THE BOOK WAS DRENCHED

UNIVERSAL
LIBRARY
OU_200737
UNIVERSAL
LIBRARY

OSMANIA UNIVERSITY LIBRARY

Call No. K294.111/V46R Accession No. K.5253.

Author ವಿಂಕಟರಾವ್, H.P.

Title ಮಕ್ಕಳ ಸಂಕಲನ ಭಾಗ .28

This book should be returned on or before the date last marked below.

1955.

ಋಗ್ವೇದಸಂಹಿತಾ

ಭಾಗ—೨೮

ಏಳನೆಯ ಅಷ್ಟಕದ ಅಧ್ಯಾಯ ೮

ಎಂಟನೆಯ ಅಷ್ಟಕದ ಅಧ್ಯಾಯಗಳು ೧–೨

ಹತ್ತನೆಯ ಮಂಡಲದ ಸೂಕ್ತಗಳು ೪೬–೭೧

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೨೮

RIG-VEDA

ಸಾಯಣಭಾಷ್ಯಸಮೇತಾ

ಋಗ್ವೇದ ಸಂಹಿತಾ

(ಕರ್ಣಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

ಭಾಗ—೨೮

ಏಳನೆಯ ಅಷ್ಟಕದ ಅಧ್ಯಾಯ ೮

ಎಂಟನೆಯ ಅಷ್ಟಕದ ಅಧ್ಯಾಯಗಳು ೧-೨

ಹತ್ತನೆಯ ಮಂಡಲದ ಸೂಕ್ತಗಳು ೪೬-೭೧

Translated with Exhaustive Critical Notes and Explanations

by

Asthana Mahavidwan

H. P. VENKATA RAO

Editor

Printed at

SRI SHAKTHI ELECTRIC PRESS, MYSORE

1955

Published by the gracious permission of

His Highness

Sri Jayachamarajendra Wadiyar Bahadur,

G.C.B., G.C.S.I., Maharaja of Mysore

ಯದುವಂಶಪಯಃಪಾರಾವಾರಸುಧಾಕರರೂ ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ
ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ ಸಿ. ಎಸ್. ಐ. ರವರು.

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

ವೇದವಿಮರ್ಶನವಿದ್ವನ್ಮಂಡಲಿ

—o—

Translator & Editor :

ಆಸ್ಥಾನ ಮಹಾವಿದ್ವಾನ್ H. P. ವೆಂಕಟರಾವ್

Associate

ಶ್ರೀ G. N. ಚಕ್ರವರ್ತಿ, M.A.

Professor of Sanskrit St. Philomina's College, Mysore

ಸಹಾಯಕ ವಿದ್ವನ್ಮಂಡಲಿ

1. **ಬ್ರ॥ ಶ್ರೀ॥ ಜಿ. ವಿಷ್ಣುಮೂರ್ತಿಭಟ್ಟರು,** ಸಾಹಿತ್ಯ ವ್ಯಾಕರಣವಿದ್ವಾನ್, ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ, ಮೈಸೂರು.

2. **ಆಸ್ಥಾನ ವಿದ್ವಾನ್ ಬ್ರ॥ ಶ್ರೀ॥ H. ಗಂಗಾಧರಶಾಸ್ತ್ರಿಗಳು,** ಜ್ಯೋತಿಷ ವಿದ್ವಾನ್ ಮತ್ತು ಕರ್ನಾಟಕ ಭಾಷಾಪಂಡಿತರು.

3. **ಬ್ರ॥ ಶ್ರೀ॥ ಶ್ರೀನಿವಾಸಶಾಸ್ತ್ರಿಗಳು,** ಋಗ್ವೇದ ಘನಪಾಠಿಗಳು.

4. **ಬ್ರ॥ ಶ್ರೀ॥ ಹಿಟ್ಟುವಳ್ಳಿ ಬಿಳಿಗಿರಿರಂಗಾಜೋಯಿಸರು,** ಶ್ರೌತವಿದ್ವಾನ್.

5. **ಬ್ರ॥ ಶ್ರೀ॥ ವೆಂಕಟರಮಣಾಚಾರ್,** M.A., B.T., ಸಾಹಿತ್ಯವಿದ್ವಾನ್.

6. **ಬ್ರ॥ ಶ್ರೀ॥ S. ರಂಗನಾಥನ್,** ಸಾಹಿತ್ಯ ವಿದ್ವಾನ್, ಆರಮನೆ ಸರಸ್ವತೀ ಭಂಡಾರ.

7. **ಬ್ರ॥ ಶ್ರೀ॥ ಪುತ್ತೂರು ಅನಂತಕೃಷ್ಣಾಚಾರ್,** ಸಾಹಿತ್ಯವಿದ್ವಾನ್. Govt. Oriental Research Institute, Mysore.

8. **ಬ್ರ॥ ಶ್ರೀ॥ S. ಸೀತಾರಾಮಶಾಸ್ತ್ರಿಗಳು,** ರಿಟೈರ್ಡ್ ಪಂಡಿತರು, Govt. Oriental Research Institute, Mysore.

ಪೀಠಿಕೆ

ಋಗ್ವೇದದ ಸೂಕ್ತಗಳಲ್ಲಿ ಮುಖ್ಯವಾಗಿ ದೇವತೆಗಳನ್ನು ಉದ್ದೇಶಿಸಿ ಮಾಡಿರುವ ಸ್ತೋತ್ರಗಳೇ ಹೆಚ್ಚಾಗಿದ್ದರೂ ಅಲ್ಲಲ್ಲಿ ಇತರ ವಿಷಯಗಳ ವಿವರಣೆ ಮತ್ತು ಪ್ರಸ್ತಾಪವೂ ಇದೆ. ಇವುಗಳಲ್ಲಿ—ರಾಜರು ಮಾಡಿರುವ ದಾನಗಳ ಪ್ರಶಂಸೆ, ದೇವತೆಗಳ ಸಾಹಸಕೃತ್ಯಗಳು, ಇತಿಹಾಸಗಳು, ಉಪಾಖ್ಯಾನಗಳು, ಸಂಭಾಷಣೆಗಳು, ಸೃಷ್ಟಿವಿಷಯ, ತತ್ತ್ವವಿಮರ್ಶೆ ಎಂಬಿವು ಮುಖ್ಯವಾದವು. ಇತಿಹಾಸಗಳಲ್ಲಿ ಎರಡುವಿಧ—ಋಷಿಗಳಿಗೆ ಸಂಬಂಧಪಟ್ಟ ಇತಿಹಾಸ ಮತ್ತು ದೇವತೆಗಳಿಗೆ ಸಂಬಂಧಪಟ್ಟ ಇತಿಹಾಸ. ಕೆಲವು ಸಂದರ್ಭಗಳಲ್ಲಿ ಇವೆರಡೂ ಮಿಶ್ರವಾಗಿರುವುದೂ ಉಂಟು. ಸಂಭಾಷಣೆಗಳಲ್ಲಿಯೂ ಅನೇಕ ವಿಧವಿವೆ. ಅಗ್ನಿಗೂ ದೇವತೆಗಳಿಗೂ ನಡೆದ ಸಂಭಾಷಣೆ, ಅಸುರರಿಗೂ (ಪಣಿಗಳಿಗೂ) ಸರಮಾ ಎಂಬ ದೇವಶುನಿಗೂ ನಡೆದ ಸಂಭಾಷಣೆ, ವಿಶ್ವಾಮಿತ್ರನಿಗೂ ನದಿಗಳಿಗೂ ನಡೆದ ಸಂಭಾಷಣೆ, ಯಮಯಮಿಯರಿಗೆ ನಡೆದ ರತಿಸಂಬಂಧವಾದ ಸಂಭಾಷಣೆ, ಪುರೂರವ ಉರ್ವಶಿಯರಿಗೆ ರತಿವಿರಹದ ವಿಷಯದಲ್ಲಿ ನಡೆದ ಸಂಭಾಷಣೆ, ಅಗಸ್ತ್ಯ ಲೋಪಾಮುದ್ರೆಯರಿಗೆ ನಡೆದ ರತಿಸಂಭಾಷಣೆ ಇತ್ಯಾದಿ.

ಪ್ರಕೃತ ಈ ಭಾಗದಲ್ಲಿ ಪಣಿಗಳೆಂಬ ಅಸುರರು ದೇವತೆಗಳ ಗೋವುಗಳನ್ನು ಅಪಹರಿಸಿ ಪರ್ವತದ ಗುಹೆಯಲ್ಲಿ ಬಚ್ಚಿಟ್ಟಿದ್ದ ವಿಷಯವನ್ನು ಪ್ರಸ್ತಾಪಮಾಡಲಾಗಿದೆ. ಈ ವಿಷಯವು ಬಹು ಪುರಾತನ ಕಾಲದಲ್ಲಿ ನಡೆದಿರುವುದೆಂದು ಹೇಳಲಾಗಿರುವುದರಿಂದ ಅನೇಕ ಋಷಿಗಳು ಅನೇಕ ವಿಧವಾಗಿ ಇದನ್ನು ವರ್ಣಿಸಿರುವುದು ಕಂಡುಬರುತ್ತದೆ. ಈ ಗೋವುಗಳನ್ನು ಬಿಡಿಸಿ ಹಿಂದಕ್ಕೆ ತರುವ ಕಾರ್ಯದಲ್ಲಿ ಇಂದ್ರ, ದೇವತೆಗಳು, ಬೃಹಸ್ಪತಿ, ಅಂಗಿರಸರು, ಅಗ್ನಿ, ಸರಮಾ ಮೊದಲಾದವರ ಮುಖ್ಯಪಾತ್ರವಿದೆ. ಪಣಿಗಳು ದೇವತೆಗಳ ಗೋವುಗಳನ್ನು ಎಲ್ಲಿ ಬಚ್ಚಿಟ್ಟಿರುವರೆಂಬುದನ್ನು ತಿಳಿಯುವುದಕ್ಕಾಗಿ ಇಂದ್ರನು ತನ್ನ ಸರಮಾ ಎಂಬ ನಾಯಿಯನ್ನು ಕಳುಹಿಸುತ್ತಾನೆ. ಆ ನಾಯಿಯು ಬಹುದೂರ ಸಂಚರಿಸಿ, ಅನೇಕ ನದಿಗಳನ್ನೂ, ಗಿರಿದುರ್ಗಗಳನ್ನೂ ದಾಟಿ ಪಣಿಗಳ ನಿವಾಸಸ್ಥಾನವನ್ನು ಸೇರಿ ಅವರೊಂದಿಗೆ ಸಂಭಾಷಣೆಮಾಡಿ ಗೋವುಗಳಿರುವ ಸ್ಥಳವನ್ನು ತಿಳಿದು ಬಂದನಂತರ ಇಂದ್ರಾದಿದೇವತೆಗಳು ಅಲ್ಲಿಗೆ ಹೋಗಿ ಅಸುರರನ್ನು ಸಂಹರಿಸಿ ಗೋವುಗಳನ್ನು ಹಿಂದಕ್ಕೆ ತಂದರೆಂಬ ಮುಖ್ಯವಿಷಯವನ್ನು ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ನಾನಾಕಡೆ ವರ್ಣಿಸಲಾಗಿದೆ.

ಪೂರ್ವದಲ್ಲಿ ಪ್ರಜಾಪತಿಯ ಪುತ್ರಿಯಾದ ವಿಕುಂಠಾ ಎಂಬ ಅಸುರ ಸ್ತ್ರೀಯು ತನಗೆ ಪರಾಕ್ರಮದಲ್ಲಿ ಇಂದ್ರನನ್ನು ಸರಿಗಟ್ಟುವ ಪುತ್ರನಾಗಬೇಕೆಂದು ಬಯಸಿ ತಪಸ್ಸನ್ನು ಮಾಡಲು, ಇಂದ್ರನು ತನಗೆ ಪ್ರತಿಸ್ಪರ್ಧಿ ಇರಬಾರದೆಂದು ತಾನೇ ಆ ಸ್ತ್ರೀಯಲ್ಲಿ ಪುತ್ರನಾಗಿ ಜನಿಸಿದನು. ವಿಕುಂಠಾ ಎಂಬ ಸ್ತ್ರೀಯಲ್ಲಿ ಜನಿಸಿದ್ದರಿಂದ ಇವನಿಗೆ ವೈಕುಂಠನೆಂದು ಹೆಸರಾಯಿತು. ಇವನು ದೈತ್ಯದಾನವರನ್ನೆಲ್ಲಾ ಜಯಿಸಿ ಭೂಮಿಯನ್ನೂ, ಸ್ವರ್ಗವನ್ನೂ ಆಳುತ್ತಾ ತನಗೆ ಸಮಾನರಿಲ್ಲವೆಂಬ ಅಹಂಕಾರದಿಂದ ಬೀಗಿ ಮೆರೆಯುತ್ತಾ ಇದ್ದನು. ಇವನಿಗೆ ಅಸುರಸಂಬಂಧವಿದ್ದುದರಿಂದ ದೇವತೆಗಳ ವಿರೋಧಿಯಾಗಿ ಅವರನ್ನು ಹಿಂಸಿಸುತ್ತಿದ್ದನು. ಇವನ ಬಾಧೆಯನ್ನು ತಾಳಲಾರದೆ ದೇವತೆಗಳು ಈ ವೈಕುಂಠನ ಸ್ನೇಹಿತನಾದ ಸಪ್ತಗು ಎಂಬ ಋಷಿಯ ಮರೆಹೊಕ್ಕರು. ಈ ಋಷಿಯು ತನ್ನ ಸ್ನೇಹಿತನಾದ ಇಂದ್ರವೈಕುಂಠನನ್ನು ಕೈಹಿಡಿದು ಹತ್ತಿರ ಕುಳ್ಳಿರಿಸಿಕೊಂಡು ಅವನನ್ನು ನಾನಾವಿಧವಾಗಿ ಸ್ತುತಿಸಿ ಅವನು ಯಾರೆಂಬುದನ್ನೂ ಏತಕ್ಕಾಗಿ ಇಂದ್ರವೈಕುಂಠನೆಂಬ ಹೆಸರಿನಿಂದ ಜನಿಸಿದನೆಂಬುದನ್ನೂ ತಿಳಿಸಿ ಅವನಿಗೆ ಪೂರ್ವಸ್ಮರಣೆಯುಂಟಾಗುವಂತೆ ಮಾಡಿದನು. ಅದರಿಂದ ತಿಳಿದುಕೊಂಡು ವೈಕುಂಠನು ತಾನು ಇಂದ್ರನೇ ಎಂದು ತಿಳಿದು ತಾನು ಹಿಂದೆ ಮಾಡಿದ ಸಾಹಸಕೃತ್ಯಗಳನ್ನೂ,

ದೇವತೆಗಳಿಗೂ, ಋಷಿಗಳಿಗೂ ಮಾಡಿದ ಉಪಕಾರವನ್ನು ವರ್ಣಿಸುತ್ತಾ ಆತ್ಮಪ್ರಶಂಸೆಮಾಡಿಕೊಂಡಿರುವನು. ಮತ್ತು ದೇವತೆಗಳ ವಿಷಯದಲ್ಲಿ ಅನುಗ್ರಹಬುದ್ಧಿಯನ್ನು ಪ್ರದರ್ಶಿಸಿದನು.

ಪೂರ್ವದಲ್ಲಿ ಅಗ್ನಿಗೆ ಮೂರುಮಂದಿ ಜ್ಯೇಷ್ಠ ಸಹೋದರರಿದ್ದರು. ಯಜ್ಞಯಾಗಾದಿಗಳಲ್ಲಿ ಈವರೇ ದೇವತೆಗಳಿಗೆ ಹವಿಸ್ಸನ್ನು ಒಯ್ದು ಅರ್ಪಿಸುತ್ತಿದ್ದರು. ಯಜ್ಞಾದಿಗಳಲ್ಲಿ ಹವಿಸ್ಸನ್ನು ಅರ್ಪಿಸುವಾಗ ಪಠಿಸುವ ವೌಷಟ್ ಎಂಬ ವಷಟ್ಕಾರಕ್ಕೆ ಶತ್ರುಗಳನ್ನು ನಾಶಮಾಡುವ ಶಕ್ತಿಸಾಮರ್ಥ್ಯಗಳಿರುವವು. ಇದನ್ನು ಪಠಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮದ ವ್ಯತ್ಯಾಸವಾದಲ್ಲಿ ಯಜ್ಞಮಾಡುವ ಯಜಮಾನನಿಗೂ ಹವಿಸ್ಸನ್ನು ಒಯ್ಯುವ ಅಗ್ನಿಗೂ ಕೆಡಕುಂಟಾಗುವುದು. ಒಂದು ಸಂದರ್ಭದಲ್ಲಿ ಈ ವಷಟ್ಕಾರಾಹುತಿಗಳ ಅಕ್ರಮಪಠನದಿಂದ ಹವಿಸ್ಸನ್ನು ವಹಿಸುತ್ತಿದ್ದ ಅಗ್ನಿಯ ಮೂರು ಮಂದಿ ಜ್ಯೇಷ್ಠಸಹೋದರರಿಗೆ ಕೆಡಕುಂಟಾಗಿ ಅವರು ಮೃತರಾದರು. ತನ್ನ ಸಹೋದರರು ಮೃತರಾದುದನ್ನು ನೋಡಿ ಅಗ್ನಿಯು ತನಗೂ ಅದೇ ಗತಿ ಬರುವುದೆಂದು ಹೆದರಿ ದೇವತೆಗಳಿಗೆ ಹೇಳದೆ ಓಡಿಹೋಗಿ ನೀರಿನಲ್ಲಿ ಗೂಢವಾಗಿ ಎಂದರೆ ಯಾರಿಗೂ ತಿಳಿಯದಂತೆ ಅವಿತುಕೊಂಡಿದ್ದನು. ದೇವತೆಗಳಿಗೆ ಯಜ್ಞಾದಿಗಳಲ್ಲಿ ಅರ್ಪಿಸುವ ಹವಿಸ್ಸನ್ನು ವಹಿಸುವವರಿಲ್ಲದ್ದರಿಂದ ದೇವತೆಗಳು ಚಿಂತಾಕ್ರಾಂತರಾಗಿ ಅಗ್ನಿಯನ್ನು ಎಲ್ಲೆಲ್ಲೂ ಹುಡುಕಿ ಕೊನೆಗೆ ನೀರಿನಲ್ಲಿ ಅಡಗಿರುವುದನ್ನು ಕಂಡು ಅಲ್ಲಿಗೆ ಬಂದು ಅವನೊಡನೆ ಸಂಭಾಷಣೆಯನ್ನು ನಡೆಸಿದರು. ಅದರ ಫಲವಾಗಿ ಅಗ್ನಿಗೆ ಮರಣಭಯವಿಲ್ಲದಂತೆಯೂ, ಯಜ್ಞದಲ್ಲಿ ಅವನೇ ಮುಖ್ಯಪಾತ್ರವನ್ನು ವಹಿಸುವಂತೆಯೂ, ಪ್ರಯಾಜಾ, ಅನುಯಾಜಾ ಮೊದಲಾದ ಕೆಲವು ಮುಖ್ಯ ಆಹುತಿಗಳು ಅಗ್ನಿಗೇ ಸೇರಬೇಕೆಂತಲೂ ಅಗ್ನಿಯು ಕೇಳಿದ ವರಗಳನ್ನು ಕೊಟ್ಟರು. ಅದರಿಂದ ಅಗ್ನಿಯು ಸಂತುಷ್ಟನಾಗಿ ನೀರಿನಿಂದ ಎದ್ದುಬಂದು ಹವಿರ್ವಹನಕಾರ್ಯದಲ್ಲಿ ಪ್ರವೃತ್ತನಾದನು ಎಂಬ ಉಪಾಖ್ಯಾನವು ೧೦ ನೇ ಮಂಡಲದ ೫೧ ನೇ ಸೂಕ್ತದಲ್ಲಿ ಉಕ್ತವಾಗಿದೆ. ಯಜುರ್ವೇದದಲ್ಲಿಯೂ, ಇತರ ಕಡೆಗಳಲ್ಲಿಯೂ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಈ ಉಪಾಖ್ಯಾನದ ವರ್ಣನೆ ಇದೆ.

ಪೂರ್ವದಲ್ಲಿ ಅತ್ರಿವಂಶದ ಗೋಪಾಯನ ಎಂಬ ಋಷಿಯ ಪುತ್ರರಾದ ಬಂಧು, ಸುಬಂಧು, ಶ್ರುತಬಂಧು, ವಿಪ್ರಬಂಧು ಎಂಬ ನಾಲ್ಕು ಮಂದಿ ಸಹೋದರರು ಇಕ್ಷ್ವಾಕುವಂಶದ ಅಸಮಾತಿ ಎಂಬ ರಾಜನ ಬಳಿ ಪುರೋಹಿತರಾಗಿದ್ದರು. ಒಂದು ಸಮಯದಲ್ಲಿ ಈ ಪುರೋಹಿತರಿಗೂ ರಾಜನಿಗೂ ಬಂದ ಭಿನ್ನಾಭಿಪ್ರಾಯದ ಫಲವಾಗಿ ರಾಜನು ಈ ನಾಲ್ಕು ಮಂದಿ ಪುರೋಹಿತರನ್ನು ತ್ಯಜಿಸಿ ಅವರ ಸ್ಥಾನದಲ್ಲಿ ಕಿರಾತ, ಆಕುಲಿ ಎಂಬಿಬ್ಬರು ದ್ವಿಜರನ್ನು ನೇಮಿಸಿಕೊಂಡನು. ಇವರು ಮಾಯಾಮಂತ್ರಗಳಲ್ಲಿ ಕುಶಲರಾಗಿದ್ದರು. ರಾಜನಿಗೆ ಸಂತೋಷವನ್ನುಂಟುಮಾಡಬೇಕೆಂಬ ಇಚ್ಛೆಯಿಂದ ಈ ಇಬ್ಬರು ದ್ವಿಜರು ತಮ್ಮ ಮಾಯಾಮಂತ್ರಸಾಮರ್ಥ್ಯದಿಂದ ಪಾರಿವಾಳದ ಹಕ್ಕಿಗಳ ರೂಪವನ್ನು ಹೊಂದಿ ರಾಜನ ಹಿಂದಿನ ಪುರೋಹಿತರಾದ ಬಂಧು ಮೊದಲಾದವರ ಮೇಲೆ ಬಿದ್ದು ಅಪಘಾತವೆಸಗಿದರು. ಅವರಲ್ಲಿ ಎರಡನೆಯವನಾದ ಸುಬಂಧುವೆಂಬುವನು ಇವರ ಅಪಘಾತವನ್ನು ತಡೆಯಲಾರದೆ ಜ್ಞಾನಾಶೂನ್ಯನಾಗಿ ಮೂರ್ಛಿತನಾದನು. ಬಳಿಕ ಈ ಮಾಯಾವಿ ದ್ವಿಜರು ಸುಬಂಧುವಿನ ಅಸುವನ್ನು (ಪ್ರಾಣವನ್ನು) ಅಪಹರಿಸಿ ತೆಗೆದುಕೊಂಡು ಹೋಗಿ ಅಗ್ನಿಯ ಅಂತಃಪರಿಧಿಯಲ್ಲಿಟ್ಟರು. ನಿಶ್ಚೇಷ್ಟಿತನಾಗಿ ಬಿದ್ದಿದ್ದ ಸುಬಂಧುವನ್ನು ಬದುಕಿಸುವುದಕ್ಕಾಗಿ ಅವನ ಉಳಿದ ಮೂರುಮಂದಿ ಸಹೋದರರು ಅನೇಕ ಸ್ವಸ್ತಿಮಂತ್ರಗಳನ್ನು ಪಠಿಸಿ ನಾನಾ ದೇವತೆಗಳನ್ನು ಸ್ತೋತ್ರಮಾಡಿದರು. ಅದರಿಂದ ಸಂತುಷ್ಟನಾದ ಅಗ್ನಿಯು ಸುಬಂಧುವಿಗೆ ಪುನಃ ಚೇತನ ಬರುವಂತೆ ಮಾಡಿದನು. ಬಳಿಕ ಬಂಧ್ವಾದಿಗಳು ಅಗ್ನಿಯನ್ನು ಸ್ತುತಿಸಿ ಅನಂತರ ಅಸಮಾತಿ ರಾಜನನ್ನು ಪ್ರಶಂಸೆಮಾಡಿ ಅವನಿಗೆ ಶ್ರೇಯಸ್ಸುಂಟಾಗುವಂತೆ ದೇವತೆಗಳನ್ನು ಪ್ರಾರ್ಥಿಸಿದರು. ಅದರಿಂದ ಅಸಮಾತಿರಾಜನು ತಾನು ಮಾಡಿದ ಅನ್ಯಾಯಕ್ಕಾಗಿ ಪಶ್ಚಾತ್ತಾಪಪಟ್ಟು ಲಜ್ಜೆಯಿಂದ ಬಂಧ್ವಾದಿಗಳ ಮುಂದೆ ತಲೆತಗ್ಗಿಸಿ ನಿಂತುಕೊಂಡನು ಮತ್ತು ಅವರನ್ನು ಪೂರ್ವದಂತೆ ಪುರೋಹಿತ

ಸ್ಥಾನದಲ್ಲಿ ಇರಿಸಿ ಪೂಜಾದಿಗಳಿಂದ ಸತ್ಕರಿಸಿ ಗೌರವಿಸಿದನು. ಈ ಉಪಾಖ್ಯಾನವು ಇದೇ ಭಾಗದಲ್ಲಿರುವ ೫೭-೬೦ನೇ ಸೂಕ್ತಗಳಲ್ಲಿ ವಿವರಿಸಲಾಗಿದೆ:

ಪೂರ್ವದಲ್ಲಿ ಮನುವಿಗೆ ಅನೇಕಮಂದಿ ಪುತ್ರರಿದ್ದರು. ಆ ಪುತ್ರರಲ್ಲಿ ನಾಭಾನೇದಿಷ್ಠನೆಂಬುವನು ಕಿರಿಯವನು ಅವನು ಬ್ರಹ್ಮಚರ್ಯಾಶ್ರಮದಿಂದ ಗುರುಕುಲದಲ್ಲಿ ವೇದಾಧ್ಯಾಯನಮಾಡುತ್ತಿದ್ದನು. ಆ ಸಮಯದಲ್ಲಿ ಅವನ ಸಹೋದರರು ತಮ್ಮ ತಂದೆಯಾದ ಮನುವಿನಿಂದ ಆಸ್ತಿಯನ್ನೆಲ್ಲಾ ಪಡೆದು ತಮ್ಮಲ್ಲಿಯೇ ಹಂಚಿಕೊಂಡರು. ವಿದ್ಯಾಭ್ಯಾಸವನ್ನು ಮುಗಿಸಿ ಬಂದಮೇಲೆ ನಾಭಾನೇದಿಷ್ಠನು ತನ್ನ ತಂದೆಯ ಆಸ್ತಿಯನ್ನೆಲ್ಲಾ ತನಗೆ ಭಾಗವನ್ನು ಕೊಡದೆ ತನ್ನ ಸಹೋದರರೇ ಹಂಚಿಕೊಂಡಿರುವದನ್ನು ತಿಳಿದು ತಂದೆಯ ಬಳಿಗೆ ಹೋಗಿ ತನ್ನ ಭಾಗದ ಆಸ್ತಿಯನ್ನು ಕೊಡಬೇಕೆಂದು ಕೇಳಿದನು. ಮತ್ತು ಇದ್ದ ಆಸ್ತಿಯನ್ನೆಲ್ಲಾ ಸಹೋದರರಿಗೇ ಕೊಟ್ಟು ತನಗೆ ಏನೂ ಇಲ್ಲದ್ದರಿಂದ ಅದೇಕೆ ಹೀಗೆ ಮಾಡಿದೆಯೆಂದು ತಂದೆಯನ್ನು ಕೇಳಿದನು. ಅದಕ್ಕೆ ಮನುವು- ನಿನಗೆ ನನ್ನ ಆಸ್ತಿಯಲ್ಲಿ ಭಾಗ ಸಿಕ್ಕದಿದ್ದರೆ ಚಿಂತೆಯಿಲ್ಲ. ಬೇರೆವಿಧವಾಗಿ ನಿನಗೆ ಆಸ್ತಿಯು ದೊರೆಯುವಂತೆ ಮಾಡುತ್ತೇನೆ. ಈಗ ಅಂಗಿರಸರೆಂಬ ಋಷಿಗಳು ಸ್ವರ್ಗಕ್ಕೆ ಹೋಗಬೇಕೆಂಬ ಅಪೇಕ್ಷೆಯಿಂದ ಸತ್ರಯಾಗವನ್ನು ಮಾಡುತ್ತಿರುವರು. ಆ ಯಾಗದ ಆರನೆಯ ದಿವಸ ನಡೆಯಬೇಕಾಗಿರುವ ಕಾರ್ಯಕಲಾಪಗಳಲ್ಲಿ ಯಾವ ಮಂತ್ರಗಳನ್ನು ಪಠಿಸಬೇಕು ಎಂಬುದು ಅವರಿಗೆ ತಿಳಿಯದೆ ಚಿಂತಿಸುತ್ತಿರುವರು. ಆದ್ದರಿಂದ ನೀನು ಅಲ್ಲಿಗೆ ಹೋಗಿ **ಇದಮಿತ್ಥಾ ರೌದ್ರಂ** ಎಂಬ ೧೦ನೇ ಮಂಡಲದ ೬೧ ನೇ ಸೂಕ್ತವನ್ನು ಅವರಿಗೆ ತಿಳಿಸಿ ಸಹಾಯವಮಾಡು ಅದರಿಂದ ಅವರ ಯಾಗವು ಪೂರ್ತಿಯಾಗಿ ಅವರು ಸ್ವರ್ಗಕ್ಕೆ ಹೋಗುವಾಗ ಯಜ್ಞಾರ್ಥವಾಗಿ ಸಂಗ್ರಹಿಸಿ ಉಳಿಯುವ ಸಾವಿರ ಗೋವುಗಳನ್ನು ನಿನಗೆ ಕೊಡುವರು. ಅದೇ ನಿನಗೆ ಆಸ್ತಿಯು ಎಂದು ಹೇಳಿದನು. ತಂದೆಯ ಮಾತಿನಂತೆ ನಾಭಾನೇದಿಷ್ಠನು ಅಂಗಿರಸರ ಯಜ್ಞಕ್ಕೆ ಹೋಗಿ ಅವರಿಗೆ ಆ ಮಂತ್ರವನ್ನು ತಿಳಿಸಿ ಯಜ್ಞಸಮಾಪ್ತಿಯಾದನಂತರ ಉಳಿದಿದ್ದ ಸಹಸ್ರ ಗೋವುಗಳನ್ನು ಪಡೆದನು. ಆ ಗೋವುಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಹೊಟು ಒರಬೇಕೆಂದಿರುವಲ್ಲಿ ಆ ಯಜ್ಞಭೂಮಿಯಲ್ಲಿ ಓರ್ವ ಮಲಿನವಸ್ತ್ರಧಾರಿಯಾದ ಪುರುಷನು ಬಂದು ಈ ಗೋವುಗಳು ನನ್ನವು. ಅಂಗಿರಸರು ಅವನ್ನು ನಿನಗೆ ಕೊಡಲು ಅವರಿಗೆ ಅಧಿಕಾರವಿಲ್ಲ ಎಂದು ಹೇಳಿ ಈ ವಿಷಯದಲ್ಲಿ ನಿನಗೆ ಸಂಶಯವಿದ್ದರೆ ನಿನ್ನ ತಂದೆಯನ್ನೇ ಕೇಳಿಕೊಂಡು ಬಾ ಎಂದನು. ಅದರಂತೆ ನಾಭಾನೇದಿಷ್ಠನು ತನ್ನ ತಂದೆಯ ಬಳಿಗೆ ಹೋಗಿ ನಡೆದ ಸಂಗತಿಯನ್ನು ತಿಳಿಸಿ ಆ ಗೋವುಗಳು ಯಾರಿಗೆ ಸೇರಬೇಕು ಎಂದು ಕೇಳಲು, ತಂದೆಯು ಪುತ್ರನನ್ನು ಕುರಿತು–ಎಲೈ ಪುತ್ರನೇ, ಆ ಪುರುಷನು ಹೇಳಿದಂತೆ ಆ ಗೋವುಗಳು ಅವನಿಗೇ ಸೇರಬೇಕು ಎಂದನು. ನಾಭಾನೇದಿಷ್ಠನು ಪುನಃ ಯಜ್ಞಭೂಮಿಗೆ ಹೋಗಿ ಈ ಗೋವುಗಳು ನಿನಗೇ ಸೇರಿವೆ, ಅವನ್ನು ನೀನು ತೆಗೆದುಕೊಳ್ಳಬಹುದು ಎಂದು ಹೇಳಿ ಹೊಡಲು ಸಿದ್ಧನಾಗಲು ಆ ಮಲಿನವಸ್ತ್ರಧಾರಿಯಾದ ಪುರುಷನು–ಎಲೈ ಬಾಲಕನೇ ನಿನ್ನ ಸತ್ಯಕ್ಕೆ ಮೆಚ್ಚಿದೆನು. ನಿನಗೆ ಲಾಭವಾಗುವಂತಿದ್ದರೂ ಅದನ್ನು ಬಿಟ್ಟು ಸತ್ಯವನ್ನೇ ನುಡಿದಿರುವೆ. ಆದ್ದರಿಂದ ಆ ಗೋವುಗಳನ್ನು ನಾನು ನಿನಗೆ ಹಿಂದಕ್ಕೆ ಕೊಡುತ್ತೇನೆ. ನಾನು ರುದ್ರನು. ಯಜ್ಞಭೂಮಿಯಲ್ಲಿ ಯಜ್ಞಾವಶೇಷವಾಗಿ ಉಳಿಯುವ ಎಲ್ಲಾ ವಸ್ತುಗಳಿಗೂ ನಾನೇ ಅಧಿಕಾರಿಯು. ಆದ್ದರಿಂದ ಇವು ನನಗೆ ಸೇರಿವೆ. ಆದರೆ ನಿನ್ನ ಸತ್ಯವಾದ ನಡವಳಿಕೆಗೆ ಮೆಚ್ಚಿ ಈ ಸಹಸ್ರ ಗೋವುಗಳನ್ನು ನಿನಗೆ ಕೊಟ್ಟರುತ್ತೇನೆ, ತೆಗೆದುಕೊ ಎಂದು ಹೇಳಿದನು. ಅದರಂತೆ ನಾಭಾನೇದಿಷ್ಠನು ಗೋವುಗಳನ್ನು ತೆಗೆದುಕೊಂಡು ತಂದೆಯ ಬಳಿಗೆ ಬಂದು ನಡೆದ ಸಂಗತಿಯನ್ನು ವಿವರಿಸಿದನು. ಈ ಉಪಾಖ್ಯಾನವು ೧೦ ನೇ ಮಂಡಲದ ೬೧ನೇ ೬೨ ನೇ ಸೂಕ್ತಗಳ ಸಂಬಂಧದಲ್ಲಿ ಐತರೇಯಬ್ರಾಹ್ಮಣ, ತೈತ್ತಿರೀಯ ಸಂಹಿತಾ ಮೊದಲಾದ ಸ್ಥಳಗಳಲ್ಲಿ ಹೇಳಿದೆ.

ಈ ೧೦ ನೇ ಮಂಡಲದ ೭೧ ನೇ ಸೂಕ್ತದಲ್ಲಿ ಜ್ಞಾನಪ್ರಶಂಸೆ ಇರುವುದು. ಸಾಕ್ಷಾತ್ ಬೃಹಸ್ಪತಿಯೇ ಜ್ಞಾನದ ಮಹಿಮೆಯನ್ನು ಪ್ರಶಂಸೆಮಾಡಿದಾನೆ. ವೇದಾರ್ಥವನ್ನು ತಿಳಿದುಕೊಳ್ಳುವುದರ ಅವಶ್ಯಕತೆ, ವೇದಾರ್ಥವನ್ನು ತಿಳಿದು ಎಂದರೆ ತಾನು ಮಾಡುವ ಸಂಧ್ಯಾವಂದನೆ, ಪೂಜೆ, ಯಜ್ಞಾನುಷ್ಠಾನ ಮೊದಲಾದ ಸತ್ಕರ್ಮಗಳಲ್ಲಿ ಉಪಯೋಗಿಸುವ ಮಂತ್ರಗಳನ್ನು ಅರ್ಥವತ್ತಾಗಿ ತಿಳಿದು ಕರ್ಮಮಾಡಿದರೆ ಅತಿಶಯವಾದ ಫಲವು ಲಭಿಸುವುದೆಂದೂ ಮಂತ್ರಾರ್ಥ ಜ್ಞಾನವಿಲ್ಲದೆ ಸುಮ್ಮನೆ ಕುರುಡುಪಾಠದಿಂದ ಪೂಜಾದಿಗಳನ್ನು ಮಾಡಿದರೆ ಫಲವು ಲಭಿಸುವುದಿಲ್ಲವೆಂದೂ, ಅಥವಾ ಲಭಿಸಿದರೂ ಅತ್ಯಲ್ಪವೆಂದೂ ಹೇಳಿರುವುದಲ್ಲದೆ, ವೇದಮಂತ್ರಾರ್ಥವನ್ನು ತಿಳಿದಿರುವ ಪುರುಷನ ಪ್ರಶಂಸೆಯನ್ನೂ ಅರ್ಥ ಜ್ಞಾನವಿಲ್ಲದೆ ಸುಮ್ಮನೆ ಮಂತ್ರಗಳನ್ನು ಬಾಯಿಪಾಠಮಾಡಿದ ಪುರುಷನ ನಿಂದೆಯನ್ನೂ, ಯಜ್ಞಾದಿಗಳಲ್ಲಿ ಹೋತೃ ಮೊದಲಾದ ಋತ್ವಿಕ್ಕುಗಳು ನೆರವೇರಿಸಬೇಕಾದ ಕರ್ತವ್ಯಕರ್ಮಗಳನ್ನೂ, ದೃಷ್ಟಾಂತ, ಉಪಮಾನ ಮೊದಲಾದ ವಿವರಣೆಗಳಿಂದ ಋಷಿಯು ವಿಶದವಾಗಿ ವರ್ಣಿಸಿರುವನು.

ಇಂತಹ ನೂರಾರು ಉಪಾಖ್ಯಾನಗಳೂ, ಇತಿಹಾಸಗಳೂ ಋಗ್ವೇದದಲ್ಲಿ ಬಹಳವಾಗಿವೆ. ಇವುಗಳನ್ನು ಸಂಗ್ರಹರೂಪದಲ್ಲಿ ಶೌನಕಮಹರ್ಷಿಯು ಬೃಹದ್ದೇವತಾ ಎಂಬ ಗ್ರಂಥದಲ್ಲಿ ವಿವರಿಸಿದಾರೆ. ಈ ಗ್ರಂಥದಲ್ಲಿ ಋಗ್ವೇದಕ್ಕೆ ಸಂಬಂಧಪಟ್ಟ ಅನೇಕ ಉಪಯುಕ್ತ ವಿಷಯಗಳು ಅಡಕವಾಗಿರುವವು. ಈ ಗ್ರಂಥವು ವೇದಾಭ್ಯಾಸವನ್ನು ಅರ್ಥವತ್ತಾಗಿ ಮಾಡುವವರಿಗೂ ವಿಶ್ವವಿದ್ಯಾಲಯದ ಸಂಸ್ಕೃತಭಾಗದ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯೋಗವಾಗಿರುವುದರಿಂದ ಅತಿಪ್ರಾಚೀನವೂ, ಪ್ರಮಾಣಗ್ರಂಥವೂ ಆದ ಇದನ್ನು ಅರ್ಥಾನುವಾದಸಹಿತವಾಗಿ ಈ ಭಾಗದ ಕೊನೆಯಲ್ಲಿ ಸರ್ವರಿಗೂ ಉಪಯೋಗವಾಗಲೆಂದು ಸೇರಿಸಲಾಗಿದೆ.

ಅತಿ ಪ್ರಾಚೀನವೂ, ಅತಿಗಹನವೂ, ಅತಿ ವಿಸ್ತಾರವೂ, ಸರ್ವಶಾಸ್ತ್ರಗಳಿಗೂ, ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ. ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರರಾದಿಯಾದ ಸಕಲಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಬೇಕೆಂಬ ಘನವಾದ ಉದ್ದೇಶದಿಂದ ಕರ್ನಾಟಕಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುವರ್ಯರೂ ಅವರ ಸರ್ಕಾರದವರೂ ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಮಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ ಅವರ ಕುಟುಂಬಕ್ಕೂ ರಾಜಕುಮಾರಿಯರಿಗೂ, **ಶ್ರೀಕಂಠದತ್ತ ನರಸಿಂಹರಾಜ ಒಡೆಯರ್,** ಎಂಬ ಶುಭನಾಮಾಂಕಿತರಾದ ರಾಜಕುಮಾರರಿಗೂ, ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕಫಲಗಳಾದ ಆಯುರಾರೋಗ್ಯೈಶ್ವರ್ಯಾದಿಸಕಲಸಂಪತ್ತನ್ನೂ ಪಾರಮಾರ್ಥಿಕವಾದ ಅಧ್ಯಾತ್ಮಜ್ಞಾನವನ್ನೂ ಇತೋಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು,
ಮನ್ಮಥನಾಮ ಸಂ॥ ಚೈತ್ರ ಬ॥ ದಶಮೀ ಭಾನುವಾರ,
೧೭—೪—೫೫.

ಅನುವಾದಕ :
ಎಚ್. ಪಿ. ವೆಂಕಟರಾವ್,
ಆಸ್ಥಾನ ಮಹಾವಿದ್ವಾನ್.

ವಿಷಯಾನುಕ್ರಮಣಿಕೆ

ಏಳನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯವು.

(ಮುಂದುವರೆದುದು)

ಹತ್ತನೆಯ ಮಂಡಲದ ಸೂಕ್ತಗಳು

		ಪುಟಸಂಖ್ಯೆ
೪೧	**ಸಮಾನಮು ತ್ಯಂ** ಎಂಬ ನಲವತ್ತೊಂದನೆಯ ಸೂಕ್ತ	1
	ಸೂಕ್ತದ ಪೀಠಿಕೆ	1
೪೨	**ಅಸ್ತೇವ** ಎಂಬ ನಲವತ್ತೆರಡನೆಯ ಸೂಕ್ತ	12
೪೩	**ಅಚ್ಛಾಮ ಇಂದ್ರಂ** ಎಂಬ ನಲವತ್ತಮೂರನೆಯ ಸೂಕ್ತ	25
	ಶ್ವಘ್ನೀ ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ	31
೪೪	**ಆ ಯಾತ್ವಿಂದ್ರಃ** ಎಂಬ ನಲವತ್ತನಾಲ್ಕನೆಯ ಸೂಕ್ತ	40
೪೫	**ದಿವಸ್ಪರಿ** ಎಂಬ ನಲವತ್ತೈದನೆಯ ಸೂಕ್ತ	54
	ಮೂರು ವಿಧ ಅಗ್ನಿಗಳು	56
	ದ್ಯುಲೋಕಸ್ಥನಾದ ಅಗ್ನಿಯ ಉತ್ಪತ್ತಿ	57
	ಅಂತರಿಕ್ಷಸ್ಥನಾದ ವೈದ್ಯುತಾಗ್ನಿಯ ಪ್ರಶಂಸೆ	59
	ಪಾರ್ಥಿವಾಗ್ನಿಯ ಮಹಿಮೆ	60
	ಜಾತವೇದಾಃ, ವೈಶ್ವಾನರ, ದ್ರವಿಣೋದಾಃ ಇತ್ಯಾದಿ ನಾನಾವಿಧ ಅಗ್ನಿಗಳು	64
	ಅಗ್ನಿಯ ಮುಹದ್ಗುಣಗಳ ವರ್ಣನೆ ಇತ್ಯಾದಿ	80
	ಅಗ್ನಿಯು ಮರಣರಹಿತನು ಇತ್ಯಾದಿ ವಿಚಾರ	86

ಇಲ್ಲಿಗೆ ಏಳನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯವು ಸಮಾಪ್ತವು

ಎಂಟನೆಯ ಅಷ್ಟಕದಲ್ಲಿ ಮೊದಲನೆಯ ಅಧ್ಯಾಯವು

೪೬	**ಪ್ರ ಹೋತಾ ಜಾತಃ** ಎಂಬ ನಲವತ್ತಾರನೆಯ ಸೂಕ್ತವು	93
	ಸೂಕ್ತದ ಪೀಠಿಕೆ—ವತ್ಸಪ್ರಿಋಷಿಯಿಂದ ದೃಷ್ಟವಾದ ಸೂಕ್ತಗಳ ಮಹಿಮೆ	93
	ಭೃಗು ಮೊದಲಾದ ಋಷಿಗಳು ಅಗ್ನಿಯನ್ನು ಕಂಡವಿಚಾರ	104
	ಮಾತರಿಶ್ವನು ಅಗ್ನಿಯನ್ನು ಅಂತರಿಕ್ಷದಿಂದ ಕರೆತಂದ ವಿಚಾರ	114
	ಬೃಹಸ್ಪತಿಯು ಅಗ್ನಿಯನ್ನು ಕಂಡವಿಷಯ	115
	ಅಂಗಿರಾಋಷಿಗಳಿಗೂ ಅಗ್ನಿಗೂ ಇರುವ ಸಂಬಂಧ	115
	ತ್ರಿತ ಆಪ್ತ್ಯನ ಸಂಬಂಧವಾದ ವಿಷಯವಿಮರ್ಶೆ	122
೪೭	**ಜಗೃಭ್ಮಾ ತೇ** ಎಂಬ ನಲವತ್ತೇಳನೆಯ ಸೂಕ್ತ	132
೪೮	**ಅಹಂ ಭುವಂ** ಎಂಬ ನಲವತ್ತೆಂಟನೆಯ ಸೂಕ್ತ	142
	ಸೂಕ್ತದ ಪೀಠಿಕೆ—**ಮಹಾನಿಂದ್ರ** ಎಂದು ಹೆಸರು ಬರಲು ಕಾರಣ	142
	ಅಭೀ ೩ ದಂ ಎಂಬ ಋಕ್ಕಿನ ನಿರುಕ್ತ	153
	ಖಲ ಶಬ್ದಾರ್ಥವಿವರಣೆ	154
	ಏಕ, ದ್ವೌ, ತ್ರಯಃ ಚತುರ್ಥ ಇತ್ಯಾದಿ ಶಬ್ದಗಳ ರೂಪನಿಷ್ಪತ್ತಿ ಇತ್ಯಾದಿ	154

೪೯	**ಅಹಂ ದಾಂ** ಎಂಬ ನಲವತ್ತೊಂಭತ್ತನೇ ಸೂಕ್ತ	.....	161
	ಸೂಕ್ತದ ಪೀಠಿಕೆ—ಇಂದ್ರನ ಸಾಹಸಕೃತ್ಯಗಳು—ವೃತ್ರಾಸುರವಧವರ್ಣನೆ	.....	161
	ಪ್ರಾಸಹಾದೇವಿಯ ಕಥೆ	.....	167
	ಇಂದ್ರನಿಗೆ **ಮರುತ್ವಾನ್** ಎಂಬ ಹೆಸರು ಬರಲು ಕಾರಣ	.....	170
	ಇಂದ್ರನು **ನಮುಚಿ**ಯೆಂಬ ರಾಕ್ಷಸನನ್ನು ಸಂಹರಿಸಿದ ವಿಚಾರ	.....	173
	ಇಂದ್ರನಿಗೆ **ಋಜೀಷೀ** ಎಂಬ ಹೆಸರು ಬರಲು ಕಾರಣ	.....	175
	ಇಂದ್ರನು **ವರಾಹಾ**ಸುರನನ್ನು ಸಂಹಾರಮಾಡಿದ ವಿಷಯ	.....	181
	ಇಂದ್ರನು **ವಿಶ್ವರೂಪ**ನನ್ನು ಸಂಹಾರಮಾಡಿದ ವಿಷಯ	.....	184
	ಇಂದ್ರನಿಗೆ ಬ್ರಹ್ಮಹತ್ಯಾದೋಷವು ಪ್ರಾಪ್ತವಾದ ವಿಷಯ ಮತ್ತು ಅದರ ಪರಿಹಾರಕ್ಕಾಗಿ ಇಂದ್ರನು ಮಾಡಿದ ಪ್ರಯತ್ನ	.....	186
	ಇಂದ್ರ್ಯೈಕುಂಠನ ವಿಷಯ	.....	189
	ಕವಿಃ ಉಶನಾಃ ಎಂಬುವರ ವಿಷಯ	.....	195
	ಕುತ್ಸನ ವಿಷಯ	.....	196
	ಶುಷ್ಣಾಸುರನ ವಿಷಯ	.....	199
	ದಸ್ಯುಶಬ್ದಾರ್ಥವಿವರಣೆ	.....	199
	ವೇತಸೂನ್ ಎಂಬ ಶಬ್ದದ ವಿವರಣೆ	.....	201
	ತುರ್ವಶ ಯದು ಎಂಬುವರ ವಿಷಯ	.....	207
೫೦	**ಪ್ರ ವೋ ಮಹೇ** ಎಂಬ ಐವತ್ತನೆಯ ಸೂಕ್ತ	.....	212
	ದೇವಸುವ ಎಂಬ ಹವಿಸ್ಸುಗಳ (ಅಥವಾ ದೇವತೆಗಳ) ವಿಷಯ	.....	219
	ಯಜ್ಞದಲ್ಲಿ ವಿಮರ್ಶಿಸಲ್ಪಡುವ **ಬ್ರಹ್ಮೋದ್ಯ**ದ ವಿಷಯ	.....	225
೫೧	**ಮಹತ್ತದುಲ್ಬಂ** ಎಂಬ ಐವತ್ತೊಂದನೆಯ ಸೂಕ್ತ	.....	245
	ಸೂಕ್ತದ ಪೀಠಿಕೆ	.....	245
	ಅಗ್ನಿಯ ಕರ್ಮಗಳು	.....	246
	ಅಗ್ನಿಯು ನೀರಿನಲ್ಲಿ ಅವಿತುಕೊಂಡಿದ್ದ ವಿಚಾರ	.....	250
	ಈ ವಿಷಯದಲ್ಲಿ ದೇವತೆಗಳಿಗೂ ಅಗ್ನಿಗೂ ನಡೆದ ಸಂಭಾಷಣೆ	.....	253
	ಈ ವಿಷಯದಲ್ಲಿ ಬೃಹದ್ದೇವತಾಗ್ರಂಥದಲ್ಲಿರುವ ವಿವರಣೆ	.....	253
	ಪ್ರಯಾಜಾಃ ಮತ್ತು **ಅನುಯಾಜಾಃ** ಎಂಬ ಆಹುತಿಗಳ ವಿಷಯದಲ್ಲಿ ಯಾಸ್ಕರ ನಿರ್ವಚನವು	.....	268
೫೨	**ವಿಶ್ವೇ ದೇವಾಃ** ಎಂಬ ಐವತ್ತೆರಡನೆಯ ಸೂಕ್ತ	.....	271
	ಸೂಕ್ತದ ಪೀಠಿಕೆ	.....	271
	ವಿಶ್ವೇದೇವತೆಗಳ ವಿಷಯವಿಮರ್ಶೆ	.....	272
	ವಿಶ್ವೇದೇವತಾಕಸೂಕ್ತದ್ರಷ್ಟೃಗಳಾದ ಋಷಿಗಳ ಹೆಸರುಗಳು ಮತ್ತು ಸೂಕ್ತಗಳು	.....	280
	ವಿಶ್ವೇದೇವತಾಕವಾದ ಸೂಕ್ತಗಳಲ್ಲಿ ನೈಮಿತ್ತಿಕವಾಗಿ ಸ್ತುತರಾಗುವ ದೇವತೆಗಳು	.....	289
	ದೇವತೆಗಳ ಸಂಖ್ಯೆ ಎಷ್ಟು ಎಂಬ ವಿಷಯವಿಮರ್ಶೆ	.....	299

೫೩	**ಯಮೈಚ್ಛಾಮ** ಎಂಬ ಐವತ್ತಮೂರನೆಯ ಸೂಕ್ತ	.....	302
	ಪಂಚಜನರು ಯಾರು ಎಂಬ ವಿಷಯ	.....	308
	ತಂತುಂ ತನ್ವನ್ ಎಂಬ ಋಕ್ಕಿನ ವಿಶೇಷವಿನಿಯೋಗ	.....	315
೫೪	**ತಾಂ ಸು ತೇ** ಎಂಬ ಐವತ್ತನಾಲ್ಕನೆಯ ಸೂಕ್ತ	.....	321
೫೫	**ದೂರೇ ತನ್ನಾಮ** ಎಂಬ ಐವತ್ತೈದನೆಯ ಸೂಕ್ತ	.....	329
೫೬	ಇದಂ ತ ಏಕಂ ಎಂಬ ಐವತ್ತಾರನೆಯ ಸೂಕ್ತ	.....	340
	ಋಣತ್ರಯದ ವಿಷಯ	.....	349
೫೭	**ಮಾ ಪ್ರ ಗಾಮ** ಎಂಬ ಐವತ್ತೇಳನೆಯ ಸೂಕ್ತ	.....	350
	ಸೂಕ್ತದ ಪೀಠಿಕೆ--**ಸುಬಂಧು**ಋಷಿಯ ವೃತ್ತಾಂತ	.....	350
	ಸುಬಂಧುವಿನ ವಿಷಯದಲ್ಲಿ ಶಾಟ್ಯಾಯನಬ್ರಾಹ್ಮಣದಲ್ಲಿ ಉಕ್ತವಾಗಿರುವ ಪೂರ್ವೇತಿಹಾಸವು	.....	356
೫೮	**ಯತ್ತ್ರೀ ಯಮಮಂ** ಎಂಬ ಐವತ್ತೆಂಟನೆಯ ಸೂಕ್ತ	.....	362
೫೯	**ಪ್ರ ತಾರ್ಯಾಯುಃ** ಎಂಬ ಐವತ್ತೊಂಭತ್ತನೆಯ ಸೂಕ್ತ	.....	373
	ಅಸುನೀತೇ ಪುನಃ ಎಂಬ ಋಕ್ಕಿನ ನಿರುಕ್ತವು	.....	379
೬೦	**ಆ ಜನಂ** ಎಂಬ ಅರವತ್ತನೆಯ ಸೂಕ್ತ	.....	385
	ಅಯಂ ಮಾತಾಯಂ ಎಂಬ ಋಕ್ಕಿನ ವಿಷಯದಲ್ಲಿ ಶಾಟ್ಯಾಯನ ಬ್ರಾಹ್ಮಣ ವಿವರಣೆ	.....	393
೬೧	**ಇದಮಿತ್ಥಾ ರೌದ್ರಂ** ಎಂಬ ಅರವತ್ತೊಂದನೆಯ ಸೂಕ್ತವು	.....	398
	ಸೂಕ್ತದ ಪೀಠಿಕೆ	...	398
	ನಾಭಾನೇದಿಷ್ಠನೆಂಬ ಋಷಿಯ ವಿಷಯ-ಮನುವು ತನ್ನ ಪುತ್ರರಿಗೆ ದಾಯಭಾಗವನ್ನು ಕೊಟ್ಟ ವಿಚಾರ	.....	399
	ಪ್ರಜಾಪತಿಯು ತನ್ನ ಸ್ವಂತಪುತ್ರಿಯಲ್ಲಿ ಅನುರಕ್ತನಾದ ವಿಷಯ	.....	414
	ಆದಿತ್ಯ, ಭೃಗು, ಅಂಗಿರಸರು ಇವರ ಉತ್ಪತ್ತಿ	.....	417
	ಇಲ್ಲಿಗೆ ಎಂಟನೆಯ ಅಷ್ಟಕದ ಮೊದಲನೆಯ ಅಧ್ಯಾಯವು ಸಮಾಪ್ತವು		

ಎರಡನೆಯ ಅಧ್ಯಾಯ

೬೨	**ಯೋ ಯಜ್ಞೇನ** ಎಂಬ ಅರವತ್ತೆರಡನೆಯ ಸೂಕ್ತವು	....	446
	ಸೂಕ್ತದ ಪೀಠಿಕೆ	.....	446
	ಅಂಗಿರಾಃ ಶಬ್ದದ ರೂಪನಿಷ್ಪತ್ತಿ	.....	452
೬೩	**ಪರಾವತಃ** ಎಂಬ ಅರವತ್ತಮೂರನೆಯ ಸೂಕ್ತ	.....	460
	ಸ್ವಸ್ತಿರಿದ್ಧಿ ಎಂಬ ಋಕ್ಕಿನ ನಿರುಕ್ತ	.....	481
೬೪	**ಕಥಾ ದೇವಾನಾಂ** ಎಂಬ ಅರವತ್ತನಾಲ್ಕನೆಯಸೂಕ್ತ	.....	483
	ನರಾಶಂಸ ಎಂಬ ದೇವತೆಯ ವಿಷಯ	.....	487
	ಅದಿತಿಶಬ್ದನಿರ್ವಚನ ಮತ್ತು ದಕ್ಷಸ್ಯ ವಾದಿತೇ ಎಂಬ ಋಕ್ಕಿನ ನಿರುಕ್ತ	.....	491
	ಏಳು ಮಂದಿ **ಸೋಮಪಾಲಕರ** ಹೆಸರು ಇತ್ಯಾದಿ	.....	496

೬೫	**ಅಗ್ನಿರಿಂದ್ರೋ ವರುಣಃ** ಎಂಬ ಅರವತ್ತೈದನೆಯ ಸೂಕ್ತ	.....	505
	ಸೂಕ್ತದ ಪೀಠಿಕೆ	.....	506
	ಮಿತ್ರ, ವರುಣ, ಅರ್ಯಮಾ ಎಂಬ ದೇವತೆಗಳ ವಿಷಯ	.....	506
೬೬	**ದೇವಾನ್ ಹುವೇ** ಎಂಬ ಅರವತ್ತಾರನೇ ಸೂಕ್ತ	.....	535
೬೭	**ಇಮಾಂ ಧಿಯಂ** ಎಂಬ ಅರವತ್ತೇಳನೆಯ ಸೂಕ್ತ	.....	553
	ಸೂಕ್ತದ ಪೀಠಿಕೆ	.....	553
	ಬೃಹಸ್ಪತಿ ಎಂಬ ದೇವತೆಯ ವಿಷಯ	.....	553
	ಬೃಹಸ್ಪತಿಯು ವಲನು ಅಪಹರಿಸಿದ್ದ ದೇವತೆಗಳ ಗೋವುಗಳನ್ನು ಹಿಂದಕ್ಕೆ ತಂದುದು	.....	561
	ಅಂಗಿರಸರಿಗೆ **ವರಾಹರೆಂಬ** ಹೆಸರು	.....	569
೬೮	**ಉದಪ್ರುತಃ** ಎಂಬ ಅರವತ್ತೆಂಟನೆಯ ಸೂಕ್ತ	.....	575
೬೯	**ಭದ್ರಾ ಅಗ್ನೇಃ** ಎಂಬ ಅರವತ್ತೊಂಭತ್ತನೆಯ ಸೂಕ್ತ	.....	588
೭೦	**ಇಮಾಂ ಮೇ ಅಗ್ನೇ** ಎಂಬ ಎಪ್ಪತ್ತನೆಯ ಸೂಕ್ತ	.....	602
	ಸೂಕ್ತದ ಪೀಠಿಕೆ—ಆಪ್ರೀಸೂಕ್ತಗಳ ವಿಷಯ	.....	602
	ಸಮಿದ್ಧ (ಅಗ್ನಿಃ)	.....	612
	ನರಾಶಂಸಃ	.....	614
	ಇಳಃ	.....	917
	ಬರ್ಹಿಃ	....	620
	ದೇವೀರ್ದ್ವಾರಃ	.....	622
	ನಕ್ತೋಷಾಸಾ	.....	625
	ದೇವ್ಯಾ ಹೋತಾರಾ	.....	629
	ತಿಸ್ರೋ ದೇವ್ಯಃ (ಸರಸ್ವತೀಳಾಭಾರತ್ಯಃ)	.....	633
	ತ್ವಷ್ಟಾ	.....	637
	ವನಸ್ಪತಿ	.....	641
	ಸ್ವಾಹಾಕೃತಿ	.....	646
೭೧	**ಬೃಹಸ್ಪತೇ ಪ್ರಥಮಂ** ಎಂಬ ಎಪ್ಪತ್ತೊಂದನೆಯ ಸೂಕ್ತ	.....	649
	ಸೂಕ್ತದ ಪೀಠಿಕೆ	.....	649
	ಸಕ್ತುಮಿವ ತಿತಉನಾ ಎಂಬ ಋಕ್ಕಿನ ನಿರುಕ್ತ	.....	654
	ಉತ ತ್ವಃ ಪಶ್ಯನ್ ಎಂಬ ಋಕ್ಕಿನ ನಿರುಕ್ತ	.....	658
	ಉತ ತ್ವಂ ಸಖ್ಯೇ ಎಂಬ ಋಕ್ಕಿನ ನಿರುಕ್ತ	.....	661
	ಅಕ್ಷಣ್ವಂತಃ ಕರ್ಣವಂತಃ ಎಂಬ ಋಕ್ಕಿನ ನಿರುಕ್ತ	.....	665
	ಋಚಾಂ ತ್ವಃ ಪೋಷಮಾಸ್ತೇ ಎಂಬ ಋಕ್ಕಿನ ನಿರುಕ್ತ	.....	672

ಇಲ್ಲಿಗೆ ಎಳನೇ ಅಷ್ಟಕದ ಎರಡನೆಯ ಅಧ್ಯಾಯವು ಸಮಾಪ್ತವು.

ಬೃಹದ್ದೇವತಾಗ್ರಂಥದ ವಿವರಣೆ

ಮೊದಲನೆಯ ಅಧ್ಯಾಯವು

ಪೀಠಿಕಾ ಪ್ರಕರಣ 677

ಮಂತ್ರಗಳಲ್ಲಿ ಸ್ತುತರಾದ ದೇವತೆಗಳನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ 677

ತ್ರಿಸ್ಥಾನ ದೇವತೆಗಳು 678

ಪ್ರಾರ್ಥನೆ ಅಥವಾ ಸ್ತುತಿಯ ಸ್ವರೂಪ 679

ನಾನಾವಿಧ ಸೂಕ್ತಗಳು 680

ಸೂಕ್ತಭಾಂಜಿ, ಋಗ್ಭಾಂಜಿ ನೈಪಾತಿಕ ಎಂಬ ಮೂರು ವಿಧ ಸೂಕ್ತಗಳು 681

ಹೆಸರುಗಳ ಸ್ವರೂಪ ಮತ್ತು ಅವು ಹೇಗೆ ಉತ್ಪತ್ತಿಯಾದವು ? 682

ವ್ಯಕ್ತಿಗೆ ಹೆಸರುಗಳು ವ್ಯಕ್ತಿಯ ಕರ್ಮಗಳಿಂದಲೇ ಉಂಟಾಗುವವು-ಇದು ಶೌನಕರ ಮತವು 684

ಮಂಗಲಕರವಾದ ಹೆಸರುಗಳು, ನಾನಾವಿಧಮಂತ್ರಗಳು 685

ಅರ್ಥಾನುಸಾರವಾಗಿ ಮಂತ್ರಗಳನ್ನು ವಿಂಗಡಿಸಿರುವ ಕ್ರಮ 686

ಸೂರ್ಯ (ಪ್ರಜಾಪತಿ)ನೇ ಸರ್ವಕ್ಕೂ ಮೂಲವು 689

ಅಗ್ನಿಯ ಮೂರುವಿಧ ರೂಪಗಳು 694

ತ್ರಿಸ್ಥಾನ ದೇವತೆಗಳು ಮತ್ತು ಆತ್ಮ ವಾಕ್ಯಿನ ಮೂರು ರೂಪಗಳು 695

ಸೂಕ್ತದ ಮುಖ್ಯದೇವತೆ 696

ನಾನಾದೇವತೆಗಳ ಹೆಸರುಗಳು 698

ಅಗ್ನಿ, ಇಂದ್ರ ಅಥವಾ ವಾಯು, ಸೂರ್ಯ ಎಂಬ ದೇವತೆಗಳ ಪರವಾದ ಸೂಕ್ತಗಳ ವರ್ಣನೆ 699

ಮೂರು ವಿಧ ಅಗ್ನಿಗಳು 700

ಅಗ್ನಿ, ಜಾತವೇದ, ವೈಶ್ವಾನರ ಎಂಬ ಹೆಸರುಗಳು ಒಂದೇ ಅಗ್ನಿಯನ್ನು ಸೂಚಿಸುವುದಾದರೂ ಆ ಅಗ್ನಿಗಳ ಗುಣವರ್ಣನೆಯಲ್ಲಿ ಭೇದವು ಕಂಡುಬರುವುದು 702

ಪ್ರತ್ಯವರೋಹಕ್ರಮದಿಂದ ತ್ರಿಸ್ಥಾನದೇವತೆಗಳ ವರ್ಣನೆ 703

ಪಾರ್ಥಿವಾಗ್ನಿಯನ್ನು ಪ್ರತಿಬಿಂಬಿಸುವ ದೇವತೆಗಳು 705

ಮಧ್ಯಮಸ್ಥಾನ (ಅಂತರಿಕ್ಷ) ದೇವತೆಗಳು ಮತ್ತು ಇಂದ್ರನಿಗೆ ಸಂಬಂಧಪಟ್ಟ ಇತರ ದೇವತೆಗಳು 709

ಇಲ್ಲಿಗೆ ಮೊದಲನೆಯ ಅಧ್ಯಾಯವು ಸಮಾಪ್ತವು.

ಎರಡನೆಯ ಅಧ್ಯಾಯವು

ಮಧ್ಯಮಸ್ಥಾನದೇವತೆಗಳು (ಮುಂದುವರೆದುದು) 712

ದ್ಯುಸ್ಥಾನದೇವತೆಗಳು, ಸೂರ್ಯನ ಮೂರುಮಂದಿ ಪತ್ನಿಯರು 713

ಸೌರ್ಯವೈಶ್ವಾನರನೆಂದರೆ ಅಗ್ನಿಯ ರೂಪಾಂತರ 716

ಅಗ್ನಿಯ ಐದು ಹೆಸರುಗಳು, ಅಗ್ನಿಶಬ್ದದ ರೂಪನಿಷ್ಪತ್ತಿ, ದ್ರವಿಣೋದಾಃ ಮತ್ತು ತನೂನಪಾತ್ ಎಂಬ ಶಬ್ದಗಳ ನಿಷ್ಪತ್ತಿ 717

ನರಾಶಂಸ, ಪವಮಾನ, ಜಾತವೇದಾಃ ಎಂಬ ದೇವತೆಗಳು	.....	719
ಇಂದ್ರನ ಇಪ್ಪತ್ತಾರು ನಾಮಗಳು; ವಾಯು, ವರುಣ, ರುದ್ರ ಮೊದಲಾದವರು	.....	719
ಪರ್ಜನ್ಯ, ಬೃಹಸ್ಪತಿ, ಬ್ರಹ್ಮಣಸ್ಪತಿ, ಕ್ಷೇತ್ರಸ್ಯಪತಿ ಇತ್ಯಾದಿ	.....	721
ವಾಸ್ತೋಷ್ಪತಿ, ಅದಿತಿ, ಕಃ, ಯಮ	.....	723
ಮಿತ್ರ, ವಿಶ್ವಕರ್ಮಾ, ಸರಸ್ವಾನ್, ವೇದ, ಮನ್ಯು	.....	724
ಅಸುನೀತಿ, ಅಪಾಂನಪಾತ್, ದಧಿಕ್ರಾ, ಧಾತೃ, ತಾರ್ಕ್ಷ್ಯ	.....	725
ಪುರೂರವಾಃ, ಮೃತ್ಯು, ಸೂರ್ಯನ ಹೆಸರುಗಳು	.....	727
ಪೂಷಾ, ವಿಷ್ಣು, ಕೇಶಿನ್, ವಿಶ್ವಾನರ, ವೃಷಾಕಪಿ	.....	728
ವಾಕ್ಕಿನ ಮೂರುವಿಧ ಸ್ವರೂಪ; ಪೃಥಿವೀ ಮತ್ತು ಮಧ್ಯಮಸ್ಥಾನದ ರೂಪಗಳು	.....	730
ವಾಗ್ದೇವತೆಯ ಇತರ ರೂಪಗಳು, ನಾಲ್ಕು ಸ್ವರ್ಗೀಯರೂಪಗಳು	.....	731
ಋಷಿಕಾ ಅಥವಾ ಮಂತ್ರದ್ರಷ್ಟಗಳಾದ ಸ್ತ್ರೀಋಷಿಗಳು—ಇವರಲ್ಲಿ ಮೂರು ಪಂಗಡಗಳು	.....	733
ಸ್ವಪ್ರಶಂಸೆ (ಆತ್ಮಪ್ರಶಂಸೆ) ಮಾಡಿಕೊಂಡಿರುವ ದೇವತೆಗಳು, ಸಂವಾದಗಳು, ನಿಪಾತಗಳು	.....	734
ಉಪಸರ್ಗಗಳು, ಮತ್ತು ಲಿಂಗಗಳು	.....	736
ನಾಮಪದಗಳು, ಸರ್ವನಾಮಗಳು, ಆರ್ಧ, ವಾಕ್ಯರಚನೆ	.....	737
ಪದವಿಚ್ಛೇದ ಮತ್ತು ಆರುವಿಧ ಸಮಾಸಪದಗಳು	....	738
ಶಬ್ದಗಳ ಅರ್ಥ ಮತ್ತು ವಿವರಣೆ	.....	740
ಯಾಸ್ಕರ ತಪ್ಪಾದ ವಿವರಣೆ	.....	741
ಪದ ಮತ್ತು ಅರ್ಥ ಕ್ರಿಯಾಶಬ್ದಾರ್ಥ	.....	743
ಓಂ ಎಂಬ ವ್ಯಾಹೃತಿ ಮತ್ತು ಅದರ ದೇವತೆಗಳು	.....	745

ಪೀಠಿಕಾಪ್ರಕರಣವು ಸಮಾಪ್ತವು.

ಪ್ರಥಮಮಂಡಲದ ಸೂಕ್ತಗಳ ವಿವರಣೆ

ಮೊದಲ ಮೂರು ಸೂಕ್ತಗಳು; ವೈಶ್ವದೇವಸೂಕ್ತಗಳ ದ್ರಷ್ಟೃಗಳು	.....	746
ವೈಶ್ವದೇವಸೂಕ್ತಗಳ ಸ್ವರೂಪ ಮತ್ತು ವಿವರಣೆ	.....	747
ಸರಸ್ವತೀದೇವತಾಕವಾದ ಮಂತ್ರಗಳು ಮತ್ತು ಇಂದ್ರದೇವತಾಕವಾದ ಸೂಕ್ತಗಳು	.....	748
೬ ನೇ ಸೂಕ್ತದ ೫, ೭ ನೇ ಋಕ್ಕುಗಳಲ್ಲಿರುವ ಇಂದ್ರ ಮತ್ತು ಮರುತ್ತುಗಳ ಸಾಹಚರ್ಯ	.....	750
ಪ್ರಥಮಮಂಡಲದ ೧೨ ನೇ ಸೂಕ್ತ ಮತ್ತು ೧೩ ನೇ ಆಪ್ರೀಸೂಕ್ತ	.....	751
ಹನ್ನೊಂದು ಆಪ್ರೀಸೂಕ್ತಗಳು	.....	753
ಆಪ್ರೀಸೂಕ್ತಗಳ ಮೂರು ಗುಂಪುಗಳು ಅಥವಾ ಪ್ರಭೇದಗಳು	.....	754

ಎರಡನೆಯ ಅಧ್ಯಾಯವು ಸಮಾಪ್ತವು.

ಮೂರನೆಯ ಅಧ್ಯಾಯವು

ಆಪ್ರೀಸೂಕ್ತಗಳ ವಿವರಣೆ (ಮುಂದುವರೆದುದು)	.....	756
ತನೂನಪಾತ್, ನರಾಶಂಸ, ಇಳಾ, ಬರ್ಹಿ, ಎಂಬ ದೇವತೆಗಳು	.....	756

ದೇವೀದ್ವಾರಃ ಮತ್ತು ಉಷಾಸಾನಕ್ತಾ ಎಂಬ ದೇವತೆಗಳು	.....	757
ದೈವ್ಯಾ ಹೋತಾರಾ, ತಿಸ್ರೋ ದೇವ್ಯಃ ತ್ವಷ್ಟಾ	.....	758
ಸ್ವರ್ಗೀಯದೇವತೆಯಾದ ತ್ವಷ್ಟೃ ; ದಧೀಚಿಋಷಿಯ ವೃತ್ತಾಂತ	.....	760
ದಧೀಚಿಋಷಿಯ ಅಶ್ವಶಿರಸ್ಸು—ಮಧ್ಯಮಸ್ಥಾನವಾದ ತ್ವಷ್ಟೃವು	.....	761
ವನಸ್ಪತಿ ಮತ್ತು ಸ್ವಾಹಾಕೃತಿ ಎಂಬ ದೇವತೆಗಳು	.....	763
ತನೂನಪಾತ್ ಮತ್ತು ನರಾಶಂಸ ಎಂಬ ಎರಡು ದೇವತೆಗಳನ್ನೂ ಸ್ತುತಿಸಿರುವ ಆಪ್ರೀಸೂಕ್ತಗಳು	.....	764
ಪ್ರಥಮಮಂಡಲದ ೧೪ ಮತ್ತು ೧೫ ನೇ ಸೂಕ್ತಗಳ ದೇವತೆಗಳು	.....	765
ಋತುದೇವತಾಕವಾದ ಸೂಕ್ತ—೧ ನೇ ಮಂಡಲದ ೧೫ ನೇ ಸೂಕ್ತ	.....	765
ಮೂರು ವಿಧವಾದ ವೈಶ್ವದೇವಸೂಕ್ತಗಳು	.....	767
ವೈಶ್ವದೇವಸೂಕ್ತಗಳ ಲಕ್ಷಣ	.....	768
ಸೂಕ್ತಭಾಗಿನೀ ಮತ್ತು ನಿಪಾತಿನೀ ಮಂತ್ರಗಳು	.....	770
ವಿಶ್ವೇದೇವತಾಕಸೂಕ್ತಗಳ ದ್ರಷ್ಟೃಗಳಾದ ಋಷಿಗಳ ಹೆಸರುಗಳು	.....	771
ದ್ರವಿಣೋದಾಃ ಎಂಬ ದೇವತೆಯ ವಿಷಯ	.....	772
೧೬, ೧೭, ೧೮ ನೇ ಸೂಕ್ತಗಳ ದೇವತೆಗಳು	.....	774
೧೯ ನೇ ಸೂಕ್ತದ ದೇವತೆಗಳು	.....	776
ಮಂತ್ರದಲ್ಲಿ ನಿರ್ದಿಷ್ಟರಾಗಿರುವ ದೇವತೆಗಳನ್ನು ತಿಳಿಯುವ ಬಗೆ	.....	777
ಋಭುಗಳ ಮತ್ತು ತ್ವಷ್ಟೃವಿನ ವೃತ್ತಾಂತ	.....	779
೨೦–೨೨ ನೇ ಸೂಕ್ತಗಳ ದೇವತೆಗಳು	.....	781
೨೩ ನೇ ಸೂಕ್ತದ ದೇವತೆಗಳು	.....	782
೨೪–೩೦ ನೇ ಸೂಕ್ತಗಳ ದೇವತೆಗಳು	.....	784
೩೧–೪೦ ನೇ ಸೂಕ್ತಗಳ ದೇವತೆಗಳು	.....	785
೪೧-೪೬ ನೇ ಸೂಕ್ತಗಳ ದೇವತೆಗಳು	.....	787
ಸವ್ಯನ ವೃತ್ತಾಂತ ಶತರ್ಚಿನರು ಎಂದರೆ ಯಾರು ?	.....	789
೬೧-೭೩ ನೇ ಸೂಕ್ತಗಳ ದೇವತೆಗಳು	.....	790
೭೪–೯೦ ನೇ ಸೂಕ್ತಗಳ ದೇವತೆಗಳು	.....	791
೯೧-೧೦೪ ನೇ ಸೂಕ್ತದ ದೇವತೆಗಳು	.....	792
೧೦೫ ನೇ ಸೂಕ್ತ–ತ್ರಿತ ಆಪ್ತ್ಯ ಎಂಬ ಋಷಿಯ ವೃತ್ತಾಂತವು	.....	795
೧೧೨-೧೨೦ ಸೂಕ್ತಗಳ ದೇವತೆಗಳು	.....	796
ಕಕ್ಷೀವಾನ್ ಮತ್ತು ಸ್ವನಯ ಎಂಬುವರ ವೃತ್ತಾಂತವು	.....	798
ರಾಜರ ದಾನಪ್ರಶಂಸೆ, ನಾರಾಶಂಸೀ ಮಂತ್ರಗಳು, ಮತ್ತು ೧೨೬ ನೇ ಸೂಕ್ತದ ೬–೭ ನೇ ಮಂತ್ರಗಳ ವಿಷಯದಲ್ಲಿ ಕೆಲವು ಅಭಿಪ್ರಾಯಗಳು	.....	800

ಮೂರನೆಯ ಅಧ್ಯಾಯವು ಸಮಾಪ್ತವು

ನಾಲ್ಕನೆಯ ಅಧ್ಯಾಯವು

ರೋಮಶಾ ಮತ್ತು ಇಂದ್ರ ಇವರ ವೃತ್ತಾಂತ—೧೨೭-೧೩೬ ನೇ ಸೂಕ್ತಗಳು 803

೧೩೭-೧೪೯ ನೇ ಸೂಕ್ತಗಳ ದೇವತೆಗಳು ; ವೈಶ್ವದೇವಸೂಕ್ತಗಳ ಸ್ವರೂಪ 805

ದೀರ್ಘತಮಾಃ ಎಂಬ ಋಷಿಯ ಜನ್ಮ ವೃತ್ತಾಂತ 807

ದೀರ್ಘತಮಾಃ ಎಂಬ ಋಷಿಯಿಂದ ದೃಷ್ಟವಾದ ಸೂಕ್ತಗಳು ೧೪೦-೧೫೬ 808

ದೀರ್ಘತಮಾಃ ಎಂಬ ಋಷಿಯ ಮುಂದಿನ ವೃತ್ತಾಂತವು 809

೧೫೭-೧೬೩ ನೇ ಸೂಕ್ತಗಳ ದೇವತೆಗಳು 811

೧೬೪ ನೇ ಸೂಕ್ತದ ದೇವತೆಗಳು—ಮೂರುವಿಧ ಅಗ್ನಿಗಳು, ಸಂವತ್ಸರ 813

೧೬೫-೧೬೯ ನೇ ಸೂಕ್ತಗಳ ದೇವತೆಗಳು 816

ಮರುದ್ದೇವತೆಗಳ ವಿಷಯದಲ್ಲಿ ಒಂದು ಇತಿಹಾಸವು 816

ಇಂದ್ರ, ಮರುತ್ತುಗಳು ಮತ್ತು ಅಗಸ್ತ್ಯಋಷಿ (೧೬೯-೧೯೦ ಸೂಕ್ತಗಳು) 817

ಅಗಸ್ತ್ಯ ಮತ್ತು ಅವನ ಪತ್ನಿಯಾದ ಲೋಪಾಮುದ್ರಾ ; ೧೭೯ ನೇ ಸೂಕ್ತ 819

೧೯೦-೧೯೧ನೇ ಸೂಕ್ತಗಳು 821

ಇಲ್ಲಿಗೆ ಪ್ರಥಮ ಮಂಡಲವು ಸಮಾಪ್ತವು

ಎರಡನೆಯ ಮಂಡಲವು

೨ನೇ ಮಂಡಲದ ೧-೧೪ ಸೂಕ್ತಗಳು; ಗೃತ್ಸಮದಋಷಿ, ಇಂದ್ರ ಮತ್ತು ದೈತ್ಯರು 823

ಗೃತ್ಸಮದ ಮತ್ತು ಇಂದ್ರ 824

೨೩-೩೦ ಸೂಕ್ತಗಳು 827

೩೧-೩೫ ಸೂಕ್ತಗಳ ದೇವತೆಗಳು 828

೩೬-೪೩ ಸೂಕ್ತದ ದೇವತೆಗಳು; ಕಪಿಂಜಲರೂಪನಾದ ಇಂದ್ರನು 830

ಇಲ್ಲಿಗೆ ಎರಡನೆಯ ಮಂಡಲವು ಸಮಾಪ್ತವು

ಮೂರನೆಯ ಮಂಡಲವು

ಮಂಡಲದ್ರಷ್ಟೃವಾದ ವಿಶ್ವಾಮಿತ್ರಋಷಿಯು ; ೧-೬ ಸೂಕ್ತಗಳು 832

೭-೯ ನೇ ಸೂಕ್ತಗಳ ದೇವತೆಗಳು 834

೩೦-೩೩ ನೇ ಸೂಕ್ತಗಳ ದೇವತೆಗಳು ; ವಿಶ್ವಾಮಿತ್ರ, ಸುದಾಸ ಮತ್ತು ನದಿಗಳು 835

ದತ್ತುಪುತ್ರಿಯ ವಿಷಯ ; ವಿಶ್ವಾಮಿತ್ರ ಮತ್ತು ಶಕ್ತಿ 837

ವಿಶ್ವಾಮಿತ್ರ ಮತ್ತು ವಾಕ್ ಸಸರ್ಪರೀ ; ವಸಿಷ್ಠರಿಗೆ ವಿಶ್ವಾಮಿತ್ರನ ಶಾಪ 838

೬೧-೬೨ ನೇ ಸೂಕ್ತದ ದೇವತೆಗಳು 841

ಇಲ್ಲಿಗೆ ಮೂರನೆಯ ಮಂಡಲವು ಸಮಾಪ್ತವು

ನಾಲ್ಕನೆಯ ಮಂಡಲವು

ನಾಲ್ಕನೆಯ ಮಂಡಲದ ೧-೧೫ ಸೂಕ್ತಗಳು 842

ವಾಮದೇವ ಋಷಿಯ ಜನನವೃತ್ತಾಂತ ಇತ್ಯಾದಿ 843

ನಾನಾ ದೇವತೆಗಳ ವಾಹನಗಳು 846

ಇಲ್ಲಿಗೆ ನಾಲ್ಕನೆಯ ಅಧ್ಯಾಯವು ಸಮಾಪ್ತವು

ಐದನೆಯ ಅಧ್ಯಾಯವು

೪ ನೇ ಮಂಡಲದ ೩೩-೫೨ ನೇ ಸೂಕ್ತದ ದೇವತೆಗಳು 848

೫೩-೫೮ ನೇ ಸೂಕ್ತಗಳ ದೇವತೆಗಳು 850

ನಾಲ್ಕನೆಯ ಮಂಡಲವು ಸಮಾಪ್ತವು

ಐದನೆಯ ಮಂಡಲವು

೫ ನೇ ಮಂಡಲದ ೧-೭೮ ಸೂಕ್ತಗಳ ದೇವತೆಗಳು; ತ್ರ್ಯರುಣ ಮತ್ತು ವ್ಯಶ್ವಜಾನರ ವೃತ್ತಾಂತ 852

೨ ನೇ ಸೂಕ್ತದ ೨ ಮತ್ತು ೯ ನೇ ಋಕ್ಕುಗಳ ವಿಷಯದಲ್ಲಿ ಇತರ ಗ್ರಂಥಗಳ ಪ್ರಮಾಣವು ಮತ್ತು ೩೯-೪೦ ಸೂಕ್ತಗಳ ದೇವತೆಗಳು 855

೪೧ -೫೧ ಸೂಕ್ತಗಳ ದೇವತೆಗಳು ಮತ್ತು ಋಣಂಚಯರಾಜನು ಬಭ್ರುವಿಗೆ ಮಾಡಿದ ದಾನದ ಪ್ರಶಂಸೆಯು 857

೪೩, ೪೪, ೪೫ ನೇ ಸೂಕ್ತಗಳ ದೇವತೆಗಳು 860

೫೧-೬೦ ಸೂಕ್ತಗಳ ದೇವತೆಗಳು 861

ಶ್ಯಾವಾಶ್ವನ ವೃತ್ತಾಂತವು 862

ಸಪ್ತವಧ್ರಿಯ ವೃತ್ತಾಂತ 870

೬೯-೭೭ ನೇ ಸೂಕ್ತಗಳ ದೇವತೆಗಳು 871

ಭೃಗು, ಅಂಗಿರಸ, ಅತ್ರಿ ಎಂಬ ಋಷಿಗಳ ಜನ್ಮವೃತ್ತಾಂತ 874

ಭರದ್ವಾಜಋಷಿಯ ಜನನವೃತ್ತಾಂತ 875

ಐದನೆಯ ಮಂಡಲವು ಸಮಾಪ್ತವು

ಆರನೆಯ ಮಂಡಲವು

ಆರನೇ ಮಂಡಲದ ೧-೪೭ ಸೂಕ್ತಗಳ ದೇವತೆಗಳು 876

೩೭, ೪೪, ೪೫, ೪೭ನೇ ಸೂಕ್ತಗಳ ದೇವತೆಗಳು 877

೪೯-೫೨ ಸೂಕ್ತಗಳ ದೇವತೆಗಳು 880

೬೩-೭೪ ಸೂಕ್ತಗಳ ದೇವತೆಗಳು ; ಸಪ್ತನಿಧಿಗಳು 881

೭೫ ನೇ ಸೂಕ್ತ ; ಅಭ್ಯಾವರ್ತೀ ಮತ್ತು ಪ್ರಸ್ತೋಕ ಸಾಂಜ್ಯ ಎಂಬುವರ ವೃತ್ತಾಂತ 882

೭೫ ನೇ ಸೂಕ್ತದ ದೇವತೆಗಳು 884

ಆರನೆಯ ಮಂಡಲವು ಸಮಾಪ್ತವು

ಏಳನೆಯ ಮಂಡಲವು

ವಸಿಷ್ಠಋಷಿಯ ಮಹಿಮೆ ; ಕಶ್ಯಪನ ಪತ್ನಿಯರು 888

ವಸಿಷ್ಠ ಮತ್ತು ವಸಿಷ್ಠಕುಲದವರು ; ೭ ನೇ ಮಂಡಲದ ೧-೩೨ ಸೂಕ್ತಗಳ ದೇವತೆಗಳು 892

೩೩-೩೮ ಸೂಕ್ತಗಳ ದೇವತೆಗಳು 893

೩೯-೪೩ ಸೂಕ್ತಗಳ ದೇವತೆಗಳು 895

೪೪-೪೯ ಸೂಕ್ತಗಳ ದೇವತೆಗಳು 896

ಇಲ್ಲಿಗೆ ಐದನೆಯ ಅಧ್ಯಾಯವು ಸಮಾಪ್ತವು

ಆರನೆಯ ಆಧ್ಯಾಯವು

೭ ನೇ ಮಂಡಲದ ೫೦-೬೬ ಸೂಕ್ತಗಳ ದೇವತೆಗಳು 898

೬೭-೭೪ ನೇ ಸೂಕ್ತಗಳ ದೇವತೆಗಳು 899

೭೫-೮೫ ಸೂಕ್ತಗಳ ದೇವತೆಗಳು 901

೮೬-೮೯ ಸೂಕ್ತಗಳ ದೇವತೆಗಳು ; ವಸಿಷ್ಠ ಮತ್ತು ವರುಣನ ನಾಯಿಯು 901

೯೦-೯೬ ಸೂಕ್ತಗಳ ದೇವತೆಗಳು 902

ನಾಹುಷ ಮತ್ತು ಸರಸ್ವತಿ ಇವರ ವೃತ್ತಾಂತವು 903

೯೭-೧೦೪ ಸೂಕ್ತಗಳ ದೇವತೆಗಳು 905

೧೦೪ ನೇ ಸೂಕ್ತದ ಋಕ್ಕುಗಳ ಪ್ರತ್ಯೇಕ ವಿವರಣೆ 906

ಏಳನೆಯ ಮಂಡಲವು ಸಮಾಪ್ತವು

ಎಂಟನೆಯ ಮಂಡಲವು

ಕಣ್ವ ಮತ್ತು ಪ್ರಗಾಥ ಎಂಬುವರ ವೃತ್ತಾಂತ 908

೮ ನೇ ಮಂಡಲದ ೧-೩೧ ಸೂಕ್ತಗಳ ದೇವತೆಗಳು 909

೫-೧೪ ಸೂಕ್ತಗಳ ದೇವತೆಗಳು 911

೧೯ ನೇ ಸೂಕ್ತದ ದೇವತೆ ಮತ್ತು ತ್ರಸದಸ್ಯುರಾಜನ ದಾನಪ್ರಶಂಸೆ 912

ಋಷಿಯು ಇಂದ್ರನನ್ನು ಬೇಡಿದ ವರಗಳು, ಸೋಭರಿ ಮತ್ತು ಚಿತ್ರ ಎಂಬುವರ ವೃತ್ತಾಂತವು 914

೨೨-೨೫ ನೇ ಸೂಕ್ತಗಳ ವೃತ್ತಾಂತವು 915

೨೯-೩೦ ನೇ ಸೂಕ್ತಗಳ ಪ್ರತ್ಯೇಕವಿವರಣೆ ; ೩೨-೩೪ ನೇ ಸೂಕ್ತಗಳು 918

೪೭-೫೬ ನೇ ಸೂಕ್ತಗಳ ದೇವತೆಗಳು 921

೬೮-೭೫ ನೇ ಸೂಕ್ತಗಳ ದೇವತೆಗಳು 924

೭೬-೯೦ ನೇ ಸೂಕ್ತಗಳ ದೇವತೆಗಳು 926

ಅಪಾಲಾ ಎಂಬ ಸ್ತ್ರೀಯ ವೃತ್ತಾಂತ 927

ಸೋಮನು ದೇವತೆಗಳನ್ನು ಬಿಟ್ಟು ಓಡಿಹೋದ ವಿಚಾರ 929

೧೦೦ ನೇ ಸೂಕ್ತದ ಪ್ರತ್ಯೇಕವಿವರಣೆ ; ವಿಷ್ಣುವು ಇಂದ್ರನಿಗೆ ಸಹಾಯಮಾಡುವುದು 932

೧೦೧ ನೇ ಸೂಕ್ತದ ಪ್ರತ್ಯೇಕವಿವರಣೆ 934

ಎಂಟನೆಯ ಮಂಡಲವು ಸಮಾಪ್ತವು

ಒಂಭತ್ತನೆಯ ಮಂಡಲವು

ಗ–೮೬ ನೇ ಸೂಕ್ತಗಳ ದೇವತೆಗಳು 936

೮೭, ೯೬, ೧೧೨ ನೇ ಸೂಕ್ತಗಳ ದೇವತೆಗಳು 937

ಇಂದ್ರ ಮತ್ತು ಋಷಿಗಳು; ತಪಸ್ಸಾಮರ್ಥ್ಯ 939

ಒಂಭತ್ತನೆಯ ಮಂಡಲವು ಸಮಾಪ್ತವು.

ಹತ್ತನೆಯ ಮಂಡಲವು

ಹತ್ತನೆಯ ಮಂಡಲದ ೧–೮ ನೇ ಸೂಕ್ತಗಳ ದೇವತೆಗಳು; ತ್ರಿಶಿರಾಃ ಮತ್ತು ಇಂದ್ರ 941

೯–೧೪ ನೇ ಸೂಕ್ತಗಳ ದೇವತೆಗಳು ಮತ್ತು ೧೫-೧೬ ನೇ ಸೂಕ್ತಗಳ ದೇವತೆಗಳು;
ಮೂರುವಿಧ ಅಗ್ನಿಗಳು 942

ಸರಣ್ಯೂದೇವಿಯ ವೃತ್ತಾಂತ 945

ಇಲ್ಲಿಗೆ ಆರನೆಯ ಅಧ್ಯಾಯವು ಸಮಾಪ್ತವು.

ಏಳನೆಯ ಅಧ್ಯಾಯವು

ಸರಣ್ಯೂದೇವಿಯ ವೃತ್ತಾಂತ (ಮುಂದುವರೆದುದು) 947

೧೭ ನೇ ಸೂಕ್ತದ ದೇವತೆಗಳು 948

೧೮ ನೇ ಸೂಕ್ತದಲ್ಲಿ ಅಂತ್ಯಸಂಸ್ಕಾರಕ್ಕಾಗಿ ಉಪಯೋಗಿಸುವ ಕೆಲವು ಮಂತ್ರಗಳ ವಿವರಣೆ 950

ಯಾವ ದೇವತೆಯ ಹೆಸರೂ ಇಲ್ಲದ ಕೆಲವು ಮಂತ್ರಗಳು 951

೧೯–೨೭ ನೇ ಸೂಕ್ತಗಳ ದೇವತೆಗಳು 953

೩೦-೩೩ ನೇ ಸೂಕ್ತಗಳ ದೇವತೆಗಳು 956

ಪಗಡೆದಾಳಗಳ ಪ್ರಶಂಸೆ; ೩೪–೪೪ ನೇ ಸೂಕ್ತಗಳ ದೇವತೆಗಳು 957

೪೫–೪೬ ನೇ ಸೂಕ್ತಗಳ ದೇವತೆಗಳು 959

ಘೋಷಾ ಎಂಬ ಸ್ತ್ರೀಯ ವೃತ್ತಾಂತ 959

ಇಂದ್ರವೈಕುಂಠನೆಂಬ ಋಷಿಯ ವೃತ್ತಾಂತ 961

ಸೌಚೀಕಾಗ್ನಿಯ ವಿಷಯ; ಅಗ್ನಿಯು ದೇವತೆಗಳನ್ನು ಬಿಟ್ಟು ಓಡಿಹೋಗಿ ನೀರಿನಲ್ಲಿ
ಅವಿತುಕೊಂಡಿದ್ದ ವಿಚಾರ 964

ಪಂಚಜನರ ವಿವರಣೆ 966

ಸುಬಂಧುವಿನ ವೃತ್ತಾಂತ—೫೭-೫೯ ನೇ ಸೂಕ್ತಗಳು 971

೬೦ ನೇ ಸೂಕ್ತದ ದೇವತೆಗಳು 974

೬೭-೭೨ ನೇ ಸೂಕ್ತದ ದೇವತೆಗಳು 978

೭೧ ನೇ ಸೂಕ್ತದ ಪ್ರತ್ಯೇಕವಿವರಣೆ 978

೭೩-೮೪ ನೇ ಸೂಕ್ತದ ದೇವತೆಗಳು (ಪಿಲಮಂತ್ರಗಳು) 980

ಸೂರ್ಯಾಸೂಕ್ತದ (೮೫) ವಿವರಣೆ 982

೮೩–೯೩ ನೇ ಸೂಕ್ತಗಳ ದೇವತೆಗಳು 988

ಪುರೂರವ ಮತ್ತು ಊರ್ವಶಿಯ ಕಥೆ; ೯೫ ನೇ ಸೂಕ್ತ	....	989
೯೬-೯೭ ನೇ ಸೂಕ್ತಗಳ ದೇವತೆಗಳು; ದೇವಾಪಿಯ ವೃತ್ತಾಂತ	....	991
ಋಷ್ಟಿಷೇಣನ ಪುತ್ರನಾದ ದೇವಾಪಿ ಮತ್ತು ಶಂತನು ಎಂಬುವರ ವೃತ್ತಾಂತ	....	991

ಇಲ್ಲಿಗೆ ಏಳನೆಯ ಅಧ್ಯಾಯವು ಸಮಾಪ್ತವು.

ಎಂಟನೆಯ ಅಧ್ಯಾಯವು

ದೇವಾಪಿಯ ವೃತ್ತಾಂತ (ಮುಂದುವರೆದುದು)	....	993
೧೦೨-೧೦೩ ನೇ ಸೂಕ್ತಗಳು; ನಕುಲಋಷಿಯ ಖಿಲಮಂತ್ರಗಳು	....	996
೧೦೪-೧೦೬ ನೇ ಸೂಕ್ತಗಳು; ಭೂತಾಂಶಕಾಶ್ಯಪ	....	997
ಪಣಿ ಎಂಬ ಅಸುರರ ಮತ್ತು ಸರಮಾ ಎಂಬ ದೇವಶುನಿಯ ಕಥೆ; ೧೦೮ ನೇ ಸೂಕ್ತ	....	999
೧೦೯-೧೧೦ ನೇ ಸೂಕ್ತಗಳ ದೇವತೆಗಳು	....	1002
೧೧೧-೧೧೯ ನೇ ಸೂಕ್ತಗಳ ದೇವತೆಗಳು; ಮೂರು ಖಿಲಸೂಕ್ತಗಳು	....	1004
ಭೂಮಿಃ ಎಂಬ ಖಿಲಸೂಕ್ತ; ೧೨೮-೧೪೨ ನೇ ಸೂಕ್ತಗಳ ದೇವತೆಗಳು	....	1007
೧೪೩-೧೫೪ ನೇ ಸೂಕ್ತಗಳ ದೇವತೆಗಳು; ಖಿಲಸೂಕ್ತ, ಮೇಧಾಸೂಕ್ತ	....	1008
೧೫೫-೧೫೯ ನೇ ಸೂಕ್ತಗಳ ದೇವತೆಗಳು	....	1009
೧೬೦-೧೬೪ ನೇ ಸೂಕ್ತಗಳ ದೇವತೆಗಳು; ಕಪೋತನೈರ್ಋತನೆಂಬ ಋಷಿ	....	1010
೧೬೫-೧೭೪ ನೇ ಸೂಕ್ತಗಳ ದೇವತೆಗಳು	....	1012
೧೭೫-೧೮೨ ನೇ ಸೂಕ್ತಗಳ ದೇವತೆಗಳು	....	1013
೧೮೩-೧೮೪ ನೇ ಸೂಕ್ತಗಳ ದೇವತೆಗಳು	....	1015
ನೇಜಮೇಷ ಎಂಬ ಖಿಲಸೂಕ್ತ (೩೪); ೧೮೫-೧೮೯ ನೇ ಸೂಕ್ತಗಳ ದೇವತೆಗಳು	....	1016
೧೮೯-೧೯೦ ನೇ ಸೂಕ್ತಗಳು; ಸಂಜ್ಞಾನಂ ಎಂಬ ಖಿಲಸೂಕ್ತ	....	1017
೧೯೧ ನೇ ಸೂಕ್ತ; ಮಹಾನಾಮ್ನ್ಯಾ ಋಕ್ಕುಗಳು	.....	1019
ನಿವಿತ್ಸೂಕ್ತಗಳು, ನಿಗದಗಳು ಮತ್ತು ಛಂದಸ್ಸುಗಳ ದೇವತೆಗಳು	....	1022
ಛಂದಸ್ಸುಗಳ ದೇವತೆಗಳು; ವೇದಗಳ, ವಷಟ್ಕಾರಗಳ, ಸ್ವಾಹಾಕಾರಗಳ, ಸ್ವರಗಳ ದೇವತೆಗಳು	....	1023
ಸ್ವರಗಳ ದೇವತೆಗಳು	....	1025
ವೈಶ್ವದೇವಸೂಕ್ತಗಳಲ್ಲಿ ಪ್ರಸ್ತಾಪಪ್ರತ್ಯೇನ ಸ್ತುತರಾಗಿರುವ ನಾನಾ ದೇವತೆಗಳು	....	1027
ದೇವತೆಗಳ ವಿಷಯದಲ್ಲಿ ಸರಿಯಾದ ತಿಳುವಳಿಕೆಯು ಅವಶ್ಯಕವು	....	1029
ಮಂತ್ರಗಳ ದೇವತೆಗಳನ್ನು ತಿಳಿದುಕೊಳ್ಳುವ ಅವಶ್ಯಕತೆ	....	1030

ಎಂಟನೆಯ ಅಧ್ಯಾಯವು ಸಮಾಪ್ತವು.

ಬೃಹದ್ದೇವತಾಗ್ರಂಥದಲ್ಲಿ ಉಕ್ತವಾಗಿರುವ ಉಪಾಖ್ಯಾನ ಮತ್ತು ಇತಿಹಾಸಗಳು	....	1031
ಬೃಹದ್ದೇವತೆಯಲ್ಲಿ ಉಕ್ತವಾಗಿರುವ ಋಗ್ವೇದಮಂತ್ರಗಳ ಅಕಾರಾದಿವರ್ಣಾನುಕ್ರಮಣಿಕೆ	....	1035

ವಿಷಯಾನುಕ್ರಮಣಿಕೆ ಸಮಾಪ್ತವು

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥

ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥
ವ್ಯಾಖ್ಯಾಯ ನಿಗಮಾಭಿಜ್ಞಃ ಸಪ್ತಮಂ ಸಪ್ತಮಾಷ್ಟಕೇ ।
ಅಧ್ಯಾಯಂ ಸಾಯಣಾಚಾರ್ಯಃ ಅಷ್ಟಮಂ ವ್ಯಾಕರೋತ್ಕಥ ॥

ಸಾಯಣಭಾಷ್ಯ ಸಹಿತಾ

ಋಗ್ವೇದ ಸಂಹಿತಾ

(ಕರ್ಣಾಟಕ ಭಾಷಾರ್ಥಾನುವಾದ ವಿವರಣೆ ಸಹಿತವಾಗಿ)

ಭಾಗ-೨೮

॥ ಸಪ್ತಮಾಷ್ಟಕೇ ಅಷ್ಟಮೋಽಧ್ಯಾಯಃ ॥

ಏಳನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯವು

ಹತ್ತನೆಯ ಮಂಡಲದಲ್ಲಿ ನಲವತ್ತೊಂದನೆಯ ಸೂಕ್ತವು

ಪೀಠಿಕೆ

ಋಗ್ವೇದಸಂಹಿತೆಯ ಇಪ್ಪತ್ತೇಳನೆಯ ಭಾಗದಲ್ಲಿ ಹತ್ತನೆಯ ಮಂಡಲದ ನಲವತ್ತು ಸೂಕ್ತಗಳು ಮುಗಿದಿವೆ. ಈ ೨೮ನೆಯ ಭಾಗವು ನಲವತ್ತೊಂದನೆಯ ಸೂಕ್ತದಿಂದ ಪ್ರಾರಂಭವಾಗಿ ಏಳನೆಯ ಅಷ್ಟಕದ ಮೊದಲ ಏಳು ಅಧ್ಯಾಯಗಳೂ, ಎಂಟನೆಯ ಅಧ್ಯಾಯದಲ್ಲಿ ೨೦ ವರ್ಗಗಳೂ ಪೂರ್ತಿಯಾಗಿ ಮುಗಿದಿವೆ. ಪ್ರಸಕ್ತ ಪ್ರಾರಂಭ ಸೂಕ್ತವಾದ **ಸಮಾನಮು ತ್ಯಂ** ಎಂಬ ೪೧ನೆಯ ಸೂಕ್ತಕ್ಕೆ ಘೋಷಾ ಎಂಬ ಸ್ತ್ರೀಯ ಪುತ್ರನಾದ ಸುಹಸ್ತ್ಯನೆಂಬುವನು ಋಷಿಯು. ಆದ್ದರಿಂದ ಈ ಋಷಿಯ ತಾಯಿಯಾದ ಘೋಷೆಯ ಪರಿಚಯವನ್ನೂ, ಸುಹಸ್ತ್ಯಋಷಿಯ ಪರಿಚಯವನ್ನೂ ಇಲ್ಲಿ ಸೂಕ್ಷ್ಮವಾಗಿ ವಿವರಿಸುವುದು ಅವಶ್ಯಕವಾಗಿದೆ.

ಅಶ್ವಿನೀದೇವತೆಗಳು ಯಾವ ತತ್ತ್ವವನ್ನು ಪ್ರತಿಬಿಂಬಿಸುವರೆಂಬ ವಿಷಯಲ್ಲಿ ಇರುವ ಅಭಿಪ್ರಾಯಭೇದಗಳನ್ನು ತಿಳಿಸಲು ನಿರುಕ್ತಾದಿ ವಾಕ್ಯಗಳನ್ನು ದಾಹರಿಸಿ ಹಿಂದೆ ವಿವರಿಸಿದೆ. ಈ ದೇವತೆಗಳ ಮಾಹಾತ್ಮ್ಯವನ್ನು ತಿಳಿಸುವ ಅನೇಕ ಸಂದರ್ಭಗಳನ್ನು ವಿಶದಪಡಿಸಿದೆ. ಅನೇಕ ಋಷಿಗಳು ಈ ದೇವತೆಗಳನ್ನು ಪ್ರಶಂಸಿಸಿದ್ದಾರೆ. ಅವರಲ್ಲಿ **ಘೋಷಾ** ಎಂಬ ಸ್ತ್ರೀಋಷಿಯಿಂದ ನಿರ್ಮಿತವಾಗಿರುವ ೧೦ ನೇ ಮಂಡಲದ ೩೯ ಮತ್ತು ೪೦ ನೇ ಸೂಕ್ತವೂ, ಅವಳ ಪುತ್ರನಾದ ಸುಹಸ್ತ್ಯನಿಂದ ನಿರ್ಮಿತವಾಗಿರುವ ೪೧ನೇ ಸೂಕ್ತವೂ ಪ್ರಸಿದ್ಧವಾಗಿದೆ. ಈ ಸೂಕ್ತಗಳಲ್ಲಿ ಋಷಿಗಳು ಅಶ್ವಿನೀದೇವತೆಗಳ ಅಸಾಧಾರಣವಾದ ಮಹದ್ಗುಣಗಳನ್ನು ಪ್ರಶಂಸಿಸಿದ್ದಾರೆ.

ಘೋಷಾ ಸಂಜ್ಞಕಳಾದ ಋಷಿಯಿಂದ ನಿರ್ಮಿತವಾದ ಸೂಕ್ತಗಳು ಎರಡೇ ಆದರೂ ಸಹ, ಅಶ್ವಿನೀದೇವತೆಗಳು ಅವಳಿಗೆ ಮಾಡಿದ ಮಹದುಪಕಾರವನ್ನೂ, ಅವಳ ಮಹತ್ತ್ವವನ್ನೂ ಹಿಂದೆ ಅನೇಕ ಮಂತ್ರಗಳಲ್ಲಿ ಹೊಗಳಿದೆ. ಉತ್ತಮಳಾದ ಭಕ್ತಳಾದುದರಿಂದ ಅವಳಲ್ಲಿ ಈ ದೇವತೆಗಳು ಮಹದನುಗ್ರಹವನ್ನು ತೋರಿದ್ದಾರೆ. ಅವಳ ವೈಯಕ್ತಿಕವಾದ ಪರಿಚಯವನ್ನು ತಿಳಿಸುತ್ತ ಬೃಹದ್ದೇವತೆಯಲ್ಲಿ ಅವಳ ವಿಷಯವನ್ನು ಈ ರೀತಿ ತಿಳಿಸಿದೆ.

ಆಸೀತ್ಕಕ್ಷೀವತೀ ಘೋಷಾ ಸಾಪಸರೋಗೇಣ ದುರ್ಭಗಾ ।
ಉವಾಸ ಷಷ್ಟಿಂ ವರ್ಷಾಣಿ ಪಿತುರೇವ ಗೃಹೇ ಪುರು ॥

(ಬೃ. ದೇ. ೭. ೪೨)

ಕಕ್ಷೀವಂತನ ಪುತ್ರಿಯಾದ **ಘೋಷಾ** ಎಂಬ ಸ್ತ್ರೀಗೆ ವಿಕಾರವೂ, ಭಯಂಕರವೂ ಆದ ರೋಗವು ಪ್ರಾಪ್ತವಾಯಿತು. ಅವಳ ರೂಪವೇ ನಾಶವಾಯಿತು. ಆದುದರಿಂದಲೇ ಅವಳಿಗೆ ವಿವಾಹವಿಲ್ಲದೆ ಅರವತ್ತುವರ್ಷಗಳಕಾಲ ತಂದೆಯ ಮನೆಯಲ್ಲಿಯೇ ವಾಸಮಾಡಬೇಕಾಯಿತು.

ಅತಸ್ಥೇ ಮಹತೀಂ ಚಿಂತಾಂ ನ ಪುತ್ರೋ ನ ಪತಿರ್ಮಮ ।
ಜರಾಂ ಪ್ರಾಪ್ತಾ ಮುಧಾ ತಸ್ಮಾತ್ ಪ್ರಪದ್ಯೇಽಹಂ ಶುಭಸ್ಪತೀ ॥

(ಬೃ. ದೇ. ೭. ೪೩)

" ವಿವಾಹವಿಲ್ಲದೇ, ಪತಿರಹಿತಳಾಗಿಯೂ, ಪುತ್ರರಹಿತಳಾಗಿಯೂ ನಾನು ವೃದ್ಧಳಾಗಿದ್ದೇನೆ. ನನ್ನ ಆಯುಸ್ಸು ವ್ಯರ್ಥವಾಗುತ್ತಿದೆ " ಎಂಬುದಾಗಿ ಅವಳಿಗೆ ಸದಾ ಚಿಂತೆಯು ಆವರಿಸಿತು. ಆದುದರಿಂದ ನಾನು **ಶುಭಸ್ಪತಿ**ಗಳೆಂದು (ತೇಜಸ್ಸಿಗೆ ಒಡೆಯರು) ಪ್ರಸಿದ್ಧರಾದ ಅಶ್ವಿನೀದೇವತೆಗಳನ್ನು ಆಶ್ರಯಿಸಿ ಅವರನ್ನು ಸ್ತುತಿಸಿ ಅವರ ಅನುಗ್ರಹವನ್ನು ಪಡೆಯುವೆನು ಎಂದು ನಿಶ್ಚಯಿಸಿ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿ ಮೊರೆಯಿಟ್ಟಳು.

ಯೇಥೈತೌ ಮಾಮಕಸ್ತಾತ ಆರಾಧ್ಯಾವಾಪ ಯೌವನಂ ।
ಆಯುರಾರೋಗ್ಯಮೈಶ್ವರ್ಯಂ ಸರ್ವಭೂತಹನೇ ವಿಷಂ ॥

(ಬೃ. ದೇ. ೭. ೪೪)

" ನನ್ನ ತಂದೆಯು ಇದೇ ಅಶ್ವಿನೀದೇವತೆಗಳನ್ನು ಪೂಜಿಸಿ ಅವರ ಅನುಗ್ರಹದಿಂದ ಯೌವನವನ್ನೂ, ದೀರ್ಘಾಯುಸ್ಸನ್ನೂ, ಆರೋಗ್ಯವನ್ನೂ, ಶಕ್ತಿಯನ್ನೂ ಮತ್ತು ಸಕಲಭೂತಗಳನ್ನೂ ಕೊಲ್ಲಲು ಸಮರ್ಥವಾದ ವಿಷವನ್ನೂ ಪಡೆದನು. ಆದುದರಿಂದ ನಾನೂ ಅವರನ್ನು ಪೂಜಿಸಿ ನನ್ನ ಇಷ್ಟಾರ್ಥವನ್ನು ಪಡೆಯುವೆನು "

ರೂಪವತ್ತಾಂ ಚ ಸೌಭಾಗ್ಯಮಹಂ ತಸ್ಯ ಸುತಾ ಯದಿ ।
ಮಮಾಪಿ ಮಂತ್ರಾಃ ಸ್ಪಾದುಃ ಸ್ಯುರ್ಕೃಸ್ತೋಷ್ಯೇತೇ ಮಯೋಶ್ವಿನೌ ॥

(ಬೃ. ದೇ. ೭. ೪ ೫)

" ನನಗೂ ಸಹ ಅಶ್ವಿನೀದೇವತೆಗಳನ್ನು ವಿಧಿಪೂರ್ವಕವಾಗಿ ಸ್ತುತಿಸಿ ಪೂಜಿಸುವ ಕ್ರಮವು ತಿಳಿದರೆ ನಾನೂ ಅವರನ್ನು ಪೂಜಿಸಿ ಅವರ ಅನುಗ್ರಹದಿಂದ ಸೌಂದರ್ಯವನ್ನೂ , ಕಲ್ಯಾಣವನ್ನೂ ಪಡೆಯುತ್ತೇನೆ. ನಮ್ಮ ತಂದೆಯು ಅವರಿಂದ ವರವನ್ನು ಪಡೆದಂತೆ ನಾನೂ ನನ್ನ ಇಷ್ಟಾರ್ಥಗಳನ್ನು ಪಡೆಯುತ್ತೇನೆ " ಎಂದು ಅಶ್ವಿನೀದೇವತೆಗಳನ್ನು ಸ್ತುತಿಸುವ ಕ್ರಮವನ್ನು ಕುರಿತು ಆಲೋಚಿಸಿದಳು.

ಚಿಂತಯೆಂತೀತಿ ಸೂಕ್ತೇ ದ್ವೇ ಯೋ ವಾಂ ಪರಿ ದದರ್ಶ ಸಾ।
ಸ್ತುತೌ ತಾವಶ್ವಿನೌ ದೇವೌ ಪ್ರೀತೌ ತಸ್ಯಾ ಭಗಾಂತರಂ ॥

(ಬೃ. ದೇ. ೭. ೪೬)

ಹೀಗೆ ಧ್ಯಾನಾಸಕ್ತಳಾಗಿರುವಾಗ " **ಯೋ ವಾಂ ಪರಿ** ", " **ರಥಂ ಯಾಂತಂ** " (೧೦-೩೯; ೧೦-೪೦) ಎಂಬ ಮಂತ್ರಗಳಿಂದ ಆರಂಭವಾಗುವ ಎರಡು ಸೂಕ್ತಗಳ ದರ್ಶನವನ್ನು ಹೊಂದಿ ಅವರನ್ನು ಸ್ತುತಿಸಿದಳು. ಇದರಿಂದ ಅಶ್ವಿನೀದೇವತೆಗಳು ತೃಪ್ತರಾಗಿ ಅವಳ ದೇಹವನ್ನು ಪ್ರವೇಶಿಸಿದರು.

ಪ್ರವಿಶ್ಯ ವಿಜರಾರೋಗಾಂ ಸುಭಗಾಂ ಚಕ್ರತುಶ್ಚ ತೌ ।
ಭರ್ತಾರಂ ದದತುಸ್ತಸ್ಯೈ ಸುಹಸ್ತ್ಯಂ ಚ ಸುತಂ ಮುನಿಂ ॥

(ಬೃ. ದೇ. ೭. ೪೭)

ಅನಂತರ, ಅವಳ ವಾರ್ಧಕ್ಯವನ್ನು ಹೋಗಲಾಡಿಸಿ ಅವಳನ್ನು ರೋಗದಿಂದ ಮುಕ್ತಳನ್ನಾಗಿ ಮಾಡಿ, ಸುಂದರವಾದ ರೂಪವನ್ನು ಅವಳಿಗೆ ಕೊಟ್ಟರು. ಉತ್ತಮವಾದ ಪತಿಯನ್ನೂ ಮತ್ತು **ಸುಹಸ್ತ್ಯ**ನೆಂಬ ಉತ್ತಮನಾದ ಪುತ್ರನನ್ನೂ ಅನುಗ್ರಹಿಸಿದರು. **ಸುಹಸ್ತ್ಯ**ನೂ ಅವಳಂತೆಯೇ ಪ್ರಸಿದ್ಧನಾದ ಋಷಿಯು.

ದದತುಸ್ತತ್ಸುಪರ್ಣಾಭ್ಯಾಂ ಯನ್ನಾಸತ್ಯೇತಿ ಕೀರ್ತ್ಯತೇ ।
ಕಾಕ್ಷೀವತ್ಯೈ ಚ ಘೋಷಾಯೈ ನ ತಸ್ಯಾಮಾಜುರೋಽನಯೋ ॥

(ಬೃ. ದೇ. ೭. ೪೮)

ಅಶ್ವಿನೀದೇವತೆಗಳು ತಮ್ಮ ಉತ್ತಮವಾದ ಸುಪರ್ಣ (ಪಕ್ಷಗಳನ್ನು ಹೊಂದಿದ ಅಶ್ವ) ಗಳೊಡನೆ ಕೂಡಿ ಬಂದು ಘೋಷೆಗೆ ಅನುಗ್ರಹಿಸಿದ ಕ್ರಮವನ್ನು " **ಆಮಾಜುರಶ್ವಿದ್ಧವಥಃ** " " ನ ತಸ್ಯ ವಿದ್ಮ " (೧೦-೩೯-೨; ೧೦. ೪೦. ೧೧) ಇತ್ಯಾದಿ ಸ್ತುತಿವಾಕ್ಯಗಳಿಂದ ವರ್ಣಿಸಿದೆ.

ಅತೀಂದ್ರಿಯದರ್ಶನದ ಸಾಮರ್ಥ್ಯವೂ, ಉತ್ತಮವಾದ ಕರ್ಮಕುಶಲತೆಯೂ ಇರುವ **ಬ್ರಹ್ಮವಾದಿನಿ**ಗಳ ಸಮೂಹಕ್ಕೆ ಸೇರಿದವಳೆಂದು ಘೋಷೆಯನ್ನು ಪ್ರಶಂಸಿಸಿದೆ. ಈ ಬ್ರಹ್ಮವಾದಿನಿಗಳನ್ನು ಮೂರು ಪಂಗಡವಾಗಿ ವಿಭಾಗಿಸಿದೆ. ಈ ಮೂರು ಪಂಗಡವೂ ಮೂರು ವಿಧವಾದ ಶಕ್ತಿಯನ್ನು ಹೊಂದಿ ದೇವತಾದರ್ಶನದ ಸಾಮರ್ಥ್ಯವನ್ನು ಹೊಂದಿರುತ್ತದೆ ಎಂದು ಈ ಗುಂಪುಗಳಿಗೆ ಸೇರಿದ ಸ್ತ್ರೀ ಋಷಿಗಳ ಶಕ್ತಿಯನ್ನು ಈ ರೀತಿ ವರ್ಣಿಸಿದೆ.

नवकः प्रथमस्त्वासां वर्गस्तुष्ट्वाव देवताः ।
ऋषिभिर्देवताभिश्च समूदे मध्यमो गणः ॥

(बृ. दे. ३. ४४)

इवुगळल्लि मॊदलनेय गुंपिगे सेरिदवरु ऒंभत्तु मुंदि. इवरु देवतेगळन्नु स्तुतिसिदवरु. आदरे प्रत्यक्षतः देवतेगळॊंदिगे संभाषिसिदवरल्ल. एरडनेय गुंपिगे सेरिदवरु मात्र ऋषिगळॊंदिगू, देवतेगळॊंदिगू प्रत्यक्षतः मातनाडिदवरु.

आत्मनो भाववृत्तानि जगौ वर्गस्तृचोत्तमः ।
उत्तमस्य तु वर्गस्य य ऋषिः सैव देवता ॥

(बृ. दे. ३. ४६)

भावववृत्तवन्नु ऎंदरॆ आत्मपरिणामस्वरूपविशेषगळन्नु प्रशंसिसि सूक्तवन्नु निर्मिसिद ऋषिगळु उत्तम वर्गदवरु. ई गुंपिगे सेरिद सूक्तनिर्मापकरादा ऋषिगळे, ई सूक्तदल्लि निर्दिष्टरादा देवतेगळू आगिरुत्तारॆ. हीगॆ ब्रह्मवादिनिगळल्लि मूरु बगॆयागिरुत्तवॆ. अवुगळल्लि **घॊषॆयु** मॊदलनेय वर्गक्कॆ सेरिदवळॆंदु तिळिसुत्त—

घोषा, गोधा, विश्ववारा, अपालोपनिषन्निषत् ।
ब्रह्मजायो जुहूर्नाम अगस्त्यस्य स्वसादितिः ॥

(बृ. दे. ३. ४७)

घोषा (८०-३९, ४०); **गोधा** (८०८-१९-६,२); **विश्ववारा** (५. ३४); **अपाला** (८. ९१); **उपनिषत्** मत्तु **निषत्** (**प्र धारयंत** ऎंब आरंभवुळ्ळ ऒंबत सूक्तद निर्मापकरु) **जुहू ब्रह्मजाया** (८०. ८०९); अगस्त्यन सोदरि (८०. ६०. ६) **अदिति** (४. ८४ रल्लि कॆलवु मंत्रगळु) ऎंदु प्रथम गुंपिगे सेरिद ब्रह्मवादिनिगळल्लि **घोषॆयु** ऒब्बळॆंदु सूचिसिदॆ. आदुदरिंद, घोषॆयु दिव्यत्ववन्नु साक्षात्करिसबल्ल अतीन्द्रिय शक्तियुळ्ळ मानवस्त्रीयॆंदु विशद वागुत्तदॆ. इवळु मानवस्त्रीयादरू तन्न दिव्यशक्तियिंद देवतेगळन्नु पूजिसि अवरन्नु साक्षात्करिसि अवर अनुग्रहवन्नु पडॆदळॆंबुदु स्पष्टवागिदॆ.

इंतह दिव्यशक्तियिद्दरू सह अवळु तन्न भौतिकवाद न्यूनतॆयिद्दुदरिंद सरियाद पतियन्नु पडॆयलागलिल्लवॆंदू मत्तु पतिपुत्ररहितवाद जीवनवु अवळ मनस्सिगॆ भेदवन्नुंटुमाडितॆंदू तिळिसिदॆ. भौतिकवाद आरोग्यवू, सौंदर्यवू जीवनद सौख्यक्कॆ यावरीति साधनवागिरुत्तदॆंबुदु इंतह उदाहरणॆगळिंद तिळियुत्तदॆ. इवॆरडू इल्लद स्त्रीयरु अत्यधिकवाद वयस्सुळ्ळवरादरू सह अविवाहितरागियॆ तम्म पितृगृहगळल्लिरुत्तिद्दरु ऎंदु इदरिंदलू इंतह इन्नू अनॆक सन्निवेशगळिंदलू वैदिककालद सामाजिक जीवनद स्वरूपवु सूचितवागुत्तदॆ.

जीवनवु दुःखमयवागिद्दरू सह, परिशुद्धवाद जीवनवन्नु नडॆसि देवपूजाकार्यगळिंद ई दुःखवन्नु निवारिसलु साध्यवॆंबुदु घोषॆय जीवनदिंद तिळियुत्तदॆ. इवळ उत्तमवाद

ಸ್ತುತಿಗೂ, ಪೂಜಾಕಾರ್ಯಕ್ಕೂ ಪ್ರೀತರಾದ ಅಶ್ವಿನೀದೇವತೆಗಳು ಇವಳಿಗೆ ಅತ್ಯುತ್ತಮವಾದ ಸೌಖ್ಯವನ್ನುಂಟುಮಾಡಿದರು ಎಂದು ಅನೇಕ ಕಡೆಗಳಲ್ಲಿ ಪ್ರಶಂಸಿತವಾಗಿದೆ. ಈ ವಿಷಯವನ್ನು ಹಿಂದೆ ವಿವರಿಸಿದೆ. (ಋ. ಸಂ. ೧. ೧೧೨. ೭ ಇತ್ಯಾದಿ)

ಘೋಷೆಗೆ ಅಶ್ವಿನೀದೇವತೆಗಳ ಅನುಗ್ರಹದಿಂದ **ಸುಹಸ್ತ್ಯ**ನೆಂಬ ಪುತ್ರನು ಉತ್ಪನ್ನನಾದ ವಿಷಯವೂ ತಿಳಿಸಲ್ಪಟ್ಟಿದೆ. ಈ **ಸುಹಸ್ತ್ಯ**ನೂ ಸಹ ಉತ್ತಮವಾದ ಸ್ತುತಿನಿರ್ಮಾಪಕನು. ಋ. ಸಂ. ೧೦-೪೧ನೇ ಸೂಕ್ತದ ನಿರ್ಮಾಪಕನೆಂದು ಪ್ರಸಿದ್ಧನಾಗಿದ್ದಾನೆ. ಪ್ರಕೃತ ಸೂಕ್ತದ ಋಕ್ಕುಗಳು ಇವನ ಕೃತಿಕೌಶಲವನ್ನು ತಿಳಿಸುತ್ತವೆ. ಇವುಗಳಲ್ಲಿ ಅಶ್ವಿನೀದೇವತೆಗಳನ್ನು ಪ್ರಶಂಸಿಸಿದ್ದಾನೆ. ಘೋಷಾ ಮತ್ತು ಘೌಷೇಯ ಇವರಿಬ್ಬರೂ ತಮ್ಮ ಕೃತಿಗಳಲ್ಲಿ ಅಶ್ವಿನೀದೇವತೆಗಳ ದಿವ್ಯಶಕ್ತಿಗಳನ್ನು ಸ್ತುತಿಸಿದ್ದಾರೆ. ಈ ದಿವ್ಯಶಕ್ತಿಗಳನ್ನೂ, ಅಶ್ವಿನೀದೇವತೆಗಳ ವಿಷಯದಲ್ಲಿರುವ ಅಭಿಪ್ರಾಯ ಪ್ರಭೇದಗಳನ್ನೂ ಹಿಂದೆ ತಿಳಿಸಿದೆ. ಪ್ರಕೃತ ಸೂಕ್ತಗಳಲ್ಲಿ ವರ್ಣಿತವಾಗಿರುವ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಪರಿಶೀಲಿಸಲಾಗುತ್ತದೆ.

" ವ್ಯುಷ್ಟಾ ಉಷಸೋ ಹವಾಮಹೇ " (ಋ. ಸಂ. ೧೦. ೪೧. ೧) **" ಪ್ರಾತರ್ಯುಜಂ ನಾಸತ್ಯಾಧಿತಿಷ್ಠಥಃ "** (೧೦. ೪೧. ೨) ಇತ್ಯಾದಿ ವಾಕ್ಯಗಳು ಅಶ್ವಿನೀದೇವತೆಗಳಿಗೂ, ಉಷಸ್ಸಿಗೂ ಇರುವ ಸ್ವಾಭಾವಿಕವಾದ ಸಂಬಂಧವನ್ನು ತಿಳಿಸುತ್ತವೆ. ಅಶ್ವಿನೀದೇವತೆಗಳು **ಅಹೋರಾತ್ರರೂಪರು** ಎಂಬುದು ಒಂದು ಮತವೆಂಬ ನಿರುಕ್ತಕಾರರು ಉದಾಹರಿಸಿರುವ ವಿಷಯವನ್ನೂ ಹಿಂದೆ ತಿಳಿಸಿದೆ. (ನಿ. ೧೨. ೧) ಈ ಮತವನ್ನು ಅನೇಕರು ಅನುಮೋದಿಸಿರುತ್ತಾರೆ. ಅಹೋರಾತ್ರಗಳೆರಡರಲ್ಲೂ ಇವರಿಗೆ ಆಹ್ವಾನವಿದೆ. ಘೋಷೆಯಿಂದ ನಿರ್ಮಿತವಾದ ಋಕ್ಕುಗಳಲ್ಲಿಯೇ ಈ ಅಂಶವು ಸ್ಪಷ್ಟವಾಗಿದೆ. ಉದಾಹರಣೆಗೆ—

> **ಯುವಾಂ ಮೃಗೇವ ವಾರಣಾ ಮೃಗಣ್ಯವೋ ದೋಷಾ ವಸ್ತೋರ್ಹವಿಷಾ ನಿ ಹ್ವಯಾಮಹೇ।**
> **ಯುವಂ ಹೋತ್ರಾಮೃತುಥಾ ಜುಹ್ವತೇ ನರೇಷಂ ಜನಾಯ ವಹಥಃ ಶುಭಸ್ಪತೀ ॥**
>
> (ಋ. ಸಂ. ೧೦. ೪೦. ೪)

ಎಲೈ ಅಶ್ವಿನೀದೇವತೆಗಳೇ, ನಿಮ್ಮನ್ನು ಅಹೋರಾತ್ರಗಳೆರಡರಲ್ಲೂ ಹವಿಸ್ಸುಗಳೊಡನೆ ಕೂಡಿ ಪ್ರಾರ್ಥಿಸಿಕರೆಯುತ್ತೇವೆ ಎಂದು ಈ ಎರಡು ಕಾಲಗಳಲ್ಲೂ ಅವರ ಆವಿರ್ಭಾವವನ್ನು ತಿಳಿಸಿದೆ.

" ತಾವಿದ್ದೋಷಾ ತಾ ಉಷಸಿ ಶುಭಸ್ಪತೀ ತಾ ಯಾಮನ್ರುದ್ರವರ್ತನೀ " (ಋ. ಸಂ. ೮. ೨೨. ೧೪) ಇತ್ಯಾದಿ ಇತರ ಋಷಿಗಳಿಂದ ನಿರ್ಮಿತವಾದ ಮಂತ್ರಗಳೂ ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ. ಆದರೆ, ಇಲ್ಲಿ ಇನ್ನೊಂದು ಪರಿಷ್ಕಾರವೂ ಇರುತ್ತದೆ. ಅಹೋರಾತ್ರಗಳೆಂದರೆ, ಅಹಸ್ಸಿನ ಆವಿರ್ಭಾವಕಾಲದ ಸಂಧ್ಯಾ; ರಾತ್ರಿಯ ಆವಿರ್ಭಾವಕಾಲದ ಸಂಧ್ಯಾ ಎಂದು ತಾತ್ಪರ್ಯಮಾಡಬೇಕೆಂದು ಕೆಲವರ ಮತ. ಈ ಸಂಧ್ಯೆಗಳು ಪ್ರಕಾಶ ಮತ್ತು ಮಬ್ಬು ಈ ಎರಡು ಅಂಶಗಳಿಂದಲೂ ಕೂಡಿರುತ್ತದೆ. ಆದರೆ, ಈ ಪರಿಷ್ಕಾರವು ಅಷ್ಟು ವಿಹಿತವಾಗಿರುವುದಿಲ್ಲ. ಇವುಗಳಲ್ಲಿ ಸಮಕಾಲಿಕವಾದ ಸಾಹಚರ್ಯವಿರುವುದಿಲ್ಲವೆಂಬುದು ಇನ್ನೊಂದು ಅಭಿಪ್ರಾಯ. ಅಹೋರಾತ್ರಗಳನ್ನು ಪ್ರತಿಬಿಂಬಿಸುವ ಮಿತ್ರಾವರುಣರಲ್ಲಿ ಐಕ್ಯವನ್ನೂ, ಸಾಹಚರ್ಯವನ್ನೂ ಹೇಳುವಂತೆಯೇ ಇಲ್ಲಿಯೂ ಹೇಳಬೇಕೆಂದು ಈ ಆಕ್ಷೇಪಕ್ಕೆ ಸಮಾಧಾನವಿರುತ್ತದೆ. ಉಷಸ್ಸಿನ ಆವಿರ್ಭಾವಕಾಲದಲ್ಲಿ ಅಶ್ವಿನೀದೇವತೆಗಳೂ ಪ್ರಾದುರ್ಭೂತರಾಗುತ್ತಾರೆ ಎಂಬ ಅಭಿಪ್ರಾಯವು ಅನೇಕ ಕಡೆಗಳಲ್ಲಿ ಹೇಳಿದೆ. ಆದರೆ ಉಷಸ್ಸಿನ ಆವಿರ್ಭಾವಕಾಲವು ಪ್ರಾತಃಕಾಲದಲ್ಲಿ ಮಾತ್ರವಲ್ಲ. ರಾತ್ರಿಯ ಆರಂಭಕಾಲಕ್ಕೂ ಉಷಸ್ಸೆಂಬ ನಿರ್ದೇಶವಿರುತ್ತದೆ. ಉದಾಹರಣೆಗೆ—

ಸುರುಕ್ಮೋ ಹಿ ಸುಪೇಶಸಾಧಿ ಶ್ರಿಯಾ ವಿರಾಜತಃ । ಉಷಾಸಾವೇಹ ಸೀದತಾಂ ॥

(ಋ. ಸಂ. ೧. ೧೪೮. ೬)

ಎಂಬಲ್ಲಿ **ಉಷಸ್** ಶಬ್ದವು **ಉಷಾಸಾ** ಎಂಬ ದ್ವಿವಚನದಲ್ಲಿ ಪ್ರಯುಕ್ತವಾಗಿದೆ. ಇಲ್ಲಿ ಈ ಪದಕ್ಕೆ ಅಹೋರಾತ್ರಗಳೆಂಬ ಅರ್ಥವನ್ನು ತಿಳಿಸಿದೆ. **ಉಷಸಾ ಏತತ್ ರಾತ್ರೇರಪ್ಯುಪಲಕ್ಷಣಂ ಉಷಃಶಬ್ದೋ ದಿವಸಸ್ಯೋಪಲಕ್ಷಕಃ ರಾತ್ರಿರುಷಾಶ್ಚ** ಎಂದು ಭಾಷ್ಯವು ವಿವರಿಸುತ್ತದೆ. **“ನಾನಾ ಜಾತೌ”** (೫-೭೩-೪) ಎಂದು ಅಶ್ವಿನೀದೇವತೆಗಳನ್ನು ವರ್ಣಿಸಿದೆ. ಅಹೋರಾತ್ರಗಳೆರಡರಲ್ಲೂ ಉತ್ಪನ್ನರು ಎಂದು ಈ ವಾಕ್ಯದ ತಾತ್ಪರ್ಯವಿರುತ್ತದೆ.

ಉಷಸ್ಸಿಗೂ, ಅಶ್ವಿನೀದೇವಗಗಳಿಗೂ ಈ ರೀತಿ ನಿಕಟಸಂಬಂಧವನ್ನು ಹೇಳಿರುವ ಜೊತೆಯಲ್ಲಿಯೇ, **ಸೂರ್ಯಾ**ದೇವಿಗೂ, ಅಶ್ವಿನೀದೇವತೆಗಳಿಗೂ ಇರುವ ನಿಕಟವಾದ ಸಂಬಂಧವನ್ನು ತಿಳಿಸಿದೆ. ಇದರಿಂದ **ಉಷಸ್ಸಿ**ಗೂ **ಸೂರ್ಯಾ**ದೇವಿಗೂ ತಾದಾತ್ಮ್ಯವನ್ನು ಹೇಳಬಹುದೇ ಎಂಬ ವಿಷಯವನ್ನು ಮುಂದೆ (ಋ. ಸಂ. ೧೦. ೪೫) **ಸೂರ್ಯಾ** ವಿಷಯವನ್ನು ವಿವರಿಸುವಾಗ ತಿಳಿಸಬೇಕಾಗಿರುತ್ತದೆ. ಎಂದರೆ, ಸೂರ್ಯೆಯು ಅಶ್ವಿನೀದೇವತೆಗಳ **ತ್ರಿಚಕ್ರಾತ್ಮಕ** ವಾದ ರಥವನ್ನು ಹತ್ತಿದಳು ಎಂಬಲ್ಲಿ **ತ್ರಿಚಕ್ರ**ದ ಸ್ವರೂಪವನ್ನು ಪರಿಶೀಲಿಸುವುದು ಪ್ರಕೃತದಲ್ಲಿ ಅವಶ್ಯವಾಗಿರುತ್ತದೆ.

ರಥಂ ತ್ರಿಚಕ್ರಂ ಸವನಾ ಗನಿಗ್ಮತಂ (೧೦. ೪೧. ೧) ಎಂಬಲ್ಲಿಯೂ ಹೀಗೆಯೇ ಇತರೆಡೆಗಳಲ್ಲಿಯೂ (೧೦. ೮೫. ೧೫) ವರ್ಣಿತವಾಗಿರುವ **ತ್ರಿಚಕ್ರವು** ಆದಿತ್ಯನ ತ್ರಿಚಕ್ರಾತ್ಮಕವಾದ ರಥವೆಂದು ಒಟ್ಟಿನಲ್ಲಿ ಹೇಳಬಹುದಾಗಿದೆ.

ಈ ರಥವು ಏಕಚಕ್ರಾತ್ಮಕವೆಂದು ಕೆಲವೆಡೆಗಳಲ್ಲಿಯೂ, ದ್ವಿಚಕ್ರಾತ್ಮಕವೆಂದು ಇನ್ನು ಕೆಲವೆಡೆಯೂ, ತ್ರಿಚಕ್ರಾತ್ಮಕವೆಂದು ಮತ್ತೆ ಕೆಲವೆಡೆಯೂ ವರ್ಣಿತವಾಗಿದೆ. ಒಂದು ಚಕ್ರವೆಂದಿರುವಾಗಲೆಲ್ಲ ಆದಿತ್ಯರೂಪವಾದ ಚಕ್ರವೆಂದೂ, ಎರಡು ಚಕ್ರವೆಂದಿರುವಾಗ ದ್ಯಾವಾಪೃಥಿವಿಗಳನ್ನು ಸ್ಪರ್ಶಿಸುವ ಆದಿತ್ಯರಥದ ಎರಡು ಚಕ್ರಗಳೆಂದೂ ವರ್ಣಿತವಾಗಿದೆ. ಇದೇ ಎರಡು ಚಕ್ರಗಳು ಅಶ್ವಿನೀದೇವತೆಗಳ ರಥಕ್ಕೂ ಇರುತ್ತದೆ. ಅದನ್ನೇ ತಿಳಿಸುತ್ತ—

ನ್ಯ೧ಘ್ನ್ಯ ಸ್ಯ ಮೂರ್ಧನಿ ಚಕ್ರಂ ರಥಸ್ಯ ಯೇಮಥುಃ । ಪರಿ ದ್ಯಾಮನ್ಯದೀಯತೇ ॥

(ಋ. ಸಂ. ೧. ೨೦. ೧೯)

ಎಲೈ ಅಶ್ವಿನೀದೇವತೆಗಳೇ, ನಿಮ್ಮ ರಥಚಕ್ರಗಳೆರಡರಲ್ಲಿ ಒಂದನ್ನು ದೃಢವಾದ ಪರ್ವತದಮೇಲೆ ಸ್ಥಾಪಿಸಿದ್ದೀರಿ. ಇನ್ನೊಂದನ್ನು ದ್ಯುಲೋಕವನ್ನೆಲ್ಲ ಸುತ್ತುವಂತೆ ಮಾಡಿದ್ದೀರಿ ಎಂದು ವರ್ಣಿಸಿದೆ. ಈ ಎರಡು ಚಕ್ರಗಳೂ ಲೋಕಕ್ಕೆ ಗೋಚರವಾಗತಕ್ಕವು. ಮೂರನೆಯದು ಅಂತರ್ಹಿತವಾಗಿರುತ್ತದೆ.

ದ್ವೇ ತೇ ಚಕ್ರೇ ಸೂರ್ಯೇ ಬ್ರಹ್ಮಾಣ ಋತುಥಾ ವಿದುಃ ।
ಅಥೈಕಂ ಚಕ್ರಂ ಯದ್ಗುಹಾ ತದದ್ಭಾತಯ ಇದ್ವಿದುಃ ॥

(ಋ. ಸಂ. ೧೦. ೮೫. ೧೬)

ಎಲೈ ಸೂರ್ಯೆಯೇ, ನಿನ್ನ ರಥದ ಎರಡು ಚಕ್ರಗಳನ್ನೂ ಕರ್ಮಕುಶಲರಾದ ಬ್ರಾಹ್ಮಣರು ನೋಡಬಲ್ಲರು. ಆದರೆ ಇನ್ನೊಂದು ಚಕ್ರವು ಮಾತ್ರ ಅಂತರ್ಹಿತವಾಗಿರುತ್ತದೆ ಎಂದು ವಿವರಿಸುವಾಗ **ದ್ವೇ ಏವ ಚಂದ್ರಸೂರ್ಯಾತ್ಮಕೇ** ಚಂದ್ರಸೂರ್ಯರೂಪದ ಎರಡು ಚಕ್ರಗಳೆಂದು ಸಾಯಣರು ವಿವರಿಸಿದ್ದಾರೆ. ಆದರೆ ಮೂರನೆಯ ಚಕ್ರವು ಅಂತರ್ಹಿತವಾಗಿರುವುದರಿಂದ ಇದರ ಸ್ವರೂಪವೇನೆಂಬುದು **ಲೌಕಿಕ**ವಾದ ಪ್ರಜ್ಞೆಗೆ ಸಾಧ್ಯವಿಲ್ಲವೆಂದೂ ತಿಳಿಸಿದ್ದಾರೆ.

ಜ್ಯೋತಿಷ್ಮಂತಂ ಕೇತುಮಂತಂ ತ್ರಿಚಕ್ರಂ ಸುಖಂ ರಥಂ ಸುಷದಂ ಭೂರಿವಾರಂ ।
ಚಿತ್ರಾಮಘಾ ಯಸ್ಯ ಯೋಗೇ೪ಧಿಜಜ್ಞೇ ತಂ ವಾಂ ಹುವೇ ಅತಿ ರಿಕ್ತಂ ಪಿಬಧ್ಯೈ ॥

(ಋ. ಸಂ. ೪. ೫೪. ೩)

ಎಂಬಲ್ಲಿ ಸಕಲ ದೇವತೆಗಳಿಗೂ ಸಂಬಂಧಿಸಿದ ಈ ರಥವು ವರ್ಣಿತವಾಗಿದೆ, **ತ್ರಿಚಕ್ರಂ** ಎಂಬುದು ಈ ರಥದ ವಿಶೇಷ ಶಕ್ತಿಯನ್ನು ತೋರಿಸುತ್ತದೆ. ಭೂಲೋಕ, ಭುವರ್ಲೋಕ ಮತ್ತು ಸ್ವರ್ಗಲೋಕಗಳನ್ನೆಲ್ಲ ಸಂಚರಿಸುವ ಸ್ವಭಾವವುಳ್ಳದ್ದೆಂದರ್ಥ. ಇಲ್ಲಿ ಅಂತರ್ಹಿತವಾದ ಮೂರನೆಯ ಚಕ್ರವು ಸಕಲಲೋಕವ್ಯಾಪ್ತಿಯಾದರೂ ತನ್ನ ಗೂಢವಾದ ಸ್ವರೂಪವನ್ನು ಮರೆಸಿಟ್ಟುಕೊಂಡಿರುತ್ತದೆ. ಇದನ್ನೇ ಬೇರೆ ವಿಧದಲ್ಲಿ ವರ್ಣಿಸುತ್ತ—

ಇದಂ ತ ಏಕಂ ಪರ ಊತ ಏಕಂ ತೃತೀಯೇನ ಜ್ಯೋತಿಷಾ ಸಂವಿಶಸ್ವ ।

ಋ. ಸಂ. ೧೦. ೫೬. ೧)

ಇತ್ಯಾದಿಯಾಗಿ ಮೂರು ವಿಧವಾದ ಜ್ಯೋತಿಯು ನಿರ್ದೇಶಿಸಲ್ಪಟ್ಟಿರುತ್ತದೆ. ಒಟ್ಟಿನಲ್ಲಿ ಅಶ್ವಿನೀದೇವತೆಗಳು ಅಹೋರಾತ್ರರೂಪವಾದರೆ ಇವರ ರಥದ ಎರಡುಬಾಹುಗಳೂ ಸಹ ಸೂರ್ಯ ಮತ್ತು ಚಂದ್ರರೂಪಾತ್ಮಕವಾಗಿರುತ್ತವೆ. ಮೂರನೆಯದು ರಹಸ್ಯತರವಾಗಿರುತ್ತದೆ. ವಿಶ್ವವ್ಯಾಪಕವಾದುದೂ ಜ್ಯೋತೀರೂಪವುಳ್ಳದ್ದೂ ಆದ ಚಕ್ರಗಳುಳ್ಳ ರಥವನ್ನು ಹೊಂದಿರುವ ಅಶ್ವಿನೀದೇವತೆಗಳನ್ನು ಘೋಷಾ ಮತ್ತು ಘೌಷೇಯರು ಅತ್ಯುತ್ತಮವಾಗಿ ಪ್ರಶಂಸಿಸಿದ್ದಾರೆ.

———

ನಲವತ್ತೊಂದನೆಯ ಸೂಕ್ತ

ಸಾಯಣಭಾಷ್ಯಂ

ಸಮಾನಮಿತಿ ತೃಚಂ ದ್ವಾದಶಂ ಸೂಕ್ತಂ ಘೋಷಾಯಾಃ ಪುತ್ರಸ್ಯ ಸುಹಸ್ತ್ಯಸ್ಯಾರ್ಷಂ ಜಾಗತಮಾಶ್ವಿನಂ । ಅನುಕ್ರಾಂತಂ ಚ । ಸಮಾನಂ ತೃಚಂ ಸುಹಸ್ತ್ಯೋ ಘೌಷೇಯ ಇತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥

ಅನುವಾದವು—**ಸಮಾನಂ** ಎಂಬ ಈ ಸೂಕ್ತವು ಹತ್ತನೆಯ ಮಂಡಲದ ಮೂರನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಮೂರು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಘೋಷಾ ಎಂಬ ಸ್ತ್ರೀಯ ಪುತ್ರನಾದ ಸುಹಸ್ತ್ಯನೆಂಬುವನು ಋಷಿಯು. ಅಶ್ವಿನೀದೇವತೆಗಳು ದೇವತೆಯು; ಜಗತೀ ಛಂದಸ್ಸು. ಅನುಕ್ರಮಣಿಕೆಯಲ್ಲಿ **ಸಮಾನಂ ತೃಚಂ ಸುಹಸ್ತ್ಯೋ ಘೌಷೇಯಃ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದು.

ಸೂಕ್ತ—೭೨

ಮಂಡಲ—೧೦ ॥ ಅನುವಾಕ—೩ ॥ ಸೂಕ್ತ—೪೧ ॥
ಅಷ್ಟಕ—೭ ॥ ಅಧ್ಯಾಯ—೪ ॥ ವರ್ಗ—೨೧ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೩ ॥
ಋಷಿಃ—ಸುಹಸ್ತ್ಯೋ ಘೌಷೇಯಃ ॥
ದೇವತಾ—ಅಶ್ವಿನೌ ॥
ಛಂದಃ—ಜಗತೀ ।

ಸಂಹಿತಾಪಾಠಃ

ಸಮಾನಮು ತ್ಯಂ ಪುರುಹೂತಮುಕ್ಥ್ಯಂ ರಥಂ ತ್ರಿಚಕ್ರಂ ಸವನಾ ಗನಿ-
ಗ್ಮತಂ ।
ಪರಿಜ್ಮಾನಂ ವಿದಥ್ಯಂ ಸುವೃಕ್ತಿಭಿರ್ವಯಂ ವ್ಯುಷ್ಟಾ ಉಷಸೋ ಹವಾ-
ಮಹೇ ॥ ೧ ॥

ಪದಪಾಠಃ

ಸಮಾನಂ । ಊಂ ಇತಿ । ತ್ಯಂ । ಪುರು೽ಹೂತಂ । ಉಕ್ಥ್ಯಂ । ರಥಂ । ತ್ರಿ೽ಚಕ್ರಂ । ಸವನಾ ।
ಗನಿಗ್ಮತಂ ।
ಪರಿ೽ಜ್ಮಾನಂ । ವಿದಥ್ಯಂ । ಸುವೃಕ್ತಿ೽ಭಿಃ । ವಯಂ । ವಿ೽ಉಷ್ಟಾ । ಉಷಸಃ । ಹವಾಮಹೇ ॥ ೧ ॥

ಸಾಯಣಭಾಷ್ಯಂ

ಹೇ ಅಶ್ವಿನೌ ಯುವಯೋಃ ಸಮಾನಮು ಸಾಧಾರಣಮೇವ ತ್ಯಂ ತಂ ಪುರುಹೂತಂ ಬಹುಭಿ-
ರಾಹೂತಮುಕ್ಥ್ಯಂ ಪ್ರಶಸ್ಯಂ ತ್ರಿಚಕ್ರಂ ಸವನಾ ಸವನಾನಿ ಯಜ್ಞಾನ್ಗನಿಗ್ಮತಂ ಪ್ರತಿಗಚ್ಛಂತಂ
ಪರಿಜ್ಮಾನಂ ಪರಿತೋ ಗಂತಾರಂ ವಿದಥ್ಯಂ ಯಜ್ಞಹಿತಂ ರಥಮುಷಸೋ ವ್ಯುಷ್ಟೌ ಸುವೃಕ್ತಿಭಿಃ
ಸುಷ್ಠು ದೋಷವರ್ಜಿತಾಭಿಃ ಸ್ತುತಿಭಿರ್ವಯಂ ಹವಾಮಹೇ । ಆಹ್ವಯಾಮಃ ॥

ಪ್ರತಿಪದಾರ್ಥ

(ಎಲೈ ಅಶ್ವಿನೀದೇವತೆಗಳೇ), **ಸಮಾನಮು**—ನಿಮ್ಮಿಬ್ಬರಿಗೂ ಸಾಧಾರಣವಾದುದೂ । **ತ್ಯಂ**—ಪ್ರಸಿದ್ಧವಾದುದೂ । **ಪುರುಹೂತಂ**—ಅನೇಕರ ಆಹ್ವಾನಕ್ಕೆ ಪಾತ್ರವಾದುದೂ । **ಉಕ್ಥ್ಯಂ**—ಪ್ರಶಸ್ತ್ಯವಾದುದೂ । **ತ್ರಿಚಕ್ರಂ**—ಮೂರು ಚಕ್ರವುಳ್ಳದ್ದೂ । **ಸವನಾ ಗನಿಗ್ಮತಂ**—ಯಜ್ಞಗಳಿಗೆ ಹೋಗತಕ್ಕದ್ದೂ । **ಪರಿಜ್ಮಾನಂ**—ಸುತ್ತಲೂ ಸಂಚರಿಸತಕ್ಕದ್ದೂ । **ವಿದಥ್ಯಂ**—ಯಜ್ಞಕ್ಕೆ ಉಪಯುಕ್ತವಾದುದೂ ಆದ । **ರಥಂ**—ರಥವನ್ನು । **ಉಷಸಃ ವ್ಯುಷ್ಟೌ**—ಉಷಸ್ಸಿನ ಆವಿರ್ಭಾವಕಾಲದಲ್ಲಿ । **ಸುವೃಕ್ತಿಭಿಃ**—ಉತ್ತಮವಾದ ಸ್ತುತಿಗಳಿಂದ । **ವಯಂ**—ನಾವು । **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ನಿಮ್ಮಿಬ್ಬರಿಗೂ ಸಾಧಾರಣವಾದುದೂ, ಪ್ರಸಿದ್ಧವೂ, ಅನೇಕರ ಆಹ್ವಾನಕ್ಕೆ ಪಾತ್ರವೂ, ಪ್ರಶಸ್ತ್ಯವೂ, ಮೂರು ಚಕ್ರಗಳುಳ್ಳದ್ದೂ, ಯಜ್ಞಗಳಿಗೆ ಹೋಗತಕ್ಕದ್ದೂ, ಸುತ್ತಲೂ ಸಂಚರಿಸತಕ್ಕದ್ದೂ, ಯಜ್ಞಕ್ಕೆ ಉಪಯುಕ್ತವೂ ಆದ ರಥವನ್ನು ಉಷಸ್ಸಿನ ಆವಿರ್ಭಾವಕಾಲದಲ್ಲಿ ಉತ್ತಮವಾದ ಸ್ತುತಿಗಳಿಂದ ನಾವು ಪ್ರಾರ್ಥಿಸಿ ಕರೆಯುತ್ತೇವೆ.

English Translation.

At break of dawn, (Aswins) we invoke with pious prayers your common chariot, praised of many, adorable, three-wheeled, frequenting religious rites, traversing all space, suitable at sacrifices.

ಸಂಹಿತಾಪಾಠಃ

ಪ್ರಾತರ್ಯುಜಂ ವಾಸತ್ಯಾವಧಿ ತಿಷ್ಠಥಃ ಪ್ರಾತರ್ಯಾವಾಣಂ ಮಧುವಾಹನಂ ರಥಂ ।
ವಿಶೋ ಯೇನ ಗಚ್ಛಥೋ ಯಜ್ವರೀರ್ನರಾ ಕೀರೇಶ್ಚಿದ್ಯಜ್ಞಂ ಹೋತೃಮಂತಮಶ್ವಿನಾ ॥ ೨ ॥

ಪದಪಾಠಃ

ಪ್ರಾತರ್ಯುಜಂ । ವಾಸತ್ಯಾ । ಅಧಿ । ತಿಷ್ಠಥಃ । ಪ್ರಾತರ್ಯಾವಾಣಂ । ಮಧುವಾಹನಂ । ರಥಂ ।
ವಿಶಃ । ಯೇನ । ಗಚ್ಛಥಃ । ಯಜ್ವರೀಃ । ನರಾ । ಕೀರೇಃ । ಚಿತ್ । ಯಜ್ಞಂ । ಹೋತೃಮಂತಂ ।
ಅಶ್ವಿನಾ ॥ ೨ ॥

ಸಾಯಣಭಾಷ್ಯಂ

ಹೇ ವಾಸತ್ಯಾ ವಾಸತ್ಯೇ ಭೂತೌ ಸತ್ಯಸ್ಯ ಪ್ರಣೇತಾರೌ ವಾ ನರಾ ನೇತಾರಾವಶ್ವಿನೌ ಯುವಾಂ ಪ್ರಾತರ್ಯುಜಂ ಪ್ರಾತಃಕಾಲೇಽಶ್ವೈರ್ಯುಜ್ಯಮಾನಂ ಪ್ರಾತರ್ಯಾವಾಣಂ ಪ್ರಾತರ್ಗಂತಾರಂ ಮಧುವಾಹನಂ ಮಧುನೋಽಮೃತಸ್ಯ ವಾಹಕಂ ತಂ ರಥಮಧಿ ತಿಷ್ಠಥಃ। ಆರೋಹತಮಿತ್ಯರ್ಥಃ। ಯಜ್ವರೀರ್ಯಜನಶೀಲಾ ವಿಶಃ ಪ್ರಜಾ ಯೇನ ರಥೇನ ಗಚ್ಛಥಃ। ಯೇನ ಚ ಕೀರೇಶ್ಚಿತ್ಸ್ತೋತುರಪಿ ಹೋತೃಮಂತಮೃತ್ವಿಗ್ಯುಕ್ತಂ ಯಜ್ಞಂ ಗಚ್ಛಥಃ ॥

ಪ್ರತಿಪದಾರ್ಥ

ನಾಸತ್ಯಾ—ಎಲೈ ಅಶ್ವಿನೀದೇವತೆಗಳೇ । **ನರಾ**—ನೇತೃಗಳಾದ ನೀವು । **ಯೇನ**—ಯಾವ ರಥದಿಂದ **ಯಜ್ವರೀಃ**—ಯಜ್ಞಕರ್ತರಾದ । **ವಿಶಃ**—ಪ್ರಜೆಗಳಲ್ಲಿಗೆ । **ಗಚ್ಛಥಃ**—ಹೋಗುವಿರೋ । **ಯೇನ**—ಯಾವುದರಿಂದ । **ಕೀರೇಶ್ಚಿತ್**—ಸ್ತುತಿಕರ್ತನ । **ಹೋತೃಮಂತಂ**—ಹೋತೃಗಳಿಂದ ಕೂಡಿದ । **ಯಜ್ಞಂ**—ಯಜ್ಞಕ್ಕೆ ಹೋಗುವಿರೋ ಅಂತಹುದೂ । **ಪ್ರಾತರ್ಯುಜಂ**—ಪ್ರಾತಃಕಾಲದಲ್ಲಿ ಹೂಡತಕ್ಕದ್ದೂ । **ಪ್ರಾತರ್ಯಾವಾಣಂ**—ಪ್ರಾತಃಕಾಲದಲ್ಲಿ ಯಜ್ಞಕ್ಕೆ ಹೋಗತಕ್ಕದ್ದೂ । **ಮಧುವಾಹನಂ**—ಮಧುವನ್ನು ವಹಿಸತಕ್ಕದ್ದೂ ಆದ । **ರಥಂ**—ರಥವನ್ನು । **ಅಧಿ ತಿಷ್ಠಥಃ**—ಹತ್ತಿ ಕುಳಿತುಕೊಳ್ಳಿ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ನೇತೃಗಳಾದ ನೀವು ಯಾವ ರಥದಿಂದ ಯಜ್ಞಕರ್ತರಾದ ಪ್ರಜೆಗಳಲ್ಲಿಗೆ ಹೋಗುವಿರೋ, ಯಾವುದರಿಂದ ಸ್ತುತಿಕರ್ತನ ಹೋತೃಯುಕ್ತವಾದ ಯಜ್ಞಕ್ಕೆ ಹೋಗುವಿರೋ ಅಂತಹುದೂ, ಪ್ರಾತಃಕಾಲದಲ್ಲಿ ಹೂಡತಕ್ಕದ್ದೂ, ಪ್ರಾತಃಕಾಲದಲ್ಲಿ ಯಜ್ಞಕ್ಕೆ ಹೋಗತಕ್ಕದ್ದೂ, ಮಧುವನ್ನು ವಹಿಸತಕ್ಕದ್ದೂ ಆದ ರಥವನ್ನು ಹತ್ತಿ ಕುಳಿತುಕೊಳ್ಳಿ.

English Translation

Ascend, Nasatyas, your nectar-bearing chariot, which is harnessed at dawn, and set in motion at dawn, with which, leaders (of rites), you go to the people who are engaged in worship, to the priest-administered sacrifice, Aswins, of (your) adorer.

ಸಂಹಿತಾಪಾಠಃ

ಅಧ್ವ್ಯರ್ಯುಂ ವಾ ಮಧುಪಾಣಿಂ ಸುಹಸ್ತ್ಯಮಗ್ನಿಧಂ ವಾ ಧೃತದಕ್ಷಂ
ದಮೂನಸಂ ।
ವಿಪ್ರಸ್ಯ ವಾ ಯತ್ಸವನಾನಿ ಗಚ್ಛಥೋತ ಆ ಯಾತಂ ಮಧುಪೇಯಮಶ್ವಿನಾ॥

ಪದಪಾಠಃ

ಅಧ್ವ್ಯರ್ಯುಂ । ವಾ । ಮಧುಽಪಾಣಿಂ । ಸುಽಹಸ್ತ್ಯಂ । ಅಗ್ನಿಧಂ । ವಾ । ಧೃತಽದಕ್ಷಂ । ದಮೂನಸಂ ।
ವಿಪ್ರಸ್ಯ । ವಾ । ಯತ್ । ಸವನಾನಿ । ಗಚ್ಛಥಃ । ಅತಃ । ಆ । ಯಾತಂ । ಮಧುಽಪೇಯಂ । ಅಶ್ವಿನಾ॥

ಸಾಯಣಭಾಷ್ಯಂ

ಹೇ ಅಶ್ವಿನೌ ಯುವಾಂ ಮಧುಪಾಣಿಂ ಸೋಮಪಾಣಿಮಧ್ವ್ಯರ್ಯುಂ ವಾ ಸುಹಸ್ತ್ಯಂ ಸುಹಸ್ತ್ಯಾನಾಮಾನಮೃಷಿಂ ಮಾಂ ಧೃತದಕ್ಷಂ ಧೃತಬಲಂ ದಮೂನಸಂ ದಾನಮನಸಮಗ್ನಿಧಂ ವರ್ಷಿಷ್ಠಾಗ್ನಿಶೇಷಂ ಸಮಾಯಾತಂ । ತದೇವ ದರ್ಶಯತಿ । ಯದ್ಯದ್ಯಪಿ ವಿಪ್ರಸ್ಯಾನ್ಯಸ್ಯ ಮೇಧಾವಿನಃ ಸವನಾನಿ ಯಜ್ಞಾನ್ಗಚ್ಛಥಃ ತಥಾಪ್ಯತಸ್ತೇಭ್ಯೋ ಯಜ್ಞೇಭ್ಯೋ ಮಧುಪೇಯಮಸ್ಮಾಕಂ ಸೋಮಾತ್ಮಕಂ ಪೇಯಮಾಯಾತಂ । ಅನ್ಯಾಗಚ್ಛತಂ ॥

ಪ್ರತಿಪದಾರ್ಥ

(ಎಲೈ ಅಶ್ವಿನೀದೇವತೆಗಳೇ) ಮಧುಪಾಣಿಂ—ಕೈಯಲ್ಲಿ ಸೋಮವನ್ನು ಹಿಡಿದಿರುವ । ಅಧ್ವರ್ಯುಂ ವಾ—ಅಧ್ವರ್ಯುರೂಪದಿಂದಾಗಲಿ । ಧೃತದಕ್ಷಂ—ಅಧಿಕಬಲವುಳ್ಳವನೂ । ದಮೂನಸಂ—ದಾನಬಲವುಳ್ಳವನೂ ಆದ

ಅಗ್ನಿಧಂ ವಾ—ಅಗ್ನೀಧ್ರರೂಪದಿಂದಾಗಲಿ । **ಸುಹಸ್ತ್ಯಂ**—ಸುಹಸ್ತ್ಯಸಂಜ್ಞಕನಾದ ನನ್ನಲ್ಲಿಗೆ । **ಆ ಯಾತಂ**—ಬನ್ನಿರಿ । **ಯತ್**—ಒಂದುವೇಳೆ । **ವಿಪ್ರಸ್ಯ**—ಮೇಧಾವಿಯ । **ಸವನಾನಿ**—ಯಜ್ಞಕ್ಕೆ । **ಗಚ್ಛಥಃ**—ಹೋಗಿದ್ದರೂ । **ಅತಃ**—ಅಲ್ಲಿಂದ । **ಮಧುಪೇಯಂ**—ಸೋಮರೂಪವಾದ ಪಾನವುಳ್ಳ ನಮ್ಮ ಯಜ್ಞಕ್ಕೆ ಬನ್ನಿರಿ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ಕೈಯಲ್ಲಿ ಸೋಮವನ್ನು ಹಿಡಿದಿರುವ ಅಧ್ವರ್ಯುರೂಪದಿಂದಾಗಲಿ, ಅಧಿಕಬಲವುಳ್ಳವನೂ, ದಾನಮನಸ್ಸುಳ್ಳವನೂ ಆದ ಅಗ್ನೀಧ್ರರೂಪದಿಂದಾಗಲಿ. ಸುಹಸ್ತ್ಯಸಂಜ್ಞಕನಾದ ನನ್ನಲ್ಲಿಗೆ ಬನ್ನಿರಿ. ಒಂದುವೇಳೆ ಇತರ ಯಜಮಾನನ ಯಜ್ಞಕ್ಕೆ ಹೋಗಿದ್ದರೂಸಹ, ಅಲ್ಲಿಂದ ಸೋಮವನ್ನು ಅರ್ಪಿಸುವ ನಮ್ಮ ಯಜ್ಞಕ್ಕೆ ಬನ್ನಿರಿ.

English Translation

Come, Aswins, to Suhastya, whether as the ministrant priest bearing the Soma in his hand, or as the competent lowly-minded feeder of the sacred fire; although you go to the sacrifice of (some other) sage, (yet) come, Aswins, from them to the beverage of the Soma (which I offer).

———

ನಲವತ್ತೆರಡನೆಯ ಸೂಕ್ತ

ಸಾಯಣಭಾಷ್ಯಂ

ಅಸ್ತೇವೇತ್ಯೇಕಾದಶರ್ಚಂ ತ್ರಯೋದಶಂ ಸೂಕ್ತಮಾಂಗಿರಸಸ್ಯ ಕೃಷ್ಣಾಖ್ಯಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ಅನುಕ್ರಾಂತಂ ಚ । ಅಸ್ತೇವೈಕಾದಶ ಕೃಷ್ಣ ಇತಿ ॥ ಅಭಿಪ್ಲವಿಕೇಷೂಕ್ಥ್ಯೇಷು ಸ್ತೋಮವೃದ್ಧಾವಿದಂ ಸೂಕ್ತಂ ಬ್ರಾಹ್ಮಣಾಚ್ಛಂಸಿನ ಆವಾಪಾರ್ಥಂ । ಸೂತ್ರಿತಂ ಚ । ಯಜ್ಞೋ ದಿವ ಇತಿ ಸೂಕ್ತೇ ಅಸ್ತೇವ ಸು ಪ್ರತರಂ । ಅ ೭-೯ । ಇತಿ ॥

ಅನುವಾದವು—**ಅಸ್ತೇವ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಅಂಗಿರಸ ಪುತ್ರನಾದ ಕೃಷ್ಣನೆಂಬುವನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ **ಅಸ್ತೇವೈಕಾದಶ ಕೃಷ್ಣಃ** ಎಂದು ಹೇಳಿರುವುದು. ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿ ಸೋಮವೃದ್ಧಿಗಾಗಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಆವಾಪಾರ್ಥವಾಗಿ ಪಠಿಸಬೇಕಾದ ಸೂಕ್ತಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಯಜ್ಞೋ ದಿವ ಇತಿ ಸೂಕ್ತೇ ಅಸ್ತೇವ ಸು ಪ್ರತರಂ** ಎಂಬ ಸೂತ್ರದಿಂದ (ಅ. ೭-೯) ವಿವೃತವಾಗಿರುವುದು.

ಸೂಕ್ತ—೪೨

ಮಂಡಲ—೧೦ ॥ ಅನುವಾಕ—೩ ॥ ಸೂಕ್ತ—೪೨ ॥
ಅಷ್ಟಕ—೭ ॥ ಅಧ್ಯಾಯ—೮ ॥ ವರ್ಗ—೨೨, ೨೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ಕೃಷ್ಣಃ ॥
ದೇವತಾ—ಇಂದ್ರಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಅಸ್ತೇ॑ವ ಸು ಪ್ರತ॑ರಂ ಲಾ॒ಯಮ॑ಸ್ಯ॒ನ್ಭೂಷ॑ನ್ನಿವ ಪ್ರ ಭ॑ರಾ ಸ್ತೋ॒ಮಮ॑ಸ್ಮೈ ।
ವಾ॒ಚಾ ವಿ॑ಪ್ರಾಸ್ತರತ ವಾ॒ಚಮ॑ಯೋ॒ ನಿ ರ॑ಮಯ ಜರಿತಃ ಸೋ॒ಮ ಇಂ॑ದ್ರಂ ॥ ೧ ॥

ಪದಪಾಠಃ

ಅಸ್ತಾ॑ಽಇವ । ಸು । ಪ್ರ॒ತ॒ರಂ । ಲಾಯ॑ಂ । ಅಸ್ಯ॑ನ್ । ಭೂಷ॑ನ್ಽಇವ । ಪ್ರ । ಭ॒ರ॒ । ಸ್ತೋ॒ಮಂ । ಅ॒ಸ್ಮೈ॒ ।
ವಾ॒ಚಾ । ವಿ॒ಪ್ರಾಃ । ತ॒ರ॒ತ॒ । ವಾ॒ಚಂ । ಅ॒ಯ॒ರ್ಯಃ । ನಿ । ರ॒ಮ॒ಯ॒ । ಜ॒ರಿ॒ತ॒ರಿ॑ತಿ । ಸೋ॒ಮೇ । ಇಂ॒ದ್ರಂ ॥

ಸಾಯಣಭಾಷ್ಯಂ

ಪ್ರತರಂ ಪ್ರವೃದ್ಧತರಂ ಲಾಯಂ ಸಂಶ್ಲೇಷಣಂ ಹೃದಯವೇಧಿನಂ ಶರಂ ಸು ಸುಷ್ಠ್ವಸ್ಯನ್ ಕ್ಷಿಪನ್ನಸ್ತೇವ ಯಥಾ ಕ್ಷೇಪ್ತಾ ಧಾನುಷ್ಕೋ ಭೂಷನ್ನಿವ ಯಥಾ ಚಾಲಂಕಾರಮಲಂಕುರ್ವನ್ನಲಂಕರ್ತಾ ತದ್ವತ್ತೋ॒ತ್ರಮಮಸ್ಮಾ ಇಂದ್ರಾಯ ಪ್ರ ಭರ । ಪ್ರಾಪಯ । ಹೇ ಅಂತರಾತ್ಮನ್ ತ್ವಮಿತಿ ಶೇಷಃ । ಕಿಂಚ ಹೇ ವಿಪ್ರಾ ಮೇಧಾವಿನಃ ಯೂಯಂ ವಾಚಾ ಸ್ತುತ್ಯಾ ತ್ಮಯೋ॑ಽರೇಃ ಶತ್ರೋರ್ವಾಚಂ ತರತ । ನಿತರಾಂ ತರತ । ನಿರಾಕುರುತೇತ್ಯರ್ಥಃ । ಹೇ ಜರಿತಃ ಸ್ತೋತಃ ತ್ವಂ ಸೋಮೇ ಸೋಮಯಾಗ ಇಂದ್ರಂ ನಿ ರಮಯ । ಕ್ರೀಡಯ ॥

ಪ್ರತಿಪದಾರ್ಥ

ಪ್ರತರಂ—ವೇಗಗಾಮಿಯೂ । **ಲಾಯಂ**—ಗುರಿಯನ್ನು ಮುಟ್ಟುವುದೂ ಆದ ಬಾಣವನ್ನು । **ಸು**—ಅತಿಶಯವಾಗಿ । **ಅಸ್ಯನ್**—ಎಸೆಯತಕ್ಕ । **ಅಸ್ತೇವ**—ಧನುರ್ಧಾರಿಯಂತೆಯೂ । **ಭೂಷನ್ನಿವ**—ಚಿತ್ರಗಳನ್ನು ಅಲಂಕರಿಸುವ ಚಿತ್ರಕಾರನಂತೆಯೂ । **ಸ್ತೋಮಂ**—ಈ ಸೋತ್ರವನ್ನು । **ಅಸ್ಮೈ**—ಇಂದ್ರನನ್ನುದ್ದೇಶಿಸಿ । **ಪ್ರ ಭರ**—ಅರ್ಪಿಸು । **ವಿಪ್ರಾಃ**—ಮೇಧಾವಿಗಳಾದ ಎಲೈ ಸ್ತುತಿಕರ್ತರೇ । **ವಾಚಾ**—ನಿಮ್ಮ ಸ್ತುತಿಯಿಂದ । **ಅರ್ಯಃ**—

ಶತ್ರುವಿನ । **ವಾಚಂ**—ಸ್ತುತಿವಾಕ್ಯನ್ನು । **ತರತ**—ತಿರಸ್ಕರಿಸಿರಿ । **ಜರಿತಃ**—ಎಲೈ ಸ್ತುತಿಕರ್ತನೇ । **ಸೋಮೇ**—ಸೋಮಯಾಗದಲ್ಲಿ । **ಇಂದ್ರಂ**—ಇಂದ್ರನನ್ನು । **ನಿ ರಮಯೇ**—ಕ್ರೀಡಿಸುವಂತೆ ಮಾಡು.

ಭಾವಾರ್ಥ

ವೇಗಗಾಮಿಯೂ, ಗುರಿಯನ್ನು ಮುಟ್ಟುವುದೂ ಆದ ಶರವನ್ನು ಧನುರ್ಧಾರಿಯು ಗುರಿಯಿಟ್ಟು ಹೊಡೆಯುವಂತೆಯೂ, ತನ್ನ ಚಿತ್ರಗಳಿಗೆ ತದೇಕಧ್ಯಾನವಾಗಿ ಚಿತ್ರಕಾರನು ವರ್ಣಗಳನ್ನರ್ಪಿಸುವಂತೆಯೂ ಈ ಸ್ತೋತ್ರವನ್ನು ಇಂದ್ರನನ್ನುದ್ದೇಶಿಸಿ ಅರ್ಪಿಸು. ಮೇಧಾವಿಗಳಾದ ಎಲೈ ಸ್ತುತಿಕರ್ತರೇ ನಿಮ್ಮ ಸ್ತುತಿಯಿಂದ ಶತ್ರುವಿನ ಸ್ತುತಿವಾಕ್ಯನ್ನು ತಿರಸ್ಕರಿಸಿರಿ. ಎಲೈ ಸ್ತುತಿಕರ್ತನೇ ಸೋಮಯಾಗದಲ್ಲಿ ಇಂದ್ರನನ್ನು ಕ್ರೀಡಿಸುವಂತೆ ಮಾಡು.

English Translation

Direct your laudation to him, (Indra), like an archer aiming a larger arrow (to its mark), like a decorator (applying his ornaments) : surpass by your praises, sages, the praises of your adversaries; delight Indra, worshipper, by the (offering of the) Soma.

ಸಂಹಿತಾಪಾಠಃ

ದೋಹೇ॑ನ ಗಾಮುಪ॑ ಶಿಕ್ಷಾ ಸಖಾ॑ಯಂ ಪ್ರ ಬೋ॑ಧಯ ಜರಿತರ್ಜಾ॑ರ-
ಮಿಂದ್ರ॑ಂ ।
ಕೋ॑ಶಂ ನ ಪೂರ್ಣಂ ವಸು॑ನಾ ನ್ಯೃಷ್ಟಮಾ ಚ್ಯಾ॑ವಯ ಮಘ॒ದೇಯಾ॑ಯ ಶೂರ॑ಂ ॥ ೨ ॥

ಪದಪಾಠಃ

ದೋಹೇ॑ನ । ಗಾಂ । ಉಪ॑ । ಶಿಕ್ಷ॒ । ಸಖಾ॑ಯಂ । ಪ್ರ । ಬೋ॒ಧ॒ಯ॒ । ಜ॒ರಿ॒ತ॒ಃ । ಜಾರ॑ಂ । ಇಂದ್ರ॑ಂ ।
ಕೋ॒ಶಂ । ನ । ಪೂರ್ಣ॑ಂ । ವಸು॑ನಾ । ನಿ॒ಽಋ॒ಷ್ಟಂ॒ । ಆ । ಚ್ಯಾ॒ವ॒ಯ॒ । ಮ॒ಘ॒ಽದೇ॑ಯಾ॑ಯ । ಶೂರ॑ಂ ॥

ಸಾಯಣಭಾಷ್ಯಂ

ಹೇ ಜರಿತಃ ತ್ವಂ ದೋಹೇನ ಕಾಮಾನಾಂ ದೋಹನಾರ್ಥಂ ಗಾಂ ಗೋರೂಪಂ ಸಖಾಯಂ ಪ್ರಿಯಮಿಂದ್ರಮುಪ ಶಿಕ್ಷ । ವಶಂ ನಯ । ಕಿಂಚ ಜಾರಂ ಭೂತಾನಾಂ ಜರಯಿತಾರಮಿಂದ್ರಂ ಪ್ರ ಬೋಧಯ । ಸ್ತುತಿಭಿಃ ಪ್ರಬುದ್ಧಂ ಕುರು । ಕಿಂಚ ಪೂರ್ಣಮುದಕೇನ ಪೂರಿತಂ ಕೋಶಂ ನ ಪಾತ್ರ-

ಮಿವ ವಸುನಾ ಹಿರಣ್ಯಾದಿನಾ ಧನೇನ ನ್ಯೃಷ್ಟಂ ನೀಚೈರ್ಗತಂ ಶೂರಂ ವೀರಮಿಂದ್ರಂ ಮಘದೇಯಾಯ ಧನದಾನಾಯಾ ಚ್ಯವಯ ।ಅಭಿಮುಖಂ ಕುರ್ವಿತ್ಯರ್ಥಃ ॥

ಪ್ರತಿಪದಾರ್ಥ

ಜರಿತಃ—ಎಲೈ ಸ್ತುತಿಕರ್ತನೇ । **ದೋಹೇನ**—ಹಾಲನ್ನು ಕರೆಯುವುದಕ್ಕಾಗಿ । **ಗಾಂ**—ಗೋವನ್ನು ತಡೆದು ನಿಲ್ಲಿಸುವಂತೆ । **ಸಖಾಯಂ**—ಮಿತ್ರನಾದ । **ಇಂದ್ರಂ**—ಇಂದ್ರನನ್ನು । **ಉಪ ಶಿಕ್ಷ**—ನಿನ್ನಲ್ಲೇ ತಡೆದು ನಿಲ್ಲಿಸು । **ಜಾರಂ**—ಪ್ರಾಣಿಗಳಿಗೆ ಜರೆಯನ್ನುಂಟುಮಾಡುವ ಇಂದ್ರನನ್ನು । **ಪ್ರಬೋಧಯ**—ಎಚ್ಚರಗೊಳಿಸು । **ಪೂರ್ಣಂ**—ಉದಕದಿಂದ ಪೂರ್ಣವಾದ । **ಕೋಶಂ ನ**—ಪಾತ್ರೆಯಂತೆ । **ವಸುನಾ**—ಸಂಪತ್ತಿನ ಭಾರದಿಂದ **ನ್ಯೃಷ್ಟಂ**—ಬಗ್ಗಿದವನೂ । **ಶೂರಂ**—ವೀರನೂ ಆದ ಇಂದ್ರನನ್ನು । **ಮಘದೇಯಾಯ**—ಸಂಪತ್ತನ್ನು ಹಂಚುವುದಕ್ಕಾಗಿ । **ಆ ಚ್ಯವಯ**—ನಮಗೆ ಅಭಿಮುಖನಾಗುವಂತೆ ಮಾಡು.

ಭಾವಾರ್ಥ

ಎಲೈ ಸ್ತುತಿಕರ್ತನೇ, ಹಾಲನ್ನು ಕರೆಯುವುದಕ್ಕಾಗಿ ಗೋವನ್ನು ತಡೆದು ನಿಲ್ಲಿಸುವಂತೆ ಮಿತ್ರನಾದ ಇಂದ್ರನನ್ನು ನಿನ್ನಲ್ಲೇ ತಡೆದು ನಿಲ್ಲಿಸು. ಪ್ರಾಣಿಗಳಿಗೆ ಜರೆಯನ್ನುಂಟುಮಾಡುವ ಇಂದ್ರನನ್ನು ಎಚ್ಚರಗೊಳಿಸು. ಉದಕದಿಂದ ಪೂರ್ಣವಾದ ಪಾತ್ರೆಯಂತೆ ಸಂಪತ್ತಿನ ಭಾರದಿಂದ ಬಗ್ಗಿದವನೂ, ವೀರನೂ ಆದ ಇಂದ್ರನನ್ನು ಸಂಪತ್ತನ್ನು ಹಂಚುವುದಕ್ಕಾಗಿ ನಮಗೆ ಅಭಿಮುಖವಾಗುವಂತೆ ಮಾಡು.

English Translation

Control, worshipper, your friend(Indra), like a cow for your milking: awake, Indra, the author of decay; bring down for the distribution of wealth the hero who is pressed down with wealth like a vessel full (of water).

ಸಂಹಿತಾಪಾಠಃ

ಕಿಮಂಗ ತ್ವಾ ಮಘವನ್ಭೋಜಮಾಹುಃ ಶಿಶೀಹಿ ಮಾ ಶಿಶಯಂ ತ್ವಾ ಶೃಣೋಮಿ ।
ಅಪ್ನಸ್ವತೀ ಮಮ ಧೀರಸ್ತು ಶಕ್ರ ವಸುವಿದಂ ಭಗಮಿಂದ್ರಾ ಭರಾ ನಃ ॥೩॥

ಪದಪಾಠಃ

ಕಿಂ । ಅಂಗ । ತ್ವಾ । ಮಘವನ್ । ಭೋಜಂ । ಆಹುಃ । ಶಿಶೀಹಿ । ಮಾ । ಶಿಶಯಂ । ತ್ವಾ । ಶೃಣೋಮಿ ।
ಅಪ್ನಸ್ವತೀ । ಮಮ । ಧೀಃ । ಅಸ್ತು । ಶಕ್ರ । ವಸುವಿದಂ । ಭಗಂ । ಇಂದ್ರ । ಆ । ಭರ । ನಃ ॥ ೩ ॥

ಸಾಯಣಭಾಷ್ಯಂ

ಅಂಗೇತಿ ಸಾಮಾನ್ಯಾಹ್ವಾನಂ । ಅಂಗ ಹೇ ಮಘವನ್ಧನವಞ್ಶಕ್ರೇಂದ್ರ ತ್ವಾ ತ್ವಾಂ ಕಂ ಕಿಮರ್ಥಂ ಭೋಜಂ ಸ್ತೋತ್ರ್ಯಾಣಾಂ ಭೋಜಕಮಭೀಷ್ಟಮಾಹುಃ ಸರ್ವೇ ವಿದ್ವಾಂಸಃ । ಯದಿ ನ ದದಾಸೀತ್ಯಧ್ಯಾಹಾರಃ । ತಸ್ಮಾದ್ದದಾಸ್ಯೇವ ಸ್ತೋತೃಭ್ಯೋ ಧನಾನೀತ್ಯರ್ಥಃ । ತಥಾ ಸತಿ ಮಾ ಸ್ತೋತಾರಂ ಶಿಶೀಹಿ । ಧನದಾನೇನ ತೀಕ್ಷ್ಣೀಕುರು । ತ್ವಾ ತ್ವಾಂ ಶಿಶಯಂ ಸ್ತೋತ್ರ್ಯಾಣಾಂ ಸಂಸ್ಕರ್ತಾರಂ ಶೃಣೋಮಿ । ಕಿಂಚ ಮಮ ಧೀರ್ಬುದ್ಧಿರಪ್ಸ್ವತೀ ಕರ್ಮವತ್ಯಸ್ತು । ಭವತು । ಕಿಂಚ ನೋಽಸ್ಮಾಕಂ ವಸುವಿದಂ ಧನಸಲಂಭಕಂ ಭಗಂ ಭಾಗ್ಯಮಾ ಭರ । ಆಹರ ॥

ಪ್ರತಿಪದಾರ್ಥ

ರಥಕ್ಕೆ ಪ್ರಬಲವಾದ ಶಕ್ತಿಯುಳ್ಳ ಅಶ್ವಗಳನ್ನು ಯೋಜಿಸಿ ಧನವನ್ನು ಸಂಪಾದಿಸುವ ಶಕ್ತಿಯಿದ್ದರೂ ಸಹ ಯಾರು ದುಷ್ಟಬುದ್ಧಿಯುಳ್ಳವರಾಗಿ ಕರ್ಮವನ್ನಾಚರಿಸುವುದಿಲ್ಲವೋ ಅವರು ಅಧೋಗತಿಯನ್ನೇ ಹೊಂದುತ್ತಾರೆ. ಯಾವ ಯಜ್ಞಕರ್ತರು ಮರಣಕ್ಕೆ ಮೊದಲೇ ಹವಿಸ್ಸನ್ನು ಅರ್ಪಿಸಲು ಸಿದ್ಧರಾಗಿರುವರೋ, ಯಾವ ಯಜ್ಞಕರ್ತರಲ್ಲಿ ಆತ್ಯಧಿಕವಾಗಿರುವ ಉತ್ತಮವಾದ ಜ್ಞಾನವೂ ಭೋಗಸಾಧನವಾದ ಧನವೂ ಸಾರ್ಥಕವಾಗುವುದೋ ಅವರು ಮೇಲೆ ವಿವರಿಸಿದಂತೆ ಉತ್ತಮವಾದ ಗತಿಯನ್ನು ಪಡೆಯುತ್ತಾರೆ.

English Translation.

Thus may those others the ignorant go downwards, whose restive horses are yoked ; otherwise (is it with those) who before (death) are near unto liberality, amongst whom precious gifts (to the gods) are numerous.

ಸಂಹಿತಾಪಾಠಃ

ಗಿರೀꣳರಜ್ರಾನ್ರೇಜಮಾನಾꣳ ಅಧಾರಯದ್ದ್ಯೌಃ ಕ್ರಂದದಂತರಿಕ್ಷಾಣಿ ಕೋಪ-
ಯತ್ ।
ಸಮೀಚೀನೇ ಧಿಷಣೇ ವಿ ಷ್ಕಭಾಯತಿ ವೃಷ್ಣಃ ಪೀತ್ವಾ ಮದ ಉಕ್ಥಾನಿ
ಶಂಸತಿ ॥ ೮ ॥

ಪದಪಾಠಃ

ಗಿರೀನ್ । ಅಜ್ರಾನ್ । ರೇಜಮಾನಾನ್ । ಅಧಾರಯತ್ । ದ್ಯೌಃ । ಕ್ರಂದತ್ । ಅಂತರಿಕ್ಷಾಣಿ ।
ಕೋಪಯತ್ ।
ಸಮೀಚೀನೇ ಇತಿ ಸಂ೨ಈಚೀನೇ । ಧಿಷಣೇ ಇತಿ । ವಿ । ಷ್ಕಭಾಯತಿ । ವೃಷ್ಣಃ । ಪೀತ್ವಾ । ಮದೇ ।
ಉಕ್ಥಾನಿ । ಶಂಸತಿ ॥

ಸಾಯಣಭಾಷ್ಯಂ

ಗಿರೀನ್ಮೇಘಾನಜ್ರಾನ್ಗಮನಶೀಲಾನ್ರೇಜಮಾನಾನ್ಕಂಪಮಾನಾನಧಾರಯೆತ್ । ಇಂದ್ರೋ ಧಾರಿತವಾನ್ । ನಿಶ್ಚಲಾನ್ಕೃತವಾನಿತ್ಯರ್ಥಃ । ಕಿಂಚ ದ್ಯೌರ್ದ್ಯುಲೋಕಸ್ತನ್ನಿವಾಸೀ ವಾ ಜನೋ೨ಸುರರಾಕ್ಷಸೇಭ್ಯೋ ಭೀತಃ ಸನ್ ಕ್ರಂದತ್ । ಕ್ರಂದತಿ । ಇಂದ್ರಮಾಹ್ವಯತ್ಯಾತ್ಮನಃ ಪರಿತ್ರಾಣಾರ್ಥಂ । ಕಿಂಚೇಂದ್ರೋ೨ಂತರಿಕ್ಷಾಣಿ ಕೋಪಯೆತ್ । ಕೋಪಯತಿ । ಸಂಕ್ಷೋಭಯತೀತ್ಯರ್ಥಃ । ಕಿಂಚೇಂದ್ರಃ ಸಮೀಚೀನೇ ಪರಸ್ಪರಂ ಸಂಗತೇ ಧಿಷಣೇ ದ್ಯಾವಾಪೃಥಿವ್ಯೌ ವಿ ಷ್ಕಭಾಯತಿ । ಅಂತರಿಕ್ಷೇಣ ಸ್ತಭ್ನಾತಿ । ಸ್ತಂಭ-

ಯತೀತ್ಯರ್ಥಃ । ಕಿಂಚೇಂದ್ರೋ ವೃಷ್ಣಃ ಸ್ವೋದರಸ್ಯಾಸೇಕ್ತ್ರ್ಯಾಸ್ಸೋಮಾನ್ಪೀತ್ವಾ ಮದೇ ಸತ್ಯುಕ್ಥಾನಿ ಪ್ರಶಸ್ಯಾನಿ ವಚನಾನಿ ಶಂಸತಿ । ಪ್ರಬ್ರವೀತಿ ।

ಪ್ರತಿಪದಾರ್ಥ

ಅಜ್ರಾನ್—ಸಂಚಾರಾತ್ಮಕವೂ । **ರೇಜಮಾನಾನ್**—ಕಂಪಿಸುವುವೂ ಆದ । **ಗಿರೀನ್**—ಮೇಘಗಳನ್ನು । **ಅಧಾರಯತ್**—ಇಂದ್ರನು ನಿಶ್ಚಲವಾಗುವಂತೆ ಮಾಡಿದನು । **ದ್ಯೌಃ**—ದ್ಯುಲೋಕವು । **ಕ್ರಂದತ್**—ರಕ್ಷಣೆಗಾಗಿ ಇಂದ್ರನನ್ನು ಕೂಗುತ್ತದೆ । **ಅಂತರಿಕ್ಷಾಣಿ**—ಅಂತರಿಕ್ಷಗಳು । **ಕೋಪಯತ್**—ಕ್ಷೋಭಗೊಳ್ಳುತ್ತವೆ । **ಸಮೀಚೀನೇ**—ಒಂದುಗೂಡಿರುವ । **ಧಿಷಣೇ**—ದ್ಯಾವಾಪೃಥಿವಿಗಳನ್ನು । **ವಿಷ್ಕಭ್ನಾಯತಿ**—ಸ್ಥಿರವಾಗಿ ಸ್ಥಾಪಿಸುತ್ತಾನೆ । **ವೃಷ್ಣಃ**—ತನ್ನ ಉದರವನ್ನು ತುಂಬುವ ಸೋಮರಸಗಳನ್ನು । **ಪೀತ್ವಾ**—ಪಾನಮಾಡಿ ! **ಮದೇ**—ಹರ್ಷವುಂಟಾದಾಗ । **ಉಕ್ಥಾನಿ**—ಪ್ರಶಸ್ತವಾದ ಪ್ರಶಂಸಾವಾಕ್ಯಗಳನ್ನು । **ಶಂಸತಿ**—ಪಠಿಸುತ್ತಾನೆ.

ಭಾವಾರ್ಥ

ಸಂಚಾರಾತ್ಮಕವೂ, ಕಂಪಿಸುವುವೂ ಆದ ಮೇಘಗಳನ್ನು ಇಂದ್ರನು ನಿಶ್ಚಲವಾಗುವಂತೆ ಮಾಡಿದನು. ದ್ಯುಲೋಕವು ಇಂದ್ರನನ್ನು ರಕ್ಷಣೆಗಾಗಿ ಕೂಗುತ್ತದೆ. ಅಂತರಿಕ್ಷಗಳು ಕ್ಷೋಭಗೊಳ್ಳುತ್ತವೆ. ಇಂದ್ರನು ಒಂದುಗೂಡಿರುವ ದ್ಯಾವಾಪೃಥಿವಿಗಳನ್ನು ಸ್ಥಿರವಾಗಿ ಸ್ಥಾಪಿಸುತ್ತಾನೆ. ತನ್ನ ಉದರವನ್ನು ತುಂಬುವ ಸೋಮರಸಗಳನ್ನು ಪಾನಮಾಡಿ ಹರ್ಷವುಂಟಾದಾಗ ಪ್ರಶಸ್ತವಾದ ಪ್ರಶಂಸಾವಾಕ್ಯಗಳನ್ನು ಪಠಿಸುತ್ತಾನೆ.

English Translation

(Indra) has arrested the wandering tremulous clouds : the heaven cries out (in alarm) : he agitates the firmament ; he fixes the combined heaven and earth : having drunk of the effused Soma, he repeats praises in his exhilaration.

ಸಂಹಿತಾಪಾಠಃ

ಇಮಂ ಬಿಭರ್ಮಿ ಸುಕೃತಂ ತೇ ಅಂಕುಶಂ ಯೇನಾರುಜಾಸಿ ಮಘವಞ್ಛಫಾರುಜಃ ।
ಅಸ್ಮಿನ್ತ್ಸು ತೇ ಸವನೇ ಅಸ್ತ್ವೋಕ್ಯಂ ಸುತ ಇಷ್ಟೌ ಮಘವನ್ಬೋಧ್ಯಾಭಗಃ

ಪದಪಾಠಃ

ಇಮಂ । ಬಿಭರ್ಮಿ । ಸುಕೃತಂ । ತೇ । ಅಂಕುಶಂ । ಯೇನ । ಆರುಜಾಸಿ । ಮಘವನ್ । ಶಫಾರುಜಃ ॥

ಅಸ್ಮಿನ್ । ಸು । ತೇ । ಸವನೇ । ಅಸ್ತು । ಓಕ್ಯಂ । ಸುತೇ । ಇಷ್ಟೌ । ಮಘವನ್ । ಬೋಧಿ ।
ಅವಿತಭಗಃ ॥

ಸಾಯಣಭಾಷ್ಯಂ

ಹೇ ಮಘವನ್ನೇನಮಿಂದ್ರ ತೇ ತವ ಸುಕೃತಂ ಸಂಸ್ಕೃತಮಿಮಮಂಕುಶಂ ಬಿಭರ್ಮಿ । ಧಾರಯಾಮಿ । ಅಶ್ವಾಂಕುಶಶಬ್ದೇನ ಪ್ರೇರಕತ್ವಗುಣಯೋಗಾತ್ಸ್ತುತಿರುಚ್ಯತೇ । ಸ್ತುತಿಂ ಧಾರಯಾಮೀತ್ಯರ್ಥಃ ಯೇನ ಸ್ತುತಿಲಕ್ಷಣಾಂಕುಶೇನ ಸ್ತುತಃ ಸಂಸ್ತ್ವಂ ಶಫಾರುಜ ಅಭಿಮುಖ್ಯೇನ ಪರಬಲಾನಾಂ ಸಂತ್ಯನೈರಾವತಾದೀನ್ಗಜಾನಾರುಜಾಸಿ ಅಭಿಮುಖ್ಯೇನ ರುಜಸಿ । ಪೀಡಯಸೀತ್ಯರ್ಥಃ । ಕಿಂಚ ತೇ ತವಾಸ್ಮಿನ್ನಸ್ಮದೀಯೇ ಸವನ ಓಕ್ಯಮೋಕೋ ನಿವಾಸೋಽಸ್ತು । ಭವತು । ಕಿಂಚ ಹೇ ಮಘವನ್ನೇನಮಿಂದ್ರ ಆಭಗ ಅಭಜನೀಯಸ್ತ್ವಂ ಸುತೇ ಸುತಸೋಮ ಇಷ್ಟೌ ಯಜ್ಞೇ ಬೋಧಿ । ಅಸ್ಮದೀಯಾಃ ಸ್ತುತೀರ್ಬುಧ್ಯಸ್ವ ॥

ಪ್ರತಿಪದಾರ್ಥ

ಮಘವನ್—ಧನವಂತನಾದ ಎಲೈ ಇಂದ್ರನೇ । **ಯೇನ**--ಯಾವ ಸ್ತುತಿರೂಪವಾದ ಅಂಕುಶದಿಂದ । **ಶಫಾರುಜಃ**--ಶತ್ರುಗಳ ಮೇಲೆ ಬೀಳುವ ನಿನ್ನ ಐರಾವತಾದಿ ಆನೆಗಳನ್ನು । **ಅರುಜಾಸಿ**—ತಿವಿಯುವಿಯೋ ೨ಂತಹ । **ತೇ**—ನಿನ್ನ । **ಸುಕೃತಂ**—ಉತ್ತಮವಾಗಿ ಸಂಸ್ಕೃತವಾದ । **ಇಮಂ ಅಂಕುಶಂ**—ಸ್ತುತಿರೂಪವಾದ ಈ ೨ಂಕುಶವನ್ನು । **ಬಿಭರ್ಮಿ**—ನಾನು ಹಿಡಿದಿದ್ದೇನೆ । **ತೇ**—ನಿನಗೆ । **ಓಕ್ಯಂ**—ವಾಸಸ್ಥಾನವು । **ಅಸ್ಮಿನ್ ಸವನೇ**—ನಮ್ಮ ಈ ಯಜ್ಞದಲ್ಲಿ । **ಅಸ್ತು**—ಇರಲಿ । **ಮಘವನ್**—ಧನವಂತನಾದ ಎಲೈ ಇಂದ್ರನೆ । **ಅಭಗಃ**--ಪೂಜ್ಯನಾದ ನೀನು । **ಸುತೇ**—ಸೋಮರಸವನ್ನು ಹಿಂಡಿರುವ । **ಇಷ್ಟೌ**—ನಮ್ಮ ಯಜ್ಞದಲ್ಲಿ । **ಬೋಧಿ**—ನಮ್ಮ ಸ್ತುತಿವಾಕ್ಯಗಳನ್ನು ತಿಳಿ.

ಭಾವಾರ್ಥ

ಧನವಂತನಾದ ಎಲೈ ಇಂದ್ರನೇ, ಯಾವ ಅಂಕುಶದಿಂದ ನೀನು ಶತ್ರುಸೈನ್ಯಗಳಮೇಲೆ ಬೀಳುವ ನಿನ್ನ ಐರಾವತಾದಿ ಆನೆಗಳನ್ನು ತಿವಿಯುವೆಯೋ ಅಂತಹ ನಿನ್ನ ಉತ್ತಮವಾಗಿ ಸಂಸ್ಕೃತವೂ, ಸ್ತುತಿರೂಪವೂ ಆದ ಈ ಅಂಕುಶವನ್ನು ನಾನು ಹಿಡಿದಿದ್ದೇನೆ. ನಿನಗೆ ವಾಸಸ್ಥಾನವು ನಮ್ಮ ಈ ಯಜ್ಞದಲ್ಲಿರಲಿ. ಧನವಂತನಾದ ಎಲೈ ಇಂದ್ರನೇ, ಪೂಜ್ಯನಾದ ನೀನು ಸೋಮರಸವನ್ನು ಹಿಂಡಿರುವ ನಮ್ಮ ಯಜ್ಞದಲ್ಲಿ ನಮ್ಮ ಸ್ತುತಿವಾಕ್ಯಗಳನ್ನು ತಿಳಿ.

English Translation

I bear this your well-made goad, (excited) by which, Maghavat, you urge on the slayers of powerful foes. Let your abode be at this my sacrifice. Accept, Maghavat, who are to be adored, (my praise) at the sacrifice at which (the Soma) is effused

संहितापाठः

गोभिष्टरेमावमतिं दुरेवाꣳ यवेन क्षुधं पुरुहूत विश्वां।
वयं राजभिः प्रथमा धनान्यस्माकेन वृजनेना जयेम ॥८०॥

पदपाठः

गोभिः। तरेम। अमतिं। दुःऽइवान्। यवेन। क्षुधं। पुरुऽहूत। विश्वां।
वयं। राजऽभिः। प्रथमाः। धनानि। अस्माकेन। वृजनेन। जयेम ॥ ८० ॥

सायणभाष्यं

हे पुरुहूत बहुभिराहूतेंद्र तव प्रसादाद्दुरेवान् दुष्प्रागमनान् दारिद्र्यादागतामतिं दुर्बुद्धिं वयं घोषेयाः सुहस्त्यो गोभिः पशुभिस्तरेम। तिस्तरेम। किंच यवेन विश्वां व्याप्तां क्षुधं तरेम। किंच प्रथमा मुख्यानि धनानि राजभिर्धनानामीश्वरैः। लभेमहीति शेषः। यद्वा। प्रथमा वयमिति संबंधः। किंचास्माकेनास्मदीयेन वृजनेन बलेन जयेम। शत्रूनिति शेषः॥

प्रतिपदार्थ

पुरुहूत—अनेकरिंद करेयल्पडुव एल्लै इंद्रनेऽ। **दुरेवान्**—दारिद्र्यदिंद प्राप्तवाद। **अमतिं**—दुर्बुद्धियन्नु। **वयं**—नावु। **गोभिः**—नम्म पशुसंपत्तिन सहायदिंद। **तरेम**—दाटुवंतागलि। **यवेन**—यवधान्यद सहायदिंद। **विश्वां**—नम्मन्नावरिसिरुव। **क्षुधं**—हसिवन्नु दाटुवंतागलि। **प्रथमाः**—अति मुख्यवाद। **धनानि**—धनगळन्नु। **राजभिः**—धनद प्रभुगळिंद (नावु हॊंदुवंतागलि) **अस्माकेन**—नम्म। **वृजनेन**—शक्तियिंद। **जयेम**—शत्रुगळन्नु जयिसुवंतागलि.

भावार्थ

पुरुहूतनाद एल्लै इंद्रनेऽ, दारिद्र्यदिंद प्राप्तवाद दुर्बुद्धियन्नु नावु नम्म पशु संपत्तिनिंद दाटुवंतागलि. यवधान्यद सहायदिंद नम्मन्नावरिसुव हसिवन्नु नाशपडिसुवंतागलि. धनिकरिंद नावु मुख्यवाद धनगळन्नु हॊंदुवंतागलि. नम्म शक्तियिंद शत्रुगळन्नु जयिसुवंतागलि.

English Translation

Indra, invoked of many, may we escape all ignorance caused by poverty by means of our cattle : (may we escape) all hunger by means of

our barley : (may we acquire) the chief riches through the princes (of wealth) : may we conquer by our valour.

ಸಂಹಿತಾಪಾಠಃ

ಬೃಹಸ್ಪತಿರ್ನಃ ಪರಿ ಪಾತು ಪಶ್ಚಾದುತೋತ್ತರಸ್ಮಾದಧರಾದಘಾಯೋಃ ।
ಇಂದ್ರಃ ಪುರಸ್ತಾದುತ ಮಧ್ಯತೋ ನಃ ಸಖಾ ಸಖಿಭ್ಯೋ ವರಿವಃ ಕೃಣೋತು

ಪದಪಾಠಃ

ಬೃಹಸ್ಪತಿಃ । ನಃ । ಪರಿ । ಪಾತು । ಪಶ್ಚಾತ್ । ಉತ । ಉತ್ತರಸ್ಮಾತ್ । ಅಧರಾತ್ । ಅಘಾಯೋಃ ।
ಇಂದ್ರಃ । ಪುರಸ್ತಾತ್ । ಉತ । ಮಧ್ಯತಃ । ನಃ । ಸಖಾ । ಸಖಿಭ್ಯಃ । ವರಿವಃ । ಕೃಣೋತು ॥ ೧೧ ॥

ಸಾಯಣಭಾಷ್ಯಂ

ಪಶ್ಚಾತ್ಪಶ್ಚಿಮತೋ ಯೋಽಘಾಯುರಾಗಚ್ಛತಿ ತಸ್ಮಾದಘಾಯೋಃ ಪಾಪಕಾಚ್ಛತ್ರೋರ್ನೋಽಸ್ಮಾನ್ಬೃಹಸ್ಪತಿಃ ಪರಿ ಪಾತು । ರಕ್ಷತು । ಉತಾಪಿ ಚೋತ್ತರಸ್ಮಾದುತ್ತರತೋಽಧರಾದಧಸ್ತಾಚ್ಚ ಯೋಽಘಾಯುರಾಗಚ್ಛತಿ ತಸ್ಮಾದಘಾಯೋರ್ನೋಽಸ್ಮಾನ್ಪರಿ ಪಾತು । ಉತಾಪಿ ಚೇಂದ್ರಃ ಪುರಸ್ತಾತ್ಪೂರ್ವತೋಮಧ್ಯತಶ್ಚ ಯೋಽಘಾಯುರಾಗಚ್ಛತಿ ತಸ್ಮಾದಘಾಯೋರ್ನೋಽಸ್ಮಾನ್ಪರಿ ಪಾತು । ಕಿಂಚ । ಸಖಾ ಸಖಿಭೂತೇಂದ್ರಃ ಸಖಿಭ್ಯಃ ಪ್ರಿಯೇಭ್ಯೋಽಸ್ಮಭ್ಯಂ ವರಿವೋ ಧನಂ ಕೃಣೋತು । ಕರೋತು ॥

ಪ್ರತಿಪದಾರ್ಥ

ಬೃಹಸ್ಪತಿಃ—ಬೃಹಸ್ಪತಿಯು। **ಪಶ್ಚಾತ್**—ನಮ್ಮ ಹಿಂಭಾಗದಿಂದ । **ಅಘಾಯೋಃ**—ಕೇಡನ್ನು ಬಯಸುವ ಶತ್ರುವಿನಿಂದ । **ನಃ**—ನಮ್ಮನ್ನು । **ಪರಿ ಪಾತು**—ರಕ್ಷಿಸಲಿ । **ಉತ**—ಮತ್ತು । **ಉತ್ತರಸ್ಮಾತ್**—ನಮ್ಮ ಮೇಲ್ಭಾಗದಿಂದಲೂ । **ಅಧರಾತ್**—ಕೆಳಭಾಗದಿಂದಲೂ ನಮ್ಮ ಮೇಲೆ ಬೀಳುವ ಶತ್ರುಗಳಿಂದ ರಕ್ಷಿಸಲಿ । **ಉತ**—ಮತ್ತು । **ಇಂದ್ರಃ**—ಇಂದ್ರನು । **ಪುರಸ್ತಾತ್**—ಪೂರ್ವದಿಕ್ಕಿನಿಂದಲೂ । **ಮಧ್ಯತಃ**—ಮಧ್ಯಭಾಗದಿಂದಲೂ । **ನಃ**—ನಮ್ಮನ್ನು ರಕ್ಷಿಸಲಿ । **ಸಖಾ**—ಮಿತ್ರನಾದ ಇಂದ್ರನು । **ಸಖಿಭ್ಯಃ**—ಅವನ ಮಿತ್ರರಾದ ನಮಗೆ । **ವರಿವಃ**—ಧನವನ್ನು । **ಕೃಣೋತು**—ಒದಗಿಸಲಿ.

ಭಾವಾರ್ಥ

ನಮ್ಮ ಹಿಂಭಾಗದಿಂದ ಬಂದು ನಮಗೆ ಕೇಡನ್ನು ಬಯಸುವ ಶತ್ರುವಿನಿಂದ ಬೃಹಸ್ಪತಿಯು ನಮ್ಮನ್ನು ರಕ್ಷಿಸಲಿ. ನಮ್ಮ ಮೇಲ್ಭಾಗದಿಂದಲೂ, ಕೆಳಭಾಗದಿಂದಲೂ ನಮ್ಮ ಮೇಲೆ ಬೀಳುವ ಶತ್ರುಗಳಿಂದಲೂ ನಮ್ಮನ್ನು ರಕ್ಷಿಸಲಿ. ಇಂದ್ರನು ಪೂರ್ವದಿಕ್ಕಿನಿಂದಲೂ, ಮಧ್ಯಭಾಗದಿಂದಲೂ ನಮ್ಮನ್ನು ರಕ್ಷಿಸಲಿ. ಮಿತ್ರನಾದ ಇಂದ್ರನು ಅವನ ಮಿತ್ರರಾದ ನಮಗೆ ಧನವನ್ನು ಒದಗಿಸಲಿ.

English Translation

May Brihaspati defend us from a malignant (foe) coming from behind, from above, or from below; may Indra defend us from foes in front and in the middle; may he, our friend bestow wealth upon (us) his friends.

———

ನಲವತ್ತೈದನೆಯ ಸೂಕ್ತ

ಸಾಯಣಭಾಷ್ಯಂ

ದಿವಸ್ಪರೀತಿ ದ್ವಾದಶರ್ಚಂ ತೃತೀಯಂ ಸೂಕ್ತಂ ಭಾಲಂದನಸ್ಯ ವತ್ಸಪ್ರೋರಾರ್ಷಂ ತ್ರೈಷ್ಟುಭ-ಮಾಗ್ನೇಯಂ। ತಥಾ ಚಾನುಕ್ರಾಂತಂ। ದಿವಸ್ಪರಿ ದ್ವಾದಶ ವತ್ಸಪ್ರಿರಾಗ್ನೇಯಂ ತ್ರಿತಿ ॥ ಪ್ರಾತರನುವಾ-ಕಾಶ್ವಿನಶಸ್ತ್ರಯೋರಿದಮಾದಿಕೇ ದ್ವೇ ಸೂಕ್ತೇ ಅಸ್ಯ ಸೂಕ್ತಸ್ಯಾಂತ್ಯಾಂ ವರ್ಜಯಿತ್ವಾ। ಸೂತ್ರಿತಂ ಚ-ದಿವಸ್ಪರೀತಿ ಸೂಕ್ತಯೋಃ ಪೂರ್ವಸ್ಯೋತ್ತಮಾಮುದ್ಧರೇತ್। ಆ-೪-೧೩। ಇತಿ ॥ ಕ್ಷಾಮವತ್ಯಾಮಕ್ರಂದದಗ್ನಿರಿತ್ಯೇಷಾ ಯಾಜ್ಯಾ। ಸೂತ್ರಿತಂ ಚ। ಅಗ್ನೇ ತ್ವಮಸ್ಮದ್ಯುಯೋಧ್ಯಮೀವಾ ಅಕ್ರಂದದಗ್ನಿಃ ಸ್ತನಯನ್ನಿವ ದ್ಯೌಃ। ಆ-೩-೧೩। ಇತಿ ॥

ಅನುವಾದವು—ದಿವಸ್ಪರಿ ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವುವು. ಈ ಸೂಕ್ತಕ್ಕೆ ವತ್ಸಪ್ರಿರ್ಭಾಲಂದನ ಎಂಬುವನು ಋಷಿಯು; ಅಗ್ನಿಯು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ **ದಿವಸ್ಪರಿ ದ್ವಾದಶ ವತ್ಸಪ್ರಿರಾಗ್ನೇಯಂ ತು** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪಠನಕಾಲದಲ್ಲಿ ಈ ಸೂಕ್ತದ ಕೊನೆಯ ಋಕ್ಕನ್ನು ಬಿಟ್ಟು ಉಳಿದ ಋಕ್ಕುಗಳ ಮತ್ತು ಇದರ ಮುಂದಿನ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ದಿವಸ್ಪರೀತಿ ಸೂಕ್ತಯೋಃ ಪೂರ್ವಸ್ಯೋತ್ತಮಾಮುದ್ಧರೇತ್** ಎಂಬ ಸೂತ್ರದಿಂದ (ಆ-೪-೧೩) ವಿವೃತವಾಗಿರುವುದು. **ಕ್ಷಾಮವಾನ್** ಅಗ್ನಿಃ ಎಂಬ ಅಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಅಕ್ರಂದದಗ್ನಿಃ** ಎಂಬ ಈ ಸೂಕ್ತದ ನಾಲ್ಕನೆಯ ಋಕ್ಕನ್ನು ಯಾಜ್ಯಾ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಅಗ್ನೇ ತ್ವಮಸ್ಮದ್ಯುಯೋಧ್ಯಮೀವಾ ಅಕ್ರಂದದಗ್ನಿಃ ಸ್ತನಯನ್ನಿವ ದ್ಯೌಃ** ಎಂಬ ಸೂತ್ರದಿಂದ (ಆ-೩-೧೩) ವಿವೃತವಾಗಿರುವುದು.

ಸೂಕ್ತ—೪೫

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೪೫ ॥
ಅಷ್ಟಕ—೭ ॥ ಅಧ್ಯಾಯ—೮ ॥ ವರ್ಗ—೨೮, ೨೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ವತ್ಸಪ್ರಿಃ ॥
ದೇವತಾ—ಅಗ್ನಿಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ದಿವಸ್ಪರಿ ಪ್ರಥಮಂ ಜಜ್ಞೇ ಅಗ್ನಿರಸ್ಮದ್ದ್ವಿತೀಯಂ ಪರಿ ಜಾತವೇದಾಃ ।
ತೃತೀಯಮಪ್ಸು ನೃಮಣಾ ಅಜಸ್ರಮಿಂಧಾನ ಏನಂ ಜರತೇ ಸ್ವಾಧೀಃ ॥ ೧ ॥

ಪದಪಾಠಃ

ದಿವಃ । ಪರಿ । ಪ್ರಥಮಂ । ಜಜ್ಞೇ । ಅಗ್ನಿಃ । ಅಸ್ಮತ್ । ದ್ವಿತೀಯಂ । ಪರಿ । ಜಾತವೇದಾಃ ।
ತೃತೀಯಂ । ಅಪ್ಸು । ನೃಮನಾಃ । ಅಜಸ್ರಂ । ಇಂಧಾನಃ । ಏನಂ । ಜರತೇ । ಸುಽಆಧೀಃ ॥ ೧ ॥

ಸಾಯಣಭಾಷ್ಯಂ

ಅಗ್ನಿಃ ಪ್ರಥಮಂ ಪೂರ್ವಂ ದಿವೋ ದ್ಯುಲೋಕಸ್ಯ ಪರ್ಯುಪರ್ಯಾದಿತ್ಯಾತ್ಮನಾ ಜಜ್ಞೇ ಜಾತಃ । ಜಾತವೇದಾ ಜಾತಪ್ರಜ್ಞೋ ಜಾತಧನೋ ವಾಗ್ನಿರ್ದ್ವಿತೀಯಮಸ್ಮದಸ್ಮಾಕಂ ಪರ್ಯುಪರಿ ಪಾರ್ಥಿವಾತ್ಮನಾ ಜಜ್ಞೇ । ನೃಮಣಾ ನೃಷು ಮನುಷ್ಯೇಷ್ವನುಗ್ರಾಹಕತಯಾಸಕ್ತಚಿತ್ತೋಽಗ್ನಿಸ್ತೃತೀಯಮಪ್ಸ್ವಂತರಿಕ್ಷೇ ವೈದ್ಯುತಾತ್ಮನಾ ಜಜ್ಞೇ । ಏವಂವಿಧಮೇನಮಗ್ನಿಂ ಸ್ವಾಧೀಃ ಸುಪ್ರಜ್ಞಾತಾಜಸ್ರಮನವರತಮಿಂಧಾನೋ ದೀಪಯಞ್ಜರತೇ । ಸ್ತೌತಿ । ಯದ್ವಾ । ವಾಜಸನೇಯಕೋಕ್ತಪ್ರಕಾರೇಣಾಸ್ಯ ಮಂತ್ರಸ್ಯಾರ್ಥೋ ದ್ರಷ್ಟವ್ಯಃ । ತದ್ಯಥಾ । ದಿವಸ್ಪರಿ ಪ್ರಥಮಂ ಜಜ್ಞೇ ಅಗ್ನಿರಿತಿ ಪ್ರಾಣೋ ವೈ ದ್ಯೌಃ ಪ್ರಾಣಾದ್ವಾ ಏಷ ಪ್ರಥಮಮಜಾಯತಾಸ್ಮದ್ದ್ವಿತೀಯಂ ಪರಿ ಜಾತವೇದಾ ಇತಿ ಯದೇನಮದೋ ದ್ವಿತೀಯಂ ಪುರುಷವಿಧೋಽಜನಯತ್ತೃತೀಯಮುಷ್ಮಿನ್ನಿತಿ ಯದೇನಮದಸ್ತೃತೀಯಮದ್ಭ್ಯೋಽಜನಯನ್ನೃಮಣಾ ಅಜಸ್ರಮಿತಿ ಪ್ರಜಾಪತಿರ್ವೈ ನೃಮಣಾ ಅಗ್ನಿರಜಸ್ರಮಿಂಧಾನ ಏನಂ ಜರತೇ ಸ್ವಾಧೀರಿತಿ ಯೋ ವಾ ಏನಮಿಂಧೇ ಸ ಏನಂ ಜನಯತೇ ಸ್ವಾಧೀಃ । ಶತ ೬-೭-೪-೩ । ಇತಿ ॥

ಪ್ರತಿಪದಾರ್ಥ

ಅಗ್ನಿಃ—ಅಗ್ನಿಯು । **ಪ್ರಥಮಂ**—ಮೊದಲು । **ದಿವಃ ಪರಿ**—ದ್ಯುಲೋಕದ ಮೇಲ್ಭಾಗದಲ್ಲಿ । **ಜಜ್ಞೇ**—ಉತ್ಪನ್ನನಾದನು । **ಜಾತವೇದಾಃ**—ಜಾತವೇದೋರೂಪನಾಗಿ । **ದ್ವಿತೀಯಂ**—ಎರಡನೆಯ ಸಲ । **ಅಸ್ಮತ್ ಪರಿ**—ನಮ್ಮ ಲೋಕವಾದ ಪೃಥ್ವಿಯ ಮೇಲೆ ಉತ್ಪನ್ನನಾದನು । **ತೃತೀಯಂ**—ಮೂರನೆಯ ಸಲ । **ನೃಮನಾಃ**—ಮಾನವರಿಗೆ ಹಿತಕಾರಿಯಾದ ಅಗ್ನಿಯು । **ಅಪ್ಸು**—ಅಂತರಿಕ್ಷದಲ್ಲಿ ಉತ್ಪನ್ನನಾದನು । **ಏನಂ**—ಈ ಮಹತ್ತ್ವವುಳ್ಳ ಅಗ್ನಿಯನ್ನು । **ಸ್ವಾಧೀಃ**—ಉತ್ತಮವಾದ ಪ್ರಜ್ಞೆಯುಳ್ಳ ಋಷಿಯು । **ಅಜಸ್ರಂ**—ಯಾವಾಗಲೂ । **ಇಂಧಾನಃ**—ಪ್ರಜ್ವಲಿಸುವಂತೆ ಮಾಡುತ್ತ । **ಜರತೇ**—ಸ್ತುತಿಸುತ್ತಾನೆ.

ಭಾವಾರ್ಥ

ಅಗ್ನಿಯು ಮೊದಲನೆಯ ಸಲ ದ್ಯುಲೋಕದಮೇಲೆ ಉತ್ಪನ್ನನಾದನು. ಎರಡನೆಯ ಸಲ ಜಾತವೇದೋರೂಪನಾಗಿ ಪೃಥ್ವಿಯ ಮೇಲೆ ಉತ್ಪನ್ನನಾದನು. ಮಾನವರಿಗೆ ಹಿತಕಾರಿಯಾದ ಅದೇ ಅಗ್ನಿಯು ಮೂರನೆಯ ಸಲ

ವಿದ್ಯುದಾದಿ ರೂಪಗಳಲ್ಲಿ ಅಂತರಿಕ್ಷದಲ್ಲಿ ಜನಿಸಿದನು. ಉತ್ತಮವಾದ ಪ್ರಜ್ಞೆಯುಳ್ಳ ಋಷಿಯು ಯಾವಾಗಲೂ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತ ಸ್ತುತಿಸುತ್ತಾನೆ.

English Translation

Agni was first born above the sky; as Jatavedas he was born the second time amongst us: the friend of man, he was born the third time in the waters; the sage kindling him eternally praises him.

ವಿಶೇಷವಿಷಯಗಳು

ವಿಶ್ವವ್ಯಾಪಕವೂ, ವಿಶ್ವಧಾರಕವೂ ಆದ ಅಗ್ನಿಯ ಮಹತ್ತ್ವದ ವರ್ಣನವು ೧೦-೪೫ನೇ ಸೂಕ್ತದಲ್ಲಿ ಅತಿಶಯವಾದ ಕಾವ್ಯಾತ್ಮಕವಾಗಿದೆ. ಜನ್ಮರಹಿತನೂ, ಅಮರನೂ ಆದ ಅಗ್ನಿಯ ರೂಪಾಂತರಗಳ ಆವಿರ್ಭಾವವನ್ನೇ ಇಲ್ಲಿ ಅಗ್ನಿಯ ಜನ್ಮಪ್ರಭೇದಗಳೆಂದು ನಿರ್ದೇಶಿಸಿದೆ. ಅನಾದಿಯೂ, ಅದ್ವಿತೀಯವೂ, ವಿಶ್ವವ್ಯಾಪಿಯೂ ಆದ ಅಗ್ನಿಯ ಪ್ರಭೇದಗಳೇ ಇತರ ಸಕಲ ದೇವತೆಗಳೆಂದು ಸಂಹಿತಾದಿ ವಾಕ್ಯಗಳು ಸಾರಿವೆ. ವಿಶ್ವಕ್ಕೆಲ್ಲ ಸಾರ್ವಭೌಮನಾದ ಅಗ್ನಿಯು ಮೂರು ಲೋಕಗಳಲ್ಲಿಯೂ ಮೂರು ವಿಧವಾದ ರೂಪಗಳಿಂದ ಪ್ರಕಾಶಿಸುತ್ತ ಮೂರು ನಾಮಧೇಯಗಳಿಂದ ಪ್ರಸಿದ್ಧವಾಗಿದ್ದಾನೆ. ದ್ಯುಲೋಕಸ್ಥನಾದ ಆದಿತ್ಯನೂ, ಮಧ್ಯಲೋಕದ ಇಂದ್ರನೂ ಈ ಅಗ್ನಿಯ ರೂಪಾಂತರಗಳೇ ಅಲ್ಲದೆ ಬೇರೆಯಲ್ಲ. ಪಾರ್ಥಿವಾಗ್ನಿಗೆ ಸಂಬಂಧಿಸಿದ ಅವಾಂತರ ಪ್ರಭೇದಗಳೂ ಅನೇಕವಾಗಿರುತ್ತವೆ. ಹೀಗೆ ನಾನಾ ರೂಪಗಳಿಂದ ತನ್ನ ಸ್ವರೂಪವನ್ನು ಪ್ರಕಾಶಪಡಿಸಿ ವಿಶ್ವವನ್ನು ಧರಿಸಿ ಪೋಷಿಸುತ್ತಿರುವ ಅಗ್ನಿಯ ಮಹತ್ತ್ವವನ್ನು ಪ್ರಶಂಸಿಸುವುದೇ ಪ್ರಕೃತ ಸೂಕ್ತದ ಉದ್ದಿಶ್ಯವಾಗಿರುತ್ತದೆ.

೧) ಮೂರು ಲೋಕಗಳಲ್ಲಿಯೂ ಮೂರು ರೂಪಗಳಿಂದ ಅಗ್ನಿಯ ಆವಿರ್ಭಾವ.

೨) ಲೋಕಪ್ರತ್ಯಕ್ಷಕ್ಕೆ ಗೋಚರವಾಗುವ ಮೂರು ರೂಪಗಳು ಮತ್ತು ಅಂತರ್ಹಿತವಾಗಿರುವ ದಿವ್ಯ ಸ್ವರೂಪ.

೩) ಅಗ್ನಿಯ ಯಜ್ಞನೇತೃತ್ವ ಮತ್ತು ತನ್ಮೂಲಕವಾಗಿ ವಿಶ್ವಧಾರಕತ್ವ ಇತ್ಯಾದಿ ವಿಷಯಗಳು ಪ್ರಕೃತ ಸೂಕ್ತದಲ್ಲಿ ವರ್ಣಿತವಾಗಿವೆ. ಮೊದಲನೆಯ ಋಕ್ಕಿನಲ್ಲಿ ಅಗ್ನಿಯ ಮೂರು ವಿಧವಾದ ಉತ್ಪತ್ತಿಕ್ರಮವನ್ನು ತಿಳಿಸಿದೆ. ಹಿಂದೆ " **ತ್ರೀಣಿ ಜಾನಾ** " ಎಂಬ ಋಕ್ಕಿನ ತಾತ್ಪರ್ಯವನ್ನು ವಿವರಿಸುವಾಗ ಈ ವಿಷಯವನ್ನು ಸೂಕ್ಷ್ಮವಾಗಿ ತಿಳಿಸಿದೆಯಾದರೂ, ಪ್ರಕೃತದಲ್ಲಿ ಇದರ ವಿವರವನ್ನು ವಿಸ್ತೃತವಾಗಿ ತಿಳಿಸಿ ಅಗ್ನಿಯ ಉತ್ಪತ್ತಿಯ ವಿಷಯದಲ್ಲಿ ಪಠಿತವಾಗಿರುವ ನಾನಾ ವಾಕ್ಯಗಳನ್ನು ಉದಾಹರಿಸಿ ಆಯಾ ಸಂದರ್ಭಗಳ ವಿಶೇಷಾಂಶಗಳನ್ನು ತಿಳಿಸಲಾಗುತ್ತದೆ.

" ಅಗ್ನಿಯು ಪ್ರಥಮತಃ ದ್ಯುಲೋಕದಲ್ಲಿ ಉತ್ಪನ್ನನಾದನು. ಅನಂತರ **ಜಾತವೇದೋ** ರೂಪದಲ್ಲಿ ಪೃಥ್ವಿಯಲ್ಲಿ ಉತ್ಪನ್ನನಾದನು. ಮಾನವರಿಗೆ ಮಿತ್ರನಾದ ಅದೇ ಅಗ್ನಿಯು ಮಾರನೆಯ ಸಲ ಅಂತರಿಕ್ಷದಲ್ಲಿ ಉತ್ಪನ್ನನಾದನು " ಎಂಬುದೇ ಮೊದಲನೆಯ ಋಕ್ಕಿನ ತಾತ್ಪರ್ಯವು.

" **ದ್ಯುಲೋಕಸ್ಯ ಉಪರಿ ಆದಿತ್ಯಾತ್ಮನಾ ಜಾತಃ; ದ್ವಿತೀಯಂ ಪಾರ್ಥಿವಾತ್ಮನಾ ಜಜ್ಞೇ ತೃತೀಯಂ ಅಂತರಿಕ್ಷೇ ವೈದ್ಯುತಾತ್ಮನಾ ಜಜ್ಞೇ** " ದ್ಯುಲೋಕದಲ್ಲಿ ಆದಿತ್ಯಾತ್ಮನೂ ಅಂತರಿಕ್ಷದಲ್ಲಿ ವೈದ್ಯುತಾ

ತ್ಮನೂ ಆದ ಅಗ್ನಿಯೇ ಪೃಥ್ವಿಯಲ್ಲಿಯೂ ಪಾರ್ಥಿವಾಗ್ನಿರೂಪದಲ್ಲಿ ಉತ್ಪನ್ನನಾದನು ಎಂದು ಸಾಯಣಭಾಷ್ಯದ ವಿವರಣೆಯಿರುತ್ತದೆ. ಅಗ್ನಿಯ ಈ ವಿಧವಾದ ರೂಪಾಂತರಗಳನ್ನು ಮುಂದಿನ ಋಕ್ಕಿನ ವಿಶೇಷ ವಿಷಯಗಳಲ್ಲಿ ತಿಳಿಸಲಾಗುತ್ತದೆ. ಅವನ ಉತ್ಪತ್ತಿಯ ಪ್ರಕಾರಗಳೇನು ? ಉತ್ಪತ್ತಿಯ ಮೂಲಗಳಾವುವು ? ಉತ್ಪತ್ತಿಯ ಸ್ವರೂಪಗಳು ಹೇಗೆ ಎಂಬ ಅಂಶಗಳು ಹೇಗೆ ವರ್ಣಿತವಾಗಿವೆಯೆಂದು ಪ್ರಕೃತದಲ್ಲಿ ಪರಿಶೀಲಿಸಲಾಗುತ್ತದೆ.

ಅಗ್ನಿಯ ಉತ್ಪತ್ತಿಯನ್ನು ವಿವರಿಸುವ ವಾಕ್ಯಗಳು ಅನೇಕವಾಗಿದ್ದು ಸ್ಥೂಲವಾಗಿ ನೋಡುವವರಿಗೆ ಅವು ಒಂದಕ್ಕೊಂದು ವಿರುದ್ಧವಾಗಿರುವಂತಿರುತ್ತವೆ. ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಆ ವಿರುದ್ಧಾಂಶವಾವುದೂ ಇರುವುದಿಲ್ಲ. ಅಗ್ನಿಯ ಪ್ರಥಮಜನ್ಮವು ದ್ಯುಲೋಕದಲ್ಲಿ ಎಂದಿದೆ. ಅದು ಹೇಗೆ ? ಉತ್ಪತ್ತಿಯ ಕ್ರಮವು ಹೇಗೆ ಎಂಬುದು ವಿಸ್ತೃತವಾಗಿ ವಿವೃತವಾಗಿದೆ.

ದ್ಯುಲೋಕಸ್ಥನಾದ ಅಗ್ನಿಯ ಉತ್ಪತ್ತಿ

ಸ ಜಾಯಮಾನಃ ಪರಮೇ ವ್ಯೋಮನ್ಯಾವಿರಗ್ನಿರಭವನ್ಮಾತರಿಶ್ವನೇ ।
ಅಸ್ಯ ಕ್ರತ್ವಾ ಸಮಿಧಾನಸ್ಯ ಮರ್ಮಞ್ಜನಾ ಪ್ರ ದ್ಯಾವಾ ಶೋಚಿಷಾ ಪೃಥಿವೀ ಅರೋಚಯತ್ ॥

(ಋ. ಸಂ. ೧-೧೪೫-೨)

ಎಂಬ ಮಂತ್ರದ ತಾತ್ಪರ್ಯವನ್ನು ವಿವರಿಸುವಾಗ ಅಗ್ನಿಯು **ಮಾತರಿಶ್ವನ** ಎದುರಿಗೆ ಆವಿರ್ಭೂತನಾದ ವಿವರವನ್ನು ತಿಳಿಸಿದೆ. ಈ ಮಂತ್ರದಲ್ಲಿ ಅಗ್ನಿಯು ಮೂರುಲೋಕದ ಮೂರು ವಿಧವಾದ ಆವಿರ್ಭಾವವನ್ನೂ ಸೂಚಿಸಿದೆ.

ಪ್ರಥಮತಃ :— **ಮಾತರಿ ಅಂತರಿಕ್ಷೇ ಶ್ವಸಿತಿ ಪ್ರಾಣಿತಿ ಸೂರ್ಯರೂಪೇಣ ಚೇಷ್ಟತ ಇತಿ** ಸೂರ್ಯರೂಪದಲ್ಲಿ ಅಂತರಿಕ್ಷದಲ್ಲಿ ಸಂಚರಿಸುವವನು ಎಂದೂ ;

ಎರಡನೆಯದಾಗಿ:— ವಾಯುರೂಪದ ಅಗ್ನಿಯೆಂದೂ ;

ಮೂರನೆಯದಾಗಿ:— ಪೃಥ್ವಿಯಲ್ಲಿ ಯಜ್ಞನಿರ್ವಾಹಕನಾದ ಯಜಮಾನನೆಂದೂ ತಾತ್ಪರ್ಯವನ್ನು ತಿಳಿಸಿದೆ. ಈ ಮೂರು ರೂಪಗಳಲ್ಲಿಯೂ ಪ್ರತ್ಯಕ್ಷನಾದ ಅಗ್ನಿಯು ಮೂರುಲೋಕಗಳನ್ನೂ ಬೆಳಗಿಸಿದವನು ಎಂದಿರುವಾಗ ಅಗ್ನಿಗೂ, ಮಾತರಿಶ್ವನಿಗೂ ತಾದಾತ್ಮ್ಯವನ್ನು ತೋರಿಸಿದೆ.

ಉದು ಷ್ಟುತಃ ಸಮಿಧಾ ಯಹ್ವೋ ಅದ್ಯೌದ್ವಸ್ಮನ್ನಿವೋ ಅಧಿ ನಾಭಾ ಪೃಥಿವ್ಯಾಃ ।
ಮಿತ್ರೋ ಅಗ್ನಿರೀಡ್ಯೋ ಮಾತರಿಶ್ವಾ ದೂತೋ ವಕ್ಷದ್ಯಜಥಾಯ ದೇವಾನ್ ॥

(ಋ. ಸಂ. ೩-೫-೯)

ಇತ್ಯಾದಿ ಸ್ಥಳಗಳಲ್ಲಿ **ಮಾತರಿಶ್ವನ್** ಶಬ್ದವನ್ನು ವಿವರಿಸಿ ಅಗ್ನಿಯ ವಿಶೇಷಗುಣವನ್ನು ತಿಳಿಸುವ ಪದವಾಗಿದೆಯೆಂದು ತಿಳಿಸಿದೆ. ಈ ರೂಪಗಳಲ್ಲಿ ಆವಿರ್ಭಾವವನ್ನು ಹೊಂದುವುದಕ್ಕೆ ಪೂರ್ವಭಾವಿಯಾಗಿದ್ದ ಅಗ್ನಿಯ ಮೂಲರೂಪವೇನು ಎಂದರೆ, ಅದಕ್ಕೆ ಉತ್ತರವಾಗಿ ಈ ರೀತಿಯಿರುತ್ತದೆ.

ಅಸಚ್ಚ ಸಚ್ಚ ಪರಮೇ ವ್ಯೋಮನ್ದಕ್ಷಸ್ಯ ಜನ್ಮನ್ನದಿತೇರುಪಸ್ಥೇ ।
ಅಗ್ನಿರ್ಹ ನಃ ಪ್ರಥಮಜಾ ಋತಸ್ಯ ಪೂರ್ವ ಆಯುನಿ ವೃಷಭಶ್ಚ ಧೇನುಃ ॥

(ಋ. ಸಂ. ೧೦-೫-೭)

ದಕ್ಷನ ಸ್ಥಾನವಾದ ಅತ್ಯುತ್ತಮವಾದ ದಿವ್ಯಲೋಕದಲ್ಲಿ ಪ್ರಥಮತಃ ಅವ್ಯಾಕೃತರೂಪನಾಗಿಯೂ ಮತ್ತು ವ್ಯಾಕೃತರೂಪನಾಗಿಯೂ ಅಗ್ನಿಯು ಲೋಕವ್ಯವಹಾರಗಳಿಗೆಲ್ಲ ಅಧ್ಯಕ್ಷನಾಗಿದ್ದನು. ಅನಂತರ ಲೋಕದ ಸಕಲ ಪ್ರಜೆಗಳಿಗಿಂತಲೂ ಮೊದಲು ತಾನು ಉತ್ಪನ್ನನಾದನು ಎಂದು ಅಗ್ನಿಯ ಅಲೌಕಿಕ ಮತ್ತು ಲೌಕಿಕಸ್ವರೂಪಗಳು ವರ್ಣಿತವಾಗಿವೆ. ದ್ಯುಲೋಕದಲ್ಲಿ ಇವನ ಮೊದಲನೆಯ ಉತ್ಪತ್ತಿಯು ಆದಿತ್ಯರೂಪದಲ್ಲಿ. ಇವನ ಶಾಶ್ವತವಾದ ಪ್ರಕಾಶವು ಅಲ್ಲಿಯೇ.

ಸ ಜಾಯಮಾನಃ ಪರಮೇ ವ್ಯೋಮನಿ ವ್ರತಾನ್ಯಗ್ನಿರ್ವ್ರತಪಾ ಅರಕ್ಷತ ।
ವ್ಯಂತರಿಕ್ಷಮಮಿಮೀತ ಸುಕ್ರತುರ್ವೈಶ್ವಾನರೋ ಮಹಿನಾ ನಾಕಮಸ್ಪೃಶತ್ ॥

(ಋ. ಸಂ. ೬-೮-೨)

ವೈಶ್ವಾನರಸಂಜ್ಞಕನಾದ ಅಗ್ನಿಯು ಅತ್ಯುತ್ಕೃಷ್ಟವಾದ ಆಕಾಶದಲ್ಲಿ ಸೂರ್ಯರೂಪದಿಂದ ಉತ್ಪನ್ನನಾಗಿ ವ್ರತಗಳನ್ನು ರಕ್ಷಿಸುತ್ತಾನೆ. ಇದೇ ಅಗ್ನಿಯು ಮೂರು ಲೋಕಗಳನ್ನು ನಿರ್ಮಿಸಿದ್ದಾನೆ. ತನ್ನ ಮಹತ್ತ್ವದಿಂದ ದ್ಯುಲೋಕದಲ್ಲಿ ಸ್ಥಾಪಿತನಾಗಿ ಪ್ರಕಾಶಿಸುತ್ತಾನೆ. ಇತ್ಯಾದಿ ವರ್ಣನೆಗಳು ಆದಿತ್ಯರೂಪನಾದ ಅಗ್ನಿಯ ಸ್ತುತಿಗಳಾಗಿರುತ್ತವೆ.

ಶುಚಿಂ ನ ಯಾಮನ್ನಿಷಿರಂ ಸ್ವರ್ದೃಶಂ ಕೇತುಂ ದಿವೋ ರೋಚನಸ್ಥಾಮುಷರ್ಬುಧಂ ।
ಅಗ್ನಿಂ ಮೂರ್ಧಾನಂ ದಿವೋ ಅಪ್ರತಿಷ್ಕುತಂ ತಮೀಮಹೇ ನಮಸಾ ವಾಜಿನಂ ಬೃಹತ್ ॥

(ಋ. ಸಂ. ೩-೨-೧೪)

ಈ ಅಗ್ನಿಯು ದ್ಯುಲೋಕಕ್ಕೆ ಪ್ರಧಾನನು. ದ್ಯುಲೋಕದಲ್ಲಿ ಪ್ರಕಾಶಿಸತಕ್ಕವನು, ಮಹಾತ್ಮನು, ದ್ಯುಲೋಕಕ್ಕೆ ಪ್ರಜ್ಞಾಪಕನು. ಯಜ್ಞದಲ್ಲಿ ಪೂಜ್ಯನಾದ ಈ ಅಗ್ನಿಯನ್ನು ಪೂಜಿಸುತ್ತೇವೆ—ಇತ್ಯಾದಿ ಪ್ರಶಂಸೆಗಳು ಆದಿತ್ಯರೂಪನಾದ ಅಗ್ನಿಯನ್ನು ನಿರ್ದೇಶಿಸುವುವಾಗಿವೆ. ಈ ಆದಿತ್ಯರೂಪನಾದ ಅಗ್ನಿಯ ಮಹತ್ತ್ವವೇನೆಂದರೆ—

ಯೋ ವಿಶ್ವಾಭಿ ವಿಪಶ್ಯತಿ ಭುವನಾ ಸಂ ಚ ಪಶ್ಯತಿ । ಸ ನಃ ಪರ್ಷದತಿ ದ್ವಿಷಃ ॥

(ಋ. ಸಂ. ೧೦-೧೪೭-೪)

ಯೋ ಅಸ್ಯ ಪಾರೇ ರಜಸಃ ಶುಕ್ರೋ ಅಗ್ನಿರಜಾಯತ । ಸ ನಃ ಪರ್ಷದತಿ ದ್ವಿಷಃ ॥

(ಋ. ಸಂ. ೧೦-೧೪೭-೫)

ಯಾವ ಸೂರ್ಯರೂಪನಾದ ಅಗ್ನಿಯು ತನ್ನ ತೇಜಸ್ಸಿನಿಂದ ಸಕಲ ಲೋಕಗಳನ್ನೂ ಪ್ರಕಾಶಿಸುವಂತೆ ಮಾಡುವನೋ, ಯಾರು ಸಕಲಲೋಕಗಳನ್ನೂ ನೋಡಬಲ್ಲನೋ, ಯಾರು ಅಂತರಿಕ್ಷದ ಪ್ರದೇಶವನ್ನು ಮೀರಿದ ಉನ್ನತ ಪ್ರದೇಶದಲ್ಲಿ ತನ್ನ ಪ್ರಭೆಯಿಂದ ಬೆಳಗುತ್ತಿರುವನೋ ಅದೇ ಅಗ್ನಿಯು ನಮ್ಮನ್ನೆಲ್ಲ ರಕ್ಷಿಸಬಲ್ಲನು. ಈ ಆದಿತ್ಯರೂಪನಾದ ಅಗ್ನಿಯು ದ್ಯುಲೋಕೋತ್ಪನ್ನನು.

ಅಸೌ ವಾ ಆದಿತ್ಯ ಏಷ ರುಕ್ಮಸ್ತಿಷ್ಠತೀವ ವಾ ಅಸಾವಾದಿತ್ಯೋಽಥೋ . . . . ದುರ್ಮರಂ ವಾ ಏತಸ್ಯಾಯುಃ ಶ್ರಿಯೋ ಏಷ ರೋಚತೇಽಗ್ನಿರಮೃತೋಽಭವದ್ವಯೋಭಿರಿತಿ ಸರ್ವೈವಾ ಏಷ ವಯೋಭಿರಮೃತೋಽಭವದ್ಯದೇನಂ ದ್ಯೌರಜನಯದಿತಿ ದ್ಯೌರ್ವಾ ಏತಮಜನಯತ್ಸುರೇತಾ ಇತಿ ಸುರೇತಾ ಏಷಾ ಯಸ್ಯಾ ಏಷ ರೇತಃ ॥

(ಶ. ಬ್ರಾ. ೬-೭-೩-೨)

ಹೊಂಬಣ್ಣದ ಆದಿತ್ಯಮಂಡಲವು ದ್ಯುಲೋಕದಲ್ಲಿ ತನ್ನ ಅಮರವಾದ ಪ್ರಭೆಯಿಂದ ಪ್ರಕಾಶಿಸುತ್ತಿದೆ. ಸರ್ವ ಲೋಕವ್ಯಾಪ್ತಿಯಾದ ಅಗ್ನಿಯ ಪ್ರಭಾವವೇ ಇದು. ದ್ಯುಲೋಕವು ಆದಿತ್ಯರೂಪದಲ್ಲಿ ಈ ಅಗ್ನಿಯನ್ನು ಧರಿಸಿದೆ. ಈ ಅಗ್ನಿಯನ್ನು ದ್ಯುಲೋಕವು ತನ್ನ ಗರ್ಭದಲ್ಲಿ ಧರಿಸಿದುವರಿಂದ ಉತ್ತಮವಾದ ಗರ್ಭವನ್ನೇ ಧರಿಸಿದಂತಾಯಿತು. ಇತ್ಯಾದಿಯಾಗಿ ದ್ಯುಲೋಕೋತ್ಪನ್ನನಾದ ಅಗ್ನಿಯ ಪ್ರಶಂಸೆಯಿರುತ್ತದೆ.

ಅಂತರಿಕ್ಷೋತ್ಪನ್ನನಾದ ವೈದ್ಯುತಾಗ್ನಿಯ ಪ್ರಶಂಸೆ

ಅಂತರಿಕ್ಷಸ್ಥನಾದ ಅಗ್ನಿಯು ವೈದ್ಯುತಾಗ್ನಿರೂಪದಲ್ಲಿ ಪ್ರಕಾಶಿಸುತ್ತ **ಅಪಾಂ ನಪಾತ್ ; ಅಪಾಂ ಗರ್ಭಃ** ಇತ್ಯಾದಿಯಾಗಿ ವರ್ಣಿತನಾಗಿದ್ದಾನೆ.

ಪ್ರ ಕೇತುನಾ ಬೃಹತಾ ಯಾತ್ಯಗ್ನಿರಾ ರೋದಸೀ ವೃಷಭೋ ರೋರವೀತಿ ।
ದಿವಶ್ಚಿದಂತಾ ಉಪಮಾ ಉದಾನಳಪಾಮುಪಸ್ಥೇ ಮಹಿಷೋ ವವರ್ಧ ॥

(ಋ. ಸಂ. ೧೦-೪-೧)

ಅಂತರಿಕ್ಷಸ್ಥವಾದ ಉದಕದಿಂದ ಉತ್ಪನ್ನನೂ, ಉದಕಗಳ ತೊಡೆಯಮೇಲೆ ಮಲಗಿ ಆಡವಾಡುವವನೂ ಆದ ವೈದ್ಯುತಾಗ್ನಿಯು ದ್ಯಾವಾಪೃಥಿವಿಗಳನ್ನೆಲ್ಲ ವ್ಯಾಪಿಸುತ್ತಾನೆ. ವೃಷಭದಂತೆ ಗುಟುರು ಹಾಕುತ್ತಾನೆ. ಇತ್ಯಾದಿಯಾಗಿ ಅಂತರಿಕ್ಷೋತ್ಪನ್ನನಾದ ಅಗ್ನಿಯ ಪ್ರಶಂಸೆಯಿರುತ್ತದೆ. ಇದೇ ಅಗ್ನಿಯು **ಅಪ್ತ್ಯ**ನೆಂದೂ ನಿರ್ದಿಷ್ಟನಾಗಿದ್ದಾನೆ. ಪೃಥ್ವೀಸ್ಥವಾದ ಉದಕದಿಂದಲೂ ಅಗ್ನಿಯು ಉತ್ಪನ್ನವಾಗುವುದಾದರೂ ಸಹ ಸಾಧಾರಣವಾಗಿ **ಅಪ್ತ್ಯ**ನೆಂಬ ಅಂತರಿಕ್ಷಸ್ಥವಾದ ಉದಕದಿಂದ ಉತ್ಪನ್ನನಾದ ವೈದ್ಯುತಾಗ್ನಿಗೆ ಮಾತ್ರ ವಿಶೇಷಣವಾಗಿರುತ್ತದೆ. **ಧನೋರಧಿ ಪ್ರವತಃ** (ಋ. ಸಂ. ೧-೧೪೪-೫) ಇತ್ಯಾದಿ ವರ್ಣನವಿರುವ ಸನ್ನಿವೇಶಗಳಲ್ಲಿ ಈ ಅಂಶವು ಸ್ಪಷ್ಟವಾಗಿರುತ್ತದೆ.

ಸ ಶ್ವಿತಾನಸ್ತನ್ಯತೊ ರೋಚನಸ್ಥಾ ಅಜರೇಭಿರ್ನಾನದದ್ಭಿರ್ಯವಿಷ್ಠಃ ।
ಯಃ ಪಾವಕಃ ಪುರುತಮಃ ಪುರೂಣಿ ಪೃಥೂನ್ಯಗ್ನಿರನುಯಾತಿ ಭರ್ವನ್ ॥

(ಋ. ಸಂ. ೬-೬-೨)

ಇತ್ಯಾದಿ ಸ್ಥಳಗಳಲ್ಲಿ ವೈದ್ಯುತಾಗ್ನಿಯ ವರ್ಣನವು ವಿಶದವಾಗಿರುತ್ತದೆ. ಈ ವಿದ್ಯುದ್ರೂಪದ ಅಗ್ನಿಯು ಅತ್ಯಧಿಕವಾಗಿ ಪ್ರಕಾಶಿಸುತ್ತಾನೆ. ಇವನು ಅಂತರಿಕ್ಷದಲ್ಲಿ ಪ್ರಕಾಶಿಸುತ್ತ ಅಧಿಕವಾದ ಶಬ್ದವನ್ನುತ್ಪನ್ನಮಾಡುತ್ತಾನೆ. ಕ್ಷಯರಹಿತವೂ, ಶಬ್ದಕಾರಕವೂ ಆದ ರಶ್ಮಿಗಳೊಂದಿಗೆ ವ್ಯಾಪಿಸಿ ಹರಡುತ್ತಾನೆ. ಇತ್ಯಾದಿಯಾಗಿ ಪ್ರಶಂಸಿತವಾಗಿರುತ್ತದೆ. ಅಂತರಿಕ್ಷಸ್ಥವಾದ ಉದಕದಿಂದ ಅಗ್ನಿಯು ಉತ್ಪನ್ನನಾಗಿದ್ದಾನೆ ಎಂಬ ವರ್ಣನವು ಋಕ್ಸಂಹಿತೆಯಲ್ಲಿ ಅತ್ಯಧಿಕವಾಗಿರುತ್ತದೆ.

ವನೇಷು ವ್ಯಂತರಿಕ್ಷಂ ತತಾನ ವಾಜಮರ್ವತ್ಸು ಪಯ ಉಸ್ರಿಯಾಸು ।
ಹೃತ್ಸು ಕ್ರತುಂ ವರುಣೋ ಅಪ್ಸ್ವಂಗ್ನಿಂ ದಿವಿ ಸೂರ್ಯಮದಧಾತ್ಸೋಮಮದ್ರೌ ॥

(ಋ. ಸಂ. ೫-೪೫-೨)

ವರುಣದೇವನು ದ್ಯುಲೋಕಾದಿಗಳಲ್ಲಿ ಆದಿತ್ಯಾದಿಗಳನ್ನು ಸ್ಥಾಪಿಸಿದಂತೆ ಉದಕದಲ್ಲಿ ಅಗ್ನಿಯನ್ನು ಸ್ಥಾಪಿಸಿದನು ಎಂದಿರುವಾಗ **ಅಪ್** ಶಬ್ದಕ್ಕೆ ಅಂತರಿಕ್ಷೋದಕವೆಂದೂ, ಇದರಲ್ಲಿ ಸ್ಥಾಪಿತನಾದ ಅಗ್ನಿಯು ವೈದ್ಯುತಾಗ್ನಿಯೆಂದೂ ತಾತ್ಪರ್ಯವು. ಪ್ರಕೃತವಾದ ಋಕ್ಕಿನಲ್ಲಿ " **ತೃತೀಯಮಪ್ಸು** " ಎಂದು ಹೇಳಿರುವುದೂ ಈ ವೈದ್ಯುತಾಗ್ನಿಯ ಪ್ರಶಂಸೆಯಾಗಿದೆ.

ಪಾರ್ಥಿವಾಗ್ನಿಯ ಮಹಿಮೆ

ಪೃಥ್ವಿಯಲ್ಲಿ ಅಗ್ನಿಯ ಅನೇಕ ವಿಧವಾದ ಉತ್ಪತ್ತಿ

ಈ ವಿಷಯವನ್ನು ಹಿಂದೆ ಕೆಲವೆಡೆಗಳಲ್ಲಿ ಸೂಕ್ಷ್ಮವಾಗಿ ತಿಳಿಸಿದೆ. ಆದರೂ ಪ್ರಕೃತದಲ್ಲಿ ಇದೇ ಮುಖ್ಯ ವಿಷಯವಾದುದರಿಂದ ಹಿಂದೆ ಹೇಳದಿರುವ ಕೆಲವು ಅಂಶಗಳನ್ನು ಮಾತ್ರ ಸೂಚಿಸಲಾಗುತ್ತದೆ. ಅಗ್ನಿಯು ಅರಣಿಗಳಲ್ಲಿ ಮಥನಕ್ರಿಯೆಯಿಂದ ಯಜ್ಞಾರ್ಥವಾಗಿ ಉತ್ಪನ್ನನಾದವನು ಇತ್ಯಾದಿಯಾಗಿ ಪಾರ್ಥಿವಾಗ್ನಿಯ ಪ್ರಶಂಸೆಯಿರುತ್ತದೆ. ಅನೇಕ ಸಂದರ್ಭಗಳಲ್ಲಿ ಈ ವರ್ಣನವು ಉತ್ತಮವಾದ ಕಾವ್ಯರೂಪದಲ್ಲಿರುತ್ತದೆ. ಉದಾಹರಣೆಗೆ—

ಉತ ಸ್ಮ ಯಂ ಶಿಶುಂ ಯಥಾ ನವಂ ಜನಿಷ್ಟಾರಣೀ ।
ಧರ್ತಾರಂ ಮಾನುಷೀಣಾಂ ವಿಶಾಮಗ್ನಿಂ ಸ್ವಧ್ವರಂ ॥

(ಋ. ಸಂ. ೫-೯-೩)

ಮಾನವರಿಗೆಲ್ಲ ಧಾರಕನೂ, ಉತ್ತಮವಾದ ಯಜ್ಞವುಳ್ಳವನೂ ಆದ ಅಗ್ನಿಯನ್ನು ಮಾತೃರೂಪಗಳಾದ ಅರಣಿಗಳು ನೂತನವಾದ ಶಿಶುವನ್ನು ಹಡೆಯುವಂತೆ ಉತ್ಪನ್ನ ಮಾಡಿವೆ ಎಂದು ಅರಣಿಗಳಿಗೂ, ಅಗ್ನಿಗೂ ಮಾತೃ ಪುತ್ರಭಾವವನ್ನು ತೋರಿಸಿದೆ. ಅಂತರಿಕ್ಷಸ್ಥವಾದ ಉದಕವು ಅಗ್ನಿಯ ಉತ್ಪತ್ತಿಗೆ ಮೂಲವಾಗಿರುವಂತೆಯೇ ಪಾರ್ಥಿವವಾದ ಉದಕವೂ ಅಗ್ನಿಯ ಉತ್ಪತ್ತಿಗೆ ಮೂಲವಾಗಿರುತ್ತದೆ. ಓಷಧಿಗಳೂ, ವನಸ್ಪತಿಗಳೂ ಇವನನ್ನು ಗರ್ಭದಂತೆ ಧರಿಸಿವೆ.

ಅಪಾಂ ಗರ್ಭಂ ದರ್ಶತಮೋಷಧೀನಾಂ ವನಾ ಜಜಾನ ಸುಭಗಾ ವಿರೂಪಂ ।
ದೇವಾಸಶ್ಚಿನ್ಮನಸಾ ಸಂ ಹಿ ಜಗ್ಮುಃ ಪನಿಷ್ಠಂ ಜಾತಂ ತವಸಂ ದುವಸ್ಯನ್ ॥

(ಋ. ಸಂ. ೩-೧-೧೩)

ಉದಕಗಳಿಗೂ, ಓಷಧಿಗಳಿಗೂ ಗರ್ಭರೂಪನಾದ ಅಗ್ನಿಯನ್ನು ಆಕರ್ಷಕಗಳಾದ ಅರಣಿಗಳು ಉತ್ಪನ್ನ ಮಾಡಿದವು. ದೇವತೆಗಳೂ ಈ ಪೂಜ್ಯನಾದ ಅಗ್ನಿಯನ್ನು ಸಮೀಪಿಸಿ ಸ್ತುತಿಸಿದರು. ಇತ್ಯಾದಿಯಾಗಿ ಯಜ್ಞಾಗ್ನಿಯ ಉತ್ಪತ್ತಿಕ್ರಮವು ತಿಳಿಸಲ್ಪಟ್ಟಿದೆ. ಈ ಅಂಶವು ಇಲ್ಲಿಯವರೆಗೆ ಅನೇಕ ಸನ್ನಿವೇಶಗಳಲ್ಲಿ ವಿವೃತವಾಗಿರುವುದರಿಂದ ಇಲ್ಲಿ ವಿಶದಪಡಿಸಬೇಕಾಗಿಲ್ಲ.

ಈ ರೀತಿ ಮೂರು ಲೋಕಗಳಲ್ಲೂ ಮೂರು ರೀತಿಯ ಉತ್ಪತ್ತಿಯು ವರ್ಣಿತವಾಗಿರುವುದರ ಜೊತೆಗೆ ಇನ್ನೂ ಅನೇಕ ವಿಧವಾದ ಉತ್ಪತ್ತಿಗಳೂ ತಿಳಿಸಲ್ಪಟ್ಟಿವೆ. ಉದಾಹರಣೆಗೆ—

ಏತಾ ಉ ತ್ಯಾಃ ಪ್ರತ್ಯದೃಶ್ರನ್ಪುರಸ್ತಾಜ್ಜ್ಯೋತಿರ್ಯಚ್ಛಂತೀರುಷಸೋ ವಿಭಾತೀಃ ।
ಅಜೀಜನನ್ಸೂರ್ಯಂ ಯಜ್ಞಮಗ್ನಿಮಪಾಚೀನಂ ತಮೋ ಅಗಾದಜುಷ್ಟಂ ॥

(ಋ. ಸಂ. ೭-೭೮-೩)

ಪ್ರಕಾಶಮಾನವಾದ ಉಷಸ್ಸುಗಳು ತಮ್ಮ ತೇಜಸ್ಸನ್ನು ಪ್ರಸರಿಸಿವೆ. ಅದೇ ಉಷಸ್ಸುಗಳು ಸೂರ್ಯನನ್ನೂ, ಯಜ್ಞಾಗ್ನಿಯನ್ನೂ ಉತ್ಪನ್ನಮಾಡಿವೆ. ಈ ಅಗ್ನಿಯು ಮೂರುಲೋಕಗಳಿಗೂ ಪುತ್ರನು. ಹೇಗೆಂದರೆ—

ಯಂ ತ್ವಾ ದ್ಯಾವಾಪೃಥಿವೀ ಯಂ ತ್ವಾಪಸ್ತ್ವಷ್ಟಾ ಯಂ ತ್ವಾ ಸುಜನಿಮಾ ಜಜಾನ ।
ಪಂಥಾಮನು ಪ್ರವಿದ್ವಾನ್ಪಿತೃಯಾಣಂ ದ್ಯುಮದಗ್ನೇ ಸಮಿಧಾನೋ ವಿ ಭಾಹಿ ॥

(ಋ. ಸಂ. ೧೦-೭-೭)

ಎಲೈ ಅಗ್ನಿಯೇ, ಯಾವ ನಿನ್ನನ್ನು ದ್ಯಾವಾಪೃಥಿವಿಗಳು ಉತ್ಪನ್ನಮಾಡಿದರೋ, ಯಾವ ನಿನ್ನನ್ನು ಅಂತರಿಕ್ಷೋದಕಗಳು ಉತ್ಪನ್ನಮಾಡಿದವೋ, ಯಾವ ನಿನ್ನನ್ನು ತ್ವಷ್ಟೃದೇವನು ಉತ್ಪನ್ನಮಾಡಿದನೋ ಅಂತಹ ದಿವ್ಯವಾದ ಉತ್ಪನ್ನವುಳ್ಳ ನೀನು ಪಿತೃಮಾರ್ಗವನ್ನು ಅರಿತವನಾಗಿ ಅತ್ಯತಿಶಯವಾಗಿ ಪ್ರಕಾಶಿಸುತ್ತೀಯೆ.

" ಇದೇ ಯಜ್ಞಾಗ್ನಿಯನ್ನು ಓಷಧಿಗಳು ತಮ್ಮ ಗರ್ಭದಲ್ಲಿ ಧರಿಸಿದವು. ಇದೇ ಅಗ್ನಿಯನ್ನು ಉದಕಗಳೂ ಉತ್ಪನ್ನಮಾಡಿದುವು. ವನಸ್ಪತಿಗಳೂ ತಮ್ಮ ಗರ್ಭದಲ್ಲಿ ಧರಿಸಿದವು. ಗರ್ಭರೂಪನಾದ ಅಗ್ನಿಯನ್ನು ಓಷಧ್ಯಾದಿಗಳು ಉತ್ಪನ್ನಮಾಡುತ್ತವೆ "

" ದ್ಯುಲೋಕಕ್ಕೆ ಶಿರಃಪ್ರಾಯನೂ, ಪೃಥ್ವಿಯಲ್ಲಿ ಸಂಚರಿಸುವವನೂ, ಸಾರ್ವಭೌಮನೂ, ಯಜ್ಞಗಳಿಗೆ ನಾಭಿರೂಪನೂ ಯಜ್ಞಕರ್ತರಿಗೆ ಮಾರ್ಗದರ್ಶಕನೂ ಆದ ಅಗ್ನಿಯನ್ನು ದೇವತೆಗಳು ಉತ್ಪನ್ನಮಾಡಿದರು. ಅದರಂತೆಯೇ ಋತ್ವಿಕ್ಕುಗಳೂ ಉತ್ಪನ್ನಮಾಡಿದರು " ಇತ್ಯಾದಿಯಾಗಿ ಪ್ರಶಂಸಿತನಾಗಿದ್ದರೂ (೬. ೭. ೧-೨) ಯಾರು ಯಾರಿಂದ ಉತ್ಪನ್ನವಾಗಿದ್ದಾನೆಂದು ವರ್ಣಿತನಾಗಿರುವನೋ ಅಂತಹ ದೇವಮಾನವಾದಿಗಳಿಗೆಲ್ಲ ಪಿತೃರೂಪನೂ ಪಾಲಕನೂ ಆಗಿದ್ದಾನೆಂದು ಪ್ರಶಂಸಿಸಲ್ಪಟ್ಟಿದ್ದಾನೆ.

ಋ. ಸಂ. ೧–೬೯-೧

ಇಂತಹ ಅಗ್ನಿಯ ನಾನಾ ವಿಧವಾದ ಉತ್ಪನ್ನವನ್ನು ತಿಳಿಸುತ್ತ ಪ್ರಕೃತವಾದ ಋಕ್ಕಿನಲ್ಲಿ " **ದಿವಸ್ಪರಿ ಪ್ರಥಮಂ ಜಜ್ಞೇ** " ಇತ್ಯಾದಿಯಾಗಿ ಸ್ತುತಿಸಲ್ಪಟ್ಟಿದೆ. ಇದೇ ಮಂತ್ರದ ತಾತ್ಪರ್ಯವನ್ನು ವಿವರಿಸುತ್ತ ಶತಪಥ ಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ.

ದಿವಸ್ಪರಿ ಪ್ರಥಮಂ ಜಜ್ಞೇ ಅಗ್ನಿರಿತಿ । ಪ್ರಾಣೋ ವೈ ದ್ಯೌಃ ಪ್ರಾಣಾದ್ವಾ ಏಷ ಪ್ರಥಮಮು-ಜಾಯತಾಸ್ಮದ್ದ್ವಿತೀಯಂ ಪರಿ ಜಾತವೇದಾ ಯದೇನಮದೋ ದ್ವಿತೀಯಂ ಪುರುಷವಿ-ಧೋಽಜನಯತ್ತೃತೀಯಮಪ್ಸ್ವಿತಿ ಯದೇನಮದಸ್ತೃತೀಯಮದ್ಭ್ಯೋಽಜನಯನ್ನೃ-ಮಣಾ ಅಜಸ್ರಮಿತಿ ಪ್ರಜಾಪತಿರ್ವೈ ನೃಮಣಾ ಅಗ್ನಿರಜಸ್ರಮಿಂಧಾನ ಏನಂ ಜರತೇ ಸ್ವಾಧೀರಿತಿ ಯೋ ವಾ ಏನಮಿಂಧೇ ಸ ಏನಂ ಜನಯತೇ ಸ್ವಾಧೀಃ ॥

(ಶ. ಬ್ರಾ. ೬–೭–೪-೩)

ಅಗ್ನಿಯು ಪ್ರಥಮತಃ ದ್ಯುಲೋಕದಲ್ಲಿ ಉತ್ಪನ್ನನಾದನು. ಪ್ರಾಣವೇ ದ್ಯುಲೋಕಸಂಜ್ಞಕವು. ಎಂದರೆ, ಪ್ರಥಮತಃ ಅಗ್ನಿಯ ಆವಿರ್ಭಾವವು ಪ್ರಾಣದಿಂದ ಎಂದರ್ಥ. **ಜಾತವೇದೋ**ರೂಪನಾದ ಅಗ್ನಿಯು ಎರಡನೆಯ ಸಲ ನಮ್ಮಿಂದ ಉತ್ಪನ್ನನಾದನು. ಮೂರನೆಯ ಸಲ ಉದಕದಿಂದ ಉತ್ಪನ್ನನಾದನು. ಇದೇ ಅಗ್ನಿಯು ಮಾನವರಿಗೆ ಹಿತಕಾರಿಯು. ಮರಣರಹಿತನಾದ ಈ ಅಗ್ನಿಯು ಜಗತ್ತಿಗೆಲ್ಲ ಮೂಲಕಾರಣನಾದ ಪ್ರಜಾಪತಿರೂಪನು. ಅಮರ್ತ್ಯನಾದ ಈ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತ ಯಜ್ಞಕರ್ತನು ಧ್ಯಾನರೂಪದಲ್ಲಿ ಇವನನ್ನು ಪೂಜಿಸುತ್ತಾನೆ.

ಸಮುದ್ರೇ ತ್ವಾ ನೃಮಣಾ ಅಪ್ಸ್ವಂತರಿತಿ । ಪ್ರಜಾಪತಿರ್ವೈ ನೃಮಣಾ ಅಪ್ಸು ತ್ವಾ ಪ್ರಜಾಪತಿ-ರಿತ್ಯೇತದ್ಧೃಚಿಷ್ಟಾ ಈಧೇ ದಿವೋ ಅಗ್ನ ಊಧನ್ನಿತಿ ಪ್ರಜಾಪತಿರ್ವೈ ನೃಚಿಷ್ಟಾ ಆಪೋ ದಿವ ಊಧಸ್ತೃತೀಯೇ ತ್ವಾ ರಜಸಿ ತಸ್ಥಿವಾಂಸಮಿತಿ ದ್ಯೌರ್ವೈ ತೃತೀಯಂ ರಜೋಽಪಾಮುಪ-ಸ್ಥೇ ಮಹಿಷಾ ಅವರ್ಧನ್ನಿತಿ ಪ್ರಾಣಾ ವೈ ಮಹಿಷಾ ದಿವಿ ತ್ವಾ ಪ್ರಾಣಾ ಅವರ್ಧನ್ನಿತ್ಯೇತತ್॥

(ಶ. ಬ್ರಾ. ೬-೭-೪-೫)

ಮಾನವರಿಗೆ ಹಿತಕಾರಿಯು ನಿನ್ನನ್ನು ಅಂತರಿಕ್ಷದಲ್ಲಿ ಉತ್ಪತ್ತಿ ಮಾಡಿದನು. ಪ್ರಜಾಪತಿಯೇ ಈ ಜನೋಪಕಾರಿಯು. ಎಲೈ ಅಗ್ನಿಯೇ, ಇದೇ ಜನೋಪಕಾರಿಯಾದ ಪ್ರಜಾಪತಿಯು ನಿನ್ನನ್ನು ದ್ಯುಲೋಕದ ಊಧಃಪ್ರದೇಶದಲ್ಲಿ ಉತ್ಪನ್ನಮಾಡಿದನು. ಮೂರನೆಯ ಲೋಕದ ಉನ್ನತ ಪ್ರದೇಶದಲ್ಲಿ ಸ್ಥಿತನಾದ ನಿನ್ನನ್ನು ಮಹಿಷಗಳು ಪ್ರಜ್ವಲಿತವಾಗುವಂತೆ ಮಾಡಿದವು. ಪ್ರಾಣಗಳೇ ಮಹಿಷಗಳು. ಈ ಪ್ರಾಣಗಳೇ ನಿನ್ನನ್ನು ದ್ಯುಲೋಕದ ಉನ್ನತಪ್ರದೇಶದಲ್ಲಿ ಪ್ರಜ್ವಲಿತನಾಗುವಂತೆ ಮಾಡಿದವು ಇತ್ಯಾದಿಯಾಗಿ ವಿವರಿಸಿದೆ.

" ಅಭಿ ದ್ವಿಜನ್ಮಾ ತ್ರಿವೃದನ್ನಮೃಜ್ಯತೇ " (ಋ. ಸಂ. ೧-೧೪೦-೨) ಇತ್ಯಾದಿ ಸ್ಥಳಗಳಲ್ಲಿ ಅಗ್ನಿಯ ಜನ್ಮವು ಎರಡು ವಿಧವೆಂದು ತಿಳಿಸಿದೆ. ಇವು ಯಾವುವೆಂದರೆ ಪುನಃ **" ಅಭಿ ದ್ವಿಜನ್ಮಾ ತ್ರೀ ರೋಚನಾನಿ "**(ಋ.ಸಂ. ೧-೧೪೯-೪) ಎಂಬ ಮಂತ್ರದಲ್ಲಿ ಈ ವಿಷಯವನ್ನು ವಿವರಿಸುತ್ತ,

> **ದ್ವಾಭ್ಯಾಂ ಅರಣೀಭ್ಯಾಂ ಜಾಯಮಾನಃ । ಯದ್ವಾ । ಮಥನೇನ ಅಧಾನಸಂಸ್ಕಾರೇಣ ಚ ಉತ್ಪನ್ನತ್ವಾತ್ ದ್ವಿಜನ್ಮತ್ವಂ ಅಥವಾ ದ್ವಯೋರ್ದ್ಯಾವಾಪೃಥಿವ್ಯೋರ್ಜಾಯಮಾನಃ ಅರಣ್ಯೋರ್ವಾ ಜಾಯಮಾನಃ ॥**
>
> (ಸಾ. ಭಾ)

ಎರಡು ಕಟ್ಟಿಗೆಗಳಿಂದ ಉತ್ಪನ್ನವಾಗುವುದರಿಂದಾಗಲೀ, ಅಥವಾ ಮಥನದಿಂದ ಒಂದುಸಲವೂ, ಆಧಾನ ಸಂಸ್ಕಾರದಿಂದ ಒಂದುಸಲವೂ ಹೀಗೆ ಎರಡುಸಲ ಉತ್ಪನ್ನವಾಗುವುದರಿಂದಾಗಲಿ ಅಥವಾ ದ್ಯಾವಾಪೃಥಿವಿಗಳಿಂದ ಉತ್ಪನ್ನವಾಗುವುದರಿಂದಾಗಲೀ **ದ್ವಿಜನ್ಮಾ** ಎಂಬ ವಿಶೇಷಣದಿಂದ ಅಗ್ನಿಯನ್ನು ಪ್ರಶಂಸಿಸಿದೆಯೆಂದು ಸಾಯಣರು ತಿಳಿಸುತ್ತಾರೆ.

ಅಗ್ನಿಯು ತನ್ನಿಂದತಾನೇ ಉತ್ಪನ್ನನಾದನು ಎಂಬ ಪ್ರಶಂಸೆಯೂ ಇರುವ ಸನ್ನಿವೇಶಗಳುಂಟು. **ತನೂನಪಾತ್** ಎಂಬ ವಿಶೇಷಣಕ್ಕೆ ಇದೇ ಅರ್ಥವು ಕೆಲವೆಡೆಗಳಲ್ಲಿ ಹೇಳಲ್ಪಟ್ಟಿದೆ. ಉದಾಹರಣೆಗೆ ಬೃಹದ್ದೇವತೆಯಲ್ಲಿ ಇದೇ ಅಂಶವನ್ನು ತಿಳಿಸುತ್ತ—

> **ತನೂನಪಾದಯಂ ತ್ವೇವ ನಾಮ್ನಾ ಯಚ್ಛತ್ಯಸೌ ತನುಂ ।**
> **ನಪಾದಿತಿ ಪ್ರಜಾಮಾಹುರಮುತೋಽಸ್ಯ ಚ ಸಂಭವಾತ್ ॥**
>
> (ಬೃ. ದೇ. ೩-೧೧)

ಈ ಅಗ್ನಿಯು **ತನೂನಪಾತ್** ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದಾನೆ. ದಿವ್ಯಾಗ್ನಿಯು ತನ್ನ ಶಕ್ತಿಯಿಂದಲೇ ತನ್ನ ಸ್ವರೂಪವು ವಿಸ್ತೃತವಾಗುವಂತೆ ಮಾಡಿಕೊಳ್ಳುತ್ತಾನೆ. **ನಪಾತ್** ಎಂದರೆ ತನ್ನ ದೇಹದಿಂದ ಉತ್ಪನ್ನನಾದ ಪುತ್ರನೆಂಬ ಅರ್ಥವು ಪ್ರಸಿದ್ಧವಾಗಿದೆ. ಈ ದಿವ್ಯಾಗ್ನಿಯ ಉತ್ಪನ್ನವು ತನ್ನ ಶರೀರದಿಂದಲೇ ಆದುದರಿಂದ **" ತನೂನಪಾತ್ "** ಎಂಬ ಹೆಸರು ಪ್ರಸಿದ್ಧವಾಗಿದೆ. **" ಅಪಾಂ ನಪಾತ್ "** ಎಂಬ ವಿಶೇಷಣದ ತಾತ್ಪರ್ಯವನ್ನು ಹಿಂದೆ ಅನೇಕ ಕಡೆಗಳಲ್ಲಿ ವಿವರಿಸಿದೆ.

ಸಂಹಿತಾಪಾಠಃ

ವಿದ್ಮಾ ತೇ ಅಗ್ನೇ ತ್ರೇಧಾ ತ್ರಯಾಣಿ ವಿದ್ಮಾ ತೇ ಧಾಮ ವಿಭೃತಾ ಪುರುತ್ರಾ

ವಿದ್ಮಾ ತೇ ನಾಮ॑ ಪರ॒ಮಂ ಗುಹಾ॒ ಯದ್ವಿದ್ಮಾ ತಮುತ್ಸಂ॒ ಯತ॑ ಆಜ॒ಗಂಥ॥

ಪದಪಾಠಃ

ವಿ॒ದ್ಮ॒ । ತೇ॒ । अ॒ಗ್ನೇ॒ । त्रे॒धा । त्र॒यो॒ऽणी॑ । वि॒द्म॒ । ते॒ । धाम॑ । वि॒ऽभृ॑ता । पु॒रु॒ऽत्रा ।

विद्म॒ । ते॒ । नाम॑ । प॒र॒मं । गु॒हा॑ । यत् । वि॒द्म॒ । तं । उ॒त्सं॑ । यत॑ः । आ॒ऽज॒गंथ॑ ॥

ಸಾಯಣಭಾಷ್ಯಂ

ಹೇ ಅಗ್ನೇ ತೇ ತವ ತ್ರೇಧಾ ತ್ರಿಷು ಸ್ಥಾನೇಷು ಪೃಥಿವ್ಯಾಂತರಿಕ್ಷದ್ಯುಲೋಕೇಷು ಸ್ಥಿತಾನಿ ತ್ರಯೋಣ್ಯಗ್ನಿವಾಯ್ವಾದಿತ್ಯಾಖ್ಯಾನಿ ತ್ರೀಣಿ ರೂಪಾಣಿ ವಿದ್ಮ । ವಯಂ ಜಾನೀಮಃ । ಕಿಂಚ ಹೇ ಅಗ್ನೇ ತೇ ತವ ಧಾಮ ಸದ್ಮಾನಿ ಸ್ಥಾನಾನಿ ವಿಭೃತಾ ವಿಭೃತಾನಿ ಪುರುತ್ರಾ ಬಹುಧಾ ಬಹೂನಿ ವಾ ಗಾರ್ಹಪತ್ಯಾ-ಹವನೀಯಾನ್ವಾಹಾರ್ಯಪಚನಾದೀನಿ ವಿದ್ಮ । ಕಿಂಚ ತೇ ತವ ಗುಹಾ ಗೂಢಮವೇದವಿದ್ಭಿರವಿಜ್ಞಾತಂ ಪರಮಮುತ್ಕೃಷ್ಟಂ ವೇದೇ ಪ್ರಸಿದ್ಧಂ ಯನ್ನಾಮಾಸ್ತಿ ತದ್ವಿದ್ಮ । ವೇದವಿದೋ ವಯಂ ವಿಜಾನೀಮಃ । ಕಿಂಚ ತ್ವಂ ಯತೋ ಯಸ್ಮಾದಾಜಗಂಥ ಆಗತವಾನಸಿ । ಉತ್ಪನ್ನವಾನಿತ್ಯರ್ಥಃ । ತಮುತ್ಸಮುತ್ಸ್ಯಂ-ದಯಿತಾರಮುತ್ಪಾದಯಿತಾರಂ ಕಾರಣಾತ್ಮಾನಂ ವಿದ್ಮ । ಜಾನೀಮಃ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ತೇ**—ನಿನ್ನ । **ತ್ರೇಧಾ**—ಪೃಥಿವ್ಯಾದಿ ಮೂರು ಲೋಕಗಳಲ್ಲೂ ಸ್ಥಾಪಿತವಾಗಿರುವ । **ತ್ರಯೋಣಿ**—ಅಗ್ನಿ, ವಾಯು ಮತ್ತು ಆದಿತ್ಯಸಂಜ್ಞಕವಾದ ಸ್ವರೂಪಗಳನ್ನು । **ವಿದ್ಮ**—ಅರಿತಿದ್ದೇವೆ. । **ತೇ**—ನಿನ್ನ । **ಧಾಮ**—ಸ್ಥಾನಗಳನ್ನೂ । **ಬಿಭೃತಾ**—ನಿನ್ನಿಂದ ಧರಿಸಲ್ಪಟ್ಟವೂ । **ಪುರುತ್ರಾ**—ಆಹವನೀಯಾದ್ಯನೇಕ ಸಂಜ್ಞೆಯುಳ್ಳವೂ ಆದ ರೂಪಗಳನ್ನೂ । **ವಿದ್ಮ**—ಅರಿತಿದ್ದೇವೆ. । **ತೇ**—ನಿನ್ನ । **ಯತ್ ನಾಮ**—ಯಾವ ಹೆಸರು । **ಪರಮಂ**—ಉತ್ಕೃಷ್ಟವೂ । **ಗುಹಾ**—ರಹಸ್ಯವೂ ಆಗಿರುವುದೋ ಅದನ್ನೂ । **ವಿದ್ಮ**—ಅರಿತಿದ್ದೇವೆ. । **ಯತಃ**—ಎಲ್ಲಿಂದ । **ಆ ಜಗಂಥ**—ನೀನು ಆವಿರ್ಭವಿಸಿ ಬಂದಿದ್ದೀಯೋ । **ತಂ ಉತ್ಸಂ**—ಆ ನಿನ್ನ ಉತ್ಪತ್ತಿಸ್ಥಾನವನ್ನೂ । **ವಿದ್ಮ**—ಅರಿತಿದ್ದೇವೆ. ।

ಭಾವಾರ್ಥ

ಎಲೈ ಅಗ್ನಿಯೇ, ಪೃಥಿವ್ಯಾದಿ ಮೂರು ಲೋಕಗಳಲ್ಲೂ ಸ್ಥಾಪಿತವಾಗಿರುವ ಅಗ್ನಿ, ವಾಯು ಮತ್ತು ಆದಿತ್ಯ ಎಂಬ ಸಂಜ್ಞೆಗಳುಳ್ಳ ಮೂರು ರೂಪಗಳನ್ನೂ ಅರಿತಿದ್ದೇವೆ. ನಿನ್ನ ಸ್ಥಾನಗಳನ್ನೂ ಆಹವನೀಯಾದಿ ಸ್ವರೂಪಗಳನ್ನೂ ಅರಿತಿದ್ದೇವೆ. ಯಾವ ನಿನ್ನ ನಾಮವು ಅತ್ಯುತ್ಕೃಷ್ಟವೂ ಇತರರಿಂದ ಅರಿಯಲ್ಪಡದೇ ರಹಸ್ಯವೂ ಆಗಿರುವುದೋ ಅದನ್ನೂ ಮತ್ತು ನಿನ್ನ ಉತ್ಪತ್ತಿಸ್ಥಾನವನ್ನೂ ನಾವು ಅರಿತಿದ್ದೇವೆ.

English Translation

We recognize your threefold station, Agni, and your three (forms) : we recognize the many stations occupied by you : we know what your supreme secret appellation (is) : we know the source, whence you have proceeded.

ವಿಶೇಷವಿಷಯಗಳು

ಹಿಂದಿನ ಋಕ್ಕಿನ ವಿಶೇಷ ವಿಷಯಗಳಲ್ಲಿ ಅಗ್ನಿಯ ಮೂರು ವಿಧವಾದ ಉತ್ಪತ್ತಿಯನ್ನು ವಿವರಿಸಲಾಗಿದೆ. ಮೂರು ಲೋಕಗಳಲ್ಲೂ ಮೂರು ಬೇರೆ ವಿಧವಾದ ಉತ್ಪತ್ತಿಗನುಗುಣವಾಗಿ ಮೂರು ಲೋಕಗಳಲ್ಲೂ ಮೂರು ಬೇರೆ ಬೇರೆ ರೂಪಗಳಿಂದ ಆವಿರ್ಭೂತನಾಗುವ ವಿಷಯವನ್ನು ಪ್ರಕೃತವಾದ ಮತ್ತು ಮುಂದಿನ ಋಕ್ಕುಗಳಲ್ಲಿ ವಿವರಿಸಲಾಗಿದೆ.

ವಿದ್ಮಾ ತೇ ಅಗ್ನೇ ತ್ರೇಧಾ ತ್ರಯಾಣಿ ಎಂಬ ವಾಕ್ಯಕ್ಕೆ **ತವ ತ್ರಿಷು ಸ್ಥಾನೇಷು ಪೃಥಿವ್ಯಂತರಿಕ್ಷದ್ಯುಲೋಕೇಷು ಸ್ಥಿತಾನಿ ಅಗ್ನಿವಾಯ್ವಾದಿತ್ಯಾನಿ ತ್ರೀಣಿ ರೂಪಾಣಿ** ಪೃಥಿವೀ, ಅಂತರಿಕ್ಷ ಮತ್ತು ದ್ಯುಲೋಕಗಳಲ್ಲಿ ; ಪೃಥಿವ್ಯಯಲ್ಲಿ ಅಗ್ನಿರೂಪದಲ್ಲಿಯೂ, ಅಂತರಿಕ್ಷದಲ್ಲಿ ವಾಯು (ಅಥವಾ ಇಂದ್ರ) ರೂಪದಲ್ಲಿಯೂ, ಮತ್ತು ದ್ಯುಲೋಕದಲ್ಲಿ ಆದಿತ್ಯರೂಪದಲ್ಲಿಯೂ ಗೋಚರನಾಗುತ್ತಾನೆ ಎಂದು ಸಾಯಣರು ವಿವರಿಸಿದ್ದಾರೆ. ಎಂದರೆ, ಅಗ್ನಿ , ವಾಯು (ಅಥವಾ ಇಂದ್ರ) ಮತ್ತು ಆದಿತ್ಯ ಈ ಮೂರು ರೂಪಗಳೂ ಒಂದೇ ತತ್ತ್ವದ ಮೂರು ರೂಪಗಳೆಂದು ತಾತ್ಪರ್ಯ. ಇವಲ್ಲದೆ ಇನ್ನೂ ಅನೇಕ ಅವಾಂತರರೂಪಗಳೂ ವರ್ಣಿತವಾಗಿವೆ. ಮುಖ್ಯವಾಗಿ ಈ ಮೂರೂ ಮೂರು ಲೋಕಗಳ ಧಾರಕವೂ, ಪಾಲಕವೂ ಆಗಿವೆ. ಇವಲ್ಲದೆ, **ಅಗ್ನಿಪವಮಾನ, ಅಗ್ನಿವನಸ್ಪತಿ** ಮತ್ತು **ಅಗ್ನಿಶುಚಿ** ಎಂಬ ರೂಪಾಂತರಗಳೂ, **ಜಾತವೇದಸ್, ವೈಶ್ವಾನರ** ಮತ್ತು **ದ್ರವಿಣೋದಾಃ** ಎಂಬ ರೂಪಪ್ರಭೇದಗಳೂ, **ದಕ್ಷಿಣಾಗ್ನಿ, ಗಾರ್ಹಪತ್ಯ,** ಮತ್ತು **ಆಹವನೀಯ** ಎಂಬ ಪಾರ್ಥಿವಾಗ್ನಿಯ ರೂಪಾಂತರಗಳೂ, ಹೀಗೆಯೇ ಇನ್ನೂ ಅನೇಕ ಅವಾಂತರಪ್ರಭೇದಗಳೂ ಇರುತ್ತವೆ. ಇವುಗಳಲ್ಲಿ **ವೈಶ್ವಾನರ, ದ್ರವಿಣೋದಾಃ** ಇತ್ಯಾದಿ ಪ್ರಭೇದಗಳ ವಿಷಯಗಳನ್ನು ಹಿಂದೆ (ಎನೇ ಭಾಗ) ತಿಳಿಸಿದೆ. ಹಿಂದೆ ವಿವರಿಸದೆ ಇರುವ ಕೆಲವು ಮುಖ್ಯಾಂಶಗಳನ್ನು ಪ್ರಕೃತದಲ್ಲಿ ತಿಳಿಸಲಾಗುತ್ತದೆ.

ಈ ಪ್ರಭೇದಗಳು ತಾತ್ತ್ವಿಕವಾದ ವೈವಿಧ್ಯವನ್ನು ಹೊಂದಿಲ್ಲ. ಇವೆಲ್ಲಕ್ಕೂ ಮೂಲ ತತ್ತ್ವವು ಒಂದೇ ಆಗಿರುತ್ತದೆ. ಚರಾಚರವಾದ ವಸ್ತುಗಳಿಗೆಲ್ಲ ಇದೇ ಮೂಲವು. ಇದೊಂದೇ ತತ್ತ್ವವು ಮೂರು ಲೋಕಗಳಲ್ಲೂ ಮೂರು ರೂಪಗಳಲ್ಲಿ ಪ್ರಕಾಶಿಸುತ್ತದೆ. ಹೇಗೆಂದರೆ—

ಭವದ್ಭೂತಸ್ಯ ಭವ್ಯಸ್ಯ ಜಂಗಮಸ್ಥಾವರಸ್ಯ ಚ ।
ಅಸ್ಯೈಕೇ ಸೂರ್ಯಮೇವೈಕಂ ಪ್ರಭವಂ ಪ್ರಲಯಂ ವಿದುಃ ॥

(ಬೃ. ದೇ. ೧-೬೧)

ಈಗ ಯಾವುದು ಪ್ರಚಲಿತವಾಗುತ್ತಿರುವುದೋ, ಹಿಂದೆ ಯಾವುದಿದ್ದಿತೋ, ಮುಂದೆ ಯಾವುದಿರುವುದೋ, ಯಾವುದು ಚರಾತ್ಮಕವಾಗಿರುವುದೋ, ಯಾವುದು ಸ್ಥಿರವಾದ ಸ್ಥಿತಿಯನ್ನು ಹೊಂದಿರುವುದೋ ಇವೆಲ್ಲಕ್ಕೂ ಆದಿತ್ಯನೊಬ್ಬನೇ ಮೂಲವಸ್ತುವು ಮತ್ತು ಇವುಗಳೆಲ್ಲದರ ಕ್ಷಯಕ್ಕೂ ಅವನೇ ಕಾರಣನು.

ಅಸತಶ್ಚ ಸತಶ್ಚೈವ ಯೋನಿರೇಷಾ ಪ್ರಜಾಪತಿಃ ।
ಯದಕ್ಷರಂ ಚ ವಾಚ್ಯಂ ಚ ಯಥೈತದ್ಬ್ರಹ್ಮ ಶಾಶ್ವತಂ ॥

(ಬೃ. ದೇ. ೧-೬೨)

ಯಾವುದು ಭಾವರೂಪದಲ್ಲಿರುವುದೋ, ಯಾವುದು ಅಭಾವರೂಪದಲ್ಲಿರುವುದೋ ಅವೆಲ್ಲಕ್ಕೂ ಪ್ರಜಾಪತಿ ಸಂಜ್ಞಕನಾದ ಈ ಸೂರ್ಯನೇ ಮೂಲವು. ಈ ಪ್ರಜಾಪತಿತತ್ತ್ವವು ನಾಶರಹಿತವಾದುದು ಮತ್ತು ವಾಕ್ಶಬ್ದಶಂಸೆಗೆ ಮೀರಿದ್ದರೂ ಸಹ ಸೂರ್ಯಾದಿರೂಪದಲ್ಲಿ ಗೋಚರವಾಗುವ ಅವಾಂತರಪ್ರಭೇದಗಳು ವರ್ಣನೆಗೆ ಯೋಗ್ಯವಾಗಿವೆ.

ತ್ರೈಷ ಹಿ ತ್ರಿಧಾತ್ಮಾನಂ ಏಷ ಲೋಕೇಷು ತಿಷ್ಠತಿ ।
ದೇವಾನ್ಯಥಾಯಥಂ ಸರ್ವಾನ್ ನಿವೇಶ್ಯ ಸ್ವೇಷು ರಶ್ಮಿಷು ॥

(ಬೃ. ದೇ. ೧-೬೩)

ಜಗತ್ತಿಗೆ ಮೂಲವಸ್ತುವಾದ ಈ ಸೂರ್ಯನು ತನ್ನ ಸ್ವರೂಪವನ್ನು ಮೂರು ವಿಧಗಳಿಂದ ಪ್ರಸರಿಸಿ ಮೂರು ಲೋಕಗಳಲ್ಲೂ ವ್ಯಾಪಿಸಿದ್ದಾನೆ. ಉಳಿದ ಸಕಲ ದೇವತೆಗಳನ್ನೂ ಅವರವರ ಸ್ಥಾನದಲ್ಲಿ ಸ್ಥಾಪಿಸಿದ್ದಾನೆ. ಅವರೆಲ್ಲರಿಗೂ ಈ ಸೂರ್ಯನ ರಶ್ಮಿಗಳೇ ಅಧಿಕರಣಸ್ಥಾನಗಳು.

ಏತದ್ಭೂತೇಷು ಲೋಕೇಷು ಅಗ್ನಿಭೂತಂ ಸ್ಥಿತಂ ತ್ರಿಧಾ ।
ಋಷಯೋ ಗೀರ್ಭಿರರ್ಚಂತಿ ವ್ಯಂಜಿತಂ ನಾಮಭಿಸ್ತ್ರಿಭಿಃ ॥

(ಬೃ. ದೇ. ೧-೬೪)

ಸೃಷ್ಟಿಯಾದನಂತರ ಆವಿರ್ಭಾವವನ್ನು ಹೊಂದಿದ ಮೂರುಲೋಕಗಳಲ್ಲೂ ಅಗ್ನಿರೂಪಸ್ಥವಾದ ಈ ಮೂಲವಸ್ತುವು ಮೂರುರೂಪಗಳಲ್ಲಿರುತ್ತದೆ. ಮೂರು ಪ್ರಕಾರಗಳಿಗೂ ಮೂರುವಿಧವಾದ ಸಂಜ್ಞೆಯನ್ನು ಹೊಂದಿದ ಈ ಅಗ್ನಿಯನ್ನು ಋಷಿಗಳು ಮೂರು ಹೆಸರುಗಳಿಂದ ನಿರ್ದೇಶಿಸಿ ಪ್ರಶಂಸಿಸುತ್ತಾರೆ.

ತಿಷ್ಠತ್ಯೇವ ಹಿ ಭೂತಾನಾಂ ಜಠರೇ ಜಠರೇ ಜ್ವಲನ್ ।
ತ್ರಿಸ್ಥಾನಂ ತ್ವೈನಮರ್ಚಂತಿ ಹೋತ್ರಾಯಾಂ ವೃಕ್ತಬರ್ಹಿಷಃ ।

ಈ ಅಗ್ನಿಯು ಜಗತ್ತಿನ ಸಕಲ ಭೂತಗಳ ಉದರದಲ್ಲೂ ವ್ಯಾಪಿಸಿದ್ದಾನೆ. ಯಜ್ಞಕರ್ತರು ತಮ್ಮ ಆಹ್ವಾನಕಾಲದಲ್ಲಿ ಈ ಅಗ್ನಿಯನ್ನು ಮೂರು ಸ್ಥಾನಗಳುಳ್ಳವನೆಂದು ಪ್ರಶಂಸಿಸಿ ಪೂಜಿಸುತ್ತಾರೆ. ಪ್ರಭಾವಯುತನಾದ ಈ ಅಗ್ನಿಯ ಮೂರು ರೂಪಗಳಾವುವೆಂದರೆ—

ಇಹೈಷ ಪವಮಾನೋಽಗ್ನಿರ್ಮಧ್ಯಮೋಽಗ್ನಿರ್ವನಸ್ಪತಿಃ ।
ಅಮುಷ್ಮಿನ್ನೇವ ವಿಪ್ರೈಸ್ತು ಲೋಕೇಽಗ್ನಿಃಶುಚಿರುಚ್ಯತೇ ॥

(ಬೃ. ದೇ. ೧-೬೬)

ಈ ಪೃಥ್ವಿಯ ಮೇಲಿರುವ ಅಂಶವನ್ನು **ಅಗ್ನಿಪವಮಾನನೆಂದೂ,** ಅಂತರಿಕ್ಷಸ್ಥವಾದ ಅಂಶವನ್ನು **ಅಗ್ನಿವನಸ್ಪತಿಯೆಂದೂ,** ದ್ಯುಲೋಕಸ್ಥವಾದ ಅಂಶವನ್ನು **ಅಗ್ನಿಶುಚಿಯೆಂದೂ** ಋತ್ವಿಕ್ಕುಗಳು ಪ್ರಶಂಸಿಸುತ್ತಾರೆ. ಇದೇ ಅಲ್ಲದೆ,

ಇಹಾಗ್ನಿಭೂತಸ್ತ್ರೈಷಿಭಿರ್ಲೋಕೇ ಸ್ತುತಿಭಿರೀಳಿತಃ ।
ಜಾತವೇದಾಸ್ತುತೋ ಮಧ್ಯೇ ಸ್ತುತೋ ವೈಶ್ವಾನರೋ ದಿವಿ ॥

(ಬೃ. ದೇ. ೧-೬೭)

ಪೃಥ್ವಿಯಲ್ಲಿ ಆವಿರ್ಭೂತನಾಗಿರುವ ಅಗ್ನಿಯನ್ನು ಕೇವಲ ಅಗ್ನಿಯೆಂದು ಸ್ತುತಿಕರ್ತರು ಪ್ರಶಂಸಿಸುತ್ತಾರೆ. ಅಂತರಿಕ್ಷಸ್ಥನಾದ ಅಗ್ನಿಯು ಜಾತವೇದಸ್ಸೆಂದೂ, ದ್ಯುಲೋಕಸ್ಥನಾದ ಅಗ್ನಿಯು ವೈಶ್ವಾನರನೆಂದೂ ಪ್ರಸಿದ್ಧಿಯಿದೆ. ಆದರೆ, ಈ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವಿರುವುದಿಲ್ಲ. ಮತಭೇದಗಳಿರುತ್ತವೆ. ಉದಾಹರಣೆಗೆ—

ವೈಶ್ವನರಾಗ್ನಿಯೇ ಆದಿತ್ಯರೂಪನೆಂದು ಹಿಂದಿನ ಋಷಿಗಳು ಅಭಿಪ್ರಾಯಪಡುತ್ತಾರೆ. ಆದರೆ, ಪಾರ್ಥಿವಾಗ್ನಿಯೇ ವೈಶ್ವಾನರಾಗ್ನಿಸಂಜ್ಞಕನೆಂದು ಶಾಕಪೂಣಿಯವರು ಅಭಿಪ್ರಾಯಪಡುತ್ತಾರೆಂದು ನಿರುಕ್ತಕಾರರು ಈ ಅಭಿಪ್ರಾಯಭೇದಗಳನ್ನು ತಿಳಿಸಿದ್ದಾರೆ. (ನಿ. ೭-೨೩) ಈ ಅಭಿಪ್ರಾಯಭೇದಗಳೇನಿದ್ದರೂ ಅಗ್ನಿಯ ಮೂರು ರೂಪಗಳೇ ಮೂರು ಲೋಕಗಳನ್ನೂ ಪ್ರಸರಿಸಿ ನಾಮಭೇದಗಳಿಂದ ಪ್ರಸಿದ್ಧವಾಗಿವೆಯೆಂಬುದು ಸರ್ವಸಮ್ಮತವಾಗಿದೆ.

ಅಗ್ನಿರಸ್ಮಿನ್ನಥೇಂದ್ರಸ್ತು ಮಧ್ಯತೋ ಹಾಯುರೇವ ಚ ।
ಸೂರ್ಯೋ ದಿವೀತಿ ವಿಜ್ಞೇಯಾಸ್ತಿಸ್ರ ಏವೇಹ ದೇವತಾಃ ॥

(ಬೃ. ದೇ. ೧-೬೯)

ಅಗ್ನಿಯು ಈ ಲೋಕದಲ್ಲಿಯೂ, ಇಂದ್ರ ಮತ್ತು ವಾಯುಗಳು ಮಧ್ಯನುಲೋಕದಲ್ಲಿಯೂ, ಸೂರ್ಯನು ದ್ಯುಲೋಕದಲ್ಲಿಯೂ, ಅಗ್ನಿಯ ಪ್ರಭೇದಗಳಾಗಿದ್ದಾರೆ. ಈ ಎಲ್ಲಾ ಪ್ರಭೇದಗಳಿಗೂ, ಜಗತ್ತಿನ ಸಕಲ ವಸ್ತುಗಳಿಗೂ ಅಗ್ನಿಯೇ ಮೂಲರೂಪನು. ಇದನ್ನೇ ನಿರುಕ್ತಕಾರರೂ ಸಹ ವಿವರಿಸುತ್ತ **ತಿಸ್ರ ಏವ ದೇವತಾಃ** (ದೇವತೆಗಳ ಸಂಖ್ಯೆಯು ಕೇವಲ ಮೂರು. ಈ ಮೂರೂ ಸಹ ಒಂದೇ ತತ್ತ್ವದ ಮೂರು ಅಂಶಗಳು) ಎಂದು ತಿಳಿಸಿದ್ದಾರೆ. ಆದರೆ, ಈ ಮೂರು ಪ್ರಭೇದಗಳ ಮಹಿಮೆಯೇನೆಂದರೆ—

ಏತಾಸಾಮೇವ ಮಾಹಾತ್ಮ್ಯಾನ್ನಾಮಾನ್ಯತ್ವಂ ವಿಧಿಯತೇ ।
ತತ್ತತ್ಸ್ಥಾನವಿಭಾಗೇನ ತತ್ರ ತತ್ರೇಹ ದೃಶ್ಯತೇ ॥

(ಬೃ. ದೇ. ೧-೭೦)

ಇವರುಗಳ ಮಾಹಾತ್ಮ್ಯದಿಂದಲೇ ಬೇರೆಬೇರೆ ನಾಮಧೇಯಗಳಿಂದ ನಿರ್ದಿಷ್ಟರಾಗಿದ್ದಾರೆ. ಈ ಬೇರೆಬೇರೆ ಹೆಸರುಗಳೂ ಸಹ ಆಯಾ ಅಂಶಗಳಿಂದ ಬೇರೆಬೇರೆ ಲೋಕಗಳನ್ನು ವ್ಯಾಪಿಸಿರುವುದರಿಂದ ಆಯಾ ಸ್ಥಾನಗಳಿಗನುಸಾರವಾಗಿ ಪ್ರಸಿದ್ಧವಾಗಿವೆ ಇತ್ಯಾದಿಯಾಗಿ ಅಗ್ನಿಯ ಪ್ರಭೇದ ವಿಷಯಗಳು ಪ್ರಶಂಸಿತವಾಗಿವೆ.

" **ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ಧದೇ ಪದಂ** " (ಋ. ಸಂ. ೧-೨೨-೧೭) ಎಂಬ ವಾಕ್ಯದ ತಾತ್ಪರ್ಯವನ್ನು ವಿವರಿಸುವಾಗ ದುರ್ಗಾಚಾರ್ಯರು ಈ ರೀತಿ ತಿಳಿಸಿದ್ದಾರೆ.

ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ । ಪಾರ್ಥಿವೋಽಗ್ನಿರ್ಭೂತ್ವಾ ಪೃಥಿವ್ಯಾಂ ಯೆತ್ಕಿಂಚಿದಸ್ತಿ ತದ್ವಿಕ್ರಮತೇ ತದಧಿತಿಷ್ಠತಿ । ಅಂತರಿಕ್ಷೇ ವಿದ್ಯುದಾತ್ಮನಾ ದಿವಿ ಸೂರ್ಯಾತ್ಮನಾ । ಯದುಕ್ತಂ । ತಮೂ ಅಕೃಣ್ವನ್ ತ್ರೇಧಾ ಭುವೇ ಕಂ

(ನಿ. ೧೨-೧೯)

ಹಿಂದೆ ಹೇಳಿದ ರೀತಿಯಲ್ಲಿಯೇ ವಿಷ್ಣುವಿನ ಪಾದಪ್ರಕ್ಷೇಪಣವೂ ವಿವೃತವಾಗಿದೆ. ವಿಷ್ಣುವಿನ ಮೂರು ಪಾದಗಳಲ್ಲಿ ಒಂದು ಪೃಥ್ವಿಯಲ್ಲಿ ಪಾರ್ಥಿವಾಗ್ನಿರೂಪದಲ್ಲಿಯೂ, ಇನ್ನೊಂದು ಅಂತರಿಕ್ಷದಲ್ಲಿ ವಿದ್ಯುದ್ರೂಪದಲ್ಲಿಯೂ, ಮೂರನೆಯದು ದ್ಯುಲೋಕದಲ್ಲಿ ಸೂರ್ಯರೂಪದಲ್ಲಿಯೂ ಆಕ್ರಮಿಸಿದೆ. ಇದಕ್ಕೆ ವೈದಿಕವಾಕ್ಯವೂ ಆಧಾರವಾಗಿದೆ.

ಪ್ರಜಾಪತಿರೂಪನಾದ ಅಗ್ನಿಯೇ, ಅಗ್ನಿ, ವಾಯು, ಆದಿತ್ಯ ಈ ರೂಪಗಳಿಂದ ಪ್ರಕಾಶಿತನಾಗುತ್ತಾನೆಂದು ಬೃಹದ್ದೇವತಾವಾಕ್ಯಗಳು ಯಾವ ಮೂಲತತ್ತ್ವವನ್ನು ಪ್ರಶಂಸಿಸಿರುವ ವಿಷಯವನ್ನು ಮೇಲೆ ಉದಾಹರಿಸಿ ವಿವರಿಸಿದೆಯೋ ಅದೇ ವಿಷಯವೇ ಶತಪಥಬ್ರಾಹ್ಮಣದಲ್ಲಿ ಇನ್ನೂ ವಿಸ್ತೃತವಾಗಿ ತಿಳಿಸಲ್ಪಟ್ಟಿದೆ.

ಸೋ೭ಕಾಮಯತ ಪ್ರಜಾಪತಿಃ । ಭೂಯ ಏವ ಸ್ಯಾತ್ಪ್ರಜಾಯೇತೇತಿ ಸೋ೭ಗ್ನಿನಾ ಪೃಥಿವೀಂ ಮಿಥುನಗ್ಂ ಸಮಭವತ್ತತ ಆಂಡಗ್ಂ ಸಮವರ್ತತ ತದಭ್ಯಮೃಶತ್ಪುಷ್ಯತ್ವಿತಿ ಪುಷ್ಯತು ಭೂಯೋ೭ಸ್ತ್ವಿತ್ಯೇವ ತದಬ್ರವೀತ್ ॥

(ಶ. ಬ್ರಾ. ೬-೧-೨-೧)

ಜಗತ್ತಿಗೆ ಮೂಲವಾದ ಈ ಸೂಕ್ಷ್ಮತತ್ತ್ವವು ಬೆಳೆಯಲಿ ಎಂದು ಪ್ರಜಾಪತಿಯು ಆಶಿಸಿದನು. ಅನಂತರವೇ ಅವನು ಅಗ್ನಿರೂಪದಿಂದ ಪೃಥ್ವಿಯೊಡನೆ ಸೇರಿ ಸಂಪರ್ಕವನ್ನು ಹೊಂದಿದನು ಆಗ ಒಂದು ಅಂಡವು ಉದ್ಭವಿಸಿತು. ಪುನಃ ಅದು ಬೆಳೆಯಲಿ ಎಂದು ಆಶಿಸಿದನು.

ಸ ಯೋ ಗರ್ಭೋ೭ಂತರಾಸೀತ್ । ಸ ವಾಯುರಸೃಜ್ಯತಾಥ ಯದಶ್ರು ಸಂಕ್ಷರಿತಮಾಸೀತ್ತಾನಿ ವಯಾಗ್ ಸ್ಯಭವನ್ನಥ ಯಃ ಕಪಾಲೇ ರಸೋ ಲಿಪ್ತ ಆಸೀತ್ತಾ ಮರೀಚಯೋ೭ಭವನ್ನಥ ಯತ್ಕಪಾಲಮಾಸೀತ್ತದಂತರಿಕ್ಷಮಭವತ್ ।

(ಶ. ಬ್ರಾ. ೬-೧-೨-೩)

ಆಗ ಅಂತಃಸ್ಥವಾದ ಆ ಗರ್ಭವು ವಾಯುರೂಪದಲ್ಲಿ ಉತ್ಪನ್ನವಾಯಿತು. ಆ ಕಾಲದಲ್ಲಿ ಉತ್ಪನ್ನವಾದ ಅಶ್ರುಗಳೇ ಪಕ್ಷಿರೂಪದಲ್ಲಿ ಪರಿವರ್ತಿತವಾದವು. ಕಪಾಲಕ್ಕೆ ಸಿಕ್ತವಾಗಿದ್ದ ರಸಗಳು ಸೂರ್ಯರಶ್ಮಿಗಳಾದವು. ಕಪಾಲವೇ ಅಂತರಿಕ್ಷರೂಪದಲ್ಲಿ ಪರಿವರ್ತಿತವಾಯಿತು.

ಸೋ೭ಕಾಮಯತ । ಭೂಯ ಏವ ಸ್ಯಾತ್ಪ್ರಜಾಯೇತೇತಿ ಸ ವಾಯುನಾಂತರಿಕ್ಷಂ ಮಿಥುನಗ್ಂ ಸಮಭವತ್ತತ ಆಂಡಗ್ಂ ಸಮವರ್ತತ ತದಭ್ಯಮೃಶದ್ಯಶೋ ವಿಭೃಹೀತಿ ತತೋ೭ಸಾವಾದಿತ್ಯಃ ।

(ಶ. ಬ್ರಾ. ೬-೧-೨-೩)

ಪುನಃ ಇದೂ ಬೆಳೆಯಲಿ ಮತ್ತು ಸಂತತರೂಪದಿಂದ ವೃದ್ಧಿ ಹೊಂದಲಿ ಎಂದು ಆಶಿಸಿದನು. ಆಗ ವಾಯುರೂಪದಿಂದ ಅಂತರಿಕ್ಷದೊಂದಿಗೆ ಸಂಪರ್ಕವನ್ನು ಹೊಂದಿದನು. ಪುನಃ ಒಂದು ಅಂಡವು ಆವಿರ್ಭವಿಸಿತು. " ನೀನು ಯಶಸ್ವಿಯಾಗು ಎಂದು " ಆಶೀರ್ವದಿಸಿ ಅದನ್ನು ಸ್ಪರ್ಶಿಸಿದನು. ಆದರಿಂದ ಆದಿತ್ಯನ ಆವಿರ್ಭಾವವಾಯಿತು-

ಸೋ೭ಕಾಮಯತ। ಭೂಯ ಏವ ಸ್ಯಾತ್ಪ್ರಜಾಯೇತೇತಿ ಸ ಆದಿತ್ಯೇನ ದಿವಂ ಮಿಥುನಗ್ಂ ಸಮಭವತ್ತತ ಆಂಡಗ್ಂ ಸಮವರ್ತತ . . . . ॥

(೬-೧-೨-೪)

ಇನ್ನೂ ವೃದ್ಧಿಯನ್ನು ಹೊಂದಲಿ ಎಂದು ಆಶಿಸಿದನು. ಆಗ ಆದಿತ್ಯನ ರೂಪದಿಂದ ದ್ಯುಲೋಕದ ಸಂಪರ್ಕವನ್ನು ಹೊಂದಿದನು. ಅನಂತರ ಅದರಿಂದಲೂ ಒಂದು ಅಂಡವು ಉತ್ಪನ್ನವಾಯಿತು.

ಹೀಗೆ ಮೂರು ಲೋಕಗಳಲ್ಲೂ ಅಗ್ನಿ, ವಾಯು ಮತ್ತು ಆದಿತ್ಯರೂಪದಿಂದ ವ್ಯಾಪಿಸಿರುವ ಪ್ರಕರಣವು ವರ್ಣಿತವಾಗಿದೆ. ಪ್ರಕೃತವಾದ " **ವಿದ್ಮಾ ತೇ೭ಗ್ನೇ ತ್ರೇಧಾ ತ್ರಯಾಣೀತಿ** " ಎಂಬ ಋಕ್ಕನ್ನೇ ವಿವರಿಸುತ್ತ

ಅಗ್ನಿರ್ವಾಯುರಾದಿತ್ಯ ಏತಾನಿ ಹಾಸ್ಯ ತಾನಿ ತ್ರೇಧಾ ತ್ರಯಾಣಿ ಎಂಬುದಾಗಿ ಮೇಲೆ ಹೇಳಿದ ವಿಷಯಗಳನ್ನು ತಿಳಿಸಿದೆ. (ಶ. ಬ್ರಾ. ೬-೭-೪-೪) ಅನಂತರ **ಸಮುದ್ರೇ ತ್ವಾ** ಎಂಬ ಮುಂದಿನ ಋಕ್ಕನ್ನು ವಿವರಿಸುತ್ತ—

ಸಮುದ್ರೇ ತ್ವಾ ನೃಮಣಾ ಅಪ್ಸ್ವಂತರಿತಿ ಪ್ರಜಾಪತಿರ್ವೈ ನೃಮಣಾ ಅಪ್ಸು ತ್ವಾ ಪ್ರಜಾಪತಿರಿತ್ಯೇತನ್ನೃಚಕ್ಷಾ ಈಧೇ ದಿವೋ ಅಗ್ನ ಊಧನ್ನಿತಿ ಪ್ರಜಾಪತಿರ್ವೈ ನೃಚಕ್ಷಾ ಅಪೋ ದಿವ ಊಧಸ್ತೃತೀಯೇ ತ್ವಾ ರಜಸಿ ತಸ್ಥಿವಾಗ್ಂಸಮಿತಿ ದ್ಯೌರ್ವೈ ತೃತೀಯೆಗ್ಂ ರಜೋಽಪಾಮುಪಸ್ಥೇ ಮಹಿಷಾ ಅವರ್ಧನ್ನಿತಿ ಪ್ರಾಣಾ ವೈ ಮಹಿಷಾ ದಿವಿ ತ್ವಾ ಪ್ರಾಣಾ ಅವರ್ಧನ್ನಿತ್ಯೇತತ್ । (ಶ. ಬ್ರಾ. ೬-೭-೪-೫)

ಎಲೈ ಅಗ್ನಿಯೇ, ಮಾನವರಿಗೆ ಹಿತಕಾರಿಯಾದವನು ನಿನ್ನನ್ನು ಅಪ್ಪಿನಲ್ಲಿ (ಉದಕದಲ್ಲಿ) ಪ್ರಜ್ವಲಿಸುವಂತೆ ಮಾಡಿದನು. ಪ್ರಜಾಪತಿಯೇ ಅಂತಹ ಮಾನವರಿಗೆ ಹಿತಕರನು. ಎಲೈ ಅಗ್ನಿಯೇ, ಮಾನವರ ವ್ಯವಹಾರಗಳನ್ನೆಲ್ಲ ಪೂರ್ಣವಾಗಿ ನೋಡಬಲ್ಲವನೇ ನಿನ್ನನ್ನು ಅಂತರಿಕ್ಷದಲ್ಲಿಯೂ ಪ್ರಜ್ವಲಿತನಾಗುವಂತೆ ಮಾಡಿದನು. ಪ್ರಜಾಪತಿಯೇ ಆ ರೀತಿಯಾದ ದಿವ್ಯದರ್ಶನವುಳ್ಳವನು. ಅನಂತರ ಅದೇ ಪ್ರಜಾಪತಿಯ ನಿರ್ದೇಶದಿಂದ ಮೂರನೆಯದಾದ ದ್ಯುಲೋಕದಲ್ಲಿ ಸ್ಥಿತಿಯನ್ನು ಹೊಂದಿದ ನಿನ್ನನ್ನು ಮಹಿಷಗಳು ಬೆಳೆಸಿದವು. ಪ್ರಾಣಗಳೇ ಈ ರೀತಿ ಮಹಿಷಸಂಜ್ಞಕವಾಗಿರುವುವು. ಎಂದರೆ, ನಿನ್ನನ್ನು ಪ್ರಾಣಗಳು ದ್ಯುಲೋಕದಲ್ಲಿ ಪುಷ್ಟನಾಗಿ ಪ್ರಕಾಶಿಸುವಂತೆ ಮಾಡಿದವು ಎಂದು ತಾತ್ಪರ್ಯವೆಂದು ತಿಳಿಸಿದೆ.

ಯಾವ ಆದಿತ್ಯನು ದ್ಯುಲೋಕದಲ್ಲಿ ಪ್ರಕಾಶಿಸುವನೋ, ಅವನು ಅಗ್ನಿಯಲ್ಲದೆ ಬೇರೆಯಲ್ಲ ಎಂದು " **ಅಸೌ ವಾ ಆದಿತ್ಯ ಏಷೋಽಗ್ನಿಃ ಸ ಏಷ ಜ್ಯೋತಿಷ್ಮಾನ್** " (ಶ. ಬ್ರಾ. ೬-೪-೧-೧೧) ಎಂಬಿವೇ ಮುಂತಾದ ಶ್ರುತಿವಾಕ್ಯಗಳು ಪ್ರಸಿದ್ಧವಾಗಿವೆ. ಈ ಅಗ್ನಿಯು ಇಂದ್ರನೆಂದು ಏತಕ್ಕೆ ಕರೆಯಲ್ಪಟ್ಟನು ಎಂದು ಪ್ರಶ್ನಿಸಿದರೆ, ಅದಕ್ಕೆ ಉತ್ತರವಾಗಿ—

ರಸಾನ್ ರಶ್ಮಿಭಿರಾದಾಯ ವಾಯುನಾಯಂ ಗತಃ ಸಹ ।
ವರ್ಷತ್ಯೇವ ಚ ಯೆಲ್ಲೋಕೇ ತೇನೇಂದ್ರ ಇತಿ ಸ ಸ್ಮೃತಃ ॥

(ಬೃ. ದೇ. ೧-೬೮)

ಇದೇ ಅಗ್ನಿಯು ತನ್ನ ರಶ್ಮಿಗಳಿಂದ ರಸವನ್ನು ಹೀರಿ, ವಾಯುಸಹಿತನಾಗಿ ಪುನಃ ಪೃಥ್ವಿಯಮೇಲೆ ವೃಷ್ಟಿಯನ್ನು ಸುರಿಸುತ್ತಾನೆ. ಆದುದರಿಂದಲೇ ಇಂದ್ರನೆಂದು ಪ್ರಸಿದ್ಧನಾದನು ಎಂದು ಬೃಹದ್ದೇವತೆಯ ವಾಕ್ಯಗಳು ತಿಳಿಸುತ್ತವೆ. ಹೀಗೆ ಶ್ರುತ್ಯಂತರಗಳಲ್ಲಿ ವರ್ಣಿತವಾದ ಅಗ್ನಿಯ ರೂಪಪ್ರಭೇದಗಳು ಋಕ್ಸಂಹಿತಾವಾಕ್ಯಗಳಲ್ಲಿಯೇ ಈ ರೀತಿ ವಿವೃತವಾಗಿವೆ. ಈ ಅಗ್ನಿಯೇ ಅದ್ಯಂತರಹಿತವಾದ ಮೂಲತತ್ತ್ವವು.

ಅಗ್ನಿರಸ್ಮಿ ಜನ್ಮನಾ ಜಾತವೇದಾ ಘೃತಂ ಮೇ ಚಕ್ಷುರಮೃತಂ ಮ ಆಸನ್ ।
ಅರ್ಕಸ್ತ್ರಿಧಾತೂ ರಜಸೋ ವಿಮಾನೋಽಜಸ್ರೋ ಘರ್ಮೋ ಹವಿರಸ್ಮಿ ನಾಮ ॥

(ಋ. ಸಂ. ೩-೨೬-೨)

ತ್ರಿಭಿಃ ಪವಿತ್ರೈರಪುಪೋದ್ಧ್ಯರ್ಕಂ ಹೃದಾ ಮತಿಂ ಜ್ಯೋತಿರನುಪ್ರಜಾನನ್ ।
ವರ್ಷಿಷ್ಠಂ ರತ್ನಮಕೃತ ಸ್ವಧಾಭಿರಾದಿದ್ದ್ಯಾವಾಪೃಥಿವೀ ಪರ್ಯಪಶ್ಯತ್ ॥

(ಋ. ಸಂ. ೩-೨೬-೪)

ನನ್ನ ಸ್ವರೂಪಯೋಗ್ಯತೆಯಿಂದಲೇ ನಾನು ಸಕಲ ವಿಶ್ವವ್ಯವಹಾರಗಳನ್ನೂ ತಿಳಿದವನಾಗಿದ್ದೇನೆ (ಜಾತವೇದನಾಗಿದ್ದೇನೆ). ನನ್ನ ತೇಜಸ್ಸು ಸ್ವಪ್ರಕಾಶಕವೂ, ಜಗತ್ಪ್ರಕಾಶಕವೂ ಆಗಿದೆ. ಜಗತ್ತಿಗೆಲ್ಲ ಚೈತನ್ಯದಾಯಿಯಾದ ಪ್ರಾಣ ರೂಪನಾಗಿ ನನ್ನ ಪ್ರಕೃತಿಯನ್ನು ಮೂರು ವಿಭಾಗಗಳಿಂದ ಪ್ರಸರಿಸಿದ್ದೇನೆ. ಅದು ಹೇಗೆಂದರೆ—

೧) **ರಜಸಃ ವಿಮಾನಃ**—ಅಂತರಿಕ್ಷಕ್ಕೆ ಅಧಿಷ್ಠಾತೃವಾದ ವಾಯು (ಅಥವಾ ಇಂದ್ರ) ರೂಪನು.

೨) **ಅಜಸ್ರೋ ಘರ್ಮಃ**—ಕ್ಷಯರಹಿತವಾದ ಪ್ರಕಾಶಾತ್ಮನಾದ (ದ್ಯುಲೋಕದಲ್ಲಿ) ಆದಿತ್ಯರೂಪನು.

೩) **ಹವಿರಸ್ಮಿ ನಾಮ**—ಪೃಥ್ವಿಯಲ್ಲಿ ಹವಿಸ್ಸಿಗೆ ಪಾತ್ರನಾದ ಅಗ್ನಿರೂಪನು.

ಹೀಗೆ ವಿವೃತವಾದ ಇದೇ ವಿಷಯವನ್ನೇ ಬೃಹದಾರಣ್ಯಕದಲ್ಲೂ ಪ್ರಶಂಸಿಸಿ—

" **ಸ ಕ್ರೇಧಾತ್ಮಾನಂ ವ್ಯಭಜತ ಆದಿತ್ಯಂ ತೃತೀಯಂ ವಾಯುಂ ತೃತೀಯಂ** " (ಬೃ. ಉ. ೧-೨-೩) ಎಂದು ತಿಳಿಸಿದೆ. ಹೀಗೆ ಉಪನಿಷದಾದಿಗಳಲ್ಲಿ ಯಾವ ಅದ್ವಿತೀಯವಾದ ವಿಶ್ವತತ್ತ್ವವನ್ನು ಪರಬ್ರಹ್ಮ, ಪರಂಜ್ಯೋತಿ ಎಂದು ವರ್ಣಿಸಿದೆಯೋ ಅದೇ ಆದಿತತ್ತ್ವವನ್ನು ಋಕ್ಸಂಹಿತೆಯಲ್ಲಿ ಮೇಲೆ ಉದಾಹೃತವಾಗಿರುವ (೨-೨೬-೮) ವಾಕ್ಯಗಳಲ್ಲಿ ಪ್ರಶಂಸಿಸಿದೆ.

ಸರ್ವಾತ್ಮಕನಾದ ಅಗ್ನಿಯು ತನ್ನ ಅಂತಃಕರಣವೃತ್ತಿಯಿಂದ ಪೂಜ್ಯವೂ, ಸ್ವಪ್ರಕಾಶವೂ ಆದ ಪರಬ್ರಹ್ಮಾಖ್ಯವಾದ (ಸಾ. ಭಾ.) ತೇಜಸ್ಸನ್ನು ಅರಿತು ಜಗತ್ಪಾವಕಗಳಾದ ಅಗ್ನಿ, ವಾಯು ಮತ್ತು ಸೂರ್ಯರೂಪಗಳಿಂದ ಕೂಡಿಯೂ ಮತ್ತು ಅವುಗಳಿಂದಲೂ ವೈಶಿಷ್ಟ್ಯವನ್ನು ಹೊಂದಿಯೂ ಪ್ರಕಾಶಿಸುತ್ತಾನೆ. ಇದೇ ಅಗ್ನಿ, ವಾಯು ಮತ್ತು ಸೂರ್ಯರೂಪಗಳಿಂದಲೂ ತನ್ನ ಆತ್ಮಪ್ರಸಾರವನ್ನು ಹೊಂದುತ್ತಾನೆ. ಈ ಸಾಧನಪ್ರಯತ್ನದಿಂದ ಸಕಲ ಜಗತ್ತನ್ನೂ ವೀಕ್ಷಿಸುತ್ತಾನೆ ಎಂದು ಪ್ರಶಂಸಿಸಿರುತ್ತದೆ.

ಈ ಆದಿತತ್ತ್ವವೇ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆಲ್ಲ ಕಾರಣವು. ಈ ಮೂರು ಸ್ವರೂಪಗಳಾವುವೆಂದರೆ—

ಅಸ್ಯ ವಾಮಸ್ಯ ಪಲಿತಸ್ಯ ಹೋತುಸ್ತಸ್ಯ ಭ್ರಾತಾ ಮಧ್ಯಮೋ ಅಸ್ತ್ಯಶ್ನಃ ।
ತೃತೀಯೋ ಭ್ರಾತಾ ಘೃತಪೃಷ್ಠೋ ಅಸ್ಯಾತ್ರಾಪಶ್ಯಂ ವಿಷ್ಪತಿಂ ಸಪ್ತಪುತ್ರಂ ॥

(ಋ. ಸಂ. ೧-೧೬೪-೧)

ವಿಶ್ವಪಾಲಕನಾದ ಆದಿತ್ಯನಿಗೆ ಮಧ್ಯಮಲೋಕದ ವಾಯುವೂ, ಪೃಥಿವೀಸ್ಥನಾದ ಅಗ್ನಿಯೂ ಭ್ರಾತೃಗಳು. ಇವನೇ ವಿಶ್ವಾತ್ಮನು. ವಿಶ್ವಪ್ರಭುವು. ಬ್ರಹ್ಮಾಂಡರೂಪದಲ್ಲಿ ವಿಶ್ವವನ್ನು ಪ್ರಕಾಶಪಡಿಸಿದನು. ತಾನು ಸೃಷ್ಟಿಸಿದ ಜಗತ್ತನ್ನು ತಾನೇ ಪಾಲಿಸುತ್ತಾನೆ. ಪುನಃ ಸಂಹಾರಕ್ರಿಯೆಯಿಂದ ತನ್ನಲ್ಲೇ ಲೀನಮಾಡಿಕೊಳ್ಳುತ್ತಾನೆ. ಇವನೇ ಜಗತ್ತಿಗೆ ಸೂತ್ರಪ್ರಾಯನು. ಕ್ರಿಯಾಭೇದಗಳಿಂದಲೂ, ಸ್ಥಾನಭೇದಗಳಿಂದಲೂ ಇವನಿಗೆ ನಾನಾ ನಾಮಗಳು ಪ್ರಸಿದ್ಧವಾಗಿವೆ. ತನೂನಪಾತ್, ನರಾಶಂಸ, ಮಾತರಿಶ್ವಾ, ವೈಶ್ವಾನರ ಇತ್ಯಾದಿ ನಾಮಗಳೆಲ್ಲವೂ ಇವನ ರೂಪಪ್ರಭೇದಗಳು. ಮೂರು ಲೋಕಗಳಲ್ಲೂ ವ್ಯಾಪಿಸಿರುವುದರಿಂದ ಇವನೇ **ತ್ರಿತ**ನೆಂದೂ, ವ್ಯವಹೃತನಾಗಿದ್ದಾನೆ. **ತ್ರಿಷು ಸ್ಥಾನೇಷು ವರ್ತಮಾನಃ ತ್ರಿತಃ** ಎಂದು ಈ ಪದದ ಅರ್ಥವನ್ನು ತಿಳಿಸಿದೆ. (ತ್ರಿತಶಬ್ದಸೂಚಿತವಾದ ಋಷಿಯ ವಿಷಯವನ್ನು ಹಿಂದೆ ಋಗ್ವೇದಸಂಹಿತಾ ೮ನೆಯ ಭಾಗದಲ್ಲಿ ತಿಳಿಸಿದೆ.)

ತ್ರಿತರೂಪನಾದ ಅಗ್ನಿಗೆ ಮೂರು ಬಂಧನಗಳಿರುತ್ತವೆ. ಸಳು ಹೇಪತೆಗಳೂ ಇವನ ಪ್ರಭೇದಗಳು.

ಅಸಿ ಯಮೋ ಅಸ್ಯಾದಿತ್ಯೋ ಅರ್ವನ್ನಸಿ ತ್ರಿತೋ ಗುಹ್ಯೇನ ವ್ರತೇನ ।
ಅಸಿ ಸೋಮೇನ ಸಮಯಾ ವಿಪೃಕ್ತ ಆಹುಸ್ತೇ ತ್ರೀಣಿ ದಿವಿ ಬಂಧನಾನಿ ॥

(ಋ. ಸಂ. ೧-೧೬೩-೩)

ವಾರುಣಾಶ್ವರೂಪನಾದ (ವಿದ್ಯುದ್ರೂಪದ) ಅಗ್ನಿಯೇ ವಾಯ್ವಾತ್ಮಕನು. ಅವನೇ ಆದಿತ್ಯರೂಪನು. ಇವನಿಗೆ ದ್ಯುಲೋಕದಲ್ಲಿ ಮೂರು ವಿಧವಾದ ಬಂಧನಗಳಿರುತ್ತವೆ. ಈ ಬಂಧನದ ಪ್ರಕಾರಗಳೇನು ಎಂಬುದನ್ನು ಹಿಂದೆ ೧೧ನೆಯ ಭಾಗದ ೨೪-೪೩ನೆಯ ಪುಟಗಳಲ್ಲಿ ವಿವರಿಸಿದೆ. ಮೂರು ಲೋಕಗಳಲ್ಲಿಯೂ ಮೂರು ವಿಧವಾದ ಬಂಧನಗಳು ಎಂಬ ಪ್ರಶಂಸೆಯೂ ಇರುತ್ತದೆ. ದ್ಯುಲೋಕದ ಮೂರು ವಿಧವಾದ ಬಂಧನವಿರುವಂತೆಯೇ, ಪೃಥ್ವಿಯಲ್ಲಿ ಅನ್ನ, ಸ್ಥಾನ ಮತ್ತು ಬೀಜವೆಂಬ ಮೂರು ವಿಧವಾದ ಬಂಧನವೂ, ಅಂತರಿಕ್ಷದಲ್ಲಿ ವೃಷ್ಟ್ಯುತ್ಪತ್ತಿಗೆ ಕಾರಣವಾದ ಮೇಘ, ಮಿಂಚು, ಗುಡುಗು ಎಂಬ ಮೂರು ವಿಧವಾದ ಬಂಧನವೆಂದೂ ಭಾಷ್ಯವು ತಿಳಿಸುತ್ತದೆ. ಹೀಗೆ ಸಕಲವಾದ ವಿಶ್ವಕ್ಕೂ ಕಾರಣನಾದುದರಿಂದಲೇ ಅಗ್ನಿಯು ಎಲ್ಲಕ್ಕೂ ನಾಭಿರೂಪನಾಗಿದ್ದಾನೆ. ಈ ವಿಷಯವನ್ನು ಮುಂದೆ ೧೦-೫೧-೫೨ನೆಯ ಸೂಕ್ತಗಳ ವಿಶೇಷವಿಷಯಗಳಲ್ಲಿ ವಿವರಿಸಲಾಗುತ್ತದೆ. ಅಗ್ನಿ ಶುಚಿ, ಅಗ್ನಿ ಪವಮಾನ ಮತ್ತು ಅಗ್ನಿ ಪಾವಕ ಇತ್ಯಾದಿ ರೂಪನಿರ್ದೇಶಗಳಿಂದ ಆಚರಿಸುವ ಕ್ರಿಯೆ ಮತ್ತು ಅವುಗಳ ಮಹತ್ತ್ವದ ಸ್ವರೂಪ ಇವುಗಳ ವಿಷಯವನ್ನು ತಿಳಿಯುವುದು ಪ್ರಕೃತದಲ್ಲಿ ಉಚಿತವಾಗುತ್ತದೆ. ಮೂರು ಲೋಕಗಳಲ್ಲೂ ಈ ಮೂರು ರೂಪಗಳಿಂದ ಪ್ರಕಾಶಿಸುವ ಅಗ್ನಿಯನ್ನು ಅಗ್ನಿ ಪವಮಾನ, ಅಗ್ನಿ ಶುಚಿ ಮತ್ತು ಅಗ್ನಿ ವನಸ್ಪತಿಯೆಂದು ಮೇಲೆ ತಿಳಿಸಿದೆ. ಅದನ್ನೇ ತೈತ್ತಿರೀಯ ಸಂಹಿತೆಯಲ್ಲಿ ಅಗ್ನಿ ಪವಮಾನ, ಅಗ್ನಿ ಶುಚಿ ಮತ್ತು ಅಗ್ನಿ ಪಾವಕ ಎಂದು ಕರೆದಿದೆ. ಈ ಮೂರು ರೂಪಗಳಿಂದ ನಿರ್ದೇಶಿಸಿ, ಮೂರು ವಿಧವಾಗಿ ಆಹುತಿಗಳನ್ನರ್ಪಿಸಿದರೆ ಮಾತ್ರ ಪೂರ್ಣರೂಪನಾದ ಅಗ್ನಿಗೆ ಪೂರ್ಣವಾದ ತೃಪ್ತಿಯು ಎಂದು ಈ ಕ್ರಿಯೆಗಳ ಆಧ್ಯಾತ್ಮಿಕ ಮತ್ತು ಆಧಿದೈವಿಕವಾದ ಮಹತ್ತ್ವವನ್ನು ತೈತ್ತಿರೀಯಸಂಹಿತೆಯಲ್ಲಿಯೂ ಮತ್ತು ಶತಪಥಬ್ರಾಹ್ಮಣದಲ್ಲಿಯೂ ತಿಳಿಸಿದೆ.

ಅಗ್ನಯೇ ಪವಮಾನಾಯ ಪುರೋಡಾಶಮಷ್ಟಾಕಪಾಲಂ ನಿರ್ವಪೇದಗ್ನಯೇ ಪಾವಕಾ-
ಯಾಗ್ನಯೇ ಶುಚಯೇ ಜ್ಯೋಗಾಮಯಾವೀ ಯೆದಗ್ನಯೇ ಪವಮಾನಾಯ . . . . ॥

(ತೈ. ಸಂ. ೨-೨-೪-೨)

ಇತ್ಯಾದಿ ವಾಕ್ಯಗಳಲ್ಲಿ ಮೂರು ರೂಪದ ಅಗ್ನಿಯನ್ನು ಉದ್ದೇಶಿಸಿ ಅರ್ಪಿತವಾಗಬೇಕಾದ ಹವಿಸ್ಸುಗಳ ಮತ್ತು ಈ ಯಾಗದ ಮಹತ್ತ್ವ ಇವನ್ನು ಪ್ರಶಂಸಿಸಿದೆ. **ಪವಮಾನ, ಪಾವಕ** ಮತ್ತು **ಶುಚಿ** ಎಂಬ ವಿಭಾಗಗಳು ಪಾರ್ಥಿವವಾದ ಯಜ್ಞಾಗ್ನಿಯ ವಿಭಾಗಗಳಾದರೂ ಆಗಬಹುದು. ಅದು ಹೇಗೆಂದರೆ, ಪ್ರಜಾಪತಿರೂಪನಾದ ಅಗ್ನಿಯ ಈ ಮೂರು ರೂಪಗಳ ನಿಜವಾದ ರಹಸ್ಯವೇನು ಎಂಬ ವಿಷಯದಲ್ಲಿ ತೈತ್ತಿರೀಯ ಮತ್ತು ಶತಪಥಬ್ರಾಹ್ಮಣವಾಕ್ಯಗಳು ಒಂದೆರಡು ವಿವರಣೆಗಳನ್ನು ತಿಳಿಸುತ್ತವೆ.

ಪ್ರಜಾಪತಿರ್ವಾಚಸ್ಸತ್ಯಮಪಶ್ಯತ್ । ತೇನಾಗ್ನಿಮಾಧತ್ತ । ತೇನ ವೈ ಸ ಅರ್ಧ್ನೋತ್ । ಭೂರ್ಭುವಸ್ಸುವರಿತ್ಯಾಹ । ಏತದ್ವೈ ವಾಚಸ್ಸತ್ಯಂ । ಯ ಏತೇನಾಗ್ನಿಮಾಧತ್ತೇ । ಋಧ್ನೋತ್ಯೇವ । ಅಥೋ ಸತ್ಯೆಷ್ಠಾಶೂರೇವ ಭವತಿ । ಅಥೋ ಯ ಏವಂ ವಿದ್ವಾನಭಿಚರತಿ । ಸ್ತೃಣುತ ಏನೈನಂ । ಭೂರಿತ್ಯಾಹ । ಪ್ರಜಾ ವಾ ಏವ ತದ್ಯಜಮಾನಸ್ಸೃಜತೇ । ಭುವ ಇತ್ಯಾಹ । ಅಸ್ಮಿನ್ನೇವ ಲೋಕೇ ಪ್ರತಿ ತಿಷ್ಠತಿ । ಸುವರಿತ್ಯಾಹ । ಸುವರ್ಗ ಏವ ಲೋಕೇ

ಪ್ರತಿತಿಷ್ಠತಿ । ತ್ರಿಭಿರಷ್ಟಕೈರ್ಗಾರ್ಹಪತ್ಯಮಾದಧಾತಿ । ತ್ರಯ ಇಮೇ ಲೋಕಾಃ । ಏಷ್ವೇವೈನಂ ಲೋಕೇಷು ಪ್ರತಿಷ್ಠಿತಮಾಧತ್ತೇ । . . . .

(ತೈ. ಬ್ರಾ. ೧-೧-೫-೧, ೨)

ಪ್ರಜಾಪತಿಗೆ ವಾಕ್ಸಂಬಂಧಿಯಾದ ಸತ್ಯದ ದರ್ಶನವಾಯಿತು. ಅನಂತರ ಅಭಿಮತಸಾಧನವಾದ ಆ ಸತ್ಯರೂಪದಿಂದ ಅಗ್ನ್ಯಾಧಾನವನ್ನು ಕಲ್ಪಿಸಿ ಭೂಃ, ಭುವಃ, ಸ್ವಃ ಎಂಬ ಕಲ್ಯಾಣಾತ್ಮಕವಾದ ತತ್ತ್ವಗಳನ್ನು ನಿರ್ಮಿಸಿದನು. ಇವರಿಂದ ಸತ್ಯಪರಾಕ್ರಮಿಯಾದನು. (ಅಥವಾ ಈ ಸತ್ಯದಿಂದಲೇ ತಾನೂ ಪುಷ್ಟನಾದನು) ಈ ಸತ್ಯದ ಪ್ರಸಾರಕ್ಕೆ ಯಾರು ವಿಘ್ನವನ್ನುಂಟುಮಾಡಿ ಹಿಂಸಿಸುವರೋ, ಖಂಡಿತ ಅವರೇ ಹಿಂಸಿತರಾಗುತ್ತಾರೆ. ಅವರಿಗೆ ಖಂಡಿತ ಶ್ರೇಯಸ್ಸಿಲ್ಲ.

ಗಾರ್ಹಪತ್ಯಾದ್ಯಗ್ನಿಗಳೇ, ಈ ಭೂರಾದಿ ಲೋಕಗಳನ್ನು ಪ್ರತಿಬಿಂಬಿಸುವ ತತ್ತ್ವಗಳು. ಇವೆಲ್ಲವೂ ವಾಗ್ರೂಪವಾದ ಸತ್ಯವು. ಇವೆಲ್ಲವೂ ಪ್ರಜಾಪತಿಯಿಂದ ನಿರ್ಮಿತವಾದವು ಮತ್ತು ಪ್ರಜಾಪತಿಯ ಅಂಶಗಳೇ ಆಗಿರುತ್ತವೆ.

ಪ್ರಜಾಪತಿಃ ಪ್ರಜಾ ಅಸೃಜತ । . . . . ಸಾ ವಿರಾಡಭವತ್ । ತಂ ದೇವಸುರಾ ವ್ಯಗೃಹ್ಣತ । ಸೋಽಬ್ರವೀತ್ಪ್ರಜಾಪತಿಃ । ಮಮ ವಾ ಏಷಾ ।

(ತೈ. ಬ್ರಾ. ೧-೧-೧೦-೧)

ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನು. ಆಗ ತನ್ನ ವೀರ್ಯವು ಕೊಂಚ ಕುಂದಲು ತಪಸ್ಸನ್ನಾಚರಿಸಿದನು. ಆಗ ಆ ವೀರ್ಯವು ಅಗ್ನಿಯ ರೂಪಗಳಾದವು. ಆಗ ದೇವಾಸುರರೆಲ್ಲರೂ ಅದನ್ನು ಸ್ಪರ್ಧೆಯಿಂದ ಹಿಡಿಯಲು ಆರಂಭಿಸಿದರು. ಆಗ ಪ್ರಜಾಪತಿಯು ಈ ವಿರಾಟ್‌ಸಂಜ್ಞಕವಾದ ಅಗ್ನಿಯೂ ಅಗ್ನಿಯ ಮೂಲರೂಪಗಳೂ ನನಗೆ ಸೇರಿದವು. ಈ ಮೂಲರೂಪದಿಂದ ವಿಕೃತಿಹೊಂದಿದ ಅಗ್ನಿಯ ರೂಪಗಳು ನಿಮಗೆ ಸೇರಿದವು ಎಂದು ಹೇಳಿದನು. ಆದುದರಿಂದ ಅಗ್ನಿಯ ಮೂಲರೂಪಗಳು ಪ್ರಜಾಪತಿಯ ಅಂಶವೆಂದಾದವು. ಇವು ಮೂರು ಬಗೆ. ಇದರ ಸ್ವರೂಪಗಳಾವುವೆಂದರೆ ಅಥವಾ ಮೂರು ರೂಪಗಳನ್ನು ಹೊಂದಲು ಕಾರಣವೇನೆಂದರೆ ಅದನ್ನು ಇತಿಹಾಸರೂಪದಲ್ಲಿ ಈ ರೀತಿ ತಿಳಿಸಿದೆ.

ದೇವಾಸುರಾಸ್ಸಂಯುಕ್ತಾ ಆಸನ್ । ತೇ ದೇವಾ ವಿಜಯಮುಪಯಂತಃ । ಅಗ್ನೌ ವಾಮಂ ವಸು ಸಂನ್ಯದಧತ । ಇದಮು ನೋ ಭವಿಷ್ಯತಿ । ಯದಿ ನೋ ಜೇಷ್ಯಂತೀತಿ । ತದಗ್ನಿರ್ನೋಽಥ್ಸಹಮಶಕ್ನೋತ್ । ತತ್ತ್ರೇಧಾ ವಿನ್ಯದಧಾತ್ । ಪಶುಷು ತೃತೀಯಂ । ಅಪ್ಸು ತೃತೀಯಂ । ಆದಿತ್ಯೇ ತೃತೀಯಂ ।

(ತೈ. ಬ್ರಾ. ೧-೧-೬-೧)

ದೇವತೆಗಳೂ, ಅಸುರರೂ ಹೋರಾಡತೊಡಗಿದರು. ಆಗ ದೇವತೆಗಳಿಗೆ ವಿಜಯವಾಯಿತು. ಅವರು ಅಸುರರಿಂದ ಜಯಿಸಿದ ಸಂಪತ್ತನ್ನು ಅಗ್ನಿಯಲ್ಲಿ ನಿಕ್ಷೇಪ ಮಾಡಿದರು. ಆಗ ಅಗ್ನಿಗೆ ಅಷ್ಟನ್ನೂ ಹೊರಲಾಗಲಿಲ್ಲ. ಆಗ ಅದನ್ನು ಮೂರು ಭಾಗ ಮಾಡಿ ಮೂರು ಸ್ಥಾನಗಳಲ್ಲಿರಿಸಿದನು. ಪಶ್ವಾದಿಗಳಲ್ಲಿ ಒಂದುಭಾಗವನ್ನೂ, ಉದಕಗಳಲ್ಲಿ ಇನ್ನೊಂದು ಭಾಗವನ್ನೂ, ಆದಿತ್ಯನಲ್ಲಿ ಉಳಿದ ಮೂರನೆಯ ಭಾಗವನ್ನೂ ಸ್ಥಾಪಿಸಿದನು.

ತದ್ದೇವಾ ವಿಜಿತ್ಯ । ಪುನರವಾರುರುಥ್ಸಂತ । ತೇಽಗ್ನಯೇ ಪವಮಾನಾಯ ಪುರೋಡಾಶಮಷ್ಟಾಕಪಾಲಂ ನಿರವಪನ್ । ಪಶವೋ ವಾ ಅಗ್ನಿಃ ಪವಮಾನಃ । ಯದೇವ ಪಶುಷ್ವಾ-

ಸೀತ್ । ತತ್ತ್ವೇನಾವಾರುಂಧತ । ತೇಽಗ್ನಯೇ ಪಾವಕಾಯ । ಅಪೋ ವಾ ಅಗ್ನಿಃ ಪಾವಕಃ । ಯದೇವಾಪ್ಸ್ವಸೀತ್ । ತತ್ತ್ವೇನಾವಾರುಂಧತ । ತೇಽಗ್ನಯೇ ಶುಚಯೇ । ಅಸೌ ವಾ ಆದಿತ್ಯೋಽಗ್ನಿಶ್ಶುಚಿಃ । ಯದೇವಾದಿತ್ಯ ಅಸೀತ್ । ತತ್ತ್ವೇನಾವಾರುಂಧತ ।

(ತೈ. ಬ್ರಾ. ೧-೧-೬-೨, ೩)

ಹೀಗೆ ವಿಭಕ್ತವಾದ ಸಂಪತ್ತನ್ನು ದೇವತೆಗಳು ಪುನಃ ಪಡೆಯಲು ಇಚ್ಛಿಸಿದರು. ಆಗ ಅಗ್ನಿಪವಮಾನವನ್ನು ದ್ದೇಶಿಸಿ ಅಷ್ಟಾಕಪಾಲಾತ್ಮಕವಾದ ಪುರೋಡಾಶವನ್ನು ಅರ್ಪಿಸಿದರು. ಯಾವ ಪಶುಗಳಲ್ಲಿ ಅಗ್ನಿಯು ಮೂರನೆಯ ಒಂದು ಭಾಗದ ಧನವನ್ನು ಸ್ಥಾಪಿಸಿದ್ದನೋ, ಆದೇ ಪಶುಗಳೇ ಅಗ್ನಿಪವನಾತ್ಮಕಗಳಾಗಿದ್ದುವು. ಆದುದರಿಂದ ಅಗ್ನಿಪವಮಾನನಿಗೆ ಹವಿಸ್ಸನ್ನರ್ಪಿಸಿ ಅಲ್ಲಿದ್ದ ಸಂಪತ್ತನ್ನು ಪಡೆದರು. ಹಾಗೆಯೇ ಅಗ್ನಿಪಾವಕನಿಗೂ ಅರ್ಪಿಸಿದರು. ದೋಷವನ್ನು ನಾಶಮಾಡಿ ಉದಕವು ಪರಿಶುದ್ಧಿಯನ್ನುಂಟುಮಾಡುತ್ತದೆ. ಈ ಉದಕವೇ ಅಗ್ನಿಪಾವಕಸಂಜ್ಞಕವು. ಆದುದರಿಂದ ಅಗ್ನಿಪಾವಕನಲ್ಲಿ ಸ್ಥಾಪಿಸಿದ್ದ ಸಂಪತ್ತನ್ನು ಪಡೆದರು. ಹಾಗೆಯೇ ಅಗ್ನಿಶುಚಿಗೂ ಅರ್ಪಿಸಿದರು. ಆದಿತ್ಯನೇ ಅಗ್ನಿಶುಚ್ಯಾತ್ಮಕನು. ಆದುದರಿಂದ ಆದಿತ್ಯನಲ್ಲಿ ನಿಕ್ಷಿಪ್ತವಾಗಿದ್ದ ಮೂರನೆಯ ಒಂದು ಭಾಗವನ್ನೂ ಪಡೆದರು. ಆದುದರಿಂದಲೇ ಹವಿಸ್ಸಿನ ಅರ್ಪಣವು ಮೂರು ವಿಧವಾಗಿರುತ್ತದೆ. ಈ ಮೂರು ವಿಧವಾದ ಅರ್ಪಣವೂ ಅಗ್ನಿಯ ಮೂರು ಮೂಲರೂಪಗಳಿಗನುಗುಣವಾಗಿರುತ್ತವೆ. ಹೇಗೆಂದರೆ—

ತ್ರೀಣಿ ಹವೀಗ್ಂಷಿ ನಿರ್ವಪತಿ । ವಿರಾಜ ಏವ ವಿಕ್ರಾಂತಂ ಯಜಮಾನೋಽನು ವಿಕ್ರಮತೇ । ಅಗ್ನಯೇ ಪವಮಾನಾಯ । ಅಗ್ನಯೇ ಶುಚಯೇ । ಯದಗ್ನಯೇ ಪವಮಾನಾಯ ನಿರ್ವಪತಿ । ಪುನಾತ್ಯೇವೈನಂ । ಯದಗ್ನಯೇ ಪಾವಕಾಯ । ಪೂತವಿವಾಸ್ಮಿನ್ನನ್ನಾದ್ಯಂ ದಧಾತಿ । ಯದಗ್ನಯೇ ಶುಚಯೇ । ಬ್ರಹ್ಮವರ್ಚಸಮೇವಾಸ್ಮಿನ್ನುಪರಿಷ್ಟಾದ್ದಧಾತಿ ।

(ತೈ. ಬ್ರಾ. ೧-೧-೫-೧೦)

ಅಗ್ನಿಪವಮಾನ, ಅಗ್ನಿಪಾವಕ ಮತ್ತು ಅಗ್ನಿಶುಚಿ ಎಂಬ ಮೂರು ರೂಪಗಳಲ್ಲಿ ವಿಭಕ್ತನಾದ ವಿರಾಡ್ರೂಪನಾದ ಅಗ್ನಿಯನ್ನುದ್ದೇಶಿಸಿ ಮೂರು ವಿಧವಾದ ಹವಿಸ್ಸುಗಳನ್ನರ್ಪಿಸಿದರೆ ಆಗ ಯಜಮಾನನು ಸರ್ವವ್ಯಾಪಕವಾದ ಶಕ್ತಿಯನ್ನು ಹೊಂದುತ್ತಾನೆ. ಅಗ್ನಿಪವಮಾನನಿಗೆ ಹವಿಸ್ಸನ್ನರ್ಪಿಸಿದುದರ ಫಲವಾಗಿ ಯಜಮಾನನಿಗೆ ಶುದ್ಧಿಯು ಲಭಿಸುತ್ತದೆ. ಅಗ್ನಿಪಾವಕನಿಗೆ ಅರ್ಪಿಸಿದುದರ ಫಲವಾಗಿ ಪೂತನಾದ ಯಜಮಾನನು ಅನ್ನಾದನಸಾಮರ್ಥ್ಯವನ್ನು ಹೊಂದುತ್ತಾನೆ. ಅಗ್ನಿಶುಚಿಗೆ ಅರ್ಪಿಸಿದ ಫಲವಾಗಿ ಬ್ರಹ್ಮವರ್ಚಸ್ಸನ್ನು ಹೊಂದುತ್ತಾನೆ. ೧) ಶುದ್ಧಿ, ೨) ಅನ್ನ, (ಪ್ರಜಾ ಮತ್ತು ಪಶ್ವಾದಿಗಳ ಸಂಪಾದನಸಾಮರ್ಥ್ಯ) ಮತ್ತು ೩) ಬ್ರಹ್ಮವರ್ಚಸ್ ಎಂಬ ಮೂರು ವಿಧವಾದ ವಿಕ್ರಾಂತಿಗಳು ಯಜಮಾನನಿಗೆ ಲಭಿಸುತ್ತವೆ.

ತೈ. ಬ್ರಾ. ೧-೧-೧೦ ರಲ್ಲು ಸಾಯಣರು **ಪವಮಾನ**ನೆಂಬುದಕ್ಕೆ ಸ್ವಯಂಶುದ್ಧನೆಂದೂ, **ಪಾವಕ**ನೆಂಬುದಕ್ಕೆ ಇತರರನ್ನು ಶುದ್ಧಿಗೊಳಿಸುವವನೆಂದೂ ಮತ್ತು **ಶುಚಿ**ಯೆಂಬುದಕ್ಕೆ ಪ್ರಕಾಶಮಾನನೆಂದೂ ತಾತ್ಪರ್ಯವನ್ನು ಹೇಳಿದ್ದಾರೆ.

ಈ ಮೂರು ರೂಪಗಳುಳ್ಳ ಅಗ್ನಿಯನ್ನುದ್ದೇಶಿಸಿ ಹವಿಸ್ಸನ್ನು ಅರ್ಪಿಸುವ ಕ್ರಮವನ್ನೂ, ಈ ಅರ್ಪಣವು ಆಯಾ ಮೂಲರೂಪಗಳ ಸ್ವರೂಪಕ್ಕನುಗುಣವಾಗಿರಬೇಕೆಂಬುದನ್ನೂ, ಆಯಾ ಅರ್ಪಣದ ಫಲವನ್ನೂ ಶಥಪಥ ಬ್ರಾಹ್ಮಣದಲ್ಲಿ ಈ ರೀತಿ ಹೇಳಿರುತ್ತದೆ. ಪ್ರಕೃತದಲ್ಲಿ ಹವಿರರ್ಪಣದ ವಿಧ್ಯುಕ್ತವಾದ ಕ್ರಮದ ವಿವರಣವು ಅಪ್ರಕೃತ.

ಈ ವಿಧಿಯು ಅಗ್ನಿಯ ಮೂಲಭೂತವಾದ ರೂಪಗಳ ವಿಷಯದಲ್ಲಿ ಯಾವ ವಿವರಣವನ್ನು ಹೇಳುತ್ತದೆ ಎಂಬುದನ್ನು ಪರಿಶೀಲಿಸುವುದೇ ಮುಖ್ಯ ಉದ್ದಿಶ್ಯವಾಗಿರುತ್ತದೆ.

ಸ ವಾ ಅಗ್ನಯೇ ಪವಮಾನಾಯ ನಿರ್ವಪತಿ । ಪ್ರಾಣೋ ವೈ ಪವಮಾನಃ ಪ್ರಾಣಮೇವಾಸ್ಮಿನ್ನೇತದ್ದಧಾತಿ । ತದ್ಧೇತಯೈವಾಸ್ಮಿಂಸ್ತದ್ದಧಾತಿ ಅನ್ನಗ್ಂ ಹಿ ಪ್ರಾಣೋಽನ್ನಮೇಷಾಹುತಿಃ ॥

(ಶ. ಬ್ರಾ. ೨-೨-೧-೬)

ಪವಮಾನಾತ್ಮಕನಾದ ಅಗ್ನಿಯು ಪ್ರಾಣರೂಪನು. ಅಗ್ನಿ ಪವಮಾನನಿಗೆ ಹವಿಸ್ಸನ್ನರ್ಪಿಸುವುದರಿಂದ ಯಜಮಾನನಲ್ಲಿ ಪ್ರಾಣವನ್ನು ಸ್ಥಾಪಿಸಿದಂತಾಗುತ್ತದೆ. ಅನ್ನವೇ ಪ್ರಾಣಾಧಾರವು ಮತ್ತು ಪ್ರಾಣರೂಪವು. ಆದುದರಿಂದ ಈ ಹವಿಸ್ಸನ್ನು ಅರ್ಪಿಸುವುದರಿಂದ ಪ್ರಾಣವನ್ನು ಸ್ಥಾಪಿಸುತ್ತಾನೆ.

ಅಥಾಗ್ನಯೇ ಪಾವಕಾಯ ನಿರ್ವಪತಿ । ಅನ್ನಂ ವೈ ಪಾವಕಮನ್ನಮೇವಾಸ್ಮಿನ್ನೇತದ್ದಧಾತಿ ತದ್ಧೇತಯೈವಾಸ್ಮಿಂಸ್ತದ್ದಧಾತ್ಯೇಷಾಹ್ಯೇವ ಪ್ರತ್ಯಕ್ಷಮನ್ನಮಾಹುತಿಃ ॥

(ಶ. ಬ್ರಾ. ೨-೨-೧-೭)

ಅನಂತರ ಶುದ್ಧಿಕಾರಕನಾದ **ಅಗ್ನಿ ಪಾವಕ**ನನ್ನುದ್ದೇಶಿಸಿ ಹವಿಸ್ಸನ್ನರ್ಪಿಸುತ್ತಾನೆ. ಅನ್ನವೇ ಶುದ್ಧಿಕಾರಕವು. ಈ ಹವಿಸ್ಸನ್ನರ್ಪಿಸುವುದರಿಂದ ಯಜಮಾನನಲ್ಲಿ ಅನ್ನವನ್ನು ಸ್ಥಾಪಿಸಿದಂತಾಯಿತು. ಶುದ್ಧಿಕಾರಕವಾದ ಈ ಅನ್ನವನ್ನು ಈ ಹವಿರರ್ಪಣದ ಮೂಲಕ ಸ್ಥಾಪಿಸುತ್ತಾನೆ.

ಅಥಾಗ್ನಯೇ ಶುಚಯೇ ನಿರ್ವಪತಿ । ವೀರ್ಯಂ ವೈ ಶುಚಿ ಯದ್ವಾ ಅಸ್ಯೈತದುಜ್ಜ್ವಲತ್ಯೇತದಸ್ಯ ವೀರ್ಯಗ್ಂ ಶುಚಿ ವೀರ್ಯಮೇವಾಸ್ಮಿನ್ನೇತದ್ದಧಾತಿ . . . . . ಅಥಾಸ್ಯೇತದ್ವೀರ್ಯಗ್ಂ ಶುಚ್ಯುಜ್ಜ್ವಲತಿ ॥

(ಶ. ಬ್ರಾ. ೨-೨-೧-೮)

ಅನಂತರ **ಅಗ್ನಿ ಶುಚಿಗೆ** ಹವಿಸ್ಸನ್ನರ್ಪಿಸುತ್ತಾನೆ. ಪ್ರಕಾಶಮಾನನಾದ ಅಗ್ನಿ ಶುಚಿಯೇ ವೀರ್ಯರೂಪನಾದುದರಿಂದ ಈ ಹವಿಸ್ಸನ್ನು ಅರ್ಪಿಸುವುದರ ಫಲವಾಗಿ ಯಜಮಾನನಲ್ಲಿ ವೀರ್ಯವನ್ನು ಸ್ಥಾಪಿಸಿದಂತೆ ಆಗುತ್ತದೆ.

ಇತ್ಯಾದಿ ವಿಧಿಗಳು ಅಗ್ನಿಯ ಪವಮಾನತ್ವ, ಪಾವಕತ್ವ ಮತ್ತು ಶುಚಿತ್ವ ಎಂಬ ಮೂರು ರೂಪಗಳನ್ನೂ, ಈ ರೂಪಗಳನ್ನು ಆರಾಧಿಸುವುದರಿಂದ ಯಜಮಾನನಿಗೆ ಲಭಿಸತಕ್ಕ ಫಲಗಳನ್ನೂ ತಿಳಿಸುತ್ತವೆ.

ಅಗ್ನಿರ್ಹ ಯತ್ರ ದೇವೇಭ್ಯೋ ಮನುಷ್ಯಾನಭ್ಯುಪಾವವರ್ತ ತದ್ಧೇಷ್ಟಾಂಚಕ್ರೇ ಮೈವ ಸರ್ವೇ ಏವಾತ್ಮನಾ ಮನುಷ್ಯಾನಭ್ಯುಪಾವೃತಮಿತಿ ।

(ಶ. ಬ್ರಾ. ೨-೨-೧-೧೩)

ಅಗ್ನಿಯು ದೇವತೆಗಳ ಸಮೂಹದಿಂದ ಮಾನವರಲ್ಲಿಗೆ ಬಂದು ಸೇರುವಾಗ " ನಾನು ನನ್ನ ಪೂರ್ಣವಾದ ರೂಪದೊಂದಿಗೆ ಹೋಗಲಾಗುವುದಿಲ್ಲ " ಎಂದು ಯೋಚಿಸಿದನು.

ಸ ಏತಾಸ್ತಿಸ್ರಸ್ತನೂರೇಷು ಲೋಕೇಷು ವಿನ್ಯಧತ್ತ । ಯದಸ್ಯ ಪವಮಾನಗ್ಂ ರೂಪಮಾಸೀತ್ತದಸ್ಯಾಂ ಪೃಥಿವ್ಯಾಂ ನ್ಯಧತ್ತಾಥ ಯತ್ಪಾವಕಂ ತದಂತರಿಕ್ಷೇ೨ಥ ಯಚ್ಛುಚಿ ತದ್ದಿವಿ ತದ್ವಾ ಋಷಯಃ ಪ್ರತಿಬುಬುಧಿರೇ ಯ ಉ ತಹ್ಯೃಷಯ ಆಸುರಸರ್ವೇಣ ವೈ ನ ಆತ್ಮನಾಗ್ನಿರಭ್ಯುಪಾವೃತದಿತಿ ತಸ್ಮಾ ಏತಾನಿ ಹವೀಗ್ಂಷಿ ನಿರವಪನ್ ॥

(ಶ. ಬ್ರಾ. ೨-೨-೧-೧೪)

ಆಗ ಅಗ್ನಿಯು ಮೂರು ಲೋಕಗಳಲ್ಲೂ ತನ್ನ ಮೂರು ರೂಪಗಳನ್ನು ಸ್ಥಾಪಿಸಿದನು. **ಪವಮಾನ**ರೂಪವನ್ನು ಪೃಥ್ವಿಯಲ್ಲಿಯೂ, ಶುದ್ಧಿಕಾರಕವಾದ **ಪಾವಕ**ರೂಪವನ್ನು ಅಂತರಿಕ್ಷದಲ್ಲಿಯೂ, ಪ್ರಕಾಶಮಾನವಾದ **ಶುಚಿ** ರೂಪವನ್ನು ದ್ಯುಲೋಕದಲ್ಲಿಯೂ ಸ್ಥಾಪಿಸಿದನು. ಆಗ ಆ ಕಾಲದಲ್ಲಿದ್ದ ಋಷಿಗಳು ಅಗ್ನಿಯ ಈ ವಿಭಾಗವನ್ನರಿತು, " ಅಗ್ನಿಯು ನಮ್ಮಲ್ಲಿಗೆ ಪೂರ್ಣರೂಪದಿಂದ ಬಂದಿಲ್ಲ " ಎಂದು ತಿಳಿದು **ಈ** ಪೂರ್ಣಾಹುತಿಯನ್ನು ಅರ್ಪಿಸುವ ಆವಶ್ಯಕತೆಯನ್ನು ಅರಿತರು.

ಸ ಯದಗ್ನಯೇ ಪವಮಾನಾಯ ನಿರ್ವಪತಿ । ಯದೇವಾಸ್ಯಾಸ್ಯಾಂ ಪೃಥಿವ್ಯಾಗ್ಂ ರೂಪಂ ತದೇವಾಸ್ಯೈತೇನಾಪ್ನೋತ್ಯಥ ಯದಗ್ನಯೇ ಪಾವಕಾಯ ನಿರ್ವಪತಿ ಯದೇವಾಸ್ಯಾಂತರಿಕ್ಷೇ ರೂಪಂ ತದೇವಾಸ್ಯೈತೇನಾಪ್ನೋತ್ಯಥ ಯದಗ್ನಯೇ ಶುಚಯೇ ನಿರ್ವಪತಿ ಯದೇವಾಸ್ಯ ದಿವಿ ರೂಪಂ ತದೇವಾಸ್ಯೈತೇನಾಪ್ನೋತ್ಯೇವಮು ಕೃತ್ಸ್ನಮೇವಾಗ್ನಿಮನಪನಿಹಿತಮಾದತ್ತೇ ತಸ್ಮಾದು ನಿರ್ವಪೇದೇವೋತ್ತರಾಣಿ ಹವೀಗ್ಂಷಿ ॥

(ಶ. ಬ್ರಾ. ೨-೨-೧-೧೫)

ಅದೇ ರೀತಿಯಲ್ಲಿ ಹವಿಸ್ಸನ್ನರ್ಪಿಸಿದಾಗ ಅದರ ಫಲವನ್ನು ಅರಿತರು. ಅಗ್ನಿ ಪವಮಾನನ್ನುದ್ದೇಶಿಸಿ ಹವಿಸ್ಸನ್ನರ್ಪಿಸಿದರೆ, ಪೃಥ್ವಿಯಲ್ಲಿ ಸ್ಥಾಪಿತವಾಗಿರುವ ಅಗ್ನಿರೂಪವನ್ನು ಹೊಂದುತ್ತಾನೆ. ಅಗ್ನಿ ಪಾವಕನನ್ನುದ್ದೇಶಿಸಿ ಹವಿಸ್ಸನ್ನರ್ಪಿಸಿದರೆ, ಅಂತರಿಕ್ಷದಲ್ಲಿ ಪ್ರಸರಿಸಿರುವ ಅಗ್ನಿಯ ರೂಪವನ್ನು ಯಜಮಾನನು ಹೊಂದುತ್ತಾನೆ. ಅಗ್ನಿ ಶುಚಿಯನ್ನುದ್ದೇಶಿಸಿ ಹವಿಸ್ಸನ್ನರ್ಪಿಸಿದರೆ ದ್ಯುಲೋಕಸ್ಥವಾದ ಅಗ್ನಿಯ ರೂಪವನ್ನು ಹೊಂದುತ್ತಾನೆ. ಈ ರೀತಿ ಅಕುಂಠಿತವಾದ ಪೂರ್ಣರೂಪದ ಅಗ್ನಿಯ ರೂಪವನ್ನು ಹೊಂದುತ್ತಾನೆ. ಆದುದರಿಂದ **ಈ** ಪೂರ್ಣಾಹುತಿಯು ಅರ್ಪಿತವಾಗತಕ್ಕದ್ದು ಎಂದು ಅಗ್ನಿಯ ಮೂರು ರೂಪದ ಮಹತ್ತ್ವವು ಪ್ರಶಂಸಿತವಾಗಿದೆ.

ಹೀಗೆ ಮೂರು ಲೋಕಗಳಲ್ಲೂ ಪ್ರಕಾಶಿಸುವ **ಈ** ಲೋಕಾಧಿಪತಿಗಳು ಸೂರ್ಯ, ಇಂದ್ರ (ವಾಯು) ಮತ್ತು ಅಗ್ನಿಗಳೆಂದು ಒಂದು ಸಂದರ್ಭದಲ್ಲೂ, ಅಗ್ನಿ ಪವಮಾನ, ಅಗ್ನಿ ಪಾವಕ ಮತ್ತು ಅಗ್ನಿ ಶುಚಿ ಎಂದು ಇನ್ನೊಂದು ಸಂದರ್ಭದಲ್ಲೂ, ವೈಶ್ವಾನರ, ಜಾತವೇದಾಃ, ಪಾರ್ಥಿವಾಗ್ನಿಗಳೆಂದು ಬೇರೊಂದು ಪ್ರಕರಣದಲ್ಲೂ ಸಹ ಒಂದೇ ತತ್ತ್ವದ ಮೂರು ಬೇರೆಬೇರೆ ರೂಪಗಳು ವರ್ಣಿತವಾಗಿವೆ.

ಅಯಂ ಪ್ರಯೋಗಸ್ತ್ವೀತೇಷಾಂ ಜ್ಯೋತಿಷಾಂ ತ್ರಿಷು ವರ್ತತಾಂ ।
ಲೋಕೇಷು ಮಂತ್ರವಿದ್ವಿದ್ವಾನ್ ಪ್ರಯೋಗೇ ನಾವಸೀದತಿ ॥

(ಬೃ. ದೇ. ೧-೯೦)

ಮೂರು ಜ್ಯೋತೀರೂಪಗಳೂ ಮೂರುಲೋಕಗಳನ್ನಾಶ್ರಯಿಸಿರುವ ಕ್ರತುಗಳನ್ನರಿತು ಆಯಾ ರೂಪಗಳಿಗನು ರೂಪವಾಗಿ ಹವಿರಾದಿಗಳನ್ನರ್ಪಿಸಬೇಕು. ಪ್ರಾಜ್ಞನು ಇದನ್ನರಿತು ಇದಕ್ಕೆ ವಿರುದ್ಧವಾಗಿ ಆಚರಿಸುವುದಿಲ್ಲ.

ನಿಯತೇ೨ಯಂ ನೃಭಿರ್ಯಸ್ಮಾನ್ನಯತ್ಯಸ್ಮಾದಸೌ ಚ ತಂ ।
ತೇನೇಮೌ ಚಕ್ರತುಃ ಕರ್ಮ ಸನಾಮಾನೌ ಪೃಥಕ್ ಪೃಥಕ್ ॥

(ಬೃ. ದೇ. ೧-೯೧)

ಈ ಪಾರ್ಥಿವಾಗ್ನಿಯು ಮಾನವರಿಂದ ಪ್ರಚೋದಿಸಲ್ಪಡುತ್ತಾನೆ. ದ್ಯುಲೋಕಾಗ್ನಿಯು ಇವನನ್ನು ಪೃಥ್ವಿಯಿಂದ ಕರೆದೊಯ್ಯುತ್ತಾನೆ. ಹೀಗೆ ಇಬ್ಬರಿಗೂ ಒಂದೇ ಹೆಸರಿದ್ದರೂ ಸಹ ಇಬ್ಬರ ಕರ್ಮವೂ ಬೇರೆಬೇರೆಯಾಗಿರುತ್ತದೆ.

ಯದ್ವಿದ್ಯತೇ ಹಿ ಜಾತಃ ಸಞ್ಜಾತೈರ್ಯದ್ವಾತ್ರ ವಿದ್ಯತೇ ।
ತೇನೇಮೌ ತುಲ್ಯನಾಮಾನೌ ಉಭೌ ಲೋಕೌ ಸಮಾಪ್ನುತಃ ॥

(ಬೃ. ದೇ. ೧-೯೨)

ಉತ್ಪನ್ನವಾಗುವಾಗಲೇ ಎಲ್ಲವನ್ನೂ ಅರಿಯುವುದರಿಂದಲೂ, ಉತ್ಪನ್ನವಾದ ಪ್ರಾಣಿಗಳಿಂದ ಅರಿಯಲ್ಪಡುವುದರಿಂದಲೂ ಸಹ, ಈ ಎರಡು ರೂಪಗಳಿಗೂ ಒಂದೇ ನಾಮಧೇಯವಿದ್ದರೂ, ಎರಡೂ ಎರಡು ಲೋಕಗಳನ್ನು ವ್ಯಾಪಿಸಿರುತ್ತವೆ. (ಜಾತವೇದೋರೂಪನಾದ ಅಗ್ನಿಯ ಸ್ವರೂಪವನ್ನು ಋ. ಸಂ. ೮ನೆಯ ಭಾಗದಲ್ಲಿ ವಿವರಿಸಿದೆ.)

ವಿಸೃಜನ್ನಯಮೇತೇಷಾಂ ಭ್ರಾಜತೇ ವ್ಯೋಮ್ನಿ ಮಧ್ಯಮಃ ।
ನಿಪಾತಮಾತ್ರೇ ಕಥ್ಯಂತೇ ತಥಾಗ್ನೇಯಾನಿ ಕಾನಿಚಿತ್ ॥

(ಬೃ. ದೇ. ೧-೯೩)

ಈ ಮೂರು ರೂಪಗಳಲ್ಲಿ ಮಧ್ಯಮಲೋಕವಾದ ಅಂತರಿಕ್ಷವನ್ನು ವ್ಯಾಪಿಸಿರುವ ಅಗ್ನಿಯು ವೃಷ್ಟಿಯನ್ನು ಸುರಿಸುತ್ತ ವಿದ್ಯುದ್ರೂಪದಿಂದ ಪ್ರಕಾಶಿಸುತ್ತಾನೆ. ಹೀಗೆ ಆಯಾ ಕರ್ಮಗಳಿಗನುಗುಣವಾಗಿ ಆಯಾ ಗುಣಗಳನ್ನು ವರ್ಣಿಸುವ ನಾಮಪ್ರಭೇದಗಳಿರುತ್ತವೆ. ಆದರೆ ಈ ನಾಮಭೇದಗಳು ಆನುಷಂಗಿಕವಾಗಿರುತ್ತವೆ. ಇವು ಅಗ್ನಿಯ ತಾತ್ತ್ವಿಕವಾದ ಭಿನ್ನತೆಯನ್ನು ತೋರಿಸುವುದಿಲ್ಲ. ಉದಾಹರಣೆಗೆ—

ಅಸೌ ತು ರಶ್ಮಿಭಿಃ ಕೇಶೀ ತೇನೈನಾನಾಹ ಕೇಶಿನಃ ।
ಏತೇಷಾಂ ತು ಪೃಥಕ್ತ್ವೇನ ತ್ರಯಾಣಾಂ ಕೇಶಿನಾಮಿಹ ॥

(ಬೃ. ದೇ. ೧-೯೪)

ಪಾರ್ಥಿವಾಗ್ನಿಯು ಜ್ವಾಲಾರೂಪವಾದ ಕೇಶಗಳನ್ನೂ, ಮಧ್ಯಮಲೋಕದ ಅಗ್ನಿಯು ವಿದ್ಯುದ್ರೂಪದ ಕೇಶಗಳನ್ನೂ, ದ್ಯುಲೋಕದ ಆದಿತ್ಯರೂಪನಾದ ಅಗ್ನಿಯು ರಶ್ಮಿರೂಪದ ಕೇಶಗಳನ್ನೂ ಹೊಂದಿರುವುದರಿಂದ ಋಷಿಗಳು ಇವರನ್ನು **ತ್ರಯಃ ಕೇಶಿನಃ** ಎಂದು ನಿರ್ದೇಶಿಸಿರುತ್ತಾರೆ.

ಏತೇಷಾಂ ತು ಪೃಥಕ್ತ್ವೇನ ತ್ರಯಾಣಾಂ ಕೇಶಿನಾಮಿಹ ।
ಸಂಲಕ್ಷ್ಯಂತೇ ಪ್ರಕ್ರಿಯಾಸು ತ್ರಯಃ ಕೇಶಿನ ಇತ್ಯೃಚಿ ॥

ಈ ರೀತಿ ಮೂರು ವಿಧವಾದ ಕೇಶಗಳುಳ್ಳ ಈ ಅಗ್ನಿಪ್ರಭೇದಗಳ ಸ್ವರೂಪವು ಬೇರೆಬೇರೆಯಾಗಿರುವುದರಿಂದ ಅವರು ಆಯಾ ಪ್ರಕ್ರಿಯಾಭೇದಗಳಿಂದ " **ತ್ರಯಃ ಕೇಶಿನಃ** " ಎಂದು ನಿರ್ದಿಷ್ಟರಾಗಿದ್ದಾರೆ.

ನ ಚೈವೇಷಾಂ ಪ್ರಸೂತಿರ್ವಾ ವಿಭೂತಿಸ್ಥಾನ ಜನ್ಮ ವಾ ।
ನಿರ್ವಕ್ತುಂ ಶಕ್ಯಮೇತೈರ್ಹಿ ಕೃತ್ಸ್ನಂ ವ್ಯಾಪ್ತಮಿದಂ ಜಗತ್ ॥

(ಬೃ. ದೇ. ೧-೯೬)

ಆದರೆ, ಅವರವರ ವೈಯಕ್ತಿಕವಾದ ಜನ್ಮವು ಹೇಗೆ ? ವೈಯಕ್ತಿಕವಾದ ವಿಭೂತಿವಿಶೇಷಗಳೇನು ? ಪ್ರತ್ಯೇಕ ಸ್ಥಾನಗಳಾವುವು ? ಇತ್ಯಾದಿಗಳನ್ನು ಹೇಳಲು ಶಕ್ಯವಿಲ್ಲ. ಪ್ರತಿಯೊಂದು ಪ್ರಭೇದವೂ ಸಕಲ ಜಗತ್ತನ್ನೂ ವ್ಯಾಪಿಸಿದೆ.

ವೈಶ್ವಾನರಂ ಶ್ರಿತೋ ಹ್ಯಗ್ನಿರಗ್ನಿಂ ವೈಶ್ವಾನರಃ ಶ್ರಿತಃ ।
ಅನಯೋರ್ಜಾತವೇದಾಸ್ತು ತಥೈತೇ ಜಾತವೇದಸೀ ॥

(ಬೃ. ದೇ. ೧-೯೭)

ಅಗ್ನಿಯು ವೈಶ್ವಾನರನಲ್ಲಿ ಐಕ್ಯನಾಗಿದ್ದಾನೆ. (ವೈಶ್ವಾನರನ ಮಹಿಮೆಯನ್ನು ಋ. ಸಂ. ೮ನೆಯ ಭಾಗದಲ್ಲಿ ವಿವರಿಸಿದೆ) ವೈಶ್ವಾನರನು ಅಗ್ನಿಯಲ್ಲಿ ಐಕ್ಯನಾಗಿದ್ದಾನೆ. ಜಾತವೇದಸ್ಸು ಈ ಎರಡು ರೂಪಗಳಲ್ಲಿಯೂ ಅಡಗಿದ್ದಾನೆ. ಆದುದರಿಂದ ಮೊದಲಿನ ಎರಡು ಪ್ರಭೇದಗಳೂ ಜಾತವೇದಸ್ಸಿನ ಎರಡು ರೂಪಗಳಾಗಿವೆ. ಕೇವಲ ಇವರೇ ಅಲ್ಲ. ಸಕಲ ದೇವತೆಗಳೂ ಈ ಅಗ್ನಿಯಲ್ಲೇ ಅಡಗಿ ಐಕ್ಯರಾಗಿದ್ದಾರೆ.

ಜಾತವೇದಾಃ ಶ್ರಿತೋ ಹ್ಯಗ್ನಿಮಗ್ನಿಂ ವೈಶ್ವಾನರಃ ಶ್ರಿತಃ ।
ದ್ರವಿಣೋದಾಸ್ತಥೇಧ್ಮಶ್ಚ ಶ್ರಿತಶ್ಚಾಗ್ನಿಂ ತನೂನಪಾತ್ ॥
ನರಾಶಂಸಃ ಶ್ರಿತಶ್ಚೈನಂ ಏನಮೇವಾಶ್ರಿತಸ್ತ್ವಿಳಃ ।
ಬರ್ಹಿರ್ದ್ವಾರಶ್ಚ ದೇವ್ಯೋಽಗ್ನಿಮೇನಮೇವ ತು ಸಂಶ್ರಿತಾಃ ॥
ನಕ್ತೋಷಾಸಾ ಚ ದೇವ್ಯೌ ಚ ಹೋತಾರಾವೇತದಾಶ್ರಯೌ ।
ದೇವ್ಯಸ್ತಿಸ್ರಃ ಶ್ರಿತಾಶ್ಚೈನಂ ತ್ವಷ್ಟಾ ಚೈವೈತದಾಶ್ರಯಃ ॥
ಶ್ರಿತೋ ವನಸ್ಪತಿಶ್ಚೈನಂ ಸ್ವಾಹಾಕೃತಯ ಏವ ಚ ।

(ಬೃ. ದೇ. ೧.೧೦೬-೧೧೦)

ಜಾತವೇದಸ್ಸು, ವೈಶ್ವಾನರ, ದ್ರವಿಣೋದಾಃ, ಇಧ್ಮ, ತನೂನಪಾತ್, ನರಾಶಂಸ, ಇಳಾ (ಬರ್ಹಿ), ದ್ವಾರ ದೇವತೆಗಳು, ನಕ್ತ ಮತ್ತು ಉಷೋದೇವತೆಗಳು, ಹೋತೃಗಳು, ವನಸ್ಪತಿ ಇತಾದಿ ಸಕಲ ದೇವತೆಗಳೂ ಈ ಅಗ್ನಿಯಲ್ಲಿ ಐಕ್ಯರಾಗಿದ್ದಾರೆ. ಈ ಅಗ್ನಿಯೇ ವಿಶ್ವವ್ಯಾಪಕವಾದ ಮಹತ್ತತ್ತ್ವವು. ಈ ಮಹಾತ್ತತ್ತ್ವವೇ " **ಮೂರ್ಧಾ ಭುವೋ ಭವತಿ** " ರಾತ್ರಿಕಾಲದಲ್ಲಿ ಪೃಥ್ವಿಗೆ ಅಧಿಪತಿಯಾಗಿರುತ್ತಾನೆ ಇತ್ಯಾದಿಯಾಗಿ ವರ್ಣಿತವಾಗಿದೆ. (ಈ ವಿವರಣವನ್ನು ಹಿಂದೆ ತಿಳಿಸಿದೆ)

ಯದೇದೇನಮದಧುರ್ಯಜ್ಞಿಯಾಸೋ ದಿವಿ ದೇವಾಃ ಸೂರ್ಯಮಾದಿತೇಯಂ ।
ಯದಾ ಚರಿಷ್ಣೂ ಮಿಥುನಾವಭೂತಾಮಾದಿತ್ಪಶ್ಯನ್ಭುವನಾನಿ ವಿಶ್ವಾ ॥

(ಋ. ಸಂ. ೧೦-೭೪-೧೧)

ಪೂಜ್ಯರಾದ ದೇವತೆಗಳು ಯಾವ ಈ ಅಗ್ನಿಯನ್ನು ಸೂರ್ಯರೂಪದಲ್ಲಿ ದ್ಯುಲೋಕದಲ್ಲಿ ಸ್ಥಾಪಿಸಿದರೋ, ಯಾವಾಗ ಈ ಸೂರ್ಯ ಮತ್ತು ವೈಶ್ವಾನರರು ಲೋಕಕ್ಕೆ ಗೋಚರರಾದರೋ, ಆಗ ದೇವತೆಗಳು ಅಗ್ನ್ಯಂಶಗಳಾದ ಈ ಸೂರ್ಯಾದಿಗಳ ಸಹಾಯದಿಂದ ಜಗತ್ತನ್ನೆಲ್ಲ ವೀಕ್ಷಿಸಲು ಶಕ್ತರಾದರು ಎಂದು ಅಗ್ನಿಯ ಪ್ರಶಂಸೆಯು ಅನೇಕ ವಿಧವಾಗಿ ರುತ್ತದೆ.

ಸಂಹಿತಾಪಾಠಃ

ಸ॒मु॒द्रे त्वा॒ नृम॑णा अप्स्व॑न्त॒र्नृच॑क्षा ईधे दि॒वो अ॑ग्न ऊ॒धन्॑ ।
तृ॒तीये॒ त्वा॒ रज॑सि तस्थि॒वांस॒मुषा॒मुप॑स्थे महि॒षा अ॑वर्धन् ॥

ಪದಪಾಠಃ

स॒मु॒द्रे । त्वा॒ । नृ॒ऽम॑नाः । अ॒प्ऽसु । अ॒न्तः । नृ॒ऽचक्षाः । ई॒धे॒ । दि॒वः । अ॒ग्ने॒ । ऊ॒धन् ॥
तृ॒तीये॑ । त्वा॒ । रज॑सि । त॒स्थि॒ऽवांस॑म् । उषा॑म् । उप॑ऽस्थे । म॒हि॒षाः । अ॒व॒र्ध॒न् ॥

ಸಾಯಣಭಾಷ್ಯಂ

ಹೇ ಅಗ್ನೇ ಸಮುದ್ರೇ ಮಹೋದಧೌ ಜಾಯಮಾನಮಪ್ಸ್ವಂತರಪಾಂ ಮಧ್ಯೇ ವಡವಾತ್ಮನಾ ಸ್ಥಿತಂ ತ್ವಾ ತ್ವಾಂ ನೃಮಣಾ ನೃಷು ಮನುಷ್ಯೇಷ್ವನುಗ್ರಾಹಕತಯಾಸಕ್ತಚಿತ್ತೋ ವರುಣ ಈಧೇ। ಸಂದೀಪಿತವಾನ್ । ಕಿಂಚ ನೃಚಕ್ಷಾ ನೃಣಾಂ ಪ್ರತ್ಯಕ್ಷೇಣ ಪ್ರಕಾಶಾದಿತ್ಯೋ ದಿವೋ ದ್ಯುಲೋಕಸ್ಯ ಸಂಬಂಧಿನ್ಯೂಧನ್ನೂಧಸ್ಯೂಧಃಸ್ಥಾನೀಯ ಆದಿತ್ಯಮಂಡಲೇ ಯಜ್ಞೇ ವೇಧೇ । ಸಂದೀಪಿತವಾನ್ । ಕಿಂಚ ತೃತೀಯೇ ತ್ರಯಾಣಾಂ ಪೂರಕೇಽಪಾಂ ವೃಷ್ಟ್ಯುದಕಾನಾಮುಪಸ್ಥೇ ಸ್ಥಾನೇ ರಜಸ್ಯಂತರಿಕ್ಷಲೋಕೇ ತಸ್ಥಿವಾಂಸಂ ವಿದ್ಯುದ್ರೂಪೇಣಾವಸ್ಥಿತಂ ತ್ವಾಂ ಮಹಿಷಾ ಮಹಾಂತೋ ಮಾಧ್ಯಮಿಕಾ ದೇವಗಣಾ ಮರುದಾದಯಃ ಸ್ತೋತಾರೋಽವರ್ಧನ್ । ಸ್ತುತಿಭಿರವರ್ಧಯನ್ । ಯದ್ವಾ । ವಾಜಸನೇಯಕೋಕ್ತಪ್ರಕಾರೇಣಾರ್ಥೋ ದ್ರಷ್ಟವ್ಯಃ । ತದ್ಯಥಾ । ಸಮುದ್ರೇ ತ್ವಾ ನೃಮಣಾ ಅಪ್ಸ್ವಂತರಿತಿ ಪ್ರಜಾಪತಿರ್ವೈ ನೃಮಣಾ ಅಪ್ಸು ತ್ವಾ ಪ್ರಜಾಪತಿರಿತ್ಯೇತನ್ನೃಚಕ್ಷಾ ಈಧೇ ದಿವೋ ಅಗ್ನ ಊಧನ್ನಿತಿ ಪ್ರಜಾಪತಿರ್ವೈ ನೃಚಕ್ಷಾ ಆಪೋ ದಿವ ಊಧಸ್ತೃತೀಯೇ ತ್ವಾ ರಜಸಿ ತಸ್ಥಿವಾಂಸಮಿತಿ ದ್ಯೌರ್ವೈ ತೃತೀಯಂ ರಜೋಽಪಾಮುಪಸ್ಥೇ ಮಹಿಷಾ ಅವರ್ಧನ್ನಿತಿ ಪ್ರಾಣಾ ವೈ ಮಹಿಷಾ ದಿವಿ ತ್ವಾ ಪ್ರಾಣಾ ಅವರ್ಧನ್ನಿತ್ಯೇತತ್ । ತತೋ ೭-೭-೪-೫ । ಇತಿ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಸಮುದ್ರೇ**—ಸಮುದ್ರಮಧ್ಯದಲ್ಲಿ ಉತ್ಪನ್ನನೂ । **ಅಪ್ಸ್ವಂತಃ**—ಉದಕಗಳ ನಡುವೆ ವಡವಾಗ್ನಿರೂಪದಲ್ಲಿರುವವನೂ ಆದ । **ತ್ವಾ**—ನಿನ್ನನ್ನು । **ನೃಮಣಾಃ**—ಮಾನವರಿಗೆ ಹಿತಕಾರಿಯಾದ ವರುಣನು । **ಈಧೇ**—ಪ್ರಜ್ವಲಿಸುವಂತೆ ಮಾಡಿದನು । **ನೃಚಕ್ಷಾಃ**—ಮಾನವರನ್ನು ನೋಡಬಲ್ಲ ಆದಿತ್ಯನು । **ದಿವಃ**—ದ್ಯುಲೋಕದ । **ಊಧನ್**—ಮಧ್ಯಸ್ಥಾನವಾದ ಆದಿತ್ಯಮಂಡಲದಲ್ಲಿ ನಿನ್ನನ್ನು ಪ್ರಜ್ವಲಿಸುವಂತೆ ಮಾಡಿದನು । **ಅಪಾಂ ಉಪಸ್ಥೇ**—ವೃಷ್ಟ್ಯುದಕಗಳಿಗೆ ಸ್ಥಾನವಾದ । **ತೃತೀಯೇ ರಜಸಿ**—ಮೂರನೆಯುದಾದ ಅಂತರಿಕ್ಷದಲ್ಲಿ । **ತಸ್ಥಿವಾಂಸಂ**—ವಿದ್ಯುದ್ರೂಪದಲ್ಲಿರತಕ್ಕ। **ತ್ವಾ**—ನಿನ್ನನ್ನು । **ಮಹಿಷಾಃ**—ಮಹಾತ್ಮರಾದ ದೇವತೆಗಳು। **ಅವರ್ಧನ್**—ಪುಷ್ಟಿಗೊಳಿಸಿದರು.

ಭಾವಾರ್ಥ

ಎಲೈ ಅಗ್ನಿಯೆ, ಸಮುದ್ರಮಧ್ಯದಲ್ಲಿ ಉತ್ಪನ್ನನೂ, ಉದಕಗಳ ನಡುವೆ ವಡವಾಗ್ನಿರೂಪದಲ್ಲಿರುವವನೂ ಆದ ನಿನ್ನನ್ನು ಮಾನವರಿಗೆ ಹಿತಕಾರಿಯಾದ ವರುಣನು ಪ್ರಜ್ವಲಿಸುವಂತೆ ಮಾಡಿದನು. ಮಾನವರನ್ನು ನೋಡಬಲ್ಲ ಆದಿತ್ಯನು ದ್ಯುಲೋಕದ ಮಧ್ಯದಲ್ಲಿ ನಿನ್ನನ್ನು ಆದಿತ್ಯಮಂಡಲದಲ್ಲಿ ಪ್ರಕಾಶಿಸುವಂತೆ ಮಾಡಿದನು. ವೃಷ್ಟ್ಯುದಕಕ್ಕೆ ಸ್ಥಾನವಾದ ಅಂತರಿಕ್ಷದಲ್ಲಿ ವಿದ್ಯುದ್ರೂಪದಲ್ಲಿರುವ ನಿನ್ನನ್ನು ಮಹಾತ್ಮರಾದ ದೇವತೆಗಳು ಪುಷ್ಟಿಗೊಳಿಸಿದರು.

English Translation

He who is well disposed towards men illumes the Agni in the ocean (as submarine fire), in the midst of the waters: the beholder of men (illumes) you in the centre of the sky : the mighty (Maruts) magnify you abiding in the third region (the firmament), on the lap of the waters.

ಸಂಹಿತಾಪಾಠಃ

ಅಕ್ರಂದದಗ್ನಿಃ ಸ್ತನಯನ್ನಿವ ದ್ಯೌಃ ಕ್ಷಾಮಾ ರೇರಿಹದ್ವೀರುಧಃ ಸಮಂಜನ್ ।
ಸದ್ಯೋ ಜಜ್ಞಾನೋ ವಿ ಹೀಮಿದ್ಧೋ ಅಖ್ಯದಾ ರೋದಸೀ ಭಾನುನಾ
ಭಾತ್ಯಂತಃ ॥ ೪ ॥

ಪದಪಾಠಃ

ಅಕ್ರಂದತ್ । ಅಗ್ನಿಃ । ಸ್ತನಯನ್ನಿವ । ದ್ಯೌಃ । ಕ್ಷಾಮಾ । ರೇರಿಹತ್ । ವೀರುಧಃ । ಸಂ । ಅಂಜನ್ ॥
ಸದ್ಯಃ । ಜಜ್ಞಾನಃ । ವಿ । ಹಿ । ಈಂ । ಇದ್ಧಃ । ಅಖ್ಯತ್ । ಆ । ರೋದಸೀ ಇತಿ । ಭಾನುನಾ । ಭಾತಿ ।
ಅಂತರಿತಿ ॥

ಸಾಯಣಭಾಷ್ಯಂ

ದಾವರೂಪೋಽಗ್ನಿಃ ಸ್ತೂಯತೇ । ಅಗ್ನಿರ್ದಾವಾಗ್ನಿಃ ಸ್ತನಯನ್ನಿವ ದ್ಯೌರ್ಯಥಾ ದೀಪ್ತೋ ವಿದ್ಯುದ್ರೂಪಃ ಪರ್ಜನ್ಯೋ ಮಹಾಂತಂ ಶಬ್ದಂ ಕರೋತಿ ತದ್ವದಕ್ರಂದತ್ । ಮಹಾಂತಂ ಶಬ್ದಂ ಕರೋತಿ । ಕಿಂ ಕುರ್ವನ್ನಿತ್ಯತ್ರಾಹ । ಕ್ಷಾಮ ಕ್ಷಾಮಾಂ ಪೃಥಿವೀಂ ರೇರಿಹದಾಸ್ವಾದಯನ್ನೀರುಧ ಓಷಧೀಶ್ಚ ಸಮಂಜನ್ ಮ್ರಕ್ಷಯನ್ । ಸಂತಾಪಯನ್ನಿತ್ಯರ್ಥಃ । ಕಿಂಚ ಸದ್ಯಸ್ತತ್ಕ್ಷಣೇ ಸಮಾನೇ ಕಾಲೇ ಜಜ್ಞಾನೋ ಜಾಯಮಾನ ಇದ್ಧೋ ದೀಪ್ತ ಈಮಿದಂ ಸ್ವೇನ ದಗ್ಧಂ ವಸ್ತುಜಾತಂ ವ್ಯಖ್ಯತ್ । ವಿವಿಧಂ ಪಶ್ಯತಿ । ಹೀತಿ ಪಾದಪೂರಣಃ । ಕಿಂಚ ರೋದಸೀ ದ್ಯಾವಾಪೃಥಿವೀ ದ್ಯಾವಾಪೃಥಿವ್ಯಾವಂತರಂತರೇಣ ಭಾನುನಾ ಸ್ವದೀಪ್ತ್ಯಾ ಭಾತಿ । ಪ್ರಕಾಶತೇ । ಯದ್ವಾ ವಾಜಸನೇಯಕೋಕ್ತಾರ್ಥೋ ದ್ರಷ್ಟವ್ಯಃ । ತದ್ಯಥಾ । ಅಕ್ರಂದದಗ್ನಿಃ ಸ್ತನಯನ್ನಿವ ದ್ಯೌರಿತಿ ಕ್ರಂದತೀವ ಹಿ ಪರ್ಜನ್ಯಃ ಸ್ತನಯನ್ನಾಹ್ಲಾಮಾ ರೇರಿಹದ್ವೀರುಧಃ ಸಮಂಜನ್ನಿತಿ ಕ್ಷಾಮಾಂ ವೈ ರೇರಿಹ್ಯಮಾಣೋ ವೀರುಧಃ ಸಮನಕ್ತಿ ಸದ್ಯೋ ಜಜ್ಞಾನೋ ವಿ ಹೀಮಿದ್ಧೋ ಅಖ್ಯದಿತಿ ಸದ್ಯೋ ವಾ ಏಷ ಜಜ್ಞಾನ ಇದಂ ಸರ್ವಂ ವಿಖ್ಯಾಪಯತ್ಯಾ ರೋದಸೀ ಭಾನುನಾ ಭಾತ್ಯಂತರಿತೀಮೇ ವೈ ದ್ಯಾವಾಪೃಥಿವೀ ರೋದಸೀ ತೇ ಏಷ ಭಾನುನಾ ಭಾತ್ಯಂತಃ । ಶತ-೬-೭-೩-೨ । ಇತಿ । ವೈದ್ಯುತಸ್ಯ ಸ್ತುತಿಃ । ಯದ್ವಾ । ಇಯಂ ದಾವಾಗ್ನೇಃ ಸ್ತುತಿರಿತಿ ॥

ಪ್ರತಿಪದಾರ್ಥ

ದ್ಯೌಃ—ಪರ್ಜನ್ಯನು । **ಸ್ತನಯನ್ನಿವ**—ಗರ್ಜಿಸುವಂತೆ । **ಅಗ್ನಿಃ**—ಅಗ್ನಿಯು । **ಅಕ್ರಂದತ್**—ಶಬ್ದ ಮಾಡುತ್ತಾನೆ। **ಕ್ಷಾಮ**—ಪೃಥ್ವಿಯನ್ನು । **ರೇರಿಹತ್**—ನೆಕ್ಕುತ್ತ । **ವೀರುಧಃ**—ಓಷಧಿಗಳನ್ನು । **ಸಮಂಜನ್**—ದಹಿಸುತ್ತಾನೆ । **ಸದ್ಯಃ ಜಜ್ಞಾನಃ**—ಉತ್ಪನ್ನನಾದೊಡನೆಯೇ । **ಇದ್ಧಃ**—ಪ್ರದೀಪ್ತನಾಗಿ । **ಈಂ**—ತನ್ನ ದಾಹ ವಿಷಯಗಳನ್ನೆಲ್ಲ । **ವ್ಯಖ್ಯತ್**—ಸೂಕ್ಷ್ಮವಾಗಿ ನೋಡುತ್ತಾನೆ । **ರೋದಸೀ ಅಂತಃ**—ದ್ಯಾವಾಪೃಥಿವಿಗಳ ನಡುವೆ ಯೆಲ್ಲ । **ಭಾನುನಾ**—ತನ್ನ ಕಾಂತಿಯಿಂದ । **ಆ ಭಾತಿ**—ಪ್ರಕಾಶಿಸುತ್ತಾನೆ.

ಭಾವಾರ್ಥ

ಪರ್ಜನ್ಯನು ದ್ಯುಲೋಕದಲ್ಲಿ ಗರ್ಜಿಸುವಂತೆ ಅಗ್ನಿಯೂ ಶಬ್ದಮಾಡುತ್ತಾನೆ. ಪೃಥ್ವಿಯನ್ನು ನೆಕ್ಕುತ್ತ ಓಷಧಿಗಳನ್ನು ದಹಿಸುತ್ತಾನೆ. ತಾನು ಉತ್ಪನ್ನನಾದೊಡನೆಯೇ ಪ್ರದೀಪ್ತನಾಗಿ ತಾನು ಯಾವ ಯಾವ ವಸ್ತುಗಳನ್ನು ದಹಿಸಬೇಕೋ ಅವೆಲ್ಲವನ್ನೂ ಪೂರ್ಣವಾಗಿ ನೋಡುತ್ತಾನೆ. ದ್ಯಾವಾಪೃಥಿವಿಗಳ ನಡುವೆ ತನ್ನ ಕಾಂತಿಯಿಂದ ಪ್ರಕಾಶಿಸುತ್ತಾನೆ.

English Translation

Agni cries aloud like the thundering heaven : he licks the earth burning the plants : as soon as generated, he contemplates this (conflagration) : when kindled he blazes with his (own) radiance between heaven and earth.

ವಿಶೇಷವಿಷಯಗಳು

ಹಿಂದಿನ ಮೂರು ಋಕ್ಕುಗಳಲ್ಲಿ ಅಗ್ನಿಯ ಮೂರು ವಿಧವಾದ ಜನ್ಮ, ಈ ಜನ್ಮಗಳಿಗನುರೂಪವಾದ ಅಗ್ನಿಯ ರೂಪಪ್ರಭೇದಗಳು ಮತ್ತು ಆಯಾ ರೂಪಾನುಗುಣವಾದ ಅನುಸಂಧಾನ ಇತ್ಯಾದಿ ವಿಷಯಗಳನ್ನು ತಿಳಿಸಿದೆ. ಪ್ರಕೃತವಾದ ೪ ಮತ್ತು ೫ ನೇ ಋಕ್ಕುಗಳಲ್ಲಿ ಅಗ್ನಿಯ ಇತರ ಮಹದ್ಗುಣಗಳನ್ನು ವರ್ಣಿಸಿದೆ. ಇವುಗಳಲ್ಲಿ

೧) ಅಗ್ನಿಗೂ, ಪರ್ಜನ್ಯನಿಗೂ ಇರುವ ಸಾದೃಶ್ಯ

೨) ದ್ಯಾವಾಪೃಥಿವಿಗಳೆರಡರಲ್ಲೂ ವ್ಯಾಪಿಸುವ ಅಗ್ನಿಯ ಪ್ರಭೆ

೩) ಅಗ್ನಿಯು **ಸೋಮಗೋಪ**ನೆಂದು ಸಂಬೋಧಿತನಾಗಿರುವುದು ಮತ್ತು

೪) ಅಗ್ನಿಗೂ ಉಷಸ್ಸಿಗೂ ಇರುವ ಸಂಬಂಧ ಇವು ಮುಖ್ಯವಾದುವು.

ಮೊದಲನೆಯದಾಗಿ ಇದೇ ಋಕ್ಕನ್ನು (೪) ವಿವರಿಸುತ್ತ ಶತಪಥ ಬ್ರಾಹ್ಮಣದಲ್ಲಿ ಅಗ್ನಿಗೂ, ಪರ್ಜನ್ಯನಿಗೂ ಇರುವ ಸಂಬಂಧವನ್ನು ಈ ರೀತಿ ತಿಳಿಸಿದೆ.

ಅಕ್ರಂದದಗ್ನಿಃ ಸ್ತನಯನ್ನಿವ ದ್ಯೌರಿತಿ । ಕ್ರಂದತೀವ ಹಿ ಪರ್ಜನ್ಯಃ ಸ್ತನಯನ್ ಕ್ಷಾಮಾ ರೇರಿಹದ್ವೀರುಧಃ ಸಮಂಜನ್ನಿತಿ ಕ್ಷಾಮಾ ವೈ ರೇರಿಹ್ಯಮಾಣೋ ವೀರುಧಃ ಸಮನಕ್ತಿ ಸದ್ಯೋ ಜಜ್ಞಾನೋ ವಿ ಹೀಮಿದ್ಧೋ ಅಖ್ಯದಿತಿ ಸದ್ಯೋ ವಾ ಏಷ ಜಜ್ಞಾನ ಇದಂ ಸರ್ವಂ ವಿಖ್ಯಾಪಯತ್ಯಾ ರೋದಸೀ ಭಾನುನಾ ಭಾತ್ಯಂತರಿತೀಮೇ ವೈ ದ್ಯಾವಾಪೃಥಿವೀ ರೋದಸೀ ತೇ ಏಷ ಭಾನುನಾ ಭಾತ್ಯಂತಃ॥

(ಶ. ಬ್ರಾ. ೬-೭-೩-೨)

ಗುಡುಗುವ ಅಂತರಿಕ್ಷದಂತೆ ಅಗ್ನಿಯು ಗರ್ಜಿಸಿದನು. ಪರ್ಜನ್ಯನು ಗರ್ಜಿಸುವಂತೆಯೇ ಅಗ್ನಿಯೂ ಗರ್ಜನ ಶಬ್ದವನ್ನು ಮಾಡುತ್ತಾನೆ. ಪರ್ಜನ್ಯನು ಪದೇ ಪದೇ ಭೂಮಿಯನ್ನು ಸ್ಪರ್ಶಿಸುತ್ತ ಓಷಧ್ಯಾದಿಗಳಲ್ಲಿ ತನ್ನ ಪ್ರಭಾವವನ್ನು ಸ್ಥಾಪಿಸುತ್ತ ಪ್ರಸರಿಸುವಂತೆ ಅಗ್ನಿಯೂ ಸಹ ಪದೇ ಪದೇ ಭೂಮಿಯನ್ನು ಆಘ್ರಾಣಿಸುವಂತೆ ಪ್ರಸರಿಸುತ್ತಲೂ, ಓಷಧ್ಯಾದಿಗಳಲ್ಲಿ ಪ್ರವೇಶಿಸುತ್ತಲೂ ಪ್ರಸರಿಸುತ್ತಾನೆ. ತನ್ನ ಪ್ರಭೆಯೊಂದಿಗೆ ದ್ಯಾವಾಪೃಥಿವಿಗಳ ನಡುವೆಯಲ್ಲಿ ಪ್ರಕಾಶಿಸುತ್ತಾನೆ ಮತ್ತು ಈ ಎರಡು ಲೋಕಗಳನ್ನೂ ತನ್ನ ಪ್ರಭೆಯಿಂದ ಪ್ರಕಾಶಿಸುವಂತೆ ಮಾಡುತ್ತಾನೆ ಎಂದಿರುವ ಶತಪಥ ಬ್ರಾಹ್ಮಣದ ವಿವರಣವನ್ನು ಸಾಯಣರು ಇತಿ " **ವೈದ್ಯುತಸ್ಯ ಸ್ತುತಿಃ** " ಇದು ವಿದ್ಯುದ್ರೂಪದ ಅಗ್ನಿಯ ಪ್ರಶಂಸೆ ಎಂದು ತಿಳಿಸಿದ್ದಾರೆ. ಇದು ದಾವಾಗ್ನಿಯ ಸ್ತುತಿಯೆಂದು ಸಾಯಣರ ಅಭಿಪ್ರಾಯವಾಗಿದೆ. " **ಆ ರೋದಸೀ ಭಾನುನಾ ಭಾತ್ಯಂತಃ** " ಎಂಬ ವಿವರಣವಿರುವುದರಿಂದ ವೈದ್ಯುತಾಗ್ನಿಯೆಂದು ಹೇಳದರೆ ಉಚಿತವಾಗುತ್ತದೆ. ಪರ್ಜನ್ಯನಿಗೂ, ಅಗ್ನಿಗೂ ಕೇವಲ ಸಾದೃಶ್ಯ ಮಾತ್ರವಲ್ಲ, ಪರ್ಜನ್ಯನು ಅಗ್ನಿಯ ಕ್ರಿಯಾವಿಶೇಷವನ್ನು ಹೊಂದಿ ಅವನ ರೂಪಾಂತರವೇ ಆಗಿರುತ್ತಾನೆ ಎಂದೂ ಸಹ ಹೇಳಿರುತ್ತದೆ.

ತದ್ಯದಸ್ಯ ತನ್ನಾಮಾಕರೋದಾದಿತ್ಯಸ್ತದ್ರೂಪಮಭವದಾದಿತ್ಯೋ ವಾ ಈಶಾನ ಆದಿತ್ಯೋ ಹ್ಯಸ್ಯ ಸರ್ವಸ್ಯೇಷ್ಟೇ ಸೋಽಬ್ರವೀದೇತಾವಾನ್ವಾ ಅಸ್ತಿ . . . . ॥

(ಶ. ಬ್ರಾ. ೬-೧-೩-೧೫)

ಅಗ್ನಿಯೇ ಭವಸಂಜ್ಞಕನು. ಪ್ರತಿಯೊಂದೂ ವೃಷ್ಟಿಪತನದಿಂದಲೇ ಸಂಭವಿಸುವುದರಿಂದ ಈ ಭವನೇ ಪರ್ಜನ್ಯ ರೂಪನು ಎಂದು ಪರ್ಜನ್ಯನು ಅಗ್ನಿಯ ವಿಭೂತಿವಿಶೇಷವೆಂದು ತಿಳಿಸಿದೆ. ಆದುದರಿಂದ ಪ್ರಕೃತವಾದ ಋಕ್ಕಿನಲ್ಲಿ ಪರ್ಜನ್ಯ ಅಥವಾ ವೈದ್ಯುತಾಗ್ನಿಯ ಕ್ರಿಯೆಯೇ ಎಂದು ಹೇಳಿದರೆ ತಪ್ಪಾಗಲಾರದು.

ಈ ವೈದ್ಯುತಾಗ್ನಿಯನ್ನೇ ಋನೆಯ ಋಕ್ಕಿನಲ್ಲಿ " **ಸೋಮಗೋಪಾಃ** " ಎಂದು ಪ್ರಶಂಸಿಸಿದೆ. **ಸೋಮಸ್ಯ ಪಾಲಕಃ** ಎಂದು ಸಾಯಣರು ಅರ್ಥಮಾಡಿದ್ದಾರೆ. ಸೋಮವೆಂದರೆ ಕೇವಲ ಸೋಮರಸವೆಂದು ಮಾತ್ರ ಅರ್ಥವಲ್ಲ. ವೈದ್ಯುತಾಗ್ನಿಗೆ ಯಾವ ಯಾವ ಲಕ್ಷಣಗಳಿವೆಯೋ ಅವೆಲ್ಲವೂ ಸೋಮನ ಲಕ್ಷಣಗಳೂ ಆಗಿವೆ. ದಿವ್ಯತ್ವವನ್ನು ಹೊಂದಿರುವ ಸೋಮನು ಸ್ವಯಂಪ್ರಕಾಶವಾದ ತೇಜೋರೂಪನು. " **ಸ ಸೂರ್ಯಸ್ಯ ರಶ್ಮಿಭಿಃ ಪರಿವ್ಯತ** " (ಋ. ಸಂ. ೯-೮೬-೩೨) ಇತ್ಯಾದಿ ವರ್ಣನೆಗಳು ಸೋಮನ ತೇಜೋಯುತವಾದ ದಿವ್ಯಸ್ವರೂಪವನ್ನು ತಿಳಿಸುತ್ತವೆ. ತೇಜೋರೂಪನಾದ ಈ ಸೋಮನೂ ಅಗ್ನಿಯಂತೆಯೇ ಮೂರು ಸ್ಥಾನಗಳುಳ್ಳವನು. ಅವು ಯಾವುವೆಂದರೆ—

ಧತ್ತೇ ಸೋಮ ದಿವಿ ಜ್ಯೋತಿರ್ಯತ್ಪೃಥಿವ್ಯಾಂ ಯದುರಾವಂತರಿಕ್ಷೇ

(ಶ. ಬ್ರಾ. ೩-೯-೪-೧೨)

ಎಲೈ ಸೋಮದೇವನೇ, ದಿವ್ಯಲೋಕದಲ್ಲಿ ಯಾವ ನಿನ್ನ ತೇಜಸ್ಸು ಪ್ರಸರಿಸಿದೆಯೋ, ಅಂತರಿಕ್ಷ ಲೋಕದಲ್ಲಿ ಯಾವ ತೇಜಸ್ಸು ಪ್ರಕಾಶಿಸುತ್ತಿರುವುದೋ ಮತ್ತು ಯಾವ ಪಾರ್ಥಿವವಾದ ತೇಜಸ್ಸಿರುವುದೋ ಅವೆಲ್ಲದರೊಂದಿಗೂ ಯಜಮಾನನಿಗೆ ಪುಷ್ಟಿದಾಯಕನಾಗು ಇತ್ಯಾದಿಯಯಾಗಿ " **ತ್ರಿಷಧಸ್ಥ** " ಎಂಬ ವಿಶೇಷಣವು ಅಗ್ನಿಯ ಯಾವ ಸ್ವರೂಪವನ್ನು ತಿಳಿಸುವುದೋ ಅದನ್ನೇ ಈ ಸೋಮನ ವರ್ಣನವೂ ತಿಳಿಸುತ್ತದೆ.

" **ತ್ರೀ ಷಧಸ್ಥಾ ಪುನಾನಃ ಕೃಣುತೇ ಹರಿಃ** " (ಋ. ಸಂ. ೯-೧೦೩-೩) ಎಂಬಲ್ಲಿ ದ್ರೋಣಕಲಶಾದಿ ಮೂರು ಪಾತ್ರೆಗಳೆಂದು ಆ ಸಂದರ್ಭಾನುಸಾರವಾಗಿ ಅರ್ಥವಾದರೂ ಸಹ ಮೇಲೆ ಶತಪಥ ಬ್ರಾಹ್ಮಣದ ವಾಕ್ಯದ ಆಧಾರದ ಮೇಲೆ ಇಲ್ಲಿಯೂ ಮೂರು ಲೋಕಗಳಲ್ಲಿಯೂ ಇರತಕ್ಕವನು ಎಂಬ ಅರ್ಥವನ್ನು ಹೇಳಿದರೂ ತಪ್ಪಾಗಲಾರದು.

ನಾಭಾ ಪೃಥಿವ್ಯಾ ಧರುಣೋ ಮಹೋ ದಿವೋಽಪಾಮೂರ್ಮೌ ಸಿಂಧುಷ್ವಂತರುಕ್ಷಿತಃ ।
ಇಂದ್ರಸ್ಯ ವಜ್ರೋ ವೃಷಭಃ ವಿಭೂವಸುಃ ಸೋಮೋ ಹೃದೇ ಪವತೇ ಚಾರು ಮತ್ಸರಃ ॥

(ಋ. ಸಂ. ೯-೭೨-೨)

ಈ ಸೋಮನು ದ್ಯುಲೋಕದ ಧಾರಕನು. ವಿಸ್ತೃತವಾದ ಪೃಥ್ವಿಗೆ ನಾಭಿಸ್ಥಾನೀಯನು. ಅಂತರಿಕ್ಷದ ಮಧ್ಯವರ್ತಿಯು. ಇಂದ್ರನಿಗೆ ವಜ್ರಾಯುಧರೂಪನು. ಇಂತಹ ಸೋಮನು ಇಂದ್ರನಿಗೆ ತೃಪ್ತಿಕಾರಕನು ಎಂದಿರುತ್ತದೆ.

" **ಪರ್ಜನ್ಯಃ ಪಿತಾ ಮಹಿಷಸ್ಯ ಪರ್ಣಿನಃ** " (ಋ. ಸಂ. ೯-೮೨-೩) ಈ ಸೋಮನಿಗೆ ಪರ್ಜನ್ಯನೇ ಪಿತೃವು. ಇವನನ್ನೇ " **ಪರ್ಜನ್ಯವೃದ್ಧ** " ನೆಂದೂ ಕರೆದಿದೆ. (೯-೧೧೩-೩)

ಯಾವ ಶ್ಯೇನಪಕ್ಷಿಯು ಸೋಮನನ್ನು ಅಂತರಿಕ್ಷದಿಂದ ತಂದಿತು ಎಂಬ ಇತಿಹಾಸರೂಪವಾದ ವರ್ಣನವಿರುವುದೋ ಅದೇ ಶ್ಯೇನವು ಅಗ್ನಿರೂಪವಾಗಿಯೇ ಇರುತ್ತದೆ.

ನವಂ ನು ಸ್ತೋಮಮಗ್ನಯೇ ದಿವಃ ಶ್ಯೇನಾಯ ಜೀಜನಂ ।

(ಋ. ಸಂ. ೭-೧೫-೪)

ದ್ಯುಲೋಕಕ್ಕೆ ಶ್ಯೇನರೂಪನಾದ ಅಗ್ನಿಯು ವಿದ್ಯುದ್ರೂಪದ ಅಗ್ನಿಯ ಪಾಲಕನು ಎಂಬ ಅರ್ಥವು ಪ್ರಕೃತದಲ್ಲಿ ಉಚಿತವಾಗಿರುತ್ತದೆ.

(ಪಾರ್ಥಿವವಾದ ಸೋಮರಸವನ್ನು ರಕ್ಷಿಸಿ ದೇವತೆಗಳ ನಡುವೆ ಹಂಚುವ ಕೆಲಸವಿರುವುದರಿಂದ ಅಗ್ನಿಗೆ ಈ ವಿಶೇಷಣವು ಎಂಬ ಅರ್ಥಕ್ಕೆ ಪ್ರಕೃತದಲ್ಲಿ ಅವಕಾಶವಿಲ್ಲ.)

ಅಗ್ನಿಯು ದ್ಯಾವಾಪೃಥಿವಿಗಳೆರಡರಲ್ಲಿಯೂ ಪ್ರಭಾಯುತನಾಗಿ ಬೆಳಗುವುದನ್ನೂ ಮತ್ತು ಅಗ್ನಿಗೂ, ಉಷಸ್ಸಿಗೂ ಇರುವ ನಿತ್ಯಸಂಬಂಧವನ್ನೂ ಹಿಂದೆ ಅನೇಕಕಡೆಗಳಲ್ಲಿ ತಿಳಿಸಿದೆ.

ಸಂಹಿತಾಪಾಠಃ

ಶ್ರೇಣಾಮುದಾರೋ ಧರುಣೋ ರಯೀಣಾಂ ಮನೀಷಾಣಾಂ ಪ್ರಾರ್ಪಣಃ
ಸೋಮಗೋಪಾಃ ।
ವಸುಃ ಸೂನುಃ ಸಹಸೋ ಅಪ್ಸು ರಾಜಾ ವಿ ಭಾತ್ಯಗ್ರ ಉಷಸಾಮಿಧಾನಃ ॥

ಪದಪಾಠಃ

ಶ್ರೇಣಾಂ । ಉತ್ ಽಆರಃ । ಧರುಣಃ । ರಯೀಣಾಂ । ಮನೀಷಾಣಾಂ । ಪ್ರ ಽಅರ್ಪಣಃ । ಸೋಮ
ಗೋಪಾಃ ॥
ವಸುಃ । ಸೂನುಃ । ಸಹಸಃ । ಅಪ್ ಽಸು । ರಾಜಾ । ವಿ । ಭಾತಿ । ಅಗ್ರೇ । ಉಷಸಾಂ । ಇಧಾನಃ ॥

ಸಾಯಣಭಾಷ್ಯಂ

ಶ್ರೇಣಾಂ ವಿಭೂತೀನಾಮುದಾರ ಉದ್ಗಮಯಿತಾ ದಾತಾ ರಯೀಣಾಂ ಧನಾನಾಂ ಧರುಣೋ ಧಾರಕೋ ಮನೀಷಾಣಾಮೀಪ್ಸಿತಾರ್ಥಾನಾಂ ಪ್ರಾರ್ಪಣಃ ಪ್ರಾಪಯಿತಾ ಸೋಮಗೋಪಾಃ ಸೋಮಸ್ಯ ಗೋಪಾ ವಸುಃ ಸರ್ವಸ್ಯ ಲೋಕಸ್ಯ ವಾಸಕಃ ಸಹಸೋ ಬಲಸ್ಯ ಸೂನುರಪ್ಸೂದಕೇಷು ಸ್ಥಿತೋ ರಾಜಾ ಸರ್ವಸ್ಯೇಶ್ವರ ಉಷಸಾಮಗ್ರೇ ಪ್ರಭಾತಕಾಲ ಇಧಾನೋಽಗ್ನಿರ್ಹೋತ್ರಾರ್ಥಂ ಸಮಿಧ್ಯಮಾನೋಽಗ್ನಿರ್ವಿ ಭಾತಿ । ಪ್ರಕಾಶತೇ ॥

ಪ್ರತಿಪದಾರ್ಥ

ಶ್ರೇಣಾಂ—ಸಂಪತ್ತುಗಳಿಗೆ । ಉದಾರಃ—ದಾತನೂ । ರಯೀಣಾಂ—ಧನಗಳಿಗೆ । ಧರುಣಃ—ಧಾರಕನೂ । ಮನೀಷಾಣಾಂ—ಇಷ್ಟಾರ್ಥಗಳನ್ನೂ । ಪ್ರಾರ್ಪಣಃ—ಹೊಂದಿಸುವವನೂ । ಸೋಮಗೋಪಾಃ—ಸೋಮರಕ್ಷಕನೂ । ವಸುಃ—ಸಕಲಲೋಕವನ್ನೂ ವ್ಯಾಪಿಸುವವನೂ । ಸಹಸಃ ಸೂನುಃ—ಶಕ್ತಿಪುತ್ರನೂ ಽ ಅಪ್ಸು—ಉದಕಗಳಲ್ಲಿ ಸ್ಥಿತನೂ । ರಾಜಾ—ಪ್ರಭುವೂ । ಉಷಸಾಂ ಅಗ್ರೇ—ಉಷಃಕಾಲದ ಆವಿರ್ಭಾವ ಸಮಯದಲ್ಲಿ । ಇಧಾನಃ—ಪ್ರಜ್ವಲಿತನಾಗುವವನೂ ಆದ ಅಗ್ನಿಯು । ವಿ ಭಾತಿ—ಪ್ರಕಾಶಿಸುತ್ತಾನೆ.

ಭಾವಾರ್ಥ

ಸಂಪತ್ಪ್ರದನೂ, ಧನಗಳಿಗೆ ಧಾರಕನೂ, ಇಷ್ಟಾರ್ಥಪ್ರದನೂ, ಸೋಮರಕ್ಷಕನೂ, ಸಕಲ ಲೋಕವನ್ನೂ ವ್ಯಾಪಿಸುವವನೂ, ಶಕ್ತಿಪುತ್ರನೂ, ಉದಕಗಳಲ್ಲಿ ಸ್ಥಿತನೂ, ಪ್ರಭುವೂ, ಉಷಃಕಾಲದ ಆವಿರ್ಭಾವಸಮಯದಲ್ಲಿ ಪ್ರಜ್ವಲಿತನೂ ಆದ ಅಗ್ನಿಯು ಪ್ರಕಾಶಿಸುತ್ತಾನೆ.

English Translation

Liberal, exciter of splendours, depositary of riches, granter of desires, preserver of the Soma, the inhabiter (of the world), the son of strength, (placed) in the waters, the king (Agni) blazes, kindled at the commencement of dawn.

ಸಂಹಿತಾಪಾಠಃ

ವಿಶ್ವಸ್ಯ ಕೇತುರ್ಭುವನಸ್ಯ ಗರ್ಭ ಆ ರೋದಸೀ ಅಪೃಣಾಜ್ಜಾಯಮಾನಃ ।
ವೀಳುಂ ಚಿದದ್ರಿಮಭಿನತ್ಪರಾಯಞ್ಜನಾ ಯದಗ್ನಿಮಯಜಂತ ಪಂಚ ॥೬॥

ಪದಪಾಠಃ

ವಿಶ್ವಸ್ಯ । ಕೇತುಃ । ಭುವನಸ್ಯ । ಗರ್ಭಃ । ಆ । ರೋದಸೀ ಇತಿ । ಅಪೃಣಾತ್ । ಜಾಯಮಾನಃ ॥
ವೀಳುಂ । ಚಿತ್ । ಅದ್ರಿಂ । ಅಭಿನತ್ । ಪರಾಯನ್ । ಜನಾಃ । ಯತ್ । ಅಗ್ನಿಂ । ಅಯಜಂತ ।
ಪಂಚ ॥

ಸಾಯಣಭಾಷ್ಯಂ

ವಿಶ್ವಸ್ಯ ಸರ್ವಸ್ಯ ಕೇತುಃ ಪ್ರಜ್ಞಾಪಕೋ ಭುವನಸ್ಯೋದಕಸ್ಯ ಗರ್ಭೋ ಗರ್ಭಭೂತೋಽಗ್ನಿರ್ಜಾಯಮಾನಃ ಪ್ರಾದುರ್ಭವನ್ನೇವ ರೋದಸೀ ದ್ಯಾವಾಪೃಥಿವ್ಯಾವಾಪೃಣಾತ್ । ಆಪೂರಯತಿ । ಪರಾಯನ್ ಪರಾಗಚ್ಛನ್ ವೀಳುಂ ಚಿದ್ದೃಢಮಪ್ಯದ್ರಿಂ ಮೇಘಮಭಿನತ್ । ಭಿನತ್ತಿ ಚ । ಕದೇತ್ಯಾಹ-ಯದ್ಯದಾ ಪಂಚ ಜನಾ ಮನುಷ್ಯಾ ಅಗ್ನಿಮಯಜಂತ ಯಜಂತೇ ॥

ಪ್ರತಿಪದಾರ್ಥ

ವಿಶ್ವಸ್ಯ—ಸಕಲ ಲೋಕಕ್ಕೂ । **ಕೇತುಃ**—ಪ್ರಜ್ಞಾಪಕನೂ । **ಭುವನಸ್ಯ**—ಉದಕಕ್ಕೆ । **ಗರ್ಭಃ**—ಗರ್ಭಭೂತನೂ ಆದ ಅಗ್ನಿಯು । **ಜಾಯಮಾನಃ**—ಉತ್ಪನ್ನನಾಗುವಾಗಲೇ । **ರೋದಸೀ**—ದ್ಯಾವಾಪೃಥಿವಿಗಳನ್ನು । **ಆ ಪೃಣಾತ್**—ವ್ಯಾಪಿಸುತ್ತಾನೆ । **ಪರಾಯನ್**—ಸಂಚಾರಕಾಲದಲ್ಲಿ । **ಅದ್ರಿಂ**—ಮೇಘವನ್ನು । **ವೀಳುಂ ಚಿತ್**—ದೃಢವಾಗಿದ್ದರೂ ಸಹ । **ಅಭಿನತ್**—ಸೀಳುತ್ತಾನೆ । **ಯತ್**—ಆದುದರಿಂದಲೇ । **ಪಂಚಜನಾಃ**—ಐದು ವಿಧವಾದ ನಿಷಾದಾದಿ ಪಂಚ ಜನರೂ । **ಅಗ್ನಿಂ**—ಅಗ್ನಿಯನ್ನು । **ಅಯಜಂತ**—ಆರಾಧಿಸುತ್ತಾನೆ.

ಭಾವಾರ್ಥ

ಸಕಲ ಲೋಕಕ್ಕೂ ಪ್ರಜ್ಞಾಪಕನೂ, ಉದಕಕ್ಕೆ ಗರ್ಭಭೂತನೂ ಆದ ಅಗ್ನಿಯು ಉತ್ಪನ್ನವಾಗುವಾಗಲೇ ದ್ಯಾವಾಪೃಥಿವಿಗಳನ್ನು ವ್ಯಾಪಿಸುತ್ತಾನೆ. ಸಂಚಾರಕಾಲದಲ್ಲಿ ದೃಢವಾದ ಮೇಘವನ್ನೂ ಸೀಳುತ್ತಾನೆ. (ವೃಷ್ಟಿಯನ್ನು ಸುರಿಸುತ್ತಾನೆ) ಆದುದರಿಂದಲೇ ಪಂಚವರ್ಣಾತ್ಮಕವಾದ ಜನರೂ ಈ ಅಗ್ನಿಯನ್ನು ಆರಾಧಿಸುತ್ತಾರೆ.

English Translation

The manifester of all, the germ of the world, Agni, as soon as born fills heaven and earth (with light) : he fractures as he advances the solid cloud, for which the five classes of men praise him.

ಸಂಹಿತಾಪಾಠಃ

ಉಶಿಕ್ಪಾವಕೋ ಅರತಿಃ ಸುಮೇಧಾ ಮರ್ತೇಷ್ವಗ್ನಿರಮೃತೋ ನಿ ಧಾಯಿ ।
ಇಯರ್ತಿ ಧೂಮಮರುಷಂ ಭರಿಭ್ರದುಚ್ಛುಕ್ರೇಣ ಶೋಚಿಷಾ ದ್ಯಾಮಿನಕ್ಷನ್ ॥ ೭ ॥

ಪದಪಾಠಃ

ಉಶಿಕ್ । ಪಾವಕಃ । ಅರತಿಃ । ಸುಽಮೇಧಾಃ । ಮರ್ತೇಷು । ಅಗ್ನಿಃ । ಅಮೃತಃ । ನಿ । ಧಾಯಿ ॥
ಇಯರ್ತಿ । ಧೂಮಂ । ಅರುಷಂ । ಭರಿಭ್ರತ್ । ಉತ್ । ಶುಕ್ರೇಣ । ಶೋಚಿಷಾ । ದ್ಯಾಂ । ಇನಕ್ಷನ್ ॥

ಸಾಯಣಭಾಷ್ಯಂ

ಉಶಿಗ್ಭ್ಯವೀಂಷಿ ಕಾಮಯಮಾನಃ ಪಾವಕಃ ಸರ್ವಸ್ಯ ಲೋಕಸ್ಯ ಶೋಧಕೋಽರತಿರ್ಗಂತಾ ಭೂತಾನಾಮಾರಯಿತಾ ವಾ ಸುಮೇಧಾಃ ಸುಪ್ರಜ್ಞೋಽಮೃತೋ ಮರಣಧರ್ಮರಹಿತೋಽಗ್ನಿರ್ಮರ್ತೇಷು ಮನುಷ್ಯೇಷು ನಿ ಧಾಯಿ । ನಿಹಿತಃ । ಸೋಽಯಮಗ್ನಿರ್ಧೂಮಮಿಯರ್ತಿ । ಪ್ರೇರಯತಿ । ಕಿಂಚಾರುಷಮಾರೋಚಮಾನಂ ರೂಪಂ ಭರಿಭ್ರದ್ಭಾರಯನ್ನುಕ್ಲೇಣ ಶುಕ್ಲೇನ ಶೋಚಿಷಾ ರೋಚಿಷಾ ದ್ಯಾಂ ದಿವಮಿನಕ್ಷನ್ವ್ಯಾಪ್ನುವನ್ ಗಚ್ಛತೀತಿ ಶೇಷಃ ॥

ಪ್ರತಿಪದಾರ್ಥ

ಉಶಿಕ್—ಹವಿಸ್ಸುಗಳನ್ನ ಪೇಕ್ಷಿಸುವವನೂ । **ಪಾವಕಃ**—ಶುದ್ಧಿಕಾರಕನೂ । **ಅರತಿಃ**—ಶೀಘ್ರಗಾಮಿಯೂ । **ಸುಮೇಧಾಃ**—ಉತ್ತಮವಾದ ಪ್ರಜ್ಞೆಯುಳ್ಳವನೂ । **ಅಮೃತಃ**—ಮರಣರಹಿತನೂ ಆದ । **ಅಗ್ನಿಃ**—ಅಗ್ನಿಯು । **ಮರ್ತೇಷು**—ಮಾನವರಲ್ಲಿ । **ನಿಧಾಯಿ**—ಸ್ಥಾಪಿತನಾಗಿದ್ದಾನೆ । **ಧೂಮಂ**—ಹೊಗೆಯನ್ನು । **ಉತ್ ಇಯರ್ತಿ**—ಪ್ರೇರಿಸುತ್ತಾನೆ । **ಅರುಷಂ**—ಆಕರ್ಷಕವಾದ ರೂಪವನ್ನು । **ಭರಿಭ್ರತ್**—ಧರಿಸುತ್ತ । **ಶುಕ್ರೇಣ**—ಶುಭ್ರವಾದ । **ಶೋಚಿಷಾ**—ಕಾಂತಿಯಿಂದ ಕೂಡಿ । **ದ್ಯಾಂ**—ದ್ಯುಲೋಕವನ್ನು । **ಇನಕ್ಷನ್**—ವ್ಯಾಪಿಸುತ್ತಾನೆ.

ಭಾವಾರ್ಥ

ಹವಿಸ್ಸುಗಳನ್ನಪೇಕ್ಷಿಸುವವನೂ, ಶುದ್ಧಿಕಾರಕನೂ, ಶೀಘ್ರಗಾಮಿಯೂ, ಉತ್ತಮವಾದ ಪ್ರಜ್ಞೆಯುಳ್ಳವನೂ, ಮರಣಧರ್ಮರಹಿತನೂ ಆದ ಅಗ್ನಿಯು ಮಾನವರಲ್ಲಿ ಸ್ಥಾಪಿತನಾಗಿದ್ದಾನೆ. ಹೊಗೆಯನ್ನು ಹರಡುತ್ತಾನೆ. ಆಕರ್ಷಕವಾದ ರೂಪವನ್ನು ಧರಿಸಿ ಶುಭ್ರವಾದ ಕಾಂತಿಯಿಂದ ಕೂಡಿ ದ್ಯುಲೋಕವನ್ನು ವ್ಯಾಪಿಸುತ್ತಾನೆ.

English Translation

Desiring (oblations), purifying, moving quickly, sagacious, immortal, Agni has been stationed among mortals : he sends forth the smoke, and goes wearing a radiant (form), and pervading the heaven with brilliant lustre.

ಸಂಹಿತಾಪಾಠಃ

ದೃಶಾನೋ ರುಕ್ಮ ಉರ್ವಿಯಾ ವ್ಯದ್ಯೌದ್ದುರ್ಮರ್ಷಮಾಯುಃ ಶ್ರಿಯೇ ರುಚಾನಃ ।
ಅಗ್ನಿರಮೃತೋ ಅಭವದ್ವಯೋಭಿರ್ಯದೇನಂ ದ್ಯೌರ್ಜನಯತ್ಸುರೇತಾಃ ॥೮॥

ಪದಪಾಠಃ

ದೃಶಾನಃ । ರುಕ್ಮಃ । ಉರ್ವಿಯಾ । ವಿ । ಅದ್ಯೌತ್ । ದುಃಮರ್ಷಂ । ಆಯುಃ । ಶ್ರಿಯೇ । ರುಚಾನಃ ॥
ಅಗ್ನಿಃ । ಅಮೃತಃ । ಅಭವತ್ । ವಯೋಭಿಃ । ಯತ್ । ಏನಂ । ದ್ಯೌಃ । ಜನಯತ್ । ಸುಃರೇತಾಃ ॥

ಸಾಯಣಭಾಷ್ಯಂ

ದೃಶಾನಃ ಪ್ರತ್ಯಕ್ಷೇಣ ದೃಶ್ಯಮಾನೋ ರುಕ್ಮೋ ರೋಚಮಾನೋಽಗ್ನಿರುರ್ವಿಯೋರ್ವತ್ಯಂತಂ ವ್ಯದ್ಯೌತ್ । ವಿದ್ಯೋತತೇ । ಕಿಂಚಾಯುರ್ಗಂತಾ ಸ ಸರ್ವತೋಽಯಮಗ್ನಿಃ ಶ್ರಿಯೇ ವಿಭೂತ್ಯೈ ದುರ್ಮರ್ಷಂ ದುರಭಿಭವಂ ಯಥಾ ಭವತಿ ತಥಾ ರುಚಾನೋ ರೋಚಮಾನೋ ಭವತಿ । ಸೋಽಯಮಗ್ನಿರ್ವಯೋಭಿರನ್ನೈರ್ವನಸ್ಪತಿಭಿರಮೃತೋ ಮರಣರಹಿತೋಽಭವತ್ ಯದ್ಯಸ್ಮಾತ್ಕಾರಣಾದೇನಮಗ್ನಿಂ ಸುರೇತಾಃ ಶೋಭನರೇತಸ್ಕೋ ದ್ಯೌಃ ಪ್ರಾಣ ಆದಿತ್ಯೋ ವಾ ಜನಯತ್ ಜನಯತಿ ॥

ಪ್ರತಿಪದಾರ್ಥ

ಆಯುಃ—ಸರ್ವಗಾಮಿಯೂ । **ಶ್ರಿಯೇ**—ಸಂಪತ್ತಿಗಾಗಿ । **ದುರ್ಮರ್ಷಂ**—ಅಪ್ರತಿಹತನಾಗಿ । **ರುಚಾನಃ**—ಶೋಭಿಸುತ್ತಲೂ ಇರುವವನೂ । **ದೃಶಾನಃ**—ಪ್ರತ್ಯಕ್ಷಗೋಚರನೂ । **ರುಕ್ಮಃ**—ಆಕರ್ಷಕವಾದ ರೂಪ

ವುಳ್ಳವನೂ ಆದ ಅಗ್ನಿಯು | **ಉರ್ವಿಯಾ**—ಅತ್ಯಂತ ವಿಸ್ತೃತನಾಗಿ | **ವ್ಯದ್ಯೌತ್**—ಪ್ರಕಾಶಿಸುತ್ತಾನೆ | **ಯತ್**—ಯಾವ ನಿಮಿತ್ತವಾಗಿ | **ಏನಂ**—ಈ ಅಗ್ನಿಯನ್ನು | **ಸುರೇತಾಃ**—ಉತ್ತಮವಾದ ವೀರ್ಯವುಳ್ಳ | **ದ್ಯೌಃ**—ಆದಿತ್ಯನು | **ಜನಯತ್**—ಉತ್ಪನ್ನಮಾಡಿದನೋ | ಆದುದರಿಂದಲೇ **ಅಗ್ನಿಂ**—ಅಗ್ನಿಯು | **ವಯೋಭಿಃ**—ವನಸ್ಪತಿರೂಪಗಳಾದ ಅನ್ನಗಳಿಂದ | **ಅಮೃತಃ**—ಮರಣಧರ್ಮರಹಿತನಾಗಿ | **ಅಭವತ್**—ಆದನು.

ಭಾವಾರ್ಥ

ಸರ್ವಗಾಮಿಯೂ, ಸಂಪತ್ತಿಗಾಗಿ ಅಪ್ರತಿಹತನಾಗಿ ಶೋಭಿಸುತ್ತಿರುವವನೂ, ಪ್ರತ್ಯಕ್ಷಗೋಚರನೂ, ಆಕರ್ಷಕವಾದ ರೂಪವುಳ್ಳವನೂ ಆದ ಅಗ್ನಿಯು ಅತ್ಯಂತ ವಿಸ್ತೃತನಾಗಿ ಪ್ರಕಾಶಿಸುತ್ತಾನೆ. ಯಾವ ನಿಮಿತ್ತವಾಗಿ ಈ ಅಗ್ನಿಯನ್ನು ಉತ್ತಮವಾದ ವೀರ್ಯವುಳ್ಳ ಆದಿತ್ಯನು ಉತ್ಪನ್ನಮಾಡಿದನೋ ಆದುದರಿಂದಲೇ, ಅಗ್ನಿಯು ವನಸ್ಪತಿ ರೂಪಗಳಾದ ಅನ್ನಗಳಿಂದ ಮರಣಧರ್ಮರಹಿತನಾಗಿ ಆದನು. (ನಿತ್ಯನಾದನು)

English Translation

Conspicuous, glorious, Agni shines with great splendour, moving everywhere, and blazing unsurpassingly with glory : Agni became immortal through the food (of sacrifice) when the prolific heaven engendered him.

ವಿಶೇಷವಿಷಯಗಳು

ಅಗ್ನಿಃ ಅಮೃತಃ ಅಭವತ್ — ಅಗ್ನಿಯು ಮರಣರಾಹಿತ್ಯವನ್ನು ಹೊಂದಿದನು ಎಂಬುದು ಋಕ್ಕಿನ ಮುಖ್ಯವಾದ ಅಭಿಪ್ರಾಯ. ಅದಕ್ಕೆ ಕಾರಣವನ್ನು ಈ ರೀತಿ ತಿಳಿಸಿದೆ. **ಯತ್ ಸುರೇತಾಃ ದ್ಯೌಃ ಜನಯತ್** ಯಾವ ಕಾರಣಕ್ಕಾಗಿ ಉತ್ತಮವಾದ ರೇತಸ್ಸುಳ್ಳ ಆದಿತ್ಯನು ಅಗ್ನಿಯ ಜನ್ಮಕ್ಕೆ ಕಾರಣನಾದನೋ, ಆದುದರಿಂದಲೇ ಅಗ್ನಿಯ ಮರಣರಾಹಿತ್ಯವೆಂದು ತಿಳಿಸಿದೆ. ಈ ಋಕ್ಕನ್ನು ಶತಪಥಬ್ರಾಹ್ಮಣದಲ್ಲಿ ಈ ರೀತಿ ವಿವರಿಸಿದೆ.

ದೃಶಾನೋ ರುಕ್ಮ ಉರ್ವ್ಯಾ ವ್ಯದ್ಯೌದಿತಿ । ದೃಶ್ಯಮಾನೋ ಹ್ಯೇಷ ರುಕ್ಮ ಉರ್ವ್ಯಾ ವಿದ್ಯೋತತೇ ದುರ್ಮರ್ಷಮಾಯುಃ ಶ್ರಿಯೇ ರುಚಾನ ಇತಿ ದುರ್ಮರಂ ವಾ ಏತಸ್ಯಾಯುಃ ಶ್ರಿಯೋ ಏಷ ರೋಚತೇऽಗ್ನಿರಮೃತೋऽಭವದ್ವಯೋಭಿರಿತಿ ಸರ್ವೈರ್ವಾ ಏಷ ವಯೋಭಿರಮೃತೋऽಭವದ್ಯದೇನಂ ದ್ಯೌರಜನಯದಿತಿ ದ್ಯೌರ್ವಾ ಏತಮಜನಯತ್ಸುರೇತಾ ಇತಿ ಸುರೇತಾ ಹ್ಯೇಷಾ ಯಸ್ಯಾ ಏಷ ರೇತಃ ॥

(ಶ. ಬ್ರಾ. ೬-೭-೨-೨)

ಸುವರ್ಣಮಯವಾದ ಬಿಂಬದಂತೆ ಗೋಚರನಾಗಿರುವ ಈ ಅಗ್ನಿಯು (ಆದಿತ್ಯನು) ತನ್ನ ಪ್ರಭೆಯನ್ನು ವಿಸ್ತರಿಸಿ ಪ್ರಕಾಶಿಸುತ್ತಾನೆ. ಲೋಕದ ಶ್ರೇಯಸ್ಸಿಗಾಗಿ ಪ್ರಕಾಶಿಸುವ ಈ ಬಿಂಬದ ಆಯುಸ್ಸು ಕ್ಷಯಿಸುವುದೇ ಇಲ್ಲ. ಯಾವಾಗ ಅಂತರಿಕ್ಷವು (ಆದಿತ್ಯನು) ಇವನಿಗೆ ಜನ್ಮವನ್ನಿತ್ತಿತೋ ಆಗಲೇ ಇವನು ಅಮರ್ತ್ಯನಾದನು. ಅಧಿಕವಾದ ಶಕ್ತಿಯುತನಾದನು. ಯಾವಾಗ ಅಂತರಿಕ್ಷವು ಅಗ್ನಿರೂಪವಾದ ಗರ್ಭ (ರೇತಸ್ಸು) ವನ್ನು ಧರಿಸಿತೋ ಆಗಲೇ ಅದರ ಗರ್ಭವು ಶೋಭನಾತ್ಮಕವಾದ ಶಕ್ತಿಯುಳ್ಳದ್ದಾಯಿತು. ಇದು ಸತ್ಯಾತ್ಮಕವಾದುದರಿಂದಲೇ ಈ ಶಕ್ತಿಯುಂಟಾಯಿತು. ಹೇಗೆಂದರೆ—

ರುಕ್ಮಂ ಪ್ರತಿಮುಚ್ಯ ಬಿಭರ್ತಿ । ತಸ್ಯಗ್ಂ ಹೈತದ್ಯದ್ರುಕ್ಮಃ ಸತ್ಯಂ ವಾ ಏತಂ ಯಂತು ಮರ್ಹತಿ ಸತ್ಯೇನೈತಂ ದೇವಾ ಅಬಿಭರುಃ ಸತ್ಯೇನೈವೈನ ಮೇ ತದ್ಬಿಭರ್ತಿ ॥

(ಶ. ಬ್ರಾ. ೬-೭-೧-೧)

ಯಾವ ಹೊಂಬಣ್ಣದ ಸುವರ್ಣಮಯವಾದ ಬಿಂಬವನ್ನು ಯಜಮಾನನಿಂದಿಗೆಯಲ್ಲಿ ಧರಿಸುವರೋ ಅದೇ ಸತ್ಯದ ಪ್ರತಿಬಿಂಬವು. ಸತ್ಯವೇ ಅಗ್ನಿಯನ್ನು ಧರಿಸುವ ಶಕ್ತಿಯನ್ನು ಹೊಂದಿರುತ್ತದೆ. ಸತ್ಯದಿಂದಲೇ ದೇವತೆಗಳು ಈ ಬಿಂಬವನ್ನು ಧರಿಸಿಲ್ಲವೆ? ಎಂದು ಕೇಳಿದ್ದರೆ ಇವನೂ ಈಗ ಇವನ್ನು ಧರಿಸಿಲ್ಲವೆನ್ನಬೇಕಾಗಿಲ್ಲ.

ತದ್ಯತ್ತತ್ಸತ್ಯಂ । ಅಸೌ ಸ ಆದಿತ್ಯಃ । ಸ ಹಿರಣ್ಮಯೋ ಭವತಿ ಜ್ಯೋತಿರ್ವೈ ಹಿರಣ್ಮಯಂ ಜ್ಯೋತಿರೇವೋತ್ತಮಮೃತಗ್ಂ ಹಿರಣ್ಮಯಮಮ್ಯೇವೈಷ ಪರಿಮಂಡಲೋ ಭವತಿ ।

(ಶ. ಬ್ರಾ. ೬-೭-೧-೨)

ಅಂತಃಪ್ರವೇಶಿಸಲ್ಪಡುವ ಆದಿತ್ಯನೇ ಸತ್ಯವು. ಸ್ವರ್ಗವೂ ತೇಜೋಮಯವಾಗಿದೆ. ಆದಿತ್ಯನೂ ತೇಜೋಮಯ ರೂಪನೆನಿಸಿದ್ದಾನೆ. ಸ್ವರ್ಗವೂ ಅಮೃತಮಯವು. ಆದಿತ್ಯನೂ ಅಮೃತಮಯನು. ಆದುದರಿಂದಲೇ ಆದಿತ್ಯನ ಮಂಡಲವನ್ನು ಪ್ರತಿಬಿಂಬಿಸುವ ಈ ಸುವರ್ಣಬಿಂಬವನ್ನು ಧರಿಸುವುದು ಮತ್ತು ಯಾವುದನ್ನೂ ಸುವರ್ಣಮಯವೆಂದು ಕಲ್ಪಿಸಿ ಸುವರ್ಣರೂಪವಾದ ಶೋಭೆಯ ಈ ತೇಜಸ್ಸನ್ನು ಅರ್ಜಿಸಿಕೊಳ್ಳಬೇಕಾಗಿದೆ.

ಪ್ರಕೃತವಾದ ಹಿರಣ್ಮಯನಲ್ಲಿ ಅರ್ಜಿತವಾಗಿರುವುದೂ ಸಹ ಈ ಹೊಂಬಣ್ಣದ ರೂಪವುಳ್ಳ ಅಗ್ನಿಯು ಆಕರ್ಷಕವಾದ ತೇಜಸ್ಸೇ ಆಗಿರುತ್ತದೆ. ಆದುತ್ಯರೂಪನಾದ ಈ ಅಗ್ನಿಯು ಅಧಿಕವಾದ ಆದುತ್ಯಪ್ರಭೆಯಿಂದಲೂ ಕೂಡಿದೆ ಈ ಅಗ್ನಿಯು ಲೋಕದ ಶ್ರೇಯಸ್ಸಿಗಾಗಿ ಬಳಕೆಯಾಗುತ್ತಿದ್ದಾನೆ. ಇವನ ಪ್ರಭೆಯು ನಿತ್ಯವಾಯಿದು.

ಸಂಹಿತಾಪಾಠಃ

ಯಸ್ತೇ ಅದ್ಯ ಕೃಣವದ್ಭದ್ರಶೋಚೇಽಪೂಪಂ ದೇವ ಘೃತವಂತಮಗ್ನೇ ।

ಪ್ರ ತಂ ನಯ ಪ್ರತರಂ ವಸ್ಯೋ ಅಚ್ಛಾಭಿ ಸುಮ್ನಂ ದೇವಭಕ್ತಂ ಯವಿಷ್ಠ ।

ಪದಪಾಠಃ

ಯಃ । ತೇ । ಅದ್ಯ । ಕೃಣವತ್ । ಭದ್ರಶೋಚೇ । ಅಪೂಪಂ । ದೇವ । ಘೃತವಂತಂ । ಅಗ್ನೇ ॥

ಪ್ರ । ತಂ । ನಯ । ಪ್ರತರಂ । ವಸ್ಯಃ । ಅಚ್ಛ । ಅಭಿ । ಸುಮ್ನಂ । ದೇವಭಕ್ತಂ । ಯವಿಷ್ಠ ॥

ಸಾಯಣಭಾಷ್ಯಂ

ಹೇ ಭದ್ರಶೋಚೇ ಕಲ್ಯಾಣದೀಪ್ತೇ ಹೇ ದೇವ ದ್ಯೋತಮಾನ ಯವಿಷ್ಠ ಯುವತಮಾಗ್ನೇ ತೇ ತುಭ್ಯಂ ಯೋ ಯಜಮಾನೋಽದ್ಯಾಸ್ಮಿನ್ನಹನಿ ಘೃತವಂತಂ ಘೃತೇನ ಯುಕ್ತಮಪೂಪಂ ಪುರೋಡಾಶಂ

अत्यर्थं प्राप्नुयेः । तथा देवभक्तं स्तुतिभिर्हविर्भिश्च देवानां संभक्तारं सेवितारं तं यजमानं सुम्नं सुखमभि प्रति प्र नयेः ॥

प्रतिपदार्थ

भद्रशोचे—कल्याणात्मकवाद प्रभेयुळ्ळवनू । **देव**—प्रकाशमाननू । **यविष्ठ**—अत्यंत युवकनू आद । **अग्ने**—एलै अग्नियेः । **ते**—निन्नन्नुद्देशिसि । **यः**—यावं यजमाननु । **अद्य**—इंदु । **घृतवंतं**—आज्यदिंद कूडिद । **अपूपं**—पुरोडाशवन्नु । **कृणवत्**—अर्पिसुवनो । **प्रतरं**—अंतह श्रेष्ठनाद यजमाननन्नु । **वस्यः अच्छ**—उत्तमवाद संपत्तिगभिमुखवागि । **प्र नयेः**—करेतंदु सेरिसु । **देवभक्तं**—देवतेगळन्नु पूजिसुव । **तं**—आदे यजमाननन्नु । **सुम्नं अभि**—सुखक्के अभिमुखवागि । (**प्र नयेः**—करेतंदु सेरिसु.)

भावार्थ

कल्याणात्मकवाद प्रभेयुळ्ळवनू, प्रकाशमाननू, अत्यंत युवकनू आद एलै अग्नियेः, निन्नन्नुद्देशिसि यावं यजमाननु इंदु आज्यदिंद कूडिद पुरोडाशवन्नु अर्पिसुवनो अंतह श्रेष्ठनाद यजमाननिगे उत्तमवाद संपत्तन्नु ओदगिसु. देवतेगळन्नु पूजिसुव यजमाननिगे उत्तमवाद सुखवन्नुंटुमाडु.

English Translation

Auspiciously radiant and divine Agni, youngest (of the gods), grant ample wealth to the eminent (worshipper), who presents to you to-day cakes dressed with butter, and confer happiness upon one devoted to the gods.

संहितापाठः

आ तं भज सौश्रवसेष्वग्न उक्थ उक्थ आ भज शस्यमाने ।

प्रियः सूर्ये प्रियो अग्ना भवात्युज्जातेन भिनददुज्जनित्वैः

पदपाठः

आ । तं । भज । सौश्रवसेषु । अग्ने । उक्थेऽउक्थे । आ । भज । शस्यमाने ॥

प्रियः । सूर्ये । प्रियः । अग्ना । भवाति । उत् । जातेन । भिनदत् । उत् । जनित्वैः ॥

ಸಾಯಣಭಾಷ್ಯಂ

ಹೇ ಅಗ್ನೇ ತ್ವಂ ಸೌಶ್ರವಸೇಷು । ಶೋಭನಾನಿ ಶ್ರವಾಂಸ್ಯನ್ನಾನಿ ಹವೀಂಷಿ ಯೇಷು ಕರ್ಮಸು ತಾನಿ ಸೌಶ್ರವಸಾನಿ । ತೇಷು ಕ್ರಿಯಮಾಣೇಷು ತಂ ಯಜಮಾನಂ ಸ್ತೋತಾರಂ ವಾ ಭಜ । ಅಭೀಷ್ಟ-ಫಲಪ್ರದಾನೇನ ಸೇವಸ್ವ । ಕಿಂಚೋಕ್ಥೇ ಶಸ್ತ್ರೇ ಶಸ್ಯಮಾನೇ ಪಠ್ಯಮಾನೇ ಸತಿ ತವಾ ಭಜ । ಅಭೀಷ್ಟ-ಫಲಪ್ರದಾನೇನೈವ ಸೇವಸ್ವ । ಸೋಽಯಂ ಯಜಮಾನಃ ಸ್ತೋತಾ ವಾ ಸೂರ್ಯೇ ಪ್ರಿಯೋ ಭವಾತಿ । ಭವತು । ತಥಾಗ್ನಾಗ್ನಾವಪಿ ಪ್ರಿಯೋ ಭವಾತಿ । ಕಿಂಚ ಸೋಽಯಂ ಜಾತೇನೋತ್ಪನ್ನೇನ ಪುತ್ರೇಣೋದ್ಭಿನದತ್ । ಶತ್ರೂನ್ವಿದಾರಯತು । ತಥಾ ಜನಿತ್ವೈರ್ಜನಯಿಷ್ಯಮಾಣೈಶ್ಚ ಪುತ್ರೈಃ ಶತ್ರೂನುದ್ಭಿನದತ್ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಸೌಶ್ರವಸೇಷು**—ಉತ್ತಮವಾದ ಹವಿಸ್ಸನ್ನು ಅರ್ಪಿಸುವಾಗ । **ತಂ**—ಯಜಮಾನನನ್ನು । **ಆ ಭಜ**—ಇಷ್ಟಾರ್ಥಪ್ರದಾನಗಳಿಂದ ಸಂತೋಷಗೊಳಿಸು । **ಉಕ್ಥೇ ಉಕ್ಥೇ**—ಸ್ತೋತ್ರವು (ಪುನಃ ಪುನಃ) । **ಶಸ್ಯಮಾನೇ**—ಪಠಿತವಾಗುವ ಕಾಲದಲ್ಲೂ । **ತಂ**—ಆ ಸ್ತುತಿಕರ್ತನನ್ನು । **ಆ ಭಜ**—ಸಂತೋಷಗೊಳಿಸು । (**ಸಃ**—ಆ ಯಜಮಾನನು) **ಸೂರ್ಯೇ**—ಸೂರ್ಯನಿಗೆ । **ಪ್ರಿಯಃ**—ಪ್ರೀತಿಪಾತ್ರನಾಗಿ । **ಭವಾತಿ**—ಆಗಲಿ । **ಅಗ್ನಾ**—ಅಗ್ನಿಗೂ । **ಪ್ರಿಯಃ**—ಪ್ರೀತಿಪಾತ್ರನಾಗಲಿ । **ಜಾತೇನ**—ತನ್ನ ಪುತ್ರಾದಿಗಳೊಡನೆ । **ಉತ್ಭಿನದತ್**—ಶತ್ರುಗಳನ್ನು ನಾಶಮಾಡಲಿ । **ಜನಿತ್ವೈಃ**—ಮುಂದೆ ಹುಟ್ಟುವ ಪುತ್ರಾದಿಗಳೊಡನೆಯೂ । **ಉತ್**—ಶತ್ರುಗಳನ್ನು ನಾಶಮಾಡಲಿ.

ಭಾವಾರ್ಥ

ಎಲೈ ಅಗ್ನಿಯೇ, ಉತ್ತಮವಾದ ಹವಿಸ್ಸನ್ನು ಅರ್ಪಿಸುವ ಕಾಲದಲ್ಲೂ ಅನೇಕ ವಿಧವಾದ ಸ್ತುತಿಯನ್ನು ಪಠಿಸುವ ಕಾಲದಲ್ಲೂ ಸಹ ಯಜಮಾನನಾದ ಸ್ತುತಿಕರ್ತನನ್ನು ಅವನ ಇಷ್ಟಾರ್ಥಪ್ರದಾನಾದಿಗಳಿಂದ ಸುಖಪಡಿಸು. ಆ ಯಜಮಾನನು ಸೂರ್ಯನಿಗೂ, ಅಗ್ನಿಗೂ ಪ್ರೀತಿಪಾತ್ರನಾಗಲಿ. ಈಗ ಹುಟ್ಟಿರುವ ಮತ್ತು ಮುಂದೆ ಹುಟ್ಟುವ ತನ್ನ ಸಕಲ ಪುತ್ರಾದಿಗಳೊಡನೆಯೂ ಕೂಡಿ ಶತ್ರುಗಳನ್ನು ನಾಶಮಾಡಲಿ.

English Translation

Prosper the worshipper, Agni, when beautiful sacrificial viands (are being offered), when sacred praises are being recited (by him). May he be dear to Surya, dear to Agni; may he by a son born, or sons to be born, overcome (his foes).

ಸಂಹಿತಾಪಾಠಃ

ತ್ವಾಮ॑ಗ್ನೇ ಯಜ॑ಮಾನಾ ಅನು॒ ದ್ಯೂನ್ವಿಶ್ವಾ॒ ವಸು॑ ದಧಿರೇ॒ ವಾರ್ಯಾ॑ಣಿ ।

ತ್ವಯಾ ಸಹ ದ್ರವಿಣಮಿಚ್ಛಮಾನಾ ವ್ರಜಂ ಗೋಮಂತಮುಶಿಜೋ ವಿ ವವ್ರುಃ ॥ ೧೧ ॥

ಪದಪಾಠಃ

ತ್ವಾಂ । ಅಗ್ನೇ । ಯಜಮಾನಾಃ । ಅನು । ದ್ಯೂನ್ । ವಿಶ್ವಾ । ವಸು । ದಧಿರೇ । ವಾರ್ಯಾಣಿ ॥

ತ್ವಯಾ । ಸಹ । ದ್ರವಿಣಂ । ಇಚ್ಛಮಾನಾಃ । ವ್ರಜಂ । ಗೋಽಮಂತಂ । ಉಶಿಜಃ । ವಿ । ವವ್ರುಃ ॥

ಸಾಯಣಭಾಷ್ಯಂ

ಹೇ ಅಗ್ನೇ ತ್ವಾಂ ಪ್ರತಿ ಯಜಮಾನಾ ಅನು ದ್ಯೂನ್ ಪ್ರತ್ಯಹಂ ವಿಶ್ವಾ ವಿಶ್ವಾನಿ ವಾರ್ಯಾಣಿ ವರಣೀಯಾನಿ ವಸು ವಸೂನಿ ಧನಾನಿ ದಧಿರೇ । ಧಾರಯಂತಿ । ಕಿಂಚ ತ್ವಯಾ ಸಹ ದ್ರವಿಣಮಸುರೈರಪಹೃತಂ ಗೋರೂಪಂ ಧನಮಿಚ್ಛಮಾನಾಃ ಕಾಮಯಮಾನಾ ಉಶಿಜೋ ಮೇಧಾವಿನೋ ದೇವಾ ಗೋಮಂತಂ ಪಶುಮಂತಂ ವ್ರಜಂ ವಿ ವವ್ರುಃ । ವಿವೃತದ್ವಾರಂ ಕೃತವಂತಃ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ತ್ವಾಂ**—ನಿನ್ನನ್ನುದ್ದೇಶಿಸಿ । **ಯಜಮಾನಾಃ**—ಯಜಮಾನರು । **ಅನು-ದ್ಯೂನ್**—ಪ್ರತಿದಿನವೂ । **ವಾರ್ಯಾ**—ಅತ್ಯಪೇಕ್ಷಿತವಾದ । **ವಿಶ್ವಾ ವಸು**—ಸಕಲ ಧನಗಳನ್ನೂ । **ದಧಿರೇ**—ಧರಿಸಿದ್ದಾರೆ । **ತ್ವಯಾ ಸಹ**—ನಿನ್ನೊಡನೆ । **ದ್ರವಿಣಂ**—ಧನವನ್ನು । **ಇಚ್ಛಮಾನಾಃ**—ಅಪೇಕ್ಷಿಸಿದ । **ಉಶಿಜಃ**—ದೇವತೆಗಳು । **ಗೋಮಂತಂ**—ಪಶುಯುಕ್ತವಾದ । **ವ್ರಜಂ**—ಕೊಟ್ಟಿಗೆಯನ್ನು । **ವಿ ವವ್ರುಃ**—ತೆರೆದಿದ್ದಾರೆ.

ಭಾವಾರ್ಥ

ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿ ಯಜಮಾನರು ಪ್ರತಿದಿನವೂ ಅಪೇಕ್ಷಿತವಾದ ಸಕಲ ಧನಗಳನ್ನೂ (ಹವಿಸ್ಸನ್ನೂ) ಧರಿಸಿದ್ದಾರೆ. ನಿನ್ನೊಡನೆ ಧನವನ್ನಪೇಕ್ಷಿಸಿದ ದೇವತೆಗಳು ಪಶುಯುಕ್ತವಾದ ಕೊಟ್ಟಿಗೆಯನ್ನು ತೆರೆದಿದ್ದಾರೆ.

English Translation

To you, Agni, the worshippers offer daily all desirable treasures; (abiding) with you, desirious of wealth, the sages have set open the pasturage frequented by cattle.

ಸಂಹಿತಾಪಾಠಃ

ಅಸ್ತ್ಯಗ್ನಿರ್ನರಾಂ ಸುಶೇವೋ ವೈಶ್ವಾನರ ಋಷಿಭಿಃ ಸೋಮಗೋಪಾಃ ।
ಅದ್ವೇಷೇ ದ್ಯಾವಾಪೃಥಿವೀ ಹುವೇಮ ದೇವಾ ಧತ್ತ ರಯಿಮಸ್ಮೇ ಸುವೀರಂ॥

ಪದಪಾಠಃ

ಅಸ್ತಿ । ಅಗ್ನಿಃ । ನರಾಂ । ಸುಽಶೇವಃ । ವೈಶ್ವಾನರಃ । ಋಷಿಽಭಿಃ । ಸೋಮಽಗೋಪಾಃ ॥
ಅದ್ವೇಷೇ ಇತಿ । ದ್ಯಾವಾಪೃಥಿವೀ ಇತಿ । ಹುವೇಮ । ದೇವಾಃ । ಧತ್ತ । ರಯಿಂ । ಅಸ್ಮೇ ಇತಿ । ಸುಽವೀರಂ ॥

ಸಾಯಣಭಾಷ್ಯಂ

ಅದ್ವೇಷೇ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಹುವೇಮ । ವಯಂ ಹ್ವಯೇಮ । ಕಿಂಚ ಹೇ ದೇವಾಃ ಯೂಯಂ ಸುವೀರಂ ಶೋಭನಪುತ್ರಾದ್ಯುಪೇತಂ ರಯಿಂ ಧನಮಸ್ಮೇ ಅಸ್ಮಾಸು ಧತ್ತ । ಧಾರಯತ ॥

ಪ್ರತಿಪದಾರ್ಥ

ನರಾಂ—ಮಾನವರಿಗೆ । **ಸುಶೇವಃ**—ಉತ್ತಮವಾದ ಸುಖಪ್ರದನೂ । **ವೈಶ್ವಾನರಃ**—ವೈಶ್ವಾನರಸಂಜ್ಞಕನೂ । **ಸೋಮಗೋಪಾಃ**—ಸೋಮವನ್ನು ರಕ್ಷಿಸುವವನೂ ಆದ । **ಅಗ್ನಿಃ**—ಅಗ್ನಿಯು । **ಋಷಿಭಿಃ**—ಋಷಿಗಳಿಂದ । **ಅಸ್ತಾವಿ**—ಪ್ರಶಂಸಿಸಲ್ಪಡುತ್ತಾನೆ । **ಅದ್ವೇಷೇ**—ದ್ವೇಷರಹಿತರಾದ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳನ್ನು । **ಹುವೇಮ**—ಪ್ರಾರ್ಥಿಸಿ ಕರೆಯುತ್ತೇವೆ । **ದೇವಾಃ**—ಎಲೈ ದೇವತೆಗಳೇ । **ಸುವೀರಂ**—ಉತ್ತಮವಾದ ವೀರಪುತ್ರರಿಂದ ಕೂಡಿದ । **ರಯಿಂ**—ಧನವನ್ನು । **ಅಸ್ಮೇ**—ನಮ್ಮಲ್ಲಿ । **ಧತ್ತ**—ಸ್ಥಾಪಿಸಿರಿ.

ಭಾವಾರ್ಥ

ಮಾನವರಿಗೆ ಉತ್ತಮವಾದ ಸುಖಪ್ರದನೂ, ವೈಶ್ವಾನರಸಂಜ್ಞಕನೂ, ಸೋಮರಕ್ಷಕನೂ ಆದ ಅಗ್ನಿಯು ಋಷಿಗಳಿಂದ ಪ್ರಶಂಸಿಸಲ್ಪಡುತ್ತಾನೆ. ದ್ವೇಷರಹಿತರಾದ ದ್ಯಾವಾಪೃಥಿವಿಗಳನ್ನು ನಾವು ಈಗ ಪ್ರಾರ್ಥಿಸಿ ಕರೆಯುತ್ತೇವೆ. ಎಲೈ ದೇವತೆಗಳೇ, ಉತ್ತಮವಾದ ವೀರಪುತ್ರರಿಂದ ಕೂಡಿದ ಧನವನ್ನು ನಮ್ಮಲ್ಲಿ ಸ್ಥಾಪಿಸಿರಿ.

English Translation

Agni, you are very dear to men; Vaishwanara, the guardian of the Soma, has been glorified by the Rishis : we invoke the friendly heaven and earth : grant us, gods, riches and male offspring.

*

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯೇನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕವೀರಬುಕ್ಕಮಹೀಪಾಲಸಾಮ್ರಾಜ್ಯ-
ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ
ಋಕ್ಸಂಹಿತಾಭಾಷ್ಯೇ ಸಪ್ತಮಾಷ್ಟಕೇಽಷ್ಟಮೋಽಧ್ಯಾಯಃ ಸಮಾಪ್ತಃ

॥ ಶ್ರೀಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ಣಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಏಳನೆಯ ಅಷ್ಟಕದಲ್ಲಿ
ಎಂಟನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ॥
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ।

॥ ಮಂಗಳಂ ॥

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥
ಸಪ್ತಮೇಽಷ್ಟಮಮಧ್ಯಾಯಂ ವ್ಯಾಖ್ಯಾಪೂಚಾರ್ಯವಂಶಜಃ ।
ಅಷ್ಟಮೇ ಸಾಯಣಾಚಾರ್ಯಃ ಆದಿಮಂ ವ್ಯಾಕರೋತ್ಕಥ ॥

ಸಾಯಣಭಾಷ್ಯ ಸಹಿತಾ

ಋಗ್ವೇದ ಸಂಹಿತಾ

(ಕರ್ಣಾಟಕ ಭಾಷಾರ್ಥಾನುವಾದ ವಿವರಣೆ ಸಹಿತವಾಗಿ)

॥ ಅಷ್ಟಮಾಷ್ಟಕೇ ಪ್ರಥಮೋಽಧ್ಯಾಯಃ ॥

ಎಂಟನೆಯ ಅಷ್ಟಕದಲ್ಲಿ ಮೊದಲನೆಯ ಅಧ್ಯಾಯವು

ಹತ್ತನೆಯ ಮಂಡಲದಲ್ಲಿ ನಲವತ್ತಾರನೆಯ ಸೂಕ್ತವು

ಪೀಠಿಕೆ

ವತ್ಸಪ್ರಿ ಋಷಿಯಿಂದ ನಿರ್ಮಿತವಾದ ಸೂಕ್ತಗಳ ಮಹಿಮೆ

ಭಲಂದನ ಪುತ್ರನಾದ ವತ್ಸಪ್ರಿ ಋಷಿಯಿಂದ ನಿರ್ಮಿತವಾದ ೧೦-೪೫ ಮತ್ತು ೪೬ ನೇ ಸೂಕ್ತಗಳು ಅತ್ಯಂತ ಪ್ರಸಿದ್ಧವಾಗಿವೆ. ಸರ್ವಲೋಕಧಾರಕನೂ ಮತ್ತು ಪಾಲಕನೂ ಆದ ಅಗ್ನಿಯ ಪ್ರಶಂಸೆಯು ಅತ್ಯಂತ ಶ್ರೇಷ್ಠವಾದ ಕಾವ್ಯರೂಪದಲ್ಲಿರುತ್ತದೆ. ಅದೇ ಅಲ್ಲದೆ, ಕರ್ಮಾಚರಣೆಯ ದೃಷ್ಟಿಯಿಂದಲೂ ಇವರ ಮಹಿಮೆಯು ಅತ್ಯಧಿಕವಾದುದು. ಆಧ್ಯಾತ್ಮಿಕವಾದ ಹಿನ್ನೆಲೆಯಿಂದ ಯುಕ್ತವಾಗಿ ಆಧಿದೈವಿಕವಾದ ಮಹಿಮೆಯನ್ನು ಹೊಂದಿರುವ ಈ ಸೂಕ್ತಗಳ ಪ್ರಭಾವಗಳನ್ನು ಶತಪಥಬ್ರಾಹ್ಮಣದಲ್ಲಿ ಅಧಿಕವಾಗಿ ಪ್ರಶಂಸಿಸಿದೆ. ಈ ಸೂಕ್ತಗಳಲ್ಲಿ ಮೊದಲನೆಯ ಸೂಕ್ತದ ಮೊದಲನೆಯ ಮೂರು ಋಕ್ಕುಗಳಿಗೆ ವಿವರಣೆಯನ್ನು ಹೇಳಿದೆ. ಅವುಗಳಲ್ಲಿ ಎರಡು ಸಂದರ್ಭವನ್ನು ಮೇಲೆ-**ವಿದ್ಮಾ ತೇ ಅಗ್ನೇ** ಎಂಬ ಮಂತ್ರದ ವಿಶೇಷವಿಷಯಗಳಲ್ಲಿ ಉದಾಹರಿಸಿದೆ. ವಾತ್ಸಪ್ರ ಕರ್ಮದ ಮಹತ್ತ್ವವನ್ನು ಪ್ರಕೃತದಲ್ಲಿ ವಿವರಿಸಲಾಗುತ್ತದೆ. ಈ ಮಹಿಮೆಯು ಶತಪಥಬ್ರಾಹ್ಮದಲ್ಲಿ ಈ ರೀತಿ ಪ್ರಶಂಸಿಸಲ್ಪಟ್ಟಿದೆ.

ಅಥ ವಾತ್ಸಪ್ರೇಣೋಪತಿಷ್ಠತೇ । ಏತದ್ವೈ ಪ್ರಜಾಪತಿರ್ವಿಷ್ಣುಕ್ರಮೈಃ ಪ್ರಜಾಃ ಸೃಷ್ವಾ, ತಾಭ್ಯೋ ವಾತ್ಸಪ್ರೇಣಾಯುಷ್ಯಮಕರೋತ್ತಥೈವೈತದ್ಯಜಮಾನೋ ವಿಷ್ಣುಕ್ರಮೈಃ ಪ್ರಜಾಃ

ಸೃಷ್ಟ್ವಾ ತಾಭ್ಯೋ ವಾತ್ಸಪ್ರೇಣಾಯುಷ್ಯಂ ಕರೋತಿ ॥

(ಶ. ಬ್ರಾ. ೬-೭-೪-೧)

ಪ್ರಜಾಪತಿಯು ವಿಷ್ಣುವಿನ ಪಾದವಿಕ್ಷೇಪರೂಪವಾದ ಸಾಧನದಿಂದ ಸಕಲ ಭೂತಗಳನ್ನೂ ಸೃಷ್ಟಿಸಿದನು. ಮತ್ತು ವಾತ್ಸಪ್ರಕ್ರಿಯೆಯಿಂದ ಆ ಪ್ರಜೆಗಳಿಗೆ ಉಪಯುಕ್ತವಾದ ಚೈತನ್ಯವನ್ನು ಉತ್ಪನ್ನಮಾಡಿದನು. ಅದರಂತೆಯೇ ಯಜಮಾನನೂ ಸಹ ವಿಷ್ಣುಕ್ರಮಗಳಿಂದ ಪ್ರಜೆಗಳನ್ನೂ ಮತ್ತು ವಾತ್ಸಪ್ರಕ್ರಿಯೆಗಳಿಂದ ಪ್ರಜೆಗಳಿಗೆ ಆಯುಷ್ಯವನ್ನೂ ಉತ್ಪನ್ನಮಾಡುತ್ತಾನೆ.

ಸ ಹೈಷ ದಾಕ್ಷಾಯಣಿಹಸ್ತಃ । ಯೆದ್ವಾತ್ಸಪ್ರಂ ತಸ್ಮಾದ್ಯಂ ಜಾತಂ ಕಾಮಯೇತ ಸರ್ವಮಾಯುರಿಯಾದಿತಿ ವಾತ್ಸಪ್ರೇಣೈನಮಭಿಮೃಶೇತ್ತದಸ್ಮೈ ಜಾತಾಯಾಯುಷ್ಯಂ ಕರೋತಿ ತಥೋ ಹ ಸ ಸರ್ವಮಾಯುರೇತ್ಯಥ ಯಂ ಕಾಮಯೇತ ವೀರ್ಯವಾನ್ಸ್ಯಾದಿತಿ ವಿಕೃತ್ಯೈನಂ ಪುರಸ್ತಾದಭಿಮಂತ್ರಯೇತ ತಥೋ ಹ ಸ ವೀರ್ಯವಾನ್ ಭವತಿ ॥

(ಶ. ಬ್ರಾ. ೬-೭-೪-೨)

ಈ ವಾತ್ಸಪ್ರಕ್ರಿಯೆಯು ಸುವರ್ಣರೂಪವುಳ್ಳ ಅಗ್ನಿಯ ರೂಪವೇ ಆಗಿರುತ್ತದೆ. ಉತ್ಪನ್ನವಾದ ಯಾವ ಪ್ರಾಣಿಗೇ ಆಗಲಿ, ಪೂರ್ಣಾಯುಷ್ಯವನ್ನು ಯಾರಾದರೂ ಅಪೇಕ್ಷಿಸಿದರೆ ಆಗ ವಾತ್ಸಪ್ರಕ್ರಿಯೆಯಿಂದ ಸ್ಪರ್ಶಿಸಿದರೆ ದೀರ್ಘಾಯುಷ್ಯವು ಲಭಿಸುತ್ತದೆ. ಯಾರು ವೀರ್ಯವಂತನಾಗಬೇಕೆಂದು ಅಪೇಕ್ಷಿಸುವನೋ ಅವನನ್ನು ವಿಕೃತಿಸಂಜ್ಞಕವಾದ ಮಂತ್ರಪಠನದಿಂದ ನಿರ್ದೇಶಿಸಿದರೆ ಆಗ ಆತನು ವೀರ್ಯವಂತನಾಗುತ್ತಾನೆಂದು ಹೇಳಿ ಅಗ್ನಿಮಹಿಮೆಯನ್ನು ಪ್ರಶಂಸಿಸಿದೆ.

" **ದಿವಸ್ಪರಿ ಪ್ರಥಮಂ ಜಜ್ಞೇ ಅಗ್ನಿರಿತಿ . . . .** " (ಶ. ಬ್ರಾ. ೬-೭-೪-೩)

" **ವಿದ್ಮಾ ತೇ ಅಗ್ನೇ ತ್ರೇಧಾ ತ್ರಯಾಣೀತ್ಯಗ್ನಿರ್ವಾಯುರಾದಿತ್ಯ ಏತಾನಿ . . . .** "

(ಶ. ಬ್ರಾ. ೬-೭-೪-೪)

ಸಮುದ್ರೇ ತ್ವಾ ನೃಮಣಾ ಅಪ್ಸ್ವಂತರಿತಿ ಪ್ರಜಾಪತಿರ್ವೈ ನೃಮಣಾ ।

(ಶ. ಬ್ರಾ. ೬-೭-೪-೫)

ಎಂದು ಅಗ್ನಿಯ ಮೂರು ರೂಪಗಳನ್ನು ಮೂರು ಲೋಕಗಳಲ್ಲೂ ಅವನ ವ್ಯಾಪಕತ್ವವನ್ನು ವಿವರಿಸಿದೆ. ಈ ಪ್ರಕರಣವನ್ನು ಮೇಲೆ ವಿವರಿಸಿದೆ. ಶತಪಥಬ್ರಾಹ್ಮಣದಲ್ಲಿ ಉದಾಹೃತವಾಗಿ ವಿವೃತವಾಗಿರುವ ಈ ಮೂರು ಋಕ್ಕುಗಳೂ ಅಗ್ನಿಯ ಮಹಿಮೆಯನ್ನು ವರ್ಣಿಸುತ್ತವೆಯೆಂದು ಈ ರೀತಿ ಪ್ರಶಂಸಿಸಿದೆ.

ತಾ ಏತಾ ವಿಕೃತ್ಯಾಖ್ಯಾನಾಃ । ಏತಸ್ಮೇವಾಸಾ ತಾ ಆಗ್ನೇಯ್ಯಸ್ತ್ರಿಷ್ಟುಭಸ್ತಾ ಯದಾಗ್ನೇಯ್ಯಸ್ತೇನಾಗ್ನಿರಥ ಯತ್ತ್ರಿಷ್ಟುಭೋ ಯತ್ತೇಕಾದಶ ತೇನೇಂದ್ರ ಐಂದ್ರಾಗ್ನೋ ವಾಗ್ನಿರ್ವಾವಾನಗ್ನಿರ್ಯಾವತ್ಯಸ್ಯ ಮಾತ್ರಾ ತಾವತ್ಯೈವೈನಮೇತದುಪಶಿಷ್ಯತ ಐಂದ್ರಾಗ್ನೇ ವೈ ಸರ್ವೇ ದೇವಾಃ ಸರ್ವದೇವತ್ಯೋಽಗ್ನಿರ್ಯಾವಾನಗ್ನಿರ್ಯಾವತ್ಯಸ್ಯ ಮಾತ್ರಾ ತಾವತ್ಯೈವೈನಮೇತದುಪಶಿಷ್ಯತಿ ॥

ಋಕ್ಸಂಹಿತೆಯಿಂದ ಉದಾಹೃತವಾಗಿರುವ ಈ ಮೇಲಿನ ಮೂರು ಋಕ್ಕುಗಳೂ ಅಗ್ನಿಯ ಅಸಾಧಾರಣಗುಣಗಳನ್ನು ಒಂದೇ ರೀತಿಯಲ್ಲಿ ವರ್ಣಿಸುತ್ತವೆ. ಅಗ್ನಿಪ್ರಶಂಸಕವಾಗಿ ತ್ರಿಷ್ಟುಪ್‌ಛಂದಸ್ಸಿನಿಂದ ನಿರ್ಮಿತವಾಗಿದೆ. ಅವು ಎಷ್ಟುಮಟ್ಟಿಗೆ ಅಗ್ನಿಪ್ರಶಂಸಕವಾಗಿವೆಯೋ ಅಷ್ಟುಮಟ್ಟಿಗೆ ಅಗ್ನಿಸ್ವರೂಪವನ್ನೇ ಹೊಂದಿವೆ. ಹನ್ನೊಂದು ಅಕ್ಷರಗಳಿಂದ ಕೂಡಿದ ತ್ರಿಷ್ಟುಪ್‌ಛಂದಸ್ಸಿನಿಂದ ನಿರ್ಮಿತವಾದುದರಿಂದ ಇವು ಇಂದ್ರರೂಪವನ್ನು ಹೊಂದಿರುತ್ತವೆ. ಅಗ್ನಿಸ್ವರೂಪವು ಇದ್ರಾಗ್ನಿಗಳೆಂಬ ಎರಡು ವಿಧವಾದ ಅಸ್ತಿತ್ವವನ್ನೂ ಹೊಂದಿರುತ್ತವೆ. ಅಗ್ನಿಯ ಮಹತ್ತ್ವವು ಎಷ್ಟುಮಟ್ಟಿಗಿದೆಯೋ ಅಷ್ಟೇಮಟ್ಟಿಗೆ ಪೂಜ್ಯಭಾವವನ್ನು ವ್ಯಕ್ತಪಡಿಸುತ್ತಾನೆ. ಇಂದ್ರಾಗ್ನಿಗಳಲ್ಲಿ ಸಕಲ ದೇವತೆಗಳೂ ಐಕ್ಯರಾಗಿದ್ದಾರೆ. ಅಗ್ನಿಯ ಮಹತ್ತ್ವದಷ್ಟೇ ಅಗ್ನಿಯ ಪೂಜ್ಯತ್ವವೂ ಇರುತ್ತದೆ.

ಯದ್ವೈವ ವಿಷ್ಣುಕ್ರಮವಾತ್ಸಪ್ರೇ ಭವತಃ । ವಿಷ್ಣುಕ್ರಮ್ಯೈವೈನಂ ಪ್ರಜಾಪತಿರಿಮಂ ಲೋಕಮಸೃಜತ ವಾತ್ಸಪ್ರೇಣಾಗ್ನಿಂ ವಿಷ್ಣುಕ್ರಮ್ಯೈವೈನಂ ಪ್ರಜಾಪತಿರಂತರಿಕ್ಷಮಸೃಜತ ವಾತ್ಸಪ್ರೇಣ ವಾಯುಂ ವಿಷ್ಣುಕ್ರಮ್ಯೈವೈನಂ ಪ್ರಜಾಪತಿರ್ದಿವಮಸೃಜತ ವಾತ್ಸಪ್ರೇಣಾದಿತ್ಯಂ ವಿಷ್ಣುಕ್ರಮ್ಯೈವೈನಂ ಪ್ರಜಾಪತಿರ್ದಿಶೋಽಸೃಜತ ವಾತ್ಸಪ್ರೇಣ ಚಂದ್ರಮಸಂ ವಿಷ್ಣುಕ್ರಮ್ಯೈವೈನಂ ಪ್ರಜಾಪತಿರ್ಭೂತಮಸೃಜತ ವಾತ್ಸಪ್ರೇಣ ಭವಿಷ್ಯದ್ವಿಷ್ಣುಕ್ರಮ್ಯೈವೈನಂ ಪ್ರಜಾಪತಿರ್ಧನಮಸೃಜತ ವಾತ್ಸಪ್ರೇಣಾಹಾಂ ವಿಷ್ಣುಕ್ರಮ್ಯೈವೈನಂ ಪ್ರಜಾಪತಿರಹರಸೃಜತ ವಾತ್ಸಪ್ರೇಣ ರಾತ್ರಿಂ ವಿಷ್ಣುಕ್ರಮ್ಯೈವೈನಂ ಪ್ರಜಾಪತಿಃ ಪೂರ್ವಪಕ್ಷಾನಸೃಜತ ವಾತ್ಸಪ್ರೇಣಾಪರಪಕ್ಷಾನ್ವಿಷ್ಣುಕ್ರಮ್ಯೈವೈನಂ ಪ್ರಜಾಪತಿರರ್ಧಮಾಸಾನಸೃಜತ ವಾತ್ಸಪ್ರೇಣ ಮಾಸಾನ್ ವಿಷ್ಣುಕ್ರಮ್ಯೈವೈನಂ ಪ್ರಜಾಪತಿರ್ಋತೂನಸೃಜತ ವಾತ್ಸಪ್ರೇಣ ಸಂವತ್ಸರಂ ತದ್ಯದ್ವಿಷ್ಣುಕ್ರಮವಾತ್ಸಪ್ರೇ ಭವತ ಏತದೇವ ತೇನ ಸರ್ವಗ್ಂ ಸೃಜತೇ ॥

(ಶ. ಬ್ರಾ. ೬-೭-೪-೭)

ವಿಷ್ಣುಕ್ರಮವೂ (ವಿಷ್ಣುವಿನ ಪಾದವಿಕ್ಷೇಪಕ್ರಿಯೆ) ಮತ್ತು ವಾತ್ಸಪ್ರಕ್ರಿಯೆಯೂ ಒಟ್ಟಿಗೆ ನೆರವೇರಿಸಲ್ಪಡಬೇಕಾದ ಆವಶ್ಯಕತೆಯೇನು ಎಂಬ ಪ್ರಶ್ನೆಯು ಈ ಸಂದರ್ಭದಲ್ಲಿ ಸಹಜವಾಗಿರುತ್ತದೆ. ಈ ಎರಡು ಕ್ರಿಯೆಗಳೂ ಒಟ್ಟಿಗೆ ನೆರವೇರಿಸಲ್ಪಡಬೇಕಾದ ಆವಶ್ಯಕತೆಯು ಈ ಎರಡು ಕ್ರಿಯೆಗಳ ಪರಸ್ಪರಾನ್ಯೋನ್ಯ ಸಂಬಂಧವನ್ನವಲಂಬಿಸಿರುತ್ತದೆ. ವಿಷ್ಣುಕ್ರಮದಿಂದ ಯಾವಯಾವ ಆಧಾರವಸ್ತುಗಳನ್ನು ಪ್ರಜಾಪತಿಯು ನಿರ್ಮಿಸಿದನೋ ವಾತ್ಸಪ್ರದಿಂದ ಆಯಾ ಆಧಾರವಸ್ತುಗಳಲ್ಲಿ ನಿಯತವಾಗಿ ವ್ಯಾಪಿಸಿರುವ ಮತ್ತು ಅದಕ್ಕೆ ಪೂರಕವೂ, ಪೋಷಕವೂ ಆದ ತತ್ತ್ವಗಳನ್ನು ಅದರೊಂದಿಗೆ ನಿರ್ಮಿಸಿದನು. ಹೇಗೆಂದರೆ—

ಪ್ರಜಾಪತಿಯು	ಪೃಥಿವ್ಯನ್ನೂ	ತತ್ಪೂರಕವಾದ	ಅಗ್ನಿಯನ್ನೂ	ನಿರ್ಮಿಸಿದನು.
,,	ಅಂತರಿಕ್ಷವನ್ನೂ	,,	ವಾಯುವನ್ನೂ	,,
,,	ದ್ಯುಲೋಕವನ್ನೂ	,,	ಆದಿತ್ಯನನ್ನೂ	,,
,,	ದಿಗ್ದಿಗಂತಗಳನ್ನೂ	,,	ಚಂದ್ರನನ್ನೂ	,,
,,	ಭೂತಕಾಲದ ವಸ್ತುಗಳನ್ನೂ	,,	ಭವಿಷ್ಯತ್ಕಾಲದ ವಸ್ತುಗಳನ್ನೂ	,,
,,	ಧನಸಂಪತ್ತನ್ನೂ	,,	ಆಸೆಯನ್ನೂ	,,
,,	ಅಹಸ್ಸನ್ನೂ	,,	ರಾತ್ರಿಯನ್ನೂ	,,

,,	ಪೂರ್ವಪಕ್ಷಗಳನ್ನೂ	,,	ಅಪರಪಕ್ಷಗಳನ್ನೂ	,,
,,	ಅರ್ಧಮಾಸಗಳನ್ನೂ	,,	ಮಾಸಗಳನ್ನೂ	,,
,,	ಋತುಗಳನ್ನೂ	,,	ಸಂವತ್ಸರಗಳನ್ನೂ	,,

ಆದುದರಿಂದಲೇ ಈ ಎರಡು ಕ್ರಿಯೆಗಳಿಗೂ ಅನ್ಯೋನ್ಯ ಸಂಬಂಧವಿದ್ದು ಇವೆರಡನ್ನೂ ಒಟ್ಟಿಗೆ ಆಚರಿಸಬೇಕಾದ ವಿಧಿ ಇರುತ್ತದೆ. ಸಾಹಚರ್ಯದಿಂದಲೇ ಸೃಷ್ಟಿಯ ಕಾರ್ಯವೂ ಅನುಸ್ಯೂತವಾಗಿ ಮುಂದುವರಿಯುತ್ತದೆ.

ಯದ್ವೈವ ವಿಷ್ಣುಕ್ರಮಮಾತ್ಸಪ್ರೇ ಭವತಃ । ವಿಷ್ಣುಕ್ರಮ್ಯೈವೈನಂ ಪ್ರಜಾಪತಿಃ ಸ್ವರ್ಗಂ ಲೋಕಮಭಿಪ್ರಾಯಾತ್ಸ ಏತದವಸಾನಮಪಶ್ಯದ್ವಾತ್ಸಪ್ರಂ ತೇನಾವಾಸ್ಯದಪ್ರದಾಹಾಯ ಯದ್ಧಿ ಯುಕ್ತಂ ನ ವಿಮುಚ್ಯತೇ ಪ್ರ ತದ್ದಹ್ಯತೇ ಯಥೈನೈತದ್ಯಜಮಾನೋ ವಿಷ್ಣುಕ್ರಮ್ಯೈರೇವ ಸ್ವರ್ಗಂ ಲೋಕಮಭಿಪ್ರಯಾತಿ ವಾತ್ಸಪ್ರೇಣಾವಸ್ಯತಿ ॥

(ಶ. ಬ್ರಾ. ೬-೭-೪-೮)

ವಿಷ್ಣುಕ್ರಮ ಮತ್ತು ವಾತ್ಸಪ್ರಗಳ ಸಾಹಚರ್ಯದ ಆವಶ್ಯಕತೆಯೇನು ಎಂಬ ಪ್ರಶ್ನೆಯು ಪುನಃ ಕೇಳಲ್ಪಟ್ಟರೆ ಅದಕ್ಕೆ ಉತ್ತರವು ಆ ಆವಶ್ಯಕತೆಯನ್ನು ತಿಳಿಸುತ್ತದೆ.

ವಿಷ್ಣುಕ್ರಮದಿಂದ ಪ್ರಜಾಪತಿಯು ಸ್ವರ್ಗವನ್ನು ತಲುಪಿದನು. ಅಲ್ಲಿ ಬಂಧವಿಮೋಚಕವಾದ ವಾತ್ಸಪ ವನ್ನು ನೋಡಿ ಬಂಧಕ್ಕೆ ಒಳಗಾಗಿದ್ದ ಅಂಶವನ್ನು ಬಿಡಿಸಿದನು. ಹಾಗೆ ಬಂಧಕ್ಕೆ ಒಳಗಾಗಿದ್ದ ಪಶುವನ್ನಾಗಲಿ ಅಥವಾ ಇನ್ನಾವ ಚೇತನವನ್ನಾಗಲಿ ಬಿಡಿಸದಿದ್ದರೆ ಅದರ ದಾಹವಾಗಲಿ ಅಥವಾ ಛೇದವಾಗಲೀ ಖಂಡಿತವಾಗಿ ಆಗುತ್ತದೆ. ಪ್ರಜಾಪತಿಯು ಇದನ್ನು ತಪ್ಪಿಸಿದನು. ಹೀಗೆಯೇ ಯಜಮಾನನೂ ಸಹ ವಿಷ್ಣುಕ್ರಮದ ಸಹಾಯದಿಂದ ಸ್ವರ್ಗಕ್ಕೆ ಹೋಗುತ್ತಾನೆ. ವಾತ್ಸಪ್ರದ ಸಹಾಯದಿಂದ ಬಂಧದಿಂದ ವಿಮುಕ್ತಿಯನ್ನು ಹೊಂದುತ್ತಾನೆ.

ಸ ವೈ ವಿಷ್ಣುಕ್ರಮಾನ್ ಕ್ರಾನ್ತ್ಸ್ಯ । ಅಥ ತದಾನೀಮೇವ ವಾತ್ಸಪ್ರೇಣೋಪತಿಷ್ಠತೇ ಯಥಾ ಪ್ರಯಾಯಾಥ ತದಾನೀಮೇವ ವಿಮುಂಚೇತ್ತಾದೃಕ್ತದ್ದೇವಾನಾಂ ವೈ ವಿಧಾಮನು ಮನುಷ್ಯಾಸ್ತಸ್ಮಾದು ಹೇದಮುತ ಮಾನುಷೋ ಗ್ರಾಮಃ ಪ್ರಯಾಯಾಥ ತದಾನೀಮೇವಾ-ವಸ್ಯತಿ ।

(ಶ, ಬ್ರಾ. ೬-೭-೪-೯)

ವಿಷ್ಣುಕ್ರಮಗಳನ್ನು ಅನುಸರಿಸಿ ಅದನ್ನು ದಾಟಿದನಂತರ ಯಜಮಾನನು ಅಗ್ನಿಯ ಸಮೀಪದಲ್ಲಿ ನಿಂತ ವಾತ್ಸಪ್ರಕ್ರಿಯೆಯಿಂದ ಅಗ್ನಿಯನ್ನು ಪೂಜಿಸುತ್ತಾನೆ. ಸಂಚಾರದ ಅವಸಾನದಲ್ಲಿ ಒಂದೆಡೆ ನಿಂತು ಶ್ರಮವನ್ನು ಪರಿಹರಿಸುವಂತೆ ಯಜಮಾನನೂ ಈ ಸನ್ನಿವೇಶದಲ್ಲಿ ವಿಶ್ರಾಂತಿಯನ್ನು ಹೊಂದುತ್ತಾನೆ. ದೇವತೆಗಳ ಮಾರ್ಗವನ್ನೇ ಸಾಧಾರಣವಾಗಿ ಮಾನವರೂ ಅನುಸರಿಸುತ್ತಾರೆ.

ತದ್ವಾ ಅಹೋರಾತ್ರೇ ಏವ ವಿಷ್ಣುಕ್ರಮಾ ಭವಂತಿ । ಅಹೋರಾತ್ರೇ ವಾತ್ಸಪ್ರಮಹೋ-ರಾತ್ರೇ ಏವ ತದ್ಯಾತ್ಯಹೋರಾತ್ರೇ ಕ್ಷೇಮ್ಯೋ ಭವತಿ ತಸ್ಮಾದು ಹೇದಮುತ ಮಾನುಷೋ ಗ್ರಾಮೋಽಹೋರಾತ್ರೇ ಯಾತ್ವಾಹೋರಾತ್ರೇ ಕ್ಷೇಮ್ಯೋ ಭವತಿ ।

(ಶ. ಬ್ರಾ. ೬-೭-೪-೧೦)

ವಿಷ್ಣುಕ್ರಮಗಳೇ ಅಹೋರಾತ್ರರೂಪಗಳಾಗಿವೆ. ವತ್ಸಪ್ರವೂ ಅಹೋರಾತ್ರರೂಪವಾಗಿಯೇ ಇದೆ. ವಿಷ್ಣುಕ್ರಮವು ಸಂಚಾರಾತ್ಮಕವು. ಮತ್ತು ವತ್ಸಪ್ರವು ವಿಶ್ರಾಂತಿದಾಯಕವು. ಆದುದರಿಂದ ವಿಷ್ಣುಕ್ರಮವನ್ನನುಸರಿಸಿದ ಯಜಮಾನನು ಒಂದು ಅಹೋರಾತ್ರದಲ್ಲಿ ಸಂಚರಿಸಿ ಇನ್ನೊಂದು ಅಹೋರಾತ್ರದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಾನೆ. ವ್ಯವಹಾರಪ್ರಪಂಚದಲ್ಲಿಯೂ ಸಹ ಒಂದುದಿನವೆಲ್ಲ (ರಾತ್ರಿಯೂ ಸೇರಿ) ಸಂಚರಿಸಿದರೆ ಆ ಜನಸಮೂಹವು ಇನ್ನೊಂದು ದಿನ (ರಾತ್ರಿಯೂ ಸೇರಿ) ವಿಶ್ರಾಂತಿಯನ್ನು ಪಡೆಯುತ್ತದೆ.

ಸ ವಾ ಅರ್ಧಮೇವ ಸಂವತ್ಸರಸ್ಯ ವಿಷ್ಣುಕ್ರಮಾನ್ ಕ್ರಮತೇ । ಅರ್ಧಂ ವಾತ್ಸಪ್ರೇಣೋಪತಿಷ್ಠತೇ ಮಧ್ಯೇ ಹ ಸಂವತ್ಸರಸ್ಯ ಸ್ವರ್ಗೋ ಲೋಕಃ ಸ ಯತ್ಕನೀಯೋಽರ್ಧಾತ್ಪ್ರಮೇತ ನ ಹೈತಗ್ಂ ಸ್ವರ್ಗಂ ಲೋಕಮಭಿಪ್ರಾಪ್ನುಯಾದಥ ಯದ್ಭೂಯೋಽರ್ಧಾತ್ಪರಾಜಹೈತಗ್ಂ ಸ್ವರ್ಗಂ ಲೋಕಮತಿ ಪ್ರಣಶ್ಯೇದಥ ಯದರ್ಧಂ ಕ್ರಮತೇಽರ್ಧಮುಪತಿಷ್ಠತೇ ತತ್ಸಂಪ್ರತಿ ಸ್ವರ್ಗಂ ಲೋಕಮಾಪ್ತ್ವಾ ವಿಮುಂಚತೇ ॥

(ಶ. ಬ್ರಾ. ೬-೭-೪-೧೧)

ವಿಷ್ಣುಕ್ರಮವನ್ನನುಸರಿಸಿ ಅರ್ಧಸಂವತ್ಸರಕಾಲ ಮಾತ್ರ ಸಂಚರಿಸಿ ಉಳಿದರ್ಧ ಸಂವತ್ಸರದಲ್ಲಿ ವತ್ಸಪ್ರಕ್ರಿಯೆಯೊಂದಿಗೆ ಅಗ್ನಿಪೂಜೆಯನ್ನು ಸಲ್ಲಿಸುತ್ತಾನೆ. ಸ್ವರ್ಗಲೋಕವು ಸಂವತ್ಸರಾರ್ಧದಲ್ಲಿರುತ್ತದೆ. ಆದುದರಿಂದ ಅರ್ಧಸಂವತ್ಸರಕ್ಕಿಂತಲೂ ಕಡಿಮೆ ಕಾಲ ಸಂಚರಿಸಿದರೆ ಸ್ವರ್ಗವನ್ನೇ ಮುಟ್ಟುವುದಿಲ್ಲ. ಅರ್ಧಸಂವತ್ಸರಕ್ಕಿಂತಲೂ ಅಧಿಕಕಾಲ ಸಂಚರಿಸಿದರೆ ಆಗ ಸ್ವರ್ಗವನ್ನು ವಿಾರಿಹೋಗುವುದರಿಂದ ಸ್ವರ್ಗವು ಕೈಬಿಟ್ಟುಹೋಗುತ್ತದೆ. ಆದುದರಿಂದ ಅರ್ಧಸಂವತ್ಸರಕಾಲ ಮಾತ್ರ ಸಂಚರಿಸಿ ಇನ್ನರ್ಧಸಂವತ್ಸರಕಾಲ ವಾತ್ಸಪ್ರಕ್ರಿಯೆಯಿಂದ ಅಗ್ನಿಪೂಜೆಯನ್ನು ಸಲ್ಲಿಸಿದರೆ ಆಗಸ್ವರ್ಗವನ್ನೂ ಸೇರಿ ಬಂಧನದಿಂದಲೂ ಮುಕ್ತಿಯನ್ನು ಪಡೆಯಬಹುದು.

ತಾಭ್ಯಾಂ ವೈ ವಿಪರ್ಯಾಸಮೇತಿ । ಯಥಾ ಮಹಾಂತಮಧ್ವಾನಂ ವಿನೋಕಗ್ಂ ಸಮಶ್ನುವೀತ ತಾದೃಕ್ತಾತ್ಸ ವೈ ಪುರಸ್ತಾಚ್ಚೋದರಿಷ್ಟಾಚ್ಚೋಭೇ ವಿಷ್ಣುಕ್ರಮವಾತ್ಸಪ್ರೇ ಸಮಸ್ಯತ್ಯಹರ್ವೈ ವಿಷ್ಣುಕ್ರಮಾ ರಾತ್ರಿರ್ವಾತ್ಸಪ್ರಮೇತದ್ವಾ ಇದಗ್ಂ ಸರ್ವಂ ಪ್ರಜಾಪತಿಃ ಪ್ರಜನಯಿಷ್ಯಂಶ್ಚ ಪ್ರಜನಯಿತ್ವಾ ಚಾಹೋರಾತ್ರಾಭ್ಯಾಮುಭಯತಃ ಪರಿಗೃಹ್ಣಾತಿ ॥

(ಶ. ಬ್ರಾ. ೬-೭-೪-೧೨)

ಹೇಗೆ ದೂರದೇಶದ ಸಂಚಾರ ಮಾಡುವವನು ತನ್ನ ಪ್ರಯಾಣ ಮತ್ತು ವಿಶ್ರಾಂತಿಗಳನ್ನು ಪರ್ಯಾಯರೂಪದಲ್ಲಿ (ಒಂದಾದನಂತರ ಇನ್ನೊಂದು) ಇಟ್ಟುಕೊಳ್ಳುವನೋ ಅದೇ ರೀತಿ ವಿಷ್ಣುಕ್ರಮ ಮತ್ತು ವಾತ್ಸಪ್ರಕ್ರಿಯೆಗಳ ಪರ್ಯಾಯರೂಪದಲ್ಲಿರತಕ್ಕದ್ದು. ಆದರೆ, ದೀಕ್ಷೆಗೆ ಪೂರ್ವಭಾವಿಯಾಗಿಯೂ, ದೀಕ್ಷಾಕಾಲವಾದನಂತರವೂ ಈ ಎರಡನ್ನೂ ಒಟ್ಟಿಗೆ ಸೇರಿಸಬೇಕು. ವಿಷ್ಣುಕ್ರಮವೇ ಅಹಸ್ಸು ಮತ್ತು ವಾತ್ಸಪ್ರವೇ ರಾತ್ರಿಯು. ಆದಿಯಲ್ಲಿಯೂ ಅಂತ್ಯದಲ್ಲಿಯೂ ಇವೆರಡೂ ಒಟ್ಟಿಗೆ ಸೇರಿರುತ್ತವೆ. ಮಧ್ಯಕಾಲದಲ್ಲಿ ಮಾತ್ರ ಇವೆರಡೂ ಪರ್ಯಾಯರೂಪದಲ್ಲಿ ಪರಿಭ್ರಮಣವನ್ನು ಹೊಂದುತ್ತಿರುತ್ತವೆ. ಪ್ರಜಾಪತಿಯು ಸೃಷ್ಟಿಕಾಲದ ಆರಂಭದಲ್ಲಿಯೂ, ಸೃಷ್ಟಿಯಾದನಂತರವೂ ತನ್ನಿಂದ ಸೃಷ್ಟವಾದ ವಿಶ್ವವೆಲ್ಲವನ್ನೂ ಅಹೋರಾತ್ರಗಳಿಂದ ವ್ಯಾಪೃತವಾಗುವಂತೆ ಮಾಡಿದನು. ಅದರಂತೆಯೇ ಯಜ್ಞಕರ್ತನೂ ಸಹ

ಯಜ್ಞರೂಪವಾದ ವಿಶ್ವವನ್ನು ಸೃಷ್ಟಿಮಾಡಲಿಚ್ಛಿಸಿದಾಗ ತನ್ನ ಸೃಷ್ಟಿಗೆ ಆದಿಯಲ್ಲಿಯೂ, ಸೃಷ್ಟಿಯಾದ ನಂತರವೂ ಸಹ ಎರಡು ಪಾರ್ಶ್ವಗಳನ್ನೂ ವಿಷ್ಣುಕ್ರಮವಾತ್ಸಪ್ರರೂಪಗಳಾದ ಅಹೋರಾತ್ರಗಳಿಂದ ವ್ಯಾಪ್ತವಾಗುವಂತೆ ಮಾಡಬೇಕು.

ತದಾಹುಃ । ಯದಹರ್ವಿಷ್ಣುಕ್ರಮಾ ರಾತ್ರಿರ್ವಾತ್ಸಪ್ರಮಥೋ ಏವಾಹನ್ಭವತೋ ನ ರಾತ್ರ್ಯಾಂ ಕಥಮಸ್ಯಾಪಿ ರಾತ್ರ್ಯಾಂಕೃತೇ ಭೇಭದತ ಇತ್ಯೇತದ್ವಾ ಏನೇ ಅದೋ ದೀಕ್ಷ-ಮಾಣಃ ಪುರಸ್ತಾದಪರಾಹ್ಣಉಭೇ ಸಮಸ್ಯತಿ ರಾತ್ರಿರ್ಹೈತದ್ಯದಪರಾಹ್ಣೋಽಥೈ ನೇ ಏತ-ತ್ಸಂನಿವಪ್ಸ್ಯನ್ನುಪರಿಷ್ಟಾತ್ಪೂರ್ವಾಹ್ಣ ಉಭೇ ಸಮಸ್ಯತ್ಯಹರ್ಹೈತದ್ಯತ್ಪೂರ್ವಾಹ್ಣ ಏವಮು ಹಾಸ್ಯೋಭೇ ಏವಾಹನ್ ಕೃತೇ ಭವತ ಉಭೇ ರಾತ್ರ್ಯಾಂ ।

(ಶ. ಬ್ರಾ. ೬-೭-೪-೧೩)

ಮೇಲಿನ ವಿಧಿವಾಕ್ಯಕ್ಕೆ ಪ್ರತಿಯಾಗಿ ಒಂದು ಆಕ್ಷೇಪವೂ ಸಂಭವಿಸಬಹುದು. ವಿಷ್ಣುಕ್ರಮಗಳು ಅಹಸ್ಸನ್ನು ಪ್ರತಿಬಿಂಬಿಸಿ, ವಾತ್ಸಪ್ರವು ರಾತ್ರಿಯನ್ನು ಪ್ರತಿಬಿಂಬಿಸಿದರೆ ಅವೆರಡನ್ನೂ ಪರ್ಯಾಯರೂಪದಲ್ಲಿ ಆಯಾ ಕಾಲಗ ಳಲ್ಲೇ ಆಚರಿಸಬೇಕು. ಅದನ್ನು ಬಿಟ್ಟು ಎರಡು ಕ್ರಿಯೆಗಳನ್ನೂ ಅಹಸ್ಸಿನಲ್ಲೇ ಆಚರಿಸುವುದರ ಅರ್ಥವೇನು ಎಂಬ ಆಕ್ಷೇಪವು ಸಂಭವಿಸಿದರೆ ಅದಕ್ಕೆ ಉತ್ತರರೂಪವಾದ ವಿಧಿಯು ಈ ರೀತಿ ಇರುತ್ತದೆ—ದೀಕ್ಷಿತನಾದವನು ಪ್ರಥಮತಃ ಅಪರಾಹ್ಣದಲ್ಲಿ ಎರಡು ಕ್ರಿಯೆಗಳನ್ನೂ ಸೇರಿಸಿ ನೆರವೇರಿಸುತ್ತಾನೆ. ಅಪರಾಹ್ಣವೂ ರಾತ್ರಿರೂಪವಾಗಿಯೇ ಇರುತ್ತದೆ ಹೀಗೆ ಎರಡನ್ನೂ ಯೋಜಿಸಿದನಂತರ ಎರಡನ್ನೂ ಸೇರಿಸಿ ಪೂರ್ವಾಹ್ಣದಲ್ಲಿ ಆಚರಿಸಲ್ಪಡುತ್ತದೆ. ಪೂರ್ವಾಹ್ಣವು ಅಹೋರೂಪವಾಗಿರುತ್ತದೆ. ಈ ರೀತಿ ಎರಡು ಕ್ರಿಯೆಗಳನ್ನೂ ಅಹಸ್ಸಿನಲ್ಲಿಯೂ ಆಚರಿಸಿದಂತಾಯಿತು. ಹಾಗೆಯೇ ರಾತ್ರಿಯಲ್ಲಿಯೂ ಆಚರಿಸಿದಂತಾಯಿತು.

ಸ ಯದಹಃ ಸಂನಿವಪ್ಸ್ಯನ್ನಾತ್ಮನ್ಯತ್ ತದಹಃ ಪ್ರಾತರುದಿತ ಆದಿತ್ಯೇ ಭಸ್ಮೈವ ಪ್ರಥಮ-ಮುದ್ವಪತಿ ಭಸ್ಮೋದುಪ್ಯ ವಾಚಂ ವಿಸೃಜತೇ ವಾಚಂ ವಿಸೃಜ್ಯ ಸಮಿಧಮಾದಧಾತಿ ಸಮಿಧ ಮಾದಾಯ ಭಸ್ಮಾಪೋಽಭ್ಯವಹರತಿ ಯಥೈವ ತಸ್ಯಾಭ್ಯವಹರಣಂ ತಥಾಪಾದಾಯ ಭಸ್ಮನಃ ಪ್ರತ್ಯೇತ್ಯೋಖಾಯಾಮೋಪ್ಯೋಪತಿಷ್ಠತೇಽಥ ಪ್ರಾಯಶ್ಚಿತ್ತೀಕರೋತಿ ॥

(ಶ. ಬ್ರಾ. ೬-೭-೪-೧೪)

ಯಾವ ದಿನ ಸೂರ್ಯೋದಯವಾದನಂತರ ಪ್ರಾತಃಕಾಲದಲ್ಲಿಯೇ ಈ ಎರಡು ಕ್ರಿಯೆಗಳನ್ನು ಸೇರಿಸಲಿಚ್ಛಿಸು ವನೋ ಅಂದು ಪ್ರಥಮತಃ ಭಸ್ಮವನ್ನು ಎರಚಬೇಕು. ಅನಂತರ ವಾಕ್ಯನ್ನುಚ್ಚರಿಸಿ ಸಮಿತ್ತನ್ನು ಕೈಗೆ ತೆಗೆದುಕೊಂಡು ಆ ಭಸ್ಮವನ್ನು ಉದಕಕ್ಕೆ ಎರಚುತ್ತಾನೆ. ಅನಂತರ ಆದರಂತೆಯೇ ಅದೇ ಭಸ್ಮದ ಕೊಂಚ ಅವಶಿಷ್ಟವನ್ನು ತೆಗೆದು ಕೊಂಡು ಹಿಂತಿರುಗುತ್ತಾನೆ. ಅನಂತರ ಆದನ್ನು **ಉಖಾ** ಸಂಜ್ಞಕವಾದ ಪಾತ್ರೆಯಲ್ಲಿ ಹಾಕಿ ಅಗ್ನಿಯ ಮುಂದೆ ಭಕ್ತಿ ಯುತನಾಗಿ ನಿಲ್ಲುತ್ತಾನೆ. ಅನಂತರ ಪ್ರಾಯಶ್ಚಿತ್ತಕರ್ಮವು ನೆರವೇರುತ್ತದೆ.

ಸ ಯದಿ ವಿಷ್ಣುಕ್ರಮೀಯಮಹಃ ಸ್ಯಾತ್ । ವಿಷ್ಣುಕ್ರಮಾನ್ ಕ್ರಾನ್ತ್ವಾ ವಾತ್ಸಪ್ರೇಣೋ-ಪತಿಷ್ಠೇತಾಥ ಯದಿ ವಾತ್ಸಪ್ರೀಯಂ ವಾತ್ಸಪ್ರೇಣೋಪಸ್ಥಾಯ ವಿಷ್ಣುಕ್ರಮಾನ್ ಕ್ರಾನ್ತ್ವಾ ವಾತ್ಸಪ್ರಮನ್ತತಃ ಕುರ್ಯಾದ್ಯಥಾ ಪ್ರಯಾಯ ನ ವಿಮುಂಚೇತ್ತಾದೃಕ್ತದಥ ಯದ್ವಾತ್ಸಪ-

ಮಂತರತಃ ಕರೋತಿ ಪ್ರತಿಷ್ಠಾ ವೈ ವಾತ್ಸಪ್ರ್ಯಂ ಯಥಾ ಪ್ರತಿಷ್ಠಾಪಯೇದವಸಾಯಯೇತ್ತಾ-ದೃಕ್ತತ್ತಸ್ಮಾದು ವಾತ್ಸಪ್ರ್ಯಮೇವಾಂತರತಃ ಕುರ್ಯಾತ್ ॥

(ಶ. ಬ್ರಾ. ೬-೭-೪-೧೫)

ಒಂದುವೇಳೆ ಕ್ರಿಯಾದಿನವು ವಿಷ್ಣುಕ್ರಮೀಯವಾಗಿದ್ದರೆ ಆಗ ವಿಷ್ಣುಕ್ರಮವನ್ನು ದಾಟಿ (ನೆರವೇರಿಸಿ) ವಾತ್ಸಪ್ರದಿಂದ ಅಗ್ನಿಯನ್ನು ಪೂಜಿಸಬೇಕು. ಒಂದುವೇಳೆ ವಾತ್ಸಪ್ರಕ್ರಿಯೆಯ ದಿನವಾಗಿದ್ದರೆ ಮೊದಲು ವಾತ್ಸಪ್ರವನ್ನು ನೆರವೇರಿಸಿ ಅನಂತರ ವಿಷ್ಣುಕ್ರಮವನ್ನು ಮುಗಿಸಿ ಪುನಃ ವಾತ್ಸಪ್ರವನ್ನಾಚರಿಸಬೇಕು. ವಿಷ್ಣುಕ್ರಮದಲ್ಲಿಯೇ ಮುಗಿಸಬಾರದು. ಹಾಗೆ ಮಾಡಿದರೆ ಸಂಚಾರಕ್ಕಾಗಿ ಸುತ್ತಿ ವಿಶ್ರಾಂತಿಯಿಲ್ಲದೇ ಇರುವ ಸ್ಥಿತಿಯುಂಟಾಗುತ್ತದೆ. ವಾತ್ಸಪ್ರಕ್ರಿಯಾಚರಣೆಯಿಂದ ಸಮಾಪ್ತಿಗೊಳಿಸಿದರೆ ಆಗ ಪೂರ್ಣವಾದ ವಿಶ್ರಾಂತಿಯು ಲಭಿಸುತ್ತದೆ. ಇತ್ಯಾದಿಯಾಗಿ ವಾತ್ಸಪ್ರದ ಮಹಿಮೆಯನ್ನು ತಿಳಿಸಿ ಪುನಃ ಅಗ್ನಿಗೂ ವಾತ್ಸಪ್ರಸೂಕ್ತಕ್ಕೂ ಇರುವ ಸಂಬಂಧವನ್ನು ಈ ರೀತಿ ವಿವರಿಸಿದೆ.

ವನೀವಾಹ್ಯೇತಾಗ್ನಿಂ ಬಿಭ್ರದಿತ್ಯಾಹುಃ । ದೇವಾಶ್ಚಾಸುರಾಶ್ಚೋಭಯೇ ಪ್ರಾಜಾಪತ್ಯಾ ಅಸ್ಪರ್ಧಂತ ತೇ ದೇವಾಶ್ಚಕ್ರಮುಚರಞ್ಛ್ವಲಮಸುರಾ ಅಸಂಸ್ತೇ ದೇವಾಶ್ಚಕ್ರೇಣ ಚರಂತ ಏತತ್ಕರ್ಮಾಪಶ್ಯಂಶ್ಚಕ್ರೇಣ ಹಿ ವೈ ದೇವಾಶ್ಚರಂತ ಏತತ್ಕರ್ಮಾಪಶ್ಯಂಸ್ತಸ್ಮಾದಾನಸ ಏವ ಪೌರೋಡಾಶೇಷು ಯಜೂಗ್ಷ್ಯನಸೋಽಗ್ನೌ ॥

(ಶ. ಬ್ರಾ. ೬-೮-೧-೧)

" ಅಗ್ನಿಯನ್ನು ಭರಿಸುತ್ತಿರುವಾಗಲೇ ಅಗ್ನಿಯನ್ನು ಪ್ರೇರಿಸಿ ಕಳುಹಲಿ " ಎಂಬ ವಿಧಿಯಿರುತ್ತದೆ. ಎತಕ್ಕೆಂದರೆ—ಅದರ ಕಾರಣವು ಹೀಗೆ ವಿವೃತವಾಗಿರುತ್ತದೆ.

ಪ್ರಜಾಪತಿಯಿಂದ ಉತ್ಪನ್ನರಾದ ದೇವತೆಗಳೂ ಮತ್ತು ಅಸುರರೂ ಪರಸ್ಪರ ಸ್ಪರ್ಧಿಸುತ್ತಿದ್ದರು. ದೇವತೆಗಳು ಚಕ್ರಯುಕ್ತವಾದ ರಥದಮೇಲೆ ಸಂಚರಿಸುತ್ತಿದ್ದರು. ಅಸುರರು ಸ್ವಸ್ಥಾನದಲ್ಲಿಯೇ ಇರುತ್ತಿದ್ದರು. ದೇವತೆಗಳು ಚಕ್ರಯುಕ್ತವಾದ ರಥದಲ್ಲಿ ಸಂಚರಿಸುತ್ತಿದ್ದುದರಿಂದಲೇ ಈ ವಿಧ್ಯುಕ್ತವಾದ ಕ್ರಿಯೆಯ ದರ್ಶನವನ್ನು ಪಡೆದರು. ಅವರು ಚಕ್ರಯುಕ್ತವಾದ ರಥದಲ್ಲಿ ಸಂಚರಿಸದೇ ಇದ್ದರೆ ಇವರ ದರ್ಶನವಾಗುತ್ತಿರಲಿಲ್ಲ. ಆದುದರಿಂದ ಪೌರೋಡಾಶ ಕರ್ಮವು ರಥಕ್ಕೆ ಸಂಬಂಧಿಸಿದುದಾಗಿರುತ್ತದೆ.

ಸ ಯೋ ವನೀವಾಹ್ಯತೇ । ದೇವಾನ್ ಕರ್ಮಣೈತಿ ದ್ವೈವಗ್ಂ ಹಾಸ್ಯ ಕರ್ಮ ಕೃತಂ ಭವತ್ಯಥ ಯೋ ನ ವನೀವಾಹ್ಯತೇಽಸುರಾನ್ ಕರ್ಮಣೈತ್ಯಸುರ್ಯಗ್ಂ ಹಾಸ್ಯ ಕರ್ಮ ಕೃತಂ ಭವತಿ ॥

(ಶ. ಬ್ರಾ. ೬-೮-೧-೨)

ಯಾವನು ಅಗ್ನಿಯನ್ನು ಪ್ರೇರಿಸಿ ಸಂಚರಿಸುವಂತೆ ಮಾಡುವನೋ, ಅವನುಮಾತ್ರ ಪೂಜ್ಯವಾದ ಕರ್ಮರೂಪವಾದ ಸಾಧನದಿಂದ ದೇವತೆಗಳನ್ನು ಸಮಿಾಪಿಸುತ್ತಾನೆ. ಹೀಗೆ ಅಗ್ನಿಯನ್ನು ಪ್ರೇರಿಸದಿದ್ದರೆ ತನ್ನ ಕರ್ಮಗಳ ಮೂಲಕ ಅಸುರರನ್ನು ಮಾತ್ರ ಸಮಿಾಪಿಸುತ್ತಾನೆ. ಇಂತಹ ಅಗ್ನಿಪ್ರಚೋದಕವಲ್ಲದ ಕರ್ಮವು ಆಸುರೀಪ್ರವೃತ್ತಿಯುಳ್ಳದ್ದಾಗಿರುತ್ತದೆ.

तद्वै क आहुः । स्वयं वा एष वनीवाहितोऽथ विष्णुक्रमैर्वा एष प्रयाति वात्सप्रेणावस्यतीति न तथा विद्याद्दैवं वा अस्य तत्प्रयाणं यद्विष्णुक्रमा-दैवमवसानं तद्वात्सप्रमुथास्येदं मानुषं प्रयाणं यदिदं प्रयाति मानुषमवसानं यदस्यति ॥

(श. ब्रा. ६-४-८-३)

आदरे इल्लि इनोंदु शंकेगे अवकाशविरुत्तदे. अग्निगे प्रचोदकवागि इतर यावा सहा यवू बेकागिल्ल. विष्णुक्रमद सहायदिंद अवनेे चलिसि संचरिसुत्तानॆ मत्तु वात्सप्रदिंद आ संचारद अवसाननन्नु होंदुत्तानॆएंदु आक्षेपिसिदरॆ ई आक्षेपवु तप्पागुत्तदे. एतक्कॆंदरॆ— पुरुषप्रयत्नविल्लदॆ अग्नियु चलनसंचारगळिद्दरॆ अदु देवतॆगळिगॆ मात्र उपकारकवागुत्तदे. अद रिंद मानवरिगॆ प्रयोजनविल्ल. आदुदरिंद पुरुषनु तन्न क्रियॆयिंद अग्नियन्नु प्रयोजिसिदरॆ आग अवर फलवु पुरुषनिगॆ लभिसुत्तदे. इल्लदिद्दरॆ इल्ल.

प्रजापतिरेषोऽग्निः । उभयमेतत्प्रजापतिर्यच्च देवा यच्च मनुष्या-स्तद्यद्विष्णुक्रमैर्वात्सप्रे भवतोऽथ यद्वैवास्य दैवꣳ रूपं तदस्य तेन संस्करोत्यथ यद्वनीवाह्यते तदेवास्य मानुषꣳ रूपं तदस्य तेन संस्क-रोति स ह वा एतꣳ सर्वं कृत्स्नं प्रजापतिꣳ संस्करोति य एवं विद्वा-न्वनीवाह्यते तस्माद्वै वनीवाह्येतैव ॥

(श. ब्रा. ६-४-८-४)

प्रजापतियॆ अग्नियु. अग्नियॆ प्रजापतियु. अग्निरूपनाद प्रजापतियॆ सकल देव-मानवरू आगिद्दानॆ. विष्णुक्रमु मत्तु वात्सप्रगळ आचरणॆयिंद दिव्यरूपवन्नु निर्मिसुत्तानॆ. अग्निप्रचोदकवाद क्रियॆयिंद मानवरूपवन्नु निर्मिसुत्तानॆ. आदुदरिंद ई एरडू क्रियॆय सहायदिंद यारु अग्नियन्नु प्रेरिसुवरॊ अवरु पूर्णवाद प्रजापतिरूपवन्नॆ निर्मिसिदंतॆ. हीगॆंदु वात्सप्र महिमॆयु प्रशंसितवागिदॆ.

नलवत्तारनॆय सूक्त

सायणभाष्यं

अच्छ्वमा इति चतुर्थेऽनुवाकेऽष्टादश सूक्तानि । तत्र प्र होतेति दशर्चं चतुर्थं सूक्तं । प्र होता दशेत्यनुक्रान्तं । अनुवर्तमानाद्भालंदनस्य वत्सप्रे-राषर्षं । अनादेशपरिभाषयाऽऽग्नेयं ॥ पूर्वसूक्तेन सहोक्तो विनियोगः ॥

ಅನುವಾದವು—ಋಗ್ವೇದಸಂಹಿತೆಯ ಹತ್ತನೆಯ ಮಂಡಲದ **ಆಚ್ಛಾಮ** ಎಂಬ ಋಕ್ಕಿನಿಂದ ಪ್ರಾರಂಭವಾಗುವ ನಾಲ್ಕನೆಯ ಅನುವಾಕದಲ್ಲಿ ಹದಿನೆಂಟು ಸೂಕ್ತಗಳಿರುವುವು. ಅವುಗಳಲ್ಲಿ ಮೊದಲ ಮೂರು ಸೂಕ್ತಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈಗ ಪ್ರಾರಂಭಿಸಬೇಕಾಗಿರುವ **ಪ್ರಹೋತಾ** ಎಂಬ ಸೂಕ್ತವು ಈ ಅನುವಾಕದಲ್ಲಿ ನಾಲ್ಕನೆಯದು. ಇಪರಲ್ಲಿ ಹತ್ತು ಋಕ್ಕುಗಳಿರುವುವು. ಅನುಕ್ರಮಣಿಕೆಯಲ್ಲಿ **ಪ್ರಹೋತಾ ದಶ** ಎಂದು ಹೇಳಿರುವುದು. ಈ ಸೂಕ್ತಕ್ಕೆ ವತ್ಸಪ್ರಿರ್ಭಾಲಂದನಃ ಎಂಬುವನು ಋಷಿಯು; ಅಗ್ನಿಯು ದೇವತೆಯು; ತ್ರಿಷ್ಟುಪ್ಛಂದಸ್ಸು. ಈ ಸೂಕ್ತದ ವಿನಿಯೋಗವನ್ನು ಹಿಂದಿನ ಸೂಕ್ತದ ಪೀಠಿಕೆಯಲ್ಲಿ ಹೇಳಲಾಗಿದೆ.

ಸೂಕ್ತ—೪೬

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೪೬ ॥
ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧, ೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
ಋಷಿಃ—ವತ್ಸಪ್ರಿಃ ॥
ದೇವತಾ—ಅಗ್ನಿಃ ॥॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಪ್ರ ಹೋತಾ ಜಾತೋ ಮಹಾನ್ನಭೋವಿನ್ನೃಷದ್ವಾ ಸೀದದಪಾಮುಪಸ್ಥೇ ।
ದಧಿರ್ಯೋ ಧಾಯಿ ಸ ತೇ ವಯಾಂಸಿ ಯಂತಾ ವಸೂನಿ ವಿಧತೇ ತನೂಪಾಃ ॥

ಪದಪಾಠಃ

ಪ್ರ । ಹೋತಾ । ಜಾತಃ । ಮಹಾನ್ । ನಭಃ೪ವಿತ್ । ನೃ೪ಸದ್ವಾ । ಸೀದತ್ । ಅಪಾಂ । ಉಪ೪ಸ್ಥೇ ।
ದಧಿಃ । ಯಃ । ಧಾಯಿ । ಸಃ । ತೇ । ವಯಾಂಸಿ । ಯಂತಾ । ವಸೂನಿ । ವಿಧತೇ । ತನೂ೪ಪಾಃ ॥

ಸಾಯಣಭಾಷ್ಯಂ

ಯೋ ನೃಷದ್ವಾಗ್ನಿರಪಾಂ । ಅಂತರಿಕ್ಷನಾಮೈತತ್ । ಅಂತರಿಕ್ಷಸ್ಯೋಪಸ್ಥ ಉತ್ಸಂಗೇ ವೈದ್ಯುತರೂಪೇಣ ನಿಷಣ್ಣೋ೪ಭೂತ್ । ಸ ಇದಾನೀಂ ಹೋತಾ ಯಜಮಾನಾನಾಂ ಹೋಮನಿಷ್ಪಾದಕೋ ಜಾತಃ ಪ್ರಾದುರ್ಭೂತೋ ಮಹಾನ್ ಗುಣೈಃ ಪೂಜ್ಯೋ ನಭೋವಿದಂತರಿಕ್ಷಸ್ಯ ವೇತ್ತಾ । ಯತಸ್ತತ್ರೋತ್ಪನ್ನಃ ಅತಸ್ತಸ್ಯ ಜ್ಞಾತಾ ॥ ನೃಷದ್ವಾ ನೃಷು ಸೀದನ್ । ಸದೇಃ ಕ್ವನಿಪ್ ಕೃತ್ಸ್ವರಃ ॥ ಪ್ರ ಸೀದತ್ । ವೇದ್ಯಾಂ ಪ್ರಸೀದತಿ । ಅಪಾಮುಪಸ್ಥೇ ಮಹಿಷಾ ಅಗೃಭ್ಣತ । ಋಗ್ವೇ-೪-೪-೧ । ಇತಿ ಹಿ ನಿಗಮಃ। ಯದ್ವಾ । ಅಪಾಂ । ಅಪಸಾಮಿತ್ಯರ್ಥಃ । ಕರ್ಮಣಾಮುಪಸ್ಥ ಉಪಸ್ಥಾನೇ ಸಮೀಪೇ ವೇದ್ಯಾಮುತ್ಪಲಕ್ಷಣಃ ಸನ್।

ಅಥವಾ । ಅಪಾಮುದಕಾನಾಮುಪಸ್ಥೇ ಮಧ್ಯೇ ಯೋಽಗ್ನಿರ್ದಿವೋರ್ಧುಮಸಹಮಾನೋ ನಿಗೂಢಃ ಸ ದೇವೈಃ ಪುನಃ ಪ್ರಾರ್ಥಿತ ಉಕ್ತವಿಧಃ ಸನ್ ವೇದ್ಯಾಂ ಪ್ರಸೀದತಿ । ಯೋಽಗ್ನಿರ್ದಧಿರ್ಧಾತಾ ಯಜ್ಞಸ್ಯ ಧಾರಕಃ ಸನ್ ಧಾಯಿ ವೇದ್ಯಾಂ ನಿಹಿತೋಽಭೂತ್ ಸೋಽಗ್ನಿರ್ಹೇ ವತ್ಸಪ್ರೇ ವಿಧತೇ ಪರಿಚರತೇ ತೇ ತುಭ್ಯಂ ವಯಾಂಸ್ಯನ್ನಾನಿ ವಸೂನಿ ಧನಾನಿ ಚ ಯಂತಾ । ನಿಯಮಿತಾ ಭವತು । ಕಿಂಚ ತನೂಪಾಸ್ತೇ ತನ್ವಃ ಪಾತಾ ಚ ಭವತ್ವಿತಿ ಶೇಷಃ ॥

ಪ್ರತಿಪದಾರ್ಥ

(ಯಃ) ನೃಷದ್ವಾ—ಯಾವ ಅಗ್ನಿಯು । **ಅಪಾಂ**—ಅಂತರಿಕ್ಷದ । **ಉಪಸ್ಥೇ**—ಉತ್ಸಂಗಸ್ಥಾನದಲ್ಲಿ ವಿದ್ಯುದ್ರೂಪದಿಂದ ಇದ್ದನೋ । **ಮಹಾನ್**—ಪೂಜ್ಯನೂ । **ನಭೋವಿತ್**—ಅಂತರಿಕ್ಷಲೋಕವನ್ನು ತಿಳಿದವನೂ ಆದ । **ಸಃ**—ಅದೇ ಅಗ್ನಿಯು । **ಹೋತಾ**—ಯಜಮಾನನ ಯಜ್ಞದಲ್ಲಿ ದೇವತೆಗಳನ್ನು ಆಹ್ವಾನ ಮಾಡುವ ಹೋತೃವಾಗಿ । **ಜಾತಃ**—ಉತ್ಪನ್ನನಾಗಿ । **ಪ್ರ ಸೀದತ್**—ಯಜ್ಞವೇದಿಯಲ್ಲಿ ಆವಿರ್ಭೂತನಾಗಿದ್ದಾನೆ । **ಯಃ**—ಯಾವ ಅಗ್ನಿಯು । **ದಧಿಃ**—ಯಜ್ಞಕ್ಕೆ ಧಾರಕನಾಗಿ । **ಧಾಯಿ**—ಯಜ್ಞವೇದಿಯಲ್ಲಿ ಕುಳಿತಿರುವನೋ । **ಸಃ**—ಆ ಅಗ್ನಿಯು । **ವಿಧತೇ**—ಶುಶ್ರೂಷೆ ಮಾಡುತ್ತಿರುವ । **ತೇ**—ನಿನಗೆ (ವತ್ಸಪ್ರಿ ಎಂಬ ಋಷಿಗೆ) । **ವಯಾಂಸಿ**—ಅನ್ನಾದ್ಯಾಹಾರಗಳನ್ನೂ । **ವಸೂನಿ**—ಧನಗಳನ್ನೂ । **ಯಂತಾ**—ಕೊಡುವವನಾಗಲಿ (ಮತ್ತು) । **ತನೂಪಾಃ**—ನಿನ್ನ ಶರೀರವನ್ನು ರಕ್ಷಿಸುವವನೂ ಆಗಿರಲಿ.

ಭಾವಾರ್ಥ

ಪೂಜ್ಯನೂ ಅಂತರಿಕ್ಷಲೋಕವನ್ನು ತಿಳಿದವನೂ ಅಂತರಿಕ್ಷದಲ್ಲಿ ವಿದ್ಯುದ್ರೂಪದಿಂದಿರುವವನೂ ಆದ ಅಗ್ನಿಯೇ ಈಗ ಯಜಮಾನನ ಯಜ್ಞವೇದಿಯಲ್ಲಿ ದೇವತೆಗಳು ಆಹ್ವಾನ ಮಾಡುವ ಹೋತೃವಾಗಿ ಆವಿರ್ಭವಿಸಿ ಕುಳಿತಿದ್ದಾನೆ. ಯಜ್ಞಕ್ಕೆ ಧಾರಕನೂ ಯಜ್ಞವೇದಿಯಲ್ಲಿ ಪ್ರತಿಷ್ಠಿತನೂ ಆದ ಅದೇ ಅಗ್ನಿಯು, ಎಲೈ ವತ್ಸಪ್ರಿಋಷಿಯೇ, ನಿನಗೆ ಅನ್ನಾದ್ಯಾಹಾರಗಳನ್ನೂ ಧನಗಳನ್ನೂ ಕೊಟ್ಟು ನಿನ್ನನ್ನು ರಕ್ಷಿಸಲಿ.

English Translation

A mighty ministrant priest, one cognizant of heaven, though abiding with men, having been born, is seated on the lap of the waters : may he, the upholder (of sacrifice), who has been stationed (on the altar), be to you when offering worship, the giver of food and riches, the protector of your person.

ವಿಶೇಷವಿಷಯಗಳು

ನೃಷದ್ವಾ—ನೃಷು ಸೀದನ್ । ಮನುಷ್ಯರ ಮಧ್ಯದಲ್ಲಿ ಅಥವಾ ಮನುಷ್ಯರು ಮಾಡುತ್ತಿರುವ ಯಜ್ಞದಲ್ಲಿ ಕುಳಿತಿರುವವನು ಎಂದರೆ ಮನುಷ್ಯರು ಮಾಡುತ್ತಿರುವ ಯಜ್ಞಮಧ್ಯದಲ್ಲಿರುವ ಯಜ್ಞವೇದಿಯಲ್ಲಿ ಸ್ಥಾಪಿತನಾಗಿರುವ ಅಗ್ನಿಯು.

उपस्थे—उत्संगे । ತೊಡೆಯಮೇಲೆ ಎಂದರೆ ಅಂತರಿಕ್ಷದ ಮಧ್ಯಪ್ರದೇಶದಲ್ಲಿ

नभोविद्—अंतरिक्षस्य वेत्ता । यतस्तत्रोत्पन्नः अतस्तस्य ज्ञाता । ಅಂತರಿಕ್ಷದಲ್ಲಿಯೇ ಉತ್ಪನ್ನನಾದ್ದರಿಂದ ಅದರ ಸ್ವರೂಪವನ್ನು ತಿಳಿದವನೆಂದರ್ಥವು.

अपाम्—अंतरिक्षनामैतत् । **अपः समुद्रः** ಇತ್ಯಾದಿ ಶಬ್ದಗಳು ಅಂತರಿಕ್ಷನಾಮಗಳಲ್ಲಿ ಪಠಿತವಾಗಿವೆ. (ನಿ.) **अपः** ಎಂಬ ಶಬ್ದಕ್ಕೆ ಕರ್ಮವೆಂದೂ ಅರ್ಥವು. (ನಿ.) **ಈ ಸಂದರ್ಭದಲ್ಲಿ कर्मनामापस्थ उपस्थाने सविधाने वेद्याम्** । ಕರ್ಮ ಎಂದರೆ ಯಜ್ಞಕರ್ಮವನ್ನು ಮಾಡುವ ಯಜ್ಞವೇದಿಯಲ್ಲಿ ಎಂದೂ ಹೇಳಬಹುದು. **अपाम्उपस्थे** ಎಂಬ ಶಬ್ದಗಳಿಗೆ ಭಾಷ್ಯಕಾರರು **अपां मध्ये योऽग्निर्हविर्वोढा-मसहमानो निगूढः स देवैः पुनः प्रार्थितस्सन् वेद्याम् प्रसीदति** । ಎಂಬ ಇನ್ನೊಂದು ವಿಧ ಅರ್ಥವನ್ನೂ ಹೇಳಿದ್ದಾರೆ. ಪೂರ್ವದಲ್ಲಿ ಅಗ್ನಿಯು ಕಾರಣಾಂತರದಿಂದ ದೇವತೆಗಳಿಗೆ ಹವಿಸ್ಸನ್ನು ವಹಿಸುವ ಕಾರ್ಯದಲ್ಲಿ ಜಿಗುಪ್ಸೆಗೊಂಡು ಯಾರಿಗೂ ಹೇಳದೆ ಓಡಿಹೋಗಿ ನೀರಿನ ಮಧ್ಯದಲ್ಲಿ ಅವಿತುಕೊಂಡಿದ್ದನು. ಇದನ್ನು ದೇವತೆಗಳು ಬಹು ಶ್ರಮದಿಂದ ತಿಳಿದುಕೊಂಡು ಅಲ್ಲಿಗೆ ಹೋಗಿ ಅಗ್ನಿಯನ್ನು ನಾನಾ ವಿಧವಾಗಿ ಪ್ರಾರ್ಥಿಸಿ ಅವನಿಗೆ ವರಾದಿಗಳನ್ನು ಕೊಟ್ಟು ಸಮಾಧಾನಸಾಡಿ ಪುನಃ ಹವಿರ್ವಹನಕಾರ್ಯದಲ್ಲಿ ಪ್ರವೃತ್ತನಾಗುವಂತೆ ಮಾಡಿದನು. ನೀರಿನಿಂದ ಪುನಃ ಎದ್ದುಬಂದ ಅಗ್ನಿಯೇ ಈಗ ಯಜ್ಞವೇದಿಯಲ್ಲಿ ಬಂದು ಕುಳಿತಿರುವನು ಎಂದು ಇಲ್ಲಿ ಹೇಳಿದೆ ಎಂದು ಭಾಷ್ಯಕಾರರು ಸೂಚಿಸಿರುವರು. ಈ ವಿಷಯದ ವಿವರಣೆಯು ಇದೇ ಮಂಡಲದ ೫೧ ನೆಯ ಸೂಕ್ತದಲ್ಲಿ ಹೇಳಿರುವುದರಿಂದ ಇವನ್ನು ನಾವು ಆ ಸೂಕ್ತವನ್ನು ವಿವರಿಸುವಾಗ ವಿಸ್ತಾರವಾಗಿ ವರ್ಣನೆ ಮಾಡುವೆವು.

संहितापाठः

इमꣳ विधन्तो अपाꣳ सधस्थे पशुं न नष्टं पदैरनु ग्मन् ।
गुहा चतन्तमुशिजो नमोभिरिच्छन्तो धीरा भृगवोऽविन्दन् ॥

पदपाठः

इमꣳ । विधन्तः । अपाꣳ । सधऽस्थे । पशुं । न । नष्टं । पदैः । अनु । ग्मन् ।
गुहा । चतन्तं । उशिजः । नमःऽभिः । इच्छन्तः । धीराः । भृगवः । अविन्दन् ॥

सायणभाष्यं

इममग्निमपामुदकानां सधस्थे सहस्थाने मध्ये निगूढं विधन्तः परिचरन्त उपचारं वदन्तो ऋषयश्च पदैः पलायनमार्गव्यंजकैर्नष्टं चोरादिभिरपहृत

ಪಶುಮಿವಾನುಗ್ಮನ್ । **ಅನುಜಗ್ಮುಃ** ॥ **ಗಮೇರ್ಲುಜಿ ಮಂತ್ರೇ ಘಸೇತಿ ಚ್ಲೇರ್ಲುಕ್** ॥ **ತೇಷು ಮಧ್ಯೇ ಗುಹಾ ಗುಹಾಯೊಂ ಚತಂತಂ** । **ಚತಿರ್ಗತಿಕರ್ಮಾ** । **ಅಪ್ಸು ವಿಲೀನಮಿತ್ಯರ್ಥಃ** । **ಉಶಿಜಃ ಕಾಮಯಮಾನಾ ನಮೋಭಿರ್ನಮಸ್ಕಾರೈಃ ಸ್ತೋತ್ರೈರ್ವೇಚ್ಛಂತ ಆತ್ಮನ ಇಚ್ಛಂತೋ ಧೀರಾ ಧೀಮಂತೋ ಭೃಗವೋಽವಿಂದನ್** । **ಲಬ್ಧವಂತಃ** । **ಅಗ್ನೇರ್ಹವಿರ್ವೋಢುಮಸಹಮಾನಸ್ಯ ಪಲಾಯ್ಯಾಪ್ಸು ಪ್ರವೇಶೋ ದೇವಾನಾಮನ್ವೇಷಣಂ ಚಾಗ್ನೇಸ್ತ್ರಯೋ ಜ್ಯಾಯಾಂಸ ಇತ್ಯತ್ರ ಸ್ಪಷ್ಟಮಾಮ್ನಾತಂ** । **ತೈ. ಸ. ೨-೬-೬** । **ಅನ್ವೇಷಣಂ ಕುರ್ವತಾಂ ಮಧ್ಯೇ ಭೃಗೂಣಾಮಗ್ನಿಲಾಭ ಇಮಂ ವಿಧಂತೋ ಅಪಾಂ ಸಧಸ್ಥೇ ದ್ವಿತಾದಧುರ್ಭಗವ ಇತ್ಯತ್ರೋಕ್ತಂ** ॥ **ಋ-೨-೪-೨** ॥

ಪ್ರತಿಪದಾರ್ಥ

ಇಮಂ—ಈ ಅಗ್ನಿಯನ್ನು । **ಅಪಾಂ**—ಉದಕಗಳ । **ಸಧಸ್ಥೇ**—ಸಂಗಮಸ್ಥಾನದಲ್ಲಿ । **ವಿಧಂತಃ**—ಶುಶ್ರೂಷೆ ಮಾಡುತ್ತಿದ್ದ ಅಥವಾ ಸಮಾಧಾನ ಮಾಡುತ್ತಿದ್ದ ಋಷಿಗಳು । **ನಷ್ಟಂ**—ಚೋರಾದಿಗಳಿಂದ ಅಪಹರಿಸಲ್ಪಟ್ಟ । **ಪಶುಂ**—ಗೋವುಗಳನ್ನು । **ಪದ್ಯೈಃ**—ಹೆಜ್ಜೆಯ ಗುರುತುಗಳಿಂದ ಅನುಸರಿಸಿಹೋಗಿ ಹುಡುಕುವಂತೆ । **ಅನುಗ್ಮನ್**—ಅನುಸರಿಸಿ ಹೋಗಿ ಹುಡುಕಿದರು । **ಗುಹಾ**—ಆ ನೀರಿನ ಮಧ್ಯದಲ್ಲಿ । **ಚತಂತಂ**—ಹೋಗಿ ಅಡಗಿಕೊಂಡಿದ್ದ ಅಗ್ನಿಯನ್ನು । **ಉಶಿಜಃ**—ಪುನಃ ಕರೆತರಬೇಕೆಂದು ಅಪೇಕ್ಷಿಸುತ್ತಾ । **ನಮೋಭಿಃ**—ನಮಸ್ಕಾರಪೂರ್ವಕ ಸ್ತೋತ್ರಪಠನಾದಿಗಳಿಂದ । **ಇಚ್ಛಂತಃ**—ಇಚ್ಛಿಸುತ್ತಿರುವ । **ಧೀರಾಃ**—ಪ್ರಾಜ್ಞರಾದ । **ಭೃಗವಃ**—ಭೃಗುವೇ ಮೊದಲಾದ ಋಷಿಗಳು । **ಅವಿಂದನ್**—ಅಗ್ನಿಯನ್ನು ಪಡೆದರು.

ಭಾವಾರ್ಥ

ಉದಕಗಳ ಮಧ್ಯದಲ್ಲಿ ಅಡಗಿಕೊಂಡಿದ್ದ ಅಗ್ನಿಯನ್ನು ಹುಡುಕುವುದಕ್ಕಾಗಿ ಅಗ್ನಿಶುಶ್ರೂಷೆಯಲ್ಲಿ ಆಸಕ್ತರಾಗಿದ್ದ ಋಷಿಗಳು ಕಳ್ಳರಿಂದ ಅಪಹೃತವಾದ ಗೋವುಗಳನ್ನು ಅವುಗಳ ಪಾದಗಳ (ಹೆಜ್ಜೆ ಗುರುತು) ಗಳಿಂದ ಅನುಸರಿಸಿ ಹೋಗಿ ಹುಡುಕುವಂತೆ ಹುಡುಕಿದರು. ನೀರಿನ ಮಧ್ಯದಲ್ಲಿ ಯಾರಿಗೂ ತಿಳಿಯದಂತೆ ಗೂಢವಾಗಿ ಅಡಗಿಕೊಂಡಿದ್ದ ಅಗ್ನಿಯನ್ನು ನಮಸ್ಕಾರಗಳಿಂದಲೂ ಸ್ತೋತ್ರಗಳಿಂದಲೂ ಇಚ್ಛಿಸುತ್ತಾ (ಪ್ರಾರ್ಥಿಸುತ್ತಾ) ಪ್ರಾಜ್ಞರಾದ ಭೃಗು ಮೊದಲಾದ ಋಷಿಗಳು ಕೊನೆಗೆ ಅಗ್ನಿ ಇರುವ ಸ್ಥಾನದ ಬಳಿ ಬಂದು ಸೇರಿದರು.

English Translation

The Rishis worshipping him, (when hiding) in the midst of the waters, followed him by his footprints (as men follow) an animal that is lost : the wise Bhrigus desiring his presence, and anxious (to find him), discovered him by their prayers lurking in the cave.

ವಿಶೇಷವಿಷಯಗಳು

(ಹಿಂದಿನ ಋಕ್ಕಿನಲ್ಲಿ ಹೇಳಿರುವ ವಿಷಯವನ್ನೇ ಇಲ್ಲಿ ಪುನಃ ಪ್ರಕಾರಾಂತವಾಗಿ ಹೇಳಿದೆ)

ಭೃಗವಃ ಗುಹಾ ಚತಂತಂ ಇಮಂ (ಅಗ್ನಿಂ) ಅವಿಂದನ್—ಉದಕರೂಪವಾದ ಗುಹೆಯಲ್ಲಿ ಅಡಗಿದ್ದ

ಅಗ್ನಿಯನ್ನು ಭೃಗುಗಳು ಪ್ರಥಮತಃ ಕಂಡುಹಿಡಿದು ಅವನ ಅನುಗ್ರಹವನ್ನು ಪಡೆದರು ಎಂಬುದು ಪ್ರಕೃತವಾದ ಋಕ್ಕಿನ ತಾತ್ಪರ್ಯ. ಅಗ್ನಿಯ ಭ್ರಾತೃಗಳಿಗೆ ತೊಂದರೆಯುಂಟಾದಾಗ ಅಗ್ನಿಯು ಬೆದರಿ ಗುಹೆಯಲ್ಲಿ ಅಡಗಿಕೊಂಡಿದು ಮತ್ತು ಅವನನ್ನು ಹುಡುಕಲು ದೇವತೆಗಳು ಪ್ರಯತ್ನಿಸಿದ್ದು ಇತ್ಯಾದಿ ವಿಷಯಗಳಲ್ಲಿ ತೈತ್ತಿರೀಯಸಂಹಿತಾವಾಕ್ಯವನ್ನು ದಾಹರಿಸಿ ಹಿಂದೆ ಸೂಕ್ಷ್ಮವಾಗಿ ವಿವರಿಸಲಾಗಿದೆ. **ಅಪ್**ಶಬ್ದಕ್ಕೆ ಉದಕವೆಂದೇ ಅರ್ಥವಾಗದೆ ಅಂತರಿಕ್ಷವೆಂಬ ಅರ್ಥವೂ ಇರುವುದರಿಂದ ಅಂತರಿಕ್ಷಸ್ಥನಾದ ವೈದ್ಯುತಾಗ್ನಿಯ ಪರವಾಗಿಯೂ ಈ ಸನ್ನಿವೇಶದಲ್ಲಿ ತಾತ್ಪರ್ಯವನ್ನು ಹೇಳಬಹುದು. ಹಾಗಾದರೆ ವೈದ್ಯುತಾಗ್ನಿಯು ಗುಹೆಯಲ್ಲಿ ಅಡಗಿರುವ ಸ್ವರೂಪ, ಅದು ಉಳಿದ ದೇವತೆಗಳೂ ಸಹ ಯಾರಿಗೂ ತಿಳಿಯದೆ ಭೃಗುಗಳಿಗೆ ಮಾತ್ರ ಗೋಚರವಾದ ಬಗೆ, ಆದುದರಿಂದ ಇತರ ದೇವತೆಗಳಿಗಿಂತಲೂ ಭೃಗುಗಳಿಗಿರುವ ವೈಶಿಷ್ಟ್ಯ ಇವೆಲ್ಲವನ್ನೂ ಪರಿಶೀಲಿಸಬೇಕಾಗಿರುತ್ತದೆ. ಈ ಪ್ರಕರಣವನ್ನು ಎರಡುಭಾಗವಾಗಿ ವಿಭಾಗಿಸಿ ವಿವರಿಸಲಾಗುತ್ತದೆ. ಮೊದಲನೆಯದಾಗಿ ಭೃಗುಗಳ ವೈಶಿಷ್ಟ್ಯ, ಎರಡನೆಯದಾಗಿ ಗುಹಾಂತರ್ಗತನಾಗಿದ್ದ ಅಗ್ನಿಯನ್ನು ಭೃಗುಗಳು ಹೊಂದಿದರು ಎಂಬುದರ ತಾತ್ಪರ್ಯ.

ಭೃಗವಃ ಆವಿಂದದ್ ಎಂದಿರುವಾಗ ಭೃಗುವಂಶೋತ್ಪನ್ನರಾದ ಋಷಿಗಳೆಂದರ್ಥ. ದಿವ್ಯಾಂಶಸಂಭೂತನಾದ ಭೃಗುವಿನ ವಂಶದಲ್ಲಿ ಉತ್ಪನ್ನರಾದ ಋಷಿಗಳಲ್ಲಿ ಕೆಲವರು ಋಕ್ಸಂಹಿತೆಯ ಕೆಲವು ಸೂಕ್ತಗಳಿಗೆ ದ್ರಷ್ಟೃಗಳಾಗಿದ್ದಾರೆ. ಭೃಗುವೂ ಸಹ ಎರಡು ಸೂಕ್ತಗಳ ದ್ರಷ್ಟೃವಾಗಿದ್ದಾನೆ. ಪ್ರಸಿದ್ಧನಾದ ಈ ಭೃಗುವು ಮಾನವರ ಗುಂಪಿಗೆ ಸೇರಿದ ಅತ್ಯುತ್ತಮರಾದ ಸಪ್ತರ್ಷಿಗಳಲ್ಲಿ ಒಬ್ಬನು. (ಅತ್ರಿ, ಭೃಗು, ಕುತ್ಸ ಇತ್ಯಾದಿ) ಎಂದು ಹೇಳುವ ವಾಡಿಕೆ. ಆದರೆ, ಅತ್ರ್ಯಾದಿ ಋಷಿಗಳು ಮಾನವರಲ್ಲ. ಅವರು ಆಧ್ಯಾತ್ಮಿಕ ತತ್ತ್ವವನ್ನು ಪ್ರತಿಬಿಂಬಿಸುವ ದಿವ್ಯತತ್ತ್ವಗಳು ಎಂದು ಪ್ರಶಂಸಿಸುವ ವೈದಿಕವಾಕ್ಯಗಳೂ ಇವೆ ಅಥವಾ ಇವರೆಲ್ಲರೂ ದಿವ್ಯಾಂಶಸಂಭೂತರಾದುದರಿಂದ ದೇವತೆಗಳ ಗುಂಪಿಗೆ ಸೇರಿದವರೇ ಆಗಿದ್ದಾರೆ ಎಂದು ಹೇಳುವ ಮತವೂ ಇರುತ್ತದೆ.

ಭೃಗುರ್ವೈ ವಾರುಣಿಃ । ವರುಣಂ ಪಿತರಮುಪಸಸಾರ॥

(ತೈ. ಉ. ೩–೧)

ಇತ್ಯಾದಿ ಸ್ಥಳಗಳಲ್ಲಿ ಭೃಗುವನ್ನು ವರುಣನ ಪುತ್ರನೆಂದು ಸ್ಪಷ್ಟವಾಗಿ ತಿಳಿಸಿದೆ. ವರುಣನಿಂದ ಭೃಗುವು ಹೇಗೆ ಉತ್ಪನ್ನನಾದನು ಎಂಬುದನ್ನು ತಿಳಿಸುತ್ತಾ ಬೃಹದ್ದೇವತೆಯಲ್ಲಿ ಭೃಗುವಿನ ಉತ್ಪತ್ತಿಯನ್ನು ಕಥಾರೂಪದಲ್ಲಿ ಈ ರೀತಿ ತಿಳಿಸಿದೆ.

ತ್ರಿಸಾಂವತ್ಸರಿಕಂ ಸತ್ರಂ ಪ್ರಜಾಕಾಮಃ ಪ್ರಜಾಪತಿಃ ।
ಆಹರತ್ಸಹಿತಃ ಸಾಧ್ಯೈರ್ವಿಶ್ವೇದೈರ್ವೈಃ ಸಹೇತಿ ಚ ॥

(ಬೃ. ದೇ. ೫-೯೭)

ಪ್ರಜಾಪತಿಯು ಸಂತಾನಕ್ಕಾಗಿ ಆಶಿಸಿದನು. ಆಗ ಸಾಧ್ಯರೊಂದಿಗೂ ವಿಶ್ವೇದೇವತೆಗಳೊಂದಿಗೂ ಕೂಡಿ ಮೂರು ಸಂವತ್ಸರಗಳ ಕಾಲ ಅವಧಿಯುಳ್ಳ ಸತ್ರವನ್ನು ಆಚರಿಸಿದನು.

ತತ್ರ ವಾಗ್ದೀಕ್ಷಣೀಯಾಯಾಂ ಅಜಗಾಮ ಶರೀರಿಣೀ ।
ತಾಂ ದೃಷ್ಟ್ವಾ ಯುಗಪತ್ತತ್ರ ಕಸ್ಯಾಥ ವರುಣಸ್ಯ ಚ ॥

(ಬೃ. ದೇ. ೫–೯೮)

ಆಗ ಆ ಸತ್ರಾಚರಣೆಯ ಪ್ರದೇಶಕ್ಕೆ ವಾಗ್ದೇವಿಯು ಸುಂದರವಾದ ಶರೀರಧಾರಿಣಿಯಾಗಿ ಬಂದಳು. ಆಗ ಅವಳನ್ನು ನೋಡಿದೊಡನೆಯೇ ಪ್ರಜಾಪತಿಯೂ ಮತ್ತು ವರುಣನೂ ಅವಳ ದಿವ್ಯ ಸೌಂದರ್ಯಕ್ಕೆ ಪರವಶರಾಗಿ ಮೋಹಿತರಾದರು.

ಶುಕ್ರಂ ಚಸ್ಕಂದ ತದ್ವಾಯುರಗ್ನೌ ಪ್ರಾಸ್ಯದ್ಯದೃಚ್ಛಯಾ ।
ಕರೋಽರ್ಚಿಭ್ಯೋ ಭೃಗುರ್ಜಜ್ಞೇ ಅಂಗಾರೇಷ್ವಂಗಿರಾಅಷಿಃ ॥

(ಬೃ. ದೇ. ೫ ೯೯)

ಆಗ ಆಸರಿಬ್ಬರ ವೀರ್ಯಕ್ಕೂ ಸ್ಖಲನವುಂಟಾಯಿತು. ವಾಯುವು ಆ ವೀರ್ಯವನ್ನು ತನ್ನ ಶಕ್ತಿಗನುಗುಣವಾಗಿ ಅಗ್ನಿಯಲ್ಲಿ ಹರಡುವಂತೆ ಮಾಡಿದನು. ಆಗ ಆ ಜ್ವಾಲೆಯಿಂದ ಭೃಗುವು ಉತ್ಪನ್ನನಾದನು. ಅಂಗಾರಗಳಿಂದ ಅಂಗಿರಸ್ಸಿನ ಉತ್ಪತ್ತಿಯುಂಟಾಯಿತ ಎಂಬುದು ಭೃಗುವಿನ ಜನ್ಮದ ವೃತ್ತಾಂತ. ಇತಿಹಾಸರೂಪವಾದ ಈ ಸಂದರ್ಭದ ವಿವರಣೆಯಿಂದ ಭೃಗುವಿನಲ್ಲಿ ಪ್ರಜಾಪತಿ ಮತ್ತು ವರುಣರಿಬ್ಬರ ದಿವ್ಯಾಂಶವೂ ಇರುವುದೆಂದು ತಿಳಿಯುತ್ತದೆ. ಇದೇ ವಿಷಯವನ್ನು ಐತರೇಯಬ್ರಾಹ್ಮಣದಲ್ಲಿ ವಿವರಿಸುತ್ತಾ ಭೃಗುವಿನ ದಿವ್ಯಾಂಶವನ್ನು ಪ್ರಶಂಸಿಸಿದೆ. ಆದರ ಮೇಲೆ ತಿಳಿಸಿರುವ ವಿವರಣೆಗೂ, ಐತರೇಯಬ್ರಾಹ್ಮಣದ ವಿವರಣೆಗೂ ಅನೇಕ ವಿಷಯಗಳಲ್ಲಿ ವ್ಯತ್ಯಾಸವಿರುತ್ತದೆ.

ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧ್ಯಾಯತ್ ದಿವಮಿತ್ಯನ್ಯೇ ಆಹುರುಷಸಮಿತ್ಯನ್ಯೇ . . . . . ಇದಂ ಪ್ರಜಾಪತೇ ರೇತಃ ಸಿಕ್ತಮಧಾವತ್ತತ್ಸರೋಽಭವತ್ತೇ ದೇವಾ ಅಬ್ರುವನ್ನೇದಂ ಪ್ರಜಾಪತೇ ರೇತೋಽದುಷದಿತಿ ಯದಬ್ರುವನ್ ಮೇದಂ ಪ್ರಜಾಪತೇ ರೇತೋಽದುಷದಿತಿ ತನ್ಮಾದುಷಮಭವತ್ತನ್ಮಾದುಷಸ್ಯ ಮಾದುಷತ್ವಂ ಮಾದುಷಂ ಹ ವೈ ನಾಮೈತದ್ಯನ್ಮಾನುಷಂ ತನ್ಮಾನುಷಂ ಸನ್ಮಾನುಷಮಿತ್ಯಾಚಕ್ಷತೇ ಪರೋಕ್ಷೇಣ ಪರೋಕ್ಷಪ್ರಿಯಾ ಇವ ಹಿ ದೇವಾಃ ॥

(ಐ. ಬ್ರಾ. ೨.೩೨)

ಪ್ರಜಾಪತಿಯು ತನ್ನ ಪುತ್ರಿಯನ್ನೇ ನೋಡಿ ಮೋಹಿಸಿದನು. ಅವಳು ದ್ಯುಲೋಕಾಧಿದೇವತೆಯೆಂದು ಕೆಲವರೂ, ಉಷಸ್ಸೆಂದು ಮತ್ತೆ ಕೆಲವರೂ ಹೇಳುತ್ತಾರೆ. ಸ್ತ್ರೀಜಿಂಕೆಯ ರೂಪವನ್ನು ತಾಳಿದ್ದ ಅವಳನ್ನು ತಾನು ಪುಂಜಿಂಕೆಯ ರೂಪವನ್ನು ಹೊಂದಿ ಹಿಂಬಾಲಿಸಿದನು. ದೇವತೆಗಳು ಪ್ರಜಾಪತಿಯ ಈ ವರ್ತನವನ್ನು ನೋಡಿ ಸಹಿಸದೆ ಅವನನ್ನು ದಂಡಿಸಲು ಸಾಧನವನ್ನು ಹುಡುಕಿದರು. ಪ್ರಜಾಪತಿಯನ್ನು ದಂಡಿಸುವವನನ್ನು ತಮ್ಮಲ್ಲಿ ಯಾರನ್ನೂ ಕಾಣಲಿಲ್ಲ. ಆಗ ಜಗತ್ತಿನ ಘೋರರೂಪಗಳನ್ನೆಲ್ಲ ಒಂದಾಗಿ ಸೇರಿಸಿ ಒಂದು ಭೂತವನ್ನು ಉತ್ಪನ್ನ ಮಾಡಿದರು. ಆಗ ಆ ಭೂತವು ಪ್ರಜಾಪತಿಯನ್ನು ಚುಚ್ಚಿದ ಕಾಲದಲ್ಲಿ ಅವನು ಮೇಲಕ್ಕೆ ಚಿಮ್ಮಿದನು. ಹಾಗೆ ಚಿಮ್ಮಿದುದರಿಂದಲೇ ಅವನನ್ನು " ಮೃಗ " ವೆಂದು ಕರೆದರು. ಸ್ತ್ರೀಜಿಂಕೆಯೇ " ರೋಹಿಣಿ " ಸಂಜ್ಞಕವಾಯಿತು. ತ್ರಿಕಾಂಡಾತ್ಮಕವಾದ ಇಷು (ಬಾಣ) ವು ಚುಚ್ಚಿದೊಡನೆಯೇ ಪ್ರಜಾಪತಿಯ ರೇತಃಸ್ಖಲನವಾಯಿತು. ಅದು ಸರೋ ರೂಪವಾಯಿತು. ಆಗ ದೇವತೆಗಳು " ಪ್ರಜಾಪತಿಯ ರೇತಸ್ಸು ದೂಷಿತವಾಗಕೂಡದು (ಮಾದುಷತ್ " ಎಂದು ಯೋಚಿಸಿದರು. ಆದುದರಿಂದಲೇ " **ಮಾದುಷ** " ವೆಂದಾಯಿತು. " **ಮಾನುಷ** " ಎಂದರೆ ಮನುಷ್ಯನ ಸಂಬಂಧಿ ಯಾಯಿತು. ದೇವತೆಗಳು ಪರೋಕ್ಷಪ್ರಿಯರಾದುದರಿಂದ " **ಮಾನುಷ** " ವನ್ನು " **ಮಾದುಷ** " ವೆಂದು ಕರೆದರು.

ತದಗ್ನಿನಾ ಪರ್ಯಾದಧುಸ್ತನ್ನಾರುತೋ ಧೂನ್ವಂಸ್ತದಗ್ನಿರ್ನ ಪ್ರಾಚ್ಯಾವಯತ್ತದಗ್ನಿನಾ ವೈಶ್ವಾನರೇಣ ಪರ್ಯಾದಧುಸ್ತನ್ನಾರುತೋ ಧೂನ್ವಂಸ್ತದಗ್ನಿರ್ವೈಶ್ವಾನರಃ ಪ್ರಾಚ್ಯಾವಯತ್ತಸ್ಯ ಯದ್ರೇತಸಃ ಪ್ರಥಮಮುದದೀಪ್ಯತ ತದಸಾವಾದಿತ್ಯೋಽಭವದ್ಯದ್ದ್ವಿತೀಯಮುದೀಪ್ತ-ದ್ಭೃಗುರಭವತ್ತಂ ವರುಣೋ ನೃಗೃಹ್ಣೀತ ತಸ್ಮಾತ್ಸ ಭೃಗುರ್ವಾರುಣಿರಥ ಯತ್ತೃತೀಯ-ಮುದೀದೇದಿವ ತ ಆದಿತ್ಯಾ ಅಭವನ್ಯೇಽಂಗಾರಾ ಅಸಂಸ್ತೇಽಂಗಿರಸೋ ಅಭವನ್ ॥

(ಐ. ಬ್ರಾ. ೨-೨೪)

ಪ್ರಜಾಪತಿಯ ರೇತಸ್ಸು ದೂಷಿತವಾಗಕೂಡದು ಎಂಬ ಸದುದ್ದೇಶದಿಂದ ಅದರ ಸುತ್ತಲೂ ಅಗ್ನಿಯು ವ್ಯಾಪಿಸುವಂತೆ ಮಾಡಿದರು. ಆಗ ಆ ಅಗ್ನಿಯನ್ನು ಮರುತ್ತುಗಳು ಊದಿ ಪ್ರಜ್ವಲಿಸುವಂತೆ ಮಾಡಿದರು. ಅಗ್ನಿಗೆ ಅದನ್ನು ಚಲಿಸುವಂತೆ ಮಾಡಲಾಗಲಿಲ್ಲ. ಆಗ **ಅಗ್ನಿವೈಶ್ವಾನರ**ನಿಂದ ಸುತ್ತುವರೆಯಲ್ಪಡುವಂತೆ ಮಾಡಿದರು. ಮತ್ತು ಆ ಅಗ್ನಿವೈಶ್ವಾನರನನ್ನು ಊದಿ ಪ್ರಜ್ವಲಿಸುವಂತೆ ಮಾಡಿದರು. ಆಗ ಅಗ್ನಿವೈಶ್ವಾನರನಿಗೆ ಅದನ್ನು ಚಲಿಸುವಂತೆ ಮಾಡಲು ಸಾಧ್ಯವಾಯಿತು. ಪ್ರಜ್ವಲಿತವಾಗಿ ಮಾಡಲ್ಪಟ್ಟ ಪ್ರಜಾಪತಿಯ ರೇತಸ್ಸಿನ ಒಂದು ಭಾಗವು ಆದಿತ್ಯ ರೂಪದಲ್ಲಿ ಪರಿವರ್ತಿತವಾಯಿತು. ಇನ್ನೊಂದು ಭಾಗವು ಭೃಗುರೂಪದಲ್ಲಿ ಆವಿರ್ಭೂತವಾಯಿತು. ಅದನ್ನು ವರುಣನು ಪರಿಗ್ರಹಿಸಿದನು. ಆದುದರಿಂದಲೇ **ಭೃಗುರ್ವಾರುಣಿಃ** ಎಂದು ಪ್ರಸಿದ್ಧವಾಯಿತು.

ಯಾವ ಭೃಗುವನ್ನು ತೈತ್ತಿರೀಯ ಮತ್ತು ಶತಪಥಬ್ರಾಹ್ಮಣಗಳಲ್ಲಿ ಪ್ರಜಾಪತಿಯ ರೇತಸ್ಸಿನಿಂದ ಪ್ರಾದುರ್ಭೂತನೂ ಮತ್ತು ವರುಣನಿಂದ ಪರಿಗೃಹೀತನೂ ಆದವನೆಂದು ತಿಳಿಸಿದೆಯೋ ಅವನನ್ನೇ ತೈತ್ತಿರೀಯ ಬ್ರಾಹ್ಮಣದಲ್ಲಿ ಇಂದ್ರರೂಪನಾದ ಈಶ್ವರನ ಅಂಶವೆಂದು ತಿಳಿಸಿದೆ.

ಇಂದ್ರಸ್ಯ ಸುಷುವಾಣಸ್ಯ ತ್ರೇಧೇಂದ್ರಿಯಂ ವೀರ್ಯಂ ಪರಾಪತತ್ । ಭೃಗುಸ್ತೃತೀಯಮು-ಭವತ್ । ಶ್ಯಾಯಂತೀಯಂ ತೃತೀಯಂ । ಸರಸ್ವತೀ ತೃತೀಯಂ । ಭಾರ್ಗವೋ ಹೋತಾ ಭವತಿ । ಶ್ಯಾಯಂತೀಯಂ ಬ್ರಹ್ಮಸಾಮಂ ಭವತಿ । ವಾರವಂತೀಯಮುಗ್ಥಿಷ್ಟೋಮಸಾಮಂ ॥

(ತೈ. ಬ್ರಾ. ೧-೮-೩-೫)

ಯಜ್ಞೇಚ್ಛುವಾದ ಇಂದ್ರನ ವೀರ್ಯವು ಮೂರು ಭಾಗವಾಗಿ ವಿಭಕ್ತವಾಗಿ ಸ್ಖಲಿತವಾಯಿತು. ಅದರ ಮೂರನೆ ಒಂದು ಭಾಗದಿಂದ ಭೃಗುವೂ, ಇನ್ನೊಂದರಿಂದ ಶ್ಯಾಯಂತೀಯಸಾಮವೂ ಉಳಿದ ಮೂರನೆಯ ಭಾಗದಿಂದ ಸರಸ್ವತಿಯೂ ಆವಿರ್ಭೂತರಾದರು. ಅದರಲ್ಲಿ ಭಾರ್ಗವನು ಹೋತೃವು.

ಭೃಗುವಿನ ಉತ್ಪತ್ತಿಯ ವಿಷಯದಲ್ಲಿ ಈ ರೀತಿ ಭಿನ್ನಾಭಿಪ್ರಾಯಗಳಿದ್ದರೂ ಅವನು ದಿವ್ಯಾಂಶಸಂಭೂತನೆಂಬುದರ ವಿಷಯದಲ್ಲಿ ಎಲ್ಲಿಯೂ ಮತಭೇದವಿರುವುದಿಲ್ಲ. ಆದರೂ ಸಹ ಭೃಗುವು ತನ್ನ ಅಜ್ಞಾನವನ್ನು ಪ್ರಕಾಶಪಡಿಸುತ್ತಾನೆಂಬುದು ಕೆಲವೆಡೆಗಳಲ್ಲಿ ವ್ಯಕ್ತವಾಗಿದೆ. ಉದಾಹರಣೆಗೆ—

ಭೃಗುರ್ಹ ವೈ ವಾರುಣಿಃ । ವರುಣಂ ಪಿತರಂ ವಿದ್ಯಯಾತಿಮೇನೇ ತದ್ಧ ವರುಣೋ ವಿದಾಂ ಚಕಾರಾತಿ ವೈ ಮಾ ವಿದ್ಯಯಾ ಮನ್ಯತ ಇತಿ । ಸ ಹೋವಾಚ । ಪ್ರಾಜ್ ಪುತ್ರಕ ವ್ರಜಾತ್ತತ್ರ ಯತ್ಪಶ್ಯೇಸ್ತದ್ಬ್ರೂಷ್ವಾ ದಕ್ಷಿಣಾ ವ್ರಜಾತ್ತತ್ರ ಯತ್ಪಶ್ಯೇತ್ತದ್ಬ್ರೂಷ್ವಾ . . . ಮೇ ಆಚಕ್ಷೀಯೋ ಇತಿ ॥

(ಶ. ಬ್ರಾ. ೧೧-೬-೧-೧)

ವರುಣಪುತ್ರನಾದ ಭೃಗುವು ತನ್ನ ಪಿತೃವಾದ ವರುಣನಿಗಿಂತಲೂ ತಾನೇ ಅಧಿಕವಾದ ಜ್ಞಾನಿಯೆಂದು ತಿಳಿದನು. ವರುಣನಿಗೆ ಭೃಗುವಿನ ಈ ಪ್ರಾಜ್ಞಂಮನ್ಯತ್ವವು ತಿಳಿಯಿತು. ಇವನು ಜ್ಞಾನದಲ್ಲಿ ನನಗಿಂತಲೂ ಅಧಿಕನೆಂದು ತಿಳಿದಿದ್ದಾನೆ ಎಂದು ಅರ್ಥಮಾಡಿಕೊಂಡನು.

ಆಗ ಪುತ್ರನಾದ ಭೃಗುವನ್ನು ಕರೆದು " ಮಗುವೇ, ನೀನು ಸರ್ವ ದಿಕ್ಕಿನಲ್ಲಿಯೂ ಸಂಚರಿಸಿ ಬಾ. ಮೊದಲು ಪೂರ್ವದಿಕ್ಕಿಗೆ ಹೋಗಿ ಅಲ್ಲಿ ಏನು ನೋಡುವೆಯೋ ಅದನ್ನು ತಿಳಿದುಬಂದು ನನಗೆ ಹೇಳು. ಅನಂತರ ದಕ್ಷಿಣಕ್ಕೂ, ಅದಾನಮೇಲೆ ಪಶ್ಚಿಮ ಮತ್ತು ಉತ್ತರದಿಕ್ಕುಗಳಿಗೂ ಕೊನೆಯಲ್ಲಿ ಈಶಾನ್ಯದಿಕ್ಕಿಗೂ ಹೋಗಿ ಅಲ್ಲಿ ಅಲ್ಲಿ ನಡೆಯತಕ್ಕ ವ್ಯವಹಾರಗಳನ್ನು ಪ್ರತ್ಯಕ್ಷತಃ ನೋಡಿ ಅವನ್ನು ನನಗೆ ತಿಳಿಸು ಎಂದು ಆಜ್ಞಾಪಿಸಿದನು. ಆಗ ಭೃಗುವು ಸಕಲ ದಿಕ್ಕುಗಳಲ್ಲಿಯೂ ಸಂಚರಿಸಿ ಎಲ್ಲಾ ದಿಕ್ಕುಗಳಲ್ಲಿರುವ ಪ್ರಜೆಗಳೂ ದ್ವೇಷಾಗ್ನಿಯಿಂದ ಕೂಡಿರುವುದನ್ನೂ, ಒಬ್ಬರನ್ನೊಬ್ಬರು ಹಿಂಸಿಸುತ್ತಿರುವುದನ್ನೂ, ಪರಸ್ಪರ ಪಂತಕರಾಗಿರುವುದನ್ನೂ ಕಂಡನು. ಅದರಿಂದ ಚಕಿತನಾಗಿ ಪುನಃ ಹಿಂತಿರುಗಿಬಂದು ಅದನ್ನೆಲ್ಲ ತಂದೆಗೆ ತಿಳಿಸಿದನು. ಆಗ ತಂದೆಯು ಅವೆಲ್ಲವೂ ಸಂಸಾರದ ಲಕ್ಷಣಗಳೆಂದೂ ಅಗ್ನಿಹೋತ್ರಾದಿ ಕರ್ಮಗಳ ಮೂಲಕ ಜ್ಞಾನವನ್ನು ಸಂಪಾದಿಸಿದರೆ ಈ ಭೀಕರವಾದ ಸಂಸಾರದಿಂದ ತಪ್ಪಿಸಿಕೊಳ್ಳಬಹುದೆಂದೂ ಹೇಳುತ್ತಾನೆ. ಹೀಗೆ ಭೃಗುವಿಗೆ ವರುಣನ ಉಪದೇಶವಿರುತ್ತದೆ. ತೈತ್ತಿರೀಯೋಪನಿಷತ್ತಿನಲ್ಲಿ ವಿವೃತವಾದ ತತ್ತ್ವೋಪದೇಶಕ್ಕೂ, ಇಲ್ಲಿರುವ ತತ್ತ್ವೋಪದೇಶಕ್ಕೂ ಅನೇಕ ವ್ಯತ್ಯಾಸಗಳಿಯುತ್ತವೆ. ಇನ್ನು ಕೆಲವೆಡೆಗಳಲ್ಲಿ ಯಜ್ಞತತ್ತ್ವವನ್ನರಿತ ಋಷಿಯೆಂದು ಭೃಗುವನ್ನು ಪ್ರಶಂಸಿಸಿದೆ.

" . . . . . ಆಪೋ ವಾ ಅಸ್ಪರ್ಧಂತ ವಯಂ ಪೂರ್ವಂ ಯಜ್ಞಂ ವಹ್ಯಾನೋ ವಯಮಿತಿ ಯೋಶ್ಚೇಮಾಃ ಪೂರ್ವೇದ್ಯುರ್ವಸತೀವರ್ಯೋ ಗೃಹ್ಯಂತೇ ಯಾಶ್ಚ ಪ್ರಾತರೇಕಧನಾಸ್ತಾ ಭೃಗುರಪಶ್ಯದಾಪೋ ವೈ ಸ್ಪರ್ಧಂತ ಇತಿ ತಾ ವಿತಯಚ್ಚಾಸಮಜ್ಞಪಯತ್ಸಮನ್ಯಾಯಂತೀ . . . .

(ಐ. ಬ್ರಾ. ೩-೩೦)

ಹಿಂದಿನದಿನ ಶೇಖರಿಸಲ್ಪಟ್ಟ **ವಸತೀವರೀಸಂಜ್ಞಕವಾದ** ಉದಕಗಳಿಗೂ ಮತ್ತು ಆ ದಿನ ಪ್ರಾತಃಕಾಲದಲ್ಲಿ ಶೇಖರಿಸಲ್ಪಟ್ಟ **ಏಕಧನಾಸಂಜ್ಞಕವಾದ** ಉದಕಗಳಿಗೂ ಒಂದುಸಲ ಯಜ್ಞವನ್ನು ವಹಿಸುವ ಕಾರ್ಯದಲ್ಲಿ ಸ್ಪರ್ಧೆಯುಂಟಾಯಿತು. ಅವುಗಳಲ್ಲಿ ವೈಮನಸ್ಯವುಂಟಾದಾಗ ಯಜ್ಞಕಾರ್ಯವು ನಿರ್ವಿಘ್ನವಾಗಿ ನಡೆಯಲು ತೊಂದರೆಯಾಯಿತು. ಆಗ ಭೃಗುವು ಈ ಉದಕಗಳ ವೈಮನಸ್ಯವನ್ನರಿತು " **ಆಪೋ ನ ದೇವೀರುಪ ಯಂತಿ** " ಎಂಬ ಮಂತ್ರವನ್ನು ಪಠಿಸಿ (ಋ. ಸಂ. ೧-೮೨-೨) ಅವುಗಳಲ್ಲಿ ಸಾಮರಸ್ಯವನ್ನುಂಟುಮಾಡಿದನು ಎಂದು ತಿಳಿಸಿದೆ.

ಒಟ್ಟನಲ್ಲಿ ಭೃಗುವು ದಿವ್ಯಾಂಶಸಂಭೂತನೆಂದೂ, ದಿವ್ಯಜ್ಞಾನಿಯೆಂದೂ ಅನೇಕ ಶ್ರುತಿವಾಕ್ಯಗಳಲ್ಲಿ ಇವನ ಮಹತ್ತ್ವವು ಪ್ರಶಂಸಿತವಾಗಿವೆ. ಋಕ್ಸಂಹಿತೆಯಲ್ಲಿ ೯೯-೫ ಮತ್ತು ೧೦-೧೯ನೇ ಸೂಕ್ತಗಳ ಕರ್ತೃವೆಂದು ಪ್ರಸಿದ್ಧನಾಗಿದ್ದಾನೆ.

ಅಲ್ಲದೆ, ಉತ್ತಮವಾದ ಯಜ್ಞನಿರ್ವಹಣಕಾರ್ಯದಲ್ಲಿ ಭೃಗುವೇ ಮಾನವರಿಗೆಲ್ಲ ಆದರ್ಶಪುರುಷನೆಂದು ಪ್ರಶಂಸಿತನಾಗಿದ್ದಾನೆ. ಉದಾಹರಣೆಗೆ—

ಉತ ತ್ವಾ ಭೃಗುವಚ್ಛುಚೇ ಮನುಷ್ವದಗ್ನ ಆಹುತ। ಅಂಗಿರಸ್ವದ್ಧವಾಮಹೇ ॥

(ಋ. ಸಂ. ೮-೪೩-೧೩)

ಎಲೈ ಪರಿಶುದ್ಧನಾದ ಅಗ್ನಿಯೇ, ಭೃಗುಮಹರ್ಷಿಯಂತೆಯೂ, ಮನುವಿನಂತೆಯೂ, ಅಂಗಿರಸ್ಸುಗಳಂತೆಯೂ ನಿನ್ನನ್ನು ಪೂಜಿಸಿ ತೃಪ್ತಿಪಡಿಸುತ್ತೇನೆ. ನಮ್ಮ ಸಹಾಯಕ್ಕೆ ಕರೆಯುತ್ತೇವೆ. ಇತ್ಯಾದಿಯಾಗಿ ಕರ್ಮಾಚರಣೆಯಲ್ಲಿ ಭೃಗುವಿನ ಮಾರ್ಗದರ್ಶಿತ್ವವನ್ನು ತೋರಿಸಿದೆ.

ಕರ್ಮಸ್ತೋತ್ರವೂ, ಪ್ರಾಜ್ಞತ್ವವೂ ಆದ ಈ ಭೃಗುಮಹರ್ಷಿಯ ವಂಶದಲ್ಲಿ ಉತ್ಪನ್ನರಾದ ಋಷಿಗಳೂ ಭೃಗುಗಳೆಂದೇ ಪ್ರಸಿದ್ಧರಾಗಿದ್ದಾರೆ. ಇವರಲ್ಲಿ ಕೆಲವರು ಋಕ್ಸಂಹಿತೆಯ ಕೆಲವು ಸೂಕ್ತಗಳ ದ್ರಷ್ಟೃಗಳೆಂದು ಪ್ರಸಿದ್ಧರಾಗಿದ್ದಾರೆ. ಇವರಾರೆಂದರೆ—

೧)	ಇಟಭಾರ್ಗವಃ	ಋ. ಸಂ.	೧೦-೧೭೧
೨)	ವೈಧಭಾರ್ಗವಃ	,,	೯-೪೭-೪೯; ೯-೭೫-೭೯
೩)	ಕೃತ್ಸ್ನಭಾರ್ಗವಃ	,,	೮-೭೯
೪)	ಗೃತ್ಸಮದೋ ಭಾರ್ಗವಃ	,,	೨.೧-೩; ೨-೮೪೫; ೯-೮೬-೪೬-೪೭-೪೮
	(ಶೌನಕಃ)	,,	
೫)	ಚ್ಯವನೋಭಾರ್ಗವಃ	,,	೧೦-೧೯
೬)	ಜಮದಗ್ನಿರ್ಭಾರ್ಗವಃ	,,	೩-೬೨-೧೬,೧೭,೧೮; ೮-೧೦೧; ೯-೯೨; ೯-೯೫ ೯-೬೭-೧೬,೧೭-೧೮; ೧೦-೧೧೦; ೧೦-೧೩೭-೬ ೧೦-೧೬೭
೭)	ನೇಮೋ ಭಾರ್ಗವಃ	,,	೮-೧೦೦-೧,೨,೩; ೬-೧೨
೮)	ಪ್ರಯೋಗೋ ಭಾರ್ಗವಃ	,,	೮-೧೦೨
೯)	ವೇನೋ ಭಾರ್ಗವಃ	,,	೯-೮೫; ೧೦-೧೨೩
೧೦)	ಸೋಮಾಹುತಿರ್ಭಾರ್ಗವಃ	,,	೨-೪-೫,೬,೭
೧೧)	ಸ್ಯೂಮರಶ್ಮಿಃಭಾರ್ಗವಃ	,,	೧೦-೭೭; ೧೦-೭೮

ಭೃಗುವು ಯಾವರೀತಿ ಕರ್ಮಕುಶಲನೋ ಹಾಗೆಯೇ ಭೃಗುವಂಶೋತ್ಪನ್ನರಾದ ಈ ಮಹರ್ಷಿಗಳೂ ಸಹ ಕರ್ಮಕುಶಲರೆಂದು ಪ್ರಸಿದ್ಧರಾಗಿದ್ದಾರೆ. ಇವರ ಕರ್ಮಕುಶಲತೆಯನ್ನು ಪ್ರಶಂಸಿಸುತ್ತ ಸಾಯಣರು ಈ ರೀತಿ ವಿವರಿಸಿದ್ದಾರೆ

ಏತಂ ವಾಂ ಸ್ತೋಮಮಶ್ವಿನಾವಕರ್ಮಾತಕ್ಷಾಮ ಭೃಗವೋ ನ ರಥಂ ।
ನ್ಯಮೃಕ್ಷಾಮ ಯೋಷಣಾಂ ನ ಮರ್ಯೇ ನಿತ್ಯಂ ನ ಸೂನುಂ ತನಯಂ ದಧಾನಾಃ ॥

(ಋ. ಸಂ. ೧೦-೩೯-೧೪)

ಎಂಬ ಋಕ್ಕಿನಲ್ಲಿ ಭೃಗುಗಳ ಕರ್ಮಕುಶಲತೆಯನ್ನು ವಿವರಿಸಿದೆ. ಇಲ್ಲಿ **ಭೃಗವಃ** ಎಂಬ ಶಬ್ದದ ನಿರ್ವಚನವನ್ನು ತಿಳಿಸುತ್ತ ಸಾಯಣರು " **ಕರ್ಮಯೋಗಾದ್ಭವೋ ಭೃಗವ ಉಚ್ಯಂತೇ** " ಎಂದು ವಿವರಿಸಿದ್ದಾರೆ

ಋಭುಗಳ ಕರ್ಮಕುಶಲತೆಯನ್ನು ಹಿಂದೆ ವಿಶದವಾಗಿ ವಿಮರ್ಶಿಸಿ ತಿಳಿಸಿದೆ. ಇಲ್ಲಿ ಭೃಗುಗಳ ವೈಶಿಷ್ಟ್ಯವನ್ನು ತಿಳಿಸಿದೆ. ಇದೇ ರೀತಿ—

ಏವೇದಿಂದ್ರಾಯ ವೃಷಭಾಯ ವೃಷ್ಣೇ ಬ್ರಹ್ಮಾಕರ್ಮ ಭೃಗವೋ ನ ರಥಂ ।
ನ ಚಿದ್ಯದಾ ನಃ ಸಖ್ಯಾ ವಿಯೋಷದಸನ್ನ ಉಗ್ರೋವಿತಾ ತನೂಪಾಃ ॥

(ಋ ಸಂ. ೪-೧೬-೨೦)

ಎಂಬಲ್ಲಿ ಭೃಗುಶಬ್ದಕ್ಕೆ ಪ್ರಕಾಶಮಾನವಾದ ತಕ್ಷರು (ಮರಕೆಲಸದವರು) ಎಂದು ಅರ್ಥಮಾಡಿದೆ. ಹೀಗೆ ಋಭುಗಳು ಯಾವ ಶಕ್ತಿಯಿಂದ ಪ್ರಸಿದ್ಧರೋ ಆದರಂತೆಯೇ ಭೃಗುಗಳೂ ಅದೇ ಶಕ್ತಿಯಿಂದ ಪ್ರಸಿದ್ಧರು. ಋಭುಗಳಿಗಿರುವಂತೆಯೇ, ಭೃಗುಗಳಿಗೂ ಸಹ ದೇವತೆಗಳೊಡನೆ ಯಜ್ಞಭಾಗವಿರುತ್ತದೆ.

ವಿಶ್ವೇದೇವೇಭಿರ್ಜನಿಭಿರೇಕಾಪತ್ನೀರಹಾದ್ಭಿರ್ಮರುದ್ಭಿರ್ಭೃಗುಭಿಃ ಸಚಾಭುವಾ ।
ಸಜೋಷಸಾ ಉಷಸಾ ಸೂರ್ಯೇಣ ಚ ಸೋಮಂ ಪಿಬತಮಶ್ವಿನಾ ॥

(ಋ. ಸಂ. ೮-೩೫-೩)

ಎಲೈ ಅಶ್ವಿನೀದೇವತೆಗಳೇ, ಈ ಯಜ್ಞದಲ್ಲಿ ನೀವು ಸಕಲ ದೇವತೆಗಳೊಡನೆಯೂ, ಮರುತ್ತುಗಳೊಡನೆಯೂ, ಭೃಗುಗಳೊಂದಿಗೂ, ಉಷಸ್ಸಿನೊಂದಿಗೂ ಕೂಡಿಕೊಂಡು ಸೋಮವನ್ನು ಪಾನಮಾಡಿರಿ ಎಂದಿರುವ ಸನ್ನಿವೇಶಗಳಲ್ಲಿ ಭೃಗುಗಳಿಗೆ ದೇವತೆಗಳೊಡನೆ ಇರುವ ಯಜ್ಞಭಾಗವು ಸ್ಪಷ್ಟವಾಗಿರುತ್ತದೆ.

ಭೃಗುವೂ ಭೃಗುವಂಶೋತ್ಪನ್ನರಾದ ಋಷಿಗಳೂ ಪ್ರಥಮತಃ ಯಜ್ಞವನ್ನು ಸ್ಥಾಪಿಸಿದವರೆಂದು ಪ್ರಸಿದ್ಧರಾಗಿದ್ದಾರೆ. ಯಜ್ಞಕ್ಕೆ ಮೂಲರೂಪನಾದ ಅಗ್ನಿಯ ಅನುಗ್ರಹವು ಭೃಗುಮಹರ್ಷಿಗಳಿಗೆ ಲಬ್ಧವಾದಷ್ಟು ಇನ್ನಾರಿಗೂ ಲಭಿಸಲಿಲ್ಲ. ಈ ಋಷಿಗಳಿಗೂ ಅಗ್ನಿಗೂ ಇರುವ ಸಂಬಂಧವು ಎಷ್ಟು ನಿಕಟವೂ, ಪವಿತ್ರವೂ ಆದುದೆಂದು ಕೆಲವು ಉದಾಹರಣೆಗಳಿಂದ ನೋಡಬಹುದು.

೧) ಮಾತರಿಶ್ವನು ಅಗ್ನಿಯನ್ನು ಪ್ರಥಮತಃ ಭೃಗುಗಳಿಗೆ ತಂದುಕೊಟ್ಟನು.

(ಋ. ಸಂ. ೧-೬೦-೧)

೨) ಎಲೈ ಅಗ್ನಿಯೇ, ನಿನ್ನನ್ನು ಮಾನವರ ನಡುವೆ ಪ್ರಥಮತಃ ಸ್ಥಾಪಿಸಿದವರು ಭೃಗುಗಳು.

(ಋ. ಸಂ. ೧-೫೮-೬; ೬-೧೫-೨)

೩) ಭೃಗುಗಳಿಗೆ ಇಷ್ಟಾರ್ಥಪ್ರದನಾದ ಅಗ್ನಿಯನ್ನು ಪ್ರಾರ್ಥಿಸಿ ಅಪೇಕ್ಷಿಸುತ್ತೇವೆ.

(ಋ. ಸಂ. ೩-೨-೪)

೪) ಕರ್ಮನಿರತರಾದ ಋಭುಗಳು ಅಗ್ನಿಯನ್ನು ತೇಜೋಯುತನಾಗುವಂತೆ ಮಾಡಿದರು.

೫) ಭೃಗುಗಳು ತಮ್ಮ ಸ್ತುತಿಗಳಿಂದ ಅಗ್ನಿಯನ್ನು ಪ್ರಭಾಯುತನನ್ನಾಗಿ ಮಾಡಿದರು.

(೧೦-೧೨೨-೫)

ಇತ್ಯಾದ್ಯನೇಕ ವಾಕ್ಯಗಳಲ್ಲಿ ಭೃಗುವಂಶೋತ್ಪನ್ನರಾದ ಋಷಿಗಳು ಅಗ್ನಿಯನ್ನು ಪೂಜಿಸಿ ಮಾನವರಲ್ಲಿ ಮಾನವರ ಶ್ರೇಯಸ್ಸಾಧನೆಗಾಗಿ ಯಜ್ಞವನ್ನು ಸ್ಥಾಪಿಸಿದ ವಿಷಯವನ್ನು ಪ್ರಶಂಸಿಸಿದೆ. ಸಾಯಣನು ಇದೇ ಮಾಹಾತ್ಮ್ಯವನ್ನು ತಿಳಿಸುವಂತೆ **ಭೃಗವಃ** ಎಂಬ ಪದದ ನಿರ್ವಚನವನ್ನು ಈ ರೀತಿ ತಿಳಿಸಿದ್ದಾರೆ.

ಭೃಗವಃ—ಭ್ರಷ್ಟಾರೋ ಹವಿಷಾಂ ಪಾಪಾನಾಂ ಭರ್ಜಕಾ ವಾ ।

ಹವಿಸ್ಸುಗಳನ್ನು ಅರ್ಪಿಸುವವರು ಎಂದಾಗಲೀ ಅಥವಾ ಪಾಪವನ್ನು ನಾಶಮಾಡುವವರು ಎಂದಾಗಲೀ ಅರ್ಥವಾಗುವುದರಿಂದಲೂ ಈ ಋಷಿಗಳಿಗೆ ಈ ಎರಡು ವಿಧವಾದ ಶಕ್ತಿಗಳು ಇದ್ದುದರಿಂದಲೂ ಇವರಿಗೆ ಈ ಹೆಸರೆಂದು ನಿರುಕ್ತಕಾರರು ವಿವರಿಸಿದ್ದಾರೆ. ನಿರುಕ್ತಕಾರರೂ,

" ಆರ್ಚಿಷಿ ಭೃಗುಃ ಸಂಬಭೂವ ಭೃಗುರ್ಭರ್ಜ್ಯಮಾನೋ ನ ದೇಹೇ । "

(ನಿರು-ಪರಿ-೧೭)

ಜ್ವಾಲೋತ್ಪನ್ನನಾದ ಭೃಗುವು ಅಗ್ನಿಯ ಜ್ವಾಲೆಯಿಂದ ಉತ್ಪನ್ನನಾದನು. ಆದರೆ ಅಗ್ನಿಯ ಜ್ವಾಲೆಯೊಳಗೆ ಕುದಿಯುತ್ತಿದ್ದರೂ ದೇಹನಾಶ ಇಲ್ಲ. ಆದುದರಿಂದ ಈ ಹೆಸರು ಎಂದು ಸಾರ್ಥಕವಾಗಿದೆಯೆಂದು ತಾತ್ಪರ್ಯವನ್ನು ಹೇಳಿದ್ದಾರೆ. ಈ ಅದ್ಭುತವಾದ ಶಕ್ತಿಯು ಮಹತ್ತಾದ ಯಜ್ಞಕರ್ಮಕ್ಕೆ ಸಹಾಯಮಾಡುವಂತೆಯೇ ಪಾಪನಾಶಕ್ಕೂ ಸಹಾಯಮಾಡುತ್ತದೆ. **" ತೇಜೋ ಯದ್ಭೃಗುರಂಗಿರಸಾಂ "** (ಶ. ಬ್ರಾ. ೧-೨-೧-೧೩) ಇತ್ಯಾದಿ ವಾಕ್ಯಗಳಿಂದ ಈ ಮಹತ್ತ್ವವು ಪ್ರಶಂಸಿತವಾಗಿದೆ.

ಇಂತಹ ಮಹತ್ತ್ವವುಳ್ಳ ಭೃಗುಗಳು ಗುಹೆಯಲ್ಲಿ ಅಡಗಿದ್ದ ಅಗ್ನಿಯನ್ನು ಕಂಡುಹಿಡಿದರು ಎಂದು ಪ್ರಕೃತವಾದ ಋಕ್ಕಿನಲ್ಲಿ ತಿಳಿಸಿದೆ. ಅಗ್ನಿಯು ಗುಹೆಯಲ್ಲಿ ಅಡಗಿರಬೇಕಾದ ಕಾರಣವೇನು ಅಥವಾ ಅದರ ಅರ್ಥವೇನು ಮತ್ತು ರಹಸ್ಯಸ್ಥಾನದಲ್ಲಿ ಅಡಗಿದ್ದ ಅಗ್ನಿಯನ್ನು ಭೃಗುಗಳು ಹೊಂದಿದರು ಎಂಬುದರ ತಾತ್ಪರ್ಯವೇನು ? ಈ ಎರಡು ವಿಷಯಗಳನ್ನೂ ಇಲ್ಲಿ ಪರಿಶೀಲಿಸಲಾಗುತ್ತದೆ.

ಅಗ್ನಿಯು ಗುಹೆಯಲ್ಲಿ ಅಂತರ್ಗತನಾಗಿದ್ದ ವಿಷಯವನ್ನು ಬೇರೆಬೇರೆ ಕಡೆಗಳಲ್ಲಿ ಬೇರೆಬೇರೆ ರೀತಿಯಲ್ಲಿ ವರ್ಣಿಸಿದೆ. ಅಗ್ನಿಯ ಭ್ರಾತೃಗಳಿಗೆ ತೊಂದರೆಯು ಸಂಭವಿಸಿದಾಗ ಅಗ್ನಿಯು ಭೀತಿಯಿಂದ ರಹಸ್ಯಪ್ರದೇಶದಲ್ಲಿ ಅಡಗಿಕೊಂಡುದನ್ನೂ ದೇವತೆಗಳು ಅಗ್ನಿಯನ್ನು ಪ್ರಾರ್ಥಿಸಿದುದನ್ನೂ ತೈತ್ತಿರೀಯ ಸಂಹಿತಾವಾಕ್ಯಗಳನ್ನು ದಾಖಲಿಸಿ ಹಿಂದೆ ವಿವರಿಸಿದೆ. ಇದೇರೀತಿ ಗುಹಾಂತರ್ಗತನಾದುದನ್ನು ಶತಪಥಬ್ರಾಹ್ಮಣದಲ್ಲಿ ಈ ರೀತಿ ವಿವರಿಸಿದೆ.

ಚತುರ್ಧಾ ವಿಹಿತೋ ಹ ವಾ ಅಗ್ರೇಽಗ್ನಿರಾಸ । ಸ ಯಮಗ್ರೇಽಗ್ನಿರ್ಗಂ ಹೋತ್ರಾಯೈ ಪ್ರಾವೃಣತ ಸ ಪ್ರಾಧನ್ವದ್ಯಂ ದ್ವಿತೀಯಂ ಪ್ರಾವೃಣತ ಸ ಪ್ರೈವಾಧನ್ವದ್ಯಂ ತೃತೀಯಂ ಪ್ರಾವೃಣತ ಸ ಪ್ರೈವಾಧನ್ವದಥ ಯೋಽಯಮೇತರ್ಹ್ಯಗ್ನಿಃ ಸ ಭೀಷಾ ನಿಲಿಲ್ಯೇ ಸೋಽಪಃ ಪ್ರವಿವೇಶ ತಂ ದೇವಾ ಅನುವಿದ್ಯ ಸಹಸೈವಾದ್ಭ್ಯ ಅನಿನ್ಯುಃ ಸೋಽಪೋಽಭಿತಿಷ್ಠೇವಾವಷ್ಟೃತಾ ಸ್ಥ ಯಾ ಅಪ್ರಪದನಗ್ಂ ಸ್ಥ ಯಾಭ್ಯೋ ವೋ ಮಾಮಕಾಮಂ ನಯಂತೀತಿ ತತ ಆಪ್ತ್ಯಾಃ ಸಂಬಭೂವುಸ್ತ್ರಿತೋ ದ್ವಿತ ಏಕತಃ ॥

(ಶ. ಬ್ರಾ. ೧-೨-೩-೧)

ಈ ವಾಕ್ಯಗಳಲ್ಲಿ ಅಗ್ನಿಯ ಮೂರು ಭ್ರಾತೃಗಳ ವಿಷಯವಿಲ್ಲ. ಆದರೆ ಅಗ್ನಿಯ ಮೂರು ರೂಪಾಂತರಗಳು ಬೇರೆಬೇರೆಯಾಗಿ ವರ್ಣಿತವಾಗಿವೆ. ಈ ಸನ್ನಿವೇಶವು ಈ ರೀತಿ ಇದೆ

ಅಗ್ನಿಯು ನಾಲ್ಕುರೂಪಗಳನ್ನು ಹೊಂದಿದನು. ಆಗ ಪ್ರಥಮದಲ್ಲಿ ಅಗ್ನಿಯನ್ನು ಹೋತೃಸ್ಥಾನವನ್ನಲಂಕರಿಸಲು ಪ್ರಾರ್ಥಿಸಿದರು. ಪ್ರಥಮತಃ ಪ್ರಾರ್ಥಿತನಾದ ಅಗ್ನಿಯು ಅದೃಶ್ಯನಾದನು. ಎರಡನೆಯ ಸಲ ಪ್ರಾರ್ಥಿತನಾದಾಗಲೂ ಅದೃಶ್ಯನಾದನು. ಮೂರನೆಯಸಲ ಪ್ರಾರ್ಥಿತನಾದಾಗಲೂ ಅದೃಶ್ಯನಾದನು. ಆಗ ಅದನ್ನು ನೋಡಿ ಅಗ್ನಿಯ ನಾಲ್ಕನೆಯ ರೂಪವೂ ರಹಸ್ಯಪ್ರದೇಶದಲ್ಲಿ ಅಡಗಿತುಕೊಂಡಿತು. ಆ ಸಮಯದಲ್ಲಿ ಸಲಿಲದೊಳಕ್ಕೆ ಪ್ರವೇಶಿಸಿ

ಮರೆಮಾಡಿಕೊಂಡಿತು. ಆಗ ದೇವತೆಗಳು ಸಲಿಲವನ್ನು ಪ್ರವೇಶಿಸಿ ಅಡಗಿಕೊಂಡಿದ್ದ ಅಗ್ನಿಯನ್ನು ಹೊರಕ್ಕೆ ಕರೆತಂದರು. ಆಗ ಅಗ್ನಿಯು ಕ್ರುದ್ಧನಾಗಿ ತನಗೆ ಸರಿಯಾಗಿ ರಕ್ಷಣೆಯನ್ನು ಕೊಡದೇಇದ್ದುದರಿಂದ ಉದಕದಮೇಲೆ ಅಸಮಾಧಾನವನ್ನು ಸೂಚಿಸಿದನು. ಆ ಕಾಲದಲ್ಲಿ ಅವನ ಬಾಯಿಂದ ಮೂರು ಸಣ್ಣ ಹನಿಗಳು ಉದುರಿದುವು. ಆ ಹನಿಗಳಿಂದ ಏಕತ, ದ್ವಿತ ಮತ್ತು ತ್ರಿತ ಇವರು ಉತ್ಪನ್ನರಾದರು ಎಂದಿರುತ್ತದೆ. ಇದೇ ರೀತಿ ಅಗ್ನಿಯು ಪ್ರಜಾಪತಿಯ ಗೋಚರಕ್ಕೂ ಅತೀತನಾಗಿ ರಹಸ್ಯರೂಪವನ್ನು ಹೊಂದಿದ ಪ್ರಕರಣವೂ ಬೇರೆಡೆಯಲ್ಲಿ ವರ್ಣಿತವಾಗಿರುತ್ತದೆ.

ಪ್ರಜಾಪತಿರಗ್ನಿರೂಪಾಣ್ಯಭ್ಯಧ್ಯಾಯತ್ । ಸ ಯೋಽಯಂ ಕುಮಾರೋ ರೂಪಾಣ್ಯನ್ನ-ಪ್ರವಿಷ್ಯ ಆಸೀತ್ತಮನ್ವೈಚ್ಛತ್ಸೋಽಗ್ನಿರವೇದನು ವೈ ಮಾ ಪಿತಾ ಪ್ರಜಾಪತಿರಿಚ್ಛತಿ ಪಂತ ತದ್ರೂಪಮಸಾನಿ ಯನ್ನ ಏಷ ನ ವೇದೇತಿ ॥

(ಶ. ಬ್ರಾ. ೬-೨-೧-೧)

ಪ್ರಜಾಪತಿಯು ಅಗ್ನಿಯ ರೂಪಗಳನ್ನು ಅರಿಯಲು ಧ್ಯಾನರೂಪದಲ್ಲಿ ಚಿಂತಿಸಿದನು. ಬೇರೆ ಬೇರೆ ರೂಪಗಳನ್ನು ಹೊಂದಿದ್ದ ಕುಮಾರನನ್ನು ಕಂಡುಹಿಡಿಯಲು ಪ್ರಯತ್ನಿಸಿದನು. " ನನ್ನ ಪಿತೃವಾದ ಪ್ರಜಾಪತಿಯು ನನ್ನನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದಾನೆ. ಅವನ ಗೋಚರಕ್ಕೆ ಬೀಳದಿರುವಂತೆ ನಾನು ರೂಪಾಂತರಗಳನ್ನು ಹೊಂದುತ್ತೇನೆ " ಎಂದು ಯೋಚಿಸಿ,

ಸ ಏತಾನ್ಪಂಚ ಪಶೂನಪಶ್ಯತ್ । ಪುರುಷಮಶ್ವಂ ಗಾಮವಿಮಜಂ ಯದಪಶ್ಯತ್ತಸ್ಮಾ-ದೇತೇ ಪಶವಃ ॥ ಸ ಏತಾನ್ ಪಂಚ ಪಶೂನ್ ಪ್ರಾವಿಶತ್ । ಸ ಏತೇ ಪಂಚ ಪಶವೋಽ-ಭವತ್ತಮು ವೈ ಪ್ರಜಾಪತಿರನ್ವೈವೈಚ್ಛತ್ ॥

(ಶ. ಬ್ರಾ. ೬-೨-೧-೨,೩)

ಪುರುಷ, ಅಶ್ವ, ಗೋವು, ಟಗರು ಮತ್ತು ಅಜ ಈ ಐದು ಪ್ರಾಣಿಗಳನ್ನು ನೋಡಿದನು. ಈ ರೀತಿ ನೋಡಿದುದರಿಂದಲೇ (ಪಶ್) ಅವುಗಳಿಗೆ **ಪಶು** ಎಂದು ಹೆಸರಾದುವು. ಅಗ್ನಿಯು ಅವುಗಳನ್ನು ಪ್ರವೇಶಿಸಿ ಅವುಗಳ ರೂಪವನ್ನೇ ಹೊಂದಿದನು. ಪ್ರಜಾಪತಿಯು ಮಾತ್ರ ಇನ್ನೂ ಹುಡುಕುತ್ತಲೇ ಇದ್ದನು.

ಸ ಐಕ್ಷತ । ಇಮೇ ವಾ ಅಗ್ನಿರಿಮಾನೇವಾತ್ಮಾನಮಭಿಸಂಸ್ಕರವೈ ಯಥಾ ವಾ ಅಗ್ನಿಃ ಸಮಿದ್ಧೋ ದೀಪ್ಯತೇ ಏವಮೇಷಾಂ ಚಕ್ಷುರ್ದೀಪ್ಯತೇ . . . . ಇಮೇ ವಾಽಗ್ನಿರಿಮಾನೇ-ವಾತ್ಮಾನಮಭಿಸಂಸ್ಕರವಾ ಇತಿ ತಾನ್ನಾನಾದೇವತಾಭ್ಯ ಆಲಭತ ವೈಶ್ವಕರ್ಮಣಂ ಪುರುಷಂ ವಾರುಣಮಶ್ವಮೈಂದ್ರಮೃಷಭಂ ತ್ವಾಷ್ಟ್ರಮವಿಮಾಗ್ನೇಯಮಜಂ ॥

(ಶ. ಬ್ರಾ. ೬-೨-೧-೫)

ಪ್ರಜಾಪತಿಯೂ ಆ ಪಶುಗಳನ್ನು ನೋಡಿ " ಅವೇ ಅಗ್ನಿಯ ರೂಪಾಂತರಗಳಿರಬೇಕು. ಅವನ್ನು ನನ್ನೊಡನೆ ಐಕ್ಯವಾಗುವಂತೆ ಮಾಡುತ್ತೇನೆ. ಪ್ರದೀಪ್ತನಾದ ಅಗ್ನಿಯು ಪ್ರಕಾಶಿಸುವಂತೆ ಅವುಗಳ ಕಣ್ಣುಗಳು ಪ್ರಕಾಶಿಸುತ್ತವೆ. ಅಗ್ನಿಯಿಂದ ಧೂಮವು ಮೇಲಕ್ಕೆ ಹೊರಡುವಂತೆ ಅವುಗಳ ಮುಖಗಳಿಂದಲೂ ಶ್ವಾಸವು ಹೊರಡುತ್ತದೆ, ಹೀಗೆ ಅಗ್ನಿಯ ಲಕ್ಷಣಗಳೆಲ್ಲವೂ ಅವುಗಳಲ್ಲಿರುವುದರಿಂದ ಅಗ್ನಿಯೇ ಈ ರೂಪವನ್ನು ತಾಳಿರಬಹುದು ಎಂದು ಯೋಚಿಸಿ ಅವುಗಳನ್ನು ತನ್ನ ರೂಪಾಂತರಗಳೇ ಆದ ಬೇರೆಬೇರೆ ದೇವತೆಗಳಿಗೆ ಆಹುತಿರೂಪಗಳಲ್ಲಿ ಅರ್ಪಿಸಲು ಇಚ್ಛಿಸಿದನು. ಪುರುಷನನ್ನು

ವಿಶ್ವಕರ್ಮನಿಗೂ, ಅಶ್ವವನ್ನು ವರುಣನಿಗೂ, ವೃಷಭವನ್ನು ಇಂದ್ರನಿಗೂ, ಟಗರನ್ನು ತ್ವಷ್ಟೃವಿಗೂ ಮತ್ತು ಅಜವನ್ನು ಅಗ್ನಿಗೂ ಅರ್ಪಿಸಲು ಸಂಕಲ್ಪಿಸಿದನು.

" . . . . . ಆತ್ಮಾ ವೈ ಯಜ್ಞೋ ನೇನ್ಮೇಯಮಾತ್ಮಾ ವಿಕೃಷ್ಟೋಽಸದಿತ್ಯೇತೇನ ಪಶೂನೇಷ್ವಾ ತತ್ಪ್ರಜಾಪತಿರಪಶ್ಯದ್ಯಥೈತಸ್ಯಾಗ್ನೇರಂತಂ ನ ಪರ್ಯೇತ್ ॥ "

(ಶ. ಬ್ರಾ. ೬-೨-೧-೭)

ಈ ರೀತಿಯಾಗಿ ಯೋಚಿಸಿದ ಪ್ರಜಾಪತಿಯು ತಾನು ಸಂಕಲ್ಪಿಸಿದಂತೆಯೇ ಯಜ್ಞವನ್ನಾಚರಿಸಿದನು. ಆಯಾ ಪ್ರಾಣಿಗಳನ್ನು ಯಥಾಕ್ರಮವಾಗಿ ಆಯಾ ದೇವತೆಗಳಿಗರ್ಪಿಸಿದನು. ಇಷ್ಟಾದರೂ ಸಹ ಅಗ್ನಿಯ ಅಂತವನ್ನು ಅರಿಯಲಿಲ್ಲವೆಂದು ಮನಗಂಡನು.

ಸ ಐಕ್ಷತ । ಯದಿಮಮಾತ್ಮಾನಮಪ್ಸು ಪ್ರಾಪಿಪ್ಲವಂ ತಮನ್ವಿಚ್ಛಾನೀತಿ ತಮನ್ವೈಚ್ಛದ್ಯ-ದೇಷಾಮಪ್ಸು ಪ್ರವಿದ್ವಾನಾಂ ಪ್ರತ್ಯತಿಷ್ಠತ್ತಾ ಅಪಃ ಸಮಭರದಥ ಯದಸ್ಯಾಂ ತಾಂ ಮೃದಂ ಯದುಭಯಗ್ಂ ಸಂಭೃತ್ಯ ಮೃದಂ ಚಾಪಶ್ಚೇಷ್ಟಕಾಮುಕರೋತ್ತಸ್ಮಾದೇತದುಭಯಮಿಷ್ಟಕಾ ಭವತಿ ಮೃಚ್ಚಾಪಶ್ಚ ॥

(ಶ. ಬ್ರಾ. ೬-೨-೧-೮)

" ನಾನು ಉದಕದಲ್ಲಿ ಹರಡಿದ ಅಗ್ನಿರೂಪವನ್ನು ಹುಡುಕಿ ಪಡೆಯಬೇಕು " ಎಂದು ಚಿಂತಿಸಿ ಅಲ್ಲಿಯೂ ಹುಡುಕಿದನು ಮತ್ತು ಉದಕರೂಪವನ್ನು ತಾಳಿ ಹರಡಿದ್ದ ಅಗ್ನ್ಯಂಶಗಳೆಲ್ಲವನ್ನೂ ಒಂದುಕಡೆ ಸೇರಿಸಿದನು. ಉದಕಾಂತರ್ಗತವಾದ ಮೃತ್ತಿನಲ್ಲಿ (ಮಣ್ಣು) ಅಡಗಿದ್ದ ಅಗ್ನ್ಯಂಶವನ್ನು ಸೇರಿಸಿದನು. ಹೀಗೆ ಅಗ್ನ್ಯಂಶವನ್ನು ಹೊಂದಿದ್ದ ಸಲಿಲ ಮತ್ತು ಮೃತ್ತನ್ನು ಸೇರಿಸಿ ಇಟ್ಟಿಗೆ (ಇಷ್ಟಕ) ಗಳನ್ನು ಮಾಡಿದನು. ಆದುದರಿಂದ ಯಜ್ಞವೇದಿಕೆಗೆ ಉಪಯುಕ್ತವಾದ ಇಟ್ಟಿಗೆಗಳೂ ಅಗ್ನ್ಯಂಶಗಳನ್ನು ಹೊಂದಿವೆ ಇತ್ಯಾದಿಯಾಗಿ ರಹಸ್ಯರೂಪದಲ್ಲಿ ಅಡಗಿದ್ದ ಅಗ್ನಿಯನ್ನು ಯಜ್ಞರೂಪಕ್ಕೆ ಪರಿವರ್ತಿತವಾಗುವಂತೆ ಮಾಡಿ ಪ್ರಜೆಗಳಿಗೆ ಪ್ರಜಾಪತಿಯು ಉಪಕಾರಮಾಡಿದನು ಎಂದಿರುತ್ತದೆ.

ಹೀಗೆ ಅಗ್ನಿಯು ಪಶುರೂಪಗಳಲ್ಲಿ ಅಡಗಿರುವನು ಎಂಬುದು ಪ್ರಜಾಪತಿಯಿಂದ ದೇವತೆಗಳಿಗೂ ತಿಳಿದ ವಿಷಯವಾಗಿದೆ. ಈ ತಿಳಿವಳಿಕೆಯಿಂದ ಅವರಿಗೆ ಇನ್ನೊಂದು ಉಪಕಾರವಾಯಿತು. ಗೋಚರಾತೀತನಾದ ಅಗ್ನಿಯು ಎಲ್ಲಿ ಅಡಗಿರುವನು ಎಂಬ ಅರಿವೂ ಉಂಟಾಯಿತು. ಹೇಗೆಂದರೆ—

ಏತಸ್ಯಾಮಾಹುತ್ಯಾಗ್ಂ ಹುತಾಯಾಂ । ಅಗ್ನಿರ್ದೇವೇಭ್ಯ ಉದಕ್ರಾಮತ್ತೇ ದೇವಾ ಅಬ್ರುವನ್ ಪಶುರ್ವಾ ಅಗ್ನಿಃ ಪಶುಭಿರಿಮಮನ್ವಿಚ್ಛಾಮ ಸ ಸ್ವಾಯೇ ರೂಪಾಯಾವಿರ್ಭವತು ಗೌರ್ವಾ ಗವೇ ಆಶ್ವೋವಾಶ್ವಾಯ ಪುರುಷೋ ವಾ ಪುರುಷಾಯ ॥

(ಶ. ಬ್ರಾ. ೬-೩-೧-೨೨)

ದೇವತೆಗಳು ಒಂದುಸಲ ಸತ್ರವನ್ನಾಚರಿಸಿ ಅಗ್ನಿಯನ್ನುದ್ದೇಶಿಸಿ ಆಹುತಿಯನ್ನರ್ಪಿಸಿದಾಗ ಅಗ್ನಿಯು ಅವರಿಂದ ಅಂತರ್ಹಿತನಾದನು. ಆಗ ಅವರು " ಅಗ್ನಿಯು ಪಶುರೂಪದಲ್ಲಿ ಅಂತರ್ಹಿತನಾಗಿರುವುದರಿಂದ ಪಶುರೂಪದಿಂದಲೇ ಅವನನ್ನು ಹುಡುಕೋಣ ಎಂದು ಗವಾದಿರೂಪಗಳಿಂದ ಹುಡುಕಲು ಆರಂಭಿಸಿದಾಗ ಪುರುಷನಿಗೆ ಪುರುಷರೂಪದಲ್ಲಿಯೂ, ಅಶ್ವಕ್ಕೆ ಅಶ್ವರೂಪದಲ್ಲಿಯೂ, ಗೋವಿಗೆ ಗೋರೂಪದಲ್ಲಿಯೂ ಅಗ್ನಿಯು ಕಾಣಿಸಿಕೊಂಡನು

ಎಂದಿರುತ್ತದೆ. ಇದೇರೀತಿ ರಹಸ್ಯದಲ್ಲಿ ಅಡಗಿದ್ದ ಅಗ್ನಿಯ ಅನ್ವೇಷಣವು ಇನ್ನೂ ಅನೇಕ ಸಂದರ್ಭಗಳಲ್ಲಿ ವಿವೃತವಾಗಿರುತ್ತದೆ.

ಮಾನವರ ಗೋಚರಕ್ಕೆ ಅತೀತನಾಗಿ ಅಂತರಿಕ್ಷವ ಮೂಲಪ್ರದೇಶದಲ್ಲಿ ಅಡಗಿರುವ ವೈದ್ಯುತಾಗ್ನಿಯೂ ಸಹ ಇದೇ ರೀತಿ ಅನೇಕತೆಗಳಲ್ಲಿ ವರ್ಣಿತನಾಗಿದ್ದಾನೆ. ಉದಾಹರಣೆಗೆ—

ಸ ಜಾಯತ ಪ್ರಥಮಃ ಪಸ್ತ್ಯಾಸು ಮಹೋ ಬುಧ್ನೇ ರಜಸೋ ಅಸ್ಯ ಯೋನೌ ।
ಅಪಾದಶೀರ್ಷಾ ಗುಹಮಾನೋ ಅಂತಾಯೋಯುವಾನೋ ವೃಷಭಸ್ಯ ನೀಳೇ ॥

(ಋ.ಸಂ. ೪-೧-೧೧)

ಯಜ್ಞಗೃಹದಲ್ಲಿ ಅಗ್ನಿಯು ಉತ್ಪನ್ನನಾಗುವುದಕ್ಕೆ ಮೊದಲು ಅಗ್ನಿಯು ಅಂತರ್ಹಿತನಾಗಿದ್ದ ಗೂಢನಾದ ಪ್ರದೇಶವನ್ನು ಇಲ್ಲ ವರ್ಣಿಸಿದೆ. ಪಾದಂಹಿತನೂ, ಶಿರೋರಹಿತನೂ ಆದ ಅಗ್ನಿಯು ಅಂತರಿಕ್ಷದ ಗುಹ್ಯವಾದ ಪ್ರದೇಶದಲ್ಲಿ ಅಡಗಿದ್ದನು ಎಂದಿರುವಾಗ **ಯೋನೌ, ನೀಳೇ** ಎಂಬ ಪದಗಳು ಗಮನಾರ್ಹವಾಗಿವೆ. ಯಾವ ಗೂಢವಾದ ಪ್ರದೇಶವು ಲೌಕಿಕವಾದ ದೃಷ್ಟಿಗೆ ಬೀಳದೆ ನಿಗೂಢವಾಗಿರುವುದೋ ಅದನ್ನೇ **ಋತದ** ಸ್ಥಾನವೆಂದೂ ಕರೆದಿದೆ. ಇದು ಅತ್ಯಂತ ರಹಸ್ಯವಾದ ಪ್ರದೇಶ. (ಋ. ಸಂ. ೪-೧-೧೨)

ಈ ವಿಧವಾಗಿ ವರ್ಣಿತವಾದ ಗುಹೆಯಲ್ಲಿ ಅಡಗಿದ್ದ ಅಗ್ನಿಯನ್ನು ಕೆಲವು ಸಂದರ್ಭಗಳಲ್ಲಿ ಮಾನವರು ಕರೆತಂದರೆಂದೂ, ಅನೇಕ ವಿಧವಾಗಿ ಈ ವಿಷಯವು ಪ್ರಸ್ತಾಪಿಸಲ್ಪಟ್ಟಿದೆ. ದೇವತೆಗಳಲ್ಲಾಗಲೀ ಅಥವಾ ಮಾನವರಲ್ಲಾಗಲೀ ಯಾರುಯಾರು ಅಗ್ನಿಯನ್ನು ಪ್ರಥಮತಃ ಸಾಕ್ಷಾತ್ಕರಿಸಿ ಪೃಥ್ವಿಯಲ್ಲಿ ಆವಿರ್ಭೂತನಾಗುವಂತೆ ಮಾಡುವರೆಂದು ಹೇಳಲ್ಪಟ್ಟಿದೆಯೋ ಅವರೆಲ್ಲರೊಂದಿಗೂ ಅಗ್ನಿಯ ಐಕ್ಯವನ್ನೂ, ತಾದಾತ್ಮ್ಯವನ್ನೂ ಹೇಳದ. ಈ ಸಂದರ್ಭದಲ್ಲಿ **ಮಾತರಿಶ್ವ, ಬೃಹಸ್ಪತಿ, ಅಂಗಿರಸ, ಅಥರ್ವನ್, ಭೃಗು** ಇತ್ಯಾದಿಗಳು ಪ್ರಸಿದ್ಧರಾಗಿದ್ದಾರೆ.

೧) **ಮಾತರಿಶ್ವನು** ಭೃಗುವಿಗಾಗಿ ಅಗ್ನಿಯನ್ನು ಅಂತರಿಕ್ಷದಿಂದ ಕರೆತಂದ ವಿಷಯವನ್ನು ಹಿಂದೆ ತಿಳಿಸಿದೆ. ಅಂತಹ ಸಂದರ್ಭಗಳಲ್ಲಿ ಪ್ರಕೃತ ಉದಾಹರಣೆಗಾಗಿ ಒಂದು ಪ್ರಕರಣವನ್ನು ಪರಿಶೀಲಿಸಿದರೆ **ಮಾತರಿಶ್ವಾ** ಎಂಬ ಪದದ ಅರ್ಥವೇನು ಎಂದು ತಿಳಿಯುತ್ತದೆ ಮತ್ತು ಅಗ್ನಿಯನ್ನು ಕಂಡುಹಿಡಿದ ಅದೇ ಮಾತರಿಶ್ವನೇ ಅಗ್ನಿರೂಪನು ಎಂಬುದೂ ತಿಳಿಯುತ್ತದೆ.

ಉದಸ್ತಂಭೀತ್ಸಮಿಧಾ ನಾಕಮೃಷ್ವೋಽಗ್ನಿರ್ಭವನ್ನುತ್ತಮೋ ರೋಚಮಾನಾಂ ।
ಯದೀ ಭೃಗುಭ್ಯಃ ಪರಿ ಮಾತರಿಶ್ವಾ ಗುಹಾ ಸಂತಂ ಹವ್ಯವಾಹಂ ಸಮೀಧೇ ॥

(ಋ. ಸಂ. ೩-೫-೧೦)

ಎಂಬಲ್ಲಿ ಮಾತರಿಶ್ವನು ಭೃಗುಗಳಿಗೆ ಅಗ್ನಿಯನ್ನು ತಂದೊದಗಿಸಿದ ಪ್ರಕರಣವು ವಿದಿತವಾಗಿದೆ. ಆದರೆ, ಈ ಮಾತರಿಶ್ವನು ಯಾರೆಂದರೆ—

" ಮಾತರಿ ಅಂತರಿಕ್ಷೇ ಶ್ವಸಿತಿ ಪ್ರಾಣಿತಿ ಸೂಯ್ಯರೂಪೇಣ ಚೇಷ್ಟತ ಇತಿ ಮಾತರಿಶ್ವಾ ಅಥವಾ ಮಾತರಿ ಅರಣ್ಯಾಂ ಶ್ವಸಿತಿ **ನಿವಸತೀತಿ ಮಾತರಿಶ್ವಾ** " ಸೂರ್ಯರೂಪದಿಂದ ಅಂತರಿಕ್ಷದಲ್ಲಿ ಸಂಚರಿಸುವುದರಿಂದಲಾಗಲೀ ಅಥವಾ ಮಾತೃರೂಪವಾದ ಅರಣಿಗಳಲ್ಲಿರುವುದರಿಂದಾಗಲೀ ಅಗ್ನಿಗೆ ಈ ಹೆಸರೆಂದು ಸಾಯಣರು ವಿವರಿಸಿದ್ದಾರೆ

(ಋ. ಸಂ. ಭಾ. ೩ ೫-೯) ಈ ವಿವರಣವು ನಿರುಕ್ತಕಾರರು ಈ ಪದಕ್ಕೆ ಹೇಳಿರುವ ನಿರ್ವಚನವನ್ನು (ನಿ. ೭-೨೬) ಸಮರ್ಥಿಸಲು ಆಗಿದೆ.

೨) ಅದರಂತೆಯೇ ಬೃಹಸ್ಪತಿಯೂ ಸಹ ಪ್ರಥಮತಃ ಅಗ್ನಿಯನ್ನು ಕಂಡುಹಿಡಿದು ಸೃಷ್ಟಿಗೆ ಕಾರಣನೆಂದು ಪ್ರಸಿದ್ಧವಾಗಿದೆ.

ಸೋಷಾಮವಿಂದತ್ಸ ಸ್ವಃಸೋ ಅಗ್ನಿಂ ಸೋ ಅರ್ಕೇಣ ವಿ ಬಬಾಧೇ ತಮಾಂಸಿ ।
ಬೃಹಸ್ಪತಿರ್ಗೋ ವಪುಷೋ ವಲಸ್ಯ ನಿರ್ಮಜ್ಜಾನಂ ನ ಪರ್ವಣೋ ಜಭಾರ ॥

(ಋ. ಸಂ. ೧೦ ೬೮-೯)

ಬೃಹಸ್ಪತಿಯು ಗೋವುಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದಾಗ ಉಷಸ್ಸನ್ನು ಪೊಂದಿದನು. ಅವನು ಅಗ್ನಿಯನ್ನೂ, ಆದಿತ್ಯನನ್ನೂ ಹೊಂದಿ ತಮಸ್ಸನ್ನು ನಾಶಮಾಡಿದನು ಇತ್ಯಾದಿಯಾಗಿ ಬೃಹಸ್ಪತಿಯ ಪ್ರಯತ್ನದ ಮತ್ತು ಸಿದ್ಧಿಯ ಪ್ರಶಂಸೆಯಿರುತ್ತದೆ. ಆದೇ ಬೃಹಸ್ಪತಿಗೂ ಅಗ್ನಿ ಮತ್ತು ಮಾತರಿಶ್ವ ಇವರಿಬ್ಬರಿಗೂ ತಾದಾತ್ಮ್ಯವನ್ನು ತೋರಿಸಿದೆ. ಉದಾಹರಣೆಗೆ—

ಅಚ್ಛಾ ವದಾ ತನಾ ಗಿರಾ ಜರಾಯೈ ಬ್ರಹ್ಮಣಸ್ಪತಿಂ । ಅಗ್ನಿಂ ಮಿತ್ರಂ ನ ದರ್ಶತಂ ॥

(ಋ. ಸಂ. ೧-೫೮-೧೩)

ತಮೃತ್ವಿಯಾ ಉಪ ವಾಚಃ ಸಚಂತೇ ಸರ್ಗಾಸ ನ ಯೋ ದೇವಯತಾಮಸರ್ಜಿ ।
ಬೃಹಸ್ಪತಿಃ ಸ ಹ್ಯಂಜೋ ವರಾಂಸಿ ವಿಭ್ವಾಭವತ್ಸಮೃತೇ ಮಾತರಿಶ್ವಾ ॥

(ಋ. ಸಂ. ೧-೧೯೦-೩)

ಇತ್ಯಾದಿಗಳಲ್ಲಿ ಕೆಲವೆಡೆ ಅಗ್ನಿಯೊಂದಿಗೂ, ಇನ್ನು ಕೆಲವೆಡೆಗಳಲ್ಲಿ **ಮಾತರಿಶ್ವ**ನೊಂದಿಗೂ ತಾದಾತ್ಮ್ಯವನ್ನು ತಿಳಿಸಿದೆ. **ಬ್ರಹ್ಮಣಸ್ಪತಿಃ ಅಗ್ನಿಃ** ಎಂದಿರುವಾಗ ಮಂತ್ರಗಳಿಗೆ ಪತಿಯೆಂದರ್ಥ. **ಬೃಹಸ್ಪತಿಃ ಮಾತರಿಶ್ವಾ** ಎಂದಿರುವಾಗ ಫಲನಿರ್ಮಾತೃವಾದ ಯಜ್ಞದಲ್ಲಿ ಸ್ಥಿತನಾಗಿರುವವನು ಎಂದರ್ಥ. ಹೀಗೆ ಇನ್ನೂ ಅನೇಕಕಡೆಗಳಲ್ಲಿ ಈ ತಾದಾತ್ಮ್ಯವು ತಿಳಿಯುತ್ತದೆ.

(೨-೧-೩; ೩-೨೬-೨ ಇತ್ಯಾದಿ)

೩) **ಅಂಗಿರಸ್**—ಅಂಗಿರಸ್ಸಿನ ವಿಷಯವನ್ನೂ; ಅಂಗಿರಾಋಷಿಗೂ, ಅಗ್ನಿಗೂ ಇರುವ ಸಂಬಂಧವನ್ನೂ, ಅಗ್ನಿಯೇ ಅಂಗಿರಸ್ಸುಗಳಲ್ಲಿ ಪ್ರಥಮನೆಂದು ನಿರ್ದೇಶಿಸಿರುವುದನ್ನೂ ಹಿಂದೆ ತಿಳಿಸಿದೆ. ಅಲ್ಲದೆ,

ತವ ಶ್ರಿಯೇ ವ್ಯಜಿಹೀತ ಪರ್ವತೋ ಗವಾಂ ಗೋತ್ರಮುದಸೃಜೋ ಯದಂಗಿರಃ ।
ಇಂದ್ರೇಣ ಯುಜಾ ತಮಸಾ ಪರೀವೃತಂ ಬೃಹಸ್ಪತೇ ನಿರಪಾಮೌಬ್ಜೋ ಅರ್ಣವಂ ॥

(ಋ. ಸಂ. ೨-೨೩-೧೮)

ಇತ್ಯಾದಿ ಋಕ್ಕುಗಳಲ್ಲಿ ಬೃಹಸ್ಪತಿಯನ್ನೂ ಅಂಗಿರಸ್ಸೆಂದೇ ಸಂಬೋಧಿಸಿದೆ. ಎಂದರೆ, ಬೃಹಸ್ಪತಿ,ಮಾತರಿಶ್ವ, ಅಂಗಿರಸ್, ಅಗ್ನಿ ಇತ್ಯಾದಿ ಗುಂಪಿನಲ್ಲಿರುವ ಒಂದು ಪದವು ಇನ್ನೊಂದಕ್ಕೆ ವಿಶೇಷಣವಾಗಿರುವ ಸಂದರ್ಭಗಳೂ ಅನೇಕವಾಗಿವೆ. ಎಲ್ಲವೂ ಅಗ್ನಿಯ ಅಂಶವನ್ನು ಸೂಚಿಸತಕ್ಕವೆಂದು ನಿಷ್ಕೃಷ್ಟವಾಗಿ ಹೇಳಬಹುದು.

೪) ಯಾವ ಅಗ್ನಿಯು ಅಥರ್ವಸಂಜ್ಞಕನಾದ ಋಷಿಯಿಂದ ಉತ್ಪನ್ನನಾದನೆಂದು ಹಿಂದೆ " **ತ್ವಾಮಗ್ನೇ ಪುಷ್ಕರಾದಥರ್ವಾ ನಿರಮಂಥತ** " (ಋ. ಸಂ. ೬-೧೬-೧೩) ಇತ್ಯಾದಿ ವಾಕ್ಯಗಳಿಂದ ತಿಳಿಸಿದೆಯೋ, ಅದೇ ಅಗ್ನಿಯೂ ಸಹ ಅಥರ್ವವಾಚ್ಯನಾಗಿಯೇ ಇದ್ದಾನೆ.

" **ಅಗ್ನಿರ್ಜಾತೋ ಅಥರ್ವಣಾ ವಿದದ್ವಿಶ್ವಾನಿ ಕಾವ್ಯಾ** " (೧೦-೨೧-೫) ಇತ್ಯಾದಿ ವಾಕ್ಯಗಳಲ್ಲಿಯೂ ಅಥರ್ವನು ಉತ್ಪಾದಕನು ಮತ್ತು ಅಗ್ನಿಯು ಅವನಿಂದ ಜನ್ಯನು ಎಂಬುದು ತಿಳಿಸಿದೆ. ಆದರೆ,

ಆ ನೂನಮಶ್ವಿನೋರ್ಯುವಿಃ ಸ್ತೋಮಂ ಚಿಕೇತ ವಾಮಯಾ ।
ಆ ಸೋಮಂ ಮಧುಮತ್ತಮಂ ಘರ್ಮಂ ಸಿಂಚಾದಥರ್ವಣಿ ॥

(ಋ. ಸಂ. ೮-೯-೭)

ಎಂಬಲ್ಲಿ **ಅಥರ್ವಣಿ** ಎಂಬುದು ಅಗ್ನಿಬೋಧಕವಾದ ಪದವಾಗಿದೆ. ಅಹಿಂಸಕನಾದ ಅಗ್ನಿಯೆಂದರ್ಥ ಮಾಡಿದೆ. ಅಥವಾ ಅಥರ್ವಋಷಿಯಿಂದ ನಿರ್ಮಿತನು ಎಂಬರ್ಥವೂ ಸಾಧ್ಯವೆಂದು ತಿಳಿಸಿದೆ. ಹೀಗೆಯೇ ಅಥರ್ವನಿಗೂ ಅಗ್ನಿಗೂ ತಾದಾತ್ಮ್ಯವನ್ನು ತೋರಿಸುವ ವಾಕ್ಯಗಳು ಇನ್ನೂ ಹಲವಾರಿವೆ. ಅವುಗಳನ್ನು ಇಲ್ಲಿ ಸೂಚಿಸಿದೆಯೇ ವಿನಃ ಅವುಗಳ ವಿವರಣವು ಇಲ್ಲಿ ಅಪ್ರಕೃತ.

ಪ್ರಕೃತದಲ್ಲಿ ಭೃಗುಗಳು ಗೃಹಾಂತರ್ಗತನಾಗಿದ್ದ ಅಗ್ನಿಯನ್ನು ಕಂಡುಹಿಡಿದು ತಾವೂ ಪೂಜಿಸಿ ಪ್ರಜೆಗಳಿಗೂ ಸಹಾಯ ಮಾಡಿದರು ಎಂಬ ವಿಷಯವು ಮುಖ್ಯವಾದುದು. ಈ ವಿಷಯವನ್ನು ಹಿಂದೆ ೧೧ನೇ ಭಾಗದಲ್ಲಿ ವಿವರಿಸಿದೆ.

ಸಂಹಿತಾಪಾಠಃ

ಇಮಂ ತ್ರಿತೋ ಭೂರ್ಯವಿಂದದಿಚ್ಛನ್ವೈಭೂವಸೋ ಮೂರ್ಧನ್ಯ-
ಘ್ನ್ಯಾಯಾಃ ।
ಸ ಶೇವೃಧೋ ಜಾತ ಆ ಹರ್ಮ್ಯೇಷ್ಠಾ ನಾಭಿರ್ಯುವಾ ಭವತಿ ರೋಚನಸ್ಯ ॥

ಪದಪಾಠಃ

ಇಮಂ । ತ್ರಿತಃ । ಭೂರಿ । ಅವಿಂದತ್ । ಇಚ್ಛನ್ । ವೈಭುವಸವಃ । ಮೂರ್ಧನಿ । ಅಘ್ನ್ಯಾಯಾಃ ।
ಸಃ । ಶೇವೃಧಃ । ಜಾತಃ । ಆ । ಹರ್ಮ್ಯೇಷ್ಠಾಃ । ನಾಭಿಃ । ಯುವಾ । ಭವತಿ । ರೋಚನಸ್ಯ ॥೩॥

ಸಾಯಣಭಾಷ್ಯಂ

ಇಮಂ ಭೂರಿ ಮಹಾಂತಮಗ್ನಿಂ ವೈಭೂವಸವೋ ವಿಭೂವಸಃ ಪುತ್ರಸ್ತ್ರಿತ ಋಷಿರಿಚ್ಛನ್ನಿಚ್ಛನ್ನಘ್ನ್ಯಾಯಾಃ । ಅಘ್ನ್ಯಾ ಭೂಮಿಃ । ತಸ್ಯಾ ಭೂಮ್ಯಾ ಮೂರ್ಧನಿ । ಭೂಮ್ಯಾಮಿತ್ಯರ್ಥಃ ।

ತತ್ರಾವಿಂದತ್ । ಲಬ್ಧವಾನ್ । ಸೋಽಗ್ನಿಃ ಶೇವೃಧಃ ಸುಖಸ್ಯ ವರ್ಧಯಿತಾ ಸನ್ ಹವ್ಯೇಷು ಯಜಮಾನಗೃಹೇಷ್ವಾ ಸರ್ವತೋ ಜಾತಃ ಪ್ರಾದುರ್ಭೂತಃ ಸನ್ರೋಚನಸ್ಯ ರೋಚಮಾನಸ್ಯ ಸ್ವರ್ಗಾಖ್ಯಸ್ಯ ಫಲಸ್ಯೋಕ್ತಲಕ್ಷಣಸ್ಯ ಯಜ್ಞಸ್ಯಾದಿತ್ಯಸ್ಯ ವಾ ನಾಭಿರ್ಬಂಧಕೋ ಭವತಿ ॥

ಪ್ರತಿಪದಾರ್ಥ

ಇಮಂ—ಪ್ರಸಿದ್ಧನಾದ । **ಭೂರಿ**—ಮಹತ್ಸ್ವರೂಪವುಳ್ಳ ಅಗ್ನಿಯನ್ನು । **ವೈಭೂವಸಃ**—ವಿಭೂವಸು ಪುತ್ರನಾದ । **ತ್ರಿತಃ**—ತ್ರಿತನೆಂಬ ಋಷಿಯು । **ಇಚ್ಛನ್** ಪಡೆಯಬೇಕೆಂದು ಅಪೇಕ್ಷಿಸಿ । **ಅಳಭ್ನಾ ಅಯಾ ಮೂರ್ಧನಿ**—ಭೂಮಿಯಮೇಲೆ । **ಆವಿಂದತ್**—ಸಂಪಾದಿಸಿದನು. **ಸಃ**—ಆ ಅಗ್ನಿಯು । **ಶೇವೃಧಃ**— ಸುಖಕಾರಕನಾಗಿ । **ಹವ್ಯೇಷು**—ಯಜಮಾನನ ಮನೆಗಳಲ್ಲಿ ಅಥವಾ ಯಜ್ಞಗೃಹಗಳಲ್ಲಿ । **ಆ ಜಾತಃ**—ಪ್ರಾದುರ್ಭೂತನಾಗಿ । **ರೋಚನಸ್ಯ**—ಪ್ರಕಾಶಮಾನವಾದ ಸ್ವರ್ಗದ । **ನಾಭಿಃ**—ಪ್ರಾಪ್ತನಾಗಿ । **ಭವತಿ**—ಆಗುತ್ತಾನೆ

ಭಾವಾರ್ಥ

ಮಹಾತ್ಮನಾದ ಈ ಅಗ್ನಿಯನ್ನು ವಿಭೂವಸುಪುತ್ರನಾದ ತ್ರಿತನೆಂಬ ಋಷಿಯು ಪಡೆಯಬೇಕೆಂದು ಇಚ್ಛಿಸಿ ಅವರಂತೆ ಭೂಮಿಯಲ್ಲಿ ಆ ಅಗ್ನಿಯನ್ನು ಸಂಪಾದಿಸಿದನು. ಸುಖವನ್ನು ವೃದ್ಧಿಮಾಡುವ ಆ ಅಗ್ನಿಯು ಯಜಮಾನನ ಯಜ್ಞಗೃಹಗಳಲ್ಲಿ ಉತ್ಪನ್ನನಾಗಿ ಯಜ್ಞಮಾಡುವವರಿಗೆ ಸ್ವರ್ಗವನ್ನು ಒದಗಿಸಿಕೊಡುತ್ತಾನೆ.

English Translation

Trita, the son of Vibhuvas, searching (for him), found mighty Agni on the surface of the earth : he the augmenter of happiness menifested in the dwellings (of the pious), the youthful (connecting) bond of the resplendent (Sun).

ಸಂಹಿತಾಪಾಠಃ

ಮಂದ್ರಂ ಹೋತಾರಮುಶಿಜೋ ನಮೋಭಿಃ ಸ್ರ್ಯಂಚಂ ಯಜ್ಞಂ
ನೇತಾರಮಧ್ವರಾಣಾಂ ।
ವಿಶಾಮಕೃಣ್ವನ್ನರತಿಂ ಸಾವಕಂ ಹವ್ಯವಾಹಂ ದಧತೋ ಮಾನುಷೇಷು ॥೪॥

ಪದಪಾಠಃ

ಮಂದ್ರಂ । ಹೋತಾರಂ । ಉಶಿಜಃ । ನಮಃಭಿಃ । ಸ್ರ್ಯಂಚಂ । ಯಜ್ಞಂ । ನೇತಾರಂ । ಅಧ್ವರಾಣಾಂ ।
ವಿಶಾಂ । ಅಕೃಣ್ವನ್ । ಅರತಿಂ । ಸಾವಕಂ । ಹವ್ಯವಾಹಂ । ದಧತಃ । ಮಾನುಷೇಷು ॥ ೪ ॥

ಸಾಯಣಭಾಷ್ಯಂ

ಉಶಿಜಃ ಕಾಮಯಮಾನಾ ಋತ್ವಿಜೋ ಮಂದ್ರಂ ಮಾದನೀಯಂ ಹೋತಾರಂ ಹೋಮನಿಷ್ಪಾದಕಂ ಪ್ರಾಂಚಂ ಗಾರ್ಹಪತ್ಯಾದಾಹವನೀಯಂ ಪ್ರತಿ ಪ್ರಾಗಂಚಂತಂ ಯಜ್ಞಂ ಯಜನೀಯಮಧ್ವರಾಣಾಂ ಯಾಗಾನಾಂ ನೇತಾರಂ ಪ್ರಾಪಯಿತಾರಮರತಿಂ ಗಂತಾರಂ ಸರ್ವದಾ ಯಾಗಗೃಹೇ ವರ್ತಮಾನಂ ಪಾವಕಂ ಶೋಧಕಂ ಹವ್ಯವಾಹಂ ಹವಿಷೋ ವೋಢಾರಂ ಮಾನುಷೇಷು ಮನುಷ್ಯೇಷು ವಿಶ್ಯೇ ದಧತೋ ದಧಾನಾ ಋತ್ವಿಜೋ ವಿಶಾಂ ಯಜಮಾನಾನಾಮರ್ಥಾಯಿ। ಯದ್ವಾ। ವಿಶಾಂ ಪ್ರಜಾನಾಮರತಿಮರ್ಯಂ । ಸ್ವಾಮಿನಮಿತ್ಯರ್ಥಃ । ನಮೋಭಿರ್ನಮಸ್ಕಾರೈಃ । ಸ್ತುತಿಭಿರಿತ್ಯರ್ಥಃ । ಅಕೃಣ್ವನ್ । ಅಕುರ್ವನ್। ಸುಪ್ರೀತಂ ಕೃತವಂತಃ ॥

ಪ್ರತಿಪದಾರ್ಥ

ಉಶಿಜಃ—ದೇವತೆಗಳನ್ನಿಚ್ಛಿಸುವ ಋತ್ವಿಕ್ಕುಗಳು । **ಮಂದ್ರಂ**—ಸಂತೋಷಪ್ರದನೂ । **ಹೋತಾರಂ**—ಹೋಮನಿಷ್ಪಾದಕನೂ । **ಪ್ರಾಂಚಂ**—ಗಾರ್ಹಪತ್ಯವೆಂಬ ಅಗ್ನಿಕುಂಡದಿಂದ ಆಹವನೀಯವೆಂಬ ಅಗ್ನಿಕುಂಡದ ಒಳಗೆ ಒಯ್ಯಲ್ಪಡುವವನೂ । **ಯಜ್ಞಂ**—ಪೂಜಾರ್ಹನೂ । **ಅಧ್ವರಾಣಾಂ**—ಯಜ್ಞಗಳಿಗೆ । **ನೇತಾರಂ**—ನಾಯಕನಾದವನೂ ಅಥವಾ ಯಜ್ಞಗಳಲ್ಲಿ ಮುಖ್ಯ ದೇವತೆಯಾದವನೂ । **ಅರತಿಂ**—ಯಾವಾಗಲೂ ಯಜ್ಞಗೃಹದಲ್ಲಿ ಇರುವವನೂ । **ಪಾವಕಂ**—ಶುದ್ಧಿಗೊಳಿಸುವವನೂ । **ಹವ್ಯವಾಹಂ**—ದೇವತೆಗಳ ಬಳಿಗೆ ಹವಿಸ್ಸನ್ನು ಒಯ್ಯುವವನೂ । **ಮಾನುಷೇಷು**—ಮನುಷ್ಯರ ಮಧ್ಯದಲ್ಲಿ । **ವಿಶಾಂ (ಅರತಿಂ)**—ಪ್ರಜೆಗಳಿಗೆಲ್ಲಾ ಒಡೆಯನಾದ ಅಗ್ನಿಯನ್ನು । **ದಧತಃ**—ಕರ್ಮಕರ್ತರಾದ ಋತ್ವಿಜರು। **ನಮೋಭಿಃ**—ನಮಸ್ಕಾರಗಳಿಂದ ಅಥವಾ ಸ್ತುತಿಗಳಿಂದ । **ಅಕೃಣ್ವನ್**—ಸುಪ್ರೀತನನ್ನಾಗಿ ಮಾಡಿದರು ।

ಭಾವಾರ್ಥ

ದೇವತೆಗಳನ್ನು ಬಯಸುವವರೂ, ಮನುಷ್ಯರ ಯಜ್ಞಾದಿಗಳಲ್ಲಿ ಕರ್ಮಕರ್ತರೂ ಆದ ಋತ್ವಿಜರು, ಸುಖಕರನೂ, ಹೋಮನಿಷ್ಪಾದಕನೂ, ಪೂಜಾರ್ಹನೂ, ಯಜ್ಞಕರ್ಮಗಳ ನೇತೃವಾದವನೂ ಯಾವಾಗಲೂ ಯಜ್ಞಗೃಹಗಳಲ್ಲಿ ವಾಸಿಸುವವನೂ, ದೇವತೆಗಳಿಗೆ ಹವಿಸ್ಸನ್ನು ಒಯ್ಯುವವನೂ ಪ್ರಜೆಗಳಿಗೆ ಒಡೆಯನೂ ಆದ ಅಗ್ನಿಯನ್ನು ನಮಸ್ಕಾರಗಳಿಂದಲೂ ಸ್ತೋತ್ರಗಳಿಂದಲೂ ಸಂತೋಷಪಡಿಸುತ್ತಾರೆ.

English Translation

(The priests) desirous (to propitiate him), detaining him amongst men have by their adoration made him lord over all people, him the exhilarator, the presenter of burnt offerings, the migrator, the object of sacrifice, the leader of rites, the purifier, the bearer of oblations.

संहितापाठः

प्र भूर्जयंतं महाम विप्रोधाम मूरा अमूरं पुरां दर्माणं ।
नयंतो गर्भं वनाम धियं धुर्हिरश्मश्रुं नावर्णं धनर्चं ॥ ५ ॥

पदपाठः

प्र । भूः । जयंतं । महाम । विप्रऽधाम । मूराः । अमूरं । पुरां । दर्माणं ।
नयंतः । गर्भं । वनाम । धियं । धुः । हिरिऽश्मश्रुं । न । अवर्णं । धनऽअर्चं ॥

सायणभाष्यं

हे स्तोतः त्वं जयंतं जेतव्यान्शत्रून्जयंतं महाम महान्तं विप्रोधाम मेधाविनो धर्तारमग्निं प्र भूः । प्रभव । समर्थो भव । स्तोतुमिति शेषः । उद्गीथस्तु भूर्जयंतमित्येकपदं मत्वा भूरादील्लोकान्जयंतमित्याचष्टे । न केवलं त्वमेक एव अपि तु मूरा मूढाः सर्वेऽपि पुरुषा अमूरममूढं पुरां दर्माणं दारकं ॥ ऊणादिकोऽनिः । प्रत्ययस्वरः ॥ गर्भमरणयोऽगर्भभूतं वनाम वननीयं ॥ वा छंदसि । पा-६-१-८०६,८०८ । इति वचनादमि पूर्वाभावः ॥ हिरिश्मश्रुं नावर्णं । नेत्युपमार्थीयः । श्मश्रुशब्दोऽत्र रोमसामान्यवचनः । हरितरोचमानोपेतमवर्णमरणशीलमश्वमिव । उक्तलक्षणाश्ववद्धरितकेशस्थानीयज्वालोपेतं धनर्चं प्रीणनस्तुतिं ॥ शकंध्वादित्वात्पररूपत्वं ॥ ईदृशमग्निं नयंतो हविर्भिः प्रापयंतो धियं कर्म स्तोत्रं वा धुः । प्रापयंति ॥ गातिस्थेति सिचो लुक् ॥

प्रतिपदार्थ

(ಎಲೈ ಸ್ತೋತೃವೇ, ನೀನು) **जयंतं**—ಶತ್ರುಗಳನ್ನು ಜಯಿಸುವವನನೂ । **महाम**—ಮಹಾತ್ಮನೂ । **विप्रोधाम**—ಮೇಧಾವಿಗಳಾದ ಋತ್ವಿಜರನ್ನು ಪೋಷಿಸುವವನೂ ಆದ ಅಗ್ನಿಯನ್ನು । **प्रभूः**—ಸ್ತುತಿಸಲು ಸಮರ್ಥನಾಗು. । **मूराः**—ಮೂಢರಾದ ಪುರುಷರೂ ಸಹ । **अमूरं**—ವಿವೇಕಿಯಾದವನೂ । **पुरां**—ಶತ್ರುಪುರಗಳನ್ನು । **दर्माणं**—ಸೀಳಿಹಾಕುವವನೂ । **गर्भं**—ಅರಣಿಗಳಲಿ ಗರ್ಭರೂಪದಿಂದ ಇರುವವನೂ **वनाम**—ಎಲ್ಲರಿಂದಲೂ ಪ್ರಶಂಸಿತನೂ । **हिरिश्मश्रुं**—ಸುವರ್ಣದಂತೆ ಥಳಥಳಿಸುವ ಕೇಶವುಳ್ಳ । **अवर्णं न**

—ಅಶ್ವದಂತೆ ಸುವರ್ಣಚ್ಛಾಯೆಯುಳ್ಳ ಜ್ವಾಲೆಗಳಿಂದ ಕೂಡಿರುವವನೂ । **ಧನರ್ಚಂ**—ಸ್ತುತಿಪ್ರಿಯನೂ ಆದ ಅಗ್ನಿಯನ್ನು ಸ್ತುತಿಸುತ್ತಾರೆ. । **ನಯೆಂತೇಃ**—ಹವಿರಾದಿಗಳಿಂದ ಸೇವಿಸುವ ಋತ್ವಿಕ್ಕುಗಳು । **ಧಿಯಂ**—ಯಜ್ಞಕರ್ಮನಿರ್ವಾಹಕ್ಕಾಗಿ ಅಥವಾ ಸ್ತೋತ್ರಗಳನ್ನು ಕೇಳುವುದಕ್ಕಾಗಿ । **ಧುಃ**—ಯಜ್ಞಭೂಮಿಗೆ ಕರೆತರುತ್ತಾರೆ. ।

ಭಾವಾರ್ಥ

ಎಲೈ ಸ್ತೋತೃವೇ, ನೀನು ಮಹಾತ್ಮನಾದವನೂ, ಮೇಧಾವಿಗಳಾದ ಋತ್ವಿಕ್ಕುಗಳನ್ನು ಪೋಷಿಸುವವನೂ ಆದ ಅಗ್ನಿಯನ್ನು ಸ್ತುತಿಸಲು ಸಮರ್ಥನಾಗಿರು. ಮೂಢರಾದ ಪುರುಷರೂ ಸಹ ವಿವೇಕಿಯಾದವನೂ, ಶತ್ರುಪುರಗಳನ್ನು ಸೀಳಿಹಾಕುವವನೂ, ಅರಣಿಗಳಲ್ಲಿ ಗರ್ಭರೂಪದಿಂದ ಇರುವವನೂ, ಎಲ್ಲರಿಂದಲೂ ಪ್ರಶಂಸಿತನೂ, ಸುವರ್ಣದಂತೆ ಥಳಥಳಿಸುವ ಕೇಶರಾಶಿಯುಳ್ಳ ಅಶ್ವದಂತೆ ಸುವರ್ಣಮಯಜ್ವಾಲೋಪೇತನೂ, ಸ್ತುತಿಪ್ರಿಯನೂ ಆದ ಅಗ್ನಿಯನ್ನು ಸ್ತುತಿಸುತ್ತಾರೆ. ಹವಿರಾದಿಗಳನ್ನು ಒಯ್ದು ಅರ್ಪಿಸುವ ಋತ್ವಿಜರು ಯಜ್ಞಕರ್ಮನಿರ್ವಾಹಕ್ಕಾಗಿ ಅಗ್ನಿಯನ್ನು ಯಜ್ಞವೇದಿಗೆ ಒಯ್ಯುತ್ತಾರೆ.

English Translation

Be competent, (priest, to glorify) the victorious mighty Agni; the sustainer of the wise, (even) fools (adore) him, the exempt from folly, the demolisher of cities; conducting the embryo of touchwood, (Agni), like a golden-haired, swift-moving (horse), loving praise and wealth, they bring him to the sacrifice.

ಸಂಹಿತಾಪಾಠಃ

ನಿ ಪಸ್ತ್ಯಾಸು ತ್ರಿತಃ ಸ್ತಭೂಯನ್ಪರಿವೀತೋ ಯೋನೌ ಸೀದದ್ದಂತಃ ।
ಅತಃ ಸಂಗೃಭ್ಯಾ ವಿಶಾಂ ದಮೂನಾ ವಿಧರ್ಮಣಾಯುಂತ್ರೈರೀಯತೇ ನ್ಯಾನ್॥

ಪದಪಾಠಃ

ನಿ । ಪಸ್ತ್ಯಾಸು । ತ್ರಿತಃ । ಸ್ತಭೂಯನ್ । ಪರಿವೀತಃ । ಯೋನೌ । ಸೀದತ್ । ಅಂತರಿತಿ ।
ಅತಃ । ಸಂಗೃಭ್ಯ । ವಿಶಾಂ । ದಮೂನಾಃ । ವಿಧರ್ಮಣಾ । ಆಯುಂತ್ರೈಃ । ಈಯತೇ । ನ್ಯಾನ್ ॥೬॥

ಸಾಯಣಭಾಷ್ಯಂ

ತ್ರಿತಸ್ತ್ರಿಷು ಸ್ಥಾನೇಷು ಗಾರ್ಹಪತ್ಯಾದಿಷು ತಾಯಮಾನಃ ಸ್ತಭೂಯನ್ ಯಜಮಾನಗೃಹಾನ್ ಸ್ತಂಭಯಿತುಮಿಚ್ಛನ್ ॥ ಇಚ್ಛಾರ್ಥೇ ಕ್ಯಚಿ ತದಂತಾಚ್ಛತರಿ ರೂಪಂ ॥ ಪರಿವೀತಃ ಪರಿತೋ ಜ್ವಾಲಾಭಿ-

ವ್ಯಾಪ್ತೈಃ ಸನ್ ಪಸ್ತ್ಯಾಸು ಯೋಗಗೃಹೇಷು ಯೋನಾವಂತಃ ಸ್ವೀಯೇ ವೇದ್ಯಾತ್ಮಕೇ ಸ್ಥಾನೇ ನಿ ಷೀದತ್ । ನಿಷೀದತಿ । ಅತೋಽಸ್ಮಾತ್ಸ್ಥಾನಾದ್ವಿಶಾಂ ಪ್ರಜಾನಾಂ ಸಂಬಂಧೀನಿ ಹವೀಂಷಿ ಸಂಗೃಭ್ಯ ಸಂಗೃಹ್ಯೇಂದ್ರಾದೀನುದ್ದಿಶ್ಯ ವ್ರತ್ತಾನಿ ಚರುಪುರೋಡಾಶಾದೀನಿ ಸ್ವೀಕೃತ್ಯ ದಮೂನಾ ದೇವೇಭ್ಯೋ ದಾನಮನಾ ಯಜಮಾನಾಯ ವಾಭಿಮತಪ್ರದಾನಮನಾ ವಿಧರ್ಮಣಾ ತಾಸಾಂ ವಿವಿಧೇನ ಕರ್ಮಣಾ ನಿಮಿತ್ತೇನ ದಾನಮನಾ ದೇವೇಭ್ಯೋ ದಾನಸಕ್ತೇ ವಿವಿಧಗಮನರೂಪೇಣ ಕರ್ಮಣಾಯಂತ್ರೈಃ ಶತ್ರೂಣಾಂ ನಿಯಮನೈಃ ಸಹ ನೃನ್ದೇವಾನೀಯತೇ । ಗಚ್ಛತಿ ॥

ಪ್ರತಿಪದಾರ್ಥ

ತ್ರಿಭಃ—ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ ಎಂಬ ಮೂರು ಅಗ್ನಿಕುಂಡಗಳಲ್ಲಿ ಸ್ಥಾಪಿತನಾದ ಅಗ್ನಿಯು **ಪರಿವೀತಃ**—ಸುತ್ತಲೂ ಜ್ವಾಲೆಗಳಿಂದ ವ್ಯಾಪ್ತನಾಗಿ । **ಪಸ್ತ್ಯಾಸು**—ಯಾಗಗೃಹಗಳ(ಲ್ಲಿ) । **ಯೋನೌ**—ಮಧ್ಯದಲ್ಲಿರುವ ಯಜ್ಞವೇದಿಯಲ್ಲಿ । **ನಿ ಷೀದತ್**—ಕುಳಿತುಕೊಳ್ಳುತ್ತಾನೆ. । **ಅತಃ**—ಈ ಸ್ಥಾನದಲ್ಲಿ ಕುಳಿತುಕೊಂಡೇ । **ವಿಶಾಂ**—ಪ್ರಜೆಗಳು ಅರ್ಪಿಸುವ ಹವಿರಾದಿಗಳನ್ನು । **ಸಂಗೃಭ್ಯ**—ಸ್ವೀಕರಿಸಿ ಎಂದರೆ ಇಂದ್ರಾದಿದೇವತೆಗಳನ್ನು ದ್ದೇಶಿಸಿ ತನ್ನಲ್ಲಿ ಅರ್ಪಿಸಿದ ಚರುಪುರೋಡಾಶಾದಿಗಳನ್ನು ಆ ದೇವತೆಗಳಿಗೆ ತಲಪಿಸುವ ಉದ್ದಿಶ್ಯದಿಂದ ಸ್ವೀಕರಿಸಿ । **ದಮೂನಾಃ**—ಆ ಹವಿರಾದಿಗಳನ್ನು ದೇವತೆಗಳಿಗೆ ಕೊಡಲಿಚ್ಛೆಯುಳ್ಳವನಾಗಿ ಅಥವಾ ಯಜಮಾನನಿಗೆ ಇಷ್ಟಾರ್ಥಗಳನ್ನು ಕೊಡಲಿಚ್ಛೆಯುಳ್ಳವನಾಗಿ । **ವಿಧರ್ಮಣಾ**—ನಾನಾವಿಧ ಕರ್ಮಗಳಿಂದ ಅಥವಾ ಮಾರ್ಗಗಳಿಂದ । **ಯಂತ್ರೈಃ**—ಶತ್ರುಗಳನ್ನು ದಮನ ಮಾಡುತ್ತಾ । **ನೃನ್**—ದೇವತೆಗಳ ಬಳಿಗೆ । **ಈಯತೇ**—ಹೋಗುತ್ತಾನೆ.

ಭಾವಾರ್ಥ

ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ ಎಂಬ ಮೂರು ಅಗ್ನಿಕುಂಡಗಳಲ್ಲಿ ಸ್ಥಾಪಿತನಾಗಿರುವ ಅಗ್ನಿಯು ಯಜಮಾನರ ಗೃಹಗಳನ್ನು ದೃಢವಾಗಿರುವಂತೆ ಮಾಡುತ್ತಾ ಸುತ್ತಲೂ ಪ್ರಸರಿಸಿರುವ ಜ್ವಾಲೆಗಳಿಂದ ವ್ಯಾಪ್ತನಾಗಿ ಯಜ್ಞಗೃಹದ ಮಧ್ಯದಲ್ಲಿರುವ ಯಜ್ಞವೇದಿಯಲ್ಲಿ ಕುಳಿತುಕೊಳ್ಳುತ್ತಾನೆ. ಈ ಯಜ್ಞವೇದಿಯಲ್ಲಿ ಕುಳಿತಿರುವಾಗಲೇ ಇಂದ್ರಾದಿ ದೇವತೆಗಳಿಗಾಗಿ ಪ್ರಜೆಗಳು ಅಗ್ನಿಯಲ್ಲಿ ಅರ್ಪಿಸುವ ಹವಿರಾದಿಗಳನ್ನು ಸ್ವೀಕರಿಸಿ ಅವುಗಳನ್ನು ದೇವತೆಗಳ ಬಳಿಗೆ ಒಯ್ಯಲು ಇಚ್ಛೆಯಿಂದ ಶತ್ರುಗಳನ್ನು ದಮನಮಾಡುವ ಆ ಅಗ್ನಿಯು ನಾನಾವಿಧ ಕರ್ಮಗಳ ಅಥವಾ ಮಾರ್ಗಗಳ ಮೂಲಕ ದೇವತೆಗಳ ಬಳಿಗೆ ಹೋಗುತ್ತಾನೆ.

English Translation

Occupying three (stations), consolidating (the dwelling of the worshipper), surrounded (by flames), he sits down upon the altar in the chambers (of sacrifice); from thence, having accepted (the oblations) of the people, with intent to give (them to the gods), in various ways, he (Agni) goes to the gods holding (his foes) in check.

ವಿಶೇಷವಿಷಯಗಳು

ಪ್ರಕೃತವಾದ ಋಕ್ಕಿನಲ್ಲಿ **ತ್ರಿತ** ನೆಂದು ವರ್ಣಿತನಾದ ಅಗ್ನಿಯ ಪ್ರಶಂಸೆಯಿರುತ್ತದೆ. **ತ್ರಿತ** ಶಬ್ದಕ್ಕೆ ಸಾಯಣರು **ತ್ರಿಷು ಸ್ಥಾನೇಷು ಗಾರ್ಹಪತ್ಯಾದಿಷು ತಾಯಮಾನಃ** ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಎಂಬ ಮೂರು ರೂಪಗಳಿಂದ ಮೂರು ಸ್ಥಾನಗಳಲ್ಲೂ ಇದ್ದು ಯಜ್ಞವನ್ನು ರಕ್ಷಿಸತಕ್ಕ ಅಗ್ನಿಯೆಂದರ್ಥಮಾಡಿದ್ದಾರೆ.

ತ್ರಿತನೆಂಬ ಋಷಿಯ ವಿಷಯವನ್ನು ಹಿಂದೆ ತಿಳಿಸಿದೆ. (ಋಗ್ವೇದ ಸಂಹಿತಾ vol 8 P 443-7) ಪ್ರಕೃತ ದಲ್ಲಿ ದೇವತಾಪರವಾದ **ಈ** ವಿಶೇಷಣವು ಯಾವ ದೇವತೆಯ ವಿಷಯವನ್ನು ತಿಳಿಸುವುದೆಂಬ ವಿಷಯವನ್ನು ಪರಿಶೀಲಿಸ ಲಾಗುತ್ತದೆ.

ದೇವತಾಪರವಾದ **ತ್ರಿತ** ಶಬ್ದಕ್ಕೆ ನಿಸ್ಸಂದಿಗ್ಧವಾದ ಅರ್ಥವನ್ನು ಹೇಳುವುದು ಸುಲಭವಲ್ಲ. ಈ ವಿಷಯದಲ್ಲಿ ವೈದಿಕ ಸಂಪ್ರದಾಯವನ್ನು ಅನುಸರಿಸಿ ನಿರ್ವಚನವನ್ನು ತಿಳಿಸುವ ಪಂಡಿತರೂ ಹಾಗೆಯೇ ಆಧುನಿಕ ಆಂಗ್ಲ ಪಂಡಿತರೂ ಚರ್ಚಿಸಿದ್ದಾರೆ. ಒಬ್ಬೊಬ್ಬರು ಒಂದೊಂದು ಅರ್ಥವನ್ನು ಹೇಳಿದ್ದಾರೆ. ಋಕ್ಸಂಹಿತೆಯ ಮತ್ತು ಇತರ ಆಧಾರ ಗಳಿಂದ ತ್ರಿತನ ಸ್ವರೂಪವೇನೆಂಬುದನ್ನು ಸಾಧ್ಯವಾದಷ್ಟು ತಿಳಿಯಬಹುದಾದರೆ ಯಾಸ್ಕಾದಿ ವೈದಿಕ ವ್ಯಾಖ್ಯಾಕಾರರ ಅಭಿಪ್ರಾಯವನ್ನು ಮೊದಲು ಗಮನಿಸಬೇಕು.

ನಿರುಕ್ತಕಾರರು ಈ ಪದಕ್ಕೆ ಎರಡು ಕಡೆಗಳಲ್ಲಿ ವಿವರಣೆಯನ್ನು ಹೇಳಿದ್ದಾರೆ. ಮೊದಲನೆಯದಾಗಿ ಋಷಿ ವಿಷಯವನ್ನು ಹೇಳುವ ವಿವರಣೆಯಿದೆ.

ತ್ರಿತಂ ಕೂಪೇऽವಹಿತಮೇತತ್ಸೂಕ್ತಂ ಪ್ರತಿಬಭೌ। ತತ್ರ ಬ್ರಹ್ಮೇತಿಹಾಸಮಿಶ್ರಮೃಙ್ಮಿಶ್ರಂ ಗಾಥಾಮಿಶ್ರಂ ಭವತಿ ॥

(ನಿ. ೪-೬)

ಇತ್ಯಾದಿಯಾಗಿ ಋಷಿವಿಷಯಕವಾದ ವಿವರಣವನ್ನು ಹಿಂದೆ ತಿಳಿಸಿದೆ.

ಹೀಗೆಯೇ ೧೦೮೭-೧ ನೇ ಋಕ್ಕನ್ನು ವಿವರಿಸುವಾಗ ಸಾಯಣರು "**ಕ್ಷಿತ್ಯಾದಿಸ್ಥಾನೇಷು ತಾಯಮಾನಃ ಇಂದ್ರಃ**" ಪೃಥಿವೀ, ಅಂತರಿಕ್ಷ ಮತ್ತು ದ್ಯುಲೋಕಗಳಲ್ಲಿ ರಕ್ಷಕನಾಗಿರತಕ್ಕ ಇಂದ್ರನೆಂದು ಅರ್ಥ ಮಾಡಿದ್ದಾರೆ. ಇದೇ ಋಕ್ಕನ್ನು ನಿರುಕ್ತಕಾರರೂ ವಿವರಿಸುತ್ತ "**ತ್ರಿಸ್ಥಾನ ಇಂದ್ರಃ**" ಎಂದು ಹೇಳಿದ್ದಾರೆ. ತ್ರಿಸ್ಥಾನವೆಂದರೇನೆಂದು ತಿಳಿಸಿಲ್ಲ. ಪ್ರಾಯಃ ಸಾಯಣರು ಹೇಳುವಂತೆ ಪೃಥಿವ್ಯಾದಿ ಲೋಕತ್ರಯವೇ ಆಗಿರಬೇಕು. ಅಲ್ಲದೆ, ವಾಯು ಮತ್ತು ಸೋಮ ಇವರಿಗೂ **ಈ** ವಿಶೇಷಣವಿರುತ್ತದೆ. ಆದುದರಿಂದ **ತ್ರಿತ** ಶಬ್ದಕ್ಕೆ ಆಯಾ ಸಂದರ್ಭಾನುಸಾರ ಅರ್ಥವೇ ಅಥವಾ ಕೇವಲ ಒಂದು ದೇವತೆಯನ್ನು ಮಾತ್ರ ನಿರ್ದೇಶಿಸುವ ವಿಶೇಷಣವೇ ಎಂಬು ದನ್ನು ಪ್ರಕೃತ ಪರಿಶೀಲಿಸಬೇಕು.

ತ್ರಿತ ನೆಂಬ ಹೆಸರು ಋಕ್ಸಂಹಿತೆಯಲ್ಲಿ ಒಟ್ಟಿಗೆ ನಲವತ್ತು ಕಡೆಗಳಲ್ಲಿ ಪ್ರಯುಕ್ತವಾಗಿದೆ. (೩, ೪ ಮತ್ತು ೭ ನೇ ಮಂಡಲಗಳಲ್ಲಿ ಈ ಹೆಸರಿಲ್ಲ) ತ್ರಿತನೆಂಬ ದೇವತೆಯನ್ನೇ ಉದ್ದೇಶಿಸಿ ಯಾವ ಸೂಕ್ತವೂ ಪ್ರತ್ಯೇಕವಾಗಿ ಈ ದೇವತೆಯನ್ನೇ ಪ್ರಶಂಸಿಸುವ ಸಂದರ್ಭವಿಲ್ಲ ಅಥವಾ ಯಾಸ್ಕರಿಂದ ವಿಭಾಗಿಸಲ್ಪಟ್ಟಿರುವ ದೇವತೆಗಳ ನಡುವೆಯೂ ಈ ಹೆಸರಿಲ್ಲ. ವೈದಿಕ ಸಂಪ್ರದಾಯವನ್ನು ಪೂರ್ಣವಾಗಿ ಅರಿಯದಿದ್ದರೂ ಈ ವಿಷಯದಲ್ಲಿ ಅನೇಕ ದೃಷ್ಟಿಯಿಂದ

ಪರಿಶ್ರಮವನ್ನು ಹೊಂದಿ ವಿಮರ್ಶೆ ಮಾಡಿರುವ ಕೆಲವು ಆಂಗ್ಲ ಪಂಡಿತರ ಅಭಿಪ್ರಾಯಗಳನ್ನು ಮೊದಲು ತಿಳಿಸಿ ಅನಂತರ ಆ ಅಭಿಪ್ರಾಯಗಳು ಸರಿಯೇ ಅಲ್ಲವೇ ಎಂಬುದನ್ನು ವಿಮರ್ಶಿಸಲಾಗುತ್ತದೆ.

" ಇಂದ್ರ ಮತ್ತು ತ್ರಿತ ಎರಡೂ ಒಂದೇ ದೇವತೆಯನ್ನು ನಿರ್ದೇಶಿಸತಕ್ಕವು. ತ್ರಿತನೆಂಬುದು ಇಂದ್ರನಿಗೆ ಮಾತ್ರ ನಿರ್ದಿಷ್ಟವಾಗಿರುವ ವಿಶೇಷಣ " ಎಂದು ಕುಹ್ನ್ ಎಂಬುವರ ಅಭಿಪ್ರಾಯ. " ವಾಯುವಿನ ಪ್ರಸಂಗವನ್ನು ತಿಳಿಸತಕ್ಕ ವಿಶೇಷಣ " ಎಂದು Roth ಎಂಬುವರು ತಿಳಿಸಿದ್ದಾರೆ.

" ದುಸ್ಸ ಶಕ್ತಿಯನ್ನು ನಾಶಮಾಡಿ ವೃಷ್ಟಿಯನ್ನು ಸುರಿಸುವ ದೇವತೆ. ಸೋಮವೇ ಈ ದೇವತೆಗೆ ಶಕ್ತಿದಾಯಕವಾದ ರಸ. ಆದುದರಿಂದ ಇಂದ್ರ ಮತ್ತು ವಾಯು ಎಂಬ ಎರಡು ದೇವತೆಗಳ ಶಕ್ತಿಯೂ ವ್ಯಕ್ತವಾಗುತ್ತದೆ" ಎಂದು Bonfey ಎಂಬುವರು ಊಹಿಸಿದ್ದಾರೆ. ಹೀಗೆಯೇ ಇನ್ನೂ ಅನೇಕ ಅಭಿಪ್ರಾಯಗಳಿರುತ್ತವೆ.

ಈ ಪದಕ್ಕೆ ಯಾಸ್ಕರು ತೋರಿಸಿರುವ ನಿರ್ವಚನವನ್ನೂ, ವಿವರಣವನ್ನೂ ಮೇಲೆ ತಿಳಿಸಿದೆ. ಸುಮಾರು ಇಪ್ಪತ್ತು ಸನ್ನಿವೇಶಗಳಲ್ಲಿ ಸಾಯಣನು ಈ ಪದಕ್ಕೆ ತ್ರಿತನೆಂಬ ಅರ್ಥ ಮಾಡಿದ್ದಾರೆ. ಉಳಿದೆಡೆಗಳಲ್ಲಿ " ತ್ರಿಷು ಸವನೇಷು ತಾಯಮಾನಃ " ಎಂಬ ವಿವರಣವನ್ನು ಹೇಳಿ ಆಯಾ ಸಂದರ್ಭಕ್ಕನುಸಾರವಾಗಿ ಇಂದ್ರ, ವಾಯು, ವರುಣ ಮತ್ತು ಅಗ್ನಿ ಈ ಎಲ್ಲ ದೇವತೆಗಳ ಪರವಾಗಿಯೂ ಅರ್ಥ ಮಾಡಿದ್ದಾರೆ.

ಈ ವಿಧವಾದ ತಾತ್ಪರ್ಯವೈವಿಧ್ಯವಿರುವುದರಿಂದ ಈ ಪದಕ್ಕೆ ಒಂದೇ ನಿಷ್ಕೃಷ್ಟವಾದ ಅರ್ಥವನ್ನು ಹೇಳಲಾಗುವುದಿಲ್ಲ. ಆದುದರಿಂದ ಈ ಪದದ ಪ್ರಯೋಗಗಳು ಇರುವ ಸನ್ನಿವೇಶಗಳನ್ನು ಗಮನಿಸಿ ಆಯಾ ಸಂದರ್ಭಗಳು ಏನು ಎಂದು ಪರಿಶೀಲಿಸಿ ಯಥಾಮತಿ ವಿವರಿಸಲಾಗುತ್ತದೆ.

ಒಟ್ಟಿಗೆ ನಲವತ್ತು ಸಲ ಈ ಪದದ ಪ್ರಯೋಗವಿರುವಾಗ—

೧) ಇಂದ್ರನೊಡಗೂಡಿ ಹದಿನಾರು ಸಲ ಪ್ರಯುಕ್ತವಾಗಿದೆ.

೨) ಒಂದುಸಲ ಮಾತ್ರ ವೈಯಕ್ತಿಕವಾಗಿ ವೃತ್ರಹಂತಕನೆಂದು ಪ್ರಶಂಸಿಸಲ್ಪಟ್ಟಿದೆ.

೩) ಒಂದುಸಲ ವಾರುಣಾಶ್ವದೊಂದಿಗೆ ತಾದಾತ್ಮ್ಯವನ್ನು ಹೇಳಿದೆ.

೪) ನಾಲ್ಕುಸಲ ಮರುತ್ತುಗಳೊಡನೆ ಸಾಹಚರ್ಯವನ್ನು ತಿಳಿಸಿದೆ.

೫) ಏಳುಸಲ ಅಗ್ನಿಯ ವೈಶಿಷ್ಟ್ಯವನ್ನು ಪ್ರಶಂಸಿಸುತ್ತದೆ.

೬) ವರುಣನೊಂದಿಗೆ ಒಂದುಕಡೆ ತಾದಾತ್ಮ್ಯವನ್ನು ಹೇಳಿದೆ.

೭) ಸೋಮನ ಗುಣವರ್ಣನೆ ನಾಲ್ಕು ಕಡೆಗಳಲ್ಲಿ.

೮) ಆರು ಸಲ ಗುಹ್ಯಸ್ಥದೇಶದಲ್ಲಿ ವಾಸಮಾಡತಕ್ಕ ದೇವತೆಯೆಂದು ವರ್ಣಿತವಾಗಿದೆ.

೧) ಋ. ಸಂ. ೮-೨.೨೪ ರಲ್ಲಿ ಇಂದ್ರನೂ, ತ್ರಿತನೂ ಒಟ್ಟಿಗೆ ವೃತ್ರನನ್ನು ಎದುರಿಸುತ್ತಿದ್ದಾರೆಂದು ವರ್ಣಿಸಿದೆ. ಆಗ ಮರುತ್ತುಗಳು ತ್ರಿತನಿಗೆ ಶಕ್ತಿಪ್ರದರೆಂದೂ ತಿಳಿಸಿದೆ. ಸಾಯಣರು ಈ ಸಂದರ್ಭದಲ್ಲಿ ತ್ರಿತ ಆಪ್ತ್ಯನೆಂಬ ರಾಜರ್ಷಿಯೆಂದು ವಿವರಿಸಿದ್ದಾರೆ. (ತ್ರಿತ ಆಪ್ತ್ಯ ಎಂಬ ಪ್ರಯೋಗವನ್ನು ಮುಂದೆ ವಿವರಿಸಲಾಗುತ್ತದೆ.)

೨) ೧-೫೨.೪, ೫ ಇಲ್ಲಿಯೂ ವಲನೆಂಬ ಅಸುರನೊಡನೆ ಯುದ್ಧವು ವರ್ಣಿತವಾಗಿದೆ. ಇಂದ್ರ ಮತ್ತು ತ್ರಿತ ಇಬ್ಬರೂ ವಲನನ್ನು ಎದುರಿಸುತ್ತಿದ್ದಾರೆ ಮತ್ತು ವೃಷ್ಟಿಪತನಕ್ಕೆ ಸಹಾಯ ಮಾಡುತ್ತಿದ್ದಾರೆ. ಏಕತ, ದ್ವಿತ, ಮತ್ತು ತ್ರಿತರೆಂಬ ಮೂವರಲ್ಲಿ ಒಬ್ಬನೆಂದು ಸಾಯಣರ ವಿವರಣೆಯಿದೆ.

೩) ೫-೪೬-೧ ಇದು ಇಂದ್ರಾಗ್ನಿಗಳನ್ನು ಒಟ್ಟಿಗೆ ಪ್ರಶಂಸಿಸುವ ಮಂತ್ರ. " **ತ್ರಿತಃ ಋಷಿಃ ಅಥವಾ ತ್ರಿಷು ಸ್ಥಾನೇಷು ವರ್ತಮಾನಃ ಅಗ್ನಿಃ** " ಋಷಿಯೆಂದೂ ಅರ್ಥ ಅಥವಾ ಮೂರು ಸ್ಥಾನಗಳಲ್ಲಿಯೂ ವ್ಯಾಪಿಸಿರುವ ಅಗ್ನಿ ಎಂಬ ಪರ್ಯಾಯಾತ್ಮಕವಾದ ವಿವರಣೆಯನ್ನು ಸಾಯಣರು ಹೇಳಿದ್ದಾರೆ.

೪) ೫-೪-೭ ತ್ರಿತನು ವೃತ್ರನೊಂದಿಗೆ ಯುದ್ಧ ಮಾಡಲು ಸಿದ್ಧಪಡಿಸಿಕೊಳ್ಳುವ ಸನ್ನಿವೇಶ. ಸಾಯಣರು ಋಷಿಯೆಂದೂ, ಇನ್ನು ಕೆಲವರು ವಾಯುವೆಂದೂ ಅಭಿಪ್ರಾಯಪಟ್ಟಿದ್ದಾರೆ.

೫) ೫-೪-೪ ಮತ್ತು ೯ ಇಂದ್ರನಿಂದ ಪ್ರೇರಿತನೂ, ಇಂದ್ರನ ಸಹಾಯವನ್ನು ಪಡೆಯುವವನೂ ಆದ ತ್ರಿತನು ತ್ವಷ್ಟೃವಿನ ಪುತ್ರನಾದ ವಿಶ್ವರೂಪನನ್ನು ಎದುರಿಸಿ ಸೀಳುವ ಸನ್ನಿವೇಶ. ವೃಷ್ಟಿಕಾರಕನೆಂದೂ ಪರ್ಜನ್ಯನೆಂದೂ ಹೇಳಿದ್ದಾನೆ.

೬) ೧೦-೯೯-೬ " **ತ್ರಿತೋನ್ವೋಜಸಾ ವೃಧಾನೋ ವಿಪಾ ವರಾಹಮಯೋಅಗ್ರಯಾ ಹನ್** " ಉಕ್ಕಿನ ವಜ್ರದಿಂದ ವರಾಹಾಸುರನನ್ನು ನಾಶ ಮಾಡಿದನು ಎಂದಿದೆ. ಇಂದ್ರನಿಗೂ ತ್ರಿತನಿಗೂ ತಾದಾತ್ಮ್ಯವಿರುತ್ತದೆ.

೭) ೧೦-೪೮-೨ " **ತ್ರಿತಾಯ ಗಾ ಅಜನಯನ್ಮನವೇರಧಿ** " ತ್ರಿತನಿಗಾಗಿ ನಾನು ಅಹಿಯಿಂದ ಗೋವನ್ನು ಉತ್ಪನ್ನ ಮಾಡಿದೆನು ಎಂದು ಇಂದ್ರನು ತ್ರಿತನಿಗೆ ಮಾಡಿದ ಸಹಾಯವನ್ನು ತಾನೇ ಹೇಳಿಕೊಳ್ಳುತ್ತಾನೆ. ಬಾವಿಗೆ ಬಿದ್ದಿದ್ದ ತ್ರಿತ ಆಪ್ತ್ಯನಿಗೆ ಮಾಡಿದ ಸಹಾಯವೆಂದು ಇಲ್ಲಿ ಸಾಯಣರ ವಿವರಣೆಯಿದೆ.

೮, ೯) ೨-೧೧-೧೯, ೨೦) ತ್ರಿತನು ಸೋಮವನ್ನು ಹಿಂಡಿ ಇಂದ್ರನಿಗೆ ಅರ್ಪಿಸಿದ ಫಲವಾಗಿ ಇಂದ್ರನು ಉತ್ತೇಜಿತನಾಗಿ ವಲಸನ್ನು ನಾಶಪಡಿಸಿದನು ಎಂದು ತಿಳಿಸಿದೆ. ಈ ಸಂದರ್ಭದಲ್ಲಿ ಕೆಲವರು ತ್ರಿತನಿಗೂ, ಸೋಮನಿಗೂ ತಾದಾತ್ಮ್ಯವನ್ನು ತೋರಿಸಿದ್ದಾರೆ. ಇಲ್ಲಿ **ತ್ರಿತಸ್ಯ** ಎಂಬ ಪದಕ್ಕೆ ಸಾಯಣರು **ತ್ರಿತಾಯ** ಎಂದರ್ಥಮಾಡಿ ತ್ರಿತನಿಗಾಗಿ ಇಂದ್ರನು ಚಕ್ರಪ್ರಯೋಗ ಮಾಡಿದನು. ಆದುದರಿಂದ ತ್ರಿತನೆಂದರೆ ಇಲ್ಲಿ **ತ್ರಿತ**ಸಂಜ್ಞಕನಾದ ಋಷಿಯೆಂದರ್ಥವೆಂದಭಿಪ್ರಾಯಪಟ್ಟಿದ್ದಾರೆ.

೧೦) ೮-೧೨-೧೬, ೧೭ ತ್ರಿತ ಆಪ್ತ್ಯನು ರಾಜರ್ಷಿಯೆಂದು ಸಾಯಣರ ಮತ,

೧೧) ೮-೫೨-೧ ,, ,,

೧೨-೧೬) ೯-೩೨-೨; ೯-೩೮-೨; ೯-೩೪-೪; ೯-೪೬-೨೦; ೧-೧೬೩-೨ ಈ ಐದು ಸಂದರ್ಭಗಳೂ ಒಂದೇ ಅರ್ಥವನ್ನು ತೋರಿಸುವುದಾದರೂ ಕೊನೆಯ ಋಕ್ಕಿನಲ್ಲಿ ವಿಶೇಷಾರ್ಥವಿರುತ್ತದೆ. ಸಾಯಣರು ಮೊದಲಿನ ನಾಲ್ಕು ಕಡೆಗಳಲ್ಲಿಯೂ ಋಷಿಯೆಂದು ಅರ್ಥ ಮಾಡಿ ಕೊನೆಯ ಋಕ್ಕಿನಲ್ಲಿ **ವಾಯು** ವೆಂಬ ಅರ್ಥವನ್ನು ತೋರಿಸಿದ್ದಾರೆ. " **ಯಮೇನ ದತ್ತಂ ತ್ರಿತಃ** " ಎನ್ನುವ ವಾಕ್ಯಕ್ಕೆ " **ಪೃಥಿವ್ಯಾದಿಷು ತ್ರಿಷು ಸ್ಥಾನೇಷು ವರ್ತಮಾನಃ ತೀರ್ಣತಮೋ ವಾ ವಾಯುಃ** " ಎಂಬ ವಿವರಣೆಯಿದೆ.

II. ವಾರುಣಾಶ್ವದೊಡನೆ ಐಕ್ಯ

೧೭) " **ಅಸಿ ಯಮೋಅಸ್ಯಾದಿತ್ಯೋಅರ್ವನ್ನಸಿ ತ್ರಿತಃ** " (೧-೧೬೩-೨)ಇಲ್ಲಿ **ಯಮ, ಆದಿತ್ಯ, ತ್ರಿತ** ಎಂಬ ಮೂರು ದೇವತೆಗಳ ಅಂಶವೂ ವಾರುಣಾಶ್ವದಲ್ಲಿರುತ್ತದೆಂಬ ವಿವರಣವಿದೆ. **ತ್ರಿತ** ಶಬ್ದಕ್ಕೆ ಏನರ್ಥವೆಂದು

ಸಾಯಣರು ನಿಸ್ಪೃಷ್ಟವಾಗಿ ಹೇಳಿಲ್ಲ. **ಯಮ** ಶಬ್ದಕ್ಕೆ ಅಗ್ನಿಯೆಂದರ್ಥ ಮಾಡಿದ್ದಾರೆ. **ತ್ರಿತ**ನೆಂದರೆ ಮೂರು ಪ್ರದೇಶ ಗಳಲ್ಲೂ ಸಂಚರಿಸುವ ವಾಯುವಾಗಬಹುದು ಅಥವಾ ಋಷಿಯಾದರೂ ಆಗಬಹುದು ಎಂದು ಅಭಿಪ್ರಾಯಪಡುತ್ತಾರೆ.

III. ವೃತ್ರಹಂತಕನಾದ ತ್ರಿತ

೧೮) ೧-೧೮೭-೧ ಸಾಯಣರು ತ್ರಿತ ಶಬ್ದಕ್ಕೆ ಇಲ್ಲಿ ಇಂದ್ರನೆಂಬ ಅರ್ಥವೆಂದು ಊಹಿಸಿದ್ದಾರೆ ಎಂಬ ವಿಷಯವನ್ನು ಮೇಲೆ ತಿಳಿಸಿದೆ.

IV. ತ್ರಿತನಿಗೂ ಮರುತ್ತುಗಳಿಗೂ ಇರುವ ಸಾಹಚರ್ಯವನ್ನು ತೋರಿಸುವ ಸಂದರ್ಭಗಳು

೧೯) ೨-೩೪-೧೦ ರುದ್ರಪುತ್ರರಾದ ಮರುತ್ತುಗಳು ತ್ರಿತನನ್ನು ಬಂಧನದಿಂದ ಬಿಡಿಸಿದರು ಎಂಬುದೇ ಈ ಋಕ್ಕಿನ ತಾತ್ಪರ್ಯ. ಬಂಧನದ ಸ್ವರೂಪವೆಂತಹುದು; ತ್ರಿತನು ಯಾರು ಎಂದು ನಿರ್ಣಯಿಸಲು ಅನೇಕರು ಪ್ರಯತ್ನ ಪಟ್ಟಿದ್ದಾರೆ. ಯಾರಿಗೂ ಸರಿಯಾಗಿ ಅರ್ಥವಾಗಿಲ್ಲ. ಈ ಸಂದರ್ಭದಲ್ಲಿ Max muller ಎಂಬ ಪಂಡಿತನು ಈ ಪದಕ್ಕೆ ನಿಸ್ಪೃಷ್ಟವಾದ ತಾತ್ಪರ್ಯವನ್ನು ಹೇಳಬೇಕೆಂದು ಬಹಳ ಪ್ರಯಾಸಪಟ್ಟು ಕೊನೆಗೆ "Its true meaning remains as unfathomable as ever" ಅವರ ಅರ್ಥವು ಕೊನೆಗೂ ಗಂಭೀರವಾಗಿಯೇ (ಅಸ್ಪಷ್ಟವಾಗಿಯೇ) ಉಳಿಯಿತು ಎಂದಿದ್ದಾನೆ.

೨೦-೨೧) ೨-೩೪-೧೪; ೫-೫೪-೨. ಈ ಎರಡು ಸಂದರ್ಭಗಳಲ್ಲೂ ಮೇಲೆ ಉದಾಹರಿಸಿರುವ ಋಕ್ಕಿ ನಲ್ಲಿರುವಂತೆಯೇ ಮರುತ್ತುಗಳೊಡನಿರುವ ಸಾಹಚರ್ಯವನ್ನು ತೋರಿಸಿದೆ. ಪ್ರಾಯಃ ಋಷಿಯೆಂಬ ತಾತ್ಪರ್ಯ ವಿರಬಹುದು ಆದರೆ ೫. ೫೪. ೨. ನೇ ಋಕ್ಕನ್ನು ವಿವರಿಸುವಾಗ ಸಾಯಣರು **ತ್ರಿಷು ಸ್ಥಾನೇಷು ತಾಯಮಾನೋ, ಮೇಘೋ ಮರುದ್ಗಣೋ ವಾ** ಮೂರು ಸ್ಥಾನಗಳನ್ನು ವ್ಯಾಪಿಸಿ ರಕ್ಷಕವಾಗಿರುವ ಮೇಘ ಅಥವಾ ಮರುದ್ಗಣ ವಾಗಿರಬಹುದು ಎಂದಭಿಪ್ರಾಯಪಟ್ಟಿದ್ದಾರೆ.

೨೨) ೧೦-೧೧೫-೪. ಯುದ್ಧಾತುರರಾದ ಮರುತ್ತುಗಳು ಮೇಘಗಳ ನಡುವೆ ತ್ರಿತ ರೂಪದಲ್ಲಿ ಅಡಗಿದ್ದ ಅಗ್ನಿಯನ್ನು ಕಂಡುಹಿಡಿದರು ಎಂದು ಋಕ್ಕಿನ ತಾತ್ಪರ್ಯ. ಸಾಯಣರೂ ಇಲ್ಲಿ **ತ್ರಿತ** ಶಬ್ದಕ್ಕೆ ಅಗ್ನಿಯೆಂದೇ ಅರ್ಥ ಮಾಡಿದ್ದಾರೆ.

V. ತ್ರಿತನಿಗೂ ಅಗ್ನಿಗೂ ಇರುವ ತಾದಾತ್ಮ್ಯ ಅಥವಾ ಸಾಹಚರ್ಯ.

೨೩) ೫-೯-೫. ಅಂತರಿಕ್ಷದಲ್ಲಿ ಹರಡಿದ ಅಗ್ನಿಯ ಜ್ವಾಲೆಯು ಪ್ರಸರಿಸಲು ಅಂತರಿಕ್ಷಸ್ಥನಾದ ತ್ರಿತನು ಉತ್ತೇಜನವನ್ನು ಕೊಡುತ್ತಾನೆ ಎಂಬ ವಿವರಣವುಳ್ಳ ಈ ಋಕ್ಕಿನಲ್ಲಿ **ತ್ರಿತ** ಶಬ್ದಕ್ಕೆ ವಾಯುವೆಂದು ಕೆಲವರೂ ಅಗ್ನಿ ಯೆಂದು ಕೆಲವರೂ ಅರ್ಥಮಾಡಿದ್ದಾರೆ. ಸಾಯಣರ ರೀತ್ಯಾ ಅಗ್ನಿಯೆಂದೇ ಅರ್ಥ.

೨೪) **೫-೪೧-೪.** ವಾತ, ಅಗ್ನಿ, ಪೂಷ ಇವರೊಂದಿಗೆ ಕೂಡಿಕೊಂಡಿರುವ ತ್ರಿತನು ನಮ್ಮ ಯಾಗಕ್ಕೆ ಬಂದಿದ್ದಾನೆ ಎಂಬ ತ್ರಿತನ ಸ್ತುತಿಯಿದೆ. ತ್ರಿತನೂ ಅಗ್ನಿಯೂ ಬೇರೆ ಬೇರೆ ಎಂಬ ಅಭಿಪ್ರಾಯವು ಕೆಲವರದು. **ತ್ರಿತ** ಶಬ್ದವು ಇಲ್ಲಿ ಅಗ್ನಿ ಪರ್ಯಾಯವಾಗಿದೆಯೆಂಬ ಅಭಿಪ್ರಾಯವು ಕೆಲವರದು. ಸಾಯಣನು ಮಾತ್ರ **ವಾತ** ಶಬ್ದಕ್ಕೆ ಇದು ವಿಶೇಷಣವಾಗಿದೆಯೆಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.

೨೫) ೫-೪೧-೯. ೧೦. **ಆಪ್ತ್ಯ, ಅಪಾಂ ನಪಾತಂ** ಎಂಬ ವಿಶೇಷಣಗಳು ತ್ರಿತ ರೂಪನಾದ ಅಗ್ನಿಯನ್ನು ವರ್ಣಿಸುತ್ತವೆ. ಸಾಯಣರೂ ಅಗ್ನಿಯೆಂದೇ ಅರ್ಥ ಮಾಡಿದ್ದಾರೆ.

೨೬) ೧೦-೪೬-೩ ಇಲ್ಲಿ ತ್ರಿತನ ತೇಜಸ್ಸು ವರ್ಣಿತವಾಗಿರುವುದರಿಂದ ಅಗ್ನಿಯೆಂದು ಕೆಲವರಮತ. ಸಾಯಣರು ಋಷಿಯೆಂದರ್ಥ ಮಾಡಿಬಿಟ್ಟರೆ.

೨೭) ೧೦-೪೬-೬. ಇದೇ ಪ್ರಕೃತವಾದ ಋಕ್ಕು ಇದರ ವಿವರಣವನ್ನು ಮೇಲೆ ತಿಳಿಸಿದೆ. ಇಲ್ಲಿ ಗೃಹಪತಿಯಾದ ಅಗ್ನಿಯೆಂದರ್ಥ.

೨೮) ೧೦-೪೪-೩ ಇವೆರಡೂ ವೈದ್ಯುತಾಗ್ನಿಯನ್ನುದ್ದೇಶಿಸಿದವಾಗಿವೆ.

೨೯) ೨-೩೧-೬ ,,

VI. ತ್ರಿತನಿಗೂ ವರುಣನಿಗೂ ತಾದಾತ್ಮ್ಯ ನಿರ್ದೇಶ

೩೦) ೮-೪೭-೬ ಸಪ್ತ ವರುಣ ಋಕ್ಕು ಅರ್ಯನು ಇತ್ಯಾದಿ ದೇವತೆಗಳಿಗೆ ನಾಭಿರೂಪನಾದ ಅಗ್ನಿಯಾಗಬಹುದು. ಅಥವಾ ಸಾಯಣರು ಹೇಳಿರುವಂತೆ ವರುಣದೇವತೆಯಾಗಬಹುದು. ಇಲ್ಲಿ ವೈದ್ಯುತಾಗ್ನಿಯೆಂದು ಹೇಳಲೂ ಅಧಿಕಾರವಾದ ಅವಕಾಶವಿರುತ್ತದೆ.

VII. ತ್ರಿತನಿಗೂ ಸೋಮನಿಗೂ ತಾದಾತ್ಮ್ಯ ಅಥವಾ ಸಾಹಚರ್ಯ

೩೧-೩೪) ೯-೩೭-೪; ೯-೯೫-೪; ೯-೧೦೨-೨; ೯-೧೦೨-೩ ಈ ನಾಲ್ಕು ಸಂದರ್ಭಗಳಲ್ಲೂ ಸೋಮನಿಗೂ ತ್ರಿತನಿಗೂ ಇರುವ ನಿಕಟವಾದ ಸಂಬಂಧವನ್ನು ತಿಳಿಸಿದೆ. ಕೆಲವೆಡೆಗಳಲ್ಲಿ ತ್ರಿತನು ಸೋಮವನ್ನು ಹಿಂಡಿ ಇಂದ್ರನಿಗೆ ಅರ್ಪಿಸಿದ ವಿಷಯವನ್ನು ತಿಳಿಸಿದೆ. ಇನ್ನು ಕೆಲವೆಡೆಗಳಲ್ಲಿ ಸೋಮನೇ ತ್ರಿತರೂಪದಲ್ಲಿರುವ ವಿಷಯವನ್ನೂ ತಿಳಿಸಿದೆ.

VIII. ತ್ರಿತನು ಗುಹ್ಯವಾದ ಅಂತರಿಕ್ಷದಲ್ಲಿ ಅಡಗಿರುವುದು

೩೫) ೧-೧೦೫-೯ ತ್ರಿತ ಆಪ್ತ್ಯನು ಆದಿತ್ಯನ (ಅಗ್ನಿಯ) ಸಪ್ತರಶ್ಮಿಗಳನ್ನೂ ತಿಳಿದಿರುತ್ತಾನೆಂದು ವಿವರಿಸಿದೆ. ಹಿಂದೆ ಇದೇ ಋಕ್ಕನ್ನು ವಿವರಿಸುವಾಗ ತ್ರಿತ ಆಪ್ತ್ಯನೆಂಬ ಋಷಿಯೆಂದು ತಿಳಿಸಿದೆ. ಮೇಘಾಂತರ್ಗತನಾದ ವೈದ್ಯುತಾಗ್ನಿಯೆಂಬುದಕ್ಕೂ ಅವಕಾಶವಿರುತ್ತದೆ. ಹೀಗೆಯೇ,

೩೬-೪೦) ೧-೧೦೫-೧೭; ೮-೪೭-೧೩; ೮-೪೭-೧೪; ೮-೪೭-೧೫; ೮-೪೭-೧೬ ಈ ಎಲ್ಲಾ ಸಂದರ್ಭಗಳಲ್ಲೂ ಮೇಘಾಂತರ್ಗತನಾದ ವೈದ್ಯುತಾಗ್ನಿಯೆಂದರ್ಥಮಾಡುವ ಅವಕಾಶವಿರುತ್ತದೆ.

ಮೇಲೆ ಉದ್ಧೃತವಾದ ವಾಕ್ಯಗಳಲ್ಲಿ ತ್ರಿತನ ಸ್ವರೂಪವು ಅನೇಕ ವಿಧವಾಗಿ ವರ್ಣಿತವಾಗಿದೆ. ಇವನು ಇಂದ್ರರೂಪನೇ, ವಾಯುರೂಪನೇ ಅಥವಾ ಅಗ್ನಿರೂಪನೇ ಎಂಬ ಪ್ರಶ್ನೆಯು ಸಹಜವಾಗಿದೆ. ಆದರೆ, ಮೇಲಿನ ಎಲ್ಲ ಸನ್ನಿವೇಶಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಆಗ ತ್ರಿತನ ಒಂದು ಅಂಶವು ಮಾತ್ರ ಎಲ್ಲಾ ಸನ್ನಿವೇಶಗಳಲ್ಲೂ ಸಮಾನವಾಗಿ ಕಂಡುಬರುತ್ತದೆ.

ತ್ರಿತನು ವೈದ್ಯುತಾಗ್ನಿಯಲ್ಲದೆ ಬೇರೆಯಲ್ಲ ಎಂಬ ನಿಷ್ಕೃಷ್ಟವಾದ ಅರ್ಥವು ಸಾಧ್ಯವೆನ್ನುವುದಕ್ಕೆ ಮೇಲಿನ ಎಲ್ಲಾ ವಾಕ್ಯಗಳಲ್ಲೂ ಆಧಾರವು ಸಿಕ್ಕುತ್ತದೆ.

ವೃತ್ರಾದಿಗಳೊಡನೆ ಇಂದ್ರನ ಯುದ್ಧವು ಬಂಧಿತವಾಗಿದ್ದ ಮೇಘವನ್ನು ಸಡಿಲಿಸಿ ವೃಷ್ಟಿಯನ್ನು ಸುರಿಸುವ ಉದ್ದಿಶ್ಯವನ್ನು ಹೊಂದಿರುತ್ತದೆ. ಈ ಸಂದರ್ಭದಲ್ಲಿ ತ್ರಿತನ (ವೈದ್ಯುತಾಗ್ನಿಯ) ಸಹಾಯವಿದ್ದೇ ತೀರಬೇಕು. ಈ ಕಾರಣದಿಂದಲೇ ವಾಮಣಾಶ್ವವೂ ತ್ರಿತಸಂಜ್ಞಕವಾಗಿರುತ್ತದೆ. ಈ ವಾಮಣಾಶ್ವವು ಆದಿತ್ಯಾಂತರ್ವಾದ ದಿವ್ಯಜ್ಯೋತಿ ಎಂದು ಹಿಂದೆ ತಿಳಿಸಿದೆ. ಈ ವೈದ್ಯುತಾಗ್ನಿಯು ಅಗ್ನ್ಯಂಶವೇ ಆಗಿರುವುದರಿಂದ ಅಗ್ನಿಗೂ, ತ್ರಿತನಿಗೂ ಇರುವ ತಾದಾತ್ಮ್ಯವು ಸಹಜವಾಗಿಯೇ ಇರುತ್ತದೆ. ಅಲ್ಲದೆ **ತ್ರಿಷಧಸ್ಥ**ನೆಂದು ಅಗ್ನಿಯೇ **ತ್ರಿತ** ಸಂಜ್ಞಕನೆಂದು ಹಿಂದೆ ವಿವರಿಸಿದೆ. **(೧-೪೫ ೧, ೨)** ಹೀಗೆಯೇ ಸೋಮ ಮತ್ತು ವಾಮಣಾಶ್ವಗಳೊಡನೆ ತಾದಾತ್ಮ್ಯವನ್ನು ಹೇಳುವಾಗಲೂ ಇದೇ ಅರ್ಥವೆಂದು ತಿಳಿಯಬೇಕು.

ಆದುದರಿಂದ ತ್ರಿತನಿಗೂ ಇಂದ್ರನಿಗೂ ಇರುವ ಸಂಬಂಧವನ್ನು ಅಗ್ನಿಗೂ ಇಂದ್ರನಿಗೂ ಇರುವ ಸಂಬಂಧ ವರ್ಣನೆಯೆಂದರ ತಪ್ಪಾಗಲಾರದು. ಇಂದ್ರಾಗ್ನಿಗಳು ಅನೇಕವೇಳೆ ಒಟ್ಟಿಗೆ ವರ್ಣಿತರಾಗಿದ್ದಾರೆ ಮತ್ತು ಒಟ್ಟಿಗೆ ವೃತ್ರಾಸುರಹಂತಕರೆಂದೂ ಪ್ರಶಂಸಿತರಾಗಿದ್ದಾರೆ.

ಎಲ್ಲಕ್ಕಿಂತಲೂ ಅಧಿಕವಾಗಿ ತ್ರಿತ ಆಪ್ತ್ಯನೆಂಬ ವಿಶೇಷಣವು ಗಮನಾರ್ಹವಾದುದು. ಅಗ್ನಿಯು ಮೂರು ಭ್ರಾತೃಗಳ ವಿಷಯವನ್ನು ಹಿಂದೆ ತೈತ್ತಿರೀಯ ಸಂಹಿತಾವಾಕ್ಯವನ್ನುದಾಹರಿಸಿ ತಿಳಿಸಿದೆ. ಅಲ್ಲ ತ್ರಿತನ ಸ್ಥಾನವನ್ನೂ, ತ್ರಿತನೆಂಬುದಕ್ಕೆ ಅರ್ಥವನ್ನೂ ತಿಳಿಸಿದ ಮತ್ತು ಹಿಂದೆ (೧೦-೪೫-೨ ನೇ ಋಕ್ಕಿನ ವಿಶೇಷವಿಷಯಗಳಲ್ಲಿ) ಶಥಪಥ ಮತ್ತು ತೈತ್ತಿರೀಯ ಬ್ರಾಹ್ಮಣಗಳನ್ನೂ ಉದಾಹರಿಸಿ **ತ್ರಿತ**ನ ನಿರ್ದಿಷ್ಟ ಸ್ಥಾನವನ್ನು ವಿವರಿಸಿದೆ.

ಒಟ್ಟಿನಲ್ಲಿ ಮೂರು ಲೋಕಗಳನ್ನೂ ವ್ಯಾಪಿಸಿರುವುದರಿಂದ ಅಗ್ನಿಯು ತ್ರಿತನೆಂದು ವ್ಯವಹರಿಸಲ್ಪಟ್ಟಿದ್ದಾನೆಂದು ಪ್ರಕೃತವಾದ ಋಕ್ಕಿನಲ್ಲಿ ಸಾಯಣರು ವಿವರಿಸಿದ್ದಾರೆ.

ಸಂಹಿತಾಪಾಠಃ

ಅಸ್ಯಾಜರಾಸೋ ದಮಾನುರಿತ್ರಾ ಅರ್ಚದ್ಧೂಮಾಸೋ ಅಗ್ನಯಃ ಸಾವಕಾಃ
ಶ್ವಿತೀಚಯಃ ಶ್ವಾತ್ರಾಸೋ ಭುರಣ್ಯವೋ ವನರ್ಷದೋ ವಾಯವೋ ನ
ಸೋಮಾಃ ॥ ೭ ॥

ಪದಪಾಠಃ

ಅಸ್ಯ । ಅಜರಾಸಃ । ದಮಾಂ । ಅರಿತ್ರಾಃ । ಅರ್ಚತ್ಧೂಮಾಸಃ । ಅಗ್ನಯಃ । ಸಾವಕಾಃ ।
ಶ್ವಿತೀಚಯಃ । ಶ್ವಾತ್ರಾಸಃ । ಭುರಣ್ಯವಃ । ವನರ್ಷದಃ । ವಾಯವಃ । ನ । ಸೋಮಾಃ ॥ ೭ ॥

ಸಾಯಣಭಾಷ್ಯಂ

ಅತ್ರ ಬಹುತ್ವೇನ ಸ್ತೂಯತೇ । ಅಸ್ಯ ಯಜಮಾನಸ್ಯ ಸಂಬಂಧಿನೋಽಜರಾಸೋ ಜರಾರಹಿತಾ ದಮಾಂ ದಮನೀಯಾನಾಂ ರಕ್ಷಃಪ್ರಭೃತೀನಾಂ॥ ದಮೇಽ ಕ್ವಿಪಿ ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ॥ ಕೇಷಾಮರಿತ್ರಾಸ್ತಾರಕಾ ಅರ್ಚದ್ಧೂಮಾಸೋಽರ್ಚಂತೋಽರ್ಚನೀಯಾ ಧೂಮಾ ಧೂನೋತೇಽಲಕ್ಷಿತಾ ಜ್ವಾಲಾ ವಾ ಏಷಾಂ ತೇ ತಥೋಕ್ತಾಃ ಪಾವಕಾಃ ಶೋಧಕಾಃ ಶ್ವಿತೀಚಯೇಃ ಶ್ವೇತಿಮಾನಮಂಚಂತಃ॥ ಶ್ವಿತಿಃ ಶ್ವೇತಃ । ಔಣಾದಿಕ ಇಃ॥ ಶ್ವಾತ್ರಾಸಃ । ಕ್ವಿಪ್ರತ್ಯಯಾನ್ಮೈತತ್ । ಕ್ವಿಪ್ರಧರ್ಮಕಾ ಭುರಣ್ಯವೋ ಭರಣಶೀಲಾ ವನರ್ಷದೋ ವನೇಷು ಸೀದಂತಃ । ಸಂಹಿತಾಯಾಂ ಛಾಂದಸಂ ರುತ್ವಂ॥ ವಾಯವೋ ನ ಸೋಮಾ ಗಂತಾರಃ ಸೋಮಾ ಇವ । ಹವಿರ್ದಾತುರ್ಯಜಮಾನಸ್ಯ ಶೀಘ್ರಾ ಭವಂತೀತಿ ।

ಪ್ರತಿಪದಾರ್ಥ

ಅಸ್ಯ—ಈ ಯಜಮಾನನ । **ಅಜರಾಸಃ**—ಜರಾರಹಿತವಾದವೂ ಎಂದರೆ ನಾಶವಿಲ್ಲದವೂ । **ದಮಾಂ**—ರಾಕ್ಷಸಾದಿ ಶತ್ರುಗಳನ್ನೂ । **ಅರಿತ್ರಾಃ**—ತಡೆಗಟ್ಟುವವೂ । **ಅರ್ಚದ್ಧೂಮಾಸಃ**—ಪೂಜಾರ್ಹವಾದ ಹೊಗೆ ಅಥವಾ ಜ್ವಾಲೆಗಳಿಂದ ಯುಕ್ತವಾದವೂ । **ಪಾವಕಾಃ**—ಶುದ್ಧಿಕಾರಕವೂ । **ಶ್ವಿತೀಚಯೇಃ**—ಬೆಳ್ಳಗೆ ಪ್ರಕಾಶಮಾನವಾದವೂ । **ಶ್ವಾತ್ರಾಸಃ**—ಬೇಗನೆ ಸರ್ವತ್ರ ವ್ಯಾಪಿಸುವ ಸ್ವಭಾವವುಳ್ಳವೂ । **ಭುರಣ್ಯವಃ**—ಭರಿಸಿ ಪೋಷಿಸುವ ಸಾಮರ್ಥ್ಯವುಳ್ಳವೂ । **ವನರ್ಷದಃ**—ವೃಕ್ಷಾದಿಗಳ ಮಧ್ಯದಲ್ಲಿ ಗರ್ಭರೂಪದಲ್ಲಿ ಅಡಗಿರುವವೂ ಆದ ಅಗ್ನಿಗಳು ಅಥವಾ ಅಗ್ನಿಜ್ವಾಲೆಗಳು । **ವಾಯವೋ ನ**—ವೇಗವಾಗಿ ಬೀಸುವ ಗಾಳಿಗಳಂತೆ । **ಸೋಮಾಃ**—ಶೀಘ್ರವಾಗಿ ಪ್ರವಹಿಸುವ ಸೋಮರಸಗಳಂತೆ ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ ಬೇಗನೆ ಬಂದು ಸೇರುತ್ತವೆ.

ಭಾವಾರ್ಥ

ಯಜಮಾನಸಂಬಂಧವಾದ ಎಂದರೆ ಯಜಮಾನರ ಯಜ್ಞವೇದಿಯಲ್ಲಿ ಪ್ರಜ್ವಲಿತವಾದವೂ, ಜರಾರಹಿತವಾದವೂ ಎಂದರೆ ಬೇಗನೆ ಆರಿಹೋಗದಿರುವವೂ, ರಾಕ್ಷಸಾದಿಗಳು ಯಜ್ಞವೇದಿಗೆ ಬರದಂತೆ ತಡೆಗಟ್ಟುವವೂ, ಪೂಜಾರ್ಹವಾದ ಹೊಗೆ ಅಥವಾ ಜ್ವಾಲೆಗಳಿಂದ ಯುಕ್ತವಾದವೂ, ಶುದ್ಧಿಕಾರಕವೂ, ಪ್ರಕಾಶಮಾನನಾದವೂ, ಬೇಗನೆ ಸರ್ವತ್ರ ವ್ಯಾಪಿಸುವ ಸಾಮರ್ಥ್ಯವುಳ್ಳವೂ, ಯಜ್ಞವನ್ನು ಭರಿಸುವವೂ. ವೃಕ್ಷಾದಿಗಳ ಮಧ್ಯದಲ್ಲಿ ಅಡಗಿರುವವೂ ಆದ ಅಗ್ನಿಗಳು ಅಥವಾ ಅಗ್ನಿಜ್ವಾಲೆಗಳು ವೇಗವಾಗಿ ಬೀಸುವ ಗಾಳಿಗಳಂತೆಯೂ, ಶೀಘ್ರವಾಗಿ ಪ್ರವಹಿಸುವ ಸೋಮರಸಗಳಂತೆಯೂ ಹವಿಸ್ಸನ್ನರ್ಪಿಸುವ ಯಜಮಾನರಲ್ಲಿಗೆ ಬಂದು ಸೇರಲಿ.

English Translation

The undecaying fires of the worshipper, the rescuers from the humiliated (spirits of ill), having adorable smoke, purifying, becoming white, swift, bearing (the oblation), sitting in the wood, (are) like the fast-flowing juices of the Soma.

ಸಂಹಿತಾಪಾಠಃ

ಪ್ರ ಜಿಹ್ವಯಾ ಭರತೇ ವೇಪೋ ಅಗ್ನಿಃ ಪ್ರ ವಯುನಾನಿ ಚೇತಸಾ ಪೃಥಿವ್ಯಾಃ ।
ತಮಾಯವಃ ಶುಚಯಂತಂ ಪಾವಕಂ ಮಂದ್ರಂ ಹೋತಾರಂ ದಧಿರೇ ಯಜಿಷ್ಠಂ ॥ ೯ ॥

ಪದಪಾಠಃ

ಪ್ರ । ಜಿಹ್ವಯಾ । ಭರತೇ । ವೇಪಃ । ಅಗ್ನಿಃ । ವಯುನಾನಿ । ಚೇತಸಾ । ಪೃಥಿವ್ಯಾಃ ।
ತಂ । ಆಯವಃ । ಶುಚಯಂತಂ । ಪಾವಕಂ । ಮಂದ್ರಂ । ಹೋತಾರಂ । ದಧಿರೇ । ಯಜಿಷ್ಠಂ ॥ ೯ ॥

ಸಾಯಣಭಾಷ್ಯಂ

ಯೋಽಗ್ನಿರ್ಜಿಹ್ವಯಾ ಜ್ವಾಲಯಾ ವೇಪಃ । ಕರ್ಮನಾಮೈತತ್ । ಕರ್ಮ ಪ್ರ ಭರತೇ ತಥಾ ಯೋಽಗ್ನಿರ್ವಯುನಾನಿ ಪ್ರಜ್ಞಾನಾನಿ ಸ್ತೋತ್ರಾಣಿ ಪೃಥಿವ್ಯಾ ರಕ್ಷಣಾಯ ಚೇತಸಾನುಗ್ರಹಯುಕ್ತೇನ ಮನಸಾ ಪ್ರ ಭರತೇ ತಮಗ್ನಿಮಾಯವೋ ಗಂತಾರೋ ಮನುಷ್ಯಾಃ ಶುಚಯಂತಂ ದೀಪ್ಯಮಾನಂ ಪಾವಕಂ ಶೋಧಕಂ ಮಂದ್ರಂ ಸ್ತುತ್ಯಂ ಹೋತಾರಮಾಹ್ವಾತಾರಂ ಹೋಮನಿಷ್ಪಾದಕಂ ವಾ ಯಜಿಷ್ಠಮತಿಶಯೇನ ಯಷ್ಟವ್ಯಂ ಯಷ್ಟೃತಮಂ ವಾ ದಧಿರೇ । ಧಾರಯಂತಿ ॥

ಪ್ರತಿಪದಾರ್ಥ

(ಯಃ) **ಅಗ್ನಿಃ**—ಯಾವ ಅಗ್ನಿಯು । **ಜಿಹ್ವಯಾ**—ತನ್ನ ಜ್ವಾಲೆಯಿಂದ । **ವೇಪಃ**—ಯಜ್ಞಕರ್ಮವನ್ನು । **ಪ್ರ ಭರತೇ**—ಧರಿಸಿ ನಿರ್ವಹಿಸುವನೋ । (ಮತ್ತು) **ವಯುನಾನಿ**—ಸ್ತೋತ್ರಗಳನ್ನು । **ಪೃಥಿವ್ಯಾಃ**—ಭೂಮಿಯ ರಕ್ಷಣೆಗಾಗಿ । **ಚೇತಸಾ**—ಅನುಗ್ರಹಾತ್ಮಕವಾದ ಬುದ್ಧಿಯಿಂದ । **ಪ್ರ (ಭರತೇ)**—ಸ್ವೀಕರಿಸಿ ದೇವತೆಗಳ ಬಳಿಗೆ ಒಯ್ಯುವನೋ । **ತಂ**—ಅಂತಹ ಅಗ್ನಿಯನ್ನು । **ಆಯವಃ**—ಮನುಷ್ಯರು । **ಶುಚಯಂತಂ**—ಪ್ರಕಾಶಿಸುವವನೂ । **ಪಾವಕಂ**—ಶುದ್ಧಿಕಾರಕನೂ । **ಮಂದ್ರಂ**—ಸ್ತುತ್ಯರ್ಹನೂ । **ಹೋತಾರಂ**—ಹೋಮನಿಷ್ಪಾದಕನೂ ಅಥವಾ ದೇವತೆಗಳನ್ನು ಆಹ್ವಾನಮಾಡುವವನೂ । **ಯಜಿಷ್ಠಂ**—ಪೂಜಾರ್ಹನೂ ಅಥವಾ ದೇವತೆಗಳನ್ನು ಪೂಜಿಸುವವನೂ ಆಗಿರುವನೆಂದು । **ದಧಿರೇ**—ಭಾವಿಸಿ ಧರಿಸುತ್ತಾರೆ.

ಭಾವಾರ್ಥ

ಯಾವ ಅಗ್ನಿಯು ತನ್ನ ಜ್ವಾಲೆಯಿಂದ ಯಜ್ಞಕರ್ಮವನ್ನು ನಿರ್ವಹಿಸಬಲ್ಲನೋ, ಯಾವ ಅಗ್ನಿಯು ಭೂಮಿಯ ರಕ್ಷಣೆಗಾಗಿ ಅನುಗ್ರಹಾತ್ಮಕವಾದ ಬುದ್ಧಿಯಿಂದ ಮನುಷ್ಯರ ಸ್ತೋತ್ರಗಳನ್ನು ದೇವತೆಗಳ ಬಳಿಗೆ ಒಯ್ಯುವನೋ ಅಂತಹ ಅಗ್ನಿಯನ್ನು ಮನುಷ್ಯರು, ಅತ್ಯಂತ ಪ್ರಕಾಶದಿಂದ ಬೆಳಗುವವನೂ, ಶುದ್ಧಿಕಾರಕನೂ, ಸ್ತುತ್ಯರ್ಹನೂ, ದೇವತೆಗಳನ್ನು ಆಹ್ವಾನಮಾಡುವವನೂ, ಪೂಜಾರ್ಹನೂ ಅಥವಾ ದೇವತೆಗಳನ್ನು ಮನುಷ್ಯರ ಪರವಾಗಿ ಪೂಜಿಸುವವನೂ ಆಗಿರುವನೆಂದು ಭಾವಿಸಿ ಧರಿಸುತ್ತಾರೆ.

Euglish Translation.

Agni who bears off (the oblation) with his tongue (of flames),who bears off the hymns of praise with(favourable) mind (for the preservation of the earth ; him men have appointed as the shining, purifying, exulting hotri the most entitled to worship.

संहितापाठः

द्यावा यमग्निं पृथिवी जनिष्टामापस्त्वष्टा भृगवो यं सहोभिः ।
ईळेन्यं प्रथमं मातरिश्वा देवास्तक्षुर्मनवे यजत्रं ॥ ९ ॥

पदपाठः

द्यावा । यं । अग्निं । पृथिवी इति । जनिष्टां । आपः । त्वष्टा । भृगवः । यं । सहःऽभिः
ईळेन्यं । प्रथमं । मातरिश्वा । देवाः । तक्षुः । मनवे । यजत्रं ॥ ९ ॥

सायणभाष्यं

यमग्निं द्यावापृथिवी व्यावापृथिव्यौ जनिष्टां अजनिषाताम् ॥ जनेर्लुङ् व्यत्ययेन परस्मैपदं ॥ आपश्च यमुदपादयन्वैद्युतरूपेण त्वष्टा च यमजनयत् भृगवश्च यं सहोभिर्बलैः स्तोत्रादिसाधनैर्लब्धवंतः । भृगवोऽविंदन्निति हि युक्तं । ऋ. १०-४६-३ । ईळेन्यं स्तुत्यं यं प्रथमं मातरिश्वा वायुरुदपादयत् अन्ये देवाश्च मनवे राज्ञे मनोरर्थाय यजत्रं यष्टव्यमग्निं तक्षुः । निष्पादितवंतः ॥

प्रतिपदार्थ

यं अग्निं—यावं अग्नियन्नु । द्यावापृथिवी—द्यावापृथिविगळु । जनिष्टां—उत्पन्नमाडिदवो । आपः च—उदकगळू । यं—यावं अग्नियन्नु विद्युद्रूपदिंद उत्पन्न माडिदवो । त्वष्टा—त्वष्टृवू उत्पन्नमाडिदनो । भृगवः—भृगुवंशद ऋषिगळु । सहोभिः—बाहुबलदिंदलू, स्तोत्रागळिंदलू उत्पन्नमाडिदरो । ईळेन्यं—स्तुत्यर्हनाद अ अग्नियन्नु । मातरिश्वा—मातरिश्वनु (वायुवु) । प्रथमं—एल्लरिगिंतलू मोदलु पडिदनु । देवाः (च)—देवतेगळू कूड । मनवे—मनुवेंब राजर्षिगागि । यजत्रं—यज्ञार्हनाद अग्नियन्नु । तक्षुः—उत्पन्नमाडि पडिदरु.

ಭಾವಾರ್ಥ

ಯಾವ ಅಗ್ನಿಯನ್ನು ದ್ಯಾವಾಪೃಥಿವಿಗಳು ಉತ್ಪನ್ನಮಾಡಿದವೋ, ಯಾವ ಅಗ್ನಿಯನ್ನು ಉದಕಗಳು ವಿದ್ಯುದ್ರೂಪದಿಂದ ಉತ್ಪನ್ನಮಾಡಿದವೋ, ತ್ವಷ್ಟೃವೂ, ಭೃಗುಋಷಿಗಳೂ ಸಹ ಶಕ್ತಿಯಿಂದಲೂ, ಸ್ತೋತ್ರಾದಿಪಠನದಿಂದಲೂ ಉತ್ಪನ್ನಮಾಡಿ ಪಡೆದರೋ ಅಂತಹ ಅಗ್ನಿಯನ್ನು ಮಾತರಿಶ್ವನೇ ಮೊದಲು ಕಂಡು ಪಡೆದನು. ದೇವತೆಗಳೂ ಸಹ ಆ ಅಗ್ನಿಯನ್ನು ಮನುವೆಂಬ ರಾಜರ್ಷಿಗಾಗಿ ಉತ್ಪನ್ನಮಾಡಿ ಪಡೆದರು.

English Translation

Agni whom heaven and earth engendered, (whom) the waters and Twashtri, ane the Brighus by their powers (begot); the adorable one, whom Matarishwa first and the gods fabricated as the object of worship for Manu.

ಸಂಹಿತಾಪಾಠಃ

ಯಂ ತ್ವಾ ದೇವಾ ದಧಿರೇ ಹವ್ಯವಾಹಂ ಪುರುಸ್ಪೃಹೋ ಮಾನುಷಾಸೋ ಯಜತ್ರಂ ।
ಸ ಯಾಮನ್ನಗ್ನೇ ಸ್ತುವತೇ ವಯೋ ಧಾಃ ಪ್ರ ದೇವಯನ್ಯಶಸಃ ಸಂ ಹಿ ಪೂರ್ವೀಃ ॥ ೧೦ ॥

ಪದಪಾಠಃ

ಯಂ । ತ್ವಾ । ದೇವಾಃ । ದಧಿರೇ । ಹವ್ಯವಾಹಂ । ಪುರುಸ್ಪೃಹಃ । ಮಾನುಷಾಸಃ । ಯಜತ್ರಂ ।
ಸಃ । ಯಾಮನ್ । ಅಗ್ನೇ । ಸ್ತುವತೇ । ವಯಃ । ಧಾಃ । ಪ್ರ । ದೇವಯನ್ । ಯಶಸಃ । ಸಂ । ಹಿ ।
ಪೂರ್ವೀಃ ॥ ೧೦ ॥

ಸಾಯಣಭಾಷ್ಯಂ

ಹೇ ಅಗ್ನೇ ಹವ್ಯವಾಹಂ ಯಂ ತ್ವಾ ತ್ವಾಂ ದೇವಾ ದಧಿರೇ ಧಾರಿತವಂತಃ ಮಾನುಷಾಸೋ ಮನುಷ್ಯಾಶ್ಚ ಪುರುಸ್ಪೃಹೋ ಬಹುಕಾಮಾನ್ ಸ್ಪೃಹಯಂತೋ ಯಜತ್ರಂ ಯಷ್ಟವ್ಯಂ ದಧಿರೇ ಧಾರಿತವಂತಃ ಹೇ ಅಗ್ನೇ ಸ ತ್ವಂ ಯಾಮನ್ ಯಾಮನಿ ಯಜ್ಞೇ ಸ್ತುವತೇ ಮಹ್ಯಂ ವಯೋಽನ್ನಂ ಧಾಃ । ದೇಹಿ । ಹೇ ಅಗ್ನೇ ತ್ವತ್ತೋ ದೇವಯನ್ ದೇವಕಾಮೋ ಯಜಮಾನಃ ಪೂರ್ವೀರ್ಬಹ್ವೀರ್ಬಹೂನಿ ಯಶಸೋ ಯಶಾಂಸಿ ಸಂ ಹೀತ್ಯುಪಸರ್ಗಶ್ರುತೇರ್ಯೋಗ್ಯಕ್ರಿಯಾಧ್ಯಾಹಾರಃ । ಸಂಪ್ರಾಪ್ನೋತಿ ಖಲು ॥

ಪ್ರತಿಪದಾರ್ಥ

(ಎಲೈ ಅಗ್ನಿಯೇ) **ಯಂ ತ್ವಾ**—ಯಾವ ನಿನ್ನನ್ನು । **ದೇವಾಃ**—ದೇವತೆಗಳು । **ಹವ್ಯವಾಹಂ**—ದೇವತೆಗಳಿಗೆ ಹವ್ಯವಾಹಕನನ್ನಾಗಿ । **ದಧಿರೇ**—ನಿಯಮಿಸಿದರೋ। **ಮಾನುಷಾಸಃ**—ಮನುಷ್ಯರೂ ಸಹ । **ಪುರಸ್ಪೃಹಃ**—ಬಹಳವಾದ ಅಭೀಷ್ಟಗಳನ್ನು ಬಯಸುವವರಾಗಿ । **ಯಜಿಷ್ಠಂ**—ಯಜ್ಞಾರ್ಹನಾದ ನಿನ್ನನ್ನು । **ದಧಿರೇ**—ಧರಿಸಿದರೋ । **ಅಗ್ನೇ**—ಎಲೈ ಅಗ್ನಿಯೇ । **ಸಃ**—ಅಂತಹ ನೀನು । **ಯಾಮನ್**—ಯಜ್ಞದಲ್ಲಿ । **ಸ್ತುವತೇ**—ಸ್ತೋತ್ರಮಾಡುವ ನನಗಾಗಿ । **ವಯಃ**—ಅನ್ನವನ್ನು । **ಧಾಃ**—ಕೊಡು । **ದೇವಯನ್**—ದೇವತೆಗಳನ್ನಿಚ್ಛಿಸುವ ಯಜಮಾನನೂ ಸಹ । **ಪೂರ್ವೀಃ**—ಬಹಳವಾದ । **ಯಶಸಃ**—ಕೀರ್ತಿಗಳನ್ನು । **ಸಂ ಹಿ**—ನಿನ್ನ ಮೂಲಕವಾಗಿ ಪಡೆಯುತ್ತಾನೆ.

ಭಾವಾರ್ಥ

ಎಲೈ ಅಗ್ನಿಯೇ, ಯಾವ ನಿನ್ನನ್ನು ದೇವತೆಗಳು ತಮಗೆ ಹವಿರ್ವಾಹಕನನ್ನಾಗಿ ನಿಯಮಿಸಿದರೋ ಮನುಷ್ಯರೂ ಸಹ ಯಜ್ಞಾರ್ಹನಾದ ನಿನ್ನನ್ನು ಬಹಳವಾದ ಅಭೀಷ್ಟಪ್ರಾಪ್ತಿಗಾಗಿ ಯಜ್ಞಾದಿಗಳಲ್ಲಿ ಧರಿಸಿದರೋ ಅಂತಹ ನೀನು ಯಜ್ಞದಲ್ಲಿ ನಿನ್ನನ್ನು ಸ್ತೋತ್ರಮಾಡುತ್ತಿರುವ ನನಗಾಗಿ ಅನ್ನವನ್ನು ಕೊಡು. ದೇವತೆಗಳನ್ನು ಪೂಜಿಸಲಿಚ್ಛಿಸುವ ಯಜಮಾನನೂ ನಿನ್ನಿಂದಲೇ ಬಹಳವಾದ ಯಶಸ್ಸನ್ನು ಪಡೆಯುತ್ತಾನೆ.

English Translation

You, whom the gods appointed as the bearer of oblations, whom men, desiring manifold blessings, regard as the object of worship Agni, bestow food upon him who praises you at the sacrifice; for the devout worshipper verily obtains great renown.

ನಲವತ್ತೇಳನೆಯ ಸೂಕ್ತ

ಸಾಯಣಭಾಷ್ಯಂ

ಜಗೃಭ್ಮಾ ತ ಇತ್ಯೇಷ್ಟರ್ಚಂ ಪಂಚಮಂ ಸೂಕ್ತಮಾಂಗಿರಸಸ್ಯ ಸಪ್ತಗುನಾಮ್ನ ಆರ್ಷಂ ತ್ರೈಷ್ಟುಭಂ । ವಿಕುಂಠಾ ನಾಮಾಸುರಸ್ತ್ರೀ । ಸಾ ಚೇಂದ್ರಸದೃಶಂ ಪುತ್ರಂ ಕಾಮಯಮಾನಾ ಕೃಚ್ಛ್ರ-ಚಾಂದ್ರಾಯಣಾದಿಕಂ ತಪಸ್ತೇಪೇ । ಮತ್ಸದೃಶೋಽನ್ಯಃ ಕಶ್ಚಿನ್ಮಾ ಜನಿಷ್ಯೇತಿ ಬುದ್ಧ್ವೇಂದ್ರ ಏವ ತೇಸ್ಯಾಃ ಪುತ್ರೋಽಜಾಯತ । ತಾದೃಶೋ ವೈಕುಂಠ ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಜಗೃಭ್ಮಾಷ್ಟೌ ಸಪ್ತಗುರ್ವೈಕುಂಠಮಿಂದ್ರಂ ತುಷ್ಟಾವೇತ್ಯಾದಿ ॥ ಗತೋ ವಿನಿಯೋಗಃ ॥

ಅನುವಾದವು--**ಜಗೃಭ್ಮಾ ತೇ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವುವು, ಈ ಸೂಕ್ತಕ್ಕೆ ಆಂಗೀರಸಗೋತ್ರದ ಸಪ್ತಗು ಎಂಬುವನು ಋಷಿಯು. ತ್ರಿಷ್ಟುಪ್ ಛಂದಸ್ಸು. ಪೂರ್ವದಲ್ಲಿ ವಿಕುಂಠಾ ಎಂಬ ಓರ್ವ ಅಸುರ ಸ್ತ್ರೀಯಿದ್ದಳು. ಆವಳು ತನಗೆ ಇಂದ್ರನಿಗೆ ಸಮಾನನಾದ ಪುತ್ರನು ಜನಿಸಬೇಕೆಂದು ಅಪೇಕ್ಷಿಸಿ ಅದಕ್ಕಾಗಿ ಕೃಚ್ಛ್ರಚಾಂದ್ರಾಯಣಾದಿ ನಿಯಮಗಳನ್ನಾಚರಿಸುತ್ತ ತಪಸ್ಸನ್ನು ಮಾಡಿದಳು. ತನಗೆ ಸಮಾನವಾದ ಬೇರೊಬ್ಬನು ಜನಿಸಬಾರದೆಂದು ಇಂದ್ರನು ಯೋಚಿಸಿ ತಾನೇ ಆ ಅಸುರ ಸ್ತ್ರೀಯಲ್ಲಿ ಪುತ್ರನಾಗಿ ಜನಿಸಿದನು. ಈ ಪುತ್ರನೇ ವೈಕುಂಠಇಂದ್ರನೆಂದು ಪ್ರಸಿದ್ಧನಾದನು ಇವನೇ ಈ ಸೂಕ್ತಕ್ಕೆ ದೇವತೆಯು. ಅನುಕ್ರಮಣಿಕೆಯಲ್ಲಿ **ಜಗೃಭ್ಮಾಷ್ಟೌ ಸಪ್ತಗುರ್ವೈಕುಂಠಮಿಂದ್ರಂ ತುಷ್ಟಾವ** ಎಂದು ಹೇಳಿರುವುದು

ಸೂಕ್ತ—೪೭

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೪೭ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೩, ೪ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೮

ಋಷಿಃ—ಸಪ್ತಗುಃ ॥
ದೇವತಾ—ಇಂದ್ರೋ ಹೈಕುಂಠಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಜಗೃಭ್ಮಾ ತೇ ದಕ್ಷಿಣಮಿಂದ್ರ ಹಸ್ತಂ ವಸೂಯವೋ ವಸುಪತೇ ವಸೂನಾಂ ।
ವಿದ್ಮಾ ಹಿ ತ್ವಾ ಗೋಪತಿಂ ಶೂರ ಗೋನಾಮಸ್ಮಭ್ಯಂ ಚಿತ್ರಂ ವೃಷಣಂ
ರಯಿಂ ದಾಃ ॥ ೧ ॥

ಪದಪಾಠಃ

ಜಗೃಭ್ಮ । ತೇ । ದಕ್ಷಿಣಂ । ಇಂದ್ರ । ಹಸ್ತಂ । ವಸುಯವಃ । ವಸುಪತೇ । ವಸೂನಾಂ ॥
ವಿದ್ಮ । ಹಿ । ತ್ವಾ । ಗೋಪತಿಂ । ಶೂರ । ಗೋನಾಂ । ಅಸ್ಮಭ್ಯಂ । ಚಿತ್ರಂ । ವೃಷಣಂ । ರಯಿಂ । ದಾಃ ॥

ಸಾಯಣಭಾಷ್ಯಂ

ವಸೂನಾಂ ವಸುಪತೇ ಬಹೂನಾಂ ಧನಾನಾಂ ಸ್ವಾಮಿನ್ನಿಂದ್ರ ತೇ ತವ ದಕ್ಷಿಣಂ ಹಸ್ತಂ ವಸೂಯವೋ ವಸುಕಾಮಾ ವಯಂ ಜಗೃಭ್ಮ ಗೃಹ್ಣೀಮಃ । ಯಥಾ ಬಹುಪ್ರದಸ್ಯಾರ್ಥಿನೋ ಮಹ್ಯಮದತ್ತ್ವಾ ನ ಗಂತವ್ಯಮಿತಿ ಹಸ್ತಂ ಗೃಹ್ಣಂತಿ ತದ್ವತ್ । ಹೇ ಶೂರ ವಿಕ್ರಾಂತೇಂದ್ರ ತ್ವಾ ತ್ವಾಂ ಗೋನಾಂ ಗೋಪತಿಂ । ಅತ್ರ ವೃತ್ತ್ಯವೃತ್ತಿಭ್ಯಾಂ ಸ್ವಾಮಿತ್ವಂ ಬಹುತ್ವಂ ಚ ಪ್ರತಿಪಾದ್ಯತೇ । ಬಹ್ವೀನಾಂ ಗವಾಂ ಗೋಪತಿಂ ವಿದ್ಮ । ಜಾನೀಮಃ । ಅತೋಽಸ್ಮಭ್ಯಂ ಚಿತ್ರಂ ಚಾಯನೀಯಂ ವೃಷಣಂ ವರ್ಷಕಂ ರಯಿಂ ಧನಂ ದಾಃ । ದೇಹಿ ॥

ಪ್ರತಿಪದಾರ್ಥ

ವಸೂನಾಂ—ಬಹಳವಾದ ಧನಗಳಿಗೆ । **ವಸುಪತೇ**—ಒಡೆಯನಾದ ಎಲೈ ಇಂದ್ರನೇ । **ತೇ**—ನಿನ್ನ । **ದಕ್ಷಿಣಂ ಹಸ್ತಂ**—ಬಲಗೈಯನ್ನು । **ವಸೂವಯಃ**—ಧನವನ್ನು ಬಯಸುವ ನಾವು । **ಜಗೃಭ್ಮ**—ಹಿಡಿದುಕೊಳ್ಳುತ್ತೇವೆ ! **ಶೂರ**—ಪರಾಕ್ರಮಿಯಾದ ಎಲೈ ಎಂದ್ರನೇ । **ತ್ವಾ**—ನಿನ್ನನ್ನು । **ಗೋನಾಂ**—ಅನೇಕ ಗೋವುಗಳಿಗೆ । **ಗೋಪತಿಂ**—ಒಡೆಯನೆಂಬುದಾಗಿ । **ವಿದ್ಮ**—ತಿಳಿದಿದ್ದೇವೆ । (ಆದ್ದರಿಂದ) **ಅಸ್ಮಭ್ಯಂ**—ನಮಗೆ । **ಚಿತ್ರಂ**—ನಾನಾ ವಿಧವಾದುದೂ । **ವೃಷಣಂ**—ವೃಷ್ಟಿಪ್ರದವಾದುದೂ ಆದ । **ರಯಿಂ**—ಧನವನ್ನು । **ದಾಃ**—ಕೊಡು.

ಭಾವಾರ್ಥ

ಬಹಳವಾದ ಧನಗಳಿಗೆ ಒಡೆಯನಾದ ಎಲೈ ಇಂದ್ರನೇ, ಧನವನ್ನು ಬಯಸುವ ನಾವು (ನಮಗೆ ಧನವನ್ನು ಕೊಡದೆ ಹಾಗೆಯೇ ಹೋಗಕೂಡದೆಂದು) ನಿನ್ನ ಬಲಗೈಯನ್ನು ಹಿಡಿದುಕೊಳ್ಳುತ್ತೇವೆ. ಪರಾಕ್ರಮಿಯಾದ ಎಲೈ ಇಂದ್ರನೇ, ನಿನ್ನನ್ನು ಅನೇಕ ಗೋವುಗಳಿಗೆ ಒಡೆಯನೆಂದು ನಾವು ತಿಳಿದಿದ್ದೇವೆ. ಆದ್ದರಿಂದ ನಮಗೆ ನಾನಾವಿಧ ವಾದುದೂ ಇಷ್ಟಾರ್ಥಪ್ರದವಾದುದೂ ಆದ ಧನವನ್ನು ಕೊಡು.

English Translation

Indra, lord of abundant wealth, we desiring wealth, seize hold of your right hand ; we know you hero, lord of abundent cattle, give us various fertilizing riches.

ಸಂಹಿತಾಪಾಠಃ

स्वायुधं स्ववशं सुनीथं चतुःसमुद्रं धरुणं रयीणाम् ।
चर्कृत्यं शंस्यं भूरिवारमस्मभ्यं चित्रं वृषणं रयिं दाः ॥

ಪದಪಾಠಃ

सुऽआयुधं । सुऽअवसं । सुऽनीथं । चतुःऽसमुद्रं । धरुणं । रयीणाम् ।
चर्कृत्यं । शंसं । भूरिऽवारं । अस्मभ्यं । चित्रं । वृषणं । रयिं । दाः ॥ ७ ॥

ಸಾಯಣಭಾಷ್ಯಂ

स्वायुधं शोभनवज्रादन्यायुधं **स्ववसं** शोभनरक्षणं सुगमनं वा **सुनीथं** सुनयनं **चतुःसमुद्रं** चतुरः समुद्रान्यो यशसा व्याप्नोति तं **धरुणं** धारकं **रयीणां** । रयिणाम् । धनानाम् । **चर्कृत्यं** पुनःपुनः कर्तव्यं **शंस्यं** स्तुत्यं **भूरिवारं** भूरिणां दुःखानां वारकं बहुभिर्वरणीयं वा त्वां विद्मेति शेषः । **तादृशोऽस्मभ्यमित्यादि** पूर्ववत् । यद्वा । हे इंद्र उक्तगुणविशिष्टं **पुत्राख्यं रयिं दाः** । देहि ॥

ಪ್ರತಿಪದಾರ್ಥ

(ಎಲೈ ಇಂದ್ರನೇ ನಾವು) **स्वायुधं**—ಉತ್ತಮವಾದ ವಜ್ರಾಯುಧವುಳ್ಳವನೂ । **स्ववसं**—ಉತ್ತಮವಾದ ರಕ್ಷಣಪ್ರದನೆಂದೂ । **सुनीथं**—ಉತ್ತಮವಾದ ಮಾರ್ಗದರ್ಶಕನೆಂದೂ । **चतुःसमुद्रं**—ನಾಲ್ಕು ಸಮುದ್ರಪರ್ಯಂತ ಹರಡಿರುವ ಕೀರ್ತಿಯುಳ್ಳವನೂ । **रयीणाम्**—ಧನಗಳ । **धरुणं**—ಧಾರಕನೆಂದೂ । **चर्कृत्यं**—ಪುನಃಪುನಃ ಮಾಡಲ್ಪಡುವ । **शंस्यं**—ಸ್ತುತ್ಯರ್ಹನೆಂದೂ । **भूरिवारं**—ದುಃಖಗಳನ್ನು ಪರಿಹರಿಸುವವನೆಂದೂ ಅಥವಾ ಅನೇಕರಿಂದ ಅಪೇಕ್ಷಿಸಲ್ಪಡುವವನೆಂದೂ । (**त्वां विद्म**—ನಾವು ತಿಳಿದಿದ್ದೇವೆ ।

ಎಲೈ ಇಂದ್ರನೇ) **ಅಸ್ಮಭ್ಯಂ**—ನಮಗೆ । **ಚಿತ್ರಂ**—ಅನೇಕ ವಿಧವಾದುದೂ । **ವೃಷಣಂ**—ಪುತ್ರಾದಿ ಸಂತಾನಾತ್ಮಕವಾದುದೂ ಆದ । **ರಯಿಂ**—ಧನವನ್ನು । **ದಾಃ**—ಕೊಡು.

ಭಾವಾರ್ಥ

ಎಲೈ ಇಂದ್ರನೇ, ನೀನು ಉತ್ತಮವಾದ ವಜ್ರಾಯುಧವುಳ್ಳವನೆಂದೂ, ಉತ್ತಮವಾದ ರಕ್ಷಣೆಯನ್ನು ನೀಡುವವನೆಂದೂ, ಉತ್ತಮ ಮಾರ್ಗದರ್ಶಕನೆಂದೂ, ನಾಲ್ಕು ಸಮುದ್ರಪರ್ಯಂತ ಹರಡಿದ ಕೀರ್ತಿಶಾಲಿಯೆಂದೂ, ಧನಗಳ ಧಾರಕನೆಂದೂ ಪುನಃಪುನಃ ಸ್ತುತಿಗೆ ಪಾತ್ರನೆಂದೂ, ದುಃಖಪರಿಹಾರಕನೆಂದೂ ಅಥವಾ ಬಹುಜನರ ಆದರಕ್ಕೆ ಪಾತ್ರನೆಂದೂ ನಾವು ತಿಳಿದಿದ್ದೇವೆ. ಆದ್ದರಿಂದ ಎಲೈ ಇಂದ್ರನೇ, ನಮಗೆ ನಾನಾ ವಿಧವಾದ ಧನವನ್ನೂ ಪುತ್ರಾದಿ ಸಂತತಿಯನ್ನೂ ಕೊಡು.

English Translation

(We know you to be) well armed, a sure protector, a safe guide, (renowned throughout) the four oceans, the depositary of riches, deserving of repeated worship. adorable, the preventer of many (ills): grant us various fertilizing riches.

ಸಂಹಿತಾಪಾಠಃ

ಸುಬ್ರಹ್ಮಾಣಂ ದೇವವಂತಂ ಬೃಹಂತಮುರುಂ ಗಭೀರಂ ಪೃಥುಬುಧ್ನಮಿಂದ್ರ
ಶ್ರುತಋಷಿಮುಗ್ರಮಭಿಮಾತಿಷಾಹಮಸ್ಮಭ್ಯಂ ಚಿತ್ರಂ ವೃಷಣಂ ರಯಿಂ
ದಾಃ ॥ ೩ ॥

ಪದಪಾಠಃ

ಸು೪ಬ್ರಹ್ಮಾಣಂ । ದೇವ೪ವಂತಂ । ಬೃಹಂತಂ । ಉರುಂ । ಗಭೀರಂ । ಪೃಥು೪ಬುಧ್ನಂ । ಇಂದ್ರ । ಶ್ರುತ೪ಋಷಿಂ । ಉಗ್ರಂ । ಅಭಿಮಾತಿ೪ಸಹಂ । ಅಸ್ಮಭ್ಯಂ । ಚಿತ್ರಂ । ವೃಷಣಂ । ರಯಿಂ । ದಾಃ ॥ ೩ ॥

ಸಾಯಣಭಾಷ್ಯಂ

ಹೇ ಇಂದ್ರ ತ್ವಂ ಸುಬ್ರಹ್ಮಾಣಂ । ಬ್ರಹ್ಮ ಪರಿವೃಢಂ ಸ್ತುತಿಲಕ್ಷಣಂ ಕರ್ಮ । ಶೋಭನಸ್ತುತಿಕ-ಮಿತ್ಯರ್ಥಃ । ದೇವವಂತಂ ಬೃಹಂತಂ ಮಹಾಂತಮುರುಂ ವಿಸ್ತೀರ್ಣಂ ಗಂಭೀರಮಸುರಾದಿಭಿರಗಮ್ಯಂ ಪೃಥುಬುಧ್ನಂ ವಿಸ್ತೃತಮೂಲಂ ಶ್ರುತಋಷಿಂ ಶ್ರುತಾ ಋಷಯೋ ಯೇನ ತಾದೃಶಮೃಷೀಣಾಂ ಖ್ಯಾಪ-ಯಿತಾರಂ ಪ್ರಥಿತಜ್ಞಾನಂ ವೋಗ್ರಮುದ್ಗೂರ್ಣಬಲಂ ಅತ ಏವಾಭಿಮಾತಿಷಾಹಮಭಿಮಾತೀನಾಂ ಶತ್ರೂ-ಣಾಮಭಿಭವಿತಾರಂ ಹಂತಾರಮಸ್ಮಭ್ಯಂ ಚಿತ್ರಂ ಪೂಜ್ಯಂ ವೃಷಣಂ ವರ್ಷಕಂ ಪುತ್ರಂ ರಯಿಂ ಧನಂ ದಾಃ । ದೇಹಿ । ಅಥವಾ ವಿಶೇಷಣವಿಶೇಷ್ಯಭಾವಃ । ಉಕ್ತಲಕ್ಷಣಂ ಪುತ್ರಾಖ್ಯಂ ರಯಿಂ ದಾಃ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ, ನೀನು । **ಸುಬ್ರಹ್ಮಾಣಂ**—ಬ್ರಹ್ಮಸ್ತುತಿರೂಪವಾದ ಸುಬ್ರಹ್ಮಣ್ಯವೆಂಬ ಕರ್ಮದಿಂದ ಪ್ರಶಂಸಿತನಾದವನೂ । **ದೇವಯಂತಂ**—ದೇವತೆಗಳಿಂದ ಸಹಿತನಾದವನೂ । **ಬೃಹಂತಂ**—ಮಹತ್ಸ್ವರೂಪವುಳ್ಳವನೂ । **ಉರುಂ**—ವಿಸ್ತೃತವಾದ ಶರೀರವುಳ್ಳವನೂ । **ಗಭೀರಂ**—ಅಸುರಾದಿಗಳಿಂದ ಜಯಿಸಲಸಾಧ್ಯನೂ । **ಪೃಥುಬುಧ್ನಂ**—ವಿಸ್ತಾರವಾದ ಮೂಲವುಳ್ಳವನೂ । **ಶ್ರುತಯುಷಿಂ**—ಋಷಿಗಳನ್ನು ತಿಳಿದವನೂ ಅಥವಾ ಉತ್ತಮ ಜ್ಞಾನವುಳ್ಳವನೂ । **ಉಗ್ರಂ**— ಹೆಚ್ಚಾದ ಬಲವುಳ್ಳವನೂ । **ಅಭಿಮಾತಿಷಾಹಂ**—ಶತ್ರುಗಳನ್ನು ಸೋಲಿಸುವವನೂ ಆದವನೆಂದು ನಾವು ತಿಳಿದಿದ್ದೇವೆ. ಆದ್ದರಿಂದ । **ಅಸ್ಮಭ್ಯಂ**—ನಮಗೆ । **ಚಿತ್ರಂ**—ಪೂಜ್ಯವಾದುದೂ । **ವೃಷಣಂ**—ಇಷ್ಟಾರ್ಥಪ್ರದವಾದುದೂ ಆದ । **ರಯಿಂ**—ಧನವನ್ನು । **ದಾಃ**—ಕೊಡು.

ಭಾವಾರ್ಥ

ಎಲೈ ಇಂದ್ರನೇ, ನೀನು ಬ್ರಹ್ಮಸ್ತುತಿರೂಪವಾದ ಸ್ತೋತ್ರಕ್ಕೆ ಪಾತ್ರನಾದವನೆಂದೂ, ದೇವತೆಗಳೊಡನಿರುವವನೆಂದೂ, ಮಹತ್ಸ್ವರೂಪವುಳ್ಳವನೆಂದೂ, ವಿಸ್ತೃತಶರೀರವುಳ್ಳವನೆಂದೂ, ಅಸುರಾದಿಗಳಿಂದ ಅಜೇಯನೆಂದೂ, ವಿಸ್ತಾರವಾದ ಮೂಲವುಳ್ಳವನೆಂದೂ, ಋಷಿಗಳನ್ನು ತಿಳಿದವನೆಂದೂ ಅಥವಾ ಉತ್ತಮಜ್ಞಾನಿಯೆಂದೂ, ಹೆಚ್ಚಾದ ಬಲವುಳ್ಳವನೆಂದೂ, ಆದುದರಿಂದಲೇ ಶತ್ರುಗಳನ್ನು ಸೋಲಿಸುವವನೆಂದೂ ನಾವು ತಿಳಿದಿದ್ದೇವೆ. ಆದ್ದರಿಂದ ಎಲೈ ಇಂದ್ರನೇ, ನೀನು ನಮಗೆ ಪೂಜ್ಯವಾದುದೂ, ಇಷ್ಟಾರ್ಥಪ್ರದವಾದುದೂ ಆದ ಧನವನ್ನು ಕೊಡು.

English Translation

Grant us, Indra, various fertilizing riches, the fit object of prayer, honoured by the gods, large, vast, profound, wide-rooted, by means of which the Rishis are heared, fierce, the subduer of your foes.

ಸಂಹಿತಾಪಾಠಃ

ಸನದ್ವಾಜಂ ವಿಪ್ರವೀರಂ ತರುತ್ರಂ ಧನಸ್ಪೃತಂ ಶೂಶುವಾಂಸಂ ಸುದಕ್ಷಂ ।
ದಸ್ಯುಹನಂ ಪೂರ್ಭಿದಮಿಂದ್ರ ಸತ್ಯಮಸ್ಮಭ್ಯಂ ಚಿತ್ರಂ ವೃಷಣಂ ರಯಿಂ
ದಾಃ ॥ ೪ ॥

ಪದಪಾಠಃ

ಸನತ್ಽವಾಜಂ । ವಿಪ್ರ್ಽವೀರಂ । ತರುತ್ರಂ । ಧನ್ಽಸ್ಪೃತಂ । ಶೂಶುವ್ಽವಾಂಸಂ । ಸು೨ದಕ್ಷಂ ॥
ದಸ್ಯು೨ಹನಂ । ಪೂಃ೨ಭಿದಂ । ಇಂದ್ರ । ಸತ್ಯಂ । ಅಸ್ಮಭ್ಯಂ । ಚಿತ್ರಂ । ವೃಷಣಂ । ರಯಿಂ । ದಾಃ ॥೪॥

ಸಾಯಣಭಾಷ್ಯಂ

ಸನದ್ವಾಜಂ ಲಬ್ಧಾನ್ನಂ ವಿಪ್ರವೀರಂ ಮೇಧಾವಿನಂ ಪುತ್ರಂ ತರುತ್ರಂ ತಾರಕಂ ಧನಸ್ಪೃತಂ ಧನಾನಾಂ ಪೂರಕಂ ಸ್ಪಷ್ಟಾರಂ ವಾ ॥ ಸ್ಪೃಣತೇಃ ಸ್ಪೃಶತೇರ್ವೋತ್ತರಪದಂ ॥ ಶೂಶುವಾಂಸಂ

ವರ್ಧಮಾನಂ ಸುದಕ್ಷಂ ಶೋಭನಬಲಂ ದಸ್ಯುಹನಂ ಶತ್ರೂಣಾಂ ಹಂತಾರಂ ಪೂರ್ಭಿದಂ ಶತ್ರೂಣಾಂ ಪುರಾಂ ಭೇತ್ತಾರಂ ಸತ್ಯಂ ಸತ್ಯಕರ್ಮಾಣಂ । ಶಿಷ್ಟಮುಕ್ತಂ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ ನೀನು । **ಸನದ್ವಾಜಂ**—ಅನ್ನಾದ್ಯಾಹಾರಗಳನ್ನು ಹೊಂದಿರುವವನೆಂದೂ । **ವಿಪ್ರವೀರಂ**—ಮೇಧಾವಿಯಾದ ಪುತ್ರನುಳ್ಳವನೆಂದೂ । **ತರುತ್ರಂ**—ದುಃಖಾದಿಗಳಿಂದ ದಾಟಿಸುವವನೆಂದೂ । **ಧನಸ್ಪೃತಂ**—ಧನಗಳನ್ನು ತುಂಬಿಕೊಂಡಿರುವವನೆಂದೂ। **ಶೂಶುವಾಸಂ** —ವೃದ್ಧಿಯನ್ನೈದುವವನೆಂದೂ। **ಸುದಕ್ಷಂ** —ಉತ್ತಮ ಬಲವುಳ್ಳವನೆಂದೂ । **ದಸ್ಯುಹನಂ**—ಶತ್ರುಗಳನ್ನು ಕೊಲ್ಲುವವನೆಂದೂ। **ಪೂರ್ಭಿದಂ**—ಶತ್ರುಗಳಪಟ್ಟಣಗಳನ್ನು ಸೀಳಿಹಾಕುವವನೆಂದೂ । **ಸತ್ಯಂ**—ಸತ್ಯಸ್ವಭಾವದವನೆಂದೂ ತಿಳಿದಿದ್ದೇವೆ. ಆದ್ದರಿಂದ । **ಅಸ್ಮಭ್ಯಂ**—ನಮಗೆ । **ಚಿತ್ರಂ**—ನಾನಾವಿಧವಾದುದೂ । **ವೃಷಣಂ**—ಇಷ್ಟಾರ್ಥಪ್ರದವಾದುದೂ ಆದ । **ರಯಿಂ**—ಧನವನ್ನು । **ದಾಃ**—ಕೊಡು.

ಭಾವಾರ್ಥ

ಎಲೈ ಇಂದ್ರನೇ, ನೀನು ಆನ್ನಾದ್ಯಾಹಾರಗಳನ್ನು ಹೊಂದಿರುವವನೆಂದೂ, ಮೇಧಾವಿಯಾದ ಪುತ್ರನುಳ್ಳವನೆಂದೂ, ದುಃಖಾದಿಗಳಿಂದ ಪಾರುಮಾಡುವವನೆಂದೂ, ಧನಗಳನ್ನು ಸ್ತೋತೃಗಳಿಗೆ ಒದಗಿಸಿಕೊಡುವವನೆಂದೂ, ವೃದ್ಧಿಕಾರಕನೆಂದೂ, ಶತ್ರುಗಳನ್ನು ಕೊಲ್ಲುವವನೆಂದೂ, ಶತ್ರುಗಳ ಪಟ್ಟಣಗಳನ್ನು ಧ್ವಂಸಮಾಡುವವನೆಂದೂ, ಸತ್ಯ ಸ್ವಭಾವದವನೆಂದೂ ನಾವು ತಿಳಿದಿದ್ದೇವೆ. ಆದ್ದರಿಂದ ಎಲೈ ಇಂದ್ರನೇ, ನೀನು ನಮಗೆ ನಾನಾ ವಿಧವಾದ ಇಷ್ಟಾರ್ಥವನ್ನು ಕೊಡುವ ಧನವನ್ನು ಕೊಡು.

English Translation

Grant us Indra, various fertilizing riches, dispensing food, comprising intelligent male offspring, the protector, filling men with wealth, the granter of increase, the very poweful, the slayer of the Dasyus, the destroyer of cities the observer of truth.

ಸಂಹಿತಾಪಾಠಃ

ಅಶ್ವಾವಂತಂ ರಥಿನಂ ವೀರವಂತಂ ಸಹಸ್ರಿಣಂ ಶತಿನಂ ವಾಜಮಿಂದ್ರ ।
ಭದ್ರವ್ರಾತಂ ವಿಪ್ರವೀರಂ ಸ್ವರ್ಷಾಮಸ್ಮಭ್ಯಂ ಚಿತ್ರಂ ವೃಷಣಂ ರಯಿಂ ದಾಃ

ಪದಪಾಠಃ

ಅಶ್ವವಂತಂ । ರಥಿನಂ । ವೀರವಂತಂ । ಸಹಸ್ರಿಣಂ । ಶತಿನಂ । ವಾಜಂ । ಇಂದ್ರ ।
ಭದ್ರವ್ರಾತಂ । ವಿಪ್ರವೀರಂ । ಸ್ವಃಸಾಂ । ಅಸ್ಮಭ್ಯಂ । ಚಿತ್ರಂ । ವೃಷಣಂ । ರಯಿಂ । ದಾಃ ॥

ಸಾಯಣಭಾಷ್ಯಂ

ಅಶ್ವಾವಂತಂ ಬಹುಭರಶ್ಚಿರುಪೇತಂ ರಥಿನಂ ರಥವಂತಂ ವೀರವಂತಂ ವೀರೈಃ ಪುರುಷೈರುಪೇತಂ ಸಹಸ್ರಿಣಂ ಸಹಸ್ರವಂತಂ ಶತಿನಂ ಶತವಂತಂ । ಅಸಂಖ್ಯಾತಗವಾದಿಯುಕ್ತಮಿತ್ಯರ್ಥಃ । ಭದ್ರವ್ರಾತಂ ಭದ್ರಗಣಂ ಕಲ್ಯಾಣೈಃ ಸೇವಕೈಃ ಪರಿವೃತಂ ವಿಪ್ರವೀರಂ ವಿಪ್ರೈರ್ವೀರೈಶ್ಚೋಪೇತಂ ಸ್ವರ್ವಾಂ ಸರ್ವಾಸ ಸಂಭಕ್ತಾರಂ ವಾಜಂ ಬಲವಂತಂ ಹೇ ಇಂದ್ರ । ಶಿಷ್ಟಮುಕ್ತಂ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ, ನೀನು । **ಅಶ್ವಾವಂತಂ**—ಅನೇಕ ಅಶ್ವಗಳುಳ್ಳವನೆಂದೂ । **ರಥಿನಂ**—ರಥವುಳ್ಳವನೆಂದೂ । **ವೀರವಂತಂ**—ವೀರರಾದಪುರುಷರಿಂದ ಕೂಡಿರುವವನೆಂದೂ । **ಸಹಸ್ರಿಣಂ ಶತಿನಂ**—ನೂರಾರು ಅಥವಾ ಸಾವಿರಾರು ಗೋಸಂಪತ್ತಿನಿಂದ ಯುಕ್ತನಾದವನೆಂದೂ । **ಭದ್ರವ್ರಾತಂ**—ಉತ್ತಮವಾದ ಸೇವಕರಿಂದ ಸೇವಿಸಲ್ಪಡುವವನೆಂದೂ । **ವಿಪ್ರವೀರಂ**—ಮೇಧಾವಿಗಳೂ, ಶೂರರೂ ಆದ ಪುರುಷರಿಂದ ಕೂಡಿರುವವನೆಂದೂ । **ಸ್ವರ್ವಾಂ**—ಸರ್ವಸಂಪತ್ತನ್ನು ಹೊಂದಿರುವವನೆಂದೂ । **ವಾಜಂ**—ಬಲಶಾಲಿಯೆಂದೂ ತಿಳಿದಿದ್ದೇನೆ. ಆದ್ದರಿಂದ । **ಅಸ್ಮಭ್ಯಂ**—ನಮಗೆ । **ಚಿತ್ರಂ**— ನಾನಾ ವಿಧವಾದುದೂ । **ವೃಷಣಂ**— ಇಷ್ಟಾರ್ಥಪ್ರದವಾದುದೂ ಆದ **ರಯಿಂ**—ಧನವನ್ನು । **ದಾಃ**—ಕೊಡು.

ಭಾವಾರ್ಥ

ಎಲೈ ಇಂದ್ರನೇ, ನಿನ್ನ ಬಳಿ ಅನೇಕ ಅಶ್ವಗಳು, ರಥ, ವೀರರಾದ ಪುರುಷರು, ನೂರಾರು ಅಥವಾ ಸಾವಿರಾರು ಗೋವುಗಳು, ಉತ್ತಮರಾದ ಸೇವಕಜನರು, ಮೇಧಾವಿಗಳಾದ ಶೂರರು. ಸರ್ವಸಂಪತ್ತು, ಬಲ ಇವುಗಳೆಲ್ಲವೂ ಇರುವುವೆಂದು ನಮಗೆ ತಿಳಿದಿದೆ. ಆದ್ದರಿಂದ ಎಲೈ ಇಂದ್ರನೇ ನೀನು ನಮಗೆ ಪೂಜ್ಯವೂ, ಇಷ್ಟಾರ್ಥಪ್ರದವೂ ಆದ ಧನವನ್ನು ಕೊಡು.

English Translation

Grant us, Indra, various fertilizing wealth, consisting of horses, of chariots, of valiant followers, of thousands, of hundreds (of cattle), surrouded by beautiful attendants, endowed with sages and heroes, the enjoyer of all (benefits).

ಸಂಹಿತಾಪಾಠಃ

ಪ್ರ ಸಪ್ತಗುಮ್ಮೃತಧೀತಿಂ ಸುಮೇಧಾಂ ಬೃಹಸ್ಪತಿಂ ಸುತಿರಚ್ಛಾ ಜಿಗಾತಿ ॥
ಯ ಆಂಗಿರಸೋ ನಮಸೋಪಸದ್ಯೋಽಸ್ಮಭ್ಯಂ ಚಿತ್ರಂ ವೃಷಣಂ ರಯಿಂ ದಾಃ ॥ ೬ ॥

ಪದಪಾಠಃ

ಪ್ರ । ಸಪ್ತ್ಯಗುಂ । ಋತಧೀತಿಂ । ಸುಮೇಧಾಂ । ಬೃಹಸ್ಪತಿಂ । ಮತಿಃ । ಅಚ್ಛ । ಜಿಗಾತಿ ॥

ಯಃ । ಆಂಗಿರಸಃ । ನಮಸಾ । ಉಪಸದ್ಯಃ । ಅಸ್ಮಭ್ಯಂ । ಚಿತ್ರಂ । ವೃಷಣಂ ರಯಿಂ । ದಾಃ ॥ ೬ ॥

ಸಾಯಣಭಾಷ್ಯಂ

ಸಪ್ತ್ಯಗುಂ ಮಾಂ ಮತಿಃ ಸ್ತುತಿರ್ದೇವವಿಷಯಾಚ್ಛಾ ಜಿಗಾತಿ । ಕೀದೃಷಂ ಸಪ್ತ್ಯಗುಂ । ಋತಧೀತಿಂ ಸತ್ಯಕರ್ಮಾಣಂ ಸುಮೇಧಾಂ ಶೋಭನಪ್ರಜ್ಞಂ ಬೃಹಸ್ಪತಿಂ ಬೃಹತೋ ಮಂತ್ರಸ್ಯ ಸ್ವಾಮಿನಂ । ಯಃ ಸಪ್ತ್ಯಗುರಾಂಗಿರಸೋಽಂಗಿರೋಗೋತ್ರೋತ್ಪನ್ನೋಽಹಂ ನಮಸಾ ನಮಸ್ಕಾರೇಣ ದೇವಾನುಪಸದ್ಯಃ । ಉಪಗತಃ । ಯದ್ವಾ । ನಮಸಾನ್ನೇನೋಪಸದ್ಯ ಉಪಸದನೀಯಃ । ದೇವೈರನುಗ್ರಾಹ್ಯ ಇತ್ಯರ್ಥಃ । ತಾದೃಶಾಯಾಸ್ಮಭ್ಯಂ ಮಹ್ಯಂ ಚಿತ್ರಂ ವೃಷಣಂ ರಯಿಂ ದಾಃ ॥

ಪ್ರತಿಪದಾರ್ಥ

ಋತಧೀತಿಂ—ಸತ್ಯಕರ್ಮಗಳನ್ನೇ ಮಾಡುವವನೂ । **ಸುಮೇಧಾಂ**—ಉತ್ತಮವಾದ ಜ್ಞಾನವನ್ನು ಹೊಂದಿರುವವನೂ । **ಬೃಹಸ್ಪತಿಂ**—ಅನೇಕ ಮಂತ್ರಗಳಿಗೆ ಸ್ವಾಮಿಯೂ ಎಂದರೆ ಅನೇಕ ಮಂತ್ರಗಳ ನಿರ್ಮಾಪಕನೂ ಆದ । **ಸಪ್ತ್ಯಗುಂ**—ಸಪ್ತಗು ಎಂಬ ಹೆಸರಿನ ನನ್ನನ್ನು । **ಮತಿಃ**—ದೇವತೆಗಳನ್ನು ಸ್ತುತಿಸಬೇಕೆಂಬ ಬುದ್ಧಿಯು । **ಅಚ್ಛ ಜಿಗಾತಿ**—ಬಂದು ಸೇರುತ್ತದೆ. **ಆಂಗಿರಸಃ**—ಅಂಗಿರಸಗೋತ್ರೋದ್ಭವನಾದ । **ಯಃ**—ಯಾವ ಸಪ್ತಗ ವೆಂಬ ನಾನು । **ನಮಸಾ**—ನಮಸ್ಕಾರಪೂರ್ವಕವಾಗಿ ಅಥವಾ ಹವಿಸ್ಸಿನಿಂದ ಯುಕ್ತನಾಗಿ । **ಉಪಸದ್ಯಃ**—ದೇವತೆಗಳನ್ನು ಸಮೀಪಿಸಿದ್ದೇನೆ । (ಆದ್ದರಿಂದ ಎಲೈ ಇಂದ್ರನೇ) **ಅಸ್ಮಭ್ಯಂ**—ನನಗೆ । **ಚಿತ್ರಂ**—ನಾನಾ ವಿಧವಾದುದೂ । **ವೃಷಣಂ**—ಇಷ್ಟಾರ್ಥಪ್ರದವಾದುದೂ ಆದ । **ರಯಿಂ**—ಧನವನ್ನು । **ದಾಃ**—ಕೊಡು.

ಭಾವಾರ್ಥ

ಸತ್ಯಕರ್ಮನಿರತನೂ, ಉತ್ತಮಜ್ಞಾನಿಯೂ, ಅನೇಕ ಮಂತ್ರಗಳಿಗೆ ಕರ್ತೃವೂ ಆದ ಸಪ್ತಗು ಎಂಬ ಋಷಿಯಾದ ನನಗೆ ದೇವತೆಗಳನ್ನು ಸ್ತುತಿಸಬೇಕೆಂಬ ಬುದ್ಧಿಯು ಹುಟ್ಟುತ್ತದೆ. ಆದ್ದರಿಂದ ಸಪ್ತಗು ಎಂಬ ಹೆಸರಿನ ನಾನು ನಮಸ್ಕಾರಪೂರ್ವಕವಾಗಿ ಹವಿರಾದಿಗಳೊಡನೆ ದೇವತೆಗಳನ್ನು ಸಮೀಪಿಸುತ್ತೇನೆ. ಎಲೈ ಇಂದ್ರನೇ, ಆಕರ್ಷವಾದುದೂ, ಇಷ್ಟಾರ್ಥಪ್ರದವಾದುದೂ ಆದ ಧನವನ್ನು ನಮಗೆ ಕೊಡು.

English Translation

The praise (adressed to the gods) comes to the presence of Saptagu, the observer of the truth, the intelligent, the lord of much (praise), who being of the family of Angiras, has approached (the gods) with oblations: (Indra), grant me various fertilizing riches.

ಸಂಹಿತಾಪಾಠಃ

ವನೀವಾನೋ ಮಮ ದೂತಾಸ ಇಂದ್ರಂ ಸ್ತೋಮಾಶ್ಚರಂತಿ ಸುಮತೀರಿಯಾನಾಃ ।
ಹೃದಿಸ್ಪೃಶೋ ಮನಸಾ ವಚ್ಯಮಾನಾ ಅಸ್ಮಭ್ಯಂ ಚಿತ್ರಂ ವೃಷಣಂ ರಯಿಂ ದಾಃ ॥ ೭ ॥

ಪದಪಾಠಃ

ವನೀವಾನಃ । ಮಮ । ದೂತಾಸಃ । ಇಂದ್ರಂ । ಸ್ತೋಮಾಃ । ಚರಂತಿ । ಸುಽಮತೀಃ । ಇಯಾನಾಃ ॥
ಹೃದಿಽಸ್ಪೃಶಃ । ಮನಸಾ । ವಚ್ಯಮಾನಾಃ । ಅಸ್ಮಭ್ಯಂ । ಚಿತ್ರಂ । ವೃಷಣಂ । ರಯಿಂ । ದಾಃ ॥ ೭ ॥

ಸಾಯಣಭಾಷ್ಯಂ

ವನೀವಾನೋ ವನನವಂತಃ ॥ ಛಂದಸೀವನಿಸಾವಿತಿ ಮತ್ವರ್ಥೀಯೋವನಿಸ್ ॥ ಮಮ ಸಪ್ತ-ಗೋದೂರ್ತಾಸೋ ದೂತಸದೃಶಾಃ ದೂತಾ ಯಥಾ ಭರ್ತುರಭಿಮತಾರ್ಥಂ ಪ್ರಾಪಣೀಯಂ ಪ್ರಾಪಯಂತಿ ತದ್ವತ್ಸ್ತುತ್ಯಾನ್ಗುಣಾನ್ಪ್ರಾಪಯಂತಃ ಸ್ತೋಮಾಃ ಸ್ತವಾಃ ಸುಮತೀಸ್ತಸ್ಯೇಂದ್ರಸ್ಯಾಸ್ಮದ್ವಿಷಯಾ ಅನುಕೂಲಾ ಬುದ್ಧೀರಿಯಾನಾ ಯಾಚಮಾನಾ ಇಂದ್ರಂ ಚರಂತಿ । ಪ್ರಾಪ್ನುವಂತಿ । ಪುನಶ್ಚ ತ ಏವ ವಿಶೇಷ್ಯಂತೇ । ಹೃದಿಸ್ಪೃಶೋ ಹೃದಯೇ ಸ್ಪೃಶಂತಃ । ಸ್ತುತ್ಯಸ್ಯ ಪ್ರಿಯಭೂತಾ ಇತ್ಯರ್ಥಃ ॥ ಹೃದ್ಭ್ಯಾಮಿತ್ಯುಪಸಂಖ್ಯಾನಾತ್ ಜ್ಞೇರಲುಕ್ ॥ ಮನಸಾ ಸತ್ಪ್ರೇರ್ದ್ರಿಕ್ತೇನ ವಚ್ಯಮಾನಾ ಉಚ್ಯಮಾನಾಃ । ಅಸ್ಮಭ್ಯಮಿತ್ಯಾದಿ ಗತಂ ॥

ಪ್ರತಿಪದಾರ್ಥ

ವನೀವಾನಃ—ಇಂದ್ರನ ಅನುಗ್ರಹವನ್ನು ಬಯಸುವವೂ । **ಮಮ**—ನನ್ನ । **ದೂತಾಸಃ**—ದೂತರಂತೆ ನನ್ನ ಮುಖದಿಂದ ಹೊರಹೊರಟು ಇಂದ್ರನ ಬಳಿಗೆ ಬರುವವೂ । **ಹೃದಿಸ್ಪೃಶಃ**—ಹೃದಯವನ್ನು ಮುಟ್ಟುವವೂ । **ಮನಸಾ**—ಮನಸ್ಸಿನಿಂದಲೇ ಎಂದರೆ ಮನಃಪೂರ್ವಕವಾಗಿ । **ವಚ್ಯಮಾನಾಃ**— ಉಚ್ಚರಿಸಲ್ಪಡುವವೂ । **ಸ್ತೋಮಾಃ**— ಸ್ತೋತ್ರಾತ್ಮಕವೂ ಆದ । **ಸುಮತೀಃ** — ನಮ್ಮ ಬುದ್ಧಿಪೂರ್ವಕವಾದ ಸ್ತುತಿವಾಕ್ಯಗಳು । **ಇಯಾನಾಃ**—(ಇಷ್ಟಾರ್ಥಗಳನ್ನು ಯಾಚಿಸುತ್ತಾ) । **ಇಂದ್ರಂ**—ಇಂದ್ರನನ್ನು । **ಚರಂತಿ**—ಸಮೀಪಿಸುತ್ತವೆ.

ಭಾವಾರ್ಥ

ಇಂದ್ರನ ಅನುಗ್ರಹಬುದ್ಧಿಯನ್ನು ಬಯಸುವವೂ, ದೂತರಂತೆ ನನ್ನ ಮುಖದಿಂದ ಹೊರಟು ಇಂದ್ರನ ಬಳಿಗೆ ಹೋಗುವವೂ, ಇಂದ್ರನ ಹೃದಯವನ್ನು ಮುಟ್ಟುವವೂ, ಮನಃಪೂರ್ವಕವಾಗಿ ಉಚ್ಚರಿಸಲ್ಪಡುವವೂ, ಸ್ತೋತ್ರಾತ್ಮಕವೂ ಆದ ಸ್ತುತಿವಾಕ್ಯಗಳು ಇಷ್ಟಾರ್ಥಗಳನ್ನು ಯಾಚಿಸುತ್ತಾ ಇಂದ್ರನ ಬಳಿಗೆ ಹೋಗುವುವು

English Translation

My praises, (my) messengers soliciting (audience), come to Indra, praying (his) favourable (thoughts), heart-touching, spoken from the soul; (therefore, Indra), grant me various fertilizing riches.

ಸಂಹಿತಾಪಾಠಃ

ಯತ್ತ್ವಾ ಯಾಮಿ ದದ್ಧಿ ತನ್ನ ಇಂದ್ರ ಬೃಹಂತಂ ಕ್ಷಯಮಸಮ್ಮಂ ಜನಾನಾ ।
ಅಭಿ ತದ್ದ್ಯಾವಾಪೃಥಿವೀ ಗೃಣೀತಾಮಸ್ಮಭ್ಯಂ ಚಿತ್ರಂ ವೃಷಣಂ ರಯಿಂ ದಾಃ

ಪದಪಾಠಃ

ಯತ್ । ತ್ವಾ । ಯಾಮಿ । ದದ್ಧಿ । ತತ್ । ನಃ । ಇಂದ್ರ । ಬೃಹಂತಂ । ಕ್ಷಯಂ। ಅಸಮಂ । ಜನಾನಾಂ॥
ಅಭಿಃ । ತತ್ । ದ್ಯಾವಾಪೃಥಿವೀ ಇತಿ । ಗೃಣೀತಾಂ । ಅಸ್ಮಭ್ಯಂ । ಚಿತ್ರಂ । ವೃಷಣಂ । ರಯಿಂ । ದಾಃ ॥

ಸಾಯಣಭಾಷ್ಯಂ

ಹೇ ಇಂದ್ರ ತ್ವಾ ತ್ವಾಂ ಯದ್ಯಕ್ಷಮಾಣಂ ಯಾಮಿ ಯಾಚಾಮಿ ॥ ವರ್ಣಲೋಪಶ್ಛಾಂದಸಃ ॥ ಯಾಚ್ಯಮಾನಂ ತದ್ದದ್ಧಿ । ದೇಹಿ ॥ ಪದಾತ್ಪರೋಽಪಿ ವ್ಯತ್ಯಯೋಽಪಿ ಪರಸ್ಮೈಪದಂ । ಬಹುಲಂ ಛಂದಸೀತಿ ಶಪೋ ಲುಕ್ ॥ ತದಿತಿ ಸಾಮಾನ್ಯೇನ ನಿರ್ದಿಷ್ಟಂ ವಿಶೇಷಯತಿ । ಬೃಹಂತಂ ಮಹಾಂತಂ ಕ್ಷಯಂ ನಿವಾಸಂ ಜನಾನಾಮನ್ಯೇಷಾಮಸಮಮಸಾಧಾರಣಂ ದೇಹಿ । ತ್ವಯಾ ದಾತವ್ಯಂ ದ್ಯಾವಾಪೃಥಿವೀ ಅಭಿ ಗೃಣೀತಾಂ । ಅಸ್ಮಭ್ಯಮಿತ್ಯಾದಿ ಗತಂ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । **ತ್ವಾಂ**—ನಿನ್ನನ್ನು । **ಯತ್**—ಯಾವುದಕ್ಕಾಗಿ (ಯಾವುದನ್ನು) **ಯಾಮಿ**—ಯಾಚಿಸುವೆನೋ । **ತತ್**—ಅದನ್ನು । **ನಃ**—ನಮಗೆ । **ದದ್ಧಿ**—ಕೊಡು । **ಬೃಹಂತಂ**—ದೊಡ್ಡದಾಗಿರುವುದೂ । **ಜನಾನಾಂ**—ಇತರ ಜನರ (ಗೃಹದಂತೆ) । **ಅಸಮಂ**—ಸಾಮಾನ್ಯವಲ್ಲದ್ದಾದುದೂ ಎಂದರೆ ಎಲ್ಲರ ಗೃಹಗಳಿಗಿಂತ ಅತ್ಯಂತ ಶ್ರೇಷ್ಠವಾದುದೂ ಆದ । **ಕ್ಷಯಂ**—ವಾಸಕ್ಕೆ ಯೋಗ್ಯವಾದ ಗೃಹವನ್ನು ಕೊಡು । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳು । (ನೀನು ಕೊಡುವ ಗೃಹವನ್ನು) **ಅಭಿ ಗೃಣೀತಾಂ**—ಅನುಮೋದಿಸಲಿ. ಎಲೈ ಇಂದ್ರನೇ । **ಅಸ್ಮಭ್ಯಂ**—ನಮಗೆ । **ಚಿತ್ರಂ**—ಆಕರ್ಷವಾದುದೂ । **ವೃಷಣಂ**—ಇಷ್ಟಾರ್ಥಪ್ರದವಾದುದೂ ಆದ । **ರಯಿಂ**—ಧನವನ್ನು । **ದಾಃ**—ಕೊಡು.

ಭಾವಾರ್ಥ

ಎಲೈ ಇಂದ್ರನೇ, ಯಾವುದನ್ನು ಕೊಡಬೇಕೆಂದು ನಿನ್ನನ್ನು ಯಾಚಿಸುವೆವೋ ಅದನ್ನು ನಮಗೆ ಕೊಡು ಎಂದರೆ ದೊಡದಾಗಿಯೂ, ಇತರರ ಗೃಹದಂತೆ ಸಾಮಾನ್ಯವಾಗಿರದೆ ಅತಿ ಶ್ರೇಷ್ಠವಾದುದೂ ಆದ ವಾಸಗೃಹವನ್ನು

ನನಗೆ ಕೊಡು. ನೀನು ಕೊಡುವ ಈ ದಾನವನ್ನು ದ್ಯಾವಾಪೃಥಿವಿಗಳು ಅನುಮೋದಿಸಲಿ. ಎಲೈ ಇಂದ್ರನೇ, ನೀನು ನಮಗೆ ಆಕರ್ಷಕವಾದುದೂ ಇಷ್ಟಾರ್ಥಪ್ರದವಾದುದೂ ಆದ ಧನವನ್ನು ಕೊಡು.

English Translation

Bestow, Indra, that which I solicit of you; a large mansion, not held in common with other men; and may heaven and earth approve of it grant us, (Indra), various fertilizing riches.

ನಲವತ್ತೆಂಟನೆಯ ಸೂಕ್ತ

ಪೀಠಿಕೆ

ಈ ಸೂಕ್ತದಲ್ಲಿಯೂ, ಮುಂದಿನ ಸೂಕ್ತದಲ್ಲಿಯೂ ಇಂದ್ರನು ತಾನು ಮಾಡಿದ ಅನೇಕ ಸಾಹಸಕೃತ್ಯಗಳನ್ನು ತಾನೇ ಪ್ರಶಂಸೆ ಮಾಡಿಕೊಂಡಿದ್ದಾನೆ. ವೃತ್ರಾಸುರ ವಧೆಯೇ ಮೊದಲಾದ ಅನೇಕ ಸಾಹಸಕೃತ್ಯಗಳನ್ನು ಮಾಡಿ ಪ್ರಸಿದ್ಧನಾಗಿರುವುದರಿಂದ ಇಂದ್ರನಿಗೆ ಮಹಾನಿಂದ್ರ ಎಂಬ ಪ್ರಶಸ್ತಿಯು ಬಂದಿರುವುದನ್ನು ಐತರೇಯಬ್ರಾಹ್ಮಣದಲ್ಲಿ ಈ ರೀತಿ ವರ್ಣಿಸಲಾಗಿದೆ.

ಇಂದ್ರನಿಗೆ ಮಹಾನಿಂದ್ರ ಎಂಬ ಹೆಸರು ಬರಲು ಕಾರಣ

ಮಹಾನ್ ಇಂದ್ರಃ—ಮಹಾನ್ ಇಂದ್ರಃ । ಇಂದ್ರನಿಗೆ **ಮಹಾನ್** (ದೊಡ್ಡವನು) ಎಂಬ ಪ್ರಶಸ್ತಿಯು ಹೇಗೆ ಬಂತೆಂಬ ವಿಷಯದಲ್ಲಿ ಐತರೇಯಬ್ರಾಹ್ಮಣದಲ್ಲಿ ಒಂದು ಪೂರ್ವೇತಿಹಾಸವಿದೆ.

ಇಂದ್ರೋ ವೈ ವೃತ್ರಂ ಹತ್ವಾ ಸರ್ವಾ ವಿಜಿತೀರ್ಜಿತ್ಯಾಬ್ರವೀತ್ಪ್ರಜಾಪತಿಮಹಮೇತದ ಸಾನಿ ಯತ್ತ್ವಮಹಂ ಮಹಾಸನಾನೀತಿ ಸ ಪ್ರಜಾಪತಿರಬ್ರವೀದಥ ಕೋಽಹಮಿತಿ ಯದೈವೈ-ತದವೋಚ ಇತ್ಯಬ್ರವೀತ್ತತೋ ವೈ ಕೋ ನಾಮ ಪ್ರಜಾಪತಿರಭವತ್ಕೋ ವೈ ನಾಮ ಪ್ರಜಾ-ಪತಿರ್ಯನ್ಮಹಾನಿಂದ್ರೋಽಭವತ್ತನ್ಮಹೇಂದ್ರಸ್ಯ ಮಹೇಂದ್ರತ್ವಂ ।

(ಐ. ಬ್ರಾ. ೧೨-೫೧)

ಪೂರ್ವದಲ್ಲಿ ಇಂದ್ರನು ವೃತ್ರನನ್ನು ಸಂಹಾರ ಮಾಡಿದನಂತರ ಭೂಮಂಡಲದ ಸಮಸ್ತ ಪ್ರದೇಶಗಳನ್ನೂ ಜಯಿಸಿ, ಪ್ರಜಾಪತಿಯನ್ನು ಕುರಿತು—ಎಲೈ ಪ್ರಜಾಪತಿಯೇ, ಈಗ ನೀನು ಮಹತ್ಸ್ಥಾನವನ್ನು ಗಳಿಸಿ ಪೂಜ್ಯನಾರುವೆಯಷ್ಟೆ. ಇನ್ನುಮೇಲೆ ನಿನ್ನ ಮಹತ್ಪದವಿಯು ನನಗೆ ಬೇಕು ಎಂದನು ಅದಕ್ಕೆ ಪ್ರಜಾಪತಿಯು ನನ್ನ ಪದವಿಯನ್ನು ನೀನು ತೆಗೆದುಕೊಂಡರೆ ನಾನು ಯಾರ (ಕಃ) ನನ್ನ ಸ್ಥಾನಮಾನವೇನು ಎಂದು ಕೇಳಲು ಅದಕ್ಕೆ ಇಂದ್ರನು—ಎಲೈ ಪ್ರಜಾಪತಿಯೇ, ಈಗ ನೀನೇ ಹೇಳಿದಂತೆ ನಿನ್ನ ಹೆಸರು ಇನ್ನುಮೇಲೆ ಕಃ (ಯಾರು) ಎಂದಾಗುವುದು. ಎಂದರೆ ಕಶಬ್ದವಾಚ್ಯನಾಗುವೆ. ಎಂದನು. ಆದುದರಿಂದ ಆ ಕಾಲ ಮೊದಲುಗೊಂಡು ಪ್ರಜಾಪತಿಯು ಕಃಶಬ್ದವಾಚ್ಯನಾದನು. ಈ ವಿಷಯವು ಪ್ರಸಿದ್ಧವಾಗಿರುವುದು. ಆದುದರಿಂದಲೇ ಯಾವುದಾದರೂ ದಾನವನ್ನು ಸ್ವೀಕರಿಸುವಾಗ ಪಠಿಸಬೇಕಾದ ಪ್ರತಿಗ್ರಹಮಂತ್ರಗಳಲ್ಲಿ ಈ ವಿಷಯವು ಉಕ್ತವಾಗಿರುವುದು ಎಂದರೆ **ಕ ಇದಂ**

ಕಸ್ಮಾ ಅದಾದಿತ್ಯಾಹ । ಪ್ರಜಾಪತಿರ್ವೈ ಕಃ । ಪ್ರಜಾಪತಯ ಏವ ತದ್ದದಾತಿ ಎಂದು ಇತರ ವೇದಗಳ ಬ್ರಾಹ್ಮಣವಾಕ್ಯವಿರುವುದು. ಕ ಶಬ್ದಕ್ಕೆ ಸುಖವೆಂಬ ಅರ್ಥವಿರುವುದರಿಂದ ಪ್ರಜಾಪತಿಸಂಬಂಧವಾದ ವ್ಯವಹಾರಗಳಲ್ಲಿಯೂ, ವಿಷಯಗಳಲ್ಲಿಯೂ ಪ್ರಜಾಪತಿಯು ಸುಖಸ್ವರೂಪನು ಎಂದೇ ಹೇಳಲ್ಪಡುವನು. ಈ ರೀತಿ ಪ್ರಜಾಪತಿಯು ಮಹತ್ತ್ವವನ್ನು ಇಂದ್ರನು ಸ್ವೀಕರಿಸಿದುದರಿಂದ ಇಂದ್ರನಿಗೆ **ಮಹಾನ್** ಎಂಬ ಅಭಿಧಾನವು ಬಂದಿತು. ಎಂದರೆ— ಇಂದ್ರನು ಮಹಾನಿಂದ್ರನಾದನು. ಈ ವಿಷಯವು ಇತರ ವೇದಗಳಲ್ಲಿ—**ಇಂದ್ರೋ ವೃತ್ರಮಹನ್ತ್ಸಂ ದೇವಾ ಅಬ್ರುವನ್ಮಹಾನ್ವಾ ಅಯಮಭೂದ್ಯೋ ವೃತ್ರಮವಧೀದಿತಿ ತನ್ಮಹೇಂದ್ರಸ್ಯ ಮಹೇಂದ್ರತ್ವಂ** । ಇಂದ್ರನು ವೃತ್ರನನ್ನು ಸಂಹಾರಮಾಡಿದ ವಿಷಯವನ್ನು ದೇವತೆಗಳು ಪ್ರಶಂಸಿಸುತ್ತಾ ಈ ಇಂದ್ರನು ವೃತ್ರನನ್ನು ಸಂಹಾರ ಮಾಡಿದ್ದರಿಂದ ಮಹೇಂದ್ರನಾದನು. (ಮಹತ್ಪದವಿಯನ್ನು ಗಳಿಸಿದನು) ಎಂದರೆ ಎಲ್ಲಾ ದೇವತೆಗಳಿಗಿಂತಲೂ ಶ್ರೇಷ್ಠನಾದನು. ಇಂದ್ರನಿಗೆ ಮಹೇಂದ್ರನೆಂಬ ಹೆಸರು ಬರಲು ಇದೇ ಕಾರಣವು ಎಂದು ಹೇಳಿದೆ.

ಸ ಮಹಾನ್ಭೂತ್ವಾ ದೇವತಾ ಅಬ್ರವೀದುದ್ಧಾರಂ ಮ ಉದ್ಧರತೇತಿ ಯಥಾಽಸ್ಯೇತರ್ಹ್ಯೇವಂ ಚ್ಛ್ರೈತಿಯೋ ವೈ ಭವತಿ ಯಃ ಶ್ರೇಷ್ಠತಾಮಶ್ನುತೇ ಸ ಮಹಾನ್ಭವತಿ ತಂ ದೇವಾ ಅಬ್ರುವನ್ ಸ್ವಯಮೇವ ಬ್ರೂಷ್ವ ಯತ್ತೇ ಭವಿಷ್ಯತೀತಿ ಸ ಏತಂ ಮಾಹೇಂದ್ರಂ ಗ್ರಹಮಬ್ರೂತ ಮಾಧ್ಯಂದಿನಂ ಸವನಾನಾಂ ನಿಷ್ಕೇವಲ್ಯಮುಕ್ತಾನಾಂ ತ್ರಿಷ್ಟುಭಂ ಛಂದಸಾಂ ಪೃಷ್ಠಂ ಸಾಮ್ನಾಂ ತಮಸ್ಮಾ ಉದ್ಧಾರಮದಹರನ್ ಉದಸ್ಮಾ ಉದ್ಧಾರಂ ಹರಂತಿ ಯ ಏವಂ ವೇದ ॥

ಬಳಿಕ ಇಂದ್ರನು ಮೇಲೆ ಹೇಳಿದಂತೆ ಮಹತ್ಪದವಿಯನ್ನು ಗಳಿಸಿ ದೇವತೆಗಳನ್ನು ಕರೆದು ಇಂತೆಂದನು— ಎಲೈ ದೇವತೆಗಳೇ, ನಾನು ಮಹತ್ಪದವಿಯನ್ನು ಗಳಿಸಿರುವುದರಿಂದ ಇದರ ನಿಮಿತ್ತವಾಗಿ ಎಂದರೆ ನನ್ನನ್ನು ಅಭಿನಂದಿಸುವುದಕ್ಕಾಗಿ ಗೌರವಸೂಚಕವಾದ ಸತ್ಕಾರವೊಂದನ್ನು ಏರ್ಪಡಿಸಿ ಎಂದನು. ಲೋಕವ್ಯವಹಾರದಲ್ಲಿಯೂ ಸಹ ಒಬ್ಬ ಪುರುಷನಿಗೆ ಅತುಳೈಶ್ವರ್ಯ ಪ್ರಾಪ್ತಿಯಾಗಲಿ, ವಿದ್ಯಾದಿಗಳಲ್ಲಿ ಪ್ರಶಸ್ತಿಯಾಗಲಿ, ರಾಜಸನ್ಮಾನವಾಗಲಿ ಲಭಿಸಿದಲ್ಲಿ ಅಂತಹ ಪುರುಷನು ಜನರ ಮಧ್ಯೆ ಗಣ್ಯನಾದವನೆಂದು ಪ್ರಸಿದ್ಧನಾಗಿರುವುದರಿಂದ ಜನರು ಸಾಧಾರಣವಾಗಿ ಅಂತಹ ಪುರುಷನನ್ನು ಅಭಿನಂದಿಸಲು ಸತ್ಕಾರಕೂಟವನ್ನು ಏರ್ಪಡಿಸುವುದು ರೂಢಿಯಷ್ಟೆ ಅದರಂತೆ ಇಂದ್ರನು ದೇವತೆಗಳನ್ನು ಈ ವಿಷಯವಾಗಿ ಪ್ರಶ್ನೆ ಮಾಡಿದನು. ದೇವತೆಗಳೂ ಸಹ ಇಂದ್ರನ ಮಾತನ್ನು ಮೋದಿಸಿ ಎಲೈ ಇಂದ್ರನೇ, ಈ ಸತ್ಕಾರಸಮಾರಂಭವನ್ನು ಯಾವ ರೀತಿ ಮಾಡಬೇಕು ? ಹೇಗೆ ಮಾಡಿದರೆ ನಿನಗೆ ಸಂತೋಷವಾಗುವುದು ? ಅದನ್ನು ನೀನೇ ಹೇಳಬೇಕು. ನಾವು ಅದರಂತೆ ನಡೆಸುವೆವು ಎನಲು, ಅದಕ್ಕೆ ಇಂದ್ರನು ಗ್ರಹಗಳ (ಗ್ರಹವೆಂದರೆ ಸೋಮವನ್ನು ಪಾನಮಾಡುವ ಪಾತ್ರವಿಶೇಷ) ಮಧ್ಯದಲ್ಲಿ ಮಾಹೇಂದ್ರಗ್ರಹವು (ಮಹೇಂದ್ರನಾದ ನನಗೆ ಅರ್ಪಿಸುವ ಸೋಮಪಾನ ಪಾತ್ರೆಯು) ಎಲ್ಲಾ ಗ್ರಹಗಳಿಗಿಂತ ಶ್ರೇಷ್ಠವಾದುದಾಗಿರಬೇಕು. ಅದರಂತೆಯೇ ಪ್ರಾತಃಸವನ, ಮಾಧ್ಯಂದಿನ ಸವನ, ತೃತೀಯಸವನಗಳೆಂಬ ಮೂರು ಸವನಗಳಲ್ಲಿ ಮಾಧ್ಯಂದಿನಸವನವೂ, ಆಶ್ವಿನಶಸ್ತ್ರ, ಮರುತ್ವತೀಯ ಮೊದಲಾದ ಶಸ್ತ್ರ (ಮಂತ್ರ) ಗಳಲ್ಲಿ ನಿಷ್ಕೇವಲ್ಯಶಸ್ತ್ರವೂ, ಗಾಯತ್ರ್ಯಾದಿ ಛಂದಸ್ಸುಗಳಲ್ಲಿ ತ್ರಿಷ್ಟುಪ್ ಛಂದಸ್ಸೂ, ಸಾಮಗಾನಗಳ ಮಧ್ಯದಲ್ಲಿ ಪೃಷ್ಠಸ್ತೋತ್ರನಿಷ್ಪಾದಕವಾದ ಬೃಹದ್ರಥಂತರ ಸಾಮವೂ ಶ್ರೇಷ್ಠವಾಗಿರುವುದೆಂದು ನೀವು ಅನುಮೋದಿಸಿಬೇಕು. ಏಕೆಂದರೆ ಅವುಗಳೆಲ್ಲಾ ನನಗೆ ಪ್ರಿಯವಾಗಿರುವುವು. ಇದೇ ನೀವು ನನಗೆ ಮಾಡುವ ಸತ್ಕಾರವು ಎಂದನು ದೇವತೆಗಳು ಹಾಗೆಯೇ ಆಗಲೆಂದೊಪ್ಪಿ ಯಜ್ಞಾದಿಗಳಲ್ಲಿ ಮಾಹೇಂದ್ರಗ್ರಹಾದಿಗಳಿಗೆ ಶ್ರೇಷ್ಠತೆಯನ್ನು ಅನುಮೋದಿಸಿದರು. ಈ ವಿಷಯವು ಇತರ ವೇದಗಳಲ್ಲಿಯೂ **ಸ ಏತಂ ಮಾಹೇಂದ್ರಮುದಹರತ್ ವೃತ್ರಂ ಹತ್ವಾನ್ಯಾಸ**

ದೇವತಾಸ್ವಧೀತಿ ಯೆನ್ಮಾಹೇಂದ್ರೋ ಗೃಹ್ಯತ ಉದ್ಧಾರಮೇವ ತಂ ಯಜಮಾನ ಉದ್ಧರತೇ ನ ಪ್ರಜಾಸ್ವಧಿ ಎಂದು ಹೇಳಿರುವುದು. ಈ ವಿಷಯವನ್ನು ಯಜ್ಞಮಾಡುವ ಯಾವ ಯಜಮಾನನು ತಿಳಿಯುವನೋ ಅವನು ಜನರಲ್ಲಿ ಶ್ರೇಷ್ಠತೆಯನ್ನೂ, ಗಣ್ಯಸ್ಥಾನವನ್ನೂ ಪಡೆಯುವನು.

ಪೀಠಿಕೆ ಸಮಾಪ್ತವು

ಸಾಯಣಭಾಷ್ಯಂ

ಅಹಂಭುವಮಿತ್ಯೇಕಾದಶರ್ಚಂ ಷಷ್ಠಂ ಸೂಕ್ತಂ । ಪೂರ್ವಸೂಕ್ತೇನ ಸಪ್ತಗುನಾ ಸ್ತುತೋ ಹೃಷ್ಟಃ ಸನ್ನಿದಮಾದಿಸೂಕ್ತತ್ರಯೇಣ ಸ್ವಯಮಾತ್ಮಾನಮಸ್ತೌತ್ । ತಸ್ಮಾದ್ವೈಕುಂಠಸ್ಯೇಂದ್ರಸ್ಯ ವಾಕ್ಯ. ತ್ವಾದ್ಯಸ್ಯ ವಾಕ್ಯಂ ಸ ಋಷಿರಿತಿ ಪರಿಭಾಷಾಯೇಂದ್ರ ಋಷಿಃ । ವೈಕುಂಠಸ್ಯೇಂದ್ರಸ್ಯ ಚ ಸ್ತೂಯಮಾನ. ತ್ವಾದ್ಯಾ ತೇನೋಚ್ಯತೇ ಸಾ ದೇವತೇತಿ ಪರಿಭಾಷಾಯೇಂದ್ರ ಏವ ದೇವತಾ। ದಶಮ್ಯೇಕಾದಶೀಸಪ್ತಮ್ಯ ಸ್ತ್ರಿಷ್ಟುಭಃ । ಶಿಷ್ಟಾಸ್ತ್ರಿಷ್ಟುಬಂತಪರಿಭಾಷಯಾ ಜಗತ್ಯಃ । ತಥಾ ಚಾನುಕ್ರಾಂತಂ । ಸ ಸಪ್ತಗುಸ್ತುತಿಸಂ. ಹೃಷ್ಟ ಆತ್ಮಾನಮುತ್ತರೈಸ್ತ್ರಿಭಿಸ್ತುಷ್ಟಾವಾಹಂ ಭುವನೇಮೇಕಾದಶಾಂತ್ಯೇ ತ್ರಿಷ್ಟುಭೌ ಸಪ್ತಮೀ ಚೇತಿ ॥ ಅತಿರಾತ್ರೇ ದ್ವಿತೀಯಪರ್ಯಾಯೇ ಹೋತುಃ ಶಸ್ತ್ರ ಏತತ್ಸೂಕ್ತಂ । ಸೂತ್ರಿತಂ ಚ । ಅಹಂ ಭುವಮು. ಪಾಯ್ಯೇಸ್ಯಾಂಧಸೋ ಮದಾಯೇತಿ ಯಾಜ್ಯಾ । ಆ. ೬-೪ । ಇತಿ ॥ ಸಮೂಳ್ಹಸ್ಯ ದಶರಾತ್ರಸ್ಯ ತೃತೀ. ಯೇ ಛಂದೋಮೇ ನಿಷ್ಕೇವಲ್ಯೇಽಸ್ಯೇತತ್ಸೂಕ್ತಂ । ಅಹಂ ಭುವಂ ತತ್ತ ಇಂದ್ರಿಯಮಿತಿ ನಿಷ್ಕೇವಲ್ಯಂ । ಆ. ೮-೭ । ಇತಿ ಸೂತ್ರಿತಂ ॥

ಅನುವಾದವು—ಅಹಂ ಭುವಂ ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವುವು. ಹಿಂದಿನ ಸೂಕ್ತದಲ್ಲಿ ಸಪ್ತಗು ಋಷಿಯಿಂದ ಸ್ತುತಿಸಲ್ಪಟ್ಟ ಇಂದ್ರನು ಆ ಋಷಿಯ ಸ್ತುತಿಯಿಂದ ಸಂತುಷ್ಟನಾಗಿ ಈ ಸೂಕ್ತದಲ್ಲಿಯೂ, ಇದರ ಮುಂದಿನ ಎರಡು ಸೂಕ್ತಗಳಲ್ಲಿಯೂ ತಾನೇ ತನ್ನ ಪ್ರಶಂಸೆಯನ್ನು ಮಾಡಿಕೊಂಡಿದ್ದಾನೆ. ಆದ್ದರಿಂದ ಈ ಸೂಕ್ತದ ವಿಷಯವು ವೈಕುಂಠನಾಮಕನಾದ ಇಂದ್ರನ ವಾಕ್ಯವಾಗಿರುವುದರಿಂದ **" ಯಸ್ಯ ವಾಕ್ಯಂ ಸ ಋಷಿಃ**—ಮಂತ್ರಗಳಲ್ಲಿ ಯಾರ ವಾಕ್ಯವಿರುವುದೋ ಅವನೇ ಆ ಮಂತ್ರಕ್ಕೆ ಋಷಿಯು" ಎಂಬ ನ್ಯಾಯಾನುಸಾರ ಈ ಸೂಕ್ತಕ್ಕೆ ಇಂದ್ರನೇ ಋಷಿಯು; ಈ ಸೂಕ್ತದಲ್ಲಿ ಇಂದ್ರನೇ ಸ್ತುತನಾಗಿರುವುದರಿಂದ **" ಯಾ ತೇನೋಚ್ಯತೇ ಸಾ ದೇವತಾ**—ಮಂತ್ರದಲ್ಲಿ ಯಾವ ವಿಷಯವು ಪ್ರತಿಪಾದಿತವಾಗಿರುವುದೋ ಅದೇ ಆ ಮಂತ್ರಕ್ಕೆ ದೇವತೆಯು " ಎಂಬ ನ್ಯಾಯಾನುಸಾರವಾಗಿ ಈ ಸೂಕ್ತಕ್ಕೆ ಇಂದ್ರನೇ ದೇವತೆಯು. ಈ ಸೂಕ್ತದ ಹತ್ತು, ಹನ್ನೊಂದು ಮತ್ತು ಏಳನೆಯ ಋಕ್ಕುಗಳು ತ್ರಿಷ್ಟುಪ್ ಛಂದಸ್ಸುವು. ಉಳಿದ ಋಕ್ಕುಗಳು ಜಗತೀ ಛಂದಸ್ಕವು. ಅನುಕ್ರಮಣಿಕೆಯಲ್ಲಿ **ಸ ಸಪ್ತಗುಸ್ತುತಿಸಂಹೃಷ್ಟ ಆತ್ಮಾನಮುತ್ತ. ರೈಸ್ತ್ರಿಭಿಸ್ತುಷ್ಟಾವಾಹಂ ಭುವನೇಮೇಕಾದಶಾಂತ್ಯೇ ತ್ರಿಷ್ಟುಭೌ ಸಪ್ತಮೀ ಚ** ಎಂದು ಹೇಳಿರುವುದು. ಅತಿರಾತ್ರ ವೆಂಬ ಯಾಗದ ದ್ವಿತೀಯಪರ್ಯಾಯದಲ್ಲಿ ಹೋತೃವೆಂಬ ಋತ್ವಿಜನು ಪಠಿಸಬೇಕಾದ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಅಹಂ ಭುವಮುಪಾಯ್ಯೇಸ್ಯಾಂಧಸೋ ಮದಾಯೇತಿ ಯಾಜ್ಯಾ** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು. ಸಮೂಳ್ಹವೆಂಬ ದಶರಾತ್ರಯಾಗದ ಮೂರನೆಯ ಛಂದೋಮದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಅಹಂ ಭುವಂ ತತ್ತ ಇಂದ್ರಿಯಮಿತಿ ನಿಷ್ಕೇವಲ್ಯಂ** ಎಂಬ ಸೂತ್ರದಿಂದ (ಆ. ೮-೭) ವಿವೃತವಾಗಿರುವುದು.

ಸೂಕ್ತ—೪೮

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೪೮ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೫, ೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ಇಂದ್ರೋ ವೈಕುಂಠಃ ॥
ದೇವತಾ—ಇಂದ್ರೋ ವೈಕುಂಠಃ ॥
ಛಂದಃ—೧-೬, ೪-೯. ಜಗತೀ । ೭, ೧೧, ೧೧. ತ್ರಿಷ್ಟುಪ್ ।

ಸಂಹಿತಾಪಾಠಃ

ಅಹಂ ಭುವಂ ವಸುನಃ ಪೂರ್ವ್ಯಸ್ಪತಿರಹಂ ಧನಾನಿ ಸಂ ಜಯಾಮಿ ಶಶ್ವತಃ।
ಮಾಂ ಹವಂತೇ ಪಿತರಂ ನ ಜಂತವೋಽಹಂ ದಾಶುಷೇ ವಿ ಭಜಾಮಿ ಭೋಜನಂ ॥ ೧ ॥

ಪದಪಾಠಃ

ಅಹಂ । ಭುವಂ । ವಸುನಃ । ಪೂರ್ವ್ಯಃ । ಪತಿಃ । ಅಹಂ । ಧನಾನಿ । ಸಂ । ಜಯಾಮಿ । ಶಶ್ವತಃ ॥
ಮಾಂ । ಹವಂತೇ । ಪಿತರಂ । ನ । ಜಂತವಃ । ಅಹಂ । ದಾಶುಷೇ । ವಿ । ಭಜಾಮಿ । ಭೋಜನಂ ॥ ೧ ॥

ಸಾಯಣಭಾಷ್ಯಂ

ಅಹಮಿಂದ್ರೋ ವಸುನೋ ಧನಸ್ಯ ಪೂರ್ವ್ಯೋ ಮುಖ್ಯೋಽಸಾಧಾರಣಃ ಪತಿಃ ಸ್ವಾಮೀ ಭುವಂ । ಅಭವಂ ॥ ಭವತೇರ್ಲಙಿ ಬಹುಲಂ ಛಂದಸೀತಿ ಶಪೋ ಲುಕ್ । ಅಚಿ ಶ್ನುಧಾತುಭ್ರುವಾಮಿತ್ಯುವಙಾದೇಶಃ । ಅಡಭಾವಶ್ಛಾಂದಸಃ । ತಥಾಹಂ ಶಶ್ವತಃ । ಬಹುನಾಮೈತತ್ । ಬಹೋಃ ಶತ್ರೋಃ ಸಂಬಂಧೀನಿ ಧನಾನಿ । ಸಮಿತ್ಯೇಕೀಭಾವೇ । ಸಹ ಜಯಾಮಿ । ಕಿಂಚ ಮಾಮೇವ ಜಂತವಃ ಪ್ರಾಣಿನೋ ಯಜಮಾನಾ ಹವಂತೇ । ಆಹ್ವಯಂತಿ । ಪಿತರಂ ನ ಪಿತರಮಿವ ಪುತ್ರ್ಯಾಃ । ಅಹಂ ದಾಶುಷೇ ದಾತ್ರೇ ಯಜಮಾನಾಯ ಭೋಜನಮನ್ನಂ ವಿ ಭಜಾಮಿ । ಪದಾಮಿ ॥

ಪ್ರತಿಪದಾರ್ಥ

ಅಹಂ—ನಾನು (ಇಂದ್ರನು) । **ವಸುನಃ**—ಧನಕ್ಕೆ । **ಪೂರ್ವ್ಯಃ**—ಮುಖ್ಯವಾದ (ಅಸಾಧಾರಣವಾದ) । **ಪತಿಃ**—ಸ್ವಾಮಿಯಾಗಿ । **ಭುವಂ**—ಆಗಿದ್ದೇನೆ । **ಅಹಂ**—ನಾನು । **ಶಶ್ವತಃ**—ಅನೇಕ ಶತ್ರುಗಳ । **ಧನಾನಿ**—ಧನಗಳನ್ನು । **ಸಂ ಜಯಾಮಿ**—ಗೆದ್ದು ತರುತ್ತೇನೆ । **ಜಂತವಃ**—ಪ್ರಾಣಿಗಳೂ, ಯಜಮಾನರೇ ಮೊದಲಾದವರೂ । **ಮಾಂ**—ನನ್ನನ್ನು । **ಪಿತರಂ ನ**—ಪುತ್ರರು ತಮ್ಮ ತಂದೆಯನ್ನು ವಿಶ್ವಾಸದಿಂದ ಕರೆಯುವಂತೆ । **ಹವಂತೇ**—ಕರೆ

ಯುತ್ತಾರೆ | **ಅಹಂ**—ನಾನು | **ದಾಶುಷೇ**—ನನಗೆ ಹವಿಸ್ಸನ್ನ ರ್ಪಿಸುವ ಯಜಮಾನನಿಗೆ | **ಭೋಜನಂ**—ಅನ್ನವನ್ನು | **ವಿ ಭಜಾಮಿ**—ಒದಗಿಸಿಕೊಡುತ್ತೇನೆ.

ಭಾವಾರ್ಥ

ಇಂದ್ರನಾದ ನಾನು ಧನಕ್ಕೆಲ್ಲಾ ಮುಖ್ಯನಾದ ಎಂದರೆ ಏಕಮಾತ್ರ ಅಧಿಪತಿಯಾಗಿದ್ದೇನೆ. ಶತ್ರುಗಳ ಧನಗಳನ್ನು ಗೆದ್ದು ತರುತ್ತೇನೆ. ಸಮಸ್ತ ಪ್ರಾಣಿಗಳೂ ಎಂದರೆ ಯಜ್ಞ ಮಾಡುವ ಯಜಮಾನರೂ ಪುತ್ರರು ತಮ್ಮ ತಂದೆಯನ್ನು ಪ್ರೀತ್ಯಾದರಗಳಿಂದ ಕರೆಯುವಂತೆ ನನ್ನನ್ನು ಕರೆಯುತ್ತಾರೆ. ನನಗೆ ಹವಿಸ್ಸನ್ನ ರ್ಪಿಸುವ ಯಜಮಾನನಿಗೆ ಭೋಗಯೋಗ್ಯವಾದ ಅನ್ನವನ್ನು ಒದಗಿಸಿಕೊಡುತ್ತೇನೆ.

English Translation

I am the principal lord of wealth : I conquer the treasure of many (adversaries) : living beings call upon me as (sons call upon) a father ; I bestow food on the donor of oblations.

ಸಂಹಿತಾಪಾಠಃ

ಅಹವಿಂದ್ರೋ ರೋಧೋ ವಕ್ಷೋ ಅಥರ್ವಣಸ್ತ್ರಿತಾಯು ಗಾ ಅಜನಯಮು ಹೇರಧಿ ।
ಅಹಂ ದಸುಭ್ಯಃ ಪರಿ ನ್ಯಮ್ಣಮಾ ದದೇ ಗೋತ್ರಾ ಶಿಕ್ಷನ್ ದಧೀಚೇ ಮಾತರಿಶ್ವನೇ ॥ ೨ ॥

ಪದಪಾಠಃ

ಅಹಂ । ಇಂದ್ರಃ । ರೋಧಃ । ವಕ್ಷಃ । ಅಥರ್ವಣಃ । ತ್ರಿತಾಯ । ಗಾಃ । ಅಜನಯಂ । ಅಹೇಃ । ಅಧಿ ॥
ಅಹಂ । ದಸ್ಯುಭ್ಯಃ । ಪರಿ । ನ್ಯಮ್ಣಂ । ಆ । ದದೇ । ಗೋತ್ರಾ । ಶಿಕ್ಷನ್ । ದಧೀಚೇ । ಮಾತರಿಶ್ವನೇ ॥೨॥

ಸಾಯಣಭಾಷ್ಯಂ

ಆದ್ಯಪಾದಸ್ಯೇತಿಹಾಸಮಾಹುಃ । ಅಥರ್ವಣಂ ದಧ್ಯಂಚಂ ಮಧುವಿದ್ಯಾವಂತಮಿಂದ್ರ ಆಗತ್ಯ ಮಧುವಿದ್ಯಾಂ ಕಸ್ಯ ಚಿನ್ನ ಬ್ರೂಯಾ ಇತಿ ನಿಯಮಿತವಾನ್ । ಯದಿ ಬ್ರೂಯಾಸ್ತೇ ಶಿರೋ ಹರಾಮೀತ್ಯುಕ್ತವಾನ್ । ಸ ಚಾಥರ್ವಣೋಽಶ್ವಿಭ್ಯಾಮುವಾಚ । ಇದಂ ವೈ ತನ್ಮಧು ದಧ್ಯಙ್ಙಾಥರ್ವಣೋಽಶ್ವಿಭ್ಯಾಮುವಾಚ । ಶತ-೧೪-೫-೫-೧೬ । ಅಶ್ವಸ್ಯ ಶೀರ್ಷ್ಣಾ ಪ್ರ ಯದೀಮುವಾಚ । ಋ-೧-೧೧೬-೧೨ । ಇತಿ ಹಿ

ಶ್ರುತಿಃ । ಸ ಚೇಂದ್ರ ಆಗತ್ಯ ದಧೀಚಃ ಶಿರೋಽಹರದಿತಿ ತತ್ರೋಚ್ಯತೇ । ಇಂದ್ರೋಽಹಮಥರ್ವಣೋಽಧರ್ವಣಃ ಪುತ್ರಸ್ಯ ದಧೀಚೋ ವಕ್ಷಃ । ತದುಪಲಕ್ಷಿತಂ ಶಿರ ಇತ್ಯರ್ಥಃ । ತಸ್ಯ ರೋಧೋ ರೋಧಕೋ ಹರ್ತಾಸ್ಮಿ । ತಥಾ ತ್ರಿತಾಯೈತನ್ನಾಮಕಾಯಾಸ್ತ್ಯಾಯೈ ಕೂಪಪತಿತಾಯೋದ್ಧರಣಾರ್ಥಮಹಮೇವೇರ್ಷಸ್ಯಾಧ್ಯುಪರಿ ಗಾ ಉದಕಾನ್ಯಜನಯಂ । ಉದಪಾದಯಂ । ತ್ರಿತಸ್ಯ ಕೂಪಪತಿತಸ್ಯೇಂದ್ರಂ ಸ್ತುತ್ಯುದ್ಧರಣಪ್ರಾರ್ಥನಂ ಸಂ ಮಾ ತಪಂತ್ಯಭಿತಃ । ಋ. ೧೦-೩೩-೨ । ಇತ್ಯತ್ರ ಪ್ರತಿಪಾದಿತಂ । ತಥಾಹಂ ದಸ್ಯುಭ್ಯ ಉಪಕ್ಷಪಯಿತೃಭ್ಯಃ ಶತ್ರುಭ್ಯಃ ಸಕಾಶಾನ್ನೃಮ್ಣಂ ಧನಮಾದದೇ । ಆದತ್ತವಾನಸ್ಮಿ । ಕಿಂ ಕುರ್ವನ್ । ಗೋತ್ರಾ ಗವಾಮುದಕಾನಾಂ ರಕ್ಷಕಾನ್ಮೇಘಾನ್ಹಿಂಸನ್ವಿನಯೇನ್ । ಕಿಮರ್ಥಂ । ಮಾತರಿಶ್ವನೇ ಮಾತರಿಶ್ವನಃ ಪುತ್ರಾಯ ದಧೀಚ ಏತನ್ನಾಮಕಾಯರ್ಷಯೇ ವರ್ಷಕಾಮಾಯ ಪ್ರವರ್ಷಯಿತುಮಿಚ್ಛನ್

ಪ್ರತಿಪದಾರ್ಥ

ಇಂದ್ರಃ—ಇಂದ್ರನಾದ । **ಅಹಂ**—ನಾನು । **ಆಥರ್ವಣಃ**—ಅಥರ್ವಋಷಿಯ ಪುತ್ರನಾದ ದಧೀಚ ಋಷಿಯ । **ವಕ್ಷಃ**—ಶಿರಸ್ಸನ್ನು । **ರೋಧಃ**—ಕತ್ತರಿಸಿದ್ದೇನೆ । **ತ್ರಿತಾಯ**—ಬಾವಿಯಲ್ಲಿ ಬಿದ್ದಿದ್ದ ತ್ರಿತನೆಂಬ ಋಷಿಯನ್ನು ಉದ್ಧರಿಸುವುದಕ್ಕಾಗಿ । **ಅಹೇಃ**—ಮೇಘದ । **ಅಧಿ**—ಮೇಲೆ (ಪ್ರಹರಿಸಿ) । **ಗಾಃ**—ಉದಕಗಳನ್ನು । **ಅಜನಯಂ**—ಉತ್ಪತ್ತಿ ಮಾಡಿದ್ದೇನೆ । **ಅಹಂ**—ನಾನು । **ದಸ್ಯುಭ್ಯಃ**—ಶತ್ರುಗಳಾದ ದಸ್ಯು ಜನರಿಂದ । **ನೃಮ್ಣಂ**—ಧನವನ್ನು । **ಆ ದದೇ**—ಕಸಿದುಕೊಂಡು ಬಂದಿದ್ದೇನೆ । **ಮಾತರಿಶ್ವನೇ**—ಮಾತರಿಶ್ವನ ಪುತ್ರನಾದ । **ದಧೀಚೇ**—ದಧೀಚ ಋಷಿಯ ಪ್ರಾರ್ಥನೆಯಂತೆ ವೃಷ್ಟಿಯನ್ನು ಸುರಿಸುವುದಕ್ಕಾಗಿ । **ಗೋತ್ರಾ**—ಮೇಘಗಳನ್ನು । **ಶಿಕ್ಷನ್**—ಶಿಕ್ಷಿಸಿದ್ದೇನೆ.

ಭಾವಾರ್ಥ

ಇಂದ್ರನಾದ ನಾನು ಅಥರ್ವಋಷಿಯ ಪುತ್ರನಾದ ದಧೀಚ ಋಷಿಯ ಶಿರಸ್ಸನ್ನು ಕತ್ತರಿಸಿದ್ದೇನೆ. ತ್ರಿತನೆಂಬ ಋಷಿಯು ಭಾವಿಯಲ್ಲಿ ಬಿದ್ದು ಬಾಯಾರಿಕೆಯಿಂದ ಬಳಲುತ್ತಿದ್ದಾಗ ಅವನಿಗಾಗಿ ಮೇಘವನ್ನು ಪ್ರಹರಿಸಿ ಉದಕವೃಷ್ಟಿಯಾಗುವಂತೆ ಮಾಡಿದ್ದೇನೆ. ಶತ್ರುಗಳಾದ ದಸ್ಯುಜನರಿಂದ ಧನವನ್ನು ಅಪಹರಿಸಿ ತಂದಿದ್ದೇನೆ. ಮಾತರಿಶ್ವನ ಪುತ್ರನಾದ ದಧೀಚ ಋಷಿಯ ಪ್ರಾರ್ಥನೆಯಂತೆ ವೃಷ್ಟಿಯನ್ನು ಸುರಿಸುವುದಕ್ಕಾಗಿ ಮೇಘಗಳನ್ನು ಪ್ರಹರಿಸಿದ್ದೇನೆ.

English Translation

I, Indra, am the striker off of the head of the son of Atharvan. I generated the waters from above the cloud for the sake of Trita. I carried off their wealth from the Dasyus; taming the clouds for Dadhyanch, the son of Matarishwan.

ಸಂಹಿತಾಪಾಠಃ

ಮಹ್ಯಂ ತ್ವಷ್ಟಾ ವಜ್ರಮತಕ್ಷದಾಯಸಂ ಮಯಿ ದೇವಾಸೋಽವೃಜನ್ನಪಿ ಕ್ರತುಂ ।

ಮಮಾನೀಕಂ ಸೂರ್ಯಸ್ಯೇವ ದುಷ್ಟರಂ ಮಾಮಾರ್ಯಂತಿ ಕೃತೇನ ಕರ್ತ್ವೇನ ಚ ॥ ೩ ॥

ಪದಪಾಠಃ

ಮಹ್ಯಂ । ತ್ವಷ್ಟಾ । ವಜ್ರಂ । ಅತಕ್ಷತ್ । ಆಯಸಂ । ಮಯಿ । ದೇವಾಸಃ । ಅವೃಜನ್ । ಅಪಿ । ಕ್ರತುಂ ॥

ಮಮ । ಅನೀಕಂ । ಸೂರ್ಯಸ್ಯ । ಇವ । ದುಸ್ತರಂ । ಮಾಂ । ಆರ್ಯಂತಿ । ಕೃತೇನ । ಕರ್ತ್ವೇನ । ಚ ॥

ಸಾಯಣಭಾಷ್ಯಂ

ಮಹ್ಯಂ ಮದರ್ಥಂ ತ್ವಷ್ಟಾ ದೇವ ಆಯಸಮಯೋಮಯಂ ವಜ್ರಮಾಯುಧಮತಕ್ಷತ್ । ಸಂಪಾದಿತವಾನ್ । ದೇವಾ ಮಯಿ ವಿಷಯೇ ಕ್ರತುಂ ಸ್ವವಿರೋಧಿಹನನರೂಪಂ ಕರ್ಮಾಪ್ಯವೃಜನ್ । ಸಮಪಾದಯನ್ । ಮಮಾನೀಕಂ ಸೇನಾಸಮೂಹಂ ಸೂರ್ಯಾನೀಕಮಿವ ದುಷ್ಟರಂ । ಅನ್ಯೇನ ತರೀತುಮಶಕ್ಯಂ । ಮಾಮೇವ ಕೃತೇನ ಕರ್ಮಣಾ ಕರ್ತ್ವೇನೇತಃ ಪರಂ ಕರ್ತವ್ಯೇನ ವೃತ್ರವಧಾದಿರೂಪೇಣಾರ್ಯಂತಿ । ಗಚ್ಛಂತಿ । ಆರ್ಯತಿರ್ಗತಿಕರ್ಮಾ । ಯದ್ವಾ । ಆರ್ಯಮೀಶ್ವರಂ ಕುರ್ವತೇ ॥

ಪ್ರತಿಪದಾರ್ಥ

ತ್ವಷ್ಟಾ—ತ್ವಷ್ಟೃದೇವನು । **ಮಹ್ಯಂ**—ನನಗೋಸ್ಕರ । **ಆಯಸಂ**—ಉಕ್ಕಿನಿಂದ ನಿರ್ಮಿತವಾದ । **ವಜ್ರಂ**—ವಜ್ರಾಯುಧವನ್ನು । **ಅತಕ್ಷತ್**—ಮಾಡಿಕೊಟ್ಟಿದ್ದಾನೆ । (**ದೇವಾಃ**—ದೇವತೆಗಳು) । **ಮಯಿ**—ನನ್ನಲ್ಲಿ । **ಕ್ರತುಂ**—ಶತ್ರುಹನನರೂಪವಾದ ಕರ್ಮವನ್ನು । **ಅಪಿ ಅವೃಜನ್**—ಕೇಂದ್ರೀಕರಿಸಿದ್ದಾರೆ । **ಮಮ**—ನನ್ನ । **ಅನೀಕಂ**—ಸೇನೆಯು । **ಸೂರ್ಯಸ್ಯೇವ**—ಸೂರ್ಯನ ತೀಕ್ಷ್ಣವಾದ ಕಿರಣಗಳಂತೆ । **ದುಸ್ತರಂ**—ಸಹಿಸಲಶಕ್ಯವು । **ಮಾಂ**—ನನ್ನನ್ನು । **ಕೃತೇನ**—ಈಗ ಮಾಡಿರುವ । **ಕರ್ತ್ವೇನ**—ಮುಂದೆ ಮಾಡುವ ವೃತ್ರವಧಾದಿ ಕರ್ಮಗಳ ನಿಮಿತ್ತ । **ಆರ್ಯಂತಿ**—ಸ್ವಾಮಿ ಎಂದು ಭಾವಿಸಿ ಸಮೀಪಿಸುತ್ತಾರೆ.

ಭಾವಾರ್ಥ

ತ್ವಷ್ಟೃದೇವನು ನನಗಾಗಿ ಉಕ್ಕಿನಿಂದ ಮಾಡಿದ ವಜ್ರಾಯುಧವನ್ನು ನಿರ್ಮಿಸಿಕೊಟ್ಟನು. ದೇವತೆಗಳು ನನ್ನಲ್ಲಿ ಶತ್ರುಹನನಸಾಮರ್ಥ್ಯವುಳ್ಳ ಕರ್ಮಗಳೆಲ್ಲವನ್ನೂ ಕೇಂದ್ರೀಕರಿಸಿ ಸ್ಥಾಪಿಸಿದ್ದಾರೆ. ನನ್ನ ಸೇನೆಯು ಸೂರ್ಯನ ತೀಕ್ಷ್ಣವಾದ ಕಿರಣಗಳಂತೆ ಸಹಿಸಲಶಕ್ಯವಾಗಿದೆ. ನಾನು ಈಗ ಮಾಡಿರುವ ಮತ್ತು ಮುಂದೆ ಮಾಡುವ ಸಾಹಸಕರ್ಮಗಳಿಗಾಗಿ ಜನರು ನನ್ನನ್ನು ತಮ್ಮ ಸ್ವಾಮಿಯೆಂದು ಭಾವಿಸಿ ಸಮೀಪಿಸುತ್ತಾರೆ.

English Translation

For me Twashtri fabricated the iron thunderbolt : in me the gods have concentered pious acts : my lustre is insupportable, like that of the

Sun : men acknowledge me as lord ia consequence of what I have done, and of what I shall do.

संहितापाठः

अहमेतं गव्ययमश्व्यं पशुं पुरीषिणं सायकेना हिरण्य-
यं
पुरू सहस्रा नि शिशामि दाशुषे यन्मा सोमास ऊक्थिनो
अमंदिषुः ॥ ४ ॥

पदपाठः

अहं । एतं । गव्ययं । अश्व्यं । पशुं । पुरीषिणं । सायकेन । हिरण्ययं ॥
पुरु । सहस्रा । नि । शिशामि । दाशुषे । यत् । मा । सोमासः । ऊक्थिनः । अमंदिषुः ॥

सायणभाष्यं

अहमेतं गव्ययं गोमयमश्व्यमश्वमयं हिरण्ययं हिरण्यालंकारोपेतं पुरीषिणं। पुरीषमुदकं क्षीररूपं। तद्वंतं पशुं शत्रुसंबंधिनं। जात्येकवचनं। पशुसंघमित्यर्थः। तं। सायकेनायुधेनाजयं। तथा पुरु पुरूणि सहस्रा सहस्राणि शस्त्राणि नि शिशामि संस्करोमि दाशुषे हविर्दत्तवते यजमानाय। वैरिनाशायेत्यर्थः। कदेति उच्यते। यदा मा मां सोमासः सोमा ऊक्थिनः शस्त्रोपेताः संतः अथवा सोमेन शस्त्रोपेता यजमाना अमंदिषुः तर्पयंति ॥

प्रतिपदार्थ

यत्—यावाग । **मा**—नन्नन्नु । **सोमासः**—सोमः । **ऊक्थिनः**—यजमानरिंद मंत्रपूर्वकवागि अर्पिसल्पट्टु । **अमंदिषुः**—तृप्तिगोळिसुवुदु । **अहं**—नानु । **गव्ययं**—गोवुगळिंद सहितवादुदू । **अश्व्यं**—अश्वगळिंद सहि । दू । **हिरण्ययं**—सुवर्णाभरणगळिंद युक्तवादुदू । **पुरीषिणं**—क्षीरसहितवादुदू । **पशुं**—शत्रुविनल्लिरुव गोसमूहवन्नु । **सायकेन**—आयुधदिंद गेल्लुवेनु (सुत्तु शत्रुविरुद्धवागि) । **पुरु**—दोड्डवाद । **सहस्रा**—साविरारु आयुधगळन्नु । **दाशुषे**—ननगे हविस्सु अर्पिसिद यजमानरिगागि । **नि शिशामि**—हरितवन्नागि माडुवेनु.

ಭಾವಾರ್ಥ

ಯಜ್ಞ ಮಾಡುವ ಯಜಮಾನರು ಮಂತ್ರಪೂರ್ವಕವಾಗಿ ನನಗೆ ಅರ್ಪಿಸಿದ ಸೋಮರಸಗಳಿಂದ ನಾನು ಯಾವಾಗ ತೃಪ್ತನಾಗುವೆನೋ ಆಗ ನನಗೆ ಹವಿಸ್ಸನ್ನರ್ಪಿಸಿದ ಯಜಮಾನರಿಗಾಗಿ ಶತ್ರುಗಳಲ್ಲಿರುವ ಗೋವುಗಳು, ಅಶ್ವಗಳು, ಸುವರ್ಣಾಭರಣಗಳು, ಹೆಚ್ಚಾಗಿ ಹಾಲನ್ನು ಕೊಡುವ ಗೋವುಗಳು ಇವುಗಳನ್ನೆಲ್ಲಾ ಶತ್ರುಗಳಿಂದ ಗೆದ್ದು ತರುವುದಕ್ಕಾಗಿ ನನ್ನ ಆಯುಧವನ್ನು ಹರಿತ ಮಾಡುವೆನು ಮತ್ತು ದೊಡ್ಡದಾದ ಆ ಸಾವಿರಾರು ಆಯುಧಗಳಿಂದ ಶತ್ರುಗಳನ್ನು ಗೆಲ್ಲುವೆನು.

English Translation.

(I conquered) by my shaft this (wealth) comprehending cows, horses, herds, water, and gold; I give many thousands to the donor(of the oblation) when libations and praises have afforded me delight.

ಸಂಹಿತಾಪಾಠಃ

ಅಹಮಿಂದ್ರೋ ನ ಪರಾ ಜಿಗ್ಯ ಇದ್ಧನಂ ನ ಮೃತ್ಯವೇ ಽವ ತಸ್ಥೇ ಕದಾ ಚನ ।
ಸೋಮಮಿನ್ಮಾ ಸುನ್ವಂತೋ ಯಾಚತಾ ವಸು ನ ಮೇ ಪೂರವಃ ಸಖ್ಯೇ
ರಿಷಾಥನ ॥ ೫ ॥

ಪದಪಾಠಃ

ಅಹಂ । ಇಂದ್ರಃ । ನ । ಪರಾ । ಜಿಗ್ಯೇ । ಇತ್ । ಧನಂ । ನ । ಮೃತ್ಯವೇ । ಅವ । ತಸ್ಥೇ । ಕದಾ । ಚನ ॥
ಸೋಮಂ । ಇತ್ । ಮಾ । ಸುನ್ವಂತಃ । ಯಾಚತತಃ । ವಸು । ನ । ಮೇ । ಪೂರವಃ । ಸಖ್ಯೇ । ರಿಷಾಥನ ॥

ಸಾಯಣಭಾಷ್ಯಂ

ಇಂದ್ರೋ ಧನಸ್ಯ ಸರ್ವಸ್ಯ ಸ್ವಾಮ್ಯಹಂ ಧನಮಾತ್ಮೀಯಂ ನ ಪರಾ ಜಿಗ್ಯ ಇತ್ । ನೈವ ಪರಾಭಾವಯಾಮಿ । ಮದೀಯಂ ಧನಂ ನ ಪರಾಭೂಯತ ಇತ್ಯರ್ಥಃ । ಕಿಂಚಾಹಂ ಮೃತ್ಯವೇ ಸರ್ವೇಷಾಂ ಮಾರಕಾಯ ಕದಾ ಚನ ಕದಾಪಿ ನಾವ ತಸ್ಥೇ । ನಾವಸ್ಥಿತೋ ಭವಾಮಿ । ಇಂದ್ರಭಕ್ತಾ ನ ಮೃತ್ಯುಭಾಜೋ ಭವಂತಿ ಕಿಲ ಕಿಮು ವಕ್ತವ್ಯಮಿಂದ್ರಸ್ಯ ಮೃತ್ಯುವಿರಹೇ । ಯಸ್ಮಾದೇವಂ ತಸ್ಮಾ-ತ್ಸೋಮಂ ಸುನ್ವಂತೋ ಹೇ ಯಜಮಾನಾಃ ವಸು ಯುಷ್ಮದಭಿಮತಂ ಧನಂ ಮೇನ್ಮಾಮೇವ ಯಾಚತ । ಹೇ ಪೂರವೋ ಮನುಷ್ಯಾಃ ಮೇ ಸಖ್ಯೇ ನ ರಿಷಾಥನ । ಮಾ ರಿಷ್ಟಾ ಭವಥ । ಮತ್ಸಖ್ಯಂ ಮಾ ವಿನಾಶಯತ ॥

ಪ್ರತಿಪದಾರ್ಥ

ಇಂದ್ರಃ—ಸಮಸ್ತ ಧನಕ್ಕೂ ಸ್ವಾಮಿಯಾದ । **ಅಹಂ**—ನಾನು । **ಧನಂ**—ನನ್ನ ಧನವನ್ನು । **ಪರಾ**—ಇತರರು ಯಾರೂ । **ನ ಜಿಗ್ಯೆ ಇತ್**—ಕಸಿದುಕೊಳ್ಳಲು ಅವಕಾಶ ಕೊಡುವುದಿಲ್ಲ । (**ಅಹಂ**—ನಾನು) । **ಮೃತ್ಯವೇ**—ಸರ್ವರನ್ನೂ ಸಂಹರಿಸುವುದಕ್ಕಾಗಿ । **ಕದಾ ಚನ**—ಯಾವಾಗಲೂ । **ನ ಅವ ತಸ್ಥೇ**—ಪ್ರಯತ್ನಪಡುವುದಿಲ್ಲ (ಆದ್ದರಿಂದ) । **ಸೋಮಂ**—ಸೋಮರಸವನ್ನು । **ಸುನ್ವಂತಃ**—ನನಗಾಗಿ ಹಿಂಡುವ ಎಲೈ ಯಜಮಾನರೇ । **ವಸು**--ನಿಮಗೆ ಬೇಕಾದ ಧನವನ್ನು ಪಡೆಯಲು । **ಮಾ ಇತ್**—ನನ್ನನ್ನೇ। **ಯಾಚತ**—ಯಾಚಿಸಿರಿ। **ಪೂರವಃ**—ಎಲೈ ಮನುಷ್ಯರೇ । **ಮೇ**—ನನ್ನ । **ಸಖ್ಯೇ**—ಸ್ನೇಹವನ್ನು । **ನ ರಿಷಾಥನ**—ಕಳೆದುಕೊಳ್ಳಬೇಡಿ.

ಭಾವಾರ್ಥ

ಸಮಸ್ತ ಧನಕ್ಕೂ ಸ್ವಾಮಿಯಾದ ನಾನು ನನ್ನ ಧನವನ್ನು ಇತರರು ಯಾರೂ ಗೆದ್ದುಕೊಳ್ಳಲು ಅವಕಾಶವೀಯುವುದಿಲ್ಲ. ನನ್ನ ಭಕ್ತರಾದ ಜನರನ್ನು ಸಂಹರಿಸಲು ನಾನು ಯಾವಾಗಲೂ ಪ್ರಯತ್ನಪಡುವುದಿಲ್ಲ. ಆದ್ದರಿಂದ ನನಗಾಗಿ ಸೋಮರಸವನ್ನು ಹಿಂಡುವ ಎಲೈ ಯಜಮಾನರೇ, ನಿಮಗೆ ಬೇಕಾಗುವ ಧನಕ್ಕಾಗಿ ನನ್ನನ್ನೇ ಯಾಚಿಸಿರಿ. ಎಲೈ ಮನುಷ್ಯರೇ, ನೀವು ನನ್ನ ಸ್ನೇಹವನ್ನು ಕಳೆದುಕೊಳ್ಳಬೇಡಿ.

English Translation

I, Indra, am not surpassed in affluence; I never yield to death: pouring forth the Soma libation, ask of me wealth; O men, forfeit not my friendship.

ಸಂಹಿತಾಪಾಠಃ

ಅಹಮೇತಾಞ್ಛಶ್ವಸತೋ ದ್ವಾದ್ವೇಂದ್ರಂ ಯೇ ವಜ್ರಂ ಯುಧಯೇಽಕೃಣ್ವತ ।
ಆಹ್ವಯಮಾನಾ ಅವ ಹನ್ಮನಾಹನಂ ದೃಳ್ಹಾ ವದನ್ನನಮುಸ್ಯುರ್ನಮುಸ್ಮಿನಃ ॥

ಪದಪಾಠಃ

ಅಹಂ । ಏತಾನ್ । ಶಾಶ್ವಸತಃ । ದ್ವಾಽದ್ವಾ । ಇಂದ್ರಂ । ಯೇ । ವಜ್ರಂ । ಯುಧಯೇ । ಅಕೃಣ್ವತ ॥
ಆಽಹ್ವಯಮಾನಾನ್ । ಅವ । ಹನ್ಮನಾ । ಅಹನಂ । ದೃಳ್ಹಾ । ವದನ್ । ಅನಮುಸ್ಯುಃ । ನಮುಸ್ಮಿನಃ ॥

ಸಾಯಣಭಾಷ್ಯಂ

ಅಹಮಿಂದ್ರ ಏತಾನ್ವಕ್ಷ್ಯಮಾಣಾಞ್ಶಾಶ್ವಸತೋ ಭೃಶಂ ಪ್ರಾಣತಃ ಪ್ರವೃದ್ಧಬಲಾಞ್ಶತ್ರೂನ್ ದ್ವಾದ್ವಾ ದ್ವೌ ದ್ವೌ । ಯುಗ್ಮಭೂತಾನಿತ್ಯರ್ಥಃ । ತಾನಹನಮಿತಿ ಸಂಬಂಧಃ। ಏತಾನಿತ್ಯುಕ್ತಂ ಕಾನಿತ್ಯಾಹ। ಯೇ ಶತ್ರವ ಇಂದ್ರಂ ಶತ್ರೂಣಾಂ ದಾರಕಂ । ಇಂದ್ರಃ ಶತ್ರೂಣಾಂ ದಾರಯಿತೇತಿ ನಿರುಕ್ತಂ । ೧೦-೪ । ಈದೃಶಂ ವಜ್ರಂ ಬಲಿನಂ ಯದ್ವಾ ವ್ರಜವಂತಂ ಯುಧಯೇ ಯುದ್ಧಾಯಾಕೃಣ್ವತ ಅಕುರ್ವತ। ತಾನೇತಾನಿತ್ಯರ್ಥಃ । ಪುನಃ ಕೀದೃಶಾನ್ । ಆಹ್ವಯಮಾನಾನ್ ಏಹಿ ಯುಧ್ಯಸ್ವೇತ್ಯಾಹ್ವಯತಃ ಶತ್ರೂನ್

ನಮುಸ್ಥಿನೋ ನಮುನವತೋ ಬಲಾನ್ನಮಯಿತ್ವಾನಮಸ್ಯುರಪ್ರಣತಿಶೀಲಃ ಸನ್ ದೃಳ್ಹಾ ದೃಢಾನಿ ಭಯಜನಕಾನಿ ಸ್ಥಿರಾಣಿ ವಚನಾನಿ ವದನ್ನಹನಂ ಹತವಾನಸ್ಮಿ ॥

ಪ್ರತಿಪದಾರ್ಥ

ಅಹಂ—ಇಂದ್ರನಾದ ನಾನು । **ಯೇ**—ಯಾವ ಶತ್ರುಗಳು । **ಇಂದ್ರಂ**—ಶತ್ರುಗಳನ್ನು ಯುದ್ಧದಲ್ಲಿ ಸೀಳಿಹಾಕುವವನೂ । **ವಜ್ರಂ**—ವಜ್ರಾಯುಧಧಾರಿಯೂ ಆದ ನನ್ನನ್ನು । **ಯುಧಯೇ**—ಯುದ್ಧಕ್ಕಾಗಿ । **ಅಕೃಣ್ವತ**—ಕರೆಯುವರೋ । **ಏತಾನ್**—ಆಂತಹ । **ಶಾಶ್ವಸತಃ**—ಶಕ್ತಿಯಿಂದ ಪ್ರವೃದ್ಧರಾದ ಶತ್ರುಗಳನ್ನು । **ದ್ವಾದ್ವಾ**—ಒಂದೊಂದು ಸಲಕ್ಕೆ ಇಬ್ಬಿಬ್ಬರನ್ನಾಗಿ ಕೊಲ್ಲುವೆನು ಮತ್ತು । **ಆಹ್ವಯಮಾನಾನ್**—ನನ್ನನ್ನು ಯುದ್ಧಕ್ಕಾಗಿ ಕರೆಯುತ್ತಿರುವ ಆ ಶತ್ರುಗಳನ್ನು । **ನಮುಸ್ಥಿನಃ**—ನನ್ನ ಶಕ್ತಿಯಿಂದ ಬಗ್ಗಿಸುತ್ತಲೂ । **ಅನಮಸ್ಯುಃ**—ಆದರೆ ನಾನು ಮಾತ್ರ ಅವರಿಗೆ ಬಗ್ಗದೆ । **ದೃಳ್ಹಾ**—ದೃಢವಾದುದೂ, ಭಯಜನಕವಾದುದೂ ಆದ ವೀರವಚನಗಳನ್ನು । **ವದನ್**—ನುಡಿಯುತ್ತಾ । **ಅಹನಂ**—ಕೊಲ್ಲುತ್ತೇನೆ.

ಭಾವಾರ್ಥ

ಶತ್ರುಗಳನ್ನು ಯುದ್ಧದಲ್ಲಿ ಸೀಳಿಹಾಕುವವನೂ, ವಜ್ರಾಯುಧಧಾರಿಯೂ ಆದ ನನ್ನನ್ನು ಯಾವ ಶತ್ರುಗಳು ಯುದ್ಧಕ್ಕಾಗಿ ಕರೆಯುವರೋ ಶಕ್ತಿಯಿಂದ ಮದಿಸಿದ ಆಂತಹ ಶತ್ರುಗಳನ್ನು ಇಂದ್ರನಾದ ನಾನು ಒಂದು ಸಲಕ್ಕೆ ಇಬ್ಬಿಬ್ಬರಂತೆ ಕೊಲ್ಲುವೆನು. ಯಾರಿಗೂ ಬಗ್ಗದಿರುವ ನಾನು ಯುದ್ಧಕ್ಕಾಗಿ ಕರೆಯುವ ಶತ್ರುಗಳನ್ನು ನನ್ನ ಶಕ್ತಿಯಿಂದ ಬಗ್ಗಿಸುವೆನು ಮತ್ತು ಭಯಜನಕವಾದ ವೀರಾಲಾಪಗಳನ್ನು ನುಡಿಯುತ್ತಾ ಅವರನ್ನು ಸಂಹರಿಸುವೆನು.

English Translation

I destroy those powerful (enemies) two by two who defy the (wielder of the) thunderbolt, Indra, to battle. I slew them challenging (me to fight) with (great) slaughter, the unbending (slaying) the bending, uttering stern (menaces).

ಸಂಹಿತಾಪಾಠಃ

ಅಭೀ3ದಮೇ3ಕಮೇ3ಕೋ ಅಸ್ಮಿ ನಿಷ್ಪ್ಳಭೀ ದ್ವಾ ಕಿಮು ತ್ರಯೇ3ಃ ಕರಂತಿ ।
ಖಲೇ ನ ಪರ್ಷಾನ್ ಪ್ರತಿ ಹನ್ಮಿ ಭೂರಿ ಕಿಂ ಮಾ ನಿಂದಂತಿ ಶತ್ರವೋ3
ನಿಂದ್ರಾಃ ॥ ೭ ॥

ಪದಪಾಠಃ

ಅಭಿ । ಇದಂ । ಏಕಂ । ಏಕಃ । ಅಸ್ಮಿ । ನಿಷ್ಪ್ಳಟ್ । ಅಭಿ । ದ್ವಾ । ಕಿಂ । ಊಂ ಇತಿ । ತ್ರಯಃ । ಕರಂತಿ ॥
ಖಲೇ । ನ । ಪರ್ಷಾನ್ । ಪ್ರತಿ । ಹನ್ಮಿ । ಭೂರಿ । ಕಿಂ । ಮಾ । ನಿಂದಂತಿ । ಶತ್ರವಃ । ಅನಿಂದ್ರಾಃ ॥ ೭ ॥

ಸಾಯಣಭಾಷ್ಯಂ

ಅಹಮಿದಮಿದಾನೀಮೇಕಂ ಶತ್ರುಮೇಕೋ೭ಸಹಾಯ ಏವ ಸನ್ನಭ್ಯಸ್ಮಿ। ಅಭಿಭವಾಮಿ। ಕಿಂಚ ನಿಷ್ಪಾಟ್ ಸಪತ್ನಾನ್ನಿಃಷಹಮಾಣೋ೭ಹಂ ದ್ವಾ ದ್ವಾವಪ್ಯಸಹ್ಯೌ ಶತ್ರೂ ಅಭ್ಯಸ್ಮಿ। ಕಿಮು ಕಂ ವಾ ತ್ರಯಃ ಶತ್ರವಃ ಕರಂತಿ। ಕುರ್ವಂತಿ। ತಾನಪ್ಯಭಿಭವಾಮೀತ್ಯರ್ಥಃ। ಕಿಂ ಬಹುನಾ। ಖಲೇ ನ ಖಲನಿಷ್ಪಾದನೇ ಯಥಾ ಜೀರ್ಣವ್ರೀಹ್ಯಾದಿಸ್ತಂಬಾನನಾಯಾಸೇನ ಪ್ರತಿಹಂತಿ ಕರ್ಷಕಃ ತದ್ವತ್ಪರ್ಷಾನ್ನಿಷ್ಟ್ಯುರಾನ್ಭೂರಿ ಬಹೂನ್ಶತ್ರೂನ್ಪ್ರತಿ ಹನ್ಮಿ। ಮಾ ಮಾಮನಿಂದ್ರಾ ಇಂದ್ರರಹಿತಾ ಇಂದ್ರಮಜಾನಂತ ಇಂದ್ರವಿರೋಧಿನಃ ಶತ್ರವೋ ಮಾಮಿಂದ್ರಂ ಕಿಂ ನಿಂದಂತಿ। ನಿಂದಿತುಮಶಕ್ತಾ ಇತ್ಯರ್ಥಃ। ಅತ್ರಾಭಿಭವಾಮೀತ್ಯಾದಿ ನಿರುಕ್ತಂ ದ್ರಷ್ಟವ್ಯಂ ॥ ನಿ. ೩-೧೦ ॥

ಪ್ರತಿಪದಾರ್ಥ

(**ಅಹಂ**—ನಾನು) । **ಇದಂ**—ಈಗ । **ಏಕಂ**—ಒಬ್ಬ ಶತ್ರುವನ್ನು । **ಏಕಃ**—ಒಬ್ಬನೇ ಎಂದರೆ ಯಾರ ಸಹಾಯವೂ ಇಲ್ಲದೆ । **ಅಭಿ ಅಸ್ಮಿ**—ಸೋಲಿಸುವೆನು । **ನಿಷ್ಪಾಟ್**—ಶತ್ರುಗಳನ್ನು ಸೋಲಿಸುವ ಸಾಮರ್ಥ್ಯವುಳ್ಳ ನಾನು । **ದ್ವಾ**—ಬಲಶಾಲಿಗಳಾದ ಇಬ್ಬರು ಶತ್ರುಗಳನ್ನು (ಒಟ್ಟಿಗೆ) । **ಅಭಿ**—ಸೋಲಿಸುವೆನು (ಅಷ್ಟೇ ಅಲ್ಲ) । **ತ್ರಯಃ**—ಮೂರುಮಂದಿ ಶತ್ರುಗಳಾದರೂ (ನನ್ನನ್ನು) । **ಕಿಮು ಕರಂತಿ**—ಏನುತಾನೇ ಮಾಡಬಲ್ಲರು ? । **ಖಲೇ ನ**—ರೈತನು ತೆನೆಯಲ್ಲಿರುವ ಕಾಳುಗಳನ್ನು ಯಾವರೀತಿ ಸುಲಭವಾಗಿ ಬಡಿದು ಬೇರ್ಪಡಿಸುವನೋ ಅದರಂತೆ । **ಪರ್ಷಾನ್**—ಶಕ್ತಿಯಿಂದ ಮದಿಸಿದವರೂ । **ಭೂರಿ**—ಅನೇಕರೂ ಆದ ಶತ್ರುಗಳನ್ನು । **ಪ್ರತಿ ಹನ್ಮಿ**—ಕೊಲ್ಲುತ್ತೇನೆ। **ಅನಿಂದ್ರಾಃ**—ಇಂದ್ರನ ಶಕ್ತಿಯನ್ನು ತಿಳಿಯದಿರುವ। **ಶತ್ರವಃ**—ಶತ್ರುಗಳು । **ಮಾ**—ನನ್ನನ್ನು । **ಕಿಂ ನಿಂದಂತಿ**—ನಿಂದಿಸಲು ಶಕ್ತರಾದಾರೇನು ?

ಭಾವಾರ್ಥ

ಇಂದ್ರನಾದ ನಾನು ಈಗ ಇನ್ನೊಬ್ಬರ ಸಹಾಯವಿಲ್ಲದೆ ನಾನೊಬ್ಬನೇ ಒಬ್ಬ ಶತ್ರುವನ್ನು ಪರಾಭವಗೊಳಿಸುವೆನು. ಶತ್ರುಗಳನ್ನು ಪರಾಭವಗೊಳಿಸುವ ನಾನು ಒಲಶಾಲಿಯಾದ ಇಬ್ಬರು ಶತ್ರುಗಳನ್ನು ಸಹ ಏಕಕಾಲದಲ್ಲಿ ಸೋಲಿಸಬಲ್ಲೆನು. ಅಷ್ಟೇ ಏಕೆ ? ಮೂರುಮಂದಿ ಶತ್ರುಗಳು ಇದ್ದರೂ ನನ್ನನ್ನು ಏನು ಮಾಡಬಲ್ಲರು ? ರೈತನು ಧಾನ್ಯದ ತೆನೆಯಲ್ಲಿರುವ ಕಾಳುಗಳನ್ನು ಅನಾಯಾಸವಾಗಿ ಬಡಿದು ಉದರಿಸುವಂತೆ ಶಕ್ತಿಯಿಂದ ಮತ್ತರಾದ ಅನೇಕ ಮಂದಿ ಶತ್ರುಗಳನ್ನು ನಾನು ಕೊಲ್ಲುವೆನು. ನನ್ನ ಶಕ್ತಿಸಾಮರ್ಥ್ಯಗಳನ್ನು ಅರಿಯದ ವಿರೋಧಿಗಳು ನನ್ನನ್ನು ನಿಂದಿಸಲು ಸಮರ್ಥರೇ ?

English Translation

Single, I overcome my single (adversary) : (over-powering them) I overcome two foes ; what can three effect (against me) ? I smite numerous (adversaries) like sheaves (of grain) on the threshing-floor ; can my enemies who know not Indra revile me ?

ವಿಶೇಷವಿಷಯಗಳು

ಈ ಋಕ್ಕಿನಲ್ಲಿರುವ ಖಲಶಬ್ದದ ಅರ್ಥವನ್ನು ವಿವರಿಸುವುದಕ್ಕಾಗಿ ಯಾಸ್ಕರು ಈ ಋಕ್ಕಿಗೆ ನಿರ್ವಚನವನ್ನು ಹೇಳಿದ್ದಾರೆ.

ಅಭಿಭವಾಮಿದಮೇಕಮೇಕೋಽಸ್ಮಿ ನಿಷ್ಪ್ರಹಮಾಣಃ ಸಪತ್ನಾನಭಿಭವಾಮಿ । ದ್ವೌ ಕಿಂ ಮಾ ತ್ರಯಃ ಕುರ್ವಂತಿ । ಏಕ ಇತಾ ಸಂಖ್ಯಾ । ದ್ವೌ ದ್ರುತತರಾ ಸಂಖ್ಯಾ । ತ್ರಯಸ್ತೀರ್ಣತಮಾ ಸಂಖ್ಯಾ । ಚತ್ವಾರಶ್ಚಲಿತತಮಾ ಸಂಖ್ಯಾ । ಅಷ್ಟಾವಶ್ನೋತೇಃ । ನವ ನ ವನನೀಯಾ ನಾವಾಪ್ತಾ ವಾ । ದಶ ದಸ್ತಾ ದೃಷ್ಟಾರ್ಥಾ ವಾ । ವಿಶಂತಿರ್ದ್ವಿರ್ದಶತಃ । ಶತಂ ದಶದಶತಃ । ಸಹಸ್ರಂ ಸಹಸ್ಯತ್ । ಅಯುತಂ ನಿಯುತಂ ಪ್ರಯುತಂ ತತ್ತದಭ್ಯಸ್ತಂ । ಅರ್ಬುದೋ ಮೇಘೋ ಭವತಿ । ಅರಣಮಂಬು ತದ್ದೋಽಮ್ಬುದಃ । ಅಂಬುಮದ್ಧಾತೀತಿ ವಾ । ಅಂಬುಮದ್ಭವತೀತಿ ವಾ । ಸ ಯಥಾ ಮಹಾನ್ ಬಹುರ್ಭವತಿ ವರ್ಷಂಸ್ತದಿವಾರ್ಬುದಂ । ಖಲೇ ನ ಪರ್ಷಾನ್ ಪ್ರತಿದನ್ಮಿ ಭೂರಿ । ಖಲ ಇವ ಪರ್ಷಾನ್ ಪ್ರತಿಹನ್ಮಿ ಭೂರಿ । ಖಲ ಇತಿ ಸಗತ್ಯಮನಾಮ । ಖಲತೇರ್ವಾ ಸ್ಖಲತೇರ್ವಾ । ಅಯಮಪೀತರಃ ಖಲ ಏತಸ್ಮಾದೇವ ಸಮಾಸ್ಕನ್ನೋ ಭವತಿ । ಕಿಂ ಮಾ ನಿಂದಂತಿ ಶತ್ರವೋಽನಿಂದ್ರಾಃ । ಯ ಇಂದ್ರಂ ನ ವಿವಿದುರಿಂದ್ರೋ ಹ್ಯಹಮಸ್ಮ್ಯನಿಂದ್ರಾ ಇತರ ಇತಿ ವಾ ॥

(ನಿ. ೩-೧೦)

ನನ್ನ ಎದುರಿಗಿರುವ ಈ ಒಬ್ಬ ಶತ್ರುವನ್ನು ನಾನೊಬ್ಬನೇ (ಇತರರ ಸಹಾಯವಿಲ್ಲದೆ) ಸೋಲಿಸಬಲ್ಲೆನು. ಹಾಗೆಯೇ ಅನೇಕ ತತ್ರುಗಳ ಪ್ರಹಾರಗಳನ್ನು ತಡೆದು (ತಪ್ಪಿಸಿಕೊಂಡು) ಅವರನ್ನೆಲ್ಲಾ ಸೋಲಿಸುತ್ತೇನೆ ಎಂದು ಇಂದ್ರನ ವಾಕ್ಯವು. ಇಲ್ಲಿ ಏಕ ಎಂಬ ಶಬ್ದವು ಸಂಖ್ಯಾವಾಚಕವು. **ಇಣ್ ಗತೌ** ಎಂಬ ಧಾತುವಿನಿಂದ **ಏಕ** ಎಂಬ ಶಬ್ದವು ನಿಷ್ಪನ್ನವಾಗಿದೆ. ಒಂದು ಎಂದು ಎಣಿಸುವಾಗ ಒಂದು ಎಂಬ ಸಂಖ್ಯೆಯು ಕಳೆದುಹೋಗುವುದು ಎಂದರೆ ಅದನ್ನು ಬಿಟ್ಟು ಮುಂದಿನ ಎರಡು ಎಂಬ ಸಂಖ್ಯೆಯನ್ನು ಪಠಿಸುತ್ತೇವೆ. **ದ್ವೌ ದ್ರುತತರಾ ಸಂಖ್ಯಾ । ದ್ವೌ** ಎಂದರೆ ಎರಡು. **ಈ** ಶಬ್ದವು ಓಡು ಎಂಬರ್ಥವಿರುವ **ದ್ರು** ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಒಂದಾದಕೂಡಲೆ ಎರಡು ಎಂದು ಬೇಗನೆ ಎಣಿಸುವುದರಿಂದ **ದ್ವೌ** ಎಂಬ ಶಬ್ದಕ್ಕೆ ಎರಡು ಎಂಬರ್ಥ ಬಂದಿದೆ.

ತ್ರಯಸ್ತೀರ್ಣತಮಾ ಸಂಖ್ಯಾ—ತ್ರಯಃ-ಮೂರು ಎಂಬ ಶಬ್ದವು **ತೃ**-ದಾಟು ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಎರಡು ಎಂಬ ಸಂಖ್ಯೆಯು ದಾಟಿಹೋದಮೇಲೆ **ತ್ರಯಃ** ಮೂರು ಎಂಬ ಸಂಖ್ಯೆಯ ನಿರ್ದೇಶವಿರುವುದು. **ಚತ್ವಾರಶ್ಚಲಿತತಮಾ ಸಂಖ್ಯಾ-ಚತ್ವಾರಃ**-ನಾಲ್ಕು ಎಂಬ ಸಂಖ್ಯೆಯು ಚಲಿಸು ಎಂಬರ್ಥವುಳ್ಳ ಚಲತಿಧಾತುವಿನಿಂದ ನಿಷ್ಪನ್ನವಾಗಿ ಮೂರಾದ ಕೂಡಲೇ ನಾಲ್ಕು, ನಾಲ್ಕಾದ ಕೂಡಲೇ ಐದು ಎಂದು ಚಲನಾರ್ಥವನ್ನು ಸೂಚಿಸುವುದು. **ಅಷ್ಟಾವಶ್ನೋತೇಃ । ಅಷ್ಟೌ**-ಎಂಟು ಎಂಬ ಶಬ್ದವು **ಅಶ್**-ವ್ಯಾಪಿಸು ಎಂಬರ್ಥವುಳ್ಳ ಅಶ್ನೋತಿಧಾತುವಿನಿಂದ ನಿಷ್ಪನ್ನವಾಗಿ ಈ ಶಬ್ದವು (ಅಥವಾ ಸಂಖ್ಯೆಯು) ಒಂದರಿಂದ ಏಳರವರೆಗೆ ಇರುವ ಸಂಖ್ಯೆಗಳನ್ನು ಒಳಗೊಂಡಿರುವುದರಿಂದ **ಅಷ್ಟೌ** ಎಂದರೆ ಎಂಟು ಎಂಬರ್ಥವನ್ನು ಸೂಚಿಸುವುದಾಗಿದೆ. **ನವ ನ ವನನೀಯಾ ನಾವಾಪ್ತಾ ವಾ। ನವ**-ಒಂಭತ್ತು ಎಂಬ ಶಬ್ದವು **ವನ್**-ಗೆಲ್ಲು ಅಥವಾ **ನ+ಅ+ಆಪ್ಲೃ**-ಹೊಂದದಿರು ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ ಎಂದರೆ **ಈ** ಸಂಖ್ಯಾಕವಾದ ನವಮಿತಿಥಿಯು ಯಾವ ಒಳ್ಳೆಯ ಕಾರ್ಯಕ್ಕೂ ಪ್ರಶಸ್ತವಾಗಿರುವುದಿಲ್ಲವಾದ್ದರಿಂದ ಇದಕ್ಕೆ ನವ ಎಂಬ ಹೆಸರು ಬಂದಿದೆ. **ದಶ ದಸ್ತಾ ದೃಷ್ಟಾರ್ಥಾ ವಾ । ದಶ**-ಹತ್ತು ಎಂಬ ಶಬ್ದವು **ದಸ್**-ಮುಗಿದುಹೋಗು, ನಷ್ಟವಾಗು ಎಂಬರ್ಥವುಳ್ಳ **ದಸ್** ಧಾತುವಿನಿಂದಾಗಲಿ **ದೃಶಿರ್**-ಪ್ರೇಕ್ಷಣೇ, ನೋಡು ಎಂಬ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ಏಕೆಂದರೆ ಹತ್ತುಸಂಖ್ಯೆಯು ಕಳೆದ

ನಂತರ ಮುಂದೆ ಬರುವ ೧೧, ೧೨, ೧೩ ಮುಂತಾವ ಸಂಖ್ಯೆಗಳಲ್ಲಿ ಹಿಂದೆ ಬಂದ ೧, ೨, ೩ ಮೊದಲಾದ ಸಂಖ್ಯೆಗಳೇ ಮತ್ತೆಮತ್ತೆ ಬರುವುದನ್ನು ನಾವು ನೋಡುತ್ತೇವೆ. ಆದ್ದರಿಂದ ಪುನಪುನಃ ನೋಡುವುದರಿಂದ ಈ ಸಂಖ್ಯೆಗೆ **ದಶ** ಎಂಬ ಹೆಸರು ಬಂದಿದೆ. **ವಿಂಶತಿರ್ದ್ವಿರ್ದಶತೇಃ**-**ವಿಂಶತಿ** ಇಪ್ಪತ್ತು ಎಂದರೆ ಎರಡು ಹತ್ತುಗಳು ಎಂದರ್ಥವು. **ಶತಂ ದಶದಶತೇಃ ಶತಂ**-ನೂರು ಎಂದರೆ ಹತ್ತುಸಲ ಹತ್ತು ಸಂಖ್ಯೆಗಳು, **ಸಹಸ್ರಂ ಸಹಸ್ವತ್—ಸಹಃ** ಎಂದರೆ ಬಲವು ಅಥವಾ ಶಕ್ತಿಯು. **ಸಹಸ್ರಂ**-ಸಾವಿರ ಎಂದರೆ ಸಾವಿರ (ಅನೇಕ) ಸಂಖ್ಯೆಗಳನ್ನೊಳಗೊಂಡಿರುವುದರಿಂದ ಬಹಳ ಬಲವುಳ್ಳದ್ದು. ಬಲವುಳ್ಳದ್ದರಿಂದಲೇ **ಸಹಸ್ರಂ** ಎಂದು ಹೆಸರು; **ಅಯುತಂ** ಎಂದರೆ ಹತ್ತುಸಾವಿರ. ಅದರಂತೆ **ಅಯುತಂ, ನಿಯುತಂ, ಪ್ರಯುತಂ, ತತ್ತದಭ್ಯಸ್ತಂ । ಅಯುತಂ ನಿಯುತಂ ಪ್ರಯುತಂ** ಎಂಬ ಶಬ್ದಗಳು ಒಂದಕ್ಕಿಂತ ಮತ್ತೊಂದು ಹತ್ತುಸಾಲಿನಷ್ಟು ಸಂಖ್ಯೆಯನ್ನು ಸೂಚಿಸುತ್ತವೆ. **ಅಯುತಂ** ಎಂದರೆ ಹತ್ತುಸಾವಿರ. **ನಿಯುತಂ** ಎಂದರೆ ಒಂದು ಲಕ್ಷ; **ಪ್ರಯುತಂ** ಎಂದರೆ ಹತ್ತುಲಕ್ಷ ಇತ್ಯಾದಿ **ಅರ್ಬುದ**ಶಬ್ದಕ್ಕೆ ಮೇಘವೆಂದರ್ಥವು. ಅರಣ ಅಥವಾ ಅಂಬು ಎಂದರೆ ಉದಕವು. ಉದಕವನ್ನು ಕೊಡುವುದು ಎಂದರೆ ಸುರಿಸುವುದರಿಂದ ಅರ್ಬುದವೆಂದರೆ ಮೇಘವು ಮೇಘವು ಯಾವರೀತಿ ಬಹುದೊಡ್ಡದಾಗಿ ಅಂತರಿಕ್ಷದಲ್ಲಿ ವೃದ್ಧಿಯಾಗಿ ಪ್ರಸರಿಸುವುದೋ ಅದರಂತೆ ಮೇಘವೆಂಬ ಅರ್ಥವನ್ನು ಸೂಚಿಸುವ ಅರ್ಬುದಶಬ್ದಕ್ಕೆ ಕೋಟಿ ಎಂಬ ಸಂಖ್ಯಾವಾಚಕ ಅರ್ಥವಿರುವುದು ಅಥವಾ ಅರ್ಬುದಶಬ್ದಕ್ಕೆ—**ಅಂಬುಮುದ್ಭಾತೀತೀ ವಾ** ನೀರಿನಂತೆ ಪ್ರಕಾಶಿಸುವುದರಿಂದ ಮೇಘವೆಂಬ ಹೆಸರು ಅಥವಾ **ಅಂಬುಮುದ್ಭವತೀತೀ ವಾ** ನೀರಿನಂತೆಯೇ ಇರುವುದರಿಂದ ಮೇಘವೆಂಬ ಹೆಸರು ಎಂದು ಅರ್ಬುದಶಬ್ದಕ್ಕೆ ಎರಡು ವಿಧವಾದ ಅರ್ಥಗಳನ್ನೂ ಹೇಳಬಹುದು. ಮಳೆಗಾಲದಲ್ಲಿ ಅರ್ಬುದ ಎಂದರೆ ಮೇಘವು ಯಾವರೀತಿ ಬಹಳವಾದ ವೃಷ್ಟಿಯನ್ನು ಸುರಿಸುವದೋ ಅದರಂತೆ ಅರ್ಬುದಶಬ್ದಕ್ಕೆ ಸಂಖ್ಯಾವಾಚಕ ಅರ್ಥವನ್ನು ಹೇಳುವಾಗ ಅತ್ಯಧಿಕವಾದ ಸಂಖ್ಯೆ ಎಂದರೆ ಕೋಟಿ ಎಂಬರ್ಥವಿರುವುದು. **ಖಲೇ ನ ಪಷ್ಠಾನ್ ಪ್ರತಿಹನ್ಮಿ ಭೂರಿ** ಎಂಬ ವಾಕ್ಯದಲ್ಲಿ ಖಲ ಶಬ್ದಕ್ಕೆ ಸಂಗ್ರಾಮ ಅಥವಾ ಯುದ್ಧವೆಂದರ್ಥ. ಈ ಖಲಶಬ್ದವು ಬೀಳು ಎಂಬರ್ಥವುಳ್ಳ ಖಲತಿಧಾತುವಿನಿಂದಾಗಲಿ ಕೊಲ್ಲು ಎಂಬರ್ಥವುಳ್ಳ ಸ್ಖಲಿತಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ಕಣದಲ್ಲಿ ಧಾನ್ಯಗಳ ಹೊಟ್ಟನ್ನು ತೂರುವಂತೆ ಯುದ್ಧದಲ್ಲಿ ಶತ್ರುಗಳನ್ನು ಚದುರಿಸಿ ಕೊಲ್ಲುತ್ತೇನೆ ಎಂದು ಇದು ಇಂದ್ರನ ವಾಕ್ಯವು. ಆದ್ದರಿಂದ ಈ ಯುದ್ಧ ಭೂಮಿಯಲ್ಲಿ ಯುದ್ಧಭಟರು ಸತ್ತುಬೀಳುವುದರಿಂದ ಬೀಳು ಎಂಬರ್ಥವುಳ್ಳ ಖಲತಿಧಾತುವಿನಿಂದ ಖಲಶಬ್ದವು ನಿಷ್ಪನ್ನವಾಗಿದೆ ಅಥವಾ ಯುದ್ಧದಲ್ಲಿ ಒಬ್ಬರನ್ನೊಬ್ಬರು ಕೊಲ್ಲುವುದರಿಂದ ಕೊಲ್ಲು ಎಂಬರ್ಥವುಳ್ಳ ಸ್ಖಲತಿಧಾತುವಿನಿಂದ ಖಲ ಎಂಬ ಶಬ್ದವು ನಿಷ್ಪನ್ನವಾಗಬಹುದು. ಈ ಅರ್ಥದಲ್ಲಿ ಖಲಶಬ್ದಕ್ಕೆ ಸಂಗ್ರಾಮ ಅಥವಾ ಯುದ್ಧವೆಂಬರ್ಥವಿರುವುದು. ಇದಲ್ಲದೆ ಧಾನ್ಯಗಳನ್ನು ಬಡಿಯುವುದು ಎಂಬರ್ಥದಲ್ಲಿಯೂ ಈ ಶಬ್ದಪ್ರಯೋಗವಿರುವುದು. **ಕಂ ಮಾ ನಿಂದಂತಿ ಶತ್ರವೋ೨ನಿಂದ್ರಾಃ** ಎಂಬ ವಾಕ್ಯದಲ್ಲಿ ಅನಿಂದ್ರಾಃ ಎಂಬ ಶಬ್ದಕ್ಕೆ ಇಂದ್ರನೊಡನಿಲ್ಲದಿರುವವರು ಅಥವಾ ಇಂದ್ರನನ್ನು ಭಜಿಸದಿರುವವರು ಎಂದರ್ಥವು. ಇಂದ್ರನು ತಮ್ಮಕಡೆ ಇಲ್ಲದ ಎಂದರೆ ಇಂದ್ರನ ಅನುಗ್ರಹವಿಲ್ಲದ ಶತ್ರುಜನರು ಇಂದ್ರನಾದ ನನ್ನನ್ನು ಹೇಗೆ ನಿಂದಿಸಬಲ್ಲರು? ಅಥವಾ ಇಂದ್ರನ ಅನುಗ್ರಹವಿಲ್ಲದಿರುವವರು ನಾನೇ ಇಂದ್ರನೆಂದು ಹೇಗೆತಾನೇ ತಿಳಿಯಬಲ್ಲರು? ಇಂತಹ ಜನರು ನನ್ನನ್ನು ಹೇಗೆತಾನೇ ನಿಂದಿಸಬಲ್ಲರು ಎಂದು ನಿರ್ವಚನದ ಮುಖ್ಯಾಭಿಪ್ರಾಯವು.

ಸಂಹಿತಾಪಾಠಃ

ಅಹಂ ಗುಂಗುಭ್ಯೋ ಅತಿಥಿಗ್ವಮಿಷ್ಕರಮಿಷ್ಟಂ ನ ವೃತ್ರತುರಂ ವಿಕ್ಷು ಧಾರಯಂ ।

ಯತ್ಪರ್ಣಯಘ್ನ ಉತ ವಾ ಕರಂಜಹೇ ಪ್ರಾಹಂ ಮಹೇ ವೃತ್ರಹತ್ಯೇ
ಅಶುಶ್ರವಿ ॥ ೪ ॥

ಪದಪಾಠಃ

ಅಹಂ । ಗುಂಗುಭ್ಯಃ । ಅತಿಥಿಗ್ವಂ । ಇಷ್ಕರಂ । ಇಷಂ । ನ । ವೃತ್ರತುರಂ । ವಿಕ್ಷು । ಧಾರಯಂ ॥
ಯತ್ । ಪರ್ಣಯಘ್ನೇ । ಉತ । ವಾ । ಕರಂಜಹೇ । ಪ್ರ । ಅಹಂ । ಮಹೇ । ವೃತ್ರಹತ್ಯೇ ।
ಅಶುಶ್ರವಿ ॥

ಸಾಯಣಭಾಷ್ಯಂ

ಅಹಮಿಂದ್ರೋ ಗುಂಗುಭ್ಯ ಏತನ್ನಾಮಕೇಭ್ಯೋ ಜನಪದೇಭ್ಯೋ ರಕ್ಷಣಾಯಾತಿಥಿಗ್ವ-
ಮತಿಥಿಗೋಃ ಪುತ್ರಂ ದಿವೋದಾಸಮೃಷಿಮಿಷ್ಕರಂ ನಿಷ್ಕರ್ತಾರಂ ವೃತ್ರತುರಂ ಶತ್ರೂಣಾಂ ಹಿಂಸಕಂ
ವಿಕ್ಷು ಪ್ರಜಾಸು ಮಧ್ಯ ಇಷಂ ನಾನ್ನಮಿವ ತಾಸಾಮನ್ನಂ ಯಥಾ ಭೋಗಾಯ ಭವತಿ ತದ್ವದನ್ನ-
ಸ್ಥಾನೀಯಂ ಧಾರಯಂ । ಧಾರಿತವಾನಸ್ಮಿ । ಕದೇತಿ ಉಚ್ಯತೇ । ಯದ್ಯದಾ ಪರ್ಣಯಘ್ನೇ ಪರ್ಣಯ-
ನಾಮಕಸ್ಯಾಸುರಸ್ಯ ಹನನವತಿ ಉತಾಪಿ ಚ ಕರಂಜಹ ಏತನ್ನಾಮಕಸ್ಯ ಹನನೋಪೇತೇ ಮಹೇ
ಮಹತಿ ವೃತ್ರಹತ್ಯೇ ಸಂಗ್ರಾಮೇಽಶುಶ್ರವಿ ಶ್ರುತೋಽಭವಂ ॥

ಪ್ರತಿಪದಾರ್ಥ

ಯತ್—ಯಾವಾಗ । **ಪರ್ಣಯಘ್ನೇ**—ಪರ್ಣಯ ಎಂಬ ಅಸುರನನ್ನು ಸಂಹರಿಸಿದ । **ಉತ ವಾ**—ಮತ್ತು । **ಕರಂಜಹೇ**—ಕರಂಜನೆಂಬ ಅಸುರನನ್ನು । **ಮಹೇ ವೃತ್ರಹತ್ಯೇ**—ಶತ್ರುಸಂಹಾರಕವಾದ ಮಹಾ ಯುದ್ಧದಲ್ಲಿ ಕೊಂದು । **ಅಶುಶ್ರವಿ**—ನಾನು ಪ್ರಸಿದ್ಧಿಯನ್ನು ಪಡೆದನೋ ಆಗ ! **ಅಹಂ**—ನಾನು । **ಗುಂಗುಭ್ಯಃ**—ಗುಂಗು ಎಂಬ ಹೆಸರಿನ ಜನರನ್ನು ಕಾಪಾಡುವುದಕ್ಕಾಗಿ । **ಅತಿಥಿಗ್ವಂ**—ಅತಿಥಿಗು ಎಂಬುವನ ಪುತ್ರನಾದ ದಿವೋದಾಸನೆಂಬ ಋಷಿಯನ್ನು । **ಇಷ್ಕರಂ**—ಏನುಮಾಡದಿದ್ದರೂ । **ವೃತ್ರತುರಂ**—ಶತ್ರುಗಳ ಹಿಂಸಕನಾಗುವಂತೆಯೂ । **ವಿಕ್ಷು**—ಪ್ರಜೆಗಳ ಮಧ್ಯದಲ್ಲಿ । **ಇಷಂ ನ**—ಅವಶ್ಯಕವಾದ ಅಥವಾ ಭೋಗಸಾಧನವಾದ ಅನ್ನದಂತೆಯೂ । **ಧಾರಯಂ**—ಧರಿಸಿದ್ದೇನೆ (ಮಾಡಿದ್ದೇನೆ).

ಭಾವಾರ್ಥ

ಪರ್ಣಯ ಮತ್ತು ಕರಂಜ ಎಂಬ ಅಸುರರನ್ನು ಸಂಹರಿಸಲು ನಡೆದ ಮಹಾಯುದ್ಧದಲ್ಲಿ ನಾನು ಆ ಅಸುರರನ್ನು ಸಂಹರಿಸಿ ಕೀರ್ತಿಯನ್ನು ಪಡೆದು ಪ್ರಸಿದ್ಧನಾದಾಗ ಗುಂಗು ಎಂಬ ರಾಷ್ಟ್ರದ ಜನರನ್ನು ಕಾಪಾಡುವುದಕ್ಕಾಗಿ ಶತ್ರುಸಂಹಾರಕಾರ್ಯದಲ್ಲಿ ಅಸಮರ್ಥನಾದವನೂ ಅತಿಥಿಗು ಎಂಬುವನ ಪುತ್ರನೂ ಆದ ದಿವೋದಾಸನೆಂಬ ಋಷಿಯನ್ನು ಯುದ್ಧದಲ್ಲಿ ಶತ್ರುಸಂಹಾರಕನನ್ನಾಗಿಯೂ, ಪ್ರಜೆಗಳ ಮಧ್ಯದಲ್ಲಿ ಭೋಗಸಾಧನವಾದ ಅನ್ನದಂತೆ ಸಕಲರಿಗೂ ಪ್ರಿಯನನ್ನಾಗಿ ಮಾಡಿದೆನು.

English Translation

I prepared Attithigva for (the protection of) the Gungus, I upheld him, the dostroyer of enemies, as sustenance amongst the people; whcn I gained renown in the great Vritra-battle, in which Parnaya and Karanja were slain.

ಸಂಹಿತಾಪಾಠಃ

ಪ್ರ ಮೇ ನಮೀ ಸಾಪ್ಯ ಇಷೇ ಭುಜೇ ಭೂದ್ಗವಾಮೇಷೇ ಸಖ್ಯಾ ಕೃಣುತ ದ್ವಿತಾ ।

ದಿದ್ಯುಂ ಯದಸ್ಯ ಸಮಿಥೇಷು ಮುಂಹಯುಮಾದಿದೇನಂ ಶಂಸ್ಯಮುಕ್ಥ್ಯಂ ಕರಂ ॥ ೯ ॥

ಪದಪಾಠಃ

ಪ್ರ । ಮೇ । ನಮೀ । ಸಾಪ್ಯಃ । ಇಷೇ । ಭುಜೇ । ಭೂತ್ । ಗವಾಂ । ಏಷೇ । ಸಖ್ಯಾ । ಕೃಣುತ । ದ್ವಿತಾ ॥

ದಿದ್ಯುಂ । ಯತ್ । ಅಸ್ಯ । ಸಂಽಇಥೇಷು । ಮುಂಹಯುಂ । ಆತ್ । ಇತ್ । ಏನಂ । ಶಂಸ್ಯಂ । ಉಕ್ಥ್ಯಂ । ಕರಂ ॥ ೯ ॥

ಸಾಯಣಭಾಷ್ಯಂ

ಮೇ ಮಮ ಮತ್ಸಂಬಂಧೀ ನಮೀ । ನಾಮಕತ್ವಾನ್ನಮಃ ಸ್ತೋತ್ರಂ । ತದಸ್ಯಾಸ್ತೀತಿ ನಮೀ ಸ್ತೋತಾ ಸಾಪ್ಯಃ ಸರ್ವೈರಾಶ್ರಯಣೀಯ ಇಷೇಽನ್ನಾಯ ಭುಜೇ ಭೋಗಾಯ ಪ್ರ ಭೂತ್ । ಪ್ರಭವತಿ । ತಂ ಮತ್ಸ್ತೋತಾರಂ ಮನುಷ್ಯಾ ಗವಾಮೇಷೇಽನ್ವೇಷಣಾಯ ಸಖ್ಯಾ ಸಖ್ಯಾಯ ಚ ದ್ವಿತಾ ದ್ವಿವಿಧಂ ದ್ವಿಪ್ರಕಾರಾಯ ಕೃಣುತ । ಕೃಣ್ವಂತಿ । ಗವಾಂ ದಾತಾರಂ ಸಖಾಯಂ ಚ ಕುರ್ವಂತೀತ್ಯರ್ಥಃ । ಯದ್ವಾ । ಗವಾಮೇಷ ಏಷಣೇ ದ್ವಿತಾ ದ್ವೈಧಾಯ ಸಖ್ಯಾಯ ಶಾರೀರಾಯ ಸೈನಿಕಾಯ ಚ ಸಖ್ಯಾಯಕೃಣ್ವಂತಿ । ಕದೇತಿ ಉಚ್ಯತೇ। ಯದ್ಯದಾಸ್ಯ ಮತ್ಸಂಬಂಧಿನಃ ಸ್ತೋತುರ್ಜಯಾರ್ಥಂ ಸಮಿಥೇಷು ಸಂಗ್ರಾಮೇಷು ದಿದ್ಯುಮಾಯುಧಂ ಮುಂಹಯಂ । ಸ್ವೀಕುರ್ಯಾಮಿತ್ಯರ್ಥಃ । ಆದಿದನಂತರಮೇವೈನಂ ಸ್ತೋತಾರಂ ಶಂಸ್ಯಂ ಸ್ತುತ್ಯಮುಕ್ಥ್ಯಮುಕ್ಥಾರ್ಹಂ ಕರಂ । ಅಕರಂ । ಕರೋಮಿ ॥

ಪ್ರತಿಪದಾರ್ಥ

ಯತ್—ಯಾವಾಗ । **ಅಸ್ಯ**—ಈ ನನ್ನ ಸ್ತುತಿಕರ್ತನ । **ಸಮಿಥೇಷು**—ಯುದ್ಧಗಳಲ್ಲಿ । **ದಿದ್ಯುತ್**—ಆಯುಧವನ್ನು । **ಮುಂಹಯಂ**—ಕೊಟ್ಟಿನೋ । **ಆದಿತ್**—ಅನಂತರ । **ಏನಂ**—ಈ ಸ್ತುತಿಕರ್ತನನ್ನು ।

ಶಂಸ್ಯಂ—ಸ್ತುತ್ಯರ್ಹನನ್ನಾಗಿಯೂ । **ಉಕ್ಥ್ಯಂ**—ಪ್ರಶಂಸಾರ್ಹನನ್ನಾಗಿಯೂ । **ಕರಂ**—ಮಾಡಿದೆನೋ ಆಗ । **ಮೇ**—ನನ್ನ । **ನಮಾ**—ಸ್ತುತಿಕರ್ತನು । **ಇಷೇ**—ಅನ್ನಲಾಭದಲ್ಲಿಯೂ । **ಭುಜೇ**—ಭೋಗಪ್ರಾಪ್ತಿಯಲ್ಲಿಯೂ । **ಪ್ರ ಭೂತ್**—ಸಮರ್ಥನಾಗುತ್ತಾನೆ । **ತಂ**—ಅಂತಹ ಪುರುಷನನ್ನು ಮನುಷ್ಯರು ! **ಗವಾಂ ಏಷೇ**—ಗೋವುಗಳನ್ನು ಹುಡುಕುವುದಕ್ಕಾಗಿಯೂ ಅಥವಾ ಗೋವುಗಳನ್ನು ಪಡೆಯುವುದಕ್ಕಾಗಿಯೂ । **ಸಖ್ಯಾ**—ಅವನ ಸ್ನೇಹಸಂಪಾದನೆಗಾಗಿಯೂ । **ದ್ವಿತಾ**—ಈ ಎರಡು ವಿಧ ಕಾರ್ಯಕ್ಕಾಗಿ । **ಕೃಣುತೆ**—ಆಶ್ರಯಿಸುತ್ತಾರೆ.

ಭಾವಾರ್ಥ

ನನ್ನನ್ನು ಸ್ತೋತ್ರಮಾಡುವ ಸ್ತುತಿಕರ್ತನು ಶತ್ರುಗಳೊಡನೆ ಮಾಡುವ ಯುದ್ಧಗಳಲ್ಲಿ ಶತ್ರುವಧಾರ್ಥವಾಗಿ ಅವನಿಗೆ ಆಯುಧವನ್ನು ಕೊಟ್ಟು ಅವನನ್ನು ಪ್ರಶಂಸಾರ್ಹನನ್ನಾಗಿ ಮಾಡಿದಾಗ ಆ ನನ್ನ ಸ್ತುತಿಕರ್ತನು ಅನ್ನವನ್ನು ಸಂಪಾದಿಸಲು ಮತ್ತು ಅದನ್ನು ಭೋಗಿಸಲು ಸಮರ್ಥನಾಗುತ್ತಾನೆ. ಮನುಷ್ಯರು ಅಂತಹ ಪುರುಷನನ್ನೇ ಗೋವುಗಳನ್ನು ಪಡೆಯುವುದಕ್ಕಾಗಿಯೂ ಅವನ ಸ್ನೇಹಸಂಪಾದನೆಗಾಗಿಯೂ ಈ ಎರಡು ವಿಧ ಕಾರ್ಯಗಳಿಗಾಗಿಯೂ ಆಶ್ರಯಿಸುತ್ತಾರೆ.

English Translation

My praiser, the refuge (of all), was food to enjoy ; (him, men) use in two ways, to search for their cattle, and to be their friend, when I bestow upon him a weapon in his battles, and make him worthy of celebrity and praise.

ಸಂಹಿತಾಪಾಠಃ

ಪ್ರ ನೇಮಸ್ಮಿನ್ದದೃಶೇ ಸೋಮೋ ಅಂತರ್ಗೋಪಾ ನೇಮಮಾವಿರಸ್ಥಾ
ಕೃಣೋತಿ ।
ಸ ತಿಗ್ಮಶೃಂಗಂ ವೃಷಭಂ ಯುಯುತ್ಸನ್ ದ್ರುಹಸ್ತಸ್ಥೌ ಬಹುಲೇ ಬಧ್ದೋ
ಅಂತಃ ॥ ೧೦ ॥

ಪದಪಾಠಃ

ಪ್ರ। ನೇಮಸ್ಮಿನ್ । ದದೃಶೇ । ಸೋಮಃ । ಅಂತಃ । ಗೋಪಾಃ । ನೇಮಂ । ಆವಿಃ। ಅಸ್ಥಾ । ಕೃಣೋತಿ ॥
ಸಃ । ತಿಗ್ಮಶೃಂಗಂ । ವೃಷಭಂ । ಯುಯುತ್ಸನ್ । ದ್ರುಹಃ । ತಸ್ಥೌ । ಬಹುಲೇ । ಬದ್ಧಃ । ಅಂತರಿತಿ ॥

ಸಾಯಣಭಾಷ್ಯಂ

ನೇಮಸ್ಮಿನ್ । ನೇಮಶಬ್ದೋಽರ್ಧಪರ್ಯಾಯಃ । ಯಷ್ಟಾಯಷ್ಟಾ ಚ ದ್ವೌ ಪುರುಷೌ ಯುಧ್ಯಂತೌ । ತಯೋರೇಕಸ್ಮಿನ್ಯಷ್ಟರೀತ್ಯರ್ಥಃ । ತಸ್ಮಿನ್ನಂತಃ ಸೋಮೋ ದದೃಶೇ । ದೃಶ್ಯತೇ । ತಂ

नेममार्धमेकं गोपा गोपायितेंद्रोऽस्था क्षेपणसाधनेन वज्रेणाविष्कृणोति । प्रकटयति । शत्रुभिरनभिभूतं करोतीत्यर्थः । स यत्र सोमो न दृश्यते स तिग्मशृंगं तीक्ष्णायुधं वृषभं बाणान्वर्षयंतमिंद्रेणानुगृहीतं प्रति युयुयुत्सन् योद्धुमिच्छन् द्रुहो द्रोग्धा बद्धः सन् बहुलेंऽधकारेंऽतस्तस्य मध्ये तस्थौ । तिष्ठति । यदा । एवं व्याख्येयं । नेमस्मिन्निंद्रभक्तेंऽन्तः सोमो दवृशे । नेमममन्यं गोपाः स्वभक्तरक्षक इंद्रोऽस्था वज्रेणाविष्कृणोति । आविष्करोति । वज्रेण पीडयतीत्यर्थः । स नेमो द्रुहस्तिग्मशृंगं वृषभमिंद्रं युयुयुत्सन् । शिष्टं समानं ॥

ಪ್ರತಿಪದಾರ್ಥ

ನೇಮಸ್ಮಿನ್—ಯಜ್ಞಮಾಡುವವನೂ, ಮಾಡದಿರುವವನೂ ಎಂಬಿಬ್ಬರಲ್ಲಿ ಯಜ್ಞಮಾಡುವ ಪುರುಷರಲ್ಲಿ । **ಅಂತಃ**—ಮಧ್ಯದಲ್ಲಿ । **ಸೋಮಃ**—ಸೋಮರಸವು । **ದದೃಶೇ**—ಕಾಣಲ್ಪಡುವುದೋ । **ತಂ ನೇಮಂ**—ಇಬ್ಬರಲ್ಲಿ ಒಬ್ಬನಾದ ಆ ಪುರುಷನನ್ನು । **ಗೋಪಾಃ**—ಸಂರಕ್ಷನಾದ ಇಂದ್ರನು । **ಅಸ್ಥಾ**—ಹನನಸಾಧನವಾದ ವಜ್ರಾಯುಧದಿಂದ । **ಆವಿಃ ಕೃಣೋತಿ**—ಪ್ರಕಟಿಸುತ್ತಾನೆ ಎಂದರೆ ಶತ್ರುಗಳಿಂದ ಸೋಲಿಸಲ್ಪಡದಂತೆ ಮಾಡುತ್ತಾನೆ। **ಸಃ**—ಯಜ್ಞಮಾಡದಿರುವ ಎಂದರೆ ಸೋಮರಸವನ್ನು ಪಡೆಯದಿರುವ ಇನ್ನೊಬ್ಬ ಪುರುಷನು । **ತಿಗ್ಮಶೃಂಗಂ**—ಹರಿತವಾದ ಆಯುಧವುಳ್ಳ । **ವೃಷಭಂ**—ಯುದ್ಧದಲ್ಲಿ ಬಾಣವೃಷ್ಟಿಯನ್ನು ಸುರಿಸುವ ತನ್ನ ಪ್ರತಿಕಕ್ಷಿಯಾದ ಯಜ್ಞಕರ್ತನೊಡನೆ । **ಯುಯುತ್ಸನ್**—ಯುದ್ಧಮಾಡಬೇಕೆಂದು ಒಯಸುವಾಗ । **ದ್ರುಹಃ**—ದ್ರೋಹಿಯಾದ ಅವನು । **ಬದ್ಧಃ**—ಪಾಶಗಳಿಂದ ಕಟ್ಟಲ್ಪಟ್ಟವನಾಗಿ । **ಬಹುಲೇ ಅಂತಃ**—ಅಂಧಕಾರದ ಮಧ್ಯದಲ್ಲಿ । **ತಸ್ಥೌ**—ಇರುತ್ತಾನೆ.

ಭಾವಾರ್ಥ

ಯಾವ ಪುರುಷನಲ್ಲಿ ಸೋಮರಸವು ಕಾಣಲ್ಪಡುವುದೋ ಎಂದರೆ ಯಜ್ಞಕರ್ತೃ ಮತ್ತು ಯಜ್ಞಮಾಡದವನು ಎಂಬಿಬ್ಬರ ಮಧ್ಯದಲ್ಲಿ ಯಜ್ಞಮಾಡುವ ಪುರುಷನನ್ನು ಇಂದ್ರನು ತನ್ನ ವಜ್ರಾಯುಧದಿಂದ ಸಹಾಯಮಾಡಿ ಅವನು ಶತ್ರುಗಳಿಂದ ಪರಾಜಿತನಾಗದಂತೆ ಮಾಡುತ್ತಾನೆ. ಆದರೆ ಯಜ್ಞಮಾಡದಿರುವ ಪುರುಷನು ಹರಿತವಾದ ಆಯುಧವುಳ್ಳವನೂ, ಯುದ್ಧದಲ್ಲಿ ಬಾಣವೃಷ್ಟಿಯನ್ನು ಸುರಿಸುವವನೂ ಆದ ಯಜ್ಞಕರ್ತನೊಡನೆ ಯುದ್ಧಮಾಡುವಾಗ ತನಗೆ ಯಾವ ಸಹಾಯವೂ ಇಲ್ಲದ್ದರಿಂದ ಶತ್ರುಗಳ ಪಾಶಗಳಿಂದ ಕಟ್ಟಲ್ಪಟ್ಟು ಅಂಧಕಾರಾವೃತವಾದ ಕಾರಾಗೃಹದಲ್ಲಿ ಇರುತ್ತಾನೆ ಅಥವಾ ಇಂದ್ರನ ಸಹಾಯವಿಲ್ಲದ್ದರಿಂದ ಅಸಹಾಯನಾಗಿ ಶತ್ರುಗಳ ವಶವಾಗುವನು.

English Translation

The Soma is seen in one of the two (combatants); the cowherd (Indra)manifests the other with his thunder-bolt: the latter warring against the sharp-horned bull, remains in great (darkness) bound by the victor.

ಸಂಹಿತಾಪಾಠಃ

आदित्यानां वसूनां रुद्रियाणां देवो देवानां न मिनामि धाम ।

तेऽ मॉ भद्रायꣳ शवसेऽ ततक्षुरपराजितमꣳस्तृतमषाळ्हꣳ ॥ ८८ ॥

पदपाठः

आदित्यानाꣳ । वसूनाꣳ । रुद्रियाणाꣳ । देवः । देवानाꣳ । न । मिनामि । धामꣳ ॥

तेऽ । मॉ । भद्रायꣳ । शवसेऽ । ततक्षुः । अपराजितꣳ । अस्तृतꣳ । अषाळ्हꣳ ॥ ८८ ॥

सायणभाष्यं

आदित्यानां वसूनां रुद्रियाणां रुद्राणां यद्वा रुद्रपुत्राणां मरुतां च देवानां धाम स्थानं देव इन्द्रो न मिनाति । न हिनस्ति । त आदित्यादयो मा मां भद्रायꣳ शवसे ततक्षुः । अनुगृह्णन्तु । अपराजितमस्तृतमहिंसितमषाळ्हं मनभिभूतं ॥

प्रतिपदार्थ

देवः—देवात्मनाद इन्द्रनु । **आदित्यानां**—आदित्यर अथवा आदितिपुत्ररादा देवतेगळ । **वसूनां**—वसुगळ । **रुद्रियाणां**—रुद्रर अथवा रुद्रपुत्ररादा मरुत्तुगळ । **देवानां**—इतर देवतेगळ । **धाम**—स्थानवन्नु । **न मिनाति**—त्यजिसुवुदिल्ल । **ते**—आदित्यादि देवतेगळु । **मा**—नन्नन्नु । **भद्राय**—मंगळक्काग़ियू । **शवसे**—शक्तिसामर्थ्यगळिगागियू । **ततक्षुः**—अनुग्रहिसलि । **अपराजितं**—शत्रुगळिंद सोलिसल्पडदंतेयू । **अस्तृतं**—अवरिंद हिंसिसल्पडदंतेयू । **अषाळ्हं**—सोलागदंतेयू नन्नन्नु अनुग्रहिसलि.

भावार्थ

आदित्यरु, वसुगळु, रुद्ररु मत्तु इतर देवतेगळ स्थानवन्नु देवतात्मनाद इंद्रनु त्यजिसदिरलि. आ आदित्यादिदेवतेगळु ननगे मंगळवन्नुंटुमाडि शक्तिसामर्थ्यगळन्नु कॊट्टु शत्रुगळिंद पराजितनागदंतेयू अवरिंद हिंसितनागदंतेयू यारिंदलू सोलागदंतेयू नन्नन्नु अनुग्रहिसलि.

English Translation

The divine (Indra) abandons not the abode of the deities, the Adityas, the Vasus, and the Rudriyas; may they fashion me for auspicious vigour, undefeated, unharmed, unconquered.

———

ನಲವತ್ತೊಂಭತ್ತನೆಯ ಸೂಕ್ತ

ಪೀಠಿಕೆ

ಈ ಸೂಕ್ತದಲ್ಲಿಯೂ ಇಂದ್ರನು ತನ್ನ ಸಾಹಸಕೃತ್ಯಗಳನ್ನು ಪ್ರಶಂಸೆ ಮಾಡಿಕೊಂಡಿದ್ದಾನೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ವೃತ್ರಾಸುರವಧವರ್ಣನೆ

ವೃತ್ರಾಸುರನು ದುಷ್ಟಸ್ವಭಾವದವನು. ಇವನ ಸ್ವಭಾವವು ಯಾರಿಗೂ ತಿಳಿಯದು. ಇವನಿಗೆ ಯಾವ ಉತ್ತಮ ಪರಿಜ್ಞಾನವೂ ಇಲ್ಲ. ಯಾವಾಗಲೂ ಉದಕಗಳನ್ನು ಅಡ್ಡಗಟ್ಟಿ ಮಲಗಿರುವುದೇ ಇವನ ಸ್ವಭಾವ. ಇಂತಹ ನೀಚಸ್ವಭಾವವುಳ್ಳ ವೃತ್ರನನ್ನು ಇಂದ್ರನು ಪೌರ್ಣಮಾಸಿಯ ದಿವಸ ವಜ್ರಾಯುಧದಿಂದ ಸಂಹರಿಸಿದನೆಂದು ವರ್ಣನೆ ಇದೆ. ಈ ವಿಷಯದಲ್ಲಿ ಭಾಷ್ಯಕಾರರು—

ತೈತ್ತಿರೀಯಸಂಹಿತಾವಾಕ್ಯವನ್ನುದಾಹರಿಸಿ ಆದರಲ್ಲಿ ಇಂದ್ರನು ವೃತ್ರನನ್ನು ಪೌರ್ಣಮಾಸಿಯ ದಿನದಲ್ಲಿ ಸಂಹಾರಮಾಡಿರುವ ವಿಷಯವು ಉಕ್ತವಾಗಿದೆಯೆಂದು ತಿಳಿಸಿದಾರೆ. ಇಂದ್ರನು ವೃತ್ರನನ್ನು ಸಂಹಾರಮಾಡಿದ ವಿಷಯವನ್ನು ಎಲ್ಲಾ ಋಷಿಗಳೂ ಪ್ರಶಂಸೆಮಾಡಿರುವುದರಿಂದ ಆ ವೃತ್ರಹನನದ ವಿಸ್ತಾರವಾದ ವಿವರಣೆಯನ್ನು ಇಲ್ಲಿ ಹೇಳುವುದು ಆವಶ್ಯಕವು. ಆದುದರಿಂದ ಆ ವಿವರವನ್ನು ತಿಳಿಸುವ ಯಜುರ್ವೇದದ ಮಂತ್ರಭಾಗವನ್ನೂ ಅದರ ಅರ್ಥಾನುವಾದವನ್ನೂ ಇಲ್ಲಿ ವಿವರಿಸಿದೇವೆ—

ತ್ವೆಷ್ಟಾ ಹತಪುತ್ರೋ ವೀಂದ್ರಗ್ಂ ಸೋಮಮಾಹರತ್ತಸ್ಮಿನ್ನಿಂದ್ರ ಉಪಹವಮೈಚ್ಛತ ತಂ ನೋಪಾಹ್ವಯತ ಪುತ್ರಂ ಮೇಽವಧೀರಿತಿ ಸ ಯಜ್ಞವೇಶಸಂ ಕೃತ್ವಾ ಪ್ರಾಸಹಾ ಸೋಮಮಪಿಬತ್ತಸ್ಯ ಯದತ್ಯಶಿಷ್ಯತ ತತ್ತ್ವಷ್ಟಾಹವನೀಯಮುಪ ಪ್ರಾವರ್ತಯತ್ತಾ ವ್ಯಹೇಂದ್ರಶತ್ರುರ್ವರ್ಧಸ್ವೇತಿ ಯದವರ್ತಯತ್ತದ್ವೃತ್ರಸ್ಯ ವೃತ್ರತ್ವಂ ಯದಬ್ರವೀತ್ತಾ ವ್ಯಹೇಂದ್ರಶತ್ರುರ್ವಧಸ್ವೇತಿ ತಸ್ಮಾದಸ್ಯೇಂದ್ರಃ ಶತ್ರುರಭವತ್ಸ ಸಂಭವನ್ನಗ್ನೀಷೋಮಾವಭಿ ಸಮಭವತ್ಸ ಇಷುಮಾತ್ರಮಿಷುಮಾತ್ರಂ ವಿಷ್ವಙ್ವ್ಯವರ್ಧತ ಸ ಇಮಾನ್ ಲೋಕಾನವೃಣೋದ್ಯದಿಮಾನ್ ಲೋಕಾನವೃಣೋತ್ತದ್ವೃತ್ರಸ್ಯ ವೃತ್ರತ್ವಂ ತಸ್ಮಾದಿಂದ್ರೋಽಭಿಭೇತ್ ॥

(ತೈ. ಸಂ. ೨-೫-೨-೧)

ಈ ಅನುವಾಕದಲ್ಲಿ ಇಂದ್ರನು ವೃತ್ರನನ್ನು ಸಂಹರಿಸಿದ ವಿವರವು ಉಕ್ತವಾಗಿದೆ. ಈ ಕಥಾಸಂದರ್ಭಕ್ಕೆ ಹಿನ್ನೆಲೆಯಾಗಿ ಇನ್ನೊಂದು ಉಪಾಖ್ಯಾನವಿರುವುದು. ಅದನ್ನು ನಾವು ಹಿಂದೆ ವಿವರಿಸಿರುವೆವಾದರೂ ಇಲ್ಲಿ ಮುಂದಿನ ವಿವರಣೆಗೆ ಪೀಠಿಕಾರೂಪವಾಗಿ ಸೂಕ್ಷ್ಮರೀತಿಯಿಂದ ವಿವರಿಸುವುದು ಆವಶ್ಯಕವು. ಪೂರ್ವದಲ್ಲಿ ತ್ವಷ್ಟೃಪ್ರಜಾಪತಿಗೆ ವಿಶ್ವರೂಪನೆಂಬ ಪುತ್ರನಿದ್ದನು. ಅವನು ದೇವತೆಗಳಿಗೆ ಪುರೋಹಿತನಾಗಿದ್ದನು. ಆದರೂ ಇವನು ಅಸುರಸ್ತ್ರೀಯಲ್ಲಿ ಜನಿಸಿದವನಾದ್ದರಿಂದ ಇವನಿಗೆ ಅಸುರರ ವಿಷಯದಲ್ಲಿ ವಿಶೇಷವಾಗಿ ಅಭಿಮಾನವಿತ್ತು. ಹೀಗಿರುವಾಗ ಈ ವಿಶ್ವರೂಪನು ನಮಗೆ ಪುರೋಹಿತನಾಗಿದ್ದರೂ ಅಸುರಪಕ್ಷಪಾತಿಯಾದ್ದರಿಂದ ಸಮಯ ಸಾಧಿಸಿ ಅಸುರರಿಗೆ ಸಹಾಯಮಾಡುತ್ತಾ ದೇವತೆಗಳಿಗೆ ರಾಜ್ಯವೇ ಇಲ್ಲದಂತೆ ಒಳಸಂಚು ನಡೆಸಬಹುದೆಂದು ಇಂದ್ರನು ಹೆದರಿದನು. ಆದ್ದರಿಂದ ಇಂದ್ರನು ಇವನನ್ನು ಉಪಾಯಾಂತರದಿಂದ ಸಂಹಾರಮಾಡಿದನು. ಈ ವಿಷಯವನ್ನೇ ಇಲ್ಲಿ **ತ್ವಷ್ಟಾ ಹತಪುತ್ರೋ ವೀಂದ್ರಗ್ಂ**

ಸೋಮಮಾಹರತ್ ಎಂಬ ವಾಕ್ಯದಿಂದ ಹೇಳಲಾಗಿದೆ. ತನ್ನ ಮಗನನ್ನು ಕೊಂದನೆಂಬ ಕೋಪದಿಂದ ತ್ವಷ್ಟೃವು ತಾನು ಯಜ್ಞಮಾಡುವಾಗ ಇಂದ್ರನನ್ನು ಯಜ್ಞದಲ್ಲಿ ಆಹ್ವಾನಮಾಡದೆ ಅವನನ್ನು ಬಿಟ್ಟೇ ಯಜ್ಞ ಮಾಡಿದನು. ಅವನಿಗೆ ಪಾನಾರ್ಥವಾಗಿ ಸೋಮವನ್ನೂ ಕೊಡಲಿಲ್ಲ. ಅದರಿಂದ ಕೋಪಗೊಂಡ ಇಂದ್ರನು ಅವನ ಯಜ್ಞಕ್ಕೆ ಬಂದು ಯಜ್ಞಕ್ಕೆ ವಿಘ್ನವನ್ನುಂಟುಮಾಡಿದ್ದಲ್ಲದೆ ಯಜ್ಞಕ್ಕಾಗಿ ಸಿದ್ಧಪಡಿಸಿಟ್ಟಿದ್ದ ಸೋಮರಸವನ್ನು ಬಲಾತ್ಕಾರವಾಗಿ ಪಾನ ಮಾಡಿದನು. ಇದನ್ನು ನೋಡಿ ತ್ವಷ್ಟೃವು ಇಂದ್ರನಿಗೆ ತಕ್ಕ ಪ್ರತೀಕಾರಮಾಡಬೇಕೆಂದು ಯೋಚಿಸಿ ಇಂದ್ರನು ಕುಡಿದು ಮಿಕ್ಕ ಸೋಮರಸವನ್ನು ಆಹವನೀಯಾಗ್ನಿಯಲ್ಲಿ ಸುರಿದು **ಸ್ವಾಹೇಂದ್ರಶತ್ರುರ್ವರ್ಧಸ್ವ**—ಇಂದ್ರನನ್ನು ಜಯಿಸುವ ಮತ್ತು ಇಂದ್ರನಿಗೇ ಶತ್ರುವಾದ ಪುತ್ರನುಂಟಾಗಲೀ ಎಂದು ಅಗ್ನಿಯನ್ನು ಪ್ರಾರ್ಥಿಸುತ್ತಾ ಸೋಮಶೇಷವನ್ನು ಅಗ್ನಿಯಲ್ಲಿ ಹೋಮಮಾಡಿದನು. ಹೀಗೆ ಹೋಮಮಾಡುವಾಗ ಮಂತ್ರದಲ್ಲಿ ಸ್ವರವ್ಯತ್ಯಾಸವಾದುದರಿಂದ ಇಂದ್ರನನ್ನು ಜಯಿಸುವ ಪುತ್ರನಿಗೆ ಬದಲಾಗಿ ಇಂದ್ರನಿಂದ ಜಯಿಸಲ್ಪಡುವ ಪುತ್ರನಾದನು. ಈ ಪುತ್ರನೇ ವೃತ್ರನು. ಇದೇ ಇವನ ಉತ್ಪತ್ತಿಯ ಕ್ರಮವು. ಯಜ್ಞಾದಿಗಳಲ್ಲಿ ಮಂತ್ರಪಠನಮಾಡುವಾಗ ಸ್ವರವ್ಯತ್ಯಾಸವಾದರೆ ಯಜಮಾನನಿಗೆ ಹಾನಿಯುಂಟಾಗುವುದೆಂದು—

ದುಷ್ಟುಃ ಶಬ್ದಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ ನ ತಮರ್ಥಮಾಹ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ಯಥೇಂದ್ರಶತ್ರುಃ ಸ್ವರತೋಽಪರಾಧಾತ್ ॥

(ಪಾಣಿನೀಯಶಿಕ್ಷಾ)

ಪಾಣಿನಿಮಹರ್ಷಿಯು ಈ ಮಂತ್ರವನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡು ಹೇಳಿರುವರು. ಹೀಗೆ ಮಂತ್ರದ ಸ್ವರವ್ಯತ್ಯಾಸದಿಂದ ತ್ವಷ್ಟೃವಿಗೆ ತನಗೆ ಬೇಕಾದ ಇಂದ್ರನನ್ನು ನಿಗ್ರಹಿಸುವ ಪುತ್ರನಿಗೆ ಬದಲಾಗಿ ಇಂದ್ರನಿಂದ ಸಂಹೃತನಾಗುವ ಪುತ್ರನು ಜನಿಸಿದನು. ಆದರೂ ಆ ವೃತ್ರನು, ಅಗ್ನಿಯಲ್ಲಿ ಅಗ್ನಿ ಮತ್ತು ಸೋಮದೇವತೆಗಳನ್ನು ಉದ್ದೇಶಿಸಿ ಹೂಡಿದ ಹವಿಸ್ಸಿನಿಂದ ವೃದ್ಧಿಯನ್ನೈದುತ್ತಾ ಬಂದನು. ಅವನು ಪ್ರತಿದಿನವೂ ಒಂದು ಬಿಲ್ಲಿನ ಪ್ರಮಾಣದಂತೆ ಬೆಳೆಯುತ್ತಾ ದೊಡ್ಡ ಆಕಾರವುಳ್ಳವನಾಗಿ ಈ ಲೋಕಗಳನ್ನೆಲ್ಲಾ ಎಲ್ಲೆಲ್ಲಿಯೂ ವ್ಯಾಪಿಸಿದನು. ಹೀಗೆ ಸರ್ವಪ್ರದೇಶಗಳನ್ನೂ ವ್ಯಾಪಿಸುವ ಸ್ವಭಾವವುಳ್ಳವನಾದ್ದರಿಂದ ವೃತ್ರನಿಗೆ ವೃತ್ರನೆಂದು ಹೆಸರಾಯಿತು. ಆಚ್ಛಾದಿಸು, ಮುಚ್ಚು, ವ್ಯಾಪಿಸು ಎಂಬರ್ಥವುಳ್ಳ ವೃಞ್-ವರಣೇ ಎಂಬ ಧಾತುವಿನಿಂದ ವೃತ್ರ, ಶಬ್ದವು ನಿಷ್ಪನ್ನವಾಗಿ ಇವನು ಸರ್ವವನ್ನೂ ವ್ಯಾಪಿಸುವವನು ಎಂಬ ಅನ್ವರ್ಥನಾಮವನ್ನು ಸೂಚಿಸುವುದು. ವೃತ್ರನ ಈ ವಿಧವಾದ ಬೆಳವಣಿಗೆಯನ್ನು ಕಂಡು ಇಂದ್ರನು ಹೆದರಿದನು.

ಸ ಪ್ರಜಾಪತಿಮುಪಾಧಾವಜ್ಜಾತ್ರುರ್ಮೇಽಜನೀತಿ ತಸ್ಮೈ ವಜ್ರಗ್ಂ ಸಿಕ್ತ್ವಾಽಪ್ರಾಯಚ್ಛ-ದೇತೇನ ಜಹೀತಿ ತೇನಾಭ್ಯಾಯತ ॥

ಬಳಿಕ ಇಂದ್ರನು ಪ್ರಜಾಪತಿಯ ಸಮೀಪಕ್ಕೆ ಹೋಗಿ ಎಲೈ ಬ್ರಹ್ಮನೇ, ನನಗೆ ಒಬ್ಬ ಶತ್ರುವು ಜನಿಸಿರುವನು. ಅವನನ್ನು ಸಂಹರಿಸುವ ಬಗೆ ಹೇಗೆ ಎಂದು ಪ್ರಾರ್ಥಿಸಲು, ಪ್ರಜಾಪತಿಯು ಇಂದ್ರನನ್ನು ಹೆದರಬೇಡವೆಂದು ಸಂತೈಸಿ ಅವನ ವಜ್ರಾಯುಧವನ್ನು ಹರಿತವನ್ನಾಗಿ ಮಾಡಿಕೊಟ್ಟು ಈ ಆಯುಧದಿಂದ ನಿನ್ನ ಶತ್ರುವನ್ನು ಸಂಹರಿಸೆಂದು ಹೇಳಲು ಇಂದ್ರನು ಅದನ್ನು ತೆಗೆದುಕೊಂಡು ವೃತ್ರನ ಬಳಿಗೆ ಬಂದನು.

ತಾವಬ್ರೂತಾಮಗ್ನೀಷೋಮೌ ಮಾ ಪ್ರಹಾರಾವಮುಂಶಃ ಸ್ವ ಇತಿ ಮಮ ವೈ ಯುವಗ್ಂ ಸ್ಥ ಇತ್ಯಬ್ರವೀನ್ಮಾಮಭ್ಯೇತಮಿತಿ ತೌ ಭಾಗಧೇಯಮೈಚ್ಛೇತಾಂ ತಾಭ್ಯಾಮೇತಮಗ್ನೀಷೋ-

ಮಾಯೆಮೇಕಾದಶಕಪಾಲಂ ಪೂರ್ಣಮಾಸೇ ಪ್ರಾಯಚ್ಛತ್ತಾವಬ್ರೂತಾಮಭಿ ಸಂದಷ್ಟ್ಸಾ ವೈ ಸ್ವೋ ನ ಶಕ್ನುವ ಐತುಮಿತಿ ಸ ಇಂದ್ರ ಆತ್ಮನಃ ಶೀತರೂರಾವಜನಯೆತ್ತಚ್ಛೀತರೂರಯೋರ್ಜನ್ಮ ಯ ಏವಗ್ಂ ಶೀತರೂರಯೋರ್ಜನ್ಮ ವೇದ ನೈನಗ್ಂ ಶೀತರೂರೌ ಹತಸ್ತಾಭ್ಯಾಮೇನಮಭ್ಯನ-ಯತ್ತಸ್ಮಾಜ್ಜಂಜಭ್ಯಮಾನಾದಗ್ನೀಷೋಮೌ ನಿರಕ್ರಾಮತಾಂ ॥

ಅನಂತರ ಇಂದ್ರನು ತನ್ನ ಆಯುಧದಿಂದ ವೃತ್ರನನ್ನು ಪ್ರಹರಿಸಲು ಉದ್ಯುಕ್ತನಾದಾಗ ಅಗ್ನಿ ಮತ್ತು ಸೋಮರು ಇಂದ್ರನನ್ನು ಹೊಡೆಯಬೇಡವೆಂದು ತಡೆದು—ಎಲೈ ಇಂದ್ರನೇ, ಈಗ ವೃತ್ರನನ್ನು ಹೊಡೆಯಬೇಡ. ಅಗ್ನಿಸೋಮ ದೇವತೆಗಳಾದ ನಾವು ಈ ವೃತ್ರನ ಮುಖದಲ್ಲಿ ವಾಸಿಸುತ್ತಿರುವೆವು ಎನ್ನಲು, ಇಂದ್ರನು ಎಲೈ ಅಗ್ನಿಸೋಮರೇ, ನೀವು ನಮ್ಮವರುತಾನೆ. ಆದ್ದರಿಂದ ನೀವು ವೃತ್ರನ ಶರೀರವನ್ನು ಬಿಟ್ಟು ನನ್ನ ಬಳಿಗೆ ಬನ್ನಿ ಅನಂತರ ನಾನು ವೃತ್ರನನ್ನು ಸಂಹರಿಸುವೆನು ಎಂದನು. ಅದನ್ನು ಕೇಳಿ ಅಗ್ನಿಸೋಮದೇವತೆಗಳು—ಎಲೈ ಇಂದ್ರನೇ, ನೀನು ಹೇಳುವಂತೆ ನಾವು ಮಾಡುವುದಾದರೆ ನಮಗೆ ಏನು ಉಪಕಾರಮಾಡುತ್ತೀಯೆ ? ನಮಗೂ ಯಜ್ಞದಲ್ಲಿ ಭಾಗವನ್ನು ಕಲ್ಪಿಸಿಕೊಡುವುದಾದರೆ ನೀನು ಹೇಳುವಂತೆ ಕೇಳುವೆವು ಎನ್ನಲು ಅದಕ್ಕೆ ಇಂದ್ರನು ಸಮ್ಮತಿಸಿ ಅವರಿಗೆ ಪೂರ್ಣಮಾಸಯಾಗದಲ್ಲಿ ಏಕಾದಶ ಕಪಾಲವೆಂಬ ಪೋರಾಡಶ ಹವಿಸ್ಸಿನ ಅಹುತಿಭಾಗವನ್ನು ಕಲ್ಪಿಸಿಕೊಟ್ಟನು. ಬಳಿಕ ಅಗ್ನಿಸೋಮದೇವತೆಗಳು ಈರೀತಿ ತಮಗೆ ಬೇಕಾದ ವರವನ್ನು ಪಡೆದರೂ ಸಹ ಇಂದ್ರನನ್ನು ಕುರಿತು—ಎಲೈ ಇಂದ್ರನೇ, ಈಗ ನಾವು ವೃತ್ರನ ಮುಖದಿಂದ ಹೊರಟುಬರಲು ಸಾಧ್ಯವಿಲ್ಲ. ನಾವು ವೃತ್ರನ ಹಲ್ಲುಗಳ ಮಧ್ಯೆ ಸಿಕ್ಕಿ ಬಲವಾಗಿ ಹಿಡಿಯಲ್ಪಟ್ಟಿದ್ದೇವೆ. ಅವನು ಬಾಯನ್ನು ತೆರೆದಲ್ಲದೆ ನಾವು ಈಚೆಗೆ ಬರಲಾಗುವುದಿಲ್ಲ ಎಂದರು. ಆಗ ಇಂದ್ರನು ಇದಕ್ಕೊಂದುಪಾಯವನ್ನು ಯೋಚಿಸಿದನು. ತನ್ನ ಶರೀರದಿಂದ ಶೀತಜ್ವರ ಮತ್ತು ಆದರಿಂದ ಉಂಟಾಗುವ ಮಹಾತಾಪವನ್ನು ಸೃಷ್ಟಿಮಾಡಿದನು. ಛಳಿಜ್ವರವು ಪ್ರಪಂಚದಲ್ಲಿ ಜನರನ್ನು ಬಾಧಿಸುವುದಕ್ಕೆ ಇದೇ ಮೊದಲು. ಈ ಛಳಿಜ್ವರದ, ಈರೀತಿಯಾದ ಉತ್ಪತ್ತಿಕ್ರಮವನ್ನು ಯಾವ ಪುರುಷನು ತಿಳಿಯುವನೋ ಅವನಿಗೆ ಈ ಶೀತಜ್ವರದಿಂದ ಬಾಧೆ ಇರುವುದಿಲ್ಲ. ಬಳಿಕ ಇಂದ್ರನು ಸೃಷ್ಟಿಸಿದ ಛಳಿಜ್ವರಗಳನ್ನು ಕರೆದುಕೊಂಡುಯೋಗಿ ವೃತ್ರಾಸುರನ ಶರೀರವನ್ನು ಪ್ರವೇಶಿಸುವಂತೆ ಮಾಡಿದನು. ಆಗ ವೃತ್ರಾಸುರನು ಛಳಿಯಿಂದ ನಡಗುತ್ತಾ ಜ್ವರದ ತಾಪದಿಂದ ಬಳಲಿ ಆಯಾಸದಿಂದ ನಿಟ್ಟುಸುರನ್ನು ಬಿಡುವುದಕ್ಕಾಗಿ ಬಾಯನ್ನು ಅಗಲವಾಗಿ ತೆರೆದನು. ತಕ್ಷಣ ಅವನ ಬಾಯಿಯಿಂದ ಅಗ್ನಿಸೋಮದೇವತೆಗಳು ಹೊರಹೊರಟು ಈಚೆಗೆ ಬಂದರು.

ಪ್ರಾಣಾಪಾನೌ ನಾ ಏನಂ ತದಜಹಿತಾಂ ಪ್ರಾಣೋ ವೈ ದಕ್ಷೋಽಪಾನಃ ಕ್ರತುಸ್ತಸ್ಮಾಜ್ಜಂಜಭ್ಯಮಾನೋ ಬ್ರೂಯಾನ್ಮಯಿ ದಕ್ಷಕ್ರತೂ ಇತಿ ಪ್ರಾಣಾಪಾನಾವೇವಾತ್ಮನ್ಧತ್ತೇ ಸರ್ವಮಾಯುರೇತಿ॥

ಅನಂತರ ಪ್ರಾಣ, ಅಪಾನ ಎಂಬ ವಾಯುಗಳು ಆ ವೃತ್ರನನ್ನು ತ್ಯಜಿಸಿದವು. ಎಂದರೆ ಅವನ ಶರೀರವನ್ನು ಬಿಟ್ಟು ಹೋದವು. ಪ್ರಾಣಶಬ್ದಕ್ಕೆ ದಕ್ಷವೆಂದೂ, ಅಪಾನಶಬ್ದಕ್ಕೆ ಕ್ರತುವೆಂದೂ ಅರ್ಥವಿರುವುದು. ದಕ್ಷವೆಂದರೆ ಕೆಲಸಕಾರ್ಯಗಳಲ್ಲಿ ಕುಶಲತೆಯು, ಪ್ರಜ್ಞೆಯು. ಕ್ರತುವೆಂದರೆ ಕೆಲಸಮಾಡುವ ದೇಹಶಕ್ತಿ, ಸಾಮರ್ಥ್ಯ, ಇವೆರಡೂ ಜೀವನನ್ನು ತೆರೆದಿದ್ದ ಆ ವೃತ್ರನನ್ನು ಬಿಟ್ಟುಹೋದುವು, ಆದ್ದರಿಂದ ಯಜ್ಞಕರ್ಮವನ್ನು ನೆರವೇರಿಸುತ್ತಿರುವಾಗ ದೇಹಚೇಷ್ಟೆ ಮಾಡಿದರೂ, ಆಕಳಿಸಿ ಬಾಯನ್ನು ತೆರೆದರೂ ಆಗ **ಮಯಿ ದಕ್ಷಕ್ರತೂ** ಎಂಬ ಮಂತ್ರವನ್ನುಚ್ಚರಿಸಬೇಕು. ಹಾಗೆ ಮಾಡಿದರೆ ಪ್ರಾಣಾಪಾನಗಳು ಯಜಮಾನನ್ನು ಬಿಟ್ಟುಹೋಗದೆ ಸ್ಥಿರವಾಗಿ ನಿಲ್ಲುವವು. ದೀರ್ಘಾಯುಸ್ಸೂ ಉಂಟಾಗುವುದು.

ಸ ದೇವತಾ ವೃತ್ರಾನ್ನಿರ್ಹೂಯ ವಾರ್ತ್ರಘ್ನಗ್ಂ-ಹವಿಃ ಪೂರ್ಣಮಾಸೇ ನಿರವಪದ್ ಘ್ನಂತಿ ವಾ ಏನಂ ಪೂರ್ಣಮಾಸ ಆಮಾವಾಸ್ಯಾಯಾಂ ಪ್ಯಾಯಯಂತಿ ತಸ್ಮಾದ್ವಾರ್ತ್ರಘ್ನೀ ಪೂರ್ಣಮಾಸೇऽನೂಚ್ಯೇತೇ ವೃಧನ್ವತೀ ಅಮಾವಾಸ್ಯಾಯಾಂ ॥

ಅನಂತರ ಇಂದ್ರನು ವೃತ್ರಾಸುರನ ಮುಖದಲ್ಲಿ ಇದ್ದ ಅಗ್ನೀಷೋಮಾದಿ ದೇವತೆಗಳನ್ನೆಲ್ಲಾ ಅಲ್ಲಿಂದ ಈಚೆಗೆ ಕರೆದು ವೃತ್ರನ ಸಂಹಾರಕ್ಕೆ ಸಾಧನಭೂತವಾದ ಹವಿರಾಜ್ಯಭಾಗದ್ರವ್ಯರೂಪವಾದ ಆಹುತಿಯನ್ನು ಪೌರ್ಣಮಾಸಿಯ ದಿವಸ ಸಿದ್ಧಪಡಿಸಿದನು. ಲೋಕವ್ಯವಹಾರದಲ್ಲಿಯೂ ಅಂಧಕಾರವೆಂಬ ಎಲ್ಲೆಲ್ಲಿಯೂ ಆವರಿಸಿರುವ ಕತ್ತಲೆಯೆಂಬ ಶತ್ರುವು ಪೌರ್ಣಮಾಸಿಯ ಪ್ರಕಾಶಮಾನವಾದ ಬೆಳದಿಂಗಳಿನಿಂದ ನಾಶವಾಗುವ ವಿಷಯವು ಎಲ್ಲರಿಗೂ ತಿಳಿದೇ ಇದೆ. ಆದರೆ ಅಮಾವಾಸ್ಯೆಯ ದಿವಸ ಬೆಳದಿಂಗಳಿನ ಪ್ರಕಾಶವು ಇರುವುದಿಲ್ಲವಾದುದರಿಂದ ಆಗ ಕತ್ತಲೆಯೆಂಬ ಶತ್ರುವು (ವೃತ್ರ) ಎಲ್ಲೆಲ್ಲಿಯೂ ಆವರಿಸಿ ವೃದ್ಧಿಯಾಗುವುದು. ಆದುದರಿಂದ ವೃತ್ರಹನನಕ್ಕಾಗಿ ಪೂರ್ಣಮಾಸೆಯ ದಿವಸ ಅಗ್ನೀಷೋಮಿಯ ಆಜ್ಯಭಾಗಗಳೆಂಬ ಆಹುತಿಗಳಿಗೆ ಪೂರ್ವಭಾವಿಯಾಗಿ,

ಅಗ್ನಿರ್ವೃತ್ರಾಣಿ ಜಂಘನದ್ಧವಿಷ್ಯನ್ತಿರಪಸ್ಯಯಾ । ಸಮಿದ್ಧಃ ಶುಕ್ರ ಆಹುತಃ ।

(ಋ. ಸಂ. ೬-೧೬-೩೪)

ತ್ವಂ ಸೋಮಾಸಿ ಸತ್ಪತಿಸ್ತ್ವಂ ರಾಜೋತ ವೃತ್ರಹಾ । ತ್ವಂ ಭದ್ರೋ ಅಸಿ ಕ್ರತುಃ ॥

(ಋ. ಸಂ. ೧-೯೧-೫)

ಎಂಬ ಋಕ್ಕುಗಳನ್ನು ಪುರೋನುವಾಕ್ಯಾಮಂತ್ರಗಳನ್ನಾಗಿ ಪಠಿಸಬೇಕು. ಈ ಎರಡು ಋಕ್ಕುಗಳಲ್ಲಿಯೂ ವೃತ್ರಹನನವನ್ನು ಸೂಚಿಸುವ ಶಬ್ದಗಳ ಪ್ರಯೋಗವಿರುವುದರಿಂದ ಈ ಋಕ್ಕುಗಳಿಗೆ ವಾರ್ತ್ರಘ್ನೀ ಋಕ್ಕುಗಳೆಂದು ಹೆಸರು. ಏಕೆಂದರೆ— ಪೌರ್ಣಮಾಸಿಯ ದಿವಸವೇ ವೃತ್ರನ ಸಂಹಾರವಾಯಿತು. ಆದುದರಿಂದ ಆ ದಿವಸ ವೃತ್ರಹನನ ಸಂಬಂಧವಾದ ಋಕ್ಕುಗಳನ್ನು ಪಠಿಸಿ ಹೋಮಮಾಡುವುದು ಯುಕ್ತವಾಗಿದೆ. ಅಮಾವಾಸ್ಯೆಯ ದಿವಸ ಅಂಧಕಾರವು ವೃದ್ಧಿಯಾಗಿರುವುದು. ಎಂದರೆ, ತಮಸ್ಸಿನಿಂದ ಸರ್ವವನ್ನು ವ್ಯಾಪಿಸುವ ವೃತ್ರನು ಅಭಿವೃದ್ಧಿಯನ್ನೈದುವನು. ಆದುದರಿಂದ ಆ ದಿವಸ ವೃಧು-ವೃದ್ಧೌ ಎಂಬ ವೃದ್ಧಿಯನ್ನು ಸೂಚಿಸುವ ಧಾತುವಿನಿಂದ ನಿಷ್ಪನ್ನವಾದ ಶಬ್ದಗಳನ್ನೊಳಗೊಂಡ—

ಅಗ್ನಿಃ ಪ್ರತ್ನೇನ ಮನ್ಮನಾ ಶುಂಭಮಾನಸ್ತನ್ವಂ ೧ ಸ್ವಾಂ । ಕವಿರ್ವಿಪ್ರೇಣ ವಾವೃಧೇ ॥

(ಋ. ಸಂ. ೮-೪೪-೧೨)

ಸೋಮು ಗೀರ್ಭಿಷ್ಟ್ವಾ ವಯಂ ವರ್ಧಯಾಮೋ ವಚೋವಿದಃ । ಸುಮೃಳೀಕೋ ನ ಆ ವಿಶ ॥

(ಋ. ಸಂ. ೧-೯೧-೧೧)

ಎಂಬ ಋಕ್ಕುಗಳನ್ನು ಪಠಿಸಬೇಕು. ವೃದ್ಧಿಯನ್ನು ಸೂಚಿಸುವ ಶಬ್ದಗಳಿಂದ ಸಹಿತವಾದ ಈ ಋಕ್ಕುಗಳಿಗೆ ವೃಧನ್ವತೀ ಋಕ್ಕುಗಳೆಂದು ಹೆಸರು. ಇವುಗಳನ್ನು ಅಂಧಕಾರದಿಂದ ವೃದ್ಧಿಯಾಗಿರುವ ಅಮಾವಾಸ್ಯೆಯ ದಿವಸ ಪಠಿಸಬೇಕು.

ತತ್ಸಗ್ಂಸ್ಥಾಪ್ಯ ವಾರ್ತ್ರಘ್ನಗ್ಂ ಹವಿರ್ವಜ್ರಮಾದಾಯ ಪುನರಭ್ಯಾಯತ ತೇ ಅಬ್ರೂತಾಂ ದ್ಯಾವಾಪೃಥಿವೀ ಮಾ ಪ್ರಹಾರಾವಯೋರ್ವೈ ಶ್ರಿತ ಇತಿ ತೇ ಅಬ್ರೂತಾಂ ವರಂ ವೃಣಾವಹೈ ನಕ್ಷತ್ರವಿಹಿತಾಹಮಸಾನೀತ್ಯಸಾವಬ್ರವೀಚ್ಚಿತ್ರವಿಹಿತಾಹಮಿತೀಯಂ ತಸ್ಮಾನ್ನಕ್ಷತ್ರವಿಹಿತಾಸೌ ಚಿತ್ರವಿಹಿತೇಯಂ ಯ ಏವಂ ದ್ಯಾವಾಪೃಥಿವ್ಯೋರ್ವರಂ ವೇದೈನಂ ವರೋ ಗಚ್ಛತಿ ಸ ಆಭ್ಯಾಮೇವ ಪ್ರಸೂತ ಇಂದ್ರೋ ವೃತ್ರಮಹನ್ ॥

ಅನಂತರ ಇಂದ್ರನು ವೃತ್ರಹನನಹೇತುಭೂತವಾದ ಆಜ್ಯಭಾಗ ಮತ್ತು ಹವಿಸ್ಸುಗಳನ್ನು ಪೂರ್ತಿಯಾಗಿ ನೆರವೇರಿಸಿ ವಜ್ರಾಯುಧನನ್ನು ಕೈಯಲ್ಲಿ ಹಿಡಿದುಕೊಂಡು ವೃತ್ರನನ್ನು ಸಂಹಾರಮಾಡುವ ಉದ್ದಿಶ್ಯದಿಂದ ಅವನ ಅಭಿಮುಖವಾಗಿ ನುಗ್ಗಿಹೋದನು. ಆಗ ದ್ಯಾವಾಪೃಥಿವಿಗಳು (ಭೂಮ್ಯಂತರಿಕ್ಷಗಳು) ಇಂದ್ರನನ್ನು ತಡೆದು—ಎಲೈ ಇಂದ್ರನೇ, ನೀನು ವೃತ್ರನನ್ನು ಕೊಲ್ಲಬೇಡ. ಇವನು ಭೂಮಿಯಿಂದ ಸ್ವರ್ಗಪರ್ಯಂತರ ಇರುವ ಪ್ರದೇಶವನ್ನೆಲ್ಲಾ ವ್ಯಾಪಿಸಿ ಇರುವನು. ನಮ್ಮನ್ನಾಶ್ರಯಿಸಿ ಇರುವ ಇವನನ್ನು ನಾವು ಬಿಟ್ಟುಕೊಡಲಾರೆವು ಎಂದವು. ಅದಕ್ಕೆ ಇಂದ್ರನು ಒಪ್ಪದಿರಲು ಮತ್ತೆ ದ್ಯಾವಾಪೃಥಿವಿಗಳು ಇಂದ್ರನನ್ನು ಕುರಿತು....ಎಲೈ ಇಂದ್ರನೇ, ಒಂದುವೇಳೆ ನಾವು ವೃತ್ರಸಂಹಾರಕ್ಕೆ ಅವಕಾಶವನ್ನು ಕೊಡುವುದಾದರೆ ನಾವು ಕೇಳುವ ವರವನ್ನು ಕೊಡಬೇಕು ಎಂದು ಹೇಳಲು ಹಾಗೆಯೇ ಆಗಲೆಂದನು. ಇಗ ಅಂತರಿಕ್ಷವು (ದ್ಯೌ) ತಾನು ನಕ್ಷತ್ರಗಳಿಂದ ಅಲಂಕೃತವಾಗಿರಬೇಕೆಂದು ವರವನ್ನು ಬೇಡಿತು. ಭೂಮಿಯು ನಾನಾವಿಧವಾದ ಮನುಷ್ಯಪಶುವೃಕ್ಷಪರ್ವತನದೀಸಮುದ್ರಾದಿ ವಿಚಿತ್ರವಸ್ತುಗಳಿಂದ ಕೂಡಿರಬೇಕೆಂದು ವರವನ್ನು ಕೇಳಿತು. ಇಂದ್ರನು ಆದರಂತೆ ವರವನ್ನು ಕೊಟ್ಟನು. ದ್ಯಾವಾಪೃಥಿವಿಗಳ ಈ ವಿಧವಾದ ವರಪ್ರಾಪ್ತಿಕ್ರಮವನ್ನು ತಿಳಿಯುವ ಪುರುಷನು ತನಗೆ ಬೇಕಾದ ಇಷ್ಟಾರ್ಥಗಳನ್ನು ಪಡೆದು ಸುಖಿಸುವನು. ಬಳಿಕ ಇಂದ್ರನು ದ್ಯಾವಾಪೃಥಿವಿಗಳ ಅನುಮತಿಯನ್ನು ಪಡೆದು ವೃತ್ರನನ್ನು ವಜ್ರಾಯುಧದಿಂದ ಹೊಡೆದು ಸಂಹರಿಸಿದನು.

ತೇ ದೇವಾ ವೃತ್ರಗ್ಂ ಹತ್ವಾಗ್ನೀಷೋಮಾವಬ್ರುವನ್ ಹವ್ಯಂ ನೋ ವಹತಮಿತಿ ತಾವ-ಬ್ರೂತಾಮಪ ತೇಜಸೌ ನೈ ತ್ಯೌ ವೃತ್ರೇ ನೈ ತ್ಯಯೋಸ್ತೇಜ ಇತಿ ತೇಽಬ್ರುವನ್ ಕ ಇದಮಚ್ಛೈ-ತೀತಿ ಗೌರಿತ್ಯಬ್ರುವನ್ಗೌರ್ವಾವ ಸರ್ವಸ್ಯ ಮಿತ್ರಮಿತಿ ಸಾಬ್ರವೀದ್ವರಂ ವೃಣೈ ಮಯ್ಯೇವ ಸತೋ-ಭಯೇನ ಭುನಜಾಧ್ವಾ ಇತಿ ತದ್ಗೌರಾಹರತ್ತಸ್ಮಾದ್ಗವಿ ಸತೋಭಯೇನ ಭುಂಜತ ಏತದ್ವಾ ಅಗ್ನೇಸ್ತೇಜೋ ಯದ್ಘೃತಮೇತತ್ಸೋಮಸ್ಯ ಯತ್ಸೋಮೋ ಯ ಏವಮಗ್ನೀಷೋಮಯೋ ಸ್ತೇಜೋ ವೇದ ತೇಜಸ್ವ್ಯೇವ ಭವತಿ ॥

ವೃತ್ರಹನನಾಂತರ ಇಂದ್ರನ ಸಮೀಪದಲ್ಲಿದ್ದ ದೇವತೆಗಳೆಲ್ಲರೂ ಅಗ್ನಿಸೋಮರನ್ನು ಕುರಿತು—ಎಲೈ ಅಗ್ನಿಸೋಮ ದೇವತೆಗಳೇ, ನೀವು ಈಗ ವೃತ್ರನ ಮುಖದಿಂದ ಹಿಂದಿರುಗಿ ಬಂದಿರುವಿರಷ್ಟೆ. ಇನ್ನುಮುಂದೆ ನಮಗಾಗಿ ಯಜ್ಞಾದಿ ಗಳಲ್ಲಿ ಹೋಮಮಾಡುವ ಹವಿಸ್ಸುಗಳನ್ನು ವಹಿಸಿತಂದು ನಮಗೆ ಅರ್ಪಿಸಿರಿ ಎಂದರು. ಅದಕ್ಕೆ ಆ ಅಗ್ನೀಸೋಮರು ದೇವತೆಗಳನ್ನು ಕುರಿತು—ಎಲೈ ದೇವತೆಗಳೇ. ನಾವು ಬಹಳ ಕಾಲದಿಂದಲೂ ವೃತ್ರನ ಶರೀರದಲ್ಲಿದ್ದು ಅವನ ದಂತ ದಶನಾದಿಗಳಿಂದ ನಿಸ್ತೇಜಸ್ಕರಾಗಿದೇವೆ ಎಂದರೆ ನಮ್ಮ ಶಕ್ತಿಯು ಕುಗ್ಗಿಹೋಗಿದೆ. ನಮ್ಮ ಶಕ್ತಿ ಅಥವಾ ತೇಜಸ್ಸೆಲ್ಲವೂ ವೃತ್ರನಲ್ಲಿಯೇ ನಿಂತುಹೋಗಿದೆ ಎಂದರು. ಆಗ ದೇವತೆಗಳು ವೃತ್ರನ ಶರೀರದಲ್ಲಿದ್ದು ಅಗ್ನಿಸೋಮರು ಬಿಟ್ಟುಬಂದ ತೇಜಸ್ಸನ್ನು ಹಿಂದಕ್ಕೆ ತರುವ ಬಗೆ ಹೇಗೆಂದು ತಮ್ಮತಮ್ಮಲ್ಲಿಯೇ ಆಲೋಚಿಸಿ, ಗೋವು ಯಾರಿಗೂ ಕೆಡಕುಮಾಡದೆ ಎಲ್ಲರಲ್ಲಿಯೂ ಸ್ನೇಹಭಾವದಿಂದ ವರ್ತಿಸುತ್ತಿರುವುದರಿಂದ ಅದನ್ನು ಕಳುಹಿಸಿ ವೃತ್ರನಲ್ಲಿದ್ದ ತೇಜಸ್ಸನ್ನು ತರಿಸಬೇಕೆಂದು ನಿರ್ಧರಿಸಿದರು. ಬಳಿಕ ಅವರು ಹಸುವನ್ನು ಕರೆದು ವೃತ್ರನಲ್ಲಿರುವ ತೇಜಸ್ಸನ್ನು ತರಬೇಕೆಂದು ಹೇಳಲು ಅದು ಹಾಗೆಯೇ ಆಗಲಿ, ಆದರೆ ನಾನು ತರುವ ತೇಜಸ್ಸು ಹಾಲು, ತುಪ್ಪ ಇವುಗಳ ರೂಪದಲ್ಲಿ ಸದಾ ನನ್ನಲ್ಲಿಯೇ ಸೇರಿರ ಬೇಕು. ಅವುಗಳನ್ನು ಜನರು ನನ್ನಿಂದ ಪಡೆದು ಭೋಜನಾದಿಗಳನ್ನು ನೆರವೇರಿಸಬೇಕು. ಈರೀತಿ ವರವನ್ನು ಕೊಡುವುದಾದರೆ ತರುತ್ತೇನೆಂದಿತು. ದೇವತೆಗಳು ಹಾಗೆಯೇ ಆಗಲೆಂದು ಹೇಳಿ ಅದರಂತೆ ವರವನ್ನು ಕೊಟ್ಟರು. ವರವನ್ನು ಪಡೆದು ಗೋವು ಆ ತೇಜಸ್ಸನ್ನು ತಂದಿತು. ಈ ವಿಧವಾದ ವರಪ್ರದಾನದ ಫಲವಾಗಿ ಈಗಲೂ ಲೋಕ

ದಲ್ಲಿರುವ ಜನರು ಗೋವುಗಳಿಂದಲೇ ಹಾಲು, ತುಪ್ಪ ಮೊದಲಾದ ಪುಷ್ಟಿಪ್ರದವಾದ ಆಹಾರವನ್ನು ಆಗಾಗ್ಯೆ ಪಡೆಯುತ್ತಾ ಭೋಜನಮಾಡುತ್ತಿರುವರು. ಇಲ್ಲಿ ತುಪ್ಪ ಅಥವಾ ಘೃತವು ಅಗ್ನಿಯ ತೇಜಸ್ಸೆಂದು ಹೇಳಲ್ಪಡುವುದು. ಆದುದರಿಂದಲೇ ಯಜ್ಞಾದಿಗಳಲ್ಲಿ ಜನರು ಘೃತ ಅಥವಾ ತುಪ್ಪದಿಂದ ಅಗ್ನಿಯಲ್ಲಿ ಹೋಮಾದಿಗಳನ್ನು ಮಾಡಿ ಅಗ್ನಿಯು ಪ್ರಜ್ವಲಿಸುವಂತೆ ಮಾಡುವರು. ಹಾಲು ಸೋಮದ ತೇಜಸ್ಸೆಂದು ಹೇಳಲ್ಪಡುವುದು. ಏಕೆಂದರೆ ಸೋಮವು ಹಾಲಿನಂತೆ ದ್ರವರೂಪದಲ್ಲಿರುವುದು ಮತ್ತು ಸೋಮರಸದ ರುಚಿಯನ್ನು ಹೆಚ್ಚಿಸುವುದಕ್ಕಾಗಿ ಅದರ ಜತೆಗೆ ಹಾಲನ್ನು ಮಿಶ್ರಮಾಡುವರು. ಇದಕ್ಕೆ ಗದಾತಿರವೆಂದು ಹೆಸರು. ಈ೦ತಿ ಹಾಲನ್ನು ಮಿಶ್ರಮಾಡುವುದರಿಂದ ಸೋಮದ ತೇಜಸ್ಸು ಅಥವಾ ಸತ್ತ್ವವು (ರುಚಿಯು) ಹೆಚ್ಚುವುದು. ಈರೀತಿಯಾದ ಅಗ್ನಿಯ ಮತ್ತು ಸೋಮದ ತೇಜಸ್ಸುಗಳ ಮಹಿಮೆಯನ್ನು ತಿಳಿಯುವ ಪುರುಷನು ತೇಜಸ್ವಿಯಾಗಿರುವನು.

ಬ್ರಹ್ಮವಾದಿನೋ ವದಂತಿ ಕಿಂದೇವತ್ಯಂ ಪೌರ್ಣಮಾಸಮಿತಿ ಪ್ರಾಜಾಪತ್ಯಮಿತಿ ಬ್ರೂಯಾತ್ತೇನೇಂದ್ರಂ ಜ್ಯೇಷ್ಠಂ ಪುತ್ರಂ ನಿರವಾಸಾಯಯದಿತಿ ತಸ್ಮಾಜ್ಜ್ಯೇಷ್ಠಂ ಪುತ್ರಂ ಧನೇನ ನಿರವಾಸಯಂತಿ ॥

(ತೈ. ಸಂ. ೨-೫-೨-೧ ರಿಂದ ೭)

ಈ ಪೌರ್ಣಮಾಸ್ಯನೆಂಬ ಯಾಗಕ್ಕೆ ಮುಖ್ಯದೇವತೆಯಾರು ಎಂದು ಬ್ರಹ್ಮವಾದಿಗಳು ಕೇಳುವರು. ಅದಕ್ಕೆ ಪ್ರಜಾಪತಿಯೇ ಯಜ್ಞಾಧಿಷ್ಠಾತೃವಾದ ದೇವತೆಯು ಎಂದು ಪ್ರತ್ಯುತ್ತರವನ್ನು ಹೇಳಬೇಕು. ಆದರೆ ಈ ಯಾಗದಲ್ಲಿ ಪ್ರಜಾಪತಿಗೆ ಯಾವ ಹವಿರ್ಭಾಗವೂ ಇರುವುದಿಲ್ಲವಲ್ಲ? ಆದ್ದರಿಂದ ಈ ಯಜ್ಞಕ್ಕೆ ಪ್ರಜಾಪತಿಯು ಹೇಗೆ ದೇವತೆಯು? ಎಂದರೆ ಪೂರ್ವದಲ್ಲಿ ಪ್ರಜಾಪತಿಯು ಎಲ್ಲಾ ಯಜ್ಞಗಳನ್ನೂ ಸೃಷ್ಟಿಮಾಡಿದನು. ಈ ವಿಷಯವು—

ಪ್ರಜಾಪತಿರ್ಯಜ್ಞಾನಸೃಜತಾಗ್ನಿಹೋತ್ರಂ ಚಾಗ್ನಿಷ್ಟೋಮಂ ಚ ಪೌರ್ಣಮಾಸೀಂ ಚೋಕ್ಥ್ಯಂ ಚಾಮಾವಾಸ್ಯಾಂ ಚಾತಿರಾತ್ರಂ ಚ ॥

(ತೈ. ಸಂ. ೧-೫-೯-೧)

ಎಂಬ ಶ್ರುತಿವಾಕ್ಯದಲ್ಲಿ ಹೇಳಲಾಗಿದೆ. ಎಂದರೆ ಪ್ರಜಾಪತಿಯು—ಅಗ್ನಿಹೋತ್ರ, ಅಗ್ನಿಷ್ಟೋಮ, ಪೌರ್ಣಮಾಸಿ (ಪೌರ್ಣಮಾಸಿಯ ದಿನದಲ್ಲಿ ಮಾಡುವ ಯಾಗ), ಉಕ್ಥ್ಯ, ಅಮಾವಾಸ್ಯಾ (ಅಮಾವಾಸ್ಯೆಯ ದಿನದಲ್ಲಿ ಮಾಡುವ ಯಾಗ) ಅತಿರಾತ್ರ ಮೊದಲಾದ ಯಜ್ಞಗಳನ್ನೆಲ್ಲಾ ಸೃಷ್ಟಿಮಾಡಿದನೆಂದು ಇಲ್ಲಿ ಹೇಳಿದೆ. ಪ್ರಜಾಪತಿಯು ಸೃಷ್ಟಿಮಾಡಿರುವ ಯಜ್ಞಗಳೆಲ್ಲಾ ಅವನ ಸ್ವಕೀಯವಾದ ಆಸ್ತಿಯಾಯಿತು. ಆದುದರಿಂದ ಲೋಕವ್ಯವಹಾರದಲ್ಲಿ ರೂಢಿಯಾಗಿರುವಂತೆ ಎಂದರೆ ತನ್ನ ಆಸ್ತಿಯನ್ನು ತನ್ನ ಜ್ಯೇಷ್ಠಪುತ್ರನಿಗೆ ಕೊಡುವಂತೆ, ಪ್ರಜಾಪತಿಯು ತನ್ನ ಜ್ಯೇಷ್ಠ ಪುತ್ರನಾದ ಇಂದ್ರನಿಗೆ ಈ ಯಜ್ಞಗಳ ಮುಖ್ಯದೇವತ್ವವನ್ನು ವಹಿಸಿಕೊಟ್ಟನು. ಈ ವಿಷಯವು—**ತೇನೇಂದ್ರಂ ನಿರವಾಸಾಯಯತ್ತೇನೇಂದ್ರಃ ಪರಮಾಂ ಕಾಷ್ಠಾಮಗಚ್ಛತ್** ಎಂಬ ತೈತ್ತಿರೀಯಸಂಹಿತಾವಾಕ್ಯದಲ್ಲಿಯೇ ಹೇಳಿದೆ. ಆದುದರಿಂದ ಪುತ್ರನಾದ ಇಂದ್ರನಿಗೆ ಪೌರ್ಣಮಾಸ್ಯಯಾಗದಲ್ಲಿ ಅರ್ಪಿತವಾಗುವ ಹವಿಸ್ಸುಗಳೆಲ್ಲವೂ ತಂದೆಯಾದ ಪ್ರಜಾಪತಿಗೆ ಅರ್ಪಿತವಾದಂತೆಯೇ ಎಂದು ಭಾವಿಸಬೇಕು. ಈ ಕಾರಣದಿಂದಲೇ ಈ ಪೌರ್ಣಮಾಸ್ಯೆಯೆಂಬ ಯಾಗವು ಪ್ರಾಜಾಪತ್ಯ ಎಂದರೆ ಪ್ರಜಾಪತಿ ಸಂಬಂಧವಾದುದು ಎಂದು ಹೇಳುವ ರೂಢಿಯಿದೆ. ಈ ಕ್ರಮವನ್ನನುಸರಿಸಿ ಈಗಲೂ ಲೋಕವ್ಯವಹಾರದಲ್ಲಿ ತಂದೆಯು ತನ್ನ ಧನಾದಿಯಾದ ಸಮಸ್ತ ಆಸ್ತಿಯನ್ನೂ ತನ್ನ ಹಿರಿಯ ಮಗನಿಗೆ ಕೊಡುವುದು ರೂಢಿಯಲ್ಲಿದೆ.

ಪ್ರಾಸಹಾದೇವಿಯ ಕಥೆ

ದೇವತೆಗಳು ಇಂದ್ರನನ್ನು ಕುರಿತು—ಎಲೈ ಇಂದ್ರನೇ, ನಾವು ನಿನ್ನನ್ನು ಸತ್ಕರಿಸಿ ಯಜ್ಞದಲ್ಲಿ ನಿನಗೆ ಬೇಕಾದ ಸಾರವಸ್ತುಗಳನ್ನೆಲ್ಲಾ ಅರ್ಪಿಸಿರುವೆವು. ಸಾರವಾದ ಎಲ್ಲಾ ವಸ್ತುಗಳನ್ನೂ ನೀನೇ ತೆಗೆದುಕೊಂಡಿರುವೆ. ಇವುಗಳಲ್ಲಿ ಕೆಲವನ್ನು ನಮಗೂ ಕೊಡು ಎಂದರು. ಇಂದ್ರನು ಅದಾಗುವುದಿಲ್ಲ. ಈ ಸಾರವಸ್ತುಗಳನ್ನೆಲ್ಲಾ ನಾನೇ ಅಪೇಕ್ಷಿಸಿದೆನು. ಅವೆಲ್ಲಾ ನನಗೆ ಲಭಿಸಿತು. ನಿಮಗೆ ಕೊಡಲು ಕಾರಣವೇನು ? ಎಂದನು. ದೇವತೆಗಳು ಮತ್ತೆ ಎಲೈ ಇಂದ್ರನೇ, ಈರೀತಿ ನಮ್ಮ ಪ್ರಾರ್ಥನೆಯನ್ನು ನಿರಾಕರಿಸಬೇಡ. ನಮಗೂ ಸ್ವಲ್ಪಭಾಗವನ್ನು ಕೊಡು ಎಂದು ಪ್ರಾರ್ಥಿಸಲು ಇಂದ್ರನು ಅವರನ್ನು ಅನುಗ್ರಹದೃಷ್ಟಿಯಿಂದ ನೋಡಿದನು. ಮತ್ತೇನನ್ನೂ ಹೇಳಲಿಲ್ಲ.

ತೇ ದೇವಾ ಅಬ್ರುವನ್ನಿಯಂ ವಾ ಇಂದ್ರಸ್ಯ ಪ್ರಿಯಾ ಜಾಯಾ ವಾವಾತಾ ಪ್ರಾಸಹಾ ನಾಮಾ-ಸ್ಯಾಮೇವೇಚ್ಛಾಮಹಾ ಇತಿ ತಥೇತಿ ತಸ್ಯಾಮೈಚ್ಛಂತ ಸೈತಾನಬ್ರವೀತ್ಪ್ರತರ್ವಃ ಪ್ರತಿವಕ್ತಾ-ಸ್ಮೀತಿ ತಸ್ಮಾತ್ಸ್ತ್ರಿಯೈ ಪತ್ಯಾವಿಚ್ಛಂತೇ ತಸ್ಮಾದು ಸ್ತ್ರ್ಯನುರಾತ್ರಂ ಪತ್ಯಾವಿಚ್ಛತೇ ತಾಂ ಪ್ರಾತ-ರುಪಾಯನ್ನೈತದೇವ ಪ್ರತ್ಯೇಪಹ್ಯತ ॥

(ಐ. ಬ್ರಾ. ೧೨-೨೨)

ಇಂದ್ರನು ಯಾವ ಮಾತನ್ನೂ ಆಡದ್ದರಿಂದ ದೇವತೆಗಳಿಗೆ ಇಂದ್ರನ ಅಭಿಪ್ರಾಯವು ತಿಳಿಯಲಿಲ್ಲ. ಆದ್ದರಿಂದ ಅವರು ಪರಸ್ಪರ ಈರೀತಿ ಮಾತನಾಡಿಕೊಂಡರು—ಈಗ ನಮ್ಮೆದುರಿಗೆ ಇರುವ ಈ ಸ್ತ್ರೀಯು ಇಂದ್ರನಿಗೆ ಪ್ರೀತಿಪಾತ್ರಳಾದ ಪತ್ನಿಯು. ಇವಳು ಮಧ್ಯಮಜಾತಿಯವಳು. ಇವಳ ಹೆಸರು ವಾವಾತಾ ಎಂದು. ರಾಜರಿಗೆ ಮೂರುವಿಧವಾದ ಪತ್ನಿಯರಿರುವರು. ಅವರಲ್ಲಿ ಉತ್ತಮಜಾತಿಯ ಪತ್ನಿಗೆ ಮಹಿಷೀ ಎಂದೂ, ಮಧ್ಯಮಜಾತಿಯ ಪತ್ನಿಗೆ ವಾವಾತಾ ಎಂದೂ, ಅಧಮಜಾತಿಯ ಪತ್ನಿಗೆ ಪರಿವೃತ್ತಿ ಎಂದೂ ಹೇಳುವ ರೂಢಿ ಇದೆ. ಆದ್ದರಿಂದಲೇ ಅಶ್ವಮೇಧಯಜ್ಞದಲ್ಲಿ ಸ್ತ್ರೀಯರು ಮಾಡಬೇಕಾದ ಕರ್ತವ್ಯಕರ್ಮಗಳಲ್ಲಿ **ಮಹಿಷಿ**ಯನ್ನೂ **ಭೂಃ** ಎಂಬ ಶಬ್ದದಿಂದಲೂ **ವಾವಾತಾ** ಎಂಬ ಪತ್ನಿಯನ್ನು **ಭುವಃ** ಎಂಬ ಶಬ್ದದಿಂದಲೂ ಪರಿವೃತ್ತಿ ಎಂಬ ಪತ್ನಿಯನ್ನು **ಸುವಃ** ಎಂಬ ಶಬ್ದದಿಂದಲೂ ನಿರ್ದೇಶಿಸುವರು ಈ ಮೂವರಲ್ಲಿ **ವಾವಾತಾ** ಎಂಬ ಮಧ್ಯಮಜಾತಿಗೆಸೇರಿದ ಪತ್ನಿಗ **ಪ್ರಾಸಹಾ** ಎಂದು ಹೆಸರಿಪ. ಏಕೆಂದರೆ ಈ ಪತ್ನಿಯು ಪತಿಯಇಷ್ಟವನ್ನು ತಿಳಿದು ಅದರಂತೆ ವರ್ತಿಸುತ್ತಾ ಒಲಾತ್ಕಾರದಿಂದ ಸಮಸ್ತಕಲಸವನ್ನೂ ಮಾಡಲು ಸಮರ್ಥಳಾದ್ದರಿಂದ ಇವಳು ರಾಜನಿಗೆ ಬಹಳ ಪ್ರೀತಿಪಾತ್ರಳಾಗಿರುವಳು. ಆದ್ದರಿಂದ ಇವಳ ಮೂಲಕ ರಾಜನಾದ ಇಂದ್ರನ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಯುಕ್ತವೆಂದರಿತು ಇವಳಲ್ಲಿ ತಮ್ಮಸಿಚಾರವನ್ನು ಅರಿಕನಮಾಡಿಕೊಂಡರು ಅದನ್ನು ಕೇಳಿ ವಾವಾತೆಯು ಎಲೈ ದೇವತೆಗಳೇ ನಿಮ್ಮ ವಿಚಾರವನ್ನು ಇಂದ್ರನಿಗೆತಿಳಿಸಿ ಅವನ ಅಭಿಪ್ರಾಯವನ್ನು ತಿಳಿಯಜೇಕಾದರೆ ಈಗ ಸರಿಯಾದ ಕಾಲವಲ್ಲ. ಲೋಕದಲ್ಲಿ ಸ್ತ್ರೀಯರು ತಮ್ಮ ಪತಿಗೆ ತಿಳಿಸಬೇಕಾದ ಯಾವ ಮುಖ್ಯ ವಿಷಯವನ್ನಾಗಲೀ ರಾತ್ರಿಕಾಲದಲ್ಲಿ ಏಕಾಂತದಲ್ಲಿರುವಾಗ ತಿಳಿಸುವುದು ರೂಢಿಯಷ್ಟೆ. ಏಕಾಂತದಲ್ಲಿರುವಾಗ ಯಾವವಿಧಗಾದ ಅಡ್ಡಿಆತಂಕಗಳಿಲ್ಲದೆ ಇರುವುದರಿಂದ ಸ್ತ್ರೀಯರು ಹೇಳಿದ್ದನ್ನು ಪುರುಷನು ಸಹಾನುಭೂತಿಯಿಂದ ಕೇಳಿ ಯೋಗ್ಯವಾದ ಉತ್ತರವನ್ನು ಹೇಳುವನು. ಆದ್ದರಿಂದ ನಾನು ಈರಾತ್ರಿ ಇಂದ್ರನೊಡನೆ ಏಕಾಂತದಲ್ಲಿರುವಾಗ ನಿಮ್ಮ ವಿಷಯಗಳನ್ನು ಪ್ರಸ್ತಾಪಮಾಡಿ ಇಂದ್ರನ ಅಭಿಪ್ರಾಯವನ್ನು ತಿಳಿದುಕೊಳ್ಳುವೆನು. ಆದ್ದರಿಂದ ನೀವು ನಾಳೆ ಬೆಳಿಗ್ಗೆ ಬಂದರೆ ಇಂದ್ರನ ಪ್ರತ್ಯುತ್ತರವನ್ನು ತಿಳಿಸುವೆನು ಎಂದಳು. ದೇವತೆಗಳು ಹಾಗೇ ಆಗಲೆಂದು ಹೇಳಿ ಮಾರನೆಯದಿವಸ ಪ್ರಾತಃಕಾಲ ಬಂದು ಕೇಳಲು, ಆ ವಾವಾತೆಯು ಪ್ರತ್ಯುತ್ತರವಾಗಿ ಮಂತ್ರರೂಪವಾದ ಈ ವಾಕ್ಯವನ್ನು ಹೇಳಿದಳು—

ಯದ್ವಾವಾನ ಪುರುತಮಂ ಪುರಾಷಾಳಾ ವೃತ್ರಹೇಂದ್ರೋ ನಾಮಾನ್ಯಪ್ರಾಃ ।
ಅಚೇತಿ ಪ್ರಾಸಹಸ್ಪತಿಸ್ತುವಿಷ್ಮಾನ್ ಯದೀಮುಶ್ಮಸಿ ಕರ್ತವೇ ಕರತ್ತಕ್ ॥

(ಋ. ಸಂ. ೧೦-೭೪-೬)

ಪುರಾತನ ಪುರುಷರ ಮಧ್ಯದಲ್ಲಿ ಇಂದ್ರನು ವೃತ್ರನನ್ನು ಸಂಹಾರಮಾಡಿ ಇತರ ಅನೇಕ ಯುದ್ಧಗಳಲ್ಲಿಯೂ ಜಯಶಾಲಿಯಾಗಿ ಪ್ರಪಂಚದಲ್ಲೆಲ್ಲಾ ಖ್ಯಾತಿಯನ್ನು ಗಳಿಸಿರುವನು. ಆದ್ದರಿಂದ ಇಂದ್ರನಿಗೆ ಪ್ರಾಸಹಸ್ಪತಿ ಎಂಬ ಹೆಸರು. **ಪ್ರ** ಎಂದರೆ ಅತಿಶಯವಾದ, **ಸಹಃ** ಬಲಕ್ಕೆ, **ಪತಿಃ** ಪ್ರಭುವು, ಅತ್ಯಂತ ಬಲಶಾಲಿಯು ಎಂಬ ಹೆಸರು ಅನ್ವರ್ಥನಾಮವಾಗಿರುವುದು. ಇಂತಹ ಹೆಸರನ್ನು ವೃತ್ರಸಂಹಾರರೂಪವಾದ ಮಹಾಕಾರ್ಯದಿಂತ ಗಳಿಸಿ, ಮಾಹೇಂದ್ರಗ್ರಹ, ಮಾಧ್ಯಂದಿನ ಸವನ, ಮೊದಲಾದ ಪ್ರಶಸ್ತಿನಾಮಗಳು ತನಗೆ ಅತ್ಯಂತ ಪ್ರಿಯವಾಗಿರುವುದೆಂದು ಪ್ರಪಂಚದಲ್ಲೆಲ್ಲಾ ಹರಡಿರುವನು. ಈ ಇಂದ್ರನು ದೇವತೆಗಳ ಅಭೀಷ್ಟವೇನೆಂಬುದನ್ನೂ ತಿಳಿದೇ ಇರುವನು ಮತ್ತು ಇವನು ಬಹಳ ಬಲಶಾಲಿಯು—ಎಂದು ಈ ಋಕ್ಕಿನ ಮೂರು ಪಾದಗಳಿಗೆ ಅರ್ಥವು. ಇದನ್ನೇ ವಾವಾತೆಯು ದೇವತೆಗಳಿಗೆ ತಿಳಿಸಿದಳು.

ಇಂದ್ರೋ ವೈ ಪ್ರಾಸಹಸ್ಪತಿಸ್ತುವಿಷ್ಮಾನ್ । ಯದೀಮುಶ್ಮಸಿ ಕರ್ತವೇ ಕರತ್ತದಿತಿ ಯದೇವೈತದವೋಚಾಮಾಕರತ್ತದಿತ್ಯೇವೈನಾಂಸ್ತದಬ್ರವೀತ್ ॥

ಮೇಲೆ ಹೇಳಿದಂತೆ ಮಂತ್ರದ ಮೂರು ಪಾದಗಳಿಂದ ವಾವಾತೆಯು ಹೇಳಿದ ಉತ್ತರವನ್ನು ಕೇಳಿ ದೇವತೆಗಳು—

ಯದೀಮುಶ್ಮಸಿ ಕರ್ತವೇ ಕರತ್ತತ್ ।

ಎಂಬ ನಾಲ್ಕನೆಯ ಪಾದದಿಂದ ತಮ್ಮತಮ್ಮಲ್ಲಿ ಮಾತನಾಡಿಕೊಂಡರು. ದೇವತೆಗಳಾದ ನಮಗೂ ಯಜ್ಞದಲ್ಲಿ ಭಾಗವಿರುವುದಾದರೆ ಮತ್ತು ಇಂದ್ರನು ನಮಗೆ ಆ ಯಜ್ಞಭಾಗವನ್ನು ಕಲ್ಪಿಸಿಕೊಡುವುದಾದರೆ, ನಮ್ಮ ಅಪೇಕ್ಷೆಯನ್ನು ಇಂದ್ರನು ನೆರವೇರಿಸದಂತಾಗುವುದು ಎಂದು, ಅಥವಾ ಈ ನಾಲ್ಕನೆಯ ಪಾದದ ವಾಕ್ಯವನ್ನು ವಾವಾತೆಯ ಪ್ರತ್ಯುತ್ತರವೆಂದೇ ಪರಿಗಣಿಸುವುದಾದರೆ ಆಗ—ಎಲೈ ದೇವತೆಗಳೇ, ನೀವು ಆಲೋಚಿಸಿ ಇಂದ್ರನನ್ನು ಪ್ರಾರ್ಥಿಸಿದ ಕಾರ್ಯವನ್ನು ಇಂದ್ರನು ನೆರವೇರಿಸುತ್ತಾನೆ ಅಥವಾ ನೆರವೇರಿಸುವನು ಎಂದು ಚತುರ್ಥಪಾದದ ಅರ್ಥವು. ಅದನ್ನೇ ಇಲ್ಲಿ ಸ್ಪಷ್ಟವಾಗಿ ಹೇಳಿರುವುದು—

ತೇ ದೇವಾ ಅಬ್ರುವನ್ಯಪ್ಯಸ್ಯಾ ಇಹಾಸ್ತು ಯಾನೋಽಸ್ಮಿನ್ನ ವೈಕಮವಿದದಿತಿ ತಥೇತಿ ತಸ್ಯಾ ಅಪ್ಯತ್ಯಾಕುರ್ವನ್ ॥

ಈರೀತಿ ಹೇಳಿದ ವಾವಾತೆಯ ಪ್ರತ್ಯುತ್ತರವನ್ನು ದೇವತೆಗಳು ಕೇಳಿ ಈ ವಾವಾತೆಯು ದೇವತೆಗಳಾದ ನಮಗೆ ಬಹಳ ಉಪಕಾರಮಾಡಿದ್ದಾಳೆ. ಆದ್ದರಿಂದ ಇವಳಿಗೆ ನಾವು ಪ್ರತ್ಯುಪಕಾರವನ್ನು ಮಾಡಬೇಕಾಗಿರುವುದು. ನಿಷ್ಕೇವಲ್ಯ ಶಸ್ತ್ರಮಂತ್ರದಲ್ಲಿ ಈ ವಾವಾತೆಗೆ ಯಾವುದಾದರೂ ಸಂಬಂಧವಿದೆಯೋ ಇಲ್ಲವೋ ತಿಳಿಯದು. ಹೇಗಾದರೂ ಆಗಲಿ ಈ ವಾವಾತೆಗೆ ನಿಷ್ಕೇವಲ್ಯ ಶಸ್ತ್ರಮಂತ್ರದಲ್ಲಿ ಯೋಗ್ಯವಾದ ಸಂಬಂಧವನ್ನು ಕಲ್ಪಿಸೋಣ ಎಂದು ಯೋಚಿಸಿ ಅದರಂತೆ ಮಾಡಿದರು.

ತಸ್ಮಾದೇಷಾತ್ರಾಪಿ ಶಸ್ಯತೇ ಯದ್ವಾವಾನ ಪುರುತಮಂ ಪುರಾಷಾಳಿತಿ ।

ಈರೀತಿ ನಿಷ್ಕೇವಲ್ಯಶಸ್ತ್ರಮಂತ್ರದಲ್ಲಿ ವಾವಾತೆಗೆ ಈ ಋಕ್ಕಿನ (ಯದ್ವಾವಾನ ಋ. ಸಂ. ೧೦-೭೪.೬) ಸಂಬಂಧವನ್ನು ದೇವತೆಗಳು ಕಲ್ಪಿಸಿದ್ದರಿಂದ ಈ ಋಕ್ಕು ನಿಷ್ಕೇವಲ್ಯಶಸ್ತ್ರಮಂತ್ರದಲ್ಲಿ ಧಾಯ್ಯಾಮಂತ್ರವೆಂದು ಹೇಳಲ್ಪಡುವುದು.

ಸೇನಾ ವಾ ಇಂದ್ರಸ್ಯ ಪ್ರಿಯಾ ಜಾಯಾ ಹಾವಾತಾ ಪ್ರಾಸಹಾ ನಾಮ ಕೋ ನಾಮ ಪ್ರಜಾಪತಿಃ ಶ್ವಶುರಸ್ತದ್ಯಾಸ್ಯ ಕಾಮೇ ಸೇನಾ ಜಯೇತ್ತಸ್ಯಾ ಅರ್ಧಾತ್ತಿಷ್ಠಂಸ್ತೃಣಮುಭಯತಃ ಪರಿಚ್ಛಿದ್ಯೇತರಾಂ ಸೇನಾಮಭ್ಯಸ್ಯೇತ್ಪ್ರಾಸಹೇ ಕಸ್ತ್ವಾ ಪಶ್ಯತೀತಿ ತದ್ಯಥೈವಾದಃ ಸ್ನುಷಾ ಶ್ವಶುರಾಲ್ಲಜ್ಜಮಾನಾ ನಿಲೀಯಮಾನೈತ್ಯೇವಮೇವ ಸಾ ಸೇನಾ ಭಜ್ಯಮಾನಾ ನಿಲೀಯಮಾನೈತಿ ಯತ್ರೈವಂ ವಿದ್ವಾಂಸ್ತೃಣಮುಭಯತಃ ಪರಿಚ್ಛಿದ್ಯೇತರಾಂ ಸೇನಾಮಭ್ಯಸ್ಯತಿ ಪ್ರಾಸಹೇ ಕಸ್ತ್ವಾ ಪಶ್ಯತೀತಿ ॥

ಈ ಧಾಯ್ಯಾಮಂತ್ರವನ್ನು ಹೇಳಿದ ಇಂದ್ರಪತ್ನಿಯಾದ ವಾವಾತೆಯ ಪ್ರಶಂಸೆಯನ್ನು ಸ್ವಲ್ಪ ವಿವರವಾಗಿ ಇಲ್ಲಿ ತಿಳಿಸಿದೆ. ಹಿಂದೆ ವಾವಾತೆಯೆಂಬುವಳು ಇಂದ್ರನ ಪ್ರಿಯಪತ್ನಿಯೆಂದೂ ಇವಳ ಹೆಸರು ಪ್ರಾಸಹಾ ಎಂದೂ ಹೇಳಿದೆಯಷ್ಟೆ. ಲೋಕವ್ಯವಹಾರದಲ್ಲಿ ಈ ವಾವಾತಾ ಅಥವಾ ಪ್ರಾಸಹಾ ಎಂಬುವಳು ಯುದ್ಧಕ್ಕಾಗಿ ಸಿದ್ಧವಾಗಿರುವ ಸೇನಾರೂಪದಿಂದ ಇರುವಳೆಂದು ಹೇಳುವರು. ಏಕೆಂದರೆ ಇಂದ್ರಪತ್ನಿಯು ಸೇನಾಭಿಮಾನಿದೇವತೆಯು. ವೇದದಲ್ಲಿಯೂ ಸಹ **ಇಂದ್ರಾಣೀ ನೈ ಸೇನಾಯೈ ದೇವತಾ** । ಎಂದು ಹೇಳಿರುವುದು ಮತ್ತು **ಕೋ ನಾಮ** ನಾನು ಯಾರು ಎಂದು ಹೇಳಿದ್ದರಿಂದ ಪ್ರಜಾಪತಿಯು ಕಶಬ್ದವಾಚ್ಯನೆಂದೂ ಹಿಂದೆ ವಿವರಿಸಲಾಗಿದೆಯಷ್ಟೆ- ಆ ಪ್ರಜಾಪತಿಯೇ ಇಂದ್ರಪತ್ನಿಯ **ಶ್ವಶುರ** ಅಥವಾ ಮಾವನು. ಇಂದ್ರನು ಪ್ರಜಾಪತಿಯ ಪುತ್ರನೆಂಬ ವಿಷಯದಲ್ಲಿ-**ಪ್ರಜಾಪತಿರಿಂದ್ರಮಸೃಜತಾನುಜಾವರಂ ದೇವಾನಾಂ** ಎಂದು ವೇದದಲ್ಲಿಯೇ ಹೇಳಿದೆ. ಈ ವಿಷಯವು ಹೀಗಿರುವಾಗ ಲೌಕಿಕವ್ಯವಹಾರದಲ್ಲಿ ಯುದ್ಧಾಭಿಲಾಷಿಯಾದ ಪುರುಷನು ತನ್ನ ಸೇನೆಯು ಜಯವನ್ನು ಪಡೆಯಬೇಕೆಂದು ತನಗಿಷ್ಟವಿದ್ದರೆ ಆಗ ಅವನೊಂದು ಕಾರ್ಯವನ್ನು ಮಾಡಬೇಕು. ಯುದ್ಧಸಮಯದಲ್ಲಿ ಎರಡು ಸೇನೆಗಳೂ ಪರಸ್ಪರಾಭಿಮುಖವಾಗಿ ಯುದ್ಧ ಮಾಡಲು ನಿಂತಿರುವಾಗ ಆ ಪುರುಷನು ತನ್ನ ಸೇನೆಯನ್ನತಿಕ್ರಮಿಸಿ ಎಂದರೆ ಸೇನೆಯ ಮಧ್ಯಭಾಗದಿಂದ ಸ್ವಲ್ಪ ಮುಂದಕ್ಕೆ ಹೋಗಿ ಭೂಮಿಯಲ್ಲಿ ನಿಂತುಕೊಂಡು ಒಂದು ಹುಲ್ಲುಕಡ್ಡಿಯನ್ನು ತೆಗೆದುಕೊಂಡು ಅದರ ಬೇರನ್ನೂ ತುದಿಯನ್ನೂ ಕತ್ತರಿಸಿ ಉಳಿದ ಮಧ್ಯಭಾಗವನ್ನು ಶತ್ರುಸೇನೆಯ ಅಭಿಮುಖವಾಗಿ (ಎದುರಿಗೆ) ಬಾಣವನ್ನು ಎಸೆಯುವಂತೆ ಎಸೆಯಬೇಕು. ಹೀಗೆ ಎಸೆಯುವಾಗ—**ಪ್ರಾಸಹೇ ಕಸ್ತ್ವಾ ಪಶ್ಯತಿ** । ಎಲೈ ಪ್ರಾಸಹಾ ಎಂಬ ಹೆಸರುಳ್ಳ ಇಂದ್ರಪತ್ನಿಯೇ, ಕಶಬ್ದವಾಚ್ಯನೂ, ನಿನ್ನ ಮಾವನೂ ಆದ ಪ್ರಜಾಪತಿಯು ನಿನ್ನನ್ನು ತನ್ನ ಕಣ್ಣುಗಳಿಂದ ನೋಡುತ್ತಿರುವನು ಎಂಬ ಮಂತ್ರದಿಂದ ಆ ಹುಲ್ಲುಕಡ್ಡಿಯನ್ನು ಎಸೆಯಬೇಕು. ಈ ಮಂತ್ರದಿಂದ ಹುಲ್ಲುಕಡ್ಡಿಯನ್ನು ಈರೀತಿ ಎಸೆದರೆ ಶತ್ರುಸೇನೆಗೆ ಪರಾಜಯವುಂಟಾಗುವುದು. ಇದನ್ನು ಒಂದು ದೃಷ್ಟಾಂತ ಮೂಲಕ ಸ್ಪಷ್ಟಪಡಿಸುವರು. ಲೋಕವ್ಯವಹಾರದಲ್ಲಿ ದೊಡ್ಡಮನುಷ್ಯರೂ, ಪೂರ್ವಾಚಾರಸಂಪ್ರದಾಯನಿಷ್ಠರೂ ಆದ ಗೃಹಸ್ಥರ ಮನೆಯಲ್ಲಿ ತರುಣಿಯಾದ ಸೊಸೆಯು ತನ್ನ ಮಾವನನ್ನು ಕಂಡರೆ ನಾಚಿಕೆಯಿಂದ ಸೀರೆಯ ಸೆರಗನ್ನು ಸರಿಮಾಡಿಕೊಳ್ಳುತ್ತಾ ಹಸ್ತಾದ್ಯವಯವಗಳನ್ನು ಮುದುರಿಕೊಂಡು ಮನೆಯ ಒಳಭಾಗಕ್ಕೆ ಮೆಲ್ಲನೆ ಹೊರಟುಹೋಗುವಳು. ಅದರಂತೆ ಮಂತ್ರಪೂರ್ವಕವಾದ ತೃಣವಿಕ್ಷೇಪದಿಂದ ಶತ್ರುಸೇನೆಗೆ ಪರಾಭವ (ಸೋಲು) ವುಂಟಾಗಿ ಅದು ಪರ್ವತಾರಣ್ಯನದಿಗಳನ್ನು ದಾಟಿ ಹಿಂದಕ್ಕೆ ಸರಿಯುತ್ತಾ ತನ್ನ ದೇಶಕ್ಕೆ ಪಲಾಯನ ಮಾಡುವುದು. ಪ್ರಾಸಂಗಿಕವಾಗಿ ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಿ ಮುಂದೆ ಪ್ರಕೃತಸಂದರ್ಭವನ್ನು ವಿಸ್ತರಿಸುವರು—

ತಾನಿಂದ್ರ ಉವಾಚಾಪಿ ವೋಽತ್ಕಾಸ್ತ್ವಿತಿ ತೇ ದೇವಾ ಏಬ್ರುವನ್ವಿರಾಡ್ಯಾಜ್ಯಾಸ್ತು ನಿಷ್ಕೇವಲ್ಯಸ್ಯ ಯಾ ತ್ರಯಸ್ತ್ರಿಂಶದಕ್ಷರಾ ತ್ರಯಸ್ತ್ರಿಂಶದ್ವೈ ದೇವಾ ಅಷ್ಟೌ ವಸವ ಏಕಾದಶ ರುದ್ರಾ ದ್ವಾದಶಾದಿತ್ಯಾಃ ಪ್ರಜಾಪತಿಶ್ಚ ವಷಟ್ಕಾರಶ್ಚ ದೇವತಾ ಅಕ್ಷರಭಾಜಃ ಕರೋತ್ಯಕ್ಷರಮಕ್ಷರಮೇವತದ್ದೇವತಾ ಅನುಪ್ರಸಿಬಂತಿ ದೇವಪಾತ್ರೇಣೈವ ತದ್ದೇವತಾಸ್ತೃಪ್ಯಂತಿ ॥

ವಾವಾತೆಯ ವಚನವನ್ನು (ಪ್ರತ್ಯುತ್ತರವನ್ನು) ಕೇಳಿ ದೇವತೆಗಳು ಇಂದ್ರನ ಸಮೀಪಕ್ಕೆ ಹೋಗಲು, ಇಂದ್ರನು ಅವರನ್ನು ಕುರಿತು — ಎಲೈ ದೇವತೆಗಳೇ, ನೀವು ಅಪೇಕ್ಷಿಸುವಂತೆ ಯಜ್ಞದ ನಿಷ್ಕೇವಲ್ಯಶಸ್ತ್ರದಲ್ಲಿ ನಿಮಗೆ ಯಜ್ಞ ಭಾಗವು ಕೊಡಲ್ಪಟ್ಟಿರುವುದು ಎಂದನು. ಅದನ್ನು ಕೇಳಿ ದೇವತೆಗಳು — ನಾವು (ದೇವತೆಗಳು) ಮೂವತ್ತ್ಮೂರುಮಂದಿ ಇರುವೆವು. ಹೇಗೆಂದರೆ, ಎಂಟುಮಂದಿ ವಸುಗಳು, ಹನ್ನೊಂದುಮಂದಿ ರುದ್ರರು, ಹನ್ನೆರಡುಮಂದಿ ಆದಿತ್ಯರು ಇವರ ಜತೆಗೆ ಪ್ರಜಾಪತಿ ಒಬ್ಬನು, ವಷಟ್ಕಾರವು ಒಂದು. ಒಟ್ಟು ಮೂವತ್ತ್ಮೂರು ದೇವತೆಗಳಿರುವುದರಿಂದ ಮೂವತ್ತ್ಮೂರು ಅಕ್ಷರಗಳುಳ್ಳ ವಿರಾಟ್ ಎಂಬ ಛಂದಸ್ಸಿನ ಯಾಜ್ಯಾಮಂತ್ರದಿಂದ ಎಂದರೆ—

ಪಿಬಾ ಸೋಮಮಿಂದ್ರ ಮಂದತು ತ್ವಾ ಯಂ ತೇ ಸುಷಾವ ಹರ್ಯಶ್ವಾದ್ರಿಃ ।
ಸೋತುರ್ಬಾಹುಭ್ಯಾಂ ಸುಯತೋ ನಾರ್ವಾ ॥

(ಋ. ಸಂ. ೭-೨೨-೧)

ಎಂಬ ಯಾಜ್ಯಾಮಂತ್ರದಿಂದ ಸೋಮಪಾನವನ್ನು ಕಲ್ಪಿಸಬೇಕೆಂದು ಇಂದ್ರನನ್ನು ಪ್ರಾರ್ಥಿಸಿದರು. ಈ ಯಾಜ್ಯಾಮಂತ್ರದಲ್ಲಿ ಮೂವತ್ತ್ಮೂರು ಅಕ್ಷರಗಳಿರಬೇಕು. ಆದರೆ ಹಾಗಲ್ಲದೆ ಇಪ್ಪತ್ತೊಂಭತ್ತು ಅಕ್ಷರಗಳು ಮಾತ್ರ ಇರುವವು. ಆದರೂ ಅಕ್ಷರಸಂಯೋಜನಾಕ್ರಮದಿಂದ ಅಕ್ಷರಗಳು ಕಮ್ಮಿಯಿದ್ದರೂ ಒಟ್ಟು ಮೂವತ್ತ್ಮೂರು ಅಕ್ಷರಗಳಿರುವುವೆಂದೇ ಪರಿಗಣಿಸಬೇಕು. ಈ ರೀತಿ ಯಾಜ್ಯಾಮಂತ್ರದಲ್ಲಿರುವ ಮೂವತ್ತ್ಮೂರು ಅಕ್ಷರಗಳೂ, ಒಂದೊಂದು ಅಕ್ಷರ ಒಂದೊಂದು ದೇವತೆಯಂತೆ, ಮೂವತ್ತ್ಮೂರು ದೇವತೆಗಳನ್ನೂ ತೃಪ್ತಿಪಡಿಸುವುವು. ಈ ಕ್ರಮವನ್ನು ಬಿಟ್ಟು ಬೇರೆ ಛಂದಸ್ಸಿನ ಮಂತ್ರದಿಂದ ಯಾಜ್ಯಾಹುತಿಯನ್ನು ಅರ್ಪಿಸಿದರೆ ಅದರಿಂದ ಉಂಟಾಗುವ ಹಾನಿಯನ್ನು ವಿವರಿಸುವರು.

ಯಂ ಕಾಮಯೇತಾನಾಯತವಾನ್ ಸ್ಯಾದಿತ್ಯವಿರಾಜಾಸ್ಯ ಯೆಜೇದ್ಗಾಯತ್ರ್ಯಾ ವಾ ತ್ರಿಷ್ಟುಭಾ ವಾನ್ಯೇನ ವಾ ಛಂದಸಾ ವಷಟ್ಕುರ್ಯಾದನಾಯತನವಂತಮೇವೈನಂ ತತ್ಕರೋತಿ ಯಂ ಕಾಮಯೇತಾಯತನವಾನ್ ಸ್ಯಾದಿತಿ ವಿರಾಜಾಸ್ಯ ಯಜೇತ್ಪಿಬಾ ಸೋಮಮಿಂದ್ರ ಮಂದತು ತ್ವೇತ್ಯೇತಯಾಯತನವಂತಮೇವೈನಂ ತತ್ಕರೋತಿ ।

(ಐ. ಬ್ರಾ. ೧.೨-೨೨)

ಯಜ್ಞಮಾಡುವ ಯಜಮಾನನಿಗೆ ಗೃಹಾದಿಸಂಪತ್ತುಗಳು ನಾಶವಾಗಬೇಕೆಂಬ ಅಪೇಕ್ಷೆಯು ಹೋತೃವಿಗಿದ್ದಲ್ಲಿ ಆಗ ಅವನು ನಿಷ್ಕೇವಲ್ಯಶಸ್ತ್ರದಲ್ಲಿ ಪಠಿಸಬೇಕಾದ ಯಾಜ್ಯಾಮಂತ್ರವನ್ನು ವಿರಾಟ್ಛಂದಸ್ಸಿನ ಋಕ್ಕಿನಿಂದ ಪಠಿಸದೆ ಗಾಯತ್ರೀ, ತ್ರಿಷ್ಟುಪ್ ಅಥವಾ ಬೇರೆ ಛಂದಸ್ಸಿನ ಮಂತ್ರಗಳನ್ನು ಪಠಿಸುತ್ತಾ ಹೋಮಮಾಡಬೇಕು. ಆರೀತಿ ಮಾಡಿದಲ್ಲಿ ಯಜಮಾನನ ಗೃಹಾದಿನಿವಾಸಸ್ಥಾನಗಳು ನಾಶವಾಗುವವು. ಆದ್ದರಿಂದ ಯಜಮಾನನಿಗೆ ಗೃಹಸಂಪತ್ತು ಶಾಶ್ವತವಾಗಿರಲಿ ಎಂಬ ಅಪೇಕ್ಷೆಯಿದ್ದಲ್ಲಿ ಹೋತೃವು ಯಾಜ್ಯಾಹೋಮವನ್ನು ವಿರಾಟ್ಛಂದಸ್ಸಿನ ಋಕ್ಕಾದ— ಪಿಬಾ ಸೋಮಮಿಂದ್ರ (ಋ. ಸಂ. ೭-೨೨-೧) ಎಂಬ ಮಂತ್ರದಿಂದಲೇ ನೆರವೇರಿಸಬೇಕು. ಹಾಗೆ ಮಾಡಿದಲ್ಲಿ ಯಜಮಾನನಿಗೆ ಗೃಹಾದಿನಿವಾಸಸ್ಥಾನಗಳ ಸಮೃದ್ಧಿಯುಂಟಾಗುವುದು.

ಇಂದ್ರನಿಗೆ ಮರುತ್ವಾನ್ ಎಂಬ ಹೆಸರು ಬರಲು ಕಾರಣ

ಇಂದ್ರನಿಗೂ ಮರುತ್ತುಗಳಿಗೂ ಇರುವ ಶಾಶ್ವತವಾದ ಸಾಹಚರ್ಯವೂ, ಅವರವರಿಗೆ ಇರುವ ರಾಜಾಪ್ರಜಾ ಸಂಬಂಧವೂ, ಮರುತ್ತುಗಳೊಡಗೂಡಿದ ಇಂದ್ರನಿಗೆ ಮುಖ್ಯವಾದ ಯಜ್ಞಕ್ರಿಯೆಗಳಲ್ಲಿ ಹವಿಸ್ಸಿನ ಅರ್ಪಣೆಯೂ ಮತ್ತು ವೃತ್ರಾಸುರನೊಡನೆ ಯುದ್ಧವನ್ನು ನಡೆಸಿದಾಗ ಇಂದ್ರನಿಗೆ ಮರುತ್ತುಗಳು ಸಹಾಯ ಮಾಡಿರುವುದೂ

ಸಂಹಿತೆಗಳಲ್ಲಿಯೂ, ಬ್ರಾಹ್ಮಣಗಳಲ್ಲಿಯೂ ಅನೇಕ ಕಡೆ ಸ್ತುತಿಸಲ್ಪಟ್ಟಿದೆ. ಇಂದ್ರನು ಮರುತ್ತುಗಳೊಡನೆ ಸೇರಿಕೊಂಡು ಉಳಿದ ದೇವತೆಗಳಿಂದ ಪ್ರತ್ಯೇಕವಾಗಿ ಇದ್ದುದನ್ನು ತಿಳಿಸುವ ಪೂರ್ವಕಥೆಯೊಂದನ್ನು ಶತಪಥಬ್ರಾಹ್ಮಣದಲ್ಲಿ ಹೇಳಿದೆ.

ಅತಿಥ್ಯೇನ ಹ್ಯೆ ದೇವಾ ಇಷ್ಟ್ವಾ। ತಾನ್ತ್ಸಮದವಿಂದತ್ತೇ ಚತುರ್ಧಾವ್ಯದ್ರವನ್ನನ್ಯೋನ್ಯಸ್ಯ ಶ್ರಿಯಾ ತಿಷ್ಠಮಾನಾ ಅಗ್ನಿರ್ವಸುಭಿಃ ಸೋಮೋ ರುದ್ರೈರ್ವರುಣ ಆದಿತ್ಯೈರಿಂದ್ರೋ ಮರುದ್ಭಿರ್ಬೃಹಸ್ಪತಿರ್ವಿಶ್ವೈರ್ದೇವೈಃ ॥

(ಶ. ಬ್ರಾ. ೩-೪-೨-೧)

ಹಿಂದೆ ದೇವತೆಗಳು ಆತಿಥ್ಯಕ್ರಿಯೆಯನ್ನು ನೆರವೇರಿಸಿದಾಗ ಅವರವರಲ್ಲೇ ವೈಮನಸ್ಯವುಂಟಾಗಿ ಒಬ್ಬರಿಗೊಬ್ಬರು ಸೇರಲಿಷ್ಟಪಡದೆ, ನಾಲ್ಕು ಗುಂಪು ಮಾಡಿಕೊಂಡು ಬೇರೆಬೇರೆಯಾದರು. ಅಗ್ನಿಯು ವಸುಗಳೊಂದಿಗೂ, ಸೋಮನು ರುದ್ರರೊಂದಿಗೂ, ವರುಣನು ಆದಿತ್ಯರೊಂದಿಗೂ, ಇಂದ್ರನು ಮರುತ್ತುಗಳೊಂದಿಗೂ ಮತ್ತು ಬೃಹಸ್ಪತಿಯು ವಿಶ್ವೇದೇವತೆಗಳೊಂದಿಗೂ ಕೂಡಿಕೊಂಡು ಪ್ರತ್ಯೇಕವಾದ ಗುಂಪು ಮಾಡಿಕೊಂಡರು ಎಂಬ ಕಥೆಯಲ್ಲಿ ಇಂದ್ರನು ಮರುತ್ತುಗಳೊಡನೆ ಸಾಹಚರ್ಯವನ್ನು ಬೆಳೆಸಿ ಅವರೊಡನೆ ಇಟ್ಟುಕೊಂಡಿರುವ ನಿಕಟವಾದ ಸಂಬಂಧವನ್ನು ಹೇಳಿದೆ. ಇದೂ ಅಲ್ಲದೆ, ಇಂದ್ರನೇ ದೊರೆಯೆಂದೂ, ಮರುತ್ತುಗಳೇ ಪ್ರಜೆಗಳೆಂದೂ ಅನೇಕ ಕಡೆ ಹೇಳಿದೆ. ಉದಾಹರಣೆಗೆ ಅದೇ ಶತಪಥಬ್ರಾಹ್ಮಣದಲ್ಲಿ,

ಕ್ಷತ್ರಂ ವಾ ಇಂದ್ರೋ ವಿಶೋ ಮರುತೋ ವಿಶಾ ವೈ ಕ್ಷತ್ರಿಯೋ ಬಲವಾನ್ ಭವತಿ ॥

(ಶ. ಬ್ರಾ. ೪-೩-೩-೬)

ಇಂದ್ರನು ಕ್ಷಾತ್ರತೇಜಸ್ಸುಳ್ಳ ರಾಜನು. ಮರುತ್ತುಗಳೇ ಅವನ ಪ್ರಜೆಗಳು. ಪ್ರಜೆಗಳ ಸಹಕಾರದಿಂದಲೇ ರಾಜನು ಶಕ್ತಿಯುಳ್ಳವನಾಗಿ ಆಗುತ್ತಾನೆಂದೂ, ಮರುತ್ತುಗಳ ಸಹಾಯದಿಂದ ಇಂದ್ರನ ಪರಾಕ್ರಮವು ವೃದ್ಧಿಯನ್ನು ಪಡೆಯಿತೆಂದೂ ಸೂಚಿಸಿದೆ. ಈ ರೀತಿಯಾದ ನಿಕಟಸಂಬಂಧವೂ, ಸಾಹಚರ್ಯವೂ ಇರುವುದರಿಂದಲೇ ಇಂದ್ರನನ್ನೂ ಮರುತ್ತುಗಳನ್ನೂ ಒಟ್ಟಿಗೆ ಉದ್ದೇಶಿಸಿ ಹವಿಸ್ಸುಗಳನ್ನು ಅರ್ಪಿಸುವ ಕ್ರಮವು ಶ್ರುತಿಗಳಲ್ಲಿ ಕಂಡುಬರುತ್ತದೆ. ಮತ್ತು

ಸ ನೋ ಮರುದ್ಭಿರ್ವೃಷಭ ಶ್ರವೋ ಧಾ ಉಗ್ರ ಉಗ್ರೇಭಿಃ ಸ್ಥವಿರಃ ಸಹೋದಾಃ ॥

(ಋ. ಸಂ. ೧-೧೭೧-೫)

ಎಂಬಿವೇ ಮುಂತಾದ ಋಕ್ಕುಗಳಿಂದ ಇಂದ್ರನಿಗೂ, ಮರುತ್ತುಗಳಿಗೂ ಒಟ್ಟಿಗೆ ಸೇರಿಸಿ ಆಹ್ವಾನವೂ ಹವಿಸ್ಸಿನ ಅರ್ಪಣೆಯೂ ಇದೆ. ಈ ರೀತಿಯಾಗಿ ಸಾಹಚರ್ಯವನ್ನು ವರ್ಣಿಸಿ ಬೃಹದ್ದೇವತೆಯಲ್ಲಿ—

ಮರುದ್ಭಿಃ ಸಹ ಯತ್ರೈಂದ್ರೋ ಮರುತ್ವಾಂಸ್ತತ್ರ ಸೋಽಭವತ್ ।

(ಬೃ. ದೇ. ೪-೫೬)

ಇತ್ಯಾದಿ ವಾಕ್ಯಗಳಿಂದ ಈ ದೇವತೆಗಳ ಸಂಬಂಧಸೂಚಕವಾದ ವಿಶೇಷಣವನ್ನು ವಿವರಿಸಿದೆ. ಆದರೆ ಒಂದು ಸೂಕ್ತದಲ್ಲಿ ಇಂದ್ರನಿಗೂ ಮರುತ್ತುಗಳಿಗೂ ನಡೆದ ವಾಗ್ವಾದದ ಫಲವಾಗಿ ಅವರವರ ವೈಷಮ್ಯವೂ, ಇಂದ್ರನ ಕ್ರೋಧವೂ ಸೂಚಿತವಾಗಿದೆ. ಈ ಕ್ರೋಧಕ್ಕೆ ಮೂಲವಾದ ಅವರವರ ವಾಗ್ವಾದವನ್ನು ಈ ರೀತಿ ತಿಳಿಸಿದೆ.

ಕ್ವ ೧ ಸ್ಯಾವೋ ಮರುತಃ ಸ್ವಧಾಸೀದ್ಯನ್ನಾಮೇಕಂ ಸಮಾಧತ್ತಾಹಿಹತ್ಯೇ ।
ಅಹಂ ಹ್ಯ ೧ ಗ್ರಸ್ತವಿಷಸ್ತವಿಷ್ಮಾನ್ವಿಶ್ವಸ್ಯ ಶತ್ರೋರನಮಂ ವಧಸ್ನೈಃ ॥

(ಋ. ಸಂ. ೧-೧೬೫-೬)

ಎಲೈ ಮರುತ್ತುಗಳೇ, ನಿಮ್ಮ ಸಹಾಯದಿಂದ ನಾನು ಅಹಿ (ವೃತ್ರ) ಹನನವನ್ನು ಮಾಡಿದೆನು ಎಂದು ಹೇಳುವುದು ಸುಳ್ಳು. ನಿಮಗೆ ಆ ಶಕ್ತಿಯು ತಾನೇ ಎಲ್ಲಿದ್ದಿತು ? ನನ್ನ ಶಕ್ತಿಯೇ ಅಸಾಧಾರಣವಾದುದರಿಂದ ಇತರ ಶಕ್ತಿಯ ಸಹಾಯವನ್ನು ಅಪೇಕ್ಷಿಸದೆ ವೃತ್ರಹನನಕಾಲದಲ್ಲಿ ಅದು ನನಗೆ ಸಹಾಯ ಮಾಡಿತು. ಕೇವಲ ನಾನು ಮಾತ್ರ ಭಯಂಕರನೂ, ಅದ್ಭುತವಾದ ಶಕ್ತಿಯುಳ್ಳವನೂ, ಮಹತ್ತ್ವದಿಂದ ಕೂಡಿದವನೂ ಆಗಿದ್ದೇನೆ ಎಂದು ಮರುತ್ತುಗಳನ್ನು ತಿರಸ್ಕೃತವಾದ ದೃಷ್ಟಿಯಿಂದ ಕಂಡು ತನ್ನ ಕ್ರೋಧವನ್ನು ಪ್ರಕಟಿಸುತ್ತಾನೆ. ಇಲ್ಲಿ ಆ ಕ್ರೋಧವು ಸೂಚಿತವಾಗಿದೆ. ವೃತ್ರಾಸುರನ ವಧಕಾಲದಲ್ಲಿ ಮರುತ್ತುಗಳ ಸಹಾಯವನ್ನು ಇಂದ್ರನು ಪಡೆದನೆಂಬುದು ಪ್ರಸಿದ್ಧವಾಗಿದೆ. ಆದರೂ ಸಹ ಮರುತ್ತುಗಳು ಆ ವಿಷಯವನ್ನು ತಿಳಿಸಿ ಆ ಸಹಾಯದ ಜ್ಞಾಪಕಾರ್ಥವಾಗಿ ಇಂದ್ರನಿಗೆ ಸೇರಬೇಕಾದ ಹವಿಸ್ಸಿನಲ್ಲಿ ತಮಗೂ ಭಾಗವನ್ನು ಕೊಡಬೇಕೆಂದು ಕೇಳಿದಾಗ ಇಂದ್ರನು ಮರುತ್ತುಗಳಿಂದ ಯಾವ ಸಹಾಯವೂ ಆಗಿಯೇ ಇಲ್ಲ ವೆಂದೂ ತಾನು ತನ್ನ ಸ್ವಶಕ್ತಿಯಿಂದಲೇ ಸಕಲ ಶತ್ರುಗಳನ್ನೂ ಕೊಂದೆನೆಂದೂ ಹೇಳಿಕೊಳ್ಳುತ್ತಾನೆ. ಇದೇ ವಿಷಯವನ್ನು ನಿರುಕ್ತಕಾರರು ತಿಳಿಸುತ್ತಾ ಈ ರೀತಿ ಹೇಳಿದ್ದಾರೆ—

ಅಗಸ್ತ್ಯ ಇಂದ್ರಾಯ ಹವಿರ್ನಿರುಪ್ಯ ಮರುದ್ಭ್ಯಃ ಸಂಪ್ರದಿತ್ಸಾಂಚಕಾರ। ಸ ಇಂದ್ರ ಏತ್ಯ ಪರಿದೇವಯಾಂಚಕ್ರೇ ॥

(ನಿ. ೧-೫)

ಅಗಸ್ತ್ಯಮುನಿಯು ಇಂದ್ರನನ್ನುದ್ದೇಶಿಸಿ ಹವಿಸ್ಸನ್ನು ಸಿದ್ಧಪಡಿಸಿದಾಗ ಮರುತ್ತುಗಳಿಗೂ ಅದರಲ್ಲಿ ಭಾಗವನ್ನರ್ಪಿಸಲು ಅಪೇಕ್ಷಿಸಿದೊಡನೆಯೇ ಇಂದ್ರನು ಆ ವಿಷಯದಲ್ಲಿ ಆಕ್ಷೇಪಿಸಿದನು ಎಂಬ ಸಂದರ್ಭವನ್ನು ತಿಳಿಸಿ ನಿರುಕ್ತಕಾರರು ಈ ಅಂಶವನ್ನು ತಿಳಿಸುವ,

ನ ನೂನಮಸ್ತಿ ನೋ ಶ್ವಃ ಕಸ್ತದ್ವೇದ ಯದದದ್ಭುತಂ ।
ಅನ್ಯಸ್ಯ ಚಿತ್ತಮಭಿ ಸಂಚರೇಣ್ಯಮುತಾಧೀತಂ ವಿನಶ್ಯತಿ ॥

(ಋ. ಸಂ. ೧-೧೭೦-೧)

ಎಂಬ ಋಕ್ಕನ್ನುದಹರಿಸಿದ್ದಾರೆ. ಆ ಕ್ರೋಧದ ವೇಗವು ಕಡಿಮೆಯಾಗಿ ತನಗೆ ಅದರಿಂದ ಬಾಧಕವಾಗದಿರಲೆಂದೂ ಮತ್ತು ಮರುತ್ತುಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಹವಿರ್ಭಾಗವು ಅವರಿಗೆ ಸೇರಲೇಬೇಕೆಂಬ ಉದ್ದಿಶ್ಯದಿಂದಲೂ ಇಲ್ಲಿ ಮರುತ್ತುಗಳನ್ನುದ್ದೇಶಿಸಿ ಪ್ರಾರ್ಥಿಸಿದೆ. ಈ ವಿಧವಾದ ಸಾಂತ್ವನವಚನವಾದನಂತರ ಇಂದ್ರನ ಮೈತ್ರಿಯು ಹಿಂದಿನಂತೆಯೇ ಬೆಳೆದು ತನ್ನ ಹವಿಸ್ಸಿನ ಭಾಗವನ್ನು ಮರುತ್ತುಗಳಿಗೆ ತಾನೇ ಕೊಡುತ್ತಾನೆ. ಇದೇ ವಿಷಯವನ್ನು ಎಂಟನೆಯ ಮಂಡಲದಲ್ಲಿ ಋಷಿಯು ಈ ರೀತಿ ಹೇಳಿ ಸ್ತುತಿಸುತ್ತಾನೆ.

ವೃತ್ರಸ್ಯ ತ್ವಾ ಶ್ವಸಥಾದೀಷಮಾಣಾ ವಿಶ್ವೇ ದೇವಾ ಅಜಹುರ್ಯೇ ಸಖಾಯಃ ।
ಮರುದ್ಭಿರಿಂದ್ರ ಸಖ್ಯಂ ತೇ ಅಸ್ತ್ವಥೇಮಾ ವಿಶ್ವಾಃ ಪೃತನಾ ಜಯಾಸಿ ॥

(ಋ. ಸಂ. ೮-೯೬-೭)

ಎಲೈ ಇಂದ್ರನೇ, ಮರುತ್ತುಗಳೊಡನಿರುವ ನಿನ್ನ ಸಖ್ಯವು ಪ್ರಸಿದ್ಧವಾದುದು- ಅವರಿಗೂ ನಿನ್ನ ಹವಿಸ್ಸಿನಲ್ಲಿ ಭಾಗ ವನ್ನು ಕೊಟ್ಟು ಅವರ ಸಹಾಯದಿಂದ ಶತ್ರುಗಳನ್ನೆಲ್ಲಾ ಜಯಿಸು ಎಂದು ಪ್ರಾರ್ಥಿಸಿದೆ.

ಇಂದ್ರನು ನಮುಚಿಯೆಂಬ ರಾಕ್ಷಸನನ್ನು ಸಂಹರಿಸಿದ ವಿಷಯ

ಈ ನಮುಚಿಯ ಸೂಕ್ಷ್ಮಪರಿಚಯವನ್ನು ಹೇಳಿ ಅನಂತರ ಇಂದ್ರನು ಅವನನ್ನು ಹೇಗೆ ವಧಿಸಿದನೆಂಬ ವಿಷಯವನ್ನು ವಿವರಿಸುವೆವು.

ನಮುಚಿಯ ಹೆಸರು ಋಗ್ವೇದದಲ್ಲಿ ಒಂಭತ್ತುಸಲವಲ್ಲದೆ,, ವಾಜಸನೇಯಸಂಹಿತೆ, ತೈತ್ತಿರೀಯಬ್ರಾಹ್ಮಣ (ತೈ. ಬ್ರಾ. ೧-೭-೧-೬, ೭) ಶತಪಥಬ್ರಾಹ್ಮಣ (ಶ. ಬ್ರಾ. ೧೨-೭-೧-೧೦) ಮೊದಲಾದ ಸ್ಥಳಗಳಲ್ಲಿಯೂ ಈ ಹೆಸರು ಕಂಡುಬರುತ್ತದೆ. ಇವನು ಅಸುರಸ್ವಭಾವದವನು ಎಂದೂ, ಋಗ್ವೇದದಲ್ಲಿ ದಾಸ ಎಂದೂ (ಋ. ಸಂ. ೫-೩೦-೭. ೪) ವ್ಯವಹೃತನಾಗಿದಾನೆ. ಒಂದುಕಡೆ (ಋ. ಸಂ. ೧-೫೭-೭) ಮಾಯಿ ಎಂದು ವರ್ಣಿತನಾಗಿದಾನೆ. ಇಂದ್ರನು ನಮುಚಿಯನ್ನು ಸೋಲಿಸುವಾಗ ನಮಿಾ ಮತ್ತು ಸಾಯ್ಯ ಎಂಬುವರ ಸ್ನೇಹ ಅಥವಾ ಬೆಂಬಲವಿದ್ದಿತೆಂದು ಋಗ್ವೇದ ದಲ್ಲಿ ಹೇಳಿದೆ. (ಋ. ಸಂ. ೧-೫೩-೭; ೬-೨೦-೬) ಇತರ ಅಸುರರಂತೆ ನಮುಚಿಯೂ ಇಂದ್ರನಿಂದ ಹತನಾಗಿದಾನೆ (ಋ. ಸಂ. ೨-೧೪-೫; ೭-೧೯-೫) ಅಥದಾ ಹೊಡೆದು ಕೆಡವಲ್ಪಟ್ಟಿದ್ದಾನೆ. (೧-೫೩-೭) ಇಂದ್ರನು ವೃತ್ರನಮುಚಿ ಎಂಬ ಅಸುರನನ್ನು ವಧಿಸಿ ಅಸುರರ ನೂರು ಕೋಟೆಗಳನ್ನು ನಾಶಮಾಡಿದನು. (ಋ. ಸಂ. ೭-೧೯-೫) ವೃತ್ರಾಸುರನ ಶಿರಸ್ಸನ್ನು ಛೇದಿಸಿದಂತೆ ನಮುಚಿಯ ಶಿರಸ್ಸನ್ನು ಛೇದಿಸುವುದಿಲ್ಲ. ಆದರೆ ಮಧನಮಾಡಿ (ಜಜ್ಞಿ) ಕೊಲ್ಲುತ್ತಾನೆ. (ಋ. ಸಂ. ೫-೩೦-೪, ೬-೨೦-೬) ಅಥವಾ ಶಿರಸ್ಸನ್ನು ತಿರುಚಿ ಕೊಲ್ಲುತ್ತಾನೆ. (ಋ. ಸಂ. ೫-೩೦-೭) ಅಥವಾ ನೀರಿನ (ಸಮುದ್ರದ) ನೊರೆಯಿಂದ ಅವನ ಶಿರಸ್ಸನ್ನು ತಿರುಚಿ (ನುಲಿದು) ಕೊಲ್ಲುತ್ತಾನೆ. (ಋ. ಸಂ. ೪-೧೪-೩) ಕೆಲವುಕಡೆ ಶಿರಸ್ಸನ್ನು ಕತ್ತರಿಸಿದನು ಎಂದೂ ಇದೆ. (ತೈ. ಬ್ರಾ. ೧-೭-೧-೬, ೭) ಒಂದು ಸ್ಥಳದಲ್ಲಿ (ಋ. ಸಂ. ೮೦-೧೩೧-೪, ೫) ಇಂದ್ರನು ನಮುಚಿಯ ಪಾರ್ಶ್ವದಲ್ಲಿ ಕುಳಿತು ಮದ್ಯವನ್ನ ಪಾನಮಾಡಿದನು. ಆಗ ಸರಸ್ವತಿಯು ಅಶ್ವಿನೀದೇವತೆಗಳ ಸಹಾಯದಿಂದ ಗುಣಪಡಿಸಿದಳು ಎಂದಿದೆ. ಇವೆಲ್ಲಾ ಋಗ್ವೇದದಲ್ಲಿ ಹೇಳಲುವ ವಿವರಣೆಗಳು.

ಈಗ ಯಜುರ್ವೇದದ ತೈತ್ತಿರೀಯ-ಬ್ರಾಹ್ಮಣದಲ್ಲಿ ಇಂದ್ರನು ನಮುಚಿಯನ್ನು ಹೇಗೆ ಸಂಹಾರಮಾಡಿದನೆಂಬ ವಿಷಯವಿರುವುದನ್ನು ವಿವರಿಸುತ್ತೇವೆ. **ನಮುಚಿಃ । ಇಂದ್ರೇಣ ಸಹ ಯುದ್ಧಂ ನ ಮುಂಚತೀತಿ ನಮುಚಿಃ ।** ಇಂದ್ರನೊಡನೆ ಯುದ್ಧಮಾಡುವುದನ್ನು ಬಿಡುವವನಲ್ಲವಾದ್ದರಿಂದ ಇವನಿಗೆ ನಮುಚಿಯೆಂದು ಹಸರು ಎಂದು ಕೆಲವು ಭಾಷ್ಯಕಾರರು ನಮುಚಿಶಬ್ದದ ವ್ಯುತ್ಪತ್ತಿಮಾಡಿರುವರು. ಈ ಅಸುರನು ಮಹಾಬಲವುಳ್ಳವನಾದುದರಿಂದ ಇಂದ್ರನು ಇವನೊಡನೆ ಯುದ್ಧಮಾಡಿ ಜಯಿಸುವುದು ಬಹಳ ಕಷ್ಟವಾಯಿತು. ಆದ್ದರಿಂದ ಇಂದ್ರನು ಉಪಾಯದಿಂದ ಇವನನ್ನು ಸಂಹರಿಸಬೇಕಾಯಿತು. ಈ ವಿಷಯದಲ್ಲಿ ತೈತ್ತಿರೀಯಬ್ರಾಹ್ಮಣದಲ್ಲಿ ಒಂದು ಉಪಾಖ್ಯಾನವಿರುವುದು.

ಇಂದ್ರೋ ವೃತ್ರಗ್ಂ ಹತ್ವಾ । ಅಸುರಾನ್ ಪರಾಭಾವ್ಯ । ನಮುಚಿಮಾಸುರಂ ನಾಲಭತ । ತಗ್ಂ ಶಚ್ಯಾಗೃಹ್ಣಾತ್ । ತೌ ಸಮಲಭೇತಾಂ । ಸೋಽಸ್ಮಾದಭಿಶುನತರೋಽಭವತ್ । ಸೋಽಬ್ರವೀತ್ । ಸಂಧಾಗ್ಂ ಸಂದಧಾವಹೈ । ಅಥ ತ್ವಾವಸ್ಯಕ್ಷಾಮಿ । ನ ಮಾ ಶುಷ್ಕೇಣ ನಾರ್ದ್ರೇಣ ಹನಃ । ನ ದಿವಾ ನ ನಕ್ತಮಿತಿ । ಸ ಏತಮಪಾಂ ಫೇನಮುಸಿಂಚತ್ । ನ ವಾ ಏಷ ಶುಷ್ಕೋ ನಾರ್ದ್ರೋ ವ್ಯುಷ್ಟಾಸೀತ್ । ಅನುದಿತಃ ಸೂರ್ಯಃ । ನ ವಾ ಏತದ್ದಿವಾ ನ ನಕ್ತಂ । ತಸ್ಯೈತಸ್ಮಿನ್ ಲೋಕೇ । ಅಪಾಂ ಫೇನೇನ ಶಿರ ಉದವರ್ತಯತ್ । ತದೇನಮನ್ವವರ್ತತ । ಮಿತ್ರದ್ರುಗಿತಿ । ಸ ಏತಾನಪಾಮಾರ್ಗಾನಜನಯತ್ । ತಾನಜುಹೋತ್ । ತೈರ್ವೈ ಸ ರಕ್ಷಾಗ್ಂಸ್ಯಪಾಹತ । ಯದಪಮಾರ್ಗಹೋಮೋ ಭವತಿ । ರಕ್ಷಸಾಮಪಹತ್ಯೈ ॥

(ತೈ. ಬ್ರಾ. ೧-೭-೧-೬, ೭)

ಇಂದ್ರನು ವೃತ್ರಾಸುರನನ್ನು ಸಂಹಾರಮಾಡಿದಮೇಲೆ ಇನ್ನೂ ಇತರ ಅಸುರರನ್ನೂ ಸಂಹಾರಮಾಡಿದನು. ಆದರೆ ನಮುಚಿಯೆಂಬ ಅಸುರನನ್ನು ಜಯಿಸಲಾಗಲಿಲ್ಲ. ಇವನು ಮಹಾಬಲಶಾಲಿಯಾಗಿದ್ದನು. ಯಾವವಿಧವಾದ ಆಯುಧಗಳಿಗೂ ಇವನು ಜಗ್ಗಲಿಲ್ಲ. ಆದುದರಿಂದ ಇಂದ್ರನು ಅವನನ್ನು ತನ್ನ ಶರೀರಬಲದಿಂಡಲೇ ಗೆಲ್ಲಬೇಕೆಂದು ಬಯಸಿ ಅವನೊಡನೆ ಮಲ್ಲಯುದ್ಧವನ್ನು ಪ್ರಾರಂಭಿಸಿದನು. ಆದರೂ ಯುದ್ಧಮಾಡಿದಂತೆಲ್ಲಾ ನಮುಚಿಯ ಬಲವೇ ವೃದ್ಧಿಯಾಗುತ್ತಿತ್ತು. ಇಂದ್ರನು ಅವನ ಹಿಡಿತದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಆಗ ಇಂದ್ರನು ತನ್ನನ್ನು ಬಿಡಬೇಕೆಂದು ನಮುಚಿಯನ್ನು ಕೇಳಲು ಆಗ ಆ ಅಸುರನು ಇಂದ್ರನನ್ನು ಕುರಿತು—ಎಲೈ ಇಂದ್ರನೇ, ನಿನ್ನನ್ನು ಬಿಡಬೇಕಾದರೆ ನಾನು ಹೇಳಿದಂತೆ ಕೇಳಬೇಕು. ಈಗ ನಾವು ಒಬ್ಬರಿಗೊಬ್ಬರು ಸಂಧಿಯನ್ನು (ಒಪ್ಪಂದವನ್ನು) ಮಾಡಿಕೊಳ್ಳೋಣ. ನೀನು ಮತ್ತೆ ನನ್ನೊಡನೆ ಯಾವುದಾದರೂ ತಂತ್ರದಿಂದ ಯುದ್ಧಮಾಡಿ ನನ್ನನ್ನು ಕೊಲ್ಲಬೇಕೆಂದು ಇಚ್ಛಿಸಬಹುದು. ಅಂತಹ ಸಂದರ್ಭದಲ್ಲಿ ನೀನು ನನ್ನನ್ನು ಕೊಲ್ಲಬೇಕೆಂದು ಉಪಯೋಗಿಸುವ ಆಯುಧವು ಹಸಿಯಾಗಿರಕೂಡದು, ಒಣಗಿರಲೂ ಕೂಡದು, ಹಗಲಿನಲ್ಲಿ ನನ್ನನ್ನು ಕೊಲ್ಲಕೂಡದು, ರಾತ್ರಿಕಾಲದಲ್ಲಿಯೂ ಕೊಲ್ಲಕೂಡದು. ಈ ನಿಯಮಗಳಿಗೆ ನೀನು ಒಪ್ಪುವಿಯಾದರೆ ನಿನ್ನನ್ನು ಬಿಡುವೆನು ಎಂದು ಹೇಳಿದನು. ಇಂದ್ರನು ಹಾಗೆಯೇ ಆಗಲೆಂದೊಪ್ಪಿ ಅವನ ಹಿಡಿತದಿಂದ ಬಿಡಿಸಿಕೊಂಡು ಇವನನ್ನು ಹೇಗೆ ಜಯಿಸಬೇಕೆಂದು ಆಲೋಚಿಸತೊಡಗಿದನು. ಕೆಲವುಕಾಲದ ಮೇಲೆ ಇಂದ್ರನು ಒಂದು ಉಪಾಯವನ್ನು ಯೋಚಿಸಿದನು. ಸಮುದ್ರತೀರದಲ್ಲಿ ಸಂಚರಿಸುತ್ತಿರುವಾಗ ಸಮುದ್ರದ ನೊರೆಯು ಅವನ ದೃಷ್ಟಿಗೆ ಬಿತ್ತು. ಈ ನೊರೆಯು ಹಸಿಯೂ ಅಲ್ಲ, ಒಣಗಿದುದೂ ಅಲ್ಲ. ಆದುದರಿಂದ ಇದನ್ನೇ ಆಯುಧವನ್ನಾಗಿ ಮಾಡಿಕೊಂಡು ನಮುಚಿಯನ್ನು ಸಂಹರಿಸುವೆನು. ರಾತ್ರಿಯು ಕಳೆದು ಉಷಃಕಾಲವು ಪ್ರಾರಂಭವಾಗಿ ಸೂರ್ಯನು ಉದಯಿಸುವುದಕ್ಕೆ ಮೊದಲು ಚೆನ್ನಾಗಿ ಬೆಳಕಿರುವುದು. ಆ ಕಾಲವು ಕತ್ತಲೆಯಲ್ಲದ್ದರಿಂದ ರಾತ್ರಿಯೂ ಅಲ್ಲ, ಸೂರ್ಯನು ಉದಯಿಸಿಲ್ಲವಾದ್ದರಿಂದ ಹಗಲೂ ಅಲ್ಲ. ಇಂತಹ ಕಾಲದಲ್ಲಿ ನಮುಚಿಯೊಡನೆ ಯುದ್ಧಮಾಡಿ ನೀರಿನ ನೊರೆಯಿಂದ ನಿರ್ಮಿತವಾದ ಆಯುಧದಿಂದ ಅವನನ್ನು ಕೊಂದರೆ ನಾನು ಆಡಿದ ಮಾತಿಗೆ ತಪ್ಪಿದಂತಾಗುವುದಿಲ್ಲ ಎಂದು ನಿಶ್ಚಯಿಸಿ ಅದರಂತೆ ನಮುಚಿಯೊಡನೆ ಯುದ್ಧಮಾಡಿ ಆ ನೊರೆಯಿಂದ ಅವನ ಶಿರಸ್ಸನ್ನು ಕತ್ತರಿಸಿದನು. ಆದರೂ ಆ ಅಸುರನು ಮೃತನಾಗದೆ ಇಂದ್ರನನ್ನು ಕೊಲ್ಲುವುದಕ್ಕಾಗಿ ಅವನನ್ನು ಅಟ್ಟಿಸಿಕೊಂಡುಬಂದನು. ಎಲೈ ಮಿತ್ರದ್ರೋಹಿಯಾದ ಇಂದ್ರನೇ, ನಿಲ್ಲು ನಿಲ್ಲು. ನೀನು ನನ್ನನ್ನು ಕೊಲ್ಲುವುದಿಲ್ಲವೆಂದು ಹಿಂದೆ ಮಾತುಕೊಟ್ಟು ಈಗ ಇಂತಹ ಮಿತ್ರದ್ರೋಹಕರವಾದ ಕೆಲಸವನ್ನು ಮಾಡಿರುತ್ತೀಯೆ. ನಿನ್ನನ್ನು ಈಗಲೂ ಕೊಲ್ಲದೆ ಬಿಡುವುದಿಲ್ಲ ಎಂದನು. ಆಗ ಇಂದ್ರನು ಹೆದರಿ ಅಪಾಮಾರ್ಗವೆಂಬ ವೃಕ್ಷವಿಶೇಷವನ್ನು ಸೃಷ್ಟಿಸಿ ಅದರ ಸಮಿತ್ತುಗಳಿಂದ ವೀರ್ಯವೃದ್ಧಿಗಾಗಿ ಅಗ್ನಿಯಲ್ಲಿ ಹೋಮಮಾಡಿದನು, ಅದರಿಂದ ಇಂದ್ರನ ಬಲವು ಅಧಿಕವಾಗಿ ಆ ನಮುಚಿಯನ್ನು ಸಂಹಾರಮಾಡಿನನು. ಆದುದರಿಂದ ರಾಕ್ಷಸರ ಬಾಧೆಯಿಂದ ಪಾರಾಗಬೇಕೆಂದು ಬಯಸುವವರು ಅಪಾಮಾರ್ಗ ಸಮಿತ್ತುಗಳಿಂದ ಅಗ್ನಿಯಲ್ಲಿ ವೀರ್ಯವೃದ್ಧಿಗಾಗಿ ಹೋಮಮಾಡಬೇಕು. ಈ ಹೋಮದಿಂದ ಅವರ ಬಲವು ವೃದ್ಧಿಯಾಗಿ ರಾಕ್ಷಸರನ್ನು ಜಯಿಸಲು ಶಕ್ಯವಾಗುವುದು ಎಂದು ಉಪಾಖ್ಯಾನವಿದೆ. ಈ ನಮುಚಿಯ ಹೆಸರು ಋಗ್ವೇದದಲ್ಲಿ—

ನಮ್ಯಾ ಯದಿಂದ್ರ ಸಖ್ಯಾ ಪರಾವತಿ ನಿಬರ್ಹಯೋ ನಮುಚಿಂ ನಾಮ ಮಾಯಿನಂ ॥

(ಋ. ಸಂ. ೧-೫೩-೭)

ಯಃ ಪಿಪ್ರುಂ ನಮುಚಿಂ ಯೋ ರುಧಿಕ್ರಾಂ ತಸ್ಮಾ ಇಂದ್ರಾಯಾಂಧಸೋ ಜುಹೋತ ॥

(ಋ. ಸಂ. ೮-೧೪-೫)

ನಿವೇಶನೇ ಶತತಮಾವಿವೇಷೀರಹಞ್ಜ ವೃತ್ರಂ ನಮುಚಿಮುತಾಹನ್ ॥

(ಋ. ಸಂ. ೭-೧೯-೫)

ತ್ವಂ ಜಘಂಥ ನಮುಚಿಂ ಮಖಸ್ಯಂ ದಾಸಂ ಕೃಷ್ಣಾನ ಋಷಯೇ ವಿಮಾಯಂ ॥

(ಋ. ಸಂ. ೧೦-೭೩-೭)

ಅತ್ರಾ ದಾಸಸ್ಯ ನಮುಚೇಃ ಶಿರೋ ಯದವರ್ತಯೋ ಮಘವೇ ಗಾತುಮಿಚ್ಛನ್ ॥

(ಋ. ಸಂ. ೫-೩೦-೭)

ಯುಜಂ ಹಿ ಮಾಮಕೃಥಾ ಆದಿದಿಂದ್ರ ಶಿರೋ ದಾಸಸ್ಯ ನಮುಚೇರ್ಮಥಾಯನ್ ॥

(ಋ. ಸಂ. ೫-೩೦-೮)

ಪ್ರ ಶ್ಯೇನೋ ನ ಮದಿರಮಂಶುಮಸ್ಮೈ ಶಿರೋ ದಾಸಸ್ಯ ನಮುಚೇರ್ಮಥಾಯನ್ ॥

(ಋ. ಸಂ. ೬-೭೦-೬)

ಅಪಾಂ ಫೇನೇನ ನಮುಚೇಃ ಶಿರ ಇಂದ್ರೋದವರ್ತಯಃ ॥

(ಋ. ಸಂ. ೮-೧೪-೧೩)

ಯುವಂ ಸುರಾಮಮಶ್ವಿನಾ ನಮುಚಾವಾಸುರೇ ಸಚಾ ॥

(ಋ. ಸಂ. ೧೦-೧೩೧-೪)

ಎಂಬ ಋಕ್ಕುಗಳಲ್ಲಿರುವುದು. ಮತ್ತೆಲ್ಲಿಯೂ ಇರುವುದಿಲ್ಲ.

ಇಂದ್ರನಿಗೆ ಋಜಿಷೀ ಎಂಬ ಹೆಗರು ಬರಲು ಕಾರಣ

ಋಜಿಷೀ:— ಈ ಶಬ್ದಕ್ಕೆ ಯಾಸ್ಕರು ಈ ರೀತಿ ನಿರ್ವಚನವನ್ನು ಹೇಳಿದ್ದಾರೆ—

ಋಜೀಷೀ ಸೋನೋ ಯತ್ಸೋಮಸ್ಯ ಪೂಯಮಾನಸ್ಯಾತಿರಿಚ್ಯತೇ ತದೃಜೀಷಮಸಾರ್ಜಿತಂ ಭವತಿ ತೇನರ್ಜೀಷೀ ಸೋಮಃ । ಅಥಾಪ್ಯೈಂದ್ರೋ ನಿಗಮೋ ಭವತಿ ಋಜೀಷೀ ವಜ್ರೀ ಇತಿ ॥

(ನಿ. ೫-೧೨)

ಸೋಮಲತೆಯನ್ನು ಕಲ್ಲುಗಳಿಂದ ಜಜ್ಜಿ ಸೋಮರಸವನ್ನು ತೆಗೆದಮೇಲೆ ಉಳಿಯುವ ಸಿಪ್ಪೆಯಂತಿರುವ ರಸರಹಿತವಾದ ಪದಾರ್ಥಕ್ಕೆ ಋಜೀಷವೆಂದು ಹೆಸರು. ಈ ಋಜೀಷವನ್ನು ಬೇಡವೆಂದು ಎಸೆದುಬಿಡುವರು. ಕೆಲವು ಸಂದರ್ಭದಲ್ಲಿ ಅಂತಹ ಋಜೀಷವನ್ನು ನೀರಿನಲ್ಲಿ ನೆನೆಸಿ ಇನ್ನೂ ಸ್ವಲ್ಪ ರಸವನ್ನು ಹಿಂಡಿ ತೆಗೆಯುವರು. ಅಂತಹ ಸೋಮರಸಕ್ಕೆ **ಋಜೀಷಃ ಸೋಮಃ** ಎಂದು ಹೆಸರು. ತೃತೀಯಸವನಕಾಲದಲ್ಲಿ ಇಂತಹ ಋಜೀಷಸೋಮಕ್ಕೆ ಹಿಟ್ಟು ಮೊದಲಾದ ಆಶಿರದ್ರವ್ಯಗಳನ್ನು ಮಿಶ್ರಮಾಡಿ ಇಂದ್ರನಿಗೆ ಅರ್ಪಿಸುವರು. ಈ ಋಜೀಷಸೋಮವನ್ನು ಇಂದ್ರನು ಪಾನಮಾಡುವುದರಿಂದ ಇಂದ್ರನನ್ನು **ಋಜೀಷೀ** ಎಂಬ ಶಬ್ದದಿಂದಲೇ ಕರೆಯುವುದು ರೂಢಿಯಾಗಿದೆ. ಇದಲ್ಲದೆ ಇಂದ್ರನ ಹರೀ ಎಂಬ ಕುದುರೆಗಳು ಈ ಋಜೀಷವೆಂಬ ಸೋಮಲತೆಗಳ ಸಿಪ್ಪೆಯನ್ನು ತಿನ್ನುವುವು ಎಂದು ಪ್ರಸಿದ್ಧಿಯಾಗಿದೆ. ಈ ವಿಷಯದಲ್ಲಿ ಯಾಸ್ಕರು ಉದಾಹರಣೆಗಾಗಿ **ಬದ್ಧಾಂತೇ ಹರೀಧಾನಾ ಉಪ ಋಜೀಷಂ ಜಿಘ್ರತಾಂ** ಎಂಬ ಶ್ರುತಿವಾಕ್ಯವನ್ನು ಹೇಳಿದ್ದಾರೆ. ಎಲೈ ಇಂದ್ರನೇ, ನಿನ್ನ ಕುದುರೆಗಳು ಧಾನ್ಯವನ್ನು ತಿಂದು ಈ ಋಜೀಷವನ್ನು ಮೂಸಿನೋಡಲಿ ಎಂದು ಮೇಲಿನ ವಾಕ್ಯದ ಅರ್ಥವು.

ಋಜೀಷವೆಂದರೇನು ? ಇದಕ್ಕೆ ಈ ಹೆಸರು ಬರಲು ಕಾರಣವೇನು ? ಯಜ್ಞದಲ್ಲಿ ಇದರ ಉಪಯೋಗವೇನು ? ಇತ್ಯಾದಿ ವಿಷಯಗಳು ಐತರೇಯಬ್ರಾಹ್ಮಣ ಮತ್ತು ತೈತ್ತಿರೀಯ ಸಂಹಿತೆಗಳಲ್ಲಿ ಹೇಳಿರುವುದನ್ನು ಇಲ್ಲಿ ಸೂಕ್ಷ್ಮವಾಗಿ ಪರಿಶೀಲಿಸುವೆವು—

ಸೋಮೋ ವೈ ರಾಜಾಮುಷ್ಮಿಂಲ್ಲೋಕೆ ಆಸೀತ್ತಂ ದೇವಾಶ್ಚ ಋಷಯಶ್ಚಾಭ್ಯಧ್ಯಾಯನ್ ಕಥಮುಯೆಮಸ್ಮಾತ್ಸೋಮೋ ರಾಜಾಗಚ್ಛೇದಿತಿ ತೇಽಬ್ರುವಂಶ್ಛಂದಾಂಸಿ ಯೂಯಂ ನ ಇಮಂ ಸೋಮಂ ರಾಜಾನಮಾಹರತೇತಿ ತಥೇತಿ ತೇ ಸುಪರ್ಣಾ ಭೂತ್ವೋದಪತನ್ ॥

(ಐ. ಬ್ರಾ. ೧೩-೩೫)

ಪೂರ್ವದಲ್ಲಿ ಸೋಮರಾಜನು (ಸೋಮಲತೆಯು ; ಗೌರವಾರ್ಥವಾಗಿ ಸೋಮಲತೆಯನ್ನು ಸೋಮರಾಜನೆಂದು ಕರೆಯುವ ರೂಢಿ ಇದೆ) ಎಂದರೆ ಸೋಮಲತೆಯು ಸ್ವರ್ಗದಲ್ಲಿದ್ದಿತು. ಈ ಲೋಕದಲ್ಲಿರಲಿಲ್ಲ. ಇದನ್ನು ತಿಳಿದು ದೇವತೆಗಳೂ, ಋಷಿಗಳೂ ಈ ಸೋಮವನ್ನು ಇಲ್ಲಿಗೆ ತರುವ ಬಗೆ ಹೇಗೆ ಎಂದು ಆಲೋಚಿಸಿದರು. ಬಳಿಕ ಈ ವಿಚಾರವನ್ನು ವಿಮರ್ಶೆ ಮಾಡಿ ಸೋಮವನ್ನು ಸ್ವರ್ಗದಿಂದ ಭೂಮಿಗೆ ತರುವ ಶಕ್ತಿಯು ಛಂದಸ್ಸುಗಳಿಗೆ ಇರುವುದೆಂದು ತಿಳಿದು ಛಂದಸ್ಸುಗಳನ್ನು ಕುರಿತು—ಎಲೈ ಛಂದಸ್ಸುಗಳೇ, ನಮಗೋಸ್ಕರ ಎಂದರೆ ನಮ್ಮ ಯಜ್ಞದಲ್ಲಿ ಉಪಯೋಗಿಸುವುದಕ್ಕೋಸ್ಕರ ಸ್ವರ್ಗದಲ್ಲಿರುವ ಸೋಮವನ್ನು ಭೂಮಿಗೆ ತರಬೇಕೆಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನಂಗೀಕರಿಸಿ ಛಂದಸ್ಸುಗಳು ಲೋಕದಲ್ಲಿ ಪ್ರಸಿದ್ಧವಾಗಿರುವ ಕೆಲವು ಪಕ್ಷಿಗಳ ರೂಪವನ್ನು ಧರಿಸಿ ಸ್ವರ್ಗಲೋಕಕ್ಕೆ ಹಾರಿಹೋದವು. ಮೊದಲು ಜಗತೀ ಛಂದಸ್ಸು ಪಕ್ಷಿರೂಪವನ್ನು ಧರಿಸಿ ಸ್ವರ್ಗಲೋಕದ ಕಡೆಗೆ ಹಾರಿತು. ಆದರೆ ಸ್ವಲ್ಪದೂರ ಹೋಗುವುದರೊಳಗಾಗಿ ಅದಕ್ಕೆ ಆಯಾಸವಾಗಿ ಸ್ವರ್ಗದವರೆಗೂ ಹೋಗಲಾರದೆ ಹಿಂತಿರುಗಿತು. ಬಳಿಕ ತ್ರಿಷ್ಟುಪ್ಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಹೇಳಿ ಅಂತರಿಕ್ಷಕ್ಕೆ ನೆಗೆಯಿತು. ಆದರೆ ಅರ್ಧದಾರಿಗಿಂತ ಸ್ವಲ್ಪದೂರ ಹೋಗುವುದರೊಳಗಾಗಿ ಆಯಾಸದಿಂದ ಬಳಲಿ ಹಿಂತಿರುಗಿತು. ಈರೀತಿ ಜಗತೀ ಮತ್ತು ತ್ರಿಷ್ಟುಪ್ಛಂದಸ್ಸುಗಳು ಸೋಮವನ್ನು ತರಲು ಸಾಮರ್ಥ್ಯವಿಲ್ಲದೇ ಹಿಂತಿರುಗಿಬಂದದ್ದನ್ನು ದೇವತೆಗಳು ನೋಡಿ ಗಾಯತ್ರೀಛಂದಸ್ಸಿನ ಸಮೀಪಕ್ಕೆ ಹೋಗಿ—ಎಲೈ ಗಾಯತ್ರಿಯೇ, ನಮಗಾಗಿ ನೀನು ಸ್ವರ್ಗದಿಂದ ಸೋಮವನ್ನು ತರಬೇಕೆಂದು ಪ್ರಾರ್ಥಿಸಿದರು. ಗಾಯತ್ರಿಯು ಹಾಗೆಯೇ ಆಗಲೆಂದೊಪ್ಪಿ ಶ್ಯೇನಪಕ್ಷಿಯ ರೂಪವನ್ನು ಧರಿಸಿ ಸ್ವರ್ಗಕ್ಕೆ ಹಾರಿಹೋಗಿ ಅಲ್ಲಿ ಸೋಮವನ್ನು ಕಾಯುತ್ತಿದ್ದ ಸ್ವಾನ, ಭ್ರಾಜ ಮೊದಲಾದ ಸೋಮಪಾಲಕರನ್ನು ಹೆದರಿಸಿ ಸೋಮವನ್ನು ಅಪಹರಿಸಿಕೊಂಡುಬಂದು ಭೂಮಿಗೆ ತಂದಿತು. ಸೋಮಲತೆಯನ್ನು ತಂದಿದ್ದರಿಂದ ಛಂದಸ್ಸುಗಳಲ್ಲೆಲ್ಲಾ ಗಾಯತ್ರಿಗೆ ಶ್ರೇಷ್ಠವಾದ ಸ್ಥಾನವು ಲಭಿಸಿತು.

ಸಾ ಯದ್ದಕ್ಷಿಣೇನ ಪದಾ ಸಮಗೃಭ್ಣಾತ್ತತ್ಕಾಪ್ರತಿಸವನಮಭವತ್ತದ್ಗಾಯತ್ರೀ ಸ್ವಮಾಯತನಮಕುರುತ ತಸ್ಮಾತ್ತತ್ಸಮೃದ್ಧತಮಂ ಮನ್ಯಂತೇ ಸರ್ವೇಷಾಂ ಸವನಾನಾಮಗ್ರಿಯೋ ಮುಖ್ಯೋ ಭವತಿ ಶ್ರೇಷ್ಠತಾಮಶ್ನುತೇ ಯ ಏವಂ ವೇದ ಯತ್ಸವ್ಯೇನ ಪದಾ ಸಮಗೃಭ್ಣಾತ್ತನ್ಮಾಧ್ಯಂದಿನಂ ಸವನಮಭವತ್ತದ್ವಿಸ್ರಂಸತ ತದ್ವಿಸ್ರಸ್ತಂ ನಾನ್ವಪ್ಯೋತ್ಪೂರ್ವಂ ಸವನಂ ತೇ ದೇವಾಃ ಪ್ರಾಜಿಜ್ಞಾಸಂತ ತಸ್ಮಿಂಸ್ತ್ರಿಷ್ಟುಭಂ ಛಂದಸಾಮದಧುರಿಂದ್ರಂ ದೇವತಾನಾಂ ತೇನ ತತ್ಸವಮಾವದ್ವೀರ್ಯಮಭವತ್ಪೂರ್ವೇಣ ಸವನೇನೋಭಾಭ್ಯಾಂ ಸವನಾಭ್ಯಾಂ ಸವಮಾವ-

ದ್ವೀರ್ಯಾಭ್ಯಾಂ ಸಮಾವಜ್ಜಾಮಿಭ್ಯಾಂ ರಾಧ್ನೋತಿ ಯ ಏವಂ ವೇದಾಥ ಯದ್ಗಾಯತ್ರೇಣ ಸಮಗೃಭ್ಣಾತ್ತತ್ತೃತೀಯಸವನಮಭವತ್ ॥

(ಐ- ಬ್ರಾ. ೧೩-೨೬)

ಸೋಮಲತೆಗಳನ್ನು ತರುವಾಗ ಶ್ಯೇನಪಕ್ಷಿಯು ತನ್ನ ಎರಡು ಕಾಲುಗಳಿಂದಲೂ ಕೊಕ್ಕಿನಿಂದಲೂ ಕಚ್ಚಿಕೊಂಡು ತರುತ್ತಿದ್ದಿತು. ಪಕ್ಷಿಯು ತನ್ನ ಬಲಗಾಲಿನಿಂದ ಹಿಡಿದುಕೊಂಡು ತಂದ ಸೋಮವು (ಅಥವಾ ಸೋಮಲತೆಯು) ಪ್ರಾತಃಸವನವಾಯಿತು. ಗಾಯತ್ರಿಯು ಅದನ್ನು ಅಂದರೆ ಪ್ರಾತಃಸವನವನ್ನು ತನ್ನ ಸ್ವಕೀಯಸ್ಥಾನವನ್ನಾಗಿ ಮಾಡಿಕೊಂಡಿತು. ಆದ್ದರಿಂದ ಸಮಸ್ತ ಸವನಗಳಲ್ಲಿಯೂ ಪ್ರಾತಃಸವನವೇ ಸರ್ವಶ್ರೇಷ್ಠವೆಂದು ಯಾಜ್ಞಿಕರ ಅಭಿಮತವು. ಆ ಪ್ರಾತಃಸವನಕರ್ಮದಲ್ಲಿ ಮಂತ್ರಾದಿಗಳ ಪ್ರಯೋಗವೂ ವಿಶೇಷವಾಗಿರುವುದು. ಆದ್ದರಿಂದ ಈ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವ ಪುರುಷನು ತನ್ನ ಸಮಾನರಾದವರ ಮಧ್ಯದಲ್ಲಿ ಶ್ರೇಷ್ಠನೂ ಮುಖ್ಯನೂ ಆಗುವನೆಂದು ಪರಿಗಣಿಸಲ್ಪಡುವನು. ಗಾಯತ್ರಿಯು ಎಡಗಾಲಿನಿಂದ ಸೋಮವನ್ನು ಹಿಡಿದುಕೊಂಡು ತರುವಾಗ ಒಲಗಾಲಿಗಿರುವಷ್ಟು ಶಕ್ತಿಯು ಎಡಗಾಲಿಗಿಲ್ಲದಿರುವುದರಿಂದ ಆ ಲತಾದಿಗಳು ಕಾಲಿನಿಂದ ಆಗಾಗ ಸ್ವಲ್ಪಸ್ವಲ್ಪ ಜಾರುತ್ತಿದ್ದಿತು. ಈ ಕಾರಣದಿಂದ ಮಾಧ್ಯಂದಿನಸವನವು ಪ್ರಾತಃಸವನದಂತೆ ಶಕ್ತಿಸಾಮರ್ಥ್ಯಗಳಲ್ಲಿ ಸರಿಸಮವಾಗಲಿಲ್ಲ. ಇದನ್ನು ಕಂಡು ದೇವತೆಗಳು ವಿಚಾರವಿಮರ್ಶೆಮಾಡಿ ಮಾಧ್ಯಂದಿನಸವನಕರ್ಮದಲ್ಲಿ ಉಪಯೋಗಿಸುವ ಛಂದಸ್ಸುಗಳಿಗಾಗಿ ತ್ರಿಷ್ಟುಪ್ಛಂದಸ್ಸನ್ನೂ ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನನ್ನೂ ಸ್ಥಾಪಿಸಿದರು. ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನ ಮತ್ತು ಅವನಿಗೆ ಪ್ರಿಯವಾದ ತ್ರಿಷ್ಟುಪ್ಛಂದಸ್ಸಿನ ಸಾಹಚರ್ಯದಿಂದ ಮಾಧ್ಯಂದಿನಸವನವು ಶಕ್ತಿಸಾಮರ್ಥ್ಯಗಳಲ್ಲಿಯೂ, ಶ್ರೇಷ್ಠತೆಯಲ್ಲಿಯೂ ಪ್ರಾತಃಸವನಕ್ಕೆ ಸರಿಸಮನಾದ ಸ್ಥಾನವನ್ನು ಪಡೆಯಿತು. ಪ್ರಾತಃಸವನ ಮತ್ತು ಮಾಧ್ಯಂದಿನಸವನಗಳ ಈ ವಿಧವಾದ ಸರಸಮಾನತೆಯನ್ನೂ, ಶಕ್ತಿಸಾಮರ್ಥ್ಯಗಳನ್ನೂ, ಶ್ರೇಷ್ಠತೆಯನ್ನೂ ತಿಳಿದಿರುವ ಪುರುಷನು ಧನಾದಿಗಳಲ್ಲಿ ಸಮೃದ್ಧಿಯನ್ನೂ, ಶ್ರೇಯಸ್ಸನ್ನೂ ಪಡೆದು ಸುಖಿಸುವನು. ಬಳಿಕ ಶ್ಯೇನರೂಪದಿಂದಿದ್ದ ಆ ಗಾಯತ್ರಿಯು ತನ್ನ ಕೊಕ್ಕಿನಿಂದ ಕಚ್ಚಿ ತಂದ ಸೋಮದ ಭಾಗವು ತೃತೀಯಸವನವೆಂದು ಪ್ರಸಿದ್ಧವಾಯಿತು.

ತಸ್ಯ ಪತಂತೀ ರಸಮುಧಯತ್ತದ್ಧೀಶರಸಂ ನಾನ್ವಾಪ್ನೋತ್ಪೂರ್ವೇ ಸವನೇ ತೇ ನೇವಾಃ ಪ್ರಾಜಿಜ್ಞಾಸಂತ ತೇಪ್ಶುಷ್ಪಶ್ಯಂಸ್ತದ್ಯದಾಶಿರಮವನಯಂತ್ಯಾಜ್ಯೇನ ಪಶುನಾ ಚರಂತಿ ತೇನ ತತ್ಸಮಾವದ್ವೀರ್ಯಮಭವತ್ಪೂರ್ವಾಭ್ಯಾಂ ಸವನಾಭ್ಯಾಂ ಸರ್ವೈಃ ಸವನೈಃ ಸಮಾವದ್ವೀರ್ಯೈಃ ಸಮಾವಜ್ಜಾಮಿಭೀ ರಾಧ್ನೋತಿ ಯ ಏವಂ ವೇದ ॥

(ಐ. ಬ್ರಾ. ೧೩-೨೭)

ಗಾಯತ್ರಿಯು (ಶ್ಯೇನವು) ತನ್ನ ಕೊಕ್ಕಿನಿಂದ ಸೋಮಲತೆಯನ್ನು ಕಚ್ಚಿಕೊಂಡು ಬರುತ್ತಿರುವಾಗ ಆ ಲತೆಯಲ್ಲಿದ್ದ ರಸವನ್ನು ಸ್ವಲ್ಪಸ್ವಲ್ಪವಾಗಿ ಹೀರಿ ಕುಡಿಯುತ್ತಿದ್ದಿತು. ಆದ್ದರಿಂದ ಎಂದರೆ ಕೊಕ್ಕಿನಿಂದ ತಂದ ಸೋಮಲತೆಗಳಲ್ಲಿ ರಸವು ಹೆಚ್ಚಾಗಿಲ್ಲದೆ ಕಮ್ಮಿಯಾಗಿದ್ದುದರಿಂದ ಈ ತೃತೀಯಸವನವು ಶಕ್ತಿಸಾಮರ್ಥ್ಯಾದಿಗಳಲ್ಲಿ ಪ್ರಾತಃಸವನ ಮಾಧ್ಯಂದಿನ ಸವನಗಳಿಗೆ ಸರಿಸಮನಾಗಲಿಲ್ಲ. ಆದ್ದರಿಂದ ಈ ವಿಷಯವನ್ನು ಕಂಡ ದೇವತೆಗಳು ವಿಚಾರಮಾಡಿ ಇದಕ್ಕೆ ತಕ್ಕ ಸಾಧನೋಪಾಯವು ಪಶುಗಳಲ್ಲಿರುವುದೆಂದು ಕಂಡುಕೊಂಡರು. ಪಶುಗಳಲ್ಲಿ ಹಾಲು, ಮೊಸರು, ಆದರಿಂದ ಲಭ್ಯವಾಗುವ ಆಜ್ಯ (ತುಪ್ಪ) ಮೊದಲಾದ ಹವಿರ್ದ್ರವ್ಯಗಳು ದೊರಕುವುವು. ಕ್ಷೀರವನ್ನು ಅಥವಾ ಹಾಲನ್ನು ಲತೆಗಳಲ್ಲಿ ಕಮ್ಮಿಯಾಗಿರುವ ಸೋಮರಸಕ್ಕೆ ಬೆರಸಿವರೆ ಆ ರಸವು ಶಕ್ತಿಯುತವಾಗುವುದು. ಆಜ್ಯದಿಂದಲೂ, ಪಶುಗಳ ಅವಯವ

ಗಳಿಂದಲೂ ಹೋಮಾದಿಗಳನ್ನು ಮಾಡಿದರೆ ಸವನಕರ್ಮವು ಸಾಂಗವಾಗುವುದು. ಆದುದರಿಂದ ಯಜ್ಞಕರ್ಮವನ್ನು ತಿಳಿದವರು ತೃತೀಯಸವನದಲ್ಲಿ ಉಪಯೋಗಿಸುವ ಋಜೀಷದ ರಸಕ್ಕೆ (ಪ್ರಾತಃಸವನ ಮಾಧ್ಯಂದಿನಸವನಗಳಲ್ಲಿ ರಸವನ್ನು ತೆಗೆದಬಳಿಕ ಉಳಿದಿರುವ ಸೋಮಲತೆಯ ಸಿಪ್ಪೆಗಳಿಗೆ ಋಜೀಷವೆಂದು ಹೇಳುವರು) ಹಾಲು ಮೊದಲಾದ ಆಶಿರದ್ರವ್ಯಗಳನ್ನು ಸೇರಿಸುವುದರಿಂದಲೂ, ಪಶುಗಳಿಂದ ಲಭಿಸತಕ್ಕ ಆಜ್ಯದಿಂದ ಮತ್ತು ಪಶುಗಳ ಹೃದಯಾದ್ಯಂಗಗಳಿಂದ ಹೋಮಗಳನ್ನು ಮಾಡುವುದರಿಂದಲೂ ತೃತೀಯಸವನಕರ್ಮವೂ ಪ್ರಾತಃಸವನಮಾಧ್ಯಂದಿನಸವನಗಳಿಗೆ ಶಕ್ತಿ ಸಾಮರ್ಥ್ಯಾದಿಗಳಲ್ಲಿ ಸರಿಸಮಾನವಾಗುವುದು ಎಂದು ತಿಳಿದು ಅದರಂತೆ ಆಚರಿಸುವರು. ಈ ವಿಷಯವು ಶಾಖಾಂತರದಲ್ಲಿ ಈರೀತಿ ಹೇಳಲ್ಪಟ್ಟಿರುವುದು.

ಬ್ರಹ್ಮವಾದಿನೋ ವದಂತಿ ಕಸ್ಮಾತ್ಸತ್ಯಾದ್ಗಾಯತ್ರೀ ಕನಿಷ್ಠಾ ಛಂದಸಾಗ್ಂ ಸತೀ ಯಜ್ಞಮುಖಂ ಪರೀಯಾಯೇತಿ ಯದೇವಾದಃ ಸೋಮವಾಹರತ್ತಸ್ಮಾದ್ಯಜ್ಞಮುಖಂ ಪರ್ಯೈತ್ತಸ್ಮಾತ್ತೇಜಸ್ವಿನೀತಮಾ ಪದ್ಭ್ಯಾಂ ದ್ವೇ ಸವನೇ ಸಮುಗೃಹ್ಣನ್ಮುಖೇನೈಕಂ ಯನ್ಮುಖೇನ ಸಮುಗೃಹ್ಣಾತ್ತದಧಯತ್ತಸ್ಮಾದ್ದ್ವೇ ಸವನೇ ಶುಕ್ರವತೀ ಪ್ರಾತಃಸವನಂ ಚ ಮಾಧ್ಯಂದಿನಂ ಚ ತಸ್ಮಾತ್ತೃತೀಯಸವನ ಋಜೀಷಮಭಿಷುಣ್ವಂತಿ ಧೀತಮಿವ ಹಿ ಮನ್ಯಂತೇ ಆಶಿರಮವನಯತಿ ಸಶುಕ್ರತ್ವಾಯೈ ॥

(ತೈ. ಸಂ. ೬-೧-೬-೪)

ಎಂದು ತೈತ್ತಿರೀಯಸಂಹಿತೆಯಲ್ಲಿ ಇದೇ ಅಭಿಪ್ರಾಯವು ಉಕ್ತವಾಗಿದೆ. ಈ ವಿಷಯವನ್ನು ಎಂದರೆ ಪ್ರಾತಃಸವನ, ಮಾಧ್ಯಂದಿನಸವನ ತೃತೀಯಸವನಗಳೆಂಬ ಮೂರು ಸವನಗಳೂ. ಶಕ್ತಿಸಾಮರ್ಥ್ಯಾದಿಗಳಲ್ಲಿಯೂ ಶ್ರೇಷ್ಠತೆಯಲ್ಲಿಯೂ ಸರಿಸಮಾನವಾದ ಸ್ಥಾನವನ್ನು ಪಡೆದಿರುವುವು ಎಂಬ ವಿಷಯವನ್ನು ಯಾವ ಪುರುಷನು ತಿಳಿಯುವನೋ ಅವನು ಸರ್ವಸಮೃದ್ಧಿಯುಕ್ತನಾಗಿ ಸುಖಿಸುವನು.

ಇಂದ್ರವಾಯುಗಳಿಗೆ ಪ್ರಥಮ ಸೋಮಪಾನ ಹೇಗೆ ಲಭಿಸಿತು ಎಂಬ ವಿಚಾರ

ಅಗ್ರಂ ಪಿಬಾ ಮಧೂನಾಂ (ಋ. ಸಂ. ೪-೪೬-೧) ಎಂಬ ಋಕ್ಕಿನಲ್ಲಿ ಇಂದ್ರಾದಿದೇವತೆಗಳಿಗಿಂತಲೂ ವಾಯುವೇ ಮೊದಲು ಸೋಮಪಾನಮಾಡಲು ಅರ್ಹನೆಂದು ಹೇಳಿದೆ. ಇದರ ಸಮರ್ಥನೆಗಾಗಿ—

ಆವಾ ಯೋ ಭೂಷ ಶುಚಿಪಾ ಉಪ ನಃ ಸಹಸ್ರಂ ತೇ ನಿಯುತೋ ವಿಶ್ವವಾರ ।
ಉಪೋ ತೇ ಅಂಧೋ ಮದ್ಯಮಯಾಮಿ ಯಸ್ಯ ದೇವ ದಧಿಷೇ ಪೂರ್ವಪೇಯಂ ॥

(ಋ. ಸಂ. ೭-೯೨-೧)

ಎಂಬ ಋಕ್ಕನ್ನು ದಾಹರಿಸಿ ಅಲ್ಲಿ ವಾಯುವೇ ಮೊದಲು ಸೋಮಪಾನಮಾಡಬೇಕೆಂದು ಋಷಿಯು ಪ್ರಾರ್ಥಿಸಿರುವುದನ್ನು ಸೂಚಿಸಲಾಗಿದೆ. ವಾಯುವಿಗೆ ದೇವತೆಗಳ ಮಧ್ಯೆ ಸೋಮಪಾನವಿಷಯದಲ್ಲಿ ಅಗ್ರಸ್ಥಾನವು ಹೇಗೆ ಲಭಿಸಿತೆಂಬ ವಿಷಯದಲ್ಲಿ ಐತರೇಯಬ್ರಾಹ್ಮಣದಲ್ಲಿ ಒಂದು ಪೂರ್ವೇತಿಹಾಸವಿದೆ. ಅದನ್ನು ಇಲ್ಲಿ ವಿವರಿಸಿದೇವೆ—

ದೇವಾ ವೈ ಸೋಮಸ್ಯ ರಾಜ್ಞೋಽಗ್ರಪೇಯೇ ನ ಸಮಪಾದಯನ್ನಹಂ ಪ್ರಥಮಃ ಪಿಬೇಯಮಹಂ ಪ್ರಥಮಃ ಪಿಬೇಯಮಿತ್ಯೇವಾಕಾಮಯಂತ ತೇ ಸಂಪಾದಯಂತೋಽಬ್ರುವನ್

ಹಂತಾಜಿಮಯಾಮ ಸ ಯೋ ನ ಉಜ್ಜೇಷ್ಯತಿ ಸ ಪ್ರಥಮಃ ಸೋಮಸ್ಯ ಪಾಸ್ಯತೀತಿ ತಥೇತಿ ತ ಆಜಿಮಯಂಸ್ತೇಷಾಮಾಜಿಂ ಯತಾಮಭಿಸೃಷ್ಟಾನಾಂ ವಾಯುರ್ಮುಖಂ ಪ್ರಥಮಃ ಪ್ರತ್ಯಪದ್ಯತಾಥೇಂದ್ರೋಽಥ ಮಿತ್ರಾವರುಣಾವಥಾಶ್ವಿನೌ ॥

(ಐ. ಬ್ರಾ. ೯-೫೫)

ಪೂರ್ವದಲ್ಲಿ ದೇವತೆಗಳೆಲ್ಲರೂ ಸೇರಿ ಸೋಮಪಾನ ಮಾಡಬೇಕೆಂದು ಅಪೇಕ್ಷಿಸಿ ತಮ್ಮಲ್ಲಿ ಯಾರು ಮೊದಲು ಸೋಮ ಪಾನವನ್ನು ಮಾಡಬೇಕೆಂದು ವಿವಾದವುಂಟಾಗಲು ಆಗ ಅವರಲ್ಲಿ ನಾನು ಮೊದಲು ತಾನು ಮೊದಲು ಪಾನಮಾಡ ಬೇಕೆಂದು ಚರ್ಚೆಗಾರಂಭವಾಯಿತು. ಈ ವಿಷಯವು ಯಾವರೀತಿಯಲ್ಲಿಯೂ ಇತ್ಯರ್ಥವಾಗದಿದ್ದರಿಂದ ಅವರೆಲ್ಲರೂ ಸೇರಿ ಸಮಾಲೋಚನೆಮಾಡಿ ಒಂದು ಒಪ್ಪಂದಕ್ಕೆ ಬಂದರು. ಏನೆಂದರೆ, ನಾವೆಲ್ಲರೂ ಸೇರಿ ಒಂದು ಸ್ಪರ್ಧೆಯನ್ನು ಏರ್ಪಡಿಸೋಣ. ಆದರಲ್ಲಿ ಗೆದ್ದವರು ಮೊದಲು ಸೋಮಪಾನಮಾಡಲು ಅರ್ಹರಾಗುವರು ಎಂದು. ಆದಕ್ಕೆ ಎಲ್ಲರೂ ಒಪ್ಪಲು, ಆಗ ಒಂದು ಸ್ಥಳದಿಂದ ದೂರದಲ್ಲಿರುವ ಮತ್ತೊಂದು ಸ್ಥಳಕ್ಕೆ ಓಡಿಹೋಗಿ ಅಲ್ಲಿರುವ ಒಂದು ಕಲ್ಲುಬಂಡೆ ಯನ್ನಾಗಲೀ, ವೃಕ್ಷವನ್ನಾಗಲೀ ಮೊದಲು ಸಮೀಪಿಸಿದವರು ಗೆದ್ದವರೆಂದು ಭಾವಿಸಬೇಕೆಂದು ಸ್ಪರ್ಧೆಯ ನಿಶ್ಚಯ ವಾಯಿತು. ಈರೀತಿ ಗೆದ್ದವರು ನಮ್ಮಗಳ ಮಧ್ಯದಲ್ಲಿ ಜಯಶಾಲಿಯಾಗಿ ಮೊದಲು ಸೋಮಪಾನವನ್ನು ಮಾಡ ಬೇಕು ಎಂಬ ಒಪ್ಪಂದಕ್ಕೆ ಎಲ್ಲರೂ ಸಮ್ಮತಿಸಲು, ಎಲ್ಲಾ ದೇವತೆಗಳೂ ಏಕಕಾಲದಲ್ಲಿ ಓಡಲು ಪ್ರಾರಂಭಿಸಿದರು. ಓಡು ತ್ತಿರುವ ಎಲ್ಲಾ ದೇವತೆಗಳಲ್ಲಿ ವಾಯುವು ಎಲ್ಲರಿಗಿಂತಲೂ ಮುಂದಾಗಿ ನಿರ್ದಿಷ್ಟಸ್ಥಳವನ್ನು ಸೇರಿದನು. ಇಂದ್ರನು ವಾಯುವಿನ ಹಿಂಭಾಗದಲ್ಲಿಯೇ ಬಂದು ಎರಡನೆಯನವನಾದನು. ಅನಂತರ ಇಂದ್ರನ ಹಿಂದೆ ಮಿತ್ರಾವರುಣರೂ, ಅವರ ಹಿಂದೆ ಅಶ್ವಿನೀದೇವತೆಗಳೂ ಓಡಿಬಂದು ನಿರ್ದಿಷ್ಟಸ್ಥಳವನ್ನು ಸೇರಿದರು. ಆದುದರಿಂದ ಈ ದೇವತೆಗಳಲ್ಲಿ ವಾಯುವೇ ಎಲ್ಲರಿಗಿಂತಲೂ ಮುಂದಾಗಿ ಓಡಿ ಜಯಶಾಲಿಯಾದನು.

ಸೋಽವೇದಿಂದ್ರೋ ವಾಯುಮುದ್ದೈ ಜಯತೀತಿ ತಮನುಪರಾಪತತ್ಸಹ ನಾವಥೋಜ್ಜಯಾವೇತಿ ಸ ನೇತ್ಯಬ್ರವೀದಹಮೇವೋಜ್ಜೇಷ್ಯಾಮೀತಿ ತೃತೀಯಂ ಮೇಽಥೋಜ್ಜಯಾವೇತಿ ನೇತಿ ಹೈವಾಬ್ರವೀದಹಮೇವೋಜ್ಜೇಷ್ಯಾಮೀತಿ ತುರೀಯಂ ಮೇಽಥೋಜ್ಜಯಾವೇತಿ ತಥೇತಿ ತಂ ತುರೀಯೇಽತ್ಯಾರ್ಜತ ತತ್ತುರೀಯಭಾಗಿಂದ್ರೋಽಭವತ್ತ್ರಿಭಾಗ್ವಾಯುಃ ॥

ವಾಯುವೂ ಅವನ ಹಿಂದೆ ಇಂದ್ರನೂ ಓಡುತ್ತಿರುವಾಗ ಅವರಲ್ಲಿ ಈರೀತಿ ಪರಸ್ಪರ ಸಂವಾದವುಂಟಾಯಿತು. ವಾಯುವು ವೇಗವಾಗಿ ಓಡುತ್ತಿರುವುದನ್ನು ಅವನ ಹಿಂದಿದ್ದ ಇಂದ್ರನು ಕಂಡು ಈ ವಾಯುವೇ ಎಲ್ಲರಿಗಿಂತಲೂ ಮುಂಚಿತವಾಗಿ ಓಡಿ ಜಯಶಾಲಿಯಾಗುವನು. ಏನಾದರೂ ಮಾಡಿ ನಾನು ಇವನ ಜತೆಗೇ ಓಡಿ ಗೆಲ್ಲಬೇಕು ಎಂದು ನಿಶ್ಚಯಿಸಿ, ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ವಾಯುವಿನ ಸಮೀಪದಲ್ಲಿಯೇ ಓಡಿದನು. ಆದರೂ ವಾಯುವನ್ನು ಹಿಂದಕ್ಕೆ ಹಾಕಿ ತಾನು ಮುಂದುವರಿಯುವ ಸೂಚನೆಯು ಕಾಣದಿರಲು, ಆಗ ಇಂದ್ರನು ವಾಯುವನ್ನು ಕುರಿತು—ಎಲೈ ವಾಯುವೇ, ನಾವಿಬ್ಬರೂ ಎಲ್ಲರಿಗಿಂತಲೂ ಮುಂದಾಗಿರುವೆವು. ಆದ್ದರಿಂದ ನಾವಿಬ್ಬರೂ ಗೆದ್ದಂತೆ ಭಾವಿಸಿ ಪ್ರಥಮ ಸೋಮಪಾನ ವನ್ನು ಇಬ್ಬರೂ ಹಂಚಿಕೊಳ್ಳೋಣ, ನನಗರ್ಧ, ನಿನಗರ್ಧ. ಈರೀತಿ ಇಬ್ಬರೂ ಸಹಕರಿಸಿ ಜಯವನ್ನು ಸಂಪಾದಿಸೋಣ ಎಂದನು. ಆ ಮಾತನ್ನು ಕೇಳಿ ವಾಯುವು–ಎಲೈ ಇಂದ್ರನೇ, ನಿನಗಿಂತಲೂ ನಾನು ಸ್ವಲ್ಪವಾದರೂ ಮುಂದಾಗಿಯೇ ಇರುವೆನು. ಆದ್ದರಿಂದ ನಾನೊಬ್ಬನೇ ಜಯಶಾಲಿಯಾಗುವೆನು. ಪ್ರಥಮ ಸೋಮಪಾನದಲ್ಲಿ ಎಲ್ಲವೂ ನನಗೇ ಸೇರ

ಬೇಕು. ನಿನಗೆ ಅರ್ಧವನ್ನು ಕೊಡುವುದಕ್ಕಾಗುವುದಿಲ್ಲ ಎಂದನು. ಆಗ ಇಂದ್ರನು—ಒಳ್ಳೇದು, ಹಾಗಾದರೆ ನನಗೆ ಅರ್ಧ ಬೇಡ. ಮೂರು ಭಾಗಗಳಲ್ಲಿ ಎರಡನ್ನು ನೀನು ತೆಗೆದುಕೋ, ನನಗೆ ಒಂದು ಭಾಗವನ್ನು ಮಾತ್ರ ಕೊಡು ಎನ್ನಲು ವಾಯುವು ಅದಕ್ಕೆ ಒಪ್ಪದೆ, ಹೇಗಾದರೂ ನಾನೇ ಗೆಲ್ಲುವೆನು. ಎಲ್ಲಾ ಭಾಗವೂ ನನಗೇ ಸೇರುವುದು, ನಿನಗೆ ಮೂರರಲ್ಲಿ ಒಂದು ಭಾಗವನ್ನೂ ಕೊಡಲು ನನಗಿಷ್ಟವಿಲ್ಲ ಎಂದನು. ಆಗ ಇಂದ್ರನು ಮತ್ತೆ ವಾಯುವನ್ನು ಪ್ರಾರ್ಥಿಸುತ್ತಾ, ನನಗೆ ಮೂರರಲ್ಲೊಂದು ಭಾಗವೂ ಬೇಡ, ಇನ್ನೂ ಕಡಿಮೆಯಾಗಿ ಎಂದರೆ ನಾಲ್ಕರಲ್ಲೊಂದುಭಾಗವನ್ನು ಕೊಟ್ಟರೆ ಸಾಕು. ಅದಕ್ಕಾದರೂ ಒಪ್ಪು ಎಂದು ಕೇಳಲು, ವಾಯುವು ಹಾಗೆಯೇ ಆಗಲೆಂದು ಅದಕ್ಕೊಪ್ಪಿದನು. ಆದ್ದರಿಂದ ಐಂದ್ರವಾಯವಗ್ರಹದಲ್ಲಿ (ಎಂದರೆ ಇಂದ್ರ ಮತ್ತು ವಾಯು ಇಬ್ಬರೂ ಸೇರಿ ಸೋಮಪಾನ ಮಾಡುವಾಗ) ಇಂದ್ರನಿಗೆ ಒಂದು ಭಾಗವೂ, ವಾಯುವಿಗೆ ಮೂರುಭಾಗವೂ ಇರಬೇಕೆಂದು ವ್ಯವಸ್ಥೆಯಾಯಿತು.

ತೌ ಸಹೈವೇಂದ್ರವಾಯೂ ಉದಜಯತಾಂ ಸಹ ಮಿತ್ರಾವರುಣೌ ಸಹಾಶ್ವಿನೌ ತ ಏಷಾಮೇತೇ ಯಥೋಜ್ಜಿತಂ ಭಕ್ಷಾ ಇಂದ್ರವಾಯ್ವೋಃ ಪ್ರಥಮೋಽತ ಮಿತ್ರಾವರುಣಯೋರಥಾಶ್ವಿನೋಃ ಸ ಏಷ ಇಂದ್ರತುರಿಯೋ ಗ್ರಹೋ ಗೃಹ್ಯತೇ ಯದೈಂದ್ರವಾಯವಃ ॥

ಈರೀತಿ ಇಂದ್ರ ಮತ್ತು ವಾಯುವು ಸಹಕರಿಸಿ ಸ್ಪರ್ಧೆಯನ್ನು ಗೆದ್ದು ನಿರ್ದಿಷ್ಟಪ್ರದೇಶವನ್ನು ಮೊದಲು ತಲುಪಿದರು. ಅವರ ಹಿಂದೆ ಮಿತ್ರಾವರುಣರು ಬಂದು ಸೇರಿದರು. ಅವರ ಹಿಂದೆ ಅಶ್ವಿನೀದೇವತೆಗಳು ಬಂದರು. ಆದ್ದರಿಂದ ಈ ದೇವತೆಗಳ ಮಧ್ಯದಲ್ಲಿ ಅವರು ಸ್ಪರ್ಧೆಯಲ್ಲಿ ಯಾವಯಾವ ಸ್ಥಾನವನ್ನು ಪಡೆದರೋ ಆ ಕ್ರಮದಲ್ಲಿ ಅವರು ಸೋಮ ಪಾನಕ್ಕೆ ಅರ್ಹರಾದರು ಎಂದರೆ ಮೊದಲು ಇಂದ್ರವಾಯುಗಳು, ಅನಂತರ ಮಿತ್ರಾವರುಣರೂ, ಅವರ ನಂತರ ಅಶ್ವಿನೀ ದೇವತೆಗಳು ಸೋಮಪಾನ ಮಾಡಲು ವ್ಯವಸ್ಥೆಯುಂಟಾಯಿತು. ಹೀಗೆ ಇಬ್ಬಿಬ್ಬರು ದೇವತೆಗಳು ಸೇರಿ ಸೋಮಪಾನ ಮಾಡುವ ಕ್ರಮವು ರೂಢಿಗೆ ಬಂದಿತು. ಆದ್ದರಿಂದ ಐಂದ್ರವಾಯವಗ್ರಹದಲ್ಲಿ ಇಂದ್ರನಿಗೆ ನಾಲ್ಕರಲ್ಲಿ ಒಂದು ಭಾಗ ಮಾತ್ರ ಸೋಮಪಾನದಲ್ಲಿ ವ್ಯವಸ್ಥೆ ಇರುವುದು.

ತದೇತದೃಷಿಃ ಪಶ್ಯನ್ನಭ್ಯನೂವಾಚ ನಿಯುತ್ವಾ ಇಂದ್ರಸಾರಥಿರಿತಿ ।

ಐಂದ್ರವಾಯವಗ್ರಹದಲ್ಲಿ ಇಂದ್ರನಿಗೆ ನಾಲ್ಕರಲ್ಲಿ ಒಂದು ಭಾಗವಿರುವುದನ್ನು ಋಷಿಯು ದಿವ್ಯದೃಷ್ಟಿಯಿಂದ ತಿಳಿದು ಮುಂದಿನ ಋಕ್ಕಿನಲ್ಲಿ ಎಂದರೆ–**ಶತೇನಾ ನೋ ಅಭಿಷ್ಟಿಭಿರ್ನಿಯುತ್ವಾನ್ ಇಂದ್ರಸಾರಥಿಃ** । (ಋ. ಸಂ. ೪-೪೬-೨) ಎಂಬ ಋಕ್ಕಿನಲ್ಲಿ ಈ ವಿಷಯವನ್ನು **ನಿಯುತ್ವಾನ್ ಇಂದ್ರಸಾರಥಿಃ** ಎಂಬ ವಾಕ್ಯದಿಂದ ವ್ಯಕ್ತಪಡಿಸಿರುವನು. ಇಲ್ಲಿ **ನಿಯುತೋ ವಾಯೋಃ** ಎಂಬ ನಿರುಕ್ತವಚನದಂತೆ (ನಿ. ೨-೨೮) ನಿಯುತ ಎಂಬ ಅಶ್ವಗಳು ವಾಯುದೇವನ ವಾಹನ ವೆಂದು ಪ್ರಸಿದ್ಧವು. ಆದ್ದರಿಂದ ನಿಯುತ್ವಚ್ಛಬ್ದವು ವಾಯುಶಬ್ದವನ್ನು ಸೂಚಿಸುವುದು. ಮೇಲಿನ ಋಕ್ಕಿನಲ್ಲಿ **ನಿಯುತ್ವಾನ್** ಎಂಬ ಪದವು ವಾಯುವಿನಿಂದ ಸಹಿತವಾದ ಇಂದ್ರನನ್ನು ಸೂಚಿಸುವುದು. **ಅಥಾ ವಾಯುಂ ನಿಯುತಃ ಸಶ್ಚತಸ್ಕಾಃ** (ತೈ. ಬ್ರಾ. ೨-೮-೧-೧) ಇತ್ಯಾದಿ ಮಂತ್ರಗಳು ಈ ವಿಷಯವನ್ನು ಸಮರ್ಥಿಸುವುವು. ಇಂದ್ರಸಾರಥಿಃ ಎಂಬ ಶಬ್ದಕ್ಕೆ ವಾಯುವಿಗೆ ಸಾರಥಿಯಾದ ಇಂದ್ರನು ಎಂದಭಿಪ್ರಾಯವು. ಇಂದ್ರನು ವಾಯುವಿಗೆ ಸಾರಥಿಸ್ಥಾನದಲ್ಲಿರುವುದರಿಂದ ಇಂದ್ರನಿಗೆ ಪ್ರಥಮ ಸೋಮಪಾನದಲ್ಲಿ ಚತುರ್ಥಾಂಶ ಮಾತ್ರವಿರುವುದೆಂದು ಇದರಿಂದ ಸೂಚಿತವಾಗುವುದು.

ತಸ್ಮಾದ್ಧಾಪ್ಯೇತರ್ಹಿ ಭರತಾಃ ಸತ್ವನಾಂ ವಿತ್ತಂ ಪ್ರಯಂತಿ ತುರಿಯೇ ಹೈವ ಸಂಗ್ರಹೀತಾರೋ ವದಂತೇಽಮುನೈವಾನೂಕಾಶೇನ ಯದದ ಇಂದ್ರಃ ಸಾರಥಿರಿವ ಭೂತ್ವೋದಜಯತ್ ॥

ಮೇಲೆ ಹೇಳಿದ ವಿಷಯವನ್ನು ಲೋಕವ್ಯವಹಾರದೃಷ್ಟಿಯಿಂದ ಉದಾಹರಣೆ ಮೂಲಕವಾಗಿ ವಿಶದಪಡಿಸುವರು. ಯುದ್ಧದಲ್ಲಿ ಯೋಧರಾದವರು ರಥಗಳಲ್ಲಿ ಕುಳಿತು ತಮ್ಮ ಸಾರಥಿಯ ಸಹಾಯದಿಂದ ಯುದ್ಧದಲ್ಲಿ ಜಯಶೀಲರಾಗಿ ಶತ್ರುಗಳ ಧನಾದಿಗಳನ್ನು ಆಕ್ರಮಿಸುವರು. ಆರೀತಿ ಆಕ್ರಮಿಸಿದಾಗ ಆ ಧನಾದಿಗಳಲ್ಲಿ ಒಂದು ಭಾಗವನ್ನು ಎಂದರೆ— ನಾಲ್ಕರಲ್ಲಿ ಒಂದು ಭಾಗವನ್ನು ತಮಗೆ ಸಹಾಯಕರಾದ ಸಾರಥಿಗಳಿಗೆ ಕೊಡುವರು. ಈ ಪದ್ಧತಿಯು ಲೋಕವ್ಯವಹಾರದಲ್ಲಿ ರೂಢಿಯಲ್ಲಿದೆ. ಅದರಂತೆ ದೇವತೆಗಳು ಏರ್ಪಡಿಸಿದ್ದ ಈ ಸ್ಪರ್ಧೆಯಲ್ಲಿ ಇಂದ್ರನು ವಾಯುವಿಗೆ ಸಾರಥಿಯಾಗಿ ವಾಯುವು ಜಯಶೀಲನಾಗಿದ್ದುದರಿಂದ ಸ್ಪರ್ಧೆಯಲ್ಲಿ ದೊರೆತ ಪ್ರಥಮ ಸೋಮಪಾನದಲ್ಲಿ ಚತುರ್ಥಾಂಶವು ಇಂದ್ರನ ಭಾಗವಾಯಿತು. ಇಂದ್ರನು ತನ್ನ ಚತುರ್ಥಾಂಶವನ್ನು ವಾಯುವಿಗೆ ಸಾರಥಿಯಾಗಿ ಗಳಿಸಿದನು ಎಂದು ಮುಖ್ಯಾಭಿಪ್ರಾಯವು.

ಇಂದ್ರನು ವರಾಹಾಸುರನನ್ನು ಸಂಹಾರ ಮಾಡಿದ ವಿಷಯ

ವರಾಹನೆಂಬ ಅಸುರನೊಬ್ಬನಿದ್ದನೆಂದೂ, ಅವನನ್ನು ಇಂದ್ರನು ಸಂಹರಿಸಿದನೆಂದೂ ಒಂದು ಉಪಾಖ್ಯಾನ ವಿದೆ. ಅದರಲ್ಲಿ ವಿಷ್ಣುವಿನ ಪಾತ್ರವೂ ಇದೆ. ಈ ವಿಷಯದಲ್ಲಿ ಚತುಕಬ್ರಾಹ್ಮಣದಲ್ಲಿ ಉಕ್ತವಾಗಿರುವ ಇತಿಹಾಸವನ್ನು ಇಲ್ಲಿ ವಿವರಿಸಿದ್ದೇವೆ.

ವಿಷ್ಣುರ್ಯಜ್ಞಃ । ಸ ದೇವೇಭ್ಯ ಆತ್ಮಾನಮಂತರಧಾತ್ । ತನ್ನು ದೇವತಾ ನಾವಿಂದನ್ನಿಂದ್ರಸ್ತ್ವೇತ್ । ಸ ಇಂದ್ರಮಬ್ರವೀತ್ಕೋ ಭವಾನಿತಿ । ತಮಿಂದ್ರಃ ಪ್ರತ್ಯಬ್ರವೀದಹಂ ದುರ್ಗಾಣಾಮಸುರಾಣಾಂ ಚ ಹಂತಾ ಭವಾಂಸ್ತು ಕ ಇತಿ । ಸೋಽಬ್ರವೀದಹಂ ದುರ್ಗಾದಾಹರ್ತಾ ತ್ವಂ ತು ಯದಿ ದುರ್ಗಾಣಾಮಸುರಾಣಾಂ ಹಂತಾ ತತೋಽಯಂ ವರಾಹೋ ವಾಮಮುಷ ಏಕವಿಂಶ್ಯಾಃ ಪುರಾಂ ಪಾರೇಽಶ್ಮಮಯೀನಾಂ ವಸತಿ ತಸ್ಮಿನ್ನಸುರಾಣಾಂ ವಸು ವಾಮಮುಸ್ತಿ ತಮಿಮಂ ಜಹೀತಿ ॥ ತಸ್ಯೇಂದ್ರಸ್ತಾಃ ಪುರೋ ಭಿತ್ತ್ವಾ ಹೃದಯಮವಿಧ್ಯತ್ ಭಿ ಅಧಿ ತತ್ರ ಯದಾಸೀತ್ತದ್ವಿಷ್ಣುರಾಹರದಿತಿ । ಸೋಽಯಮಿತಿಹಾಸಃ ॥

ಇದರ ಮುಖ್ಯಾಭಿಪ್ರಾಯವೇನೆಂದರೆ—ವಿಷ್ಣುವೇ ಯಜ್ಞವು. ಆ ಯಜ್ಞರೂಪಿಯಾದ ವಿಷ್ಣುವು ಒಂದಾನೊಂದು ಕಾಲದಲ್ಲಿ ದೇವತೆಗಳನ್ನು ಬಿಟ್ಟು ಹೊರಟುಹೋಗಿ ಒಂದು ರಹಸ್ಯಸ್ಥಳದಲ್ಲಿದ್ದನು. ಇದು ಇತರ ದೇವತೆಗಳಿಗೆ ತಿಳಿಯಲಿಲ್ಲ. ಇಂದ್ರನಿಗೆ ಮಾತ್ರ ತಿಳಿಯಿತು. ಆಗ ಇಂದ್ರನು ವಿಷ್ಣುವಿದ್ದ ಸ್ಥಳಕ್ಕೆ ಹೋದಾಗ ವಿಷ್ಣುವು ಇಂದ್ರನನ್ನು ಕುರಿತು ನೀನು ಯಾರೆಂದು ಕೇಳಿದನು. ವಿಷ್ಣುವಿಗೆ ಪ್ರತ್ಯುತ್ತರವಾಗಿ ಇಂದ್ರನು ನಾನು ದುರ್ಗಗಳನ್ನೂ, ಅಸುರರನ್ನೂ ಧ್ವಂಸ ಮಾಡುವವನು. ದರೆ ನೀನು ಯಾರು ? ಎಂದನು. ವಿಷ್ಣುವು ನಾನು ದುರ್ಗಾದಿಗಳಿಂದ ಅಸುರರಿಗೆ ಸೇರಿದ ಧನಾದಿಗಳನ್ನು ಅಪಹರಿಸಿ ತರುವವನು. ನೀನು ಯಾರು? ನೀನುಮಾಡುವ ಕೆಲಸವೇನು? ಎಂದು ಪುನಃ ಕೇಳಲು ಅದಕ್ಕೆ ವಿಷ್ಣುವು ಇಂತೆಂದನು—ನೀನು ಹೇಳಿದಂತೆ ದುರ್ಗಗಳ ಮತ್ತು ಅಸುರರ ಧನಾದಿಗಳನ್ನು ಧ್ವಂಸಮಾಡುವವನಾಗಿದ್ದಲ್ಲಿ ಧನಾದಿಗಳನ್ನು ಅಪಹರಿಸಿ ತನ್ನಲ್ಲಿ ಬಚ್ಚಿಟ್ಟುಕೊಂಡಿರುವ ವರಾಹನೆಂಬ ಅಸುರನು ಇಲ್ಲಿಂದ ಇಪ್ಪತ್ತೊಂದು ಪುರಗಳ (ಕೋಟೆಗಳ) ಕೊನೆಯಲ್ಲಿ ಕಲ್ಲುಗಳಿಂದ ಭದ್ರವಾಗಿ ಕಟ್ಟಲ್ಪಟ್ಟಿರುವ ಕೋಟೆಯಲ್ಲಿ ವಾಸಮಾಡುತ್ತಿರುವನು.

ಅವನಲ್ಲಿ ಅಸುರರ ಬಹಳವಾದ ಧನವಿರುವುದು. ಆದ್ದರಿಂದ ಆ ಅಸುರರನ್ನು ಸಂಹರಿಸು ಎಂದನು. ಅದನ್ನು ಕೇಳಿ ಇಂದ್ರನು ಅಸುರರ ಆ ಪಟ್ಟಣಗಳನ್ನು ಧ್ವಂಸ ಮಾಡಿ ವರಾಹ ಎಂಬ ಅಸುರನ ಹೃದಯವನ್ನು ಇರಿದು ಕೊಂದನು. ಆಗ ವಿಷ್ಣುವು ಅಸುರನಲ್ಲಿದ್ದ ಧನವನ್ನೆಲ್ಲಾ ಅಲ್ಲಿಂದ ತಂದನು. ಇದೇ ಈ ಇತಿಹಾಸದ ಮುಖ್ಯಾಭಿಪ್ರಾಯವು. ಈ ವಿಷಯವು ಮೇಲೆ ಹೇಳಿದ ಋಕ್ಕಿನಲ್ಲಿಯೂ,

ಅಸ್ಯೇದು ಮಾತುಃ ಸವನೇಷು ಸದ್ಯೋ ಮಹಃ ಪಿತುಂ ಪಪಿವಾಞ್ಛಾರ್ವನ್ನಾ ।
ಮುಷಾಯದ್ವಿಷ್ಣುಃ ಪಚತಂ ಸಹೀಯಾನ್ವಿಧ್ಯದ್ವರಾಹಂ ತಿರೋ ಅದ್ರಿಮುಸ್ರಾ ॥

(ಋ. ಸಂ. ೧೬-೧೭)

ಎಂಬ ಋಕ್ಕಿನಲ್ಲಿಯೂ ಹೇಳಿದೆಯೆಂದು ಭಾಷ್ಯಕಾರರು ಹೇಳಿ ಪ್ರಕೃತ ಋಕ್ಕಿನಲ್ಲಿರುವ ಮತ್ತು ಉದಾಹರಣೆಗಾಗಿ ಕೊಟ್ಟಿರುವ ವಾಕ್ಯಗಳಿಗೂ ಮೇಲೆ ಹೇಳಿದ ಇತಿಹಾಸಕ್ಕೂ ಹೊಂದಿಸಿ ಅರ್ಥವಿವರಣೆ ಮಾಡಿರುವರು.

ಅಸ್ಯೇದು ಮಾತುಃ ಇತ್ಯತ್ರ ವಿಷ್ಣುನಾ ಹೇ ಇಂದ್ರ ತ್ವಂ ದುರ್ಗಾಣಾಂ ಹಂತೇತ್ಯಾತ್ಮಾನಂ ಕಥಯಸಿ ತರ್ಹಿ ನಾಮಮುಷಂ ವರಾಹಮಸುರಂ ಜಹೀತ್ಯುಕ್ತಾರ್ಥೋ ವಿಧ್ಯದ್ವರಾಹಂ ಇತಿ ಪಾದೇನ ಪ್ರತಿಪಾದಿತಃ ॥

ಮೇಲಿನ ಇತಿಹಾಸದಲ್ಲಿ ಹೇಳಿರುವ—" ಎಲೈ ಇಂದ್ರನೇ, ನೀನು ದುರ್ಗಗಳ ಮತ್ತು ಅಸುರರ ಸಂಹಾರಕನೆಂದು ಹೇಳಿಕೊಳ್ಳುವೆಯಷ್ಟೆ. ಹಾಗಾದರೆ ಧನಾದಿಗಳನ್ನು ಅಪಹರಿಸಿ ತನ್ನಲ್ಲಿ ಬಚ್ಚಿಟ್ಟುಕೊಂಡಿರುವ ವರಾಹನನ್ನು ಸಂಹರಿಸು» ಎಂದು ವಿಷ್ಣುವಿನ ವಾಕ್ಯಾರ್ಥವು ಮೇಲೆ ಹೇಳಿದ **ಅಸ್ಯೇದು ಮಾತುಃ** ಎಂಬ ಉದಾಹರಣೆಯ ಋಕ್ಕಿನ **ವಿಧ್ಯದ್ವರಾಹಂ ತಿರೋ ಅದ್ರಿಮುಸ್ರಾ** ಎಂಬ ಕೊನೆಯ ಪಾದದಲ್ಲಿ ಉಕ್ತವಾಗಿರುವುದು.

ಇಂದ್ರೇಣ ಚ ವಿಷ್ಣೋ ತ್ವಂ ದುರ್ಗಾದಾಹರ್ತೇತಿ ಬ್ರೂಷೇ ಮಯಾ ಪುರಾಣಿ ಜಿತಾನ್ಯಸುರಶ್ಚ ಘಾತಿತಸ್ತಸ್ಯ ವಾಮಂ ವಸ್ವಾನಯೇತ್ಯುಕ್ತೋ ವಿಷ್ಣುಮೂರ್ತಿಸ್ತಸ್ಯ ವರಾಹಾಸುರಸ್ಯ ಧನಂ ಮುಮೋಷ । ಸೋಽರ್ಥಃ ಮುಷಾಯದ್ವಿಷ್ಣುಃ ಪಚತಂ ಸಹೀಯಾನ್ ಇತಿ ಪಾದೇನ ಸೂಚಿತಃ ॥

ಮತ್ತು ಇಂದ್ರನು ವಿಷ್ಣುವನ್ನು ಕುರಿತು—ಎಲೈ ವಿಷ್ಣುವೇ, ನೀನು ಅಸುರರ ದುರ್ಗಗಳಿಂದ ಅವರ ಧನಾದಿಗಳನ್ನು ಅಪಹರಿಸಿ ತರುವವನೆಂದು ಹೇಳಿಕೊಂಡಿದ್ದೀಯಷ್ಟೆ. ಈಗ ನಾನು ಅನೇಕ ಶತ್ರುಪಟ್ಟಣಗಳನ್ನು ಜಯಿಸಿ ಅಸುರನನ್ನು ಕೊಂದಿರುವೆನು. ಆ ಅಸುರನಲ್ಲಿರುವ ಧನವನ್ನು ತೆಗೆದುಕೊಂಡುಬಾ ಎಂದು ಹೇಳಲು ವಿಷ್ಣುವು ಅದಕ್ಕೆ ಒಪ್ಪಿ ಆ ವರಾಹಾಸುರನಲ್ಲಿದ್ದ ಧನವನ್ನು ಅಪಹರಿಸಿ ತಂದನು—**ಮುಷಾಯದ್ವಿಷ್ಣುಃ । ಪಚತಂ ಸಹೀಯಾನ್ ॥** ಎಂಬ ಉದಾಹೃತ ಋಕ್ಕಿನ ಪಾದದಿಂದ ವ್ಯಕ್ತಪಡುವುದು.

ಸ ಕಿಂ ಪುನರ್ಮುಷಿತವಾನಿತಿ ತದತ್ರೋಚ್ಯತೇ । ವಿಶ್ವೇತಾ ಇತಿ । ಹೇ ಇಂದ್ರ ತ್ವೇಷಿತಸ್ತ್ವಯಾ ಪ್ರೇರಿತೋ ವಿಷ್ಣುರ್ಯಜ್ಞರೂಪೀ ತ್ವೇಷಿತಸ್ತ್ವಂ ದುರ್ಗಾದಾಹರ್ತಾ ಕಿಲ ತರ್ಹಿ ತ್ವಂ ತಸ್ಯ ಧನಾನ್ಯಾಹರೇತಿ ತ್ವಯಾ ಪ್ರೇರಿತಃ ಸನ್ನುರುಕ್ರಮೋ ಭೂತ್ವಾ ವಿಶ್ವೇತಾ ಯಾನಿ ಚ ತತ್ರ ಸ್ಥಿತಾನಿ ತಾನಿ ಸರ್ವಾಣ್ಯಾಭರತ್ । ಅಭರತ್ । ಕಾನಿ ತಾನೀತಿ । ಶತಂ ಮಹಿಷಾನಪರಿ-

ಮಿತಾನ್ ಪ್ರಶಸ್ತಾನ್ ಪದಾರ್ಥಾನ್ ತೇಷಾಂ ವಾಹನರೂಪಾನ್ ಮಹಿಷಾನ್ವಾ ಕ್ಷೀರಪಾಕೌ-ದನಂ ಚ ಪಕ್ವಮಾತ್ರಮೇವೌದನಂ ಚಾಬರತ್ ॥

ಮತ್ತು ಆ ವಿಷ್ಣುವು ಪುನಃ ಇನ್ನೂ ಅನೇಕ ಪದಾರ್ಥಗಳನ್ನೂ ಅಪಹರಿಸಿ ತಂದನು ಎಂದು ಹೇಳಿದೆಯಷ್ಟೆ. ಅದರ ವಿವರವನ್ನು **ವಿಶ್ವೇತಾತ್ತಾ** ಎಂಬ ಪ್ರಕೃತ ಋಕ್ಕಿನಲ್ಲಿ ವಿಶದವಾಗಿ ಹೇಳಲಾಗಿದೆ. ಎಲೈ ಇಂದ್ರನೇ, ನೀನು ಯಜ್ಞರೂಪಿಯಾದ ವಿಷ್ಣುವನ್ನು ಕುರಿತು—ಎಲೈ ವಿಷ್ಣುವೇ, ನೀನು ಅಸುರರ ದುರ್ಗಗಳಿಂದ ಧನಾದಿಗಳನ್ನು ಅಪಹರಿಸಿ ತರುವವನೆಂದು ಹೇಳಿಕೊಂಡಿರುವೆಯಷ್ಟೆ. ಹಾಗಾದರೆ ಈ ವರಾಹಾಸುರನಲ್ಲಿರವ ಧನಾದಿಗಳನ್ನು ತೆಗೆದುಕೊಂಡುಬಾ ಎಂಬುದಾಗಿ ನಿನ್ನಿಂದ (ಇಂದ್ರನಿಂದ) ಪ್ರೇರಿತನಾದಕೂಡಲೇ ವಿಷ್ಣುವು ಹಾಗೇ ಆಗಲೆಂದೊಪ್ಪಿ ಬೇಗಬೇಗನೆ ಅಸುರನ ಪಟ್ಟಣಕ್ಕೆ ಹೋಗಿ, ಅಸುರನಲ್ಲಿದ್ದ ಎಂದರೆ ಯಾವಯಾವ ವಸ್ತುಗಳನ್ನು ತರಬೇಕೆಂದು ಹೇಳಿದ್ದನೋ ಆ ಧನಾದಿಗಳನ್ನೆಲ್ಲಾ ಅಪಹರಿಸಿ ತಂದನು. ವಿಷ್ಣುವು ತಂದ ಆ ವಸ್ತುಗಳಾವುವು ಎಂದರೆ ಅತ್ಯುತ್ತಮವಾದವೂ ಅಸಂಖ್ಯಾತವಾದುವೂ ಆದ ಧನಾದಿ ಶ್ರೇಷ್ಠವಸ್ತುಗಳನ್ನೂ ಅವುಗಳನ್ನೂ ಹೊತ್ತುತರುವ ಮಹಿಷಾದಿ ಪಶುಗಳನ್ನೂ ಕ್ಷೀರಾದಿಗಳಿಂದ ಪಕ್ವಮಾಡಿದ ಅನ್ನಾದ್ಯಾಹಾರಗಳನ್ನೂ ಎಲ್ಲವನ್ನೂ ಇಂದ್ರನು ಹೇಳಿದಂತೆ ಅಪಹರಿಸಿ ತಂದನು ಎಂಬ ವಿವರವು ಪ್ರಕೃತ ಋಕ್ಕಿನಲ್ಲಿ ವಿಶದವಾಗಿ ಸೂಚಿತವಾಗಿರುವುದು.

ವಿಧ್ಯದ್ವರಾಹಮಿತ್ಯತ್ರೋಕ್ತೋಽರ್ಥಶ್ಚ ಚರಮಪಾದೇನೋಚ್ಯತೇ। ಇಂದ್ರಸ್ತು ವರಾಹಾರಂ ಸ್ವೀಕೃತಾಸುರಸರ್ವಸ್ವಂ ವರಾಹರೂಪಿಣಂ ವೈಮುಷಮೇವಮುಷನಾಮಾನಮಥ ವೈಮುಷಂ ಧನಾನಾಮಾಕ್ಷೋಷಕಂ ವರಾಹಮಸುರಂ ಹೃದಯೇಽವಿಧ್ಯದಿತಿ ಶೇಷಃ ॥

ಇನ್ನು ವಿಧ್ಯದ್ವರಾಹಮಿಂದ್ರ ಏಮುಷಂ ಎಂಬ ಪ್ರಕೃತ ಋಕ್ಕಿನ ಕೊನೆಯ ಪಾದದ ಅರ್ಥವನ್ನು ವಿವರಿಸುವನು. **ಈ ವರಾಹನೆಂಬ** ಅಸುರನು ವರಾಹ (ಹಂದಿ) ರೂಪಿಯಾಗಿದ್ದು ಬಹಳ ಧನವನ್ನು ಅನೇಕರಿಂದ ಅಪಹರಿಸಿಟ್ಟಿದ್ದನು. ಆದ್ದರಿಂದ ಇವನನ್ನು **ಏಮುಷಂ** ಎಂದರೆ **ಧನಾನಾಮಾಮೋಷಕಂ** ಧನವನ್ನು ಅಪಹರಿಸುವವನು ಎಂಬ ಹೆಸರಿನಿಂದ ಕರೆಯುವುದು ರೂಢಿಯು. ಇಂತಹ ವರಾಹರೂಪಿಯಾದ ಏಮುಷನೆಂಬ ಅಸುರನನ್ನು ಇಂದ್ರನು ತನ್ನ ಶಕ್ತಿಸಾಮರ್ಥ್ಯಗಳಿಂದ ಅವನ ಎದೆಯನ್ನು ತಿವಿದು ಕೊಂದನು ಎಂಬ ಅಭಿಪ್ರಾಯವು ಪ್ರಕೃತ ಕೊನೆಯ ಪಾದದಲ್ಲಿ ವಿವೃತವಾಗಿದೆ.

ಕೃಷ್ಣಯಜುರ್ವೇದದ ತೈತ್ತಿರೀಯಸಂಹಿತೆಯಲ್ಲಿಯೂ ಈ ವಿಷಯದ ವಿವರಣೆಯು ಇದೇ ರೀತಿಯಾಗಿ ಹೇಳಲ್ಪಟ್ಟಿದೆ.

ಯಜ್ಞೋ ದೇವೇಭ್ಯೋ ನಿಲಾಯತ ವಿಷ್ಣೂರೂಪಂ ಕೃತ್ವಾ ಸ ಪೃಥಿವೀಂ ಪ್ರಾವಿಶತ್ತಂ ದೇವಾ ಹಸ್ತಾನ್ತ್ಸಗ್ಂ ರಭ್ಯೈಚ್ಛನ್ತಮಿಂದ್ರ ಉಪಯರ್ಯುಪರ್ಯತ್ಯಕ್ರಾಮತ್ಸೋಽಬ್ರವೀತ್ಕೋ-ಮಾಯಮುಪರ್ಯುಪರ್ಯತ್ಯಕ್ರಮೀದಿತ್ಯಹಂ ದುರ್ಗೇ ಹಂತೇತ್ಯಥ ಕಸ್ತ್ವಮಿತ್ಯಹಂ ದುರ್ಗಾದಾಹರ್ತೇತಿ ಸೋಽಬ್ರವೀದ್ದುರ್ಗೇ ವೈ ಹಂತಾವೋಚಥಾವರಾಹೋಽಯಂ ವಾಮು-ನೋಷಃ ಸಪ್ತಾನಾಂ ಗಿರೀಣಾಂ ಪರಸ್ತಾದ್ವಿತ್ತಂ ವೇದ್ಯಮಸುರಾಣಾಂ ಬಿಭರ್ತಿ ತಂ ಜಹಿ ಯದಿ ದುರ್ಗೇ ಹಂತಾಸೀತಿ ಸ ದರ್ಭಪುಂಜೀಲಮುದ್ಗೃಹ್ಯ ಸಪ್ತಗಿರೀನ್ ಭಿತ್ವಾ ತಮಹ-ನ್ತ್ಸೋಽಬ್ರವೀದ್ದುರ್ಗಾದ್ವಾ ಆಹರ್ತಾ ವೋಚಥಾ ಏತಮಾಹರೇತಿ ತಮೇಭ್ಯೋ ಯಜ್ಞ

ಏವ ಯಜ್ಞಮಾಹರದ್ಯತ್ತದ್ವಿತ್ತಂ ವೇದ್ಯಮಸುರಾಣಾಮವಿಂದಂತ ತದೇಕಂ ವೇದ್ಯೈ ವೇದಿತ್ವಂ ॥

(ತೈ. ಸಂ. ೬-೨-೪-೨, ೩)

ಯಜ್ಞವೇದಿಗೆ ವೇದಿ ಎಂದು ಹೆಸರು ಹೇಗೆ ಬಂದಿತೆಂಬ ವಿಷಯವನ್ನು ವಿವರಿಸುವುದಕ್ಕಾಗಿ ಯಜುರ್ವೇದದಲ್ಲಿ ಒಂದು ಇತಿಹಾಸವು ಉಕ್ತವಾಗಿದೆ.

ಪೂರ್ವದಲ್ಲಿ ಕಾರಣಾಂತರದಿಂದ ಯಜ್ಞವು ವಿಷ್ಣುರೂಪವನ್ನು ಧರಿಸಿ ದೇವತೆಗಳನ್ನು ಬಿಟ್ಟು ಹೊರಟು ಹೋಯಿತು. ಅನಂತರ ಯಜ್ಞರೂಪನಾದ ಆ ವಿಷ್ಣುವು ಭೂಮಿಯನ್ನು ಪ್ರವೇಶಿಸಿ ಯಾರಿಗೂ ತಿಳಿಯದಂತೆ ಅಡಗಿಕೊಂಡಿದ್ದನು. ದೇವತೆಗಳು ಅವನನ್ನು ಕಾಣದೆ ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ಎಲ್ಲೆಲ್ಲೂ ಹುಡುಕುತ್ತಿದ್ದರು. ಆದರೂ ಅವರಿಗೆ ವಿಷ್ಣು ನಿರುವ ಸ್ಥಳವು ಸಿಕ್ಕಲಿಲ್ಲ. ಆದರೆ ಇಂದ್ರನು ವಿಷ್ಣುವು ಅಡಗಿಕೊಂಡಿದ್ದ ಪ್ರದೇಶದ ಮೇಲೆ ಹಾದುಹೋಗುವಾಗ, ಕೆಳಗಿದ್ದ ವಿಷ್ಣುವು ಯಾರದು? ನಾವಿರುವ ಈ ಸ್ಥಳದ ಮೇಲೆ ಹಾದುಹೋಗುವವರಾರು? ಎನಲು, ಅದನ್ನು ಕೇಳಿ ಇಂದ್ರನು—ನಾನು, ಅಸುರರ ದುರ್ಗಗಳನ್ನು ಧ್ವಂಸಮಾಡತಕ್ಕ ಶೂರನೇ ನಾನು. ಆದರೆ ನೀನು ಯಾರು? ಎಂದು ಕೇಳಿದನು. ಆದಕ್ಕೆ ವಿಷ್ಣುವು ಅಸುರರ ದುರ್ಗಾದಿಗಳು ಧ್ವಂಸವಾದಮೇಲೆ ಅಲ್ಲಿರತಕ್ಕ ಧನಾದಿ ವಸ್ತುಗಳನ್ನು ತರುವವನೇ ನಾನು ಎಂದು ಪ್ರತ್ಯುತ್ತರವಿತ್ತನು ಮತ್ತು ಇಂದ್ರನನ್ನುದ್ದೇಶಿಸಿ—ಎಲೈ ಪುರುಷನೇ, ನೀನು ಹೇಳಿಕೊಳ್ಳುವಂತೆ ಶತ್ರುಪಟ್ಟಣಗಳನ್ನು ಧ್ವಂಸಮಾಡುವವನು ನೀನೇ ಆಗಿದ್ದರೆ ಇಲ್ಲಿಂದ ಮುಂದೆ ಏಳು ಪರ್ವತಗಳ ಆಚೆ ವರಾಹನೆಂಬ ಅಸುರನಿರುವನು. ಅವನು ಅಸುರರ ಧನಾದಿಗಳನ್ನು ಅಪಹರಿಸಿ ತನ್ನ ಬಲವಾದ ಕೋಟೆಯೊಳಗೆ ಇಟ್ಟುಕೊಂಡಿರುವನು. ನೀನು ಹೇಳಿಕೊಳ್ಳುವಂತೆ ಅಸುರರ ದುರ್ಗಗಳನ್ನು ನಾಶಮಾಡುವ ಶಕ್ತಿ ನಿನಗಿದ್ದರೆ ಆ ವರಾಹನೆಂಬ ಅಸುರನನ್ನು ಪ್ರಹರಿಸಿ ಧ್ವಂಸಮಾಡು. ಆಗಮಾತ್ರ ನಿನ್ನ ಶಕ್ತಿಯು ಗೊತ್ತಾಗುವುದು ಎಂದನು. ಇದನ್ನು ಕೇಳಿ ಇಂದ್ರನು ಸಮೀಪದಲ್ಲಿದ್ದ ದರ್ಭೆಯ ಗೊಂಚಲೊಂದನ್ನು ತೆಗೆದುಕೊಂಡು ಅದನ್ನೇ ತನ್ನ ಆಯುಧವನ್ನಾಗಿ ಮಾಡಿಕೊಂಡು ಆಭೇದ್ಯವಾದ ಏಳು ಪರ್ವತಗಳನ್ನೂ ಛೇದಿಸಿ ಆ ವರಹಾಸುರನನ್ನು ಹೊಡೆದುಕೊಂದನು. ಬಳಿಕ ವಿಷ್ಣುವನ್ನುದ್ದೇಶಿಸಿ ಎಲೈ ಪುರುಷನೇ, ನೀನು ಹೇಳಿದಂತೆ ಸಪ್ತಪರ್ವತಗಳನ್ನೂ ಸೀಳಿಹಾಕಿ ಅಲ್ಲಿದ್ದ ಅಸುರರನ್ನು ಕೊಂದಿರುವೆನು. ಇದರಿಂದ ನನ್ನ ಶಕ್ತಿಸಾಮರ್ಥ್ಯಗಳು ಸ್ಪಷ್ಟವಾಯಿತಷ್ಟೆ. ನೀನು ಹಿಂದೆ ಹೇಳಿದಂತೆ ಧ್ವಂಸವಾದ ಅಸುರರ ದುರ್ಗಾದಿಗಳಿಂದ ಅಲ್ಲಿರುವ ಧನಾದಿವಸ್ತುಗಳನ್ನು ತೆಗೆದುಕೊಂಡುಬಾ, ಆಗ ನಿನ್ನ ಶಕ್ತಿಯು ವ್ಯಕ್ತವಾಗುವುದು ಎಂದು ಹೇಳಲು ವಿಷ್ಣುವು ಹಾಗೆಯೇ ಆಗಲೆಂದು ಹೇಳಿ ಯಜ್ಞರೂಪದಿಂದಲೇ ಆ ಅಸುರನಲ್ಲಿದ್ದ ಧನಾದಿವಸ್ತುಗಳನ್ನು ಅಪಹರಿಸಿ ದೇವತೆಗಳ ಸಮೀಪಕ್ಕೆ ತಂದನು. ಈ ರೀತಿ ಯಜ್ಞದಿಂದ ದೇವತೆಗಳು ಅಸುರರ ಧನಗಳನ್ನು ಪಡೆದದ್ದರಿಂದ ಯಜ್ಞಮಾಡುವ ಪ್ರದೇಶಕ್ಕೆ ವೇದಿ ಎಂದು ಹೆಸರು ಬಂದಿತು ಎಂದು ಈ ಇತಿಹಾಸದ ಮುಖ್ಯಾಭಿಪ್ರಾಯವು.

ಇಂದ್ರನು ವಿಶ್ವರೂಪನೆಂಬುವನನ್ನು ಸಂಹಾರಮಾಡಿದ ವಿಷಯ

ವಿಶ್ವರೂಪನೆಂಬುವನನ್ನು ಇಂದ್ರನು ಸಂಹಾರಮಾಡಿದ ವಿಷಯವು ತೈತ್ತಿರೀಯಸಂಹಿತೆಯ ಎರಡನೇ ಕಾಂಡದಲ್ಲಿ ಐದನೆಯ ಪ್ರಪಾಠಕದ ಪ್ರಾರಂಭಭಾಗದಲ್ಲಿ ಹೇಳಿದೆ. ಋಗ್ವೇದದಲ್ಲಿಯೂ ಈ ವಿಷಯವಾಗಿ—

ಭೂರೀದಿಂದ್ರ ಉದಿನಕ್ಷಂತಮೋಜೋಽವಾಭಿನತ್ಸಪ್ತಿರ್ಮ್ಯಮಾನಂ ।
ತ್ವಾಷ್ಟ್ರಸ್ಯ ಚಿದ್ವಿಶ್ವರೂಪಸ್ಯ ಗೋನಾಮಾಚಕ್ರಾಣಸ್ತ್ರೀಣಿ ಶೀರ್ಷಾ ಪರಾ ವರ್ಕ್ ॥

(ಋ. ಸಂ. ೧೦-೮೯-೯)

ಎಂಬ ಋಕ್ಕಿನಲ್ಲಿ ಇಂದ್ರನು—ತ್ವಷ್ಟೃಪುತ್ರನಾದ ನಿಶ್ವರೂಪನೆಂಬುವನ ಮೂರು ತಲೆಗಳನ್ನು ಕತ್ತರಿಸಿಹಾಕಿದನು ಎಂದು ಹೇಳಿದೆ. ಈ ಕಾರ್ಯವನ್ನು ಇಂದ್ರನು ತ್ರಿತನಿಗಾಗಿ ಮಾಡಿದನೆಂದೂ, ತ್ರಿತನು ಆ ವಿಷಯದಲ್ಲಿ ಇಂದ್ರನಿಗೆ ಸಹಾಯಮಾಡಿದನೆಂದೂ ಅದೇ ಸೂಕ್ತದ ೭ ನೇ ಋಕ್ಕಿನಲ್ಲಿ ಹೇಳಿದೆ.

ಅಸ್ಯ ತ್ರಿತಃ ಕ್ರತುನಾ ವವ್ರೇ ಅಂತರಿಚ್ಛನ್ ಧೀತಿಂ ಪಿತುರೇವೈಃ ಪರಸ್ಯ ।
ಸಚಸ್ಯಮಾನಃ ಪಿತ್ರೋರುಪಸ್ಥೇ ಜಾಮಿ ಬ್ರುವಾಣ ಆಯುಧಾನಿ ವೇತಿ ।
ಸ ಪಿತ್ರ್ಯಾಣ್ಯಾಯುಧಾನಿ ವಿದ್ವಾನಿಂದ್ರೇಷಿತ ಆಪ್ತ್ಯೇ ಅಭ್ಯಯುಧ್ಯತ್ ।
ತ್ರಿಶೀರ್ಷಾಣಂ ಸಪ್ತರಶ್ಮಿಂ ಜಘನ್ವಾನ್ ತ್ವಾಷ್ಟ್ರಸ್ಯಚಿನ್ನಿಃ ಸಸೃಜೇ ತ್ರಿತೋ ಗಾಃ ॥

(ಋ. ಸಂ. ೧೦-೮-೭, ೮)

ಈ ಋಕ್ಕುಗಳ ಭಾಷ್ಯದಲ್ಲಿ ಸಾಯಣರು ಒಂದು ಉಪಾಖ್ಯಾನವನ್ನೂ ಹೇಳಿದ್ದಾರೆ—ಇಂದ್ರನು ಮೂರು ಶಿರಸ್ಸುಗಳುಳ್ಳ ತ್ವಷ್ಟೃಪುತ್ರನಾದ ವಿಶ್ವರೂಪನನ್ನು ಕೊಲ್ಲಲು ತ್ರಿತನ ಸಹಾಯವನ್ನು ಕೋರಿದನು. ಅದಕ್ಕೆ ತ್ರಿತನು ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ತನಗೆ ಯಜ್ಞಗಳಲ್ಲಿ ಹವಿರ್ಭಾಗವನ್ನು ಕೊಡಬೇಕೆಂದು ವರವನ್ನು ಕೇಳಿದನು. ಇಂದ್ರನು ಅದಕ್ಕೊಪ್ಪಿ ಹಸ್ತಪ್ರಕ್ಷಾಳನಕ್ಕಾಗಿ ನೀರನ್ನೂ, ಯಜ್ಞಭಾಗವನ್ನೂ ಕೊಟ್ಟನು. ಬಳಿಕ ತ್ರಿತನು ತನ್ನ ತಂದೆಯ ಸಂಬಂಧವಾದ ಆಯುಧಗಳಿಂದ ಸಜ್ಜುಗೊಂಡು ಇಂದ್ರಪ್ರೇರಿತನಾಗಿ ತ್ವಷ್ಟೃಪುತ್ರನಾದ ವಿಶ್ವರೂಪನೆಂಬುವನ ಕೂಡ ಯುದ್ಧಮಾಡಿ ಅವನನ್ನು ತನ್ನ ಆಯುಧಗಳಿಂದ ಬಲವಾಗಿ ಹೊಡೆದು ಮೂರ್ಛೆಗೊಳಿಸಿದನು. ಅನಂತರ ಇಂದ್ರನು ಆ ವಿಶ್ವರೂಪನ ಮೂರು ತಲೆಗಳನ್ನು ಕತ್ತರಿಸಿಹಾಕಿದನು ಎಂದು ಮೇಲಿನ ಋಕ್ಕುಗಳಲ್ಲಿ ಹೇಳಿದೆ. ಇದೇ ವಿಷಯವನ್ನೇ ವಿಸ್ತಾರವಾಗಿ ತೈತ್ತಿರೀಯಸಂಹಿತೆಯಲ್ಲಿ ಹೇಳಿದೆ. (ತೈ. ಸಂ. ೨-೫-೧೧) ಅದನ್ನೂ ಅರ್ಥಸಹಿತವಾಗಿ ಇಲ್ಲಿ ವಿವರಿಸಿದೆ—

ವಿಶ್ವರೂಪೋ ವೈ ತ್ವಾಷ್ಟ್ರಃ ಪುರೋಹಿತೋ ದೇವಾನಾಮಾಸೀತ್ ಸ್ವಸ್ರಿಯೋಽಸುರಾಣಾಂ ತಸ್ಯ ತ್ರೀಣಿ ಶೀರ್ಷಾಣ್ಯಾಸನ್ಸೋಮಪಾನಗ್ಂ ಸುರಾಪಾನಮನ್ನಾದನಗ್ಂ ಸ ಪ್ರತ್ಯಕ್ಷಂ ದೇವೇಭ್ಯೋ ಭಾಗಮವದತ್ ಪರೋಕ್ಷಮಸುರೇಭ್ಯಃ ॥

ಪೂರ್ವಕಾಲದಲ್ಲಿ ತ್ವಷ್ಟೃಪುತ್ರನಾದ ವಿಶ್ವರೂಪನೆಂಬುವನು ದೇವತೆಗಳಿಗೆ ಪುರೋಹಿತನಾಗಿದ್ದನು. ಇವನು ಅಸುರರ ತಂಗಿಯ ಮಗನಾದ್ದರಿಂದ ಅಸುರರಲ್ಲಿಯೂ ಅಭಿಮಾನವಿತ್ತು. ಈ ವಿಶ್ವರೂಪನಿಗೆ ಮೂರು ಶಿರಸ್ಸು (ತಲೆಗಳು) ಇದ್ದವು. ಆ ಮೂರು ತಲೆಗಳಲ್ಲಿ ಒಂದರಿಂದ ಸೋಮಪಾನ ಮಾಡುತ್ತಿದ್ದನು, ಮತ್ತೊಂದರಿಂದ ಸುರಾ (ಮದ್ಯ) ಪಾನಮಾಡುತ್ತಿದ್ದನು, ಮೂರನೆಯ ಶಿರಸ್ಸಿನಿಂದ ಅನ್ನಾದ್ಯಾಹಾರಗಳನ್ನು ತಿನ್ನುತ್ತಿದ್ದನು. ಹೀಗಿರುವಾಗ ಈ ವಿಶ್ವರೂಪನು ಯಜ್ಞದಲ್ಲಿ ದೇವತೆಗಳಿಗೆ ಹವಿರ್ಭಾಗವನ್ನು ದೊರಕಿಸಿಕೊಡುವುದಾಗಿ ಎಲ್ಲರೆದುರಿಗೂ ಹೇಳುತ್ತಿದ್ದನು. ಆದರೆ ಒಳಗೊಳಗೇ ಯಾರಿಗೂ ತಿಳಿಯದಂತೆ ಅಸುರರಿಗೆ ಸಹಾಯಮಾಡುತ್ತಿದ್ದನು.

ಸರ್ವಸ್ಮೈ ವೈ ಪ್ರತ್ಯಕ್ಷಂ ಭಾಗಂ ವದಂತಿ ಯಸ್ಮಾ ಏವ ಪರೋಕ್ಷಂ ವದಂತಿ ತಸ್ಯ ಭಾಗ ಉದಿತಸ್ತಸ್ಮಾದಿಂದ್ರೋಽಬಿಭೇದೀದೃಙ್ಮೈ ರಾಷ್ಟ್ರಂ ವಿಪರ್ಯೋವರ್ತಯತೀತಿ ತಸ್ಯ ವಜ್ರಮಾದಾಯ ಶೀರ್ಷಾಣ್ಯಚ್ಛಿನತ್ ॥

ಜನರೂ ಎಲ್ಲರಿಗೂ ಭಾಗವನ್ನು ಕೊಡುತ್ತೇನೆಂದು ಪ್ರತ್ಯಕ್ಷವಾಗಿ ಎಲ್ಲರೆದುರಿಗೂ ಮಾತುಕೊಡುವರು. ಆದರೆ ಆ ಕೊಟ್ಟ ಮಾತನ್ನು ನೆರವೇರಿಸುವವರು ಅತಿ ವಿರಳ. ಭಾಗವನ್ನು ಕೊಡುತ್ತೇವೆಂದು (ಪರೋಕ್ಷವಾಗಿ) ರಹಸ್ಯವಾಗಿ (ಏಕಾಂತವಾಗಿ) ನಂಬಿಕೆಯಾಗುವಂತೆ ಮಾತುಕೊಟ್ಟಲ್ಲಿ ೫ ವಚನವನ್ನು ಖಂಡಿತವಾಗಿಯೂ ಪಾಲಿಸುತ್ತಾರೆ. ಆದುದರಿಂದ ವಿಶ್ವರೂಪನ ರಹಸ್ಯಸಂಧಾನವನ್ನು ಕಂಡು ಇಂದ್ರನು ಹೆದರಿದನು. ಇವನು ತನಗೆ ದ್ರೋಹವೆಸಗಿ ರಾಷ್ಟ್ರವನ್ನು ಬೇರೆಯವರ (ಅಸುರರ) ವಶಮಾಡುವನೆಂದು ಹೆದರಿ ತನ್ನ ವಜ್ರಾಯುಧವನ್ನು ತೆಗೆದುಕೊಂಡು ಆ ವಿಶ್ವರೂಪನ ಮೂರು ಶಿರಸ್ಸುಗಳನ್ನೂ ಕತ್ತರಿಸಿದನು.

ಯತ್ಸೋಮಪಾನಮಾಸೀತ್ಸ ಕಪಿಂಜಲೋಽಭವದ್ಯತ್ಸುರಾಪಾನಗ್ಂ ಸ ಕಲವಿಂಕೋ ಯದನ್ನಾದನಗ್ಂ ಸ ತಿತ್ತಿರಿಸ್ತಸ್ಯಾಂಜಲಿನಾ ಬ್ರಹ್ಮಹತ್ಯಾಮುಪಾಗೃಹ್ಣಾತ್ತಾಗ್ಂ ಸಂವತ್ಸರಮುಬಿಭಸ್ತಂ ಭೂತಾನ್ಯಭ್ಯಕ್ರೋಶನ್ ಬ್ರಹ್ಮಹನ್ನಿತಿ ॥

ಆಗ ಇಂದ್ರನು ಕತ್ತರಿಸಿದ ಮೂರು ಶಿರಸ್ಸುಗಳಲ್ಲಿ ಸೋಮಪಾನ ಮಾಡುತ್ತಿದ್ದ ಶಿರಸ್ಸು ಕಪಿಂಜಲವೆಂಬ (hazecock) ಪಕ್ಷಿಯಾಯಿತು. ಸುರಾಪಾನವನ್ನು ಮಾಡುತ್ತಿದ್ದ ಎರಡನೆಯ ಶಿರಸ್ಸು ಕಲವಿಂಕ ಎಂದರೆ ಗುಬ್ಬಚ್ಚಿ (Sparrow) ಆಯಿತು; ಅನ್ನವನ್ನು ತಿನ್ನುತ್ತಿದ್ದ ಮೂರನೆಯ ಶಿರಸ್ಸು ತಿತ್ತಿರಿಯೆಂಬ (Partridge) ಪಕ್ಷಿಯಾಯಿತು. ಆಗ ಇಂದ್ರನು ಬ್ರಾಹ್ಮಣನಾದ ವಿಶ್ವರೂಪನನ್ನು ಕೊಂದದ್ದರಿಂದ ಬ್ರಹ್ಮಹತ್ಯಾದೋಷವು ಪ್ರಾಪ್ತವಾಗಲು ಅದನ್ನು ತನ್ನ ಕೈಯ್ಯಿಂದಲೇ ಸ್ವೀಕರಿಸಬೇಕಾಯಿತು. ಅದರಂತೆ ಅವನು ಬ್ರಹ್ಮಹತ್ಯಾದೋಷವನ್ನು ಒಂದು ಸಂವತ್ಸರದವರೆಗೂ ಧರಿಸಿದ್ದನು. ಪ್ರಾಣಿಗಳೆಲ್ಲಾ ಅವನನ್ನು (ಇಂದ್ರನನ್ನು) ನೋಡಿ "ಎಲೈ ಇಂದ್ರನೇ, ನೀನು ಬ್ರಹ್ಮಹತ್ಯೆಯನ್ನು ಮಾಡಿದವನು" ಎಂದು ಕೂಗುತ್ತಿದ್ದುವು.

ಸ ಪೃಥಿವೀ ಮುಪಾಸೀಪದಸ್ಯೈ ಬ್ರಹ್ಮಹತ್ಯಾಯೈ ತೃತೀಯಂ ಪ್ರತಿಗೃಹಾಣೇತಿ ಸಾಬ್ರವೀದ್ವರಂ ವೃಣೈ ಋತಾತ್ಪರಾಭವಿಷ್ಯಂತೀ ಮನ್ಯೇ ತತೋ ಮಾ ಪರಾಭೂವಮಿತಿ ಪುರಾ ತೇ ಸಂವತ್ಸರಾದಪಿರೋಹಾದಿತ್ಯಬ್ರವೀತ್ತಸ್ಮಾತ್ಪುರಾ ಸಂವತ್ಸರಾತ್ಪೃಥಿವ್ಯೈ ಋತಮಪಿರೋಹತಿ ವಾರೇವೃತಗ್ಗ್ಹ್ಯಸ್ಯೈ ತೃತೀಯಂ ಬ್ರಹ್ಮಹತ್ಯಾಯೈ ಪ್ರತ್ಯಗೃಹ್ಣಾತ್ತತ್ಸ್ವಕೃತಮಿರಿಣಮಭವತ್ತಸ್ಮಾದಾಹಿತಾಗ್ನಿಃ ಶ್ರದ್ಧಾದೇವಃ ಸ್ವಕೃತ ಇರಿಣೇ ನಾವಸ್ಯೇದ್ಬ್ರಹ್ಮಹತ್ಯಾಯೈ ಹ್ಯೇಷ ವರ್ಣಃ ॥

ಇದನ್ನು ಕಂಡ ಇಂದ್ರನು (ಲಜ್ಜೆಗೊಂಡು) ಬ್ರಹ್ಮಹತ್ಯಾಪರಿಹಾರಕ್ಕಾಗಿ ಪೃಥಿವಿಯ (ಭೂಮಿಯ) ಬಳಿಗೆ ಹೋಗಿ ಎಲೈ ಭೂಮಿಯೇ, ನನಗೆ ಪ್ರಾಪ್ತವಾಗಿರುವ ಈ ಬ್ರಹ್ಮಹತ್ಯದಲ್ಲಿ ಮೂರನೇ ಒಂದು ಭಾಗವನ್ನು ನೀನು ತೆಗೆದುಕೋ ಎಂದು ಕೇಳಲು, ಅದಕ್ಕೆ ಭೂಮಿಯು ಹಾಗಾದರೆ ನಾನು ಒಂದು ವರವನ್ನು ಕೇಳುವೆನು—ಜನರು ಭೂಮಿಯನ್ನು ಅಗೆದು ಹಳ್ಳಮಾಡುವರು, ಅದರಿಂದ ನನಗೆ ಅಪಮಾನವಾಗಿರುವುದು. ಆ ರೀತಿ ಆಗದಂತೆ ವರವನ್ನು ಕೊಡಬೇಕು ಎಂದು ಕೇಳಿತು. ಇಂದ್ರನು ಹಾಗೆಯೇ ಆಗಲಿ, ಆ ರೀತಿ ಅಗೆದ ಹಳ್ಳವು ಯಾವ ಪ್ರಯತ್ನವೂ ಇಲ್ಲದೆ ಒಂದು ವರ್ಷದೊಳಗಾಗಿ ತಾನಾಗಿಯೇ ಮುಚ್ಚಿಹೋಗಿ ಭೂಮಿಯು ಮುಂಚಿನಂತೆ ಸಮನಾಗಲಿ ಎಂದು ವರವನ್ನು ಕೊಟ್ಟನು. ಆದ್ದರಿಂದ ಭೂಮಿಯಲ್ಲಿ ಅಗೆದ ಹಳ್ಳ ಮುಂತಾದವು ಒಂದು ವರ್ಷ ಕಳೆಯುವುದರೊಳಗಾಗಿ ತಾನಾಗಿಯೇ ಮುಚ್ಚಿ

ಹೋಗುವುದು. ಇದನ್ನೇ ಭೂಮಿಯು ಕೇಳಿಕೊಂಡ ವರವು. ಈರೀಯಾದ ವರವನ್ನು ಪಡೆದು ಭೂಮಿಯು ಇಂದ್ರನ ಬ್ರಹ್ಮಹತ್ಯಾದೋಷದ ಮೂರನೇ ಒಂದು ಭಾಗವನ್ನು ತೆಗೆದುಕೊಂಡಿತು. ಆ ಲಾಗಾಯಿತು ಭೂಮಿಗೆ ಅದು ಸ್ವಾಭಾವಿಕವಾಯಿತು. ಆದ್ದರಿಂದ ಅಗ್ನಿಹೋತ್ರ ಅಥವಾ ಯಜ್ಞಯಾಗಾದಿಗಳನ್ನು ಮಾಡಿದ ಮತ್ತು ದೇವತೆಗಳಲ್ಲಿ ಶ್ರದ್ಧಾಭಕ್ತಿಗಳನ್ನಿಟ್ಟಿರುವ ಪುರುಷನು ಭೂಮಿಯಲ್ಲಿ ಆಗೆದು ಹಳ್ಳವಾಗಿರುವ ಭಾಗವನ್ನು ಯಜ್ಞಮಾಡಲು ಯಜ್ಞವೇದಿಯನ್ನಾಗಿ ಆರಿಸಿಕೊಳ್ಳಬಾರದು. ಏಕೆಂದರೆ ಆಂತಹ ಆಗೆದಿರುವ ಹಳ್ಳಪ್ರದೇಶವು ಭೂಮಿಯು ತಾನು ವಹಿಸಿಕೊಂಡ ಬ್ರಹ್ಮಹತ್ಯದ ಸಂಕೇತ (ವರ್ಣ) ವಾಗಿರುವುದು.

ಸ ವನಸ್ಪತೀನುಪಾಸೀದದಸ್ಯೈ ಬ್ರಹ್ಮಹತ್ಯಾಯೈ ತೃತೀಯಂ ಪ್ರತಿಗೃಹ್ಣೀತೇತಿ ತೇಽಬ್ರುವನ್-ವರಂ ವೃಣಾಮಹೈ ವೃಕ್ಣಾತ್ಪರಾ ಭವಿಷ್ಯಂತೋ ಮನ್ಯಾಮಹೇ ತತೋ ಮಾ ಪರಾಭೂಮೇತ್ಯಾವ್ರಶ್ಚನಾದ್ವೋ ಭೂಯಾಗ್ಂಸ ಉತ್ತಿಷ್ಠಾನಿತ್ಯಬ್ರವೀತ್ತಸ್ಮಾದಾವ್ರಶ್ಚನಾದ್ವೃಕ್ಷಾಣಾಂ ಭೂಯಾಗ್ಂಸ ಉತ್ತಿಷ್ಠಂತಿ ನಾರೇವೃತಗ್ಂ ಹ್ಯೇಷಾಂ ತೃತೀಯಂ ಬ್ರಹ್ಮಹತ್ಯಾಯೈ ಪ್ರತ್ಯಗೃಹ್ಣನ್ತ್ಸ ನಿರ್ಯಾಸೋಽಭವತ್ತಸ್ಮಾನ್ನಿರ್ಯಾಸಸ್ಯ ನಾಶ್ಯಂ ಬ್ರಹ್ಮಹತ್ಯಾಯೈ ಹ್ಯೇಷ ವರ್ಣೋಽಥೋ ಖಲು ಯ ಏವ ಲೋಹಿತೋ ಯೋ ನಾವ್ರಶ್ಚನಾನ್ನಿರ್ಯೇಷತಿ ತಸ್ಯ ನಾಶ್ಯಂ ಕಾಮಮನ್ಯಸ್ಯ ॥

ಬಳಿಕ ಇಂದ್ರನು ವೃಕ್ಷಗಳ ಸಮೀಪಕ್ಕೆ ಹೋಗಿ—ಎಲೈ ವೃಕ್ಷಗಳೇ, ನನ್ನ ಬ್ರಹ್ಮಹತ್ಯಾದೋಷದಲ್ಲಿ ಮೂರನೇ ಒಂದು ಭಾಗವನ್ನು ನೀವು ತೆಗೆದುಕೊಳ್ಳಿ ಎನ್ನಲು, ಅದಕ್ಕೆ ವೃಕ್ಷಗಳು—ಹಾಗಾದರೆ ನಾವು ಒಂದು ವರವನ್ನು ಅಪೇಕ್ಷಿಸುವೆವು. ಜನರು ವೃಕ್ಷದ ಕೊಂಬೆ ಮೊದಲಾದುವನ್ನು ಕತ್ತರಿಸುವರು. ಆದರಿಂದ ನಮಗೆ ಅಭಿಭವವಾಗುವುದು. ಅಂತಾಗದಂತೆ ವರವನ್ನು ಕೊಡಬೇಕೆನ್ನಲು, ಇಂದ್ರನು, ಒಳ್ಳೆದು, ಹಾಗೆ ಕತ್ತರಿಸಿದಾಗ ಭಾಗದ ಸುತ್ತಲೂ ಅಧಿಕವಾದ ಕೊನೆಗಳು ಚಿಗುರುವಂತಾಗಲಿ ಎಂದು ವರವನ್ನು ಕೊಟ್ಟನು. ಆದ್ದರಿಂದ ವೃಕ್ಷಗಳು ಕೇಳಿಕೊಂಡ ವರದಂತೆ ಕೊನೆಗಳನ್ನು ಕತ್ತರಿಸಿದಾಗ ಆ ಭಾಗದಲ್ಲಿ ಹೆಚ್ಚು ಕೊನೆಗಳು ಚಿಗುರುವುವು. ಒಳಿಕ ವೃಕ್ಷಗಳು ತಮ್ಮ ಮಾತಿನಂತೆ ಇಂದ್ರನ ಬ್ರಹ್ಮಹತ್ಯೆಯಲ್ಲಿ ಮೂರನೇ ಒಂಬು ಭಾಗವನ್ನು ಸ್ವೀಕರಿಸಿದವು. ಮರವನ್ನು ಕಡಿದಾಗ ಹೊರಡುವ ರಸವೇ ಈ ಬ್ರಹ್ಮಹತ್ಯೆಯ ಚಿಹ್ನೆಯು. ಆದ್ದರಿಂದ ಈ ಮರ ಕಡಿಯುವುದರಿಂದ ಹೊರಹೊರಡುವ ರಸವನ್ನು (ಮದ್ಯ)ಯಾರೂ ಕುಡಿಯಬಾರದು. ಏಕೆಂದರೆ ಅದು ಬ್ರಹ್ಮಹತ್ಯೆಯ ವರ್ಣವು ಅಥವಾ ವೃಕ್ಷದ ಕತ್ತರಿಸುವಿಕೆಯಿಂದ ಹೊರಡುವ ರಸವು ಕೆಂಪಾಗಿ ಇದ್ದಲ್ಲಿ ಅದನ್ನು ಕುಡಿಯಬಾರದು. ಹಾಗಿಲ್ಲದಿದ್ದರೆ ಇಷ್ಟಪಟ್ಟರೆ ಕುಡಿಯಬಹುದು.

ಸ ಸ್ತ್ರೀಷಗ್ಂಸಾದಮುಪಾಸೀದದಸ್ಯೈ ಬ್ರಹ್ಮತ್ಯಾಯೈ ತೃತೀಯಂ ಪ್ರತಿಗೃಹ್ಣೀತೇತಿ ತಾ ಅಬ್ರುವನ್ವರಂ ವೃಣಾಮಹಾ ಯತ್ಪ್ರಿಯಾತ್ ಪ್ರಜಾಂ ವಿಂದಾಮಹೈ ಕಾಮಮಾವಿಜನಿತೋಃ ಸಂಭವಾನೇತಿ ತಸ್ಮಾದೃತ್ವಿಯಾತ್ ಸ್ತ್ರಿಯಃ ಪ್ರಜಾಂ ವಿಂದಂತೇ ಕಾಮಮಾ ವಿಜನಿತೋಃ ಸಂಭವಂತಿ ವಾರೇವೃತಗ್ಂ ಹ್ಯಾಸಾಂ ತೃತೀಯಂ ಬ್ರಹ್ಮಹತ್ಯಾಯೈ ಪ್ರತ್ಯಗೃಹ್ಣನ್ತ್ಸ ಮಲವದ್ವಾಸಾ ಅಭವತ್ ॥

ಅನಂತರ ಇಂದ್ರನು ಸ್ತ್ರೀಯರ ಗುಂಪಿಗೆ ಹೋಗಿ ಅವರನ್ನು ಕುರಿತು—ಎಲೌ ಸ್ತ್ರೀಯರೇ, ನನ್ನ ಬ್ರಹ್ಮಹತ್ಯಾದೋಷದಲ್ಲಿ ಉಳಿದಿರುವ ಮೂರನೇ ಒಂದು ಭಾಗವನ್ನು ನೀವು ತೆಗೆದುಕೊಳ್ಳಿ ಎನಲು ಅದಕ್ಕೆ ಸ್ತ್ರೀಯರು, ಹಾಗಾದರೆ ನಾವು

ಒಂದು ವರವನ್ನ ಪೇಕ್ಷಿಸುವೆವು—ನಾವು ಮುಟ್ಟಾದನಂತರ (ಋತುಸ್ನಾನಾನಂತರ) ನಮಗೆ ಮಕ್ಕಳಾಗಬೇಕು ಮತ್ತು ಪ್ರಸವವಾಗುವವರೆಗೂ (ಹೆರಿಗೆಯಾಗುವವರೆಗೂ) ನಾವು ಇಷ್ಟಪಟ್ಟಲ್ಲಿ ಸಂಭೋಗದಿಂದ ಕಾಮತೃಪ್ತಿಯನ್ನು ಹೊಂದುವಂತಾಗಬೇಕು ಎನ್ನಲು, ಇಂದ್ರನು ಹಾಗೇಯೇ ಆಗಲೆಂದನು. ಆದುದರಿಂದ ಸ್ತ್ರೀಯರು ಮುಟ್ಟಾದನಂತರ ಸಂತಾನವನ್ನು ಪಡೆಯುವರು ಮತ್ತು ಹೆರಿಗೆಯಾಗುವವರೆಗೂ ತಮ್ಮಿಷ್ಟಬಂದಾಗ ಸಂಭೋಗಿಸುವರು. ಏಕೆಂದರೆ ಇದನ್ನೇ ಅವರು ಕೇಳಿಕೊಂಡಿರುವ ವರವು. ಅನಂತರ ಆ ಸ್ತ್ರೀಯರು ಇಂದ್ರನ ಬ್ರಹ್ಮಹತ್ಯಾದೋಷದ ಮೂರನೇ ಒಂದು ಭಾಗವನ್ನು ವಹಿಸಿಕೊಂಡರು. ಸ್ತ್ರೀಯರು ಮುಟ್ಟಾದಾಗ ದ್ರವಿಸುವ ರಜಸ್ಸೇ ಈ ಬ್ರಹ್ಮಹತ್ಯದ ಚಿಹ್ನೆಯಾಗಿರುವುದು. ರಜಸ್ಸು ದ್ರವಿಸುವ ಕಾಲದಲ್ಲಿ (ಮುಟ್ಟಾದಾಗ) ಸ್ತ್ರೀಯರು ಅಪವಿತ್ರರು (ಅಶುದ್ಧರು).

ತಸ್ಮಾನ್ಮಲವದ್ವಾಸಸಾ ನ ಸಂವದೇತ ನ ಸಹಾಸೀತ ನಾಸ್ಯಾ ಅನ್ನಮದ್ಯಾದ್ಬ್ರಹ್ಮಹತ್ಯಾಯೈ ಹ್ಯೇಷಾ ವರ್ಣಂ ಪ್ರತಿಮುಚ್ಯಾಸ್ತೇಽಥೋ ಖಲ್ವಾಹುರಭ್ಯಂಜನಂ ವಾವ ಸ್ತ್ರಿಯಾ ಅನ್ನಮಭ್ಯಂಜನಮೇವ ನ ಪ್ರತಿಗೃಹ್ಯಂ ಕಾಮಮನ್ಯದಿತಿ ॥

ಆದುದರಿಂದ ಮುಟ್ಟಾದಾಗ ಸ್ತ್ರೀಯರೊಡನೆ ಮಾತನಾಡಬಾರದು. ಅವಳು ಕೊಟ್ಟ ಅಥವಾ ಮುಟ್ಟಿದ ಆಹಾರವನ್ನು ತಿನ್ನಬಾರದು. ಏಕೆಂದರೆ ಬಹ್ಮಹತ್ಯಾದೋಷದ ಚಿಹ್ನೆಯಾದ ಅಶುದ್ಧವಾದ ರಜೋದ್ರವವನ್ನು ಸ್ರವಿಸುತ್ತಿರುವಳು. ಮುಟ್ಟಾಗಿರುವ ಕಾಲದಲ್ಲಿ ತೈಲಾಭ್ಯಂಜನಾದಿಗಳನ್ನು ಮಾಡಬಾರದು ಅಥವಾ ಆ ಕಾಲದಲ್ಲಿ ಅವಳಿಂದ (ಅವಳು ಮುಟ್ಟಿದ) ಅನ್ನಾದಿಗಳನ್ನು ಯಾರೂ ಸ್ವೀಕರಿಸಬಾರದು.

ಯಾಂ ಮಲವದ್ವಾಸಸಗ್ಂ ಸಂಭವಂತಿ ಯಸ್ತತೋ ಜಾಯತೇ ಸೋಽಭಿಶಸ್ತೋ ಯಾಮರಣ್ಯೇ ತಸ್ಯೈ ಸ್ತೇನೋ ಯಾಂ ಪರಾಚೀಂ ತಸ್ಯೈ ಹ್ರೀತಮುಖ್ಯಪಗಲ್ಭೋ ಯಾ ಸ್ನಾತಿ ತಸ್ಯಾ ಅಪ್ಸು ಮಾರುಕೋ ಯಾಭ್ಯಂಕ್ತೇ ತಸ್ಯೈ ದುಶ್ಚರ್ಮಾ ಯಾ ಪ್ರಲಿಖತೇ ತಸ್ಯೈ ಖಲತಿರಪಮಾರೀ ಯಾಂಕ್ತೇ ತಸ್ಯೈ ಕಾಣೋ ಯಾ ದತೋ ಧಾವತೇ ತಸ್ಯೈ ಶ್ಯಾವದನ್ ಯಾ ನಖಾನಿ ನಿಕೃಂತತೇ ತಸ್ಯೈ ಕುನಖೀ ಯಾ ಕೃಣತ್ತಿ ತಸ್ಯೈ ಕ್ಲೀಬೋ ಯಾ ರಜ್ಜುಗ್ಂ ಸೃಜತಿ ತಸ್ಯಾ ಉದ್ಬಂಧುಕೋ ಯಾ ಪರ್ಣೇನ ಪಿಬತಿ ತಸ್ಯಾ ಉನ್ಮಾದುಕೋ ಯಾ ಖರ್ವೇಣ ಪಿಬತಿ ತಸ್ಯೈ ಖರ್ವಸ್ತಿಸ್ಯೋ ರಾತ್ರೀರ್ವ್ರತಂ ಚರೇದಂಜಲಿನಾ ವಾ ಪಿಬೇದಖರ್ವೇಣ ವಾ ಪಾತ್ರೇಣ ಪ್ರಜಾಯೈ ಗೋಪೀಥಾಯ ॥

(ತೈ. ಸಂ. ೨-೫-೧-೧ ರಿಂದ ೭)

ರಜಸ್ವಲೆಯಾಗಿರುವ ಕಾಲದಲ್ಲಿ (ಮುಟ್ಟಾಗಿರುವಾಗ) ಸಂಭೋಗ ಮಾಡಿದರೆ ಅದರಿಂದ ಹುಟ್ಟುವ ಪುತ್ರನು ಶಾಪಗ್ರಸ್ತನಾಗುವನು; ರಜಸ್ವಲೆಯಾದ ಸ್ತ್ರೀಯು ಅರಣ್ಯದಲ್ಲಿ ಸಂಭೋಗಿಸಿದರೆ ಅವಳಿಗೆ ಹುಟ್ಟುವ ಪುತ್ರನು ಕಳ್ಳನಾಗುವನು; ಮುಖವನ್ನು ಮುಚ್ಚಿಕೊಂಡು ಅಥವಾ ಬೇರೆ ಕಡೆಗೆ ತಿರುಗಿಸಿಕೊಂಡು ಸಂಭೋಗ ಮಾಡಿದರೆ ಹುಟ್ಟುವ ಮಗನು ನಾಚಿಕೆಯಿಂದ ಯಾರೊಡನೆಯೂ ಸರಿಯಾಗಿ ಮಾತನಾಡಲಾರದ ಮುಜೇಡಿಯಾಗುವನು; ಮುಟ್ಟಾದ ಕಾಲದಲ್ಲಿ ಸ್ನಾನ ಮಾಡುವ ಸ್ತ್ರೀಗೆ ಹುಟ್ಟುವ ಮಗನು ನೀರಿನಲ್ಲಿ ಮುಳುಗಿ ಸಾಯುವನು; ಅಭ್ಯಂಜನ ಮಾಡಿಕೊಳ್ಳುವ ಸ್ತ್ರೀಯ ಪುತ್ರನು ಚರ್ಮರೋಗದಿಂದ (ಕುಷ್ಠ, ತೊನ್ನು) ಪೀಡಿತನಾಗುವನು; ತಲೆಯನ್ನು ಬಾಚಿಕೊಳ್ಳುವ ಸ್ತ್ರೀಗೆ ಹುಟ್ಟುವ ಮಗನು ತಲೆಯಲ್ಲಿ ಕೂದಲಿಲ್ಲದ ಬೋಳನಾಗುವನು ಮತ್ತು ಶಕ್ತಿಹೀನನಾಗುವನು; ಕಣ್ಣಿಗೆ ಕಪ್ಪು ಹಚ್ಚಿಕೊಳ್ಳುವ ಸ್ತ್ರೀಗೆ ಹುಟ್ಟುವ ಪುತ್ರನಿಗೆ ಕುರುಡಾಗುವುದು; ಆ ಕಾಲದಲ್ಲಿ ಹಲ್ಲನ್ನುಜ್ಜಿಕೊಳ್ಳುವ ಸ್ತ್ರೀಗೆ ಹುಟ್ಟುವ

ಪುತ್ರನಿಗೆ ಕೊಳಕಾದ ಹಲ್ಲುಗಳಿರುವುವು; ಉಗುರನ್ನು ಕತ್ತರಿಸಿಕೊಳ್ಳುವ ಸ್ತ್ರೀಗೆ ಹುಟ್ಟುವ ಮಗನಿಗೆ ನೋಡುವುದಕ್ಕೆ ವಿಕಾರವಾದ ಕೆಟ್ಟ ಉಗುರುಗಳಿರುವುವು; ಆ ಕಾಲದಲ್ಲಿ (ಚಾಪೆ ಮೊದಲಾದುವನ್ನು) ಹೆಣೆಯುವ ಸ್ತ್ರೀಗೆ ಹುಟ್ಟುವ ಪುತ್ರನು ನಪುಂಸಕನಾಗುವನು; ಹಗ್ಗವನ್ನು ಹೊಸೆಯುವ ಸ್ತ್ರೀಗೆ ಹುಟ್ಟುವ ಪುತ್ರನು ಆತ್ಮಹತ್ಯೆಯಿಂದ ಮೃತನಾಗುವನು; (ಪದ್ಮಪುತ್ರಾದಿ) ಎಲೆಗಳಿಂದ ನೀರು ಕುಡಿಯುವ ಸ್ತ್ರೀಗೆ ಅಂಗಹೀನನಾದ ಅಥವಾ ಅಂಗವಿಕಾರವುಳ್ಳ ಪುತ್ರನಾಗುವನು. ಆದುದರಿಂದ ಸ್ತ್ರೀಯರು ಮುಟ್ಟಾಗಿರುವಾಗ ಮೂರು ರಾತ್ರಿಗಳು ಕಳೆಯುವವರೆಗೆ ಬಹಳ ಕಟ್ಟುನಿಟ್ಟಾಗಿ (ವ್ರತವನ್ನು) ಪಾಲಿಸಬೇಕು. ಒಳ್ಳೆಯ ಸಂತತಿಪ್ರಾಪ್ತಿಗಾಗಿ ಸ್ತ್ರೀಯರು ಆಕಾಲದಲ್ಲಿ ನೀರು ಕುಡಿಯುವಾಗ ಬೊಗಸೆಯಿಂದಾಗಲೀ ಅಥವಾ ಮುರಿಯದಿರುವ ಚೆನ್ನಾಗಿರುವ ಪಾತ್ರೆಯಿಂದಲೇ ನೀರು ಕುಡಿಯಬೇಕು.

ಮೇಲೆ ಹೇಳಿದ ಆಂಶಗಳಲ್ಲಿ ಇಂದ್ರನು ವಿಶ್ವರೂಪನನ್ನು ಸಂಹರಿಸಿದ ವಿಷಯವೂ ಅವನ ಸಂಹಾರದಿಂದ ಇಂದ್ರನಿಗೆ ಪ್ರಾಪ್ತಿಯಾದ ಬ್ರಹ್ಮಹತ್ಯಾದೋಷವೂ, ಆ ದೋಷಪರಿಹಾರಕ್ಕಾಗಿ ಇಂದ್ರನು ಆಚರಿಸಿದ ಕೃತ್ಯಗಳೂ ಅದರ ಪರಿಣಾಮವಾಗಿ ಸ್ತ್ರೀಯರು ರಜಸ್ವಲೆಯಾಗಿರುವಾಗ ನಿಯಮವಾಗಿರಬೇಕೆಂಬ ವಿಷಯವೂ ಉಕ್ತವಾಗಿದೆ ಪ್ರಕೃತಸಂದರ್ಭದಲ್ಲಿ ವಿಶ್ವರೂಪನ ವಿವರ ಮಾತ್ರ ಗ್ರಾಹ್ಯವಾಗಿದ್ದರೂ ಅದಕ್ಕೆ ಸಂಬಂಧಿಸಿದ ಮತ್ತು ಅದೇ ಅನುವಾಕದಲ್ಲಿರುವ ಇತರ ವಿಷಯಗಳ ಪ್ರಸ್ತಾಪವನ್ನೂ ಇಲ್ಲಿ ಮಾಡಲಾಗಿದೆ. ಏಕೆಂದರೆ ಪುರಾಣಾದಿಗಳಲ್ಲಿ ಇಂದ್ರನಿಗೆ ವೃತ್ರವಧೆಯಿಂದ ಬ್ರಹ್ಮಹತ್ಯಾದೋಷ ಪ್ರಾಪ್ತವಾಯಿತೆಂದೂ, ಅದರ ಪರಿಹಾರಕ್ಕಾಗಿ ಇಂದ್ರನು ಮೇಲೆ ಹೇಳಿದಂತೆ ಪ್ರಯತ್ನಪಟ್ಟನೆಂದೂ ಹೇಳಿರುವುದರಿಂದ ವೇದ ಮತ್ತು ಪುರಾಣಾದಿಗಳ ವಿವರಗಳಿಗೆ ಇರುವ ವ್ಯತ್ಯಾಸವನ್ನು ತೋರಿಸುವುದಕ್ಕಾಗಿ ಈ ವಿವರಣೆಯು ಅವಶ್ಯಕವಾಯಿತು.

ಇಂದ್ರವೈಕುಂಠನ ವಿಷಯ

ಜಗೃಭ್ಮಾ ತೇ ಎಂಬ ೪೭ ನೇ ಸೂಕ್ತದ ಋಷಿಯಾದ ಸಪ್ತಗು ಎಂಬ ಋಷಿಯ ವಿಷಯದಲ್ಲಿಯೂ ಇದರ ಮುಂದಿನ ಸೂಕ್ತಗಳಾದ ಅಹಂ ಭುವಂ (೪೮) ಅಹಂ ದಾಂ (೪೯) ಎಂಬ ಸೂಕ್ತಗಳ ಋಷಿಯಾದ ವೈಕುಂಠ ಇಂದ್ರನ ವಿಷಯವಾಗಿಯೂ ಬೃಹದ್ದೇವತಾ ಎಂಬ ಗ್ರಂಥದಲ್ಲಿ ಈರೀತಿ ಹೇಳಿದೆ—

ಪ್ರಾಜಾಪತ್ಯಾಸುರೀ ತ್ವಾಸೀದ್ವಿಕುಂಠಾ ನಾಮು ನಾಮತಃ ।
ಸೇಚ್ಛಂತೀಂದ್ರಸಮಂ ಪುತ್ರಂ ತೇಪೇ೨ಥ ಸುಮಹತ್ತಪಃ ॥

ಸಾ ಪ್ರಜಾಪತಿತಃ ಕಾಮಾಂಲ್ಲೇಭೇ೨ಥ ವಿವಿಧಾನ್ವರಾನ್ ।
ತಸ್ಯಾಂ ಚೇಂದ್ರಃ ಸ್ವಯಂ ಜಜ್ಞೇ ಜಿಘಾಂಸುರ್ದೈತ್ಯದಾನವಾನ್ ॥

ಪೂರ್ವದಲ್ಲಿ ಪ್ರಜಾಪತಿಯ ಪುತ್ರಿಯಾದ ಓರ್ವ ಅಸುರಸ್ತ್ರೀ ಇದ್ದಳು. ಅವಳ ಹೆಸರು ವಿಕುಂಠಾ ಎಂದು. ಒಂದಾನೊಂದು ಕಾಲದಲ್ಲಿ ಶೌರ್ಯವರಾಕ್ರಮಾದಿಗಳಲ್ಲಿ ಇಂದ್ರನಿಗೆ ಸಮನಾದ ಪುತ್ರನು ತನ್ನಲ್ಲಿ ಜನಿಸಬೇಕೆಂಬ ಬಯಕೆಯು ಅವಳಿಗುಂಟಾಯಿತು. ಆದ್ದರಿಂದ ಅವಳು ಒಹಳ ಘೋರವಾದ ತಪಸ್ಸನ್ನು ಮಾಡಿ ಪ್ರಜಾಪತಿಯಿಂದ ತನಗೆ ಬೇಕಾದ ವರಗಳನ್ನು ಪಡೆದಳು. ಇಂದ್ರನು ದೈತ್ಯದಾನವರನ್ನು ಸಂಹಾರಮಾಡಬೇಕೆಂದು ಇಚ್ಛಿಸಿ ಆ ವಿಕುಂಠಾ ಎಂಬ ಸ್ತ್ರೀಯಲ್ಲೇ ಅವಳ ಪುತ್ರನಾಗಿ ಜನಿಸಿದನು.

ಏಕದಾ ದಾನವೈಃ ಸಾರ್ಧಂ ಸಮರೇ ಸಮಸಜ್ಯತ ।
ಜಘಾನ ತೇಷಾಂ ನವತೀರ್ನವ ಸಪ್ತ ಚ ಸಪ್ತಕಾನ್ ॥

ಭಿತ್ವಾ ಸ್ವಬಾಹುವೀರ್ಯೇಣ ಹೈಮರೌಷ್ಯಾಯಸೀಃ ಪುರೀಃ ।
ಹತ್ವಾ ಸರ್ವಾನ್ಯಥಾಸ್ಥಾನಂ ಪೃಥಿವ್ಯಾದಿವ್ಯವಸ್ಥಿತಾನ್ ॥

ಪೃಥಿವ್ಯಾಂ ಕಾಲಕೇಯಾಂಶ್ಚ ಪೌಲೋಮಾಂಶ್ಚೈವ ಧನ್ವಿನಃ ।
ತಾಂಶ್ಚ ವ್ಯುತ್ಸಾದಯಾಮಾಸ ಪ್ರಹ್ಲಾದತನಯಾನ್ದಿವಿ ॥

ಇಂದ್ರನು ಒಂದು ಸಂದರ್ಭದಲ್ಲಿ ದಾನವರೊಡನೆ ಯುದ್ಧಮಾಡುತ್ತಿರುವಾಗ ಅವರ ೯೯ ಮತ್ತು ೭೭ ನಾಯಕರನ್ನು ಸಂಹಾರಮಾಡಿದನು. ಅವರು ಭೂಮಿ, ಅಂತರಿಕ್ಷ, ಸ್ವರ್ಗಗಳಲ್ಲಿ ಚಿನ್ನದಿಂದಲೂ, ಬೆಳ್ಳಿಯಿಂದಲೂ, ಕಬ್ಬಿಣದಿಂದಲೂ ಭದ್ರವಾದ ಕೋಟೆಗಳನ್ನು ಕಟ್ಟಿಕೊಂಡು ಅಲ್ಲಿ ವಾಸಮಾಡುತ್ತಿದ್ದರು. ಇಂದ್ರನು ತನ್ನ ಸ್ವಸಾಮರ್ಥ್ಯದಿಂದಲೇ ಅವುಗಳನ್ನೆಲ್ಲಾ ನಾಶಮಾಡಿ ಭೂಮಿಯ ಮೇಲಿದ್ದ ಕಾಲಕೇಯರು, ಪುಲೋಮವಂಶದವರು ಪ್ರಹ್ಲಾದನ ವಂಶದ ಅಸುರರು ಮೊದಲಾದವರನ್ನು ನಾಶಮಾಡಿದನು.

ರಾಜ್ಯಂ ಪ್ರಾಪ್ಯ ಸ ದೈತ್ಯೇಷು ಸ್ವೇನ ವೀರ್ಯೇಣ ದರ್ಪಿತಃ ।
ದೇವಾನ್ಪಾಧಿತುಮಾರೇಭೇ ಮೋಹಿತೋಽಸುರಮಾಯಯಾ ॥

ಬಾಧ್ಯಮಾನಾಸ್ತು ತೇನಾಪಿ ಅಸುರೇಣಾಮಿತೌಜಸಾ ।
ಉಪಾಧಾವನ್ನೃಷಿಶ್ರೇಷ್ಠಂ ತತ್ಪ್ರಬೋಧಾಯ ಸಪ್ತಗುಂ ॥

ಋಷಿಸ್ತು ಸಪ್ತಗುರ್ನಾಮ ತಸ್ಯಾಸೀತ್ಸುಪ್ರಿಯಃ ಸಖಾ ।
ಸ ಚೈನಮಭಿತುಷ್ಟಾವ ಜಗೃಭ್ಮೇತಿ ಕರೇ ಸ್ಪೃಶನ್ ॥

ಈ ರೀತಿ ದೈತ್ಯರನ್ನು ಸಂಹಾರ ಮಾಡಿದ ಏಕುಂಠಪುತ್ರನಾದ ಇಂದ್ರನು ಅಸುರಸ್ತ್ರೀಯಲ್ಲಿ ಹುಟ್ಟಿದ ಕಾರಣ ಮೋಹ ಪರವಶನಾಗಿ ತನ್ನ ಶಕ್ತಿಸಾಮರ್ಥ್ಯಗಳಿಂದ ರಾಜ್ಯವನ್ನು ಗಳಿಸಿ ಮೈಮರೆತು ಅಹಂಕಾರದಿಂದ ಕೂಡಿ ದೇವತೆಗಳನ್ನು ಹಿಂಸಿಸುವುದಕ್ಕೆ ಪ್ರಾರಂಭ ಮಾಡಿದನು. ದೈತ್ಯರೂಪನಾದ ಇಂದ್ರನು ತನ್ನ ಅಪಾರವಾದ ಪರಾಕ್ರಮದಿಂದ ಬೀಗಿ ಮೆರೆಯುತ್ತಾ ದೇವತೆಗಳನ್ನು ಹಿಂಸಿಸುತ್ತಾ ಇರುವಾಗ ಅವನ ಹಿಂಸೆಯನ್ನು ಸಹಿಸಲಾರದೆ ದೇವತೆಗಳು ಸಪ್ತಗು ಎಂಬ ಋಷಿಯ ಬಳಿಗೆ ಬಂದು ಅವನ ಮರೆಹೊಕ್ಕರು. ಆ ಋಷಿಯು ಇಂದ್ರನ ಪರಮಪ್ರಿಯ ಸ್ನೇಹಿತನಾಗಿದ್ದನು. ಆಗ ಸಪ್ತಗು ಋಷಿಯು ಇಂದ್ರನ ಕೈಯನ್ನು ತನ್ನ ಕೈಯಿಂದ ಹಿಡಿದುಕೊಂಡು **ಜಗೃಭ್ಮಾ ತೇ** ಎಂಬ ಸೂಕ್ತದಿಂದ (೪೭ನೇ ಸೂಕ್ತ) ಇಂದ್ರನನ್ನು ಸ್ತುತಿಸಿದನು.

ತತಃ ಸ ಬುಧ್ವಾ ಚಾತ್ಮಾನಂ ಸಪ್ತಗುಸ್ತುತಿಹರ್ಷಿತಃ ।
ಆತ್ಮಾನಮೇವ ತುಷ್ಟಾವ ಅಹಂ ಭುವಮಿತಿ ತ್ರಿಭಿಃ ॥

ಕೀರ್ತಯನ್ ಸ್ವಾನಿ ಕರ್ಮಾಣಿ ಯಾನಿ ಸ್ಮ ಕೃತವಾನ್ಪುರಾ ।
ಯಥಾಕರೋಚ್ಚ ನೈದೇಹಂ ವ್ಯಂಸಂ ಸೋಮಪತಿಂ ನೃಪಂ ॥

ವಸಿಷ್ಠಶಾಪಾದಭವದ್ವೈದೋಹೋ ನೃಪತಿಃ ಪುರಾ ।
ಇಂದ್ರಪ್ರಸಾದಾದೇಜೇ ಚ ಸತ್ರೈಃ ಸಾರಸ್ವತಾದಿಭಿಃ ॥

ಪ್ರಭೂತಾಂ ಶಕ್ತಿಮತ್ತಾಂ ಚ ಶತ್ರೂಣಾಮಪ್ಯಪಾಕ್ರಿಯಾಂ ।
ನೃಷು ಸರ್ವೇಷು ಚೈಶ್ವರ್ಯಂ ಪ್ರಭುತ್ವಂ ಭುವನೇಷು ಚ ॥

ಸಪ್ತಗು ಋಷಿಯಿಂದ ಸ್ತುತನಾದ ಇಂದ್ರವೈಕುಂಠನಿಗೆ ತನ್ನ ಪೂರ್ವಸ್ಮರಣೆಯುಂಟಾಗಿ ತಾನು ಯಾರು ಎಂಬ ಅರಿವುಂಟಾಯಿತು. ಆನಂತರ ಆ ವೈಕುಂಠ ಇಂದ್ರನು ತಾನು ಹಿಂದೆ ಮಾಡಿದ ಅನೇಕ ಸಾಹಸಕಾರ್ಯಗಳನ್ನು (೪೮-೫೦) ಅಹಂ ಭುವಂ ಎಂದು ಮೊದಲಾದ ಮೂರು ಸೂಕ್ತಗಳಲ್ಲಿ ಪ್ರಸಂಸೆ ಮಾಡಿಕೊಂಡಿದ್ದಾನೆ. ಹಿಂದೆ ವಿದೇಹ ದೇಶದ ರಾಜನಾದ ವ್ಯಂಸನನ್ನು ವಸಿಷ್ಠರು ಶಾಪದಿಂದ ವಿಮುಕ್ತನನ್ನಾಗಿ ಮಾಡಿದುದನ್ನು ಆ ರಾಜನು ಇಂದ್ರನ ಅನುಗ್ರಹದಿಂದ ಸರಸ್ವತೀನದೀತೀರದಲ್ಲಿ ಸತ್ರಯಾಗವನ್ನು ಮಾಡಿ ಶತ್ರುಗಳನ್ನು ಜಯಿಸಿ ಸಾರ್ವಭೌಮತ್ವವನ್ನು ಸ್ಥಾಪಿಸಿದ ವಿಷಯವೂ ಉಕ್ತವಾಗಿದೆ.

ಸಾಯಣಭಾಷ್ಯಂ

ಅಹಂ ದಾಮಿತ್ಯೇಕಾದಶರ್ಚಂ ಸಪ್ತಮಂ ಸೂಕ್ತಂ । ವೈಕುಂಠ ಏವರ್ಷಿರ್ದೇವತಾ ಚ । ದ್ವಿತೀಯೈಕಾದಶ್ಯೌ ತ್ರಿಷ್ಟುಭೌ । ಶಿಷ್ಟಾ ಜಗತ್ಯಃ । ಅನುಕ್ರಾಂತಂ ಚ । ಅಹಂ ದಾಮಂತ್ಯೋಪಾದ್ಯೇ ಚೇತಿ ॥ ದ್ವಿತೀಯೈ ರಾತ್ರಿಪರ್ಯಾಯೇ ಮೈತ್ರಾವರುಣಸ್ಯೇದಂ ಸೂಕ್ತಂ । ಸೂತ್ರಿತಂ ಚ। ಅಹಂ ದಾಂ ಪಾತಾ ಸುತಮಿಂದ್ರೋ ಅಸ್ತು ಸೋಮಂ । ಆ-೬-೪ । ಇತಿ ॥

ಅನುವಾದವು—**ಅಹಂ ದಾಂ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವೈಕುಂಠ ಇಂದ್ರನೇ ಋಷಿಯು; ದೇವತೆಯೂ ಅವನೇ. ಈ ಸೂಕ್ತದ ಎರಡು ಮತ್ತು ಹನ್ನೊಂದನೆಯ ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು; ಉಳಿದ ಋಕ್ಕುಗಳು ಜಗತೀ ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಅಹಂ ದಾಮಂತ್ಯೋಪಾದ್ಯೇ ಚ** ಎಂದು ಹೇಳಿರುವುದು. ಎರಡನೇ ರಾತ್ರಿ ಪರ್ಯಾಯದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಹರಿಸುನ ಶಸ್ತ್ರಮಂತ್ರಗಳಿಗಾಗಿ **ಈ** ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ಅಹಂ ದಾಂ ಪಾತಾ ಸುತಮಿಂದ್ರೋ ಅಸ್ತು ಸೋಮಂ** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು.

ಸೂಕ್ತ—೪೮

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೪೯ ॥
ಅಷ್ಟಕ—೬ ॥ ಅಧ್ಯಾಯ—೧ ॥ ವರ್ಗ—೭, ೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ಇಂದ್ರೋ ವೈಕುಂಠಃ ॥
ದೇವತಾ—ಇಂದ್ರೋ ವೈಕುಂಠಃ ॥
ಛಂದಃ—೧, ೩-೧೦. ಜಗತೀ । ೨, ೧೧. ತ್ರಿಷ್ಟುಪ್ ॥

ಸಂಹಿತಾಪಾಠಃ

ಅಹಂ ದಾಂ ಗೃಣತೇ ಪೂರ್ವ್ಯಂ ವಸ್ವಹಂ ಬ್ರಹ್ಮ ಕೃಣವಂ ಮಹ್ಯಂ ವರ್ಧನಂ।

ಅಹಂ ಭುವಂ ಯಜಮಾನಸ್ಯ ಚೋದಿತಾಯಜ್ವನಃ ಸಾಕ್ಷಿ ವಿಶ್ವಸ್ಮಿನ್ಭರೇ ॥

ಪದಪಾಠಃ

ಅಹಂ । ದಾಂ । ಗೃಣತೇ । ಪೂರ್ವ್ಯಂ । ವಸು । ಅಹಂ । ಬ್ರಹ್ಮ । ಕೃಣವಂ । ಮಹ್ಯಂ । ವರ್ಧನಂ ।

ಅಹಂ । ಭುವಂ । ಯಜಮಾನಸ್ಯ । ಚೋದಿತಾ । ಅಯಜ್ವನಃ । ಸಾಕ್ಷಿ । ವಿಶ್ವಸ್ಮಿನ್ । ಭರೇ ॥ ೧ ॥

ಸಾಯಣಭಾಷ್ಯಂ

ಅಹಮಿಂದ್ರೋ ಗೃಣತೇ ಸ್ತುವತೇ ಪೂರ್ವ್ಯಂ ಮುಖ್ಯಂ ವಸು ಧನಂ ದಾಂ । ಅದಾಂ । ಅಹಮೇವ ಬ್ರಹ್ಮ ಪರಿವೃಢಂ ಕರ್ಮ ಸ್ತುತಿಲಕ್ಷಣಂ ಮಹ್ಯಂ ವರ್ಧನಂ ಕೃಣವಂ । ಕರೋಮಿ । ಸ್ತೋತುಃ ಸಂಬಂಧಿ ಸ್ತೋತ್ರಂ ತಸ್ಮೈ ಧನಂ ಪ್ರಯಚ್ಛನ್ ಮಹನ್ಮೇವ ವರ್ಧನಂ ಕರೋಮೀತ್ಯರ್ಥಃ। ತಥಾಹಂ ಯಾಜಮಾನಸ್ಯ ಮಾಮುದ್ದಿಶ್ಯ ಯಷ್ಟುರ್ಧನಸ್ಯ ಚೋದಿತಾ ಪ್ರೇರಕೋ ಭುವಂ । ಭವಾಮಿ । ಅಯಜ್ವನೋಽಯಷ್ಟುಃ । ಅಯಷ್ಟಾರಮಿತ್ಯರ್ಥಃ । ತಂ ವಿಶ್ವಸ್ಮಿನ್ಭರೇ ಸರ್ವಸ್ಮಿನ್ನಪಿ ಸಂಗ್ರಾಮೇ ಸಾಕ್ಷಿ । ಅಭಿಭವಾಮಿ ॥

ಪ್ರತಿಪದಾರ್ಥ

ಅಹಂ—ಇಂದ್ರನಾದ ನಾನು / **ಗೃಣತೇ**—ನನ್ನನ್ನು ಸ್ತೋತ್ರಮಾಡುವ ಪುರುಷನಿಗೆ । **ಪೂರ್ವ್ಯಂ**—ಬಹಳವಾದ । **ವಸು**—ಧನವನ್ನು । **ದಾಂ**—ಕೊಡುತ್ತೇನೆ । **ಅಹಂ**—ನಾನು । **ಬ್ರಹ್ಮ**—ನನ್ನನ್ನು ಸ್ತುತಿಸುವ ಯಜ್ಞಾದಿಕರ್ಮವನ್ನು । **ಮಹ್ಯಂ ವರ್ಧನಂ**—ನನಗೆ ಅಭಿವೃದ್ಧಿಯನ್ನುಂಟುಮಾಡುವಂತೆ । **ಕೃಣವಂ**—ಮಾಡುತ್ತೇನೆ । **ಅಹಂ**—ನಾನು । **ಯಜಮಾನಸ್ಯ**—ನನ್ನನ್ನುದ್ದೇಶಿಸಿ ಯಾಗಮಾಡುವ ಯಜಮಾನನ ಧನಕ್ಕೆ । **ಚೋದಿತಾ**—ಪ್ರೇರಕನಾಗಿ । **ಭುವಂ**—ಆಗಿದೇನೆ । **ಅಯಜ್ವನಃ**—ನನ್ನನ್ನು ಆರಾಧಿಸದಿರುವವನಿಗೆ । **ವಿಶ್ವಸ್ಮಿನ್ ಭರೇ**—ಸಮಸ್ತವಾದ ಯುದ್ಧಗಳಲ್ಲಿಯೂ । **ಸಾಕ್ಷಿ**—ಸೋಲನ್ನುಂಟುಮಾಡುತ್ತೇನೆ.

ಭಾವಾರ್ಥ

ಇಂದ್ರನಾದ ನಾನು ನನ್ನನ್ನು ಸ್ತೋತ್ರಮಾಡುವ ಪುರುಷನಿಗೆ ಬಹುಮುಖ್ಯವಾದ ಅಥವಾ ಬಹಳವಾದ ಧನವನ್ನು ಕೊಡುತ್ತೇನೆ; ನನ್ನನ್ನು ಸ್ತುತಿಸುವ ಯಜ್ಞಾದಿಕರ್ಮವು ನನಗೆ ಅಭಿವೃದ್ಧಿಯನ್ನುಂಟುಮಾಡುವಂತೆ ಎಂದರೆ ಪ್ರಶಸ್ಯವಾಗಿರುವಂತೆ ಮಾಡುತ್ತೇನೆ; ನನ್ನನ್ನುದ್ದೇಶಿಸಿ ಯಾಗಮಾಡುವ ಯಜಮಾನನ ಧನವನ್ನು ಅಭಿವೃದ್ಧಿಯಾಗುವಂತೆ ಪ್ರೇರಿಸುತ್ತೇನೆ. ನನ್ನನ್ನು ಆರಾಧಿಸದಿರುವ ಪುರುಷನಿಗೆ ಸಮಸ್ತ ಯುದ್ಧಗಳಲ್ಲಿಯೂ ಸೋಲಾಗುವಂತೆ ಮಾಡುತ್ತೇನೆ.

English Translation

I give excellent treasure to him who praise me, I render sacred prayer (a source) of greatness to myself, I am the instigator of the

worshipper : I am the discomfiter in every battle of him who does not worship

ಸಂಹಿತಾಪಾಠಃ

ಮಾಂ ಧುರಿಂದ್ರಂ ನಾಮ ದೇವತಾ ದಿವಶ್ಚ ಗ್ಮಶ್ಚಾಪಾಂ ಚ ಜಂತವಃ ।
ಅಹಂ ಹರೀ ವೃಷಣಾ ವಿವ್ರತಾ ರಘೂ ಅಹಂ ವಜ್ರಂ ಶವಸೇ ಧೃಷ್ಣ್ವಾ ದದೇ॥

ಪದಪಾಠಃ

ಮಾಂ । ಧುಃ । ಇಂದ್ರಂ । ನಾಮ । ದೇವತಾ । ದಿವಃ । ಚ । ಗ್ಮಃ । ಚ । ಅಪಾಂ । ಚ । ಜಂತವಃ ॥

ಅಹಂ । ಹರೀ ಇತಿ । ವೃಷಣಾ । ವಿವ್ರತಾ । ರಘೂ ಇತಿ । ಅಹಂ । ವಜ್ರಂ । ಶವಸೇ । ಧೃಷ್ಣು । ಆ । ದದೇ ॥ ೨ ॥

ಸಾಯಣಭಾಷ್ಯಂ

ಇಂದ್ರಂ ನಾಮೇಂದ್ರನಾಮಾನಂ ಮಾ ದೇವತಾ ದೇವಾನಾಂ ಮಧ್ಯೇ ದಿವೋ ದ್ಯುಲೋಕಸ್ಯ । ಗ್ಮಾ ಪೃಥಿವ್ಯಾ ಪೋಽಂತರಿಕ್ಷಂ । ಏತೇಷು ಲೋಕೇಷು ಜಂತವೋ ಜಾತಾ ಮಾ ಮಾಮೇವ ಧುಃ । ದಧುಃ । ಧಾರಯಂತಿ । ಹವಿರ್ಭಿಃ ಸ್ತುತಿಭಿಶ್ಚ । ಅಹಂ ಯಜ್ಞಗಮನಾಯ ಸಂಗ್ರಾಮಗಮನಾಯ ವಾ ಹರೀ ಹರಿತವರ್ಣೌ ವೃಷಣಾ ಪುಂಸ್ತ್ವೋಪೇತೌ ವಿವ್ರತಾ ವಿವಿಧಕರ್ಮಾಣೌ ರಘೂ ಲಘೂ ಶೀಘ್ರಗತೀ ಅಶ್ವೌ ನಿಯೋಜಯಾಮಿ ರಥೇ । ತಥಾಹಂ ಧೃಷ್ಣು ಧರ್ಷಕಂ ವಜ್ರಮಾಯುಧಂ ಶವಸೇ ಬಲಾಯಾ ದದೇ । ಸ್ವೀಕರೋಮಿ ॥

ಪ್ರತಿಪದಾರ್ಥ

ಇಂದ್ರಂ ನಾಮ—ಇಂದ್ರನೆಂಬ ಹೆಸರಿನ। **ಮಾಂ**—ನನ್ನನ್ನು। **ದೇವತಾ**—ದೇವತೆಗಳ ಮಧ್ಯದಲ್ಲಿ ಯಾರು। **ದಿವಃ ಚ**—ಸ್ವರ್ಗಲೋಕವಾಸಿಗಳಾಗಿಯೂ । **ಗ್ಮಃ ಚ**—ಭೂಲೋಕದಲ್ಲಿರುವವರಾಗಿಯೂ । **ಅಪಾಂ**—ಅಂತರಿಕ್ಷಸಂಚಾರಿಗಳಾದವರಾಗಿಯೂ। **ಜಂತವಃ**—ಉತ್ಪನ್ನರಾಗಿರುವರೋ ಅವರೆಲ್ಲರೂ । **ಮಾಂ**—ನನ್ನನ್ನೇ ! **ಧುಃ**—ಹವಿರಾದಿಗಳಿಂದಲೂ, ಸ್ತೋತ್ರಗಳಿಂದಲೂ ಧರಿಸಿ ಪೋಷಿಸುತ್ತಾರೆ। **ಅಹಂ**—ನಾನು ಯಜ್ಞಕ್ಕೆ ಅಥವಾ ಯುದ್ಧಕ್ಕೆ ಹೋಗುವಾಗ। **ಹರೀ**—ಹರಿತವರ್ಣವೂ ! **ವೃಷಣಾ**—ಯೌವನೋಪೇತವೂ । **ವಿವ್ರತಾ**—ವಿವಿಧಕರ್ಮಗಳಿಂದ ಪ್ರಸಿದ್ಧವಾದವೂ । **ರಘೂ**—ಶೀಘ್ರಗಮನವುಳ್ಳವೂ ಆದ ನನ್ನ ಎರಡು ಅಶ್ವಗಳನ್ನು ರಥಕ್ಕೆ ಹೂಡುತ್ತೇನೆ (ಹಾಗೆಯೇ) । **ಅಹಂ**—ನಾನು। **ಧೃಷ್ಣು**—ಧರ್ಷಕವಾದ। **ವಜ್ರಂ**—ವಜ್ರಾಯುಧವನ್ನು । **ಶವಸೇ**—ಯುದ್ಧದಲ್ಲಿ ಬಲಪ್ರಯೋಗಕ್ಕಾಗಿ। **ಆ ದದೇ**—ಸ್ವೀಕರಿಸುತ್ತೇನೆ.

ಭಾವಾರ್ಥ

ದೇವತೆಗಳ ಮಧ್ಯದಲ್ಲಿ ಸ್ವರ್ಗಲೋಕದಲ್ಲಿ ಯಾರು ಉತ್ಪನ್ನರಾಗಿರುವರೋ ಹಾಗೆಯೇ ಭೂಮಿಯಲ್ಲಿಯೂ, ಅಂತರಿಕ್ಷದಲ್ಲಿಯೂ ಯಾವ ದೇವತೆಗಳಿರುವರೋ ಅವರೆಲ್ಲರೂ ನನ್ನನ್ನು ಹವಿರಾದಿಗಳಿಂದಲೂ, ಸ್ತೋತ್ರಗಳಿಂದಲೂ

ಆರಾಧಿಸಿ ನನ್ನನ್ನು ಪೋಷಿಸುತ್ತಾರೆ. ಹರಿತವರ್ಣದವೂ, ಯೌವನೋಪೇತವೂ, ವಿವಿಧ ಕರ್ಮಗಳನ್ನು ಮಾಡಿ ಪ್ರಸಿದ್ಧಿಯನ್ನು ಹೊಂದಿರುವವೂ, ಶೀಘ್ರಗತಿಯುಳ್ಳವೂ ಆದ ನನ್ನ ಎರಡು ಕುದುರೆಗಳನ್ನು ನನ್ನ ರಥಕ್ಕೆ ಹೂಡುತ್ತೇನೆ ಮತ್ತು ಯುದ್ಧದಲ್ಲಿ ಶತ್ರುಗಳನ್ನು ಬಲಪ್ರಯೋಗದಿಂದ ಜಯಿಸಲು ನಾನು ನನ್ನ ವಜ್ರಾಯುಧವನ್ನು ಸ್ವೀಕರಿಸುತ್ತೇನೆ.

English Translation

Those born in heaven, in earth, aad in the firmament, support me, whose name is Indra amongst the deities (by their offerings). I (harness to my car) two bay steeds vigorous, many functioned, rapid: I wield for my strength the fearful thunder-bolt.

ಸಂಹಿತಾಪಾಠಃ

ಅಹಮುತ್ತಂ ಕವಯೇ ಶಿಶ್ನಥಂ ಹಥೈರಹಂ ಕುತ್ಸಮಾವಮಾಭಿರೂತಿಭಿಃ ।
ಅಹಂ ಶುಷ್ಣಸ್ಯ ಶ್ನಥಿತಾ ವಧರ್ಯಮುಂ ನ ಯೋ ರರ ಆರ್ಯಂ ನಾಮ
ದಸ್ಯವೇ ॥ ೩ ॥

ಪದಪಾಠಃ

ಅಹಂ । ಅತ್ತಂ । ಕವಯೇ । ಶಿಶ್ನಥಂ । ಹಥೈಃ । ಅಹಂ । ಕುತ್ಸಂ । ಆವಂ । ಆಭಿಃ । ಊತಿಭಿಃ ॥
ಅಹಂ । ಶುಷ್ಣಸ್ಯ । ಶ್ನಥಿತಾ । ವಧಃ । ಯಮುಂ । ನ । ಯಃ । ರರೇ । ಆರ್ಯಂ । ನಾಮ । ದಸ್ಯವೇ ॥

ಸಾಯಣಭಾಷ್ಯಂ

ಅಹಮಿಂದ್ರೋಽತ್ತಮಾಚ್ಛಾದಕಂ ಶತ್ರುಪುತ್ರಂ ಕವಯ ಉಶನಸ ಋಷಯೇ ತಸ್ಯ ಸುಖಾರ್ಥಂ ಹಥೈರ್ಬಹುಪ್ರಕಾರೈಃ ಪ್ರಹಾರೈಸ್ತತ್ಸಾಧನೈರಾಯುಧೈರ್ವಾ ಶಿಶ್ನಥಂ । ತಾಡಿತವಾನಸ್ಮಿ । ಶ್ನಥಿತಿರ್ವಧಕರ್ಮಾ । ಕಿಂಚಾಹಂ ಕುತ್ಸಮೇತನ್ನಾಮಕಮೃಷಿಮಾಭಿರೂತಿಭಿರ್ವಧಾದಿರೂಪೈಃ । ಕುತ್ಸಾಯ ಶುಷ್ಣಮಶುಷಂ ನಿ ಬರ್ಹೀಃ । ಋ. ೪-೧೬-೧೨ । ಇತ್ಯಾದಿ ಮಂತ್ರಾಂತರಂ । ರಕ್ಷಣೈರಾವಂ । ಅರಕ್ಷಂ । ಪೂರ್ವಮೇವ ಕೃತಾನ್ಯಪಿ ರಕ್ಷಣಾನೀದಾನೀಮಿವ ಕೃತಾನೀತ್ಯನುವದತಿ । ಕುತ್ಸಾರ್ಥಂ ಶುಷ್ಣಸ್ಯೈತನ್ನಾಮಕಸ್ಯಾಸುರಸ್ಯ ಶ್ನಥಿತಾ ಹಿಂಸಿತಾ । ತಸ್ಯ ಹನನಾಯೇತ್ಯರ್ಥಃ । ವಧರ್ವಜ್ರಂ ಯಮುಂ । ಪ್ರಹರಣಾಯ ನಿಯಮಿತವಾನಸ್ಮಿ । ಅಪಿ ಚಾಹಮಾರ್ಯಮಾರ್ಯಸಂಬಂಧಿ । ಆರ್ಯಾಣಾಂ ದೇಯಮಿತ್ಯರ್ಥಃ । ತಾದೃಶಂ ನಾಮ । ಉದಕನಾಮೈತತ್ । ನಾಮಕಮುದಕಂ ದಸ್ಯವೇ ಶತ್ರವ ಉಪಕ್ಷಪಯಿತ್ರೇ ನ ರರೇ । ನ ದತ್ತವಾನಸ್ಮಿ । ಯದ್ವಾ । ಆರ್ಯಂ ಪೂಜ್ಯಮಿತ್ಯಸಾಧಾರಣಂ ನಾಮ ದಸ್ಯವೇ ನ ದತ್ತವಾನಸ್ಮಿ । ಅತ್ರೇಂದ್ರಸ್ಯಾತ್ಮಸ್ತುತೌ ಕುತ್ಸರಕ್ಷಣಶುಷ್ಣವಧಾದಿಕಂ ಆವಃ ಕುತ್ಸಮಿಂದ್ರ

ಯಸ್ಮಿಞ್ಜಾಕನ್ । ಋ-೧-೩೩ ೧೪ । ಶುಷ್ಣಂ ಪಿಪ್ರುಂ ಕುಯವಂ ವೃತ್ರಮಿಂದ್ರ । ಋ-೧-೧೦೩-೪ । ಇತ್ಯಾದಿಷು ಬಹುಧಾ ಪ್ರಪಂಚಿತಂ । ಅತೋಽತ್ರ ಗ್ರಂಥವಿಸ್ತರಭಯಾನ್ನ ಲಿಖ್ಯತೇ ॥

ಪ್ರತಿಪದಾರ್ಥ

ಅಹಂ—ನಾನು (ಇಂದ್ರನು) । **ಅತ್ಕಂ**—ಯುದ್ಧದಲ್ಲಿ ಮುತ್ತಿರುವ ಶತ್ರುಪುತ್ರನಾದ ಅತ್ಕನೆಂಬುವನನ್ನು । **ಕವಯೇ**—ಉಶನಾಃ ಎಂಬ ಋಷಿಯ ವಾಸಗೃಹವನ್ನು ರಕ್ಷಿಸುವುದಕ್ಕಾಗಿ । **ಹಥೈಃ**—ಹನನಸಾಧನವಾದ ನಾನಾ ಆಯುಧಗಳಿಂದ ಅಥವಾ ಪ್ರಹಾರಗಳಿಂದ । **ಶಿಶ್ನಥಂ**—ಹೊಡೆದಿದ್ದೇನೆ ಅಥವಾ ಸಂಹರಿಸಿದ್ದೇನೆ । **ಅಹಂ**—ನಾನು । **ಅಭಿಃ ಊತಿಭಿಃ**—ಶತ್ರುಸಂಹಾರರೂಪವಾದ ರಕ್ಷಣೆಗಳಿಂದ । **ಕುತ್ಸಂ**—ಕುತ್ಸನೆಂಬ ಋಷಿಯನ್ನು । **ಅವಂ**—ರಕ್ಷಿಸಿದ್ದೇನೆ । **ಅಹಂ**—ನಾನು । **ಶುಷ್ಣಸ್ಯ**—ಶುಷ್ಣನೆಂಬ ಅಸುರನ । **ಶ್ನಥಿತಾ**—ಸಂಹಾರಕನಾಗಿದ್ದೇನೆ । **ಅಹಂ**—ನಾನು । **ವಧಃ**—ವಜ್ರಾಯುಧವನ್ನು । **ಯಮಂ**—ಧರಿಸಿದ್ದೇನೆ ! (**ಅಹಂ**—ನಾನು) । **ಆರ್ಯಂ**—ಆರ್ಯರಿಗೆ ಸಂಬಂಧಿಸಿದ । **ನಾಮ**—ವೃಷ್ಟ್ಯುದಕವನ್ನು । **ದಸ್ಯವೇ**—ಶತ್ರುಜನರಿಗೆ । **ನ ರರೇ**—ಕೊಡುವುದಿಲ್ಲ.

ಭಾವಾರ್ಥ

ಇಂದ್ರನಾದ ನಾನು ಉಶನಾಃ ಎಂಬ ಋಷಿಯ ವಾಸಸ್ಥಾನವನ್ನು ರಕ್ಷಿಸುವುದಕ್ಕಾಗಿ ಅದನ್ನು ಮುತ್ತಿದ್ದ ಅತ್ಕನೆಂಬ ಶತ್ರುವನ್ನು ನಾನಾವಿಧ ಆಯುಧಗಳಿಂದ ಪ್ರಹರಿಸಿ ಕೊಂದಿದೇನೆ, ನನ್ನ ಶತ್ರುಸಂಹಾರಕವಾದ ರಕ್ಷಣೆಗಳಿಂದ ಕುತ್ಸನೆಂಬ ಋಷಿಯನ್ನು ರಕ್ಷಿಸಿದ್ದೇನೆ. ಶುಷ್ಣನೆಂಬ ಅಸುರನನ್ನು ಸಂಹರಿಸಿದ್ದೇರೆ. ಕೈಯಲ್ಲಿ ಶತ್ರುವಧಾರ್ಥವಾಗಿ ವಜ್ರಾಯುಧವನ್ನು ಹಿಡಿದಿದ್ದೇನೆ. ಆರ್ಯರಿಗೆ ನಾನು ಅನುಗ್ರಹಿಸಿ ಕೊಡುವ ವೃಷ್ಟ್ಯುದಕವನ್ನು ಶತ್ರುಗಳಾದ ದಸ್ಯುಜನರಿಗೆ ಕೊಡುವುದಿಲ್ಲ.

English Translation

I smote Atka with many weapons for the defence of the sage : with those protections I preserved Kutsa; I am the player of Shushna : I grasped the thunderbolt, I who have not given the water of the Aryas to the Dasyu.

ವಿಶೇಷವಿಷಯಗಳು

ಕವಯೇ—ಇಲ್ಲಿ ಕವಿಶಬ್ದದ ಪ್ರಯೋಗವಿದ್ದರೂ ಇವನ ಪುತ್ರನಾದ ಉಶನಾಃ ಎಂಬ ಋಷಿಯ ವಿಷಯವನ್ನೇ ಇಲ್ಲಿ ಪ್ರಸ್ತಾಪಿಸಲಾಗಿದೆ. ಈ ಋಷಿಯ ಹೆಸರು ಋಗ್ವೇದದಲ್ಲಿ ೧–೫೦–೧೦; ೧–೮೩–೫; ೧–೧೩೧–೧೨; ೪–೧೬–೨; ೪–೨೬–೧; ೬–೨೦ ೧೧; ೮–೨೩–೧೭; ೯–೮೭–೩; ೧೦–೪೦–೭; ೧–೧೩೦–೯; ೫–೩೧–೮; ೫–೩೪–೨; ೮–೭೬–೬ ಎಂಬ ಋಕ್ಕುಗಳಿಗೆ ಪಠಿತವಾಗಿದೆ. ಇದಲ್ಲದೆ ತೈತ್ತಿರೀಯಸಂಹಿತೆಯಲ್ಲಿ—

ಅಗ್ನಿರ್ದೇವಾನಾಂ ದೂತ ಆಸೀದುಶನಾ ಕಾವ್ಯೋಽಸುರಾಣಾಂ ತೌ ಪ್ರಜಾಪತಿಂ ಪ್ರಶ್ನಮೈತಾಗ್ಂ ಸ ಪ್ರಜಾಪತಿರಗ್ನಿಂ ದೂತಂ ವೃಣೀಮಹ ಇತ್ಯಭಿಪರ್ಯಾವರ್ತತ ತತೋ ದೇವಾ ಅಭವನ್ಪರಾಸುರಾಃ ॥

ಪೂರ್ವದಲ್ಲಿ ಯಜ್ಞವಾಡುವ ಯಜಮಾನರು ಯಜ್ಞಾದಿಗಳಲ್ಲಿ ಅರ್ಪಿಸುವ ಹವಿರಾದಿಗಳನ್ನು ಉದ್ದಿಷ್ಟದೇವತೆಗಳಿಗೆ ಒಯ್ಯಲು ಅಗ್ನಿಯು ದೇವತೆಗಳ ದೂತನಾಗಿದ್ದನು. ಇದೇ ರೀತಿ ಅಸುರರ ವಿಷಯದಲ್ಲಿ **ಕವಿಪುತ್ರನಾದ ಉಶನಾಃ** ಎಂಬುವನು ದೂತನಾಗಿದ್ದನು. ಹೀಗಿರುವಲ್ಲಿ ಅಗ್ನಿ ಮತ್ತು ಉಶನಾಃ ಎಂಬಿಬ್ಬರೂ ಪ್ರಜಾಪತಿಯ ಬಳಿಗೆ ಹೋಗಿ ನಮ್ಮಿಬ್ಬರಲ್ಲಿ ಯಾರು ದೂತಕಾರ್ಯವನ್ನು ವಹಿಸಲು ಸಮರ್ಥರು ಎಂದು ಕೇಳಲಾಗಿ, ಪ್ರಜಾಪತಿಯು **ಅಗ್ನಿಂ ದೂತಂ ವೃಣೀಮಹೇ** ನಾವು ಅಗ್ನಿಯನ್ನೇ ದೂತನನ್ನಾಗಿ ಆರಿಸಿಕೊಳ್ಳುತ್ತೇವೆ ಎಂದು ಹೇಳಿದನು. ಆದ್ದರಿಂದ ಅಗ್ನಿಯ ಹವಿರ್ವಹನದಿಂದ ತುಷ್ಟರಾದ ದೇವತೆಗಳು ಎಲ್ಲಾ ಯುದ್ಧಗಳಲ್ಲಿಯೂ ಜಯಶಾಲಿಗಳಾದರು, ಅಸುರರು ಪರಾಜಿತರಾದರು ಎಂದು ಹೇಳಿದೆ.

ಈ ಋಷಿಯ ವಿಷಯವು ಅಥರ್ವವೇದ ೪-೨೯-೬; ಪಂಚವಿಂಶಬ್ರಾಹ್ಮಣ ೭-೫-೨೦; ೧೪-೧೨-೫; ಜೈಮಿನೀಯ ಉಪನಿಷದ್ಬ್ರಾಹ್ಮಣ ೨-೭-೨-೬; ಸಾಂಖ್ಯಾಯನಶ್ರೌತಸೂತ್ರ ೧೪-೨೭-೧ ಇತ್ಯಾದಿ ಸ್ಥಳಗಳಲ್ಲಿ ಸೂಚಿತವಾಗಿದೆ.

ಅತ್ಕಂ—**ಈ** ಕಬ್ದವು ಋಗ್ವೇದಸಂಹಿತೆಯ ೧೦-೪೯-೩ ಮತ್ತು ೧೦-೬೯-೬ ನೆಯ ಋಕ್ಕುಗಳಲ್ಲಿ ಮಾತ್ರ ಪಠಿತವಾಗಿದೆ. ಇದಕ್ಕೆ ಸಾಯಣರು **ಈ** ಹೆಸರಿನ ಶತ್ರುಪುತ್ರನಾದ ಅತ್ಕನೆಂಬ ಹೆಸರಿನವನು ಎಂದರ್ಥವಿವರಣೆ ಮಾಡಿದಾರೆ. ಇದನ್ನು ಪಾಶ್ಚಾತ್ಯಪಂಡಿತರಾದ Roth, Grassmann, Ludwig, ಎಂಬ ಪಂಡಿತರು ಸಮರ್ಥನೆ ಮಾಡಿದಾರೆ. ಆದರೆ Zimmer ಎಂಬ ಪಂಡಿತನು ಅತ್ಕವೆಂದರೆ ಯುದ್ಧಾದಿಗಳಲ್ಲಿ ಯೋಧರು ಉಪಯೋಗಿಸುವ ಲೋಹದ ಕವಚವೆಂದೂ Pischel ಎಂಬ ಪಂಡಿತನು ಕೊಡಲಿಯೆಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ.

ಕುತ್ಸಂ—ಕುತ್ಸನ ವಿಷಯದಲ್ಲಿ ಸಾಯಣರು ಋ. ಸಂ. ೪-೧೬-೧೦ ನೇ ಋಕ್ಕಿನ ಭಾಷ್ಯದಲ್ಲಿ ಒಂದು ಉಪಾಖ್ಯಾನವನ್ನು ಹೇಳಿದಾರೆ—

ರುರುನಾಮಕಃ ಕಶ್ಚಿದ್ರಾಜರ್ಷಿಃ। ತಸ್ಯ ಪುತ್ರಃ ಕುತ್ಸಾಖ್ಯೋ ರಾಜರ್ಷಿರಾಸೀತ್। ಸ ಚ ಕದಾಚಿತ್ ಶತ್ರುಭಿಃ ಸಹ ಯುಯುಯುತ್ಸುಃ ಸಂಗ್ರಾಮೇ ಸ್ವಯಮಶಕ್ತಃ ಸನ್ ಶತ್ರೂಣಾಂ ಹನನಾರ್ಥಮಿಂದ್ರಸ್ಯ ಆಹ್ವಾನಂ ಚಕಾರ। ಸ ಚೇಂದ್ರಃ ಕುತ್ಸಸ್ಯ ಗೃಹಮಾಗತ್ಯ ತಸ್ಯ ಶತ್ರೂನ್ ಜಘಾನ। ತದನಂತರಮತಿಪ್ರೀತ್ಯಾ ತಯೋಃ ಸಖ್ಯಮಭವತ್। ಸಂಖ್ಯಾನಂತರಮಿಂದ್ರ ಏನಮಪಿ ಸ್ವಕೀಯಂ ಗೃಹಂ ಪ್ರಾಪಯಾಮಾಸ। ತಸ್ಯ ಶಚೀ ಇಂದ್ರಂ ಪ್ರಾಪ್ತುಮಾಗತಾ ಸತೀ ತೌ ಸಮಾನರೂಪೌ ದೃಷ್ಟ್ವಾ ಅಯಮಿಂದ್ರೋ ಽಯಂ ಕುತ್ಸ ಇತಿ ವಿವೇಕಾಭಾವೇನ ಸಂಶಯಂ ಚಕಾರ। ಅನಯಾಖ್ಯಾಯಿಕಯಾ ಪ್ರತೀಯಮಾನೋ ಽರ್ಥೋ ಽತ್ರ ಪ್ರತಿಪಾದ್ಯತೇ॥

(ಸಾ. ಭಾ. ೪-೧೬-೧೦)

ಪೂರ್ವದಲ್ಲಿ ರುರು ಎಂಬ ಒಬ್ಬ ರಾಜರ್ಷಿ ಇದ್ದನು. ಅವನಿಗೆ ಕುತ್ಸನೆಂಬ ಪುತ್ರನಿದ್ದನು. ಅವನು ಒಂದಾನೊಂದು ಕಾಲದಲ್ಲಿ ಶತ್ರುಗಳೊಡನೆ ಯುದ್ಧಮಾಡಬೇಕಾಗಿ ಬಂದಿತು. ಶತ್ರುಗಳು ಬಹಳ ಬಲಿಷ್ಠರಾಗಿದ್ದುದರಿಂದ ತಾನೊಬ್ಬನೇ ಅವರನ್ನು ಎದುರಿಸಿ ಗೆಲ್ಲಲಾರದೆ ಇಂದ್ರನ ಸಹಾಯವನ್ನಪೇಕ್ಷಿಸಿ ಅವನನ್ನು ಆಹ್ವಾನಿಸಿದನು. ಆಗ ಇಂದ್ರನು ಕುತ್ಸನ ಮನೆಗೆ ಬಂದು ಅವನ ಶತ್ರುಗಳನ್ನು ಸಂಹರಿಸಿದನು. ಇದರಿಂದ ಕುತ್ಸನಿಗೂ ಇಂದ್ರನಿಗೂ ಪರಸ್ಪರಸ್ನೇಹವುಂಟಾಯಿತು.

ಅನಂತರ ಇಂದ್ರನು ಕುತ್ಸನನ್ನು ತನ್ನ ಮನೆಗೆ ಕರೆದುಕೊಂಡುಹೋದನು, ಮನೆಯ ಬಾಗಿಲಿನಲ್ಲಿ ಇಂದ್ರಪತ್ನಿಯಾದ ಶಚೀದೇವಿಯು ಇಂದ್ರನನ್ನು ಸ್ವಾಗತಿಸುವುದಕ್ಕಾಗಿ ಬಂದು ನೋಡುವಲ್ಲಿ ಇಂದ್ರನಂತೆಯೇ ಸಮಾನರೂಪವುಳ್ಳ ಈರ್ವರು ಪುರುಷರಿರುವುದನ್ನು ಕಂಡು ಇವರಲ್ಲಿ ಇಂದ್ರನು ಯಾರು, ಕುತ್ಸನು ಯಾರು ಎಂದು ಗುರುತಿಸಲು ತಿಳಿಯದೆ ಸಂಶಯವನ್ನು ವ್ಯಕ್ತಪಡಿಸಿದಳು. **ಈ** ವಿಷಯವನ್ನೇ **ಈ** ಋಕ್ಕಿನಲ್ಲಿ ಸೂಚಿಸಲಾಗಿದೆ.

ಇಲ್ಲಿ ಕುತ್ಸಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಬಹುದೆಂದು ಸಾಯಣರ ವಿವರಣೆಯು ತಿಳಿಸುತ್ತದೆ. ಮೊದಲನೆಯದಾಗಿ **ಕುತ್ಸಂ ಕರ್ತನಸಾಧನಂ** ಕತ್ತರಿಸುವ ಸಾಧನವಾದ ವಜ್ರಾಯುಧಕ್ಕೆ ವಿಶೇಷಣವಾಗಿಯೂ, ಎರಡನೆಯದಾಗಿ—**ಕುತ್ಸಂ ಕುತ್ಸನಾಮಾನಮೃಷಿಂ** ಕುತ್ಸನೆಂಬ ಹೆಸರಿನ ಋಷಿಯೆಂದೂ ವಿವರಿಸಿದ್ದಾರೆ. ಋಷಿಯೆಂದರ್ಥವಾದಿದರೆ, ಶುಷ್ಣನೆಂಬ ಅಸುರನನ್ನು ಕೊಂದು ಕುತ್ಸನಿಗೆ ಸಹಾಯ ಮಾಡಿದನೆಂದು ಇಂದ್ರನ ಪ್ರಶಂಸೆಯಾಗುತ್ತದೆ. ಪ್ರಕೃತ ಋಕ್ಕಿನಲ್ಲಿ ಇದೇ ಅರ್ಥವಿವರಣೆ ಇದೆ.

ಕುತ್ಸನಿಗೂ ಇಂದ್ರನಿಗೂ ಇರತಕ್ಕ ಸ್ನೇಹಸಂಬಂಧವು ಅತ್ಯಂತ ನಿಕಟವಾದುದೆಂದು ಋಕ್ಸಂಹಿತೆಯಲ್ಲಿರುವ ವರ್ಣನೆಗಳಿಂದ ತಿಳಿದುಬರುತ್ತದೆ. ಕುತ್ಸನಿಗೆ ಆರ್ಜುನೇಯ ಎಂಬ ವಿಶೇಷಣವು ಅನೇಕ ಕಡೆಗಳಲ್ಲಿರುತ್ತದೆ. **ಆರ್ಜುನೇಯ** ಎಂಬ ಪದಕ್ಕೆ **ಅರ್ಜುನೀ** ಎಂಬ ಸ್ತ್ರೀಯ ಪುತ್ರನೆಂದಾಗಬಹುದು ಅಥವಾ **ಅರ್ಜುನ ಇತೀಂದ್ರಸ್ಯ ನಾಮ ತಸ್ಯ ಪುತ್ರಃ** ಇಂದ್ರನಿಗೆ ಅರ್ಜುನನೆಂದು ಹೆಸರು. ಕುತ್ಸನು ಇವನ ಪುತ್ರನಾದುದರಿಂದ ಆರ್ಜುನೇಯನೆಂಬ ವಿಶೇಷಣವು ಸಹಜವಾಗಿದೆ ಎಂದು ಇನ್ನೊಂದು ವಿಧವಾಗಿ ಅರ್ಥವನ್ನು ಹೇಳಬಹುದು. ಇಂದ್ರನಿಗೆ ಅರ್ಜುನ ಎಂಬ ಹೆಸರುಂಟು ಎಂದು ಸಮರ್ಥಿಸಲು ಸಾಯಣರು ಕೆಲವೆಡೆಗಳಲ್ಲಿ—

ಏತದ್ವಾ ಇಂದ್ರಸ್ಯ ಗುಹ್ಯಂ ನಾಮ ಯದರ್ಜುನಃ ।

ಎಂಬ ವಾಜಸನೇಯಸಂಹಿತಾಮಂತ್ರವನ್ನು ದಾಹರಿಸಿದ್ದಾರೆ. ಆದರೆ,

ಅಹಂ ಕುತ್ಸಮಾರ್ಜುನೇಯಂ ನ್ಯೃಂಜೇಽಹಂ ಕವಿರುಶನಾ ಪಶ್ಯತಾ ಮಾ ।

(ಋ. ಸಂ. ೪-೨೬-೧)

ದಾಸಂ ಯಚ್ಛುಷ್ಣಂ ಕುಯವಂ ನ್ಯಸ್ಮಾ ಅರಂಧಯ ಆರ್ಜುನೇಯಾಯ ಶಿಕ್ಷನ್ ।

(ಋ. ಸಂ. ೭-೧೯-೨)

ವಹತ್ಕುತ್ಸಮಾರ್ಜುನೇಯಂ ಶತಕ್ರತುಃ ತ್ವರದ್ಗಂಧರ್ವಮುಸ್ರಿಯಂ ।

(ಋ. ಸಂ. ೮-೧-೧೧)

ಎಂಬ ಋಕ್ಕುಗಳಲ್ಲಿ ಇರತಕ್ಕ ಆರ್ಜುನೇಯ ಪದಗಳಿಗೆಲ್ಲಾ ಸಾಯಣರೂ ಸಹ **ಅರ್ಜುನ್ಯಾಃ ಪುತ್ರಂ ಕುತ್ಸಂ ।** ಅರ್ಜುನೀ ಎಂಬ ಸ್ತ್ರೀಯ ಪುತ್ರನಾದ ಕುತ್ಸನೆಂದೇ ಅರ್ಥಮಾಡಿದ್ದಾರೆ. **ಅರ್ಜುನ, ಅರ್ಜುನೀ** ಎಂಬ ಪದಗಳು ಇಂದ್ರಸಂಬಂಧವಾದವು ಎಂದು ಶ್ರುತ್ಯಂತರಗಳಲ್ಲಿ ಹೇಳಿರುವುದರಿಂದ ಮೇಲಿನ ಎರಡು ವಿಧವಾದ ವಿವರಣೆಗಳೂ ಒಂದೇ ಅರ್ಥವನ್ನು ಕೊಡುವುವು ಎಂದು ಹೇಳಬಹುದು. ಉದಾಹರಣೆಗೆ—

ಫಲ್ಗುನೀಷ್ವಗ್ನೀ ಆದಧೀತ । ಏತಾ ವಾ ಇಂದ್ರನಕ್ಷತ್ರಂ ಯತ್ಫಲ್ಗುನ್ಯೋಽಸ್ಯಸ್ಯ ಪ್ರತಿನಾಮ್ನ್ಯೋಽಸ್ಯರ್ಜುನೋ ಹ ವೈ ನಾಮೇಂದ್ರೋ ಯದಸ್ಯ ಗುಹ್ಯಂ ನಾಮಾರ್ಜನ್ಯೋ ವೈ

ನಾನೈತಾಸ್ತಾ ಏತತ್ಪರೋಕ್ಷಮಾಚಕ್ಷತೇ ಫಲ್ಗುನ್ಯ ಇತಿ ಕೋ ಹ್ಯೇತಸ್ಯಾರ್ಹತಿ ಗುಹ್ಯಂ ನಾಮ ॥

(ಶ. ಬ್ರಾ. ೨-೧-೨-೧೧)

ಇಂದ್ರೋ ಭವತಿ ಯಚ್ಛ್ವ ಕ್ಷತ್ರಿಯೋ ಯದು ಚ ಯಜಮಾನಸ್ತಸ್ಮಾದಾಹಾರಿಷ್ಣ್ವೋಽರ್ಜುನ ಇತಿ ॥

(ಶ. ಬ್ರಾ. ೫-೪-೩-೭)

ಫಲ್ಗುನಿಗಳು ಐಂದ್ರನಕ್ಷತ್ರಗಳು. ಹೆಸರಿನಲ್ಲಿಯೂ ಹೊಂದಿಕೆ ಇದೆ. ಇಂದ್ರನಿಗೂ ಅರ್ಜುನನೆಂಬ ಹೆಸರು. ಫಲ್ಗುನಿಗಳಿಗೂ ಅರ್ಜುನಿಗಳೆಂಬ ಹೆಸರು ಎಂಬುದಾಗಿ ಶತಪಥಬ್ರಾಹ್ಮಣದಲ್ಲಿಯೂ ಇತರ ಕಡೆಗಳಲ್ಲಿಯೂ ಹೇಳಿರುವುದರಿಂದ ಕುತ್ಸನನ್ನು ಇಂದ್ರಪುತ್ರ, ಅರ್ಜುನೀಪುತ್ರ ಎಂದು ಎರಡು ವಿಧವಾಗಿಯೂ ಕರೆಯಬಹುದೆಂದು ಹೇಳಬಹುದು. ಋಕ್ಸಂಹಿತೆಯ ಅನೇಕ ಕಡೆಗಳಲ್ಲಿ ಕುತ್ಸನು ಇಂದ್ರನ ಸಹಾಯದಿಂದಲೇ ತನ್ನ ಶತ್ರುಗಳನ್ನು ಜಯಿಸುತ್ತಾನೆಂದು ಇಂದ್ರಕುತ್ಸರ ಸಂಬಂಧವನ್ನು ತೋರಿಸಿದೆ.

ತ್ವಂ ಶುಷ್ಣಂ ವ್ಯಜನೇ ಪೃಕ್ಷ ಆಣೌ ಯೂನೇ ಕುತ್ಸಾಯ ದ್ಯುಮತೇ ಸಚಾಹನ್ ।

(ಋ. ಸಂ. ೧-೬೩-೩)

ಕುತ್ಸಾಯ ಯತ್ರ ಪುರುಹೂತ ವನ್ವನ್ಶುಷ್ಣಮನಂತೈಃ ಪರಿಯಾಸಿ ವಧ್ರೈಃ ।

(ಋ. ಸಂ. ೧-೧೨೧-೯)

ಎಂಬ ಋಕ್ಕುಗಳಲ್ಲಿಯೂ ಹೀಗೆಯೇ ಇತರ ಅನೇಕ ಕಡೆಗಳಲ್ಲಿಯೂ ಇಂದ್ರನು ಕುತ್ಸನಿಗೆ ಸಹಾಯ ಮಾಡಲು ಶುಷ್ಣನನ್ನು ಕೊಂದನು ಎಂಬ ವರ್ಣನೆ ಇದೆ. ಮತ್ತು

ಅಹಂ ಪಿತೇವ ವೇತಸೌರಭಿಷ್ಟಯೇ ತುಗ್ರಂ ಕುತ್ಸಾಯ ಸ್ನದಿಭಂ ಚ ರಂಧಯಂ ।

(ಋ. ಸಂ. ೧೦-೪೯-೪)

ಕುತ್ಸನಿಗಾಗಿ ನಾನು ವೇತಸು, ತುಗ್ರ ಸ್ನದಿಭ ಇತ್ಯಾದಿ ಶತ್ರುಗಳನ್ನೆಲ್ಲಾ ಸೋಲಿಸಿ ತನ್ನ ಮಿತ್ರನಿಗೆ ಸಹಾಯ ಮಾಡಿದೆನು ಎಂದು ಇಂದ್ರನೇ ಹೇಳಿಕೊಂಡಿದ್ದಾನೆ. ಆದರೆ,

ತಸ್ಮೈ ಕುತ್ಸಮತಿಥಿಗ್ವಮಾಯುಂ ಮಹೇ ರಾಜ್ಞೇ ಯೂನೇ ಅರಂಧನಾಯಃ ।

(ಋ. ಸಂ. ೧-೫೩-೧೦)

ಯ ಆಯುಂ ಕುತ್ಸಮತಿಥಿಗ್ವಮರ್ದಯೋ ವಾವೃಧಾನೋ ದಿವೇದಿವೇ ।

(ಋ. ಸಂ. ೮-೫೩-೧೦)

ಇತ್ಯಾದಿ ಋಕ್ಕುಗಳಲ್ಲಿ ಇಂದ್ರನು ಕುತ್ಸಾದಿಗಳನ್ನು ಸೋಲಿಸಿದುದಾಗಿಯೂ ವರ್ಣಿತವಾಗಿದೆ. ಕೆಲವು ಋಕ್ಕುಗಳಲ್ಲಿ ಇಂದ್ರನು ಕುತ್ಸನಿಗೆ ಸಹಾಯಮಾಡುವುದಕ್ಕಾಗಿ ಶುಷ್ಣನೆಂಬ ಅಸುರನನ್ನು ಕೊಂದನು ಮತ್ತು ಅವನ ಸೈನಿಕರಾದ ಪಣಿಗಳೆಂಬ ಅಸುರರನ್ನು ಯುದ್ಧದಲ್ಲಿ ಚದುರಿಸಿ ಓಡಿಸಿದ ವಿಷಯವು ಋ. ಸಂ. ೧-೧೭೪-೫, ೧-೧೭೫-೪ ಇತ್ಯಾದಿ ಋಕ್ಕುಗಳಲ್ಲಿಯೂ ಹೇಳಿದೆ.

ಶುಷ್ಣಂ—ಋಗ್ವೇದದಲ್ಲಿ ಇವನ ಹೆಸರು ಸುಮಾರು ೪೦ ಸಲ ಪಠಿತವಾಗಿದೆ. ಇವನು ಕುತ್ಸನ ಮುಖ್ಯ ಶತ್ರು. ಈ ಕುತ್ಸನಿಗೋಸ್ಕರ ಅಥವಾ ಕುತ್ಸನ ಜತೆಯಲ್ಲಿ ಇಂದ್ರನು ಶುಷ್ಣನನ್ನು ನಿರ್ಮೂಲಮಾಡುತ್ತಾನೆ (ಋ. ಸಂ. ೪-೧೬-೧೨, ೫-೨೯-೯ ಇತ್ಯಾದಿ). ಅವನಿಗೆ ಕೊಂಬುಗಳಿವೆ (೧-೩೩-೧೨) ಇವನಿಗೆ ಪೊಟ್ಟಿಗಳಿವೆ (೬-೧೦-೧೦, ೧೧) ಎಂದರೆ ಪೊಟ್ಟಿಗಳಿಂದಾದ ಮರಿಗಳು ಇವೆ (೧೦-೧೨-೧೧) ಇದರಿಂದ ಶುಷ್ಣನೂ ಒಂದು ಸರ್ಪ ವೆನ್ನಬಹುದು. ಆರುಸಲ ಇವನಿಗೆ ಅಶುಷ (ನುಂಗುವ) ಎಂಬ ವಿಶೇಷಣವಿದೆ. ಇವನಿಗೆ ಬಲವಾದ ಕೋಟೆಗಳಿವ (೧-೫೧-೧೧, ೪-೩೦-೧೩) ಇವು ಚಲಿಸುವ ಕೋಟೆಗಳು (೮-೧-೨೮) ಇಂದ್ರನು ಶುಷ್ಣನ ಕೋಟೆಗಳನ್ನು ನಾಶಮಾಡಿ ನೀರುಗಳನ್ನು ಬಿಡುಗಡೆಮಾಡುತ್ತಾನೆ (೧-೫೧-೧೧) ಇಂದ್ರನು ಶುಷ್ಣನ ವಂಶವನ್ನು ನಿರ್ಮೂಲಮಾಡಿ ಸ್ವರ್ಗೀಯೋ ದಕವನ್ನು ಗಳಿಸುತ್ತಾನೆ (೮-೪೦-೧೦) ನಾಲ್ಕುಸಲ ಶುಷ್ಣನಿಗೆ **ಕುಯುವ** (ಕಟ್ಟಧಾನ್ಯವನ್ನುಂಟುಮಾಡುವವನು) ಎಂಬ ವಿಶೇಷಣವಿದೆ. ಇಂದ್ರಶುಷ್ಣರ ಯುದ್ಧದ ಪರಿಣಾಮವು ಜಲವಿಮೋಚನೆ ಮಾತ್ರವಲ್ಲ, ಗೋವುಗಳ ಅಥವಾ ಸೂರ್ಯನ ಪ್ರಾಪ್ತಿಗೂ ಆಗಬಹುದು (೮-೮೫-೧೭) ಇಂದ್ರನೊಡನೆ ಯುದ್ಧಮಾಡುವಾಗ ಶುಷ್ಣನು ಅಂಧಕಾರದಲ್ಲಿ ಓಡಾಡುತ್ತಾನೆ. ಮೇಲೆ ಹೇಳಿದ ವಾಕ್ಯಗಳಿಂದ ಶುಷ್ಣನು ಅನಾವೃಷ್ಟಿಕಾರಕನೆನ್ನಬಹುದು. ಶುಷ್ಣ ಎಂಬ ಶಬ್ದವು ಬುಸುಗುಟ್ಟು ಅಥವಾ ಒಣಗಿಸು ಎಂಬರ್ಥವಿರುವ ಶುಷ್ ಧಾತುವಿನಿಂದ ನಿಷ್ಪನ್ನವಾಗಿದೆ. ಆದ್ದರಿಂದ ಇದೂ ಅನಾವೃಷ್ಟಿಕಾರಕನೆಂಬುದನ್ನು ಸಮರ್ಥಿಸುತ್ತದೆ.

ದಸ್ಯುಂ—ಉಪಕ್ಷಪಯಿತಾರಂ | ಯಾಸ್ಕರು ಈ ಶಬ್ದಕ್ಕೆ **ದಸ್ಯುರ್ದಸ್ಯತೇಃ ಕ್ಷಯಾರ್ಥಾದುಪದಸ್ಯಂ-ತ್ಯಸ್ಮಿನ್ ರಸಾಃ ಉಪದಾಸಯತಿ ಕರ್ಮಾಣಿ** | (ನಿ. ೭-೨೩). ಹಿಂಸೆಮಾಡು ಅಥವಾ ನಾಶಗೊಳಿಸು ಎಂಬರ್ಥ ವುಳ್ಳ ದಸು ಧಾತುವಿನಿಂದ ನಿಷ್ಪನ್ನವಾದ ದಸ್ಯುಶಬ್ದದ ಪ್ರಯೋಗವು—ಉದಕಗಳು ಶೋಷಿತವಾಗುವವು, ಕರ್ಮಗಳು ನಾಶವಾಗುವವು ಎಂಬ ಅರ್ಥದಲ್ಲಿ ವಿನಿಯೋಗವಿರುವುದೆಂದು ವಾಖ್ಯಾನಮಾಡಿದಾರೆ. ಸಾಯಣರು ನಾಶಮಾಡು ವವನು ಎಂದು ಅರ್ಥವನ್ನು ಹೇಳಿದ್ದಾರೆ.

ದಸ್ಯುಪದವು ಅನೇಕ ಸಂದರ್ಭಗಳಲ್ಲಿ **ಅವ್ರತಂ** ಎಂಬ ಪದದೊಡನೆ ಪ್ರಯುಕ್ತವಾಗಿದೆ. **ಅವ್ರತಂ** ಎಂಬ ಪದಕ್ಕೆ **ಅಕರ್ಮಾಣಂ, ಅನನುಷ್ಠಾಯಿನಂ** ಯಾಗರೂಪವಾದ ಕರ್ಮಗಳನ್ನು ಆಚರಿಸದೆ ಎಲ್ಲವನ್ನೂ ನಾಶಮಾಡು ವವನನ್ನು ಇಂದ್ರನು ನಾಶಮಾಡಲಿ ಎಂದು ವರ್ಣಿಸಲಾಗಿದೆ- ಇದಲ್ಲದೆ ಯಾಗವನ್ನು ಆಚರಿಸುವ ಯೋಗ್ಯತೆಯನ್ನು ಹೊಂದಿದ್ದರೂ ಯಾಗವನ್ನು ಮಾಡದೆ ಉದಾಸೀನಭಾವದಿಂದ ಇರುವವನನ್ನೂ ಇಂದ್ರನು ನಾಶಮಾಡಲಿ ಎಂಬ ವರ್ಣನೆಯೂ ಇದೆ.

ದೇವಶಬ್ದದಿಂದ ಏಕಾಸಾತ್ಮಕವಾದುದೂ, ದ್ಯೋತನಾತ್ಮಕವಾದುದೂ, ದಾನಾತ್ಮಕವಾದುದೂ (ನಿ. ೭-೧೫) ಆದ ಯಾವ ಅರ್ಥವು ತೋರುವುದೋ ಅದಕ್ಕೆಲ್ಲ ವಿರುದ್ಧವಾದ ಕ್ಷಯಾತ್ಮಕವಾದುದೂ, ಅಂಧಕಾರಮಯವಾದುದೂ ಮತ್ತು ಹಿಂಸಾತ್ಮಕವಾದುದೂ ಆದ ಅರ್ಥವನ್ನು ದಸ್ಯುಶಬ್ದವು ಸೂಚಿಸುತ್ತದೆ. ವೃತ್ರ, ಶಂಬರ ಮೊದಲಾದ ಅಸುರ ರೆಲ್ಲರೂ ಈ ದಸ್ಯುಜನರ ಗುಂಪಿಗೆ ಸೇರಿದವರು. ನೀರನ್ನು ಪ್ರವಹಿಸದಂತೆ ಅಥವಾ ಬೀಳದಂತೆ ತಡೆಯುವುದೂ, ಬೆಳಕನ್ನು ಮುಚ್ಚುವುದೂ ಇವರ ಕೃತ್ಯಗಳಾದುದರಿಂದ ಇವರ ನಾಶವನ್ನು ಮಾಡಿ ನೀರನ್ನು ಹರಿಯುವಂತೆಯೂ ಬೆಳಕನ್ನು ಪರಡುವಂತೆಯೂ ಮಾಡುವಂತೆ ಇಂದ್ರನನ್ನು ಪ್ರಾರ್ಥಿಸಿ ಅವನನ್ನು ದಸ್ಯುಹಾ ಎಂಬ ವಿಶೇಷಣದಿಂದ ಕರೆದಿದೆ.

ದಸ್ಯುಶಬ್ದವು ರಾಕ್ಷಸಾದಿಗಳ ಪರ್ಯಾಯವಾಗಿ ಅನೇಕಕಡೆಗಳಲ್ಲಿ ಉಪಯೋಗಿಸಲ್ಪಟ್ಟಿದ್ದರೂ ಕರ್ಮಹೀನರಾದ ಮಾನವರ ವಿಷಯದಲ್ಲಿಯೂ ಕೆಲವುಕಡೆಗಳಲ್ಲಿ ಈ ಪದದ ಪ್ರಯೋಗವಿದೆ. ಉದಾಹರಣೆಗೆ—

ತ್ವಂ ಹ ನು ತ್ಯದದಮಾಯೋ ದಸ್ಯೋ ರೇಕಃ ಕೃಷ್ಟೀರವನೋರಾರ್ಯಾಯ ।

(ಋ. ಸಂ. ೬-೧೪-೩)

ಇತ್ಯಾದಿ ಋಕ್ಕುಗಳಲ್ಲಿ **ದಸ್ಯೂನ್** ಎಂಬುದಕ್ಕೆ **ಕರ್ಮಹೀನಾನ್ ಜನಾನ್** ಎಂದರ್ಥಮಾಡಿದೆ. ಈ ವಿಧವಾದ ಅರ್ಥದಲ್ಲಿಯೇ ದಸ್ಯುಶಬ್ದಕ್ಕೆ ಯಜ್ಞಾದಿಕರ್ಮಗಳನ್ನಾಚರಿಸದ ಈ ದೇಶದ ಪೂರ್ವನಿವಾಸಿಗಳು ಎಂದು ಹೇಳುವ ರೂಢಿ ಇದೆ.

ಕುವಿತ್ಸಸ್ಯ ಪ್ರ ಹಿ ವ್ರಜಂ ಗೋಮಂತಂ ದಸ್ಯುಹಾ ಗಮತ್ ॥

(ಋ. ಸಂ. ೬-೪೫-೨೪)

ಇತ್ಯಾದ್ಯನೇಕ ಋಕ್ಕುಗಳಲ್ಲಿ ಇಂದ್ರನು ದಸ್ಯುಹನನಮಾಡಿ ಲೋಕರಕ್ಷಣೆಮಾಡುವ ವಿಷಯವನ್ನು ತಿಳಿಸಿದೆ.

ಆರ್ಯ, ದಸ್ಯು ಎಂಬ ಎರಡು ಪದಗಳೂ ಎರಡು ಬೇರೆಬೇರೆ ಗುಂಪಿನ ಜನರನ್ನು ತೋರಿಸುವ ಸಂಕೇತಪದಗಳೆಂದು ಕೆಲವರ ಮತವಾಗಿದೆ. ಆರ್ಯರೆಂದರೆ, ಸಂಸ್ಕೃತರಾದ ಮತ್ತು ಯಜ್ಞಯಾಗಾದಿಗಳನ್ನು ಮಾಡುವ, ದೇವತೆಗಳನ್ನು ಆರಾಧಿಸುವ ಜನರೆಂದೂ, ದಸ್ಯುಗಳು ಎಂದರೆ ಅಸಂಸ್ಕೃತರೂ, ಯಜ್ಞಾದಿಗಳನ್ನು ಮಾಡದೆ ಅವುಗಳಿಗೆ ವಿಘ್ನವನ್ನುಂಟುಮಾಡುವವರೂ, ದೈವಭಕ್ತಿ ಇಲ್ಲದವರೂ ಆರ್ಯಜನರ ದ್ವೇಷಿಗಳೂ ಆದ ಈ ದೇಶದ ಪೂರ್ವನಿವಾಸಿಗಳಾದ ಕಪ್ಪುಜನರೆಂದೂ ಈ ಎರಡು ಗುಂಪಿನ ಜನರ ವ್ಯತ್ಯಾಸವನ್ನು ತೋರಿಸಿ ಇತಿಹಾಸಕಾರರು ವಿಮರ್ಶಿಸಿದ್ದಾರೆ.

ಸಂಹಿತಾಪಾಠಃ

ಅಹಂ ಪಿತೇವ ವೇತಸೂರಭಿಷ್ಟಯೇ ತುಗ್ರಂ ಕುತ್ಸಾಯ ಸ್ಮದಿಭಂ ಚ ರಂಧಯಂ ।
ಅಹಂ ಭುವಂ ಯಜಮಾನಸ್ಯ ರಾಜನಿ ಪ್ರ ಯದ್ಭರೇ ತುಜಯೇ ನ ಪ್ರಿಯಾಧೃಷೇ ॥ ೪ ॥

ಪದಪಾಠಃ

ಅಹಂ । ಪಿತಾಽಇವ । ವೇತಸೂನ್ । ಅಭಿಷ್ಟಯೇ । ತುಗ್ರಂ । ಕುತ್ಸಾಯ । ಸ್ಮತ್ಽಇಭಂ । ಚ । ರಂಧಯಂ ।
ಅಹಂ । ಭುವಂ । ಯಜಮಾನಸ್ಯ । ರಾಜನಿ । ಪ್ರ । ಯತ್ । ಭರೇ । ತುಜಯೇ । ನ । ಪ್ರಿಯಾ ।
ಆಽಧೃಷೇ ॥ ೪ ॥

ಸಾಯಣಭಾಷ್ಯಂ

ಅಹಮಿಂದ್ರಃ ಪಿತೇವ ಪಿತಾ ಪುತ್ರಾಯೇವ ಸ ಯಥಾ ತಸ್ಮೈ ನಿರ್ವಾಹಾರ್ಥಮಭಿಮತಂ ಪ್ರದೇಶಂ ಪ್ರಸಾಧಯತಿ ತದ್ವದ್ವೇತಸೂನೇತನ್ನಾಮಕಾಜ್ಞನಪದಾನಭಿಷ್ಟಯೇಽಭೀಚ್ಛತೇ ಕುತ್ಸಾಯ ಮಹರ್ಷಯೇ ತುಗ್ರಂ ಸ್ಮದಿಭಂ ಚ ರಂಧಯಂ। ವಶಮನಯಂ । ಅಹಂ ಯಜಮಾನಸ್ಯ ರಾಜನಿ ರಾಜನಾರ್ಥಂ ಭುವಂ। ಅಭವಂ । ಸಮರ್ಥ ಇತಿ ಶೇಷಃ। ಯದ್ಯಸ್ಮಾತ್ತುಜಯೇ ನ ಪುತ್ರಾಯೇವ ಪಿತಾ ತಸ್ಮೈ ಯಜಮಾನಾಯೋಧೃಷೇ ಶತ್ರೂಣಾಂ ಧರ್ಷಣಾಯ ಪ್ರಿಯಾ ಪ್ರಿಯಾಣಿ ಪ್ರ ಭರೇ ಪ್ರಭರಾಮಿ ತಸ್ಮಾದ್ಯಜಮಾನಸ್ಯ ರಾಜನಿ ಭುವಮಿತಿ ಸಂಬಂಧಃ ॥

ಪ್ರತಿಪದಾರ್ಥ

ಅಹಂ—ನಾನು । **ಪಿತೇವ**—ತಂದೆಯು ಮಗನ ಹಿತವನ್ನು ಬಯಸುಂತೆ । **ವೇತಸೂನ್**—ವೇತಸು ಎಂಬ ರಾಷ್ಟ್ರದ ಜನರನ್ನು । **ಅಭಿಷ್ಟಯೇ**—ಇಚ್ಛಿಸುವ । **ಕುತ್ಸಾಯ**—ಕುತ್ಸಋಷಿಗೆ । **ತುಗ್ರಂ**—ತುಗ್ರನೆಂಬುವನನ್ನೂ । **ಸ್ಮದಿಭಂ ಚ**—ಸ್ಮದಿಭನೆಂಬುವನನ್ನೂ । **ರಂಧಯಂ**—ವಶಮಾಡಿದೆನು । **ಅಹಂ**—ನಾನು । **ಯಜಮಾನಸ್ಯ**—ಯಜ್ಞಮಾಡುವ ಯಜಮಾನನ । **ರಾಜನಿ**—ಹಿತವನ್ನು ಬಯಸುವ ಸ್ವಾಮಿಯಾಗಿ । **ಭುವಂ**—ಆಗಿದ್ದೇನೆ । **ಯತ್**—ಏತಕ್ಕೆಂದರೆ । **ತುಜಯೇ ನ**—ತಂದೆಯು ಮಗನ ವಿಷಯದಲ್ಲಿ ಆಚರಿಸುವಂತೆ । **ಅಧೃಷೇ**—ಶತ್ರುಜನರ ನಿಗ್ರಹಕ್ಕಾಗಿ । **ಪ್ರಿಯಾ**—ಪ್ರಿಯಕರವಾದ ವಸ್ತುಗಳನ್ನು । **ಪ್ರ ಭರೇ**—ಒದಗಿಸಿಕೊಡುತ್ತೇನೆ.

ಭಾವಾರ್ಥ

ತಂದೆಯು ತನ್ನ ಪುತ್ರನ ಹಿತವನ್ನು ಬಯಸುವಂತೆ ನಾನು ಕುತ್ಸಋಷಿಯ ಇಚ್ಛೆಯನ್ನು ನೆರವೇರಿಸುವುದಕ್ಕಾಗಿ ವೇತಸು ಎಂಬ ಜನತೆಯನ್ನೂ, ತುಗ್ರನೆಂಬುವನನ್ನೂ, ಸ್ಮದಿಭನೆಂಬುವನನ್ನೂ ಕುತ್ಸನ ವಶಮಾಡಿದೆನು. ನಾನು ಯಾವಾಗಲೂ ಯಜ್ಞಮಾಡುವ ಯಜಮಾನನಿಗೆ ಅವನ ಹಿತಕಾಂಕ್ಷಿಯೂ, ಒಡೆಯನೂ ಆಗಿದ್ದೇನೆ. ಏತಕ್ಕೆಂದರೆ ತಂದೆಯ ಮಗನ ವಿಷಯದಲ್ಲಿ ಪ್ರೀತಿಯಿಂದ ನಡೆದುಕೊಳ್ಳುವಂತೆ ಶತ್ರುಜನರ ನಿಗ್ರಹಕ್ಕಾಗಿ ಅವನಿಗೆ ಪ್ರಿಯಕರವಾದ ವಸ್ತುಗಳನ್ನು ಒದಗಿಸಿಕೊಡುತ್ತೇನೆ.

English Translation

Like a father (for a son), I brought under subjection to Kutsa, at his desire, the Vetasus and Tugra and Smadibha : I have been in place of a sovereign to the worshipper when I bring (to him) as to a son acceptable (gifts) for assailing (his enemies)

ವಿಶೇಷವಿಷಯಗಳು

ವೇತಸೂನ್—ವೇತಸು ಶಬ್ದವು ಕೆಲವುಕಡೆ ಏಕವಚನದಲ್ಲಿ ಪ್ರಯುಕ್ತವಾಗಿದೆ. ಉದಾಹರಣೆಗೆ—

ಸ ವೇತಸುಂ ದಶಮಾಯಂ ದಶೋಣಿಂ ತೂತುಜಿಮಿಂದ್ರಃ ಸ್ವಭಿಷ್ಟಿಸುಮ್ನಃ ।

(ಋ. ಸಂ. ೬-೨೦-೮)

ಎಂಬ ಋಕ್ಕಿನಲ್ಲಿರುವ ವೇತಸುಂ ಎಂಬ ಶಬ್ದಕ್ಕೆ ಸಾಯಣರು **ವೇತಸುಂ ವೇತಸುನಾಮಾನಮಸುರಂ** ವೇತಸು ಎಂಬ ಹೆಸರಿನ ಅಸುರನನ್ನು ಎಂದರ್ಥಮಾಡಿದಾರೆ ಪ್ರಕೃತ ಋಕ್ಕಿನಲ್ಲಿ **ವೇತಸೂನ್** ಎಂದರೆ ವೇತಸು ಎಂಬ ಅಸುರನ ಅನುಯಾಯಿಗಳನ್ನು ಅಥವಾ ಆ ಹೆಸರಿನ ಜನಾಂಗದವರನ್ನು ಎಂದಭಿಪ್ರಾಯವು. ಈ ವೇತಸುವನ್ನು ಇಂದ್ರನು ಸೋಲಿಸಿದ ವಿಷಯವು,

ಘೃತಸ್ಯ ಧಾರಾ ಅಭಿ ಚಾಕಶೀಮಿ ಹಿರಣ್ಯಯೋ ವೇತಸೋ ಮಧ್ಯ ಆಸಾಂ ।

(ಋ. ಸಂ. ೪-೮೫-೫)

ತ್ವಂ ತುಗ್ರಂ ವೇತಸವೇ ಸಚಾಹನ್ ತ್ವಂ ತುಜಿಂ ಗೃಣಂತಮಿಂದ್ರ ತೂತೋಃ ।

(ಋ. ಸಂ. ೬-೨೬-೪)

ಇತ್ಯಾದಿ ಋಕ್ಕುಗಳಲ್ಲಿ ಸೂಚಿತವಾಗಿದೆ. ತುಗ್ರ ಎಂಬುದು ಆ ಹೆಸರಿನ ಒಬ್ಬ ಅಸುರನನ್ನು ನಿರ್ದೇಶಿಸುತ್ತದೆ. ಇತರ ಕಡೆಗಳಲ್ಲಿ ತುಗ್ರ ಎಂಬುದು ಒಬ್ಬ ಪ್ರಸಿದ್ಧನಾದ ರಾಜನೆಂದೂ, ಇವನ ಮಗನಾದ ಭುಜ್ಯುವು ಸಮುದ್ರದಲ್ಲಿ ಮುಳುಗುತ್ತಿರುವಾಗ ಅಶ್ವಿನೀದೇವತೆಗಳು ಅವನನ್ನು ಕಾಪಾಡಿದರೆಂದೂ ಹೇಳಿದೆ. ಆದ್ದರಿಂದ ರಾಜನಾದ ತುಗ್ರ ಎಂಬುವನೇ ಬೇರೆ, ಅಸುರನಾದ ತುಗ್ರ ಎಂಬುವನೇ ಬೇರೆ. ಇಬ್ಬರೂ ಬೇರೆಬೇರೆ ವ್ಯಕ್ತಿಗಳು ಎಂಬ ವಿಷಯದಲ್ಲಿ ಸಂಶಯಕ್ಕವಕಾಶವಿಲ್ಲ.

ಸ್ಮದಿಭ—ಪ್ರಕೃತ ಋಕ್ಕಿನಲ್ಲಿ ಇವನ ಹೆಸರು ಮಾತ್ರ ಸೂಚಿತವಾಗಿದೆ. ಅಸುರರ ಗುಂಪಿನಲ್ಲಿ ಹೇಳಿರುವುದರಿಂದ ಇವನು ಅಸುರನೇ ಆಗಿರಬೇಕು. ಇವನನ್ನು ಇಂದ್ರನು ಸೋಲಿಸಿದ ವಿಷಯವನ್ನು ಬಿಟ್ಟರೆ ಇವನ ವಿಷಯದಲ್ಲಿ ಹೆಚ್ಚು ಸಂಗತಿಗಳು ತಿಳಿಯಲವಕಾಶವಿಲ್ಲ.

ಸಂಹಿತಾಪಾಠಃ

ಅಹಂ ರಂಧಯಂ ಮೃಗಯಂ ಶ್ರುತರ್ವಣೇ ಯನ್ಮಾ ಜಿಹೀತ ವಯುನಾ ಚನಾನುಷಕ್ ।

ಅಹಂ ವೇಶಂ ನಮ್ರಮಾಯವೇಕರಮಹಂ ಸವ್ಯಾಯ ಪಡ್ಗೃಭಿಮರಂಧಯಂ ॥ ೫ ॥

ಪದಪಾಠಃ

ಅಹಂ । ರಂಧಯಂ । ಮೃಗಯಂ । ಶ್ರುತರ್ವಣೇ । ಯತ್ । ಮಾ । ಅಜಿಹೀತ । ವಯುನಾ । ಚನ । ಅನುಷಕ್ ।

ಅಹಂ । ವೇಶಂ । ನಮ್ರಂ । ಆಯವೇ । ಅಕರಂ । ಅಹಂ । ಸವ್ಯಾಯ । ಪಟ್ಕೃಗೃಭಿಂ । ಅರಂಧಯಂ ॥

ಸಾಯಣಭಾಷ್ಯಂ

ಅಹಮಿಂದ್ರೋ ಮೃಗಯೆನಮೇತನ್ನಾಮಕಮಸುರಂ ತ್ರುತರ್ವಣ ಏತನ್ನಾಮಕಾಯ ಮಹರ್ಷಯೇ ರಂಧಯಂ । ರಧ್ಯತಿರ್ವಶಗಮನೇ । ವಶಮನಯಂ । ಯದ್ಯಸ್ಮಾಚ್ಛ್ರುತರ್ವಾ ಮಾ ಮಾಮು-

ಜಿಹೀತ॥ ಓಹಾಙ್ ಗತೌ॥ ಅಗಚ್ಛತ್ ।ತದೇವೋಚ್ಯತೇ। ವಯುನಾ ಪ್ರಜ್ಞಾನೇನ ಸ್ತೋತ್ರೇಣಾನುಷಗ್ ನುಷಕ್ತೋಽಭೂತ್ । ಚನೇತಿ ಪೂರಣಃ । ಅಹಂ ವೇಶನೋತೇನ್ನಾಮಾನಂ ನಮ್ರಂ ಪ್ರಹ್ವಂ ಕರಂ । ಅಕಾರ್ಷಂ ॥ ಕರೋತೇರ್ಲುಙಿ ಕೃಮೃದೃರುಹಿಭ್ಯಶ್ಛಂದಸೀತಿ ಚ್ಲೇರಙ್ । ಅಡಭಾವಶ್ಛಾಂದಸಃ ॥ ಅಹಂ ಸವ್ಯಾಯ್ಯೈತನ್ನಾಮಕಾಯ ಪಡ್ಗೃಭಿಮೇತನ್ನಾಮಕಮರಂಧಯಂ ॥

ಪ್ರತಿಪದಾರ್ಥ

ಅಹಂ—ಇಂದ್ರನಾದ ನಾನು । **ಮೃಗಯಂ**—ಮೃಗಯನೆಂಬ ಅಸುರನನ್ನು । **ಶ್ರುತರ್ವಣೇ**—ಶ್ರುತರ್ವಾನ್ ಎಂಬ ಋಷಿಗೆ । **ರಂಧಯಂ**—ವಶಮಾಡಿದೆನು । **ಯತ್**—ಏಕೆಂದರೆ, ಆ ಶ್ರುತರ್ವನು । **ಮಾ**—ನನ್ನನ್ನು । **ಅಜಿಹೀತ**—ಸಮೀಪಿಸಿದನು ಮತ್ತು । **ವಯುನಾ**—ಸ್ತೋತ್ರಾದಿಗಳಿಂದ । **ಆನುಷಕ್ ಚೆನ**—ಸ್ತುತಿಸಿ ನನ್ನ ಆರಾಧನೆಯಲ್ಲಿ ಆಸಕ್ತನಾದನು । **ಅಹಂ**—ನಾನು । **ವೇಶಂ**—ವೇಶನೆಂಬುವನನ್ನು । **ನಮ್ರಂ**—ವಿನೀತನನ್ನಾಗಿ । **ಕರಂ**—ಮಾಡಿದೆನು । **ಅಹಂ**—ನಾನು । **ಷಡ್ಗೃಭಿಂ**—ಷಡ್ಗೃಭಿ ಎಂಬುವನನ್ನು । **ಸವ್ಯಾಯ**—ಸವ್ಯ ಎಂಬುವನ । **ಅರಂಧಯಂ**—ವಶಮಾಡಿದೆನು.

ಭಾವಾರ್ಥ

ಮೃಗಯನೆಂಬುವನನ್ನೂ, ನನ್ನನ್ನು ಸಮೀಪಿಸಿ ಸ್ತೋತ್ರಾದಿಗಳಿಂದ ಆರಾಧಿಸಿದ ಶ್ರುತರ್ವಾ ಎಂಬ ಋಷಿಯ ವಶಮಾಡಿದೆನು; ಹಾಗೆಯೇ ವೇಶನೆಂಬುವನನ್ನು ನಮ್ರ (ವಿನೀತ) ನಾಗಿರುವಂತೆ ಮಾಡಿದೆನು ಮತ್ತು ಷಡ್ಗೃಭಿ ಎಂಬುವನನ್ನು ಸವ್ಯನ ವಶಮಾಡಿದೆನು.

English Translation.

I have brought Mrigaya under subjection to Shrutarvan ; when he came to me, (he was) earnestly engaged in supplication. I humiliated Vesha for Ayu; I subjugated Padgribhi for Savya.

ವಿಶೇಷವಿಷಯಗಳು

ಶ್ರುತರ್ವಾ ಮತ್ತು **ಸವ್ಯ** ಎಂಬಿಬ್ಬರೂ ಋಷಿಗಳು, **ಮೃಗಯು, ವೇಶ, ಷಡ್ಗೃಭಿ** ಎಂಬುವರು ಅಸುರರು. ಇವರ ವಿಷಯದಲ್ಲಿ ಹೆಚ್ಚು ಸಂಗತಿಗಳು ತಿಳಿದುಬಂದಿಲ್ಲ,

ಸಂಹಿತಾಪಾಠಃ

ಅಹಂ ಸ ಯೋ ನವವಾಸ್ತ್ವಂ ಬೃಹದ್ರಥಂ ಸಂ ವೃತ್ರೇವ ದಾಸಂ ವೃತ್ರಹಾ ರುಜಂ ।
ಯದ್ವರ್ಧಯಂತಂ ಪ್ರಥಯಂತಮಾನುಷಗ್ದೂರೇ ಪಾರೇ ರಜಸೋ ರೋಚನಾಕರಂ ॥ ೬ ॥

ಪದಪಾಠಃ

ಅಹಂ । ಸಃ । ಯಃ । ನವ೪ವಾಸ್ತ್ವಂ । ಬೃಹತ್೪ರಥಂ । ಸಂ । ವೃತ್ರಾ೪ಇವ । ದಾಸಂ । ವೃತ್ರ೪ಹಾ ।
ಅರುಜಂ ।
ಯತ್ । ವರ್ಧಯಂತಂ । ಪೃಥಯಂತಂ । ಅನುಷಕ್ । ದೂರೇ । ಪಾರೇ । ರಜಸಃ । ರೋಚನಾ ॥
ಅಕರಂ ॥ ೬ ॥

ಸಾಯಣಭಾಷ್ಯಂ

ಅಹಮಿಂದ್ರಃ ಸೋ೪ಸ್ಮಿ ಯೋ೪ಹಂ ನವವಾಸ್ತ್ವಂ ಬೃಹದ್ರಥಂ ಚ ವೃತ್ರೇವವೃತ್ರಮಿವ ದಾಸ-ಮುಪಕ್ಷಪಯಿತಾರಮಿವ ನವವಾಸ್ತ್ವಂ ಬೃಹದ್ರಥಂ ಚಾರುಜಂ । ಅಹಂ ಭಗ್ನಮಕರವಂ ॥ ರುಜೋ ಭಂಗೇ ॥ ಯದ್ಯದಾ ವರ್ಧಯಂತಂ ವರ್ಧಮಾನಂ ಪೃಥಯಂತಂ ಪೃಥಮಾನಂ ಚೋಭೌ ಶತ್ರೂ ಅನುಷಗಾನುಷಕ್ತಃ ಸನ್ರೋಚನಾ ರೋಚನಸ್ಯ ರಜಸೋ ಲೋಕಸ್ಯ ದೂರೇ ಪಾರೇ೪ಕರಂ ಕೃತ-ವಾನಸ್ಮಿ ॥

ಪ್ರತಿಪದಾರ್ಥ

ಯತ್—ಯಾವಾಗ । **ವರ್ಧಯಂತಂ**—ವೃದ್ಧಿಯನ್ನು ಹೊಂದುತ್ತಿರುವವನೂ । **ಪೃಥಯಂತಂ**—ವಿಸ್ತಾರವಾದ ಪ್ರದೇಶದಲ್ಲಿ ಹರಡುತ್ತಿರುವವನೂ ಆದ ಶತ್ರುವನ್ನು । **ಅನುಷಕ್**—ಶತ್ರುನಿಗ್ರಹದಲ್ಲಿ ಆಸಕ್ತನಾಗಿ ನಾನು । **ರೋಚನಾ**—ಪ್ರಕಾಶಮಾನವಾದ । **ರಜಸಃ**—ಲೋಕದ । **ದೂರೇ ಪಾರೇ**—ದೂರಪ್ರದೇಶದ ಕೊನೆಗೆ । **ಅಕರಂ**—ಓಡಿಸಿದೆನೋ ಆಗ । **ಯಃ**—ಯಾವ ನಾನು । **ನವವಾಸ್ತ್ವಂ**—ನವವಾಸ್ತ್ವನೆಂಬುವನನ್ನೂ । **ಬೃಹದ್ರಥಂ**—ಬೃಹದ್ರಥನೆಂಬುವನನ್ನೂ । **ವೃತ್ರೇವ**—ವೃತ್ರನನ್ನು ಸಂಹರಿಸುವಂತೆಯೂ । **ದಾಸಂ**—ನಾಶಕನಾದ ಶತ್ರುವನ್ನು ಕೊಲ್ಲುವಂತೆಯೂ । **ಅರುಜಂ**—ಧ್ವಂಸಮಾಡಿದೆನೋ । **ಅಹಂ ಸಃ**—ಆ ಇಂದ್ರನೇ ನಾನು.

ಭಾವಾರ್ಥ

ವೃದ್ಧಿಯನ್ನು ಹೊಂದುತ್ತಾ ಎಲ್ಲೆಲ್ಲೂ ಹರಡುತ್ತಿರುವ ಶತ್ರುವಿನ ನಿಗ್ರಹದಲ್ಲಿ ಆಸಕ್ತನಾದ ನಾನು ಪ್ರಕಾಶಮಾನವಾದ ಲೋಕದ ದೂರದಲ್ಲಿರುವ ಕೊನೆಯಭಾಗಕ್ಕೆ ಆ ಶತ್ರುವನ್ನು ಓಡಿಸಿವೆನು ಮತ್ತು ನವವಾಸ್ತ್ವನನ್ನೂ, ಬೃಹದ್ರಥನೆಂಬುವನನ್ನೂ ನಾಶಕರವಾದ ಶತ್ರುವನ್ನು ಕೊಲ್ಲುವಂತೆ ಧ್ವಂಸಮಾಡಿದ ಇಂದ್ರನೇ ನಾನು.

English Translation

I, the slayer of Vritra, am he who crushed Navavastwa and Brihadratha, (who crushed) Dasa like a Vritra, when I drove to the distant shore of the shining world, (both) my augmenting and outstretched (foes) one after the other.

ವಿಶೇಷವಿಷಯಗಳು

ನವವಾಸ್ತ್ವಂ, ಬೃಹದ್ರಥಂ—ಈ ಎರಡು ಹೆಸರುಗಳು ಪ್ರಕೃತ ಋಕ್ಕಿನಲ್ಲಿಯೂ, ಋ. ಸಂ. ೧-೩೬-೧೮ ರಲ್ಲಿಯೂ ಪಠಿತವಾಗಿದೆ. ನವವಾಸ್ತ್ವಶಬ್ದವು ಮಾತ್ರ ಋ. ಸಂ. ೬-೨೦-೧೧ ರಲ್ಲಿಯೂ ಪಠಿತವಾಗಿದೆ. ನವವಾಸ್ತ್ವನು ೧-೩೬-೧೮ ರಲ್ಲಿ ಅಗ್ನಿಗೆ ಮಿತ್ರನೆಂದೂ, ೬-೨೦-೧೧ ರಲ್ಲಿ ಇಂದ್ರನಿಗೆ ಬೇಕಾದವನೆಂದೂ ಹೇಳಿದೆ. ಪ್ರಕೃತ ಋಕ್ಕಿನಲ್ಲಿ ಇಂದ್ರನಿಗೆ ವಿರೋಧಿಯೆಂದು ಉಕ್ತವಾಗಿದೆ. ಬೃಹದ್ರಥನು ಬೇರೆ ವ್ಯಕ್ತಿಯೇ ಅಥವಾ ಈ ಶಬ್ದವು ನವವಾಸ್ತ್ವನಿಗೆ ವಿಶೇಷಣಪದವೇ ಎಂಬುದು ಸ್ಪಷ್ಟವಾಗಿಲ್ಲ.

ಸಂಹಿತಾಪಾಠಃ

ಅಹಂ ಸೂರ್ಯಸ್ಯ ಪರಿ ಯಾಮ್ಯಾಶುಭಿಃ ಪ್ರೈತಶೇಭಿರ್ವಹಮಾನ ಓಜಸಾ ।
ಯನ್ಮಾ ಸಾವೋ ಮನುಷ ಆಹ ನಿರ್ಜಿ ಯುಧಕ್ಕೃಷ್ಟೇ ದಾಸಂ ಕೃತ್ವ್ಯಂ
ಹಥೈಃ ॥ ೭ ॥

ಪದಪಾಠಃ

ಅಹಂ । ಸೂರ್ಯಸ್ಯ । ಪರಿ । ಯಾಮಿ । ಆಶುಽಭಿಃ । ಪ್ರ । ಏತಶೇಭಿಃ । ವಹಮಾನಃ । ಓಜಸಾ ।
ಯತ್ । ಮಾ । ಸಾವಃ । ಮನುಷಃ । ಆಹ । ನಿಃಽನಿಜೇ । ಯುಧಕ್ । ಕೃಷ್ಟೇ । ದಾಸಂ । ಕೃತ್ವ್ಯಂ ।
ಹಥೈಃ ॥ ೭ ॥

ಸಾಯಣಭಾಷ್ಯಂ

ಅಹಂ ಸೂರ್ಯಸ್ಯ ದೇವಸ್ಯಾಶುಭಿಃ ಶೀಘ್ರಗಾಮಿಭಿರೇತಶೇಭಿರೇತಶವರ್ಣೈರಶ್ವೈರ್ವಹಮಾನ ಉಹ್ಯಮಾನ ಓಜಸಾತ್ಮೀಯೇನ ಬಲೇನ ಪ್ರಕರ್ಷೇಣ ಪರಿ ಯಾಮಿ । ಪರಿಗಚ್ಛಾಮಿ ಸೂರ್ಯಾತ್ಮನಾ । ಕಿಂಚ ಯದ್ಯದಾ ಮಾ ಮಾಂ ಮನುಷೋ ಮನುಷ್ಯಸ್ಯ ಸಾವಃ ಸೋಮಾಭಿಷವ ಆಹ ಬ್ರೂತೇ । ಆಹ್ವಯತೀತ್ಯರ್ಥಃ । ಕಿಮರ್ಥಮಾಹ । ನಿರ್ಜಿಜೇ । ನಿರ್ಜಿಗಿತಿ ರೂಪನಾಮ । ಯಜ್ಞಸ್ವರೂಪಾಯೇತ್ಯರ್ಥಃ । ತದಾನೀಂ ಕೃತ್ವ್ಯಂ ಕರ್ತವ್ಯಂ । ಹಂತವ್ಯಮಿತ್ಯರ್ಥಃ । ದಾಸಮುಪಕ್ಷಪಯಿತಾರಂ ಶತ್ರುಂ ಹಥೈರ್ಹನನಸಾಧನೈರ್ಯುಧಕ್ಕೃಷೇ। ಪೃಥಕ್ಕರೋಮಿ । ಯುಧಗಿತ್ಯವ್ಯಯಂ ಪೃಥಗರ್ಥೇ ॥

ಪ್ರತಿಪದಾರ್ಥ

ಯತ್—ಯಾವಾಗ । **ಮಾ**—ನನ್ನನ್ನು । **ಮನುಷಃ**—ಮನುಷ್ಯರಾದ ಯಜಮಾನರು ಆಚರಿಸುವ। **ಸಾವಃ**—ಸೋಮರಸವನ್ನು ಹಿಂಡುವ ಕರ್ಮವು । **ನಿರ್ಜಿಜೇ**—ಯಜ್ಞನಿರ್ವಹಣಕ್ಕಾಗಿ । **ಆಹ**—ನನ್ನನ್ನು ಕರೆಯುವುದೋ ಆಗ । **ಅಹಂ**—ನಾನು । **ಸೂರ್ಯಸ್ಯ**—ಸೂರ್ಯದೇವನ । **ಆಶುಭಿಃ**—ಶೀಘ್ರಗಾಮಿ

ಗಳಾದ । **ಏತಶೇಭಿಃ**—ಏತಶವರ್ಣಯುಕ್ತವಾದ ಅಶ್ವಗಳಿಂದ । **ವಹಮಾನಃ**—ಒಯ್ಯಲ್ಪಡುವವನಾಗಿ । **ಓಜಸಾ**—ನನ್ನ ಸ್ವಂತ ಸಾಮರ್ಥ್ಯದಿಂದ । **ಪರಿ ಯಾಮಿ**—ಸೂರ್ಯರೂಪದಿಂದ (ಯಜ್ಞಭೂಮಿಗೆ) ಹೋಗುತ್ತೇನೆ (ಆಗ) । **ಕೃತ್ವ್ಯಂ**—ನನ್ನ ಕರ್ತವ್ಯವಾದ । **ದಾಸಂ**—ಶತ್ರುವಧಕರ್ಮವನ್ನು । **ಹಥ್ಯೈಃ**—ಹನನ ಸಾಧನವಾದ ಆಯುಧಗಳಿಂದ । **ಋಧಕ್ ಕೃಷೇ**—ಪ್ರತ್ಯೇಕವಾಗಿ (ಮುಖ್ಯವಾಗಿ) ಮಾಡುತ್ತೇನೆ.

ಭಾವಾರ್ಥ

ಮನುಷ್ಯರು ಮಾಡುವ ಯಜ್ಞದಲ್ಲಿ ಸೋಮರಸವನ್ನು ಹಿಂಡುವ ಕರ್ಮವು ಯಾವಾಗ ನನ್ನನ್ನು ಕರೆಯುವುದೋ ಎಂದರೆ ಯಜ್ಞಮಾಡುವ ಯಜಮಾನರು ಸೋಮರಸವನ್ನು ಹಿಂಡಿ ಸಿದ್ಧಪಡಿಸಿ ಸೋಮಪಾನಾರ್ಥವಾಗಿ ನನ್ನನ್ನು ಪ್ರಾರ್ಥಿಸಿ ಕರೆಯುವರೋ ಆಗ ಅವರ ಯಜ್ಞನಿರ್ವಹಣಕ್ಕಾಗಿ ನಾನು ಸೂರ್ಯನ ಶೀಘ್ರಗಾಮಿಗಳಾದ ಏತಶವರ್ಣದ ಅಶ್ವಗಳಿಂದ ಒಯ್ಯಲ್ಪಟ್ಟು ಅವರ ಯಜ್ಞಭೂಮಿಗೆ ನನ್ನ ಸ್ವಂತ ಶಕ್ತಿಸಾಮರ್ಥ್ಯಾದಿಗಳಿಂದ ಸೂರ್ಯರೂಪನಾಗಿ ಹೋಗುತ್ತೇನೆ ಮತ್ತು ಆಗ ನನ್ನ ಕರ್ತವ್ಯಕರ್ಮವಾದ ಶತ್ರುಹನನಕಕಾರ್ಯವನ್ನು ಹನನಸಾಧನವಾದ ವಜ್ರಾದ್ಯಾಯುಧಗಳಿಂದ ಮುಖ್ಯವಾಗಿ ನೆರವೇರಿಸುತ್ತೇನೆ.

English Translation

Conveyed by the swift white horses of Surya, I hasten forth by my power; when the effused libation of a man invokes me to the brillient form of the sacrifice, I drive off with my weapons the destroyer who is to be slain.

ಸಂಹಿತಾಪಾಠಃ

ಅಹಂ ಸಪ್ತಹಾ ನಹುಷೋ ನಹುಷ್ಟರಃ ಪ್ರಾಶ್ರಾವಯಂ ಶವಸಾ ತುರ್ವಶಂ ಯದುಂ ।
ಅಹಂ ನ್ಯ೧ನ್ಯಂ ಸಹಸಾ ಸಹಸ್ಕರಂ ನವ ವ್ರಾಧತೋ ನವತಿಂ ಚ ವಕ್ಷಯಂ॥

ಪದಪಾಠಃ

ಅಹಂ । ಸಪ್ತಽಹಾ । ನಹುಷಃ । ನಹುಃತರಃ । ಪ್ರ । ಅಶ್ರವಯಂ । ಶವಸಾ । ತುರ್ವಶಂ । ಯದುಂ ॥
ಅಹಂ । ನಿ । ಅನ್ಯಂ । ಸಹಸಾ । ಸಹಃ । ಕರಂ । ನವ । ವ್ರಾಧತಃ । ನವತಿಂ । ಚ । ವಕ್ಷಯಂ ॥ ೯ ॥

ಸಾಯಣಭಾಷ್ಯಂ

ಅಹಂ ಸಪ್ತಸಂಖ್ಯಾಕಾನಾಂ ಪುರಾಂ ಶತ್ರೂಣಾಂ ವಾ ಹಂತಾ। ಸಪ್ತ ಯೆತ್ಪುರಃ ಶರ್ಮ ಶಾರದೀಃ । ಋ-೧-೧೭೪-೨ । ಇತ್ಯುಕ್ತಂ । ಯದ್ವಾ । ಸಪ್ತ ನಮುಚ್ಯಾದೀನ್ ಹತವಾನ್ । ಕಿಂಚ

ನಹುಷೋ ಬಂಧಕಸ್ಯಾಪಿ ನಹುಷ್ಪರೋ ಬಂಧಕತರೋ೭ಹಂ ಶವಸಾ ಬಲೇನ ತುರ್ವಶಂ ಯದುಂ ಚ ಪ್ರಾಶ್ರಾವಯಂ । ಶತ್ರುಸಂಬಂಧಿಗವಾದಿಪ್ರದಾನೇನ ಶ್ರಾವಿತವಾನಸ್ಮಿ । ತೌ ಯಥಾ ಲೋಕೇ ಶ್ರುತೌ ಭವತಃ ತಥಾಕಾರ್ಷಮಿತ್ಯರ್ಥಃ । ಕಿಂಚಾಹಮನ್ಯಂ ಚಾಸ್ತೋತ್ರಾರಂ ಸಹಸಾ ಬಲೇನ ಸಹೋ ಬಲಿನಂ ಕರಂ । ಅಕಾರ್ಷಂ ॥ ಕರೋತೇರ್ಲುಙಿ ಕೃಮೃದೃರುಹೀತಿ ಚ್ಲೇರಙ್ । ಅಡಭಾವ ಆರ್ಷಃ ॥ ಕಿಂಚ ನವ ನವಸಂಖ್ಯಾಕಾ ನವತಿಂ ಚ ನವತಿಸಂಖ್ಯಾಕಾಶ್ಚ । ನವೋತ್ತರನವತಿಮಿತ್ಯರ್ಥಃ । ಕಥಂಭೂತಾಃ । ವ್ರಾಧತೋ ವರ್ಧಮಾನಾಃ । ವಕ್ಷಯಂ । ಅವಹಂ । ವ್ಯನಾಶಯಮಿತ್ಯರ್ಥಃ ॥

ಪ್ರತಿಪದಾರ್ಥ

ಅಹಂ—ನಾನು । **ಸಪ್ತಹಾ**—ಏಳು ಶತ್ರುನಗರಗಳ ಧ್ವಂಸಕನು ಅಥವಾ ನಮುಚಿಯೇ ಮೊದಲಾದ ಏಳುಜನ ಅಸುರರ ಹಂತಕನು । (**ಅಹಂ**—ನಾನು) । **ನಹುಷಃ**—ಬಂಧನಕ್ಕೆ । **ನಹುಷ್ಪರಃ**—ಬಂಧಕನು । **ಶವಸಾ**—ನನ್ನ ಶಕ್ತಿಸಾಮರ್ಥ್ಯಗಳಿಂದ । **ತುರ್ವಶಂ**—ತುರ್ವಶನೆಂಬುವನನ್ನೂ । **ಯದುಂ ಚ**—ಯದುವೆಂಬುವನನ್ನೂ । **ಪ್ರಾಶ್ರಾವಯಂ**—(ಶತ್ರುಗಳ ಗೋವುಗಳನ್ನು ಕೊಟ್ಟು) ಪ್ರಸಿದ್ಧರನ್ನಾಗಿ ಮಾಡಿದ್ದೇನೆ । **ಅಹಂ**—ನಾನು । **ಅನ್ಯಂ**—ನನ್ನನ್ನು ಸ್ತುತಿಸುವ ಇನ್ನೊಬ್ಬನನ್ನು । **ಸಹಸಾ**—ನನ್ನ ಸಾಮರ್ಥ್ಯದಿಂದ । **ಸಹಃ**—ಶಕ್ತಿವಂತನನ್ನಾಗಿ । **ಕಗಂ**—ಮಾಡಿದ್ದೇನೆ (ಮತ್ತು) । **ನವ ನವತಿಂ ಚ**—ತೊಂಭತ್ತೊಂಭತ್ತು । **ವ್ರಾಧತಃ**—ಬಲಯುತರಾದ ಶತ್ರುಗಳನ್ನು । **ವಕ್ಷಯಂ**—ನಾಶಮಾಡಿದ್ದೇನೆ.

ಭಾವಾರ್ಥ

ನಾನು ಏಳು ಶತ್ರುನಗರಗಳ ಅಥವಾ ನಮುಚಿಯೇ ಮೊದಲಾದ ಏಳುಮಂದಿ ಅಸುರರ ಹಂತಕನು. ಬಂಧನಕ್ಕೂ ನಾನು ಬಂಧಕನು. ನನ್ನ ಶಕ್ತಿಸಾಮರ್ಥ್ಯಗಳಿಂದ ತುರ್ವಶ ಮತ್ತು ಯದು ಎಂಬಿಬ್ಬರನ್ನು ಪ್ರಸಿದ್ಧರನ್ನಾಗಿ ಮಾಡಿದ್ದೇನೆ. ನನ್ನನ್ನು ಸ್ತುತಿಸುವವನನ್ನು ನನ್ನ ಸಾಮರ್ಥ್ಯದಿಂದ ಶಕ್ತಿಯುತನಾಗುವಂತೆ ಮಾಡಿದ್ದೇನೆ. ಅತ್ಯಂತ ಬಲಯುತರಾದ ತೊಂಭತೊಂಭತ್ತುಮಂದಿ ಶತ್ರುಗಳನ್ನು ನಾಶಮಾಡಿದ್ದೇನೆ.

English Translation

I am the slayer of seven (Asuras) : I am the especial bond of bonds ; I have made Turvasha and Yadu famous through prowess : I have strengthened another (worshipper) with strength : I have demolished ninety-and-nine powerful (foes).

ವಿಶೇಷವಿಷಯಗಳು

ತುರ್ವಶಂ ಯದುಂ—**ಯದು** ಮತ್ತು **ತುರ್ವಶ** ಎಂಬ ಎರಡು ವ್ಯಕ್ತಿಗಳ ಹೆಸರು ಬರುವಕಡೆಗಳಲ್ಲೆಲ್ಲಾ ಅವರಿಬ್ಬರೂ ರಾಜರ್ಷಿಗಳೆಂದೂ, ಇಂದ್ರಾದಿಗಳ ಅನುಗ್ರಹಕ್ಕೆ ಪಾತ್ರರಾದವರೆಂದೂ ತಿಳಿಯುತ್ತದೆ.

ಅಗ್ನಿನಾ ತುರ್ವಶಂ ಯದುಂ ಪರಾವತ ಉಗ್ರಾದೇವಾ ಹವಾಮಹೇ ।

(ಋ. ಸಂ. ೧-೩೬ ೧೮)

ತ್ವಮಾವಿಥ ನರ್ಯಂ ತುರ್ವಶಂ ಯದುಂ ತ್ವಂ ತುರ್ವೀತಿಂ ವಯ್ಯಂ ಶತಕ್ರತೋ ।

(ಋ. ಸಂ. ೧-೫೪-೬)

ಇತ್ಯಾದಿ ಋಕ್ಕುಗಳಲ್ಲಿ ಇಬ್ಬರು ರಾಜರ್ಷಿಗಳೂ ಅಗ್ನಿಯ ಮತ್ತು ಇಂದ್ರನ ರಕ್ಷಣೆಯನ್ನು ಪಡೆದುದಾಗಿ ಹೇಳಲ್ಪಟ್ಟಿದೆ. ತುರ್ವಶನ ಮುಖ್ಯವಾದ ಸಾಹಸಕೃತ್ಯವೆಂದರೆ, ಸುದಾಸನೊಂದಿಗೆ ಯುದ್ಧಮಾಡಿದುದು.

ಪುರೋಳಾ ಇತ್ತುರ್ವಶೋ ಯಕ್ಷುರಾಸೀದ್ರಾಯೇ ಮತ್ಸ್ಯಾಸೋ ನಿಶಿತಾ ಅಪೀವ ।
ಶ್ರುಷ್ಟಿಂ ಚಕ್ರುರ್ಭೃಗವೋ ದ್ರುಹ್ಯವಶ್ಚ ಸಖಾ ಸಖಾಯಮತರದ್ದಿವೋದಾಸಃ ॥

(ಋ. ಸಂ. ೭-೧೮-೬)

ಎಂಬ ಋಕ್ಕಿನಲ್ಲಿ ತುರ್ವಶನ ಯುದ್ಧದ ವಿವರಣೆ ಇದೆ. ಆದರೆ ತುರ್ವಶನು ಇಲ್ಲಿ ಇಂದ್ರನಿಂದ ಸಹಾಯವನ್ನು ಪಡೆದನೇ ಅಥವಾ ಸೋಲಿಸಲ್ಪಟ್ಟನೇ ಎಂಬುದು ವಿಶದವಾಗಿಲ್ಲ. ಸಾಯಣರು ಎರಡುವಿಧವಾದ ಅರ್ಥವನ್ನೂ ಹೇಳಿದ್ದಾರೆ. ಮೊದಲನೆಯದಾಗಿ ತುರ್ವಶನು ಇಂದ್ರನ ಸಖನಾದ ಸುದಾಸನೊಂದಿಗೆ ಯುದ್ಧಕ್ಕೆ ಹೋದಾಗ ಇಂದ್ರನು ತುರ್ವಶನನ್ನು ನಿಗ್ರಹಿಸಿ ತನ್ನ ಸ್ನೇಹಿತನನ್ನು ರಕ್ಷಿಸಿದನು ಎಂದೂ, ಎರಡನೆಯದಾಗಿ ತುರ್ವಶನಿಗೂ ಅವನ ವಿರೋಧಿಗಳಿಗೂ ಯುದ್ಧವು ಸಂಭವಿಸಿದ ಕಾಲದಲ್ಲಿ ಇಂದ್ರನು ತನ್ನ ಸಖನಾದ ತುರ್ವಶನಿಗೆ ಸಹಾಯಮಾಡಿದನೆಂದೂ ಹೇಳಿದೆ. ಆದ್ದರಿಂದ ಈ ಋಕ್ಕಿನ ತಾತ್ಪರ್ಯವು ವಿಶದವಾಗಿಲ್ಲ. ಇದೇರೀತಿ ಯದು ಮತ್ತು ತುರ್ವಶ ಇಬ್ಬರೂ ಸಹ ಇಂದ್ರನಿಂದ ಪರಾಜಯವನ್ನು ಪಡೆದುದಾಗಿ—

ಪುರಃ ಸದ್ಯ ಇತ್ಥಾಧಿಯೇ ದಿವೋದಾಸಾಯ ಶಂಬರಂ । ಅಧ ತ್ಯಂ ತುರ್ವಶಂ ಯದುಂ ॥

(ಋ. ಸಂ. ೯-೬೧-೨)

ಎಂಬ ಋಕ್ಕಿನಲ್ಲಿ ಹೇಳಿದೆ. ಇದರಿಂದ ಇಂದ್ರನು ತನ್ನ ಸಖನಾದ ದಿವೋದಾಸನಿಗಾಗಿ ಯದುವನ್ನೂ ತುರ್ವಶನನ್ನೂ ನಿಗ್ರಹಿಸಿದುದಾಗಿ ಕಂಡುಬರುತ್ತದೆ. ಆದರೆ—

ಪ್ರಯತ್ಸಮುದ್ರಮತಿ ಶೂರ ಪರ್ಷಿ ಪಾರಯಾ ತುರ್ವಶಂ ಯದುಂ ಸ್ವಸ್ತಿ ।

(ಋ. ಸಂ. ೧-೧೭೪-೯)

ಉತ ತ್ಯಾ ತುರ್ವಶಾಯದೂ ಅಸ್ನಾತಾರಾ ಶಚೀಪತಿಃ । ಇಂದ್ರೋ ವಿದ್ವಾ ಅವಾರಯತ್ ॥

(ಋ. ಸಂ. ೪-೩೦-೧೭)

ತ್ವಮಪೋ ಯದವೇ ತುರ್ವಶಾಯಾರಮಯಃ ಸುದುಘಾಃ ಪಾರ ಇಂದ್ರ ।

(ಋ. ಸಂ. ೫-೩೧-೮)

ಮಹತ್ತೇ ವೃಷ್ಣೋ ಅಭಿಚಕ್ಷ್ಯಂ ಕೃತಂ ಪಶ್ಯೇಮ ತುರ್ವಶಂ ಯದುಂ ।

(ಋ. ಸಂ. ೮-೪-೭)

ಇತ್ಯಾದ್ಯನೇಕ ಋಕ್ಕುಗಳಲ್ಲಿ ಯದು ಮತ್ತು ತುರ್ವಿಶರಿಬ್ಬರೂ ಇಂದ್ರನಿಂದ ಸಹಾಯವನ್ನು ಪಡೆದ ವಿಷಯವು ಉಕ್ತವಾಗಿದೆ.

ಸಂಹಿತಾಪಾಠಃ

ಅಹಂ ಸಪ್ತ ಸ್ರವತೋ ಧಾರಯಂ ವೃಷಾ ದ್ರವಿತ್ನ್ವಃ ಪೃಥಿವ್ಯಾಂ ಸೀರಾ ಅಧಿ ।
ಅಹಮರ್ಣಾಂಸಿ ವಿ ತಿರಾಮಿ ಸುಕ್ರತುರ್ಯುಧಾ ವಿದಂ ಮನವೇ ಗಾತುಮಿಷ್ಟಯೇ ॥ ೮ ॥

ಪದಪಾಠಃ

ಅಹಂ । ಸಪ್ತ । ಸ್ರವತಃ । ಧಾರಯಂ । ವೃಷಾ । ದ್ರವಿತ್ನ್ವಃ । ಪೃಥಿವ್ಯಾಂ । ಸೀರಾಃ । ಅಧಿ ।
ಅಹಂ । ಅರ್ಣಾಂಸಿ । ವಿ । ತಿರಾಮಿ । ಸುಽಕ್ರತುಃ । ಯುಧಾ । ವಿದಂ । ಮನವೇ । ಗಾತುಂ । ಇಷ್ಟಯೇ ॥

ಸಾಯಣಭಾಷ್ಯಂ

ವೃಷಾ ವರ್ಷಿತೋಽಹಂ ಸಪ್ತ ಸ್ರವತಃ ಸ್ರವಂತೀರ್ನದೀರ್ಧಾರಯಂ । ಅಧಾರಯಂ । ಕೀದೃಶ್ಯಸ್ತಾಃ । ದ್ರವಿತ್ನ್ವೀ ದ್ರವಂತೀಃ ॥ ವಾ ಛಂದಸೀತಿ ಪೂರ್ವಸವರ್ಣದೀರ್ಘಾಭಾವಃ ॥ ಸೀರಾಃ ಸರಣಶೀಲಾಃ । ಕುತ್ರ । ಪೃಥಿವ್ಯಾಂ । ಸುಕ್ರತುಃ ಶೋಭನಕರ್ಮಾಹಮರ್ಣಾಂಸ್ಯುದಕಾನಿ ವಿ ತಿರಾಮಿ । ಪ್ರಯಚ್ಛಾಮಿ । ಕಿಂಚ ಮನವೇ ಮನುಷ್ಯಾಯೇಷ್ಟಯೇ ತಸ್ಯ ಗಮನಾಯ ಗಾತುಂ ಮಾರ್ಗಂ ಯುಧಾ ಸಂಪ್ರಹಾರೇಣ । ನಿರೋಧಪರಿಹಾರೇಣೇತ್ಯರ್ಥಃ । ವಿದಂ । ಅಲಭಂ । ಪ್ರಾಯಚ್ಛಮಿತ್ಯರ್ಥಃ ॥ ವಿದೇರ್ಲಾಭಾರ್ಥಸ್ಯ ಪುಷಾದಿತ್ವಾತ್ । ಪಾ । ೩-೧-೫೫ । ಚ್ಲೇರಙ್ ॥

ಪ್ರತಿಪದಾರ್ಥ

ವೃಷಾ—ಇಷ್ಟಾರ್ಥಪ್ರದನಾದ । **ಅಹಂ**—ನಾನು (ಇಂದ್ರನು) । **ಪೃಥಿವ್ಯಾಂ**—ಭೂಮಿಯ ಮೇಲೆ । **ದ್ರವಿತ್ನ್ವಃ**—ಶೀಘ್ರವಾಗಿ ಪ್ರವಹಿಸುವವೂ । **ಸೀರಾಃ**—ಚಲಿಸುವವೂ । **ಸ್ರವತಃ**—ಹರಿಯುತ್ತಿರುವ ನದಿಗಳ । **ಧಾರಯಂ**—ಧಾರಕನಾಗಿದ್ದೇನೆ । **ಸುಕ್ರತುಃ**—ಶ್ರೇಷ್ಠವಾದ ಸಾಹಸಕರ್ಮಗಳನ್ನೆಸಗುವ । **ಅಹಂ**—ನಾನು । **ಅರ್ಣಾಂಸಿ**—ವೃಷ್ಟ್ಯುದಕಗಳನ್ನು । **ವಿ ತಿರಾಮಿ**—(ಜನರಿಗೆ) ಅನುಗ್ರಹಿಸಿಕೊಡುತ್ತೇನೆ । **ಮನವೇ**—ಮನುಷ್ಯರಿಗೆ । **ಇಷ್ಟಯೇ**—ಸಂಚಾರಾರ್ಥವಾಗಿ । **ಗಾತುಂ**—ಮಾರ್ಗವನ್ನು । **ಯುಧಾ**—ವಿಘ್ನಪರಿಹಾರದಿಂದ । **ವಿದಂ**—ಸುಗಮವನ್ನಾಗಿ ಮಾಡುತ್ತೇನೆ.

ಭಾವಾರ್ಥ

ಇಷ್ಟಾರ್ಥಪ್ರದನಾದ ನಾನು (ಇಂದ್ರನು) ಭೂಮಿಯಮೇಲೆ ವೇಗವಾಗಿ ಪ್ರವಹಿಸುತ್ತಾ ಮುಂದೆ ಸರಿಯುತ್ತಿರುವ ನದಿಗಳ ಧಾರಕನೂ ಪೋಷಕನೂ ಆಗಿದ್ದೇನೆ. ಅನೇಕ ಶ್ರೇಷ್ಠಪರಾಕ್ರಮಕರ್ಮಗಳನ್ನೆಸಗುವ ನಾನು

ವೃಷ್ಟಿದ್ವಾರಾ ಉದಕಗಳನ್ನು ಜನರಿಗೆ ಅನುಗ್ರಹಿಸಿಕೊಡುತ್ತೇನೆ. ಮನುಷ್ಯರು ಸಂಚಾರಮಾಡಲು ಮಾರ್ಗವನ್ನು ವಿಘ್ನಾದಿಗಳಿಂದ ರಹಿತವಾಗಿಯೂ, ಸುಗಮವಾಗಿಯೂ ಆಗುವಂತೆ ಮಾಡುತ್ತೇನೆ.

English Translation

The showerer (of rain), I supported the sevan rivers flowing and meandering over the earth : doer of good deeds, I spread out the waters : I found by war a path for man to go in.

ಸಂಹಿತಾಪಾಠಃ

ಅಹಂ ತದಾಸು ಧಾರಯಂ ಯದಾಸು ನ ದೇವಶ್ಚನ ತ್ವಷ್ಟಾಧಾರಯದ್ರುಶತ್।
ಸ್ವಾರ್ಹಂ ಗವಾಮೂಧಃಸು ವಕ್ಷಣಾಸ್ವಾ ಮಧೋರ್ಮಧ್ವು ಶ್ವಾತ್ರ್ಯಂ
ಸೋಮಮಾಶಿರಂ ॥ ೧೦ ॥

ಪದಪಾಠಃ

ಅಹಂ । ತತ್ । ಆಸು । ಧಾರಯಂ । ಯತ್ । ಆಸು । ನ । ದೇವಃ । ಚನ । ತ್ವಷ್ಟಾ । ಅಧಾರಯತ್ । ರುಶತ್ ।
ಸ್ವಾರ್ಹಂ । ಗವಾಂ । ಊಧಃಸು । ವಕ್ಷಣಾಸು । ಆ । ಮಧೋಃ । ಮಧು । ಶ್ವಾತ್ರ್ಯಂ । ಸೋಮಂ । ಆಶಿರಂ ॥ ೧೦ ॥

ಸಾಯಣಭಾಷ್ಯಂ

ಅಹಂ ತತ್ವಸಿದ್ಧಂ ಪಯ ಆಸು ಗೋಷು ಧಾರಯಂ । ಧೃತವಾನಸ್ಮಿ । ಧೃಞ್ ಧಾರಣೇ । ಣ್ಯಂತಸ್ಯ ಲಙಿ ರೂಪಂ ॥ ಯತ್ಪಯ ಆಸು ಗೋಷು ದೇವಶ್ಚನ ತ್ವಷ್ಟಾ ದೇವತಿಲ್ವೀ ಸೂರ್ಯೋ ವಾ ದೇವೋ ನ ಚನಾಧಾರಯತ್ ಧರ್ತುಂ ನಾಶಕ್ನೋತ್ । ಕೀದೃಕ್ ಪಯೋಽಧಾರಯಮಿತಿ ಚೇತ್ ಉಚ್ಯತೇ । ರುಶದ್ವಿಪ್ತಂ ಸ್ವಾರ್ಹಂ ಸ್ಪೃಹಣೀಯಂ । ಕೇಷು ಪ್ರದೇಶೇಷ್ವಿತಿ ಉಚ್ಯತೇ । ಗವಾಮೂಧಃಸು ಉದ್ಧತತರೇಷು ಗವಾಂ ಪಯೋಧಾರಣಪ್ರದೇಶೇಷು । ಕಿಂಚ ಮಧೂದಕಂ ವಕ್ಷಣಾಸು ನದೀನಾಮೈತ್ । ವಹನಶೀಲಾಸು ನದೀಷು ಧಾರಯಾಮೀತ್ಯನುಷಜ್ಯತೇ । ನದ್ಯುದಕಧಾರಣಸ್ಯಾವಧಿರುಚ್ಯತೇ । ಆ ಮಧೋರೋದಕೋತ್ಪತ್ತೇಃ । ಆಗಾಮಿವರ್ಷಸಮಯಪರ್ಯಂತಮಿತ್ಯರ್ಥಃ । ಕೀದೃಶಂ ಮಧ್ವಿತಿ ತದುಚ್ಯತೇ । ಶ್ವಾತ್ರ್ಯಂ । ಶ್ವಾತ್ರಮಿತಿ ಕ್ಷಿಪ್ರನಾಮ । ಕ್ಷಿಪ್ರಗಮನಾರ್ಹಂ । ಯದ್ವಾ । ಶ್ಯಾತ್ರ್ಯಮಿತ್ಯುತ್ತರತ್ರ ಸಂಬಧ್ಯತೇ । ಶ್ವಾತ್ರ್ಯಂ ಸುಖಾವಹಂ ಸೋಮಂ ಪ್ರತ್ಯಾಶಿರಂ ಧಾರಯಂ ॥

ಪ್ರತಿಪದಾರ್ಥ

ಯೆತ್—ಯಾವ ಹಾಲನ್ನು । **ಅಸು**—ಗೋವುಗಳಲ್ಲಿ । **ದೇವಶ್ಚನ**—ಇತರ ಯಾವ ದೇವನಾಗಲಿ । **ತ್ವಷ್ಟಾ**—ದೇವಶಿಲ್ಪಿಯಾದ ತ್ವಷ್ಟೃವಾಗಲಿ ಅಥವಾ ಸೂರ್ಯನಾಗಲಿ । **ನ ಚಿನ ಅಧಾರಯತ್**—ತುಂಬಲು ಸಮರ್ಥನಾಗಲಿಲ್ಲವೋ ಅಂತಹ । **ರುಶತ್**—ಪ್ರಕಾಶಮಾನವಾದುದೂ (ಶ್ರೇಷ್ಠವಾದುದೂ) । **ಪಾರ್ಶ್ವಂ**—ಎಲ್ಲರಿಗೂ ಬೇಕಾಗಿರುವುದೂ ಆದ । **ತತ್**—ಆ ಹಾಲನ್ನು । **ಅಸು**—ಆ ಗೋವುಗಳಲ್ಲಿ ಎಂದರೆ । **ಗವಾಂ ಊಧಸ್ಸು**—ಅವುಗಳ ಸ್ತನಗಳಲ್ಲಿ । **ಅಹಂ**—ನಾನು । **ಧಾರಯಂ**—ತುಂಬಿದ್ದೇನೆ । **ವಕ್ಷಣಾಸು**—ಪ್ರವಹಿಸುವ ನದಿಗಳಲ್ಲಿ । **ಆ ಮಧೋಃ**—ಅವು ಉತ್ಪತ್ತಿಯಾಗುವ ಪ್ರದೇಶದಿಂದಲೂ ಅಥವಾ ವೃಷ್ಟಿಯಾಗುವ ವರೆಗೂ ಬೇಸಿಗೆಯಲ್ಲಿ । **ಶ್ವಾತ್ರ್ಯಂ**—ವೇಗವಾಗಿ ಹರಿಯುವ । **ಮಧು**—ಉದಕವನ್ನೂ ಅಥವಾ । (**ಶ್ವಾತ್ರ್ಯಂ**—ಸುಖಪ್ರದವಾದ । **ಸೋಮಂ**—ಸೋಮರಸವನ್ನು) । **ಆಶಿರಂ**—ತುಂಬಿದ್ದೇನೆ.

ಭಾವಾರ್ಥ

ದೇವಶಿಲ್ಪಿಯಾದ ತ್ವಷ್ಟೃವಾಗಲಿ, ಸೂರ್ಯನಾಗಲಿ, ಇತರರ ಯಾವ ದೇವತೆಯಾಗಲಿ ಗೋವುಗಳ ಕೆಚ್ಚಲು ಗಳಲ್ಲಿ ತುಂಬಲಾಗದ ಶುಭ್ರವಾದುದೂ, ಎಲ್ಲರಿಗೂ ಬೇಕಾದುದೂ ಆದ ಹಾಲನ್ನು ಇಂದ್ರನಾದ ನಾನು ಆ ಗೋವುಗಳಲ್ಲಿ ತುಂಬಿದ್ದೇನೆ ಮತ್ತು ಪ್ರವಹಿಸುವ ನದಿಗಳಲ್ಲಿ ಬೇಸಿಗೆಕಾಲದಲ್ಲಿಯೂ ಸಿಹಿಯಾದ ನೀರನ್ನು ಮತ್ತು ಸೋಮಲತೆಗಳಲ್ಲಿ ಜನರಿಗೆ ಸುಖವನ್ನುಂಟುಮಾಡುವ ಸೋಮರಸವನ್ನೂ ತುಂಬಿದ್ದೇನೆ.

English Translation

I have kept up in them that which no deity, not even Twashtri, has maintained, bright, desirable, (contained) in the udders of the cows : in the rivers (I uphold) the water up to the (source of the) water, the delightful Soma and the milk and curds.

ಸಂಹಿತಾಪಾಠಃ

ಏವಾ ದೇವಾঁ ಇಂದ್ರೋ ವಿವ್ಯೇ ನ್ಯಾನ್ ಪ್ರ ಚ್ಯೌತ್ನೇನ ಮಘವಾ ಸತ್ಯರಾಧಾಃ।
ವಿಶ್ವೇತಾ ತೇ ಹರಿವಃ ಶಚೀವೋಽಭಿ ತುರಾಸಃ ಸ್ವಯಶೋ ಗೃಣಂತಿ ॥೧೧॥

ಪದಪಾಠಃ

ಏವ । ದೇವಾನ್ । ಇಂದ್ರಃ । ವಿವ್ಯೇ । ನ್ಯಾನ್ । ಪ್ರ । ಚ್ಯೌತ್ನೇನ । ಮಘವಾ । ಸತ್ಯರಾಧಾಃ ।
ವಿಶ್ವಾ । ಇತ್ । ತಾ । ತೇ । ಹರಿವಃ । ಶಚೀವಃ । ಅಭಿ । ತುರಾಸಃ । ಸ್ವಯಶಸಃ । ಗೃಣಂತಿ ॥ ೧೧ ॥

ಸಾಯಣಭಾಷ್ಯಂ

ಅಥಾನಯೇಂದ್ರ ಇಂದ್ರಭಾವಂ ಪರಿತ್ಯಜ್ಯ ಋಷಿಭಾವೇನಾಹ । ಏವೈವಮುಕ್ತಪ್ರಕಾರೇಣ ದೇವಾನ್ನೃಂಶ್ಚೇಂದ್ರೋ ದೇವಃ ಪ್ರ ವಿನ್ಯೇ । ಪ್ರಕರ್ಷೇಣ ಗಮಯತಿ । ತಸ್ಮಾತ್ಪರಾಚೀಃ ಪ್ರಜಾಃ ಪ್ರ ವೀಯಂತೇ ಪ್ರತೀಚೀರ್ಜಾಯಂತೇ । ತೈ. ಸಂ. ೬-೩-೧-೪ । ಇತಿ ಬ್ರಾಹ್ಮಣಂ । ಕಿಮನ್ಯಸಹಾಯೇನ ನೇತ್ಯಾಹ । ಚ್ಯೌತ್ನೇನ ಸ್ವೀಯೇನ ಬಲೇನ । ಕೀದೃಶ ಇಂದ್ರಃ । ಮಘವಾ ಧನವಾನ್ ಸತ್ಯರಾಧಾಃ ಸತ್ಯಧನಃ । ಅಥ ಪ್ರತ್ಯಕ್ಷೇಣಾಹ । ಹೇ ಹರಿವೋ ಹರಿಭ್ಯಾಂ ತದ್ವಾಞ್ಛೀಲವಃ ಕರ್ಮವನ್ ಹೇ ಸ್ವಯಶಃ ಸ್ವಾಯತ್ತಕೀರ್ತೇರನ್ನವನ್ವೇಂದ್ರ ತಾ ತಾನಿ ವಿಶ್ವಾ ಸರ್ವಾಣಿ ಕರ್ಮಾಣಿ ತೇ ತವ ಸಂಬಂಧೀನಿ ಯೇಷು ಕರ್ಮಸು ತುರಾಸಸ್ತ್ವರಮಾಣಾ ಋತ್ವಿಜೋಽಭಿ ಗೃಣಂತಿ ಅಭಿಷ್ಟುವಂತಿ ॥

ಪ್ರತಿಪದಾರ್ಥ

ಮಘವಾ—ಧನವಂತನೂ । **ಸತ್ಯರಾಧಾಃ**—ನಿಜವಾದ ಸಂಪತ್ತುಳ್ಳವನೂ ಆದ । **ಇಂದ್ರಃ**—ಇಂದ್ರನು । **ಏವ**—ಈ ಪ್ರಕಾರವಾಗಿ । **ದೇವಾನ್**—ದೇವತೆಗಳನ್ನೂ । **ನೃನ್**—ಮಾನವರನ್ನೂ । **ಚ್ಯೌತ್ನೇನ**—ತನ್ನ ಸ್ವಶಕ್ತಿಸಾಮರ್ಥ್ಯಗಳಿಂದ । **ಪ್ರ ವಿನ್ಯೇ**—ಉತ್ತಮರೀತಿಯಿಂದ ಅನುಗ್ರಹಿಸುತ್ತಾನೆ । **ಹರಿವಃ**—ಹರೀ ಎಂಬ ಆಶ್ವೋಪೇತನೂ । **ಶಚೀವಃ**—ಸಾಹಸಕೃತ್ಯಗಳನ್ನೆಸಗುವವನೂ । **ಸ್ವಯಶಃ**—ಕೀರ್ತಿಯುತನೂ ಅಥವಾ ಅನ್ನವಂತನೂ ಆದ ಎಲೈ ಇಂದ್ರನೇ । **ತಾ ವಿಶ್ವಾ**—ಈ ಸಮಸ್ತ ಕರ್ಮಗಳನ್ನೂ । **ತುರಾಸಃ**—ಶೀಘ್ರವಾಗಿ ನಿನ್ನನ್ನು ಸ್ತುತಿಸುವ । **ತೇ**—ಆ ಋತ್ವಿಕ್ಕುಗಳು । **ಅಭಿ ಗೃಣಂತಿ**—ಪ್ರಶಂಸಿಸಿ ಸ್ತುತಿಸುತ್ತಾರೆ.

ಭಾವಾರ್ಥ

ನಿಜವಾದ ಸಂಪತ್ತುಳ್ಳವನೂ, ಧನವಂತನೂ ಆದ ಇಂದ್ರನು ಈ ಪ್ರಕಾರವಾಗಿ ತನ್ನ ಸ್ವಸಾಮರ್ಥ್ಯದಿಂದ ದೇವತೆಗಳನ್ನೂ, ಮಾನವರನ್ನೂ ಅಧಿಕವಾಗಿ ಅನುಗ್ರಹಿಸುತ್ತಾನೆ. ಸಾಹಸಕರ್ಮಗಳನ್ನು ಮಾಡುವವನೂ, ಹರೀ ಎಂಬ ಅಶ್ವಗಳಿಂದ ಯುಕ್ತನಾದವನೂ, ಕೀರ್ತಿ ಅಥವಾ ಅನ್ನಯುತನೂ ಆದ ಎಲೈ ಇಂದ್ರನೇ, ಶೀಘ್ರವಾಗಿ ನಿನ್ನನ್ನು ಸ್ತುತಿಸುವ ಆ ಋತ್ವಿಗ್ಜನರು ಪ್ರಸಿದ್ಧವಾದ ನಿನ್ನ ಸಾಹಸಕರ್ಮಗಳನ್ನು ಬಹಳವಾಗಿ ಪ್ರಶಂಸಿಸಿ ಸ್ತುತಿಸುತ್ತಾರೆ.

English Translation

(Indra speaks as Rishi :) In this manner does Indra, the possessor of opulence, the affluent in truth, by his energy stimulate both gods and men : lord of horses, doer of great deeds, renowned (Indra), the eager (priests) glorify all these (your actions).

ಐವತ್ತನೆಯ ಸೂಕ್ತ

ಸಾಯಣಭಾಷ್ಯಂ

ಪ್ರ ವೋ ಮಹ ಇತಿ ಸಪ್ತರ್ಚಮಷ್ಟಮಂ ಸೂಕ್ತಂ ॥ ಆದಿತ್ಯೋ ದ್ವೇ ಜಗತ್ಯೌ । ಕೇ ತೇ ನರ ಇತ್ಯಾದಿಕೇ ದ್ವೇ ಅಭಿಸಾರಿಣ್ಯೌ । ಆದಿತ್ಯೋ ದ್ವೌ ದಶಾಕ್ಷರೌ ತತೋ ದ್ವೌ ದ್ವಾದಶಕೌ ಸಾಭಿಸಾರಿಣೀ?।

ತದುಕ್ತಂ । ವೈರಾಜೌ ಜಾಗತೌ ಚಾಭಿಸಾರಿಣೀ । ಅನು. ೯-೪ । ಇತಿ॥ ತತಸ್ತ್ರಿಷ್ಟುಬೇಕಾ । ತತೋ ದ್ವೇ ಜಗತ್ಯೌ। ಪೂರ್ವವದೃಷಿದೇವತೇ । ತಥಾ ಚಾನುಕ್ರಾಂತಂ।ಪ್ರ ವೋ ಮಹೇ ಸಪ್ತ ದ್ವಿಜಗತ್ಯಾದ್ಯಂತಂ ಕೇ ತೇ೨ಭಿಸಾರಿಣ್ಯಾವಿತಿ ॥ ಮಹಾವ್ರತೇ ನಿಷ್ಕೇವಲ್ಯ ಏತತ್ಸೂಕ್ತಂ ನಿವಿದ್ಧಾನಂ । ಸೂತ್ರಿತಂ ಚ । ಪ್ರ ವೋ ಮಹೇ ಮಂದಮಾನಾಯಾಂಧಸ ಇತಿ ನಿವಿದ್ಧಾನಂ । ಐ.ಆ.೫-೩-೧ । ಇತಿ ॥

ಅನುವಾದವು—**ಪ್ರ ವೋ ಮಹೇ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತದ ಮೊದಲಿನ ಎರಡು ಋಕ್ಕುಗಳು ಜಗತೀಛಂದಸ್ಸುವು. **ಕೇ ತೇ ನರಃ** ಎಂದು ಮೊದಲಾಗುವ ಎರಡು ಋಕ್ಕುಗಳು (೩-೪ ಋಕ್ಕುಗಳು) ಅಭಿಸಾರಿಣೀ ಎಂಬ ಛಂದಸ್ಸಿನವು. ಒಂದು ಋಕ್ಕಿನಲ್ಲಿ ನಾಲ್ಕು ಪಾದಗಳಿದ್ದು ಮೊದಲಿನ ಎರಡು ಪಾದಗಳಲ್ಲಿ ಹತ್ತುಹತ್ತು ಅಕ್ಷರಗಳೂ. ಮುಂದಿನ ಎರಡು ಪಾದಗಳಲ್ಲಿ ಹನ್ನೆರಡು ಹನ್ನೆರಡು ಅಕ್ಷರಗಳೂ ಇದ್ದರೆ ಅದು ಅಭಿಸಾರಿಣೀ ಎಂಬ ಛಂದಸ್ಸೆನಿಸುವುದು (ಅನು. ೯-೪). ಅದರ ಮುಂದಿನ ಒಂದು ಋಕ್ಕು (೫ನೇ ಋಕ್ಕು) ತ್ರಿಷ್ಟುಪ್ಛಂದಸ್ಸುವು. ಅದರ ಮುಂದಿನ ಎರಡು ಋಕ್ಕುಗಳು (೬-೭ನೇ ಋಕ್ಕುಗಳು) ಜಗತೀಛಂದಸ್ಸುವು. ಈ ಸೂಕ್ತದ ಋಷಿದೇವತೆಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—**ಪ್ರ ವೋ ಮಹೇ ಸಪ್ತ ದ್ವಿಜಗತಾದ್ಯಂತಂ ಕೇ ತೇ೨ಭಿಸಾರಿಣ್ಯೌ** ಎಂದು ಹೇಳಿರುವುದು. ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಾನುಶಂತ್ರಪಠನದಲ್ಲಿ ಈ ಸೂಕ್ತವನ್ನು ನಿವಿದ್ಧಾನಸೂಕ್ತವನ್ನಾಗಿ ಪಠಿಸಬೇಕೆಂದು ಐತರೇಯ ಆರಣ್ಯಕದ—**ಪ್ರ ವೋ ಮಹೇ ಮಂದಮಾನಾಯಾಂಧಸ ಇತಿ ನಿವಿದ್ಧಾನಂ** ಎಂಬ ವಾಕ್ಯದಿಂದ ನಿರ್ದಿಷ್ಟವಾಗಿರುವುದು ಐ. ಆ. ೫-೩-೧).

ಸೂಕ್ತ—೫೦

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೦ ॥
ಅಷ್ಟಕ—೨ ॥ ಅಧ್ಯಾಯ—೧ ॥ ವರ್ಗ—೯॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಇಂದ್ರೋ ವೈಕುಂಠಃ ॥
ದೇವತಾ—ಇಂದ್ರೋ ವೈಕುಂಠಃ ॥
ಛಂದಃ—೧, ೨, ೬, ೭. ಜಗತೀ । ೩-೪. ಅಭಿಸಾರಿಣೀ । ೫. ತ್ರಿಷ್ಟುಪ್ ॥

ಸಂಹಿತಾಪಾಠಃ

ಪ್ರ ವೋ॑ ಮ॒ಹೇ ಮ॑ಂದ॒ಮಾ॒ನಾ॒ಯಾಂ॒ಧ॒ಸೋ೨ರ್ಚಾ॑ ವಿಶ್ವ॒ಸ॒ನಾ॒ಯ ವಿ॒ಶ್ವಾ॒ಭು॒ವೇ᳐ ।
ಇಂ॒ದ್ರ॒ಸ್ಯ ಯ॒ಸ್ಯ॑ ಸು॒ಮ॒ಖಂ॒ ಸ॒ಹೋ॒ ಮ॒ಹಿ ಶ್ರವೋ॑ ನೃ॒ಮ್ಣಂ ಚ॒ ರೋ॒ದ॒ಸೀ ಸ॒ಪ॒ರ್ಯ॒ತಃ॑ ॥ ೧ ॥

ಪದಪಾಠಃ

ಪ್ರ । ವಃ । ಮಹೇ । ಮಂದಮಾನಾಯ । ಅಂಧಸಃ । ಅರ್ಚ । ವಿಶ್ವಾನರಾಯ । ವಿಶ್ವಭುವೇ ।
ಇಂದ್ರಸ್ಯ । ಯಸ್ಯ । ಸುಮಖಂ । ಸಹಃ । ಮಹಿ । ಶ್ರವಃ । ನೃಮ್ಣಂ । ಚ । ರೋದಸೀ ಇತಿ । ಸಪರ್ಯತಃ ॥

ಸಾಯಣಭಾಷ್ಯಂ

ಹೇ ಸ್ತೋತಃ ವಸ್ತ್ವಂ ॥ ಪೂಜಾರ್ಥೇ ಬಹುವಚನಂ ॥ ಮಹೇ ಮಹತೇಽಂಧಸಃ । ಅಂಧಸೇತ್ಯರ್ಥಃ । ಸೋಮೇನ ಮಂದಮಾನಾಯ ಮೋದಮಾನಾಯ ವಿಶ್ವಾನರಾಯ ಸರ್ವಸ್ಯ ನೇತ್ರೇ ॥ ನರೇ ಸಂಜ್ಞಾಯಾಮಿತಿ ದೀರ್ಘಃ ॥ ವಿಶ್ವಾಭುವೇ ಸರ್ವಸ್ಯ ಭಾವಯಿತ್ರೇ ಮಹ್ಯಮಿಂದ್ರಾಯ ಪ್ರಾರ್ಚ । ಅರ್ಚತಿಃ ಸ್ತುತಿಕರ್ಮಾ । ಪ್ರೋಚ್ಚಾರಯ । ಯಸ್ಯ ಮಮೇಂದ್ರಸ್ಯ ಸುಮಖಂ ಸುಷ್ಠು ಮಂಹನೀಯಂ ಸಹೋ ಬಲಂ ಮಹಿ ಮಹಚ್ಛ್ರವೋಽನ್ನಂ ನೃಮ್ಣಂ ಸುಖಂ ಚ ರೋದಸೀ ದ್ಯಾವಾಪೃಥಿವ್ಯೌ ಸಪರ್ಯತಃ । ಪೂಜಯತಃ । ತಸ್ಮಾ ಇಂದ್ರಾಯಾರ್ಚೇತಿ ಸಮುನ್ನಯಃ ॥

ಪ್ರತಿಪದಾರ್ಥ

(ಎಲೈ ಸ್ತೋತೃವೇ) **ವಃ**—ನೀನು । **ಮಹೇ**—ಬಹಳವಾದ । **ಅಂಧಸಃ**—ಸೋಮರೂಪವಾದ ಅನ್ನದಿಂದ । **ಮಂದಮಾನಾಯ**—ಹರ್ಷಗೊಂಡವನೂ । **ವಿಶ್ವಾನರಾಯ**—ಸರ್ವರಿಗೂ ಮಾರ್ಗದರ್ಶಕನೂ । **ವಿಶ್ವಾಭುವೇ**—ಸಮಸ್ತ ಉತ್ಪತ್ತಿಗೂ ಕಾರಣಭೂತನೂ ಆದ ಇಂದ್ರನನ್ನುದ್ದೇಶಿಸಿ । **ಪ್ರ ಅರ್ಚ**—ಸ್ತುತಿಯನ್ನು ಪಠಿಸು । **ಯಸ್ಯ ಇಂದ್ರಸ್ಯ**—ಯಾವ ನನ್ನ (ಇಂದ್ರನ) । **ಸುಮಖಂ**—ಪೂಜಾರ್ಹವಾದ । **ಸಹಃ**—ಒಲವನ್ನೂ । **ಮಹಿ**—ಮಹತ್ತಾದ । **ಶ್ರವಃ**—ಅನ್ನವನ್ನೂ । **ನೃಮ್ಣಂ ಚ**—ಸುಖವನ್ನೂ ಕೂಡ । **ರೋದಸೀ**—ದ್ಯಾವಾಪೃಥಿವಿಗಳು । **ಸಪರ್ಯತಃ**—ಪ್ರಶಂಸಿಸಿ (ಗೌರವಿಸಿ) ಪೂಜಿಸುತ್ತವೆ.

ಭಾವಾರ್ಥ

ಇಂದ್ರನಾದ ನನ್ನ ಪೂಜಾರ್ಹವಾದ ಎಂದರೆ ಅತ್ಯಧಿಕವಾದ ಬಲವನ್ನೂ ನನ್ನಲ್ಲಿರುವ ಬಹಳವಾದ ಅನ್ನಾದ್ಯಾಹಾರವನ್ನೂ ನನ್ನನ್ನು ಸೇವಿಸುವವರಿಗೆ ನಾನು ಕೊಡುವ ಸುಖವನ್ನೂ ಸಹ ದ್ಯಾವಾಪೃಥಿವಿಗಳು ಬಹಳವಾಗಿ ಪ್ರಶಂಸಿಸಿ ಪೂಜಿಸುತ್ತವೆ. ಎಲೈ ಸ್ತೋತೃವೇ, ಬಹಳವಾದ ಸೋಮಪಾನದಿಂದ ತೃಪ್ತಿಯನ್ನು ಹೊಂದಿರುವವನೂ ಸರ್ವರಿಗೂ ಮಾರ್ಗದರ್ಶಕನೂ ಸರ್ವಕ್ಕೂ ಕಾರಣಭೂತನೂ ಆದ ಅಂತಹ ಇಂದ್ರನನ್ನುದ್ದೇಶಿಸಿ ಸ್ತೋತ್ರವನ್ನು ಪಠಿಸು.

English Translation

Worship him who is exhilarated by the sacrificial food, the mighty Indra, the leader of all men, the creator of all, whose venerable strength and abundant food and wealth, heaven and earth adore.

ಸಂಹಿತಾಪಾಠಃ

ಸೋ ಚಿನ್ನು ಸಖ್ಯಾ ನರ್ಯ ಇನಃ ಸ್ತುತಶ್ಚರ್ಕೃತ್ಯ ಇಂದ್ರೋ ಮಾವತೇ ನರೇ ।
ವಿಶ್ವಾಸು ಧೂರ್ಷು ವಾಜಕೃತ್ಯೇಷು ಸತ್ಪತೇ ವೃತ್ರೇ ವಾಪ್ಸ್ವಭಿ ಶೂರ ಮಂದಸೇ ॥ ೨ ॥

ಪದಪಾಠಃ

ಸಃ । ಚಿತ್ । ನು । ಸಖ್ಯಾ । ನರ್ಯಃ । ಇನಃ । ಸ್ತುತಃ । ಚರ್ಕೃತ್ಯಃ । ಇಂದ್ರಃ । ಮಾವತೇ । ನರೇ ।
ವಿಶ್ವಾಸು । ಧೂಃಸು । ವಾಜಕೃತ್ಯೇಷು । ಸತ್ಪತೇ । ವೃತ್ರೇ । ವಾ । ಆಪ್ಸಸು । ಅಭಿ । ಶೂರ ।
ಮಂದಸೇ ॥ ೨ ॥

ಸಾಯಣಭಾಷ್ಯಂ

ಸೋ ಚಿನ್ನು ಸ ಖಲ್ವಿಂದ್ರಃ ಸಖ್ಯಾ ಸಖಿಭೂತೇನ ನಿಮಿತ್ತೇನ ನರ್ಯೋ ನೃಭ್ಯೋ ಹಿತ ಇನಃ ಸರ್ವಸ್ಯೇಶ್ವರಃ ಸ್ತುತಃ ಸರ್ವೈರಭಿಷ್ಟುತಃ । ಸಖ್ಯಾ ಸ್ತುತ ಇತಿ ವಾನ್ನಯಃ । ಮಾವತೇ ಮತ್ಸದೃಶಾಯ ನರೇ ನರಾಯ ಚರ್ಕೃತ್ಯಃ । ಪುನಃಪುನಃ ಕರ್ತವ್ಯಃ । ಪರಿಚರಣೀಯ ಇತ್ಯರ್ಥಃ । ಅಥ ಪ್ರತ್ಯಕ್ಷವಾದಃ । ಹೇ ಸತ್ಪತೇ ಸತಾಂ ಪಾಲಕೇಂದ್ರ ಸ ತ್ವಂ ವಿಶ್ವಾಸು ಸರ್ವಾಸು ಧೂರ್ಷು ವೋಢವ್ಯೇಷು ಕಾರ್ಯಭಾರೇಷು ವಾಜಕೃತ್ಯೇಷು ಚ ಬಲಕೃತ್ಯೇಷು ಚ ವೃತ್ರೇ ವಾಪ್ಸು ಮೇಘೇ ವರ್ತಮಾನೇಷೂದಕೇಷು ಚ ನಿಮಿತ್ತೇಷು ಹೇ ಶೂರ ತ್ವಮಭಿ ಮಂದಸೇ । ಅಭಿಷ್ಟೂಯಸೇ ॥

ಪ್ರತಿಪದಾರ್ಥ

ಸಃ ಚಿನ್ನು ಇಂದ್ರಃ—ಆ ಇಂದ್ರನೇ । **ಸಖ್ಯಾ**—ಸ್ನೇಹಸಮಿತ್ರತ್ವಾಗಿ । **ನರ್ಯಃ**—ಮಾನವರಿಗೆ ಹಿತಕಾರಿಯಾಗಿಯೂ । **ಇನಃ**—ಸರ್ವರಿಗೂ ಒಡೆಯನಾಗಿಯೂ । **ಸ್ತುತಃ**—ಸರ್ವರಿಂದಲೂ ಸ್ತುತಿಸಲ್ಪಡುವವನಾಗಿಯೂ ಆಗಿ । **ಮಾವತೇ ನರೇ**—ನನ್ನಂತಹ ಮನುಷ್ಯನಿಂದ । **ಚರ್ಕೃತ್ಯಃ**—ಪದೇಪದೇ ಸೇವಿಸಲ್ಪಡಲು ಅರ್ಹನಾಗಿದ್ದಾನೆ । **ಶೂರ**—ಎಲೈ ಪರಾಕ್ರಮಶಾಲಿಯೇ । **ಸತ್ಪತೇ**—ಸಜ್ಜನರಿಗೆ ಪಾಲಕನಾದ ಎಲೈ ಇಂದ್ರನೇ ನೀನು । **ವಿಶ್ವಾಸು**—ಸಮಸ್ತವಾದ । **ಧೂರ್ಷು**—ಎಲ್ಲವನ್ನೂ ಧರಿಸಿ ಪೋಷಿಸುವ । **ವಾಜಕೃತ್ಯೇಷು**—ಸಾಹಸಕಾರ್ಯಗಳಿಂದ ಕೂಡಿದ । **ವೃತ್ರೇ**—ಆವರಿಕವಾದ । **ವಾಪ್ಸು**—ಮೇಘದ ಉದಕಗಳಲ್ಲಿ । **ಅಭಿ ಮಂದಸೇ**—ಸಂತೋಷದಿಂದ ನಲಿದಾಡುತ್ತೀಯೆ.

ಭಾವಾರ್ಥ

ಆ ಇಂದ್ರನೇ ಮಾನವರಿಗೆ ಹಿತಕಾರಿಯೂ, ಸರ್ವರಿಗೂ ಒಡೆಯನೂ, ಸರ್ವರಿಂದಲೂ ಸ್ತುತಿಸಲ್ಪಡುವವನೂ ಆಗಿರುವುದಲ್ಲದೆ ಸ್ನೇಹಸಮಿತ್ರತ್ವಾಗಿ ನನ್ನಂತಹ ಪುರುಷರಿಂದ ಪದೇಪದೇ ಸ್ತುತ್ಯರ್ಹನಾಗಿದ್ದಾನೆ. ಪರಾಕ್ರಮ

ಶಾಲಿಯೂ, ಸಜ್ಜನರ ಪಾಲಕನೂ ಆದ ಎಲೈ ಇಂದ್ರನೇ, ಎಲ್ಲವನ್ನೂ ಧರಿಸಿ ಪೋಷಿಸುವುದೂ, ಸಾಹಸಕಾರ್ಯಗಳಿಂದ ಕೂಡಿರುವುದೂ, ವೃತ್ರಾಸುರನ ಸಂಬಂಧವಾದುದೂ ಆದ ಮೇಘೋದಕಗಳಲ್ಲಿ ನಿನ್ನ ಶಕ್ತಿಪರಾಕ್ರಮಗಳನ್ನು ಪ್ರದರ್ಶಿಸುತ್ತಾ ಸಂತೋಷಪಡುತ್ತೀಯೆ.

English Translalion

That Indra, kind to man, the lord of all, who is praised by his friend, is to be repeatedly honoured by men like me; you, hero, protector of the good, are glorified in the all-sustaining food-producing cloud-imprisoned waters.

ಸಂಹಿತಾಪಾಠಃ

ಕೇ ತೇ ನರ ಇಂದ್ರ ಯೀ ತ ಇಷೇ ಯೀ ತೇ ಸುಮ್ನಂ ಸಧನ್ಯ ೧ ಮಿಯೆಕ್ಷಾನ್।
ಕೇ ತೇ ವಾಜಾಯಾಸುರ್ಯಾಯ ಹಿನ್ವಿರೇ ಕೇ ಅಪ್ಸು ಸ್ವಾಸೂರ್ವರಾಸು
ಪೌಂಸ್ಯೇ ॥ ೩ ॥

ಪದಪಾಠಃ

ಕೇ । ತೇ । ನರಃ । ಇಂದ್ರ । ಯೀ । ತೇ । ಇಷೇ । ಯೀ । ತೇ । ಸುಮ್ನಂ । ಸ್ವಧನ್ಯಂ । ಇಯೆಕ್ಷಾನ್ ।
ಕೇ । ತೇ । ವಾಜಾಯ । ಅಸುರ್ಯಾಯ । ಹಿನ್ವಿರೇ । ಕೇ । ಅಪ್ಸು । ಸ್ವಾಸು । ಉರ್ವರಾಸು ।
ಪೌಂಸ್ಯೇ ॥ ೩ ॥

ಸಾಯಣಭಾಷ್ಯಂ

ಹೇ ಇಂದ್ರ ತೇ ಕೇ ನರಃ ಕೇ ಮನುಷ್ಯಾ ಇತಿ ಪ್ರಶ್ನಃ । ತೇ ಮಹಾಂತೋ ಮಯಾ ಜ್ಞಾತವ್ಯಾ ಇತ್ಯಭಿಪ್ರಾಯಃ । ಪ್ರಷ್ಟವ್ಯಾನಾಹ । ಯೀ ನರಾಸ್ತೇ ತವೇಷೇಽನ್ನಾಯ ಪ್ರಭವಂತೀತಿ ಶೇಷಃ । ಯೀ ಚ ತೇ ಸುಮ್ನಂ ಸುಖಂ ತ್ವದೀಯಂ ಸಧನ್ಯಂ ಧನಯುಕ್ತಮಿಯೆಕ್ಷಾನ್ ಗಚ್ಛಂತಿ । ಇಯೆಕ್ಷತಿರ್ಗತಿಕರ್ಮಾ । ತ್ವದೀಯಮನ್ನಂ ಸುಖಂ ಧನಂ ಚ ಯೀ ಲಭಂತೇ ತೇ ಕೇ ಮಹಾತ್ಮಾನ ಇತಿ । ಕಿಂಚ ಕೇ ತೇ ತವಾಸುರ್ಯಾಯಾಸುರಸಂಬಂಧಿನೇ ತೇಷಾಂ ವಧನಿಮಿತ್ತಾಯ ವಾಜಾಯ ಬಲಾಯ ಹಿನ್ವಿರೇ । ಪ್ರೇರಯಂತಿ ಸೋಮಾದಿ ಹವಿಃ । ಕೇ ವಾಪ್ಸು ಸ್ವಾಸು ಸ್ವಾಪೇಕ್ಷಿತೇಷಾದಕೇಷೂರ್ವರಾಸು ಸರ್ವಸಸ್ಯಾಢ್ಯಾಸು ಭೂಮಿಷು ಪೌಂಸ್ಯೇ ಪುಂಸ್ತ್ವೇ ಚೇತಿ ತೇಷು ನಿಮಿತ್ತಭೂತೇಷು ಹವಿಃ ಪ್ರೇರಯಂತೀತ್ಯನುವರ್ತತೇ । ಉಕ್ತವಿಧಾ ಮಹಾಂತೋ ದುರ್ಲಭಾ ಇತಿ ಭಾವಃ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರದೇ । **ಯೇ**—ಯಾವ ಮನುಷ್ಯರು । **ತೇ**—ನಿನ್ನಲ್ಲಿರುವ । **ಇಷೇ**—ಅನ್ನವನ್ನು ಪಡೆಯಲು ಸಮರ್ಥರೋ । **ತೇ ಕೇ**—ಅವರು ಯಾರು । **ಯೇ ಚೆ**—ಯಾವ ಮನುಷ್ಯರು । **ತೇ**—ನಿನ್ನಿಂದ ಲಬ್ಧವಾಗುವ । **ಸಧನ್ಯಂ**—ಧನಯುಕ್ತವಾದ । **ಸುಮ್ನಂ**—ಸುಖವನ್ನು । **ಇಯಕ್ಷಾನ್**—ಪಡೆಯುವರೋ ಆ ಪುರುಷರು ಯಾರು । **ತೇ**—ನಿನ್ನ । **ಅಸುರ್ಯಾಯ**—ಅಸುರವಧನಿಮಿತ್ತಾರ್ಥವಾದ । **ವಾಜಾಯ**—ಬಲವನ್ನು (ಉತ್ಸಾಹವನ್ನು) । **ಹಿನ್ವಿರೇ ತೇ**—ಪ್ರೇರಿಸುವ ಪುರುಷರು । **ಕೇ**—ಯಾರು । **ಸ್ವಾಸು**—ತಾವು ಅಪೇಕ್ಷಿಸುವ । **ಅಪ್ಸು**—ಉದಕಗಳನ್ನೂ । **ಉರ್ವರಾಸು**—ಸರ್ವಸಸ್ಯಸಮೃದ್ಧಿಯಾದ ಭೂಮಿಯನ್ನೂ । **ಪೌಂಸ್ಯೇ**—ಅಧಿಕವಾದ ಪೌರುಷವನ್ನು ಅಥವಾ ಬಲವನ್ನು ಕೊಡುವಂತೆ ನಿನ್ನನ್ನು ಪ್ರೇರಿಸುವರೋ । **ಕೇ ತೇ**—ಅಂತಹ ಮನುಷ್ಯರು ಯಾರು ?

ಭಾವಾರ್ಥ

ಎಲೈ ಇಂದ್ರನೇ, ನಿನ್ನಲ್ಲಿರುವ ಅನ್ನಾದ್ಯಾಹಾರವನ್ನೂ, ಧನವನ್ನೂ, ಸೌಖ್ಯವನ್ನೂ ಪಡೆಯುವ ಪುರುಷರು ಯಾರು ? ಅಸುರವಧನಿಮಿತ್ತವಾಗಿ ನಿನ್ನನ್ನು ಪ್ರೋತ್ಸಾಹಿಸಿ ನಿನ್ನ ಬಲವನ್ನು ಹೆಚ್ಚಿಸುವ ಪುರುಷರು ಯಾರು ? ಮತ್ತು ತಮಗೆ ಬೇಕಾದ ವೃಷ್ಟ್ಯುದಕಗಳನ್ನೂ, ಸರ್ವಸಸ್ಯಪರಿಪೂರ್ಣವಾದ ಭೂಮಿಯನ್ನೂ, ಅಧಿಕವಾದ ಬಲವನ್ನೂ ಕೊಡುವಂತೆ ನಿನ್ನನ್ನು ಪ್ರೇರಿಸಬಲ್ಲ ಮನುಷ್ಯರು ಯಾರಿರುವರು ?

English Translation

What men, Indra, are they who (are eminent) in offering food to you, who are desirous of obtaining from you happiness and opulence, who send you (oblations) for the sake of strength (to fight) the Asura, who (send oblations) for the sake of obtaining spontaneously-flowing waters and cultivable lands, and manly vigour ?

ಸಂಹಿತಾಪಾಠಃ

ಭುವಸ್ತ್ವಮಿಂದ್ರ ಬ್ರಹ್ಮಣಾ ಮಹಾನ್ಭುವೋ ವಿಶ್ವೇಷು ಸವನೇಷು ಯಜ್ಞಿಯಃ ।
ಭುವೋ ನ್ವಂಶ್ಚಾತ್ಕೋ ವಿಶ್ವಸ್ಮಿನ್ಭರೇ ಜ್ಯೇಷ್ಠಶ್ಚ ಮಂತ್ರೋ ವಿಶ್ವಚರ್ಷಣೇ॥

ಪದಪಾಠಃ

ಭುವಃ । ತ್ವಂ । ಇಂದ್ರ । ಬ್ರಹ್ಮಣಾ । ಮಹಾನ್ । ಭುವಃ । ವಿಶ್ವೇಷು । ಸವನೇಷು । ಯಜ್ಞಿಯಃ ।

ಭುವಃ । ನ್ಯಾನ್ । ಚ್ಯೌತ್ನಃ । ವಿಶ್ವಸ್ಮಿನ್ । ಭರೇ । ಜ್ಯೇಷ್ಠಃ । ಚ । ಮಂತ್ರಃ । ವಿಶ್ವಚರ್ಷಣೇ ॥ ೪ ॥

ಸಾಯಣಭಾಷ್ಯಂ

ಭುವಸ್ತ್ವಮಿಂದ್ರೇತಿ ದರ್ಶಪೂರ್ಣಮಾಸಯೋರ್ಮಾಹೇಂದ್ರಸ್ಯ ಹವಿಷೋ ಯಾಜ್ಯಾ । ಸೂತ್ರಿತಂ ಚ । ಮಹಾಂ ಇಂದ್ರೋ ಯ ಓಜಸಾ ಭುವಸ್ತ್ವಮಿಂದ್ರ ಬ್ರಹ್ಮಣಾ ಮಹಾನ್ । ಆ-೧-೬ । ಇತಿ ॥ ದೇವಸುವಾಂ ಹವಿಃಷ್ವಿಂದ್ರಸ್ಯ ಜ್ಯೇಷ್ಠಸ್ಯೈಷೈವ ಯಾಜ್ಯಾ । ಭುವಸ್ತ್ವಮಿಂದ್ರ ಬ್ರಹ್ಮಣಾ ಮಹಾನನಮೀವಾಸ ಇಳಯಾ । ಆ ೪-೧೧ । ಇತಿ ಹಿ ಸೂತ್ರಿತಂ ॥ ಏಷೈವ ಭೂನಾಮ್ನ್ಯೈಕಾಹೇ ನಿಷ್ಕೇವಲ್ಯೇ ಸೂಕ್ತಮುಖೀಯಾ । ಸೂತ್ರಿತಂ ಚ । ಶಸ್ಯಮುಕ್ತಂ ಬೃಹಸ್ಪತಿಸವೇನ ತ್ವಂ ಭುವಃ ಪ್ರತಿಮಾಗಂ ಪೃಥಿವ್ಯಾ ಭುವಸ್ತ್ವಮಿಂದ್ರ ಬ್ರಹ್ಮಣಾ ಮಹಾನ್ । ಆ-೯-೫ । ಇತಿ ॥

ಹೇ ಇಂದ್ರ ತ್ವಂ ಬ್ರಹ್ಮಣಾಸ್ಮತ್ಕೃತೇನ ಪರಿವೃಢೇನ ಸ್ತೋತ್ರೇಣ ಮಹಾನ್ಭುವಃ । ಅಭವಃ ॥ ಭವತೇರ್ಲೇಟಿ ಭೂಸುವೋಸ್ತಿಜಂತೇತಿ ಗುಣಪ್ರತಿಷೇಧ ಉವಜಾದೇಶಃ ॥ ತಥಾ ವಿಶ್ವೇಷು ಸರ್ವೇಷು ಸವನೇಷು ಯಜ್ಞಿಯೋ ಯಷ್ಯವ್ಯೋ ಭುವಃ । ಅಭವಃ । ತಥಾ ವಿಶ್ವಸ್ಮಿನ್ಭರೇ ಸಂಗ್ರಾಮೇ ನ್ಯಾನ್ ನೇತೃಣಾಂ ಶತ್ರೂಣಾಂ ಚ್ಯೌತ್ನಶ್ಚ್ಯಾವಯಿತಾಭವಃ । ಹೇ ವಿಶ್ವಚರ್ಷಣೇ ಸರ್ವಸ್ಯ ದ್ರಷ್ಟರಿಂದ್ರ ಮಂತ್ರೋ ಮಂತ್ರಯಿತವ್ಯಸ್ತ್ವಂ ಜ್ಯೇಷ್ಠಶ್ಚಾಭವಃ ಸರ್ವೇಷಾಂ ಮಧ್ಯೇ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । **ತ್ವಂ**—ನೀನು । **ಬ್ರಹ್ಮಣಾ**—ನಾವು ಮಾಡುವ ಸ್ತೋತ್ರದಿಂದ । **ಮಹಾನ್**—ಮಹತ್ಸ್ವರೂಪವುಳ್ಳವನಾಗಿ । **ಭುವಃ**—ಆಗಿದ್ದೀಯೆ (ಮತ್ತು) । **ವಿಶ್ವೇಷು**—ಸಮಸ್ತವಾದ । **ಸವನೇಷು**—ಪ್ರಾತಃಸವನ, ಮಾಧ್ಯಂದಿನಸವನ ಮತ್ತು ತೃತೀಯಸವನಗಳಲ್ಲಿ ಅಥವಾ ಯಜ್ಞಗಳಲ್ಲಿ । **ಯಜ್ಞಿಯಃ**—ಯಜ್ಞಾರ್ಹನಾಗಿಯೂ । **ಭುವಃ**—ಆಗಿದ್ದೀಯೆ । **ವಿಶ್ವಸ್ಮಿನ್**—ಸಮಸ್ತವಾದ । **ಭರೇ**—ಯುದ್ಧದಲ್ಲಿ । **ನ್ಯಾನ್**—ಶತ್ರುಜನರನ್ನು । **ಚ್ಯೌತ್ನಃ**—ನಾಶಮಾಡುವವನಾಗಿದ್ದೀಯೆ । **ವಿಶ್ವಚರ್ಷಣೇ**—ಸರ್ವವನ್ನೂ ವೀಕ್ಷಿಸುವ ಎಲೈ ಇಂದ್ರನೇ, ನೀನು । **ಮಂತ್ರಃ**—ಮನಸ್ಸಿನಲ್ಲಿ ಧ್ಯಾನಿಸಲ್ಪಡುವವನೂ । **ಜ್ಯೇಷ್ಠಃ ಚ**—ಸರ್ವರ ಮಧ್ಯದಲ್ಲಿಯೂ ಮುಖ್ಯನಾದವನೂ ಆಗಿದ್ದೀಯೆ.

ಭಾವಾರ್ಥ

ಎಲೈ ಇಂದ್ರನೇ, ನಾವು ಮಾಡುವ ಸ್ತುತಿಗಳಿಂದ ನೀನು ಪ್ರವೃದ್ಧಮಾನನಾಗಿ ಮಹತ್ಸ್ವರೂಪವುಳ್ಳವನಾಗಿರುವೆ. ಸಮಸ್ತ ಯಜ್ಞಗಳಲ್ಲಿಯೂ ಪೂಜ್ಯನಾಗಿ ಆರಾಧಿಸಲ್ಪಡುವೆ. ಸಮಸ್ತ ಯುದ್ಧಗಳಲ್ಲಿಯೂ ಶತ್ರು ಜನರನ್ನು ನಾಶಪಡಿಸುವೆ. ಸರ್ವವನ್ನೂ ನೋಡಬಲ್ಲ ಎಲೈ ಇಂದ್ರನೇ, ನೀನು ಮನಸ್ಸಿನಲ್ಲಿ ಸರ್ವರಿಂದಲೂ ಧ್ಯಾನಿಸಲ್ಪಡುವವನೂ, ಸರ್ವದೇವತೆಗಳಲ್ಲಿ ಮುಖ್ಯನಾದವನೂ ಆಗಿರುವೆ.

English Translation

Indra, you have become mighty through our praise : you have become adorable at all sacrifices, in every combat you are the caster down of the leaders (of hosts) : beholder of all, you are the best and most excellent.

ವಿಶೇಷವಿಷಯಗಳು

ದಶಪೂರ್ಣಮಾಸಯಾಗಗಳಲ್ಲಿ ಮಾಹೇಂದ್ರದೇವತೆಯನ್ನುದ್ದೇಶಿಸಿ ಮಾಡುವ ಹವಿಸ್ಸಿನ ಹೋಮದಲ್ಲಿ **ಭುವಸ್ತ್ವಮಿಂದ್ರ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಮಹಾ ಇಂದ್ರೋ ಯ ಓಜಸಾ ಭುವಸ್ತ್ವಮಿಂದ್ರ ಬ್ರಹ್ಮಣಾ ಮಹಾನ್** ಎಂಬ ಸೂತ್ರದಿಂದ (ಆ. ೧-೬) ವಿವೃತವಾಗಿರುವುದು. ದೇವಸುವ ಎಂಬ ಎಂಟುಮಂದಿ ದೇವತೆಗಳನ್ನುದ್ದೇಶಿಸಿ ಮಾಡುವ ಹವಿಸ್ಸಿನ ಹೋಮದಲ್ಲಿ ಈ ಋಕ್ಕನ್ನು ಜ್ಯೇಷ್ಠ ಇಂದ್ರನನ್ನುದ್ದೇಶಿಸಿ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಭುವಸ್ತ್ವಮಿಂದ್ರ ಬ್ರಹ್ಮಣಾ ಮಹಾನನಮಿಮಾನಾಸ ಇಳಯಾ** ಎಂಬ ಸೂತ್ರದಿಂದ (ಆ. ೪-೧೧) ವಿವೃತವಾಗಿರುವುದು ಮತ್ತು ಭೂನಾಮವೆಂಬ ಒಂದು ದಿನದಮಟ್ಟಿಗೆ ಮಾಡುವ ಇಷ್ಟಿಯಲ್ಲಿ ಸಿಪ್ಪೇವಲ್ಯಶಸ್ತ್ರಮಂತ್ರಗಳ ಪ್ರಾರಂಭದಲ್ಲಿ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಶಸ್ಯಮುಕ್ತಂ ಬೃಹಸ್ಪತಿಸವೇನ ತ್ವಂ ಭುವಃ ಪ್ರತಿಮಾನಂ ಪೃಥಿವ್ಯಾ ಭುವಸ್ತ್ವಮಿಂದ್ರ ಬ್ರಹ್ಮಣಾ ಮಹಾನ್** ಎಂಬ ಸೂತ್ರದಿಂದ (ಆ. ೯-೫) ವಿವೃತವಾಗಿರುವುದು.

ಈ ಋಕ್ಕನ್ನು ದೇವಸೂಃ ಎಂಬ ಯಾಗದಲ್ಲಿ ಇಂದ್ರನ ಪರವಾದ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಹೇಳಿರುವುದಷ್ಟೆ. ಮೊದಲು **ದೇವಸೂ** ಯಾಗವೆಂದರೇನು ಎಂಬುದನ್ನು ತಿಳಿದು ಅನಂತರ ಮಂತ್ರದ ವಿವರಣೆಯನ್ನು ತಿಳಿಯಬಹುದು.

ದೇವಸುವಃ ಎಂಬುದು ವಿಶ್ವಕ್ಕೆಲ್ಲಾ ಚೈತನ್ಯದಾಯಿಗಳಾದ ದೇವತೆಗಳ ಸಮೂಹವು, ಈ ಹೆಸರಿನಿಂದ ಕರೆಯಲ್ಪಟ್ಟಿದೆ. ಈ ದೇವತೆಗಳ ಸಂಖ್ಯೆಯು ಎಂಟು. ರಾಜಸೂಯಾಂಗವಾದ ಅಭಿಷೇಚನಕ್ರಿಯೆಯ ಕಾಲದಲ್ಲಿ ಈ ಎಂಟು ದೇವತೆಗಳನ್ನುದ್ದೇಶಿಸಿ ವಿಧ್ಯುಕ್ತವಾದ ಹವಿಸ್ಸನ್ನರ್ಪಿಸಬೇಕು. ಅದರ ಕ್ರಮವು ಈರೀತಿ ಇದೆ—

(1) **ಸವಿತ್ರೇ ಸತ್ಯಪ್ರಸವಾಯ । ದ್ವಾದಶಕಪಾಲಂ ವಾಷ್ಟಾಕಪಾಲಂ ವಾ ಪುರೋಡಾಶಂ ನಿರ್ವಪತಿ ಶುಕ್ಲಾನಾಂ ವ್ರೀಹೀಣಾಂ ಸವಿತಾ ವೈ ದೇವಾನಾಂ ಪ್ರಸವಿತಾ ಸವಿತೈವೈನಂ ಪ್ರಸೂತಃ ಸೂಯಾ ಇತ್ಯಥ ಯತ್ಪಾಲಾಶುಕಾನಾಂ ವ್ರೀಹೀಣಾಂ ಕ್ಷಿಪ್ರೇ ವಾ ಪ್ರಸುವಾನಿತಿ ॥**

(ಶ. ಬ್ರಾ. ೫-೩-೩-೭)

ಪ್ಲಾಶುಕಾಖ್ಯವಾದ (ಬೆಳ್ಳಗಿರುವ) ಧಾನ್ಯವು ಚೇತನದಾಯಿಯಾದುದು. ಶೀಘ್ರವಾಗಿ ವೃಷ್ಟಿಯನ್ನು ಕೊಡತಕ್ಕದ್ದು. ಇದರಿಂದ ದ್ವಾದಶಕಪಾಲ ಅಥವಾ ಅಷ್ಟಾಕಪಾಲಾತ್ಮಕವಾದ ಹವಿಸ್ಸನ್ನು ಸಿದ್ಧಪಡಿಸಿ ದೇವತೆಗಳಿಗೆ ಪ್ರಸವಿತೃವೂ ಸತ್ಯಪ್ರಸವನೂ ಆದ ಸವಿತೃದೇವನನ್ನುದ್ದೇಶಿಸಿ ಅರ್ಪಿಸತಕ್ಕದ್ದು. ಹೀಗೆ ಅರ್ಪಿಸುವುದರಿಂದ ಅಭಿಷೇಕಕ್ಕೆ ಸಿದ್ಧನಾಗಿರುವ ರಾಜನು ತನ್ನ ಕರ್ತವ್ಯದಲ್ಲಿ ಚೈತನ್ಯವನ್ನು ಸಂಪಾದಿಸುವ ವಿಶ್ವಾಸವನ್ನು ಹೊಂದುತ್ತಾನೆ.

(2) **ಅಥಾಗ್ನಯೇ ಗೃಹಪತಯೇ । ಅಷ್ಟಾಕಪಾಲಂ ಪುರೋಡಾಶಂ ನಿರ್ವಪತ್ಯಾಶೂನಾಂ ಶ್ರೀರ್ವೈ ಗಾರ್ಹಪತ್ಯಂ ಯಾವತೋ ಯಾವತ ಈಷ್ಟೇ ತದೇನಮಗ್ನಿರೇವ ಗೃಹಪತಿ-ರ್ಗಾರ್ಹಪತ್ಯಮಭಿಪರಿಣಯತ್ಯಥ ಯದಾಶೂನಾಂ ಕ್ಷಿಪ್ರೇ ಮಾ ಪರಿಣಯಾನಿತಿ ॥**

ಅಶ್ವಾಖ್ಯವಾದ ಧಾನ್ಯವು ಶೀಘ್ರವಾಗಿ ಫಲಿಸತಕ್ಕದ್ದು. ಈ ಧಾನ್ಯದಿಂದ ಅಷ್ಟಾಕಪಾಲಾತ್ಮಕವಾದ ಪುರೋಡಾಶವನ್ನು ಸಿದ್ಧಪಡಿಸಿ ಗೃಹಪತಿಯಾದ ಅಗ್ನಿಯನ್ನುದ್ದೇಶಿಸಿ ಅರ್ಪಿಸತಕ್ಕದ್ದು. ಗೃಹಪತಿಯ ಸ್ಥಾನವು ಸಂಪದ್ಯುಕ್ತವಾದುದು. ಇಂತಹ ಅಗ್ನಿಯ ಅನುಗ್ರಹದಿಂದ ಗಾರ್ಹಪತ್ಯವನ್ನು ಪಡೆದ ರಾಜನು ಸಂಪದ್ಯುಕ್ತನಾಗುತ್ತಾನೆ ಮತ್ತು ಆಶುಧಾನ್ಯ ದಿಂದ ಕಲ್ಪಿತವಾದ ಪುರೋಡಾಶವನ್ನು ಅರ್ಪಿಸುವುದರಿಂದ ಅದರಂತೆಯೇ ತಾನೂ ಶೀಘ್ರವಾದ ಅಭಿವೃದ್ಧಿಯನ್ನು ಪಡೆಯುತ್ತಾನೆ.

(3) **ಅಥ ಸೋಮಾಯ ವನಸ್ಪತಯೇ । ಶ್ಯಾಮಾಕಂ ಚರುಂ ನಿರ್ವಪತಿ ತದೇನಗ್ಂ ಸೋಮ ಏವ ವನಸ್ಪತಿರೋಷಧೀಭ್ಯಃ ಸುವತ್ಯಥ ಯಚ್ಛ್ಯಾಮಾಕೋ ಭವತ್ಯೇತೇ ವೈ ಸೋಮ-ಸ್ಯೌಷಧೀನಾಂ ಪ್ರತ್ಯಕ್ಷತಮಾಂ ಯಚ್ಛ್ಯಾಮಾಕಾಸ್ತಸ್ಮಾಚ್ಛ್ಯಾಮಾಕೋ ಭವತಿ ॥**

ಸೋಮರಾಜನು ಓಷಧಿಗಳಿಗೆ ಅಧಿಪತಿಯು. ಓಷಧಿಗಳಲ್ಲೆಲ್ಲಾ ಈ ಶ್ಯಾಮಾಕವೇ ಸೋಮದೇವತೆಗೆ ಅತ್ಯಂತ ಪ್ರಿಯಕರ ವಾದುದು. ಶಾಂತಿಗೂ ಪುಷ್ಟಿಗೂ ಕಾರಣನಾದ ಸೋಮನನ್ನುದ್ದೇಶಿಸಿ ಶ್ಯಾಮಾಕದಿಂದ ಪುರೋಡಾಶವನ್ನು ಕಲ್ಪಿಸಿ ಅರ್ಪಿಸಿದರೆ ಅಭಿಷಿಕ್ತನಾದ ರಾಜನಿಗೆ ಶಾಂತಿಯೂ ಪುಷ್ಟಿಯೂ ದೊರೆಯತ್ತದೆ.

(4) **ಅಥ ಬೃಹಸ್ಪತಯೇ ವಾಚೇ । ನೈವಾರಂ ಚರುಂ ನಿರ್ವಪತಿ ತದೇನಂ ಬೃಹಸ್ಪತಿರೇವ ವಾಚೇ ಸುವತ್ಯಥ ಯನ್ನೈವಾರೋ ಭವತಿ ಬ್ರಹ್ಮ ವೈ ಬೃಹಸ್ಪತಿರೇತೇ ವೈ ಬ್ರಹ್ಮಣಾ ಪಚ್ಯಂತೇ ಯನ್ನೀವಾರಾಸ್ತಸ್ಮಾನ್ನೈವಾರೋ ಭವತಿ ॥**

ಬೃಹಸ್ಪತಿಯು ಬ್ರಹ್ಮಪ್ರಿಯವಾದ ವಾಕ್ಕಿಗೆ ಅಧಿಪತಿಯು. ನೀವಾರಧಾನ್ಯವು ಬ್ರಹ್ಮಪೋಷಿತವಾದುದು. ಆದುದರಿಂದ ಈ ನೀವಾರಧಾನ್ಯದಿಂದ ಪುರೋಡಾಶವನ್ನು ಕಲ್ಪಿಸಿ ಬೃಹಸ್ಪತಿಗೆ ಅರ್ಪಿಸುವುದರಿಂದ ರಾಜನು ವಾಗಧಿಪತಿಯಾದ ಬೃಹಸ್ಪತಿಯ ಅನುಗ್ರಹವನ್ನು ಪಡೆದು ತನ್ನ ವಾಕ್ಶಕ್ತಿಯನ್ನು ವೃದ್ಧಿಪಡಿಸಿಕೊಳ್ಳುತ್ತಾನೆ.

(5) **ಅಥೇಂದ್ರಾಯ ಜ್ಯೇಷ್ಠಾಯ । ಹಾಯನಾನಾಂ ಚರುಂ ನಿರ್ವಪತಿ ತದೇನಮಿಂದ್ರ ಏವ ಜ್ಯೇಷ್ಠೋ ಜ್ಯೈಷ್ಠ್ಯಮಭಿಪರಿಣಯತ್ಯಥ ಯದ್ಧಾಯನಾನಾಂ ಭವತ್ಯತಿಷ್ಠಾ ವಾ ಏತಾ ಓಷಧಯೋ ಯದ್ಧಾಯನಾ ಅತಿಷ್ಠೋ ವಾ ಇಂದ್ರಸ್ತಸ್ಮಾದ್ಧಾಯನಾನಾಂ ಭವತಿ ॥**

ದೇವತೆಗಳಲ್ಲೆಲ್ಲಾ ಇಂದ್ರನೇ ಜ್ಯೇಷ್ಠನು ಮತ್ತು ಪ್ರಭುವು. ಓಷಧಿಗಳಲ್ಲೆಲ್ಲಾ ಹಾಯನನೇ ಜ್ಯೇಷ್ಠವು. ಆದುದರಿಂದ ಹಾಯನಧಾನ್ಯದಿಂದ ಚರುವನ್ನು ಕಲ್ಪಿಸಿ ಇಂದ್ರನಿಗೆ ಅರ್ಪಿಸತಕ್ಕದ್ದು. ಈ ಇಂದ್ರನ ಅನುಗ್ರಹದಿಂದ ರಾಜನು ಪ್ರಮುಖ ವಾದ ಸ್ಥಾನವನ್ನಾಕ್ರಮಿಸಿ ಎಲ್ಲರಿಗೂ ಪ್ರಭುವಾಗಲು ಅರ್ಹನಾಗುತ್ತಾನೆ.

(6) **ಅಥ ರುದ್ರಾಯ ಪಶುಪತಯೇ । ರೌದ್ರಂ ಗಾವೀಧುಕಂ ಚರುಂ ನಿರ್ವಪತಿ ತದೇನಗ್ಂ ರುದ್ರ ಏವ ಪಶುಪತಿಃ ಪಶುಭ್ಯಃ ಸುವತ್ಯಥ ಯದ್ಗಾವೀಧುಕೋ ಭವತಿ ವಾಸ್ತವ್ಯೋ ವಾ ಏಷ ದೇವೋ ವಾಸ್ತವ್ಯಾ ಗಾವೀಧುಕಾಸ್ತಸ್ಮಾದ್ಗಾವೀಧುಕೋ ಭವತಿ ॥**

ರುದ್ರನು ಪಶುಗಳಿಗೆ ಅಧಿಪತಿಯು. ಗಾವೀಧುಕವು ರುದ್ರಸಂಬಂಧವಾದುದು. ಯಜ್ಞದಲ್ಲಿ ರುದ್ರನಿಗೆ ವಾಸ್ತವ್ಯ ಭಾಗವು ಸೇರತಕ್ಕದ್ದು. ಗಾವೀಧುಕವೂ ಈ ವಾಸ್ತವ್ಯದ ಗುಂಪಿಗೇ ಸೇರತಕ್ಕದ್ದು. ಆದುದರಿಂದ ಗಾವೀಧುಕಧಾನ್ಯದ ಚರುವನ್ನು ಪಶುಪತಿಯಾದ ರುದ್ರನಿಗೆ ಅರ್ಪಿಸುವುದರಿಂದ ರಾಜನು ಪಶುಸಂಪತ್ತನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

(7) **ಅಥ ಮಿತ್ರಾಯ ಸತ್ಯಾಯ । ನಾಂಬಾನಾಂ ಚರುಂ ನಿರ್ವಪತಿ ತದೇನಂ ಮಿತ್ರ ಏವ ಸತ್ಯೋ ಬ್ರಹ್ಮಣೇ ಸುವತ್ಯಥ ಯನ್ನಾಂಬಾನಾಂ ಭವತಿ ವಾರುಣ್ಯಾ ವಾ ಏತಾ ಓಷಧಯೋ ಯಾಃ ಕೃಷ್ಣೇ ಜಾಯಂತೇಽಥೈತೇ ವೈತ್ರಾ ಯನ್ನಾಂಬಾಸ್ತಸ್ಮಾನ್ನಾಂಬಾನಾಂ ಭವತಿ ॥**

ನಾಂಬಬೀಜವು ವರುಣಸಂಬಂಧವಾದುದಾದದೂ ಸಹ ನಾಂಬಸಸಿಯು ಮಿತ್ರಸಂಬಂಧಿಯಾದುದು. ಆದುದರಿಂದ ನಾಂಬಬೀಜದಿಂದ ಚರುವನ್ನು ಕಲ್ಪಿಸಿ ಸತ್ಯಾತ್ಮಕನೂ, ಸತ್ಯಪ್ರಸವನೂ ಆದ ಮಿತ್ರನಿಗೆ ಅರ್ಪಿಸಿದರೆ ರಾಜನು ಮಿತ್ರನ ಅನುಗ್ರಹವನ್ನು ಸಂಪಾದಿಸಿ ಬ್ರಹ್ಮತೇಜಸ್ಸನ್ನು ಪಡೆಯುತ್ತಾನೆ.

(8) **ಅಥ ವರುಣಾಯ ಧರ್ಮಪತಯೇ । ವಾರುಣಂ ಯವಮಯಂ ಚರುಂ ನಿರ್ವಪತಿ ತದೇನಂ ವರುಣ ಏವ ಧರ್ಮಪತಿರ್ಧರ್ಮಸ್ಯ ಪತಿಂ ಕರೋತಿ ಪರಮತಾ ವೈ ಸಾ ಯೋ ಧರ್ಮಸ್ಯ ಪತಿರಸದ್ಯೋ ಹಿ ಪರಮತಾಂ ಗಚ್ಛತಿ ತಗ್ಂ ಹಿ ಧರ್ಮ ಉಪಯಂತಿ ತಸ್ಮಾದ್ವರುಣಾಯ ಧರ್ಮಪತಯೇ ॥**

(ಶ. ಬ್ರಾ. ೫-೩-೩-೯)

ಧರ್ಮಪತಿಯೂ, ಧರ್ಮಾಧ್ಯಕ್ಷನೂ ವರುಣನೇ ಆಗಿರುವನು. ಇದೇ ರಾಜನ ಅತ್ಯುತ್ತಮವಾದ ಪದವಿಯು. ಅವನಿಗೆ ಈ ಪದವಿಯು ಲಭಿಸಬೇಕಾದರೆ ವಿಶ್ವಧರ್ಮಕ್ಕೆಲ್ಲಾ ಪಾಲಕನಾದ ವರುಣನ ಅನುಗ್ರಹವು ಅತ್ಯವಶ್ಯಕವಾಗಿರುತ್ತದೆ. ಆದುದರಿಂದ ಅವನಿಗೆ ಪ್ರಿಯವಾದ ಯವಧಾನ್ಯದಿಂದ ಚರುವನ್ನು ಕಲ್ಪಿಸಿ ವರುಣನಿಗೆ ಅರ್ಪಿಸಬೇಕು. ವರುಣನ ಅನುಗ್ರಹದಿಂದ ರಾಜನು ಅತಿಶ್ಲಾಘ್ಯವಾದ ಧರ್ಮಾಧ್ಯಕ್ಷಪದವಿಯನ್ನು ಪಡೆಯುತ್ತಾನೆ.

ಈರೀತಿ ಎಂಟುಮಂದಿ ದೇವತೆಗಳೂ ಸಹ ದೇವಸೂ ಎಂಬ ರಾಜಸೂಯಾಂಗವಾದ ಕರ್ಮದಲ್ಲಿ ತಮ್ಮ ಸ್ಥಾನಕ್ಕನುಗುಣವಾಗಿ ಪೂಜಿಸಲ್ಪಡುತ್ತಾರೆ. ಅವರಲ್ಲಿ ಸತ್ಯಾತ್ಮಕನಾದ ಇಂದ್ರನೂ ಒಬ್ಬನು. ಅವನ ತೃಪ್ತ್ಯರ್ಥವಾಗಿ ಪ್ರಕೃತವಾದ ಮಂತ್ರವು ಪಠಿತವಾಗುತ್ತದೆ. ಇದೇ ದೇವಸುಯಾಗವು ತೈತ್ತಿರೀಯಸಂಹಿತೆಯಲ್ಲಿಯೂ ಸಹ ಸ್ವಲ್ಪ ವ್ಯತ್ಯಸ್ತವಾಗಿ ಉಕ್ತವಾಗಿದೆ. ಮುಖ್ಯಾಂಶಗಳ ವಿಷಯದಲ್ಲಿ ಏನೂ ವ್ಯತ್ಯಾಸವಿಲ್ಲ.

ಅಗ್ನಯೇ ಗೃಹಪತಯೇ ಪುರೋಡಾಶಮಷ್ಟಾಕಪಾಲಂ ನಿರ್ವಪತಿ ಕೃಷ್ಣಾನಾಂ ವ್ರೀಹೀಣಾಗ್ಂ ಸೋಮಾಯ ವನಸ್ಪತಯೇ ಶ್ಯಾಮಾಕಂ ಚರುಗ್ಂ ಸವಿತ್ರೇ ಸತ್ಯಪ್ರಸವಾಯ ಪುರೋಡಾಶಂ ದ್ವಾದಶಕಪಾಲಮಾಶೂನಾಂ ವ್ರೀಹೀಣಾಗ್ಂ ರುದ್ರಾಯ ಪಶುಪತಯೇ ಗಾವೀಧುಕಂ ಚರುಂ ಬೃಹಸ್ಪತಯೇ ವಾಚಸ್ಪತಯೇ ನೈವಾರಂ ಚರುಮಿಂದ್ರಾಯ ಜ್ಯೇಷ್ಠಾಯ ಪುರೋಡಾಶ-ಮೇಕಾದಶಕಪಾಲಂ ಮಹಾವ್ರೀಹೀಣಾಂ ಮಿತ್ರಾಯ ಸತ್ಯಾಯಾಂಬಾನಾಂ ಚರುಂ ವರುಣಾಯ ಧರ್ಮಪತಯೇ ಯವಮಯಂ ಚರುಗ್ಂ ಸವಿತಾ ತ್ವಾ ಪ್ರಸವಾನಾಗ್ಂ ಸುವತಾಂ ॥

(ತೈ. ೧-೮-೧೦-೧)

ಈ ಮಂತ್ರದಲ್ಲಿ ದೇವಸೂ ಎಂಬ ಹೋಮದಲ್ಲಿ ನಾನಾ ದೇವತೆಗಳಿಗೆ ಅರ್ಪಿಸಬೇಕಾದ ಹವಿಸ್ಸುಗಳ ವಿವರಣೆ ಇದೆ. ದೇವತೆಗಳ ಸಂಖ್ಯೆಯೂ, ಹೆಸರುಗಳೂ ಶತಪಥಬ್ರಾಹ್ಮಣದಲ್ಲಿ ಉಕ್ತವಾಗಿರುವಂತೆಯೇ ಇದೆ. ಆದರೆ ಹವಿಸ್ಸಿಗೆ ಉಪಯೋಗಿಸುವ ಧಾನ್ಯಗಳಲ್ಲಿ ಸ್ವಲ್ಪ ವ್ಯತ್ಯಸ್ತವಾದ ವಿವರಣೆ ಇದೆ. ಸತ್ಯಪ್ರಸವನಾದ ಸವಿತೃವಿಗೆ ಶತಪಥದಲ್ಲಿ ಪ್ಲಾಶುಕಾಖ್ಯವಾದ ಧಾನ್ಯವನ್ನೂ, ಗೃಹಪತಿಯಾದ ಅಗ್ನಿಗೆ ಆಶುಧಾನ್ಯವನ್ನೂ, ಜ್ಯೇಷ್ಠನಾದ ಇಂದ್ರನಿಗೆ ಹಾಯನ ಧಾನ್ಯವನ್ನೂ ವಿಧಿಸಿದೆ. ತೈತ್ತಿರೀಯಸಂಹಿತೆಯಲ್ಲಿ ಸವಿತೃವಿಗೆ ಆಶುಧಾನ್ಯವನ್ನೂ, ಅಗ್ನಿಗೆ ಕೃಷ್ಣವ್ರೀಹಿಯನ್ನೂ, ಇಂದ್ರನಿಗೆ ಮಹಾವ್ರೀಹಿಯನ್ನೂ ನಿರ್ದೇಶಿಸಿದೆ. ದೇವತೆಗಳ ಸಂಖ್ಯೆಯು ಒಂದೇ ಆದರೂ ಈ ಎಂಟು ದೇವತೆಗಳನ್ನು ಶತಪಥದಲ್ಲಿ ಒಂದು ಕ್ರಮದಲ್ಲಿಯೂ ತೈತ್ತಿರೀಯಸಂಹಿತೆಯಲ್ಲಿ ಮತ್ತೊಂದು ಕ್ರಮದಲ್ಲಿಯೂ ವಿವರಿಸಿದೆ.

ಹೀಗೆ ದೇವಸೂಯಾಗದಲ್ಲಿ ಜ್ಯೇಷ್ಠನೆಂದು ವರ್ಣಿತನಾದ ಇಂದ್ರನು ಈ ಮಂತ್ರದಲ್ಲಿ ಸ್ತುತನಾಗಿದ್ದಾನೆ. ಈ ದೇವನನ್ನು ಪೂಜಿಸಿ ಉಪಾಸನೆಯನ್ನು ಮಾಡತಕ್ಕ ಪುರುಷನು ಜಯಶೀಲನೂ, ಅನ್ನಯುಕ್ತನೂ, ಪಾಪಮುಕ್ತನೂ ಆಗುತ್ತಾನೆಂದು ಪ್ರಶಂಸಿಸಿದೆ. ಇದೇ ಮಂತ್ರವು ತೈತ್ತಿರೀಯಬ್ರಾಹ್ಮಣದಲ್ಲಿಯೂ ಪಠಿತವಾಗಿದೆ.

ದೇವಸುವಾಮೇತಾನಿ ಹವೀಗ್ಂಷಿ ಭವಂತಿ । ಏತಾವಂತೋ ವೈ ದೇವಾನಾಗ್ಂ ಸವಾಃ । ತ ಏವಾಸ್ಮೈ ಸರ್ವಾನ್ಪ್ರಯಚ್ಛಂತಿ । ತ ಏನಗ್ಂ ಸುವಂತೇ । ಅಗ್ನಿರೇವೈನಂ ಗೃಹಪತೀನಾಗ್ಂ ಸುವತೇ । ಸೋಮೋ ವನಸ್ಪತೀನಾಂ । ರುದ್ರಃ ಪಶೂನಾಂ । ಬೃಹಸ್ಪತಿರ್ವಾಚಾಂ ಇಂದ್ರೋ ಜ್ಯೇಷ್ಠಾನಾಂ । ಮಿತ್ರಸ್ಸತ್ಯಾನಾಂ । ವರುಣೋ ಧರ್ಮಪತೀನಾಂ । ..... । ಸವಿತಾ ತ್ವಾ ಪ್ರಸವಾನಾಗ್ಂ ಸುವತಾಂ ॥

(ತೈ. ಬ್ರಾ. ೧-೭-೪-೧)

ಇದರ ಅರ್ಥವೂ ಮೇಲೆ ಹೇಳಿದ ವಿವರಣೆಯಂತೆಯೇ ಇದೆ. ಸಾಯಣರೂ, ಭಟ್ಟಭಾಸ್ಕರರೂ ತೈತ್ತಿರೀಯಸಂಹಿತೆಯಲ್ಲಿರುವ ವಿವರಣೆಯನ್ನೇ ಹೇಳಿದಾರೆ.

ಸಂಹಿತಾಪಾಠಃ

ಅವಾ ನು ಕ್ಷಂ ಜ್ಯಾಯಾನ್ ಯಜ್ಞವನಸೋ ಮಹೀಂ ತ ಓಮಾತ್ರಾಂ ಕೃಷ್ಟಯೋ ವಿದುಃ ।
ಅಸೋ ನು ಕನ್ಮಜರೋ ವರ್ಧಾಶ್ಚ ವಿಶ್ವೇದೇತಾ ಸವನಾ ತೂತುಮಾ ಕೃಷೇ॥

ಪದಪಾಠಃ

ಅವ । ನು । ಕ್ಷಂ । ಜ್ಯಾಯಾನ್ । ಯಜ್ಞವನಸಃ । ಮಹೀಂ। ತೇ । ಓಮಾತ್ರಾಂ । ಕೃಷ್ಟಯಃ। ವಿದುಃ।
ಅಸಃ । ನು । ಕ್ಷಂ । ಅಜರಃ। ವರ್ಧಾಃ।ಚ್ಚ। ವಿಶ್ವಾ । ಇತ್ । ಏತಾ । ಸವನಾ । ತೂತುಮಾ । ಕೃಷೇ॥ ೫ ॥

ಸಾಯಣಭಾಷ್ಯಂ

ಹೇ ಇಂದ್ರ ತ್ವ ಜ್ಯಾಯಾನ್ ಪ್ರಶಸ್ಯತರಸ್ತ್ವಂ ಯಜ್ಞವನಸಃ ಸಂಭಕ್ತಯಜ್ಞಾನ್ ಸ್ತೋತ್ರ್ಯಾನ್ ನು ಕಂ ಕ್ಷಿಪ್ರಮವ । ರಕ್ಷ ॥ ಅಧ್ಯೇತಾರೋ ನು ಕಮಿತಿ ಪದದ್ವಯಂ ಕುರ್ವಂತಿ ತಥಾಪಿ ಹಿಕಂ ನುಕಮಿತ್ಯಾದೀನಿ ನವೋತ್ತರಾಣಿ ಪದಾನೀತ್ಯುಕ್ತವಾನ್ಯಾಸ್ಕಾಚಾರ್ಯಃ। ನೈ.೩-೧೨। ಅತಃ ಕೇವಲಾನಾಂ ಹಿಕಂ ಮಿತ್ಯೇವಮಾದೀನಾಂ ಯಾವಾನರ್ಥಃ ಸ ಏವ ವಿಶಿಷ್ಟಾನಾಮಪಿ । ತೈತ್ತಿರೀಯಾ ಅಪ್ಯೇಕಮೇವ ಪದಂ ಕುರ್ವಂತಿ ॥ ಅವೇತ್ಯುಕ್ತಂ । ಇಂದ್ರಸ್ಯಾವನಪ್ರಸಿದ್ಧಿಂ ದರ್ಶಯತಿ । ಹೇ ಇಂದ್ರ ತೇ ತವೌಮಾತ್ರಾಂ ರಕ್ಷಣಂ ಮಹೀಂ ಮಹದ್ವಿದುಃ ಕೃಷ್ಟಯೋ ಮನುಷ್ಯಾ ಋಷ್ಟಯಃ॥ ಓಮಾತ್ರಾಂ । ಅಮ ಗತ್ಯಾದಿಷು । ಔಣಾದಿಕ ಆತ್ರನ್ಪ್ರತ್ಯಯಃ । ಛಾಂದಸ ಉಮಾದೇಶಃ ॥ ಕಿಂಚ ತ್ವಮಜರೋ ಜರಾರಹಿತೋಽಸಃ । ಭವ । ನು ಕಂ ಕ್ಷಿಪ್ರಂ ವರ್ಧಾಶ್ಚ । ವರ್ಧಸ್ವ ಚ ಹವಿರಾಜ್ಯಾದಿನಾ । ಕಿಂಚ ವಿಶ್ವೇತ್ ಸರ್ವಾಣ್ಯಪ್ಯೇತಾನಿ ಸವನಾ ಸವನಾನಿ ತೂತುಮಾ ತೂರ್ಣಾನಿ ಕೃಷೇ । ಕರೋಷಿ ॥ ಕೃಷೇ । ಛಾಂದಸೇ ಲಿಟಿ ಛಂದಸಿ ವೇತಿ ದ್ವಿರ್ವಚನಾಭಾವಃ ॥

ಪ್ರತಿಪದಾರ್ಥ

(ಎಲೈ ಇಂದ್ರನೇ ನೀನು) **ಜ್ಯಾಯಾನ್**—ಎಲ್ಲರಿಗಿಂತಲೂ ಶ್ರೇಷ್ಠನಾದವನು । **ಯಜ್ಞವನಸಃ**—ಯಜ್ಞಾನುಷ್ಠಾನದಲ್ಲಿ ನಿರತರಾದವರನ್ನು । **ನು ಕಂ**—ಶೀಘ್ರವಾಗಿ । **ಅವ**—ರಕ್ಷಿಸು (ಎಲೈ ಇಂದ್ರನೇ) । **ತೇ**—ನಿನ್ನ । **ಓಮಾತ್ರಾಂ**—ರಕ್ಷಣೆಯನ್ನು । **ಮಹೀಂ**—ಉತ್ತಮನೆಂಬುದನ್ನಾಗಿ । **ಕೃಷ್ಟಯಃ**—ಮನುಷ್ಯರು । **ವಿದುಃ**—ತಿಳಿಯುತ್ತಾರೆ । (**ತ್ವಂ**—ನೀನು) । **ಅಜರಃ**—ಜರಾರಹಿತನಾಗಿ (ಮುಪ್ಪಿಲ್ಲದವನಾಗಿ) । **ಅಸಃ**—ಆಗಿದ್ದೀಯೆ । **ನುಕಂ**—ಶೀಘ್ರವಾಗಿ । **ವರ್ಧಾಃ ಚ**—ಹವಿರಾಜ್ಯಾದಿಹೋಮಗಳಿಂದ ವೃದ್ಧಿಯನ್ನು ಹೊಂದು । **ವಿಶ್ವಾ ಇತ್**—ಸಮಸ್ತವಾದ । **ಏತಾ ಸವನಾನಿ**—ಈ ಯಜ್ಞಗಳನ್ನು । **ತೂತುಮಾ**—ಶೀಘ್ರವಾಗಿ ನೆರವೇರುವಂತೆ । **ಕೃಷೇ**—ಮಾಡುತ್ತೀಯೆ.

ಭಾವಾರ್ಥ

ಎಲೈ ಇಂದ್ರನೇ, ನೀನು ಎಲ್ಲರಿಗಿಂತಲೂ ಹೊಡ್ಡನು ಎಂದರೆ ಶ್ರೇಷ್ಠನು. ಯಜ್ಞಾನುಷ್ಠಾನದಲ್ಲಿ ನಿರತರಾದ ನಮ್ಮನ್ನು ಶೀಘ್ರವಾಗಿ ರಕ್ಷಿಸು. ನಿನ್ನ ರಕ್ಷಣೆಯು ಬಹಳ ಉತ್ತಮತರದ್ದೆಂದು ಮನುಷ್ಯರೆಲ್ಲರೂ ತಿಳಿದಿದ್ದಾರೆ. ನೀನು ಜರಾರಹಿತನು ಎಂದರೆ ನಿನಗೆ ಯಾವಾಗಲೂ ಮುಪ್ಪಿಲ್ಲ. ಹವಿರಾಜ್ಯಾದಿಹೋಮಗಳಿಂದ ವೃದ್ಧಿಯನ್ನು ಹೊಂದಿ ಈ ಸಮಸ್ತ ಯಜ್ಞಗಳೂ ಶೀಘ್ರವಾಗಿ ನೆರವೇರುವಂತೆ ಅನುಗ್ರಹಿಸುತ್ತೀಯೆ.

English Translation

Indra, you are the best of all, quickly protect those who are deligent in worship: men know that your protection is great: be undecaying, rapidly increase : you make all these sacrifices swift.

ವಿಶೇಷವಿಷಯಗಳು

ನುಕಂ ಎಂದು ಮೊದಲಾದ ಒಂಭತ್ತು ಶಬ್ದಗಳು ಸರ್ವಪದಸಮಾಮ್ನಾಯದಲ್ಲಿ ಎಂದರೆ ನಾಲ್ಕುವಿಧವಾದ ಶಬ್ದಗಳನ್ನು ಒಂದುಗೂಡಿಸುವ ಸಂದರ್ಭದಲ್ಲಿ ಉಪಯೋಗಿಸಲ್ಪಡುತ್ತವೆ ಎಂದು ಹೇಳಿದಾರೆ(ನಿ. ೩–೧೪). ಆ ಪದಗಳು ಯಾವುವೆಂದರೆ— **ಹಿಕಂ. ನುಕಂ, ಸುಕಂ, ಆಹಿಕಂ, ಆಕೀಂ, ನಕಿಃ, ಮಾಕಿಃ, ನಕೀಂ, ಆಕೃತಂ** ಎಂದು. ಪ್ರಕೃತ ಋಕ್ಕಿನಲ್ಲಿ ನು, ಕಿಂ ಎಂದು ಪ್ರತ್ಯೇಕ ಶಬ್ದಗಳನ್ನಾಗಿ ವಿಂಗಡಿಸಿದೆ. ಕೆಲವರು ಇವೆರಡಕ್ಷರಗಳೂ ಒಂದೇ ಪದವೆಂದು ಭಾವಿಸುತ್ತಾರೆ. ತೈತ್ತಿರೀಯ (ಯಜುರ್ವೇದದ) ಸಂಹಿತೆಯಲ್ಲಿರುವ—**ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ** (ತೈ. ಸಂ. ೧-೨-೧೩-೩) ಎಂಬ ವಾಕ್ಯದಲ್ಲಿ ನುಕಂ ಎಂಬ ಎರಡಕ್ಷರಗಳೂ ಒಂದೇ ಪದವೆಂದು ಪರಿಗಣಿಸಲ್ಪಟ್ಟಿದೆ.

ಸಂಹಿತಾಪಾಠಃ

ಏತಾ ವಿಶ್ವಾ ಸವನಾ ತೂತುಮಾ ಕೃಷೇ ಸ್ವಯಂ ಸೂನೋ ಸಹಸೋ ಯಾನಿ ದಧಿಷೇ ।
ವರಾಯ ತೇ ಪಾತ್ರಂ ಧರ್ಮಣೇ ತನಾ ಯಜ್ಞೋ ಮಂತ್ರೋ ಬ್ರಹ್ಮೋದ್ಯತಂ ವಚಃ ॥ ೬ ॥

ಪದಪಾಠಃ

ಏತಾ । ವಿಶ್ವಾ । ಸವನಾ । ತೂತುಮಾ । ಕೃಷೇ । ಸ್ವಯಂ । ಸೂನೋ ಇತಿ । ಸಹಸಃ । ಯಾನಿ । ದಧಿಷೇ ।
ವರಾಯ । ತೇ । ಪಾತ್ರಂ । ಧರ್ಮಣೇ । ತನಾ । ಯಜ್ಞಃ । ಮಂತ್ರಃ । ಬ್ರಹ್ಮ । ಉತ್ಯತಂ । ವಚಃ ॥೬॥

ಸಾಯಣಭಾಷ್ಯಂ

ಹೇ ಇಂದ್ರ ಏತೈತಾನಿ ವಿಶ್ವಾ ಸವನಾ ಸರ್ವಾಣಿ ಸವನಾನಿ ತೂತುಮಾ ತೂರ್ಣಾನಿ ಕೃಷೇ । ಕರೋಷಿ । ಏತಾನೀತ್ಯುಕ್ತಂ ಕಾನೀತಿ ತತ್ರಾಹ । ಹೇ ಸಹಸೋ ಬಲಸ್ಯ ಸೂನೋ ಪುತ್ರ । ಬಲವನ್ನಿತ್ಯರ್ಥಃ । ಸ್ವಯಂ ಯಾನಿ ದಧಿಷೇ ಧಾರಯಸಿ । ಹೇ ಇಂದ್ರ ತೇ ತವ ವರಾಯ ಶತ್ರೂಣಾಂ ವಾರಕಾಯ ತೇ ತವ ಸ್ವಭೂತಂ ಪಾತ್ರಂ ರಕ್ಷಣಂ ಭವತ್ವಸ್ಮಾಕಂ । ಕಿಂಚ ಧರ್ಮಣೇ ಧಾರಣಾಯ ತನಾ ಧನಂ ಭವತ್ವಿತಿ ಶೇಷಃ । ಕಿಂಚ ತುಭ್ಯಂ ಯಜ್ಞೋ ಮಂತ್ರಃ । ಇಜ್ಯತೇಽನೇನೇತಿ ಯಜ್ಞಃ ಕರಣಸಾಧನಭೂತೋ ಮಂತ್ರಃ। ಯಜುರಿತ್ಯರ್ಥಃ । ಬ್ರಹ್ಮ ಪರಿವೃಢಂ । ಶಸ್ತ್ರಮಿತ್ಯರ್ಥಃ । ತದುಭಯಾತ್ಮಕಂ ವಚ ಉದ್ಯತಂ ಭವತೀತಿ ಶೇಷಃ ॥

ಪ್ರತಿಪದಾರ್ಥ

(ಎಲೈ ಇಂದ್ರನೇ) **ಏತಾ ವಿಶ್ವಾ**—ಈ ಸಮಸ್ತವಾದ। **ಸವನಾ**—ಯಜ್ಞಕರ್ಮಗಳನ್ನು। **ತೂತುಮಾ**—ಶೀಘ್ರವಾಗಿ ನೆರವೇರುವಂತೆ। **ಕೃಷೇ**—ಮಾಡುತ್ತೀಯೆ। **ಸಹಸಃ ಪುತ್ರ**ಃ—ಶಕ್ತಿಪುತ್ರನಾದ ಎಂದರೆ ಶಕ್ತಿಯುತನಾದ ಎಲೈ ಇಂದ್ರನೇ। **ಸ್ವಯಂ**—ನೀನೇ। **ಯಾನಿ**—ಯಾವ ಯಜ್ಞಕರ್ಮಗಳನ್ನು। **ದಧಿಷೇ**—ಧರಿಸಿ ಪೋಷಿಸುತ್ತೀಯೋ। **ತೇ**—ಅಂತಹ ನಿನ್ನ। **ವರಾಯ**—ಶತ್ರುನಿವಾರಕವಾದ। **ಪಾತ್ರಂ**—ರಕ್ಷಣೆಯು ನಮ್ಮ ವಿಷಯದಲ್ಲಿರಲಿ। **ಧರ್ಮಣೇ**—ನಮ್ಮ ಧಾರಣೆಪೋಷಣೆಗಳಿಗಾಗಿ। **ತನಾ**—ಧನವೂ ಲಭಿಸಲಿ। (**ತುಭ್ಯಂ**—ನಿನ್ನ ಪ್ರೀತಿಗಾಗಿ)। **ಯಜ್ಞಃ**—ಯಜ್ಞಸಾಧನಭೂತವಾದ। **ಮಂತ್ರ**ಃ—ಯಜುರ್ವೇದದ ಮಂತ್ರಗಳೂ। **ಬ್ರಹ್ಮ**—ಸ್ತೋತ್ರರೂಪವಾದ। **ವಚಃ**—ಋಗ್ವೇದಮಂತ್ರಗಳೂ ಸಹ। **ಉದ್ಯತಂ**—ನಿರ್ಮಿತವಾಗಿ ಪಠಿಸಲ್ಪಡುತ್ತವೆ.

ಭಾವಾರ್ಥ

ಎಲೈ ಇಂದ್ರನೇ, ಈ ಸಮಸ್ತ ಯಜ್ಞಕರ್ಮಗಳನ್ನು ನೀನು ಶೀಘ್ರವಾಗಿ ನೆರವೇರುವಂತೆ ಮಾಡುತ್ತೀಯೆ. ಮಹಾಬಲಶಾಲಿಯಾದ ಎಲೈ ಇಂದ್ರನೇ, ನೀನು ಯಾವ ಯಜ್ಞಕರ್ಮವನ್ನು ಧರಿಸಿ ಪೋಷಿಸುತ್ತೀಯೋ ಅಂತಹ ನಿನ್ನ ಶತ್ರುನಿವಾರಕವಾದ ಯಜ್ಞರಕ್ಷಣೆಯು ನಮ್ಮ ವಿಷಯದಲ್ಲಿರಲಿ. ನಮ್ಮ ಪೋಷಣೆಗಾಗಿ ಧನವೂ ನಮಗೆ ಲಭಿಸಲಿ. ನಿನ್ನ ಪ್ರೀತಿಗಾಗಿ ಯಜ್ಞಸಾಧನವಾದ ಯಜುರ್ವೇದಾತ್ಮಕವಾದ ಮಂತ್ರವೂ, ಸ್ತುತಿರೂಪವಾದ ಋಗ್ವೇದಮಂತ್ರವೂ ಪಠಿಸಲ್ಪಡುತ್ತದೆ.

English Translation

You make swift all those sacrifices which, son of strength, you yourself support; may your protection be granted for the repulse (of enemies, may) wealth (be granted) for our support : the sacrifice, the hym n the sacred text, the voice (is) raised (to you).

ವಿಶೇಷವಿಷಯಗಳು

ಪ್ರಕೃತ ಋಕ್ಕಿನಲ್ಲಿರುವ **ಯಜ್ಞೋ ಮಂತ್ರೋ ಬ್ರಹ್ಮೋದ್ಯತಂ ವಚಃ** ಎಂಬ ವಾಕ್ಯದ ಯಜ್ಞೋ ಮಂತ್ರಃ ಎಂಬ ಪದಗಳಿಗೆ ಯಜ್ಞಕರ್ಮಗಳಿಗೆ ಸಾಧನವಾದ ಯಜುರ್ವೇದ ಮಂತ್ರವೆಂದೂ ಬ್ರಹ್ಮ ಉದ್ಯತಂ ವಚಃ ಎಂಬ ಶಬ್ದಗಳಿಗೆ ಸ್ತೋತ್ರಾತ್ಮಕವಾದ ಋಗ್ವೇದಮಂತ್ರವೆಂದೂ ಸಾಯಣರು ಅರ್ಥವಿವರಣೆಮಾಡಿದಾರೆ. ಆದರೆ ಬ್ರಹ್ಮೋದ್ಯವೆಂದರೆ ಬ್ರಹ್ಮವಿಷಯವಾವ ತತ್ತ್ವವಿಮರ್ಶೆಯು ಎಂದೂ ಅರ್ಥವಿದೆ. ಅಶ್ವಮೇಧಯಜ್ಞದ ಮಧ್ಯದ ದಿವಸದಲ್ಲಿ ಬ್ರಹ್ಮೋದ್ಯವು ಎಂದರೆ ಬ್ರಹ್ಮವಿಷಯವಾದ ತತ್ತ್ವವಿಮರ್ಶೆಯು ಹೋತೃವೇ ಮೊದಲಾದ **ಋತ್ವಿಗ್ಜ**ನರಲ್ಲಿ ನಡೆಯುವುದು ರೂಢಿಯು. ಈ ವಿಷಯದಲ್ಲಿ—**ಅಶ್ವಮೇಧಿಕೇ ಮಧ್ಯಮೇಽಹನಿ ಬ್ರಹ್ಮೋದ್ಯೇ ಹೋತ್ರಾದಯಃ ಪೃಚ್ಛಾಮಿ ತ್ವೇತ್ಯನಯಾ ಯಜಮಾನಂ ಪೃಚ್ಛೇಯುಃ** ಎಂದು ಆಶ್ವಲಾಯನಮಹರ್ಷಿಯು ಹೇಳಿದಾರೆ. ಅಶ್ವಮೇಧಯಜ್ಞದಲ್ಲಿಯೂ, ಇತರ ಮುಖ್ಯ ಯಜ್ಞಗಳಲ್ಲಿಯೂ ಋತ್ವಿಕ್ಕುಗಳು ಅದರಲ್ಲಿಯೂ ಹೋತೃ, ಬ್ರಹ್ಮ ಮೊದಲಾದವರು ಗಹನವಾದ ತತ್ತ್ವವಿಚಾರವನ್ನು ವಿಮರ್ಶೆಮಾಡುವುದು ಪದ್ಧತಿಯಾಗಿದೆ. ಈ ತತ್ತ್ವವಿಮರ್ಶೆಯು

ಪ್ರಜಾಪತಿಯ ವಿಷಯವಾಗಿಯೂ ಅಥವಾ ಯಜ್ಞದ ವಿಷಯವಾಗಿಯೂ ಅಥವಾ ಸೃಷ್ಟಿ, ಸೃಷ್ಟಿಗೆ ಪೂರ್ವದಲ್ಲಿದ್ದ ಸ್ಥಿತಿ ಮೊದಲಾದ ವಿಷಯವಾಗಿಯೂ ಇರಬಹುದು. ಉದಾಹರಣೆಗಾಗಿ ಮೇಲೆ ಹೇಳಿದ ಅಶ್ವಮೇಧಯಜ್ಞದಲ್ಲಿ ಚರ್ಚಿಸಲ್ಪಡಬೇಕಾದ ಪೃಚ್ಛಾಮಿ ತ್ವಾ ಎಂಬ ಋಕ್ಕನ್ನೂ ಅದಕ್ಕೆ ಪ್ರತ್ಯುತ್ತರವಾಗಿ ವೇದಿಮಾಹುಃ ಎಂದು ಋಕ್ಕುಗಳಲ್ಲಿ ಅಡಗಿರುವ ತತ್ತ್ವವನ್ನೂ ಸೂಕ್ಷ್ಮವಾಗಿ ವಿವರಿಸಲಾಗುವುದು.

ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ ಪೃಚ್ಛಾಮಿ ಯತ್ರ ಭುವನಸ್ಯ ನಾಭಿಂ ।
ಪೃಚ್ಛಾಮಿ ತ್ವಾ ವೃಷ್ಣೋ ಅಶ್ವಸ್ಯ ರೇತಃ ಪೃಚ್ಛಾಮಿ ವಾಚಃ ಪರಮಂ ವ್ಯೋಮ ॥

(ಋ. ಸಂ. ೧-೧೬೪-೩೪)

ಎಲೈ ಯಜಮಾನನೇ, ಪೃಥಿವಿಯ ತುತ್ತತುದಿ ಯಾವುದು ? ವಿಶ್ವದ ಎಲ್ಲಾ ಭಾಗಗಳನ್ನೂ ಒಟ್ಟಿಗೆ ಸೇರಿಸತಕ್ಕ ಬಂಧಕವು ಎಲ್ಲಿದೆ ? ವೃಷ್ಟಿಯನ್ನು ಸುರಿಸತಕ್ಕ ಆದಿತ್ಯನ (ಬ್ರಹ್ಮನ) ವೀರ್ಯ (ಸಾಮರ್ಥ್ಯವು) ಯಾವುದು ? ಮತ್ತು ಸಕಲ ವ್ಯವಹಾರಗಳಿಗೂ ಕಾರಣವಾದ ವಾಕ್ಕಿನ (ಅಥವಾ ಮಂತ್ರದ) ಉಗಮಸ್ಥಾನವು ಯಾವುದು ? ಇವುಗಳ ಸ್ವರೂಪವನ್ನು ನನಗೆ ತಿಳಿಸು ಎಂದು ಋತ್ವಿಜನು ಯಜಮಾನನನ್ನು ಪ್ರಶ್ನೆಮಾಡುವನು. ಅದಕ್ಕೆ ಪ್ರತ್ಯುತ್ತರವಾಗಿ ಯಜಮಾನನು ಮುಂದಿನ ಋಕ್ಕಿನಿಂದ ಪ್ರತ್ಯುತ್ತರವನ್ನು ಹೇಳುವನು.

ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಅಯಂ ಯಜ್ಞೋ ಭುವನಸ್ಯ ನಾಭಿಃ ।
ಅಯಂ ಸೋಮೋ ವೃಷ್ಣೋ ಅಶ್ವಸ್ಯ ರೇತೋ ಬ್ರಹ್ಮಾಯಂ ವಾಚಃ ಪರಮಂ ವ್ಯೋಮ ॥

(ಋ. ಸಂ. ೧-೧೬೪-೩೫)

ಎಲೈ ಋತ್ವಿಜನೇ, ನೀನು ಕೇಳಿದ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಹೇಳುವೆನು, ಕೇಳು—ಯಜ್ಞವೇದಿಯೇ ಪೃಥ್ವಿಯ ಅತ್ಯಂತ ಕೊನೆಯ ಪರ್ಯವಸಾನವು ಎಂದರೆ ತುದಿಯು. ಯಜ್ಞವೇ ವಿಶ್ವದ ನಾಭಿರೂಪವಾಗಿದೆ. ವೃಷ್ಟಿಪ್ರದನೂ, ಸರ್ವತ್ರ ವ್ಯಾಪಕನೂ ಆದ ಆದಿತ್ಯನಿಗೆ (ಬ್ರಹ್ಮನಿಗೆ) ಸೋಮರಸವೇ ರೇತಸ್ಸಾಗಿದೆ (ವೀರ್ಯವಾಗಿದೆ). ಪ್ರಜಾಪತಿಯೆನಿಸಿದ ಬ್ರಹ್ಮನೇ ವಾಕ್ಕಿಗೆ (ಮಂತ್ರಗಳಿಗೆ) ಶ್ರೇಷ್ಠವಾದ ಆಶ್ರಯಸ್ಥಾನವಾಗಿದ್ದಾನೆ ಎಂದು ಯಜಮಾನನು ಹೇಳುವನು.

ಈ ಎರಡು ಮಂತ್ರಗಳಲ್ಲಿಯೂ ಅಡಗಿರುವ ತತ್ತ್ವವು ಸಾಧಾರಣವೆಂದು ತೋರಬಹುದಾದರೂ ಇವುಗಳಿಗೆ ಮಹತ್ತ್ವಪೂರಿತವಾದ ಗೂಢಾರ್ಥವಿದೆ. ಅವುಗಳನ್ನು ಸ್ವಲ್ಪಮಟ್ಟಿಗೆ ವಿಮರ್ಶೆಮಾಡುತ್ತೇವೆ.

ಆಶ್ವಮೇಧಿಕೇ ಮಧ್ಯಮೇಽಹನಿ ಬ್ರಹ್ಮೋದ್ಯೇ ಹೋತ್ರಾದಯಃ-ಪೃಚ್ಛಾಮಿ ತ್ವಾ ಇತ್ಯನಯಾ ಏಕೈಕಶೋ ಯಜಮಾನಂ ಪೃಚ್ಛೇಯುಃ । ಇದು ಬ್ರಹ್ಮೋದ್ಯಕಾಲದಲ್ಲಿ ಪಠಿಸತಕ್ಕ ಮಂತ್ರವು. ಹೋತ್ರಾದಿ ಋತ್ವಿಗ್ವರ್ಣರು ಯಜಮಾನನ್ನು ಬ್ರಹ್ಮವಿಷಯಕವಾಗಿ ಪ್ರಶ್ನೆಮಾಡುವರು. ಈ ಬ್ರಹ್ಮೋದ್ಯವು ಅಶ್ವಮೇಧಯಜ್ಞದಲ್ಲಿ ನಿಯತವಾಗಿ ಆಚರಿಸಲ್ಪಡಬೇಕಾದ ವಿಧಿಯು. ಇತರ ಯಜ್ಞಗಳಲ್ಲಿಯೂ ವಿಕಲ್ಪವಾಗಿ ಆಚರಿಸಬಹುದು. ಇದು ಕರ್ಮಾಂಗವಾಗಿದ್ದರೂ ಸಹ ಇದರಲ್ಲಿ ವಿಶ್ವತತ್ತ್ವದ ವಿಷಯಕವಾದ ಜ್ಞಾನಾನ್ವೇಷಣವಿರುತ್ತದೆ. ವಿಶ್ವತತ್ತ್ವಕ್ಕೆ ಸಂಬಂಧಿಸಿದ ರಹಸ್ಯವಾದ ಅಂಶಗಳನ್ನು ತಿಳಿಯಬೇಕೆಂಬ ಕುತೂಹಲವೂ, ಆ ವಿಷಯದಲ್ಲಿ ಆಯಾ ಋಷಿಗಳಿಗೆ ತಿಳಿದಿರುವ ಉತ್ತರವೂ ಬ್ರಹ್ಮಸ್ವರೂಪವನ್ನು ಕುರಿತ ಪ್ರಶ್ನೋತ್ತರಗಳಾಗಿವೆ. ತೈತ್ತಿರೀಯಸಂಹಿತೆ, ಐತರೇಯ

ಬ್ರಾಹ್ಮಣ, ಶತಪಥಬ್ರಾಹ್ಮಣ, ಬೃಹದಾರಣ್ಯಕೋಪನಿಷತ್ ಇತ್ಯಾದಿ ಶ್ರುತಿಗಳಲ್ಲೆಲ್ಲಾ ಈ ಬ್ರಹ್ಮೋದ್ಯವು (ಬ್ರಹ್ಮ ಜಿಜ್ಞಾಸೆಯು) ಒಂದೇ ವಿಧವಾಗಿಲ್ಲ. ಬ್ರಹ್ಮಾನ್ವೇಷಣವು ಇದರಲ್ಲಿ ಮುಖ್ಯವಾದ ಅಂಶವಾಗಿದ್ದರೂ ಸಹ ಪ್ರಶ್ನೋತ್ತರ ಗಳಲ್ಲಿ ಕರ್ಮಭೇದಗಳಿರುತ್ತವೆ. ಉದಾಹರಣೆಗೆ, ಪ್ರಕೃತವಾದ ಮಂತ್ರಗಳಲ್ಲಿ ಇದು ಹೋತ್ರಾದಿಗಳು ಯಜಮಾನನಿಗೆ ಹಾಕತಕ್ಕ ಪ್ರಶ್ನೆಯೆಂದು ಆಶ್ವಲಾಯನಶ್ರೌತಸೂತ್ರದಲ್ಲಿ ಹೇಳಿದ್ದರೂ ತೈತ್ತಿರೀಯಸಂಹಿತೆಯಲ್ಲಿ ಹೋತೃವು ಈ ಪ್ರಶ್ನೆಯನ್ನು ಯಜ್ಞಕಾಲದಲ್ಲಿ ಬ್ರಹ್ಮನಿಗೆ ಹಾಕಿ ಉತ್ತರವನ್ನು ಪಡೆಯುತ್ತಾನೆ.

ಕಿಗ್ಂ ಸ್ವಿದಾಸೀತ್ ಪೂರ್ವಚಿತ್ತಿಃ ಇತ್ಯಾದಿ ವಾಕ್ಯಗಳಿಂದ ಈ ಪ್ರಶ್ನೋತ್ತರವು ತೈತ್ತಿರೀಯಸಂಹಿತೆಯಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿ—**ಅಥ ಹೋತುಃ ಪ್ರಶ್ನಾಃ ಬ್ರಹ್ಮಣಃ ಪ್ರತಿವಚನಾನಿ** । ಹೋತೃವಿಗೂ ಬ್ರಹ್ಮನಿಗೂ ನಡೆಯತಕ್ಕ ಪ್ರಶ್ನೋತ್ತರರೂಪವಾದ ಸಂಭಾಷಣೆಯು ಎಂದು ಭಾಷ್ಯದಿಂದ ತಿಳಿಯುತ್ತದೆ ತೈತ್ತಿರೀಯಸಂಹಿತಾದಿಗಳಲ್ಲಿ ಈ ಬ್ರಹ್ಮೋದ್ಯದ ಕ್ರಮವು ಯಾವ ರೀತಿಯಲ್ಲಿ ವಿವರಿಸಲ್ಪಟ್ಟಿದೆಯೆಂದು ಮುಂದೆ ತಿಳಿಸಲಾಗುತ್ತದೆ.

ಪ್ರಕೃತ ಬ್ರಹ್ಮೋದ್ಯವೆಂದು ವಿವರಿಸುವ ಮಂತ್ರದಲ್ಲಿ ನಾಲ್ಕು ಪ್ರಶ್ನೆಗಳಿವೆ. ಅವುಗಳಿಗೆ ಉತ್ತರವೂ ಮುಂದಿನ ಮಂತ್ರದಲ್ಲಿದೆ. ಅವುಗಳಲ್ಲಿ ಒಂದೊಂದನ್ನೂ ಪ್ರತ್ಯೇಕವಾಗಿ ವಿಮರ್ಶಿಸಲಾಗುವುದು.

(1) ಮೊದಲನೆಯ ಪ್ರಶ್ನೆಯು—**ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ** । ಪೃಥಿವಿಯ ತುತ್ತತುದಿ ಯಾವುದು ಎಂಬುದೇ ಪ್ರಶ್ನೆ. ಅದಕ್ಕೆ—**ಇಯಂ ವೇದಿಃ ಪರೋ ಅಂತಃ ಪೃಥಿವ್ಯಾಃ** । ಈ ಯಜ್ಞವೇದಿಯೇ ಪೃಥಿವಿಯ ತುತ್ತತುದಿಯೆಂದು ಉತ್ತರರೂಪವಾಗಿ ಹೇಳಿದೆ. ಎಂದರೆ ಯಜ್ಞಾಧಾರವಾದ ವೇದಿಯೆಂದಾಯಿತು. ಯಜ್ಞವೇ ಪರಬ್ರಹ್ಮಸ್ವರೂಪವಾದುದರಿಂದಲೂ (ಪೃಥಿವ್ಯಾದಿಲೋಕಗಳೆಲ್ಲವೂ ಬ್ರಹ್ಮನ ಆಧಾರದಿಂದಲೇ ಇರುವುದರಿಂದ ಅಥವಾ ಬ್ರಹ್ಮಸ್ವರೂಪವಾಗಿಯೇ ಇರುವುದರಿಂದಲೂ ಯಜ್ಞಾಧಾರವಾದ ವೇದಿಗೂ ಪೃಥಿವಿಗೂ ತಾದಾತ್ಮ್ಯವನ್ನು ಹೇಳಿದೆ. ಪೃಥಿವಿಯೆಂಬ ಶಬ್ದಕ್ಕೆ ಅಂತರಿಕ್ಷವೆಂಬ ಅರ್ಥವೂ ಇರುವುದರಿಂದ ಇಲ್ಲಿ ಪೃಥಿವಿಯೆಂದರೆ ಕೇವಲ ಭೂಮಿಯೆಂದೇ ಅರ್ಥಮಾಡಬಾರದು. ಭೂಮ್ಯಂತರಿಕ್ಷಾದಿಗಳನ್ನು ಒಳಗೊಂಡ ಸಕಲವಿಶ್ವವೆಂದೇ ಅರ್ಥಮಾಡಬೇಕು.

ಸ ವೈ ತ್ರಿಃ ಪೂರ್ವಂ ಪರಿಗ್ರಹಂ ಪರಿಗೃಹ್ಣಾತಿ । ತ್ರಿರುತ್ತರಂ ತತ್ ಷಟ್ಕೃತ್ವಃ ಷಡ್ವಾ ಋತವಃ ಸಂವತ್ಸರಸ್ಯ ಸಂವತ್ಸರೋ ಯಜ್ಞಃ ಪ್ರಜಾಪತಿಃ ಸ ಯಾವಾನೇನ ಯಜ್ಞೋ ಯಾವತ್ಯಸ್ಯ ಮಾತ್ರಾ ತಾವಂತಮೇವೈತತ್ಪರಿಗೃಹ್ಣಾತಿ ॥

(ಶ. ಬ್ರಾ. ೧-೨-೪-೧೨)

●

ಇತ್ಯಾದಿ ವಾಕ್ಯಗಳಲ್ಲಿ ಪ್ರಜಾಪತಿಗೂ, ಕಾಲಾತ್ಮಕವಾದ ಸಂವತ್ಸರಕ್ಕೂ, ವತ್ಸರರೂಪವಾದ ಯಜ್ಞಕ್ಕೂ, ಪ್ರಜಾಪತಿಗೂ ತಾದಾತ್ಮ್ಯವನ್ನು ಹೇಳಿದೆ. ಹೀಗೆ ದೇಶಕಾಲಸ್ವರೂಪನಾದ ಪ್ರಜಾಪತಿಗೆ ಆಧಾರವು ಎಷ್ಟು ವಿಸ್ತೃತವೋ ಯಜ್ಞಾಧಾರವೂ ಅಷ್ಟೇ ವಿಸ್ತೃತಿಯುಳ್ಳದ್ದು ಎಂದು **ಯಾವತ್ಯಸ್ಯ ಮಾತ್ರಾ ತಾವಂತಮೇವೈತತ್ಪರಿಗೃಹ್ಣಾತಿ** ಎಂಬ ವಾಕ್ಯದಿಂದ ತಿಳಿಸಿದೆ ಮತ್ತು ಯಜ್ಞಾಧಾರವಾದ ವೇದಿಯ ಶಬ್ದನಿಷ್ಪತ್ತಿಯನ್ನು ತಿಳಿಸುತ್ತಾ—

ತಂ ಛಂದೋಭಿರಭಿತಃ ಪರಿಗೃಹ್ಯ । ಅಗ್ನಿಂ ಪುರಸ್ತಾತ್ಸಮಾಧಾಯ ತೇನಾರ್ಚಂತಃ ಶ್ರಾಮ್ಯಂತಶ್ಚೇರುಸ್ತೇನೇಮಾಗ್ಂ ಸರ್ವಾಂ ಪೃಥಿವೀಂ ಸಮುವಿಂದತ ತದ್ಯದೇನೇನೇಮಾಗ್ಂ ಸರ್ವಾಗ್ಂ ಸಮುವಿಂದಂತ ತಸ್ಮಾದ್ವೇದಿರ್ನಾಮ ತಸ್ಮಾದಾಹುರ್ಯಾವತೀ ವೇದಿಸ್ತಾವತೀ ಪೃಥಿವೀತ್ಯೇ-

ತ್ಯಯಾ ಹೀಮಾಗ್ಂ ಸರ್ವಾಗ್ಂ ಸಮವಿಂದಂತೈವಗ್ಂ ಹ ವಾ ಇಮಾಗ್ಂ ಸರ್ವಾಗ್ಂ ಸಪತ್ನಾನಾಂ ಸಂವೃಂಕ್ತೇ ನಿರ್ಭಜತ್ಯಸ್ಯೈ ಸಪತ್ನಾನ್ಯ ಏವಮೇತದ್ವೇದ ॥

(ಶ. ಬ್ರಾ. ೧-೨-೫-೭)

ಛಂದಸ್ಸುಗಳಿಂದ ಯಜ್ಞವೇದಿಯನ್ನು ಪರಿಗ್ರಹಿಸಿದನಂತರ ಅದರಲ್ಲಿ ಅಗ್ನಿಯನ್ನು ಸ್ಥಾಪಿಸಿ ಅನುಸ್ಯೂತವಾದ ಮತ್ತೆ ತಪೋರೂಪವಾದ ನಿಯಮಗಳಿಂದಲೂ ವ್ರತಗಳಿಂದಲೂ ಪೂಜಿಸತೊಡಗಿದರು. ಇದರ ಫಲವಾಗಿ ಅವರು ಪೂರ್ಣವಾದ ಪೃಥ್ವಿಯನ್ನು ಪಡೆದರು. ಅವರು **ಈ** ಪೃಥ್ವಿಯನ್ನು ಪೂರ್ಣವಾಗಿ ಪಡೆದುದರಿಂದಲೇ (ಸಂವಿದ್) ಯಜ್ಞಭೂಮಿಗೆ ವೇದಿ ಎಂಬ ಹೆಸರು ಪ್ರಸಿದ್ಧವಾಯಿತು. ಆದುದರಿಂದಲೇ ಪೃಥ್ವಿಯು ಎಷ್ಟು ವಿಸ್ತೃತವಾಗಿದೆಯೋ ಯಜ್ಞವೇದಿಯೂ ಅಷ್ಟೇ ವಿಸ್ತೃತವಾಗಿದೆ ಎಂದು ತಿಳಿದವರು ಹೇಳುತ್ತಾರೆ. **ಈ** ತತ್ತ್ವವನ್ನು ತಿಳಿದವನು ತಾನೇ **ಈ** ಸಮಸ್ತವಾದ ಪೃಥ್ವಿಗೂ ಒಡೆಯನಾಗುತ್ತಾನೆ ಎಂದು ಶತಪಥಬ್ರಾಹ್ಮಣದಲ್ಲಿ ತಿಳಿಸಿದೆ. ಇದೇ ವಿಷಯವನ್ನು ಐತರೇಯಬ್ರಾಹ್ಮಣದಲ್ಲಿಯೂ ವಿವರಿಸುತ್ತಾ—

ತಂ ವೇದ್ಯಾಮನ್ವವಿಂದನ್ಯದ್ವೇದ್ಯಾಮನ್ವವಿಂದಂಸ್ತದ್ವೇದೇರ್ವೇದಿತ್ವಂ ॥

(ಐ. ಬ್ರಾ. ೩-೯)

ಈ ಯಜ್ಞವನ್ನು ವೇದಿಕೆಯ ಮೇಲೆ ಕಂಡು ಅದನ್ನು ಪಡೆದುದರಿಂದ ಅದಕ್ಕೆ ವೇದಿಯೆಂಬ ಹೆಸರು ಬಂದಿತು ಎಂದು **ಈ** ಪದದ ನಿರ್ವಚನರೂಪವಾದ ಮಹತ್ತ್ವವನ್ನು ಸ್ತುತಿಸಿದೆ ಮತ್ತು ಇದೇ ವೇದಿಯು ಪೃಥಿವಿಯ ಪರವಾದ ಅಂತವು ಎಂದು ತಿಳಿಸಿರುವಾಗ ಪೃಥಿವಿಯೆಂದರೆ ಕೇವಲ ಭೂಮಿಯೆಂದೇ ಅರ್ಥಮಾಡಬಾರದೆಂದು ಮೇಲೆ ತಿಳಿಸಿದೆ. ಪೃಥಿವೀಶಬ್ದವು ಅಂತರಿಕ್ಷನಾಮಗಳಲ್ಲಿಯೂ (ನಿ. ೨-೧೦) ಪಠಿತವಾಗಿದೆ. ಪ್ರಥನಾತ್ಪೃಥಿವೀತ್ಯಾಹುಃ(ನಿ. ೧-೧೪) ಎಂಬ ನಿರುಕ್ತಕಾರರ ನಿರ್ವಚನದ ಆಧಾರದ ಮೇಲೆ ಅತ್ಯಂತವಾಗಿ ವಿಸ್ತೃತಿಯನ್ನು ಹೊಂದಿದ **ಭೂಮ್ಯಾಕಾಶಗಳೆಲ್ಲವೂ** ಪೃಥಿವೀಶಬ್ದವಾಚ್ಯಗಳೇ ಆಗಿವೆ. ಈ ಅರ್ಥವನ್ನು ತೆಗೆದುಕೊಂಡರೆ **ಈ** ವೇದಿಯು ಭೂಮ್ಯಂತರಿಕ್ಷಗಳಗೂ ಅಥವಾ ಸಮಸ್ತ ವಿಶ್ವಕ್ಕೂ ಪರವಾದ ಅಂತವು ಎಂದರ್ಥವಾಡಬಹುದು. ಇದಕ್ಕೆ **ಈ** ಮಹತ್ತ್ವವಿರುವುದರಿಂದಲೇ ಶತಪಥಬ್ರಾಹ್ಮಣದಲ್ಲಿ **ಈ** ಯಜ್ಞವೇದಿಯನ್ನು **ಈ**ರೀತಿ ಸ್ತುತಿಸಿದೆ.

ಅಯಂ ವಾವ ಲೋಕ ಏಷೋಽಗ್ನಿಶ್ಚಿತಃ । ತಸ್ಯಾಪ ಏವ ಪರಿಶ್ರಿತೋ ಮನುಷ್ಯಾ ಯಜುಷ್ಕೃತ ಇಷ್ಟಕಾಃ ಸೂದದೋಹಾ ಓಷಧಯಶ್ಚ ವನಸ್ಪತಯಶ್ಚ ಪುರೀಷಮಾಹುತಯಃ.....—....
ಸ ಯೋ ಹೈತದೇವಂ ವೇದ ಲೋಕಂಪೃಣಾಮೇನಂ ಭೂತಮೇತತ್ಸರ್ವಮಭಿ ಸಂಪದ್ಯತೇ ॥

(ಶ. ಬ್ರಾ. ೧೦-೫-೪-೧)

ಇಷ್ಟಕೆಗಳಿಂದ (ಇಟ್ಟಿಗೆಗಳಿಂದ) ನಿರ್ಮಿತವಾದ **ಈ** ಯಜ್ಞವೇದಿಯೇ **ಈ** ಪಾರ್ಥಿವಲೋಕವು. ಇದನ್ನು ಸುತ್ತುವರೆದಿರುವ ಇಷ್ಟಕೆಗಳೇ ಪೃಥ್ವಿಯನ್ನು ಸುತ್ತುವರೆದಿರುವ ಸಮುದ್ರಗಳು, ಯಜುಷ್ಕೃತಿಗಳೇ ಮಾನವರು. ಸೂದದೋಹಗಳೇ ಪಶುಗಳು, ಇಷ್ಟಕೆಗಳ ಮಧ್ಯವರ್ತಿಯಾದ ಮೃತ್ತಿಕೆಗಳೇ ಓಷಧಿವನಸ್ಪತಿಗಳು, ಲೋಕಂಪೃಣವೇ ಅಗ್ನಿಯು. **ಈ** ತತ್ತ್ವವನ್ನು ತಿಳಿದವನು ಲೋಕಾಧಿಷ್ಠಾತೃತ್ವವನ್ನು ಪಡೆಯುತ್ತಾನೆ. ಅಲ್ಲದೆ—

ಅಂತರಿಕ್ಷಗ್ಂ ಹ ತ್ವೇವೈಷೋಽಗ್ನಿಶ್ಚಿತಃ । ತಸ್ಯ ದ್ಯಾವಾಪೃಥಿವ್ಯೋರೇವ ಸಂಧಿಃ । ಪರಿಶ್ರಿತಃ ಪರೇಣ ಹಾಂತರಿಕ್ಷಂ ದ್ಯಾವಾಪೃಥಿವೀ ಸಂಧತ್ತಸ್ತಾಃ ಪರಿಶ್ರಿತೋ ವಯಾಗ್ಂಸಿ ಯಜುಷ್ಕೃತ್ಯ ಇಷ್ಟಕಾ ವರ್ಷಗ್ಂ ಸೂದದೋಹಾ ಮರೀಚಯಃ ಪುರೀಷಮಾಹುತಯಃ ಸಮಿಧೋ ಲೋಕಂಪೃಣಾ ತದ್ವಾ ಏತತ್ಸರ್ವಂ ॥

(ಶ. ಬ್ರಾ. ೧೦-೫-೪-೨)

ಈ ಯಜ್ಞವೇದಿಕೆಯೇ ಅಂತರಿಕ್ಷವು. ದಾವಾಪೃಥಿವಿಗಳ ಸಂಧಿಯು ಅಂತರಿಕ್ಷಕ್ಕೂ ಮಿಗಿಲಾದ ಪ್ರದೇಶದಲ್ಲಾಗುವುದರಿಂದ ಈ ವೇದಿಕೆಯ ಪರಿಶ್ರಿತಗಳೇ ದ್ಯಾವಾಪೃಥಿವಿಗಳ ಸಂಧಿಯು. ಯಜುಷ್ಮತಿಯೆಂಬ ಇಷ್ಟಕಗಳೇ ಪಕ್ಷಿಗಳು. ಸೂದದೋಹಗಳೇ ವೃಷ್ಟಿಯು. ಇಷ್ಟಕೆಗಳ ಮಧ್ಯವರ್ತಿಯಾದ ಮೈತ್ತಿಕೆಗಳೇ ರಶ್ಮಿಗಳು. ಆಹುತಿಗಳೇ ಸಮಿತ್ತುಗಳು. ಲೋಕಂಪೃಣವೇ ವಾಯುವು. ಈ ತತ್ತ್ವವನ್ನು ತಿಳಿದವನು ಅಗ್ನಿಯಲ್ಲಿ ತಾದಾತ್ಮ್ಯವನ್ನು ಹೊಂದುತ್ತಾನೆ.

ದ್ಯೌರ್ಹ ತ್ವೈವೈಷೋಽಗ್ನಿಶ್ಚಿತಃ । ತಸ್ಯಾಪ ಏವ ಪರಿಶ್ರಿತೋ ಯಥಾ ಹ ವಾ ಇದಂ ಕೋಶಃ ಸಮುಬ್ಜಿತ ಏವಮಿಮೇ ಲೋಕಾ ಅಪ್ಸ್ವಂತಸ್ತದ್ಯಾ ಇಮಾನ್ ಲೋಕಾನ್ ಪರೇಣಾಪಸ್ತಾಃ ಪರಿಶ್ರಿತೋ ದೇವಾ ಯಜುಷ್ಮತ್ಯ ಇಷ್ಟಕಾ ಯದೇವೈತಸ್ಮಿಂಲ್ಲೋಕೇಽನ್ನಂ ತತ್ಸೂದದೋಹಾ ನಕ್ಷತ್ರಾಣಿ ಪುರೀಷಮಾಹುತಯಃ ಸಮಿಧ ಆದಿತ್ಯೋ ಲೋಕಂಪೃಣಾ ತದ್ವಾ ಏತತ್ಸರ್ವಮಾದಿತ್ಯಮೇತೇಽಭಿಸಂಪದ್ಯತೇ ತತ್ಸರ್ವೋಽಗ್ನಿಃ ।

(ಶ. ಬ್ರಾ. ೧೦-೫-೪-೩)

ಈ ಯಜ್ಞವೇದಿಯೇ ದ್ಯುಲೋಕವು. ಸುತ್ತುವರೆದಿರುವ ಇಷ್ಟಕೆಗಳೇ ಈ ಲೋಕವನ್ನಾವರಿಸುವ ಉದಧಿಗಳು. ಯಜುಷ್ಮತಿಯೆಂಬ ಇಷ್ಟಕೆಗಳೇ ದೇವತೆಗಳು. ಸೂದದೋಹಗಳೇ ಈ ಲೋಕದ ಅನ್ನವು. ಇಷ್ಟಕೆಗಳ ಮಧ್ಯವರ್ತಿಯಾದ ಮೈತ್ತಿಕೆಗಳೇ ನಕ್ಷತ್ರಗಳು. ಲೋಕಂಪೃಣವೇ ಆದಿತ್ಯನು.

ಆದಿತ್ಯೋ ಹ ತ್ವೈವೈಷೋಽಗ್ನಿಶ್ಚಿತಃ । ತಸ್ಯ ದಿಶ ಏವ ಪರಿಶ್ರಿತಸ್ತಾಃ ಷಷ್ಟಿಶ್ಚ ತ್ರೀಣಿ ಚ ಶತಾನಿ ಭವಂತಿ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನ್ಯಾದಿತ್ಯಂ ದಿಶಃ ಸಮಂತಂ ಪರಿಯಂತಿ ರಶ್ಮಯೋ ಯಜುಷ್ಮತ್ಯ ಇಷ್ಟಕಾಸ್ತಾಃ ಷಷ್ಟಿಶ್ಚೈವ ತ್ರೀಣಿ ಚ ಶತಾನಿ ಭವಂತಿ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನ್ಯಾದಿತ್ಯಸ್ಯ ರಶ್ಮಯಸ್ತದ್ಯತ್ಪರಿಶ್ರಿತ್ಸು ಯಜುಷ್ಮತೀಃ ಪ್ರತ್ಯರ್ಪಯತಿ ರಶ್ಮೀಂಸ್ತದ್ದಿಕ್ಷು ಪ್ರತ್ಯರ್ಪಯತ್ಯಥ ಯದಂತರಾ ದಿಶಶ್ಚ ರಶ್ಮೀಂಶ್ಚ ತತ್ಸೂದದೋಹಾ ಅಥ ಯದ್ದಿಕ್ಷು ಚ ರಶ್ಮಿಷು ಚಾನ್ನಂ ತತ್ಪುರೀಷಂ ತಾ ಆಹುತಯಸ್ತಾಃ ಸಮಿಧಃ ॥

(ಶ. ಬ್ರಾ. ೧೦ ೫-೪-೪)

ಈ ಯಜ್ಞವೇದಿಯೇ ಆದಿತ್ಯನು. ಆದಿತ್ಯನನ್ನು ಮುನ್ನೂರಅರವತ್ತು ದಿಕ್ಕುಗಳೂ, ಮುನ್ನೂರಅರವತ್ತು ರಶ್ಮಿಗಳೂ ಸುತ್ತುವರೆದಿವೆ. ಮುನ್ನೂರಅರವತ್ತು ಸಂಖ್ಯಾಕಗಳಾದ ಯಜುಷ್ಮತಿಗಳೇ ಆದಿತ್ಯನ ಮುನ್ನೂರ ಅರವತ್ತು ರಶ್ಮಿಗಳಾಗಿವೆ. ಸೂದದೋಹಗಳೇ ಆದಿತ್ಯಶಶ್ಮಿಗಳಿಗೂ ದಿಕ್ಕುಗಳಿಗೂ ಮಧ್ಯದಲ್ಲಿರುವ ತತ್ತ್ವವಿಶೇಷಗಳು. ಇಷ್ಟಕೆಗಳ ಮಧ್ಯವರ್ತಿಗಳಾದ ಮೈತ್ತಿಕೆಗಳೇ ರಶ್ಮಿಗಳಿಗೂ ದಿಕ್ಕುಗಳಿಗೂ ನಡುವೆ ಇರುವ ಅನ್ನವು.

ನಕ್ಷತ್ರಾಣಿ ಹ ತ್ವೈವೈಷೋಽಗ್ನಿಶ್ಚಿತಃ । ತಾನಿ ವಾ ಏತಾನಿ ಸಪ್ತವಿಗ್ಂಶತಿನಕ್ಷತ್ರಾಣಿ । ಛಂದಾಗ್ಂಸಿ ಹ ತ್ವೈವೈಷೋಽಗ್ನಿಶ್ಚಿತಃ । ತಾನಿ ವಾ ಏತಾನಿ ಸಪ್ತಛಂದಾಗ್ಂಸಿ . . . . । ಸರ್ವಾಣಿ ಹ ತ್ವೈವ ಭೂತಾನಿ । ಸರ್ವೇ ದೇವಾ ಏಷೋಽಗ್ನಿಶ್ಚಿತ ಆಪೋ ವೈ ಸರ್ವೇ ದೇವಾಃ ಸರ್ವಾಣಿ ಭೂತಾನಿ ತಾ ಹೈತಾ ಆಪ ಏವೈಷೋಽಗ್ನಿಶ್ಚಿತಸ್ತಸ್ಯ ನಾನ್ನಾ ಏವ ಪರಿಶ್ರಿತಸ್ತಾಃ ಷಷ್ಟಿಶ್ಚ ತ್ರೀಣಿ ಚ ಶತಾನಿ ಭವಂತಿ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನ್ಯಾದಿತ್ಯಂ ನಾವ್ಯಾಃ ಸಮಂತಂ ಪರಿಯಂತಿ . . . . ಅತ್ಮಾಯಮೇವ ಸ ಯೋಽಯಂ ಹಿರಣ್ಮಯಃ ಪುರುಷಃ ॥

(ಶ. ಬ್ರಾ. ೧೦ ೫-೪-೬ ರಿಂದ ೧೪)

ಈ ಯಜ್ಞವೇದಿಯೇ ಸಮಸ್ತ ನಕ್ಷತ್ರಗಳು, ಸಪ್ತ ಛಂದಸ್ಸುಗಳು. ಇದೇ ಸಂವತ್ಸರವು. ಇದೇ ಸಕಲ ಭೂತಗಳೂ ಆಗಿದೆ. ಆದಿತ್ಯನ ಸುತ್ತಲೂ ಮುನ್ನೂರ ಅರವತ್ತು ರಶ್ಮಿರೂಪಗಳಾದ ನಾವೆಗಳು ಸುತ್ತುವರೆದಿರುವಂತೆ ಈ ವೇದಿಯ ಸುತ್ತಲೂ ಯಜುಷ್ಮತೀರೂಪದ ದೇವಮಾನವಾದಿಗಳು ಸುತ್ತುವರೆದಿದ್ದಾರೆ. ಈ ವೇದಿಕೆಯ ದೇಹವೇ ಈ ಆದಿತ್ಯಾಂತರ್ಗತನಾದ ಹಿರಣ್ಮಯಪುರುಷನು. ಈ ಹಿರಣ್ಮಯಪುರುಷನ ಸ್ವರೂಪವು ಎಷ್ಟು ಆಕರ್ಷಕವಾದದ್ದು ಮತ್ತು ಎಷ್ಟು ಮಹತ್ವವುಳ್ಳದ್ದು ಎಂದರೆ—

ತಸ್ಯೈತೇ ಪ್ರತಿಷ್ಠೇ । ರುಕ್ಮಶ್ಚ ಪುಷ್ಕರಪರ್ಣಂ ಚಾಪಶ್ಚಾದಿತ್ಯಮಂಡಲಂ ಚ ಸ್ರುಚೌ ಬಾಹೂ ತಾವಿಂದ್ರಾಗ್ನೀ ದ್ಯೇ ಸ್ವಯಮಾತೃಣ್ಣೇ ಇಯಂ ಚಾಂತರಿಕ್ಷಂ ಚ ತಿಸ್ರೋ ವಿಶ್ವಜ್ಯೋತಿಷ ಏತಾ ದೇವತಾ ಅಗ್ನಿರ್ವಾಯುರಾದಿತ್ಯ ಏತಾ ಹ್ಯೇವ ದೇವತಾ ವಿಶ್ವಂ ಜ್ಯೋತಿರ್ದ್ವಾದಶ-ರ್ತವ್ಯಃ ಸಂವತ್ಸರಃ ಸ ಆತ್ಮಾ ಪಂಚ ನಾಕಸದಃ ಪಂಚ ಪಂಚಚೂಡಾಃ ಸ ಯಜ್ಞಸ್ತೇ ದೇವಾ ಅಥ ಯದ್ವಿಕರ್ಣೇ ಚ ಸ್ವಯಮಾತೃಣ್ಣಾ ಚಾಶ್ಮಾ.....ಆತ್ಮಾ ಸ ಏಷ ಸರ್ವಾಸಾಮಪಾಂ ಮಧ್ಯೇ ಸ ಏಷ ಸರ್ವೈಃ ಕಾಮೈಃ ಸಂಪನ್ನ ಆಪೋ ವೈ ಸರ್ವೇ ಕಾಮಾಃ ಸ ಏಷೋಽ-ಕಾಮಃ ಸರ್ವಕಾಮೋ ನ ಹ್ಯೇತಂ ಕಸ್ಯ ಚನ ಕಾಮಃ ॥

(ಶ. ಬ್ರಾ. ೧೦-೫-೪-೧೫)

ಸ್ವರ್ಣಪಾತ್ರವೂ, ಪುಷ್ಕರಪರ್ಣವೂ ಈ ಆದಿತ್ಯಾಂತರ್ಗತನಾದ ಹಿರಣ್ಮಯಪುರುಷನ ಎರಡು ಪಾದಗಳು, ಯಜ್ಞವೇದಿಕೆಯಲ್ಲಿರುವ ಎರಡು ಸ್ರುಚಪಾತೆಗಳೂ ಇವನ ಬಾಹುಗಳು, ಇವರೇ ಇಂದ್ರಾಗ್ನಿಗಳು. ಸಹಜವಾಗಿಯೇ ಆತೃಣ್ಣವಾಗಿರುವ ಈ ಎರಡು ಇಷ್ಟಕೆಗಳೇ ಪೃಥಿವ್ಯಂತರಿಕ್ಷಗಳು, ವಿಶ್ವಜ್ಯೋತೀರೂಪವಾದ ಇಷ್ಟಕೆಗಳೇ ಸಕಲ ದೇವತೆಗಳು, ಇವುಗಳ ಸಂಖ್ಯೆಯು ಮೂರು. ಈ ಮೂರೂ ಸಹ ಅಗ್ನಿ, ವಾಯು ಮತ್ತು ಆದಿತ್ಯರನ್ನು ಪ್ರತಿಬಿಂಬಿಸುತ್ತವೆ. ಈ ವೇದಿಯ ದೇಹವೇ ಸಕಲಕ್ಕೂ ಆಂತವಾಗಿದೆ. ಈ ವೇದೀರೂಪವಾದ ಆದಿತ್ಯಾಂತರ್ಗತನಾದ ಹಿರಣ್ಮಯಪುರುಷನು ಸರ್ವಕಾಮಗಳನ್ನೂ ಪಡೆದಿರುವುದರಿಂದ ಕಾಮರಹಿತನಾಗಿಯೂ, ಪೂರ್ಣತೃಪ್ತನಾಗಿಯೂ ಇದ್ದಾನೆ. ಇತ್ಯಾದಿಯಾಗಿ ವೇದಿಯ ಮಹತ್ತ್ವವನ್ನೂ, ವಿಸ್ತೃತಿಯನ್ನೂ ನಾನಾವಿಧವಾಗಿ ಸ್ತುತಿಸಿದೆ. ಕೇವಲ ಅಧಿದೈವತಪಕ್ಷದಲ್ಲಿಯೇ ಅಲ್ಲದೆ ಅಧ್ಯಾತ್ಮಪಕ್ಷದಲ್ಲಿಯೂ ಇದರ ಮಹಿಮೆಯು ಸ್ತುತವಾಗಿದೆ. ಇದೇ ಅಂಶವನ್ನು ಪ್ರಕೃತಮಂತ್ರದಲ್ಲಿ—**ಇಯಂ ವೇದಿಃ ಪೃಥಿವ್ಯಾ ಅಂತಃ** ಎಂದು ವರ್ಣಿಸಲಾಗಿದೆ. ಪೃಥಿವಿಯ ಉತ್ಕೃಷ್ಟವಾದ ಸ್ಥಾನವೆಂದು ತಾತ್ಪರ್ಯ. ಸಾಯಣರು ಇದೇ ಅರ್ಥವನ್ನು ತಿಳಿಸತಕ್ಕ **ಏತಾವತೀ ವೈ ಪೃಥಿವೀ ಯಾವತೀ ವೇದಿಃ** । (ತೈ. ಸಂ. ೫-೬-೪-೧) ಎಂಬ ತೈತ್ತಿರೀಯಸಂಹಿತಾವಾಕ್ಯವನ್ನು ಉದಾಹರಿಸಿ—**ನ ಹಿ ವೇದ್ಯತಿರಿಕ್ತಾ ಭೂಮಿರಸ್ತಿ** । ಈ ಯಜ್ಞವೇದಿಗಿಂತಲೂ ಮಿಗಿಲಾದ ಅಥವಾ ಬೇರೆಯಾವ ಪೃಥಿವಿಯೇ ಇಲ್ಲ ಎಂಬ ತಾತ್ಪರ್ಯವನ್ನು ವಿವರಿಸಿದ್ದಾರೆ.

(2) ಇನ್ನು ಎರಡನೆಯ ಪ್ರಶ್ನೆಯಾದ **ಪೃಚ್ಛಾಮಿ ಯತ್ರ ಭುವನಸ್ಯ ನಾಭಿಃ** ಎಂಬ ವಾಕ್ಯಕ್ಕೆ—**ಅಯಂ ಯಜ್ಞೋ ಭುವನಸ್ಯ ನಾಭಿಃ** । ಎಂಬ ಉತ್ತರವು ಅಲ್ಲೇ ಉಕ್ತವಾಗಿದೆ. **ನಾಭಿಶಬ್ದಕ್ಕೆ ಸಂನಾಹಃ** ಎಂದರೆ ಸಕಲಭೂತಜಾತಗಳಿಗೂ ಒಂದು ಸಂಬಂಧವನ್ನು ತೋರಿಸತಕ್ಕ ಬಂಧಕರೂಪವಾದ ತಂತುವು ಯಾವುದು ಎಂದು ಪ್ರಶ್ನಿಸಲಾಗಿದೆ. ಈ ಪ್ರಶ್ನೆಗೆ ಉತ್ತರರೂಪವಾಗಿ—**ಅಯಂ ಯಜ್ಞೋ ಭುವನಸ್ಯ ನಾಭಿಃ** । **ಅಯಂ ಯಜ್ಞಃ ಭೂತಜಾತಸ್ಯ ಸಂನಹನಂ । ತಶ್ಚೈವ ವೃಷ್ಟ್ಯಾದಿಸರ್ವಫಲೋತ್ಪತ್ತೇಃ ಸರ್ವಪ್ರಾಣಿನಾಂ ಬಂಧಕತ್ವಾತ್** । ಈ ಯಜ್ಞದಿಂದಲೇ ವೃಷ್ಟಿಯುಂಟಾಗಿ ಆ ವೃಷ್ಟಿಯ ಮೂಲಕ ಸರ್ವಪ್ರಾಣಿಗಳಿಗೂ ಇದು ಬಂಧಕವಾಗಿರುವುದರಿಂದ ಇದು ನಾಭಿರೂಪದಲ್ಲಿ ದೆಯೆಂದು ವರ್ಣಿತವಾಗಿದೆ.

ನಾಭಿಶಬ್ದಕ್ಕೆ—ವಾಸಸ್ಥಾನ, ವ್ಯಾಪಕಸಂಬಂಧ, ಸಂನಾಹಕ ಎಂದರೆ ರಕ್ಷಕ, ಬಂಧಕ, ಉತ್ಪತ್ತಿಸ್ಥಾನ ಇತ್ಯಾದಿ ಬೇರೆಬೇರೆ ಅರ್ಥಗಳಿರುವುದನ್ನು ಹಿಂದೆ ತಿಳಿಸಿದೆ. ಪ್ರಕೃತವಾದ ಋಕ್ಕಿನಲ್ಲಿ ಯಜ್ಞವೇ ನಾಭಿಯೆಂದು ಹೇಳಿದರೆ ಈ ಎಲ್ಲಾ ಅರ್ಥಗಳಲ್ಲಿಯೂ ಈ ಪದದ ಪ್ರಯೋಗವಿರುವುದನ್ನು ತೋರಿಸಬಹುದು. **ಪೃಚ್ಛಾಮಿ ಯತ್ರ ಭುವನಸ್ಯ ನಾಭಿಃ** ಎಂದು ಕೇಳಿರುವ ಪ್ರಶ್ನೆಗೆ **ಅಯಂ ಯಜ್ಞಃ** ಎಂಬುದೇ ಉತ್ತರರೂಪವಾಗಿದೆ. ಯಜ್ಞವೇ ಸಕಲ ವಿಶ್ವಗಳ ಉತ್ಪತ್ತಿಗೂ ಸ್ಥಿತಿಗೂ ಕಾರಣವಾಗಿ ದೇವಮಾನವಾದಿ ಸಕಲ ಭೂತಗಳಿಗೂ ಪರಸ್ಪರಸಂಬಂಧನನ್ನು ಬೆಳೆಸುವ ಬಂಧಕ ಸಾಧನವಾಗಿರುವುದರಿಂದ ಇದು (ಯಜ್ಞವು) ನಾಭಿರೂಪದಲ್ಲಿದೆಯೆಂದಭಿಪ್ರಾಯವು.

ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥
(ಭ. ಗೀ. ೩-೧೧)

ದೇವಾನ್ ಇಂದ್ರಾದೀನ್ ಭಾವಯತ ವರ್ಧಯತ ಅನೇನ ಯಜ್ಞೇನ। ತೇ ದೇವಾ ಭಾವಯಂತು ವೃಷ್ಟ್ಯಾದಿನಾ ಆಪ್ಯಾಯಯಂತು ವಃ ಯುಷ್ಮಾನ್ । ಏವಂ ಪರಸ್ಪರಂ ಅನ್ಯೋನ್ಯಂ ಭಾವಯಂತಃ ಶ್ರೇಯಃ ಪರಂ ಬ್ರಹ್ಮವಿಜ್ಞಾನಪ್ರಾಪ್ತಿಂ ಕ್ರಮೇಣ ಅವಾಪ್ಸ್ಯಥ । ಸ್ವರ್ಗಂ ವಾ ಪರಂ ಶ್ರೇಯಃ ಅವಾಪ್ಸ್ಯಥ ॥
(ಶಂ. ಭಾ.)

ಯಜ್ಞವೇ ದೇವತೆಗಳಿಗೆ ಅನ್ನರೂಪವೆಂದೂ, ಈ ಅನ್ನವನ್ನು ಮಾನವರು ಯಜ್ಞದಿಂದ ಆಪ್ಯಾಯಿಸಬೇಕೆಂದೂ, ಇದರಿಂದ ತೃಪ್ತರಾದ ದೇವತೆಗಳು ವೃಷ್ಟ್ಯಾದಿಗಳಿಂದ ಮಾನವರ ಸ್ಥಿತಿಗೂ ವೃದ್ಧಿಗೂ ಕಾರಣರಾಗಬೇಕೆಂದೂ ಭಗವದ್ಗೀತೆಯಲ್ಲಿ ಉಪದೇಶವಿದೆ. ಇದರಿಂದ ಸಮಸ್ತವಾದ ಶ್ರೇಯಸ್ಸಿಗೂ ಯಜ್ಞವೇ ಸಾಧನವೆಂದಾಯಿತು. ಈ ಯಜ್ಞವು ಲೋಕಕ್ಕೆಲ್ಲಾ ಶ್ರೇಯಸ್ಸಾಧನವು ಎಂಬ ತತ್ತ್ವವನ್ನರಿತು ಇದನ್ನು ನೇರವಾಗಿ ಪ್ರೀತಿಯಿಂದ ಆಚರಿಸಿದರೆ ಇದು ಬ್ರಹ್ಮಜ್ಞಾನಕ್ಕೂ ಸಾಧನವಾಗುವುದೆಂದು ಶಂಕರಾದಿಗಳು ವಿವರಿಸಿದ್ದಾರೆ.

ಈ ಯಜ್ಞತತ್ತ್ವವು ವಿಶ್ವದ ಐಕ್ಯವನ್ನೂ, ಈ ಐಕ್ಯದ ನೆಲೆಯು ಪರಬ್ರಹ್ಮವೆಂಬ [illegible]ವನ್ನೂ ತೀರುವುದಾಗಿದೆ. ಉಪನಿಷದಾದಿಗಳಲ್ಲಿ ಯಾವ ಮೂಲತತ್ತ್ವವನ್ನು ಪರಬ್ರಹ್ಮವೆಂದು ಕರೆಯಲಾಗಿದೆಯೋ ಅದನ್ನು ಸಂಹಿತಾ ಮತ್ತು ಬ್ರಾಹ್ಮಣಗಳಲ್ಲಿ ಪ್ರಜಾಪತಿಯೆಂದು ಕರೆದಿದೆ ಮತ್ತು ಯಜ್ಞಕ್ಕೂ ಪ್ರಜಾಪತಿಗೂ ಅವಿನಾಭಾವ್ಯತ್ವವನ್ನು ಹೇಳಿದೆ. ವಿಶ್ವಸೃಷ್ಟಿಯು ಪ್ರಜಾಪತಿಯ ಯಜ್ಞದ ಮತ್ತು ತಪಸ್ಸಿನ ಫಲವು. ಜಗತ್ತಿಗೆ ಮೊದಲೂ, ಸೃಷ್ಟಿಗೆ ಪೂರ್ವಭಾವಿಯಾಗಿ ಅದ್ವಿತೀಯನಾಗಿಯೂ ಇದ್ದ ಪ್ರಜಾಪತಿಯು ಸೃಷ್ಟಿಸಾಧನವಾದ ಯಜ್ಞವನ್ನು ಆಚರಿಸಬೇಕಾದರೆ ಅದಕ್ಕೆ ತನ್ನನ್ನೇ ಆಹುತಿಯಾಗಿ ಅರ್ಪಿಸಬೇಕಾಯಿತು.

ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯ ದೇವಾಃ ।
ಯಸ್ಯ ಛಾಯಾಮೃತಂ ಯಸ್ಯ ಮೃತ್ಯುಃ ಕಸ್ಮೈ ದೇವಾಯ ಹವಿಷಾ ವಿಧೇಮ ॥
(ಋ. ಸಂ. ೧೦-೧೨೧-೨)

ಇತ್ಯಾದಿ ಮಂತ್ರಗಳಲ್ಲಿ ವರ್ಣಿತವಾಗಿರುವಂತೆ ತನ್ನ ವಿಶ್ವಯಜ್ಞದಲ್ಲಿ ತನ್ನನ್ನೇ ಅರ್ಪಿಸಿದ ಪ್ರಜಾಪತಿಯು ಸೃಷ್ಟಿಕಾರ್ಯವನ್ನು ನಿರ್ವಹಿಸಿದನು. ಅವನ ಆಜ್ಞೆಯನ್ನೇ ದೇವಾದಿಗಳೆಲ್ಲರೂ ಪಾಲಿಸುತ್ತಾರೆ. ವೃಷ್ಟ್ಯನ್ನವೂ, ಅಮೃತತ್ವವೂ ಅವನ ಛಾಯೆಗಳು. ಇಂತಹ ವಿಶ್ವಹೇತುವಾದ ಪ್ರಜಾಪತಿಗೆ ನಾವೂ ಸಹ ಹವಿರಾದಿಗಳನ್ನರ್ಪಿಸಿ ಯಜ್ಞಾನುಷ್ಠಾನಗಳಿಂದ

ಆರಾಧಿಸೋಣ ಎಂದು ಯಜ್ಞದ ಪ್ರಾಶಸ್ತ್ಯವನ್ನು ಸ್ತುತಿಸಿದೆ. ಯಜ್ಞವು ಸೃಷ್ಟಿಯ ಮೂಲವು, ಸ್ಥಿತಿಗೆ ಹೇತುವು ಮತ್ತು ಶ್ರೇಯಸ್ಸಿಗೆ ಸಾಧಕವು. ಈ ವಿಷಯವನ್ನೇ ಶತಪಥಬ್ರಾಹ್ಮಣದಲ್ಲಿ ಈರೀತಿ ವರ್ಣಿಸಿದೆ—

ಅಥ ದೇವಾಃ ॥ ಅನ್ಯೋನ್ಯಮಸ್ಮಿನ್ನೇವ ಜುಹ್ವತಶ್ಚೇರುಸ್ತೇಭ್ಯಃ ಪ್ರಜಾಪತಿರಾತ್ಮಾನಂ ಪ್ರದದೌ ಯಜ್ಞೋ ಹೈಷಾಮಾಸ ಯಜ್ಞೋ ಹಿ ದೇವಾನಾಮನ್ನಂ ॥

(ಶ. ಬ್ರಾ. ೧೧-೧-೮-೨)

ದೇವತೆಗಳು ಯಜ್ಞವನ್ನಾಚರಿಸಿ ಪರಸ್ಪರಾನುಕೂಲವಾದ ಆಹುತಿಗಳನ್ನರ್ಪಿಸಿದರು. ಆಗ ಪ್ರಜಾಪತಿಯು ಅವರಿಗೆ ತನ್ನನ್ನೇ ಅರ್ಪಿಸಿದನು. ಆಗ ಯಜ್ಞವೇ ದೇವತೆಗಳ ಸ್ವತ್ತಾಯಿತು. ಆದುದರಿಂದಲೇ ಯಜ್ಞವನ್ನು ದೇವತೆಗಳ ಅನ್ನವೆಂದು (ಅನ್ನಸಾಧನವೆಂದು) ಕರೆಯುತ್ತಾರೆ. ಇದಲ್ಲದೆ,

ಸ ಏತೇನ ಯಜ್ಞೇನ ದೇವೇಭ್ಯ ಆತ್ಮಾನಂ ನಿರಕ್ರೀಣೀತ ಯದ್ವ್ರತಮುಪೈತಿ ಯಥೈವ ತತ್ಪ್ರಜಾಪತಿರ್ದೇವೇಭ್ಯ ಆತ್ಮಾನಂ ಪ್ರಾಯಚ್ಛದೇವಮೇವೈಷ ಏತದ್ದೇವೇಭ್ಯ ಆತ್ಮಾನಂ ಪ್ರಯಚ್ಛತಿ ತಸ್ಮಾದು ಸಂಯತ ಏವೈತಾಗ್ಂ ರಾತ್ರಿಂ ಚಿಚರಿಷೇದ್ಯಥಾ ಹವಿಷಾ ಚರೇದೇವಗ್ಂ ಹವಿರ್ಹ್ಯೇಷ ದೇವಾನಾಂ ಭವತಿ ॥

(ಶ. ಬ್ರಾ. ೧೧-೧-೮-೩)

ದೇವತೆಗಳ ಯಜ್ಞದಿಂದ ತೃಪ್ತನಾದ ಪ್ರಜಾಪತಿಯು ಅವರಿಗೆ ತನ್ನನ್ನೇ ಅರ್ಪಿಸಿದನಂತರ ಪುನಃ ಯಜ್ಞಪ್ರತಿನಿಧಿಯಾದ ತನ್ನ ಪ್ರತಿರೂಪವನ್ನು ಸೃಷ್ಟಿಸಿದನು. ಈ ರೀತಿ ಯಜ್ಞಾರ್ಥವಾಗಿ ತನ್ನ ಪ್ರತಿರೂಪವನ್ನು ಸೃಷ್ಟಿಸಿ ಯಜ್ಞವನ್ನು ಪ್ರತಿಬಿಂಬಿಸಿದುದರಿಂದ ತಿಳಿದವರು ಪ್ರಜಾಪತಿಯನ್ನೇ ಯಜ್ಞವೆಂಬ ಪರ್ಯಾಯನಾಮದಿಂದ ಕರೆಯುತ್ತಾರೆ.

ಅಥ ಯದ್ಯಜ್ಞಂ ತನುತೇ । ಯಜ್ಞೇನೈವೈತದ್ದೇವೇಭ್ಯ ಆತ್ಮಾನಂ ನಿಷ್ಕ್ರೀಣೀತೇ ಯಥೈವ ತತ್ಪ್ರಜಾಪತಿರ್ನಿರಕ್ರೀಣೀತೈವಂ ಅಥ ಯದ್ಧವಿರ್ನಿರ್ವಪತಿ ಹವಿಷೈವೈತದ್ಯಜ್ಞಂ ನಿಷ್ಕ್ರೀಣಾತಿ ಹವಿರನುವಾಕ್ಯಾನುವಾಕ್ಯಮವದಾನೇನಾವದಾನಂ ಯಾಜ್ಯಯಾ ಯಾಜ್ಯಾಂ ವಷಟ್ಕಾರೇಣ ವಷಟ್ಕಾರಂ ॥

(ಶ. ಬ್ರಾ. ೧೧-೧-೮-೪)

ಪ್ರಜಾಪತಿಯ ಮಾರ್ಗವನ್ನೇ ಅನುಸರಿಸಿ ಯಾವನು ಯಜ್ಞಕರ್ಮವನ್ನಾಚರಿಸುತ್ತಾನೆಯೋ ಮತ್ತು ತನ್ನ ಋಣವನ್ನು ತೀರಿಸಿ ಆ ದೇವಋಣದಿಂದ ಮುಕ್ತನಾಗುತ್ತಾನೆಯೋ ಅವನು ಪ್ರಜಾಪತಿಯ ಸೃಷ್ಟಿಕಾರ್ಯದಲ್ಲಿ ನೆರವಾಗುತ್ತಾನೆ ಎಂದು ಶತಪಥದಲ್ಲಿ ಹೇಳಿರುವ ಅಂಶವನ್ನೇ ಭಗವದ್ಗೀತೆಯಲ್ಲಿಯೂ ಸಹ,

ಇಷ್ಟಾನ್ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ।
ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ತೇ ತ್ವಘಂ ಭುಂಜತೇ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥

(ಭ. ಗೀ. ೩-೧೨, ೧೩)

ಯಜ್ಞದಿಂದ ತೃಪ್ತರಾದ ದೇವತೆಗಳು ಮಾನವರಿಗೆ ಅದಕ್ಕೆ ಪ್ರತಿಯಾಗಿ ಅವರವರ ಇಷ್ಟಾರ್ಥಗಳನ್ನು ಕೊಡುತ್ತಾರೆ. ೀವತೆಗಳಿಂದ ಅನ್ನಾದಿಸಂಪತ್ತುಗಳನ್ನು ಪಡೆದು ಪುನಃ ಅದಕ್ಕೆ ಪ್ರತಿಯಾಗಿ ದೇವತೆಗಳಿಗೆ ತೃಪ್ತಿಕರವಾದ ಯಜ್ಞಾಹುತಿಯನ್ನರ್ಪಿಸದಿದ್ದರೆ ಅವನು ಚೋರನಾಗುತ್ತಾನೆ. ಯಜ್ಞಕರ್ಮವನ್ನು ನೆರವೇರಿಸುವ ಸತ್ಪುರುಷರು ಪಾಪರಹಿತರಾಗುತ್ತಾರೆ. ಅದಿಲ್ಲದವರು ಪಾಪಿಗಳಾಗಿ ಪಾಪಫಲವನ್ನನುಭವಿಸುತ್ತಾರೆ ಏಕೆಂದರೆ ಈ ಯಜ್ಞವು ವಿಶ್ವಕ್ಕೆಲ್ಲಾ ಏಕಸಂಬಂಧವನ್ನು ತೋರಿಸತಕ್ಕ ತಂತುವಾಗಿದೆ. ಇದನ್ನೇ ವಿಶ್ವಚಕ್ರವೆಂದೂ ಕರೆದಿದೆ. ಉದಾಹರಣೆಗೆ—

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥

ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ ।
ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥

ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥

(ಭ. ಗೀ. ೩-೧೩ ರಿಂದ ೧೬)

ಕರ್ಮರೂಪವಾದ ಯಜ್ಞದಿಂದ ಪರ್ಜನ್ಯವೂ (ವೃಷ್ಟಿಯೂ) ಪರ್ಜನ್ಯದಿಂದ ಅನ್ನವೂ ಅನ್ನದಿಂದ ಭೂತ (ಪ್ರಾಣಿ)ಗಳೂ ಉತ್ಪನ್ನವಾಗುವವು. ಈ ಯಜ್ಞರೂಪವಾದ ಕರ್ಮವು ಬ್ರಹ್ಮನಿಂದ ಉತ್ಪನ್ನವಾಯಿತು. ಆದುದರಿಂದ ವಿಶ್ವದ ಸೃಷ್ಟಿಯಿಂದ ಪ್ರಾರಂಭಿಸಿ ಸಕಲವಿಧವಾದ ವ್ಯವಹಾರಗಳಿಗೂ ಪುನರಾವೃತ್ತಿರೂಪವಾದ ವಿಶ್ವಚಕ್ರಕ್ಕೂ ಸಹ ಮೂಲವಾದ ಪರಬ್ರಹ್ಮನೇ ಯಜ್ಞದಲ್ಲಿ ನಿತ್ಯವಾಗಿ ಪ್ರತಿಷ್ಠಿತನಾಗಿದ್ದಾನೆ. ಯಾವ ವ್ಯಕ್ತಿಯು ಯಜ್ಞರೂಪವಾದ ಈ ವಿಶ್ವತತ್ತ್ವವನ್ನರಿಯದೆ, ನಿಯತವಾದ ಈ ವಿಶ್ವಚಕ್ರದ ಮಾರ್ಗವನ್ನನುಸರಿಸದೆ ಸ್ವೇಚ್ಛೆಯಾಗಿರುವನೋ ಅವನು ಪಾಪಿಷ್ಠನು. ಇತ್ಯಾದಿಯಾಗಿ ಗೀತಾದಿಗಳಲ್ಲಿ ಶ್ರುತಿವಾಕ್ಯಪ್ರತಿಪಾದಿತವಾದ ಯಜ್ಞತತ್ತ್ವವು ನಿವರಿಸಲ್ಪಟ್ಟಿದೆ. ಪ್ರಕೃತವಾದ ಋಕ್ಕಿನಲ್ಲಿ ವರ್ಣಿತವಾಗಿರುವ **ಭುವನಸ್ಯ ನಾಭಿಃ** ಎಂಬ ಈ ಯಜ್ಞತತ್ತ್ವವನ್ನು ಋಕ್ಸಂಹಿತೆಯ ಬೇರೆ ಭಾಗಗಳಲ್ಲಿಯೂ ಇದೇ ರೀತಿ ಪ್ರಶಂಸಿಸಿದೆ—

ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥

(ಋ. ಸಂ. ೧-೧೬೪-೫೦ ; ೧೦-೯೦-೧೬)

ದೇವತೆಗಳು ತಮ್ಮ ಸಂಕಲ್ಪರೂಪವಾದುದೂ ಧ್ಯಾನಾತ್ಮಕವಾದುದೂ ಆದ ಯಜ್ಞದಿಂದ ಯಜ್ಞಸ್ವರೂಪಿಯಾದ ಪ್ರಜಾಪತಿಯನ್ನು ಆರಾಧಿಸಿದರು. ಪ್ರಾಪಂಚಿಕವಾದ ಧರ್ಮಗಳೆಲ್ಲಾ ಈ ವಿಧವಾದ ಯಜ್ಞವೇ ಮೂಲವಾಯಿತು. ಈ ಧರ್ಮಗಳೇ ಅಂತರಿಕ್ಷದಲ್ಲಿ ಸ್ಥಾಪಿತವಾಗಿ ದ್ಯುಲೋಕಸ್ಥರಾದ ದೇವತೆಗಳನ್ನು ಅವರವರ ಸ್ಥಾನಗಳಲ್ಲಿರಿಸುತ್ತದೆ. ಯಜ್ಞದಿಂದಲೇ ಪ್ರಜಾಪತಿಯಿಂದ ಸೃಷ್ಟವಾದ ಸಕಲ ಭೂತಗಳೂ ತಮ್ಮ ಸ್ಥಿತಿಹೇತುವಾದ ಅನ್ನವನ್ನೂ ಶಕ್ತಿಯನ್ನೂ ಪಡೆಯುತ್ತವೆ. ಆದುದರಿಂದ ಯಜ್ಞದ ಆವಶ್ಯಕತೆಯನ್ನು ತೈತ್ತಿರೀಯಸಂಹಿತೆಯಲ್ಲಿ ಈರೀತಿ ತಿಳಿಸಿದೆ—

ಪ್ರಜಾಪತಿಃ ಪ್ರಜಾ ಅಸೃಜತ ತಾಃ ಸೃಷ್ಟಾಃ ಕ್ಷುಧಂ ನ್ಯಾಯನ್ತ್ಸ ಏತಂ ನವರಾತ್ರಮಪಶ್ಯ-ತ್ತಮಾಹರತ್ತೇನಾಯಜತ ತತೋ ವೈ ಪ್ರಜಾಭ್ಯೋಽಕಲ್ಪತ ಯರ್ಹಿ ಪ್ರಜಾಃ ಕ್ಷುಧಂ ನಿಗಚ್ಛೇಯುಸ್ತರ್ಹಿ ನವರಾತ್ರೇಣ ಯಜೇತೇಮೇ ಹಿ ವಾ ಏತಾಸಾಂ ಲೋಕಾ ಅಕ್ಲೃಪ್ತಾ॥

(ತೈ. ಸಂ. ೭-೨-೪-೧)

ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನಂತರ ಅವು ಹಸಿವಿನಿಂದ ಬಾಧೆಪಡಲಾರಂಭಿಸಿದವು. ಅವುಗಳ ಹಸಿವನ್ನು ಪರಿಹಾರಮಾಡುವುದಕ್ಕಾಗಿ ನವರಾತ್ರಾತ್ಮಕವಾದ ಯಜ್ಞವನ್ನು ಕಂಡು ಆದರಿಂದ ಯಜ್ಞವನ್ನು ನಿರ್ವಹಿಸಿದನು. ಅದರಿಂದ ಆ ಪ್ರಜೆಗಳ ಕ್ಷುತ್ತಿನ ಶಮನವಾಯಿತು. ಆದುದರಿಂದ ಕ್ಷುತ್ತಿನ ಶಮನಕ್ಕಾಗಿ ಯಜ್ಞವನ್ನು ಆಚರಿಸ ಬೇಕಾದುದು ಸಹಜವಾಗಿದೆ. ಈ ಯಜ್ಞವೇ ಮೂರು ಲೋಕಗಳನ್ನೂ ಒಂದು ಸ್ಥಿತಿಯಲ್ಲಿಯೂ ನಿಯಮನದಲ್ಲಿಯೂ ಇಡುತ್ತದೆ. ಹೇಗೆಂದರೆ—

ಕಲ್ಪಂತೇಽಸ್ಮಾ ಇಮೇ ಲೋಕಾ ಊರ್ಜಂ ಪ್ರಜಾಸು ದಧಾತಿ ತ್ರಿರಾತ್ರೇಣೈವೇಮಂ ಲೋಕಂ ಕಲ್ಪಯತಿ ತ್ರಿರಾತ್ರೇಣಾಂತರಿಕ್ಷಂ ತ್ರಿರಾತ್ರೇಣಾಮುಂ ಲೋಕಂ ಯಥಾ ಗುಣೇ ಗುಣ-ಮನ್ವಸ್ಯತ್ಯೇವಮೇವ ತಲ್ಲೋಕೇ ಲೋಕಮನ್ವಸ್ಯತಿ ಧೃತ್ಯಾ ಅಶಿಥಿಲಂ ಭಾವಾಯ ॥

(ತೈ. ಸಂ. ೭-೨.೪-೨)

ನವರಾತ್ರರೂಪವಾದ ಈ ಯಜ್ಞದಿಂದ ಲೋಕತ್ರಯಕ್ಕೂ ಚೈತನ್ಯವು ದೊರೆಯಿತು. ತ್ರಿರಾತ್ರದಿಂದ ಪೃಥ್ವಿಗೂ, ತ್ರಿರಾತ್ರದಿಂದ ಅಂತರಿಕ್ಷಕ್ಕೂ, ಉಳಿದ ತ್ರಿರಾತ್ರದಿಂದ ದ್ಯುಲೋಕಕ್ಕೂ ಪ್ರಜಾಪತಿಯು ಸ್ಥಿತಿಶಕ್ತಿಯನ್ನು ಈ ಯಜ್ಞದ ಶಕ್ತಿಯಿಂದ ಕಲ್ಪಿಸಿದನು. ಓತಪ್ರೋತರೂಪದಿಂದ ತಂತುವಿನೊಡನೆ ತಂತುವನ್ನು ಸೇರಿಸಿ ಬಟ್ಟೆಯನ್ನು ನಿರ್ಮಿಸುವಂತೆ ಶೈಥಿಲ್ಯವನ್ನು ಕಲ್ಪಿಸುವುದಕ್ಕೂ ಮತ್ತು ವಿಶ್ವಕ್ಕೆಲ್ಲಾ ಸಂಬಂಧಿಸಿದ ಒಂದೇ (ಏಕಮಾತ್ರ) ಶಕ್ತಿಯನ್ನು ಉತ್ಪಾದನೆಮಾಡಿ ಮೂರು ಲೋಕಗಳೂ ಅವುಗಳ ನಿಯತವಾದ ಸ್ಥಿತಿಯಲ್ಲಿರುವುದಕ್ಕೂ ಈ ಯಜ್ಞದಿಂದ ಲೋಕತ್ರಯಕ್ಕೂ ಓತಪ್ರೋತ ರೂಪವಾದ ಸಂಬಂಧವನ್ನು ಕಲ್ಪಿಸಿದನು. ಈ ಯಜ್ಞವು ವಿಶ್ವಜೀವದ ನಾಡಿಯಾಗಿದೆ. ಅದನ್ನು,

ಸರ್ವೇಷಾಂ ವಾ ಏಷ ಭೂತಾನಾಗ್ಂ ಸರ್ವೇಷಾಂ ದೇವಾನಾಮಾತ್ಮಾ ಯದ್ಯಜ್ಞಸ್ತಸ್ಯ ಸಮೃದ್ಧಿ-ಮನು ಯಜಮಾನಃ ಪ್ರಜಯಾ ಪಶುಭಿರ್ಯಧ್ಯತೇ ॥

(ಶ. ಬ್ರಾ. ೧೪-೩-೨-೧)

ಎಂದು ಶತಪಥದಲ್ಲಿ ವಿವರಿಸಿದೆ. ಈ ಯಜ್ಞವು ಸಕಲ ಮಾನವರ ಮತ್ತು ಸಕಲ ದೇವತೆಗಳ ಆತ್ಮವೇ ಆಗಿದೆ. ಯಾವ ಪುರುಷನು ಈ ಯಜ್ಞವನ್ನು ನಿರ್ವಹಿಸುತ್ತಾನೆಯೋ ಅವನು ಸತ್ಸಂತಾನವನ್ನೂ ಪಶುಸಂಪತ್ತನ್ನೂ ಪಡೆಯುತ್ತಾನೆ. ಮತ್ತು

ಸ ಯದಗ್ನೌ ಜುಹೋತಿ। ತದ್ದೇವೇಷು ಜುಹೋತಿ ತಸ್ಮಾದ್ದೇವಾಃ ಸಂತೃಪ್ತಾ ಯತ್ಸದಸಿ ಭಕ್ಷಯಂತಿ ತನ್ಮನುಷ್ಯೇಷು ಜುಹೋತಿ ತಸ್ಮಾನ್ಮನುಷ್ಯಾಃ ಸಂತೃಪ್ತಾ ಯದ್ದವಿರ್ಧಾನಯೋ-ರ್ನಾರಾಶಗ್ಂಸಾಃ ಸೀದಂತಿ ತತ್ಪಿತೃಷು ಜುಹೋತಿ ತಸ್ಮಾತ್ಪಿತರಃ ಸಂತಿ ॥

(ಶ. ಬ್ರಾ. ೨-೬-೨-೨೫)

ಅಗ್ನಿಯಲ್ಲಿ ಹುತವಾದುದು ದೇವತೆಗಳಿಗೆ ಅರ್ಪಿತವಾಗುತ್ತದೆ. ಆದುದರಿಂದಲೇ ದೇವತೆಗಳು ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡಿದ್ದಾರೆ. ಸದಸ್ಸಿನಲ್ಲಿ ಹಂಚಲ್ಪಟ್ಟ (ಸೋಮ) ರಸದಿಂದ ಮಾನವರ ಸ್ಥಿತಿಯಿದೆ. ನಾರಾಶಂಸಪಾತ್ರೆಯಿಂದ ಅರ್ಪಿತವಾದ ಆಹುತಿಯು ಪಿತೃಗಳನ್ನು ತೃಪ್ತಿಪಡಿಸುತ್ತದೆ. ಆದುದರಿಂದ ಮಾನವನು ತನ್ನ ದೇವಋಣವನ್ನೂ ಪಿತೃಋಣವನ್ನೂ ಸಹ ಯಜ್ಞಕರ್ಮದಿಂದಲೇ ತೀರಿಸಬೇಕು: ಇದಿಲ್ಲದೆ ಇವನಿಗೆ ವಿಮೋಚನೆಯಿಲ್ಲ. ತೈತ್ತಿರೀಯಸಂಹಿತೆಯಿಂದ ಹಿಂದೆ ಉದಾಹರಿಸಿದ,

ತಲ್ಲೋಕೇ ಲೋಕಮನ್ವಸ್ಯತಿ ಧೃತ್ಯಾ ಅಶಿಥಿಲಂಭಾವಾಯ ।

(ತೈ. ಸಂ. ೭-೨-೪-೨)

ಎಂಬ ವಾಕ್ಯದಲ್ಲಿ ವಿಶ್ವದ ಅಸ್ತಿತ್ವವು ಶಿಥಿಲವಾಗದೆ ಭದ್ರವಾಗಿರುವುದಕ್ಕಾಗಿಯೂ ಮತ್ತು ಮೂರು ಲೋಕಗಳ ಸಂಬಂಧವೂ ಓತಪ್ರೋತಗಳಂತೆ ಹೆಣೆದುಕೊಂಡಿರುವುದಕ್ಕಾಗಿಯೂ ಸಹ ಯಜ್ಞಕರ್ಮದ ಅವಶ್ಯಕತೆಯಿದೆಯೆಂದು ತಿಳಿಸಿದೆ. ಋಣತ್ರಯದ ವಿಷಯವನ್ನು ಹೇಳುವಾಗಲೂ ಸಹ ಈ ಪರಸ್ಪರವಾದ ಬಂಧನವು ವರ್ಣಿತವಾಗಿರುತ್ತದೆ.

ಋಣಗ್ಂ ಹ ವೈ ಜಾಯತೇ ಯೋಽಸ್ತಿ ಸ ಜಾಯಮಾನ ಏವ ದೇವೇಭ್ಯ ಋಷಿಭ್ಯಃ ಪಿತೃಭ್ಯೋ ಮನುಷ್ಯೇಭ್ಯಃ ॥

(ಶ. ಬ್ರಾ. ೧-೭-೨-೧)

ಪ್ರತಿಯೊಬ್ಬ ವ್ಯಕ್ತಿಯ ಸ್ಥಿತಿಯ ಕಾಲದಲ್ಲಿಯೂ ಸಹ ಅವನ ಜನ್ಮದಿಂದಲೇ ಪ್ರಾಪ್ತವಾದ ದೇವಋಣವೂ, ಋಷಿಋಣವೂ, ಪಿತೃಋಣವೂ ಅವನ ಮೇಲಿನ ಹೊರೆಯಾಗಿದ್ದೇ ಇರುತ್ತದೆ.

ಸ ಯದೇವ ಯಜೇತ । ತೇನ ದೇವೇಭ್ಯ ಋಣಂ ಜಾಯತೇ ತದ್ಧ್ಯೇಭ್ಯ ಏತತ್ಕರೋತಿ ಯದೇಭ್ಯೋ ಜುಹೋತಿ ॥

(ಶ. ಬ್ರಾ. ೧-೭-೨-೨)

ಈ ಋಣದಿಂದ ಮುಕ್ತನಾಗಿ ವಿಶ್ವದ ಸ್ಥಿತಿಯಲ್ಲಿ ತಾನೂ ಸಹ ಭಾಗವಹಿಸುವಂತೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದರೆ ಪ್ರತಿಯೊಂದು ವ್ಯಕ್ತಿಯೂ ಯಜ್ಞಮಾಡಿ ದೇವಋಣವನ್ನು ತೀರಿಸಿ ಆ ಋಣದಿಂದ ಮುಕ್ತನಾಗಲೇಬೇಕು. ಈ ವಿಷಯವನ್ನು ತೈತ್ತಿರೀಯಸಂಹಿತೆಯಲ್ಲಿ ಇನ್ನೂ ವಿಶದವಾಗಿ ತಿಳಿಸಿದೆ.

ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯ ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಹ್ಮಚಾರಿವಾಸೀ ॥

(ತೈ. ಸಂ. ೬-೩-೧೧-೫)

ಬ್ರಾಹ್ಮಣನಾದವನು ಹುಟ್ಟುವಾಗಲೇ ಋಷಿಋಣ, ದೇವಋಣ, ಪಿತೃಋಣಗಳೆಂಬ ಮೂರು ವಿಧವಾದ ಋಣಗಳನ್ನು ಹೊತ್ತುಕೊಂಡೇ ಹುಟ್ಟುವನು. ಇಲ್ಲಿ ಋಷಿಋಣವೆಂದರೆ ಬ್ರಾಹ್ಮಣನಾದವನು ಋಷಿಗಳ ವಿಷಯದಲ್ಲಿ ನಡೆಸಬೇಕಾದ ಕರ್ತವ್ಯವೆಂದರ್ಥವು- ಇದರಂತೆ ದೇವಋಣ, ಪಿತೃಋಣಗಳಿಗೂ ಅರ್ಥವು. ಬ್ರಹ್ಮಚರ್ಯವ್ರತದಿಂದ ಗುರುಕುಲದಲ್ಲಿ ವಾಸಮಾಡುತ್ತಾ ನಿಯಮವಾಗಿ ಗುರುವಿನಿಂದ ಉಪದೇಶಪೂರ್ವಕವಾಗಿ ವೇದಾಧ್ಯಯನಮಾಡುವುದರಿಂದ ಋಷಿ

ಋಣವು ತೀರುವುದು. ಯಜ್ಞಾದಿಕರ್ಮಗಳಿಂದ ದೇವತೆಗಳನ್ನು ಆರಾಧಿಸುವುದರಿಂದ ದೇವಋಣವು ತೀರುವುದು. ವಿವಾಹವಾದ ಪತ್ನಿಯಲ್ಲಿ ಧರ್ಮಪ್ರಜೋತ್ಪಾದನೆಮಾಡುವುದರಿಂದ ಪಿತೃಋಣವು ತೀರುವುದು. ಆದುದರಿಂದ ಬ್ರಾಹ್ಮಣನಾದವನು ಗೃಹಸ್ಥನಾಗಿ ಈ ಮೂರು ವಿಧವಾದ ಕರ್ತವ್ಯವನ್ನು ಪಾಲಿಸಲೇಬೇಕು ಎಂದು ಉಕ್ತವಾಗಿರುವುದು.

ಇತ್ಯಾದಿಯಾಗಿ ವಿಶ್ವತತ್ತ್ವದಲ್ಲಿ ಪ್ರತಿವ್ಯಕ್ತಿಯೂ ಸಹ ತನ್ನ ಪ್ರಭಾವಪೂರಿತವಾದ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದರೆ ಯಜ್ಞವು ಈ ಸಾಮಾನ್ಯ ವಿಶೇಷಗಳಿಗೆ ಸಂಬಂಧವನ್ನು ಕಲ್ಪಿಸುವ ಸೂತ್ರವಾಗಿರುತ್ತದೆ. ಸೂತ್ರರೂಪವಾದ ಈ ಯಜ್ಞವೂ ಸಹ ವಿಶ್ವದ ವಿಕಾಸ ಮತ್ತು ಸಂಕೋಚಗಳೊಡನೆ ತಾನೂ ಸಹ ಒಂದುಸಲ ಬೆಳೆಯುತ್ತದೆ, ಇನ್ನೊಂದುಸಲ ಸಂಕುಚಿತವಾಗುತ್ತದೆ. ವಿಶ್ವಗತಿಯೊಡನೆ ತನ್ನ ಗತಿಯನ್ನು ಹೊಂದಿಸಿಕೊಳ್ಳುತ್ತದೆ. ಈ ಅಂಶವನ್ನು ವಿವರಿಸುತ್ತಾ ಶತಪಥಬ್ರಾಹ್ಮಣದಲ್ಲಿ ಯಜ್ಞಶಬ್ದದ ನಿರ್ವಚನವನ್ನು ತಿಳಿಸಿದೆ.

ಅಥ ಯಸ್ಮಾದ್ಯಜ್ಞೋ ನಾಮ । ಘ್ನಂತಿ ವಾ ಏನಮೇತದ್ಯದಭಿಷುಣ್ವಂತಿ ತದ್ಯದೇನಂ ತನ್ವತೇ ತದೇನಂ ಜನಯಂತಿ ಸ ತಾಯಮಾನೋ ಜಾಯತೇ ಸ ಯನ್ ಜಾಯತೇ ತಸ್ಮಾದ್ಯಜ್ಞೋ ಯಜ್ಞೋ ಹ ವೈ ನಾಮೈತದ್ಯಜ್ಞ ಇತಿ ॥

(ಶ. ಬ್ರಾ. ೩-೯-೪-೨೩)

ಅಭಿಷವಕಾಲದಲ್ಲಿ ಹನನಮಾಡುತ್ತಾರೆ (ಸೋಮಲತೆಗಳನ್ನು ಕಲ್ಲಿನಿಂದ ಜಜ್ಜುತ್ತಾರೆ, ಇದೇ ಹನನವು). ಪುನಃ ಉತ್ಪನ್ನವಾಗುವಂತೆ ಮಾಡುತ್ತಾರೆ). ಪ್ರಸಾರರೂಪವಾದ ಗತಿಯೊಂದಿಗೆ ಉತ್ಪನ್ನವಾಗುವುದರಿಂದ ಯಜ್ಞವೆಂಬ ಹೆಸರು ಪ್ರಸಿದ್ಧವಾಯಿತು ಎಂದು ಆವಶ್ಯಕತೆಗಳಿಗೆ ತಕ್ಕಂತೆ ಸಂಕೋಚವಿಕಾಸಗಳೂ ಇವೆಯೆಂದು ತಿಳಿಸಿದೆ ಮತ್ತು ವಿಶ್ವದ ಸ್ಥಿತಿಗತಿಗಳಿಗನುಗುಣವಾಗಿಯೇ ಇರುವುದರಿಂದ ವಿಶ್ವಕ್ಕೆ ಉಪಕಾರವಾಗಿದೆ. ಹೇಗೆಂದರೆ—

ಭುಜ್ಯುಃ ಸುಪರ್ಣ ಇತಿ । ಯಜ್ಞೋ ವೈ ಭುಜ್ಯುಃ ಯಜ್ಞೋ ಹಿ ಸರ್ವಾಣಿ ಭೂತಾನಿ ಭುನಕ್ತಿ ಯಜ್ಞೋ ಗಂಧರ್ವಃ ॥

(ಶ. ಬ್ರಾ. ೯-೪-೧-೧೧)

ಯಜ್ಞವು ಸಕಲ ಭೂತಗಳನ್ನೂ ತನ್ನ ಆಹುತಿಗಾಗಿ ಅಪೇಕ್ಷಿಸುತ್ತದೆ. ಪುನಃ ಸಕಲ ಭೂತಗಳ ಉಪಕಾರಕ್ಕಾಗಿ ಪ್ರಸರಿಸುತ್ತದೆ. ಇತ್ಯಾದಿಯಾಗಿ ವಿಶ್ವತತ್ತ್ವಕ್ಕೂ ಯಜ್ಞಕ್ಕೂ ಇರತಕ್ಕ ತಾದಾತ್ಮ್ಯಸಂಬಂಧವನ್ನು ತಿಳಿಸಿ ವ್ಯಾವಹಾರಿಕವಾದ ಸಮಸ್ತ ವಿಶ್ವವ್ಯವಹಾರಗಳಿಗೂ ಸಹ ಯಜ್ಞವು ಕಾರಣವು, ಆದೇ ರಕ್ಷಕವು ಮತ್ತು ಆದೇ ಸೂತ್ರರೂಪವಾದ ಸಂಬಂಧವು ಇತ್ಯಾದಿಯಾಗಿ ನಾನಾ ಶ್ರುತಿವಾಕ್ಯಗಳಲ್ಲಿ ವರ್ಣಿಸಿರುವ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿ **ಯಜ್ಞೋ ವಿಶ್ವಸ್ಯ ನಾಭಿಃ** ಎಂಬ ವಾಕ್ಯದಿಂದ ವರ್ಣಿಸಲಾಗಿದೆ. ಆದುದರಿಂದಲೇ ವಿಶ್ವನಾಭಿಯಾದ ಈ ಯಜ್ಞವನ್ನು ನಿರ್ವಹಿಸಬೇಕಾದರೆ ದೇವಮಾನವಾದಿಗಳೆಲ್ಲರಿಗೂ ಸಮಾನವಾದ ಶ್ರದ್ಧೆಯು ಅತ್ಯವಶ್ಯವೆಂದು ತಿಳಿಸಿದೆ.

ಯೋ ವೈ ಶ್ರದ್ಧಾಮನಾರಭ್ಯ ಯಜ್ಞೇನ ಯಜತೇ ನಾಸ್ಮೇಷ್ಟಾಯ ಶ್ರದ್ದಧತೇಽಪಃ ಪ್ರಣಯತಿ ಶ್ರದ್ಧಾ ವಾ ಆಪಃ ಶ್ರದ್ಧಾಮೇವಾರಭ್ಯ ಯಜ್ಞೇನ ಯಜತ ಉಭಯೇಽಸ್ಮೈ ದೇವಮನುಷ್ಯಾ ಇಷ್ಟಾಯ ಶ್ರದ್ದಧತೇ ॥

(ತೈ. ಸಂ. ೧-೬-೪-೧)

ಶ್ರದ್ಧಾರಹಿತನಾಗಿ ಯಜ್ಞಮಾಡಿದವನ ಯಜ್ಞವು ಸಿದ್ಧಿಸುವುದಿಲ್ಲ ಎಂದರೆ ಫಲಕಾರಿಯಾಗುವುದಿಲ್ಲ. ಶ್ರದ್ಧಾರೂಪವಾದ ಉದಕವನ್ನು ಮುಂದಿಟ್ಟುಕೊಂಡು ಯಜ್ಞವನ್ನು ನೆರವೇರಿಸಬೇಕು. ದೇವಮಾನವಾದಿ ಸಕಲರೂ ಸಹ ಶ್ರದ್ಧೆಯಿಂದಲೇ ಯಜ್ಞದಲ್ಲಿ ಭಾಗವಹಿಸುವರು ಎಂದು ಶ್ರದ್ಧೆಯ ಆವಶ್ಯಕತೆಯನ್ನೂ ತಿಳಿಸಿದೆ. ಇದಲ್ಲದೆ,

ಶ್ರದ್ಧಯಾಗ್ನಿಃ ಸಮಿಧ್ಯತೇ ಶ್ರದ್ಧಯಾ ಹೂಯತೇ ಹವಿಃ ।

(ಋ. ಸಂ. ೧೦-೧೫೧-೧)

ಯಜ್ಞಕರ್ಮಗಳಲ್ಲಿ ಶ್ರದ್ಧೆಯಿಂದಲೇ ಅಗ್ನಿಮಥನವನ್ನು ಮಾಡಿ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಬೇಕು. ಆ ಅಗ್ನಿಯಲ್ಲಿ ದೇವತೆಗಳನ್ನುದ್ದೇಶಿಸಿ ಆಹುತಿಗಳನ್ನರ್ಪಿಸುವುದನ್ನೂ ಸಹ ಶ್ರದ್ಧೆಯಿಂದಲೇ ನೆರವೇರಿಸಬೇಕು ಎಂದು ಋಗ್ವೇದದಲ್ಲಿಯೂ ಹೇಳಿದೆ.

ಯಜ್ಞತತ್ತ್ವದಲ್ಲಿಡಬೇಕಾದ ಈ ಶ್ರದ್ಧೆಯು ಕೇವಲ ಅಂಧಶ್ರದ್ಧೆಯಲ್ಲ. ಈ ಶ್ರದ್ಧೆಯು ಆಧ್ಯಾತ್ಮಿಕವಾದ ತತ್ತ್ವವನ್ನು ಗ್ರಹಣಮಾಡುವ ಶಕ್ತಿಯುಳ್ಳದ್ದಾಗಿರಬೇಕು. ಇದು ಭುವನನಾಭಿಯಾದ ಯಜ್ಞಕ್ಕೂ ಬ್ರಹ್ಮತತ್ತ್ವಕ್ಕೂ ಇರುವ ಸಂಬಂಧವನ್ನು ತಿಳಿಸುವಂತಿರಬೇಕು. ಆಧ್ಯಾತ್ಮಿಕಜ್ಞಾನದ ಆಧಾರದಮೇಲೆ ನಿಂತಿರುವ ಈ ಶ್ರದ್ಧೆಯುಳ್ಳ ಯಜಮಾನನು ತನಗೂ ಯಜ್ಞಕ್ಕೂ ತಾದಾತ್ಮ್ಯವನ್ನು ಕಲ್ಪಿಸಿಕೊಳ್ಳುತ್ತಾನೆ. ಅನಂತರ ಯಜ್ಞಕ್ಕೂ ಪ್ರಜಾಪತಿಗೂ ಇರುವ ತಾದಾತ್ಮ್ಯವನ್ನರಿಯುತ್ತಾನೆ. ಪ್ರಜಾಪತಿರೂಪಿಯಾದ ಪರಬ್ರಹ್ಮನ ವಿಶ್ವವ್ಯಾಪಕಾಂಗಗಳೆಲ್ಲವೂ ಈ ಯಜ್ಞತತ್ತ್ವದಲ್ಲಡಗಿರುತ್ತದೆಂದರಿಯುತ್ತಾನೆ ಮತ್ತು ಆ ವಿಶ್ವಚಕ್ರದಲ್ಲಿ ತಾನೂ ಸಹ ಭಾಗವನ್ನು ವಹಿಸುತ್ತಾನೆ

ಇನ್ನು ಮೂರನೆಯ ಪ್ರಶ್ನೆಯಾದ ಪೃಚ್ಛಾಮಿ ತ್ವಾ ವೃಷ್ಣೋ ಅಶ್ವಸ್ಯ ರೇತಃ ಎಂಬ ವಾಕ್ಯಕ್ಕೆ **ಆಯಂ ವೃಷ್ಣೋ ಅಶ್ವಸ್ಯ ರೇತಃ** ಎಂದು ಉತ್ತರವನ್ನು ಹೇಳಲಾಗಿದ ಎಂದರೆ ವೃಷ್ಟ್ಯಾದಿಗಳನ್ನು ಸೃಜಿಸುವವನೂ, ಜಗದ್ವ್ಯಾಪಕನೂ ಆದ ಆದಿತ್ಯನ (ಬ್ರಹ್ಮನ) ರೇತಸ್ಸು ಎಂದರೆ ಜಗದುತ್ಪತ್ತಿಕಾರಣವಾದ ಶಕ್ತಿಸಾಮರ್ಥ್ಯವು ಯಾವುದು ಎಂಬುದೇ ಪ್ರಶ್ನೆ. ಅದಕ್ಕೆ ಸೋಮವೇ ಆ ರೇತಸ್ಸು ಎಂದು ಉತ್ತರವನ್ನು ಹೇಳಿದೆ. ಇಲ್ಲಿ ಅಶ್ವವೆಂಬ ಪರ್ಯಾಯಪದವು ಆದಿತ್ಯನ ಯಾವ ಗುಣವನ್ನು ತೋರಿಸುತ್ತದೆ ಎಂಬುದನ್ನು ತಿಳಿದು ಅನಂತರ ಸೋಮವು ಅವನ ರೇತಸ್ಸು ಎಂಬುದರ ಅರ್ಥವೇನು ಎಂಬ ವಿಷಯವನ್ನು ಪರಿಶೀಲಿಸಬೇಕು. ಶತಪಥಬ್ರಾಹ್ಮಣದಲ್ಲಿ ಅಶ್ವಶಬ್ದದ ನಿರ್ವಚನವನ್ನು ಈ ರೀತಿ ತಿಳಿಸಿದೆ.

ಪ್ರಜಾಪತೇರಕ್ಷ್ಯಶ್ವಯತ್ ತತ್ಪರಾಪತತ್ತತೋಽಶ್ವಃ ಸಮಭವದ್ಯದಶ್ವಯತ್ತದಶ್ವಸ್ಯಾಶ್ವತ್ವಂ ॥

(ಶ. ಬ್ರಾ. ೧೩-೩-೧-೧)

ಪ್ರಜಾಪತಿಯ ಅಕ್ಷಿಯು (ಕಣ್ಣು) ಉಬ್ಬಿಕೊಂಡು ಕೆಳಕ್ಕೆ ಬಿದ್ದುಹೋಯಿತು. ಅದರಿಂದ ಅಶ್ವವು ಉತ್ಪನ್ನವಾಯಿತು. ಅದು ವೃದ್ಧವಾದುದರಿಂದ ಅದಕ್ಕೆ ಅಶ್ವವೆಂದು ಹೆಸರು ಪ್ರಸಿದ್ಧವಾಯಿತು ಎಂದು ತಿಳಿಸಿ ಅನಂತರ ಈ ಅಶ್ವಕ್ಕೂ ಆದಿತ್ಯನಿಗೂ ಇರುವ ತಾದಾತ್ಮ್ಯವು ಹೇಗೆ ಎಂಬುದನ್ನು ವಿವರಿಸಿದೆ.

ಪ್ರಜಾಪತಿರ್ವಾ ಇದಮಗ್ರ ಆಸೀತ್। . . . ನಿರಮಿಮೀತ ಮನಸಃ ಪುರುಷಂ ಚಕ್ಷುಷೋಽಶ್ವಂ।

(ಶ. ಬ್ರಾ. ೭-೫-೨-೬)

ಈ ಅಶ್ವವು ಪ್ರಜಾಪತಿಯ ಚಕ್ಷುಸ್ಸಿನಿಂದ ಸೃಷ್ಟವಾಯಿತು ಎಂದು ಹೇಳಿ ಅನಂತರ ವರುಣನಿಗೂ ಈ ಅಶ್ವಕ್ಕೂ ಇರತಕ್ಕ ನಿಕಟವಾದ ಸಂಬಂಧವನ್ನು ಅನೇಕ ಕಡೆಗಳಲ್ಲಿ ತಿಳಿಸಿದೆ.

ವಾರುಣೋ ವಾ ಅಶ್ವಃ । ತಂ ದೇವತಯಾ ವ್ಯರ್ಧಯತಿ । ಯಜ್ಞಾಜಾಪತ್ಯಂ ಕರೋತಿ । ನಮೋ ರಾಜ್ಞೇ ನಮೋವರುಣಾಯೇತ್ಯಾಹ । ವಾರುಣೋ ವಾ ಅಶ್ವಃ ॥

(ತೈ. ಬ್ರಾ. ೩-೯-೧೬-೧)

ಎಂದು ವರುಣನಿಗೂ ಅಶ್ವಕ್ಕೂ ಇರುವ ಸಂಬಂಧವನ್ನು ತಿಳಿಸುವಾಗ ಸಾಯಣರು **ಅಶ್ವಸ್ಯಾಬ್ಭ್ಯೋನಿತ್ವಾದ್ವರುಣಸ್ಯ ಚಾಪಾಂ ಪತಿತ್ವಾದಯಮಶ್ವೋ ವಾರುಣಃ** । ಅಶ್ವವು ವಿಶ್ವವ್ಯಾಪಕವಾದ ನೀರಿನಿಂದ ಜನಿಸಿದುದರಿಂದಲೂ, ವರುಣನು ನೀರಿಗೆ ಒಡೆಯನಾದುದರಿಂದಲೂ ಯಜ್ಞಾಶ್ವವು ವರುಣದೇವತೆಗೆ ಸಂಬಂಧಿಸಿದುದು ಎಂದು ವಿವರಣೆ ಮಾಡಿದ್ದಾರೆ. ಈ ವಾರುಣಾಶ್ವದ ರಹಸ್ಯಾರ್ಥವೇನು ಎಂಬ ವಿಷಯವನ್ನು ವಿಮರ್ಶಿಸುತ್ತಾ Eggelling ಎಂಬ ಪಂಡಿತನು ಶತಪಥಬ್ರಾಹ್ಮಣದ ಪರಿವರ್ತನದಲ್ಲಿ ಈ ರೀತಿ ಹೇಳಿದ್ದಾನೆ. ದ್ಯಾವಾಪೃಥಿವಿಗಳಿಗೆಲ್ಲಾ ಪ್ರಭುವಾದ ವರುಣನ ಈ ಅಶ್ವವು ಯಾವುದೆಂದರೆ ತನ್ನ ದೈನಂದಿನ ಪರಿಭ್ರಮಣವನ್ನು ಹೊಂದುತ್ತಿರುವ ಸೂರ್ಯನಲ್ಲದೆ ಬೇರೆಯಲ್ಲ. ವರುಣನಿಗೂ ಈ ಅಶ್ವದೊಡನೆ ಇರತಕ್ಕ ಸಂಬಂಧವು ತೈತ್ತಿರೀಯ ಸಂಹಿತೆಯಲ್ಲಿ ಈ ರೀತಿ ವರ್ಣಿತವಾಗಿದೆ.

ಪ್ರಜಾಪತಿರ್ವರುಣಾಯಾಶ್ವಮನಯತ್ಸ ಸ್ವಾಂ ದೇವತಾಮಾರ್ಚ್ಛತ್ಸ ಪರ್ಯದೀರ್ಯತ ಸ ಏತಂ ವಾರುಣಂ ಚತುಷ್ಕಪಾಲಮಪಶ್ಯತ್ತಂ ನಿರವಪತ್ತತೋ ವೈ ಸ ವರುಣಪಾಶಾದಮುಚ್ಯತ ವರುಣೋ ವಾ ಏತಂ ಗೃಹ್ಣಾತಿ ಯೋಽಶ್ವಂ ಪ್ರತಿಗೃಹ್ಣಾತಿ ॥

(ತೈ. ಸಂ. ೨-೩-೧೨-೧)

ಪ್ರಜಾಪತಿಯು ಈ ಅಶ್ವವನ್ನು ವರುಣನಲ್ಲಿಗೆ ಕರೆದುಕೊಂಡುಹೋದನು. ಆದರೆ ಆ ಅಶ್ವವು ತನ್ನ ಸ್ವಂತದೇವತೆಯಾದ ಪ್ರಜಾಪತಿಯ ಬಳಿಗೇ ಹೋಯಿತು. ಆಗ ವರುಣನಿಗೆ ಖೇದವುಂಟಾದುದರಿಂದ ಪ್ರಜಾಪತಿಯು ವರುಣನನ್ನು ದ್ವೇಷಿಸಿ ಚತುಷ್ಕಪಾಲವನ್ನರ್ಪಿಸಿದನು. ಆಗ ಪ್ರಜಾಪತಿಯು ವರುಣನ ಪಾಶದಿಂದ ಮುಕ್ತನಾದನು ಎಂಬುದಾಗಿ ವಿವರಿಸಿದೆ. ಈ ಅಂಶವನ್ನು ವಿಶದವಾಗಿ ತಿಳಿಯಲು ಇನ್ನೂ ಕೆಲವು ಮಂತ್ರಗಳು ಸಹಾಯಕಗಳಾಗಿರುವವು. ಇವು ಅಶ್ವಪದವು ಸೂರ್ಯನಿಗೆ ಪರ್ಯಾಯಪದವಾಗಿರುವುದನ್ನು ಸೂಚಿಸುತ್ತವೆ—ಋ. ಸಂ. ೧-೫೦-೧; ತೈ. ಸಂ. ೨-೨-೧೨-೧; ಋ. ಸಂ. ೧-೧೧೫-೧; ತೈ. ಸಂ. ೨-೫-೧೨-೧ ಇತ್ಯಾದಿ. ವಿಶ್ವವ್ಯಾಪಿಯಾದ (ಅಶ್ವಸ್ಯ) ಈ ಆದಿತ್ಯನಿಗೆ ಸೋಮವು ರೇತೋರೂಪವಾಗಿರುವುದು ಎಂದರೆ ಆದಿತ್ಯರೂಪದಲ್ಲಿರುವ ಪರಬ್ರಹ್ಮನಿಗೆ ಸೋಮವೇ ರೇತಸ್ಸಾಗಿರುವುದೆಂದು ಹೇಳಬಹುದು. ಹೇಗೆಂದರೆ, ಸಕಲ ಭೂತಗಳ ಸೃಷ್ಟಿಗೆ ಸೋಮವೇ ಉತ್ಪಾದಕವಾದ ಬೀಜವೆಂಬುದನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ಈರೀತಿ ಹೇಳಿದೆ—

ಅಥ ಯೇಽಕಾಮಯಂತ ತದ್ರೇತಸೋಽಸೃಜತ ತದು ಸೋಮ ಏತಾವದ್ವಾ ಇದಂ ಸರ್ವಮನ್ನಂ ಚೈವಾನ್ನಾದಶ್ಚ ಸೋಮ ಏವಾನ್ನಮಗ್ನಿರನ್ನಾದಃ ॥

(ಬೃ. ಉ. ೧-೪-೬)

ಅದ್ವಿತೀಯನಾದ ಪರಬ್ರಹ್ಮನು ತನ್ನ ರೇತಸ್ಸಿನಿಂದ ವಿಶ್ವದಲ್ಲಿ ಆರ್ದ್ರವಾಗಿರುವ ಸಕಲವಸ್ತುಗಳನ್ನೂ ಸೃಷ್ಟಿಸಿದನು. ೮ ರೇತಸ್ಸೇ ಸೋಮವು. ಈ ಸೋಮವು ಅಗ್ನಿಯಲ್ಲಿ ಅರ್ಪಿತವಾಗಿ ಎಂಡೂ ಪರಸ್ಪರ ಭಕ್ಷ್ಯಭಕ್ಷಕಗಳಾಗುತ್ತವೆ. ಇದನ್ನೇ ಮೈತ್ರ್ಯುಪನಿಷತ್ತಿನಲ್ಲಿ—

ರವಿಮಧ್ಯೇ ಸ್ಥಿತಃ ಸೋಮಃ ಸೋಮಮಧ್ಯೇ ಹುತಾಶನಃ ॥

(ಮೈ. ಉ. ೬-೩೮)

ಎಂದು ವರ್ಣಿಸಿದೆ. ಎಂದರೆ ಸೋಮನು ಆದಿತ್ಯಮಂಡಲದ ಮಧ್ಯವರ್ತಿಯಾಗಿಯೂ, ಅಗ್ನಿಯು ಸೋಮದ ಮಧ್ಯವರ್ತಿಯಾಗಿಯೂ ಇದ್ದಾರೆಂದು ತಿಳಿಸಿದೆ. ಸಾಧಾರಣವಾಗಿ ಆದಿತ್ಯನಿಗೂ ಸೋಮನಿಗೂ ಇರುವ ಸಂಬಂಧವನ್ನು ಋಕ್ಸಂಹಿತೆಯಲ್ಲಿ ಅನೇಕ ಕಡೆ ವರ್ಣಿಸಿದೆ.

ಮಹತ್ತತ್ಸೋಮೋ ಮಹಿಷಶ್ಚಕಾರಾಪಾಂ ಯದ್ಗರ್ಭೋಽವೃಣೀತ ದೇವಾನ್ ।
ಅದಧಾದಿಂದ್ರೇ ಪವಮಾನ ಓಜೋಽಜನಯತ್ಸೂರ್ಯೇ ಜ್ಯೋತಿರಿಂದುಃ ॥

(ಋ. ಸಂ. ೯-೯೭-೪೧)

ಆದಿತ್ಯಸ್ಥವಾದ ಉದಕಗಳ ಗರ್ಭಭೂತವಾದ ಸೋಮವು ದೇವತೆಗಳಿಗೂ ತೃಪ್ತಿಯನ್ನುಂಟುಮಾಡಿತು. ವೀರ್ಯರೂಪದಲ್ಲಿದ್ದು ಆದಿತ್ಯನಲ್ಲಿ ವಿಶ್ವಜ್ಯೋತಿಯನ್ನು ಸೃಷ್ಟಿಸಿತು ಎಂದಿದೆ. ಮತ್ತು—

ತಂ ಸಮುದ್ರೋ ಅಸಿ ವಿಶ್ವವಿತ್ಕವೇ ತವೇಮಾಃ ಪಂಚ ಪ್ರದಿಶೋ ವಿಧರ್ಮಣಿ ।
ತ್ವಂ ದ್ಯಾಂ ಚ ಪೃಥಿವೀಂ ಚಾತಿ ಜಭ್ರಿಷೇ ತವ ಜ್ಯೋತೀಂಷಿ ಪವಮಾನ ಸೂರ್ಯಃ ॥

(ಋ. ಸಂ. ೯-೮೬-೨೯)

ಎಂಬಲ್ಲಿ ಸೋಮವೇ ಅಂತರಿಕ್ಷಸ್ಥವಾದ ಸಮುದ್ರವೆಂದೂ, ಸಕಲ ಜ್ಯೋತಿಗೂ ಆಧಾರವೆಂದೂ, ಆದಿತ್ಯನೇ ಸೋಮನ ಪ್ರಭಾವದಿಂದ ಬೆಳಗುತ್ತಿರುವನೆಂದೂ ತಿಳಿಸಿದೆ. ಇಲ್ಲಿ ಸೋಮವು ಯಾವ ತತ್ವವನ್ನು ಪ್ರತಿಬಿಂಬಿಸುತ್ತದೆ ಎಂಬುದನ್ನು ಪ್ರಕೃತವಾದ ಋಕ್ಕಿನಲ್ಲಿ ಸಾಯಣರು ವಿವರಿಸುವಾಗ **ಅಗ್ನೌ ಹುತಃ ಸೋಮರಸಃ ಆದಿತ್ಯಂ ಪ್ರಾಪ್ಯ ವೃಷ್ಟ್ಯಾದಿಫಲಂ ಜನಯತಿ** । ಅಗ್ನಿಯಲ್ಲಿ ಅರ್ಪಿಸಿದ ಸೋಮವು ಆದಿತ್ಯನನ್ನು ಸೇರಿ ವೃಷ್ಟ್ಯಾದಿಫಲವನ್ನು ಉತ್ಪನ್ನವಾಗುವಂತೆ ಮಾಡುತ್ತದೆ. ಆದುದರಿಂದ ಆದಿತ್ಯನ ರೇತಸ್ಸೆಂದು ಇಲ್ಲಿ ವರ್ಣಿತವಾಗಿದೆಯೆಂದು ತಿಳಿಸಿದ್ದಾರೆ. ಇಲ್ಲಿ ಕೇವಲ ಅಧಿದೈವತಪಕ್ಷದಲ್ಲಿಯೇ ಅರ್ಥ ಮಾಡದೆ ಅಧ್ಯಾತ್ಮಪಕ್ಷದಲ್ಲಿಯೂ ಅರ್ಥ ಮಾಡಬೇಕು. ಅಧ್ಯಾತ್ಮಪಕ್ಷದಲ್ಲಿ ಮೇಲೆ ಉದಹರಿಸಿರುವ ಉಪನಿಷದ್ವಾಕ್ಯಗಳಲ್ಲಿ ರೇತಸ್ಸಿನ ರೂಪದಲ್ಲಿರುವ ಸೋಮನಿಗಿರುವ ವಿಶ್ವೋತ್ಪಾದನ ಶಕ್ತಿಯನ್ನೂ, ಸೋಮನಿಗೂ ಆದಿತ್ಯನಿಗೂ ಇರುವ ಸಂಬಂಧವನ್ನೂ ತಿಳಿಸಿದೆ.

(4) ನಾಲ್ಕನೆಯ ಪ್ರಶ್ನೆಯಾದ—**ಪೃಚ್ಛಾಮಿ ವಾಚಃ ಪರಮಂ ವ್ಯೋಮ** । ಸಕಲ ವ್ಯವಹಾರಗಳಿಗೂ ಕಾರಣವಾದ ವಾಕ್ಕಿನ ಪರಮಸ್ಥಾನವಾವುದು ಎಂಬುದಕ್ಕೆ— **ಬ್ರಹ್ಮಾಯಂ ವಾಚಃ ಪರಮಂ ವ್ಯೋಮ** । **ಮಂತ್ರಾದಿರೂಪಾಯಾಃ ವಾಚಃ ಪ್ರಜಾಪತಿರೇವ ಉತ್ಕೃಷ್ಟಂ ರಕ್ಷಕಂ ಸ್ಥಾನಂ । ತಸ್ಮೈವ ಉತ್ಪತ್ತೇಸ್ತಸ್ಮೈವ ಪರ್ಯವಸಾನಾಚ್ಚ ॥** ಮಂತ್ರಾದಿರೂಪವಾದ ವಾಕ್ಕಿಗೆ ಪ್ರಜಾಪತಿಯೇ (ಬ್ರಹ್ಮನೇ) ಉತ್ಪತ್ತಿಸ್ಥಾನವೂ, ಅವನೇ ಪರ್ಯವಸಾನವೂ (ಅಂತ್ಯವೂ) ಆಗಿರುವುದರಿಂದ ಅವನೇ ವ್ಯೋಮವು (ಸ್ಥಾನವು) ಎಂದು ತಿಳಿಸಿದೆ. ಇಲ್ಲಿ

ವ್ಯೋಮಶಬ್ದಕ್ಕೆ ಉತ್ಕೃಷ್ಟಂ ರಕ್ಷಕಂ ಸ್ಥಾನಂ । ಅತಿಶಯವಾದುದೂ ರಕ್ಷಕವೂ, ಆದ ಆಧಾರ (ಆಶ್ರಯ) ಸ್ಥಾನ ವೆಂದು ಅರ್ಥಮಾಡಿದ್ದಾರೆ.

ವ್ಯೋಮಶಬ್ದವು ನಿರುಕ್ತದಲ್ಲಿ ಅಂತರಿಕ್ಷನಾಮಗಳಲ್ಲಿ (ನಿ. ೨-೧೦) ಪಠಿತವಾಗಿದೆ. ವ್ಯಾಪಿಸು, ಆಚ್ಛಾದಿಸು ಎಂಬರ್ಥವುಳ್ಳ ವ್ಯೆಞ್ ಧಾತುವಿನಿಂದ ವ್ಯೋಮಶಬ್ದವು ನಿಷ್ಪನ್ನವಾಗಿದೆ. ಸರ್ವವ್ಯಾಪಕವಾದ ಅಂತರಿಕ್ಷವೆಂದರ್ಥ. ಇದಲ್ಲದೆ ರಕ್ಷಣಾರ್ಥವಾದ ಅವ ಧಾತುವಿಗೆ ವಿ ಎಂಬ ಉಪಸರ್ಗವು ಸೇರಿ ವ್ಯೋಮಪದವು ನಿಷ್ಪನ್ನವಾಗಬಹುದು. ನಾನಾವಿಧ ರಕ್ಷಣೆಗಳಿಂದ ಕೂಡಿದ ಸ್ಥಾನವೆಂದು ಅರ್ಥವಾಗುತ್ತದೆ. ಇದೇ ಅರ್ಥದಲ್ಲಿ—

ಋತೇನ ಋತಂ ಧರುಣಂ ಧಾರಯಂತ ಯಜ್ಞಸ್ಯ ಶಾಕೇ ಪರಮೇ ವ್ಯೋಮನ್ ।
ದಿವೋ ಧರ್ಮನ್ಧರುಣೇ ಸೇದುಷೋ ನೃಞ್ಜಾತೈರಜಾತಾ ಅಭಿ ಯೇ ನನಕ್ಷುಃ ॥

(ಋ- ಸಂ. ೫-೧೫-೨)

ಎಂಬಲ್ಲಿಯೂ ಸಹ ಉತ್ತರವೇದಿಗೆ ಈ ಪದವು ವಿಶೇಷಣವಾಗಿ ಉಪಯೋಗಿಸಲ್ಪಟ್ಟಿದೆ.

ವ್ಯೋಮಸದಿತ್ಯೇಷ ವೈ ವ್ಯೋಮಸದ್ಯೋ ಮ ವಾ ಏತತ್ಸದ್ಮಾನಾಂ ಯಸ್ಮಿನ್ನೇಷ ಆಸನ್ನಸ್ತಪತಿ ॥

(ಐ. ಬ್ರಾ. ೪-೨೦)

ಎಂಬ ಐತರೇಯಬ್ರಾಹ್ಮಣದ ವಾಕ್ಯದಲ್ಲಿಯೂ ರಕ್ಷಣಾಸ್ಥಾನ ಅಥವಾ ಆಧಾರಸ್ಥಾನ ಎಂಬರ್ಥದಲ್ಲಿ ಈ ಪದದ ಪ್ರಯೋಗವಿರುವುದು.

ಪ್ರಜಾಪತಿಯು(ಬ್ರಹ್ಮನು)ವಾಕ್ಕಿಗೆ ಆಧಾರ ಅಥವಾ ರಕ್ಷಣಾಸ್ಥಾನವಾಗಿರುವುದು ಹೇಗೆಂದರೆ, ಅವನೇ ಅದರ ಉತ್ಪತ್ತಿಗೂ, ಅದರ ಪರ್ಯವಸಾನಕ್ಕೂ (ಅಂತ್ಯ ಅಥವಾ ನಾಶ) ಕಾರಣನು ಎಂದು ಸಾಯಣರು ಆಧ್ಯಾತ್ಮರೂಪವಾದ ಅರ್ಥವನ್ನು ಹೇಳಿದಾರೆ. ಪರಬ್ರಹ್ಮನಿಗೂ ವಾಕ್ಕಿಗೂ ತಾದಾತ್ಮ್ಯವನ್ನೇ ಹೇಳಿ ಲೋಕದ ಸಕಲ ವ್ಯವಹಾರಗಳೂ ವಾಕ್ಕಿನ ಆಧಾರದ ಮೇಲೆಯೇ ನಡೆಯುತ್ತವೆ ಮತ್ತು ಈ ವಾಕ್ಕಿಗೆ ಪರಬ್ರಹ್ಮನೇ ಆಧಾರನು. ಅವನ ತತ್ತ್ವವನ್ನೇ ಇದು ಬಾಹ್ಯವಾಗಿ ಪ್ರಕಾಶಗೊಳಿಸುತ್ತದೆ ಎಂಬ ವಿಷಯವನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ಈರೀತಿ ತಿಳಿಸಿದೆ—

ಜನಕೋ ಹ ವೈದೇಹ ಆಸಾಂಚಕ್ರೇ೨ಥ ಹ ಯಾಜ್ಞವಲ್ಕ್ಯ ಆವವ್ರಾಜ ತಂ ಹೋವಾಚ ಯಾಜ್ಞವಲ್ಕ್ಯ ಕಿಮರ್ಥಮಚಾರೀಃ ಪಶೂನಿಚ್ಛನ್ನನ್ವಂತಾನೀತಿ । ಉಭಯಮೇವ ಸಮ್ರಾಡಿತಿ ಹೋವಾಚ ॥

(ಬೃ. ಉ. ೪-೧)

ಜನಕವೈದೇಹನು ತನ್ನ ಆಸ್ಥಾನದಲ್ಲಿ ಕುಳಿತಿರುವಾಗ ಅವನಲ್ಲಿಗೆ ಯಾಜ್ಞವಲ್ಕ್ಯನೆಂಬ ಋಷಿಯು ಬಂದನು. ಆಗ ಜನಕನು ಅವನನ್ನು ಕುರಿತು—ನೀನು ಬಂದ ಉದ್ದೇಶವೇನು ? ಪಶುವನ್ನು (ಪಶುರೂಪವಾದ ಸಂಪತ್ತು ಎಂದರೆ ದ್ರವ್ಯ) ಪಡೆಯಲು ಬಂದೆಯಾ ? ಅಥವಾತಾತ್ತ್ವಿಕವಾದ ಚರ್ಚೆಯನ್ನು ನಡೆಸಲು ಬಂದೆಯಾ ? ಎಂದು ಕೇಳಲು, ಯಾಜ್ಞವಲ್ಕ್ಯನು ಎಲೈ ಪ್ರಭುವೇ, ನಾನು ಎರಡನ್ನೂ ಉದ್ದೇಶಿಸಿ ಬಂದಿರುವೆನು ಎಂದು ಹೇಳಿದನು.

ಯತ್ತೇ ಕಶ್ಚಿದಬ್ರವೀತ್ತಚ್ಛೃಣವಾಮೋತ್ಯಬ್ರವೀನ್ನೋ ಜಿಹ್ವಾ ಶೈಲಿನಿರ್ವಾಗ್ವೈ ಬ್ರಹ್ಮೇತಿ ಯಥಾ ಹೂತ್ಯೈವಾನ್ ಪಿತೃಮಾನಾಚಾರ್ಯವಾನ್ ಬ್ರೂಯಾತ್ತಥಾ ತಚ್ಛೈಲನಿರಬ್ರವೀದ್ವಾಗ್ವೈ ಬ್ರಹ್ಮೇತ್ಯವದತೋ ಹಿ ಕಿಂ ಸ್ಯಾದಿತ್ಯಬ್ರವೀತ್ತು ತೇ ತಸ್ಮಾಯತನಂ ಪ್ರತಿಷ್ಠಾಂ ನ ವೇತ್ಯಬ್ರವೀದಿತ್ಯೇಕಪಾದ್ವಾ ಏತತ್ಸಮ್ರಾಡಿತಿ ಸ ವೈ ನೋ ಬ್ರೂಹಿ ಯಾಜ್ಞವಲ್ಕ್ಯ ॥

(ಬೃ. ಉ. ೪-೧)

ಈ ತತ್ತ್ವದ ವಿಷಯದಲ್ಲಿ ನಿನಗೆ ತಿಳಿದುದನ್ನು ಅಥವಾ ನೀನು ಇತರರಿಂದ ತಿಳಿದುಕೊಂಡಿರುವುದನ್ನು ವಿವರಿಸು ಎಂದು ಜನಕನನ್ನು ಯಾಜ್ಞವಲ್ಕ್ಯನು ಪ್ರಶ್ನಿಸಿದನು. ಅದಕ್ಕೆ ಉತ್ತರವಾಗಿ ಜನಕನು—ವಾಕ್ಕೇ ಬ್ರಹ್ಮನೆಂದು ಶೈಲಿನಿಯು ಹೇಳಿದನು ಎಂದು ತಿಳಿಸಿದನು. ಯಾಜ್ಞವಲ್ಕ್ಯನು ಅದನ್ನು ಒಪ್ಪಿ ಅದರಲ್ಲಿ ಸತ್ಯದ ಒಂದಂಶವನ್ನು ಮಾತ್ರ ಹೇಳಿದಂತಾಯಿತು. ಆದರೆ ಆ ವಾಗ್ರೂಪವಾದ ಬ್ರಹ್ಮನಿಗೆ ಆಯತನವಾದುದು ಮತ್ತು ಪ್ರತಿಷ್ಠೆ (ಆಧಾರಸ್ಥಾನ) ಯಾವುದು ಎಂಬುದನ್ನು ಹೇಳಿದನೇ ಎಂದು ಕೇಳಲು, ಅವನು ಅದನ್ನು ಹೇಳಲಿಲ್ಲವೆಂದು ಜನಕನು ತಿಳಿಸಿದನು. ಆಗ ಯಾಜ್ಞವಲ್ಕ್ಯನು ಈ ಬ್ರಹ್ಮನಿಗೆ ಏಕಪಾದಮಾತ್ರವಿರುತ್ತದೆ ಎಂದನು. ಅದು ಹೇಗೆಂದು ವಿವರಿಸಬೇಕೆಂದು ಜನಕನು ಕೇಳಿದಾಗ ಯಾಜ್ಞವಲ್ಕ್ಯನು ಈರೀತಿ ವಿವರಿಸಿದ್ದಾನೆ—

ವಾಗೇವಾಯತನಮಾಕಾಶಃ ಪ್ರತಿಷ್ಠಾ ಪ್ರಜ್ಞೇತ್ಯೇತದುಪಾಸೀತ ।

ವಾಗ್ರೂಪಿಯಾದ ಈ ಬ್ರಹ್ಮನಿಗೆ ಜಿಹ್ವೆಯೇ ಆಯತನವು, ಆಕಾಶವೇ ಪ್ರತಿಷ್ಠಾಸ್ಥಾನವು. ಇದನ್ನೇ ಪ್ರಜ್ಞೆಯೆಂದು ತಿಳಿದು ಉಪಾಸನೆಮಾಡಬೇಕು ಎಂದಾಗ,

ಕಾ ಪ್ರಜ್ಞತಾ ಯಾಜ್ಞವಲ್ಕ್ಯ । ವಾಗೇವ ಸಮ್ರಾಡಿತಿ ಹೋವಾಚ । ವಾಚಾ ವೈ ಸಮ್ರಾಡ್ಬಂಧುಃ ಪ್ರಜ್ಞಾಯತ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ ಇತಿಹಾಸಃ ಪುರಾಣಂ ವಿದ್ಯಾ ಉಪನಿಷದಃ ಶ್ಲೋಕಾಃ ಸೂತ್ರಾಣ್ಯನುವ್ಯಾಖ್ಯಾನಾನಿ ವ್ಯಾಖ್ಯಾನಾನೀಷ್ಟಂ ಹುತಮಾಶಿತಂ ಪಾಯಿತಮಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ವಾಚೈವ ಸಮ್ರಾಟ್ ಪ್ರಜ್ಞಾಯಂತೇ ವಾಗ್ವೈ ಸಮ್ರಾಟ್ ಪರಮಂ ಬ್ರಹ್ಮ ನೈನಂ ವಾಗ್ಜಹಾತಿ ಸರ್ವಾಣ್ಯೇನಂ ಭೂತಾನ್ಯಭಿ ರಕ್ಷಂತಿ ದೇವೋ ಭೂತ್ವಾ ದೇವಾನಪ್ಯೇತಿ ಯ ಏವಂ ವಿದ್ವಾನೇತದುಪಾಸ್ತೇ ॥

(ಬೃ. ಉ. ೪-೧)

ಜನಕನು ಆ ಪ್ರಜ್ಞೆಯ ಸ್ವರೂಪವೇನೆಂದು ಕೇಳಿದನು. ಅದಕ್ಕೆ ಯಾಜ್ಞವಲ್ಕ್ಯನು ಈರೀತಿ ಉತ್ತರವಿತ್ತನು—ವಾಕ್ಕೇ ಈ ಜ್ಞಾನವು, ಇದೇ ಬಂಧುವು, ಇದೇ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಇತಿಹಾಸ ಪುರಾಣಾದಿಗಳು, ಅವುಗಳ ವ್ಯಾಖ್ಯಾನುವ್ಯಾಖ್ಯಾನಗಳು, ಯಜ್ಞಾಹುತಿಗಳು, ಈ ಲೋಕತತ್ತ್ವ, ಪರಲೋಕತತ್ತ್ವ, ಮುಂತಾದ ಸಮಸ್ತವೂ ಸಹ ಈ ವಾಕ್ಕಿನ ಸಹಾಯದಿಂದಲೇ ತಿಳಿಯಲ್ಪಡುತ್ತವೆ. ವಾಕ್ಕಿನಿಂದಲೇ ಬ್ರಹ್ಮವೂ ತಿಳಿಯಲ್ಪಡುತ್ತದೆ. ವಾಕ್ಕೇ ಪರಬ್ರಹ್ಮವು. ಈ ತಾತ್ತ್ವಿಕಜ್ಞಾನದಿಂದ ಯಾರು ವಾಗ್ರೂಪಿಯಾದ ಬ್ರಹ್ಮವನ್ನು ಆರಾಧಿಸುತ್ತಾರೆಯೋ ಅವರನ್ನು ವಾಕ್ಕು ತ್ಯಜಿಸುವುದಿಲ್ಲ. ಅವನೂ ಸಹ ದೇವತ್ವವನ್ನು ಪಡೆಯುತ್ತಾನೆ. ಇತ್ಯಾದಿಯಾಗಿ **ಬ್ರಹ್ಮಾಯಂ ವಾಚಃ ಪರಮಂ ವ್ಯೋಮ ।** ಎಂಬ ವಾಕ್ಯದಲ್ಲಿ ಹೇಳಿರುವ ಅಂಶವನ್ನು ವಿವರಿಸಿದ್ದಾರೆ. ಎಂದರೆ ವಾಕ್ಕಿಗೂ ಪರಬ್ರಹ್ಮಕ್ಕೂ ತಾದಾತ್ಮ್ಯವನ್ನೇ ಹೇಳಿದ್ದಾರೆ. ಇದನ್ನೇ ಶತಪಥಬ್ರಾಹ್ಮಣದಲ್ಲಿಯೂ ಸಹ,

ವಾಚಸ್ಪತಿರ್ವಾಚಂ ನಃ ಸ್ವದತು ಸ್ವಾಹೇತಿ ಪ್ರಜಾಪತಿರ್ವೈ ವಾಚಸ್ಪತಿಃ ।

(ಶ. ಬ್ರಾ. ೫-೧-೧-೧೬)

ಇತ್ಯಾದಿ ವಾಕ್ಯಗಳಿಂದ ತಿಳಿಸಿದೆ ಮತ್ತು ಸೃಷ್ಟಿಯ ಕ್ರಮವನ್ನು ವಿವರಿಸುವಾಗ ಪರಬ್ರಹ್ಮವು ವಾಗ್ರೂಪದಲ್ಲಿ ತನ್ನನ್ನು ಪ್ರಕಾಶಪಡಿಸಿದನು ಎಂಬ ವಿವರಣೆಯಲ್ಲಿಯೂ ಸಹ ವ್ಯಕ್ತಿಗೂ ಬ್ರಹ್ಮಕ್ಕೂ ಇರುವ ಆಧಾರಾಧೇಯ ಭಾವವನ್ನು ತಿಳಿಯಬಹುದು.

ಪ್ರಜಾಪತಿಃ ಪ್ರಜಾ ಅಸೃಜತ । ತಾಃ ಸೃಷ್ಟಾಃ ಸಮಶ್ಲಿಷ್ಯನ್ । ತಾ ರೂಪೇಣಾನುಪ್ರಾವಿಶತ್ । ತಸ್ಮಾದಾಹುಃ । ರೂಪಂ ವೈ ಪ್ರಜಾಪತಿರಿತಿ । ತಾ ನಾಮ್ನಾನುಪ್ರಾವಿಶತ್ । ತಸ್ಮಾದಾಹುಃ । ನಾಮ ವೈ ಪ್ರಜಾಪತಿರಿತಿ ॥

(ತೈ. ಬ್ರಾ. ೩-೨-೭-೧)

ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನಂತರ ಅವೆಲ್ಲವೂ ಪರಸ್ಪರವಾದ ವ್ಯಕ್ತಿತ್ವವನ್ನು ತೋರಿಸದೆ ಸಂಶ್ಲಿಷ್ಟವಾದವು. ಆಗ ಅವುಗಳ ವಿಶೇಷ ಧರ್ಮಗಳನ್ನು ತೋರಿಸುವುದಕ್ಕಾಗಿ ನಾಮ (ಹೆಸರು) ಮತ್ತು ರೂಪ (ಆಕಾರ) ಇವೆರಡನ್ನೂ ಸೃಷ್ಟಿಸಿದನು. ರೂಪವು ಮಾನಸಿಕವಾದ ವಿಭಜನೆಗೂ ನಾಮವು ವಾಗ್ರೂಪವಾದ ವಿಭಜನೆಗೂ ಸಹಾಯವಾಯಿತೆಂದು ತಿಳಿಸಿದೆ. ಶತಪಥಬ್ರಾಹ್ಮಣದಲ್ಲಿಯೂ,

ಮರ್ತ್ಯಾ ಹ ವಾ ದೇವಾ ಆಸುಃ । ಸ ಯೇದೈವ ತೇ ಬ್ರಹ್ಮಣಾಪುರಥಾಮೃತಾ ಆಸುಃ ಸ ಯೇಂ ಮನಸ ಆಘೂರಯತಿ ಮನೋ ವೈ ರೂಪಂ ಮನಸಾ ಹಿ ವೇದೇದಗ್ಂ ರೂಪಮಿತಿ ತೇನ ರೂಪಮಾಪ್ನೋತ್ಯಥ ಯಂ ವಾಚ ಆಘೂರಯತಿ ವಾಗ್ವೈ ನಾಮ ವಾಚಾ ಹಿ ನಾಮ ಗೃಹ್ಣಾತಿ ತೇನ ನಾಮಾಪ್ನೋತ್ಯೇತಾವದ್ವಾ ಇದಗ್ಂ ಸರ್ವಂ ಯಾವದ್ರೂಪಂ ಚೈವ ನಾಮ ಚ ತತ್ಸರ್ವಮಾಪ್ನೋತಿ ॥

(ಶ. ಬ್ರಾ. ೧೧-೨-೩-೬)

ಎಂದು ಹೇಳಿದೆ. ಪ್ರಾರಂಭದಲ್ಲಿ ದೇವತೆಗಳು ಮರ್ತ್ಯರಾಗಿದ್ದರು ಎಂದರೆ ಅವರೂ ಮರಣಕ್ಕೀಡಾಗುತ್ತಿದ್ದರು. ಅವರು ಬ್ರಹ್ಮನನ್ನು ಸಾಕ್ಷಾತ್ಕರಿಸಿ ಅಮೃತತ್ವವನ್ನು (ಮರಣವಿಲ್ಲದಿರುವುದನ್ನು) ಪಡೆದರು. ಆ ಬ್ರಹ್ಮನಿಗೆ ನಾಮ ಮತ್ತು ರೂಪಗಳೆಂಬ ಎರಡು ರೂಪಗಳು. ರೂಪವು ಮನಸ್ಸಿಗೆ ಮಾತ್ರ ಗೋಚರವಾಗುವ ತತ್ತ್ವವು. ಆದುದರಿಂದ ಮಾನಸಿಕವಾದ ಆಘೂರದಿಂದ ವಾಗಾತ್ಮಕವಾದ ಬ್ರಹ್ಮವನ್ನರಿಯುತ್ತಾನೆ. ಮನೋರೂಪವಾದುದೂ, ವಾಗ್ರೂಪವಾದುದೂ ಆದ ಈ ಬ್ರಹ್ಮತತ್ತ್ವವನ್ನರಿಯುವುದರಿಂದ ಮಾನವನೂ ಸಹ ಬ್ರಹ್ಮತ್ವವನ್ನು ಎಂದರೆ ಅಮೃತತ್ವವನ್ನು ಪಡೆಯುತ್ತಾನೆ ಎಂದು ವಾಕ್ಯಕ್ಕೂ ಬ್ರಹ್ಮನಿಗೂ ಇರುವ ಸಂಬಂಧವನ್ನು ತಿಳಿಸಿದೆ.

ಈ ರೀತಿಯಾಗಿ ಪರಬ್ರಹ್ಮನಿಗೆ ಸಂಬಂಧಪಟ್ಟ ಯಾವ ತತ್ತ್ವವನ್ನಾದರೂ ಯಜ್ಞಕಾಲದಲ್ಲಿ ಜಿಜ್ಞಾಸೆ ಮಾಡುವುದಕ್ಕೆ ಬ್ರಹ್ಮೋದ್ಯವೆಂದು ಹೆಸರು. ತೈತ್ತಿರೀಯಬ್ರಾಹ್ಮಣದಲ್ಲಿಯೂ ಸಹ ಬ್ರಹ್ಮೋದ್ಯಕ್ಕಾಗಿ ಚರ್ಚಿಸಲ್ಪಡಬೇಕಾದ ಪ್ರಶ್ನೆಗಳೂ ಉತ್ತರಗಳೂ ಇವೆ.

ಪ್ರಶ್ನೆ—**ಕಿಗ್ಂಸ್ವಿದಾಸೀತ್ಪೂರ್ವಚಿತ್ತಿರಿತ್ಯಾಹ**

ಉತ್ತರ—**ದ್ಯೌರ್ವೈ ವೃಷ್ಟಿಃ ಪೂರ್ವಚಿತ್ತಿಃ**

ಪ್ರಶ್ನೆ—ಕಿಗ್ಂ ಸ್ವಿದಾಸೀದ್ಬೃಹದ್ವಯೆ ಇತ್ಯಾಹ
ಉತ್ತರ—ಅಶ್ವೋ ವೈ ಬೃಹದ್ವಯಃ
ಪ್ರಶ್ನೆ—ಕಿಗ್ಂ ಸ್ವಿದಾಸೀತ್ಪಿಶಂಗಿಲೇತ್ಯಾಹ
ಉತ್ತರ—ರಾತ್ರಿರ್ವೈ ಪಿಶಂಗಿಲಾ
ಪ್ರ—ಕಿಗ್ಂ ಸ್ವಿದಾಸೀತ್ಪಿಲಿಪ್ಪಿಲೇತ್ಯಾಹ
ಉ—ಶ್ರೀರ್ವೈ ಪಿಲಿಪ್ಪಿಲಾ
ಪ್ರ—ಕಃ ಸ್ವಿದೇಕಾಕೀ ಚರತೀತ್ಯಾಹ
ಉ—ಅಸೌ ವಾ ಆದಿತ್ಯ ಏಕಾಕೀ ಚರತಿ
ಪ್ರ—ಕ ಉ ಸ್ವಿಜ್ಜಾಯತೇ ಪುನರಿತ್ಯಾಹ
ಉ—ಚಂದ್ರಮಾ ವೈ ಜಾಯತೇ ಪುನಃ
ಪ್ರ—ಕ್ವೆಗ್ ಸ್ವಿದ್ಭಿಷಮಸ್ಯ ಭೇಷಜಮಿತ್ಯಾಹ
ಉ—ಅಗ್ನಿರ್ವೈ ಹಿಮಸ್ಯ ಭೇಷಜಂ
ಪ್ರ—ಕಿಗ್ ಸ್ವಿದಾವಪನಂ ಮಹದಿತ್ಯಾಹ
ಉ—ಅಯಂ ವೈ ಲೋಕ ಆವಪನಂ ಮಹತ್
ಪ್ರ—ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾ ಇತ್ಯಾಹ
ಉ—ವೇದಿರ್ವೈ ಪರೋಽನ್ತಃ ಪೃಥಿವ್ಯಾಃ
ಪ್ರ—ಪೃಚ್ಛಾಮಿ ತ್ವಾ ಭುವನಸ್ಯ ನಾಭಿಮಿತ್ಯಾಹ
ಉ—ಯಜ್ಞೋ ವೈ ಭುವನಸ್ಯ ನಾಭಿಃ
ಪ್ರ—ಪೃಚ್ಛಾಮಿ ತ್ವಾ ವೃಷ್ಣೋ ಅಶ್ವಸ್ಯ ರೇತ ಇತ್ಯಾಹ
ಉ—ಸೋಮೋ ವೈ ವೃಷ್ಣೋ ಅಶ್ವಸ್ಯ ರೇತಃ
ಪ್ರ—ಪೃಚ್ಛಾಮಿ ವಾಚಃ ಪರಮಂ ವ್ಯೋಮೇತ್ಯಾಹ
ಉ—ಬ್ರಹ್ಮೈವ ವಾಚಃ ಪರಮಂ ವ್ಯೋಮ

(ತೈ. ಬ್ರಾ. ೩-೯-೫-೨ ರಿಂದ ೬)

ಬ್ರಹ್ಮೋದ್ಯದಲ್ಲಿ ಬ್ರಹ್ಮವಿಷಯಕವಾದ ಯಾವ ಚರ್ಚೆ ಬೇಕಾದರೂ ನಡೆಯಬಹುದು. ಮೇಲೆ ಹನ್ನೆರಡು ಪ್ರಶ್ನೆಗಳೂ ಅವುಗಳಿಗೆ ಉತ್ತರಗಳೂ ಉಕ್ತವಾಗಿವೆ. ಕೊನೆಯ ನಾಲ್ಕು ಪ್ರಶ್ನೆಗಳನ್ನೂ ಅವುಗಳ ಉತ್ತರವನ್ನೂ ನಾವು ಇದುವರೆಗೆ ವಿಸ್ತಾರವಾಗಿ ವಿವರಿಸಿದ್ದೇವೆ. ಇದೇ ರೀತಿ ಇತರ ಪ್ರಶ್ನೆಗಳಿಗೂ ಉತ್ತರವನ್ನು ವಿಮರ್ಶೆ ಮಾಡಬಹುದು ಮತ್ತು ಇಂತಹ ಅನೇಕ ವಿಷಯಗಳು ವಿಮರ್ಶಾರ್ಹವಾಗಿರುವುವು. ಅವೆಲ್ಲವನ್ನೂ ಇಲ್ಲಿ ವಿಮರ್ಶೆ ಮಾಡುವುದು ಸಾಧ್ಯವಿಲ್ಲ ಮತ್ತು ಅಪ್ರಕೃತ. ಮತ್ತು ಅಲ್ಲಿಯೇ,

ತೇಜಸಾ ವಾ ಏಷ ಬ್ರಹ್ಮವರ್ಚಸೇನ ವ್ಯೃಧ್ಯತೇ । ಯೋಽಶ್ವಮೇಧೇನ ಯಜತೇ । ಹೋತಾ ಚ ಬ್ರಹ್ಮಾ ಚ ಬ್ರಹ್ಮೋದ್ಯಂ ವದತಃ ॥

(ತೈ. ಬ್ರಾ. ೩-೯-೫-೧)

ಹೇಳಿದೆ ಎಂದರೆ ಈ ಬ್ರಹ್ಮೋದ್ಯವಿಷಯವಾದ ಚರ್ಚೆಯಲ್ಲಿ ಹೋತೃವೆಂಬ ಋತ್ವಿಜನೂ ಬ್ರಹ್ಮನೆಂಬ ಋತ್ವಿಜನೂ ಭಾಗವಹಿಸುತ್ತಾರೆ ಎಂದಿದೆ. ಏಕೆಂದರೆ ಋತ್ವಿಕ್ಕುಗಳಲ್ಲೆಲ್ಲಾ ಅವರಿಬ್ಬರೇ ಹೆಚ್ಚು ತಿಳುವಳಿಕೆಯುಳ್ಳವರೆಂದೂ ಇಂತಹ ಉತ್ತಮವರ್ಗದ ಚರ್ಚೆಯನ್ನು ನಡೆಸಲು ಸಾಮಾನ್ಯರಿಗೆ ಶಕ್ಯವಲ್ಲವೆಂಬ ತಿಳಿಸುವುದಕ್ಕಾಗಿಯೂ ಇತರ ಋತ್ವಿಕ್ಕುಗಳಿಗಿಂತ ಅವರಿಗೆ ಗೌರವಪ್ರಶಸ್ತಿಗಳು ಹೆಚ್ಚಾಗಿರುವವೆಂದೂ ತಿಳಿಯಪಡಿಸುವುದಕ್ಕಾಗಿಯೇ ಇಲ್ಲಿ **ಹೋತಾ ಚ ಬ್ರಹ್ಮಾ ಚ** ಎಂದು ಹೋತೃ ಮತ್ತು ಬ್ರಹ್ಮನ ಹೆಸರನ್ನು ಮಾತ್ರ ಸೂಚಿಸಿದೆ. ಇತರ ಋತ್ವಿಕ್ಕುಗಳು ಯಜಮಾನ ಮುಂತಾದವರು ಇಂತಹ ವಿಷಯಗಳನ್ನು ಚರ್ಚಿಸಲು ಸಮರ್ಥರಾಗಿದ್ದಲ್ಲಿ ಅವರೂ ಸಹ ಇದರಲ್ಲಿ ಭಾಗವಹಿಸಲು ಯಾವ ನಿರ್ಬಂಧವೂ ಇರುವುದಿಲ್ಲ.

ಸಂಹಿತಾಪಾಠಃ

ये॑ ते॑ विप्र ब्रह्म॒कृ॑तः सु॒ते॑ सचा॒ वसू॑नां च॒ वसु॑नश्च दा॒वने॑।
प्र ते॑ सु॒म्नस्य॒ मन॑सा प॒था भु॒वन्मदे॑ सु॒तस्य॒ सोम्य॑स्यान्ध॑सः ॥

ಪದಪಾಠಃ

ये॑ । ते॒ । विप्र॑ । ब्रह्म॒ऽकृ॑तः । सु॒ते॑ । सचा॑ । वसू॑नां । च॒ । वसु॑नः । च॒ । दा॒वने॑ ॥
प्र । ते॒ । सु॒म्नस्य॑ । मन॑सा । प॒था । भु॒वन् । मदे॑ । सु॒तस्य॑ । सोम्य॑स्य । अन्ध॑सः ॥२॥

ಸಾಯಣಭಾಷ್ಯಂ

हे विप्र मेधाविन्निन्द्र ते तुभ्यं ये ब्रह्मकृतः स्तोत्रकृतो हविष्कर्तारो वा स्तोतारः सचा संघीभूताः सुते सोमेऽभिषुते वसूनां बहूनां धनानां वसुनश्चैकस्य निवासयोग्यस्य धनस्य च दावने दानाय परिचरन्तीति शेषः। अत्र वसूनामिति बहुवचनेनैहिकभोगसाधनानि धनान्यभिप्रेतानि। एकवचनान्तेन च निवासयोग्यं स्वर्गाख्यं धनमभिप्रेतमित्यवगन्तव्यं। तेऽनुष्ठातारः सुम्नस्य सुखस्य लाभाय मनसा पथा मनोमार्गेण। स्तोत्रवर्त्मनेत्यर्थः। प्र भुवन्। प्रभवन्तु। उक्तवसुदानाय योग्या भवन्तीत्यर्थः। कदेति उच्यते। सुतस्याभिषुतस्य सोम्यस्य सोमसंबन्धिनोऽन्धसोऽन्नस्य मदे सति ॥

ಪ್ರತಿಪದಾರ್ಥ

विप्र—ಮೇಧಾವಿಯಾದ ಎಲೈ ಇಂದ್ರನೇ। **ते**—ನಿನಗಾಗಿ। **ये ब्रह्मकृतः**—ಸ್ತೋತ್ರ ಮಾಡುತ್ತಿರುವ ಅಥವಾ ಹೋಮವನ್ನಾಡುತ್ತಿರುವ ಯಾವ ಋತ್ವಿಗ್ಯಜಮಾನರಾದಿ ಪುರುಷರಿರುವರೋ। **सचा**—

ಅವರೆಲ್ಲರೂ ಸೇರಿ । **ಸುತೇ**—ಸೋಮರಸವು ಹಿಂಡಲ್ಪಟ್ಟಮೇಲೆ । **ವಸೂನಾಂ**—ಬಹಳವಾದ ಐಹಿಕವಸ್ತುಗಳ ನ್ನೊಳಗೊಂಡ ಮತ್ತು । **ವಸುನಶ್ಚ**—ಒಬ್ಬ ಮನುಷ್ಯನಿಗೆ ಮಾತ್ರ ಬೇಕಾಗುವ ಸ್ವರ್ಗಾಖ್ಯವಾದ ಧನದ । **ದಾವನೇ**—ಲಾಭಕ್ಕಾಗಿ ನಿನ್ನನ್ನು ಉಪಚರಿಸುತ್ತಾರೆ । **ತೇ**—ಆ ಯಜ್ಞಾನುಷ್ಠಾನಕರ್ತರು । **ಸುಮ್ನಸ್ಯ**—ಸುಖಪ್ರಾಪ್ತಿಗಾಗಿ । **ಮನಸಾ ಪಥಾ**—ಮನಸ್ಸಿನಲ್ಲಿಯೇ ಧ್ಯಾನಮಾಡುವ ಸ್ತುತಿರೂಪವಾದ ಮಾರ್ಗದಿಂದ । **ಸುತಸ್ಯ**—ಹಿಂಡಲ್ಪಟ್ಟ । **ಸೋಮ್ಯಸ್ಯ**—ಸೋಮರಸಸಂಬಂಧವಾದ । **ಅಂಧಸಃ**—ಅನ್ನದಿಂದ । **ಮದೇ**—ಇಂದ್ರನು ಹರ್ಷಗೊಂಡಾಗ । **ಪ್ರ ಭುವನ್**—ಮೇಲೆ ಹೇಳಿದ ಧನಾದಿಗಳನ್ನು ಪಡೆಯಲು ಸಮರ್ಥರಾಗುತ್ತಾರೆ.

ಭಾವಾರ್ಥ

ಎಲೈ ಮೇಧಾವಿಯಾದ ಇಂದ್ರನೇ, ನಿನ್ನನ್ನುದ್ದೇಶಿಸಿ ಸ್ತೋತ್ರಮಾಡುತ್ತಿರುವ ಅಥವಾ ಯಜ್ಞಾನುಷ್ಠಾನ ಮಾಡುತ್ತಿರುವ ಋತ್ವಿಗ್ಯಜಮಾನರಾದಿ ಪುರುಷರೆಲ್ಲರೂ ಸೇರಿ ಸೋಮರಸವು ಹಿಂಡಲ್ಪಟ್ಟಮೇಲೆ ಐಹಿಕಧನಗಳ ಮಸ್ತು ಸ್ವರ್ಗಾಖ್ಯಸುಖದ ಪ್ರಾಪ್ತಿಗಾಗಿ ನಿನ್ನನ್ನು ಉಪಚರಿಸುತ್ತಾರೆ. ಹಿಂಡಲ್ಪಟ್ಟ ಸೋಮರಸದಿಂದ ಇಂದ್ರನು ಹರ್ಷ ಗೊಂಡಾಗ ಆ ಸ್ತುತಿಕರ್ತರು ಮನಸ್ಸಿನಲ್ಲಿಯೇ ಸ್ತೋತ್ರಮಾಡುತ್ತಾ ತಾವು ಅಪೇಕ್ಷಿಸುವ ಧನಾದಿಗಳನ್ನೂ ಸುಖವನ್ನೂ ಇಂದ್ರನಿಂದ ಪಡೆಯಲು ಸಮರ್ಥರಾಗುತ್ತಾರೆ.

English Translation

Sage Indra, the reciters of pious hymns to you who assembled together when (the Soma) is effused, (worship you) for the donation of riches and treasures : may they be competent (to acquire) your felicity by the pathway of the mind ; when you are exhilarated with the effused Soma food.

ಐವತ್ತೊಂದನೆಯ ಸೂಕ್ತ

ಪೀಠಿಕೆ

ಈ ಸೂಕ್ತಕ್ಕೂ ಮುಂದಿನ ಎರಡು ಸೂಕ್ತಗಳಿಗೂ (೫೧,೫೨, ೫೩ನೇ ಸೂಕ್ತಗಳು) **ಸೌಚೀಕೋಽಗ್ನಿಃ** ಎಂಬ ಅಗ್ನಿಯು ಋಷಿಯು. ೫೧ ನೇ ಸೂಕ್ತದಲ್ಲಿ ಕಾರಣಾಂತರದಿಂದ ಅಗ್ನಿಯು ದೇವತೆಗಳಿಗೆ ಹವಿಸ್ಸನ್ನು ವಹಿಸುವ ಕಾರ್ಯವನ್ನು ಬಿಟ್ಟು ಓಡಿಹೋಗಿ ನೀರಿನಲ್ಲಿ ಅಡಗಿಕೊಂಡಿದ್ದನೆಂದೂ ದೇವತೆಗಳು ಅವನನ್ನು ಕಂಡು ಪುನಃ ನೀರಿನಿಂದ ಬಂದು ತಮಗೆ ಹವಿಸ್ಸನ್ನು ವಹಿಸುವ ಕಾರ್ಯವನ್ನು ವಹಿಸಬೇಕೆಂದು ಪ್ರಾರ್ಥಿಸಿದ ಸಂಭಾಷಣೆ ಇದೆ. ಅಗ್ನಿಯ ಸಂಬಂಧ ವಾದ ವಿಷಯವನ್ನು ನಾವು ಅಲ್ಲಲ್ಲಿ ವಿಸ್ತಾರವಾಗಿ ವಿವರಿಸಿದ್ದರೂ ಇಲ್ಲಿ ಸಂದರ್ಭಾನುಸಾರ ಸಾಮಾನ್ಯವಿವರಣೆಯನ್ನು ಬರದು ಅನಂತರ ಸೌಚೀಕೋಽಗ್ನಿಯ ವಿಷಯವನ್ನು ವಿವರಿಸುತ್ತೇವೆ.

ಋಕ್ಸಂಹಿತೆಯಲ್ಲಿ ವರ್ಣಿತವಾಗಿರುವ ದೇವತೆಗಳಲ್ಲಿ ಅಗ್ನಿಯೇ ಅತ್ಯಂತ ಪ್ರಧಾನದೇವತೆ. ಇಂದ್ರನ ಸ್ತುತಿವಾಕ್ಯಗಳನ್ನು ಬಿಟ್ಟರೆ ಋಕ್ಸಂಹಿತೆಯಲ್ಲೆಲ್ಲಾ ಅಗ್ನಿಯನ್ನು ಪ್ರಶಂಸಿಸಿ ವರ್ಣಿಸುವ ಸೂಕ್ತಗಳೇ ಅತ್ಯಧಿಕವಾಗಿರುತ್ತವೆ. ೮, ೯ ನೆಯ ಮಂಡಲಗಳನ್ನು ಬಿಟ್ಟರೆ ಉಳಿದ ಎಲ್ಲಾ ಮಂಡಲಗಳೂ ಅಗ್ನಿದೇವತಾಕವಾದ ಸೂಕ್ತದಿಂದಲೇ

ಪ್ರಾರಂಭವಾಗುವುವು. ಆದುದರಿಂದ ಅಗ್ನಿದೇವತೆಯ ವಿಷಯವಾಗಿ ಅವಶ್ಯಕವಾಗಿ ತಿಳಿದುಕೊಳ್ಳಬೇಕಾದ ಕೆಲವು ಸಂಗತಿಗಳನ್ನು ಇಲ್ಲಿ ವಿವರಿಸಲಾಗಿದೆ.

ಅಗ್ನಿಯ ಕರ್ಮಗಳು

ಮಾನವನ ವ್ಯವಹಾರಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಯಜ್ಞಕರ್ಮಗಳೊಂದಿಗೆ ಸಾಕ್ಷಾತ್ಸಂಬಂಧವನ್ನು ಹೊಂದಿರುವುದರಿಂದಲೇ ಅಗ್ನಿಗೆ ಅತ್ಯಂತ ಪ್ರಧಾನವಾದುದೂ, ಪೂಜ್ಯವಾದುದೂ ಆದ ಸ್ಥಾನವಿರುತ್ತದೆ. ಅಗ್ನಿಯ ಪ್ರಧಾನಗುಣವು ಅವನ ಅಮರ್ತ್ಯತ್ವ (೧-೪೪-೬; ೧-೫೮-೧; ೨-೧೦-೧, ೨; ೩-೨-೧; ೩-೩-೧; ೩-೧೧-೨; ೩-೨೭-೫; ೩-೨೭-೨; ೬-೯-೪; ೭-೪-೪; ೮-೬೦-೧೧; ೧೦-೭೯-೧)

ಸ್ವಾಭಾವಿಕವಾಗಿ ಮರಣಧರ್ಮರಹಿತನಾದರೂ ಸಹ; ಅಗ್ನಿಯು ಮಾನವರಿಗೆಲ್ಲಾ ಅನುಕೂಲವಾಗಲೆಂದು ಮರ್ತ್ಯರಾದ ಮಾನವರ ಅನುಗ್ರಹಕ್ಕಾಗಿ ಅವರ ಅತಿಥಿಯಾಗಿ ಅವರೊಂದಿಗೆ ಪೃಥ್ವೀಸ್ಥನಾಗಿರುತ್ತಾನೆ. (೧-೪೪-೪; ೧-೫೮-೬; ೨-೪-೧; ೩-೨-೨; ೪-೧೦-೪; ೫-೧-೮; ೫-೮-೨; ೫-೧೮-೧; ೬-೨-೬; ೬-೧೫-೧; ೬-೧೫-೪; ೮-೪೪-೪; ೮-೪೪-೫; ೧೦-೧-೫; ೧೦-೯೧-೨; ೧೦-೯೨-೧)

ಅಮರ್ತ್ಯನೂ, ಮಾನವರಿಗೆ ಅನುಗ್ರಹಾತ್ಮಕನೂ ಆದ ಅಗ್ನಿಯು ಯಜಮಾನನ ಯಜ್ಞಗೃಹದಲ್ಲಿ ಶಾಶ್ವತನಾದ ಋತ್ವಿಕ್ಕಾಗುತ್ತಾನೆ. **ಪುರೋಹಿತ, ಋತ್ವಿಕ್, ಹೋತೃ, ಬ್ರಹ್ಮ** ಇತ್ಯಾದಿ ವಿಶೇಷಣಗಳಿಂದ ವರ್ಣಿತನಾಗಿದ್ದಾನೆ. ಉಷೋದೇವಿಯೊಡನೆ ಪ್ರಬುದ್ಧನಾಗುವವನೆಂದು ಕೆಲವು ವಾಕ್ಯಗಳಲ್ಲಿಯೂ ಉಷಸ್ಸಿಗಿಂತಲೂ ಪೂರ್ವಭಾವಿಯಾಗಿಯೇ ಆವಿರ್ಭೂತನಾಗುವನೆಂದು ಇನ್ನು ಕೆಲವು ವಾಕ್ಯಗಳಲ್ಲಿಯೂ ಸ್ತುತಿಸಿದೆ. ೧-೧೨ ೧-೧೩-೧; ೧-೧೩-೧, ೪; ೧-೨೬-೨; ೧-೩೬-೩, ೫; ೧-೪೪-೪; ೧-೪೪-೧೨; ೧-೪೫-೩-೭; ೧-೫೮-೧,೬; ೧-೬೦-೪; ೧-೬೮-೪, ೭; ೧-೭೬-೨; ೧-೭೬-೨, ೪; ೧-೭೭-೧; ೧-೭೪-೧೨; ೧-೭೪-೧೩; ೧-೭೪-೧೪; ೨-೫-೧; ೨-೬-೬; ೩-೨-೧; ೩-೬-೬; ೩-೯-೧; ೩-೨-೯; ೩-೧೦-೨, ೭; ೩-೧೧-೧; ೩-೧೪-೪; ೪-೧೦-೪; ೪-೧೧-೨; ೬-೧೫-೧, ೪,೧೬; ೬-೧೬-೧; ೭-೭-೫; ೭-೧೦-೫; ೭-೧೧-೧; ೭-೧೬-೫, ೧೨; ೮-೪೪-೬; ೮-೪೯-೧; ೯-೬೬-೨೦; ೧೦-೧-೬; ೧೦-೯೨-೨)

ದೇವಮಾನವಾದಿಗಳಿಂದೆಲ್ಲಾ ಪ್ರಾರ್ಥಿತನೂ, ನಿಯಮಿತನೂ ಆಗಿ ಸಕಲ ಯಜ್ಞಕರ್ಮಗಳನ್ನೂ ತನ್ನಲ್ಲೇ ಲೀನಮಾಡಿಕೊಳ್ಳುತ್ತಾನೆ. ತಾನೇ ನಿಜವಾದ ಕರ್ಮಕರ್ತನಾಗಿ, ಯಜಮಾನರು, ಅಧ್ವರ್ಯು, ಹೋತೃ, ಪೋತೃ ಇತ್ಯಾದಿ ಬೇರೆಬೇರೆ ಋತ್ವಿಕ್ಕುಗಳಿಗೆ ನಿಯಮಿಸತಕ್ಕ ಸಕಲವಾದ ಯಜ್ಞಕರ್ಮಗಳನ್ನೂ ತಾನೊಬ್ಬನೇ ನಿರ್ವಹಿಸಲು ಸಮರ್ಥನಾಗುತ್ತಾನೆ.

(೧-೯೪-೬: ೨-೧-೨; ೨-೫-೨; ೪-೯-೩, ೪; ೧೦-೨-೧) ಈ ನಿರ್ವಹಣಶಕ್ತಿಯಿರುವುದರಿಂದಲೇ. ಯಜಮಾನರಿಂದ ಈರೀತಿ ಪ್ರಾರ್ಥಿತನಾಗಿದ್ದಾನೆ. ಎಲೈ ಅಗ್ನಿಯೇ, ನೀನು ಹೋತೃಗಳಲ್ಲೆಲ್ಲಾ ಅತ್ಯುತ್ತಮವಾದ ಹೋತೃವಾಗಿದ್ದೀಯೆ. ನೀನು ನಿತ್ಯತರುಣನು. ದೇವತಾತ್ಮರಾದ ಇತರ ಋತ್ವಿಕ್ಕುಗಳೊಡನೆ ಸೇರಿ, ಋತುಕಾಲಾನುಗುಣವಾದ ಕರ್ಮಗಳನ್ನಾಚರಿಸುತ್ತ ಯಜ್ಞಕಾಮರಾದ ದೇವತೆಗಳನ್ನು ಪೂಜಿಸಿ ತೃಪ್ತಿಪಡಿಸು. ಇದೇ ವಿಧವಾಗಿ ಅಗ್ನಿಯ ಮಹದ್ಗುಣಗಳನ್ನು ವರ್ಣಿಸುವ ಇನ್ನೂ ಕೆಲವು ವಾಕ್ಯಗಳನ್ನು ವಿವರಿಸಿ ಕೆಳಗೆ ಉದಾಹರಿಸಲಾಗುತ್ತದೆ.

"ಅಗ್ನಿಯು ಮೇಧಾವಿಯಾದ ಕವಿಯು, ಕವಿಗಳೆಲ್ಲರಲ್ಲಾ ದಿವ್ಯರೂಪನು. **(ಅಸುರೋ ವಿಪಶ್ಚಿತಾಂ)**"

(೩-೩-೪)

"ಇಂತಹ ವಿಪಶ್ಚಿತ್ತಾದ ಅಗ್ನಿಯು ಎಲ್ಲಾ ವಿಧವಾದ ಪೂಜಾಕರ್ಮಗಳನ್ನೂ ಅರಿತಿದ್ದಾನೆ. ಉತ್ತಮನಾದ ನೇತೃವು. ಸುಲಭವಾಗಿ ಸಿದ್ಧಿಯನ್ನು ತರತಕ್ಕವನು. ಸಕಲ ಕರ್ಮಗಳಿಗೂ ರಕ್ಷಕನು. ಭಕ್ತರಿಗೆ ಸುಲಭವಲ್ಲದ ಕರ್ಮಗಳಲ್ಲಿ ಸಹಾಯಮಾಡಿ ಕರ್ಮವನ್ನು ಸಾಂಗಗೊಳಿಸತಕ್ಕವನು."

"ಎಲೈ ಅಗ್ನಿಯೇ, ಯಾವ ಯಜ್ಞವನ್ನು ನೀನು ಸುತ್ತುವರಿದು ನೆರವೇರುವಂತೆ ಮಾಡುತ್ತೀಯೋ ಅದು ಖಂಡಿತ ದೇವತೆಗಳಲ್ಲಿ ಹೋಗಿ ಸೇರುತ್ತದೆ."

(೧-೧-೪)

"ಎಲೈ ಅಗ್ನಿಯೇ, ನೀನು ಅಂಗಿರಾಋಷಿಗಳಲ್ಲಿ ಪ್ರಥಮನು. (ಮುಖ್ಯನು) ದೇವತೆಗಳಿಗೆಲ್ಲಾ ಕಲ್ಯಾಣಕಾರಕನಾದ ಸಖನು."

(೧-೩೧-೧)

"ಎಲೈ ಅಗ್ನಿಯೇ, ನೀನೇ ಯಜ್ಞಕರ್ಮನಿರ್ವಹಣಕ್ಕೆಲ್ಲಾ ಪ್ರಧಾನವಾದ ಸಾಧನವು."

(೩-೩-೩)

"ಎಲೈ ಅತ್ಯುತ್ತಮನಾದ ಋಷಿಯೇ, ನೀನು ಪ್ರಜ್ವಲಿತನಾಗಿದ್ದೀಯೆ. ಯಜ್ಞವನ್ನು ರಕ್ಷಿಸು."

(೩-೨೧-೩)

"ಯಜ್ಞಸಾಧನವಾದವನೂ, ಋಷಿರೂಪನೂ ಆದ ಅಗ್ನಿಯು ಯಜ್ಞವನ್ನು ವೃದ್ಧಿಗೊಳಿಸುತ್ತಾ ಮುಂಭಾಗದಲ್ಲಿ ನೇತ್ರರೂಪನಾಗಿದ್ದಾನೆ."

(೩-೩೭-೨, ೭)

"ಪ್ರಾಜ್ಞರಲ್ಲದವರ ನಡುವೆ ಇರುವ ಅವನೊಬ್ಬನೇ ಪ್ರಾಜ್ಞನಾದ ಕವಿಯು- ಅತ್ಯುತ್ತಮವಾದ ಜ್ಞಾನವುಳ್ಳವನು."

(೭-೪ ೪)

"ಎಲೈ ದೇವತೆಗಳೇ, ವಿಧಿವಿಹಿತವಾದ ಕರ್ಮಾಚರಣೆಯಲ್ಲಿ ನಾವು ಯಾವ ಲೋಪದೋಷಗಳನ್ನು ಮಾಡಿದರೂ ಸಹ, ಋತುಕಾಲನಿಯಮಗಳನ್ನರಿತವನೂ, ದೇವತೆಗಳಿಗೆ ಯಾವ ರೀತಿ ತೃಪ್ತಿಯನ್ನುಂಟುಮಾಡಬೇಕೆಂಬ ತಿಳುವಳಿಕೆಯುಳ್ಳವನೂ ಆದ ಅಗ್ನಿಯು ನಮ್ಮ ಲೋಪದೋಷಗಳನ್ನೆಲ್ಲಾ ತಿದ್ದಿಸರಿಪಡಿಸುತ್ತಾನೆ."

(೧೦-೨-೪)

"ಯಜ್ಞನಿರ್ವಹಣಕ್ಕೆ ಉಪಯುಕ್ತವಾದ ಅನೇಕ ವಿಷಯಗಳು ಮಂದಮತಿಗಳಾದ ನಮ್ಮ ತಿಳುವಳಿಕೆಗೆ ಬಂದಿರುವುದೇ ಇಲ್ಲ. ಆದರೂ ಸಹ ಅಗ್ನಿಯು ಸರ್ವಜ್ಞನಾದುದರಿಂದಲೂ, ಪೂಜ್ಯನಾದ ಋತ್ವಿಕ್ಕಾದುದರಿಂದಲೂ, ಈ ಮರ್ಮಗಳನ್ನೆಲ್ಲಾ ಅರಿತು, ದೇವತೆಗಳನ್ನು ಸಕಾಲದಲ್ಲಿ ಪೂಜಿಸಿ ಅವರವರಿಗೆ ಉಪಯುಕ್ತವಾದ ಹವಿರಾದಿಗಳನ್ನರ್ಪಿಸಿ ಎಲ್ಲರಿಗೂ ತೃಪ್ತಿಯನ್ನುಂಟುಮಾಡುತ್ತಾನೆ.

(೧೦-೨-೫)

"ಯಜಮಾನರಾದ ಮಾನವರ ದೃಷ್ಟಿಗಳು ಸೂರ್ಯನಕಡೆ ಯಾವ ರೀತಿ ತಿರುಗುತ್ತವೆಯೋ, ಅದೇ ರೀತಿ ಅಗ್ನ್ಯಭಿಮುಖವಾಗಿಯೂ ತಿರುಗುತ್ತವೆ."

(೧೦-೯೧-೩)

"ಅಗ್ನಿಯೇ, ಸಕಲ ಯಜಮಾನರಿಗೂ ಪಿತೃವು, ಅವನೇ ಪ್ರಭುವು. ಈಶ್ವರನು ಯಜ್ಞಕ್ಕೆ ಬಾಹ್ಯ ವಿಭ್ರಾವನ್ನು ಹೊಂದಿದ ಧ್ವಜರೂಪನು, ಸಕಲ ವೈದಿಕಕರ್ಮಗಳಿಗೂ ಅಧ್ಯಕ್ಷನು." (ಕೇತುಂ ಯಾಜ್ಞಾನಾಂ, ಪಿತಾ ಯಾಜ್ಞಾನಾಂ, ಸಮ್ರಾಜಂ), ೩-೩-೩,೪, ೩-೧೦-೪, ೩-೧೧-೨, ೪-೩-೧; ೬-೨-೩, ೮-೪೩-೨೪, ೧೦-೧-೫, ೧೦-೬-೩.

"ಶೀಘ್ರಸಂಚಾರಿಯಾದ ಅಗ್ನಿಯು (**ರಥುಪತ್ವೈಃ**) ದೇವತೆಗಳಿಂದ ಪ್ರಾರ್ಥಿತನಾಗಿ, ಪೃಥಿವಿಯಿಂದ ಅಂತರಿಕ್ಷಕ್ಕೂ, ಅಂತರಿಕ್ಷದಿಂದ ಪೃಥಿವಿಗೂ ಸಂಚರಿಸುತ್ತಾ, ದೇವದೂತನೂ, ಮಾನವನಾದ ಯಜಮಾನನ ದೂತನೂ ಆಗಿ ದೇವಮಾನವಾದಿಗಳ ನಿತ್ಯಸಂಬಂಧವನ್ನು ಬೆಳೆಸುತ್ತಾನೆ. ಮಾನವರಿಂದ ಅರ್ಪಿತವಾದ ದಿವ್ಯವಾದ ಸ್ತುತಿಗಳನ್ನೂ ಹವಿರಾದಿಗಳನ್ನೂ ದೇವತೆಗಳಿಗೆ ಒಪ್ಪಿಸುತ್ತಾನೆ. ಅಪೇಕ್ಷಿತವಾದ ಕಾಲಗಳಲ್ಲೆಲ್ಲಾ ದೇವತೆಗಳನ್ನು ಸ್ವರ್ಗದಿಂದ ಪೃಥ್ವಿಯ ಯಜ್ಞಭೂಮಿಗೆ ಕರೆದುಕೊಂಡು ಬರುತ್ತಾನೆ."

(೧೦-೧೦೦-೧೧; ೧೦-೧೫೦-೪)

ಅಗ್ನಿಯ ದೇವದೂತತ್ವವೂ, ಮಾನವದೂತತ್ವವೂ ತೈತ್ತಿರೀಯಸಂಹಿತೆಯಲ್ಲಿ ಈರೀತಿ ವರ್ಣಿತವಾಗಿದೆ—

"ಅಗ್ನಿರ್ದೇವಾನಾಂ ದೂತ ಆಸೀದುಶನಾ ಕಾವ್ಯೋಽಸುರಾಣಾಂ"

(ತೈ. ಸಂ. ೩-೫-೮-೫)

ಅಗ್ನಿಯು ದೇವದೂತನಾಗಿಯೂ, ಕಾವ್ಯ ಉಶನಸ್ಸು ಅಸುರದೂತನಾಗಿಯೂ ಇದ್ದರು. ಇದೇ ದೂತತ್ವದಿಂದ ದೇವಮಾನವಾದಿಗಳ ಸಂಬಂಧವು ಯಾವರೀತಿ ಬೆಳೆಯಲು ಅವಕಾಶವಾಯಿತೆಂದು ತೈತ್ತಿರೀಯಬ್ರಾಹ್ಮಣದಲ್ಲಿ ಅಗ್ನಿಯು ಈ ಕಾರ್ಯವನ್ನು ಈರೀತಿ ಪ್ರಶಂಸಿಸಿದೆ.

ಅ ತಂತುಮಗ್ನಿರ್ದೈವ್ಯಂ ತತಾನ । ತ್ವಂ ನಸ್ತಂತುರುತ ಸೇತುರಗ್ನೇ । ತ್ವಂ ಪಂಥಾ ಭವಸಿ ದೇವಮಾನೈಃ । ತ್ವಯಾ ಅಗ್ನೇ ಪೃಷ್ಠತು ವಯಮಾರುಹೇಮ । ಅಥ ದೇವೈಃ ಸಧಮಾದಂ ಮದೇಮ ॥

(ತೈ. ಬ್ರಾ. ೨-೪-೧-೬)

ಎಲೈ ಅಗ್ನಿಯೇ, ದೇವಮಾನವಾದಿಗಳಿಗಿರುವ ಸಂಬಂಧರೂಪವಾದ ತಂತುವನ್ನು ನೀನು ವಿಸ್ತರಿಸುವೆ. ನೀನೇ ನಮಗೆ ತಂತುಪ್ರಾಯನು. ಸ್ವರ್ಗಕ್ಕೆ ಹೋಗಲು ಮುಖ್ಯ ಸೇತುವೆಯು, ದೇವಲೋಕಕ್ಕೆ ಹೋಗುವ ಮುಖ್ಯ ಮಾರ್ಗವು ನೀನೇ. ನಿನ್ನ ಅನುಗ್ರಹದಿಂದ ನಿನ್ನ ಪೂಜಕರಾದ ನಾವೂ ಸಹ ಸ್ವರ್ಗವನ್ನು ಸೇರಿ ಅಲ್ಲಿರುವ ದೇವತೆಗಳು ಯಾವ ಸುಖವನ್ನನುಭವಿಸುವರೋ ಅದೇ ಸುಖವನ್ನು ಅವರೊಡನೆ ನಾವೂ ಅನುಭವಿಸುವಂತಾಗಲಿ.

ಇದೇ ವಿಧವಾಗಿ ದೇವದೂತತ್ವವೂ; ಈ ದೌತ್ಯದಿಂದ ದೇವಮಾನವಾದಿಗಳ ಸಂಬಂಧಾಭಿವೃದ್ಧಿಗೆ ಸಾಧಕತ್ವವೂ ಪ್ರಶಂಸಿತವಾಗಿರುವ ಸನ್ನಿವೇಶಗಳೂ ಋಕ್ಸಂಹಿತೆಯಲ್ಲಿ ಬಹಳ ಹೇರಳವಾಗಿವೆ. " **ಅಗ್ನಿಂ ದೂತಂ ವೃಣೀ ಮಹೇ** " ಇತ್ಯಾದಿ ವಾಕ್ಯಗಳು ಅಗ್ನಿಯ ಸಹಾಯವನ್ನು ಪ್ರಶಂಸಿಸುವುವಾಗಿವೆ. (೧-೧೨-೧; ೨-೪-೮; ೧-೩೬-೩, ೪, ೫; ೧-೪೪, ೨, ೩, ೫, ೯, ೧೨; ೨-೧೦-೬; ೩-೧೧-೨; ೪-೨-೩; ೫-೨೧-೩; ೭-೧೭-೬; ೮-೩೯-೧, ೯; ೧೦-೯೧-೧೧; ೧-೨೭-೪; ೧-೧೪೮-೧; ೩-೫-೨; ೩-೧೭-೪; ೪-೭-೮; ೬-೧೫-೮ ರಿಂದ ೧೦; ೮-೧೯-೨೧; ೮-೪೪-೩; ೧೦ ೧೨೨-೭; ೧-೫೮-೧; ೨-೬-೬, ೭; ೩-೬-೫; ೩-೨೧-೧, ೫; ೪-೮-೨, ೪;

೭-೧೧-೪; ೮-೨೩-೧೮, ೧೯; ೧೦-೪-೨, ೧-೭೪-೪, ೭; ೨-೯-೨; ೩-೯-೮; ೪-೯-೮; ೪-೧-೮; ೫-೮-೬; ೭-೧೬-೪; ೧೦-೪೬-೧೦ ಇತ್ಯಾದಿ.)

ಇದೇ ಅಗ್ನಿಯು ದ್ಯುಲೋಕದ ಅಂತಸ್ತತ್ವವನ್ನು ಪೂರ್ಣವಾಗಿ ಅರಿತವನಾಗಿ ಸಕಲ ದೇವತೆಗಳನ್ನೂ ಅವರವರ ಯೋಗ್ಯತಾನುಸಾರವಾದ ಯಜ್ಞಭಾಗವನ್ನು ಸ್ವೀಕರಿಸಲು ಕರೆತರಲು ಯೋಗ್ಯನಾಗಿದ್ದಾನೆ.

(೪-೮-೨)

ಯಾವ ರಥಗಳಲ್ಲಿ ದೇವತೆಗಳು ಬರುವರೋ, ಅಗ್ನಿಯೂ ಅದೇ ರಥದಲ್ಲಿ ಕುಳಿತು ಬರುತ್ತಾನೆ.

(೩.೪-೧೧; ೭-೧೧-೧)

ಅಥವಾ ಸಮಯವನ್ನರಿತು ಅವರಿಗಿಂತಲೂ ಪೂರ್ವಭಾವಿಯಾಗಿಯೇ ಬರುತ್ತಾನೆ.

(೧೦-೭೦-೨)

ಉಳಿದ ಸಕಲ ದೇವತೆಗಳಿಗೂ ಯಾವ ಪೂಜೆಯುಂಟೋ, ಯಾವ ಯಜ್ಞಭಾಗವುಂಟೋ ಅವೆಲ್ಲವೂ ಅಗ್ನಿಗೂ ಸೇರತಕ್ಕವಾಗಿವೆ ಮತ್ತು ಅರ್ಪಿತವಾಗುತ್ತವೆ.

(೧-೩೬-೪, ೨-೧೨-೧)

ಯಜ್ಞಕ್ಕೆ ವರುಣನನ್ನು ಕರೆತರುತ್ತಾನೆ. ಇಂದ್ರನನ್ನು ದ್ಯುಲೋಕದಿಂದಲೂ, ಮರುತ್ತುಗಳನ್ನು ಅಂತರಿಕ್ಷದಿಂದಲೂ ಕರೆತರುತ್ತಾನೆ.

(೧೦-೭೦-೧೧)

ಯಜ್ಞದಲ್ಲಿ ಅರ್ಪಿತವಾದ ಹವಿಸ್ಸುಗಳನ್ನು ಸುಗಂಧಯುಕ್ತವಾಗುವಂತೆ ಮಾಡುತ್ತಾನೆ. **(ಹವ್ಯಾನೀ ಸುರಭೀಣಿ ಕೃಣ್ವೀ)**

(೧೦-೧೫-೧೨ ; ವಾ. ಸಂ. ೧೯-೬೬)

ಯಜ್ಞದಲ್ಲಿ ಅಗ್ನಿಯ ಸಹಾಯವಿಲ್ಲದಿದ್ದರೆ ದೇವತೆಗಳಿಗೆ ಯಾವ ವಿಧವಾದ ತೃಪ್ತಿಯೂ ಇರುವುದಿಲ್ಲ.

(೭-೧೧-೧)

ಆದುದರಿಂದ ಆ ದೇವತೆಗಳಿಗೆಲ್ಲಾ ಅಗ್ನಿಯೇ ಸಾಕ್ಷಾತ್ತಾಗಿ ಹವಿಸ್ಸುಗಳನ್ನು ಅರ್ಪಿಸುತ್ತಾನೆ.

(೭-೧೧-೩; ೪-೯೧-೧೬; ೧೦-೭-೬)

ಅಗ್ನಿಯ ಮೂಲಕವೇ ದೇವತೆಗಳು ಹವಿರಾದಿಗಳನ್ನು ಸ್ವೀಕರಿಸುವುದರಿಂದ ಅನೇಕವೇಳೆ ಅಗ್ನಿಯು ದೇವಮಾನವಾದಿಗಳಿಂದ ನಿರ್ವಹಿಸಲ್ಪಡುವ ಯಜ್ಞದಲ್ಲಿ ಪ್ರಧಾನಪಾತ್ರವಹಿಸಿ ದೇವತೆಗಳ ಮುಖವೆಂದೂ, ಅವರು ಸೋಮಾದಿಗಳನ್ನು ಪಾನಮಾಡುವ ಜೆಹ್ವೆಯೇ ಇವನೆಂದೂ ಪ್ರಶಂಸಿತನಾಗಿದ್ದಾನೆ. **(ಅಸ್ಯಂ ತ್ವಾಂ ಜಿಹ್ವಾಂ)** (೨-೧-೧೩; ೨-೧-೧೪) ಇನ್ನು ಕೆಲವೆಡೆಗಳಲ್ಲಿ ಅವನೇ ಸಕಲ ಹವಿಸ್ಸುಗಳನ್ನೂ ಭಕ್ಷಿಸಬೇಕೆಂದೂ ಪ್ರಾರ್ಥಿತನಾಗಿದ್ದಾನೆ ಮತ್ತು ಯಜ್ಞದಲ್ಲಿ ಅರ್ಪಿತವಾದ ಸೋಮವನ್ನು ಪಾನಮಾಡುವುದಕ್ಕೆ ಸಾಕ್ಷಾತ್ತಾಗಿ ಆಹೂತನಾಗಿದ್ದಾನೆ.

(೩-೨೧-೧; ೩-೨೮-೧ ರಿಂದ ೬; ೧-೧೪-೧೦; ೭-೧೯-೯)

ಅಗ್ನಿಯು ನೀರಿನಲ್ಲಿ ಅವಿತುಕೊಂಡಿದ್ದ ವಿಚಾರ

ಎಲ್ಲಕ್ಕಿಂತಲೂ ಮೊದಲು ಈ ಪ್ರಕರಣದಲ್ಲಿ ಅಗ್ನಿಯ ಹವ್ಯವಾಹಕತ್ವವು ಪ್ರಶಂಸಿತವಾಗಿದೆ. ಜಗದ್ವ್ಯವಹಾರಕ್ಕೆಲ್ಲಾ ಆಧಾರಭೂತವಾದ ಯಜ್ಞನಿರ್ವಹಣವು ಜಗತ್ತಿನ ಸ್ಥಿತಿಗತಿಗಳಿಗೆ ಅತ್ಯವಶ್ಯಕವಾಗಿದೆ. ಈ ಯಜ್ಞವು ಪರಿಪೂರ್ಣವಾಗಿ ನಿರ್ವಹಿಸಲ್ಪಡಬೇಕಾದರೆ ಅಗ್ನಿಯೇ ಈ ಕಾರ್ಯಸಾಧಕನಾಗಿರಬೇಕು. ಆದುದರಿಂದ ಅವನೇ ಮುಖ್ಯ ಹೋತೃವೂ ಹವಿರ್ವಾಹಕನೂ ಆಗಿರಬೇಕು. **"ಮನ್ಯೇ ತ್ವಾ ಜಾತವೇದಸಂ ಸ ಹವ್ಯಾವಕ್ಷ್ಯಾನುಷಕ್"** ಜಾತವೇದೋನಾಮಧೇಯನಾದ ಅಗ್ನಿಯೇ ನಿರಂತರವಾದ ಹವ್ಯವಾಹಕನೆಂದು ನನ್ನ ದೃಢವಿಶ್ವಾಸವಿದೆಯೆಂದು ಋಷಿಯು ತನ್ನ ಶ್ರದ್ಧೆಯನ್ನು ಪ್ರಥಮತಃ ವ್ಯಕ್ತಪಡಿಸಿದ್ದಾನೆ (೫-೯-೧).

ಹವಿಸ್ಸನ್ನೇ ಆಹಾರವನ್ನಾಗಿ ನಂಬಿಕೊಂಡಿರುವ ದೇವತೆಗಳು ಯಜ್ಞಹವಿಸ್ಸನ್ನು ಹಂಚುವ ಅಗ್ನಿಯು ಸ್ವಲ್ಪ ಕಣ್ಮರೆಯಾದರೂ ಪ್ರಕ್ಷುಬ್ಧರಾಗುತ್ತಾರೆ. ಅಂತಹ ಸನ್ನಿವೇಶಗಳಲ್ಲಿ ಅಗ್ನಿಯನ್ನು ವಿನಯದಿಂದ ಪ್ರಾರ್ಥಿಸಿ ಹವಿರ್ವಹನ ಕರ್ಮವನ್ನು ನೆರವೇರಿಸುವಂತೆ ಪ್ರಾರ್ಥಿಸುತ್ತಾರೆ. ಇಂತಹ ಕೆಲವು ಸನ್ನಿವೇಶಗಳು ಋಕ್ಸಂಹಿತೆಯಲ್ಲಿಯೇ ವರ್ಣಿತವಾಗಿರುತ್ತವೆ. ಉದಾಹರಣೆಗೆ, ಋ. ಸಂ. ೧೦-೫೧ನೇ ಸೂಕ್ತದ ವಿವರಣೆಯನ್ನು ಇಲ್ಲಿ ಪರಿಶೀಲಿಸಬಹುದು. ಉದಾಹೃತವಾಗುವ ಈ ಸೂಕ್ತದಲ್ಲಿ ದೇವತೆಗಳು ಹವಿರ್ವಹನಕರ್ಮಕ್ಕಾಗಿ ಅಗ್ನಿಯನ್ನು ಪ್ರಾರ್ಥಿಸುತ್ತಾರೆ. ಅಗ್ನಿಯು ತನ್ನ ಪ್ರಿಯವಾದ ಒಂದು ನಿಯಮನವನ್ನು ಸೂಚಿಸಿ ದೇವತೆಗಳು ಆ ನಿಯಮನವನ್ನು ಪಾಲಿಸುವುದಾದರೆ ತಾನು ಹವಿರ್ವಹನಕರ್ಮವನ್ನು ನಿರ್ವಹಿಸುವುದಾಗಿ ಭರವಸೆಯನ್ನು ನೀಡುತ್ತಾನೆ.

ಅಗ್ನಿಯು ನೀರಿನಲ್ಲಿ ಏತಕ್ಕೆ ಅಡಗಿಕೊಂಡಿದ್ದನು ಎಂಬ ವಿಷಯದಲ್ಲಿ ಒಂದು ಪೂರ್ವೇತಿಹಾಸವು ಋಗ್ವೇದದ ಪ್ರಕೃತ ಸೂಕ್ತದಲ್ಲಿಯೂ ಯಜುರ್ವೇದದಲ್ಲಿಯೂ ಉಕ್ತವಾಗಿರುವುದು.

ಅಗ್ನೇಃ ಪೂರ್ವೇ ಭ್ರಾತರೋ ಅರ್ಥಮೇತಂ ರಥೀವಾಧ್ವಾನಮನ್ವಾವರೀವುಃ ।
ತಸ್ಮಾದ್ಧಿಯಾ ವರುಣ ದೂರಮಾಯಂ ಗೌರೋ ನ ಕ್ಷೇಪ್ನೋರವಿಜೇ ಜ್ಯಾಯಾಃ ।
ಕುರ್ಮಸ್ತ ಆಯುರಜರಂ ಯದಗ್ನೇ ಯಥಾ ಯುಕ್ತೋ ಜಾತವೇದೋ ನ ರಿಷ್ಯಾಃ ।
ಅಥಾ ವಹಾನಿ ಸುಮನಸ್ಯಮಾನೋ ಭಾಗಂ ದೇವೇಭ್ಯೋ ಹವಿಷಃ ಸುಜಾತ ॥
ಪ್ರಯಾಜಾನ್ಮೇ ಅನುಯಾಜಾಂಶ್ಚ ಕೇವಲಾನೂರ್ಜಸ್ವಂತಂ ಹವಿಷೋ ದತ್ತ ಭಾಗಂ ।
ಘೃತಂ ಚಾಸಾಂ ಪುರುಷಂ ಚೌಷಧೀನಾಮಗ್ನೇಶ್ಚ ದೀರ್ಘಮಾಯುರಸ್ತು ದೇವಾಃ ॥
ತವ ಪ್ರಯಾಜಾ ಅನುಯಾಜಾಶ್ಚ ಕೇವಲ ಊರ್ಜಸ್ವಂತೋ ಹವಿಷಃ ಸಂತು ಭಾಗಾಃ ।
ತವಾಗ್ನೇ ಯಜ್ಞೋಽಯಮಸ್ತು ಸರ್ವಸ್ತುಭ್ಯಂ ನಮಂತಾಂ ಪ್ರದಿಶಶ್ಚತಸ್ರಃ ॥

(ಋ ಸಂ. ೧೦-೫೧-೬ ರಿಂದ ೯)

ಈ ಸೂಕ್ತದಲ್ಲಿ ದೇವತೆಗಳಿಗೂ ಅಗ್ನಿಗೂ ನಡೆದ ಸಂಭಾಷಣೆಯು ಉಕ್ತವಾಗಿದೆ. ಮುಖ್ಯವಿಚಾರವೇನೆಂದರೆ—ಅಗ್ನಿಗೆ ಭೂಪತಿಃ, ಭುವನಪತಿಃ ಭೂತಾನಾಂಪತಿಃ ಎಂಬ ಹೆಸರಿನ ಮೂರು ಜ್ಯೇಷ್ಠಸಹೋದರರಿದ್ದರು. ಅವರೂ ಅಗ್ನಿಯಂತೆಯೇ ಯಜ್ಞದಲ್ಲಿ ಯಜಮಾನರು ಅರ್ಪಿಸುವ ಹವಿಸ್ಸನ್ನು ದೇವತೆಗಳ ಬಳಿಗೆ ವಹಿಸುತ್ತಿದ್ದರು. ಹೀಗಿರುವಲ್ಲಿ ಯಜ್ಞದಲ್ಲಿ ಹೋಮಮಾಡುವಾಗ ವಜ್ರಸದೃಶವಾದ ವಷಟ್ಕಾರಶಬ್ದಪೂರ್ವಕವಾದ ಹೋಮಗಳಿಂದ ಈ ಮೂವರು ಸಹೋದರರೂ ಮೃತರಾದರು. ಅದನ್ನು ಕಂಡು ಕಿರಿಯವನಾದ ಅಗ್ನಿಯು ತನಗೂ ಆ ದೆಶೆ ಸಂಭವಿಸಬಹುದೆಂದು

ಭೀತನಾಗಿ ನೀರಿನಲ್ಲಿ ಹೋಗಿ ಅವಿತುಕೊಂಡಿದ್ದನು. ದೇವತೆಗಳು ಅಗ್ನಿಯನ್ನು ಎಲ್ಲಿಯೂ ಕಾಣದೆ ಹುಡುಕುತ್ತಿರುವಾಗ ನೀರಿನಲ್ಲಿದ್ದ ಮಿಾನುಗಳು ಅಗ್ನಿಯು ನೀರಿನಲ್ಲಿರುವನೆಂದು ದೇವತೆಗಳಿಗೆ ತಿಳಿಸಿದವು. ಆಗ ದೇವತೆಗಳು ಅಗ್ನಿಯ ಬಳಿಗೆ ಬಂದು ಅವನೊಡನೆ ಈರೀತಿ ಸಂಭಾಷಿಸಿದರು. ಈ ಸಂಭಾಷಣೆಯೇ ಈ ಸೂಕ್ತದಲ್ಲಿ ವಿವರಿಸಲ್ಪಟ್ಟಿದೆ. ದೇವತೆಗಳು ಅಗ್ನಿಯನ್ನು ನೀರಿನಿಂದ ಎದ್ದುಬರಬೇಕೆಂದೂ ಹಿಂದಿನಂತೆ ತಮಗೆ ಹವಿಸ್ಸನ್ನು ವಹಿಸಬೇಕೆಂದೂ ಪ್ರಾರ್ಥಿಸಲು ಅಗ್ನಿಯು, ತನ್ನ ಸಹೋದರರು ಮೃತರಾದುದರಿಂದ ತನಗೂ ಅದೇ ಗತಿ ಪ್ರಾಪ್ತವಾಗುವುದೆಂದೂ ಆದ್ದರಿಂದ ತಾನು ಬರುವುದಿಲ್ಲವೆಂದೂ ಹೇಳಿದನು. ಅದಕ್ಕೆ ದೇವತೆಗಳು ಮರಣಕ್ಕಾಗಿ ಹೆದರಬೇಡವೆಂದೂ ನಿನಗೆ ಮರಣಭಯವುಂಟಾಗ ದಂತೆ ಮಾಡುವೆವೆಂದೂ ಹೇಳಲು ಅಗ್ನಿಯು ಪುನಃ ಇಂತೆಂದನು—ಒಳ್ಳೆಯದು, ಮರಣಭಯವನ್ನು ನನಗೆ ತಪ್ಪಿಸುವುದಲ್ಲದೆ ಯಜ್ಞಗಳಲ್ಲಿ ಪ್ರಯಾಜಾ, ಅನುಯಾಜಾ, ಉರ್ಜಸ್ವತ್, ಸ್ವಿಷ್ಟಕೃತ್, ಆಜ್ಯಭಾಗ ಮೊದಲಾದ ಕೆಲವು ವಿಶೇಷ ಆಹುತಿಗಳನ್ನು ನನಗೆ ಕೊಡಬೇಕು ಎಂದನು. ದೇವತೆಗಳು ಹಾಗೆಯೇ ಆಗಲೆಂದೊಪ್ಪಿ ಅವನು ಕೇಳಿದ ಹವಿರ್ಭಾಗಗಳನ್ನು ಕೊಟ್ಟು ಯಜ್ಞದಲ್ಲಿ ಮುಖ್ಯಪಾತ್ರವನ್ನು ವಹಿಸುವಂತೆಯೂ, ಸರ್ವರಿಂದಲೂ ನಮಸ್ಕೃತನಾಗುವಂತೆಯೂ, ದೀರ್ಘಾಯುವಾಗುವಂತೆಯೂ ವರವನ್ನಿತ್ತು ಪೂರ್ವದಂತೆ ಹವಿರ್ವಹನಕಾರ್ಯದಲ್ಲಿ ಅವನನ್ನು ನಿಯಮಿಸಿದರು ಎಂದು ಈ ಸೂಕ್ತದ ಮುಖ್ಯಾಭಿಪ್ರಾಯವು. ಯಜುರ್ವೇದದ ತೈತ್ತಿರೀಯಸಂಹಿತೆಯಲ್ಲಿ ಈ ವಿಷಯವಾಗಿ ಈರೀತಿ ಇರುವುದು.

ಅಗ್ನೇಸ್ತ್ರಯೋ ಜ್ಯಾಯಾಗ್ಂಸೋ ಭ್ರಾತರ ಆಸನ್ತೇ ದೇವೇಭ್ಯೋ ಹವ್ಯಂ ವಹಂತಃ ಪ್ರಾವಿಾಯಂತ ಸೋಽಗ್ನಿರಬಿಭೇದಿತ್ಥಂ ವಾವ ಸ್ಯ ಅರ್ತಿಮಾರಿಷ್ಯತೀತಿ ಸ ನಿಲಾಯತ ಸೋಽಪಃ ಪ್ರಾವಿಶತ್ತಂ ದೇವತಾಃ ಪ್ರೈಷಮೈಚ್ಛನ್ತಂ ಮತ್ಸ್ಯಃ ಪ್ರಾಬ್ರವೀತ್ತಮಪಶಪದ್ಧಿಯಾಧಿಯಾ ತ್ವಾ ವಧ್ಯಾಸುರ್ಯೋ ಮಾ ಪ್ರಾವೋಚ ಇತಿ ತಸ್ಮಾನ್ಮತ್ಸ್ಯಂ ಧಿಯಾಧಿಯಾ ಘ್ನಂತಿ ಶಪ್ತೋ ಹಿ ತಮನ್ವನಿಂದನ್ತಮಬ್ರುವನ್ನುಪ ನ ಆ ವರ್ತಸ್ವ ಹವ್ಯಂ ನೋ ವಹೇತಿ ಸೋಽಬ್ರವೀದ್ವರಂ ವೃಣೈ ಯದೇವ ಗೃಹೀತಸ್ಯಾಹುತಸ್ಯ ಬಹಿಃ ಪರಿಧಿಸ್ಕಂದಾತ್ತನ್ಮೇ ಭಾತೃಣಾಂ ಭಾಗಧೇಯಮಸದಿತಿ ತಸ್ಮಾದ್ಯದ್ಗೃಹೀತಸ್ಯಾಹುತಸ್ಯ ಬಹಿಃ ಪರಿಧಿ ಸ್ಕಂದತಿ ತೇಷಾಂ ತದ್ಭಾಗಧೇಯಂ ತಾನೇವ ತೇನ ಪ್ರೀಣಾತಿ ಪರಿಧೀನ್ಪರಿ ದಧಾತಿ ರಕ್ಷಸಾಮಪಹತ್ಯೈ॥

(ತೈ. ಸಂ. ೨-೬-೬-೧, ೨)

ಪೂರ್ವದಲ್ಲಿ ಅಗ್ನಿಗೆ ಮೂರುಮಂದಿ ಜ್ಯೇಷ್ಠಸಹೋದರರಿದ್ದರು. ಅವರು ದೇವತೆಗಳಿಗೆ ಯಜ್ಞಯಾಗಾದಿಗಳಲ್ಲಿ ಯಜಮಾನನು ಅರ್ಪಿಸುವ ಹವಿಸ್ಸನ್ನು ಒಯ್ಯುತ್ತಿದ್ದರು. ಅವರು ಮೃತರಾಗಲು ಅಗ್ನಿಯು ತನಗೂ ಆ ಗತಿ ಪ್ರಾಪ್ತವಾಗಬಹುದೆಂದು ಹೆದರಿ ಓಡಿಹೋಗಿ ನೀರಿನಲ್ಲಿ ಪ್ರವೇಶಿಸಿ ಯಾರಿಗೂ ಕಾಣದಂತೆ ಅವಿತುಕೊಂಡಿದ್ದನು. ದೇವತೆಗಳು ಅಗ್ನಿಯು ಎಲ್ಲಿಹೋದನೆಂದು ಹುಡುಕುತ್ತಿರುವಾಗ ನೀರಿನಲ್ಲಿದ್ದ ಒಂದು ಮಿಾನು ಅಗ್ನಿಯು ನೀರಿನಲ್ಲಿ ಅವಿತುಕೊಂಡಿರುವುದನ್ನು ದೇವತೆಗಳಿಗೆ ಹೇಳಿತು. ಮಿಾನಿನ ಈ ಚಾಡಿಮಾತನ್ನು ಕೇಳಿ ಅಗ್ನಿಗೆ ಕೋಪಬಂದು ಇನ್ನುಮೇಲೆ ನೀರಿನಲ್ಲಿರುವ ಮಿಾನುಗಳನ್ನು ಜನರು ಬಲೆ ಮೊದಲಾದ ಸಾಧನಗಳಿಂದ ಹಿಡಿದು ಕೊಲ್ಲುವಂತೆ ಶಪಿಸಿದನು. ಆದರಂತೆ ಈಗಲೂ ಜನರು ಮಿಾನುಗಳನ್ನು ಬಲೆ ಮೊದಲಾದ ಸಾಧನಗಳಿಂದ ಹಿಡಿದು ಕೊಂದು ತಿನ್ನುತ್ತಿರುವರು. ಬಳಿಕ ದೇವತೆಗಳು ಅಗ್ನಿಯನ್ನು ಕುರಿತು ಎಲೈ ಅಗ್ನಿಯೇ, ನೀನು ಹಿಂತಿರುಗಿಬಂದು ನಮಗೆ ಹವಿರ್ವಹನಕಾರ್ಯದಲ್ಲಿ ಉದ್ಯುಕ್ತನಾಗಿರು ಎನ್ನಲು ಅದಕ್ಕೆ ಅಗ್ನಿಯು ಯಜ್ಞದಲ್ಲಿ ಹೋಮಮಾಡುವಾಗ ಪರಿಧಿಯು (ರಾಕ್ಷಸರು ಬಂದು ಯಜ್ಞಕ್ಕೆ

ವಿಘ್ನಮಾಡದಂತೆ ಅಗ್ನಿಕುಂಡದ ನಾಲ್ಕು ದಿಕ್ಕುಗಳಲ್ಲಿಯೂ ಇಡುವ ದರ್ಭೆ ವಿಶೇಷಗಳಿಗೆ ಪರಿಧಿ ಎಂದು ಹೆಸರು). ಹೊರಗಡೆ ಎಂದರೆ ಈಚೆ ಬೀಳುವ ಆಜ್ಯವೇ ಮೊದಲಾದ ಆಹುತಿಗಳ ಭಾಗವು ನನ್ನ ಸಹೋದರರಿಗೆ ಹವಿರ್ಭಾಗುವಂತೆ ವರವನ್ನು ಕೊಟ್ಟರೆ ತಾನು ನೀರಿನಿಂದ ಎದ್ದುಬಂದು ಪೂರ್ವದಂತೆ ಹವಿಸ್ಸನ್ನು ಒಯ್ಯುವೆನೆಂದು ಹೇಳಿದನು. ಅದಕ್ಕೆ ದೇವತೆಗಳು ಸಮ್ಮತಿಸಿ ಅವನಿಗೆ ಆ ರೀತಿ ವರವನ್ನು ಕೊಟ್ಟರು ಇತ್ಯಾದಿ ಉಪಾಖ್ಯಾನವಿದೆ.

ಯಜ್ಞದಲ್ಲಿ ಪ್ರಾಧಾನ್ಯವನ್ನು ವಹಿಸಿ ದೇವತೆಗಳಿಗೆ ಸಹಾಯಮಾಡಬೇಕೆಂದು ಅಗ್ನಿಯು ಪ್ರಾರ್ಥಿತನಾದಾಗ ಅಗ್ನಿಗೂ ಇತರ ದೇವತೆಗಳಿಗೂ ನಡೆದ ಒಂದು ಸಂಭಾಷಣೆಯು ಅಗ್ನಿಯ ಪ್ರಾಶಸ್ತ್ಯವನ್ನೂ ಅತಿಶಯವಾದ ಶಕ್ತಿಯನ್ನೂ ತಿಳಿಸುತ್ತದೆ. ಪ್ರಕೃತ ಸೂಕ್ತದ ಸಾರಾಂಶವಾದ ಆ ಸಂಭಾಷಣೆಯು ಈರೀತಿಯಿರುತ್ತದೆ.

(೧೦-೫೧)

ದೇವತೆಗಳು—ಎಲೈ ಅಗ್ನಿಯೇ; ನೀನು ಮರೆಮಾಡಿಕೊಂಡು ಯಾವ ಆವರಣದೊಂದಿಗೆ ನೀರಿನಲ್ಲಿ ಅಂತರ್ಗತನಾಗಿದ್ದೀಯೋ, ಆ ಆವರಣವು ಬಹಳ ಸ್ಥೂಲವಾದುದೂ, ಪೂರ್ಣವಾಗಿ ಮುಚ್ಚತಕ್ಕದ್ದಾಗಿಯೂ ಇದೆ. ಆದರೆ, ಎಲೈ ಜಾತವೇದಸ್ಸೇ, ಒಬ್ಬ ದೇವನು ಮಾತ್ರ (ಪ್ರಜಾಪತಿ) ನಿನ್ನ ಅನೇಕ ವಿಧವಾದ ಸ್ವರೂಪಗಳನ್ನು ಪೂರ್ಣವಾಗಿ ಅರಿತವನಾಗಿದ್ದಾನೆ.

ಅಗ್ನಿ—ನಿಮ್ಮಲ್ಲಿ ನನ್ನ ಸ್ವರೂಪಗಳನ್ನು ಅರಿತಿರುವವನಾರು ? ನನ್ನ ರೂಪವೈವಿಧ್ಯವನ್ನೆಲ್ಲಾ ಪೂರ್ಣವಾಗಿ ಅರಿತಿರುವ ದೇವನಾರು ? ಎಲೈ ಮಿತ್ರಾವರುಣರೇ, ದೇವತೆಗಳಿಗೆ ಹವಿಸ್ಸನ್ನು ವಹಿಸಲು ಸಾಧನವಾದವೂ, ದೀಪ್ತಿಯುತವಾದುವೂ ಆದ ನನ್ನ ಸ್ವರೂಪಗಳನ್ನು ನಿಮ್ಮಲ್ಲಿ ತಿಳಿದಿರುವನೊಬ್ಬನು ಇದ್ದಪಕ್ಷದಲ್ಲಿ ಅವೆಲ್ಲವೂ ಎಲ್ಲಿ ಅಡಗಿಕೊಂಡಿವೆ ಎಂಬುದನ್ನು ತಿಳಿಸುವಿರಾ ?

ದೇವತೆಗಳು—ಎಲೈ ಅಗ್ನಿಯೇ, ನಾನಾ ರೂಪಗಳನ್ನು ಧರಿಸಿ ನೀರಿನಲ್ಲಿಯೂ, ಓಷಧಿಗಳಲ್ಲಿಯೂ ಅಂತರ್ಗತನಾದ ನಿನ್ನನ್ನು ಪಡೆಯಲು ನಾವು ನಿನ್ನನ್ನು ಹುಡುಕಿದೆವು. ಆಗ ಯಮನು ಮಾತ್ರ ಪೃಥಿವ್ಯಾದಿ ಹತ್ತು ಸ್ಥಾನಗಳಲ್ಲೂ ಅಡಗಿಕೊಂಡಿರುವ ನಿನ್ನ ಮಹಾಜ್ವಾಲೆಗಳನ್ನು ಕಂಡುಕೊಂಡನು.

ಅಗ್ನಿ—ಎಲೈ ವರುಣನೇ, ದೇವತೆಗಳು ನನಗೆ ಎಲ್ಲಿ ಹವಿರ್ವಹನಕರ್ಮವನ್ನು ಪುನಃ ಎಲ್ಲಿ ವಹಿಸುವರೋ ಎಂಬ ಭಯದಿಂದ ನಾನು ಇಲ್ಲಿಗೆ ಬಂದು ಮರೆಯಾಗಿದ್ದೇನೆ. ಆದುದರಿಂದಲೇ, ನಾನು ಬೇರೆಬೇರೆ ರೂಪಗಳಿಂದ ಉದಕಾಂತರ್ಗತನಾಗಿ ಮರೆಯಾಗಿದ್ದೇನೆ. ಪುನಃ ಆ ಕಾರ್ಯದ ಭಾರವನ್ನು ವಹಿಸಲು ನನಗಿಷ್ಟವಿಲ್ಲ ಎಂಬುದನ್ನು ಮಾತ್ರ ಹೇಳಬಲ್ಲೆ.

ದೇವತೆಗಳು—ಎಲೈ ಅಗ್ನಿಯೇ, ಭಕ್ತನಾದ ಮನುವು ನಿನಗೆ ಪೂಜೆಯನ್ನರ್ಪಿಸಿ ಯಜ್ಞವನ್ನು ನಿರ್ವಹಿಸಬೇಕೆಂದು ಕಾದಿದ್ದಾನೆ. ನೀನು ನಿನ್ನನ್ನಲಂಕರಿಸಿಕೊಂಡು ಉದಕಾಂತರ್ಗತನಾಗಿದ್ದೀಯೆ. ದೇವತೆಗಳು ಸಂಚರಿಸತಕ್ಕ ಮಾರ್ಗಗಳನ್ನು ಸುರಕ್ಷಿತಗಳನ್ನಾಗಿ ಮಾಡು ಮತ್ತು ಅರ್ಪಿತವಾದ ಹವಿಸ್ಸುಗಳನ್ನು ದೇವತೆಗಳಿಗೆ ತೆಗೆದುಕೊಂಡು ಹೋಗು.

ಅಗ್ನಿ—ಎಲೈ ವರುಣನೇ, ಇದೇ ಹವಿರ್ವಹನಕರ್ತವ್ಯವನ್ನು ನನ್ನ ಹಿರಿಯ ಸಹೋದರರು ನೆರವೇರಿಸಲು ಒಪ್ಪಿಕೊಂಡರು. ಆದರೆ, ಆ ಕರ್ತವ್ಯನಿರ್ವಹಣಕಾಲದಲ್ಲಿ ಅವರು ಮೃತಿಗೊಂಡರು. ಆ ಕಾರಣದಿಂದಲೇ ನಾನು

ಬೆದರಿ ಇಲ್ಲಿಗೆ ಓಡಿಬಂದೆನು. ಧನ್ವಿಯ ಬಿಲ್ಲುಬಾಣಗಳನ್ನು ನೋಡಿದೊಡನೆಯೇ ಗೌರಮೃಗವು ಬೆದರಿ ಓಡುವಂತೆ ನಾನೂ ನಡುಗುತ್ತಾ ಓಡಿಬಂದೆನು. (ಈ ಸಂದರ್ಭವನ್ನು ಹಿಂದೆ ತಿಳಿಸಿದೆ).

ದೇವತೆಗಳು—ಎಲೈ ಅಗ್ನಿಯೇ, ನೀನು ಆ ಭೀತಿಯನ್ನಿಡಬೇಕಾಗಿಲ್ಲ. ನಿನಗೆ ಕ್ಷಯರಹಿತವಾದ ಆಯುಸ್ಸನ್ನು ನಾವು ಕೊಡುತ್ತೇವೆ. ಅದರ ಸಹಾಯದಿಂದ ನೀನು ಮೃತ್ಯುವನ್ನು ತಪ್ಪಿಸಿಕೊಳ್ಳಬಹುದು. ಶ್ರೇಷ್ಠವಾದ ಉತ್ಪನ್ನವುಳ್ಳ ಎಲೈ ಅಗ್ನಿಯೇ, ನೀನು ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವನಾಗಿ ದೇವತೆಗಳ ಹವಿಸ್ಸನ್ನು ಒಯ್ದು ಅವರಿಗೆ ಅದನ್ನು ಹಂಚುವ ಭಾರವನ್ನು ಪುನಃ ವಹಿಸು.

ಅಗ್ನಿ—ಎಲೈ ದೇವತೆಗಳೇ, ವೀರ್ಯವತ್ತಾದ, ಪ್ರಯಾಜ ಮತ್ತು ಅನುಯಾಜರೂಪಗಳಾದ ಹವಿಸ್ಸುಗಳನ್ನು ನನಗಾಗಿಯೇ ಪ್ರತ್ಯೇಕವಾಗಿ ಉದ್ದೇಶಿಸಿ ಇಟ್ಟುಬಿಡಿ. ಉದಕಗಳ ಸಾರವನ್ನೂ (ಘೃತ) ಓಷಧಿಗಳ ಸಾರವನ್ನೂ ನನಗೆ ಅರ್ಪಿಸಿರಿ. ಅಗ್ನಿರೂಪನಾದ ನನ್ನ ಆಯುಸ್ಸು ದೀರ್ಘಕಾಲವಿರುವಂತಾಗಲಿ.

ದೇವತೆಗಳು—ಎಲೈ ಅಗ್ನಿಯೇ, ಪ್ರಯಾಜಾನುಯಾಜರೂಪವಾದ ಹವಿಸ್ಸುಗಳನ್ನು ಪ್ರತ್ಯೇಕವಾಗಿ ನಿನ್ನನ್ನುದ್ದೇಶಿಸಿಯೇ ಇಡುತ್ತೇವೆ. ಹವಿಸ್ಸುಗಳಲ್ಲಿ ವೀರ್ಯವತ್ತಾದ ಭಾಗಗಳೆಲ್ಲವೂ ನಿನ್ನದಾಗಿಯೇ ಇರಲಿ. ಎಲೈ ಅಗ್ನಿಯೇ, ಈ ಯಜ್ಞವೂ ನಿನಗೇ ಅರ್ಪಿತವಾಗಲಿ. ನಾಲ್ಕುದಿಕ್ಕುಗಳೂ ನಮ್ರತೆಯಿಂದ ನಿನ್ನಮುಂದೆ ತಲೆಬಾಗಿ ನಿನಗೆ ನಮಸ್ಕಾರ ಮಾಡಲಿ ಎಂಬುದಾಗಿ ೧೦-೫೧ ನೇ ಸೂಕ್ತದ ಸಂಭಾಷಣೆಯ ವಿವರಣೆಯಾಗಿರುತ್ತದ. ಇದಾದನಂತರವೇ ಮುಂದಿನ ಸೂಕ್ತದಲ್ಲಿ ಅಗ್ನಿಯು ತಾನೇ ಯಜ್ಞಕ್ಕೆಲ್ಲಾ ಪ್ರಭುವೆಂದು ಪ್ರಕಟಿಸಿಕೊಳ್ಳುತ್ತಾನೆ. ಅಲ್ಲದೇ, ದೇವತೆಗಳಿಗೆ ತನ್ನ ಸಹಕಾರವನ್ನು ನೀಡುವುದಾಗಿಯೂ ತಕ್ಕ ಭರವಸೆಯನ್ನು ಕೊಡುತ್ತಾನೆ. ತಾನು ಯಾವರೀತಿ ಅವರಿಗೆ ಸಹಾಯ ಮಾಡಬಹುದೆಂದೂ ತಿಳಿಸಬೇಕಾಗಿ ಕೇಳಿಕೊಳ್ಳುತ್ತಾನೆ.

ಸೌಚೀಕೋಗ್ನಿಯ ವಿಷಯವಿರುವ ೫೧, ೫೨, ೫೩ನೆಯ ಸೂಕ್ತಗಳ ವಿಷಯದಲ್ಲಿ ಶೌನಕಋಷಿಯು ತಮ್ಮ ಬೃಹದ್ದೇವತಾ ಎಂಬ ಗ್ರಂಥದ ಏಳನೆಯ ಅಧ್ಯಾಯದಲ್ಲಿ ಈರೀತಿ ಹೇಳಿರುತ್ತಾರೆ—

ವೈಶ್ವಾನರೇ ಗೃಹಪತೌ ಯವಿಷ್ಠೇಽಗ್ನೌ ಚ ಪಾವಕೇ ।
ವಷಟ್ಕಾರೇಣ ವೃಕ್ಣೇಷು ಭಾತೃಷ್ವಗ್ನೌ ಸಹಃಸುತೇ ॥ ೬೧ ॥

ಅಪಚಕ್ರಾಮ ದೇವೇಭ್ಯಃ ಸೌಚೀಕೋಽಗ್ನಿರಿತಿ ಶ್ರುತಿಃ ।

ವೈಶ್ವಾನರ, ಗೃಹಪತಿ, ಪಾವಕ ಮೊದಲಾದ ಹೆಸರುಗಳಿಂದ ಪ್ರಸಿದ್ಧನಾದ ಅಗ್ನಿಗೆ ಮೂರುಮಂದಿ ಸಹೋದರರಿದ್ದರು. ಭೂಪತಿ, ಭುವನಪತಿ, ಭೂತಾನಾಂ ಪತಿ ಎಂದು ಅವರ ಹೆಸರು. ಈ ಸಹೋದರರಲ್ಲಿ ಅಗ್ನಿಯೇ ಕಿರಿಯವನು. ಪೂರ್ವದಲ್ಲಿ ಅಗ್ನಿಯ ಮೂರುಮಂದಿ ಹಿರಿಯ ಸಹೋದರರು ಯಜ್ಞಾದಿಗಳಲ್ಲಿ ಯಜಮಾನರು ವಷಟ್ಕಾರಪೂರ್ವಕವಾಗಿ ದೇವತೆಗಳಿಗೆ ಅರ್ಪಿಸುವ ಆಹುತಿಗಳನ್ನು ಒಯ್ದು ಅವರಿಗೆ ತಲಪಿಸುತ್ತಿದ್ದರು. **ವಜ್ರೋ ವೈ ವಷಟ್ಕಾರಃ । ವಜ್ರಮೇವ ಭಾತೃವ್ಯೇಭ್ಯಃ ಪ್ರಹರತಿ ।** ಎಂಬ ಶ್ರುತಿವಾಕ್ಯದಂತೆ ವಷಟ್ಕಾರಾಹುತಿಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೂ ಅದು ವಜ್ರಾಯುಧದಂತೆ ವಜ್ರತ್ವವನ್ನು ಉಚ್ಚರಿಸುವವರನ್ನೂ, ಹವಿಸ್ಸನ್ನು ಒಯ್ಯುವವರನ್ನೂ ಪ್ರಹರಿಸುವುದು. ಆದರಿಂದ ವಷಟ್ಕಾರಾಹುತಿಗಳನ್ನು ದೇವತೆಗಳ ಬಳಿಗೆ ಒಯ್ಯುತ್ತಿದ್ದ ಅಗ್ನಿಯ ಹಿರಿಯ ಸಹೋದರರು ವಷಟ್ಕಾರಪ್ರಹಾರದಿಂದ ಮೃತಿಯನ್ನೈದಿದರು. ಇದನ್ನು ಕಂಡ ಕಿರಿಯವನಾದ ಸೌಚೀಕೋಗ್ನಿಯು ತನಗೂ ಅದೇ ಗತಿಯೊದಗುವುದೆಂದು

ಹೆದರಿ ದೇವತೆಗಳ ಬಳಿಯಿಂದ ದೂರ ಓಡಿಹೋದನು. ಈ ವಿಷಯವು ಶ್ರುತಿವಾಕ್ಯಗಳಲ್ಲಿಯೇ ಹೇಳಿರುವುದು.

ಸ ಪ್ರಾವಿಶದಪಕ್ರಮ್ಯ ಋತೂನಪೋ ವನಸ್ಪತೀನ್ ॥ ೬೨ ॥

ತತೋಽಸುರಾಃ ಪ್ರಾದುರಾಸನ್ನಪ್ತೇಽಗ್ನೌ ಹವ್ಯವಾಹನೇ ।
ತೇಽಗ್ನಿಮೇವಾನ್ವವೈಚ್ಛಂತ ದೇವಾ ಹತ್ವಾಸುರಾನ್ಮೃಧಿ ॥ ೬೩ ॥

ತಂ ತು ದೂರಾದ್ಯಮಶ್ಚೈವ ವರುಣಶ್ಚಾನ್ವಪಶ್ಯತಾಂ ।
ಉಭಾವೇನಂ ಸಮಾದಾಯ ದೇವಾನೇವಾಭಿಜಗ್ಮತುಃ ॥ ೬೪ ॥

ಅಗ್ನಿಯು ದೇವತೆಗಳನ್ನು ಬಿಟ್ಟು ಓಡಿಸೋಗಿ ಋತುಗಳು, ವೃಕ್ಷಗಳು ಮತ್ತು ನೀರು ಇವುಗಳಲ್ಲಿ ಪ್ರವೇಶಿಸಿ ಯಾರಿಗೂ ಕಾಣದಂತೆ ಅಡಗಿಕೊಂಡಿದ್ದನು. ಅಗ್ನಿಯು ಹೊರಟುಹೋದಬಳಿಕ ದೇವತೆಗಳಿಗೂ ಅಸುರರಿಗೂ ಯುದ್ಧವು ಪ್ರಾಪ್ತವಾಗಿ ದೇವತೆಗಳು ಅಸುರರನ್ನು ಯುದ್ಧದಲ್ಲಿ ಕೊಂದು ಜಯಶಾಲಿಗಳಾದರು. ಅನಂತರ ತಮ್ಮ ಬಳಿಗೆ ಹವ್ಯಾದಿಗಳನ್ನು ಒಯ್ಯುತ್ತಿದ್ದ ಅಗ್ನಿಯನ್ನೂ ಕಾಣದೆ ಎಲ್ಲಾ ಸ್ಥಳಗಳಲ್ಲಿ ಹುಡುಕುತ್ತಿದ್ದರು. ಆಗ ದೇವತೆಗಳ ಮಧ್ಯದಲ್ಲಿದ್ದ ಯಮ ಮತ್ತು ವರುಣರು ಅಗ್ನಿಯಿರುವ ಸ್ಥಳವನ್ನು ಕಂಡು ಅವನನ್ನು ತಮ್ಮ ಜತೆಯಲ್ಲಿಯೇ ಕರೆದುಕೊಂಡು ದೇವತೆಗಳ ಬಳಿಗೆ ಹೋದರು,

ಧೃಷ್ಟ್ವಾ ದೇವಾಸ್ತ್ವೇನಮೂಚುರಗ್ನೇ ಹವ್ಯಾನಿ ನೋ ವಹ ।
ವರಾನ್ ಗೃಹಾಣ ಚಾಸ್ಮತ್ತಶ್ಚಿತ್ರಭಾನೋ ಭಜಸ್ವ ನಃ ।
ದೇವಯಾನಾನ್ ಸುಗಾನ್ ಪಥಃ ಕುರುಷ್ವ ಸುಮನಾಃ ಸ್ವಯಂ ॥೬೫॥

ಪ್ರತ್ಯುವಾಚ ತಾನಗ್ನಿರ್ವಿಶ್ವೇ ದೇವಾ ಯದೂಚ ಮಾಂ ।
ತತ್ಕರಿಷ್ಯೇ ಜುಷಂತಾಂ ತು ಹೋತ್ರಂ ಪಂಚ ಜನಾ ಮಮ ॥ ೬೬ ॥

ಅಗ್ನಿಯು ತಮ್ಮ ಬಳಿಗೆ ಬಂದುದನ್ನು ದೇವತೆಗಳು ಕಂಡು—ಎಲೈ ಅಗ್ನಿಯೇ, ನೀನು ಚಿತ್ರವಿಚಿತ್ರವಾದ ಕಾಂತಿಯಿಂದ ಬೆಳಗುವವನು. ಇನ್ನು ಮೇಲೆ ನೀನು ನಮಗೆ ಯಜ್ಞದಲ್ಲಿ ಯಜಮಾನರು ಅರ್ಪಿಸುವ ಹವಿರಾದಿಗಳನ್ನು ತಂದೊಯ್ಯಬೇಕು. ನಿನಗೆ ಬೇಕಾದ ವರಗಳನ್ನು ಕೇಳಿಕೋ, ಕೊಡುವೆವು ಎನಲು, ಅಗ್ನಿಯು—ಎಲೈ ದೇವತೆಗಳೇ, ನೀವು ಹೇಳುವಂತೆಯೇ ಮಾಡುತ್ತೇನೆ. ಆದರೆ ಪಂಚಜನರು ನನ್ನ ಹೋತೃತ್ವವನ್ನು ಎಂದರೆ (ಪುರೋಹಿತತ್ವವನ್ನು) ಅಂಗೀಕರಿಸಿ ನನಗೆ ಸಹಾಯಕರಾಗಬೇಕು ಎಂದನು.

ಶಾಲಾಮುಖ್ಯಃ ಪ್ರಣೀತಶ್ಚ ಪುತ್ರೋ ಗೃಹಪತೇಶ್ಚ ಯಃ ।
ಉತ್ತರೋ ದಕ್ಷಿಣಶ್ಚಾಗ್ನಿರೇತೇ ಪಂಚ ಜನಾಃ ಸ್ಮೃತಾಃ ॥ ೬೭ ॥

ಇಲ್ಲಿ ಪಂಚಜನರು ಯಾರು ಎಂಬ ವಿಷಯದಲ್ಲಿ ವಿವರಣೆಯು ಅವಶ್ಯಕವಾದ್ದರಿಂದ ಅದನ್ನು ಹೇಳುವರು. ಈ ವಿಷಯದಲ್ಲಿ ಅಭಿಪ್ರಾಯಭೇದಗಳಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗುವುದು. ಸ್ಥಾನಭೇದಗಳಿಂದ ಅಗ್ನಿಯು ಐದು ವಿಧವೆಂದು ಪ್ರತೀತಿ ಇರುವುದು. (೧) ಯಾಗಶಾಲೆಯ ದ್ವಾರಸಮೀಪದಲ್ಲಿ ಸ್ಥಾಪಿತವಾಗಿರುವ ಅಗ್ನಿ ; (೨) ಅಗ್ನಿಮಥನಸ್ಥಾನದಿಂದ ಉತ್ತರವೇದಿಯ ಬಳಿಗೆ ವಿಧ್ಯುಕ್ತವಾಗಿಯೂ, ಮಂತ್ರಪೂರ್ವಕವಾಗಿಯೂ ಕರೆತರಲ್ಪಡುವ ಯಜ್ಞವೇದಿಯಲ್ಲಿ ಪ್ರತಿಷ್ಠಾಪಿತನಾಗುವ ಅಗ್ನಿ ; (೩) ಯಜಮಾನರ ಗೃಹ ಅಥವಾ ಯಜ್ಞಗೃಹ

ದಲ್ಲಿ ಸ್ಥಾಪಿತವಾಗಿರುವ ಗೃಹಪತಿ (ಗೃಹಕ್ಕೆ ಪಾಲಕನು) ಎಂಬ ಅಗ್ನಿ ; (೪) ಉತ್ತರವೇದಿಯಲ್ಲಿರುವ ಆಹವನೀಯಾಗ್ನಿ ; (೫) ದಕ್ಷಿಣಾಗ್ನಿ ಎಂಬ ಅಗ್ನಿ. ಈ ಐದು ವಿಧವಾದ ಅಗ್ನಿಗಳನ್ನೇ ಪಂಚಜನರೆಂದು ಕೆಲವರು ಹೇಳುವರು.

ಮನುಷ್ಯಾಃ ಪಿತರೋ ದೇವಾ ಗಂಧರ್ವೋರಕರಾಕ್ಷಸಾಃ ।
ಗಂಧರ್ವಾಃ ಪಿತರೋ ದೇವಾ ಅಸುರಾ ಯಕ್ಷರಾಕ್ಷಸಾಃ ॥ ೬೮ ॥

ಯಾಸ್ಕೌಪಮನ್ಯವಾವೇತಾನಾಹತುಃ ಪಂಚ ವೈ ಜನಾನ್ ।

ಮನುಷ್ಯರು, ಪಿತೃಗಳು, ದೇವತೆಗಳು, ಗಂಧರ್ವರು, ಸರ್ಪಗಳು, ರಾಕ್ಷಸರು—ಅಥವಾ ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು, ಯಕ್ಷರಾಕ್ಷಸರು ಎಂಬ ಐದು ವಿಧ ಪಂಗಡಗಳೇ ಪಂಚಜನರು ಎಂದು ಯಾಸ್ಕ ಮತ್ತು ಔಪಮನ್ಯವ ಎಂಬ ಆಚಾರ್ಯರ ಮತವು.

ನಿಷಾದಪಂಚಮಾನ್ ವರ್ಣಾನ್ಮನ್ಯಂತೇ ಶಾಕಟಾಯನಃ ॥ ೬೯ ॥
ಋತ್ವಿಜೋ ಯಜಮಾನಂ ಚ ಶಾಕಪೂಣಿಸ್ತು ಮನ್ಯತೇ ।
ಹೋತಾಧ್ವರ್ಯುಸ್ತಥೋದ್ಗಾತಾ ಬ್ರಹ್ಮಾ ಚೇತಿ ವದಂತಿ ತಾನ್ ॥ ೭೦ ॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದ (ಬೇಡರು) ಎಂಬ ಐದು ಜಾತಿಯ ಜನರಿಗೆ ಪಂಚಜನರೆಂದು ಹೆಸರು ಎಂದು ಶಾಕಟಾಯನ ಎಂಬ ಆಚಾರ್ಯರ ಮತವು. ಹೋತೃ, ಅಧ್ವರ್ಯು, ಉದ್ಗಾತೃ, ಬ್ರಹ್ಮಾ, ಯಜಮಾನ ಎಂಬ ಯಜಮಾನಸಹಿತರಾದ ನಾಲ್ಕುಮಂದಿ ಋತ್ವಿಕ್ಕುಗಳೇ ಪಂಚಜನರೆಂದು ಶಾಕಪೂಣಿ ಎಂಬುವರ ಮತವು.

ಚಕ್ಷುಃ ಶ್ರೋತ್ರಂ ಮನೋ ವಾಕ್ ಚ ಪ್ರಾಣಶ್ಚೇತ್ಯಾತ್ಮವಾದಿನಃ ।
ಗಂಧರ್ವಾಪ್ಸರಸೋ ದೇವಾ ಮನುಷ್ಯಾಃ ಪಿತರಸ್ತಥಾ ॥ ೭೧ ॥

ಸರ್ಪಾಶ್ಚ ಬ್ರಾಹ್ಮಣೇ ಚೈವ ಶ್ರೂಯಂತೇ ಹ್ಯೈತರೇಯಕೇ ।
ಯೇ ಚಾನ್ಯೇ ಪೃಥಿವೀಜಾತಾ ದೇವಾಶ್ಚಾನ್ಯೇಽಥ ಯಜ್ಞಿಯಾಃ ॥ ೭೨ ॥

ಚಕ್ಷುಃ (ಕಣ್ಣು) ಶ್ರೋತ್ರಂ (ಕಿವಿ) ಮನಸ್ಸು, ವಾಕ್ (ನುಡಿತು) ಪ್ರಾಣ ಎಂಬ ಈ ಐದೂ ಪಂಚಜನರೆಂದು ಆತ್ಮವಾದಿಗಳು ಎಂದರೆ ವೇದಾಂತಿಗಳು ಹೇಳುವರು ; ಗಂಧರ್ವರು ಮತ್ತು ಅಪ್ಸರಸ್ಸುಗಳು, ದೇವತೆಗಳು, ಮನುಷ್ಯರು, ಪಿತೃಗಳು; ಸರ್ಪಗಳು ಎಂಬ ಈ ಐದು ಜಾತಿಗಳೂ ಪಂಚಜನರೆಂದು ಪ್ರಸಿದ್ಧಿಯು ಎಂದು ಐತರೇಯಬ್ರಾಹ್ಮಣದಲ್ಲಿ ಹೇಳಿರುವುದು ಇದಲ್ಲದೆ ಭೂಮಿಯಮೇಲೆ ಉತ್ಪನ್ನರಾಗಿರುವ ಯಜ್ಞಾರ್ಹರಾದ ಯಾವ ಐದು ಪಂಗಡದ ಜನರಾಗಲೀ ಅಥವಾ ಮೇಲೆ ಹೇಳಿದ ಪಟ್ಟಿಯಲ್ಲಿಲ್ಲದ ಇತರ ದೇವತೆಗಳಾಗಲಿ ಪಂಚಜನರೆಂದು ಪರಿಗಣಿಸಲ್ಪಡಬಹುದು.

ಆಯುರಸ್ತು ಚ ಮೇ ದೀರ್ಘಂ ಹವೀಂಷಿ ವಿವಿಧಾನಿ ಚ ।
ಅರಿಷ್ಟಿಃ ಪೂರ್ವಜಾನಾಂ ಚ ಭ್ರಾತೄಣಾಮಧ್ವರೇಽಧ್ವರೇ ॥ ೭೩ ॥

ಪ್ರಯಾಜಾಶ್ಚಾನುಯಾಜಾಶ್ಚ ಘೃತಂ ಸೋಮೇ ಚ ಯಃ ಪಶುಃ ।
ಮದ್ದೈವತ್ಯಾನಿ ವೈ ಸಂತು ಯಜ್ಞೋ ಮದ್ದೇವತೋಽಸ್ತು ಚ ॥ ೭೪ ॥

ಅಗ್ನಿಯು ತನಗೆ ಬೇಕಾದ ವರಗಳನ್ನು ಕೇಳುತ್ತಾ ಈ ರೀತಿ ಮುಂದುವರೆದು ಹೇಳಿದನು— ನಾನು ಬಹಳಕಾಲ ಜೀವಿಸುವಂತಾಗಲಿ ಎಂದರೆ ದೀರ್ಘಾಯುಸ್ಸು ಲಭಿಸಲಿ ಮತ್ತು ನನಗೆ ನಾನಾ ವಿಧ ಹವಿಸ್ಸುಗಳು ಅರ್ಪಿಸಲ್ಪಡ ಬೇಕು. ನನ್ನ ಜ್ಯೇಷ್ಠ ಸಹೋದರರಿಗೆ ಅಪಾಯ ಸಂಭವಿಸದಂತೆ ಎಲ್ಲಾ ಯಜ್ಞಗಳಲ್ಲಿಯೂ ರಕ್ಷಣೆಯು ದೊರಕ ಬೇಕು. ಆಹುತಿಗಳನ್ನರ್ಪಿಸುವಾಗ ನನಗೆ ಮೊದಲು ಅರ್ಪಿತವಾಗುವ ಪ್ರಯಾಜಾಹುತಿಗಳೂ, ಕೊನೆಯಲ್ಲಿ ಅರ್ಪಿತ ವಾಗುವ ಅನೂಯಾಜಾಹುತಿಗಳೂ, ಘೃತವೂ (ಆಜ್ಯ ಅಥವಾ ತುಪ್ಪ) ಸೋಮಯಾಗದಲ್ಲಿ ಅರ್ಪಿತವಾಗುವ ಪಶುವೂ ಇವೆಲ್ಲವೂ ನನಗೇ ಸೇರಬೇಕು ಮತ್ತು ಇವುಗಳಿಗೆಲ್ಲಾ ನಾನೇ ದೇವತೆಯಾಗಿರಬೇಕು- ಯಜ್ಞದಲ್ಲಿಯೂ ಸಹ ನಾನೇ ದೇವತೆಯಾಗಿ ನನ್ನ ಪ್ರಭಾವವೇ ಹೆಚ್ಚಾಗಿರಬೇಕು ಎಂದು ತನಗೆ ಬೇಕಾದ ವರಗಳನ್ನು ಕೇಳಿದನು.

ತವಾಗ್ನೇ ಯಜ್ಞ ಇತ್ಯೇತತ್ಪ್ರತ್ಯಾರ್ಧಿ ಸ್ವಿಷ್ಟಕೃಚ್ಚ ಸಃ ।
ಯೆಸ್ಯ ತ್ರೀಣಿ ಸಹಸ್ರಾಣಿ ನವ ತ್ರೀಣಿ ಶತಾನಿ ಚ ॥ ೭೫ ॥

ತ್ರಿಂಶಚ್ಚೈವ ತು ದೇವಾನಾಂ ಸರ್ವಾನೇವ ವರಾನ್ದದುಃ ।

ಹಾಗೆಯೇ ಆಗಲೆಂದು ದೇವತೆಗಳು ಒಪ್ಪಿದರು. ಎಲೈ ಅಗ್ನಿಯೇ, ಈ ಯಜ್ಞವು ನಿನಗೆ ಸೇರಲಿ ಎಂದರೆ ನೀನೇ ಅದರಲ್ಲಿ ಪ್ರಧಾನಪಾತ್ರವನ್ನು ವಹಿಸಿ ಅದನ್ನು ಸಾಂಗವಾಗಿ ನೆರವೇರಿಸು ಎಂದು ಮೂರುಸಾವಿರದ ಮುನ್ನೂರ ಮೂವತ್ತೊಂಭತ್ತು ಮಂದಿ ದೇವತೆಗಳೆಲ್ಲರೂ ಸೇರಿ ಅಗ್ನಿಗೆ ವರವನ್ನು ಕೊಟ್ಟರು.

ತತೋಽಗ್ನಿಃ ಸುಮನಾಃ ಪ್ರೀತೋ ವಿಶ್ವೈರ್ದೇವೈಃ ಪುರಸ್ಕೃತಃ ॥ ೭೬ ॥

ವಿಧೂಯಾಂಗಾನಿ ಯಜ್ಞೇಷು ಚಕ್ರೇ ಹೋತ್ರಮತಂದ್ರಿತಃ ।
ಭ್ರಾತೃಭಿಃ ಸಹಿತಃ ಪ್ರೀತೋ ದಿವ್ಯಾತ್ಮಾ ಹವ್ಯವಾಹನಃ ॥ ೭೭ ॥

ಅನಂತರ ಸಮಸ್ತ ದೇವತೆಗಳಿಂದಲೂ ಗೌರವಿಸಲ್ಪಟ್ಟು ಆ ಅಗ್ನಿಯು ಮನಸ್ಸಿನಲ್ಲಿ ಸಮಾಧಾನವನ್ನು ಹೊಂದಿ ಸಂತುಷ್ಟ ನಾದನು. ಯಾವ ಆತಂಕಗಳೂ ಇಲ್ಲದೆ ಪ್ರೀತಮನಸ್ಕನಾಗಿಯೂ ಹವ್ಯವನ್ನು ವಹಿಸತಕ್ಕವನಾಗಿಯೂ ಇರುವ ಆ ಅಗ್ನಿಯು ತನ್ನ ಸಹೋದರರೊಡನೆ ಸಂತೋಷದಿಂದಿರುತ್ತಾ ಯಜ್ಞಗಳ ಸಮಸ್ತ ಕರ್ಮಾಂಗಗಳಲ್ಲಿಯೂ ಹೋತೃತ್ವ ದನ್ನು ಎಂದರೆ ಯಜ್ಞನಿರ್ವಹಣೆಯನ್ನು ವಹಿಸುತ್ತಿದ್ದನು.

ತಸ್ಯಾಸ್ಥಿ ದೇವದಾರ್ವಾಸೀನ್ಮೇದೋ ಮಾಂಸಂ ಚ ಗುಗ್ಗುಲುಃ ।
ಸುಗಂಧಿತೇಜನಂ ಸ್ನಾಯು ಶುಕ್ರಂ ರಜತಕಾಂಚನೇ ॥ ೭೮ ॥

ರೋಮಾಣಿ ಕಾಶಾಃ ಕೇಶಾಸ್ತು ಕುಶಾಃ ಕೂರ್ಮಾ ನಖಾನಿ ಚ ।
ಆಂತ್ರಾಣಿ ಚೈವಾಪ್ಯವಕಾ ಮಜ್ಜಾ ಸಿಕತಶರ್ಕರಾಃ ॥ ೭೯ ॥

ಅಸೃಕ್ ಪಿತ್ತಂ ಚ ವಿವಿಧಾ ಧಾತವೋ ಗೈರಿಕಾದಯಃ ।
ಏವಮಗ್ನಿಶ್ಚ ದೇವಾಶ್ಚ ಸೂಕ್ತೈರ್ಮಹದಿತಿ ತ್ರಿಭಿಃ ॥ ೮೦ ॥

ಯಜ್ಞಕರ್ಮನಿರ್ವಾಹಕನಾದ ಅಗ್ನಿಯ ಅಸ್ಥಿಯು (ಮೂಳೆಯು) ದೇವದಾರು ವೃಕ್ಷವಾಯಿತು. ಅವನ ಕೊಬ್ಬು (ಮೇದಸ್ಸು) ಮತ್ತು ಮಾಂಸವು ಗುಗ್ಗುಲುವಾಗಿ (ಸುಗಂಧದ್ರವ್ಯವಾಗಿ) ಪರಿವರ್ತಿತವಾಯಿತು. ಅವನ ಸ್ನಾಯುಗಳು

(ಸರಗಳು) ಸುಗಂಧಯುಕ್ತವಾದ ತೇಜನವೆಂಬ ದರ್ಭೆಗಳಾದವು. ಅವನ ರೇತಸ್ಸು ಬೆಳ್ಳಿ ಮತ್ತು ಚಿನ್ನವಾಯಿತು, ರೋಮಗಳು (ಕೂದಲುಗಳು) ಕಾಶವೆಂಬ ಹುಲ್ಲಾಯಿತು. ಶಿರಸ್ಸಿನ ಕೇಶಗಳು ಕುಶವೆಂಬ ದರ್ಭೆಯಾಯಿತು; ಉಗುರುಗಳು ಆಮೆಗಳಾದವು, ಕರಳುಗಳು (entrails) ಅವಕ ಎಂಬ ಬಳ್ಳಿಗಳಾದವು. ಕೊಬ್ಬು, ಮರಳು ಮತ್ತು ಮಣ್ಣಾಯಿತು, ರಕ್ತ ಮತ್ತು ಪಿತ್ತವು ನಾನಾವಿಧ ಗೈರಿಕಾದಿಧಾತುಗಳೂ ಲೋಹಗಳೂ ಆದವು. ಈರೀತಿಯಾಗಿ ದೇವತೆಗಳೂ ಅಗ್ನಿಯೂ ಸೇರಿ ನಡೆಸಿದ ಸಂಭಾಷಣೆಯು ಮಹತ್ತತ್ ಎಂದು ಮೊದಲಾಗುವ ಮೂರು ಸೂಕ್ತಗಳಲ್ಲಿ (೫೧-೫೩ ನೇ ಸೂಕ್ತಗಳಲ್ಲಿ) ವಿವೃತವಾಗಿದೆ.

ಸಾಯಣಭಾಷ್ಯಂ

ಮಹತ್ತದಿತಿ ನವರ್ಚಂ ನವಮಂ ಸೂಕ್ತಂ । ವಜ್ರಭೂತೇನ ವಷಟ್ಕಾರೇಣ ದೇವಾನಾಂ ಹವಿರ್ವಹನೇನ ಚ ಹತೇಷು ಭ್ರಾತೃಷು ಕನಿಷ್ಠಃ ಸೌಚೀಕೋ ನಾಮಾಗ್ನಿರ್ವಷಟ್ಕಾರಹವಿರ್ವಹನಾಭ್ಯಾಂ ಭೀತೋ ದೇವೇಭ್ಯೋ ನಿರ್ಗತ್ಯಾಪಃ ಪ್ರಾವಿಶತ್ । ಸ ಚ ಮತ್ಸ್ಯೈಃ ಪ್ರದರ್ಶಿತಃ ಸನ್ನ್ಯೇಷ್ವಮಾಗತೈರ್ದೇವೈಃ ಸಹೇದಮಾದಿಸೂಕ್ತತ್ರಯೇಣ ಸಂವಾದಂ ಕೃತವಾನ್ । ಅಸ್ಯ ಸೂಕ್ತಸ್ಯ ದ್ವಿತೀಯಾದಿಯುಜಶ್ಚತಸ್ರೋ ವಿಶ್ವೇ ದೇವಾಃ ಶಾಸ್ತನೇತಿ ಷಡೃಚಮುತ್ತರಸೂಕ್ತಂ ಚೇತಿ ದಶರ್ಚೋಽಗ್ನಿವಾಕ್ಯಂ । ಅಯುಜಃ ಪ್ರಥಮಾದ್ಯಾಃ ಪಂಚರ್ಚೋ ಯಮೈಚ್ಛಾವ ಮನಸೇತ್ಯೇಕಾದಶರ್ಚಮುತ್ತರಸೂಕ್ತಂ ಚ ದೇವಾನಾಂ ವಾಕ್ಯಂ । ತತ್ರ ತದದ್ಯ ವಾಚಃ ಪ್ರಥಮಂ ಮಸೀಯೇತಿ ದ್ವ್ಯೃಚಸ್ತ್ವಗ್ನೇರ್ವಾಕ್ಯಂ । ಅತೋಽಗ್ನಿವಾಕ್ಯೇಷು ದೇವಾ ದೇವತಾಗ್ನಿರ್ಋಷಿಃ । ದೇವೋಕ್ತೇಷ್ವಗ್ನಿರ್ದೇವತಾ ದೇವಾ ಋಷಯಃ । ಅನಾದೇಶಪರಿಭಾಷಯೇದಮುತ್ತರಂ ಚ ದ್ವೇ ತ್ರೈಷ್ಟುಭೇ ವಿಶೇಷಾನಭಿಧಾನಾತ್ । ಶಥಾ ಚಾನುಕ್ರಾಂತಂ। ವಷಟ್ಕಾರೇಣ ವೃಕ್ಣೇಷು ಭ್ರಾತೃಷು ಸೌಚೀಕೋಽಗ್ನಿರಪಃ ಪ್ರವಿಶ್ಯ ದೇವೈಃ ಸಮವದದುತ್ತರೈಸ್ತಿಭಿರ್ಮಹತ್ತನ್ನವ ತತ್ರ ಯುಜೋಽಗ್ನಿವಾಕ್ಯಂ ವಿಶ್ವ ಇತ್ಯುತ್ತರಂ ಷಟ್ಕಮಯುಜೋ ದೇವಾನಾಂ ಯಮೈಚ್ಛಾವೇತ್ಯುತ್ತರಂ ಚೈಕಾದಶಕಂ ತದದ್ಯೇತಿ ತು ದ್ವ್ಯೃಚೋಽಗ್ನೇರಿತಿ ॥ ಗತೋ ವಿನಿಯೋಗಃ ॥ ಸೂಕ್ತತ್ರಯೋಕ್ತಾರ್ಥೇ ತೈತ್ತಿರೀಯಬ್ರಾಹ್ಮಣಂ । ಅಗ್ನೇಸ್ತ್ರಯೋ ಜ್ಯಾಯಾಂಸೋ ಭ್ರಾತರ ಆಸನ್ ತೇ ದೇವೇಭ್ಯೋ ಹವ್ಯಂ ವಹಂತಃ ಪ್ರಾಮೀಯಂತ ಸೋಽಗ್ನಿರಬಿಭೇದಿತ್ಥಂ ವಾವ ಸ್ಯ ಅರ್ತಿಮಾರಿಷ್ಯತೀತಿ ಸ ನಿಲಾಯತ ಸೋಽಪಃ ಪ್ರಾವಿಶತ್ತಂ ದೇವಾಃಪ್ರೈಷಮೈಚ್ಛನ್ನಿತ್ಯಾದಿ । ತೈ. ಸಂ. ೨ ೬-೬ । ತಸ್ಮಾದ್ಯಯಾ ದೇವಾ ಅಗ್ನಿಮಾಹುಃ ॥

ಅನುವಾದವು—**ಮಹತ್ತತ್** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತದಲ್ಲಿ ಒಂದು ಉಪಾಖ್ಯಾನವು ಉಕ್ತವಾಗಿರುವುದು—ವಜ್ರಾಯುಧ ಸದೃಶವಾದ ವಷಟ್ಕಾರಾಹುತಿಗಳಿಂದ ದೇವತೆಗಳಿಗೆ ಹವಿಸ್ಸನ್ನು ವಹಿಸುತ್ತಿದ್ದ ಅಗ್ನಿಯ ಮೂರುಮಂದಿ ಜ್ಯೇಷ್ಠ ಸಹೋದರರು ಮೃತರಾಗಲು ಕಿರಿಯವನಾದ ಸೌಚೀಕಾಗ್ನಿಯು, ಇದನ್ನು ಕಂಡು ಹೆದರಿ ವಷಟ್ಕಾರಪೂರ್ವಕವಾದ ಆಹುತಿಯನ್ನು ದೇವತೆಗಳ ಬಳಿಗೆ ಒಯ್ಯುವುದು ಬಹಳ ಅಪಾಯಕರವಾದ ಕೆಲಸವೆಂದು ತಿಳಿದು ಹೇಳದೇ ಕೇಳದೆ ದೇವತೆಗಳ ಬಳಿಯಿಂದ ಓಡಿಹೋಗಿ ನೀರಿನಲ್ಲಿ ಪ್ರವೇಶಿಸಿ ಅವಿತುಕೊಂಡಿದ್ದನು. ಅಗ್ನಿಯು ಎಲ್ಲಿಗೆ ಹೋದನೆಂದು ದೇವತೆಗಳು ಹುಡುಕುತ್ತಿರುವಾಗ ನೀರಿನಲ್ಲಿದ್ದ ಒಂದು ಮೀನು ಅಗ್ನಿಯು ನೀರಿನಲ್ಲಿ ಅಡಗಿಕೊಂಡಿರುವನೆಂದು ದೇವತೆ

ಗಳಿಗೆ ಹೇಳಿತು. ಅನಂತರ ದೇವತೆಗಳು ನೀರಿನ ಬಳಿಗೆ ಬಂದು ಅಗ್ನಿಯನ್ನು ಕಂಡು ನಡೆಸಿದ ಸಂಭಾಷಣೆಯೇ ಈ ಸೂಕ್ತದಲ್ಲಿಯೂ ಮುಂದಿನ ಎರಡು ಸೂಕ್ತಗಳಲ್ಲಿಯೂ ವಿವರಿಸಲಾಗಿದೆ. ಈ ಸೂಕ್ತದಲ್ಲಿ ೨, ೪, ೬, ೮ ಎಂಬ ಸಮ ಸಂಖ್ಯೆಯ ಋಕ್ಕುಗಳೂ ಮುಂದಿನ ಸೂಕ್ತದ ವಿಶ್ವೇದೇವಾಃ ಶಾಸ್ತನ ಎಂದು ಮೊದಲಾಗುವ ಆರು ಋಕ್ಕುಗಳೂ ಒಟ್ಟು ೧೦ ಋಕ್ಕುಗಳೂ ಅಗ್ನಿಯ ವಾಕ್ಯವು. ೧, ೩, ೫, ೭, ೯ ಎಂಬ ಅಸಮಸಂಖ್ಯೆಯ ೫ ಋಕ್ಕುಗಳೂ ಯಮ್ಯೈಚ್ಛಾಮ ಎಂಬ ೫೩ ನೇ ಸೂಕ್ತದ ೪-೫ ನೇ ಋಕ್ಕುಗಳನ್ನು ಬಿಟ್ಟು ಉಳಿದ ೯ ಋಕ್ಕುಗಳು, ಒಟ್ಟು ೧೪ ಋಕ್ಕುಗಳು ದೇವತೆಗಳ ವಾಕ್ಯವು. ೫೩ ನೇ ಸೂಕ್ತದ ೪-೫ ನೇ ಋಕ್ಕುಗಳು ಅಗ್ನಿಯ ವಾಕ್ಯವು. ಆದ್ದರಿಂದ ಅಗ್ನಿವಾಕ್ಯಗಳಿರುವ ಋಕ್ಕುಗಳಿಗೆ ಅಗ್ನಿಯೇ ಋಷಿಯು, ದೇವತೆಗಳು ದೇವತೆಯು; ದೇವತೆಗಳ ವಾಕ್ಯವಿರುವ ಋಕ್ಕುಗಳಿಗೆ ದೇವತೆಗಳು ಋಷಿಯು, ಅಗ್ನಿಯು ದೇವತೆಯು. ಈ ಸೂಕ್ತ ಮತ್ತು ಮುಂದಿನ ಸೂಕ್ತದ ಋಕ್ಕುಗಳು ತ್ರಿಷ್ಟುಪ್ ಛಂದಸ್ಸುವು. ಅನುಕ್ರಮಣಿಕೆಯಲ್ಲಿ—**ವಷಟ್ಕಾರೇಣ ವೃಕ್ಣೇಷು ಭ್ರಾತೃಷು ಸೌಚೀಕೋಽಗ್ನಿರಪಃ ಪ್ರವಿಶ್ಯ ದೇವೈಃ ಸಮವದದುತ್ತರೈಸ್ತ್ರಿಭಿರ್ಮಹತ್ತನ್ನವ ತತ್ರ ಯುಜೋಽಗ್ನಿವಾಕ್ಯಂ ವಿಶ್ವ ಇತ್ಯುತ್ತರಂ ಷಟ್ಕಮಯುಜೋ ದೇವಾನಾಂ ಯಮ್ಯೈಚ್ಛಾಮೇತ್ಯುತ್ತರಂ ಜೈಕಾದಶಕಂ ತದದ್ಯೇತಿ ತು ಪ್ರೃಚ್ಛೋಽಗ್ನೇಃ** । ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಈ ಮೂರು ಸೂಕ್ತಗಳಲ್ಲಿ ಹೇಳಿರುವ ವಿಷಯವು ತೈತ್ತಿರೀಯ ಸಂಹಿತೆಯ—**ಅಗ್ನೇಸ್ತ್ರಯೋ ಜ್ಯಾಯಾಗ್ಂಸೋ ಭ್ರಾತರ ಆಸನ್ತೇ ದೇವೇಭ್ಯೋ ಹವ್ಯಂ ವಹನ್ತಃ ಪ್ರಾಮಿಮಾಯಂತ ಸೋಽಗ್ನಿರಬಿಭೇದಿತ್ಥಂ ವಾವ ಸ್ಯ ಆರ್ತಿಮಾರಿಷ್ಯತೀತಿ ಸ ನಿಲಾಯತ ಸೋಽಪಃ ಪ್ರಾವಿಶತ್ತಂ ದೇವತಾಃ ಪ್ರೈಷಮೈಚ್ಛನ್** । ಎಂದು ಮೊದಲಾಗುವ ವಾಕ್ಯಗಳಲ್ಲಿ (ತೈ. ಸಂ. ೨-೬-೬) ತಿಳಿಸಲಾಗಿದೆ. ಮಹತ್ತತ್ ಎಂಬ ಪ್ರಕೃತಸೂಕ್ತದ ಮೊದಲನೆಯ ಋಕ್ಕಿನಲ್ಲಿ ದೇವತೆಗಳು ಅಗ್ನಿಯನ್ನು ದ್ದೇಶಿಸಿ ಹೇಳುವರು.

ಸೂಕ್ತ—೫೧

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೧ ॥
ಅಷ್ಟಕ—೬ ॥ ಅಧ್ಯಾಯ—೧ ॥ ವರ್ಗ—೧೦, ೧೧॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—೧, ೩, ೫, ೭, ೯. ದೇವಾಃ । ೨, ೪, ೬, ೮. ಅಗ್ನಿಃ ಸೌಚೀಕಃ ॥
ದೇವತಾ—೧, ೩, ೫, ೭, ೯. ಅಗ್ನಿಃ ಸೌಚೀಕಃ । ೨, ೪, ೬, ೮. ದೇವಾಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಮಹತ್ತದುಲ್ಬಂ ಸ್ಥವಿರಂ ತದಾಸೀದ್ಯೇನಾವಿಷ್ಟಿತಃ ಪ್ರವಿವೇಶಿಥಾಪಃ ।
ವಿಶ್ವಾ ಅಪಶ್ಯದ್ಬಹುಧಾ ತೇ ಅಗ್ನೇ ಜಾತವೇದಸ್ತನ್ವೋ ದೇವ ಏಕಃ ॥ ೧ ॥

ಪದಪಾಠಃ

ಮಹತ್ । ತತ್ । ಉಲ್ಬಂ । ಸ್ಥವಿರಂ । ತತ್ । ಆಸೀತ್ । ಯೇನ । ಆವಿಷ್ಟಿತಃ । ಪ್ರವಿವೇಶಿಥ । ಅಪಃ ॥

ವಿಶ್ವಾಃ । ಅಪಶ್ಯತ್ । ಬಹುಧಾ । ತೇ । ಅಗ್ನೇ । ಜಾತವೇದಃ । ತನ್ವಃ । ದೇವಃ । ಏಕಃ ॥ ೧ ॥

ಸಾಯಣಭಾಷ್ಯಂ

ತದುಲ್ಬಂ ವಪ್ಟ್ಯಮಾಣಂ ಪ್ರಾವರಣಂ ಮಹತ್ ಸ್ಥವಿರಮತ್ಯಂತಂ ಸ್ಥೂಲಂ ಚ ತದಾಸೀತ್ ಯೇನೋಲ್ಬೇನಾವಿಷ್ಟಿತ ಆವೇಷ್ಟಿತಃ ಸನ್ ಹೇ ಅಗ್ನೇ ಪ್ರವಿವೇಶಿಥಾಪಃ ಉದಕಾನಿ ಪ್ರವಿಷ್ಟವಾನಸಿ । ಹೇ ಅಗ್ನೇ ಜಾತವೇದೋ ಜಾತಪ್ರಜ್ಞಾನ ವಿಶ್ವಾಃ ಸರ್ವಾಸ್ತನ್ವಸ್ತನೂಃ ಸರ್ವಾಣ್ಯಂಗಾನಿ ಬಹುಧಾ ಬಹುಪ್ರಕಾರಮೇಕೋ ದೇವೋಽಪಶ್ಯತ್ । ದೃಷ್ಟವಾನ್ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಯೇನ**—ಯಾವ ಹೊದ್ದಿಕೆಯಿಂದ । **ಆವಿಷ್ಟಿತಃ**—ನೀನು ಆವರಿಸಲ್ಪಟ್ಟವನಾಗಿ । **ಅಪಃ**—ಉದಕಗಳನ್ನು । **ಪ್ರವಿವೇಶಿಥ**—ಪ್ರವೇಶಿಸಿದೆಯೋ । **ತತ್ ಉಲ್ಬಂ**—ಆ ಹೊದ್ದಿಕೆಯು । **ಮಹತ್**—ಮಹತ್ಸ್ವರೂಪವುಳ್ಳದ್ದೂ । **ಸ್ಥವಿರಂ ಅಸೀತ್**—ಸ್ಥೂಲ (ದಪ್ಪ) ವಾದದ್ದೂ ಆಗಿದೆ । **ಜಾತವೇದಃ**—ಜಾತವೇದೋರೂಪನಾದ ಎಲೈ ಅಗ್ನಿಯೇ । **ತೇ**—ನಿನ್ನ । **ವಿಶ್ವಾಃ ತನ್ವಃ**—ಸಕಲ ಸ್ವರೂಪಗಳನ್ನೂ । **ಬಹುಧಾ**—ಅನೇಕ ಪ್ರಕಾರವಾಗಿ । **ಏಕಃ ದೇವಃ**—ಒಬ್ಬ ದೇವನು ಮಾತ್ರ । **ಅಪಶ್ಯತ್**—ನೋಡಿದ್ದಾನೆ.

ಭಾವಾರ್ಥ

ದೇವತೆಗಳು—ಎಲೈ ಅಗ್ನಿಯೇ, ಯಾವ ಉಲ್ಬರೂಪವಾದ ಹೊದ್ದಿಕೆಯಿಂದ ನೀನು ಆವರಿಸಲ್ಪಟ್ಟವನಾಗಿ ಉದಕಗಳನ್ನು ಪ್ರವೇಶಿಸಿದೆಯೋ ಆ ಹೊದ್ದಿಕೆಯು ಮಹತ್ಸ್ವರೂಪವುಳ್ಳದ್ದೂ, ಸ್ಥೂಲವಾದದ್ದೂ ಆಗಿದೆ. ಜಾತವೇದೋರೂಪನಾದ ಎಲೈ ಅಗ್ನಿಯೇ, ನಿನ್ನ ಸಕಲಸ್ವರೂಪಗಳನ್ನೂ ಅನೇಕ ಪ್ರಕಾರವಾಗಿ ಒಬ್ಬ ದೇವನು ಮಾತ್ರ ನೋಡಿದ್ದಾನೆ.

English Translation

(The gods speak :) Great and very dense is the covering enveloped by which, Agni, you have entered into the waters. Agni Jatavedas, one deity has beheld all your mainfold forms,

ವಿಶೇಷವಿಷಯಗಳು

ಉಲ್ಬಂ—ಯಾಸ್ಕರು **ಈ** ಶಬ್ದಕ್ಕೆ **ಉಲ್ಬಮೂರ್ಣೋತೇರ್ವೃಣೋತೇರ್ವಾ । ಮಹತ್ತದುಲ್ಬಂ ಸ್ಥವಿರಂ ತದಾಸೀದಿತ್ಯಪಿ ನಿಗಮೋ ಭವತಿ** (ನಿ. ೬-೩೫) ಎಂದು ನಿರ್ವಚನವನ್ನು ಹೇಳಿದ್ದಾರೆ. ಮುಚ್ಚು, ಆಚ್ಛಾದಿಸು ಎಂಬರ್ಥವುಳ್ಳ **ಊರ್ಣು** ಧಾತುವಿನಿಂದಾಗಲಿ, **ವೃ** ಧಾತುವಿನಿಂದಾಗಲಿ ಉಲ್ಬಶಬ್ದವು ನಿಷ್ಪನ್ನವಾಗಿದೆ ಆವರಣ, ಹೊದ್ದಿಕೆ ಎಂದರ್ಥ. **ಉಲ್ಬಂ ಗರ್ಭೋ ಜರಾಯು** ಎಂಬ ಶ್ರುತಿವಾಕ್ಯದಲ್ಲಿ ಹೇಳಿರುವಂತೆ ಉಲ್ಬ, ಗರ್ಭ, ಜರಾಯು ಎಂಬ ಪದಗಳು ಪರ್ಯಾಯನಾಮಗಳು. ಶಿಶುವನ್ನು ಆವರಿಸಿರುವ (ಮುಚ್ಚಿರುವ) ಚರ್ಮದ ಪದರಕ್ಕೆ ಗರ್ಭವೆಂದು ಹೆಸರು. ಉಳಿದ ಶಬ್ದಗಳಿಗೂ ಇದೇ ಅರ್ಥವು.

ಸಂಹಿತಾಪಾಠಃ

ಕೋ ಮಾ ದದರ್ಶ ಕತಮಃ ಸ ದೇವೋ ಯೋ ಮೇ ತನ್ವೋ ಬಹುಧಾ ಪರ್ಯಪಶ್ಯತ್ ।
ಕ್ವಾಹ ಮಿತ್ರಾವರುಣಾ ಕ್ಷಿಯಂತ್ಯಗ್ನೇರ್ವಿಶ್ವಾಃ ಸಮಿಧೋ ದೇವಯಾನೀಃ ॥

ಪದಪಾಠಃ

ಕಃ । ಮಾ । ದದರ್ಶ । ಕತಮಃ । ಸಃ । ದೇವಃ । ಯಃ । ಮೇ । ತನ್ವಃ । ಬಹುಧಾ । ಪರಿ॒ಅಪಶ್ಯತ್ ॥
ಕ್ವ । ಅಹ । ಮಿತ್ರಾವರುಣಾ । ಕ್ಷಿಯಂತಿ । ಅಗ್ನೇಃ । ವಿಶ್ವಾಃ । ಸಂ॒ಇಧಃ । ದೇವ॒ಯಾನೀಃ ॥ ೨ ॥

ಸಾಯಣಭಾಷ್ಯಂ

ಇದಮಗ್ನೇರ್ವಾಕ್ಯಂ । ಏಕೋ ದೇವೋ॒ಽಪಶ್ಯದಿತ್ಯುಕ್ತೇ ಪೃಚ್ಛತಿ । ಕೋ ಮಾ ಮಾಂ ದದರ್ಶ ದೃಷ್ಟವಾನ್ । ಸ ದೇವಃ ಕತಮಃ । ಯೋ ಮೇ ಮಮ ತನ್ವಸ್ತನೂರ್ಬಹುಧಾ ಬಹುಪ್ರಕಾರಂ ಸ್ಥಿತಾಃ ಪರ್ಯಪಶ್ಯತ್ ಪರಿದೃಷ್ಟವಾನ್ । ಹೇ ಮಿತ್ರಾವರುಣಾ ಮಿತ್ರಾವರುಣೌ ಅಗ್ನೇರ್ಮಮ ವಿಶ್ವಾಃ ಸರ್ವಾಃ ಸಮಿಧೋ ದೀಪ್ತಾ ದೇವಯಾನೀರ್ದೇವಯಾನಸಾಧನಭೂತಾಸ್ತನ್ವೋ ದೃಷ್ಟಾ ಇತ್ಯುಕ್ತಂ ಯದಿ ದೃಷ್ಟಾಶ್ಚೇತ್ತರ್ಹಿ ಕ್ವ ಕ್ಷಿಯಂತಿ ಕ್ವ ನಿವಸಂತೀತ್ಯೇವಂ ದೇವಾನಾಂ ಪುರತೋ ವರ್ತಮಾನೌ ಮಿತ್ರಾವರುಣಾವಾಹಾಗ್ನಿಃ ॥

ಪ್ರತಿಪದಾರ್ಥ

ಕಃ—ಯಾರು । **ಮಾ**—ನನ್ನನ್ನು । **ದದರ್ಶ**—ನೋಡಿದ್ದಾನೆ ? । **ಯಃ**—ಯಾರು । **ಮೇ**—ನನ್ನ । **ತನ್ವಃ**—ಶರೀರಗಳನ್ನು । **ಬಹುಧಾ**—ಅನೇಕ ಪ್ರಕಾರವಾಗಿರುವುದನ್ನು । **ಪರ್ಯಪಶ್ಯತ್**—ನೋಡಿರುವನೋ । **ಸಃ**—ಅಂತಹ । **ದೇವಃ**—ದೇವನು । **ಕತಮಃ**—ದೇವತೆಗಳ ನಡುವೆ ಯಾರು ? । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ,। **ಅಗ್ನೇಃ**—ಅಗ್ನಿರೂಪನಾದ ನನ್ನ। **ಸಮಿಧಃ**—ಪ್ರಭಾವಯುತವಾದ। **ವಿಶ್ವಾಃ ದೇವಯಾನೀಃ**—ದೇವತೆಗಳಿಗೆ ಹವಿಸ್ಸನ್ನು ವಹಿಸುವ ಸಕಲ ಸಾಧನಗಳೂ । **ಕ್ವ**—ಎಲ್ಲಿ । **ಕ್ಷಿಯಂತಿ**—ವಾಸಿಸುತ್ತವೆ ?.

ಭಾವಾರ್ಥ

ಅಗ್ನಿ—ನನ್ನ ಸ್ವರೂಪವನ್ನು ನಿಜವಾಗಿಯೂ ಅರಿತಿರುವವರು ಯಾರು ? ನನ್ನ ಅನೇಕ ಪ್ರಕಾರವಾದ ಶರೀರಗಳನ್ನು ದೇವತೆಗಳ ನಡುವೆ ಯಾರು ಅರಿತಿದ್ದಾರೆ ? ಎಲೈ ಮಿತ್ರಾವರುಣರೇ, ಅಗ್ನಿರೂಪನಾದ ನನ್ನ ಪ್ರಭಾವಯುತವಾದ ಮತ್ತು ದೇವತೆಗಳಿಗೆ ಹವಿಸ್ಸನ್ನು ವಹಿಸುವ ಸಕಲ ಸಾಧನಗಳೂ ಎಲ್ಲಿ ಇರುತ್ತವೆ ?

English Translation

(Agni speaks :) Who has beheld me ? Which is it of the deities who has fully seen my manifold forms ? Where, Mitra and Varvna, do Agni's luminous vehicles of the gods abide ?

ಸಂಹಿತಾಪಾಠಃ

ಐಚ್ಛಾವಮು ತ್ವಾ ಬಹುಧಾ ಜಾತವೇದಃ ಪ್ರವಿಷ್ಟಮಗ್ನೇ ಅಪ್ಸ್ವೋಷಧೀಷು ।
ತಂ ತ್ವಾ ಯಮೋ ಅಚಿಕೇಚ್ಚಿತ್ರಭಾನೋ ದಶಾಂತರುಷ್ಯಾದತಿರೋಚಮಾನಂ ॥ ೩ ॥

ಪದಪಾಠಃ

ಐಚ್ಛಾವ । ತ್ವಾ । ಬಹುಧಾ । ಜಾತವೇದಃ । ಪ್ರವಿಷ್ಟಂ । ಅಗ್ನೇ । ಅಪ್ಸು । ಓಷಧೀಷು ॥
ತಂ । ತ್ವಾ । ಯಮಃ । ಅಚಿಕೇತ್ । ಚಿತ್ರಭಾನೋ ಇತಿ ಚಿತ್ರ ಭಾನೋ । ದಶ ಅಂತರುಷ್ಯಾತ್ ।
ಅತಿ ರೋಚಮಾನಂ ॥ ೩ ॥

ಸಾಯಣಭಾಷ್ಯಂ

ಏವಮಗ್ನಿನಾ ಪೃಷ್ಟಾ ದೇವಾ ಅಗ್ನಿಂ ಬ್ರುವಂತಿ । ಹೇ ಜಾತವೇದೋ ಜಾತಪ್ರಜ್ಞಾಗ್ನೇ ತ್ವಾ ತ್ವಾಮನ್ವೈಚ್ಛಾವ । ಕೀದೃಶಂ ತ್ವಾಂ । ಅಪ್ಸುದಕೇಷ್ವೋಷಧೀಷು ಚ ಬಹುಧಾ ಪ್ರವಿಷ್ಟಂ । ಅನ್ವಿಷ್ಯ ಚ ತಂ ತಾದೃಶಂ ಪ್ರವಿಷ್ಟಂ ತ್ವಾ ತ್ವಾಂ ಯಮೋ ದೇವೋಽಚಿಕೇತ್ ಜ್ಞಾತವಾನ್ ಹೇ ಚಿತ್ರಭಾನೋ ಚಾಯನೀಯರಶ್ಮೇ । ಕುತ್ರ ಸ್ಥಿತಂ ಜ್ಞಾತವಾನಿತಿ ತದುಚ್ಯತೇ । ದಶಾಂತರುಷ್ಯಾತ್ । ಅಂತರುಷ್ಯಂ ಗೂಢಮಾವಾಸಸ್ಥಾನಂ ತಚ್ಚ ಸ್ಥಾನಂ ದಶಸಂಖ್ಯೋಪೇತಂ। ತಾದೃಶಂ ಸ್ಥಾನಮತಿರೋಚಮಾನಮತೀತ್ಯ ಪ್ರಕಾಶಮಾನಂ । ಅಗ್ನೇರ್ಹಿ ಗೂಢಾನಿ ದಶ ಸ್ಥಾನಾನಿ ಭವಂತಿ ಪೃಥಿವ್ಯಾದಯಸ್ತ್ರಯೋ ಲೋಕಾ ಅಗ್ನಿ-ವಾಯ್ವಾದಿತ್ಯಾಸ್ತ್ರಯೋ ದೇವಾ ಅಪ ಓಷಧಯೋ ವನಸ್ಪತಯಃ ಸ್ಪಾಣಿಶರೀರಮಿತಿ ದಶ ಸ್ಥಾನಾನಿ ॥

ಪ್ರತಿಪದಾರ್ಥ

ಜಾತವೇದಃ—ಜಾತವೇದೋರೂಪನಾದ । **ಅಗ್ನೇ**—ಎಲೈ ಅಗ್ನಿಯೇ । **ಅಪ್ಸು**—ಜಲಗಳಲ್ಲಿಯೂ । **ಓಷಧೀಷು**—ಲತಾದಿಗಳಲ್ಲಿಯೂ । **ಬಹುಧಾ**—ಅನೇಕ ಕ್ರಮವಾಗಿ । **ಪ್ರವಿಷ್ಟಂ**—ಪ್ರವೇಶಿಸಿದ । **ತ್ವಾ**—ನಿನ್ನನ್ನು । **ಐಚ್ಛಾವ**—ಅರಿಯಲು ಇಚ್ಛಿಸಿ ಹುಡುಕಿದೆವು । **ಚಿತ್ರಭಾನೋ**—ಪೂಜ್ಯವಾದ (ಆಕರ್ಷಕವಾದ) ಪ್ರಭೆಯುಳ್ಳ ಎಲೈ ಅಗ್ನಿಯೇ । **ದಶಾಂತರುಷ್ಯಾತ್**—ನಿನ್ನ ರಹಸ್ಯವಾದ ಹತ್ತು ವಾಸಸ್ಥಾನಗಳಿಂದಲೂ ।

ಅತಿರೋಚಮಾನಂ—ಹೊರಹೊರಟು ಪ್ರಕಾಶಿಸುವ। **ತಂ ತ್ವಾ**—ಪ್ರಸಿದ್ಧನಾದ ನಿನ್ನನ್ನು। **ಯಮಃ**—ಯಮನು। **ಅಚಿಕೇತ್**—ಅರಿತಿದ್ದಾನೆ.

ಭಾವಾರ್ಥ

ದೇವತೆಗಳು-ಜಾತವೇದೋರೂಪನಾದ ಎಲೈ ಅಗ್ನಿಯೇ, ಜಲಗಳಲ್ಲಿಯೂ, ಲತಾದಿಗಳಲ್ಲಿಯೂ ಅನೇಕಪ್ರಕಾರವಾಗಿಪ್ರವೇಶಿಸಿದ ನಿನ್ನನ್ನು ಅರಿಯಲು ನಾವೆಲ್ಲರೂ ಇಚ್ಛಿಸಿ ಹುಡುಕಿದೆವು. ಅಕರ್ಷಕವಾದ ಪ್ರಭೆಯುಳ್ಳ ಎಲೈ ಅಗ್ನಿಯೇ, ಪೃಥಿವೀ, ಅಂತರಿಕ್ಷ, ಸ್ವರ್ಗ, ಅಗ್ನಿ, ವಾಯು, ಆದಿತ್ಯ, ಆಪಃ, ಓಷಧಿ, ವನಸ್ಪತಿ ಪ್ರಾಣಿಶರೀರವೆಂಬ ನಿನ್ನ ರಹಸ್ಯವಾದ ಹತ್ತು ವಾಸಸ್ಥಾನಗಳಿಂದಲೂ ಹೊರಹೊರಟು ಪ್ರಕಾಶಿಸುವ ಪ್ರಸಿದ್ಧನಾದ ನಿನ್ನನ್ನು ಯಮನು ಅರಿತಿದ್ದಾನೆ.

English Translalion

(The gods :) We sought for you, Agni Jatavedas, who had entered in many ways into the waters, into the plants : Yama recognized you, who have adorable rays, blazing from your ten hiding-places.

ಸಂಹಿತಾಪಾಠಃ

ಹೋತ್ರಾದಹಂ ವರುಣ ಬಿಭ್ಯದಾಯಂ ನೇದೇವ ಮಾ ಯುನಜನ್ನತ್ರ ದೇವಾಃ।
ತಸ್ಯ ಮೇ ತನ್ವೋ ಬಹುಧಾ ನಿವಿಷ್ಟಾ ಏತಮರ್ಥಂ ನ ಚಿಕೇತಾಹಮಗ್ನಿಃ ॥೪॥

ಪದಪಾಠಃ

ಹೋತ್ರಾತ್ । ಅಹಂ । ವರುಣ । ಬಿಭ್ಯತ್ । ಆಯಂ । ನ । ಇತ್ । ಏವ । ಮಾ । ಯುನಜನ್ । ಅತ್ರ। ದೇವಾಃ ।
ತಸ್ಯ । ಮೇ । ತನ್ವಃ । ಬಹುಧಾ । ನಿವಿಷ್ಟಾಃ । ಏತಂ । ಅರ್ಥಂ । ನ । ಚಿಕೇತ । ಅಹಂ । ಅಗ್ನಿಃ ॥೪॥

ಸಾಯಣಭಾಷ್ಯಂ

ಅನಯಾ ದೇವಗಣಾ ಮಾಂ ಜ್ಞಾತವಂತ ಇತಿ ನಿಶ್ಚಿತ್ಯ ಗೂಹನಸ್ಯ ಪ್ರಯೋಜನಮಾಹ । ಹೇ ವರುಣ ದೇವ ಅಹಂ ಹೋತ್ರಾದ್ಧೋತವ್ಯಾತ್ । ಹವಿರ್ವಹನಾದಿತ್ಯರ್ಥಃ । ತಸ್ಮಾದ್ಬಿಭ್ಯದಾಯಂ । ಆಗತವಾನಸ್ಮಿ । ಅತೋ ಮಾ ಮಾಮೇವೈವಂ ಪೂರ್ವಪ್ರಕಾರೇಣಾತ್ರಾಸ್ಮಿನ್ಹವಿರ್ವಹನಪ್ರಯೋಜನೇ ನೇದ್ಯುನಜನ್ ಮೈವ ಯೋಜಯಂತ ದೇವಾಃ । ತಸ್ಯ ತಾದೃಶಸ್ಯ ಬಿಭ್ಯತೋ ಮೇ ತನ್ವೋ ಬಹುಧಾ

ನಿವಿಷ್ಟಾ ಆಪ್ಸು । ಏತಮರ್ಥಮೇತದ್ಧವಿರ್ಧಹನಕಾರ್ಯಮಗ್ನಿರಹಂ ನ ಚಿಕೇತ । ನ ಬುಧ್ಯೇ। ನಾಂಗೀಕರೋಮಿ ॥

ಪ್ರತಿಪದಾರ್ಥ

ವರುಣ—ಎಲೈ ವರುಣನೇ । **ಅಹಂ**—ನಾನು । **ಹೋತ್ರಾತ್**—ಹವಿರ್ಧಹನಕರ್ಮದಿಂದ । **ಬಿಭ್ಯತ್**—ಬೆದರಿದವನಾಗಿ । **ಆಯಂ**—ಇಲ್ಲಿ ಬಂದಿದ್ದೇನೆ । **ಮಾ**—ನನ್ನನ್ನು । **ಏವ**—ಹಿಂದಿನಂತೆ । **ಅತ್ರ**—ಹವಿರ್ಧಹನಕರ್ಮದಲ್ಲಿ । **ದೇವಾಃ**—ದೇವತೆಗಳು । **ನ ಯುನಜನ್ ಇತ್**—ಖಂಡಿತ ಯೋಜಿಸಲಾರರು । **ತಸ್ಯ**—ಅದೇ ರೀತಿ ಬೆದರಿದ । **ಮೇ ತನ್ವಃ**—ನನ್ನ ಶರೀರಗಳು । **ಬಹುಧಾ**—ಅನೇಕಪ್ರಕಾರವಾಗಿ । **ನಿವಿಷ್ಟಾಃ**—(ಜಲಾದಿಗಳಲ್ಲಿ) ಅಡಗಿವೆ । **ಏತಮರ್ಥಂ**—ಈ ಕಾರ್ಯಕ್ಕಾಗಿ । **ಅಗ್ನಿಃ**—ಅಗ್ನಿಯಾದ। **ಅಹಂ**—ನಾನು । **ನ ಚಿಕೇತ**—ಖಂಡಿತ ಒಪ್ಪುವುದಿಲ್ಲ.

ಭಾವಾರ್ಥ

ಅಗ್ನಿ-ಎಲೈ ವರುಣನೇ, ನಾನು ಹವಿರ್ಧಹನಕರ್ಮದಿಂದ ಬೆದರಿದವನಾಗಿ ಇಲ್ಲಿ ಬಂದಿದ್ದೇನೆ. ನನ್ನನ್ನು ಹಿಂದಿನಂತೆ ಹವಿರ್ಧಹನಕರ್ಮದಲ್ಲಿ ದೇವತೆಗಳು ಖಂಡಿತ ಸೇರಿಸಲಾರರು. ಆ ಕಾರಣದಿಂದಲೇ ಬೆದರಿದ ನನ್ನ ಶರೀರಗಳು ಅನೇಕ ಪ್ರಕಾರವಾಗಿ ಜಲಾದಿಗಳಲ್ಲಿ ಅಡಗಿವೆ. ಈ ಕಾರ್ಯಕ್ಕೆ ನಾನು ಖಂಡಿತ ಒಪ್ಪುವುದಿಲ್ಲ.

English Translation

(Agni :) Divine Varuna, I have come hither, being afraid of Hotra, lest the gods should again associate me with him ; my forms have therefore entered (into the waters)in various places. I, Agni, do not consent (to undertake) that office.

ಸಂಹಿತಾಪಾಠಃ

ಏಹಿ ಮನುರ್ದೇವಯುರ್ಯಜ್ಞಕಾಮೋಽರಂಕೃತ್ಯಾ ತಮಸಿ ಕ್ಷೇಷ್ಯಗ್ನೇ।
ಸುಗಾನ್ಪಥಃ ಕೃಣುಹಿ ದೇವಯಾನಾನ್ವಹ ಹವ್ಯಾನಿ ಸುಮನಸ್ಯಮಾನಃ ॥೫॥

ಪದಪಾಠಃ

ಆ । ಇಹಿ । ಮನುಃ । ದೇವಯುಃ । ಯಜ್ಞಕಾಮಃ । ಅರಂಕೃತ್ಯ । ತಮಸಿ । ಕ್ಷೇಷಿ । ಅಗ್ನೇ ॥
ಸುಗಾನ್ । ಪಥಃ । ಕೃಣುಹಿ । ದೇವಯಾನಾನ್ । ವಹ । ಹವ್ಯಾನಿ । ಸುಮನಸ್ಯಮಾನಃ ॥ ೫ ॥

ಸಾಯಣಭಾಷ್ಯಂ

ಅಗ್ನಿನೈವಮುಕ್ತಾ ದೇವಾಃ ಪುನರಗ್ನಿಮಾಹ್ವಯಂತಿ । ಹೇ ಅಗ್ನೇ ಏಹಿ । ಆಗಚ್ಛ । ಮನುರ್ಮನುಷ್ಯೋ ಯಷ್ಟಾ ಮನನೀಯೋ ಮನೂ ರಾಜಾ ವಾ ದೇವಯುರ್ದೇವಾನ್ಯಹ್ವಮಿಚ್ಛನ್ ಯಜ್ಞಕಾಮಶ್ಚ ಭವತಿ । ಅತ ಏಹಿ । ಕಿಂ ಕುರ್ವನ್ ಯಜ್ಞಕಾಮೋ ಭವತೀತಿ ಚೇತ್ ಉಚ್ಯತೇ । ಅರಂಕೃತ್ಯ ಕೇವಲಂ ತೇಜಃಪುಂಜಮೇವಾಲಂಕುರ್ವನ್ । ಯದ್ವೇದಮುತ್ತರತ್ರ ಸಂಬಧ್ಯತೇ । ತ್ವಮಲಂಕೃತ್ಯಾತ್ಮಾನಮಲಂಕುರ್ವನ್ ತಮಸ್ಯನ್ಯೈರ್ಜ್ಞಾತುಮಶಕ್ಯೇಽಂಧಕಾರೇ ಕ್ಷೇಷಿ । ನಿವಸಸಿ । ಹೇ ಅಗ್ನೇ ಅಗತ್ಯ ಚ ದೇವಯಾನಾನ್ ದೇವಾನ್ಪ್ರತಿ ಯೈರ್ಮನುಷ್ಯಾ ಗಚ್ಛಂತಿ ತಾನ್ಪಥೋ ಮಾರ್ಗಾನ್ ಸುಗಾನ್ಕೃಣುಹಿ । ಕುರು ॥ ಕೃವಿ ಹಿಂಸಾಕರಣಯೋಶ್ಚ । ಧಿನ್ವಿಕೃಣ್ವ್ಯೋರಚ್ಛೇತ್ಯುಪ್ರತ್ಯಯಃ ॥ ಸಂಮತ್ಯಾ ನೋ ಯಜ್ಞನಿಷ್ಪತ್ತ್ಯೇರ್ದೇವಯಾನಾಃ ಸುಪಥಾ ಭವಂತಿ । ವಹ ಹವ್ಯಾನ್ಯಸ್ಮದೀಯಾನಿ ಸುಮನಸ್ಯಮಾನಃ ಸೌಮನಸ್ಯಮಾಚರಂಸ್ತ್ವಂ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಏಹಿ**—ದಯಮಾಡು । **ಮನುಃ**—ದೊರೆಯಾದ ಮನುವು (ಅಥವಾ ಅವನ ಸಂತತಿಯವನಾದ ಮಾನವನು) । **ದೇವಯುಃ**—ದೇವತೆಗಳನ್ನು ಪೂಜಿಸಲಿಚ್ಛೆಯುಳ್ಳವನೂ । **ಯಜ್ಞಕಾಮಶ್ಚ**—ಯಜ್ಞವನ್ನು ನೆರವೇರಿಸಲಿಚ್ಛೆಯುಳ್ಳವನೂ ಆಗಿದ್ದಾನೆ । **ಅರಂಕೃತ್ಯ**—ನಿನ್ನನ್ನು ಮಾತ್ರ ಅಲಂಕರಿಸಿಕೊಂಡು । **ತಮಸಿ**—ಯಾರಿಗೂ ತಿಳಿಯದ ರಹಸ್ಯಪ್ರದೇಶದಲ್ಲಿ । **ಕ್ಷೇಷಿ**—ವಾಸಿಸುತ್ತೀಯೆ । (ನೀನು ಬಂದು) **ದೇವಯಾನಾನ್**—ದೇವತೆಗಳು ಸಂಚರಿಸುವ । **ಪಥಃ**—ಮಾರ್ಗಗಳನ್ನು । **ಸುಗಾನ್**—ಸಂಚರಿಸಲು ಯೋಗ್ಯವಾದವನ್ನಾಗಿ । **ಕೃಣುಹಿ**—ಮಾಡು । **ಸುಮನಸ್ಯಮಾನಃ**—ನಮಗೆ ಒಳ್ಳೆಯದನ್ನು ಮಾಡಲಿಚ್ಛೆಯುಳ್ಳವನಾಗಿ । **ಹವ್ಯಾನಿ**—ಹವಿಸ್ಸುಗಳನ್ನು । **ವಹ**—ವಹಿಸು.

ಭಾವಾರ್ಥ

ದೇವತೆಗಳು—ಎಲೈ ಅಗ್ನಿಯೇ, ನಮ್ಮ ಪ್ರಾರ್ಥನೆಗಳನ್ನಂಗೀಕರಿಸಿ ದಯಮಾಡು. ದೊರೆಯಾದ ಮನುವು ಯಜ್ಞವನ್ನಾಚರಿಸಿ ದೇವತೆಗಳನ್ನು ಪೂಜಿಸಲಿಚ್ಛಿಸುತ್ತಾನೆ. ನೀನು ನಿನ್ನನ್ನು ಮಾತ್ರ ಅಲಂಕರಿಸಿಕೊಂಡು ಯಾರಿಗೂ ತಿಳಿಯದ ರಹಸ್ಯಪ್ರದೇಶದಲ್ಲಿ ವಾಸಿಸುತ್ತೀಯೆ. ಇಲ್ಲಿ ಬಂದು ದೇವತೆಗಳು ಸಂಚರಿಸುವ ಮಾರ್ಗಗಳನ್ನು ಸಂಚರಿಸಲು ಯೋಗ್ಯವನ್ನಾಗಿ ಮಾಡು. ನಮಗೆ ಒಳ್ಳೆಯದನ್ನು ಮಾಡಲಿಚ್ಛೆಯುಳ್ಳವನಾಗಿ ಹವಿಸ್ಸುಗಳನ್ನು ವಹಿಸು.

English Translation

(The gods:) Come, Agni, the devout Manu (is) desirous of offering sacrifice adorning yourself, you abide in darkness: make straight the paths traversed by the gods, and with a benevolent mind convey our oblations,

ಸಂಹಿತಾಪಾಠಃ

ಅಗ್ನೇ ಪೂರ್ವೇ ಭ್ರಾತರೋ ಅರ್ಥಮೇತಂ ರಥೀವಾಧ್ವನಮನ್ವಾವರೀವುಃ ।

ತಸ್ಮಾದ್ಭಿಯಾ ವರುಣ ದೂರಮಾಯಂ ಗೌರೋ ನ ಕ್ಷೇಪ್ನೋರವಿಜೇ ಜ್ಯಾಯೋಃ ॥ ೬ ॥

ಪದಪಾಠಃ

ಅಗ್ನೇಃ । ಪೂರ್ವೇ । ಭ್ರಾತರಃ । ಅರ್ಥಂ । ಏತಂ । ರಥೀಽಇವ । ಅಧ್ವಾನಂ । ಅನು । ಅ । ಅವರೀವುರಿತಿ ॥

ತಸ್ಮಾತ್ । ಭಿಯಾ । ವರುಣ । ದೂರಂ । ಆಯಂ । ಗೌರಃ । ನ । ಕ್ಷೇಪ್ನೋಃ । ಅವಿಜೇ । ಜ್ಯಾಯೋಃ ॥

ಸಾಯಣಭಾಷ್ಯಂ

ಅನಯೋಗ್ನಿಃ ಸ್ವಪಲಾಯನನಿಮಿತ್ತಮಾಹ । ಹೇ ದೇವಾ ಅಗ್ನೇ ರ್ಮಮ ಪೂರ್ವೇ ಪೂರ್ವಮುತ್ಪನ್ನಾ ಭ್ರಾತರೋ ಭೂಪತಿರ್ಭುವನಪತಿರ್ಭೂತಾನಾಂ ಪತಿರಿತಿ ತ್ರಯೋಽಗ್ರಜಾ ಏತಮರ್ಥಂ ಹವಿರ್ವಹನಾಖ್ಯಮರ್ಥಮನ್ವಾವರೀವುಃ । ಅನುಕ್ರಮೇಣ ವೃತವಂತಃ ॥ ತತ್ರ ವೃಣೋತೇರ್ಯಙ್ಲುಗಂತಾಲ್ಲುಙಿ ಋೀಶ್ಛಾಂದಸೋ ಲುಕ್ । ಬಹುಲಂ ಛಂದಸೀತ್ಯುಕ್ತಂ ॥ ಅವರಣೇ ದೃಷ್ಟ್ವಾಂತತಃ । ರಥೀವಾಧ್ವಾನಂ । ಅಧ್ವಾನಂ ಯಥಾ ರಥೀ ವೃಣುತೇ ತದ್ವತ್ । ತೇ ಭ್ರಾತರಸ್ತಥಾ ಕುರ್ವಂತೋ ಹತಾಃ । ತಸ್ಮಾನ್ಮರಣಾದ್ಭಿಯಾ ಭೀತ್ಯಾ ಹೇ ವರುಣ ದೂರಂ ದೇಶಮಾಯಂ । ಕಿಂ ಚ ಕ್ಷೇಪ್ನೋರಿಷುಕ್ಷೇಪ್ತುರ್ಧನುಷೋ ಜ್ಯಾಯೋಃ ಸಕಾಶಾದ್ಗೌರೋ ನ ಮೃಗ ಇವ ಸ ಯಥಾ ಬಿಭೇತಿ ಚಲತಿ ವಾ ತದ್ವದವಿಜೇ । ಅಕಂಪೇ । ಓವಿಜೀ ಭಯಚಲನಯೋಃ । ಅನುದಾತ್ತೇತ್ತ್ವಾದಾದಿಕಃ । ತಸ್ಯ ಲಙ್ಯುತ್ತಮೇರೂಪಂ ॥

ಪ್ರತಿಪದಾರ್ಥ

(ಎಲೈ ದೇವತೆಗಳೇ) **ರಥೀ**—ರಥವನ್ನು ನಡೆಸುವವನು । **ಅಧ್ವಾನಂ ಇವ**—ಮಾರ್ಗವನ್ನೇ ಸುತ್ತಿ ಸಂಚರಿಸಿ ಕೃಶನಾಗುವಂತೆ । **ಅಗ್ನೇಃ**—ನನ್ನ । **ಪೂರ್ವೇ ಭ್ರಾತರಃ**—ಹಿರಿಯ ಸಹೋದರರು । **ಏತಂ ಅರ್ಥಂ**—ಇದೇ ಹವಿರ್ವಹನಕರ್ಮವನ್ನು ನಿರ್ವಹಿಸಿ । **ಅನ್ವಾವರೀವುಃ**—ಒಬ್ಬರಾದಮೇಲೆ ಇನ್ನೊಬ್ಬರು ಹತರಾದರು । **ವರುಣ**—ಎಲೈ ವರುಣನೇ । **ಗೌರಃ**—ಗೌರಸಂಜ್ಞಕವಾದ ಮೃಗವು । **ಕ್ಷೇಪ್ನೋಃ**—ಬಾಣವನ್ನು ಬಿಡುವ ಧನುರ್ಧಾರಿಯ ! **ಜ್ಯಾಯೋಃ ನ ಅವಿಜೇ**—ಹೆದೆಯಿಂದ ಬೆದರಿ ಓಡುವಂತೆ । **ತಸ್ಮಾದ್ಭಿಯಾ**—ಅದೇ ಭಯದಿಂದ । **ದೂರಂ ಆಯಂ**—ನಾನು ದೂರದೇಶಕ್ಕೆ ಬಂದಿದ್ದೇನೆ.

ಭಾವಾರ್ಥ

ಅಗ್ನಿ —ಎಲೈ ವರುಣನೇ, ಸಾರಥಿಯು ಮಾರ್ಗವನ್ನೇ ಸುತ್ತಿ ಸಂಚರಿಸಿ ಕೃಶನಾಗುವಂತೆ, ನನ್ನ ಹಿರಿಯ ಸಹೋದರರು ಇದೇ ಹವಿರ್ವಹನಕರ್ಮವನ್ನು ನಿರ್ವಹಿಸಿ ಒಬ್ಬರಾದಮೇಲೆ ಇನ್ನೊಬ್ಬರು ಹತರಾದರು. ಎಲೈವರುಣನೇ, ಸಾರಸಂಜ್ಞಕವಾದ ಮೃಗವು ಬಾಣವನ್ನು ಬಿಡುವ ಧನುರ್ಧಾರಿಯ ಹೆದೆಯಿಂದ ಬೆದರಿ ನಡಗುತ್ತ ಓಡುವಂತೆ, ನಾನೂ ಅದೇ ಭಯದಿಂದ ನಡಗುತ್ತ ಈ ದೂರದೇಶಕ್ಕೆ ಓಡಿಬಂದಿದ್ದೇನೆ.

English Translation

(Agni :) The elder brothers of Agni performed that duty, as the driver of a chariot covers the road. (They were slain), and therefore, Varuna, I fled afar through fear. I trembled as a wild ox (trembles) at the bowstring of the archer.

ಸಂಹಿತಾಪಾಠಃ

ಕುರ್ಮಸ್ತ ಆಯುರಜರಂ ಯದಗ್ನೇ ಯಥಾ ಯುಕ್ತೋ ಜಾತವೇದೋ ನ ರಿಷ್ಯಾಃ ।
ಅಥಾ ವಹಾಸಿ ಸುಮನಸ್ಯಮಾನೋ ಭಾಗಂ ದೇವೇಭ್ಯೋ ಹವಿಷಃ ಸುಜಾತ॥

ಪದಪಾಠಃ

ಕುರ್ಮಃ । ತೇ । ಆಯುಃ । ಅಜರಂ । ಯತ್ । ಅಗ್ನೇ । ಯಥಾ । ಯುಕ್ತಃ । ಜಾತವೇದಃ । ನ । ರಿಷ್ಯಾಃ ॥
ಅಥ । ವಹಾಸಿ । ಸುಮನಸ್ಯಮಾನಃ । ಭಾಗಂ । ದೇವೇಭ್ಯಃ । ಹವಿಷಃ । ಸುಜಾತ ॥ ೬ ॥

ಸಾಯಣಭಾಷ್ಯಂ

ಇದಂ ದೇವಾನಾಂ ವಾಕ್ಯಂ । ಹೇ ಅಗ್ನೇ ಯದಾಯುರಾಯುಷ್ಯಮಜರಂ ಜರಾರಹಿತಮಸ್ತಿ ತತ್ತೇ ಕುರ್ಮಃ । ತಥಾ ತೇನಾಯುಷಾ ಯುಕ್ತಸ್ತ್ವಂ ಹೇ ಜಾತವೇದೋ ಜಾತಪ್ರಜ್ಞ ಯಥಾ ನ ರಿಷ್ಯಾ ನ ಮ್ರಿಯಸೇ ತಥಾ ಕುರ್ಮಃ । ಅಥ ವಹಾಸಿ ವಹ ಸುಮನಸ್ಯಮಾನಃ ಸೌಮನಸ್ಯಂ ಕುರ್ವನ್। ವೋಢವ್ಯಂ ವಹನ್ । ತದೇವ ದರ್ಶಯತಿ । ಹವಿಷೋ ಯಜಮಾನಪ್ರತ್ತಸ್ಯ ಭಾಗಂ । ಕೇಭ್ಯಃ । ದೇವೇಭ್ಯಃ । ಹೇ ಸುಜಾತ ಶೋಭನಜನ್ಮನ್ನಗ್ನೇ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ। **ಯತ್ ಆಯುಃ**—ಯಾವ ಆಯುಸ್ಸು । **ಅಜರಂ**—ಕ್ಷಯಿಸುವುದಿಲ್ಲವೋ ಅದನ್ನು । **ತೇ**—ನಿನಗೆ । **ಕುರ್ಮಃ**—ಅನುಗ್ರಹಿಸುತ್ತೇವೆ । **ಜಾತವೇದಃ**—ಜಾತವೇದೋರೂಪನಾದ ಎಲೈ ಅಗ್ನಿಯೇ । **ಯುಕ್ತಃ**—ಆ ಆಯುಸ್ಸಿನಿಂದ ಕೂಡಿದ ನೀನು । **ಯಥಾ ನ ರಿಷ್ಯಾಃ**—ನಾಶವಾಗದಂತೆ ನಾವು ನೋಡಿಕೊಳ್ಳುತ್ತೇವೆ । **ಅಥ**—ಅದುದರಿಂದ । **ಸುಜಾತ**—ಉತ್ತಮವಾದ ಜನ್ಮವುಳ್ಳ ಎಲೈ ಅಗ್ನಿಯೇ ।

ಸುಮನಸ್ಯಮಾನಃ—ಒಳ್ಳೆಯದನ್ನು ಮಾಡಲಿಚ್ಛೆಯುಳ್ಳವನಾಗಿ । **ಹವಿಷಃ**—ಹವಿಸ್ಸಿನ ಭಾಗಗಳನ್ನು । **ದೇವೇಭ್ಯಃ**—ಆಯಾ ದೇವತೆಗಳಿಗೆ । **ವಹಾಸಿ**—ವಹಿಸು.

ಭಾವಾರ್ಥ

ದೇವತೆಗಳು—ಎಲೈ ಅಗ್ನಿಯೇ, ಯಾವ ಆಯುಸ್ಸು ಕ್ಷಯಿಸುವುದಿಲ್ಲವೋ ಆ ಆಯುಸ್ಸನ್ನು ನಿನಗೆ ಅನುಗ್ರಹಿಸುತ್ತೇವೆ. ಜಾತವೇದೋರೂಪನಾದ ಎಲೈ ಅಗ್ನಿಯೇ, ಆ ಆಯುಸ್ಸಿನಿಂದ ಕೂಡಿದ ನೀನು ನಾಶವಾಗದಂತೆ ನಾವು ನೋಡಿಕೊಳ್ಳುತ್ತೇವೆ. ಆದುದರಿಂದ ಉತ್ತಮವಾದ ಜನ್ಮವುಳ್ಳ ಎಲೈ ಅಗ್ನಿಯೇ, ಒಳ್ಳೆಯದನ್ನು ಮಾಡಲಿಚ್ಛೆಯುಳ್ಳವನಾಗಿ ಆಯಾ ದೇವತೆಗಳಿಗೆ ಹವಿಸ್ಸಿನ ಭಾಗಗಳನ್ನು ವಹಿಸು.

English Translation

(The gods :) We grant you life, Agni, which (is) exempt from decay, so that thus endowed, Jatavedas, your will not die; so, becoming conciliated, well-born Agni, bear their portion of the oblation to the gods.

ಸಂಹಿತಾಪಾಠಃ

ಪ್ರಯಾಜಾನ್ಮೇ ಅನುಯಾಜಾಂಶ್ಚ ಕೇವಲಾನೂರ್ಜಸ್ವಂತಂ ಹವಿಷೋ ದತ್ತ ಭಾಗಂ ।
ಘೃತಂ ಚಾಪಾಂ ಪುರುಷಂ ಚೌಷಧೀನಾಮಗ್ನೇಶ್ಚ ದೀರ್ಘಮಾಯುರಸ್ತು ದೇವಾಃ ॥ ೪ ॥

ಪದಪಾಠಃ

ಪ್ರಽಯಾಜಾನ್ । ಮೇ । ಅನುಽಯಾಜಾನ್ । ಚ । ಕೇವಲಾನ್ । ಊರ್ಜಸ್ವಂತಂ । ಹವಿಷಃ । ದತ್ತ । ಭಾಗಂ ॥
ಘೃತಂ । ಚ । ಅಪಾಂ । ಪುರುಷಂ । ಚ । ಓಷಧೀನಾಂ । ಅಗ್ನೇಃ । ಚ । ದೀರ್ಘಂ । ಆಯುಃ । ಅಸ್ತು ದೇವಾಃ ॥ ೪ ॥

ಸಾಯಣಭಾಷ್ಯಂ

ಅನೇನಾಗ್ನಿರ್ಹವಿರ್ವಹನೇ ದಾತಾವ್ಯಾನುಕ್ತ್ವಾ ದತ್ತೇತಿ ಪ್ರತಿಜಾನಾತಿ । ಹೇ ದೇವಾಃ ಮೇ ಮಹ್ಯಂ ಪ್ರಯಾಜಾನ್ ಪ್ರಧಾನಸ್ಯ ಪ್ರಮುಖೇ ಯಷ್ಟವ್ಯಾನೇತನ್ನಾಮಕಾನ್ ಹವಿರ್ಭಾಗಾನ್ ತಥಾನುಯಾಜಾನನುಪ್ರಧಾನಾತ್ಪಶ್ಚಾದ್ಯಷ್ಟವ್ಯಾನೇತನ್ನಾಮಕಾನ್ ಕೇವಲಾನಸಾಧಾರಣಾನ್ದತ್ತ । ಪ್ರಯಚ್ಛತ। ತಥೋರ್ಜಸ್ವಂತಂ ಪ್ರತ್ಯಭಿಘಾರಣಾತ್ಸಾರವಂತಂ ಹವಿಷಃ ಸರ್ವಸ್ಯಾಪಿ ಚರುಪುರೋಡಾಶಾದೇರ್ಭಾಗಂ

स्विष्टकृदाख्यं भागं दत्त । अथवोर्ज्जस्वंतं हविषो भागं प्रयाजानुयाजाख्यं दत्तेति योज्यं । किंचासां सारभूतं साध्य उत्पन्नं वा घृतमाज्यभागादिसाधनमोषधीनामोषधीभ्य उत्पन्नं पुरुषं च भागं दत्त । किंचाग्नेर्ममापि दीर्घमायुश्चास्तु । वषट्कारकृतवधभयं मा भूदित्यर्थः । अमुमितिहासं प्रस्तुत्य कौषीतकिब्राह्मणं । तस्मादाहुराग्नेयाः प्रयाजा आग्नेया अनुयाजा आग्नेयमाज्यमाग्नेयः पुरोडाश इति । शरीरदायो ह वा अग्नयो भवंतीति च ब्राह्मणं पुरुषाहुतिर्यस्य प्रियतमेति च ॥

ಪ್ರತಿಪದಾರ್ಥ

ದೇವಾಃ—ಎಲೈ ದೇವತೆಗಳೇ । **ಮೇ**—ನನಗೆ । **ಪ್ರಯಾಜಾನ್**—(ಆರಂಭದಲ್ಲಿ ಅರ್ಪಿಸುವ) ಪ್ರಯಾಜಸಂಜ್ಞಕಗಳಾದ ಹವಿಸ್ಸುಗಳನ್ನು । **ಅನುಯಾಜಾನ್**—ಅನಂತರ ಅರ್ಪಿಸುವ ಅನುಯಾಜಸಂಜ್ಞಕಗಳಾದ ಹವಿಸ್ಸುಗಳನ್ನು । **ಕೇವಲಾನ್**—ಕೇವಲ ನನಗೆ ಮಾತ್ರ ಸೇರುವಂತೆ । **ದತ್ತ**—ಒದಗಿಸಿರಿ । **ಹವಿಷಃ**.... ಹವಿಸ್ಸಿನ । **ಊರ್ಜಸ್ವಂತಂ**—ಸಾರವತ್ತಾದ । **ಭಾಗಂ**—ಭಾಗವನ್ನು । (**ದತ್ತ**—ಕೊಡಿರಿ) । **ಅಪಾಂ**—ಉದಕಗಳಿಗೆ ಸಾರಭೂತವಾದ । **ಘೃತಂ**—ಆಜ್ಯವನ್ನೂ । **ಓಷಧೀನಾಂ**—ಓಷಧಿಗಳಿಗೆ ಸಾರಭೂತವಾದ । **ಪುರುಷಂ**—ಪುರುಷಭಾಗವನ್ನು (ಅನ್ನವನ್ನು) ಕೊಡಿರಿ । **ಅಗ್ನೇಃ**—ನನಗೆ । **ದೀರ್ಘಂ ಆಯುಃ**—ಬಹುಕಾಲ ಬದಕುವ ಶಕ್ತಿಯು । **ಅಸ್ತು**—ಉಂಟಾಗಲಿ.

ಭಾವಾರ್ಥ

ಅಗ್ನಿ—ಎಲೈ ದೇವತೆಗಳೇ, ಪ್ರಯಾಜಸಂಜ್ಞಕಗಳಾದ ಹವಿಸ್ಸುಗಳನ್ನೂ ಅನುಯಾಜಸಂಜ್ಞಕಗಳಾದ ಹವಿಸ್ಸುಗಳನ್ನೂ ಕೇವಲ ನನಗೆ ಮಾತ್ರ ಸೇರುವಂತೆ ಅರ್ಪಿಸಿರಿ. ನನಗೆ ಹವಿಸ್ಸಿನ ಸಾರವತ್ತಾದ ಭಾಗವನ್ನು ಕೊಡಿರಿ. ಉದಕಗಳಿಗೆ ಸಾರಭೂತವಾದ ಆಜ್ಯವನ್ನೂ, ಓಷಧಿಗಳಿಗೆ ಸಾರಭೂತವಾದ ಪುರುಷಭಾಗವನ್ನೂ (ಅನ್ನವನ್ನೂ) ಕೊಡಿರಿ. ನನಗೆ ಬಹುಕಾಲ ಬದಕುವ ಶಕ್ತಿಯುಂಟಾಗಲಿ.

English Translation

(Agni :) Only grant to me, deities, the concentrated portion of the oblation, the Prayajas and the Anuyajas exclusively : (give me) the butter (the essence) of the waters and man (the essence) of the plants; and let the life of Agni be long.

ವಿಶೇಷವಿಷಯಗಳು

ಪ್ರಕೃತ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಪ್ರಯಾಜಾಃ ಮತ್ತು ಅನುಯಾಜಾಃ ಎಂಬ ಶಬ್ದಗಳ ಪ್ರಯೋಗವಿದೆ. ಈ ಶಬ್ದಗಳಿಗೆ ಅರ್ಥವೇನು ಎಂಬ ವಿಷಯದಲ್ಲಿ ಯಾಸ್ಕರು ನಿರ್ವಚನವನ್ನು ಈರೀತಿ ಹೇಳಿದಾರೆ—

ಅಥ ಕಿಂ ದೇವತಾಃ ಪ್ರಯಾಜಾನುಯಾಜಾಃ । ಆಗ್ನೇಯಾ ಇತ್ಯೇಕೇ । ಪ್ರಯಾಜಾನ್ನೋ ಅನು-ಯಾಜಾಂಶ್ಚ ಕೇವಲಾನೂರ್ಜಸ್ವಂತಂ ಹವಿಷೋ ದತ್ತಭಾಗಂ । ಘೃತಂ ಚಾಪಾಂ ಪುರುಷಂ ಚೌಷಧೀನಾಮಗ್ನೇಶ್ಚ ದೀರ್ಘಮಾಯುರಸ್ತು ದೇವಾಃ । ತವ ಪ್ರಯಾಜಾ ಅನುಯಾಜಾಶ್ಚ ಕೇವಲ ಊರ್ಜಸ್ವಂತೋ ಹವಿಷಃ ಸಂತು ಭಾಗಾಃ । ತವಾಗ್ನೇ ಯಜ್ಞೋ ಽಯಮಸ್ತು ಸರ್ವಸ್ತುಭ್ಯಂ ನಮಂತಾಂ ಪ್ರದಿಶಶ್ಚತಸಃ ॥ ಆಗ್ನೇಯಾ ವೈ ಪ್ರಯಾಜಾ ಆಗ್ನೇಯಾ ಅನುಯಾಜಾ ಇತಿ ಚ ಬ್ರಾಹ್ಮಣಂ ॥

(ನಿ. ೮-೨೩)

ಪ್ರಯಾಜಾನುಯಾಜಾಃ ಎಂದರೆ ಯಾವ ದೇವತೆಗಳು ? ಎಂದು ಪ್ರಶ್ನೆಮಾಡಿ ಅದಕ್ಕೆ—**ಆಗ್ನೇಯಾ ಇತ್ಯೇಕೇ** ಅಗ್ನಿಯೇ ಆ ಮಂತ್ರಗಳ ದೇವತೆಯು ಎಂದು ಕೆಲವರ ಮತವೆಂದು ಇಲ್ಲಿ ಹೇಳಿದೆ. ಇಲ್ಲಿ ಸ್ವಲ್ಪ ವಿವರಣೆಯು ಆವಶ್ಯಕವು. ಯಜ್ಞಾದಿಕರ್ಮಗಳಲ್ಲಿ ಪರೋಕ್ಷವಾದ ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ಆಹುತಿಯನ್ನರ್ಪಿಸಿ ಹೋಮ ಮಾಡುವುದು ಸರಿಯಷ್ಟೆ. ಉದ್ದಿಷ್ಟರಾದ ಮತ್ತು ಆಹೂತರಾದ (ಕರೆಯಲ್ಪಟ್ಟ) ದೇವತೆಗಳನ್ನುದ್ದೇಶಿಸಿ ಮಾಡುವ ಆಹುತಿಗಳಿಗೆ ಪ್ರಧಾನಾಹುತಿ (ಮುಖ್ಯಾಹುತಿ) ಗಳೆಂದು ಹೆಸರು. ಈ ಪ್ರಧಾನಾಹುತಿಗಳಿಗೆ ಪೂರ್ವಭಾವಿಯಾಗಿಯೂ ಅನಂತರವೂ ಕೆಲವು ಉಪಹೋಮಗಳನ್ನು ಮಾಡುವುದು ರೂಢಿಯು. ಆದ್ದರಿಂದ ಪ್ರಧಾನಾಹುತಿಗಳಿಗೆ ಪೂರ್ವಭಾವಿಯಾಗಿ ಮಾಡುವ ಉಪಹೋಮಗಳಿಗೆ ಪ್ರಯಾಜಾಃ ಎಂದೂ ಪ್ರಧಾನಾಹುತಿಯ ಅನಂತರ ಮಾಡುವ ಉಪಹೋಮಕ್ಕೆ ಅನುಯಾಜಾ ಎಂದೂ ಹೆಸರು. ಮೇಲೆ ಉದಾಹರಿಸಿರುವ ಎರಡು ಋಕ್ಕುಗಳಲ್ಲಿ ಈ ಪ್ರಯಾಜಾನುಯಾಜಗಳೆಂಬ ಆಹುತಿಗಳನ್ನು ತನ್ನನ್ನುದ್ದೇಶಿಸಿಯೇ ಅರ್ಪಿಸಬೇಕೆಂದೂ ಆ ಆಹುತಿಗಳಿಗೆ ತಾನೇ ದೇವತೆಯಾಗಬೇಕೆಂದೂ ಅಗ್ನಿಯು ದೇವತೆಗಳಿಂದ ವರವನ್ನು ಪಡೆದ ಪ್ರಕಾರ ದೇವತೆಗಳು ಹಾಗೇ ಆಗಲೆಂದು ವರವನ್ನು ಕೊಟ್ಟರು. ಆದಕಾರಣ ಈ ಪ್ರಯಾಜಾನುಯಾಜಾಮಂತ್ರಗಳಿಗೂ ಆಹುತಿಗಳಿಗೂ ಅಗ್ನಿಯೇ ದೇವತೆಯೆಂದು ಕೆಲವರ ಮತವೆಂದು ಯಾಸ್ಕರು ಇಲ್ಲಿ ವಿವರಿಸಿದಾರೆ. ಈ ವಿಷಯದಲ್ಲಿ **ಆಗ್ನೇಯಾ ವೈ ಪ್ರಯಾಜಾ ಆಗ್ನೇಯಾ ಅನುಯಾಜಾ** ಎಂಬ ಬ್ರಾಹ್ಮಣವಾಕ್ಯವನ್ನೂ ಉದಾಹರಿಸಿದಾರೆ. ಇವೇ ರೀತಿ ಬೇರೆಬೇರೆ ಮತದವರ ಅಭಿಪ್ರಾಯಗಳನ್ನೂ ಈರೀತಿ ತಿಳಿಸಿದಾರೆ—

ಛಂದೋದೇವತಾ ಇತ್ಯಪರಂ । ಛಂದಾಂಸಿ ವೈ ಪ್ರಯಾಜಾಶ್ಛಂದಾಂಸ್ಯನುಯಾಜಾ ಇತಿ ಚ ಬ್ರಾಹ್ಮಣಂ ॥

ಋತುದೇವತಾ ಇತ್ಯಪರಂ । ಋತವೋ ವೈ ಪ್ರಯಾಜಾ ಋತವೋ೭ನುಯಾಜಾ ಇತಿ ಚ ಬ್ರಾಹ್ಮಣಂ ॥

ಪಶುದೇವತಾ ಇತ್ಯಪರಂ । ಪಶವೋ ವೈ ಪ್ರಯಾಜಾ ಪಶವೋ೭ನುಯಾಜಾ ಇತಿ ಚ ಬ್ರಾಹ್ಮಣಂ॥

ಪ್ರಾಣದೇವತಾ ಇತ್ಯಪರಂ । ಪ್ರಾಣಾ ವೈ ಪ್ರಯಾಜಾಃ ಪ್ರಾಣಾ ವಾ ಅನುಯಾಜಾ ಇತಿ ಚ ಬ್ರಾಹ್ಮಣಂ ॥

ಆತ್ಮದೇವತಾ ಇತ್ಯಪರಂ। ಆತ್ಮಾ ವೈ ಪ್ರಯಾಜಾ ಆತ್ಮಾ ವಾ ಅನುಯಾಜಾ ಇತಿ ಚ ಬ್ರಾಹ್ಮಣಂ॥

ಕೆಲವರು ಪ್ರಯಾಜಾನುಯಾಜಮಂತ್ರಗಳಿಗೆ ಛಂದಸ್ಸೇ ದೇವತೆಯೆಂದು ಹೇಳುವರು. ಈ ವಿಷಯದಲ್ಲಿ—**ಛಂದಾಂಸಿ ವೈ ಪ್ರಯಾಜಾಶ್ಛಂದಾಂಸ್ಯನುಯಾಜಾ** ಎಂಬ ಬ್ರಾಹ್ಮಣವಾಕ್ಯನಿರುವುದು. ಮತ್ತೆ ಕೆಲವರು ಈ ಮಂತ್ರಗಳಿಗೆ

ಋತುಗಳೇ (ವಸಂತಾದಿ ಋತುಗಳು) ದೇವತೆಗಳೆಂದು ಹೇಳುವರು. ಇದನ್ನು—**ಋತವೋ ವೈ ಪ್ರಯಾಜಾ ಋತವೋಽನುಯಾಜಾ** ಎಂಬ ಬ್ರಾಹ್ಮಣವಾಕ್ಯವು ಸಮರ್ಥಿಸುವುದು. ಮತ್ತೆ ಕೆಲವರು ಇವುಗಳಿಗೆ ಗೋವುಗಳೇ ಮೊದಲಾದ ಪಶುಗಳೇ ದೇವತೆಯೆಂದು ಹೇಳುವರು. ಇದಕ್ಕೆ **ಪಶವೋ ವೈ ಪ್ರಯಾಜಾ ಪಶವೋಽನುಯಾಜಾ** ಎಂಬ ಬ್ರಾಹ್ಮಣವಾಕ್ಯವೇ ಆಧಾರವಾಗಿರುವುದು. ಮತ್ತೆ ಕೆಲವರು ಈ ಮಂತ್ರಗಳಿಗೆ ಪ್ರಾಣವೇ ದೇವತೆಯೆಂದು ಹೇಳಿ **ಪ್ರಾಣಾ ವಾ ಪ್ರಯಾಜಾಃ ಪ್ರಾಣಾ ವಾ ಅನುಯಾಜಾ** ಎಂಬ ಬ್ರಾಹ್ಮಣವಾಕ್ಯವನ್ನು ಆಧಾರವಾಗಿ ತೋರಿಸುವರು. ಮತ್ತೆ ಕೆಲವರು ಈ ಮಂತ್ರಗಳಿಗೆ ಆತ್ಮವೇ ದೇವತೆಯೆಂದು ಹೇಳುವರು. ಇದನ್ನು ಸಮರ್ಥಿಸುವುದಕ್ಕಾಗಿ **ಆತ್ಮಾ ವೈ ಪ್ರಯಾಜಾ ಆತ್ಮಾ ವಾ ಅನುಯಾಜಾ** ಎಂಬ ಬ್ರಾಹ್ಮಣವಾಕ್ಯವೇ ಪ್ರಮಾಣವಾಗಿರುವುದೆಂದು ಪ್ರತಿಪಾದಿಸುವರು.

ಆಗ್ನೇಯಾ ಇತಿ ತು ಸ್ಥಿತಿಃ। ಭಕ್ತಿಮಾತ್ರಮಿತರತ್। ಕಿಮರ್ಥಂ ಪುನರಿದಮುಚ್ಯತೇ। ಯಸ್ಯೈ ದೇವತಾಯೈ ಹವಿರ್ಗೃಹೀತಂ ಸ್ಯಾತ್ತಾಂ ಮನಸಾ ಧ್ಯಾಯೇದ್ವಷಟ್‌ಕರಿಷ್ಯನ್ನಿತಿ ಹ ವಿಜ್ಞಾಯತೇ ॥

(ನಿ. ೮-೨೨)

ಇಷ್ಟೆಲ್ಲಾ ಮತಭೇದಗಳೂ ಅಭಿಪ್ರಾಯಭೇದಗಳೂ ಇದ್ದರೂ ಈ ಮಂತ್ರಗಳಿಗೆ ಅಗ್ನಿಯೇ ದೇವತೆಯೆಂಬ ಮತವೇ ಪ್ರಮಾಣಾರ್ಹವಾದುದು ಎಂದು ನಿರ್ಧರಿಸಲ್ಪಟ್ಟಿರುವುದು. ಹೀಗಿದ್ದರೂ ನಾನಾ ಮತಬೇಧಗಳನ್ನು ಹೇಳಿರುವುದು ಯಾಕೆ ? ಇದರಿಂದ ಏನು ಪ್ರಯೋಜನ ಎಂದರೆ ಪ್ರಯಾಜಾನುಯಾಜಮಂತ್ರಗಳನ್ನು ವಷಟ್ಕಾರಪೂರ್ವಕವಾಗಿ ಅಗ್ನಿಯಲ್ಲಿ ಆಹುತಿಯನ್ನರ್ಪಿಸುವಾಗ ಆಯಾ ಮಂತ್ರಗಳ ದೇವತೆಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಆಹುತಿಯನ್ನರ್ಪಿಸಬೇಕೆಂದು ವಿಧಿಯೂ ಸಂಪ್ರದಾಯವೂ ಇರುವುದರಿಂದ ಇದನ್ನೆಲ್ಲಾ ಇಲ್ಲಿ ವಿಶದವಾಗಿ ತಿಳಿಸಬೇಕಾಯಿತು.

ಸಂಹಿತಾಪಾಠಃ

ತವ॑ ಪ್ರ॒ಯಾಜಾ॑ ಅ॒ನು॒ಯಾಜಾ॑ಶ್ಚ॒ ಕೇವ॑ಲ ಊರ್ಜ॒ಸ್ವಂತೋ॑ ಹ॒ವಿಷ್ಮಃ॑ ಸಂತು ಭೂ॒ಗಾಃ ।
ತವಾ॒ಗ್ನೇ॑ ಯ॒ಜ್ಞೋ॒ಽಯ॒ಮ॒ಸ್ತು॒ ಸರ್ವ॑ಸ್ತು॒ಭ್ಯಂ ನಮಂತಾಂ ಪ್ರ॒ದಿಶ॑ಶ್ಚ॒ತಸ್ರಃ ॥ ೯ ॥

ಪದಪಾಠಃ

ತವ॑ । ಪ್ರ॒ಯಾಜಾಃ॑ । ಅ॒ನು॒ಯಾಜಾಃ॑ । ಚ॒ । ಕೇವ॑ಲೇ । ಊರ್ಜ॒ಸ್ವಂತಃ॑ । ಹ॒ವಿಷ್ಮಃ॑ । ಸಂ॒ತು॒ । ಭೂ॒ಗಾಃ॥
ತವ॑ । ಅ॒ಗ್ನೇ॒ । ಯ॒ಜ್ಞಃ । ಅ॒ಯಂ । ಅ॒ಸ್ತು॒ । ಸರ್ವ॑ಃ । ತು॒ಭ್ಯಂ । ನ॒ಮಂ॒ತಾಂ । ಪ್ರ॒ದಿಶ॑ಃ । ಚ॒ತಸ್ರಃ ॥

ಸಾಯಣಭಾಷ್ಯಂ

ಏವಮಗ್ನಿನಾ ಯಾಚ್ಯಮಾನಾ ದೇವಾಃ ಪ್ರತಿ ಬ್ರುವತೇ ।ಹೇ ಅಗ್ನೇ ತವ ಪ್ರಯಾಜಾ ಅನು-ಯಾಜಾಶ್ಚ ಕೇವಲೇ೨ಸಾಧಾರಣಾ ಊರ್ಜಸ್ವಂತೋ ಬಲವಂತೋ ಹವಿಷೋ ಭಾಗಾಃ ಸಂತು । ಹೇ ಅಗ್ನೇ ಅಯಂ ಸರ್ವೋ ಯಜ್ಞಶ್ಚ ತವಾಸ್ತು। ತಥಾ ಪ್ರದಿಶಃ ಪ್ರಕೃಷ್ಟಾ ಮುಖ್ಯಾಶ್ಚತಸ್ರೋ ದಿಶಸ್ತುಭ್ಯಂ ನಮಂತಾಂ । ಅತ ಏಹಿ ಹವಿರ್ವಹೇತಿ ಶೇಷಃ ॥

ಪ್ರತಿದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಪ್ರಯಾಜಾಃ**—ಪ್ರಯಾಜರೂಪವಾದ ಹವಿಸ್ಸುಗಳೂ। **ಅನುಯಾಜಾಶ್ಚ**—ಅನುಯಾಜಸಂಜ್ಞಕಗಳಾದ ಹವಿಸ್ಸುಗಳೂ । **ಕೇವಲೇ ತವ**—ಕೇವಲ ನಿನಗಾಗಿಯೇ । **ಸಂತು**--ಉದ್ದಿಷ್ಟವಾಗಿರುತ್ತವೆ । **ಹವಿಷಃ**—ಹವಿಸ್ಸುಗಳ । **ಊರ್ಜಸ್ವಂತಃ**—ಸಾರವತ್ತಾದ । **ಭಾಗಾಃ**—ಭಾಗಗಳು । ನಿನಗಾಗಿಯೇ ಇರುತ್ತವೆ । **ಅಯಂ ಸರ್ವಃ ಯಜ್ಞಃ**—ಈ ಸಕಲ ಯಜ್ಞವೂ । **ತವ**—ನಿನ್ನನ್ನೇ ಉದ್ದೇಶಿಸಿ । **ಅಸ್ತು**—ಅರ್ಪಿತವಾಗಲಿ । **ಚತಸ್ರಃ ಪ್ರದಿಶಃ**—ನಾಲ್ಕು ಮುಖ್ಯವಾದ ದಿಕ್ಕುಗಳೂ । **ತುಭ್ಯಂ**—ನಿನಗೆ । **ನಮಂತಾಂ**—ನಮಸ್ಕರಿಸಲಿ.

ಭಾವಾರ್ಥ

ದೇವತೆಗಳು—ಎಲೈ ಅಗ್ನಿಯೇ, ಪ್ರಯಾಜರೂಪವಾದ ಹವಿಸ್ಸುಗಳೂ, ಅನುಯಾಜಸಂಜ್ಞಕಗಳಾದ ಹವಿಸ್ಸುಗಳೂ ಕೇವಲ ನಿನಗಾಗಿಯೇ ಉದ್ದಿಷ್ಟವಾಗಿರುತ್ತವೆ. ಹವಿಸ್ಸುಗಳ ಸಾರವತ್ತಾದ ಭಾಗಗಳು ನಿನಗಾಗಿಯೇ ಇರುತ್ತವೆ.ಸಕಲ ಯಜ್ಞವೂ ನಿನ್ನನೇ ಉದ್ದೇಶಿಸಿ ಅರ್ಪಿತವಾಗಲಿ. ನಾಲ್ಕು ಮುಖ್ಯವಾದ ದಿಕ್ಕುಗಳೂ ನಿನಗೆ ನಮಸ್ಕರಿಸಲಿ.

English Translation

(The gods :) yours, Agni, be the Prayajas and Anuyajas exclusively ; yours be the concentrated portions of the oblations : let this sacrifice, Agni, be all yours and let the four quarters of space bow down before you.

ಐವತ್ತೊಡರನೆಯ ಸೂಕ್ತ

ಪೀಠಿಕೆ

ಈ ಸೂಕ್ತದಲ್ಲಿ ವಿಶ್ವೇದೇವತೆಗಳು ಪ್ರತಿಪಾದಿತರಾಗಿರುವುದರಿಂದ ಈ ದೇವತೆಗಳ ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ವಿವರಿಸುತ್ತೇವೆ. ಆಶ್ವಿನೌ ಮೊದಲಾದ ದೇವತಾವಿಶೇಷಗಳನ್ನು ಸೂಚಿಸುವ ಮೂವತ್ತೊಂದು ನಾಮಗಳ ಮಧ್ಯದಲ್ಲಿ ಈ ದೇವತೆಗಳ ಹೆಸರು ಪಠಿತವಾಗಿರುವುದು. ಇವರು ಪ್ರತ್ಯೇಕವಾದ ವಿಶೇಷ ದೇವತೆಗಳೆಂದು ಭಾಷ್ಯಕಾರರು ಹೇಳುವರು. ಕೆಲವರು ಎಲ್ಲಾ ದೇವತೆಗಳೆಂದು ಹೇಳುವರು. ಆದರೆ ವಿಶ್ವೇದೇವತೆಗಳೆಂದು ಪ್ರತ್ಯೇಕವಾದ ದೇವತೆಗಳನ್ನು ಋಷಿಗಳು ಆರಾಧಿಸುತ್ತಿದ್ದರೆಂದು ಇತರ ಸೂಕ್ತಗಳಲ್ಲಿರುವ ವಿಷಯಗಳಿಂದ ಸ್ಪಷ್ಟವಾಗಿ ಹೇಳಬಹುದು. ಈ ವಿಚಾರದಲ್ಲಿ ಯಾಸ್ಕರು ಓಮಾಸಃ ಎಂಬ ಋಕ್ಕಿಗೆ ವಿವರಣೆಯನ್ನು ಬರೆದಿರುವರು.

ಅವಿಶಾರೋ ವಾವನೀಯೋ ವಾ ಮನುಷ್ಯಧೃತಃ ಸರ್ವೇ ದೇವಾ ಇಹಾ ಗಚ್ಛತ ಹತ್ತವಂತೋ ದತ್ತವತಃ ಸುತಮಿತಿ. ತದೇತದೇಕಮೇವ ವೈಶ್ವದೇವಂ ಗಾಯತ್ರಂ ತೃಚಂ ದಶತಯಿಷ್ಣು ವಿದ್ಯತೇ ಯತ್ತು ಕಿಂಚಿದ್ಪಹುದೈವತಂ ತದ್ವೈಶ್ವದೇವಾನಾಂ ಸ್ಥಾನೇ ಯುಜ್ಯತೇ ಯದೇವ ವಿಶ್ವಲಿಂಗಮಿತಿ ಶಾಕಪೂಣಿಃ (ನಿ. ೧೨-೪೦) ಈ ಋಕ್ಕಿನ ಅರ್ಥವಿಚಾರದಲ್ಲಿ ನಾವು ಹೇಳಿರುವ ಅರ್ಥಕ್ಕೂ, ಯಾಸ್ಕರ ಅರ್ಥಕ್ಕೂ ಏನೂ ವ್ಯತ್ಯಾಸವಿಲ್ಲ. ಆದರೆ ಯಾಸ್ಕರ ಅಭಿಪ್ರಾಯದಂತೆ **ವಿಶ್ವೇದೇವಾಃ** ಎಂದರೆ ಎಲ್ಲಾ ದೇವತೆಗಳು ಎಂದೂ, ಮತ್ತು ವಿಶ್ವೇದೇವರೆಂದರೆ ಈ ಹೆಸರಿನಿಂದ ಕರೆಯಲ್ಪಡುವ ವಿಶೇಷ ದೇವತೆಗಳೆಂದು ಶಾಕಪೂಣಿ ಎಂಬುವರ ಮತವೆಂದೂ ಯಾಸ್ಕರೇ ಹೇಳಿರುವರು. ಆದುದರಿಂದ ಅವರ ಕಾಲದಲ್ಲಿಯೇ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿತ್ತೆಂದು ದೃಢವಾಗಿ ಹೇಳಬಹುದು. ಈಗ ಗೃಹ್ಯಾದಿ ಕರ್ಮಗಳಲ್ಲಿ ರೂಢಿಯಿರುವಂತೆ ಹೇಳುವುದಾದರೆ ಈ ವಿಶ್ವೇದೇವತೆಗಳು ಸಾಧಾರಣದೇವತೆಗಳ ಗುಂಪಿಗೆ ಸೇರಿದವರಲ್ಲವೆಂದೂ, ಇವರದೇ ಹದಿಮೂರು ಜನರ ವಿಶೇಷ ಗುಂಪೆಂದೂ ತಿಳಿದು ಬರುವುದು. ಅದು ಹೇಗಾದರೂ ಇರಲಿ. ಋಗ್ವೇದದಲ್ಲಿ ವರ್ಣಿಸಿರುವ ವಿಶ್ವೇದೇವತೆಗಳು ಪ್ರತ್ಯೇಕವಾದ ದೇವತೆಗಳ ಗುಂಪಿಗೆ ಸೇರಿದವರೆಂದು ಹೇಳುವುದೇ ಯುಕ್ತವಾಗಿ ತೋರುವುದು.

ಋಗ್ವೇದದಲ್ಲಿ ವಿಶ್ವೇದೇವತೆಗಳನ್ನು ಮಾತ್ರ ಸ್ತೋತ್ರ ಮಾಡಿರುವ ೬೩ ಸೂಕ್ತಗಳಿವೆ. ಇದಲ್ಲದೆ ಋ. ಸಂ. ೧-೧೬ಳ ನೆಯ ಸೂಕ್ತದಲ್ಲಿ ಮೊದಲನೆಯ ೪೧ ಋಕ್ಕುಗಳು ವಿಶ್ವೇದೇವತೆಗಳ ಪರವಾಗಿವೆ. ಇವುಗಳಲ್ಲೆಲ್ಲಾ— ಋ. ಸಂ ೧೦.೧೫೫ ಈ ಸೂಕ್ತವನ್ನು ಬಿಟ್ಟು ಉಳಿದ ಎಲ್ಲಾ ಸೂಕ್ತಗಳಲ್ಲಿಯೂ ಅನೇಕ ದೇವತೆಗಳನ್ನು ಎಂದರೆ ಇತರ ಸೂಕ್ತಗಳಲ್ಲಿರುವಂತೆ ಅಗ್ನಿ, ಇಂದ್ರ ಮೊದಲಾದ ದೇವತೆಗಳನ್ನು ಸ್ತುತಿಸಿರುವುದಲ್ಲದೆ ವೃಕ್ಷಗಳು, ನದಿಗಳು, ಪರ್ವತಗಳು, ಗೋವುಗಳು, ಅಶ್ವಗಳು ಮೊದಲಾದುವುಗಳೂ ಪ್ರತಿಪಾದಿಸಲ್ಪಟ್ಟಿವೆ. ಇವುಗಳಲ್ಲದೆ ಇತರ ದೇವತಾಕವಾದ ಸೂಕ್ತಗಳಲ್ಲಿ ಅನೇಕ ಕಡೆ ಒಟ್ಟು ೧೭ ಋಕ್ಕುಗಳು ವಿಶ್ವೇದೇವತಾಕವಾಗಿವೆ. ಈ ಸ್ಥಳಗಳಲ್ಲೆಲ್ಲಾ ವಿಶ್ವೇದೇವತೆಗಳೇ ಈ ಋಕ್ಕುಗಳಿಗೆ ದೇವತೆಗಳೆಂದು ಹೇಳಲ್ಪಟ್ಟಿದೆ ಮತ್ತು ಋ. ಸಂ. ೧೦-೧೫೫-೧ ನೆಯ ಮಂತ್ರದಲ್ಲಿ ವಿಶ್ವೇದೇವತೆಗಳ ಜೊತೆಯಲ್ಲಿ ವಸುರುದ್ರಾದಿತ್ಯರೂ ಸೇರಿದ್ದಾರೆ.

ವಾಜಸನೇಯಸಂಹಿತೆಯ (ಶುಕ್ಲಯಜುರ್ವೇದ) ೨೦-೨೨ ನೆಯ ಮಂತ್ರದಲ್ಲಿ ಇಂದ್ರನು, ಆದಿತ್ಯರು, ವಸುಗಳು, ಮರುತ್ತು, ವಿಶ್ವೇದೇವತೆಗಳೊಡನೆ ಸೇರಬೇಕೆಂದು ಪ್ರಾರ್ಥಿಸಲ್ಪಟ್ಟಿರುವರು. ಆದೇ ಸಂಹಿತೆಯ ೩೩-೪೫ ರಿಂದ ೪೭ ಮಂತ್ರಗಳಲ್ಲಿ ಇಂದ್ರ, ವಾಯು ಮತ್ತು ಇತರ ದೇವತೆಗಳು ವಿಶ್ವೇದೇವತೆಗಳ ಜೊತೆಯಲ್ಲಿ ಸ್ತುತಿಸಲ್ಪಟ್ಟಿದ್ದಾರೆ.

ಅಥರ್ವಣವೇದದ ೨೦-೬೨-೬ ನೇ ಮಂತ್ರದಲ್ಲಿ ದಿಶ್ವೇದೇವತೆಗಳನ್ನು ಏಕವಚನದಲ್ಲಿ ಸೂಚಿಸಲಾಗಿದೆ ಮತ್ತು ವಿಶ್ವೇದೇವತೆಗಳ ಪರವಾದ ಅನೇಕ ಸೂತ್ರಗಳು ಅಥರ್ವಣವೇದದಲ್ಲಿವೆ.

ಬ್ರಾಹ್ಮಣಗಳಲ್ಲಿಯೂ ಸಹ ವಿಶ್ವೇದೇವತೆಗಳ ಹೆಸರು ಅಲ್ಲಲ್ಲಿ ಸೂಚಿತವಾಗಿದೆ. ಕೌಷೀತಕೀ ಬ್ರಾಹ್ಮಣದ ೪-೧೪, ಗೋಪಥ ಬ್ರಾಹ್ಮಣದ ೧-೨೦ ನೇ ಮಂತ್ರಗಳಲ್ಲಿ ಎಲ್ಲಾ ದೇವತೆಗಳನ್ನೂ ವಿಶ್ವೇದೇವತೆಗಳೆಂಬ ಹೆಸರಿನಿಂದಲೇ ಸಂಬೋಧನೆಮಾಡಲಾಗಿದೆ. ಶತಪಥಬ್ರಾಹ್ಮಣದ ೩-೯-೨-೬ನೇ ಮಂತ್ರದಲ್ಲಿ ವಿಶ್ವೇದೇವತೆಗಳು ಸೂರ್ಯನ ಕಿರಣಗಳೆಂದೂ ಶ. ಬ್ರಾ. ೧೪-೨-೨-೩೭ ರಲ್ಲಿ ಪ್ರಾಣಾದಿವಾಯುಗಳೆಂದೂ, ಶ. ಬ್ರಾ. ೭-೧-೧-೪೨ ರಲ್ಲಿ ಯಜ್ಞಕರ್ಮಗಳೆಂದೂ, ಶ. ಬ್ರಾ. ೨-೪-೪-೧೩ ರಲ್ಲಿ ಇಂದ್ರಾಗ್ನಿಗಳೆಂದೂ ಕರೆಯಲ್ಪಟ್ಟಿದ್ದಾರೆ. ತೈತ್ತಿರೀಯ ಆರಣ್ಯಕದಲ್ಲಿ (ತೈ.ಆ. ೫-೧-೬) ವಿಶ್ವೇದೇವತೆಗಳ ಜೊತೆಯಲ್ಲಿ ಇಂದ್ರಾಗ್ನಿಗಳು ಸ್ತುತಿಸಲ್ಪಟ್ಟಿದ್ದಾರೆ.

ಪುರಾಣಗಳಲ್ಲಿ ಕೆಲವುಕಡೆ ಈ ವಿಶ್ವೇದೇವತೆಗಳು ದಿಕ್ಕುಗಳಿಗೆ ಅಧಿಪತಿಗಳೆಂದು ಹೇಳಲ್ಪಟ್ಟಿದೆ. ನಿರುಕ್ತದಲ್ಲಿ (ನಿ. ೧೨-೩೯) ವಿಶ್ವೇದೇವತೆಗಳೆಂದರೆ ಎಲ್ಲಾ ದೇವತೆಗಳೂ ಎಂದಿದೆ. ನಿರುಕ್ತದ ಭಾಷ್ಯಕಾರರಾದ ದುರ್ಗಾಚಾರ್ಯರೆಂಬುವರು ವಿಶ್ವೇದೇವತೆಗಳೆಂದರೆ ಸೂರ್ಯನ ಕಿರಣಗಳೆಂದು ಅರ್ಥಮಾಡಿದಾರೆ. ನಿರುಕ್ತಕಾರರಾದ ಯಾಸ್ಕರು ವಿಶ್ವೇದೇವತೆಗಳೆಂದರೆ ಸಮಸ್ತ ದೇವತೆಗಳು ಎಂದು ತಮ್ಮ ಅಭಿಪ್ರಾಯವನ್ನು ಹೇಳಿರುವುದಲ್ಲದೆ ಶಾಕಪೂಣಿ ಎಂಬುವರ ಅಭಿಪ್ರಾಯವನ್ನೂ ಸೂಚಿಸಿರುವರು. ಶೌನಕರು ತಮ್ಮ ಬೃಹದ್ದೇವತಾ ಎಂಬ ಗ್ರಂಥದಲ್ಲಿ (ಬೃ. ದೇ. ೨-೧೪೮ ರಿಂದ ೧೩೪ ಶ್ಲೋಕಗಳು) ವಿಶ್ವೇದೇವತೆಗಳ ವಿಷಯವಾಗಿ ಹೇಳುವಾಗ, ವಿಶ್ವೇದೇವಾಃ ಎಂದರೆ ಸಮಸ್ತ ದೇವತೆಗಳು ಎಂದು ಯಾಸ್ಕರು ಮತ್ತು ಶಾಂಡಿಲ್ಯರು ಅಭಿಪ್ರಾಯಪಡುವರೆಂದು ಹೇಳಿದಾರೆ. ಶೌನಕರ ಮತವೂ ಅದೇರೀತಿ ಇದೆ.

ಸಾಯಣಾಚಾರ್ಯರು ಈ ಋಕ್ಕಿಗೆ ವ್ಯಾಖ್ಯಾನಮಾಡುವಾಗ ವಿಶ್ವೇದೇವರೆಂದರೆ ಅಶ್ವಿನೀದೇವತೆಗಳೇ ಮೊದಲಾದ ಮೂವತ್ತ್ರೊಂದುಮಂದಿ ದೇವತೆಗಳೂ ಸೇರಿ ವಿಶ್ವೇದೇವತೆಗಳೆಂದು ಕರೆಯಲ್ಪಡುವರೆಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪಾಶ್ಚಾತ್ಯಪಂಡಿತರಲ್ಲಿ Langlois, Kaegi, Hopkins ಎಂಬುವರು ವಿಶ್ವೇದೇವತೆಗಳೆಂದರೆ ಸಮಸ್ತ ದೇವತೆಗಳು ಎಂದೂ, Wilson, Griffith, Macdonell ಎಂಬುವರು ವಿಶ್ವೇದೇವತೆಗಳೆಂದರೆ ಸಮಸ್ತ ದೇವತೆಗಳು ಅಥವಾ ವಿಶ್ವೇದೇವತೆಗಳೆಂಬ ಪ್ರತ್ಯೇಕವಾದ ದೇವತೆಗಳ ಸಮೂಹ ಎಂಬ ಎರಡು ವಿಧವಾದ ಅರ್ಥವನ್ನೂ ಅನುಮೋದಿಸುವರು.

ಮುಖ್ಯಾಭಿಪ್ರಾಯವೇನೆಂದರೆ—ಪೂರ್ವದಲ್ಲಿ ಎಂದರೆ ಬಹುಪ್ರಾಚೀನಕಾಲದಲ್ಲಿ ವಿಶ್ವೇದೇವತೆಗಳೆಂದರೆ ಸಮಸ್ತ ದೇವತೆಗಳೆಂಬ ಅರ್ಥವೇ ರೂಢಿಯಲ್ಲಿದ್ದು, ಕಾಲಕ್ರಮೇಣ ವಿಶ್ವೇದೇವರೆಂದರೆ, ಆ ಹೆಸರಿನ ಪ್ರತ್ಯೇಕ ದೇವತೆಗಳ ಸಮೂಹವೆಂದು ಭಾವಿಸುವುದು ಬಳಕೆಗೆ ಬಂತೆಂದೂ ಹೇಳಬಹುದು. ಅನೇಕ ಬ್ರಾಹ್ಮಣಗಳಲ್ಲಿಯೂ, ಪುರಾಣಗಳಲ್ಲಿಯೂ ವಿಶ್ವೇದೇವತೆಗಳೇ ಒಂದು ಪ್ರತ್ಯೇಕವಾದ ದೇವತೆಗಳ ಗುಂಪೆಂದೂ ಸೂಚಿಸಲ್ಪಟ್ಟಿದೆ. ಆದರೆ ಯಾಸ್ಕರ ಕಾಲದಲ್ಲಿಯೂ ಸಹ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿತ್ತೆಂದು ಯಾಸ್ಕರ ನಿರುಕ್ತದಿಂದಲೇ ತಿಳಿದುಬರುತ್ತದೆ.

ಋಗ್ವೇದದಲ್ಲಿ ವಿಶ್ವೇದೇವತೆಗಳ ಪರವಾದ ಋಕ್ಕುಗಳು ಅಲ್ಲಲ್ಲಿ ಬರುವುದಲ್ಲದೆ ವಿಶ್ವೇದೇವತಾಕವಾವ ಪ್ರತ್ಯೇಕ ಸೂಕ್ತಗಳೇ ೫೮ ಇರುವವು. ಋ. ಸಂ. ಪ್ರಥಮದುಂಡಲದಲ್ಲಿ ೧೪, ೮೯, ೯೦, ೧೦೫, ೧೦೬, ೧೦೭, ೧೨೧, ೧೩೯ ನೇ ಸೂಕ್ತಗಳು ; ಎರಡನೇ ಮಂಡಲದಲ್ಲಿ ೨೯-೩೧ ನೇ ಸೂಕ್ತಗಳು; ಮೂರನೇ ಮಂಡಲದಲ್ಲಿ ೫೪ ನೇ ಸೂಕ್ತವು; ನಾಲ್ಕನೇ ಮಂಡಲದಲ್ಲಿ ೫೫ ನೇ ಸೂಕ್ತವು; ಐದನೇ ಮಂಡಲದಲ್ಲಿ ೪೧, ೪೨, ೪೩, ೪೪, ೪೫, ೪೬, ೫೦, ೫೧; ಆರನೇ ಮಂಡಲದಲ್ಲಿ ೪೯, ೫೦, ೫೧, ೫೨; ಏಳನೆಯ ಮಂಡಲದಲ್ಲಿ ೩೫, ೩೬, ೩೭, ೩೯, ೪೦, ೪೨, ೪೩; ಎಂಟನೇ ಮಂಡಲದಲ್ಲಿ ೨೭, ೨೮, ೨೯, ೩೦, ೫೪, ೫೩; ಹತ್ತನೆಯ ಮಂಡಲದಲ್ಲಿ ೩೧,೩೨,೩೫,೩೬,೫೧, ೬೪, ೬೬, ೭೨, ೮೩, ೧೦೦, ೧೦೧, ೧೦೯, ೧೧೪, ೧೨೨, ೧೨೮, ೧೪೧, ೧೪೨, ೧೪೧ ಎಂಬ ಸೂಕ್ತಗಳು ವಿಶ್ವೇದೇವತಾಕವು.

ವಿಶ್ವೇದೇವತೆಗಳಾರು ? ಅವರ ಸ್ವರೂಪವೇನು ? ಇತ್ಯಾದಿ ವಿಷಯಗಳನ್ನು ಇಲ್ಲಿ ವಿಮರ್ಶಿಸುವುದು ಅವಶ್ಯಕವಾಗಿದೆ.

ಕೋ ನು ವಾಂ ವೈಶ್ವದೇವಾನಿ ಏಕಾದಶ ಪರಾಣ್ಯತಃ ।

(ಬೃ. ದೇ. ೫-೩೬)

ಕೋ ನು ವಾಂ ಮಿತ್ರಾವರುಣಾ ಎಂಬ ಮಂತ್ರದಿಂದ ಆರಂಭವಾಗುವ ಸೂಕ್ತದಿಂದ ಮೊದಲುಗೊಂಡು ಒಟ್ಟು ಹನ್ನೊಂದು ಸೂಕ್ತಗಳು ವಿಶ್ವೇದೇವತೆಗಳನ್ನು ಉದ್ದೇಶಿಸಿ ಪ್ರಶಂಸಿಸುವ ಸೂಕ್ತಗಳಾಗಿವೆ ಎಂಬ ಬೃಹದ್ದೇವತಾ ವಾಕ್ಯವು ಋಕ್ಸಂಹಿತೆಯಲ್ಲಿ ಐವನೆಯ ಮಂಡಲದ ೪೧ ನೇ ಸೂಕ್ತದಿಂದ ೫೧ ನೇ ಸೂಕ್ತಗಳವರೆಗಿನ ಹನ್ನೊಂದು ಸೂಕ್ತಗಳಲ್ಲಿ ಪ್ರಶಂಸಿತವಾಗಿರುವ ವಿವರಗಳನ್ನು ಸೂಚಿಸುವುದಾಗಿದೆ. ಇವನ್ನೇ ಸರ್ವಾನುಕ್ರಮಣಿಕೆಯಲ್ಲಿ **ವೈಶ್ವದೇವಂ ೨೧ ತತ್** ಎಂದು ತಿಳಿಸಿದೆ.

(Maedonell's Brihad Dewata, English Translation P. 175)

ವಿಶ್ವೇದೇವತೆಗಳೆಂದರೇನು? ಎಂಬ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಹೇಳುವುದು ಸುಲಭವಲ್ಲ. ಎಲ್ಲಾ ದೇವತೆಗಳ ಸಮೂಹವೆಂದರ್ಥವೇ ಅಥವಾ ಒಂದು ನಿರ್ದಿಷ್ಟವಾದ ಸಂಖ್ಯೆಯನ್ನು ತಿಳಿಸುವ ದೇವತೆಗಳ ಪ್ರತ್ಯೇಕವಾದ ಒಂದು ಗಣವೇ ಎಂಬ ವಿಷಯದಲ್ಲಿ ಮತಭೇದಗಳಿರುತ್ತವೆ. ಆದರೆ ವಿಶ್ವೇದೇವಗಣಗಳೆಂದು ಋಕ್ಸಂಹಿತೆಯಲ್ಲಿ ಸಕಲ ದೇವತೆಗಳನ್ನೂ ಸ್ಪಷ್ಟವಾಗಿ ನಿರ್ದೇಶಿಸಿರುವ ಪ್ರಕರಣವೂ ಇರುತ್ತದೆ.

ಅಮಿಾ ಯೇ ದೇವಾ ಸ್ಥನ ತ್ರಿಷ್ಟಾ ರೋಚನೇ ದಿವಃ ।

(ಋ. ಸಂ. ೧-೧೦೫-೫)

ಎಂಬ ಮಂತ್ರದಲ್ಲಿ ಯಾವ ಲೋಕತ್ರಯದ ದೇವತೆಗಳೆಲ್ಲರೂ ನಿರ್ದಿಷ್ಟರಾಗಿದ್ದಾರೋ, ಅದೇ ದೇವತೆಗಳ ವಿಷಯವನ್ನು ಬೃಹದ್ದೇವತೆಯಲ್ಲಿ ತಿಳಿಸುತ್ತಾ,

ಬೃಹಸ್ಪತಿಪ್ರಚೋದಿತಾ ವಿಶ್ವೇದೇವಗಣಾಸ್ತ್ರಯಃ ।
ಜಗ್ಮುಸ್ತ್ರಿತಸ್ಯ ತಂ ಯಜ್ಞಂ ಭಾಗಾಂಶ್ಚ ಜಗೃಹುಃ ಸಹ ॥

(ಬೃ. ದೇ. ೮-೧೩೬)

ಪೃಥಿವ್ಯಾದಿ ಮೂರು ಲೋಕಗಳಲ್ಲೂ ಮೂರು ಗುಂಪುಗಳಾಗಿ ವಿಭಕ್ತರಾಗಿರುವ ಸಕಲ ದೇವತೆಗಳೂ ಸಹ ಬೃಹಸ್ಪತಿಯಿಂದ ಪ್ರಚೋದಿತರಾಗಿ ತ್ರಿತನ ಯಜ್ಞಕ್ಕೆ ಬಂದು ಅದರಲ್ಲಿ ಭಾಗವಹಿಸಿದರು ಎಂದು **ವಿಶ್ವದೇವ**ಶಬ್ದಕ್ಕೆ ಸಕಲ ದೇವತೆಗಳೆಂದರ್ಥವಾಡಿದೆ. ಇದೇ ಅಭಿಪ್ರಾಯವನ್ನು ಶತಪಥಬ್ರಾಹ್ಮಣದಲ್ಲೂ ವಿವರಿಸುತ್ತಾ,

ವೈಶ್ವದೇವಶ್ಚತುರ್ಥಮಹರ್ಭವತಿ । ವಿಶ್ವೇ ವೈ ಸರ್ವೇ ದೇವಾಃ ಸರ್ವೇಷಾಂ ದೇವಾನಾಮಾಪ್ತ್ಯೈ ।
ವೈಶ್ವದೇವಾ ಗ್ರಹಾ ಭವಂತಿ ವೈಶ್ವದೇವ್ಯಃ ಪರೋರುಚಃ ಸರ್ವಂ ವೈಶ್ವದೇವಮಸದಿತಿ ॥

(ಶ. ಬ್ರಾ. ೧೩-೭-೧-೬)

ಚತುರ್ಥವಾದ ಅಹಸ್ಸು ವೈಶ್ವದೇವವಾದುದು. ವಿಶ್ವೇದೇವತೆಗಳೆಂದರೆ, ಸಕಲ ದೇವತೆಗಳೆಂದರ್ಥ. ಚತುರ್ಥದಿನದಲ್ಲಿ ಅವರ ಪೂರ್ಣವಾದ ಅನುಗ್ರಹವು ಲಭ್ಯವಾಗಬೇಕಾದುದೇ ಉದ್ದಿಶ್ಯ. ಸೋಮಗ್ರಹಗಳು ವೈಶ್ವದೇವಗ್ರಹಗಳಾಗಿವೆ. ಪರೋರುಕ್ ಸಂಜ್ಞಿಕಗಳಾದ ಕಲಾಪಗಳೂ ಸಹ ಸಕಲ ದೇವತೆಗಳ ಅನುಗ್ರಹವನ್ನೇ ಸಂಪಾದಿಸುವುದಾಗಿದೆ. ಆದುದರಿಂದ ಈ ಗ್ರಹಗಳು ಸಕಲ ದೇವತೆಗಳನ್ನೂ ತೃಪ್ತಿಪಡಿಸಬೇಕು ಎಂಬುದಾಗಿಯೂ, ಇದರಂತೆಯೇ,

ಇತಿ ಹ ಸ್ಮಾಹ ಸತ್ಯಕಾಮೋ ಜಾಬಾಲೋ ವಿಶ್ವೇ ವೈ ಸರ್ವೇ ದೇವಾಸ್ತದೇನಾನ್ಯಥಾ ದೇವತಂ ಪ್ರೀಣಾತೀತಿ ॥

(ಶ. ಬ್ರಾ. ೧೩-೫-೨-೧)

ವಿಶ್ವೇದೇವತೆಗಳೆಂದರೆ ಸಕಲ ದೇವತೆಗಳೆಂದರ್ಥವು, ಆದುದರಿಂದಲೇ ವಿಶ್ವೇದೇವತಾಕವಾದ ಈ ಕರ್ಮದಿಂದ ಸಕಲ ದೇವತೆಗಳಿಗೂ ವೈಯಕ್ತಿಕವಾದ ತೃಪ್ತಿಯು ಲಭಿಸುತ್ತದೆ ಎಂದು ಸತ್ಯಕಾಮಜಾಬಾಲನು ಘೋಷಿಸಿದ್ದಾನೆ ಎಂದು ಶತಪಥದಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಹೀಗೆ ಸಕಲ ದೇವತೆಗಳಿಗೂ ಅನ್ವಯಿಸುವುದೆಂಬ ಮತವು ವೈದಿಕವಾಕ್ಯಗಳಲ್ಲೇ ಕೆಲೆವೆಡೆಗಳಲ್ಲಿದ್ದರೂ ಸಹ ಇನ್ನೂ ಕೆಲೆವೆಡೆಗಳಲ್ಲಿ ವೈಕಲ್ಪಿಕವಾದ ತಾತ್ಪರ್ಯಕ್ಕೆ ಅವಕಾಶವಾಗಿದೆ. ಉದಾಹರಣೆಗೆ,

ಸ ನೈವ ವ್ಯಭವತ್ಸ ವಿಶಮಸೃಜತ ಯಾನ್ಯೇತಾನಿ ದೇವಜಾತಾನಿ ಗಣಶ ಆಖ್ಯಾಯಂತೇ ವಸವೋ ರುದ್ರಾ ಆದಿತ್ಯಾ ವಿಶ್ವೇ ದೇವಾ ಮರುತ ಇತಿ ॥

(ಬೃ. ಉ. ೧-೪-೧೨)

ಸೃಷ್ಟಿಕರ್ಮದಲ್ಲಿ ಉದ್ಯುಕ್ತನಾದ ಪ್ರಜಾಪತಿಯು ಇನ್ನೂ ಸೃಷ್ಟಿರೂಪವಾದ ಪೌಷ್ಕಲ್ಯವನ್ನು ಹೊಂದಿರಲಿಲ್ಲ. ಆಗ ಅವನು ಪ್ರಜೆಗಳನ್ನೂ ಗಣರೂಪಗಳಲ್ಲಿ ನಿರ್ದಿಷ್ಟರಾಗುವ ದೇವತೆಗಳನ್ನೂ ಸೃಷ್ಟಿಸಿದನು. ಅವರೇ ವಸುಗಳು, ರುದ್ರರು, ಆದಿತ್ಯರು ಮತ್ತು ವಿಶ್ವೇದೇವತೆಗಳು. ಅಲ್ಲದೇ ಮರುತ್ತುಗಳು ಎಂದಿರುವಾಗ, ಈ ಗಣಗಳಲ್ಲಿ ವಸುಗಳು ಅಷ್ಟಸಂಖ್ಯಾಕವಾದ ಗಣವನ್ನೂ, ರುದ್ರರು ಏಕಾದಶ (೧೧) ಸಂಖ್ಯಾಕವಾದ ಗಣವನ್ನೂ, ಆದಿತ್ಯರು ದ್ವಾದಶಸಂಖ್ಯೆಯುಳ್ಳ (೧೨) ಗಣವನ್ನೂ ಮತ್ತು ಮರುತ್ತುಗಳು ಸಪ್ತಸಂಖ್ಯಾಕವಾದ ಗಣವನ್ನು ತೋರುವುವು ಎಂದು ವಿವರಿಸಿ ವಿಶ್ವೇದೇವಪದಕ್ಕೆ ಈರೀತಿ ಅರ್ಥವನ್ನು ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ.

ವಿಶ್ವೇದೇವಾಸ್ತ್ರಯೋದಶ ವಿಶ್ವಾಯಾ ಅಪತ್ಯಾನಿ । ಸರ್ವೇ ವಾ ದೇವಾಃ ।

(ಬೃ. ಉ. ಶಂ. ಭಾ. ೧-೪-೧೨)

ವಿಶ್ವಾ ಎಂಬುವಳ ಪುತ್ರರಾದ ಹದಿಮೂರು ದೇವತೆಗಳ ಗುಂಪೆಂದು ಒಂದರ್ಥ ಅಥವಾ ಸಕಲ ದೇವತೆಗಳೆಂದು ಇನ್ನೊಂದರ್ಥ ಎಂದು ವೈಕಲ್ಪಿಕವಾದ ಅರ್ಥವುಂಟೆಂದು ಹೇಳಿದ್ದಾರೆ. ಈ ವಿಶ್ವೆ ಎಂಬುವಳು ಯಾರು, ಇವಳ ಪುತ್ರತ್ವವು ದೇವತೆಗಳಿಗೆ ಹೇಗೆ ಪ್ರಾಪ್ತವಾಯಿತು ಎಂಬುದನ್ನು ಹೇಳುವುದು ಸುಲಭವಲ್ಲ. ಸಂಹಿತಾದಿಗಳಲ್ಲಿ ಇವಳು ಅಷ್ಟು ಪ್ರಖ್ಯಾತಳಾದ ವ್ಯಕ್ತಿಯೂ ಅಲ್ಲ. ಬೃಹದ್ದೇವತೆಯಲ್ಲಿ ಮಾತ್ರ ಒಂದುಕಡೆಯಲ್ಲಿ ಇವಳ ಹೆಸರು ನಿರ್ದಿಷ್ಟವಾಗಿದೆ.

ಅದಿತಿರ್ದಿತಿರ್ದನುಃ ಕಾಲಾ ದನಾಯುಃ ಸಿಂಹಿಕಾ ಮುನಿಃ ।
ಕ್ರೋಧಾ ವಿಶ್ವಾ ವರಿಷ್ಠಾ ಚ ಸುರಭಿರ್ವಿನತಾ ತಥಾ ।
ಕದ್ರೂಶ್ಚೈವೇತಿ ದುಹಿತ್ರ್ಯಃ ಕಶ್ಯಪಾಯ ದದೌ ಸ ಚ ॥

(ಬೃ. ದೇ. ೫-೧೪೪)

ಮರೀಚಿಪುತ್ರನಾದ ಕಶ್ಯಪನಿಗೆ ಹದಿನೂರು ದೇವಪತ್ನಿಯರಿದ್ದರು. ಅವರಾರೆಂದರೆ—ಅದಿತಿ, ದಿತಿ, ದನು, ಕಾಲಾ, ದನಾಯು, ಸಿಂಹಿಕಾ, ಮುನಿ, ಕ್ರೋಧಾ, ವಿಶ್ವಾ, ವರಿಷ್ಠಾ ಸುರಭಿ, ವಿನತಾ, ಕದ್ರು ಇವರು ದಕ್ಷನ ಪುತ್ರಿಯರು. ಈ ಹದಿಮೂರು ಕನ್ಯೆಯರನ್ನೂ ದಕ್ಷನು ಕಶ್ಯಪನಿಗೆ ಕೊಟ್ಟು ವಿವಾಹಮಾಡಿದನು.

ತಾಸು ದೇವಾಸುರಾಶ್ಚೈವ ಗಂಧರ್ವೋರಗರಾಕ್ಷಸಾಃ ।

(ಬೃ ದೇ. ೫-೧೪೫)

ಈ ದಕ್ಷಪುತ್ರಿಯರಲ್ಲಿ ದೇವತೆಗಳೂ, ಅಸುರರೂ, ಗಂಧರ್ವರೂ, ಪನ್ನಗಗಳೂ, ರಾಕ್ಷಸಾದಿಗಳೂ ಉತ್ಪನ್ನರಾದರು.

ಅದಿತಿಗೆ ಹನ್ನೆರಡು ಪುತ್ರರುತ್ಪನ್ನರಾದರು ಇತ್ಯಾದಿಯಾದ ವಿವರವನ್ನು ಕೊಡುತ್ತಾ ಅಗಸ್ತ್ಯ ಮತ್ತು ವಸಿಷ್ಠರ ಜನನ ಕ್ರಮವನ್ನು ವಿವರಿಸಿದೆ. ಆದೇ ಸಂದರ್ಭದಲ್ಲಿ,

ಸರ್ವತ್ರ ಪುಷ್ಕರಂ ತತ್ರ ವಿಶ್ವೇ ದೇವಾ ಅಧಾರಯನ್ ।

(ಬೃ. ದೇ. ೫-೧೫೫)

ಪುಷ್ಕರ (ಕಮಲಪುಷ್ಪ) ದಲ್ಲಿ ಸ್ಥಿತನಾಗಿದ್ದ ವಸಿಷ್ಠನನ್ನು ವಿಶ್ವೇದೇವತೆಗಳು ಧರಿಸಿದರು ಎಂದಿದೆ. **ವಿಶ್ವಾ** ಎಂಬುವಳು ಕಶ್ಯಪನ ಪತ್ನಿಯೆಂದಿದ್ದರೂ ಸಹ ವಿಶ್ವೇದೇವತೆಗಳು ಅವಳ ಪುತ್ರರೆಂದು ತಿಳಿಸಿಲ್ಲ. ಅದರೆ ಪುಷ್ಕರಸ್ಥನಾಗಿದ್ದ ವಸಿಷ್ಠನನ್ನು ಧರಿಸಿದ್ದು ಋಕ್ಸಂಹಿತೆಯಲ್ಲಿಯೂ ವರ್ಣಿತವಾಗಿದೆ.

ಉತಾಸಿ ಮೈತ್ರಾವರುಣೋ ವಸಿಷ್ಠೋರ್ವಶ್ಯಾ ಬ್ರಹ್ಮನ್ಮನಸೋಽಧಿ ಜಾತಃ ।
ದ್ರಪ್ಸಂ ಸ್ಕನ್ನಂ ಬ್ರಹ್ಮಣಾ ದೈವ್ಯೇನ ವಿಶ್ವೇ ದೇವಾಃ ಪುಷ್ಕರೇ ತ್ವಾದದಂತ ॥

(ಋ. ಸಂ. ೭-೩೩-೧೧)

ಎಲೈ ವಸಿಷ್ಠನೇ, ನೀನು ಮಿತ್ರಾವರುಣದಿಂದ ಊರ್ವಶಿಯಲ್ಲಿ ಉತ್ಪನ್ನನಾದವನು. ಪುಷ್ಕರಸ್ಥನಾದ ನಿನ್ನನ್ನು ವಿಶ್ವೇದೇವತೆಗಳು ಧರಿಸಿದರು ಎಂದಿದೆ. ಇಲ್ಲಿ ವಿಶ್ವೇ **ದೇವಾಃ** ಎಂದರೆ ಯಾರು ಎಂಬುದನ್ನು ಸಾಯಣರು ತಿಳಿಸಿಲ್ಲ. ನಿರುಕ್ತಕಾರರು ಇದೇ ವಾಕ್ಯಕ್ಕೆ ತಾತ್ಪರ್ಯವನ್ನು ತಿಳಿಸುವಾಗ,

ಸರ್ವೇ ದೇವಾಃ ತ್ವಾಧಾರಯಂತ ।

(ನಿ. ೫-೧೪)

ಎಂಬುದಾಗಿ **ವಿಶ್ವೇ ದೇವಾಃ** ಎಂಬುದಕ್ಕೆ ಸಕಲ ದೇವತೆಗಳೂ ಸಹ ಎಂದರ್ಥಮಾಡಿದ್ದಾರೆ.

ಮತ್ಸ್ಯಪುರಾಣದಲ್ಲಿ ಮಾತ್ರ ಒಂದುಕಡೆ ವಿಶ್ವೇದೇವತೆಗಳು **ವಿಶ್ವಾ** ಎಂಬುವಳ ಪುತ್ರರೆಂದೂ, ಅವರಾರೆಂದರೆ **ಕ್ರತು, ದಕ್ಷ, ವಸು, ಸತ್ಯ, ಕಾಲಕಾಮ, ಮುನಿ, ಕುರಜ, ಮನುಜ, ವೀಜ, ರೋಚಮಾನ** ಎಂಬ ಹತ್ತು ಮಂದಿಗಳೆಂದೂ ತಿಳಿಸಿದೆ. ಇವರು ಹವ್ಯಕವ್ಯಗಳಲ್ಲಿ ಪೂಜನೀಯರೆಂದೂ ಪ್ರಶಂಸಿಸಿದೆ (ಮತ್ಸ್ಯ ೨೦೩). ಇವರು ವಿಶ್ವಾಮಿತ್ರನಿಂದ ಶಾಪವನ್ನು ಹೊಂದಿದರೆಂದು ಮಾರ್ಕಂಡೇಯಪುರಾಣದಲ್ಲಿ ತಿಳಿಸಿದೆ (ಮಾರ್ಕಂಡೇಯ ೭). ಆದರೆ ಸದ್ಯಃ ಪುರಾಣವ ಆಧಾರಗಳಿಂದ ನಾವು ವೈದಿಕವಾಕ್ಯಗಳ ಅರ್ಥವನ್ನು ನಿಷ್ಕರ್ಷಿಸಲು ಸಾಧ್ಯವಿಲ್ಲ.

ವೈದಿಕವಾಕ್ಯಗಳಲ್ಲಿ, ವಿಶ್ವೇದೇವತೆಗಳ ಪ್ರಶಂಸೆಯು ಮೂರುಬಗೆಯುಳ್ಳವಾಗಿವೆ. ಅದನ್ನೇ ಬೃಹದ್ದೇವತೆಯಲ್ಲಿ ಈರೀತಿ ತಿಳಿಸಿದೆ-

ವೈಶ್ವದೇವಾನಿ ಸೂಕ್ತಾನಿ ತ್ರಿವಿಧಾನಿ ಭವಂತಿ ತು ।
ಸೂರ್ಯಸಂಸ್ತವಸಂಯುಕ್ತಂ ವಿಶ್ವಲಿಂಗಂ ಪೃಥಕ್ಸ್ತುತಿ ॥

(ಬೃ. ದೇ. ೩-೪೨)

ವಿಶ್ವದೇವತೆಗಳನ್ನು ಪ್ರಶಂಸಿಸಿ ಪ್ರಾರ್ಥಿಸತಕ್ಕ ಸೂಕ್ತಗಳು ಮೂರುವಿಧವಾಗಿವೆ. ಸೂರ್ಯಪ್ರಶಂಸೆಗಳೊಡನೆ ಕೂಡಿಕೊಂಡಿರತಕ್ಕ ಸೂಕ್ತಗಳು ಮೊದಲನೆಯ ಪಂಗಡಕ್ಕೆ ಸೇರಿದವು. ಸಕಲ ದೇವತೆಗಳ ಸಾಮಾನ್ಯ ಧರ್ಮಗಳನ್ನು ನಿರ್ದೇಶಿಸಿ ಪ್ರಶಂಸಿಸುವ ಸೂಕ್ತಗಳು ಎರಡನೆಯ ಪಂಗಡದವು. ಅದಲ್ಲದೆ, ವೈಯಕ್ತಿಕವಾದ ದೇವತೆಯನ್ನೇ

ಪ್ರಶಂಸಿಸಿ ಆಯಾ ದೇವತೆಯ ವೈಯಕ್ತಿಕವಾದ ಗುಣಗಳನ್ನು ಸ್ತುತಿಸುವುದು (ಪೃಥಕ್‌ಸ್ತುತಿ) ಮೂರನೆಯ ಪಂಗಡಕ್ಕೆ ಸೇರಿದವು.

ಪೃಥಕ್‌ಸ್ತುತೀತಿ ಯತ್ಪ್ರೋಕ್ತಂ ತದ್ವಿದ್ಯಾದ್ಬಹುದೈವತಂ ।
ವಿಶ್ವಲಿಂಗಂ ತು ತದ್ಯತ್ರ ವಿಶ್ವೈಃಸ್ವೈಃ ಕರ್ಮಜೈರ್ಗುಣೈಃ ॥
(ಬೃ. ದೇ. ೩-೪೩)

ಮೇಲಿನ ಶ್ಲೋಕದಲ್ಲಿ ವಿವರಿಸಿದ (೧) **ಸೂರ್ಯಸಂಸ್ತವಸಂಯುಕ್ತ**, (೨) **ವಿಶ್ವಲಿಂಗ**, (೩) **ಪೃಥಕ್‌ಸ್ತುತಿ** ಎಂಬ ಈ ಮೂರುಬಗೆಯಾದ ಸ್ತುತಿಗಳಲ್ಲಿ; ಪೃಥಕ್‌ಸ್ತುತಿಯು ಅನೇಕ ದೇವತೆಗಳ ವೈಯಕ್ತಿಕಪ್ರಶಂಸೆಯಳ್ಳದ್ದಾಗಿರುತ್ತದೆ. ದೇವತೆಗಳ ಸಾಮಾನ್ಯ ಧರ್ಮಗಳನ್ನು ತಿಳಿಸುವುದೇ ವಿಶ್ವಲಿಂಗವು. ಇದೇ ಅಂಶವನ್ನು ಬೇರೊಂದುಕಡೆಯಲ್ಲಿ ತಿಳಿಸುತ್ತಾ **ವಿಶ್ವಲಿಂಗ**ವೆಂದರೇನು ಎಂಬುದನ್ನು ವಿವರಿಸಿದೆ.

ಋಷಿರ್ದೇವತಾಃ ಸರ್ವಾ ವಿಶ್ವಾಭಿಃ ಸ್ತುತಿಭಿಃ ಸ್ತುತಾಃ ।
ಸಂಜ್ಞಾ ತು ವಿಶ್ವಮಿತ್ಯೇಷಾ ಸರ್ವಾವಾಪ್ತಿ ನಿಪಾತಿತಾ ॥
(ಬೃ. ದೇ. ೨-೧೩೪)

ಸಕಲ ದೇವತೆಗಳೂ ಸಹ ಸಂಯುಕ್ತವಾದ ಮತ್ತು ವಿಶ್ವಗುಣಗಳನ್ನು ವರ್ಣಿಸುವ ಸ್ತುತಿಗಳ ಮೂಲಕ ಋಷಿಗಳಿಂದ ಪ್ರಶಂಸಿತರಾಗಿದ್ದಾರೆ. **ವಿಶ್ವ** ಎಂಬ ಸಂಜ್ಞೆಯು **ಸರ್ವಾವಾಪ್ತಿ** ಎಂಬ ಅರ್ಥದಲ್ಲಿ ಪ್ರಯೋಸಲ್ಪಟ್ಟಿದೆ. **ಸರ್ವಾವಾಪ್ತಿ** ಎಂದರೆ ಸಕಲವನ್ನೂ ಅಡಕಮಾಡಿಕೊಂಡಿರುವುದು ಎಂದರ್ಥ. **ವಿಶ್ವೇದೇವಾಃ** ಎಂದರೆ, ಈ ಸಂಜ್ಞೆಯ ಪ್ರಕಾರ ಸಕಲ ದೇವತೆಗಳನ್ನೂ ಸೇರಿಸಿಕೊಂಡಿರುವುದು ಎಂದರ್ಥ. ಇವನ್ನೇ ಮೇಲೆ, **ವಿಶ್ವಲಿಂಗ** ಎಂಬ ಸಂಜ್ಞೆಯಿಂದ ವ್ಯವಹರಿಸಿದೆ. ನಿರುಕ್ತಕಾರರು **ವಿಶ್ವಲಿಂಗ**ವೆಂಬ ಸಂಜ್ಞೆಯನ್ನು ವಿವರಿಸುತ್ತಾ, **ವಿಶ್ವ**ವೆಂಬ ಪದದಿಂದ ಸೂಚಿತವಾಗಿರತಕ್ಕ ದೇವತಾಪ್ರಶಂಸಕವಾದ ಸೂಕ್ತಗಳು ಮಾತ್ರ **ವೈಶ್ವದೇವ** ಸೂಕ್ತಗಳೆಂದು ಹೇಳಿರುವ **ಶಾಕಪೂಣಿ**ಯನವರ ಮತವನ್ನೂ ತಿಳಿಸಿದ್ದಾರೆ (ನಿ. ೧೨-೪೦).

ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ (೩-೪೩) ವಿಶ್ವಸಾಧಾರಣಗಳಾದ ಗುಣಗಳು ಆಯಾ ದೇವತೆಗಳ ವೈಯಕ್ತಿಕವಾದ ಕರ್ಮಜವೆಂದೂ ತಿಳಿಸಿದೆ. ಈ ಅರ್ಥದಲ್ಲಿ **ವಿಶ್ವಲಿಂಗ** ಮತ್ತು **ಪೃಥಕ್‌ಸ್ತುತಿ** ಈ ಎರಡು ಗುಂಪಿನ ಸೂಕ್ತಗಳಿಗೂ ಅಧಿಕವಾದ ವ್ಯತ್ಯಾಸವಿರುವುದಿಲ್ಲ. ಹೇಗೆಂದರೆ, **ಸ್ವಕರ್ಮಜ**ವೆಂದರೇನು ಎಂಬುದನ್ನು ವಿವರಿಸುತ್ತಾ ಸ್ವಕರ್ಮಜವಾದ ವಿಶ್ವಗುಣಗಳೇನೆಂಬುದನ್ನು ಈರೀತಿ ಸೂಚಿಸಿದೆ.

ಸ್ತೂಯಂತೇ ದೇವತಾ ಹ್ಯಾಸು ಕರ್ಮಭಿಃ ಸ್ವೈಃ ಪೃಥಕ್‌ಪೃಥಕ್ ।
ಸ್ತುತಾಃ ಕರ್ಮಗುಣೈಃ ಸ್ವೈಃ ಸ್ವೈರ್ದೇವತಾ ಯತ್ರ ತತ್ರ ತು ॥
ಪೃಥಕ್ಕರ್ಮಸ್ತುತಿರ್ನಾಮ ವೈಶ್ವದೇವಂ ತದೇವ ತು ।
(ಬೃ. ದೇ. ೬-೬೯, ೭೦)

ಎಲ್ಲೆಲ್ಲಿ ದೇವತೆಗಳು ಆಯಾ ವೈಯಕ್ತಿಕವಾದ ಗುಣಗಳ ವರ್ಣನೆಯಿಂದಲೂ ಆಯಾ ದೇವತೆಯ ವೈಯಕ್ತಿಕವಾದ ವ್ಯವಹಾರಗಳಿಂದಲೂ ಸ್ತುತರಾಗಿದ್ದಾರೆಯೋ ಅಲ್ಲೆಲ್ಲಾ **ಪೃಥಕ್ಕರ್ಮಸ್ತುತಿ** (ವೈಯಕ್ತಿಕವಾದ ಕರ್ಮಗಳ ಸ್ತುತಿ) ಗಳಿಗೆ ಅವಕಾಶವಾಗಿರುತ್ತದೆ. ಇಂತಹ ಸ್ತುತಿಯು ವೈಶ್ವದೇವಿಕವಾಗಿರುತ್ತದೆ.

ಮೂರನೆಯದಾ, **ಸೂರ್ಯಸಂಸ್ತವಸಂಯುಕ್ತಂ** ಎಂಬ ವಾಕ್ಯದಿಂದ ವರ್ಣಿತವಾಗಿರುವ ವೈಶ್ವದೇವ ಸ್ತುತಿಯ ಸ್ವರೂಪವೇನೆಂಬುದನ್ನು ಪರಿಶೀಲಿಸಿದರೆ, ಅದರ ಸ್ವರೂಪವನ್ನು **ಈರೀತಿ** ತಿಳಿಸಿದೆ.

ವಿಶ್ವಾನುದ್ದಿಶ್ಯ ಯದ್ದೇವಾನ್ ಸ್ತೌತಿ ಸೂರ್ಯಮನೇಕಧಾ ।
ದೇವಾನೇವಾಭಿಸಂಸ್ತೌತಿ ತಂ ಪ್ರಾಹುಃ ಸೂರ್ಯಸಂಸ್ತವಂ ॥

(ಬೃ. ದೇ- ೩-೪೪)

ಯಾವ ಮಂತ್ರವು ವಿಶ್ವೇದೇವತೆಗಳನ್ನುದ್ದೇಶಿಸಿ ಬಹಳವಾಗಿ ಸೂರ್ಯನನ್ನೇ ಪ್ರಶಂಸಿಸುವುದೋ ಅಲ್ಲದೇ ಮುಖ್ಯವಾಗಿ ದೇವತಾಪ್ರಶಂಸಕವೇ ಆಗಿರುವುದೋ ಅದು **ಸೂರ್ಯಸಂಸ್ತವ** ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಆದರೆ, **ಈ** ನಿಯಮಕ್ಕೆ ಒಂದೆರಡುಕಡೆಗಳಲ್ಲಿ ಅವ್ಯಾಪ್ತಿಯೂ ಇರುತ್ತದೆ. ಉದಾಹರಣೆಗೆ—

ನ ತು ಭಾಗಸ್ಯ ಸೂಕ್ತಾದೌ ಸೂಕ್ತೇಷ್ವೇವೌಷಸೇಷು ವಾ ।
ನ ಸಾವಿತ್ರೇ ಹ್ವಯಾಮೀತಿ ನ ಸೂರ್ಯಾಯಾಂ ಕೃತೌ ಮಹೇ ॥

(ಬೃ. ದೇ. ೩-೪೫)

ಋಕ್ಸಂಹಿತೆಯಲ್ಲೆಲ್ಲಾ ಭಗೋದ್ದಿಷ್ಟವಾಗಿ ಏಕಮಾತ್ರಸೂಕ್ತವಾದ ೭-೪೧ ನೇ ಸೂಕ್ತದಲ್ಲಿ ಅನೇಕ ದೇವತೆಗಳು ನಿರ್ದಿಷ್ಟರಾಗಿದ್ದಾರೆ. ಆದರೆ ಅದು ವೈಶ್ವದೇವಸೂಕ್ತವಾಗಲಾರದು. ಈ ಸೂಕ್ತದ ಮೊದಲನೇ ಮಂತ್ರದಲ್ಲೇ ಸವಿತೃವಿನೊಡನೆ ಇಂದ್ರ, ಅಗ್ನಿ ಇತ್ಯಾದಿ ನಾನಾ ದೇವತೆಗಳನ್ನು ಪ್ರಶಂಸಿಸಿ ಪ್ರಾರ್ಥಿಸಿದೆ. ಆದರೆ ಅದೂ ವೈಶ್ವದೇವವಲ್ಲ. ಋ. ಸಂ. ೧೦-೪೫ ನೇ ಸೂಕ್ತಕ್ಕೂ ಇದೇ ನಿಯಮವು ಅನ್ವಯಿಸುತ್ತದೆ. ಆದು ಕೇವಲ ಸೂರ್ಯಾಸೂಕ್ತವೆನಿಸಿಕೊಳ್ಳುತ್ತದೆ. ಅನೇಕ ದೇವತಾಕವಾಗಿದ್ದರೂ ಸಹ ಈ ಮಂತ್ರಗಳೆಲ್ಲವೂ ಯಜ್ಞಕರ್ಮಗಳಲ್ಲಿ ಉಪಯುಕ್ತವಾಗುವ ವೈಶ್ವದೇವನೆನಿಸಿಕೊಳ್ಳುವುದಿಲ್ಲ. ಇದರಂತೆಯೇ,

ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ ಹ್ವಯಾಮಿ ಮಿತ್ರಾವರುಣಾ ವಿಹಾವಸೇ ।
ಹ್ವಯಾಮಿ ರಾತ್ರೀಂ ಜಗತೋ ನಿವೇಶನೀಂ ಹ್ವಯಾಮಿ ದೇವಂ ಸವಿತಾರಮೂತಯೇ ॥

(ಋ. ಸಂ. ೧-೩೫-೧)

ಇತ್ಯಾದಿ ಸ್ಥಳಗಳಲ್ಲಿ **ಸೂರಸಂಸ್ತವಸಂಯುಕ್ತ**ವಾದ ವೈಶ್ವದೇವ ಎಂಬ ಗುಂಪಿಗೆ ಸೇರಿಸಬಹುದಾದ ಮಂತ್ರಗಳಿದ್ದು, ಸವಿತೃವಿನೊಡನೆ ಇತರ ದೇವತೆಗಳ ಪ್ರಶಂಸೆಯಿದೆ. ಆದರೆ ಇದೂ ಸಹ ವೈಶ್ವದೇವವಲ್ಲ. ಹೀಗೆ ಮೂರೆನೆಯ ಪಂಗಡಕ್ಕೆ ಸೇರಬಹುದೆಂದು ತೋರುವ ಅನೇಕ ಸೂಕ್ತಗಳು ಈ ನಿಯಮಕ್ಕೆ ಒಳಪಡುವುದಿಲ್ಲ.

ಈರೀತಿ ವಿಧಿಪ್ರತಿಷೇಧಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ವೈಶ್ವದೇವಸೂಕ್ತಗಳಲ್ಲಿ ಆನುಷಂಗಿಕವಾಗಿ ನಿರ್ದಿಷ್ಟರಾಗಿರುವ ದೇವತೆಗಳಾರು ಎಂಬುದನ್ನೂ ಅರಿಯಬೇಕು.

ದೇವತಾವಿದವೇಕ್ಷೇತ ಪ್ರಯೋಗೇ ಸರ್ವಕರ್ಮಣಾಂ ।

(ಬೃ. ದೇ. ೮-೧೨೪)

ಸಕಲ ಕರ್ಮಗಳೂ ಪ್ರಯೋಗಕೌಶಲ್ಯವನ್ನು ಪಡೆಯುವುದಕ್ಕಾಗಿ ವೈಯಕ್ತಿಕವೂ, ಸಾಂಘಿಕವೂ ಆದ ಈ ದೇವತಾ ಸ್ವರೂಪಗಳನ್ನು ಪೂರ್ಣವಾಗಿ ತಿಳಿಯಬೇಕಾಗಿದೆ. ಆ ದೇವತೆಗಳಾರೆಂದರೆ,

ಸಪ್ತರ್ಷಯೋ ವಸವಶ್ಚಾಪಿ ದೇವಾ ಅಥರ್ವಾಣೋ ಭೃಗವಃ ಸೋಮಸೂರ್ಯಾಃ ।
ಪಥ್ಯಾಸ್ವಸ್ತೀ ರೋದಸೀ ಚೋಕ್ತಮುಂತ್ರೀ ಕುಹೂರ್ಗುಙ್ಗೂರದಿತಿರ್ಧೇನುರಘ್ನ್ಯಾ ॥

(ಬೃ. ದೇ. ೪-೧೨೫)

ಸಪ್ತರ್ಷಿಗಳು, ವಸುಗಳು, ದೇವತೆಗಳು, ಅಥರ್ವರು, ಭೃಗುಗಳು, ಸೋಮ, ಸೂರ್ಯ, ಪೃಥ್ಯಾಸ್ವಸ್ತೀ, ಉಪಮಂತ್ರರಾದ ದ್ಯಾವಾಪೃಥಿವಿಗಳು, ಕುಹು, ಗುಂಗೂ, ಧೇನು ಮತ್ತು ಅಘ್ನ್ಯಾ.

ಅಸುನಿತೀರಿಳಾ ಚಾಪ್ತ್ಯಾ ವಿಧಾತಾನುಮತಿರ್ಹ ಯಾ ।
ಅಂಗಿರೋಭಿಃ ಸಹೈತಾಃ ಸ್ಯುರುಕ್ತಮುಂತ್ರಾಶ್ಚ ದೇವತಾಃ ॥

(ಬೃ. ದೇ. ೪-೧೨೬)

ಅಸುನೀತಿ, ಇಳಾ, ಆಪ್ತ್ಯರು, ವಿಧಾತೃ, ಅಂಗಿರಸಹಿತವಾದ ಅನುಮತಿ, ಇವರೆಲ್ಲರೂ ಉಕ್ತಮುಂತ್ರರಾದ ದೇವತೆಗಳೆಂದು ಪರಿಗಣಿತರಾಗಿದ್ದಾರೆ. (ಇಲ್ಲಿ ನಿರ್ದಿಷ್ಟರಾದ ದೇವತೆಗಳು ಅಪರೂಪವಾಗಿ ಪ್ರಶಂಸಿತರಾಗಿರುವರು. ಇವರೆಲ್ಲರೂ ವೈಶ್ವದೇವಸೂಕ್ತಗಳಲ್ಲಿ ಪ್ರಶಂಸಿತರಾಗಿದ್ದಾರೆ).

ವೈಶ್ವಾನರೋ ಹಿ ಸುಪರ್ಣೋ ವಿವಸ್ವಾನ್ ಪ್ರಜಾಪತಿ ರ್ದ್ಯೌಃ ಸುಧನ್ವಾ ನಗೋಹ್ಯಃ ।
ಅಪಾಂನಪಾದರ್ಯಮಾ ವಾತಜೂತಿರಿಳಸ್ಪತಿಶ್ಚಾಪಿ ರಥಸ್ಪತಿಶ್ಚ ॥

(ಬೃ. ದೇ. ೪-೧೩೭)

ವೈಶ್ವಾನರ, ಸುಪರ್ಣಾ, ವಿವಸ್ವಾನ್, ಪ್ರಜಾಪತಿ, ದ್ಯೌಃ, ಸುಧನ್ವಾ, ನಗೋಹ್ಯ, ಅಪಾಂನಪಾತ್, ಅರ್ಯಮನ್, ವಾತಜೂತಿ, ಇಳಸ್ಪತಿ ಮತ್ತು ರಥಸ್ಪತಿ.

ಋಭವಃ ಪರ್ಜನ್ಯಃ ಪರ್ವತಾ ಗ್ನಾಶ್ಚ ದಕ್ಷೋ ಭಗೋ ದೇವಪತ್ನೀರ್ದಿಶಶ್ಚ ।
ಆದಿತ್ಯಾಃ ರುದ್ರಾಃ ಪಿತರೋಽಥ ಸಾಧ್ಯಾ ನಿಪಾತಿನೋ ವೈಶ್ವದೇವೇಷು ಸರ್ವೇ ॥

(ಬೃ. ದೇ. ೪-೧೩೮)

ಋಭುಗಳು, ಪರ್ಜನ್ಯ, ಪರ್ವತಗಳು, ಸ್ತ್ರೀದೇವತೆಗಳು, ದಕ್ಷ, ಭಗ, ದೇವಪತ್ನಿಯರು, ದಿಗ್ದೇವತೆಗಳು, ಆದಿತ್ಯರು, ರುದ್ರರು, ಪಿತೃಗಳು, ಸಾಧ್ಯರು ಇವರೆಲ್ಲರೂ ವೈಶ್ವದೇವಸೂಕ್ತದಲ್ಲಿ ಅನುಷಂಗಿಕವಾಗಿ ನಿರ್ದಿಷ್ಟರೂ, ಪ್ರಾರ್ಥಿತರೂ ಆದ ದೇವತೆಗಳು.

ಒಟ್ಟಿನಲ್ಲಿ ವೈಶ್ವದೇವಸೂಕ್ತಗಳೆಂದರೇನು ಎಂಬ ಪ್ರಶ್ನೆಗೆ ಉತ್ತರವಾಗಿ ಅವುಗಳ ಸಾಮಾನ್ಯಲಕ್ಷಣವನ್ನು ತೋರಿಸುವ ಕೆಳಗಿನ ವಾಕ್ಯವನ್ನು ಉದಾಹರಿಸಿದೆ

ಅಸ್ತು ಶ್ರೌಷಡ್ವೈಶ್ವದೇವಂ ತೃತೀಯ ವೈಶ್ವದೇವಂ ಸ್ಯಾದ್ಬಹುದೇವತೇಷು ।

(ಬೃ. ದೇ. ೪-೭)

ಅಸ್ಯವಾಮಸ್ಯ ಪಲಿತಸ್ಯ (೧.೧೬೪) ಇತ್ಯಾದಿ ಸೂಕ್ತಗಳಲ್ಲಿ ತೋರಿರುವಂತೆ ಬಹುದೇವತಾತ್ಮಕವಾಗಿ ಸ್ತುತಿಯಿರುವೆಡೆಗಳಲ್ಲೆಲ್ಲಾ ವೈಶ್ವದೇವಸೂಕ್ತಗಳೆಂದು ನಿರ್ಧರಿಸತಕ್ಕದ್ದು ಎಂಬುದು ಸಾಮಾನ್ಯ ನಿಯಮ. (ಆದರೆ, ನಿಯಮುಕ್ಕಿರುವ

ಅತಿವ್ಯಾಪ್ತಿ ಮತ್ತು ಅವ್ಯಾಪ್ತಿಗಳನ್ನು ಮೇಲಿನ ವಾಕ್ಯಗಳಲ್ಲಿ ವಿವರಿಸಿದೆ). ಈ ವಿಧವಾದ ವೈಶ್ವದೇವಸೂಕ್ತಗಳು ಋಕ್ಸಂಹಿತೆಯಲ್ಲಿ ಬಹಳವಾಗಿವೆ. ಅವುಗಳಲ್ಲಿ, ಕೆಲವು ಪ್ರತ್ಯೇಕವಾದ ಸೂಕ್ತಗಳಾಗಿಯೂ, ಇನ್ನು ಕೆಲವು ಇತರ ದೇವತಾಕವಾದ ಸೂಕ್ತಗಳಲ್ಲಿ ಅಂತರ್ಗತವಾದ ಮಂತ್ರಗಳಾಗಿಯೂ ಇರುತ್ತವೆ. ಅವುಗಳಾವುವೆಂದರೆ—

೧-೩-೭ ರಿಂದ ೯; ೧-೧೪; ೧.೨೩-೧೦ ರಿಂದ ೧೨; ೧-೪೯; ೧-೯೦; ೧-೧೦೫ ರಿಂದ ೧೦೭; ೧-೧೨೨; ೧-೧೪೯-೧, ೧೧; ೧-೧೬೪-೧ ರಿಂದ ೪೧; ೧-೧೪೬; ೨-೨೯; ೨ ೩೧; ೨-೪೧-೧೩ ರಿಂದ ೧೫, ೩-೨೦-೧ ರಿಂದ ೫; ೩-೫೪ ರಿಂದ ೫೭; ೪-೫೫; ೫-೨೬-೯; ೪-೪೧; ೫ ೪೨-೧ ರಿಂದ ೧೦, ೧೨ ರಿಂದ ೧೪; ೫-೪೩ ರಿಂದ ೪೫; ೫-೪೬-೧ ರಿಂದ ೬; ೫-೪೭ ರಿಂದ ೫೧; ೬-೨೧-೯, ೧೧; ೬-೪೯ ರಿಂದ ೫೨; ೭-೩೪-೧ ರಿಂದ ೧೫, ೧೪ ರಿಂದ ೨೫; ೭-೩೫ ರಿಂದ ೩೭; ೭-೪೯ ; ೭-೪೦; ೭-೪೨; ೭-೫೦-೩; ೮-೨೫-೧೦ ರಿಂದ ೧೨; ೮-೨೭ ರಿಂದ ೩೦; ೮-೫೪-೩, ೪; ೮-೫೮-೨, ೩; ೮-೬೯-೧೧; ೮-೮೩; ೧೦-೩೧; ೧೦-೩೩-೧; ೧೦-೩೫; ೧೦-೩೬; ೧೦-೫೬; ೧೦-೫೭; ೧೦-೬೧; ೧೦-೬೨-೭; ೧೦-೬೩-೧ ರಿಂದ ೧೪, ೧೭; ೧೦-೬೪-೬೬; ೧೦-೯೨; ೧೦-೯೩; ೧೦-೧೦೦; ೧೦-೧೦೯; ೧೦-೧೧೪; ೧೦-೧೨೬; ೧೦-೧೪೭; ೧೦-೧೪೮; ೧೦-೧೪೯; ೧೦-೧೫೫-೫; ೧೦-೧೫೭; ೧೦-೧೮೫; ೧೦-೧೮೧.

ವಿಶ್ವೇದೇವಾಃ ಅಥವಾ ಅಗ್ನಿಃ—೯-೬೭-೨೭;

ವಿಶ್ವೇದೇವಾಃ ಅಥವಾ ಅಂಗಿರಸಃ—೧೦-೬೨-೧ ರಿಂದ ೬;

ವಿಶ್ವೇದೇವಾಃ ಅಥವಾ ಇಂದ್ರಃ—೧-೧೨೧;

ವಿಶ್ವೇದೇವಾಃ ಅಥವಾ ಋತ್ವಿಜಃ—೪-೫೪-೧ ; ೧೦-೧೦೧;

ವಿಶ್ವೇದೇವಾಃ ಅಥವಾ ಯೂಪಾಃ—೩-೪-೪.

ಈ ಸೂಕ್ತಗಳ ದರ್ಶನವನ್ನು ಪಡೆದು ವಿಶ್ವೇದೇವತೆಗಳನ್ನು ಪ್ರಶಂಸಿಸಿ ಪ್ರಾರ್ಥಿಸಿರುವ ಋಷಿಗಳ ನಾಮವನ್ನು ಕೆಳಗಿನ ವಾಕ್ಯಗಳಲ್ಲಿ ತಿಳಿಸಿದೆ

ಮೇಧಾತಿಥಿರಗಸ್ತ್ಯಸ್ತು ಬೃಹದುಕ್ಥೋ ಮನುರ್ಗಯಃ ।
ಋಜಿಶ್ವಾ ವಸುಕರ್ಣಶ್ಚ ಶಾರ್ಯಾತೋ ಗೋತಮೋ ಲುಶಃ ॥
ಸ್ವಸ್ತ್ಯಾತ್ರೇಯಃ ಪರುಚ್ಛೇಪಃ ಕಕ್ಷೀವಾನ್ ಗಾಥಿನೌರ್ವಶೌ ।
ನಾಭಾಕಶ್ಚೈವ ನಿರ್ದಗ್ಧೋ ದುವಸ್ಯುರ್ಮಮತಾಸುತಃ ॥
ವಿಹವ್ಯಃ ಕಶ್ಯಪ ಋಷಿರವತ್ಸಾರಶ್ಚ ನಾಮ ಯಃ ।
ವಾಮದೇವೋ ಮಧುಚ್ಛಂದಾಃ ಪಾರ್ಥೋ ದಕ್ಷಸುತಾದಿತಿಃ ॥
ಜುಹೂರ್ಗೃತ್ಸಮದಶ್ಚರ್ಷಿರ್ದೇವಾಃ ಸಪ್ತರ್ಷಯಶ್ಚ ಯೇ ।
ಯಮೋಽಗ್ನಿಸ್ತಾಪಸಃ ಕುತ್ಸಃ ಕುಸೀದೀ ಚಿತ್ರ ಏವ ಚ ॥
ಬಂಧುಪ್ರಭೃತಯಶ್ಚೈವ ಚತ್ವಾರೋ ಭ್ರಾತರಃ ಪೃಥಕ್ ।
ವಿಷ್ಣುಶ್ಚ ನೇಜಮೇಷಶ್ಚ ನಾಮ್ನಾ ಸಂವನನಶ್ಚ ಯಃ ।
ಏತೇ ತು ಸರ್ವ ಏವಾಸ್ಯ ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ ।
ಸಮಸ್ತೈರಥ ಚ ವ್ಯಸ್ತೈಃ ಪೃಥಕ್ಸೂಕ್ತೇಷು ತುಷ್ಟುವುಃ ॥

(ಬೃ. ದೇ. ೩-೫೫ ರಿಂದ ೬೦)

ಮೇಧಾತಿಥಿ, ಅಗಸ್ತ್ಯ, ಬೃಹದುಕ್ಥ, ಮನು, ಗಯ, ಋಜಿಶ್ವಾ, ವಸುಕರ್ಣ, ಶಾರ್ಯಾತ, ಗೋತಮ, ಲುಶ, ಸ್ವಸ್ತ್ಯಾತ್ರೇಯ, ಪರುಚ್ಛೇಪ, ಕಕ್ಷೀವಾನ್, ಗಾಧಿಪುತ್ರನಾದ ವಿಶ್ವಾಮಿತ್ರ, ಊರ್ವಶೀಪುತ್ರನಾದ ವಸಿಷ್ಠ, ನಾಭಾಕ, ದುವಸ್ಯ, ಮಮತಾಪುತ್ರನಾದ ದೀರ್ಘತಮಸ್ಸು, ವಿಹವ್ಯ, ಕಶ್ಯಪ, ಅವತ್ಸಾರ, ವಾಮದೇವ, ಮಧುಚ್ಛಂದಸ್, ಪಾರ್ಥ, ದಕ್ಷಪುತ್ರಿಯಾದ ಅದಿತಿ, ಜುಹೂ, ಗೃತ್ಸಮದ, ಸಪ್ತರ್ಷಿಗಳು, ಯಮ, ಅಗ್ನಿ, ತಾಪಸ, ಕುತ್ಸ, ಕುಸೀದಿ, ತ್ರಿತ, ಬಂಧು ಮತ್ತು ತತ್ಸಹೋದರರು, ವಿಷ್ಣು, ನೇಜಮೇಷ ಮತ್ತು ಸಂವನನ.

ಮೇಲೆ ಹೇಳಿದ ಈ ಋಷಿಗಳೆಲ್ಲರೂ ಸಹ ಪ್ರತ್ಯೇಕ ಸೂಕ್ತಗಳಲ್ಲಿ ಅಗ್ನಿಯನ್ನು ವಿಧವಿಧವಾಗಿ ಸ್ತುತಿಸಿದ್ದಾರೆ.

ಏತೇ ತು ಸರ್ವ ಏವಾಸ್ಯ ವಿಶ್ವೈಃ ಸ್ತೋಮೈಃ ಕರ್ಮಜೈರ್ಗುಣೈಃ ।
ಸಮಸ್ತೈರಥ ಚೇ ವ್ಯಸ್ತೈಃ ಪೃಥಕ್ಸೂಕ್ತೇಷು ತುಷ್ಟುವುಃ ॥

(ಬೃ. ದೇ. ೩-೬೦)

ಅಗ್ನಿದೇವನ ನಾನಾವಿಧವಾದ ಕರ್ಮೋತ್ಪನ್ನವಾದ ವಿಶ್ವಗುಣಗಳ ವರ್ಣನವೇ ವಿಶ್ವೇದೇವತೆಗಳ ವರ್ಣನವು. ಎಂದರೆ ಬೇರೆಬೇರೆ ದೇವತೆಗಳೆಲ್ಲವೂ ಅಗ್ನಿಯ ರೂಪಾಂತರಗಳೇ ಆಗಿರುವುದರಿಂದ ಅನೇಕ ದೇವತೆಗಳ ಸ್ತುತಿಯು ಅಗ್ನಿಯ ಅನೇಕ ಗುಣಗಳ ಪ್ರಶಂಸನವು. ಮೇಲೆ ನಿರ್ದಿಷ್ಟರಾದ ಸಕಲ ಋಷಿಗಳೂ ಸಹ ತಮ್ಮತಮ್ಮ ಕೃತಿಗಳಾದ ವೈಯಕ್ತಿಕವಾದ ಸೂಕ್ತಗಳಲ್ಲಿ ವಿಶ್ವೇದೇವರೂಪಿಯಾದ ಅಗ್ನಿದೇವನ ವಿಶ್ವಗುಣಗಳನ್ನೇ ಪೂರ್ಣವಾಗಿ ಸ್ತುತಿಸಿದ್ದಾರೆ ಎಂಬುದೇ ತಾತ್ಪರ್ಯವು. ಇದೇ ಅಭಿಪ್ರಾಯವನ್ನೇ ಇನ್ನೂ ಕೆಲವೆಡೆಗಳಲ್ಲೂ ಸ್ಪಷ್ಟವಾಗಿ ತಿಳಿಸಿವೆ. ಉದಾಹರಣೆಗೆ—

ಆಗ್ನೇಯಂ ಸೂಕ್ತಮೈಭಿರ್ಯದ್ವೈಶ್ವದೇವಮಿಹೋಚ್ಯತೇ ।
ತದ್ವಿಶ್ವಲಿಂಗಂ ಗಾಯತ್ರಂ ವೈಶ್ವದೇವೇಷು ಶಸ್ಯತೇ ॥

(ಬೃ. ದೇ. ೩-೩೩)

ಐಭಿರಗ್ನೇ (ಋ. ಸಂ. ೧-೧೪) ಎಂಬ ಮಂತ್ರದಲ್ಲಿ ಅಗ್ನಿಯನ್ನುದ್ದೇಶಿಸಿದ್ದರೂ ಸಹ ವಿಶ್ವೇದೇವತಾಕವಾಗಿದೆ. ಗಾಯತ್ರೀಛಂದಸ್ಸಿನಲ್ಲಿ ನಿರ್ಮಿತವಾಗಿರುವುದರಿಂದ **ಈ** ಸೂಕ್ತದ ಮಂತ್ರಗಳು ವಿಶ್ವಲಿಂಗಾತ್ಮಕವಾಗಿವೆ ಮತ್ತು ವಿಶ್ವ ಗುಣಗಳನ್ನೂ ಪ್ರಶಂಸಿಸುವುವಾಗಿವೆ. ಆದುದರಿಂದಲೇ,

ಯದೈಭಿರಿತಿ ಚೈತಸ್ಮಿನ್ ವೈಶ್ವದೇವೇऽಗ್ನಿಮರ್ಚತಿ ।

(ಬೃ. ದೇ. ೩-೫೧)

ಎಂದು ಇದೇ ಭಾವವನ್ನು ಪದೇಪದೇ ತಿಳಿಸಿದೆ, ಅಲ್ಲದೇ ಅಗ್ನಿಹೋತ್ರಕ್ಕೂ, ವಿಶ್ವೇದೇವತೆಗಳಿಗೂ ಇರುವ ಸಂಬಂಧವನ್ನು ವಿವರಿಸುತ್ತಾ ಐತರೇಯಬ್ರಾಹ್ಮಣದಲ್ಲಿ,

ಯೋ ವಾ ಅಗ್ನಿಹೋತ್ರಂ ವೈಶ್ವದೇವಂ ಷೋಳಶಕಲಂ ಪಶುಷು ಪ್ರತಿಷ್ಠಿತಂ ವೇದ ವೈಶ್ವದೇವೇನಾಗ್ನಿಹೋತ್ರೇಣ ಷೋಳಶಕಲೇನ ಪಶುಷು ಪ್ರತಿಷ್ಠಿತೇನ ರಾಧ್ನೋತಿ ॥

(ಐ. ಬ್ರಾ. ೫-೩೬)

ಹದಿನಾರು ತಲೆಗಳುಳ್ಳದ್ದೂ, ಪಶುಗಳಲ್ಲಿ ಪ್ರತಿಷ್ಠಿತವಾದುದೂ ಆದ ಅಗ್ನಿಹೋತ್ರವು ವೈಶ್ವದೇವವೆಂದು ಯಾವನು ಅರಿಯುವನೋ ಮತ್ತು ವಿಶ್ವದೇವತಾಕವಾದ **ಈ** ಅಗ್ನಿಹೋತ್ರವನ್ನಾಚರಿಸುವನೋ ಅವನು ಪಶ್ವಾದಿಸಂಪದ್ಯುಕ್ತನಾಗಿ ಆಗುತ್ತಾನೆ ಎಂದು ಪ್ರಶಂಸಿಸಿದೆ. ಆದುದರಿಂದಲೇ,

ಯಸ್ಯಾಗ್ನಿಹೋತ್ರಮದರ್ಶಮಪೌರ್ಣಮಾಸಮಚಾತುರ್ಮಾಸ್ಯಮನಾಗ್ರಯಣಮತಿಥಿವರ್ಜಿತಂಚ ।
ಅಹುತಮವೈಶ್ವದೇವಮವಿಧಿನಾ ಹುತಮಾಸಪ್ತಮಾಂಸ್ತಸ್ಯ ಲೋಕಾನ್ ಹಿನಸ್ತಿ ॥

(ಮಂಡಕ ೧-೨-೩)

ಅಗ್ನಿಹೋತ್ರವು, ಪೌರ್ಣಮಾಸ, ಚಾತುರ್ಮಾಸ್ಯ, ಆಗ್ರಯಣ, ವೈಶ್ವದೇವ ಇತ್ಯಾದಿ ಕರ್ಮರಹಿತವಾಗಿದ್ದರೆ, ಸಪ್ತ ಲೋಕಗಳಲ್ಲೂ ಸಹ ಪುರುಷನ ಭವಿಷ್ಯಕ್ಕೆ ಕುಂದನ್ನುಂಟುಮಾಡುತ್ತದೆ ಎಂದು ವೈಶ್ವದೇವಕ್ರಿಯೆಯ ಪ್ರಾಶಸ್ತ್ಯವನ್ನು ಪ್ರಶಂಸಿಸಿದೆ. ಅಗ್ನಿಯಲ್ಲಿಯೇ ವಿಶ್ವದೇವತೆಗಳೆಲ್ಲರೂ ಅಂತರ್ಗತರಾಗಿದ್ದಾರೆ ಅಥವಾ ಇತರ ಸಕಲ ದೇವತೆಗಳ ಸ್ವರೂಪಗಳೆಲ್ಲವೂ ಅಗ್ನಿಯ ರೂಪಾಂತರಗಳು. ಆದುದರಿಂದಲೇ ಅಗ್ನಿಹೋತ್ರಕ್ಕೂ, ವೈಶ್ವದೇವಕರ್ಮಕ್ಕೂ ತಾದಾತ್ಮ್ಯ ಸಂಬಂಧವು ಎಂಬ ಈ ಅಂಶವನ್ನು ವೈಶ್ವದೇವನಿವಿನ್ಮಂತ್ರದಿಂದ ತಿಳಿಯಬಹುದು. ಇದರಂತೆಯೇ ಇನ್ನೂ ಕೆಲವು ಮಂತ್ರಗಳಲ್ಲೂ ಸಹ ವಿಶ್ವೇದೇವತೆಗಳು ಅಗ್ನಿಯಲ್ಲಿ ಅಡಗಿರುವ ವಿಷಯವನ್ನು ಸ್ಪಷ್ಟವಾಗಿಯೇ ತಿಳಿಸಿದೆ. ಉದಾಹರಣೆಗೆ—

ತ್ವಮಗ್ನೇ ವರುಣೋ ಜಾಯಸೇ ಯತ್ತ್ವಂ ಮಿತ್ರೋ ಭವಸಿ ಯತ್ಸಮಿದ್ಧಃ ।
ತ್ವೇ ವಿಶ್ವೇ ಸಹಸಸ್ಪುತ್ರ ದೇವಾಸ್ತ್ವಮಿಂದ್ರೋ ದಾಶುಷೇ ಮರ್ತ್ಯಾಯ ॥

(ಋ. ಸಂ. ೫-೩-೧)

ಎಲೈ ಅಗ್ನಿಯೇ, ನೀನೇ ವರುಣನು, ನೀನೇ ಮಿತ್ರನು ಮತ್ತು ನಿನ್ನಲ್ಲೇ ಸಕಲ ವಿಶ್ವದೇವತೆಗಳೂ ಅಂತರ್ಗತರಾಗಿದ್ದಾರೆ. ನಿನ್ನಲ್ಲಿ ಅರ್ಪಿತವಾದ ಹವಿಸ್ಸಿನಿಂದಲೇ ಅವರೆಲ್ಲರೂ ಜೀವಿಸುತ್ತಾರೆ. ನಿನಗರ್ಪಿತವಾಗುವ ಹವಿಸ್ಸೇ ಅವರಿಗೂ ಸೇರಕ್ಕದ್ದು ಮತ್ತು ಅವರೆಲ್ಲರಿಗೂ ಅರ್ಪಿತವಾಗತಕ್ಕದ್ದೂ ನಿನ್ನನ್ನೇ ಸೇರತಕ್ಕದ್ದು ಇತ್ಯಾದಿಯಾದ ಪ್ರಶಂಸೆಯಿದೆ. ಆದರೆ ಅವರಾರು ? ಎಷ್ಟು ಸಂಖ್ಯೆಯುಳ್ಳವರು ಎಂಬುದನ್ನು ವೈಶ್ವದೇವನಿವಿನ್ಮಂತ್ರದಲ್ಲಿ ತಿಳಿಸಿದೆ.

ತ್ರೀಣಿ ಶತಾ ತ್ರೀ ಸಹಸ್ರಾಣ್ಯಗ್ನಿಂ ತ್ರಿಂಶಚ್ಚ ದೇವಾ ನವ ಚಾಸಪರ್ಯನ್ ।
ಔಕ್ಷನ್ ಘೃತೈರಸ್ತೃಣನ್ಬರ್ಹಿರಸ್ಮಾ ಆದಿದ್ಧೋತಾರಂ ನ್ಯಸಾದಯಂತ ॥

(ಋ. ಸಂ. ೩-೯-೯)

ಎಂಬುದು ವೈಶ್ವದೇವನಿವಿನ್ಮಂತ್ರವೆಂದು ಪರಿಗಣಿತವಾಗಿದೆ. ಇದರಲ್ಲಿ ದೇವತೆಗಳ ಸಂಖ್ಯಾನಿರ್ದೇಶವಿದೆ. ಇದೇ ವಿಶ್ವೇದೇವತೆಗಳ ಸಂಖ್ಯೆ ಎಂದು ಬೃಹದಾರಣ್ಯಕದಲ್ಲಿ ಇದರ ವಿವರಣೆಯನ್ನು ತಿಳಿಸಿದೆ. ಅಗ್ನ್ಯಂತರ್ಗತವಾದ ಈ ಸಕಲ ದೇವತೆಗಳ ಸಂಖ್ಯೆಯನ್ನು ವಿವರಿಸುತ್ತಾ—

ಅಥ ಹೈನಂ ವಿದಗ್ಧಃ ಶಾಕಲ್ಯಃ ಪಪ್ರಚ್ಛ ಕತಿ ದೇವಾ ಯಾಜ್ಞವಲ್ಕ್ಯೇತಿ ಸ ಹೈತಯೈವ ನಿವಿದಾ ಪ್ರತಿಪೇದೇ ಯಾವಂತೋ ವೈಶ್ವದೇವಸ್ಯ ನಿವಿದುಚ್ಯಂತೇ ತ್ರಯಶ್ಚ ತ್ರೀ ಚ ಶತಾ ತ್ರಯಶ್ಚ ತ್ರೀ ಚ ಸಹಸ್ರೇತ್ಯೋಮಿತಿ ॥

(ಬೃ. ಉ. ೩-೯-೧)

ಎಂದು ತಿಳಿಸಿದೆ. ಮೇಲೆ ಉದ್ಧೃತವಾಗಿರುವ ಋ. ಸಂ. ೩-೯-೯ ನೇ ಮಂತ್ರದ ಭಾಷ್ಯದಲ್ಲಿ ಸಾಯಣರು ಈ ಉಪನಿಷದ್ವಾಕ್ಯವನ್ನು ಉದಹರಿಸಿ ವಿವರಿಸಿದ್ದಾರೆ. ಇಲ್ಲಿ ವಿದಗ್ಧಶಾಕಲ್ಯನಿಗೂ, ಯಾಜ್ಞವಲ್ಕ್ಯನಿಗೂ ದೇವತಾಸಂಖ್ಯೆಗಳ ವಿಷಯದಲ್ಲಿ ನಡೆದ ಸಂಭಾಷಣೆಯಿರುತ್ತದೆ.

ವಿದಗ್ಧ ಶಾಕಲ್ಯ—ಯಾಜ್ಞವಲ್ಕ್ಯನೇ, ದೇವತೆಗಳ ಒಟ್ಟು ಸಂಖ್ಯೆಯೆಷ್ಟು? **ಯಾಜ್ಞವಲ್ಕ್ಯ**—ವಿಶ್ವದೇವ ನಿವಿನ್ಮಂತ್ರದಲ್ಲಿ ನಿರ್ದಿಷ್ಟರಾದ ಸಂಖ್ಯೆಯೇನಿದೆಯೋ ಅದೇ ವಿಶ್ವೇದೇವತೆಗಳ ಸಂಖ್ಯೆ ಎಂದರೆ, ಮುನ್ನೂರಮೂರು ಮತ್ತು ಮೂರುಸಾವಿರದ ಮೂರು. ಒಟ್ಟು ಮೂರುಸಾವಿರದ ಮುನ್ನೂರ ಆರು. ಆದರೆ ಈ ಸಂಖ್ಯೆಯು ಬೇರೆಡೆಯಲ್ಲಿ ಹೇಳಿರುವ ಸಂಖ್ಯೆಗಿಂತ ಕೊಂಚ ವ್ಯತ್ಯಸ್ತವಾಗಿದೆ. ಅದರಪ್ರಕಾರ ೧೧ x ೩ = ೩೩ ನ್ನು ಸೇರಿಸಿಕೊಳ್ಳಬೇಕು. ಎಂದರೆ ಒಟ್ಟು ಮೂರುಸಾವಿರದ ಮುನ್ನೂರ ಮೂವತ್ತೊಂಭತ್ತು. ಇದೇ ಅಗ್ನ್ಯಂತರ್ಗತವಾದ ವಿಶ್ವೇದೇವತೆಗಳ ಸಂಖ್ಯೆ. ಈ ವಿಶ್ವೇದೇವತೆಗಳ ಪೂಜೆಯೇ ಅಗ್ನಿಪೂಜೆ ಮತ್ತು ಮತ್ತು ಅಗ್ನಿಪೂಜೆಯೇ ವಿಶ್ವೇದೇವತೆಗಳ ಪೂಜೆ.

ಈರೀತಿಯಾದ ವರ್ಣನಗಳಲ್ಲಿ ವಿಶ್ವೇದೇವತೆಗಳು ಅಗ್ನ್ಯಂತರ್ಗತರಾಗಿರುವರು ಎಂದು ಹೇಳಿರುವುದು ಒಂದು ಕ್ರಮವಾದರೆ, ವಿಶ್ವೇದೇವತೆಗಳು ಪಂಚಜನಾತ್ಮಕರು ಎಂದು ಹೇಳಿ ವರ್ಣಿತವಾಗಿರುವ ಪ್ರಕರಣಗಳೂ ಕಲವಿವೆ. ಪಂಚಜನರೆಂದರೆ, ಇಂತಹ ಸಂದರ್ಭಗಳಲ್ಲಿ, ದೇವತೆಗಳು, ಮಾನವರು, ಯಕ್ಷರು, ಗಂಧರ್ವರು ಮತ್ತು ಪಿತೃಗಳು ಎಂಬ ಅಂಶವನ್ನು ವೈಶ್ವದೇವಶಸ್ತ್ರಪ್ರಕರಣದಲ್ಲಿ ಈರೀತಿ ವಿವರಿಸಿದೆ—

ಪಾಂಚಜನ್ಯಂ ವಾ ಏತದುಕ್ಥಂ ಯದ್ವೈಶ್ವದೇವಂ ಸರ್ವೇಷಾಂ ವಾ ಏತತ್ಪಂಚಜನಾನಾಮುಕ್ಥಂ ದೇವಮನುಷ್ಯಾಣಾಂ ಗಂಧರ್ವಾಪ್ಸರಸಾಂ ಸರ್ಪಾಣಾಂ ಚ ಪಿತೃಣಾಂ ಚೈತೇಷಾಂ ವಾ ಏತತ್ಪಂಚಜನಾನಾಮುಕ್ಥಂ ಸರ್ವ ಏನಂ ಪಂಚಜನಾ ವಿದುಃ ॥

(ಐ. ಬ್ರಾ. ೩-೩೧)

ವೈಶ್ವದೇವಕರ್ಮವು ಪಾಂಚಜನ್ಯವಾದುದು ಎಂದರೆ ಐದುಗಂಪಿನ ಜನರಿಗೂ ಸಂಬಂಧಿಸಿದುದು ಎಂದರೆ, ದೇವ, ಮನುಷ್ಯ, ಗಂಧರ್ವ, ಅಪ್ಸರಸ್ ಮತ್ತು ಪಿತೃಗಳು. ಈ ತತ್ತ್ವವನ್ನರಿತವನು ಈ ಕರ್ಮಕುಶಲನು ಎಂದು ವೈಶ್ವದೇವ ಕರ್ಮಪ್ರಶಂಸೆಯೂ ವಿಶ್ವೇದೇವತೆಗಳ ವರ್ಣನವೂ ಇರುತ್ತದೆ. ಈ ಕರ್ಮದ ಮಹತ್ತ್ವವನ್ನು ಪ್ರಶಂಸಿಸುವ ಇತರ ಸನ್ನಿವೇಶಗಳನ್ನೂ ಮುಂದೆ ತಿಳಿಸಲಾಗುತ್ತದೆ.

ಹೀಗೆ ಸರ್ವದೇವತಾಮಯನಾದ ಅಗ್ನಿಯಲ್ಲಿಯೇ ವಿಶ್ವೇದೇವತೆಗಳು ಅಡಕರಾಗಿರುವರು ಎಂಬುದು ಒಂದು ಸನ್ನಿವೇಶ; ವಿಶ್ವೇದೇವತೆಗಳಲ್ಲಿಯೇ ದೇವಮಾನವಾದಿ ಸಕಲ ಭೂತಗಳೂ ಅಡಕವಾಗಿರುವುವು ಎಂಬುದು ಇನ್ನೊಂದು ಸನ್ನಿವೇಶ. ಇವೇ ಅಲ್ಲದೇ, ಮೂರನೇ ಬಗೆಯಾದ ವರ್ಣನವೂ ವೈದಿಕವಾಕ್ಯಗಳಲ್ಲಿ ಪ್ರಸಿದ್ಧವಾಗಿವೆ. ವಿಶ್ವೇದೇವತೆಗಳು ಸೃಷ್ಟಿನಿಯಮದಲ್ಲಿ ವರ್ಣಪ್ರಭೇದವನ್ನು ತೋರಿಸುವ ಒಂದು ಶಕ್ತಿಶಂಜ್ಞೆ ಎಂಬುದೇ ಈ ಮೂರನೆಯದು. ಈ ವರ್ಣನದ ಪ್ರಕಾರ ಅಗ್ನಿ, ಇಂದ್ರ, ವಿಶ್ವೇದೇವತೆಗಳು, ಈ ಮೂವರೂ ಮೂರು ವರ್ಣನಗಳನ್ನು ಪ್ರತಿಬಿಂಬಿಸತಕ್ಕ ದೇವತಾವಿಶೇಷಗಳು. ಋಕ್ಸಂಹಿತೆಯಲ್ಲಿ ಸೂಕ್ತವಿಭಾಗಕ್ರಮವೂ ಸಹ ಈ ಅಂಶವನ್ನು ಸೂಚಿಸುವುದಾಗಿದೆ. ಎಂಟನೆಯ ಮತ್ತು ಒಂಬತ್ತನೆಯ ಮಂಡಲಗಳನ್ನು ಬಿಟ್ಟರೆ ಉಳಿದ ಎಲ್ಲಾ ಮಂಡಲಗಳಲ್ಲೂ ಸಹ ಆದಿಯಲ್ಲಿ **ಅಗ್ನಿ**ಪ್ರಶಂಸಕವೂ, ಅನಂತರ **ಇಂದ್ರ**ಪ್ರಶಂಸಕವೂ ಆದ ಸೂಕ್ತಗಳಿರುತ್ತವೆ. ತದನಂತರ ಸಾಧಾರಣವಾಗಿ ವಿಶ್ವೇದೇವಪ್ರಶಂಸಕವಾದ ಸೂಕ್ತಗಳು ಮುಂದುವರಿಯುತ್ತವೆ. ಮುಂದೆ ಬ್ರಾಹ್ಮಣಾದಿಗಳಲ್ಲೆಲ್ಲಾ ಅಗ್ನಿ, ಇಂದ್ರ ಮತ್ತು ವಿಶ್ವೇದೇವತೆಗಳಿಗೂ, ಬ್ರಾಹ್ಮಣ ಕ್ಷತ್ರ ಮತ್ತು ವೈಶ್ಯ ಎಂಬ ಮೂರು ವರ್ಣಗಳಿಗೂ ಕ್ರಮವಾಗಿ ತಾದಾತ್ಮ್ಯವನ್ನು ತೋರಿಸಿಹೇಳುವ ಉದಾಹರಣೆಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ.

ಪ್ರಜಾಪತಿರ್ವಾವ ಜ್ಯೇಷ್ಠಸ್ಯ ಹ್ಯೇತೇನಾಗ್ರೇಽಯಜತ ಪ್ರಜಾಪತಿರಕಾಮಯತ ಪ್ರ ಜಾಯೇ-ಯೇತಿ ಸ ಮುಖತಸ್ತ್ರಿವೃತಂ ನಿರಮಿಮೀತ ತಮಗ್ನಿರ್ದೇವತಾನ್ವಸೃಜತ ಗಾಯತ್ರೀ-ಚ್ಛಂದೋ ರಥತರಗ್ಂಸಾಮ ಬ್ರಾಹ್ಮಣೋ ಮನುಷ್ಯಾಣಾಮಜಃ ಪಶೂನಾಂ ॥

(ತೈ. ಸಂ. ೭-೧-೧-೪)

ಎಲ್ಲಕ್ಕಿಂತಲೂ ಪ್ರಥಮತಃ ಯಜ್ಞಕರ್ಮವನ್ನಾಚರಿಸಿದುದರಿಂದ ಪ್ರಜಾಪತಿಯೇ ಸರ್ವಶ್ರೇಷ್ಠನು. ಆಗ " ನಾನು ಸಂತತಿಯನ್ನು ಪಡೆಯಬೇಕು " ಎಂದು ಆಶಿಸಿದನು. ಆಗ ತ್ರಿವೃತವನ್ನು ಮುಖದಿಂದ ಪ್ರಕಟಿಸಿದನು. ಅದರಿಂದ ಅಗ್ನಿದೇವನೂ, ಗಾಯತ್ರೀಚ್ಛಂದಸ್ಸೂ, ರಥಂತರಸಾಮವೂ, ಮಾನವರಲ್ಲಿ ಬ್ರಾಹ್ಮಣರೂ, ಪಶುಗಳಲ್ಲಿ ಅಜವೂ, ಉತ್ಪನ್ನವಾದವು. ಮುಖದಿಂದ ಉತ್ಪನ್ನವಾದುದರಿಂದ ಅವೆಲ್ಲವೂ ಶ್ರೇಷ್ಠತೆಯನ್ನು ಪಡೆದವು.

ಉರಸೋ ಬಾಹುಭ್ಯಾಂ ಪಂಚದಶಂ ನಿರಮಿಮೀತ ತಮಿಂದ್ರೋ ದೇವತಾನ್ವಸೃಜ್ಯತ ತ್ರಿಷ್ಟುಪ್-ಛಂದೋ ಬೃಹತ್ಸಾಮ ರಾಜನ್ಯೋ ಮನುಷ್ಯಾಣಾಮವಿಃ ಪಶೂನಾಂ ತಸ್ಮಾತ್ತೇ ವೀರ್ಯಾವಂತೋ ವೀರ್ಯಾದ್ಧ್ಯಸೃಜ್ಯಂತ ॥

(ತೈ. ಸಂ. ೭-೧-೧-೪,೫)

ಉರಸ್ಸಿನಿಂದಲೂ, ಬಾಹುಗಳಿಂದಲೂ ಪಂಚದಶವನ್ನು ಪ್ರಕಟಿಸಿದನು. ಅದರಿಂದ ಇಂದ್ರದೇವನೂ ತ್ರಿಷ್ಟುಪ್ ಛಂದಸ್ಸೂ, ಬೃಹತ್ಸಾಮವೂ, ಮಾನವರ ನಡುವೆ ಕ್ಷತ್ರಿಯರೂ, ಪಶುಗಳ ನಡುವೆ ಮೇಷಗಳೂ ಉತ್ಪನ್ನವಾದವು. ಬಾಹುವಿನ ವೀರ್ಯದಿಂದ ಜನಿಸಿದುದರಿಂದ ಅವೆಲ್ಲವೂ ವೀರ್ಯಸೂಚಕವಾದವು.

ಮಧ್ಯತಸ್ಸಪ್ತದಶಂ ನಿರಮಿಮೀತ ತಂ ವಿಶ್ವೇದೇವಾ ದೇವತಾ ಅನ್ವಸೃಜ್ಯಂತ ಜಗತೀ ಛಂದೋ ವೈರೂಪಗ್ಂಸಾಮ ವೈಶ್ಯೋ ಮನುಷ್ಯಾಣಾಂ ಗಾವಃ ಪಶೂನಾಂ ತಸ್ಮಾತ್ತ ಆದ್ಯಾ ಅನ್ನ-ಧಾನಾದ್ಧ್ಯಸೃಜ್ಯಂತ ತಸ್ಮಾದ್ಭೂಯಾಗ್ಂಸೋಽನ್ಯೇಭ್ಯೋ ಭೂಯಿಷ್ಠಾ ಹಿ ದೇವತಾ ಅನ್ವಸೃಜ್ಯಂತ ॥

(ತೈ. ಸಂ. ೭-೧-೧-೫)

ಅನಂತರ ತನ್ನ ಮಧ್ಯಭಾಗದಿಂದ ಸಪ್ತದಶಸ್ತೋಮವನ್ನು ಪ್ರಕಟಿಸಿದನು. ಅದರಿಂದ ವಿಶ್ವೇದೇವತೆಗಳು ಉತ್ಪನ್ನರಾದರು. ಛಂದಸ್ಸುಗಳಲ್ಲಿ ಜಗತಿಯೂ, ಸಾಮಗಳಲ್ಲಿ ವೈರೂಪವೂ, ಪ್ರಜೆಗಳಲ್ಲಿ ವೈಶ್ಯರೂ, ಪಶುಗಳಲ್ಲಿ ಗೋವುಗಳೂ ಉತ್ಪನ್ನವಾದವು. ಇವೆಲ್ಲವೂ ಅನ್ನಕೋಶದಿಂದ ಉತ್ಪನ್ನವಾದುದರಿಂದ ಅನ್ನಸಂಪದ್ಯುಕ್ತವೂ ಭೋಗಾರ್ಹವೂ ಆದವು. ವಿಶ್ವೇದೇವತೆಗಳ ಸಂಬಂಧಿಗಳಾದುದರಿಂದ ಇವುಗಳ ಸಂಖ್ಯೆಯೂ ಸಹ ಅತ್ಯಧಿಕವಾದುವು ಇತ್ಯಾದಿಯಾಗಿ ಅಗ್ನಿ, ಇಂದ್ರ ಮತ್ತು ವಿಶ್ವೇದೇವತೆಗಳ ಉತ್ಪತ್ತಿ ಕ್ರಮವನ್ನೂ, ಶಕ್ತಿಪ್ರಭೇದಗಳನ್ನೂ ತಿಳಿಸಿದೆ. ಇದೇ ಅಂಶವನ್ನು ಶತಪಥಬ್ರಾಹ್ಮಣದಲ್ಲಿಯೂ ಕೆಳಗೆ ಹೇಳಿರುವಂತೆ ವಿವರಿಸಿದೆ.

ಕ್ಷತ್ರಂ ವಾ ಇಂದ್ರಾಗ್ನೀ । ವಿಶೋ ವಿಶ್ವೇದೇವಾ ಯತ್ರ ವೈ ಕ್ಷತ್ರಮುಜ್ಜಯತ್ಯನ್ವಾಭಕ್ತಾ ವೈ ತತ್ರ ವಿಡ್ವದ್ವಿಶ್ವಾನ್ದೇವಾನನ್ವಾಭಜತಾಂ ತಸ್ಮಾದೇಷ ವೈಶ್ವದೇವಕ್ಷರುರ್ಭವತಿ ॥

(ಶ. ಬ್ರಾ. ೨-೪-೩-೬)

ಇಂದ್ರಾಗ್ನಿಗಳು ಕ್ಷಾತ್ರಸ್ವಭಾವದವರು, ವಿಶ್ವದೇವರುಗಳು ವೈಶ್ಯಸ್ವಭಾವದವರು. ಕ್ಷತ್ರಿಯರು ಎಲ್ಲೆಲ್ಲಿ ಜಯವನ್ನು ಪಡೆಯುವರೋ, ಅಲ್ಲೆಲ್ಲಾ ವೈಶ್ಯರೂ ಭಾಗವನ್ನು ಹೊಂದುವರು. ಆದುದರಿಂದಲೇ ಇಂದ್ರಾಗ್ನಿಗಳ ಜಯದಲ್ಲಿ ವಿಶ್ವದೇವತೆಗಳೂ ಭಾಗವಹಿಸುವರು ಎಂದು ತಿಳಿಸಿದೆ. ಈ ವರ್ಣವಿಭಾಗವು ಒಂದು ವಿಧದಲ್ಲಿ ಸಹಜವಾಗಿಯೇ ಇದೆಯೆಂದು ಹೇಳಬಹುದು. ಹೇಗೆಂದರೆ ಯಜ್ಞಾಗ್ನಿರೂಪದಲ್ಲಿ ದೇವತೆಗಳನ್ನು ಯಜ್ಞಕ್ಕೆ ಬರಮಾಡುತ್ತಲೂ ದೇವತೆಗಳಿಗೆ ಹವಿಸ್ಸನ್ನು ವಹಿಸುತ್ತಲೂ ಮತ್ತು ದೇವಮಾನವರಿಗೆ ಸಂಬಂಧವನ್ನು ಬೆಳೆಸುತ್ತಲೂ ಅಗ್ನಿಯು ಪುರೋಹಿತರೂಪದಲ್ಲಿರುತ್ತಾನೆ. ತೀಕ್ಷ್ಣವಾದ ತೇಜಸ್ಸು ಮತ್ತು ವರ್ಚಸ್ಸು ಸಹ ಬ್ರಾಹ್ಮಣಲಕ್ಷಣಗಳು. ಅಸುರಾದಿಗಳೊಂದಿಗೆ ಸರ್ವದಾ ಯುದ್ಧ ಮಾಡಿ ಜಯಲಾಭವನ್ನು ಪಡೆಯುವ ಇಂದ್ರನು ಸಹಜವಾದ ಕ್ಷಾತ್ರಶಕ್ತಿಯನ್ನು ಹೊಂದಿರುತ್ತಾನೆ. ಇವನ್ನುಳಿದರೆ ಉಳಿದ ಪ್ರಜೆಗಳು ವೈಶ್ಯರೆಂದು ಕರೆಯಲ್ಪಡುವಂತೆ ಇಂದ್ರಾಗ್ನಿಗಳನ್ನುಳಿದ ಇತರ ದೇವತೆಗಳು ವೈಶ್ಯಗುಂಪಿಗೆ ಸೇರಿದವರು ಎಂದಿರುವ ಈ ವಿಭಾಗದಲ್ಲಿ ವಿಶ್ವೇದೇವತೆಗಳು ಇಂದ್ರಾಗ್ನಿಗಳಿಗಿಂತಲೂ ಭಿನ್ನರೆಂದು ಇಂದ್ರಾಗ್ನಿಗಳ ತೇಜಸ್ಸಾಗಲಿ ಅಥವಾ ವೀರ್ಯವಾಗಲೀ ಜಯರಹಿತವಾಗಿರುವಷ್ಟಿಲ್ಲವೆಂದೂ ಅರ್ಥವಾಗುತ್ತದೆ.

ಈ ವಿಭಾಗಾನುಸಾರವಾಗಿಯೇ ಮೂರು ಸವನಗಳಲ್ಲಿಯೂ ಇವರ ಭಾಗಗಳು ಕ್ಲೃಪ್ತವಾಗಿವೆ. ಈ ವಿಭಾಗ ಕ್ರಮವನ್ನು ಸಂಹಿತಾ ಮತ್ತು ಬ್ರಾಹ್ಮಣವಾಕ್ಯಗಳಲ್ಲಿ ಕಾಣಬಹುದು

ಪ್ರಜಾಪತಿರ್ವೈ ಯಜ್ಞಂ ಛಂದಾಸಿ ದೇವೇಭ್ಯೋ ಭಾಗಧೇಯಾನಿ ವ್ಯಭಜತ್ಸ ಗಾಯತ್ರೀಮೇವಾಗ್ನಯೇ ವಸುಭ್ಯಃ ಪ್ರಾತಃಸವನೇಽಭಜತ್ತ್ರಿಷ್ಟುಭಮಿಂದ್ರಾಯ ರುದ್ರೇಭ್ಯೋ ಮಧ್ಯಂದಿನೇ ಜಗತೀಂ ವಿಶ್ವೇಭ್ಯೋ ದೇವೇಭ್ಯ ಆದಿತ್ಯೇಭ್ಯಸ್ತೃತೀಯಸವನೇ ॥

(ಐ. ಬ್ರಾ. ೩-೧೩)

ಪ್ರಜಾಪತಿಯು ಯಜ್ಞಭಾಗಗಳನ್ನೂ, ಛಂದಸ್ಸುಗಳನ್ನು ದೇವತೆಗಳಿಗೆ ಹಂಚಿದನು. ಪ್ರಾತಃಸವನದಲ್ಲಿ ಗಾಯತ್ರಿಯನ್ನು ಅಗ್ನಿಗೂ ಮತ್ತು ವಸುಗಳಿಗೂ, ಮಾಧ್ಯಂದಿನ ಸವನದಲ್ಲಿ ತ್ರಿಷ್ಟುಪ್ಪನ್ನು ಇಂದ್ರನಿಗೂ ಮತ್ತು ರುದ್ರರಿಗೂ, ತೃತೀಯಸವನದಲ್ಲಿ ಜಗತಿಯನ್ನು ವಿಶ್ವೇದೇವತೆಗಳಿಗೂ ಮತ್ತು ಆದಿತ್ಯರುಗಳಿಗೂ ಹಂಚಿದನು ಎಂದು ಈ ಇದೇ ಪ್ರಕರಣವು ಶತಪಥಬ್ರಾಹ್ಮಣದಲ್ಲಿ ಕೊಂಚ ವ್ಯತ್ಯಸ್ತವಾಗಿದೆ. ಅದು ಹೇಗೆಂದರೆ,

ಅಥ ಪ್ರಾತಃ । ಆಗ್ನೇಯಃ ಪುರೋಡಾಶೋ ಭವತ್ಯೈಂದ್ರಗ್ಂ ಸಾಂನಾಯ್ಯಂ ಪ್ರಾತಃಸವನಮೇವಾಸ್ಯಾಗ್ನೇಯಃ ಪುರೋಡಾಶ ಆಗ್ನೇಯಗ್ಂ ಹಿ ಪ್ರಾತಃಸವನಮಥೈಂದ್ರಗ್ಂ ಸಾಂನಾಯ್ಯಂ ಮಾಧ್ಯಂದಿನಮೇವಾಸ್ಯ ತತ್ಸವನಮೈಂದ್ರಗ್ಂ ಹಿ ಮಾಧ್ಯಂದಿನಗ್ಂ ಸವನಂ ॥

(ಶ. ಬ್ರಾ. ೩-೪-೪-೧೨)

ಪ್ರಾತಃಕಾಲದಲ್ಲಿ ಆಗ್ನೇಯವಾದ ಪುರೋಡಾಶವೂ ಇಂದ್ರಸಂಬಂಧವಾದ ಸಾಂನಾಯ್ಯವೂ ಅರ್ಪಿತವಾಗುವುದು. ಪ್ರಾತಃಸವನವೇ ಅಗ್ನಿಪ್ರೀತಿಕರವಾದುದು. ಅದರಂತೆಯೇ ಮಾಧ್ಯಂದಿನಸವನವು ಇಂದ್ರಪ್ರೀತಿಕರವಾದುದು.

ಅಥ ಯತ್ಪೂರ್ವೇದ್ಯುಃ । ಐಂದ್ರಾಗ್ನೇನ ಯಜತೇಽಮಾವಾಸ್ಯಾಯಾಂ ತೃತೀಯಸವನಮೇವಾಸ್ಯ ತದ್ವೈಶ್ವದೇವಂ ವೈ ತೃತೀಯಸವನಮಿಂದ್ರಾಗ್ನೀ ವೈ ವಿಶ್ವೇದೇವಾಃ ॥

(ಶ. ಬ್ರಾ. ೩-೪-೪-೧೩)

ಅಮಾವಾಸ್ಯೆಯದಿನ ಅರ್ಪಿತವಾಗುವ ಐಂದ್ರಾಗ್ನಿಸಂಬಂಧವಾದ ಪುರೋಡಾಶವೇ ವೈಶ್ವದೇವೋದ್ದಿಷ್ಟವಾದ ತೃತೀಯ ಸವನವು. ಇಂದ್ರಾಗ್ನಿಗಳೇ ವಿಶ್ವೇದೇವತೆಗಳು ಎಂದು ವರ್ಣಿತವಾಗಿರುವ ಈ ಸಂದರ್ಭದಲ್ಲಿ ಇಂದ್ರಾಗ್ನಿಗಳಿಗೂ, ವಿಶ್ವೇದೇವತೆಗಳಿಗೂ ತಾದಾತ್ಮ್ಯವನ್ನು ತಿಳಿಸಿದೆ.

ಇದಲ್ಲದೇ, ವಿಶ್ವೇದೇವತೆಗಳಿಗೆ ತೃತೀಯಸವನದಲ್ಲಿ ಪ್ರಾಧಾನ್ಯವುಂಟು ಎಂದು ತಿಳಿಸುವ ಒಂದು ಐತಿಹಾಸಿಕ ಸಂದರ್ಭವೂ ಐತರೇಯಬ್ರಾಹ್ಮಣದಲ್ಲಿ ಈರೀತಿ ವರ್ಣಿತವಾಗಿದೆ.

ದೇವಾ ವೈ ಯಜ್ಞಮತನ್ವತ ತಾಂಸ್ತನ್ವಾನಾನಸುರಾ ಅಭ್ಯಾಯನ್ ಯೇಜ್ಞವೇಶಸಮೇಷಾಂ ಕರಿಷ್ಯಾಮ ಇತಿ.....ತೇ ವೈ ಪುರಸ್ತಾದಪಹತಾ ಅಸುರಾಃ ಪಶ್ಚಾತ್ಪರೀತ್ಯ ಪ್ರಾವಿಶಂಸ್ತೇ ದೇವಾಃ ಪ್ರತಿಬುದ್ಧ್ಯ ವಿಶ್ವಾನ್ದೇವಾನಾತ್ಮಾನಂ ಪಶ್ಚಾತ್ತೃತೀಯಸವನೇ ಪರ್ಯಾಹಂಸ್ತೇ ವಿಶ್ವೈರೇವ ದೇವೈರಾತ್ಮಭಿಃ ಪಶ್ಚಾತ್ತೃತೀಯಸವನೇಽಸುರರಕ್ಷಾಂಸ್ಯಪಾಘ್ನತ ತಥೈವೈತದ್ಯಜಮಾನಾ ವಿಶ್ವೈರೇವ ದೇವೈರಾತ್ಮಭಿಃ ಪಶ್ಚಾತ್ತೃತೀಯಸವನೇಽಸುರರಕ್ಷಾಂಸ್ಯಪಾಘ್ನತೇ ತಸ್ಮಾದ್ವೈಶ್ವದೇವಂ ತೃತೀಯಸವನಂ ॥

(ಐ. ಬ್ರಾ. ೬-೪)

ದೇವತೆಗಳು ಯಜ್ಞವನ್ನು ನೆರವೇರಿಸಬೇಕೆಂದು ಪ್ರಯತ್ನಿಸಿದಾಗ ಅಸುರರು ಪ್ರವೇಶಿಸಿ "ನಾವು ಇದಕ್ಕೆ ವಿಘ್ನವನ್ನುಂಟುಮಾಡುವೆವು" ಎಂದು ಪ್ರಯತ್ನಿಸಿದರು. ಆಗ ಪ್ರಾತಃಸವನದಲ್ಲಿ ಮಿತ್ರಾವರುಣರ ಸಹಾಯದಿಂದ ದಕ್ಷಿಣ ದಿಕ್ಕಿನಿಂದ ಪ್ರವೇಶಿಸಿದ ಅಸುರರನ್ನು ಓಡಿಸಿದರು. ಇಂದ್ರನು ಮಧ್ಯಭಾಗಕ್ಕೆ ರಕ್ಷಕನಾದನು ಮತ್ತು ಇಂದ್ರಾಗ್ನಿಗಳು ಒಟ್ಟಿಗೆ ಸೇರಿ ಉತ್ತರದಿಕ್ಪಾಲಕರಾದರು. ಅಗ್ನಿಯು ಮುಂಭಾಗಕ್ಕೆ ರಕ್ಷಕನಾದನು. ಮುಂಭಾಗದ ಪ್ರವೇಶಕ್ಕೆ ಅವಕಾಶವಿಲ್ಲದ ಅಸುರರು ಹಿಂಭಾಗದಿಂದ ಪ್ರವೇಶಿಸತೊಡಗಿದರು. ಆಗ ದೇವತೆಗಳು ತೃತೀಯಸವನದಲ್ಲಿ ವಿಶ್ವೇದೇವತೆಗಳನ್ನು ಅಲ್ಲಿ ಪಾಲಕರನ್ನಾಗಿ ನಿಯಮಿಸಿದರು. ಅವರ ಸಹಾಯದಿಂದ ಹಿಂಭಾಗದಿಂದ ಪ್ರವೇಶಿಸುತ್ತಿದ್ದ ಅಸುರರನ್ನು ಓಡಿಸಿದರು. ಆದುದರಿಂದಲೇ ತೃತೀಯಸವನದಲ್ಲಿ ವಿಶ್ವೇದೇವತೆಗಳಿಗೆ ಪ್ರಾಧಾನ್ಯವಿರುತ್ತದೆ. ಈ ತತ್ತ್ವವನ್ನರಿತವನು ಅಸುರರನ್ನು ಓಡಿಸಲು ಸಮರ್ಥನಾಗುತ್ತಾನೆ.

ಹೀಗೆ ಬ್ರಾಹ್ಮಣಾದಿಗಳಲ್ಲಿ ಅಗ್ನಿ, ಇಂದ್ರ, ವಿಶ್ವೇದೇವತೆಗಳು ಎಂಬ ಕ್ರಮವಿದ್ದರೆ ಉಪನಿಷತ್ತುಗಳಲ್ಲಿ ವಸು, ರುದ್ರ, ಆದಿತ್ಯ ಮತ್ತು ವಿಶ್ವೇದೇವತೆಗಳು ಎಂಬ ಕ್ರಮವಿರುತ್ತದೆ. ಹೇಗೆಂದರೆ—

ಬ್ರಹ್ಮವಾದಿನೋ ವದಂತಿ ಯದ್ವಸೂನಾಂ ಪ್ರಾತಃಸವನಂ ರುದ್ರಾಣಾಂ ಮಾಧ್ಯಂದಿನಂ ಸವನಮಾದಿತ್ಯಾನಾಂ ಚ ವಿಶ್ವೇಷಾಂ ಚ ದೇವಾನಾಂ ತೃತೀಯಸವನಂ ॥

(ಛಾ. ಉ. ೨-೨೪-೧)

ವಸುಗಳಿಗೆ ಪ್ರಾತಃಸವನವೂ, ರುದ್ರರಿಗೆ ಮಾಧ್ಯಂದಿನಸವನವೂ, ಆದಿತ್ಯ ಮತ್ತು ವಿಶ್ವೇದೇವತೆಗಳಿಗೆ ತೃತೀಯ ಸವನವೂ ವಿಹಿತವಾಗಿವೆಯೆಂದು ಬ್ರಹ್ಮಜ್ಞಾನಿಗಳು ಹೇಳಿದ್ದಾರೆ.

ಅಥ ಜುಹೋತಿ ನಮ ಆದಿತ್ಯೇಭ್ಯಶ್ಚ ವಿಶ್ವೇಭ್ಯಶ್ಚ ದೇವೇಭ್ಯೋ ದಿವಿಕ್ಷದ್ಭ್ಯೋ ಲೋಕಕ್ಷದ್ಭ್ಯೋ ಲೋಕಂ ಮೇ ಯಜಮಾನಾಯ ವಿಂದತ ॥

(ಛಾ. ಉ. ೨-೨೪-೧೫)

ತಸ್ಮಾ ಆದಿತ್ಯಾಶ್ಚ ವಿಶ್ವೇ ಚ ದೇವಾಸ್ತೃತೀಯೇಸವನಂ ಸಂಪ್ರಯಚ್ಛಂತ್ಯೇಷ ಹ ವೈ ಯಜ್ಞಸ್ಯ ಮಾತ್ರಾಂ ವೇದ ಯ ಏವಂ ವೇದ ಯ ಏವಂ ವೇದ ॥

(ಛಾ. ಉ. ೨-೨೪-೧೬)

ಅನಂತರ, ಆದಿತ್ಯರಿಗೆ ನಮಸ್ಕಾರವು. ವಿಶ್ವೇದೇವತೆಗಳಿಗೆ ನಮಸ್ಕಾರವು. ಅಂತರಿಕ್ಷಸ್ಥರೂ, ಪೃಥ್ವೀಸ್ಥರೂ ಆದ ದೇವತೆಗಳಿಗೆ ನಮಸ್ಕಾರವು. ಯಜ್ಞಕರ್ತನಾದ ನನ್ನ ವಾಸಕ್ಕೆ ಒಂದು ಲೋಕವನ್ನು ಸಿದ್ಧಪಡಿಸಿ ಎಂದು ಪ್ರಾರ್ಥಿಸಿದಾಗ ಆದಿತ್ಯರೂ, ವಿಶ್ವೇದೇವತೆಗಳೂ ಅವನನ್ನು ತೃತೀಯಸವನದಿಂದ ಅನುಗ್ರಹಿಸುತ್ತಾರೆ.

ಪೃಷ್ಠ್ಯ ಷಡಹರೂಪವಾದ ಯಾಗಕಾಲಗಳಲ್ಲೂ ಸಹ ಇದೇ ರೀತಿಯಾದ ಕ್ರಮದಿಂದ ಅಗ್ನಿ, ಇಂದ್ರ ಮತ್ತು ವಿಶ್ವೇದೇವತೆಗಳಿಗೆ ಪ್ರಥಮಾಹ, ದ್ವಿತೀಯಾಹ ಮತ್ತು ತೃತೀಯಾಹಗಳಲ್ಲಿ ಪ್ರಾಧಾನ್ಯವಿರುವುದೆಂದು ಐತರೇಯ ಬ್ರಾಹ್ಮಣವು ವರ್ಣಿಸುತ್ತದೆ.

(೧) ಅಗ್ನಿರ್ವೈ ದೇವತಾ ಪ್ರಥಮಮಹರ್ವಹತಿ ತ್ರಿವೃತ್ಸ್ತೋಮೋ ರಥಂತರಂ ಸಾಮ ಗಾಯತ್ರೀಚ್ಛಂದಃ ॥

(ಐ. ಬ್ರಾ. ೪-೨೯)

(೨) ಇಂದ್ರೋ ವೈ ದೇವತಾ ದ್ವಿತೀಯಮಹರ್ವಹತಿ ಪಂಚದಶಸ್ತೋಮೋ ಬೃಹತ್ಸಾಮ ತ್ರಿಷ್ಟುಪ್ಛಂದಃ ॥

(ಐ. ಬ್ರಾ. ೪-೩೧)

(೩) ವಿಶ್ವೇ ನೈ ದೇವಾ ದೇವತಾಸ್ತೃತೀಯಮಹರ್ವಹಂತಿ ಸಪ್ತದಶಃ ಸ್ತೋಮೋ ವೈರೂಪಂ ಸಾಮ ಜಗತೀಛಂದಃ ॥

(ಐ. ಬ್ರಾ. ೫-೧)

ಪೃಷ್ಠ್ಯಷಡಹಗಳಲ್ಲಿ ಪ್ರಥಮದಿನ ಅಗ್ನಿದೇವತೆಯು ತ್ರಿವೃತ್ಸ್ತೋಮವನ್ನೂ, ರಥಂತರ ಸಾಮವನ್ನೂ ಮತ್ತು ಗಾಯತ್ರೀ ಛಂದಸ್ಸನ್ನೂ ಕೂಡಿಕೊಂಡಿರುತ್ತಾನೆ. ಎರಡನೆಯದಿನ ಇಂದ್ರದೇವತೆಯು ಪಂಚದಶಸ್ತೋಮವನ್ನೂ, ಬೃಹತ್ಸಾಮವನ್ನೂ ಮತ್ತು ತ್ರಿಷ್ಟುಪ್ಛಂದಸ್ಸನ್ನೂ ಕೂಡಿಕೊಂಡಿರುತ್ತಾನೆ. ಮೂರನೆಯದಿನ ವಿಶ್ವೇದೇವತೆಗಳು ಸಪ್ತದಶಸ್ತೋಮ, ವೈರೂಪಸಾಮ ಮತ್ತು ಜಗತೀಛಂದಸ್ಸನ್ನು ಕೂಡಿಕೊಂಡಿರುತ್ತಾರೆ ಎಂದು ವಿಶ್ವೇದೇವತೆಗಳಿಗೆ ಮೂರನೆಯ ಸ್ಥಾನವನ್ನು ನಿರ್ದೇಶಿಸಿದೆ. ಈ ರೀತಿ ವಿಶ್ವೇದೇವತೆಗಳ ಸ್ಥಾನಮಾನಗಳಲ್ಲಿ ವ್ಯತ್ಯಸ್ತವಾದ ಅಭಿಪ್ರಾಯಗಳನ್ನು ತಿಳಿಸಿದೆ. ಆದರೆ ಇದೇ ವಿಶ್ವೇದೇವತೆಗಳು ನಾನಾ ತತ್ತ್ವಗಳನ್ನು ಪ್ರತಿಬಿಂಬಿಸುವುದರಿಂದ ಇವರನ್ನು ಅನೇಕ ಕಡೆಗಳಲ್ಲಿ ಅನೇಕ ವಿಧವಾಗಿ ವರ್ಣಿಸಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಣೆಗಾಗಿ ತೆಗೆದುಕೊಳ್ಳಬಹುದು.

ಇಮೇ ವೈ ಪ್ರಾಣಾಃ । ಮನೋಜ್ಞಾತಾ ಮನೋಯುಜೋ ದಕ್ಷಕ್ರತವೋ ವಾಗೇವಾಗ್ನಿಃ ಪ್ರಾಣೋದಾನೌ ಮಿತ್ರಾವರುಣೌ ಚಕ್ಷುರಾದಿತ್ಯಃ ಶ್ರೋತ್ರಂ ವಿಶ್ವೇದೇವಾಃ ॥

(ಶ. ಬ್ರಾ. ೩-೨-೨-೧೩)

ಚೈತನ್ಯಯುಕ್ತಗಳಾದ ಈ ಪ್ರಾಣಗಳು ಮನೋಜನ್ಯವಾದವು. ಅಗ್ನಿಯೇ ವಾಕ್ಕು. ಮಿತ್ರಾವರುಣರೇ ಉಚ್ಛ್ವಾಸ ನಿಶ್ವಾಸಗಳು. ಆದಿತ್ಯನೇ ಚಕ್ಷುಸ್ತತ್ತ್ವವು. ವಿಶ್ವೇದೇವತೆಗಳೇ ಶ್ರೋತ್ರೇಂದ್ರಿಯತತ್ತ್ವವು.

ವೈಶ್ವದೇವಂ ವಾ ಅಂತರಿಕ್ಷಂ ತದ್ಯದೇನೇನೇಮಾಃ ಪ್ರಜಾಃ ಪ್ರಾಣತ್ಯಶ್ಲೋದಾನತ್ಯಶ್ಚಾಂತರಿಕ್ಷ ಮನುಚರಂತಿ ತೇನ ವೈಶ್ವದೇವಂ ವಷಟ್ಕೃತೇ ಜುಹೋತಿ ॥

(ಶ. ಬ್ರಾ. ೩.೪-೨-೩೨)

ಶ್ರವಣೇಂದ್ರಿಯಕ್ಕೆ ಸಂಬಂಧಿಸಿದ ಶಬ್ದದ ಸಂಚಾರಕ್ಕೆ ಸಾಧನವಾಗಿರುವುದರಿಂದಲೂ, ಉಚ್ಛ್ವಾಸನಿಃಶ್ವಾಸಗಳ ಮೂಲಕ ಅಂತರಿಕ್ಷದಲ್ಲಿಯೇ ಸಕಲ ಭೂತಗಳೂ ವ್ಯವಹರಿಸುವುದರಿಂದಲೂ ಇವುಗಳಿಗೆಲ್ಲಾ ಅಧಿದೇವತೆಗಳಾದ ವಿಶ್ವೇದೇವತೆಗಳೇ ಅಂತರಿಕ್ಷತತ್ತ್ವವನ್ನು ಪ್ರತಿಬಿಂಬಿಸುವವರಾಗಿದ್ದಾರೆ.

ಏತಸ್ಮೈ ವೈ ಗೃಹ್ಣಾತಿ ಯ ಏಷ ತಪತಿ ವಿಶ್ವೇಭ್ಯೋ ಹ್ಯೇನಾ ದೇವೇಭ್ಯೋ ಗೃಹ್ಣಾತಿ ರಶ್ಮಯೋ ಹ್ಯಸ್ಯ ವಿಶ್ವೇ ದೇವಾಸ್ತಸ್ಮಾದಾಹ ಹವಿಷ್ಮಾ ಅಸ್ತು ಸೂರ್ಯ ಇತಿ ॥

(ಶ. ಬ್ರಾ. ೩-೯-೨-೧೨)

ಸೂರ್ಯನಿಗೆ ಅರ್ಪಿತವಾಗುವ ಹವಿಸ್ಸುಗಳೆಲ್ಲವೂ ವಿಶ್ವೇದೇವತೆಗಳಿಗೆ ಅರ್ಪಿತವಾದಂತೆ. ಹೇಗೆಂದರೆ, ಸಕಲ ಸೂರ್ಯರಶ್ಮಿಗಳೂ ವಿಶ್ವೇದೇವತೆಗಳ ತತ್ತ್ವಸ್ವರೂಪಗಳೇ ಆಗಿವೆ. ಆದುದರಿಂದ ಸಂಚಾರವಿಷಯಗಳಾದ ಸೂರ್ಯರಶ್ಮಿಗಳೂ ಮತ್ತು ಸಂಚಾರಸಾಧನವಾದ ಅಂತರಿಕ್ಷವೂ ವಿಶ್ವೇದೇವತೆಗಳ ಪ್ರತೀಕಗಳೇ ಆಗಿವೆ. ಈ ಕಾರಣದಿಂದಲೇ ಇವರನ್ನು ದಿಕ್ಕುಗಳಿಗೆ ನಿರ್ಮಾಪಕರೆಂದೂ ತಿಳಿಸಿದೆ.

ವಿಶ್ವೇದೇವಾಃ ವೈಶ್ವಾನರಾ ದಿಶಃ ಕೃತ್ವಾ ತಾಸ್ವೇತಾಮಾಶಿಷಮಾಶಾಸತ ।

(ಶ. ಬ್ರಾ. ೬-೫-೨-೬)

ವಿಶ್ವೇದೇವತೆಗಳು ದಿಕ್ಕುಗಳನ್ನೆಲ್ಲಾ ನಿರ್ಮಿಸಿ ಅವುಗಳನ್ನು ಆಶೀರ್ವದಿಸಿದರು. ದಿಕ್ಕುಗಳಿಗೂ ತದ್ವ್ಯಾಪಕವಾದ ಅಂತರಿಕ್ಷಕ್ಕೂ ಇವರೇ ಅಧಿದೇವತೆಗಳಾದುದರಿಂದ ಇವರೇ ಋತ್ವಾದಿಗಳಿಗೆಲ್ಲಾ ನಿಯಾಮಕರು ಮತ್ತು ತದನುಸಾರವಾಗಿ ವೃಷ್ಟ್ಯುತ್ಪಾದಕರು ಎಂದೂ ವರ್ಣಿತರಾಗಿದ್ದಾರೆ.

ಋತವೋ ವೈ ವಿಶ್ವೇದೇವಾಸ್ತದೇನಾಂ ವಿಶ್ವೈರ್ದೇವೈರ್ಋತುಭಿಃ ಸಂವಿದಾನಃ ।

(ಶ. ಬ್ರಾ. ೭-೧-೧-೪೩)

ವಿಶ್ವೇಚ ವೈ ದೇವಾ ಮರುತಶ್ಚ ವರ್ಷಸ್ಯೇಶತ ಊರ್ಜಸ್ವತೀ ।

(ಶ. ಬ್ರಾ. ೭-೨-೨-೧೦)

ಇತ್ಯಾದಿಯಾದ ವಾಕ್ಯಗಳಿಂದ ಇವರ ಸರ್ವವ್ಯಾಪಕತ್ವವೂ ಅತಿಶಯವಾದ ಪ್ರಭಾವವೂ ಪ್ರಶಂಸಿತವಾಗಿವೆ. ಇಂತಹ ಅತಿಶಯವಾದ ಪ್ರಭಾವವಿರುವುದರಿಂದಲೇ ಇದರ ಪ್ರಶಂಸಕವಾಗಿ,

ವಿಶ್ವೇ ವೈ ದೇವಾ ದೇವಾನಾಂ ಯೇಶಸ್ವಿತಮಾ ಯೇಶ ಏವಾಸ್ಮಿನ್ಭವಾತಿ ।

(ಶ. ಬ್ರಾ. ೧೩-೧-೨-೪)

ಸಕಲ ದೇವತೆಗಳ ನಡುವೆಯೂ ವಿಶ್ವೇದೇವತೆಗಳೇ ಅತ್ಯಂತ ಯಶಸ್ವಿಗಳು ಮುಂತಾದ ಸ್ತುತಿವಾಕ್ಯಗಳಿರುತ್ತವೆ. ಹೀಗೆ ಕೆಲವೆಡೆಗಳಲ್ಲಿ ಇಂದ್ರಾಗ್ನಿಗಳೊಡನೆ ತಾದಾತ್ಮ್ಯವನ್ನು ತೋರಿಸಿಯೂ ಕೆಲವೆಡೆಗಳಲ್ಲಿ ವೈಯಕ್ತಿಕವಾದ ಸ್ವರೂಪವನ್ನು ವರ್ಣಿಸಿಯೂ ಇವರನ್ನು ಅನೇಕವಿಧವಾಗಿ ಸ್ತುತಿಸಿರುತ್ತದೆ. ಈ ಎಲ್ಲಾ ವಿಧವಾದ ವರ್ಣನೆಗಳನ್ನು

ಪರಿಶೀಲಿಸಿದರೆ, ಒಟ್ಟಿನಲ್ಲಿ ವಿಶ್ವೇದೇವತೆಗಳು ವಿಶ್ವದಲ್ಲಿ ಸಕಲ ಶಕ್ತಿಗಳನ್ನು ಪ್ರತಿಬಿಂಬಿಸುವ ದೇವತೆಗಳೆಂದು ಹೇಳ ಬಹುದು ಅಥವಾ ಸಕಲ ತತ್ತ್ವಗಳನ್ನೂ ಒಳಗೊಂಡಿರುವ ಬ್ರಹ್ಮಸ್ವರೂಪವೇ ವಿಶ್ವೇದೇವತಾಕವೆಂದೂ ಹೇಳಬಹುದು. ಹೇಗೆಂದರೆ—

ತದ್ವೈ ತತ್ಪಶ್ಯನ್ನೃಷಿರಭ್ಯನೂವಾಚ । ಭೂತಂ ಭವಿಷ್ಯತ್ಪ್ರಸ್ತೌಮಿ ಮಹದ್ಬ್ರಹ್ಮೈಕಮಕ್ಷರಂ ಬಹು ಬ್ರಹ್ಮೈಕಮಕ್ಷರಮಿತ್ಯೇತದ್ವೈ ವಾಕ್ಷರಗ್ಂ ಸರ್ವೇ ದೇವಾಃ ಸರ್ವಾಣಿ ಭೂತಾನ್ಯಭಿಸಂಪದ್ಯಂತೇ ತದೇತದ್ಬ್ರಹ್ಮ ಚ ಕ್ಷತ್ರಂ ಚಾಗ್ನಿರೇವ ಬ್ರಹ್ಮೇಂದ್ರಃ ಕ್ಷತ್ರಮಿಂದ್ರಾಗ್ನೀ ವೈ ವಿಶ್ವೇದೇವಾ ವಿಡು ವಿಶ್ವೇದೇವಾಸ್ತದೇತದ್ಬ್ರಹ್ಮ ಕ್ಷತ್ರಂ ವಿಟ್ ॥

(ಶ. ಬ್ರಾ. ೧೦-೪-೧-೯)

ಮಹತತ್ತ್ವದ ದರ್ಶನವನ್ನು ಪಡೆದ ಋಷಿವಾಕ್ಯವಿದು. ಭೂತಕಾಲಗಳಲ್ಲಿದ್ದುದೂ, ಭವಿಷ್ಯತ್ತುಗಳಲ್ಲಿ ಇರುವುದೂ, ಮಹತ್ತಾದುದೂ, ನಾಶರಹಿತವಾದುದೂ, ನಾನಾರೂಪಾತ್ಮಕವಾದುದೂ ಆದ ಬ್ರಹ್ಮತತ್ತ್ವವನ್ನು ನಾನು ಸ್ತುತಿಸುತ್ತೇನೆ. ಸಕಲ ದೇವತೆಗಳೂ, ಸಕಲ ಭೂತಗಳೂ ಈ ತತ್ತ್ವದಲ್ಲೇ ಅಂತರ್ಧಾನವನ್ನು ಹೊಂದುತ್ತವೆ. ಇದೇ ಬ್ರಹ್ಮರೂಪವು, ಇದೇ ಕ್ಷತ್ರರೂಪವು, ಅಗ್ನಿಯೇ ಬ್ರಹ್ಮಶಕ್ತಿಪ್ರತಿಪಾದಕನು, ಇಂದ್ರನೇ ಕ್ಷಾತ್ರಶಕ್ತಿಪ್ರತಿಪಾದಕನು, ವಿಶ್ವೇದೇವತೆಗಳೇ ಇಂದ್ರಾಗ್ನಿಗಳು. ಆದರೆ ವಿಶ್ವೇದೇವತೆಗಳು ವೈಶ್ಯಶಕ್ತಿಗೂ ಪ್ರತಿಪಾದಕರು. ಆದುದರಿಂದಲೇ ಸಕಲವನ್ನೂ ಆಡಕ ಮಾಡಿಕೊಂಡಿರುವ ಈ ತತ್ತ್ವವು ಬ್ರಹ್ಮ, ಕ್ಷತ್ರ ಮತ್ತು ವಿಟ್ ಎಂಬ ಈ ಎಲ್ಲಾ ಶಕ್ತಿಗಳಿಗೂ ಮೂಲವಾಗಿದೆ.

ವೈಶ್ವದೇವ ಸೂಕ್ತಗಳಲ್ಲಿ ನೈಮಿತ್ತಿಕವಾಗಿ ಪ್ರಶಂಸಿತರಾಗತಕ್ಕ ದೇವತೆಗಳು
ಐದನೆಯ ಮಂಡಲದ ೪೧-೪೬ ಸೂಕ್ತಗಳು

ವಿಶ್ವೇದೇವತೆಗಳಾರು ? ಇದು ಒಂದು ಗುಂಪೇ ಅಥವಾ ಸಕಲ ದೇವತೆಗಳನ್ನೊಳಗೊಂಡ ಪೂರ್ಣದೇವತಾ ಸಮೂಹವೇ ಎಂಬ ವಿಷಯದಲ್ಲಿ ಋ. ಸಂ. ೫-೪೧ ನೇ ಸೂಕ್ತದ ಪೂರ್ವಪೀಠಿಕೆಯಲ್ಲಿ ವಿಮರ್ಶಿಸಲಾಗಿದೆ. ಒಂದುವೇಳೆ ವೈಶ್ವದೇವಸೂಕ್ತಗಳಲ್ಲಿ ನಿರ್ದಿಷ್ಟರಾದ ದೇವತೆಗಳ ಸಂಘವೇ ಬೇರೆ ಎಂಬ ಅಭಿಪ್ರಾಯವನ್ನು ಒಪ್ಪಿದರೂ ಸಹ ಆಗಲೂ ಆ ಗುಂಪಿನ ದೇವತೆಗಳೇ ಅಲ್ಲದೇ, ಆನುಷಂಗಿಕವಾಗಿ ಪ್ರಶಂಸಿತರಾಗಿರತಕ್ಕ ಇತರ ದೇವತೆಗಳೂ ಆ ಸೂಕ್ತಗಳಲ್ಲಿ ಅಂತರ್ಗತರಾಗಿರುತ್ತಾರೆ. ಈ ವಿಧವಾಗಿ ನೈಮಿತ್ತಿಕವಾದ ದೇವತೆಗಳು ಯಾರುಯಾರು ಎಂಬ ವಿಷಯ ದಲ್ಲಿ ಬೃಹದ್ದೇವತೆಯಲ್ಲಿ ಒಂದು ಪ್ರಕರಣವೇ ಇರುತ್ತದೆ. ಈ ವಿಷಯವನ್ನು ಮುಂದೆ ವಿಶದವಾಗಿ ತಿಳಿಸಲಾಗುವುದು. ಆದರೆ, ಪ್ರಕೃತದಲ್ಲಿ, ಆ ನೈಮಿತ್ತಿಕವಾಗಿ ಸ್ತುತರಾಗತಕ್ಕ ದೇವತೆಗಳಾರು ಎಂಬುದನ್ನು ತಿಳಿಸಲಾಗುತ್ತದೆ. **ಸಪ್ತರ್ಷಯೋ ವಸವಶ್ಚಾಪಿ ದೇವಾಃ** (ಬೃ. ದೇ. ೮-೧೩೫) ಇತ್ಯಾದಿಯಾಗಿ, ಬೃಹದ್ದೇವತೆಯಲ್ಲಿ ಈ ನೈಮಿತ್ತಿಕವಾದ ದೇವತೆಗಳನ್ನು ತಿಳಿಸುತ್ತಾ **ನಿಪಾತಿನೋ ವೈಶ್ವದೇವೇಷು ಸರ್ವೇ** (೮-೧೩೮) ಎಂದು ಮುಕ್ತಾಯವನ್ನಾಡಿದೆ. ಅವರಾರೆಂದರೆ,

ಸಪ್ತರ್ಷಿಗಳು, ವಸುಗಳು, ದೇವತಾತ್ಮರಾದ ಅಥರ್ವರು, ಭೃಗುಗಳು, ಸೋಮ, ಸೂರ್ಯ, ಪಥ್ಯಾಸ್ವಸ್ತಿ, ದ್ಯಾವಾಪೃಥಿವಿಗಳು, ಕುಹೂ, ಗುಂಗೂ, ಅದಿತಿ, ಧೇನು, ಅಘ್ನ್ಯಾ, ಅಸುನೀತಿ, ಇಳಾ, ಆಪ್ತರು, ವಿಧಾತೃ, ಅನುಮತಿ, ಸಂಗತರಾದ ಅಂಗಿರಸ್ಸುಗಳು, ವೈಶ್ವಾನರ, ಸುಪರ್ಣ, ವಿವಸ್ವತ್, ಪ್ರಜಾಪತಿ, ದ್ಯೌಃ ಸುಧನ್ವನ್, ನಗೋಹ್ಯ, ಆಪಾಂನಪಾತ್, ಅರ್ಯಮನ್, ವಾತಜೂತಿ, ಇಳಸ್ಪತಿ, ರಥಸ್ಪತಿ, ಋಭುಗಳು, ಪರ್ಜನ್ಯ, ಪರ್ವತಗಳು,

ಗ್ನಾ, ದಕ್ಷ, ಭಗ, ದೇವಪತ್ನಿಗಳು, ದಿಗ್ದೇವತೆಗಳು, ಆದಿತ್ಯರು, ರುದ್ರರು, ಪಿತೃಗಳು ಮತ್ತು ಸಾಧ್ಯರು. (ಬೃ. ದೇ. ೪-೧೩೫ ರಿಂದ ೧೩೪)

ಈ ಸಮುದಾಯದಲ್ಲಿರುವ ದೇವತೆಗಳೆಲ್ಲರೂ ನೈಮಿತ್ತಿಕದೇವತೆಗಳೇ ಆದರೆ ನಿತ್ಯದೇವತೆಗಳಾರು ಎಂಬುದನ್ನು ಇತ್ಯರ್ಥಮಾಡುವುದೂ ಶ್ರಮವಾಗುತ್ತದೆ. **ಅಗ್ನಿ, ಸೋಮ, ಬೃಹಸ್ಪತಿ** ಇತ್ಯಾದಿ ದೇವತೆಗಳು ವೈಶ್ವದೇವಸೂಕ್ತ ಗಳಲ್ಲೆಲ್ಲಾ ನಿಯತವಾಗಿಯೇ ಪ್ರಶಂಸಿತರಾಗಿರತಕ್ಕವರಾಗಿದ್ದಾರೆ. ಈ ಪ್ರಕರಣವನ್ನು ಎಂದರೆ (೫-೪೧ ರಿಂದ ೪೬)ನೇ ಸೂಕ್ತಗಳಲ್ಲಿ ಅಂತರ್ಗತವಾಗಿರುವ ದೇವತೆಗಳ ವಿಷಯವನ್ನು ತಿಳಿಸುವಾಗ ಬೃಹದ್ದೇವತೆಯಲ್ಲಿ ಕೆಲವು ದೇವತೆಗಳ ನಿರ್ದೇಶವನ್ನು ಮಾತ್ರ ಮಾಡಿದೆ. ಆದುದರಿಂದ, ಅಲ್ಲಿ ನಿರ್ದಿಷ್ಟರಾಗಿರುವ ದೇವತೆಗಳೆಲ್ಲಾ ಈ ಸೂಕ್ತಗಳಲ್ಲಿ ನೈಮಿತ್ತಿಕ ದೇವತೆಗಳೆಂದು ಪರಿಶೀಲಿಸಬಹುದೇ ಎಂಬುದು ಒಂದು ಪ್ರಶ್ನೆ. ಎರಡನೆಯದಾಗಿ, ಕೆಲವು ಮಂತ್ರಗಳಲ್ಲಿ ನಿಷ್ಕೃಷ್ಟವಾಗಿ ಯಾವ ದೇವತೆಯನ್ನು ಪ್ರಶಂಸಿಸಿದೆ ಎಂಬ ವಿಷಯದಲ್ಲೂ ಯಾಸ್ಕಾದಿಗಳು ಮತವೈವಿಧ್ಯವನ್ನು ತೋರಿಸಿದ್ದಾರೆ. ಅದು ಹೇಗೆಂದರೆ.

ಪ್ರ ಸುಷ್ಟುತಿಃ ಸ್ತನಯಂತಂ ರುವಂತಮಿಳಸ್ಪಂತಂ ಜರಿತರ್ನೂನಮಶ್ಯಾಃ ।
ಯೋ ಅಬ್ದಿಮಾ ಉದನಿಮಾ ಇಯರ್ತಿ ಪ್ರ ವಿದ್ಯುತಾ ರೋದಸೀ ಉಕ್ಷಮಾಣಃ ॥

(ಋ. ಸಂ. ೫-೪೨-೧೪)

ಎಂಬ ಮಂತ್ರದಲ್ಲಿ **ಇಳಸ್ಪತಿಯ** ಪ್ರಶಂಸೆಯಿದೆ. ಈ ಇಳಸ್ಪತಿಯು ಯಾರು ಎಂಬ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವೇ ಇರುವುದಿಲ್ಲ. **ಇಳಃ** ಅನ್ನಸ್ಯ **ಉದಕಸ್ಯ ವಾ ಪತಿಂ ಸ್ವಾಮಿನಂ** (ಪರ್ಜನ್ಯಂ) ಅನ್ನ ಅಥವಾ ಉದಕಕ್ಕೆ ಒಡೆಯನಾದ ಪರ್ಜನ್ಯನನ್ನು ಎಂದು ಸಾಯಣರು ವಿವರಿಸಿದ್ದಾರೆ. ಇದು ಒಂದು ಮತ. ಯಾಸ್ಕಾದಿಗಳ ಮತವನ್ನು ಬೃಹದ್ದೇವತೆಯಲ್ಲಿ ಈರೀತಿ ತಿಳಿಸಿದೆ—

ತಮುಷ್ಟುಹೀತಿ ರೌದ್ರೀ ತು ಪ್ರ ಸುಷ್ಟುತಿರಿತಿ ತ್ವೃಚಿ ।
ಶೌನಕಾದಿಭಿರಾಚಾರ್ಯೈರ್ದೇವತಾ ಬಹುಧೇರಿತಾ ।
ಇಳಸ್ಪತಿಂ ಶಾಕಪೂಣಿಃ ಪರ್ಜನ್ಯಾಗ್ನೀ ತು ಗಾಲವಃ ॥
ಯಾಸ್ಕಸ್ತು ಪೂಷಣಂ ಮೇನೇ ಸ್ತುತಮಿಂದ್ರಂ ತು ಶೌನಕಃ ।
ವೈಶ್ವಾನರಂ ಭಾಗುರಿಸ್ತು ಮಾರುತ್ಯೇಷ ಸಮಾಶ್ವಿನೌ ॥

(ಬೃ. ದೇ. ೫-೩೮ ರಿಂದ ೪೦)

ಮೇಲೆ ಉನ್ನೃತವಾದ ಮಂತ್ರದಲ್ಲಿ ನಿರ್ದಿಷ್ಟವಾದ ದೇವತೆಯಾರೆಂಬ ವಿಷಯದಲ್ಲಿ ಶೌನಕಾದಿಗಳು ಮತವೈವಿಧ್ಯವನ್ನು ತೋರಿಸಿದ್ದಾರೆ. ಶಾಕಪೂಣಿಯವರು **ಇಳಸ್ಪತಿ**ಯೆಂದೇ ಕರೆದರು. ಗಾಲವರು **ಪರ್ಜನ್ಯಾಗ್ನಿ**ಯೆಂದರು. ಯಾಸ್ಕರು **ಪೂಷದೇವ**ನೆಂದರು. ಶೌನಕರು **ಇಂದ್ರ**ನೆಂದಭಿಪ್ರಾಯಪಟ್ಟಿದ್ದಾರೆ. ಭಾಗುರಿಯು ವೈಶ್ವಾನರನೆಂದರು. ಇನೇ ರೀತಿ ಮತವೈವಿಧ್ಯವಿರುತ್ತದೆ. ಹೀಗೆಯೇ,

ತಂ ಪ್ರತ್ನಥಾ ಪೂರ್ವಥಾ ವಿಶ್ವಥೇಮಥಾ ಜ್ಯೇಷ್ಠತಾತಿಂ ಬರ್ಹಿಷದಂ ಸ್ವರ್ವಿದಂ ।
ಪ್ರತೀಚೀನಂ ವೃಜನಂ ದೋಹಸೇ ಗಿರಾಶುಂ ಜಯಂತಮನು ಯಾಸು ವರ್ಧಸೇ ॥

(ಬೃ. ಸಂ. ೫-೪೪-೧)

ಎಂಬ ಮಂತ್ರದಲ್ಲಿ **ತಂ ಇಂದ್ರಂ** ಎಂದು ಸಾಯಣರು ಇಂದ್ರಸ್ತುತಿಯಿದೆಯೆಂದು ತಿಳಿಸಿದ್ದಾರೆ. ಆದರೆ ಬೃಹದ್ದೇವತಾಕಾರರು ಈ ಮಂತ್ರದಲ್ಲಿ ಪ್ರಶಂಸಿತವಾಗಿರುವ ದೇವತೆ ಯಾರು ಎಂಬುದನ್ನು ನಿಷ್ಕೃಷ್ಟವಾಗಿ ತಿಳಿಸದೆ ಅನೇಕ ವಿಕಲ್ಪಗಳನ್ನು ತೋರಿಸಿದ್ದಾನೆ.

ತಂ ಪ್ರತ್ನಥೇತಿ ಸೌಮೀ ವಾ ದೈವ್ಯೇಂದ್ರೀ ವಾ ಪ್ರಜಾಪತೇಃ ।
ಪರೋಕ್ಷವೈಶ್ವದೇವಂ ತದಾಹ ಕೌಷೀತಕಿಃ ಸ್ವಯಂ ॥

(ಬೃ. ದೇ. ೫-೪೪)

ತಂ ಪ್ರತ್ನಥಾ ಎಂಬ ಮಂತ್ರದಲ್ಲಿ ಉದ್ದಿಷ್ಟವಾದ ದೇವತೆಯು ಸೋಮನಾಗಬಹುದು ಅಥವಾ ಇನ್ನಾವುದಾದರೂ ದೇವತಾದಿವಿಶೇಷವಾಗಬಹುದು ಅಥವಾ ಇಂದ್ರನಾಗಬಹುದು. ಅದೂ ಅಲ್ಲದಿದ್ದರೆ, ಪ್ರಜಾಪತಿಯೇ ಉದ್ದಿಷ್ಟನಾಗ ಬಹುದು ಎಂದು ಪೂರ್ವಾರ್ಧದಲ್ಲಿ ವೈಕಲ್ಪಿಕವಾದ ಅರ್ಥವನ್ನು ತಿಳಿಸಿದೆ. ಉತ್ತರಾರ್ಧದಲ್ಲಿ ಕೌಷೀತಕೀಬ್ರಾಹ್ಮಣದ ಅಭಿಪ್ರಾಯವನ್ನು ತಿಳಿಸುತ್ತಾ, "ಈ ಮಂತ್ರದಲ್ಲಿ ವಿಶ್ವೇದೇವತೆಗಳೇ ಪರೋಕ್ಷವಾಗಿ ನಿರ್ದಿಷ್ಟರಾಗಿದ್ದಾರೆ" ಎಂದು ಕೌಷೀತಕಿಯು ಹೇಳಿರುವ ವಾಕ್ಯವನ್ನು ದಾಹರಿಸಿದೆ (ಕೌ. ಬ್ರಾ. ೨೪-೯).

ಹೀಗೆ ಅನೇಕ ಮಂತ್ರಗಳಲ್ಲಿ ನಿರ್ದಿಷ್ಟರಾಗಿರುವ ದೇವತೆಯ ವಿಷಯದಲ್ಲೇ ನಿಷ್ಕೃಷ್ಟವಾದ ಅಭಿಪ್ರಾಯ ವಿಲ್ಲದಿರುವಾಗ, ವೈಶ್ವದೇವಗಣದಲ್ಲಿ ಸೇರತಕ್ಕ ನಿತ್ಯದೇವತೆಗಳಾರು ಮತ್ತು ನೈಮಿತ್ತಿಕದೇವತೆಗಳಾರು ಎಂಬ ಅಂಶವನ್ನು ಪ್ರಕೃತವಾದ ಪ್ರಕರಣದಲ್ಲಿ (೫-೪೧-೪೬) ನಿರ್ಧರಿಸುವುದು ಶ್ರಮವಾಗುತ್ತದೆ.

ಸಾಯಣಭಾಷ್ಯಂ

ವಿಶ್ವೇ ದೇವಾಃ ಶಾಸ್ತನೇತಿ ಷಡೃಚಂ ದಶಮಂ ಸೂಕ್ತಂ ಸೌಚೀಕಸ್ಯಾಗ್ನೇರಾರ್ಷಂ ವೈಶ್ವದೇವಂ॥ ಗತಃ ಸೂಕ್ತವಿನಿಯೋಗಃ ॥ ಸುಗ್ರಾದಾಪನಾತ್ಪೂರ್ವಭಾವಿನಿ ಜಪೇ ವಿನಿಯುಕ್ತಾ । ಸೂತ್ರಿತಂ ಚ । ವಿಶ್ವೇ ದೇವಾಃ ಶಾಸ್ತನ ಮಾ ಯಥೇಹಾರಾಧಿ ಹೋತಾ ನಿಷದಾ ಯಜೀಯಾನ್ । ಆ. ೧-೪ । ಇತಿ ॥

ಅನುವಾದವು—**ವಿಶ್ವೇದೇವಾಃ ಶಾಸ್ತನ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಸೌಚೀಕಸಂಜ್ಞಕನಾದ ಅಗ್ನಿಯೇ ಋಷಿಯು; ವಿಶ್ವೇದೇವತೆಗಳೇ ದೇವತೆಯು. ತ್ರಿಷ್ಟುಪ್ ಛಂದಸ್ಸು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಆಜ್ಯಹೋಮ ಮಾಡುವುದಕ್ಕಾಗಿ ಸ್ರುಕ್ ಎಂಬ ಮರದ ಸೌಟನ್ನು ಸ್ವೀಕರಿಸುವುದಕ್ಕೆ ಪೂರ್ವಭಾವಿಯಾಗಿ ಜಪ ಮಾಡುವಾಗ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ವಿಶ್ವೇದೇವಾಃ ಶಾಸ್ತನ ಮಾ ಯಥೇಹಾರಾಧಿ ಹೋತಾ ನಿಷದಾ ಯಜೀಯಾನ್** ಎಂಬ ಸೂತ್ರದಿಂದ (ಆ ೧-೪) ವಿವೃತವಾಗಿರುವುದು.

ಸೂಕ್ತ—೫೨

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೨ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೧೨ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಅಗ್ನಿಃ ಸೌಚೀಕಃ ॥
ದೇವತಾ—ದೇವಾಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ವಿಶ್ವೇ ದೇವಾಃ ಶಾಸ್ತನ ಮಾ ಯಥೇಹ ಹೋತಾ ವೃತೋ ಮನವೈ ಯನ್ನಿ-
ಷದ್ಯ ।
ಪ್ರ ಮೇ ಬ್ರೂತ ಭಾಗಧೇಯಂ ಯಥಾ ವೋ ಯೇನ ಪಥಾ ಹವ್ಯಮಾ
ವೋ ವಹಾನಿ ॥ ೧ ॥

ಪದಪಾಠಃ

ವಿಶ್ವೇ । ದೇವಾಃ । ಶಾಸ್ತನ । ಮಾ। ಯಥಾ । ಇಹ । ಹೋತಾ । ವೃತಃ । ಮನವೈ। ಯತ್। ನಿ॒ಸದ್ಯ ॥
ಪ್ರ । ಮೇ । ಬ್ರೂತ। ಭಾಗ॒ಧೇಯಂ । ಯಥಾ । ವಃ । ಯೇನ । ಪಥಾ । ಹವ್ಯಂ । ಆ । ವಃ ।
ವಹಾನಿ ॥ ೧ ॥

ಸಾಯಣಭಾಷ್ಯಂ

ಏತತ್ಸೂಕ್ತಂ ಕೃತ್ಸ್ನಮಾಗ್ನೇಯಂ । ಹೇ ವಿಶ್ವೇ ದೇವಾಃ ಯೂಯಂ ಮಾ ಮಾಂ ಶಾಸ್ತನ । ಅನುಜ್ಞಾಂ ದತ್ತ । ಯಥೇಹ ಯಜ್ಞೇ ಹೋತಾ ದೇವಾನಾಮಾಹ್ವಾತಾ ಸನ್ ವೃತೋ ಹೋತೃತ್ವೇನ ವೃತೋ॒ಽಹಂ ಮನವೈ ಸ್ತೋಮಿ ಭವತಃ । ಯದ್ಯಸ್ಮಾನ್ನಿಷದ್ಯ ಸ್ತೋಮಿ ತಸ್ಮಾಚ್ಛಾಸ್ತನ । ಮೇ ಮಮ ಭಾಗಧೇಯಂ ಪ್ರ ಬ್ರೂತ। ಯಥಾ ವೋ ಯೂಯಂ ಭಾಗಂ ಕಲ್ಪಿತವಂತಃ ತಥಾ ತಂ ಭಾಗಂ ಪ್ರ ಬ್ರೂತ ಯೇನ ಚ ಪಥಾ ವೋ ಹವ್ಯಮಾ ವಹಾನಿ । ವಹನಂ ಕರೋಮಿ ॥

ಪ್ರತಿದಾರ್ಥ

ವಿಶ್ವೇ ದೇವಾಃ—ಎಲೈ ದೇವತೆಗಳೇ । **ಯತ್**—ಯಾವ ನಿಮಿತ್ತವಾಗಿ । **ಹೋತಾ**—ಹೋತೃವಾಗಿ । **ವೃತಃ**—ನಾನು ಆರಿಸಲ್ಪಟ್ಟಿರುವೆನೋ ಆದುದರಿಂದಲೇ । **ಇಹ**—ಇಲ್ಲಿ । **ನಿಷದ್ಯ**—ಕುಳಿತು । **ಯಥಾ**—ಯಾವ ರೀತಿ । **ಮನವೈ**—ಸ್ತುತಿಸಲಿ ಎಂಬುದನ್ನು । **ಮಾ**—ನನಗೆ । **ಶಾಸ್ತನ**—ಉಪದೇಶಿಸಿರಿ । **ಯಥಾ**—ಯಾವ ರೀತಿ । **ವಃ**—ನೀವು । **ಮೇ**—ನನಗೆ । **ಭಾಗಧೇಯಂ**—ಯಜ್ಞಭಾಗವನ್ನು ಕಲ್ಪಿಸಿರುವಿರೋ। (ಮತ್ತು) **ಯೇನ**—**ಪಥಾ**—ಯಾವ ಮಾರ್ಗವಾಗಿ । **ವಃ**—ನಿಮ್ಮ । **ಹವ್ಯಂ**—ಹವಿಸ್ಸನ್ನು । **ಆ ವಹಾಮಿ**—ನಿಮಗೆ ವಹಿಸಲಿ ಎಂಬುದನ್ನೂ । **ಪ್ರ ಬ್ರೂತ**—ಹೇಳಿರಿ.

ಭಾವಾರ್ಥ

ಎಲೈ ದೇವತೆಗಳೇ, ನಾನು ಹೋತೃಸ್ಥಾನಕ್ಕೆ ಆರಿಸಲ್ಪಟ್ಟಿರುವುದರಿಂದ ಇಲ್ಲಿ ಕುಳಿತು ಯಾವ ರೀತಿ ನಿಮ್ಮನ್ನು ಸ್ತುತಿಸಲಿ ಎಂಬುದನ್ನು ನನಗೆ ಉಪದೇಶಿಸಿರಿ. ಯಾವ ರೀತಿ ನನಗೆ ಯಜ್ಞಭಾಗವನ್ನು ಕಲ್ಪಿಸಿರುವಿರೋ ಮತ್ತು ಯಾವ ಮಾರ್ಗವಾಗಿ ನಿಮ್ಮ ಹವಿಸ್ಸನ್ನು ನಿಮಗೆ ವಹಿಸಲಿ ಎಂಬುದನ್ನೂ ಹೇಳಿರಿ.

English Translation

Instruct me, Vishwedevas, since I am appointed Hotri, how sitting here I ought to praise you : declare to me your portion, how you have acquired it, and by what path I may convey the oblation to you.

ಸಂಹಿತಾಪಾಠಃ

ಅಹಂ ಹೋತಾ ನ್ಯಸೀದಂ ಯಜೀಯಾನ್ ವಿಶ್ವೇ ದೇವಾ ಮರುತೋ ಮಾ ಜುನಂತಿ ।
ಅಹರಹರಶ್ವಿನಾಧ್ವರ್ಯವಂ ವಾಂ ಬ್ರಹ್ಮಾ ಸಮಿದ್ಭವತಿ ಸಾಹುತಿರ್ವಾಂ ॥

ಪದಪಾಠಃ

ಅಹಂ । ಹೋತಾ । ನಿ । ಅಸೀದಂ । ಯಜೀಯಾನ್ । ವಿಶ್ವೇ । ದೇವಾಃ । ಮರುತಃ । ಮಾ । ಜುನಂತಿ ॥
ಅಹಃಽಅಹಃ । ಅಶ್ವಿನಾ । ಆಧ್ವರ್ಯವಂ । ವಾಂ । ಬ್ರಹ್ಮಾ । ಸಂಽಇತ್ । ಭವತಿ । ಸಾ । ಆಽಹುತಿಃ । ವಾಂ ॥ ೨ ॥

ಸಾಯಣಭಾಷ್ಯಂ

ಯಜೀಯಾನ್ ಯಷ್ಟೃತಮೋಽಹಂ ಹೋತಾ ಸನ್ನ್ಯಸೀದಂ । ನಿಷಣ್ಣೋಽಸ್ಮಿ । ನಿಷದನೇ ತಂ ನಿಷಣ್ಣಂ ವಿಶ್ವೇ ವ್ಯಾಪ್ತಾ ಮರುತೋ ದೇವಾ ಜುನಂತಿ । ಪ್ರೇರಯಂತಿ ಹವಿರ್ವಹನಾಯ । ಹೇ ಅಶ್ವಿನಾ ವಾಂ ಯುವಯೋರಾಧ್ವರ್ಯವಮಹರಹಃ ಪ್ರತಿದಿನಂ ಕರ್ತವ್ಯಮಿತಿ ಶೇಷಃ । ಆಧ್ವರ್ಯವಂ ಭವದ್ಭ್ಯಾಮನುಜ್ಞಾತವ್ಯಮಿತ್ಯರ್ಥಃ । ಬ್ರಹ್ಮಾ ಭವತಿ ಭವತು । ಕಃ ಸಮಿತ್ ಸಮಿದ್ಧಶ್ಚಂದ್ರಮಾಃ। ಚಂದ್ರಮಾ ಬ್ರಹ್ಮಾ ಭವತು । ಕಿಂಚ ಸಾ । ಸ ಇತ್ಯರ್ಥಃ । ಸ ಚ ಸಮಿತ್ ಸಮಿದ್ಧಶ್ಚಂದ್ರಮಾ ವಾಂ ಯುವಯೋರ್ಹೋತ್ರಾರ್ಥಂ ವಾಂ ಯುವಾಭ್ಯಾಂ ಕ್ರಿಯಮಾಣಾಯಾಧ್ವರ್ಯವಕರ್ಮಣ ಆಹುತಿರ್ಭವತ್ವಿತ್ಯರ್ಥಃ । ಸೋಮಾತ್ಮಕೋ ಹಿ ಚಂದ್ರಮಾ ಹೂಯತೇ । ಏಷ ವೈ ಸೋಮೋ ರಾಜೇತ್ಯುಪಕ್ರಮ್ಯ ತದೇವೋಭಯಂ ಭವತೀತಿ ಹಿ ಚ್ಛಂದೋಗಬ್ರಾಹ್ಮಣಂ । ಅಥವೈವಂ ಯೋಜನಾ। ಯಾಹುತಿರಾಧ್ವರ್ಯವಮನುಷ್ಠಿತವದ್ಭ್ಯಾಂ ಹೋತವ್ಯಾ ಸಾ ವಾಂ ಯುವಯೋರ್ಯುವಾಭ್ಯಾಂ ಭವತಿ। ಭವತು। ಆಧ್ವರ್ಯವಂ ವಾಮಿತ್ಯಸ್ಯೈವ ವಿವರಣಮೇತತ್ ॥

ಪ್ರತಿಪದಾರ್ಥ

ಯಜೀಯಾನ್—ಯಜ್ಞಾರ್ಹನಾದ । **ಅಹಂ**—ನಾನು । **ಹೋತಾ**—ಹೋತೃವಾಗಿ । **ನ್ಯಸೀದಂ**—ಕುಳಿತಿದ್ದೇನೆ । **ವಿಶ್ವೇ ಮರುತಃ ದೇವಾಃ**—ಸಕಲ ಮರುತ್ತುಗಳೂ, ದೇವತೆಗಳೂ ಅಥವಾ ದೇವಾತ್ಮರಾದ ಸಕಲ

ಮರುತ್ತುಗಳೂ । **ಜುನಂತಿ**—ಹವಿರ್ವಹನಕ್ಕಾಗಿ ನನ್ನನ್ನು ಪ್ರೇರಿಸುತ್ತಾರೆ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮಿಂದ । **ಅಹರಹಃ**—ಪ್ರತಿದಿನವೂ । **ಅಧ್ವರ್ಯವಂ**—ಅಧ್ವರ್ಯುವಿನ ಕರ್ಮವು (ನಿರ್ವಹಿಸಲ್ಪಡಬೇಕು) । **ಸಮಿತ್**—ಪ್ರಜ್ವಲಿತನಾದ (ಪ್ರಕಾಶಿಸುವ) ಚಂದ್ರನು (ಸೋಮನು) । **ಬ್ರಹ್ಮಾ ಭವತಿ**—ಬ್ರಹ್ಮಸ್ಥಾನದಲ್ಲಿರಲಿ । **ಸಾ**—ಅದೇ ಸೋಮನು । **ವಾಂ**—ನಿಮಗೆ । **ಆಹುತಿಃ**—ಆಹುತಿಯಾಗಲಿ.

ಭಾವಾರ್ಥ

ಯಜ್ಞಾರ್ಹನಾದ ನಾನು ಹೋತೃವಾಗಿ ಕುಳಿತಿದ್ದೇನೆ. ಸಕಲ ಮರುತ್ತುಗಳೂ ದೇವತೆಗಳೂ ಅಥವಾ ದೇವಾತ್ಮರಾದ ಸಕಲ ಮರುತ್ತುಗಳೂ ಹವಿರ್ವಹನಕ್ಕಾಗಿ ನನ್ನನ್ನು ಪ್ರೇರಿಸುತ್ತಾರೆ. ಎಲೈ ಅಶ್ವಿನೀದೇವತೆಗಳೇ, ನಿಮ್ಮಿಂದ ಪ್ರತಿದಿನವೂ ಅಧ್ವರ್ಯುವಿನ ಕರ್ಮವು ನಿರ್ವಹಿಸಲ್ಪಡಬೇಕು. ಸೋಮನು ಬ್ರಹ್ಮಸ್ಥಾನದಲ್ಲಿರಲಿ. ಅದೇ ಸೋಮನು ನಿಮಗೆ ಆಹುತಿಯಾಗಲಿ.

English Translation

Best entitled to the sacrifice, I have sat down as the Hotri : all the divine Maruts urge me (to bear the oblation) : the office of the Adhwaryu is to be discharged daily, Ashwins, by you : let the moon be the Brahman, and let it be also your oblation.

ಸಂಹಿತಾಪಾಠಃ

ಅಯಂ ಯೋ ಹೋತಾ ಕಿರು ಸ ಯಮಸ್ಯ ಕಮಪ್ಯೂಹೇ ಯತ್ಸಮಂಜಂತಿ ದೇವಾಃ ।
ಅಹರಹರ್ಜಾಯತೇ ಮಾಸಿಮಾಸ್ಯಥಾ ದೇವಾ ದಧಿರೇ ಹವ್ಯವಾಹಂ ॥ ೩ ॥

ಪದಪಾಠಃ

ಅಯಂ । ಯಃ । ಹೋತಾ । ಕಿಃ । ಊಂ ಇತಿ । ಸಃ । ಯಮಸ್ಯ । ಕಂ । ಅಪಿ । ಊಹೇ । ಯತ್ ।
ಸಂ೨ಅಂಜಂತಿ । ದೇವಾಃ ॥
ಅಹಃ೨ಅಹಃ । ಜಾಯತೇ । ಮಾಸಿ೨ಮಾಸಿ । ಅಥ । ದೇವಾಃ । ದಧಿರೇ । ಹವ್ಯ೨ವಾಹಂ ॥ ೩ ॥

ಸಾಯಣಭಾಷ್ಯಂ

ಯೋ೨ಯಂ ಹೋತಾ ಸ ಕಿಃ । ಕೋ ಭವತಿ । ಕೀದೃಶೋ ಭವತಿ । ತಸ್ಯ ಕೋ ವ್ಯಾಪಾರ ಇತ್ಯರ್ಥಃ । ತಸ್ಯೋತ್ತರಮುಚ್ಯತೇ । ಯಮಸ್ಯ ಮೃತ್ಯೋರ್ಭೀತಃ ಸನ್ನಿತಿ ಶೇಷಃ । ಕಮಪಿ ಹುತ.

ಮೂಹೇ । ವಹತಿ । ಯೇದ್ಸಾ । ಸರ್ವಮೃತ್ವಿಗ್ಭಾತಂ ನಿಯಮಯತೀತಿ ಯಮೋ ಯಜಮಾನಃ । ತಸ್ಯ ಕಮಪಿ ಹುತಮೂಹೇ। ವಹತಿ ದೇವಾನ್ಪ್ರತಿ । ಯತ್ಸಮಂಜಂತಿ ಯದ್ಧವಿಃ ಪ್ರಾಪ್ನುವಂತಿ ದೇವಾಃ । ಕಿಂಚಾಗ್ನಿರಹರಹಃ ಪ್ರತಿದಿನಮಗ್ನಿಹೋತ್ರಾರ್ಥಂ ಜಾಯತೇ । ಪ್ರಾದುರ್ಭವತಿ । ತಥಾ ಮಾಸಿಮಾಸಿ ಪ್ರತಿಮಾಸಂ ಜಾಯತೇ ಪಿತೃಯಜ್ಞಾರ್ಥಂ । ಏತತ್ಕಾಲದ್ವಯಮುಪಲಕ್ಷಣಂ ಪಕ್ಷಚತುರ್ಮಾಸಷಣ್ಮಾಸ-ಸಂವತ್ಸರಾದೀನಾಂ । ಅಪರೇ ಪುನರೇವಮಾಹುಃ । ಅಹರಹಃ ಸೂರ್ಯಾತ್ಮನಾ ಜಾಯತೇ ಮಾಸಿ ಮಾಸಿ ಚಂದ್ರಾತ್ಮನೇತಿ । ಅಥ ತಮಿಮಮಗ್ನಿಂ ದೇವಾ ದಧಿರೇ ಹವ್ಯವಾಹಂ । ಹವಿಷಾಂ ವೋಢಾರಂ । ಏವ-ಮಗ್ನಿರಾತ್ಮಾನಂ ಸ್ವಯಮೇವೋಕ್ತವಾನ್ ॥

ಪ್ರತಿಪದಾರ್ಥ

ಯಃ ಅಯಂ ಹೋತಾ—ಯಾರು ಈ ಹೋತೃವಾಗಿರುವನೋ । **ಸಃ**—ಅವನು । **ಕಿಃ**—ಯಾರು ಎಂದರೆ ಅವನ ಸ್ವರೂಪವೇನು ? । **ಯಮಸ್ಯ**—ಋತ್ವಿಕ್ಕುಗಳನ್ನು ನಿಯಮದಲ್ಲಿಡುವ ಯಜಮಾನನ । **ಯತ್**—ಯಾವ ಹವಿಸ್ಸನ್ನು । **ದೇವಾಃ**—ದೇವತೆಗಳು । **ಸಮಂಜಂತಿ**—ಸ್ವೀಕರಿಸುವರೋ ಅಂತಹ । **ಕಮಪಿ**—ಎಲ್ಲ ಹವಿಸ್ಸುಗಳನ್ನೂ । **ಊಹೇ**—ವಹಿಸುತ್ತಾನೆ । (**ಅಗ್ನಿಃ**—ಅಗ್ನಿಯು) । **ಅಹರಹಃ**—ಪ್ರತಿದಿನವೂ । **ಜಾಯತೇ**—ಉತ್ಪನ್ನನಾಗುತ್ತಾನೆ । **ಮಾಸಿಮಾಸಿ**—ಪ್ರತಿ ಮಾಸವೂ ಉತ್ಪನ್ನನಾಗುತ್ತಾನೆ । **ಅಥ**—ಆದುದರಿಂದಲೇ । **ದೇವಾಃ**—ದೇವತೆಗಳು । **ಹವ್ಯವಾಹಂ**—ಹವಿಸ್ಸನ್ನು ವಹಿಸುವ ದೂತನನ್ನು । **ದಧಿರೇ**—ಧರಿಸಿ (ಗೌರವಿಸಿ) ಪೂಜಿಸುತ್ತಾರೆ.

ಭಾವಾರ್ಥ

ಹೋತೃವಾಗಿರುವ ಈ ಅಗ್ನಿಯ ಸ್ವರೂಪವೇನು ? ಯಜಮಾನನು ಯಾವ ಹವಿಸ್ಸುಗಳನ್ನು ದೇವತೆಗಳು ಸ್ವೀಕರಿಸುವರೋ ಅಂತಹ ಎಲ್ಲ ಹವಿಸ್ಸುಗಳನ್ನೂ ಅಗ್ನಿಯು ವಹಿಸುತ್ತಾನೆ. ಇದೇ ಅಗ್ನಿಯು ಪ್ರತಿದಿನವೂ ಉತ್ಪನ್ನನಾಗುತ್ತಾನೆ. ಆದುದರಿಂದಲೇ ದೇವತೆಗಳು ಹವಿರ್ವಾಹಕನಾದ ಈ ಅಗ್ನಿಯನ್ನು ಧರಿಸಿ (ಗೌರವಿಸಿ) ಪೂಜಿಸುತ್ತಾರೆ.

English Translation

Who is this, who is the Hotri ? (Afraid) of Yama, what offering does he bear that the gods accept ? Agni is born day by day, and month by month, and so the gods have made for themselves a bearer of oblations.

ವಿಶೇಷವಿಷಯಗಳು

ಅಹರಹಃ-ಪ್ರತಿದಿನವೂ ; ಅಗ್ನಿಹೋತ್ರವೆಂಬ ಕರ್ಮವನ್ನು ಪ್ರತಿದಿನವೂ ಮಾಡಬೇಕಾಗಿರುವುದು. ಆದಕ್ಕಾಗಿ ಅಗ್ನಿಯನ್ನು ಪ್ರತಿದಿನವೂ ಉತ್ಪನ್ನಮಾಡುವುದರಿಂದ ಅಥವಾ ಪೂರ್ವದಿನದಿಂದ ಅಗ್ನಿಯು ಪ್ರತಿದಿನವೂ ಉತ್ಪನ್ನನಾಗುವನೆಂದು ಇಲ್ಲಿ ಹೇಳಿದೆ. ಅದರಂತೆ ಮಾಸಿಮಾಸಿ—ಪ್ರತಿ ಮಾಸದಲ್ಲಿಯೂ ದರ್ಶಪೂರ್ಣಮಾಸಾದಿ ಯಾಗಗಳನ್ನು ಮಾಡುವುದರಿಂದ ಆದಕ್ಕಾಗಿ ಅಗ್ನಿಯನ್ನು ಪ್ರತಿ ಯಾಗದಲ್ಲಿಯೂ ಅರಣಿಗಳಲ್ಲಿ ಕಡೆದು ಉತ್ಪನ್ನ ಮಾಡುವುದು ವಿಧಿಯಾದ್ದರಿಂದ ಅಗ್ನಿಯು ಪ್ರತಿ ಮಾಸದಲ್ಲಿಯೂ ಉತ್ಪನ್ನನಾಗುವನೆಂದು ಇಲ್ಲಿ ವಿವರಿಸಿದೆ.

ಸಂಹಿತಾಪಾಠಃ

ಮಾಂ ದೇವಾ ದಧಿರೇ ಹವ್ಯವಾಹಮಪಮ್ಲುಕ್ತಂ ಬಹು ಕೃಚ್ಛ್ರಾ ಚರಂತಂ।
ಅಗ್ನಿರ್ವಿದ್ವಾನ್ಯಜ್ಞಂ ನಃ ಕಲ್ಪಯಾತಿ ಪಂಚಯಾಮಂ ತ್ರಿವೃತಂ ಸಪ್ತ-
ತಂತುಂ ॥ ೪ ॥

ಪದಪಾಠಃ

ಮಾಂ । ದೇವಾಃ । ದಧಿರೇ । ಹವ್ಯವಾಹಂ । ಅಪಽಮ್ಲುಕ್ತಂ । ಬಹು । ಕೃಚ್ಛ್ರಾ । ಚರಂತಂ ॥
ಅಗ್ನಿಃ । ವಿದ್ವಾನ್ । ಯಜ್ಞಂ । ನಃ । ಕಲ್ಪಯಾತಿ । ಪಂಚಽಯಾಮಂ । ತ್ರಿಽವೃತಂ । ಸಪ್ತಽತಂತುಂ ॥

ಸಾಯಣಭಾಷ್ಯಂ

ಮಾಮಗ್ನಿಂ ದೇವಾ ಹವ್ಯವಾಹಂ ಹವಿರ್ವೋಢಾರಂ ದಧಿರೇ । ಕೃತವಂತಃ । ಕೀದೃಶಂ ಮಾಂ । ಅಪಮ್ಲುಕ್ತಮಪಕ್ರಮ್ಯಾಗತಂ । ಬಹು ಕೃಚ್ಛ್ರಾ ಬಹೂನಿ ಕೃಚ್ಛ್ರಾಣಿ ಸ್ಥಾನಾನಿ ಚರಂತಂ ಗಚ್ಛಂತಂ । ಕಯಾ ಮನೀಷಯಾ ದಧಿರ ಇತಿ ಉಚ್ಯತೇ । ಅಯಮಗ್ನಿರ್ವಿದ್ವಾನ್ ಸರ್ವಂ ಜಾನನ್ನೋಽಸ್ಮಾಕಂ ಯಜ್ಞಂ ಕಲ್ಪಯಾತಿ । ಕೀದೃಶಂ ಯಜ್ಞಂ । ಪಂಚಯಾಮಂ । ಪಂಚವಿಧಗಮನಂ । ಪಾಂಕ್ತ್ಯೋ ಹಿ ಯಜ್ಞಃ. । ತ್ರಿವೃತಂ । ಸವನತ್ರಯಭೇದೇನ ತ್ರಿಪ್ರಕಾರಂ ಸಪ್ತತಂತುಂ ಸಪ್ತಭಿಶ್ಛಂದೋಮಯೈಃ ಸ್ತುತಿಭಿರ್ವಿಸ್ತೃತಂ ॥

ಪ್ರತಿಪದಾರ್ಥ

ಅಪಮ್ಲುಕ್ತಂ—ಇಲ್ಲಿಂದ ಹೊರಟುಹೋಗಿ ಪುನಃ ಬಂದವನೂ । **ಬಹು ಕೃಚ್ಛ್ರಾ**—ಅನೇಕ ಕಷ್ಟಗಳನ್ನೂ । **ಚರಂತಂ**—ಸಹಿಸಿದವನೂ ಆದ । **ಮಾಂ**—ನನ್ನನ್ನು । **ದೇವಾಃ**—ದೇವತೆಗಳು । **ಹವ್ಯವಾಹಂ**—ಹವಿರ್ವಾಹಕನನ್ನಾಗಿ । **ದಧಿರೇ**—ಹೊಂದಿದ್ದಾರೆ । **ವಿದ್ವಾನ್**—ಸಕಲವನ್ನೂ ಅರಿತ । **ಅಗ್ನಿಃ**—ಅಗ್ನಿಯು । **ನಃ**—ನಮಗಾಗಿ । **ಪಂಚಯಾಮಂ**—ಐದು ವಿಧವಾದ ಗಮನವುಳ್ಳದ್ದೂ । **ತಿವೃತಂ**—ಮೂರು ಸವನಗಳುಳ್ಳದ್ದೂ । **ಸಪ್ತತಂತುಂ**—ಏಳು ಛಂದಸ್ಸುಗಳುಳ್ಳದ್ದೂ ಆದ । **ಯಜ್ಞಂ**—ಯಜ್ಞವನ್ನು । **ಕಲ್ಪಯಾತಿ**—ನಿರ್ಮಿಸುತ್ತಾನೆ.

ಭಾವಾರ್ಥ

ಇಲ್ಲಿಂದ ಹೊಂಟುಹೋಗಿ ಪುನಃ ಬಂದವನೂ, ಅನೇಕ ಕಷ್ಟಗಳನ್ನು ಸಹಿಸಿದವನೂ ಆದ ನನ್ನನ್ನು **ದೇವತೆಗಳು** ಹವಿರ್ವಾಹಕನನ್ನಾಗಿ ಹೊಂದಿದ್ದಾರೆ. ಸಕಲವನ್ನೂ ಅರಿತ ಅಗ್ನಿಯು ನಮಗಾಗಿ ಐದು ವಿಧವಾದ ಗಮನವುಳ್ಳದ್ದೂ, ಮೂರು ಸವನಗಳುಳ್ಳದ್ದೂ, ಏಳು ಛಂದಸ್ಸುಗಳುಳ್ಳದ್ದೂ ಆದ ಯಜ್ಞವನ್ನು ನಿರ್ಮಿಸುತ್ತಾನೆ.

English Translation

The gods have made me the bearer of oblations returning after eparture, and passing many difficult places : (saying) this Agni is ɪise ; he will accomplish the sacrifice for us, whether it be that of the ıve ways, the three kinds, or the seven threads.

ಸಂಹಿತಾಪಾಠಃ

ಆ ವೋ॑ ಯಕ್ಷ್ಯಮೃತತ್ವಂ ಸುವೀರ್ಯಂ ಯಥಾ ವೋ॑ ದೇವಾ ವರಿವಃ ಕರಾ॑ಣಿ।
ಆ ಬಾಹ್ವೋರ್ವಜ್ರಮಿಂದ್ರ॑ಸ್ಯ ಧೇಯಾಮಥೇಮಾ ವಿಶ್ವಾಃ ಪೃತ॑ನಾ ಜಯಾತಿ ॥ ೫ ॥

ಪದಪಾಠಃ

ಆ । ವಃ । ಯಕ್ಷಿ । ಅಮೃತ॑ತ್ವಂ । ಸು॒ವೀರ॑ಂ । ಯಥಾ॑ । ವಃ । ದೇವಾ॑ಃ । ವರಿ॑ವಃ । ಕರಾ॑ಣಿ ।
ಆ । ಬಾಹ್ವೋಃ । ವಜ್ರ॑ಂ । ಇಂದ್ರ॑ಸ್ಯ । ಧೇಯಾ॑ಂ । ಅಥ॑ । ಇಮಾಃ । ವಿಶ್ವಾಃ । ಪೃತ॑ನಾಃ । ಜಯಾ॑ತಿ ॥

ಸಾಯಣಭಾಷ್ಯಂ

ಹೇ ದೇವಾ ವೋ ಯುಷ್ಮಾ॒ನಾ ಯ॑ಕ್ಷಿ । ಅಯಾಚೇ । ಕಿಂ । ಅಮೃತತ್ವಮವಿನಾಶಿತ್ವಂ ಸುವೀರಂ ಸುಪುತ್ರಂ ಚ । ಹೇ ದೇವಾಃ ವೋ ಯುಷ್ಮಾಕಂ ವರಿವಃ ಪರಿಚರ್ಯಾಂ ಹವೀರೂಪಂ ಧನಂ ವಾ ಯಥಾ ಕರಾಣಿ ಕರವಾಣಿ ತದರ್ಥಮಿತ್ಯರ್ಥಃ । ಕಿಂಚೇಂದ್ರಸ್ಯ ಬಾಹ್ವೋರ್ವಜ್ರಮಾ ಧೇಯಾಂ । ಗ್ರಾಹಯಾಮೀತ್ಯರ್ಥಃ । ಅಗ್ನೇರ್ಹೋತೃತ್ವಾಭಾವ ಇಂದ್ರಸ್ಯ ಸೋಮಾದ್ಯಭಾವಾದ್ದುರ್ಬಲತ್ವೇನ ವಜ್ರಧಾರಣಂ ನೋಪಪದ್ಯತೇ । ಅತಸ್ತತ್ಕೃತ್ವಾ ವಜ್ರಂ ಗ್ರಾಹಯಾಮೀತ್ಯರ್ಥಃ । ಅಥೈವಂ ಸತೀಮಾ ವಿಶಾಃ ಸರ್ವಾಃ ಪೃತನಾಃ ಶತ್ರುಸೇನಾಃ ಜಯಾತಿ । ಜಯತಿ । ಜಯತು ವಾ ॥

ಪ್ರತಿಪದಾರ್ಥ

ದೇವಾಃ—ಎಲೈ ದೇವತೆಗಳೇ । **ವಃ**—ನಿಮ್ಮನ್ನುದ್ದೇಶಿಸಿ । **ವರಿವಃ**—ಹವಿಸ್ಸಿನಿಂದ ಕೂಡಿದ ಪೂಜೆಯನ್ನು । **ಯಥಾ**- ಯಾವರೀತಿ । **ಕರಾಣಿ**—ಅರ್ಪಿಸುವೆನೋ ಅದಕ್ಕಾಗಿ । **ಅಮೃತತ್ವಂ**—ಮರಣರಹಿತತ್ವವನ್ನೂ । **ಸುವೀರಂ**—ಉತ್ತಮನಾದ ಪುತ್ರನನ್ನೂ ಅನುಗ್ರಹಿಸಬೇಕೆಂದು । **ವಃ**—ನಿಮ್ಮನ್ನು । **ಆ ಯಕ್ಷಿ**—ಯಾಚಿಸುತ್ತೇನೆ । **ಇಂದ್ರಸ್ಯ**—ಇಂದ್ರನ । **ಬಾಹ್ವೋಃ**—ಬಾಹುಗಳಲ್ಲಿ । **ವಜ್ರಂ**—ವಜ್ರಾಯುಧವನ್ನು । **ಆ ಧೇಯಾಂ**—ಹಿಡಿಯುವಂತೆ ಮಾಡುತ್ತೇನೆ । **ಅಥ**—ಅನಂತರ । **ಇಮಾಃ ವಿಶ್ವಾಃ ಪೃತನಾಃ**—ಈ ಸಕಲ ಶತ್ರುಸೈನ್ಯಗಳನ್ನೂ । **ಜಯಾತಿ**—ಸೋಲಿಸುತ್ತಾನೆ.

ಭಾವಾರ್ಥ

ಎಲೈ ದೇವತೆಗಳೇ, ನಿಮ್ಮನ್ನುದ್ದೇಶಿಸಿ ಹವಿಸ್ಸಿನಿಂದ ಕೂಡಿದ ಪೂಜೆಯನ್ನು ನಿರಂತರ ಅರ್ಪಿಸುವುದಕ್ಕಾಗಿ ನನಗೆ ಮರಣರಹಿತತ್ವವನ್ನೂ, ಉತ್ತಮನಾದ ಪುತ್ರನನ್ನೂ ಅನುಗ್ರಹಿಸಬೇಕೆಂದು ನಿಮ್ಮನ್ನು ಯಾಚಿಸುತ್ತೇನೆ. ಇಂದ್ರನ ಬಾಹುಗಳಲ್ಲಿ ವಜ್ರಾಯುಧವನ್ನು ಹಿಡಿಯುವಂತೆ ಮಾಡುತ್ತೇನೆ. ಅನಂತರ ಅವನು ಸಕಲ ಶತ್ರುಸೈನ್ಯಗಳನ್ನೂ ನಾಶ ಮಾಡುತ್ತಾನೆ.

English Translation

Gods, I solicit of you immortality and excellent male offspring, that I may offer you adoration. I cause Indra to take the thunderbolt in his hands, wherewith he may overcome all these hostile hosts.

ಸಂಹಿತಾಪಾಠಃ

ತ್ರೀಣಿ ಶತಾ ತ್ರೀ ಸಹಸ್ರಾಣ್ಯಗ್ನಿಂ ತ್ರಿಂಶಚ್ಚ ದೇವಾ ನವ ಚಾಸಪರ್ಯನ್ ।
ಔಕ್ಷನ್ಘೃತೈರಸ್ತೃಣನ್ಬರ್ಹಿರಸ್ಮಾ ಆದಿದ್ಧೋತಾರಂ ನ್ಯಸಾದಯಂತ ॥ ೬ ॥

ಪದಪಾಠಃ

ತ್ರೀಣಿ । ಶತಾ । ತ್ರೀ । ಸಹಸ್ರಾಣಿ । ಅಗ್ನಿಂ । ತ್ರಿಂಶತ್ । ಚ । ದೇವಾಃ । ನವ । ಚ । ಅಸಪರ್ಯನ್ । ಔಕ್ಷನ್ । ಘೃತೈಃ । ಅಸ್ತೃಣನ್ । ಬರ್ಹಿಃ । ಅಸ್ಮೈ । ಅತ್ । ಇತ್ । ಹೋತಾರಂ । ನಿ । ಅಸಾದಯಂತ ॥ ೬ ॥

ಸಾಯಣಭಾಷ್ಯಂ

ತ್ರೀಣಿ ಶತಾ ಶತಾನಿ ತ್ರೀಣಿ ಸಹಸ್ರಾಣಿ ತ್ರಿಂಶಚ್ಚ ನವ ಚ ಏತತ್ಸಂಖ್ಯಾಕಾ ದೇವಾ ಅಗ್ನಿಂ ಮಾಮು ಪರ್ಯನ್ । ಪರ್ಯಚರನ್ । ಪರಿಚರ್ಯಾಪ್ರಕಾರ ಉಚ್ಯತೇ । ಘೃತೈಃ ಕ್ಷರದ್ಭಿರಾಜ್ಯೈರೌಕ್ಷನ್ । ಸಿಕ್ತವಂತಃ । ಅಸ್ಮಾ ಅಗ್ನಯೇ ಮಹ್ಯಂ ಚ ಬರ್ಹಿರಸ್ತೃಣನ್ । ಆಸ್ತೃತವಂತಃ । ಆದಿದಾಸ್ತರಣಾನಂತರಂ ಹೋತಾರಮಾಹ್ವಾತಾರಂ ನ್ಯಸಾದಯಂತ । ನಿಯಮೇನಾಸಾದಿತವಂತಃ ॥

ಪ್ರತಿಪದಾರ್ಥ

ತ್ರೀಣಿ ಶತಾ—ಮುನ್ನೂರು ಸಂಖ್ಯೆಯುಳ್ಳವರೂ । **ತ್ರೀ ಸಹಸ್ರಾಣಿ**—ಮೂರು ಸಹಸ್ರಸಂಖ್ಯೆಯುಳ್ಳವರೂ । **ತ್ರಿಂಶಚ್ಚ ನವ ಚ**—ಮೂವತ್ತೊಂಭತ್ತು ಸಂಖ್ಯೆಯುಳ್ಳವರೂ ಆದ । **ದೇವಾಃ**—ದೇವತೆಗಳು । **ಅಗ್ನಿಂ**—ಅಗ್ನಿಯಾದನನ್ನನ್ನು । **ಅಸಪರ್ಯನ್**—ಪೂಜಿಸಿದರು । **ಅಸ್ಮೈ**—ನನಗೆ ಕುಳಿತುಕೊಳ್ಳುವುದಕ್ಕಾಗಿ । **ಬರ್ಹಿಃ**—

ರ್ಭಾಸನವನ್ನು । **ಅಸ್ತೃಣನ್**—ಹರಡಿದರು । **ಘೃತೈಃ**—ಸ್ರವಿಸುವ ಆಜ್ಯಗಳಿಂದ । **ಔಕ್ಷನ್**—ಚುಮುಕಿಸಿದರು । **ದಿತ್**—ಆ ಒಡನೆಯೇ । **ಹೋತಾರಂ**—ಹೋತೃಕಾರ್ಯಕ್ಕಾಗಿ । **ನ್ಯಸಾದಯಂತ**—ಕುಳ್ಳಿರಿಸಿದರು.

ಭಾವಾರ್ಥ

ಮೂರುಸಾವಿರದ ಮುನ್ನೂರ ಮೂವತ್ತೊಂಭತ್ತು ಸಂಖ್ಯೆಯುಳ್ಳ ದೇವತೆಗಳು ನನ್ನನ್ನು ಪೂಜಿಸಿದರು. ನನಗೆ ಳಿತುಕೊಳ್ಳಲು ದರ್ಭಾಸನವನ್ನು ಹರಡಿದರು. ಸ್ರವಿಸುವ ಆಜ್ಯಗಳಿಂದ ಚುಮುಕಿಸಿದರು. ಆ ಒಡನೆಯೇ ಹೋತೃ ಕಾರ್ಯಕ್ಕಾಗಿ ಕುಳ್ಳಿರಿಸಿದರು.

English Translation

Three thousand three hundred and thirty-and-nine deities worshipped Agni, they sprinkled (me) with butter, they strewed the sacred grass, and then made the invoker of the gods sit down.

ವಿಶೇಷವಿಷಯಗಳು

ಪ್ರಕೃತ ಋಕ್ಕಿನಲ್ಲಿ **ತ್ರೀಣಿ ಶತಾ ತ್ರೀ ಸಹಸ್ರಾಣಿ ತ್ರಿಂಶಚ್ಚ ದೇವಾಃ** । ಮೂರುಸಾವಿರದ ಮುನ್ನೂರ ಮೂವತ್ತಮೂರುಮಂದಿ ದೇವತೆಗಳು ಎಂದು ದೇವತೆಗಳ ಸಂಖ್ಯೆಯನ್ನು ನಿರ್ದೇಶಿಸಿದೆ. ಈ ದೇವತೆಗಳು ಯಾರು ? ಇವರ ಸಂಖ್ಯಾಪರಿಮಿತಿಯೆಷ್ಟು ಎಂಬ ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಬಹುದು.

ಈ ಋಕ್ಕಿನಲ್ಲಿ ದೇವತೆಗಳ ಸಂಖ್ಯಾಪರಿಮಿತಿಯನ್ನು ತಿಳಿಸಿದೆ. **ಯೇ ದೇವಾಸೋ ದಿವ್ಯೇಕಾದಶಸ್ಥ** ಎಂಬ ಋಕ್ಕಿನಲ್ಲಿ ಪೃಥಿವ್ಯಂತರಿಕ್ಷಸ್ವರ್ಗಗಳಲ್ಲಿ ಮೂವತ್ತ್ಮೂರು ದೇವತೆಗಳಿರುವರೆಂದು ತಿಳಿಸಿದೆ. **ದಿವಿ ಏಕಾದಶ, ಪೃಥಿವ್ಯಾಂ ಏಕಾದಶ, ಅಪ್ಸುಕ್ಷಿತೇಃ ಏಕಾದಶ** ಎಂದು ಒಟ್ಟು ದೇವತೆಗಳ ಸಂಖ್ಯೆಯು ಮೂವತ್ತ್ಮೂರೆಂದು ತಿಳಿದೆ. ಸಾಯಣರು—**ಯದ್ಯಪಿ ತಿಸ್ರ ಏವ ದೇವತಾಃ** (ನಿ. ೭-೫) ಎಂಬ ನಿರುಕ್ತವಚನವನ್ನುದಾಹರಿಸಿ **ತ್ಯಾದ್ಯಭಿಮಾನಿನ್ಯೋ ದೇವತಾಸ್ತ್ರಿಸ್ರ ಏವ ತಥಾಪಿ ಸ್ವಸ್ವವಿಭೂತ್ಯಾ ತ್ರಯಸ್ತ್ರಿಂಶತ್ಸಂಖ್ಯಾತಾ ಭವಂತಿ । ತ್ತತ್ತ್ಸ್ಥಾನಾ ಅನ್ಯಾಸ್ತದ್ವಿಭೂತಯಃ ಇತ್ಯುಕ್ತತ್ವಾತ್** । ಪೃಥಿವೀ, ಅಂತರಿಕ್ಷ ಮತ್ತು ದ್ಯುಲೋಕಾಭಿಮಾನಿಗಳ ಸಂಖ್ಯೆಯು ಮೂರೇ ಆದರೂ ಸಹ ಅವರು ಅವರವರ ಮಹಿಮೆಯಿಂದ ಸಹ ಸಂಖ್ಯೆಯುಳ್ಳವರಾಗಿ ಕಾಣುತ್ತಾರೆ. ಆಯಾ ಲೋಕಗಳಲ್ಲಿರುವ ಉಳಿದ ದೇವತೆಗಳೆಲ್ಲಾ ಇವರ ವಿಭೂತಿಗಳು ಎಂದು ವಿವರಿಸಿದ್ದಾರೆ. ನಿರುಕ್ತಕಾರರೂ ಸಹ—

> **ತಿಸ್ರ ಏವ ದೇವತಾ ಇತಿ ನೈರುಕ್ತಾಃ । ಅಗ್ನಿಃ ಪೃಥಿವೀಸ್ಥಾನಃ । ವಾಯುರ್ವಾ ಇಂದ್ರೋ ವಾ ಅಂತರಿಕ್ಷಸ್ಥಾನಃ । ಸೂರ್ಯೋ ದ್ಯುಸ್ಥಾನಃ । ತಾಸಾಂ ಮಹಾಭಾಗ್ಯಾತ್ ಏಕೈಕಸ್ಯಾ ಅಪಿ ಬಹೂನಿ ನಾಮಧೇಯಾನಿ ಭವಂತಿ । ಅಪಿ ವಾ ಕರ್ಮಪೃಥಕ್ತ್ವಾತ್ ॥**
>
> (ನಿ. ೭-೫)

ನಿರುಕ್ತಕಾರರ ಮತದಂತೆ ಅಗ್ನಿ, ವಾಯು ಅಥವಾ ಇಂದ್ರ ಮತ್ತು ಸೂರ್ಯ ಎಂಬ ಮೂರು ದೇವತೆಗಳೂ ಸಹ ಪೃಥಿವೀ, ಅಂತರಿಕ್ಷ, ಸ್ವರ್ಗ ಎಂಬ ಮೂರು ಲೋಕಗಳ ಅಧಿದೇವತೆಗಳು, ಈ ದೇವತೆಗಳಿಗೆ ಅವರವರ ಮಹತ್ತ್ವಕ್ಕನುಗುಣವಾಗಿ ಅಥವಾ ಕ್ರಿಯಾವೈವಿಧ್ಯಗಳ ದೆಸೆಯಿಂದ ಅನೇಕವಿಧವಾದ ನಾಮಧೇಯಗಳಿರುತ್ತವೆ. ಆ ನಾಮಧೇಯ

ಗಳೇ ನಾನಾ ದೇವತೆಗಳು ಎಂದು ಹೇಳಿ **ಅಥಾತೋಽನುಕ್ರಮಿಷ್ಯಾಮಃ ಅಗ್ನಿಃ ಪೃಥಿವೀಸ್ಥಾನಃ ತಂ ಪ್ರಥಮಂ ವ್ಯಾಖ್ಯಾಸ್ಯಾಮಃ** ಎಂದು ನಿ. ೭–೧೪ ರಿಂದ ೯-೪೩ ರ ವರೆಗಿನ ಖಂಡಗಳಲ್ಲಿ ಪೃಥಿವೀಸ್ಥರಾದ ದೇವತೆಗಳ ಸ್ವರೂಪವನ್ನೂ, **ಅಥಾತೋ ಮಧ್ಯಸ್ಥಾನಾ ದೇವತಾಃ । ತಾಸಾಂ ವಾಯುಃ ಪ್ರಥಮಾಗಾಮಿನೀ ಭವತಿ** ಎಂದು ನಿ. ೧೦-೧ ರಿಂದ ೧೧-೫೦ ವರೆಗಿನ ಖಂಡಗಳಲ್ಲಿ ಮಧ್ಯಸ್ಥಾನವಾದ ಅಂತರಿಕ್ಷದ ದೇವತೆಗಳ ಸ್ವರೂಪವನ್ನೂ, **ಅಥಾತೋ ದುಸ್ಥಾನಾ ದೇವತಾಃ** ಎಂದು ನಿ. ೧೨-೧ ರಿಂದ ಅಧ್ಯಾಯದ ಕೊನೆಯವರೆಗೆ ದ್ಯುಲೋಕಸ್ಥರಾದ ದೇವತೆಗಳ ಸ್ವರೂಪವನ್ನೂ ಹೇಳಿದೆ. ಹೀಗೆ ವಿಭಾಗಿಸಿರುವ ಈ ದೇವತೆಗಳ ಸಂಖ್ಯೆಯೆಷ್ಟು ಎಂಬ ವಿಷಯದಲ್ಲಿ ಮತ ಭೇದಗಳಿದ್ದರೂ ಋಗ್ಸಂಹಿತೆಯ ಅನೇಕಕಡೆಗಳಲ್ಲಿ ಒಂದೇವಿಧವಾದ ಅಭಿಪ್ರಾಯವು ಕಂಡುಬರುತ್ತದೆ.

ಆ ನಾಸತ್ಯಾ ತ್ರಿಭಿರೇಕಾದಶೈರಿಹ ದೇವೇಭಿರ್ಯಾತಂ ಮಧುಪೇಯಮಶ್ವಿನಾ ।
ಪ್ರಾಯಸ್ತಾರಿಷ್ಟಂ ನೀ ರಪಾಂಸಿ ಮೃಕ್ಷತಂ ಸೇಧತಂ ದ್ವೇಷೋ ಭವತಂ ಸಚಾಭುವಾ ॥

(ಋ. ಸಂ. ೧-೩೪-೧೧)

ಎಂಬ ಋಕ್ಕಿನಲ್ಲಿ ಮೂವತ್ತ್ಮೂರು ದೇವತೆಗಳೊಂದಿಗೆ ಈ ಯಜ್ಞಭೂಮಿಗೆ ಬಂದು ಸೋಮಪಾನವಮಾಡಿರಿ ಎಂದು ಅಶ್ವಿನೀದೇವತೆಗಳನ್ನು ಸ್ತುತಿಸಿದೆ.

ಶ್ರುಷ್ಟೀವಾನೋ ಹಿ ದಾಶುಷೇ ದೇವಾ ಅಗ್ನೇ ವಿಚೇತಸಃ ।
ತಾನ್ರೋಹಿದಶ್ವ ಗಿರ್ವಣಸ್ತ್ರಯಸ್ತ್ರಿಂಶತಮಾ ವಹ ॥

(ಋ. ಸಂ. ೧-೪೫-೨)

ಎಂಬ ಋಕ್ಕಿನಲ್ಲಿ ಮೂವತ್ತ್ಮೂರು ದೇವತೆಗಳನ್ನು ಕರೆದುಕೊಂಡು ಬಾ ಎಂದು ಅಗ್ನಿಯನ್ನು ಪ್ರಾರ್ಥಿಸಿದೆ.

ಐಭಿರಗ್ನೇ ಸರಥಂ ಯೋಹ್ಯರ್ವಾಙ್ ನಾನಾರಥಂ ವಾ ವಿಭವೋ ಹ್ಯಶ್ವಾಃ ।
ಪತ್ನೀವತಸ್ತ್ರಿಂಶತಂ ತ್ರೀಂಶ್ಚ ದೇವಾನನುಷ್ವಧಮಾ ವಹ ಮಾದಯಸ್ವ ॥

(ಋ. ಸಂ. ೩-೬-೯)

ಇತಿ ಸ್ತುತಾಸೋ ಅಸಥಾ ರಿಶಾದಸೋ ಯೇ ಸ್ಥ ತ್ರಯಶ್ಚ ತ್ರಿಂಶಚ್ಚ ।
ಮನೋರ್ದೇವಾ ಯಜ್ಞಿಯಾಸಃ ॥

(ಋ. ಸಂ. ೮-೩೦-೨)

ವಿಶ್ವೇದೇವೈಸ್ತ್ರಿಭಿರೇಕಾದಶೈರಿಹಾದ್ಭಿರ್ಮರುದ್ಭಿರ್ಭೃಗುಭಿಃ ಸಚಾಭುವಾ ।

(ಋ. ಸಂ. ೮-೩೫-೩)

ತವ ತ್ಯೇ ಸೋಮ ಪವಮಾನ ನಿಣ್ಯೇ ವಿಶ್ವೇ ದೇವಾಸ್ತ್ರಯ ಏಕಾದಶಾಸಃ ।
ದಶ ಸ್ವಧಾಭಿರಧಿ ಸಾನೋ ಅವ್ಯೇ ಮೃಜಂತಿ ತ್ವಾ ನದ್ಯಃ ಸಪ್ತ ಯಹ್ವೀಃ ॥

(ಋ. ಸಂ. ೯-೯೭-೪)

ಇತ್ಯಾದಿ ಋಕ್ಕುಗಳಲ್ಲಿಯೂ ಸಹ ದೇವತೆಗಳ ಸಂಖ್ಯೆಯು ಮೂವತ್ತ್ಮೂರೆಂಬುದು ಸ್ಪಷ್ಟವಾಗಿದೆ. ಶತಪಥಬ್ರಾಹ್ಮಣದಲ್ಲಿಯೂ ಸಹ

ಅಷ್ಟೌ ವಸವಃ । ಏಕಾದಶ ರುದ್ರಾಃ । ದ್ವಾದಶಾದಿತ್ಯಾ ಇಮೇ ಏವ ದ್ಯಾವಾಪೃಥಿವೀ ತ್ರಯಸ್ತ್ರಿಂಶದ್ವೈ ದೇವಾಃ ಪ್ರಜಾಪತಿಶ್ಚತುಸ್ತ್ರಿಂಶಃ ॥

(ಶ. ಬ್ರಾ. ೪-೫-೭-೨)

ಎಂಟುಮಂದಿ ವಸುಗಳೂ, ಹನ್ನೊಂದುಮಂದಿ ರುದ್ರರೂ, ಹನ್ನೆರಡುಮಂದಿ ಆದಿತ್ಯರೂ ಮತ್ತು ದ್ಯಾವಾಪೃಥಿವಿಗಳೂ ಸೇರಿ ಮೂವತ್ತಮೂರು ದೇವತೆಗಳು. ಇವರಲ್ಲದೆ ಪ್ರಜಾಪತಿಯು ಮೂವತ್ತನಾಲ್ಕನೆಯವನು ಎಂದು ಒಂದುಕಡೆ ಹೇಳಿದೆ. ಆದರೆ ಇನ್ನೊಂದು ಸ್ಥಳದಲ್ಲಿ ಆದೇ ಮೂವತ್ತಮೂರು ಸಂಖ್ಯೆಯಿದ್ದರೂ ಸಹ ದ್ಯಾವಾಪೃಥಿವಿಗಳಿಗೆ ಬದಲಾಗಿ ಇಂದ್ರನನ್ನೂ, ಪ್ರಜಾಪತಿಯನ್ನೂ ಸೇರಿಸಿದೆ.

ತೇ ತ್ರಯಸ್ತ್ರಿಂಶದಿತ್ಯಷ್ಟೌ ವಸವ ಏಕಾದಶ ರುದ್ರಾ ದ್ವಾದಶಾದಿತ್ಯಾಸ್ತ ಏಕತ್ರಿಂಶದಿಂದ್ರಶ್ಚೈವ ಪ್ರಜಾಪತಿಶ್ಚ ತ್ರಯಸ್ತ್ರಿಂಶಾವಿತಿ ॥

(ಶ. ಬ್ರಾ. ೧೧-೬-೩-೫)

ಐತರೇಯಬ್ರಾಹ್ಮಣದಲ್ಲಿಯೂ ಸಹ

ತ್ರಯಸ್ತ್ರಿಂಶದ್ವೈ ದೇವಾಃ ಸೋಮಪಾಸ್ತ್ರಯಸ್ತ್ರಿಂಶದಸೋಮಪಾ ಅಷ್ಟೌ ವಸವ ಏಕಾದಶ ರುದ್ರಾ ದ್ವಾದಶಾದಿತ್ಯಾಃ ಪ್ರಜಾಪತಿಶ್ಚ ವಷಟ್ಕಾರಶ್ಚೈತೇ ದೇವಾಃ ಸೋಮಪಾಃ ॥

(ಐ. ಬ್ರಾ. ೩-೧೪)

ಸೋಮಪಾನವನ್ನು ಮಾಡತಕ್ಕವರು ಮೂವತ್ತಮೂರುಮಂದಿ ದೇವತೆಗಳು, ಅವರು ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಪ್ರಜಾಪತಿ ಮತ್ತು ವಷಟ್ಕಾರ. ಹೀಗೆ ಸಂಹಿತೆಯಲ್ಲಿಯೂ, ಬ್ರಾಹ್ಮಣಗಳಲ್ಲಿಯೂ ಈ ಸಂಖ್ಯೆಯ ವಿಷಯದಲ್ಲಿ ಒಂದೇ ಅಭಿಪ್ರಾಯವಿದೆ. ಆದರೆ,

ತ್ರೀಣಿ ಶತಾ ತ್ರೀ ಸಹಸ್ರಾಣ್ಯಗ್ನಿಂ ತ್ರಿಂಶಚ್ಚ ದೇವಾ ನವ ಚಾಸಪರ್ಯನ್ ।
ಔಕ್ಷನ್ ಘೃತೈರಸ್ತೃಣನ್ಬರ್ಹಿರಸ್ಮಾ ಆದಿದ್ಧೋತಾರಂ ನ್ಯಸಾದಯಂತ ॥

(ಋ. ಸಂ. ೩-೯-೯)

ಎಂಬ ಋಕ್ಕಿನಲ್ಲಿ ಪಠಿತವಾಗಿರುವುದನ್ನೇ ಪ್ರಕೃತ ಋಕ್ಕಿನಲ್ಲಿಯೂ ಪುನಃ ಪಠಿತವಾಗಿದೆ. ಇಲ್ಲಿ ಮೂರುಸಾವಿರ ಮುನ್ನೂರಮೂವತ್ತೊಂಭತ್ತುಮಂದಿ ದೇವತೆಗಳು ಅಗ್ನಿಯನ್ನು ಪೂಜಿಸಿದರೆಂದು ಹೇಳಿದೆ. ವಾಜಸನೇಯಸಂಹಿತೆಯಲ್ಲಿಯೂ ಇದೇ ರೀತಿ (೩೩-೭) ಇದೆ.

ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ ನಮೋ ಯುವಭ್ಯೋ ನಮ ಆಶಿನೇಭ್ಯಃ ॥
ಯಜಾಮ ದೇವಾನ್ಯದಿ ಶಕ್ನವಾಮ ಮಾ ಜ್ಯಾಯಸಃ ಶಂಸಮಾ ವೃಕ್ಷಿ ದೇವಾಃ ॥

(ಋ. ಸಂ. ೧-೨೭-೧೩)

ದೊಡ್ಡವರೂ, ಸಣ್ಣವರೂ, ತರುಣರೂ, ವೃದ್ಧರೂ ಆದ ಸಕಲವಿಧವಾದ ದೇವತೆಗಳಿಗೂ ನಮಸ್ಕಾರವೆಂಗು ಹೇಳುವಾ ದೇವತೆಗಳಲ್ಲಿ ಸ್ವರೂಪವೈವಿಧ್ಯವಿದೆಯೆಂದು ತಿಳಿಯುತ್ತದೆ. ಈ ಋಕ್ಕನ್ನೇ ಐತರೇಯಬ್ರಾಹ್ಮಣದಲ್ಲಿಯ (ಐ. ಬ್ರಾ. ೭-೧೬) ಶುನಶ್ಶೇಪೋಖ್ಯಾನದಲ್ಲಿ ವಿಶ್ವೇದೇವಪ್ರಾರ್ಥನಾಸಂದರ್ಭದಲ್ಲಿ ಪಠಿಸಿದೆ. ಆದರೆ

ನ ಹಿ ವೋ ಅಸ್ತ್ಯರ್ಭಕೋ ದೇವಾಸೋ ನ ಕುಮಾರಕಃ ।
ವಿಶ್ವೇ ಸತೋಮಹಾಂತ ಇತ್ ॥

(ಋ. ಸಂ. ೮-೩೦-೧)

ಎಂಬಲ್ಲಿ ದೇವತೆಗಳ ಮಧ್ಯದಲ್ಲಿ ದೊಡ್ಡವರು ಚಿಕ್ಕವರು ಎಂಬ ಭೇದವೇ ಇಲ್ಲ. ಸಕಲ ದೇವತೆಗಳೂ ಮಹಾತ್ಮರೇ ಆಗಿದ್ದಾರೆ ಎಂಬ ಪ್ರಶಂಸೆ ಇದೆ.

ಐವತ್ತಮೂರನೆಯ ಸೂಕ್ತ

ಸಾಯಣಭಾಷ್ಯಂ

ಯಮ್ಮೈಚ್ಛಾಮೇತ್ಯೇಕಾದಶರ್ಚಮೇಕಾದಶಂ ಸೂಕ್ತಂ । ದೇವಾನಾಂ ವಾಕ್ಯತ್ವಾದ್ದೇವಾ ಋಷಯಃ । ತದದ್ಯೇತಿ ತೃಚಸ್ಯ ಸೌಚೀಕೋಽಗ್ನಿರ್ಋಷಿಃ । ತಂತುಂ ತನ್ವನ್ನಿತ್ಯಾದ್ಯಾ ಅಷ್ಟರ್ಚಾ ವಿಶ್ವಾವರ್ಜಿತಾ ಜಗತ್ಯಃ । ಅಷ್ಟರ್ಚಾ ಶಿಷ್ಟಾಶ್ಚ ತ್ರಿಷ್ಟುಭಃ । ತಥಾ ಚಾನುಕ್ರಾಂತಂ । ತಂತುಮಾದ್ಯಾ ಜಗತ್ಯೋಽಷ್ಟರ್ಚಾವಿಶ್ವಾವರ್ಜಮಿತಿ । ಶಿಷ್ಟಾನುಕ್ತಂ ॥ ಗತಃ ಸೂಕ್ತವಿನಿಯೋಗಃ ॥

ಅನುವಾದವು— **ಯಮ್ಮೈಚ್ಛಾಮ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇವರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತದಲ್ಲಿ ದೇವತೆಗಳ ವಾಕ್ಯವಿರುವುದರಿಂದ ಈ ಸೂಕ್ತಕ್ಕೆ ದೇವತೆಗಳೇ ಋಷಿಯು; **ತದದ್ಯ** ಎಂದು ಮೊದಲಾಗುವ ಎರಡು ಋಕ್ಕುಗಳಿಗೆ ಮಾತ್ರ (೪-೫ ಋಕ್ಕುಗಳಿಗೆ) ಸೌಚೀಕೋಗ್ನಿಯು ಋಷಿಯು. ಉಳಿದ ಋಕ್ಕುಗಳಿಗೆ ದೇವತೆಗಳು ಋಷಿಯು; ಅಗ್ನಿಯು ದೇವತೆಯು. **ತಂತುಂ ತನ್ವನ್** ಎಂಬ ಋಕ್ಕಿನವರೆಗಿರುವ ಮೊದಲಿದ ೫ ಋಕ್ಕುಗಳನ್ನೂ, ೮ನೇ ಋಕ್ಕನ್ನು ಬಿಟ್ಟು ಉಳಿದ ಋಕ್ಕುಗಳು ಜಗತೀಛಂದಸ್ಕವು, ಉಳಿದ ಋಕ್ಕುಗಳು ತ್ರಿಷ್ಟುಪ್ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ತಂತುಮಾದ್ಯಾ ಜಗತ್ಯೋಽಷ್ಟರ್ಚಾವಿಶ್ವಾವರ್ಜಂ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೫೩

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೩ ॥
ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧೩, ೧೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—೧-೩, ೬-೧೧, ದೇವಾಃ । ೪-೫. ಅಗ್ನಿಃ ಸೌಚೀಕಃ ॥
ದೇವತಾ—೧-೩, ೬-೧೧. ಅಗ್ನಿಃ ಸೌಚೀಕಃ । ೪-೫. ದೇವಾಃ ॥
ಛಂದಃ—೧-೫, ೮. ತ್ರಿಷ್ಟುಪ್ । ೬, ೭, ೯-೧೧. ಜಗತೀ ॥

ಸಂಹಿತಾಪಾಠಃ

ಯಮ್ಮೈ᳒ಚ್ಛಾ᳒ಮ ಮನ᳒ಸಾ ಸೋ᳒ಮಂ᳒ಯಮಾ᳒ಗಾದ್ಯ᳒ಜ್ಞಸ್ಯ ವಿ᳒ದ್ವಾನ್ಪರು᳒ಷಶ್ಚಿ᳒ಕಿ-
ತ್ವಾನ್ ।

ಸ ನೋ ಯಕ್ಷದ್ದೇವತಾತಾ ಯಜೀಯಾನ್ಹಿ ಷತ್ಸದಂತರಃ ಪೂರ್ವೋ ಅಸ್ಮತ್ ॥ ೧ ॥

ಪದಪಾಠಃ

ಯಂ । ಐಚ್ಛಾಮ । ಮನಸಾ । ಸಃ । ಅಯಂ । ಅ । ಅಗಾತ್ । ಯಜ್ಞಸ್ಯ । ವಿದ್ವಾನ್ । ಪರುಷಃ । ಚಿಕಿತ್ವಾನ್ ।

ಸಃ । ನಃ । ಯಕ್ಷತ್ । ದೇವತಾತಾ । ಯಜೀಯಾನ್ । ನಿ । ಹಿ । ಸತ್ಸತ್ । ಅಂತರಃ । ಪೂರ್ವಃ । ಅಸ್ಮತ್ ॥ ೧ ॥

ಸಾಯಣಭಾಷ್ಯಂ

ಯಮಗ್ನಿಮೈಚ್ಛಾಮ ಅನಿಷ್ಟವಂತೋ ವಯಂ ಮನಸಾ ಹವಿಷ್ಪ್ರಾಪಣಬುದ್ಧ್ಯಾ । ಮಹ್ಯಂ ಹವಿಃ ಪ್ರಾಪಯತ್ವಿತಿ ಬುದ್ಧ್ಯೇತ್ಯರ್ಥಃ । ಸೋಽಯಮಗ್ನಿರಾಗಾತ್ । ಆಜಗಾಮ । ಕೀದೃಶೋಽಗ್ನಿಃ । ಯಜ್ಞಸ್ಯ ಯಜ್ಞಂ ವಿದ್ವಾನ್ ತಥಾ ಪರುಷಃ ಪರೂಂಷಿ ಸಂಧಾತವ್ಯಾನ್ಯಂಗಾನಿ ಚಿಕಿತ್ವಾನಭಿಗಚ್ಛನ್ । ಸೋಽಗ್ನಿರ್ಯಜೀಯಾನ್ಯಷ್ಟೃತಮೋ ನೋಽಸ್ಮಾನ್ದೇವತಾತಾ ದೇವತಾತೌ ಯಜ್ಞೇ ಯಕ್ಷತ್ । ಯಜತು । ನಿ ಹಿ ಷತ್ಸತ್ । ನ್ಯಸೀದತ್ವಲು ವೇದ್ಯಾಮಿತಿ ಶೇಷಃ । ಕೀದೃಶಃ ಸನ್ । ಅಂತರ ಋತ್ವಿಜಾಂ ಯಷ್ಟೃಣಾಂ ದೇವಾನಾಂ ಚ ಮಧ್ಯೇ ಸಂಚರನ್ ಅಸ್ಮತ್ಪೂರ್ವೋಽಸ್ಮತ್ತೋ ದೇವೇಭ್ಯಃ ಪೂರ್ವಭಾವೀ ಸನ್ । ಅಗ್ನಿಂ ಸಮಿಧ್ಯ ಪಶ್ಚಾದ್ಧಿ ದೇವಾ ಆಹ್ವಯಂತೇ ॥

ಪ್ರತಿಪದಾರ್ಥ

ಮನಸಾ—ಧ್ಯಾನಾತ್ಮಕವಾದ ಮನಸ್ಸಿನಿಂದ । **ಯಂ**—ಯಾವ ಅಗ್ನಿಯನ್ನು । **ಐಚ್ಛಾಮ**—ನಾವು ಹುಡುಕ್ತುದ್ದೆವೋ । **ಸಃ**—ಅಂತಹ । **ಯಜ್ಞಸ್ಯ ವಿದ್ವಾನ್**—ಯಜ್ಞದ ಸ್ವರೂಪವನ್ನರಿತವನೂ । **ಪರುಷಃ**—ಬೇರೆಬೇರೆಯಾದ ಯಜ್ಞಾವಯವಗಳನ್ನು ಒಂದುಗೂಡಿಸಲು । **ಚಿಕಿತ್ವಾನ್**—ತಿಳಿದವನೂ ಆದ । **ಅಯಂ**—ಅಗ್ನಿಯು । **ಆಗಾತ್**—ಬಂದಿದ್ದಾನೆ । **ಯಜೀಯಾನ್**—ಪೂಜ್ಯನಾದವನೂ । **ನಿಷತ್ಸದ್ಧಿ**—ಯಜ್ಞವೇದಿಯಲ್ಲಿ ಕುಳಿತವನೂ । **ಅಸ್ಮತ್ ಪೂರ್ವಃ**—ನಮಗಿಂತಲೂ ಪೂರ್ವಭಾವಿಯಾಗಿಯೇ । **ಅಂತರಃ**—ಋತ್ವಿಕ್ಕುಗಳ ನಡುವೆ ಸೇರಿರುವವನೂ ಆದ । **ಸಃ**—ಅದೇ ಅಗ್ನಿಯು । **ನಃ**—ನಮ್ಮನ್ನು । **ದೇವತಾತಾ**—ಯಜ್ಞದಲ್ಲಿ । **ಯಕ್ಷತ್**—ಪೂಜಿಸಲಿ.

ಭಾವಾರ್ಥ

ಧ್ಯಾನಾತ್ಮಕವಾದ ಮನಸ್ಸಿನಿಂದ ಯಾವ ಅಗ್ನಿಯನ್ನು ನಾವು ಹುಡುಕುತ್ತಿದ್ದೆವೋ ಅಂತಹ ಯಜ್ಞದ ಸ್ವರೂಪವನ್ನರಿತವನೂ, ಬೇರೆಬೇರೆಯಾದ ಯಜ್ಞಾಂಗಗಳನ್ನು ಒಂದುಗೂಡಿಸಲು ತಿಳಿದವನೂ ಆದ ಅಗ್ನಿಯು ಬಂದಿದ್ದಾನೆ. ಪೂಜ್ಯನೂ, ಯಜ್ಞವೇದಿಯಲ್ಲಿ ಕುಳಿತವನೂ, ನಮಗಿಂತಲೂ ಪೂರ್ವಭಾವಿಯಾಗಿಯೇ ಋತ್ವಿಕ್ಕುಗಳ ನಡುವೆ ಸೇರಿರುವವನೂ ಆದ ಅಗ್ನಿಯು ಯಜ್ಞದಲ್ಲಿ ನಮ್ಮನ್ನು ಪೂಜಿಸಲಿ.

English Translation

(The gods :) He whom we sought with (anxious) minds has arrived; he who understands the sacrifice and is acquainted with its different parts ; may he who is most skilled in worship, sacrifice for us at the worship of the gods, being seated (at the altar), taking place among (the priests), and preceding us.

संहितापाठः

अरा॑धि हो॒ता नि॒ष॒दा॒ यजी॑यानभि॒ प्रयां॑सि सु॒धि॒ता॒नि हि ख्यत् ।
यजा॑मह्यै॒ यज्ञि॑यान्ह॒न्त दे॒वाँ ई॒ळा॑महा ई॒ड्या॑ अ॒ज्ये॒न ॥

पदपाठः

अरा॑धि । हो॒ता । नि॒ऽस॒दा । यजी॑यान् । अभि । प्रयां॑सि । सु॒ऽधि॒तानि । हि । ख्यत् ।
यजा॑महै । यज्ञि॑यान् । ह॒न्त । दे॒वान् । ई॒ळा॑महै । ई॒ड्यान्- । अ॒ज्ये॒न ॥ ७ ॥

सायणभाष्यं

दर्शपूर्णमासयोः पुरोराधीत्येषा जपस्या । सूत्रमुदाहृतं ॥

अयमग्निर्होता होममनिष्पादकोऽयं यजीयान् यष्टृतमश्च सन्निषदा वेद्यां निषदनेनाराधि । सिद्धोऽभूत् । आहुतियोग्योऽभूदित्यर्थः । तथाभूतोऽयं सुधितानि सुष्ठु निहितानि प्रयांसि चरुपुरोडाशाद्यन्नान्यभि हि ख्यत् । अभिचष्टे । सर्वतः पश्यति । हीति पादपूरणः । कथा बुद्ध्येति । यज्ञियान्यष्टव्यानाहुतिभाजो देवान् हन्त शीघ्रमाज्येन यजामहै तथेड्यान् स्तुतिभाजो देवान् स्तुत्येळामहा इति बुद्ध्येति शेषः ॥

प्रतिपदार्थ

होता—होमसंपादकनू । **यजीयान्**—पूज्यनू आद अग्नियु । **निषदा**—यज्ञवेदियल्लि कुळितिरुवुदरिंद । **आराधि**—पूजेगे योग्यनागिद्दानॆ । **सुधितानि**—उत्तमवागि

ಅರ್ಪಿಸಿದ । **ಪ್ರಯಾಂಸಿ**—ಚರುಪುರೋಡಾಶಗಳನ್ನು । **ಅಭಿ ಹಿ ಖ್ಯಃ**—ಸುತ್ತಲೂ ನೋಡುತ್ತಾನೆ **ಯಜ್ಞಿಯಾನ್**—ಯಜ್ಞಾರ್ಹರಾದ । **ದೇವಾನ್**—ದೇವತೆಗಳನ್ನು । **ಹಂತ**—ಶೀಘ್ರವಾಗಿ । **ಆಜ್ಯೇನ** ಆಜ್ಯದ ಅರ್ಪಣೆಯಿಂದ । **ಯಜಾಮಹೈ**—ಪೂಜಿಸೋಣ । **ಈಡ್ಯಾನ್**—ಸ್ತುತಿಗೆ ಯೋಗ್ಯರಾದ ದೇವ ಗಳನ್ನು । **ಈಳಾಮಹೈ**—ಸ್ತುತಿಸೋಣ.

ಭಾವಾರ್ಥ

ಹೋಮಸಂಪಾದಕನೂ, ಪೂಜ್ಯನೂ ಆದ ಅಗ್ನಿಯು ಯಜ್ಞವೇದಿಯಲ್ಲಿ ಕುಳಿತಿರುವುದರಿಂದ ಪೂಜೆಗೆ ಯೋ ನಾಗಿದ್ದಾನೆ. ಉತ್ತಮವಾಗಿ ಅರ್ಪಿಸಿದ ಚರುಪುರೋಡಾಶಾದಿಗಳನ್ನು ಸುತ್ತಲೂ ನೋಡುತ್ತಾನೆ. ಯಜ್ಞಾರ್ಹರಾ ದೇವತೆಗಳನ್ನು ಆಜ್ಯದ ಅರ್ಪಣೆಯಿಂದ ಶೀಘ್ರವಾಗಿ ಪೂಜಿಸೋಣ. ಸ್ತುತಿಗೆ ಯೋಗ್ಯರಾದ ದೇವತೆಗಳನ ಸ್ತುತಿಸೋಣ.

English Translation

The hotri, most skilled in worship, has been sanctified by his se (at the altar); he contemplated the sacred offerings reverently place (before him): let us speedily worship with ghi the gods to whom worshi is due; let us praise those who are entitled to praise.

ವಿಶೇಷವಿಷಯಗಳು

ದರ್ಶಪೂರ್ಣಮಾಸಯಾಗಗಳ ಪ್ರಾರಂಭದಲ್ಲಿ **ಆರಾಧಿ** ಎಂಬ ಈ ಋಕ್ಕನ್ನು ಜಪಿಸಬೇಕೆಂದು ಹೇಳಿರು ಸೂತ್ರವನ್ನು ಹಿಂದೆಯೇ ಉದಾಹರಿಸಲಾಗಿದೆ.

ಸಂಹಿತಾಪಾಠಃ

ಸಾಧ್ವೀ॑ ಮಕರ್ದೇವವೀ॑ತಿಂ ನೋ ಅದ್ಯ ಯಜ್ಞ॑ಸ್ಯ ಜಿಹ್ವಾಮ॑ವಿದಾಮ
ಗುಹ್ಯಾಂ ।
ಸ ಆಯು॑ರಾಗಾ॑ತ್ಸು॒ರಭಿ॑ರ್ವ॒ಸಾನೋ॑ ಭ॒ದ್ರಾಮ॑ಕರ್ದೇವಹೂ॑ತಿಂ ನೋ
ಅದ್ಯ ॥ ೩ ॥

ಪದಪಾಠಃ

ಸಾಧ್ವೀ॑ಂ। ಅ॒ಕ॒ರ್ಃ। ದೇವ॑ಽವೀ॑ತಿಂ। ನ॒ಃ। ಅ॒ದ್ಯ। ಯ॒ಜ್ಞ॒ಸ್ಯ। ಜಿ॒ಹ್ವಾಂ। ಅ॒ವಿ॒ದಾ॒ಮ॒। ಗು॒ಹ್ಯಾಂ।
ಸಃ। ಆಯುಃ। ಅ। ಅ॒ಗಾ॒ತ್। ಸು॒ರಭಿಃ। ವ॒ಸಾನಃ। ಭ॒ದ್ರಾಂ। ಅ॒ಕ॒ರ್ಃ। ದೇವ॑ಽಹೂತಿಂ। ನ॒ಃ। ಅ॒ದ್ಯ

ಸಾಯಣಭಾಷ್ಯಂ

ಯಸ್ಮಿನ್ಯಜಮಾನೇ ಜೀವತಿ ಮೃತಶಬ್ದೋ ಜಾಯತೇ ತಸ್ಯ ಸುರಭಿಮತೀಷ್ಟಿಃ ಕರ್ತವ್ಯಾ । ಸಾಧ್ವೀಮಕರಿತ್ಯೇಷಾ ತತ್ರ ಯಾಜ್ಯಾ । ಸೂತ್ರಿತಂ ಚ । ಅಗ್ನಿರ್ಹೋತಾ ನ್ಯಸೀದದ್ಯಜೀಯಾನ್ ಸಾಧ್ವೀಮಕರ್ದೇವವೀತಿಂ ನೋ ಅದ್ಯ । ಆ-೩-೧೩ । ಇತಿ ॥

ಅಯಮಗ್ನಿರದ್ಯ ನೋಽಸ್ಮಾಕಂ ದೇವವೀತಿಂ ದೇವಾನಾಮಾಗಮನವಂತಂ ದೇವಾನಾಂ ಹವಿರ್ಭಕ್ಷಣೋಪೇತಂ ವಾ ಯಜ್ಞಂ ಸಾಧ್ವೀಮಕಃ । ಸಾಧುಮಕರೋತ್ । ವಯಂ ಚ ಯಜ್ಞಸ್ಯ ಜಿಹ್ವಾಂ ಗುಹ್ಯಾಂ ಗೂಢತರಾಂ ಜಿಹ್ವಾಮವಿದಾಮ । ಲಬ್ಧವಂತಃ ಸ್ಮ । ಅಗ್ನಿರ್ಹಿ ಯಜ್ಞಸ್ಯ ಜಿಹ್ವಾ ತೇನ ದೇವಾನಾಂ ಪಾನಾಜ್ಜಿಹ್ವಾತ್ವೇನೋಪಚಾರಃ । ಸ ತಾದೃಶೋಽಗ್ನಿಃ ಸುರುಭಿಃ ಸುಗಂಧ ಆಯುರ್ದೇವೈರ್ದತ್ತಮಾಯುಷ್ಯಂ ವಸಾನ ಆಚ್ಛಾದಯನ್ನಾಗಾತ್ ಆಗಚ್ಛತಿ । ಆಗತ್ಯ ಚ ನೋಽಸ್ಮದರ್ಥಂ ದೇವಹೂತಿಂ ದೇವಾನಾಮಾಹ್ವಾನವಂತಂ ಯಜ್ಞಂ ಭದ್ರಾಮಕಃ । ಕಲ್ಯಾಣಂ ಕೃತವಾನ್ । ಅದ್ಯೇದಾನೀಂ ॥

ಪ್ರತಿಪದಾರ್ಥ

ಅದ್ಯ—ಇಂದು । **ಅಗ್ನಿಃ**—ಅಗ್ನಿಯು । **ನಃ**—ನಮ್ಮಿಂದ । **ದೇವವೀತಿಂ**—ದೇವತೆಗಳಿಗಾಗಿ ಅರ್ಪಿಸಿದ ಹವಿಸ್ಸನ್ನು । **ಸಾಧ್ವೀಂ**—ಭಕ್ಷಿಸಲು ಯೋಗ್ಯವಾದುದನ್ನಾಗಿ । **ಅಕಃ**—ಮಾಡಿದ್ದಾನೆ । (**ವಯಂ**-ನಾವು) । **ಯಜ್ಞಸ್ಯ**—ಯಜ್ಞದ । **ಗುಹ್ಯಾಂ**—ರಹಸ್ಯಾತ್ಮಕವಾದ । **ಜಿಹ್ವಾಂ**—ಜಿಹ್ವೆಯನ್ನು । **ಅವಿದಾಮ**—ಹೊಂದಿದ್ದೇವೆ । **ಸಃ**—ಅಗ್ನಿಯು । **ಸುರಭಿಃ**—ಸುಗಂಧಯುಕ್ತನಾಗಿಯೂ । **ಆಯುಃ**—ದೇವತೆಗಳಿಂದ ಅನುಗೃಹೀತವಾದ ಆಯುಸ್ಸನ್ನು । **ವಸಾನಃ**—ಹೊಂದಿದವನಾಗಿಯೂ । **ಆಗಾತ್**—ಬರುತ್ತಾನೆ । **ಅದ್ಯ**—ಇಂದು । **ನಃ**—ನಮಗಾಗಿ । **ದೇವಹೂತಿಂ**—ದೇವತೆಗಳನ್ನು ಆಕರ್ಷಿಸುವ ಯಜ್ಞವನ್ನು । **ಭದ್ರಾಂ**—ಮಂಗಳಯುಕ್ತವನ್ನಾಗಿ । **ಅಕಃ**—ಮಾಡಿದ್ದಾನೆ.

ಭಾವಾರ್ಥ

ನಮ್ಮಿಂದ ದೇವತೆಗಳಿಗೆ ಅರ್ಪಿಸಿದ ಹವಿಸ್ಸನ್ನು ಅಗ್ನಿಯು ಭಕ್ಷಿಸಲು ಯೋಗ್ಯವಾಮುದನ್ನಾಗಿ ಮಾಡಿದ್ದಾನೆ. ನಾವು ಯಜ್ಞದ ರಹಸ್ಯಾತ್ಮಕವಾದ ಜಿಹ್ವೆಯನ್ನು ಹೊಂದಿದ್ದೇವೆ. ಅಗ್ನಿಯು ಸುಗಂಧಯುಕ್ತನಾಗಿಯೂ, ದೇವತೆಗಳಿಂದ ಅನುಗೃಹೀತವಾದ ಆಯುಸ್ಸನ್ನು ಹೊಂದಿದವನಾಗಿಯೂ ಬರುತ್ತಾನೆ. ಇಂದು ನಮಗಾಗಿ ದೇವತೆಗಳನ್ನು ಆಕರ್ಷಿಸುವ ಯಜ್ಞವನ್ನು ಮಂಗಳಯುಕ್ತವನ್ನಾಗಿ ಮಾಡಿದ್ದಾನೆ.

English Translation

He has to-day made our banquet to the gods effiicacious : we have obtained the mysterious tongue of sacriffices : he has come, fragrant, clothed with life : he makes our oblation to the gods to-day auspicious.

ವಿಶೇಷವಿಷಯಗಳು

Indra bestows fertilizing energies (accompained by these Maruts) in whose company the thunderer sends down showers in order to destroy sin : the deities who were born for giving rain (to asist) in the act performed by great Indra.

ಸಂಹಿತಾಪಾಠಃ

ಯುಜಾ ಕರ್ಮಾಣಿ ಜನಯನ್ವಿಶ್ವೌಜಾ ಅಶಸ್ತಿಹಾ ವಿಶ್ವಮನಾಸ್ತುರಾ-
ಷಾಟ್ ।
ಪೀತ್ವೀ ಸೋಮಸ್ಯ ದಿವ ಆ ವೃಧಾನಃ ಶೂರೋ ನಿರ್ಯುಧಾಧಮದ್ದಸ್ಯೂನ್॥

ಪದಪಾಠಃ

ಯುಜಾ । ಕರ್ಮಾಣಿ । ಜನಯನ್ । ವಿಶ್ವಓಜಾಃ । ಅಶಸ್ತಿಓಹಾ । ವಿಶ್ವಮನಾಃ । ತುರಾಷಾಟ್ ।
ಪೀತ್ವೀ । ಸೋಮಸ್ಯ । ದಿವಃ । ಆ । ವೃಧಾನಃ । ಶೂರಃ । ನಿಃ । ಯುಧಾ । ಅಧಮತ್ । ದಸ್ಯೂನ್ ॥

ಸಾಯಣಭಾಷ್ಯಂ

ಸ ಇಂದ್ರೋ ಯುಜಾ ಮರುತಾಂ ಸಾಹಾಯ್ಯೇನ ಕರ್ಮಾಣಿ ಪ್ರವರ್ಷಣಾದೀನಿ ಜನಯನ್ನು-
ತ್ಪಾದಯನ್ ವಿಶ್ವೌಜಾ ವ್ಯಾಪ್ತಬಲೋಽಶಸ್ತಿಹಾ ರಕ್ಷೋಹಾ ವಿಶ್ವಮನಾ ವ್ಯಾಪ್ತಮನಾ ಅತ್ಯಂತಂ
ಮನಸ್ವೀ ತುರಾಷಾಟ್ ತೂರ್ಣಮಭಿಭವಿತಾ ಶತ್ರೂಣಾಂ । ಏವಂ ಮಹಾನುಭಾವ ಇಂದ್ರಃ ಸೋಮಸ್ಯ
ಸೋಮಂ ಪೀತ್ವೀ ಪೀತ್ವಾ ದಿವೋ ದ್ಯುಲೋಕಾದಾಗತ್ಯ ಸೋಮಂ ಪೀತ್ವಾ ವೃಧಾನೋ ವರ್ಧಮಾನಃ
ಶೂರಃ ಸನ್ ಯುಧಾಯುಧೇನ ಪ್ರಹಾರೇಣ ವಾ ದಸ್ಯೂಞ್ಶತ್ರೂನ್ನಿರಧಮತ್ । ನಿರ್ಧಮತಿ ।
ಯುದ್ಧೇನಾಸುರಾನಪಬಾಧತ ಇತ್ಯರ್ಥಃ ॥

ಪ್ರತಿಪದಾರ್ಥ

ಯುಜಾ—ಮರುತ್ತುಗಳೊಡಗೂಡಿ । **ಕರ್ಮಾಣಿ**—ವೃಷ್ಟ್ಯಾದಿಕರ್ಮಗಳನ್ನು । **ಜನಯನ್**—ಉತ್ಪನ್ನಮಾಡುತ್ತ । **ವಿಶ್ವೌಜಾಃ**—ಸರ್ವತ್ರ ವ್ಯಾಪಿಸಿದ ಬಲವುಳ್ಳವನೂ । **ಅಶಸ್ತಿಹಾ**—ದುಷ್ಟನಾಶಕನೂ । **ವಿಶ್ವಮನಾಃ**—ಸರ್ವತ್ರ ಪ್ರಸರಿಸಿದ ಮನಸ್ಸುಳ್ಳವನೂ । **ತುರಾಷಾಟ್**—ಶತ್ರುಗಳನ್ನು ಶೀಘ್ರವಾಗಿ ಜಯಿಸುವವನೂ । **ಸೋಮಸ್ಯ**—ಸೋಮವನ್ನು । **ಪೀತ್ವೀ**—ಪಾನಮಾಡಿ । **ದಿವಃ**—ದ್ಯುಲೋಕದಿಂದ ಬಂದು । **ವೃಧಾನಃ**—ವೃದ್ಧಿಯನ್ನು ಹೊಂದಿದವನೂ । **ಶೂರಃ**—ಪರಾಕ್ರಮಿಯೂ ಆದ ಇಂದ್ರನು । **ಯುಧಾ**—ಆಯುಧಗಳಿಂದ । **ದಸ್ಯೂನ್**—ಶತ್ರುಗಳನ್ನು । **ನಿಃ ಅಧಮತ್**—ನಾಶಮಾಡುತ್ತಾನೆ.

ಭಾವಾರ್ಥ

ಮರುತ್ತುಗಳೊಡಗೂಡಿ ವೃಷ್ಟ್ಯಾದಿಕರ್ಮಗಳನ್ನು ಉತ್ಪನ್ನಮಾಡುತ್ತ ಸರ್ವತ್ರ ವ್ಯಾಪಿಸಿದ ಬಲವುಳ್ಳವನೂ, ದುಷ್ಟನಾಶಕನೂ, ಸರ್ವತ್ರ ಪ್ರಸರಿಸಿದ ಮನಸ್ಸುಳ್ಳವನೂ, ಶತ್ರುಗಳನ್ನು ಶೀಘ್ರವಾಗಿ ಜಯಿಸುವವನೂ, ಸೋಮವನ್ನು ಪಾನಮಾಡಿ ದ್ಯುಲೋಕದಿಂದ ಬಂದು ವೃದ್ಧಿಯನ್ನು ಹೊಂದಿದವನೂ, ಪರಾಕ್ರಮಿಯೂ ಆದ ಇಂದ್ರನು ಆಯುಧಗಳಿಂದ ಶತ್ರುಗಳನ್ನು ನಾಶಮಾಡುತ್ತಾನೆ.

English Translation

Accomplishing his duty with their assistance, the all-powerful Indra, the destroyer of the wicked, the all-wise, the quick subduer of foes, descending from heaven, and quaffing the Soma, invigorated and a hero he demolishes the Dasyus with his thunderbolt.

ಐವತ್ತಾರನೆಯ ಸೂಕ್ತ

ಪೀಠಿಕೆ

ಈ ಸೂಕ್ತದ ಋಷಿಯಾದ ಬೃಹದುಕ್ಥನು ತನ್ನ ವಾಜಿ ಎಂಬ ಮಗನು ಮೃತನಾಗಲು ಶೋಕಸಂತಪ್ತನಾಗಿ ಮೃತನ ನಾನಾ ಅಂಶಗಳು ಪಂಚಮಹಾಭೂತಗಳಲ್ಲಿ ಸೇರಿಹೋಗಲೆಂದು ಈ ಸೂಕ್ತದಲ್ಲಿ ಹೇಳಿದಾನೆ. ಅದರಂತೆ— ಶರೀರದಲ್ಲಿ ಶಾಖ (ಔಷ್ಣ್ಯ) ರೂಪದಿಂದ ಇದ್ದ ಅಗ್ನಿಯು ಬಾಹ್ಯಾಗ್ನಿಯಲ್ಲಿ ಸೇರಿಹೋಗಲೆಂದೂ ಅದರಂತೆ ಪ್ರಾಣ ವಾಯುವು ಆಕಾಶದಲ್ಲಿರುವ ಬಾಹ್ಯವಾಯುವಿನಲ್ಲಿಯೂ, ಆತ್ಮವು ಸ್ವರ್ಗದಲ್ಲಿ ಬೆಳಗುತ್ತಿರುವ ಪರಬ್ರಹ್ಮಸ್ವರೂಪವಾದ ಸೂರ್ಯನಲ್ಲಿ ಸೇರಿ ಐಕ್ಯವಾಗಲೆಂದೂ ಆಶಿಸಿದ್ದಾನೆ. ಈ ವಿಷಯಗಳನ್ನೇ ಈ ಸೂಕ್ತದ ಋಕ್ಕುಗಳಲ್ಲಿ ವಿವರಿಸಲಾಗಿದೆ.

ಸಾಯಣಭಾಷ್ಯಂ

ಇದಂ ತ ಇತಿ ಸಪ್ತರ್ಚಂ ಚತುರ್ದಶಂ ಸೂಕ್ತಂ। ವಾಮದೇವಪುತ್ರೋ ಬೃಹದುಕ್ಥ ಋಷಿಃ। ಚತುರ್ಥೀಪಂಚಮೀಷಷ್ಠ್ಯೇ ಜಗತ್ಯೌ। ಆದಿತಸ್ತಿಸ್ರಃ ಸಪ್ತಮೀ ಚ ತ್ರಿಷ್ಟುಭಃ। ವಿಶ್ವೇ ದೇವಾ ದೇವತಾ। ತಥಾ ಚಾನುಕ್ರಾಂತಂ। ಇದಂ ತೇ ಸಪ್ತ ವೈಶ್ವದೇವಂ ತು ಚತುರ್ಥ್ಯಾದ್ಯಾಸ್ತಿಸ್ರೋ ಜಗತ್ಯ ಇತಿ॥ ಗತಃ ಸೂಕ್ತವಿನಿಯೋಗಃ॥ ಆಹವನೀಯೇ ವಾದ್ಯಾಧಿಕಾರಣೇನಾಯತನಾನ್ನಿಷ್ಕ್ರಮ್ಯ ಶಮ್ಯಾ-ಪರಾಸಾದವಾರ್ವಾಚೀನೇ ದೇಶೇ ದೀಪ್ಯಮಾನೇ ಸತಿ ತಮಗ್ನಿಮನಯಾ ಪುನರಾಯತನೇ ಸಂವಪೇತ್। ಸೂತ್ರಿತಂ ಚ। ಆಹವನೀಯಮವದೀಪ್ಯಮಾನಮವಾರ್ಕ್ ಶಮ್ಯಾಪರಾಸಾದಿದಂ ತ ಏಕಂ ಪರ ಊ ತ ಏಕಮಿತಿ ಸಂವಪೇತ್। ಆ. ೩.೧೦। ಇತಿ॥

ಅನುವಾದವು—**ಇದಂ ತ ಏಕಂ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವಪುತ್ರನಾದ ಬೃಹದುಕ್ಥನೆಂಬುವನು ಋಷಿಯು; ಈ ಸೂಕ್ತದ ನಾಲ್ಕು, ಐದು, ಆರನೆಯ ಋಕ್ಕುಗಳು ಜಗತೀಛಂದಸ್ಸುವು. ಸೂಕ್ತದ ಮೊದಲ ಮೂರು ಋಕ್ಕುಗಳೂ ಏಳನೆಯ ಋಕ್ಕೂ ತ್ರಿಷ್ಟುಪ್ಛಂದಸ್ಸುವು. ವಿಶ್ವೇದೇವತೆಗಳು ದೇವತೆಯು; ಅನುಕ್ರಮಣಿಕೆಯಲ್ಲಿ—

ಇದಂ ತೇ ಸಪ್ತ ವೈಶ್ವದೇವಂ ತು ಚತುರ್ಥ್ಯಾದ್ಯಾಸ್ತ್ರಿಸ್ರೋ ಜಗತ್ಯಃ ಎಂದು ಹೇಳಿರುವುದು. ಸೂಕ್ತ ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೫೬

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೬ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೧೮ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಬೃಹದುಕ್ಥೋ ವಾಮದೇವ್ಯಃ ॥
ದೇವತಾ—ವಿಶ್ವೇ ದೇವಾಃ ॥
ಛಂದಃ—೧-೫, ೭. ತ್ರಿಷ್ಟುಪ್ । ೪-೬. ಜಗತೀ ॥

ಸಂಹಿತಾಪಾಠಃ

ಇ॒ದಂ ತ॒ ಏಕಂ॑ ಪ॒ರ ಊ॑ ತ॒ ಏಕಂ॑ ತೃ॒ತೀಯೇ॑ನ॒ ಜ್ಯೋತಿ॑ಷಾ॒ ಸಂ ವಿ॑ಶಸ್ವ ।
ಸಂವೇ॑ಶನೇ ತ॒ನ್ವ॑ಶ್ಚಾರುರೇಧಿ ಪ್ರಿ॒ಯೋ ದೇ॒ವಾನಾಂ॑ ಪರ॒ಮೇ ಜ॑ನಿ॒ತ್ರೇ ॥

ಪದಪಾಠಃ

ಇ॒ದಂ । ತ॒ೇ । ಏಕಂ॑ । ಪ॒ರಃ । ಊಂ॒ ಇತಿ॑ । ತ॒ೇ । ಏಕಂ॑ । తృ॒తೀಯೇ॑ನ । ಜ್ಯೋತಿ॑ಷಾ । ಸಂ । ವಿ॒ಶ॒ಸ್ವ॒ ।
ಸಂ॒ವೇ॒ಶ॒ನೇ । త॒ನ್ವಃ॑ । ಚಾ॒ರು॒ಃ । ಏ॒ಧಿ॒ । ಪ್ರಿ॒ಯಃ । ದೇ॒ವಾನಾಂ॑ । ಪ॒ರ॒ಮೇ । ಜ॒ನಿ॒ತ್ರೇ ॥ ೧ ॥

ಸಾಯಣಭಾಷ್ಯಂ

ಏತದಾದಿಭಿರ್ಬಹದುಕ್ಥೋ ವಾಜಿನಂ ನಾಮ ಸ್ವಪುತ್ರಂ ಮೃತಂ ವದತಿ । ಹೇ ಮೃತ ಪುತ್ರ ತೇ ತವೇದಂ । ಉಪರಿ ಜ್ಯೋತಿಷೇತಿ ವಕ್ಷ್ಯಮಾಣತ್ವಾದತ್ರೇದಂಶಬ್ದೇನ ಜ್ಯೋತಿರಭಿಧೀಯತೇ । ಇದಂ ಜ್ಯೋತಿರಗ್ನ್ಯಾಖ್ಯಮೇಕಮೇಕೋಽಂಶಃ । ಅತಸ್ತನುಮಗ್ನಿಂ ತವ ದೇಹಗತಾಗ್ನ್ಯಂಶೇನ ಬಾಹ್ಯಮಗ್ನಿಂ ಸಂ ವಿಶಸ್ವ । ಸಂಗಚ್ಛಸ್ವ । ತಥಾ ಪರ ಉ ಅನ್ಯೋಽಪಿ ತೇ ತವೈಕಂ ವಾಯ್ವಾಖ್ಯೋಽಂಶಃ । ತೇ ತವ ಪ್ರಾಣಸಾಯ್ವಾಖ್ಯೇನಾಂಶೇನ ಸಂವಿಶಸ್ವ । ಶರೀರಾಗ್ನಿಪ್ರಾಣವಾಯ್ವೋರ್ಬಾಹ್ಯಾಗ್ನಿವಾಯ್ವೋಶ್ಚೈಕತ್ವಾದಂಶತ್ವಮಿತಿ ಭಾವಃ । ತಥಾ ತೃತೀಯೇನ ಜ್ಯೋತಿಷಾದಿತ್ಯಾಖ್ಯೇನ ತೇಜಸಾ ತವಾತ್ಮನಾ ಸಂವಿಶಸ್ವ । ಸೂರ್ಯಗತಾತ್ಮಚೈತನ್ಯದೇಹಗತಾತ್ಮಚೈತನ್ಯಯೋರಭೇದಾದಂಶತ್ವಂ । ತದ್ಯೋಽಹಂ ಸೋಽಸೌ ಯೋಽಸೌ ಸೋಽಹಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚೇತಿ ಶ್ರುತೇರಾತ್ಮನಃ ಸೂರ್ಯಪ್ರವೇಶೋ ಯುಕ್ತಃ । ತನ್ವಸ್ತನ್ವಾಃ ಸಂವೇಶನೇ ತಸ್ಮಿನ್ಸೂರ್ಯೇ ಸಂವಿಶ್ಯ ಚಾರುರೇಧಿ । ಕಲ್ಯಾಣೋ ಭವ । ಕೀದೃಶಸ್ತ್ವಂ । ಪ್ರಿಯಸ್ತೇನ ಸಹ ಪ್ರೀಯಮಾಣಃ । ಕೀದೃಶೇ ತಸ್ಮಿನ್ । ದೇವಾನಾಂ ಪರಮ ಉತ್ತಮೇ ಜನಿತ್ರೇ ಜನಕೇ । ದೇವಾನಾಂ ಹ್ಯೇತತ್ಪರಮಂ ಜನಿತ್ರಂ ಯತ್ಸೂರ್ಯ ಇತಿ ಹಿ ಶ್ರುತಿಃ ॥

ಪ್ರತಿಪದಾರ್ಥ

(ಎಲೈ ಮೃತಪುತ್ರನೇ, ನೀನು) **ತೇ**—ನಿನ್ನ । **ಇದಂ**—ಶರೀರಸಂಬಂಧವಾದ ಎಂದರೆ ಇದುವರೆಗೂ ಶರೀರಾಂತರ್ಗತವಾದ । **ಏಕಂ**—ತೇಜಸ್ಸಿನ ಒಂದು ಅಂಶದಿಂದ । **ಸಂ ವಿಶಸ್ವ**—ಬಾಹ್ಯಾಗ್ನಿಯನ್ನು ಪ್ರವೇಶಿಸಿ ಅದರೊಡನೆ ಐಕ್ಯವಾಗು (ಹಾಗೆಯೇ) । **ತೇ**—ನಿನ್ನ । **ಪರಃ ಉ**—ಶರೀರಾಂತರ್ಗತವಾದ ಪ್ರಾಣವಾಯುವಿನ । **ಏಕಂ**—ಮತ್ತೊಂದು ಅಂಶದಿಂದ । (**ಸಂ ವಿಶಸ್ವ**—ಬಾಹ್ಯವಾಯುವನ್ನು ಪ್ರವೇಶಿಸಿ ಅದರಲ್ಲಿ ಅಂತರ್ಗತನಾಗು (ಮತ್ತು) । **ತೃತೀಯೇನ ಜ್ಯೋತಿಷಾ**—ಮೂರನೆಯ ತೇಜಸ್ಸಿನಿಸಿದ ಆದಿತ್ಯನ ತೇಜಸ್ಸಿನೊಡನೆ । **ಸಂ ವಿಶಸ್ವ**-ನಿನ್ನ ಆತ್ಮದಿಂದ ಪ್ರವೇಶಿಸಿ ಅದರಲ್ಲಿ ಐಕ್ಯನಾಗು) । **ದೇವಾನಾಂ**—ದೇವತೆಗಳಿಗೆ। **ಪರಮೇ**—ಅತ್ಯುತ್ಕೃಷ್ಟವಾದ । **ಜನಿತ್ರೇ**—ಉತ್ಪತ್ತಿಸ್ಥಾನವಾದ ಆದಿತ್ಯನಲ್ಲಿ । **ತನ್ವಃ**—ನಿನ್ನ ಶರೀರಾಂಶಗಳ। **ಸಂವೇಶನೇ**—ಪ್ರವೇಶಕಾಲದಲ್ಲಿ । **ಪ್ರಿಯಃ**—ಆದಿತ್ಯನ ಪ್ರೀತಿಪಾತ್ರನಾಗಿ । **ಚಾರುಃ**—ಹರ್ಷವನ್ನು । **ಏಧಿ**-ಹೊಂದು.

ಭಾವಾರ್ಥ

ಎಲೈ ಮೃತಪುತ್ರನೇ, ನೀನು ನಿನ್ನ ದೇಹದ ಅಗ್ನಿರೂಪವಾದ ಅಂಶದಿಂದ ಬಾಹ್ಯಾಗ್ನಿಯನ್ನು ಪ್ರವೇಶಿಸಿ ಅದರೊಡನೆ ಒಂದಾಗು. ವಾಯುರೂಪವಾದ ತೇಜಸ್ಸಿನಿಂದ ಬಾಹ್ಯಾಕಾಶದಲ್ಲಿರುವ ವಾಯುವಿನೊಡನೆ ಪ್ರವೇಶಿಸಿ ಅದರೊಡನೆ ಒಂದಾಗು ಮತ್ತು ಮೂರನೆಯ ಆತ್ಮರೂಪವಾದ ಅಂಶದಿಂದ ಆದಿತ್ಯನೊಡನೆ ಪ್ರವೇಶಿಸಿ ಅವನಲ್ಲಿ ಐಕ್ಯನಾಗು ಮತ್ತು ದೇವತೆಗಳಿಗೂ ಅತ್ಯುತ್ತಮವಾದ ಉತ್ಪತ್ತಿಸ್ಥಾನವಾದ ಆದಿತ್ಯನನ್ನು ಪ್ರವೇಶಿಸುವಾಗ ಆದಿತ್ಯನ ಪ್ರೀತಿಗೆ ಪಾತ್ರನಾಗಿ ಹರ್ಷವನ್ನು ಹೊಂದು.

English Translation

This (light) is one (portion) of you, and this other is one (portion); with your third light enter into (outer radiance); on the entrance of the body into (the sun), the supreme birthplace of the gods, become lovely and beloved.

ವಿಶೇಷವಿಷಯಗಳು

ಸಕಲ ಪ್ರಾಣಿಗಳ ಶರೀರದಲ್ಲಿ ಔಷ್ಣ್ಯದಿಂದಲೂ, ಉದರದಲ್ಲಿ ಜಾಠರಾಗ್ನಿರೂಪದಿಂದಲೂ ವೈಶ್ವಾನರಾಗ್ನಿಯು ವ್ಯಾಪಿಸಿದ್ದಾನೆ. ಈ ವಿಷಯವು ವೈಶ್ವಾನರಾಗ್ನಿಯನ್ನು ವಿವರಿಸುವಾಗ ತಿಳಿಸಿದೆ. ಭೂಮಿಯ ಮೇಲಿರುವ ಸಮಸ್ತ ವಿಧವಾದ ಔಷ್ಣ್ಯ ಅಥವಾ ಶಾಖಕ್ಕೂ ಅಗ್ನಿ ಅಥವಾ ಆದಿತ್ಯರೂಪದಿಂದಿರುವ ಅಗ್ನಿಯೇ ಮೂಲವು. ಆದ್ದರಿಂದ ಶರೀರವು ನಾಶವಾದಾಗ ಅದರಲ್ಲಿದ್ದ ಉಷ್ಣವು ತನಗೆ ಮೂಲಭೂತವಾದ ಬಾಹ್ಯಾಗ್ನಿಯಲ್ಲಿ ಸೇರಿಹೋಗಲೆಂದು ಬಯಸುವುದು ಸಹಜವಾಗಿದೆ. ಅದರಂತೆ ಪ್ರಾಣವಾಯುವು ಆಕಾಶದಲ್ಲಿರುವ ಬಾಹ್ಯವಾಯುವಿನಲ್ಲಿಯೂ ಆತ್ಮವು ಸಕಲ ಚೈತನ್ಯಗಳಿಗೂ ಕಾರಣಭೂತನಾದ ಸೂರ್ಯನಲ್ಲಿಯೂ ಸೇರಿಹೋಗಲೆಂದು ಹೇಳುವುದು ಯುಕ್ತವಾಗಿಯೇ ಇದೆ. ಇದಲ್ಲದೆ ಸೂರ್ಯ ಅಥವಾ ಆದಿತ್ಯನೇ ಪರಬ್ರಹ್ಮನೆಂದು **ಅಸಾವಾದಿತ್ಯೋ ಬ್ರಹ್ಮೇತಿ । ಸೂರ್ಯ ಆತ್ಮಾ ಜಗತಸ್ತ-ಸ್ಥುಷಶ್ಚ** ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಸ್ಪಷ್ಟವಾಗಿ ಹೇಳಿದೆ.

ಸಂಹಿತಾಪಾಠಃ

ತನೂಷ್ಟೇ ವಾಜಿನ್ತನ್ವಂ1 ನಯಂತೀ ವಾಮಮಸ್ಮಭ್ಯಂ ಧಾತು ಶರ್ಮ
ತುಭ್ಯಂ ।
ಅಹ್ರುತೋ ಮಹೋ ಧರುಣಾಯ ದೇವಾನ್ದಿವೀವ ಜ್ಯೋತಿಃ ಸ್ವಮಾ
ಮಿಮೀಯಾಃ ॥ ೨ ॥

ಪದಪಾಠಃ

ತನೂಃ । ತೇ । ವಾಜಿನ್ । ತನ್ವಂ । ನಯಂತೀ । ವಾಮಂ । ಅಸ್ಮಭ್ಯಂ । ಧಾತು । ಶರ್ಮ । ತುಭ್ಯಂ ।
ಅಹ್ರುತಃ । ಮಹಃ । ಧರುಣಾಯ । ದೇವಾನ್ । ದಿವಿ ಇವ । ಜ್ಯೋತಿಃ । ಸ್ವಂ । ಆ । ಮಿಮೀಯಾಃ ॥

ಸಾಯಣಭಾಷ್ಯಂ

ಹೇ ವಾಜಿನ್ನೇತನ್ನಾಮಕ ಪುತ್ರ ತೇ ತವ ತನ್ವಂ ಶರೀರಂ ನಯಂತೀ ಸ್ವಶರೀರಂ ಪ್ರಾಪಯಂತೀ ತನೂರಿಯಂ ಪೃಥಿವೀ । ಉಭಯೋರಪಿ ಪಾರ್ಥಿವತ್ವಾತ್ತವ ಶರೀರಸ್ಯ ಪೃಥಿವೀಪ್ರಾಪ್ತೌ ಸತ್ಯಾಂ ತಸ್ಯಾಸ್ತವ ಶರೀರನಯನಂ ಯುಕ್ತಂ । ತಾದೃಶೀ ಪೃಥಿವೀ ವಾಮಂ ವನನೀಯಂ ಧನಮಸ್ಮಭ್ಯಂ ಧಾತು । ದಧಾತು । ಶರ್ಮ ಚ ಸುಖಂ ತುಭ್ಯಂ ಧಾತು । ದಧಾತು । ಸ ತ್ವಮಹ್ರುತೋಽನವಪತಿತಃ ಸನ್ ಮಹೋ ಮಹತೋ ದೇವಾಂಸ್ತವ ಕಾರಣಭೂತಾನ್ ದಿವೀವ ಜ್ಯೋತಿರ್ದ್ಯುಲೋಕೇ ವರ್ತಮಾನಂ ಸೂರ್ಯಂ ಚ । ಇವಶಬ್ದಶ್ಚಾರ್ಥೇ ನಿಪಾತಾನಾಮನೇಕಾರ್ಥತ್ವಾತ್ । ತಂ ಚ ಸ್ವಂ ತವ ಸ್ವಭೂತಮಾ ಮಿಮೀಯಾಃ । ಆವಿಶ ॥

ಪ್ರತಿಪದಾರ್ಥ

ವಾಜಿ—ಎಲೈ ವಾಜಿಸಂಜ್ಞಕನಾದ ಪುತ್ರನೇ । **ತೇ**—ನಿನ್ನ । **ತನ್ವಂ**—ಶರೀರವನ್ನು । **ನಯಂತೀ**—ವಹಿಸುವ । **ತನೂಃ**—ಈ ಪೃಥ್ವಿಯು । **ವಾಮಂ**—ಆಕರ್ಷಕವಾದ ಧನವನ್ನು । **ಅಸ್ಮಭ್ಯಂ**—ನಮಗೆ । **ಧಾತು**—ಕೊಡಲಿ । **ತುಭ್ಯಂ**—ನಿನಗೆ । **ಶರ್ಮ**—ಸುಖವನ್ನು ಕೊಡಲಿ । **ಅಹ್ರುತಃ**—ಎಲ್ಲಿಯೂ ಎಡರು ಬೀಳದೆ । **ಧರುಣಾಯ**—ನಿನ್ನ ಸ್ಥಿರವಾದ ಧಾರಣೆಗಾಗಿ । **ಮಹಃ**—ಮಹಾತ್ಮರಾದ । **ದೇವಾನ್**—ದೇವತೆಗಳನ್ನೂ । **ದಿವೀವ**—ದ್ಯುಲೋಕದಲ್ಲಿ । **ಜ್ಯೋತಿಃ**—ಆದಿತ್ಯನನ್ನೂ । **ಸ್ವಂ**—ನಿನ್ನ ಸ್ವಯಂರೂಪವನ್ನೂ **ಆ ಮಿಮೀಯಾಃ**—ಪ್ರವೇಶಿಸು.

ಭಾವಾರ್ಥ

ಎಲೈ ವಾಜಿಸಂಜ್ಞಕನಾದ ಪುತ್ರನೇ, ನಿನ್ನ ಶರೀರವನ್ನು ವಹಿಸುವ ಈ ಪೃಥ್ವಿಯು ನಮಗೆ ಆಕರ್ಷಕವಾದ ಧನವನ್ನು ಕೊಡಲಿ. ನಿನಗೆ ಸುಖವನ್ನು ಕೊಡಲಿ. ನೀನು ಎಲ್ಲಿಯೂ ಎಡರುಬೀಳದೆ ನಿನ್ನ ಸ್ಥಿರವಾದ ಧಾರಣೆಗಾಗಿ ಮಹಾತ್ಮರಾದ ದೇವತೆಗಳನ್ನೂ, ದ್ಯುಲೋಕಸ್ಥನಾದ ಆದಿತ್ಯನನ್ನೂ ಮತ್ತು ನಿನ್ನ ಸ್ವಯಂರೂಪವನ್ನೂ ವ್ರವೇಶಿಸು.

English Translation

May this body (the earth) conveying your body; Vajin, give precious wealth to us and hapiness to you; and do you, without stumbling, enter among the great gods for their support; and the light that is in heaven (the sun) and your own (light).

ಸಂಹಿತಾಪಾಠಃ

ವಾಜ್ಯ॑ಸಿ ವಾಜಿನೇ॑ನಾ ಸುವೇ॒ನೀ॒ಃ ಸು॒ವಿ॒ತಃ ಸ್ತೋ॒ಮಂ ಸು॒ವಿ॒ತೋ॒ ದಿವಂ॑ ಗಾಃ ।
ಸು॒ವಿ॒ತೋ॒ ಧರ್ಮ॑ ಪ್ರಥ॒ಮಾನು॑ ಸ॒ತ್ಯಾ ಸು॒ವಿ॒ತೋ॒ ದೇ॒ವಾನ್ತ್ಸ॒ವಿ॒ತೋ॒ಽನು॑
ಪತ್ಮ ॥ ೩ ॥

ಪದಪಾಠಃ

ವಾ॒ಜೀ॒ । ಅ॒ಸಿ॒ । ವಾ॒ಜಿ॒ನೇ॒ನ । ಸು॒ऽವೇ॒ನೀ॒ಃ । ಸು॒ವಿ॒ತಃ । ಸ್ತೋ॒ಮಂ । ಸು॒ವಿ॒ತಃ । ದಿವಂ । ಗಾಃ ।
ಸು॒ವಿ॒ತಃ । ಧರ್ಮ॑ । ಪ್ರ॒ಥ॒ಮಾ । ಅನು॑ । ಸ॒ತ್ಯಾ । ಸು॒ವಿ॒ತಃ । ದೇ॒ವಾನ್ । ಸು॒ವಿ॒ತಃ । ಅನು॑ । ಪತ್ಮ ॥ ೩ ॥

ಸಾಯಣಭಾಷ್ಯಂ

ಹೇ ಪುತ್ರ ತ್ವಂ ವಾಜಿನೇನಾನ್ನರಸೇನ ಬಲೇನ ವಾ ವಾಜ್ಯಸಿ । ತದ್ವಾನ್ಭವಸಿ । ಕೀದೃಶಸ್ತ್ವಂ । ಸುವೇನೀಃ । ಸುಷ್ಠು ಕಾಂತಃ ॥ ವಿ ಗತ್ಯಾದಿಷು ॥ ತಾದೃಶಸ್ತ್ವಂ ಸುವಿತಃ ಸುಷ್ಠು ಪ್ರೇರಿತಸ್ತ್ವಂ ಸ್ತೋಮಂ ಪೂರ್ವಂ ತ್ವಯಾ ಕೃತಂ ಸ್ತೋತ್ರಂ ತದಭಿಮಾನಿದೇವಮನು ಗಾಃ । ಅನ್ವಗಾಃ । ಅನುಗಚ್ಛ । ತಥಾ ಸುವಿತೋ ದಿವಂ ಗಾಃ । ತಥಾ ಸುವಿತೋ ಧರ್ಮತ್ವಯಾ ಸಂಪಾದಿತಾನಿ ಧರ್ಮಾಣ್ಯನುಗಚ್ಛ । ಕೀದೃಶಾನಿ । ಪ್ರಥಮಾ ಮುಖ್ಯಾನಿ ಸತ್ಯಾ ಸತ್ಯಫಲಾನಿ । ತಥಾ ಸುವಿತೋ ದೇವಾನಿಂದ್ರಾದೀನ್ । ತಥಾ ಸುವಿತಃ ಪತ್ಮ ಪತಜ್ಜ್ಯೋತಿರಾದಿತ್ಯಾಖ್ಯಮನು ಗಾಃ ॥

ಪ್ರತಿಪದಾರ್ಥ

(ಎಲೈ ಪುತ್ರನೇ) **ವಾಜಿನೇನ**—ಅನ್ನರಸದಿಂದ । **ವಾಜೀ ಅಸಿ**—ನೀನು ಶಕ್ತಿಯುತನಾಗಿದ್ದೀಯೆ । **ಸುವೇನೀಃ**—ಆಕರ್ಷಕವಾದ ರೂಪವನ್ನು ಹೊಂದಿದ್ದೀಯೆ । **ಸುವಿತಃ**—ಆದರಿಂದ ಪ್ರೇರಿತನಾಗಿ । **ಸ್ತೋಮಂ**—ನಿನ್ನ ಸ್ತುತಿಕರ್ಮದ ಗುರಿಯ ಕಡೆಗೆ । **ಅನು ಗಾಃ**—ಅನುಸರಿಸಿ ಹೋಗು । **ಸುವಿತಃ**—ಅಲ್ಲಿಂದ ಉತ್ತೇಜಿತನಾಗಿ । **ದಿವಂ**—ದ್ಯುಲೋಕಕ್ಕೆ । **ಗಾಃ**—ಹೋಗು । **ಸುವಿತಃ**—ಅಲ್ಲಿ ಪ್ರೇರಿತನಾಗಿ । **ಪ್ರಥಮಾ**—ಶ್ರೇಷ್ಠವಾದವೂ । **ಸತ್ಯಾ**—ಸತ್ಯಾತ್ಮಕವೂ ಆದ । **ಧರ್ಮ**—ನಿನ್ನಿಂದ ಮಾಡಲ್ಪಟ್ಟ ಧರ್ಮಾನುಸಾರವಾಗಿ ನಡೆ । **ಸುವಿತಃ**—ಆ ಧರ್ಮದಿಂದ ಪ್ರೇರಿತನಾಗಿ । **ದೇವಾನ್**—ಇಂದ್ರಾದಿ ದೇವತೆಗಳನ್ನು ಸೇರು । **ಸುವಿತಃ**—ಅಲ್ಲಿಂದಲೂ ಪ್ರೇರಿತನಾಗಿ । **ಪತ್ಮ**—ಆದಿತ್ಯರೂಪದ ಜ್ಯೋತಿಯನ್ನು । **ಅನು**—ಅನುಸರಿಸಿ ಹೋಗು.

ಭಾವಾರ್ಥ

ಎಲೈ ಪುತ್ರನೇ, ನೀನು ಅನ್ನರಸದಿಂದ ಶಕ್ತಿಯುತನಾಗಿದ್ದೀಯೆ. ಆಕರ್ಮಕವಾದ ರೂಪವನ್ನು ಹೊಂದಿದ್ದೀಯೆ. ಆದರಿಂದ ಪ್ರೇರಿತನಾಗಿ ನೀನು ಹಿಂದೆ ಮಾಡಿದ ಸ್ತುತಿಕರ್ತನ ಗುರಿಯನ್ನು ಅನುಸರಿಸಿ ಹೋಗು ಅಲ್ಲಿಂದ ಉತ್ತೇಜಿತನಾಗಿ ದ್ಯುಲೋಕಕ್ಕೆ ಹೋಗು. ಅಲ್ಲಿ ಪ್ರೇರಿತನಾಗಿ ಶ್ರೇಷ್ಠವೂ, ಸತ್ಯಾತ್ಮಕವೂ ಆದ ಮತ್ತು ನಿನ್ನಿಂದ ಆಚರಿಸಲ್ಪಟ್ಟ ಧರ್ಮಾನುಸಾರವಾಗಿ ನಡೆ. ಆ ಧರ್ಮದಿಂದ ಪ್ರೇರಿತನಾಗಿ ಇಂದ್ರಾದಿ ದೇವತೆಗಳನ್ನು ಸೇರು. ಅಲ್ಲಿಯೂ ಪ್ರೇರಿತನಾಗಿ ಆದಿತ್ಯರೂಪದ ಜ್ಯೋತಿಯನ್ನು ಸೇರು.

English Translation

You are, Vajin, (strong) through food; you (are) well-beloved: urged thereto follow (the object of your) praise: urged thereto proceed to heaven: urged thereto pursue the duties that are the most important and sure of reward: urged thereto follow the gods: urged thereto follow (the light), descending (from heaven).

ಸಂಹಿತಾಪಾಠಃ

ಮಹಿಮ್ನ ಏಷಾಂ ಪಿತರಶ್ಚನೇಶಿರೇ ದೇವಾ ದೇವೇಷ್ವದಧುರಪಿ ಕ್ರತುಂ ।
ಸಮವಿವ್ಯಚುರುತ ಯಾನ್ಯತ್ಪಿಷ್ಟುರೈಷಾಂ ತನೂಷು ನಿ ವಿವಿಶ್ರುಃ ಪುನಃ ॥೪॥

ಪದಪಾಠಃ

ಮಹಿಮ್ನಃ । ಏಷಾಂ । ಪಿತರಃ । ಚನ । ಈಶಿರೇ । ದೇವಾಃ । ದೇವೇಷು । ಅದಧುಃ । ಅಪಿ । ಕ್ರತುಂ ।
ಸಂ । ಅವಿವ್ಯಚುಃ । ಉತ । ಯಾನಿ । ಅತ್ಪಿಷುಃ । ಆ । ಏಷಾಂ । ತನೂಷು । ನಿ । ವಿವಿಶ್ರುಃ । ಪುನರಿತಿ ॥

ಸಾಯಣಭಾಷ್ಯಂ

ಪಿತರಶ್ಚನಾಸ್ಮತ್ಪಿತರೋಽಪ್ಯಂಗಿರಸ ಏಷಾಂ ದೇವಾನಾಂ ಮಹಿಮ್ನೋ ಮಹತ್ತ್ವಸ್ಯೇಶಿರೇ । ಈಶ್ವರಾ ಅಭವನ್ । ತೇ ದೇವಾ ಅಪಿ ದೇವತ್ವಂ ಪ್ರಾಪ್ತಾ ಅಂಗಿರಸೋ ದೇವೇಷ್ವಿಂದ್ರಾದಿಷು ಕ್ರತುಂ ಸಂಕಲ್ಪಮದಧುಃ । ಧೃತವಂತಃ । ಉತಾಪಿ ಚ ಯಾನಿ ತೇಜಾಂಸ್ಯತ್ಪಿಷುರ್ದೀಪ್ಯಂತೇ ತಾನಿ ಸಮವಿವ್ಯಚುಃ । ಸಂಗತಾ ಅಸನ್ । ಏಷಾಂ ದೇವಾನಾಂ ತನೂಷು ಶರೀರೇಷು ನಿ ವಿವಿಶ್ರುಃ । ನಿವಿಶಂತಿ ಪಿತರೋಽಂಗಿರಸಃ । ಅತಸ್ತ್ವಮಪಿ ತಥಾ ಕುರ್ವಿತ್ಯರ್ಥಃ ॥

ಪ್ರತಿಪದಾರ್ಥ

ಪಿತರಶ್ಚನ—ನಮ್ಮ ಪಿತೃಗಳಾದ ಅಂಗಿರಸ್ಸುಗಳು । **ಏಷಾಂ**—ಈ ದೇವತೆಗಳ । **ಮಹಿಮ್ನಃ**—ಮಾಹಾತ್ಮ್ಯಕ್ಕೆ । **ಈಶಿರೇ**—ಪ್ರಭುಗಳಾದರು । **ದೇವಾಃ**—ದೇವತ್ವವನ್ನು ಪಡೆದ ಅವರು । **ದೇವೇಷು ಅಪಿ**—

ಇಂದ್ರಾದಿ ದೇವತೆಗಳಲ್ಲಿಯೂ । **ಕ್ರತುಂ**—ತಮ್ಮ ಸಂಕಲ್ಪವನ್ನು । **ಅದಧುಃ**—ವಹಿಸಿದರು (ತಮ್ಮ ಸಂಕಲ್ಪವೇ ನೆರವೇರುವಂತೆ ಮಾಡಿಕೊಂಡರು) । **ಉತ**—ಮತ್ತು । **ಯೋನಿ**—ಯಾವ ತೇಜಸ್ಸುಗಳು । **ಅತ್ವಿಷುಃ**—ಪ್ರಕಾಶಿಸುವವೋ ಅವನ್ನು । **ಸಮವಿವ್ಯಚುಃ**—ಸೇರಿ ಅವುಗಳೊಂದಿಗೆ ಐಕ್ಯರಾದರು । **ವಿಷಾಂ**—ಈ ದೇವತೆಗಳ । **ತನೂಷು**—ಶರೀರಗಳಲ್ಲಿ । **ಪುನಃ**—ತಿರುಗಿಯೂ । **ನಿ ವಿವಿಶುಃ**—ಪ್ರವೇಶಿಸಿದ್ದಾರೆ.

ಭಾವಾರ್ಥ

ನಮ್ಮ ಪಿತೃಗಳಾದ ಅಂಗಿರಸ್ಸುಗಳು ದೇವತೆಗಳಿಗಿಂತಲೂ ಅಧಿಕವಾದ ಮಾಹಾತ್ಮ್ಯವನ್ನು ಪಡೆದು ಅವರಿಗೆಲ್ಲ ಪ್ರಭುಗಳಾದರು. ದೇವತ್ವವನ್ನು ಪಡೆದ ಅವರು ಇಂದ್ರಾದಿ ದೇವತೆಗಳಲ್ಲಿಯೂ ತಮ್ಮ ಸಂಕಲ್ಪವೇ ನೆರವೇರುವಂತೆ ಮಾಡಿಕೊಂಡರು ಮತ್ತು ಸಕಲ ತೇಜಸ್ಸುಗಳನ್ನೂ ಪ್ರವೇಶಿಸಿದರು. ಪುನಃ ದೇವತೆಗಳ ಶರೀರದಲ್ಲಿ ಪ್ರವೇಶಿಸಿದರು.

English Translation

Our progenitors (the Angirasas) were lords over the might of those (divinities), they having become gods imposed their will upon the gods; they attained also (the radiances) which shone forth and they again entered the bodies of those (gods).

ಸಂಹಿತಾಪಾಠಃ

ಸಹೋಭಿರ್ವಿಶ್ವಂ ಪರಿ ಚಕ್ರಮೂ ರಜಃ ಪೂರ್ವಾ ಧಾಮಾನ್ಯಮಿತಾ ಮಿಮಾನಾಃ ।
ತನೂಷು ವಿಶ್ವಾ ಭುವನಾ ನಿ ಯೇಮಿರೇ ಪ್ರಾಸಾರಯಂತ ಪುರುಧ ಪ್ರಜಾ ಅನು ॥ ೫ ॥

ಪದಪಾಠಃ

ಸಹಃಽಭಿಃ । ವಿಶ್ವಂ । ಪರಿ । ಚಕ್ರಮುಃ । ರಜಃ । ಪೂರ್ವಾ । ಧಾಮಾನಿ । ಅಮಿತಾ । ಮಿಮಾನಾಃ ।
ತನೂಷು । ವಿಶ್ವಾ । ಭುವನಾ । ನಿ । ಯೇಮಿರೇ । ಪ್ರ । ಅಸಾರಯಂತ । ಪುರುಧ । ಪ್ರಽಜಾಃ । ಅನು ॥

ಸಾಯಣಭಾಷ್ಯಂ

ಮದೀಯಾಃ ಪಿತರಃ ಸಹೋಭಿರ್ಬಲೈಃ ಸ್ವೀಯೈರ್ವಿಶ್ವಂ ಸರ್ವಂ ರಜೋ ಲೋಕಂ । ಲೋಕಾ ರಜಾಂಸ್ಯುಚ್ಯಂತ ಇತಿ ನಿರುಕ್ತಂ । ಪೂರ್ವಾ ಪೂರ್ವಾಣಿ ಧಾಮಾನಿ ಸ್ಥಾನಾನ್ಯಮಿತಾನ್ಯೈರಮಿತಾನಿ ಮಿಮಾನಾಃ ಪರಿಚ್ಛಿಂದಂತಃ ಪರಿಚಕ್ರಮುಃ । ಪರ್ಯಕ್ರಾಮನ್ । ಕಿಂಚ ತಥಾ ಕುರ್ವಂತೋ ವಿಶ್ವಾ ಸರ್ವಾಣಿ ಭುವನಾ ಭೂತಜಾತಾನಿ ನಿ ಯೇಮಿರೇ । ನಿಯಮಿತವಂತಃ । ಕಿಂ ಚ ಪುರುಧ ಪುರುಧಾ ಬಹು.

ಪ್ರಕಾರಂ ಪ್ರಜಾ ಅನು ಜ್ಯೋತೀಂಷ್ಯುದಕಾನಿ ವಾ ಪ್ರಾಸಾರಯಂತ। ಪ್ರಸಾರಿತವಂತಃ। ಅಸ್ಮತ್ಪಿತರಃ ಪೂರ್ವೇಽಂಗಿರಸಃ ಸ್ವಸಾಮರ್ಥ್ಯೇನ ಸರ್ವಂ ಲೋಕಂ ವ್ಯಾಪ್ಯ ಪುರಾತನಾನಿ ಗ್ರಹನಕ್ಷತ್ರಾದೀನಿ ಪರಿಚ್ಛಿದ್ಯ ಸರ್ವಭೂತಾನಿ ನಿಯಮ್ಯ ಪ್ರಜಾ ಅನೂದಕಾನಿ ತೇಜಾಂಸಿ ವಾ ಪ್ರಸಾರಿತವಂತ ಇತ್ಯರ್ಥಃ। ಅತಸ್ತ್ವಮಪ್ಯೇವಂ ಕುರ್ವಿತಿ ಭಾವಃ ॥

ಪ್ರತಿಪದಾರ್ಥ

(ಪಿತರಃ—ನನ್ನ ಪಿತೃಗಳಾದ ಅಂಗಿರಸ್ಸುಗಳು। ಅಮಿತಾ—ಹಿಂದೆ ಯಾರಿಂದಲೂ ಅಳೆಯಲ್ಪಡದ। ಪೂರ್ವಾ—ಪುರಾತನಗಳಾದ। ಧಾಮಾನಿ—ಸ್ಥಾನಗಳನ್ನು। ಸಹೋಭಿಃ—ತಮ್ಮ ಶಕ್ತಿಗಳಿಂದ। ಮಿಮಾನಾಃ—ಅಳೆಯುತ್ತ। ವಿಶ್ವಂ ರಜಃ—ಸಕಲ ಲೋಕಗಳನ್ನೂ। ಪರಿ ಚಕ್ರಮುಃ—ಸಂಚರಿಸುತ್ತಾರೆ। ವಿಶ್ವಾ—ಸಕಲವಾದ। ಭುವನಾ—ಪ್ರಾಣಿಗಳನ್ನೂ। ತನೂಷು—ಆಯಾ ರೂಪಗಳಿಗನುಸಾರವಾಗಿ। ನಿ ಯೇಮಿರೇ—ನಿಯಮಿಸುತ್ತಾರೆ। ಪುರುಧ—ಅನೇಕ ಪ್ರಕಾರವಾಗಿ। ಪ್ರಜಾಃ—ಪ್ರಜೆಗಳನ್ನು। ಅನು ಪ್ರಸಾರಯಂತ—ವಿಭಾಗಮಾಡಿ ಲೋಕದಲ್ಲಿ ಹರಡಿದ್ದಾರೆ.

ಭಾವಾರ್ಥ

ನಮ್ಮ ಪಿತೃಗಳಾದ ಅಂಗಿರಸ್ಸುಗಳು ಹಿಂದೆ ಯಾರಿಂದಲೂ ಅಳೆಯಲ್ಪಡದ ಪುರಾತನ ಸ್ಥಾನಗಳನ್ನು ತಮ್ಮ ಶಕ್ತಿಗಳಿಂದ ಅಳೆಯುತ್ತ ಸಕಲ ಲೋಕಗಳನ್ನೂ ಸಂಚರಿಸುತ್ತಾರೆ. ಸಕಲ ಪ್ರಾಣಿಗಳನ್ನೂ ಆಯಾ ರೂಪಗಳಿಗನುಸಾರವಾಗಿ ನಿಯಮಿಸುತ್ತಾರೆ. ಅನೇಕ ಪ್ರಕಾರವಾಗಿ ಪ್ರಜೆಗಳನ್ನು ವಿಭಾಗಮಾಡಿ ಲೋಕದಲ್ಲಿ ಹರಡಿದ್ದಾರೆ

English Translation

By their powers they traversed the whole world, measuring the ancient divisions (till then) unmeasured : they restricted all existent beings to their proper forms ; they distributed in many directions (light) among the people.

ಸಂಹಿತಾಪಾಠಃ

ದ್ವಿಧಾ ಸೂನವೋಽಸುರಂ ಸ್ವರ್ವಿದಮಾಸ್ಥಾಪಯಂತ ತೃತೀಯೇನ ಕರ್ಮಣಾ।
ಸ್ವಾಂ ಪ್ರಜಾಂ ಪಿತರಃ ಪಿತ್ರ್ಯಂ ಸಹ ಆವರೇಷ್ವದಧುಸ್ತಂತುಮಾತತಂ ॥ ೬ ॥

ಪದಪಾಠಃ

ದ್ವಿಧಾ। ಸೂನವಃ। ಅಸುರಂ। ಸ್ವಃಽವಿದಂ। ಆ। ಅಸ್ಥಾಪಯಂತ। ತೃತೀಯೇನ। ಕರ್ಮಣಾ।
ಸ್ವಾಂ। ಪ್ರಽಜಾಂ। ಪಿತರಃ। ಪಿತ್ರ್ಯಂ। ಸಹಃ। ಆ। ಅವರೇಷು। ಅದಧುಃ। ತಂತುಂ। ಆಽತತಂ ॥

ಸಾಯಣಭಾಷ್ಯಂ

ಸೂನವ ಆದಿತ್ಯಸ್ಯ ಪುತ್ರಾ ದೇವಾ ಅಂಗಿರಸಃ। ದೇವಾನಾಂ ಹ್ಯೇತತ್ಪರಮಂ ಜನಿತ್ರಂ ಯತ್ಸೂರ್ಯ ಇತಿ ಪ್ರದರ್ಶಿತತ್ವಾದಾದಿತ್ಯಸ್ಯ ಸೂನವ ಇತಿ ಗಮ್ಯತೇ। ಅಸುರಂ ಬಲವಂತಂ ಸ್ವರ್ವಿದಂ

सर्वज्ञं स्वर्गस्य लोकस्य वादित्यं तृतीयेन कर्मणा प्रजोत्पत्त्याख्येन। ब्रह्मचर्येणर्षिभ्यो यज्ञेन देवेभ्यः प्रजया पितृभ्यः। तै. सं. ६-३-१०-५। इति श्रुतेः प्रजोत्पादनस्य तृतीयकर्मत्वं। तेनादित्यं द्विधास्थापयंत। द्विप्रकारमास्थापयंति। उदितं चास्तमितं च कुर्वंति। उद्यन्नद्य मित्रमह आरोहन्नुत्तरां दिवम्। हृद्रोगं मम सूर्य हरिमाणं च नाशय। शुकेषु मे हरिमाणं रोपणाकासु दध्मसि। अथो हारिद्रवेषु मे हरिमाणं नि दध्मसि। तै. सं. १-२-१३-१। इति मंत्रस्य ब्राह्मणेऽसौ वा आदित्य उद्यन्नुद्यन्भद्र एष निवोरोचन्निगाभः। तै. सं. ५-५-६-६। इति श्रुतत्वाद्देवानामादित्यस्य द्विःस्थापनमुदयास्तमयैकरणमिति गम्यते। किंच पितरो मदीया अंगिरसः स्वां प्रजां। उत्पाद्येति शेषः। पित्र्यं सहः पितुरादित्यस्य संबंधिनमुपरराभिभवक्षमं बलमवरेष्वादधुः। निकृष्टेषु स्वप्रजाभूतेषु मनुष्येषु स्थापितवंतः। यथा पित्र्यं धनं सम्यक् परिरक्ष्य स्वपुत्रेभ्यः प्रयच्छंति तद्वत्पितुरादित्यस्य प्रकाशादिबलं मनुष्येषु न्यदधुरित्यर्थः। किंच तंशुं प्रजामातंतं विततं कृतवंत इति शेषः। पुत्रपौत्रादिरूपेणानवच्छिन्नां प्रजामित्यर्थः। अयं ह्यातततंतुर्यत्प्रजेति ब्राह्मणं। प्रजातंतुं मा व्यवच्छेत्सीः। तै. आ. २-८८-८। इति च। तंतुं तन्वन्। ऋ. १०.५३-६। इत्यस्य ब्राह्मणं प्रजा वै तंतुः। ऐ. ब्रा. ३-३६। इति॥

प्रतिपदार्थ

सूनवः—ಆದಿತ್ಯಪುತ್ರರಾದ ಅಂಗಿರಸ್ಸುಗಳು। **तृतीयेन कर्मणा**—ಪ್ರಜೋತ್ಪತ್ತಿರೂಪವಾದ ಮೂರನೆಯ ಕರ್ಮದಿಂದ। **असुरं**—ಶಕ್ತಿಯುತನಾದವನೂ। **स्वर्विदं**—ದ್ಯುಲೋಕಕ್ಕೆ ಆಶ್ರಯನೂ ಆದ ಆದಿತ್ಯನನ್ನು। **द्विधा**—ಉದಯಾಸ್ತಮಯರೂಪವಾದ ಎರಡು ಪ್ರಕಾರವಾಗಿ। **अ स्थापयंत**—ಸ್ಥಾಪಿಸಿದ್ದಾರೆ। **पितरः**—ನಮ್ಮ ಪಿತೃಗಳಾದ ಅಂಗಿರಸ್ಸುಗಳು। **स्वां प्रजां**—ತಮ್ಮ ಪ್ರಜೆಗಳನ್ನು ಉತ್ಪನ್ನಮಾಡಿ। **अवरेषु**—ನಿಕೃಷ್ಟರಾದ ಆ ಮಾನವರಲ್ಲಿಯೂ ಸಹ। **पित्र्यं सहः**—ಆದಿತ್ಯನ ಶಕ್ತಿಯನ್ನು। **अ दधुः**—ಸ್ಥಾಪಿಸಿದ್ದಾರೆ। **तंशुं**—ಪ್ರಜಾಸಂತತಿಯನ್ನು। **अ ततं**—ವಿಸ್ತಾರವಾಗಿ ಬೆಳೆಸಿದ್ದಾರೆ.

ಭಾವಾರ್ಥ

ಆದಿತ್ಯಪುತ್ರರಾದ ಅಂಗಿರಸ್ಸುಗಳು ಪ್ರಜೋತ್ಪತ್ತಿರೂಪವಾದ ತಮ್ಮ ಮೂರನೆಯ ಕರ್ಮದಿಂದ ಶಕ್ತಿಯುತನೂ ದ್ಯುಲೋಕಕ್ಕೆ ಆಶ್ರಯನೂ ಆದ ಆದಿತ್ಯನನ್ನು ಉದಯಾಸ್ತಮಯರೂಪವಾದ ಎರಡು ಪ್ರಕಾರವಾಗಿ ಸ್ಥಾಪಿಸಿದ್ದಾರೆ. ನಮ್ಮ ಪಿತೃಗಳಾದ ಅಂಗಿರಸ್ಸುಗಳು ತಮ್ಮ ಪ್ರಜೆಗಳನ್ನು ಉತ್ಪನ್ನಮಾಡಿ ನಿಕೃಷ್ಟರಾದ ಆ ಮಾನವರಲ್ಲಿಯೂ ಸಹ ಆದಿತ್ಯನ ಶಕ್ತಿಯನ್ನು ಸ್ಥಾಪಿಸಿದ್ದಾರೆ. ಪ್ರಜಾಸಂತತಿಯನ್ನು ವಿಸ್ತಾರವಾಗಿ ಬೆಳೆಸಿದ್ದಾರೆ.

English Translation

The sons (of Aditya, the Angirasas), established by the third act of duty, the mighty, all-wise (sun) in his two-fold (condition of rising and setting) : our progenitors (having begotten) their own progeny, deposited

in the best (of them) the paternal strength, (making) an extended line (of progeny).

ವಿಶೇಷವಿಷಯಗಳು

ದೇವತೆಗಳೂ, ಅಂಗಿರಸ್ಸುಗಳೂ ಆದಿತ್ಯನ ಪುತ್ರರು ಹೇಗಾದರೆಂಬ ವಿಷಯದಲ್ಲಿ ಭಾಷ್ಯಕಾರರು- **ದೇವಾನಾಂ ಹ್ಯೇತತ್ಪರಮಂ ಜನಿತ್ರಂ ಯತ್ಸೂರ್ಯಃ** ಎಂಬ ಬ್ರಾಹ್ಮಣವಾಕ್ಯವನ್ನು ಉದಾಹರಿಸಿದಾರೆ. **ಅಸೌ ವಾ ಆದಿತ್ಯೋ ಬಹ್ಮ** ಎಂದು ಶ್ರುತಿವಾಕ್ಯವಿರುವುದರಿಂದ ದೇವತೆಗಳು ಬ್ರಹ್ಮಸ್ವರೂಪವಾದ ಆದಿತ್ಯನ ಪುತ್ರರೆಂದು ಹೇಳುವುದು ಸಹಜವಾಗಿದೆ.

ತೃತೀಯೇನ ಕರ್ಮಣಾ—ಪ್ರಜೋತ್ಪತ್ತಿಯೇ ಮೂರನೆಯ ಕರ್ಮವೆಂದು ಹೇಳುವುದು ರೂಢಿಯು. ಹೇಗೆಂದರೆ—

ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ ॥

(ತೈ. ಸಂ. ೬-೩-೧೦-೫)

ಎಂದು ತೈತ್ತಿರೀಯಸಂಹಿತೆಯಲ್ಲಿ ಹೇಳಿರುವಂತೆ ಬ್ರಾಹ್ಮಣನಾದವನು ಹುಟ್ಟುವಾಗಲೇ ಮೂರುವಿಧವಾದ ಋಣಗಳನ್ನು (ಸಾಲವನ್ನು ಅಥವಾ ಕರ್ತವ್ಯವನ್ನು) ಹೊತ್ತುಕೊಂಡೇ ಹುಟ್ಟುವನು. ಅವುಗಳನ್ನು ತೀರಿಸಬೇಕಾದರೆ ಯಜ್ಞವನ್ನು ಮಾಡಿ ದೇವತೆಗಳ ವಿಷಯದಲ್ಲಿ ನೆರವೇರಿಸಬೇಕಾದ ಕರ್ತವ್ಯವನ್ನು (ಋಣವನ್ನು) ತೀರಿಸಬೇಕು. ವೇದಾಧ್ಯಯನ ಮಾಡಿ ಋಷಿಗಳ ಋಣವನ್ನು ತೀರಿಸಬೇಕು. ಧರ್ಮಪ್ರಜೋತ್ಪಾದನೆಯಿಂದ ಪಿತೃಗಳ ಋಣವನ್ನು ತೀರಿಸಬೇಕು. ಆದ್ದರಿಂದ ಯಜ್ಞ, ವೇದಾಧ್ಯಯನ, ಪ್ರಜೋತ್ಪಾದನ ಎಂಬ ಮೂರುವಿಧವಾದ ಕರ್ತವ್ಯಕರ್ಮಗಳಲ್ಲಿ ಪ್ರಜೋತ್ಪಾದನೆಯೇ ಮೂರನೆಯ ಕರ್ಮವೆಂದು ಇಲ್ಲಿ ಹೇಳಿದೆ.

ಆ ಅಸ್ಥಾಪಯಂತ-ದ್ವಿಧಾ ದ್ವಿಪ್ರಕಾರಮಾಸ್ಥಾಪಯಂತಿ । ಉದಿತಂ ಚಾಸ್ತಮಿತಂ ಚ ಕುರ್ವಂತಿ॥ ದೇವತೆಗಳು ಎರಡುವಿಧವಾಗಿ ಸ್ಥಾಪನೆಮಾಡಿದರು ಎಂದರೆ ಸೂರ್ಯನಿಗೆ ಉದಯ, ಅಸ್ತಮಯಗಳೆಂಬ ಎರಡುವಿಧ ಕರ್ಮಗಳನ್ನು ಗೊತ್ತುಮಾಡಿದರು ಎಂದಭಿಪ್ರಾಯವು. ಈ ವಿಷಯದಲ್ಲಿ— **ಉದ್ಯಾಭಂ ಚ ನಿಗ್ರಾಭಂ ಚ ಬ್ರಹ್ಮ ದೇವಾ ಅವೀವೃಧನ್** (ತೈ. ಸಂ. ೧-೧-೧೩-೧); **ಅಸೌ ವಾ ಆದಿತ್ಯ ಉದ್ಯನ್ನುದ್ಯಾಭ ಏಷ ನಿಮ್ರೋಚನ್ನಿಗ್ರಾಭಃ** (ತೈ. ಸಂ. ೫.೪-೬-೬) ಎಂಬ ಎರಡು ಶ್ರುತಿವಾಕ್ಯಗಳನ್ನು ಭಾಷ್ಯಕಾರರು ಉದಾಹರಿಸಿದಾರೆ.

ತಂತುಂ ಅತತಂ—ಇಲ್ಲಿ ತಂತುವೆಂದರೆ ಪ್ರಜಾಸಂತತಿ. ತಂತುವು (ದಾರವು) ಯಾವರೀತಿ ಎಡಬಿಡದೆ ಅವಿಚ್ಛಿನ್ನವಾಗಿರುವುದೋ ಅದೇರೀತಿ ಪುತ್ರಪೌತ್ರಾದಿ ಸಂತತಿಯೂ ಇರುವುದರಿಂದ ಪ್ರಜಾಸಂತತಿಯನ್ನು ತಂತುವೆಂದು ಕರೆಯುವರು. ಈ ವಿಧವಾದ ಅವಿಚ್ಛಿನ್ನವಾದ ಪ್ರಜಾಸಂತತಿಯನ್ನು ವಿಸ್ತಾರವಾಗುವಂತೆ ಎಂದರೆ ಅಭಿವೃದ್ಧಿಯಾಗುವಂತೆ ಮಾಡಿದರು ಎಂದಭಿಪ್ರಾಯವು.

ಸಂಹಿತಾಪಾಠಃ

ನಾವಾ ನ ಕ್ಷೋದಃ ಪ್ರದಿಶಃ ಪೃಥಿವ್ಯಾಃ ಸ್ವಸ್ತಿಭಿರತಿ ದುರ್ಗಾಣಿ ವಿಶ್ವಾ ।
ಸ್ವಾಂ ಪ್ರಜಾಂ ಬೃಹದುಕ್ಥೋ ಮಹಿತ್ವಾವರೇಷ್ವದಧ್ದಾದಾ ಪರೇಷು ॥ ೭ ॥

ಪದಪಾಠಃ

ನಾವಾ । ನ । ಕ್ಷೋದಃ । ಪ್ರ॒ದಿಶಃ । ಪೃಥಿವ್ಯಾಃ । ಸ್ವಸ್ತಿ॒ಭಿಃ । ಅತಿ । ದುಃ॒ಗಾನಿ । ವಿಶ್ವಾ ।
ಸ್ವಾಂ । ಪ್ರಜಾಂ । ಬೃಹತ್॑ಉಕ್ಥಃ । ಮಹಿ॒ತ್ವಾ । ಆ । ಅವರೇಷು । ಆದ॑ಧಾತ್ । ಆ । ಪರೇಷು ॥

ಸಾಯಣಭಾಷ್ಯಂ

ನಾವಾ ನೋದಕೋತ್ತರಣಸಾಧನೇನೇವ ಕ್ಷೋದ ಉದಕಂ ಯಥಾ ಮನುಷ್ಯಾ ನಾವೋದಕಮು. ತಿತರಂತಿ ಯಥಾ ವಾ ಸ್ವಸ್ತಿಭಿಃ ಕ್ಷೇಮೈರ್ವಿಶ್ವಾ ಸರ್ವಾಣಿ ದುರ್ಗಾಣಿ ದುಃಖೇನ ಗಂತವ್ಯಾನ್ಯತಿತರಂತಿ ತದ್ವದ್ಬೃಹದುಕ್ಥಃ ಸ್ವಾಂ ಪ್ರಜಾಂ ವಾಜಿನಂ ಮೃತಂ ಪುತ್ರಂ ಮಹಿಮ್ನಾ ಸ್ವಮಹತ್ತ್ವೇನಾವರೇಷ್ವಗ್ನ್ಯಾದಿಷ್ವಾದಧಾತ್ । ಕೃತವಾನ್ । ತದಾ ಪರೇಷು ದಿವ್ಯೇಷು ಸೂರ್ಯಾದಿಷ್ವಾದಧಾತ್। ಏವಮೃಷಿರ್ಮ್ಯತೇ ಸ್ವಯಮೇವ ವಾ ಸ್ವಾತ್ಮಾನಂ ಪರೋಕ್ಷೇಣಾಹ ॥

ಪ್ರತಿಪದಾರ್ಥ

ಪೃಥಿವ್ಯಾಃ—ಪೃಥಿವಿಯ । **ಪ್ರದಿಶಃ**—ನಾನಾ ದಿಕ್ಕುಗಳಿಗೆ ಹೋಗಿ ಸೇರಲು । **ಕ್ಷೋದಃ**—ದಾರಿಯಲ್ಲಿ ಸಿಕ್ಕುವ ಉದಕವನ್ನು । **ನಾವಾ ನ**—ದೋಣಿಯಿಂದ ದಾಟುವಂತೆಯೂ । **ಸ್ವಸ್ತಿಭಿಃ**—ಕಲ್ಯಾಣಗಳಿಂದ । **ವಿಶ್ವಾ**—ಸಮಸ್ತವಾದ । **ದುರ್ಗಾಣಿ ಅತಿ**—ದುಃಖಗಳನ್ನು ದಾಟುವಂತೆಯೂ। **ಬೃಹದುಕ್ಥಃ**—ಬೃಹದುಕ್ಥನೆಂಬ ಋಷಿಯು । **ಸ್ವಾಂ ಪ್ರಜಾಂ**—ಮೃತನಾದ ತನ್ನ ಪುತ್ರನನ್ನು । **ಮಹಿತ್ವಾ**—ತನ್ನ ಮಾಹಾತ್ಮ್ಯದಿಂದ । **ಅವರೇಷು**—ಪೃಥ್ವೀಸ್ಥವಾದ ಅಗ್ನ್ಯಾದಿ ತೇಜಸ್ಸುಗಳಲ್ಲಿ । **ಆ ದಧಾತ್**—ಸ್ಥಾಪಿಸಿದ್ದಾನೆ । **ಪರೇಷು ಆ**—ದ್ಯುಲೋಕಸ್ಥವಾದ ಆದಿತ್ಯಾದಿ ತೇಜಸ್ಸುಗಳಲ್ಲೂ ಸ್ಥಾಪಿಸಿದ್ದಾನೆ.

ಭಾವಾರ್ಥ

ಪೃಥಿವಿಯ ನಾನಾ ದಿಕ್ಕುಗಳಿಗೆ ಹೋಗಿ ಸೇರಲು ದಾರಿಯಲ್ಲಿ ಸಿಕ್ಕುವ ಉದಕವನ್ನು ದೋಣಿಯಿಂದ ದಾಟುವಂತೆಯೂ, ಕಲ್ಯಾಣಗಳಿಂದ ಸಕಲವಾದ ದುಃಖಗಳನ್ನೂ ದಾಟುವಂತೆಯೂ, ಬೃಹದುಕ್ಥನೆಂಬ ಋಷಿಯು ಮೃತನಾದ ತನ್ನ ಪುತ್ರನನ್ನು ತನ್ನ ಮಾಹಾತ್ಮ್ಯದಿಂದ ಪೃಥ್ವೀಸ್ಥವಾದ ಅಗ್ನ್ಯಾದಿ ತೇಜಸ್ಸುಗಳಲ್ಲಿ ಸ್ಥಾಪಿಸಿದ್ದಾನೆ. ದ್ಯುಲೋಕಸ್ಥವಾದ ಆದಿತ್ಯಾದಿ ತೇಜಸ್ಸುಗಳಲ್ಲಿಯೂ ಸ್ಥಾಪಿಸಿದ್ದಾನೆ.

English Translation

As men pass over the water to the several quarters of the earth in a ship; (as they pass over) all difficulties by the blessings (of fortune), Brihaduktha by his might has committed his own offspring to those on this side, and to those on the other side.

ಐವತ್ತೇಳನೆಯ ಸೂಕ್ತ

ಪೀಠಿಕೆ

ಈ ಮಂಡಲದ ೫೭ ನೆಯ ಸೂಕ್ತದಿಂದ ೬೦ ನೆಯ ಸೂಕ್ತದವರೆಗೆ ಇರುವ ೪ ಸೂಕ್ತಗಳಿಗೆ ಗೋಪಾಯನ ಪುತ್ರರಾದ ಬಂಧು ಮೊದಲಾದ ಸಹೋದರರು ಋಷಿಗಳು. ಇವರು ಇಕ್ಷ್ವಾಕುವಂಶದ ಅಸಮಾತಿ ಎಂಬ ರಾಜನಿಗೆ

ಪುರೋಹಿತರಾಗಿದ್ದರು. ಆ ರಾಜನು ಕೆಲವರ ದುರ್ಬೋಧನೆಗೆ ಒಳಗಾಗಿ ತನಗೆ ಪುರೋಹಿತರಾಗಿದ್ದ ಬಂಧು, ಸುಬಂಧು, ಶ್ರುತಬಂಧು, ವಿಪ್ರಬಂಧು ಎಂಬ ನಾಲ್ವರು ಸಹೋದರರನ್ನು ತ್ಯಜಿಸಿ ಮಾಯಾವಿದ್ಯೆಗಳಲ್ಲಿ ಕುಶಲರಾದ ಕಿಲಾತ ಮತ್ತು ಆಕುಲಿ ಎಂಬಿಬ್ಬರನ್ನು ನೇಮಿಸಿಕೊಂಡನು. ಇದರಿಂದ ಬಂಧು ಮೊದಲಾದ ಹಿಂದಿನ ಪುರೋಹಿತರಿಗೂ, ಕಿಲಾತಾಕುಲಿಗಳೆಂಬ ಹೊಸ ಪುರೋಹಿತರಿಗೂ ದ್ವೇಷವುಂಟಾಗಿ ಬಂಧು ಮೊದಲಾದ ನಾಲ್ವರಲ್ಲಿ ಒಬ್ಬನಾದ ಸುಬಂಧುವಿನ ಮರಣದಲ್ಲಿ ಪರ್ಯವಸಾನವನ್ನು ಹೊಂದಿತು. ಈ ವಿಷಯವನ್ನು ಭಾಷ್ಯಕಾರರು ಈ ಸೂಕ್ತದ ಪೀಠಿಕೆಯಲ್ಲಿ ಸೂಕ್ಷ್ಮವಾಗಿ ವಿವರಿಸಿರುವುದನ್ನು ನಾವು ಮುಂದೆ ವಿವರಿಸಿದೇವೆ. ಈಗ ಈವಿಷಯದಲ್ಲಿ ಶೌನಕರು ತಮ್ಮ ಬೃಹದ್ದೇವತಾ ಗ್ರಂಥದಲ್ಲಿ ಹೇಳಿರುವುದನ್ನು ವಿವರಿಸಲಾಗುವುದು.

ಸೂಕ್ತಮಾಖ್ಯಾನಸಂಯುಕ್ತಂ ವಕ್ತುಕಾಮಸ್ಯ ಮೇ ಶೃಣು ।
ಸಂಮೋಹನಾನ್ನಷ್ಟಸಂಜ್ಞಸ್ಯ ಶತ್ರುಣಾಭಿಹತಸ್ಯ ತು ॥ ೪೪ ॥

ಜೀವಾವೃತ್ತಿಃ ಸುಬಂಧೋರ್ವಾ ಯದಿ ವಾ ಮನಸಃ ಸ್ತವಃ ।
ರಾಜಾಸನಮಾತಿರೈಕ್ಷ್ವಾಕೋ ರಥಪ್ರೋಷ್ಠಃ ಪುರೋಹಿತಾನ್ ॥ ೪೫ ॥

ವ್ಯುದಸ್ಯ ಬಂಧುಪ್ರಭೃತೀನ್ ದ್ವೈಷದಾ ಯೇಽತ್ರಿಮಂಡಲೇ ।
ದ್ವೌ ಕಿರಾತಾಕುಲೀ ನಾಮ ತತೋ ಮಾಯಾವಿನೌ ದ್ವಿಜೌ ॥ ೪೬ ॥

ಅಸಮಾತಿಃ ಪುರೋಽಧತ್ತ ವರಿಷ್ಠೌ ತೌ ಹಿ ಮನ್ಯತೇ ।

(ಬೃ. ದೇ. ಅಧ್ಯಾಯ ೫-೪೪, ೪೫, ೪೬)

ಈ ಸೂಕ್ತಗಳ ವಿಷಯವಾಗಿ (೫೭-೬೦ ಸೂಕ್ತಗಳು) ಒಂದು ಉಪಾಖ್ಯಾನವಿರುವುದು. ಅದನ್ನು ಹೇಳುವೆನು, ಕೇಳಿ. ಇಕ್ಷ್ವಾಕುವಂಶದ ರಾಜರಲ್ಲಿ ರಥಪ್ರೋಷ್ಠನೆಂಬುವನ ಪುತ್ರನಾದ ಅಸಮಾತಿ ಎಂಬೊಬ್ಬ ರಾಜನಿದ್ದನು. ಅವನು ತನ್ನ ಕುಲಪುರೋಹಿತರೂ, ಆತ್ರಿಕುಲದವರೂ, ದ್ವಿಷದಾ ವಿರಾಟ್‌ಛಂದಸ್ಸಿನ ಋಕ್ಕುಗಳ (ಋ. ಸಂ. ೫-೪೪) ದ್ರಷ್ಟೃಗಳೂ ಆದ ಬಂಧು ಮೊದಲಾದ ನಾಲ್ವರು ಸಹೋದರರನ್ನು ಪೌರೋಹಿತ್ಯದಿಂದ ತೆಗೆದುಹಾಕಿ ಕಿರಾತ, ಆಕುಲಿ ಎಂಬಿಬ್ಬರು ದ್ವಿಜರನ್ನು ಪುರೋಹಿತಕರ್ಮದಲ್ಲಿ ಶ್ರೇಷ್ಠರೆಂದೂ, ಕುಶಲರೆಂದೂ ತಿಳಿದು ಅವರನ್ನು ತನ್ನ ಪುರೋಹಿತರನ್ನಾಗಿ ನೇಮಿಸಿಕೊಂಡನು.

ತೌ ಕಪೋತೌ ದ್ವಿಜೌ ಭೂತ್ವಾ ಗತ್ವಾ ಗೌಪಾಯನಾನಭಿ ॥ ೪೭ ॥

ಮಾಯಾಬಲಾಚ್ಚ ಯೋಗಾಚ್ಚ ಸುಬಂಧುಮಭಿಪೇತತುಃ ।
ಸ ದುಃಖಾದಭಿಘಾತಾಚ್ಚ ಮುಮೋಹ ಚ ಪಪಾತ ಚ ॥ ೪೮ ॥

ತೌ ತತೋಽಸ್ಯಾಸುಮಾಲುಚ್ಯ ರಾಜಾನಮಭಿಜಗ್ಮತುಃ ।
ತತಃ ಸುಬಂಧೌ ಪತಿತೇ ಗತಾಸೌ ಭ್ರಾತರಸ್ತ್ರಯಃ ॥ ೪೯ ॥

ಜೇಪುಃ ಸ್ವಸ್ತ್ಯಯನಂ ಸರ್ವೇ ನೇತಿ ಗೌಪಾಯನಾಃ ಸಹ ।
ಮನ ಆವರ್ತನಂ ತಸ್ಯ ಸೂಕ್ತಂ ಯದಿತಿ ತೇಽಭ್ಯಯುಃ ॥ ೫೦ ॥

ಈ ಹೊಸ ಪುರೋಹಿತರು ತಮ್ಮ ಮಾಯಾಬಲದಿಂದಲೂ ಯೋಗಶಕ್ತಿಯಿಂದಲೂ ಪಾರಿವಾಳದ ಹಕ್ಕಿಗಳ ರೂಪವನ್ನು ಧರಿಸಿ ಗೋಪಾಯನಪುತ್ರರಾದ ಬಂಧ್ವಾದಿಗಳ ಬಳಿಗೆ ಹೋಗಿ ಸುಬಂಧುವೆಂಬುವನನ್ನು ಮೂರ್ಛೆಗೊಂಡು ಬೀಳುವಂತೆ

ಮಾಡಿದರು. ಅನಂತರ ಅವನ ಪ್ರಾಣವನ್ನು ಅಪಹರಿಸಿ ತಮ್ಮ ರಾಜನಾದ ಅಸಮಾತಿಯ ಬಳಿಗೆ ಹೋದರು. ಸುಬಂಧುವು ಪ್ರಾಣವನ್ನು ಬಿಟ್ಟು ನೆಲದಮೇಲೆ ನಿಶ್ಚೇಷ್ಟಿತನಾಗಿ ಬಿದ್ದಿರುವುದನ್ನು ಕಂಡು ಅವನ ಸಹೋದರರಾದ ಬಂಧು, ಶ್ರುತಬಂಧು, ವಿಪ್ರಬಂಧುಗಳೆಂಬುವರು ಮೃತನಾದ ತಮ್ಮ ಸಹೋದರ ಸುಬಂಧುವಿನ ಶ್ರೇಯಸ್ಸಿಗಾಗಿ **ಮಾ ಪ್ರಗಾಮ** (ಋ. ಸಂ. ೧೦-೫೭ ನೇ ಸೂಕ್ತ) ಎಂಬ ಸೂಕ್ತವನ್ನೂ ಅವನ ಪ್ರಾಣವನ್ನು ಶರೀರಕ್ಕೆ ಹಿಂತಿರುಗಿಸುವುದಕ್ಕಾಗಿ **ಯತ್ತ್ರೀ ಯಮಂ** (೫೮ ನೇ ಸೂಕ್ತ) ಎಂಬ ಸೂಕ್ತವನ್ನೂ ಪಠಿಸಿದರು.

ಜೀಪುಶ್ಚ ಭೇಷಜಾರ್ಥಂ ಯಂ ಪ್ರ ತಾರೀತಿ ಪರಂ ತತಃ ।
ಸೂಕ್ತಸ್ಯಾದ್ಯಸ್ತೃಚಸ್ತತ್ರ ನಿರ್ಋತೇರಪನೋದನಃ ॥ ೯೧ ॥

ತ್ರಯಃ ಪಾದಾ ಮೋ ಷ್ವಿತಿ ತು ಸೌಮ್ಯೈರ್ನೈರ್ಋತ ಉತ್ತಮಃ ।
ಋಕ್ಸೌಮ್ಯಾ ನೈರ್ಋತೀ ಚೈಷಾ ಅಸುನೀತೇ ಸ್ತುತಿಃ ಪರೇ ॥ ೯೨ ॥

ದ್ವ್ಯೃಚೇ ತ್ವಾನುಮತಂ ಪಾದಮಂತ್ಯಂ ಯಾಸ್ಕಸ್ತು ಮನ್ಯತೇ ।
ಭೂರ್ದ್ಯೌಃ ಸೋಮಶ್ಚ ಪೂಷಾ ಚ ಖಂ ಪಥ್ಯಾ ಸ್ವಸ್ತಿರೇವ ಚ ॥ ೯೩ ॥

ಸುಬಂಧೋರೇವ ಶಾಂತ್ಯರ್ಥಂ ಪುನರ್ಗ ಋಚಿ ತು ಸ್ಮೃತಾಃ ।
ತೃಚಃ ಶಮಿತಿ ರೋದಸ್ಯೋರೈಂದ್ರೋಽರ್ಧರ್ಚಃ ಸಮಿತ್ಯೃಚಿ ॥ ೯೪ ॥

ಅನಂತರ ಮೃತನ ಭೇಷಜಾರ್ಥವಾಗಿ (ಗುಣಹೊಂದುವುದಕ್ಕಾಗಿ) ಪ್ರತಾರ್ಯಾಯುಃ ಎಂದು ಮೊದಲಾಗುವ ಮೂರು ಋಕ್ಕುಗಳನ್ನು(೫೯ನೇ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು)ಪಾಪದೇವತೆಯಾದ ನಿರ್ಋತಿಯನ್ನು ಓಡಿಸುವುದಕ್ಕಾಗಿ ಪಠಿಸಲ್ಪಡಬೇಕು. ಈ ಸೂಕ್ತದ ನಾಲ್ಕನೆಯ ಋಕ್ಕಾದ **ಮೋ ಷು ಣಃ ಸೋಮ** ಎಂಬ ಋಕ್ಕಿನ ಮೊದಲಿನ ಮೂರು ಪಾದಗಳಲ್ಲಿ ಸೋಮದೇವತೆಯನ್ನು ಸ್ತುತಿಸಲಾಗಿದೆ. ನಾಲ್ಕನೆಯ ಪಾದವು ನಿರ್ಋತಿಪರವಾಗಿದೆ. ಆದ್ದರಿಂದ ಈ ಋಕ್ಕೆಲ್ಲವೂ ಸೋಮ ಮತ್ತು ನಿರ್ಋತಿಯನ್ನು ಸ್ತುತಿಸುವುದಾಗಿದೆ. ಮುಂದಿನ ಎರಡು ಎಂದರೆ ೫-೬ನೆಯ ಋಕ್ಕುಗಳಲ್ಲಿ ಅಸುನೀತಿಯನ್ನು ಸ್ತುತಿಸಲಾಗಿದೆ. ಆದರೆ ೬ನೇ ಋಕ್ಕಿನ ಕೊನೆಯ ಪಾದದಲ್ಲಿ ಅನುಮತಿಯೆಂಬ ದೇವತೆಯನ್ನು ಸ್ತುತಿಸಿದೆಯೆಂದು ಯಾಸ್ಕರು ಅಭಿಪ್ರಾಯಪಡುವರು. ಮತ್ತು ೭ನೆಯ ಋಕ್ಕಿನಲ್ಲಿ ಭೂಃ, ದ್ಯೌಃ, ಸೋಮ, ಪೂಷಾ, ಅಂತರಿಕ್ಷ, ಪಥ್ಯಾ, ಸ್ವಸ್ತಿ ಎಂಬ ದೇವತೆಗಳು ಸುಬಂಧುವಿನ ಶಾಂತ್ಯರ್ಥವಾಗಿ ಸ್ತುತರಾಗಿರುವರು. ಮತ್ತು ೮-೧೦ನೆಯ ಋಕ್ಕುಗಳಲ್ಲಿ ದ್ಯಾವಾಪೃಥಿವಿಗಳನ್ನು ಶಾಂತ್ಯರ್ಥವಾಗಿ ಸ್ತುತಿಸಲಾಗಿದೆ. ಕೊನೆಯ **ಸಮಿಂದ್ರೋರಯೆ** ಎಂಬ ಹತ್ತನೆಯ ಋಕ್ಕಿನ ಪೂರ್ವಾರ್ಧದಲ್ಲಿ ಇಂದ್ರನನ್ನು ಸ್ತುತಿಸಲಾಗಿದೆ.

ರಪಸೋ ನಾಶನಾರ್ಥಂ ವೈ ತುಷ್ಟುವುಸ್ತ್ವಥ ರೋದಸೀ ।
ರಪ ಇತ್ಯಭಿಧಾನಂ ತು ಗದಿತಂ ಪಾಪಕೃಚ್ಛ್ರಯೋಃ ॥ ೯೫ ॥

ಋಗ್ಭಿರೇತಿ ಚತಸೃಭಿಸ್ತತ ಐಕ್ಷ್ವಾಕುಮಸ್ತುವನ್ ।
ಇಂದ್ರ ಕ್ಷತ್ರೇತ್ಯೃಚಾ ಚಾಸ್ಯ ಸ್ತುತ್ವಾಶಂಸಿಷುರಾಶಿಷಃ ॥ ೯೬ ॥

ಅಗಸ್ತ್ಯಸ್ಯೇತಿ ಮಾತಾ ಚ ತೇಷಾಂ ತುಷ್ಟಾವ ತಂ ನೃಪಂ ।
ಸ್ತುತಃ ಸ ರಾಜಾ ಸವ್ರೀಳಸ್ತಸ್ಥೌ ಗೌಪಾಯನಾನಭಿ ॥ ೯೭ ॥

ಶರೀರದ ಅಸ್ವಸ್ಥತೆಯ ನಾಶಕ್ಕಾಗಿ ದ್ಯಾವಾಪೃಥಿವಿಗಳನ್ನು ಸ್ತೋತ್ರಮಾಡಿದರು. ಅಸ್ವಸ್ಥತೆಯು (ರಪಃ) ಅಥವಾ ವ್ಯಾಧಿಯು ಹಿಂದೆ ಮಾಡಿದ ಪಾಪದ ಹೆಗ್ಗುರುತಾಗಿದೆ. ಮುಂದಿನ ಸೂಕ್ತದ (೬೦ ನೇ ಸೂಕ್ತದ) ಮೊದಲಿನ ೪ ಋಕ್ಕುಗಳಿಂದ ಇಕ್ಷ್ವಾಕುವಂಶದ ತಿಲಕಪ್ರಾಯನಾದ (ಅಸಮಾತಿ) ರಾಜನನ್ನು ಪ್ರಸಂಸೆಮಾಡಿದರು. ಅನಂತರ ಅವನ ಶ್ರೇಯೋಭಿವೃದ್ಧಿಗಾಗಿ **ಇಂದ್ರ ಕ್ಷತ್ರ** ಎಂಬ ಋಕ್ಕಿನಿಂದ ಇಂದ್ರನನ್ನು ಪ್ರಾರ್ಥಿಸಿದರು. ಈರೀತಿ ತನ್ನನ್ನು ಪ್ರಶಂಸೆ ಮಾಡಿ ತನ್ನ ಶ್ರೇಯೋಭಿವೃದ್ಧಿಗಾಗಿ ಇಂದ್ರನನ್ನು ಪ್ರಾರ್ಥಿಸುತ್ತಿರುವುದನ್ನು ಕಂಡು ಅಸಮಾತಿರಾಜನು ತಾನು ಮಾಡಿದ ಅಕೃತ್ಯಕ್ಕಾಗಿ ಲಜ್ಜೆಗೊಂಡು ಗೋಪಾಯನಪುತ್ರರಾದ ಬಂಧ್ವಾದಿಗಳ ಬಳಿಗೆ ಹೋಗಿ ನಾಚಿಕೆಯಿಂದ ತಲೆತಗ್ಗಿಸಿ ಸುಮ್ಮನೆ ನಿಂತುಕೊಂಡನು.

ಸೂಕ್ತೇನಾಪ್ಯಸ್ತುವನ್ನಗ್ನಿಂ ದ್ವಿಪದೇನ ಯಥಾತ್ರಿಷು ।
ಅಗ್ನಿರಸ್ಯಬ್ರವೀದೇತಾನಯಮಂತಃ ಪರಿಧ್ಯಸುಃ ॥ ೯೮ ॥

ಸುಬಂಧೋರಸ್ಯ ಚೈಷ್ವಾಕೋರ್ಮಯಾ ಗುಪ್ತೋ ಹಿತಾರ್ಥಿನಾ ।
ಸುಬಂಧವೇ ಪ್ರದಾಯಾಸುಂ ಜೀವೇತ್ಯುಕ್ತ್ವಾ ಚ ಪಾವಕಃ ॥ ೯೯ ॥

ಸ್ತುತೋ ಗೌಪಾಯನೈಃ ಪ್ರೀತೋ ಜಗಾಮ ತ್ರಿದಿವಂ ಪ್ರತಿ ।
ಅಯಂ ಮಾತೇತಿ ಹೃಷ್ವಾಸ್ತೇ ಸುಬಂಧೋರಸುಮಾಹ್ವಯನ್ ॥ ೧೦೦ ॥

ಶರೀರಮಭಿನಿರ್ದಿಶ್ಯ ಸುಬಂಧೋಃ ಪತಿತಂ ಭುವಿ ।
ಸೂಕ್ತಶೇಷಂ ಜಗುಶ್ಚಾಸ್ಯ ಚೇತಸೋ ಧಾರಣಾಯ ತೇ ॥ ೧೦೧ ॥

ಲಬ್ಧಾಸುಂ ಚಾಯಮಿತ್ಯಸ್ಯಾಂ ಪೃಥಕ್ಪಾಣಿಭಿರಸ್ಪೃಶನ್ ।

(ಬೃ. ದೇ. ಅಧ್ಯಾಯ ೭)

ಹಿಂದೆ ಅತ್ರಿಮಂಡಲದಲ್ಲಿ (೫ ನೇ ಮಂಡಲದ ೨೪ ನೇ ಸೂಕ್ತ) ಅಗ್ನಿಯನ್ನು ಸ್ತುತಿಸಿದಂತೆ ಈಗಲೂ ದ್ವಿಪದಾವಿರಾಟ್ ಛಂದಸ್ಸಿನ ಋಕ್ಕುಗಳಿಂದ ಅಗ್ನಿಯನ್ನು ಸ್ತುತಿಸಿದರು. ಅದರಿಂದ ಅಗ್ನಿಯು ಸಂತುಷ್ಟನಾಗಿ ಇಂತೆಂದನು—ಎಲೈ ಬಂಧ್ವಾದಿಗಳೇ, ಇಗೋ, ನಿಮ್ಮ ಸಹೋದರನಾದ ಸುಬಂಧುವಿನ ಮತ್ತು ಇಕ್ಷ್ವಾಕುವಂಶದ (ಅಸಮಾತಿ) ರಾಜನ ಪ್ರಾಣವು ಯಜ್ಞಾಗ್ನಿಯ ಪರಿಧಿಯ ಮಧ್ಯದಲ್ಲಿಯೇ ಇರುವುದು. ಇವರಿಬ್ಬರ ಅಸುಗಳನ್ನು ಎಂದರೆ ಪ್ರಾಣಗಳನ್ನು ಇಮವರೆಗೆ ನಾನೇ ರಕ್ಷಿಸುತ್ತಿದ್ದೆನು ಎಂದು ಹೇಳಿ ಎಲೈ ಸುಬಂಧುವೇ, ಪುನಃ ಜೀವಿಸು ಎಂದು ಹೇಳುತ್ತಾ ಅವನ ಪ್ರಾಣವನ್ನು ಪುನಃ ಹಿಂದಕ್ಕೆ ಕೊಟ್ಟನು. ಅನಂತರ ಅಗ್ನಿಯು ಗೌಪಾಯನರಿಂದ ಎಂದರೆ ಗೋಪಾಯನಪುತ್ರರಾದ ಬಂಧ್ವಾದಿಗಳಿಂದ ಅತಿಶಯವಾಗಿ ಸ್ತುತಿಸಲ್ಪಟ್ಟು ಸಂತೋಷಯುಕ್ತನಾಗಿ ಸ್ವರ್ಗಕ್ಕೆ ಹೊರಟುಹೋದನು. ಬಳಿಕ ಬಂಧ್ವಾದಿಗಳು ಸಂತುಷ್ಟಚಿತ್ತರಾಗಿ ಈಸೂಕ್ತದ **ಅಯಂ ಮಾತಾ** ಎಂಬ ಒನೆಯಋಕ್ಕಿನಿಂದ ಸುಬಂಧುವಿನ ಪ್ರಾಣವನ್ನು (ಆತ್ಮವನ್ನು) ಹಿಂತಿರುಗಿ ಬರುವಂತೆ ಕರೆದು ಅಲ್ಲಿಯೇ ನಿಶ್ಚೇಷ್ಟಿತವಾಗಿ ಬಿದ್ದಿದ್ದ ಸುಬಂಧುವಿನ ಶರೀರವನ್ನು ತೋರಿಸಿ ಅದರಲ್ಲಿ ಪುನಃ ಪ್ರವೇಶಿಸಬೇಕೆಂದು ಪ್ರಾರ್ಥಿಸಿ ಅದಕ್ಕಾಗಿ ಎಂದರೆ ಮೃತಶರೀರದಲ್ಲಿ ಚೈತನ್ಯವುಂಟಾಗುವುದಕ್ಕಾಗಿ ಈ ಸೂಕ್ತದ ಋಕ್ಕುಗಳನ್ನು ಕೊನೆಯವರೆಗೂ ಜಪಿಸಿದರು ಮತ್ತು **ಅಯಂ ಮೇ ಹಸ್ತೋ ಭಗವಾನ್** ಎಂಬ ಕೊನೆಯ (೧೨ ನೆಯ) ಋಕ್ಕನ್ನು ಪಠಿಸುತ್ತಾ ಆ ಮೂರುಮಂದಿ ಸಹೋದರರಲ್ಲಿ ಪ್ರತಿಯೊಬ್ಬರೂ ಬೇರೆಬೇರೆಯಾಗಿ ಪುನಃ ಜೀವಂತನಾದ ಆ ಸುಬಂಧುವನ್ನು ತಮ್ಮ ಹಸ್ತಗಳಿಂದ ಸ್ಪರ್ಶನಮಾಡಿದರು (ಕೈಯಿಂದ ಮುಟ್ಟಿದರು).

ಸಾಯಣಭಾಷ್ಯಂ

ಮಾ ಪ್ರ ಗಾಮೇತಿ ಪಡೃಚಂ ಪಂಚದಶಂ ಸೂಕ್ತಂ ಗಾಯತ್ರಂ ವೈಶ್ವದೇವಂ । ಐಕ್ಷ್ವಾಕೋ೨-ಸಮಾತಿರ್ನಾಮ ರಾಜಾ । ತಸ್ಯ ಬಂಧುಃ ಸುಬಂಧುಃ ಶ್ರುತಬಂಧುರ್ವಿಪ್ರಬಂಧುಶ್ಚೇತಿ ಚತ್ವಾರಃ ಪುರೋ-ಹಿತಾ ಆಸನ್ । ತೇ ಚ ಗೌಪಾಯನಾಃ । ಸ ಚ ರಾಜಾ ತಾಂಸ್ತ್ಯಕ್ತ್ವಾನ್ಯೌ ಮಾಯಾವಿನಾವೃಷೀ ಪುರೋಹಿತತ್ವೇನಾವೃಣೀತ। ತತೋ ಬಂಧ್ವಾದಯಃ ಕ್ರುದ್ಧಾಃ ಸಂತ ಇಮಂ ರಾಜಾನಮಭಿಚರಿತವಂತಃ। ಏತಜ್ಜ್ಞಾತ್ವಾ ಮಾಯಾವಿನೌ ಪುರೋಹಿತಾವೇಷಾಮನ್ಯತಮಂ ಸುಬಂಧುಂ ಪ್ರಾಣೈರ್ವಿಯೋಜಿತವಂತೌ । ಮೃತಸ್ಯಾಸ್ಯ ಭ್ರಾತರೋ ಬಂಧುಃ ಶ್ರುತಬಂಧುರ್ವಿಪ್ರಬಂಧುರಿತ್ಯೇತೇ೨ವಿನಾಶಪ್ರಾಪ್ತಿಹೇತುಭೂತಮಿದಂ ದೃಷ್ಟ್ವಾ ಜಪಂತಿ ಸ್ಮ । ಅತಸ್ತೇ೨ಸ್ಯ ಸೂಕ್ತಸ್ಯರ್ಷಯಃ । ಪ್ರತಿಪಾದ್ಯತ್ವಾದಾವರ್ತಮಾನಂ ಮನೋ ದೇವತಾ । ತಥಾ ಚಾನುಕ್ರಾಂತಂ । ಅಥ ಹೈಕ್ಷ್ವಾಕೋ ರಾಜಾಸಮಾತಿರ್ಗೌಪಾಯನಾನ್ಬಂಧ್ವಾದೀ-ನ್ಪುರೋಹಿತಾಂಸ್ತ್ಯಕ್ತ್ವಾನ್ಯೌ ಮಾಯಾವಿನೌ ಶ್ರೇಷ್ಠತಮೌ ಮತ್ವಾ ಪುರೋದಧೇ ತಮಿತರೇ ಕ್ರುದ್ಧಾ ಅಭಿಚೇರುಃ ಅಥ ತೌ ಮಾಯಾವಿನೌ ಸುಬಂಧೋಃ ಪ್ರಾಣಾನಾಚಿಕ್ಷಿಪತುರಥ ಹಾಸ್ಯ ಭ್ರಾತರಸ್ತ್ರಯೋ ಮಾ ಪ್ರ ಗಾಮೇತಿ ಷಟ್ಕಂ ಗಾಯತ್ರಂ ಸ್ವಸ್ತ್ಯಯನಂ ಜಪ್ತ್ವೇತಿ ॥ ಅಗ್ನಿಸಮಿಪಾದ್ದೇಶಾಂತರಗಮನ-ಸಮಯ ಇದಂ ಸೂಕ್ತಂ ಜಪ್ಯಂ । ಸೂತ್ರಿತಂ ಚ । ಪ್ರವ್ರಜೇದನಪೇಕ್ಷಮಾಣೋ ಮಾ ಪ್ರ ಗಾಮೇತಿ ಸೂಕ್ತಂ ಜಪನ್ । ಆ. ೨-೫ । ಇತಿ ! ಮಹಾಪಿತೃಯಜ್ಞೇ೨ಪ್ಯೇತದೃತ್ವಿಗ್ಭಿರ್ಜಪ್ಯಂ । ಸೂತ್ರಿತಂ ಚ । ಮಾ ಪ್ರ ಗಾವಾಗ್ನೇತ್ವಂ ನ ಇತಿ ಜಪಂತಃ । ಆ. ೨-೧೯ । ಇತಿ ॥ ನಿವಿದಃ ಸ್ಥಾನಾತಿಪತ್ತಾವಿದಂ ಸೂಕ್ತಂ ಶಸ್ತ್ವಾ ಸೂಕ್ತಾಂತರೇ ನಿವಿತ್ಪ್ರಕ್ಷೇಪ್ತವ್ಯಾ । ಸೂತ್ರಿತಂ ಚ । ಸ್ಥಾನಂ ಚೇನ್ನಿವಿದೋ೨ತಿಹರೇನ್ನಾ ಪ್ರ ಗಾಮೇತಿ ಪುರಸ್ತಾತ್ಸೂಕ್ತಂ ಶಸ್ತ್ವಾ । ಆ. ೬-೬ । ಇತಿ ॥

ಅನುವಾದವು—**ಮಾ ಪ್ರ ಗಾಮ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವುವು. ಈ ಸೂಕ್ತಕ್ಕೆ ವಿಶ್ವೇದೇವತೆಗಳು ದೇವತೆಯು; ಗಾಯತ್ರೀ ಛಂದಸ್ಸು. ಪೂರ್ವದಲ್ಲಿ ಇಕ್ಷ್ವಾಕು ವಂಶದ ರಾಜರಲ್ಲಿ ಅಸಮಾತಿ ಎಂಬ ಹೆಸರಿನ ಓರ್ವ ರಾಜನಿದ್ದನು. ಅವನಿಗೆ ಗೋಪಾಯನ ಎಂಬ ಹೆಸರಿನ ಋಷಿಯ ಪುತ್ರರಾದ ಬಂಧು, ಸುಬಂಧು, ಶ್ರುತಬಂಧು, ವಿಪ್ರಬಂಧು ಎಂಬ ಹೆಸರಿನ ನಾಲ್ವರು ಋಷಿಗಳು ಪುರೋಹಿತರಾಗಿದ್ದರು. ಆದರೆ ಆ ರಾಜನು ತನ್ನ ಕುಲಪುರೋಹಿತರಾದ ಬಂಧು ಮೊದಲಾದ ನಾಲ್ವರನ್ನು ತ್ಯಜಿಸಿ ಮಾಯಾವಿಗಳಾದ (ಕಪಟಿಗಳಾದ) ಬೇರೆ ಇಬ್ಬರನ್ನು ಪುರೋಹಿತರನ್ನಾಗಿ ನೇಮಿಸಿಕೊಂಡನು. ಇದನ್ನು ಕಂಡು ಬಂಧ್ವಾದಿ ಸಹೋದರರು ಕೋಪಗೊಂಡು ರಾಜನಿಗೆ ಅಭಿಚಾರ (ಮಾಯು ಅಥವಾ ಮಾಟ) ಕರ್ಮದಿಂದ ಕೆಡುಕನ್ನು ಮಾಡಿದರು. ಇದನ್ನು ರಾಜಪುರೋಹಿತರಾದ ಆ ಇಬ್ಬರು ಋಷಿಗಳು ತಿಳಿದು ಆ ನಾಲ್ವರು ಸಹೋದರರಲ್ಲಿ ಎರಡನೆಯವನಾದ ಸುಬಂಧು ಎಂಬುವನ ಪ್ರಾಣಾಪಹರಣ ಮಾಡಿದರು. ತಮ್ಮ ಸಹೋದರನಾದ ಸುಬಂಧುವು ಮೃತನಾದುದನ್ನು ಕಂಡು ಉಳಿದ ಮೂವರು ಸಹೋದರರೂ ತಮ್ಮ ಮೃತಸಹೋದರನ ಸ್ವಸ್ತ್ಯರ್ಥವಾಗಿ ಈ ಸೂಕ್ತವನ್ನು ಜಪಿಸಿದರು. ಆದ್ದರಿಂದ ಈ ಸೂಕ್ತಕ್ಕೆ ಬಂಧು, ಶ್ರುತಬಂಧು, ವಿಪ್ರಬಂಧು ಎಂಬ ಮೂವರು ಸಹೋದರರು ಋಷಿಗಳು; ಅನುಕ್ರಮಣಿಕೆಯಲ್ಲಿ-**ಅಥ ಹೈಕ್ಷ್ವಾಕೋ ರಾಜಾಸಮಾತಿರ್ಗೌಪಾಯನಾನ್ಬಂಧ್ವಾ-ದೀನ್ಪುರೋಹಿತಾಂಸ್ತ್ಯಕ್ತ್ವಾನ್ಯೌ ಮಾಯಾವಿನೌ ಶ್ರೇಷ್ಠತಮೌ ಮತ್ವಾ ಪುರೋದಧೇ । ತಮಿತರೇ ಕ್ರುದ್ಧಾ ಅಭಿಚೇರುಃ । ಅಥ ತೌ ಮಾಯಾವಿನೌ ಸುಬಂಧೋಃ ಪ್ರಾಣಾನಾಚಿಕ್ಷಿಪತುರಥ ಹಾಸ್ಯ ಭ್ರಾತರ-**

ಸ್ರುಯೋ ಮಾ ಪ್ರ ಗಾಮೇತಿ ಷಟ್ಕಂ ಗಾಯತ್ರಂ ಸ್ವಸ್ತ್ಯಯನಂ ಜಪ್ತ್ವಾ ಎಂದು ಹೇಳಿರುವುದು. ಗೃಹಸ್ಥನಾದವನು ತನ್ನ ಅಗ್ನಿಹೋತ್ರಾದಿಯನ್ನು ಬಿಟ್ಟು ಪರಸ್ಥಳಕ್ಕೆ ಹೋಗುವ ಸಂದರ್ಭದಲ್ಲಿ ಈ ಸೂಕ್ತವನ್ನು ಜಪಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಪ್ರವ್ರಜೇದನಪೇಕ್ಷಮಾಣೋ ಮಾ ಪ್ರ ಗಾಮೇತಿ ಸೂಕ್ತಂ ಜಪನ್** ಎಂಬ ಸೂತ್ರದಿಂದ (ಆ. ೨–೫) ವಿವೃತವಾಗಿರುವುದು. ಮಹಾಪಿತೃಯಜ್ಞವೆಂಬ ಇಷ್ಟಿಯಲ್ಲಿಯೂ ಈ ಸೂಕ್ತವನ್ನು ಋತ್ವಿಕ್ಕುಗಳು ಜಪಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಮಾ ಪ್ರಗಾಮಾಗ್ನೇ ತ್ವಂ ನ ಇತಿ ಜಪಂತಃ** ಎಂಬ ಸೂತ್ರದಿಂದ (ಆ. ೨-೧೯) ವಿವೃತವಾಗಿರುವುದು. ಮತ್ತು ನಿವಿತ್ ಸೂಕ್ತವನ್ನು ಪಠಿಸುವ ಸಂದರ್ಭದಲ್ಲಿ ಬೇರೆ ಸೂಕ್ತವನ್ನು ಪಠಿಸಬೇಕಾದಾಗ ಈ ಸೂಕ್ತವನ್ನು ಆದರಸ್ಥಾನದಲ್ಲಿ ಎಂದರೆ ಅದಕ್ಕೆ ಬದಲಾಗಿ ಪಠಿಸಿ ನಿವಿತ್ ಸೂಕ್ತವನ್ನು ಬೇರೆ ಸೂಕ್ತದ ಮಧ್ಯದಲ್ಲಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಸ್ಥಾನಂ ಚೇನ್ನಿವಿದೋಽತಿಹರೇನ್ನಾ ಪ್ರ ಗಾಮೇತಿ ಪುರಸ್ತಾತ್ಸೂಕ್ತಂ ಶಸ್ತ್ವಾ** ಎಂಬ ಸೂತ್ರದಿಂದ (ಆ. ೬-೬) ವಿವೃತವಾಗಿರುವುದು.

ಸೂಕ್ತ—೫೭

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೭ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೧೯॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಬಂಧುಃಶ್ರುತಬಂಧುರ್ವಿಪ್ರಬಂಧುರ್ಗೌಪಾಯನಾಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—ಗಾಯತ್ರೀ ॥

ಸಂಹಿತಾಪಾಠಃ

ಮಾ ಪ್ರ ಗಾಮ ಪಥೋ ವಯಂ ಮಾ ಯಜ್ಞಾದಿಂದ್ರ ಸೋಮಿನಃ ।
ಮಾಂತಃಸ್ಥುರ್ನೋ ಅರಾತಯಃ ॥ ೧ ॥

ಪದಪಾಠಃ

ಮಾ । ಪ್ರ । ಗಾಮ । ಪಥಃ । ವಯಂ । ಮಾ । ಯಜ್ಞಾತ್ । ಇಂದ್ರ । ಸೋಮಿನಃ ॥
ಮಾ । ಅಂತರಿತಿ । ಸ್ಥುಃ । ನಃ । ಅರಾತಯಃ ॥ ೧ ॥

ಸಾಯಣಭಾಷ್ಯಂ

ಅತ್ರೋಕ್ತಾಖ್ಯಾನೇ ಶಾಟ್ಯಾಯನಕಂ । ಅಸಮಾತಿಂ ರಾಥಪ್ರೌಷ್ಮಂ ಗೌಪಾಯನಾ ಅಭ್ಯಗಮಂಸ್ತೇ ಖಾಂಡವೇ ಸತ್ರಮಾಸತಾಥ ಹಾಸಸಾತೌ ರಾಥಪ್ರೌಷ್ಮೇ ಕಿಲಾತಾಕುಲೀ ಊಷತುರಸುರಮಾಯೌ ತಂ ಹ ಸ್ಮಾನಗ್ನೌ ನಿಧಾಯೌದನಂ ಪಚತೋಽಗ್ನೌ ಮಾಂಸಮಥಾಸುರಾನ್ನಂ ದಗ್ಧ್ವೇಕ್ಷ್ವಾಕವಃ ಪರಾಬಭೂವುಃ । ತಮಸಮಾತಿಂ ರಾಥಪ್ರೌಷ್ಮಂ ಗೌಪಾಯನಾನಾಮಾಹುತಯೋಽಭ್ಯತಪನ್ ಸೋಽಬ್ರವೀದಿಮೌ ಕಿಲಾತಾಕುಲೀ ಇಮೌ ನೌ ಮಾ ಗೌಪಾಯನಾನಾಮಾಹುತಯೋಽಭಿತಪಂತೀತಿ ತಾವಬ್ರೂತಾಂ ತಸ್ಯ ವಾ ಆವಾಮೇವ ಭಿಷಜೌ ಸ್ವ ಆವಾಂ ಪ್ರಾಯಶ್ಚಿತ್ತಿರಾವಾಂ ತಥಾ ಕರಿಷ್ಯಾವೋ

यथा स्नेता नाभितपंतीति । तौ परेत्य सुबंधोर्गौपायनस्य स्वपतेः प्रमुत्तस्या-सुमाहुत्यांतेःसरिधि न्यधत्तामित्यादि । तं सुबंधोरसुमादातुं खांडवादसमातिं प्रतिगच्छंतोः गौपायना वदंति । हे इंद्र वयं गौपायनाः पथः समीचीनान्मा-र्गान्मा प्र गामु । मा परागच्छामु । असमातिगृहमेव गच्छामु । मा च सोमिनोऽ-समातेर्यज्ञात्त्र गामु । मा स्थुर्मा तिष्ठंतु नोऽस्माकमंतर्मार्गमध्येऽरातयः शत्रवः । यद्वा । सोमिनः सोमवतोः यागान्मा प्र गामु ॥

प्रतिपदार्थ

इंद्र—ಎಲೈ ಇಂದ್ರನೇ । **वयं**—ನಾವು । **पथः**—ಉತ್ತಮವಾದ ಮಾರ್ಗದಿಂದ । **मा प्र गामु**—ದೂರ ಸರಿದು ಹೋಗದಿರುವಂತಾಗಲಿ । **सोमिनः**—ಸೋಮವನ್ನು ಅರ್ಪಿಸುವ ಅಸಮಾತಿಯ । **यज्ञात् मा**—ಯಜ್ಞದಿಂದ ದೂರ ಹೋಗದಿರುವಂತಾಗಲಿ । **नः**—ನಮ್ಮ । **अंतः**—ಮಾರ್ಗಮಧ್ಯದಲ್ಲಿ । **अरातयः**—ಶತ್ರುಗಳು । **मा स्थुः**—ಅಡ್ಡಲಾಗಿ ನಿಲ್ಲದಿರಲಿ.

ಭಾವಾರ್ಥ

ಎಲೈ ಇಂದ್ರನೇ, ನಾವು ಉತ್ತಮವಾದ ಮಾರ್ಗದಿಂದ ದೂರ ಸರಿದು ಹೋಗದಿರುವಂತಾಗಲಿ. ಸೋಮವನ್ನು ಅರ್ಪಿಸುವ ಅಸಮಾತಿರಾಜನ ಯಜ್ಞದಿಂದಲೂ ದೂರ ಹೋಗದಿರುವಂತಾಗಲಿ. ನಮ್ಮ ಮಾರ್ಗಮಧ್ಯದಲ್ಲಿ ಶತ್ರುಗಳು ಅಡ್ಡಲಾಗಿ ನಿಲ್ಲದಿರಲಿ.

English Translation

Let us not depart, Indra, from the path; let us not (depart) from the sacrifice of the offerer of the libation; let not our adversaries remain (in our place).

ವಿಶೇಷವಿಷಯಗಳು

ಈ ಋಕ್ಕಿನ ಭಾಷ್ಯದಲ್ಲಿ ಸಾಯಣರು ಶಾಟ್ಯಾಯನಬ್ರಾಹ್ಮಣದಲ್ಲಿರುವ ಒಂದು ಉಪಾಖ್ಯಾನವನ್ನು ಉದಾಹರಿಸಿದಾರೆ.

असमातिं राथप्रौष्मं गौपायना अभ्यगमंस्ते खांडवे सत्रमासतात्थ हास-मात्तौ राथप्रौष्मे किलातावकुलीं ऊषतुरसुरमायौ तं ह स्मानग्नौ निधा-यौदनं पचतोऽग्नौ मांसमुथासुरान्नं ददृक्षंतः पराबभूवुः । तमसमातिं राथप्रौष्मं गौपायनानामाहुतयोऽभ्यतपन् सोऽब्रवीदिमौ किलातावकुलीं इमौ वै मा गौपायनानामाहुतयोऽभितपंतीति तावब्रूतां तस्य वा आवामेव भिषजौ स्व आवां प्रायश्चित्तिरावां तथा करिष्यावो यथा स्नेता नाभितपंतीति । तौ परेत्य सुबंधोर्गौपायनस्य स्वपतेः प्रमुत्तस्यासुमाहुत्यांतेःपरिधि न्यधत्तां । इत्यादि ॥

ಒಂದು ಸಮಯದಲ್ಲಿ ಗೋಪಾಯನಪುತ್ರರಾದ ಬಂಧ್ವಾದಿಗಳು ಖಾಂಡವವೆಂಬ ವನಪ್ರದೇಶದಲ್ಲಿ ಸತ್ರಯಾಗವನ್ನು ಮಾಡುತ್ತಿದ್ದರು. ಆಗ ಅವರು ರಥಪ್ರೌಷ್ಮನ ಪುತ್ರನಾದ ಅಸಮಾತಿ ಎಂಬ ರಾಜನ ಬಳಿಗೆ ಬಂದರು. ಆ ಕಾಲದಲ್ಲಿ

ಆ ರಾಜನ ಬಳಿ ಕಿಲಾತ, ಆಕುಲೀ ಎಂಬ ಇಬ್ಬರು ಪುರೋಹಿತರಿದ್ದರು. ಅವರು ಅಸುರರು ನಡೆಸುವ ಅಭಿಚಾರ ಮತ್ತು ಮಾಯಾ (ನಾಟ) ಕರ್ಮಗಳಲ್ಲಿ ಕುಶಲರಾಗಿದ್ದರು. ಅವರು ರಾಜನ ಕೈಯಿಂದ ಅಗ್ನಿಯಲ್ಲಿ ಮಾಂಸವನ್ನೂ ಅಸುರಾನ್ನವನ್ನೂ ಹೋಮಮಾಡಿಸಿದರು. ಅದರಿಂದ ಇಕ್ಷ್ವಾಕುವಂಶದ ರಾಜರು ಯುದ್ಧದಲ್ಲಿ ಸೋತುಹೋದರು. ಇವರಿಂದ ಅಸಮಾಧಾನಗೊಂಡ ಗೋಪಾಯನಪುತ್ರರಾದ ಬಂಧ್ವಾದಿಗಳು ಅಗ್ನಿಯಲ್ಲಿ ಹೋಮಮಾಡಲು ಆ ಹೋಮದಿಂದ ರಥಪ್ರೋಷ್ಠನ ಪುತ್ರನಾದ ಅಸಮಾತಿ ರಾಜನಿಗೆ ಶರೀರದಲ್ಲಿ ಬಹಳವಾಗಿ ಸುಡುವಂತೆ ತಾಪವುಂಟಾಯಿತು. ಅದರಿಂದ ವ್ಯಾಕುಲನಾದ ಅಸಮಾತಿಯು ತನ್ನ ಹೊಸಪುರೋಹಿತರಾದ ಕಿಲಾತಾಕುಲಿಗಳನ್ನು ಕುರಿತು—ಈ ಗೋಪಾಯನ ಪುತ್ರರು ಅಗ್ನಿಯಲ್ಲಿ ಅರ್ಪಿಸಿದ ಆಹುತಿಗಳು **ನನ್ನ**ನ್ನು ದಹಿಸುತ್ತಿವೆ ಎಂದು ಹೇಳಲು, ಅದಕ್ಕೆ ಅವರು ಹೆದರಬೇಡ ನಾವು ನಿನಗೆ ವೈದ್ಯರಾಗಿರುವೆವು. ಇವಕ್ಕೆ ಪ್ರಾಯಶ್ಚಿತ್ತರೂಪವಾದ ಕರ್ಮವನ್ನು ಮಾಡಿ ಶರೀರತಾಪವನ್ನು ಪರಿಹರಿಸುವೆವು ಎಂದು ಅವನನ್ನು ಸಮಾಧಾನಮಾಡಿ ಅಲ್ಲಿಂದ ಹೊರಟು ಗೋಪಾಯನಪುತ್ರರಾದ ಬಂಧ್ವಾದಿಗಳ ಬಳಿಗೆ ಬಂದರು. ಆಗ ಆವರಲ್ಲಿ ಎಚ್ಚರವಿಲ್ಲದೆ ನಿದ್ರಿಸುತ್ತಿದ್ದ ಸುಬಂಧು ಎಂಬುವನ ಪ್ರಾಣವನ್ನು ತಮ್ಮ ಮಾಯಾಶಕ್ತಿಯಿಂದ ಅಪಹರಿಸಿ ತಂದು ಅಗ್ನಿಯ ಅಂತಃಪರಿಧಿಯ ಮಧ್ಯದಲ್ಲಿ ಇಟ್ಟರು ಎಂದು ಮೊದಲಾಗಿ ಉಪಾಖ್ಯಾನವಿದೆ. ಮೃತನಾದ ಸುಬಂಧುವಿನ ಪ್ರಾಣವನ್ನು ಹಿಂತಿರುಗಿಸುವುದಕ್ಕಾಗಿ ಅಸಮಾತಿರಾಜನ ಗೃಹಕ್ಕೆ ಹೋಗುವಾಗ ಬಂಧ್ವಾದಿಗಳು ಇಂದ್ರನನ್ನು ಈ ಸೂಕ್ತದ **ಮಾ ಪ್ರ ಗಾಮ** ಎಂಬ ಮೊಲಾದ ಋಕ್ಕುಗಳಿಂದ ಸ್ತುತಿಸಿದ್ದಾರೆ.

ಸಂಹಿತಾಪಾಠಃ

ಯೋ ಯಜ್ಞಸ್ಯ ಪ್ರಸಾಧನಸ್ತಂತುರ್ದೇವೇಷ್ವಾತತಃ।

ತಮಾಹುತಂ ನಶೀಮಹಿ ॥ ೨ ॥

ಪದಪಾಠಃ

ಯಃ। ಯಜ್ಞಸ್ಯ। ಪ್ರಽಸಾಧನಃ। ತಂತುಃ। ದೇವೇಷು। ಆಽತತಃ॥

ತಂ। ಆಽಹುತಂ। ನಶೀಮಹಿ॥

ಸಾಯಣಭಾಷ್ಯಂ

ಯೋಽಯಮಗ್ನಿರ್ಯಜ್ಞಸ್ಯ ತಂತುರಾಹವನೀಯಾದಿರೂಪೇಣ ವಿಸ್ತೃತೋ ಯಜ್ಞಸ್ಯ ಪ್ರಸಾಧನಃ ಪ್ರಕರ್ಷೇಣ ಸಾಧಯಿತಾ ದೈವೈಃ ಸ್ತೋತೃಭಿರ್ಋತ್ವಿಗ್ಭಿರ್ವಿಸ್ತಾರಿತೋ ವರ್ತತೇ ವೇದ್ಯಾಂ ತಮಾಹುತಂ ಸರ್ವತೋ ಹೂಯಮಾನಂ ನಶೀಮಹಿ। ಪ್ರಾಪ್ನುಯಾಮ। ನಶತಿರ್ವ್ಯಾಪ್ತಿಕರ್ಮಾ॥

ಪ್ರತಿಪದಾರ್ಥ

ಯಃ—ಯಾವ ಅಗ್ನಿಯು। **ತಂತುಃ**—ಯಜ್ಞಕ್ಕೆ ಸೂತ್ರಪ್ರಾಯನೋ। **ಯಜ್ಞಸ್ಯ**—ಯಜ್ಞಕ್ಕೆ **ಪ್ರಸಾಧನಃ**—ಅಲಂಕಾರಪ್ರಾಯನೋ। **ದೇವೇಷು**—ಋತ್ವಿಕ್ಕುಗಳಿಂದ। **ಆತತಃ**—ಯಜ್ಞಕ್ಕೆ ಬರಮಾಡಲ್ಪಡುವನೋ। **ತಂ**—ಅಂತಹ। **ಆಹುತಂ**—ಆಹ್ವಾನಕ್ಕೆ ಪಾತ್ರನಾವ (ಸರ್ವತ್ರ ಆಹುತಿಯನ್ನರ್ಪಿಸಲ್ಪಡುವ) ಅಗ್ನಿಯನ್ನು। **ನಶೀಮಹಿ**—ಸವಿಾಪಿಸೋಣ.

ಭಾವಾರ್ಥ

ಯಜ್ಞಕ್ಕೆ ಸೂತ್ರಪ್ರಾಯನೂ, ಅಲಂಕಾರಪ್ರಾಯನೂ, ಋತ್ವಿಕ್ಕುಗಳಿಂದ ಬರಮಾಡಲ್ಪಡುವವನೂ, ಸರ್ವತ್ರ ಆಹುತಿಯನ್ನ ರ್ಪಿಸಲ್ಪಡುವವನೂ ಆದ ಅಗ್ನಿಯನ್ನು ನಾವು ಸಮಾಪಿಸೋಣ.

English Translation

May we obtain (the favour of) him to whom burnt offerings are presented, (Agni), who is the thread, the perfecter of sacrifice, drawn out (by the priests) to the gods.

ಸಂಹಿತಾಪಾಠಃ

ಮನೋ ನ್ವಾ ಹುವಾಮಹೇ ನಾರಾಶಂಸೇನ ಸೋಮೇನ ।

ಪಿತೄಣಾಂ ಚ ಮನ್ಮಭಿಃ ॥ ೩ ॥

ಪದಪಾಠಃ

ಮನಃ । ನು । ಆ । ಹುವಾಮಹೇ । ನಾರಾಶಂಸೇನ । ಸೋಮೇನ ॥

ಪಿತೄಣಾಂ । ಚ । ಮನ್ಮಭಿಃ ॥ ೩ ॥

ಸಾಯಣಭಾಷ್ಯಂ

ಪಿಂಡಪಿತೃಯಜ್ಞೇ ಮನೋ ನ್ವಾ ಹುವಾಮಹ ಇತಿ ತೃಚೇನ ಪಿಂಡಾಭಿಮಾನಿನಃ ಪಿತರ ಉಪಸ್ಥೇಯಾಃ । ಸೂತ್ರಿತಂ ಚ । ಮನೋ ನ್ವಾ ಹುವಾಮಹ ಇತಿ ಚತಸೃಭಿರಥೈನಾನ್ಪ್ರವಾಹಯೇತ್ । ಆ.೨-೭ । ಇತಿ ॥

ವಯಂ ಬಂಧುಶ್ರುತಬಂಧ್ವಾದಯೋ ಮನಃ ಸುಬಂಧೋಃ ಸಂಬಂಧಿ ಮಾಯಾವಿಭಿರಪಹೃತಂ ನು ಕ್ಷಿಪ್ರಮಾ ಹುವಾಮಹೇ । ಕೇನ ಸಾಧನೇನೇತಿ ತದುಚ್ಯತೇ । ನಾರಾಶಂಸೇನ ನರಾಶಂಸಚಮಸಗತೇನ ಸೋಮೇನ । ನರೈಃ ಶಸ್ಯಂತ ಇತಿ ನರಾಶಂಸಾಃ ಪಿತರಃ । ತೇಷಾಂ ಚಮಸಾನಾಂ ಕಂಪನಮೇವ ಹೋಮಃ । ತಥಾವಿಧೇನ ಸೋಮೇನ ಪಿತೄಣಾಮಂಗಿರಸಾಂ ಮನ್ಮಭಿರ್ಮಗನೀಯೈಃ ಸ್ತೋತೃಭಿಶ್ಚ ॥

ಪ್ರತಿಪದಾರ್ಥ

ನಾರಾಶಂಸೇನ—ಪಿತೃಗಳಿಗೆ ಉದ್ದಿಷ್ಟವಾದ ಚಮಸಪಾತ್ರೆಯಿಂದ ಅರ್ಪಿತವಾದ । **ಸೋಮೇನ**—ಸೋಮದಿಂದಲೂ । **ಪಿತೄಣಾಂ**—ಅಂಗಿರಸ್ಸುಗಳ । **ಮನ್ಮಭಿಃ**—ಸ್ತುತಿಗಳಿಂದಲೂ । **ಮನಃ**—ಸುಬಂಧುವಿನ ಮನಸ್ಸನ್ನು । **ನು**—ಶೀಘ್ರವಾಗಿ । **ಆ ಹುವಾಮಹೇ**—ಕರೆಯುತ್ತೇವೆ.

ಭಾವಾರ್ಥ

ಪಿತೃಗಳಿಗೆ ಉದ್ದಿಷ್ಟವಾದ ಚಮಸಪಾತ್ರೆಯಿಂದ ಅರ್ಪಿತವಾದ ಸೋಮದಿಂದಲೂ, ಅಂಗಿರಸ್ಸುಗಳ ಸ್ತುತಿಗಳಿಂದಲೂ ಸುಬಂಧುವಿನ ಮನಸ್ಸನ್ನು ಶೀಘ್ರವಾಗಿ ಕರೆಯುತ್ತೇವೆ.

English Translation

We call upon the spirit (of Subandhu) with the Soma appropriated to the progenitors, with the praises of the pitris.

ವಿಶೇಷವಿಷಯಗಳು

ಪಿಂಡಪಿತೃಯಜ್ಞವೆಂಬ ಇಷ್ಟಿಯಲ್ಲಿ ಪಿಂಡಾಭಿಮಾನಿ ಪಿತೃದೇವತೆಗಳನ್ನು ಉಪಸ್ಥಾನ (ಪ್ರಾರ್ಥನೆ) ಮಾಡುವಾಗ **ಮನೋ ನ್ವಾ ಹುವಾಮಹೇ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು (೩-೬) ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಮನೋ ನ್ವಾ ಹುವಾಮಹ ಇತಿ ಚ ತಿಸೃಭಿರಥೈನಾನ್ಪ್ರವಾಹಯೇತ್** ಎಂಬ ಸೂತ್ರದಿಂದ (ಆ. ೨-೭) ವಿವೃತವಾಗಿರುವುದು.

ಸಂಹಿತಾಪಾಠಃ

ಆ ತ ಏತು ಮನಃ ಪುನಃ ಕ್ರತ್ವೇ ದಕ್ಷಾಯ ಜೀವಸೇ ।
ಜ್ಯೋಕ್ಚ ಸೂರ್ಯಂದೃಶೇ ॥ ೪ ॥

ಪದಪಾಠಃ

ಆ । ತೇ । ಏತು । ಮನಃ । ಪುನರಿತಿ । ಕ್ರತ್ವೇ । ದಕ್ಷಾಯ । ಜೀವಸೇ ॥
ಜ್ಯೋಕ್ । ಚ । ಸೂರ್ಯಂ । ದೃಶೇ ॥ ೪ ॥

ಸಾಯಣಭಾಷ್ಯಂ

ಹೇ ಸಂಬಂಧೋ ತೇ ಮನಃ ಪುನರೈತು । ಅಭಿಚರತಃ ಸಕಾಶಾತ್ಪುನರಾಗಚ್ಛತು । ಕಿಮರ್ಥಮಿತಿ ಉಚ್ಯತೇ । ಕ್ರತ್ವೇ ಕರ್ಮಣೇ ಲೌಕಿಕವೈದಿಕವಿಷಯಾಯ ದಕ್ಷಾಯ ಬಲಾಯ ಚ । ಯದ್ವಾ । ಕ್ರತ್ವೇಽಪಾನಾಯ ದಕ್ಷಾಯ ಪ್ರಾಣಾಯ । ಪ್ರಾಣೋ ವೈ ದಕ್ಷೋಽಪಾನಃ ಕ್ರತುರಿತಿ ಹಿ ಶ್ರುತಿಃ । ಜೀವಸೇ ಜೀವನಾಯ ಚ । ಜ್ಯೋಕ್ಚ ಚಿರಕಾಲಂ ಸೂರ್ಯಂ ದೃಶೇ । ಸೂರ್ಯಂ ದ್ರಷ್ಟುಂ । ಅತ್ಯಂತಂ ಚಿರಜೀವನಾಯೇತ್ಯರ್ಥಃ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಕ್ರತ್ವೇ**—ಉತ್ತಮವಾದ ಕರ್ಮವನ್ನು ಆಚರಿಸುವುದಕ್ಕಾಗಿ । **ದಕ್ಷಾಯ**—ಶಕ್ತಿಸ್ಥಾಪನಕ್ಕಾಗಿಯೂ । **ಜೀವಸೇ**—ಜೀವಿಸುವುದಕ್ಕಾಗಿಯೂ । **ಜ್ಯೋಕ್**—ಬಹುಕಾಲ । **ಸೂರ್ಯಂ**—ಸೂರ್ಯ

ನನ್ನು । **ದೃಶೇ**—ನೋಡುವುದಕ್ಕಾಗಿಯೂ । **ತೇ**—ನಿನ್ನ । **ಮನಃ**—ಮನಸ್ಸು । **ಪುನಃ**—ತಿರುಗಿಯೂ । **ಆ ಏತು**—ಅಭಿಚಾರಕರ್ಮದಿಂದ ಹಿಂತಿರುಗಿ ಬರಲಿ.

ಭಾವಾರ್ಥ

ಎಲೈ ಸುಬಂಧುವೇ, ಉತ್ತಮವಾದ ಕರ್ಮವನ್ನು ಆಚರಿಸುವುದಕ್ಕಾಗಿಯೂ, ಶಕ್ತಿಸ್ಥಾಪನಕ್ಕಾಗಿಯೂ, ಜೀವಿಸುವುದಕ್ಕಾಗಿಯೂ, ಬಹುಕಾಲ ಸೂರ್ಯನನ್ನು ನೋಡುವುದಕ್ಕಾಗಿಯೂ, ನಿನ್ನ ಮನಸ್ಸು (ಪ್ರಾಣವು) ತಿರುಗಿಯೂ ಮಾಯಾವಿಯಿಂದ ಹಿಂತಿರುಗಿ ಬರಲಿ.

English Translation

May (your) spirit (of Subandhu) come back again to perform pious acts ; to exercise strength ; to live ; and long to see the sun.

ಸಂಹಿತಾಪಾಠಃ

ಪುನರ್ನ ಃ ಪಿತರೋ ಮನೋ ದದಾತು ದೈವ್ಯೋ ಜನಃ ।

ಜೀವಂ ವ್ರಾತಂ ಸಚೇಮಹಿ ॥ ೫ ॥

ಪದಪಾಠಃ

ಪುನಃ । ನಃ । ಪಿತರಃ । ಮನಃ । ದದಾತು । ದೈವ್ಯಃ । ಜನಃ ॥

ಜೀವಂ । ವ್ರಾತಂ । ಸಚೇಮಹಿ ॥ ೫ ॥

ಸಾಯಣಭಾಷ್ಯಂ

ನೋಽಸ್ಮಾಕಂ ಪಿತರಃ ಪಿತೃಭೂತಾ ಅಂಗಿರಸೋ ಜನಃ । ತೇಷಾಂ ಸಂಘ ಇತ್ಯರ್ಥಃ । ಸ ಚ ಜೀವಂ ವ್ರಾತಂ ಪ್ರಾಣಾದೀಂದ್ರಿಯಸಂಘಾತಂ ಪುನರ್ದದಾತು । ತಥಾ ದೈವ್ಯೋ ಜನಃ । ಜನಶಬ್ದಃ ಸಂಘವಚನಃ । ದೇವಾನಾಂ ಸಂಘೋಽಪಿ ಜೀವಂ ವ್ರಾತಂ ಚ ದದಾತು । ವಯಂ ಚ ತದುಭಯಂ ಸಚೇಮಹಿ । ಪ್ರಾಪ್ನುಯಾಮ ॥

ಪ್ರತಿಪದಾರ್ಥ

ಪಿತರಃ ಜನಃ—ನಮ್ಮ ಪಿತೃಗಳಾದ ಅಂಗಿರಸ್ಸುಗಳು । **ನ**—ನಮಗೆ । **ಜೀವಂ ವ್ರಾತಂ ಮನಃ**—ಇಂದ್ರಿಯಾದಿಗಳಿಂದ ಕೂಡಿದ ಪ್ರಾಣಸಂಘಾತವನ್ನು । **ಪುನಃ**—ತಿರುಗಿಯೂ । **ದದಾತು**—ಅನುಗ್ರಹಿಸಲಿ । **ದೈವ್ಯಃ**—ದೇವತೆಗಳ ಸಮೂಹವೂ ಸಹ ನಮಗೆ ಅದನ್ನು ದಯಪಾಲಿಸಲಿ । **ಸಚೇಮಹಿ**—ನಾವು ಅದನ್ನು ಪೂರ್ಣವಾಗಿ ಹೊಂದಿ ಅನುಭವಿಸೋಣ.

ಭಾವಾರ್ಥ

ನಮ್ಮ ಪಿತೃಗಳಾದ ಅಂಗಿರಸ್ಸುಗಳು ನಮಗೆ ಇಂದ್ರಿಯಾದಿಗಳಿಂದ ಕೂಡಿದ ಪ್ರಾಣಸಂಘಾತವನ್ನು ತಿರುಗಿಯೂ ಅನುಗ್ರಹಿಸಲಿ. ದೇವತೆಗಳ ಸಮೂಹವೂ ಸಹ ನಮಗೆ ಅದನ್ನು ದಯಪಾಲಿಸಲಿ. ನಾವು ಅದನ್ನು ಪೂರ್ಣವಾಗಿ ಅನುಭವಿಸುವಂತಾಗಲಿ.

English Translalion

May our progenitors, may the host of the gods, restore (your) spirit; may we obtain (for you) the aggregate of the functions of life.

ಸಂಹಿತಾಪಾಠಃ

ವಯಂ ಸೋಮ ವ್ರತೇ ತವ ಮನಸ್ತನೂಷು ಬಿಭ್ರತಃ ।

ಪ್ರಜಾವಂತಃ ಸಚೇಮಹಿ ॥ ೬ ॥

ಪದಪಾಠಃ

ವಯಂ । ಸೋಮ । ವ್ರತೇ । ತವ । ಮನಃ । ತನೂಷು । ಬಿಭ್ರತಃ ॥

ಪ್ರಜಾಽವಂತಃ । ಸಚೇಮಹಿ ॥ ೬ ॥

ಸಾಯಣಭಾಷ್ಯಂ

ಹೇ ಸೋಮ ದೇವ ವಯಂ ಬಂಧ್ವಾದಿಯುಸ್ತವ ವ್ರತೇ ತ್ವದೀಯೇ ಕರ್ಮಣಿ । ವ್ರತಮಿತಿ ಕರ್ಮನಾಮ । ತವ ತನೂಷು ತದೀಯೇಷ್ವಂಗೇಷು ಚ ಮನೋ ವಿಭ್ರತಸ್ತ್ವತ್ಪರ್ಯಯುಕ್ತಾಂ ಬುದ್ಧಿಂ ಧಾರಯಂತಃ ಪ್ರಜಾವಂತಃ ಪ್ರಜಾಭಿಃ ಪುತ್ರಪೌತ್ರಾದಿಭಿರ್ಯುಕ್ತಾಃ ಸಚೇಮಹಿ । ಸಂಗಚ್ಛೇಮಹಿ । ಜೀವಂ ವ್ರಾತಂ ಚೇತಿ ಶೇಷಃ ॥

ಪ್ರತಿಪದಾರ್ಥ

ಸೋಮ--ಎಲೈ ಸೋಮದೇವನೇ । **ವಯಂ**—ನಾವು । **ತವ ವ್ರತೇ**—ನಿನ್ನನ್ನು ಪೂಜಿಸುವ ಕರ್ಮದಲ್ಲಿಯೂ । **ತನೂಷು**—ನಿನ್ನ ವಿಷಯದಲ್ಲಿಯೂ । **ಮನಃ**—ಮನಸ್ಸನ್ನು । **ಬಿಭ್ರತಃ**—ಇಟ್ಟವರಾಗಿ । **ಪ್ರಜಾವಂತಃ**—ಪುತ್ರಾದಿಗಳಿಂದ ಕೂಡಿ । **ಸಚೇಮಹಿ**—ಸೌಖ್ಯವನ್ನು ಹೊಂದುವಂತಾಗಲಿ.

ಭಾವಾರ್ಥ

ಎಲೈ ಸೋಮದೇವನೇ, ನಾವು ನಿನ್ನನ್ನು ಪೂಜಿಸುವ ಕರ್ಮದಲ್ಲಿಯೂ ನಿನ್ನ ವಿಷಯದಲ್ಲಿಯೂ ನಿನ್ನನ್ನೇ ಧ್ಯಾನಿಸುತ್ತ ಪುತ್ರಾದಿಗಳನ್ನು ಪಡೆಯುವ ಸೌಖ್ಯವನ್ನು ಹೊಂದುವಂತಾಗಲಿ.

English Translation

Soma, fixing our minds on your worship and its details, may we, blessed with progeny, obtain (the aggregate of the functions of life).

ಐವತ್ತೊಂಟನೆಯ ಸೂಕ್ತ

ಸಾಯಣಭಾಷ್ಯಂ

ಯತ್ತೇ ಯಮಮಿತಿ ದ್ವಾದಶರ್ಚಂ ಷೋಡಶಂ ಸೂಕ್ತಮಾನುಷ್ಟುಭಂ । ಬಂಧ್ವಾದಯೆ ಋಷಯಃ ಸುಬಂಧುದೇಹಾನ್ನಿರ್ಗತಸ್ಯೇಂದ್ರಿಯವರ್ಗಸಹಿತಸ್ಯ ಮನಸಃ ಪುನಸ್ತಸ್ಮಿನ್ಪ್ರವೇಶನಾರ್ಥಮಿದಂ ಸೂಕ್ತಂ ದೃಷ್ಟ್ವಾಜಹನ್ । ಅತಸ್ತೇಽಸ್ಯರ್ಷಯಃ । ಪ್ರತಿಪಾದ್ಯತ್ವಾದಾವರ್ತಮಾನಂ ಮನ ಏವ ದೇವತಾ । ತಥಾ ಚಾನುಕ್ರಾಂತಂ । ಯತ್ತ ಇತಿ ದ್ವಾದಶರ್ಚಮಾನುಷ್ಟುಭಂ ಮನಆವರ್ತನಂ ಜೇಪುರಿತಿ । ಗತೋ ವಿನಿಯೋಗಃ ॥

ಅನುವಾದವು—**ಯತ್ತೇ ಯಮಂ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋಪಾಯನಪುತ್ರರಾದ ಬಂಧ್ವಾದಿಗಳು ಋಷಿಗಳು; ಅನುಷ್ಟುಪ್ಛಂದಸ್ಸು. ಸುಬಂಧುವಿನ ಮೃತದೇಹದಿಂದ ಹೊರಟುಹೋದ ಇಂದ್ರಿಯಸಹಿತವಾದ ಮನಸ್ಸನ್ನು (ಆತ್ಮವನ್ನು) ಪುನಃ ಆ ಮೃತಶರೀರದಲ್ಲಿ ಬಂದು ನೆಲೆಸಬೇಕೆಂದು ಈ ಸೂಕ್ತದಲ್ಲಿ ಬಂಧ್ವಾದಿಗಳು ಪ್ರಾರ್ಥಿಸಿದಾರೆ. ಆದ್ದರಿಂದ ಈ ಸೂಕ್ತಕ್ಕೆ ಬಂಧ್ವಾದಿಗಳೇ ಋಷಿಗಳು. ಸೂಕ್ತದಲ್ಲಿ ಪ್ರತಿಪಾದಿತವಾಗಿರುವ ಮನಸ್ಸೇ (ಪ್ರಾಣವೇ) ದೇವತೆಯು. ಅನುಕ್ರಮಣಿಕೆಯಲ್ಲಿ—**ಯತ್ತ ಇತಿ ದ್ವಾದಶರ್ಚಮಾನುಷ್ಟುಭಂ ಮನ ಆವರ್ತನಂ ಜೇಪುಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೫೮

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೮ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೨೦, ೨೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ಬಂಧುಃ ಶ್ರುತಬಂಧುರ್ವಿಶ್ರುಬಂಧುರ್ಗೌಪಾಯನಾಃ ॥
ದೇವತಾ—ಮನಆವರ್ತನಂ ॥
ಛಂದಃ—ಅನುಷ್ಟುಪ್ ॥

ಸಂಹಿತಾಪಾಠಃ

ಯತ್ತೇ ಯಮಂ ವೈವಸ್ವತಂ ಮನೋ ಜಗಾಮ ದೂರಕಂ ।
ತತ್ತ ಆ ವರ್ತಯಾಮಸೀಹ ಕ್ಷಯಾಯ ಜೀವಸೇ ॥ ೧ ॥

ಪದಪಾಠಃ

ಯತ್ । ತೇ । ಯಮಂ । ವೈವಸ್ವತಂ । ಮನಃ । ಜಗಾಮ । ದೂರಕಂ ।

ತತ್ । ತೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೧ ॥

ಸಾಯಣಭಾಷ್ಯಂ

ಪುರುಷಸ್ಯ ಮ್ರಿಯಮಾಣಸ್ಯ ಮನೋ ನಾಮ ಮಹದ್ಭೂತಂ ಬಹುಧಾ ವಿಶೀರ್ಣಂ ಭವತಿ। ತಸ್ಯ ಪುನಃಸಂಭರಣಮತ್ರೋಚ್ಯತೇ । ಹೇ ಮ್ರಿಯಮಾಣ ಪುರುಷ ಯತ್ತೇ ತವ ಮನೋ ವೈವಸ್ವತಂ ವಿವಸ್ವತಃ ಪುತ್ರಂ ಯಮಂ ದೂರಕಮತ್ಯಂತಂ ದೂರಂ ಯಥಾ ಭವತಿ ತಥಾ ಜಗಾಮ ತೇ ತವ ತನ್ಮನ ಆ ವರ್ತಯಾಮಸಿ । ಆವರ್ತಯಾಮಃ । ಕಿಮರ್ಥಂ । ಇಹ ಕ್ಷಯಾಯೇಹ ಲೋಕೇ ನಿವಾಸಾಯ ಜೀವಸೇ । ಚಿರಕಾಲಜೀವನಾಯೇತ್ಯರ್ಥಃ ॥

ಪ್ರತಿಪದಾರ್ಥ

(ಮರಣೋನ್ಮುಖನಾದ ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ವೈವಸ್ವತಂ**—ವಿವಸ್ವಂತನ ಪುತ್ರನಾದ । **ಯಮಂ**—ಯಮನಲ್ಲಿಗೆ । **ದೂರಕಂ**—ನಮ್ಮಿಂದ ಬಹಳ ದೂರವಾಗಿರುವಂತೆ । **ಜಗಾಮ**—ಹೋಗಿದ್ದರೂ ಸಹ । **ತೇ**—ನಿನ್ನ । **ತತ್**—ಅದೇ ಮನಸ್ಸನ್ನು । **ಇಹ**—ಈ ಲೋಕದಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ಬಹುಕಾಲ ಜೀವಿಸುವುದಕ್ಕೂ। **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಮರಣೋನ್ಮುಖನಾದ ಎಲೈ ಸುಬಂಧುವೇ, ಒಂದುವೇಳೆ ನಿನ್ನ ಮನಸ್ಸು (ಪ್ರಾಣವು) ನಮ್ಮಿಂದ ಬಹುದೂರವಾಗಿರುವಂತೆ ವಿವಸ್ವಂತನ ಪುತ್ರನಾದ ಯಮನಲ್ಲಿಗೆ ಹೋಗಿದ್ದರೂ ಸಹ ನಿನ್ನ ಅದೇ ಮನಸ್ಸನ್ನು ಈ ಲೋಕದಲ್ಲಿ ವಾಸಿಸುವುದಕ್ಕೂ ಮತ್ತು ಬಹುಕಾಲ ಜೀವಿಸುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to Yama, son of Vivaswat, we bring back that (spirit) of yours to dwell here, to live (long).

ವಿಶೇಷವಿಷಯಗಳು

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕುಗಳಲ್ಲಿಯೂ ಇರುವ ಮನಃ ಎಂಬ ಶಬ್ದಕ್ಕೆ ಚೈತನ್ಯ, ಪ್ರಾಣ ಅಥವಾ ಆತ್ಮವೆಂಬರ್ಥವಿರುವುದು. ಮೃತನಾದ ಸುಬಂಧುವಿನ ಶರೀರದಲ್ಲಿದ್ದ ಪ್ರಾಣವು ಅಥವಾ ಆತ್ಮವು ಬಹುದೂರಪ್ರದೇಶದಲ್ಲಿರುವ ಯಮಲೋಕದಲ್ಲಿ ಯಮನ ಬಳಿಗೆ ಹೊರಟುಹೋಗಿರುವುದನ್ನು ನಾವು ಪುನಃ ಹಿಂತಿರುಗಿಸಲು ಪ್ರಯತ್ನಿಸುತ್ತೇವೆ ಎಂದು ಬಂಧ್ವಾದಿಗಳ ವಾಕ್ಯವು ಈ ಸೂಕ್ತದ ಋಕ್ಕುಗಳಲ್ಲಿ ವಿವೃತವಾಗಿದೆ. ಹೆಚ್ಚು ವಿವರಣೆಗಾಗಿ ೫೭ ನೇ ಸೂಕ್ತದ ಪೀಠಿಕೆಯನ್ನೂ ಭಾಷ್ಯಕಾರರ ವಿವರಣೆಯನ್ನೂ ನೋಡಿ.

संहितापाठः

यत्ते दिवं यत्पृथिवीं मनो जगाम दूरकं ।

तत्त आ वर्तयामसीह क्षयाय जीवसे ॥ ७ ॥

पदपाठः

यत् । ते । दिवं । यत् । पृथिवीं । मनः । जगाम । दूरकं ।

तत् । ते । आ । वर्तयामसि । इह । क्षयाय । जीवसे ॥ ७ ॥

सायणभाष्यं

हे सुबंधो यन्मनो दिवं जगामेति यच्छब्दः पृथिवीं दूरकं । दूरकमिति क्रियाविशेषणं । तदिह निवासाय जीवनाय चावर्तयामः ॥

प्रतिपदार्थ

(ಎಲೈ ಸುಬಂಧುವೇ) **यत्**—ಒಂದುವೇಳೆ । **ते मनः**—ನಿನ್ನ ಚೇತನವು । **दूरकं**—ನಮ್ಮಿಂದ ದೂರವಾಗಿರುವಂತೆ । **दिवं**—ದ್ಯುಲೋಕಕ್ಕೆ । **जगाम**—ಹೋಗಿದ್ದರೂ । **यत्**—ಒಂದುವೇಳೆ । **पृथिवीं**—ಪೃಥ್ವಿಗೆ (ಹೋಗಿದ್ದರೂ) । **तत् ते**—ನಿನ್ನ ಅದೇ ಚೇತನವನ್ನು । **इह**—ಈ ಲೋಕದಲ್ಲಿ । **क्षयाय**—ವಾಸಿಸುವುದಕ್ಕೂ । **जीवसे**—ಬಹುಕಾಲ ಜೀವಿಸುವುದಕ್ಕೂ । **आ वर्तयामसि**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

भावार्थ

ಎಲೈ ಸುಬಂಧುವೇ, ನಿನ್ನ ಚೇತನವು ನಮ್ಮಿಂದ ದೂರವಾಗಿರುವಂತೆ ಒಂದುವೇಳೆ ದ್ಯುಲೋಕಕ್ಕೆ ಹೋಗಿರಲಿ ಅಥವಾ ಪೃಥ್ವಿಗೆ ಹೋಗಿರಲಿ, ನಿನ್ನ ಅದೇ ಚೇತನವನ್ನು ಈ ಲೋಕದಲ್ಲಿ ವಾಸಿಸುವುದಕ್ಕೂ ಬಹುಕಾಲ ಜೀವಿಸುವುದಕ್ಕೂ ಇಲ್ಲಿಗೆ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translatin

Although your spirit have gone far away to heaven, or to earth, we bring back that (spirit) of yours to dwell here, to live (long).

संहितापाठः

यत्ते भूमिं चतुर्भृष्टिं मनो जगाम दूरकं ।

ತತ್ತ ಆ ವರ್ತಯಾಮುಸೀಹ ಕ್ಷಯಾಯ ಜೀವಸೇ ॥ ೩ ॥

ಪದಪಾಠಃ

ಯತ್ । ತೇ । ಭೂಮಿಂ । ಚತುಃಽಭೃಷ್ಟಿಂ । ಮನಃ । ಜಗಾಮ । ದೂರಕಂ ।

ತತ್ । ತೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೩ ॥

ಸಾಯಣಭಾಷ್ಯಂ

ಹೇ ಸುಬಂಧೋ ಯನ್ಮನೋ ಭೂಮಿಂ ಚತುರ್ಭೃಷ್ಟಿಂ । ಚತುರ್ದಿಕ್ಷು ಭ್ರಂಶೋ ಯಸ್ಯಾಃ ಸಾ । ತಾಂ ಜಗಾಮ ತದಾವರ್ತಯಾಮಃ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**-ನಮ್ಮಿಂದ ದೂರವಾಗಿರುವಂತೆ । **ಚತುರ್ಭೃಷ್ಟಿಂ**—ನಾಲ್ಕು ದಿಕ್ಕುಗಳಿಂದ ವ್ಯಾಪ್ತವಾದ । **ಭೂಮಿಂ**—ಭೂಮಿಗೆ । **ಜಗಾಮ**—ಹೋಗಿದ್ದರೂ । **ತತ್ ತೇ**—ಆದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ದೀರ್ಘಕಾಲ ಜೀವಿಸುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮ್ಮಿಂದ ದೂರವಾಗಿರುವಂತೆ ನಾಲ್ಕು ದಿಕ್ಕುಗಳಿಂದ ವ್ಯಾಪ್ತವಾದ ಭೂಮಿಗೆ ಹೋಗಿದ್ದರೂ, ಆದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ ದೀರ್ಘಕಾಲ ಜೀವಿಸುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to the four-quartered earth, we bring back that (spirit) of yours to dwell here, to live (long).

ಸಂಹಿತಾಪಾಠಃ

ಯತ್ತೇ ಚತಸ್ರಃ ಪ್ರದಿಶೋ ಮನೋ ಜಗಾಮ ದೂರಕಂ ।

ತತ್ತ ಆ ವರ್ತಯಾಮುಸೀಹ ಕ್ಷಯಾಯ ಜೀವಸೇ ॥ ೪ ॥

ಪದಪಾಠಃ

ಯತ್ । ತೇ । ಚತಸ್ರಃ । ಪ್ರ್ಯದಿಶಃ । ಮನಃ । ಜಗಾಮ । ದೂರಕಂ ।

ತತ್ । ತ್ವೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೪ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನಃ ಪ್ರದಿಶಃ ಪ್ರಕೃಷ್ಟಾ ಮಹಾದಿಶಶ್ಚತಸ್ರೋ ಜಗಾಮ ತದಾವರ್ತಯಾಮಃ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನಮ್ಮಿಂದ ದೂರವಾಗಿರುವಂತೆ । **ಚತಸ್ರಃ ಪ್ರದಿಶಃ**—ನಾಲ್ಕು ದಿಗಂತಗಳಿಗೂ । **ಜಗಾಮ**—ಹೋಗಿದ್ದರೂ । **ತತ್ ತ್ವೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ದೀರ್ಘಕಾಲ ಜೀವಿಸುವುದಕ್ಕೂ । **ಆ ವರ್ತಯಾಮಾಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮ್ಮಿಂದ ದೂರವಾಗಿರುವಂತೆ ನಾಲ್ಕು ದಿಗಂತಗಳಿಗೂ ಹೋಗಿದ್ದರೂ, ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ, ದೀರ್ಘಕಾಲ ಬದುಕುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to the four regions (of space), we bring back that (spirit) of yours to dwell here, to live (long).

ಸಂಹಿತಾಪಾಠಃ

ಯತ್ತೇ ಸಮುದ್ರಮರ್ಣವಂ ಮನೋ ಜಗಾಮ ದೂರಕಂ ।

ತತ್ತ ಆ ವರ್ತಯಾಮುಸೀಹ ಕ್ಷಯಾಯ ಜೀವಸೇ ॥ ೫ ॥

ಪದಪಾಠಃ

ಯತ್ । ತೇ । ಸಮುದ್ರಂ । ಅರ್ಣವಂ । ಮನಃ । ಜಗಾಮ । ದೂರಕಂ ।

ತತ್ । ತ್ವೇ । ಆ । ವರ್ತಯಾಮುಸಿ । ಇಹ । ಕ್ಷಯಾಯ । ಜೀವಸೇ ॥ ೫ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನೋಽರ್ಣವಂ । ಅರ್ಣಾಂಸ್ಯುದಕಾನಿ । ತದ್ವಂತಂ ಸಮುದ್ರಂ ಮೇಘಂ ವಾ ಜಗಾಮ ತದಾವರ್ತಯಾಮಃ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನಮ್ಮಿಂದ ದೂರವಾಗುವಂತೆ । **ಅರ್ಣವಂ**—ನೀರಿನಿಂದ ತುಂಬಿದ । **ಸಮುದ್ರಂ**—ಸಮುದ್ರಕ್ಕೆ (ಅಥವಾ ಜಲಭರಿತವಾದ ಮೇಘದ ಪ್ರದೇಶಕ್ಕೆ) । **ಜಗಾಮ**—ಹೋಗಿದ್ದರೂ । **ತತ್ ತೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ಬದುಕುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮ್ಮಿಂದ ದೂರವಾಗಿರುವಂತೆ ಜಲಭರಿತವಾದ ಸಮುದ್ರದ ಅಥವಾ ಮೇಘದ ಪ್ರದೇಶಕ್ಕೆ ಹೋಗಿದ್ದರೂ ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ ಮತ್ತು ಬಹುಕಾಲ ಬದುಕುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to the watery ocean, we bring back that (spirit) of yours to dwell here, to live (long).

ಸಂಹಿತಾಪಾಠಃ

ಯತ್ತೇ ಸುರೀಚೀಃ ಪ್ರವತೋ ಮನೋ ಜಗಾಮ ದೂರಕಂ ।
ತತ್ತ ಆ ವರ್ತಯಾಮಸೀಹ ಕ್ಷಯಾಯ ಜೀವಸೇ ॥ ೬ ॥

ಪದಪಾಠಃ

ಯತ್ । ತೇ । ಸುರೀಚೀಃ । ಪ್ರವತಃ । ಮನಃ । ಜಗಾಮ । ದೂರಕಂ ।
ತತ್ । ತೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೬ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನಃ ಪ್ರವತಃ ಪ್ರಗಚ್ಛಂತೀರ್ಮರೀಚೀರ್ದೀಪ್ತೀರ್ಜಗಾಮ ತದಿತಿ ಗತಂ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನಮ್ಮಿಂದ ದೂರವಾಗುವಂತೆ । **ಪ್ರವತಃ**—ಸರ್ವದಾ ಚಲಿಸುತ್ತಿರುವ । **ಮರೀಚೀಃ**—ಪ್ರಭೆಗಳ (ಸೂರ್ಯ) ಲೋಕಕ್ಕೆ । **ಜಗಾಮ**—ಹೋಗಿದ್ದರೂ । **ತತ್ ತೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ದೀರ್ಘಕಾಲ ಬದುಕುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮ್ಮಿಂದ ದೂರವಾಗಿರತಕ್ಕ ಮತ್ತು ಸರ್ವನಾ ಚಲಿಸುತ್ತಿರುವ ಪ್ರಭೆಗಳ ಲೋಕಕ್ಕೆ ಹೋಗಿದ್ದರೂ, ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ ಮತ್ತು ದೀರ್ಘಕಾಲ ಬದುಕುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to the advancing rays of light, we bring back that (spirit) of yours to dwelling here, to live (long).

ಸಂಹಿತಾಪಾಠ

ಯತ್ತೇ ಅಪ್ಸೋ ಯದೋಷಧೀರ್ಮನೋ ಜಗಾಮ ದೂರಕಂ ।
ತತ್ತ ಆ ವರ್ತಯಾಮಸೀಹ ಕ್ಷಯಾಯ ಜೀವಸೇ ॥ ೭ ॥

ಪದಪಾಠಃ

ಯತ್ । ತೇ । ಅಪಃ । ಯತ್ । ಓಷಧೀಃ । ಮನಃ । ಜಗಾಮ । ದೂರಕಂ ।
ತತ್ । ತೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೭ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನೋಽಪ ಉದಕಂ ಯದೋಷಧೀರ್ವನಸ್ಪತೀನಿತಿ ತದಿತಿ ಗತಂ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ಅತ್ಯಂತ ದೂರವಾಗಿರುವ । **ಅಪಃ**—ಜಲವನ್ನೂ । **ಓಷಧೀಃ**—ಲತಾದಿಗಳನ್ನೂ । **ಜಗಾಮ**—ಹೋಗಿ ಸೇರಿದ್ದರೂ । **ತತ್ ತೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ಬಹುಕಾಲ ಬದುಕುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ಅತ್ಯಂತ ದೂರವಾಗಿರುವ ಜಲವನ್ನೂ, ಅಥವಾ ಲತಾದಿಗಳನ್ನೂ ಹೋಗಿಸೇರಿದ್ದರೂ, ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ, ಬಹುಕಾಲ ಬದುಕುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to the waters, to the plants, we bring back that (spirit) of yours to dwell here, to live (long).

ಸಂಹಿತಾಪಾಠಃ

ಯತ್ತೇ ಸೂರ್ಯಂ ಯದುಷಸಂ ಮನೋ ಜಗಾಮ ದೂರಕಂ ।

ತತ್ತ ಆ ವರ್ತಯಾಮಸೀಹ ಕ್ಷಯಾಯ ಜೀವಸೇ ॥ ೮ ॥

ಪದಪಾಠಃ

ಯತ್ । ತೇ । ಸೂರ್ಯಂ । ಯತ್ । ಉಷಸಂ । ಮನಃ । ಜಗಾಮ । ದೂರಕಂ ।

ತತ್ । ತೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೮ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನಃ ಸೂರ್ಯಂ ಸೂರ್ಯಮಿವ ಯದುಷಸಂ ತದಿತಿ ಗತಂ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನಮಗಿಂತ ಬಹುದೂರವಿರುವ । **ಸೂರ್ಯಂ**—ಸೂರ್ಯಲೋಕಕ್ಕೂ । **ಉಷಸಂ**—ಉಷಸ್ಸಿನ ಲೋಕಕ್ಕೂ । **ಜಗಾಮ**—ಹೋಗಿದ್ದರೂ ಸಹ । **ತತ್ ತೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿಗೆ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ಬಹುಕಾಲ ಜೀವಿಸುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇನೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮಗಿಂತ ಬಹುದೂರವಿರುವ ಸೂರ್ಯಲೋಕಕ್ಕೂ, ಉಷಸ್ಸಿನ ಲೋಕಕ್ಕೂ ಹೋಗಿದ್ದರೂ ಸಹ ಆದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ, ಬಹುಕಾಲ ಜೀವಿಸುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇನೆ.

English Translation

Although your spirit have gone far away to the sun, to the dawn, we bring back that (spirit) of yours to dwell here, to live (long).

ಸಂಹಿತಾಪಾಠಃ

ಯತ್ತೇ ಪರ್ವತಾನ್ಬೃಹತೋ ಮನೋ ಜಗಾಮ ದೂರಕಂ ।

ತತ್ತ ಆ ವರ್ತಯಾಮುಸೀಹ ಕ್ಷಯಾಯ ಜೀವಸೇ ॥ ೯ ॥

ಪದಪಾಠಃ

ಯತ್ । ತೇ । ಪರ್ವತಾನ್ । ಬೃಹತಃ । ಮನಃ । ಜಗಾಮ । ದೂರಕಂ ।

ತತ್ । ತೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೯ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನೋ ಬೃಹತಃ ಪರ್ವತಾನ್ ತದಿತಿ ಗತಂ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನಮುಗಿಂತ ದೂರವಾಗಿರುವಂತೆ । **ಬೃಹತಃ**—ಬಹು ದೊಡ್ಡವಾದ । **ಪರ್ವತಾನ್**—ಪರ್ವತಪ್ರದೇಶಗಳಿಗೆ । **ಜಗಾಮ**—ಹೋಗಿದ್ದರೂ । **ತತ್ ತೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ಬಹುಕಾಲ ಜೀವಿಸುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮ್ಮಿಂದ ಬಹುದೂರವಾಗಿರುವ ಮತ್ತು ಬಹು ದೊಡ್ಡವಾದ ಪರ್ವತಪ್ರದೇಶಗಳಿಗೆ ಹೋಗಿದ್ದರೂ, ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ, ಬಹುಕಾಲ ಜೀವಿಸುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to the great mountains, we bring back that (spirit) of yours to dwell here, to live (long).

ಸಂಹಿತಾಪಾಠಃ

ಯತ್ತೇ ವಿಶ್ವಮಿದಂ ಜಗನ್ಮನೋ ಜಗಾಮ ದೂರಕಂ ।

ತತ್ತ ಆ ವರ್ತಯಾಮುಸೀಹ ಕ್ಷಯಾಯ ಜೀವಸೇ ॥ ೧೦ ॥

ಪದಪಾಠಃ

ಯತ್ । ತೇ । ವಿಶ್ವಂ । ಇದಂ । ಜಗತ್ । ಮನಃ । ಜಗಾಮ । ದೂರಕಂ ।

ತತ್ । ತ್ವೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೧೦ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನೋ ವಿಶ್ವಮಿತಿ ತದಿತಿ ಗತಂ । ಚತಸ್ರ ಋಚೋ ನಿಗದಸಿದ್ಧಾಃ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನವ್ಮಿಂದ ಬಹುದೂರವಾಗಿರುವಂತೆಯೂ । **ಇದಂ ವಿಶ್ವಂ ಜಗತ್**—ಈ ಸಕಲ ಜಗತ್ತನ್ನೂ ವ್ಯಾಪಿಸುವಂತೆ । **ಜಗಾಮ**—ಹೋಗಿದ್ದರೂ । **ತತ್ ತ್ವೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ಜೀವಿಸುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನವ್ಮಿಂದ ಬಹುದೂರವಾಗಿರುವಂತೆ, ಈ ಸಕಲ ಜಗತ್ತನ್ನೂ ವ್ಯಾಪಿಸುವಂತೆ ಹೋಗಿದ್ದರೂ, ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ, ಜೀವಿಸುವುವಕ್ಕೂ ಹಿಂತಿರುಗಿ ಬರುವಂತೆ ನಾಡುತ್ತೇವೆ.

English Translation

Although your spirit have gone to the remotest regions of this universe, we bring back that spirit of yours to dwell here, to live (long).

ಸಂಹಿತಾಪಾಠಃ

ಯತ್ತೇ ಪರಾಃ ಪರಾವತೋ ಮನೋ ಜಗಾಮ ದೂರಕಂ ।
ತತ್ತ ಆ ವರ್ತಯಾಮುಸೀಹ ಕ್ಷಯಾಯ ಜೀವಸೇ ॥ ೧೧ ॥

ಪದಪಾಠಃ

ಯತ್ । ತ್ವೇ । ಪರಾಃ । ಪರಾ೨ವತಃ । ಮನಃ । ಜಗಾಮ । ದೂರಕಂ ।
ತತ್ । ತ್ವೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೧೧ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನಃ ಪರಾಃ ಪರಾವತೋ೨ತ್ಯಂತಂ ದೂರದೇಶಾಞ್ಜಗಾಮ ತದಿತಿ ಗತಂ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನಮ್ಮಿಂದ ದೂರವಾಗಿರುವಂತೆ । **ಪರಾಃ ಪರಾವತಃ**—ಅತ್ಯಂತ ದೂರಪ್ರದೇಶಕ್ಕೆ । **ಜಗಾಮ**—ಹೋಗಿದ್ದರೂ । **ತತ್ ತೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯ**—ವಾಸಿಸುವುದಕ್ಕೂ । **ಜೀವಸೇ**—ಬಹುಕಾಲ ಜೀವಿಸುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮ್ಮಿಂದ ದೂರವಾಗಿರುವಂತೆ ಅತ್ಯಂತ ದೂರಪ್ರದೇಶಕ್ಕೆ ಹೋಗಿದ್ದರೂ ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ, ಬಹುಕಾಲ ಜೀವಿಸುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to the remotest regions, we bring back that (spirit) of yours to dwell here, to live (long).

ಸಂಹಿತಾಪಾಠಃ

ಯತ್ತೇ ಭೂತಂ ಚ ಭವ್ಯಂ ಚ ಮನೋ ಜಗಾಮ ದೂರಕಂ ।
ತತ್ತ ಆ ವರ್ತಯಾಮಸೀಹ ಕ್ಷಯಾಯ ಜೀವಸೇ ॥ ೧೭ ॥

ಪದಪಾಠಃ

ಯತ್ । ತೇ । ಭೂತಂ । ಚ । ಭವ್ಯಂ । ಚ । ಮನಃ । ಜಗಾಮ । ದೂರಕಂ ।
ತತ್ । ತೇ । ಆ । ವರ್ತಯಾಮಸಿ । ಇಹ । ಕ್ಷಯಾಯ । ಜೀವಸೇ ॥ ೧೭ ॥

ಸಾಯಣಭಾಷ್ಯಂ

ಹೇ ಸುಬಂಧೋ ಯತ್ತೇ ಮನೋ ಭೂತಂ ಚ ಭವ್ಯಂ ಚೇತ್ಯನೇನ ಭೂತಭವ್ಯಾತ್ಮಕವ್ಯತಿರೇಕೇಣ ಕಸ್ಯಚಿದಭಾವಾದ್ವರ್ತಮಾನಸ್ಯ ಪೃಥಗೇವಾಭಿಧಾನಾತ್ ಕೃತ್ಸ್ನಂ ಪ್ರಪಂಚಮುಕ್ತಂ ಭವತಿ । ತತ್ರ ಸರ್ವತ್ರ ಗತಂ ಮನೋ ಜೀವನಾಯ ನಿವಾಸಾಯ ಚಾವರ್ತಯಾಮಃ ॥

ಪ್ರತಿಪದಾರ್ಥ

(ಎಲೈ ಸುಬಂಧುವೇ) **ಯತ್**—ಒಂದುವೇಳೆ । **ತೇ ಮನಃ**—ನಿನ್ನ ಚೇತನವು । **ದೂರಕಂ**—ನಮ್ಮಿಂದ ದೂರವಾಗಿರುವಂತೆ । **ಭೂತಂ**—ಭೂತಕಾಲದ ತತ್ತ್ವಗಳಲ್ಲಿಯೂ । **ಭವ್ಯಂ**—ಭವಿಷ್ಯತ್ಕಾಲದ ತತ್ತ್ವಗಳಲ್ಲಿಯೂ ।

ಜಗಾಮ—ಹೋಗಿ ಐಕ್ಯವಾಗಿದ್ದರೂ । **ತತ್ ತೇ**—ಅದೇ ನಿನ್ನ ಚೇತನವನ್ನು । **ಇಹ**—ಇಲ್ಲಿ । **ಕ್ಷಯಾಯೆ**-ವಾಸಿಸುವುದಕ್ಕೂ । **ಜೀವಸೇ**—ಬಹುಕಾಲ ಜೀವಿಸುವುದಕ್ಕೂ । **ಆ ವರ್ತಯಾಮಸಿ**—ಹಿಂತಿರುಗಿ ಬರುವಂತೆ ಮಾಡುತ್ತೇವೆ.

ಭಾವಾರ್ಥ

ಎಲೈ ಸುಬಂಧುವೇ, ಒಂದುವೇಳೆ ನಿನ್ನ ಚೇತನವು ನಮ್ಮಿಂದ ದೂರವಾಗಿರುವಂತೆ ಭೂತಕಾಲದ ತತ್ತ್ವಗಳಲ್ಲಿಯೂ, ಭವಿಷ್ಯತ್ಕಾಲದ ತತ್ತ್ವಗಳಲ್ಲಿಯೂ ಹೋಗಿ ಐಕ್ಯವಾಗಿದ್ದರೂ, ಅದೇ ನಿನ್ನ ಚೇತನವನ್ನು ಇಲ್ಲಿ ವಾಸಿಸುವುದಕ್ಕೂ, ಬಹುಕಾಲ ಜೀವಿಸುವುದಕ್ಕೂ ಹಿಂತಿರುಗಿ ಬರುವಂತೆ ಮಾಡುತ್ತೇವೆ.

English Translation

Although your spirit have gone far away to what has been, or to what is to be, we bring back that (spirit) of yours to dwell here, to live (long).

ಐವತ್ತೊಂಭತ್ತನೆಯ ಸೂಕ್ತ

ಸಾಯಣಭಾಷ್ಯಂ

ಪ್ರ ತಾರೀತಿ ದಶರ್ಚಂ ಸಪ್ತದಶಂ ಸೂಕ್ತಂ ಬಂಧ್ವಾದೀನಾಂ ತ್ರಯಾಣಾಂ ಗೌಪಾಯನಾನಾಮಾರ್ಷಂ । ಆದಿತಃ ಸಪ್ತ ತ್ರಿಷ್ಟುಭಃ । ಅಷ್ಟಮೀ ಪಂಚಾಷ್ಟಕಾ ಪಂಕ್ತಿಃ । ನವಮೀ ಷಡಷ್ಟಕಾ ಮಹಾಪಂಕ್ತಿಃ । ದಶಮೀ ಪಂಕ್ತ್ಯುತ್ತರಾ । ಆದ್ಯೌ ದಶಕಾವಷ್ಟಕಾಸ್ತ್ರಯಃ । ಅನು. ೯-೧೧. । ಇತ್ಯುಕ್ತಲಕ್ಷಣಸದ್ಭಾವಾತ್ । ಏಕಾಕ್ಷರಾಧಿಕ್ಯಾದ್ಭೂರಿಗ್ವಿಶೇಷೇಣೇಯಂ ವೇದಿತವ್ಯಾ । ಸೂಕ್ತಸ್ಯಾದಿತಶ್ಚತಸ್ರೋ ದೇವಹಾತ್ರಾಣಾನ್ನಿರ್ಗಮಯಿತ್ರ್ಯಃ ನಿರ್ಯತೇರ್ನಿವೃತ್ತ್ಯರ್ಥಂ ಬಂಧ್ವಾದಯೋಽಜಪನ್ । ಮೋ ಷು ಣಃ ಸೋಮೇತಿ ಚತುರ್ಥ್ಯಾ ಮೇವ ಮೃತ್ಯುನಿವೃತ್ತ್ಯರ್ಥಂ ಸೋಮಮಸ್ತುವನ್ । ಅತಶ್ಚತಸೃಣಾಂ ನಿರ್ಯತಿರ್ದೇವತಾ ಚತುರ್ಥ್ಯಃ ಸೋಮಶ್ಚ । ಅಸುನೀತೇ ಮನ ಇತಿ ದ್ವಾಭ್ಯಾಮಸುನೀತಿನಾಮ್ನೀಂ ದೇವೀಮಸ್ತುವನ್ । ಅತಸ್ತಯೋಃ ಸಾ ದೇವತಾ । ಪುನರ್ನೋ ಅಸುಮಿತ್ಯಸ್ಯಾಃ ಪೃಥಿವ್ಯಾದ್ಯಾ ಲಿಂಗೋಕ್ತಾ ದೇವತಾಃ । ತತಸ್ತಿಸೃಭಿಃ ಶಿಷ್ಟ್ವಾಭಿಃ ಪಂಕ್ತಿಮಹಾಪಂಕ್ತಿಪಂಕ್ತ್ಯುತ್ತರಾಭಿರ್ದ್ಯಾವಾಪೃಥಿವ್ಯಾವಿತಿ ದ್ಯಾವಾಪೃಥಿವ್ಯೌ ದೇವತೇ । ಸಮಿಂದ್ರೇತ್ಯರ್ಧರ್ಚಸ್ಯೇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಪ್ರ ತಾರೀತಿ ದಶರ್ಚೇ ಚತಸ್ರೋ ನಿರ್ಯತ್ಯಪನೋದನಾರ್ಥಂ ಜೇಪುಶ್ಚತುರ್ಥ್ಯಾಂ ಸೋಮಂ ಚಾಸ್ತುವನ್ಮೃತ್ಯೋರಪಗಮಾಯೋತ್ತರಾಭ್ಯಾಂ ದೈವೀಮಸುನೀತಿಂ ಸಪ್ತಮ್ಯಾಂ ಲಿಂಗೋಕ್ತದೇವತಾಃ ಶಿಷ್ಟ್ವಾಭಿಃ ಪಂಕ್ತಿಮಹಾಪಂಕ್ತಿಪಂಕ್ತ್ಯುತ್ತರಾಭಿರ್ದ್ಯಾವಾಪೃಥಿವ್ಯೌ ಸಮಿಂದ್ರೇತೀಂದ್ರಂ ಚಾರ್ಧರ್ಚೇನೇತಿ ॥ ಗತೋ ವಿನಿಯೋಗಃ ॥

ಅನುವಾದವು—**ಪ್ರ ತಾರ್ಯಾಯುಃ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹದಿನೇಳನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋಪಾಯನಪುತ್ರರಾದ ಬಂಧ್ವಾದಿ ಮೂರು ಮಂದಿ ಸಹೋದರರು ಋಷಿಗಳು. ಈ ಸೂಕ್ತದ ಮೊದಲಿನ ಏಳು ಋಕ್ಕುಗಳು ತ್ರಿಷ್ಟುಪ್ಛಂದಸ್ಕವು. ಎಂಟನೆಯ ಋಕ್ಕು ಎಂಟೆಂಟು ಅಕ್ಷರಗಳ ಐದು ಪಾದಗಳುಳ್ಳ ಪಂಕ್ತಿಶ್ಛಂದಸ್ಕವು. ಒಂಭತ್ತನೆಯ ಋಕ್ಕು ಎಂಟೆಂಟು ಅಕ್ಷರಗಳ

ಆರು ಪಾದಗಳುಳ್ಳ ಮಹಾಪಂಕ್ತಿ ಎಂಬ ಛಂದಸ್ಸಿನದು. ಹತ್ತನೆಯ ಋಕ್ಕು ಪಂಕ್ತ್ಯುತ್ತರಾ ಎಂಬ ಛಂದಸ್ಸಿನದು. ಈ ಛಂದಸ್ಸಿನ ಋಕ್ಕಿನಲ್ಲಿ ಐದು ಪಾದಗಳಿದ್ದು ಮೊದಲಿನ ಎರಡು ಪಾದಗಳಲ್ಲಿ ಹತ್ತುಹತ್ತು ಅಕ್ಷರಗಳೂ ಉಳಿದ ಮೂರು ಪಾದಗಳಲ್ಲಿ ಎಂಟೆಂಟು ಅಕ್ಷರಗಳೂ ಇರುವವು (ಅನು. ೯-೧೧) ಎಂದು ಈ ಛಂದಸ್ಸಿನ ಲಕ್ಷಣವು. ಪ್ರಕೃತ ಋಕ್ಕಿನಲ್ಲಿ ಒಂದು ಅಕ್ಷರವು ಅಧಿಕವಾಗಿರುವುದು. ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳಲ್ಲಿ ದೇಹದಿಂದ ಪ್ರಾಣವನ್ನು ಬೇರ್ಪಡಿಸಿ ಒಯ್ಯುವ ನಿರ್ಋತಿದೇವತೆಯ ಪುನರಾಗಮನಾರ್ಥವಾಗಿ ಒಂಥ್ವಾದಿಗಳು ಪ್ರಾರ್ಥಿಸಿ ಜಪಿಸಿದಾರೆ. **ಮೋ ಷು ಣಃ ಸೋಮ** ಎಂಬ ನಾಲ್ಕನೆಯ ಋಕ್ಕಿನಲ್ಲಿ ಮೃತ್ಯುವಿನ ನಿವೃತ್ತ್ಯರ್ಥವಾಗಿ ಸೋಮದೇವತೆಯನ್ನು ಸ್ತುತಿಸಿದಾರೆ. ಆದ್ದರಿಂದ ಈ ನಾಲ್ಕು ಋಕ್ಕುಗಳಿಗೆ ನಿರ್ಋತಿಯೇ ದೇವತೆಯು, ನಾಲ್ಕನೆಯ ಋಕ್ಕಿಗೆ ನಿರ್ಋತಿಯ ಜತೆಗೆ ಸೋಮನೂ ಸೇರಿ ದೇವತೆಯು. **ಅಸುನೀತೇ ಮನಃ** ಎಂಬ ಋಕ್ಕಿಗೂ ಅದರ ಮುಂದಿನ (೫-೬ ಋಕ್ಕುಗಳು) ಋಕ್ಕುಗಳಲ್ಲಿ ಅಸುನೀತೇ ಎಂಬ ಹೆಸರಿನ ದೇವತೆಯನ್ನು ಸ್ತುತಿಸಿರುವುದರಿಂದ ಆ ಋಕ್ಕುಗಳಿಗೂ ಅಸುನೀತಿಯೇ ದೇವತೆಯು, **ಪುನರ್ನೋ ಅಸುಂ** ಎಂಬ ಏಳನೆಯ ಋಕ್ಕಿಗೆ ಪೃಥಿವಿಯೇ ಮೊದಲಾದ ಋಕ್ಕಿನಲ್ಲಿ ಪ್ರತಿಪಾದಿತರಾಗಿರುವವರು ದೇವತೆಗಳು. ಅದರ ಮುಂದಿನ ಋಕ್ಕುಗಳಿಗೆ ಎಂದರೆ ಪಂಕ್ತಿ, ಮಹಾಪಂಕ್ತಿ, ಪಂಕ್ತ್ಯುತ್ತರಾ ಎಂಬ ಛಂದಸ್ಸಿನ ಮೂರು ಋಕ್ಕುಗಳಿಗೆ (೮-೧೦ ಋಕ್ಕುಗಳಿಗೆ) ದ್ಯಾವಾಪೃಥಿವಿಗಳು ದೇವತೆಯು; ಆದರೆ **ಸಮಿಂದ್ರೇರಯ** ಎಂಬ ೧೦ ನೇ ಋಕ್ಕಿನ ಪೂರ್ವಾರ್ಧಕ್ಕೆ ಇಂದ್ರನು ದೇವತೆಯು. ಅನುಕ್ರಮಣಿಕೆಯಲ್ಲಿ— **ಪ್ರ ತಾರೀತಿ ದಶರ್ಚೇ ಚತಸ್ರೋ ನಿರ್ಋತ್ಯಪನೋದನಾರ್ಥಂ ಜೇಪುಶ್ಚತುರ್ಥ್ಯಂ ಸೋಮಂ ಚಾಸ್ತುವನ್ಪೃತ್ಯೋರಪಗಮಾಯೋತ್ತರಾಭ್ಯಾಂ ದ್ಯಾವೀಮಸುನೀತಿಂ ಸಪ್ತಮ್ಯಾಂ ಲಿಂಗೋಕ್ತದೇವತಾಃ ಶಿಷ್ಟಾಭಿಃ ಪಂಕ್ತಿಮಹಾಪಂಕ್ತಿಪಂಕ್ತ್ಯುತ್ತರಾಭಿರ್ದ್ಯಾವಾಪೃಥಿವ್ಯೌ ಸಮಿಂದ್ರೇತೀಂದ್ರಂ ಚಾರ್ಧರ್ಚೇನ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೫೯

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೫೯ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೨೨,೨೩ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥

ಋಷಿಃ—ಬಂಧುಃ ಶ್ರುತಬಂಧುರ್ವಿಪ್ರಬಂಧುರ್ಗೌಪಾಯನಾಃ ॥

ದೇವತಾ—೧-೩. ನಿರ್ಋತಿಃ । ೪. ನಿರ್ಋತಿಃ ಸೋಮಶ್ಚ । ೫-೬. ಅಸುನೀತಿಃ । ೭. ಲಿಂಗೋಕ್ತದೇವತಾಃ (ಪೃಥಿವೀ, ದ್ಯೌಃ ಅಂತರಿಕ್ಷಂ ಸೋಮಃ ಪೂಷಾ ಪಥ್ಯಾ ಸ್ವಸ್ತಿ) । ೮-೯, ೧೦ರಲ್ಲಿ ಉತ್ತರಾರ್ಧ. ದ್ಯಾವಾಪೃಥಿವ್ಯೌ । ೧೦ರಲ್ಲಿ ಪೂರ್ವಾರ್ಧ. ದ್ಯಾವಾಪೃಥಿವ್ಯಾವಿಂದ್ರಶ್ಚ ॥

ಛಂದಃ—೧-೭- ತ್ರಿಷ್ಟುಪ್ । ೮. ಪಂಕ್ತಿಃ । ೯. ಮಹಾಪಂಕ್ತಿಃ ।
೧೦. ಪ್ರಂಕ್ತ್ಯುತ್ತರಾ ॥

ಸಂಹಿತಾಪಾಠಃ

ಪ್ರ ತಾರ್ಯಾಯುಃ ಪ್ರತರಂ ನವೀಯಃ ಸ್ಥಾತಾರೇವ ಕ್ರತುಮತಾ ರಥಸ್ಯ ।
ಅಧ ಚ್ಯವಾನ ಉತ್ತವೀತ್ಯರ್ಥಂ ಪರಾತರಂ ಸು ನಿರ್ಋತಿರ್ಜಿಹೀತಾಂ ॥೧॥

पदपाठः

प्र । तारि । आयुः । प्रऽतरम् । नवीयः । स्थातारःऽइव । क्रतुऽमता । रथस्य ।
अध । च्यवानः । उत् । तवीति । अर्धम् । परःऽतरम् । सु । निःऽऋतिः । जिहीताम् ॥ ८ ॥

सायणभाष्यं

सुबंधोरायुरायुष्यं प्र तारि । प्रवर्धताम् । प्रपूर्वस्तिरतिर्वर्धनार्थः । कथं प्रवर्धतामिति उच्यते । प्रतरं प्रवृद्धतरं नवीयो नवतरं । यौवनोपेतमित्यर्थः । निर्ऋत्यनुग्रहादेवमायुर्वर्धताम् । तत्र दृष्टान्तः । क्रतुमता कर्मवता सारथिना रथस्य स्थातारेव रथे स्थितावेव वर्धेति तद्वत् । अथाथ च्यवानो जीवितात्प्रच्यवनमानोऽर्धं स्वाभिलषितमायुर्लक्षणमुत्तवीति । वर्धयति । सुबंधुप्राणापहर्त्री निर्ऋतिः पापदेवता परातरमत्यंतं दूरतरं जिहीताम् । परित्यजतु । गच्छतु ॥

प्रतिपदार्थ

क्रतुमता—कर्मकुशलनाद सारथियिंद । **रथस्य स्थातारा इव**—ರಥದಲ್ಲಿರುವ ಜನರು सुरक्षितवागि ಒಯ್ಯಲ್ಪಡುವಂತೆ । **आयुः**—सुबंधुविन अयुस्सु । **प्रतरं**—दीर्घवागियू । **नवीयः**—यौवनदिंद कूडिदुदागियू । **प्र तारि**—बेळेयलि (वृद्धियन्नु होंदलि) । **अध**—कॊनेयल्लि । **च्यवानः**—जीविकॆयिंद निवृत्तियन्नु होंदुव पुरुषनु (सावन्नु समीपिसुवनु) । **अर्धं**—तानु जीविसबेकॆंब आसॆयन्नु । **उत्तवीति**—बॆळॆसुत्तानॆ । **निर्ऋतिः**—निर्ऋतिसंज्ञॆकळाद पापदेवतॆयु । **परातरं**—बहुदूरदेशक्कॆ । **सु जिहीताम्**—होरटुहोगलि.

भावार्थ

कर्मकुशलनाद सारथियिंद रथदल्लिरुव जनरु सुरक्षितवागि ಒಯ್ಯಲ್ಪಡುವಂತೆ, सुबंधुविन आयुस्सु दीर्घवागियू, यौवनदिंद कूडिदुदागियू बॆळॆयलि. सावन्नु समीपिसुव पुरुषनिगॆ तानु इन्नू बदुकबेकॆंब आसॆयु बॆळॆयुत्तदॆ. निर्ऋतिसंज्ञॆकळाद पापदेवतॆयु बहुदूरक्कॆ होरटुहोगलि.

English Translation

May the life of Subandhu be augmented so as to be more lasting and newer, as men conveyed in car (are carried on) by a skilfull (driver) : he who falls (from life), increases (his) desire to live : may Nirriti depart far off.

संहितापाठः

सामन्नु रायो निधिमन्नन्नं करामहे सु पुरुध श्रवांसि ।

ತಾ ನ್ನೋ ವಿಶ್ವಾನಿ ಜರಿತಾ ಮಮತ್ತು ಪರಾತರಂ ಸು ನಿರ್ಋತಿರ್ಜಿಹೀತಾಂ॥

ಪದಪಾಠಃ

ಸಾಮನ್ । ನು । ರಾಯೇ । ನಿಧಿಮತ್ । ನು । ಅನ್ನಂ । ಕರಾಮಹೇ । ಸು । ಪುರುಧ । ಶ್ರವಾಂಸಿ ।
ತಾ । ನಃ । ವಿಶ್ವಾನಿ । ಜರಿತಾ । ಮಮತ್ತು । ಪರಾ೽ತರಂ । ಸು । ನಿಃ೽ಋತಿಃ । ಜಿಹೀತಾಂ ॥ ೨ ॥

ಸಾಯಣಭಾಷ್ಯಂ

ಸಾಮನ್ನು ಸಾಮ್ನಿ ಗೀಯಮಾನೇ ಸತಿ । ನು ಚಾರ್ಥೇ । ರಾಯೇ ಜೀವಾಯೂರೂಪಧನಾರ್ಥಂ ನಿಧಿಮನ್ನಿಧಾನವದನ್ನಂ ಹವಿಶ್ಚ ಕರಾಮಹೇ । ಕುರ್ಮಃ । ಅತ್ರ ಸ್ಪಿತಿ ಚಾರ್ಥೇ । ನಿರ್ಋತ್ಯೈ ಸ್ತುತಿಂ ಹವಿಶ್ಚೋಭಯಂ ಕುರ್ಮ ಇತ್ಯರ್ಥಃ । ತದೇವಾಹ । ಸು ಸುಷ್ಠು ಪುರುಧ ಪುರುಧಾ ಬಹುಪ್ರಕಾರಂ ಶ್ರವಾಂಸ್ಯನ್ನಾನಿ ಹವೀಂಷಿ ಕರಾಮಹೇ । ತಾ ತಾನಿ ಹವೀಂಷಿ ನೋ೽ಸ್ಮಾಕಂ ಸಂಬಂಧೀನಿ ವಿಶ್ವಾನಿ ಸರ್ವಾಣಿ ಜರಿತಾ ಜೀರ್ಣಾ ಸ್ತುತಾ ವಾ । ಜರಾ ಸ್ತುತಿಃ । ನಿ.೧೦-೮ । ಮಮತ್ತು । ಸ್ವದತಾಂ । ಆಸ್ವಾದ್ಯ ಚ ನಿರ್ಋತಿಃ ಪರಾತರಮತ್ಯಂತಂ ದೂರದೇಶಂ ಜಿಹೀತಾಂ । ಗಚ್ಛತಾಂ ॥

ಪ್ರತಿಪದಾರ್ಥ

ಸಾಮನ್ ನು—ಸಾಮಗಾನವು ಪಠಿತವಾಗುವ ಕಾಲದಲ್ಲಿ । **ರಾಯೇ**—ಆಯುಸ್ಸಿನ ರೂಪದ ಧನಾರ್ಥವಾಗಿ । **ನಿಧಿಮತ್**—ನಿಧಿಯಂತೆ ಪುಷ್ಕಲವಾದ । **ಅನ್ನಂ**—ಹವಿಸ್ಸನ್ನು । **ಕರಾಮಹೇ**—ಅರ್ಪಿಸುತ್ತೇವೆ । **ಸು**—ಉತ್ತಮವಾಗಿಯೂ । **ಪುರುಧ**—ಅನೇಕವಿಧವಾಗಿಯೂ । **ಶ್ರವಾಂಸಿ**—ಅನ್ನಗಳನ್ನೂ (ಅರ್ಪಿಸುತ್ತೇವೆ) । **ಸ್ತುತಾ**—ನಮ್ಮಿಂದ ಪ್ರಶಂಸಿತಳಾದ ನಿರ್ಋತಿಯು । **ನಃ**—ನಮ್ಮಿಂದ ಅರ್ಪಿತವಾದ । **ತಾ ವಿಶ್ವಾನಿ**—ಆ ಸಕಲವಾದ ಅನ್ನಗಳನ್ನು । **ಮಮತ್ತು**—ಭಕ್ಷಿಸಲಿ । **ನಿರ್ಋತಿಃ**—ನಿರ್ಋತಿದೇವಿಯು । **ಪರಾತರಂ**—ಅಧಿಕವಾದ ದೂರದೇಶಕ್ಕೆ । **ಸು ಜಿಹೀತಾಂ**—ಹೊರಟುಹೋಗಲಿ.

ಭಾವಾರ್ಥ

ಸಾಮಗಾನವು ಪಠಿತವಾಗುವ ಕಾಲದಲ್ಲಿ ಆಯುರ್ವೃದ್ಧಿಗಾಗಿ ನಿಧಿಯಂತೆ ಪುಷ್ಕಲವಾದ ಹವಿಸ್ಸನ್ನು ನಿರ್ಋತಿದೇವಿಗೆ ಅರ್ಪಿಸುತ್ತೇವೆ. ಉತ್ತಮವೂ, ಅನೇಕವಿಧವೂ ಆದ ಅನ್ನಗಳನ್ನು ಅರ್ಪಿಸುತ್ತೇವೆ. ನಮ್ಮಿಂದ ಪ್ರಶಂಸಿತಳಾದ ನಿರ್ಋತಿಯು ನಮ್ಮಿಂದ ಅರ್ಪಿತವಾದ ಸಕಲ ಅನ್ನವನ್ನೂ ಭಕ್ಷಿಸಲಿ. ನಮ್ಮನ್ನು ಬಿಟ್ಟು ಅಧಿಕವಾದ ದೂರದೇಶಕ್ಕೆ ಹೊರಟುಹೋಗಲಿ.

English Translation

(When) the hymn (is being sung) let us offer (sacrificial) food, like a treasure (to Nirriti) for the sake of riches, and many kinds of sacrificial viands; may she, being praised, partake of all these our (offerings); may Nirriti depart far off.

ಸಂಹಿತಾಪಾಠಃ

ಅಭೀ ಷ್ವರ್ಯಃ ಪೌಂಸ್ಯೈರ್ಭವೇಮ ದ್ಯೌರ್ನ ಭೂಮಿಂ ಗಿರಯೋ ನಾಜ್ರಾನ್ ।
ತಾ ನೋ ವಿಶ್ವಾನಿ ಜರಿತಾ ಚಿಕೇತ ಪರಾತರಂ ಸು ನಿರ್ಋತಿರ್ಜಿಹೀತಾಂ ॥

ಪದಪಾಠಃ

ಅಭಿ । ಸು । ಅರ್ಯಃ । ಪೌಂಸ್ಯೈಃ । ಭವೇಮ । ದ್ಯೌಃ । ನ । ಭೂಮಿಂ । ಗಿರಯಃ । ನ । ಅಜ್ರಾನ್ ।
ತಾ । ನಃ । ವಿಶ್ವಾನಿ । ಜರಿತಾ । ಚಿಕೇತ । ಪರಾತರಂ । ಸು । ನಿಃಋತಿಃ । ಜಿಹೀತಾಂ ॥ ೩ ॥

ಸಾಯಣಭಾಷ್ಯಂ

ವಯಮುರ್ಯೋ೨ರೀಣ್ಯಾತ್ರೂನ್ಪೌಂಸ್ಯೈಃ ಪುಂಸ್ತ್ವೈರ್ಬಲೈಃ ಸು ಸುಷ್ಠ್ವಭಿಭವೇಮ । ದ್ಯೌರ್ನ ಭೂಮಿಂ ಸೂರ್ಯೋ ಯಥಾ ಸ್ವರಶ್ಮಿಭಿರ್ಭೂಮಿಮಭಿಭವತಿ ತದ್ವತ್ । ಗಿರಯೋ ನಾಜ್ರಾನ್ । ಗಿರಿರ್ವಜ್ರಃ । ತೇ ಯಥಾಜ್ರಾನಜನಶೀಲಾನ್ಮೇಘಾನಭಿಭವಂತಿ ತದ್ವತ್ । ತಾ ತಾನಿ ಯಾನಿ ನೋ೨ಸ್ಮಾಭಿಃ ಕೃತಾನಿ ಸ್ತೋತ್ರಾಣಿ ತಾನಿ ವಿಶ್ವಾನಿ ಸರ್ವಾಣಿ ಜರಿತಾ ಸ್ತುತಾ ಸತೀ ನಿರ್ಋತಿಶ್ಚಿಕೇತ । ಜಾನಾತಿ । ಶಿಷ್ಟಮುಕ್ತಂ ॥

ಪ್ರತಿಪದಾರ್ಥ

ದ್ಯೌಃ—ಸೂರ್ಯನು । ಭೂಮಿಂ ನ—ಭೂಮಿಯನ್ನು ಕಿರಣಗಳಿಂದ ಆವರಿಸುವಂತೆಯೂ । ಗಿರಯಃ—ವಜ್ರಾಯುಧವು । ಅಜ್ರಾನ್ ನ—ಮೇಘಗಳನ್ನು ಆವರಿಸುವಂತೆಯೂ । (ವಯಂ—ನಾವು) । ಅರ್ಯಃ—ಶತ್ರುಗಳನ್ನು । ಪೌಂಸ್ಯೈಃ—ನಮ್ಮ ಪುರುಷಶಕ್ತಿಗಳಿಂದ । ಸು—ಪೂರ್ಣವಾಗಿ । ಅಭಿ ಭವೇಮ—ಆಕ್ರಮಿಸಿ ಸೋಲಿಸುವಂತಾಗಲಿ । ಜರಿತಾ—ನಮ್ಮಿಂದ ಪ್ರಶಂಸಿತಳಾದ । ನಿರ್ಋತಿಃ—ನಿರ್ಋತಿಯು । ನಃ—ನಮ್ಮಿಂದ ಪಠಿತವಾದ । ವಿಶ್ವಾನಿ ತಾ—ಸಕಲ ಸ್ತುತಿಗಳನ್ನೂ । ಚಿಕೇತ—ಅರಿಯುತ್ತಾಳೆ । ಪರಾತರಂ—ನಮ್ಮಿಂದ ದೂರವಾಗಿ । ಸು ಜಿಹೀತಾಂ—ಹೊರಟುಹೋಗಲಿ.

ಭಾವಾರ್ಥ

ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಆವರಿಸುವಂತೆಯೂ, ವಜ್ರಾಯುಧವು ಮೇಘಗಳನ್ನು ಆವರಿಸುವಂತೆಯೂ ನಾವು ನಮ್ಮ ಪುಂಶಕ್ತಿಗಳಿಂದ ಶತ್ರುಗಳನ್ನು ಪೂರ್ಣವಾಗಿ ಆಕ್ರಮಿಸಿ ಸೋಲಿಸುವಂತಾಗಲಿ. ನಮ್ಮಿಂದ ಪ್ರಶಂಸಿತಳಾದ ನಿರ್ಋತಿಯು ನಮ್ಮಿಂದ ಪಠಿತವಾದ ಸಕಲ ಸ್ತುತಿಗಳನ್ನೂ ಅರಿಯುತ್ತಾಳೆ. ಆವಳು ನಮ್ಮಿಂದ ದೂರವಾಗಿ ಹೊರಟುಹೋಗಲಿ.

English Translalion

May we, by our manly exertions, overcome our enemies, as the Sun the earth, as thunderbolts the clouds : she, being praised, knows all these our (exploits) : may Nirriti depart far off.

संहितापाठः

मो षु ण꣡ः सो꣡म मृ꣡त्यवे꣡ परा꣡ दाः पश्ये꣡म नु सू꣡र्यमु꣡च्च꣡रंतं
द्यु꣡भि꣡र्हि꣡तो꣡ ज꣡रिमा सू꣡नो꣡ अस्तु꣡ परा꣡तरं सु नि꣡र्ऋतिर्जि꣡हीतां

पदपाठः

मो꣡ इ꣡ति । सु । न꣡ः । सो꣡म । मृ꣡त्यवे꣡ । परा꣡ । दाः꣡ । पश्ये꣡म । नु । सू꣡र्यं । उ꣡त्꣡च꣡रंतं ।
द्यु꣡꣫भिः । हि꣡तः । ज꣡रिमा । सु । न꣡ः । अ꣡स्तु । प꣡रा꣡꣫तरं । सु । नि꣡ः꣡ऋतिः । जि꣡हीतां ॥ ४ ॥

सायणभाष्यं

हे सोम नो꣡ऽस्मान् सु सुष्ठु मृत्यवे मो परा दाः । मैव परादानं कुरु । मृत्यु꣡धीनानो꣡ऽस्मा꣡न्मा कार्षीः । किंतु स्विदानीमुच्चरंतमूर्ध्वं गच्छंतमुदयंतं सूर्यं पश्येम । चिरकालं जीवेमेत्यर्थः । जीवाभावे सूर्यादर्शनादित्यभिप्रायः । किंच द्युभिः । अहर्नामै꣡तत् । अहोभिर्दिवसै꣡र्हितः प्रेरितो꣡ जरिमा जराभावो꣡ नो꣡ऽस्माकं सु सुखकरो꣡ऽस्तु । शिष्यमुक्तं ॥

प्रतिपदार्थ

सोम—ಎಲೈ ಸೋಮನೇ । **नः**—ನಮ್ಮನ್ನು । **मृत्यवे**—ಮೃತ್ಯುವಿಗೆ । **सु मो परा दाः**—ಪೂರ್ಣವಾಗಿ ಬಿಟ್ಟುಕೊಡಬೇಡ । **नु**—ಈಗ । **उच्चरंतं**—ಉದಯಿಸುತ್ತಿರುವ । **सूर्यं**—ಸೂರ್ಯನನ್ನು । **पश्येम**—ನೋಡುವಂತಾಗಲಿ । **द्युभिः**—ಅಹಸ್ಸುಗಳು ಕಳೆಯುವುದರಿಂದ । **हितः**—ಪ್ರೇರಿತವಾಗುವ । **जरिमा**—ಮುಪ್ಪು । **नः**—ನಮಗೆ । **सु**—ಸುಖಕರವಾಗಿ । **अस्तु**—ಆಗಿರಲಿ । **निर्ऋतिः**—ನಿರ್ಋತಿಯು । **परातरं**—ನಮ್ಮಿಂದ ದೂರಕ್ಕೆ । **सु जिहीतां**—ಬಿಟ್ಟುಹೋಗಲಿ.

ಭಾವಾರ್ಥ

ಎಲೈ ಸೋಮನೇ, ನಮ್ಮನ್ನು ಮೃತ್ಯುವಿಗೆ ಬಿಟ್ಟುಕೊಡಬೇಡ. ನಾವು ಉದಯಿಸುತ್ತಿರುವ ಸೂರ್ಯನನ್ನು ಅನೇಕಕಾಲ ನೋಡುವಂತಾಗಲಿ. ವಯಸ್ಸು ಕಳೆಯುವುದರಿಂದ ಪ್ರಾಪ್ತವಾಗುವ ಮುಪ್ಪಿನಕಾಲವು ನಮಗೆ ಸುಖಕರವಾಗಲಿ. ನಿರ್ಋತಿಯು ನಮ್ಮನ್ನು ಬಿಟ್ಟು ದೂರಕ್ಕೆ ಹೊರಟುಹೋಗಲಿ.

English Translation

Give us not up, Soma, to death : may we (long) behold the rising sun : may our old age brought on by (passing) days be happy : may Nirriti depart for off.

संहितापाठः

असुनीतेऽ मनोऽ अस्माꣳसु धारयऽ जीवात्मवेऽ सु प्रऽ तिराऽ नऽ आयुः ।
रारंधि नः सूर्यस्य संदृशि घृतेन त्वं तन्वं वर्धयस्व ॥ ५ ॥

पदपाठः

असुऽनीतेऽ । मनः । अस्माꣳसु । धारयऽ । जीवातवेऽ । सु । प्र । तिर । नः । आयुः ।
ररंधि । नः । सूर्यस्य । संऽदृशि । घृतेन । त्वं । तन्वं । वर्धयस्व ॥ ५ ॥

सायणभाष्यं

हे असुनीतेऽ मनुष्याणामसूनां नेत्रि देवि अस्माꣳसु मनः पुनर्धारय । किंच जीवातवेऽ जीवितुं सु प्र तिर सुष्ठु वर्धय नोऽस्माकमायुः । किंच रारंधि स्थापय नोऽस्मान् सूर्यस्य संदृशि चिरसंदर्शनेऽ । त्वं च घृतेनास्माभिर्दत्तेन तन्वं शरीरं वर्धय । वर्धयस्व ॥

प्रतिपदार्थ

असुनीतेऽ—प्राणदात्रियाद ಎಲೈ ಅಸುನೀತಿದೇವಿಯೇ । **अस्माꣳसु**—ನಮಗೆ । **मनः**—ಕಳೆದುಹೋದ ಚೇತನವನ್ನು । **धारय**—ಪುನಃ ಕೊಡು । **जीवातवेऽ**—ತಾವು ದೀರ್ಘಕಾಲ ಜೀವಿಸಲು । **नः**—ನಮ್ಮ । **आयुः**—ಆಯುಸ್ಸನ್ನು । **सु प्र तिर**—ಚೆನ್ನಾಗಿ ಬೆಳೆಯುವಂತೆ ಮಾಡು । **नः**—ನಮ್ಮನ್ನು । **सूर्यस्य संदृशि**—ಸೂರ್ಯನನ್ನು ಅನೇಕಕಾಲ ನೋಡುವಂತೆ । **ररंधि**—ಸ್ಥಾಪಿಸು । **घृतेन**—ನಮ್ಮಿಂದ ಅರ್ಪಿತವಾದ ಘೃತದಿಂದ । **त्वं**—ನೀನು । **तन्वं**—ಶರೀರವನ್ನು । **वर्धयस्व**—ಬೆಳೆಸು.

भावार्थ

ಪ್ರಾಣಗಳ ನೇತ್ರಿಯಾದ ಎಲೈ ಅಸುನೀತಿದೇವಿಯೇ, ನಮಗೆ ಕಳೆದುಹೋದ ಚೇತನವನ್ನು ಪುನಃ ಕೊಡು. ನಾವು ದೀರ್ಘಕಾಲ ಜೀವಿಸಲು ನಮ್ಮ ಆಯುಸ್ಸನ್ನು ಅಧಿಕವಾಗಿ ಬೆಳೆಯುವಂತೆ ಮಾಡು. ನಾವು ಅನೇಕಕಾಲ ಸೂರ್ಯನನ್ನು ನೋಡುವಂತೆ ಮಾಡು. ನಮ್ಮಿಂದ ಅರ್ಪಿತವಾದ ಘೃತದಿಂದ ನೀನು ಶರೀರವನ್ನು ಬೆಳೆಸು.

English Translation

Asuniti, give us back the (departed) spirit : extend our life that we may live (long) : establish us that we may (long) behold the sun : do you cherish the body with the ghi (that we have offered).

विशेषविषयगळु

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

असुनीतेऽ मनः अस्माꣳसु धारय चिरं जीवनाय पुनर्वर्धय च न आयू

ರಂಧಯ ಚ ನಃ ಸೂರ್ಯಸ್ಯ ಸಂದರ್ಶನಾಯ । ರಧ್ಯತಿರ್ವಶಗಮನೇಽಪಿ ದೃಶ್ಯತೇ । ಮಾ ರಧಾಮ ದ್ವಿಷತೇ ಸೋಮ ರಾಜನ್ । ಇತ್ಯಪಿ ನಿಗಮೋ ಭವತಿ । ಘೃತೇನ ತ್ವಮಾತ್ಮಾನಂ ತನ್ವಂ ವರ್ಧಯಸ್ವ ॥

(ನಿ. ೧೦-೪೦)

ಎಲೈ ಅಸುನೀತಿಯೆಂಬ ದೇವಿಯೇ, ನಮ್ಮ ಶರೀರದಲ್ಲಿರುವ ಮನಸ್ಸನ್ನು (ಇಲ್ಲಿ ಮನಸ್ಸೆಂದರೆ ಪ್ರಾಣ ಅಥವಾ ಆತ್ಮಾ ಎಂಬರ್ಥವು ಸೂಚಿತವಾಗುವುದು). ಬಹುಕಾಲ ಜೀವಿಸಿರುವುದಕ್ಕಾಗಿ ಸ್ಥಿರವಾಗಿ ನೆಲಸುವಂತೆ ಮಾಡು ಮತ್ತು ನಮ್ಮ ಆಯುಸ್ಸನ್ನೂ ವೃದ್ಧಿಪಡಿಸು. ಅದನ್ನು ನಮ್ಮ ವಶವಾಗುವಂತೆ ಮಾಡು. ನಾವು ಬಹುಕಾಲ ಜೀವಿಸಿದ್ದು ಸೂರ್ಯನನ್ನು ನೋಡುತ್ತಿರುವಂತಾಗಲಿ. ಇಲ್ಲಿ ರಧ್ ಧಾತುವಿಗೆ ವಶಮಾಡು ಎಂಬರ್ಥವಿರುವುದು. **ಮಾ ರಧಾಮ ದ್ವಿಷತೇ ಸೋಮ ರಾಜನ್** ಎಂಬ ಶ್ರುತಿವಾಕ್ಯವು ಇದನ್ನು ಸಮರ್ಥಿಸುವುದು. ನಾವು ಅರ್ಪಿಸುವ ಘೃತದಿಂದ ಎಲೈ ಅಸುನೀತಿಯೇ, ನಿನ್ನ ಶರೀರವನ್ನು ಪುಷ್ಟಿಗೊಳಿಸು ಎಂದು ನಿರ್ವಚನದ ಮುಖ್ಯಾಭಿಪ್ರಾಯವು.

ಸೂರ್ಯಸ್ಯ ಸಂದೃಶಿ—ಸೂರ್ಯನನ್ನು ಯಾವಾಗಲೂ ನೋಡುತ್ತಿರುವುದು ಎಂದರೆ ಬಹುಕಾಲ ಜೀವಿಸಿರುವುದು ಎಂದರ್ಥವು. ಈ ಅರ್ಥದಲ್ಲಿ **ಜ್ಯೋಕ್ ಚ ಸೂರ್ಯಂ ದೃಶೇ** ಇತ್ಯಾದಿ ಶ್ರುತಿವಾಕ್ಯಗಳಿರುವವು.

ಘೃತೇನ ತ್ವಂ ತನ್ವಂ ವರ್ಧಯಸ್ವ-ಈ ವಾಕ್ಯಕ್ಕೆ ಸಾಯಣರು **ತ್ವಂ ಚ ಅಸ್ಮಾಭಿರ್ದತ್ತೇನ ಘೃತೇನ ಶರೀರಂ ವರ್ಧಯ** ನಾವು ನಿನಗೆ ಅರ್ಪಿಸುವ ಘೃತದಿಂದ ನಿನ್ನ ಶರೀರವನ್ನು ಪುಷ್ಟಿಗೊಳಿಸು ಎಂದು ಹೇಳಿದಾರೆ. ಈ ವಿಷಯದಲ್ಲಿ ನಿರುಕ್ತವ್ಯಾಖ್ಯಾಕಾರರಾದ ದುರ್ಗಾಚಾರ್ಯರು—**ಘೃತೇನ ಉದಕೇನ ತ್ವಮಾತ್ಮಾನಂ ಯಥಾಕಾಲಂ ವರ್ಧಯಸ್ವ । ತ್ವಯ್ಯುದಕಂ ದದತಿ ಸರ್ವಮಿದಂ ಭವತಿ । ಅಹವಿರ್ಭಾಕ್ತ್ವಾದಸುನೀತೇರ್ಘೃತಮಿತ್ಯುದಕನಾಮೇತ್ಯತ್ರೋಪಪದ್ಯತೇ ॥**—ಘೃತಶಬ್ದಕ್ಕೆ ಉದಕವೆಂಬ ಅರ್ಥಮಾಡಿದಾರೆ. ಅಸುನೀತಿದೇವತೆಯು ಹವಿಸ್ಸನ್ನು ಭುಜಿಸುವುದಿಲ್ಲವಾದ್ದರಿಂದ ಇಲ್ಲಿ ಘೃತಶಬ್ದಕ್ಕೆ ಉದಕವೆಂದು ಅರ್ಥಮಾಡುವುದು ಸಮಂಜಸವಾಗಿದೆ ಎಂದು ಹೇಳಿದಾರೆ.

ಸಂಹಿತಾಪಾಠಃ

ಅಸುನೀತೇ ಪುನರಸ್ಮಾಸು ಚಕ್ಷುಃ ಪುನಃ ಪ್ರಾಣಮಿಹ ನೋ ಧೇಹಿ ಭೋಗಂ ।
ಜ್ಯೋಕ್ ಪಶ್ಯೇಮ ಸೂರ್ಯಮುಚ್ಚರಂತಮನುಮತೇ ಮೃಳಯಾ ನಃ ಸ್ವಸ್ತಿ ॥ ೬ ॥

ಪದಪಾಠಃ

ಅಸುಽನೀತೇ । ಪುನಃ । ಅಸ್ಮಾಸು । ಚಕ್ಷುಃ । ಪುನರಿತಿ । ಪ್ರಾಣಂ । ಇಹ । ನಃ । ಧೇಹಿ । ಭೋಗಂ ।
ಜ್ಯೋಕ್ । ಪಶ್ಯೇಮ । ಸೂರ್ಯಂ । ಉತ್ಽಚರಂತಂ । ಅನುಽಮತೇ । ಮೃಳಯ । ನಃ । ಸ್ವಸ್ತಿ ॥ ೬ ॥

सायणभाष्यं

हे असुनीतेऽसुनीतिदेवि अस्मासु। अस्मदीयेषु सुबंधुष्वित्यर्थः। पुनश्चक्षुः प्रकाशकं नयनं। ईक्षणसामर्थ्यमित्यर्थः। किंच पुनः प्राणमस्मासु धेहि। स्थापय। वयं च चक्रीक्ष्यरमुच्चरंतमुद्गच्छंतं सूर्यं पश्येम। हे अनुमतेऽनुमतिदेवि स्वस्त्ययनाशं यथा स्यात्तथा नोऽस्मान्मृळय। सुखय॥

प्रतिपदार्थ

असुनीतेऽ—ಎಲೈ ಅಸುನೀತಿದೇವಿಯೇ। **अस्मासु**—ನಮ್ಮಲ್ಲಿ। **पुनः**—ತಿರುಗಿಯೂ। **चक्षुः**—ದರ್ಶನಸಾಮರ್ಥ್ಯವನ್ನೂ। **प्राणं**—ಪ್ರಾಣವನ್ನೂ। **धेहि**—ಸ್ಥಾಪಿಸು। **नः**—ನಮಗೆ। **भोगं**—ಸೌಖ್ಯವನ್ನೂ। **धेहि**—ಒದಗಿಸು। **उच्चरंतं**—ಉದಯಿಸುತ್ತಿರುವ। **सूर्यं**—ಸೂರ್ಯನನ್ನು। **ज्योक्**—ಬಹುಕಾಲ। **पश्येम**—ನಾವು ನೋಡುವಂತಾಗಲಿ। **अनुमतेऽ**—ಉದಾರಚರಿತಳಾಗಿ ಎಲೈ ಅನುಮತಿದೇವಿಯೇ। **नः**—ನಮಗೆ। **स्वस्ति**—ಕಲ್ಯಾಣವಾಗುವಂತೆ। **मृळय**—ಸುಖಿಪಡಿಸು.

ಭಾವಾರ್ಥ

ಎಲೈ ಅಸುನೀತಿದೇವಿಯೇ, ನಮ್ಮಲ್ಲಿ ತಿರುಗಿಯೂ ದರ್ಶನಸಾಮರ್ಥ್ಯವನ್ನೂ ಪ್ರಾಣವನ್ನೂ ಸ್ಥಾಪಿಸು, ನಮಗೆ ಸೌಖ್ಯವನ್ನೂ ಒದಗಿಸು. ಉದಯಿಸುತ್ತಿರುವ ಸೂರ್ಯನನ್ನು ಬಹುಕಾಲ ನಾವು ನೋಡುವಂತಾಗಲಿ. ಉದಾರ ಚರಿತಳಾದ ಎಲೈ ಅನುಮತಿದೇವಿಯೇ, ನಮಗೆ ಕಲ್ಯಾಣವನ್ನುಂಟುಮಾಡಿ ಸುಖಪಡಿಸು.

English Translation

Restore to us, Asuniti, sight and breath, and enjoyment in this world : long may we behold the rising sun ; make us happy, gracious (goddess), with prosperity.

संहितापाठः

पुनर्नो असुं पृथिवी ददातु पुनर्द्यौर्देवी पुनरंतरिक्षं।
पुनर्नः सोमस्तन्वं ददातु पुनः पूषा पथ्यां या स्वस्तिः॥

पदपाठः

पुनः। नः। असुं। पृथिवी। ददातु। पुनः। द्यौः। देवी। पुनः। अंतरिक्षं।
पुनः। नः। सोमः। तन्वं। ददातु। पुनरिति। पूषा। पथ्यां। या। स्वस्ति॥ ८॥

सायणभाष्यं

पृथिवी देवी नोऽस्मभ्यमसुं प्राणं ददातु पुनः। द्यौर्देवतासुं ददातु। तथांतरिक्षमंतरिक्षदेवतासुं ददातु। तथा सोमो नस्तन्वं शरीरं पुनर्ददातु। तथा पूषा पोषाभिमानिनी देवता पथ्यां। पंथा अंतरिक्षं। नि-०८-४३। तत्र भवां

ವಾಚಂ । ವಾಗಾತ್ಮಕಃ ಶಬ್ದೋ ಹ್ಯಾಕಾಶಾದುತ್ಪದ್ಯತೇ। ತಾಂ ಪುನರ್ದದಾತು । ಕಿಂಚ ಯಾ ಸ್ವಸ್ತಿರ್ಯಾ ಲೋಕೇ ವೇದೇ ಚ ಸ್ವಸ್ತಿರುಚ್ಯತೇ ತಾಮಪಿ ಪೂಷಾ ಪ್ರಯಚ್ಛತು । ಯದ್ವಾ । ಪೂಷಾ ಪೋಷಂ ಪ್ರಯಚ್ಛತು । ಯಾ ಸ್ವಸ್ತಿರ್ವಾಗ್ಮಿನೀ ದೇವ್ಯಸ್ತಿ ಸಾ ಪಥ್ಯಾಂ ವಾಚಂ ಪ್ರಯಚ್ಛತು । ವಾಗ್ವೈ ಪಥ್ಯಾ ಸ್ವಸ್ತಿಃ । ಶತ. ೩-೨-೩-೪ । ಇತಿ ಬ್ರಾಹ್ಮಣಂ ॥

ಪ್ರತಿಪದಾರ್ಥ

ಪೃಥಿವೀ—ಪೃಥ್ವೀದೇವಿಯು । **ನಃ**—ನಮಗೆ । **ಅಸುಂ**—ಪ್ರಾಣವನ್ನು । **ದದಾತು**—ಕೊಡಲಿ । **ದ್ಯೌಃ**—ದ್ಯುಲೋಕಾಧಿದೇವತೆಯು । **ಪುನಃ**—ತಿರುಗಿಯೂ ನಮಗೆ ಪ್ರಾಣವನ್ನು ಕೊಡಲಿ । **ಅಂತರಿಕ್ಷಂ**—ಅಂತರಿಕ್ಷವು ನಮ್ಮನ್ನು ಪುನಃ ಬದುಕಿಸಲಿ । **ಸೋಮಃ**—ಸೋಮದೇವನು । **ನಃ**—ನಮ್ಮ । **ತನ್ವಂ**—ಶರೀರವನ್ನು । **ಪುನಃ**—ತಿರುಗಿಯೂ । **ದದಾತು**—ಕೊಡಲಿ । **ಯಾ**—ಯಾವುದು । **ಸ್ವಸ್ತಿಃ**—ಕಲ್ಯಾಣಕಾರಕವೆಂದು ಹೇಳಲ್ಪಡುವುದೋ ಅಂತಹ ಮಂಗಳವನ್ನೂ । **ಪಥ್ಯಾಂ**—ವಾಕ್‌ಶಕ್ತಿಯನ್ನೂ । **ಪೂಷಾ**—ಪೂಷದೇವನು ನಮಗೆ ಒದಗಿಸಲಿ.

ಭಾವಾರ್ಥ

ಪೃಥ್ವೀದೇವಿಯು ನಮಗೆ ಪ್ರಾಣವನ್ನು ಕೊಡಲಿ. ದ್ಯುಲೋಕಾಧಿದೇವತೆಯು ತಿರುಗಿಯೂ ನಮಗೆ ಪ್ರಾಣವನ್ನು ಕೊಡಲಿ. ಅಂತರಿಕ್ಷವು ನಮ್ಮನ್ನು ಪುನಃ ಬದುಕಿಸಲಿ. ಸೋಮದೇವನು ನಮ್ಮ ಶರೀರವನ್ನು ಪುನಃ ಕೊಡಲಿ. ಕಲ್ಯಾಣಕಾರಕಳಾದ ವಾಗ್ದೇವಿಯು ಕಲ್ಯಾಣವನ್ನುಂಟುಮಾಡಲಿ. ಪೂಷದೇವನು ನಮಗೆ ಪುಷ್ಟಿಯನ್ನು ಉಂಟುಮಾಡಲಿ.

English Translation

May earth restore the (departed) soul to us : may the divine heaven, may the firmament (restore it) : may Soma restore the body to us : may Pushan restore to us speech, which is prosperity.

ಸಂಹಿತಾಪಾಠಃ

ಶಂ ರೋದಸೀ ಸುಬಂಧವೇ ಯಹ್ವೀ ಋತಸ್ಯ ಮಾತರಾ ।
ಭರತಾಮಪ ಯದ್ರಪೋ ದ್ಯೌಃ ಪೃಥಿವಿ ಕ್ಷಮಾ ರಪೋ ನೋ ಷು ತ್ವೇ ಕಂ
ಚನಾಮಮತ್ ॥ ೮ ॥

ಪದಪಾಠಃ

ಶಂ । ರೋದಸೀ । ಇತಿ । ಸುಽಬಂಧವೇ । ಯಹ್ವೀ ಇತಿ । ಋತಸ್ಯ । ಮಾತರಾ ।
ಭರತಾಂ । ಅಪ । ಯತ್ । ರಪಃ । ದ್ಯೌಃ । ಪೃಥಿವಿ । ಕ್ಷಮಾ । ರಪಃ । ನೋ ಇತಿ । ಸು । ತ್ವೇ । ಕಂ ।
ಚನ । ಆಮಮತ್ ॥ ೮ ॥

ಸಾಯಣಭಾಷ್ಯಂ

ಇದಮಾದಿಭಿಸ್ತಿಸೃಭಿರ್ದ್ಯಾವಾಪೃಥಿವ್ಯೋಃ ಸ್ತುತಿಃ । ರೋದಸೀ ದ್ಯಾವಾಪೃಥಿವ್ಯೌ ಸುಬಂಧವೇ ಶಂ ಸುಖಂ ಪ್ರಯಚ್ಛತಾಂ । ಕೀದೃಶ್ಯೌ ತೇ । ಯಜ್ಞಿಯೇ ಮಹತ್ಯೌ ಋತಸ್ಯ ಯಜ್ಞಸ್ಯೋದಕಸ್ಯ ವಾ ಮಾತರಾ ನಿರ್ಮಾತ್ರ್ಯೌ । ಯದ್ರಪಃ ಪಾಪಂ ಕೃಚ್ಛ್ರಮಸ್ತಿ ತದಪ ಭರತಾಂ । ಅಪಹರತಾಂ । ಅಪನಯತಾಂ । ಹೇ ದ್ಯೌಃ ಹೇ ಪೃಥಿವಿ ಹೇ ದ್ಯಾವಾಪೃಥಿವ್ಯೌ ಕ್ಷ್ಮಾ ಕ್ಷ್ಮಾಯಾಂ ಸತ್ಯಾಂ । ಯದ್ವಾ ಕ್ಷ್ಮಾ ಪೃಥಗಪ್ಯುಚ್ಯತೇ । ಕ್ಷ್ಮಾಪ್ಯಪಹರತು। ಏವಮುಕ್ತ್ವಾ ಸುಬಂಧುಂ ಬಂಧ್ವಾದಯೋ ಬ್ರುವತೇ। ಹೇ ಸುಬಂಧೋ ತೇ ತ್ವಾಂ ಮೋ ಷು ಮೈವ ಸು ಷ್ಠು ಕಂ ಚನ ಪರಂ ರಪಃ ಕೃಚ್ಛ್ರಮಾಮುಮತ್ । ಹಿನಸ್ತು ॥

ಪ್ರತಿಪದಾರ್ಥ

ಯಜ್ಞಿಯೇ— ಮಹತ್ಸ್ವರೂಪವುಳ್ಳವರೂ । **ಋತಸ್ಯ**—ಯಜ್ಞಕ್ಕೆ । **ಮಾತರಾ**—ನಿರ್ಮಾಪಕರೂ ಆದ। **ರೋದಸೀ**—ದ್ಯಾವಾಪೃಥಿವಿಗಳು । **ಸುಬಂಧವೇ**—ಸುಬಂಧುವಿಗೆ । **ಶಂ**—ಸುಖವನ್ನು ಒದಗಿಸಲಿ । **ಯತ್**—ಯಾವ । **ರಪಃ**—ಪಾಪಕಾರ್ಯವಿದೆಯೋ (ಯಾವ ರೋಗವಿದೆಯೋ) ಅದನ್ನು । **ಅಪ ಭರತಾಂ**—ನಾಶಮಾಡಲಿ। **ದ್ಯೌಃ**—ಎಲೈ ದ್ಯುಲೋಕಾಧಿದೇವತೆಯೇ । **ಪೃಥಿವಿ**—ಎಲೈ ಪೃಥ್ವಿಯೇ । **ಕ್ಷ್ಮಾ ರಪಃ**—ಪೃಥ್ವೀಸಂಬಂಧವಾದ ಸಕಲ ರೋಗಗಳನ್ನೂ ನಾಶಮಾಡಿರಿ । **ತೇ**—(ಎಲೈ ಸುಬಂಧುವೇ) ನಿನ್ನನ್ನು । **ಕಂ ಚನ**—ಯಾವ ಪಾಪವೂ (ರೋಗವೂ) । **ಮೋ ಷು ಆಮುಮತ್**—ಹಿಂಸಿಸದಿರಲಿ.

ಭಾವಾರ್ಥ

ಮಹತ್ಸ್ವರೂಪವುಳ್ಳವರೂ, ಯಜ್ಞಕ್ಕೆ ನಿರ್ಮಾಪಕರೂ ಆದ ದ್ಯಾವಾಪೃಥಿವಿಗಳು ಸುಬಂಧುವಿಗೆ ಸುಖವನ್ನು ಒದಗಿಸಲಿ, ಸಕಲ ಪಾಪಗಳನ್ನೂ ನಾಶಮಾಡಲಿ. ಅವರ ಅನುಗ್ರಹದಿಂದ ಸುಬಂಧುವನ್ನು ಯಾವ ಪಾಪವೂ ಹಿಂಸಿಸದಿರಲಿ.

English Translation

May the great heaven and earth, the parents of sacrifice, (grant) happiness to Subandhu : heaven and earth, remove all iniquity ; let heaven (take away) iniquity : may no ill ever approach you.

ಸಂಹಿತಾಪಾಠಃ

ಅವ ದ್ಯಕೇ ಅವ ತ್ರಿಕಾ ದಿವಶ್ಚರಂತಿ ಭೇಷಜಾ ।
ಕ್ಷ್ಮಾ ಚರಿಷ್ಣ್ವೇಕಕಂ ಭರತಾಮಪ ಯದ್ರಪೋ ದ್ಯೌಃ ಪೃಥಿವಿ ಕ್ಷ್ಮಾ
ರಪೋ ಮೋ ಷು ತೇ ಕಂ ಚ ನಾಮುಮತ್ ॥ ೯ ॥

ಪದಪಾಠಃ

ಅವ । ದ್ಯಕೇ ಇತಿ । ಅವ । ತ್ರಿಕಾ । ದಿವಃ । ಚರಂತಿ । ಭೇಷಜಾ ।

ಕ್ಷ್ನಮಾ । ಚರಿಷ್ಣು । ಏಕಕಂ । ಭರತಾಂ । ಅಪ । ಯತ್ । ರಪಃ । ದ್ಯೌಃ । ಪೃಥಿವಿ । ಕ್ಷ್ನಮಾ । ರಪಃ ।

ಮೋ ಇತಿ । ಸು । ತೇ । ಕಂ । ಚನ । ಅಮಮತ್ ॥ ೯ ॥

ಸಾಯಣಭಾಷ್ಯಂ

ದಿವೋ ದ್ಯುಲೋಕಾದ್ಭೇಷಜಾ ಭೇಷಜಾನಿ ದ್ವಕೇ ದ್ವಿಕಂ ತ್ರಿಕಾ ತ್ರಿಕಂ ಚಾವ ಚರಂತಿ। ಅತ್ರಾಶ್ವಿನೌ ದ್ವಿಕಮವಚರತಃ । ಇಳಾ ಸರಸ್ವತೀ ಭಾರತೀ ತ್ರಿಕಮವಚರಂತಿ । ಕ್ಷ್ನಮಾ ಕ್ಷ್ನಮಾಯಾಂ ಚರಿಷ್ಣು ಚರತ್ಯೇಕಕಮೇಕಂ ಭೇಷಜಮಿತ್ಯಭಿಪ್ರಾಯೇಮಾಹ । ತಾನಿ ಸರ್ವಾಣಿ ಸುಬಂಧೋಃ ಪ್ರಾಣಂ ರಕ್ಷಂತ್ವಿತಿ ಶೇಷಃ ॥

ಪ್ರತಿಪದಾರ್ಥ

ದಿವಃ—ದ್ಯುಲೋಕದಿಂದ । **ಭೇಷಜಾ**—ರೋಗನಾಶಕರವಾದ ಔಷಧಿಗಳು । **ದ್ವಿಕೇ**—ಅಶ್ವಿನೀದೇವತೆಗಳೆಂಬ ಎರಡು ರೂಪಗಳಲ್ಲೂ । **ತ್ರಿಕಾ**—ಇಳಾ, ಸರಸ್ವತೀ ಮತ್ತು ಭಾರತೀ ಎಂಬ ಮೂರು ರೂಪಗಳಲ್ಲೂ । **ಅವ ಚರಂತಿ**—ಸಂಚರಿಸುತ್ತವೆ (ಪೃಥ್ವಿಗೆ ಇಳಿದುಬರುತ್ತವೆ) । **ಕ್ಷ್ನಮಾ**—ಪೃಥ್ವಿಯಲ್ಲಿ । **ಏಕಕಂ**—ಒಂದೇ ರೂಪದಲ್ಲಿ । **ಚರಿಷ್ಣು**—ಸಂಚರಿಸುತ್ತದೆ । **ಯತ್ ರಪಃ**—ಯಾವ (ರೋಗ) ಪಾಪಗಳಿವೆಯೋ ಅವನ್ನು । **ಅಪ ಭರತಾಂ**—ನಾಶಮಾಡಲಿ । **ದ್ಯೌಃ**—ಎಲೈ ದ್ಯುಲೋಕಾಧಿದೇವಿಯೇ । **ಪೃಥಿವಿ**—ಎಲೈ ಪೃಥ್ವಿಯೇ । **ಕ್ಷ್ನಮಾ ರಪಃ**—ಪೃಥ್ವೀಸಂಬಂಧವಾದ ಸಕಲ ಪಾಪ (ರೋಗ) ಗಳನ್ನೂ ನಾಶಮಾಡಿರಿ । **ತೇ**—(ಎಲೈ ಸುಬಂಧುವೇ) ನಿನ್ನನ್ನು । **ಕಂ ಚ ನ**—ಯಾವ ಪಾಪವೂ (ರೋಗವೂ) । **ಮೋ ಷು ಅಮಮತ್**—ಹಿಂಸಿಸದಿರಲಿ.

ಭಾವಾರ್ಥ

ರೋಗನಾಶಕರಗಳಾದ ಔಷಧಿಗಳು ಅಶ್ವಿನೀದೇವತೆಗಳೆಂಬ ಎರಡು ರೂಪಗಳಲ್ಲೂ, ಇಳಾ, ಸರಸ್ವತೀ ಮತ್ತು ಭಾರತೀ ಎಂಬ ಮೂರು ರೂಪಗಳಲ್ಲೂ ದ್ಯುಲೋಕದಿಂದ ಪೃಥ್ವಿಗೆ ಇಳಿದುಬರುತ್ತವೆ ಮತ್ತು ಪೃಥ್ವಿಯಲ್ಲಿ ಮಾತ್ರ ಒಂದೇ ರೂಪವುಳ್ಳದ್ದಾಗಿರುತ್ತದೆ. ಎಲೈ ದ್ಯಾವಾಪೃಥ್ವಿಗಳೇ, ಪೃಥ್ವೀಸಂಬಂಧವಾದ ಸಕಲ ಪಾಪಗಳನ್ನೂ ನಾಶಮಾಡಿರಿ. ಎಲೈ ಸುಬಂಧುವೇ, ನಿನ್ನನ್ನು ಯಾವ ಪಾಪವೂ ಹಿಂಸಿಸದಿರಲಿ.

English Translation

Remedies come down from heaven by tows and by threes : one wanders singly in heaven ; heaven and earth, remove all iniquity : let heaven (take away) iniquity : may no ill ever approach you.

ಸಂಹಿತಾಪಾಠಃ

ಸಮಿಂದ್ರೇರಯ ಗಾಮನಡ್ವಾಹಂ ಯ ಆವಹದುಶೀನರಾಣ್ಯಾ ಅನಃ ।

ಭರತಾವಪ ಯದ್ರಪೋ ದ್ಯೌಃ ಪೃಥಿವಿ ಕ್ಷ್ನಮಾ ರಪೋ ಮೋ ಷು ತೇ ಕಂ

ಚನಾಮಮತ್ ॥ ೧೦ ॥

ಪದಪಾಠಃ

ಸಂ । ಇಂದ್ರ । ಈರಯೇ । ಗಾಂ । ಅನಡ್ವಾಹಂ । ಯಃ । ಆ । ಅವಹತ್ । ಉಶೀನರಾಣ್ಯಾಃ । ಅನಃ ।

ಭರತಾಂ । ಅಪ । ಯತ್ । ರಪಃ । ದ್ಯೌಃ । ಪೃಥಿವಿ । ಕ್ಷಮಾ । ರಪಃ । ಮೋ ಇತಿ । ಸು । ತ್ವೇ । ಕಂ ।
ಚನ । ಅಮಮತ್ ॥ ೧೦ ॥

ಸಾಯಣಭಾಷ್ಯಂ

ಹೇ ಇಂದ್ರ ಸಮೀರಯೇ ಪ್ರೇರಯೇ । ಕಂ । ಗಾಂ ಗಂತಾರಮನಡ್ವಾಹಮನೋವಹನಸಮರ್ಥಂ। ಯೋ೭ನಡ್ವಾನಾವಹತ್ ಅವಹತ್ಯಸ್ಮಾನ್ಪ್ರತಿ। ಕಂ । ಅನಃ ಶಕಟಂ। ಕಸ್ಯ । ಉಶೀನರಾಣ್ಯಾ ಏತನ್ನಾಮಿಕಾಯಾ ಓಷಧೇಃ । ಯಯಾರ್ತಮನುಲಿಂಪಂತಿ ಸೋಶೀನರಾಣೀ । ಭರತಾಮಿತ್ಯಾದಿ ಗತಂ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । **ಉಶೀನರಾಣ್ಯಾಃ**—ಉಶೀನರಾಣೀ ಎಂಬ ಓಷಧಿಯನ್ನು ತುಂಬಿರುವ । **ಅನಃ**—ಬಂಡಿಯನ್ನು । **ಯಃ**—ಯಾವ ಎತ್ತು । **ಅವಹತ್**—ಹೊತ್ತುಕೊಂಡು ಬರುವುದೋ ಅಂತಹ । **ಗಾಂ**—ಸುಖವಾಗಿ ಸಂಚರಿಸುವ । **ಅನಡ್ವಾಹಂ**—ಎತ್ತನ್ನು । **ಸಮೀರಯೇ**—ನಮ್ಮಲ್ಲಿಗೆ ಕಳುಹಿಸು । **ಯತ್ ರಪಃ**—ಯಾವ ರೋಗರೂಪವಾದ ಪಾಪವಿದೆಯೋ ಅದೆಲ್ಲವೂ । **ಅಪ ಭರತಾಂ**—ನಾಶವಾಗಲಿ । **ದ್ಯೌಃ**—ಎಲೈ ದ್ಯುಲೋಕಾಧಿದೇವತೆಯೇ । **ಪೃಥಿವಿ**—ಎಲೈ ಪೃಥ್ವಿಯೇ । **ಕ್ಷಮಾ ರಪಃ**—ಪೃಥ್ವೀಸಂಬಂಧವಾದ ಸಕಲ ರೋಗಗಳನ್ನೂ ನಾಶಮಾಡಿರಿ । (ಎಲೈ ಸುಬಂಧುವೇ) **ತ್ವೇ**—ನಿನ್ನನ್ನು । **ಕಂ ಚನ**—ಯಾವ ರೋಗವೂ । **ಮೋ ಸು ಅಮಮತ್**—ಹಿಂಸಿಸದಿರಲಿ.

ಭಾವಾರ್ಥ

ಎಲೈ ಇಂದ್ರನೇ, ಉಶೀನರಾಣೀ ಎಂಬ ಓಷಧಿಯನ್ನು ತುಂಬಿರುವ ಬಂಡಿಯನ್ನು ಯಾವ ಎತ್ತು ಹೊತ್ತು ಕೊಂಡುಬರುವುದೋ ಅಂತಹ ಸುಖವಾಗಿ ಸಂಚರಿಸುವ ಎತ್ತನ್ನು ನಮ್ಮಲ್ಲಿಗೆ ಕಳುಹಿಸಿಕೊಡು. ಯಾವ ರೋಗರೂಪವಾದ ಪಾಪವಿದೆಯೋ ಅವೆಲ್ಲವೂ ನಾಶವಾಗಲಿ. ಎಲೈ ದ್ಯುಲೋಕಾಧಿದೇವಿಯೇ, ಎಲೈ ಪೃಥ್ವಿಯೇ, ಪೃಥ್ವೀಸಂಬಂಧವಾದ ಸಕಲ ರೋಗಗಳನ್ನೂ ನಾಶಮಾಡಿರಿ. ಎಲೈ ಸುಬಂಧುವೇ ನಿನ್ನನ್ನು ಯಾವ ರೋಗವೂ ಹಿಂಸಿಸದಿರಲಿ.

English Translation

Send, Indra, the active ox, who may bring the cart (leaden with) the Ushinarani grass : heaven and earth, remove all iniquity ; let heaven (take away) iniquity ; may no ill ever approach you.

ಅರವತ್ತನೆಯ ಸೂಕ್ತ

ಸಾಯಣಭಾಷ್ಯಂ

ಆ ಜನಮಿತಿ ದ್ವಾದಶರ್ಚಮಷ್ಟಾದಶಂ ಸೂಕ್ತಂ । ಗೌಪಾಯನಾ ಬಂಧ್ವಾದಯ ಋಷಯಃ। ಷಷ್ಠ್ಯಾಸ್ತ್ವಗಸ್ತ್ಯಸ್ಯ ಸ್ವಸೈಷಾಂ ಮಾತರ್ಧಿಕಾ । ಆದಿತಃ ಪಂಚ ಗಾಯತ್ರ್ಯಃ । ಅಷ್ಟಮೀನವಮ್ಯೌ

ಪಂಕ್ತೀ ಶಿಷ್ಟಾ ಅನುಷ್ಟುಭಃ । ಆದಿತಶ್ಚತಸೃಣಾಮಸಮಾತಿನಾಮ್ನೋ ರಾಜ್ಞಃ ಸ್ತೂಯಮಾನತ್ವಾತ್ ಸ ಏವ ದೇವತಾ । ಪಂಚಮ್ಯಾ ಇಂದ್ರಃ । ಷಷ್ಠ್ಯಾ ಅಸ್ಯಸಮಾತಿಃ । ತತಃ ಪಂಚಾನಾಂ ಸುಬಂಧೋರ್ಜೀವಿತಾಹ್ವಾನರೂಪೋಽರ್ಥೋ ದೇವತಾ । ಅಯಂ ಮೇ ಹಸ್ತ ಇತ್ಯಸ್ಯಾ ಲಬ್ಧಸಂಜ್ಞಸ್ಯ ಸುಬಂಧೋಃ ಸ್ಪರ್ಶನಹೇತುಭೂತೋ ದೇವತಾ । ತಥಾ ಚಾನುಕ್ರಾಂತಂ । ಆ ಜನಮಿತಿ ದ್ವಾದಶರ್ಚಮಾನುಷ್ಟುಭಂ ಚತಸೃಭಿರಸಮಾತಿಮಸ್ತುವನ್ಪಂಚಮ್ಯೇಂದ್ರಂ ಷಷ್ಠ್ಯಾಗಸ್ತ್ಯಸ್ಯ ಸ್ವಸಾ ಮಾತೈಷಾಂ ರಾಜಾನಮಸ್ತಾತ್ಪರಾಭಿಃ ಸುಬಂಧೋರ್ಜೀವಮಾಹ್ವಯಂಸ್ತಮಂತ್ಯಯಾ ಲಬ್ಧಸಂಜ್ಞಮಸ್ಪೃಶನ್ ಪಂಚಮ್ಯಾದ್ಯಾ ಗಾಯತ್ರ್ಯೋಽಷ್ಟಮ್ಯಾದ್ಯೇ ಪಂಕ್ತೀ ಇತಿ ।

ಅನುವಾದವು—**ಆ ಜನಂ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹದಿನೆಂಟನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋಪಾಯನಪುತ್ರರಾದ ಬಂಧ್ವಾದಿಗಳು ಋಷಿಗಳು; ಈ ಸೂಕ್ತದ ಆರನೆಯ ಋಕ್ಕಿಗೆ ಅಗಸ್ತ್ಯಋಷಿಯ ಸೊಸೆಯೂ ಈ ಬಂಧ್ವಾದಿಗಳ ತಾಯಿಯೂ ಆದ ಓರ್ವ ಸ್ತ್ರೀಯು ಋಷಿಯು. ಈ ಸೂಕ್ತದ ಮೊದಲಿನ ಐದು ಋಕ್ಕುಗಳು ಗಾಯತ್ರೀಛಂದಸ್ಕವು; ಎಂಟು ಮತ್ತು ಒಂಭತ್ತನೆಯ ಋಕ್ಕುಗಳು ಪಂಕ್ತಿಶ್ಛಂದಸ್ಕವು; ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳಲ್ಲಿ ಅಸಮಾತಿ ಎಂಬ ರಾಜನು ಸ್ತುತಿಸಲ್ಪಟ್ಟಿರುವುದರಿಂದ ಈ ನಾಲ್ಕು ಋಕ್ಕುಗಳಿಗೆ ಈ ಅಸಮಾತಿಯೇ ದೇವತೆಯು; ಐದನೆಯ ಋಕ್ಕಿಗೆ ಇಂದ್ರನು ದೇವತೆಯು, ಆರನೇ ಋಕ್ಕಿಗೆ ಅಸನಮಾತಿಯು ದೇವತೆಯು. ಅದರ ಮುಂದಿನ ಐದು ಋಕ್ಕುಗಳಲ್ಲಿ (೭-೧೧ ಋಕ್ಕುಗಳಲ್ಲಿ) ಸುಬಂಧುವಿನ ಜೀವಿತಾಹ್ವಾನವು ಪರಿತವಾಗಿರುವುದರಿಂದ ಆ ಅರ್ಥವೇ ದೇವತೆಯು. **ಅಯಂ ಮೇ ಹಸ್ತಃ** ಎಂಬ ಹನ್ನೆರಡನೆಯ ಋಕ್ಕಿಗೆ ಪುನಃ ಚೈತನ್ಯವನ್ನು ಪಡೆದು ಸುಬಂಧುವನ್ನು ಸ್ಪರ್ಶನಮಾಡಿರುವ ವಿಷಯವೇ ದೇವತೆಯು. ಅನುಕ್ರಮಣಿಕೆಯಲ್ಲಿ—**ಆ ಜನಮಿತಿ ದ್ವಾದಶರ್ಚಮಾನುಷ್ಟುಭಂ ಚತಸೃಭಿರಸಮಾತಿಮಸ್ತುವನ್ಪಂಚಮ್ಯೇಂದ್ರಂ ಷಷ್ಠ್ಯಾಗಸ್ತ್ಯಸ್ಯ ಸ್ವಸಾ ಮಾತೈಷಾಂ ರಾಜಾನಮಸ್ತಾತ್ಪರಾಭಿಃ ಸುಬಂಧೋರ್ಜೀವಮಾಹ್ವಯಂಸ್ತಮಂತ್ಯಯಾ ಲಬ್ಧಸಂಜ್ಞಮಸ್ಪೃಶನ್ ಪಂಚಾದ್ಯಾ ಗಾಯತ್ರ್ಯೋಽಷ್ಟಮ್ಯಾದ್ಯೇ ಪಂಕ್ತೀ** ಎಂದು ಹೇಳಿರುವುದು.

ಸೂಕ್ತ—೬೦

ಮಂಡಲ—೧೦ ॥ ಅನುವಾಕ—೪ ॥ ಸೂಕ್ತ—೬೦ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೩೪, ೩೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥

ಋಷಿಃ—ಬಂಧುಃ ಶ್ರುತಬಂಧುರ್ವಿಪ್ರಬಂಧುರ್ಗೌಪಾಯನಾಃ । ೬. ಆಗಸ್ತ್ಯಸ್ಯ ಸ್ವಸೈಷಾಂ ಮಾತಾ ॥

ದೇವತಾ—೧-೪,೬ ಅಸಮಾತೀ ರಾಜಾ । ೫. ಇಂದ್ರಃ । ೭-೧೧. ಸುಬಂಧೋರ್ಜೀವಿತಾಹ್ವಾನಂ। ೧೨. ಹಸ್ತಃ ॥

ಛಂದಃ—೧-೫. ಗಾಯತ್ರೀ । ೬, ೭, ೧೦-೧೨. ಅನುಷ್ಟುಪ್ । ೮,೯. ಪಂಕ್ತಿಃ ॥

ಸಂಹಿತಾಪಾಠಃ

ಆ ಜನಂ᳐ ತ್ವೇಷಸಂ᳐ದೃಶಂ ಮಾಹೀನಾನ್ತಾಮುಪಸ್ತುತಂ ।

ಅಗನ್ಮ ಭಿಭ್ರತೋ ನಮಃ ॥ ೧ ॥

ಪದಪಾಠಃ

ಆ । ಜನಂ । ತ್ವೇಷಸಂದೃಶಂ । ಮಾಹೀನಾನಾಂ । ಉಪಸ್ತುತಂ ।

ಅಗನ್ಮ । ಭಿಭ್ರತಃ । ನಮಃ ॥ ೧ ॥

ಸಾಯಣಭಾಷ್ಯಂ

ಇದಮಾದಿಭಿಸ್ತಿಸೃಭೀ ರಾಜಾನಂ ಸ್ತುವಂತಿ । ವಯಂ ಬಂಧ್ವಾದಯೋ ಜನಂ ಜನಪದಮುಪನೀತಿಸ್ವಭೂತಮಾಗನ್ಮ । ಅಭಿಗತಾಃ ॥ ಗಮೇರ್ಲುಙಿ ಮಂತ್ರೇ ಘಸೇತಿ ಚ್ಲೇರ್ಲುಕ್ । ಮ್ವೋಶ್ಚೇತಿ ಮಕಾರಸ್ಯ ನಕಾರಃ ॥ ಕೀದೃಶಂ ಜನಂ । ತ್ವೇಷಸಂದೃಶಂ ದೀಪ್ತದರ್ಶನಂ ಮಾಹೀನಾನಾಂ ಮಹತಾಮುಪಸ್ತುತಮುಪಗತಸ್ತುತಿಂ ॥ ತಾದೌ ಚೇತಿ ಗತೇಃ ಪ್ರಕೃತಿಸ್ವರಃ ॥ ಕೀದೃಶಾ ವಯಂ । ನಮೋ ನಮಸ್ಕಾರಂ ಬಿಭ್ರತೋ ಧಾರಯಂತಃ । ಕುರ್ವಂತ ಇತ್ಯರ್ಥಃ । ಯದ್ವಾ । ಜನಮಸಮಾತಿಮಿತ್ಯರ್ಥಃ । ಶಿಷ್ಟಂ ಸಮಾನಂ । ನಮೋ ಬಿಭ್ರತ ಇತಿ ರಾಜಕೃತೇ ನಮಸ್ಕಾರಂ ಧಾರಯಂತ ಇತ್ಯರ್ಥಃ ॥

ಪ್ರತಿಪದಾರ್ಥ

(ವಯಂ—ನಾವು) । ನಮಃ—ನಮಸ್ಕಾರವನ್ನು । ಬಿಭ್ರತಃ—ಮಾಡುತ್ತಾ । ತ್ವೇಷಸಂದೃಶಂ—ಪ್ರಕಾಶಮಾನವಾದ ರೂಪವುಳ್ಳವನೂ । ಮಾಹೀನಾನಾಂ—ಮಹಾತ್ಮರಿಂದಲೂ । ಉಪಸ್ತುತಂ—ಪ್ರಶಂಸಿತನಾದವನೂ ಆದ । ಜನಂ—ಅಸಮಾತಿಯೆಂಬ ರಾಜನಲ್ಲಿಗೆ । ಆ ಅಗನ್ಮ—ಬಂದಿದ್ದೇವೆ.

ಭಾವಾರ್ಥ

ರಾಜನಿಗೆ ಯೋಗ್ಯವಾದ ನಮಸ್ಕಾರವನ್ನು ಮಾಡುತ್ತಾ ಪ್ರಕಾಶಮಾನವಾದ ರೂಪವುಳ್ಳವನೂ, ಮಹಾತ್ಮರಿಂದಲೂ ಪ್ರಶಂಸಿತನಾದವನೂ ಆದ ಅಸಮಾತಿಯೆಂಬ ರಾಜನಲ್ಲಿಗೆ ನಾವು ಬಂದಿದ್ದೇವೆ.

English Translation

We have come to the person of splendid appearance, the honoured of the mighty, bringing him reverential homage.

ಸಂಹಿತಾಪಾಠಃ

ಅಸಮಾತಿಂ ನಿತೋಶನಂ ತ್ವೇಷಂ ನಿಯಯಿನಂ ರಥಂ ।

ಭಜೇರಥಸ್ಯ ಸತ್ಪತಿಂ ॥ ೨ ॥

ಪದಪಾಠಃ

ಅಸಮಾತಿಂ । ನಿತೋಶನಂ । ತ್ವೇಷಂ । ನಿಯಯಿನಂ । ರಥಂ ।

भजेऽरथस्य । सत्ऽपतिं ॥ ३ ॥

सायणभाष्यं

असमातिं राजानं निहंतारं शत्रूणां हंतारं । निहंतारं वर्धकर्मार। त्वेषं दीप्तं । नियंयिनं रथमिवोत्कृष्टमुपप्रधानोऽनिर्देशः । रथवत्सर्वाभिमतप्राप्तिसाधनं भजेरथस्यैतन्नामकस्य राज्ञोऽयं वंशे जातं । यद्वा । एतन्नामा कश्चिदस्य शत्रुः । तस्य नियंयिनं ॥ हलदंताच्च । पा. ६-३-९ । इति सप्तम्या अलुक् ॥ सप्तिं सतां पालकं ॥

प्रतिपदार्थ

निहंतारं—शत्रुनाशकनूं । **त्वेषं**—प्रकाशयुतनूं । **नियंयिनं**—उत्तमवागि चलिसुव । **रथं**—रथदंते इष्टार्थवन्नु ओदगिसुवनन्नूं । **भजेरथस्य**—भजेरथन वंशोत्पन्ननूं। अथवा **भजेरथस्य नियंयिनं**—भजेरथनेंब शत्रुनाशकनूं । **सप्तिं**—सज्जनर पालकनूं आद । **असमातिं**--असमातियल्लिगे (बंदिद्देवे).

भावार्थ

शत्रुनाशकनूं, प्रकाशयुतनूं, उत्तमवागि चलिसुव रथदंते इष्टार्थवन्नु ओदगिसुवनन्नूं भजेरथन वंशोत्पन्ननूं सज्जनर पालकनूं आद असमातियल्लिगे बंदिद्देवे.

English Translation

To Asamati, the destroyer (of foes), radiant, a quick-moving chariot (for the bringing of benefits), the descendant) of Bhajeratha, the protector of the good.

संहितापाठः

यो जनान्महिष्ँ इवातितस्थौ पवीरवान् ।

उताप्वीरवान्युधा ॥ ४ ॥

पदपाठः

यः । जनान् । महिषान्ऽइव । अतिऽतस्थौ । पवीरवान् ।

उत । अप्वीरवान् । युधा ॥ ४ ॥

सायणभाष्यं

योऽसमातिर्जनान् स्वविरोधिभूतानतितस्थौ अतिक्रम्य तिष्ठति । पराभावयतीत्यर्थः । क इव । महिषान् सिंह इव । कीदृशः सन् । पवीरवान् । पवीर पविः। खड्ग-

ವಾನ್ । ಉತಾಪಿ ಚಾಪವೀರವಾನಪಗತಖಡ್ಗಃ ಸನ್ । ಶಸ್ತ್ರಸಾಹಾಯ್ಯಮಪಿ ಕದಾಚಿನ್ನಾಪೇಕ್ಷತ ಇತ್ಯರ್ಥಃ । ಕಿಂ ಕುರ್ವನ್ । ಯುಧಾ ಯೋಧನೇನ । ಯುದ್ಧೇನೇತ್ಯರ್ಥಃ ॥

ಪ್ರತಿಪದಾರ್ಥ

ಪವೀರವಾನ್—ಕತ್ತಿಯನ್ನು ಹೊಂದಿರಲಿ । **ಉತ**—ಅಥವಾ । **ಅಪವೀರವಾನ್**—ಕತ್ತಿಯನ್ನು ಹೊಂದದೇ ಇರಲಿ । **ಯಃ**—ಯಾವ ಅಸಮಾತಿಯು । **ಮಹಿಷಾನ್ ಇವ**—ಸಿಂಹವು ಕಾಡುಕೋಣಗಳನ್ನು ಕೊಲ್ಲುವಂತೆ (ಸುಲಭವಾಗಿ) । **ಜನಾನ್**—ಶತ್ರುಜನರನ್ನು । **ಯುಧಾ**—ಯುದ್ಧಮಾಡಿ । **ಅತಿತಸ್ಥೌ**—ಸೋಲಿಸಿ ನಾಶಮಾಡುವನೋ (ಆ ಅಸಮಾತಿಯಲ್ಲಿಗೆ ಬಂದಿದ್ದೇವೆ).

ಭಾವಾರ್ಥ

ಯಾವ ಅಸಮಾತಿಯು ತನ್ನಲ್ಲಿ ಖಡ್ಗವಿರಲಿ ಅಥವಾ ಖಡ್ಗವಿಲ್ಲದಿರಲಿ, ಸಿಂಹವು ಕಾಡುಕೋಣಗಳನ್ನು ಕೊಲ್ಲುವಷ್ಟು ಸುಲಭವಾಗಿ ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವನೋ ಆ ಅಸಮಾತಿಯಲ್ಲಿಗೆ ಜಂದಿದ್ದೇವೆ.

English Translation

Who, whether armed or unarmed with a sword, overcomes adversaries in fight, as (a lion destroys) buffaloes.

ವಿಶೇಷನಿಷಯಗಳು

ಪವೀರವಾನ್—**ಪವಿಃ ಶಲ್ಯೋ ಭವತಿ । ಯದ್ವಿಪುನಾತಿ ಕಾಯಂ ತದ್ವಪವೀರಮಾಯುಧಂ ತದ್ವಾನಿಂದ್ರಃ ಪವೀರವಾನ್** । (ನಿ. ೧೨-೩೦) ಪವಿಃ ಎಂದರೆ ಶಲ್ಯವು, ಭರ್ಜಿಯು. ಏಕೆಂದರೆ ಅದು ಶರೀರದಲ್ಲಿ ಪ್ರವೇಶಿಸಿ ಅದನ್ನು ಸೀಳುವುದು. ಪವೀರವು ಎಂದರೆ ಮೊನಚಾದ ಆಯುಧವು.

ಸಂಹಿತಾಪಾಠಃ

ಯಸ್ಯೇಕ್ಷ್ವಾಕುರುಪವ್ರತೇ ರೇವಾನ್ಮರಾಯ್ಯೇಧತೇ ।
ದಿವೀವ ಪಂಚ ಕೃಷ್ಟಯಃ ॥ ೪ ॥

ಪದಪಾಠಃ

ಯಸ್ಯ । ಇಕ್ಷ್ವಾಕುಃ । ಉಪ । ವ್ರತೇ । ರೇವಾನ್ । ಮರಾಯೀ । ಏಧತೇ ॥
ದಿವಿ ಇವ । ಪಂಚ । ಕೃಷ್ಟಯಃ ॥ ೪ ॥

ಸಾಯಣಭಾಷ್ಯಂ

ಯಸ್ಯ ಜನಪದಸ್ಯೇಕ್ಷ್ವಾಕೂ ರಾಜಾ ವ್ರತೇ ಕರ್ಮಣಿ ರಕ್ಷಣರೂಪ ಉಪೈಧತೇ ಪ್ರವರ್ಧತೇ । ಕೀದೃಶಃ ಸನ್ । ರೇವಾನ್ ರಯಿವಾನ್ ಮರಾಯೀ ಶತ್ರೂಣಾಂ ಮಾರಕಶ್ಚ ಸನ್ । ವಿಶೇಷಣದ್ವಯೇನ

ಜನಾನಾಂ ದಾನಾದಿರೂಪೇಣ ಧನಲಾಭಃ ಪರರಾಜೋಪದ್ರವಾಪತ್ತಿಶ್ಚೋಕ್ತಾ ಭವತಿ। ಏವಾ ಸತಿ ತದ್ವಿಷಯಸ್ಥಾಃ ಪಂಚ ಕೃಷ್ಟಯೋ ನಿಷಾದಪಂಚಮಾಶ್ಚತ್ವಾರೋ ವರ್ಣಾ ದಿವೀವ ದ್ಯುಲೋಕೇಃ ಯಥಾ ಸಂಕಲ್ಪಸಿದ್ಧಾಃ ಸಂತಃ ಸುಖಿನೋ ಭವಂತಿ ತದ್ವತ್ಸುಖಿನೋ ಭವಂತೀತಿ ಶೇಷಃ ॥

ಪ್ರತಿಪದಾರ್ಥ

ಯಸ್ಯ—ಯಾವನ ರಾಜ್ಯದಲ್ಲಿ। **ಪಂಚ ಕೃಷ್ಟಯಃ**—ಐದು ಪಂಗಡದ ಜನರೂ। **ದಿವೀವ**—ದ್ಯುಲೋಕದಲ್ಲಿರುವಂತೆ ಸುಖವಾಗಿರಲು। **ರೇವಾನ್**—ಧನವಂತನೂ। **ಮರಾಯೀ**—ಶತ್ರುನಾಶಕನೂ ಆದ। **ಇಕ್ಷ್ವಾಕುಃ**—ಇಕ್ಷ್ವಾಕುವೆಂಬ ರಾಜನು। **ವೃತೇ**—ಪ್ರಜಾರಕ್ಷಣರೂಪವಾದ ಕರ್ಮದಲ್ಲಿ। **ಉಪ ಏಧತೇ**—ವೃದ್ಧಿಯನ್ನು ಹೊಂದುವನೋ (ಅಂತಹ ಅಸಮಾತಿಯಲ್ಲಿಗೆ ಬಂದಿದ್ದೇವೆ).

ಭಾವಾರ್ಥ

ಯಾವ ಅಸಮಾತಿಯ ರಾಜ್ಯದಲ್ಲಿ ಐದು ಪಂಗಡದ ಜನರೂ ದ್ಯುಲೋಕದಲ್ಲಿರುವಂತೆ ಸುಖವಾಗಿರಲು ಧನವಂತನೂ, ಶತ್ರುನಾಶಕನೂ ಆದ ಇಕ್ಷ್ವಾಕುವೆಂಬ ರಾಜನು ಪ್ರಜಾರಕ್ಷಣಾರೂಪವಾದ ಕರ್ಮದಲ್ಲಿ ವೃದ್ಧಿಯನ್ನು ಹೊಂದುವನೋ ಅಂತಹ ಅಸವಾತಿಯಲ್ಲಿಗೆ ಬಂದಿದ್ದೇವೆ.

English Translation

In the good government of whose (realm) the opulent and victorious Ikshwaku prospers (so that) the five orders of men (are as happy) as if they were in heaven.

ಸಂಹಿತಾಪಾಠಃ

ಇಂದ್ರ ಕ್ಷತ್ರಾಸಮಾತಿಷು ರಥಪ್ರೋಷ್ಠೇಷು ಧಾರಯ ।
ದಿವೀವ ಸೂರ್ಯಂ ದೃಶೇ ॥ ೫ ॥

ಪದಪಾಠಃ

ಇಂದ್ರ । ಕ್ಷತ್ರಾ । ಅಸಮಾತಿಷು । ರಥಽಪ್ರೋಷ್ಠೇಷು । ಧಾರಯ । ದಿವಿಽಇವ । ಸೂರ್ಯಂ । ದೃಶೇ ॥ ೫ ॥

ಸಾಯಣಭಾಷ್ಯಂ

ಅನಯೇಂದ್ರಮಾಹ್ವಯತೇಽಸಮಾತ್ಯರ್ಥಂ। ಹೇ ಇಂದ್ರ ಕ್ಷತ್ರಾ ಕ್ಷತ್ರಾಣಿ ಬಲಾನಿ ರಥಪ್ರೋಷ್ಠೇಷ್ವಸಮಾತಿಷು ॥ ಏಕಸ್ಮಿನ್ಬಹುವಚನಂ ಪೂಜಾರ್ಥಂ ॥ ರಥಪ್ರೋಷ್ಠೇಽಸಮಾತೌ ಧಾರಯ। ದಿವೀವ ಸೂರ್ಯಂ ದಿವಿ ಯಥಾ ಸೂರ್ಯಂ ದೃಶೇ ಸರ್ವೇಷಾಂ ಸಂದರ್ಶನಾಯ ಸ್ಥಾಪಿತವಾನಸಿ ತದ್ವದತ್ರ ಬಲಂ ಧಾರಯ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । **ದೃಶೇ**—ಸಕಲರಿಗೂ ಗೋಚರವಾಗಲು । **ದಿವಿ**—ಅಂತರಿಕ್ಷದಲ್ಲಿ । **ಸೂರ್ಯಂ**—ಸೂರ್ಯನನ್ನು ಸ್ಥಾಪಿಸಿರುವಂತೆ । **ರಥಪ್ರೋಷ್ಠೇಷು**—ರಥಪ್ರೋಷ್ಠನ ಸಂತತಿಯ । **ಅಸಮಾತಿಷು**—ಅಸಮಾತಿಯೆಂಬ ರಾಜನಲ್ಲಿ । **ಕ್ಷತ್ರಾ**—ಬಲವನ್ನು । **ಧಾರಯ**—ಸ್ಥಾಪಿಸು.

ಭಾವಾರ್ಥ

ಎಲೈ ಇಂದ್ರನೇ, ಸಕಲರಿಗೂ ಗೋಚರವಾಗಲು ಅಂತರಿಕ್ಷದಲ್ಲಿ ಸೂರ್ಯನನ್ನು ಸ್ಥಾಪಿಸಿರುವಂತೆ, ರಥಪ್ರೋಷ್ಠನ ಸಂತತಿಗೆ ಸೇರಿದ ಅಸುಮಾತಿಯೆಂಬ ರಾಜನಲ್ಲಿ ಬಲವನ್ನು ಸ್ಥಾಪಿಸು.

English Translation

Maintain, Indra, vigour in the Rathaproshtha Asamatis, as (you maintain) the sun in heaven for the sight (of all).

ಸಂಹಿತಾಪಾಠಃ

ಅಗಸ್ತ್ಯಸ್ಯ ನದ್ಭ್ಯಃ ಸಪ್ತೀ ಯುನಕ್ಷಿ ರೋಹಿತಾ ।
ಪಣೀನ್ನ್ಯಕ್ರಮೀರಭಿ ವಿಶ್ವಾನ್ರಾಜನ್ನರಾಧಸಃ ॥ ೬ ॥

ಪದಪಾಠಃ

ಅಗಸ್ತ್ಯಸ್ಯ । ನತ್ಸ್ಭ್ಯಃ । ಸಪ್ತೀ ಇತಿ । ಯುನಕ್ಷಿ । ರೋಹಿತಾ ।
ಪಣೀನ್ । ನಿ । ಅಕ್ರಮೀಃ । ಅಭಿ । ವಿಶ್ವಾನ್ । ರಾಜನ್ । ಅರಾಧಸಃ ॥ ೬ ॥

ಸಾಯಣಭಾಷ್ಯಂ

ಅನಯೋಗಸ್ತ್ಯಸ್ಯ ಸ್ವಸಾ ಬಂಭ್ವಾದೀನಾಂ ಮಾತಾ ರಾಜಾನಂ ಸ್ತೌತಿ । ಹೇ ರಾಜನ್ನಸಮಾತೇ ತ್ವಮಗಸ್ತ್ಯಸ್ಯರ್ಷೇರ್ನದ್ಭ್ಯೋ ನಂದಯಿತೃಭ್ಯೋ ಬಂಧ್ವಾದಿಭ್ಯೋ ನಿಮಿತ್ತಭೂತೇಭ್ಯಸ್ತೇಷಾಂ ಧನಪ್ರಾಪ್ತಯೇ ಸಪ್ತೀ ಸರ್ಪಣಸ್ವಭಾವಾವಶ್ವೌ ರೋಹಿತಾ ರೋಹಿತವರ್ಣೌ ಯುನಕ್ಷಿ । ಯೋಜಯ ರಥೇ । ತಥಾ ಕೃತ್ವಾ ವಿಶ್ವಾನ್ ಸರ್ವಾನರಾಧಸೋಽದಾತೄನಯಜಮಾನಾನ್ಪಣೀನ್ಪಣಿಜೋ ಲುಬ್ಧಕಾನ್ನಿಕೃಷ್ಟಂ ನಿತರಾಂ ವಾಭ್ಯಕ್ರಮೀಃ । ಅಭಿಭವ ॥

ಪ್ರತಿಪದಾರ್ಥ

ರಾಜನ್—ಎಲೈ ಅಸಮಾತಿಯೇ । **ಅಗಸ್ತ್ಯಸ್ಯ**—ಅಗಸ್ತ್ಯಋಷಿಯ । **ನದ್ಭ್ಯಃ**—ಬಂಧುಗಳಿಗೆಲ್ಲ ಧನವನ್ನು ಒದಗಿಸಲು । **ರೋಹಿತಾ**—ಹೊಂಬಣ್ಣದ । **ಸಪ್ತೀ**—ಅಶ್ವಗಳನ್ನು । **ಯುನಕ್ಷಿ**—ರಥಕ್ಕೆ ಯೋಜಿಸು ।

ಅರಾಧಸಃ—ಯಜ್ಞಕರ್ತರಲ್ಲದ । **ವಿಶ್ವಾನ್ ಪಣೀನ್**—ಸಕಲ ಲೋಭಿಗಳನ್ನೂ । **ನಿ ಅಭಿ ಅಕ್ರಮೀಃ**—ಸೋಲಿಸಿ ನಾಶಪಡಿಸು.

ಭಾವಾರ್ಥ

ಎಲೈ ಅಸಮಾತಿಯೇ, ಅಗಸ್ತ್ಯಋಷಿಯ ಬಂಧುಗಳಿಗೆಲ್ಲ ಧನವನ್ನು ಒದಗಿಸಲು ಹೊಂಬಣ್ಣದ ಅಶ್ವಗಳನ್ನು ನಿನ್ನ ರಥಕ್ಕೆ ಯೋಜಿಸು. ಯಜ್ಞಕರ್ತರಲ್ಲದ ಸಕಲ ಲೋಭಿಗಳನ್ನೂ ಸೋಲಿಸಿ ನಾಶಪಡಿಸು.

English Translation

Yoke the two red horses to your chariot, for the nephews of Agastya, and overcome, Raja, all the niggard withholders of oblations.

ಸಂಹಿತಾಪಾಠಃ

ಅಯಂ ಮಾತಾಯಂ ಪಿತಾಯಂ ಜೀವಾತುರಾಗಮತ್ ।

ಇದಂ ತವ ಪ್ರಸರ್ಪಣಂ ಸುಬಂಧವೇಹಿ ನಿರೀಹಿ ॥ ೭ ॥

ಪದಪಾಠಃ

ಅಯಂ । ಮಾತಾ । ಅಯಂ । ಪಿತಾ । ಅಯಂ । ಜೀವಾತುಃ । ಆ । ಅಗಮತ್ ।

ಇದಂ । ತವ । ಪ್ರಸರ್ಪಣಂ । ಸುಬಂಧೋ ಇತಿ ಸುಽಬಂಧೋ । ಆ । ಇಹಿ । ನಿಃ । ಇಹಿ ॥ ೭ ॥

ಸಾಯಣಭಾಷ್ಯಂ

ಅತ್ರ ಶೇಷೇ ಶಾಟ್ಯಾಯನಕಂ । ಅಥಾಗ್ನಿಂ ದ್ವ್ಯೃಪದೇನ ಸೂಕ್ತೇನಾಸ್ತುವನ್ ಅಗ್ನಿಃ ಸ್ತುತ ಆಜಗಾಮ। ಆಗತ್ಯ ಚಾಹ ಕಿಂಕಾಮಾ ಮಾಗಚ್ಛತೇತಿ। ಸುಬಂಧೋರೇವಾಸುಂ ಪುನರ್ದನುಯಾಮೇತ್ಯಬ್ರುವನ್ । ಏಷಾಂತಃಪರಿಧೀತ್ಯಬ್ರವೀತ್ತಮಾದಧ್ವಮಿತಿ । ತನ್ನಿರಾಹ । ಅಯಂ ಮಾತಾಯಂ ಪಿತೇತಿ । ಶೌನಕಶ್ಚ ।

ಸ್ತುತಃ ಸ ರಾಜಾ ಸುಪ್ರೀತಸ್ತಸ್ಥೌ ಗೌಪಾಯನಾನಭಿ ।
ಸೂಕ್ತೇನ ತೇಽಸ್ತುವನ್ನಗ್ನಿಂ ದ್ವ್ಯೃಪದೇನ ಯಥಾತ್ರಿಷು ॥
ಅಥಾಗ್ನಿರಬ್ರವೀದೇತಾನಯಮಂತ್ರಃ ಪರಿಧ್ಯಸುಃ ।
ಸುಬಂಧೋರಸ್ಯ ಚೇಷ್ಟ್ವಾಕೋರ್ಮಯಾ ಗುಪ್ತೋ ಹಿತಾರ್ಥಿನಾ ॥
ಸುಬಂಧವೇ ಪ್ರದಾಯೋಸುಂ ಜೀವೇತ್ಯುಕ್ತ್ವಾ ಚ ಪಾವಕಃ ।
ಸ್ತುತೋ ಗೌಪಾಯನೈಃ ಪ್ರೀತೋ ಜಗಾಮ ತ್ರಿದಿವಂ ಪ್ರತಿ ॥
ಅಯಂ ಮಾತೇತಿ ಹೃಷ್ಟಾಸ್ತೇ ಸುಬಂಧೋರುಸುಮಾಹ್ವಯನ್ ।

ಶರೀರಮಭಿನಿರ್ದಿಶ್ಯ ಸುಬಂಧೋಃ ಪತಿತಂ ಭುವಿ ।
ಸೂಕ್ತಶೇಷಂ ಜಗುಶ್ಚಾಸ್ಯ ಚೇತಸೋ ಧಾರಣಾಯತ ಇತಿ ॥

(ಬೃ.. ೭-೧೦೭೨ ರಿಂದ ೧೦೭೬)

ಅಯಮಗ್ನಿರ್ಮಾತಾ । ಅಯಮೇವ ಪಿತಾ । ಅಯಂ ಜೀವಾತುರ್ಜೀವಯಿತಾಗಮತ್ । ಅಜಗಾಮ । ಅತೋ ಹೇ ಸುಬಂಧೋ ಜೀವಪರಿಧೌ ವರ್ತಮಾನ ಇದಂ ತವ ಶರೀರಂ ತವ ಪ್ರಸರ್ಪಣಂ। ಪ್ರಕರ್ಷೇಣ ಸರ್ಪಣಸಾಧನಂ। ಅತ ಇದಂ ಪ್ರತ್ಯೇಹಿ । ಆಗಚ್ಛ। ನಿರಿಹಿ। ನಿರ್ಗಚ್ಛ ಪರಿಧೇಃ ಸಕಾಶಾತ್ । ಅನ್ಯ ಏವಂ ವ್ಯಾಚಕ್ಷತೇ । ಹೇ ನಿರ್ಗತಪ್ರಾಣ ಸುಬಂಧೋ ಅಯಂ ॥ ವಿಭಕ್ತಿವ್ಯತ್ಯಯಃ ॥ ಇಯಂ ಮಾತಾಯಂ ಪಿತಾಯಂ ಜೀವಾತುರ್ಜೀವನಫಲಭೂತಃ ಪುತ್ರಶ್ಚಾಗಮದಿತಿ ಸಂಬಧ್ಯತೇ । ಸರ್ವೇ ತ್ವಾಮಾಗತಾ ದುಃಖಿತಾಃ ಸಂತಃ । ಶಿಷ್ಟಂ ಸಮಾನಂ ॥

ಪ್ರತಿಪದಾರ್ಥ

ಸುಬಂಧೋ—ಎಲೈ ಸುಬಂಧುವೇ । **ಅಯಂ**—ಈ ಅಗ್ನಿಯು । **ಮಾತಾ**—ನಿನ್ನ ತಾಯಿಯು । **ಅಯಂ**—ಇದೇ ಅಗ್ನಿಯು । **ಪಿತಾ**—ನಿನ್ನ ತಂದೆಯು । **ಅಯಂ**—ಇದೇ ಅಗ್ನಿಯು । **ಜೀವಾತುಃ**—ನಿನಗೆ ಜೀವನವನ್ನು ಕೊಡತಕ್ಕವನು । **ಆಗಮತ್**—ಇಹೋ ಇಲ್ಲಿಗೆ ಬಂದಿದ್ದಾನೆ । **ಪ್ರಸರ್ಪಣಂ**—ಚಲಿಸತಕ್ಕ। **ತವ ಇದಂ**—ನಿನ್ನ ಈ ಶರೀರಕ್ಕೆ । **ಏಹಿ**—ಬಂದು ಪ್ರವೇಶಿಸು । **ನಿರಿಹಿ**—ಪರಿಧಿಯಿಂದ ಹೊರಕ್ಕೆ ಬಾ.

ಭಾವಾರ್ಥ

ಎಲೈ ಸುಬಂಧುವೇ, ಈ ಅಗ್ನಿಯೇ ನಿನ್ನ ಮಾತಾಪಿತೃರೂಪವಾಗಿದ್ದಾನೆ. ನಿನಗೆ ಜೀವವನ್ನು ತುಂಬಿಸುವ ಈ ಅಗ್ನಿಯು ಇಲ್ಲಿಗೆ ಬಂದಿದ್ದಾನೆ. ನೀನು ಬಂದು ನಿನ್ನ ಚಲಿಸುವ ಸ್ವಭಾವವುಳ್ಳ ದೇಹಕ್ಕೆ ಪ್ರವೇಶಿಸು. ಪರಿಧಿಯಿಂದ ಹೊರಕ್ಕೆ ಬಾ.

ಅಥವಾ

ಎಲೈ ಸುಬಂಧುವೇ, ನಿನ್ನ ಮರಣವನ್ನು ಕೇಳಿ ದುಃಖಿಸುತ್ತ ಇದೋ, ನಿನ್ನ ತಾಯಿ, ತಂದೆ, ಮಗು ಎಲ್ಲರೂ ಬಂದಿದ್ದಾರೆ. ನೀನು ಪುನಃ ಶರೀರವನ್ನು ಪ್ರವೇಶಿಸಿ ಜೀವಂತನಾಗು. ಇವರಿಗೆ ಸುಖಕಾರಕನಾಗು. ಎಂದು ಇನ್ನೊಂದು ವಿಧವಾದ ಅರ್ಥವು ಸಾಧ್ಯವೆಂದು ಸಾಯಣರು ತಿಳಿಸಿದ್ದಾರೆ.

English Translation

This (Agni) your mother, this your father, this the giver of life to you, has arrived ; come back, Subandhu, to this your (body) that is capable of motion; come forth.

ವಿಶೇಷವಿಷಯಗಳು

ಈ ಋಕ್ಕಿನ ಅರ್ಥವಿವರಣೆಯ ವಿಷಯದಲ್ಲಿ ಭಾಷ್ಯಕಾರರು ಶಾಟ್ಯಾಯನ ಬ್ರಾಹ್ಮಣದ ವಾಕ್ಯವನ್ನು ಉದಹರಿಸಿದಾರೆ—

ಅಥಾಗ್ನಿಂ ದ್ವೈಪದೇನ ಸೂಕ್ತೇನಾಸ್ತುವನ್ । ಅಗ್ನಿಃ ಸ್ತುತ ಅಜಗಾಮು । ಆಗತ್ಯ ಚಾಹ ಕಿಂಕಾಮಾ ಮಾಗಚ್ಛತೇತಿ । ಸುಬಂಧೋರೇವಾಸುಂ ಪುನರ್ವನುಯಾಮೇತ್ಯಬ್ರುವನ್ । ಏಷಾಂತಃಪರಿಧೀತ್ಯಬ್ರವೀತ್ತಮಾದಧ್ವಮಿತಿ । ತನ್ನಿರಾಹ । ಅಯಂ ಮಾತಾಯಂ ಪಿತಾ ಇತಿ॥

ಬಂಧ್ವಾದಿಗಳು ಅಗ್ನಿಯನ್ನು ದ್ವಿಪದಾವಿರಾಟ್ಛಂದಸ್ಸಿನ ಸೂಕ್ತದಿಂದ (ಋ. ಸಂ. ೫-೩೪) ಸ್ತೋತ್ರಮಾಡಿದರು. ಅವರಿಂದ ಸಂತುಷ್ಟನಾದ ಅಗ್ನಿಯು ಅಲ್ಲಿಗೆ ಬಂದು—ನಿಮ್ಮ ಅಪೇಕ್ಷೆಯೇನು? ಏತಕ್ಕಾಗಿ ನನ್ನನ್ನು ಬರಮಾಡಿದಿರಿ ಎಂದು ಕೇಳಲು, ಅವರು—ಈ ಸುಬಂಧುವಿನ ಪ್ರಾಣವು ಪುನಃ ಬರಬೇಕೆಂದು ಅಪೇಕ್ಷಿಸುತ್ತೇವೆ ಎಂದರು. ಈ ಸುಬಂಧುವಿನ ಪ್ರಾಣವು ಅಗ್ನಿಯ ಅಂತಃಪರಿಧಿಯಲ್ಲಿದೆಯೆಂದು ಅಗ್ನಿಯು ಹೇಳಲು ಅವನ್ನು ತರಬೇಕೆಂದು ಪ್ರಾರ್ಥಿಸಿದರು. ಆ ಪ್ರಾರ್ಥನೆಯೇ **ಅಯಂ ಮಾತಾ** ಎಂದು ಮೊದಲಾಗಿ ಈ ಋಕ್ಕಿನಲ್ಲಿ ಹೇಳಿರುವುದು.

ಶೌನಕಮಹರ್ಷಿಯೂ ಕೂಡ ಈ ವಿಷಯವನ್ನು ತನ್ನ ಬೃಹದ್ದೇವತಾಗ್ರಂಥದಲ್ಲಿ—**ಸ್ತುತಃ ಸ ರಾಜಾ ಸುಪ್ರೀತಃ** ಎಂದು ಆರಂಭಮಾಡಿ, **ಚೇತಸೋ ಧಾರಣಾಯ ತೇ** ಎನ್ನುವವರೆಗೆ ವಿವರಿಸಿರುವರು. ಈ ವಿಷಯವನ್ನು ನಾವು ೫೭ ನೇ ಸೂಕ್ತದ ಪೀಠಿಕೆಯಲ್ಲಿ (ಪುಟ 352-353) ವಿವರಿಸಿದೇವೆ.

ಸಂಹಿತಾಪಾಠಃ

ಯಥಾ ಯುಗಂ ವರತ್ರಯಾ ನಹ್ಯಂತಿ ಧರುಣಾಯ ಕಂ ।
ಏವಾ ದಾಧಾರ ತೇ ಮನೋ ಜೀವಾತವೇ ನ ಮೃತ್ಯವೇಽಥೋ ಅರಿಷ್ಟತಾತಯೇ ॥ ೮ ॥

ಪದಪಾಠಃ

ಯಥಾ । ಯುಗಂ । ವರತ್ರಯಾ । ನಹ್ಯಂತಿ । ಧರುಣಾಯ । ಕಂ ।
ಏವ । ದಾಧಾರ । ತೇ । ಮನಃ । ಜೀವಾತವೇ । ನ । ಮೃತ್ಯವೇ । ಅಥೋ ಇತಿ । ಅರಿಷ್ಟತಾತಯೇ ॥

ಸಾಯಣಭಾಷ್ಯಂ

ಯಥಾ ಯುಗಂ ವರತ್ರಯಾ ಪಾಶೇನ ನಹ್ಯಂತಿ ಬಧ್ನಂತಿ ಧರುಣಾಯ ರಥಾದಿಧಾರಣಾಯ । ಕಮಿತಿ ಪಾದಪೂರಣಃ । ಏವೈವಂ ತೇ ಮನೋ ದಾಧಾರ ಪರಿಧಾವಗ್ನಿಃ । ಕಿಮರ್ಥಂ । ಜೀವಾತವೇ ಜೀವನಾಯ ನ ಮೃತ್ಯವೇ ಮರಣಾಯ ನ ಅಥೋ ಅಪಿ ಚಾರಿಷ್ಟತಾತಯೇಽವಿನಾಶಾಯ ॥ ಸ್ವಾರ್ಥಿಕಸ್ತಾತಿಃ ॥

ಪ್ರತಿಪದಾರ್ಥ

ಯಥಾ—ಯಾವ ರೀತಿ । **ಯುಗಂ**—ನೊಗವನ್ನು । **ಧರುಣಾಯ**—ಅದು ಸ್ಥಿರವಾಗಿ ನಿಲ್ಲುವುದಕ್ಕಾಗಿ । **ವರತ್ರಯಾ**—ಹಗ್ಗದಿಂದ । **ನಹ್ಯಂತಿ**—ಕಟ್ಟುವರೋ । **ಏವ**—ಅದೇ ರೀತಿಯಲ್ಲಿ । **ತೇ ಮನಃ**—ನಿನ್ನ ಚೇತನವನ್ನು । **ಜೀವಾತವೇ**—ಜೀವಿಸುವುದಕ್ಕಾಗಿ । **ದಾಧಾರ**—ಪರಿಧಿಯಲ್ಲಿ ಸೇರಿಸಿ ಸ್ಥಾಪಿಸಿದ್ದಾನೆ । **ಅರಿಷ್ಟತಾತಯೇ**—ಕಲ್ಯಾಣಕ್ಕಾಗಿಯೇ ಹೊರತು । **ನ ಮೃತ್ಯವೇ**—ಸಾಯುವುದಕ್ಕಾಗಿ ಸ್ಥಾಪಿಸಿಲ್ಲ.

ಭಾವಾರ್ಥ

ನೊಗವನ್ನು ಅದು ಸ್ಥಿರವಾಗಿ ನಿಲ್ಲುವುದಕ್ಕಾಗಿ ಯಾವರೀತಿ ಹಗ್ಗದಿಂದ ಕಟ್ಟುವರೋ ಅದೇರೀತಿ ನಿನ್ನ ಚೇತನವನ್ನು ಅಗ್ನಿಯು ಅದು ಜೀವಿಸಿರುವುದಕ್ಕಾಗಿ ಪರಿಧಿಯಲ್ಲಿ ಸೇರಿಸಿ ಸ್ಥಾಪಿಸಿದ್ದಾನೆ. ಕಲ್ಯಾಣಲಾಭಾರ್ಥವಾಗಿಯೇ ಅದನ್ನು ಸ್ಥಾಪಿಸಿದ್ದಾನೆಯೇ ವಿನಾ ಅದರ ಸಾವಿಗಾಗಿಯಲ್ಲ.

English Translation

As men bind the yoke with cords for its support, so has (Agni) placed your spirit (in the body) for life, not for death, but for security.

ಸಂಹಿತಾಪಾಠಃ

ಯಥೇಯಂ ಪೃಥಿವೀ ಮಹೀ ದಾಧಾರೇಮಾನ್ವನಸ್ಪತೀನ್ ।
ಏವಾ ದಾಧಾರ ತೇ ಮನೋ ಜೀವಾತವೇ ನ ಮೃತ್ಯವೇಽಥೋ ಅರಿಷ್ಟತಾತಯೇ ॥ ೯ ॥

ಪದಪಾಠಃ

ಯಥಾ । **ಇಯಂ** । **ಪೃಥಿವೀ** । **ಮಹೀ** । **ದಾಧಾರ** । **ಇಮಾನ್** । **ವನಸ್ಪತೀನ್** ।
ಏವ । **ದಾಧಾರ** । **ತೇ** । **ಮನಃ** । **ಜೀವಾತವೇ** । **ನ** । **ಮೃತ್ಯವೇ** । **ಅಥೋ ಇತಿ** । **ಅರಿಷ್ಟತಾತಯೇ**॥೯॥

ಸಾಯಣಭಾಷ್ಯಂ

ಯಥೇಯಂ ಪೃಥಿವೀ ಮಹೀಮಾನ್ವನನ್ಸ್ಪತೀನ್ಪೃಕ್ಷಾದೀನ್ದಾಧಾರ । ಶಿಷ್ಟಮುಕ್ತಂ ॥

ಪ್ರತಿಪದಾರ್ಥ

ಯಥಾ—ಯಾವ ರೀತಿಯಲ್ಲಿ । **ಮಹೀ**—ಮಹತ್ಸ್ವರೂಪವುಳ್ಳ । **ಪೃಥಿವೀ**—ಪೃಥ್ವಿಯು । **ಇಮಾನ್ ವನಸ್ಪತೀನ್**—ಈ ವೃಕ್ಷಗಳನ್ನು । **ದಾಧಾರ**—ದೃಢವಾಗಿ ಧರಿಸಿದೆಯೋ । **ಏವ**—ಅದೇ ರೀತಿ (ಅಗ್ನಿಯು) । **ತೇ ಮನಃ**—ನಿನ್ನ ಚೇತನವನ್ನು । **ಜೀವಾತವೇ**—ಜೀವಿಸಿರುವುದಕ್ಕಾಗಿ । **ದಾಧಾರ**—ಪರಿಧಿಯಲ್ಲಿ ಸ್ಥಾಪಿಸಿ ಹಿಡಿದಿದ್ದಾನೆ । **ಅರಿಷ್ಟತಾತಯೇ**—ಕಲ್ಯಾಣಕ್ಕಾಗಿಯೇ ವಿನ । **ನ ಮೃತ್ಯವೇ**—ಸಾಯುವುದಕ್ಕಾಗಿ ಅಲ್ಲ.

ಭಾವಾರ್ಥ

ಯಾವರೀತಿ ಮಹತ್ಸ್ವರೂಪವುಳ್ಳ ಪೃಥ್ವಿಯು ಈ ವೃಕ್ಷಗಳನ್ನು ದೃಢವಾಗಿ ಧರಿಸಿದೆಯೋ, ಅದೇ ರೀತಿ ಅಗ್ನಿಯು ನಿನ್ನ ಚೇತನವನ್ನು ಜೀವಿಸಿರುವುದಕ್ಕಾಗಿ ಪರಿಧಿಯಲ್ಲಿ ಸ್ಥಾಪಿಸಿ ಹಿಡಿದಿದ್ದಾನೆ. ಅದರ ಕಲ್ಯಾಣಕ್ಕಾಗಿಯೇ ವಿನಾ ಅದು ಸಾಯುವುದಕ್ಕಾಗಿ ಅಲ್ಲ.

English Translation

As this spacious earth supports these trees so has (Agni) placed your spirit (in the body) for life, not for death, but for security.

ಸಂಹಿತಾಪಾಠಃ

ಯಮಾದಹಂ ವೈವಸ್ವತಾತ್ಸುಬಂಧೋರ್ಮನ ಆಭರಂ ।

ಜೀವಾತವೇ ನ ಮೃತ್ಯವೇಽಥೋ ಅರಿಷ್ಟತಾತಯೇ ॥ ೧೦ ॥

ಪದಪಾಠಃ

ಯಮಾತ್ । ಅಹಂ । ವೈವಸ್ವತಾತ್ । ಸುಽಬಂಧೋಃ । ಮನಃ । ಅ । ಅಭರಂ ।

ಜೀವಾತವೇ । ನ । ಮೃತ್ಯವೇ । ಅಥೋ ಇತಿ । ಅರಿಷ್ಟಽತಾತಯೇ ॥ ೧೦ ॥

ಸಾಯಣಭಾಷ್ಯಂ

ಇಯಂ ನಿಗದಸಿದ್ಧಾ ॥

ಪ್ರತಿಪದಾರ್ಥ

ಸುಬಂಧೋಃ—ಸುಬಂಧುವಿನ । **ಮನಃ**—ಚೇತನವನ್ನು । **ಅಹಂ**—ನಾನು । **ವೈವಸ್ವತಾತ್**—ವಿವಸ್ವಂತನ ಪುತ್ರನಾದ । **ಯಮಾತ್**—ಯಮನಿಂದ । **ಅಭರಂ**—ಕರೆತಂದಿದ್ದೇನೆ । **ಜೀವಾತವೇ**—ಅದು ಜೀವಿಸಿರುವುದಕ್ಕಾಗಿಯೂ । **ಅರಿಷ್ಟತಾತಯೇ**-ಅದರ ಕಲ್ಯಾಣಕ್ಕಾಗಿಯೂ ಕರೆತಂದಿದ್ದೇನೆ । **ನ ಮೃತ್ಯವೇ**-ಅದು ಸಾಯುವುದಕ್ಕಾಗಿ ಅಲ್ಲ.

ಭಾವಾರ್ಥ

ಸುಬಂಧುವಿನ ಚೇತನವನ್ನು ನಾನು ವಿವಸ್ವಂತನ ಪುತ್ರನಾದ ಯಮನಿಂದ ಕರೆತಂದಿದ್ದೇನೆ. ಅದು ಜೀವಿಸಿರುವುದಕ್ಕಾಗಿಯೂ ಅದರ ಕಲ್ಯಾಣಕ್ಕಾಗಿಯೂ ಕರೆತಂದಿದ್ದೇನೆ. ಅದು ಸಾಯುವುದಕ್ಕಾಗಿ ಅಲ್ಲ.

English Translation

(Agni speaks :) I bring the spirit of Subandhu from Yama, the son of Vivaswat, for life, not for death, but for security.

ಸಂಹಿತಾಪಾಠಃ

ನ್ಯ೧ಗ್ವಾತೋಽವ ವಾತಿ ನ್ಯ೧ಕ್ತಪತಿ ಸೂರ್ಯಃ ।

ನೀಚೀನಮುಷ್ಣಾ ಯ ದುಹೇ ನ್ಯ೧ಗ್ಭವತು ತೇ ರಪಃ ॥ ೧೧ ॥

ಪದಪಾಠಃ

ನ್ಯಕ್ । ವಾತಃ । ಅವ । ವಾತಿ । ನ್ಯಕ್ । ತಪತಿ । ಸೂರ್ಯಃ ।

ನೀಚೀನಂ । ಉಷ್ಣಾ ಯ । ದುಹೇ । ನ್ಯಕ್ । ಭವತು । ತೇ । ರಪಃ ॥ ೧೧ ॥

ಸಾಯಣಭಾಷ್ಯಂ

ವಾತೋ ವಾಯುರ್ದ್ಯುಲೋಕಾನ್ನ ಃಗ್ನೀಚೀನಮವ ವಾತಿ। ಗಚ್ಛತಿ। ಸೂರ್ಯಶ್ಚ ನ್ಯಕ್ ತಪತಿ। ಅಘ್ನ್ಯಾ ಃಹನನೀಯಾ ಗೌರ್ನೀಚೀನಂ ದುಹೇ । ದುಗ್ಧೇ। ಏವಂ ತೇ ರಪಃ ಪಾಪಂ ನ್ಯಗ್ನೀಚೀನಂ ಭವತು ॥

ಪ್ರತಿಪದಾರ್ಥ

ವಾತಃ—ವಾಯುವು । **ನ್ಯಕ್**—ಅಧೋಮುಖವಾಗಿ । **ಅವ ವಾತಿ**—ಬೀಸುತ್ತದೆ । **ಸೂರ್ಯಃ**—ಸೂರ್ಯನು । **ನ್ಯಕ್**—ಅಧೋಮುಖವಾದ ಕಿರಣಗಳುಳ್ಳವನಾಗಿ । **ತಪತಿ**—ದಹಿಸುತ್ತಾನೆ । **ಅಘ್ನ್ಯಾ ಃ**—ರಕ್ಷಣಾರ್ಹವಾದ ಹಸುವು । **ನೀಚೀನಂ**—ಕೆಳಭಾಗದಲ್ಲಿರುವ ಕೆಚ್ಚಲಿನಿಂದ । **ದುಹೇ**—ಹಾಲನ್ನು ಕರೆಯುತ್ತದೆ । **ತೇಃ**—ನಿನ್ನ । **ರಪಃ**—ಪಾಪವು । **ನ್ಯಕ್ ಭವತು**—ಅಧೋಭಾಗದ ಗಮನವುಳ್ಳದ್ದಾಗಿ ಆಗಲಿ.

ಭಾವಾರ್ಥ

ವಾಯುವು ಅಧೋಮುಖವಾಗಿ ಬೀಸುತ್ತದೆ. ಸೂರ್ಯನು ಅಧೋಮುಖವಾದ ಕಿರಣಗಳುಳ್ಳವನಾಗಿ ದಹಿಸುತ್ತಾನೆ. ರಕ್ಷಣಾರ್ಹವಾದ ಹಸುವು ಕೆಳಭಾಗದ ಕೆಚ್ಚಲಿನಿಂದ ಹಾಲನ್ನು ಕರೆಯುತ್ತದೆ. ನಿನ್ನ ಪಾಪವು ಅಧೋಭಾಗದ ಗಮನವುಳ್ಳದ್ದಾಗಿ ನಾಶವಾಗಲಿ.

English Translation

The wind blows downwards, the sun burns downwards, the cow yields her milk downwards, so be your sin cast down.

ಸಂಹಿತಾಪಾಠಃ

ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ ।
ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನಃ ॥ ೧೨ ॥

ಪದಪಾಠಃ

ಅಯಂ । ಮೇ । ಹಸ್ತಃ । ಭಗಽವಾನ್ । ಅಯಂ । ಮೇ । ಭಗವತ್ಽತರಃ ।
ಅಯಂ । ಮೇ । ವಿಶ್ವಽಭೇಷಜಃ । ಅಯಂ । ಶಿವಽಅಭಿಮರ್ಶನಃ ॥ ೧೨ ॥

ಸಾಯಣಭಾಷ್ಯಂ

ಅನಯೋ ಬಂಧ್ವಾದಯೋ ಲಬ್ಧಜೀವಂ ಸುಬಂಧುಂ ಪಾಣಿಭಿರಸ್ಪೃಶನ್। ಅಯಂ ಮೇ ಹಸ್ತೋ ಭಗವಾನ್ ಯಸ್ಮಾತ್ಸಜೀವಂ ಸುಬಂಧುಂ ಸ್ಪೃಶತಿ ತಸ್ಮಾತ್ । ತಥಾಯಂ ಮೇ ಹಸ್ತೋ ಭಗವತ್ತರಃ । ಅತಿಶಯೇನ ಭಗವಾನ್ । ತಥಾಯಂ ಮೇ ಹಸ್ತೋ ವಿಶ್ವಭೇಷಜೋ ಜೀವಚಿಕಿತ್ಸಾಸಾಧನಸರ್ವೌಷಧವಾನ್ ತತ್ಸ್ಥಾನೀಯೋ ವಾ । ಅಯಂ ಶಿವಾಭಿಮರ್ಶನೋ ಮಂಗಲಸ್ಪರ್ಶನಃ । ಯತೋ ಜೀವಂತಂ ಸ್ಪೃಶತ್ಯತ ಇತ್ಯರ್ಥಃ ॥

ಪ್ರತಿಪದಾರ್ಥ

(ಜೀವಂತನಾದ ಸುಬಂಧುವನ್ನು ಮುಟ್ಟತಕ್ಕ) **ಮೇ**—ನನ್ನ । **ಅಯಂ ಹಸ್ತಃ**—ಈ ಹಸ್ತವು । **ಭಗವಾನ್**—ಧನ್ಯವಾದುದು । **ಮೇ**—ನನ್ನ । **ಅಯಂ**—ಇನ್ನೊಂದು ಹಸ್ತವು । **ಭಗವತ್ತರಃ**—ಇನ್ನೂ ಧನ್ಯವಾದುದು । **ಅಯಂ ಮೇ**—ನನ್ನ ಈ ಹಸ್ತವು । **ವಿಶ್ವಭೇಷಜಃ**—ಮೃತನನ್ನು ಬದುಕಿಸುವಂತೆ ಮಾಡುವ ಔಷಧವನ್ನು ಹೊಂದಿರುವುದಾಗಿದೆ । **ಅಯಂ**—ನನ್ನ ಈ ಹಸ್ತವು । **ಶಿವಾಭಿಮರ್ಶನಃ**—ಕಲ್ಯಾಣಕಾರಕವಾದ ಸ್ಪರ್ಶವುಳ್ಳದ್ದಾಗಿದೆ.

ಭಾವಾರ್ಥ

ಜೀವಂತನಾದ ಸುಬಂಧುವನ್ನು ಮುಟ್ಟತಕ್ಕ ನನ್ನ ಈ ಹಸ್ತವು ಧನ್ಯವಾದುದು. ನನ್ನ ಇನ್ನೊಂದು ಹಸ್ತವು ಇನ್ನೂ ಧನ್ಯವಾದುದು. ನನ್ನ ಈ ಹಸ್ತವು ಮೃತನನ್ನು ಬದುಕಿಸುವಂತೆ ಮಾಡುವ ಔಷಧವನ್ನು ಹೊಂದಿರುವುದಾಗಿದೆ. ನನ್ನ ಈ ಹಸ್ತವು ಕಲ್ಯಾಣಕಾರಕವಾದ ಸ್ಪರ್ಶವುಳ್ಳದ್ದಾಗಿದೆ.

English Translalion

(The Rishis speak :) This my hand is fortunate ; this my (other hand) is (still) more fortunate : this my (hand) has all medicaments : this has a blessed touch.

ಅರವತ್ತೊಂದನೆಯ ಸೂಕ್ತ

ಪೀಠಿಕೆ

ಈ ಸೂಕ್ತದ ವಿಷಯದಲ್ಲಿ ಒಂದು ಉಪಾಖ್ಯಾನವು ಐತರೇಯಬ್ರಾಹ್ಮಣದಲ್ಲಿಯೂ (ಐ. ಬ್ರಾ. ೨೨-೧೪) ತೈತ್ತಿರೀಯ ಸಂಹಿತೆಯಲ್ಲಿಯೂ (ತೈ. ಸಂ. ೩-೧-೯-೪) ಉಕ್ತವಾಗಿರುವುದು. ಅದನ್ನೇ ಇಲ್ಲಿ ವಿವರಿಸಲಾಗಿದೆ—

ಪ್ರಯೋಗಶಸ್ತ್ರಮಂತ್ರಪಠನಕಾಲದಲ್ಲಿ ಬಹುದೇವತಾಕವಾದ ಅನೇಕ ಸೂಕ್ತಗಳನ್ನು ಪಠಿಸಬೇಕಾಗಿರುವುದು. ಅವುಗಳಲ್ಲಿ ವಿಶ್ವೇದೇವತಾಕವಾದ ಎರಡು ಸೂಕ್ತಗಳನ್ನೂ ಪಠಿಸಬೇಕು.

ಇದಮಿತ್ಥಾ ರೌದ್ರಂ ಗೂರ್ತವಚಾ ಯೇ ಯಜ್ಞೇನ ದಕ್ಷಿಣಯಾ ಸಮಕ್ತಾ ಇತಿ ವೈಶ್ವದೇವಂ ॥
(ಐ. ಬ್ರಾ. ೨೨-೧೩)

ಅವು ಯಾವುವೆಂದರೆ—ಋಗ್ವೇದ ಸಂಹಿತೆಯ ೧೦ ನೆಯ ಮಂಡಲದಲ್ಲಿರುವ **ಇದಮಿತ್ಥಾ ರೌದ್ರಂ ಗೂರ್ತವಚಾ** ಎಂಬ ೬೧ನೆಯ ಸೂಕ್ತವನ್ನೂ **ಯೇ ಯಜ್ಞೇನ ದಕ್ಷಿಣಯಾ ಸಮಕ್ತಾ** ಎಂಬ ೬೨ ನೆಯ ಸೂಕ್ತವನ್ನೂ ಪಠಿಸಬೇಕು.

ನಾಭಾನೇದಿಷ್ಠಂ ಶಂಸತಿ । (ಐ. ಬ್ರಾ. ೨೨-೧೪)

ಈ ಸೂಕ್ತಗಳಿಗೆ ನಾಭಾನೇದಿಷ್ಠ ಸೂಕ್ತಗಳೆಂದು ಹೆಸರು. ಏಕೆಂದರೆ ಈ ಸೂಕ್ತಗಳಿಗೆ ನಾಭಾನೇದಿಷ್ಠನೆಂಬ ಋಷಿಯೇ ದ್ರಷ್ಟೃವು. ಋಷಿಯ ಹೆಸರಿನಿಂದ ಸೂಕ್ತವನ್ನು ಕರೆಯುವುದು ರೂಢಿಯಾಗಿದೆ. ಆದ್ದರಿಂದ ಈ ಸೂಕ್ತಗಳಿಗೆ ನಾಭಾನೇದಿಷ್ಠ ಸೂಕ್ತಗಳೆಂದು ಹೆಸರು. ಈ ನಾಭಾನೇದಿಷ್ಠ ಋಷಿಯ ವಿಷಯದಲ್ಲಿ ಒಂದು ಉಪಾಖ್ಯಾನವಿರುವುದು. ಅದನ್ನು ಇಲ್ಲಿ ವಿವರಿಸಲಾಗಿದೆ—

ನಾಭಾನೇದಿಷ್ಠಂ ವೈ ಮಾನವಂ ಬ್ರಹ್ಮಚರ್ಯಂ ವಸಂತಂ ಭ್ರಾತರೋ ನಿರಭಜನ್ನೋಚುರವೀ-

ದೇತ್ಯ ಕಿಂ ಮಹ್ಯಮಭಾಕ್ಷೀತ್ಯೇತಮೇವ ನಿಷ್ಠಾವಮವದಿತಾರಮಿತ್ಯಬ್ರುವಂಸ್ತಸ್ಮಾದ್ಧಾ-ಪ್ಯೇತರ್ಹಿ ಪಿತರಂ ಪುತ್ರಾ ನಿಷ್ಠಾವೋಽವದಿತೇತ್ಯೇವಾಚಕ್ಷತೇ ॥

(ಐ. ಬ್ರಾ. ೨೨-೧೪)

ಮನುಪುತ್ರನಾದ ನಾಭಾನೇದಿಷ್ಠನೆಂಬುವನು ಉಪನಯನವಾದಕೂಡಲೇ ಬ್ರಹ್ಮಚರ್ಯದಿಂದ ಗುರುಕುಲದಲ್ಲಿ ವಾಸ ಮಾಡುತ್ತಾ ವೇದಾಧ್ಯಯನವನ್ನು ಮಾಡುತ್ತಿದ್ದನು. ಅವನು ತಂದೆಯ ಮನೆಯಲ್ಲಿಲ್ಲದ ವೇಳೆಯಲ್ಲಿ ಅವನ ಜ್ಯೇಷ್ಠ ಸಹೋದರರು—ತಮ್ಮ ತಮ್ಮನಾದ ನಾಭಾನೇದಿಷ್ಠನು ಇನ್ನೂ ಬಾಲಕನು, ಅವನು ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿರುವನು. ಅವನಿಗೆ ಧನದ ಅವಶ್ಯಕತೆ ಇಲ್ಲ. ಆದ್ದರಿಂದ ತಂದೆಯ ಧನವನ್ನೂ ಆಸ್ತಿಯನ್ನೂ ನಾವುಗಳೇ ಹಂಚಿಕೊಳ್ಳೋಣ ಎಂದು ಸ್ವಾರ್ಥಬುದ್ಧಿಯಿಂದ ಆಲೋಚಿಸಿ ನಾಭಿನೇದಿಷ್ಠನಿಗೆ ಏನನ್ನೂ ಉಳಿಸದೇ ಇದ್ದ ಆಸ್ತಿಯನ್ನೆಲ್ಲಾ ತಾವೇ ಹಂಚಿಕೊಂಡರು. ಕೆಲವುಕಾಲಾನಂತರ ನಾಭಾನೇದಿಷ್ಠನು ವಿದ್ಯಾಭ್ಯಾಸವನ್ನು ಮುಗಿಸಿ ಗುರುಕುಲದಿಂದ ಹಿಂತಿರುಗಿಬಂದು ತನ್ನ ಜ್ಯೇಷ್ಠಸಹೋದರನನ್ನು ಕುರಿತು ಇಂತೆಂದನು—ಎಲೈ ಸಹೋದರರೇ, ನೀವು ಆಸ್ತಿಯೆಲ್ಲವನ್ನೂ ನೀವುನೀವೇ ಹಂಚಿಕೊಂಡಿರುತ್ತೀರಿ. ನನಗೆ ಏನನ್ನೂ ಉಳಿಸಿಲ್ಲ. ನನ್ನ ಭಾಗದ ಆಸ್ತಿ ಎಲ್ಲಿ ಎಂದು ಕೇಳಲು ಅವರು ಅಲ್ಲಿಯೇ ನಿಂತಿದ್ದ ತಮ್ಮ ತಂದೆಯಾವ ಮನುವನ್ನು ಕೈಯಿಂದ ತೋರಿಸಿ—ಎಲೈ ನಾಭಾನೇದಿಷ್ಠನೇ, ನಿಮ್ಮ ತಂದೆಯನ್ನು ಕೇಳು, ಈ ವಿಷಯ ನಮಗೇನೂ ತಿಳಿಯದು. ನಿನ್ನ ತಂದೆಯಾದರೋ ಧರ್ಮಶಾಸ್ತ್ರವನ್ನೇ ನಿರ್ಣಯಿಸಿ ಧರ್ಮರಹಸ್ಯವನ್ನು ಚೆನ್ನಾಗಿ ಬಲ್ಲವನು. ಅವನನ್ನು ಕೇಳು ಎಂದರು.

ಇಲ್ಲಿ **ನಿಷ್ಠಾವಃ ಅವವದಿತಾ** ಎಂಬ ಶಬ್ದಗಳ ಪ್ರಯೋಗವಿದೆ. ಅವುಗಳನ್ನು ವಿವರಿಸುವುದು ಅವಶ್ಯಕನಾಗಿದೆ.

ಧನವಿಭಾಗಾದೇರ್ಧರ್ಮರಹಸ್ಯಂ ನಿಃಶೇಷೇಣ ಸ್ಥಿತಿನಿರ್ಣಯೋ ನಿಷ್ಠಾ । ಸಾ ಯಸ್ಮಿನ್ನಸ್ತಿ ಸ ನಿಷ್ಠಾವಃ । ತಾದೃಶಂ ಧರ್ಮರಹಸ್ಯನಿರ್ವೇತಾರಮಿತ್ಯರ್ಥಃ ॥

(ಸಾ. ಭಾ.)

ಧನವಿಭಾಗವನ್ನು ಮಾಡುವುದರಲ್ಲಿ ಧರ್ಮರಹಸ್ಯವನ್ನು ತಿಳಿದು ಅದರಂತೆ ನಿರ್ಣಯವನ್ನುಮಾಡುವುದಕ್ಕೆ **ನಿಷ್ಠಾ** ಎಂದು ಹೆಸರು. ಇಂತಹ ನಿಷ್ಠೆಯು ಯಾರಲ್ಲಿ ಇರುವುದೋ ಆ ಪುರುಷನಿಗೆ ನಿಷ್ಠಾವಃ ಎಂದು ಹೆಸರು. ಎಂದರೆ ಧರ್ಮರಹಸ್ಯವನ್ನು ತಿಳಿದು ಅದರಂತೆ ಪುತ್ರಾದಿಗಳಿಗೆ ಧನವನ್ನು ವಿಭಾಗಮಾಡಿಕೊಡಲು ಸಮರ್ಥನಾದ ಪುರುಷನು ಎಂದಭಿಪ್ರಾಯವು.

ಅವವದಿತಾರಂ । ಜ್ಯೇಷ್ಠಪುತ್ರಸ್ಯೈತಾವತ್ । ದ್ವಿತೀಯಸ್ಯೈತಾವತ್ । ಅನ್ಯಸ್ಯೈತಾವತ್ । ಇತ್ಯವಚ್ಛಿದ್ಯ ವದಿತುಂ ಸಮರ್ಥೋಽವವದಿತಾ । ತಾದೃಶಂ । ಅಯಂ ಮನುರ್ಧರ್ಮ-ಶಾಸ್ತ್ರಕರ್ತೃತ್ವಾದ್ಧರ್ಮರಹಸ್ಯನಿರ್ಣಯವಾನಿತ್ಯತ್ವೇನ । ತಮೈತಾವದಿತ್ಯವಚ್ಛಿದ್ಯ ವಕ್ತುಂ ಸಮರ್ಥಶ್ಚ ॥

(ಸಾ. ಭಾ.)

ಜ್ಯೇಷ್ಠಪುತ್ರನಿಗೆ ಇಂತಿಂತಹ ಭಾಗವು; ಎರಡನೆಯ ಪುತ್ರನಿಗೆ ಇಂತಹ ಭಾಗವು; ಮೂರನೆಯವನಿಗೆ ಈ ಭಾಗವು ಎಂದು ಪ್ರತ್ಯೇಕವಾಗಿ ವಿಭಾಗಮಾಡಿ ಅವನ್ನು ಅವರ ಮುಂದೆ ಹೇಳುವನು. ಇಲ್ಲಿ ನೀನುವು ಧರ್ಮಶಾಸ್ತ್ರಕರ್ತನಾದುದರಿಂದ ಧರ್ಮಶಾಸ್ತ್ರರಹಸ್ಯವನ್ನು ತಿಳಿದು ಅದರಂತೆ ತನ್ನ ಪುತ್ರರಿಗೆ ಆಸ್ತಿಯನ್ನು ವಿಭಾಗಮಾಡಿಕೊಟ್ಟಿರುವನು. ಈ ವಿಷಯದಲ್ಲಿ ಅವನು ಸ್ವಯಂಸಮರ್ಥನು. ಆದ್ದರಿಂದ ನಿನ್ನ ಆಸ್ತಿಯ ವಿಷಯದಲ್ಲಿ ಅವನನ್ನೇ ಕೇಳು ಎಂದು ಜ್ಯೇಷ್ಠಸಹೋದರರು ತಮ್ಮ ಕಿರಿಯಸಹೋದರನಾದ ನಾಭಾನೇದಿಷ್ಠನಿಗೆ ಹೇಳಿದರು ಎಂದಭಿಪ್ರಾಯವು.

ಸ ಪಿತರಮೇತ್ಯಾಬ್ರವೀತ್ತ್ವಂ ಹ ವಾವ ಮಮ್ಯಂ ತ (ತಾ) ತಾಭಾಷ್ಟುರಿತಿ ತಂ ಪಿತಾಬ್ರವೀನ್ನಾ ಪುತ್ರಕ ತದಾದೃಥಾ ಆಂಗಿರಸೋ ವಾ ಇಮೇ ಸ್ವರ್ಗಾಯ ಲೋಕಾಯ ಸತ್ರಮಾಸತೇ ತೇ ಷಷ್ಠಂ ಪಷ್ಠಮೇವಾಹರಾಗತ್ಯ ಮುಹ್ಯಂತಿ ತಾನೇತೇ ಸೂಕ್ತೇ ಷಷ್ಠೇಽಹನಿ ಶಂಸಯ ತೇಷಾಂ ಯತ್ಸಹಸ್ರಂ ಸತ್ರಪರಿವೇಷಣಂ ತತ್ತ್ವೇ ಸ್ವರ್ಯಂತೋ ದಾಸ್ಯಂತೀತಿ ತಥೇತಿ ॥

ಅನಂತರ ತನ್ನ ಸಹೋದರರ ಮಾತಿನಂತೆ ನಾಭಾನೇದಿಷ್ಠನು ತನ್ನ ತಂದೆಯ ಬಳಿಗೆ ಬಂದು ಇಂತೆಂದನು—ಎಲೈ ತಂದೆಯೇ, ನನ್ನ ಜ್ಯೇಷ್ಠಸಹೋದರರಿಗೆ ಆಸ್ತಿಯನ್ನೂ ನೀನೇ ವಿಭಾಗಮಾಡಿಕೊಟ್ಟಿರುವುದರಿಂದ ನನ್ನ ಭಾಗವು ನಿನ್ನಲ್ಲಿಯೇ ಇರುವುದು, ಅದನ್ನು ನಿನ್ನಿಂದ ತೆಗೆದುಕೋ ಎಂದು ಹೇಳಿದರು. ಆದ್ದರಿಂದ ನಿನ್ನಲ್ಲಿ ಉಳಿದಿರುವ ನನ್ನ ಭಾಗದ ಆಸ್ತಿಯನ್ನು ನನಗೆ ಕೊಡು ಎಂದು ಕೇಳಿದನು. ಅದನ್ನು ಕೇಳಿ ತಂದೆಯಾದ ಮನುವು ಎಲೈ ಬಾಲಕನೇ, ನಿನ್ನ ಸಹೋದರರ ಮಾತಿನಲ್ಲಿ ನಂಬಿಕೆಯನ್ನಿಡಬೇಡ, ಅವರ ಮಾತು ನಿಜವಲ್ಲ. ನಿನಗೆ ಕೊಡಬೇಕಾದ ಭಾಗವು ನನ್ನಲ್ಲಿರುವುದಿಲ್ಲ. ಎಲ್ಲವನ್ನೂ ಅವರೇ ತೆಗೆದುಕೊಂಡುಬಿಟ್ಟರು. ಆದರೂ ಚಿಂತೆಯಿಲ್ಲ. ನಿನಗೆ ಧನವು ಲಭಿಸುವುದಕ್ಕೆ ಒಂದುಪಾಯವನ್ನು ಹೇಳುವೆನು ಕೇಳು. ಇಲ್ಲಿಗೆ ಸಮೀಪವಾಗಿರುವ ಪ್ರದೇಶದಲ್ಲಿ ಅಂಗಿರಸರೆಂಬ ಮಹರ್ಷಿಗಳು ಸ್ವರ್ಗಕ್ಕೆ ಹೋಗಬೇಕೆಂದು ಬಯಸಿ ಅದಕ್ಕಾಗಿ ಸತ್ರಯಾಗವನ್ನು ಮಾಡುತ್ತಿರುವರು. ಹಿಂದೆ ಅನೇಕಾವರ್ತಿ ಸತ್ರಯಾಗವನ್ನು ಮಾಡಲು ಪ್ರಾರಂಭಿಸಿದರೂ ಅದನ್ನು ಪೂರ್ತಿಗೊಳಿಸಲು ಸಾಧ್ಯವಾಗಲಿಲ್ಲ. ಆ ಯಾಗದ ಆರನೆಯ ದಿವಸ ಮಂತ್ರಪಠನಕಾಲದಲ್ಲಿ ಸಮುಯೋಚಿತವಾದ ಯಾವ ಮಂತ್ರವನ್ನು ಪಠಿಸಬೇಕೆಂದು ತಿಳಿಯದೆ ಸಂಶಯಗ್ರಸ್ತರಾಗಿರುವರು. ಸತ್ರಯಾಗದ ಸಮಾಪ್ತಿಯಿಲ್ಲದೆ ಅವರಿಗೆ ಸ್ವರ್ಗಪ್ರಾಪ್ತಿಯು ಲಭಿಸಿರುವುದಿಲ್ಲ. ಆದ್ದರಿಂದ ಅವರು ಬಹಳವಾಗಿ ಚಿಂತಾಸಕ್ತರಾಗಿರುವರು. ನೀನು ಸತ್ರಯಾಗದ ಆರನೆಯ ದಿವಸ ಅವರ ಯಜ್ಞಕ್ಕೆ ಹೋಗಿ **ಇದಮಿತ್ಥಾ** ಮತ್ತು **ಯೇ ಯಜ್ಞೇನ** (೧೦ ನೆಯ ಮಂಡಲದ ೬೧ ಮತ್ತು ೬೨ ನೆಯ ಸೂಕ್ತಗಳು) ಎಂಬ ಸೂಕ್ತಗಳನ್ನು ಪಠಿಸು. ಆದರಿಂದ ಅವರು ಮಾಡುತ್ತಿರುವ ಸತ್ರಯಾಗವು ಪೂರ್ಣವಾಗಿ, ಯಾಗಕ್ಕಾಗಿ ಸಹಸ್ರಸಂಖ್ಯಾಕವಾಗಿ ಸಂಗ್ರಹಿಸಿದ್ದ ಧನದಲ್ಲಿ ಉಳಿದಿರುವುದನ್ನೆಲ್ಲಾ ನಿನಗೆ ಕೊಡುವರು ಎಂದು ಹೇಳಿದನು. ಅದನ್ನು ಕೇಳಿ ನಾಭಾನೇದಿಷ್ಠನು ಹಾಗೆಯೇ ಆಗಲೆಂದು ಸಮ್ಮತಿಸಿ ಅವರ ಯಜ್ಞಕ್ಕೆ ಹೊರಡಲುದ್ಯುಕ್ತನಾದನು.

ತಾನುಪೈತ್ಪ್ರತಿಗೃಭ್ಣೀತ ಮಾನವಂ ಸುಮೇಧಸ ಇತಿ ತಮಬ್ರುವನ್ಕಿಂಕಾಮೋ ವದಸೀತೀದಮೇವ ವಃ ಷಷ್ಠಮಹಃ ಪ್ರಜ್ಞಾಪಯಾನೀತ್ಯಬ್ರವೀದಥ ಯದ್ವ ಏತತ್ಸಹಸ್ರಂ ಸತ್ರಪರಿವೇಷಣಂ ತನ್ಮೇ ಸ್ವರ್ಯಂತೋ ದತ್ತೇತಿ ತಥೇತಿ ತಾನೇತೇ ಸೂಕ್ತೇ ಷಷ್ಠೇಽಹನ್ಯಶಂಸಯತ್ತತೋ ವೈ ತೇ ಪ್ರ ಯಜ್ಞಮಜಾನನ್ಪ್ರ ಸ್ವರ್ಗಂ ಲೋಕಂ ತದ್ಯದೇತೇ ಸೂಕ್ತೇ ಷಷ್ಠೇಽಹನಿ ಶಂಸತಿ ಯಜ್ಞಸ್ಯ ಪ್ರಜ್ಞಾತ್ಯೈ ಸ್ವರ್ಗಸ್ಯ ಲೋಕಸ್ಯಾನುಖ್ಯಾತ್ಯೈ ॥

ಬಳಿಕ ನಾಭಾನೇದಿಷ್ಠನು ಅಂಗಿರಸರು ಯಜ್ಞಮಾಡುವ ಸ್ಥಳಕ್ಕೆ ಹೋಗಿ ಅವರನ್ನುದ್ದೇಶಿಸಿ—**ಪ್ರತಿ ಗೃಭ್ಣೀತ ಮಾನವಂ ಸುಮೇಧಸಃ** | (ಇದು ಋ. ಸಂ. ೧೦-೬೨ ನೆಯ ಸೂಕ್ತದ ೧-೪ ನೆಯ ಋಕ್ಕುಗಳಲ್ಲಿರುವ ಕೊನೆಯ ಪಾದವು). ಎಲೈ ಮೇಧಾವಿಗಳಾದ (ಬುದ್ಧಿವಂತರಾದ)ಋಷಿಗಳೇ, ಮನುವಿನ ಪುತ್ರನಾವ ನನ್ನನ್ನು (ನಾಭಾನೇದಿಷ್ಠನನ್ನು) ಸ್ವೀಕರಿಸಿ ಎಂದು ಪ್ರಾರ್ಥಿಸಿದನು. ಅದನ್ನು ಕೇಳಿ ಅಂಗಿರಸರು—ಎಲೈ ನಾಭಾನೇದಿಷ್ಠನೇ, ನಿನ್ನ ಅವೇಕ್ಷೆಯೇನು ? ಏತಕ್ಕಾಗಿ ನೀನು ನಮ್ಮ ಬಳಿಗೆ ಬಂದು ಹೀಗೆ ಹೇಳುತ್ತಿರುವೆ ? ಎಂದು ಕೇಳಿದರು. ಅದಕ್ಕೆ ನಾಭಾನೇದಿಷ್ಠನು—ಎಲೈ ಋಷಿಗಳೇ, ಈಗ ನೀವು ಮಾಡುತ್ತಿರುವ ಸತ್ರಯಾಗದಲ್ಲಿ ಇದು ಆರನೆಯ ದಿನವು. ಈದಿನ ಯಾವ

ಮಂತ್ರಗಳನ್ನು ಪಠಿಸಿ ಯಾವರೀತಿ ಕರ್ಮಾನುಷ್ಠಾನಮಾಡಬೇಕೆಂಬ ವಿಷಯದಲ್ಲಿ ನಿಮಗೆ ಇರುವ ಸಂಶಯವನ್ನು ಪರಿಹರಿಸಿ ಮುಂದಿನ ಕರ್ತವ್ಯವನ್ನು ತಿಳಿಸುತ್ತೇನೆ. ಅದರಂತೆ ನೀವು ಸತ್ರಯಾಗವನ್ನು ಮಾಡಿ ಪೂರೈಸಿದಮೇಲೆ ಸ್ವರ್ಗಕ್ಕೆ ಹೋಗುವಾಗ ಯಜ್ಞಾರ್ಥವಾಗಿ ಸಂಗ್ರಹಿಸಿ ಉಳಿದಿರುವ ಸಹಸ್ರ ಗೋವುಗಳನ್ನೂ, ಇತರ ಧನವನ್ನೂ ನನಗೆ ಕೊಡಿ ಎಂದನು. ಹಾಗೆಯೇ ಆಗಲೆಂದು ಋಷಿಗಳು ಒಪ್ಪಿಕೊಳ್ಳಲು ನಾಭಾನೇದಿಷ್ಠನು—**ಇದಮಿತ್ಥಾ ರೌದ್ರಂ** (ಋ. ಸಂ. ೧೦ ೬೧) ಎಂಬ ಸೂಕ್ತವನ್ನೂ **ಯೇ ಯಜ್ಞೇನ** (ಋ. ಸಂ. ೧೦-೬೨) ಎಂಬ ಸೂಕ್ತವನ್ನೂ ಪಠಿಸಿ ಅವರಿಂದಲೂ ಪಠಿಸಿಸಿದನು. ಅದರಿಂದ ಋಷಿಗಳ ಯಜ್ಞವು ಸಾಂಗವಾಗಿ ನೆರವೇರಿ ಅವರು ಯಜ್ಞಾನುಷ್ಠಾನಸ್ವರೂಪವನ್ನೂ, ಸ್ವರ್ಗಲೋಕದ ಪ್ರಾಪ್ತಿಯನ್ನೂ ಕಂಡುಕೊಂಡರು. ಆದ್ದರಿಂದ ಯಜ್ಞದ ಆರನೆಯ ದಿನದ ಹೋತೃವು **ಈ** ಎರಡು ಸೂಕ್ತಗಳನ್ನೂ ಪಠಿಸಬೇಕು. ಅದರಿಂದ ಯಜ್ಞಾನುಷ್ಠಾನ ಮತ್ತು ಸ್ವರ್ಗಪ್ರಾಪ್ತಿಯು ಉಂಟಾಗುವುದು.

ತಂ ಸ್ವರ್ಯಂತೋಽಬ್ರವನ್ನೇತತ್ತೇ ಬ್ರಾಹ್ಮಣ ಸಹಸ್ರಮಿತಿ ತದೇನಂ ಸಮಾಕುರ್ವಾಣಂ ಪುರುಷಃ ಕೃಷ್ಣಶವಾಸ್ಯುತ್ತರತ ಉಪೋತ್ಥಾಯಾಬ್ರವೀನ್ಮಮ ವಾ ಇದಂ ಮಮು ವೈ ವಾಸ್ತುಹಮಿತಿ ಸೋಽಬ್ರವೀನ್ನಹ್ಯಂ ವಾ ಇದಮದುರಿತಿ ತಮಬ್ರವೀತ್ತದ್ವೈನೌ ತವೈವ ಪಿತರಿ ಪ್ರಶ್ನ ಇತಿ ಸ ಪಿತರಮೈತ್ತಂ ಪಿತಾಬ್ರವೀನ್ನನು ತೇ ಪುತ್ರಕಾದೂ ಽ ರಿತ್ಯದುರೇವ ಮ ಇತ್ಯಬ್ರವೀತ್ತತ್ತು ಮೇ ಪುರುಷಃ ಕೃಷ್ಣಶವಾಸ್ಯುತ್ತರತ ಉಪೋದತಿಷ್ಠನ್ಮಮ ವಾ ಇದಂ ಮಮು ವೈ ವಾಸ್ತುಹಮಿತ್ಯಾದಿತೇತಿ ತಂ ಪಿತಾಬ್ರವೀತ್ತಸ್ಯೈವ ಪುತ್ರಕ ತತ್ತತ್ತು ಸ ತುಭ್ಯಂ ದಾಸ್ಯತೀತಿ ಸ ಪುನರೇತ್ಯಾಬ್ರವೀತ್ತವ ಹ ವಾವ ಕಿಲ ಭಗವ ಇದಮಿತಿ ಮೇ ಪಿತಾಹೇತಿ ಸೋಽಬ್ರವೀತ್ತದಹಂ ತುಭ್ಯಮೇವ ದದಾಮಿ ಯ ಏವ ಸತ್ಯಮವಾದೀರಿತಿ ॥

ಯಜ್ಞಪರಿಸಮಾಪ್ತಿಯಾದನಂತರ ಅಂಗಿರಾಋಷಿಗಳು ನಾಭಾನೇದಿಷ್ಠನನ್ನು ಕರೆದು, ಎಲೈ ಬ್ರಾಹ್ಮಣನೇ, ನಾವು ಸ್ವರ್ಗಕ್ಕೆ ಹೋಗುತ್ತೇವೆ. ಆದ್ದರಿಂದ ನಮಗೆ ಈ ಗೋವುಗಳ ಅವಶ್ಯಕತೆ ಇಲ್ಲ. ಹಿಂದೆ ಹೇಳಿದಂತೆ ಈ ಸಹಸ್ರ ಗೋವುಗಳನ್ನು ನಿನಗೆ ಕೊಟ್ಟಿದೇವೆ. ಅವುಗಳನ್ನು ತೆಗೆದುಕೋ ಎಂದರು. [ಇಲ್ಲಿ ಎಂದರೆ ಮೇಲಿನ ಬ್ರಾಹ್ಮಣವಾಕ್ಯದಲ್ಲಿ **ಸಹಸ್ರಂ** ಎಂಬ ಶಬ್ದಮಾತ್ರವಿರುವುದು. ಸಹಸ್ರಶಬ್ದಕ್ಕೆ ಸಹಸ್ರ ಗೋವುಗಳು ಎಂದರ್ಥವು ಹೇಗಾಯಿತು ಎಂಬ ವಿಷಯದಲ್ಲಿ ಭಾಷ್ಯಕಾರರು—**ತೇ ಸುವರ್ಗಂ ಲೋಕಂ ಯಂತೋ ಯ ಏಷಾಂ ಪಶವ ಆಸಂಸ್ತಾನಸ್ಮಾ ಆದದುಃ** ಎಂಬ ಶಾಖಾಂತರಬ್ರಾಹ್ಮಣವಾಕ್ಯವನ್ನು ಉದಾಹರಿಸಿದಾರೆ]. ಋಷಿಗಳ ಮಾತಿನಂತೆ ನಾಭಾನೇದಿಷ್ಠನು ಅವರು ಕೊಟ್ಟ ಗೋವುಗಳನ್ನು ತನ್ನ ಹತ್ತಿರ ಒಟ್ಟಾಗಿ ಸೇರಿಸುತ್ತಿರುವಾಗ ಆ ಯಜ್ಞಭೂಮಿಯ ಉತ್ತರಭಾಗದಲ್ಲಿ ಕೊಳಕಾದ ಒಟ್ಟೆಗಳನ್ನು ಧರಿಸಿದ ಓರ್ವಪುರುಷನು ಆವಿರ್ಭವಿಸಿ ನಾಭಾನೇದಿಷ್ಠನನ್ನು ಕುರಿತು ಇಂತೆಂದನು—(ಮೂಲದಲ್ಲಿ **ಕೃಷ್ಣಶವಾಸೀ** ಎಂದಿರುವುದು. **ಅತಿಶಯೇನ ಕೃಷ್ಣಂ ಮಲಿನಂ ವಸ್ತ್ರಂ ಕೃಷ್ಣಶಂ ತದ್ವಸ್ತ್ರ ಆಚ್ಛಾದಯತೀತಿ ಕೃಷ್ಣಶವಾಸೀ । ಅತ್ಯಯಂ ಮಲಿನವಸ್ತ್ರಃ ಪುರುಷಃ ಪಶುಸ್ವಾಮಿ ರುದ್ರ ಇತ್ಯವಗಂತವ್ಯಂ । ತಥಾ ಚ ಶಾಖಾಂತರೇ ಪಠ್ಯತೇ—ತಂ ಪಶುಭಿಶ್ಚರಂತಂ ಯಜ್ಞವಾಸ್ತೌ ರುದ್ರ ಆಗಚ್ಛತ್ ।** ಅತಿಶಯವಾಗಿ ಕೊಳಕಾದ ಒಟ್ಟೆಗೆ ಕೃಷ್ಣಶವೆಂದೂ, ಅಂತಹ ಮಲಿನವಸ್ತ್ರವನ್ನು ಧರಿಸಿದವನಿಗೆ ಕೃಷ್ಣಶವಾಸೀ ಎಂದು ಹೆಸರು. ಇಲ್ಲಿ ಆ ಮಲಿನ ವಸ್ತ್ರಧಾರಿಯು ಯಾರೆಂದರೆ, ಅವನು ರುದ್ರನೇ ಹೊರತು ಬೇರೆ ಯಾರೂ ಅಲ್ಲ. ಈ ವಿಷಯದಲ್ಲಿ—**ತಂ ಪಶುಭಿಶ್ಚರಂತಂ ಯಜ್ಞವಾಸ್ತೌ ರುದ್ರ ಆಗಚ್ಛತ್** ಎಂದು ಶ್ರುತಿವಾಕ್ಯವಿರುವುದು). ಎಲೈ ನಾಭಾನೇದಿಷ್ಠನೇ. ಈ ಯಜ್ಞಭೂಮಿಯಲ್ಲಿ ಉಳಿದಿರುವ ಪಶುಗಳೆಲ್ಲವೂ ನನ್ನವು. ಇವುಗಳನ್ನು ನೀನು ತೆಗೆಮಕೊಳ್ಳಕೂಡದು ಎಂದನು. (ಮೂಲ

ದಲ್ಲಿ **ವಾಸ್ತುಹಂ** ಎಂಬ ಶಬ್ದಪ್ರಯೋಗವಿದೆ. ವಾಸ್ತು ಎಂದರೆ ಯಜ್ಞಭೂಮಿಯು. **ವಾಸ್ತೌ ಯಜ್ಞಭೂಮೌ ಹೀನಂ ಕರ್ಮಾಂತೇ ಪರಿತ್ಯಕ್ತಂ ವಾಸ್ತುಹಂ ತಾದೃಶಂ ಸರ್ವಂ ಮಮೈವ ಸ್ಯಂ**—ಕರ್ಮಸಮಾಪ್ತಿಯಾದ ಮೇಲೆ ಯಜ್ಞಭೂಮಿಯಲ್ಲಿ ಉಳಿದ ಸಮಸ್ತವೂ ನನ್ನ ಸ್ವತ್ತಾದುದರಿಂದ ನನಗೆ ಸೇರಬೇಕು ಎಂದು ರುದ್ರನ ವಾಕ್ಯವು). ಅದನ್ನು ಕೇಳಿ ನಾಭಾನೇದಿಷ್ಠನು ಆ ಪುರುಷನನ್ನು ಕುರಿತು—ಎಲೈ ರುದ್ರನೇ, ಈ ಸಹಸ್ರ ಗೋವುಗಳನ್ನು ನನಗೆ ಅಂಗಿರಸರು ಕೊಟ್ಟರು. ಆದ್ದರಿಂದ ಅವು ನನ್ನವು ಎನ್ನಲು, ಪುನಃ ರುದ್ರನು ಎಲೈ ನಾಭಾನೇದಿಷ್ಠನೇ, ಈ ಗೋವುಗಳು ನನ್ನದೆಂದು ನಾನೂ, ನನಗೆ ಸೇರಬೇಕೆಂದು ನೀನೂ ಹೇಳುತ್ತಿರುವುದರಿಂದ ಈ ಪ್ರಶ್ನೆಯ ಇತ್ಯರ್ಥವು ನಿನ್ನ ತಂದೆಯಿಂದಲೇ ಆಗಬೇಕಾಗಿದೆ. ಆದ್ದರಿಂದ ನೀನು ನಿನ್ನ ತಂದೆಯ ಬಳಿಗೆ ಹೋಗಿ ಈ ಗೋವುಗಳು ಯಾರದು ಎಂದು ಕೇಳಿಕೊಂಡು ಬಾ ಎಂದನು. ರುದ್ರನ ಮಾತಿನಂತೆ ನಾಭಾನೇದಿಷ್ಠನು ತನ್ನ ತಂದೆಯ ಬಳಿಗೆ ಹೋಗಲು ಅವನ ತಂದೆಯಾದ ಮನುವು ನಾಭಾನೇದಿಷ್ಠನನ್ನು ಕುರಿತು ಎಲೈ ಬಾಲಕನೇ, ಅಂಗಿರಸರು ನಿನಗೆ ಗೋವುಗಳನ್ನು ಕೊಡಲಿಲ್ಲವೇ ಎಂದು ಕೇಳಲು, ನಾಭಾನೇದಿಷ್ಠನು, ಅಂಗಿರಾಋಷಿಗಳು ಗೋವುಗಳನ್ನು ನನಗೆ ಕೊಟ್ಟರು ಎಂದನು. ಮನುವು ಹಾಗಾದರೆ ಈಗ ಏನು ವಿಚಾರ, ಗೋವುಗಳನ್ನು ತರದೆ ಒರಿಕೈಯಲ್ಲಿ ಏಕೆ ಬಂದಿದ್ದೀಯೆ ಎಂದು ಪ್ರಶ್ನೆ ಮಾಡಲು ನಾಭಾನೇದಿಷ್ಠನು—ಋಷಿಗಳು ಗೋವುಗಳನ್ನು ಕೊಟ್ಟರು. ಅವುಗಳನ್ನು ನಾನು ತೆಗೆದುಕೊಳ್ಳುತ್ತಿರುವ ಸಮಯದಲ್ಲಿ ಕೊಳಕು ಒಟ್ಟೆಯನ್ನುಟ್ಟ ಓರ್ವ ಪುರುಷನು ಯಜ್ಞಭೂಮಿಯ ಉತ್ತರದಿಕ್ಕಿನಿಂದ ಬಂದು ಈ ಸಹಸ್ರ ಗೋವುಗಳೂ ನನ್ನದು. ಏಕೆಂದರೆ ಯಜ್ಞಭೂಮಿಯಲ್ಲಿ ಕರ್ಮಸಮಾಪ್ತಿಯಾದಮೇಲೆ ಉಳಿಯುವ ಸ್ವತ್ತಿಗೆ ನಾನೇ ಒಡೆಯನು ಎಂದು ಹೇಳಿ ಆ ಗೋವುಗಳನ್ನೆಲ್ಲಾ ತಾನೇ ತೆಗೆದುಕೊಂಡನು ಎಂದು ಹೇಳಿ ಸುಮ್ಮನೆ ನಿಂತುಕೊಂಡನು. ಬಳಿಕ ತಂದೆಯು—ಎಲೈ ಪುತ್ರನೇ, ಆ ಮಲಿನವಸ್ತ್ರಧಾರಿಯಾದ ಪುರುಷನು ಹೇಳುವುದು ಸರಿ. ಯಜ್ಞಭೂಮಿಯಲ್ಲಿ ಉಳಿಯುವ ಗೋವುಗಳಿಗೂ, ಇತರ ಧನಾದಿಗಳಿಗೂ ರುದ್ರನೇ ಒಡೆಯನು. ಏಕೆಂದರೆ, ರುದ್ರನೇ ಪಶುಗಳಿಗೆ ಅಧಿಪತಿಯು ಮತ್ತು ಯಜ್ಞಾವಶಿಷ್ಟಕ್ಕೂ ಅವನೇ ಒಡೆಯನು. ಆದರೂ ನೀನು ಈ ವಿಷಯದಲ್ಲಿ ಯೋಚನೆ ಮಾಡಬೇಡ. ಆ ರುದ್ರನು ಗೋವುಗಳನ್ನು ನಿನಗೇ ಕೊಡುವನು ಎಂದು ಹೇಳಿಕಳುಹಿಸಿದನು. ತಂದೆಯ ಮಾತನ್ನು ಕೇಳಿ ನಾಭಾನೇದಿಷ್ಠನು ಪುನಃ ರುದ್ರನ ಬಳಿಗೆ ಒಂದು ತಂದೆಯ ಮಾತನ್ನು ಈ ರೀತಿ ತಿಳಿಸಿದನು—ಈ ಪಶುಗಳೆಲ್ಲವೂ ಯಜ್ಞಕಾಲದಲ್ಲಿ ಅಂಗಿರಸಂದಾಗಿತ್ತು. ಯಜ್ಞಸಮಾಪ್ತಿಯಾದನಂತರ ಉಳಿದ ಪಶುಗಳಿಗೂ ಧನಕ್ಕೂ ರುದ್ರನೇ ಸ್ವಾಮಿಯು. ಆದ್ದರಿಂದ ಅವುಗಳನ್ನು ಇತರರಿಗೆ ಕೊಡಲು ಅಂಗಿರಸರಿಗೆ ಯಾವ ಅಧಿಕಾರವೂ ಇಲ್ಲ. ಆದ್ದರಿಂದ ಎಲೈ ಪೂಜ್ಯನೇ, ಇವೆಲ್ಲವೂ ನಿನ್ನದೇ ಆಗಿದೆ ಎಂದು ತಂದೆಯ ವಚನವನ್ನು ರುದ್ರನಿಗೆ ತಿಳಿಸಿದನು. (ಶಾಖಾಂತರದಲ್ಲಿ ರುದ್ರವಚನವು ಈ ರೀತಿ ಇರುವುದೆಂದು—**ನ ವೈ ತಸ್ಯ ತದೀಶತ ಇತ್ಯಬ್ರವೀದ್ಯಜ್ಞವಾಸ್ತೌ ಹೀಯತೇ ಮಮ ವೈ ತತ್** ಎಂದು ಭಾಷ್ಯಕಾರರು ಶ್ರುತಿವಾಕ್ಯವನ್ನು ದಾಹರಿಸಿದ್ದಾರೆ.) ರುದ್ರನು ನಾಭಾದೇದಿಷ್ಠನ ಮಾತಿಗೆ ಸಂತೋಷಪಟ್ಟು ಎಲೈ ಬ್ರಾಹ್ಮಣನೇ, ನೀನು ಸುಳ್ಳು ಹೇಳದೆ ಸತ್ಯವನ್ನೇ ನುಡಿದಿರುವಿಯಾದ್ದರಿಂದ ಆ ಸಹಸ್ರ ಗೋವುಗಳನ್ನು ನಿನಗೆ ಕೊಡುತ್ತೇನೆ ತೆಗೆದುಕೋ ಎಂದು ಹೇಳಿ ಸಹಸ್ರ ಗೋವುಗಳನ್ನೂ ಅವನಿಗೆ ಕೊಟ್ಟನು.

ತಸ್ಮಾದೇವಂ ವಿದುಷಾ ಸತ್ಯಮೇವ ವದಿತವ್ಯಂ ಸ ಏಷ ಸಹಸ್ರನಿರ್ಮಂತ್ರೋ ಯನ್ನಾಭಾನೇದಿಷ್ಠಃ ಉಪೈನಂ ಸಹಸ್ರಂ ನಮತಿ ಸ್ರ ಷಷ್ಯೇನಾಹ್ನಾ ಸ್ವರ್ಗಂ ಲೋಕಂ ಜಾನಾತಿ ಯ ಏವಂ ವೇದ ॥

(ಐ. ಬ್ರಾ. ೨೨-೧೪)

ಆದ್ದರಿಂದ ವಿದ್ವಾಂಸನಾಗಿ ಎಲ್ಲವನ್ನೂ ತಿಳಿದವನು ಯಾವಾಗಲೂ ಸತ್ಯವನ್ನೇ ಹೇಳಬೇಕು. ನಾಭಾನೇದಿಷ್ಠನಿಂದ ಪಠಿತವಾದ ಈ ಮಂತ್ರವು ಸಹಸ್ರಸಂಖ್ಯಾಕವಾದ ವಸ್ತುಗಳನ್ನು ಕೊಡುವುದರಿಂದ ಇದು ಸಹಸ್ರಸನಿಃ ಎಂದು ಪ್ರಸಿದ್ಧವಾಗಿದೆ. ಈ ಮಂತ್ರವನ್ನೂ ಈ ಮಂತ್ರದ ಅರ್ಥವನ್ನೂ ತಿಳಿದಿರುವ ಪುರುಷನು ಸಹಸ್ರಸಂಖ್ಯಾಕವಾದ ಧನವನ್ನು ಪಡೆಯುವುದಲ್ಲದೆ, ಯಾಗದ ಆರನೆಯ ದಿನ ಇದರಂತೆ ಕರ್ಮಾನುಷ್ಠಾನ ಮಾಡಿ ಸ್ವರ್ಗಲೋಕವನ್ನು ಹೊಂದುವ ವಿಧಾನವನ್ನು ತಿಳಿದುಕೊಳ್ಳುವನು.

ಕೃಷ್ಣಯಜುರ್ವೇದ ತೈತ್ತಿರೀಯ ಸಂಹಿತೆಯಲ್ಲಿಯೂ ಈ ವಿಷಯದ ಪ್ರಸ್ತಾಪವಿದೆ. ಮಂಥಿಸಂಸ್ರಾವ ಹೋಮದ ವಿಷಯವನ್ನು ವಿವರಿಸುತ್ತಾ ಅದರ ಆವಶ್ಯಕತೆಯನ್ನು ತಿಳಿಸುವುದಕ್ಕಾಗಿ ಈ ಉಪಾಖ್ಯಾನದ ವಿವರಣೆ ಇದೆ—

ಮನುಃ ಪುತ್ರೇಭ್ಯೋ ದಾಯಂ ವ್ಯಭಜತ್ಸ ನಾಭಾನೇದಿಷ್ಠಂ ಬ್ರಹ್ಮಚರ್ಯಂ ವಸಂತಂ ನಿರಭಜತ್ಸ ಆಗಚ್ಛತ್ತೋ೭ಬ್ರವೀತ್ಕಥಾ ಮಾ ನಿರಭಾಗಿತಿ ನ ತ್ವಾ ನಿರಭಾಕ್ಷಮಿತ್ಯಬ್ರವೀದಂಗಿರಸ ಇಮೇ ಸತ್ರಮಾಸತೇ ತೇ ಸುವರ್ಗಂ ಲೋಕಂ ನ ಪ್ರ ಜಾನಂತಿ ತೇಭ್ಯ ಇದಂ ಬ್ರಾಹ್ಮಣಂ ಬ್ರೂಹಿ ತೇ ಸುವರ್ಗಂ ಲೋಕಂ ಯಂತೋ ಯ ಏಷಾಂ ಪಶವಸ್ತಾಗ್ ಸ್ತೇ ದಾಸ್ಯಂತೀತಿ ತದೇಭ್ಯೋ೭ಬ್ರವೀತ್ತೇ ಸುವರ್ಗಂ ಲೋಕಂ ಯಂತೋ ಯ ಏಷಾಂ ಪಶವ ಆಸನ್ತಾನಸ್ಮಾ ಅದದುಸ್ತಂ ಪಶುಭಿಶ್ಚರಂತಂ ಯಜ್ಞವಾಸ್ತೌ ರುದ್ರ ಆಗಚ್ಛತ್ತೋ೭ಬ್ರವೀನ್ನಮ ವಾ ಇಮೇ ಪಶವ ಇತ್ಯದುರ್ವೈ ಮಹ್ಯಮಿಮಾನಿತ್ಯಬ್ರವೀನ್ನ ವೈ ತಸ್ಯ ತ ಈಶತ ಇತ್ಯಬ್ರವೀದ್ಯಜ್ಞವಾಸ್ತೌ ಹೀಯತೇ ಮನು ವೈ ತದಿತಿ ತಸ್ಮಾದ್ಯಜ್ಞವಾಸ್ತು ನಾಭ್ಯವೇತ್ಯಗ್ಂ ಸೋ೭ಬ್ರವೀದ್ಯಜ್ಞೋ ಮಾಭಜಾಥ ತೇ ಪಶೂನ್ನಾಭಿ ಮಗ್ಂಸ್ಯ ಇತಿ ತಸ್ಮಾ ಏತಂ ಮಂಥಿನಸ್ಸಗ್ಂಸ್ರಾವಮಜುಹೋತ್ತತೋ ವೈ ತಸ್ಯ ರುದ್ರಃ ಪಶೂನ್ನಾಭ್ಯಮನ್ಯತ ಯತ್ರೈತಮೇವಂ ವಿದ್ವಾನ್ಮಂಥಿನಸ್ಸಗ್ಂಸ್ರಾವಂ ಜುಹೋತಿ ನ ತತ್ರ ರುದ್ರಃ ಪಶೂನಭಿ ಮನ್ಯತೇ ॥

(ತೈ. ಸಂ. ೩-೧-೯-೪,೫,೬,೭)

ಪೂರ್ವದಲ್ಲಿ ಮನುವು ತನ್ನ ಆಸ್ತಿಯನ್ನು ತನ್ನ ಪುತ್ರರಿಗೆ ವಿಭಾಗಮಾಡಿಕೊಟ್ಟನು. ಆ ಕಾಲದಲ್ಲಿ ಅವನ ಕಿರಿಯ ಪುತ್ರನಾದ ನಾಭಾನೇದಿಷ್ಠನೆಂಬುವನು ತಂದೆಯ ಬಳಿ ಇರಲಿಲ್ಲ. ಗುರುವಿನ ಬಳಿ ಬ್ರಹ್ಮಚರ್ಯವ್ರತಸ್ಥನಾಗಿ ವೇದಾಧ್ಯಯನವನ್ನು ಮಾಡುತ್ತಿದ್ದನು. ಆದ್ದರಿಂದ ಅವನ ಜ್ಞಾನಕವಿಲ್ಲದ್ದರಿಂದಲೋ ಅಥವಾ ಅವನ ಜ್ಯೇಷ್ಠ ಸಹೋದರರ ಪ್ರೇರಣೆಯಿಂದಲೋ ಅಥವಾ ಮತ್ತಾವ ಕಾರಣದಿಂದಲೋ ನಾಭಾನೇದಿಷ್ಠನನ್ನು ಬಿಟ್ಟು ಉಳಿದ ಪುತ್ರರಿಗೆ ಎಲ್ಲಾ ಆಸ್ತಿಯನ್ನೂ ವಿಭಾಗಮಾಡಿ ಹಂಚಿದನು. ಕೆಲವು ಕಾಲದನಮೇಲೆ ಗುರುಕುಲದಲ್ಲಿದ್ದ ನಾಭಾನೇದಿಷ್ಠನು ತನ್ನ ವಿದ್ಯಾಭ್ಯಾಸನವನ್ನು ಮುಗಿಸಿ ತಂದೆಯ ಬಳಿಗೆ ಬಂದು ಆಸ್ತಿಯೆಲ್ಲವೂ ತನ್ನ ಜ್ಯೇಷ್ಠ ಸಹೋದರರಿಗೇ ಸೇರಿಹೋಗಿರುವುದನ್ನೂ ತನಗೆ ಏನೂ ಇಲ್ಲವಿರುವುದನ್ನೂ ಕಂಡು ತನ್ನ ತಂದೆಯನ್ನು ಕುರಿತು—ಎಲೈ ತಂದೆಯೇ, ಏತಕ್ಕಾಗಿ ನನಗೆ ಆಸ್ತಿಯಲ್ಲಿ ಭಾಗವನ್ನು ಕೊಡಲಿಲ್ಲ ಎಂದು ಪ್ರಶ್ನೆ ಮಾಡಲು, ಅದಕ್ಕೆ ಮನುವು—ಎಲೈ ಪುತ್ರನೇ, ನಿನಗೆ ಆಸ್ತಿಯಲ್ಲಿ ಭಾಗವಿಲ್ಲವಂತೆ ನಾನು ಮಾಡಿಲ್ಲ. ನಿನಗಿರುವ ಆಸ್ತಿಯನ್ನು ತಿಳಿಸುವೆನು ಕೇಳು. ಈಗ ಅಂಗಿರಸರೆಂಬ ಋಷಿಗಳು ಸ್ವರ್ಗಕ್ಕೆ ಹೋಗಬೇಕೆಂದು ಬಯಸಿ ಸತ್ರಯಾಗವನ್ನು ಮಾಡುತ್ತಿರುವರು. ಆದರೆ ಸ್ವರ್ಗಪ್ರಾಪ್ತಿಗಾಗಿ ಯಾವ ಮಂತ್ರನನ್ನು ಪಠಿಸಬೇಕು ? ಸ್ವರ್ಗಸಾಧನ ಉಪಾಯ ಯಾವುದು ? ಎಂಬುದನ್ನು ತಿಳಿಯದೆ ಪೇಚಾಡು

ತ್ತಿರುವನು. ನೀನು ಅವರು ಮಾಡುತ್ತಿರುವ ಯಜ್ಞಭೂಮಿಗೆ ಹೋಗಿ ಈ ಮಂತ್ರವನ್ನು (ಋ. ಸಂ. ೧೦ನೇ ಮಂಡಲದ ೬೧ ಮತ್ತು ೬೨ ನೇ ಸೂಕ್ತಗಳನ್ನು) ಅವರಿಗೆ ತಿಳಿಸು. ಅದರಿಂದ ಅವರು ಯಜ್ಞವನ್ನು ಸಾಂಗವಾಗಿ ನೆರವೇರಿಸಿ ಯಜ್ಞಾರ್ಥವಾಗಿ ಸಂಗ್ರಹಿಸಿರುವ ಪಶುಗಳಲ್ಲಿ ಉಳಿದಿರುವ ಪಶುಗಳನ್ನು ನಿನಗೆ ಕೊಡುವರು. ಅದೇ ನಿನ್ನ ಭಾಗವು ಎಂದು ಹೇಳಿದನು. ಅದರಂತೆ ನಾಭಾನೇದಿಷ್ಠನು ಅಂಗಿರಸರ ಬಳಿಗೆ ಹೋಗಿ ತಂದೆಯು ತಿಳಿಸಿದ ಮಂತ್ರವನ್ನು ಉಪದೇಶಿಸಲು ಅವರು ಸಂತುಷ್ಟರಾಗಿ ಯಜ್ಞವನ್ನು ಮುಗಿಸಿ ಸ್ವರ್ಗಕ್ಕೆ ಹೋಗುವ ಸಮಯದಲ್ಲಿ ಯಜ್ಞಶೇಷವಾಗಿ ಉಳಿದಿದ್ದ ಗೋವುಗಳನ್ನೆಲ್ಲಾ ನಾಭಾನೇದಿಷ್ಠನಿಗೆ ಕೊಟ್ಟರು. ಆ ಪಶುಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ಅಲ್ಲಿಯೇ ಯಜ್ಞಭೂಮಿಯಲ್ಲಿ ಸಂಚರಿಸುತ್ತಿದ್ದ ರುದ್ರನು ಬಂದು, ಎಲೈ ನಾಭಾನೇದಿಷ್ಠನೆ, ಈ ಪಶುಗಳು ನನ್ನವು ಅದನ್ನು ನೀನು ತೆಗೆದುಕೊಳ್ಳಕೂಡದು ಎಂದು ತಡೆದನು. ನಾಭಾನೇದಿಷ್ಠನು ಇದನ್ನು ಕೇಳಿ—ಎಲೈ ರುದ್ರನೇ, ಈ ಪಶುಗಳನ್ನು ಅಂಗಿರಸರು ಕೊಟ್ಟಿರುವರು. ಆದ್ದರಿಂದ ಅವು ನನಗೆ ಸೇರಬೇಕು ಎನ್ನಲು ರುದ್ರನು ಪುನಃ—ಯಜ್ಞ ಸಮಾಪ್ತಿ ಕಾಲದಲ್ಲಿ ಉಳಿಯುವ ಪಶುಗಳಿಗೆ ಅಂಗಿರಸರು ಒಡೆಯರಲ್ಲ. ಅವರಿಗೆ ಅವುಗಳ ಮೇಲೆ ಯಾವ ಅಧಿಕಾರವೂ ಇಲ್ಲ. ಆದ್ದರಿಂದ ಅವುಗಳನ್ನು ಇತರರಿಗೆ ದಾನ ಮಾಡುವ ಅಧಿಕಾರವೂ ಅವರಿಗಿಲ್ಲ. ಅದರ ಸ್ವಾಮಿತ್ವವು ನನಗೆ ಸೇರಿದೆ—ಎಂದು ಹೇಳಿ ಮತ್ತಿಂತೆಂದನು. ಎಲೈ ನಾಭಾನೇದಿಷ್ಠನೆ, ಒಂದು ವೇಳೆ ಈ ಗೋವುಗಳನ್ನು ನೀನು ಅಪೇಕ್ಷಿಸುವಿಯಾದರೆ ಯಜ್ಞದಲ್ಲಿ ನನ್ನನ್ನು ಭಜಿಸು ಎಂದರೆ ನನ್ನನ್ನುದ್ದೇಶಿಸಿ ಮಂಥಿಸಂಸ್ರಾವಹೋಮವನ್ನು ಅರ್ಪಿಸು. ಅದರಿಂದ ನಾನು ಸಂತುಷ್ಟನಾಗಿ ಪಶುಗಳನ್ನು ನೀನು ತೆಗದುಕೊಳ್ಳುವುದಕ್ಕೆ ನಾನು ಸಮ್ಮತಿಸುವೆನು ಎಂದನು. ಅವನ್ನು ಕೇಳಿ ನಾಭಾನೇದಿಷ್ಠನು ಮಂಥಿಸಂಸ್ರಾವಹೋಮವನ್ನು ಅರ್ಪಿಸಿ ಗೋವುಗಳನ್ನು ಪಡೆದನು. ಆದ್ದರಿಂದ ವಿವೇಕಿಯಾದ ಪುರುಷನು ರುದ್ರನಿಗೆ ಮಂಥಿಸಂಸ್ರಾವಹೋಮವನ್ನು ಅರ್ಪಿಸಿದರೆ ಪಶುಪ್ರಾಪ್ತಿಯ ವಿಷಯದಲ್ಲಿ ರುದ್ರನು ಅವನಿಗೆ ಯಾವ ಅಡ್ಡಿಯನ್ನೂ ಮಾಡುವುದಿಲ್ಲ.

ಐತರೇಯಬ್ರಾಹ್ಮಣದಲ್ಲಿ ಹೇಳಿರುವ ಉಪಾಖ್ಯಾನಕ್ಕೂ ಇದಕ್ಕೂ ಕೊನೆಯ ಭಾಗದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಮುಖ್ಯ ವಿಷಯಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಈ ಉಪಾಖ್ಯಾನದಲ್ಲಿ ಅಂಗಿರಸರು ಸತ್ರಯಾಗವನ್ನು ಮಾಡಿದ ವಿಷಯವು ಉಕ್ತವಾಗಿರುವುದನ್ನು ತೈತ್ತಿರೀಯಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ—

ಅಂಗಿರಸೋ ವೈ ಸತ್ರಮಾಸತ । ತೇಷಾಂ ಪೃಶ್ನಿರ್ಘರ್ಮಧುಗಾಸೀತ್ । ಸರ್ಜೀಷೇಣಾಜೀವತ್ । ತೇಽಬ್ರುವನ್ । ಕಸ್ಮೈ ನು ಸತ್ರಮಾಸ್ಮಹೇ । ಯೇಽಸ್ಯಾ ಓಷಧೀರ್ನ ಜನಯಾಮ ಇತಿ । ತೇ ದಿವೋ ವೃಷ್ಟಿಮಸೃಜಂತ । ಯಾವಂತಸ್ತೋಕಾ ಅವಾಪದ್ಯಂತ । ತಾವತೀರೋಷಧ-ಯೋಽಜಾಯಂತ । ತಾ ಜಾತಾಃ ಪಿತರೋ ವಿಷೇಣಾಲಿಂಪನ್ । ತಾಸಾಂ ಜಗ್ಧ್ವಾ ರುಷ್ಯಂ-ತ್ಯೈತ್ । ತೇಽಬ್ರುವನ್ । ಕ ಇದಮಿತ್ಥಮಕರಿತಿ । ವಯಂ ಭಾಗಧೇಯಮಿಚ್ಛಮಾನಾ ಇತಿ ಪಿತರೋಽಬ್ರುವನ್ । ಕಿಂ ವೋ ಭಾಗಧೇಯಮಿತಿ । ಅಗ್ನಿಹೋತ್ರ ಏವ ನೋಽಸ್ಯಸ್ತ್ವಿತ್ಯ-ಬ್ರುವನ್ । ತೇಭ್ಯ ಏತದ್ಭಾಗಧೇಯಂ ಪ್ರಾಯಚ್ಛನ್ । ಯದ್ಧುತ್ವಾ ನಿರ್ಮಾರ್ಷ್ಟಿ । ತತೋ ವೈ ತ ಓಷಧೀರಸದ್ವಯನ್ । ಯ ಏವಂ ವೇದ । ಸ್ವದಂತೇಽಸ್ಮಾ ಓಷಧಯಃ । ತೇ ವತ್ಸ-ಮುಪಾವಾಸೃಜನ್ । ಇದಂ ನೋ ಹವ್ಯಂ ಪ್ರದಾಪಯೇತಿ । ಸೋಽಬ್ರವೀದ್ವರಂ ವೃಣೈ । ದಶ ಮಾ ರಾತ್ರೀರ್ಜಾತಂ ನ ದೋಹನ್ । ಅಸಂಗವಂ ಮಾತ್ರಾ ಸಹ ಚರಾಣೀತಿ । ತಸ್ಮಾ-ದ್ವತ್ಸಂ ಜಾತಂ ದಶ ರಾತ್ರೀರ್ನ ದುಹಂತಿ । ಅಸಂಗವಂ ಮಾತ್ರಾ ಸಹ ಚರತಿ । ವಾರೇ-

ವೃತೇಗ್ಂ ಹ್ಯಸ್ಯ । ತಸ್ಮಾದ್ವತ್ಸೇಗ್ಂ ಸಗ್ಂಸೃಷ್ಟಧಯಗ್ಂ ರುದ್ರೋ ಘಾತುಕಃ । ಅತಿ ಹಿ ಸಂಧಾಂ ಧಯತಿ ॥

(ತೈ. ಬ್ರಾ. ೨-೧-೧-೧, ೨, ೩)

ಅಗ್ನಿಹೋತ್ರವನ್ನು ವಿವರಿಸುವುದಕ್ಕಾಗಿ ಅಂಗಿರಸರೆಂಬ ಋಷಿಗಳು ಸತ್ರಯಾಗವನ್ನು ಮಾಡಿದ ವಿಷಯವನ್ನು ಪೀಠಿಕಾ ರೂಪವಾಗಿ ಪ್ರಸ್ತಾಪಮಾಡಲಾಗಿದೆ. ಅಂಗಿರಸರೆಂಬ ಋಷಿಗಳು ಸತ್ರಯಾಗವನ್ನು ಮಾಡಿದಾಗ ಪೃಶ್ನೀ ಎಂಬ ಶ್ವೇತ ವರ್ಣದ ಗೋವು (ಈ ಗೋವು ಮರುದ್ದೇವತೆಗಳ ಮಾತೆಯೆಂದು ಪ್ರಸಿದ್ಧವಾಗಿದೆ. ಇದರ ವಿಷಯವನ್ನು ನಾವು ಹಿಂದೆ ವಿಸ್ತಾರದಾಗಿ ವಿವರಿಸಿದ್ದೇವೆ). ಪ್ರವರ್ಗ್ಯಾರ್ಥವಾಗಿ ಹಾಲನ್ನು ಕರೆಯುತ್ತಿತ್ತು. ಆ ಕಾಲದಲ್ಲಿ ಅನಾವೃಷ್ಟಿಯಿದ್ದುದರಿಂದ ಗೋವುಗಳ ಆಹಾರವಾದ ಹುಲ್ಲಿಗೆ ಅಭಾವವಾಗಿತ್ತು. ಆದ್ದರಿಂದ ಆ ಪೃಶ್ನಿಯೆಂಬ ಧೇನುವು ಆಹಾರಕ್ಕಾಗಿ ಋಜೀಷವೆಂಬ ರಸವನ್ನು ತೆಗೆದ ಸೋಮಲತೆಗಳ ಸಿಪ್ಪೆಯನ್ನು ತಿಂದು ಜೀವಿಸಬೇಕಾಗಿತ್ತು. ಈ ರೀತಿ ಆಹಾರಕ್ಕಾಗಿ ತೊಂದರೆಪಡುತ್ತಿರುವ ಪೃಶ್ನಿಯನ್ನು ನೋಡಿ ಅಂಗಿರಸಋಷಿಗಳು ತಮ್ಮತಮ್ಮಲ್ಲಿ ಈರೀತಿ ಮಾತನಾಡಿಕೊಂಡರು ಯಾವ ಪ್ರಯೋಜನಕ್ಕಾಗಿ ನಾವು ಸತ್ರಯಾಗವನ್ನು ಮಾಡುತ್ತಿದ್ದೇವೆ ? ಈ ಗೋವಿಗೆ ತೃಣಾದಿಗಳಿಲ್ಲದೆ ಕಷ್ಟಪಡುತ್ತಿದೆಯಲ್ಲಾ ಇದಕ್ಕೆ ಏನುಮಾಡಬೇಕು ? ಹಸುರುಹುಲ್ಲು ಮೊಸಲಾದ ವನಸ್ಪತಿಲತಾದಿಗಳು ಯಥೇಚ್ಛವಾಗಿ ಬೆಳೆಯುವಂತೆ ಮಾಡಬೇಕು. ಇದಕ್ಕಾಗಿ ಅಂತರಿಕ್ಷದಿಂದ ಮಳೆಬರುವಂತೆ ಮಾಡಬೇಕು ಎಂದಾಲೋಚಿಸಿ ಅದರಂತೆ ವೃಷ್ಟಿಯನ್ನು ಉತ್ಪತ್ತಿಮಾಡಿದರು. ಆ ವೃಷ್ಟಿಯಿಂದ ಭೂಮಿಯ ಮೇಲೆ ಎಷ್ಟು ಹನಿಗಳು (ಬಿಂದುಗಳು) ಬಿದ್ದವೋ ಅಷ್ಟು ಸಂಖ್ಯೆಯಲ್ಲಿ ಓಷಧಿವನಸ್ಪತಿಗಳು ಉತ್ಪನ್ನವಾದವು. ಆಗ ಪಿತೃದೇವತೆಗಳು ಅಗ್ನಿಹೋತ್ರದಲ್ಲಿ ತಮಗೂ ಒಂದು ಭಾಗಬೇಕೆಂದು ಅಪೇಕ್ಷಿಸಿ ಅದನ್ನು ಹೊಂದುವುದಕ್ಕಾಗಿ ವೃಷ್ಟಿಯಿಂದ ಉತ್ಪನ್ನವಾದ ಓಷಧಿವನಸ್ಪತಿಗಳನ್ನು ವಿಷದಿಂದ ಸವರಿ ಕಹಿಯಾಗುವಂತೆ ಮಾಡಿದರು. ಕಹಿಯಾದ ತೃಣಾದಿಗಳನ್ನು ಭಕ್ಷಿಸಿ ಆ ಪೃಶ್ನಿಯು ಮೂರ್ಛೆಯನ್ನು ಹೊಂದಿತು. ಇವನ್ನು ಕಂಡು ಅಂಗಿರಾಋಷಿಗಳು— ಈ ತೃಣಾದಿಗಳನ್ನು ಕಹಿಯಾಗುವಂತೆ ಯಾರು ಮಾಡಿದರು ಎಂದು ಕೇಳಲು, ಪಿತೃದೇವತೆಗಳು ನಮಗೆ ಆಹುತಿಯಲ್ಲಿ ಒಂದು ಭಾಗವು ಬೇಕೆಂದು ಬಯಸಿ ಅದಕ್ಕಾಗಿ ತೃಣಾದಿಗಳನ್ನು ಕಹಿಯಾಗುವಂತೆ ನಾವೇ ಮಾಡಿದೆವು ಎಂದು ಪ್ರತ್ಯುತ್ತರವಿತ್ತರು. ನಿಮ್ಮ ಭಾಗವೇನು ? ನಿಮಗೆ ಏನು ಬೇಕು ? ಎಂದು ಪುನಃ ಕೇಳಲು, ಅಗ್ನಿಹೋತ್ರದಲ್ಲಿ ನಮಗೂ ಒಂದು ಭಾಗವಿರಬೇಕೆಂದು ಕೇಳಿದರು. ಅಂಗಿರಸಋಷಿಗಳು ಹಾಗೆಯೇ ಆಗಲೆಂದು ಪಿತೃಗಳಿಗೂ (ಸ್ವಧಾ ಪಿತೃಭ್ಯಃ ಎಂಬ ಆಹುತಿಯನ್ನು) ಒಂದು ಭಾಗವನ್ನು ಕೊಡಲು ಅವರು ತೃಣಾದಿಗಳಲ್ಲಿದ್ದ ಕಹಿಯನ್ನು ಹೋಗಲಾಡಿಸಿ ಸಿಹಿಯಾಗಿ ರುಚಿಕರವಾಗಿರುವಂತೆ ಮಾಡಿದರು. ಈ ವಿಷಯವನ್ನು ತಿಳಿದ ಪುರುಷನ ವಿಷಯದಲ್ಲಿ ತೃಣಲತಾದಿಗಳು ಸ್ವಾದು (ರುಚಿ) ಯಾಗಿಯೇ ಇರುತ್ತವೆ.

ಅನಂತರ ಆ ಅಂಗಿರಸಋಷಿಗಳು ಹಾಲನ್ನು ಕರೆಯುವುದಕ್ಕಾಗಿ ಕರುವನ್ನು ಗೋವಿನ ಬಳಿಗೆ ಕರೆತಂದು ಎಲೈ ವತ್ಸವೇ, (ಕರುವೇ) ಯಜ್ಞದಲ್ಲಿ ಹವ್ಯವನ್ನು ಸಿದ್ಧಪಡಿಸುವುದಕ್ಕಾಗಿ ಹಾಲು ಬೇಕಾಗಿರುವುದು, ಅದನ್ನು ನಮಗೆ ಕೊಡು ಎಂದು ಕೇಳಿದರು. ಅವಕ್ಕೆ ಕರುವು ನಿನಗೆ ಹಾಲು ಬೇಕಾದರೆ ನನಗೆ ಒಂದು ವರವನ್ನು ಕೊಡಬೇಕು. ಕರುವು ಹುಟ್ಟಿದಮೇಲೆ ಹತ್ತುರಾತ್ರಿಗಳವರೆಗೆ (ಹತ್ತುದಿನಗಳವರೆಗೆ) ಹಸುವಿನಿಂದ ಹಾಲನ್ನು ಕರೆಯಕೂಡದು, ಹತ್ತು ದಿನಗಳ ಕಳೆದನಂತರವೂ ಹಾಲನ್ನು ಕರೆಯುವ ಸಮಯದಲ್ಲಿ ಪ್ರತಿದಿನವೂ ತಾಯಿಯೊಡನೆ ನಾನು ಅರ್ಧಪ್ರಹರಕಾಲ ಹಾಲನ್ನು ಪಾನಮಾಡುತ್ತಾ ಸುಖವಾಗಿ ಸಂಚರಿಸುತ್ತಿರಬೇಕು ಎಂದು ವರವನ್ನು ಕೇಳಿತು. ಋಷಿಗಳು ಹಾಗೆಯೇ ಆಗಲೆಂದೊಪ್ಪಿ ಅದರಂತೆ ವರವನ್ನು ಕೊಟ್ಟರು. ಆದ್ದರಿಂದ ಈಗಲೂ ಹೋಮಾರ್ಥವಾಗಿ ಗೋದೋಹನವಮಾಡುವಾಗ

ಸೂಕ್ತ—೬೧

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೧ ॥
ಅಷ್ಟಕ—೮ ॥ ಅಧ್ಯಾಯ—೧ ॥ ವರ್ಗ—೨೬,೨೭,೨೮,೨೯,೩೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೨೭ ॥
ಋಷಿಃ—ನಾಭಾನೇದಿಷ್ಠೋ ಮಾನವಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಇದಮಿತ್ಥಾ ರೌದ್ರಂ ಗೂರ್ತವಚಾ ಬ್ರಹ್ಮ ಕೃತ್ವಾ ಶಚ್ಯಾಮಂತರಾಜೌ ।
ಕ್ವಾಣಾ ಯದಸ್ಯ ಪಿತರಾ ಮಂಹನೇಷ್ಠಾಃ ಪರ್ಷತ್ಪಕ್ಥೇ ಅಹನ್ನಾ ಸಪ್ತ ಹೋತ್ರಾನ್ ॥ ೧ ॥

ಪದಪಾಠಃ

ಇದಂ । ಇತ್ಥಾ । ರೌದ್ರಂ । ಗೂರ್ತವಚಾಃ । ಬ್ರಹ್ಮ । ಕೃತ್ವಾ । ಶಚ್ಯಾಂ । ಅಂತಃ । ಆಜೌ ।
ಕ್ವಾಣಾ । ಯತ್ । ಅಸ್ಯ । ಪಿತರಾ । ಮಂಹನೇಽಸ್ಥಾಃ । ಪರ್ಷತ್ । ಪಕ್ಥೇ । ಅಹನ್ । ಆ । ಸಪ್ತ ।
ಹೋತ್ರಾನ್ ॥ ೧ ॥

ಸಾಯಣಭಾಷ್ಯಂ

ಗೂರ್ತವಚಾ ಉದ್ಯತವಚನೋ ನಾಭಾನೇದಿಷ್ಠ ಇದಂ ಬ್ರಹ್ಮ ಸ್ತೋತ್ರಂ ರೌದ್ರಂ ರುದ್ರ-ಪ್ರಣೀತಮಿತ್ಥೇತ್ಥಮಿದಾನೀಂಕ್ರಿಯಮಾಣಪ್ರಕಾರಂ ಕೃತ್ವಾ ಪ್ರಜ್ಞಾನೇನ ನಿಷ್ಪಾದ್ಯಂ ಸ್ತೋತ್ರಂ ಶಚ್ಯಾಮಂತಃ ಕರ್ಮಣಿ ಸತ್ರಮಧ್ಯ ಆಜಾವಂಗಿರಸಾಂ ಸಂಘೇ ಕರೋತೀತಿ ಶೇಷಃ । ಯತ್ಸ್ತೋತ್ರಂ ಕ್ವಾಣಾ ಭಾಗಂ ಕುರ್ವಾಣಾ ಭಾಗಂ ಕುರ್ವಾಣಾವಸ್ಯ ಪಿತರಾ ಪಿತರಾವನ್ಯೇ ಚ ಮಂಹನೇಷ್ಠಾ ಭಾಗ-ಪ್ರದಾನೇ ವರ್ತಮಾನಾ ಭ್ರಾತರಶ್ಚ ಗೋಲಾಭಸಾಧನತ್ವೇನಾಕಲ್ಪಯೇನ್ನಿತಿ ಶೇಷಃ । ತೇನ ನಾಭಾ-ನೇದಿಷ್ಠಃ ಪಕ್ಥೇ ಪಕ್ತವ್ಯೇಽಹನ್ನಹನಿ । ಪಷ್ಠೇಽಹನೀತ್ಯರ್ಥಃ । ತೇ ಪಷ್ಠಂ ಪಷ್ಠಮೇವಾಹರಾಗತ್ಯ ಮುಹ್ಯಂತಿ ತಾನೇತೇ ಸೂಕ್ತೇ ಪಷ್ಠೇಽಹನಿ ಶಂಸಯ । ಐ.ಬ್ರಾ. ೫-೧೪। ಇತ್ಯುಕ್ತತ್ವಾತ್ । ಸಪ್ತ ಹೋತ್ರಾನ್ ಹೋತೃಪ್ರಶಾಸ್ತೃಬ್ರಾಹ್ಮಣಾಚ್ಛಂಸ್ಯಾದಿಕಾನಾ ಪರ್ಷತ್ । ಸರ್ವತೋಽಪೂರಯತ್ । ಇದಮಿತ್ಥೇತಿ ಸೂಕ್ತಾಭ್ಯಾಂ ಯಜ್ಞಸಾರಂ ಪ್ರಾಪಯಾಮಾಸೇತ್ಯರ್ಥಃ ॥

ಪ್ರತಿಪದಾರ್ಥ

ಕ್ವಾಣಾ—ಭಾಗಮಾಡಲು ನಿರತರಾದ । **ಅಸ್ಯ ಪಿತರಾ**—ನಾಭಾನೇದಿಷ್ಠನ ಮಾತಾಪಿತೃಗಳೂ । **ಮಂಹನೇಷ್ಠಾಃ**—ಭಾಗಪ್ರದಾನದಲ್ಲಿ ನಿರತರಾದ ಇವನ ಸಹೋದರರೂ । **ಯತ್**—ಯಾವ ಸ್ತೋತ್ರವನ್ನು

ಗೋಲಾಭಸಾಧನವನ್ನಾಗಿ ಮಾಡಿಕೊಂಡರೋ ಅಂತಹ। **ರೌದ್ರಂ**—ರುದ್ರನನ್ನು ಸ್ತುತಿಸುವ। **ಇದಂ ಬ್ರಹ್ಮ**—ಈ ಸ್ತೋತ್ರವನ್ನು। **ಗೂರ್ತವಚಾಃ**—ಉಚ್ಚಸ್ವರವುಳ್ಳ ನಾಭಾನೇದಿಷ್ಠನು। **ಇತ್ಥಾ**—ಮುಂದೆ ತಿಳಿಸುವಂತೆ। **ಕೃತ್ವಾ**—ತನ್ನ ಪ್ರಜ್ಞಾಪ್ರಭಾವದಿಂದ। **ಶಚ್ಯಾಂ ಅಂತಃ**—ಕರ್ಮದ ಮಧ್ಯಭಾಗದಲ್ಲಿ। **ಆಜೌ**—ಅಂಗಿರಸ್ಸುಗಳ ನಡುವೆ ನಿರ್ಮಿಸಿದನು। (ಈ ಮಂತ್ರದ ಸಹಾಯದಿಂದ) **ಪಕ್ಥ್ಯೇ ಅಹನ್**—ಕರ್ಮವು ಪೂರ್ಣತೆಯನ್ನು ಹೊಂದುವ ಆರನೆಯ ದಿವಸ। **ಸಪ್ತ ಹೋತ್ರಾನ್**—ಹೋತ್ರಾದಿ ಏಳು ಋತ್ವಿಕ್ಕುಗಳನ್ನೂ। **ಆ ಪರ್ಷತ್**—ಯಜ್ಞವು ಪೂರ್ಣವಾಗುವಂತೆ ಸಿದ್ಧಗೊಳಿಸಿದನು.

ಭಾವಾರ್ಥ

ಭಾಗಮಾಡಲು ನಿರತರಾದ ನಾಭಾನೇದಿಷ್ಠನ ಮಾತಾಪಿತೃಗಳೂ, ಭಾಗಪ್ರದಾನದಲ್ಲಿ ನಿರತರಾದ ಸಹೋದರರೂ, ಯಾವ ಸ್ತೋತ್ರವನ್ನು ಗೋಲಾಭಸಾಧನವನ್ನಾಗಿ ಮಾಡಿಕೊಂಡರೋ, ಅಂತಹ ರುದ್ರನನ್ನು ಸ್ತುತಿಸುವ ಈ ಸ್ತೋತ್ರವನ್ನು ಉಚ್ಚಸ್ವರವುಳ್ಳ ನಾಭಾನೇದಿಷ್ಠನು ಮುಂದೆ ತಿಳಿಸುವಂತೆ ತನ್ನ ಪ್ರಜ್ಞಾಪ್ರಭಾವದಿಂದ ಕರ್ಮದ ಮಧ್ಯೆ ಆಂಗಿರಸ್ಸುಗಳ ನಡುವೆ ನಿರ್ಮಿಸಿದನು. ಈ ಮಂತ್ರದ ಸಹಾಯದಿಂದ, ಕರ್ಮವು ಪೂರ್ಣತೆಯನ್ನು ಹೊಂದುವ ಆರನೆಯ ದಿನ ಹೋತ್ರಾದಿ ಏಳು ಋತ್ವಿಕ್ಕುಗಳಿಂದ ಯಜ್ಞವು ಪೂರ್ಣವಾಗುವಂತೆ ಸಿದ್ಧಪಡಿಸಿದನು.

English Translation

The fierce-voiced (Nabhanedishtha repeated) through his intelligence this praise of Rudra, in the midst of the ceremony at the assembly (of the Angirasas), which (praise)his parents, making (the partition)and his brothers engaged in giving (the shares accomplished) ; he perfected the seven priests (therewith) on the day on which the rite was to be matured.

ಸಂಹಿತಾಪಾಠಃ

ಸ ಇದ್ದಾನಾಯ ದಭ್ಯಾಯ ವನ್ವನ್ಯ್ವಾನಃ ಸೂದ್ಯೈರಮಿಮೀತ ವೇದಿಂ।
ತೂರ್ವಯಾಣೋ ಗೂರ್ತವಚಸ್ತಮುಃ ಕ್ಷೋದೋ ನ ರೇತ ಇತಊತಿ ಸಿಂಚತ್ ॥ ೨ ॥

ಪದಪಾಠಃ

ಸ । ಇತ್ । ದಾನಾಯ । ದಭ್ಯಾಯ । ವನ್ವನ್ । ಚ್ಯವಾನಃ । ಸೂದ್ಯೈಃ । ಅಮಿಮೀತ । ವೇದಿಂ ।
ತೂರ್ವಯಾಣಃ । ಗೂರ್ತವಚಃತಮುಃ । ಕ್ಷೋದಃ । ನ । ರೇತಃ । ಇತಃಊತಿ । ಸಿಂಚತ್ ॥ ೨ ॥

ಸಾಯಣಭಾಷ್ಯಂ

ಸ ಇತ್ ಸ ಕೃಷ್ಣಶವಾಸೀ ಪುರುಷೋ ರುದ್ರಾಖ್ಯೋ ದಾನಾಯ ಸ್ತೋತೃಣಾಂ ಧನಸ್ಯ ದಾನಾಯ ದಭ್ಯಾಯ ಶತ್ರೂಣಾಂ ವಧಾಯ ಚ ವನ್ವನ್ ಸ್ತೋತೃನ್ಸಂಭಜನ್ ಸೂದ್ಯೈಃ ಸೂದಕೈರ್ಹಿಂಸಕೈಃ

ಶಸ್ತ್ರೈರ್ಹನ್ಯಮಾನೋ ರಕ್ಷಾಂಸಿ ಚ್ಯಾವಯನ್ ವೇದಿಮಮಿಮೀತ । ಪರಿಮಿತವಾನ್ । ಯಜ್ಞವಾಸ್ತ್ವಧಿಷ್ಠಿತವಾನಿತ್ಯರ್ಥಃ । ತಂ ಕೃಷ್ಣಶವಾಸ್ಯುತ್ತರತ ಉಪೋತ್ಥಾಯಾಬ್ರವೀನ್ಮಮ ವಾ ಇದಂ ಮನು ವೈ ವಾಸ್ತುಹಮಿತೀತಿ ಬ್ರಾಹ್ಮಣಂ । ಐ. ಬ್ರಾ. ೫-೧೪ । ತದೇವಾಹ । ತೂರ್ವಯಾಣಸ್ತೂರ್ಣಗಮನೋ ಗೂರ್ತವಚಸ್ತಮೋಽತ್ಯಂತಮುದ್ಯತವಚಾ ರುದ್ರಃ ಕ್ಷೋದೋ ನೋದಕಮಿವ । ಉದಕಂ ಯಥಾ ಘನಃ ಸಿಂಚತಿ ತದ್ವದ್ರೇತಃ ಸ್ವಸಾಮರ್ಥ್ಯಮಿತಊತೀತೋಗಮನವದ್ಯಥಾ ಭವತಿ ತಥಾ ಸಿಂಚತ್ । ಪ್ರೇರಿತವಾನಿತ್ಯರ್ಥಃ। ಯದ್ವಾ । ಅನೇನೋತ್ತರಾರ್ಧೇನೋತ್ತರಾಭ್ಯಾಂ ಚ ಪ್ರಾಸಂಗಿಕ್ಯಶ್ವಿನೋಃ ಸ್ತುತಿಃ ಕ್ರಿಯತೇ । ತೂರ್ವಯಾಣಸ್ತೂರ್ಣಗಮನೋಽತಿಶಯೇನೋದ್ಯತವಚನೋ ರುದ್ರಃ ಕ್ಷೋದೋ ನೋದಕಮಿವ ರೇತಃ ಉತ್ಪಾದನಸಾಮರ್ಥ್ಯೋಪೇತಂ ರೇತ ಇತಊತಿ ಸಿಂಚತ್ । ಜನಯಾಮಾಸಾಶ್ವಿನೌ । ಅನ್ಯತ್ರೇತಊತೀತ್ಯಶ್ವಿನೋರಭಿಧಾನಾದನ್ಯತ್ರ ತಯೋ ರುದ್ರಪುತ್ರತ್ವಸಿದ್ಧೇಶ್ಚಾಯಮರ್ಥೋ ಲಭ್ಯತೇ ॥

ಪ್ರತಿಪದಾರ್ಥ

ಸ ಇತ್—ಅದೇ ರುದ್ರನು । **ದಾನಾಯ**—ಸ್ತೋತೃಗಳಿಗೆ ಧನವನ್ನು ಕೊಡುವುದಕ್ಕಾಗಿಯೂ । **ದಭ್ಯಾಯ**—ಶತ್ರುನಾಶಕ್ಕಾಗಿಯೂ । **ವನ್ವನ್**—ಸ್ತೋತೃಗಳನ್ನು ತೃಪ್ತಿಗೊಳಿಸುತ್ತಲೂ । **ಸೂದ್ಯೈಃ**—ಹಿಂಸಕವಾದ ಶಸ್ತ್ರಗಳಿಂದ । **ಚ್ಯವಾನಃ**—ಶತ್ರುಗಳನ್ನು ಹೊಡೆದೋಡಿಸುತ್ತಲೂ । **ವೇದಿಂ**—ಯಜ್ಞವೇದಿಯನ್ನು । **ಅಮಿಮೀತ**—ನಿರ್ಮಿಸಿದ್ದಾನೆ । **ತೂರ್ವಯಾಣಃ**—ಶೀಘ್ರಗಾಮಿಯೂ । **ಗೂರ್ತವಚಸ್ತಮಃ**—ಅತ್ಯಂತ ಉಚ್ಚತರವಾದ ಶಬ್ದವುಳ್ಳವನೂ ಆದ ರುದ್ರನು । **ಕ್ಷೋದೋ ನ**—ಮೇಘವು ಉದಕವನ್ನು ಸುರಿಸುವಂತೆ । **ರೇತಃ**—ತನ್ನ ಸೃಷ್ಟಿಸಾಧಕವಾದ ಸಾಮರ್ಥ್ಯವನ್ನು । **ಇತಊತಿ**—ಸುತ್ತಲೂ ಹರಡುವಂತೆ । **ಸಿಂಚತ್**—ಪ್ರೇರಿಸಿದ್ದಾನೆ.

ಭಾವಾರ್ಥ

ಆದೇ ರುದ್ರನು ತನ್ನ ಸ್ತೋತೃಗಳಿಗೆ ಧನದಾನವನ್ನು ಮಾಡಿ ಅವರಿಗೆ ತೃಪ್ತಿಯನ್ನುಂಟುಮಾಡುವ ಉದ್ದಿಶ್ಯದಿಂದ ತನ್ನ ಶತ್ರುಹಿಂಸಕವಾದ ಶಸ್ತ್ರಗಳಿಂದ ಶತ್ರುಗಳನ್ನು ಹೊಡೆದೋಡಿಸುತ್ತ ಯಜ್ಞವೇದಿಯನ್ನು ನಿರ್ಮಿಸಿದ್ದಾನೆ. ಶೀಘ್ರಗಾಮಿಯೂ, ಅತ್ಯಂತ ಉಚ್ಚತರವಾದ ಶಬ್ದವುಳ್ಳವನೂ ಆದ ರುದ್ರನು ಮೇಘವು ಉದಕವನ್ನು ಸುರಿಸುವಂತೆ ತನ್ನ ಸೃಷ್ಟಿಸಾಧಕವಾದ ಸಾಮರ್ಥ್ಯವನ್ನು ಸುತ್ತಲೂ ಹರಡುವಂತೆ ಪ್ರೇರಿಸಿದ್ದಾನೆ.

English Translation

He (Rudra) bestowing on his worshippers the gift (of wealth) and the defeat (of their foes), casting down (the Rakshasas) with his weapons, has constructed the altar ; rapid in movement, most fierce in speech, and shedding the procreative fluid like water around.

ಸಂಹಿತಾಪಾಠಃ

ಮನ್ತೋ ನ ಯೇಷು ಹವನೇಷು ತಿಗ್ಮಂ ವಿಪಃ ಶಚ್ಯಾ ವನುಥೋ ದ್ರವಂತಾ।

ಆ ಯಃ ಶಯ್ಯೋಭಿಸ್ತುವಿನೃಮ್ಣೋ ಅಸ್ಯಾಶ್ರೀಣೀತಾದಿಶಂ ಗಭಸ್ತೌ ॥ ೩ ॥

ಪದಪಾಠಃ

ಮನಃ । ನ । ಯೇಷು । ಹವನೇಷು । ತಿಗ್ಮಂ । ವಿಪಃ । ಶಚ್ಯಾ । ವನುಥಃ । ದ್ರವಂತಾ ।

ಆ । ಯಃ । ಶಯ್ಯೋಭಿಃ । ತುವಿಽನೃಮ್ಣಃ । ಅಸ್ಯ । ಅಶ್ರೀಣೀತ । ಆಽದಿಶಂ । ಗಭಸ್ತೌ ॥ ೩ ॥

ಸಾಯಣಭಾಷ್ಯಂ

ಹೇ ಅಶ್ವಿನೌ ಯುವಾಂ ಮನೋ ನ ಮನ ಇವ ಯಥಾ ಮನಸ್ತಿಗ್ಮಂ ತೀಕ್ಷ್ಣಮಾಶು ಧಾವತಿ ಆಗಚ್ಛತಿ ಏವಂ ಯೇಷು ಹವನೇಷ್ವಾಹ್ವಾನೇಷು ವಿಪಃ ಸ್ತೋತುಃ ಶಚ್ಯಾ ಪ್ರಜ್ಞಾನೇನ ಗಂತವ್ಯಮಿತಿ ಬುದ್ಧ್ಯಾ ದ್ರವಂತಾ ದ್ರವಂತೌ ಗಚ್ಛಂತೌ ವನುಥಃ ಸಂಭಜಥಃ । ಯೋಽಧ್ವರ್ಯುರಾ ಆಭಿಮುಖ್ಯೇನ ತುವಿನೃಮ್ಣಃ ಪ್ರಭೂತಹವಿರ್ಲಕ್ಷಣಧನಃ ಸನ್ನಸ್ಯ ಕರ್ಮಣಿ ಪ್ರವೃತ್ತಸ್ಯ ಮಮ ಸಂಬಂಧೀ ಶಯ್ಯೋಭಿರಂಗುಲೀಭಿರಶ್ರೀಣೀತ ಶ್ರೀಣಾತಿ । ಕಿಂ ಕೃತ್ವಾ । ಗಭಸ್ತೌ ಹಸ್ತೇ ಧೃತ್ವಾದಿಶಂ । ಇದಮಶ್ವಿಭ್ಯಾಮಿತಿ ನಿರ್ದಿಶ್ಯೇತ್ಯರ್ಥಃ । ತಾದೃಶಂ ಮದೀಯಮಧ್ವರ್ಯುಂ ಯೇಷು ಹವನೇಷು ವನುಥಃ ಸಂಭಜಥಃ ತೌ ಯುವಾಂ ಹುವ ಇತ್ಯುತ್ತರತ್ರ ಸಂಬಂಧಃ ॥

ಪ್ರತಿಪದಾರ್ಥ

(ಎಲೈ ಅಶ್ವಿನೀದೇವತೆಗಳೇ) **ಯಃ**—ಯಾವ ಅಧ್ವರ್ಯುವು । **(ಯೇಷು**—ಯಾವ ಯಜ್ಞಕಾಲಗಳಲ್ಲಿ) । **ಗಭಸ್ತೌ**—ತನ್ನ ಹಸ್ತದಲ್ಲಿ । **ತುವಿನೃಮ್ಣಃ**—ಅಧಿಕವಾದ ಹವಿಸ್ಸನ್ನು ಹೊಂದಿ । **ಆದಿಶಂ**—ನಿಮ್ಮನ್ನೇ ಉದ್ದೇಶಿಸಿ । **ಅಸ್ಯ**—ಈ ಕರ್ಮದಲ್ಲಿ ನಿರತವಾದ । **ಶಯ್ಯಾಭಿಃ**—ಅಂಗುಲಿ (ಬೆರಳು) ಗಳಿಂದ । **ಅಶ್ರೀಣೀತ**—ಹವಿಸ್ಸನ್ನು ಸಂಸ್ಕರಿಸುವನೋ । (ಮತ್ತು) **ಯೇಷು ಹವನೇಷು**—ಯಾವ ಆಹ್ವಾನಕಾಲಗಳಲ್ಲಿ । **ಯುವಾಂ**—ನೀವು) । **ಮನೋ ನ**—ಮನಸ್ಸಿನ ವೇಗದಂತೆ । **ತಿಗ್ಮಂ**—ಶೀಘ್ರವಾಗಿ । **ವಿಪಃ**—ಸ್ತೋತೃವಿಗೆ (ಸ್ತುತಿಕರ್ತನಲ್ಲಿಗೆ) । **ಶಚ್ಯಾ**—ನಿಮ್ಮ ಅನುಗ್ರಹಬುದ್ಧಿಯೊಡನೆ । **ದ್ರವಂತಾ**—ಓಡಿಬಂದು । **ವನುಥಃ**—ಯಜಮಾನನನ್ನು ತೃಪ್ತಿಗೊಳಿಸುವಿರೋ (ಅಂತಹ ನಿಮ್ಮನ್ನು ಕರೆಯುತ್ತೇವೆ).

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ಯಾವ ಯಜ್ಞಕಾಲಗಳಲ್ಲಿ ಅಧ್ವರ್ಯುವು ತನ್ನ ಹಸ್ತದಲ್ಲಿ ಪೂರ್ಣವಾಗಿ ಹವಿಸ್ಸನ್ನು ತುಂಬಿಕೊಂಡು ನಿಮ್ಮನ್ನೇ ಉದ್ದೇಶಿಸಿ ಕರ್ಮದಲ್ಲಿ ನಿರತವಾದ ಬೆರಳುಗಳಿಂದ ಹವಿಸ್ಸನ್ನು ಸಂಸ್ಕರಿಸುವನೋ ಮತ್ತು ಯಾವ ಯಜ್ಞಗಳಲ್ಲಿ ನೀವು ಶೀಘ್ರವಾಗಿ ಬಂದು ನಿಮ್ಮ ಅನುಗ್ರಹಬುದ್ಧಿಯಿಂದ ಯಜಮಾನನನ್ನು ತೃಪ್ತಿಗೊಳಿಸುವಿರೋ, ಆ ಯಾಗಗಳಿಗೆ ನಿಮ್ಮನ್ನು ಕರೆಯುತ್ತೇವೆ.

English Translation

(I call you to these) oblations, to which hastening, (Ashwins), swift as thought at the invitation of the worshipper, you rejoice my (worshipper),

who, affluent in the wealth of sacrifice, mixes (the oblation) with his fingers in your presence, (holding) in his hand the sacrifice intended (for you)

संहितापाठः

कृष्णा यद्गोष्वरुणीषु सीदद्दिवो नपाताश्विना हुवे वां ।
वीतं मे यज्ञमा गतं मे अन्नं ववन्वांसा नेषमुस्कृ-
तधृ ॥ ४ ॥

पदपाठः

कृष्णा । यत् । गोषु । अरुणीषु । सीदत् । दिवः । नपाता । अश्विना । हुवे । वां ।
वीतं । मे । यज्ञं । आ । गतं । मे । अन्नं । ववन्वांसा । न । इषं । अस्कृतधृ
इत्यस्कृतऽधृ ॥ ४ ॥

सायणभाष्यं

कृष्णा रात्रिर्यद्यदारुणीष्वरुणवर्णासु गोषु सीदत् निवसति । उषा निभास-
नाय रथमधितिष्ठतीत्यर्थः । अरुण्यो गाव उषसामिति निरुक्तं । उषःकाले हे
दिवो नपाता दीप्यमानस्य स्वर्गस्य प्रकाशात्मकस्य यागस्य वा न पातयितारौ हे
अश्विनौ वां हुवे । आह्वये । वीतं कामयेथां मे मेऽन्नं हविर्लक्षणं । तदर्थं मे
यज्ञमा गतं । आगच्छतं । इषमन्नं ववन्वांसा न संभजमानावश्वाविव । तद्वदा
गतं । कीदृशौ युवां । अस्कृतधृ । अस्कृतद्रोहौ मयि द्रोहमस्मरंतौ ॥

प्रतिपदार्थ

दिवो नपाता—स्वर्गलोकद पुत्रराद । **अश्विना**—ಎಲೈ ಅಶ್ವಿನೀದೇವತೆಗಳೇ । **यत्**—ಯಾವಾಗ । **कृष्णा**—ಕೃಷ್ಣವರ್ಣವುಳ್ಳ ರಾತ್ರಿಯು । **अरुणीषु**—ಹೊಂಬಣ್ಣವುಳ್ಳ । **गोषु**—ಗೋವುಗಳಲ್ಲಿ । **सीदत्**—ಒಂದಾಗುವಳೋ (ರಾತ್ರಿಯು ಕಳೆದು ಯಾವಾಗ ಉಷಸ್ಸಿನ ಆವಿರ್ಭಾಗವಾಗುವುದೋ ಆಗ । **वां**—ನಿಮ್ಮನ್ನು । **हुवे**—ಯಜ್ಞಕ್ಕೆ ಕರೆಯುತ್ತೇನೆ । **अस्कृतधृ**—ನಮಗೆ ದ್ರೋಹವನ್ನು ಬಯಸದ ನೀವು । **मे**—ನನ್ನ । **अन्नं**—ಹವಿಸ್ಸನ್ನು । **वीतं**—ಇಚ್ಛಿಸಿರಿ । **इषं**—ಅನ್ನವನ್ನು । **ववन्वांसा न**—ಒಟ್ಟಿಗೆ ತಿನ್ನತಕ್ಕ ಎರಡು ಅಶ್ವಗಳಂತೆ ಒಟ್ಟುಗೂಡಿದ ನೀವು । **मे यज्ञं**—ನನ್ನ ಯಜ್ಞಕ್ಕೆ । **आ गतं**—ಬನ್ನಿರಿ.

ಭಾವಾರ್ಥ

ಸ್ವರ್ಗಲೋಕದ ಪುತ್ರರಾದ ಎಲೈ ದೇವತೆಗಳೇ, ಯಾವಾಗ ಕೃಷ್ಣವರ್ಣವುಳ್ಳ ರಾತ್ರಿಯು ಉಷಸ್ಸಿನೊಡನೆ ಸೇರುವಳೋ ಎಂದರೆ, ಉಷಸ್ಸಿನ ಆವಿರ್ಭಾವಕಾಲದಲ್ಲಿ ನಿಮ್ಮನ್ನು ನಮ್ಮ ಯಜ್ಞಕ್ಕೆ ಕರೆಯುತ್ತೇನೆ. ನನಗೆ ದ್ರೋಹ

ವನ್ನು ಬಯಸುವ ನೀವು ನಮ್ಮ ಹವಿಸ್ಸನ್ನು ಇಚ್ಛಿಸಿರಿ. ಒಟ್ಟಿಗೆ ಕಬಳವನ್ನು ತಿನ್ನುವ ಎರಡು ಅಶ್ವಗಳಂತೆ ಒಂದಾಗಿರುವ ನೀವು ನನ್ನ ಯಜ್ಞಕ್ಕೆ ಬನ್ನಿರಿ.

English Translation

When the dark night retires before the purple oxen (of the chariot of the dawn), I inyoke you, Ashwins, children of heaven : be desirous of my sacrifice : come to my food and to my viands like (two horses) eating together, oblivious of offence.

ಸಂಹಿತಾಪಾಠಃ

ಪ್ರ ಧಿಷ್ವ ಯಸ್ಯ ವೀರಕರ್ಮನ್ನಿಷ್ಣದನುಷ್ಟಿತಂ ನು ನರ್ಯೋ ಅಪೌಹತ್ ।
ಪುನಸ್ತದಾ ವೃಹತಿ ಯತ್ಕನಾಯಾ ದುಹಿತುರಾ ಅನುಭೃತಮನ್ನರ್ವಾ ॥೫॥

ಪದಪಾಠಃ

ಪ್ರ । ಧಿಷ್ವ । ಯಸ್ಯ । ವೀರಕರ್ಮನ್ । ಇಷ್ಣತ್ । ಅನುಸ್ಥಿತಂ । ನು । ನರ್ಯಃ । ಅಪ । ಔಹತ್ ।
ಪುನರಿತಿ । ತತ್ । ಆ । ವೃಹತಿ । ಯತ್ । ಕನಾಯಾಃ । ದುಹಿತುಃ । ಆಃ । ಅನುಸೃಭೃತಂ । ಅನ್ನರ್ವಾ ॥

ಸಾಯಣಭಾಷ್ಯಂ

ಯಥಾ ಸ್ವಾಂಶೇನ ಭಗವಾನ್ರುದ್ರಃ ಪ್ರಜಾಪತಿರ್ವಾಸ್ತೋಷ್ಪತಿಂ ರುದ್ರಮುಸೃಜತ್ ತದೇತದಾದಿಭಿಸ್ತಿಸೃಭಿರ್ವದತಿ। ಯಸ್ಯ ಪ್ರಜಾಪತೇರಿಷ್ಣದೇಷಣವದ್ವೀರಕರ್ಮಂ॥ ಲಿಂಗವ್ಯತ್ಯಯಃ॥ ವೀರಕರ್ಮ। ರೇತ ಇತ್ಯರ್ಥಃ । ಯೇನ ರೇತಸೋತ್ಪನ್ನಾ ವೀರಾ ಭವಂತಿ ತಾದೃಗ್ರೇತಃ ಪ್ರಥಿಷ್ವ ಪ್ರಥಿತಮಾಸೀತ್ ತದ್ರೇತೋಽನುಷ್ಠಿತಂ ಪ್ರಜಾಪತಿನಾಪತ್ಯಾರ್ಥಂ ನಿಷಿಕ್ತಂ ನರ್ಯೋ ನರೇಭ್ಯೋ ಹಿತೋ ಯದ್ವಾ ನೇತೃಭ್ಯೋ ದೇವೇಭ್ಯೋ ಹಿತೋ ರುದ್ರೋಽಪೌಹತ್। ಅಪೋಹತಿ। ತದೇವಾಹ। ಪುನರ್ವೃದ್ರೇತ ಆ ವೃಹತಿ। ಸರ್ವತ ಉತ್ಪದತಿ ! ಉದ್ಗಮಯತಿ ಪುರುಷಾಕಾರೇಣ ಸ್ವಯಮುತ್ಪನ್ನಃ ಸನ್। ಕೀದೃಶಂ ರೇತಃ । ಯದ್ರೇತಃ ಕನಾಯಾಃ ಕಾಂತಾಯಾ ದುಹಿತುಃ ಸ್ವಪುತ್ರ್ಯಾಃ । ತಸ್ಯಾಮಿತ್ಯರ್ಥಃ । ತತ್ರ ಪ್ರಜಾಪತಿನಾನುಭೃತಮಾಃ ಆಸೀತ್ ॥ ಅಸ್ತೇಃ ಸಿಪಿ— — — ॥ ಕೀದೃಶೋ ರುದ್ರಃ । ಅನರ್ವಾನ್ಯಸ್ಮಿನ್ನಪ್ರತ್ಯೃತಃ । ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧಾಯದ್ದಿವಮಿತ್ಯನ್ಯ ಆಹುರುಷಸಮಿತ್ಯನ್ಯೇ । ಐ. ಬ್ರಾ. ೩-೩೩ । ಇತಿ ಬ್ರಾಹ್ಮಣಂ ॥

ಪ್ರತಿಪದಾರ್ಥ

ಯಸ್ಯ-ಯಾವ ಪ್ರಜಾಪತಿಯ । **ಇಷ್ಣತ್**-ಪ್ರಜೋತ್ಪಾದಕವಾದ। **ವೀರಕರ್ಮಂ**-ರೇತಸ್ಸು । **ಪ್ರಥಿಷ್ವ**-ವೃದ್ಧಿಯಾಗಿ ಪ್ರಸರಿಸುವುದರಲ್ಲಿದ್ದಿತೋ ಅಂತಹ । **ಅನುಷ್ಠಿತಂ**—ಸಂತತಿಗಾಗಿ ಪ್ರಯುಕ್ತವಾದ ರೇತಸ್ಸನ್ನು ।

ನರ್ಯಃ—ಮಾನವರಿಗೆ ಹಿತಕಾರಿಯಾದ ರುದ್ರನು । **ಅಪೌಹತ್**—ತಡೆದು ನಿಲ್ಲಿಸಿದನು । **ಯತ್**—ಯಾವ ರೇತಸ್ಸನ್ನು । **ಕನಾಯಾಃ**—ಕನ್ಯಾರೂಪಿಯಾದ । **ದುಹಿತುಃ**—ತನ್ನ (ಪ್ರಜಾಪತಿಯ) ಪುತ್ರಿಯಲ್ಲಿ । **ಅನರ್ವಾ**-ಅಪ್ರತಿಹತನಾದ ರುದ್ರನು । **ಅನುಭೃತಂ ಅಃ**—ಸ್ಥಾಪಿಸಿದನೋ । **ತತ್ ರೇತಃ**—ಅದೇ ರೇತಸ್ಸನ್ನು । **ಪುನಃ**—ತಿರುಗಿಯೂ । **ಆ ವೃಹತಿ**—ಉತ್ಪನ್ನ ಸಾಧಕವಾಗುವಂತೆ ಮಾಡುತ್ತಾನೆ.

ಭಾವಾರ್ಥ

ಯಾವ ಪ್ರಜಾಪತಿಯ ಪ್ರಜೋತ್ಪಾದಕವಾದ ರೇತಸ್ಸು ವೃದ್ಧಿಯಾಗಿ ಪ್ರಸರಿಸುವುದರಲ್ಲಿದ್ದಿತ್ತೋ ಅಂತಹ ಸಂತತಿಗಾಗಿ ಪ್ರಯುಕ್ತವಾದ ಆ ರೇತಸ್ಸನ್ನು ಮಾನವರಿಗೆ ಹಿತಕಾರಿಯಾದ ರುದ್ರನು ತಡೆದು ನಿಲ್ಲಿಸಿದನು. ಯಾವ ರೇತಸ್ಸನ್ನು ಕನ್ಯಾರೂಪಿಯಾದ ಪ್ರಜಾಪತಿಯ ಪುತ್ರಿಯಲ್ಲಿ ಅಪ್ರತಿಹತನಾದ ರುದ್ರನು ಸ್ಥಾಪಿಸಿದನೋ, ಅದೇ ರೇತಸ್ಸನ್ನು ತಿರುಗಿಯೂ ಉತ್ಪನ್ನ ಸಾಧಕವಾಗುವಂತೆ ಮಾಡುತ್ತಾನೆ.

English Translation

(Rudra), the benefactor of man, whose eager virile energy was developed, drew it back when disseminated (for the generation of offspring); again the irresistible (Rudra) concentrates (the energy) which was communicated to his maiden daughter.

ವಿಶೇಷವಿಷಯಗಳು

ಈ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ಪ್ರಜಾಪತಿಯು ತನ್ನ ಪುತ್ರಿಯಾದ ಉಷಸ್ಸಿನೊಡನೆ ಸಂಗವನ್ನು ಬಯಸಿದನೆಂದೂ ಅದನ್ನು ರುದ್ರನು ತಡೆಗಟ್ಟಿದನೆಂದೂ ಹೇಳಿರುವ ವಿಷಯದಲ್ಲಿ ಐತರೇಯ ಬ್ರಾಹ್ಮಣದಲ್ಲಿ ಒಂದು ಉಪಾಖ್ಯಾನವಿದೆ. ಅದನ್ನು ಇಲ್ಲಿ ವಿವರಿಸಿದೇವೆ—

ಐತರೇಯಬ್ರಾಹ್ಮಣದಲ್ಲಿ (ಐ. ಬ್ರಾ. ೧೩-೩೩, ೩೪) ವಿವರಿಸಿರುವ ಉಪಾಖ್ಯಾನವನ್ನು ಅಲ್ಲಿರುವಂತೆಯೇ ವಿವರಿಸಲಾಗಿದೆ—

ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧ್ಯಾಯದ್ದಿವಮಿತ್ಯನ್ಯ ಆಹುರುಷಸಮಿತ್ಯನ್ಯೇ ತಾಮ್ಯಶ್ಯೋ ಭೂತ್ವಾ ರೋಹಿತಂ ಭೂತಾಮಭ್ಯೈತ್ತಂ ದೇವಾ ಅಪಶ್ಯನ್ನಕೃತಂ ವೈ ಪ್ರಜಾಪತಿಃ ಕರೋತೀತಿ ತೇ ತಮೈಚ್ಛನ್ಯ ಏನಮಾರಿಷ್ಯತ್ಯೇತಮನ್ಯೋನ್ಯಸ್ಮಿನ್ನಾವಿಂದಂಸ್ತೇಷಾಂ ಯಾ ಏವ ಘೋರತಮಾಸ್ತನ್ವ ಆಸಂಸ್ತಾ ಏಕಧಾ ಸಮಭರಂಸ್ತಾಃ ಸಂಭೃತಾ ಏಷ ದೇವೋಽಭವತ್ತದಸ್ಯೈತದ್ಭೂತವನ್ನಾಮ ಭವತಿ ವೈ ಸ ಯೋಽಸ್ಯೈತದೇವಂ ನಾಮ ವೇದ ॥

(ಐ. ಬ್ರಾ. ೧೩-೩೩)

ಪೂರ್ವದಲ್ಲಿ ಒಂದಾನೊಂದು ಸಮಯದಲ್ಲಿ ಪ್ರಜಾಪತಿಯು ತನ್ನ ಸ್ವಂತ ಪುತ್ರಿಯನ್ನು ನೋಡಿ ಪತ್ನಿಯನ್ನು ಮೋಹಿಸುವಂತೆ ಮೋಹಗೊಂಡನು. ಅವಳ ರೂಪವನ್ನೇ ಮನಸ್ಸಿನಲ್ಲಿ ಚಿಂತಿಸುತ್ತಿದ್ದನು. ಆ ಪ್ರಜಾಪತಿಯ ಪುತ್ರಿಯು ಯಾರೆಂಬ ವಿಷಯದಲ್ಲಿ ಮಹರ್ಷಿಗಳಲ್ಲಿಯೇ ಮತಭೇದವಿದೆ. ಕೆಲವರು ದ್ಯುಲೋಕಾಧಿದೇವತೆಯೆಂದೂ ಮತ್ತೆ ಕೆಲವರು ಉಷೋದೇವತೆಯೆಂದೂ ಹೇಳುವರು. ಅದು ಹೇಗಾದರೂ ಇರಲಿ ಆಗ ಪ್ರಜಾಪತಿಯು ಋಶ್ಯವೆಂಬ ಒಂದು

ವಿಧವಾದ ಜಿಂಕೆಯ (ಮೃಗದ) ರೂಪವನ್ನು ಧರಿಸಿದನು. ಅವನ ಪುತ್ರಿಯು ರೋಹಿತವೆಂಬ ಕೆಂಪುಬಣ್ಣದ ಜಿಂಕೆಯ ರೂಪವನ್ನು ಧರಿಸಿದಳು. (ಇಲ್ಲಿ **ರೋಹಿತಂ ಪ್ರಾಪ್ತಾ** ಎಂಬ ಶಬ್ದಗಳಿಗೆ ಋತುಮತಿಯಾದಳು ಎಂದು ಭಾಷ್ಯಕಾರರ ವಿವರಣೆ ಇದೆ.) ರೋಹಿತರೂಪದಲ್ಲಿರುವ ತನ್ನ ಪುತ್ರಿಯನ್ನು ಪ್ರಜಾಪತಿಯು ಸಮೀಪಿಸಿ ಮಿಥುನಕಾರ್ಯಾಸಕ್ತನಾದನು. ಈರೀತಿ ತನ್ನ ಪುತ್ರಿಯಲ್ಲೇ ಅನುರಕ್ತನಾಗಿ ಸಂಭೋಗಿಸಲು ಉದ್ಯುಕ್ತನಾಗಿರುವ ಪ್ರಜಾಪತಿಯನ್ನು ನೋಡಿ ದೇವತೆಗಳು ಪರಸ್ಪರವಾಗಿ ಈರೀತಿ ಮಾತನಾಡಿಕೊಂಡರು—ಈ ಪ್ರಜಾಪತಿಯು ಯಾರೂ ಯಾವಾಗಲೂ ಮಾಡದಿರುವ ನಿಷಿದ್ಧಕರ್ಮಾಚರಣೆಯಲ್ಲಿ ಆಸಕ್ತನಾಗಿರುವನು. ಈ ಕಾರ್ಯವನ್ನು ನಡೆಯದಂತೆ ತಡೆಗಟ್ಟಲು ಸಮರ್ಥನಾದ ಪುರುಷನಾರು ಎಂದು ಎಲ್ಲಾಕಡೆಯಲ್ಲಿಯೂ ಹುಡುಕಿನೋಡಿದರು. ಎಷ್ಟು ಹುಡುಕಿದರೂ ಪ್ರಜಾಪತಿಯನ್ನು ನಿಗ್ರಹಿಸಲು ಶಕ್ತನಾದ ಪುರುಷನು ಸಿಕ್ಕಲಿಲ್ಲ. ನಿನಗೆ ಶಕ್ತಿಯಿದ್ದರೆ ನೀನು ಪ್ರಜಾಪತಿಯನ್ನು ಸಂಹರಿಸು ಎಂದು ದೇವತೆಗಳು ತಮ್ಮತಮ್ಮಲ್ಲಿ ಪ್ರತಿಯೊಬ್ಬನನ್ನೂ ಪ್ರಶ್ನಿಸಿನೋಡಲು ಅವರಲ್ಲಿ ಯಾರಿಗೂ ಆ ಸಾಮರ್ಥ್ಯವಿದ್ದಂತೆ ಕಂಡುಬರಲಿಲ್ಲ. ಆಗ ದೇವತೆಗಳೆಲ್ಲರೂ ಸೇರಿ ತಮ್ಮತಮ್ಮ ಘೋರರೂಪಗಳನ್ನೆಲ್ಲಾ (ದೇವತೆಗಳಿಗೆ ಯಾವ ರೂಪವನ್ನು ಬೇಕಾದರೂ ಧರಿಸಲು ಶಕ್ತಿಯಿರುವುದೆಂದು ಪ್ರಸಿದ್ಧಿಯು. ಆದ್ದರಿಂದ ತಮ್ಮ ಸೌಮ್ಯರೂಪಗಳನ್ನು ಬಿಟ್ಟು ಘೋರವಾದ ಆಕಾರಗಳನ್ನು ಎಂದು ಇಲ್ಲಿ ಹೇಳಿದೆ) ಒಟ್ಟಿಗೆ ಕೇಂದ್ರೀಕರಿಸಿ ಅತ್ಯಂತ ಘೋರಾಕಾರವುಳ್ಳ ಓರ್ವ ಪುರುಷನನ್ನು ಸೃಷ್ಟಿಸಿದರು. ಈ ಪುರುಷನೇ ರುದ್ರನೆಂಬ ಅಭಿಧಾನವನ್ನು ಪಡೆದನು. ಆದ್ದರಿಂದ ರುದ್ರನಿಗೆ ಭೂತವಾನ್ ಭೂತಪತಿ ಎಂಬ ಹೆಸರುಗಳು ಲೋಕದಲ್ಲಿ ಪ್ರಸಿದ್ಧವಾಗಿವೆ. ಆದ್ದರಿಂದ ರುದ್ರನ ಈರೀತಿಯಾದ ಭೂತವದ್ಭಾವವನ್ನು ತಾಳಿದ ಪುರುಷನು ಭೂತಿಮಂತ (ಐಶ್ವರ್ಯವಂತ) ನಾಗುವನು.

ತಂ ದೇವಾ ಅಬ್ರುವನ್ನಯಂ ವೈ ಪ್ರಜಾಪತಿರಕೃತಮಕರಿಷ್ಯದಿತಿ ಸ ತಥೇತ್ಯಬ್ರವೀತ್ಸ ವೈ ವೋ ವರಂ ವೃಣಾ ಇತಿ ವೃಣೇಷ್ವೇತಿ ಸ ಏನಮೇವ ವರಮವೃಣೀತ ಪಶೂನಾಮಾಧಿಪತ್ಯಂ ತದಸ್ಯೈತತ್ಪಶುಮನ್ಯಾಮ ಪಶುಮಾನ್ಭವತಿ ಯೋಽಸ್ಯೈತದೇವಂ ನಾಮ ವೇದ ॥

(ಐ. ಬ್ರಾ. ೧೩-೩೩)

ಅನಂತರ ದೇವತೆಗಳು ಆ ಪುರುಷನನ್ನು (ರುದ್ರನನ್ನು) ಉದ್ದೇಶಿಸಿ—ಎಲೈ ರುದ್ರನೇ, ಪ್ರಜಾಪತಿಯು ನಿಷಿದ್ಧಕಾರ್ಯವನ್ನು ಮಾಡಿಯುವನು. ಆದುದರಿಂದ ಅವನನ್ನು ಶಿಕ್ಷಿಸುವುದಕ್ಕಾಗಿ ನೀನು ಈ ಬಾಣದಿಂದ ಅವನನ್ನು ಪ್ರಹರಿಸು ಎಂದರು. ರುದ್ರನು ಹಾಗೆಯೇ ಆಗಲೆಂದೊಪ್ಪಿದನು. ಆದರೆ ತಾನು ಪಶುಗಳಿಗೆಲ್ಲಾ ಅಧಿಪತಿಯಾಗುವಂತೆ ವರವನ್ನು ಕೇಳಿದನು. ದೇವತೆಗಳು ಅದರಂತೆ ವರವನ್ನು ಕೊಟ್ಟರು. ಆದ್ದರಿಂದ ರುದ್ರನು ಪಶುಪತಿಯೆಂಬ ಹೆಸರಿನಿಂದ ಪ್ರಸಿದ್ಧನಾದನು. ಈ ವಿಷಯವನ್ನು ತಿಳಿದ ಪುರುಷನು ಪಶುಸಂಪತ್ತನ್ನು ಪಡೆಯುವನು.

ತಮಭ್ಯಾಯತ್ಯಾವಿಧ್ಯತ್ಸ ವಿದ್ಧ ಊರ್ಧ್ವ ಉದಪ್ರಪತತ್ತಮೇತಂ ಮೃಗ ಇತ್ಯಾಚಕ್ಷತೇ ಯ ಉ ಏವ ಮೃಗವ್ಯಾಧಃ ಸ ಉ ಏವ ಸ ಯಾ ರೋಹಿತ್ಸಾ ರೋಹಿಣೀ ಯೋ ಏನೇಷುಸ್ತ್ರಿಕಾಂಡಾ ಸೋ ಏನೇಷುಸ್ತ್ರಿಕಾಂಡಾ ॥

ಆನಂತರ ಆ ರುದ್ರನು ಮುಂದೆ ಒಂದು ತನ್ನ ಧನುಸ್ಸಿಗೆ ಹೆದೆಯನ್ನು ಏರಿಸಿ ಬಾಣವನ್ನು ಹೂಡಿ ಅದನ್ನು ಹಿಂದಕ್ಕೆಳೆದು ಪ್ರಜಾಪತಿಗೆ ಗುರಿಯಿಟ್ಟು ಹೊಡೆದನು. ಋಶ್ಯರೂಪದಲ್ಲಿದ್ದ ಪ್ರಜಾಪತಿಗೆ ಆ ಬಾಣವು ತಗುಲಿ ಅವನು ಊರ್ಧ್ವಾಭಿಮುಖವಾಗಿ ಅಂತರಿಕ್ಷಕ್ಕೆ ನೆಗೆದನು. ಅಂತರಿಕ್ಷದಲ್ಲಿ ಊರ್ಧ್ವಾಭಿಮುಖವಾಗಿ ನೆಗೆಯುತ್ತಿರುವ ಪ್ರಜಾಪತಿಯನ್ನು ಜನರೆಲ್ಲರೂ ನೋಡಿ ಅದನ್ನು ಮೃಗವೆಂಬ ನಕ್ಷತ್ರರಾಶಿಯೆಂದು ಕರೆಯುತ್ತಾರೆ (Stars in the Orion)

ಎಂದರೆ, ರೋಹಿಣೀ ಮತ್ತು ಆರ್ದ್ರಾನಕ್ಷತ್ರಗಳ ಮಧ್ಯದಲ್ಲಿರುವ ಮೃಗಶೀರ್ಷನಕ್ಷತ್ರವೆಂದು ಹೇಳುವರು. ಪ್ರಜಾಪತಿಯು ನಕ್ಷತ್ರರೂಪನಾಗಿ ಇರುವನೆಂದಭಿಪ್ರಾಯವು. ಮೃಗರೂಪದಿಂದಿದ್ದ ಪ್ರಜಾಪತಿಯನ್ನು ಬಾಣದಿಂದ ಪ್ರಹರಿಸಿದ ರುದ್ರನು ಮೃಗವ್ಯಾಧನೆಂಬ ಹೆಸರಿನಿಂದ ಆಕಾಶದಲ್ಲಿ ಗೋಚರಿಸುತ್ತಾನೆ. ರೋಹಿತವೆಂಬ ಕೆಂಪು ಜಿಂಕೆಯ ರೂಪದಿಂದಿದ್ದ (ಮೃಗೀ) ಪ್ರಜಾಪತಿಯ ಪುತ್ರಿಯು ಆಕಾಶದಲ್ಲಿ ರೋಹಿಣೀನಕ್ಷತ್ರರೂಪದಿಂದ ಗೋಚರಿಸುತ್ತಾಳೆ. ರುದ್ರನಿಂದ ಪ್ರೇರಿತವಾದ ಬಾಣವು ಕಾಂಡ (ಬಾಣದ ಉದ್ದವಾದ ಕಡ್ಡಿ) ಶಲ್ಯ (ಅಲಗು) ತುದಿ (ಹರಿತವಾದ ಮೊನೆ) ಎಂಬ ಮೂರು ಭಾಗಗಳುಳ್ಳದ್ದಾಯಿತು. ಆದ್ದರಿಂದ ಬಾಣದಲ್ಲಿ ಈಗಲೂ ಮೂರು ಭಾಗಗಳಿರುವುವು.

ತದ್ವಾ ಇದಂ ಪ್ರಜಾಪತೇ ರೇತಃ ಸಿಕ್ತಮಧಾವತ್ತತ್ಸರೋಽಭವತ್ತೇ ದೇವಾ ಅಬ್ರುವನ್ಮೇದಂ ಪ್ರಜಾಪತೇ ರೇತೋ ದುಷದಿತಿ ಯದಬ್ರುವನ್ಮೇದಂ ಪ್ರಜಾಪತೇ ರೇತೋ ದುಷದಿತಿ ತನ್ಮಾದುಷಮಭವತ್ತನ್ಮಾದುಷಸ್ಯ ಮಾದುಷತ್ವಂ ಮಾದುಷಂ ಹ ವೈ ನಾಮೈತದ್ಯನ್ಮಾನುಷಂ ಸನ್ಮಾನುಷಮಿತ್ಯಾಚಕ್ಷತೇ ಪರೋಕ್ಷೇಣ ಪರೋಕ್ಷಪ್ರಿಯಾ ಇವ ಹಿ ದೇವಾಃ ॥

(ಐ. ಬ್ರಾ. ೧೩-೩೩)

ಇನ್ನು ಮೃಗರೂಪದಲ್ಲಿದ್ದ ಪ್ರಜಾಪತಿಯ ರೇತಸ್ಸು (ವೀರ್ಯವು) ಬಹಳವಾಗಿದ್ದುದರಿಂದ ತನ್ನ ಪುತ್ರಿಯಾದ ಮೃಗಿಯಲ್ಲಿ ಸಿಕ್ತವಾಗಿ ಉಳಿದ ಭಾಗವು ಭೂಮಿಯಲ್ಲಿ ಬಿದ್ದು ಪ್ರವಾಹರೂಪದಿಂದ ನದಿಯಂತೆ ಹರಿಯಲುಪಕ್ರಮಿಸಿ ಒಂದು ತಗ್ಗಾದ ಪ್ರದೇಶದಲ್ಲಿ ಸಂಗ್ರಹವಾಗಿ ಮಹಾಸರೋವರವಾಗಿ ಪರಿಣಮಿಸಿತು. ಅದನ್ನು ನೋಡಿ ದೇವತೆಗಳು ಪ್ರಜಾಪತಿಯ ವೀರ್ಯವು **ಅಸ್ಪೃಶ್ಯ** (ಮುಟ್ಟಬಾರದೆಂದು) ವೆಂದೂ **ಮಾದುಷತ್** ಕೆಟ್ಟದ್ದೆಂದೂ ಜನರು ಭಾವಿಸದಂತಾಗಲೀ ಎಂದೂ ಅಪೇಕ್ಷಿಸಿದರು. ದೇವತೆಗಳು ಅದನ್ನು ಮಾದುಷತ್ ಎಂದು ಕರೆದದ್ದರಿಂದ ದೋಷರಹಿತವಾದ ಪ್ರಜಾಪತಿಯ ರೇತೋರೂಪವಾದ ಸರೋವರಕ್ಕೆ ಮಾದುಷತ್ ಎಂದೇ ಹೆಸರಾಯಿತು. ಜನರು ಮಾದುಷ ಎಂಬ ಶಬ್ದದ ದಕಾರ ಸ್ಥಾನದಲ್ಲಿ ನಕಾರವನ್ನು ಸೇರಿಸಿ ಪಠಿಸುವುದರಿಂದ ಬ್ರಾಹ್ಮಣಕ್ಷತ್ರಿಯಾದಿ ಜನರನ್ನು ಮಾನುಷ ಎಂದು ಕರೆಯುತ್ತಾರೆ. ನ್ಯಾಯವಾಗಿ ನೋಡಿದರೆ ಮಾನುಷಶಬ್ದಕ್ಕೆ (ಮಾದುಷ) ದೋಷರಹಿತವಾಗಿರುವುದು ಎಂದೇ ಅರ್ಥವು. ಹೀಗಿರುವಾಗ ಜನರು ತಮ್ಮ ಶರೀರವನ್ನು ಸಾಧಾರಣಾರ್ಥವಿರುವ ಮಾನುಷಶಬ್ದದಿಂದ ವ್ಯವಹರಿಸುವುದಕ್ಕೆ ಬದಲಾಗಿ ಪರೋಕ್ಷಾರ್ಥವಿರುವ (ಎಂದರೆ ಮಾದುಷ ಎಂಬ ಶ್ರೇಷ್ಠಾರ್ಥವಿರುವ) ಶಬ್ದದಿಂದಲೇ ವ್ಯವಹರಿಸುತ್ತಾರೆ. ಆದ್ದರಿಂದ ದೇವತೆಗಳಂತೆ ಯೋಗ್ಯರೂ ಪೂಜ್ಯರೂ ಆದ ಪುರುಷರು ಲೋಕವ್ಯವಹಾರದಲ್ಲಿ ಪರೋಕ್ಷಪ್ರಿಯರಾಗಿಯೇ (ಪ್ರತ್ಯಕ್ಷವಾಗಿ ತೋರುವ ಅರ್ಥವಿಲ್ಲದೆ ಗೂಢಾರ್ಥವಿರುವ ಶಬ್ದಗಳಿಂದಲೇ ತೃಪ್ತರಾಗಿ) ಇರುತ್ತಾರೆ. ಹೇಗೆಂದರೆ ತಮಗೆ ಮಾತಾಪಿತೃಗಳು ಇಟ್ಟ ದೇವದತ್ತ ಮೊದಲಾದ ಸಾಮಾನ್ಯ ನಾಮಗಳಿಂದ ತಮ್ಮ ಯಶಸ್ಸನ್ನು ಪ್ರಕಾಶಗೊಳಿಸುವ ಉಪಾಧ್ಯಾಯ, ಆಚಾರ್ಯ, ಸ್ವಾಮಿ ಎಂದು ಮೊದಲಾದ ಅನ್ವರ್ಥನಾಮಗಳಿಂದಲೇ ತೃಪ್ತಿಪಡುತ್ತಾರೆ. ದೇವತೆಗಳೂ ಪ್ರತ್ಯಕ್ಷವಾಗಿ ಗೋಚರಿಸದೆ ಪರೋಕ್ಷದಲ್ಲಿದ್ದುಕೊಂಡೇ ಸ್ತುತ್ಯಾದಿಗಳನ್ನು ಸ್ವೀಕರಿಸುತ್ತಾರೆ. ಆದ್ದರಿಂದ ದೇವತೆಗಳು ಪರೋಕ್ಷಪ್ರಿಯರು ಎಂದು ಹೇಳುವರು. ಆದ್ದರಿಂದ ಪರೋಕ್ಷತ್ವವನ್ನು ಪ್ರದರ್ಶಿಸುವುದಕ್ಕಾಗಿ **ಮಾದುಷ**ಶಬ್ದದಲ್ಲಿ **ದ**ಕಾರಕ್ಕೆ ಬದಲಾಗಿ **ನ**ಕಾರವನ್ನು ಸೇರಿಸಿ **ಮಾನುಷ** ಎಂದು ಉಪಯೋಗಿಸುವರು.

ತದಗ್ನಿನಾ ಪರ್ಯಾದಧುಸ್ತನ್ಮರುತೋಽಧೂನ್ವಂಸ್ತದಗ್ನಿರ್ನ ಪ್ರಾಚ್ಯಾವಯತ್ತದಗ್ನಿನಾ ವೈಶ್ವಾನರೇಣ ಪರ್ಯಾದಧುಸ್ತನ್ಮರುತೋಽಧೂನ್ವಂಸ್ತದಗ್ನಿರ್ವೈಶ್ವಾನರಃ ಪ್ರಾಚ್ಯಾವಯತ್ತಸ್ಯ ಯದ್ರೇತಸಃ ಪ್ರಥಮಮುದದೀಪ್ಯತ ತದಸಾವಾದಿತ್ಯೋಽಭವದ್ಯದ್ದ್ವಿತೀಯಮಸೀತ್ತದ್ಧೃ-

ಗುರಭವತ್ತಂ ವರುಣೋ ನ್ಯಗೃಹ್ಣೀತ ತಸ್ಮಾತ್ಸ ಭೃಗುರ್ವಾರುಣೀರಥ ಯತ್ತೃತೀಯಮುದೀ-ದೇವಿವ ತ ಆದಿತ್ಯಾ ಅಭವನ್ಯೋಽಜ್ಞಾರಾ ಅಸಂಸ್ತೋಽಜ್ಞಾರಸೋಽಭವನ್ಯದಂಗಾರಾಃ ಪುನ-ರವಶಾಂತಾ ಉದದೀಪ್ಯಂತ ತದ್ಬೃಹಸ್ಪತಿರಭವತ್ ॥

(ಐ. ಬ್ರಾ. ೧೩-೩೪)

ಅನಂತರ ದೇವತೆಗಳು ಪ್ರಜಾಪತಿಯ ಸಂಬಂಧನಾದ ರೇತಸ್ಸನ್ನು ದೋಷರಹಿತವನ್ನಾಗಿ ಮಾಡಿದನೇಲೆ ಸರೋವರದ ರೂಪಿನಲ್ಲಿ ದ್ರವರೂಪದಿಂದಿರುವ ಆ ರೇತಸ್ಸನ್ನು ದ್ರವರಹಿತವನ್ನಾಗಿ ಮಾಡಬೇಕೆಂದು ಯೋಚಿಸಿ ಆ ಸರೋವರದ ಸುತ್ತಲೂ ಅಗ್ನಿಯನ್ನು ಹೊತ್ತಿಸಿ ಉಂಸತೊಡಗಿದರು. ಸರೋವರದ ಸುತ್ತಲೂ ಅಗ್ನಿಯು ಪ್ರಜ್ವಲಿತವಾಗಿ ಉರಿಯುತ್ತಿರುವಾಗ ವಾಯುವು ರೇತಸ್ಸಿನಲ್ಲಿ ಸೇರಿರುವ ದ್ರವವನ್ನು ಒಣಗಿಸುವುದಕ್ಕಾಗಿ ರೇತಸ್ಸನ್ನು ಅಲ್ಲೋಲಕಲ್ಲೋಲವನ್ನಾಗಿ ಮಾಡಿತು. ಆದರೂ ಸಹ ಅಗ್ನಿಯು ತನ್ನ ಶಾಖದಿಂದ ರೇತಸ್ಸಿನಲ್ಲಿ ದ್ರವಭಾಗವು ವಿಶೇಷವಾಗಿದ್ದುದರಿಂದ ಅದನ್ನು ಪರಿಹರಿಸಿ ಅದನ್ನು ಪಿಂಡಾಕಾರಕ್ಕೆ (ಘನದ್ರವ್ಯ, ಘಟ್ಟಿಯಾದ ಪದಾರ್ಥ) ಪರಿವರ್ತಿಸಲು ಅಗ್ನಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ದೇವತೆಗಳು ಅಗ್ನಿಯಿಂದ ಸಾಧ್ಯವಾಗದ **ಈ** ಕಾರ್ಯವನ್ನು ವೈಶ್ವಾನರನಾಮಕವಾದ ಅಗ್ನಿಯ ರೂಪವಿಶೇಷದಿಂದ ಸಾಧಿಸಲು ಪ್ರಯತ್ನಮಾಡಿದನು. **ಈ** ವೈಶ್ವಾನರಾಗ್ನಿಯು ಸಮಸ್ತ ಪ್ರಾಣಿಗಳ ಉದರಗಳಲ್ಲಿ ಜಾಠರಾಗ್ನಿರೂಪದಿಂದ ಪ್ರವೇಶಮಾಡಿ ಅನ್ನಾಪಾನಾದಿಗಳ ಪಚನಕಾರ್ಯದಲ್ಲಿ ತೊಡಗಿರುವನು.

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ॥

ನಾನೇ ವೈಶ್ವಾನರಾಗ್ನಿರೂಪದಿಂದ ಪ್ರಾಣಿಗಳ ದೇಹದಲ್ಲಿದ್ದುಕೊಂಡು ಪ್ರಾಣ ಅಪಾನಗಳೆಂಬ ಪ್ರಾಣವಾಯುಗಳ ಸಹಾಯದಿಂದ ಪ್ರಾಣಿಗಳು ತಿನ್ನುವ ನಾಲ್ಕುವಿಧವಾದ ಅನ್ನಾದ್ಯಾಹಾರಗಳನ್ನು ಪಚನಮಾಡುತ್ತೇನೆ ಎಂದು ಭಗವಂತನೇ ಹೇಳಿದ್ದಾನೆ. ಆದ್ದರಿಂದ ದೇವತೆಗಳು ವೈಶ್ವಾನರಾಗ್ನಿಯ ಸಾಮರ್ಥ್ಯವು ವಿಶೇಷವಾಗಿರುವುದೆಂದು ತಿಳಿದು ಆ ಪ್ರಜಾಪತಿಯ ರೇತಸ್ಸನ್ನು ಶೋಷಿಸಲು (ಒಣಗಿಸಲು) ವೈಶ್ವಾನರಾಗ್ನಿಯನ್ನು ಸರೋವರದ ಸುತ್ತಲೂ ಸ್ಥಾಪಿಸಿದರು. ವಾಯುವೂ ಪೂರ್ವದಂತೆ ಸರೋವರವನ್ನು ಪ್ರವೇಶಿಸಿ ಅದನ್ನು ಅಲ್ಲೋಲಕಲ್ಲೋಲವನ್ನಾಗಿ ಮಾಡಿ ಶೋಷಿಸಲು ಪ್ರಾರಂಭಿಸಿತು. ಹೀಗೆ ವಾಯುಸಹಾಯದಿಂದ ವೈಶ್ವಾನರಾಗ್ನಿಯು ಪ್ರಜಾಪತಿಯ ರೇತಸ್ಸನ್ನು ದ್ರವೀಭಾವದಿಂದ ಬೇರ್ಪಡಿಸಿ ಪಿಂಡಾಕಾರವಾದ ಘನಪದಾರ್ಥವನ್ನಾಗಿ ಪರಿವರ್ತಿಸಿದನು. **ಈ**ರೀತಿ ರೇತಸ್ಸು ಅನೇಕ ಪಿಂಡಗಳಾಗಿ (ಗೋಳಾಕಾರವಾಗಿ) ಪರಿವರ್ತಿಸಲ್ಪಟ್ಟು ಜ್ವಾಜಲ್ಯಮಾನವಾಗಿ ಪ್ರಕಾಶಿಸತೊಡಗಿತು. ಇವುಗಳಲ್ಲಿ ಮೊದಲನೇ ಪಿಂಡರೂಪವಾದ ತೇಜೋರಾಶಿಯೇ ಸ್ವರ್ಗದಲ್ಲಿ (ಆಕಾಶದಲ್ಲಿ) ಕಾಣುವ ಆದಿತ್ಯನಾಯಿತು. ಎರಡನೆಯ ಪಿಂಡವು ಭೃಗುಋಷಿಯಾಯಿತು. **ಈ** ಭೃಗುವನ್ನು ವರುಣನು ತನ್ನ ಪುತ್ರನನ್ನಾಗಿ ಸ್ವೀಕರಿಸಿದನು. ಆದ್ದರಿಂದ ಭೃಗುಋಷಿಗೆ **ಭೃಗುರ್ವಾರುಣಿಃ** ವರುಣಪುತ್ರನಾದ ಭೃಗುಋಷಿ ಎಂದು ಹೆಸರಾಯಿಶು. ವರುಣನ ಮಗನಾದ್ದರಿಂದ ವಾರುಣಿಯೆಂದೂ ಹೇಳುವರು. ಇವನ್ನೇ ಗಮನದಲ್ಲಿಟ್ಟುಕೊಂಡು ತೈತ್ತಿರೀಯಶಾಖಾಧ್ಯಾಯಿಗಳು—**ಭೃಗುರ್ವೈ ವಾರುಣಿಃ । ವರುಣಂ ಪಿತರಮುಪಸಸಾರ ॥** (ತೈ. ಉ. ೩-೧) ಎಂದು ಪಠಿಸುವರು. ಅನಂತರ ಮೂರನೆಯ ಪಿಂಡವು ಅತಿಯಾಗಿ ಪ್ರಕಾಶಿಸುತ್ತಿದ್ದು, ಅದಿತಿಪುತ್ರರಾಗಿ ಆದಿತ್ಯರು ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆದಿತ್ಯ ಎಂದರೆ ಮಂಡಲವರ್ತಿಯಾದ ಸೂರ್ಯನು. ಇಲ್ಲಿ **ಆದಿತ್ಯಾಃ** ಎಂಬ ಶಬ್ದದಿಂದ ಅದಿತಿಪುತ್ರರಾದ ಇತರ ದೇವತೆಗಳು ಸೂಚಿತವಾಗಿರುವರು ಎಂದು ತಿಳಿಯಬೇಕು. ಅನಂತರ ಮತ್ತೆ ಕೆಲವು ಪಿಂಡಗಳು ಚೆನ್ನಾಗಿ ದಗ್ಧವಾಗಿ (ಉರಿದು) ಕೆಂಡಗಳಾದುವು.

ಆ ಕೆಂಡಗಳಿಂದ ಅಂಗಿರ ಎಂಬ ಋಷಿಗಳು ಉತ್ಪನ್ನರಾದರು ಮತ್ತು ಇನ್ನೂ ಉರಿಯುತ್ತಲೇ ಇದ್ದು ಆರಿಹೋಗದಿದ್ದ ಎಂದರೆ ಮತ್ತೆಮತ್ತೆ ಪ್ರಕಾಶಮಾನವಾಗಿ ಉರಿಯತೊಡಗಿದ್ದ ಕೆಂಡಗಳಿಂದ ಬೃಹಸ್ಪತಿಯು ಉತ್ಪನ್ನನಾದನು.

ಯಾನಿ ಪರೀಕ್ಷ್ಣಾಣ್ಯಾಸಂಸ್ತೇ ಕೃಷ್ಣಾಃ ಪಶವೋಽಭವನ್ಯಾ ಲೋಹಿನೀ ಮೃತ್ತಿಕಾ ತೇ ರೋಹಿತಾ ಅಥ ಯದ್ಭಸ್ಮಾಸೀತ್ತತ್ಪರುಷ್ಯಂ ವ್ಯಸರ್ಪದ್ಗೌರೋ ಗವಯ ಋಶ್ಯ ಉಷ್ಟ್ರೋ ಗರ್ದಭ ಇತಿ ಯೇ ಚೈತೇರುಣಾಃ ಪಶವಸ್ತೇ ಚ।

(ಐ. ಬ್ರಾ. ೧೩-೩೪)

ಅನಂತರ ಕೆಂಡಗಳು ಆರಿಹೋಗಿ ಅಂಗಾರ (ಇಜ್ಜಲು) ಗಳಾದಮೇಲೆ ಅವುಗಳು ಕಪ್ಪುಬಣ್ಣದ ಪಶುಗಳಾದವು. ಅಗ್ನಿಯು ಉರಿದಮೇಲೆ ತಳದಲ್ಲಿ ಇದ್ದ ಕೆಂಪಾದ ಮೃತ್ತಿಕೆಯ (ಮಣ್ಣು) ಕೆಂಪುಬಣ್ಣದ ಪಶುಗಳಾದವು. ಬೂದಿಯಿಂದ (ಭಸ್ಮ) ಪರುಷ್ಯಪಶುಗಳು ಎಂದರೆ, ಗೌರ, ಗವಯ, ಋಶ್ಯ ಎಂಬ ಅರಣ್ಯಮೃಗಗಳು ಒಂಟೆ, ಕತ್ತೆ ಇವುಗಳೂ ಉತ್ಪನ್ನವಾದವು ಇತ್ಯಾದಿ. ಈ ಉಪಾಖ್ಯಾನದಿಂದ ಅಂಗಿರಾಋಷಿಗಳ ಉತ್ಪತ್ತಿವಿಚಾರವೂ, ಅಂಗಿರಾಋಷಿಗಳಿಗೂ ಅಗ್ನಿಗೂ ಇರುವ ಸಂಬಂಧವೂ, ಅಗ್ನಿಗೆ ಅಂಗಿರ ಎಂದು ಹೆಸರು ಬರಲು ಕಾರಣವೂ ಸಹ ವಿವೃತವಾಗಿರುವುದು.

ಸಂಹಿತಾಪಾಠಃ

ಮಧ್ಯಾ ಯತ್ಕರ್ತ್ವಮಭವದಭೀಕೇ ಕಾಮಂ ಕೃಣ್ವಾನೇ ಪಿತರಿ ಯುವತ್ಯಾಂ।
ಮನಾನಗ್ರೇತೋ ಜಹತುರ್ವಿಯಂತಾ ಸಾನೌ ನಿಷಿಕ್ತಂ ಸುಕೃತಸ್ಯ ಯೋನೌ ॥ ೬ ॥

ಪದಪಾಠಃ

ಮಧ್ಯಾ । ಯತ್ । ಕರ್ತ್ವಂ । ಅಭವತ್ । ಅಭೀಕೇ । ಕಾಮಂ । ಕೃಣ್ವಾನೇ । ಪಿತರಿ । ಯುವತ್ಯಾಂ ।
ಮನಾನಕ್ । ರೇತಃ । ಜಹತುಃ । ವಿಽಯಂತಾ । ಸಾನೌ । ನಿಽಸಿಕ್ತಂ । ಸುಽಕೃತಸ್ಯ । ಯೋನೌ ॥ ೬ ॥

ಸಾಯಣಭಾಷ್ಯಂ

ಕಾಮಂ ಯಥೇಚ್ಛಂ ಕೃಣ್ವಾನೇ ಕುರ್ವಾಣೇ ಪಿತರಿ ಪ್ರಜಾಪತೌ ಯುವತ್ಯಾಂ ದುಹಿತರ್ಯುಷಸಿ ದಿವಿ ವಾ । ದಿವಮಿತ್ಯನ್ಯ ಇತಿ ಹಿ ಬ್ರಾಹ್ಮಣಂ ಪ್ರದರ್ಶಿತಂ । ಮಧ್ಯಾ ತಯೋರ್ಮಧ್ಯೇಽಂತರಿಕ್ಷಮಧ್ಯೇ ವಾಭೀಕೇ ಸಮೀಪೇ ಯತ್ಕರ್ತ್ವಂ ಕರ್ಮಾಭವತ್ ಮಿಥುನೀಭಾವಾಖ್ಯಂ ತದಾನೀಂ ಮನಾನಗ್ನಲ್ಪಂ ರೇತೋ ಜಹತುಃ । ತ್ಯಕ್ತವಂತೌ । ಕಿಂ ಕುರ್ವಾಣಾವಿತಿ ತತ್ರಾಹ । ವಿಯಂತಾ ಪರಸ್ಪರಮಭಿಗಚ್ಛಂತೌ । ಪ್ರಜಾಪತಿನಾ ಸಾನೌ ಸಮುಚ್ಛ್ರಿತೇ ಸ್ಥಾನೇ ಸುಕೃತಸ್ಯ ಯಜ್ಞಸ್ಯ ಯೋನೌ ನಿಷಿಕ್ತಮಾಸೀದಿತ್ಯರ್ಥಃ । ತತೋ ರುದ್ರ ಉತ್ಪನ್ನ ಇತ್ಯರ್ಥಃ ॥

ಪ್ರತಿಪದಾರ್ಥ

ಕಾಮಂ—ಸ್ವತಂತ್ರವಾಗಿ । **ಕೃಣ್ವಾನೇ**—ವ್ಯವಹರಿಸುತ್ತಿದ್ದ । **ಪಿತರಿ**—ತಂದೆಯಾದ ಪ್ರಜಾಪತಿಯೂ। **ಯುವತ್ಯಾಂ**—ಮಗಳಾದ ಉಷಸ್ಸು । **ಮಧ್ಯಾ**—ಅಂತರಿಕ್ಷದ ಮಧ್ಯಭಾಗದಲ್ಲಿ । **ಅಭೀಕೆ**—ಸಮೀಪವಾಗಿ ।

ಯತ್—ಯಾವಾಗ । **ಕರ್ತ್ವಂ**—ಒಟ್ಟಿಗೆ ಸೇರುವ ಕರ್ಮವನ್ನು । **ಅಭವತ್**—ನೆರವೇರಿಸಿದರೋ ಆಗ । **ವಿಯಂತಾ**—ಒಟ್ಟಿಗೆ ಸೇರಿದ ಅವರು । **ಮನಾನಕ್**—ಕೊಂಚಮಟ್ಟಿಗೆ । **ರೇತಃ**—ರೇತಸ್ಸನ್ನು । **ಜಹಶುಃ**—ಸಡಿಲಿಸಿ ಬಿಟ್ಟರು । (ಆ ರೇತಸ್ಸು) **ಸಾನೌ**—ಉನ್ನತಪ್ರದೇಶದಲ್ಲಿರುವ । **ಸುಕೃತಸ್ಯ**—ಯಜ್ಞದ । **ಯೋನೌ**—ಮಧ್ಯಭಾಗದಲ್ಲಿ । **ನಿಷಿಕ್ತಂ**—ಸುರಿಯಲ್ಪಟ್ಟಿತು.

ಭಾವಾರ್ಥ

ಸ್ವತಂತ್ರವಾಗಿ ವ್ಯವಹರಿಸುತ್ತಿದ್ದ ತಂದೆಯಾದ ಪ್ರಜಾಪತಿಯೂ, ಮಗಳಾದ ಉಷಸ್ಸೂ, ಅಂತರಿಕ್ಷದ ಮಧ್ಯ ಭಾಗದಲ್ಲಿ ಯಾವಾಗ ಒಟ್ಟಿಗೆ ಸೇರಿದರೋ ಆಗ ಕೊಂಚಭಾಗ ರೇತಸ್ಸನ್ನು ಸಡಿಲಿಸಿಬಿಟ್ಟರು. ಆ ರೇತಸ್ಸು ಉನ್ನತ ಪ್ರದೇಶವಲ್ಲಿರುವ ಯಜ್ಞದ ಮಧ್ಯಭಾಗದಲ್ಲಿ ಸುರಿಯಲ್ಪಟ್ಟಿತು.

English Translation

When the deed was done in mid-heaven in the proximity of the father working his will, and the daughter coming together, they let the seed fall slightly ; it was poured upon the high place of sacrifice.

ಸಂಹಿತಾಪಾಠಃ

ಪಿತಾ ಯತ್ಸ್ವಾಂ ದುಹಿತರಮಧಿಷ್ಕನ್ಕ್ಷ್ಮಯಾ ರೇತಃ ಸಂಜಗ್ಮಾನೋ ನಿ ಷಿಂಚತ್ ।
ಸ್ವಾಧ್ಯೋಽಜನಯನ್ಬ್ರಹ್ಮ ದೇವಾ ವಾಸ್ತೋಷ್ಪತಿಂ ವ್ರತಪಾಂ ನಿರತಕ್ಷನ್ ॥

ಪದಪಾಠಃ

ಪಿತಾ । ಯತ್ । ಸ್ವಾಂ । ದುಹಿತರಂ । ಅಧಿಷ್ಕನ್ । ಕ್ಷ್ಮಯಾ । ರೇತಃ । ಸಂಜಗ್ಮಾನಃ । ನಿ । ಸಿಂಚತ್ ।
ಸುಽಆಧ್ಯಃ । ಅಜನಯನ್ । ಬ್ರಹ್ಮ । ದೇವಾಃ । ವಾಸ್ತೋಃ । ಪತಿಂ । ವ್ರತಽಪಾಂ । ನಿಃ । ಅತಕ್ಷನ್ ॥

ಸಾಯಣಭಾಷ್ಯಂ

ಪಿತಾ ಪ್ರಜಾಪತಿರ್ಯದ್ಯದಾ ಸ್ವಾಂ ದುಹಿತರಂ ದಿವಮುಷಸಂ ವಾಧಿಷ್ಕನ್ ಅಧ್ಯಸ್ಕಂದತ್ ತದಾನೀಮೇವ ಕ್ಷ್ಮಯಾ ಪೃಥಿವ್ಯಾ ಸಹ ಸಂಜಗ್ಮಾನಃ ಸಂಗಚ್ಛಮಾನಃ ಪ್ರಜಾಪತಿರಸ್ಮಿಲ್ಲೋಕೇ ರೋಹಿತೋ ಭೂತ್ವಾ ರೇತೋ ನಿ ಷಿಂಚತ್ । ನಿಷೇಕಮಕರೋತ್ । ತಾಮೃಶ್ಯೋ ಭೂತ್ವಾ ರೋಹಿತಂ ಭೂತಾಮಭ್ಯೈದಿತಿ ಬ್ರಾಹ್ಮಣಂ । ಐ. ಬ್ರಾ. ೩-೩೩ । ತದಾನೀಂ ಸ್ವಾಧ್ಯಃ ಸುಧ್ಯಾನಾಃ ಸುಕರ್ಮಾಣೋ ವಾ ದೇವಾ ಬ್ರಹ್ಮಾಜನಯನ್ । ಉದಪಾದಯನ್ । ಕಿಂ ತದ್ಬ್ರಹ್ಮೇತಿ ತದಾಹ । ವಾಸ್ತೋಷ್ಪತಿಂ

ಯಜ್ಞವಾಸ್ತುಸ್ವಾಮಿನಂ ವ್ರತಪಾಂ ವ್ರತಸ್ಯ ಕರ್ಮಣೋ ರಕ್ಷಃಪ್ರಭೃತಿಭ್ಯಃ ಪಾಲಕಂ ನಿರತಕ್ಷನ್ । ಸಮುದಪಾದಯನ್ । ಯಜ್ಞವಾಸ್ತುಸ್ವಾಮಿತ್ವಂ ದತ್ತ್ವಾ ಕರ್ಮರಕ್ಷಕತ್ವೇನ ನಿರ್ಮಿತವಂತ ಇತ್ಯರ್ಥಃ ॥

ಪ್ರತಿಪದಾರ್ಥ

ಪಿತಾ—ತಂದೆಯಾದ ಪ್ರಜಾಪತಿಯು। **ಯತ್**—ಯಾವಾಗ । **ಸ್ವಾಂ ದುಹಿತರಂ**—ತನ್ನ ಪುತ್ರಿಯಾದ ಉಷಸ್ಸಿನೊಡನೆ । **ಅಧಿಷ್ಕನ್**—ಸೇರಿ ಸಂಗವನ್ನು ಹೊಂದಿದನೋ ಆಗ । **ಕ್ಷ್ಮಯಾ**—ಪೃಥ್ವಿಯೊಡನೆ । **ಸಂಜಗ್ಮಾನಃ**-ಒಂದಿಗೆ ಸೇರಿ । (ಈ ಲೋಕದಲ್ಲಿ) **ರೇತಃ**—ರೇತಸ್ಸನ್ನು । **ನಿ ಷಿಂಚತ್**—ಸುರಿಸಿದನು । (ಆಗ) **ಸ್ವಾಧ್ಯಃ**-ಉತ್ತಮವಾದ ಕರ್ಮಕರ್ತರಾದ । **ದೇವಾಃ**—ದೇವತೆಗಳು । **ಬ್ರಹ್ಮ**—ಬ್ರಹ್ಮನನ್ನು । **ಅಜನಯನ್**—ಉತ್ಪನ್ನಮಾಡಿದರು । **ವಾಸ್ತೋಷ್ಪತಿಂ**—ಯಜ್ಞಕ್ಕೆ ಪ್ರಭುವೂ । **ವ್ರತಪಾಂ**—ಕರ್ಮಪಾಲಕನೂ ಆದ ಬ್ರಹ್ಮನನ್ನು । (ವಾಸ್ತೋಷ್ಪತ್ತಿಯನ್ನು) **ನಿರತಕ್ಷನ್**—ಉತ್ಪನ್ನ ಮಾಡಿದರು.

ಭಾವಾರ್ಥ

ತಂದೆಯಾದ ಪ್ರಜಾಪತಿಯು ಯಾವಾಗ ತನ್ನ ಪುತ್ರಿಯಾದ ಉಷಸ್ಸಿನೊಡನೆ ಸೇರಿ ಸಂಗವನ್ನು ಮಾಡಿದನೋ ಆಗ ಪೃಥ್ವಿಯೊಡನೆ ಒಂದಾಗ ಸೇರಿ ಈ ಲೋಕದಲ್ಲಿ ರೇತಸ್ಸನ್ನು ಸುರಿಸಿದನು. ಆಗ ಉತ್ತಮವಾದ ಕರ್ಮಕರ್ತರಾದ ದೇವತೆಗಳು ಬ್ರಹ್ಮನನ್ನು ಉತ್ಪನ್ನಮಾಡಿದರು. ಯಜ್ಞಕ್ಕೆ ಪ್ರಭುವೂ, ಕರ್ಮಪಾಲಕನೂ ಆದ ಬ್ರಹ್ಮನನ್ನು (ವಾಸ್ತೋಷ್ಪತ್ತಿಯನ್ನು) ಉತ್ಪನ್ನಮಾಡಿದರು.

English Translation

When the father united with the daughter, then associating with the earth, he sprinkled it with the effusion : then the thoughtful gods begot Brahma : they fabricated the lord of the hearth (of sacrifice); the defender of sacred rites.

ಸಂಹಿತಾಪಾಠಃ

ಸ ಈಂ ವೃಷಾ ನ ಫೇನಮುಸ್ರದಾಜೌ ಸ್ಮದಾ ಪರ್ಶೈದಪ ದಭ್ರಚೇತಾಃ ।
ಸರತ್ಪದಾ ನ ದಕ್ಷಿಣಾ ಪರಾವೃಜ್ಞ ತಾ ನು ಮೇ ಪೃಶನ್ಯೋ ಜಗೃಭ್ರೇ ॥೮॥

ಪದಪಾಠಃ

ಸಃ । ಈಂ । ವೃಷಾ । ನ । ಫೇನಂ । ಉಸ್ರತ್ । ಆಜೌ । ಸ್ಮತ್ । ಆ । ಪರಾ । ಇತ್ । ಅಪ । ದಭ್ರಚೇತಾಃ ।
ಸರತ್ । ಪದಾ । ನ । ದಕ್ಷಿಣಾ । ಪರಾವೃಕ್ । ನ । ತಾಃ । ನು । ಮೇ । ಪೃಶನ್ಯಃ । ಜಗೃಭ್ರೇ ॥ ೮ ॥

ಸಾಯಣಭಾಷ್ಯಂ

ಅಂಗಿರಸಾಂ ಸತ್ರಾಂತೇ ನಾಭಾನೇದಿಷ್ಠೋ ಗಾ ನಿರೋಧಯಂತಂ ವಾಸ್ತೋಷ್ಪತಿಂ ಪುರತಃ ಪಶ್ಯನ್ನದತಿ । ಸ ಈಂ । ಸೋಽಯಂ ವೃಷಾ ನ ವರ್ಷಕ ಇಂದ್ರ ಇವ ಸ ಯಥಾ ನಮುಚೇರ್ವಧಾರ್ಥಮಾಜೌ ಸಂಗ್ರಾಮೇ ಫೇನಮಸ್ಯತ್ ಕ್ಷಿಪ್ತವಾನ್ ತದ್ವತ್ಕೃತ್ವೇಪನುನಾ ವಾಸ್ತೋಷ್ಪತಿರಿದಾನೀಂ ತಮೈವ ವಾಸ್ತುಭಾಗೋ ಯುಕ್ತ ಇತಿ ಯಥಾರ್ಥಕಥನಾನಂತರಂ ಸ್ಮದಸ್ಮತ್ತ ಆಪ ಪರೈತ್ । ಆಪಪರಾಗಚ್ಛತಿ । ದಭ್ರಚೇತಾ ಅಲ್ಪಮನಸ್ಕೋ ಯಃ ಕಶ್ಚಿದ್ದಕ್ಷಿಣಾ ದಕ್ಷಿಣಾರ್ಥಾನಾಂ ಗವಾಂ ಪರಾವೃಕ್ ಪರಾವರ್ಜಯಿತಾ ಸನ್ ಪದಾ ಪದಾನಿ ನ ಸರತ್ । ನ ಸರತಿ। ಅಸ್ಮದಭಿಮುಖಮಾಗಚ್ಛತಿ । ಮೇ ಮಮ ಸಂಬಂಧಿನ್ಯಸ್ತಾ ಗಾ ಅಂಗಿರೋಭಿರ್ದತ್ತಾಃ ಪೃಶನ್ಯಃ ಪಥಿಕಾನಾಮಭಿಸ್ಪರ್ಶನಕುಶಲೋ ರುದ್ರೋ ನ ಜಗೃಭ್ರೇ । ನ ಗೃಹ್ಣಾತೀತ್ಯೇವಮಾಶಾಸ್ತೇ ॥

ಪ್ರತಿಪದಾರ್ಥ

ಸ ಈಂ—ಅದೇ ವಾಸ್ತೋಷ್ಪತ್ತಿಯು । **ವೃಷಾ ನ**—ವೃಷ್ಟಿಕಾರಕನಾದ ಇಂದ್ರನಂತೆ । **ಆಜೌ**—ಯುದ್ಧದಲ್ಲಿ । **ಫೇನಂ**—ನೊರೆಯನ್ನು । **ಅಸ್ಯತ್**—ಸುತ್ತಲೂ ಸುರಿಸಿ ಹರಡಿದನು । **ಸ್ಮತ್**—ನಮ್ಮಿಂದ । **ಆ ಅಪ ಪರೈತ್**—ದೂರ ಸರಿದು ಬಂದನು । **ದಭ್ರಚೇತಾಃ**—ಅಲ್ಪಮನಸ್ಸುಳ್ಳವನು । **ದಕ್ಷಿಣಾ**—ದಕ್ಷಿಣಾರ್ಥವಾದ ಗೋವುಗಳನ್ನು । **ಪರಾವೃಕ್**—ಬಿಟ್ಟುಬಿಟ್ಟು । **ಪದಾ**—ಒಂದು ಹೆಜ್ಜೆಯನ್ನೂ । **ನ ಸರತ್**—ಮುಂದಿಡುವುದಿಲ್ಲ । (ಆದರೆ) **ಪೃಶನ್ಯಃ**—ಸುಲಿಗೆಮಾಡುವುದರಲ್ಲಿ ಚತುರನಾದ ರುದ್ರನು । **ಮೇ**—ನನಗೆ ಸೇರಿದ। **ತಾಃ**—ಅದೇ ಗೋವುಗಳನ್ನು । **ನ ಜಗೃಭ್ರೇ**—ಕಸಿದುಕೊಳ್ಳಲಿಲ್ಲ,

ಭಾವಾರ್ಥ

ವಾಸ್ತೋಷ್ಪತ್ತಿಯು ವೃಷ್ಟಿಕಾರಕನಾದ ಇಂದ್ರನಂತೆ ಯುದ್ಧದಲ್ಲಿ ನೊರೆಯನ್ನು ಸುತ್ತಲೂ ಸುರಿಸಿ ಹರಡಿದನು. ನಮ್ಮಿಂದ ದೂರ ಸರಿದನು. ಅಲ್ಪಮನಸ್ಸುಳ್ಳ ಇತರರಾರಾದರೂ ಆಗಿದ್ದರೆ ದಕ್ಷಿಣಾರ್ಥವಾದ ಗೋವುಗಳನ್ನು ಬಿಟ್ಟು ಬಿಟ್ಟು ಒಂದು ಹೆಜ್ಜೆಯನ್ನೂ ಮುಂದಿಡುವುದಿಲ್ಲ. ಆದರೆ, ಸುಲಿಗೆಮಾಡುವುದರಲ್ಲಿ ಚತುರನಾದ ರುದ್ರನು ನನಗೆ ಸೇರಿದ ಅದೇ ಗೋವುಗಳನ್ನು ಕಸಿದುಕೊಳ್ಳಲಿಲ್ಲ.

English Translation

He, like the showerer (Indra), cast foam around in the combat, and came away from us with a niggard mind ; he advances not a step, relinquishing the donations ; though skilled in rapine, he seizes not these my (cows)

ಸಂಹಿತಾಪಾಠಃ

ಮಕ್ಷೂ ನ ವಹ್ನಿಃ ಪ್ರಜಾಯಾ ಉಪಬ್ದಿರಗ್ನಿಂ ನ ನಗ್ನ ಉಪ ಸೀದದೂಧಃ ।

ಸನಿತೇಧ್ಮಂ ಸನಿತೋತ ವಾಜಂ ಸ ಧರ್ತಾ ಜಜ್ಞೇ ಸಹಸಾ ಯವೀಯುತ್ ॥

ಪದಪಾಠಃ

ಮಕ್ಷು । ನ । ವಹ್ನಿಃ । ಪ್ರಜಾಯಾಃ । ಉಪಬ್ದಿಃ । ಅಗ್ನಿಂ । ನ । ನಗ್ನಃ । ಉಪ । ಸೀದತ್ । ಊಧಃ॥

ಸನಿತಾ । ಇಧ್ಮಂ । ಸನಿತಾ । ಉತ । ವಾಜಂ । ಸಃ । ಧರ್ತಾ । ಜಜ್ಞೇ । ಸಹಸಾ । ಯವಿಷ್ಠಯುತ್ ॥ ೯ ॥

ಸಾಯಣಭಾಷ್ಯಂ

ವಾಸ್ತೋಷ್ಪತಿನಾ ರುದ್ರೇಣ ಗೋಪ್ಯಮಾನೇಽಸ್ಮಿನ್ಯಜ್ಞೇ ವಹ್ನಿರ್ವಹ್ನಿವದ್ದಾಹಕೋ ರಾಕ್ಷಸಾದಿರ್ಮಕ್ಷು ನ ಶೀಘ್ರಂ ನೋಪ ಸೀದತ್ । ನಾಗಚ್ಛತಿ । ಯೋ ವಹ್ನಿಃ ಪ್ರಜಾಯಾ ಉಪಬ್ದಿರುಪಪೀಡಕೋ ಭವತಿ ಯಜ್ಞವಿಘಾತಾರ್ಥಮಾಗಚ್ಛತಿ । ಋತ್ವಿಗಾದಿರೂಪಾಯಾಃ ಪ್ರಜಾಯಾ ನ ಪೀಡಾಂ ಕರೋತ್ಯಹನಿ । ತಥೋಧಃ । ರಾತ್ರಿನಾಮೈತತ್ । ರಾತ್ರಾವಪ್ಯಗ್ನಿಂ ಜ್ವಲಂತಂ ನಗ್ನೋ ವಿವಸನೋ ರಾಕ್ಷಸಾದಿರ್ನೋಪ ಸೀದತ್ । ಏವಂ ರುದ್ರೇ ರಕ್ಷಿತರಿ ಸತಿ ಸೋಽಗ್ನಿರಿಧ್ಮಂ ಸನಿತಾ ಜಜ್ಞೇ । ಉತ್ಪನ್ನಃ । ಉತಾಪಿ ಚ ವಾಜಮನ್ನಂ ಹವಿಃ ಸನಿತಾ ಜಜ್ಞೇ । ಸ ಧರ್ತಾ ಯಜ್ಞಸ್ಯ ಫಲಸ್ಯ ವಾ ಧಾರಕ ಉತ್ಪನ್ನಃ ಸೋಽಗ್ನಿಃ ಸಹಸಾ ಬಲೇನ ಯವಿಷ್ಠೀಯುದ್ಯಜ್ಞಮಿಶ್ರಯಿತೄಣಾಂ ರಕ್ಷಃಪ್ರಭೃತೀನಾಂ ಯೋದ್ಧಾ ಜಜ್ಞೇ॥

ಪ್ರತಿಪದಾರ್ಥ

(ರುದ್ರನು ನಮ್ಮ ಯಜ್ಞವನ್ನು ರಕ್ಷಿಸುವ ಕಾಲದಲ್ಲಿ) **ವಹ್ನಿಃ**—ಬೆಂಕಿಯಂತೆ ದಹಿಸಬಲ್ಲ ರಾಕ್ಷಸನು । **ಮಕ್ಷು**—ಶೀಘ್ರವಾಗಿ । **ನ ಉಪ ಸೀದತ್**—ಸಮೀಪಿಸಲಾರನು । **ಪ್ರಜಾಯಾಃ**—ಯಜಮಾನಾದಿಗಳಿಗೆ । **ಉಪಬ್ದಿಃ**—ಹಿಂಸಕನಾದವನೂ । **ನಗ್ನಃ**—ಬೆತ್ತಲೆಯಲ್ಲಿರುವವನೂ ಆದ ರಾಕ್ಷಸನು । **ಅಗ್ನಿಂ**—ಯಜ್ಞಾಗ್ನಿಯನ್ನು । **ಊಧಃ**—ರಾತ್ರಿಕಾಲದಲ್ಲೂ । **ನ**—ಸಮೀಪಿಸಲಾರನು । **ಇಧ್ಮಂ**—ಪ್ರಜ್ವಲನಸಾಧನವಾದ ಸಮಿದಾದಿಗಳನ್ನು । **ಸನಿತಾ**—ಕೊಡತಕ್ಕ ದೇವನು । **ಜಜ್ಞೇ**—ಉತ್ಪನ್ನನಾಗಿದ್ದಾನೆ । **ಉತ**—ಮತ್ತು । **ವಾಜಂ**—ಅನ್ನವನ್ನು । **ಸನಿತಾ**—ಒದಗಿಸಬಲ್ಲವನೂ । **ಯವಿಷ್ಠಯುತ್**—ರಾಕ್ಷಸಾದಿಗಳನ್ನು ಹೊಡೆದೋಡಿಸುವವನೂ । **ಧರ್ತಾ**—ಯಜ್ಞಧಾರಕನೂ ಆದ । **ಸಃ**—ಅಗ್ನಿಯು । **ಸಹಸಾ**—ತನ್ನ ಶಕ್ತಿಯೊಡಗೂಡಿ (ಉತ್ಪನ್ನನಾಗಿದ್ದಾನೆ).

ಭಾವಾರ್ಥ

ರುದ್ರನು ನಮ್ಮ ಯಜ್ಞವನ್ನು ರಕ್ಷಿಸುವ ಕಾಲದಲ್ಲಿ ಬೆಂಕಿಯಂತೆ ದಹಿಸಬಲ್ಲ ರಾಕ್ಷಸನು ನಮ್ಮನ್ನು ಸುಲಭವಾಗಿ ಸಮೀಪಿಸಲಾರನು. ಯಜಮಾನಾದಿಗಳಿಗೆ ಹಿಂಸಕನೂ, ಬೆತ್ತಲೆಯಿರುವವನೂ ಆದ ರಾಕ್ಷಸನು ಯಜ್ಞಾಗ್ನಿಯನ್ನು ರಾತ್ರಿಕಾಲದಲ್ಲೂ ಸಮೀಪಿಸಲಾರನು. ಪ್ರಜ್ವಲನಸಾಧನವಾದ ಸಮಿದಾದಿಗಳನ್ನು ಕೊಡತಕ್ಕವನೂ, ಅನ್ನದಾತನೂ, ರಾಕ್ಷಸಾದಿಗಳನ್ನು ಹೊಡೆದೋಡಿಸುವವನೂ, ಯಜ್ಞಧಾರಕನೂ ಆದ ಅಗ್ನಿಯು ತನ್ನ ಶಕ್ತಿಯೊಡಗೂಡಿ ಉತ್ಪನ್ನನಾಗಿದ್ದಾನೆ.

English Translation

The fire, harming the people, does not approach qnickly (by day): the naked (Rakshasas approach) not Agni by night; the giver of fuel, and

the giver of food, he the upholder (of the rite), is born, overcoming enemies by his might.

संहितापाठः

मुक्षू कनायाः सख्यं नवग्वा ऋतं वदंत ऋतयुक्तिमग्मन्।
द्विबर्हसो य उप गोपमागुरदक्षिणासो अच्युता दुदुक्षन् ॥ ८० ॥

पदपाठः

मुक्षु । कनायाः । सख्यं । नवग्वाः । ऋतं । वदंतः । ऋतयुक्तिं । अग्मन् ।
द्विबर्हसः । ये । उप । गोपं । आ । आगुः । अदक्षिणासः । अच्युता । दुदुक्षन् ॥

सायणभाष्यं

नवग्वा अंगिरसः । गवामयनाख्यं सत्रमनुतिष्ठतामंगिरसां मध्ये ये नवसु मासेषु लब्धगवः संत उत्थितास्ते नवग्वाः । त ऋतं वदंतो मुक्षु शीघ्रं कनायाः कमनीयायायाः स्तुतेर्नाभानेदिष्ठस्य प्रेरितायाः सकाशाद्गतयुक्तिमग्मन् । उक्तयोगपरिसमाप्तिमग्मन् । प्राप्ताः । यदा । ऋतयुक्तिं यज्ञायोगोपेत-मृतं शब्दं स्तुतिं वदंतोऽंगिरसः कनायाः पृश्न्याः सख्यमग्मन्निति योजना । द्विबर्हसो द्वयोः स्थानयोर्द्यावापृथिव्योः परिवृढा ये ऽंगिरसो गोपं गोपायितारं नाभानेदिष्ठमिंद्रं वोपागुः उपगताः तेऽदक्षिणासो दक्षिणारहिताः । अदक्षिणानि सत्राणीत्याहुरिति हि वचनं ये यजमानास्तु ऋत्विज इति । ते चाच्युतो-दकान्यक्षीणानि फलानि वा दुदुक्षन् ॥

प्रतिपदार्थ

ऋतयुक्तिं—ಯಜ್ಞಕ್ಕೆ ಉಪಯುಕ್ತವಾದ । **ऋतं**—ಸ್ತುತಿಯನ್ನು । **वदंतः**—ಪಠಿಸುವವರೂ । (Explained before) **नवग्वाः**—ನವಗ್ವಸಂಜ್ಞಕರೂ ಆದ ಅಂಗಿರಸ್ಸುಗಳು । **मुक्षु**—ಶೀಘ್ರವಾಗಿ । **कनायाः**—ಪೃಶ್ನಿಯ । **सख्यं**—ಸಖ್ಯವನ್ನು । **अग्मन्**—ಹೊಂದಿದರು । **द्विबर्हसः**—ದ್ಯಾವಾಪೃಥಿವಿಗಳೆರಡರಲ್ಲೂ ಸ್ಥಾನವನ್ನು ಹೊಂದಿದ । **ये**—ಯಾವ ಅಂಗಿರಸ್ಸುಗಳು । **गोपं**—ರಕ್ಷಕನಾದ ಇಂದ್ರನನ್ನು । **उप आगुः**—ಸಮೀಪಿಸಿದರೋ ಅವರು । **अदक्षिणासः**—ದಕ್ಷಿಣೆಯನ್ನು ಪಡೆಯದೆ **अच्युता**—ನಾಶರಹಿತವಾದ ಉದಕಗಳನ್ನು । **दुदुक्षन्**—ಕರೆದರು.

ಭಾವಾರ್ಥ

ಯಜ್ಞಕ್ಕೆ ಉಪಯುಕ್ತವಾದ ಸ್ತುತಿಯನ್ನು ಪಠಿಸುವವರೂ, ನವಗ್ವಸಂಜ್ಞಕರೂ ಆದ ಅಂಗಿರಸ್ಸುಗಳು ಶೀಘ್ರವಾಗಿ ಪೃಶ್ನಿಯೆಂಬ ಗೋವಿನ ಸಖ್ಯವನ್ನು ಹೊಂದಿದರು. ದ್ಯಾವಾಪೃಥಿವಿಗಳೆರಡರಲ್ಲೂ ಸ್ಥಾನವನ್ನು ಹೊಂದಿದ ಯಾವ

ಅಂಗಿರಸ್ಸುಗಳು ರಕ್ಷಕನಾದ ಇಂದ್ರನನ್ನು ಸವಿಾಪಿಸಿದರೋ ಅವರು ದಕ್ಷಿಣೆಯನ್ನು ಹೊಂದದವರಾಗಿ ನಾಶರಹಿತವಾದ ಉದಕಗಳನ್ನು ಕರೆದರು.

English Translation

The Angirasas, who were engaged in the nine months' ceremonial, reciting the praise suited to the rite, quickly attained the friendship of the maiden : those who seated in the two seats (heaven and earth) came to their protector, as they had no donation, milked forth the inexhaustible (waters).

ಸಂಹಿತಾಪಾಠಃ

ಮಕ್ಷೂ ಕನಾಯಾಃ ಸಖ್ಯಂ ನವೀಯೋ ರಾಧೋ ನ ರೇತ ಋತಮಿತ್ತುರಣ್ಯನ್ ।
ಶುಚಿ ಯತ್ತೇ ರೇಕ್ಣ ಆಯಜಂತ ಸಬರ್ದುಘಾಯಾಃ ಪಯ ಉಸ್ರಿಯಾಯಾಃ ॥ ೧೧ ॥

ಪದಪಾಠಃ

ಮಕ್ಷು । ಕನಾಯಾಃ । ಸಖ್ಯಂ । ನವೀಯಃ । ರಾಧಃ । ನಃ । ರೇತಃ । ಋತಂ । ಇತ್ । ತುರಣ್ಯನ್ ।
ಶುಚಿ । ಯತ್ । ತೇ । ರೇಕ್ಣಃ । ಅಸ ಆಯಜಂತ । ಸಬಃಸದುಘಾಯಾಃ । ಪಯಃ । ಉಸ್ರಿಯಾಯಾಃ ॥

ಸಾಯಣಭಾಷ್ಯಂ

ಮಕ್ಷು ಶೀಘ್ರಂ ಕನಾಯಾಃ ಕಮನೀಯಾಯಾ ಘರ್ಮದೋಗ್ಧ್ರ್ಯಾಃ ನವೀಯೋ ನವತರಂ ಸಖ್ಯಂ । ಪ್ರಾಪ್ಯೇತಿ ಶೇಷಃ । ಅಥವಾ ನವೀಯ ಇತಿ ರಾಧೋವಿಶೇಷಣಂ । ನವತರಂ ರಾಧೋ ಧನಮಿವ ರೇತಃ ಸಿಚ್ಯಮಾನಮೃತಮುದಕಂ ತುರಣ್ಯನ್ । ದಿವಃ ಸಕಾಶಾತ್ಪ್ರೇರಿತವಂತಃ । ಭೋ ಇಂದ್ರ ತೇ ತುಭ್ಯಂ ಯದ್ಯದಾ ರೇಕ್ಣಃ ಪಾಥೋಲಕ್ಷಣಂ ಧನನಾಭಿಮುಖಮುಯಜಂತ ಅಪೂಜಯನ್ । ಕೀದೃಶಂ ರೇಕ್ಣಃ । ಸಬರ್ದುಘಾಯಾಃ । ಸಬರಿತ್ಯಮೃತನಾಮ । ಅಮೃತದೋಗ್ಧ್ರ್ಯಾಃ ಉಸ್ರಿಯಾಯಾ ಗೋಃ ಪಯಃ ಪಾನಯೋಗ್ಯಂ ರಸಂ । ತದೋದಕಂ ತುರಣ್ಯನ್ನಿತಿ । ಅತ್ರಾಧ್ವರ್ಯುಬ್ರಾಹ್ಮಣಂ । ಅಂಗಿರಸೋ ವೈ ಸತ್ರಮಾಸತ ತೇಷಾಂ ಪೃಶ್ನಿರ್ಘರ್ಮಧುಗಾಸೀತ್ ಸರ್ಜೀಷೇಣಾಜೀವತ್ ತೇಽಬ್ರುವನ್ ಕಸ್ಮೈ ನು ಸತ್ರಮಾಸ್ಮಹೇ ಯೇಽಸ್ಯಾ ಓಷಧೀರ್ನ ಜನಯಾಮು ಇತಿ ತೇ ದಿವೋ ವೃಷ್ಟಿಮಸೃಜಂತ । ತೈ. ಬ್ರಾ. ೨-೧-೧-೧ । ಇತಿ ॥

ಪ್ರತಿಪದಾರ್ಥ

(ಎಲೈ ಇಂದ್ರನೇ) **ಶುಚಿ**—ಶುದ್ಧವಾದ । **ಸಬರ್ದುಘಾಯಾಃ**—ಅಮೃತವನ್ನು ಕರೆಯತಕ್ಕ । **ಉಸ್ರಿಯಾಯಾಃ**—ಗೋವಿನ । **ಪಯಃ**—ಕ್ಷೀರರೂಪವಾದ । **ರೇಕ್ಣಃ**—ಧನವನ್ನು । **ಯತ್**—ಯಾವಾಗ ।

ಯತ್—ಯಾವಾಗ । **ತೇ**—ನಿನ್ನನ್ನುದ್ದೇಶಿಸಿ । **ಅಯಜಂತ**—ಅರ್ಪಿಸಿದರೋ ಆಗ । **ಮಕ್ಷು**—ಶೀಘ್ರವಾಗಿ **ಕನಾಯಾಃ**—ಪೃಶ್ನಿಸಂಜ್ಞಕವಾದ ಧೇನುವಿನ । **ನವೀಯಃ**—ಹೊಸದಾದ । **ಸಖ್ಯಂ**—ಸ್ನೇಹವನ್ನು ಹೊಂದಿ। **ರೇತಃ**—ಪ್ರವಹಿಸುವ । **ಋತಂ**– ಉದಕವನ್ನು । **ರಾಧಃ ನ**—ಧನವನ್ನು **ಸುರಿಸುವಂತೆ** । **ತುರಣ್ಯನ್**—ಅಂತರಿಕ್ಷದಿಂದ ಸುರಿಸಿದರು.

ಭಾವಾರ್ಥ

ಎಲೈ ಇಂದ್ರನೇ, ಶುದ್ಧವಾದ ಅಮೃತವನ್ನು ಕರೆಯತಕ್ಕ ಗೋವಿನ ಪಾನಯೋಗ್ಯವಾದ ಕ್ಷೀರರೂಪವಾದ ಧನವನ್ನು ಯಾವಾಗ ನಿನ್ನನ್ನುದ್ದೇಶಿಸಿ ಅರ್ಪಿಸಿದರೋ ಆಗ ಶೀಘ್ರವಾಗಿ ಪೃಶ್ನಿಸಂಜ್ಞಕವಾದ ಧೇನುವಿನ ಹೊಸದಾದ ಸ್ನೇಹವನ್ನು ಹೊಂದಿ ಪ್ರವಹಿಸುವ ಉದಕವನ್ನು ಧನದಂತೆ ಅಂತರಿಕ್ಷದಿಂದ ಸುರಿಸಿದರು.

English Translation

Quickly (obtaining) the friendship of the maiden, they poured forth water like new wealth, when they offered to you (Indra) the pure riches, the milk of the cow, that yields ambrosia.

ಸಂಹಿತಾಪಾಠಃ

ಪಶ್ವಾ ಯತ್ತೇ ಶ್ಚಾ ವಿಯುತಾ ಬುಧಂತೇತಿ ಬ್ರವೀತಿ ವಕ್ತರೀ ರರಾಣಃ ।
ವಸೋರ್ವಸುತ್ವಾ ಕಾರವೋಽನೇಹಾ ವಿಶ್ವಂ ವಿವೇಷ್ಟಿ ದ್ರವಿಣಮುಪ ಕ್ಷು ॥

ಪದಪಾಠಃ

ಪಶ್ವಾ । ಯತ್ । ಪಶ್ಚಾ । ವಿಽಯುತಾ । ಬುಧಂತ । ಇತಿ । ಬ್ರವೀತಿ । ವಕ್ತರಿ । ರರಾಣಃ ।
ವಸೋಃ । ವಸುಽತ್ವಾ । ಕಾರವಃ । ಅನೇಹಾ । ವಿಶ್ವಂ । ವಿವೇಷ್ಟಿ । ದ್ರವಿಣಂ । ಉಪ । ಕ್ಷು ॥ ೧೨ ॥

ಸಾಯಣಭಾಷ್ಯಂ

ಯದ್ಯದಾ ಸ್ತೋತಾರಃ ಪಶ್ವಾ ಪಶುನಾ । ಗೋಸಮೂಹೇನೇತ್ಯರ್ಥಃ । ತೇನ ವಿಯುತಾ ವಿಯುಕ್ತಾನಿ ಸ್ವಕೀಯಾನಿ ಗೋಸ್ಥಾನಾನಿ ಪಶ್ಚಾ ಪಶ್ಚಾದ್ಬುಧಂತ ಅಜಾನನ್ ತದಾನೀಂ ಕಾರವಃ । ಕಾರುರಿತ್ಯರ್ಥಃ । ಇತಿ ಬ್ರವೀತಿ । ಇತ್ಥಂ ಬ್ರೂತೇ । ಕಿಮಿತಿ । ವಕ್ತರಿ ಸ್ತೋತರಿ ರರಾಣೋ ರಮಮಾಣೋ ವಸೋರ್ವಾಸಕಾದ್ವಸುತ್ವಾತಿಶಯೇನ ವಾಸಯಿತಾ । ಯದ್ವಾ । ವಸುತ್ವೇತಿ ಸಮೂಹಾರ್ಥೇ ತ್ವಾ ನಾಮಕರಣಃ । ಗೋರೂಪಧನವತೋಽತಿಶಯೇನ ಗೋಸಮೂಹವಾನಿತ್ಯರ್ಥಃ । ಅನೇಹಾ ಅಸಾಪ ಇಂದ್ರೋ ವಿಶ್ವಂ ಸರ್ವಂ ದ್ರವಿಣಂ ಗೋರೂಪಂ ಪಣಿಭಿರಪಹೃತಂ ಧನಂ ಕ್ಷು । ಮಕ್ಷ್ವಿತ್ಯರ್ಥಃ । ಶೀಘ್ರಮುಪ ವಿವೇಷ್ಟಿ । ಉಪವ್ಯಾಪ್ನೋತಿ ಪುನರಾದಾತುಂ । ಅಯಮರ್ಥಃ । ಯದೇಂದ್ರಸ್ಯ ಸ್ತೋತಾರೋಽಸುರೈರಪಹೃತಮಾತ್ಮೀಯಂ ಗೋಧನಂ ಜಾನಂತಿ ತತಃ ಪ್ರಾಗೇವಾಗತ್ಯೇಂದ್ರಸ್ತಂ ನ್ಯರುಧದಿತಿ ॥

ಪ್ರತಿಪದಾರ್ಥ

ಯತ್—ಯಾವಾಗ । **ಪಶ್ವಾ**—ಪಶುಗಳಿಂದ । **ವಿಯುತಾ**—ವಿರಹಿತವಾದ ಕೊಟ್ಟಿಗೆಗಳನ್ನು । **ಪಶ್ಚಾ**—ಅನಂತರದಲ್ಲಿ । **ಬುಧಂತೆ**—ಅರಿತರೋ ಆಗ । **ಕಾರವಃ**—ಸ್ತುತಿಕರ್ತನು । **ಇತಿ**—ಈ ಪ್ರಕಾರವಾಗಿ। **ಬ್ರವೀತಿ**—ಹೇಳುತ್ತಾನೆ । **ವಕ್ತರಿ**—ಸ್ತುತಿಕರ್ತನಲ್ಲಿ । **ರರಾಣಃ**—ಹರ್ಷವನ್ನು ಹೊಂದುದವನೂ । **ವಸೋಃ**-ಧನವಂತನಿಗಿಂತಲೂ । **ವಸುತ್ವಾ**—ಅತ್ಯಧಿಕವಾದ ಧನವುಳ್ಳವನೂ । **ಅನೇಹಾ**—ಪಾಪರಹಿತನೂ ಆದ ಇಂದ್ರನು । **ವಿಶ್ವಂ** – ಸಮಸ್ತವಾದ । **ದ್ರವಿಣಂ**—ಗೋರೂಪವಾದ ಧನವನ್ನೂ । **ಕ್ಷ್ಪ್ರಂ**—ಶೀಘ್ರವಾಗಿ । **ಉಪ ವಿನೇಷ್ಟಿ**—ಹಿಂತಿರುಗಿ ಬರುವಂತೆ ಮಾಡುತ್ತಾನೆ.

ಭಾವಾರ್ಥ

ಯಾವಾಗ ಯಜಮಾನರು ತಮ್ಮ ಕೊಟ್ಟಿಗೆಗಳಿಂದ ಪಶುಗಳು ಅಪಹೃತವಾಗಿರುವುದನ್ನು ನೋಡುವರೋ ಆಗ ಸ್ತುತಿಕರ್ತನು "ಸ್ತೋತೃಗಳೊಡನೆ ಹರ್ಷವನ್ನು ಹೊಂದತಕ್ಕವನೂ, ಧನವಂತನಿಗಿಂತಲೂ ಅಧಿಕವಾದ ಧನವುಳ್ಳವನೂ, ಪಾಪರಹಿತನೂ ಆದ ಇಂದ್ರನು ಗೋರೂಪವಾದ ಸಕಲ ಧನವನ್ನೂ ಶೀಘ್ರವಾಗಿ ಹಿಂತಿರುಗಿ ಬರುವಂತೆ ಮಾಡುತ್ತಾನೆ" ಎಂದು ಪ್ರಕಟಿಸುತ್ತಾನೆ.

English Translation

" When (the worshippers) find (the stalls deserted) by the cattle (then the performer of the rite) exclaims, "(Indra), pleasing to his adorer, the affluent lord of affluence, the compassionate the sinless, quickly recovers all the wealth (that has been carried off)."

ಸಂಹಿತಾಪಾಠಃ

ತದಿನ್ನ್ವಸ್ಯ ಪರಿಷದ್ವಾನೋ ಅಗ್ಮನ್ಪುರೂ ಸದಂತೋ ನಾರ್ಷದಂ ಬಿಭಿತ್ಸನ್ ।
ವಿ ಶುಷ್ಣಸ್ಯ ಸಂಗೃಥಿತಮನವ್ರಾ ವಿದತ್ಪುರುಪ್ರಜಾತಸ್ಯ ಗುಹಾ ಯತ್ ॥

ಪದಪಾಠಃ

ತತ್ । ಇತ್ । ನು । ಅಸ್ಯ । ಪರಿಷದ್ವಾನಃ । ಅಗ್ಮನ್ । ಪುರು । ಸದಂತಃ । ನಾರ್ಷದಂ । ಬಿಭಿತ್ಸನ್ ।
ವಿ । ಶುಷ್ಣಸ್ಯ । ಸಂಗೃಥಿತಂ । ಅನವ್ರಾ । ವಿದತ್ । ಪುರುಪ್ರಜಾತಸ್ಯ । ಗುಹಾ । ಯತ್ ॥ ೧೩ ॥

ಸಾಯಣಭಾಷ್ಯಂ

ತದಿತ್ತ್ರೈವ ನು ಕ್ಷಿಪ್ರಮಸ್ಯೇಂದ್ರಸ್ಯ ಪರಿಷದ್ವಾನಃ ಪರಿತೋ ವರ್ತಮಾನಾಃ ಪರಿಚಾರಕಾ ರಶ್ಮಯೋಽಗ್ಮನ್ । ಪ್ರಕಾಶನಾರ್ಥಮಗಚ್ಛನ್ । ಪುರು ಪುರೂಣಿ ಕೃತ್ರಿಮಾಣಿ ಸದಂತಃ ಸೀದಂತೋಽಸುರಾ ನಾರ್ಷದಂ ನೃಷದಃ ಪುತ್ರಂ ಬಿಭಿತ್ಸನ್ । ಭೇತ್ತುಮೈಚ್ಛನ್ । ಕಿಂಚಾಯಂ ಶುಷ್ಣಸ್ಯೈತನ್ನಾಮ-

ಕಸ್ಯಾಸುರಸ್ಯ ಪುರುಪ್ರಜಾತಸ್ಯ ಬಹುಪ್ರಾದುರ್ಭಾವಸ್ಯ ಸಂಗ್ರಥಿತಂ ಮರ್ಮ ವಿದತ್ । ವೇತ್ತಿ । ಅಯಮಿಂದ್ರೋ ಯದಸುರಸ್ಯ ದುಜ್ಜ್ಞೇಯಂ ಮರ್ಮ ಗುಹಾ ಗುಹಾಯಾಂ ಗೋಪಿತಂ ತದ್ವಿದತ್ ॥

ಪ್ರತಿಪದಾರ್ಥ

ತದಿತ್—ಆ ಒಡನೆಯೇ। **ನು**—ಕ್ಷಿಪ್ರವಾಗಿ। **ಅಸ್ಯ**—ಇಂದ್ರನ। **ಪರಿಷದ್ವಾನಃ**—ಸೇವಕರಂತಿರುವ ರಶ್ಮಿಗಳು। **ಆಗ್ಮನ್**—ಹೊರಕ್ಕೆ ಬಂದು ಪ್ರಕಾಶಿಸಿದವು। **ಪುರು**—ಅತ್ಯಧಿಕವಾಗಿ। **ಸದಂತಃ**—ನಾನಾಕಡೆಗಳಲ್ಲೂ ವಾಸಿಸುತ್ತಿರುವ ಅಸುರರು। **ನಾರ್ಷದಂ**—ನೃಷದನ ಪುತ್ರನನ್ನು। **ಬಿಭಿತ್ಸನ್**—ನಾಶಮಾಡಲಿಚ್ಛಿಸಿದರು। (ಆದರೆ) **ಪುರು ಪ್ರಜಾತಸ್ಯ**—ಅನೇಕ ವಿಧವಾದ ರೂಪಗಳನ್ನು ಹೊಂದುವ। **ಶುಷ್ಣಸ್ಯ**—ಶುಷ್ಣನೆಂಬ ಅಸುರನ। **ಯತ್ ಗುಹಾ**—ಯಾವ ಗುಪ್ತಸ್ಥಾನವಿದೆಯೋ ಅದರ। **ಸಂಗ್ರಥಿತಂ**—ಒತ್ತೊತ್ತಾಗಿ ರಚಿತವಾದ ಮರ್ಮಸ್ಥಾನವನ್ನು। **ಅನರ್ವಾ**—ಅಪ್ರತಿಹತನಾದ ಇಂದ್ರನು। **ವಿದತ್**—ಅರಿಯುತ್ತಾನೆ

ಭಾವಾರ್ಥ

ಆ ಒಡನೆಯೇ ಕ್ಷಿಪ್ರವಾಗಿ ಇಂದ್ರನ ಸೇವಕರಂತಿರುವ ರಶ್ಮಿಗಳು ಹೊರಕ್ಕೆ ಬಂದು ಪ್ರಕಾಶಿಸಿದವು. ಅತ್ಯಧಿಕವಾಗಿ ನಾನಾಕಡೆಗಳಲ್ಲೂ ವಾಸಿಸುತ್ತಿರುವ ಅಸುರರು ನೃಷದನ ಪುತ್ರನನ್ನು ನಾಶಮಾಡಲಿಚ್ಛಿಸಿದರು. ಆದರೆ, ಅನೇಕ ವಿಧವಾದ ರೂಪಗಳನ್ನು ಹೊಂದುವ ಶುಷ್ಣನೆಂಬ ಅಸುರನ ಯಾವ ಗುಪ್ತಸ್ಥಾನವಿದೆಯೋ ಅದರ ಒತ್ತೊತ್ತಾಗಿ ರಚಿತವಾದ ಮರ್ಮಸ್ಥಾನವನ್ನು ಅಪ್ರತಿಹತನಾದ ಇಂದ್ರನು ಅರಿಯುತ್ತಾನೆ

English Translalion

Then the attendant (rays of light) quickly gathered round him, and (the Asuras) dwelling in many regions sought to destroy the son of Nrishad, but the irresistible (Indra) found the wel-knit mail of Shushna, whose offspring was numerous, which was hidden in the cave.

ಸಂಹಿತಾಪಾಠಃ

ಭಗೋ॑ ಹ ನಾ॒ಮೋತ ಯಸ್ಯ॑ ದೇ॒ವಾಃ ಸ್ವ॑ರ್ಣ॒ ಯೇ ತ್ರಿ॒ಷಧ॑ಸ್ಥೇ ನಿ॒ಷೇದುಃ॑ ।
ಅ॒ಗ್ನಿರ್ಹ॒ ನಾ॒ಮೋತ ಜಾ॒ತವೇ॑ದಾಃ॒ ಶ್ರುಧೀ॑ ನೋ॒ ಹೋತ॑ರ್ಯ॒ತಸ್ಯ॒ ಹೋತಾ॑ಧ್ವ್ಯ॒ಕ್ ॥ ೧೪ ॥

ಪದಪಾಠಃ

ಭಗ॑ರ್ಃ । ಹ॒ । ನಾ॒ಮ॒ । ಉ॒ತ । ಯಸ್ಯ॑ । ದೇ॒ವಾಃ । ಸ್ವ॑ಃ । ನ । ಯೇ । ತ್ರಿ॒ಸ॒ಧ॒ಸ್ಥೇ । ನಿ॒ಸ॒ಸೇ॒ದುಃ॒ ।

ಅಗ್ನಿಃ । ಹ । ನಾಮ । ಉತ । ಜಾತವೇದಾಃ । ಶ್ರುಧಿ । ನಃ । ಹೋತಃ । ಋತಸ್ಯ । ಹೋತಾ । ಅಧ್ರುಕ್ ॥ ೧೪ ॥

ಸಾಯಣಭಾಷ್ಯಂ

ಉತಾಪಿ ಚ ಭರ್ಗೋ ಽ ಹ ನಾಮ ತತ್ತೇಜಃ ಕಿಲ ಪ್ರಸಿದ್ಧಂ ಯಸ್ಯ ತೇಜಸ ಆಗ್ನೇಯಸ್ಯ ಸಂಬಂಧಿನಿ ತ್ರಿಷಧಸ್ಥೇ ಬರ್ಹಿಷಿ ಯೇ ದೇವಾಃ ಸಂತಿ ತೇ ಸರ್ವೇ ಸ್ವರ್ಣ ಸ್ವರ್ಗೇ ಯಥಾ ತಥೈವ ನಿಷೇದುಃ ನಿಷೀದಂತಿ । ಉತಾಪಿ ಚ ತತ್ತೇಜೋ ಽ ಗ್ನಿರ್ಹ ನಾಮಾಗ್ನಿಃ ಕಿಲ ನಾಮ । ಉತಾಪಿ ಚ ಜಾತವೇದಾ ಜಾತಪ್ರಜ್ಞೋ ಜಾತಾನಾಂ ವೇದಿತೈತದಪಿ ತಸ್ಯ ತೇಜಸೋ ನಾಮ । ಅಗ್ನೇರ್ಭರ್ಗ ಇತ್ಯಗ್ನಿರಿತಿ ಜಾತವೇದಾ ಇತಿ ಚ ತ್ರೀಣಿ ನಾಮಾನೀತ್ಯರ್ಥಃ । ಅಥ ಪ್ರತ್ಯಕ್ಷಕೃತಃ । ಹೇ ಹೋತರ್ಹೋತೃಮನಿಷ್ಪಾದಕೋಕ್ತನಾಮಾಗ್ನೇ ಋತಸ್ಯ ಹೋತಾ ಯಜ್ಞಸ್ಯ ಸಂಬಂಧಿನಾಂ ದೇವಾನಾಮಾಹ್ವಾತಾಧ್ರುಗ್ಭ್ರೀಹರಹಿತಸ್ತ್ವಂ ನೋ ಽ ಸ್ಮಾಕಮಾಹ್ವಾನಂ ಶ್ರುಧಿ । ಶೃಣು ॥

ಪ್ರತಿಪದಾರ್ಥ

ಯೇ ದೇವಾಃ—ಯಾವ ದೇವತೆಗಳಿರುವರೋ ಅವರು । **ಸ್ವರ್ಣ**—ಸ್ವರ್ಗದಲ್ಲಿ ಕುಳಿತಿರುವಂತೆ । **ಯಸ್ಯ**—ಯಾವ ಅಗ್ನಿತೇಜಸ್ಸಿನಿಂದ ಕೂಡಿದ । (Explained) **ತ್ರಿಷಧಸ್ಥೇ**—ದರ್ಭಾಸನದ ಮೇಲೆ । **ನಿಷೇದುಃ**—ಕುಳಿತುಕೊಳ್ಳುವರೋ । (**ತತ್**) **ಹ**—ಆ ತೇಜಸ್ಸಿಗೆ । **ಭರ್ಗೋ ಽ ಹ ನಾಮ**—ಭರ್ಗವೆಂದಾದರೂ ಹೆಸರಿರಬಹುದು । **ಉತ**—ಅಥವಾ । **ಅಗ್ನಿ ರ್ಹ ನಾಮ**—ಅದಕ್ಕೆ ಅಗ್ನಿಯೆಂಬ ಹೆಸರಿರಬಹುದು । ಅಥವಾ **ಜಾತವೇದಃ**—ಜಾತವೇದ (ಸರ್ವಜ್ಞ) ಎಂಬ ಹೆಸರಿರಬಹುದು । **ಹೋತಃ**—ಹೋತೃರೂಪಿಯಾದ ಎಲೈ ಅಗ್ನಿಯೇ। **ಋತಸ್ಯ**—ಯಜ್ಞಕ್ಕೆ । **ಹೋತಾ**—ದೇವತೆಗಳನ್ನು ಕರೆಯುವ ನೀನು । **ಅಧ್ರುಕ್**—ನಮಗೆ ದ್ರೋಹವನ್ನಾಚರಿಸದೆ । **ನಃ**—ನಮ್ಮ ಆಹ್ವಾನವನ್ನು । **ಶ್ರುಧಿ**—ಕೇಳು.

ಭಾವಾರ್ಥ

ದೇವತೆಗಳು ಸ್ವರ್ಗದಲ್ಲಿ ಕುಳಿತಿರುವಂತೆ ಯಾವ ಅಗ್ನಿತೇಜಸ್ಸಿನಿಂದ ಕೂಡಿದ ದರ್ಭಾಸನದ ಮೇಲೆ ಕುಳಿತುಕೊಳ್ಳುವರೋ ಆ ತೇಜಸ್ಸಿಗೆ ಭರ್ಗವೆಂದಾದರೂ ಹೆಸರಿರಬಹುದು ಅಥವಾ ಅದಕ್ಕೆ ಅಗ್ನಿಯೆಂಬ ಹೆಸರಿರಬಹುದು ಅಥವಾ ಜಾತವೇದಾಃ ಎಂಬ ಹೆಸರಿರಬಹುದು. ಹೋತೃರೂಪಿಯಾದ ಎಲೈ ಅಗ್ನಿಯೇ, ಯಜ್ಞಕ್ಕೆ ದೇವತೆಗಳನ್ನು ಕರೆಯುವ ನೀನು ನಮಗೆ ದ್ರೋಹವನ್ನಾಚರಿಸದೆ, ನಮ್ಮ ಆಹ್ವಾನವನ್ನು ಕೇಳು.

English Translation

Whether Bharga is the name of that radiance, on the triple seat of which those who are gods are seated, as if in heaven, or whether it be Agni, or Jatavedas ; invoker (of the gods), who are the ministrant priest of the sacrifice, here our guileless invocation.

ಸಂಹಿತಾಪಾಠಃ

ಉತ ತ್ಯಾ ಮೇ ರೌದ್ರಾವರ್ಚಿಮಂತಾ ನಾಸತ್ಯಾವಿಂದ್ರ ಗೂರ್ತಯೇ
ಯಜಧ್ಯೈ ।
ಮನುಷ್ವದ್ವೃಕ್ತಬರ್ಹಿಷೇ ರರಾಣಾ ಮಂದೂ ಹಿತಪ್ರಯಸಾ ವಿಕ್ಷು
ಯಜ್ಯೂ ॥ ೧೫ ॥

ಪದಪಾಠಃ

ಉತ । ತ್ಯಾ । ಮೇ । ರೌದ್ರಾ । ಅರ್ಚಿಮಂತಾ । ನಾಸತ್ಯಾ । ಇಂದ್ರ । ಗೂರ್ತಯೇ । ಯಜಧ್ಯೈ ।
ಮನುಷ್ವತ್ । ವೃಕ್ತಬರ್ಹಿಷೇ । ರರಾಣಾ । ಮಂದೂ ಇತಿ । ಹಿತಪ್ರಯಸಾ । ವಿಕ್ಷು । ಯಜ್ಯೂ
ಇತಿ ॥ ೧೫ ॥

ಸಾಯಣಭಾಷ್ಯಂ

ಉತಾಪಿ ಚ ಹೇ ಇಂದ್ರ ತ್ಯಾ ತೌ ಪ್ರಸಿದ್ಧೌ ರೌದ್ರೌ ರುದ್ರಪುತ್ರೌ । ಕ್ಷೋದೋ ನ ರೇತ ಇತ-
ಊತಿ ಸಿಂಚತ್ । ಋ. ೧೦-೬೧-೨ । ಇತಿ ಹಿ ರುದ್ರಪುತ್ರತ್ವಮುಕ್ತಂ । ಅರ್ಚಿಮಂತಾ ದೀಪ್ತಿಮಂತೌ
ನಾಸತ್ಯಾವಶ್ವಿನೌ ಮೇ ಗೂರ್ತಯೇ ಸ್ತುತಯೇ ಯಜಧ್ಯೈ ಯಾಗಾಯ ಚ ಭವೇತಾಮಿತಿ ಶೇಷಃ ।
ಕಿಂಚ ಮನುಷ್ವನ್ಮಮ ಪಿತುರ್ಮನೋರಿವ ತಸ್ಯ ಯಜ್ಞೇ ಯಥಾ ತಥೈವ ವೃಕ್ತಬರ್ಹಿಷೇ ಸ್ತೀರ್ಣಬ-
ರ್ಹಿಷೇ ಮಹ್ಯಂ ರರಾಣಾ ರಮಮಾಣೌ ಮಂದೂ ಮದಿಷ್ಣೂ ಹಿತಪ್ರಯಸಾ ಪ್ರೇರಿತಧನೌ ವಿಕ್ಷ್ವೃತ್ವಿ-
ಕ್ಷ್ವಸ್ಮದೀಯೇಷು ತಥಾ ಯಜ್ಯೂ ಯಷ್ಟವ್ಯೌ ಭವತಮಿತಿ ಶೇಷಃ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । **ತ್ಯಾ**—ಪ್ರಸಿದ್ಧರೂ । **ರೌದ್ರಾ**—ರುದ್ರಪುತ್ರರೂ । **ಅರ್ಚಿಮಂತಾ**—ಕಾಂತಿಯುತರೂ ಆದ । **ನಾಸತ್ಯಾ**—ಅಶ್ವಿನೀದೇವತೆಗಳೂ । **ಮೇ**—ನನ್ನ । **ಗೂರ್ತಯೇ**—ಸ್ತುತಿಗಭಿ ಮುಖವಾಗಿಯೂ । **ಯಜಧ್ಯೈ**—ಯಾಗಾಭಿಮುಖವಾಗಿಯೂ ಸ್ಥಿತರಾಗಿರಲಿ । **ಮನುಷ್ವತ್**—ಮನುವಿನ ಯಜ್ಞದಲ್ಲಿ ಕುಳಿತು ಅವನಿಗೆ ಸಂತೋಷವನ್ನುಂಟುಮಾಡಿದಂತೆ । **ವೃಕ್ತಬರ್ಹಿಷೇ**—ದರ್ಭಾಸನವನ್ನು ಸಂಸ್ಕರಿಸಿದ ನನಗೆ । **ರರಾಣಾ**—ಹರ್ಷವನ್ನುಂಟುಮಾಡುತ್ತ । **ವಿಕ್ಷು**—ನಮ್ಮಗಳ ನಡುವೆ । **ಮಂದೂ**—ಹರ್ಷಯುಕ್ತ ರಾಗಿಯೂ । **ಹಿತಪ್ರಯಸಾ**—ನಮಗೆ ದಾನಮಾಡುವ ಧನವುಳ್ಳವರಾಗಿಯೂ । **ಯಜ್ಯೂ**—ಯಜ್ಞಾರ್ಹ ರಾಗಿಯೂ ಇರಲಿ.

ಭಾವಾರ್ಥ

ಎಲೈ ಇಂದ್ರನೇ, ಪ್ರಸಿದ್ಧರೂ, ರುದ್ರಪುತ್ರರೂ, ಕಾಂತಿಯುತರೂ ಆದ ಅಶ್ವಿನೀದೇವತೆಗಳು ನನ್ನ ಸ್ತುತಿಗಭಿ ಮುಖವಾಗಿಯೂ, ಯಾಗಾಭಿಮುಖವಾಗಿಯೂ ಸ್ಥಿತರಾಗಿರಲಿ. ಮನುವಿನ ಯಜ್ಞದಲ್ಲಿ ಕುಳಿತು ಅವನಿಗೆ ಸಂತೋಷ

ವನ್ನುಂಟುಮಾಡಿದಂತೆ ದರ್ಭಾಸನವನ್ನು ಸಂಸ್ಕರಿಸಿದ ನನಗೆ ಹರ್ಷವನ್ನುಂಟುಮಾಡುತ್ತ, ಋತ್ವಿಕ್ಕುಗಳಾದ ನಮ್ಮ ನಡುವೆ ಹರ್ಷಯುಕ್ತರಾಗಿಯೂ, ನನಗೆ ದಾನಮಾಡುವ ಧನವುಳ್ಳವರಾಗಿಯೂ ಯಜ್ಞಾರ್ಹರಾಗಿಯೂ ಇರಲಿ.

English Translation

And, Indra, let those two brilliant sons of Rudra, the Nasatyas, (be present) at my praise and sacrifice ; being propitious to (me seated) on the strewn grass, as (at the sacrifiee of) Manu, cheerful, liberal of wealth to the people, deserving of adoration

ಸಂಹಿತಾಪಾಠಃ

ಅಯಂ ಸ್ತುತೋ ರಾಜಾ ವಂದಿ ವೇಧಾ ಅಪಶ್ಚ ವಿಪ್ರಸ್ತರತಿ ಸ್ವಸೇತುಃ ।
ಸ ಕಕ್ಷೀವಂತಂ ರೇಜಯತ್ಸೋ ಅಗ್ನಿಂ ನೇಮಿಂ ನ ಚಕ್ರಮರ್ವತೋ ರಘುದ್ರು ॥ ೧೬ ॥

ಪದಪಾಠಃ

ಅಯಂ । ಸ್ತುತಃ । ರಾಜಾ । ವಂದಿ । ವೇಧಾಃ । ಅಪಃ । ಚ । ವಿಪ್ರಃ । ತರತಿ । ಸ್ವಽಸೇತುಃ ।
ಸಃ । ಕಕ್ಷೀವಂತಂ । ರೇಜಯತ್ । ಸಃ । ಅಗ್ನಿಂ । ನೇಮಿಂ । ನ । ಚಕ್ರಂ । ಅರ್ವತಃ । ರಘುಽದ್ರು ॥

ಸಾಯಣಭಾಷ್ಯಂ

ಅಯಂ ವೇಧಾಃ ಸರ್ವಸ್ಯ ವಿಧಾತಾ ರಾಜಾ ಸೋಮಃ ಸ್ತುತಃ ಸರ್ವೈರ್ವಿಂದಿ । ಸ್ತೂಯತೇಽಸ್ಮಾಭಿಃ । ಕಿಂಚ ವಿಪ್ರೋ ವಿಶೇಷೇಣ ಪೂರಕೋ ವಿಪ್ರವಚ್ಛೃದ್ಧೋ ವಾ ಸ್ವಸೇತುರ್ಯಸ್ಯ ಸ್ವಭೂತಾ ರಶ್ಮಯೋ ಜಗದ್ಬಂಧಕಾಃ ಸಂತಿ ಸ ಸೋಮೋಽಪಶ್ಚಾಂತರಿಕ್ಷಂ ಚ ತರತಿ । ಲಂಘಯತಿ ಪ್ರತಿದಿನಂ । ಸ ಸೋಮಃ ಕಕ್ಷೀವಂತಮೃಷಿಂ ಪರ್ವತಮಧ್ಯೇ ಸೋಮಾರ್ಥಂ ಗತಂ ರೇಜಯತ್ ಸಃ ಸ ಏವಾಗ್ನಿಂ ಹವಿರ್ವೋಢುಮಶಕ್ತಂ ಸಂತಂ ಪಲಾಯ್ಯಾಪ್ಸು ಪ್ರವಿಷ್ಟಂ ರೇಜಯತ್ । ಅಕಂಪಯತ್ । ಕಂಪನೇ ದೃಷ್ಟಾಂತಃ । ನೇಮಿಂ ನಮನಶೀಲಂ ರಘುದ್ರು ಲಘುಗಮನಂ ಚಕ್ರಮರ್ವತೋಽರ್ವಂತೋಽಶ್ವಾ ಇವ ತೇ ಯಥಾ ತಥಾ ರೇಜಯತ್ ॥ ನುಮಭಾವಶ್ಛಾಂದಸಃ ॥

ಪ್ರತಿಪದಾರ್ಥ

ವೇಧಾಃ—ಸೃಷ್ಟಿಕರ್ತನೂ । **ರಾಜಾ**—ಪ್ರಭುವೂ । **ಸ್ತುತಃ**—ಸಕಲರಿಂದಲೂ ಪ್ರಶಂಸಿತನೂ ಆದ । **ಅಯಂ**—ಈ ಸೋಮದೇವನು । **ವಂದಿ**—ನಮ್ಮಿಂದ ನಮಸ್ಕರಿಸಲ್ಪಡುತ್ತಾನೆ । **ವಿಪ್ರಃ**—ಮೇಧಾವಿಯೂ । **ಸ್ವಸೇತುಃ**—ತನ್ನ ರಶ್ಮಿಗಳಿಂದ ತಾನೇ ರಚಿಸಿದ ಸೇತುವೆಯುಳ್ಳವನೂ ಆದ ಸೋಮನು । **ಅಪಶ್ಚ**—ಅಂತರಿಕ್ಷವನ್ನು । **ತರತಿ**—ದಾಟುತ್ತಾನೆ । **ಸಃ**—ಆದೇ ಸೋಮನು । **ಕಕ್ಷೀವಂತಂ**—ಕಕ್ಷೀವಂತನೆಂಬ ಋಷಿಯನ್ನು । **ರೇಜಯತ್**-

ನಡುಗಿಸಿದನು। **ಅರ್ವತಃ**—ಉತ್ತಮವಾದ ಅಶ್ವಗಳು। **ನೇಮಿಂ**—ಸಂಚಾರಯೋಗ್ಯವೂ। **ರಘುದ್ರು**—ಶೀಘ್ರವಾಗಿ ಚಲಿಸುವುದೂ ಆದ। **ಚಕ್ರಂ ನ**—ಚಕ್ರವನ್ನು (ಸುತ್ತಿಸಿ) ನಡುಗಿಸುವಂತೆ। **ಸಃ**—ಅದೇ ಸೋಮನು। **ಅಗ್ನಿಂ**—ಅಗ್ನಿಯನ್ನು ನಡಗುವಂತೆ ಮಾಡಿದನು.

ಭಾವಾರ್ಥ

ಸೃಷ್ಟಿಕರ್ತನೂ, ಪ್ರಭುವೂ, ಸಕಲರಿಂದಲೂ ಪ್ರಶಂಸಿತನೂ ಆದ ಸೋಮದೇವನು ನಮ್ಮಿಂದ ನಮಸ್ಕರಿಸಲ್ಪಡುತ್ತಾನೆ. ಮೇಧಾವಿಯೂ, ತನ್ನ ರಶ್ಮಿಗಳಿಂದ ತಾನೇ ರಚಿಸಿದ ಸೇತುವೆಯುಳ್ಳವನೂ ಆದ ಸೋಮನು ಅಂತರಿಕ್ಷವನ್ನು ದಾಟುತ್ತಾನೆ. ಅದೇ ಸೋಮನು ಕಕ್ಷೀವಂತನೆಂಬ ಋಷಿಯನ್ನು ನಡುಗಿಸಿದನು. ಸಂಚಾರಯೋಗ್ಯವೂ, ಶೀಘ್ರವಾಗಿ ಚಲಿಸುವುದೂ ಆದ ಚಕ್ರವನ್ನು ಅಶ್ವಗಳು ಸುತ್ತಿಸಿ ನಡುಗಿಸುವಂತೆ ಅದೇ ಸೋಮನು ಹವಿಸ್ಸನ್ನು ವಹಿಸದೆ ನೀರಿನಲ್ಲಿ ಅವಿತುಕೊಂಡಿದ್ದ ಅಗ್ನಿಯನ್ನು ನಡುಗುವಂತೆ ಮಾಡಿದನು.

English Translation

This royal (Soma), this glorified creator, is praised (by all), and, like a sage, constituting his own causeway, he traverses the firmament : he made Kakshivat tremble, he (made) Agni (shake) as horses (agitate) the light-whirling, revolving-wheel (of a chariot).

ಸಂಹಿತಾಪಾಠಃ

ಸ ದ್ವಿಬಂಧುರ್ವೈತರಣೋ ಯಷ್ಟಾ ಸಬರ್ಧುಂ ಧೇನುಮುಸ್ರಂ ದುಹಧ್ಯೈ ।
ಸಂ ಯನ್ಮಿತ್ರಾವರುಣಾ ವ್ರಂಜ ಉಕ್ಥೈರ್ಜ್ಯೇಷ್ಠೇಭಿರರ್ಯಮಣಂ
ವರೂಥೈಃ ॥ ೧೭ ॥

ಪದಪಾಠಃ

ಸಃ । ದ್ವಿಽಬಂಧುಃ । ವೈತರಣಃ । ಯಷ್ಟಾ । ಸಬಃಽಧುಂ । ಧೇನುಂ । ಉಸ್ರಂ । ದುಹಧ್ಯೈ ।
ಸಂ । ಯತ್ । ಮಿತ್ರಾವರುಣಾ । ವ್ರಂಜೇ । ಉಕ್ಥೈಃ । ಜ್ಯೇಷ್ಠೇಭಿಃ । ಆರ್ಯಮಣಂ । ವರೂಥೈಃ ॥೧೭॥

ಸಾಯಣಭಾಷ್ಯಂ

ಸೋಽಗ್ನಿರ್ದ್ವಿಬಂಧುರ್ದ್ವಯೋರ್ಲೋಕಯೋರ್ಬಂಧುಭೂತೋ ವೈತರಣಃ ಸರ್ವಸ್ಯ ವಿಶೇಷೇಣ ತಾರಯಿತಾ। ಯದ್ವಾ । ವಿತರಣಾರ್ಹೋ ಹವಿಷ್ಪ್ರದಾನಾರ್ಹಃ। ಯಷ್ಟಾ ದೇವಾನಾಂ ಯಾಜಕೋಽಗ್ನಿಃ ಸಬರ್ಧುಮಮೃತೋಪಮಪಯೋದೋಗ್ಧ್ರೀಂ ಧೇನುಮುಸ್ರಮಪ್ರಸೂತಾಂ ನಿವೃತ್ತಪ್ರಸವಾಂ ಶಯವೇ ದುಹಧ್ಯೈ ದೋಹಾಯಾಕರೋತ್ । ಯದ್ಯದಾ ಸ ಶಯುರ್ಮಿತ್ರಾವರುಣಾವರ್ಯಮಣಂ ಚ ಜ್ಯೇಷ್ಠೇಭಿರ್ಜ್ಯೇಷ್ಠೈಃ ಪ್ರಶಸ್ತೈರ್ವರೂಥೈರ್ವರಣೀಯೈರುಕ್ಥೈಃ ಶಸ್ತ್ರೈಃ ಸಂ ವ್ರಂಜೇ ಸಮ್ಯಕ್ ಸ್ತೌತಿ। ಯದಾ ಸ ಶಯುರ್ಮಿತ್ರಾವರುಣಾರ್ಯಮ್ಣಾಂ ಸ್ತುತಿಂ ಕರೋತಿ ತದಾ ತೇಷಾಮಾಜ್ಞಯಾಗ್ನಿರ್ನಿವೃತ್ತಪ್ರಸವಾಂ ಪಯೋದೋಗ್ಧ್ರೀಮಕರೋದಿತಿ ॥

ಪ್ರತಿಪದಾರ್ಥ

ಯತ್—ಯಾವಾಗ । (**ಸಃ**—ಶಯುವು) । **ಮಿತ್ರಾವರುಣಾ**—ಮಿತ್ರಾವರುಣರನ್ನೂ । **ಅರ್ಯಮಣಂ**-ಅರ್ಯಮನನ್ನೂ । **ಜ್ಯೇಷ್ಠೇಭಿಃ**—ಪ್ರಶಸ್ಯವಾದವೂ । **ವರೂಥೈಃ**—ಆರಿಸಲ್ಪಟ್ಟವೂ ಆದ । **ಉಕ್ಥೈಃ**—ಶಸ್ತ್ರಮಂತ್ರಗಳಿಂದ । **ಸಂ ವ್ಯಂಜೇ**—ಪೂರ್ಣವಾಗಿ ಸ್ತುತಿಸಿದನೋ ಆಗ । **ದ್ವಿಬಂಧುಃ**—ದ್ಯಾವಾಪೃಥಿವಿಗಳೆರಡಕ್ಕೂ ಬಂಧುವೂ । **ವೈತರಣಃ**—ಸಕಲರನ್ನೂ (ಕಷ್ಟದಿಂದ) ದಾಟಿಸುವವನೂ । **ಯಷ್ಟಾ**—ದೇವತೆಗಳನ್ನು ಪೂಜಿಸುವವನೂ ಆದ । **ಸಃ**—ಅಗ್ನಿಯು । **ಸಬರ್ಧುಂ**—ಆಮೃತವನ್ನು (ಹಾಲನ್ನು) ಕರೆಯುವ । **ಧೇನುಂ**—ಧೇನುವನ್ನು । **ಅಸ್ವಂ**—ಕರುವನ್ನು ಹಾಕದೇ ಇದ್ದಾಗ್ಯೂ । **ದುಹಧ್ಯೈ**—ಕರೆಯುವಂತೆ ಮಾಡಿದನು.

ಭಾವಾರ್ಥ

ಶಯುವು ಮಿತ್ರಾವರುಣರನ್ನೂ, ಅರ್ಯಮನನ್ನೂ, ಪ್ರಶಸ್ಯವಾದವೂ, ಆರಿಸಲ್ಪಟ್ಟವೂ ಆದ ಶಸ್ತ್ರಮಂತ್ರಗಳಿಂದ ಪೂರ್ಣವಾಗಿ ಸ್ತುತಿಸಿದ ಕಾಲದಲ್ಲಿ, ದ್ಯಾವಾಪೃಥಿವಿಗಳೆರಡಕ್ಕೂ ಬಂಧುವೂ, ಸಕಲರನ್ನೂ ಕಷ್ಟದಿಂದ ದಾಟಿಸುವವನೂ, ದೇವತೆಗಳನ್ನು ಪೂಜಿಸುವವನೂ ಆದ ಅಗ್ನಿಯು, ಆಮೃತವನ್ನು (ಹಾಲನ್ನು) ಕರೆಯುವ ಧೇನುವು ಕರುವನ್ನು ಹಾಕದೇ ಇದ್ದಾಗ್ಯೂ ಅದನ್ನು ಕ್ಷೀರವನ್ನು ಕರೆಯುವಂತೆ ಮಾಡಿದನು.

English Translation

The kinsman of the two (worlds, Agni) the conveyer (of all), the sacrificer, (made) the ambrosia-yielding cow, which had not given birth, to yield milk (for Shayu), when he praises Mitra, Varuna and Aryaman, with most excellent and choice hymns.

ಸಂಹಿತಾಪಾಠಃ

ತದ್ಬಂಧುಃ ಸೂರಿರ್ದಿವಿ ತೇ ಧಿಯುಂಧಾ ನಾಭಾನೇದಿಷ್ಠೋ ರಪತಿ ಪ್ರ ವೇನನ್ ।
ಸಾ ನೋ ನಾಭಿಃ ಪರಮಾಸ್ಯ ವಾ ಘಾಹಂ ತತ್ಪಶ್ಚಾ ಕತಿಥಶ್ಚಿದಾಸ ॥ ೧೪ ॥

ಪದಪಾಠಃ

ತತ್ । ಬಂಧುಃ । ಸೂರಿಃ । ದಿವಿ । ತೇ । ಧಿಯುಂಧಾಃ । ನಾಭಾನೇದಿಷ್ಠಃ । ರಪತಿ । ಪ್ರ । ವೇನನ್ ।
ಸಾ । ನಃ । ನಾಭಿಃ । ಪರಮಾ । ಆಸ್ಯ । ವಾ । ಘ । ಅಹಂ । ತತ್ । ಪಶ್ಚಾ । ಕತಿಥಃ । ಚಿತ್ । ಆಸ ॥

ಸಾಯಣಭಾಷ್ಯಂ

ತದ್ಬಂಧುಃ । ಸೈವ ಪೃಥಿವೀ ಬಂಧುಕೋತ್ಪತ್ತ್ಯಧಿಷ್ಠಾನತ್ವೇನ ಯಸ್ಯಾಸೌ ತದ್ಬಂಧುಃ । ತನ್ಮಾತೃಕ ಇತ್ಯರ್ಥಃ । ಸೂರಿಃ ಸ್ತುತೇಃ ಪ್ರೇರಕೋ ದಿವಿ ವರ್ತಮಾನಸ್ಯ ತೇ ತವ ಸ್ವಭೂತ ಇತಿ ಶೇಷಃ ।

ತ್ಯದಪತ್ಯಭೂತ ಇತಿ ಯಾವತ್ । ಷಷ್ಠೀಸಾಮರ್ಥ್ಯಾತ್ಸಂಬಂಧಸಾಮಾನ್ಯಂ ಪ್ರತೀಯತೇ । ತಚ್ಚಾದಿತ್ಯ-ಪುತ್ರೋ ಮನುರ್ಮನೋಃ ಪುತ್ರೋ ನಾಭಾನೇದಿಷ್ಠ. ಇತ್ಯೇವಂ ಸೂರ್ಯಾಪತ್ಯತ್ವಂ ಪರ್ಯವಸ್ಯತಿ । ಸೂರ್ಯನಾಭಾನೇದಿಷ್ಠಯೋಃ ಸಂಬಂಧಶ್ಚರಮಪಾದ ಉತ್ತರಮಂತ್ರೇ ಚ ವಕ್ಷ್ಯತೇ । ಸ ಚ ಧಿಯಂಧಾಃ ಕರ್ಮಣಾಂ ಧಾರಕೋ ನಾಭಾನೇದಿಷ್ಠೋ ವೇನನ್ನಂಗಿರೋದತ್ತಂ ಗೋಸಹಸ್ರಂ ವೇನನ್ನಾಮಯನ್ ಪ್ರ ರಪತಿ । ಪ್ರಲಪತಿ । ಸ್ತೌತೀತ್ಯರ್ಥಃ । ವಾಪಿ ಚೇತ್ಯರ್ಥಃ । ಸಾ ದ್ಯೌರ್ಯೋಽಸ್ಮಾಕಂ ಪರಮೋತ್ಕೃಷ್ಟಾ ನಾಭಿರ್ಬಂಧಿಕಾ ಚಾಸ್ಯಾದಿತ್ಯಸ್ಯಾಧಿಷ್ಠಾನಭೂತಾಸ್ತಿ । ಫೇತಿ ಪೂರಣಃ । ಅಹಂ ತತ್ತಸ್ಯಾದಿತ್ಯಸ್ಯ ಪಶ್ಚಾ ಪಶ್ಚಾದನಂತರಂ ಕತಿಥಃ ಕತಿಪಯಾನಾಂ ಪೂರಣ ಆಸ । ಅಭವಂ । ಅನೇನ ಮಮಾದಿತ್ಯೇನ ಜನ್ಯಜನಕ-ಭಾವಃ ಸಂಬಂಧಃ ಸಂನಿಕೃಷ್ಟ ಇತ್ಯುಕ್ತಂ ಭವತಿ ॥

ಪ್ರತಿಪದಾರ್ಥ

ತದ್ಬಂಧುಃ—ಪೃಥ್ವಿಗೆ ಸಮೀಪಬಂಧುವೂ । **ಸೂರಿಃ**—ಸ್ತುತಿಕಾರಕನೂ । **ದಿವಿ**—ದ್ಯುಲೋಕಸ್ಥನಾದ । **ತೇ**—ನಿನಗೆ ಸೇರಿದವನೂ । **ಧಿಯಂಧಾಃ**—ಕರ್ಮಧಾರಕನೂ ಆದ । **ನಾಭಾನೇದಿಷ್ಠಃ**—ನಾಭಾನೇದಿಷ್ಠನು। **ವೇನನ್**—ಗೋರೂಪವಾದ ಪ್ರತಿಫಲವನ್ನಪೇಕ್ಷಿಸಿ । **ಪ್ರ ರಪತಿ**—ಪ್ರಶಂಸಿಸುತ್ತಾನೆ । **ಸಾ**—ದ್ಯುಲೋಕವು । **ನಃ**—ನಮಗೆ । **ಪರಮಾ**—ಉತ್ಕೃಷ್ಟವಾದ । **ನಾಭಿಃ**—ಸಂಬಂಧವುಳ್ಳದ್ದಾಗಿಯೂ । **ಅಸ್ಯ**—ಆದಿತ್ಯನಿಗೆ (ವಾಸಸ್ಥಾನವಾಗಿಯೂ ಇರುತ್ತದೆ) । **ಅಹಂ**—ನಾನು । **ತತ್**—ಆದಿತ್ಯನಿಗಿಂತ । **ಪಶ್ಚಾ**—ಅನಂತರದಲ್ಲಿ । **ಕತಿಥಃ**—ಕೆಲವು ತಲೆಮಾರುಗಳನಂತರ । **ಆಸ**—ಉತ್ಪನ್ನನಾಗಿದ್ದೇನೆ.

ಭಾವಾರ್ಥ

ಪೃಥ್ವಿಗೆ ಸಮೀಪಬಂಧುವೂ, ಸ್ತುತಿಕಾರಕನೂ, ದ್ಯುಲೋಕಸ್ಥನಾದ ನಿನಗೆ ಸೇರಿದವನೂ, ಕರ್ಮಧಾರಕನೂ ಆದ ನಾಭಾನೇದಿಷ್ಠನು ಗೋರೂಪವಾದ ಪ್ರತಿಫಲವನ್ನಪೇಕ್ಷಿಸಿ ಪ್ರಶಂಸಿಸುತ್ತಾನೆ. ದ್ಯುಲೋಕವು ನಮಗೆ ಉತ್ಕೃಷ್ಟವಾದ ಸಂಬಂಧವುಳ್ಳದ್ದಾಗಿಯೂ, ಆದಿತ್ಯನಿಗೆ ವಾಸಸ್ಥಾನವಾಗಿಯೂ ಇರುತ್ತದೆ. ನಾನು ಅದೇ ಆದಿತ್ಯನ ವಂಶದಲ್ಲಿ ಅವನಿಗಿಂತ ಕೆಲವು ತಲೆಮಾರುಗಳನಂತರ ಉತ್ಪನ್ನನಾಗಿದ್ದೇನೆ.

English Translation

The kinsman of the earth, the utterer of praise(belonging)to you(who abide) in heaven, Nabhanedishtha, the supporter of the rite, desiring (the recompense), repeats (this praise) : the (heaven) our most excellent bond (is the site)of the (sun), and I was after many (degrees) descended from him.

ಸಂಹಿತಾಪಾಠಃ

ಇಯಂ ಮೇ ನಾಭಿರಿಹ ಮೇ ಸಧಸ್ಥಮಿಮೇ ಮೇ ದೇವಾ ಅಯಮಸ್ಮಿ ಸರ್ವಃ ।

ದ್ವಿಜಾ ಅಹ ಪ್ರಥಮಜಾ ಋತಸ್ಯೇದಂ ಧೇನುರದುಹಜ್ಜಾಯಮಾನಾ ॥೧೯॥

ಪದಪಾಠಃ

ಇಯಂ । ಮೇ । ನಾಭಿಃ । ಇಹ । ಮೇ । ಸಧಸ್ಥಂ । ಇಮೇ । ಮೇ । ದೇವಾಃ । ಅಯಂ । ಅಸ್ಮಿ । ಸರ್ವಃ ।
ದ್ವಿಜಾಃ । ಅಹ । ಪ್ರಥಮಜಾಃ । ಋತಸ್ಯ । ಇದಂ । ಧೇನುಃ । ಅದುಹತ್ । ಜಾಯಮಾನಾ ॥೧೯॥

ಸಾಯಣಭಾಷ್ಯಂ

ಇಯಂ ಮಾಧ್ಯಮಿಕಾ ವಾಗ್ಮೇ ನಾಭಿಃ ಸಂನಾಹಿನೀ । ಆದಿತ್ಯಸ್ಯ ತಸ್ಯಾಶ್ಚಾಭೇದಾದಸ್ಯಸೌ ಮಾಧ್ಯಮಿಕಾ ವಾಗ್ಬಂಧಿಕಾ ಭವತಿ । ತಥಾ ಚ ಬ್ರಾಹ್ಮಣಂ । ಸಾ ಯಾ ವಾಗಸೌ ಸ ಆದಿತ್ಯ ಇತಿ ಬ್ರಾಹ್ಮಣಂ । ಇಹಾಸ್ಮಿನ್ಮಂಡಲೇ ಮೇ ಮಮ ಸಧಸ್ಥಂ ಸ್ಥಾನಂ । ಇಮೇ ಮೇ ದೇವಾ ದ್ಯೋತಮಾನಾ ರಶ್ಮಯೋ ಮೇ ಮಮ ಸ್ವಭೂತಾಃ । ಅಯಮಹಮಸ್ಮಿ ಸರ್ವಃ । ಸೂರ್ಯಸ್ಯ ಸ್ವಸ್ಯೋಕ್ತೇನ । ಪ್ರಕಾರೇಣಾಭೇದಾತ್ತದ್ದ್ವಾರಾ ಸರ್ವಾತ್ಮಕತ್ವಂ । ಅಹ ಕಿಂಚೇತ್ಯರ್ಥಃ । ದ್ವಿಜಾ ವಿಪ್ರಾ ಋತಸ್ಯ ಪ್ರಥಮಜಾಃ ಸತ್ಯಸ್ಯ ಪ್ರಥಮಜಾಃ ಸತ್ಯಭೂತಸ್ಯ ಬ್ರಹ್ಮಣಃ ಪ್ರಥಮೋತ್ಪನ್ನಾಃ । ಧೇನುಃ । ಪೃಶ್ನಿದೇವತಾ ಮಾಧ್ಯಮಿಕಾ ವಾಗ್ಜಾಯಮಾನೇದಂ ಸರ್ವಮದುಹತ್ । ದುದೋಹ । ಉದಪಾದಯದಿತ್ಯರ್ಥಃ ॥

ಪ್ರತಿಪದಾರ್ಥ

ಇಯಂ—ಈ ಮಾಧ್ಯಮಿಕಾವಾಗ್ದೇವಿಯು । **ಮೇ**—ನನಗೆ । **ನಾಭಿಃ**—ಸಮೀಪಸಂಬಂಧವುಳ್ಳವಳು । **ಇಹ**—ಈ ಆದಿತ್ಯಮಂಡಲದಲ್ಲಿ । **ಮೇ**—ನನ್ನ । **ಸಧಸ್ಥಂ**—ಸ್ಥಾನವಿರುತ್ತದೆ । **ದೇವಾಃ**—ಪ್ರಕಾಶಮಾನವಾದ । **ಇಮೇ**—ಈ ರಶ್ಮಿಗಳು । **ಮೇ**—ನನಗೆ ಸೇರಿದವಾಗಿವೆ । **ಅಯಂ**—ನಾನೇ । **ಸರ್ವಃ ಅಸ್ಮಿ**—ಸಕಲವೂ ಆಗಿದ್ದೇನೆ । **ಪ್ರಥಮಜಾಃ**—ಸತ್ಯರೂಪನಾದ ಬ್ರಹ್ಮನಿಂದ ಪ್ರಥಮೋತ್ಪನ್ನವಾದ । **ದ್ವಿಜಾಃ**—ದ್ವಿಜರೂಪದ ಗುಂಪುಗಳೂ ನಾನೇ ಆಗಿದ್ದೇನೆ । **ಧೇನುಃ**—ಪೃಶ್ನಿರೂಪದ ವಾಗ್ದೇವಿಯು । **ಜಾಯಮಾನಾ**—ಉತ್ಪನ್ನಳಾದೊಡನೆಯೇ । **ಇದಂ**--ಈ ಸಕಲ ವಿಶ್ವವನ್ನೂ । **ಅದುಹತ್**—ಉತ್ಪನ್ನಮಾಡಿದಳು.

ಭಾವಾರ್ಥ

ಮಾಧ್ಯಮಿಕಾವಾಗ್ದೇವಿಯು ನನಗೆ ಸಮೀಪಸಂಬಂಧವುಳ್ಳವಳು. ಈ ಆದಿತ್ಯಮಂಡಲದಲ್ಲಿ ನನ್ನ ಸ್ಥಾನವಿರುತ್ತದೆ. ಪ್ರಕಾಶಮಾನವಾದ ಈ ರಶ್ಮಿಗಳು ನನಗೆ ಸೇರಿದವಾಗಿವೆ. ನಾನೇ ಸಕಲವೂ ಆಗಿದ್ದೇನೆ. ಸತ್ಯರೂಪನಾದ ಬ್ರಹ್ಮನಿಂದ ಪ್ರಥಮೋತ್ಪನ್ನವಾದ ದ್ವಿಜರೂಪದ ಗುಂಪುಗಳೂ ನಾನೇ ಆಗಿದ್ದೇನೆ. ಪೃಶ್ನಿರೂಪದ ವಾಗ್ದೇವಿಯು ಉತ್ಪನ್ನಳಾದೊಡನೆಯೇ ಈ ಸಕಲ ವಿಶ್ವವನ್ನೂ ಉತ್ಪನ್ನಮಾಡಿದಳು.

English Translation

This (aerial voice) is my bond of affinity : here, (in the solar orb) is my abiding-place : these are my resplendent (rays) : I am this all : I am

the twice-born : the first-born of truth ; the cow, as soon as born, milked forth this (universe).

ಸಂಹಿತಾಪಾಠಃ

ಅಧಾಸು ಮಂದ್ರೋ ಅರತಿರ್ವಿಭಾವಾವ ಸ್ಯತಿ ದ್ವಿವರ್ತನಿರ್ವನೇಷಾಟ್ ।
ಊಧ್ವ್ರಾಯಚ್ಛ್ರೇಣಿರ್ನ ಶಿಶುರ್ದನ್ಮಕ್ಷೂ ಸ್ಥಿರಂ ಶೇವೃಧಂ ಸೂತ ಮಾತಾ॥

ಪದಪಾಠಃ

ಅಧ । ಆಸು । ಮಂದ್ರಃ । ಅರತಿಃ । ವಿಭಾವಾ । ಅವ । ಸ್ಯತಿ । ದ್ವಿವರ್ತನಿಃ । ವನೇಷಾಟ್ ।
ಊಧ್ವ್ರಾ । ಯತ್ । ಶ್ರೇಣಿಃ । ನ । ಶಿಶುಃ । ದನ್ । ಮಕ್ಷು । ಸ್ಥಿರಂ । ಶೇವೃಧಂ । ಸೂತ । ಮಾತಾ॥

ಸಾಯಣಭಾಷ್ಯಂ

ಅಧಾಥಾಸು ಚತಸೃಷು ದಿಕ್ಷು ಮಂದ್ರೋ ನೋದಮಾನೋಽರತಿರ್ಗಂತಾ ವಿಭಾವಾ ದೀಪ್ತಿಮಾನ್ ದ್ವಿವರ್ತನಿರ್ದ್ವಯೋರ್ಲೋಕಯೋರ್ಗಂತಾ ವನೇಷಾಡ್ವನೇ ಕಾಷ್ಠಾನಾಮುಳಿಭವನಿತಾಗ್ನಿರವ ಸ್ಯತಿ । ಅವಸನ್ನೋ ಭವತಿ ಯಾಗಾರ್ಥಂ । ಯಚ್ಚ ಯೋಽಗ್ನಿರೂರ್ಧ್ವೋಽನ್ಮುಖಾ ಶ್ರೇಣಿರ್ನ ಶಿಶುಃ ಶಂಸನೀಯಃ ಸೇನೇವ ಮುಕ್ಷು ಶೀಘ್ರಂ ದನ್ ಶತ್ರೂನ್ದಮಯತಿ ತಮಿಮಂ ಸ್ಥಿರಂ ನಿಶ್ಚಲಂ ಶೇವೃಧಂ ಸುಖಸ್ಯ ವರ್ಧಕಂ ಮಾತಾರಣಿಃ ಸೂತ । ಯಜ್ಞೇ ಜನಯಾಮಾಸ ॥

ಪ್ರತಿಪದಾರ್ಥ

ಆಸು—ಸಕಲ ದಿಕ್ಕುಗಳಲ್ಲಿಯೂ । **ಮಂದ್ರಃ**—ಹರ್ಷವನ್ನು ಹೊಂದುವವನೂ । **ಅರತಿಃ**—ಸಂಚಾರಶೀಲನೂ । **ವಿಭಾವಾ**—ಪ್ರಕಾಶಮಾನನೂ । **ದ್ವಿವರ್ತನಿಃ**—ಎರಡು ಲೋಕಗಳಲ್ಲೂ ಸಂಚರಿಸುವವನೂ । **ವನೇಷಾಟ್**—ವನವನ್ನು ದಹಿಸುವವನೂ ಆದ ಅಗ್ನಿಯು । **ಅವ ಸ್ಯತಿ**—ಯಾಗಾರ್ಥವಾಗಿ ಕೊನೆಗೊಳ್ಳುತ್ತಾನೆ । **ಯತ್**—ಯಾವ ಅಗ್ನಿಯು । **ಶ್ರೇಣಿಃ ನ**—ಉದ್ದವಾದ ಗೆರೆಯಂತೆ । **ಊರ್ಧ್ವಾ**—ಮೇಲ್ಬಾಗದ ಮುಖವುಳ್ಳವನೂ । **ಶಿಶುಃ**—ಪ್ರಶಂಸನೀಯನೂ ಆಗಿ । **ಮಕ್ಷು**—ಶೀಘ್ರವಾಗಿ । **ದನ್**—ಶತ್ರುಗಳನ್ನು ನಾಶಮಾಡುವನೋ ಆಂತಹ । **ಸ್ಥಿರಂ**—ಚಲನರಹಿತನೂ ! **ಶೇವೃಧಂ**—ಸುಖವನ್ನು ಬೆಳೆಸುವವನೂ ಆದ ಅಗ್ನಿಯನ್ನು । **ಮಾತಾ**—ಅರಣಿಯು । **ಸೂತ**—ಹಡೆದಳು.

ಭಾವಾರ್ಥ

ಸಕಲ ದಿಕ್ಕುಗಳಲ್ಲಿಯೂ ಹರ್ಷವನ್ನು ಹೊಂದುವವನೂ, ಸಂಚಾರಶೀಲನೂ, ಪ್ರಕಾಶಮಾನನೂ, ಎರಡು ಲೋಕಗಳಲ್ಲೂ ಸಂಚರಿಸುವವನೂ, ವನವನ್ನು ದಹಿಸುವವನೂ ಆದ ಅಗ್ನಿಯು ಉದ್ದವಾದ ಗೆರೆಯಂತೆ ಮೇಲ್ಬಾಗದ ಮುಖವುಳ್ಳವನೂ, ಪ್ರಶಂಸನೀಯನೂ ಆಗಿ, ಶೀಘ್ರವಾಗಿ ಶತ್ರುಗಳನ್ನು ನಾಶಮಾಡುತ್ತಾನೆ. ಯಾಗಾರ್ಥವಾಗಿ ಅವಶ್ಯವಿದ್ದಾಗ (ಯಜ್ಞಸಮಾಪ್ತಿಯಲ್ಲಿ) ಕೊನೆಗೊಳ್ಳುತ್ತಾನೆ. ಚಲನರಹಿತನೂ, ಸುಖವನ್ನು ಬೆಳೆಸುವವನೂ ಆದ ಅಗ್ನಿಯನ್ನು ಅರಣಿಯು ಹಡೆದಳು.

English Translation

He, who, exulting in these (regions), unresting, bright-shining, traversing the (two worlds), consuming the forest, terminates (in the fire of sacrifice), who, upward rising, like a line, adorable, quickly subdues (his foes) : him, unchangeable, the augmenter of happiness, his mother has brought forth.

ಸಂಹಿತಾಪಾಠಃ

ಅಧ್ಗಾ ಗಾವ ಉಪಮಾತಿಂ ಕನಾಯಾ ಅನು ಶ್ಯಾಂತಸ್ಯ ಕಸ್ಯ ಚಿತ್ಪರೇಯುಃ ।
ಶ್ರುಧಿ ತ್ವಂ ಸುದ್ರವಿಣೋ ನಸ್ತ್ವಂ ಯಾಳಾಶ್ವಮೇಧಸ್ಯ ವಾವೃಧೇ ಸೂನೃತಾಭಿಃ ॥

ಪದಪಾಠಃ

ಅಧ । ಗಾವಃ । ಉಪಮಾತಿಂ । ಕನಾಯಾಃ । ಅನು । ಶ್ಯಾಂತಸ್ಯ । ಕಸ್ಯ । ಚಿತ್ । ಪರಾ । ಈಯುಃ ।
ಶ್ರುಧಿ । ತ್ವಂ । ಸುದ್ರವಿಣಃ । ನಃ । ತ್ವಂ । ಯಾಟ್ । ಅಶ್ವಮೇಧಸ್ಯ । ವವೃಧೇ । ಸೂನೃತಾಭಿಃ ॥ ೨೧ ॥

ಸಾಯಣಭಾಷ್ಯಂ

ಅಧ ಸಂಪ್ರತಿ ಕಸ್ಯ ಚಿಚ್ಛಾಂತಸ್ಯ ಪ್ರವೃದ್ಧಸ್ಯ ಶ್ರಾಂತಸ್ಯ ವಾ । ಅತ್ಮನೋ ನಿರ್ದೇಶಃ । ಈದೃಶಸ್ಯ ನಾಭಾನೇದಿಷ್ಠಸ್ಯ ಕನಾಯಾಃ ಕಮನೀಯಾಯಾಃ ಸ್ತುತೇರ್ಗಾವೋ ವಾಚಃ । ಯದ್ವಾ । ವಾಚಃ ಸ್ತುತಯಃ ಕನಾಯಾಃ ಕಮನೀಯಾಯಾಃ ಸ್ತುತೇರುಪಮಾತಿಮುಪಮಾನಭೂತಮಿಂದ್ರಮನು ಪರೇಯುಃ । ಅನು ಪರಾಗಚ್ಛಂತಿ । ಹೇ ಸುದ್ರವಿಣಃ ಸುಧನಾಗ್ನೇ ತ್ವಂ ಶ್ರುಧಿ । ಶೃಣು । ನೋಽಸ್ಮಾಕಮಿಮಮಿಂದ್ರಂ ಯಾಟ್ । ಅಯಾಟ್ । ಯಜ । ತ್ವಂ ಚಾಶ್ವಮೇಧಸ್ಯ । ಅಶ್ವಮೇಧೋಽಶ್ವಮೇಧಯಾಜೀ ಮನುಃ । ತಸ್ಯ ಪುತ್ರಸ್ಯ ಮಮ ಸೂನೃತಾಭಿಃ ಸ್ತುತಿಭಿರ್ವವೃಧೇ । ವರ್ಧಸೇ ॥ ಪುರುಷವ್ಯತ್ಯಯಃ ॥ ಅಥವಾಯಂ ವರ್ಧತ ಇತಿ ಪರೋಕ್ಷೇಣ ನಿರ್ದೇಶಃ ॥

ಪ್ರತಿಪದಾರ್ಥ

ಕಸ್ಯ ಚಿತ್ ಶ್ಯಾಂತಸ್ಯ—ಪ್ರಶಾಂತಚಿತ್ತನಾದ ನಾಭಾನೇದಿಷ್ಠನ । **ಕನಾಯಾಃ**—ರಮ್ಯವಾದ ಸ್ತುತಿಯ। **ಗಾವಃ**—ವಾಕ್ಕುಗಳು । **ಉಪಮಾತಿಂ**—ಆದರ್ಶಪುರುಷನಾದ ಇಂದ್ರನನ್ನು । **ಅನು ಪರೇಯುಃ**—ಹೊಂದಿ ಸೇರುತ್ತವೆ । **ಸುದ್ರವಿಣಃ**—ಉತ್ತಮವಾದ ಧನವುಳ್ಳ ಎಲೈ ಅಗ್ನಿಯೇ । **ತ್ವಂ**—ನೀನು । **ನಃ**—ನಮ್ಮ ಸ್ತುತಿಯನ್ನು । **ಶ್ರುಧಿ**—ಕೇಳು । **ಯಾಟ್**—ದೇವತೆಗಳನ್ನು ಪೂಜಿಸು । **ತ್ವಂ**—ನೀನು । **ಅಶ್ವಮೇಧಸ್ಯ**—ಅಶ್ವಮೇಧಯಜ್ಞಕರ್ತನಾದ ಮನುವಿನ ಪುತ್ರನಾದ ನನ್ನ। **ಸೂನೃತಾಭಿಃ**—ಉತ್ತಮವಾದ ಸ್ತುತಿಗಳಿಂದ । **ವವೃಧೇ**—ವೃದ್ಧಿಯನ್ನು ಹೊಂದುತ್ತೀಯೆ.

ಭಾವಾರ್ಥ

ಪ್ರಶಾಂತಚಿತ್ತನಾದ ನಾಭಾನೇದಿಷ್ಠನ ರಮ್ಯವಾದ ಸ್ತುತಿವಾಕ್ಯಗಳು ಆದರ್ಶಪುರುಷನಾದ ಇಂದ್ರನನ್ನು ಹೋಗಿ ಸೇರುತ್ತವೆ. ಉತ್ತಮವಾದ ಧನವುಳ್ಳ ಎಲೈ ಅಗ್ನಿಯೇ, ನೀನು ನಮ್ಮ ಸ್ತುತಿಯನ್ನು ಕೇಳು. ದೇವತೆಗಳನ್ನು ಪೂಜಿಸು. ಅಶ್ವಮೇಧ ಯಜ್ಞಕರ್ತನಾದ ಮನುವಿನಪುತ್ರನಾದ ನನ್ನ ಉತ್ತಮವಾದ ಸ್ತುತಿಗಳಿಂದ ನೀನು ವೃದ್ಧಿಯನ್ನು ಹೊಂದುತ್ತೀಯೆ.

English Translation

The words of the desiraale (praise), of a certain tranquil person (Nabhanedishtha), attain the prototype (Indra), Do you, who are the giver of wealth (Agni), here us : offer sacrifice, you are magnified by the sincere eulogiums of Ashwaghna,

ಸಂಹಿತಾಪಾಠಃ

ಅಧ ತ್ವಮಿಂದ್ರ ವಿಧ್ಯಾಸ್ಮಾನ್ಮಹೋ ರಾಯೇ ನೃಪತೇ ವಜ್ರಬಾಹುಃ ।
ರಕ್ಷಾ ಚ ನೋ ಮಘೋನಃ ಪಾಹಿ ಸೂರೀನನೇಹಸಸ್ತೇ ಹರಿವೋ ಅಭಿಷ್ಟೌ ॥

ಪದಪಾಠಃ

ಅಧ । ತ್ವಂ । ಇಂದ್ರ । ವಿದ್ಧಿ । ಅಸ್ಮಾನ್ । ಮಹಃ । ರಾಯೇ । ನೃಽಪತೇ । ವಜ್ರಽಬಾಹುಃ ।
ರಕ್ಷ । ಚ । ನಃ । ಮಘೋನಃ । ಪಾಹಿ । ಸೂರೀನ್ । ಅನೇಹಸಃ । ತೇ । ಹರಿಽವಃ । ಅಭಿಷ್ಟೌ ॥ ೨೨ ॥

ಸಾಯಣಭಾಷ್ಯಂ

ಹೇ ಇಂದ್ರ ಅಧಾಧುನಾ ವಜ್ರಬಾಹುಸ್ತ್ವಮಸ್ಮಾನ್ಮಹೋ ಮಹತೇ ರಾಯೇ ಧನಾಯ ವಿದ್ಧಿ । ಜಾನೀಹಿ । ಹೇ ಇಂದ್ರ ಮಘೋನೋ ಹವಿಷ್ಮತಃ ಸೂರೀನ್ ಸ್ತುತಿಪ್ರೇರಕಾನ್ನೋಽಸ್ಮಾನ್ರಕ್ಷ ಚ । ಹೇ ಹರಿವೋ ಹರಿಭ್ಯಾಂ ತದ್ವನ್ನಿಂದ್ರ ತೇ ತವಾಭಿಷ್ಟಾವಭಿಗಮನೇಽನೇಹಸೋಽಪಾಪಾಃ ಸ್ಯಾಮೇತಿ ಶೇಷಃ ॥

ಪ್ರತಿಪದಾರ್ಥ

ನೃಪತೇ—ಮಾನವರಿಗೆಲ್ಲಾ ಪ್ರಭುವಾದ । ಇಂದ್ರ—ಎಲೈ ಇಂದ್ರನೇ । ಅಧ—ಈಗ । ವಜ್ರಬಾಹುಃ—ವಜ್ರವನ್ನು ಕೈಯಲ್ಲಿ ಧರಿಸಿರುವ ನೀನು । ಅಸ್ಮಾನ್—ನಮ್ಮನ್ನು । ಮಹಃ—ಮಹತ್ತಾದ । ರಾಯೇ—ಧನಕ್ಕೆ । ವಿದ್ಧಿ—ಪಾತ್ರರೆಂದು ತಿಳಿ । ಮಘೋನಃ—ಹವಿಸ್ಸನ್ನು ಸೊಂದಿರುವ । ಸೂರೀನ್—ಸ್ತುತಿಕರ್ತರಾದ । ನಃ—ನಮ್ಮನ್ನು । (ಪಾಹಿ) ರಕ್ಷ—ರಕ್ಷಿಸು । ಹರಿವಃ—ಅಶ್ವಯುಕ್ತನಾದ ಎಲೈ ಇಂದ್ರನೇ । ತೇ—ನಿನ್ನ । ಅಭಿಷ್ಟೌ—ಆಗಮನಕಾಲದಲ್ಲಿ । ಅನೇಹಸಃ—ನಾವು ಪಾಪರಹಿತರಾಗಿರುವಂತಾಗಲಿ.

ಭಾವಾರ್ಥ

ಮಾನವರಿಗೆಲ್ಲ ಪ್ರಭುವಾದ ಎಲೈ ಇಂದ್ರನೇ, ವಜ್ರಾಯುಧವನ್ನು ಕೈಯಲ್ಲಿ ಧರಿಸಿರುವ ನೀನು ನಮ್ಮನ್ನು ಮಹತ್ತಾದ ಧನಕ್ಕೆ ಪಾತ್ರರೆಂದು ತಿಳಿ. ಹವಿಸ್ಸನ್ನು ಹೊಂದಿ ಸ್ತುತಿಕರ್ತರಾದ ನಮ್ಮನ್ನು ರಕ್ಷಿಸು. ಅಶ್ವಯುಕ್ತನಾದ ಎಲೈ ಇಂದ್ರನೇ, ನಿನ್ನ ಆಗಮನಕಾಲದಲ್ಲಿ ನಾವು ಪಾಪರಹಿತರಾಗಿರುವಂತಾಗಲಿ.

English Translation

Do you, Indra, king of men, who are the bearer of the thunderbolt, regard us now to (give us) great riches, and protect us who are affluent in (oblations), who utter (your) praise ; may we, lord of bay steeds, (be) free from blame on your approach.

ಸಂಹಿತಾಪಾಠಃ

ಅಧ॑ ಯದ್ರಾ॒ಜಾನಾ॑ ಗವಿ॒ಷ್ಟೌ ಸ॒ರತ್ಸ॑ರಣ್ಯುಃ ಕಾ॒ರವೇ॑ ಜ॒ರಣ್ಯುಃ ।
ವಿ॒ಪ್ರಃ ಪ್ರೇ॒ಷ್ಠಃ ಸ ಹ್ಯೇ॑ಷಾಂ ಬ॒ಭೂವ॑ ಪ॒ರಾ ಚ॑ ವ॒ಕ್ಷದ್ಗು॒ತ ಪ॑ರ್ಷ॒ದೇನಾ॑ನ್ ॥

ಪದಪಾಠಃ

ಅಧ॑ । ಯತ್ । ರಾ॒ಜಾ॒ನಾ । ಗೋ೩ಇ॑ಷ್ಟೌ । ಸ॒ರತ್ । ಸ॒ರ॒ಣ್ಯುಃ । ಕಾ॒ರವೇ॑ । ಜ॒ರ॒ಣ್ಯುಃ ।
ವಿ॒ಪ್ರಃ । ಪ್ರೇ॒ಷ್ಠಃ । ಸಃ । ಹಿ । ಏ॒ಷಾ॒ಂ । ಬ॒ಭೂವ॑ । ಪ॒ರಾ । ಚ॒ । ವ॒ಕ್ಷತ್ । ಉ॒ತ । ಪ॒ರ್ಷ॒ತ್ । ಏ॒ನಾ॒ನ್ ॥

ಸಾಯಣಭಾಷ್ಯಂ

ಹೇ ರಾಜಾನಾ ರಾಜಮಾನೌ ಮಿತ್ರಾವರುಣೌ ಅಧಾಧುನಾ ಸತ್ರಸನಾಪ್ತೌ ಯದ್ಯಸ್ಮಾದ್ಗವಿಷ್ಟೌ ಗವಾಮೇಷಣಾಯಾಂ ಸತ್ಯಾಂ ಸರುಣ್ಯುಃ ಸರಣಶೀಲೋ ಯಮುಃ ಸರತ್ ಗಚ್ಛತಿ ಕಾರವೇ ಕರ್ಮಾಣಿ ಕುರ್ವತೇಽಂಗಿರಸಾಂ ಗಣಾಯ । ಕಿಮಿಚ್ಛನ್ । ಜರಣ್ಯುಸ್ತಸ್ಯಾ ಅಂಗಿರಸಾಂ ಗಣಾಯ ಸ್ತುತಿಮಿಚ್ಛನ್ । ತಸ್ಯಾತ್ಸ ವಿಪ್ರೋ ನಾಭಾನೇದಿಷ್ಠ ಏಷಾಮಂಗಿರಸಾಂ ಪ್ರೇಷ್ಠಃ ಪ್ರಿಯತಮೋ ಬಭೂವ । ಭವತು । ಹೀತಿ ಪೂರಣಃ । ತೇಷಾಂ ಕರ್ತವ್ಯಂ ಪರಾ ಚ ವಕ್ಷತ್ । ಪರಾವಹತು । ಉತಾಪಿ ಚೈನಾನಂಗಿರಸಃ ಪರ್ಷತ್ ಪಾರಯೆತ್ಪಿತ್ಯಾತ್ಮನ ಏವಾಶಾಸ್ತೇ ॥

ಪ್ರತಿಪದಾರ್ಥ

ರಾಜಾನಾ—ಪ್ರಭುಗಳಾದ ಎಲೈ ಮಿತ್ರಾವರುಣರೇ । **ಅಧ**—ಈಗ । **ಯತ್**—ಯಾವ ನಿಮಿತ್ತವಾಗಿ । **ಗವಿಷ್ಟೌ**—ಗೋವುಗಳನ್ನು ಹುಡುಕುವ ಕಾಲದಲ್ಲಿ । **ಸರಣ್ಯುಃ**—ಸಂಚಾರಶೀಲನಾದ ಯಮನು । **ಕಾರವೇ**—ಸ್ತುತಿಕರ್ತರಾದ ಅಂಗಿರಸ್ಸುಗಳಿಗೆ ಸಹಾಯಮಾಡಲು । **ಜರಣ್ಯುಃ**—ಅವರ ಸ್ತುತಿಯನ್ನಿಚ್ಛಿಸಿ । **ಸರತ್**—

ಬರುವನೋ ಆದುದರಿಂದಲೇ । **ವಿಪ್ರಃ**—ಮೇಧಾವಿಯಾದ । **ಸಃ**—ಆ ನಾಭಾನೇದಿಷ್ಠನು । **ಏಷಾಂ**—ಈ ಅಂಗಿರಸ್ಸುಗಳಿಗೆ । **ಪ್ರೇಷ್ಠಃ**—ಅತ್ಯಂತ ಪ್ರಿಯತಮನಾಗಿ । **ಬಭೂವ**—ಆಗಿರಲಿ । **ಪರಾ ಚ ವಕ್ಷತ್**—ಅವರ ಕರ್ತವ್ಯವನ್ನು ನಿರ್ವಹಿಸಲಿ । **ಉತ**—ಮತ್ತು । **ಏನಾನ್**—ಅಂಗಿರಸ್ಸುಗಳನ್ನು । **ಪರ್ಷತ್**—ಅವರ ಕಾರ್ಯವನ್ನು ಸಾಧಿಸುವಂತೆ ಮಾಡಲಿ.

ಭಾವಾರ್ಥ

ಪ್ರಭುಗಳಾದ ಎಲೈ ಮಿತ್ರಾವರುಣರೇ, ಯಾವ ನಿಮಿತ್ತವಾಗಿ ಗೋವುಗಳನ್ನು ಹುಡುಕುವ ಕಾಲದಲ್ಲಿ ಸಂಚಾರಶೀಲನಾದ ಯಮನು ಸ್ತುತಿಕರ್ತರಾದ ಅಂಗಿರಸ್ಸುಗಳಿಗೆ ಸಹಾಯಮಾಡಲು ಅವರ ಸ್ತುತಿಯನ್ನಿಚ್ಛಿಸಿ ಬರುವನೋ ಆದುದರಿಂದಲೇ ಮೇಧಾವಿಯಾದ ನಾಭಾನೇದಿಷ್ಠನು ಈ ಅಂಗಿರಸ್ಸುಗಳಿಗೆ ಅತ್ಯಂತ ಪ್ರಿಯತಮನಾಗಿರಲಿ. ಅವರ ಕರ್ತವ್ಯವು ನಿರ್ವಿಘ್ನವಾಗಿ ನೆರವೇರುವಂತೆ ಮಾಡಲಿ.

English Translation

Since, royal (Mitra and Varuna), the impetuous (Yama) now approaches in expectation of (the gift of) cattle, and desiring praise for the sacrificing (band of the Angirasas); the sage (Nabhanedishtha) has been held most dear by them; may he accomplish (what has to be effected), and make them successful.

ಸಂಹಿತಾಪಾಠಃ

ಅಧಾನ್ವಸ್ಯ ಜೇನ್ಯಸ್ಯ ಪುಷ್ಟೌ ವೃಥಾ ರೇಭಂತ ಈಮಹೇ ತದೂ ನು ।
ಸರಣ್ಯುರಸ್ಯ ಸೂನುರಶ್ವೋ ವಿಪ್ರಶ್ಚಾಸಿ ಶ್ರವಸಶ್ಚ ಸಾತೌ ॥ ೨೪ ॥

ಪದಪಾಠಃ

ಅಧ । ನು । ಅಸ್ಯ । ಜೇನ್ಯಸ್ಯ । ಪುಷ್ಟೌ । ವೃಥಾ । ರೇಭಂತಃ । ಈಮಹೇ । ತತ್ । ಊಂ ಇತಿ । ನು ।
ಸರಣ್ಯುಃ । ಅಸ್ಯ । ಸೂನುಃ । ಅಶ್ವಃ । ವಿಪ್ರಃ । ಚ । ಅಸಿ । ಶ್ರವಸಃ । ಚ । ಸಾತೌ ॥ ೨೪ ॥

ಸಾಯಣಭಾಷ್ಯಂ

ಅನಯಾ ವರುಣಂ ಪೃಥಕ್ ಸ್ತೌತಿ । ಅಧಾಥ ನು ಕ್ಷಿಪ್ರಮಸ್ಯ ಜೇನ್ಯಸ್ಯ ಜಯಶೀಲಸ್ಯ ಸ್ತುತ್ಯಾ ಜೇತವ್ಯಸ್ಯ ವಾ ತಸ್ಯೈಭೂತಂ ಗವಾದಿಧನಂ ಪುಷ್ಟೌ ಪೋಷೇ ನಿಮಿತ್ತೇ ಸತಿ ತಸ್ಯ ಪುಷ್ಟ್ಯರ್ಥಂ ವಾ ವೃಥಾನಾಯಾಸೇನ ರೇಭಂತಃ ಸ್ತುವಂತೋ ನು ಕ್ಷಿಪ್ರಮೀಮಹೇ । ಯಾಚಾಮಹೇ । ಸರಣ್ಯುಃ ಶೀಘ್ರಸರಣಶೀಲೋಽಶ್ವೋಽಸ್ಯ ವರುಣಸ್ಯ ಸೂನುಃ ಪುತ್ರಃ। ವರುಣಾದ್ಧ್ಯಶ್ವ ಉತ್ಪನ್ನಃ । ಅಥ ಪ್ರತ್ಯಕ್ಷಕೃತಃ। ಹೇ ವರುಣ ತ್ವಂ ವಿಪ್ರಶ್ಚಾಸಿ । ವಿಪ್ರವತ್ಪೂಜ್ಯಃ ಶುದ್ಧೋ ವಾ ಭವಸಿ । ಶ್ರವಸಶ್ಚಾನ್ನಸ್ಯ ಸಾತೌ ಲಾಭೇಽಸ್ಮಾಕಮನ್ನಲಾಭಾಯ ಪ್ರವೃತ್ತಶ್ಚ ಭವಸಿ ॥

ಪ್ರತಿಪದಾರ್ಥ

ಅಧ—ಅನಂತರ। **ನು**—ಕ್ಷಿಪ್ರವಾಗಿ। **ಜೇನ್ಯಸ್ಯ ಅಸ್ಯ**—ಜಯಶೀಲನಾದ ವರುಣನ। **-ತತ್-**ಗವಾದಿಧನವನ್ನು। **ಪುಷ್ಟ್ಯೈ**—ಪೋಷಿಸುವ ನಿಮಿತ್ತವಾಗಿ (ಅಥವಾ ವರುಣನ ತೃಪ್ತ್ಯರ್ಥವಾಗಿ)। **ವೃಥಾ**—ಸ್ವಯಂಪ್ರೇರಿತರಾಗಿ। **ರೇಭಂತಃ**—ಸ್ತುತಿಸುವ ನಾವು। **ಈಮಹೇ**—ಯಾಚಿಸುತ್ತೇವೆ। **ಸರಣ್ಯುಃ**—ಶೀಘ್ರಸಂಚಾರಿಯಾದ। **ಅಶ್ವಃ**—ಅಶ್ವವು। **ಅಸ್ಯ**—ವರುಣನಿಗೆ। **ಸೂನುಃ**—ಪುತ್ರರೂಪವಾಗಿದೆ। (ಎಲೈ ವರುಣನೇ) **ವಿಪ್ರಃ ಅಸಿ**—ನೀನು ಮೇಧಾವಿಯಾಗಿದ್ದೀಯೆ। **ಶ್ರವಸಃ ಸಾತೌ**—ನಮಗೆ ಅನ್ನದಾನಮಾಡಲು ಯೋಗ್ಯನಾಗಿದ್ದೀಯೆ.

ಭಾವಾರ್ಥ

ಜಯಶೀಲನಾದ ವರುಣನ ತೃಪ್ತ್ಯರ್ಥವಾಗಿ ಸ್ವಯಂಪ್ರೇರಿತರಾಗಿ ಸ್ತುತಿಸುವ ನಾವು ಯಾಚಿಸುತ್ತೇವೆ. ಶೀಘ್ರಸಂಚಾರಿಯಾದ ಅಶ್ವವು ವರುಣನಿಗೆ ಪುತ್ರರೂಪವಾಗಿದೆ. ಎಲೈ ವರುಣನೇ, ನೀನು ಮೇಧಾವಿಯಾಗಿದ್ದೀಯೆ ಅಥವಾ ವಿಪ್ರನಂತೆ ಪೂಜ್ಯನಾಗಿದ್ದೀಯೆ. ನಮಗೆ ಅನ್ನದಾನಮಾಡಲು ಪ್ರವೃತ್ತನಾಗಿಯೂ ಇದ್ದೀಯೆ.

English Translation

And for the contentment of this victorious (Varuna), praising (him) without an effort, we solicit this (of him), (that) his progency, a swift horse, (may be ours), and you, (Varuna), are wise, and (are occupied) in procuring us food.

ವಿಶೇಷವಿಷಯಗಳು

ಅಶ್ವವು ವರುಣನಿಂದ ಉತ್ಪತ್ತಿಯಾಯಿತೆಂದು **ವಾರುಣೋ ವಾ ಅಶ್ವಃ** ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಹೇಳಿರುವುದರಿಂದ ಇಲ್ಲಿ ಅಶ್ವವು ವರುಣನ ಪುತ್ರರೂಪವಾಗಿದೆಯೆಂದು ವರ್ಣಿಸಿದೆ.

ಸಂಹಿತಾಪಾಠಃ

ಯುವೋರ್ಯದಿ ಸಖ್ಯಾಯಾಸ್ಮೇ ಶರ್ಧಾಯ ಸ್ತೋಮಂ ಜುಜುಷೇ ನಮಸ್ವಾನ್।
ವಿಶ್ವತ್ರ ಯಸ್ಮಿನ್ನಾ ಗಿರಃ ಸಮೀಚೀಃ ಪೂರ್ವೀವ ಗಾತುರ್ದಾಶತ್ಸೂನೃತಾಯೈ ॥ ೨೫ ॥

ಪದಪಾಠಃ

ಯುವೋಃ। ಯದಿ। ಸಖ್ಯಾಯ। ಅಸ್ಮೇ ಇತಿ। ಶರ್ಧಾಯ। ಸ್ತೋಮಂ। ಜುಜುಷೇ। ನಮಸ್ವಾನ್।
ವಿಶ್ವತ್ರ। ಯಸ್ಮಿನ್। ಆ। ಗಿರಃ। ಸಂಽಈಚೀಃ। ಪೂರ್ವೀಽಇವ। ಗಾತುಃ। ದಾಶತ್। ಸೂನೃತಾಯೈ॥

ಸಾಯಣಭಾಷ್ಯಂ

ಹೇ ಮಿತ್ರಾವರುಣೌ ಯುವೋರ್ಯುವಯೋಃ ಶರ್ಧಾಯೇ ಬಲವತೇಽಸ್ಮೇ ಅಸ್ಮಾಕಂ ಸಖ್ಯಾಯೇ। ಯದ್ವಾ । **ಯುವಯೋಃ ಸಖ್ಯಾಯಾಸ್ಮೇ ಅಸ್ಮಾಕಂ ಶರ್ಧಾಯೇ ಬಲಾಯೇ ಚ** । ಯದಿ ನಮಸ್ವಾನನ್ನ-ವಾನಧ್ವರ್ಯುಃ **ಸ್ತೋತ್ರವಾನ್ಹೋತಾ ವಾ ಸೋಮಂ ಜುಜುಷೇ ಸೇವತೇ**। **ಯಸ್ಮಿನ್ ಸಖ್ಯೇ ಸಿದ್ಧೇ ಸತಿ ವಿಶ್ವತ್ರ ವಿಶ್ವಸ್ಮಿನ್ನಿನಸದೇ ಗಿರೋಽಂಗಿರಸಾಂ ಸಂಬಂಧಿನ್ಯಃ ಸಮೀಚೀಃ ಸಮೀಚ್ಯೇ ಆ ಗಚ್ಛಂತೀತಿ ಶೇಷಃ** । **ಉದಾರಾಣಾಂ ಗೃಹ ಇದಂ ಗೃಹಾಣೇದಂ ಗೃಹಾಣೇತ್ಯೇವಂರೂಪಾಃ ಶ್ರೂಯಂತ ಇತ್ಯರ್ಥಃ**। ಯದ್ವಾ । **ಯಾಗಾನುಷ್ಠಾತೄಣಾಂ ಸ್ತುತಿಗಿರ ಆಗಚ್ಛಂತೀತಿ। ಪೂರ್ವೀವ ಗಾತುಃ ಪ್ರಾಚೀ ದಿಗಿವ ಸಾ ಯೇಥಾ ಗಚ್ಛತಾಂ ಸುಖಂ ಪ್ರಯಚ್ಛತಿ ತದ್ವತ್** । ಯದ್ವಾ । **ಪೂರ್ವೀ ಪುರಾ ಪ್ರಸಿದ್ಧಾ ಪುರಾತನೀವ ಗಾತುಃ ಸರಣಿರಿವ ಸಾ ಯಥಾ ಗಚ್ಛತಾಂ ಸುಖಂ ಪ್ರಯಚ್ಛತಿ ತದ್ವತ್** । **ಸೂನೃತಾಯೈ ಪ್ರಿಯಸತ್ಯ-ರೂಪಾಯೈ ಸ್ತುತಿವಾಚೇ ದಾಶತ್** । **ಪ್ರಯಚ್ಛತು** ॥

ಪ್ರತಿಪದಾರ್ಥ

(ಎಲೈ ಮಿತ್ರಾವರುಣರೇ) **ಯಸ್ಮಿನ್**—ಯಾವ ಮಿತ್ರತ್ವವು ಸಿದ್ಧಿಸಿದರೆ । **ಗಿರಃ**—ಅಂಗಿರಸ್ಸುಗಳ ಸ್ತುತಿಗಳು । **ವಿಶ್ವತ್ರ**—ಸಕಲ ಪ್ರದೇಶಗಳಲ್ಲೂ । **ಸಮೀಚೀಃ**—ಒಂದೇ ಗುರಿಯುಳ್ಳವಾಗಿ । **ಆ**—ಪ್ರಸರಿಸುವುವೋ ಅಂತಹ । **ಯುವೋಃ ಸಖ್ಯಾಯ**—ನಿಮ್ಮ ಮಿತ್ರತ್ವಕ್ಕಾಗಿಯೂ । **ಅಸ್ಮೇ**—ನಮ್ಮ । **ಶರ್ಧಾಯೇ**—ಬಲದ ಲಾಭಕ್ಕಾಗಿಯೂ । **ನಮಸ್ವಾನ್**—ಹವಿರ್ಯುಕ್ತವಾದ ಅಧ್ವರ್ಯುವು ಅಥವಾ ಹೋತೃವು । **ಸ್ತೋಮಂ**—ಸ್ತೋತ್ರವನ್ನು । **ಜುಜುಷೇ**—ಪಠಿಸುತ್ತಾನೆ । **ಪೂರ್ವೀ ಗಾತುಃ ಇವ**—ಪುರಾತನವಾದ ಮಾರ್ಗದ ಸಂಚಾರವು ಸುಖವನ್ನುಂಟುಮಾಡುವಂತೆ। **ಸೂನೃತಾಯೈ**-ಉತ್ತಮವಾದ ಸ್ತುತಿಕರ್ತನಿಗೆ । **ದಾಶತ್**-ಮಿತ್ರಾವರುಣರು ಸುಖವನ್ನು ಕೊಡಲಿ.

ಭಾವಾರ್ಥ

ಎಲೈ ಮಿತ್ರಾವರುಣರೇ, ಯಾವ ನಿಮ್ಮ ಮಿತ್ರತ್ವವು ಸಿದ್ಧಿಸಿದರೆ ಆಂಗಿರಸ್ಸುಗಳ ಸ್ತುತಿಗಳು ಸಕಲ ಪ್ರದೇಶಗಳಲ್ಲೂ ಒಂದೇ ಗುರಿಯುಳ್ಳವಾಗಿ ಪ್ರಸರಿಸುವುವೋ ಅಂತಹ ನಿಮ್ಮ ಮಿತ್ರತ್ವಕ್ಕಾಗಿಯೂ, ನಮ್ಮ ಬಲದ ಲಾಭಕ್ಕಾಗಿಯೂ, ಹವಿರ್ಯುಕ್ತನಾದ ಅಧ್ವರ್ಯುವೂ ಅಥವಾ ಸ್ತುತಿಕರ್ತನಾದ ಹೋತೃವು ಸ್ತೋತ್ರವನ್ನು ಪಠಿಸುತ್ತಾನೆ. ಪುರಾತನವಾವ ಮಾರ್ಗದ ಸಂಚಾರವುಸುಖವನ್ನುಂಟುಮಾಡುವಂತೆ ಉತ್ತಮವಾದ ಸ್ತುತಿಕರ್ತನಿಗೆ ಮಿತ್ರಾವರುಣರು ಸುಖವನ್ನು ಕೊಡಲಿ.

English Translation

If the priest offer homage to you two (Mitra and Varuna) for the sake of your friendship and our invigoration, on (the formation of) which (friendship) the praises (of the Angirasas go) everywhere in a common direction ; may he give (pleasure) to the utterer of praise, like an ancient road.

ಸಂಹಿತಾಪಾಠಃ

ಸ । ಗೃಣಾನೋ । ಅದ್ಭಿರ್ದೇವವಾನಿತಿ । ಸುಬಂಧುರ್ನಮಸಾ । ಸೂಕ್ತೈಃ ।

ವರ್ಧದುಕ್ಥೈರ್ವಚೋಭಿರಾ ಹಿ ನೂನಂ ವೃಧ್ಪೈತಿ ಪಯಸ ಉಸ್ರಿಯಾಯಾಃ॥

ಪದಪಾಠಃ

ಸಃ । ಗೃಣಾನಃ । ಅತ್ಕಭಿಃ । ದೇವವ್ಕವಾನ್ । ಇತಿ । ಸುವ್ಕಬಂಧುಃ । ನಮಸಾ । ಸುವ್ಕಉಕ್ತೈಃ ।
ವರ್ಧತ್ । ಉಕ್ತೈಃ । ವಚಃವ್ಕಭಿಃ । ಆ । ಹಿ । ನೂನಂ । ವಿ । ಅಧ್ವಾ । ಏತಿ । ಪಯಸಃ । ಉಸ್ರಿ-
ಯಾಯಾಃ ॥ ೨೬ ॥

ಸಾಯಣಭಾಷ್ಯಂ

ದೇವತಾಭಿರ್ದೇವವಾನ್ ಸುಬಂಧುಃ ಶೋಭನಬಂಧನಃ ಸ ವರುಣ ಇತೀತ್ಥಂ ಕೃತಪ್ರಕಾರೇಣ ನಮಸಾ ನಮಸ್ಕಾರೇಣ ಸೂಕ್ತೈಶ್ಚ ಗೃಣಾನಃ ಸ್ತೂಯಮಾನಃ ಸನ್ವರ್ಧತ್ । ವರ್ಧತಾಂ । ಉಕ್ಥೈರ್ವಚೋಭಿರುಚ್ಯಮಾನೈಃ ಪ್ರಶಸ್ತೈರ್ವಾ ಸ್ತುತಿವಚೋಭಿರ್ನೂನಮಿದಾನೀಮಾ ಗಚ್ಛತ್ವಿತಿ ಶೇಷಃ । ಹೀತಿ ಪೂರಣಃ । ತಸ್ಯ ಯಾಗಾರ್ಥಮುಸ್ರಿಯಾಯಾ ಗೋಃ ಪಯಸೋಽಧ್ವಾ ಮಾರ್ಗೋ ವ್ಯೇತಿ। ಸ್ತನಾಗ್ರಾಣಿ ಕ್ಷರಂತೀತ್ಯರ್ಥಃ ॥

ಪ್ರತಿಪದಾರ್ಥ

ಸ ವರುಣಃ—ಪ್ರಸಿದ್ಧನಾದ ವರುಣನು । **ಅದ್ಭಿಃ**—ಸಕಲ ಜಲಗಳೊಡನೆಯೂ । **ದೇವವಾನ್**—ಸಕಲ ದೇವತೆಗಳೊಡನೆಯೂ ಕೂಡಿಕೊಂಡು । **ಸುಬಂಧುಃ**—ಉತ್ತಮವಾದ ಬಂಧುತ್ವವುಳ್ಳವನಾಗಿದ್ದಾನೆ । **ಇತಿ**—ಈ ಪ್ರಕಾರವಾಗಿ । **ನಮಸಾ**—ನಮಸ್ಕಾರದಿಂದಲೂ । **ಸೂಕ್ತೈಃ**—ಸ್ತುತಿಗಳಿಂದಲೂ । **ಗೃಣಾನಃ**—ಸ್ತುತಿಸಲ್ಪಟ್ಟ ವರುಣನು । **ವರ್ಧತ್**—ವೃದ್ಧಿಯನ್ನು ಹೊಂದುತ್ತಾನೆ। **ಉಕ್ತೈಃ**—ಉಕ್ಥಮಂತ್ರಗಳಿಂದಲೂ । **ವಚೋಭಿಃ**—ಸ್ತುತಿವಾಕ್ಯಗಳಿಂದಲೂ ಆಕರ್ಷಿತನಾಗಿ । **ನೂನಂ**—ಈಗ । **ಆ**—ಬರಲಿ । **ಉಸ್ರಿಯಾಯಾಃ**—ಗೋವಿನ । **ಪಯಸಃ**—ಕ್ಷೀರದ । **ಅಧ್ವಾ**—ಮಾರ್ಗವು । **ವಿ ಏತಿ**—ಅವನ ಪೂಜೆಗಾಗಿ ತೆರೆದಿದೆ.

ಭಾವಾರ್ಥ

"ಪ್ರಸಿದ್ಧನಾದ ವರುಣನು ಸಕಲ ಜಲಗಳೊಡನೆಯೂ, ಸಕಲ ದೇವತೆಗಳೊಡನೆಯೂ ಕೂಡಿಕೊಂಡು ಉತ್ತಮವಾದ ಬಂಧುತ್ವವುಳ್ಳವನಾಗಿದ್ದಾನೆ" ಎಂದು ಪ್ರಶಂಸಿಸಿ ನಮಸ್ಕರಿಸಲ್ಪಟ್ಟ ವರುಣನು ವೃದ್ಧಿಯನ್ನು ಹೊಂದುತ್ತಾನೆ. ಉಕ್ಥಮಂತ್ರಗಳಿಂದಲೂ, ಸ್ತುತಿಗಳಿಂದಲೂ ಆಕರ್ಷಿತನಾದ ವರುಣನು ನಮ್ಮಲ್ಲಿಗೆ ಬರಲಿ. ಗೋಕ್ಷೀರದ ಮಾರ್ಗವು ವರುಣನ ಪೂಜೆಗಾಗಿ ತೆರೆಯಲ್ಪಟ್ಟಿದೆ (ಸಿದ್ಧವಾಗಿದೆ).

English Translation

Being praised with reverence and hymns thus, "the god-accompanied (Varuna) of good lineage, together with the waters," may he be magnified : (attracted) by hymns and prayers (may he) now (approach) ; the path of the milk of the cow is open (for his worship)

ಸಂಹಿತಾಪಾಠಃ

ತ ಊ ಷು ಣೋ ಮಹೋ ಯಜತ್ರಾ ಭೂತ ದೇವಾಸ ಊತಯೇ ಸಜೋಷಾಃ ॥

ಯೇ ವಾಜಾಁ ಅನಯತಾ ವಿಯಂತೋ ಯೇ ಸ್ಥಾ ನಿಚೇತಾರೋ ಅಮೂರಾಃ ॥ ೨೭ ॥

ಪದಪಾಠಃ

ತೇ । ಊಂ ಇತಿ । ಸು । ನಃ । ಮಹಃ । ಯಜತ್ರಾಃ । ಭೂತ । ದೇವಾಸಃ । ಊತಯೇ । ಸಜೋಷಾಃ ।

ಯೇ । ವಾಜಾನ್ । ಅನಯತ । ವಿಯಂತಃ । ಯೇ । ಸ್ಥ । ನಿಚೇತಾರಃ । ಅಮೂರಾಃ ॥ ೨೭ ॥

ಸಾಯಣಭಾಷ್ಯಂ

ಅನಯರ್ಷಿರಂಗಿರಸ ಆಶಾಸ್ತೇ । ಹೇ ಯಜತ್ರಾ ಯಷ್ಟವ್ಯಾ ದೇವಾಸೋ ದೇವಾಃ ತೇ ಯೂಯಂ । ಉ ಇತಿ ಪೂರಣಃ । ಮಹೋ ಮಹತೇ ನೋಽಸ್ಮಾಕಮೂತಯೇ ರಕ್ಷಣಾಯ ಸಜೋಷಾಃ ಸಂಗತಾ ಭೂತ। ಭವತ। ಯೇ ಚ ಯೂಯಮಂಗಿರಸೋ ಮಹ್ಯಂ ವಾಜಾನನ್ನಾನ್ಯನಯತ ಪ್ರಾಪಯತ। ವಿಯಂತಃ ಸತತಮುಕ್ಥ್ಯಾ ವಿವಿಧಂ ಗಚ್ಛಂತಃ ಸಂತಃ । ಯೇಚ ಯೂಯಮಮೂರಾಃ । ಷಷ್ಠ್ಯಹಃ । ಪ್ರಯೋಗಮೌಢ್ಯರಹಿತಾ ಇತ್ಯರ್ಥಃ । ತಾದೃಶಾ ನಿಚೇತಾರೋ ಗವಾಂ ವಿನಿಕ್ತಾರಃ ಸ್ಥ ಭವಥ । ತೇ ಸಜೋಷಾ ಭೂತೇತಿ ಸಮನ್ವಯಃ ॥

ಪ್ರತಿಪದಾರ್ಥ

ಯಜತ್ರಾಃ—ಪೂಜ್ಯರಾದ । **ದೇವಾಸಃ**—ಎಲೈ ದೇವತೆಗಳೇ । **ಯೇ**—ಯಾವ ನೀವು । **ವಾಜಾನ್**—ಅನ್ನಗಳನ್ನು । **ಅನಯತ**—ನಮಗೆ ಹೊಂದಿಸುವಿರೋ (ಮತ್ತು) । **ವಿಯಂತಃ**—ಸರ್ವತ್ರ ಸಂಚರಿಸುತ್ತ । **ಯೇ**—ಯಾವ ನೀವು । **ಅಮೂರಃ**—ಭ್ರಾಂತಿಯಿಲ್ಲದವರಾಗಿ । **ನಿಚೇತಾರಃ**—ಗೋವುಗಳನ್ನು ಕಂಡುಹಿಡಿಯುತ್ತ । **ಸ್ಥ**—ಇರುವಿರೋ ಅಂತಹ । **ತೇ**—ನೀವು । **ನಃ**—ನಮ್ಮ । **ಮಹಃ**—ಮಹತ್ತಾದ । **ಊತಯೇ**—ರಕ್ಷಣಾರ್ಥವಾಗಿ । **ಸಜೋಷಾಃ**—ಒಂದುಗೂಡಿದವರಾಗಿ । **ಭೂತ**—ಇರಿ.

ಭಾವಾರ್ಥ

ಪೂಜ್ಯರಾದ ಎಲೈ ದೇವತೆಗಳೇ, ಯಾವ ನೀವು ನಮಗೆ ಅನ್ನದಾತರಾಗಿಯೂ ಮತ್ತು ಸರ್ವತ್ರ ಸಂಚರಿಸುತ್ತ ಕೊಂಚವೂ ಭ್ರಾಂತಿಯಿಲ್ಲದೆ ಗೋವುಗಳನ್ನು ಕಂಡುಹಿಡಿದುಕೊಡುವವರಾಗಿಯೂ ಇರುವಿರೋ, ಅಂತಹ ನೀವು ನಮ್ಮ ಮಹತ್ತಾದ ರಕ್ಷಣಾರ್ಥವಾಗಿ ಒಂದುಗೂಡಿದವರಾಗಿರಿ.

English Translation

Adorable divinities, be consentient for our great preservation, both you who, going in various directions, are the bringers of food, and you who, being no longer perplexed, are the discoverers (of the cattle).

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕ ಭೂಪಾಲ
ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ
ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇಽಷ್ಟಮಾಷ್ಟಕೇ
ಪ್ರಥಮೋಽಧ್ಯಾಯಃ ಸಮಾಪ್ತಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ಣಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಎಂಟನೆಯ ಅಷ್ಟಕದಲ್ಲಿ ಮೊದಲನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ॥
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ।

॥ ಮಂಗಳಂ ॥

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥
ವ್ಯಾಖ್ಯಾಯ ಪ್ರಥಮಂ ವಿದ್ವಾನಷ್ಟಮಸ್ಯಾಷ್ಟಕಸ್ಯ ಸಃ ।
ಅಧ್ಯಾಯಂ ಸಾಯಣಾಮಾತ್ಯೋ ದ್ವಿತೀಯಂ ವ್ಯಾಚಿಕೀರ್ಷತಿ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

(ಕರ್ಣಾಟಕ ಭಾಷಾರ್ಥಾನುವಾದ ವಿವರಣೆ ಸಹಿತವಾಗಿ)

॥ ಅಷ್ಟಮಾಷ್ಟಕೇ ದ್ವಿತೀಯೋಽಧ್ಯಾಯಃ ॥

ಎಂಟನೆಯ ಅಷ್ಟಕದಲ್ಲಿ ಎರಡನೆಯ ಅಧ್ಯಾಯವು

ಹತ್ತನೆಯ ಮಂಡಲದ ಅರವತ್ತೆರಡನೆಯ ಸೂಕ್ತ

ಪೀಠಿಕೆ

ಹಿಂದಿನ ಅಧ್ಯಾಯದ **ಇದಮಿತ್ಥಾ** ಎಂಬ ೬೧ ನೆಯ ಸೂಕ್ತದಂತೆ ಈ ಸೂಕ್ತವೂ ನಾಭಾನೇದಿಷ್ಠ ಋಷಿಯಿಂದ ದೃಷ್ಟವಾಗಿರುವುದರಿಂದ ಈ ಎರಡು ಸೂಕ್ತಗಳಿಗೂ ಸಂಬಂಧಿಸಿದ ವಿಷಯಗಳನ್ನು ಹಿಂದಿನ ಸೂಕ್ತದ ಪೀಠಿಕೆಯಲ್ಲಿ ಎಂದರೆ 398—407 ನೇ ಪೇಜುಗಳಲ್ಲಿ ವಿವರಿಸಲಾಗಿದೆ. ಅವುಗಳನ್ನು ಅಲ್ಲಿಯೇ ನೋಡಿ ತಿಳಿಯಬಹುದು.

ಸಾಯಣಭಾಷ್ಯಂ

ತತ್ರ ಯೇ ಯಜ್ಞೇನೇತ್ಯೇಕಾದಶರ್ಚಮನುವಾಕಾಪೇಕ್ಷಯಾ ದ್ವಿತೀಯಂ ಸೂಕ್ತಂ । ಮಾನವಸ್ಯ ನಾಭಾನೇದಿಷ್ಠಸ್ಯಾರ್ಷಂ । ಆದಿತಶ್ಚತಸ್ರೋ ಜಗತ್ಯಃ । ಪಂಚಮ್ಯನುಷ್ಟುಪ್ । ಷಷ್ಠೀ ಬೃಹತೀ ।

ಸಪ್ತಮಿಾ ಸತೋಬೃಹತೀ । ಅಷ್ಟಮಿಾನವಮ್ಯಾವನುಷ್ಟುಭೌ । ದಶಮಿಾ ಗಾಯತ್ರೀ । ಏಕಾದಶೀ ತ್ರಿಷ್ಟುಪ್ । ಆದಿತಃ ಷಣ್ಣಾಂ ವಿಶ್ವೇ ದೇವಾ ಅಂಗಿರಸೋ ವಾ ದೇವತಾ । ಸಪ್ತಮಿಾ ವೈಶ್ವದೇವೀ । ಅಷ್ಟಮ್ಯಾದ್ಯಾಸು ಚತಸೃಷು ಸಾವರ್ಣೇರ್ಮಹಾರಾಜಸ್ಯ ದಾನಂ ಸ್ತೂಯತೇ। ಅತಸ್ತಾಸ್ತದ್ದೇವತಾಕಾಃ। ತಥಾ ಚಾನುಕ್ರಮ್ಯತೇ। ಯೋ ಯಜ್ಞೇನೈಕಾದಶಾದ್ಯಾಃ ಷಳಂಗಿರಸಾಂ ಸ್ತುತಿರ್ವಾಂತ್ಯಾ ತ್ರಿಷ್ಟುಪ್ಪಂಚಮ್ಯನುಷ್ಟುಪ್ಪ್ರಗಾಥೋಽನುಷ್ಟುಭೌ ಗಾಯತ್ರೀ ಚತಸ್ರೋಽನ್ತ್ಯಾಃ ಸಾವರ್ಣೇರ್ದಾನಸ್ತುತಿರಿತಿ॥ ಷಷ್ಠೇಽಹನಿ ವೈಶ್ವದೇವಶಸ್ತ್ರ ಏತತ್ಸೂಕ್ತಂ । ಸೂತ್ರಿತಂ ಚ । ಇದಮಿತ್ಥಾ ರೌದ್ರಮಿತಿ ಪ್ರಾಗುಪೋತ್ತಮಾಯಾ ಯೋ ಯಜ್ಞೇನೇತ್ಯಾವಪತೇ । ಆ. ೮-೧ । ಇತಿ ॥

ಅನುವಾದವು—ಹಿಂದಿನ ಅಧ್ಯಾಯದಲ್ಲಿ ಹತ್ತನೆಯ ಮಂಡಲದ ಅರವತ್ತೊಂದು ಸೂಕ್ತಗಳು ಮುಗಿದಿರುವವು. ಈಗ **ಯೋ ಯಜ್ಞೇನ** ಎಂಬ ಅರವತ್ತೆರಡನೆಯ ಸೂಕ್ತದಿಂದ ಈ ಅಧ್ಯಾಯವು ಪ್ರಾರಂಭಿಸಲ್ಪಡುವುದು. ಈ ಸೂಕ್ತವು ಹತ್ತನೆಯ ಮಂಡಲದ ಐವನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಮನುಪುತ್ರನಾದ ನಾಭಾನೇದಿಷ್ಠನು ಋಷಿಯು; ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳು ಜಗತೀಛಂದಸ್ಕವು: ಐದನೆಯದು ಅನುಷ್ಟುಪ್ಛಂದಸ್ಕವು; ಆರನೆಯದು ಬೃಹತೀಛಂದಸ್ಕವು; ಏಳನೆಯದು ಸತೋಬೃಹತೀಛಂದಸ್ಕವು; ಎಂಟು ಮತ್ತು ಒಂಭತ್ತನೆಯ ಋಕ್ಕುಗಳು ಅನುಷ್ಟುಪ್ಛಂದಸ್ಕವು; ಹತ್ತನೆಯದು ಗಾಯತ್ರೀಛಂದಸ್ಕವು; ಹನ್ನೊಂದನೆಯದು ತ್ರಿಷ್ಟುಪ್ಛಂದಸ್ಕವು. ಈ ಸೂಕ್ತದ ಮೊದಲಿನ ಆರು ಋಕ್ಕುಗಳಿಗೆ ವಿಶ್ವೇದೇವತೆಗಳು ಅಥವಾ ಅಂಗಿರಸರು ದೇವತೆಗಳು; ಏಳನೆಯ ಋಕ್ಕು ವಿಶ್ವೇದೇವತಾಕವು; ಎಂಟನೆಯ ಋಕ್ಕಿನಿಂದ ಮುಂದಿನ ನಾಲ್ಕು ಋಕ್ಕುಗಳಲ್ಲಿ (೮-೧೧ ಋಕ್ಕುಗಳಲ್ಲಿ) ಸಾವರ್ಣಿ ಎಂಬ ಪೆಸರಿನ ಮಹಾರಾಜನ ದಾನಸ್ತುತಿಯ ವರ್ಣನೆ ಇರುವುದರಿಂದ ಆ ನಾಲ್ಕು ಋಕ್ಕುಗಳಿಗೆ ಆ ದಾನಸ್ತುತಿಯೇ ದೇವತೆಯು; ಅನುಕ್ರಮಣಿಕೆಯಲ್ಲಿ-- **ಯೋ ಯಜ್ಞೇನೈಕಾದಶಾದ್ಯಾಃ ಷಳಂಗಿರಸಾಂ ಸ್ತುತಿರ್ವಾಂತ್ಯಾ ತ್ರಿಷ್ಟುಪ್ಪಂಚಮ್ಯನುಷ್ಟುಪ್ಪ್ರಗಾಥೋಽನುಷ್ಟುಭೌ ಗಾಯತ್ರೀ ಚತಸ್ರೋಽನ್ತ್ಯಾಃ ಸಾವರ್ಣೇರ್ದಾನಸ್ತುತಿಃ** ಎಂದು ಹೇಳಿರುವುದು. ಯಜ್ಞದ ಆರನೇ ದಿನಸ ವೈಶ್ವದೇವಶಸ್ತ್ರಮಂತ್ರಗಳನ್ನು ಪಠಿಸುವಾಗ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಇದಮಿತ್ಥಾ ರೌದ್ರಮಿತಿ ಪ್ರಾಗುಪೋತ್ತಮಾಯಾ ಯೋ ಯಜ್ಞೇನೇತ್ಯಾವಪತೇ** ಎಂಬ ಸೂತ್ರದಿಂದ (ಆ ೮-೧) ವಿವೃತವಾಗಿರುವುದು.

ಸೂಕ್ತ—೬೨

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೨ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೧, ೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ನಾಭಾನೇದಿಷ್ಠೋ ಮಾನವಃ ॥
ದೇವತಾ—೧-೬. ವಿಶ್ವೇದೇವಾ ಅಂಗಿರಸೋ ವಾ । ೭. ವಿಶ್ವೇದೇವಾಃ। ೮-೧೧. ಸಾವರ್ಣೇರ್ದಾನಸ್ತುತಿಃ ॥
ಛಂದಃ—೧-೪. ಜಗತೀ । ೫, ೮, ೯. ಅನುಷ್ಟುಪ್ । ೬. ಬೃಹತೀ । ೭. ಸತೋಬೃಹತೀ । ೧೦. ಗಾಯತ್ರೀ । ೧೧. ತ್ರಿಷ್ಟುಪ್ ॥

संहितापाठः

यो॑ य॒ज्ञेन॑ दक्षि॒णया॑ स॒मक्ता॒ इन्द्र॑स्य स॒ख्यम॑मृत॒त्वमा॑न॒श।
तेभ्यो॑ भ॒द्रमं॑गिरसो॒ वो॑ अस्तु॒ प्रति॑ गृभ्णीत॒ मान॑वं
सु॒मे॒धसः॥ ८॥

पदपाठः

यो॑। य॒ज्ञेन॑। दक्षि॒णया॑। स॒म्ऽअक्ता॒। इन्द्र॑स्य। स॒ख्यं॑। अ॒मृ॒त॒ऽत्वं॑। आ॒न॒श।
तेभ्यः॑। भ॒द्रं॑। अं॒गि॒र॒सः॒। वः॒। अ॒स्तु॒। प्रति॑। गृ॒भ्णी॒त॒। मान॑वं। सु॒ऽमे॒धसः॥ ८॥

सायणभाष्यं

नाभानेदिष्ठः स्वपित्रा नुनुनाभ्यनुजाम्नातः सत्त्रमासीनानांगिरसोऽभ्येत्य मां प्रतिगृह्णीत युष्मभ्यं यज्ञं प्रजाम्नापयाम्यामिति यदुक्तवान् तदुच्यते। इतिहास-स्त्विदमित्थेति पूर्वसूक्ते नाभानेदिष्ठं शंसति नाभानेदिष्ठं वै मानवमिति ब्राह्म-णानुसारेण मनुः पुत्रेभ्यो दायं व्यभजदिति तैत्तिरीयब्राह्मणानुसारेण च सप्रपंचमभिहितः। तथा चास्याः ऋचोऽयमर्थः। यज्ञेन यजनीयेन हविषा दक्षिणयर्त्विग्भ्यो देययया समक्ताः संगता योऽहीनैकाहसत्त्राणि कुर्वंतो यूयमिन्द्रस्य सख्यं सखिकर्म अत एवामृतत्वममरणधर्मं देवत्वमानश आनशिथ्वे प्राप्ताः स्थ॥ अश्नोतेर्लिटि मध्यमे व्यत्ययेन बहुवचनं। अश्नोतेश्चेति नुडागमः। यद्वृत्तयोगादनिघातः॥ हे अंगिरसः तेभ्यो वो युष्मभ्यं भद्रं कल्याणं कर्मास्तु। हे सुमेधसः सुप्रज्ञाः हे अंगिरसः ते यूयमिदानीमागतं मानवं मनोः पुत्रं मां प्रति गृभ्णीत। प्रतिगृह्णीत। मयि प्रतिगृहीते सति यज्ञं साधु करिष्यामीति तदर्थं प्रतिगृह्णीत॥

प्रतिपदार्थ

यज्ञेन—यज्ञार्हवाद हविस्सिनिंदलू। **दक्षिणाया**—ऋत्विक्कुगळिगे कॊडबेकाद संभावनारूपद धनदिंदलू। **समक्ताः**—कूडिरुव। **योः**—सत्त्रयागवन्नु माडुत्तिरुव अंगिरसरादा नीवु। **इन्द्रस्य**—इन्द्रन। **सख्यं**—स्नेहवन्नू। **अमृतत्वं**—मरणविल्लदिरुव देवत्ववन्नू। **आनश**—पडेदिद्दीरि। **तेभ्यः वः**—अंतह निमगे। **भद्रं**—मंगळवु अथवा श्रेयस्सु। **अस्तु**—उंटागलि। **सुमेधसः**—बुद्धिशालिगळाद। (हे) **अंगिरसः**—ऎलै अंगिराऋषिगळे, नीवु। **मानवं**—मनुविन पुत्रनाद नन्न नन्नु। **प्रतिगृभ्णीत**—स्वीकरिसि.

ಭಾವಾರ್ಥ

ಎಲೈ ಅಂಗಿರಾಋಷಿಗಳೇ, ಯಜ್ಞಾರ್ಹವಾದ ಹವಿಸ್ಸನ್ನೂ, ಋತ್ವಿಕ್ಕುಗಳಿಗೆ ಕೊಡಬೇಕಾದ ದಕ್ಷಿಣೆಗಾಗಿ ಧನವನ್ನೂ ಸಿದ್ಧಪಡಿಸಿಕೊಂಡಿರುವ ನೀವು ಇಂದ್ರನ ಸ್ನೇಹವನ್ನೂ, ಮರಣವಿಲ್ಲದಿರುವ-ದೇವತ್ವವನ್ನೂ ಸಂಪಾದಿಸಿದ್ದೀರಿ. ಇಂತಹ ಗುಣವಿಶಿಷ್ಟರಾದ ನಿಮಗೆ ಮಂಗಳವುಂಟಾಗಲಿ. ಮೇಧಾವಿಗಳಾದ ಎಲೈ ಅಂಗಿರಸರೇ, ನಿಮ್ಮ ಬಳಿಗೆ ಬಂದಿರುವ ಮನುಪುತ್ರನಾದ ನನ್ನನ್ನು ಸ್ವೀಕರಿಸಿರಿ ಎಂದರೆ ನಾನು ಹೇಳುವ ಮಾತನ್ನು ಆದರದಿಂದ ಕೇಳಿರಿ.

English Translation

You, who associated with sacrifice and pious donotions, have acquired the friendship of Indra and immortality ; upon you, Angirasas, may good fortune attend ; welcome, sages, the son of Manu,

ವಿಶೇಷವಿಷಯಗಳು

ಹಿಂದಿನ ಸೂಕ್ತದ ಪೀಠಿಕೆಯಲ್ಲಿ ಹೇಳಿರುವಂತೆ ಈ ಸೂಕ್ತದ್ರಷ್ಟೃನಾದ ನಾಭಾನೇದಿಷ್ಠ ಋಷಿಯು ತನ್ನ ತಂದೆಯ ಮಾತಿನಂತೆ ಅಂಗಿರಾಋಷಿಗಳು ಯಜ್ಞವಾಡುತ್ತಿರುವ ಪ್ರದೇಶಕ್ಕೆ ಬಂದು ಅವರನ್ನು ಸಂಬೋಧಿಸಿ ಈರೀತಿ ಹೇಳಿರುವನು. ಅವನು ಹೇಳಿದ ವಿಷಯವು ಈ ಋಕ್ಕಿನಲ್ಲಿಯೂ, ಇದರ ಮುಂದಿನ ಮೂರು ಋಕ್ಕುಗಳಲ್ಲಿಯೂ ಉಕ್ತವಾಗಿದೆ. ವಿಶೇಷವಿವರಣೆಗಾಗಿ ೬೧ ನೆಯ ಸೂಕ್ತದ ಪೀಠಿಕೆಯನ್ನು ನೋಡಿ.

ಸಂಹಿತಾಪಾಠಃ

ಯ ಉದಾಜನ್ಪಿತರೋ ಗೋಮಯಂ ವಸ್ವೃತೇನಾಭಿಂದನ್ಪರಿವತ್ಸರೇ ವಲಂ।
ದೀರ್ಘಾಯುತ್ವಮಂಗಿರಸೋ ವೋ ಅಸ್ತು ಪ್ರತಿ ಗೃಭ್ಣೀತ ಮಾನವಂ
ಸುಮೇಧಸಃ ॥ ೨ ॥

ಪದಪಾಠಃ

ಯೇ । ಉತ್ಸಅಜನ್ । ಪಿತರಃ । ಗೋಽಮಯಂ । ವಸು । ಋತೇನ । ಅಭಿಂದನ್ । ಪರಿವತ್ಸರೇ
ವಲಂ ।

ದೀರ್ಘಾಯುಽತ್ವಂ । ಆಂಗಿರಸಃ । ವಃ । ಅಸ್ತು । ಪ್ರತಿ । ಗೃಭ್ಣೀತ । ಮಾನವಂ । ಸುಽಮೇಧಸಃ ॥ ೨ ॥

ಸಾಯಣಭಾಷ್ಯಂ

ಯೇ ಆಂಗಿರಸಃ ಪಿತರೋಽಸ್ಮಾಕಂ ಪೂರ್ವಜತ್ವೇನ ಪಿತೃಭೂತಾ ಯೇ ಯೂಯಂ ಗೋಮಯಂ ಗವಾತ್ಮಕಂ ಪಣಿಭಿರಪಹೃತಂ ವಸು ಧನಮುದಾಜನ್ ತೈರಧಿಷ್ಠಿತಾತ್ಪರ್ವತಾದುದಗಮಯನ್ । ಕಿಂಚ ತೇನ ಸತ್ಯಭೂತೇನ ಯಜ್ಞೇನ ಪರಿವತ್ಸರೇ ಪರ್ಯಾಗತೇ ವತ್ಸರೇ ಸಂಪೂರ್ಣೇ । ಸತ್ಯಾಂತ

ಇತ್ಯರ್ಥಃ । ತತ್ರ ವಲಂ ವಲನಾಮಾನಂ ಗವಾಮಪಹರ್ತಾರಮಸುರಮಭಿಂದನ್ ವ್ಯನಾಶಯನ್ ತೇಭ್ಯೋ ವೋ ಯುಷ್ಮಭ್ಯಂ ದೀರ್ಘಾಯುತ್ವಂ ಪ್ರಭೂತಜೀವನಮಸ್ತು । ಶೇಷಂ ಪೂರ್ವವತ್ ॥

ಪ್ರತಿಪದಾರ್ಥ

ಅಂಗಿರಸಃ—ಎಲೈ ಅಂಗಿರಾಋಷಿಗಳೇ । **ಪಿತರಃ**—ನಮಗೆ ಹಿರಿಯರಾದುದರಿಂದ ಪಿತೃಗಳೆಂದು ಕರೆಯಲ್ಪಡಲು ಅರ್ಹರಾದ । **ಯೋ**—(ಯಾವ) ನೀವು । **ಗೋಮಯಂ**—ಪಣಿಗಳಿಂದ ಅಪಹರಿಸಲ್ಪಟ್ಟ ಗೋವುಗಳ ರೂಪದಲ್ಲಿರುವ । **ವಸು**—ಧನವನ್ನು । **ಉದಾಜನ್**—ಪರ್ವತಪ್ರದೇಶದಿಂದ ಈಚಿಗೆ ಹೊರಡಿಸಿ ತಂದಿರೋ ಮತ್ತು । **ಋತೇನ**—ಯಜ್ಞದಿಂದ ಎಂದರೆ ಯಜ್ಞಾನುಷ್ಠಾನದಿಂದ । **ಪರಿವತ್ಸರೇ**—ಒಂದು ಸಂವತ್ಸರಕಾಲವು ನಿಮ್ಮಿಂದ ಕಳೆಯಲ್ಪಟ್ಟತೋ (ಮತ್ತು ನೀವು) । **ವಲಂ**—ವಲನೆಂಬ ಅಸುರನನ್ನು । **ಅಭಿಂದನ್**—ನಾಶಮಾಡಿದಿರೋ । **ವಃ**—ಅಂತಹ ನಿಮಗೆ । **ದೀರ್ಘಾಯುತ್ವಂ**—ದೀರ್ಘಾಯುಷ್ಯವು । **ಅಸ್ತು**—ಉಂಟಾಗಲಿ । **ಸುಮೇಧಸಃ**—ಮೇಧಾವಿಗಳಾದ ಎಲೈ ಅಂಗಿರಸರೇ ನೀವು । **ಮಾನವಂ**—ಮನುಪುತ್ರನಾದ ನನ್ನನ್ನು । **ಪ್ರತಿ ಗೃಭ್ಣೀತ**—ಸ್ವೀಕರಿಸಿರಿ.

ಭಾವಾರ್ಥ

ಎಲೈ ಅಂಗಿರಸರೇ, ನಮಗೆ ಹಿರಿಯರಾದುದರಿಂದ ನೀವು ಪಿತೃಗಳಂತೆ ಪೂಜ್ಯರಾಗಿದ್ದೀರಿ. ನೀವು ಪಣಿಗಳಿಂದ ಅಪಹೃತವಾದ ಗೋವುಗಳನ್ನು ಅವುಗಳನ್ನು ಬಚ್ಚಿಟ್ಟಿದ್ದ ಪರ್ವತಪ್ರದೇಶದಿಂದ ಹೊರಕ್ಕೆ ತಂದಿದ್ದೀರಿ. ಒಂದು ಸಂವತ್ಸರದವರೆಗೂ ನೀವು ನೆರವೇರಿಸುತ್ತಿದ್ದ ಸತ್ರಯಾಗವನ್ನು ಪೂರ್ಣಮಾಡಿದ್ದೀರಿ. ವಲನೆಂಬ ಅಸುರನನ್ನು ನಾಶಮಾಡಿದ್ದೀರಿ. ಇಂತಹ ನಿಮಗೆ ದೀರ್ಘಾಯುಸ್ಸುಂಟಾಗಲಿ. ಮನುಪುತ್ರನಾದ ನನ್ನನ್ನು ಸ್ವೀಕರಿಸಿರಿ.

English Translalion

May length of life be yours, Angirasas, our progenitors, who drove forth the wealth of cattle, and by means of your sacrifice when the year was ended, demolished (the Asura) Bala : welcome, sages, the son of Manu.

ವಿಶೇಷವಿಷಯಗಳು

ವಲನೆಂಬ ಅಸುರನ ವಿಷಯವನ್ನು ನಾವು ಋ. ಸಂ. ಭಾಗ 5, ಪುಟ 692 ಮತ್ತು 14-634 ಪುಟಗಳಲ್ಲಿಯೂ ವಿವರಿಸಿದೇವೆ.

ಸಂಹಿತಾಪಾಠಃ

ಯ ಋತೇನ ಸೂರ್ಯಮಾರೋಹಯನ್ ದಿವ್ಯಪ್ರಥಯನ್ಪೃಥಿವೀಂ ಮಾತರಂ ವಿ ।

ಸುಪ್ರಜಾಸ್ತ್ವಮಂಗಿರಸೋ ವೋ ಅಸ್ತು ಪ್ರತಿ ಗೃಭ್ಣೀತ ಮಾನವಂ ಸುಮೇಧಸಃ ॥ ೩ ॥

ಪದಪಾಠಃ

ಯೇ । ಋತೇನ । ಸೂರ್ಯಂ । ಆ । ಅರೋಹಯನ್ । ದಿವಿ । ಅಪ್ರಥಯನ್ । ಪೃಥಿವೀಂ । ಮಾತರಂ । ವಿ ।

ಸುಪ್ರಜಾಃಸ್ತ್ವಂ । ಅಂಗಿರಸಃ । ವಃ । ಅಸ್ತು । ಪ್ರತಿ । ಗೃಭ್ಣೀತ । ಮಾನವಂ । ಸುಽಮೇಧಸಃ ॥ ೩ ॥

ಸಾಯಣಭಾಷ್ಯಂ

ಹೇ ಅಂಗಿರಸಃ ಯೇ ಭವಂತ ಋತೇನ ಸತ್ಯಭೂತೇನ ಯಜ್ಞೇನ ದಿವಿ ದ್ಯುಲೋಕೇ ಸೂರ್ಯಂ ಸುಷ್ಠು ಸರ್ವಸ್ಯ ಪ್ರೇರಕಮಾದಿತ್ಯಮಾರೋಹಯನ್ ಅಸ್ಥಾಪಯನ್ ಕಿಂಚ ಮಾತರಂ ಸರ್ವೇಷಾಂ ನಿರ್ಮಾತ್ರೀಂ ಪೃಥಿವೀಂ ವ್ಯಪ್ರಥಯನ್ ಪ್ರಸಿದ್ಧಾಮಕುರ್ವನ್ ಸತ್ಯಾದಿಕರ್ಮಕರಣೇನ ತೇಭ್ಯೋ ಯುಷ್ಮಭ್ಯಂ ಸುಪ್ರಜಾಸ್ತ್ವಂ ಸುಪುತ್ರತ್ವಮಸ್ತು॥ ನಿತ್ಯಮಸಿಚ್ ಪ್ರಜಾಮೇಧಯೋರಿತ್ಯಸಿಚ್ಪ್ರಮಾಸಾಂತಃ। ತಸ್ಮಾದ್ಭಾವಪ್ರತ್ಯಯಃ ॥

ಪ್ರತಿಪದಾರ್ಥ

ಅಂಗಿರಸಃ—ಎಲೈ ಅಂಗಿರಸರೇ । **ಯೇ**—(ಯಾವ) ನೀವು । **ಋತೇನ**—ಸತ್ಯಸ್ವರೂಪವಾದ ಯಜ್ಞಾನುಷ್ಠಾನಪ್ರಭಾವದಿಂದ । **ದಿವಿ**—ಸ್ವರ್ಗ (ಅಂತರಿಕ್ಷ) ದಲ್ಲಿ । **ಸೂರ್ಯಂ**—ಸರ್ವಪ್ರೇರಕನಾದ ಆದಿತ್ಯನನ್ನು । **ಆರೋಹಯನ್**—ಸ್ಥಾಪಿಸಿದ್ದೀರಿ (ಮತ್ತು) । **ಮಾತರಂ**—ಸರ್ವರಿಗೂ ಮಾತೃಸ್ವರೂಪವಾದ । **ಪೃಥಿವೀಂ**—ಪೃಥಿವಿಯನ್ನು । **ವಿ ಅಪ್ರಥಯನ್**—ನಿಮ್ಮ ಸತ್ಕಾರ್ಯಾದಿಯಾಗಗಳಿಂದ ಪ್ರಸಿದ್ಧವನ್ನಾಗಿ ಮಾಡಿದ್ದೀರಿ । **ವಃ**—ಅಂತಹ ನಿಮಗೆ । **ಸುಪ್ರಜಾಸ್ತ್ವಂ**—ಉತ್ತಮವಾದ ಪುತ್ರಸಂತತಿಯು । **ಅಸ್ತು**—ಉಂಟಾಗಲಿ **ಸುಮೇಧಸಃ**—ಮೇಧಾವಿಗಳಾದ ಎಲೈ ಅಂಗಿರಸರೇ । **ಮಾನವಂ**—ಮನುಪುತ್ರನಾದ ನನ್ನನ್ನು । **ಪ್ರತಿ ಗೃಭ್ಣೀತ**—ಪರಿಗ್ರಹಿಸಿರಿ.

ಭಾವಾರ್ಥ

ಎಲೈ ಅಂಗಿರಸರೇ, ಸತ್ಯಸ್ವರೂಪವಾದ ನಿಮ್ಮ ಯಜ್ಞಾನುಷ್ಠಾನಮಹಿಮೆಯಿಂದ ನೀವು ಸರ್ವಪ್ರೇರಕನಾದ ಆದಿತ್ಯನನ್ನು ಸ್ವರ್ಗ (ಅಂತರಿಕ್ಷ) ದಲ್ಲಿ ಸ್ಥಾಪಿಸಿದ್ದೀರಿ. ಸರ್ವರಿಗೂ ಮಾತೃಸ್ವರೂಪಿಯಾದ ಈ ಭೂಮಿಯನ್ನು ನಿಮ್ಮ ಯಜ್ಞಾನುಷ್ಠಾನಾದಿ ಸತ್ಕರ್ಮಗಳಿಂದ ಪ್ರಸಿದ್ಧವನ್ನಾಗಿ ಮಾಡಿದ್ದೀರಿ. ಎಲೈ ಮೇಧಾವಿಗಳಾದ ಅಂಗಿರಸರೇ, ನಿಮಗೆ ಉತ್ತಮವಾದ ಪ್ರಜಾಸಂತತಿಯು ಉಂಟಾಗಲಿ. ಮನುಪುತ್ರನಾದ ನನ್ನನ್ನು ಸ್ವೀಕರಿಸಿ.

English Translation

May the possession of posterity be yours, Angirasas, who elevated by the (power) of sacrifice the Sun in heaven, and made the maternal earth renowned : welcome, sages, the son of Manu.

ಸಂಹಿತಾಪಾಠಃ

ಅಯಂ ನಾಭಾ ವದತಿ ವಲ್ಗು ವೋ ಗೃಹೇ ದೇವಪುತ್ರಾ ಋಷಯಸ್ತಚ್ಛೃ-
ಣೋತನ ।

ಸುಬ್ರಹ್ಮಣ್ಯಮಂಗಿರಸೋ ವೋ ಅಸ್ತು ಪ್ರತಿ ಗೃಭ್ಣೀತ ಮಾನವಂ ಸುಮೇಧಸಃ ॥ ೪ ॥

ಪದಪಾಠಃ

ಅಯಂ । ನಾಭಾ । ವದತಿ । ವಲ್ಗು । ವಃ । ಗೃಹೇ । ದೇವಪುತ್ರ್ಯಾಃ । ಋಷಯೇಃ । ತತ್ । ಶೃಣೋತನ । ಸುಬ್ರಹ್ಮಣ್ಯಂ । ಆಂಗಿರಸಃ । ವಃ । ಅಸ್ತು । ಪ್ರತಿ । ಗೃಭ್ಣೀತ । ಮಾನವಂ । ಸುಮೇಧಸಃ ॥ ೪ ॥

ಸಾಯಣಭಾಷ್ಯಂ

ಹೇ ದೇವಪುತ್ರ್ಯಾ ದೇವಾನಾಂ ಪುತ್ರ್ಯಾ ಅಗ್ನೇಃ ಪುತ್ರ್ಯಾ ಋಷಯೋಽತೀಂದ್ರಿಯಾರ್ಥಸ್ಯ ದ್ರಷ್ಟಾರೋ ಹೇಽಂಗಿರಸಃ ಅಯಂ ನಾಭಾ ನಾಭಾನೇದಿಷ್ಠಃ ಪುರೋವರ್ತೀ ಜನೋ ವೋ ಯುಷ್ಮಾಕಂ ಗೃಹೇ ಗೃಹಭೂತೇ ಯಜ್ಞೇ ವಲ್ಗು ಕಲ್ಯಾಣಂ ವಚೋ ವದತಿ । ತದ್ವಾಕ್ಯಂ ಯೂಯಂ ಶೃಣೋತನ । ಮಹಾತಾದರೇಣ ಶೃಣುತ ॥ ಶ್ರು ಶ್ರವಣೇ । ತಪ್ತನಪ್ತನಥನಾಶ್ಚೇತಿ ತನಬಾದೇಶಃ ॥ ತೇಭ್ಯೋ ಯುಷ್ಮಭ್ಯಂ ಸುಬ್ರಹ್ಮಣ್ಯಂ ಶೋಭನಂ ಬ್ರಹ್ಮವರ್ಚಸಮಸ್ತು । ಇದಾನೀಮಾಗತಂ ಮಾನವಂ ಮಾಂ ಪ್ರತಿ ಗೃಭ್ಣೀತ । ಪ್ರತಿಗೃಹ್ಣೀತ ॥

ಪ್ರತಿಪದಾರ್ಥ

ದೇವಪುತ್ರ್ಯಾಃ—ಅಗ್ನಿದೇವನ ಪುತ್ರರಾದವರೂ । **ಋಷಯೇಃ**—ಅತೀಂದ್ರಿಯವಿಷಯದ್ರಷ್ಟೃಗಳೂ ಆದ । **ಆಂಗಿರಸಃ**—ಎಲೈ ಅಂಗಿರಸರೇ । **ಅಯಂ ನಾಭಾ**—ಈ ನಾಭಾನೇದಿಷ್ಠನೆಂಬುವನು (ನಾನು) । **ವಃ**—ನಿಮ್ಮ । **ಗೃಹೇ**—ಯಜ್ಞಗೃಹದಲ್ಲಿ । **ವಲ್ಗು**—ಕಲ್ಯಾಣಾತ್ಮಕವಾದ ಮಾತನ್ನು । **ವದತಿ**—ಹೇಳುತ್ತಾನೆ । **ತತ್**—ಆ ವಾಕ್ಯವನ್ನು ನೀವು । **ಶೃಣೋತನ**—ಆದರದಿಂದ ಕೇಳಿರಿ । **ಆಂಗಿರಸಃ**—ಎಲೈ ಅಂಗಿರಸರೇ । **ವಃ**—ನಿಮಗೆ । **ಸುಬ್ರಹ್ಮಣ್ಯಂ**—ಉತ್ತಮವಾದ ಬ್ರಹ್ಮವರ್ಚಸ್ಸು । **ಅಸ್ತು**—ಉಂಟಾಗಲಿ । **ಸುಮೇಧಸಃ**—ಎಲೈ ಮೇಧಾವಿಗಳೇ । **ಮಾನವಂ**—ಮನುಪುತ್ರನಾದ ನನ್ನನ್ನು । **ಪ್ರತಿ ಗೃಭ್ಣೀತ**—ಸ್ವೀಕರಿಸಿರಿ.

ಭಾವಾರ್ಥ

ಅಗ್ನಿದೇವನ ಪುತ್ರರೂ, ಅತೀಂದ್ರಿಯವಸ್ತುಜ್ಞಾನಿಗಳೂ ಆದ ಎಲೈ ಅಂಗಿರಸರೇ, ಈಗ ನಿಮ್ಮೊಡನೆ ಸಂಭಾಷಿಸುತ್ತಿರುವ ನಾಭಾನೇದಿಷ್ಠನು (ನಾನು) ನಿಮ್ಮ ಯಜ್ಞಗೃಹದಲ್ಲಿ ಕಲ್ಯಾಣಾತ್ಮಕವಾದ ಒಂದು ಮಾತನ್ನು ಹೇಳುತ್ತಾನೆ. ಅದನ್ನು ಆದರದಿಂದ ಕೇಳಿರಿ. ನಿಮಗೆ ಉತ್ತಮವಾದ ಬ್ರಹ್ಮವರ್ಚಸ್ಸು ಉಂಟಾಗಲಿ. ಎಲೈ ಮೇಧಾವಿಗಳಾದ ಅಂಗಿರಸರೇ, ಮನುಪುತ್ರನಾದ ನನ್ನನ್ನು ಸ್ವೀಕರಿಸಿ ಎಂದರೆ ನಾನು ಹೇಳುವ ಮಾತನ್ನು ಆದರದಿಂದ ಗಮನಿಸಿ ಕೇಳಿ.

English Translation

Rishis, sons of the gods, this (Nabhanedishtha) addresses to you in the house of (sacrifice) his bendiction ; here it : may divine splendour, Angirasas, be yours : welcome, sages the, son of Manu.

ಸಂಹಿತಾಪಾಠಃ

ವಿರೂಪಾಸ ಇದೃಷಯಸ್ತ ಇದ್ಗಂಭೀರವೇಪಸಃ ।

ತೇ ಅಂಗಿರಸಃ ಸೂನವಸ್ತೇ ಅಗ್ನೇಃ ಪರಿ ಜಜ್ಞಿರೇ ॥ ೫ ॥

ಪದವಾಠಃ

ವಿ೬ರೂಪಾಸಃ । ಇತ್ । ಋಷಯಃ । ತೇ । ಇತ್ । ಗಂಭೀರ೬ವೇಪಸಃ ।

ತೇ । ಅಂಗಿರಸಃ । ಸೂನವಃ । ತೇ । ಅಗ್ನೇಃ । ಪರಿ । ಜಜ್ಞಿರೇ ॥ ೫ ॥

ಸಾಯಣಭಾಷ್ಯಂ

ಪರೋಕ್ಷತಯರ್ಷಿರಾಹ । ಋಷಯಃ ಕರ್ಮಣಾಂ ದ್ರಷ್ಟಾರ ಏತೇ ಋಷಯೋ ವಿರೂಪಾಸ ಇದನ್ಯೋನ್ಯಂ ವರ್ಣತೋ ರೂಪತಶ್ಚ ನಾನಾರೂಪಾ ಭವಂತಿ । ತ ಇತ್ತ ಏವಾಮೀ ಅಂಗಿರಸೋ ಗಂಭೀರವೇಪಸಃ । ವೇಪ ಇತಿ ಕರ್ಮನಾಮ । ಗಂಭೀರಕರ್ಮಾಣೋ ಭವಂತಿ । ತ ಇಮೇ೬ಂಗಿರಸಃ ಸೂನವಃ ಪುತ್ರಾಃ ಖಲು । ತದೇವಾಹ । ತ ಇಮೇ೬ಗಿರಸೋ೬ಗ್ನೇಃ ಪರಿ ಜಜ್ಞಿರೇ। ಸರ್ವತೋ ಜಾತಾಃ ಪ್ರಾದುರ್ಭೂತಾಃ । ಯೇ೬ಂಗಾರಾ ಅಸಂಸ್ತೇ೬ಂಗಿರಸೋ೬ಭವನ್। ಐ. ಬ್ರಾ. ೩-೩೪ । ಇತಿ ಬ್ರಾಹ್ಮಣಂ । ಅತ್ರ ನಿರುಕ್ತಂ ಚ ದ್ರಷ್ಟವ್ಯಂ। ನಿ. ೩-೧೭ ॥

ಪ್ರತಿಪದಾರ್ಥ

ಋಷಯಃ—ಋಷಿಗಳಾದವರು । **ವಿರೂಪಾಸ ಇತ್**—ವರ್ಣದಲ್ಲಿಯೂ, ರೂಪದಲ್ಲಿಯೂ, ಆಕಾರದಲ್ಲಿಯೂ, ನಾನಾರೂಪವುಳ್ಳವರಾಗಿಯೇ ಇರುವರು । **ತ ಇತ್**—(ಆದ್ದರಿಂದ) ಈ ಅಂಗಿರಸರೂ । **ಗಂಭೀರವೇಪಸಃ**—ಗಂಭೀರ ಅಥವಾ ಗಹನವಾದ ಯಜ್ಞಾದಿಕರ್ಮಾನುಷ್ಠಾನಗಳಲ್ಲಿ ನಿರತರಾಗಿರುವರು । **ತೇ ಅಂಗಿರಸಃ**-ಈ ಅಂಗಿರಸಋಷಿಗಳು । **ಅಗ್ನೇಃ**—ಅಗ್ನಿಗೆ । **ಸೂನವಃ**—ಪುತ್ರರಾಗಿ । **ಪರಿ ಜಜ್ಞಿರೇ**—ಉತ್ಪನ್ನರಾಗಿದ್ದಾರೆ.

ಭಾವಾರ್ಥ

ವರ್ಣದಲ್ಲಿಯೂ, ರೂಪದಲ್ಲಿಯೂ, ಆಕಾರದಲ್ಲಿಯೂ ಋಷಿಗಳು ನಾನಾವಿಧವಾಗಿರುತ್ತಾರೆ. ಈ ಅಂಗಿರಸರು ಗಹನವಾದ ಯಜ್ಞಾನುಷ್ಠಾನಕರ್ಮಗಳಲ್ಲಿ ನಿರತರಾಗಿರುತ್ತಾರೆ. ಈ ಅಂಗಿರಸರು ಅಗ್ನಿಯ ಪುತ್ರರು ಎಂದರೆ ಅಗ್ನಿಗೆ ಪುತ್ರರಾಗಿ ಉತ್ಪನ್ನರಾಗಿದ್ದಾರೆ.

English Translation

These Rirhis, however different in form, are verily of profound piety: they are the Angirasas who have been born as the sons of Agni.

ವಿಶೇಷವಿಷಯಗಳು

ಯಾಸ್ಕರು ಅಂಗಿರಸಶಬ್ದಕ್ಕೆ ರೂಪನಿಷ್ಪತ್ತಿಯನ್ನು ತಿಳಿಸುತ್ತಾ **ಅಂಗಾರೇಷ್ವಂಗಿರಾಃ । ಅಂಗಾಶಾ ಅಂಕನಾಃ ॥** (ನಿ. ೩-೧೭) ಎಂದು ಹೇಳಿದಾರೆ ಎಂದರೆ, ಅಂಗಾರ (ಕೆಂಡ) ಗಳಲ್ಲಿ ಉತ್ಪನ್ನರಾದುದರಿಂದ ಇವರಿಗೆ

ಆಂಗಿರಾಃ ಎಂಬ ಹೆಸರು ಬಂದಿದೆ. ಅಂಗಾರವೆಂದರೇನು ? ಇದನ್ನು ಇಟ್ಟ ಸ್ಥಳದಲ್ಲಿ ಆ ಸ್ಥಳವು ಕಪ್ಪಾಗುವುದರಿಂದ ಅಂಕನಾಃ ಎಂದು ಹೆಸರು ಎಂದು ಹೇಳಿ ಪ್ರಕೃತ ಋಕ್ಕನ್ನು ಈರೀತಿ ವಿವರಿಸಿದಾರೆ—

ಬಹುರೂಪಾ ಋಷಯಸ್ತೇ ಗಂಭೀರಕರ್ಮಾಣೋ ವಾ ಗಂಭೀರಪ್ರಜ್ಞಾ ವಾ ತೇ ಅಂಗಿರಸಃ ಪುತ್ರಾಸ್ತೇ ಅಗ್ನೇರಧಿಜಜ್ಞಿರ ಇತ್ಯಗ್ನಿಜನ್ಮ ॥

(ನಿ. ೧೧-೧೭)

ಪ್ರಜಾಪತಿಯು ದ್ಯುಲೋಕಾಧಿದೇವತೆಯನ್ನು ಅಥವಾ ಉಷೋದೇವತೆಯನ್ನು ಕಾಮಿಸಿದಾಗ ಆ ಪ್ರಜಾಪತಿಯ ವೀರ್ಯವು ಸ್ಖಲನವಾಗಿ ಭೂಮಿಯ ಮೇಲೆ ಬಿದ್ದು ಒಂದು ದೊಡ್ಡ ಸರೋವರ ಆಕಾರದಲ್ಲಿ ನಿಂತಿತು. ಅದನ್ನು ದೇವತೆಗಳು ವೈಶ್ವಾನರಾಗ್ನಿಯ ಸಹಾಯದಿಂದ ಪ್ರಜ್ವಲಿತವನ್ನಾಗಿ ಮಾಡಲು ಆ ಪ್ರಜ್ವಲಿತಾಗ್ನಿಯಿಂದ ಆದಿತ್ಯ. ಭೃಗು, ಅಂಗಿರಸರು ಇವರ ಉತ್ಪತ್ತಿಯಾಯಿತೆಂದು ಐತರೇಯಬ್ರಾಹ್ಮಣದ (ಐ. ಬ್ರಾ. ೧೩-೩೪) ಉಪಾಖ್ಯಾನದಿಂದ ತಿಳಿಯಬಹುತ್ತದೆ ಅಗ್ನಿಯಿಂದ ಅಥವಾ ಅಂಗಾರ (ಕೆಂಡ) ಗಳಿಂದ ಉತ್ಪನ್ನರಾದುದರಿಂದ ಈ ಋಷಿಗಳಿಗೆ ಅಂಗಿರಸರೆಂದು ಹೆಸರಾಯಿತು ಮತ್ತು ಇವರನ್ನು ಅಗ್ನಿಯ ಪುತ್ರರೆಂದೂ ಕರೆಯುವರು. ಅವನ್ನೇ ಇಲ್ಲಿ ಹೇಳಿದೆ, ಈ ಋಷಿಗಳು ಬಹುರೂಪಾಃ ಎಂದರೆ ನಾನಾವಿಧರೂಪವುಳ್ಳವರು ; ಗಂಭೀರನೇಪಸಃ ಎಂದರೆ ಗಂಭೀರವಾದ ಕರ್ಮಗಳನ್ನು ಮಾಡುವವರು ಅಥವಾ ಅಪ್ರಮೇಯಬುದ್ಧಿಯುಳ್ಳವರು ಎಂದು ನಿರ್ವಚನಾಭಿಪ್ರಾಯವು.

ಸಂಹಿತಾಪಾಠಃ

ಯೇ ಅಗ್ನೇಃ ಪರಿ ಜಜ್ಞಿರೇ ವಿರೂಪಾಸೋ ದಿವಸ್ಪರಿ ।
ನವಗ್ವೋ ನು ದಶಗ್ವೋ ಅಂಗಿರಸ್ತಮಃ ಸಚಾ ದೇವೇಷು ಮುಂಹತೇ ॥ ೬ ॥

ಪದಪಾಠಃ

ಯೇ । ಅಗ್ನೇಃ । ಪರಿ । ಜಜ್ಞಿರೇ । ವಿರೂಪಾಸಃ । ದಿವಃ । ಪರಿ ।
ನವಗ್ವಃ । ನು । ದಶಗ್ವಃ । ಅಂಗಿರಃತಮಃ । ಸಚಾ । ದೇವೇಷು । ಮುಂಹತೇ ॥ ೬ ॥

ಸಾಯಣಭಾಷ್ಯಂ

ವಿರೂಪಾಸೋ ವಿವಿಧರೂಪಾ ಯೇಽಙ್ಗಿರಸೋ ದಿವಸ್ಪರಿ ದ್ಯುಲೋಕಾದಗ್ನೇಃ ಪರಿ ಜಜ್ಞಿರೇ ಪರಿತೋ ಜಾತಾಃ । ಯದ್ವಾ । ದಿವಸ್ಪರಿ । ಪರಿಃ ಪಂಚಮ್ಯರ್ಥದ್ಯೋತಕಃ । ಸ್ವತೇಜಸಾ ದೀಪ್ಯಮಾನಾದಗ್ನೇರ್ಜಾತಾಃ । ತೇಷಾಂ ಮಧ್ಯೇ ನವಗ್ವೋ ದಶಗ್ವಶ್ಚಾಂಗಿರಸ್ತಮೋಽಂಗಿರಸಾಂ ವರಿಷ್ಠಃ । ಸತ್ರೈಮಾಸೀನಾನಾಮಂಗಿರಸಾಂ ಮಧ್ಯೇ ಕೇಚನ ನವಸು ಮಾಸ್ಸು ಕರ್ಮ ಕೃತ್ವೋದತಿಷ್ಠನ್ ಕೇಚನ ದಶಸು ಮಾಸ್ಸಿತ್ಯೇವಮಂಗಿರಸಾಮಯನಮುಕ್ತಂ । ತೇಷಾಮಗ್ನಿರ್ನವಗ್ವಶ್ಚ ದಶಗ್ವಶ್ಚೋಕ್ತಃ । ತಾದೃಶೋ ದೇವೇಷು ಸಚಾ ಸಹಾವಸ್ಥಿತಃ ಸೋಽಗ್ನಿರ್ಮುಂಹತೇ । ಮಹ್ಯಂ ಧನಂ ಪ್ರಯಚ್ಛತಿ । ಮುಂಹತಿರ್ದಾನಕರ್ಮಾ ॥

ಪ್ರತಿಪದಾರ್ಥ

ವಿರೂಪಾಸಃ—ನಾನಾವಿಧರೂಪಗಳುಳ್ಳ । **ಯೇ ಅಂಗಿರಸಃ**—ಯಾವ ಅಂಗಿರಾಋಷಿಗಳು । **ದಿವಃ ಪರಿ**—ಸ್ವರ್ಗಲೋಕದ ಮೇಲುಭಾಗದಲ್ಲಿ । **ಅಗ್ನೇಃ**—ಅಗ್ನಿಯಿಂದ । **ಪರಿ ಜಜ್ಞಿರೇ**—ಉತ್ಪನ್ನರಾದರೋ (ಅಂತಹ ಅಂಗಿರಾಋಷಿಗಳ ಮಧ್ಯದಲ್ಲಿ । **ನವಗ್ವಃ**—ಒಂಭತ್ತು ಮಾಸಗಳಲ್ಲಿ ಸತ್ರಯಾಗವನ್ನು ಪೂರಯಿಸಿದವರೂ। **ದಶಗ್ವಃ**—ಹತ್ತುಮಾಸಗಳಲ್ಲಿ ಸತ್ರಯಾಗವನ್ನು ಪೂರಯಿಸಿದವರೂ ಆದ । **ಅಂಗಿರಸ್ತಮಃ**—ಅಂಗಿರಸರಲ್ಲಿ ಶ್ರೇಷ್ಠರಾದವರಿದ್ದಾರೆ । **ದೇವೇಷು ಸಚಾ**—ದೇವತೆಗಳನೊಡನಿರುವ ಅಗ್ನಿಯು । **ಮಂಹತೇ**—ನನಗೆ ಧನವನ್ನು ಕೊಡುತ್ತಾನೆ.

ಭಾವಾರ್ಥ

ನಾನಾವಿಧರೂಪಗಳುಳ್ಳ ಅಂಗಿರಾಋಷಿಗಳು ಸ್ವರ್ಗಲೋಕದಲ್ಲಿ ಅಗ್ನಿಯಿಂದ ಉತ್ಪನ್ನರಾದರು. ಅವರಲ್ಲಿ ಕೆಲಸರು (ಒಂದು ವರ್ಷದಲ್ಲಿ ಮಾಡಬೇಕಾದ) ಸತ್ರಯಾಗವನ್ನು ಒಂಭತ್ತು ತಿಂಗಳುಗಳಲ್ಲಿಯೂ, ಕೆಲವರು ಹತ್ತು ತಿಂಗಳುಗಳಲ್ಲಿಯೂ ಮುಗಿಸಿ ಅಂಗಿರಸರಲ್ಲಿ ಶ್ರೇಷ್ಠರೆಂದು ಪ್ರಸಿದ್ಧಿಯನ್ನು ಪಡೆದಿದ್ದಾರೆ. ದೇವತೆಗಳನೊಡನಿರುವ ಅಗ್ನಿಯು ನನಗೆ ಧನಾದಿಗಳನ್ನು ಅನುಗ್ರಹಿಸಿ ಕೊಡುತ್ತಾನೆ.

English Translation

Among those who have sprung from Agni is mauy forms, (and sprung) from heaven, the chief Angirasas, the celebrator of the nine-month rite, the celebrator of the ten-month rite, accompained by the gods bestows (upon me wealth).

ವಿಶೇಷವಿಷಯಗಳು

ನವಗ್ವ, ದಶಗ್ವ ಎಂಬ ಶಬ್ದಗಳ ವಿವರಣೆಗಾಗಿ ಋ. ಸಂ. 18-534, 19-501 ನೇ ಪೇಜುಗಳನ್ನು ನೋಡಿ.

ಸಂಹಿತಾಪಾಠಃ

ಇಂದ್ರೇಣ ಯುಜಾ ನಿಃ ಸೃಜಂತ ವಾಘತೋ ವ್ರಜಂ ಗೋಮಂತಮಶ್ವಿನಂ।
ಸಹಸ್ರಂ ಮೇ ದದತೋ ಅಷ್ಟಕರ್ಣ್ಯಃ ಶ್ರವೋ ದೇವೇಷ್ವಕ್ರತ ॥ ೭ ॥

ಪದಪಾಠಃ

ಇಂದ್ರೇಣ । ಯುಜಾ । ನಿಃ । ಸೃಜಂತ । ವಾಘತಃ । ವ್ರಜಂ । ಗೋಽಮಂತಂ । ಅಶ್ವಿನಂ ।
ಸಹಸ್ರಂ । ಮೇ । ದದತಃ । ಅಷ್ಟಽಕರ್ಣ್ಯಃ । ಶ್ರವಃ । ದೇವೇಷು । ಅಕ್ರತ ॥ ೭ ॥

ಸಾಯಣಭಾಷ್ಯಂ

ವಾಘತಃ ಕರ್ಮಣಾಂ ವೋಢಾರೋ ವಿಶ್ವೇ ದೇವಾ ಅಂಗಿರಸೋ ವೇಂದ್ರೇಣ ಯುಜಾ ಸಹಾಯೇನ ನಿಃ ಸೃಜಂತ । ನಿರಗಮಯನ್ । ಕಂ । ಗೋಮಂತಂ ಗೋಯುಕ್ತಮಶ್ವಿನಮಶ್ವವಂತಂ ಪಣಿಭಿ-

ರವರುದ್ಧಂ ವ್ರಜಂ । ತೇ ಮೇ ಮಾಂ ಪ್ರತಿ ಸಹಸ್ರಂ ಸಹಸ್ರಸಂಖ್ಯಾಕಂ ಧನಂ ಸತ್ರಪರಿವೇಷಣಮುಷ್ಟ್ರ-ಕಣ್ಯಃ ॥ ಅಷ್ಟ ಇತಿ ಅಶೂ ವ್ಯಾಪ್ತೌ ನಿಷ್ಠಾಯಾಂ ರೂಪಂ ॥ ವಿಸ್ಮೃತಕರ್ಣಾಃ । ಉಪಲಕ್ಷಣಮೇತತ್ । ವ್ಯಾಪ್ತೇಸರ್ವಾವಯವಾ ಗಾಶ್ಚ ದದತೋ ಮಹ್ಯಂ ಪ್ರಯಚ್ಛಂತೋ ದೇವೇಷ್ವಿಂದ್ರಾದಿಷು ಶ್ರವೋ ಹವಿ-ರ್ಲಕ್ಷಣಮನ್ನಂ ಕೀರ್ತಿಂ ವಾಕೃತ ಅಕೃಷತ ॥ ಕರೋತೇರ್ಲುಙಿ ಮಂತ್ರೇ ಘಸೇತಿ ಚ್ಲೇರ್ಲುಕ್ ॥ ಏವಂ ನಾಭಾನೇದಿಷ್ಠೇನಾಂಗಿರಸಃ ಸ್ತುತಾಸ್ತಸ್ಮೈ ಧನಂ ಪ್ರಾದುಃ। ತದುಕ್ತಂ ಶೌನಕೇನ। ಋಷಯೋಽಂ-ಗಿರಸಸ್ತುಷ್ಟಾ ಯದ್ದದುರ್ಮಾನವಾಯ ತು । ತತ್ಪ್ರಣ್ಯಾಯ ಚ ಕರ್ಮಣಿ ಯೇ ಯಜ್ಞೇನೇತ್ಯ-ಕೀರ್ತಯತ್ ॥

ಪ್ರತಿಪದಾರ್ಥ

ವಾಘತಃ—(ಯಜ್ಞ) ಕರ್ಮನಿರ್ವಾಹಕರಾದ ವಿಶ್ವೇದೇವತೆಗಳು ಅಥವಾ ಅಂಗಿರಾಋಷಿಗಳು । **ಇಂದ್ರೇಣ**—ಇಂದ್ರನಿಂದಲೂ । **ಯುಜಾ**—ಅವನ ಸಹಾಯದಿಂದಲೂ । **ಗೋಮಂತಂ**—ಗೋವುಗಳಿಂದ ಸಹಿತವಾದುದೂ । **ಅಶ್ವಿನಂ**—ಅಶ್ವಗಳಿಂದ ಸಹಿತವಾದುದೂ ಆದ । **ವ್ರಜಂ**—ಪಶುಸಮೂಹವನ್ನು । **ನಿಃ ಸೃಜಂತ**-(ಅವುಗಳನ್ನು ಬಚ್ಚಿಟ್ಟಿದ್ದ ಪರ್ವತಪ್ರದೇಶದಿಂದ) ಈಚಿಗೆ ಹೊರಡಿಸಿದರು. ಆ ಅಂಗಿರಾಋಷಿಗಳು । **ಮೇ**—ನನಗೆ । **ಸಹಸ್ರಂ**—ಸಹಸ್ರಸಂಖ್ಯಾಕವಾದ । **ಅಷ್ಟಕರ್ಣ್ಯಃ**—ಉದ್ದವಾದ ಕಿವಿಗಳುಳ್ಳ ಗೋವುಗಳನ್ನು । **ದದತಃ**—ಕೊಡಲಿಚ್ಛೆಯುಳ್ಳವರಾಗಿ । **ದೇವೇಷು**—ದೇವತೆಗಳಲ್ಲಿ ಎಂದರೆ ದೇವತೆಗಳನ್ನುದ್ದೇಶಿಸಿ ಯಜ್ಞಸಮಾಪ್ತಿಗಾಗಿ । **ಶ್ರವಃ**—ಹವಿರ್ಲಕ್ಷಣದಿಂದಿರುವ ಅನ್ನವನ್ನು । **ಅಕೃತ**—ಹೋಮಮಾಡಿದರು.

ಭಾವಾರ್ಥ

ಯಜ್ಞನಿರ್ವಾಹಕರಾದ ಅಂಗಿರಾಋಷಿಗಳು (ಅಥವಾ ವಿಶ್ವೇದೇವತೆಗಳು) ಇಂದ್ರನ ಸಹಾಯದಿಂದ ಪಣಿಗಳೆಂಬ ಅಸುರರು ಅಪಹರಿಸಿ ರಹಸ್ಯವಾದ ಪರ್ವತಪ್ರದೇಶದಲ್ಲಿ ಬಚ್ಚಿಟ್ಟಿದ್ದ ಗೋವುಗಳ ಮತ್ತು ಅಶ್ವಗಳ ಸಮೂಹವನ್ನು ಆ ಪರ್ವತಪ್ರದೇಶದಿಂದ ಬಿಡಿಸಿ ಈಚಿಗೆ ಬರುವಂತೆ ಹೊರಡಿಸಿದರು. ಆ ಅಂಗಿರಸರು ನನಗೆ ಉದ್ದವಾದ ಕಿವಿಗಳುಳ್ಳ ಸಾವಿರ ಗೋವುಗಳನ್ನು ಕೊಡುವುದಕ್ಕಾಗಿ ದೇವತೆಗಳನ್ನುದ್ದೇಶಿಸಿ ಹವಿಸ್ಸನ್ನರ್ಪಿಸಿ ಯಜ್ಞಸಮಾಪ್ತಿಮಾಡಿದರು.

English Translation

The accepters of oblations, with Indra for their associate, have emptied pastures crowded with cows, and horses, giving me a thousand full-grown (cattle), they have gained renown among the gods,

ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಅಂಗಿರಸರು ತಾವು ಮಾಡುತ್ತಿದ್ದ ಸತ್ರಯಾಗದ ಪಂಸನಮಾಪ್ತಿಯಲ್ಲಿ ನಾಭಾನೇದಿಸ್ಠನಿಗೆ ಸಹಸ್ರ ಗೋವುಗಳನ್ನು ಕೊಟ್ಟ ವಿಷಯದ ಪ್ರಸ್ತಾಪವಿದೆ. ಈ ವಿಷಯದಲ್ಲಿ ಶೌನಕಮಹರ್ಷಿಯು ತಮ್ಮ ಬೃಹದ್ದೇವತಾ ಎಂಬ ಗ್ರಂಥದಲ್ಲಿ—

ಋಷಯೋಽಂಗಿರಸಸ್ತುಷ್ಟಾ ಯದ್ದದುರ್ಮಾನವಾಯ ತು ।
ತತ್ಪ್ರಣ್ಯಾಯ ಚ ಕರ್ಮಾಣಿ ಯೇ ಯಜ್ಞೇನೇತ್ಯಕೀರ್ತಯತ್ ॥

ಎಂದು ಹೇಳಿದಾರೆ. ಅಂಗಿರಸರು ನಾಭಾನೇದಿಷ್ಠನು ಪಠಿಸಿದ ಮಂತ್ರದಿಂದ ಸಂತುಷ್ಟರಾಗಿ ಅವನಿಗೆ ಗೋವುಗಳನ್ನು ಕೊಟ್ಟರು. ಈ ವಿಷಯವನ್ನು ನಾಭಾನೇದಿಷ್ಠನು **ಯೋ ಯಜ್ಞೇನ** ಎಂಬ ಪ್ರಕೃತ ಸೂಕ್ತದಿಂದ ವರ್ಣಿಸಿದಾನೆ.

ಸಂಹಿತಾಪಾಠಃ

ಪ್ರ ನೂನಂ ಜಾಯತಾಮಯಂ ಮನುಸ್ಫೋಕ್ಮೇವ ರೋಹತು ।
ಯಃ ಸಹಸ್ರಂ ಶತಾಶ್ವಂ ಸದ್ಯೋ ದಾನಾಯ ಮಂಹತೇ ॥ ೪ ॥

ಪದಪಾಠಃ

ಪ್ರ । ನೂನಂ । ಜಾಯತಾಂ । ಅಯಂ । ಮನುಃ । ತೋಕ್ಮಾಽಇವ । ರೋಹತು ।
ಯಃ । ಸಹಸ್ರಂ । ಶತಾಽಅಶ್ವಂ । ಸದ್ಯಃ । ದಾನಾಯ । ಮಂಹತೇ ॥ ೪ ॥

ಸಾಯಣಭಾಷ್ಯಂ

ಉತ್ತರಾಭಿಶ್ಚತಸೃಭಿರಸ್ಯೈ ಮಾನವಾಯರ್ಷಯೇ ಸಾವರ್ಣಿನಾ ಯದ್ದತ್ತಂ ತತ್ಪ್ರಶಸ್ಯತೇ । ತದಪ್ಯುಕ್ತಂ ಶೌನಕೇನ । ಸಾವರ್ಣಿನಾ ಚ ಯದ್ದತ್ತಂ ಮಾನವಾಯ ಮಹದ್ಯಸು । ತದುಕ್ತಂ ಸೂಕ್ತಶೇಷೇಣ ಪ್ರ ನೂನಂ ಜಾಯತಾಮಿತಿ ॥

ಅಯಂ ಸಾವರ್ಣಿರ್ಮನುರ್ನೂನಂ ಕ್ಷಿಪ್ರಂ ಪ್ರ ಜಾಯತಾಂ । ಪ್ರಜಾತೋ ಭವತು ಧನಾದಿಭಿಃ ಪುತ್ರಾದಿಭಿಶ್ಚ ರೋಹತು । ಪ್ರಾದುರ್ಭವತು । ತತ್ರ ದೃಷ್ಟಾಂತಃ । ತೋಕ್ಮೇವ । ಯಥಾ ಜಲಕ್ಲಿನ್ನಂ ಬೀಜಂ ಪ್ರಾದುರ್ಭವತಿ ಏವಂ ಕರ್ಮಫಲಸಂಯುಕ್ತಃ ಸ ಮನುಃ ಪುತ್ರಾದಿಭೀ ರೋಹತು । ಯೋಽಯಂ ಮನುಃ ಶತಾಶ್ವಂ ಬಹಶ್ವಸಂಯುಕ್ತಂ ಸಹಸ್ರಂ ಗವಾಂ ಸದ್ಯಸ್ತದಾನೀಮೇವ ದಾನಾಯ ಮಂಹತೇ । ಅಸ್ಮಾ ಋಷಯೇ ದಾತುಂ ಪ್ರೇರಯತಿ ॥

ಪ್ರತಿಪದಾರ್ಥ

ಅಯಂ—ಈ ಸಾವರ್ಣಿಯೆಂಬ । **ಮನುಃ**—ಮನುವು । **ನೂನಂ**—ಬೇಗನೆ । **ಪ್ರ ಜಾಯತಾಂ**—ಪ್ರಾದುರ್ಭೂತನಾಗಲಿ । **ತೋಕ್ಮೇವ**—ನೀರಿನಲ್ಲಿ ನೆನೆದಿರುವ ಬೀಜವು ಬೇಗನೆ ಮೊಳಕೆಯಾಗುವಂತೆ (ಈ ಸಾವರ್ಣಿಯು ಧನಾದಿಗಳಿಂದಲೂ ಪುತ್ರಾದಿಗಳಿಂದಲೂ) । **ರೋಹತು**—ಪ್ರಾದುರ್ಭೂತನಾಗಲಿ । **ಯಃ**—(ಯಾವ) ಈ ಮನುವು । **ಶತಾಶ್ವಂ**—ಅನೇಕ ಅಶ್ವಗಳನ್ನೂ । **ಸಹಸ್ರಂ**—ಸಾವಿರಾರು ಗೋವುಗಳನ್ನೂ । **ಸದ್ಯಃ**—ಈಗಲೇ । **ದಾನಾಯ**—ಈ ಋಷಿಗೆ ದಾನವಾಡುವುದಕ್ಕಾಗಿ । **ಮಂಹತೇ**—ಪ್ರೇರಿಸುವನು.

ಭಾವಾರ್ಥ

ಅನೇಕ ಅಶ್ವಗಳನ್ನೂ, ಸಾವಿರಾರು ಗೋವುಗಳನ್ನೂ ಈ ಋಷಿಗೆ ದಾನವಾಡುವಂತೆ ಪ್ರೇರಿಸುವ ಈ ಸಾವರ್ಣಿಯೆಂಬ ಮನುವು ತನ್ನ ಪುತ್ರಾದಿಗಳಿಂದಲೂ, ಧನಾದಿಗಳಿಂದಲೂ ಸಹಿತನಾಗಿ ನೀರಿನಲ್ಲಿ ನೆನೆದ ಬೀಜವು ಬೇಗನೆ ಮೊಳಕೆಯಾಗುವಂತೆ ಈಗಲೇ ಇಲ್ಲಿ ಪ್ರಾದುರ್ಭೂತನಾಗಲಿ.

May this Manu (Savarni) quickly be born, may he increase like (well-watered) seed, who sends me at once a thousand and a hundred horses for a present.

ವಿಶೇಷವಿಷಯಗಳು

ಈ ಋಕ್ಕಿನಲ್ಲಿಯೂ ಮುಂದಿನ ಮೂರು ಋಕ್ಕುಗಳಲ್ಲಿಯೂ ಸಾವರ್ಣಿ ಎಂಬ ಮನುವು ಋಷಿಗೆ ದಾನಮಾಡಿದ ವಿಷಯದ ಪ್ರಶಂಸೆ ಇವೆ. ಅದನ್ನೂ ಶೌನಕರು—

ಸಾವರ್ಣಿನಾ ಚೆ ಯದ್ದತ್ತಂ ಮಾನವಾಯ ಮಹಪ್ಸು ।
ತದುಕ್ತಂ ಸೂಕ್ತಶೇಷೇಣ ಪ್ರ ನೂನಂ ಜಾಯತಾಮಿತಿ ॥

ಎಂದು ಹೇಳಿದಾರೆ ಎಂದರೆ ಸಾವರ್ಣಿ ಎಂಬ ಮನುವು ಮನುಪುತ್ರನಾದ ನಾಭಾನೇದಿಷ್ಠನಿಗೆ ಧನದಾನಮಾಡಿರುವುದನ್ನು ಪ್ರಕೃತಸೂಕ್ತದ **ಪ್ರ ನೂನಂ ಜಾಯತಾಂ** ಎಂದು ಮೊದಲಾದ ಋಕ್ಕುಗಳಿಂದ ಸೂಕ್ತದ ಕೊನೆಯವರಿಗೆ ಪ್ರಶಂಸೆ ಮಾಡಲಾಗಿದೆ.

ಸಂಹಿತಾಪಾಠಃ

ನ ತಮಂಶ್ನೋತಿ ಕಶ್ಚನ ದಿವ ಇವ ಸಾನ್ವಾರಭಂ ।
ಸಾವರ್ಣ್ಯಸ್ಯ ದಕ್ಷಿಣಾ ವಿ ಸಿಂಧುರಿವ ಪಪ್ರಥೇ ॥ ೯ ॥

ಪದಪಾಠಃ

ನ । ತಂ । ಅಂಶ್ನೋತಿ । ಕಃ । ಚನ । ದಿವಃ । ಇವ । ಸಾನು । ಆರಭಂ ।
ಸಾವರ್ಣ್ಯಸ್ಯ । ದಕ್ಷಿಣಾ । ವಿ । ಸಿಂಧುಃ । ಇವ । ಪಪ್ರಥೇ ॥ ೯ ॥

ಸಾಯಣಭಾಷ್ಯಂ

ತಂ ಸಾವರ್ಣಿಂ ಮನುಂ ಕಶ್ಚನ ಕಶ್ಚಿದಪ್ಯಾರಭಮಾರಬ್ಧುಂ ಸ್ವಕರ್ಮಣಾ ನಾಶ್ನೋತಿ । ನ ವ್ಯಾಪ್ನೋತಿ । ಯಥಾ ಮನುಃ ಪ್ರಯಚ್ಛತಿ ತಥಾನ್ಯೋ ದಾತುಂ ನ ಶಕ್ನೋತೀತ್ಯರ್ಥಃ । ಕಥಂಸ್ಥಿತಂ । ದಿವ ಇವ ದ್ಯುಲೋಕಸ್ಯ ಸಾನು ಸಮುಚ್ಛ್ರಿತಂ ತೇಜಸಾ ಕೈಶ್ಚಿದಪ್ಯಪ್ರಧೃಷ್ಯಮಾದಿತ್ಯಮಿವ ಸ್ಥಿತಂ ॥ ಆರಭಂ । ಶಕಿ ಣಮುಲ್ಕಮುಲೌ । ಪಾ. ೩-೪-೧೨. । ಇತಿ ಕಮುಲ್ ॥ ತಸ್ಯ ಸಾವರ್ಣ್ಯಸ್ಯ ಮನೋರಿಯಂ ಗನಾದಿದಕ್ಷಿಣಾ ಸಿಂಧುರಿವ ಸ್ಯಂದಮಾನಾ ನದೀವ ಪೃಥಿವ್ಯಾಂ ಪಪ್ರಥೇ । ವಿಪಪ್ರಥೇ । ವಿಸ್ತೀರ್ಣಾ ಭವತಿ ॥

ಪ್ರತಿಪದಾರ್ಥ

ದಿವ ಇವ—ಸ್ವರ್ಗದಲ್ಲಿ ಬೆಳಗುತ್ತಿರುವ ಆದಿತ್ಯನಂತೆ । **ಸಾನು**—ತನ್ನ ತೇಜಸ್ಸಿನಿಂದ ಉನ್ನತಪ್ರದೇಶದಲ್ಲಿ ಕುಳಿತಿರುವ । **ತಂ**—ಆ ಸಾವರ್ಣಿಯೆಂಬ ಮನುವನ್ನು । **ಆರಭಂ**—ದಾನಾದಿಕರ್ಮಗಳಲ್ಲಿ ಸರಿಗಟ್ಟಲು । **ಕಶ್ಚನ**—ಯಾವ ಪುರುಷನೂ । **ನ ಅಶ್ನೋತಿ**—ಶಕ್ತನಾಗಲಾರನು । **ಸಾವರ್ಣ್ಯಸ್ಯ**—ಸಾವರ್ಣಿಯೆಂಬ

ಆ ಮನುವಿನ । **ದಕ್ಷಿಣಾ**—ದಾನಾದಿಗಳು । **ಸಿಂಧುರಿವ**—ಹರಿಯುತ್ತಿರುವ ನದಿಯಂತೆ । **ವಿ ಪಪ್ರಥೇ**—ಎಲ್ಲೆಲ್ಲಿಯೂ ವಿಸ್ತೀರ್ಣವಾಗಿ ಹರಡುತ್ತದೆ.

ಭಾವಾರ್ಥ

ಸ್ವರ್ಗದಲ್ಲಿ ಬೆಳಗುತ್ತಿರುವ ಸೂರ್ಯನಂತೆ ಉನ್ನತಪ್ರದೇಶದಲ್ಲಿ ಕುಳಿತು ರಾರಾಜಿಸುತ್ತಿರುವ ಆ ಸಾವರ್ಣಿಯೆಂಬ ಮನುವು ದಾನಮಾಡುವಂತೆ ಬೇರೆ ಯಾವ ಪುರುಷನೂ ಮಾಡಲು ಸಮರ್ಥನಾಗುವುದಿಲ್ಲ. ಆ ಸಾವರ್ಣಿಯೆಂಬ ಮನುವಿನ ಗವಾದಿದಾನಗಳು ಹರಿಯುತ್ತಿರುವ ನದಿಯಂತೆ ಎಲ್ಲೆಲ್ಲಿಯೂ ವ್ಯಾಪಿಸಿ ವಿಸ್ತಾರವಾಗಿ ಹರಡುತ್ತವೆ.

English Translation

No one succeeds in reaching him; (elevated) like the summit of heaven, the liberality of Savarni has broadened out like a river.

ಸಂಹಿತಾಪಾಠಃ

ಉತ ದಾಸಾ ಪರಿವಿಷೇ ಸ್ಮದ್ದಿಷ್ಟೀ ಗೋಪರೀಣಸಾ ।
ಯದುಸ್ತುರ್ವಶ್ಚ ಮಾಮಹೇ ॥ ೧೦ ॥

ಪದಪಾಠಃ

ಉತ । ದಾಸಾ । ಪರಿವಿಷೇ । ಸ್ಮದ್ದಿಷ್ಟೀ ಇತಿ ಸ್ಮತ್ ದಿಷ್ಟೀ । ಗೋಪರೀಣಸಾ ।
ಯದುಃ । ತುರ್ವಃ । ಚ । ಮಮಹೇ ॥ ೧೦ ॥

ಸಾಯಣಭಾಷ್ಯಂ

ಉತಾಪಿ ಚ ಸ್ಮದ್ದಿಷ್ಟೀ ಕಲ್ಯಾಣಾದೇಶಿನೌ ಗೋಪರೀಣಸಾ ಗೋಪರೀಣಸೌ ಗೋಭಿಃ ಪರಿವೃತೌ ಬಹುಗವಾದಿಯುಕ್ತೌ ದಾಸಾ ದಾಸವತ್ಪ್ರೇಷ್ಯವತ್ಸ್ಥಿತೌ ತೇನಾಧಿಷ್ಠಿತೌ ಯದುಶ್ಚ ತುರ್ವಶ್ಚೈತನ್ನಾಮಕೌ ರಾಜರ್ಷೀ ಪರಿವಿಷೇ ಸ್ಯ ಸಾವರ್ಣೇರ್ಮನೋರ್ಭೋಜನಾಯ ಮಮಹೇ । ಪಶೂನ್ಪ್ರಯಚ್ಛತಃ ॥ ಪೃಷ್ಠ್ಯೇಕಮನ್ವಯಾದೇಕವಚನಂ ॥

ಪ್ರತಿಪದಾರ್ಥ

ಉತ—ಮತ್ತು । **ಸ್ಮದ್ದಿಷ್ಟೀ**—ಕಲ್ಯಾಣಾತ್ಮಕವಾದ ವಾಕ್ಕುಳ್ಳವರೂ । **ಗೋಪರೀಣಸಾ**—ಅನೇಕ ಗೋವುಗಳಿಂದ ಕೂಡಿದವರೂ । **ದಾಸಾ**—ಉಪಚಾರಮಾಡತಕ್ಕವರೂ ಆದ । **ಯದುಃ**—ಯದುವೂ । **ತುರ್ವಶ್ಚ**—ತುರ್ವನೂ । **ಪರಿವಿಷೇ**—ಸಾವರ್ಣಿಯ ಭೋಗಕ್ಕಾಗಿ । **ಮಮಹೇ**—ಪಶುಗಳನ್ನು ಒದಗಿಸಿದರು.

ಭಾವಾರ್ಥ

ಕಲ್ಯಾಣಾತ್ಮಕವಾದ ವಾಕ್ಕುಳ್ಳವರೂ, ಅನೇಕ ಗೋವುಗಳಿಂದ ಕೂಡಿದವರೂ, ಉಪಚಾರಮಾಡತಕ್ಕವರೂ ಆದ ಯದುವೂ, ತುರ್ವನೂ, ಸಾವರ್ಣಿಯ ಭೋಗಕ್ಕಾಗಿ ಪಶುಗಳನ್ನು ಒದಗಿಸಿದರು.

English Translation

Yadu and Indra speaking auspiciously, and possessed of numerous cattle, gave them like (appointed) servants, for the enjoyment (of Manu Savarni)

ಸಂಹಿತಾಪಾಠಃ

ಸಹಸ್ರದಾ ಗ್ರಾಮಣೀರ್ಮಾ ರಿಷನ್ಮನುಃ ಸೂರ್ಯೇಣಾಸ್ಯ ಯತಮಾನೈತು ದಕ್ಷಿಣಾ ।
ಸಾವರ್ಣೇರ್ದೇವಾಃ ಪ್ರ ತಿರಂತ್ವಾಯುರ್ಯಸ್ಮಿನ್ನಶ್ರಾಂತಾ ಅಸನಾಮ ವಾಜಂ ॥ ೧೧ ॥

ಪದಪಾಠಃ

ಸಹಸ್ರದಾ ಇತಿ ಸಹಸ್ರ-ದಾಃ । ಗ್ರಾಮಣೀರಿತಿ ಗ್ರಾಮ-ನೀಃ । ಮಾ । ರಿಷತ್ । ಮನುಃ । ಸೂರ್ಯೇಣ । ಅಸ್ಯ । ಯತಮಾನಾ । ಏತು । ದಕ್ಷಿಣಾ ।
ಸಾವರ್ಣೇಃ । ದೇವಾಃ । ಪ್ರ । ತಿರಂತು । ಆಯುಃ । ಯಸ್ಮಿನ್ । ಅಶ್ರಾಂತಾಃ । ಅಸನಾಮ । ವಾಜಂ ॥

ಸಾಯಣಭಾಷ್ಯಂ

ಸಹಸ್ರದಾ ಗವಾದೀನಾಂ ಸಹಸ್ರಸ್ಯ ದಾತಾ ಗ್ರಾಮಣೀರ್ಗ್ರಾಮಾಣಾಂ ನೇತಾ ಕರ್ತಾ ಜನಪದಾನಾಮಯಂ ಮನುರ್ಮಾ ರಿಷತ್ । ನ ಕೈಶ್ಚಿದಪಿ ರಿಷ್ಟೋ ಹಿಂಸಿತೋ ಭವತು । ಯದ್ವಾ । ಕರ್ಮನೇತೃನಸ್ಮಾನ್ಮಾ ಹಿನಸ್ತು ಕಿಂತು ಧನಾದಿದಾನೇನ ಪೂಜಯತು । ಅಸ್ಯ ಯತಮಾನಾ ಗಚ್ಛಂತೀ ದಕ್ಷಿಣಾ ಸೂರ್ಯೇಣ ಸಹೈತು । ಸಂಗಚ್ಛತಾಂ । ತ್ರಿಷು ಲೋಕೇಷು ಪ್ರಸಿದ್ಧಾ ಭವತ್ವಿತ್ಯರ್ಥಃ । ತಸ್ಯಾಸ್ಯ ಸಾವರ್ಣೇಃ ಸವರ್ಣಪುತ್ರಸ್ಯ ಮನೋರ್ದೇವಾ ಇಂದ್ರಾದಯ ಆಯುರ್ಜೀವನಂ ಪ್ರ ತಿರಂತು । ಪ್ರವರ್ಧಯಂತು । ಅಶ್ರಾಂತಾಃ ಕರ್ಮನ್ವಲಸಾಃ ಸರ್ವಂ ಕರ್ಮ ಕುರ್ವಂತೋ ವಯಂ ಯಸ್ಮಿನ್ನಾ ವಾಜಂ ಗೋಲಕ್ಷಣಮನ್ನಮಸನಾಮ ಸಂಭಜೇಮಹಿ । ನಾಭಾನೇದಿಷ್ಠೋಽಹಮಲಭ ಇತ್ಯಾಶಾಸ್ತೇ ॥

ಪ್ರತಿಪದಾರ್ಥ

ಸಹಸ್ರದಾಃ—ಅನೇಕ ದಾನಗಳನ್ನು ಮಾಡತಕ್ಕವನೂ । **ಗ್ರಾಮಣೀಃ**—ಗ್ರಾಮಜನರಿಗೆಲ್ಲ ಮಾರ್ಗದರ್ಶಕನೂ ಆದ । **ಮನುಃ**—ಮನುವು । **ಮಾ ರಿಷತ್**—ಯಾರಿಂದಲೂ ಹಿಂಸಿಸಲ್ಪಡದಿರಲಿ । **ಅಸ್ಯ**—ಇವನಿಂದ । **ಯತಮಾನಾ**—ಉದಾರವಾಗಿ ಕೊಡಲ್ಪಡುವ । **ದಕ್ಷಿಣಾ**—ದಕ್ಷಿಣೆಯು । **ಸೂರ್ಯೇಣ**—ಸೂರ್ಯನೊಡನೆ । **ಏತು**—ಸೇರಿ ಕೊಳ್ಳಲಿ (ಮೂರು ಲೋಕಗಳಲ್ಲೂ ಪ್ರಸಿದ್ಧವಾಗಲಿ) । **ಯಸ್ಮಿನ್**—ಯಾರಲ್ಲಿ (ಯಾರ ಔದಾರ್ಯದಿಂದ) । **ವಾಜಂ**—ಗೋರೂಪವಾದ ಅನ್ನವನ್ನು । **ಅಶ್ರಾಂತಾಃ**—ಕರ್ಮದಲ್ಲಿ ಆಲಸ್ಯವಿಲ್ಲದ ನಾವು ।

ಅಸನಾಮ—ಅನುಭವಿಸುವೆವೋ ಅಂತಹ । **ಸಾವರ್ಣೇಃ**—ಸವರ್ಣಪುತ್ರನಾದ ಮನುವಿಗೆ । **ದೇವಾಃ**—ಇಂದ್ರಾದಿ ದೇವತೆಗಳು । **ಅಯುಃ**—ಆಯುಸ್ಸನ್ನು । **ಪ್ರ ತಿರಂತು**—ವೃದ್ಧಿಪಡಿಸಲಿ.

ಭಾವಾರ್ಥ

ಅನೇಕ ದಾನಗಳನ್ನು ಮಾಡತಕ್ಕವನೂ, ಗ್ರಾಮಜನರಿಗೆಲ್ಲ ಮಾರ್ಗದರ್ಶಕನೂ ಆದ ಸಾವರ್ಣಿಮನುವು ಯಾರಿಂದಲೂ ಹಿಂಸಿಸಲ್ಪಡದಿರಲಿ. ಇವನಿಂದ ಉದಾರವಾಗಿ ಕೊಡಲ್ಪಡುವ ದಕ್ಷಿಣೆಯು ಸೂರ್ಯನೊಡನೆ ಸೇರಿ ಮೂರು ಲೋಕಗಳಲ್ಲಿಯೂ ಖ್ಯಾತಿಯನ್ನು ಪಡೆಯಲಿ. ಯಾರ ಔದಾರ್ಯದಿಂದ ಕರ್ಮದಲ್ಲಿ ಉದಾಸೀನರಲ್ಲದ ನಾವು ಗೋರೂಪವಾದ ಅನ್ನವನ್ನು ಅನುಭವಿಸುವೆವೋ ಅಂತಹ ಸವರ್ಣಪುತ್ರನಾದ ಮನುವಿಗೆ ಇಂದ್ರಾದಿದೇವತೆಗಳು ಆಯುಸ್ಸನ್ನು ವೃದ್ಧಿಪಡಿಸಲಿ.

English Translation

May the donor of a thousand (cows), the head of the district, the Manu, never suffer wrong, may his liberality go spreading (in glory) with the sun ; may the gods prolong the life of Savarni (from whom) unwearied (in his service) we enjoy abundant food.

ವಿಶೇಷವಿಷಯಗಳು

ನಹುಷಪುತ್ರನಾದ ಯಯಾತಿಯ ವಿಷಯದಲ್ಲಿ ಋ. ಸಂ. ಭಾಗ ೩, ಪುಟ 583 ರಲ್ಲಿ ಬರೆದಿರುವುದನ್ನು ನೋಡಿ.

ಅರವತ್ತಮೂರನೆಯ ಸೂಕ್ತ

ಸಾಯಣಭಾಷ್ಯಂ

ಪರಾವತೋ ಯ ಇತಿ ಸಪ್ತದಶರ್ಚಂ ತೃತೀಯಂ ಸೂಕ್ತಂ ಪ್ಲತೇಃ ಪುತ್ರಸ್ಯ ಗಯಸ್ಯಾರ್ಷಂ । ಷೋಡಶೀಸಪ್ತದಶ್ಯೌ ತ್ರಿಷ್ಟುಭೌ । ಪಂಚದಶೀ ತ್ರಿಷ್ಟುಬ್ಜಗತೀ ವಾ । ಶಿಷ್ಟಾಶ್ಚತುರ್ದಶ ಜಗತ್ಯಃ । ಸ್ವಸ್ತಿ ನಃ ಪಥ್ಯಾಸ್ವಿತಿ ದ್ವೇ ಪಥ್ಯಾಸ್ವಸ್ತಿದೇವತ್ಯೇ । ಶಿಷ್ಟಾ ವೈಶ್ವದೇವ್ಯಃ। ತಥಾ ಚಾನುಕ್ರಾಂತಂ । ಪರಾವತಸ್ಯ್ಯನಾ ಗಯಃ ಪ್ಲಾತೋ ದ್ವಿತ್ರಿಷ್ಟುಬಂತಂ ತು ಸ್ವಸ್ತಿ ನಸ್ತ್ರಿಷ್ಟುಬ್ವಾ ಸಹ ಚೋತ್ತರಯಾ ಪಥ್ಯಾಸ್ವಸ್ತಿದೇವತ್ಯೇತಿ ॥ ಪೃಷ್ಠ್ಯಾಭಿಪ್ಲವಯೋಸ್ತೃತೀಯೇಽಹನಿ ವೈಶ್ವದೇವ ಏತತ್ಸೂಕ್ತಂ ವೈಶ್ವದೇವಂ ನಿವಿದ್ಧಾನಂ । ಸೂತ್ರಿತಂ ಚ । ಅನಶ್ವೋ ಜಾತಃ ಪರಾವತೋ ಯ ಇತಿ ವೈಶ್ವದೇವಂ । ಆ. ೭-೭ । ಇತಿ ॥

ಅನುವಾದವು—ಪರಾವತೋ ಯೇ ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹದಿನೇಳು ಋಕ್ಕುಗಳಿರುವವು. **ಈ** ಸೂಕ್ತಕ್ಕೆ ಪ್ಲತ ಎಂಬ ಋಷಿಯ ಪುತ್ರನಾದ ಗಯನೆಂಬುವನು ಋಷಿಯು ; ಈ ಸೂಕ್ತದ ಹದಿನಾರು ಮತ್ತು ಹದಿನೇಳನೆಯ ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು ; ಹದಿನೈದನೆಯ ಋಕ್ಕು ತ್ರಿಷ್ಟುಪ್ ಅಥವಾ ಜಗತೀಛಂದಸ್ಕವು ; ಉಳಿದ ಹದಿನಾಲ್ಕು ಋಕ್ಕುಗಳೂ ಜಗತೀಛಂದಸ್ಕವು. **ಸ್ವಸ್ತಿ ನಃ ಪಥ್ಯಾಸು** ಎಂದು ಮೊದಲಾಗುವ ಎರಡು ಋಕ್ಕುಗಳು (೧೫-೧೬ ನೇ ಋಕ್ಕುಗಳು) ಪಥ್ಯಾಸ್ವಸ್ತಿದೇವತಾಕವು ; ಉಳಿದ ಋಕ್ಕುಗಳು ವಿಶ್ವೇದೇವತಾಕವು. ಅನುಕ್ರಮಣಿಕೆಯಲ್ಲಿ—**ಪರಾವತಸ್ಯ್ಯನಾ ಗಯಃ ಪ್ಲಾತೋ ದ್ವಿತ್ರಿ-**

ಷ್ಟುಬಂತಂ ತು ಸ್ವಸ್ತಿ ನಸ್ತ್ರಿಷ್ಟುಬ್ವಾ ಸಹ ಚೋತ್ತರಯೋ ಪಥ್ಯಾಸ್ವಸ್ತಿದೇವತ್ಯಾ ಎಂದು ಹೇಳಿರುವುದು. ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳ ಮೂರನೆಯ ದಿನ ವೈಶ್ವದೇವಶಸ್ತ್ರಮಂತ್ರಗಳಲ್ಲಿ ಈ ಸೂಕ್ತವನ್ನು ವೈಶ್ವದೇವ ನಿವಿದ್ಧಾನಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅನಶ್ವೋ ಜಾತಃ ಪರಾವತೋ ಯ ಇತಿ ವೈಶ್ವದೇವಂ** ಎಂಬ ಸೂತ್ರದಿಂದ (ಅ. ೭-೭) ವಿವೃತವಾಗಿರುವುದು.

ಸೂಕ್ತ—೬೦

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೩ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೩, ೪, ೫ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೭ ॥

ಋಷಿಃ—ಗಯಃ ಪ್ಲಾತಃ ॥
ದೇವತಾ—೧-೧೪, ೧೭. ವಿಶ್ವೇದೇವಾಃ । ೧೫, ೧೬. ಪಥ್ಯಾಸ್ವಸ್ತಿಃ ॥
ಛಂದಃ—೧.೧೪, ಜಗತೀ । ೧೫. ಜಗತೀ ತ್ರಿಷ್ಟುಬ್ವಾ । ೧೬-೧೭. ತ್ರಿಷ್ಟುಪ್ ॥

ಸಂಹಿತಾಪಾಠಃ

ಪರಾವತೋ ಯೇ ದಿಧಿಷಂತ ಆಪ್ಯಂ ಮನುಪ್ರೀತಾಸೋ ಜನಿಮಾ ವಿವಸ್ವತಃ।
ಯಯಾತೇರ್ಯೇ ನಹುಷ್ಯಸ್ಯ ಬರ್ಹಿಷಿ ದೇವಾ ಆಸತೇ ತೇ ಅಧಿ ಬ್ರುವಂತು ನಃ ॥ ೧ ॥

ಪದಪಾಠಃ

ಪರಾವತಃ । ಯೇ । ದಿಧಿಷಂತೇ । ಆಪ್ಯಂ । ಮನುಪ್ರೀತಾಸಃ । ಜನಿಮ । ವಿವಸ್ವತಃ ।
ಯಯಾತೇಃ । ಯೇ । ನಹುಷ್ಯಸ್ಯ । ಬರ್ಹಿಷಿ । ದೇವಾಃ । ಆಸತೇ । ತೇ । ಅಧಿ । ಬ್ರುವಂತು । ನಃ ॥

ಸಾಯಣಭಾಷ್ಯಂ

ಯೇ ದೇವಾಃ ಪರಾವತೋ ದೂರದೇಶಾದಾಗತ್ಯಾಪ್ಯಂ ಜ್ಞಾತೇರಯಂ ಮನುಷ್ಯೈಃ ಸಹ ಬಂಧುತ್ವಂ ದಿಧಿಷಂತೇ ಧಾರಯಂತಿ । ಯದ್ವಾ । ಹವಿಷಾಂ ಪ್ರದಾತೃಭಿರ್ಮನುಷ್ಯೈಃ ಸಹ ಸಖ್ಯಂ ಕುರ್ವ ಇತಿ ಪರಸ್ಪರಂ ಶಬ್ದಾಯಂತೇ ॥ ಧಿಷ ಶಬ್ದೇ । ಜೌಹೋತ್ಯಾದಿಕಃ । ಛಾಂದಸೋ ಝಸ್ಯಾಂತಾದೇಶಃ । ಧಿಷ ಧಾರಣ ಇತಿ ಕೈಶ್ಚಿದಪ್ಯುಪಗಮ್ಯತೇ ॥ ಉಕ್ತಾರ್ಥಮೇವ ವಿಶಿನಷ್ಟಿ । ಮನುಪ್ರೀತಾಸೋ ಮನುಷ್ಯೈಃ ಪ್ರೀತಾ ದೇವಾ ವಿವಸ್ವತೋ ವಿವಸ್ವತ್ಪುತ್ರಸ್ಯ ಮನೋರ್ಜನಿಮ ಜನ್ಮಾನಿ ಮನುಷ್ಯಾನ್ಧಾರಯಂತಿ । ಕಿಂಚ ಯೇ ದೇವಾ ನಹುಷ್ಯಸ್ಯ ನಹುಷಪುತ್ರಸ್ಯ ಯಯಾತೇರೇತನ್ನಾಮಕಸ್ಯ ರಾಜರ್ಷೇರ್ಬರ್ಹಿಷಿ ಯಜ್ಞೇ ಆಸತೇ ಉಪವಿಶಂತಿ ತೇ ದೇವಾ ನೋಽಸ್ಮಾನಧಿ ಬ್ರುವಂತು । ಧನಾದಿಪ್ರದಾನೇನಾಸ್ಮಾನಧಿಕಂ ವದಂತು । ಪೂಜಯಂತ್ವಿತ್ಯರ್ಥಃ ॥

ಪ್ರತಿಪದಾರ್ಥ

ಮನುಷ್ಪ್ರೀತಾಸಃ—ಮಾನವರ ಪ್ರೀತಿಗೆ ಪಾತ್ರರಾದ । **ಯೇ**—ಯಾವ ದೇವತೆಗಳು । **ವಿವಸ್ವತಃ**—ವಿವಸತ್ಪುತ್ರನಾದ ಮನುವಿನ । **ಜನಿಮ**—ಜನ್ಮಗಳನ್ನು (ಸಂತತಿಗಳನ್ನು) ಭರಿಸುತ್ತ । **ಪರಾವತಃ**—ಅತ್ಯಂತ ದೂರದೇಶದಿಂಗ ಬಂದು । **ಅಸ್ಯಂ**—ಮಾನವರೊಡನಿರುವ ಬಂಧುತ್ವವನ್ನು । **ದಿಧಿಷಂತೇ**—ಪ್ರಕಟಿಸುವರೋ (ಮತ್ತು) । **ಯೇ ದೇವಾಃ**—ಯಾವ ದೇವತೆಗಳು । **ನಹುಷ್ಯಸ್ಯ**—ನಹುಷಪುತ್ರನಾದ । **ಯಯಾತೇಃ**—ಯಯಾತಿಯೆಂಬ ರಾಜರ್ಷಿಯ । **ಬರ್ಹಿಷಿ**—ಯಜ್ಞದಲ್ಲಿ । **ಆಸತೇ**—ಕುಳಿತುಕೊಳ್ಳುವರೋ । **ತೇ**—ಆ ದೇವತೆಗಳು । **ನಃ**—ನಮ್ಮನ್ನು । **ಅಧಿ ಬ್ರುವಂತು**—ಪ್ರಶಂಸಿಸಲಿ (ಅನುಗ್ರಹಿಸಲಿ).

ಭಾವಾರ್ಥ

ಮಾನವರ ಪ್ರೀತಿಗೆ ಪಾತ್ರರಾದ ಯಾವ ದೇವತೆಗಳು ವಿವಸ್ವತ್ಪುತ್ರನಾದ ಮನುವಿನ ಸಂತತಿಗಳನ್ನು ಭರಿಸುತ್ತ ಅತ್ಯಂತ ದೂರದೇಶದಿಂದ ಬಂದು ಮಾನವರೊಡನಿರುವ ಬಂಧುತ್ವವನ್ನು ಪ್ರಕಟಿಸುತ್ತ ನಹುಷಪುತ್ರನಾದ ಯಯಾತಿಯೆಂಬ ರಾಜರ್ಷಿಯ ಯಜ್ಞದಲ್ಲಿ ಕುಳಿತುಕೊಳ್ಳುವರೋ ಆ ದೇವತೆಗಳು ನಮ್ಮ ಕರ್ಮಗಳನ್ನು ಪ್ರಶಂಸಿಸಿ ನನ್ನುನ್ನು ಅನುಗ್ರಹಿಸಲಿ.

English Translation

May the gods who, (coming) from afar proclaim their affinity (with men), and beloved by men, (support) the generations of (Manu, the son of) Vivaswat ; may they who are seated on the sacred grass of Yayati, the son of Nahusha, speak favourably unto us.

ಸಂಹಿತಾಪಾಠಃ

ವಿಶ್ವಾ ಹಿ ವೋ ನಮಸ್ಯಾನಿ ವಂದ್ಯಾ ನಾಮಾನಿ ದೇವಾ ಉತ ಯಜ್ಞಿಯಾನಿ ವಃ ।
ಯೇ ಸ್ಥ ಜಾತಾ ಅದಿತೇರದ್ಭ್ಯಸ್ಪರಿ ಯೇ ಪೃಥಿವ್ಯಾಸ್ತೇ ಮ ಇಹ ಶ್ರುತಾ ಹವಂ ॥ ೨ ॥

ಪದಪಾಠಃ

ವಿಶ್ವಾ । ಹಿ । ವಃ । ನಮಸ್ಯಾನಿ । ವಂದ್ಯಾ । ನಾಮಾನಿ । ದೇವಾಃ । ಉತ । ಯಜ್ಞಿಯಾನಿ । ವಃ ।
ಯೇ । ಸ್ಥ । ಜಾತಾಃ । ಅದಿತೇಃ । ಅತ್ ೪ಭ್ಯಃ । ಪರಿ । ಯೇ । ಪೃಥಿವ್ಯಾಃ । ತೇ । ಮೇ । ಇಹ । ಶ್ರುತ ।
ಹವಂ ॥ ೨ ॥

ಸಾಯಣಭಾಷ್ಯಂ

ಯೇ ದೇವಾ ಇಂದ್ರಾದಯಃ । ಹಿರವಧಾರಣೇ । ವೋ ಯುಷ್ಮಾಕನೇವ ನಾಮಾನಿ ನಮನೀಯಾನಿ ವಿಶ್ವಾ ಸರ್ವಾಣಿ ಶರೀರಾಣಿ ನಮಸ್ಯಾನಿ ನಮಸ್ಕಾರಾರ್ಹಾಣಿ ಭವಂತಿ ವಂದ್ಯಾ ವಂದ್ಯಾನಿ ಸ್ತೋತವ್ಯಾನಿ ಚ ಭವಂತಿ । ಯೇ ಯೂಯಮುದಿತೇರದೀನಾದ್ದ್ಯುಲೋಕಾದದ್ಭ್ಯಃ । ಅಂತರಿಕ್ಷನಾನ್ಮೈತಶ್ । ಅಂತರಿಕ್ಷಾತ್ । ಪರಿಃ ಪಂಚಮ್ಯರ್ಥದ್ಯೋತಕಃ । ಪೃಥಿವ್ಯಾಶ್ಚ ಜಾತಾಃ ಪ್ರಾದುರ್ಭೂತಾಃ ಸ್ಥ ಭವತ ತೇ ಯೂಯಮಿಹಾಸ್ಮಿನ್ಯಜ್ಞೇ ಆಗತ್ಯ ಮೇ ಮದೀಯಂ ಹವಮಾಹ್ವಾನಂ ಶ್ರುತ । ಶೃಣುತ ॥

ಪ್ರತಿಪದಾರ್ಥ

ದೇವಾಃ—ಎಲೈ ಇಂದ್ರಾದಿ ದೇವತೆಗಳೇ । **ವಃ**—ನಿಮ್ಮ । **ವಿಶ್ವಾ ನಾಮಾನಿ ಹಿ**—ಸಕಲವಿಧವಾದ ಸ್ವರೂಪಗಳೂ । **ನಮಸ್ಯಾನಿ**—ನಮಸ್ಕಾರಾರ್ಹವಾದವಾಗಿವೆ । **ವಂದ್ಯಾ**—ಸ್ತುತ್ಯರ್ಹವಾಗಿವೆ । **ಉತ**—ಮತ್ತು । **ವಃ**—ನಿಮ್ಮ ಸ್ವರೂಪಗಳು । **ಯಜ್ಞಿಯಾನಿ**—ಯಜ್ಞಾರ್ಹವಾಗಿವೆ । **ಯೇ**—ಯಾವ ನೀವೆಲ್ಲರೂ । **ಅದಿತೇಃ ಪರಿ**—ಅಖಂಡವಾದ ದ್ಯುಲೋಕದಿಂದಲೂ । **ಅದ್ಭ್ಯಃ**—ಅಂತರಿಕ್ಷದಿಂದಲೂ । **ಪೃಥಿವ್ಯಾಃ**—ಪೃಥ್ವಿಯಿಂದಲೂ । **ಜಾತಾಃ ಸ್ಥ**—ಉತ್ಪನ್ನರಾಗಿರುವಿರೋ । **ತೇ**—ಆ ನೀವೆಲ್ಲರೂ । **ಇಹ**—ನಮ್ಮ ಈ ಯಜ್ಞಕ್ಕೆ ಬಂದು । **ಮೇ**—ನನ್ನ । **ಹವಂ**—ಆಹ್ವಾನವನ್ನು । **ಶ್ರುತ**—ಕೇಳಿರಿ.

ಭಾವಾರ್ಥ

ಎಲೈ ಇಂದ್ರಾದಿದೇವತೆಗಳೇ, ನಿಮ್ಮ ಸಕಲವಿಧವಾದ ಸ್ವರೂಪಗಳೂ ನಮಸ್ಕಾರಾರ್ಹವೂ, ಸ್ತುತ್ಯರ್ಹವೂ ಮತ್ತು ಯಜ್ಞಾರ್ಹವೂ ಆಗಿವೆ. ಯಾವ ನೀವೆಲ್ಲರೂ ಅಖಂಡವಾದ ದ್ಯುಲೋಕದಿಂದಲೂ, ಅಂತರಿಕ್ಷದಿಂದಲೂ, ಪೃಥ್ವಿಯಿಂದಲೂ ಉತ್ಪನ್ನರಾಗಿರುವರೋ ಆ ನೀವೆಲ್ಲರೂ ನಮ್ಮ ಈ ಯಜ್ಞಕ್ಕೆ ಬಂದು ನನ್ನ ಆಹ್ವಾನವನ್ನು ಕೇಳಿರಿ.

English Translation

All your appellations, gods, are to be revered and praised, and worshipped, and whether you are sprung from heaven, or from the firmament, or from earth, hear at this (solemnity) my invocation.

ಸಂಹಿತಾಪಾಠಃ

ಯೇಭ್ಯೋ ಮಾತಾ ಮಧುಮತ್ಪಿನ್ವತೇ ಪಯಃ ಪೀಯೂಷಂ ದ್ಯೌರದಿತಿರದ್ರಿಬರ್ಹಾಃ ।
ಉಕ್ಥಶುಷ್ಮಾನ್ವೃಷಭರಾನ್ತ್ಸ್ವಪ್ನಸಸ್ತಾ ಆದಿತ್ಯಾ ಅನು ಮದಾ ಸ್ವಸ್ತಯೇ ॥

ಪದಪಾಠಃ

ಯೇಭ್ಯಃ । ಮಾತಾ । ಮಧುಮತ್ । ಪಿನ್ವತೇ । ಪಯಃ । ಪೀಯೂಷಂ । ದ್ಯೌಃ । ಅದಿತಿಃ । ಅದ್ರಿಬರ್ಹಾಃ ।

ऊ॒क्थ॒ऽशु॒ष्मा॒न् । वृ॒ष॒ऽभ॒रा॒न् । सु॒ऽअ॒प्न॒सः । तान् । आ॒दि॒त्यान् । अनु॑ । मा॒द॒ । स्व॒स्त॒ये ॥

सायणभाष्यं

अग्निर्द्यावेमे वैश्वदेवशस्त्रे येभ्यो मातेत्येषाधाय्या। सूत्रितं च। अयं वेनश्चोदयत्पृश्निगर्भा येभ्यो माता मधुमत्। अ.५.८१। इति ॥

माता सर्वस्य निर्मात्री पृथिवी येभ्यो देवेभ्यो देवार्थं मधुमद्या-धुर्योरपेतं पयः सारभूतं क्षीरं पिन्वते क्षरति। तथादितिरदीनाद्रिबर्हा मेघैः परिवृढा प्रवृद्धा परिवृद्धमेघा वा द्यौश्च पीयूषं पिन्वते। द्यावापृथिव्यौ हवि-रुत्पादयत इत्यर्थः। ऋषिराख्यानं संबोधार्थम्। उक्थशुष्मानतिबलान् वृषभरा-न्प्रभूतवृष्टीनाहर्तॄन् ॥ हृग्रहोर्भ इति भः ॥ सुप्नसः सुकर्मणस्तानादित्यानदितेः पुत्रा-न्देवान् स्वस्तयेऽविनाशायानु मद। अनुस्तुहि ॥ मान्यशेर्योटि व्यत्ययेन शप्। मन्दतेर्वा स्तुत्यर्थस्यानित्यमागमशासनमिति नुमभावः ॥

प्रतिपदार्थ

येभ्यः—यावद देवतेगळिगागि। **माता**—जगन्निर्मात्रियाद पृथ्वियु। **मधुमत्**—माधुर्योपेतवाद। **पयः**—क्षीरवन्नु। **पिन्वते**—ओदगिसुवळो (हागेयो)। **अद्रिबर्हाः**—मेघगळिंद परिवृतवू। **अदितिः**—अखंडात्मकवू आद। **द्यौः**—द्युलोकवु। **पीयूषं**—अमृतवन्नु ओदगिसुवुदो अंतह। **वृषभरान्**—वृष्टियन्नु हॊत्तुतरुववरू। **उक्थशुष्मान्**—स्तुतिफलवाद शक्तियुळ्ळवरू। **सुप्नसः**—उत्तमवाद कर्मवुळ्ळवरू आद। **तान् आदित्यान्**—आ आदित्यरन्नु। **स्वस्तये**—कल्याणक्काग। **अनु मद**—प्रशंसिसु मत्तु तृप्तिगॊळिसु.

भावार्थ

जगन्निर्मात्रियाद पृथ्वियु यावद देवतेगळिगे माधुर्योपेतवाद क्षीरवन्नु ओदगिसुवळो, यारिगे मेघगळिंद परिवृतवू, अखंडात्मकवू आद द्युलोकवु अमृतवन्नु ओदगिसुवुदो अंतह वृष्टिवाहकरू, स्तुतिफलवाद शक्तियुळ्ळवरू, उत्तमवाद कर्मवुळ्ळवरू आद आदित्यनन्नु प्रशंसिसि तृप्तिगॊळिसि, आदरिंद निनगे कल्याणवुंटु.

English Translation

To (these deities) to whom the maternal (earth) yields the sweet-flavoured milk, and the cloud-invested, undepressed heaven (yields) ambrosia, to those Adityas whose strength is sacred praise, who are the bringers of rain, the doers of good actions, offer for your welfare laudation.

ವಿಶೇಷವಿಷಯಗಳು

ಅಗ್ನಿಷ್ಟೋಮಯಾಗದಲ್ಲಿ ವೈಶ್ವದೇವಶಸ್ತ್ರಮಂತ್ರಗಳನ್ನು ಪಠಿಸುವಾಗ **ಯೋಭ್ಯೋ ಮಾತಾ** ಎಂಬ ಈ ಋಕ್ಕನ್ನು ಧಾಯ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಯಂ ವೇನಶ್ಚೋದಯ-ತ್ಪೃಶ್ನಿಗರ್ಭಾ ಯೋಭ್ಯೋ ಮಾತಾ ಮಧುಮತ್** ಎಂಬ ಸೂತ್ರದಿಂದ (ಆ. ೫-೧೪) ವಿವೃತವಾಗಿರುವುದು.

ಸಂಹಿತಾಪಾಠಃ

ನೃಚಕ್ಷಸೋ ಅನಿಮಿಷಂತೋ ಅರ್ಹಣಾ ಬೃಹದ್ದೇವಾಸೋ ಅಮೃತತ್ವ-
ಮಾನಶುಃ।
ಜ್ಯೋತೀರಥಾ ಅಹಿಮಾಯಾ ಅನಾಗಸೋ ದಿವೋ ವಷ್ಟಾರ್ಣಂ ವಸತೇ
ಸ್ವಸ್ತಯೇ ॥ ೪ ॥

ಪದಪಾಠಃ

ನೃ೽ಚಕ್ಷಸಃ । ಅನಿ೽ಮಿಷಂತಃ । ಅರ್ಹಣಾ । ಬೃಹತ್ । ದೇವಾಸಃ ।ಅ ಮೃತ೽ತ್ವಂ। ಆನಶುಃ।
ಜ್ಯೋತಿಃ೽ರಥಾಃ । ಅಹಿ೽ಮಾಯಾಃ । ಅನಾಗಸಃ । ದಿವಃ । ವಷ್ಟಾರ್ಣಂ । ವಸತೇ । ಸ್ವಸ್ತಯೇ ॥ ೪ ॥

ಸಾಯಣಭಾಷ್ಯಂ

ನೃಚಕ್ಷಸಃ ಕರ್ಮನೇತ್ರಾಣಾಂ ಮನುಷ್ಯಾಣಾಂ ದ್ರಷ್ಟಾರಃ ಅತ ಏವಾನಿಮಿಷಂತೋ ನಿಮೇಷ-ಮಕುರ್ವಾಣಾಃ ಸರ್ವದಾ ಜಾಗರೂಕಾ ದೇವಾಸೋ ದೇವಾ ಅರ್ಹಣಾ ಲೋಕಸ್ಯ ಪರಿಚರಣಾರ್ಥಂ ಸ್ತೋತವ್ಯತ್ವಾಯ ಬೃಹದ್ಬೃಂಹಿತಮಮೃತತ್ವಮಮರಣಧರ್ಮಮಾನಶುಃ । ಪ್ರಾಪ್ತಾಃ । ದೇವಾಃ ಖಲು ಮನುಷ್ಯೈಃ ಪೂಜ್ಯಾಃ । ತಸ್ಮಾತ್ಪೂಜಾಹೇತುಂ ದೇವತ್ವಮಾನಶಿರೇ । ಅತ ಏವ ಜ್ಯೋತೀರಥಾ ದೀಪ್ಯ-ಮಾನರಥೋಪೇತಾ ಅಹಿಮಾಯಾಃ ಕೈಶ್ಚಿದಪ್ಯಹಂತವ್ಯಪ್ರಜ್ಞಾ ಅನಾಗಸಃ ಪಾಪರಹಿತಾ ಆದಿತ್ಯಾ ದಿವೋ ದ್ಯುಲೋಕಸ್ಯ ವಷ್ಟಾರ್ಣಂ ನಾಭಿಸ್ಥಾನಂ ಸಮುಚ್ಛ್ರಿತಂ ದೇಶಂ ಸ್ವಸ್ತಯೇ೽ವಿನಾಶಾಯ ಲೋಕಸ್ಯ ಕ್ಷೇಮಕರಣಾರ್ಥಂ ವಸತೇ । ಅಧಿವಸಂತಿ । ಯದ್ವಾ । ಸ್ವತೇಜಸಾಚ್ಛಾದಯಂತಿ ॥

ಪ್ರತಿಪದಾರ್ಥ

ಅನಿಮಿಷಂತಃ—ಕಣ್ಣೆವೆಯಿಕ್ಕದೆ ಜಾಗರೂಕರಾಗಿರುವವರೂ । **ನೃಚಕ್ಷಸಃ**—ಮಾನವರ ವ್ಯವಹಾರವನ್ನು ನೋಡಬಲ್ಲವರೂ ಆದ । **ದೇವಾಸಃ**—ದೇವತೆಗಳು । **ಅರ್ಹಣಾ**—ಪವಿಸ್ಸಿಗೆ ಅರ್ಹತೆಯನ್ನು ಪಡೆದು । **ಬೃಹತ್**—ಅತ್ಯಧಿಕವಾದ । **ಅಮೃತತ್ವಂ**—ಮರಣರಾಹಿತ್ಯವನ್ನು । **ಆನಶುಃ**—ಸಂಪಾದಿಸಿದ್ದಾರೆ । **ಜ್ಯೋತೀರಥಾಃ**—ಪ್ರಭಾರೂಪವಾದ ರಥವುಳ್ಳವರೂ । **ಅಹಿಮಾಯಾಃ**—ಅಪ್ರತಿಹತವಾದ ಪ್ರಜ್ಞೆಯುಳ್ಳವರೂ।

ಅನಾಗಸಃ—ಪಾಪರಹಿತರೂ ಆದ ಆದಿತ್ಯರು । **ದಿವಃ**—ದ್ಯುಲೋಕದ । **ವಷ್ಣ್ಯಾಣಂ**—ಅತ್ಯುನ್ನತವಾದ ಪ್ರದೇಶದಲ್ಲಿ । **ಸ್ವಸ್ತಯೇ**—ಲೋಕಕಲ್ಯಾಣಾರ್ಥವಾಗಿ । **ವಸತೇ**—ವಾಸಿಸುತ್ತಾರೆ.

ಭಾವಾರ್ಥ

ಕಣ್ಣೆವೆಯಿಕ್ಕದೆ ಜಾಗರೂಕರಾಗಿರುವವರೂ, ಮಾನವರ ವ್ಯವಹಾರವನ್ನು ನೋಡಬಲ್ಲವರೂ ಆದ ದೇವತೆಗಳು ಹವಿಸ್ಸಿಗೆ ಅರ್ಹತೆಯನ್ನು ಪಡೆದು ಅತ್ಯಧಿಕವಾದ ಮರಣರಾಹಿತ್ಯವನ್ನು ಹೊಂದಿದ್ದಾರೆ. ಪ್ರಭಾರೂಪವಾದ ರಥವುಳ್ಳವರೂ, ಅಪ್ರತಿಹತವಾದ ಪ್ರಜ್ಞೆಯುಳ್ಳವರೂ, ಪಾಪರಹಿತರೂ ಆದ ಆದಿತ್ಯರು ದ್ಯುಲೋಕದ ಅತ್ಯುನ್ನತವಾದ ಪ್ರದೇಶದಲ್ಲಿ ಲೋಕಕಲ್ಯಾಣಾರ್ಥವಾಗಿ ವಾಸಿಸುತ್ತಾರೆ-

English Translation

The gods, the never-slumbering beholders of mankind, and entitled (to their adoration), have abtained great immortality : conveyed in chariots of light, possessed of unsurpassaable wisdom, devoid of sin, they inhabit the exalted station of heaven for the well-being (of the world).

ಸಂಹಿತಾಪಾಠಃ

ಸಮ್ರಾಜೋ ಯೇ ಸುವೃಧೋ ಯಜ್ಞಮಾಯಯುರಪರಿಹ್ವೃತಾ ದಧಿರೇ ದಿವಿ ಕ್ಷಯಂ ।
ತಾ ಆ ವಿವಾಸ ನಮಸಾ ಸುವೃಕ್ತಿಭಿರ್ಮಹೋ ಆದಿತ್ಯಾ ಅದಿತಿಂ ಸ್ವಸ್ತಯೇ॥

ಪದಪಾಠಃ

ಸಂ೨ರಾಜಃ । ಯೇ । ಸು೨ವೃಧಃ । ಯಜ್ಞಂ । ಆ೨ಯಯುಃ । ಅಪರಿ೨ಹ್ವೃತಾಃ । ದಧಿರೇ । ದಿವಿ । ಕ್ಷಯಂ ।
ತಾನ್ । ಆ । ವಿವಾಸ । ನಮಸಾ । ಸುವೃಕ್ತಿ೨ಭಿಃ । ಮಹಃ । ಆದಿತ್ಯಾನ್ । ಅದಿತಿಂ । ಸ್ವಸ್ತಯೇ ॥ ೫ ॥

ಸಾಯಣಭಾಷ್ಯಂ

ಸಮ್ರಾಜಃ ಸರ್ವೇಷಾಂ ರಾಜಾನಃ ಸ್ವತೇಜೋಭಿಃ ಸಮ್ಯಗ್ರಾಜಮಾನಾಃ ಸುವೃಧಃ ಸುವೃದ್ಧಾ ಯೇ ದೇವಾ ಯಜ್ಞಮಾಯಯುಃ ಆಯಾಂತಿ ಸೋಮಾದಿಹವಿರ್ಭಕ್ಷಣಾರ್ಥಂ । ತತೋ೨ಪರಿಹ್ವೃತಾಃ ಕೈಶ್ಚಿದಪ್ಯಹಿಂಸಿತಾ ಯೇ ದೇವಾ ದಿವಿ ದ್ಯುಲೋಕೇ ಕ್ಷಯಂ ನಿವಾಸಂ ದಧಿರೇ ವಿದಧತಿ ಕುರ್ವಂತಿ । ಋಷಿರಾತ್ಮಾನಮಾಹ । ಮಹೋ ಮಹತೋ ಗುಣಾಧಿಕ್ಯೇನಾದಿತ್ಯಾನದಿತೇಃ ಪುತ್ರಾಂಸ್ತಾನ್ಪ್ರಸಿದ್ಧಾ-

ನ್ದೇವಾನದಿತಿಂ ತೇಷಾಂ ಮಾತರಮೇತನ್ನಾಮಿಕಾಂ ಚ ಸ್ವಸ್ತಯೇಽವಿನಾಶಾಯ ನಮಸಾ ಹವೀ-ರೂಪೇಣಾನ್ನೇನ ಸುವೃಕ್ತಿಭಿಃ ಶೋಭನಾಭಿಃ ಸ್ತುತಿಭಿಶ್ಚಾ ವಿವಾಸ । ಅಭಿಮುಖ್ಯೇನ ಪರಿಚರ । ವಿವಾಸತಿಃ ಪರಿಚರಣಕರ್ಮಾ ॥

ಪ್ರತಿಪದಾರ್ಥ

ಸಮ್ರಾಜಃ—ಲೋಕಕ್ಕೆಲ್ಲ ಪ್ರಭುಗಳೂ । **ಸುವೃಧಃ**—ಅಧಿಕವಾದ ವೃದ್ಧಿಯನ್ನು ಹೊಂದಿದವರೂ । **ಅಪರಿಹ್ವೃತಾಃ** ಯಾರ ಹಿಂಸೆಗೂ ಒಳಪಡದವರೂ ಆದ ! **ಯೇ**—ಯಾವ ದೇವತೆಗಳು । **ದಿವಿ**—ದ್ಯುಲೋಕದಲ್ಲಿ । **ಕ್ಷಯಂ**—ನಿವಾಸಸ್ಥಾನವನ್ನು । **ದಧಿರೇ**—ಹೊಂದಿರುವರೋ ಅವರು । **ಯಜ್ಞಂ**—ಯಜ್ಞಕ್ಕೆ । **ಅಯಯುಃ**—ಬಂದಿದ್ದಾರೆ । **ಮಹಃ**- ಮಹದ್ಗುಣವುಳ್ಳವರೂ । **ಆದಿತ್ಯಾನ್**—ಅದಿತಿಪುತ್ರರೂ ಆದ । **ತಾನ್**—ಆ ದೇವತೆಗಳನ್ನೂ । **ಅದಿತಿಂ**—ಅದಿತಿಯನ್ನೂ । **ನಮಸಾ**—ಹವಿಸ್ಸುಗಳಿಂದಲೂ । **ಸುವೃಕ್ತಿಭಿಃ**—ಉತ್ತಮವಾದ ಸ್ತುತಿಗಳಿಂದಲೂ । **ಸ್ವಸ್ತಯೇ**—ಕಲ್ಯಾಣಕ್ಕಾಗಿ । **ಆ ವಿವಾಸ**—ಋಷಿಯು ಪೂಜಿಸುತ್ತಾನೆ.

ಭಾವಾರ್ಥ

ಲೋಕಕ್ಕೆಲ್ಲ ಪ್ರಭುಗಳೂ, ಅಧಿಕವಾದ ವೃದ್ಧಿಯನ್ನು ಹೊಂದಿದವರೂ, ಯಾರ ಹಿಂಸೆಗೂ ಒಳಪಡದವರೂ ಆದ ಯಾವ ದೇವತೆಗಳೂ ದ್ಯುಲೋಕದಲ್ಲಿ ನಿವಾಸಸ್ಥಾನವನ್ನು ಹೊಂದಿರುವರೋ ಅವರು ಯಜ್ಞಕ್ಕೆ ಬಂದಿರುತ್ತಾರೆ. ಮಹದ್ಗುಣವುಳ್ಳವರೂ, ಅದಿತಿಪುತ್ರರೂ ಆದ ಆ ದೇವತೆಗಳನ್ನೂ, ಅದಿತಿಯನ್ನೂ, ಹವಿಸ್ಸುಗಳಿಂದಲೂ, ಉತ್ತಮವಾದ ಸ್ತುತಿಗಳಿಂದಲೂ ಕಲ್ಯಾಣಕ್ಕಾಗಿ ಋಷಿಯು ಸೇವಿಸುತ್ತಾನೆ.

English Translation

The gods, who, kings over all, and most exalted, have come to the sacrifice, who, uuassailable, abide in heaven : them, the mighty Adityas, (the sage) worships with reverence, and with praises, and also Aditi, for his well-being.

ಸಂಹಿತಾಪಾಠಃ

ಕೋ ವ॒ಃ ಸ್ತೋ॑ಮಂ ರಾಧತಿ॒ ಯಂ ಜು॒ಜೋ॑ಷಥ॒ ವಿಶ್ವೇ॑ ದೇವಾಸೋ॑ ಮನುಷ॒ಸ್ಪೋ ಯತಿ॒ ಷ್ಠನ॑ ।
ಕೋ ವೋ॑ಽಧ್ವ॒ರಂ ತು॑ವಿಜಾತಾ॒ ಅರಂ॑ ಕರ॒ದ್ಯೋ ನ॒ಃ ಪರ್ಷ॒ದತ್ಯಂ॑ಹಃ ಸ್ವ॒ಸ್ತ॒ಯೇ ॥ ೬ ॥

ಪದಪಾಠಃ

ಕಃ । ವ॒ಃ । ಸ್ತೋ॑ಮಂ । ರಾ॒ಧ॒ತಿ॒ । ಯಂ । ಜು॒ಜೋ॑ಷಥ । ವಿಶ್ವೇ॑ । ದೇ॒ವಾ॒ಸ॒ಃ । ಮ॒ನು॒ಷ॒ಃ । ಯತಿ॑ । ಸ್ಥನ॑ ।
ಕಃ । ವೋ॒ । ಅ॒ಧ್ವ॒ರಂ । ತು॒ವಿ॒ಜಾ॒ತಾ॒ । ಅರ॑ಂ । ಕ॒ರ॒ತ್ । ಯಃ । ನ॒ಃ । ಪರ್ಷ॑ತ್ । ಅತಿ॑ । ಅಂಹ॑ಃ ।
ಸ್ವ॒ಸ್ತ॒ಯೇ ।

ಕಃ । ವಃ । ಅಧ್ವರಂ । ತುವಿಜಾತಾಃ । ಅರಂ । ಕರತ್ । ಯಃ । ನಃ । ಪರ್ಷತ್ । ಅತಿ । ಅಂಹಃ ।
ಸ್ವಸ್ತಯೇ ॥ ೬ ॥

ಸಾಯಣಭಾಷ್ಯಂ

ಋಷಿರ್ದೇವಾನ್ಪ್ರತಿ ಬಹುಧಾ ವಿತರ್ಕಯತಿ । ಹೇ ದೇವಾಃ ವೋ ಯುಷ್ಮಾಕಂ ಕಃ ಸ್ತೋತಾ ಸ್ತೋಮಂ ತ್ರಿವೃತ್ಪಂಚದಶಾದಿಲಕ್ಷಣಂ ರಾಧತಿ । ಸಂಸಾಧಯತಿ । ನ ಕಶ್ಚಿದಸ್ತೀತ್ಯರ್ಥಃ । ಯದ್ವಾ । ಮದನ್ಯಃ ಕೋ ವೋ ಯುಷ್ಮಭ್ಯಂ ಸ್ತೋಮಂ ಕರೋತಿ । ಯೂಯಂ ಯಂ ಸ್ತೋತಾರಂ ಜುಜೋಷಥ ಸೇವಧ್ವೇ ॥ ಜುಷೀ ಪ್ರೀತಿಸೇವನಯೋಃ । ಲೇಟಿ ಶವಃ ಶ್ಲುಃ । ಅಡಾಗಮಃ ॥ ಕಿಂ ಚ ಹೇ ಮನುಷೋ ಮಂತಾರೋ ಜ್ಞಾತಾರೋ ಹೇ ವಿಶ್ವೇ ದೇವಾಸೋ ದೇವಾಃ ಯೂಯಂ ಯತಿ ಯತ್ಸಂಖ್ಯಾಃ ಸ್ಥನ ಭವಥ॥ ಯಚ್ಛಬ್ದಾದಪಿ ಥಾಂದಸೋ ಡತಿರ್ದ್ರಷ್ಟವ್ಯಃ ॥ ಹೇ ತುವಿಜಾತಾ ಧಾತ್ರಾದಿವಿಭಾಗೇನ ಬಹುಜನನಾ ಹೇ ದೇವಾಃ ಯುಷ್ಮದರ್ಥಂ ಕೋ ವಾ ಯಜಮಾನೋಽಧ್ವರಂ ಯಜ್ಞಮರಂ ಕರತ್ । ಅಲಂಕರೋತಿ ಸ್ತುತಿಭಿರ್ಹವಿರ್ಭಿಶ್ಚ । ಮದನ್ಯೋ ನಾಸ್ತೀತ್ಯರ್ಥಃ । ಯೋ ಯಜ್ಞೋ ನೋಽಸ್ಮಾನ್ ಸ್ವಸ್ತಯೇಽವಿನಾಶಾಯಾಂಹಃ ಪಾಪರೂಪಂ ಮಾರ್ಗಮವೈದಿಕಮತಿ ಪರ್ಷತ್ ಅತಿಪಾರಯತಿ ತಂ ಯಜ್ಞಂ ಕೋ ವಾಲಂಕರೋತೀತಿ ॥

ಪ್ರತಿಪದಾರ್ಥ

(ಎಲೈ ದೇವತೆಗಳೇ) **ಯಂ**—ಯಾವ ಸ್ತುತಿಕರ್ತನನ್ನು । **ಜುಜೋಷಥ**—ನೀವು ಸೇವಿಸುವಿರೋ ಅಂತಹ । **ಕಃ**—ಯಾವ ಸ್ತುತಿಕರ್ತನು । **ವಃ**—ನಿಮ್ಮನ್ನುದ್ದೇಶಿಸಿ । **ಸ್ತೋಮಂ**—ತ್ರಿವೃದಾದಿ ಸ್ತೋಮವನ್ನು । **ರಾಧತಿ**—ಅರ್ಪಿಸುತ್ತಾನೆ । (ನಾನಲ್ಲದೆ ಇನ್ನಾರ್ಪಿಸಬಲ್ಲರು) **ವಿಶ್ವೇ ದೇವಾಸಃ**—ಎಲೈ ವಿಶ್ವೇದೇವತೆಗಳೇ । **ಮನುಷಃ**—ಉತ್ತಮವಾದ ಜ್ಞಾನಿಗಳಾದ ನೀವು । **ಯತಿ ಸ್ಥನ**—ಎಷ್ಟು ಜನರಿದ್ದೀರಿ । **ತುವಿಜಾತಾಃ**—ಅನೇಕ ವಿಧವಾದ ಜನ್ಮವುಳ್ಳ ಎಲೈ ದೇವತೆಗಳೇ । **ಯಃ**—ಯಾವ ಯಜ್ಞವು । **ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿ । **ನಃ**—ನಮ್ಮನ್ನು । **ಅಂಹಃ**—ಪಾಪದ ಎಲ್ಲೆಯನ್ನು । **ಅತಿ ಪರ್ಷತ್**—ದಾಟಿಸುವುದೋ ಅಂತಹ । **ಅಧ್ವರಂ**—ಯಜ್ಞವನ್ನು । **ವಃ**—ನಿಮಗಾಗಿ । **ಕಃ**—ಯಾವ ಯಜಮಾನನು । **ಅರಂ ಕರತ್**—ಹವಿರಾದಿಗಳಿಂದ ಅಲಂಕರಿಸುತ್ತಾನೆ.

ಭಾವಾರ್ಥ

ಎಲೈ ದೇವತೆಗಳೇ, ಯಾವ ಸ್ತುತಿಕರ್ತನನ್ನು ನೀವು ಸೇವಿಸುವರೋ ಅಂತಹವನು ಯಾರುತಾನೇ (ನಾನಲ್ಲದೆ) ನಿಮ್ಮನ್ನುದ್ದೇಶಿಸಿ ತ್ರಿವೃದಾದಿ ಸ್ತೋಮವನ್ನು ಅರ್ಪಿಸುತ್ತಾನೆ ? ಎಲೈ ವಿಶ್ವೇದೇವತೆಗಳೇ, ಉತ್ತಮವಾದ ಜ್ಞಾನಿಗಳಾದ ನೀವು ಎಷ್ಟು ಜನರಿದ್ದೀರಿ ? ಅನೇಕವಿಧವಾದ ಜನ್ಮವುಳ್ಳ ಎಲೈ ದೇವತೆಗಳೇ, ಯಾವ ಯಜ್ಞವು ನಮ್ಮ ಕಲ್ಯಾಣಕ್ಕಾಗಿ ನಮ್ಮನ್ನು ಪಾಪದ ಎಲ್ಲೆಯನ್ನು ದಾಟಿಸುವುದೋ ಅಂತಹ ಯಜ್ಞವನ್ನು ನಿಮಗಾಗಿ ಯಾವ ಯಜಮಾನನು ಹವಿರಾದಿಗಳಿಂದ ಅಲಂಕರಿಸುತ್ತಾನೆ ? (ನೆರವೇರಿಸುತ್ತಾನೆ ?)

English Translation

Who offers you the praise which you like, you wise, universal deities, however many you may be ? Deities from whom many are born, who can

prepare for you such worship as may bear us safe beyond iniquity for our well-being ?

ಸಂಹಿತಾಪಾಠಃ

ಯೇಭ್ಯೋ ಹೋತ್ರಾಂ ಪ್ರಥಮಾಮಾಯೇಜೇ ಮನುಃ ಸಮಿದ್ಧಾಗ್ನಿರ್ಮನಸಾ ಸಪ್ತ ಹೋತೃಭಿಃ ।
ತ ಆದಿತ್ಯಾ ಅಭಯಂ ಶರ್ಮ ಯಚ್ಛತ ಸುಗಾ ನಃ ಕರ್ತ ಸುಪಥಾ ಸ್ವಸ್ತಯೇ ॥ ೭ ॥

ಪದಪಾಠಃ

ಯೇಭ್ಯಃ । ಹೋತ್ರಾಂ । ಪ್ರಥಮಾಂ । ಆ೨ಯೇಜೇ । ಮನುಃ । ಸಮಿದ್ಧ೨ಅಗ್ನಿಃ। ಮನಸಾ । ಸಪ್ತ । ಹೋತೃ೨ಭಿಃ ।
ತೇ । ಆದಿತ್ಯಾಃ । ಅಭಯಂ । ಶರ್ಮ । ಯಚ್ಛತ । ಸು೨ಗಾ । ನಃ । ಕರ್ತ । ಸು೨ಪಥಾ । ಸ್ವಸ್ತಯೇ ॥

ಸಾಯಣಭಾಷ್ಯಂ

ಸಮಿದ್ಧಾಗ್ನಿರ್ಹವಿರ್ಭಿಃ ಸಮ್ಯಗ್ದೀಪ್ತಾಗ್ನಿರ್ಮನುರ್ವೈವಸ್ವತೋ ಮನುಷ್ಯಾಣಾಂ ಪ್ರಥಮಭಾವೀ ಶ್ರದ್ಧಾನೇನ ಮನಸಾ ಸಪ್ತ ಸಪ್ತಸಂಖ್ಯಾಕೈರ್ಹೋತೃಭಿರ್ವಷಟ್ಕರ್ತೃಭಿರ್ಋತ್ವಿಗ್ಭಿಶ್ಚ ಸಹ ಯೇಭ್ಯೋ ಯುಷ್ಮಭ್ಯಂ ಪ್ರಥಮಾಂ ಪ್ರಥಮಂ ಮುಖ್ಯಂ ಯದ್ವಾ ಸರ್ವೇಷಾಂ ಮನುಷ್ಯಾಣಾಮಗ್ರೇ ಕ್ರಿಯಮಾಣತ್ವಾದಾದ್ಯಂ ಹೋತ್ರಾಂ । ಹೂಯಂತೇ ಹವೀಂಷ್ಯತ್ರೇತಿ ಹೋತ್ರಾ ಯಜ್ಞಃ । ತಂ । ಯದ್ವಾ । ಆಹೂಯಂತೇ ದೇವಾಃ ಸ್ತುತಿಭಿರತ್ರೇತಿ । ತಂ ಯಜ್ಞಮಾಯೇಜೇ ಅಭಿಮುಖ್ಯೇನೇಷ್ಟವಾನ್ ॥ ಯಜೇರ್ಲಿಟಿ ರೂಪಂ । ಯದ್ವಾ । ಲಿಟಿ ಲೋಪಸ್ತ ಆತ್ಮನೇಪದೇಷ್ವಿತಿ ತಲೋಪಃ । ಯಜಿವಪ್ಯೋರಲಿತ್ಯೇತ್ವಂ ವಕ್ತವ್ಯಂ । ಕಾ. ೬-೪-೧೨೦-೪ । ಇತಿ ವಚನಾದೇಕಾರಃ ॥ ಹೇ ಆದಿತ್ಯಾ ಆದಿತೇಃ ಪುತ್ರಾ ಹೇ ದೇವಾಃ ತೇ ಯೂಯಂ ನೋ೨ಸ್ಮಭ್ಯಮಭಯಂ ಶರ್ಮ ಚ ಸುಖಂ ಪ್ರಯಚ್ಛತ । ಕಿಂಚ ನೋ೨ಸ್ಮಾಕಂ ಸ್ವಸ್ತಯೇ ಕ್ಷೇಮಾಯ ಸುಪಥಾ ಸುಪಥಾನಿ ಶೋಭನಾನ್ವೈದಿಕಮಾರ್ಗಾನ್ ಸುಗಾ ಸುಷ್ಠು ಗಂತವ್ಯಾನ್ ಕರ್ತ । ಕುರುತ ॥ ಕರೋತೇರ್ಲೋಟಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ತಬಾದೇಶಃ ॥

ಪ್ರತಿಪದಾರ್ಥ

ಆದಿತ್ಯಾಃ—ಅದಿತಿಪುತ್ರರಾದ ಎಲೈ ದೇವತೆಗಳೇ । **ಸಮಿದ್ಧಾಗ್ನಿಃ**—ಹವಿಸ್ಸುಗಳಿಂದ ಪ್ರಜ್ವಲಿತವಾದ ಅಗ್ನಿಯುಳ್ಳ । **ಮನುಃ**—ಮನುವು । **ಮನಸಾ**—ಧ್ಯಾನಪೂರ್ವಕವಾಗಿಯೂ । **ಸಪ್ತ**—ಸಪ್ತಸಂಖ್ಯಾಕವಾದ । **ಹೋತೃಭಿಃ**—ಹೋತೃಗಳೊಡಗೂಡಿಯೂ । **ಯೇಭ್ಯಃ**—ಯಾವ ನಿಮ್ಮನ್ನುದ್ದೇಶಿಸಿ । **ಹೋತ್ರಾಂ**—ಯಜ್ಞ

ವನ್ನು । **ಅಯೇಜೀ**—ಅರ್ಪಿಸಿದನೋ ಅಂತಹ । **ತೇ**—ನೀವು । **ನಃ**—ನಮಗೆ । **ಅಭಯಂ**—ಅಭಯವನ್ನೂ । **ಶರ್ಮ**—ಸುಖವನ್ನೂ । **ಯಚ್ಛತ**—ಒದಗಿಸಿರಿ । **ನಃ**—ನಮ್ಮ । **ಸ್ವಸ್ತಯೇ**—ಕಲ್ಯಾಣಕ್ಕಾಗಿ । **ಸುಪಥಾ**—ಉತ್ತಮವಾದ ವೈದಿಕಮಾರ್ಗಗಳನ್ನು । **ಸುಗಾ**—ಸುಲಭಸಂಚಾರವುಳ್ಳದ್ದನ್ನಾಗಿ । **ಕರ್ತ**—ಮಾಡಿರಿ.

ಭಾವಾರ್ಥ

ಅದಿತಿಪುತ್ರರಾದ ಎಲೈ ದೇವತೆಗಳೇ, ಹವಿಸ್ಸುಗಳಿಂದ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿದ ಮನುವು ಧ್ಯಾನಪೂರ್ವಕವಾಗಿಯೂ, ಸಪ್ತಸಂಖ್ಯಾಕವಾದ ಹೋತೃಗಳೊಡಗೂಡಿಯೂ, ಯಾವ ನಿಮ್ಮನ್ನುದ್ದೇಶಿಸಿ ಯಜ್ಞವನ್ನು ಅರ್ಪಿಸಿದನೋ ಅಂತಹ ನೀವು ನಮಗೆ ಅಭಯವನ್ನೂ, ಸುಖವನ್ನೂ ಒದಗಿಸಿರಿ. ನಮ್ಮ ಕಲ್ಯಾಣಕ್ಕಾಗಿ ಉತ್ತಮವಾದ ವೈದಿಕಮಾರ್ಗಗಳನ್ನು ಸುಲಭಸಂಚಾರವುಳ್ಳದ್ದನ್ನಾಗಿ (ಅನುಸರಿಸುವಂತೆ) ಮಾಡಿರಿ.

English Translation

Adityas, to whom Manu, having kindled the fire, offered the first sacrifice with (reverent) mind, (aided) by the seven ministrant priests, bestow upon us prosperity, free from peril; provide for us pleasant paths easy to travel for our well-being.

ವಿಶೇಷವಿಷಯಗಳು

ಸಪ್ತಹೋತೃಗಳ ವಿಷಯ—ಋ. ಸಂ. ಭಾಗ ೧ರ 693 ನೇ ಪೇಜಿನಲ್ಲಿ ವಿವರಿಸಲಾಗಿದೆ.

ಸಂಹಿತಾಪಾಠಃ

ಯ ಈಶಿರೇ ಭುವನಸ್ಯ ಪ್ರಚೇತಸೋ ವಿಶ್ವಸ್ಯ ಸ್ಥಾತುರ್ಜಗತಶ್ಚ ಮಂತವಃ ।
ತೇ ನಃ ಕೃತಾದಕೃತಾದೇನಸಸ್ಪರ್ಯದ್ಯಾ ದೇವಾಸಃ ಪಿಪೃತಾ ಸ್ವಸ್ತಯೇ ॥

ಪದಪಾಠಃ

ಯೇ । ಈಶಿರೇ । ಭುವನಸ್ಯ । ಪ್ರಚೇತಸಃ । ವಿಶ್ವಸ್ಯ । ಸ್ಥಾತುಃ । ಜಗತಃ । ಚ । ಮಂತವಃ ।
ತೇ । ನಃ । ಕೃತಾತ್ । ಅಕೃತಾತ್ । ಏನಸಃ । ಪರಿ । ಅದ್ಯ । ದೇವಾಸಃ । ಪಿಪೃತ । ಸ್ವಸ್ತಯೇ ॥ ೮ ॥

ಸಾಯಣಭಾಷ್ಯಂ

ಪ್ರಚೇತಸಃ ಪ್ರಕೃಷ್ಟಜ್ಞಾನಾ ಮಂತವಃ ಸರ್ವಸ್ಯ ವೇದಿತಾರೋ ಯೇ ದೇವಾಃ ಸ್ಥಾತುಃ ಸ್ಥಾವರಸ್ಯ ಜಗತೋ ಜಂಗಮಸ್ಯ ವಿಶ್ವಸ್ಯ ಸರ್ವಸ್ಯ ಭುವನಸ್ಯ ಲೋಕಸ್ಯೇಶಿರೇ ಈಶ್ವರಾ ಭವಂತಿ। ಅಥ ಪ್ರತ್ಯಕ್ಷಕೃತಃ । ಹೇ ದೇವಾಸೋ ದೇವಾಃ ಯೆ ಉಕ್ತಗುಣಾಸ್ತೇ ಯೂಯಂ ನೋಽಸ್ಮಾನ್ಕೃತಾತ್ಕಾಯಿಕಾತ್ಪ-

ಪಾತ್ ಅಕೃತಾತ್ಕರಚರಣಾದಿಭಿರಕೃತಾದೇನಸಃ ಕಿಂತು ನೂನಸಾತ್ಪಾಪಾಚ್ಚಾದ್ಯಾಸ್ಮಿನ್ನಿನೇ ಸ್ವಸ್ತಯೇ೬-ವಿನಾಶಾಯಾಯುಷೋ೬ಭಿವೃದ್ಧಯೇ ಪಿಪೃತ । ಪಾರಯತ ಪಾಪರಹಿತಾನ್ಕುರುತೇತ್ಯರ್ಥಃ ॥

ಪ್ರತಿಪದಾರ್ಥ

ಪ್ರಚೇತಸಃ—ಉತ್ತಮವಾದ ಜ್ಞಾನವುಳ್ಳವನೂ । **ಮಂತವಃ**—ಎಲ್ಲವನ್ನೂ ತಿಳಿದವರೂ ಆದ । **ದೇವಾಸಃ**—ಎಲೈ ದೇವತೆಗಳೇ । **ಯೇ**—ಯಾವ ನೀವು । **ಸ್ಥಾತುಃ**—ಸ್ಥಾವರಾತ್ಮಕವೂ । **ಜಗತಃ**—ಜಂಗಮಾತ್ಮಕವೂ ಆದ । **ವಿಶ್ವಸ್ಯ ಭುವನಸ್ಯ**--ಸಕಲ ಲೋಕಕ್ಕೂ । **ಈಶಿರೇ**—ಪ್ರಭುಗಳಾಗಿದ್ದೀರೋ ಅಂತಹ । **ತೇ**—ನೀವು । **ನಃ**—ನಮ್ಮನ್ನು । **ಕೃತಾತ್**—ನಾವು ಮಾಡಿರುವುದೂ । **ಅಕೃತಾತ್**—ಹಸ್ತಾದಿಗಳಿಂದ ಮಾಡದಿರುವುದೂ ಆದ । **ಏನಸಃ ಪರಿ**—ಪಾಪದಿಂದ । **ಅದ್ಯ**—ಇಂದು । **ಸ್ವಸ್ತಯೇ**—ನಮಗೆ ಒಳ್ಳೆಯದಾಗಲು । **ಪಿಪೃತ**—ದಾಟಿಸಿರಿ.

ಭಾವಾರ್ಥ

ಉತ್ತಮವಾದ ಜ್ಞಾನವುಳ್ಳವರೂ, ಎಲ್ಲವನ್ನೂ ತಿಳಿದವರೂ ಆದ ಎಲೈ ದೇವತೆಗಳೇ, ಸ್ಥಾವರಾತ್ಮಕವೂ, ಜಂಗಮಾತ್ಮಕವೂ ಆದ ಸಕಲ ಲೋಕಕ್ಕೂ ಪ್ರಭುಗಳಾಗಿರುವ ನೀವು ನಮ್ಮನ್ನು ನಮ್ಮ ಸಕಲ ಪಾಪಗಳಿಂದಲೂ ಬಿಡುಗಡೆಮಾಡಿರಿ. ನನಗೆ ಕಲ್ಯಾಣವುಂಟಾಗುವಂತೆ ಮಾಡಿರಿ.

English Translation

May the wise and omniscient deities, who rule over the whole world both stationery aud moveable, deliver us to-day from committed and uncommitted sin, for our well-being.

ಸಂಹಿತಾಪಾಠಃ

ಭರೇಷ್ವಿಂದ್ರಂ ಸುಹವಂ ಹವಾಮಹೇಂಹೋಮುಚಂ ಸುಕೃತಂ ದೈವ್ಯಂ ಜನಂ ।
ಅಗ್ನಿಂ ಮಿತ್ರಂ ವರುಣಂ ಸಾತಯೇ ಭಗಂ ದ್ಯಾವಾಪೃಥಿವೀ ಮರುತಃ ಸ್ವಸ್ತಯೇ ॥ ೯ ॥

ಪದಪಾಠಃ

ಭರೇಷು । ಇಂದ್ರಂ । ಸುಽಹವಂ । ಹವಾಮಹೇ । ಅಂಹಃಽಮುಚಂ । ಸುಽಕೃತಂ । ದೈವ್ಯಂ । ಜನಂ ।
ಅಗ್ನಿಂ । ಮಿತ್ರಂ । ವರುಣಂ । ಸಾತಯೇ । ಭಗಂ । ದ್ಯಾವಾಪೃಥಿವೀ ಇತಿ । ಮರುತಃ । ಸ್ವಸ್ತಯೇ ॥

ಸಾಯಣಭಾಷ್ಯಂ

ಅಂಹೋಮುಚಮಂಹಸಃ ಪಾಪಸ್ಯ ಮೋಚಕಂ ಸುಹವಂ ಶೋಭನಾಹ್ವಾನಮಿಂದ್ರಂ ಭರೇಷು । ಭೃಣಂತಿ ಭರ್ಜಯಂತಿ ವಿನಾಶಯಂತಿ ಶತ್ರೂನಿತ್ಯೇತಿ ಭರಾಃ ಸಂಗ್ರಾಮಾಃ । ತೇಷು ಹವಾಮಹೇ । ರಕ್ಷ-

ಹಾಯೋಹ್ವಯೋಮಃ । ಕಿಂಚ ಸುಕೃತಂ ಸುಕರ್ಮಾಣಂ ದೈವ್ಯಂ ದೇವಸಂಬಂಧಿನಮನ್ಯಂ ಜನಂ ಚಾಹ್ವ-ಯೋಮಹೇ । ತಂ ಜನಮುದ್ದಿಶತಿ । ಅಗ್ನಿಂ ಮಿತ್ರಂ ವರುಣಂ ಭಗಂ ಭಜನೀಯಮೇತೇನ್ನಾಮಾನಂ ದೇವಂ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಮರುತಶ್ಚ ಸಾತಯೇಽನ್ನಲಾಭಾಯ ಸ್ವಸ್ತಯೇಽವಿನಾ-ಶಾಯ ರಕ್ಷಣಾಯೋಹ್ವಯೋಮಹೇ ॥

ಪ್ರತಿಪದಾರ್ಥ

ಅಂಹೋಮುಚಂ—ಪಾಪದಿಂದ ಬಿಡುಗಡೆಮಾಡತಕ್ಕವನೂ । **ಸುಹವಂ**—ಉತ್ತಮವಾದ ಆಹ್ವಾನಕ್ಕೆ ಪಾತ್ರನೂ ಆದ । **ಇಂದ್ರಂ**—ಇಂದ್ರನನ್ನು । **ಭರೇಷು**—ಯುದ್ಧಗಳಲ್ಲಿ । **ಹವಾಮಹೇ** - ಸಹಾಯಕ್ಕೆ ಕರೆಯುತ್ತೇವೆ । **ಸುಕೃತಂ**—ಉತ್ತಮವಾದ ಕರ್ಮಕರ್ತರೂ । **ದೈವ್ಯಂ ಜನಂ**—ದೇವತೆಗಳ ಗುಂಪಿಗೆ ಸೇರಿದವರೂ ಆದ । **ಅಗ್ನಿಂ**—ಅಗ್ನಿಯನ್ನೂ । **ಮಿತ್ರಂ**—ಮಿತ್ರನನ್ನೂ । **ವರುಣಂ**—ವರುಣನನ್ನೂ । **ಭಗಂ**—ಭಗನನ್ನೂ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳನ್ನೂ । **ಮರುತಃ**—ಮರುತ್ತುಗಳನ್ನೂ । **ಸಾತಯೇ**—ಅನ್ನಲಾಭಕ್ಕಾಗಿಯೂ । **ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿಯೂ ಕರೆಯುತ್ತೇವೆ.

ಭಾವಾರ್ಥ

ಪಾಪದಿಂದ ಬಿಡುಗಡೆಮಾಡತಕ್ಕವನೂ, ಉತ್ತಮವಾದ ಆಹ್ವಾನಕ್ಕೆ ಪಾತ್ರನೂ ಆದ ಇಂದ್ರನನ್ನು ಯುದ್ಧಗಳಲ್ಲಿ ಸಹಾಯಕ್ಕೆ ಕರೆಯುತ್ತೇವೆ. ಉತ್ತಮವಾದ ಕರ್ಮಕರ್ತರೂ, ದೇವತೆಗಳ ಗುಂಪಿಗೆ ಸೇರಿದವರೂ ಆದ ಅಗ್ನಿಯನ್ನೂ, ಮಿತ್ರನನ್ನೂ, ವರುಣನನ್ನೂ, ಭಗನನ್ನೂ, ದ್ಯಾವಾಪೃಥಿವಿಗಳನ್ನೂ, ಮರುತ್ತುಗಳನ್ನೂ ಸಹ ಅನ್ನಲಾಭಕ್ಕಾಗಿಯೂ, ನಮ್ಮ ಕಲ್ಯಾಣಕ್ಕಾಗಿಯೂ ಪ್ರಾರ್ಥಿಸಿ ಕರೆಯುತ್ತೇವೆ.

English Translalion

We call in battles upon the well-invoked Indra, the liberator from sin, and upon the virtuous folk of heaven, Agni, Mitra, Varuna, Bhaga, Heaven and Earth, the Maruts, for the acquisition (of food), for well-being.

ಸಂಹಿತಾಪಾಠಃ

ಸುತ್ರಾ॑ಮಾಣಂ ಪೃಥಿವೀಂ ದ್ಯಾಮ॑ನೇಹಸಂ ಸುಶರ್ಮಾ॑ಣಮ॑ದಿತಿಂ ಸುಪ್ರ-ಣೀ॑ತಿಂ ।
ದೈವೀಂ ನಾವಂ ಸ್ವರಿ॑ತ್ರಾಮ॑ನಾಗಸಮ॑ಸ್ರವಂತೀಮಾ ರು॑ಹೇಮಾ ಸ್ವಸ್ತ॑ಯೇ ॥

ಪದಪಾಠಃ

ಸು॒ತ್ರಾ॑ಮಾಣಂ । ಪೃ॒ಥಿ॒ವೀಂ । ದ್ಯಾಂ । ಅ॒ನೇ॒ಹ॒ಸಂ । ಸು॒ಶ॒ರ್ಮಾ॑ಣಂ । ಅ॒ದಿ॒ತಿಂ । ಸು॒ಪ್ರ॒ಣೀ॒ತಿಂ ।
ದೈವೀಂ । ನಾವಂ । ಸು॒ಅ॒ರಿ॒ತ್ರಾಂ । ಅ॒ನಾ॒ಗ॒ಸಂ । ಅ॒ಸ್ರ॒ವಂ॒ತೀಂ । ಆ । ರು॒ಹೇ॒ಮ॒ । ಸ್ವ॒ಸ್ತ॒ಯೇ ॥ ೧೦ ॥

ಸಾಯಣಭಾಷ್ಯಂ

ಅದಿತಿದೇವತಾಕಸ್ಯ ಪಶೋಃ ಸುತ್ರಾಮಾಣಮಿತ್ಯೇಷಾ ವಪಾಯಾಗಸ್ಯ ಯಾಜ್ಯಾ । ಸೂತ್ರಿತಂ ಚ । ಅದಿತಿರ್ಯಜನಿಷ್ಟ ಸುತ್ರಾಮಾಣಂ ಪೃಥಿವೀಂ ದ್ಯಾಮನೇಹಸಂ । ಆ-೩ ೮ । ಇತಿ ॥ ಪ್ರಾಯಣೀಯೇಷ್ಟ್ಯಾವಾದಿತ್ಯಸ್ಯ ಹವಿಷ ಏಷೈವಾನುವಾಕ್ಯಾ ಸೈವೋದಯನೀಯಾಯಾ ಯಾಜ್ಯಾ । ಸೂತ್ರಿತಂ ಚ । ಸುತ್ರಾಮಾಣಂ ಪೃಥಿವೀಂ ದ್ಯಾಮನೇಹಸಂ ಮಹೀಮೂ ಷು ಮಾತರಂ ಸುವ್ರತಾನಾಂ । ಆ-೪-೩ । ಇತಿ ॥ ಪ್ರಯಾಣೇऽನಯೈವ ನಾವಮಾರೋಹೇತ್ । ಸೂತ್ರಿತಂ ಚ । ಸುತ್ರಾಮಾಣಂ ಪೃಥಿವೀಂ ದ್ಯಾಮನೇಹಸಮಿತಿ ನಾವಂ । ಆ.ಗೃ ೨-೬-೮। ಇತಿ ॥

ದ್ಯುಲೋಕೋ ನೌರೂಪಕಲ್ಪತಯಾ ಸ್ತೂಯತೇ । ಸುತ್ರಾಮಾಣಂ ಸುಷ್ಠು ತ್ರಾಯಂತೀಂ ಪೃಥಿವೀಂ ವಿಸ್ತೃತಾಮನೇಹಸಂ ಪಾಪರಹಿತಾಂ ಸುಶರ್ಮಾಣಂ ಶೋಭನಸುಖಯುಕ್ತಾಮದಿತಿಮದೀನಾಂ ಸುಪ್ರಣೇತಿಂ ಸುಪ್ರಣಯನಾಂ ಸುಷ್ಠು ಪ್ರಣೇತ್ರೀಂ ದೈವೀಂ ದೇವಸಂಬಂಧಿನೀಂ ಸ್ವರಿತ್ರಾಂ ಶೋಭನಾರಿತ್ರಾಂ ಜಲಾಹರಣಶೀಲದಾರುಯುಕ್ತಾಮನಾಗಸಂ ಪಾಪರಹಿತಾಮಸ್ರವಂತೀಮಗಚ್ಛಂತೀಮವಿನಶ್ವರೀಂ ನಾವಂ ನಾವಮಿವ ಸ್ಥಿತಾಂ ದ್ಯಾಂ ಸ್ವಸ್ತಯೇऽವಿನಾಶಾಯ ದೇವತ್ವಪ್ರಾಪ್ತಯ ಆ ರುಹೇಮ । ವಯಮಾರೋಹೇಮ ॥ ರೋಹತೇರ್ಲಿಙಿ ಲಿಙ್ಯಾಶಿಷ್ಯಙ್ಜ್ಞಿತ್ಯಙ್ಪ್ರತ್ಯಯಃ ॥

ಪ್ರತಿಪದಾರ್ಥ

ಸುತ್ರಾಮಾಣಂ—ಸುಲಭವಾಗಿ ರಕ್ಷಿಸತಕ್ಕದ್ದೂ । **ಪೃಥಿವೀಂ**—ವಿಸ್ತೃತವಾದುದೂ । **ಅನೇಹಸಂ**—ಪಾಪರಹಿತವಾದುದೂ । **ಸುಶರ್ಮಾಣಂ**—ಉತ್ತಮವಾದ ಸುಖಯುಕ್ತವಾದುದೂ । **ಅನಾಗಸಂ**—ದೋಷರಹಿತವಾದುದೂ । **ಅದಿತಿಂ**—ಅಖಂಡಾತ್ಮಕವಾದುದೂ । **ಸುಪ್ರಣೇತಿಂ**—ಉತ್ತಮವಾದ ಮಾರ್ಗದರ್ಶಕವಾದುದೂ। **ದೈವೀಂ**—ದೇವಸಂಬಂಧಿಯಾದುದೂ । **ಸ್ವರಿತ್ರಂ**—ಶ್ರೇಷ್ಠವಾದ ಹರಿಗೋಲುಳ್ಳದ್ದೂ । **ಅಸ್ರವಂತೀಂ**—ನಾಶರಹಿತವಾದುದೂ । **ನಾವಂ**—ದೋಣಿಯಂತೆ ದಾಟಿಸುತಕ್ಕದ್ದೂ ಆದ । **ದ್ಯಾಂ**—ದ್ಯುಲೋಕವನ್ನು । **ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿ । **ಆ ರುಹೇಮ**—ಹತ್ತೋಣ.

ಭಾವಾರ್ಥ

ಸುಲಭವಾಗಿ ರಕ್ಷಿಸತಕ್ಕದ್ದೂ, ವಿಸ್ತೃತವಾದುದೂ, ಪಾಪರಹಿತವಾದುದೂ, ಉತ್ತಮವಾದ ಸುಖವನ್ನು ಕೊಡತಕ್ಕದೂ, ದೋಷರಹಿತವಾದುದೂ, ಅಖಂಡಾತ್ಮಕವಾದುದೂ, ಉತ್ತಮವಾದ ಮಾರ್ಗದರ್ಶಕವಾದುದೂ,ದೇವಸಂಬಂಧಿಯಾದುದೂ, ಶ್ರೇಷ್ಠವಾದ ಹರಿಗೋಲುಳ್ಳದ್ದೂ, ನಾಶರಹಿತವಾದುದೂ, ದೋಣಿಯಂತೆ ದಾಟಿಸತಕ್ಕದ್ದೂ ಆದ ದ್ಯುಲೋಕವನ್ನು ನಮ್ಮ ಕಲ್ಯಾಣಕ್ಕಾಗಿ ಹತ್ತೋಣ.

English Translation

May we for our well-being ascend the well-oared, defectless, unyielding, divine vessel, the safe-sheltering expansive heaven, exempt from evil, replete with happieess, exalted and right-directing.

ವಿಶೇಷವಿಷಯಗಳು

ಅದಿತಿದೇವತೆಯನ್ನುದ್ದೇಶಿಸಿ ಮಾಡುವ ಪಶುಹೋಮದಲ್ಲಿ ವಪಾಹೋಮವನ್ನಾಡುವಾಗ **ಸುತ್ರಾಮಾಣಂ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅದಿತಿರ್ಯಜನಿಷ್ಟ**

सुत्रामाणं पृथिवीं द्यामनेहसं ಎಂಬ ಸೂತ್ರದಿಂದ (ಆ. ೩-೮) ವಿವೃತವಾಗಿರುವುದು. ಪ್ರಾಯಣೀಯೇಷ್ಟಿಯಲ್ಲಿ ಆದಿತ್ಯನನ್ನುದ್ದೇಶಿಸಿ ಮಾಡುವ ಹವಿರ್ಧೋಮದಲ್ಲಿ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿಯೂ ಉದಯನೀಯೇಷ್ಟಿಯಲ್ಲಿ ಯಾಜ್ಯಾಮಂತ್ರವನ್ನಾಗಿಯೂ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**सुत्रामाणं पृथिवीं द्यामनेहसं महीमू षु मातरं सुव्रतानां** ಎಂಬ ಸೂತ್ರದಿಂದ (ಆ. ೪-೩) ವಿವೃತವಾಗಿರುವುದು. ಪ್ರಯಾಣಕಾಲದಲ್ಲಿ ದಾರಿಯಲ್ಲಿ ಸಿಕ್ಕುವ ನದಿಯನ್ನು ದಾಟುವಸಂದರ್ಭದಲ್ಲಿ ಈ ಋಕ್ಕನ್ನು ಪಠಿಸಿ ನಾವೆ (ದೋಣಿ) ಯನ್ನು ಹತ್ತಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**सुत्रामाणं पृथिवीं द्यामनेहसमिति नावं** ಎಂಬ ಸೂತ್ರದಿಂದ (ಆ ಗೃ. ೨-೬-೮) ವಿವೃತವಾಗಿರುವುದು.

ಸಂಹಿತಾಪಾಠಃ

विश्वे॑ यजत्रा॒ अधि॒ वोच॑तोतये॒ त्रायध्वं॑ नो दुरे॒वा॑याया अभिह्रु॒तः॑ ।
स॒त्यया॒ वो॑ देवहू॒त्या हु॑वेम शृण्व॒तो दे॒वा अव॑से॒ स्वस्त॑ये ॥ ೧೧ ॥

ಪದಪಾಠಃ

विश्वे॑ । यजत्राः । अधि॑ । वोच॑त । ऊ॒तये॑ । त्रा॒यध्वं॑ । नः॒ । दुः॒ऽए॒वा॑यायाः । अभि॑ह्रु॒तः॑ ।
स॒त्यया॑ । वः॒ । दे॒व॒ऽहू॒त्या । हु॒वेम॑ । शृ॒ण्व॒तः । दे॒वाः॒ । अव॑से । स्वस्त॑ये ॥ ೧೧ ॥

ಸಾಯಣಭಾಷ್ಯಂ

हे यजत्रा यजनीया हे विश्वे सर्वे देवाः यूयमूतये रक्षणार्थमधि वोचत। अस्मानधिब्रूत। अभाष्य चाभिहुतोऽभिहिंसित्र्या दुरेवाया दुर्गतेर्नोऽस्मांस्त्रायध्वं। यद्येवं कुरुथ तर्हि हे देवाः शृण्वतः स्तोत्राण्यस्माभिरुक्तानि तादृशानस्मान् यूयं सत्यया यथार्थभूतया देवहूत्या। देवा हूयंतेऽनयेति देवहूतिः स्तुतिः। तया वयं हुवेम। आह्वयेम। किमर्थं। अवसे रक्षणाय शत्रुभ्यः स्वस्तये क्षेमाय जीवनाभिवृद्धये च ॥

ಪ್ರತಿಪದಾರ್ಥ

यजत्राः—ಪೂಜ್ಯರಾದ। **विश्वे**—ಎಲ್ಲೆ ಸಮಸ್ತದೇವತೆಗಳೇ। **ऊतये**—ನಮ್ಮ ರಕ್ಷಣಾರ್ಥವಾಗಿ। **अधि वोचत**—ನಮ್ಮ ವಿಷಯದಲ್ಲಿ ಅನುಗ್ರಹಾತ್ಮಕವಾದ ಪ್ರಶಂಸೆಯನ್ನು ಮಾಡಿರಿ। **अभि हुतः**—ನಮ್ಮನ್ನು

ಹಿಂಸಿಸುವ । **ದುರೇವಾಯಾಃ**—ದುಷ್ಟಶಕ್ತಿಯಿಂದ । **ನಃ**—ನಮ್ಮನ್ನು । **ತ್ರಾಯಧ್ವಂ**—ರಕ್ಷಿಸಿರಿ । **ದೇವಾಃ**—ಎಲೈ ದೇವತೆಗಳೇ । **ಶೃಣ್ವತಃ**—ನಮ್ಮ ಸ್ತುತಿಗಳನ್ನು ಕೇಳತಕ್ಕ । **ವಃ**—ನಿಮ್ಮನ್ನು । **ಸತ್ಯಯಾ**—ಸತ್ಯಾತ್ಮಕವಾದುದೂ । **ದೇವಹೂತ್ಯಾ**—ದೇವತೆಗಳನ್ನು ಪ್ರಶಂಸಿಸುವುದೂ ಆದ ಸ್ತುತಿಯಿಂದ । **ಅವಸೇ**—ನಮ್ಮ ರಕ್ಷಣೆಗಾಗಿಯೂ । **ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿಯೂ । **ಹುವೇಮ**—ಕರೆಯುತ್ತೇವೆ.

ಭಾವಾರ್ಥ

ಪೂಜ್ಯರಾದ ಎಲೈ ದೇವತೆಗಳೇ, ನಮ್ಮ ರಕ್ಷಣಾರ್ಥವಾಗಿ ನಮ್ಮ ವಿಷಯದಲ್ಲಿ ಅನುಗ್ರಹಾತ್ಮಕವಾದ ಪ್ರಶಂಸೆಯನ್ನು ಮಾಡಿರಿ. ನಮ್ಮನ್ನು ಹಿಂಸಿಸುವ ದುಷ್ಟಶಕ್ತಿಯಿಂದ ನಮ್ಮನ್ನು ರಕ್ಷಿಸಿರಿ. ಎಲೈ ದೇವತೆಗಳೇ, ನಮ್ಮ ಸ್ತುತಿಗಳನ್ನು ಕೇಳತಕ್ಕ ನಿಮ್ಮನ್ನು ಸತ್ಯಾತ್ಮಕವೂ, ದೇವತೆಗಳನ್ನು ಪ್ರಶಂಸಿಸುವುದೂ ಆದ ಸ್ತುತಿಯಿಂದ ನಮ್ಮ ರಕ್ಷಣೆಗಾಗಿಯೂ, ನಮ್ಮ ಕಲ್ಯಾಣಕ್ಕಾಗಿಯೂ ಪ್ರಾರ್ಥಿಸಿ ಕರೆಯುತ್ತೇವೆ.

English Translation

Adorable, universal gods, advocate our cause for our protection ; preserve us from malignant adversity, may we with sincere invocation invoke you, gods, who listen (to our praise) for our protection, for our well-being-

ಸಂಹಿತಾಪಾಠಃ

ಅಪಾಮೀವಾಮಪ ವಿಶ್ವಾಮನಾಹುತಿಮಪಾರಾತಿಂ ದುರ್ವಿದತ್ರಾಮಘಾಯತಃ ।
ಆರೇ ದೇವಾ ದ್ವೇಷೋ ಅಸ್ಮದ್ಯುಯೋತನೋರು ಣಃ ಶರ್ಮ ಯಚ್ಛತಾ ಸ್ವಸ್ತಯೇ ॥ ೧೨ ॥

ಪದಪಾಠಃ

ಅಪ । ಅಮೀವಾಂ । ಅಪ । ವಿಶ್ವಾಂ । ಅನಾಹುತಿಂ । ಅಪ । ಅರಾತಿಂ । ದುಃಽವಿದತ್ರಾಂ । ಅಘಽಯತಃ । ಆರೇ । ದೇವಾಃ । ದ್ವೇಷಃ । ಅಸ್ಮತ್ । ಯುಯೋತನ । ಉರು । ನಃ । ಶರ್ಮ । ಯಚ್ಛತ । ಸ್ವಸ್ತಯೇ ॥

ಸಾಯಣಭಾಷ್ಯಂ

ಹೇ ದೇವಾಃ ಅಮೀವಾಂ ರೋಗಾದಿಕಂ ಯದ್ವಾ ರೋಗವದ್ಭಾವಕಂ ಶತ್ರುಮಸ್ಮತ್ತೋ ದೂರೇಽಪ ಕುರುತ । ಪೃಥಕ್ಕುರುತ । ತಥಾ ವಿಶ್ವಾಂ ಸರ್ವಾಮನಾಹುತಿಂ ದೇವಾನಾಮನಾಹ್ವಾನಬುದ್ಧಿಂ ಯದ್ವಾ ದೇವಾನಾಂ ಮಹಾಶತ್ರುಂ ಪೃಥಕ್ಕುರುತ । ಕಿಂಚಾರಾತಿಮದಾನಂ ಲೋಭಬುದ್ಧಿಂ ಯದ್ವಾ ದೇವೇಭ್ಯೋ ಹವಿಷಾಮದಾತಾರಂ ಶತ್ರುಮಪ ಗಮಯತ । ಅಪಿ ಚಾಘಾಯತಃ ಪಾಪಮಿಚ್ಛತಃ

शत्रोरुर्दुर्विदत्रां दुर्विज्ञानं दुष्ट्वां बुद्धिं इत्थं च द्वेषसो द्वेष्ट्ऱ्यान् सर्वान्ऱ्छत्रूनस्मदस्मत्त्र आरे दूरे युयोतन । पृथक्कुरुत । एवं सति यूयं नोऽस्मभ्यमुरु विस्तीर्णं शर्म सुखं स्वस्तये कल्याणाय प्रयच्छत ॥

प्रतिपदार्थ

देवाः—ಎಲೈ ದೇವತೆಗಳೇ । **अमीवां**—ರೋಗವನ್ನು । **अप**—ನಮ್ಮಿಂದ ದೂರಮಾಡಿರಿ । **विश्वां**—ಸಮಸ್ತವಾದ । **अनाहुतिं**—ಯಜ್ಞವಿರುದ್ಧವಾದ ಭಾವನೆಯನ್ನು । **अप**—ನಾಶಮಾಡಿರಿ । **अरातिं**—ಶತ್ರುವನ್ನು । **अप**—ದೂರಕ್ಕೆ ಓಡಿಸಿರಿ । **अघायतः**—ನಮಗೆ ಕೇಡನ್ನು ಬಯಸುವ ಶತ್ರುವಿನ। **दुर्विदत्रां**—ದುಷ್ಟಬುದ್ಧಿಯನ್ನು ನಾಶನಮಾಡಿರಿ । **द्वेषः**—ನಮ್ಮ ಶತ್ರುಗಳನ್ನು। **अस्मत्**—ನಮ್ಮಿಂದ । **आरे**—ದೂರಕ್ಕೆ । **युयोतन**—ಓಡಿಸಿರಿ । **स्वस्तये**—ನಮ್ಮ ಕಲ್ಯಾಣಕ್ಕಾಗಿ । **नः**—ನಮಗೆ । **उरु**—ವಿಸ್ತೃತವಾದ । **शर्म**—ಸುಖವನ್ನು । **यच्छत**—ಕೊಡಿರಿ.

ಭಾವಾರ್ಥ

ಎಲೈ ದೇವತೆಗಳೇ, ನಮ್ಮ ರೋಗಗಳನ್ನು ನಾಶಮಾಡಿರಿ. ಯಜ್ಞವಿರುದ್ಧವಾದ ಯಾವ ಭಾವನೆಯೂ ನಮಗೆ ಆಂಟದಂತೆ ಮಾಡಿರಿ. ನಮಗೆ ಕೇಡನ್ನು ಬಯಸುವ ದುಷ್ಟಬುದ್ಧಿಯುಳ್ಳ ನಮ್ಮ ಶತ್ರುಗಳನ್ನು ದೂರಕ್ಕೆ ಓಡಿಸಿರಿ. ನಮ್ಮ ಕಲ್ಯಾಣಕ್ಕಾಗಿ ನಮಗೆ ವಿಸ್ತೃತವಾದ ಸುಖವನ್ನು ಕೊಡಿರಿ.

English Translation

(Remove far) from us disease, remove all neglect of oblations, remove illiberaliiy, the malevolence of those who wish to do us harm ; remove far from us, gods, those who hate us ; grant us ample happiness for our well-being.

ಸಂಹಿತಾಪಾಠಃ

अरिष्टः स मर्तो विश्व एधते प्र प्रजाभिर्जायते धर्मणस्परि ।
यमादित्यासो नयथा सुनीतिभिरति विश्वानि दुरिता स्वस्तये ॥

ಪದಪಾಠಃ

अरिष्टः । सः । मर्तः । विश्वः । एधते । प्र । प्रऽजाभिः । जायते । धर्मणः । परि ।
यं । आदित्यासः । नयथ । सुनीतिऽभिः । अति । विश्वानि । दुःऽइता । स्वस्तये ॥ ७३ ॥

ಸಾಯಣಭಾಷ್ಯಂ

ಹೇ ವಿಶ್ವೇ ದೇವಾಃ ವಿಶ್ವಃ ಸರ್ವೋ೭ ಮರ್ತಃ ಸ ಮನುಷ್ಯೋ೭ರಿಷ್ಟಃ ಕೈಶ್ಚಿದಪ್ಯಹಿಂಸಿತಃ ಸನ್ನೇ-ಧತೇ ಪಶ್ವಾದಿಭಿರ್ವರ್ಧತೇ । ತಥಾ ಧರ್ಮಣಸ್ಪರಿ ಧಾರಕಾತ್ಕರ್ಮಣೋ೭ನಂತರಂ ಸ ಮನುಷ್ಯಃ ಪ್ರಜಾಭಿಃ ಪುತ್ರಾದಿಭಿಃ ಪ್ರ ಜಾಯತೇ । ಪ್ರಕರ್ಷೇಣಾವಿರ್ಭೂತೋ ಭವತಿ । ಹೇ ಆದಿತ್ಯಾಸ ಆದಿತ್ಯಾ ದೇವಾಃ ಯಂ ಮನುಷ್ಯಂ ಸುನೀತಿಭಿಃ ಸುನಯನೈರ್ವಿಶ್ವಾನಿ ಸರ್ವಾಣಿ ದುರಿತಾ ದುರಿತಾನಿ ಪಾಪಾನಿ ತದ್ರೂಪಾಣ್ಯುತ್ಪಾದ್ಯ ಸ್ವಸ್ತಯೇ ಕ್ಷೇಮಾಯಾತಿ ನಯಥ ಅತೀತ್ಯ ಸನ್ಮಾರ್ಗಂ ನಯಥ । ಸ ವರ್ಧತ ಇತಿ ಸಮನ್ವಯಃ ॥

ಪ್ರತಿಪದಾರ್ಥ

ಆದಿತ್ಯಾಸಃ—ಎಲೈ ಆದಿತ್ಯರೇ । **ಯಂ**—ಯಾವ ಮಾನವನನ್ನು । **ಸುನೀತಿಭಿಃ**—ಉತ್ತಮವಾದ ಮಾರ್ಗದರ್ಶಿತ್ವದಿಂದ । **ವಿಶ್ವಾನಿ ದುರಿತಾನಿ**—ಸಕಲ ದುಷ್ಟಶಕ್ತಿಗಳನ್ನೂ । **ಸ್ವಸ್ತಯೇ**—ಅವನ ಕಲ್ಯಾಣಕ್ಕಾಗಿ। **ಅತಿ ನಯೇಥ**—ದಾಟುವಂತೆ ಮಾಡುವಿರೋ । **ಸಃ**-ಅಂತಹ । **ವಿಶ್ವಃ ಮರ್ತಃ**-ಸಕಲ ಮಾನವನೂ । **ಅರಿಷ್ಟಃ**-ಯಾವ ಹಿಂಸೆಗೂ ಒಳಗಾಗದೆ । **ಏಧತೇ**—ವೃದ್ಧಿಯನ್ನು ಹೊಂದುತ್ತಾನೆ । **ಧರ್ಮಣಸ್ಪರಿ**—ಜಗದ್ಧಾರಕವಾದ ಯಜ್ಞಕರ್ಮಗಳನಂತರ । **ಪ್ರಜಾಭಿಃ**—ಪುತ್ರಾದಿಗಳ ರೂಪದಲ್ಲಿ । **ಪ್ರ ಜಾಯತೇ**—ಸಂತತಿಯನ್ನು ವೃದ್ಧಿಗೊಳಿಸುತ್ತಾನೆ.

ಭಾವಾರ್ಥ

ಎಲೈ ಆದಿತ್ಯರೇ, ಯಾವ ಮಾನವನನ್ನು ನೀವು ನಿಮ್ಮ ಉತ್ತಮವಾದ ಮಾರ್ಗದರ್ಶಿತ್ವದಿಂದ ಸಕಲ ದುಷ್ಟ ಶಕ್ತಿಗಳನ್ನೂ ಅವನ ಕಲ್ಯಾಣಕ್ಕಾಗಿ ದಾಟುವಂತೆ ಮಾಡುವಿರೋ ಅಂತಹ ಸಕಲ ಮಾನವನೂ ಯಾವ ಹಿಂಸೆಗೂ ಒಳಗಾಗದೆ ವೃದ್ಧಿಯನ್ನು ಹೊಂದುತ್ತಾನೆ. ಜಗದ್ಧಾರಕವಾದ ಯಜ್ಞಕರ್ಮಗಳನ್ನು ಮಾಡಿದ ನಂತರ ಪುತ್ರಾದಿ ರೂಪದಲ್ಲಿ ತನ್ನ ಆವಿರ್ಭಾವನನ್ನು ಹೊಂದಿ ವೃದ್ಧಿಯನ್ನು ಪಡೆಯುತ್ತಾನೆ.

English Translation

Unharmed prospers every mortal, after performing his duties, he flourishes with posterity, whom you Adityas guide with good counsels safe over all misfortunes to well-beings,

ಸಂಹಿತಾಪಾಠಃ

ಯಂ ದೇವಾಸೋ೭ವಥ ವಾಜಸಾತೌ ಯಂ ಶೂರಸಾತಾ ಮರುತೋ ಹಿತೇ ಧನೇ ।
ಪ್ರಾತರ್ಯಾವಾಣಂ ರಥಮಿಂದ್ರ ಸಾನಸಿಮರಿಷ್ಯಂತಮಾ ರುಹೇಮಾ ಸ್ವಸ್ತಯೇ ॥ ೧೪ ॥

ಪದಪಾಠಃ

यं । देवासः । अवथ । वाजऽसाताौ । यं । शूरऽसाता । मरुतः । हितेे । धनेे ।

प्रातरऽयावानं । रथं । इन्द्र । सानसिं । अरिष्यंतं । आ । रुहेम । स्वस्तयेे ॥ ७४ ॥

ಸಾಯಣಭಾಷ್ಯಂ

हे देवासोे देवाः वाजसाताावन्नं भजनेेऽन्नलाभेे वा यं रथमवथ रक्षथ हे मरुतः शूरसाता । संग्रामनामैतत् शूराः स्यंति क्षिप्यंतेेऽत्रेति शूराः सीयंतेे विनश्यंतेे योद्धृभिरत्रेति। तस्मिन्युद्धेे यं रथं हितेे निहितेे धनेे धनमुद्दिश्य ॥ निमित्तात्तृमर्थसंयोगेे । पा. २-३-३६-६ ।इति सप्तमीे॥ तदुद्दिश्य रक्षथ । सर्वेषां देवानां मुख्यत्वादिंद्रमेवाभिलक्ष्य वदत्युत्तरार्धेन । हे इंद्र सर्वेषां मुख्य प्रातरयावाणं प्रातरेव युद्धं प्रति गंतारं सानसिं संभजनीयमरिष्यंतं कैश्चिदप्यहिंसितं । यद्वा। इंद्रसहायानां मरुतामबाधकं। तं रथं स्वस्तयेेऽस्माकं रक्षणायै वयमारुहेम । आरोहेम ॥

ಪ್ರತಿಪದಾರ್ಥ

ದೇವಾಸಃ—ಎಲೈ ದೇವತೆಗಳೇ । **ವಾಜಸಾತೌ**—ಅನ್ನಲಾಭಾರ್ಥವಾಗಿ । **ಯಂ**—ಯಾವ ರಥವನ್ನು । **ಅವಥ**—ನೀವು ರಕ್ಷಿಸುವಿರೋ । **ಮರುತಃ**—ಎಲೈ ಮರುತ್ತುಗಳೇ । **ಶೂರಸಾತಾ**—ಶೂರರನ್ನು ಜಯಿಸುವ ಯುದ್ಧದಲ್ಲಿ । **ಯಂ**—ಯಾವ ರಥವನ್ನು । **ಹಿತೇ ಧನೇ**—ಅದರಲ್ಲಿರುವ ಧನಕ್ಕಾಗಿ ರಕ್ಷಿಸುವಿರೋ । **ಇಂದ್ರ**-ಎಲೈ ಇಂದ್ರನೇ । **ಪ್ರಾತರ್ಯಾವಾಣಂ**—ಪ್ರಾತಃಕಾಲದಲ್ಲೇ ಯುದ್ಧಕ್ಕಾಗಿ ಹೊರಡುವುದೂ । **ಸಾನಸಿಂ**—ಪೂಜ್ಯವಾದುದೂ । **ಅರಿಷ್ಯಂತಂ**—ಹಿಂಸೆಗೆ ಪಾತ್ರವಲ್ಲದ್ದೂ ಆದ । **ರಥಂ**—ಆ ರಥವನ್ನು । **ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿ । **ಆ ರುಹೇಮ**—ನಾವು ಹತ್ತುವಂತಾಗಲಿ.

ಭಾವಾರ್ಥ

ಎಲೈ ದೇವತೆಗಳೇ, ಅನ್ನಲಾಭಾರ್ಥವಾಗಿ ನೀವು ಯಾವ ರಥವನ್ನು ರಕ್ಷಿಸುವಿರೋ, ಎಲೈ ಮರುತ್ತುಗಳೇ, ಶೂರರನ್ನು ಜಯಿಸುವ ಯುದ್ಧದಲ್ಲಿ ಯಾವ ರಥವನ್ನು ಅದರಲ್ಲಿರುವ ಧನಕ್ಕಾಗಿ ರಕ್ಷಿಸುವಿರೋ, ಎಲೈ ಇಂದ್ರನೇ, ಪ್ರಾತಃಕಾಲದಲ್ಲೇ ಯುದ್ಧಕ್ಕಾಗಿ ಹೊರಡುವುದೂ, ಪೂಜ್ಯವಾದುದೂ, ಹಿಂಸೆಗೆ ಪಾತ್ರವಲ್ಲದುದೂ ಆದ ಆ ರಥವನ್ನು ನಮ್ಮ ಕಲ್ಯಾಣಕ್ಕಾಗಿ ನಾವು ಹತ್ತುವಂತಾಗಲಿ.

English Translation

(The chariot) which, deities, you protect for the supply of food ; that which, Maruts, (you protect) in battle for the sake of the deposited spoil ; may we mount, Indra, the early-moving desirable irresistible chariot for our weil-being.

संहितापाठः

स्वस्ति । नः । पथ्यासु । धन्वसु । स्वस्ति । अप्सु । वृजने । स्वर्वति ।
स्वस्ति । नः । पुत्रकृथेषु । योनिषु । स्वस्ति । रायो । मरुतः । दधातन ॥ १५ ॥

पदपाठः

स्वस्ति । नः । पथ्यासु । धन्वऽसु । स्वस्ति । अप्ऽसु । वृजने । स्वःऽवति ।
स्वस्ति । नः । पुत्रऽकृथेषु । योनिषु । स्वस्ति । रायो । मरुतः । दधातन ॥ १५ ॥

सायणभाष्यं

प्रायणीयेष्वा पथ्यास्वस्तीर्योगस्य स्वस्ति नः पथ्यास्वित्येषानुवाक्या। उत्तरा याज्या। सूत्रितं च। स्वस्ति नः पथ्यासु धनस्विति द्वे अग्ने नय सुपथा रायो अस्मान्। अ. ४-३। इति। उदयनीयायामेते एव विपर्यस्ते याज्यानुवाक्ये। सूत्रितं च। विपरीताश्च याज्यानुवाक्या इति ॥

हे मरुतो मित्रावरुणो देवाः नोऽस्माकं पथ्यासु पथियोग्येषु सोदकेषु देशेषु स्वस्ति कल्याणं कुरुत। तथा धन्वसु निरुदकेषु देशेषु स्वस्ति कल्याणमुदकजननलक्षणं कुरुत। तथाप्सूदकेषु स्वस्ति। तथा स्वर्वति सर्वैरायुधैर्युक्ते सेनालक्षणे वृजने शत्रूणामावर्जके बले च कल्याणं कुरुत। नोऽस्माकं पुत्रकृथेषु पुत्राणां कर्तृषूत्पादकेषु स्त्रीणां योनिषु स्वस्ति कल्याणं यथा गर्भा न पतंति तथा क्षेमं कुरुत। किंच नोऽस्माकं रायो धनाय गवादिलक्षणाय स्वस्ति क्षेमं दधातन। धत्त। कुरुत ॥

प्रतिपदार्थ

मरुतः—ಎಲೈ ಮರುತ್ತುಗಳೇ । **नः**—ನಮಗೆ । **पथ्यासु**—ಉದಕಪೂರ್ಣವಾದ ಮಾರ್ಗಗಳಲ್ಲೂ । **स्वस्ति**—ಒಳ್ಳೆಯದಾಗಲಿ । **धन्वसु**—ಉದಕರಹಿತವಾದ ಮರಳುಗಾಡುಗಳುಳ್ಳ ಮಾರ್ಗಗಳಲ್ಲೂ । **स्वस्ति**—ಮಂಗಳವುಂಟಾಗಲಿ । **अप्सु**—ಉದಕಗಳಲ್ಲೂ । **स्वर्वति**—ಸೇನಾಪೂರ್ಣವಾದ । **वृजने**—ಶತ್ರು ಬಲದ ನಡುವೆಯೂ ಒಳ್ಳೆಯದಾಗಲಿ । **नः**—ನಮಗೆ । **पुत्रकृथेषु**—ಪುತ್ರರನ್ನು ಹಡೆಯುವ ಸ್ತ್ರೀಯರ । **योनिषु**—ಗರ್ಭಗಳಲ್ಲಿ । **स्वस्ति**—ಕ್ಷೇಮವನ್ನೊದಗಿಸಿರಿ । **रायो**—ನಮ್ಮ ಧನಭೋಗಕ್ಕಾಗಿ । **स्वस्ति**—ಕ್ಷೇಮವನ್ನು । **दधातन**—ಒದಗಿಸಿ ಕೊಡಿರಿ.

भावार्थ

ಎಲೈ ಮರುತ್ತುಗಳೇ, ನಮಗೆ ಉದಕಪೂರ್ಣವಾವ ಮಾರ್ಗಗಳಲ್ಲೂ, ಉದಕರಹಿತವಾದ ಮರಳುಗಾಡುಗಳಲ್ಲೂ ಮಂಗಳವುಂಟಾಗಲಿ. ಉದಕಪ್ರದೇಶಗಳಲ್ಲೂ ಒಳ್ಳೆಯದಾಗಲಿ. ಸೇನೆಗಳಿಂದ ಕೂಡಿದ ಶತ್ರುಬಲಗಳ ನಡುವೆ

ನಮಗೆ ಒಳ್ಳೆಯದಾಗಲಿ. ನಮ್ಮ ಸಂತತಿಯನ್ನು ಬೆಳೆಸುವ ಸ್ತ್ರೀಯರ ಗರ್ಭಗಳಿಗೆ ರಕ್ಷಣೆಯನ್ನು ನೀಡಿರಿ. ನಮ್ಮ ಧನಭೋಗಕ್ಕಾಗಿ ನಮಗೆ ಕ್ಷೇಮವನ್ನು ಒದಗಿಸಿರಿ.

English Translation

Maruts, secure to us well-being on roads, in deserts, well-being in waters, amidst the might of assailing hosts : well-being in the son-bearing wombs (of our wives) ; well-being for (the acquirement of) riches.

ವಿಶೇಷವಿಷಯಗಳು

ಪ್ರಾಯಣೀಯೇಷ್ಟಿಯಲ್ಲಿ ಪಥ್ಯಾಸ್ವಸ್ತಿಯೆಂಬ ದೇವತೆಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಸ್ವಸ್ತಿ ನಃ ಪಥ್ಯಾಸು** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿಯೂ **ಸ್ವಸ್ತಿರಿದ್ಧಿ** ಎಂಬ ಮುಂದಿನ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿಯೂ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಸ್ವಸ್ತಿ ನಃ ಪಥ್ಯಾಸು ಧನ್ವಸ್ವಿತಿ ದ್ವೇ ಅಗ್ನೇ ನಯೆ ಸುಪಥಾ ರಾಯೇ ಅಸ್ಮಾನ್** ಎಂಬ ಸೂತ್ರದಿಂದ (ಆ. ೪-೩) ವಿವೃತವಾಗಿರುವುದು. ಉದಯನೀಯೇಷ್ಟಿಯಲ್ಲಿಯೂ ಸಹ ಈ ಎರಡು ಋಕ್ಕುಗಳನ್ನು ವಿಕಲ್ಪವಾಗಿ ಯಾಜ್ಯಾನುವಾಕ್ಯಾ ಮಂತ್ರಗಳಂತೆ ಪಠಿಸಬಹುದೆಂದು ಆಶ್ವಲಾಯನಶ್ರೌತಸೂತ್ರದ—**ವಿಪರೀತಾಶ್ಚ ಯಾಜ್ಯಾನುವಾಕ್ಯಾಃ** ಎಂಬ ಸೂತ್ರದಿಂದ ವಿವೃತವಾಗಿರುವುದು.

ಸಂಹಿತಾಪಾಠಃ

ಸ್ವಸ್ತಿರಿದ್ಧಿ ಪ್ರಪಥೇ ಶ್ರೇಷ್ಠಾ ರೇಕ್ಣಸ್ವತ್ಯಭಿ ಯಾ ವಾಮಮೇತಿ ।
ಸಾ ನೋ ಅಮಾ ಸೋ ಅರಣೇ ನಿ ಪಾತು ಸ್ವಾವೇಶಾ ಭವತು ದೇವಗೋಪಾ ॥

ಪದಪಾಠಃ

ಸ್ವಸ್ತಿಃ । ಇತ್ । ಹಿ । ಪ್ರ॒ಪಥೇ । ಶ್ರೇಷ್ಠಾ । ರೇಕ್ಣಸ್ವತೀ । ಅಭಿ । ಯಾ । ವಾಮಂ । ಏತಿ ।
ಸಾ । ನಃ । ಅಮಾ । ಸೋ ಇತಿ । ಅರಣೇ । ನಿ । ಪಾತು । ಸು॒ಅವೇಶಾ । ಭವತು । ದೇವ॒ಗೋಪಾ ॥೧೬॥

ಸಾಯಣಭಾಷ್ಯಂ

ಯಾ ಪೃಥಿವೀ ಗಂತುಮುದ್ಯುಕ್ತಾನಾಂ ಪ್ರಪಥೇ ಪ್ರಕೃಷ್ಟಾಯೈ ಮಾರ್ಗಾಯೈ ಸ್ವಸ್ತಿರಿತ್ ಕ್ಷೇಮಕಾರಿಣ್ಯೇವ ಭವತಿ ಶ್ರೇಷ್ಠಾ ಪ್ರಶಸ್ಯತಮಾ ರೇಕ್ಣಸ್ವತೀ ಧನವತೀ ಯಾ ಪೃಥಿವೀ ವಾಮಂ ವನನೀಯಂ ಯಜ್ಞಮಭ್ಯೇತಿ ಉತ್ತರವೇದ್ಯಾತ್ಮನಾ ವಾಭಿಸ್ರಾಪ್ನೋತಿ ಸಾ ಪೃಥಿವೀ ನೋ॒ಸ್ಮಾಕಮಮಾ । ಗೃಹನಾಮೈತತ್ । ಗೃಹಂ ರಕ್ಷತು । ತಥಾ ಸೋ ಸಾ ಉ ಸೈವಾರಣೇ ಗಂತವ್ಯೇ ದೇಶೇ॒ಽರಣೇ॒ಽರಮಣೇ॒ಽರಣ್ಯಾದಿಕೇ ದೇಶೇ ವಾ ನೋ॒ಽಸ್ಮಾನ್ನಿ ಪಾತು । ನಿತರಾಂ ರಕ್ಷತು । ತಥಾ ದೇವಗೋಪಾ ದೇವಾ ಗೋಪಾಯಿತಾರೋ ಯಸ್ಯಾಃ ಸಂತಿ ಸಾ ಪೃಥಿವ್ಯಸ್ಮಾಕಂ ಸ್ವಾವೇಶಾ ಶೋಭನನಿವಾಸಾ ಭವತು ॥

ಪ್ರತಿಪದಾರ್ಥ

ಪ್ರಪಥೇ—ಉತ್ತಮವಾವ ಮಾರ್ಗಕ್ಕೆ । **ಸ್ವಸ್ತಿರಿತ್**—ಕಲ್ಯಾಣಕಾರಕಳಾಗಿಯೂ । **ಶ್ರೇಷ್ಠಾ**—ಉತ್ತಮಳಾಗಿಯೂ । **ರೇಕ್ಣಸ್ವತೀ**—ಧನವಂತಳಾಗಿಯೂ ಇರುವ । **ಯಾ**—ಯಾವ ಪೃಥ್ವಿಯು । **ವಾಮಂ**—ಆಕರ್ಷಕವಾದ ಯಜ್ಞಕ್ಕೆ । **ಅಭ್ಯೇತಿ**—ಬರುವಳೋ । **ಸಾ**—ಆ ಪೃಥ್ವಿಯು । **ನಃ**—ನಮ್ಮನ್ನು । **ಅಮಾ**-ಗೃಹದಲ್ಲಿ ರಕ್ಷಿಸಲಿ । **ಸೋ**—ಅವಳೇ । **ಅರಣೇ**—ಅರಣ್ಯಾದಿ ಮಾರ್ಗಪ್ರದೇಶಗಳಲ್ಲಿಯೂ । **ನಿ ಪಾತು**—ನಮ್ಮನ್ನು ಪೂರ್ಣವಾಗಿ ರಕ್ಷಿಸಲಿ । **ದೇವಗೋಪಾ**—ದೇವತೆಗಳನ್ನು ರಕ್ಷಿಸುವ ಅದೇ ಪೃಥ್ವಿಯು । **ಸ್ವಾವೇಶಾ**-ನಮಗೆ ಉತ್ತಮವಾದ ಗೃಹದಾಯಕಳಾಗಿ । **ಭವತು**—ಆಗಿರಲಿ.

ಭಾವಾರ್ಥ

ಉತ್ತಮವಾದ ಮಾರ್ಗಕ್ಕೆ ಕಲ್ಯಾಣಕಾರಕಳಾಗಿಯೂ, ಉತ್ತಮಳಾಗಿಯೂ, ಧನವಂತಳಾಗಿಯೂ ಇರುವ ಯಾವ ಪೃಥ್ವಿಯು ಆಕರ್ಷಕವಾದ ಯಜ್ಞಕ್ಕೆ ಬರುವಳೋ ಆ ಪೃಥ್ವಿಯು ನಮ್ಮನ್ನು ಗೃಹದಲ್ಲಿ ರಕ್ಷಿಸಲಿ. ಅವಳೇ ಅರಣ್ಯಾದಿ ಮಾರ್ಗಪ್ರದೇಶಗಳಲ್ಲಿಯೂ ನಮ್ಮನ್ನು ಪೂರ್ಣವಾಗಿ ರಕ್ಷಿಸಲಿ. ದೇವತೆಗಳನ್ನೂ ರಕ್ಷಿಸುವ ಅದೇ ಪೃಥ್ವಿಯು ನಮಗೆ ಉತ್ತಮವಾದ ಗೃಹದಾಯಕಿಯಾಗಲಿ.

English Translation

May (Prithivi), who secures well-being to the excellent path, who, abounding with wealth, goes to the desirable (place of sacrifice), preserve our home, may she protect us on the path we have to travel ; cherished by the gods, may she be to us a pleasant abode.

ವಿಶೇಷವಿಷಯಗಳು

ಈ ಋಕ್ಕಿಗೆ ಯಾಸ್ಕರು ನಿರುಕ್ತವನ್ನು ಹೇಳಿದಾರೆ—

ಸ್ವಸ್ತಿರೇವ ಹಿ ಪ್ರಪಥೇ ಶ್ರೇಷ್ಠಾ ರೇಕ್ಣಸ್ವತೀ ಧನವತ್ಯಭ್ಯೇತಿ ಯಾ ವಸೂನಿ ವನನೀಯಾನಿ ಸಾ ನೋಽಮಾ ಗೃಹೇ ಸಾ ನಿರಮಣೇ ಸಾ ನಿರ್ಗಮನೇ ಪಾತು ಸ್ವಾವೇಶಾ ಭವತು ದೇವೀ ಗೋಪ್ತ್ರೀ ದೇವಾನ್ ಗೋಪಾಯತ್ವಿತಿ ದೇವಾ ಏನಾಂ ಗೋಪಾಯಂತ್ವಿತಿ ವಾ ॥

(ನಿ. ೧೧-೪೬)

ಸ್ವಸ್ತಿಯೆಂಬ ಹೆಸರಿನ ಈ ದೇವತೆಯು ಆಂತರಿಕ್ಷಸ್ಥರಾದ ದೇವತೆಗಳಲ್ಲೆಲ್ಲಾ ಶ್ರೇಷ್ಠದೇವತೆಯಾಗಿರುವಳು. ಈ ದೇವತೆಯು ಧನವುಳ್ಳವಳಾಗಿಯೂ ಎಲ್ಲರಿಗೂ ಜೀಕಾದ ಉದಕವನ್ನು ವರ್ಷಿಸುವವಳಾಗಿಯೂ ನಮ್ಮ ಸವಿಾಪಕ್ಕೆ ಬರುತ್ತಾಳೆ. ಈ ದೇವತೆಯು ನಮ್ಮನ್ನು ನಾವು ಗೃಹದಲ್ಲಿರುವಾಗಲೂ ಅಥವಾ ಹೊರಗಡೆ ಸಂಚರಿಸುತ್ತಿರುವಾಗಲೂ ರಕ್ಷಿಸಲಿ. ಇವಳ ಪ್ರವೇಶದಿಂದ ನಮಗೆ ಒಳ್ಳೆಯದಾಗುವುದು. ಈ ದೇವಿಯು ದೇವಗೋಪಾ ಎಂದು ಕರೆಯಲ್ಪಡುವಳು. ಏಕೆಂದರೆ, ಈ ದೇವತೆಯು ದೇವತೆಗಳನ್ನು (ಅಥವಾ ಹವಿರ್ದಾತೃಗಳಾವ ನಮ್ಮನ್ನು) ರಕ್ಷಿಸುವವಳಾವ್ದರಿಂದ ಅಥವಾ ದೇವತೆಗಳು ಈ ದೇವತೆಯನ್ನು ರಕ್ಷಿಸುವವರಾದ್ದರಿಂದ ಈ ದೇವತೆಗೆ ದೇವಗೋಪಾ ಎಂಬ ಅಭಿಧಾನವಿರುವುದು ಎಂದು ನಿರುಕ್ತವಚನದ ಮುಖ್ಯಾಭಿಪ್ರಾಯವು.

ಸಂಹಿತಾಪಾಠಃ

ಏವಾ ಪ್ಲತೇಃ ಸೂನುರವೀವೃಧದ್ವೋ ವಿಶ್ವ ಆದಿತ್ಯಾ ಅದಿತೇ ಮನೀಷೀ ।
ಈಶಾನಾಸೋ ನರೋ ಅಮರ್ತ್ಯೇನಾಸ್ತಾವಿ ಜನೋ ದಿವ್ಯೋ ಗಯೇನ ॥೧೭॥

ಪದಪಾಠಃ

ಏವ । ಪ್ಲತೇಃ । ಸೂನುಃ । ಅವೀವೃಧತ್ । ವಃ । ವಿಶ್ವೇ । ಆದಿತ್ಯಾಃ । ಅದಿತೇ । ಮನೀಷೀ ।
ಈಶಾನಾಸಃ । ನರಃ । ಅಮರ್ತ್ಯೇನ । ಅಸ್ತಾವಿ । ಜನಃ । ದಿವ್ಯಃ । ಗಯೇನ ॥ ೧೭ ॥

ಸಾಯಣಭಾಷ್ಯಂ

ಹೇ ವಿಶ್ವ ಆದಿತ್ಯಾಃ ಸರ್ವೇ ದೇವಾ ಹೇ ಅದಿತೇ ದೇವಾನಾಂ ಮಾತರೇನ್ನಾಮಿಕೇ ದೇವಿ ವೋ ಯುಷ್ಮಾನ್ಮನೀಷೀ ಪ್ರಾಜ್ಞಃ ಸ್ತೋತಾ ಪ್ಲತೇರೇತನ್ನಾಮಕಸ್ಯರ್ಷೇಃ ಸೂನುಃ ಪುತ್ರೋ ಗಯೋ ನಾಮೈವೈವಮುಕ್ತರೀತ್ಯಾವೀವೃಧತ್ । ಸ್ತುತಿಭಿರವರ್ಧಯತ್ ॥ ವರ್ಧತೇರ್ಣ್ಯಂತಸ್ಯ ಲುಙಿ ರೂಪಂ ॥ ಅಮರ್ತ್ಯೇನ ಮನುಷ್ಯಧರ್ಮರಹಿತೇನ ಸ್ತುತೇನ ಯೇನ ದೇವಜನೇನ ನರೋ ಮನುಷ್ಯಾ ಈಶಾನಾಸೋ ಧನಸ್ಯೇಶ್ವರಾಃ ಸ್ವಾಮಿನೋ ಭವಂತಿ ಸ ದಿವ್ಯೋ ದಿವಿ ಭವೋ ಜನೋ ದೇವಗಣೋ ಗಯೇನೈತನ್ನಾಮಕೇನ ಮಯಾಸ್ತಾವಿ । ಅಭಿಷ್ಟುತೋಽಭೂತ್ ॥ ಸ್ತೌತೇಃ ಕರ್ಮಣಿ ಲುಙಿ ಚಜಿ ರೂಪಂ ॥

ಪ್ರತಿಪದಾರ್ಥ

ವಿಶ್ವೇ ಆದಿತ್ಯಾಃ—ಅದಿತಿಪುತ್ರರಾದ ಎಲ್ಲೆ ಸಕಲ ದೇವತೆಗಳೇ । **ಅದಿತೇ**—ಎಲೈ ದೇವಮಾತೆಯೇ । **ವಃ**—ನಿಮ್ಮನ್ನು । **ಮನೀಷೀ**—ಪ್ರಾಜ್ಞನಾದ । **ಪ್ಲತೇಃ ಸೂನುಃ**—ಪ್ಲತಿಋಷಿಯ ಪುತ್ರನು । **ಏವ**—ಈರೀತಿಯಲ್ಲಿ । **ಅವೀವೃಧತ್**—ಸ್ತುತಿಗಳಿಂದ ಪುಷ್ಟಿಗೊಳಿಸಿದ್ದಾನೆ । **ಅಮರ್ತ್ಯೇನ**—ಮರಣಧರ್ಮರಹಿತರಾದ ಯಾವ ದೇವತೆಗಳ ಸಂಘದಿಂದ । **ನರಃ**—ಮಾನವರು । **ಈಶಾನಾಸಃ**—ಧನಕ್ಕೆ ಪ್ರಭುಗಳಾಗುವರೋ । **ದಿವ್ಯಃ ಜನಃ**—ಅದೇ ದೇವಸಂಘವು । **ಗಯೇನ**—ಗಯಋಷಿಯಿಂದ । **ಅಸ್ತಾವಿ**—ಸ್ತುತಿಸಲ್ಪಟ್ಟಿದೆ.

ಭಾವಾರ್ಥ

ಆದಿತಿಪುತ್ರರಾದ ಎಲ್ಲೆ ಸಕಲ ದೇವತೆಗಳೇ, ಎಲೈ ದೇವಮಾತೆಯೇ, ನಿಮ್ಮನ್ನು ಪ್ರಾಜ್ಞನಾದ ಪ್ಲತಿಋಷಿಯ ಪುತ್ರನು (ಗಯನು) ಈ ರೀತಿ ಸ್ತುತಿಗಳಿಂದ ಪುಷ್ಟಿಗೊಳಿಸಿದ್ದಾನೆ. ಮರಣಧರ್ಮರಹಿತರಾದ ಯಾವ ದೇವತೆಗಳ ಸಂಘದಿಂದ ಮಾನವರು ಧನಕ್ಕೆ ಪ್ರಭುಗಳಾಗುವರೋ ಅದೇ ದೇವಸಂಘವು ಗಯಋಷಿಯಿಂದ ಸ್ತುತಿಸಲ್ಪಟ್ಟಿದೆ.

English Translation

Universal deities and Aditi, thus has the prudent son of Plati magnified you ; the celestial people, the immortal (company of the gods) through

whom (when praised) men become the lords (of wealth) have been glorified by Gaya.

ಅರವತ್ತನಾಲ್ಕನೆಯ ಸೂಕ್ತ

ಸಾಯಣಭಾಷ್ಯಂ

ಕಥೇತಿ ಸಪ್ತದಶರ್ಚಂ ಚತುರ್ಥಂ ಸೂಕ್ತಂ ಪ್ಲಾತಸ್ಯ ಗಯಸ್ಯಾರ್ಷಂ ವೈಶ್ವದೇವಂ । ಯಾಂ ಮೇ ಧಿಯಮಿತ್ಯೇಷಾ ದ್ವಾದಶೀ ಷೋಡಶೀಸಪ್ತದಶ್ಯೌ ಚ ತ್ರಿಷ್ಟುಭಃ ಶೇಷಾ ಜಗತ್ಯಃ । ತಥಾ ಚಾನುಕ್ರಾಂತಂ । ಕಥಾ ಯಾಂ ಮೇ ತ್ರಿಷ್ಟುಬಿತಿ ॥ ಗತೋ ವಿನಿಯೋಗಃ ॥

ಅನುವಾದವು—ಕಥಾ ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಹದಿನೇಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ಲತ ಎಂಬುವನ ಪುತ್ರನಾದ ಗಯನು ಋಷಿಯು; ವಿಶ್ವೇದೇವತೆಗಳು ದೇವತೆಯು; **ಯಾಂ ಮೇ ಧಿಯಂ** ಎಂಬ ೧೨ನೇ ಋಕ್ಕು, ೧೬-೧೭ನೇ ಋಕ್ಕುಗಳೂ ತ್ರಿಷ್ಟುಪ್ಛಂದಸ್ಸುವು. ಉಳಿದ ಋಕ್ಕುಗಳೂ ಜಗತೀಛಂದಸ್ಸುವು. ಅನುಕ್ರಮಣಿಕೆಯಲ್ಲಿ—**ಕಥಾ ಯಾಂ ಮೇ ತ್ರಿಷ್ಟುಪ್** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೬೪

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೪ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೬, ೭, ೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೭ ॥
ಋಷಿಃ—ಗಯಃ ಪ್ಲಾತಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—೧-೧೧, ೧೩-೧೫. ಜಗತೀ । ೧೨, ೧೬, ೧೭. ತ್ರಿಷ್ಟುಪ್ ॥

ಸಂಹಿತಾಪಾಠಃ

ಕ॒ಥಾ ದೇ॒ವಾನಾಂ॑ ಕ॒ತಮ॒ಸ್ಯ ಯಾಮ॑ನಿ॒ ಸು॒ಮ॒ಂತು॒ ನಾಮ॑ ಶೃ॒ಣ್ವ॒ತಾಂ ಮ॑ನಾಮಹೇ ।
ಕೋ ಮೃ॑ಳಾತಿ ಕ॒ತಮೋ ನ॒ ಆ ಮ॑ಯ॒ಸ್ಕರ॑ತ್ಕ॒ತಮ॒ ಊತೀ॒ ಅಭ್ಯಾ ವ॑ವರ್ತತಿ ॥ ೧ ॥

ಪದಪಾಠಃ

ಕ॒ಥಾ । ದೇ॒ವಾನಾಂ॑ । ಕ॒ತಮ॑ಸ್ಯ । ಯಾಮ॑ನಿ । ಸು॒ಮ॒ಂತು॒ಃ । ನಾಮ॑ । ಶೃ॒ಣ್ವ॒ತಾಂ । ಮ॒ನಾ॒ಮ॒ಹೇ ।
ಕಃ । ಮೃ॒ಳಾ॒ತಿ॒ । ಕ॒ತಮ॑ಃ । ನ॒ಃ । ಮ॒ಯ॒ಃ । ಕರ॑ತ್ । ಕ॒ತಮ॑ಃ । ಊತೀ॒ । ಅಭಿ॑ । ಆ । ವ॒ವ॒ರ್ತ॒ತಿ ॥೧॥

ಸಾಯಣಭಾಷ್ಯಂ

ಋಷಿರ್ಬಹುಧಾತ್ಮಾನಂ ವಿತರ್ಕಯತಿ। ಯಾಮನಿ। ಯಾಂತಿ ಗಚ್ಛಂತ್ಯತ್ರೇತಿ ಯಾಮಾ ಯಜ್ಞಃ। ತಸ್ಮಿಞ್ಶೃಣ್ವತಾಮಸ್ಮಾಭಿರುಕ್ತಾನಿ ಸ್ತೋತ್ರಾಣಿ ದೇವಾನಾಂ ಮಧ್ಯೇ ಕತಮಸ್ಯ ದೇವಸ್ಯ ಸುಮಂತು ಸುಷ್ಠು ಮನನೀಯಂ ಸ್ತೋತವ್ಯಂ ನಾಮ ಕಥಾ ಕಥಂ ಮನಾಮಹೇ। ಉಚ್ಚಾರಯಾಮಃ। ಅಸ್ಮಾನ್ಕೋ ವಾ ಮೃಳಾತಿ। ಮೃಳತಿರುಪದಯಾಕರ್ಮೇತಿ ಯಾಸ್ಕಃ। ನಿ. ೧೦-೧೫। ಕೃಪಾಂ ಕರೋತಿ। ಕತಮೋ ವಾ ಸೋಽಸ್ಮಾಕಂ ಮಯಃ ಸುಖಂ ಕರತ್। ಕರೋತಿ। ಕತಮೋ ವೋತೀ॥ ಚತುರ್ಥ್ಯರ್ಥೇ ಪೂರ್ವಸವರ್ಣದೀರ್ಘಃ॥ ಊತ್ಯೈ ಅಸ್ಮಾಕಂ ರಕ್ಷಣಾಯೋಭ್ಯಾ ವವರ್ತತಿ। ಅಭ್ಯಾಗಚ್ಛತೀತ್ಯರ್ಥಃ॥

ಪ್ರತಿಪದಾರ್ಥ

ಯಾಮನಿ—ಯಜ್ಞದಲ್ಲಿ। **ಶೃಣ್ವತಾಂ**—ನಮ್ಮ ಸ್ತುತಿಗಳನ್ನು ಆಲಿಸಿ ಕೇಳುವ। **ದೇವಾನಾಂ**—ದೇವತೆಗಳ ನಡುವೆ। **ಕತಮಸ್ಯ**—ಯಾವ ದೇವತೆಯ। **ಸುಮಂತು**—ಉತ್ತಮವಾದ ಧ್ಯಾನಕ್ಕೆ ಯೋಗ್ಯವಾದ। **ನಾಮ**—ಹೆಸರನ್ನು। **ಕಥಾ**—ಯಾವ ಪ್ರಕಾರವಾಗಿ। **ಮನಾಮಹೇ**—ಧ್ಯಾನಿಸಿ ಪಠಿಸೋಣ। **ಕಃ**—ಯಾವ ದೇವತೆಯು। **ಮೃಳಾತಿ**—ನಮ್ಮಲ್ಲಿ ದಯೆಯುಳ್ಳವನಾಗಿದ್ದಾನೆ। **ಕತಮಃ**—ಅವರಲ್ಲಿ ಯಾರು। **ನಃ**—ನಮಗೆ। **ಮಯಃ**—ಸುಖವನ್ನು। **ಕರತ್**—ಒದಗಿಸುತ್ತಾನೆ। **ಕತಮಃ**—ಅವರಲ್ಲಿ ಯಾರು। **ಊತೀ**—ನಮ್ಮ ರಕ್ಷಣೆಗಾಗಿ। **ಅಭ್ಯಾವವರ್ತತಿ**—ನಮ್ಮ ಕಡೆಗೆ ದಯವಾಡುತ್ತಾನೆ.

ಭಾವಾರ್ಥ

ಯಜ್ಞದಲ್ಲಿ ನಮ್ಮ ಸ್ತುತಿಗಳನ್ನು ಆಲಿಸಿ ಕೇಳುವ ದೇವತೆಗಳ ನಡುವೆ ಯಾವ ದೇವತೆಯ ಹೆಸರು ಉತ್ತಮವಾದ ಧ್ಯಾನಕ್ಕೆ ಯೋಗ್ಯವಾಗಿದೆ? ಅದನ್ನು ನಾವು ಯಾವ ರೀತಿ ಧ್ಯಾನಿಸಿ ಪಠಿಸೋಣ? (ಉತ್ತಮವಾದ ಧ್ಯಾನಕ್ಕೆ ಯೋಗ್ಯವಾದ ಯಾವ ಹೆಸರನ್ನು ಉಚ್ಚರಿಸಿ ಪ್ರಶಂಸಿಸೋಣ?) ಯಾವ ದೇವತೆಯು ನಮ್ಮಲ್ಲಿ ದಯೆಯುಳ್ಳವನಾಗಿದ್ದಾನೆ? ಅವರಲ್ಲಿ ನಮಗೆ ಸುಖವನ್ನು ಒವಗಿಸುವವರಾರು? ನಮ್ಮ ರಕ್ಷಣೆಗಾಗಿ ನಮ್ಮಕಡೆ ಬರುವವರಾರು?

English Translation

In what manner, and of which of the gods, who hear (our praises) at the saerifice, my we enunciate the venerable name? who will show us compassion? which of them will grant us happiness? which of them comes for our protection?

ಸಂಹಿತಾಪಾಠಃ

ಕ್ರತೂಯಂತಿ ಕ್ರತವೋ ಹೃತ್ಸು ಧೀತಯೋ ವೇನಂತಿ ವೇನಾಃ ಪತಯಂತ್ಯಾದಿಶಃ।
ನ ಮರ್ಡಿತಾ ವಿದ್ಯತೇ ಅನ್ಯ ಏಭ್ಯೋ ದೇವೇಷು ಮೇ ಅಧಿ ಕಾಮಾ ಅಯಂಸತ ॥ ೨ ॥

ಪದಪಾಠಃ

ಹೃತ್ಸು । ಕ್ರತವಃ । ಹೃತ್ಸು । ಧೀತಯಃ । ವೇನಂತಿ । ವೇನಾಃ । ಪತಯಂತಿ । ಆ । ದಿಶಃ ।
ನ । ಮರ್ಧಿತಾ । ವಿದ್ಯತೇ । ಅನ್ಯಃ । ಏಭ್ಯಃ । ದೇವೇಷು । ಮೇ । ಅಧಿ । ಕಾಮಾಃ । ಅಯಂಸತ ॥೨॥

ಸಾಯಣಭಾಷ್ಯಂ

ಹೃತ್ಸು ಹೃದಯೇಷು ಧೀತಯೋ ನಿಧಾತವ್ಯಾ ನಿಹಿತಾಃ ಕ್ರತವಃ ಪ್ರಜ್ಞಾಃ ಕ್ರತೂಯಂತಿ । ಅಗ್ನಿಹೋತ್ರಾದಿಕರ್ಮ ಕರ್ತುಮಿಚ್ಛಂತಿ । ತದೇವಾಹ । ವೇನಾಃ ಕಾಂತಾಃ ಪ್ರಜ್ಞಾ ವೇನಂತಿ । ದೇವಾನ್ಕಾಮಯಂತೇ। ವೇನೋ ವೇನತೇಃಕಾಂತಿಕರ್ಮಣ ಇತಿ ಯಾಸ್ಕಃ । ನಿ. ೧೦-೩೮ । ತಥಾ ದಿಶೋಽಸ್ಮಾಭಿರ್ನಿದಿಶ್ಯಮಾನಾಃ ಪ್ರೇರ್ಯಮಾಣಾಃ ಕಾಮಾ ಆ ಪತಯಂತಿ। ದೇವಾನ್ಪ್ರಲಾವಾಪ್ತಯೇ ಆಗಚ್ಛಂತಿ। ಯತ ಏಭ್ಯೋ ದೇವೇಭ್ಯೋಽನ್ಯೋ ದೇವ ಏಷಾಂ ಕಾಮಾನಾಂ ಮರ್ಧಿತಾ ಸುಖಯಿತಾ ನ ವಿದ್ಯತೇ । ಕಿಂ ಬಹುನಾ । ದೇವೇಷ್ವಧಿ । ಅಧಿಶಬ್ದಃ ಸಪ್ತಮ್ಯರ್ಥದ್ಯೋತಕಃ । ಇಂದ್ರಾದಿಷು ದೇವೇಷು ಮೇ ಮದೀಯಾಃ ಕಾಮಾ ಆಯಂಸತ । ಸಿಯಮ್ಯಂತೇ॥ ಯಚ್ಛತೇಃ ಕರ್ಮಣಿ ಲುಜಿ ರೂಪಂ ॥

ಪ್ರತಿಪದಾರ್ಥ

ಹೃತ್ಸು—ನಮ್ಮ ಹೃದಯಗಳಲ್ಲಿ । **ಧೀತಯಃ**—ಭಕ್ತಿಯುತವಾಗಿ ಬೆಳೆದ । **ಕ್ರತವಃ**—ಕರ್ಮ ವಿಷಯಕವಾದ ಪ್ರಜ್ಞೆಗಳು । **ಕ್ರತೂಯಂತಿ**—ಕರ್ಮಮಾಡುವ ಪ್ರೇರಣೆಯುಳ್ಳವಾಗಿರುತ್ತವೆ । **ವೇನಾಃ**—ಆಕರ್ಷಕವಾದ ನಮ್ಮ ಪ್ರಜ್ಞೆಗಳು । **ವೇನಂತಿ**—ದೇವಪೂಜೆಯನ್ನಪೇಕ್ಷಿಸುತ್ತವೆ । **ದಿಶಃ**—ನಮ್ಮಿಂದ ಪ್ರೇರಿತವಾದ ಆ ಇಚ್ಛೆಗಳು । **ಆ ಪತಯಂತಿ**—ತಮ್ಮ ಇಷ್ಟಾರ್ಥಸಾಧನೆಗಾಗಿ ದೇವತೆಗಳನ್ನು ಸಮೀಪಿಸುತ್ತವೆ । **ಏಭ್ಯಃ**—ಈ ದೇವತೆಗಳಿಗಿಂತ । **ಅನ್ಯಃ**—ಬೇರೆಯಾದ ಯಾರೂ । **ಮರ್ಧಿತಾ**—ನಮಗೆ ಸುಖದಾತರಾಗಿ । **ನ ವಿದ್ಯತೇ**—ಇರುವುದಿಲ್ಲ । **ದೇವೇಷು ಅಧಿ**—ದೇವತೆಗಳಲ್ಲೆಯೇ । **ಮೇ**—ನನ್ನ । **ಕಾಮಾಃ**—ಇಚ್ಛೆಗಳು । **ಅಯಂಸತ**—ಕೇಂದ್ರೀಕೃತವಾಗಿವೆ.

ಭಾವಾರ್ಥ

ನಮ್ಮ ಹೃದಯದಲ್ಲಿ ಭಕ್ತಿಯುತವಾಗಿ ಬೆಳೆದ ಕರ್ಮವಿಷಯಕವಾದ ಪ್ರಜ್ಞೆಗಳು ಕರ್ಮಮಾಡುವ ಪ್ರೇರಣೆಯುಳ್ಳವಾಗಿರುತ್ತವೆ. ಆಕರ್ಷಕವಾದ ನಮ್ಮ ಪ್ರಜ್ಞೆಗಳು ದೇವಪೂಜೆಯನ್ನಪೇಕ್ಷಿಸುತ್ತವೆ. ನಮ್ಮಿಂದ ಪ್ರೇರಿತವಾದ ಆ ಇಚ್ಛೆಗಳು ತಮ್ಮ ಇಷ್ಟಾರ್ಥಸಾಧನೆಗಾಗಿ ದೇವತೆಗಳನ್ನು ಸಮೀಪಿಸುತ್ತವೆ. ದೇವತೆಗಳನ್ನು ಬಿಟ್ಟರೆ ನಮಗೆ ಸುಖದಾತರು ಇನ್ನಾರೂ ಇರುವುದಿಲ್ಲ. ನನ್ನ ಇಚ್ಛೆಗಳೆಲ್ಲವೂ ದೇವತೆಗಳಲ್ಲಿಯೇ ಕೇಂದ್ರೀಕೃತವಾಗಿವೆ.

English Translation

The desires cherished in my heart strive to offer worship : (our) wishes long for (the gods) and expressed (by us) go forth to (the gods) : no other bestower of happiness exists except them ; upon the gods are my desires concentrated.

ಸಂಹಿತಾಪಾಠಃ

ನರಾ॑ ವಾ॒ ಶಂ ಸಂ ಪೂ॒ಷಣ॒ಮಗೋ॑ಹ್ಯ॒ಮ॒ಗ್ನಿಂ ದೇ॒ವೇದ್ಧ॒ಮ॒ಭ್ಯ॑ರ್ಚಸೇ ಗಿರಾ ।
ಸೂ॒ರ್ಯಾ॒ಮಾ॒ಸಾ ಚಂ॒ದ್ರ॒ಮ॒ಸಾ ಯ॒ಮಂ ದಿ॒ವಿ ತ್ರಿ॒ತಂ ವಾ॒ತ॒ಮು॒ಷ॒ಸ॒ಮ॒ಕ್ತು-
ಮ॒ಶ್ವಿ॒ನಾ ॥ ೩ ॥

ಪದಪಾಠಃ

ನರಾಶಂಸಂ । ವಾ । ಪೂಷಣಂ । ಅಗೋಹ್ಯಂ । ಅಗ್ನಿಂ । ದೇವ॑ಇದ್ಧಂ । ಅಭಿ । ಅರ್ಚಸೇ । ಗಿರಾ ।
ಸೂರ್ಯಾಮಾಸಾ । ಚಂದ್ರಮಸಾ । ಯಮಂ । ದಿವಿ । ತ್ರಿತಂ । ವಾತಂ । ಉಷಸಂ । ಅಕ್ತುಂ । ಅಶ್ವಿನಾ॥

ಸಾಯಣಭಾಷ್ಯಂ

ಋಷಿಃ ಸ್ವಾತ್ಮಾನಂ ಸಂಬೋಧ್ಯಾಹ । ನರಾಶಂಸಂ॥ ಉಭೇ ವನಸ್ಪತ್ಯಾದಿಷು ಯುಗಪದಿತ್ಯು-ಭಯಪದಪ್ರಕೃತಿಸ್ವರತ್ವಂ । ಸಂಹಿತಾಯಾಂ ವಿಪ್ರಕರ್ಷಶ್ಚಾಂದಸಃ॥ ನರೈಃ ಶಂಸನೀಯಮೇತನ್ನಾಮಾನಂ ಪೂಷಣಂ ಸ್ತೋತೃಣಾಂ ಧನದಾನೇನ ಪೋಷಕಮೇತನ್ನಾಮಾನಂ ತಥಾಗೋಹ್ಯಮಗೂಹಿತಮನ್ಯೈ-ರ್ಗಂತುಮಶಕ್ಯಂ ದೇವೇದ್ಧಂ ವಾಮದೇವಾದಿಭಿರ್ಋಷಿಭಿರ್ದೀಪಿತಮಗ್ನಿಂ ಚ ಗಿರಾ ಸ್ತುತ್ಯಾಭ್ಯರ್ಚಸೇ । ಅಭಿಷ್ಟುಹಿ । ತಥಾ ಸೂರ್ಯಮಾಸಾ ಚಂದ್ರಮಸಾ । ಮಾ ಇತಿ ಚಂದ್ರಮಸೋ ವಿಶೇಷಣಂ । ಮಾತಿ ಪಕ್ಷಮಿತಿ ವಾಶ್ಚಂದ್ರಮಾಃ । ತೌ ಸೂರ್ಯಾಚಂದ್ರಮಸೌ ದಿವಿ ದ್ಯುಲೋಕೇ ಸ್ಥಿತಂ ಯಮಂ ಚ ತ್ರಿತಂ ತ್ರಿಷು ಲೋಕೇಷು ತತಂ ಸ್ವಮಹಿಮ್ನಾ ವಿಸ್ತೃತಂ ತ್ರಿಸ್ಥಾನಂ ವಾ ತಮಿಂದ್ರಂ ವಾತಂ ವಾಯುಮುಷಸ-ಮುಷಃಕಾಲಮಕ್ತುಂ ರಾತ್ರಿಮಶ್ವಿನಾಶ್ವಿನೌ ಚೈತಾನ್ದೇವಾಂಸ್ತತ್ತಲ್ಲಿಂಗೈಃ ಸ್ತೋತ್ರೈರಭಿಷ್ಟುಹಿ ॥

ಪ್ರತಿಪದಾರ್ಥ

ನರಾಶಂಸಂ—ನರಾಶಂಸದೇವನನ್ನೂ । **ಪೂಷಣಂ**—ಪೂಷದೇವನನ್ನೂ । **ಅಗೋಹ್ಯಂ**—ಇತರರಿಂದ ಸಮೀಪಿಸಲು ಸಾಧ್ಯವಿಲ್ಲದವನೂ । **ದೇವೇದ್ಧಂ**—ವಾಮದೇವಾದಿ ಋಷಿಗಳಿಂದ ಪ್ರಜ್ವಲಿತನೂ ಆದ । **ಅಗ್ನಿಂ**—ಅಗ್ನಿಯನ್ನೂ । **ಗಿರಾ**—ಸ್ತುತಿಯಿಂದ । **ಅಭ್ಯರ್ಚಸೇ**—ಪ್ರಶಂಸಿಸಿ ಪೂಜಿಸು । **ಸೂರ್ಯಾಮಾಸಾ-ಚಂದ್ರಮಸಾ**—ಸೂರ್ಯಾ-ಚಂದ್ರಮಸರಿಬ್ಬರನ್ನೂ । **ದಿವಿ**—ದ್ಯುಲೋಕಸ್ಥನಾದ । **ಯಮಂ**—ಯಮನನ್ನೂ । **ತ್ರಿತಂ**—ಮೂರು ಲೋಕಗಳಲ್ಲೂ ವ್ಯಾಪಿಸಿರುವ ಇಂದ್ರನನ್ನೂ । **ವಾತಂ**—ವಾಯುವನ್ನೂ । **ಉಷಸಂ**—ಉಷೋದೇವಿಯನ್ನೂ । **ಅಕ್ತುಂ**—ರಾತ್ರಿಯನ್ನೂ । **ಅಶ್ವಿನಾ**—ಅಶ್ವಿನೀದೇವತೆಗಳನ್ನೂ ಸ್ತುತಿಸು.

ಭಾವಾರ್ಥ

ಎಲೈ ಋಷಿಯೇ, ನರಾಶಂಸದೇವನನ್ನೂ, ಪೂಷದೇವನನ್ನೂ, ಇತರರಿಂದ ಸಮೀಪಿಸಲು ಸಾಧ್ಯವಿಲ್ಲದವನೂ, ವಾಮದೇವಾದಿ ಋಷಿಗಳಿಂದ ಪ್ರಜ್ವಲಿತನೂ ಆದ ಅಗ್ನಿಯನ್ನೂ, ಸೂರ್ಯ ಮತ್ತು ಚಂದ್ರರನ್ನೂ, ದ್ಯುಲೋಕಸ್ಥನಾದ

ಯಮನನ್ನೂ, ಮೂರು ಲೋಕಗಳಲ್ಲೂ ವ್ಯಾಪಿಸಿರುವ ಇಂದ್ರನನ್ನೂ, ವಾಯುವನ್ನೂ, ಉಷೋದೇವಿಯನ್ನೂ, ರಾತ್ರಿಯನ್ನೂ ಮತ್ತು ಅಶ್ವಿನೀದೇವತೆಗಳನ್ನೂ ಸ್ತುತಿಸು.

English Translation

Adore with praises Narashamsa and Pushan, and the unapproachable Agni kindled by the devout (Rishis); and the sun and the moon, the two moons, Yama in heaven, Trita, Vata, the dawn, the night, and the Ashwins.

ವಿಶೇಷವಿಷಯಗಳು

ನರಾಶಂಸಂ—ಪ್ರಕೃತ ಋಕ್ಕಿನ ಸಂಹಿತಾಪಾಠದಲ್ಲಿ **ನರಾಶಂಸಂ** ಎಂಬ ಶಬ್ದದ ಮಧ್ಯದಲ್ಲಿ ವಾ ಎಂಬ ಶಬ್ದದ ಪ್ರಯೋಗವಿದೆ ಎಂದರೆ ಸಂಹಿತಾಪಾಠದಲ್ಲಿ **ನರಾ ವಾ ಶಂಸಂ** ಎಂದು ಇರುವುದು ಪದಪಾಠದಲ್ಲಿ **ನರಾಶಂಸಂ। ವಾ** ಎಂದಾಗಿರುವುದು. ಛಂದಸ್ಸಿನ ಅನುಕೂಲಕ್ಕಾಗಿ ಈ ವಿಧವಾದ ಪ್ರಯೋಗವಿರುವುದೆಂದು ಕಂಡುಬರುವುದು. ಇದೇ ವಿಧವಾದ ಪ್ರಯೋಗವು—

ದ್ವಾ ಜನಾ ಯಾತಯನ್ನಂತರೀಯತೇ ನರಾ ಚ ಶಂಸಂ ದೈವ್ಯಂ ಚ ಧರ್ತರಿ ।

(ಋ. ಸಂ. ೯-೮೬-೪೨)

ಎಂಬ ಋಕ್ಕಿನಲ್ಲಿಯೂ ಕಂಡುಬರುವುದು. ಇಲ್ಲಿ ವಾಶಬ್ದಕ್ಕೆ ಬದಲಾಗಿ ಚಶಬ್ದದ ಪ್ರಯೋಗವಿರುವುದು. ಇಲ್ಲಿ ನರಾಶಂಸದೇವತೆಯ ವಿಷಯವನ್ನು ಸೂಕ್ಷ್ಮವಾಗಿ ವಿಮರ್ಶಿಸುವುದು ಅವಶ್ಯಕವಾಗಿದೆ.

ನರಾಶಂಸಃ। ನರೈಃ ಶಂಸನೀಯಃ (ಅಗ್ನಿಃ) ನರರಿಂದ ಸ್ತುತಿಸಲ್ಪಡುವ ಅಗ್ನಿಯೆಂದು ಇದು ಅಗ್ನಿಯ ಅನ್ವರ್ಥನಾಮವಾಗಿದೆ ಅಥವಾ **ನರಾಶಂಸೋಽಗ್ನಿರ್ಯಜ್ಞೋ ವಾ** ನರಾಶಂಸನೆಂದರೆ ಅಗ್ನಿಯೆಂದಾಗಲೀ ಅಥವಾ ಯಜ್ಞವೆಂದಾಗಲೀ ಅರ್ಥವಾಗುವುದೆಂದು ಇನ್ನೊಂದು ಮತ. ಈ ಎರಡು ಅಭಿಪ್ರಾಯಗಳನ್ನೂ ನಿರುಕ್ತವಾಕ್ಯವು ಸಮರ್ಥಿಸುತ್ತದೆ.

ನರಾಶಂಸೋ ಯಜ್ಞ ಇತಿ ಕಾತ್ಥಕ್ಯಃ । ನರಾ ಅಸ್ಮಿನ್ನಾಸೀನಾಃ ಶಂಸಂತಿ । ಅಗ್ನಿರಿತಿ ಶಾಕಪೂಣಿಃ । ನರೈಃ ಪ್ರಶಸ್ಯೋ ಭವತಿ ॥

(ನಿ. ೮-೭)

ಎಂದರೆ, ನರರು (ಮನುಷ್ಯರು) ಯಜ್ಞದಲ್ಲಿ ಕುಳಿತುಕೊಂಡು (ದೇವತೆಗಳನ್ನು) ಪ್ರಶಂಸೆಮಾಡುವುದರಿಂದ ಯಜ್ಞಕ್ಕೆ ನರಾಶಂಸನೆಂಬ ಹೆಸರೆಂದು ಕಾತ್ಥಕ್ಯರೂ, ನರರಿಂದ ಪ್ರಶಸ್ಯನಾದುದರಿಂದ ಅಗ್ನಿಗೆ ಈ ಹೆಸರು ಅನ್ವಯಿಸುವುದೆಂದು ಶಾಕಪೂಣಿಯೂ ಹೇಳಿರುವುದಾಗಿ ನಿರುಕ್ತಕಾರರು ಈ ಎರಡು ಅಭಿಪ್ರಾಯಗಳನ್ನು ಸೂಚಿಸಿ, ಅನಂತರ—

ನರಾಶಂಸಸ್ಯ ಮಹಿಮಾನಮೇಷಾಮುಪ ಸ್ತೋಷಾಮ ಯಜತಸ್ಯ ಯಜ್ಞೈಃ ।
ಯೇ ಸುಕ್ರತವಃ ಶುಚಯೋ ಧಿಯಂಧಾಃ ಸ್ವದಂತಿ ದೇವಾ ಉಭಯಾನಿ ಹವ್ಯಾ ॥

(ಋ. ಸಂ. ೭-೨-೨)

ಎಂಬ ಋಕ್ಕನ್ನು ಉದಹರಿಸಿದ್ದಾರೆ. ಈ ಋಕ್ಕಿನಲ್ಲಿ ಅಗ್ನಿಯೆಂಬ ಅರ್ಥವೇ ಸಮಂಜಸವಾಗಿದೆ. ನಿಘಂಟುವಿನಲ್ಲಿ ಪಠಿತವಾಗಿರುವ ದೇವತೆಗಳ ಮಧ್ಯದಲ್ಲಿ ನರಾಶಂಸದೇವತೆಯು ಅಗ್ನಿಯ ರೂಪಾಂತರಗಳಲ್ಲೊಂದು ಎಂದು ಉಕ್ತವಾಗಿದೆ. ಇದನ್ನೇ ಬೃಹದ್ದೇವತಾಕಾರರು—

ನರಾಂಶಂಸಸ್ತ್ರಿತಶ್ಚೈನಮೇನಮೇವಾಶ್ರಿತಸ್ತ್ರಿಳಃ ।
ಬಹಿರ್ದ್ವಾರಶ್ಚ ದೇವ್ಯೋಽಗ್ನಿಮೇನಮೇವ ತು ಸಂಶ್ರಿತಾಃ

(ಬೃ. ದೇ. ೧-೧೦೭)

ಎಂಬ ಶ್ಲೋಕದಲ್ಲಿ ನರಾಶಂಸನು ಇಲ್ಲಿ ಹೇಳಿರುವ ಇತರ ದೇವತೆಗಳಂತೆಯೇ ಅಗ್ನಿಯಲ್ಲಿ ಅಂತರ್ಗತನಾಗಿರುವನೆಂದು ಹೇಳಿದ್ದಾರೆ ಮತ್ತು

ಪೃಥಕ್ತ್ವೇನ ಸಮಸ್ತೈಸ್ತು ಯಜ್ಞೇ ಯಚ್ಛಸ್ಯತೇ ನೃಭಿಃ ।
ಸ್ತುವಂತ್ಯಾಪ್ರೀಷು ತೇನೇಷುಂ ನರಾಶಂಸಂ ತು ಕಾರವಃ ॥

(ಬೃ. ದೇ. ೨-೨೮)

ಯಜ್ಞದಲ್ಲಿ ಸೇರಿರತಕ್ಕ ಸಕಲ ನರರಿಂದಲೂ ಸಹ ಪ್ರತ್ಯೇಕವಾಗಿ ಪ್ರಶಂಸಿಸಲ್ಪಡುವುದರಿಂದ ಕೃತಿಕಾರರು ಇವನನ್ನು (ಅಗ್ನಿಯನ್ನು) ನರಾಶಂಸನೆಂಬ ಹೆಸರಿನಿಂದ ಆಪ್ರೀಸೂಕ್ತಗಳಲ್ಲಿ ಸ್ತುತಿಸಿದ್ದಾರೆ ಎಂದು ಹೇಳಿ, ನಿರುಕ್ತಕಾರರು ಹೇಳುವ ಅಭಿಪ್ರಾಯವನ್ನು ಇವರೂ ಅನುಮೋದಿಸಿದ್ದಾರೆ.

ನರಾಶಂಸಮಿಹೈಕೇ ತು ಅಗ್ನಿಮಾಹುರಥೇತರೇ ।
ನರಾಃ ಶಂಸಂತಿ ಸರ್ವೇಽಸ್ಮಿನ್ನಾಸೀನಾ ಇತಿ ವಾಧ್ವರೇ ॥

ಏತಮೇವಾಹುರನ್ಯೇಽಗ್ನಿಂ ನರಾಶಂಸೋಽಧ್ವರೇ ಹ್ಯಯಂ ।
ನರೈಃ ಪ್ರಶಸ್ಯ ಆಸೀನೈರಾಹುಶ್ಚೈವರ್ತ್ವಿಜೋ ನರಃ ॥

(ಬೃ. ದೇ. ೩-೨, ೩)

ಕೆಲವರು ನರಾಶಂಸನನ್ನು ಅಗ್ನಿಯೆಂದೇ ಹೇಳುತ್ತಾರೆ. ಯಜ್ಞದಲ್ಲಿ ನರರು ಸೇರಿ ಪ್ರಶಂಸಿಸುವುದರಿಂದ ಯಜ್ಞವೆಂದೇ ಮತ್ತೆ ಕೆಲವರು ಹೇಳುತ್ತಾರೆ. ಯಜ್ಞದಲ್ಲಿ ಸೇರಿರತಕ್ಕ ನರರಿಂದ ಪ್ರಶಂಸಿಸಲ್ಪಡುವುದರಿಂದ ನರಾಶಂಸನೆಂದರೆ ಅಗ್ನಿಯೇ ಎಂದು ಇನ್ನೂ ಕೆಲವರ ಮತ. ಮೂರನೆಯದು, ಮೊದಲನೆಯ ಮತ್ತು ಎರಡನೆಯ ಮತಗಳ ಸಮನ್ವಯ ವಾಗಿದೆ. ಈ ಎರಡು ಅರ್ಥಗಳ ಜತೆಗೆ ಸಾಯಣರು ಮೂರನೆಯ ಅರ್ಥವನ್ನೂ ಹೇಳಿರುತ್ತಾರೆ. ಋ. ಸಂ. ೧-೮೯-೯ನೆ ಋಕ್ಕಿನ ಭಾಷ್ಯದಲ್ಲಿ—

ನರಾಶಂಸನೋತನ್ನಾಮಕಂ ದೇವವಿಶೇಷಂ । ಯದ್ವಾ ಅವಯವಾರ್ಥವ್ಯುತ್ಪತ್ತ್ಯಾ ಸದಸಸ್ಪತಿ-ದೇವತಾಪರೋಽಯಂ ಶಬ್ದಃ । ಅತ್ರ ಆಗ್ನಿವತ್ ಸದಸಸ್ಪತೇರಪಿ ನರೈಃ ಶಸ್ಯಮಾನತ್ವಾತ್ ನರಾಶಂಸಸ್ತ್ವಂ । ಏತಮೇವಾಭಿಪ್ರಾಯಂ ಹೃದಿ ನಿಧಾಯ ಬ್ರಾಹ್ಮಣಮೇವಮಾಮ್ನಾಯತೇ ಪ್ರಜಾ ವೈ ನರೋ ವಾಕ್ ಶಂಸಃ ॥

(ಐ. ಬ್ರಾ. ೬-೨೭)

ಎಂಬ ವಿವರಣೆ ಇದೆ. ನರಾಶಂಸನೆಂದರೆ ಈ ಹೆಸರಿನ ದೇವತಾವಿಶೇಷನೆಂದಾಗಲಿ ಅರ್ಥವಾಗಬಹುದು. ಸದಸಸ್ಪತಿಯೂ ನರರಿಂದ ಸ್ತುತಿಸಲ್ಪಡುವುದರಿಂದಲೂ, ಈ ಭಾವವು ಐತರೇಯಬ್ರಾಹ್ಮಣದಿಂದ ಉದಾಹೃತವಾಗಿರುವ ವಾಕ್ಯವು ಸೂಚಿ ಸುವುದರಿಂದಲೂ ಸಹ ಈ ಅರ್ಥವಾಗಬಹುದು ಎಂದು ಮೂರನೆಯ ಅರ್ಥವನ್ನು ತೋರಿಸಿದ್ದಾರೆ. ಆದರೆ ಈ ಶಬ್ದವು ಋಕ್ಸಂಹಿತೆಯಲ್ಲೆಲ್ಲಾ ಅಗ್ನಿಪರವಾಗಿಯೇ ಇದೆಯೆಂದು ಹೇಳಬಹುದು.

ನರಾಶಂಸಃ ಪ್ರತಿ ಧಾಮಾನ್ಯಂಜನ್ ತಿಸ್ರೋ ದಿವಃ ಪ್ರತಿ ಮಹ್ನಾ ಸ್ಪರ್ಚಿಃ ।
ಘೃತಪುಷಾ ಮನಸಾ ಹವ್ಯಮುಂದನ್ಮೂರ್ಧನ್ಯಜ್ಞಸ್ಯ ಸಮನಕ್ತು ದೇವಾನ್ ॥

(ಋ. ಸಂ. ೨-೩.೨)

ಇತ್ಯಾದಿ ಋಕ್ಕುಗಳಲ್ಲಿ ಶರಾಶಂಸಶಬ್ದಕ್ಕೆ ಅಗ್ನಿಯೆಂದೇ ಅರ್ಥವಾಗುತ್ತದೆ.

ಸಂಹಿತಾಪಾಠಃ

ಕ॒ಥಾ ಕ॒ವಿಸ್ತು॒ವೀರ॑ವಾನ್ಕ॒ಯಾ ಗಿರಾ ಬೃ॒ಹಸ್ಪ॑ತಿರ್ವಾವೃಧತೇ ಸು॒ವೃಕ್ತಿ॑ಭಿಃ ।
ಅ॒ಜ ಏ॑ಕ॒ಪಾತ್ಸು॒ಹವೇ॑ಭಿರ್ಋ॒ಕ್ವಭಿ॑ರಹಿಂ॒ ಶೃಣೋ॑ತು ಬು॒ಧ್ನ್ಯ॑ ಹ॒ವೀಮ॑ನಿ ॥

ಪದಪಾಠಃ

ಕ॒ಥಾ । ಕ॒ವಿಃ । ತು॒ವಿ॒ರ॒ವಾನ್ । ಕ॒ಯಾ । ಗಿರಾ । ಬೃ॒ಹಸ್ಪ॑ತಿಃ । ವ॒ವೃ॒ಧ॒ತೇ॒ । ಸು॒ವೃಕ್ತಿ॑ಭಿಃ ।
ಅ॒ಜಃ । ಏ॒ಕ॒ಪಾತ್ । ಸು॒ಹವೇ॑ಭಿಃ । ಋ॒ಕ್ವಭಿ॑ಃ । ಅಹಿಃ । ಶೃ॒ಣೋ॒ತು । ಬು॒ಧ್ನ್ಯಃ । ಹ॒ವೀಮ॑ನಿ ॥೪॥

ಸಾಯಣಭಾಷ್ಯಂ

ಕವಿಃ ಕಾಂತಪ್ರಜ್ಞೋಽಗ್ನಿಃ ಕಥಾ ಕಥಂ ಕೇನ ಪ್ರಕಾರೇಣ ತುವೀರವಾನ್ಬಹುಸ್ತೋತ್ರ-ಯುಕ್ತೋ ಭವತಿ ॥ ಮತ್ವರ್ಥೀಯಪ್ರತ್ಯಯಾವೃತ್ತಿಃ । ಯದ್ವಾ । ತುವಿಶಬ್ದಸ್ಯ ರೋ ಮತ್ವರ್ಥೀಯಃ । ಬಾಹುಲ್ಯಯುಕ್ತದೇವೈಃ ಸಹಿತೋ ಭವತಿ ॥ ಕಯಾ ವಾ ಗಿರಾ ಸ್ತುತ್ಯಾ ಬಹುಮಾನ್ಯವತಿ । ಬೃಹಸ್ಪತಿ-ರೇತನ್ನಾಮಕೋ ದೇವಃ ಸುವೃಕ್ತಿಭಿಃ ಶೋಭನಾಭಿಃ ಸ್ತುತಿಭಿಸ್ತಥಾ ವಾವೃಧತೇ। ತಥೈಕಪಾತ್। ಏಕೋಽ-ಸಹಾಯ ಏವ ಪತತಿ ಗಚ್ಛತೀತ್ಯೇಕಪಾತ್ ತಾದೃಶೋ ದಿವೋ ಧಾರಯಿತಾಜ ಏತನ್ನಾಮಕೋ ದೇವಶ್ಚ ಸುಹವೇಭಿಃ ಶೋಭನಾಹ್ವಾನೈರ್ಋಕ್ವಭಿರ್ಮಂತ್ರವದ್ಭಿಃ ಸ್ತೋತ್ರೈರ್ವಾವೃಧತೇ । ಏತೇ ತ್ರಯೋ ದೇವಾ ವರ್ಧಂತೇ ॥ ಶ್ರಿತ್ವಾಪೇಕ್ಷಯಾ ಬಹುವಚನಂ। ವೃಧು ವೃದ್ಧೌ । ವ್ಯತ್ಯಯೇನ ಶಪಃ ಶ್ಲುಃ ॥ ಅಹಿ-ರ್ಬುಧ್ನ್ಯಶ್ಚೈತನ್ನಾಮಕೋ ದೇವಶ್ಚ ಹವೀಮನ್ನಾಹ್ವಾನೇಽಸ್ಮಾಞ್ಶೃಣೋತು ॥

ಪ್ರತಿಪದಾರ್ಥ

ಕವಿಃ—ಮೇಧಾವಿಯಾದ ಅಗ್ನಿಯು । **ಕಥಾ**—ಯಾವ ಪ್ರಕಾರವಾಗಿ (ಪ್ರಶಂಸಿಸಲ್ಪಡುತ್ತಾನೆ) । **ಕಯಾ ಗಿರಾ**—ಯಾವ ಸ್ತುತಿಯಿಂದ (ಕೂಡಿದ) । **ತುವೀರವಾನ್**—ಅಧಿಕವಾದ ಸ್ತುತಿಕರ್ತರಿಂದ ಕೂಡಿರುತ್ತಾನೆ। **ಬೃಹಸ್ಪತಿಃ**—ಬೃಹಸ್ಪತಿಯು । **ಸುವೃಕ್ತಿಭಿಃ**—ಉತ್ತಮವಾದ ಸ್ತುತಿಗಳಿಂದ । **ವಾವೃಧತೇ**—ವೃದ್ಧಿಯನ್ನು ಹೊಂದುತ್ತಾನೆ । (Explained) **ಅಜ ಏಕಪಾತ್**—ಅಜ ಏಕಪಾತ್ ಎಂಬ ದೇವನು । **ಸುಹವೇಭಿಃ**—ಉತ್ತಮವಾದ ಆಹ್ವಾನಗಳಿಂದಲೂ । **ಋಕ್ವಭಿಃ**—ಮಂತ್ರರೂಪವಾದ ಸ್ತುತಿಗಳಿಂದಲೂ । **ವಾವೃಧತೇ**—ವೃದ್ಧಿಯನ್ನು ಹೊಂದುತ್ತಾನೆ । **ಅಹಿರ್ಬುಧ್ನ್ಯಃ**—ಅಹಿರ್ಬುಧ್ನ್ಯಸಂಜ್ಞಕನಾದ ದೇವನು । **ಹವೀಮನಿ**—ಆಹ್ವಾನಕಾಲಗಳಲ್ಲಿ । **ಶೃಣೋತು**—ನಮ್ಮ ಆಹ್ವಾನಗಳನ್ನು ಕೇಳಲಿ.

ಭಾವಾರ್ಥ

ಮೇಧಾವಿಯಾದ ಅಗ್ನಿಯು ಯಾವ ಪ್ರಕಾರವಾಗಿ ಪ್ರಶಂಸಿಸಲ್ಪಡುತ್ತಾನೆ ? ಸ್ತುತಿಯುಕ್ತರಾದ ಎಷ್ಟು ಜನ ಸ್ತುತಿಕರ್ತರಿಂದ ಕೂಡಿರುತ್ತಾನೆ ? ಬೃಹಸ್ಪತಿಯು ಉತ್ತಮವಾದ ಸ್ತುತಿಗಳಿಂದ ವೃದ್ಧಿಯನ್ನು ಹೊಂದುತ್ತಾನೆ. ಅಜ ಏಕಪಾತ್ ಸಂಜ್ಞಕನಾದ ದೇವನು ಉತ್ತಮವಾದ ಆಹ್ವಾನಗಳಿಂದಲೂ, ಮಂತ್ರರೂಪವಾದ ಸ್ತುತಿಗಳಿಂದಲೂ ವೃದ್ಧಿಯನ್ನು ಹೊಂದುತ್ತಾನೆ. ಅಹಿರ್ಬುಧ್ನ್ಯಸಂಜ್ಞಕನಾದ ದೇವನು ಆಹ್ವಾನಕಾಲಗಳಲ್ಲಿ ನಮ್ಮ ಆಹ್ವಾನಗಳನ್ನು ಕೇಳಲಿ.

English Translation

How is the sage (Agni) adored by multitudes, and by what praises ? Brihaspati is magnified with sacred hymns ; Aja, walking alone, is magnified with solemn invocations and prayers : may Ahirbudhnya hear us at the season of invocation.

ಸಂಹಿತಾಪಾಠಃ

ದಕ್ಷಸ್ಯ ವಾದಿತೇ ಜನ್ಮನಿ ವ್ರತೇ ರಾಜಾನಾ ಮಿತ್ರಾವರುಣಾ ವಿವಾಸಸಿ ।
ಅತೂರ್ತಪಂಥಾಃ ಪುರುರಥೋ ಅರ್ಯಮಾ ಸಪ್ತಹೋತ್ರಾ ವಿಷುರೂಪೇಷು
ಜನ್ಮಸು ॥ ೫ ॥

ಪದಪಾಠಃ

ದಕ್ಷಸ್ಯ । ವಾ । ಅದಿತೇ । ಜನ್ಮನಿ । ವ್ರತೇ । ರಾಜಾನಾ । ಮಿತ್ರಾವರುಣಾ । ಆ । ವಿವಾಸಸಿ ।
ಅತೂರ್ತಽಪಂಥಾಃ । ಪುರುಽರಥಃ । ಅರ್ಯಮಾ । ಸಪ್ತಽಹೋತಾ । ವಿಷುಽರೂಪೇಷು । ಜನ್ಮಸು ॥

ಸಾಯಣಭಾಷ್ಯಂ

ಹೇ ಅದಿತೇ ಪೃಥಿವಿ ದಕ್ಷಸ್ಯ ಸೂರ್ಯಸ್ಯ ಜನ್ಮನಿ ತಸ್ಮಿನ್ಜಾತೇ ವ್ರತೇ ತಸ್ಯ ಯಜ್ಞಕರ್ಮಣಿ ರಾಜಾನಾ ರಾಜಂತೌ ಮಿತ್ರಾವರುಣೌ ವಿವಾಸಸಿ । ವಾಶಬ್ದ ಉಪಮಾರ್ಥಃ । ಯಥಾ ತ್ವಂ ವೇದಿಭೂತಾ ಸತೀ ತೌ ಪರ್ಯಚರಃ ಏವಮಿದಾನೀಮಪ್ಯಸ್ಮದ್ಯಜ್ಞೇ ಕುರ್ವಿತಿ ಪೃಥಿವೀಮಾಶಾಸ್ತೇ। ಸೋಽರ್ಯಮಾರೀಣಾಂ ತಮಸಾಂ ಯಂತಾ ನಿಯಂತಾ ಸೂರ್ಯೋ ವಿಷುರೂಪೇಷು ನಾನಾರೂಪೇಷು ಜನ್ಮಸು ಕರ್ಮಸ್ವನ್ವಹಮುದ್ಯನ್ ಸಪ್ತ ಹೋತಾ । ಸಪ್ತ ರಶ್ಮಯೋ ಯಸ್ಮಿನ್ರಸಾಜ್ಜುಹ್ವತಿ ಪ್ರಕ್ಷಿಪಂತಿ ಸ ಏಷಾದೃಶೋ ಭವತಿ । ಅತೂರ್ತಪಂಥಾಃ । ಅತೂರ್ತಸ್ತ್ವರಾರಹಿತಃ ಪಂಥಾ ಯಸ್ಯ ಸಃ । ನಿಯತಗತಿತ್ವಾತ್ ತ್ವರಮಾಣೋ ಹ್ಯನಿಯತಗತಿರ್ಭವತಿ । ಪುರುರಥಃ । ರಥೋ ರಂಹತೇಃ । ಪ್ರತ್ಯಹಂ ಭುಕ್ತಿಭೇದಾದ್ಬಹುರಂಹಣೋ ಭವತಿ ॥ ಯದ್ವಾ। ಹೇ ಅದಿತೇ ಪ್ರಾತಸ್ತನಿ ಸಂಧ್ಯೇ ದಕ್ಷಸ್ಯಾದಿತ್ಯಸ್ಯ ಜನ್ಮನ್ಯುದಯೋತ್ಯೇ ಜನ್ಮನಿ ಕರ್ಮಣಿ । ಉದ್ಯತ್ಯಾದಿತ್ಯ ಇತ್ಯರ್ಥಃ । ವಾ ಶಬ್ದಃ ಶ್ರುತಿಸಾಮರ್ಥ್ಯಾದ್ದಕ್ಷಸ್ಯ ವಾ ಜನ್ಮನಿ ತ್ವತ್ತ-

ಸ್ತವ ವಾ ಜನ್ಮನಿ ದಕ್ಷಾದಿತಿ । ರಾಜಾನಾ ದೀಪ್ಯಮಾನೌ ಮಿತ್ರಾವರುಣಾ । ಅಹರ್ವೈ ಮಿತ್ರೋ ರಾತ್ರಿರ್ವರುಣಃ । ಐ. ಬ್ರಾ. ೪-೧೦ । ಇತಿ ಶ್ರುತೇರಹೋರಾತ್ರೌ ಮಿತ್ರಾವರುಣಾವುಚ್ಯೇತೇ । ತೌ ವಿವಾಸಸಿ । ಪರಿಚರಸಿ । ಕಥಂ । ತದನುಪ್ರವೇಶೇನ । ಅರ್ಧಂ ಹಿ ಸಂಧ್ಯಾಯಾ ರಾತ್ರಿಮನುಪ್ರವಿಶತ್ಯರ್ಧಮುಹರಿತಿ । ಉತ್ತರಾರ್ಧಃ ಪೂರ್ವವತ್ । ಸಪ್ತಹೋತಾ । ಹ್ವಯತೇರರ್ಚತಿಕರ್ಮಣ ಇದಂ ರೂಪಂ । ಸಪ್ತರ್ಷಯೋ ಭರದ್ವಾಜಾದಯೋ ಹೋತಾರಃ ಸ್ತೋತಾರಃ ಸಂತೀತಿ । ಅಥವಾ ಸಪ್ತಹೋತಾ । ಮಲ್ಲಿಮ್ಲುಚಾಂಹಸಸ್ಪತಿಸಹಿತಾಃ ಸಪ್ತರ್ತವೋ ಯಸ್ಯ ಹೋತಾರೋ ಭವಂತಿ ತಾದೃಶಃ। ಅತ್ರ ನಿರುಕ್ತಂ। ದಕ್ಷಸ್ಯ ವಾದಿತೇ ಜನ್ಮನಿ ಕರ್ಮಣಿ ವ್ರತೇ ರಾಜಾನೌ । ನಿ ೧೧-೨೩ । ಇತ್ಯಾದಿ ॥

ಪ್ರತಿಪದಾರ್ಥ

ಅದಿತೇ—ಎಲೈ ಪೃಥ್ವಿಯೇ (ಅದಿತಿಯೇ) । **ದಕ್ಷಸ್ಯ**—ಸೂರ್ಯನ । **ಜನ್ಮನಿ**—ಉತ್ಪತ್ತಿಕಾಲದಲ್ಲಿ । **ವ್ರತೇ**—ಅವನ ಪೂಜಾಕರ್ಮಕ್ಕಾಗಿ । **ರಾಜಾನಾ**—ಪ್ರಕಾಶಮಾನರಾದ । **ಮಿತ್ರಾವರುಣಾ**—ಮಿತ್ರಾವರುಣರನ್ನು । **ಆ ವಿವಾಸಸಿ**—ಪೂಜಿಸುತ್ತೀಯೆ । **ಅರ್ಯಮಾ**—ಕತ್ತಲೆಯನ್ನು ನಿರೋಧಿಸುವ ಸೂರ್ಯನು । **ವಿಷು-ರೂಪೇಷು**—ವ್ಯತ್ಯಸ್ತವಾದ ಕರ್ಮಗಳಿಗೆ ಅನುಸಾರವಾದ ಅನೇಕ ರೂಪಗಳುಳ್ಳ । **ಜನ್ಮಸು**—ತನ್ನ ಉದಯಾಸ್ತಮಯಕಾಲಗಳಲ್ಲಿ । **ಸಪ್ತಹೋತಾ**—ಏಳುವಿಧವಾದ ರಶ್ಮಿಗಳುಳ್ಳವನಾಗಿಯೂ । **ಅತೂರ್ತಪಂಥಾಃ**—ವೇಗವಿಲ್ಲದ ಗಮನಮಾರ್ಗಗಳುಳ್ಳವನಾಗಿಯೂ । **ಪುರುರಥಃ**—ಅನೇಕ ರಥಗಳುಳ್ಳವನಾಗಿಯೂ ಇರುತ್ತಾನೆ.

ಭಾವಾರ್ಥ

ಎಲೈ ಪೃಥ್ವಿಯೇ, (ಅದಿತಿಯೇ) ನೀನು ಸೂರ್ಯನ ಉತ್ಪನ್ನಕಾಲದಲ್ಲಿ ಅವನ ಪೂಜಾಕರ್ಮಕ್ಕಾಗಿ ಪ್ರಕಾಶಮಾನರಾದ ಮಿತ್ರಾವರುಣರನ್ನು ಪೂಜಿಸುತ್ತೀಯೆ. ಕತ್ತಲೆಯನ್ನು ನಿರೋಧಿಸುವ ಸೂರ್ಯನು ಕರ್ಮಾನುಗುಣವಾದ ಅನೇಕ ರೂಪಗಳುಳ್ಳ ತನ್ನ ಉದಯಾಸ್ತಮಯಕಾಲಗಳಲ್ಲಿ ಏಳುವಿಧವಾದ ರಶ್ಮಿಗಳುಳ್ಳವನಾಗಿಯೂ, ವೇಗವಿಲ್ಲದ ಗಮನಮಾರ್ಗಗಳುಳ್ಳವನಾಗಿಯೂ ಅಥವಾ ಒಂದೇಸಮನಾದ ಗಮನವುಳ್ಳವನಾಗಿಯೂ, ಅನೇಕ ರಥಗಳುಳ್ಳವನಾಗಿಯೂ ಎಂದರೆ ಬಹುವೇಗವುಳ್ಳವನಾಗಿಯೂ ಇರುತ್ತಾನೆ.

English Translation

At the birth of Daksha, at his sacred rite, you, Aditi, worship the royal Mitra and Varuna at the sacred rite. Aryaman: whose course is not hurried, the giver of delight to many, haviag seven ministering (rays), (proceeds) in his multiform births.

ವಿಶೇಷವಿಷಯಗಳು

ಅದಿತಿಶಬ್ದದ ನಿರ್ವಚನವನ್ನು ಹೇಳುವಾಗ ಯಾಸ್ಕರು ಈ ಋಕ್ಕಿಗೆ ನಿರುಕ್ತವನ್ನು ಹೇಳಿದಾರೆ—

ಅದಿತಿಃ । ಅದಿತಿರದೀನಾ ದೇವಮಾತಾ (ನಿ. ೪-೨೨)

ಅದಿತಿಯು ದೇವತೆಗಳಿಗೆ ಮಾತೆಯು. ಇವಳು ದೀನಳಲ್ಲವಾದುದರಿಂದ ಇವಳಿಗೆ ಅದಿತಿಯೆಂಬ ಹೆಸರು ಬಂದಿದೆ. ಅದಿತಿಯ ಮಕ್ಕಳು ಎಂದರೆ,

ಅಷ್ಟೌ ಪುತ್ರಾಸೋ ಅದಿತೇಃ ।..... ....ತಾನನುಕ್ರಮಿಷ್ಯಾಮಃ । ಮಿತ್ರಶ್ಚ ವರುಣಶ್ಚ । ಧಾತಾ ಚಾರ್ಯಮಾ ಚ । ಅಗ್ಂಶಶ್ಚ ಭಗಶ್ಚ । ಇಂದ್ರಶ್ಚ ವಿವಸ್ವಾಗ್ಶ್ಚೇತ್ಯೇತೇ ॥

(ತೈ. ಆ.೧-೧೩.೩)

ಅದಿತಿಗೆ ಮಿತ್ರ, ವರುಣ, ಧಾತಾ, ಅರ್ಯಮಾ, ಅಂಶ, ಭಗ, ಇಂದ್ರ, ವಿವಸ್ವಾನ್ ಎಂಬ ಎಂಟುಮಂದಿ ಪುತ್ರರೆಂದು ಹೇಳಿದೆ. ಈ ಅದಿತಿಶಬ್ದವಿರುವ ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡು ಅದಕ್ಕೆ ನಿರ್ವಚನವನ್ನು ಈರೀತಿ ಹೇಳಿದಾರೆ—

ದಕ್ಷಸ್ಯ ವಾದಿತೇ ಜನ್ಮನಿ ವ್ರತೇ ಕರ್ಮಣಿ ರಾಜಾನೌ ಮಿತ್ರಾವರುಣೌ ಪರಿಚರಸಿ । ವಿವಾಸತಿಃ ಪರಿಚರ್ಯಾಯಾಂ। ಹವಿಷ್ಮಾನ್ ಆವಿವಾಸತಿ। ಇತ್ಯಾಶಾಸ್ತೇರ್ವಾ। ಅತೂರ್ತಪಂಥಾ ಅಕ್ಷರ-ಮಾಣಪಂಥಾ ಬಹುರಥೋ ಅರ್ಯಮಾದಿತ್ಯೋಽರೀನ್ನಿಯಚ್ಛತಿ ಸಪ್ತಹೋತಾ ಸಪ್ತಾಸ್ಯೈ ರಶ್ಮಯೋ ರಸಾನಭಿಸನ್ನಾಮಯಂತಿ ಸಪ್ತೈನಮೃಷಯಃ ಸ್ತುವಂತೀತಿ ವಾ ವಿಷಮರೂಪೇಷು ಜನ್ಮಸು ಕರ್ಮಸೂದಯೇಷು ॥

(ನಿ. ೧೧-೨೩)

ಎಲೈ ಅದಿತಿಯೇ, ದಕ್ಷನ ಜನನಸಮಯದಲ್ಲಿ ನೀನು ರಾಜರಾದ (ರಾಜರಂತೆ ಪ್ರಕಾಶಿಸುವ) ಮಿತ್ರಾವರುಣರನ್ನು ಸೇವಿಸುತ್ತೀಯೆ. **ವಿವಾಸತಿ** ಧಾತುವಿಗೆ **ಪರಿಚರ್ಯಾ** ಎಂದರೆ ಸೇವಿಸುವುದು ಎಂದರ್ಥವು. ಈ ಅರ್ಥವನ್ನು **ಹವಿಷ್ಮಾನ್ ಆವಿವಾಸತಿ** ಎಂಬ ಶ್ರುತಿವಾಕ್ಯವು ಸಮರ್ಥಿಸುವುದು ಅಥವಾ ಈ ಧಾತುವಿಗೆ ಪ್ರಾರ್ಥಿಸುವುದು, ಬಯಸುವುದು ಎಂಬ ಅರ್ಥವೂ ಇರುವುದು. ಇಲ್ಲಿರುವ ಅರ್ಯಮಾ ಶಬ್ದಕ್ಕೆ ಆದಿತ್ಯನೆಂದು ಅರ್ಥವು. ಈ ಆದಿತ್ಯನು ಸಂಚರಿಸುವ ಮಾರ್ಗವು ನಿರ್ಬಾಧಿತವಾಗಿರುವುದು ಎಂದರೆ ಅವನನ್ನು ಯಾರೂ ತಡೆದು ನಿಲ್ಲಿಸುವಂತಿಲ್ಲ ಮತ್ತು ಇವನ ಸಂಚಾರವು ಅತಿವೇಗವಿಲ್ಲದೆ ಒಂದೇ ಸಮನಾಗಿರುವುದು ಅಥವಾ ಇವನ ರಥವು ಬಹುವೇಗವಾಗಿ ಸಂಚರಿಸುವ ಶಕ್ತಿಯಿಳ್ಳದ್ದಾಗಿರುವುದು. **ಸಪ್ತಹೋತಾ** ಎಂಬ ಶಬ್ದಕ್ಕೆ ಏಳು ರಶ್ಮಿಗಳು ಎಂದರ್ಥವು. ಸೂರ್ಯನ ಏಳುವಿಧವಾದ ರಶ್ಮಿಗಳು ಸೂರ್ಯನ ಕಾರ್ಯವಾದ ರಸಾದಿಗಳನ್ನು ಹೀರುವುದರಲ್ಲಿ ಸಮರ್ಥವಾಗಿರುವವು ಅಥವಾ **ಸಪ್ತಹೋತಾ** ಎಂಬ ಶಬ್ದಕ್ಕೆ ಸಪ್ತಋಷಿಗಳು ಎಂದೂ ಅರ್ಥಮಾಡಬಹುದು. ಈ ಸಪ್ತರ್ಷಿಗಳು ಈ ಸೂರ್ಯನನ್ನು ಸ್ತುತಿಸುವರು. **ವಿಷುರೂಪೇಷು ಜನ್ಮಸು** ಎಂಬ ಶಬ್ದಗಳಿಗೆ ವ್ಯತ್ಯಸ್ತವಾದ ಜನ್ಮಕಾಲಗಳಲ್ಲಿ ಎಂದರೆ ಸೂರ್ಯೋದಯ ಮತ್ತು ಸೂರ್ಯಾಸ್ತಮಯ ಎಂದರ್ಥವು.

ಸಂಹಿತಾಪಾಠಃ

ತೇ ನೋ ಅರ್ವಂತೋ ಹವನಶ್ರುತೋ ಹವಂ ವಿಶ್ವೇ ಶೃಣ್ವಂತು ವಾಜಿನೋ ಮಿತದ್ರವಃ ।

ಸಹಸ್ರಸಾ ಮೇಧಸಾತಾವಿವ ತ್ಮನಾ ಮಹೋ ಯೇ ಧನಂ ಸಮಿಥೇಷು ಜಭ್ರಿರೇ ॥ ೬ ॥

ಪದಪಾಠಃ

ತೇ । ನಃ । ಅರ್ವಂತಃ । ಹವನಶ್ರುತಃ । ಹವಂ । ವಿಶ್ವೇ । ಶೃಣ್ವಂತು । ವಾಜಿನಃ । ಮಿತದ್ರವಃ ।
ಸಹಸ್ರಸಾಃ । ಮೇಧಸಾತಾವಿವ । ತ್ಮನಾ । ಮಹಃ । ಯೇ । ಧನಂ । ಸಂಯದಿಥೇಷು । ಜಭ್ರಿರೇ ॥ ೬ ॥

ಸಾಯಣಭಾಷ್ಯಂ

ಹವನಶ್ರುತ ಆಹ್ವಾನಂ ಶೃಣ್ವಂತೋ ವಾಜಿನೋ ಬಲವಂತೋ ಮಿತದ್ರವೋ ಮಿತಮಾರ್ಗಾ ಅಧ್ವಾನಂ ಪರಿಚ್ಛಿಂದಂತೋ ವಿಶ್ವೇ ಸರ್ವೇ ಪ್ರಸಿದ್ಧಾ ಅರ್ವಂತೋಽಶ್ವಾ ಇಂದ್ರಾದೀನಾಂ ವಾಹನಭೂತಾ ಹರ್ಯಾದಯೋ ನೋಽಸ್ಮಾಕಂ ಹವಮಾಹ್ವಾನಂ ಶೃಣ್ವಂತು । ಕೀದೃಶಾಃ । ಮೇಧಸಾತಾವಿವ। ಮೇಧಾಃ ಸ್ತುತಯಃ ಸಾಯಂತೇ ಸಂಭಜ್ಯಂತೇಽತ್ರೇತಿ ಮೇಧಸಾತಿರ್ಯಜ್ಞಃ। ತಸ್ಮಿನ್ನಿವ ತ್ಮನಾತ್ಮನೈವ ಸಹಸ್ರಸಾಃ ಸಹಸ್ರಸಂಖ್ಯಾಕಧನಸ್ಯ ದಾತಾರಃ । ತೇ ಶೃಣ್ವಂತು ಯೇಽಶ್ವಾಃ ಸಮಿಥೇಷು । ಸಂಗ್ರಾಮನಾಮೈತತ್ । ಸಂಪ್ರಾಪ್ಯತೇ ಯೋದ್ಭಿರಶ್ರೇತಿ । ತೇಷು ಸಂಗ್ರಾಮೇಷು ಮಹೋ ಮಹದ್ಧನಂ ಜಭ್ರಿರೇ । ಶತ್ರುಭ್ಯ ಆಹರಂತಿ ॥ ಹೃಗ್ರಹೋರ್ಭಃ ॥

ಪ್ರತಿಪದಾರ್ಥ

ಮೇಧಸಾತಾವಿವ—ಯಜ್ಞಗಳಲ್ಲಿ ಉದಾಹರಣವಾಗಿ ಧನವನ್ನು ಕೊಡುವಂತೆ । **ತ್ಮನಾ**—ಸ್ವಪ್ರೇರಣೆಯಿಂದಲೇ । **ಸಹಸ್ರಸಾಃ**—ಅನೇಕ ವಿಧಗಳಲ್ಲಿ ಧನವನ್ನು ಒದಗಿಸುವುವೂ । **ಯೇ**—ಯಾವ ಅಶ್ವಗಳು । **ಸಮಿಥೇಷು**—ಯುದ್ಧಗಳಲ್ಲಿ । **ಮಹಃ ಧನಂ**—ಅಧಿಕವಾದ ಧನವನ್ನು । **ಜಭ್ರಿರೇ**—ಶತ್ರುಗಳಿಂದ ಅಪಹರಿಸುವುವೋ ಅಂತಹ । **ಹವನಶ್ರುತಃ** ನಮ್ಮ ಆಹ್ವಾನಗಳನ್ನು ಕೇಳುವುವೂ । **ವಾಜಿನಃ**—ಶಕ್ತಿಯುತವೂ । **ಮಿತದ್ರವಃ**—ವೇಗವಾದ ಮಾರ್ಗಗಮನವುಳ್ಳವೂ ಆದ । **ತೇ ವಿಶ್ವೇ ಅರ್ವಂತಃ**—ಹರ್ಯಾದಿ ಸಕಲವಾದ ದೇವಾಶ್ವಗಳೂ । **ನಃ**—ನಮ್ಮ । **ಹವಂ**—ಆಹ್ವಾನವನ್ನು । **ಶೃಣ್ವಂತು**—ಕೇಳಲಿ.

ಭಾವಾರ್ಥ

ಯಜ್ಞಗಳಲ್ಲಿ ಉದಾಹರಣವಾಗಿ ಧನವನ್ನು ಕೊಡುವಂತೆ ಸ್ವಪ್ರೇರಣೆಯಿಂದಲೇ ಅನೇಕವಿಧಗಳಲ್ಲಿ ಧನವನ್ನು ಒದಗಿಸುವುವೂ, ಯುದ್ಧಗಳಲ್ಲಿ ಶತ್ರುಗಳಿಂದ ಅಪಾರವಾದ ಧನವನ್ನು ಅಪಹರಿಸುವುವೂ, ನಮ್ಮ ಆಹ್ವಾನಗಳನ್ನು ಕೇಳುವುವೂ, ಶಕ್ತಿಯುತವೂ, ವೇಗವಾದ ಮಾರ್ಗಗಮನಗಳುಳ್ಳವೂ ಆದ ಹರ್ಯಾದಿ ಸಕಲವಾದ ದೇವಾಶ್ವಗಳೂ (ಇಂದ್ರಾದಿಗಳ ವಾಹನಗಳಾದ ಅಶ್ವಗಳು) ನಮ್ಮ ಆಹ್ವಾನವನ್ನು ಕೇಳಲಿ.

English Translation

May those universal horses (of the deities), who iisten to invocations, who are vigorous, swift roadsters, hear our summons : they who spontaneously are the givers of thousands, as if at a sacrifice ; they who have won great wealth in battles.

ಸಂಹಿತಾಪಾಠಃ

ಪ್ರ ವೋ ವಾಯುಂ ರಥಯುಜಂ ಪುರಂಧಿಂ ಸ್ತೋಮೈಃ ಕೃಣುಧ್ವಂ
ಸಖ್ಯಾಯ ಪೂಷಣಂ ।
ತೇ ಹಿ ದೇವಸ್ಯ ಸವಿತುಃ ಸವೀಮನಿ ಕ್ರತುಂ ಸಚಂತೇ ಸಚಿತಃ ಸಚೇತಸಃ ॥

ಪದಪಾಠಃ

ಪ್ರ । ವಃ । ವಾಯುಂ । ರಥ್ಯಯುಜಂ । ಪುರ್ಯಂಧಿಂ । ಸ್ತೋಮೈಃ । ಕೃಣುಧ್ವಂ । ಸಖ್ಯಾಯ । ಪೂಷಣಂ ।
ತೇ । ಹಿ । ದೇವಸ್ಯ । ಸವಿತುಃ । ಸವೀಮನಿ । ಕ್ರತುಂ । ಸಚಂತೇ । ಸ್ಯಚಿತಃ । ಸ್ಯಚೇತಸಃ ॥

ಸಾಯಣಭಾಷ್ಯಂ

ಹೇ ಸ್ತೋತಾರಃ ವೋ ಯೂಯಂ ವಾಯುಂ ರಥಯುಜಂ ರಥಸ್ಯ ಯೋಕ್ತಾರಂ ಪುರಂಧಿಂ ಬಹುಕರ್ಮಾಣಮಿಂದ್ರಂ ಪೂಷಣಮೇತನ್ನಾಮಾನಂ ಚ ಸ್ತೋಮೈಸ್ತ್ರಿವೃತ್ಪಂಚದಶಾದಿಲಕ್ಷಣೈಃ ಸಖ್ಯಾಯ ಸಖಿಕರ್ಮಣೇ ಪ್ರ ಕೃಣುಧ್ವಂ । ಪ್ರಕುರುಧ್ವಂ । ಯಥಾ ತೇಽಸ್ಮಾಕಂ ಧನಾದಿಪ್ರದಾನೇನ ಸಖಾಯೋ ಭವಂತಿ ತಥಾ ಕುರುತ । ಹಿ ಯಸ್ಮಾತ್ಸಚಿತೋ ಜ್ಞಾನಯುಕ್ತಾಸ್ತೇ ದೇವಾಃ ಸಚೇತಸಃ ಪರಸ್ಪರಂ ಸಮಾನಬುದ್ಧಯಃ ಸಂತಃ ಸವಿತುಃ ಸರ್ವಪ್ರೇರಕಸ್ಯ ದೇವಸ್ಯಾದಿತ್ಯಸ್ಯ ಸವೀಮನಿ ಪ್ರಸವೇಽಹ್ನಿ ಕ್ರತುಂ ಯಜ್ಞಂ ಸಚಂತೇ ಸೇವಂತೇ ತಸ್ಮಾತ್ತ್ವ ಪ್ರಕುರುಧ್ವಂ ॥

ಪ್ರತಿಪದಾರ್ಥ

(ಎಲೈ ಸ್ತುತಿಕರ್ತರೇ) **ಹಿ**—ಯಾವ ಮಾಹಾತ್ಮ್ಯದಿಂದ ಕೂಡಿ । **ಸಚಿತಃ**—ಪ್ರಜ್ಞಾಯುತರಾದ । **ತೇ**—ಆ ದೇವತೆಗಳು । **ಸಚೇತಸಃ**—ಪರಸ್ಪರಜ್ಞಾನವುಳ್ಳವರಾಗಿ । **ದೇವಸ್ಯ**—ದೇವತಾತ್ಮನಾದ । **ಸವಿತುಃ**—ಆದಿತ್ಯನ । **ಸವೀಮನಿ**—ಯಜ್ಞದಿವಸದಲ್ಲಿ । **ಕ್ರತುಂ**—ಯಜ್ಞವನ್ನು । **ಸಚಂತೇ**—ಸೇವಿಸುವರೋ ಆದುದರಿಂದಲೇ । **ವಃ**—ನೀವು । **ರಥಯುಜಂ**—ರಥಕ್ಕೆ ಸಂಬದ್ಧನಾದ । **ವಾಯುಂ**—ವಾಯುವನ್ನೂ । **ಪುರಂಧಿಂ**—ಅನೇಕ ಕರ್ಮಯುಕ್ತನಾದ ಇಂದ್ರನನ್ನೂ । **ಪೂಷಣಂ**—ಪೂಷದೇವನನ್ನೂ । **ಸಖ್ಯಾಯ**—ಅವರ ಸ್ನೇಹವನ್ನು ಸಂಪಾದಿಸಲು । **ಸ್ತೋಮೈಃ**—ಸ್ತುತಿಗಳಿಂದ । **ಪ್ರಕೃಣುಧ್ವಂ**—ಪ್ರಶಂಸಿಸಿ ಪೂಜಿಸಿರಿ.

ಭಾವಾರ್ಥ

ಎಲೈ ಸ್ತುತಿಕರ್ತರೇ, ಪ್ರಜ್ಞಾಯುತರಾದ ದೇವತೆಗಳು ಪರಸ್ಪರಸ್ವರೂಪಜ್ಞಾನವುಳ್ಳವರಾಗಿ, ದೇವತಾತ್ಮನಾದ ಆದಿತ್ಯನ ಯಜ್ಞದಿವಸದಲ್ಲಿ ಯಾವ ತಮ್ಮ ಮಾಹಾತ್ಮ್ಯದಿಂದ ಯಜ್ಞದಲ್ಲಿ ಭಾಗವನ್ನು ವಹಿಸಿ ಯಜ್ಞವನ್ನು ಸೇವಿಸುವರೋ, ಅಂತಹ ದೇವತೆಗಳಾದ ನೀವು ರಥಕ್ಕೆ ಸಂಬದ್ಧನಾದ ವಾಯುವನ್ನೂ, ಅನೇಕ ಕರ್ಮಯುಕ್ತನಾದ ಇಂದ್ರನನ್ನೂ, ಪೂಷದೇವನನ್ನೂ, ಅವರ ಸಖಿತ್ವವನ್ನು ಸಂಪಾದಿಸಲು ಸ್ತುತಿಗಳಿಂದ ಪ್ರಶಂಸಿಸಿ ಪೂಜಿಸಿರಿ.

English Translation

Importune, (worshippers) with praises, Vayu, harnessing his chariot, and Purandhi, and Pnshan for their friendship, for these considerate and consentient deities, attend the sacrifice upon the birth of Savitri.

ಸಂಹಿತಾಪಾಠಃ

ತ್ರಿಃ ಸಪ್ತ ಸಸ್ರಾ ನದ್ಯೋ ಮಹೀರಪೋ ವನಸ್ಪತೀನ್ಪರ್ವತಾಁ ಅಗ್ನಿಮೂತಯೇ।
ಕೃಶಾನುಮಸ್ತ್ಯಾನ್ತಿಷ್ಯಂ ಸಧಸ್ಥ ಆ ರುದ್ರಂ ರುದ್ರೇಷು ರುದ್ರಿಯಂ ಹವಾಮಹೇ ॥ ೮ ॥

ಪದಪಾಠಃ

ತ್ರಿಃ । ಸಪ್ತ । ಸಸ್ರಾಃ । ನದ್ಯಃ । ಮಹೀಃ । ಅಪಃ । ವನಸ್ಪತೀನ್ । ಪರ್ವತಾನ್ । ಅಗ್ನಿಂ । ಊತಯೇ । ಕೃಶಾನುಂ । ಅಸ್ತ್ಯಾನ್ । ತಿಷ್ಯಂ । ಸಧಸ್ಥೇ । ಆ । ರುದ್ರಂ । ರುದ್ರೇಷು । ರುದ್ರಿಯಂ । ಹವಾಮಹೇ ॥

ಸಾಯಣಭಾಷ್ಯಂ

ತ್ರಿಃ ಸಪ್ತೈಕವಿಂಶತಿಸಂಖ್ಯಾಕಾಃ ಸಸ್ರಾಃ ಸರಂತೀರ್ನದ್ಯೋ ನದೀಃ । ಸರಸ್ವತೀ ಸರಯುಃ ಸಿಂಧುರಿತಿ ತ್ರಯಾಣಾಂ ಗಣಾನಾಂ ಪ್ರಧಾನಭೂತಾಃ । ತದಾದ್ಯಾ ನದೀರ್ಮಹೀರ್ಮಹಾಂತ್ಯಪಸ್ತಾಸಾಮುದಕಾನಿ ಸೋಮಾಭಿಷವಾರ್ಥಂ ವನಸ್ಪತೀನ್ವಾರುಮಾಯಾಂಶ್ಚಮಸಾದೀನ್ಪರ್ವತಾನ್ಸೋಮಾಭಿಷವಾರ್ಥಂ ಗಾವ್ಯೋ೯ಗ್ನಿಂ ಹೋಮನಿಷ್ಪಾದಕಂ ಕೃಶಾನುಂ ಸೋಮಪಾಲನೇತನ್ನಾಮಾನಂ ಗಂಧರ್ವಮಸ್ತ್ಯಾನಿಷೂಣಾಂ ಕ್ಷೇಪ್ತ್ರ್ಯಾಂಸ್ತದನುಚರಾನ್ಗಂಧರ್ವಾನೂತಯೇ ಸೋಮರಕ್ಷಣಾಯ ತಿಷ್ಯಂ ನಕ್ಷತ್ರಂ ಚ ರುದ್ರಿಯಂ ರುದ್ರಸ್ತೋಮಾರ್ಹಂ ರುದ್ರಂ ಹವಿರ್ಭಾಗಿನಂ ರುದ್ರನೇತನ್ನಾಮಾನಂ ಯದ್ವಾ ಪರಿಶಿಷ್ಟಸ್ವಾಮಿನಂ ರುದ್ರಂ ಚ ಏತಾನ್ಸರ್ವಾನ್ಸಧಸ್ಥೇ । ಸಹ ತಿಷ್ಠಂತ್ಯತ್ರೇತಿ ಸಧಸ್ಥೋ ಯಜ್ಞಃ । ತಸ್ಮಿನ್ ರುದ್ರೇಷು ಸ್ತೋತ್ರಕಾರಿಷು ತದರ್ಥಂ ಹವಾಮಹೇ । ಸ್ತುತ್ಯರ್ಥೇನಾಹ್ವಯಾಮಹೇ ॥

ಪ್ರತಿಪದಾರ್ಥ

ತ್ರಿಃ **ಸಪ್ತ**—ಇಪ್ಪತ್ತೊಂದು ಸಂಖ್ಯೆಯುಳ್ಳವೂ । **ಸಸ್ರಾಃ**—ಪ್ರವಹಿಸುವುವೂ ಆದ । **ನದ್ಯಃ**—ಸರಸ್ವತ್ಯಾದಿ ನದಿಗಳನ್ನೂ । **ಮಹೀಃ**—ಮಹತ್ತ್ವದಿಂದ ಕೂಡಿದ । **ಅಪಃ**—ಅವುಗಳ ಉದಕಗಳನ್ನೂ । **ವನಸ್ಪತೀನ್**—ವೃಕ್ಷಗಳನ್ನೂ (ಅಥವಾ ಅವುಗಳಿಂದ ನಿರ್ಮಿತವಾದ ಚಮಸಾದಿ ಪಾತ್ರೆಗಳನ್ನೂ) । **ಪರ್ವತಾನ್**—ಪರ್ವತಗಳನ್ನೂ । **ಅಗ್ನಿಂ**—ಅಗ್ನಿಯನ್ನೂ । **ಕೃಶಾನುಂ**—ಕೃಶಾನುವೆಂಬ ಗಂಧರ್ವನನ್ನೂ । **ಅಸ್ತ್ಯಾನ್**—ಧನುರ್ಧಾರಿಗಳಾದ

ಅವನ ಇತರರ ಅನುಚರರನ್ನೂ । **ಊತಯೇ**—ಸೋಮರಕ್ಷಣಾರ್ಥವಾಗಿ । **ತಿಷ್ಯಂ**—ತಿಷ್ಯಸಂಜ್ಞಕವಾದ ನಕ್ಷತ್ರವನ್ನೂ । **ರುದ್ರಿಯಂ**—ರುದ್ರಪ್ರಶಂಸಕವಾದ ಸ್ತುತಿಗೆ ಯೋಗ್ಯನಾದ ! **ರುದ್ರಂ**—ರುದ್ರನನ್ನೂ । **ಸಧಸ್ಥೇ**—ಯಜ್ಞದಲ್ಲಿ । **ರುದ್ರೇಷು**—ಸ್ತುತಿಕರ್ತರ ಪರವಾಗಿ । **ಹವಾಮಹೇ**—ಕರೆಯುತ್ತೇವೆ.

ಭಾವಾರ್ಥ

ಇಪ್ಪತ್ತೊಂದು ಸಂಖ್ಯೆಯುಳ್ಳವೂ, ಪ್ರವಹಿಸುವುವೂ ಆದ ಸಪ್ತಸ್ವತ್ಯಾದಿನದಿಗಳನ್ನೂ, ಮಹತ್ತ್ವದಿಂದ ಕೂಡಿದ ಅವುಗಳ ಉದಕಗಳನ್ನೂ, ವೃಕ್ಷಗಳನ್ನೂ, ಪರ್ವತಗಳನ್ನೂ, ಅಗ್ನಿಯನ್ನೂ, ಕೃಶಾನುವೆಂಬ ಗಂಧರ್ವನನ್ನೂ, ಧನುರ್ಧಾರಿಗಳಾದ ಅವನ ಇತರ ಅನುಚರರನ್ನೂ, ಸೋಮರಕ್ಷಣಾರ್ಥವಾಗಿ ತಿಷ್ಯಸಂಜ್ಞಕವಾದ ನಕ್ಷತ್ರವನ್ನೂ, ರುದ್ರ ಪ್ರಶಂಸಕವಾದ ಸ್ತುತಿಗೆ ಯೋಗ್ಯನಾದ ರುದ್ರನನ್ನೂ, ಯಜ್ಞದಲ್ಲಿ ಸ್ತುತಿಕರ್ತರ ಪರವಾಗಿ ಕರೆಯುತ್ತೇವೆ.

English Translation

Ve invoke for protection the thrice seven flowing rivers, (their) great waters, the trees, the mountains, Agui, Krishanu, the archers, and Tishya, to the assembly : (we invoke) Rudra, worthy of the praise fo the Rudras, for the good of the praisers.

ವಿಶೇಷವಿಷಯಗಳು

ಈ ಋಕ್ಕಿನಲ್ಲಿ **ತ್ರಿಃ ಸಪ್ತ ನದ್ಯಃ** ಇಪ್ಪತ್ತೊಂದು ನದಿಗಳು ಎಂದು ಹೇಳಿದೆ. ನದಿಗಳು ಅನೇಕವಾಗಿದ್ದರೂ ಮುಖ್ಯವಾದ ನದಿಗಳು ಇಪ್ಪತ್ತೊಂದು ಎಂಬ ಅರ್ಥದಲ್ಲಿ ಇಲ್ಲಿ **ತ್ರಿಃಸಪ್ತ ನದ್ಯಃ** ಎಂದು ಹೇಳಲಾಗಿದೆ. ಇಪ್ಪತ್ತೊಂದು ನದಿಗಳು ಯಾವವು ಎಂಬುದು ಸ್ಪಷ್ಟವಾಗಿಲ್ಲ. ಇದೇ ಮಂಡಲದ ೭೫ನೇ ಸೂಕ್ತದಲ್ಲಿ ಕೆಲವು ನದಿಗಳ ಹೆಸರುಗಳು ಉಕ್ತವಾಗಿವೆ—ಗಂಗಾ, ಯಮುನಾ, ಸರಸ್ವತೀ, ಶತದ್ರೀ, ಪರುಷ್ಣೀ, ಅಸಿಕ್ನೀ, ಮರುದ್ವೃಧೇ, ವಿತಸ್ತಾ, ಆರ್ಜೀಕೀಯಾ, ಪಿಪಾಬ್, ಸುಷೋಮಾ, ಸಿಂಧು, ರಸಾ ಎಂಬ ನದಿಗಳ ಜತೆಗೆ ಇನ್ನೂ ಇತರ ನದಿಗಳೂ ಸೇರಿ ಇಪ್ಪತ್ತೊಂದು ನದಿಗಳಾಗಿರಬಹುದು.

ಕೃಶಾನು—ಇವನು ಸ್ವರ್ಗದಲ್ಲಿರುವ ಸೋಮವನ್ನು ರಕ್ಷಿಸುವ ಕಾರ್ಯದಲ್ಲಿ ನಿರತನಾದ ಒಬ್ಬ ಗಂಧರ್ವನು. ಸ್ವಾನ, ಭ್ರಾಜ, ಅಂಶುಮಾರಿ, ಬಂಭಾರಿ, ಹಸ್ತ, ಸುಹಸ್ತ, ಕೃಶಾನು ಎಂಬ ಏಳುಮಂದಿ ಸೋಮಪಾಲಕರಲ್ಲಿ ಕೃಶಾನುವೂ ಒಬ್ಬನು. ಇವನ ವಿಷಯವನ್ನು ನಾವು ೯ನೇ ಮಂಡಲದ ಪೀಠಿಕೆಯಲ್ಲಿ ವಿವರಿಸಿದೇವೆ.

ಸಂಹಿತಾಪಾಠಃ

ಸರಸ್ವತೀ ಸರಯುಃ ಸಿಂಧುರೂರ್ಮಿಭಿರ್ಮಹೋ ಮಹೀರವಸಾ ಯಂತು ವಕ್ಷಣೀಃ ।
ದೇವೀರಾಪೋ ಮಾತರಃ ಸೂದಯಿತ್ನ್ವೋ ಘೃತವತ್ಪಯೋ ಮಧುಮನ್ನೋ ಅರ್ಚತ ॥ ೯ ॥

ಪದಪಾಠಃ

ಸರಸ್ವತೀ । ಸರಯುಃ । ಸಿಂಧುಃ । ಊರ್ಮಿಭಿಃ । ಮಹಃ । ಮಹೀಃ । ಅವಸಾ । ಯಂತು । ವಕ್ಷಣೀಃ।
ದೇವೀಃ । ಅಪಃ । ಮಾತರಃ । ಸೂದಯಿತ್ನ್ವಃ । ಘೃತವತ್ । ಪಯಃ । ಮಧ್ವಃ । ನಃ । ಅರ್ಚತ॥

ಸಾಯಣಭಾಷ್ಯಂ

ಮಹೋ ಮಹತೋಽಪಿ ಮಹೀರ್ಮಹತ್ಯೋಽತ್ಯಂತಂ ಮಹತ್ಯ ಊರ್ಮಿಭಿಃ ಸಹಿತಾಃ ಸರಸ್ವತೀ ಸರಯುಃ ಸಿಂಧುರೇತದಾದ್ಯಾ ಏಕವಿಂಶತಿಸಂಖ್ಯಾಕಾ ವಕ್ಷಣೀರಿಮಾ ನದ್ಯೋಽವಸಾ ರಕ್ಷಣೇನ ಹೇತುನಾ ಯಂತು । ಅಸ್ಮದೀಯಂ ಯಜ್ಞಂ ಪ್ರತ್ಯಾಗಚ್ಛಂತು । ತತೋ ದೇವೀರ್ದೇವನಶೀಲಾ ಮಾತರೋ ಮಾತೃಭೂತಾಃ ಸೂದಯಿತ್ನ್ವಃ ಪ್ರೇರಯಿತ್ರ್ಯಸ್ತಾಸಾಮಾಪೋ ಘೃತವದ್ಘೃತಯುಕ್ತಂ ಮಧುಮದ್ಮಧುಸಹಿತಮಾತ್ಮೀಯಂ ಪಯೋ ನೋಽಸ್ಮಭ್ಯಮರ್ಚತ । ಪ್ರಯಚ್ಛತ ॥

ಪ್ರತಿಪದಾರ್ಥ

ಮಹಃ—ಮಹಾತ್ಮ್ಯವುಳ್ಳ ಇತರ ನದಿಗಳಿಗಿಂತಲೂ । **ಮಹೀಃ**—ಅಧಿಕವಾದ ಮಹತ್ತ್ವವುಳ್ಳವೂ । **ಊರ್ಮಿಭಿಃ**—ಅಲೆಗಳಿಂದ ಕೂಡಿದವೂ ಆದ । **ಸರಸ್ವತೀ**—ಸರಸ್ವತಿಯೂ । **ಸರಯುಃ**—ಸರಯೂ ನದಿಯೂ । **ಸಿಂಧುಃ**—ಸಿಂಧುವೆಂಬ ಹೆಸರುಳ್ಳದ್ದೂ ಆದ । **ವಕ್ಷಣೀಃ**—ಈ ಎಲ್ಲ ನದಿಗಳೂ । **ಅವಸಾ**—ರಕ್ಷಣೆಯ ನಿಮಿತ್ತವಾಗಿ । **ಆ ಯಂತು**—ಬರಲಿ । **ದೇವೀಃ**—ದೇವತಾತ್ಮವೂ । **ಮಾತರಃ**—ಜಗತ್ತಿಗೆ ಮಾತೃರೂಪವೂ । **ಸೂದಯಿತ್ನ್ವಃ**—ಜಗತ್ತಿಗೆ ಚೈತನ್ಯದಾಯಕವೂ ಆದ । **ಅಪಃ**—ಉದಕಯುಕ್ತವಾದ ನದಿಗಳು । **ಘೃತವತ್**—ಘೃತದಿಂದ ಕೂಡಿದುದೂ । **ಮಧುಮತ್**—ಮಧುರಯುಕ್ತವಾದುದೂ ಆದ । **ಪಯಃ**—ತಮ್ಮ ಉದಕಗಳನ್ನು **ನಃ**—ನಮಗೆ । **ಅರ್ಚತ**—ಒದಗಿಸಿಕೊಡಲಿ.

ಭಾವಾರ್ಥ

ಮಾಹಾತ್ಮ್ಯವುಳ್ಳ ಇತರ ನದಿಗಳಿಗಿಂತಲೂ ಅಧಿಕವಾದ ಮಹತ್ತ್ವವುಳ್ಳವೂ, ಅಲೆಗಳಿಂದ ಕೂಡಿದವೂ ಆದ ಸರಸ್ವತಿಯೂ, ಸರಯೂ ನದಿಯೂ, ಸಿಂಧುವೆಂಬ ಹೆಸರುಳ್ಳದ್ದೂ ಆದ ಎಲ್ಲ ನದಿಗಳೂ ರಕ್ಷಣೆಯ ನಿಮಿತ್ತವಾಗಿ ಬರಲಿ. ದೇವತಾತ್ಮವೂ, ಜಗತ್ತಿಗೆ ಮಾತೃರೂಪವೂ, ಜಗತ್ತಿಗೆ ಚೈತನ್ಯದಾಯಕವೂ ಆದ ಉದಕಯುಕ್ತವಾದ ನದಿಗಳು ಘೃತದಿಂದ ಕೂಡಿದುದೂ, ಮಧುರಯುಕ್ತವಾದುದೂ ಆದ ತಮ್ಮ ಉದಕಗಳನ್ನು ನಮಗೆ ಒದಗಿಸಿಕೊಡಲಿ.

English Translation

May the very great rivers, Saraswati, Sarayu, Sindhu, come with their waves for (our) protection : may the divine maternal animating waters grant us their water mixed with butter and honey.

ಸಂಹಿತಾಪಾಠಃ

ಉತ ಮಾತಾ ಬೃಹದ್ದಿವಾ ಶೃಣೋತು ನಸ್ತ್ವಷ್ಟಾ ದೇವೇಭಿರ್ಜನಿಭಿಃ ಪಿತಾ ವಚಃ ।

ಋಭುಕ್ಷಾ ವಾಜೋ ರಥಸ್ಪತಿರ್ಭಗೋ ರಣ್ವಃ ಶಂಸಃ ಶಶಮಾನಸ್ಯ
ಪಾತು ನಃ ॥ ೧೦ ॥

ಪದಪಾಠಃ

ಉತ । ಮಾತಾ । ಬೃಹತ್ಽದಿವಾ । ಶೃಣೋತು । ನಃ । ತ್ವಷ್ಟಾ । ದೇವೇಭಿಃ । ಜನಿಽಭಿಃ । ಪಿತಾ । ವಚಃ ।
ಋಭುಕ್ಷಾಃ । ವಾಜಃ । ರಥಃಪತಿಃ । ಭಗಃ । ರಣ್ವಃ । ಶಂಸಃ । ಶಶಮಾನಸ್ಯ । ಪಾತು । ನಃ ॥ ೧೦ ॥

ಸಾಯಣಭಾಷ್ಯಂ

ಉತಾಪಿ ಚ ಬೃಹದ್ದಿವಾ । ಮಹದ್ದಿವೇತಿ ಯಾಸ್ಕಃ । ನಿ. ೧೧-೪೯ । ಮಹತೀ ದಿವಾ ದೀಪ್ತಿರ್ಯಸ್ಯಾಃ ಸಾ ಮಾತಾ ದೇವಮಾತಾ ನೋಽಸ್ಮಾಕಮಾಹ್ವಾನಂ ಶೃಣೋತು । ತಥಾ ದೇವೇಭಿರ್ದೇವೈರಿಂದ್ರಾದಿಭಿರ್ಜನಿಭಿರ್ದೇವಪತ್ನೀಭಿಶ್ಚ ಪಿತಾ ಸರ್ವೇಷಾಂ ತ್ವಷ್ಟೈತನ್ನಾಮಕೋಽಸ್ಮದೀಯಂ ವಚಃ ಶೃಣೋತು । ತಥರ್ಭುಕ್ಷಾ ಇಂದ್ರೋ ವಾಜಸ್ತತ್ಸಹಾಯೋ ವಾಜೋ ನಾಮ ಸೌಧನ್ವನಃ ಕನೀಯಾನ್ ರಥಸ್ಪತೀ ರಥಸ್ಯ ಪತಿರ್ಭಗಶ್ಚ ತಥಾ ರಣ್ವೋ ರಮಣೀಯಃ ಶಂಸಃ ಸ್ತುತ್ಯೋ ಮರುದ್ಗಣಶ್ಚ ತತಃ ಶಶಮಾನಸ್ಯ ಶಂಸಮಾನಂ ಸ್ತೋತ್ಯನ್ನೋಽಸ್ಮಾನ್ಪಾತು । ರಕ್ಷತು ॥

ಪ್ರತಿಪದಾರ್ಥ

ಬೃಹದ್ದಿವಾ—ಅತ್ಯಧಿಕವಾದ ಕಾಂತಿಯುಳ್ಳ । **ಮಾತಾ**—ದೇವಮಾತೆಯು । **ನಃ**—ನಮ್ಮ ಆಹ್ವಾನವನ್ನು । **ಶೃಣೋತು**—ಕೇಳಲಿ । **ದೇವೇಭಿಃ**—ಇಂದ್ರಾದಿ ದೇವತೆಗಳೊಡನೆಯೂ । **ಜನಿಭಿಃ**—ದೇವಪತ್ನಿಯರೊಡನೆಯೂ ಕೂಡಿದವನೂ । **ಪಿತಾ**—ಜಗತ್ತಿಗೆಲ್ಲ ಜನಕನೂ ಆದ । **ತ್ವಷ್ಟಾ**—ತ್ವಷ್ಟೃದೇವನು । **ವಚಃ**—ನಮ್ಮ ಸ್ತುತಿಯನ್ನು ಕೇಳಲಿ । **ಋಭುಕ್ಷಾಃ**—ಋಭುಕ್ಷನೂ (ಇಂದ್ರನೂ) । **ವಾಜಃ**—ವಾಜನೂ । **ರಥಸ್ಪತಿಃ**—ರಥಕ್ಕೆ ಒಡೆಯನಾದ ದೇವನೂ । **ಭಗಃ**—ಭಗನೂ । **ರಣ್ವಃ**—ಆಕರ್ಷಕವೂ । **ಶಂಸಃ**—ಸ್ತುತಿಗೆ ಅರ್ಹವೂ ಆದ ಮರುದ್ಗಣವೂ । **ಶಶಮಾನಸ್ಯ**—ಸ್ತುತಿಕರ್ತರಾದ । **ನಃ**—ನಮ್ಮನ್ನು । **ಪಾತು**—ರಕ್ಷಿಸಲಿ.

ಭಾವಾರ್ಥ

ಅತ್ಯಧಿಕವಾದ ಕಾಂತಿಯುಳ್ಳ ದೇವಮಾತೆಯು ನಮ್ಮ ಆಹ್ವಾನವನ್ನು ಕೇಳಲಿ. ಇಂದ್ರಾದಿ ದೇವತೆಗಳೊಡನೆಯೂ, ದೇವಪತ್ನಿಯರೊಡನೆಯೂ ಕೂಡಿದವನೂ, ಜಗತ್ತಿಗೆಲ್ಲ ಜನಕನೂ ಆದ ತ್ವಷ್ಟೃದೇವನು ನಮ್ಮ ಸ್ತುತಿಯನ್ನು ಕೇಳಲಿ. ಋಭುಕ್ಷನೂ, ವಾಜನೂ, ರಥಸ್ಪತಿಯೂ, ಭಗನೂ, ಆಕರ್ಷಕವೂ, ಸ್ತುತಿಗೆ ಯೋಗ್ಯವೂ ಆದ ಮರುದ್ಗಣವೂ ಸ್ತುತಿಕರ್ತರಾದ ನಮ್ಮನ್ನು ರಕ್ಷಿಸಲಿ.

English Translation

May the bright-shining mother (of the gods) hear us : may father Twashtri, with the gods, and their wives, (hear our) words : may Ribhukshan , Vaja, Rathaspati, Bhaga, may the joyous adorable (company of the Maruts) protect us their praisers.

ಸಂಹಿತಾಪಾಠಃ

ರಣ್ವಃ ಸಂದೃಷ್ಟೌ ಪಿತುಮಾಁ ಇವ ಕ್ಷಯೋ ಭದ್ರಾ ರುದ್ರಾಣಾಂ ಮರುತಾಮುಪಸ್ತುತಿಃ ।
ಗೋಭಿಃ ಷ್ಯಾಮ ಯಶಸೋ ಜನೇಷ್ವಾ ಸದಾ ದೇವಾಸ ಇಳಯಾ ಸಚೇಮಹಿ ॥

ಪದಪಾಠಃ

ರಣ್ವಃ। ಸಂಽದೃಷ್ಟೌ। ಪಿತುಮಾನ್ಽಇವ। ಕ್ಷಯಃ। ಭದ್ರಾ। ರುದ್ರಾಣಾಂ। ಮರುತಾಂ। ಉಪಽಸ್ತುತಿಃ।
ಗೋಭಿಃ। ಸ್ಯಾಮ। ಯಶಸಃ। ಜನೇಷು। ಆ। ಸದಾ। ದೇವಾಸಃ। ಇಳಯಾ। ಸಚೇಮಹಿ ॥ ೧೧ ॥

ಸಾಯಣಭಾಷ್ಯಂ

ಸಂದೃಷ್ಟೌ ಸಂದರ್ಶನೇ ರಣ್ವೋ ರಮಣೀಯೋ ಮರುದ್ಗಣಃ ಪಿತುಮಾನಿವಾನ್ನವಾನಿವ ಕ್ಷಯೋ ನಿವಾಸಃ ಸ್ತೋತೃಣಾಂ ಭವತಿ । ರುದ್ರಾಣಾಂ ರುದ್ರಪುತ್ರಾಣಾಂ ತೇಷಾಂ ಮರುತಾಮುಪಸ್ತುತಿರನುಗ್ರಹ ಬುದ್ಧಿರ್ಭದ್ರಾ ಕಲ್ಯಾಣೀ ಭವತಿ । ತಸ್ಮಾಜ್ಜನೇಷು ಜನಾನಾಂ ಮಧ್ಯೇ ವಯಂ ಗೋಭಿರ್ಗವಾದಿಭಿರ್ಯಶಸೋ ಯಶಸ್ವಿನಃ ಸ್ಯಾಮ । ಭವೇಮ । ಆನಂತರಂ ಹೇ ದೇವಾಸೋ ದೇವಾಃ ಯುಷ್ಮಾನ್ಸದಾ ಸರ್ವದೇಳಯಾನ್ನೇನ ಹವಿರ್ಲಕ್ಷಣೇನ ಸಚೇಮಹಿ । ಸಚೇಮ । ಸಂಗಚ್ಛೇಮ ॥

ಪ್ರತಿಪದಾರ್ಥ

ಸಂದೃಷ್ಟೌ—ನೋಡುವುದಕ್ಕೆ । **ರಣ್ವಃ**—ರಮಣೀಯವಾದ ಮರುದ್ಗಣವು । **ಪಿತುಮಾನಿವ**—ಅನ್ನ (ಆಹಾರ) ಸಂಪತ್ತಿನಿಂದ ಕೂಡಿದ । **ಕ್ಷಯಃ**—ನಿವಾಸಸ್ಥಾನದಂತೆ ಆಹ್ಲಾದಕರವಾಗಿರುತ್ತದೆ। **ರುದ್ರಾಣಾಂ**—ರುದ್ರ ಪುತ್ರರಾದ । **ಮರುತಾಂ**—ಮರುತ್ತುಗಳ । **ಉಪಸ್ತುತಿಃ**—ಅನುಗ್ರಹಬುದ್ಧಿಯು । **ಭದ್ರಾ**—ಕಲ್ಯಾಣಾತ್ಮಕವಾಗಿರುತ್ತದೆ (ಆದುದರಿಂದ) । **ಜನೇಷು**—ಜನರ ನಡುವೆ । **ಗೋಭಿಃ**—ಗೋಯುಕ್ತರಾಗಿಯೂ । **ಯಶಸಃ**—ಯಶಸ್ಸಿಗೆ ಪಾತ್ರರಾಗಿಯೂ । **ಸ್ಯಾಮ**—ನಾವು ಇರುವಂತಾಗಲಿ । **ಆ**—ಅನಂತರ । **ದೇವಾಸಃ**—ಎಲೈ ದೇವತೆಗಳೇ । **ಸದಾ**—ಯಾವಾಗಲೂ । **ಇಳಯಾ**—ಹವೀರೂಪವಾದ ಅನ್ನದೊಡನೆ । **ಸಚೇಮಹಿ**—ನಾವು ಕೂಡಿಕೊಂಡಿರುವಂತಾಗಲಿ.

ಭಾವಾರ್ಥ

ಅನ್ನಸಂಪತ್ತಿನಿಂದ ಕೂಡಿದ ನಿವಾಸದಂತೆ ಆಕರ್ಷಕವಾದ ಮರುದ್ಗಣವು ನೋಡಲು ಸಂತೋಷದಾಯಕವಾಗಿರುತ್ತದೆ. ರುದ್ರಪುತ್ರರಾದ ಮರುತ್ತುಗಳ ಅನುಗ್ರಹಬುದ್ಧಿಯು ಕಲ್ಯಾಣಾತ್ಮಕವಾಗಿರುತ್ತದೆ. ಆದುದರಿಂದ, ಜನರ ನಡುವೆ ನಾವು ಗೋಯುಕ್ತರಾಗಿಯೂ, ಯಶಸ್ಸಿಗೆ ಪಾತ್ರರಾಗಿಯೂ ಇರುವಂತಾಗಲಿ. ಎಲೈ ದೇವತೆಗಳೇ, ನಾವು ಯಾವಾಗಲೂ ಹವೀರೂಪವಾದ ಅನ್ನದೊಡನೆ ಕೂಡಿಕೊಂಡಿರುವಂತಾಗಲಿ.

English Translation

Pleasant of aspect (is the troop of Maruts), like a house well stored with provisions : fortunate is the favour of the Maruts, the sons of Rudra :

may we (thereby) be famed among men for cattle, and so, gods, ever approach (you) with sacrificial food.

ಸಂಹಿತಾಪಾಠಃ

ಯಾಂ ಮೇ ಧಿಯಂ ಮರುತ ಇಂದ್ರ ದೇವಾ ಅದದಾತ ವರುಣ ಮಿತ್ರ ಯೂಯಂ ।
ತಾಂ ಪೀಪಯತ ಪಯಸೇವ ಧೇನುಂ ಕುವಿದ್ಗಿರೋ ಅಧಿ ರಥೇ ವಹಾಥ ॥೧೨॥

ಪದಪಾಠಃ

ಯಾಂ । ಮೇ । ಧಿಯಂ । ಮರುತಃ । ಇಂದ್ರ । ದೇವಾಃ । ಅದದಾತ । ವರುಣ । ಮಿತ್ರ । ಯೂಯಂ ।
ತಾಂ । ಪೀಪಯತ । ಪಯಸೇವ । ಧೇನುಂ । ಕುವಿತ್ । ಗಿರಃ । ಅಧಿ । ರಥೇ । ವಹಾಥ ॥ ೧೨ ॥

ಸಾಯಣಭಾಷ್ಯಂ

ಹೇ ಮರುತೋ ಹೇ ಇಂದ್ರ ದೇವಾ ಹೇ ವರುಣ ಹೇ ಮಿತ್ರ ಯೂಯಂ ಯಾಂ ಧಿಯಂ ಯತ್ಕರ್ಮ ಮೇ ಮಹ್ಯಮದದಾತ ದತ್ತವಂತಃ ಸ್ಥ ॥ ಮರುತ ಇತ್ಯತ್ರ ವಾಕ್ಯಭೇದಾದನಿಘಾತಃ। ಪೂರ್ವ-ಪೂರ್ವಸ್ಯಾವಿದ್ಯಮಾನತ್ವೇನಾದ್ಯುದಾತ್ತತ್ವಂ ॥ ತಾಂ ಧಿಯಂ ಪೀಪಯತ । ಫಲೇನಾಪ್ಯಾಯಯತ । ತತ್ರ ದೃಷ್ಟಾಂತಃ । ಪಯಸೇವ ಧೇನುಂ ನವಪ್ರಸೂತಿಕಾಂ ಗಾಂ ಕ್ಷೀರೇಣ ಯಥಾಪ್ಯಾಯಯಂತಿ ತದ್ವತ್ ಕಿಂಚ । ಗಿರೋಽಸ್ಮದೀಯಾಃ ಸ್ತುತೀರಧಿ ರಥ ಆತ್ಮೀಯೇ ರಥೇ ಕುವಿದ್ಬಹುವಾರಂ ವಹಾಥ । ಪ್ರಾಪ್ತಾಃ ಸ್ಥ । ಸ್ತುತೇಷು ಸತ್ಸು ಯಜ್ಞಂ ಪ್ರತ್ಯಾಗಮನಾಯ ರಥಾರೂಢಾ ಭವಥ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ । **ಇಂದ್ರ**—ಎಲೈ ಇಂದ್ರನೇ । **ದೇವಾಃ**—ಎಲೈ ದೇವತೆಗಳೇ । **ವರುಣ**—ಎಲೈ ವರುಣನೇ । **ಮಿತ್ರ**—ಎಲೈ ಮಿತ್ರನೇ । **ಯೂಯಂ**—ನೀವು । **ಯಾಂ ಧಿಯಂ**—ಯಾವ ಕರ್ಮವನ್ನು । **ಮೇ**—ನನಗೆ । **ಅದದಾತ**—ಅನುಗ್ರಹಿಸಿರುವಿರೋ । **ತಾಂ**—ಆ ಕರ್ಮವನ್ನು । **ಪಯಸೇವ ಧೇನುಂ**—ಗೋವನ್ನು ಕ್ಷೀರದಿಂದ ತುಂಬುವಂತೆ । **ಪೀಪಯತ**—ಫಲದಿಂದ ತುಂಬಿರಿ । **ಗಿರಃ**—ನಮ್ಮ ಸ್ತುತಿಗಳನ್ನು । **ಅಧಿ ರಥೇ**—ನಿಮ್ಮ ರಥಗಳಲ್ಲಿ । **ಕುವಿತ್**—ಅನೇಕವೇಳೆ । **ವಹಾಥ**—ನೀವು ತುಂಬಿಕೊಳ್ಳುತ್ತೀರಿ.

ಭಾವಾರ್ಥ

ಎಲೈ ಮರುತ್ತುಗಳೇ, ಎಲೈ ಇಂದ್ರನೇ, ಎಲೈ ದೇವತೆಗಳೇ, ಎಲೈ ವರುಣನೇ, ಎಲೈ ಮಿತ್ರನೇ, ನೀವು ಯಾವ ಕರ್ಮವನ್ನು ನನಗೆ ಅನುಗ್ರಹಿಸಿರುವಿರೋ ಆ ಕರ್ಮವನ್ನು ಗೋವನ್ನು ಕ್ಷೀರದಿಂದ ತುಂಬುವಂತೆ, ಫಲದಿಂದ ತುಂಬಿರಿ. ನಮ್ಮ ಸ್ತುತಿಗಳನ್ನು ನಿಮ್ಮ ರಥಗಳಲ್ಲಿ ಅನೇಕವೇಳೆ ತುಂಬಿಕೊಳ್ಳುತ್ತೀರಿ. ಎಂದರೆ ನಮ್ಮ ಸ್ತುತಿಗಳನ್ನು ಕೇಳುತ್ತೀರಿ.

English Translation

Maruts, Indra, gods, Varuna and Mitra, reward the worship, which you have given as (men fatten) the (newly-delivered) cow with milk, you have repeatedly put my praises on your car.

ಸಂಹಿತಾಪಾಠಃ

ಕುವಿದಂಗ ಪ್ರತಿ ಯಥಾ ಚಿದಸ್ಯ ನಃ ಸಜಾತ್ಯಸ್ಯ ಮರುತೋ ಬುಬೋಧಥ।
ನಾಭಾ ಯತ್ರ ಪೃಥಮಂ ಸಂನಸಾಮಹೇ ತತ್ರ ಜಾಮಿತ್ವಮದಿತಿರ್ದಧಾತು
ನಃ ॥ ೧೩ ॥

ಪದಪಾಠಃ

ಕುವಿತ್ । ಅಂಗ । ಪ್ರತಿ । ಯಥಾ । ಚಿತ್ । ಅಸ್ಯ । ನಃ । ಸಜಾತ್ಯಸ್ಯ। ಮರುತಃ । ಬುಬೋಧಥ ।
ನಾಭಾ । ಯತ್ರ । ಪೃಥಮಂ । ಸಂನಸಾಮಹೇ । ತತ್ರ । ಜಾಮಿತ್ವಂ । ಅದಿತಿಃ । ದಧಾತು । ನಃ ॥೧೩॥

ಸಾಯಣಭಾಷ್ಯಂ

ಅಂಗೇತಿ ಸಂಬುದ್ಧೌ। ಹೇ ಮರುತಃ ಯೂಯಂ ನೋಽಸ್ಮಾನ್ಕುವಿದ್ಬಹುವಾರಂ ಪ್ರತಿ ಬುಬೋಧಥ।ತಥಾ ಪ್ರತಿಬುಧ್ಯಧ್ವಂ ॥ ಕುವಿಚ್ಛಬ್ದಯೋಗಾದನಿಘಾತಃ ॥ ಯಥಾ ನೋಽಸ್ಮಾನ್ಸಜಾತ್ಯಸ್ಯಾಸ್ಯ ಬಾಂಧವಸ್ಯ ವಿಷಯಭೂತಾನ್ಕುರುಥ ತಥಾ ಜಾನೀಥ । ತತೋ ನಾಭಾ ಪೃಥಿವ್ಯಾ ನಾಭಿಸ್ಥಾನೇ ಯತ್ರ ಯಸ್ಮಿನ್ನುತ್ತರವೇದಿಲಕ್ಷಣೇ ದೇಶೇ ಪ್ರಥಮಮೇವ ಸಂನಸಾಮಹೇ ಹವಿಷಾ ಯತ್ರ ಸಂಗಚ್ಛೇಮಹಿ ತತ್ರೈವ ದೇಶೇಽದಿತಿರ್ದೇವಾನಾಂ ಮಾತಾ ನೋಽಸ್ಮಾಕಂ ಜಾಮಿತ್ವಂ ಮನುಷ್ಯೈಃ ಸಹ ಬಾಂಧವಂ ದಧಾತು । ವಿದಧಾತು ॥

ಪ್ರತಿಪದಾರ್ಥ

ಅಂಗ ಮರುತಃ—ಎಲೈ ಮರುತ್ತುಗಳೇ । **ಯಥಾ**—ಯಾವ ರೀತಿ । **ನಃ**—ನಮ್ಮನ್ನು । **ಅಸ್ಯ ಸಜಾತ್ಯಸ್ಯ**—ನಿಮ್ಮ ಬಂಧುತ್ವವನ್ನು ಹೊಂದಲು ಯೋಗ್ಯರನ್ನಾಗಿ ಮಾಡುವಿರೋ ಹಾಗೆ । **ಕುವಿತ್**—ಅನೇಕ ವೇಳೆ । **ಪ್ರತಿ ಬುಬೋಧಥ**—ಅನುಗ್ರಹಿಸಿ ತಿಳಿಯಿರಿ । **ನಾಭಾ**—ಪೃಥ್ವಿಗೆ ನಾಭಿಭೂತವಾದ । **ಯತ್ರ**—ಯಾವ ಯಜ್ಞಪ್ರದೇಶದಲ್ಲಿ । **ಪ್ರಥಮಂ**—ಮೊದಲೇ । **ಸಂನಸಾಮಹೇ**—ನಾವು ಹವಿರಾದಿಗಳೊಂದಿಗೆ ಕೂಡಿ ಸಿದ್ಧವಾಗಿರುವೆವೋ । **ತತ್ರ**—ಆ ಸ್ಥಾನದಲ್ಲಿ । **ಅದಿತಿಃ**—ದೇವಮಾತೆಯಾದ ಅದಿತಿಯು । **ನಃ**—ನಮಗೆ । **ಜಾಮಿತ್ವಂ**—ಮಾನವರೊಂದಿಗೆ ಬಂಧುತ್ವವನ್ನು । **ದಧಾತು**—ಅನುಗ್ರಹಿಸಲಿ.

ಭಾವಾರ್ಥ

ಎಲೈ ಮರುತ್ತುಗಳೇ, ಯಾವ ರೀತಿ ನಮ್ಮನ್ನು ನಿಮ್ಮ ಬಂಧುತ್ವಕ್ಕೆ ಯೋಗ್ಯವಿಷಯರನ್ನಾಗಿ ಮಾಡುವಿರೋ ಹಾಗೆ ನಮ್ಮನ್ನು ಅನೇಕವೇಳೆ ಅನುಗ್ರಹಿಸಿರಿ. ಪೃಥ್ವಿಗೆ ನಾಭಿಭೂತವಾದ ಯಾವ ಯಜ್ಞಪ್ರದೇಶದಲ್ಲಿ ನಾವು ಪೂರ್ವ

ಭಾವಿಯಾಗಿಯೇ ಹವಿರಾದಿಗಳೊಂದಿಗೆ ಕೂಡಿ ಸಿದ್ಧವಾಗಿರುವೆವೋ ಆ ಸ್ಥಾನದಲ್ಲಿ ದೇವಮಾತೆಯಾದ ಅದಿತಿಯು ನಮಗೆ ಮಾನವರೊಂದಿಗೆ ಬಂಧುತ್ವವನ್ನು ಅನುಗ್ರಹಿಸಲಿ.

English Translation

Maruts, repeatedly acknowledge us, so that (you may make us the objects) of this relationship ; and may Aditi grant us affinity (with men) on the navel of the earth, where we first assemble (to offer oblations).

ಸಂಹಿತಾಪಾಠಃ

ತೇ ಹಿ ದ್ಯಾವಾಪೃಥಿವೀ ಮಾತರಾ ಮಹೀ ದೇವೀ ದೇವಾಞ್ಜನ್ಮನಾ ಯಜ್ಞಿ-
ಯೇ ಇತಃ ।
ಉಭೇ ಬಿಭೃತ ಉಭಯಂ ಭರೀಮಭಿಃ ಪುರೂ ರೇತಾಂಸಿ ಪಿತೃಭಿಶ್ಚ
ಸಿಂಚತಃ ॥ ೧೪ ॥

ಪದಪಾಠಃ

ತೇ ಇತಿ । ಹಿ । ದ್ಯಾವಾಪೃಥಿವೀ ಇತಿ । ಮಾತರಾ । ಮಹೀ ಇತಿ । ದೇವೀ ಇತಿ । ದೇವಾನ್ । ಜನ್ಮನಾ ।
ಯಜ್ಞಿಯೇ ಇತಿ । ಇತಃ ।
ಉಭೇ ಇತಿ । ಬಿಭೃತಃ । ಉಭಯಂ । ಭರೀಮಭಿಃ । ಪುರು । ರೇತಾಂಸಿ । ಪಿತೃಭಿಃ । ಚ । ಸಿಂಚತಃ ॥

ಸಾಯಣಭಾಷ್ಯಂ

ಮಾತರಾ ಸರ್ವಸ್ಯ ಜಗತೋ ನಿರ್ಮಾತ್ರ್ಯೌ ಅತ ಏವ ಮಹೀ ಮಹತ್ಯೌ ದೇವೀ ದೇವನಶೀಲೇ ಯಜ್ಞಿಯೇ ಯಜ್ಞಾರ್ಹೇ ತೇ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ದೇವಾನಿಂದ್ರಾದೀಞ್ಜನ್ಮನೈವೇತೋ ಹಿ । ಪ್ರಾಪ್ನುತಃ ಖಲು ॥ ಇಣ್ ಗತೌ । ಲಿಟಿ ರೂಪಂ ॥ ಕಿಂಚೋಭೇ ದ್ಯಾವಾಪೃಥಿವ್ಯೌ ಭರೀಮಭಿರ್ಭರಣೈರ್ನಾನಾವಿಧೈರುಭಯಂ ಜನಂ ದೇವಾನ್ಮನುಷ್ಯಾಂಶ್ಚ ಬಿಭೃತಃ । ಧಾರಯತಃ । ಪೋಷಯತಃ । ತಥಾ ಪಿತೃಭಿಃ ಪಾಲಕೈರ್ದೇವೈಃ ಸಂಗತೇ ತೇ ಪುರು ಪುರೂಣ್ಯಾತ್ಮೀಯಾನಿ ರೇತಾಂಸ್ಯುದಕಾನಿ ಸಿಂಚತಃ । ಕ್ಷರತಃ । ಪ್ರತ್ಯಕ್ಷೇಣ ಧಾರಯತಃ ॥

ಪ್ರತಿಪದಾರ್ಥ

ಮಾತರಾ—ಜಗನ್ನಿರ್ಮಾತ್ರಿಯರೂ । **ಮಹೀ**—ಮಹತ್ಸ್ವರೂಪವುಳ್ಳವರೂ । **ದೇವೀ**—ದೇವತಾತ್ಮರೂ । **ಯಜ್ಞಿಯೇ**—ಯಜ್ಞಾರ್ಹರೂ ಆದ । **ತೇ ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳು । **ದೇವಾನ್**—ಇಂದ್ರಾದಿ ದೇವತೆಗಳನ್ನು । **ಜನ್ಮನಾ**—ಉತ್ಪನ್ನವಾಗುವಾಗಲೇ । **ಇತಃ ಹಿ**—ಸೇರಿಕೊಳ್ಳುತ್ತಾರೆ । **ಉಭೇ**—ದ್ಯಾವಾ

ಪೃಥಿವಿಗಳಿಬ್ಬರೂ । **ಭರೀಮಭಿಃ**—ಜಗತ್ತನ್ನು ಭರಿಸುವ ಅನೇಕ ಸಾಮಗ್ರಿಗಳಿಂದ । **ಉಭಯಂ**—ದೇವತೆಗಳನ್ನೂ, ಮಾನವರನ್ನೂ । **ಬಿಭೃತಃ**—ಪೋಷಿಸುತ್ತಾರೆ । **ಪಿತೃಭಿಃ**—ಪಾಲಕರಾದ ದೇವತೆಗಳೊಡಗೂಡಿದ ಅವರು । **ಪುರು**—ಅತ್ಯಧಿಕವಾದ । **ರೇತಾಂಸಿ**—ಉದಕಗಳನ್ನು । **ಸಿಂಚತಃ**—ಪ್ರವಹಿಸುವಂತೆ ಮಾಡುತ್ತಾರೆ.

ಭಾವಾರ್ಥ

ಜಗನ್ನಿರ್ಮಾತ್ರಿಯರೂ, ಮಹತ್ಸ್ವರೂಪವುಳ್ಳವರೂ, ದೇವತಾತ್ಮರೂ, ಯಜ್ಞಾರ್ಹರೂ ಆದ ದ್ಯಾವಾಪೃಥಿವಿಗಳು ಉತ್ಪನ್ನರಾಗುವಾಗಲೇ ಇಂದ್ರಾದಿದೇವತೆಗಳನ್ನು ಸೇರಿಸಿಕೊಳ್ಳುತ್ತಾರೆ. ದ್ಯಾವಾಪೃಥಿವಿಗಳಿಬ್ಬರೂ ಜಗತ್ತನ್ನು ಭರಿಸುವ ಅನೇಕ ಸಾಮಗ್ರಿಗಳಿಂದ ದೇವತೆಗಳನ್ನೂ, ಮಾನವರನ್ನೂ ಪೋಷಿಸುತ್ತಾರೆ. ಜಗತ್ಪಾಲಕರಾದ ದೇವತೆಗಳೊಡಗೂಡಿದ ಅವರು ಅತ್ಯಧಿಕವಾದ ಉದಕಗಳನ್ನು ಪ್ರವಹಿಸುವಂತೆ ಮಾಡುತ್ತಾರೆ.

English Translation

They two, the maternal heaven and earth, mighty, divine, adorable, attain to the gods upon their birth ; they both cherish tho two (races, human and divine) with various nutriments : (associated) with the paternal (gods), they shed abundant moisture.

ಸಂಹಿತಾಪಾಠಃ

ವಿ ಷಾ ಹೋತ್ರಾ ವಿಶ್ವಮಶ್ನೋತಿ ವಾರ್ಯಂ ಬೃಹಸ್ಪತಿರರಮತಿಃ ಪನೀ-
ಯಸೀ ।
ಗ್ರಾವಾ ಯತ್ರ ಮಧುಷುದುಚ್ಯತೇ ಬೃಹದವೀವಶಂತ ಮತಿಭಿರ್ಮನೀಷಿಣಃ॥

ಪದಪಾಠಃ

ವಿ । ಸಾ । ಹೋತ್ರಾ । ವಿಶ್ವಂ । ಅಶ್ನೋತಿ । ವಾರ್ಯಂ । ಬೃಹಸ್ಪತಿಃ । ಅರಮತಿಃ । ಪನೀಯಸೀ ।
ಗ್ರಾವಾ । ಯತ್ರ । ಮಧುಽಸುತ್ । ಉಚ್ಯತೇ । ಬೃಹತ್ । ಅವೀವಶಂತ । ಮತಿಽಭಿಃ । ಮನೀಷಿಣಃ॥

ಸಾಯಣಭಾಷ್ಯಂ

ಹೋತ್ರಾ । ವಾಜ್ಞಾಮೈತತ್ ಆಹೂಯಂತೇಽನಯಾ ದೇವಾ ಇತಿ । ಸಾ ವಾಗ್ವಾರ್ಯಂ ವರಣೀಯಂ ವಿಶ್ವಂ ಸರ್ವಂ ಪಶ್ವಾದಿಸಹಿತಂ ಧನಂ ವ್ಯಶ್ನೋತಿ । ವಿವಿಧಂ ವ್ಯಾಪ್ನೋತೀ । ಕೀದೃಶೀ । ಬೃಹಸ್ಪತಿರ್ಬೃಹತಾಂ ಮಹತಾಂ ಪಾಲಯಿತ್ರೀ ಅರಮತಿಃ ಪರ್ಯಾಪ್ತಸ್ತುತಿಃ ಯದ್ವಾ ಕುತ್ರಾಪ್ಯನುಪರತಾ ಪನೀಯಸ್ಯತ್ಯಂತಂ ದೇವಾನಾಂ ಸ್ತೋತ್ರಕಾರಿಣೀ । ಯತ್ರ ಯಸ್ಯಾಂ ಹೋತ್ರಾಯಾಂ ಮಧುಷುತ್ ಸೋಮಮಭಿಷುಣ್ವನ್ಬೃಹದ್ಮಹಾನ್ತ್ಸ್ತೋತ್ರಮುಚ್ಯತೇ ಅಭಿಧೀಯತೇ। ಸ್ತೂಯತ ಇತ್ಯರ್ಥಃ ।

तꣳ स्तुतिमंतꣳ यज्ञꣳ मनीषिणोऽ देवा मतिभिः स्तुतिभिः सहावीवशंत । कामु यंतेऽ॥ वप्येण्यंतस्य लुप्तं रूपꣳ यदा ।मनीषिणः स्तोतारः स्तुतिभिर्देवान्यज्ञꣳ कामयमानानाक्कुर्वंति ॥

प्रतिपदार्थ

बृहस्पतिः—महत्स्वरूपवुळ्ळ देवतैगळन्नु पालिसुवुदू । **अरमतिः**—अनुस्यूतवागिरुवुदू । **पनीयसीऽ**—देवतैगळन्नु प्रशंसिसुवुदू । **होत्रा**—देवतैगळन्नु स्तुतिसि यज्ञक्के करेयुवुदू आद । **सा**—आ स्तुतियु । **वार्यं**—अपेक्षितवाद । **विश्वं**—सकल धनवन्नू । **व्यश्नोति**—पडेयुत्तदे । **यत्र**—यावा स्तुतिकालदल्लि । **मधुपुत्**—सोमवन्नु हिंडुवुदू । **बृहत्**—महत्तादुदू आद । **ग्रावा**—हिंडुव कल्लु । **उच्यते**—प्रशंसिसल्पडुवुदो आ स्तुतियुक्तवाद यज्ञवन्नु । **मनीषिणः**—प्राज्ञरादा देवतैगळु । **मतिभिः**—स्तुतिगळिंदने । **अवीवशंत**—अपेक्षिसुत्तारे.

भावार्थ

महत्स्वरूपवुळ्ळ देवतैगळन्नु पालिसुवुदू, अनुस्यूतवागिरुवुदू, देवतैगळन्नु प्रशंसिसुवुदू, देवतैगळन्नु स्तुतिसि यज्ञक्के करेयुवुदू आद स्तुतियु अपेक्षितवाद सकल धनवन्नू पडेयुवंते माडुत्तदे. यावा स्तुतिकालदल्लि सोमवन्नु हिंडुवुदू, महत्तादुदू आद हिंडुवकल्लु प्रशंसिसल्पडुवुदो आ स्तुतियुक्तवाद यज्ञवन्नु प्राज्ञरादा देवतैगळु स्तुतिगळिंदने अपेक्षिसुत्तारे.

English Translalion

That voice of invocation, the protectress of the mighty, never ceasing, the panegyrist (of the gods), obtains all desirable wealth : on uttering which, the great grinding-stone expressing the sweet Soma is eulogized ; the pious, by their praises, make the god desirous (of the sacrifice).

संहितापाठः

एवा कविस्तुवीरवाँ ऋतज्ञा द्रविणस्युर्द्रविणसश्चकानः ।

उक्थेभिरत्र मतिभिश्च विप्रोऽपीपयद्गयो दिव्यानि जन्म ॥ ७६ ॥

पदपाठः

एव । कविः । तुविऽरवान् । ऋतऽज्ञाः । द्रविणस्युः । द्रविणसः । चकानः ।

उक्थेभिः । अत्र । मतिऽभिः । च । विप्रः । अपीपयत् । गयः । दिव्यानि । जन्म ॥ ७६ ॥

ಸಾಯಣಭಾಷ್ಯಂ

ಕವಿಃ ಕ್ರಾಂತಪ್ರಜ್ಞಸ್ತುವೀರವಾನ್ ॥ ಮತ್ಪರ್ಥೀಯಪ್ರತ್ಯಯೋವೃತ್ತಿಃ ॥ ಬಹುಸ್ತುತಿಯುಕ್ತ-ಋತಜ್ಞಾ ಯಜ್ಞಸ್ಯ ವೇದಿತಾ ದ್ರವಿಣಸ್ಯುರ್ಧನಕಾಮಃ ॥ ಸರ್ವಪ್ರಾತಿಪದಿಕೇಭ್ಯೋ ಲಾಲಸಾಯಾಮಿತಿ ಸುಗಾಗಮಃ ॥ ತಸ್ಯೈವ ವಿಶದವಚನಂ । ದ್ರವಿಣಸಶ್ಚಕಾನ ಇತಿ । ಪಶ್ವಾದಿಧನಂ ಕಾಮಯಮಾನ ಇತ್ಯರ್ಥಃ । ವಿಪ್ರೋ ಮೇಧಾವೀ ಗಯೋ ನಾಮರ್ಷಿರೇವಮುಕ್ತಪ್ರಕಾರೇಣಾತ್ರ ಸೂಕ್ತ ಉಕ್ಥೇಭಿಃ ಶಸ್ತ್ರೈರ್ಮತಿಭಿಃ ಸ್ತುತಿಭಿಶ್ಚ ದಿವ್ಯಾನಿ ದಿವಿ ಜಾತಾನಿ ಜನ್ಮ ಜನನಾನಿ ದೇವಾನಪೀಪಯತ್ । ಅವರ್ಧಯತ್ । ಅಸ್ತಾವೀದಿತ್ಯರ್ಥಃ ॥

ಪ್ರತಿಪದಾರ್ಥ

ಕವಿಃ—ಮೇಧಾವಿಯೂ । **ತುವೀರವಾನ್**—ಅನೇಕ ಸ್ತುತಿಗಳಿಂದ ಕೂಡಿದವನೂ । **ಋತಜ್ಞಾಃ**—ಯಜ್ಞತತ್ತ್ವವನ್ನರಿತವನೂ । **ದ್ರವಿಣಸ್ಯುಃ**—ಧನವನ್ನು ಅಪೇಕ್ಷಿಸುವವನೂ । **ದ್ರವಿಣಸಶ್ಚಕಾನಃ**—ಪಶ್ವಾದಿಗಳನ್ನು ಇಚ್ಛಿಸುವವನೂ । **ವಿಪ್ರಃ**—ಪ್ರಾಜ್ಞನೂ ಆದ । **ಗಯಃ**—ಗಯಋಷಿಯು । **ಅತ್ರ**—ಈ ಸೂಕ್ತದಲ್ಲಿ । **ಉಕ್ಥೇಭಿಃ**—ಶಸ್ತ್ರಮಂತ್ರಗಳಿಂದಲೂ । **ಮತಿಭಿಃ**—ಸ್ತುತಿಗಳಿಂದಲೂ । **ಏವ**—ಈ ಪ್ರಕಾರವಾಗಿ । **ದಿವ್ಯಾನಿ ಜನ್ಮ**—ಉತ್ತಮವಾದ ಜನ್ಮವನ್ನು ಹೊಂದಿದ ದೇವತೆಗಳನ್ನು । **ಅಪೀಪಯತ್**—ಪುಷ್ಟರಾಗುವಂತೆ ಮಾಡಿದ್ದಾನೆ.

ಭಾವಾರ್ಥ

ಮೇಧಾವಿಯೂ, ಅನೇಕ ಸ್ತುತಿಗಳಿಂದ ಕೂಡಿದವನೂ, ಯಜ್ಞತತ್ತ್ವವನ್ನರಿತವನೂ, ಧನವನ್ನು ಅಪೇಕ್ಷಿಸುವವನೂ, ಪಶ್ವಾದಿಗಳನ್ನು ಇಚ್ಛಿಸುವವನೂ, ಪ್ರಾಜ್ಞನೂ ಆದ ಗಯಋಷಿಯು ಈ ಸೂಕ್ತದಲ್ಲಿ ಶಸ್ತ್ರಮಂತ್ರಗಳಿಂದಲೂ, ಸ್ತುತಿಗಳಿಂದಲೂ ಈ ಪ್ರಕಾರವಾಗಿ ಉತ್ತಮವಾದ ಜನ್ಮವನ್ನು ಹೊಂದಿದ ದೇವತೆಗಳನ್ನು ಪುಷ್ಟರಾಗುವಂತೆ ಮಾಡಿದ್ದಾನೆ.

English Translation

The pious sage, Gaya, eloquent in laudation, conversant with sacred rites, wishing for wealth, eager for wealth, propitiates the celestial people with prayers and praises.

ಸಂಹಿತಾಪಾಠಃ

ಏವಾ ಪ್ಲತೇಃ ಸೂನುರವೀವೃಧದ್ವೋ ವಿಶ್ವ ಆದಿತ್ಯಾ ಅದಿತೇ ಮನೀಷೀ ।
ಈಶಾನಾಸೋ ನರೋ ಅಮರ್ತ್ಯೇನಾಸ್ತಾವಿ ಜನೋ ದಿವ್ಯೋ ಗಯೇನ ॥

ಪದಪಾಠಃ

ಏವ । ಪ್ಲತೇಃ । ಸೂನುಃ । ಅವೀವೃಧತ್ । ವಃ । ವಿಶ್ವೇ । ಆದಿತ್ಯಾಃ । ಅದಿತೇ । ಮನೀಷೀ ।
ಈಶಾನಾಸಃ । ನರಃ । ಅಮರ್ತ್ಯೇನ । ಅಸ್ತಾವಿ । ಜನಃ । ದಿವ್ಯಃ । ಗಯೇನ ॥ ೧೭ ॥

ಸಾಯಣಭಾಷ್ಯಂ

ಇಯಂ ವ್ಯಾಖ್ಯಾತಾ ॥ 482ನೇ ಪೇಜನ್ನು ನೋಡಿ

ಪ್ರತಿಪದಾರ್ಥ

ವಿಶ್ವೇ ಆದಿತ್ಯಾಃ—ಅದಿತಿಪುತ್ರರಾದ ಎಲ್ಲೆ ಸಕಲ ದೇವತೆಗಳೇ । **ಅದಿತೇ**—ಎಲ್ಲೆ ದೇವಮಾತೆಯಾದ ಅದಿತಿಯೇ । **ವಃ**—ನಿಮ್ಮನ್ನು । **ಮನೀಷೀ**—ಪ್ರಾಜ್ಞನಾದ ಸ್ತುತಿಕರ್ತನೂ । **ಪ್ಲತೇಃ ಸೂನುಃ**—ಪ್ಲತಿಯ ಪುತ್ರನೂ ಆದ ಗಯನು । **ಏವ**—ಈರೀತಿ । **ಅವೀವೃಧತ್**—ಸ್ತುತಿಗಳಿಂದ ಪುಷ್ಟರಾಗುವಂತೆ ಮಾಡಿದ್ದಾನೆ । **ಅಮರ್ತ್ಯೇನ**—ಮರಣರಹಿತರಾದ ಯಾವ ದೇವಜನರ ಅನುಗ್ರಹದಿಂದ । **ನರಃ**—ಮಾನವರು । **ತೋಶಾನಾಸಃ**—ಧನಗಳಿಗೆ ಒಡೆಯರಾಗಿ ಆಗುವರೋ । **ದಿವ್ಯಃ ಜನಃ**—ಅಂತಹ ದೇವತೆಗಳ ಸಂಘವು । **ಗಯೇನ**—ಗಯನಿಂದ । **ಅಸ್ತಾವಿ**—ಪ್ರಶಂಸಿಸಲ್ಪಟ್ಟಿದೆ.

ಭಾವಾರ್ಥ

ಅದಿತಿಪುತ್ರರಾದ ಎಲ್ಲೆ ಸಕಲ ದೇವತೆಗಳೇ, ದೇವಮಾತೆಯಾದ ಎಲ್ಲೆ ಅದಿತಿಯೇ, ಪ್ರಾಜ್ಞನಾದ ಸ್ತುತಿಕರ್ತನೂ, ಪ್ಲತಿಯ ಪುತ್ರನೂ ಆದ ಗಯನು ಈರೀತಿ ಸ್ತುತಿಗಳಿಂದ ನಿಮ್ಮನ್ನು ಪುಷ್ಟರಾಗುವಂತೆ ಮಾಡಿದ್ದಾನೆ. ಮರಣರಹಿತರಾದ ಯಾವ ದೇವಜನರ ಅನುಗ್ರಹದಿಂದ ಮಾನವರು ಧನಗಳಿಗೆ ಒಡೆಯರಾಗುವರೋ ಅಂತಹ ದೇವತೆಗಳ ಸಂಘವು ಗಯನಿಂದ ಪ್ರಶಂಸಿಸಲ್ಪಟ್ಟಿದೆ.

English Translation

Universal deities and Aditi, thus has the prudent son of Plati magnified you; the celestial people, the immortal (company of the gods)through whom (when praised) men become the bonds (of wealth), have been glorified by Gaya.

ಅರವತ್ತ್ಯೈದನೆಯ ಸೂಕ್ತ

ಪೀಠಿಕೆ

ಈ ಸೂಕ್ತಕ್ಕೆ ವಿಶ್ವೇದೇವತೆಗಳು ದೇವತೆಯು. ವಿಶ್ವೇದೇವತೆಗಳ ವಿಷಯವನ್ನು ನಾವು ಹಿಂದೆ ವಿಸ್ತಾರವಾಗಿ ವಿವರಿಸಿದೇವೆ. ಆದರೆ ಪ್ರತ್ಯೇಕವಾಗಿ ವಿವರಿಸಿಲ್ಲ. ಈ ಸೂಕ್ತದ ಮೊದಲನೆಯ ಋಕ್ಕಿನಲ್ಲಿರುವ ಕೆಲವು ದೇವತೆಗಳ ವಿಷಯವನ್ನು ನಾವು ಆಲ್ಲಲ್ಲಿ ವಿವರಿಸಿದೇವೆ ಎಂದರೆ ಅಗ್ನಿ- ೧ ನೇ ಭಾಗದ 612 ನೇ ಪೇಜುಗಳಲ್ಲಿಯೂ, ಇಂದ್ರ (11-665) ವಾಯು (5-598) ಪೂಷಾ (15-394) ಸರಸ್ವತೀ (15-444 ಮತ್ತು 447) ಪೇಜುಗಳಲ್ಲಿಯೂ ವಿವರಿಸಿದೇವೆ. ಈಗ ಮಿತ್ರ, ವರುಣ, ಅರ್ಯಮಾ ಎಂಬ ದೇವತೆಗಳ ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ವಿವರಿಸುತ್ತೇವೆ.

ಮಿತ್ರಃ, ವರುಣಃ, ಅರ್ಯಮಾ—ಈ ಮೂರು ದೇವತೆಗಳೂ ಪ್ರತ್ಯೇಕ ದೇವತೆಗಳೆಂದು ಭಾವಿಸಲ್ಪಟ್ಟಿದ್ದರೂ ಇವರು ಸೂರ್ಯನ ಅನೇಕ ರೂಪಗಳಾದ ಎಂದರೆ ದ್ವಾದಶಾದಿತ್ಯರಲ್ಲಿ ಈ ಹೆಸರಿನ ಅಂಶದೇವತೆಗಳೆಂದು ಇಲ್ಲಿ ವಿವರಿಸಲ್ಪಟ್ಟಿರುವಂತೆ ತೋರುತ್ತದೆ. ಇದಲ್ಲದೆ ಈ ಮೂರು ದೇವತೆಗಳೂ ಅಗ್ನಿಯ ಬೇರೆ ರೂಪಗಳೆಂದು ಕೆಲವು ಕಡೆ ಹೇಳಿದೆ.

ತ್ವಮಗ್ನೇ ವರುಣೋ ಜಾಯಸೇ ಯತ್ತ್ವಂ ಮಿತ್ರೋ ಭವಸಿ ಯತ್ಸಮಿದ್ಧಃ ।

(ಋ. ಸಂ. ೫-೩-೧)

ತ್ವಮರ್ಯಮಾ ಭವಸಿ ಯತ್ಕನೀನಾಂ ನಾಮ ಸ್ವಧಾವನ್ ಗುಹ್ಯಂ ಬಿಭರ್ಷಿ ।

(ಋ. ಸಂ. ೫-೩-೨)

ಎಂಬ ಋಕ್ಕುಗಳಲ್ಲಿ ಅಗ್ನಿಯು ಉತ್ಪನ್ನನಾದಾಗ ಅವನಿಗೆ ವರುಣನೆಂದೂ, ಚೆನ್ನಾಗಿ ಹೊತ್ತಿಸಲ್ಪಟ್ಟು ಧಗಧಗನೆ ಉರಿಯುತ್ತಿರುವಾಗ ಅಗ್ನಿಗೆ ಮಿತ್ರನೆಂದೂ, ಕನ್ಯಾಸಂಬಂಧವಾದ ಹೋಮಾದಿಗಳಲ್ಲಿ ಅರ್ಯಮಾ ಎಂದೂ ಅಗ್ನಿಗೆ ಈ ಮೂರು ಹೆಸರುಗಳಿವೆಯೆಂದು ಹೇಳಿದೆ. ಇದಲ್ಲದೆ ತೈತ್ತಿರೀಯಬ್ರಾಹ್ಮಣದಲ್ಲಿ—

ಮಿತ್ರೋಽಸಿ ವರುಣೋಸೀತ್ಯಾಹ । ಮೈತ್ರಂ ವಾ ಅಹಃ । ವಾರುಣೀ ರಾತ್ರಿಃ । ಅಹೋರಾತ್ರಾಭ್ಯಾಮೇವೈನಮುಸಾವಹರತಿ ॥

(ತೈ. ಬ್ರಾ ೧-೭-೧೦-೧)

ಮಿತ್ರನು ಹಗಲಿಗೆ ಅಧಿಪತಿಯೆಂದೂ, ವರುಣನು ರಾತ್ರಿಗೆ ಅಧಿಪತಿಯೆಂದೂ ಹೇಳಿದೆ. ಆದುದರಿಂದ ಈ ಮೂರು ದೇವತೆಗಳೂ ಕೆಲವುಕಡೆ ಸೂರ್ಯನ ಅಂಶದೇವತೆಗಳೆಂದೂ, ಕೆಲವುಕಡೆ ಅಗ್ನಿಯ ಬೇರೆಬೇರೆ ಹೆಸರುಗಳೆಂದೂ ಹೇಳಿರುವುದನ್ನು ಗಮನಿಸಬೇಕು.

ಪುರಾಣಾದಿಗಳಲ್ಲಿ ಮಿತ್ರನು ದ್ವಾದಶಾದಿತ್ಯರಲ್ಲಿ ಒಬ್ಬನು. ಋಗ್ವೇದದಲ್ಲಿ ಮಿತ್ರನು ಸೂರ್ಯನ ಬೇರೊಂದು ಹೆಸರಾದರೂ ಮಿತ್ರನಿಗೇ ಸ್ಪಷ್ಟವಾದ ವೈಶಿಷ್ಟ್ಯವಿವೆ. ಎಂದರೆ ವೈಯಕ್ತಿಕ ಪ್ರಾಧಾನ್ಯವಿದೆ. ಋಗ್ವೇದದಲ್ಲಿ ಮಿತ್ರ, ವರುಣ, ಅರ್ಯಮಾ ಎಂಬುವರು ಅದಿತಿಯ ಪುತ್ರರೆಂದೂ ಹೇಳಿದೆ. ಆದ್ದರಿಂದ ಇವರನ್ನು ಆದಿತ್ಯರೆಂದೂ ಅನೇಕ ಕಡೆಗಳಲ್ಲಿ ಕರೆದಿದೆ. ಈ ಆದಿತ್ಯರು ಎಂದರೆ ಅದಿತಿಪುತ್ರರು ಆರು ಜನರೆಂದು—

ಇಮಾ ಗಿರ ಆದಿತ್ಯೇಭ್ಯೋ ಘೃತಸ್ನೂಃ ಸನಾದ್ರಾಜಭ್ಯೋ ಜುಹ್ವಾ ಜುಹೋಮಿ ।
ಶೃಣೋತು ಮಿತ್ರೋ ಅರ್ಯಮಾ ಭಗೋ ನಸ್ತುವಿಜಾತೋ ವರುಣೋ ದಕ್ಷೋ ಅಂಶಃ ॥

(ಋ. ಸಂ. ೨-೨೭-೧)

ಎಂಬ ಋಕ್ಕಿನಲ್ಲಿ ಮಿತ್ರ, ಅರ್ಯಮಾ, ಭಗ, ವರುಣ, ದಕ್ಷ, ಅಂಶ ಎಂದು ಆರುಜನರ ಹೆಸರನ್ನು ಮಾತ್ರ ಹೇಳಿದೆ.

ದೇವಾ ಆದಿತ್ಯಾ ಯೇ ಸಪ್ತ ತೇಭಿಃ ಸೋಮಾಭಿ ರಕ್ಷ ನ ಇಂದ್ರಾಯೇಂದೋ ಪರಿ ಸ್ರವ ।

(ಋ. ಸಂ. ೯-೧೧೪-೩)

ಎಂಬ ಋಕ್ಕಿನಲ್ಲಿ ಅದಿತಿಪುತ್ರರು ಏಳು ಜನರೆಂದಿದೆ.

ಅಷ್ಟೌ ಪುತ್ರಾಸೋ ಅದಿತೇರ್ಯೇ ಜಾತಾಸ್ತನ್ವ ೧ ಸ್ಪರಿ ।
ದೇವಾಁ ಉಪಪ್ರೈತ್ಸಪ್ತಭಿಃ ಪರಾ ಮಾರ್ತಾಣ್ಡಮಾಸ್ಯತ್ ॥
ಸಪ್ತಭಿಃ ಪುತ್ರೈರದಿತಿರುಪ ಪ್ರೈತ್ಪೂರ್ವ್ಯಂ ಯುಗಂ ।
ಪ್ರಜಾಯೈ ಮೃತ್ಯವೇ ತ್ವತ್ಪುನರ್ಮಾರ್ತಾಣ್ಡಮಾಭರತ್ ॥

(ಋ. ಸಂ. ೧೦-೭೨-೮, ೯)

ಎಂಬ ಋಕ್ಕುಗಳಲ್ಲಿ ಅದಿತಿಗೆ ಮೊದಲು ಏಳು ಅನಂತರ ಮಾರ್ತಂಡನೆಂದು ಒಟ್ಟು ಎಂಟುಮಂದಿ ಪುತ್ರರಿದ್ದರೆಂದು ಹೇಳಿದೆ. ಇದಲ್ಲದೇ ತೈತ್ತಿರೀಯ ಆರಣ್ಯಕದಲ್ಲಿ—

ಅಷ್ಟಾ ಪುತ್ರಾಸೋ ಅದಿತೇಃ। ಯೇ ಜಾತಾಸ್ತನ್ವಃ ಪರಿ। ದೇವಾँ ಉಪಪ್ರೈತ್ಸಪ್ತಭಿಃ। ಪರಾ-ಮಾರ್ತಾಂಡಮಾಸ್ಯತ್। ಸಪ್ತಭಿಃ ಪುತ್ರೈರದಿತಿಃ। ಉಪಪ್ರೈತ್ಪೂರ್ವ್ಯಂ ಯುಗಂ। ಪ್ರಜಾಯೈ ಮೃತ್ಯವೇ ತತ್। ಪರಾ ಮಾರ್ತಾಂಡಮಾಭರದಿತಿ। ತಾನನುಕ್ರಮಿಷ್ಯಾಮುಃ। ಮಿತ್ರಶ್ಚ ವರುಣಶ್ಚ। ಧಾತಾ ಚಾರ್ಯಮಾ ಚ। ಅಗ್ಂಶಶ್ಚ ಭಗಶ್ಚ। ಇಂದ್ರಶ್ಚ ವಿವಸ್ವಾಗ್-ಶ್ಚೇತ್ಯೇತೇ॥

(ತೈ. ಆ. ೧-೧೩-೩)

ಅದಿತಿಗೆ ಇದ್ದ ಎಂಟು ಮಂದಿ ಪುತ್ರರ ಹೆಸರನ್ನು ಹೇಳಿದೆ. ಮಿತ್ರ, ವರುಣ, ಧಾತಾ, ಅರ್ಯಮಾ, ಅಂಶ, ಭಗ, ಇಂದ್ರ, ವಿವಸ್ವಾನ್ ಎಂಬುವರೇ ಆ ಎಂಟು ಜನರು ಎಂದಿದೆ. ಇದೇ ವಿಷಯವು ತೈತ್ತಿರೀಯ ಬ್ರಾಹ್ಮಣದಲ್ಲಿ—

ಅದಿತಿಃ ಪುತ್ರಕಾಮಾ। ಸಾಧ್ಯೇಭ್ಯೋ ದೇವೇಭ್ಯೋ ಬ್ರಹ್ಮೌದನಮಪಚತ್। ತಸ್ಯಾ ಉಚ್ಛೇ-ಷಣಮದದುಃ। ತಶ್ರಾಶ್ನಾತ್। ಸಾ ರೇತೋಽಧತ್ತ। ತಸ್ಯೈ ಧಾತಾ ಚಾರ್ಯಮಾ ಚಾಜಾ-ಯೇತಾಂ। ಸಾ ದ್ವಿತೀಯಮಪಚತ್। ತಸ್ಯಾ ಉಚ್ಛೇಷಣಮದದುಃ। ತಶ್ರಾಶ್ನಾತ್। ಸಾ ರೇತೋಽಧತ್ತ। ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಂ। ಸಾ ತೃತೀಯಮಪಚತ್। ತಸ್ಯಾ ಉಚ್ಛೇಷಣಮದದುಃ। ತಶ್ರಾಶ್ನಾತ್। ಸಾ ರೇತೋಽಧತ್ತ। ತಸ್ಯಾ ಅಗ್ಂಶಶ್ಚ ಭಗಶ್ಚಾಜಾಯೇತಾಂ। ಸಾ ಚತುರ್ಥಮಪಚತ್। ತಸ್ಯಾ ಉಚ್ಛೇಷಣಮದದುಃ। ತಶ್ರಾ-ಶ್ನಾತ್। ಸಾ ರೇತೋಽಧತ್ತ। ತಸ್ಯಾ ಇಂದ್ರಶ್ಚ ವಿವಸ್ವಾಗ್ಂಶ್ಚಾಜಾಯೇತಾಂ॥

(ತೈ. ಬ್ರಾ. ೧-೧-೯-೧,೨,೩)

ಎಂದು ಉಕ್ತವಾಗಿದೆ. ಅದಿತಿಯು ಎಂಟುಮಂದಿ ಪುತ್ರರನ್ನು ಪಡೆದ ವಿಷಯವು ಇಲ್ಲಿ ಸ್ಪಷ್ಟವಾಗಿ ವಿವರಿಸಿದೆ. ಈ ಎಂಟು ಮಂದಿಯಲ್ಲಿ ಮಿತ್ರ, ವರುಣ, ಅರ್ಯಮಾ ಎಂಬ ಮೂರು ಮಂದಿಯೇ ಋಗ್ವೇದದಲ್ಲಿ ವಿಶೇಷವಾಗಿ ಪ್ರಸಿದ್ಧರಾದವರು. ಋ. ಸಂ. ೨-೭ ನೇ ಸೂಕ್ತದಲ್ಲಿ ಮಿತ್ರ, ವರುಣ, ಅರ್ಯಮಾ ಎಂಬುವರ ಲೋಕೋಪಕಾರಕವಾದ ಸಾಹಸಕೃತ್ಯಗಳ ವಿಸ್ತಾರವಾದ ವರ್ಣನೆ ಇದೆ.

ಮಿತ್ರಃ—ಮಿತ್ರಶಬ್ದದ ನಿರ್ವಚನವನ್ನು ಯಾಸ್ಕರು ತಮ್ಮ ನಿರುಕ್ತದಲ್ಲಿ ಈ ರೀತಿ ತಿಳಿಸಿದ್ದಾರೆ—

ಮಿತ್ರಃ ಪ್ರಮಿನಾತೇಸ್ತ್ರಾಯತೇ। ಸಂಮಿನ್ವಾನೋ ದ್ರವತೀತಿ ವಾ। ಮೇದಯತೇರ್ವಾ।

(ನಿ. ೧೦-೨೧)

ಮಿತ್ರ ಶಬ್ದಕ್ಕೆ ಅರ್ಥವೇನು ಎಂದರೆ—**ಮಿತ್ರಃ ಕಸ್ಮಾತ್। ಸ ಹಿ ಪ್ರಮಿನಾತೇಃ ತ್ರಾಯತೇ। ಪ್ರಮಿನಾತಿಃ ಮರಣಂ। ತತಃ ಸರ್ವಲೋಕಂ ತ್ರಾಯತೇ ವರ್ಷದ್ವಾರೇಣ।** ಪ್ರಮಿನಾತಿ ಎಂದರೆ ಮರಣವು. ಲೋಕದಲ್ಲಿ ಜನರಿಗೆ ವೃಷ್ಟಿಯನ್ನುಂಟುಮಾಡಿ ಆ ಮೂಲಕ ಅನ್ನಾದ್ಯಾಹಾರಗಳನ್ನು ಒದಗಿಸಿ ಹಸಿವಿನಿಂದ ಉಂಟಾಗಬಹುದಾದ ಮರಣಭಯವನ್ನು ತಪ್ಪಿಸಿ ರಕ್ಷಿಸುತ್ತಾನಾದ್ದರಿಂದ ಈ ದೇವತೆಗೆ ಮಿತ್ರನೆಂದು ಹೆಸರು.

ಸಮಂತಸೋ ಮಿನ್ವಾನಃ ಉದಕೇನ ದ್ರವತಿ ಅಂತರಿಕ್ಷಲೋಕೇ। ಈ ದೇವತೆಯು ಉದಕಕ್ಕೆ ಅಧಿಪತಿಯಾಗಿ ಅಂತರಿಕ್ಷದಲ್ಲಿ ಇದ್ದುಕೊಂಡು ಮೇಘಗಳ ಮೂಲಕ ಸುತ್ತಲೂ ಎಂದರೆ ಸಮಸ್ತ ಪ್ರದೇಶವನ್ನು ತೊಯ್ದುಹೋಗುವಂತೆ ಎಂದರೆ ನೀರಿನಿಂದ ನೆನೆಯುವಂತೆ ಮಾಡುವುದರಿಂದ ಈ ದೇವತೆಗೆ ಮಿತ್ರನೆಂದು ಹೆಸರು.

ಅಥವಾ—ಸ್ನೇಹನಾರ್ಥಸ್ಯ ಸರ್ವಂ ಹ್ಯಸಾವುದಕೇನ ಸ್ನೇಹಯತಿ । ಈ ದೇವತೆಯು ಉದಕದಿಂದ ಸಮಸ್ತವನ್ನೂ ಅಂಟಿಕೊಳ್ಳುವಂತೆ ಎಂದರೆ ಒಂದಾಗಿ ಸೇರಿಕೊಳ್ಳುವಂತೆ ಮಾಡುತ್ತಾನಾದ್ದರಿಂದ ಈ ದೇವತೆಗೆ ಮಿತ್ರನೆಂದು ಹೆಸರು ಎಂದು ಮೂರು ವಿಧವಾದ ನಿಷ್ಪತ್ತಿಯನ್ನು ಹೇಳಿ ಅದನ್ನು ಸಮರ್ಥಿಸುವುದಕ್ಕಾಗಿ—

ಮಿತ್ರೋ ಜನಾನ್ ಯಾತಯತಿ ಬ್ರುವಾಣೋ ಮಿತ್ರೋ ದಾಧಾರ ಪೃಥಿವೀಮುತ ದ್ಯಾಂ ।
ಮಿತ್ರಃ ಕೃಷ್ಟೀರನಿಮಿಷಾಭಿ ಚಷ್ಟೇ ಮಿತ್ರಾಯ ಹವ್ಯಂ ಘೃತವಜ್ಜುಹೋತ ॥

(ಋ. ಸಂ. ೩-೫೯-೧)

ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು. ಈ ಋಕ್ಕಿನಲ್ಲಿ ಮಿತ್ರನು ಕೃಷ್ಯಾದಿ ಕರ್ಮಗಳಿಗೆ ಸಹಾಯಕನಾಗಿ ವೃಷ್ಟ್ಯಾದಿಗಳನ್ನು ಸುರಿಸಿ ಜನರಿಗೆ ಅನ್ನಾದ್ಯಾಹಾರಗಳನ್ನು ಒದಗಿಸುತ್ತಾ ಭೂಲೋಕದ ಜನರನ್ನೂ ಸ್ವರ್ಗನಿವಾಸಿಗಳನ್ನೂ ಧರಿಸುವನು ಎಂದರೆ ಪೋಷಿಸುವನು. ಎಲೈ ಮನುಷ್ಯರೇ, ಇಂತಹ ಮಿತ್ರದೇವನಿಗೆ ಘೃತಮಿಶ್ರಿತವಾದ ಹವಿರಾದಿಗಳನ್ನು ಅರ್ಪಿಸಿ ಎಂದು ಮಿತ್ರನ ಅಸಾಧಾರಣ ಗುಣಗಳನ್ನೂ, ಲೋಕೋಪಕಾರವನ್ನೂ ಬಹು ಚೆನ್ನಾಗಿ ವರ್ಣಿಸಿದೆ. ಋಗ್ವೇದದಲ್ಲಿ ಮಿತ್ರನ ಪರವಾಗಿ ಇರುವ ಸೂಕ್ತವೆಂದರೆ ೯ ಋಕ್ಕುಗಳುಳ್ಳ ಈ ಸೂಕ್ತ ಮಾತ್ರ (ಋ. ಸಂ. ೩-೫೯) ಇತರ ಕಡೆ ಮಿತ್ರನು, ವರುಣ ಮೊದಲಾದ ಇತರ ದೇವತೆಗಳ ಜೊತೆಯಲ್ಲಿ ಸ್ತುತನಾಗಿದ್ದಾನೆ.

ಮಿತ್ರ ಮತ್ತು ವರುಣರ ಸಾಹಸಕರ್ಮವು ಬಹಳ ಹೆಚ್ಚಾಗಿರುವುದರಿಂದ ಮಿತ್ರನೊಬ್ಬನೇ ದೇವತೆಯಾಗಿರುವುಳ್ಳ ಸೂಕ್ತವು ಋಗ್ವೇದದಲ್ಲಿ ಹಿಂದೆ ಹೇಳಿದಂತೆ ಒಂದು ಮಾತ್ರವಿರುವುದು (ಋ. ಸಂ. ೩-೫೯) ಅಲ್ಲಿಯೂ ಆ ದೇವತೆಯ ಸ್ತುತಿಭಾಗವು ಅಸ್ಪಷ್ಟ. ಆದರೆ ಮೊದಲನೆಯ ಋಕ್ಕಿನಲ್ಲಿ ಮಾತ್ರ ಮಿತ್ರನ ವೈಶಿಷ್ಟ್ಯವು ಚೆನ್ನಾಗಿ ಹೇಳಲ್ಪಟ್ಟಿದೆ. ಅದೇ ಸೂಕ್ತದ ಐದನೆಯ ಋಕ್ಕಿನಲ್ಲಿ—

ಮಹಾ ಆದಿತ್ಯೋ ನಮಸೋಪಸದ್ಯೋ ಯಾತಯಜ್ಜನೋ ಗೃಣತೇ ಸುಶೇವಃ ।

(ಋ. ಸಂ. ೩-೫೯-೫

ಈ ಮಿತ್ರನನ್ನು ಮನುಷ್ಯರನ್ನೆಲ್ಲಾ ಒಟ್ಟಾಗಿ ಸೇರಿಸುವ ಮಹನೀಯನಾದ ಆದಿತ್ಯನೆಂದು ಕರೆದಿದೆ. ಈ ಅರ್ಥವನ್ನು ಕೊಡುವ **ಯಾತಯಜ್ಜನ** ಎಂಬ ಶಬ್ದವು—

ವ್ರತೇನ ಸ್ಥೋ ಧ್ರುವಕ್ಷೇಮಾ ಧರ್ಮಣಾ ಯಾತಯಜ್ಜನಾ ।

(ಋ. ಸಂ. ೫-೬೨-೭)

ಎಂಬ ಋಕ್ಕಿನಲ್ಲಿ ಮಿತ್ರಾವರುಣರ ಪರವಾಗಿಯೂ—

ಮಿತ್ರಸ್ತ್ವೋರ್ವರುಣೋ ಯಾತಯಜ್ಜನೋಽರ್ಯಮಾ ಯಾತಯಜ್ಜನಃ ।

(ಋ. ಸಂ. ೧೦-೧೩೬-೩)

ಎಂಬ ಋಕ್ಕಿನಲ್ಲಿ ಮಿತ್ರ, ವರುಣ, ಅರ್ಯಮಾ ಎಂದು ಮೂರುಮಂದಿಯ ಪರವಾಗಿಯೂ ಪ್ರಯುಕ್ತವಾಗಿದೆ. ಮೇಲೆ ಹೇಳಿದ ಋ. ಸಂ. ೩-೫೯ ನೇ ಸೂಕ್ತದ ಪ್ರಕಾರ ಮಿತ್ರನು ಸ್ವರ್ಗ ಮತ್ತು ಭೂಮಿಗಳಿಗೆ ಆಧಾರನಾಗಿದಾನೆ. ಮನುಷ್ಯರ ಐದು ಪಂಗಡಗಳು (ಪಂಚಜನಾಃ) ಅವನಿಗೆ ವಿಧೇಯರಾಗಿದಾರೆ. ಇತರ ದೇವತೆಗಳಿಗೆಲ್ಲಾ ಅವನು ಜೀವನಾಧಾರವಾಗಿದಾನೆ ಎಂದು ಮಿತ್ರನ ಗುಣವರ್ಣನೆ ಇದೆ. ಋ. ಸಂ. ೫-೮೧-೪ ರಲ್ಲಿ ಸವಿತೃ ಮತ್ತು ಮಿತ್ರರು ಒಂದೇ ಎಂದೂ, ವಾಜಸನೇಯಸಂಹಿತೆಯಲ್ಲಿ (ವಾ. ಸಂ. ೪-೩) ಮಿತ್ರನ ನಿಯಮಗಳನ್ನನುಸರಿಸಿಯೇ ವಿಷ್ಣುವು ಮೂರು ಹೆಜ್ಜೆಗಳನ್ನಿಟ್ಟನೆಂದೂ, ಋ ಸಂ. ೧೦-೮.೪ ರಲ್ಲಿ ಉಷಃಕಾಲಕ್ಕೆ ಮುಂಚೆ ಸ್ಥಾಪಿತನಾದ ಅಗ್ನಿಯು ಮಿತ್ರನನ್ನು ತಾನೇ

ತನಗೋಸ್ಕರ ಉತ್ಪತ್ತಿಮಾಡುತ್ತಾನೆಂದೂ, ಋ. ಸಂ. ೩-೫-೪ ರಲ್ಲಿ ದೀಪ್ತನಾದ ಅಗ್ನಿಯು ಜನಿತನಾದಾಗ ಮಿತ್ರನು ಎಂದೂ,

ಮಿತ್ರೋ ಅಗ್ನಿರ್ಭವತಿ ಯತ್ಸಮಿದ್ಧೋ ಮಿತ್ರೋ ಹೋತಾ ವರುಣೋ ಜಾತವೇದಾಃ ।
ಮಿತ್ರೋ ಅಧ್ವರ್ಯುರಿಷಿರೋ ದಮೂನಾ ಮಿತ್ರಃ ಸಿಂಧೂನಾಮುತ ಪರ್ವತಾನಾಂ ॥

(ಋ. ಸಂ. ೩-೫-೪)

ಎಂಬಲ್ಲಿ ಚೆನ್ನಾಗಿ ಪ್ರಜ್ವಲಿತನಾದ ಅಗ್ನಿಯೇ ಮಿತ್ರನೆಂದೂ, ಈ ಮಿತ್ರನೇ ಯಜ್ಞದಲ್ಲಿ ಹೋತೃವೂ, ಅಧ್ವರ್ಯುವೂ, ವರುಣನೂ, ಜಾತವೇದಸ್ಸೆಂಬ ಅಗ್ನಿಯೂ ಆಗಿರುವನೆಂದೂ, ಇವನು ನದಿಗಳಿಗೂ, ಪರ್ವತಗಳಿಗೂ ಮಿತ್ರ (ಸ್ನೇಹಿತ, ಹಿತಕಾರಿ) ನೆಂದೂ ಮಿತ್ರನ ಗುಣಗಳ ವರ್ಣನೆ ಇದೆ.

ವರುಣಃ—ವರುಣೋ ವೃಣೋತೀತಿ ಸತಃ (ನಿ. ೧೦-೨) ಮೇಘಸಮೂಹದಿಂದ ಆವೃತನಾದ್ದರಿಂದ ಈ ದೇವತೆಗೆ ವರುಣನೆಂದು ಹೆಸರು ಎಂದು ಯಾಸ್ಕರ ನಿರ್ವಚನವಿದೆ.

ವರುಣನು ಅತಿಶ್ರೇಷ್ಠನಾದ ದೇವತೆ, ಸಾಮರ್ಥ್ಯಾದಿಗಳಲ್ಲಿ ಇಂದ್ರನಿಗೆ ಸಮಾನನು. ವರುಣದೇವತಾಕವಾದ ಸೂಕ್ತಗಳು ಋಗ್ವೇದದಲ್ಲಿ ಹನ್ನೆರಡಿವೆ. ಆದರೆ ಮಿತ್ರಾವರುಣರನ್ನು ಒಟ್ಟಾಗಿ ಸ್ತುತಿಸುವ ಸೂಕ್ತಗಳು ಇಪ್ಪತ್ತುನಾಲ್ಕು ಇವೆ.

ವರುಣನಿಗೆ ಮಾನುಷದೇಹ, ಮಾನುಷವ್ಯಾಪಾರಗಳುಂಟು. ಆದರೆ ಭೌತಿಕಶರೀರ ಮತ್ತು ವ್ಯಾಪಾರಗಳಿಗಿಂತ ಹೆಚ್ಚಾಗಿ ಅವನ ನೈತಿಕವ್ಯಾಪಾರಾದಿಗಳ ಮತ್ತು ಕಾರ್ಯಗಳ ವರ್ಣನೆಯೇ ಹೆಚ್ಚಾಗಿ ಸೂಚಿತವಾಗಿದೆ. ಅವನಿಗೆ ಮುಖ, ಕಣ್ಣು, ತೋಳುಗಳು, ಕೈಗಳು ಮತ್ತು ಪಾದಗಳಿವೆ. ರಥ ನಡೆಯಿಸುತ್ತಾನೆ, ಕುಳಿತುಕೊಳ್ಳುತ್ತಾನೆ, ತಿನ್ನುತ್ತಾನೆ, ಪಾನಮಾಡುತ್ತಾನೆ ಇತ್ಯಾದಿ ಅವನ ಶರೀರವ್ಯಾಪಾರಗಳ ವಿವರಣೆ ಇದೆ. ಅಗ್ನಿ, ಮಿತ್ರ ಮತ್ತು ವರುಣರಿಗೆ ಸೂರ್ಯನೇ ನೇತ್ರನೆಂದು,

ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।

(ಋ. ಸಂ. ೧-೧೧೫-೧)

ಉದುತ್ಯಚ್ಚಕ್ಷುರ್ಮಹಿ ಮಿತ್ರಯೋರ್ಁ ವಾ ಏತಿ ಪ್ರಿಯಂ ವರುಣಯೋರದಬ್ಧಂ ।

(ಋ. ಸಂ. ೬-೫೧-೧)

ಉದ್ವಾಂ ಚಕ್ಷುರ್ವರುಣ ಸುಪ್ರತೀಕಂ ದೇವಯೋರೇತಿ ಸೂರ್ಯಸ್ತತನ್ವಾನ್ ।

(ಋ. ಸಂ. ೭-೬೧-೧)

ಚುಕ್ಷರ್ಮಿತ್ರಸ್ಯ ವರುಣಸ್ಯ ದೇವಶ್ಚರ್ಮೇವ ಯಃ ಸಮವಿವ್ಯಕ್ ತಮಾಂಸಿ ।

(ಋ. ಸಂ. ೭-೬೫-೧)

ನಮೋ ಮಿತ್ರಸ್ಯ ವರುಣಸ್ಯ ಚಕ್ಷಸೇ ಮಹೋ ದೇವಾಯ ತದೃತಂ ಸಪರ್ಯತ ।

(ಋ. ಸಂ. ೧೦-೩೭-೧)

ಎಂಬ ಋಕ್ಕುಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಸೂರ್ಯನು ಇವನಿಗೆ ನೇತ್ರಪ್ರಾಯನೆಂಬ ವಿಷಯವು ಮಿತ್ರಾವರುಣ ದೇವತಾಕವಾದ ಸೂಕ್ತಗಳ ಮೊದಲನೆಯ ಋಕ್ಕಿನಲ್ಲಿಯೇ ಇರುವುದರಿಂದ ಮಿತ್ರಾವರುಣರ ಪ್ರಸ್ತಾಪ ಬಂದಾಗಲೆಲ್ಲಾ ಮೊದಲು ಗೋಚರವಾಗುವುದೇ ಈ ಅಂಶವೆಂದು ತೋರುತ್ತದೆ ಮತ್ತು ಋ. ಸಂ. ೭-೬೬-೧೦ ನೆಯ ಋಕ್ಕಿನಲ್ಲಿ

ಅರ್ಯಮಾ, ಮಿತ್ರ, ವರುಣರು ಸೂರ್ಯನೇತ್ರರೆಂದು ಹೇಳಿದೆ. ವರುಣನು ದೂರದೃಷ್ಟಿಯುಳ್ಳವನು (ಉರುಚಕ್ಷಸಂ) ಎಂದು ಋ. ಸಂ. ೧-೨೫-೫ ; ೧-೨೫-೧೬ ; ಮೊದಲಾದ ಋಕ್ಕುಗಳಲ್ಲಿ ಹೇಳಿದೆ.

ಆ ನೋ ಬರ್ಹೀ ರಿಶಾದಸೋ ವರುಣೋ ಮಿತ್ರೋ ಅರ್ಯಮಾ ।
ಸೀದಂತು ಮನುಷೋ ಯಥಾ ॥

(ಋ. ಸಂ. ೧-೨೬-೪)

ವ್ರತೇನ ಸ್ಥೋ ಧ್ರುವಕ್ಷೇಮಾ ಧರ್ಮಣಾ ಯಾತಯಜ್ಜನಾ ।
ನಿ ಬರ್ಹಿಷಿ ಸದತಂ ಸೋಮಪೀತಯೇ ॥

(ಋ. ಸಂ. ೫-೬೨-೨)

ಇತ್ಯಾದಿ ಋಕ್ಕುಗಳಲ್ಲಿ ಸೋಮಪಾನಕ್ಕಾಗಿ ಮಿತ್ರ, ವರುಣ, ಅರ್ಯಮರನ್ನು ಯಜ್ಞವೇದಿಯಲ್ಲಿ ಹಾಸಿರುವ ದರ್ಭೆಯ ಮೇಲೆ ಬಂದು ಕುಳಿತುಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ.

ಯದೀ ಸಖಾಯಾ ಸಖ್ಯಾಯ ಸೋವ್ಯೈಃ ಸುತೇಭಿಃ ಸುಪ್ರಯಸಾ ಮಾದಯೈತೇ ॥

(ಋ. ಸಂ. ೪-೪೧-೩)

ಇತ್ಯಾದಿ ಋಕ್ಕುಗಳಲ್ಲಿ ವರುಣನು ಇಂದ್ರಾದಿ ದೇವತೆಗಳೊಡನೆ ಸೋಮಪಾನಮಾಡುತ್ತಾನೆಂದು ಹೇಳಿದೆ.

ಬಿಭ್ರದ್ದ್ರಾಪಿಂ ಹಿರಣ್ಯಯಂ ವರುಣೋ ವಸ್ತ ನಿರ್ಜಗಂ ।
ಪರಿಸ್ಪಶೋ ನಿಷೇದಿರೇ ॥

(ಋ. ಸಂ. ೧-೨೫-೧೩)

ಎಂಬ ಋಕ್ಕಿನಲ್ಲಿ ವರುಣನು ಸುವರ್ಣಮಯವಾದ ಮೇಲುಹೊದಿಕೆ ಅಥವಾ ನಿಲುವಂಗಿಯನ್ನೂ ಮತ್ತು ಹೊಳೆಯುವ ಉಡುಪನ್ನೂ ಧರಿಸುತ್ತಾನೆಂಬ ವರ್ಣನೆ ಇದೆ. ವರುಣನ ರಥವು ಸುವರ್ಣಮಯವಾದುದು ಮತ್ತು ಸೂರ್ಯನಂತೆ ಕಾಂತಿಯುಕ್ತವಾದುದು ಮತ್ತು ಅದರಲ್ಲಿ ಅಶ್ವಪ್ರಚೋದಕವಾದ ಚಾವಟಿಗಳಿವೆ. ಮಿತ್ರಾವರುಣರು ಆಕಾಶದಲ್ಲಿ ಬಹಳ ಎತ್ತರವಾದ ದ್ರದೇಶದಲ್ಲಿ ರಥಾರೋಹಣ ಮಾಡುತ್ತಾರೆ. (ಋ. ಸಂ. ೫-೬೩-೧) ಇತ್ಯಾದಿ ವರ್ಣನೆಗಳಿವೆ.

ಮಿತ್ರಾವರುಣರ ವಾಸಗೃಹವು ಸುವರ್ಣಮಯವಾದುದು ಮತ್ತು ಅದು ಮೇಲುಲೋಕದಲ್ಲಿದೆ ಮತ್ತು ವರುಣನು ತನ್ನ ಪ್ರಾಸಾದದಲ್ಲಿ ಕುಳಿತು—

ನಿ ಷಸಾದ ಧೃತವ್ರತೋ ವರುಣಃ ಪಸ್ತ್ಯಾ ೩ ಸ್ವಾ । ಸಾಮ್ರಾಜ್ಯಾಯ ಸುಕ್ರತುಃ ।
ಅತೋ ವಿಶ್ವಾನ್ಯದ್ಭುತಾ ಚಿಕಿತ್ವಾ ಅಭಿ ಪಶ್ಯತಿ । ಕೃತಾನಿ ಯಾ ಚ ಕರ್ತ್ವಾ ॥

(ಋ. ಸಂ. ೧-೨೫-೧೦, ೧೧)

ಪ್ರಪಂಚದಲ್ಲಿ ನಡೆಯುವುದನ್ನೆಲ್ಲಾ ನೋಡುತ್ತಾನೆ. ಮಿತ್ರಾವರುಣರ ವಾಸಸ್ಥಾನವು ಬಹಳ ದೊಡ್ಡದು, ಬಹಳ ಎತ್ತರವಾದುದು, ಸಹಸ್ರಸ್ತಂಭಗಳನ್ನಾಶ್ರಯಿಸಿ ದೃಢವಾಗಿದೆ ಮತ್ತು ಅವರ ಮನೆಗೆ ಸಹಸ್ರದ್ವಾರಗಳಿವೆ (ಋ.ಸಂ. ೭-೮೮-೫) ಸರ್ವದರ್ಶಿಯಾದ ಸೂರ್ಯನು ತನ್ನ ವಾಸಸ್ಥಾನದಿಂದ ಹೊರಟು ಮಿತ್ರಾವರುಣರ ಮನೆಗೆ ಮನುಷ್ಯರ ಕೆಲಸಗಳನ್ನು ತಿಳಿಸಲು ಹೋಗುತ್ತಾನೆ ಮತ್ತು ಅವರ ಪ್ರಿಯವಾದ ಮನೆಯನ್ನು ಪ್ರವೇಶಿಸುತ್ತಾನೆ ಇತ್ಯಾದಿ ವರ್ಣನೆಗಳೂ ಇವೆ.

ವರುಣನು ಒಂಟಿಯಾಗಿ ಅಥವಾ ಮಿತ್ರಸಹಿತನಾಗಿ ಇಶರ ದೇವತೆಗಳಂತೆ ಅನೇಕಕಡೆ ರಾಜನೆಂದು ಕರೆಯಲ್ಪಟ್ಟಿದ್ದಾನೆ.

ಅಬುಧ್ನೇ ರಾಜಾ ವರುಣೋ ವನಸ್ಯೋರ್ಧ್ವಂ ಸ್ತೂಪಂ ದದತೇ ಪೂತದಕ್ಷಃ ।

(ಋ. ಸಂ. ೧-೨೪-೭)

ತ್ವಂ ವಿಶ್ವೇಷಾಂ ವರುಣಾಸಿ ರಾಜಾ ಯೇ ಚ ದೇವಾ ಅಸುರ ಯೇ ಚ ಮರ್ತಾಃ ।

(ಋ. ಸಂ. ೨-೨೭.೧೦)

ತೇನ ವಿಶ್ವಸ್ಯ ಭುವನಸ್ಯ ರಾಜಾ ಯವಂ ನ ವೃಷ್ಟಿರ್ವ್ಯುನತ್ತಿ ಭೂಮ ।

(ಋ. ಸಂ. ೫-೮೫-೩)

ಇತ್ಯಾದಿ ಋಕ್ಕುಗಳಲ್ಲಿ ವರುಣನು ಮನುಷ್ಯರಿಗೆ ಮಾತ್ರವೇ ಅಲ್ಲ. ದೇವತೆಗಳಿಗೂ, ಸಕಲ ಲೋಕಗಳಿಗೂ ರಾಜನೆಂದು ಹೇಳಿದೆ. ವರುಣನಲ್ಲದೆ ಇಂದ್ರ, ಯಮ, ಸೋಮ ಮೊದಲಾದ ದೇವತೆಗಳಿಗೂ ರಾಜನೆಂಬ ಗೌರವಸೂಚಕವಾದ ಹೆಸರಿದೆ.

ಇಂದ್ರನ ಸಂಬಂಧವಾದ ಕಥೆಗಳು ಅನೇಕವಿವೆ. ಆದರೆ ವರುಣನ ವಿಷಯದಲ್ಲಿ ಇದಕ್ಕೆ ತೀರಾ ವಿರುದ್ಧವಾಗಿದೆ. ಒಂದಾದರೂ ಕಥೆಗಳಿಲ್ಲ. ವರುಣನು ಭೌತಿಕ ಮತ್ತು ನೈತಿಕವಿಧಿಗಳ(**ವರುಣಸ್ಯ ವ್ರತಾನಿ**) ನಿಯಾಮಕನೆಂದು ಬಹಳವಾಗಿ ಹೊಗಳಿದೆ. ಮಿತ್ರಾವರುಣರ ದೈವಶಕ್ತಿಯನ್ನು **ಮಾಯಾ** ಎಂಬ ಪದದಿಂದ ವರ್ಣಿಸಿದೆ. ಇದು ದೇವತೆಗಳಿಗೆ ಅನ್ವಯಿಸಿದರೆ ಒಳ್ಳೆಯದನ್ನು ಮಾಡಲು ಅವರಿಗಿರುವ ಗೂಢವಾದ ಶಕ್ತಿಯೆಂತಲೂ, ರಾಕ್ಷಸರಿಗೆ ಅನ್ವಯಿಸುವ ಸಂದರ್ಭದಲ್ಲಿ ಅದೇ ಪದಕ್ಕೆ ಕೆಟ್ಟದ್ದನ್ನು ಮಾಡಲು ಅವರಿಗಿರುವ ಕಟುವಾದ ಶಕ್ತಿ ಎಂತಲೂ ಅರ್ಥ. ಒಳ್ಳೆಯ ಅರ್ಥದಲ್ಲಿ ಮಿತ್ರಾವರುಣರಿಗೆ **ಈ** ಪದವು ಸಲ್ಲುತ್ತದೆ. ಕೆಟ್ಟ ಅರ್ಥದಲ್ಲಿ ರಾಕ್ಷಸರಿಗೆ ಅನ್ವಯಿಸುತ್ತದೆ. ಅಸುರಶಬ್ದಾರ್ಥದಂತೆ ಮಾಯಾಶಬ್ದಕ್ಕೂ ಎರಡರ್ಥಗಳಲ್ಲಿಯೂ ಪ್ರಯೋಗವಿದೆ. ತನ್ನಲ್ಲಿ ನಿಗೂಢವಾದ **ಈ** ಮಾಯಾಶಕ್ತಿಯಿಂದ ವರುಣನು ವಾಯುವನ್ನುಂಡಲದಲ್ಲಿ ನಿಂತು ಅಳತೆಕಡ್ಡಿಯಿಂದ ಅಳೆಯುವಂತೆ ಸೂರ್ಯನಿಂದ ಭೂಮಿಯನ್ನು ಅಳೆಯುತ್ತಾನೆ. ಸೂರ್ಯನು ಅಂತರಿಕ್ಷವನ್ನು ದಾಟುವಂತೆ ಮಾಡಿ ಅವನನ್ನು ಮಳೆಮೋಡಗಳಿಂದ ಮಸಕಾಗುವಂತೆ ಮಾಡುತ್ತಾನೆ. ಆಗ ಮಧುಮಿಶ್ರಿತವಾದ (ಸಿಹಿಯಾದ) ಹನಿಗಳು ಉದುರುತ್ತವೆ (ಋ. ಸಂ. ೫-೬೩-೪). ಆಕಾಶವು ಮಳೆಗರೆಯುವಂತೆ ಮಾಡುತ್ತಾನೆ. ಆದ್ದರಿಂದ **ಈ ಮಾಯಾ** ಎಂಬ ಪದವು (ಋ. ಸಂ. ೬-೪೮-೧೪; ೭-೨೮-೪; ೧೦.೯೯-೧೦; ೧೦.೧೪೭-೫ ಮೊದಲಾದ ಋಕ್ಕುಗಳಲ್ಲೆಲ್ಲಾ ದೇವತೆಗಳಲ್ಲಿ ಮುಖ್ಯವಾಗಿ ವರುಣನಿಗೇ ಹೇಳಿದೆ.

ಪ್ರಕೃತಿನಿಯಮಗಳನ್ನು ವಿಧಿಸುವವನು ವರುಣನು. ಅವನೇ ಭೂಮಿ ಮತ್ತು ಸ್ವರ್ಗವನ್ನು ಸ್ಥಾಪಿಸಿದನು ಮತ್ತು

ಅಸೀದದ್ವಿಶ್ವಾ ಭುವನಾನಿ ಸಂರಾಡ್ವಿಶ್ವೇತ್ತಾನಿ ವರುಣಸ್ಯ ವ್ರತಾನಿ ।

(ಋ. ಸಂ. ೮-೪೨-೧)

ಎಂಬ ಋಕ್ಕಿನಲ್ಲಿ ವರುಣನು ಸಮಸ್ತ ಲೋಕಗಳಲ್ಲಿಯೂ ವಾಸಮಾಡುವನೆಂದೂ, ಅವನ ನಿಯಮಾದಿಗಳು ಅಲ್ಲೆಲ್ಲಾ ಆಚರಿಸಲ್ಪಡುವುವೆಂದೂ,

ತಿಸ್ರೋ ದ್ಯಾವೋ ನಿಹಿತಾ ಅಂತರಸ್ಮಿನ್ ತಿಸ್ರೋ ಭೂಮೀರುಪರಾಃ ಷಡ್ವಿಧಾನಾಃ ।

(ಋ. ಸಂ. ೭-೮೭-೫)

ಎಂಬಲ್ಲಿ ಮೂರು ಊರ್ಧ್ವಲೋಕಗಳೂ, ಮೂರು ಭೂಲೋಕಗಳೂ (ಅಧೋಲೋಕಗಳು) ಅವನ ವಶದಲ್ಲಿವೆಯೆಂದೂ ಹೇಳಿದೆ. ವರುಣ ಮತ್ತು ಮಿತ್ರರು ಪ್ರಪಂಚವೆಲ್ಲವನ್ನೂ ಆಳುತ್ತಾರೆ (ಋ. ಸಂ. ೫-೬೩-೭). ಅವರೇ ಸಮಸ್ತ ಜಗತ್ತಿಗೂ ರಕ್ಷಕರು (ಋ. ಸಂ. ೨-೨೭-೪). ವರುಣನು ಸ್ವರ್ಗ, ಭೂಮಿ, ಆಕಾಶಗಳಿಗೆ ಆಧಾರಭೂತನಾಗಿದ್ದಾನೆ

(ಋ. ಸಂ. ೫-೬೯-೧, ೪) ಅವನು ಉದಕದಲ್ಲಿ ಅಗ್ನಿಯನ್ನೂ, ಆಕಾಶದಲ್ಲಿ ಸೂರ್ಯನನ್ನೂ, ಕಲ್ಲಿನಮೇಲೆ ಸೋಮವನ್ನೂ ಇಟ್ಟಿದ್ದಾನೆ. ಸೂರ್ಯನಿಗೋಸ್ಕರ ಅಗಲವಾದ ದಾರಿಯನ್ನು ಮಾಡಿದ್ದಾನೆ. ವರುಣ, ಮಿತ್ರ ಮತ್ತು ಅರ್ಯಮರು ಸೂರ್ಯನಿಗೋಸ್ಕರ ದಾರಿಯನ್ನು ಬಿಡಿಸುತ್ತಾರೆ (ಋ. ಸಂ. ೭-೬೦-೪) ಇತ್ಯಾದ್ಯನೇಕ ಋಕ್ಕುಗಳಲ್ಲಿ ವರುಣನ ಅಧಿಕಾರವರ್ಣನೆ ಇದೆ.

ತೈತ್ತಿರೀಯ ಸಂಹಿತೆಯಲ್ಲಿ (ತೈ. ಸಂ. ೬-೪-೮-೪) **ಮಿತ್ರೋಽಹರಜನಯದ್ವರುಣೋ ರಾತ್ರಿಂ** ಎಂದರೆ ಮಿತ್ರನು ಹಗಲನ್ನೂ, ವರುಣನು ರಾತ್ರಿಯನ್ನೂ ಸೃಷ್ಟಿಮಾಡಿದರೆಂದಿದೆ. ಆದ್ದರಿಂದ **ಮೈತ್ರಂ ವಾ ಅಹಃ। ವಾರುಣೀ ರಾತ್ರಿಃ**—ಎಂದರೆ ಮಿತ್ರನು ಹಗಲಿಗೆ ಅಧಿಪತಿಯೆಂದೂ, ವರುಣನು ರಾತ್ರಿಗೆ ಅಧಿಪತಿಯೆಂದೂ ಅನೇಕ ಕಡೆಗಳಲ್ಲಿ ಹೇಳಿದೆ. (ತೈ. ಸಂ. ೨-೧-೭-೪) ಒಂದು ಸ್ಥಳದಲ್ಲಿ ವರುಣನು ಋತುಗಳನ್ನು ವಿಭಜಿಸಿದನೆಂದು ಹೇಳಿದೆ.

ವೇದ ಮಾಸೋ ಧೃತವ್ರತೋ ದ್ವಾದಶ ಪ್ರಜಾವತಃ। ವೇದಾ ಯ ಉಪಜಾಯತೇ।

(ಋ. ಸಂ. ೧-೨೫-೮)

ಎಂಬಲ್ಲಿ ವರುಣನಿಗೆ ಹನ್ನೆರಡು ತಿಂಗಳೂ ತಿಳಿದಿವೆಯೆಂದೂ,

ವಿ ಯೋ ದಧುಃ ಶರದಂ ಮಾಸಮಾದಹರ್ಯಜ್ಞಮಕ್ತುಂ ಚಾದೃಚಂ।
ಅನಾಪ್ಯಂ ವರುಣೋ ಮಿತ್ರೋ ಅರ್ಯಮಾ ಕ್ಷತ್ರಂ ರಾಜಾನ ಆಶತ ॥

(ಋ. ಸಂ. ೭-೬೬-೧೧)

ಎಂಬ ಋಕ್ಕಿನಲ್ಲಿ ಮಿತ್ರ, ವರುಣ, ಅರ್ಯಮರು, ಶರತ್ಕಾಲ, ತಿಂಗಳು, ಹಗಲು ಮತ್ತು ರಾತ್ರಿಗಳನ್ನು ವಿಂಗಡಿಸಿದರು ಎಂದು ಹೇಳಿದೆ.

ಉದಕವನ್ನು ಕ್ರಮಪಡಿಸುವವನೂ ಅವನೇ ಎಂದು ಅನೇಕ ಕಡೆಗಳಲ್ಲಿ ಹೇಳಿದೆ. ನದಿಗಳು ಹರಿಯುವಂತೆ ಮಾಡಿದವನೂ ಅವನೇ. ಅವನ ಆಜ್ಞೆಯ ಮೇರೆಯೇ ಅವು ಸತತವಾಗಿ ಪ್ರವಹಿಸುತ್ತವೆ. (ಋ. ಸಂ. ೨-೨೮-೪) ನದಿಗಳು ವೇಗವಾಗಿ ಸಮುದ್ರದೊಳಕ್ಕೆ ನೀರು ತಂದು ಸುರಿಯುತ್ತಿದ್ದರೂ ಅದನ್ನು ತುಂಬಿದಿರುವುದು ಅವನ ಹುದುಗಿದ ಶಕ್ತಿಯಿಂದಲೇ. (ಋ. ಸಂ. ೫-೮೫-೬) ವರುಣ ಮತ್ತು ಮಿತ್ರರು ನದಿಗಳಿಗೆ ಒಡೆಯರು. ವರುಣನು ಸಾಗರಗಳಿಗೆ ಒಡೆಯನೆಂಬುದು ಪ್ರಸಿದ್ಧವಾದ ಅಂಶವಾದರೂ ಋಗ್ವೇದದಲ್ಲಿ ಬರುವುದು ಬಹಳ ಅಪರೂಪ. ಪ್ರಾಯಶಃ ಇದು ಅಮುಖ್ಯವೆಂಬುದೇ ಇದಕ್ಕೆ ಕಾರಣವಿರಬಹುದು. ಪುರಾಣಾದಿಗಳಲ್ಲಿ ವರುಣನು ಜಲಾಧಿಪತಿಯೆಂದು ಪ್ರಸಿದ್ಧನಾಗಿದ್ದಾನೆ. ಮತ್ತು ವರುಣನು ಅಷ್ಟದಿಕ್ಪಾಲಕರಲ್ಲಿ ಒಬ್ಬನಾಗಿ ಪಶ್ಚಿಮದಿಕ್ಕಿಗೆ ಅಧಿಪತಿಯೆಂಬುದು ಪುರಾಣಾದಿಗಳಲ್ಲಿ ಹೇಳಿರುವ ವಿಷಯ. ಋಗ್ವೇದದಲ್ಲಿ ಅದಕ್ಕೆ ಯಾವ ಸಮರ್ಥನೆಯೂ ಇಲ್ಲ. ಸಾಧಾರಣವಾಗಿ ವರುಣನಿಗೆ ಸಂಬಂಧವಿರುವುದೆಲ್ಲಾ ವಾಯುಮಂಡಲದೊಡನೆ ಇರುವ ನೀರಿನೊಡನೆಯೇ. ವೃಷ್ಟಿಗಾಗಿ ಪ್ರಾರ್ಥಿಸಲ್ಪಡುವ ದೇವತೆಗಳಲ್ಲಿ ವರುಣ ಮತ್ತು ಮಿತ್ರರೇ ಪ್ರಮುಖರು. ಪರ್ವತಗಳೆಲ್ಲಾ ಮೋಡಗಳಿಂದ ಆವೃತವಾಗಿರುವಾಗ ಬುಡಮೇಲಾದ ಬಾಸಿಯಿಂದ (ಮೋಡದಿಂದ) ಸ್ವರ್ಗ, ಭೂಮಿ ಮತ್ತು ಆಕಾಶಗಳಿಗೆ ನೀರ್ಗರೆದು ಭೂಮಿಯನ್ನೆಲ್ಲಾ ವರುಣನು ತೇವವನ್ನಾಗಿ ಮಾಡುವನು ಎಂದು ಋ ಸಂ. ೫-೮೫-೩,೪ನೆಯ ಋಕ್ಕುಗಳಲ್ಲಿ ಹೇಳಿದೆ. ಒಂದು ಇಡೀ ಸೂಕ್ತವೇ (ಎಂದರೆ ಋ. ಸಂ. ೫-೬೩ನೆಯ ಸೂಕ್ತವು) ಅವರ ಮಳೆಗೆರೆಯುವ ಶಕ್ತಿಯನ್ನು ಸೂಚಿಸುತ್ತದೆ. ಯಜುರ್ವೇದ ಸಂಹಿತೆಯಲ್ಲಿ (ತೈ. ಸಂ. ೫-೫-೪-೧) **ಅಪೋ ವರುಣಸ್ಯ ಪತ್ನ್ಯ ಆಸನ್**—

ನೀರುಗಳು ವರುಣನ ಪತ್ನಿಯರೆಂದೂ (ತೈ. ಸಂ. ೬-೪-೩-೨) **ಮಿತ್ರಾ ವರುಣೌ ವಾ ಆಪಾಂ ನೇತಾರೌ**—ಮಿತ್ರಾ ವರುಣರು ನೀರಿಗೆ ನಾಯಕರು ಎಂದೂ ಹೇಳಿದೆ.

ವರುಣನ ಶಾಸನಗಳು ಚೆನ್ನಾಗಿ ಸ್ಥಾಪಿತವಾಗಿವೆಯೆಂದು ಪದೇಪದೇ ಹೇಳಲ್ಪಟ್ಟಿವೆ. ಈ ಕಾರಣದಿಂದಲೇ ಅವನಿಗೆ **ಧೃತವೃತ** ಎಂದು ಹೆಸರು. ಮಿತ್ರಾವರುಣರಿಬ್ಬರಿಗೂ ಈ ವಿಶೇಷಣವು ಸಂದಿದೆ.

ಪರಿ ಧಾಮಾನಿ ಮರ್ಮೃಶದ್ವರುಣಸ್ಯ ಪುರೋ ಗಯೇ ವಿಶ್ವೇ ದೇವಾ ಅನು ವ್ರತಂ ನಭಂತಾಮ-
ನ್ಯಕೇ ಸಮೇ ॥

(ಋ. ಸಂ. ೮-೪೧-೭)

ನ ವಾಂ ದೇವಾ ಅಮೃತಾ ಆ ಮಿನಂತಿ ವ್ರತಾನಿ ಮಿತ್ರಾವರುಣಾ ಧ್ರುವಾಣಿ ॥

(ಋ. ಸಂ. ೫-೬೯-೪)

ಇತ್ಯಾದಿ ಋಕ್ಕುಗಳಲ್ಲಿ ದೇವತೆಗಳೇ ಮಿತ್ರಾವರುಣಾರ್ಯಮರ ಆಪ್ಪಣೆಗಳನ್ನು ಪಾಲಿಸುತ್ತಾರೆಂದೂ ಅನಾದಿ ದೇವತೆಗಳೂ ಕೂಡ ಅವರ ಧೃತವ್ರತಗಳನ್ನು ವಿಾರಲಾರರೆಂದೂ ಹೇಳಿದೆ. ಮಿತ್ರಾವರುಣರ ನಿಯಮ (ಋತ) ಮತ್ತು ಬೆಳಕಿಗೆ ನಿಯಾಮಕರು. ಈ ಶಾಸನಗಳ ಬಲದಿಂದಲೇ ಅವರು ನಿಯಮಗಳಿಗೆ ಬೆಂಬಲ ಕೊಡಲು ಸಾಧ್ಯವಾಗಿದೆ. ಈ ಗುಣವು ವಿಶೇಷವಾಗಿ ಇವರಿಬ್ಬರಲ್ಲಿ, ಒಂದೊಂದುವೇಳೆ ಆದಿತ್ಯರಲ್ಲಿ ಅಥವಾ ಇತರ ಸಾಧಾರಣ ದೇವತೆಗಳಲ್ಲಿಯೂ ಕಂಡುಬರುತ್ತದೆ. ಅವರು ಸತ್ಯ (ಋತ) ಮತ್ತು ನ್ಯಾಯವನ್ನು ಅಭಿವೃದ್ಧಿಗೊಳಿಸುವವರು. **ಋತಸ್ಯ ಗೋಪಾಃ** ಎಂದರೆ ನಿಯಮಗಳನ್ನು ಪಾಲಿಸುವವರು (ಅಥವಾ ಪಾಲಿಸುವಂತೆ ಮಾಡುವವರು) ಎಂಬ ವಿಶೇಷಣವು ಮಿತ್ರಾವರುಣರಿಗೆ ಅನೇಕವೇಳೆ ಪ್ರಯೋಗಿಸಿರುವುದು ಕಂಡುಬರುತ್ತದೆ.

ವರುಣನ ಶಕ್ತಿಯು ಅಗಾಧವಾದುದು. ಹಾರುವ ಪಕ್ಷಿಗಳಾಗಲೀ, ಹರಿಯುವ ನದಿಗಳಾಗಲೀ ಅವನ ರಾಜ್ಯದ ಗಡಿಯ ಮೇರೆಯನ್ನು ಸೇರಲಾರವು; ಅವನ ಶಕ್ತಿಯನ್ನು ವಿಾರಲಾರವು; ಅವನ ಕೋಪನನ್ನು ತಡೆಯಲಾರವು. ಮಿತ್ರಾವರುಣರ ಸೀಮೆಯ ಎಲ್ಲೆಕಟ್ಟನ್ನು ಆಕಾಶ ಮತ್ತು ನದಿಗಳು ಕೂಡ ತಲಪಿಲ್ಲ. ಸಮಸ್ತವೂ ವರುಣನಲ್ಲಿಯೇ ಅಡಗಿವೆ. ಎಲ್ಲಾ ಪ್ರಾಣಿಗಳ ವಸತಿಗಳೂ, ಮೂರು ಸ್ವರ್ಗಲೋಕಗಳೂ, ಮೂರು ಭೂಲೋಕಗಳೂ ಅವನಲ್ಲಿಯೇ ನಿಹಿತವಾಗಿವೆ. ವರುಣನು ಸರ್ವಜ್ಞನು. ಆಕಾಶದಲ್ಲಿ ಪಕ್ಷಿಗಳ ಹಾರಾಟ, ಸಮುದ್ರದಲ್ಲಿ ನಾವೆಗಳ ಸಂಚಾರ, ದೂರಗಾಮಿಯಾದ ವಾಯುವಿನ ಗತಿ, ಇವೆಲ್ಲವೂ ಅವನಿಗೆ ತಿಳಿದಿದೆ. ಹಿಂದೆ ಕಳೆದುಹೋದ ಅಥವಾ ಮುಂದೆ ಬರುವ ಎಲ್ಲಾ ಪದಾರ್ಥಗಳನ್ನೂ ಅವನು ನೋಡುತ್ತಾನೆ. ಮನುಷ್ಯರ ಸತ್ಯಸತ್ಯಕರ್ಮಗಳ ಸಾಕ್ಷಿಯಾಗಿದ್ದಾನೆ. ಪ್ರತಿಯೊಬ್ಬ ಮನುಷ್ಯನು ಮಾಡುವ ಕಾರ್ಯಗಳೂ, ಯೋಚನೆಗಳೂ, ಉಪಾಯಗಳೂ ಎಲ್ಲವೂ ವರುಣನಿಗೆ ತಿಳಿಯುತ್ತವೆ. ಸ್ವರ್ಗ ಮತ್ತು ಭೂಲೋಕಗಳಲ್ಲಿ ಮತ್ತು ಅವುಗಳಿಂದಾಚೆ ಇರುವದೆಲ್ಲವನ್ನೂ ಅವನು ಗ್ರಹಿಸಬಲ್ಲನು. ಆಕಾಶದಾಚೆ ಎಷ್ಟೋ ದೂರ ಓಡಿಹೋದರೂ ಯಾರೂ ವರುಣನ ದೃಷ್ಟಿಪಥವನ್ನು ಬಿಟ್ಟುಹೋಗಲಾಗುವುದಿಲ್ಲ.

ನೀತಿನಿಯಾಮಕನಾದುದರಿಂದ ವರುಣನಿಗೆ ಪಾಪವೆಂದರೆ ಬಹಳ ಕೋಪಬರುತ್ತದೆ, ಅವನ ನಿಯಮಗಳನ್ನುಲ್ಲಂಘಿಸಿದರೂ ಕೋಪ, ಇವೆರಡಕ್ಕೂ ಅವನು ಬಹಳ ಕ್ರೂರಶಿಕ್ಷೆಯನ್ನು ವಿಧಿಸುತ್ತಾನೆ. ಪಾಪಿಗಳನ್ನು ಬಂಧಿಸುವ ವರುಣನ ಪಾಶವು ಋ. ಸಂ. ೧-೨೪-೧೫; ೧-೨೫-೧೧, ೬-೭೪-೪; ೧೦-೮೫-೨೪ ಮೊದಲಾದ ಋಕ್ಕುಗಳಲ್ಲಿ ಉಕ್ತವಾಗಿದೆ. ಆ ಪಾಶವು ಅನೃತವಾದಿಯನ್ನು ಬಂಧಿಸುತ್ತದೆ. ಸತ್ಯವಾದಿಯನ್ನು ಬಿಟ್ಟುಬಿಡುತ್ತದೆ.

ಯುವೋ ರಾಷ್ಟ್ರಂ ಬೃಹದಿನ್ನತಿ ದ್ಯೌರ್ಯೋ ಸೇತೃಭಿರರಜ್ಜುಭಿಃ ಸಿನೀಥಃ ।
ಪರಿ ನೋ ಹೇಳೋ ವರುಣಸ್ಯ ವೃಜ್ಯಾ ಉರುಂ ನ ಇಂದ್ರಃ ಕೃಣವದು ಲೋಕಂ ॥

(ಋ. ಸಂ. ೭-೪೪-೨)

ಎಂಬ ಋಕ್ಕಿನಲ್ಲಿ ಇಂದ್ರಸಹಚರಿತನಾದ ವರುಣನು ಹಗ್ಗವಲ್ಲದ ಬಂಧನಗಳಿಂದ ಕಟ್ಟುತ್ತಾನೆ ಎಂದು ಹೇಳಿದೆ. ಈ ಪಾಶವೆಂಬ ಶಬ್ದವು ಇಡೀ ಋಗ್ವೇದದಲ್ಲಿ ಒಂದುಕಡೆ ಮಾತ್ರ ಅಗ್ನಿದೇವತಾಕವಾದ ಮಂತ್ರದಲ್ಲಿ ಬಂದಿದೆ ಅದೂ ಅವನ ಭಕ್ತರನ್ನು ಬಂಧಿಸಿರುವ ಪಾಶವನ್ನು ಬಿಡಿಸು ಎಂದು ಪ್ರಾರ್ಥಿಸುವ ಸಂದರ್ಭದಲ್ಲಿ. ಆದ್ದರಿಂದ ಈ ಪಾಶಬಂಧನ ಮತ್ತು ಮೋಚನ (ಪಾಶಬಿಡಿಸುವ) ಕಾರ್ಯಗಳು ವರುಣನಿಗೆ ಮಾತ್ರ ಸಂಬಂಧಿಸಿದೆಯೆಂದು ಹೇಳಬಹುದು. ಮಿತ್ರನಿಂದ ಕೂಡಿದ ವರುಣನು ಅನೃತವನ್ನು ಓಡಿಸುವವನು, ದ್ವೇಷಿಸುವವನು ಮತ್ತು ಶಿಕ್ಷಿಸುವವನು. ಮಿತ್ರಾವರುಣರು ತಮ್ಮ ಪೂಜೆಯ ವಿಷಯದಲ್ಲಿ ತಾತ್ಸಾರದಿಂದಿರುವವರನ್ನು ಶಿಕ್ಷಿಸುತ್ತಾರೆ. ಆದರೆ ವರುಣನು ಪಶ್ಚಾತ್ತಾಪಪಡುವವರನ್ನು ಉಳಿಸಿಕೊಡುತ್ತಾನೆ ಮತ್ತು ತನ್ನ ಆಜ್ಞೆಗಳನ್ನು ವಿಸ್ಮೃತಿಯಿಂದ ಉಲ್ಲಂಘಿಸಿದವರಲ್ಲಿ ಕನಿಕರ ತೋರಿಸುತ್ತಾನೆ. ವರುಣನಲ್ಲಿ ನೂರುಗಟ್ಟಿಲೆ, ಸಾವಿರಗಟ್ಟಿಲೆ ಓಷಧಿಗಳಿವೆ. ಅವನು ಮೃತ್ಯುವನ್ನು ದೂರಮಾಡುತ್ತಾನೆ; ಮತ್ತು ಪಾಪವನ್ನು ಪರಿಹಾರಮಾಡುತ್ತಾನೆ ಅವನು ಪ್ರಾಣಾಪಹಾರ ಮಾಡಬಲ್ಲನು; ಜೀವದಾನವನ್ನೂ ಮಾಡಬಲ್ಲನು; ನಿತ್ಯತ್ವವನ್ನು ರಕ್ಷಣೆಮಾಡುವುದರಲ್ಲಿ ಬಹಳ ಕುಶಲನು ಇತ್ಯಾದಿಯಾಗಿ ವರುಣನ ಗುಣವರ್ಣನೆಯ ಅನೇಕ ಋಕ್ಕುಗಳಲ್ಲಿವೆ. ಇಲ್ಲಿ ನಾವು ಅದನ್ನು ಅತಿಸೂಕ್ಷ್ಮವಾಗಿ ವಿವರಿಸಿದ್ದೇವೆ. ಉಚಿತ ಸಂದರ್ಭದಲ್ಲಿ ಅದನ್ನು ವಿವರಿಸುತ್ತೇವೆ.

ತೈತ್ತಿರೀಯಸಂಹಿತೆಯಲ್ಲಿ—**ಫಲ್ಗುನೀನಕ್ಷತ್ರಮರ್ಯಮಾ ದೇವತಾ.... ..... ಅನೂರಾಧಾನಕ್ಷತ್ರಂ ಮಿತ್ರೋ ದೇವತಾ**... ..... । (ತೈ. ಸಂ. ೪-೪-೯-೨) ಎಂದರೆ, ಅರ್ಯಮನು ಪೂರ್ವಫಲ್ಗುನೀ ನಕ್ಷತ್ರಕ್ಕೂ ಮಿತ್ರನು ಅನೂರಾಧಾ ನಕ್ಷತ್ರಕ್ಕೂ ಅಧಿಪತಿಗಳೆಂದು ಹೇಳಿದೆ.

ಅರ್ಯಮಾ—ಆದಿತ್ಯರ ಪರವಾದ ಸೂಕ್ತಗಳಲ್ಲಿ ಸಾಧಾರಣವಾಗಿ ಆದಿತ್ಯರೆಂದರೆ ಮಿತ್ರ, ವರುಣ ಮತ್ತು ಅರ್ಯಮರೇ ಉದ್ದಿಷ್ಟರು. ನಾವು ಹಿಂದೆ ತಿಳಿಸಿದಂತೆ ಋಗ್ವೇದದಲ್ಲಿ (ಋ. ಸಂ. ೨-೨೭-೧) ಮಿತ್ರ, ಅರ್ಯಮಾ, ಭಗ, ವರುಣ, ದಕ್ಷ, ಅಂಶ ಎಂಬ ಆರುಜನರ ಹೆಸರು ಮಾತ್ರವಿದೆ. ಋ. ಸಂ. ೪-೧೧ಳ ೩ ನೆಯ ಋಕ್ಕಿನಲ್ಲಿ ಆದಿತ್ಯರ ಸಂಖ್ಯೆ ಏಳೆಂದೂ, ಋ. ಸಂ. ೧೦-೭೨-೪ ರಲ್ಲಿ ಅದಿತಿಯು ಮೊದಲು ಏಳುಜನ ಪುತ್ರರನ್ನು ದೇವತೆಗಳಿಗೆ ಒಪ್ಪಿಸಿ, ಎಂಟನೆಯ ಮಾರ್ತಾಂಡನನ್ನು ಅನಂತರ ಪಡೆದಳೆಂದೂ ಇದೆ. ಅ. ವೇ. ೮-೯-೨೧ ರಲ್ಲಿಯೂ, ತೈ. ಆ. ೧-೧೩-೩ ರಲ್ಲಿಯೂ, ಅದಿತಿಗೆ ಮಿತ್ರ, ಅರ್ಯಮಾ, ವರುಣ, ಅಂಶ, ಭಗ, ಧಾತೃ, ಇಂದ್ರ, ವಿವಸ್ವಾನ್ ಎಂಬ ಎಂಟುಮಂದಿ ಪುತ್ರರೆಂದು ಹೇಳಿದೆ. ಶತಪಥಬ್ರಾಹ್ಮಣದಲ್ಲಿ (ಶ. ಬ್ರಾ. ೬-೧-೩-೮ ಮತ್ತು ಶ. ಬ್ರಾ. ೧೧-೬-೩-೮) ಆದಿತ್ಯರು ತಿಂಗಳಿಗೊಬ್ಬರಂತೆ ಹನ್ನೆರಡು ಜನರೆಂದು ಹೇಳಿದೆ. ಪುರಾಣಾದಿಗಳಲ್ಲಿಯೂ ಆದಿತ್ಯರು ಹನ್ನೆರಡುಮಂದಿಯೆಂದೇ ಇಪ್ಪೆ.

ಅರ್ಯಮಾ ಎಂಬ ದೇವತೆಯ ಹೆಸರು ಋಗ್ವೇದದಲ್ಲಿ ಸುಮಾರು ನೂರುಕಡೆ ಬಂದಿದ್ದರೂ, ಸಂಪೂರ್ಣವಾಗಿ ವ್ಯಕ್ತಿತ್ವವಿಲ್ಲದಿರುವುದರಿಂದ ಯಾಸ್ಕರು ತಮ್ಮ ನಿರುಕ್ತದಲ್ಲಿ (ನಿಘಂಟುವಿನಲ್ಲಿ) ದೇವತೆಗಳ ಹೆಸರುಗಳ ರೂಪನಿಷ್ಪತ್ತಿಯನ್ನು ವಿವರಿಸುವಾಗ ಆ ಅರ್ಯಮಾ ದೇವತೆಯ ಹೆಸರನ್ನು ಬಿಟ್ಟಿದಾರೆ. ಮಂತ್ರಗಳಲ್ಲಿ ಹೊರತಾಗಿ ಬಾಕಿ ಕಡೆಗಳಲ್ಲೆಲ್ಲಾ ಬೇರೆ ದೇವತೆಗಳ ಜೊತೆಯಲ್ಲಿಯೇ ಅರ್ಯಮನ ಪ್ರಸ್ತಾಪ; ಅದೂ ಹೆಚ್ಚಾಗಿ ಮಿತ್ರ ಮತ್ತು ವರುಣರ ಜೊತೆಯಲ್ಲಿಯೇ. ಅಗ್ನಿಯನ್ನುದ್ದೇಶಿಸಿ ಕನ್ಯೆಯರನ್ನು ಒಲಿಸಿಕೊಳ್ಳುವಾಗ,

ಕ್ವಮರ್ಯಮಾ ಭವಸಿ ಯತ್ಕನೀನಾಂ ನಾಮ ಸ್ವಧಾವನ್ಗುಹ್ಯಂ ಬಿಭರ್ಷಿ ।

(ಋ. ಸಂ. ೫-೩.-೨)

ನೀನೇ ಅರ್ಯಮಾ ಎಂದು ಹೇಳಿದೆ.

ಭಗೋ ಅರ್ಯಮಾ ಸವಿತಾ ಪುರಂಧಿರ್ಮಹ್ಯಂ ತ್ವಾದುರ್ಗಾರ್ಹಪತ್ಯಾಯ ದೇವಾಃ ।

(ಋ. ಸಂ. ೧೦-೮೫-೩೬)

ಎಂಬ ಋಕ್ಕಿನಲ್ಲಿ—ಎಲೈ ದೇವತೆಗಳೇ, ಭಗ, ಅರ್ಯಮಾ, ಸವಿತೃ, ಪುರಂಧಿ ಇವರುಗಳು ಈ ವಧುವನ್ನು ನನ್ನ ಗೃಹಸ್ಥಾಶ್ರಮಕ್ಕೆ ನೆರವಾಗುವುದಕ್ಕಾಗಿ ನನಗೆ ಕೊಟ್ಟರು ಎಂದು ವರನು ಹೇಳುತ್ತಾನೆ.

ನ ತಮಂಹೋ ನ ದುರಿತಂ ದೇವಾಸೋ ಅಷ್ಟ ಮರ್ತ್ಯಂ ।
ಸಜೋಷಸೋ ಯಮರ್ಯಮಾ ಮಿತ್ರೋ ನಯಂತಿ ವರುಣೋ ಅತಿ ದ್ವಿಷಃ ॥

(ಋ. ಸಂ. ೧೦-೧೨೬-೧)

ಶುನಮಸ್ಮಭ್ಯಮೂತಯೇ ವರುಣೋ ಮಿತ್ರೋ ಅರ್ಯಮಾ ।
ಶರ್ಮ ಯಚ್ಛಂತು ಸಪ್ರಥ ಆದಿತ್ಯಾಸೋ ಯದೀಮಹೇ ಅತಿ ದ್ವಿಷಃ ॥

(ಋ. ಸಂ. ೧೦-೧೨೬-೨)

ಋ. ಸಂ. ೧೦-೧೨೬ ನೆಯ ಸೂಕ್ತದಲ್ಲಿ ದೇವತೆಗಳನ್ನು ವಿಶ್ವೇದೇವತೆಗಳೆಂದು ಹೇಳಿದ್ದರೂ ಮೇಲೆ ಉದಹರಿಸಿರುವ ಋಕ್ಕುಗಳಿಂದ ಮುಖ್ಯವಾಗಿ ಆದಿತ್ಯರನ್ನೇ ಇಲ್ಲಿ ಸ್ತುತಿಸಲಾಗಿದೆ. ಇದಲ್ಲದೆ **ದೇವಾಸಃ ಅಷ್ಟ** ಎಂದು ಮೊದಲನೆಯ ಋಕ್ಕಿನಲ್ಲಿ ಹೇಳಿರುವುದು ಎಂಟುಮಂದಿ ಆದಿತ್ಯರನ್ನೇ (ವೇದದ ಆದಿತ್ಯರ ಸಂಖ್ಯೆ ಎಂಟುಮಂದಿಗಿಂತ ಹೆಚ್ಚಾಗಿ ಎಲ್ಲಿಯೂ ಹೇಳಿಲ್ಲ) ಉದ್ದೇಶಿಸಿದೆ. ಇದಲ್ಲದೇ ೭ ನೇ ಋಕ್ಕಿನಲ್ಲಿ **ಆದಿತ್ಯಾಸಃ** ಎಂಬ ಶಬ್ದವೂ ಅದನ್ನೇ ಸ್ಪಷ್ಟವಾಗಿ ತಿಳಿಸುತ್ತದೆ. ಈ ಸೂಕ್ತದ ಪ್ರತಿ ಋಕ್ಕಿನಲ್ಲಿಯೂ (ಕೊನೆಯ ಋಕ್ಕು ಹೊರತು) ವರುಣೋ, ಮಿತ್ರೋ, ಅರ್ಯಮಾ ಎಂದು ಮಿತ್ರಾವರುಣಾರ್ಯಮರ ಹೆಸರು ಪಲ್ಲವಿಯಂತೆ ಪುನಃಪುನಃ ಪಠಿತವಾಗಿರುವುದು ಆದಿತ್ಯರಲ್ಲಿ ಈ ಮಿತ್ರಾವರುಣಾರ್ಯಮರು ಪ್ರಧಾನಸ್ಥಾನವನ್ನು ಪಡೆದಿರುವುದನ್ನು ಸೂಚಿಸುವುದಾಗಿದೆ. ಅರ್ಯಮನ ವಿಷಯವು ಋಗ್ವೇದದಲ್ಲಿ ಹೆಚ್ಚಾಗಿ ವಿವರಿಸಲ್ಪಟ್ಟಿಲ್ಲವಾದ್ದರಿಂದ ವಿಶೇಷ ವಿವರಣೆಯು ಸಾಧ್ಯವಿಲ್ಲ.

ಸಾಯಣಭಾಷ್ಯಂ

ಅಗ್ನಿರಿಂದ್ರ ಇತಿ ಪಂಚದಶರ್ಚಂ ಪಂಚಮಂ ಸೂಕ್ತಂ । ವಸುಕ್ರಪುತ್ರಸ್ಯ ವಸುಕರ್ಣಸ್ಯಾರ್ಷಂ ವೈಶ್ವದೇವಂ। ಪಂಚದಶೀ ತ್ರಿಷ್ಟುಪ್ ತಿಷ್ಟಾ ಜಗತ್ಯಃ। ತಥಾ ಚಾನುಕ್ರಮ್ಯತೇ। ಅಗ್ನಿರಿಂದ್ರಃ ಪಂಚೋನಾ ವಾಸುಕ್ರೋ ವಸುಕರ್ಣಸ್ತ್ರಿಷ್ಟುಬಂತಂ ತ್ವಿತಿ ॥

ಅನುವಾದವು—**ಅಗ್ನಿರಿಂದ್ರಃ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಸುಕ್ರಪುತ್ರನಾದ ವಸುಕರ್ಣನೆಂಬುವನು ಋಷಿಯು ; ವಿಶ್ವೇದೇವತೆಗಳು ದೇವತೆಯು ; ಈ ಸೂಕ್ತದ ಹದಿನೈದನೆಯ ಋಕ್ಕು ತ್ರಿಷ್ಟುಪ್‌ಛಂದಸ್ಸುವು. ಉಳಿದ ಋಕ್ಕುಗಳು ಜಗತೀ ಛಂದಸ್ಸುವು. ಅನುಕ್ರಮಣಿಕೆಯಲ್ಲಿ—**ಅಗ್ನಿರಿಂದ್ರಃ ಪಂಚೋನಾ ವಾಸುಕ್ರೋ ವಸುಕರ್ಣಸ್ತ್ರಿಷ್ಟುಬಂತಂ ತು** ಎಂದು ಹೇಳಿರುವುದು.

ಸೂಕ್ತ—೬೫

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೫ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೯, ೧೦, ೧೧॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ವಸುಕರ್ಣೋ ವಾಸುಕ್ರಃ ॥
ವಿಶ್ವೇದೇವಾಃ ॥
ಛಂದಃ—೧-೧೪. ಜಗತೀ । ೧೫. ತ್ರಿಷ್ಟುಪ್ ॥

ಸಂಹಿತಾಪಾಠಃ

ಅಗ್ನಿರಿಂದ್ರೋ ವರುಣೋ ಮಿತ್ರೋ ಅರ್ಯಮಾ ವಾಯುಃ ಪೂಷಾ ಸರಸ್ವತೀ ಸಜೋಷಸಃ ।
ಆದಿತ್ಯಾ ವಿಷ್ಣುರ್ಮರುತಃ ಸ್ವರ್ಬೃಹತ್ಸೋಮೋ ರುದ್ರೋ ಅದಿತಿರ್ಬ್ರಹ್ಮಣಸ್ಪತಿಃ ॥ ೧ ॥

ಪದಪಾಠಃ

ಅಗ್ನಿಃ । ಇಂದ್ರಃ । ವರುಣಃ । ಮಿತ್ರಃ । ಅರ್ಯಮಾ । ವಾಯುಃ । ಪೂಷಾ । ಸರಸ್ವತೀ। ಸ್ವಜೋಷಸಃ।
ಆದಿತ್ಯಾಃ। ವಿಷ್ಣುಃ । ಮರುತಃ । ಸ್ವಃ । ಬೃಹತ್ । ಸೋಮಃ । ರುದ್ರಃ । ಅದಿತಿಃ । ಬ್ರಹ್ಮಣಃ । ಪತಿಃ ॥

ಸಾಯಣಭಾಷ್ಯಂ

ಅಗ್ನ್ಯಾದಯೋ ಆದಿತ್ಯಾದಯೋ ಬೃಹದ್ಬೃಹತೀ ಸ್ವರ್ದ್ಯೌಶ್ಚ ಸೋಮಾದಯ ಏತೇ ದೇವಾಃ ಸಜೋಷಸಃ ಸಂಹತ್ಯ ॥

ಪ್ರತಿಪದಾರ್ಥ

ಅಗ್ನಿಃ—ಅಗ್ನಿಯೂ । **ಇಂದ್ರಃ**—ಇಂದ್ರನೂ । **ವರುಣಃ**—ವರುಣನೂ । **ಮಿತ್ರಃ**—ಮಿತ್ರನೂ । **ಅರ್ಯಮಾ**—ಅರ್ಯಮನೂ । **ವಾಯುಃ**—ವಾಯುವೂ । **ಪೂಷಾ**—ಪೂಷದೇವನೂ । **ಸರಸ್ವತೀ**—ಸರಸ್ವತಿಯೂ । **ಆದಿತ್ಯಾಃ**—ಆದಿತ್ಯರೂ । **ವಿಷ್ಣುಃ**—ವಿಷ್ಣುವೂ । **ಮರುತಃ**—ಮರುತ್ತುಗಳೂ । **ಬೃಹತ್**—ಮಹತ್ತಾದ । **ಸ್ವಃ**—ದ್ಯುಲೋಕವೂ । **ಸೋಮಃ**—ಸೋಮನೂ । **ರುದ್ರಃ**—ರುದ್ರನೂ । **ಅದಿತಿಃ**—ಅದಿತಿಯೂ । **ಬ್ರಹ್ಮಣಸ್ಪತಿಃ**—ಬ್ರಹ್ಮಣಸ್ಪತಿಯೂ । **ಸಜೋಷಸಃ**—ಒಟ್ಟುಗೂಡಿದವರಾಗಿ (ಅಂತರಿಕ್ಷವನ್ನು ವ್ಯಾಪಿಸಿ ಬೆಳಗುತ್ತಿದ್ದಾರೆ).

ಭಾವಾರ್ಥ

ಅಗ್ನಿಯೂ, ಇಂದ್ರನೂ, ವರುಣನೂ, ಮಿತ್ರನೂ, ಅರ್ಯಮನೂ. ವಾಯುವೂ, ಪೂಷದೇವನೂ, ಸರಸ್ವತಿಯೂ, ಆದಿತ್ಯರೂ, ವಿಷ್ಣುವೂ, ಮರುತ್ತುಗಳೂ, ಮಹತ್ತಾದ ದ್ಯುಲೋಕವೂ, ಸೋಮನೂ, ರುದ್ರನೂ, ಅದಿತಿಯೂ, ಬ್ರಹ್ಮಣಸ್ಪತಿಯೂ ಒಟ್ಟುಗೂಡಿದವರಾಗಿ ಅಂತರಿಕ್ಷವನ್ನು ವ್ಯಾಪಿಸಿ ಬೆಳಗುತ್ತಿದ್ದಾರೆ.

English Translation

Agni, Indra, Varuna, Mitra, Aryman, Vayu, Pushan, Saraswati, the Adityas, Vishnu, the Maruts, the mighty heaven, Soma, Rudra, Aditi, Brahmanaspati with one consent,

ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಪ್ರತಿಪಾದಿತರಾಗಿರುವ ದೇವತೆಗಳ ವಿಷಯವನ್ನು ಈ ಸೂಕ್ತದ ಪೀಠಿಕೆಯಲ್ಲಿ ನೋಡಿ

ಸಂಹಿತಾಪಾಠಃ

ಇಂದ್ರಾಗ್ನೀ ವೃತ್ರಹತ್ಯೇಷು ಸತ್ಪತೀ ಮಿಥೋ ಹಿನ್ವಾನಾ ತನ್ವಾ ಸಮೋಕಸಾ।
ಅಂತರಿಕ್ಷಂ ಮಹಾ ಪಪ್ರೌ ರೋಜಸಾ ಸೋಮೋ ಘೃತಶ್ರೀರ್ಮಹಿಮಾನಮೀ-
ರಯನ್ ॥ ೨ ॥

ಪದಪಾಠಃ

ಇಂದ್ರಾಗ್ನೀ ಇತಿ । ವೃತ್ರಹತ್ಯೇಷು । ಸತ್ಪತೀ ಇತಿ ಸತ್ಪತೀ । ಮಿಥಃ । ಹಿನ್ವಾನಾ । ತನ್ವಾ ।
ಸಂಓಕಸಾ ।
ಅಂತರಿಕ್ಷಂ । ಮಹಿ । ಆ । ಪಪ್ರುಃ । ಓಜಸಾ । ಸೋಮಃ । ಘೃತಶ್ರೀಃ । ಮಹಿಮಾನಂ । ಈರಯನ್ ॥

ಸಾಯಣಭಾಷ್ಯಂ

ವೃತ್ರಹತ್ಯಾ ಯುದ್ಧಾನಿ । ತೇಷು ಮಿಥಃ ಪರಸ್ಪರಂ ತನ್ವಾ ಶರೀರೇಣ ತತ್ರಸ್ಥೇನ ಬಲೇನ ಶತ್ರೂನ್ಹಿನ್ವಾನಾ ಪ್ರೇರಯಂತೌ ಸತ್ಪತೀ ಸತಾಂ ಪತೀ ಸಮೋಕಸಾ ಸಮಾನಸ್ಥಾನವಿಂದ್ರಾಗ್ನೀ । ಘೃತ-ಶ್ರೀರುದಕಂ ವಸತೀವರ್ಯಾಖ್ಯಂ ಶ್ರಯಮಾಣೋ ಮಹಿಮಾನಮಾತ್ಮೀಯಮೀರಯನ್ ಸರ್ವತ್ರೋ-ದೀರಯನ್ನುದ್ಗಮಯನ್ ಸೋಮಶ್ಚ । ಏತೇ ಸರ್ವೇ ಚ ಮಹಿ ಮಹದಂತರಿಕ್ಷಮೋಜಸಾ ಸ್ವಬಲೇನಾ ಪಪ್ರುಃ । ಆಪೂರಯಂತಿ । ಪ್ರಾ ಪೂರಣೇ ॥

ಪ್ರತಿಪದಾರ್ಥ

ವೃತ್ರಹತ್ಯೇಷು—ವೃತ್ರಹನನಕಾಲವಲ್ಲಿ । **ಮಿಥಃ**—ಒಬ್ಬರಿಗೊಬ್ಬರು । **ತನ್ವಾ**—ಶಕ್ತಿಯುತವಾದ ದೇಹದೊಡನೆ ಸೇರಿದವರಾಗಿ । **ಹಿನ್ವಾನಾ**—ಶತ್ರುಗಳನ್ನು ಹಿಂಸಿಸುವವರೂ (ಶತ್ರುನಾಶಕ್ಕಾಗಿ ಪರಸ್ಪರ ಪ್ರೇರಿಸುವವರೂ) । **ಸತ್ಪತೀ**—ಸಜ್ಜನರ ಪಾಲಕರೂ । **ಸಮೋಕಸಾ**—ಸಮಾನವಾದ ಸ್ಥಾನವುಳ್ಳವರೂ ಆದ । **ಇಂದ್ರಾಗ್ನೀ**—ಇಂದ್ರ ಮತ್ತು ಅಗ್ನಿಗಳೂ । **ಘೃತಶ್ರೀಃ**—ವಸತೀವರ್ಯಾಖ್ಯದಕವನ್ನು ಧರಿಸಿರುವವನೂ । **ಮಹಿಮಾನಂ**—ತನ್ನ ಮಹತ್ತ್ವವನ್ನು । **ಈರಯನ್**—ಪ್ರೇರಿಸಿ ಪ್ರಕಟಿಸುವವನೂ ಆದ । **ಸೋಮಃ**—ಸೋಮ

ದೇವನೂ । **ಮಹಿ**—ಮಹತ್ತಾದ । **ಅಂತರಿಕ್ಷಂ**—ಅಂತರಿಕ್ಷವನ್ನು । **ಓಜಸಾ**—ಸ್ವಬಲದಿಂದ । **ಆ ಪಪ್ರುಃ**—ವ್ಯಾಪಿಸಿ ಪ್ರಕಾಶಿಸುತ್ತಿದ್ದಾರೆ.

ಭಾವಾರ್ಥ

ವೃತ್ರಹನನಕಾಲದಲ್ಲಿ ಒಬ್ಬರಿಗೊಬ್ಬರು ಶಕ್ತಿಯುತವಾದ ದೇಹದೊಡಗೂಡಿ ಶತ್ರುನಾಶಕ್ಕಾಗಿ ಪ್ರೇರಿಸುವವರೂ, ಸಜ್ಜನರ ಪಾಲಕರೂ, ಸಮಾನವಾದ ಸ್ಥಾನವುಳ್ಳವರೂ ಆದ ಇಂದ್ರಾಗ್ನಿಗಳೂ, ವಸತೀವರ್ಯಾದ್ಯುದಕವನ್ನು ಧರಿಸುವವನೂ, ತನ್ನ ಮಹತ್ತ್ವವನ್ನು ಪ್ರೇರಿಸಿ ಪ್ರಕಟಿಸುವವನೂ ಆದ ಸೋಮದೇವನೂ, ಮಹತ್ತಾದ ಅಂತರಿಕ್ಷವನ್ನು ಸ್ವಬಲದಿಂದ ವ್ಯಾಪಿಸಿ ಪ್ರಕಾಶಿಸುತ್ತಿದ್ದಾರೆ.

English Translation

Indra and Agni, the lords of the virtuous, standing in the same place, mutually invigorating each other with might in the Vritra-slaying battles, and the ghi-glorified Soma putting forth his greatness have filled the vast firmament with their strength.

ಸಂಹಿತಾಪಾಠಃ

ತೇಷಾಂ ಹಿ ಮಹ್ನಾ ಮಹತಾಮನರ್ವಣಾಂ ಸ್ತೋಮಾಁ ಇಯರ್ಮ್ಯೃತಜ್ಞಾ ಋತಾವೃಧಾಂ ।
ಯೇ ಅಸ್ಸವಮರ್ಣವಂ ಚಿತ್ರರಾಧಸಸ್ತೇ ನೋ ರಾಸಂತಾಂ ಮಹಯೇ ಸುಮಿತ್ರ್ಯಾಃ ॥ ೩ ॥

ಪದಪಾಠಃ

ತೇಷಾಂ । ಹಿ । ಮಹ್ನಾ । ಮಹತಾಂ । ಅನರ್ವಣಾಂ । ಸ್ತೋಮಾನ್ । ಇಯರ್ಮಿ । ಋತಜ್ಞಾಃ । ಋತವೃಧಾಂ ।
ಯೇ । ಅಸ್ಸವಂ । ಅರ್ಣವಂ । ಚಿತ್ರರಾಧಸಃ । ತೇ । ನಃ । ರಾಸಂತಾಂ । ಮಹಯೇ । ಸುಮಿತ್ರ್ಯಾಃ ॥

ಸಾಯಣಭಾಷ್ಯಂ

ಮಹ್ನಾ ಸ್ವಮಹತ್ತ್ವೇನ ಮಹತಾಮನರ್ವಣಾಮನ್ಯಸ್ಮಿನ್ನಪ್ರತ್ಯೃತಾನಾಂ ಶತ್ರುಭಿರನಭಿಗಂತವ್ಯಾನಾಮೃತಾವೃಧಾಂ ಸತ್ಯಭೂತೇನ ಯಜ್ಞೇನ ವರ್ಧಯಿತೃಣಾಂ ತೇಷಾಮಗ್ನ್ಯಾದೀನಾಂ ದೇವಾನಾಮೇವಾರ್ತಜ್ಞಾ ಯಜ್ಞಸ್ಯ ಜ್ಞಾತಾಹಂ ಸ್ತೋಮಾನಿಯರ್ಮಿ । ಪ್ರೇರಯಾಮಿ ॥ ಋ ಗತಿಪ್ರಾಪಣಯೋಃ । ಜೌಹೋತ್ಯಾದಿಕಃ ॥ ಚಿತ್ರರಾಧಸಶ್ಚಾಯನೀಯೇಧನೋಪೇತಾ ಯದ್ವಾ ಪಶ್ವಾದಿಲಕ್ಷಣಬಹುಧನಾ

ಯೇ ದೇವಾ ಅಪ್ಸವಂ । ಅಪ್ಸ ಇತಿ ರೂಪನಾಮ । ರೂಪವಂತಮರ್ಣವಂ ॥ ಅರ್ಣಸಃ ಸಲೋಪಶ್ಚ । ಕಾ. ೫-೨-೧೦೯-೩ । ಇತಿ ಮತ್ವರ್ಥೀಯೋ ವಪ್ರತ್ಯಯಃ ॥ ಉದಕವಂತಂ ಮೇಘಂ ವರ್ಷಂತಿ ತೇ ಸುಮಿತ್ರ್ಯಾಃ ಶೋಭನಸಖಿಕರ್ಮಾಣಸ್ತೇ ದೇವಾ ನೋಽಸ್ಮಭ್ಯಂ ಮಹಯೇ ಜನೇಷು ಮಧ್ಯೇ ಪೂಜಾರ್ಥಂ ಧನಂ ರಾಸಂತಾಂ । ಪ್ರಯಚ್ಛಂತು । ರಾಸೃ ದಾನೇ ॥

ಪ್ರತಿಪದಾರ್ಥ

ಋತಾವೃಧಾಂ—ಯಜ್ಞದಿಂದ ಪುಷ್ಟಿಯನ್ನು ಹೊಂದಿದವರೂ । **ಮಹ್ನಾ**—ಸ್ವಮಾಹಾತ್ಮ್ಯದಿಂದ । **ಮಹತಾಂ**—ಪ್ರಭಾವವನ್ನು ಹೊಂದಿದವರೂ । **ಅನರ್ವಣಾಂ**—ಶತ್ರುಗಳ ಹಿಂಸೆಗೆ ಒಳಗಾಗದವರೂ ಆದ । **ತೇಷಾಂ**—ಅಗ್ನ್ಯಾದಿ ದೇವತೆಗಳ । **ಋತಜ್ಞಾಃ**—ಯಜ್ಞತತ್ತ್ವವನ್ನು ತಿಳಿದ ನಾನು । **ಸ್ತೋಮಾನ್**—ಸ್ತುತಿಗಳನ್ನು । **ಇಯರ್ಮಿ**—ಅರ್ಪಿಸುತ್ತೇನೆ । **ಚಿತ್ರರಾಧಸಃ**—ಆಕರ್ಷಕವಾದ ಧನದಿಂದ ಕೂಡಿದ । **ಯೇ**-ಯಾವ ದೇವತೆಗಳು । **ಅಪ್ಸವಂ**-ಉದಕಭರಿತವಾದ (ಆಕರ್ಷಕವಾದ ರೂಪದಿಂದ ಕೂಡಿದ) !. **ಅರ್ಣವಂ**-ಮೇಘವನ್ನು ಹಿಂಡಿ ವೃಷ್ಟಿಯನ್ನು ಸುರಿಸುವರೋ । **ತೇ**—ಅಂತಹ । **ಸುಮಿತ್ರ್ಯಾಃ**—ಉತ್ತಮವಾದ ಮಿತ್ರರಾದ ದೇವತೆಗಳು । **ನಃ ಮಹಯೇ**—ಜನರ ನಡವೆ ಪೂಜಾರ್ಥವಾಗಿ । **ರಾಸಂತಾಂ**—ನಮಗೆ ಧನವನ್ನು ಕೊಡಲಿ.

ಭಾವಾರ್ಥ

ಯಜ್ಞದಿಂದ ಪುಷ್ಟಿಯನ್ನು ಹೊಂದಿದವರೂ. ಸ್ವಮಾಹಾತ್ಮ್ಯದಿಂದ ಅಧಿಕವಾದ ಪ್ರಭಾವವನ್ನು ಹೊಂದಿದವರೂ, ಶತ್ರುಗಳ ಹಿಂಸೆಗೆ ಒಳಗಾಗದವರೂ ಆದ ಅಗ್ನ್ಯಾದಿದೇವತೆಗಳ ಯಜ್ಞತತ್ತ್ವವನ್ನು ತಿಳಿದ ನಾನು ಅವರಿಗೆ ಸ್ತುತಿಗಳನ್ನರ್ಪಿಸುತ್ತೇನೆ. ಆಕರ್ಷಕವಾದ ಧನದಿಂದ ಕೂಡಿದ ಯಾವ ದೇವತೆಗಳು ಆಕರ್ಷಕವಾದ ರೂಪವುಳ್ಳ ಉದಕದಿಂದ ಕೂಡಿದ ಮೇಘವನ್ನು ಹಿಂಡಿ ವೃಷ್ಟಿಯನ್ನು ಸುರಿಸುವರೋ ಅಂತಹ ಉತ್ತಮವಾದ ಮಿತ್ರರಾದ ದೇವತೆಗಳು ಜನರ ನಡುವೆ ಪೂಜಾರ್ಥವಾಗಿ ನಮಗೆ ಧನವನ್ನು ಕೊಡಲಿ.

English Translation

Skilled in pious rites, I recite the praises of these (deities), mighty through (their own) might, unassailable, exalted by sacrifice; may those (gods) who, possessed of various wealth, (rain down) the beautiful water-cloud, acting in friendly wise, grant us (wealth) for our honour (among men).

ಸಂಹಿತಾಪಾಠಃ

ಸ್ವರ್ಣರಮಂತರಿಕ್ಷಾಣಿ ರೋಚನಾ ದ್ಯಾವಾಭೂಮೀ ಪೃಥಿವೀಂ ಸ್ಕಂಭುರೋ-
ಜಸಾ ।
ಪೃಕ್ಷಾ ಇವ ಮಹಯಂತಃ ಸುರಾತಯೋ ದೇವಾಃ ಸ್ತವಂತೇ ಮನುಷಾಯ
ಸೂರಯಃ ॥ ೪ ॥

पदपाठः

स्वः३नरं । अन्तरिक्षाणि । रोचना । द्यावाभूमी इति । पृथिवीं । स्कंभुः । ओजसा ।

पृक्षा३इव । महयंतः । सु३रातयः । देवाः । स्तवंते । मनुषाय । सूरयः ॥

सायणभाष्यं

स्वर्णरं सर्वस्य स्वस्वकर्मणि नेतारमादित्यमंतरिक्षाणि । द्यावापृथिव्योरंतरा मध्ये क्षियंति निवसंतीत्यंतरिक्षाणि । मध्यस्थितानि रोचना रोचमानानि तेजांसि द्यावाभूमी द्यावापृथिव्यौ पृथिवीं विस्तीर्णमंतरिक्षं च एतानादित्यादीनोजसा स्वबलेनैव देवाः स्कंभुः । धारयंति ॥ स्कंभ इति सौत्रो धातुः । लिटि रूपं ॥ किंच पृक्षा इव दरिद्रेभ्य धनानि संपर्चयंत इव अत एव महयंतः स्तोत्रन्नदानादिभिः पूजयंतः सुरातयः सुदानाः मनुषाय मनुष्याय सूरयो धनानां प्रेरकाः एते देवाः स्तवंते । अस्मिन्यज्ञे स्तूयंते ॥

प्रतिपदार्थ

स्वर्णरं—सकल कर्मगळिगू मार्गदर्शकनाद आदित्यनन्नू। **अंतरिक्षाणि**—द्यावापृथिविगळ नडुवे इरुव। **रोचना**—सकल तेजस्सुगळन्नू। **द्यावाभूमी**—द्यावापृथिविगळन्नू। **पृथिवीं**—विस्तृतवाद अंतरिक्षवन्नू। **ओजसा**—तम्म शक्तियिंद। **स्कंभुः**—देवतेगळु धरिसिद्दारे। **पृक्षा इव**—दरिद्ररिगे अन्नवन्नु कोडुवंते। **महयंतः**—स्तुतिकर्तरिगे धनादिगळन्नु कोडुववरू। **सुरातयः**—उदारवाद दानिगळू। **मनुषाय**—मानवनिगे। **सूरयः**—प्रेरकरू आद। **देवाः**—देवतेगळु। **स्तुवंते**—प्रशंसिसल्पडुत्तारे.

भावार्थ

सर्वकर्मगळिगू मार्गदर्शकनाद आदित्यनन्नू, द्यावापृथिविगळ नडुवे इरुव सकल तेजस्सुगळन्नू, द्यावापृथिविगळन्नू, विस्तृतवाद अंतरिक्षवन्नू तम्म शक्तियिंद देवतेगळु धरिसिद्दारे. दरिद्ररिगे अन्नवन्नु कोडुवंते स्तुतिकर्तरिगे धनादिगळन्नु कोडुववरू, उदारवाद दानिगळू, मानवनिगे प्रेरकरू आद देवतेगळु प्रशंसिसल्पडुत्तारे.

English Translation

They have sustained by their strength the leader of all (the sun), the luminaries of the firmament, heaven and earth, the outstretched (firmament); honouring (their worshippers) like those who give food (to the poor), the generous gods bestowing wealth on man are glorified (at this sacrifice).

ಸಂಹಿತಾಪಾಠಃ

ಮಿತ್ರಾ॑ಯ॒ ಶಿಕ್ಷ॒ ವರು॑ಣಾಯ॒ ದಾಶು॑ಷೇ॒ ಯಾ ಸ॒ಮ್ರಾಜಾ॒ ಮನ॑ಸಾ॒ ನ ಪ್ರ-
ಯು॑ಚ್ಛ॒ತಃ ।
ಯಯೋ॒ರ್ಧಾಮ॒ ಧರ್ಮ॑ಣಾ॒ ರೋಚ॑ತೇ॒ ಬೃಹ॒ದ್ಯಯೋ॒ರುಭೇ॒ ರೋದ॑ಸೀ
ನಾಧ॑ಸೀ॒ ವೃತೌ॑ ॥ ೫ ॥

ಪದಪಾಠಃ

ಮಿತ್ರಾ॑ಯ । ಶಿಕ್ಷ । ವರು॑ಣಾಯ । ದಾಶು॑ಷೇ । ಯಾ । ಸ॒ಂ॒ರಾಜಾ॑ । ಮನ॑ಸಾ । ನ । ಪ್ರ॒ಯು॒ಚ್ಛ॒ತಃ ।
ಯಯೋ॑ಃ । ಧಾಮ॑ । ಧರ್ಮ॑ಣಾ । ರೋಚ॑ತೇ । ಬೃಹ॑ತ್ । ಯಯೋ॑ಃ । ಉಭೇ ಇತಿ । ರೋದ॑ಸೀ
ಇತಿ । ನಾಧ॑ಸೀ ಇತಿ । ವೃತೌ॑ ॥ ೫ ॥

ಸಾಯಣಭಾಷ್ಯಂ

ದಾಶುಷೇ ಧನಾನಿ ಸ್ತೋತೃಭ್ಯಃ ಪ್ರಯುಚ್ಛತೇ ಮಿತ್ರಾಯ ವರುಣಾಯ ಚ ಶಿಕ್ಷ । ಹವೀಂಷಿ ಪ್ರಯಚ್ಛ । ಶಿಕ್ಷತಿರ್ದಾನಕರ್ಮಾ । ಸಮ್ರಾಜಾ ಸಮ್ರಾಜೌ ಸರ್ವಸ್ಯ ಯಾ ಯೌ ಮಿತ್ರಾವರುಣೌ ಮನಸಾಂತಃಕರಣೇನಾಪಿ ನ ಪ್ರಯುಚ್ಛತಃ ನ ಪ್ರಮಾದ್ಯತಃ ಕಿಮುತ ವಾಹ್ಯೇನ ವ್ಯಾಪಾರೇಣ ॥ ಯುಚ್ಛ ಪ್ರಮಾದೇ । ಭ್ವಾದಿಕಃ ॥ ಯಯೋರ್ಮಿತ್ರಾವರುಣಯೋರ್ಬೃಹದ್ಮಹದ್ಧಾಮ ಶರೀರಂ ಧರ್ಮಣಾತ್ಮೀಯೇನ ಲೋಕಪ್ರಕಾಶನಾದಿಲಕ್ಷಣೇನ ಕರ್ಮಣಾ ರೋಚತೇ ಸಮ್ಯಗ್ದೀಪ್ಯತೇ । ಯಯೋಶ್ಚ ನಾಧಸೀ ॥ ಣಾಧೃ ಯಾಚ್ಞೋಪತಾಪೈಶ್ವರ್ಯಾಶೀಃಷು ॥ ಯಾಚಮಾನೇ ಉಭೇ ರೋದಸೀ ದ್ಯಾವಾಪೃಥಿವ್ಯೌ ವೃತೌ ವರ್ತಮಾನೇ ಭವತಃ । ಯದ್ವಾ । ನಾಧಸೀ ದೇವಮನುಷ್ಯೈಃ ಸಮೃದ್ಧೇ ದ್ಯಾವಾಪೃಥಿವ್ಯೌ । ತಯೋರ್ವೃತೌ ವರ್ತಮಾನೇ ಭವತಃ । ತದಧೀನೇ ಭವತ ಇತ್ಯರ್ಥಃ ॥

ಪ್ರತಿಪದಾರ್ಥ

ಸಮ್ರಾಜಾ—ಲೋಕಕ್ಕೆಲ್ಲ ಪ್ರಭುಗಳಾದ । **ಯಾ**—ಯಾವ ಮಿತ್ರಾವರುಣರು । **ಮನಸಾ**—ಮನಸ್ಸಿನಲ್ಲಿಯೂ । **ನ ಪ್ರಯುಚ್ಛತಃ**—ತಮ್ಮ ಕರ್ತವ್ಯವನ್ನು ಮರೆಯುವುದಿಲ್ಲವೋ । **ಯಯೋಃ**—ಯಾವ ಮಿತ್ರಾವರುಣರ । **ಬೃಹತ್**—ಮಹತ್ತಾದ । **ಧಾಮ**—ಶರೀರವು । **ಧರ್ಮಣಾ**—ಉತ್ತಮವಾದ ಕರ್ಮದಿಂದ । **ರೋಚತೇ**—ಪ್ರಕಾಶಿಸುವುದೋ । **ಯಯೋಃ**—ಯಾರಲ್ಲಿ । **ನಾಧಸೀ**—ಭಕ್ತಿಯುತವಾದ । **ಉಭೇ ರೋದಸೀ**—ದ್ಯಾವಾಪೃಥಿವಿಗಳೆರಡೂ । **ವೃತೌ**—ಸ್ಥಾಪಿತವಾಗಿವೆಯೋ ಅಂತಹವರೂ । **ದಾಶುಷೇ**—ಯಜಮಾನನಿಗೆ ಧನವನ್ನು ಕೊಡುವವರೂ ಆದ । **ಮಿತ್ರಾಯ**—ಮಿತ್ರನಿಗೂ । **ವರುಣಾಯ**—ವರುಣನಿಗೂ । **ಶಿಕ್ಷ**—ಹವಿಸ್ಸನ್ನರ್ಪಿಸು.

ಭಾವಾರ್ಥ

ಲೋಕಕ್ಕೆಲ್ಲ ಪ್ರಭುಗಳಾದ ಯಾವ ಮಿತ್ರಾವರುಣರು ಮನಸ್ಸಿನಲ್ಲಿಯೂ ತಮ್ಮ ಕರ್ತವ್ಯವನ್ನು ಮರೆಯುವುದಿಲ್ಲವೋ, ಯಾವ ಮಿತ್ರಾವರುಣರ ಮಹತ್ತಾದ ಶರೀರವು ಉತ್ತಮವಾದ ಕರ್ಮದಿಂದ ಪ್ರಕಾಶಿಸುವುದೋ, ಯಾರಲ್ಲಿ ಭಕ್ತಿಯುತವಾದ ದ್ಯಾವಾಪೃಥಿವಿಗಳೆರಡೂ ಸ್ಥಾಪಿತವಾಗಿವೆಯೋ ಅಂತಹವರೂ, ಯಜಮಾನನಿಗೆ ಧನವನ್ನು ಕೊಡುವವರೂ ಆದ ಮಿತ್ರನನ್ನೂ, ವರುಣನನ್ನೂ ಉದ್ದೇಶಿಸಿ ಹವಿಸ್ಸನ್ನ ಪಿಸು.

English Translation

Worship the liberal Mitra and Varuna, the two royal deities who are never negligent in their thoughts, whose vast body is resplendent through their functions, upon whom the two solicitous worlds (heaven and earth) remain (dependent)

ಸಂಹಿತಾಪಾಠಃ

ಯಾ ಗೌರ್ವರ್ತನಿಂ ಪರ್ಯೇತಿ ನಿಷ್ಕೃತಂ ಪಯೋ ದುಹಾನಾ ವ್ರತನೀರವಾರತಃ ।
ಸಾ ಪ್ರಬ್ರುವಾಣಾ ವರುಣಾಯ ದಾಶುಷೇ ದೇವೇಭ್ಯೋ ದಾಶದ್ಧವಿಷಾ ವಿವಸ್ಪತೇ ॥ ೬ ॥

ಪದಪಾಠಃ

ಯಾ । ಗೌಃ । ವರ್ತನಿಂ । ಪರಿ । ಏತಿ । ನಿಃ । ಕೃತಂ । ಪಯಃ । ದುಹಾನಾ । ವ್ರತ । ನೀಃ । ಅವಾರತಃ ॥
ಸಾ । ಪ್ರ । ಬ್ರುವಾಣಾ । ವರುಣಾಯ । ದಾಶುಷೇ । ದೇವೇಭ್ಯಃ । ದಾಶತ್ । ಹವಿಷಾ । ವಿವಸ್ಪತೇ ॥ ೬ ॥

ಸಾಯಣಭಾಷ್ಯಂ

ಯೇಯಂ ಮದೀಯಾ ಪಯಃ ಕ್ಷೀರಾದಿಕಂ ದುಹಾನಾ ವ್ರತನೀರಾಶ್ರಯಣಪಯಃಪ್ರದಾನೇನ ಕರ್ಮಣೋ ನೇತ್ರೀ ಗೌರ್ನಿಷ್ಕೃತಂ ಸಂಸ್ಕೃತಂ ವರ್ತನಿಮಾವಾಸಸ್ಥಾನಂ ಯಜ್ಞಮವಾರತೋಽವರಣೇನಾಪ್ರಾರ್ಥನೇನೈವ ಪರ್ಯೇತಿ ಪರಿಗಚ್ಛತಿ ಸ್ವಯಮೇವಾಗಚ್ಛತಿ ಪ್ರಬ್ರುವಾಣಾ ಮಯಾ ಪ್ರಸ್ತೂಯಮಾನಾ ಸಾ ಗೌರ್ದಾಶುಷೇ ಹವಿರ್ದತ್ತವತೇ ವರುಣಾಯ ದೇವೇಭ್ಯೋಽನ್ಯೇಭ್ಯ ಇಂದ್ರಾದಿಭ್ಯಶ್ಚ ಹವಿಷಾನ್ನೇನ ವಿವಸ್ವತೇ ದೇವಾನ್ಪರಿಚರತೇ ಮಹ್ಯಂ ಮಾಂ ರಕ್ಷಿತುಂ ದಾಶತ್ । ಪಯಃ ಪ್ರಯಚ್ಛತು ॥ ದಾಶೃ ದಾನೇ । ಲೇಟ್ಯಡಾಗಮಃ॥ ಯದ್ವಾ ಗೌರಿತಿ ಮಾಧ್ಯಮಿಕಾ ವಾಕ್ ಯಾ ಪಯ ಊರ್ಜಂ ದುಹಾನಾ ಸಾ ನೋ ಮಂದ್ರೇಷಮೂರ್ಜಂ ದುಹಾನಾ । ಋ. ೪-೧೦೦-೧೧ । ಇತ್ಯಾದಿಷು ದೃಷ್ಟತ್ವಾತ್ । ತತ್ಪರತಯಾ ಪೂರ್ವವದ್ಯೋಜ್ಯಂ ॥

प्रतिपदार्थ

पयः—क्षीरवನ್ನು । **दुहाना**—ಕರೆಯುವುದೂ । **व्रतनीः**—ಆದುದರಿಂದಲೇ ಕರ್ಮಕ್ಕೆ ಸಾಧಕವಾಗಿರುವುದೂ ಆದ । **यो गौः**—ಯಾವ ಧೇನುವು । **निष्कृतं**—ಉಪಕರಣಗಳಿಂದ ಸಂಸ್ಕೃತವಾದ । **वर्तनिं**—ಯಜ್ಞವನ್ನು । **अवारतः**—ಸ್ವಪ್ರೇರಣೆಯಿಂದಲೇ (ಯಾರಿಂದಲೂ ಪ್ರಾರ್ಥಿಸಲ್ಪಡದೆ) । **परीतिः**—ಬಂದು ಸೇರುವುದೋ । **सा**—ಅಂತಹ । **मह्यं वरुणाय**—ನನ್ನಿಂದ ಸ್ತುತಿಸಲ್ಪಡುವ ಧೇನುವು । **दाशुषे**—ದಾನಮಾಡುವ । **वरुणाय**—ವರುಣನಿಗೂ । **देवेभ्यः**—ಇಂದ್ರಾದಿ ದೇವತೆಗಳಿಗೂ । **हविषा**—ಹವಿಸ್ಸಿನಿಂದ । **विवस्वते**—ದೇವತೆಗಳನ್ನು ಪೂಜಿಸುವ ನನಗೂ । **दाशत्**—ಕ್ಷೀರವನ್ನು ಕೊಡಲಿ.

ಭಾವಾರ್ಥ

ಕ್ಷೀರವನ್ನು ಕರೆಯುವುದೂ, ಆದುದರಿಂದಲೇ ಕರ್ಮಕ್ಕೆ ಸಾಧಕವಾಗಿರುವುದೂ ಆದ ಯಾವ ಧೇನುವು ಉಪಕರಣಗಳಿಂದ ಸಂಸ್ಕೃತವಾದ ಯಜ್ಞವನ್ನು ಸ್ವಪ್ರೇರಣೆಯಿಂದಲೇ ಬಂದು ಸೇರುವುದೋ ಅಂತಹ ನನ್ನಿಂದ ಸ್ತುತಿಸಲ್ಪಡುವ ಧೇನುವು ದಾನಮಾಡುವ ವರುಣನಿಗೂ, ಇಂದ್ರಾದಿ ದೇವತೆಗಳಿಗೂ, ಹವಿಸ್ಸಿನಿಂದ ದೇವತೆಗಳನ್ನು ಪೂಜಿಸುವ ನನಗೂ ಕ್ಷೀರವನ್ನು ಕೊಡಲಿ.

English Translation

May that cow, the leader of the rite, which yielding her milk proceeds uncalled to the consecrated place(of sacrifice), may she, propitiated by me, yield her milk to (me), the offerer of oblations to liberal Varuna and the (other) gods.

संहितापाठः

दिवक्षसो अग्निजिह्वा ऋतावृध ऋतस्य योनिं विमृशंत आसते ।
द्यां स्कभित्व्यपसे आ चक्रुरोजसा यज्ञं जनित्वी तन्वी नि मामृजुः ॥ ६ ॥

पदपाठः

दिवक्षसः । अग्निऽजिह्वाः । ऋतऽवृधः । ऋतस्य । योनिं । विऽमृशंतः । आसते ॥
द्यां । स्कभित्वी । अपसे । आ । चक्रुः । ओजसा । यज्ञं । जनित्वी । तन्वी । नि । ममृजुः ॥

सायणभाष्यं

दिवक्षसः स्वतेजसा दिवं व्याप्नुवंतः ॥ अक्षू व्याप्तौ । असुनि रूपं ॥ यद्वा । दिवो वोढारः अग्निजिह्वा अग्न्यास्याः । अग्निना हविरंशि लिहंत्यास्वादयंतीति

ತನ್ಮಹಾಃ । ಋತಾವೃಧೋ ಯಜ್ಞವೃದ್ಧಾ ಯಜ್ಞಸ್ಯ ವರ್ಧಯಿತಾರೋ ದೇವಾ ವರ್ತಸ್ಯ ಸತ್ಯಭೂತಸ್ಯ ಯಜ್ಞಸ್ಯ ಯೋನಿಂ ಸ್ಥಾನಂ ವಿಮೃಶಂತೋ ವಿಚಾರಯಂತಃ ಪ್ರತೀಕ್ಷಮಾಣಾಃ ಸಂತ ಆಸತೇ । ಸರ್ವತ್ರ ತಿಷ್ಠಂತಿ । ತ ಇಮೇ ದ್ಯಾಂ ದ್ಯುಲೋಕಂ ಸ್ಕಭಿತ್ವೀ ಸ್ಕಭಿತ್ವಾ ತಾಂ ಧಾರಯಿತ್ವೌಜಸಾ ಸ್ವಬಲೇನಾಪೋಽಪೇಕ್ಷಿತಾನ್ಯುದಕಾನ್ಯಾ ಚಕ್ರುಃ । ಅಕುರ್ವಂತಿ । ತತೋ ಯಜ್ಞಂ ಯಜನೀಯಂ ಹವಿರ್ಜ ಜನಿತ್ವೀ ಜನಯಿತ್ವಾ ತನ್ವಿ ಸ್ವಶರೀರೇ ನಿ ಮಾಮೃಜುಃ । ನಿಮೃಜಂತಿ । ನಿತರಾಮಲಂಕುರ್ವಂತಿ । ಹವಿರ್ಭಕ್ಷಯಂತೀತ್ಯರ್ಥಃ ॥

ಪ್ರತಿಪದಾರ್ಥ

ದಿವಕ್ಷಸಃ—ತಮ್ಮ ತೇಜಸ್ಸಿನಿಂದ ದ್ಯುಲೋಕವನ್ನು ವ್ಯಾಪಿಸುವವರೂ । **ಅಗ್ನಿಜಿಹ್ವಾಃ**—ಅಗ್ನಿರೂಪವಾದ ನಾಲಗೆಯನ್ನು ಹೊಂದಿರುವವರೂ । **ಋತಾವೃಧಃ**—ಯಜ್ಞವರ್ಧಕರೂ ಆದ ದೇವತೆಗಳು । **ಋತಸ್ಯ**—ಸತ್ಯಾತ್ಮಕವಾವ ಯಜ್ಞದ । **ಯೋನಿಂ**—ಸ್ಥಾನವನ್ನು । **ವಿಮೃಶಂತಃ**—ಧ್ಯಾನದೃಷ್ಟಿಯಿಂದ ನೋಡುತ್ತ । **ಆಸತೇ**—ಕುಳಿತಿರುತ್ತಾರೆ । **ದ್ಯಾಂ**—ದ್ಯುಲೋಕವನ್ನು । **ಸ್ಕಭಿತ್ವೀ**—ಧರಿಸಿದವರಾಗಿ । **ಓಜಸಾ**—ತಮ್ಮ ಶಕ್ತಿಯಿಂದ । **ಅಪಃ**—ಉದಕಗಳನ್ನು । **ಆ ಚಕ್ರುಃ**—ಉತ್ಪನ್ನಮಾಡುತ್ತಾರೆ । **ಯಜ್ಞಂ**—ಯಜ್ಞವನ್ನು (ಹವಿಸ್ಸನ್ನು) । **ಜನಿತ್ವೀ**—ಉತ್ಪನ್ನಮಾಡಿ । **ತನ್ವಿ**—ತಮ್ಮ ಶರೀರವನ್ನು । **ನಿ ಮಾಮೃಜುಃ**—ಅದರಿಂದ ಅಲಂಕರಿಸಿಕೊಳ್ಳುತ್ತಾರೆ.

ಭಾವಾರ್ಥ

ತಮ್ಮ ತೇಜಸ್ಸಿನಿಂದ ದ್ಯುಲೋಕವನ್ನು ವ್ಯಾಪಿಸುವವರೂ, ಅಗ್ನಿರೂಪವಾದ ನಾಲಿಗೆಯನ್ನು ಹೊಂದಿರುವವರೂ, ಯಜ್ಞವರ್ಧಕರೂ ಆದ ದೇವತೆಗಳು ಸತ್ಯಾತ್ಮಕವಾದ ಯಜ್ಞದ ಸ್ಥಾನವನ್ನು ಧ್ಯಾನದೃಷ್ಟಿಯಿಂದ ನೋಡುತ್ತ ಕುಳಿತಿರುತ್ತಾರೆ. ದ್ಯುಲೋಕವನ್ನು ಧರಿಸಿದವರಾಗಿ, ತಮ್ಮ ಶಕ್ತಿಯಿಂದ ಉದಕಗಳನ್ನು ಉತ್ಪನ್ನಮಾಡುತ್ತಾರೆ. ಯಜ್ಞವನ್ನು ಉತ್ಪನ್ನಮಾಡಿ ತನ್ಮ ಶರೀರವನ್ನು ಅದರಿಂದ ಅಲಂಕರಿಸಿಕೊಳ್ಳುತ್ತಾರೆ.

English Transiation

Pervading heaven (with their radiance), having Agni as their tongue, the augmenters of sacrifice, (these deities) sit contemplating the place of sacrifice ; sustaining heaven they have produced the waters by their power; having generated sacrifice, they have decorated their persons (with it).

ಸಂಹಿತಾಪಾಠಃ

ಪರಿಕ್ಷಿತಾ ಪಿತರಾ ಪೂರ್ವಜಾವರೀ ಋತಸ್ಯ ಯೋನಾ ಕ್ಷಯತಃ ಸಮೋಕಸಾ ।

ದ್ಯಾವಾಪೃಥಿವೀ ವರುಣಾಯ ಸವ್ರತೇ ಘೃತವತ್ಪಯೋ ಮಹಿಷಾಯ ಪಿನ್ವತಃ ॥

ಪದಪಾಠಃ

ಪರಿಽಕ್ಷಿತಾ । ಪಿತರಾ । ಪೂರ್ವಜಾವರೀ ಇತಿ ಪೂರ್ವಽಜಾವರೀ । ಋತಸ್ಯ । ಯೋನಾ । ಕ್ಷಯತಃ । ಸಂಽಓಕಸಾ ।

द्यावापृथिवी इति । वरुणाय । सव्रते इति सऽव्रते । घृतऽवत् । पयः । महि-

षाय । पिन्वतः ॥ ९ ॥

सायणभाष्यं

परिक्षिता परितोऽनिवसंत्यौ सर्वत्र व्याप्तिमत्यौ पितरा सर्वेषां मातापितृभूते अत एव पूर्वजावरी पूर्वं जाते समोकसा समानेनिवासस्थाने एते द्यावापृथिव्यावृतस्य यज्ञस्य योनौ योनौ स्थाने क्षयतः। अधिकरणस्थेन निवसतः। हविर्धानरूपे वा क्षियतः। किंच सव्रते समानकर्मणी ते महिषाय महते पूज्याय वा वरुणाय । तं यक्षध्वं । उपलक्षणमेतत् । अन्यान्देवानपि । घृतवत्प्रस्रवणवत् पय उदकं पिन्वतः । सिंचतः । उदकेन ह्यन्नं जायते ॥

प्रतिपदार्थ

परिक्षिता—सर्वत्र व्याप्तिसिरुववरू । **पितरा**-जगत्तिगे मातापितृरूपरू । **पूर्वजावरी**-एल्लक्किंतलू मोदलु उत्पन्नरादवरू । **समोकसा**—समानवाद स्थानवुळ्ळवरू आद । **द्यावापृथिवी**—द्यावापृथिविगळु । **यतस्य**—यज्ञद । **योना**—स्थानदल्लि । **क्षयतः**—वासमाडुत्तारे । **सव्रते**-समानवाद कर्मवुळ्ळ अवरु । **महिषाय**-पूज्यनाद । **वरुणाय**-वरुणनन्नु पूजिसलु । **घृतवत्**—प्रवहिसुव । **पयः**—उदकवन्नु । **पिन्वतः**—सुरिसुत्तारे.

भावार्थ

सर्वत्र द्याप्तिसिरुववरू, जगत्तिगे मातापितृरूपरू, एल्लक्किंतलू मोदलु उत्पन्नरादवरू, समानवाद स्थानवुळ्ळवरू आद द्यावापृथिविगळु यज्ञद स्थानदल्लि वासमाडुत्तारे. समानवाद कर्मवुळ्ळ अवरु पूज्यनाद वरुणनन्नु पूजिसलु प्रवहिसुव उदकवन्नु सुरिसुत्तारे.

English Translation

The encompassing parents (heaven and earth), born of old, having a common dwelling, sit down upon the place of sacrifice ; engaged in a common observance they sprinkle upon the adorable Varuna water mixed with butter.

संहितापाठः

पर्जन्यावाता वृषभा पुरीषिणेंद्रवायू वरुणो मित्रो अर्यमा ॥

ದೇವಾ ಆದಿತ್ಯಾ ಅದಿತಿಂ ಹವಾಮಹೇ ಯೇ ಪಾರ್ಥಿವಾಸೋ ದಿವ್ಯಾಸೋ ಅಪ್ಸು ಯೇ ॥ ೯ ॥

ಪದಪಾಠಃ

ಪರ್ಜನ್ಯಾವಾತಾ । ವೃಷಭಾ । ಪುರೀಷಿಣಾ । ಇಂದ್ರವಾಯೂ ಇತಿ । ವರುಣಃ । ಮಿತ್ರಃ । ಅರ್ಯಮಾ ॥ ದೇವಾನ್ । ಆದಿತ್ಯಾನ್ । ಅದಿತಿಂ । ಹವಾಮಹೇ । ಯೇ । ಪಾರ್ಥಿವಾಸಃ । ದಿವ್ಯಾಸಃ । ಅಪ್ಸ್ವಸು । ಯೇ ॥

ಸಾಯಣಭಾಷ್ಯಂ

ಪರ್ಜನ್ಯಾವಾತಾ ಪರ್ಜನ್ಯಾವಾತೌ ಪರ್ಜನ್ಯವಾಯೂ ವೃಷಭಾ ವೃಷಭೌ ಕಾಮಾನಾಂ ಸೇಕ್ತಾರೌ ಪುರೀಷಿಣಾ ಪುರೀಷಿಣೌ । ಪುರೀಷಮುದಕಂ । ಕರ್ಮಣ್ವೇನ ತದ್ವಂತೌ ತಾವಿಂದ್ರವಾಯೂ ವರುಣಾದಯಶ್ಚ ಏತೇ ಸ್ವಮಹಿಮ್ನಾ ಸರ್ವತ್ರ ವರ್ತಂತೇ । ವಾಯೋಃ ಪರ್ಜನ್ಯೇನೇಂದ್ರೇಣ ಚ ತತ್ಕಾರ್ಯಾಪೇಕ್ಷಯಾ ಸಹೋಪಾದಾನಂ । ಏತಾನಾದಿತ್ಯಾನ್ದೇವಾನದಿತಿಂ ತೇಷಾಂ ಮಾತರಂ ಚ ಹವಾಮಹೇ । ಅಸ್ಮಿನ್ಯಜ್ಞೇ ವಯಮಾಹ್ವಯಾಮಃ । ಕಿಂಚ ಯೇ ದೇವಾಃ ಪಾರ್ಥಿವಾಸಃ ಪಾರ್ಥಿವಾಃ ಪೃಥಿವ್ಯಾಂ ಭವಾ ಯೇ ಚ ದಿವ್ಯಾ ದಿವಿ ಜಾತಾ ಯೇ ಚಾಪ್ಸ್ವಂತರಿಕ್ಷೇ ಸಮುತ್ಪನ್ನಾಃ ತಾನಾಹ್ವಯಾಮಹೇ ॥

ಪ್ರತಿಪದಾರ್ಥ

ವೃಷಭಾ—ಇಷ್ಟಾರ್ಥಪ್ರದರಾದ । **ಪರ್ಜನ್ಯಾವಾತಾ**—ಪರ್ಜನ್ಯ ಮತ್ತು ವಾಯುಗಳೂ । **ಪುರೀಷಿಣಾ**—ಉದಕವಂತರಾದ । **ಇಂದ್ರವಾಯೂ**—ಇಂದ್ರ ಮತ್ತು ವಾಯುದೇವತೆಗಳೂ । **ವರುಣಃ**—ವರುಣನೂ । **ಮಿತ್ರಃ**—ಮಿತ್ರನೂ । **ಅರ್ಯಮಾ**—ಅರ್ಯಮನೂ ಸರ್ವತ್ರ ವ್ಯಾಪಿಸಿದ್ದಾರೆ । **ಯೇ**—ಯಾರು । **ಪಾರ್ಥಿವಾಸಃ**—ಪೃಥ್ವಿಯಲ್ಲಿರುವವರೋ । **ಯೇ**—ಯಾರು । **ದಿವ್ಯಾಸಃ**—ದ್ಯುಲೋಕವಲ್ಲಿರುವವರೋ । **ಅಪ್ಸು**—ಯಾರು ಅಂತರಿಕ್ಷವಲ್ಲಿರುವವರೋ । **ದೇವಾನ್**—ಆ ದೇವತೆಗಳನ್ನೂ । **ಆದಿತ್ಯಾನ್**—ಆದಿತ್ಯರನ್ನೂ । **ಅದಿತಿಂ**—ದೇವಮಾತೆಯಾದ ಅದಿತಿಯನ್ನೂ । **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ.

ಭಾವಾರ್ಥ

ಇಷ್ಟಾರ್ಥಪ್ರದರಾದ ಪರ್ಜನ್ಯ ಮತ್ತು ವಾಯುಗಳೂ, ಉದಕವಂತರಾದ ಇಂದ್ರ ಮತ್ತು ವಾಯುದೇವತೆಗಳೂ, ವರುಣನೂ, ಮಿತ್ರನೂ, ಅರ್ಯಮನೂ, ಸರ್ವತ್ರ ವ್ಯಾಪಿಸಿದ್ದಾರೆ. ಪೃಥ್ವಿಯಲ್ಲಿರುವವರೂ, ದ್ಯುಲೋಕದಲ್ಲಿರುವವರೂ, ಅಂತರಿಕ್ಷಸ್ಥರೂ ಆದ ಸಕಲ ದೇವತೆಗಳನ್ನೂ, ಆದಿತ್ಯರನ್ನೂ, ದೇವಮಾತೆಯಾದ ಅದಿತಿಯನ್ನೂ ಪ್ರಾರ್ಥಿಸಿ ಕರೆಯುತ್ತೇವೆ.

English Translation

The two showerers (of desires), Parjanya and Vata, the two senders of water, Indra and Vayu, Varuna, Mitra, Aryaman; we invoke the divine Adityas, Aditi and the gods, who dwell on the earth, or in heaven, or in the waters.

ಸಂಹಿತಾಪಾಠಃ

ತ್ವಷ್ಟಾರಂ ವಾಯುಮೃಭವೋ ಯ ಓಹತೇ ದೈವ್ಯಾ ಹೋತಾರಾ ಉಷಸಂ ಸ್ವಸ್ತಯೇ ।
ಬೃಹಸ್ಪತಿಂ ವೃತ್ರಖಾದಂ ಸುಮೇಧಸಮಿಂದ್ರಿಯಂ ಸೋಮಂ ಧನಸಾ ಉ ಈಮಹೇ ॥ ೧೦ ॥

ಪದಪಾಠಃ

ತ್ವಷ್ಟಾರಂ। ವಾಯುಂ। ಋಭವಃ। ಯಃ। ಓಹತೇ। ದೈವ್ಯಾ। ಹೋತಾರೌ। ಉಷಸಂ। ಸ್ವಸ್ತಯೇ ॥
ಬೃಹಸ್ಪತಿಂ। ವೃತ್ರಖಾದಂ। ಸುಮೇಧಸಂ। ಇಂದ್ರಿಯಂ। ಸೋಮಂ। ಧನಸಾಃ। ಊಂ ಇತಿ। ಈಮಹೇ ॥ ೧೦ ॥

ಸಾಯಣಭಾಷ್ಯಂ

ಹೇ ಋಭವಃ । ಋತೇನ ಸತ್ಯೇನ ಭಾಂತೀತ್ಯೃಭವಃ । ಉರು ಪ್ರಭೂತಂ ಸ್ವತೇಜಸಾ ಭಾಂತೀತಿ ವಾ । ಹೇ ಮೇಧಾವಿನಃ ಯಃ ಸೋಮಃ ಸ್ವಸ್ತಯೇ ಕಲ್ಯಾಣಾಯ ಯುಷ್ಮಾಕಂ ಮದಾಯ ತ್ವಷ್ಟೃ-ಪ್ರಭೃತೀನೋಹತೇ ॥ ಓಹಿರ್ಗತ್ಯರ್ಥಃ । ಭ್ವಾದಿಕಃ ॥ ಆವಹತಿ ಪ್ರಾಪ್ನೋತಿ । ತಥಾ ಬೃಹಸ್ಪತಿಂ ಸುಮೇಧಸಂ ಸುಪ್ರಜ್ಞಂ ವೃತ್ರಖಾದಂ ವೃತ್ರಸ್ಯಾಸುರಸ್ಯ ಖಾದಿತಾರಮಿಂದ್ರಂ ಚ ಪ್ರಾಪ್ನೋತಿ ಧನಸಾ ಧನಂ ಸಂಭಜಮಾನಾ ವಯಮಿಂದ್ರಿಯಮಿಂದ್ರಜುಷ್ಟಂ ತಂ ಸೋಮಮೀಮಹೇ। ಧನಂ ಯಾಚಾಮಹೇ। ಈಮಹ ಇತಿ ಯಾಚ್ಞಾಕರ್ಮಾ ॥ ಈಙ್ ಗತೌ ದೈವಾದಿಕಃ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ ॥

ಪ್ರತಿಪದಾರ್ಥ

ಋಭವಃ—ಎಲೈ ಋಭುಗಳೇ । **ಯಃ**—ಯಾವ ಸೋಮನು । **ಸ್ವಸ್ತಯೇ**—ನಿಮ್ಮ ಕಲ್ಯಾಣಕ್ಕಾಗಿ। **ತ್ವಷ್ಟಾರಂ**—ತ್ವಷ್ಟೃವನ್ನೂ । **ವಾಯುಂ**—ವಾಯುವನ್ನೂ । **ದೇವ್ಯಾ ಹೋತಾರೌ**—ದೇವಹೋತೃಗಳಾದ ಅಶ್ವಿನೀದೇವತೆಗಳನ್ನೂ । **ಉಷಸಂ**—ಉಷೋದೇವಿಯನ್ನೂ । **ಬೃಹಸ್ಪತಿಂ**-ಬೃಹಸ್ಪತಿಯನ್ನೂ । **ವೃತ್ರಖಾದಂ**-ವೃತ್ರಸಂಹಾರಕನೂ । **ಸುಮೇಧಸಂ**—ಉತ್ತಮವಾದ ಪ್ರಜ್ಞಾಯುತನೂ ಆದ ಇಂದ್ರನನ್ನೂ । **ಓಹತೇ**—ಯಜ್ಞಕ್ಕೆ ಕರೆತರುವನೋ ಅಂತಹ । **ಇಂದ್ರಿಯಂ**—ಇಂದ್ರನಿಗೆ ಮಿತ್ರನಾದ । **ಸೋಮಂ**—ಸೋಮನನ್ನು । **ಧನಸಾಃ**—ಧನವನ್ನು ಅಪೇಕ್ಷಿಸುವ ನಾವು । **ಈಮಹೇ**—ಧನಕ್ಕಾಗಿ ಯಾಚಿಸುತ್ತೇವೆ.

ಭಾವಾರ್ಥ

ಎಲೈ ಋಭುಗಳೇ, ಯಾವ ಸೋಮನು ನಿಮ್ಮ ಕಲ್ಯಾಣಕ್ಕಾಗಿ ತ್ವಷ್ಟೃವನ್ನೂ, ವಾಯುವನ್ನೂ, ದೇವಹೋತೃಗಳಾದ ಅಶ್ವಿನೀದೇವತೆಗಳನ್ನೂ, ಉಷೋದೇವಿಯನ್ನೂ, ಬೃಹಸ್ಪತಿಯನ್ನೂ, ವೃತ್ರಸಂಹಾರಕನೂ, ಉತ್ತಮವಾದ

ಪ್ರಜ್ಞಾಯುತನೂ ಆದ ಇಂದ್ರನನ್ನೂ ಯಜ್ಞಕ್ಕೆ ಕರೆತರುವನೋ ಅಂತಹ ಇಂದ್ರನಿಗೆ ಮಿತ್ರನಾದ ಸೋಮನನ್ನು ಧನಾಪೇಕ್ಷಿಗಳಾದ ನಾವು ಧನಕ್ಕಾಗಿ ಯಾಚಿಸುತ್ತೇವೆ.

English Translalion

Desirous of wealth, we solicit that Soma, the friend of Indra, who for your welfare, Ribhus, brings (hither) Twashtri, Vayu, the two divine sacrificers. (the Ashwins), Dawn, Brihaspati, and the wise slayer of the Vritra.

ಸಂಹಿತಾಪಾಠಃ

ಬ್ರಹ್ಮ ಗಾಮಶ್ವಂ ಜನಯಂತ ಓಷಧೀರ್ವನಸ್ಪತೀನ್ಪೃಥಿವೀಂ ಪರ್ವತಾಁ ಅಪಃ ।
ಸೂರ್ಯಂ ದಿವಿ ರೋಹಯಂತಃ ಸುದಾನವ ಆರ್ಯಾ ವ್ರತಾ ವಿಸೃಜಂತೋ ಅಧಿ ಕ್ಷಮಿ ॥ ೧೧ ॥

ಪದಪಾಠಃ

ಬ್ರಹ್ಮ । ಗಾಂ। ಅಶ್ವಂ। ಜನಯಂತಃ। ಓಷಧೀಃ। ವನಸ್ಪತೀನ್। ಪೃಥಿವೀಂ। ಪರ್ವತಾನ್। ಅಪಃ॥
ಸೂರ್ಯಂ । ದಿವಿ । ರೋಹಯಂತಃ । ಸುऽದಾನವಃ । ಆರ್ಯಾ । ವ್ರತಾ । ವಿऽಸೃಜಂತಃ । ಅಧಿ । ಕ್ಷಮಿ॥

ಸಾಯಣಭಾಷ್ಯಂ

ಬ್ರಹ್ಮ ವರ್ಧನಸಾಧನಮನ್ನಂ । ಅನ್ನೇನ ಹಿ ಸರ್ವಾಃ ಪ್ರಜಾಃ ವರ್ಧಂತೇ । ಗಾಮಶ್ವಮೇತತ್ಪ್ರಭೃತೀನ್ಪಶೂನ್ ತಥೌಷಧೀರ್ವನಸ್ಪತೀಂಶ್ಚ ತಥಾ ಪೃಥಿವೀಂ ವಿಸ್ತೀರ್ಣಾಂ ಭೂಮಿಂ ಪರ್ವತಾನ್ಕಿಲೋಚ್ಚೈಯಾನ್ ವೃಷ್ಟ್ಯಾ ಜಗದಾಪೂರಕಾನ್ಮೇಘಾನ್ವಾ ಅಪ ಉದಕಾನ್ಯಂತರಿಕ್ಷಂ ವಾ ವಿತಾನ್ಯಜನಯಂತ ಉತ್ಪಾದಯಂತಃ ಕಿಂಚ ದಿವಿ ದ್ಯುಲೋಕೇ ಸೂರ್ಯಮಾದಿತ್ಯಂ ರೋಹಯಂತಃ ಸುದಾನವಃ ಶೋಭನದಾನಾಸ್ತೇऽಮೀ ದೇವಾ ಅಧಿ ಕ್ಷಮಿ ॥ ಅತ ಇತಿ ಯೋಗವಿಭಾಗಾತ್ । ಪಾ-೬-೪-೧೪೦ । ಅಕಾರ ಲೋಪಃ ॥ ಕ್ಷಮಾಯಾಂ ಪೃಥಿ ವ್ಯಾಮಾರ್ಯಾ ಶ್ರೇಷ್ಠಾನಿ ಕಲ್ಯಾಣಾನಿ ವ್ರತಾನಿ ಕರ್ಮಾಣಿ ಯಾಗಾದೀನಿ ವಿಸೃಜಂತಃ ಪ್ರಸಾರಯಂತಃ ಸರ್ವತ್ರ ವರ್ತಂತೇ । ತಾನ್ವಯಂ ಧನಂ ಯಾಚಾಮಹ ಇತಿ ಶೇಷಃ ॥

ಪ್ರತಿಪದಾರ್ಥ

ಬ್ರಹ್ಮ—ಪೋಷಕವಾದ ಅನ್ನವನ್ನೂ । ಗಾಂ—ಗೋವನ್ನೂ । ಅಶ್ವಂ—ಅಶ್ವವನ್ನೂ । ಓಷಧೀಃ—ಓಷಧಿಗಳನ್ನೂ । ವನಸ್ಪತೀನ್—ವೃಕ್ಷಗಳನ್ನೂ । ಪೃಥಿವೀಂ—ಪೃಥ್ವಿಯನ್ನೂ । ಪರ್ವತಾನ್—ಪರ್ವತ

ಗಳನ್ನೂ । **ಅಪಃ**—ಉದಕಗಳನ್ನೂ । **ಜನಯಂತಃ**—ಉತ್ಪನ್ನಮಾಡುತ್ತಲೂ । **ದಿವಿ**—ದ್ಯುಲೋಕದಲ್ಲಿ । **ಸೂರ್ಯಂ**—ಸೂರ್ಯನನ್ನು । **ರೋಹಯಂತಃ**—ಉನ್ನತವಾಗಿ ಸ್ಥಾಪಿಸುತ್ತಲೂ ಇರುವ । **ಸುದಾನವಃ**—ಉದಾರವಾದ ದಾನಿಗಳಾದ ದೇವತೆಗಳು । **ಅಧಿ ಕ್ಷಮಿ**—ಪೃಥ್ವಿಯಮೇಲೆ । **ಆರ್ಯಾ ವ್ರತಾ**—ಕಲ್ಯಾಣಕಾರಗಳಾದ ಯಾಗಾದಿ ಕರ್ಮಗಳನ್ನು । **ವಿಸೃಜಂತಃ**—ವಿಸ್ತೃತವಾಗಿ ನೆರವೇರಿಸುತ್ತಾರೆ.

ಭಾವಾರ್ಥ

ಪೋಷಕವಾದ ಅನ್ನವನ್ನೂ, ಅಶ್ವವನ್ನೂ, ಓಷಧಿಗಳನ್ನೂ, ವೃಕ್ಷಗಳನ್ನೂ, ಪೃಥ್ವಿಯನ್ನೂ, ಪರ್ವತಗಳನ್ನೂ, ಉದಕಗಳನ್ನೂ ಉತ್ಪನ್ನಮಾಡುತ್ತಲೂ, ದ್ಯುಲೋಕದಲ್ಲಿ ಸೂರ್ಯನನ್ನು ಉನ್ನತವಾಗಿ ಸ್ಥಾಪಿಸುತ್ತಲೂ ಇರುವ ಉದಾರವಾದ ದಾನಿಗಳಾದ ದೇವತೆಗಳು ಪೃಥ್ವಿಯಮೇಲೆ ಕಲ್ಯಾಣಕಾರಕಗಳಾದ ಯಾಗಾದಿಕರ್ಮಗಳನ್ನು ವಿಸ್ತೃತವಾಗಿ ನೆರವೇರಿಸುತ್ತಾರೆ.

English Translation

Generating food, cows, horses, plants, trees, the earth mountains and waters, elevating the sun in heaven, munificent, promoting sacred observances upon the earth, (they abide everywhere).

ಸಂಹಿತಾಪಾಠಃ

ಭುಜ್ಯುಮಂಹಸಃ ಪಿಪೃಥೋ ನಿರಶ್ವಿನಾ ಶ್ಯಾವಂ ಪುತ್ರಂ ವಧ್ರಿಮತ್ಯಾ ಅಜಿನ್ವತಂ ।
ಕ್ಷಮದ್ಯುವಂ ವಿಮದಾಯೋಹಥುರ್ಯುವಂ ವಿಷ್ಣಾಪ್ವಂ ವಿಶ್ವಕಾಯಾವ ಸೃಜಥಃ ॥ ೧೨ ॥

ಪದಪಾಠಃ

ಭುಜ್ಯುಂ । ಅಂಹಸಃ । ಪಿಪೃಥಃ । ನಿಃ । ಅಶ್ವಿನಾ । ಶ್ಯಾವಂ । ಪುತ್ರಂ । ವಧ್ರಿಮತ್ಯಾಃ । ಅಜಿನ್ವತಂ ।
ಕ್ಷಮದ್ಯುವಂ । ವಿಮದಾಯ । ಊಹಥುಃ । ಯುವಂ । ವಿಷ್ಣಾಪ್ವಂ । ವಿಶ್ವಕಾಯ । ಅವ । ಸೃಜಥಃ ॥

ಸಾಯಣಭಾಷ್ಯಂ

ಹೇ ಅಶ್ವಿನಾಶ್ವವಂತೌ ಸರ್ವಂ ವ್ಯಾಪ್ನುವಂತೌ ವೈತನ್ನಾಮಕೌ ಹೇ ದೇವೌ ಅಂಹಸ ಉಪದ್ರವಕಾರಿಣಃ ಸಮುದ್ರಾದ್ಭುಜ್ಯುಂ ತುಗ್ರಪುತ್ರಮೇತನ್ನಾಮಾನಂ ನಿಃ ಪಿಪೃಥಃ । ನಿಷ್ಪಾರಯೇಥಃ । ನಿತರಾಂ ರಕ್ಷಥಃ ॥ ಪೃ ಪಾಲನಪೂರಣಯೋಃ । ಜೌಹೋತ್ಯಾದಿಕಃ ॥ ನಿಷ್ಪೂರ್ವ್ಯಂ ಪಾರಯೇಥಃ ಸಮುದ್ರಾತ್ । ಋ. ೧-೧೧೬-೬ । ಇತಿ ನಿಗಮಃ । ತಥಾ ಶ್ಯಾವಂ ಹಿರಣ್ಯಹಸ್ತನಾಮಾನಂ ಪುತ್ರಂ ವಧ್ರಿಮತ್ಯಾ ಏತನ್ನಾಮಿಕಾಯಾ ಅಜಿನ್ವತಂ । ಅಪ್ರೀಣಯತಂ । ಅದತ್ತಂ। ಹಿರಣ್ಯಹಸ್ತಮಶ್ವಿನಾ ರರಾಣಾ। ಋ. ೧-೧೧೭-೨೪।

ಇತ್ಯಾದಿ ನಿಗಮಃ। ತಥಾ ಕಮದ್ಯುವಂ ಕಾಮಸ್ಯ ದೀಪನೀಂ ವೇನಪುತ್ರೀಂ ಜಾಯಾಂ ವಿಮದಾ-ಯೇರ್ಷಯೇ ಯುವಮೂಹಥುಃ। ಪ್ರಾಪಯಥುಃ। ಯುವಂ ರಥೇನ ವಿಮದಾಯ। ಋ. ೧೦-೩೯-೭। ಇತಿ ನಿಗಮಃ। ತಥಾ ವಿಷ್ಣಾಪ್ಸನೇತನ್ನಾಮಾನಂ ವಿನಷ್ಟಂ ಪುತ್ರಂ ವಿಶ್ವಕಾಯರ್ಷಯೇ ಆನೀಯೋವ ಸೃಜಥಃ। ಅದತ್ತಂ। ಪಶುಂ ನ ನಷ್ಟಮಿವ ದರ್ಶನಾಯ। ಋ. ೧-೧೧೬-೨೩। ಇತಿ ನಿಗಮಃ॥

ಪ್ರತಿಪದಾರ್ಥ

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ। **ಅಂಹಸಃ**—ಹಿಂಸೆಗೆ ಸ್ಥಾನವಾದ ಸಮುದ್ರದಿಂದ। **ಭುಜ್ಯುಂ**—ಭುಜ್ಯುವನ್ನು। **ನಿ ಪಿಪೃಥಃ**—ರಕ್ಷಿಸಿದಿರಿ। **ವಧ್ರಿಮತ್ಯೈ**—ವಧ್ರಿಮತಿಗೆ। **ಶ್ಯಾವಂ ಪುತ್ರಂ**—ಶ್ಯಾವನೆಂಬ ಪುತ್ರನನ್ನು। **ಅಜಿನ್ವತಂ**—ಅನುಗ್ರಹಿಸಿ ಕೊಟ್ಟಿರಿ। **ವಿಮದಾಯ**—ವಿಮದನೆಂಬ ಋಷಿಗೆ। **ಕಮದ್ಯುವಂ**-ಕಮದ್ಯುವೆಂಬ ಪತ್ನಿಯನ್ನು। **ಯುವಂ**—ನೀವು। **ಊಹಥುಃ**—ಒದಗಿಸಿಕೊಟ್ಟಿರಿ। **ವಿಶ್ವಕಾಯ**—ವಿಶ್ವಕನೆಂಬ ಋಷಿಗೆ। **ವಿಷ್ಣಾಪ್ಸಂ**—ವಿಷ್ಣಾಪ್ಸನೆಂಬ ಪುತ್ರನನ್ನು। **ಅವ ಸೃಜಥಃ**—ಹುಡುಕಿಕೊಟ್ಟಿರಿ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ಹಿಂಸೆಗೆ ಸ್ಥಾನವಾದ ಸಮುದ್ರದಿಂದ ನೀವು ಭುಜ್ಯುವನ್ನು ರಕ್ಷಿಸಿದಿರಿ. ವಧ್ರಿಮತಿಗೆ ಶ್ಯಾವನೆಂಬ ಪುತ್ರನನ್ನು ಅನುಗ್ರಹಿಸಿಕೊಟ್ಟಿರಿ. ವಿಮದನೆಂಬ ಋಷಿಗೆ ಕಮದ್ಯುವೆಂಬ ಪತ್ನಿಯನ್ನು ಒದಗಿಸಿದಿರಿ. ವಿಶ್ವಕನೆಂಬ ಋಷಿಗೆ ವಿಷ್ಣಾಪ್ಸನೆಂಬ ಪುತ್ರನನ್ನು ಹುಡುಕಿಕೊಟ್ಟಿರಿ.

English Translation

You, Ashwins, extricated Bhujyu from calamity, you gave to Vadhrimati her son Shyava ; you gave Kamadyu (as a wife) to Vimada : you restored (the lost) Vishnapu to Vishwaka.

ವಿಶೇಷವಿಷಯಗಳು

ಭುಜ್ಯುವಿನ ವಿಷಯವನ್ನು ನಿಷ್ಟ್ಯೌಗ್ರ್ಯಂ ಪಾರಯಥಃ ಸಮುದ್ರಾತ್ (ಋ. ಸಂ. ೧-೧೧೮-೬) ಇತ್ಯಾದಿ ಋಕ್ಕುಗಳಲ್ಲಿಯೂ, ವಧ್ರಿಮತಿಯ ವಿಷಯವನ್ನು ಭಾಗ 9-408 ಮತ್ತು 27-954 ಪೇಜುಗಳಲ್ಲಿಯೂ, ವಿಶ್ವಕ ಮತ್ತು ವಿಷ್ಣಾಪುವಿನ ವಿಷಯವನ್ನು 9-298 ಪೇಜಿನಲ್ಲಿಯೂ, ವಿಮದನ ವಿಷಯವನ್ನು ಋ.ಸಂ. ೧೦-೩೯-೭ ಇತ್ಯಾದಿ ಋಕ್ಕುಗಳಲ್ಲೆಯೂ ಬರೆದಿರುವುದನ್ನು ನೋಡಿ.

ಸಂಹಿತಾಪಾಠಃ

ಪಾವೀರವೀ ತನ್ಯತುರೇಕಪಾದಜೋ ದಿವೋ ಧರ್ತಾ ಸಿಂಧುರಾಪಃ ಸಮುದ್ರಿಯಃ।
ವಿಶ್ವೇ ದೇವಾಸಃ ಶೃಣವನ್ವಚಾಂಸಿ ಮೇ ಸರಸ್ವತೀ ಸಹ ಧೀಭಿಃ ಪುರಂಧ್ಯಾ॥

ಪದಪಾಠಃ

ಪಾವೀರವೀ । ತನ್ಯತುಃ । ಏಕಪಾತ್ । ಅಜಃ । ದಿವಃ । ಧರ್ತಾ । ಸಿಂಧುಃ । ಅಪಃ । ಸಮುದ್ರಿಯಃ ।
ವಿಶ್ವೇ । ದೇವಾಸಃ । ಶೃಣವನ್ । ವಚಾಂಸಿ । ಮೇ । ಸರಸ್ವತೀ । ಸಹ । ಧೀಭಿಃ । ಪುರಂಧ್ಯಾ ॥ ೧೩ ॥

ಸಾಯಣಭಾಷ್ಯಂ

ಪಾವೀರವ್ಯಾಯುಧವತೀ ತನ್ಯತುಃ ಸ್ತನಯಿತ್ನೀ ವಾಗ್ಮಾಧ್ಯಮಿಕಾ ತಥಾ ದಿವೋ ದ್ಯುಲೋಕಸ್ಯ ಧರ್ತಾ ಧಾರಯಿತಾಜ ಏಕಪಾತ್ ಏಕ ಏವ ಪದ್ಯತೇ ಗಚ್ಛತೀತಿ ನ ಜಾಯತ ಇತ್ಯೇತತ್ಸಂಜ್ಞಕೋ ದೇವಃ ಸಿಂಧುಶ್ಚ ಸಮುದ್ರಿಯಃ । ಸಮುದ್ರಮಂತರಿಕ್ಷಂ । ತತ್ರ ಭವಾ ಆಪಶ್ಚ ॥ ಸಮುದ್ರಾಭ್ರಾದ್ಧ ಇತಿ ಭಾವಾರ್ಥೇ ಛಪ್ರತ್ಯಯಃ ॥ ವಿಶ್ವೇ ದೇವಾಶ್ಚ ಧೀಭಿಃ ಕರ್ಮಭಿರ್ಯುಕ್ತಾಃ ಪುರಂಧ್ಯಾ ಬಹುವಿಧಯಾ ಪ್ರಜ್ಞಯಾ ಸಹಿತಾ ಸರಸ್ವತೀ ಚ ಮೇ ಮದೀಯಾನಿ ವಚಾಂಸಿ ವಕ್ತವ್ಯಾನಿ ಸ್ತೋತ್ರಾಣಿ ಶೃಣವನ್ । ಶೃಣ್ವಂತು । ಪವಿಃ ಶಲ್ಯೋ ಭವತಿ ಯದ್ವಿಪುನಾತಿ ಕಾಯಮಿತ್ಯಾದಿ ನಿರುಕ್ತಮನುಸಂಧೇಯಂ । ನಿ. ೧೨-೩೦ ॥

ಪ್ರತಿಪದಾರ್ಥ

ಪಾವೀರವೀ—ಆಯುಧಧಾರಿಣಿಯೂ । **ತನ್ಯತುಃ**—ಶಬ್ದಕಾರಿಯೂ ಆದ ಮಾಧ್ಯಮಿಕಾ ವಾಗ್ದೇವಿಯೂ। **ದಿವಃ**—ದ್ಯುಲೋಕದ । **ಧರ್ತಾ**—ಧಾರಕನಾದ । **ಅಜ ಏಕಪಾತ್**—ಅಜ ಏಕಪಾತ್ಸಂಜಕನಾದ ದೇವನೂ । **ಸಿಂಧುಃ**—ಸಮುದ್ರದೇವತೆಯೂ । **ಸಮುದ್ರಿಯಃ**—ಅಂತರಿಕ್ಷದಿಂದ ಉತ್ಪನ್ನಗಳಾದ । **ಆಪಃ**—ಉದಕಗಳೂ। **ವಿಶ್ವೇ ದೇವಾಸಃ**—ವಿಶ್ವೇದೇವತೆಗಳೂ । **ಸರಸ್ವತೀ**—ಸರಸ್ವತಿಯೂ । **ಧೀಭಿಃ**—ಕರ್ಮಯುಕ್ತರಾಗಿಯೂ । **ಪುರಂಧ್ಯಾ ಸಹ**—ಉತ್ತಮನಾದ ಜ್ಞಾನಯುಕ್ತರಾಗಿಯೂ । **ಮೇ**—ನನ್ನ । **ವಚಾಂಸಿ**—ಸ್ತುತಿವಾಕ್ಯಗಳನ್ನು । **ಶೃಣ್ವನ್**—ಕೇಳಲಿ.

ಭಾವಾರ್ಥ

ಆಯುಧಧಾರಿಣಿಯೂ, ಶಬ್ದಕಾರಕಳೂ ಆದ ಮಾಧ್ಯಮಿಕಾ ವಾಗ್ದೇವಿಯೂ, ದ್ಯುಲೋಕದ ಧಾರಕನಾದ ಅಜ ಏಕವಾತ್ಸಂಜಕನಾದ ದೇವನೂ, ಸಮುದ್ರದೇವತೆಯೂ, ಅಂತರಿಕ್ಷದಿಂದ ಉತ್ಪನ್ನಗಳಾದ ಉದಕಗಳೂ, ವಿಶ್ವೇ ದೇವತೆಗಳೂ, ಸರಸ್ವತಿಯೂ, ಈ ಎಲ್ಲ ದೇವತೆಗಳೂ ಕರ್ಮಯುಕ್ತರಾಗಿಯೂ, ಉತ್ತಮವಾದ ಜ್ಞಾನಯುಕ್ತರಾಗಿಯೂ ನನ್ನ ಸ್ತುತಿವಾಕ್ಯಗಳನ್ನು ಕೇಳಲಿ.

English Translation

May the armed and thundering (voice of mid-heaven); the upholder of heaven, Aja Ekapad, the ocean, the waters of the firmament, the universal gods and Saraswati, accompanied by sacred rites and abundant wisdom, hear my words.

ಸಂಹಿತಾಪಾಠಃ

ವಿಶ್ವೇ ದೇವಾಃ ಸಹ ಧೀಭಿಃ ಪುರಂಧ್ಯಾ ಮನೋರ್ಯಜತ್ರಾ ಅಮೃತಾ ಋತಜ್ಞಾಃ ।

ರಾತಿಷಾಚೋ ಅಭಿಷಾಚಃ ಸ್ವರ್ವಿದಃ ಸ್ವರ್ಗಿರೋ ಬ್ರಹ್ಮಸೂಕ್ತಂ ಜುಷೇರತ ॥ ೧೪ ॥

ಪದಪಾಠಃ

ವಿಶ್ವೇ । ದೇವಾಃ । ಸಹ । ಧೀಭಿಃ । ಪುರಂಧ್ಯಾ । ಮನೋಃ । ಯಜತ್ರಾಃ । ಅಮೃತಾಃ । ಋತಜ್ಞಾಃ ।
ರಾತಿಷಾಚಃ। ಅಭಿಷಾಚಃ। ಸ್ವರ್ವಿದಃ । ಸ್ವಃ । ಗಿರಃ । ಬ್ರಹ್ಮ । ಸೂಕ್ತಂ । ಜುಷೇರತ ॥ ೧೪ ॥

ಸಾಯಣಭಾಷ್ಯಂ

ಧೀಭಿಃ ಕರ್ಮಭಿಃ ಸಹಿತಾಃ ಪುರಂಧ್ಯಾ ಪ್ರಜ್ಞಾನೇನ ಯುಕ್ತಾ ಮನೋರ್ಮನುಷ್ಯಸ್ಯ ಯಜ್ಞೇ ಯಜತ್ರಾ ಯಷ್ಟವ್ಯಾ ಅಮೃತಾ ಮರಣಧರ್ಮರಹಿತಾ ಋತಜ್ಞಾಃ ಸತ್ಯವಿದೋ ರಾತಿಷಾಚೋ ದೀಯಮಾನಂ ಹವಿಃ ಸೇವಮಾನಾ ಅಭಿಷಾಚ ಅಭಿಮುಖ್ಯೇನ ಯಜ್ಞಂ ಸಮವಯಂತಃ ಸಂಗತವಂತಃ ಸ್ವರ್ವಿದಃ ಸರ್ವಸ್ಯ ಲಂಭಕಾ ವಿಶ್ವೇ ಸರ್ವ ಇಂದ್ರಾದಯೋ ದೇವಾಃ ಸ್ವಃ ಸರ್ವಾ ಗಿರೋಽಸ್ಮದೀಯಾಃ ಸ್ತುತೀರ್ಬ್ರಹ್ಮ ಮಹಚ್ಚಾನ್ನಂ ಸೂಕ್ತಂ ಸುಷ್ಠು ವಕ್ತವ್ಯಂ ಸ್ತೋಮಂ ಯದ್ವಾ ಸುಷ್ಠು ಮಂತ್ರೇಣ ಸಹ ದತ್ತಮನ್ನಂ ಜುಷೇರತ । ಸೇವಂತಾಂ ॥ ಜುಷೀ ಪ್ರೀತಿಸೇವನಯೋಃ । ತೌದಾದಿಕಃ । ಅನುದಾತ್ತೇತ್ । ಲಿಙಾಶಿಷ್ಯ ರನಾದೇಶಾಭಾವಶ್ಛಂದಸಃ । ಬಹುಲಂ ಛಂದಸೀತಿ ರುಡಾಗಮಃ ॥

ಪ್ರತಿಪದಾರ್ಥ

ಮನೋಃ—ಮಾನವನ ಯಜ್ಞದಲ್ಲಿ । **ಯಜತ್ರಾಃ**—ಪೂಜಾರ್ಹರೂ । **ಅಮೃತಾಃ**—ಮರಣಧರ್ಮರಹಿತರೂ । **ಋತಜ್ಞಾಃ**—ಸತ್ಯವೇತ್ತರೂ । **ರಾತಿಷಾಚಃ**—ಹವಿಸ್ಸನ್ನು ಸೇವಿಸುವವರೂ । **ಅಭಿಷಾಚಃ**—ಯಜ್ಞಕ್ಕೆ ಒಟ್ಟಿಗೆ ಬರತಕ್ಕವರೂ । **ಸ್ವರ್ವಿದಃ**—ಸರ್ವಜ್ಞರೂ ಆದ । **ವಿಶ್ವೇ ದೇವಾಃ**—ಸಕಲ ದೇವತೆಗಳೂ । **ಧೀಭಿಃ**—ಕರ್ಮಯುಕ್ತರಾಗಿಯೂ । **ಪುರಂಧ್ಯಾ ಸಹ**—ಉತ್ತಮವಾದ ಜ್ಞಾನಯುಕ್ತರಾಗಿಯೂ । **ಸೂಕ್ತಂ**—ಉತ್ತಮವಾಗಿ ಪಠಿತವಾದ । **ಸ್ವಃ ಗಿರಃ**—ನಮ್ಮ ಸಕಲ ಸ್ತುತಿಗಳನ್ನೂ । **ಬ್ರಹ್ಮ**—ಹವಿಸ್ಸನ್ನೂ । **ಜುಷೇರತ**—ಸೇವಿಸಲಿ.

ಭಾವಾರ್ಥ

ಮಾನವನ ಯಜ್ಞದಲ್ಲಿ ಪೂಜಾರ್ಹರೂ, ಮರಣಧರ್ಮರಹಿತರೂ, ಸತ್ಯವನ್ನರಿತವರೂ, ಹವಿಸ್ಸನ್ನು ಸೇವಿಸುವವರೂ, ಯಜ್ಞಕ್ಕೆ ಒಟ್ಟಿಗೆ ಬರತಕ್ಕವರೂ, ಸರ್ವಜ್ಞರೂ ಆದ ಸಕಲ ದೇವತೆಗಳೂ, ಕರ್ಮಯುಕ್ತರಾಗಿಯೂ, ಉತ್ತಮವಾದ ಜ್ಞಾನಯುಕ್ತರಾಗಿಯೂ ಸಹ ನಮ್ಮಿಂದ ಉತ್ತಮವಾಗಿ ಪಠಿತವಾದ ನಮ್ಮ ಸಕಲ ಸ್ತುತಿಗಳನ್ನೂ ಮತ್ತು ಹವಿಸ್ಸುಗಳನ್ನೂ ಸೇವಿಸಲಿ.

English Translation

May the universal gods, accompanied by sacred rites and abundant wisdom, adorable (at the sacrifice) of men, immortal, the knowers of truth,

waiting on the oblation to be given, arriving together (at the sacrifice) omniscient, graciously accept all our praises and abuudant food with well-suug hymns.

ಸಂಹಿತಾಪಾಠಃ

ದೇವಾನ್ವಸಿಷ್ಠೋ ಅಮೃತಾನ್ವವಂದೇ ಯೇ ವಿಶ್ವಾ ಭುವನಾಭಿ ಪ್ರತಸ್ಥುಃ ॥
ತೇ ನೋ ರಾಸಂತಾಮುರುಗಾಯಮದ್ಯ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥ ೧೫ ॥

ಪದಪಾಠಃ

ದೇವಾನ್ । ವಸಿಷ್ಠಃ । ಅಮೃತಾನ್ । ವವಂದೇ । ಯೇ । ವಿಶ್ವಾ । ಭುವನಾ । ಅಭಿ । ಪ್ರತಸ್ಥುಃ ।
ತೇ । ನಃ । ರಾಸಂತಾಂ । ಉರುಗಾಯಂ । ಅದ್ಯ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥

ಸಾಯಣಭಾಷ್ಯಂ

ವಸಿಷ್ಠೋ ವಸಿಷ್ಠಕುಲಜೋಽಯಮೃಷಿರಮೃತಾನ್ಮರಣರಹಿತಾನ್ದೇವಾನ್ವವಂದೇ । ಏವಮುಸ್ತಾವೀತ್ । ಯೇ ದೇವಾ ವಿಶ್ವಾ ವಿಶ್ವಾನಿ ಭುವನಾನಿ ಲೋಕಾನಭಿ ಪ್ರತಸ್ಥುಃ ಸ್ವತೇಜಸಾಭಿಭವಂತಿ । ಅಭಿತಃ ಪ್ರತಿಷ್ಠಂತೀತಿ ವಾ ॥ ಪ್ರಪೂರ್ವಾತ್ತಿಷ್ಠತೇರ್ಲಿಟಿ ರೂಪಂ । ಸಮಾಸಸ್ವರಃ ॥ ತೇ ದೇವಾ ಅದ್ಯಾಸ್ಮಿನ್ದಿನೇ ನೋಽಸ್ಮಭ್ಯಮುರುಗಾಯಂ ಪ್ರಭೂತಯಶಸ್ಕಮನ್ನಂ ರಾಸಂತಾಂ । ಪ್ರಯಚ್ಛಂತು । ಹೇ ದೇವಾಃ ಯೂಯಂ ಸ್ವಸ್ತಿಭಿಃ ಕಲ್ಯಾಣೇಭಿರೂತಿಭಿರ್ನೋಽಸ್ಮಾನ್ಸದಾ ಸರ್ವದಾ ಪಾತ । ರಕ್ಷತ ॥

ಪ್ರತಿಪದಾರ್ಥ

ಯೇ—ಯಾವ ದೇವತೆಗಳು । **ವಿಶ್ವಾ ಭುವನಾ**—ಸಕಲ ಲೋಕಗಳನ್ನೂ । **ಅಭಿ ಪ್ರತಸ್ಥುಃ**—ತಮ್ಮ ತೇಜಸ್ಸುಗಳಿಂದ ವ್ಯಾಪಿಸಿರುವರೋ ಅಂತಹ । **ಅಮೃತಾನ್**—ಅಮರ್ತ್ಯರಾದ । **ದೇವಾನ್**—ದೇವತೆಗಳನ್ನು । **ವಸಿಷ್ಠಃ**—ವಸಿಷ್ಠವಂಶೋತ್ಪನ್ನನಾದ ಈ ಋಷಿಯು । **ವವಂದೇ**—ಸ್ತುತಿಪೂರ್ವಕವಾಗಿ ನಮಸ್ಕರಿಸಿದ್ದಾನೆ । **ತೇ**—ಅದೇ ದೇವತೆಗಳು । **ಅದ್ಯ**—ಇಂದು । **ನಃ**—ನಮಗೆ । **ಉರುಗಾಯಂ**—ಬಹಳ ಪ್ರಸಿದ್ಧಿಯನ್ನು ಹೊಂದಿದ ಪ್ರಶಸ್ಯವಾದ ಅನ್ನವನ್ನು । **ರಾಸಂತಾಂ**—ಕೊಡಲಿ । (ಎಲೈ ದೇವತೆಗಳೇ) **ಯೂಯಂ**—ನೀವು । **ಸ್ವಸ್ತಿಭಿಃ**—ಕಲ್ಯಾಣಾತ್ಮಕವಾದ ರಕ್ಷಣೆಗಳಿಂದ । **ನಃ**—ನಮ್ಮನ್ನು । **ಸದಾ**—ಯಾವಾಗಲೂ । **ಪಾತ**—ರಕ್ಷಿಸಿರಿ.

ಭಾವಾರ್ಥ

ಯಾವ ದೇವತೆಗಳು ಸಕಲ ಲೋಕಗಳನ್ನೂ ತಮ್ಮ ತೇಜಸ್ಸುಗಳಿಂದ ವ್ಯಾಪಿಸಿರುವರೋ ಅಂತಹ ಅಮರ್ತ್ಯರಾದ ದೇವತೆಗಳನ್ನು ವಸಿಷ್ಠವಂಶೋತ್ಪನ್ನನಾದ ಈ ಋಷಿಯು ಸ್ತುತಿಪೂರ್ವಕವಾಗಿ ನಮಸ್ಕರಿಸಿದ್ದಾನೆ. ಅದೇ ದೇವತೆಗಳು ಇಂದು ನಮಗೆ ಅತ್ಯಂತ ಪ್ರಶಸ್ಯವೂ, ಪ್ರಸಿದ್ಧವೂ ಆದ ಅನ್ನವನ್ನು ಕೊಡಲಿ. ಎಲೈ ದೇವತೆಗಳೇ, ನಿಮ್ಮ ಕಲ್ಯಾಣಾತ್ಮಕಗಳಾದ ರಕ್ಷಣೆಗಳಿಂದ ನಮ್ಮನ್ನು ಯಾವಾಗಲೂ ರಕ್ಷಿಸಿರಿ.

English Translation

(Descendant of) Vasishtha, I have glorified the immortal gods who preside over all worlds : may they this day bestow upon us widely-famed food ; do you always cherish us with blessings.

ಆರವತ್ಸಾರನೆಯ ಸೂಕ್ತ

ಸಾಯಣಭಾಷ್ಯಂ

ದೇವಾನ್ಹುವ ಇತಿ ಪಂಚದಶರ್ಚಂ ಷಷ್ಠಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ದೇವಾನ್ಹುವ ಇತ್ಯನುಕ್ರಾಂತಂ ॥ ಪೃಷ್ಠ್ಯಾಭಿಪ್ಲವಷಡಹಯೋಃ ಪಂಚಮೇಽಹನೀದಂ ವೈಶ್ವದೇವನಿವಿದ್ಧಾನಂ । ಸೂತ್ರಿತಂ ಚ । ಇಹೇಹ ವ ಇತಿ ಚತಸ್ರೋ ದೇವಾನ್ಹುವ ಇತಿ ವೈಶ್ವದೇವಂ । ಆ.೭-೫ । ಇತಿ ॥

ಅನುವಾದವು—ದೇವಾನ್ ಹುವೇ-ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—**ದೇವಾನ್ ಹುವೇ** ಎಂದು ಹೇಳಿರುವುದು. ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳ ಐವನೆಯ ದಿನಸ ಈ ಸೂಕ್ತವನ್ನು ವೈಶ್ವದೇವನಿವಿದ್ಧಾನಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ—**ಇಹೇಹ ವ ಇತಿ ಚತಸ್ರೋ ದೇವಾನ್ ಹುವ ಇತಿ ವೈಶ್ವದೇವಂ** ಎಂಬ ಸೂತ್ರದಿಂದ (ಆ. ೭-೫) ವಿವೃತವಾಗಿರುವುದು.

ಸೂಕ್ತ—೬೬

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೬ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೧೨, ೧೩, ೧೪॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ವಸುಕರ್ಣೋ ವಾಸುಕ್ರಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—೧-೧೪. ಜಗತೀ । ೧೫. ತ್ರಿಷ್ಟುಪ್ ॥

ಸಂಹಿತಾಪಾಠಃ

ದೇವಾನ್ಹುವೇ ಬೃಹಚ್ಛ್ರವಸಃ ಸ್ವಸ್ತಯೇ ಜ್ಯೋತಿಷ್ಕೃತೋ ಅಧ್ವರಸ್ಯ ಪ್ರಚೇತಸಃ ।
ಯೇ ವಾವೃಧುಃ ಪ್ರತರಂ ವಿಶ್ವವೇದಸ ಇಂದ್ರಜ್ಯೇಷ್ಠಾಸೋ ಅಮೃತಾ ಋತಾವೃಧಃ ॥ ೧ ॥

ಪದಪಾಠಃ

ದೇವಾನ್ । ಹುವೇ । ಬೃಹತ್ಽಶ್ರವಸಃ । ಸ್ವಸ್ತಯೇ । ಜ್ಯೋತಿಷ್ಽಕೃತಃ । ಅಧ್ವರಸ್ಯ । ಪ್ರಽಚೇತಸಃ ।
ಯೇ । ವವೃಧುಃ । ಪ್ರಽತರಂ । ವಿಶ್ವಽವೇದಸಃ । ಇಂದ್ರಽಜ್ಯೇಷ್ಠಾಸಃ । ಅಮೃತಾಃ । ಋತಽವೃಧಃ ॥ ೧ ॥

ಸಾಯಣಭಾಷ್ಯಂ

ಬೃಹಚ್ಛ್ರವಸಃ ಪ್ರಭೂತಾನ್ನಾಇಷ್ಟಿಷ್ಕೃತ ಆದಿತ್ಯಾಖ್ಯಸ್ಯ ತೇಜಸಃ ಕರ್ತ್ರೂನ್ಪ್ರಚೇತಸಃ ಪ್ರಕೃಷ್ಟಜ್ಞಾನಾಂಸ್ತಾನ್ದೇವಾನಧ್ವರಸ್ಯಾಸ್ಯ ಯಜ್ಞಸ್ಯ ಸ್ವಸ್ತಯೇಽವಿನಾಶಾಯ ನಿರ್ವಿಘ್ನೇನ ಯಜ್ಞಪರಿಸಮಾಪ್ತಯೇ ಹುವೇ । ಆಹ್ವಯಾಮಿ । ವಿಶ್ವವೇದಸಃ ಸರ್ವಧನಾ ಇಂದ್ರಜ್ಯೇಷ್ಠಾಸಃ । ಇಂದ್ರೋ ಜ್ಯೇಷ್ಠಃ ಪ್ರಧಾನೋ ಯೇಷಾಂ । ಇಂದ್ರನೇತೃಕಾ ಇತ್ಯರ್ಥಃ । ಅಮೃತಾ ಮರಣಧರ್ಮರಹಿತಾ ಋತಾವೃಧೋ ಯಜ್ಞೇನ ಪ್ರವೃದ್ಧಾ ಯೇ ದೇವಾಃ ಪ್ರತರಮತ್ಯಂತಂ ವವೃಧುಃ ವರ್ಧಂತೇ ॥

ಪ್ರತಿಪದಾರ್ಥ

ವಿಶ್ವವೇದಸಃ—ಸಕಲ ಧನವನ್ನೂ ಹೊಂದಿರುವವರೂ । **ಇಂದ್ರಜ್ಯೇಷ್ಠಾಸಃ**—ಇಂದ್ರನನ್ನೇ ನಾಯಕನನ್ನಾಗಿ ಹೊಂದಿರುವವರೂ । **ಅಮೃತಾಃ**—ಮರಣಧರ್ಮರಹಿತರೂ । **ಋತಾವೃಧಃ**—ಯಜ್ಞದಿಂದ ವೃದ್ಧಿಯನ್ನು ಹೊಂದುವವರೂ ಆದ । **ಯೇ**—ಯಾವ ದೇವತೆಗಳು । **ಪ್ರತರಂ**—ಅತ್ಯಧಿಕವಾಗಿ । **ವವೃಧುಃ**—ಪುಷ್ಟಿಯನ್ನು ಹೊಂದಿರುವರೋ ಅಂತಹ । **ಬೃಹಚ್ಛ್ರವಸಃ**—ಅಧಿಕವಾದ ಅನ್ನವಂತರೂ । **ಜ್ಯೋತಿಷ್ಕೃತಃ**—ತೇಜಸ್ಸನ್ನು ಸೃಜಿಸಿ ಪ್ರಸರಿಸುವವರೂ । **ಪ್ರಚೇತಸಃ**—ಉತ್ಕೃಷ್ಟವಾದ ಜ್ಞಾನಿಗಳೂ ಆದ । **ದೇವಾನ್**—ದೇವತೆಗಳನ್ನು । **ಅಧ್ವರಸ್ಯ**—ಯಜ್ಞದ । **ಸ್ವಸ್ತಯೇ**—ದೋಷರಹಿತವಾದ ಸಮಾಪ್ತಿಗಾಗಿ । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ.

ಭಾವಾರ್ಥ

ಸಕಲ ಧನವನ್ನು ಹೊಂದಿರುವವರೂ, ಇಂದ್ರನನ್ನೇ ನಾಯಕನನ್ನಾಗಿ ಉಳ್ಳವರೂ, ಮರಣಧರ್ಮರಹಿತರೂ, ಯಜ್ಞದಿಂದ ವೃದ್ಧಿಯನ್ನು ಹೊಂದುವವರೂ ಆದ ಯಾವ ದೇವತೆಗಳು ಅತ್ಯಧಿಕವಾಗಿ ಪುಷ್ಟಿಯನ್ನು ಹೊಂದಿರುವರೋ ಅಂತಹ ಅಧಿಕವಾದ ಅನ್ನವಂತರೂ, ತೇಜಸ್ಸನ್ನು ಸೃಜಿಸಿ ಪ್ರಸರಿಸುವವರೂ, ಉತ್ಕೃಷ್ಟವಾದ ಜ್ಞಾನಿಗಳೂ ಆದ ದೇವತೆಗಳನ್ನು ಯಜ್ಞವು ನಿರ್ವಿಘ್ನವಾಗಿ ಮುಗಿಯಲು ಪ್ರಾರ್ಥಿಸಿ ಕರೆಯುತ್ತೇನೆ.

English Translation

I invoke for the success of the sacrifice the gods who bestow abundant food, the diffusers of light, the extremely wise who flourish mightily, abounding in all riches, having Indra as their chief, immortal, augmented by sacrifice.

ಸಂಹಿತಾಪಾಠಃ

ಇಂದ್ರಪ್ರಸೂತಾ ವರುಣಪ್ರಶಿಷ್ಟಾ ಯೇ ಸೂರ್ಯಸ್ಯ ಜ್ಯೋತಿಷೋ ಭಾಗ-
ಮಾನಶುಃ ।
ಮರುದ್ಗಣೇ ವೃಜನೇ ಮನ್ಮ ಧೀಮಹಿ ಮಾಘೋನೇ ಯಜ್ಞಂ ಜನಯಂತ
ಸೂರಯಃ ॥ ೨ ॥

ಪದಪಾಠಃ

ಇಂದ್ರಃಪ್ರಸೂತಾಃ । ವರುಣಃಪ್ರಶಿಷ್ಟಾಃ । ಯೇ । ಸೂರ್ಯಸ್ಯ । ಜ್ಯೋತಿಷಃ । ಭಾಗಂ । ಆನಶುಃ ।
ಮರುತ್ಃಗಣೇ । ವೃಜನೇ । ಮನ್ಮ । ಧೀಮಹಿ । ಮಾಘೋನೇ । ಯಜ್ಞಂ । ಜನಯಂತ । ಸೂರಯಃ ॥

ಸಾಯಣಭಾಷ್ಯಂ

ಇಂದ್ರಪ್ರಸೂತಾ ಇಂದ್ರೇಣ ತತ್ಕಾರ್ಯೇಷು ಪ್ರೇರಿತಾ ವರುಣಪ್ರಶಿಷ್ಟಾ ವರುಣೇನಾನುಶಿಷ್ಟಾ ಅನುಮೋದಿತಾ ಯೇ ಮರುತೋ ಜ್ಯೋತಿಷೋ ದ್ಯೋತಮಾನಸ್ಯ ಸೂರ್ಯಸ್ಯ ಸ್ವಸ್ವಕರ್ಮಣಿ ಸರ್ವಸ್ಯ ಪ್ರೇರಕಸ್ಯಾಮುಷ್ಯಾದಿತ್ಯಸ್ಯ ಭಾಗಂ ಭಜನೀಯಂ ಲೋಕಮಾನಶುಃ ಅನಶಿರೇ ವ್ಯಾಪ್ತವಂತಃ। ಸೂರ್ಯಮಧಿಷ್ಠಾಯ ವರ್ತಂತ ಇತ್ಯರ್ಥಃ । ವೃಜನೇ ಶತ್ರೂಣಾಂ ಛೇದಕೇ ಮಾಘೋನೇ ಮಘವತ ಇಂದ್ರಸ್ಯ ಸಂಬಂಧಿನಿ ಮರುದ್ಗಣೇ। ತೇಷಾಂ ಮರುತಾಂ ಗಣೇ ಮನ್ಮ ಮನನೀಯಂ ಸ್ತೋತ್ರಂ ಧೀಮಹಿ। ದಧ್ಮಃ । ಕುರ್ಮಃ । ಕಿಂಚ । ಸೂರಯಃ ಪ್ರಾಜ್ಞಾ ಯಜಮಾನಾಸ್ತನ್ನಿಮಿತ್ತಮೇವ ಯಜ್ಞಂ ಜನಯಂತ । ಜನಯಂತಿ । ತೇಷಾಂ ಹವಿಷ್ಪ್ರದಾನಾಯ ಕುರ್ವಂತಿ ॥

ಪ್ರತಿಪದಾರ್ಥ

ಇಂದ್ರಪ್ರಸೂತಾಃ—ಇಂದ್ರನಿಂದ ಪ್ರೇರಿತರಾದವರೂ । **ವರುಣಪ್ರಶಿಷ್ಟಾಃ**—ವರುಣನ ಅನುಜ್ಞೆಯನ್ನು ಪಡೆದಿರುವವರೂ ಆದ । **ಯೇ**—ಯಾವ ಮರುತ್ತುಗಳು । **ಜ್ಯೋತಿಷಃ**—ಪ್ರಕಾಶಮಾನನಾದ । **ಸೂರ್ಯಸ್ಯ**—ಆದಿತ್ಯನ । **ಭಾಗಂ**—ಪೂಜ್ಯವಾದ ತೇಜೋಭಾಗವನ್ನು । **ಆನಶುಃ**—ಹೊಂದುವರೋ ಅಂತಹ । **ವೃಜನೇ**—ಶತ್ರುಚ್ಛೇದಕರಾದವರೂ । **ಮಾಘೋನೇ**—ಇಂದ್ರನ ಬಂಧುಗಳಾದವರೂ ಆದ । **ಮರುದ್ಗಣೇ**—ಮರುತ್ತುಗಳನ್ನುದ್ದೇಶಿಸಿ । **ಮನ್ಮ**—ಧ್ಯಾನಾತ್ಮಕವಾದ ಸ್ತೋತ್ರವನ್ನು । **ಧೀಮಹಿ**—ಅರ್ಪಿಸುತ್ತೇವೆ । **ಸೂರಯಃ**—ಪ್ರಾಜ್ಞರಾದ ಯಜಮಾನರು । **ಯಜ್ಞಂ**—ಯಜ್ಞವನ್ನು । **ಜನಯಂತ**—ಸಂಪಾದಿಸುತ್ತಾರೆ (ನೆರವೇರಿಸುತ್ತಾರೆ).

ಭಾವಾರ್ಥ

ಇಂದ್ರನಿಂದ ಪ್ರೇರಿತರಾದವರೂ, ವರುಣನ ಅನುಜ್ಞೆಯನ್ನು ಪಡೆದಿರುವವರೂ ಆದ ಯಾವ ಮರುತ್ತುಗಳು ಪ್ರಕಾಶಮಾನನಾದ ಆದಿತ್ಯನ ಪೂಜ್ಯವಾದ ತೇಜೋಭಾಗವನ್ನು ಪಡೆಯುವರೋ ಅಂತಹ ಶತ್ರುಚ್ಛೇದಕರಾದವರೂ

ಇಂದ್ರನ ಬಂಧುಗಳೂ ಆದ ಮರುತ್ತುಗಳನ್ನು ದ್ದೇಶಿಸಿ ಧ್ಯಾನಾತ್ಮಕವಾದ ಸ್ತೋತ್ರವನ್ನು ಅರ್ಪಿಸುತ್ತೇವೆ. ಪ್ರಾಜ್ಞರಾದ ಯಜಮಾನರು ಈ ನಿಮಿತ್ತವಾಗಿಯೇ ಯಜ್ಞವನ್ನು ಅರ್ಪಿಸುತ್ತಾರೆ (ನೆರವೇರಿಸುತ್ತಾರೆ).

English Translation

We offer praise to the company of the Maruts, the attendants upon Maghavan, who, encouraged by Indra, and instructed by Varuna, have acquired a portion of the light of the sun ; the wise worshippers beget the sacrifice.

ಸಂಹಿತಾಪಾಠಃ

ಇಂದ್ರೋ ವಸುಭಿಃ ಪರಿ ಪಾತು ನೋ ಗಯಮಾದಿತ್ಯೈರ್ನೋ ಅದಿತಿಃ
ಶರ್ಮ ಯಚ್ಛತು ।
ರುದ್ರೋ ರುದ್ರೇಭಿರ್ದೇವೋ ಮೃಳಯಾತಿ ನಸ್ತ್ವಷ್ಟಾ ನೋ ಗ್ನಾಭಿಃ ಸುವಿ-
ತಾಯ ಜಿನ್ವತು ॥ ೩ ॥

ಪದಪಾಠಃ

ಇಂದ್ರಃ । ವಸುಽಭಿಃ । ಪರಿ । ಪಾತು । ನಃ । ಗಯಂ । ಆದಿತ್ಯೈಃ । ನಃ । ಅದಿತಿಃ । ಶರ್ಮ । ಯಚ್ಛತು ।
ರುದ್ರಃ । ರುದ್ರೇಭಿಃ । ದೇವಃ । ಮೃಳಯಾತಿ । ನಃ । ತ್ವಷ್ಟಾ । ನಃ । ಗ್ನಾಭಿಃ । ಸುವಿತಾಯ । ಜಿನ್ವತು ॥

ಸಾಯಣಭಾಷ್ಯಂ

ವಸುಭಿರೇತನ್ನಾಮಕೈರಷ್ಟಭಿರ್ದೇವೈಃ ಸಹಿತ ಇಂದ್ರೋ ನೋಽಸ್ಮದೀಯಂ ಗಯಂ । ಗೃಹ-
ನಾಮೈತತ್ ಪ್ರಾಪ್ತವ್ಯಂ ಗಾಯತೇ ಶಬ್ದ್ಯತೇಽತ್ರೇತಿ ವಾ ಗೃಹಂ ಗಯಂ । ಪರಿ ಪಾತು । ಪರಿರಕ್ಷತು ।
ತಥಾದಿತಿರ್ದೇವಮಾತಾದಿತ್ಯೈರ್ದೇವೈಃ ಸಹ ನೋಽಸ್ಮಭ್ಯಂ ಶರ್ಮ ಸುಖಂ ಪ್ರಯಚ್ಛತು । ಕಿಂಚ
ದೇವೋ ದೀಪ್ಯಮಾನೋ ರುದ್ರೋ ರುದ್ರೇಭಿಃ ಸ್ವಪುತ್ರೈರ್ಮರುದ್ಭಿಃ ಸಹ ನೋಽಸ್ಮಾನ್ಮೃಳಯಾತಿ ।
ಸುಖಯತು ॥ ಮೃಡ ಸುಖನೇ । ಲೇಟ್ಯಡಾಗಮಃ । ಅಪಿ ಚ ತ್ವಷ್ಟಾ ಪ್ರಜಾಪತಿರ್ಗ್ನಾಭಿರ್ದೇವಪತ್ನೀಭಿ-
ಶ್ಚಂದೋಭಿಃ ಸುವಿತಾಯ ಸುಷ್ಠು ಪ್ರಾಪ್ತವ್ಯಾಯಾಭ್ಯುದಯಾಯ ನೋಽಸ್ಮಾಞ್ಜಿನ್ವತು । ಪ್ರೀಣಯತು॥

ಪ್ರತಿಪದಾರ್ಥ

ವಸುಭಿಃ—ವಸುಸಂಜ್ಞಕರಾದ ದೇವತೆಗಳೊಡಗೂಡಿದ । **ಇಂದ್ರಃ**—ಇಂದ್ರನು । **ನಃ**—ನಮ್ಮ ।
ಗಯಂ—ಗೃಹವನ್ನು । **ಪರಿ ಪಾತು**—ರಕ್ಷಿಸಲಿ । **ಅದಿತಿಃ**—ಅದಿತಿಯು । **ಆದಿತ್ಯೈಃ**—ಆದಿತ್ಯರೊಡಗೂಡಿ ।
ನಃ—ನಮಗೆ । **ಶರ್ಮ**—ಸುಖವನ್ನು । **ಯಚ್ಛತು**—ಕೊಡಲಿ । **ದೇವಃ**—ಪ್ರಕಾಶಮಾನನಾದ । **ರುದ್ರಃ**—

ರುದ್ರನು । **ರುದ್ರೇಭಿಃ**—ಮರುತ್ತುಗಳೊಡಗೂಡಿ । **ನಃ**—ನಮ್ಮನ್ನು । **ಮೃಳಯಾತಿ**—ಸುಖಪಡಿಸಲಿ । **ತ್ವಷ್ಟಾ**—ತ್ವಷ್ಟೃವು (ಪ್ರಜಾಪತಿಯು) । **ಗ್ನಾಭಿಃ**—ದೇವಪತ್ನಿಯರೊಡಗೂಡಿ । **ಸುವಿತಾಯ**—ನಮಗೆ ಮಂಗಳವುಂಟಾಗುವುದಕ್ಕಾಗಿ । **ನಃ**—ನಮ್ಮನ್ನು । **ಜಿನ್ವತು**—ಹರ್ಷಗೊಳಿಸಲಿ.

ಭಾವಾರ್ಥ

ವಸುಸಂಜ್ಞಕರಾದ ದೇವತೆಗಳೊಡಗೂಡಿದ ಇಂದ್ರನು ನಮ್ಮ ಗೃಹವನ್ನು ರಕ್ಷಿಸಲಿ. ಆದಿತ್ಯರೊಡಗೂಡಿದ ಅದಿತಿಯು ನಮಗೆ ಸುಖವನ್ನು ಕೊಡಲಿ. ಪ್ರಕಾಶಮಾನನಾದ ರುದ್ರನು ಮರುತ್ತುಗಳೊಡಗೂಡಿ ನಮ್ಮನ್ನು ಸುಖಪಡಿಸಲಿ. ಪ್ರಜಾಪತಿಯು ದೇವಪತ್ನಿಯರೊಡಗೂಡಿ ನಮಗೆ ಮಂಗಳವನ್ನುಂಟುಮಾಡುವುದಕ್ಕಾಗಿ ನಮ್ಮನ್ನು ಹರ್ಷಗೊಳಿಸಲಿ.

English Translation

May Indra with the Vasus guard our dwelling ; may Aditi with the Adityas grant us felicity ; may the divine Rudra with the Rudras make us happy : may Twashtri with the wives of the gods be favourable to us for our prosperity.

ಸಂಹಿತಾಪಾಠಃ

ಅದಿತಿರ್ದ್ಯಾವಾಪೃಥಿವೀ ಋತಂ ಮಹದಿಂದ್ರಾವಿಷ್ಣೂ ಮರುತಃ ಸ್ವರ್ಬೃಹತ್ ।
ದೇವಾಁ ಆದಿತ್ಯಾ ಅವಸೇ ಹವಾಮಹೇ ವಸೂನ್ರುದ್ರಾನ್ತ್ಸವಿತಾರಂ ಸುದಂಸಸಂ ॥ ೪ ॥

ಪದಪಾಠಃ

ಅದಿತಿಃ । ದ್ಯಾವಾಪೃಥಿವೀ ಇತಿ । ಋತಂ । ಮಹತ್ । ಇಂದ್ರಾವಿಷ್ಣೂ ಇತಿ । ಮರುತಃ । ಸ್ವಃ । ಬೃಹತ್ ।
ದೇವಾನ್ । ಆದಿತ್ಯಾನ್ । ಅವಸೇ । ಹವಾಮಹೇ । ವಸೂನ್ । ರುದ್ರಾನ್ । ಸವಿತಾರಂ । ಸುದಂಸಸಂ ॥

ಸಾಯಣಭಾಷ್ಯಂ

ಅದಿತಿರ್ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಮಹದ್ಮಹಾನೃತಂ ಸತ್ಯಭೂತೋಽಗ್ನಿರಿಂದ್ರಾವಿಷ್ಣೂ ಮರುತಶ್ಚ ಬೃಹತ್ಪರಿವೃಢಃ ಸ್ವರಾದಿತ್ಯಃ ಏತೇ ದೇವಾಃ ಸರ್ವತ್ರ ಸ್ವಮಹಿಮ್ನಾ ವರ್ತಂತೇ। ಏತಾನ್ದೇವಾನಾದಿತ್ಯಾದೀನ್ಸುದಂಸಸಂ ಸುಕರ್ಮಾಣಂ ಸವಿತಾರಮೇತನ್ನಾಮಾನಂ ಚಾವಸೇ ರಕ್ಷಣಾಯ ಹವಾಮಹೇ। ವಯಮಾಹ್ವಯಾಮಹೇ ॥

ಪ್ರತಿಪದಾರ್ಥ

ಅದಿತಿಃ—ಅದಿತಿಯೂ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳೂ । **ಮಹತ್**—ಮಹಾತ್ಮನೂ । **ಋತಂ**—ಸತ್ಯಾತ್ಮಕನೂ ಆದ ಅಗ್ನಿಯೂ । **ಇಂದ್ರಾವಿಷ್ಣೂ**—ಇಂದ್ರ ಮತ್ತು ವಿಷ್ಣುವೂ । **ಮರುತಃ**—

ಮರುತ್ತುಗಳೂ। **ಬೃಹತ್**—ಮಹತ್ಸ್ವರೂಪವುಳ್ಳ। **ಸ್ವಃ**—ಆದಿತ್ಯನೂ ಒಟ್ಟಿಗೆ ವ್ಯಾಪಿಸಿ ಪ್ರಕಾಶಿಸುತ್ತಿದ್ದಾರೆ। **ದೇವಾನ್**—ಈ ದೇವತೆಗಳನ್ನೂ। **ವಸೂನ್**—ವಸುದೇವತೆಗಳನ್ನೂ। **ರುದ್ರಾನ್**—ರುದ್ರರನ್ನೂ। **ಆದಿತ್ಯಾನ್**-ಆದಿತ್ಯರನ್ನೂ। **ಸುದಂಸಸಂ**—ಉತ್ತಮವಾದ ಕರ್ಮಕರ್ತನಾದ। **ಸವಿತಾರಂ**—ಸವಿತೃವನ್ನೂ। **ಅವಸೇ**—ರಕ್ಷಣಾರ್ಥವಾಗಿ। **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ.

ಭಾವಾರ್ಥ

ಅದಿತಿಯೂ, ದ್ಯಾವಾಪೃಥಿವಿಗಳೂ, ಮಹಾತ್ಮನೂ ಸತ್ಯಾತ್ಮಕನೂ ಆದ ಅಗ್ನಿಯೂ, ಇಂದ್ರ ಮತ್ತು ವಿಷ್ಣುವೂ, ಮರುತ್ತುಗಳೂ, ಮಹತ್ಸ್ವರೂಪವುಳ್ಳ ಆದಿತ್ಯನೂ ಒಟ್ಟಿಗೆ ವ್ಯಾಪಿಸಿ ಪ್ರಕಾಶಿಸುತ್ತಿದ್ದಾರೆ. ಈ ದೇವತೆಗಳನ್ನೂ, ವಸು, ರುದ್ರ ಮತ್ತು ಆದಿತ್ಯರನ್ನೂ, ಉತ್ತಮವಾದ ಕರ್ಮಕರ್ತನಾದ ಸವಿತೃವನ್ನೂ ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇವೆ.

English Translation

Aditi, heaven and earth, the mighty truth (Agni), Indra, Vishnu, the Maruts, the great sun—(these) we invoke for our protection, as well as the divine Adityas, the Vasus, the Rudras and Savitri, the accomplisher of good works.

ಸಂಹಿತಾಪಾಠಃ

ಸರಸ್ವಾನ್ಧೀಭಿರ್ವರುಣೋ ಧೃತವ್ರತಃ ಪೂಷಾ ವಿಷ್ಣುರ್ಮಹಿಮಾ ವಾಯುರಶ್ವಿನಾ।
ಬ್ರಹ್ಮಕೃತೋ ಅಮೃತಾ ವಿಶ್ವವೇದಸಃ ಶರ್ಮ ನೋ ಯಂಸನ್ ತ್ರಿವರೂಥಮಂಹಸಃ ॥ ೫ ॥

ಪದಪಾಠಃ

ಸರಸ್ವಾನ್ । ಧೀಭಿಃ । ವರುಣಃ । ಧೃತವ್ರತಃ । ಪೂಷಾ । ವಿಷ್ಣುಃ । ಮಹಿಮಾ । ವಾಯುಃ । ಅಶ್ವಿನಾ ।
ಬ್ರಹ್ಮಕೃತಃ । ಅಮೃತಾಃ । ವಿಶ್ವವೇದಸಃ । ಶರ್ಮ । ನಃ । ಯಂಸನ್ । ತ್ರಿವರೂಥಂ । ಅಂಹಸಃ ॥

ಸಾಯಣಭಾಷ್ಯಂ

ಧೀಭಿಃ ಪ್ರಜ್ಞಾಭಿರ್ಯುಕ್ತಃ ಸರಸ್ವಾನೇತನ್ನಾಮಾ ಧೃತವ್ರತೋ ಧೃತಕರ್ಮಾ ವರುಣಶ್ಚ ಪೂಷಾ ಮಹಿಮಾ ಮಹತ್ತ್ವೇನ ಯುಕ್ತೋ ವಿಷ್ಣುಶ್ಚ ವಾಯುರಶ್ವಿನಾಶ್ವಿನೌ ಬೃಹ್ಮಕೃತಃ ಕರ್ಮಕೃತಃ ಸ್ತೋತ್ರೈರಾಮನ್ನದಾಕಾರೋ ವಾ ವಿಶ್ವವೇದಸಃ ಸರ್ವಧನಾ ವ್ಯಾಪ್ತಜ್ಞಾನಾ ವಾಂಹಸಃ ಪಾಪೇರೂಪಾಣಾಂ ಶತ್ರೂಣಾಂ ಹಂತಾರೋಽಮೃತಾ ಏತೇ ದೇವಾ ನೋಽಸ್ಮಭ್ಯಂ ತ್ರಿವರೂಥಂ ತ್ರಿಷ್ಕಂಧಂ ತ್ರಿರಕ್ಷ್ಯಂ ತರ್ಪಯ

ಗೃಹಂ । ಯೇದ್ಯಾ । ಶ್ರವರೂಥಂ । ದ್ರೋಣಾಧವನೀಯೆಪೂತಭೃತ್ಸಂಜ್ಞಕಾನಿ ತ್ರೀಣಿ ಪಾತ್ರಾಣಿ ಯತ್ರ ವ್ರಿಯಂತೇ ಸಂಭಜ್ಯಂತೇ ತದ್ಯಜ್ಞಸಾಧನಂ ಗೃಹಂ । ಯಂಸನ್ । ಪ್ರಯಚ್ಛಂತು ॥ ಯಚ್ಛತೇರ್ಲೇಟಿ ಸಿಪ್ಯಡಾಗಮಃ ॥

ಪ್ರತಿಪದಾರ್ಥ

ಧೀಭಿಃ—ಪ್ರಜ್ಞಾಯುತನಾದ । ಸರಸ್ವಾನ್—ಸರಸ್ವಂತನೂ ! ಧೃತವ್ರತಃ—ವ್ರತಧಾರಿಯಾದ । ವರುಣಃ—ವರುಣನೂ । ಪೂಷಾ—ಪೂಷದೇವನೂ । ಮಹಿಮಾ—ಮಹಿಮಾಯುತನಾದ । ವಿಷ್ಣುಃ—ವಿಷ್ಣುವೂ । ವಾಯುಃ—ವಾಯುವೂ । ಅಶ್ವಿನಾ—ಅಶ್ವಿನೀದೇವತೆಗಳೂ । ಬೃಹ್ಮಕೃತಃ—ಅನ್ನದಾತರೂ । ವಿಶ್ವವೇದಸಃ—ಸರ್ವಜ್ಞರೂ । ಅಂಹಸಃ—ಪಾಪನಾಶಕರೂ । ಅಮೃತಾಃ—ಮರಣರಹಿತರೂ ಆದ ಸಕಲ ದೇವತೆಗಳೂ । ನಃ—ನಮಗೆ । ಶ್ರವರೂಥಂ—ಮೂರು ವಿಧವಾದ ಆಧಾರಸ್ತಂಭ (ರಕ್ಷಣೆ) ಗಳಿಂದ ಕೂಡಿದ । ಶರ್ಮ—ಗೃಹವನ್ನು (ಅಥವಾ ದ್ರೋಣಕಲಶಾದಿ ಪಾತ್ರತ್ರಯವುಳ್ಳ ಯಜ್ಞಗೃಹವನ್ನು) । ಯಂಸನ್—ಅನುಗ್ರಹಿಸಿ ಕೊಡಲಿ.

ಭಾವಾರ್ಥ

ಪ್ರಜ್ಞಾಯುತನಾದ ಸರಸ್ವಂತನೂ, ವ್ರತಧಾರಿಯಾದ ವರುಣನೂ, ಪೂಷದೇವನೂ, ಮಹಿಮಾಯುತನಾದ ವಿಷ್ಣುವೂ, ವಾಯುವೂ, ಅಶ್ವಿನೀದೇವತೆಗಳೂ, ಅನ್ನದಾತರೂ, ಸರ್ವಜ್ಞರೂ, ಪಾಪನಾಶಕರೂ, ಮರಣರಹಿತರೂ ಆದ ಸಕಲ ದೇವತೆಗಳೂ ನಮಗೆ ಮೂರುವಿಧವಾದ ರಕ್ಷಣೆಗಳಿಂದ ಕೂಡಿದ ಗೃಹವನ್ನು ದಯಪಾಲಿಸಲಿ.

English Translation

May Saraswat, (endowed) with intelligences, Varuna the observer of oblations, Pushan, Vishnu, the mighty Vayu, the Ashwins (may these) the bestowers of food upon worshippers, immortal, the possessors of all wealth, grant us a habitation triply-guarded from evil.

ಸಂಹಿತಾಪಾಠಃ

ವೃಷಾ ಯಜ್ಞೋ ವೃಷಣಃ ಸಂತು ಯಜ್ಞಿಯಾ ವೃಷಣೋ ದೇವಾ ವೃಷಣೋ ಹವಿಷ್ಕೃತಃ ।
ವೃಷಣಾ ದ್ಯಾವಾಪೃಥಿವೀ ಋತಾವರೀ ವೃಷಾ ಪರ್ಜನ್ಯೋ ವೃಷಣೋ ವೃಷ-ಸ್ತುಭಃ ॥ ೬ ॥

ಪದಪಾಠಃ

ವೃಷಾ । ಯಜ್ಞಃ । ವೃಷಣಃ । ಸಂತು । ಯಜ್ಞಿಯಾಃ । ವೃಷಣಃ । ದೇವಾಃ । ವೃಷಣಃ । ಹವಿಃಕೃತಃ ।

वृषणा । द्यावापृथिवी इति । ऋतावरी इत्यृतऽवरी । वृषा । पर्जन्यः । वृषणः । वृषऽस्तुभः ॥ ६ ॥

सायणभाष्यं

यज्ञ एषोऽस्मदीयो वृषा कामानां वर्षितास्तु । तथा यज्ञियाः यज्ञार्हा देवाश्च वृषणः संतु । किंच देवाः स्तुतिकारिण ऋत्विजो वृषणो धनवर्षणे कारणानि संतु साधुस्तुतिकरणेन । तथा हविष्कृतो हविषां कर्तारोऽध्वर्यवादयो वृषणोऽव्यग्रतया मंत्रसाहित्येन च हविष्प्रदानेन । अपि चर्तावरी यज्ञवत्यौ द्यावापृथिवी द्यावापृथिव्यौ वृषणा हविरुत्पादनेन कामानां वर्षयित्र्यौ भवताम् । तथा पर्जन्य इन्द्रो वृषासां वर्षिता भवतु । वृषस्तुभो वर्षणशीलस्तुतिभिर्देवान्स्तुवंतः सर्व ऋत्विजो वृषणो भवंतु ॥

प्रतिपदार्थ

यज्ञः—नम्म यज्ञವು । **वृषा**—इष्टार्थप्रदವುಳ್ಳದ್ದಾಗಲಿ । **यज्ञियाः**—पूजार्हरಾದ देवतೆಗಳು । **वृषणः संतु**—नम्म कामವನ್ನು सुरिसुವವರಾಗಲಿ । **देवाः**—स्तुतिकर्तरಾದ ऋत्विक्कुगळु । **वृषणः**—इष्टार्थप्रदರಾಗಲಿ । **हविष्कृतः**—हविस्सन्नु अर्पिसुव ऋत्विक्कुगळु । **वृषणः**—कामसंपादकರಾಗಲಿ । **ऋतावरीः**—यज्ञವಂತರಾದ । **द्यावापृथिवी**—द्यावापृथिविगळु । **वृषणा**—इष्टार्थप्रदರಾಗಲಿ । **पर्जन्यः**—पर्जन्यನು (इंद्रनु) । **वृषा**—कामप्रदನಾಗಲಿ (वृष्टियन्नु सुरिसलि) । **वृषस्तुभः**—इष्टार्थವನ್ನು संपादिसुव स्तुतिगळन्नु अर्पिसुव ऋत्विक्कुगळु । **वृषणः**—अपेक्षित वस्तुगळन्नु सुरिसुवವರಾಗಲಿ.

भावार्थ

ನಮ್ಮ ಯಜ್ಞವು ಇಷ್ಟಾರ್ಥಪ್ರದವಾಗಲಿ ಪೂಜಾರ್ಹರಾದ ನಮ್ಮ ದೇವತೆಗಳು ನಮ್ಮ ಇಚ್ಛೆಯನ್ನು ನೆರವೇರಿಸಲಿ, ಸ್ತುತಿಕರ್ತರಾದ ಋತ್ವಿಕ್ಕುಗಳು ಇಷ್ಟಾರ್ಥಪ್ರದರಾಗಲಿ. ಯಜ್ಞವಂತರಾದ ದ್ಯಾವಾಪೃಥಿವಿಗಳೂ, ಪರ್ಜನ್ಯನೂ ಅವರವರ ಸ್ವರೂಪಕ್ಕನುಗುಣವಾಗಿ ನಮ್ಮ ಇಷ್ಟಾರ್ಥಗಳನ್ನು ಒದಗಿಸಿಕೊಡಲಿ. ಸ್ತುತಿಕರ್ತರಾದ ಋತ್ವಿಕ್ಕುಗಳೂ ಇವಕ್ಕೆ ಸಹಾಯವಾಡಲಿ.

English Translation

May (our) sacrifice be the showerer (of benefits); may the gods who are worthy of sacrifice be the showerers (of beeefits); may the priests, may the presenters of the oblation, be the showerers (of benefits); may heaven and earth receiving adoration be the showerer (of benefits); may Parjanya be the showerer (of rain), may those who praise (the gods) with showers be showerers.

ಸಂಹಿತಾಪಾಠಃ

ಅಗ್ನೀಷೋಮಾ ವೃಷಣಾ ವಾಜಸಾತಯೀ ಪುರುಪ್ರಶಸ್ತಾ ವೃಷಣಾ ಉಪ ಬ್ರುವೇ ।
ಯಾವೀಜಿರೇ ವೃಷಣೋ ದೇವಯಜ್ಯಯಾ ತಾ ನಃ ಶರ್ಮ ತ್ರಿವರೂಥಂ ವಿ ಯಂಸತಃ ॥ ೭ ॥

ಪದಪಾಠಃ

ಅಗ್ನೀಷೋಮಾ । ವೃಷಣಾ । ವಾಜಸಾತಯೀ । ಪುರುಪ್ರಶಸ್ತಾ । ವೃಷಣೌ । ಉಪ । ಬ್ರುವೇ ।
ಯೌ । ಈಜಿರೇ । ವೃಷಣಃ । ದೇವಯಜ್ಯಯಾ । ತಾ । ನಃ । ಶರ್ಮ । ತ್ರಿವರೂಥಂ । ವಿ । ಯಂಸತಃ ॥

ಸಾಯಣಭಾಷ್ಯಂ

ವೃಷಣಾ ವರ್ಷಣಶೀಲೌ ಪುರುಪ್ರಶಸ್ತಾ ಬಹುಭಿಃ ಪ್ರಶಸ್ತಾವಗ್ನೀಷೋಮೌ ವಾಜಸಾತಯೀ ಅನ್ನಲಾಭಾಯೋಪ ಬ್ರುವೇ । ಅಹಮುಪಸ್ತೌಮಿ । ಪುನರ್ವೃಷಣಾವಿತ್ಯಾದರಾರ್ಥಂ । ಯೌ ದೇವೌ ವೃಷಣ ಋತ್ವಿಜೋ ದೇವಯಜ್ಯಯಾ । ದೇವಾ ಇಜ್ಯಂತೇಽತ್ರೇತಿ ದೇವಯಜ್ಯಾ ಯಜ್ಞಃ ॥ ಛಂದಸಿ ನಿಷ್ಪರ್ಕ್ಯೇತಿ ನಿಪಾತಿತಃ ॥ ತೇನೇಜಿರೇ ಯಜಂತೇ ಹವಿರ್ಭಿಃ ಪೂಜಯಂತಿ ತಾ ತೌ ಪ್ರಸಿದ್ಧೌ ನೋಽಸ್ಮಭ್ಯಂ ತ್ರಿವರೂಥಂ ತ್ರಿಷ್ಕಂಭಂ ಶರ್ಮ ಗೃಹಂ ವಿ ಯಂಸತಃ । ವಿಶೇಷೇಣ ಪ್ರಯಚ್ಛತಾಂ ॥

ಪ್ರತಿಪದಾರ್ಥ

ವೃಷಣಾ—ಇಷ್ಟಾರ್ಥಪ್ರದರೂ । **ಪುರುಪ್ರಶಸ್ತಾ**—ಅಧಿಕವಾಗಿ ಪ್ರಶಂಸಿಸಲ್ಪಡುವವರೂ ಆದ । **ಅಗ್ನೀಷೋಮಾ**—ಅಗ್ನಿ ಮತ್ತು ಸೋಮದೇವತೆಗಳನ್ನು । **ವಾಜಸಾತಯೀ**—ಅನ್ನಲಾಭಾರ್ಥವಾಗಿ । **ಉಪ ಬ್ರುವೇ**—ಪ್ರಶಂಸಿಸುತ್ತೇನೆ । **ಯೌ**—ಯಾವ ಅಗ್ನಿ ಮತ್ತು ಸೋಮದೇವರನ್ನು । **ವೃಷಣಃ**—ಋತ್ವಿಕ್ಕುಗಳು । **ದೇವಯಜ್ಯಯಾ**—ದೇವಪೂಜಕವಾದ ಯಜ್ಞದಿಂದ । **ಈಜಿರೇ**—ಪೂಜಿಸುವರೋ ! **ತಾ**—ಆದೇ ದೇವತೆಗಳು । **ನಃ**—ನಮಗೆ । **ತ್ರಿವರೂಥಂ**—ಮೂರುಬಗೆಯಲ್ಲಿಯೂ ರಕ್ಷಣೆಯುಳ್ಳ । **ಶರ್ಮ**—ಗೃಹವನ್ನು । **ವಿ ಯಂಸತಃ**—ಒದಗಿಸಿಕೊಡಲಿ.

ಭಾವಾರ್ಥ

ಇಷ್ಟಾರ್ಥಪ್ರದರೂ, ಅಧಿಕವಾಗಿ ಪ್ರಶಂಸಿಸಲ್ಪಡುವವರೂ ಆದ ಅಗ್ನಿ ಮತ್ತು ಸೋಮದೇವತೆಗಳನ್ನು ಅನ್ನ ಲಾಭಾರ್ಥವಾಗಿ ಪ್ರಶಂಸಿಸುತ್ತೇನೆ. ಯಾವ ಅಗ್ನಿ ಮತ್ತು ಸೋಮದೇವರನ್ನು ಋತ್ವಿಕ್ಕುಗಳು ದೇವಪೂಜಕವಾದ ಯಜ್ಞದಿಂದ ಪೂಜಿಸುವರೋ, ಪ್ರಸಿದ್ಧರಾದ ಆದೇ ದೇವತೆಗಳು ನಮಗೆ ಮೂರು ಬಗೆಯ ರಕ್ಷಣೆಗಳಿಂದ ಕೂಡಿದ ಗೃಹವನ್ನು ಒದಗಿಸಿಕೊಡಲಿ.

English Translation

I glorify for the obtaining of food the two showerers (of benefits), Agni and Soma, the many-lauded showerers (of beuefits), may these two whom the priests have worshipped with divine worship bestow upon us a triply-guarded dwelling.

ಸಂಹಿತಾಪಾಠಃ

ಧೃತವ್ರತಾಃ ಕ್ಷತ್ರಿಯಾ ಯಜ್ಞನಿಷ್ಕೃತೋ ಬೃಹದ್ದಿವಾ ಅಧ್ವರಾಣಾಮಭಿ-
ಶ್ರಿಯಃ ।
ಅಗ್ನಿಹೋತಾರ ಋತಸಾಪೋ ಅದ್ರುಹೋಽಪೋ ಅಸೃಜನ್ನನು ವೃತ್ರ-
ತೂರ್ಯೇ ॥ ೮ ॥

ಪದಪಾಠಃ

ಧೃತಽವ್ರತಾಃ । ಕ್ಷತ್ರಿಯಾಃ । ಯಜ್ಞನಿಃಽಕೃತಃ । ಬೃಹತ್ಽದಿವಾಃ । ಅಧ್ವರಾಣಾಂ । ಅಭಿಽಶ್ರಿಯಃ ।
ಅಗ್ನಿಽಹೋತಾರಃ । ಋತಽಸಾಪಃ । ಅದ್ರುಹಃ । ಅಪಃ । ಅಸೃಜನ್ । ಅನು । ವೃತ್ರಽತೂರ್ಯೇ ॥ ೮ ॥

ಸಾಯಣಭಾಷ್ಯಂ

ಧೃತವ್ರತಾ ಧೃತಕರ್ಮಾಣೋ ಜಾತ್ಯಾ ಕ್ಷತ್ರಿಯಾಃ। ಯದ್ವಾ। ಕ್ಷತ್ರಂ ಬಲಂ। ತದರ್ಹಾಃ। ಯಜ್ಞನಿಷ್ಕೃತಃ। ಯಜ್ಞಂ ಪ್ರತಿ ನಿರ್ಗಮನಂ ಯಜ್ಞನಿಃ। ತಸ್ಯ ಕರ್ತಾರೋ ಬೃಹದ್ದಿವಾ ಮಹಾತೇಜಸ್ಕಾ ಅಧ್ವರಾಣಾಂ ರಕ್ಷೋಭಿರಹಿಂಸಿತಾನಾಂ ಯಜ್ಞಾನಾಮಭಿಶ್ರಿಯೋಽಭಿಸೇವಕಾ ಅಗ್ನಿಹೋತಾರೋಽಗ್ನಿಹೋತ್ರಾಹ್ವಯಾ ಯೇಷಾಂ ತಾದೃಶಾ ಋತಸಾಪಃ॥ ಷಪ ಸಮವಾಯೇ॥ ಸತ್ಯಭಾಜಃ ಅತ ಏವಾದ್ರುಹಃ ಕೇಷಾಂಚಿದಪ್ಯದ್ರೋಗ್ಧಾರಃ। ಯದ್ವಾ ॥ ದ್ರುಹೇಃ ಕರ್ಮಣ್ಯೌಣಾದಿಕಃ ಕ್ವಿಪ್ ॥ ಕೈಶ್ಚಿದಪ್ಯಹಿಂಸ್ಯಾಃ। ಏವಂಪ್ರಭಾವಾ ದೇವಾ ವೃತ್ರತೂರ್ಯೇ। ವೃತ್ರಸ್ತೂರ್ಯತೇ ಹಿಂಸ್ಯತೇಽತ್ರೇತಿ ವೃತ್ರತೂರ್ಯಃ ಸಂಗ್ರಾಮಃ । ತಸ್ಮಿನ್ನಪಾಮಾವರಕಶತ್ರುವಧೇಽಪ ಉದಕಾನ್ಯನ್ವಸೃಜನ್ । ಅನ್ವಸಾರಯನ್ ॥

ಪ್ರತಿಪದಾರ್ಥ

ಧೃತವ್ರತಾಃ—ತಮ್ಮ ನಿಯಮಿತವಾದ ಕರ್ಮಗಳನ್ನು ದೃಢವಾಗಿ ನೆರವೇರಿಸುವವರೂ । **ಕ್ಷತ್ರಿಯಾಃ**—ಶಕ್ತಿಯುತರೂ । **ಯಜ್ಞನಿಷ್ಕೃತಃ**—ಯಜ್ಞಕ್ಕಾಗಿ ಒಟ್ಟಿಗೆ ಹೋಗುವವರೂ । **ಬೃಹದ್ದಿವಾಃ**—ಅತ್ಯಧಿಕವಾದ ತೇಜಸ್ಸುಳ್ಳವರೂ । **ಅಧ್ವರಾಣಾಂ**—ಯಜ್ಞಗಳಿಗೆ । **ಅಭಿಶ್ರಿಯಃ**—ಕಾಂತಿಯುತವಾದ ರಕ್ಷಣೆಯನ್ನೀಯುವವರೂ । **ಅಗ್ನಿಹೋತಾರಃ**—ಅಗ್ನಿಯೇ ಹೋತೃವಾಗಿ ಉಳ್ಳವರೂ । **ಋತಸಾಪಃ**—ಸತ್ಯಪಾಲಕರೂ । **ಅದ್ರುಹಃ**—ಯಾರಿಗೂ ಕೇಡನ್ನು ಬಯಸದಿರುವವರೂ ಆದ ದೇವತೆಗಳು । **ವೃತ್ರತೂರ್ಯೇ**—ವೃತ್ರಸಂಹಾರಕವಾದ ಯುದ್ಧದಲ್ಲಿ। **ಅಪಃ**—ಉದಕಗಳನ್ನು । **ಅನು ಅಸೃಜನ್**—ಉತ್ಪನ್ನಮಾಡಿ ಸುರಿಸಲಿ.

ಭಾವಾರ್ಥ

ತಮ್ಮ ನಿಯಮಿತವಾದ ಕರ್ಮಗಳನ್ನು ದೃಢವಾಗಿ ನೆರವೇರಿಸುವವರೂ, ಶಕ್ತಿಯುತರೂ, ಯಜ್ಞಕ್ಕಾಗಿ ಒಟ್ಟಿಗೆ ಹೋಗುವವರೂ, ಅತ್ಯಧಿಕವಾದ ತೇಜಸ್ಸುಳ್ಳವರೂ, ಯಜ್ಞಗಳಿಗೆ ಕಾಂತಿಯುತವಾದ ರಕ್ಷಣೆಯನ್ನೀಯುವವರೂ, ಅಗ್ನಿಯೇ ಹೋತೃವಾಗಿ ಉಳ್ಳವರೂ, ಸತ್ಯಪಾಲಕರೂ, ಯಾರಿಗೂ ಕೇಡನ್ನು ಬಯಸದಿರುವವರೂ ಆದ ದೇವತೆಗಳು ವೃತ್ರಸಂಹಾರಕವಾದ ಯುದ್ಧದಲ್ಲಿ ಉದಕಗಳನ್ನು ಸುರಿಸಿ ಪ್ರವಹಿಸುವಂತೆ ಮಾಡಲಿ.

English Translation

The (gods) observing obligations endowed with vigour, developers of sacrifice, possessed of abundant brightness, the defenders of sacrifices, having Agni for their priest, enjoying truth, unassailable, set free the waters at the combat with the Vritra.

ಸಂಹಿತಾಪಾಠಃ

द्यावापृथिवी जनयन्नभि व्रता प आषधीर्वनिनानि यज्ञियाः ।
अन्तरिक्षं स्वरा पप्रूरूतये वशं देवासस्तन्विनि ममृजुः॥

ಪದಪಾಠಃ

द्यावापृथिवी इति । जनयन् । अभि । व्रता । अपः । ओषधीः । वनिनानि । यज्ञियाः ।
अन्तरिक्षं । स्वः । आ । पप्रुः । ऊतये । वशं । देवासः । तन्वि । नि । ममृजुः ॥

ಸಾಯಣಭಾಷ್ಯಂ

देवासो देवा इन्द्रादयो द्यावापृथिवी द्यावापृथिव्यावभ्यभिलक्ष्य व्रता व्रतेन स्वेन कर्मणापः ॥ सुब्व्यत्ययः ॥ अप उदकान्योषधीश्च तथा यज्ञियाः यज्ञार्हान्वनिनानि वने भवान्पलाशादीन्पृक्षाज्जनयन् । उदपादयन् । किंच ते देवाः स्वः सर्वमन्तरिक्षमा पप्रुः । तेजसापूरयंति । किमर्थं । ऊतये रक्षणायै शत्रुभ्यो बाधाभावाय । अपि च वशं कामयमानं ॥ वशिरनोरुपसंख्यानं । पा-३-३-१७५-३ । इत्यकर्तरि कारकेऽप् ॥ तं यज्ञं तन्वि स्वशरीरे नि ममृजुः । नितरां शुद्धमलंकृतं चक्रुः ॥

ಪ್ರತಿಪದಾರ್ಥ

ದೇವಾಸಃ—ಇಂದ್ರಾದಿ ದೇವತೆಗಳು । **ಅಭಿ ವ್ರತಾ**—ತಮ್ಮತಮ್ಮ ವೈಯಕ್ತಿಕವಾದ ಕರ್ಮಗಳಿಂದ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳನ್ನೂ । **ಅಪಃ**—ಉದಕಗಳನ್ನೂ । **ಓಷಧೀಃ**—ಲತಾದಿಗಳನ್ನೂ ।

यज्ञियाः—यज्ञार्हवाद । **वनिनानि**—वृक्षगळन्नू । **जनयन्**—उत्पन्नमाडिदरु । **स्वः अन्तरिक्षम्**—सकलवाद अन्तरिक्षवन्नू । **ऊतये**—रक्षणार्थवागि । **आ पप्रुः**—तम्म तेजस्सिनिंद तुंबिद्दारे । **वशम्**—आकर्षकवाद यज्ञवन्नु । **तन्वि**—तम्म शरीरदल्लि । **नि ममृजुः**—अंतर्गतमाडिकोंडु अलंकरिसिकोळ्ळुत्तारे.

भावार्थ

इंद्रादि देवतेगळु तम्मतम्म वैयक्तिकवाद कर्मगळिंद द्यावापृथिविगळन्नू, ऊदकगळन्नू, लतादिगळन्नू, यज्ञार्हवाद वृक्षगळन्नू उत्पन्नमाडिदरु. सकलवाद अंतरिक्षवन्नू रक्षणार्थवागि तम्म तेजस्सिनिंद तुंबिद्दारे. आकर्षकवाद यज्ञवन्नु तन्म शरीरदल्लि अंतर्गतवनाडिकोंडु अलंकरिसिकोळ्ळुत्तारे.

English Translation

The gods engendered the heaven and earth with their respective functions, the waters, the plants, the sacred trees; they filled the whole firmament (with lustre) for its protection; they graced the desirable (sacrifice) in their own persons.

संहितापाठः

धर्तारौ दिव ऋभवः सुहस्ता वातापर्जन्या महिषस्य तन्य-
तोः ।
आप ओषधीः प्र तिरन्तु नो गिरो भगो रातिर्वाजिनो यन्तु
मे हवं ॥ ८० ॥

पदपाठः

धर्तारः । दिवः । ऋभवः । सुऽहस्ताः । वातापर्जन्या । महिषस्य । तन्यतोः ।
आपः । ओषधीः । प्र । तिरन्तु । नः । गिरः । भगः । रातिः । वाजिनः । यन्तु । मे । हवं॥

सायणभाष्यं

दिवो द्युलोकस्य धर्तारौ धारयितारा ऋभवः सत्येन भासमानाः सुहस्ताः शोभनबाह्वाद्यायुधयुक्तहस्ता देवास्तथा महिषस्य महतस्तन्यतोः शब्दस्य ॥ तनु विस्तारे । ऋतन्यंजीति यतुरुच्प्रत्ययः ॥ शब्दस्य कर्तारौ वातापर्जन्या वातश्च पर्ज-न्यश्च तत्कार्या आप ओषधीरोषधयश्च नोऽस्माकं गिरः स्तुतीः प्र तिरन्तु । प्रवर्ध-

ಯಂತು । ಪ್ರಪೂರ್ವಸ್ತಿರತಿರ್ವೃದ್ಧ್ಯರ್ಥಃ । ತಥಾ ರಾತಿರ್ದಾತಾ ಭಗೋ ಭಜನೀಯೋಽರ್ಯಮಾ ಚ ವಾಜಿನಃ । ಅಗ್ನಿರ್ವಾಯುಃ ಸೂರ್ಯಸ್ತೇ ವೈ ವಾಜಿನ ಇತಿ ತೈತ್ತಿರೀಯಬ್ರಾಹ್ಮಣಂ । ೧-೬-೩-೯ । ಏತೇ ದೇವಾಶ್ಚ ಮೇ ಮದೀಯಂ ಹವಮಾಹ್ವಾನಂ ಯಂತು । ಅಭಿಗಚ್ಛಂತು ॥

ಪ್ರತಿಪದಾರ್ಥ

ದಿವಃ—ದ್ಯುಲೋಕಕ್ಕೆ । **ಧರ್ತಾರಃ**—ಧಾರಕರೂ । **ಋಭವಃ**—ತಮ್ಮ ಸತ್ಯಸ್ವರೂಪದಿಂದ ಪ್ರಕಾಶಿಸುವವರೂ । **ಸುಹಸ್ತಾಃ**—ಉತ್ತಮವಾದ ಹಸ್ತಗಳುಳ್ಳವರೂ । **ಮಹಿಷಸ್ಯ**—ಮಹತ್ತಾದ । **ತನ್ಯತೋಃ**—ಶಬ್ದಕ್ಕೆ ನಿರ್ಮಾಪಕರೂ ಆದ । **ವಾತಾಪರ್ಜನ್ಯಾ**—ವಾಯು ಮತ್ತು ಪರ್ಜನ್ಯರುಗಳು । **ಅಪಃ**—ಉದಕಗಳನ್ನೂ । **ಓಷಧೀಃ**—ಓಷಧಿಗಳನ್ನೂ । **ನಃ**—ನಮ್ಮ । **ಗಿರಃ**—ಸ್ತುತಿಗಳನ್ನೂ । **ಪ್ರ ತಿರಂತು**—ವೃದ್ಧಿಯಾಗುವಂತೆ ಮಾಡಲಿ । **ರಾತಿಃ**—ಉದಾರಿಯಾದ । **ಭಗಃ**—ಭಗದೇವನೂ । **ವಾಜಿನಃ**—ಅಗ್ನಿ, ವಾಯು ಮತ್ತು ಸೂರ್ಯರೂ । **ಮೇ**—ನನ್ನ । **ಹವಂ**—ಆಹ್ವಾನವನ್ನು ಲಕ್ಷಿಸಿ । **ಯಂತು**—ಬರಲಿ.

ಭಾವಾರ್ಥ

ದ್ಯುಲೋಕಕ್ಕೆ ಧಾರಕರೂ, ತಮ್ಮ ಸತ್ಯಸ್ವರೂಪದಿಂದ ಪ್ರಕಾಶಿಸುವವರೂ, ಉತ್ತಮವಾದ ಹಸ್ತಗಳುಳ್ಳವರೂ, ಮಹತ್ತಾದ ಶಬ್ದಕ್ಕೆ ನಿರ್ಮಾಪಕರೂ ಆದ ವಾಯು ಮತ್ತು ಪರ್ಜನ್ಯರುಗಳು ಉದಕಗಳನ್ನೂ, ಓಷಧಿಗಳನ್ನೂ ನಮ್ಮ ಸ್ತುತಿಗಳನ್ನು ವೃದ್ಧಿಯಾಗುವಂತೆ ಮಾಡಲಿ. ಉದಾರಿಯಾದ ಭಗದೇವನೂ, ಅಗ್ನಿ, ವಾಯು ಮತ್ತು ಸೂರ್ಯರೂ ನನ್ನ ಆಹ್ವಾನವನ್ನು ಲಕ್ಷಿಸಿ ಬರಲಿ.

English Translalion

May the upholders of the sky, the radiant with truth, the well-armed deities, Vata and Parjanya, (the utterers) of the mighty thunder, the waters, the plants, amplify our praises ; may the liberal Bhaga and the Vajins come to my invocation.

ಸಂಹಿತಾಪಾಠಃ

ಸಮುದ್ರಃ ಸಿಂಧೂ ರಜೋ ಅಂತರಿಕ್ಷಮಜ ಏಕಪಾತ್ತನಯಿತ್ನುರರ್ಣವಃ ।
ಅಹಿರ್ಬುಧ್ನ್ಯಃ ಶೃಣವದ್ವಚಾಂಸಿ ಮೇ ವಿಶ್ವೇ ದೇವಾಸ ಉತ ಸೂರಯೋ ಮಮ ।

ಪದಪಾಠಃ

ಸಮುದ್ರಃ । ಸಿಂಧುಃ । ರಜಃ । ಅಂತರಿಕ್ಷಂ । ಅಜಃ । ಏಕಪಾತ್ । ತನಯಿತ್ನುಃ । ಅರ್ಣವಃ ।
ಅಹಿಃ । ಬುಧ್ನ್ಯಃ । ಶೃಣವತ್ । ವಚಾಂಸಿ । ಮೇ । ವಿಶ್ವೇ । ದೇವಾಸಃ । ಉತ । ಸೂರಯಃ । ಮಮ ॥

ಸಾಯಣಭಾಷ್ಯಂ

ಸಮುದ್ರಃ ಸಮುಂದನಶೀಲಃ ಸ್ಯಂದಮಾನೋದಕಃ ಸಿಂಧುರೇತೆನ್ನಾಮಕೋಽಂತರಿಕ್ಷಂ ದ್ಯಾವಾ ಪೃಥಿವ್ಯೋರಂತರಾ ಮಧ್ಯೇ ಕ್ಷಿತಮುಷಿತಂ ರಜೋ ಮಧ್ಯಮಲೋಕಮಜ ಏಕಪಾತ್ ಅಜಾಯಮಾನ ಏಕ ಏವ ಪದ್ಯತೇ । ಏತತ್ಸಂಜ್ಞಕೋ ದೇವೋಽರ್ಣವ ಉದಕವಾಂಸ್ತನಯಿತ್ನುಃ ಸ್ತನಯಿತ್ನುರ್ಮೇಘೋ ಬುಧ್ನ್ಯೋಽಂತರಿಕ್ಷೇ ಭವೋಽಹಿರೇತತ್ಸಂಜ್ಞಕಃ ಏತೇ ದೇವಾ ಮೇ ಮಮ ವಚಾಂಸಿ ವಕ್ತವ್ಯಾನಿ ಸ್ತೋತ್ರಾಣಿ ಶೃಣವತ್ । ಪ್ರತ್ಯೇಕಂ ಶೃಣೋತು ಉತಾಪಿ ಚ ಸೂರಯಃ ಪ್ರಾಜ್ಞಾ ವಿಶ್ವೇ ದೇವಾಸೋ ದೇವಾ ಮಮ ಸ್ತೋತ್ರಾಣಿ ಶೃಣ್ವಂತು ॥

ಪ್ರತಿಪದಾರ್ಥ

ಸಮುದ್ರಃ—ಪ್ರವಹಿಸುವ ಉದಕವುಳ್ಳ । **ಸಿಂಧುಃ**—ಸಿಂಧುವೂ । **ಅಂತರಿಕ್ಷಂ**—ದ್ಯಾವಾಪೃಥಿವಿಗಳ ನಡುವೆ ಇರುವ । **ರಜಃ**—ಮಧ್ಯಮಲೋಕವೂ । **ಅಜ ಏಕಪಾತ್**—ಅಜ ಏಕಪಾತ್ಸಂಜಕನಾದ ದೇವನೂ । **ಅರ್ಣವಃ**—ಉದಕವಂತನೂ । **ತನಯಿತ್ನುಃ**—ಶಬ್ದಕಾರಕನೂ ಆದ । **ಅಹಿರ್ಬುಧ್ನ್ಯಃ**—ಅಹಿರ್ಬುಧ್ನ್ಯ-ದೇವನೂ । **ಮೇ**—ನನ್ನ । **ವಚಾಂಸಿ**—ಸ್ತುತಿವಾಕ್ಯಗಳನ್ನು । **ಶೃಣವತ್**—ಕೇಳಲಿ । **ಉತ**—ಮತ್ತು । **ಸೂರಯಃ**—ಪ್ರಾಜ್ಞರಾದ । **ವಿಶ್ವೇ ದೇವಾಸಃ**—ಸಮಸ್ತ ದೇವತೆಗಳು । **ಮಮ**—ನನ್ನ ಸ್ತುತಿಗಳನ್ನು ಕೇಳಲಿ.

ಭಾವಾರ್ಥ

ಪ್ರವಹಿಸುವ ಉದಕವುಳ್ಳ ಸಿಂಧುವೂ, ದ್ಯಾವಾಪೃಥಿವಿಗಳ ನಡುವೆ ಇರುವ ಮಧ್ಯಮಲೋಕವೂ, ಅಜ ಏಕಪಾತ್ಸಂಜ್ಞಕನಾದ ದೇವನೂ, ಉದಕವಂತನೂ, ಶಬ್ದಕಾರಕನೂ ಆದ ಅಹಿರ್ಬುಧ್ನ್ಯದೇವನೂ ನನ್ನ ಸ್ತುತಿವಾಕ್ಯಗಳನ್ನು ಕೇಳಲಿ ಮತ್ತು ಪ್ರಾಜ್ಞರಾದ ವಿಶ್ವೇದೇವತೆಗಳು ನನ್ನ ಸ್ತುತಿಗಳನ್ನು ಕೇಳಲಿ.

English Translation

May the flowing Sindhu, the atmosphere, the firmament, Aja Ekapad, the rain-bearing thunder-cloud, and Ahirbudhnya hear my words; may the wise universal gods (listen to) my (praises).

ಸಂಹಿತಾಪಾಠಃ

ಸ್ಯಾಮು ವೋ ಮನವೋ ದೇವವೀತಯೇ ಪ್ರಾಂಚಂ ನೋ ಯಜ್ಞಂ ಪ್ರ ಣಯತ ಸಾಧುಯಾ ।

ಆದಿತ್ಯಾ ರುದ್ರಾ ವಸವಃ ಸುದಾನವ ಇಮಾ ಬ್ರಹ್ಮ ಶಸ್ಯಮಾನಾನಿ ಜಿನ್ವತ ॥

ಪದಪಾಠಃ

ಸ್ಯಾಮು । ವಃ । ಮನವಃ । ದೇವವೀತಯೇ । ಪ್ರಾಂಚಂ । ನಃ । ಯಜ್ಞಂ । ಪ್ರ । ಣಯತ । ಸಾಧುಯಾ ।

आदित्याः । रुद्राः । वसवः । सुऽदानवः । इमा । ब्रह्म । शस्यमानानि । जिन्वत ॥ ८३ ॥

सायणभाष्यं

हे देवाः मनवो मनुष्या वयं वो यष्मदीयायै देवहितयेऽ । देवानां हितिर्भक्षणं यस्मिन् स यज्ञः । तस्मै यज्ञाय स्याम । यज्ञकर्तारो भवेम । ततो नोऽस्मदीयं यज्ञं साधुया ॥ सुप्रो यजादेशः ॥ साधु कल्याणं स्यांचं स्याचीनं प्र णयत । प्रकृष्टांचनं कुरुत । हे आदित्याः हे रुद्रा रुद्रपुत्रा मरुतो हे सुदानवः शोभनदाना हे वसवः इमेमानि शस्यमानानि ब्रह्म ब्रह्माणि स्तोत्राणि जिन्वत । प्रीणयत ॥

प्रतिपदार्थ

(ಎಲೈ ದೇವತೆಗಳೇ) **मनवः**—ಮಾನವರಾದ ನಾವು । **वः**-ನಿಮ್ಮನ್ನು ಪೂಜಿಸುವ । **देवहितयेऽ**-ಯಜ್ಞಸಂಪಾದನೆಗಾಗಿ । **स्याम**—ನಿರತರಾಗಿದ್ದೇವೆ । **नः**—ನಮ್ಮ । **स्यांचं**—ಪ್ರಾಚೀನವಾದ । **यज्ञं**—ಯಜ್ಞವನ್ನು । **साधुया**—ಕಲ್ಯಾಣಫಲಪ್ರದವಾಗುವಂತೆ । **प्रणयत**—ಸಹಾಯಮಾಡಿರಿ **आदित्याः**—ಎಲೈ ಆದಿತ್ಯರೇ । **रुद्राः**—ಎಲೈ ರುದ್ರರೇ । **सुदानवः**—ಉದಾರಿಗಳಾದ । **वसवः**—ಎಲೈ ವಸುಗಳೇ । **इमा शस्यमानानि**—ಇಲ್ಲಿ ಪಠಿತವಾಗುವ । **ब्रह्म**—ಸ್ತುತಿಗಳನ್ನು । **जिन्वत**—ಆದರದಿಂದ ಸ್ವೀಕರಿಸಿರಿ.

ಭಾವಾರ್ಥ

ಎಲೈ ದೇವತೆಗಳೇ, ಮಾನವರಾದ ನಾವು ನಿಮ್ಮನ್ನು ಪೂಜಿಸುವ ಯಜ್ಞಸಂಪಾದನೆಗಾಗಿ ನಿರತರಾಗಿದ್ದೇವೆ. ನಮ್ಮ ಪ್ರಾಚೀನವಾದ ಯಜ್ಞವನ್ನು ಕಲ್ಯಾಣಫಲಪ್ರದವಾಗುವಂತೆ ಸಹಾಯಮಾಡಿರಿ. ಎಲೈ ಆದಿತ್ಯರೇ, ಎಲೈ ರುದ್ರರೇ ಮತ್ತು ಉದಾರಿಗಳಾದ ಎಲೈ ವಸುಗಳೇ, ಇಲ್ಲಿ ಪಠಿತವಾಗುವ ಸ್ತುತಿಗಳನ್ನು ಆದರದಿಂದ ಸ್ವೀಕರಿಸಿರಿ.

English Translation

May we men be (deligent in providing) for your food, (O gods); conduct our ancient sacrifice to a successful end, Adityas, Rudras, and generous Vasus, graciously accept these hymns which are being recited.

संहितापाठः

दैव्या होतारा प्रथमा पुरोहित ऋतस्य पन्थामन्वेमि साधुया ।

क्षेत्रस्य पतिं प्रतिवेशमीमहे विश्वान्देवाँ अमृताँ अप्रयुच्छतः

ಪದಪಾಠಃ

ದೈವ್ಯಾ । ಹೋತಾರಾ । ಪ್ರಥಮಾ । ಪುರಃಽಹಿತಾ । ಋತಸ್ಯ । ಪಂಥಾಂ । ಅನು । ಏಮಿ। ಸಾಧುಽಯಾ।
ಕ್ಷೇತ್ರಸ್ಯ । ಪತಿಂ । ಪ್ರತಿಽವೇಶಂ । ಈಮಹೇ। ವಿಶ್ವಾನ್ । ದೇವಾನ್। ಅಮೃತಾನ್। ಅಪ್ರಽಯುಚ್ಛತಃ ॥

ಸಾಯಣಭಾಷ್ಯಂ

ಅಪ್ತೋರ್ಯಾಮೇಚ್ಛಾವಾಕಾತಿರಿಕ್ತೋಕ್ಥಸ್ಯ ದೈವ್ಯಾ ಹೋತಾರೇತ್ಯೇಷಾ ಪರಿಧಾನೀಯಾ । ಸೂತ್ರಿತಂ ಚ । ಉಭಾ ಉ ನೂನಂ ದೈವ್ಯಾ ಹೋತಾರಾ ಪ್ರಥಮಾ ಪುರೋಹಿತೇತಿ ಪರಿಧಾನೀಯಾ । ಆ.೯ ೧೧ । ಇತಿ ॥

ಪ್ರಥಮಾ ಮುಖ್ಯೌ ಪುರೋಹಿತಾ ಪುರೋಹಿತೌ ಪುರತೋ ನಿಹಿತೌ ದೈವ್ಯಾ ದೇವಸಂಬಂಧಿನೌ ಹೋತಾರಾ ಹೋತಾರಾವೇತನ್ನಾಮಾನಾವಗ್ನಾದಿತ್ಯಾವನ್ವೇಮಿ । ಹವಿರ್ಭಿರನುಗಚ್ಛಾಮಿ। ತತ ಋತಸ್ಯ ಯಜ್ಞಸ್ಯ ಪಂಥಾಂ ಪಂಥಾನಂ ಸಾಧುಯಾ ಕಲ್ಯಾಣಂ ವಿಘ್ನರಾಹಿತ್ಯೇನಾನ್ವೇಮಿ । ಅನುಗಚ್ಛಾಮಿ । ಅನಂತರಂ ಪ್ರತಿವೇಶಂ ಸಮೀಪೇ ವರ್ತಮಾನಂ ಕ್ಷೇತ್ರಸ್ಯ ಪತಿಂ ಪಾಲಯಿತಾರಮೇತನ್ನಾಮಾನಮಮೃತಾನ್ಮರಣಧರ್ಮರಹಿತಾನಪ್ರಯುಚ್ಛತೋಽಪ್ರಮಾದ್ಯತೋ ವಿಶ್ವಾನ್ಸರ್ವಾನ್ದೇವಾಂಶ್ಚೇಮಹೇ । ಧನಂ ಯಾಚಾಮಹೇ ॥

ಪ್ರತಿಪದಾರ್ಥ

ಪ್ರಥಮಾ—ಪ್ರಧಾನರೂ । **ಪುರೋಹಿತಾ**—ಎಲ್ಲರಿಗಿಂತಲೂ ಮುಂದಾಗಿ ಸ್ಥಾಪಿತರಾದವರೂ । **ದೈವ್ಯಾ ಹೋತಾರಾ**—ದೇವಪೂಜಕರೂ ಆದ ಅಗ್ನಿ ಮತ್ತು ಆದಿತ್ಯರನ್ನು । **ಅನ್ವೇಮಿ**—ನಾನು ಅನುಸರಿಸುತ್ತೇನೆ । **ಋತಸ್ಯ**—ಯಜ್ಞದ । **ಪಂಥಾಂ**—ಮಾರ್ಗವನ್ನು । **ಸಾಧುಯಾ**—ಉತ್ತಮವಾಗಿ । **ಅನ್ವೇಮಿ**—ಅನುಸರಿಸುತ್ತೇನೆ । **ಪ್ರತಿವೇಶಂ**—ನಮ್ಮ ಸಮೀಪದಲ್ಲಿರುವ । **ಕ್ಷೇತ್ರಸ್ಯ ಪತಿಂ**—ಕ್ಷೇತ್ರಪತಿಯೆಂಬ ದೇವನನ್ನೂ । **ಅಮೃತಾನ್**—ಮರಣರಹಿತರೂ । **ಅಪ್ರಯುಚ್ಛತಃ**—ಆಲಸ್ಯರಹಿತರೂ ಆದ । **ವಿಶ್ವಾನ್ ದೇವಾನ್**—ಸಮಸ್ತ ದೇವತೆಗಳನ್ನು । **ಈಮಹೇ**—ಧನಕ್ಕಾಗಿ ಯಾಚಿಸುತ್ತೇವೆ.

ಭಾವಾರ್ಥ

ಪ್ರಧಾನರೂ, ಎಲ್ಲರಿಗಿಂತಲೂ ಮುಂದಾಗಿ ಸ್ಥಾಪಿತರಾದವರೂ, ದೇವಪೂಜಕರೂ ಆದ ಅಗ್ನಿ ಮತ್ತು ಆದಿತ್ಯರನ್ನು ನಾನು ಅನುಸರಿಸುತ್ತೇನೆ. ಯಜ್ಞಮಾರ್ಗವನ್ನು ನಾನು ಉತ್ತಮವಾಗಿ ಅನುಸರಿಸುತ್ತೇನೆ. ನಮ್ಮ ಸಮೀಪದಲ್ಲೇ ಇರುವ ಕ್ಷೇತ್ರಪತಿಯೆಂಬ ದೇವನನ್ನೂ, ಮರಣರಹಿತರೂ, ಆಲಸ್ಯರಹಿತರೂ ಆದ ವಿಶ್ವೇದೇವತೆಗಳನ್ನೂ (ಸಕಲ ದೇವತೆಗಳನ್ನೂ) ಧನಕ್ಕಾಗಿ ಯಾಚಿಸುತ್ತೇವೆ,

English Translation

I follow the two chief priests, the divine offerers of burnt sacrifices; (I follow) successfully the path of sacrifice; we solicit (wealth of) the contiguous lord of the field, and the immortal and not unheeding universal deities.

ವಿಶೇಷವಿಷಯಗಳು

ಅಪ್ತೋರ್ಯಾಮವೆಂಬ ಯಾಗದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಅತಿರಿಕ್ತವೆಂಬ ಉಕ್ಥಮಂತ್ರಗಳನ್ನು ಪಠಿಸುವಾಗ **ದೈವ್ಯಾ ಹೋತಾರಾ** ಎಂಬ ಈ ಋಕ್ಕನ್ನು ಕೊನೆಯ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಉಭಾ ಉ ನೂನಂ ದೈವ್ಯಾ ಹೋತಾರಾ ಪುರೋಹಿತೇತಿ ಪರಿಧಾನೀಯಾ** ಎಂಬ ಸೂತ್ರದಿಂದ (ಆ. ೯-೧೧) ವಿನ್ಯತವಾಗಿರುವುದು.

ಸಂಹಿತಾಪಾಠಃ

ವಸಿಷ್ಠಾಸಃ ಪಿತೃವದ್ವಾಚಮಕ್ರತ ದೇವಾಁ ಈಳಾನಾ ಋಷಿವತ್ಸ್ವಸ್ತಯೇ ।
ಪ್ರೀತಾ ಇವ ಜ್ಞಾತಯಃ ಕಾಮಮೇತ್ಯಾಸ್ಮೇ ದೇವಾಸೋಽವ ಧೂನುತಾ ವಸು ॥ ೧೪ ॥

ಪದಪಾಠಃ

ವಸಿಷ್ಠಾಸಃ । ಪಿತೃವತ್ । ವಾಚಂ । ಅಕ್ರತ । ದೇವಾನ್ । ಈಳಾನಾಃ । ಋಷಿವತ್ । ಸ್ವಸ್ತಯೇ ।
ಪ್ರೀತಾಃ ಇವ । ಜ್ಞಾತಯಃ । ಕಾಮಂ । ಆ ಇತ್ಯೈ । ಅಸ್ಮೇ ಇತಿ । ದೇವಾಸಃ । ಅವ । ಧೂನುತ ।
ವಸು ॥ ೧೪ ॥

ಸಾಯಣಭಾಷ್ಯಂ

ಋಷಿವತ್ ಪೂರ್ವ ಋಷಯ ಇವ ದೇವಾನೀಳಾನಾಃ ಸ್ತುವಂತೋ ವಸಿಷ್ಠಾಸೋ ವಸಿಷ್ಠಕುಲಜಾತಾ ಋಷಯಃ ಪಿತೃವದ್ಯಸಿಷ್ಠವತ್ಸ್ವಸ್ತಯೇಽವಿನಾಶಾಯ ವಾಚಂ ಸ್ತೋತ್ರಮಕ್ರತ । ಕುರ್ವಂತಿ ॥ ಕರೋತೇರ್ಲುಙಿ ಮಂತ್ರೇ ಘಸೇತಿ ಚ್ಲೇರ್ಲುಕ್ ॥ ಹೇ ದೇವವಾಸೋ ದೇವಾಃ ಯೂಯಂ ಕಾಮಮಸ್ಮದಭಿಲಾಷಮೇತ್ಯಾಗತ್ಯಾಸ್ಮೇ ಅಸ್ಮಾಸು ವಸು ಗವಾದಿಲಕ್ಷಣಂ ಧನಮವ ಧೂನುತ । ಅಭಿಮುಖಂ ಪ್ರೇರಯತ । ತತ್ರ ದೃಷ್ಟಾಂತಃ । ಪ್ರೀತಾ ಇವ । ಯಥಾ ಪ್ರೀತಾಃ ಸಂಹೃಷ್ಟಾ ಜ್ಞಾತಯೋ ಬಂಧವಃ ಸ್ವಜನಸ್ಯ ಧನಂ ಪ್ರೇರಯಂತಿ ತದ್ವದ್ಧವಿರ್ದಾನೇನ ಸ್ತುತಿಕರಣೇನ ಚ ಬಂಧುಸ್ಥಾನೀಯಾನ್ಅಸ್ಮಾಸು ಧನಂ ಪ್ರೇರಯತೇತಿ ಭಾವಃ ॥

ಪ್ರತಿಪದಾರ್ಥ

ಋಷಿವತ್—ಹಿಂದಿನಕಾಲದ ಋಷಿಗಳಂತೆಯೂ । **ಪಿತೃವತ್**—ತಮ್ಮ ಪಿತೃವಾದ ವಸಿಷ್ಠನಂತೆಯೂ । **ದೇವಾನ್**—ದೇವತೆಗಳನ್ನು । **ಈಳಾನಾಃ**—ಪ್ರಶಂಸಿಸುವ । **ವಸಿಷ್ಠಾಸಃ**—ವಸಿಷ್ಠವಂಶೋತ್ಪನ್ನರಾದ ಋಷಿಗಳು । **ಸ್ವಸ್ತಯೇ**—ತಮ್ಮ ಕಲ್ಯಾಣಕ್ಕಾಗಿ । **ವಾಚಂ**—ಸ್ತುತಿಯನ್ನು । **ಅಕ್ರತ**—ಸಿರ್ಮಿಸುತ್ತಾರೆ. **ದೇವಾಸಃ**—ಎಲೈ ದೇವತೆಗಳೇ । **ಪ್ರೀತಾ ಇವ**—ಸಮ್ಮುಲ್ಲಿ ಪ್ರೇಮವನ್ನಿಟ್ಟಿರುವ । **ಜ್ಞಾತಯಃ**—ನಮ್ಮ ಬಂಧುಗಳಂತೆ । **ಕಾಮ್ಯಂ**—ನಮ್ಮ ಇಷ್ಟಾರ್ಥವನ್ನು । **ಏತ್ಯ**—ನೆರವೇರಿಸಲು ಬಂದು । **ಅಸ್ಮೇ**—ನಮ್ಮಲ್ಲಿ । **ವಸು**—ಧನವನ್ನು । **ಅವ ಧೂನುತ**—ಸ್ಥಾಪಿಸಿರಿ.

ಭಾವಾರ್ಥ

ಹಿಂದಿನ ಕಾಲವ ಋಷಿಗಳಂತೆಯೂ, ತಮ್ಮ ಪಿತೃವಾದ ವಸಿಷ್ಠನಂತೆಯೂ, ದೇವತೆಗಳನ್ನು ಪ್ರಶಂಸಿಸುವ ವಸಿಷ್ಠವಂಶೋತ್ಪನ್ನರಾದ ಋಷಿಗಳು ತಮ್ಮ ಕಲ್ಯಾಣಕ್ಕಾಗಿ ಸ್ತುತಿಯನ್ನು ನಿರ್ಮಿಸುತ್ತಾರೆ. ಎಲೈ ದೇವತೆಗಳೇ, ನೀವು ನನ್ನಲ್ಲಿ ಪ್ರೇಮವನ್ನಿಟ್ಟಿರುವ ನನ್ನ ಬಂಧುಗಳಂತೆ ನನ್ನ ಇಷ್ಟಾರ್ಥವನ್ನು ನೆರವೇರಿಸಲು ಬಂದು ನನ್ನಲ್ಲಿ ಧನವನ್ನು ಸ್ಥಾಪಿಸಿರಿ.(ನಮಗೆ ಧನವನ್ನು ಕೊಡಿ)

English Translation

The Vasishthas like their progenitor have uttered praise glorifying the gods like (former) Rishis for their well-being ; having come to us, gods, at our desire, bestow wealth upon us like affectionate relations.

ಸಂಹಿತಾಪಾಠಃ

ದೇವಾನ್ವಸಿಷ್ಠೋ ಅಮೃತಾನ್ವವಂದೇ ಯೇ ವಿಶ್ವಾ ಭುವನಾಭಿ ಪ್ರತಸ್ಥುಃ ।
ತೇ ನೋ ರಾಸಂತಾಮುರುಗಾಯಮದ್ಯ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥ ೧೫ ॥

ಪದಪಾಠಃ

ದೇವಾನ್ । ವಸಿಷ್ಠಃ । ಅಮೃತಾನ್ । ವವಂದೇ । ಯೇ । ವಿಶ್ವಾ । ಭುವನಾ । ಅಭಿ । ಪ್ರತಸ್ಥುಃ ।
ತೇ । ನಃ । ರಾಸಂತಾಂ । ಉರುಗಾಯಂ । ಅದ್ಯ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥೧೫॥

ಸಾಯಣಭಾಷ್ಯಂ

ಏಷರ್ಕ್ ಪೂರ್ವಮೇವ ವ್ಯಾಖ್ಯಾಯಿ ॥ 534 ನೇ ಪುಟವನ್ನು ನೋಡಿ.

ಪ್ರತಿಪದಾರ್ಥ

ಯೇ—ಯಾವ ದೇವತೆಗಳು । ವಿಶ್ವಾ ಭುವನಾ—ಸಕಲ ಲೋಕಗಳನ್ನೂ । ಅಭಿ ಪ್ರತಸ್ಥುಃ—ತಮ್ಮ ತೇಜಸ್ಸುಗಳಿಂದ ವ್ಯಾಪಿಸಿರುವರೋ ಅಂತಹ । ಅಮೃತಾನ್—ಅಮರ್ತ್ಯರಾದ। ದೇವಾನ್—ದೇವತೆಗಳನ್ನು। ವಸಿಷ್ಠಃ—ವಸಿಷ್ಠವಂಶೋತ್ಪನ್ನನಾದ ಈ ಋಷಿಯು । ವವಂದೇ—ಸ್ತುತಿಪೂರ್ವಕವಾಗಿ ನಮಸ್ಕರಿಸುತ್ತಾನೆ । ತೇ—ಅದೇ ದೇವತೆಗಳು । ಅದ್ಯ—ಇಂದು । ನಃ....ನಮಗೆ । ಉರುಗಾಯಂ—ಅತ್ಯಂತ ಪ್ರಶಸ್ಯವಾದ ಅನ್ನವನ್ನು। ರಾಸಂತಾಂ—ಕೊಡಲಿ । (ಎಲೈ ದೇವತೆಗಳೇ) ಯೂಯಂ--ನೀವು । ಸ್ವಸ್ತಿಭಿಃ—ಕಲ್ಯಾಣಾತ್ಮಕವಾದ ರಕ್ಷಣೆಗಳಿಂದ । ನಃ—ನಮ್ಮನ್ನು । ಸದಾ—ಯಾವಾಗಲೂ । ಪಾತ—ರಕ್ಷಿಸಿರಿ.

ಭಾವಾರ್ಥ

ಸಕಲ ಲೋಕಗಳನ್ನೂ ತಮ್ಮ ತೇಜಸ್ಸುಗಳಿಂದ ವ್ಯಾಪಿಸಿರುವವರೂ, ಅಮರ್ತ್ಯರೂ ಆದ ದೇವತೆಗಳನ್ನು ವಸಿಷ್ಠವಂಶೋತ್ಪನ್ನನಾದ ಈ ಋಷಿಯು ಸ್ತುತಿಪೂರ್ವಕವಾಗಿ ನಮಸ್ಕರಿಸಿದ್ದಾನೆ. ಅದೇ ದೇವತೆಗಳು ಇಂದು ನಮಗೆ

ಅತ್ಯಂತ ಪ್ರಶಸ್ಯವಾದ ಅನ್ನವನ್ನು ಕೊಡಲಿ. ಎಲೈ ದೇವತೆಗಳೇ, ನೀವು ಕಲ್ಯಾಣಾತ್ಮಕವಾದ ರಕ್ಷಣೆಗಳಿಂದ ನಮ್ಮನ್ನು ಯಾವಾಗಲೂ ರಕ್ಷಿಸಿರಿ.

English Translation

(Descendant of) Vasistha, I have glorified the immortal gods who preside over all the worlds; may they this day bestow upon us widely-famed food; do you always cherish us with blessings.

ಅರವತ್ತೇಳನೆಯ ಸೂಕ್ತ

ಪೀಠಿಕೆ

ಈ ಸೂಕ್ತಕ್ಕೂ ಮುಂದಿನ ಸೂಕ್ತಕ್ಕೂ ಬೃಹಸ್ಪತಿಯು ದೇವತೆಯು. ಯಾಸ್ಕರು ತಮ್ಮ ನಿರುಕ್ತದಲ್ಲಿ ಬೃಹಸ್ಪತಿ ಶಬ್ದದ ನಿರ್ವಚನವನ್ನು ವಿವರಿಸುತ್ತಾ—

ಬೃಹಸ್ಪತಿಃ ಬೃಹತಃ ಪಾತಾ ವಾ ಪಾಲಯಿತಾ ವಾ ।

(ನಿ. ೧೦-೧೧)

ಎಂದು ಹೇಳಿದ್ದಾರೆ. ಇದಕ್ಕೆ ವಾಖ್ಯಾನಕಾರರಾದ ದುರ್ಗಾಚಾರ್ಯರು—ಬೃಹಸ್ಪತಿಃ ಕಸ್ಮಾತ್? **ಬೃಹತಃ ಪಾತಾ ವಾ ಪಾಲಯಿತಾ ವಾ । ಬೃಹತಃ ಮಹತೋಽಸ್ಯ ಜಗತಃ ಉದಕಸ್ಯ ವಾ ಪಾತಾ ರಕ್ಷಿತಾ ಪಾಲಯಿತಾ ಅಪಿ ರಕ್ಷಿತೈವ ಧಾತ್ವನ್ಯತ್ವಮರ್ಥೈಕತ್ವಂ** ॥ ಎಂದರೆ ದೊಡ್ಡದಾದ ಜಗತ್ತಿನ ಅಥವಾ ಉದಕದ ಸಂರಕ್ಷಕನು, ಕಾಪಾಡುವವನು. ಪತಿಶಬ್ದದ ಅರ್ಥವನ್ನು ಸೂಚಿಸುವುದಕ್ಕೆ ಪಾತಾ, ಪಾಲಯಿತಾ ಎಂಬ ಬೇರೆಬೇರೆ ಧಾತುಗಳಿಂದ ನಿಷ್ಪನ್ನವಾದ ಶಬ್ದಗಳಿದ್ದರೂ ಅರ್ಥವು ಮಾತ್ರ ಒಂದೇ ಆಗಿರುವುದೆಂದು ಹೇಳಿರುವರು. ಸಾಯಣರು ಅನೇಕ ಸಂದರ್ಭಗಳಲ್ಲಿ ಬೃಹತಃ ಪಾತಾ ಎಂಬುವುದನ್ನು ವಿವರಿಸುವಾಗ ಬೃಹತಃ ಎಂಬ ಶಬ್ದಕ್ಕೆ ಬೃಹತಃ ಯಜ್ಞಕರ್ಮಣಃ ಅಥವಾ ವೈಷ್ಟ್ಯಖ್ಯಕರ್ಮಣಃ ಎಂದರೆ ಯಜ್ಞರೂಪವಾದ ಕರ್ಮದ ಅಥವಾ ವೃಷ್ಟಿಪ್ರದಾನರೂಪವಾದ ಕರ್ಮದ ಎಂದು ಅರ್ಥವನ್ನು ಹೇಳಿರುವರು. ಬೃಹಸ್ಪತಿಯು ದೇವತೆಗಳಿಗೆ ಪುರೋಹಿತನಾಗಿ ಯಜ್ಞಕರ್ಮವನ್ನು ನೆರವೇರಿಸುವುದರಿಂದಲೂ, ಮನುಷ್ಯರಿಗೆ ಅವಶ್ಯಕವಾದ ವೃಷ್ಟಿಯನ್ನುಂಟುಮಾಡುವುದರಿಂದಲೂ ಈ ಎರಡು ವಿಧವಾದ ವಿಶೇಷಣಗಳೂ ಸಹಜವಾಗಿರುವುವು. ಬೃಹಸ್ಪತಿಯ ಪುರೋಹಿತತ್ವವನ್ನೂ ವೃಷ್ಟಿಪ್ರದಾನವನ್ನು ವರ್ಣಿಸುವ—

ಯದ್ದೇವಾಸಿಃ ಶಂತನವೇ ಪುರೋಹಿತೋ ಹೋತ್ರಾಯ ವೃತಃ ಕೃಪಯನ್ನದೀಧೇತ್ ।
ದೇವಶ್ರುತಂ ವೃಷ್ಟಿವನಿಂ ರರಾಣೋ ಬೃಹಸ್ಪತಿರ್ವಾಚಮಸ್ಮಾ ಅಯಚ್ಛೆತ್ ॥

(ಋ. ಸಂ. ೧೦-೯೮-೭)

ಎಂಬ ಋಕ್ಕನ್ನು ಯಾಸ್ಕರು ಉದಾಹರಣೆಗಾಗಿ ಕೊಟ್ಟಿರುವರು. ಈ ಋಕ್ಕಿನ ನಿರ್ವಚನದಲ್ಲಿ **ಬೃಹಸ್ಪತಿರ್ಬ್ರಹ್ಮಾಸೀತ್ ಸೋಽಸ್ಮೈ ವಾಚಮಯಚ್ಛೆತ್** ಎಂದರೆ ಬೃಹಸ್ಪತಿಯು ಶಂತನುವೆಂಬ ರಾಜನು ಮಾಡಿದ ಯಜ್ಞದಲ್ಲಿ ಬ್ರಹ್ಮನೆಂಬ ಪುರೋಹಿತನಾಗಿ ವಾಕ್ಯರೂಪವಾದ ಮಂತ್ರವನ್ನು ಉಪದೇಶಿಸಿದನೆಂದೂ ಆ ಮಂತ್ರದಿಂದ ಯಜಮಾನನು ಸ್ತುತಿಸಲಾಗಿ ವೃಷ್ಟಿವುಂಟಾಯಿತೆಂದೂ ವರ್ಣಿತವಾಗಿದೆ. ಇದಲ್ಲದೆ ಯಜುರ್ವೇದಾದಿಗಳಲ್ಲಿ—

ಬೃಹಸ್ಪತಿರ್ದೇವಾನಾಂ ಪುರೋಹಿತ ಆಸೀಚ್ಛಂಡಾಮರ್ಕಾವಸುರಾಣಾಂ ।

(ತೈ. ಸಂ. ೬-೪-೧೦-೧)

ಬೃಹಸ್ಪತಿಯು ದೇವತೆಗಳಿಗೆ ಪುರೋಹಿತನಾಗಿದ್ದನು. ಶಂಡಾಮರ್ಕರೆಂಬುವರು ಅಸುರರಿಗೆ ಪುರೋಹಿತರಾಗಿದ್ದರು ಎಂದು ಹೇಳಿದೆ.

ಬ್ರಹ್ಮ ವೈ ದೇವಾನಾಂ ಬೃಹಸ್ಪತಿರ್ಬ್ರಹ್ಮಣೈವೈನಮಭಿಚರತಿ ।

(ತೈ. ಸಂ. ೨-೨-೯-೧)

ಬೃಹಸ್ಪತಿಯು ದೇವತೆಗಳು ಮಾಡಿದ ಯಜ್ಞದಲ್ಲಿ ಬ್ರಹ್ಮನೆಂಬ ಋತ್ವಿಜನಾಗಿ ಯಜ್ಞವನ್ನು ನೆರವೇರಿಸಿದನು ಎಂದು ಹೇಳಿದೆ.

ತಸ್ಮೈ ವಿಶಃ ಸ್ವಯಮೇವಾ ನಮಂತೇ ಯಸ್ಮಿನ್ ಬ್ರಹ್ಮಾ ರಾಜನಿ ಪೂರ್ವ ಏತಿ ।

(ಋ. ಸಂ. ೪-೫೦-೪)

ಅವಸ್ಯವೇ ಯೋ ವರಿವಃ ಕೃಣೋತಿ ಬ್ರಹ್ಮಣೇ ರಾಜಾ ತಮವಂತಿ ದೇವಾಃ ।

(ಋ. ಸಂ. ೪-೫೦-೯)

ಸೋಮಂ ರಾಜಾನಮವಸೇऽಗ್ನಿಂ ಗೀರ್ಭಿರ್ಹವಾಮಹೇ ।
ಆದಿತ್ಯಾನ್ವಿಷ್ಣುಂ ಸೂರ್ಯಂ ಬ್ರಹ್ಮಾಣಂ ಚ ಬೃಹಸ್ಪತಿಂ ॥

(ಋ. ಸಂ. ೧೦-೧೪೧-೩)

ಇತ್ಯಾದಿ ಋಕ್ಕುಗಳಲ್ಲಿ ಬೃಹಸ್ಪತಿಯು ಬ್ರಹ್ಮನೆಂಬ ಋತ್ವಿಜನು ಎಂದು ವರ್ಣನೆ ಇದೆ.

ಋಗ್ವೇದದಲ್ಲಿ ಬೃಹಸ್ಪತಿಗೆ ಪ್ರಾಮುಖ್ಯವಾದ ಸ್ಥಾನವೇ ಇದೆ. ಹನ್ನೊಂದು ಸೂಕ್ತಗಳಲ್ಲಿ ಸ್ತುತನಾಗಿರುವು ದಲ್ಲದೇ ಎರಡು ಸೂಕ್ತಗಳಲ್ಲಿ (ಋ. ಸಂ. ೪-೪೯ ; ೭-೯೭) ಇಂದ್ರನ ಜತೆಯಲ್ಲಿ ದ್ವಂದ್ವದೇವತೆಯಾಗಿಯೂ ಸ್ತುತನಾಗಿದಾನೆ. ಬೃಹಸ್ಪತಿ ಶಬ್ದವು ಋಗ್ವೇದದಲ್ಲಿ ಸುಮಾರು ೧೩೦ ಸಲ ಪಠಿತವಾಗಿದೆ. ಅನೇಕ ಸಂದರ್ಭಗಳಲ್ಲಿ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿ ದೇವತೆಗಳು ಒಂದೇ ಮಂತ್ರದಲ್ಲಿ ಪರಸ್ಪರ ವಿನಿಮಯವಾಗಿ ಸ್ತುತರಾಗಿದಾರೆ. ಆದರೂ ಬೃಹಸ್ಪತಿಯೇ ಬೇರೆ, ಬ್ರಹ್ಮಣಸ್ಪತಿಯೇ ಬೇರೆ ದೇವತೆಗಳು.

ಕೆಲವು ಪಾಶ್ಚಾತ್ಯಪಂಡಿತರು, ಆಧುನಿಕ ವಿದ್ವಾಂಸರಲ್ಲಿ ಕೆಲವರೂ ಸಹ ಋ. ಸಂ. ೨-೨೩ ನೆಯ ಸೂಕ್ತದಲ್ಲಿ ಬೃಹಸ್ಪತಿ ಮತ್ತು ಬೃಹ್ಮಣಸ್ಪತಿಗಳು ಪರಸ್ಪರ ವಿನಿಮಯವಾಗಿ ಸ್ತುತಿಸಲ್ಪಟ್ಟಿರುವುದರಿಂದ ಇಬ್ಬರೂ ಒಂದೇ ದೇವತೆ ಯೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಆದರೆ ಯಾಸ್ಕರು, ಶೌನಕರು, ಸಾಯಣರು ಮೊದಲಾದ ಪುರಾತನ ವೇದಭಾಷ್ಯಕಾರರು ಬೃಹಸ್ಪತಿಯೇ ಬೇರೆ, ಬೃಹ್ಮಣಸ್ಪತಿಯೇ ಬೇರೆ ಎಂದು ಸ್ಪಷ್ಟವಾಗಿ ಹೇಳಿರುವರು. ಮೇಲೆ ಹೇಳಿದ ಋ. ಸಂ. ೨-೨೩ ನೆಯ ಸೂಕ್ತದಲ್ಲಿರುವ ೧೯ ಋಕ್ಕುಗಳಲ್ಲಿ ೧, ೫, ೯, ೧೧, ೧೭, ೧೯ ಎಂಬ ೬ ಋಕ್ಕುಗಳು ಮಾತ್ರ ಬೃಹಸ್ಪತಿಯನ್ನು ಸ್ತುತಿಸುತ್ತವೆ. ಉಳಿದ ೧೩ ಋಕ್ಕುಗಳು ಬ್ರಹ್ಮಣಸ್ಪತಿಯ ಪರವಾಗಿವೆ. ಯಾಸ್ಕರೂ ಸಹ ಬೃಹಸ್ಪತಿ ಶಬ್ದಕ್ಕೂ ಬ್ರಹ್ಮಣಸ್ಪತಿ ಶಬ್ದಕ್ಕೂ ಬೇರೆ ಬೇರೆ ನಿರ್ವಚನವನ್ನು ಹೇಳಿದಾರೆ. ಆದುದರಿಂದ ಬೃಹಸ್ಪತಿಯೇ ಬೇರೆ ಬ್ರಹ್ಮಣಸ್ಪತಿಯೇ ಬೇರೆ.

ಇತರ ದೇವತೆಗಳಿಗಿಂತ ತೀರಾ ಭಿನ್ನವಾದ ವೈಶಿಷ್ಟ್ಯವು ಬೃಹಸ್ಪತಿಗೆ ಇದೆ. ಇತರ ದೇವತೆಗಳೆಲ್ಲಾ ಪ್ರಕೃತಿ ಅಥವಾ ಪ್ರಕೃತಿಶಕ್ತಿಯ ರೂಪವಿಶೇಷಗಳಾದರೆ ಬೃಹಸ್ಪತಿಯು ಮಾನವನ ನೈತಿಕ ಮತ್ತು ಧಾರ್ಮಿಕ ಜೀವನಕ್ಷೇತ್ರಕ್ಕೆ ಸಂಬಂಧಿಸಿದಂತಿದೆ. ಸ್ತುತಿಸ್ತೋತ್ರ ಅಥವಾ ಪ್ರಾರ್ಥನೆಗೆ ರಕ್ಷಕನಾದ ಈ ದೇವತೆಯು ದೇವತೆಗಳ ಮನಸ್ಸಿನ ನಿರ್ಧಾರ, ಸಂಕಲ್ಪ ಅಥವಾ ಶಕ್ತಿಯಮೇಲೆ ತನ್ನ ಪ್ರಭಾವವನ್ನು ಬೀರುವನೆಂಬುವುದಕ್ಕೆ ಋಗ್ವೇದದಲ್ಲಿ ಅನೇಕ ಉದಾಹರಣೆ ಗಳಿವೆ. ಋಗ್ವೇದ ೧೦ ನೆಯ ಮಂಡಲದ ೯೮ ನೆಯ ಸೂಕ್ತದಲ್ಲಿ ದೇವಾಪಿ ಮತ್ತು ಶಂತನು ಎಂಬ ಕುರುವಂಶದ

ರಾಜಪುತ್ರರ ವಿಷಯಕವಾದ ಒಂದು ಇತಿಹಾಸವರ್ಣನೆ ಇದೆ. ಅದರಲ್ಲಿ ಬೃಹಸ್ಪತಿಯು ಪಾತ್ರವು ಬಹುಮುಖ್ಯವಾದು ದೆಂಬುದನ್ನು ನಿರುಕ್ತಕಾರರು ಈರೀತಿ ವರ್ಣಿಸಿದ್ದಾರೆ—

ಆತ್ರೇತಿಹಾಸಮಾಚಕ್ಷತೇ। ದೇವಾಪಿಶ್ಚಾಷ್ಟಿಷೇಣಃ ಶಂತನುಶ್ಚ ಕೌರವೌ ಭ್ರಾತರೌ ಬಭೂವತುಃ। ಸ ಶಂತನುಃ ಕನೀಯಾನಭಿಷೇಚಯಾಂಚಕ್ರೇ। ದೇವಾಪಿಸ್ತಪಃ ಪ್ರತಿಪೇದೇ। ತತಃ ಶಂತನೋ ರಾಜ್ಯೇ ದ್ವಾದಶವರ್ಷಾಣಿ ದೇವೋ ನ ವವರ್ಷ। ತಮೂಚು ರ್ಬ್ರಾಹ್ಮಣಾ ಅಧರ್ಮಸ್ತ್ವಯಾಚರಿತೋ ಜ್ಯೇಷ್ಠಂ ಭ್ರಾತರಮಂತರಿತ್ಯಾಭಿಷೇಚಿತಂ ತಸ್ಮಾತ್ತ್ವೇ ದೇವೋ ನ ವರ್ಷತೀತಿ। ಸ ಶಂತನುರ್ದೇವಾಪಿಂ ಶಿಶಿಕ್ಷ ರಾಜ್ಯೇನ। ತಮುವಾಚ ದೇವಾಪಿಃ ಪುರೋಹಿತಸ್ತ್ವೇವಾಸಾನಿ ಯಾಜಯಾನಿ ಚ ತ್ವೇತಿ॥

(ನಿ. ೨ ೧೧)

ಪೂರ್ವಕಾಲದಲ್ಲಿ ಕುರುವಂಶದಲ್ಲಿ ಋಷ್ಟಿಷೇಣನೆಂಬ ರಾಜನಿಗೆ ದೇವಾಪಿ, ಶಂತನು ಎಂಬ ಈರ್ವರು ಪುತ್ರರಿದ್ದರು. ಅದರಲ್ಲಿ ದೇವಾಪಿಯೆಂಬುವನು ಹಿರಿಯನು, ಶಂತನು ಕಿರಿಯವನು. ಇವರ ತಂದೆಯಾದ ಋಷ್ಟಿಷೇಣನು ವೃತನಾದ ಬಳಿಕ ಅವನ ಹಿರಿಯಮಗನಾದ ದೇವಾಪಿ ಎಂಬುವನು ರಾಜನಾಗಬೇಕೆಂದು ಇಚ್ಛಿಸಿದನು. ಆದರೆ ಇವನ ತಮ್ಮನಾದ ಶಂತನುವು ಅದಕ್ಕೆ ಅವಕಾಶಕೊಡದೆ ತಾನೇ ರಾಜ್ಯಕ್ಕೆ ದೊರೆಯಾಗಬೇಕೆಂದು ಬಯಸಿ ಅಣ್ಣನಾದ ದೇವಾಪಿಯನ್ನು ಓಡಿಸಿ ತಾನೇ ರಾಜ್ಯವಾಳಲು ಮೊದಲುಮಾಡಿದನು. ಅಣ್ಣನಾದ ದೇವಾಪಿಯು ವ್ಯಾಕುಲಪ್ರಭೃವನಾಗಿ ಕಾಡಿಗೆ ಹೋಗಿ ತಪಸ್ಸನ್ನು ಮಾಡುತ್ತಾ ಕಾಲಕಳೆಯುತ್ತಿದ್ದನು. ಹೀಗಿರಲು ಇವನ ದೇಶದಲ್ಲಿ ೧೨ ವರ್ಷಗಳವರಿಗೆ ಮಳೆಯೇ ಬರದೆ ದುರ್ಭಿಕ್ಷವು ಪ್ರಾಪ್ತವಾಯಿತು. ಆಗ ರಾಜನಾದ ಶಂತನುವು ಇದಕ್ಕೆ ಏನುಮಾಡಬೇಕೆಂದು ಆಲೋಚಿಸಿ ಬ್ರಾಹ್ಮಣರ ಸಲಹೆಯನ್ನು ಕೇಳಿದನು. ಅದಕ್ಕೆ ಬ್ರಾಹ್ಮಣರು ರಾಜನನ್ನು ಕುರಿತು—ಧರ್ಮಶಾಸ್ತ್ರಪ್ರಕಾರ ರಾಜನ ಹಿರಿಯಮಗನೇ ರಾಜ್ಯಕ್ಕೆ ಅಧಿಕಾರಿಯು. ಆದುದರಿಂದ ರಾಜ್ಯಭಾರವನ್ನು ನಿನ್ನ ಅಣ್ಣನಾದ ದೇವಾಪಿಯೇ ಮಾಡ ಬೇಕಾಗಿದ್ದಿತು. ಆದರೆ ನೀನು ಅದಕ್ಕವಕಾಶಕೊಡದೆ ಅವನನ್ನು ಓಡಿಸಿ ರಾಜ್ಯವನ್ನು ಆಕ್ರಮಿಸಿರುವೆ. ಹೀಗೆ ನೀನು ಅಧರ್ಮವನ್ನು ಆಚರಿಸುತ್ತಿರುವುದರಿಂದ ವೃಷ್ಟಿದೇವನು ನಿನ್ನ ರಾಜ್ಯದಲ್ಲಿ ಮಳೆಗರೆಯುವುದಿಲ್ಲ ಎಂದು ಹೇಳಿದರು. ಶಂತನುರಾಜನು ತಾನು ಮಾಡಿದ ಅನ್ಯಾಯಕ್ಕೆ ಪಶ್ಚಾತ್ತಾಪಪಟ್ಟು ವನದಲ್ಲಿ ತಪಸ್ಸುಮಾಡುತ್ತಿದ್ದ ತನ್ನ ಅಣ್ಣನಾದ ದೇವಾಪಿಯನ್ನು ಕರೆಸಿ ಅವನಿಗೆ ರಾಜ್ಯವನ್ನು ಒಪ್ಪಿಸಿದನು. ಆದರೆ ದೇವಾಪಿಯು ರಾಜ್ಯವು ತನಗೆ ಬೇಡವೆಂದೂ ತಾನು ವನದಲ್ಲಿ ತಪಸ್ಸುಮಾಡುತ್ತಾ ನಿವೃತ್ತಿಮಾರ್ಗವನ್ನು ಆಶ್ರಯಿಸುವೆನೆಂದೂ ಹೇಳಿ, ರಾಜ್ಯದಲ್ಲಿ ಉಂಟಾಗಿರುವ ಅನಾವೃಷ್ಟಿಪರಿಹಾರಾರ್ಥವಾಗಿ ಶಂತನುವು ಯಜ್ಞಮಾಡಬೇಕೆಂದೂ ಆದರಲ್ಲಿ ತಾನು ಪೌರೋಹಿತ್ಯವನ್ನು ವಹಿಸಿ ವೃಷ್ಟಿ ಯಾಗಲು ಸಹಾಯಮಾಡುವೆನೆಂದೂ ಹೇಳಿದನು. ಅದಕ್ಕೆ ರಾಜನು ಒಪ್ಪಲು ದೇವಾಪಿಯು ಅವನ ಯಜ್ಞದಲ್ಲಿ ಹೋತೃವೆಂಬ ಋತ್ವಿಜನ ಪಾತ್ರವನ್ನು ವಹಿಸಿದನು. ಬೃಹಸ್ಪತಿಯು ಬ್ರಹ್ಮನೆಂಬ ಋತ್ವಿಜನಾದನು. ವೃಷ್ಟಿವರ್ಷಣ ಕ್ಕಾಗಿ ಮಾಡುತ್ತಿರುವ ಆ ಯಜ್ಞದಲ್ಲಿ ಹೋತೃವಾದ ದೇವಾಪಿಯು ಬ್ರಹ್ಮನಾದ ಬೃಹಸ್ಪತಿಯನ್ನು ಕುರಿತು ಎಲೈ ಬೃಹಸ್ಪತಿಯೇ, ನಿನಗೆ ದೇವತೆಗಳ ಮನಸ್ಸಿನ ಮೇಲೆ ಬಹಳವಾದ ಪ್ರಭಾವವಿರುವುದು. ಆದುದರಿಂದ ಅವರನ್ನು ಒಲಿಸಿಕೊಳ್ಳುವ ಮಂತ್ರಗಳನ್ನು ನನಗೆ ತಿಳಿಸಬೇಕು ಎಂದು ಪ್ರಾರ್ಥಿಸಲಾಗಿ ಬೃಹಸ್ಪತಿಯು ಹಾಗೇ ಆಗಲೆಂದು ವೃಷ್ಟಿವರ್ಷಣಕ್ಕೆ ಬೇಕಾದ ದೇವತೆಗಳ ಪ್ರಾರ್ಥನೆಗಳನ್ನೊಳಗೊಂಡ ಮಂತ್ರಗಳನ್ನು ಹೋತೃವಾದ ದೇವಾಪಿಗೆ ಹೇಳಿಕೊಟ್ಟನು. ಆ ಮಂತ್ರಗಳಿಂದ ದೇವತೆಗಳನ್ನುದ್ದೇಶಿಸಿ ಹೋಮಮಾಡಲು ಯಥೇಚ್ಛವಾಗಿ ವೃಷ್ಟಿಯಾಯಿತು

ಎಂದು ಹೇಳಿದೆ. ಆದುದರಿಂದ ಈ ಸೂಕ್ತಕ್ಕೆ ವೃಷ್ಟಿಕಾಮಸೂಕ್ತವೆಂದೂ ಹೆಸರು. ಈ ವಿಷಯವು ಕೆಲವು ವ್ಯತ್ಯಾಸಗಳೊಡನೆ ವಿಷ್ಣುಪುರಾಣ ೪-೫೦-೭ ; ಮಹಾಭಾರತ ಆದಿಪರ್ವ ; ಭಾಗವತಪುರಾಣ ೯-೨೨-೧೪ ರಿಂದ ೧೭; ಇತ್ಯಾದಿ ಪುರಾಣಗ್ರಂಥಗಳಲ್ಲಿಯೂ ಉಕ್ತವಾಗಿದೆ.

ಋ. ಸಂ. ೧೦ ನೆಯ ಮಂಡಲದಲ್ಲಿ ೧೦೮ ನೆಯ ಸೂಕ್ತದ ಮತ್ತೊಂದು ಉಪಾಖ್ಯಾನವಿರುವುದು. ಪಣಿಗಳೆಂಬ ಅಸುರರು ದೇವತೆಗಳ ಗೋವುಗಳನ್ನು (ಉದಕವಿಶಿಷ್ಟಗಳಾದ ಮೇಘಗಳನ್ನು) ಅಪಹರಿಸಿ ಅಭೇದ್ಯವಾದ ಒಂದು ದುರ್ಗದಲ್ಲಿ ಬಚ್ಚಿಟ್ಟಿದ್ದರು. ಅದನ್ನು ಹುಡುಕುವಂತೆ ಇಂದ್ರನು ದೇವಶುನಿಯಾದ ಸರಮೆಯನ್ನು ಕಳುಹಿಸಿದನು. ಆ ಸರಮೆಯು ಪಣಿಗಳಲ್ಲಿಗೆ ಬಂದು ಅವರೊಡನೆ ವಾಗ್ವಾದದನ್ನು ಬೆಳೆಸಿ ಅಪಹರಿಸಿದ್ದ ಗೋವುಗಳನ್ನು ಹಿಂದಕ್ಕೆ ಕೊಡುವಂತೆ ಕೇಳಲು ಆ ಪಣಿಗಳು ಇಂದ್ರನ ಶಕ್ತಿಯೆಷ್ಟರದು ? ತಾವು ಮಹಾವೀರರು ಮತ್ತು ತಮ್ಮ ಆಯುಧಗಳು ತುಂಬಾ ಹರಿತವಾದವು. ಆದ್ದರಿಂದ ತಮ್ಮನ್ನು ಗೆಲ್ಲಲು ದೇವತೆಗಳಿಂದ ಸಾಧ್ಯವಿಲ್ಲವೆಂದೂ, ಗೋವುಗಳನ್ನು ಇಟ್ಟಿರುವ ಸ್ಥಳವನ್ನು ತಿಳಿಯಲು ದೇವತೆಗಳಿಗೂ ಸಾಧ್ಯವಿಲ್ಲವೆಂದೂ, ಆದುದರಿಂದ ಸರಮೆಯು ದೇವತೆಗಳ ಪಕ್ಷವನ್ನು ಬಿಟ್ಟು ತಮ್ಮ ಗುಂಪಿಗೇ ಸೇರಿದಲ್ಲಿ ಬೇಕಾದ ಐಶ್ವರ್ಯಾದಿಗಳನ್ನು ಕೊಡುವುವೆಂದೂ, ನಾನಾವಿಧವಾಗಿ ಪ್ರೇರಿಸಿದರೂ ಸರಮೆಯು ಅದಕ್ಕೊಪ್ಪದೆ ಅಲ್ಲಿಂದ ಹಿಂತಿರುಗಿ ಆ ವಿಷಯವನ್ನೆಲ್ಲಾ ದೇವತೆಗಳಿಗೆ ತಿಳಿಸಿದಳು. ಆಗ ಬೃಹಸ್ಪತಿಯು ತನ್ನ ಸಾಮರ್ಥ್ಯದಿಂದ ಆ ಗೋವುಗಳನ್ನು ಬಚ್ಚಿಟ್ಟಿದ್ದ ಸ್ಥಳವನ್ನು ಪತ್ತೆಮಾಡಿದನು. ಬಳಿಕ ದೇವತೆಗಳು ಅವರನ್ನು ನಿಗ್ರಹಿಸಿ ಗೋವುಗಳನ್ನು ಹಿಂದಕ್ಕೆ ತಂದರು ಎಂಬ ಉಪಾಖ್ಯಾನವಿದೆ.

ಇಂತಹ ಅನೇಕ ಸಾಹಸಕಾರ್ಯಗಳಲ್ಲಿ ಬೃಹಸ್ಪತಿಯ ಪಾತ್ರವು ಬಹಳ ಮುಖ್ಯವಾಗಿದೆ. ಆದರಲ್ಲಿಯೂ ಮಾನವರಿಗೆ ವೃಷ್ಟಿ ಬೇಕಾದಾಗ ಸಹಾಯವನ್ನಾಡಲು ಬೃಹಸ್ಪತಿಯ ಸಹಾಯವು ಅತ್ಯವಶ್ಯಕವಾಗಿದೆ. ಈ ವಿಧವಾದ ಪ್ರಾರ್ಥನೆಯೇ ಬೃಹಸ್ಪತಿದೇವತಾಕವಾದ ಸೂಕ್ತಗಳಲ್ಲಿ ವಿಶೇಷವಾಗಿ ಕಂಡುಬರುವುದು.

ಋಗ್ವೇದದಲ್ಲಿ ವರ್ಣಿಸಿರುವಂತೆ ಬೃಹಸ್ಪತಿಯ ಗುಣಗಳು, ಕಾರ್ಯಸಾಧನೆಗಳು ಯಾವರೀತಿ ಇವೆಯೆಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ. ಬೃಹಸ್ಪತಿಯು ದ್ಯಾವಾಪೃಥಿವಿಗಳಿಂದ ಜನಿಸಿದವನು ಮತ್ತು ಅವರ ಮಹತ್ತ್ವದಿಂದಲೇ ಅವನ ಪೋಷಣೆಯಾಗಿದೆ (ಋ. ಸಂ. ೭-೯೭-೮). ಆದರೆ ಅವನನ್ನು ತ್ವಷ್ಟೃವು ಉತ್ಪತ್ತಿಮಾಡಿದನೆಂದು ಒಂದುಕಡೆ (೨-೨೩-೧೭) ಹೇಳಿದೆ. ಅವನಿಗೆ ದೇವತೆಗಳ ಜನಕನೆಂದು ಹೆಸರಿದೆ (೬-೭೬-೩) ; ಕರ್ಮಾರನ ಸುತ್ತಿಗೆಯ ಏಟಿನಿಂದ ಅಗ್ನಿಕಣಗಳು ಹಾರುವಂತೆ ದೇವತೆಗಳು ಇವನಿಂದ ಉತ್ಪನ್ನರಾದರು (೧೦-೭೨-೮) ಎಂದೂ ಹೇಳಿದೆ.

ಅವನಿಗೆ ಬ್ರಹ್ಮ (ಬ್ರಹ್ಮ ಎಂಬ ಋತ್ವಿಜ) ನೆಂದು ಹೆಸರಿದೆ (೧೦-೧೪೧-೩). ಋತ್ವಿಜರೊಡನೆ ಅವನಿಗೆ ಸಂಬಂಧವಿದೆ (೭-೧೦-೪; ೧೦-೧೪-೩) ಅಂಗಿರಸನೆಂತಲೂ ಹೆಸರಿದೆ (೪-೪೦-೧; ೪-೭೩-೧, ೧೦-೪೭-೬) ಸ್ತುತಿವಾಕ್ಯಗಳನ್ನು ರಚಿಸುವವನು, ಉಚ್ಚರಿಸುವವನು, ಅವುಗಳಿಗೆ ಅಧಿಪತಿ, ಪ್ರೇರಕ (೨-೨೩-೧, ೨; ೧-೪೦-೫, ೧೦-೯೪-೭) , ಮಂತ್ರದಿಂದಲೇ ತನ್ನ ಉದ್ದೇಶಗಳನ್ನೆಲ್ಲಾ ಸಾಧಿಸುತ್ತಾನೆ (೨-೨೪-೩); ಯಜ್ಞವೆಂಬ ದೇದೀಪ್ಯಮಾನವಾದ ರಥವನ್ನೇರಿಕೊಂಡು ದೇವತೆಗಳ ಮತ್ತು ಸ್ತೋತೃಗಳ ಶತ್ರುಗಳನ್ನು ಜಯಿಸಲು ಹೊರಡುತ್ತಾನೆ (೨-೨೩-೩); ಇವನು ಶ್ರದ್ಧಾಳುಗಳ ಪೋಷಕ ಮತ್ತು ರಕ್ಷಕನು. ಅವರಿಗೆ ಮಾರ್ಗದರ್ಶಕನಾಗಿದಾನೆ; ಅವರನ್ನು ವಿಪತ್ತುಗಳಿಂದ ಪಾರು ಮಾಡುತ್ತಾನೆ (೨-೨೩-೪) ಅವರಿಗೆ ಸಂಪದಾದಿಗಳನ್ನು ಅನುಗ್ರಹಿಸುತ್ತಾನೆ (೨-೨೩-೯) ದೇವತೆಗಳಿಗೆಲ್ಲಾ ಪಿತೃವೆನಿಸಿಕೊಂಡಿದಾನೆ, ದಿವ್ಯವಾದ ಸಮಸ್ತ ಗುಣಗಳಿಂದ ಕೂಡಿದಾನೆ (೩-೬೨-೪; ೪-೫೦-೬) ವಿಶ್ವರೂಪನು; ಎಲ್ಲರೂ

ಅಪೇಕ್ಷಿಸುವ ವಸ್ತುಗಳೆಲ್ಲವೂ ಇವನಲ್ಲಿವೆ (೭.೧೦-೪, ೭-೯೭-೪) ಸುವರ್ಣಮಯವಾದ ಈಟಿಯನ್ನು ಧರಿಸಿದಾನೆ (೭-೯೭-೭) ಇಂದ್ರನೊಡನೆ ಸೇರಿ ಇವನೂ ಸೈನ್ಯಗಳಿಗೆ ನಾಯಕನಾಗಿದಾನೆ (೧೦-೧೦೩-೪) ಆಯುಸ್ಸನ್ನು ವೃದ್ಧಿ ಮಾಡುವವನು (೧೦-೯೦೦-೫); ಸಸ್ಯಗಳು ಇವನಿಂದ ಉದ್ಭೂತವಾದವು (೧೦-೯೭-೧೫ ಮತ್ತು ೧೯); ಕಪಿಲವರ್ಣದ ಅಶ್ವಗಳೇ ಅವನ ವಾಹನವು. (೨. ೨-೨೮). ಇತ್ಯಾದಿ ವರ್ಣನೆಗಳಿವೆ.

ರಾಕ್ಷಸರಿಂದ ಭಾವಿಯಲ್ಲಿ ಎಸೆಯಲ್ಪಟ್ಟು, ಸಹಾಯಕ್ಕಾಗಿ ದೇವತೆಗಳನ್ನು ಕರೆಯುತ್ತಿದ್ದ ತ್ರಿತನ ಆರ್ತನಾದವನ್ನು ಕೇಳಿ, ಆ ಅಪಾಯಕರವಾದ ಅವಸ್ಥೆಯಿಂದ ಬೃಹಸ್ಪತಿಯು ಅವನನ್ನು ಬಿಡುಗಡೆಗೊಳಿಸಿದನೆಂದೂ(೧೦-೧೦೫-೧೬) ಇಂದ್ರನೊಡನೆ ಸೇರಿ ಬೃಹಸ್ಪತಿಯು ಅಂಧಕಾರಾವೃತವಾಗಿದ್ದ ಉದಕವನ್ನು ಪುನಃ ಪ್ರವಹಿಸುವಂತೆ ಮಾಡಿದನೆಂದೂ (೨ ೨೩-೧೮; ೧-೫೬-೫) ಹೇಳಿದೆ.

ಮಧುಭರಿತವಾದ ಕೂಪದ ಶಿಲಾದ್ವಾರವನ್ನು ಬೃಹಸ್ಪತಿಯು ತನ್ನ ಸಾಮರ್ಥ್ಯದಿಂದ ಒಡೆದನು. ದೇವತೆಗಳು ಆ ಮಧುವನ್ನು ಪಾನಮಾಡಿ ಯಥೇಚ್ಛವಾಗಿ ಮುಳಿಗಲೆದರು (೨-೨೪-೩, ೪) ಬೃಹಸ್ಪತಿಯು ಬೆಂಕಿ ಕಾರುತ್ತಿರುವ ಕಿರಣಗಳಿಂದ ವಲನ ದುರ್ಗಗಳನ್ನು ಭೇದಿಸಿದಾಗ ಗೋಸಮೂಹಗಳು ಗೋಚರವಾದವು; ಮೊಟ್ಟೆಯನ್ನು ಒಡೆಯುವಂತೆ ಗೋವುಗಳನ್ನು ಹೊರಕ್ಕೆ ಅಟ್ಟಿದನು; ಶಿಲೆಯಿಂದ ಆವೃತವಾದ (ನೀರು) ಮಡುವನ್ನು ಕಂಡು ತನ್ನ ಸಿಂಹನಾದದಿಂದಲೇ ಸೀಳಿ ಅದನ್ನು ಹೊರಕ್ಕೆ ಬರಮಾಡಿದನು (೧೦.೬೮-೪ ರಿಂದ ೯) ಬೃಹಸ್ಪತಿಯು ಹಸುಗಳನ್ನು ಬಂಡೆಗಳಿಂದ ಮುಚ್ಚಿದ್ದ ಸ್ಥಳದಿಂದ ಹೊರಕ್ಕೆ ತಂದನು; ವಲನ ಗೋವುಗಳನ್ನು ಹಿಡಿದು ತನ್ನ ವಶಪಡಿಸಿಕೊಂಡನು (೧೦-೬೮-೫).

ಬೃಹಸ್ಪತಿಯು ದೇವತ್ವವಿಶಿಷ್ಟನು (೨-೨೩-೨); ಎಲ್ಲ ದೇವತೆಗಳಿಗೂ ಸ್ವಕೀಯನು(೩-೬೨-೪; ೪-೫೦-೬) ಮತ್ತು ದೇವತೆಗಳಲ್ಲೆಲ್ಲಾ ಹೆಚ್ಚು ದೇವತ್ವವುಳ್ಳವನು. ದೇವತೆಯ ರೂಪದಿಂದ ಎಲ್ಲಾ ದೇವತೆಗಳನ್ನೂ ಎಲ್ಲಾ ಪದಾರ್ಥಗಳನ್ನೂ ತನ್ನಲ್ಲಿ ಸೇರಿಸಿಕೊಳ್ಳುತ್ತಾನೆ (೨-೨೪-೧೧; ೮-೬೧-೮) ಭೂಮಿಯ ಎಡರು ಕೊನೆಗಳನ್ನು ಸಮರ್ಥನಾದ ಇವನು ದೂರವಾಗಿ ಇಟ್ಟಿರುತ್ತಾನೆ (೪.೫೦-೧) ಸೂರ್ಯಚಂದ್ರರು ಒಬ್ಬರಾದ ಮೇಲೊಬ್ಬರೂ ಉದಯಿಸುವುದು ಅವನ ಅನುಕರಣೀಯವಾದ ಕೃತ್ಯವೇ ಆಗಿದೆ (೧೦-೬೮-೧೦) ತೈತ್ತಿರೀಯಸಂಹಿತೆಯಲ್ಲಿ (ಯಜುರ್ವೇದದಲ್ಲಿ) ಬೃಹಸ್ಪತಿಗೂ ಕೆಲವು ನಕ್ಷತ್ರಗಳಿಗೂ ಸಂಬಂಧವು ಉಕ್ತವಾಗಿದೆ. ಬೃಹಸ್ಪತಿಯು ಪುಷ್ಯನಕ್ಷತ್ರದ ದೇವತೆ (ತೈ. ಸಂ. ೪-೪-೧೦-೧) ಪುರಾಣಾದಿಗಳಲ್ಲಿ ಬೃಹಸ್ಪತಿಯನ್ನು ವಾಚಸ್ಪತಿಯೆಂದೂ, ಬೃಹಸ್ಪತಿಗ್ರಹಾಭಿನಾಮದೇವತೆಯೆಂದೂ ವರ್ಣಿಸಿದೆ.

ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿ ಎಂಬ ದೇವತೆಗಳು ಅಗ್ನಿಯ ರೂಪಾಂತರಗಳೆಂದು ಕೆಲವು ಪಂಡಿತರು ಅಭಿಪಾಯಪಟ್ಟಿದ್ದಾರೆ. M. Longlois ಎಂಬ ಪಂಡಿತನು ತನ್ನ ಋಗ್ವೇದ ಭಾಷಾಂತರವೆಂಬ ಗ್ರಂಥದ ಭಾಗ I p. 249, 254, 578 ಗಳಲ್ಲಿ ಈ ಎರಡು ದೇವತೆಗಳೂ ಅಗ್ನಿಯ ರೂಪಾಂತರಗಳೆಂದು ಅನೇಕ ಉದಾಹರಣೆಗಳಿಂದ ಸಮರ್ಥಿಸಿದ್ದಾನೆ Wilson ಎಂಬ ಪಂಡಿತನೂ ತನ್ನ ಋಗ್ವೇದ ಭಾಷಾಂತರದ ಮೊದಲನೆಯ ಭಾಗದ ಪೀಠಿಕೆಯಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. Max Muller ಎಂಬ ಪಂಡಿತನೂ ಸಹ—Brihaspati and Brahmanaspati are both varieties of Agni, the priest and the purohit of the Gods and men and as such he is invoked together with the Maruts ಎಂದರೆ ಬೃಹಸ್ಪತಿ ಮತ್ತು ಬೃಹಣಸ್ಪತಿ ಎಂಬೆರಡೂ ಅಗ್ನಿಯ ರೂಪಾಂತರಗಳು, ದೇವತೆಗಳಿಗೂ ಮನುಷ್ಯರಿಗೂ ಋತ್ವಿಜ ಮತ್ತು ಪುರೋಹಿತಸ್ಥಾನದಲ್ಲಿರುವವರು. ಈ ದೃಷ್ಟಿಯಿಂದಲೇ ಮರುದ್ದೇವತೆಗಳೊಡನೆ ಅವರಿಗೆ ಆಹ್ವಾನವಿತ್ತಿರುವುದು

ಅನೇಕಕಡೆ ಇದೆ ಎಂದು ಹೇಳಿದ್ದಾನೆ. ಈರೀತಿ ಅಗ್ನಿಗೂ ಬೃಹಸ್ಪತಿ ಬ್ರಹ್ಮಣಸ್ಪತಿಗಳಿಗೂ ಇರುವ ತಾದಾತ್ಮ್ಯವನ್ನು ಹೇಳುವ ಒಂದೆರಡು ಉದಾಹರಣೆಗಳನ್ನು ಕೊಡುತ್ತೇವೆ.

ತ್ವಮಗ್ನ ಇಂದ್ರೋ ವೃಷಭಃ ಸತಾಮಸಿ ತ್ವಂ ವಿಷ್ಣುರುರುಗಾಯೋ ನಮಸ್ಯಃ ।
ತ್ವಂ ಬ್ರಹ್ಮಾ ರಯಿವಿದ್ಬ್ರಹ್ಮಣಸ್ಪತೇ ತ್ವಂ ವಿಧರ್ತಃ ಸಚಸೇ ಪುರಂಧ್ಯಾ ॥

(ಋ. ಸಂ. ೨-೧-೩)

ಎಲೈ ಅಗ್ನಿಯೇ, ಸಜ್ಜನರಲ್ಲಿ ಅತಿಶ್ರೇಷ್ಠನಾದ ಇಂದ್ರನೇ ನೀನು; ಪೂಜ್ಯನೂ ಅತಿ ದೊಡ್ಡ ದೇಹವುಳ್ಳವನೂ ಆದ ವಿಷ್ಣುವೂ ನೀನೇ; ಎಲೈ ಬ್ರಹ್ಮಣಸ್ಪತಿಯೇ, ಧನಾಢ್ಯನಾದ ಬ್ರಹ್ಮನಾಮಕ ಋತ್ವಿಜನೂ ನೀನೇ ಎಂದು ಅಗ್ನಿಯನ್ನು ನಾನಾ ದೇವತೆಗಳ ಸ್ವರೂಪವೆಂದು ವರ್ಣಿಸಿದೆ.

ತಂ ಶುಭ್ರಮಗ್ನಿಮವಸೇ ಹವಾಮಹೇ ವೈಶ್ವಾನರಂ ಮಾತರಿಶ್ವಾನಮುಕ್ಥ್ಯಂ ।
ಬೃಹಸ್ಪತಿಂ ಮನುಷೋ ದೇವತಾತಯೇ ವಿಪ್ರಂ ಶ್ರೋತಾರಮತಿಥಿಂ ರಘುಷ್ಯದಂ ॥

(ಋ. ಸಂ. ೩-೩೬-೨)

ಶುಭ್ರನೂ, ಮಾನವವರ್ಗಕ್ಕೇ ಮಿತ್ರಭೂತನೂ ಆದ ಅಗ್ನಿಯನ್ನು ನಮ್ಮ ರಕ್ಷಣೆಗೋಸ್ಕರ ಆಹ್ವಾನಿಸುತ್ತೇವೆ. ಮಂತ್ರ ಸಾಧ್ಯನಾಗಲು ಯೋಗ್ಯನಾದ ಮಾತರಿಶ್ವನನ್ನೂ, ಜ್ಞಾನಿಯೂ ದೇವತೆಗಳನ್ನು ದ್ವೇಷಿಸಿ ಸ್ತುತಿಸುವವನೂ, ಅತಿಥಿ ಸತ್ಕಾರನೀಯನೂ, ಶೀಘ್ರಗಾಮಿಯೂ ಆದ ಬೃಹಸ್ಪತಿಯನ್ನೂ ಮಾನುಷಸಂಬಂಧವಾದ ಯಜ್ಞಾದಿಕರ್ಮಗಳಿಗೆ ಬರುವಂತೆ ಆಹ್ವಾನಿಸುತ್ತೇವೆ.

ಸಾಯಣಾಚಾರ್ಯರು ೫-೪೩-೧೨ ನೆಯ ಋಕ್ಕಿಗೆ ವ್ಯಾಖ್ಯಾನ ಬರೆಯುವಾಗ ಬೃಹಸ್ಪತಿ ಶಬ್ದಕ್ಕೆ—

ಅಥವಾ ಇಯಮಾಗ್ನೇಯೀ । ಬೃಹತಃ ಪರಿವೃಢಸ್ಯ ಕರ್ಮಣಃ ಸ್ವಾಮೀತಿ ಬೃಹಸ್ಪತಿರಗ್ನಿ-ರುಚ್ಯತೇ । ತಥಾ ನೀಲವರ್ಣಧೂಮಪೃಷ್ಠತ್ವಸದನಸಾದನಹಿರಣ್ಯವರ್ಣತ್ವಾದಿಲಿಂಗೈರಪ್ಯಗ್ನಿ-ರೇವ ಬೃಹಸ್ಪತಿಃ ॥

ಎಂದರೆ ಅಥವಾ ಈ ಮಂತ್ರವು ಅಗ್ನಿದೇವತಾಪ್ರತಿಪಾದಕವಾಗಿರುವುದು ಎನ್ನಬಹುದು. ಪ್ರಸ್ತುತವಾದ ಯಜ್ಞರೂಪ ಮಹಾಕಾರ್ಯಕ್ಕೆ ಸ್ವಾಮಿಯಾದುದರಿಂದ ಅಗ್ನಿಗೆ ಬೃಹಸ್ಪತಿಯೆಂಬ ಹೆಸರು. ಆದರಂತೆ ಕಪ್ಪಾದ ಧೂಮವೇ ಪೃಷ್ಠವಾಗಿ, ಯಜ್ಞವೇದಿಯೇ ಸ್ಥಾನ, ಹಿರಣ್ಯವರ್ಣ ಮೊದಲಾದ ಲಕ್ಷಣಗಳಿಂದಲೂ ಬೃಹಸ್ಪತಿಯನ್ನೂ ಅಗ್ನಿಯೆಂದೇ ಹೇಳಬೇಕು ಎಂದು ಹೇಳಿದ್ದಾರೆ.

ಇನ್ನು ಅಗ್ನಿಗೂ ಬೃಹಸ್ಪತಿಬ್ರಹ್ಮಣಸ್ಪತಿಗಳಿಗೂ ಭೇದವನ್ನು ಹೇಳಿರುವ ಉದಾಹರಣೆಗಳನ್ನು ವಿಮರ್ಶೆ ಮಾಡೋಣ.

ಸೋಷಾಮವಿಂದತ್ಸ ಸ್ವಃ ೧ ಸೋ ಅಗ್ನಿಂ ಸೋ ಅರ್ಕೇಣ ವಿ ಬಬಾಧೇ ತಮಾಂಸಿ ।
ಬೃಹಸ್ಪತಿರ್ಗೋವಪುಷೋ ವಲಸ್ಯ ನಿರ್ಮಜ್ಜಾನಂ ನ ಪರ್ವಣೋ ಜಭಾರ ॥

(ಋ. ಸಂ. ೧೦-೬೮-೯)

ಎಂಬ ಋಕ್ಕಿನಲ್ಲಿ ಬೃಹಸ್ಪತಿಯು ಉಷಸ್ಸು, ಸ್ವರ್ಗ ಮತ್ತು ಅಗ್ನಿಗಳನ್ನು ಸಂಪಾದಿಸಿದನು ಮತ್ತು ಒಂದು ಮಂತ್ರದಿಂದ ಅಂಧಕಾರವನ್ನು ಪರಿಹರಿಸಿದನು ಎಂದು ಬೃಹಸ್ಪತಿ ಮತ್ತು ಅಗ್ನಿಯು ಬೇರೆಬೇರೆ ಎಂದು ಹೇಳಿದೆ.

ಇಂದ್ರಂ ನೋ ಅಗ್ನೇ ವಸುಭಿಃ ಸಜೋಷಾ ರುದ್ರಂ ರುದ್ರೇಭಿರಾ ವಹಾ ಬೃಹಂತಂ ।
ಆದಿತ್ಯೇಭಿರದಿತಿಂ ವಿಶ್ವಜನ್ಯಾಂ ಬೃಹಸ್ಪತಿಮೃಕ್ವಭಿರ್ವಿಶ್ವವಾರಂ ॥

(ಋ. ಸಂ. ೭-೧೦-೪)

ಎಂಬ ಋಕ್ಕಿನಲ್ಲಿ ವಸುಗಳಿಂದ ಸಹಿತನಾದ ಇಂದ್ರನನ್ನೂ, ಮರುದ್ದೇವತೆಗಳಿಂದ ಸಹಿತನಾದ ರುದ್ರನನ್ನೂ ಆದಿತ್ಯರು (ದೇವತೆ) ಗಳಿಂದ ಸಹಿತಳಾದ ವಿಶ್ವಜನನಿಯಾದ ಅದಿತಿಯನ್ನೂ, ಸ್ತೋತ್ರಮಾಡುತ್ತಿರುವ ಅಂಗಿರಾಋಷಿಗಳಿಂದ ಸಹಿತನಾದ ಬೃಹಸ್ಪತಿಯನ್ನೂ ಕರೆತರಬೇಕೆಂದು ಅಗ್ನಿಯನ್ನು ಪ್ರಾರ್ಥಿಸಿದೆ. ಇದಲ್ಲದೆ ಬೃಹಸ್ಪತಿ ಅಥವಾ ಬ್ರಹ್ಮಣಸ್ಪತಿಯೇ ಬೇರೆ, ಅಗ್ನಿಯೇ ಬೇರೆ ಎಂಬ ಅರ್ಥವನ್ನು ಸೂಚಿಸುವ ಋಕ್ಕುಗಳು-೩-೨೦-೫; ೪-೪೦ ೧, ೫-೫೦-೧೨, ೭-೪೧-೧, ೭-೪೪.೧, ೯-೫-೧೧, ೧೦-೩೫-೧೧, ೧೨-೬೫-೧, ೧೦-೧೩೦-೪, ೧೦-೧೪೧-೩ ಮೊದಲಾದ ಮಂತ್ರಗಳು ಋಗ್ವೇದದಲ್ಲಿ ಬಹಳವಾಗಿವೆ. ಆದುದರಿಂದ ಅಗ್ನಿಯೇ ಬೇರೆ, ಬೃಹಸ್ಪತಿಬ್ರಹ್ಮಣಸ್ಪತಿಗಳೇ ಬೇರೆ ಎಂಬ ಸಿದ್ಧಾಂತವೇ ಋಗ್ವೇದದಲ್ಲಿ ಸಮರ್ಥಿತವಾಗಿದೆ.

ಸಾಯಣಭಾಷ್ಯಂ

ಇಮಾಂ ಧಿಯಮಿತಿ ದ್ವಾದಶರ್ಚಂ ಸಪ್ತಮಂ ಸೂಕ್ತಮಾಂಗಿರಸಸ್ಯಾಯಸ್ಯಸ್ಯಾರ್ಷಂ ತ್ರೈಷ್ಟುಭಂ। ಇದಮುತ್ತರಂ ಚ ಬೃಹಸ್ಪತಿದೇವತಾಕಂ । ತಥಾ ಚಾನುಕ್ರಾಂತಂ । ಇಮಾಂ ಧಿಯಂ ದ್ವಾದಶಾಯಾಸ್ಯೋ ಬಾರ್ಹಸ್ಪತ್ಯಂ ತ್ವಿತಿ ॥ ಆಭಿಪ್ಲವಿಕೇಷೂಕ್ಥ್ಯೇಷು ಸ್ತೋಮವೃದ್ಧ್ಯೈ ಬ್ರಾಹ್ಮಣಾಚ್ಛಂಸಿನ ಇದಂ ಸೂಕ್ತಮಾವಾಪಾರ್ಥಂ । ಸೂತ್ರಿತಂ ಚ। ಇಮಾಂ ಧಿಯಮಿತಿ ಬ್ರಾಹ್ಮಣಾಚ್ಛಂಸೀ ವಿಷ್ಣೋರ್ನು ಕಮಿತಿ ಸೂಕ್ತೇ । ಆ-೭ ೯ । ಇತಿ ॥

ಅನುವಾದವು— **ಇಮಾಂ ಧಿಯಂ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿವೆ. ಈ ಸೂಕ್ತಕ್ಕೆ ಅಂಗಿರಸಗೋತ್ರದ ಅಯಾಸ್ಯನೆಂಬುವನು ಋಷಿಯು; ತ್ರಿಷ್ಟುಪ್ಛಂದಸ್ಸು. ಈ ಸೂಕ್ತಕ್ಕೂ ಮುಂದಿನ ಸೂಕ್ತಕ್ಕೂ ಬೃಹಸ್ಪತಿಯು ದೇವತೆಯು. ಅನುಕ್ರಮಣಿಕೆಯಲ್ಲಿ— **ಇಮಾಂ ಧಿಯಂ ದ್ವಾದಶಾಯಾಸ್ಯೋ ಬಾರ್ಹಸ್ಪತ್ಯಂ ತು** ಎಂದು ಹೇಳಿರುವುದು. ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿ ಸ್ತೋಮವೃದ್ಧಿಗಾಗಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಈ ಸೂಕ್ತವನ್ನು ಆವಾಪಾರ್ಥವಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಇಮಾಂ ಧಿಯಮಿತಿ ಬ್ರಾಹ್ಮಣಾಚ್ಛಂಸೀ ವಿಷ್ಣೋರ್ನು ಕಮಿತಿ ಸೂಕ್ತೇ** ಎಂಬ ಸೂತ್ರದಿಂದ (ಆ. ೭-೯) ವಿವೃತವಾಗಿರುವುದು.

ಸೂಕ್ತ—೬೭

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೭ ॥
ಅಷ್ಟಕ—೮ ॥ ಅಧ್ಯಾಯ—೨೦ ॥ ವರ್ಗ—೧೫, ೧೬ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ಆಯಾಸ್ಯಃ ॥
ದೇವತಾ—ಬೃಹಸ್ಪತಿಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಇಮಾಂ ಧಿಯಂ ಸಪ್ತಶೀರ್ಷ್ಣೀಂ ಪಿತಾ ನ ಋತಪ್ರಜಾತಾಂ ಬೃಹತೀಮವಿಂದತ್ ।
ತುರೀಯಂ ಸ್ವಿಜ್ಜನಯದ್ವಿಶ್ವಜನ್ಯೋಽಯಾಸ್ಯ ಉಕ್ಥಮಿಂದ್ರಾಯ ಶಂಸನ್॥

ಪದಪಾಠಃ

ಇಮಾಂ । ಧಿಯಂ । ಸಪ್ತಽಶೀರ್ಷ್ಣೀಂ । ಪಿತಾ । ನಃ । ಋತಽಪ್ರಜಾತಾಂ । ಬೃಹತೀಂ । ಅವಿಂದತ್ ।
ತುರೀಯಂ । ಸ್ವಿತ್ । ಜನಯೇತ್. । ವಿಶ್ವಽಜನ್ಯಃ । ಆಯಾಸ್ಯಃ । ಉಕ್ಥಂ । ಇಂದ್ರಾಯ । ಶಂಸನ್॥ ೦ ॥

ಸಾಯಣಭಾಷ್ಯಂ

ಅತ್ರೇತಿಹಾಸಮಾಚಕ್ಷತೇ । ಪುರಾ ಕಿಲಾಂಗಿರಾ ನಾಮರ್ಷಿರ್ಬೃಹಸ್ಪತಿಂ ಪುತ್ರಮಲಭತ । ಸ ತು ದೇವಾನಾಂ ಹಿತೋಪದೇಶನಾಯೇಂದ್ರಸ್ಯ ಪುರೋಹಿತೋಽಭವತ್ । ಕದಾಚಿತ್ತಸ್ಯ ಗಾವಃ ಪಣಿನಾಮಸುರೈರಪಹೃತ್ಯ ವಲಪುರಂ ಪ್ರಾಪಯ್ಯ ತ್ರಿಷು ಸ್ಥಾನೇಷು ತಮಸಾವೃತೇಷು ಸ್ಥಾಪಿತಾ ಆಸನ್ । ಅಥ ತಾಸಾಮನ್ವೇಷಣಾಯೇಂದ್ರೇಣ ಪ್ರೇರಿತೋ ಬೃಹಸ್ಪತಿರ್ಮರುದ್ಭಿಃ ಸಹ ತತ್ರಾಗತ್ಯ ಗವಾಂ ಗುಹಾ ಸ್ಥಿತಾನಾಂ ದರ್ಶನಾಯ ಸೂರ್ಯಂ ಜನಯಿತ್ವಾ ವಲನಾಮಾನಮಸುರಂ ತದನುಚರಾನ್ಪಣೀಂಶ್ಚ ಹತ್ವಾ ಗಾ ಆಜಹಾರೇತಿ । ತದತ್ರ ದರ್ಶಯಿಷ್ಯತೇ । ತಥಾ ಚಾಸ್ಯಾ ಋಚೋಽಯಮರ್ಥಃ। ಧಿಯಂ ಕರ್ಮಣಾಂ ಧಾತ್ರೀಂ ಸಪ್ತಶೀರ್ಷ್ಣೀಂ ಸಪ್ತಶಿರಸ್ಕಾಂ ಸಪ್ತಭಿಃ ಶಿರಃಸ್ಥಾನೀಯೈಸ್ತದ್ವಶ್ಚ್ರಧಾನಭೂತೈರ್ಮರುದ್ಗಣೈರುಪೇತಾಂ । ಯದ್ವಾ । ಸಪ್ತಚ್ಛಂದೋಮಯೀಂ ಶಿರಸ್ಕಾಂ । ಋತಪ್ರಜಾತಾಂ ಯಜ್ಞಾರ್ಥಮುತ್ಪನ್ನಾಂ ಬೃಹತೀಂ ಮಹತೀಮಿಮಾಂ ತನುಂ ನೋಽಸ್ಮಾಕಂ ಪಿತಾಂಗಿರಾ ಅವಿಂದತ್ । ಲಬ್ಧವಾನ್ । ಕರ್ಮಣಾಂ ಧ್ಯಾತಾರಂ ಬೃಹಸ್ಪತಿಂ ಪುತ್ರಮಲಭತೇತ್ಯರ್ಥಃ। ಯೇಂಽಗಾರಾ ಅಸಂಸ್ತೇಂಽಗಿರಸೋಽಭವನ್ ಯದಂಗಾರಾಃ ಪುನರವಶಾಂತಾ ಉದದೀಪ್ಯಂತ ತದ್ಬೃಹಸ್ಪತಿರಭವದಿತಿ ಬ್ರಾಹ್ಮಣಂ । ಐ. ಬ್ರಾ. ೩-೩೪ । ತಥಾ ತುರೀಯಂ ಸ್ವಿನ್ನಪ್ತಾರಮಪಿ ಜನಯೇತ್ ಅಜನಯೇತ್ ವಿಶ್ವಜನ್ಯಃ ಸರ್ವಜನಹಿತ ಇಂದ್ರಾಯೇಶ್ವರಾಯ ಬೃಹಸ್ಪತಯ ಇಂದ್ರಾಯ ವೋಕ್ಥಂ ಸ್ತೋತ್ರಂ ಶಂಸನ್ನಯಮಯಾಸ್ಯೋ ನಾಮರ್ಷಿಃ । ಪೂರ್ವಮೇವ ನೋಽಸ್ಮಾಕಂ ಪಿತಾಕಾರ್ಷೀದಿತ್ಯಾಹ ॥

ಪ್ರತಿಪದಾರ್ಥ

ಧಿಯಂ—ಕರ್ಮಧಾರಕವೂ । ಸಪ್ತಶೀರ್ಷ್ಣೀಂ—ಸಪ್ತಶಿರಸ್ಸುಳ್ಳದ್ದೂ । ಋತಪ್ರಜಾತಾಂ—ಯಜ್ಞಾರ್ಥವಾಗಿ ಉತ್ಪನ್ನವಾದುದೂ । ಬೃಹತೀಂ—ಮಹತ್ಸ್ವರೂಪವುಳ್ಳದ್ದೂ ಆದ । ಇಮಾಂ—ಈ (ಬೃಹಸ್ಪತಿರೂಪವಾದ) ಶರೀರವನ್ನು । ನಃ—ನಮ್ಮ । ಪಿತಾ—ಪಿತೃವಾದ ಅಂಗಿರಸ್ಸು । ಅವಿಂದತ್—ಪಡೆದನು । ತುರೀಯಂ ಸ್ವಿತ್—ಮೊಮ್ಮಗನನ್ನೂ । ಜನಯೇತ್—ಪಡೆದನು । ವಿಶ್ವಜನ್ಯಃ—ಸಕಲರಿಗೂ

ಹಿತಕರನಾದ। **ಅಯಾಸ್ಯಃ**—ಅಯಾಸ್ಯನೆಂಬ ಋಷಿಯು। **ಇಂದ್ರಾಯ**—ಇಂದ್ರನನ್ನುದ್ದೇಶಿಸಿ। **ಉಕ್ಥಂ**—ಸ್ತೋತ್ರವನ್ನು। **ಶಂಸನ್**—ಅರ್ಪಿಸಿದನು.

ಭಾವಾರ್ಥ

ಕರ್ಮಧಾರಕವೂ, ಸಪ್ತಶಿರಸ್ಸುಳ್ಳದ್ದೂ, ಯಜ್ಞಾರ್ಥವಾಗಿ ಉತ್ಪನ್ನವಾದುದೂ, ಮಹತ್ಸ್ವರೂಪವುಳ್ಳದ್ದೂ ಆದ (ಬೃಹಸ್ಪತಿರೂಪವಾದ) ಈ ಶರೀರವನ್ನು ನಮ್ಮ ಪಿತೃವಾದ ಅಂಗಿರಸ್ಸು ಪಡೆದನು. ಮೊಮ್ಮಗನನ್ನೂ ಪಡೆದನು. ಸಕಲರಿಗೂ ಹಿತಕರನಾದ ಅಯಾಸ್ಯಋಷಿಯು ಇಂದ್ರನನ್ನುದ್ದೇಶಿಸಿ ಸ್ತೋತ್ರವನ್ನರ್ಪಿಸಿದನು.

English Translation

This great seven-headed ceremony, born of truth, our father (Angiras) discovered; Ayasya, the friend of all races, engendered the fourth (generation), reciting a hymn to Indra.

ವಿಶೇಷವಿಷಯಗಳು

ಈ ಋಕ್ಕಿನ ಭಾಷ್ಯದಲ್ಲಿ ಸಾಯಣರು ಒಂದು ಇತಿಹಾಸವನ್ನು ಹೇಳಿರುವರು—

ಅತ್ರೇತಿಹಾಸಮಾಚಕ್ಷತೇ। ಪುರಾ ಕಿಲಾಂಗಿರಾ ನಾಮರ್ಷಿರ್ಬೃಹಸ್ಪತಿಂ ಪುತ್ರಮಲಭತ। ಸ ತು ದೇವಾನಾಂ ಹಿತೋಪದೇಶನಾಯೇಂದ್ರಸ್ಯ ಪುರೋಹಿತೋಽಭವತ್। ಕದಾಚಿತ್ತಸ್ಯ ಗಾವಃ ಪಣಿನಾಮಖ್ಯೈರಸುರೈರಪಹೃತ್ಯ ವಲಪುರಂ ಪ್ರಾಪಯ್ಯ ತ್ರಿಷು ಸ್ಥಾನೇಷು ತಮಸಾವೃತೇಷು ಸ್ಥಾಪಿತಾ ಆಸನ್। ಅಥ ತಾಸಾಮನ್ವೇಷಣಾಯೇಂದ್ರೇಣ ಪ್ರೇರಿತೋ ಬೃಹಸ್ಪತಿರ್ಮರುದ್ಭಿಃ ಸಹ ತತ್ರಾಗತ್ಯ ಗವಾಂ ಗುಹಸ್ಥಿತಾನಾಂ ದರ್ಶನಾಯ ಸೂರ್ಯಂ ಜನಯಿತ್ವಾ ಬಲನಾಮಾನಮಸುರಂ ತದನುಚರಾನ್ ಪಣೀಂಶ್ಚ ಹತ್ವಾ ಗಾ ಆಜಹಾರೇತಿ। ತದತ್ರ ದರ್ಶಯಿಷ್ಯತೇ॥

ಪೂರ್ವದಲ್ಲಿ ಅಂಗಿರಾಋಷಿಗಳಿಗೆ ಬೃಹಸ್ಪತಿಯೆಂಬ ಪುತ್ರನಿದ್ದನು. ಆ ಬೃಹಸ್ಪತಿಯು ದೇವತೆಗಳಿಗೆ ಹಿತಚಿಂತಕನಾಗಿ ಅವರಿಗೆ ಹಿತೋಪದೇಶವನ್ನು ಮಾಡುತ್ತಿದ್ದುದರಿಂದ ಇಂದ್ರನಿಗೆ ಪುರೋಹಿತನಾಗಿದ್ದನು. ಒಂದು ಸಮಯದಲ್ಲಿ ಆ ಬೃಹಸ್ಪತಿಯ ಗೋವುಗಳನ್ನು ಪಣಿಗಳೆಂಬ ಅಸುರರು ಅಪಹರಿಸಿ ತಮ್ಮ ಮುಖಂಡನಾದ ವಲನೆಂಬ ಅಸುರನ ಪಟ್ಟಣಕ್ಕೆ ತೆಗೆದುಕೊಂಡುಹೋಗಿ ಮೂರುಕಡೆಯೂ ಆಚ್ಛಾದಿತವಾಗಿ ಕಗ್ಗತ್ತಲೆಯಿಂದ ಆವೃತವಾಗಿದ್ದ ಪರ್ವತದ ಗುಹೆಯಲ್ಲಿ ಬಚ್ಚಿಟ್ಟರು. ಆ ಗೋವುಗಳನ್ನು ಹುಡುಕಿತರಬೇಕೆಂಬ ಉದ್ದೇಶದಿಂದ ಇಂದ್ರನಿಂದ ಪ್ರೇರಿತನಾದ ಬೃಹಸ್ಪತಿಯು ಮರುದ್ದೇವತೆಗಳೊಡನೆ ವಲನ ಪಟ್ಟಣದ ಸಮೀಪಕ್ಕೆ ಬಂದು ಗೋವುಗಳನ್ನು ಹುಡುಕುತ್ತಿರುವಾಗ ಪರ್ವತಗುಹೆಯಲ್ಲಿ ಕತ್ತಲೆ ಕವಿದು ಯಾವುದೂ ಕಣ್ಣಿಗೆ ಕಾಣಿಸದಿದ್ದರಿಂದ ಆ ಸ್ಥಳದಲ್ಲಿ ಬೆಳಕಾಗುವುದಕ್ಕಾಗಿ ಸೂರ್ಯನನ್ನು ಸೃಷ್ಟಿಸಿ ಎಲ್ಲವೂ ಕಾಣುವಂತೆ ಮಾಡಿದನು. ಅನಂತರ ಗೋವುಗಳನ್ನಪಹರಿಸಿದ್ದ ವಲನೆಂಬ ಅಸುರನನ್ನೂ ಅವನ ಅನುಚರರಾದ ಪಣಿಗಳನ್ನೂ ಕೊಂದು ತನ್ನ ಗೋವುಗಳನ್ನು ಬಿಡಿಸಿ ತಂದನು. ಈ ವಿಷಯವನ್ನೇ ಈ ಸೂಕ್ತದಲ್ಲಿ ಹೇಳಲಾಗಿದೆ.

ಪಣಿಗಳು ದೇವತೆಗಳ (ಬೃಹಸ್ಪತಿಯ) ಗೋವುಗಳನ್ನು ಅಪಹರಿಸಿ ಪರ್ವತಗುಹೆಯಲ್ಲಿ ಬಚ್ಚಿಟ್ಟದ್ದುದನ್ನೂ ಅದನ್ನು ಬೃಹಸ್ಪತಿಯೇ ಮೊದಲಾದ ದೇವತೆಗಳು ಇಂದ್ರನ ಸಹಾಯದಿಂದ ಪಡೆದುದನ್ನೂ ಅನೇಕ ಕಡೆಗಳಲ್ಲಿ ಸೂಕ್ಷ್ಮ

ವಾಗಿ ವಿವರಿಸಲಾಗಿದೆ. ಇದೇ ಮಂಡಲದ ೧೦೮ ನೇ ಸೂಕ್ತದಲ್ಲಿ ಈ ಗೋವುಗಳನ್ನು ಅಪಹರಿಸಿದವರು ಯಾರು ? ಆ ಗೋವುಗಳು ಇರುವ ಸ್ಥಳವು ಯಾವುದು ಇತ್ಯಾದಿ ವಿಷಯಗಳನ್ನು ತಿಳಿದುಬರುವುದಕ್ಕಾಗಿ ಇಂದ್ರನು ಮೊದಲು ದೇವಶುನಿಯಾದ ಸರಮಾ ಎಂಬ ನಾಯಿಯನ್ನು ಕಳುಹಿಸಿದನೆಂದೂ ಅದು ಅನೇಕ ನದೀಪರ್ವತಗಳನ್ನೂ, ಬೆಟ್ಟಗುಡ್ಡಗಳನ್ನೂ ದಾಟಿ ಬಹುದೂರ ಹೋಗಿ ಪಣಿಗಳು ಗೋವುಗಳನ್ನು ಬಚ್ಚಿಟ್ಟಿದ್ದ ರಹಸ್ಯಪ್ರದೇಶವನ್ನು ಕಂಡುಹಿಡಿದು ಆ ಪಣಿಗಳೊಡನೆ ಸಂಭಾಷಣೆಯನ್ನು ನಡೆಸಿ ಅಲ್ಲಿ ನಡೆದ ವಿಷಯವನ್ನು ಇಂದ್ರನಿಗೆ ತಿಳಿಸಿತೆಂದೂ ಇಂದ್ರಾದಿದೇವತೆಗಳು ಅಲ್ಲಿಗೆ ಹೋಗಿ ಅಸುರರನ್ನು ಜಯಿಸಿ ಗೋವುಗಳನ್ನು ಹಿಂದಕ್ಕೆ ತಂದರೆಂದೂ ಹೇಳಿರುವ ಸಂಗತಿಯು ಉಕ್ತವಾಗಿದೆ. ಈ ವಿಷಯದಲ್ಲಿ ವಿಸ್ತಾರವಾಗಿ ಬರೆದಿರುವ ವಿವರಣೆಯನ್ನು ಅಲ್ಲಿ ನೋಡಿ ತಿಳಿಯಬಹುದು.

ಬೃಹಸ್ಪತಿಯವಿಷಯದಲ್ಲಿ—**ಯೋಽಙ್ಗಾರಾ ಅಸಂಸ್ತೇಽಙ್ಗಾರಸೋಽಭವನ್ ಯದಾಂಗಾರಾಃ ಪುನರವಶಾಂತಾ ಉದದೀಪ್ಯಂತ ತದ್ಬೃಹಸ್ಪತಿರಭವತ್** (ಐ. ಬ್ರಾ. ೩-೩೪) ಇತ್ಯಾದಿ ಐತರೇಯಬ್ರಾಹ್ಮಣವಾಕ್ಯಗಳನ್ನು ನಾವು ಈ ಸೂಕ್ತದ ಪೀಠಿಕೆಯಲ್ಲಿ ವಿಸ್ತಾರವಾಗಿ ವಿವರಿಸಿದೇವೆ. (ಭಾಗ ೨೦, ಪುಟ 680)

ಸಂಹಿತಾಪಾಠಃ

ಋತಂ ಶಂಸಂತ ಋಜು ದೀಧ್ಯಾನಾ ದಿವಸ್ಪುತ್ರಾಸೋ ಅಸುರಸ್ಯ ವೀರಾಃ ।
ವಿಪ್ರಂ ಪದಮಂಗಿರಸೋ ದಧಾನಾ ಯಜ್ಞಸ್ಯ ಧಾಮ ಪ್ರಥಮಂ ಮನಂತ ॥

ಪದಪಾಠಃ

ಋತಂ । ಶಂಸಂತಃ । ಋಜು । ದೀಧ್ಯಾನಾಃ । ದಿವಃ । ಪುತ್ರಾಸಃ । ಅಸುರಸ್ಯ । ವೀರಾಃ ।
ವಿಪ್ರಂ । ಪದಂ । ಅಂಗಿರಸಃ । ದಧಾನಾಃ । ಯಜ್ಞಸ್ಯ । ಧಾಮ । ಪ್ರಥಮಂ । ಮನಂತ ॥ ೨ ॥

ಸಾಯಣಭಾಷ್ಯಂ

ಋತಂ ಸತ್ಯಭೂತಂ ಸ್ತೋತ್ರಂ ಶಂಸಂತಃ ಸ್ತುವಂತ ಋಜು ಕಲ್ಯಾಣಂ ದೀಧ್ಯಾನಾಃ ಕರ್ಮಾಣಿ ಧ್ಯಾಯಂತೋ ದಿವೋ ದೀಪ್ತಸ್ಯಾಸುರಸ್ಯ ಪ್ರಜ್ಞಾನವತೋಽಗ್ನೇರಂಗಿರಸಃ ಪುತ್ರಾಃ । ಅಂಗಿರಸೋ ಹ್ಯಂಽಗಾರೇಭ್ಯೋ ಜಾತಾ ಇತ್ಯುಕ್ತಂ। ಅಂಗಾರೇಷ್ವಂಗಿರಾಃ। ನಿ ೩-೧೬-೧ ಇತಿ। ವೀರಾ ವಿಕ್ರಾಂತಪ್ರಜ್ಞಾ ಏತೇಽಂಗಿರಸೋ ವಿಪ್ರಂ ಪ್ರಜ್ಞಾಪಕಂ ಯಜ್ಞಸ್ಯ ಧಾಮ ಧಾರಕಂ ಪದಂ ಬೃಹಸ್ಪತ್ಯಾಖ್ಯಂ ದಧಾನಾಃ ಕರ್ಮಣಾ ಧಾರಯಂತಃ ಸಂತಃ ಪ್ರಥಮಮಾದಿತ ಏವ ಮನಂತ । ಸ್ತುವಂತಿ । ಪ್ರಜ್ಞಾಪಕಂ ಹ್ಯೇತತ್ಸ್ಥಾನಂ ಯದ್ಬೃಹಸ್ಪತಿರಿತಿ ॥

ಪ್ರತಿಪದಾರ್ಥ

ಋತಂ—ಸತ್ಯಾತ್ಮಕವಾದ ಸ್ತುತಿಯನ್ನು । **ಶಂಸತಃ**—ಪಠಿಸುವವರೂ । **ಋಜು**—ಲೋಕಕಲ್ಯಾಣವನ್ನು । **ದೀಧ್ಯಾನಾಃ**—ಧ್ಯಾನಿಸುವವರೂ । **ದಿವಃ**—ಪ್ರಕಾಶಮಾನನಾದವನೂ । **ಅಸುರಸ್ಯ**—ಪ್ರಾಜ್ಞನೂ ಆದ ಅಗ್ನಿಯ । **ಪುತ್ರಾಸಃ**—ಪುತ್ರರೂ ಆದ । **ಅಂಗಿರಸಃ**—ಅಂಗಿರಸ್ಸುಗಳು । **ವೀರಾಃ**—ಪರಾಕ್ರಮವುಳ್ಳ

ವರಾಗಿ। **ವಿಪ್ರಂ**—ಜಗತ್ತಿಗೆ ಪ್ರಜ್ಞಾಪಕವಾದುದೂ। **ಯಜ್ಞಸ್ಯ ಧಾಮ**—ಯಜ್ಞಧಾರಕವಾದುದೂ ಆದ। **ಪದಂ**—ಬೃಹಸ್ಪತಿಸಂಜ್ಞಕವಾದ ಸ್ಥಾನವನ್ನು। **ದಧಾನಾಃ**—ತಮ್ಮ ಕರ್ಮದಿಂದ ಧರಿಸಿದವರಾಗಿ। **ಪ್ರಥಮಂ**—ಆರಂಭದಿಂದಲೇ। **ಮನಂತೆ**—ಸ್ತುತಿಸುತ್ತಾರೆ.

ಭಾವಾರ್ಥ

ಸತ್ಯಾತ್ಮಕವಾದ ಸ್ತುತಿಯನ್ನು ಪಠಿಸುವವರೂ, ಲೋಕಕಲ್ಯಾಣಕ್ಕಾಗಿ ಧ್ಯಾನಿಸುವವರೂ, ಪ್ರಕಾಶಮಾನನೂ ಪ್ರಾಜ್ಞನೂ ಆದ ಅಗ್ನಿಯ ಪುತ್ರರೂ ಆದ ಅಂಗಿರಸ್ಸುಗಳು ಪರಾಕ್ರಮವುಳ್ಳವರಾಗಿ ಜಗತ್ತಿಗೆ ಪ್ರಜ್ಞಾಪಕವಾದುದೂ, ಯಜ್ಞಧಾರಕವಾದುದೂ ಆದ ಬೃಹಸ್ಪತಿಸಂಜ್ಞಕವಾದ ಸ್ಥಾನವನ್ನು ತಮ್ಮ ಕರ್ಮದಿಂದ ಧರಿಸಿದವರಾಗಿ ಆರಂಭದಿಂದಲೇ ಸ್ತುತಿಸುತ್ತಾರೆ.

English Translation

Reciting sincere praise, reflecting correctly, the Agirasas, the pious sons of the brilliant and powerful (Agni), upholding the intelligent base, the supporter of the sacrifice, praise from the beginning.

ಸಂಹಿತಾಪಾಠಃ

ಹಂಸೈರಿವ ಸಖಿಭಿರ್ವಾವದದ್ಭಿರಶ್ಮನ್ಮಯಾನಿ ನಹನಾ ವ್ಯಸ್ಯನ್ ।
ಬೃಹಸ್ಪತಿರಭಿಕನಿಕ್ರದದ್ಗಾ ಉತ ಪ್ರಾಸ್ತೌದುಚ್ಚಾ ವಿದ್ವಾ ಅಗಾಯತ್ ॥ ೩ ॥

ಪದಪಾಠಃ

ಹಂಸೈಃಇವ । ಸಖಿಭಿಃ । ವಾವದತ್ಭಿಃ । ಅಶ್ಮನ್ಮಯಾನಿ । ನಹನಾ । ವಿಅಸ್ಯನ್ ।
ಬೃಹಸ್ಪತಿಃ । ಅಭಿಕನಿಕ್ರದತ್ । ಗಾಃ । ಉತ । ಪ್ರ । ಅಸ್ತೌತ್ । ಉತ । ಚ । ವಿದ್ವಾನ್। ಅಗಾಯತ್॥

ಸಾಯಣಭಾಷ್ಯಂ

ದೇವಸುವಾಂ ಹವಿಃಷು ಬೃಹಸ್ಪತೆಯೇ ವಾಚಸ್ಪತಯೇ ಇತ್ಯಸ್ಯ ಯಾಜ್ಯಾ ಹಂಸೈರಿವೇತ್ಯೇಷಾ। ಸೂತ್ರಿತಂ ಚ । ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಹಂಸೈರಿವ ಸಖಿಭಿರ್ವಾವದದ್ಭಿಃ । ಆ. ೪-೧೧ । ಇತಿ ॥

ಹಂಸೈರಿವ ಮಧುರವಾಗ್ಭಿಃ ಸಖಿಭಿಃ ಸಖಿಭೂತೈರ್ವಾವದಭ್ಭಿರತ್ಯಂತಂ ತಬ್ದಾಯೆಮಾನೈರ್ಮರುದ್ಭಿರಶ್ಮನ್ಮಯಾನ್ಯಶ್ಮಮಯಾನಿ ನಹನಾ ಗವಾಂ ಬಂಧಕಾನ್ಯಾವರಕಾಣ್ಯಸುರಾಣಾಂ ಸ್ಥಾನಾನಿ ವ್ಯಸ್ಯನ್ ವಿಕ್ಷಿಪಞ್ಶಿಥಿಲಯನ್ನಭಿಕನಿಕ್ರದದಾಭಿಮುಖ್ಯೇನ ಶಬ್ದಯನ್ ಗಾಃ ಪಣಿಭಿರಪಹೃತಾನ್ಪ್ರತೂನಾಜಿಹೀರ್ಷುಃ ಸ ಬೃಹಸ್ಪತಿರ್ಗರ್ಜತೀ । ಯದ್ವಾ । ವಾವದದ್ಭಿರತ್ಯಂತಂ ಸ್ತುವದ್ಭಿಃ ಸ್ತೋತೃಭಿಃ ಸಹ

ಗಾಃ ಸ್ತೋತ್ರಲಕ್ಷಣಾ ವಾಚೋಭಿಕನಿಕ್ರದದಾಭಿಮುಖ್ಯೇನೋಚ್ಚಾರಯನ್ । ಉತಾಪಿ ಚ ಪ್ರಾಸ್ತೌತ್ । ಕರ್ಮಣಿ ಪ್ರವೃತ್ತೌ ಯಜ್ಞಸ್ಯ ಸಖಿಭಿಃ ಸಹಾಸೀನಃ ಸಾಮ ಗಾತುಂ ಪ್ರಸ್ತೌತಿ । ವಿದ್ವಾನ್ ಸರ್ವಂ ಜಾನಾನಃ ಸ ಉದ್ಗಾತಾ ಭೂತ್ವೋದಗಾಯತ್ । ದೇವಾನುದ್ಗಾಯತಿ । ಅಭಿಷ್ತೌತಿ ॥

ಪ್ರತಿಪದಾರ್ಥ

ಹಂಸೈಃ ಇವ—ಹಂಸಪಕ್ಷಿಗಳಂತೆ । **ವಾವದದ್ಭಿಃ**—ಮಧುರವಾಗಿ ಶಬ್ದಮಾಡುವವರೂ । **ಸಖಿಭಿಃ**—ಮಿತ್ರರೂಪರೂ ಆದ ಮರುತ್ತುಗಳೊಡಗೂಡಿ । **ಬೃಹಸ್ಪತಿಃ**—ಬೃಹಸ್ಪತಿಯು । **ಅಶ್ಮನ್ಮಯಾನಿ**—ಶಿಲೆಯಿಂದ ನಿರ್ಮಿತವೂ । **ನಹನಾ**—ಗೋಬಂಧಕವೂ ಆದ ಅಸುರರ ಸ್ಥಾನಗಳನ್ನು । **ವ್ಯಸ್ಯನ್**—ಪಡಿಲಗೊಳಿಸುತ್ತಲೂ । **ಅಭಿಕನಿಕ್ರದತ್**—ಶಬ್ದಮಾಡುತ್ತಲೂ । **ಗಾಃ**—ಗೋವುಗಳನ್ನು ಬಿಡಿಸಲಿಚ್ಛಿಸಿದನು । **ಉತ**—ಮತ್ತು । **ಪ್ರಾಸ್ತೌತ್**—ದೇವತೆಗಳನ್ನು ಪ್ರಶಂಸಿಸಿದನು । **ವಿದ್ವಾನ್**—ಸಕಲವನ್ನೂ ತಿಳಿದ ಅವನು । **ಉದ ಗಾಯತ್**—ಗಾನರೂಪದಲ್ಲಿ ಸ್ತುತಿಸಿದನು.

ಭಾವಾರ್ಥ

ಹಂಸಪಕ್ಷಿಗಳಂತೆ ಮಧುರವಾಗಿ ಶಬ್ದಮಾಡುವವರೂ, ಮಿತ್ರರೂಪರೂ ಆದ ಮರುತ್ತುಗಳೊಡಗೂಡಿ ಬೃಹಸ್ಪತಿಯು ಶಿಲೆಯಿಂದ ನಿರ್ಮಿತವೂ, ಗೋಬಂಧಕವೂ ಆದ ಅಸುರರ ಸ್ಥಾನಗಳನ್ನು ಪಡಿಲಗೊಳಿಸುತ್ತಲೂ, ಶಬ್ದಮಾಡುತ್ತಲೂ ಗೋವುಗಳನ್ನು ಬಿಡಿಸಲಿಚ್ಛಿಸಿದನು. ಸಕಲವನ್ನೂ ತಿಳಿದ ಅವನು ದೇವತೆಗಳನ್ನು ಗಾನರೂಪದಲ್ಲಿ ಪ್ರಶಂಸಿಸಿದನು.

English Translation

With his friends (the Maruts) clamouring like geese, throwing open the (Asuras') cattle-folds made of stone, Brihaspati calling aloud (desires to carry off) the cows; knowing all things he praises (the gods), and chants (their laudation).

ವಿಶೇಷವಿಷಯಗಳು

ದೇವಸುವ ಎಂಬ ಎಂಟುಮಂದಿ ದೇವತೆಗಳನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಬೃಹಸ್ಪತಯೇ ವಾಚಸ್ಪತಯೇ ಎಂಬ ದೇವತೆಗೆ ಅರ್ಪಿಸುವ ಹವಿಸ್ಸನ್ನು ಹೋಮಮಾಡುವಾಗ **ಹಂಸೈರಿವ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಹಂಸೈರಿವ ಸಖಿಭಿರ್ವಾವದದ್ಭಿಃ** ಎಂಬ ಸೂತ್ರದಿಂದ (ಅ. ೪-೧೧) ವಿವೃತವಾಗಿರುವುದು.

ಸಂಹಿತಾಪಾಠಃ

ಅವೋ ದ್ವಾಭ್ಯಾಂ ಪರ ಏಕಯಾ ಗಾ ಗುಹಾ ತಿಷ್ಠಂತೀರನೃತಸ್ಯ ಸೇತೌ ।
ಬೃಹಸ್ಪತಿಸ್ತಮಸಿ ಜ್ಯೋತಿರಿಚ್ಛನ್ನುದುಸ್ರಾ ಆಕರ್ವಿ ಹಿ ತಿಸ್ರ ಆವಃ ॥ ೪ ॥

ಪದಪಾಠಃ

ಅವಃ । ದ್ವಾಭ್ಯಾಂ । ಪರಃ । ಏಕಯಾ । ಗಾಃ । ಗುಹಾ । ತಿಷ್ಠಂತೀಃ । ಅನೃತಸ್ಯ । ಸೇತೌ ।
ಬೃಹಸ್ಪತಿಃ । ತಮಸಿ । ಜ್ಯೋತಿಃ । ಇಚ್ಛನ್ । ಉತ್ । ಉಸ್ರಾಃ । ಆ । ಅಕರ್ಷಃ । ವಿ । ಹಿ । ತಿಸ್ರಃ ।
ಅವರಿತ್ಯಾವಃ ॥ ೪ ॥

ಸಾಯಣಭಾಷ್ಯಂ

ಪಣಯೋ ಗಾ ಅಹೃತ್ಯ ತ್ರಿಷು ಸ್ಥಾನೇಷು ನಿದಧುಃ । ಅವೋಽವಸ್ತಾತ್ಸ್ಥಿತಾ ಅನೃತಸ್ಯ ತಮಸಃ ಸೇತೌ ಸ್ಥಾನೇ ಗುಹಾ ಗುಹಾಯಾಂ ತಿಷ್ಠಂತೀರ್ಗಾ ದ್ವಾಭ್ಯಾಂ ಸ್ಥಾನಾಭ್ಯಾಮುದಾಜತ್ । ತತಃ ಪರಃ ಪರಸ್ತಾದವಸ್ಥಿತಾ ಗಾ ಏಕಯೈಕೇನ ಸ್ಥಾನೇನೋದಗಮಯತ್ । ತದೇವಾಹ । ಬೃಹಸ್ಪತಿಸ್ತಸ್ಮಿಂಸ್ತಮಸಿ ಜ್ಯೋತಿಃ ಕರ್ತುಮಿಚ್ಛಂಸ್ತತ್ರ ಸ್ಥಿತಾ ಉಸ್ರಾ ಗಾ ಉದಾಕಃ । ಉದಕಾರ್ಷೀತ್ । ಪ್ರಾದುರ್ಭೂತಾ ಅಕಾರ್ಷೀತ್ । ಇತ್ಥಮಯಂ ತಿಸ್ರೋಽಸುರಾಣಾಂ ದ್ವಾರೋ ವ್ಯಾವಃ । ವಿವೃತವಾನ್ವಲು ॥ ವೃಣೋತೇರ್ಲುಙಿ ಮಂತ್ರೇ ಘಸೇತಿ ಚ್ಲೇರ್ಲುಕ್ । ಬಹುಲಂ ಛಂದಸೀತ್ಯಡಾಗಮಃ ॥

ಪ್ರತಿಪದಾರ್ಥ

ಅನೃತಸ್ಯ—ಕತ್ತಲುಕವಿದ । **ಸೇತೌ**—ಸ್ಥಾನದಲ್ಲಿ । **ಗುಹಾ**—ಗುಹೆಯಲ್ಲಿ । **ಅವಃ**—ಅಧಃ ಪ್ರದೇಶದಲ್ಲಿದ್ದ । **ಗಾಃ**—ಗೋವುಗಳನ್ನು । **ದ್ವಾಭ್ಯಾಂ**—ಎರಡು ಸ್ಥಾನಗಳಿಂದ(ಮಾರ್ಗಗಳಿಂದ)ಹೊರಡಿಸಿದನು । **ಪರಃ**—ಊರ್ಧ್ವಸ್ಥಾನದಲ್ಲಿದ್ದ ಗೋವುಗಳನ್ನು । **ಏಕಯಾ**—ಒಂದು ಮಾರ್ಗದಿಂದ ಹೊರಡಿಸಿದನು । **ಬೃಹಸ್ಪತಿಃ**—ಬೃಹಸ್ಪತಿಯು । **ತಮಸಿ**—ಕತ್ತಲೆಯಲ್ಲಿ । **ಜ್ಯೋತಿಃ**—ತೇಜಸ್ಸನ್ನುಂಟುಮಾಡುತ್ತ । **ಇಚ್ಛನ್**—ಗೋವುಗಳನ್ನು ಬಿಡಿಸಲಿಚ್ಛಿಸಿ । **ಉಸ್ರಾಃ**—ಗೋವುಗಳನ್ನು । **ಉದಾಕಃ**—ಹೊರಕ್ಕೆ ಬರಮಾಡಿದನು । **ತಿಸ್ರಃ**—ಅಸುರರ ಮೂರು ಬಾಗಿಲನ್ನೂ । **ವ್ಯಾವಃ**—ಸೀಳಿದನು.

ಭಾವಾರ್ಥ

ಕತ್ತಲುಕವಿದ ಸ್ಥಾನದಲ್ಲಿ ಗುಹೆಯಲ್ಲಿ ಅಧಃಪ್ರದೇಶದಲ್ಲಿದ್ದ ಗೋವುಗಳನ್ನು ಎರಡು ಮಾರ್ಗಗಳಿಂದ ಹೊರಡಿಸಿದನು. ಊರ್ಧ್ವಸ್ಥಾನದಲ್ಲಿದ್ದ ಗೋವುಗಳನ್ನು ಒಂದು ಮಾರ್ಗದಿಂದ ಹೊರಡಿಸಿದನು. ಬೃಹಸ್ಪತಿಯು ಕತ್ತಲಿನಲ್ಲಿ ತೇಜಸ್ಸನ್ನುಂಟುಮಾಡುತ್ತ ಗೋವುಗಳನ್ನು ಬಿಡಿಸಲಿಚ್ಛಿಸಿ ಗೋವುಗಳನ್ನು ಹೊರಕ್ಕೆ ಬರಮಾಡಿದನು. ಅಸುರರ ಕೊಟ್ಟಿಗೆಯ ಮೂರು ಬಾಗಿಲುಗಳನ್ನೂ ಸೀಳಿದನು.

English Translation

Brihaspati purposing to bring light into the darkness drove out the cows standing in the cave in the place of darkness below by two (ways), and those above by one (way) ; he opened the three (doors of the Asuras).

ಸಂಹಿತಾಪಾಠಃ

ವಿಭಿದ್ಯಾ ಪುರಂ ಶಯಥೇಮಪಾಚೀಂ ನಿಸ್ತ್ರೀಣಿ ಸಾಕಮುದಧೇರಕೃಂತತ್ ।
ಬೃಹಸ್ಪತಿರುಷಸಂ ಸೂರ್ಯಂ ಗಾಮರ್ಕಂ ವಿವೇದ ಸ್ತನಯನ್ನಿವ ದ್ಯೌಃ ॥

ಪದಪಾಠಃ

ವಿಽಭಿದ್ಯ । ಪುರಂ । ಶಯಥಾ । ಈಂ । ಅಪಾಚೀಂ । ನಿಃ । ತ್ರೀಣಿ । ಸಾಕಂ । ಉದಽಧೇಃ । ಅಕೃಂತತ್ ।
ಬೃಹಸ್ಪತಿಃ । ಉಷಸಂ । ಸೂರ್ಯಂ । ಗಾಂ । ಅರ್ಕಂ । ವಿವೇದ । ಸ್ತನಯನ್ನಽಇವ । ದ್ಯೌಃ ॥ ೫ ॥

ಸಾಯಣಭಾಷ್ಯಂ

ಸ ಬೃಹಸ್ಪತಿಃ ಶಯಥೋಽಪಶಯೇನ ಸ್ಥಿತ್ವಾಪಾಚೀಂ ಪರಾಙ್ಮುಖೀಮೀಮಿಮಾಮಸುರಪುರೀಂ ವಿಭಿದ್ಯ ವಿದಾರ್ಯೋದಧೇರ್ವಲಾದ್ಮೇಘರೂಪಾದಸುರಾತ್ಸಾಕಂ ಸಹ ಯುಗಪತ್ ತ್ರೀಣ್ಯುಷಸಂ ಸೂರ್ಯಂ ಗಾಮೇತಾನಿ ತ್ರೀಣಿ ನಿರಕೃಂತತ್। ನಿರ್ಗತಮಕಾರ್ಷೀತ್। ತಮಸಾವೃತೇಷು ಸ್ಥಾನೇಷೂಷಃ-ಕಾಲತಃ ಪಶ್ಚಾದ್ಭಾವಿನಂ ಸೂರ್ಯಂ ಚ ಜನಯಿತ್ವಾ ಪಶೂನ್ನಿರಗಮಯದಿತ್ಯರ್ಥಃ। ಸೋಽಯಮರ್ಕಮರ್ಚನೀಯಂ ಮಂತ್ರಂ ಸೂರ್ಯಂ ವಿವೇದ। ಪ್ರಜ್ಞಾಪಯತಿ । ಕಥಮಿವ । ಯಥಾ ಸ್ತನಯನ್ ಶಬ್ದಂ ಕುರ್ವನ್ ದ್ಯೌರಿವ ಸ್ಥಿತಃ ॥

ಪ್ರತಿಪದಾರ್ಥ

ಬೃಹಸ್ಪತಿಃ—ಬೃಹಸ್ಪತಿಯು । **ಶಯಥಾ**—ಪಕ್ಕದಲ್ಲಿಯೇ ಒರಗಿ ನಿಂತವನಾಗಿ । **ಅಪಾಚೀಂ**—ಪಶ್ಚಿಮಾಭಿಮುಖವಾದ । **ಈಂ ಪುರಂ**—ಅಸುರನ ಪಟ್ಟಣವನ್ನು । **ವಿಭಿದ್ಯ**—ನಾಶಮಾಡಿ । **ತ್ರೀಣಿ**—ಮೂರು ಪ್ರಕಾಶಸಾಧನಗಳಾದ । **ಉಷಸಂ**—ಉಷಸ್ಸನ್ನೂ । **ಸೂರ್ಯಂ**—ಸೂರ್ಯನನ್ನೂ । **ಗಾಂ**—ಗೋವನ್ನೂ । **ಉದಧೇಃ**—ಮೇಘರೂಪವಾದ ವಲನೆಂಬ ಅಸುರನಿಂದ । **ಸಾಕಂ**—ಒಟ್ಟಿಗೆ । **ನಿ ಅಕೃಂತತ್**—ಹೊರಕ್ಕೆ ಬರುವಂತೆ ಮಾಡಿದನು । **ದ್ಯೌಃ**—ದ್ಯುಲೋಕದಂತೆ । **ಸ್ತನಯನ್ನಿವ**—ಶಬ್ದಮಾಡುತ್ತ । **ಅರ್ಕಂ**—ಪೂಜ್ಯನಾದ ಸೂರ್ಯನನ್ನು । **ವಿವೇದ**—ಪ್ರಕಾಶಪಡಿಸಿದನು.

ಭಾವಾರ್ಥ

ಬೃಹಸ್ಪತಿಯು ಪಕ್ಕದಲ್ಲಿಯೇ ಒರಗಿ ನಿಂತವನಾಗಿ ಪಶ್ಚಿಮಾಭಿಮುಖವಾದ ಅಸುರನ ಪಟ್ಟಣವನ್ನು ನಾಶ ಮಾಡಿ ಮೂರುವಿಧವಾದ ಪ್ರಕಾಶಸಾಧನಗಳಾದ ಉಷಸ್ಸು, ಸೂರ್ಯ ಮತ್ತು ಗೋವನ್ನು ಮೇಘರೂಪವಾದ ವಲನೆಂಬ ಅಸುರನಿಂದ ಒಟ್ಟಿಗೆ ಹೊರಕ್ಕೆ ಬರುವಂತೆ ಮಾಡಿದನು. ದ್ಯುಲೋಕದಂತೆ ಶಬ್ದಮಾಡುತ್ತ ಪೂಜ್ಯನಾದ ಸೂರ್ಯನನ್ನು ಪ್ರಕಾಶಿಸುವಂತೆ ಮಾಡಿದನು.

English Translation

Resting near it, demolishing the western city, Brihaspati wrested at once from Vala the three, the dawn, the sun, the cow; thundering like the heaven, he proclaimed the adorable (sun).

ಸಂಹಿತಾಪಾಠಃ

ಇಂದ್ರೋ ವಲಂ ರಕ್ಷಿತಾರಂ ದುಘಾನಾಂ ಕರೇಣೇವ ವಿ ಚಕರ್ತಾ ರವೇಣ।
ಸ್ವೇದಾಂಜಿಭಿರಾಶಿರಮಿಚ್ಛಮಾನೋಽರೋದಯತ್ಪಣಿನಾ ಗಾ ಅಮುಷ್ಣಾತ್॥

ಪದಪಾಠಃ

ಇಂದ್ರಃ। ವಲಂ। ರಕ್ಷಿತಾರಂ। ದುಘಾನಾಂ। ಕರೇಣಽಇವ। ವಿ। ಚಕರ್ತ। ರವೇಣ।
ಸ್ವೇದಾಂಜಿಽಭಿಃ। ಆಽಶಿರಂ। ಇಚ್ಛಮಾನಃ। ಅರೋದಯತ್। ಪಣಿಂ। ಆ। ಗಾಃ। ಅಮುಷ್ಣಾತ್॥

ಸಾಯಣಭಾಷ್ಯಂ

ಇಂದ್ರ ಈಶ್ವರೋ ಬೃಹಸ್ಪತಿರ್ದುಘಾನಾಂ ಕ್ಷೀರಸ್ಯ ದೋಗ್ಧ್ರೀಣಾಂ ಗವಾಂ ರಕ್ಷಿತಾರಂ ವಲಮಸುರಂ ಕರೇಣೇವ ಸಾಯುಧಕರ ಇವ ಸ್ಥಿತೇನ ರವೇಣ ಶಬ್ದೇನ ವಲಂ ವಿ ಚಕರ್ತ। ವಿಚಿಚ್ಛೇದ। ಕಿಂಚ ಸ್ವೇದಾಂಜಿಭಿಃ। ಸ್ವೇದಾಂಜಯೋ ಮರುತಃ ಕ್ಷರದಾಭರಣಾಃ। ತೈಃ ಸಹಾಶಿರಮಾಶ್ರಯಣಂ ಸಂಯೋಗಮಿಚ್ಛಮಾನಃ ಕಾಮಯಮಾನಃ ಪಣಿಂ ವಲಸ್ಯಾನುಚರಮೇತನ್ನಾಮಾನಮಸುರಮರೋದಯತ್। ವ್ಯನಾಶಯತ್। ತತಸ್ತೇನಾಪಹೃತಾ ಗಾ ಅಮುಷ್ಣಾತ್। ಅಜಹಾರ॥

ಪ್ರತಿಪದಾರ್ಥ

ಇಂದ್ರಃ—ಇಂದ್ರನು (ಪ್ರಭುವಾದ ಬೃಹಸ್ಪತಿಯು)। **ದುಘಾನಾಂ**—ಕ್ಷೀರವನ್ನು ಕರೆಯತಕ್ಕ ಗೋವುಗಳನ್ನು। **ರಕ್ಷಿತಾರಂ**—ಬಚ್ಚಿಟ್ಟವ್ವ। **ವಲಂ**—ವಲನೆಂಬ ಅಸುರನನ್ನು। **ಕರೇಣೇವ**—ಆಯುಧಸಹಿತವಾದ ಹಸ್ತದಂತಿದ್ದ। **ರವೇಣ**—ಶಬ್ದದಿಂದಲೇ। **ವಿ ಚಕರ್ತ**—ಸೀಳಿಹಾಕಿದನು। **ಸ್ವೇದಾಂಜಿಭಿಃ**—ಬೆವರನ್ನೇ ಅಲಂಕಾರವಾಗಿ ಹೊಂದಿದ್ದ ಮರುತ್ತುಗಳೊಡನೆ। **ಆಶಿರಂ**—ದಧ್ಯಾದಿಗಳೊಡನೆ ಮಿಶ್ರಿತವಾದ ಸೋಮವನ್ನು। **ಇಚ್ಛಮಾನಃ**—ಅಪೇಕ್ಷಿಸಿದ ಇಂದ್ರನು (ಬೃಹಸ್ಪತಿಯು)। **ಪಣಿಂ**—ಪಣಿಯೆಂಬ ಅಸುರನನ್ನು। **ಅರೋದಯತ್**—ನಾಶಮಾಡಿದನು। **ಗಾಃ**—ಗೋವುಗಳನ್ನು। **ಅಮುಷ್ಣಾತ್**—ಅಪಹರಿಸಿದನು.

ಭಾವಾರ್ಥ

ಕ್ಷೀರವನ್ನು ಕರೆಯತಕ್ಕ ಗೋವುಗಳನ್ನು ಬಚ್ಚಿಟ್ಟಿದ್ದ ವಲನೆಂಬ ಅಸುರನನ್ನು ಆಯುಧಸಹಿತವಾದ ಹಸ್ತದಂತಿದ್ದ ಶಬ್ದದಿಂದಲೇ ಇಂದ್ರನು (ಬೃಹಸ್ಪತಿಯು) ಸೀಳಿಹಾಕಿದನು. ಬೆವರನ್ನೇ ಅಲಂಕಾರವಾಗಿ ಹೊಂದಿದ್ದ ಮರುತ್ತು

ಗಳೊಡನೆ ದಧ್ಯಾದಿಗಳೊಡನೆ ಮಿಶ್ರಿತವಾದ ಸೋಮವನ್ನು ಅಪೇಕ್ಷಿಸಿದ ಇಂದ್ರನು ಪಣಿಯೆಂಬ ಅಸುರನನ್ನು ನಾಶ ಮಾಡಿದನು. ಗೋವುಗಳನ್ನು ಅಪಹರಿಸಿದನು.

English Translation

Indra with his voice as with an (armed) hand clove Valva the defender of the milch cows; desirous of the mixture (of milk and Soma) he with (the Maruts), who were shining with perspiration, destroyed Pani and liberated the cows.

ಸಂಹಿತಾಪಾಠಃ

ಸ ಈಂ ಸತ್ಯೇಭಿಃ ಸಖಿಭಿಃ ಶುಚದ್ಭಿರ್ಗೋಧಾಯಸಂ ವಿ ಧನಸೈರದರ್ದಃ ।
ಬ್ರಹ್ಮಣಸ್ಪತಿರ್ವೃಷಭಿರ್ವರಾಹೈರ್ಘರ್ಮಸ್ವೇದೇಭಿರ್ದ್ರವಿಣಂ ವ್ಯಾನಟ್ ॥೭॥

ಪದಪಾಠಃ

ಸಃ। ಈಂ। ಸತ್ಯೇಭಿಃ। ಸಖಿಭಿಃ। ಶುಚದ್ಭಿಃ। ಗೋಧಾಯಸಂ। ವಿ। ಧನಸೈಃ। ಅದರ್ದರಿತ್ಯದರ್ದಃ।
ಬ್ರಹ್ಮಣಃ। ಪತಿಃ। ವೃಷಭಿಃ। ವರಾಹೈಃ। ಘರ್ಮಸ್ವೇದೇಭಿಃ। ದ್ರವಿಣಂ। ವಿ। ಆನಟ್ ॥ ೭ ॥

ಸಾಯಣಭಾಷ್ಯಂ

ಸ ಬೃಹಸ್ಪತಿಃ ಸತ್ಯೇಭಿರ್ಯಥಾರ್ಥಬಲೈಃ ಸಖಿಭಿಃ । ಸಖಿಭೂತೈಃ ಶುಚದ್ಭಿರ್ದೀಪ್ಯಮಾನೈ-ರ್ಧನಸೈರ್ಧನಸ್ಯ ಸಂಭಕ್ತ್ರೃಭಿರ್ಮರುದ್ಭಿಃ ಸಹ ಗೋಧಾಯಸಂ ಗವಾಂ ಧಾರಕಮಿಮೇಮಂ ವಲಂ ವ್ಯದರ್ದರಃ । ವ್ಯದಾರಯತ್ । ತತೋ ಬ್ರಹ್ಮಣ ಋಗ್ಯಜುಃಸಾಮಲಕ್ಷಣಸ್ಯ ಸ್ತೋತ್ರಸ್ಯ ಪತಿರಧಿಪತಿಃ ಸ ವೃಷಭಿರ್ವರ್ಷಿತೃಭಿರ್ವರಾಹೈರ್ವರಾಹಾರ್ಯೈರ್ವರಸ್ಯ ವರಣೀಯಸ್ಯೋದಕಸ್ಯಾಹರ್ತೃಭಿರ್ಘರ್ಮಸ್ವೇದೇಭಿ-ರ್ದೀಪ್ತಾಗಮನೈಃ ಯದ್ವಾ ಕ್ಷರದುದಕೈಃ । ಅಥವಾ। ಘರ್ಮೋ ಯಜ್ಞಃ। ತಂ ಪ್ರತಿ ಗಂತೃಭಿರ್ಮರುದ್ಭಿ-ರ್ದ್ರವಿಣಂ ಗೋಲಕ್ಷಣಂ ಧನಂ ವ್ಯಾನಟ್ । ವ್ಯಾಪ್ನೋತ್ ॥

ಪ್ರತಿಪದಾರ್ಥ

ಸಃ—ಬೃಹಸ್ಪತಿಯು । **ಸತ್ಯೇಭಿಃ**—ಸತ್ಯಾತ್ಮಕವಾದ ಶಕ್ತಿಯುಳ್ಳವರೂ । **ಸಖಿಭಿಃ**—ಮಿತ್ರಭೂತರೂ । **ಶುಚದ್ಭಿಃ**—ಪ್ರಕಾಶಮಾನರೂ । **ಧನಸೈಃ**—ಧನವನ್ನು ಹೊಂದಿರತಕ್ಕವರೂ ಆದ ಮರುತ್ತುಗಳೊಡಗೂಡಿ । **ಗೋಧಾಯಸಂ**—ಗೋವುಗಳನ್ನು ಬಚ್ಚಿಟ್ಟಿದ್ದ । **ಈಂ**—ವಲಸನ್ನು । **ವ್ಯದರ್ದರಃ**—ಸೀಳಿಹಾಕಿದನು । **ಬ್ರಹ್ಮಣಸ್ಪತಿಃ**—ಸ್ತುತಿಗಳಿಗೆ ಪ್ರಭುವಾದ ಬೃಹಸ್ಪತಿಯು । **ವೃಷಭಿಃ**—ಇಷ್ಟಾರ್ಥಪ್ರದರೂ । **ವರಾಹೈಃ**—ಅಪೇಕ್ಷಿತವಾದ ಉದಕವನ್ನು ಸುರಿಸುವವರೂ । **ಘರ್ಮಸ್ವೇದೇಭಿಃ**—ಯಜ್ಞಗಾಮಿಗಳೂ ಆದ ಮರುತ್ತುಗಳೊಡನೆ। **ದ್ರವಿಣಂ**—ಗೋರೂಪವಾದ ಧನವನ್ನು । **ವ್ಯಾನಟ್**—ಹೊಂದಿದನು.

ಭಾವಾರ್ಥ

ಸತ್ಯಾತ್ಮಕವಾದ ಶಕ್ತಿಯುಳ್ಳವರೂ, ಮಿತ್ರಭೂತರೂ, ಪ್ರಕಾಶವಾನರೂ, ಧನವನ್ನು ಹೊಂದಿರುವವರೂ ಆದ ಮರುತ್ತುಗಳೊಡಗೂಡಿ ಬೃಹಸ್ಪತಿಯು ಗೋವುಗಳನ್ನು ಬಚ್ಚಿಟ್ಟಿದ್ದ ವಲನನ್ನು ಸೀಳಿಹಾಕಿದನು. ಸ್ತುತಿಗಳಿಗೆ ಪ್ರಭುವಾದ ಬೃಹಸ್ಪತಿಯು ಇಷ್ಟಾರ್ಥಪ್ರದರೂ, ಅಪೇಕ್ಷಿತವಾದ ಉದಕವನ್ನು ಸುರಿಸುವವರೂ, ಯಜ್ಞಗಾಮಿಗಳೂ ಆದ ಮರುತ್ತುಗಳೊಡಗೂಡಿ ಗೋರೂಪವಾದ ಧನವನ್ನು ಹೊಂದಿದನು.

English Translation

Together with his true brilliant wealth-winning friendly (Maruts) he destroyed the detainer of the cows; Brahmanaspati, with the showerers (of benefits), the conveyers of desirable (water). the frequenters of sacrifice, acquired wealth.

ವಿಶೇಷವಿಷಯಗಳು

ವರಾಹೈಃ—ವರಾಹ ಶಬ್ದವನ್ನು ವಿವರಿಸುವಾಗ ಯಾಸ್ಕರು—

ಅಂಗಿರಸೋಽಪಿ ವರಾಹಾ ಉಚ್ಯಂತೇ । ಬ್ರಹ್ಮಣಸ್ಪತಿರ್ವೃಷಭಿರ್ವರಾಹೈಃ ।

(ನಿ. ೫-೪)

ಎಂದು ಹೇಳಿದಾರೆ. ಅಂಗಿರಾಋಷಿಗಳಿಗೆ ವರಾಹರೆಂದೂ ಹೆಸರು. ಏಕೆಂದರೆ, **ವರಾಹೈರ್ವರಾಹಾರೈಃ**—ಉತ್ತಮವಾದ ಸತ್ತ್ವಾಹಾರವನ್ನು ಮಾತ್ರ ಭುಜಿಸುವವರಾದ್ದರಿಂದ ಇವರಿಗೆ ವರಾಹರೆಂಬ ಹೆಸರು ಅಥವಾ **ವರಸ್ಯ ವರಣೀಯಸ್ಯೋದಕಸ್ಯಾಹರ್ತೃಭಿಃ**—ಸರ್ವರಿಂದಲೂ ಅಪೇಕ್ಷಿಸಲ್ಪಡುವ ವೃಷ್ಟ್ಯುದಕವನ್ನು (ಯಜ್ಞಾದಿಕರ್ಮಾನುಷ್ಠಾನಗಳಿಂದ) ಸುರಿಸುವಂತೆ ಮಾಡುವವರಾದ್ದರಿಂದ ಅಂಗಿರಸರಿಗೆ ವರಾಹರೆಂದು ಹೆಸರು ಎಂದು ಅರ್ಥವಿವರಣೆಮಾಡಿದಾರೆ.

ವರಾಹಶಬ್ದದ ನಾನಾರ್ಥಗಳನ್ನು (ಯಾಸ್ಕರು ನಿರುಕ್ತದಲ್ಲಿ ವಿವರಿಸಿರುವಂತೆ) ನಾವು ಋ. ಸಂ. ಭಾಗ 25, ಪುಟ 175 ರಲ್ಲಿಯೂ, ಭಾಗ 26, ಪುಟ 762 ರಲ್ಲಿಯೂ ವಿಸ್ತಾರವಾಗಿ ವಿವರಿಸಿದೇವೆ.

ಸಂಹಿತಾಪಾಠಃ

ತೇ ಸತ್ಯೇನ ಮನಸಾ ಗೋಪತಿಂ ಗಾ ಇಯಾನಾಸ ಇಷಣಯಂತ ಧೀಭಿಃ ।
ಬೃಹಸ್ಪತಿರ್ಮಿಥೋಽವದ್ಯಪೇಭಿರುದುಸ್ರಿಯಾ ಅಸೃಜತ ಸ್ತಯುಗ್ಭಿಃ ॥ ೯ ॥

ಪದಪಾಠಃ

ತೇ । ಸತ್ಯೇನ । ಮನಸಾ । ಗೋಽಪತಿಂ । ಗಾಃ । ಇಯಾನಾಸಃ । ಇಷಣಯಂತ । ಧೀಭಿಃ ।
ಬೃಹಸ್ಪತಿಃ । ಮಿಥಃಽಅವದ್ಯಪೇಭಿಃ । ಉತ್ । ಉಸ್ರಿಯಾಃ । ಅಸೃಜತ । ಸ್ತಯುಕ್ಽಭಿಃ ॥ ೯ ॥

ಸಾಯಣಭಾಷ್ಯಂ

ಗಾಃ ಪಣಿಭಿರಪಹೃತಾನ್ಪಶೂನಿಯಾನಾಸೋಽಭಿಗಚ್ಛಂತಃ ಸತ್ಯೇನ ಯಥಾರ್ಥಭೂತೇನ ಮನಸಾ ಯುಕ್ತಾಸ್ತೇ ಮರುತೋ ಧೀಭಿರಾತ್ಮೀಯೈಃ ಕರ್ಮಭಿರೇತಂ ಬೃಹಸ್ಪತಿಂ ಗೋಪತಿಂ ತದಾಹರಣೇನ ಗವಾಂ ಸ್ವಾಮಿನಂ ಕುರ್ವ ಇತೀಷಣಯಂತ। ಐಚ್ಛನ್। ಬೃಹಸ್ಪತಿಶ್ಚ ಮಿಥೋಽವದ್ಯಪೇಭಿಃ॥ ಪಾತೇಃ ಕರ್ಮಣ್ಯೌಣಾದಿಕಃ ಪ್ರತ್ಯಯಃ॥ ಅವದ್ಯರೂಪಾದಸುರಾದ್ರಕ್ಷಿತವ್ಯಾ ಗಾವೋ ಯೇಷು ಮರುತ್ಸು ಪರಸ್ಪರಂ ಸಂಗಚ್ಛಂತ ಇತಿ ತೇ ತಥೋಕ್ತಾಃ। ತೈಃ ಸ್ವಯುಗ್ಭಿಃ ಸ್ವಯಮೇವ ಯುಕ್ತೈರ್ಮರುದ್ಭಿ-ರುಸ್ರಿಯಾ ಗಾ ಉದಸೃಜತ। ಪರ್ವತಾನ್ನಿರಗಮಯತ್॥

ಪ್ರತಿಪದಾರ್ಥ

ಸತ್ಯೇನ—ಪ್ರಾಮಾಣಿಕವಾದ। **ಮನಸಾ**—ಮನಸ್ಸಿನಿಂದ ಕೂಡಿದ। **ತೇ**—ಮರುತ್ತುಗಳು। **ಗಾಃ**—ಗೋವುಗಳನ್ನು। **ಇಯಾನಾಸಃ**—ಹುಡುಕುತ್ತ। **ಧೀಭಿಃ**—ತಮ್ಮ ಕರ್ಮಗಳಿಂದ। (**ಬಹಸ್ಪತಿಃ**—ಬೃಹಸ್ಪತಿಯನ್ನು)। **ಗೋಪತಿಂ**—ಗೋವುಗಳಿಗೆ ಒಡೆಯನನ್ನಾಗಿ ಮಾಡಲು। **ಇಷಣಯಂತ**—ಅಪೇಕ್ಷಿಸಿದರು। **ಬೃಹಸ್ಪತಿಃ**—ಬೃಹಸ್ಪತಿಯು। **ಮಿಥೋಽವದ್ಯಪೇಭಿಃ**—ಅಸುರನಿಂದ ಪರಸ್ಪರ ರಕ್ಷಣೆಯನ್ನು ಕೊಡತಕ್ಕವರೂ। **ಸ್ವಯುಗ್ಭಿಃ**—ಸ್ವಯಂಪ್ರೇರಿತರಾಗಿ ಬಂದು ಸೇರುವವರೂ ಆದ ಮರುತ್ತುಗಳೊಡನೆ ಕೂಡಿ। **ಉಸ್ರಿಯಾಃ**—ಗೋವುಗಳನ್ನು। **ಉದಸೃಜತ**—ಹೊರಕ್ಕೆ ಬರುವಂತೆ ಮಾಡಿದನು.

ಭಾವಾರ್ಥ

ಪ್ರಾಮಾಣಿಕವಾದ ಮನಸ್ಸಿನಿಂದ ಕೂಡಿದ ಮರುತ್ತುಗಳು ಗೋವುಗಳನ್ನು ಹುಡುಕುತ್ತ ತಮ್ಮ ಕರ್ಮಗಳಿಂದ ಬೃಹಸ್ಪತಿಯನ್ನು ಗೋವುಗಳಿಗೆ ಒಡೆಯನನ್ನಾಗಿ ಮಾಡಲು ಅಪೇಕ್ಷಿಸಿದರು- ಅಸುರನಿಂದ ಪರಸ್ಪರ ರಕ್ಷಣೆಯನ್ನು ಕೊಡತಕ್ಕವರೂ, ಸ್ವಯಂಪ್ರೇರಿತರಾಗಿ ಬಂದು ಸೇರುವವರೂ ಆದ ಮರುತ್ತುಗಳೊಡಗೂಡಿದ ಬೃಹಸ್ಪತಿಯು ಗೋವುಗಳನ್ನು ಹೊರಕ್ಕೆ ಬರುವಂತೆ ಮಾಡಿದನು.

English Translation

They with truthful mind searching for the cows resolved by their exploits to make him the lord of cattle; Brihaspati with his self-yoked (allies) mutually defending each other from reproach, set free the cows.

ಸಂಹಿತಾಪಾಠಃ

ತಂ ವರ್ಧಯಂತೋ ಮತಿಭಿಃ ಶಿವಾಭಿಃ ಸಿಂಹಮಿವ ನಾನದತಂ ಸದಸ್ಥೇ।
ಬೃಹಸ್ಪತಿಂ ವೃಷಣಂ ಶೂರಸಾತೌ ಭರೇಭರೇ ಅನು ಮದೇಮ ಜಿಷ್ಣುಂ ॥೯॥

ಪದಪಾಠಃ

ತಂ। ವರ್ಧಯಂತಃ। ಮತಿಽಭಿಃ। ಶಿವಾಭಿಃ। ಸಿಂಹಂ।ಇವ। ನಾನದತಂ। ಸದಸ್ಥೇ।

ಬೃಹಸ್ಪತಿಂ । ವೃಷಣಂ । ಶೂರ॑ಸಾತೌ । ಭರೇ॑ಭರೇ । ಅನು । ಮದೇಮ । ಜಿಷ್ಣುಂ ॥ ೯ ॥

ಸಾಯಣಭಾಷ್ಯಂ

ಸಧಸ್ಥೇ । ಸಹ ತಿಷ್ಠಂತ್ಯತ್ರ ದೇವಾ ಇತಿ ಸಧಸ್ಥಮಂತರಿಕ್ಷಂ । ತಸ್ಮಿನ್ ಸಿಂಹಮಿವ ನಾನದತಂ ಪುನಃಪುನಃ ಶಬ್ದಾಯಮಾನಂ ವೃಷಣಂ ಕಾಮಾನಾಂ ವರ್ಷಿತಾರಂ ಜಿಷ್ಣುಂ ಜಯಶೀಲಂ ತಂ ಬೃಹಸ್ಪತಿಂ ವರ್ಧಯಂತೋ ಮರುತೋ ವಯಂ ಶೂರಸಾತೌ ಶೂರೈಃ ಸಂಭಜನೀಯೇ ಭರೇ ಭರೇ ಸಂಗ್ರಾಮೇ ಶಿವಾಭಿಃ ಕಲ್ಯಾಣೀಭಿಃ ಸ್ತುತಿಭಿರನು ಮದೇಮ। ಅನುಹ್ವಯಾಮಃ। ಸ್ತೋತೃಪರತ್ವೇನ ವಾ ಯೋಜನೀಯಂ॥

ಪ್ರತಿಪದಾರ್ಥ

ಸಧಸ್ಥೇ—ಅಂತರಿಕ್ಷದಲ್ಲಿ । **ಸಿಂಹಮಿವ**—ಸಿಂಹದಂತೆ । **ನಾನದತಂ**—ಪದೇಪದೇ ಶಬ್ದವಾಡುತ್ತಿರುವವನೂ । **ವೃಷಣಂ**—ಇಷ್ಟಾರ್ಥಪ್ರದನೂ । **ಜಿಷ್ಣುಂ**—ಜಯಶೀಲನೂ ಆದ । **ತಂ ಬೃಹಸ್ಪತಿಂ**—ಆ ಬೃಹಸ್ಪತಿಯನ್ನು । **ವರ್ಧಯಂತಃ**—ಪುಷ್ಟಿಗೊಳಿಸುವ ನಾವು । **ಶೂರಸಾತೌ**—ಶೂರರು ಜಯವನ್ನು ಪಡೆಯುವ । **ಭರೇಭರೇ**—ಯುದ್ಧದಲ್ಲಿ । **ಶಿವಾಭಿಃ**—ಕಲ್ಯಾಣಾತ್ಮಕವಾದ । **ಮತಿಭಿಃ**—ಸ್ತುತಿಗಳಿಂದ । **ಅನು ಮದೇಮ**—ಹರ್ಷಗೊಳಿಸುತ್ತೇವೆ.

ಭಾವಾರ್ಥ

ಅಂತರಿಕ್ಷದಲ್ಲಿ ಸಿಂಹದಂತೆ ಪದೇಪದೇ ಶಬ್ದವಾಡುತ್ತಿರುವವನೂ, ಇಷ್ಟಾರ್ಥಪ್ರದನೂ, ಜಯಶೀಲನೂ ಆದ ಬೃಹಸ್ಪತಿಯನ್ನು ಪುಷ್ಟಿಗೊಳಿಸುವ ನಾವು, ಶೂರರು ಜಯವನ್ನು ಪಡೆಯುವ ಯುದ್ಧದಲ್ಲಿ ಕಲ್ಯಾಣಾತ್ಮಕವಾದ ಸ್ತುತಿಗಳಿಂದ ಹರ್ಷಗೊಳಿಸುತ್ತೇವೆ.

English Translation

Magnifying the victorious Brihaspati, the showerer (of benefits), roaring in mid-heaven like a lion, let us praise him in the conflicts where heroes win. with auspicious praises.

ಸಂಹಿತಾಪಾಠಃ

ಯದಾ ವಾಜಮಸನದ್ವಿಶ್ವರೂಪಮಾ ದ್ಯಾಮರುಕ್ಷದುತ್ತರಾಣಿ ಸದ್ಮ ।
ಬೃಹಸ್ಪತಿಂ ವೃಷಣಂ ವರ್ಧಯಂತೋ ನಾನಾ ಸಂತೋ ಬಿಭ್ರತೋ ಜ್ಯೋತಿರಾಸಾ ॥ ೧೦ ॥

ಪದಪಾಠಃ

ಯದಾ । ವಾಜಂ । ಅಸನತ್ । ವಿಶ್ವರೂಪಂ । ಆ । ದ್ಯಾಂ । ಅರುಕ್ಷತ್ । ಉತ್ತರಾಣಿ । ಸದ್ಮ ।
ಬೃಹಸ್ಪತಿಂ । ವೃಷಣಂ । ವರ್ಧಯಂತಃ । ನಾನಾ । ಸಂತಃ । ಬಿಭ್ರತಃ । ಜ್ಯೋತಿಃ । ಆಸಾ ॥ ೧೦ ॥

ಸಾಯಣಭಾಷ್ಯಂ

ಸ ಬೃಹಸ್ಪತಿರ್ಯದಾ ಯೆಸ್ಮಿನ್ಕಾಲೇ ವಿಶ್ವರೂಪಂ ನಾನಾರೂಪಂ ವಾಜಂ ಗೋಲಕ್ಷಣಮನ್ನಮು-ಸನತ್ ಭಜತೇ ಯದಾ ವಾಹೃತಪಶುಕಃ ಸನ್ ದ್ಯಾಂ ದ್ಯುಲೋಕಮರುಕ್ಷತ್ ಆರೋಹತಿ। ಅಥವೋತ್ತ-ರಾಣಿ ವಾ ಸದ್ಮ ಸ್ಥಾನಾನ್ಯಾರೋಹತಿ॥ ರುಹೇರ್ಲುಙಿ ಚ್ಲೇಃ ಶಲ ಇಗುಪಧಾದನಿಟಃ ಕ್ಸಃ ಪಾ. ೩-೧-೪೫॥ ತದಾನೀಂ ವೃಷಣಂ ವರ್ಷಿತಾರಂ ಬೃಹಸ್ಪತಿಮಾಸಾಸ್ಯೇನ ದೇವಾ ವರ್ಧಯಂತೋ ಭವಂತಿ। ತಥಾ ನಾನಾ ದಿಕ್ಷು ಸಂತೋ ಭವಂತೋ ಜ್ಯೋತಿರ್ಬಿಭ್ರತೋ ಧಾರಯಂತೋ ದೇವಾಶ್ಚ ಸ್ತುವಂತಿ॥

ಪ್ರತಿಪದಾರ್ಥ

ಯದಾ—ಯಾವಾಗ। **ವಿಶ್ವರೂಪಂ**—ನಾನಾವಿಧವಾದ ರೂಪವುಳ್ಳ। **ವಾಜಂ**—ಅನ್ನವನ್ನು। **ಅಸನತ್**—ಬೃಹಸ್ಪತಿಯು ಹೊಂದುವನೋ। **ದ್ಯಾಂ**—ದ್ಯುಲೋಕವನ್ನು। **ಅರುಕ್ಷತ್**—ಯಾವಾಗ ಹತ್ತುವನೋ। **ಉತ್ತರಾಣಿ ವಾ ಸದ್ಮ**—ಉತ್ತರದಿಕ್ಕಿನ ಪ್ರದೇಶಗಳನ್ನು ಯಾವಾಗ ಸೇರುವನೋ ಆಗ। **ನಾನಾ ಸಂತಃ**—ಅನೇಕ ದಿಕ್ಕುಗಳಲ್ಲಿರುವವರೂ। **ಜ್ಯೋತಿಃ**—ತೇಜಸ್ಸನ್ನು। **ಬಿಭ್ರತಃ**—ಧರಿಸಿರುವವರೂ ಆದ ದೇವತೆಗಳು। **ವೃಷಣಂ**—ಇಷ್ಟಾರ್ಥಪ್ರದನಾದ। **ಬೃಹಸ್ಪತಿಂ**—ಬೃಹಸ್ಪತಿಯನ್ನು। **ಆಸಾ**—ಮುಖಗಳಿಂದ। **ವರ್ಧಯಂತಃ**—ಸ್ತುತಿಸಿ ಪುಷ್ಟಿಗೊಳಿಸುತ್ತಾರೆ.

ಭಾವಾರ್ಥ

ಬೃಹಸ್ಪತಿಯು ಯಾವಾಗ **ನಾನಾ**ವಿಧವಾದ ರೂಪಗಳುಳ್ಳ ಅನ್ನವನ್ನು (ಗೋವುಗಳನ್ನು) ಹೊಂದುವನೋ, ಯಾವಾಗ ದ್ಯುಲೋಕದ ಪ್ರದೇಶಗಳನ್ನಾಗಲೀ ಅಥವಾ ಉತ್ತರದಿಕ್ಕಿನ ಪ್ರದೇಶವನ್ನಾಗಲೀ ಹತ್ತುವನೋ ಆಗ ಅನೇಕ ದಿಕ್ಕುಗಳಲ್ಲಿರುವವರೂ, ತೇಜಸ್ಸನ್ನು ಧರಿಸಿರುವವರೂ ಆದ ದೇವತೆಗಳು ಇಷ್ಟಾರ್ಥಪ್ರದನಾದ ಬೃಹಸ್ಪತಿಯನ್ನು ತಮ್ಮ ಮುಖಗಳಿಂದ ಸ್ತುತಿಸಿ ಪುಷ್ಟಿಗೊಳಿಸುತ್ತಾರೆ.

English Translation

When he acquires food of various kinds, when he ascends the sky or the northern stations, (the gods are) extolling Brihaspati, the showerer (of benefits), with their mouth, being in various (quarters), bearing light.

ಸಂಹಿತಾಪಾಠಃ

ಸತ್ಯಾಮಾಶಿಷಂ ಕೃಣುತಾ ವಯೋಧೈ ಕೀರಿಂ ಚಿದ್ಧ್ಯವಥ ಸ್ವೇಭಿರೇವೈಃ।
ಪಶ್ಚಾ ಮೃಧೋ ಅಪ ಭವಂತು ವಿಶ್ವಾಸ್ತದ್ರೋದಸೀ ಶೃಣುತಂ ವಿಶ್ವಮಿನ್ವೇ॥

ಪದಪಾಠಃ

ಸತ್ಯಾಂ। ಆಶಿಷಂ। ಕೃಣುತ। ವಯಃಧೈ। ಕೀರಿಂ। ಚಿತ್। ಹಿ। ಅವಥ। ಸ್ವೇಭಿಃ। ಏವೈಃ।

ಪಶ್ಚಾ । ಮೃಧಃ । ಅಪ । ಭವಂತು । ವಿಶ್ವಾಃ । ತತ್ । ರೋದಸೀ ಇತಿ । ಶೃಣುತಂ । ವಿಶ್ವಮಿನ್ವೇ ಇತಿ ವಿಶ್ವಂ೽ಇನ್ವೇ ॥ ೧೧ ॥

ಸಾಯಣಭಾಷ್ಯಂ

ಹೇ ಬೃಹಸ್ಪತಿಪ್ರಭೃತಯೋ ದೇವಾ ವಯೋಧಾ ಅನ್ನಸ್ಯ ಧಾನಾಯೋಸ್ಮದೀಯಾಮಾಶಿಷಂ ಸ್ತುತಿಂ ಸತ್ಯಾಂ ಯಥಾರ್ಥಾಂ ಕೃಣುತ । ಕುರುತ । ತಥಾ ಯೂಯಂ ಸ್ವೇಭಿರಾತ್ಮೀಯೈರೇವೈರ್ಗಮನೈಃ ಕೀರಿಂ ಸ್ತೋತಾರಂ ಮಾಮವಥ । ರಕ್ಷಥ । ಹಿರವಧಾರಣೇ । ಪಶ್ಚಾ ॥ ಪಶ್ಚಾ ಚ ಛಂದಸಿ । ಪಾ. ೫ ೩-೩೩ । ಇತಿ ಸಿಪಾತಿತಃ ॥ ಪಶ್ಚಾದಿಶ್ವಾಃ ಸರ್ವಾ ಮೃಧೋ ಹಿಂಸಿತ್ರ್ಯೋ೭ಪ ಭವಂತು । ನಶ್ಯಂತು । ತದಿದಮುಸ್ಯಾ-ಭಿರುಕ್ತಂ ವಚನಂ ಹೇ ವಿಶ್ವಮಿನ್ವೇ ವಿಶ್ವಸ್ಯ ಪ್ರೀಣಯಿತ್ರ್ಯೌ ಹೇ ರೋದಸೀ ದ್ಯಾವಾಪೃಥಿವ್ಯೌ ಶೃಣುತಂ ॥

ಪ್ರತಿಪದಾರ್ಥ

(ಬೃಹಸ್ಪತಿಯೇ ಮೊದಲಾದ ಎಲ್ಲೆ ದೇವತೆಗಳೇ) **ವಯೋಧೈ**—ಅನ್ನವನ್ನು ಅರ್ಪಿಸಲು । **ಆಶಿಷಂ**—ನಮ್ಮ ಸ್ತುತಿಯನ್ನು । **ಸತ್ಯಾಂ**—ಸತ್ಯಾತ್ಮಕವನ್ನಾಗಿ । **ಕೃಣುತ**—ಮಾಡಿರಿ । **ಸ್ವೇಭಿಃ**—ನಿಮ್ಮ । **ವಿವೈಃ**—ಗಮನಗಳಿಂದ । **ಕೀರಿಂ**—ಸ್ತುತಿಕರ್ತನಾದ ನನ್ನನ್ನು । **ಅವಥ**—ರಕ್ಷಿಸಿರಿ । **ವಿಶ್ವಾಃ ಮೃಧಃ**—ನಮ್ಮ ಹಿಂಸಕರಾದ ಸಕಲ ಶತ್ರುಗಳೂ । **ಪಶ್ಚಾ**—ಕೊನೆಯಲ್ಲಿ । **ಅಪ ಭವಂತು**—ನಾಶವಾಗಲಿ । **ವಿಶ್ವಮಿನ್ವೇ**—ಜಗತ್ತನ್ನೆಲ್ಲ ಹರ್ಷಗೊಳಿಸುವ । **ರೋದಸೀ**—ಎಲ್ಲೆ ದ್ಯಾವಾಪೃಥಿವಿಗಳೇ । **ತತ್**—ನಮ್ಮ ಸ್ತುತಿಯನ್ನು । **ಶೃಣುತಂ**—ಕೇಳಿರಿ.

ಭಾವಾರ್ಥ

ಬೃಹಸ್ಪತಿಯೇ ಮೊದಲಾದ ಎಲ್ಲೆ ದೇವತೆಗಳೇ, ಹವಿಸ್ಸಿನ ರೂಪವಾದ ಅನ್ನವನ್ನು ಅರ್ಪಿಸಲು ನಮ್ಮ ಸ್ತುತಿಯನ್ನು ಸತ್ಯಾತ್ಮಕವನ್ನಾಗಿ ಮಾಡಿರಿ. ನಿಮ್ಮ ಗಮನಗಳಿಂದ ಸ್ತುತಿಕರ್ತನಾದ ನನ್ನನ್ನು ರಕ್ಷಿಸಿರಿ. ನಮ್ಮ ಹಿಂಸಕರಾದ ಸಕಲ ಶತ್ರುಗಳೂ ನಾಶವಾಗಲಿ. ಜಗತ್ತನ್ನೆಲ್ಲ ಹರ್ಷಗೊಳಿಸುವ ಎಲ್ಲೆ ದ್ಯಾವಾಪೃಥಿವಿಗಳೇ, ನಮ್ಮ ಸ್ತುತಿಯನ್ನು ಕೇಳಿರಿ.

English Translation

Make good our prayer for the bestowal of food; you protect through your movements even (me) your worshipper; may all our enemies he driven back again; heaven and earth, the delighters of all, hear this (our prayer).

ಸಂಹಿತಾಪಾಠಃ

ಇಂದ್ರೋ ಮಹ್ನಾ ಮಹತೋ ಅರ್ಣವಸ್ಯ ವಿ ಮೂರ್ಧಾನಮಭಿನದ-
ರ್ಬುದಸ್ಯ ।
ಅಹನ್ನಹಿಮರಿಣಾತ್ಸಪ್ತ ಸಿಂಧೂನ್ದೇವೈರ್ದ್ಯಾವಾಪೃಥಿವೀ ಪ್ರಾವತಂ ನಃ ॥

ಪದಪಾಠಃ

ಇಂದ್ರಃ । ಮಹ್ನಾ । ಮಹತಃ । ಅರ್ಣವಸ್ಯ । ವಿ । ಮೂರ್ಧಾನಂ । ಅಭಿನತ್ । ಅರ್ಬುದಸ್ಯ । ಅಹನ್ । ಅಹಿಂ । ಅರಿಣಾತ್ । ಸಪ್ತ । ಸಿಂಧೂನ್ । ದೇವ್ಯೈಃ । ದ್ಯಾವಾಪೃಥಿವೀ ಇತಿ । ಪ್ರ । ಅವತಂ ॥ ನಃ ॥ ೧೨ ॥

ಸಾಯಣಭಾಷ್ಯಂ

ಇಂದ್ರ ಈಶ್ವರೋ ಮಹ್ನಾ ಮಹತ್ತ್ವೇನ ಯುಕ್ತೋ ಬೃಹಸ್ಪತಿರ್ಮಹತೋ ಅರ್ಣವಸ್ಯೋದಕವತೋಽರ್ಬುದಸ್ಯಾಂಬುದಸ್ಯ ಮೇಘಸ್ಯ ಮೂರ್ಧಾನಂ ಶಿರೋ ವ್ಯಭಿನತ್ । ವ್ಯಚ್ಛಿನತ್ । ತದುಚ್ಯತೇ । ಅಹಿಮಹಂತವ್ಯಮಪಾಮಾವರಕಂ ಶತ್ರುಮಹನ್ । ಅವಧೀತ್ । ಅತಃ ಸಪ್ತ ಸರ್ಪಣಶೀಲಾಃ ಸಿಂಧೂನ್ ಸ್ಯಂದಮಾನಾ ಅಪಃ । ಯದ್ವಾ । ಸಪ್ತಸಂಖ್ಯಾಕಾ ಗಂಗಾದ್ಯಾ ನದೀಃ । ಅರಿಣಾತ್ । ಸಮುದ್ರಂ ಪ್ರತ್ಯಗಮಯತ್ । ಅಥ ಪ್ರತ್ಯಕ್ಷಕೃತಃ । ಹೇ ದ್ಯಾವಾಪೃಥಿವ್ಯೌ ದೇವ್ಯೈಃ ಸಹ ನೋಽಸ್ಮಾನ್ಪ್ರಾವತಂ । ಪ್ರರಕ್ಷತಂ ॥

ಪ್ರತಿಪದಾರ್ಥ

ಮಹ್ನಾ—ಮಹತ್ತ್ವಪೂರಿತನಾದವನೂ । **ಇಂದ್ರಃ**—ಪ್ರಭುವೂ ಆದ ಬೃಹಸ್ಪತಿಯು । **ಮಹತಃ**—ಮಾಹಾತ್ಮ್ಯದಿಂದ ಕೂಡಿದುದೂ । **ಅರ್ಣವಸ್ಯ**—ಉದಕಯುಕ್ತವೂ ಆದ । **ಅರ್ಬುದಸ್ಯ**—ಮೇಘದ । **ಮೂರ್ಧಾನಂ**—ಶಿರಸ್ಸನ್ನು । **ವ್ಯಭಿನತ್**—ಸೀಳಿಹಾಕಿದನು । **ಅಹಿಂ**—ಶತ್ರುವನ್ನು । **ಅಹನ್**—ನಾಶಮಾಡಿದನು । **ಸಪ್ತ ಸಿಂಧೂನ್**—ಗಂಗಾದಿ ಸಪ್ತನದಿಗಳನ್ನೂ । **ಅರಿಣಾತ್**—ಸಮುದ್ರದ ಕಡೆಗೆ ಹರಿಸಿದನು । **ದ್ಯಾವಾಪೃಥಿವೀ**—ಎಲೈ ದ್ಯಾವಾಪೃಥಿವಿಗಳೇ ನೀವು । **ದೇವ್ಯೈಃ**—ದೇವತೆಗಳೊಡಗೂಡಿ । **ನಃ**—ನಮ್ಮನ್ನು । **ಪ್ರಾವತಂ**—ರಕ್ಷಿಸಿರಿ.

ಭಾವಾರ್ಥ

ಮಹತ್ತ್ವಪೂರಿತನೂ, ಪ್ರಭುವೂ ಆದ ಬೃಹಸ್ಪತಿಯು ಮಾಹಾತ್ಮ್ಯದಿಂದ ಕೂಡಿದುದೂ, ಉದಕಯುಕ್ತವೂ ಆದ ಮೇಘದ ಶಿರಸ್ಸನ್ನು ಸೀಳಿಹಾಕಿದನು. ಶತ್ರುವನ್ನು ನಾಶಮಾಡಿದನು- ಗಂಗಾದಿ ಸಪ್ತನದಿಗಳನ್ನೂ ಸಮುದ್ರದ ಕಡೆಗೆ ಹರಿಸಿದನು. ಎಲೈ ದ್ಯಾವಾಪೃಥಿವಿಗಳೇ, ನೀವು ದೇವತೆಗಳೊಡಗೂಡಿ ನಮ್ಮನ್ನು ರಕ್ಷಿಸಿರಿ.

English Translation

Indra by his might has cleft the brow of the vast watery cloud, he has has slain Ahi; he has made the seven rivers flow; do you, heaven and earth, along with the gods, protect us.

ಅರವತ್ತೆಂಟನೆಯ ಸೂಕ್ತ

ಪೀಠಿಕೆ

ಉದಪ್ರುತ ಇತಿ ದ್ವಾದಶರ್ಚಮಷ್ಟಮಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಉದಪ್ರುತ ಇತ್ಯನುಕ್ರಾಂತಂ ॥ ಉಕ್ಥೇ ಬ್ರಾಹ್ಮಣಾಚ್ಛಂಸಿನ ಏತತ್ಸೂಕ್ತಂ । ಸೂತ್ರಿತಂ ಚ । ಪ್ರ ಮಂಹಿಷ್ಠಾಯೋದಪ್ರುತೋಽಚ್ಛಾ ಮ ಇಂದ್ರಂ । ಆ. ೬-೧ । ಇತಿ ॥

ಅನುವಾದವು—ಉದಪ್ರುತಃ ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆ. ಅನುಕ್ರಮಣಿಕೆಯಲ್ಲಿ—**ಉದಪ್ರುತಃ** ಇತ್ಯಾದಿಯಾಗಿ ಹೇಳಿರುವುದು. ಉಕ್ಥಮಂತ್ರಶಠನದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಈ ಸೂಕ್ತವನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ಮಂಹಿಷ್ಠಾಯೋದಪ್ರುತೋಽಚ್ಛಾಮ ಇಂದ್ರಂ** ಎಂಬ ಸೂತ್ರದಿಂದ (ಅ. ೬-೧) ವಿವೃತವಾಗಿರುವುದು.

ಸೂಕ್ತ—೬೮

ಮಂಡಲ—೧೦ ॥ ಅನುವಾಕ—೫ ॥ ಸೂಕ್ತ—೬೮ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೧೭, ೧೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ಆಯಾಸ್ಯಃ ॥
ದೇವತಾ—ಬೃಹಸ್ಪತಿಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಉದಪ್ರುತೋ ನ ವಯೋ ರಕ್ಷಮಾಣಾ ವಾವದತೋ ಅಭ್ರಿಯಸ್ಯೇವ ಘೋಷಾಃ ।
ಗಿರಿಭ್ರಜೋ ನೋರ್ಮಯೋ ಮದಂತೋ ಬೃಹಸ್ಪತಿಮಭ್ಯರ್ಕಾ ಅನಾವನ್ ॥

ಪದಪಾಠಃ

ಉದ್ಆಪ್ರುತಃ । ನ । ವಯಃ । ರಕ್ಷಮಾಣಾಃ । ವಾವದತಃ । ಅಭ್ರಿಯಸ್ಯ ಇವ । ಘೋಷಾಃ ।
ಗಿರಿಭ್ರಜಃ । ನ । ಊರ್ಮಯಃ । ಮದಂತಃ । ಬೃಹಸ್ಪತಿಂ । ಅಭಿ । ಅರ್ಕಾಃ । ಅನಾವನ್ ॥ ೧ ॥

ಸಾಯಣಭಾಷ್ಯಂ

ಉದಪ್ರುತ ಉದಕಸ್ಯೋದ್ಗಮಯಿತಾರೋ ವಯಃ ಪಕ್ಷಿಣಃ ಪಕ್ಷಾತ್ಪಸ್ಯಾದ್ರಕ್ಷಮಾಣಾಃ ಕೃಷೀವಲಾಃ । ನ ಉಪಮಾರ್ಥೇ । ಯಥಾ ಶಬ್ದಾಯಂತೇ । ಯಥಾ ಚ ವಾವದತಃ ಪುನಃಪುನಃ ಶಬ್ದಾಯಮಾನಸ್ಯಾಭ್ರಿಯಸ್ಯೇವಾಭ್ರಸಮೂಹಸ್ಯ ಘೋಷಾಃ ಶಬ್ದಾ ಯಥಾ ಭವಂತಿ । ಕಿಂಚಗಿರಿಭ್ರಜೋ ಗಿರಿಭ್ಯೋ ಮೇಘೇಭ್ಯೋ ಭ್ರಷ್ಟಾ ನಿರ್ಗತಾ ಊರ್ಮಯೋಽಪ್ಸಮೂಹಾ ಯಥಾ ಮದಂತಃ ಶಬ್ದಾಯಮಾನಾ ಭವಂತಿ । ತಥಾರ್ಕಾ ಅರ್ಚಕಾಃ ಸ್ತೋತಾರೋ ಬೃಹಸ್ಪತಿಮಭ್ಯನಾವನ್ । ಅಭಿಷ್ಟುವಂತಿ ॥ ನು ಸ್ತವನೇ ॥

ಪ್ರತಿಪದಾರ್ಥ

ಉದಪ್ರುತಃ—ನೀರನ್ನು ಎರಚುತ್ತ । **ವಯಃ**—ಪಕ್ಷಿಗಳನ್ನು ಓಡಿಸುತ್ತಲೂ । **ರಕ್ಷಮಾಣಾಃ ನ**—ಪೈರುಗಳನ್ನು ಪಕ್ಷಿಗಳಿಂದ ರಕ್ಷಿಸುತ್ತಲೂ ಇರುವ ರೈತರು ಪಕ್ಷಿಗಳನ್ನು ಓಡಿಸುವಾಗ ಶಬ್ದಮಾಡುವಂತೆಯೂ । **ವಾವದತಃ**-

ವದೇಪದೇ ಗುಡುಗುವ । **ಅಭ್ರಿಯಸ್ಯ**—ಮೋಡದ । **ಘೋಷಾ ಇವ**—ಶಬ್ದದಂತೆಯೂ । **ಗಿರಿಭ್ರಜಃ**—ಮೇಘದಿಂದ ಬೀಳುವ । **ಊರ್ಮಯಃ**—ಮಳೆಯ ನೀರಿನ ಪ್ರವಾಹವು । **ಮದಂತಃ ನ**—ಶಬ್ದಮಾಡುವಂತೆಯೂ । **ಅರ್ಕಾಃ**—ಪೂಜಕರಾದ ಸ್ತುತಿಕರ್ತರು । **ಬೃಹಸ್ಪತಿಂ**—ಬೃಹಸ್ಪತಿಯನ್ನು । **ಅಭ್ಯನಾವನ್**—ಸ್ತುತಿಸುತ್ತಾರೆ.

ಭಾವಾರ್ಥ

ನೀರನ್ನು ಎರಚಿ ಪಕ್ಷಿಗಳನ್ನು ಓಡಿಸುವಾಗ ಸಸ್ಯರಕ್ಷಕರಾದ ರೈತರು ಶಬ್ದಮಾಡುವಂತೆಯೂ, ಪದೇಪದೇ ಗುಡುಗುವ ಮೋಡದ ಶಬ್ದದಂತೆಯೂ, ಮೇಘದಿಂದ ಬೀಳುವ ಮಳೆಯ ನೀರಿನ ಪ್ರವಾಹವು ಶಬ್ದಮಾಡುವಂತೆಯೂ ಪೂಜಕರಾದ ಸ್ತುತಿಕರ್ತರು ಬೃಹಸ್ಪತಿಯನ್ನು ಸ್ತುತಿಸುತ್ತಾರೆ.

English Translation

Like birds swimming in water when keeping watch, like the sound of the roaring thunder-cloud, like sounding torrents falling from the clouds, the worshippers glorify Brihaspati.

ಸಂಹಿತಾಪಾಠಃ

ಸಂ ಗೋಭಿರಾಂಗಿರಸೋ ನಕ್ಷಮಾಣೋ ಭಗ ಇವೇದರ್ಯಮಣಂ ನಿನಾಯ।
ಜನೇ ಮಿತ್ರೋ ನ ದಂಪತೀ ಅನಕ್ತಿ ಬೃಹಸ್ಪತೇ ವಾಜಯಾಶೂರಿವಾಜೌ ॥೨॥

ಪದಪಾಠಃ

ಸಂ । ಗೋಭಿಃ । ಆಂಗಿರಸಃ । ನಕ್ಷಮಾಣಃ । ಭಗಃ । ಇವ । ಇತ್ । ಅರ್ಯಮಣಂ । ನಿನಾಯ ।
ಜನೇ । ಮಿತ್ರಃ । ನ । ದಂಪತೀ ಇತಿ ದಂಪತೀ । ಅನಕ್ತಿ । ಬೃಹಸ್ಪತೇ । ವಾಜಯ । ಆಶೂನ್ । ಇವ ಆಜೌ ॥ ೨ ॥

ಸಾಯಣಭಾಷ್ಯಂ

ಆಂಗಿರಸೋಽಂಗಿರಸಃ ಪುತ್ರೋ ನಕ್ಷಮಾಣಃ ಸ್ವತೇಜಸಾ ವ್ಯಾಪ್ನುವನ್ ಭಗ ಇವೇದ್ಭಗೋ ದೇವ ಇವ ಸ್ಥಿತೋ ಬೃಹಸ್ಪತಿರೇವಾರ್ಯಮಣಂ ಸ್ತುತೇಃ ಪ್ರೇರಕಂ ಸ್ತೋತಾರಂ ಗೋಭಿಃ ಸಹ ಸಂ ನಿನಾಯ । ನಯತಿ । ಸಂಯೋಜಯತಿ । ಮಿತ್ರೋ ನ ಮಿತ್ರೋ ಯಥಾ ಜನೇ ಜನಪದೇ ಸ್ವರಶ್ಮೀನ್ಸಂಯೋಜಯತಿ ತದ್ವದ್ದಂಪತೀ ಜಾಯಾಪತೀ ಅನಕ್ತಿ । ಸಂಗಮಯತಿ । ಸ್ವಸಾಮರ್ಥ್ಯಂ ತತ್ರ ಸ್ಥಾಪಯತೀತ್ಯರ್ಥಃ । ಹೇ ಬೃಹಸ್ಪತೇ ಆಶೂನ್ವ್ಯಪ್ತಾನ್ಸ್ವರಶ್ಮೀನ್ವಾಜಯ । ತವ ಸ್ತೋತೃಷು ಗಮಯ । ಸ್ಥಾಪಯ । ಆಶೂನಿವ ವ್ಯಾಪ್ತಾನಶ್ವಾನಾಜೌ ಸಂಗ್ರಾಮೇ ಯೋದ್ಧಾರೋ ಯಥಾ ಸಂಗಮಯಂತಿ ತದ್ವತ್ ॥

ಪ್ರತಿಪದಾರ್ಥ

ನಕ್ಷಮಾಣಃ—ತನ್ನ ತೇಜಸ್ಸಿನಿಂದ ವ್ಯಾಪಿಸುವವನೂ। **ಭಗ ಇವೇತ್**—ಭಗದೇವನಂತೆ ಪ್ರಕಾಶಿಸುವವನೂ। **ಅಂಗಿರಸಃ**—ಅಂಗಿರಸ್ಸಿನ ಪುತ್ರನೂ ಆದ ಬೃಹಸ್ಪತಿಯು। **ಅರ್ಯಮಣಂ**—ಸ್ತುತಿಪ್ರೇರಕನಾದ ಸ್ತುತಿಕರ್ತನನ್ನು। **ಗೋಭಿಃ (ಸಹ)**—ಗೋವುಗಳೊಡನೆ। **ಸಂ ನಿನಾಯ**—ಸೇರಿಸುತ್ತಾನೆ। **ಜನೇ**—ಸಕಲರಲ್ಲಿಯೂ। **ಮಿತ್ರೋ ನ**—ಸೂರ್ಯದೇವನು ತನ್ನ ರಶ್ಮಿಗಳನ್ನು ಸೇರಿಸುವಂತೆ। **ದಂಪತೀ**—ದಂಪತಿಗಳನ್ನು। **ಅನಕ್ತಿ**—ಒಟ್ಟಿಗೆ ಸೇರಿಸುತ್ತಾನೆ। **ಬೃಹಸ್ಪತೇ**—ಎಲೈ ಬೃಹಸ್ಪತಿಯೇ। **ಆಜೌ**—ಯುದ್ಧದಲ್ಲಿ। **ಅಶೂನಿವ**—ಅಶ್ವಗಳನ್ನು ಸೇರಿಸುವಂತೆ। **ವಾಜಯ**—ನಿನ್ನ ರಶ್ಮಿಗಳನ್ನು ಸ್ತುತಿಕರ್ತರಿಗೆ ಪ್ರೇರಿಸಿ ಅವರಲ್ಲಿ ಸೇರಿಸು.

ಭಾವಾರ್ಥ

ತನ್ನ ತೇಜಸ್ಸಿನ ದ್ವಾರಾ ಸರ್ವತ್ರ ವ್ಯಾಪಿಸುವವನೂ, ಭಗನಂತೆ ಪ್ರಕಾಶಿಸುವವನೂ, ಅಂಗಿರಸ್ಸಿನ ಪುತ್ರನೂ ಆದ ಬೃಹಸ್ಪತಿಯು ಸ್ತುತಿಪ್ರೇರಕನಾದ ಸ್ತುತಿಕರ್ತನನ್ನು ಗೋವುಗಳೊಡನೆ ಸೇರಿಸುತ್ತಾನೆ. ಸೂರ್ಯದೇವನು ಸಕಲರಲ್ಲಿಯೂ ತನ್ನ ರಶ್ಮಿಗಳನ್ನು ಸೇರಿಸುವಂತೆ ದಂಪತಿಗಳನ್ನು ಒಟ್ಟಿಗೆ ಸೇರಿಸುತ್ತಾನೆ. ಎಲೈ ಬೃಹಸ್ಪತಿಯೇ, ಯುದ್ಧದಲ್ಲಿ ಅಶ್ವಗಳನ್ನು ಸೇರಿಸುವಂತೆ ನಿನ್ನ ರಶ್ಮಿಗಳನ್ನು ಸ್ತುತಿಕರ್ತರಲ್ಲಿ ಸೇರಿಸು.

English Translation

The son of Angiras pervading him with his brightness, has, like Bhaga, brought Aryaman to the cows; as Mitra (unites his radiance) with the people, so has he united husband and wife, Brihaspati, send (your wide-spread rays to your worshippers) ar (a warrior sends his) his horses to battle.

ಸಂಹಿತಾಪಾಠಃ

ಸಾಧ್ವ್ಯರ್ಯಾ ಅತಿಥಿನೀರಿಷಿರಾಃ ಸ್ವಾಹಾರ್ಯಾಃ ಸುವರ್ಣಾ ಅನವದ್ಯರೂಪಾಃ।
ಬೃಹಸ್ಪತಿಃ ಪರ್ವತೇಭ್ಯೋ ವಿತೂರ್ಯಾ ನಿರ್ಗಾ ಊಪೇ ಯವಮಿವ
ಸ್ಥಿವಿಭ್ಯಃ ॥ ೩ ॥

ಪದಪಾಠಃ

ಸಾಧ್ವ್ಯಃ ಅರ್ಯಾಃ। ಅತಿಥಿನೀಃ। ಇಷಿರಾಃ। ಸ್ವಾಹಾರ್ಯಾಃ। ಸುವರ್ಣಾಃ। ಅನವದ್ಯರೂಪಾಃ।
ಬೃಹಸ್ಪತೇಃ। ಪರ್ವತೇಭ್ಯಃ। ವಿತೂರ್ಯ। ನಿಃ। ಗಾಃ। ಊಪೇ। ಯವಂ ಇವ। ಸ್ಥಿವಿಭ್ಯಃ ॥ ೩ ॥

ಸಾಯಣಭಾಷ್ಯಂ

ಸಾಧ್ವ್ಯರ್ಯಾಃ ಸಾಧೂನಾಂ ಕಲ್ಯಾಣಾನಾಂ ಪಯಸಾಂ ನೇತ್ರೀರತಿಥಿನೀಃ ಸತತಂ ಗಚ್ಛಂತೀರಿಷಿರಾ ಏಷಣೀಯಾಃ ಸ್ವಾಹಾರ್ಯಾಃ ಸ್ಪೃಹಣೀಯಾಃ ಸುವರ್ಣಾಃ ಶೋಭನಶುಕ್ಲಾದಿವರ್ಣೋಪೇತಾ ಅನವದ್ಯ-

ರೂಪಾಃ ಪ್ರಶಸ್ಯರೂಪಾ ಏತಾ ಗಾಃ ಪರ್ವತೇಭ್ಯೋ ವಲಸಂಬಂಧಿಭ್ಯೋ ವಿತೂರ್ಯ ನಿರ್ಗಮಯ್ಯೋಪೇ। ದೇವಸವಿಾಪೇ ನಿರ್ವಪತಿ । ಪ್ರಾಪಯತಿ । ತತ್ರ ದೃಷ್ಟಾಂತಃ । ಯವಮಿವ ಯಥಾ ಯವಂ ಸ್ಥವಿಭ್ಯಃ ಕುಸಿದೇಭ್ಯ ಆದಾಯ ನಿರ್ವಪತಿ॥ ಡುವಪ್ ಬೀಜಸಂತಾನೇ । ಲಿಟ ರೂಪಂ ॥ ಯದ್ವಾ। ಸಾಧುನಯನಾದಿ ಗುಣಯುಕ್ತಾ ಗಾ ಅಪಃ ಪರ್ವತೇಭ್ಯೋ ಮೇಘೇಭ್ಯ ಆಹೃತ್ಯ ಸರ್ವತ್ರ ವರ್ಷತಿ ॥

ಪ್ರತಿಪದಾರ್ಥ

ಸ್ಥವಿಭ್ಯಃ—ಕಣಜಗಳಿಂದ । **ಯವಮಿವ**—ಯವಧಾನ್ಯವನ್ನು ತುಂಬಿಕೊಂಡುಬರುವಂತೆ । **ಬೃಹಸ್ಪತಿಃ**—ಬೃಹಸ್ಪತಿಯು । **ಸಾಧ್ವರ್ಯಾಃ**—ಕಲ್ಯಾಣಕರವಾದ ಕ್ಷೀರವನ್ನು ಕೊಡತಕ್ಕವೂ । **ಅತಿಥಿನೀಃ**—ಅನುಸ್ಯೂತವಾದ । ಗಮನವುಳ್ಳವೂ। **ಇಷಿರಾಃ**—ಹುಡುಕಲ್ಪಡತಕ್ಕವೂ। **ಸ್ಪಾರ್ಹಾಃ**—ಅಪೇಕ್ಷಿತವಾದವೂ। **ಸುವರ್ಣಾಃ**—ಉತ್ತಮವಾದ ವರ್ಣವುಳ್ಳವೂ । **ಅನವದ್ಯರೂಪಾಃ**—ಪ್ರಶಂಸಿತವಾದ ರೂಪವುಳ್ಳವೂ ಆದ । **ಗಾಃ**—ಗೋವುಗಳನ್ನು । **ಪರ್ವತೇಭ್ಯಃ**—ವಲನು ಬಚ್ಚಿಟ್ಟಿದ್ದ ಪರ್ವತಗಳಿಂದ । **ವಿತೂರ್ಯ**—ಹೊರಕ್ಕೆ ಬರಮಾಡಿ । **ನಿಃ ಊಪೇ**—ದೇವತೆಗಳ ಸವಿಾಪಕ್ಕೆ ಕರೆದೊಯ್ಯುತ್ತಾನೆ.

ಭಾವಾರ್ಥ

ಕಣಜಗಳಿಂದ ಯವಧಾನ್ಯವನ್ನು ತುಂಬಿಕೊಂಡು ಈಚೆಗೆ ಬರುವಂತೆ ಬೃಹಸ್ಪತಿಯು ಕಲ್ಯಾಣಕರವಾದ ಕ್ಷೀರವನ್ನು ಕೊಡತಕ್ಕವೂ, ಅನುಸ್ಯೂತವಾದ ಗಮನವುಳ್ಳವೂ, ಹುಡುಕಲ್ಪಡತಕ್ಕವೂ, ಅಪೇಕ್ಷಿತವಾದವೂ, ಉತ್ತಮವಾದ ವರ್ಣವುಳ್ಳವೂ, ಪ್ರಶಂಸಿತವಾದ ರೂಪವುಳ್ಳವೂ ಆದ ಗೋವುಗಳನ್ನು ವಲನು ಅಡಗಿರುವ ಪರ್ವತಗಳಿಂದ ಹೊರಕ್ಕೆ ಬರಮಾಡಿ ಅವನ್ನು ದೇವತೆಗಳ ಸವಿಾಪಕ್ಕೆ ಕರೆದೊಯ್ಯುತ್ತಾನೆ.

English Translation

Brihaspati brings to (the gods), after extricating them from the mountains, the cows that are the yielders of pure (milk), ever in motion, the objects of search and of desire, well-coloured and of unexceptionable form, (as men bring) barley from the granaries.

ಸಂಹಿತಾಪಾಠಃ

ಆಪ್ರುಷಾಯನ್ಮಧುನ ಋತಸ್ಯ ಯೋನಿಮವಕ್ಷಿಪನ್ನರ್ಕ ಉಲ್ಕಾಮಿವ ದ್ಯೋಃ ।
ಬೃಹಸ್ಪತಿರುದ್ಧರನ್ನಶ್ಮನೋ ಗಾ ಭೂಮ್ಯಾ ಉದ್ನೇವ ವಿ ತ್ವಚಂ ಬಿಭೇದ ॥೪॥

ಪದಪಾಠಃ

ಆಽಪ್ರುಷಾಯನ್। ಮಧುನಾ । ಋತಸ್ಯ। ಯೋನಿಂ । ಅವಽಕ್ಷಿಪನ್। ಅರ್ಕಃ । ಉಲ್ಕಾಂಽಇವ। ದ್ಯೋಃ।
ಬೃಹಸ್ಪತಿಃ । ಉದ್ಧರನ್ । ಅಶ್ಮನಃ । ಗಾಃ । ಭೂಮ್ಯಾಃ । ಉದ್ನಾಽಇವ । ವಿ । ತ್ವಚಂ । ಬಿಭೇದ ॥ ೪ ॥

ಸಾಯಣಭಾಷ್ಯಂ

ಮಧುನೋದಕೇನಾಪ್ಯಾಯೆನ್ ಪೃಥಿವೀಮಾಭಿಮುಖ್ಯೇನ ಸಿಂಚನ್॥ ಪ್ಯಾಷ ಪ್ಯಾಷ ಸ್ನೇಹನ-ಸೇಚನಪೂರಣೇಷು। ವ್ಯತ್ಯಯೇನ ವಿಕರಣಸ್ಯ ಶಾಯಜಾದೇಶಃ॥ ಋತಸ್ಯೋದಕಸ್ಯ ಯೋನಿಂ ಮೇಘ-ಮವಕ್ಷಿಪನ್ ವೃಷ್ಟ್ಯರ್ಥಮವಕಿರನ್ನರ್ಕೋಽರ್ಚನೀಯೋ ಬೃಹಸ್ಪತಿರ್ದ್ಯೋರ್ದ್ಯುಲೋಕಾದುಲ್ಕಾಮಿ-ವೋಲ್ಕಾಂ ಯಥೋದ್ಧರತಿ ತದ್ವದಶ್ಮನಃ ಶಿಲೋಚ್ಚಯಾದ್ವಲೇನಾಧಿಷ್ಠಿತಾದ್ಗಾಃ ಪಣಿಭಿರಪಹೃತಾನ್ಪ-ಶೂನುದ್ಧರನ್ನೂರ್ಧ್ವಂ ಗಮಯನ್ಭೂಮ್ಯಾಸ್ತ್ವಚಂ ತೇಷಾಂ ಶಫೈರ್ವಿ ಬಿಭೇದ। ವಿಭಿನ್ನಾಮ-ಕಾರ್ಷೀತ್। ಸರ್ವತ್ರ ಗಾ ವಿತತಾ ಅಕಾರ್ಷೀದಿತ್ಯರ್ಥಃ। ತತ್ರ ದೃಷ್ಟಾಂತಃ। ಉದ್ನೇವ ಯಥಾ ವೃಷ್ಟ್ಯುದಕೇನ ಪರ್ಜನ್ಯೋ ಭೂಮಿತ್ವಚಂ ವಿಭಿನತ್ತಿ ತದ್ವತ್ ॥

ಪ್ರತಿಪದಾರ್ಥ

ಮಧುನಾ—ಉದಕದಿಂದ । **ಆ ಪೃಷಾಯೆನ್**—ಪೃಥ್ವಿಯನ್ನು ತೊಯ್ಯುವಂತೆ ಮಾಡುತ್ತಲೂ । **ಋತಸ್ಯ**—ಉದಕಕ್ಕೆ । **ಯೋನಿಂ**—ಮೂಲವಾದ ಮೇಘವನ್ನು । **ಅವಕ್ಷಿಪನ್**—ವೃಷ್ಟಿಗಾಗಿ ಚದುರಿಸುತ್ತಲೂ । **ಅರ್ಕಃ**—ಪೂಜ್ಯನಾದ । **ಬೃಹಸ್ಪತಿಃ**—ಬೃಹಸ್ಪತಿಯು । **ದ್ಯೋಃ**—ದ್ಯುಲೋಕದಿಂದ । **ಉಲ್ಕಾಮಿವ**—ಉಲ್ಕಾಪಾತವನ್ನು ಹೊರಕ್ಕೆ ಬರಮಾಡುವಂತೆ । **ಅಶ್ಮನಃ**-ಪರ್ವತದಿಂದ । **ಗಾಃ**-ಗೋವುಗಳನ್ನು । **ಉದ್ಧರನ್**-ಹೊರಕ್ಕೆ ಬರಮಾಡುತ್ತ । **ಉದ್ನೇವ**—ಪರ್ಜನ್ಯನು ವೃಷ್ಟಿಯಿಂದ ಭೂಮಿಯ ಪ್ರದೇಶವನ್ನು ಹಳ್ಳಕೊಳ್ಳಗಳಾಗಿ ಮಾಡುವಂತೆ । **ಭೂಮ್ಯಾಃ**—ಭೂಮಿಯ । **ತ್ವಚಂ**—ಮೇಲ್ಭಾಗವನ್ನು । **ವಿ ಬಿಭೇದ**—ಗೊರಸುಗಳಿಂದ ಸೀಳುವಂತೆ ಮಾಡುತ್ತಾನೆ.

ಭಾವಾರ್ಥ

ಪೂಜ್ಯನಾದ ಬೃಹಸ್ಪತಿಯು ಉದಕದಿಂದ ಪೃಥ್ವಿಯನ್ನು ತೊಯ್ಯುವಂತೆ ಮಾಡುತ್ತಲೂ, ಉದಕಕ್ಕೆ ಮೂಲವಾದ ಮೇಘವನ್ನು ವೃಷ್ಟಿಗಾಗಿ ಚದುರಿಸುತ್ತಲೂ ದ್ಯುಲೋಕದಿಂದ ಉಲ್ಕಾಪಾತವನ್ನು ಹೊರಕ್ಕೆ ಬರಮಾಡುವಂತೆ ಪರ್ವತದಿಂದ ಗೋವುಗಳನ್ನು ಹೊರಕ್ಕೆ ಬರಮಾಡುತ್ತ ಪರ್ಜನ್ಯನು ವೃಷ್ಟಿಯನ್ನು ಸುರಿಸಿ ಭೂಮಿಯ ಪ್ರದೇಶಗಳನ್ನು ಸೀಳುವಂತೆ, ಇವನೂ ಸಹ ಗೋವುಗಳ ಗೊರಸುಗಳಿಂದ ಭೂಮಿಯ ಮೇಲ್ಭಾಗವನ್ನು ಸೀಳುವಂತೆ ಮಾಡುತ್ತಾನೆ.

English Translation

Saturating (the earth) with water, scattering the receptacle of rain, the adorable Brihaspati, raising up the cattle from the rock as (he raises) a meteor from the sky, rent the skin of the earth (with the hoofs of the cattle) as (Parjanya rends it) with rain.

ಸಂಹಿತಾಪಾಠಃ

ಅಪ ಜ್ಯೋತಿಷಾ ತಮೋ ಅಂತರಿಕ್ಷಾದುದ್ನಃ ಶೀಪಾಲಮಿವ ವಾತ ಆಜತ್ ।
ಬೃಹಸ್ಪತಿರನುಮೃಶ್ಯಾ ವಲಸ್ಯಾಭ್ರಮಿವ ವಾತ ಆ ಚಕ್ರ ಆ ಗಾಃ ॥ ೫ ॥

ಪದಪಾಠಃ

ಅಪ । ಜ್ಯೋತಿಷಾ । ತಮಃ । ಅಂತರಿಕ್ಷಾತ್ । ಉದ್ನಃ । ಶೀಪಾಲಂ೬ಇವ । ವಾತಃ । ಅಜತ್ । ಬೃಹಸ್ಪತಿಃ । ಅನು೬ವಮೃಶ್ಯ । ವಲಸ್ಯ । ಅಭ್ರಂ೬ಇವ । ವಾತಃ । ಆ । ಚಕ್ರೇ । ಆ । ಗಾಃ ॥ ೫ ॥

ಸಾಯಣಭಾಷ್ಯಂ

ಸ ಬೃಹಸ್ಪತಿರ್ಜ್ಯೋತಿಷಾ ತಮಸಾವೃತೇ ಪರ್ವತವಿವರೇ ಕೃತೇನ ಸೂರ್ಯೇಣಾಂತರಿಕ್ಷಾತ್ತ್ಯ-ತ್ತಮೋ೬ಪಾಜತ್ । ಅಪಾಗಮಯತ್ । ತತ್ರ ದೃಷ್ಟಾಂತಃ । ಉದ್ನಃ ಶೀಪಾಲಮಿವ । ಯಥೋದಕಾ-ದ್ವಾತೋ ವಾಯುಃ ಶೀಪಾಲಂ ಶೈವಾಲಮಪಗಮಯತಿ ತದ್ವತ್ । ತತಃ ಸೋ೬ಯಮನುಮೃಶ್ಯ೬ತ್ರ ಗಾವಸ್ತಿಷ್ಠಂತೀತಿ ವಿಚಾರ್ಯ ನಿಶ್ಚಿತ್ಯ ವಲಸ್ಯ ಸ್ವಭೂತಸ್ಯ ಪರ್ವತಸ್ಯಾಂತರ್ಗತಾ ಗಾ ಆ ಚಕ್ರೇ । ಆ ಸಮಂತಾದಕಾರ್ಷೀತ್ । ಕಥಮಿವ । ಅಭ್ರಮಿವ ಯಥಾ ವಾಯುರಂತರಿಕ್ಷಸ್ಥಿತಮಭ್ರಂ ಮೇಘಮಾ-ಕಿರತಿ ತದ್ವತ್ ॥

ಪ್ರತಿಪದಾರ್ಥ

ವಾತಃ—ವಾಯುವು । **ಉದ್ನಃ**—ಉದಕದಿಂದ । **ಶೀಪಾಲಮಿವ**—ಪಾಚಿಯನ್ನು ಬೇರೆ ಮಾಡುವಂತೆ । **ಬೃಹಸ್ಪತಿಃ**—ಬೃಹಸ್ಪತಿಯು । **ಜ್ಯೋತಿಷಾ**—ತನ ಪ್ರಭೆಯಿಂದ । **ಅಂತರಿಕ್ಷಾತ್**—ಅಂತರಿಕ್ಷದಿಂದ । **ತಮಃ**—ಕತ್ತಲೆಯನ್ನು । **ಅಪಾಜತ್**—ಚದುರಿಸಿದನು । **ವಾತಃ**—ವಾಯುವು । **ಅಭ್ರಮಿವ**—ಮೇಘವನ್ನು ಚದುರಿಸುವಂತೆ । (**ಅಯಂ**—ಬೃಹಸ್ಪತಿಯು) । **ಅನುಮೃಶ್ಯ**—ಗೋವುಗಳಿದ್ದೇ ಇರಬೇಕೆಂದು ಊಹಿಸಿ । **ವಲಸ್ಯ**—ವಲನ ಪರ್ವತದಲ್ಲಿ ಅಡಗಿದ್ದ । **ಗಾಃ**—ಗೋವುಗಳನ್ನು । **ಆ ಚಕ್ರೇ**—ಹೊರಕ್ಕೆ ಬರಮಾಡಿದನು.

ಭಾವಾರ್ಥ

ಉದಕದಿಂದ ವಾಯುವು ಪಾಚಿಯನ್ನು ಚದುರಿಸುವಂತೆ ಬೃಹಸ್ಪತಿಯು ತನ್ನ ಪ್ರಭೆಯಿಂದ ಅಂತರಿಕ್ಷದಿಂದ ಕತ್ತಲೆಯನ್ನು ಚದುರಿಸಿದನು. ವಲನ ಪರ್ವತದಲ್ಲಿ ಗೋವುಗಳಿದ್ದೇಯಿರಬೇಕೆಂದೂಹಿಸಿ ಅಲ್ಲಿ ಅಡಗಿದ್ದ ಗೋವುಗಳನ್ನು ವಾಯುವು ಮೇಘವನ್ನು ಚದುರಿಸುವಂತೆ ಹೊರಕ್ಕೆ ಬರಮಾಡಿದನು.

English Translation

Brihaspati drove away the darkness from the firmament with light as the wind (blows) the shipala from the water, guessing (them to be there) he swept the Vala's cows together to himself as the wind(sweeps) the clouds.

ಸಂಹಿತಾಪಾಠಃ

ಯದಾ ವಲಸ್ಯ ಪೀಯತೋ ಜಸುಂ ಭೇದ್ಬೃಹಸ್ಪತಿರಗ್ನಿತಪೋಭಿರರ್ಕೈಃ ।
ದದ್ಭಿರ್ನ ಜಿಹ್ವಾ ಪರಿವಿಷ್ಟಮಾದದಾವಿರ್ನಿಧೀರಕೃಣೋದುಸ್ರಿಯಾಣಾಂ ॥ ೬ ॥

पदपाठः

यदा । वलस्य । पीयतः । जसुं । भेत् । बृहस्पतिः । अग्नितपोऽभिः । अर्क्यैः ।
दत्ऽभिः । न । जिह्वा । परिऽविष्टं । अदत् । आविः । निऽधीन् । अकृणोत् । उस्रियाणां॥

सायणभाष्यं

पीयतः । पीयतिर्हिंसाकर्मा। हिंसकस्य वलस्य जसुमायुधं यदा यस्मिन्काले भेत् भिनत्ति। केन साधनेन । अग्नितपोभिरग्निवत्प्रतपनशीलैरर्क्यैरर्चनीयैः रश्मिभिः अपि वा मन्त्रैर्भिनत्ति । किंच दद्भिः॥ पद्दन्नोमासित्यादिना दंतशब्दस्य दद्भावः॥ यथा दंतैः परिविष्टं भक्ष्यं जिह्वा भक्षयति तद्वत्स परिविष्टं पर्वतेः पणिभिः परिवृतं वलनामानं यदादत् अभक्षयत् अवधीत् तदानीं तैरपहृतानामुस्रियाणां गवां निधीनाविरकृणोत् । आविर्भूतमकरोत्॥

प्रतिपदार्थ

दद्भिः—हल्लुगळ मध्यदल्लिरुव भक्ष्यवन्नु । **जिह्वा अदत् न**—नालिगेयु सवियुवंते । **पीयतः**—हिंसकनाद । **वलस्य**—वलनेंब असुरन । **परिविष्टं**—इतर असुरर आयुधगळिंद आवृत वाद । **जसुं**—(वलन)आयुधवन्नु । **यदा**—यावाग । **अग्नितपोभिः**—अग्नियंते दहिसतक्कवू । **अर्क्यैः**—पूज्यवू आद रश्मिगळिंद । **बृहस्पतिः भेत्**—बृहस्पतियु नाशमाडिदनो आग । **उस्रियाणां**—गोवुगळ । **निधीन्**—गुंपुगळन्नु । **आविरकृणोत्**—गोचरवागुवंते माडिदनु.

भावार्थ

दंतगळिंद आवृतवाद भक्ष्यवन्नु नालिगेयु सवियुवंते हिंसकराद वलनेंब असुरन, इतर असुर आयुधगळिंद आवृतवाद आयुधवन्नु यावाग अग्नियंते दहिसतक्कवू पूज्यवू आद रश्मिगळिंद बृहस्पतियु नाशमाडिदनो आग गोवुगळ गुंपुगळन्नु गोचरवागुवंते माडिदनु.

English Translation

Wheu Brihaspati demolished with rays burning like fire the weapon of the malignant Vala, he devoured him (encompassed hy his followers) as the tongue (consumes) that whieh is encompassed by the teeth; he made manifest the hiding-place of the cows.

संहितापाठः

बृहस्पतिरमत हि त्यदास्यां नामु स्वरिणां सदनेगुहा यत् ।

ऐण्डेव भित्त्वा शकुनस्य गर्भमुदुस्रियाः पर्वतस्य त्मनाजत् ॥

पदपाठः

बृहस्पतिः । अमत । हि । त्यम् । असाम् । नाम । स्वरीणाम् । सदने । गुहा । यत् ।
आण्डाऽइव । भित्त्वा । शकुनस्य । गर्भम् । उत् । उस्रियाः । पर्वतस्य । त्मना । अजत् ॥

सायणभाष्यं

बृहस्पतिर्गुहा गुहायाम् सदने स्थाने स्वरीणाम् शब्दायमानानामासाम् गवाम् त्यत्तत्प्रसिद्धं नाम नामधेयम् यद्यदामत हि ज्ञातवान्खलु ॥ मनु अवबोधने। लुङ् तनादिभ्यस्तथासोः । पा. ३-४-७९ । इति सिचो लुक् ॥ तदानीम् पर्वतस्यान्तःस्थिता उस्रिया गास्त्मनात्मनैवासहायेन पर्वतम् भित्त्वोदाजत् । उदगमयत् । तत्र दृष्टान्तः । ऐण्डेव यथा शकुनस्य पक्षिण आण्डानि भित्त्वा तत्र स्थितं गर्भमुद्गमयति तद्वत् ॥

प्रतिपदार्थ

गुहा—पर्वतद गुहेय । **सदने**—स्थानदल्लि । **स्वरीणाम्**—शब्दमाडतक्क । **असाम्**—गोवुगळ । **त्यत्**—प्रसिद्धवाद । **नाम**—हेसरन्नु । **यत्**—यावाग । **बृहस्पतिः**—बृहस्पतियु **अमत हि**—तिळिदनो आग । **शकुनस्य**—पक्षियु । **ऐण्डेव गर्भम्**—मोट्टेयन्नु ओडेदु ओळगिन सत्ववन्नु होरक्के बरमाडुवंतेः **पर्वतस्य**—पर्वतद ओळगिद्द । **उस्रियाः**—गोवुगळन्नु । **त्मना**—इतरर सहायविल्लदे । **भित्त्वा**—(शिलेगळन्नु) ओडेदु । **उदाजत्**—होरक्के बरमाडिदनु.

भावार्थ

पर्वतदगुहेयल्लि अडगि शब्दमाडुत्तिद्द गोवुगळ प्रसिद्धवादहेसरन्नु बृहस्पतियु यावाग तिळिदनो आग पक्षिय मोट्टेयन्नु ओडेदु ओळगिन सत्ववन्नु होरक्के बरमाडुवंते पर्वतद शिलेगळन्नु ओडेदु ओळगिद्द गोवुगळन्नु इतरर सहायविल्लदे तानो होरक्के बरमाडिदनु.

English Translalion

When Brihaspati had discovered that name of the lowing cows in their place in the cave; by his own strength he extricated the cattle from the rock as (breaking) the eggs of a bird (one extricates) the embryo.

संहितापाठः

अश्मापिनद्धं मधु पर्यपश्यन्मत्स्यं न दीन उदनि क्षियन्तं ।
निष्टज्जभार चमसं न वृक्वाद्बृहस्पतिर्विरवेणा विकृत्य ॥ ९ ॥

ಪದಪಾಠಃ

ಅಶ್ಮಾ । ಅಪಿ॒ನದ್ಧಂ । ಮಧು । ಪರಿ । ಅಪಶ್ಯತ್ । ಮತ್ಸ್ಯಂ । ನ ದೀನೇ । ಉದನಿ । ಕ್ಷಿಯಂತಂ ।

ನಿಃ । ತತ್ । ಜಭಾರ । ಚಮಸಂ । ನ । ವೃಕ್ಷಾತ್ । ಬೃಹಸ್ಪತಿಃ । ವಿ॒ರವೇ॑ಣ । ವಿ॒ಕೃತ್ಯ ॥ ೪ ॥

ಸಾಯಣಭಾಷ್ಯಂ

ಬೃಹಸ್ಪತಿರಶ್ಮಾಶ್ಮನಾ ವ್ಯಾಪ್ತಯಾ ಶಿಲಯಾಪಿನದ್ಧಂ ಪಿಹಿತಂ ಮಧು ಗೋಲಕ್ಷಣಂ ಪರ್ಯ-ಪಶ್ಯತ್ । ಪರಿತೋ೨ದ್ರಾಕ್ಷೀತ್ । ತತ್ರ ದೃಷ್ಟಾಂತಃ । ಮತ್ಸ್ಯಂ ನ ಯಥಾ ದೀನೇ ಶುಷ್ಕ ಉದನಿ ॥ ಉದಕಶಬ್ದಸ್ಯೋದನ್ನಾದೇಶಃ । ಉದಕೇ ಕ್ಷಿಯಂತಂ ನಿವಸಂತಂ ಮತ್ಸ್ಯಂ ಯಥಾ ಪಶ್ಯತಿ ತದ್ವತ್ ॥ ದೃಷ್ಟ್ವಾ ಚ ತದ್ಗೋಲಕ್ಷಣಂ ಮಧು ವಿರವೇಣ ವಿವಿಧೇನ ಶಬ್ದೇನ ವಿಕೃತ್ಯ ವಲಂ ಭಿತ್ತ್ವಾ ನಿರ್ಜಭಾರ । ಕಥಮಿವ । ಚಮಸಂ ನ । ಚಮಂತಿ ಭಕ್ಷಯಂತ್ಯತ್ರೇತಿ ಚಮಸಃ ಸೋಮಪಾತ್ರಂ । ತಂ ಯಥಾ ವೃಕ್ಷಾ-ನ್ನಿರ್ಹರತಿ ತದ್ವತ್ ॥ ಹರತೇರ್ಲಿಟಿ ರೂಪಂ । ಹೃಗ್ರಹೋರ್ಭಃ ॥

ಪ್ರತಿಪದಾರ್ಥ

ದೀನೇ ಉದನಿ—ಶುಷ್ಕವಾದ ನೀರುಳ್ಳ ಕೊಳವಲ್ಲಿ । **ಕ್ಷಿಯಂತಂ**—ವಾಸಿಸುವ । **ಮತ್ಸ್ಯಂ ನ**—ಮೀನಿನಂತೆ । **ಅಶ್ಮಾ**—ಸುತ್ತಲೂ ವ್ಯಾಪಿಸಿರುವ ಶಿಲೆಯಿಂದ । **ಅಪಿನದ್ಧಂ**—ಮುಚ್ಚಲ್ಪಟ್ಟ । **ಮಧು**—ಗೋವನ್ನು । **ಬೃಹಸ್ಪತಿಃ**—ಬೃಹಸ್ಪತಿಯು । **ಪರ್ಯಪಶ್ಯತ್**—ನೋಡಿದನು । **ವೃಕ್ಷಾತ್**—ವೃಕ್ಷನನ್ನು ಕತ್ತರಿಸಿ ಅದರಿಂದ । **ಚಮಸಂ ನ**—ಚಮಸ ಪಾತ್ರೆಯನ್ನು ಸಿದ್ಧಪಡಿಸುವಂತೆ । **ವಿರವೇಣ**—ತನ್ನ ಶಬ್ದದಿಂದ । **ವಿಕೃತ್ಯ**—ವಲನನ್ನು ಸೀಳಿ । **ತತ್**—ಗೋರೂಪವಾದ ಮಧುವನ್ನು । **ನಿರ್ಜಭಾರ**—ಹೊರಕ್ಕೆ ಬರಮಾಡಿದನು.

ಭಾವಾರ್ಥ

ಶುಷ್ಕವಾದ ನೀರುಳ್ಳ ಕೊಳವಲ್ಲಿ ವಾಸಿಸುವ ಮೀನನ್ನು ಸುಲಭವಾಗಿ ನೋಡುವಂತೆ ಸುತ್ತಲೂ ಶಿಲೆಯಿಂದ ಮುಚ್ಚಲ್ಪಟ್ಟ ಗೋವನ್ನು ಬೃಹಸ್ಪತಿಯು ನೋಡಿದನು. ವೃಕ್ಷನನ್ನು ಕತ್ತರಿಸಿ ಅದರಿಂದ ಚಮಸಪಾತ್ರೆಯನ್ನು ಸಿದ್ಧಪಡಿಸುವಂತೆ ತನ್ನ ಘರ್ಜನೆ ಶಬ್ದದಿಂದ ವಲನನ್ನು ಸೀಳಿ ಗೋರೂಪವಾದ ಮಧುವನ್ನು ಹೊರಕ್ಕೆ ಬರಮಾಡಿದನು.

English Translation

Brihaspati looked round upon the cows shut up in the cave like fish in a dried-up pool, he seized Vala with a shout, cutting him off like a bowl from a tree.

ವಿಶೇಷವಿಷಯಗಳು

ಸಾಯಣರು **ಈ** ಋಕ್ಕಿಗೆ ವಿವರಿಸಿರುವ ಅರ್ಥಕ್ಕೂ ಯಾಸ್ಕರು ವಿವರಿಸಿರುವ ಅರ್ಥಕ್ಕೂ ವ್ಯತ್ಯಾಸವಿರುವುದು. ಯಾಸ್ಕರು ಬೃಹಸ್ಪತಿಶಬ್ದದ ನಿರ್ವಚನವನ್ನು ಹೇಳುತ್ತಾ—

ಬೃಹಸ್ಪತಿಃ। ಬೃಹಸ್ಪತಿರ್ಬೃಹತಃ ಪಾತಾ ವಾ ಪಾಲಯಿತಾ ವಾ। ತಸ್ಯೈಷಾ ಭವತಿ। ಅಶ್ಮಾಪಿನದ್ಧಂ ಮಧು ಪರ್ಯಪಶ್ಯನ್ಮತ್ಸ್ಯಂ ನ ದೀನ ಉದನಿ ಕ್ಷಿಯಂತಂ। ನಿಷ್ಪಜ್ಜಭಾರ ಚಮಸಂ ನ ವೃಕ್ಷಾ-

ದ್ಬೃಹಸ್ಪತಿರ್ವಿರವೇಣಾ ವಿಕೃತ್ಯ ॥ ಅಶನವತಾ ಮೇಘೇನಾಪಿನದ್ಧಂ ಮಧು ಪರ್ಯಪಶ್ಯನ್ಮತ್ಸ್ಯ-ಮಿವ ದೀನ ಉದಕೇ ನಿವಸಂತಂ ನಿರ್ಜಹಾರ ತಚ್ಚಮಸಮಿವ ವೃಕ್ಷಾತ್ । ಚಮಸಃ ಕಸ್ಮಾತ್ ಚಮಂತ್ಯಸ್ಮಿನ್ನಿತಿ । ಬೃಹಸ್ಪತಿರ್ವಿರವೇಣ ಶಬ್ದೇನ ವಿಕೃತ್ಯ ॥

(ನಿ. ೧೦-೧೨)

ಎಂದರೆ ದೊಡ್ಡದಾದ ಈ ಜಗತ್ತಿಗೆ ಅಥವಾ ಉದಕಕ್ಕೆ ಪಾಲಕನಾದುದರಿಂದ ಇವನಿಗೆ ಬೃಹಸ್ಪತಿಯೆಂಬ ಹೆಸರು. ಇವನ ಕರ್ಮವನ್ನು ವಿವರಿಸುವ **ಅಶ್ನಾಪಿನದ್ಧಂ** ಎಂಬ ಋಕ್ಕಿನ ವಿವರಣೆಯು ಈ ರೀತಿ ಇರುವುದು. ಸರ್ವತ್ರ ವ್ಯಾಪಿಸಿರುವ ಈ ಮೇಘದಿಂದ (ತನ್ನ ಒಳಭಾಗದಲ್ಲಿ ಅಥವಾ ಮಧ್ಯದಲ್ಲಿ) ಬಂಧಿತವಾಗಿರುವ ಎಂದರೆ ಯಾರಿಗೂ ಕಾಣದಂತೆ ಆಚ್ಛಾದಿತವಾಗಿರುವ ಉದಕವನ್ನು(ಮಧು)ಈ ಬೃಹಸ್ಪತಿಯು ನೋಡಿದನು. ಹೇಗೆ ನೋಡಿದನು ಎಂದರೆ ಆಳವಿಲ್ಲದ ನೀರಿನಲ್ಲಿ ಇಮವ ಮೀನನ್ನು ಯಾವರೀತಿ ಸುಲಭವಾಗಿ ನೋಡಬಹುದೋ ಅದರಂತೆ ಮೇಘಮಧ್ಯದಲ್ಲಿರುವ ಮಧುವನ್ನು ಎಂದರೆ ನೀರನ್ನು ಬೃಹಸ್ಪತಿಯು ನೋಡಿದನು ಮತ್ತು ವೃಕ್ಷದಿಂದ (ಮರದಿಂದ) ಚಮಸಪಾತ್ರೆಯನ್ನು ನಿರ್ಮಿಸಿ ತರುವಂತೆ ಮೇಘಮಧ್ಯದಲ್ಲಿದ್ದ ನೀರನ್ನು ಭಯಂಕರವಾದ ಶಬ್ದದಿಂದ(ಘರ್ಜನೆ ಅಥವಾ ಉಚ್ಚಧ್ವನಿಯಲ್ಲಿ ಪಠಿಸುವ ಮಂತ್ರಗಳಿಂದ) ಭೂಮಿಯಮೇಲೆ ತಂದನು ಎಂದರೆ ವೃಷ್ಟಿರೂಪದಿಂದ ಬೀಳುವಂತೆ ಮಾಡಿದನು. ಇಲ್ಲಿ **ಚಮಸ** ವೆಂದರೇನು ಎಂದರೆ ಚಮುಸಶಬ್ದವು **ಚಮ್** ಭಕ್ಷಿಸು ಎಂಬ ಧಾತುವಿನಿಂದ ನಿಷ್ಪನ್ನವಾಗಿರುವುದು. ಈ ಚಮಸಪಾತ್ರೆಯಲ್ಲಿ ಸೋಮರಸವನ್ನು ಭಕ್ಷಿಸುವುದರಿಂದ ಎಂದರೆ ಪಾನಮಾಡುವುದರಿಂದ ಇದಕ್ಕೆ **ಚಮಸ**ವೆಂಬ ಹೆಸರು ಬಂದಿದೆ ಎಂದು ನಿರ್ವಚನಾಭಿಪ್ರಾಯವು.

ಸಂಹಿತಾಪಾಠಃ

ಸೋಷಾಮವಿಂದತ್ಸ ಸ್ವ॒ರ್ಗಃಸೋ ಅಗ್ನಿಂ ಸೋ ಅರ್ಕೇಣ ವಿ ಬಬಾಧೇ ತಮಾಂಸಿ।
ಬೃಹಸ್ಪತಿರ್ಗೋವಪುಷೋ ವಲಸ್ಯ ನಿರ್ಮಜ್ಜಾನಂ ನ ಪರ್ವಣೋ ಜಭಾರ ॥

ಪದಪಾಠಃ

ಸಃ । ಉಷಾಂ । ಅವಿಂದತ್ । ಸಃ । ಸ್ವ॒ರಿತಿ॑ ಸ್ವಃ । ಸಃ। ಅಗ್ನಿಂ । ಸಃ । ಅರ್ಕೇಣ । ವಿ । ಬಬಾಧೇ । ತಮಾಂಸಿ ।
ಬೃಹಸ್ಪತಿಃ । ಗೋ॒ವಪುಷಃ । ವಲಸ್ಯ । ನಿಃ । ಮಜ್ಜಾನಂ । ನ । ಪರ್ವಣಃ । ಜಭಾರ ॥ ೯ ॥

ಸಾಯಣಭಾಷ್ಯಂ

ಸ ಬೃಹಸ್ಪತಿಸ್ತತ್ರ ಪರ್ವತನಿವರೇ ಗವಾಂ ದರ್ಶನಾಯೋಷಾಮುಷಸಮವಿಂದತ್ । ಅಲಭತ । ಸ ಏವ ಸ್ವರಾದಿತ್ಯಂ ಸೋಽಗ್ನಿಂ ಲಬ್ಧ್ವಾರ್ಕೇಣಾರ್ಚನೀಯೇನ ತೇಜಸಾ ತಮಾಂಸಿ ವಿ ಬಬಾಧೇ । ಅತ್ಯರ್ಥಂ ಬಾಧಿತವಾನ್ । ತತಃ ಸ ಗೋವಪುಷೋ ಗೋರೂಪಶರೀರಸ್ಯ ಪಶುಭಿಃ ಪರಿವೃತಸ್ಯ ವಲಸ್ಯ ಪರ್ವಣಃ ಪರ್ವತಾತ್ತಾ ಗಾ ನಿರ್ಜಭಾರ । ಬಲೇನ ನಿರ್ಜಹಾರ । ಬಲಾದಾಹರಣೇ ದೃಷ್ಟಾಂತಃ । ಮಜ್ಜಾನಂ ನ ಪರ್ವಣಃ ಅಸ್ಥ್ನೋ ಮಜ್ಜಾನಂ ಯಥಾತಿಕ್ಲೇಶೇನ ನಿರ್ಹರಂತಿ ತದ್ವತ್ ॥

ಪ್ರತಿಪದಾರ್ಥ

ಸಃ ಬೃಹಸ್ಪತಿಃ—ಆ ಬೃಹಸ್ಪತಿಯು । **ಉಷಾಂ**—ಉಷಸ್ಸನ್ನೂ । **ಅವಿಂದತ್**—ಹೊಂದಿದನು । **ಸಃ**—ಅವನು । **ಸ್ವಃ**—ಆದಿತ್ಯನನ್ನೂ । **ಸಃ**—ಅವನು । **ಅಗ್ನಿಂ**—ಅಗ್ನಿಯನ್ನೂ ಪಡೆದು । **ಅರ್ಕೇಣ**—ಪೂಜ್ಯವಾದ ತೇಜಸ್ಸಿನಿಂದ । **ತಮಾಂಸಿ**—ಕತ್ತಲೆಗಳನ್ನು । **ವಿ ಬಬಾಧೇ**—ನಾಶಪಡಿಸಿದನು । **ಪರ್ವಣಃ**—ಮೂಳೆಗಳ ಅಂತಃ ಪ್ರವೇಶದಿಂದ । **ಮಜ್ಜಾನಂ ನ**—ಕೊಬ್ಬನ್ನು ಹೊರಕ್ಕೆ ಬರಮಾಡುವಂತೆ । **ಗೋವಪುಷಃ**—ಗೋರೂಪವಾದ ಶರೀರದಿಂದ ವ್ಯಾಪ್ತನಾದ । **ವಲಸ್ಯ**—ವಲನ । **ಪರ್ವಣಃ**—ಪರ್ವತದಿಂದ । **ನಿರ್ಜಭಾರ**—ಗೋವುಗಳನ್ನು ಶ್ರಮಪಟ್ಟು ಹೊರಕ್ಕೆ ಬರುವಂತೆ ಮಾಡಿದನು.

ಭಾವಾರ್ಥ

ಗೋದರ್ಶನಕ್ಕೆ ಸಹಾಯಮಾಡಲು ಬೃಹಸ್ಪತಿಯು ಉಷಸ್ಸನ್ನೂ ಆದಿತ್ಯನನ್ನೂ, ಅಗ್ನಿಯನ್ನೂ ಹೊಂದಿ ಅವುಗಳ ಪೂಜ್ಯವಾದ ತೇಜಸ್ಸಿನಿಂದ ಕತ್ತಲೆಗಳನ್ನು ನಾಶಪಡಿಸಿದನು. ಮೂಳೆಗಳ ಅಂತಃಪ್ರದೇಶದಿಂದ ಕೊಬ್ಬನ್ನು ಕಷ್ಟದಿಂದ ಹೊರಕ್ಕೆ ಬರುವಹಾಗೆ ಮಾಡುವಂತೆ, ಗೋರೂಪವಾದ ಶರೀರದಿಂದ ವ್ಯಾಪ್ತನಾಗ ವಲನ ಪರ್ವತದಿಂದ ಗೋವುಗಳನ್ನು ಶ್ರಮಪಟ್ಟು ಹೊರಕ್ಕೆ ಬರುವಂತೆ ಮಾಡಿದನು.

English Translation

Brihaspati found the dawn, the sun, Agni; he dispersed the gloom with light; he seized (the cattle from the rock) of Vala surrounded by the cows as (one extracts) marrow from a bone.

ಸಂಹಿತಾಪಾಠಃ

ಹಿಮೇ॑ವ ಪ॒ರ್ಣಾ ಮು॒ಷಿತಾ ವನಾ॑ನಿ ಬೃ॒ಹಸ್ಪ॑ತಿನಾಕೃಪಯದ್ವ॒ಲೋ ಗಾಃ ।
ಅ॒ನಾ॒ನು॒ಕೃ॒ತ್ಯಮು॑ಪುನ॒ಶ್ಚ॑ಕಾರ॒ ಯಾತ್ಸೂ॒ರ್ಯಾ॑ಮಾಸಾ॒ ಮಿ॒ಥ ಉ॒ಚ್ಚರಾ॑ತಃ ॥

ಪದಪಾಠಃ

ಹಿಮಾ॑ಇವ । ಪ॒ರ್ಣಾ । ಮು॒ಷಿತಾ । ವನಾ॑ನಿ । ಬೃ॒ಹಸ್ಪ॑ತಿನಾ । ಅ॒ಕೃ॒ಪ॒ಯ॒ತ್ । ವ॒ಲಃ । ಗಾಃ ।
ಅ॒ನ॒ನು॒ಽಕೃ॒ತ್ಯಂ । ಅ॒ಪು॒ನ॒ರಿ॑ತಿ । ಚ॒ಕಾ॒ರ॒ । ಯಾತ್ । ಸೂ॒ರ್ಯಾ॑ಮಾಸಾ । ಮಿ॒ಥಃ । ಉ॒ತ್ಽಚ॒ರಾ॒ತಃ ॥

ಸಾಯಣಭಾಷ್ಯಂ

ಹಿಮೇವ ಯಥಾ ಹಿಮೇನ ಪರ್ಣಾ ಪರ್ಣಾನಿ ಪದ್ಮಪರ್ಣಾನಿ ಮುಷಿತಾ ಮುಷಿತಾನಿ ಭವಂತಿ ತದ್ವದ್ವಲೇನ ವನಾನಿ ವನನೀಯಾನಿ ಗೋಧನಾನಿ ಮುಷಿತಾನ್ಯಭೂವನ್ । ಅಥ ಗವಾಮನ್ವೇಷಣಾಯ ಬೃಹಸ್ಪತಿನಾಗತೇನ ಹೇತುನಾ ವಲೋಽಕೃಪಯತ್ । ಅಸ್ಮೈ ತಾ ಮುಷಿತಾ ಗಾಃ ಪ್ರಾಯಚ್ಛತ್ । ತತ್ರಾನನುಕೃತ್ಯಮನನುಕರಣೀಯಮಪುನಃಕರ್ತವ್ಯಂ ಚ ತತ್ಕರ್ಮ ಚಕಾರ । ಯಥಾ ತಪ್ಶಾಽಕ್ಷರ-

णेयं न भवति यथा पुनरकरणीयं तथाकार्षीदित्यर्थः । किं तदिति अह । सूर्यामासा सूर्यचंद्रमसौ मिथः परस्परमहोरात्रयोरुच्चैरात उच्चैरत इति यात्तच्चकार ॥ यादिति दीर्घश्छांदसः ॥

प्रतिपदार्थ

पर्णा—वृक्षद ಎಲೆಗಳು । **हिमेव मुषिता**—ಹಿಮದಿಂದ ಅಪಹೃತವಾಗುವಂತೆ । **बृहस्पतिना**—ಬೃಹಸ್ಪತಿಯಿಂದ । **वनानि**—ಆಕರ್ಷಕವಾದ ಗೋವುಗಳು (ವಲನಿಂದ) ಅಪಹರಿಸಲ್ಪಟ್ಟವು । **बृहस्पतिना**—ಬೃಹಸ್ಪತಿಯು ಬಂದೊಡನೆಯೇ । **वलः**—ವಲನು । **गाः**—ಆ ಗೋವುಗಳನ್ನು । **अकृपयत्**—ಅವನಿಗೆ ಒಪ್ಪಿಸಿಬಿಟ್ಟನು । **यात्**—ಯಾವ ಅವನ ಶಕ್ತಿಯಿಂದ । **सूर्यामासा**—ಸೂರ್ಯ ಮತ್ತು ಚಂದ್ರರು । **मिथः**—ಪರಸ್ಪರ ಪರ್ಯಾಯರೂಪದಲ್ಲಿ । **उच्चैरातः**—ಸಂಚರಿಸುವರೋ ಅಂತಹ । **अननुकृत्यं**—ಇನ್ನೊಬ್ಬರಿಂದ ಅನುಕರಿಸಲ್ಪಡದೇ ಇರುವುದೂ । **अपुनः**—ಪುನಃ ಮಾಡಲು ಸಾಧ್ಯವಿಲ್ಲದಿರುವುದೋ ಆ ಕಾರ್ಯವನ್ನು । **चकार**—ನೆರವೇರಿಸಿದನು.

ಭಾವಾರ್ಥ

ವೃಕ್ಷದ ಎಲೆಗಳು ಹಿಮದಿಂದ ಅಪಹೃತವಾಗುವಂತೆ ಬೃಹಸ್ಪತಿಯಿಂದ ಆಕರ್ಷಕವಾದ ಗೋವುಗಳು (ವಲನಿಂದ) ಅಪಹರಿಸಲ್ಪಟ್ಟವು. ಬೃಹಸ್ಪತಿಯು ಬಂದೊಡನೆಯೇ ವಲನು ಆ ಗೋವುಗಳನ್ನು ಅವನಿಗೆ ಒಪ್ಪಿಸಿಬಿಟ್ಟನು. ಯಾವ ಅವನ ಶಕ್ತಿಯಿಂದ ಸೂರ್ಯ ಮತ್ತು ಚಂದ್ರರು ಪರಸ್ಪರಪರ್ಯಾಯರೂಪದಲ್ಲಿ ಸಂಚರಿಸುವಂತೆ ಆಗಿರುವರೋ ಅಂತಹ ಇನ್ನೊಬ್ಬರಿಂದ ಅನುಕರಿಸಲ್ಪಡದೇ ಇರುವುದೂ, ಪುನಃ ಮಾಡಲ್ಪಡಲು ಸಾಧ್ಯವಿಲ್ಲದಿರುವುದೂ ಆದ ಕಾರ್ಯವನ್ನು ಬೃಹಸ್ಪತಿಯು ನೆರವೇರಿಸಿದ್ದಾನೆ.

English Translation

As the trees (bemoan) their leaves carried off by the winter, so Vala bemoaned his cows (carried off) by Brihaspati; he did that which cannot be imitated, which cannot be repeated, whereby sun and moon mutually rise (day and night).

संहितापाठः

अभि श्याव॑ं न कृश॑नेभिरश्वं॑ नक्षत्रे॑भिः पितरो॑ द्यामपिंशन् ।
रात्र्या॑ तमो॑ अदधु॒र्ज्योति॑रह॒न्बृह॒स्पति॑र्भि॒नदद्रिं॑ विद॒द्गाः ॥

पदपाठः

अभि । श्याव॑म् । न । कृश॑नेभिः । अश्व॑म् । नक्षत्रे॑भिः । पितरः॑ । द्याम् । अपिंशन् ।
रात्र्या॑ । तमः॑ । अदधुः । ज्योतिः॑ । अहन् । बृह॒स्पतिः॑ । भि॒नत् । अद्रि॑म् । विद॒त् । गाः ॥

ಸಾಯಣಭಾಷ್ಯಂ

ಪಿತರಃ ಪಾಲಯಿತಾರೋ ದೇವಾ ದ್ಯಾಂ ದ್ಯುಲೋಕಂ ನಕ್ಷತ್ರೈಭಿರಾಶ್ವಿನ್ಯಾದಿಭಿರಭ್ಯಪಿಂಶನ್ । ಅಭಿತೋಽದೀಪಯೆನ್ ॥ ಪಿಶ ಅವಯವೇ । ಅಯಂ ದೀಪನಾಯೋಂ ವರ್ತತೇ ॥ ತತ್ರ ದೃಷ್ಟಾಂತಃ । ಶ್ಯಾವಂ ನ ಯಥಾ ಶ್ಯಾವವರ್ಣಮಶ್ವಂ ಕೃಶನೇಭಿಃ ಸೌವರ್ಣೈರಾಭರಣೈರಲಂಕುರ್ವಂತಿ ತದ್ವತ್ । ತಥಾ ರಾತ್ರ್ಯಾಂ ತಮೋ ನಿಹಿತವಂತಃ । ಕಿಂಚಾಹನ್ನಹ್ನಿ ಜ್ಯೋತಿರಾದಿತ್ಯಾಖ್ಯಮದಧುಃ ॥ ಅದಧುರಿತ್ಯುತ್ತರವಾಕ್ಯೇನ ಸಂಬಂಧಃ ಕರಣೀಯಃ । ಅನ್ಯಥಾ ಸ್ವರೋ ನ ಘಟೇತ । ಅತ್ರ ತು ವಾಕ್ಯಭೇದಾದನಿಘಾತಃ ॥ ಯದಾ ಬೃಹಸ್ಪತಿರದ್ರಿಂ ವಲೇನಾಧಿಷ್ಠಿತಂ ಶಿಲೋಚ್ಚಯಂ ಭಿನತ್ ಅಭಿನತ್ ವಿಭಿದ್ಯ ಚ ತತ್ರ ಸ್ಥಿತಾನ್ಗಾಃ ಪಶೂನ್ವಿದತ್ ಅವಿದತ್ ಅಲಭತ ॥ ವಿದೇರ್ಲುಙಿ ಲೃದಿತ್ವಾದಜ್ ॥ ತದಾ ದೇವಾ ಏವಮುಕಾರ್ಷುರಿತ್ಯರ್ಥಃ ॥

ಪ್ರತಿಪದಾರ್ಥ

ಶ್ಯಾವಂ—ಹೊಂಬಣ್ಣದ । **ಅಶ್ವಂ**—ಅಶ್ವವನ್ನು । **ಕೃಶನೇಭಿಃ ನ**—ಸುವರ್ಣಾಭರಣಗಳಿಂದ ಅಲಂಕರಿಸುವಂತೆ । **ಪಿತರಃ**—ಜಗತ್ಪಾಲಕರಾದ ದೇವತೆಗಳು । **ದ್ಯಾಂ**—ದ್ಯುಲೋಕವನ್ನು । **ನಕ್ಷತ್ರೈಭಿಃ**—ಅಶ್ವಿನ್ಯಾದಿ ನಕ್ಷತ್ರಗಳಿಂದ । **ಅಭ್ಯಪಿಂಶನ್**—ಅಲಂಕರಿಸಿದ್ದಾರೆ । **ರಾತ್ರ್ಯಾಂ**—ರಾತ್ರಿಯಲ್ಲಿ । **ತಮಃ**—ಕಗ್ಗತ್ತಲೆಯನ್ನು ಸ್ಥಾಪಿಸಿದ್ದಾರೆ । **ಅಹನ್**—ಅಹಸ್ಸಿನಲ್ಲಿ । **ಜ್ಯೋತಿಃ**—ಬೆಳಕನ್ನು । **ಅದಧುಃ**—ಸ್ಥಾಪಿಸಿದ್ದಾರೆ । **ಬೃಹಸ್ಪತಿಃ**—ಬೃಹಸ್ಪತಿಯು । **ಅದ್ರಿಂ**—ಪರ್ವತವನ್ನು । **ಭಿನತ್**—ಸೀಳಿದನು । **ಗಾಃ**—ಪಶುಗಳನ್ನು । **ವಿದತ್**—ಹೊಂದಿದನು.

ಭಾವಾರ್ಥ

ಹೊಂಬಣ್ಣದ ಅಶ್ವವನ್ನು ಸುವರ್ಣಾಭರಣಗಳಿಂದ ಅಲಂಕರಿಸುವಂತೆ ಜಗತ್ಪಾಲಕರಾದ ದೇವತೆಗಳು ದ್ಯುಲೋಕವನ್ನು ಅಶ್ವಿನ್ಯಾದಿ ನಕ್ಷತ್ರಗಳಿಂದ ಅಲಂಕರಿಸಿದ್ದಾರೆ. ಅವರು ರಾತ್ರಿಯಲ್ಲಿ ಕತ್ತಲೆಯನ್ನೂ, ಹಗಲಿನಲ್ಲಿ ಬೆಳಕನ್ನೂ ಸ್ಥಾಪಿಸಿದ್ದಾರೆ. ಬೃಹಸ್ಪತಿಯು ಈ ಬೆಳಕಿನ ಸಹಾಯದಿಂದ ಪರ್ವತವನ್ನು ಸೀಳಿದನು. ಪಶುಗಳನ್ನು ಹೊಂದಿದನು.

English Translation

The protecting (deities) have decorated the heaven with constellations as (men decorate) a brown horse with golden trappings: they established darkness in the night and light in the day; Brihaspati fractured the rock and recovered the cows.

ಸಂಹಿತಾಪಾಠಃ

ಇದಮಕರ್ಮ ನಮೋ ಅಭ್ರಿಯಾಯ ಯಃ ಪೂರ್ವೀರನ್ವಾನೋನವೀತಿ ।
ಬೃಹಸ್ಪತಿಃ ಸ ಹಿ ಗೋಭಿಃ ಸೋ ಅಶ್ವೈಃ ಸ ವೀರೇಭಿಃ ಸ ನೃಭಿರ್ನೋ
ವಯೋ ಧಾತ್ ॥ ೧೨ ॥

ಪದಪಾಠಃ

ಇದಂ । ಅಕರ್ಮ । ನಮಃ । ಅಭ್ರಿಯಾಯ । ಯಃ । ಪೂರ್ವೀಃ । ಅನು । ಅನೋನವೀತಿ ।
ಬೃಹಸ್ಪತಿಃ । ಸಃ । ಹಿ । ಗೋಭಿಃ । ಸಃ । ಅಶ್ವೈಃ । ಸಃ । ವೀರೇಭಿಃ । ಸಃ । ನೃಭಿಃ । ನಃ । ವಯಃ ।
ಧಾತ್ ॥ ೧೨ ॥

ಸಾಯಣಭಾಷ್ಯಂ

ಅಭ್ರಿಯಾಯಾಭ್ರೇಷು ಭವಾಯಾಂತರಿಕ್ಷಾಯ ಮಧ್ಯಮಾಯ ಬೃಹಸ್ಪತಯ ಇದಮುಕ್ತಂ ನಮಃ ಸ್ತೋತ್ರಮಕರ್ಮ । ವಯಮಕಾರ್ಷ್ಮ । ಯೋ ಬೃಹಸ್ಪತಿಃ ಪೂರ್ವೀರ್ಬಹ್ವೀರ್ಋಚೋಽನ್ವನುಕ್ರಮೇಣಾನೋನವೀತಿ ಅತ್ಯರ್ಥಮಾಭಿಮುಖ್ಯೇನ ಬ್ರವೀತಿ ಸ ಬೃಹಸ್ಪತಿರೇವ ಗೋಭಿರಶ್ವೈಶ್ಚ ಯುಕ್ತಂ ವೀರೇಭಿಃ ಪುತ್ರೈರ್ನೃಭಿರ್ಭೃತ್ಯಾದಿಭಿಶ್ಚ ಸಹಿತಂ ವಯೋಽನ್ನಂ ನೋಽಸ್ಮಭ್ಯಂ ಸ್ತೋತೃಭ್ಯೋ ಧಾತ್ । ದಧಾತು । ಪ್ರಯಚ್ಛತು । ತಚ್ಛಬ್ದಾದ್ವೃತ್ತಿರಾದರಾರ್ಥಾ ॥

ಪ್ರತಿಪದಾರ್ಥ

ಅಭ್ರಿಯಾಯ—ಅಂತರಿಕ್ಷಸ್ಥನಾದ ಬೃಹಸ್ಪತಿಯನ್ನು ಉದ್ದೇಶಿಸಿ । ಇದಂ ನಮಃ-ಈ ಸ್ತುತಿಯನ್ನು । ಅಕರ್ಮ-ನಾವು ಅರ್ಪಿಸುತ್ತೇವೆ । ಯಃ—ಯಾವ ಬೃಹಸ್ಪತಿಯು । ಪೂರ್ವೀಃ—ಅನೇಕ ಮಂತ್ರಗಳನ್ನು । ಅನು-ಅನುಪೂರ್ವಿಯಿಂದ । ಅನೋನವೀತಿ—ಪಠಿಸುವನೋ । ಸಃ ಬೃಹಸ್ಪತಿಃ—ಅದೇ ಬೃಹಸ್ಪತಿಯು । ಗೋಭಿಃ—ಗೋವುಗಳೊಡನೆಯೂ । ಅಶ್ವೈಃ—ಅಶ್ವಗಳೊಡನೆಯೂ । ವೀರೇಭಿಃ—ವೀರಪುತ್ರರೊಡನೆಯೂ । ನೃಭಿಃ—ಭೃತ್ಯಾದಿಗಳೊಡನೆಯೂ । ವಯಃ—ಅನ್ನವನ್ನು । ನಃ—ನಮಗೆ । ಧಾತ್—ಕೊಡಲಿ.

ಭಾವಾರ್ಥ

ಅಂತರಿಕ್ಷಸ್ಥನಾದ ಬೃಹಸ್ಪತಿಯನ್ನುದ್ದೇಶಿಸಿ ಈ ಸ್ತುತಿಯನ್ನು ನಾವು ಅರ್ಪಿಸುತ್ತೇವೆ. ಯಾವ ಬಹಸ್ಪತಿಯು ಅನೇಕ ಮಂತ್ರಗಳನ್ನು ಅನುಪೂರ್ವಿಯೊಡನೆ ಪಠಿಸುವನೋ ಅದೇ ಬೃಹಸ್ಪತಿಯು ಗೋವುಗಳೊಡನೆಯೂ, ಅಶ್ವಗಳೊಡನೆಯೂ, ವೀರಪುತ್ರರೊಡನೆಯೂ, ಭೃತ್ಯಾದಿಗಳೊಡನೆಯೂ ಕೂಡಿದ ಅನ್ನವನ್ನು ನಮಗೆ ಕೊಡಲಿ.

English Translation

We have offered this homage to Brihaspati, who lives in mid-heaven, who recites in order many (sacred stanzas); may he bestow upon us food, with cows, with horses, with sons, with dependants.

ಅರವತ್ಸೋಂಭತ್ತನೆಯ ಸೂಕ್ತ

ಷಷ್ಠೇಽನುವಾಕೇ ಹೋದಶ ಸೂಕ್ತಾನಿ। ಭದ್ರಾ ಇತಿ ದ್ವಾದಶರ್ಚಂ ಪ್ರಥಮಂ ಸೂಕ್ತಂ ವಧ್ರ್ಯಶ್ವಪುತ್ರಸ್ಯ ಸುಮಿತ್ರಸ್ಯಾರ್ಷಂ । ಆದಿತೋ ದ್ವೇ ಜಗತ್ಯಾವಥ ದಶ ತ್ರಿಷ್ಟುಭಃ । ಅಗ್ನಿರ್ದೇವತಾ । ತಥಾ ಚಾನುಕ್ರಮ್ಯತೇ ॥ ಭದ್ರಾಃ ಸುಮಿತ್ರೋ ವಾಧ್ರ್ಯಶ್ವ ಆಗ್ನೇಯಂ ದ್ವಿಜಗತ್ಯಾದೀತಿ ॥ ಗತೋ ವಿನಿಯೋಗಃ

ಅನುವಾದವು—ಋಗ್ವೇದಸಂಹಿತೆಯ ೧೦ ನೆಯ ಮಂಡಲದ ಆರನೆಯ ಅನುವಾಕದಲ್ಲಿ ಹದಿನಾರು ಸೂಕ್ತಗಳಿರುವವು. ಅವುಗಳಲ್ಲಿ **ಭದ್ರಾ ಅಗ್ನೇಃ** ಎಂಬ ಸೂಕ್ತವು ಮೊದಲನೆಯದು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಧ್ರ್ಯಶ್ವಪುತ್ರನಾದ ಸುಮಿತ್ರನೆಂಬುವನು ಋಷಿಯು; ಈ ಸೂಕ್ತದ ಮೊದಲಿನ ಎರಡು ಋಕ್ಕುಗಳು ಜಗತೀಛಂದಸ್ಕವು; ಮುಂದಿನ ಹತ್ತು ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು; ಅಗ್ನಿಯು ದೇವತೆಯು. ಅನುಕ್ರಮಣಿಕೆಯಲ್ಲಿ—**ಭದ್ರಾಃ ಸುಮಿತ್ರೋ ವಾಧ್ರ್ಯಶ್ವ ಆಗ್ನೇಯಂ ದ್ವಿಜಗತ್ಯಾದಿ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೬೯

ಮಂಡಲ—೧೦ ॥ ಅನುವಾಕ—೬ ॥ ಸೂಕ್ತ—೬೯ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೧೯, ೨೦ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ಸಾಮಿತ್ರೋ ವಾಧ್ರ್ಯಶ್ವಃ ॥
ದೇವತಾ—ಅಗ್ನಿಃ ॥
ಛಂದಃ—೧, ೨. ಜಗತೀ । ೩-೧೨ ತ್ರಿಷ್ಟುಪ್ ॥

ಸಂಹಿತಾಪಾಠಃ

ಭದ್ರಾ ಅಗ್ನೇರ್ವಧ್ರ್ಯಶ್ವಸ್ಯ ಸಂದೃಶೋ ವಾಮೀ ಪ್ರಣೀತಿಃ ಸುರಣಾ ಉಪೇತಯಃ ।
ಯದೀಂ ಸುಮಿತ್ರಾ ವಿಶೋ ಅಗ್ರ ಇಂಧತೇ ಘೃತೇನಾಹುತೋ ಜರತೇ ದವಿದ್ಯುತತ್ ॥ ೧ ॥

ಪದಪಾಠಃ

ಭದ್ರಾಃ । ಅಗ್ನೇಃ । ವಧ್ರ್ಯಶ್ವಸ್ಯ । ಸಂದೃಶಃ । ವಾಮೀ । ಪ್ರಣೀತಿಃ । ಸುರಣಾಃ । ಉಪೇತಯಃ
ಯತ್ । ಈಂ । ಸುಮಿತ್ರಾಃ । ವಿಶಃ । ಅಗ್ರೇ । ಇಂಧತೇ । ಘೃತೇನ । ಆಹುತಃ । ಜರತೇ
ದವಿದ್ಯುತತ್ ॥ ೧ ॥

ಸಾಯಣಭಾಷ್ಯಂ

ಅಗ್ನೇರ್ವಧ್ರ್ಯಮಾಣಗುಣಸ್ಯ ಸಂದೃಶಃ ಸಂದೃಶ್ಯಯೋ ವಧ್ರ್ಯಶ್ವಸ್ಯೈತನ್ನಾಮಕಸ್ಯ ಮಮ ಪಿತುರ್ಭದ್ರಾಃ ಕಲ್ಯಾಣಕಾರಿಣ್ಯೋ ಭವಂತು । ಯದ್ವಾ । ವಧ್ರ್ಯಶ್ವಸ್ಯ ವಧ್ರ್ಯಶ್ವಕುಲೇ ಜಾತಸ್ಯಾಗ್ನೇಃ ಸಂದೃಶ್ಯಯೋ ಭಜನೀಯಾ ಭವಂತು । ಪ್ರಣೀತಿಸ್ತಸ್ಯ ಪ್ರಣಯನಂ ವಾಮೀ ಕಲ್ಯಾಣಂ ಚ ಭವತು । ತಥೋಪೇತಯೋ ಯಜ್ಞಂ ಪ್ರತ್ಯುಪಗತಯಃ ಸುರಣಾಃ ಶೋಭನರಮಣಾ ಭವಂತು । ಸುಮಿತ್ರಾ ಏತನ್ನಾಮಧೇಯಾ ವಿಶೋಽಮೀ ಮನುಷ್ಯಾ ಈನೇನಮಗ್ನಿಮಗ್ರೇ ಪ್ರಥಮಂ ಯದ್ಯದೇಂಧತೇ

हविर्भिर्दीदयंति तदा घृतेनाहुतो हविर्भिश्च दविद्युतद्घृतं द्योतमानः ॥ दाधर्तिदधर्तिरित्यादिना निपातितः । सोऽग्निर्जरते । अस्माभिः स्तूयते ॥

प्रतिपदार्थ

अग्नेः—अग्नि य । **संदृशः**—अनुग्रहात्मकवाद दृष्टिगळु । **वध्र्यश्वस्य**—वध्र्यश्व नेंब नन्न पितृविगे । **भद्राः**—कल्याणकारकगळागलि। **प्रणीतिः**—अवन उत्तमवाद मार्गदर्शित्ववु। **वामीः**—मंगळकारकवागलि । **उपेतयः**—यज्ञाभिमुखवाद आगमनवु । **सुरणाः**—अनुग्रहात्मकवागिरलि । **सुमित्र्याः**—सुमित्रसंज्ञकराद । **विशः**—जनरु । **ईं**—अग्नियन्नु। **अग्रे**—मोदलु । **यत्**—यावाग । **इंधते**—प्रज्वलिसुवंते माडुवरो आग । **घृतेन**—आज्यदिंद । **आहुतः**—पूजिसल्पट्टवनू । **दविद्युतत्**—प्रकाशमानवू आद अग्नियु । **जरते**—नम्मिंद स्तुतिसल्पडुत्तानॆ.

भावार्थ

अग्नि य अनुग्रहात्मकवाद दृष्टिगळु वध्र्यश्वनेंब नन्न पितृविगे कल्याणकारकळागली. अवन उत्तमवाद मार्गदर्शित्ववु मंगळकारवागलि. यज्ञाभिमुखवाद अवन आगमनवु अनुग्रहात्मकवागली. सुमित्रसंज्ञकराद जनरु अग्नियन्नु मोदलु यावाग प्रज्वलिसुवंते माडुवरो आग आज्यदिंद पूजिसल्पट्टवनू, प्रकाशमानवू आद अग्नियु नम्मिंद स्तुतिसल्पडुत्तानॆ.

English Translation

May Agni's regards be benevolent to Vadhryashwa, may his guidance be auspicious, his approaches (to the sacrifice) favourable; when the Sumitra people first kindle Agni, then fed with butter and brilliantly blazing, he is glorified.

संहितापाठः

घृतमग्नेर्वध्र्यश्वस्य वर्धनं घृतमन्नं घृतमस्य मेदनं ।
घृतेनाहुत उर्विया वि पप्रथे सूर्य इव रोचते सर्परासुतिः ॥ ७ ॥

पदपाठः

घृतं । अग्नेः । वध्र्यश्वस्य । वर्धनं । घृतं । अन्नं । घृतं । ऊं इति । अस्य । मेदनं ।
घृतेन । आऽहुतः । उर्विया । वि । पप्रथे । सूर्यःऽइव । रोचते । सर्पिःऽआसुतिः॥

ಸಾಯಣಭಾಷ್ಯಂ

ವಧ್ರ್ಯಶ್ವಸ್ಯ ಸಂಬಂಧಿನೋಽಗ್ನೇರ್ಘೃತಂ ದೀಯಮಾನಂ ಹವಿರ್ವರ್ಧನಂ ಭವತು । ತಥಾ ಘೃತಮನ್ನಮದನೀಯಂ ಭವತು । ತಥಾಸ್ಯಾಗ್ನೇರ್ಘೃತಮು ಘೃತಮೇವ ಮೇದನಂ ಪುಷ್ಟಿಕರಂ ಭವತು। ಯೇನಾಗ್ನಿಃ ಪುಷ್ಟೋ ಭವತಿ ತನ್ಮೇದನಂ । ತೇನ ಘೃತೇನಾಹುತೋಽಗ್ನಿರುರ್ವಿಯೋರ್ವತ್ಯಂತಂ ವಿಪಪ್ರಥೇ । ಸ್ವತೇಜಸಾ ವಿಪ್ರಥಿತೋ ಭವತಿ । ತಥಾ ಸರ್ಪಿರಾಸುತಿಃ ಸರ್ಪಿರಾಸೂಯತೇ ಯಸ್ಮಿನ್ನಿತಿ ಸೋಽಗ್ನಿಃ ಸೂರ್ಯ ಇವ ರೋಚತೇ । ದೀಪ್ಯತೇ ॥

ಪ್ರತಿಪದಾರ್ಥ

ವಧ್ರ್ಯಶ್ವಸ್ಯ—ವಧ್ರ್ಯಶ್ವನಿಂದ ಪೂಜಿತನಾದ । **ಅಗ್ನೇಃ**—ಅಗ್ನಿಯ । **ಘೃತಂ**—ಜವಿಸ್ಸು । **ವರ್ಧನಂ**—ವೃದ್ಧಿಯನ್ನು ಹೊಂದಲಿ । **ಘೃತಂ**—ಹವಿಸ್ಸು । **ಅನ್ನಂ**—ಅವನ ಭಕ್ಷಣಕ್ಕೆ ಯೋಗ್ಯವಾಗಲಿ । **ಅಸ್ಯ**—ಈ ಅಗ್ನಿಯ । **ಘೃತಮು**—ಘೃತರೂಪವಾದ ಹವಿಸ್ಸೇ । **ಮೇದನಂ**—ಪುಷ್ಟಿಕರವಾಗಲಿ । **ಘೃತೇನ**—ಘೃತದಿಂದ । **ಆಹುತಃ**—ಪೂಜಿತನಾದ ಅಗ್ನಿಯು । **ಉರ್ವಿಯಾ**—ಅತ್ಯಧಿಕವಾಗಿ । **ವಿ ಪಪ್ರಥೇ**—ತನ್ನ ತೇಜಸ್ಸಿನಿಂದ ವಿಸ್ತೃತನಾಗುತ್ತಾನೆ । **ಸರ್ಪಿರಾಸುತಿಃ**—ಸ್ತುತಿಗಳಿಂದ ಪ್ರಶಂಸಿತನಾದ ಅಗ್ನಿಯು । **ಸೂರ್ಯ ಇವ**—ಸೂರ್ಯನಂತೆ । **ರೋಚತೇ**—ಪ್ರಕಾಶಿಸುತ್ತಾನೆ.

ಭಾವಾರ್ಥ

ವಧ್ರ್ಯಶ್ವನಿಂದ ಪೂಜಿತನಾಗುವ ಅಗ್ನಿಗೆ ಅರ್ಪಿಸುವ ಹವಿಸ್ಸು ವೃದ್ಧಿಯನ್ನು ಹೊಂದಲಿ. ಹವಿಸ್ಸು ಅವನ ಭಕ್ಷಣಕ್ಕೆ ಯೋಗ್ಯವಾಗಲಿ. ಘೃತರೂಪವಾದ ಈ ಹವಿಸ್ಸು ಪುಷ್ಟಿಕರವಾಗಲಿ. ಘೃತದಿಂದ ಪೂಜಿತನಾಗುವ ಅಗ್ನಿಯು ತನ್ನ ತೇಜಸ್ಸಿನಿಂದ ಅತ್ಯಧಿಕವಾಗಿ ವಿಸ್ತೃತನಾಗುತ್ತಾನೆ. ಸ್ತುತಿಗಳಿಂದ ಪ್ರಶಂಸಿತನಾದ ಅಗ್ನಿಯು ಸೂರ್ಯನಂತೆ ಪ್ರಕಾಶಿಸುತ್ತಾನೆ.

English Translation

May ghi be the augmenter of the Agni of Vadhryashwa; may ghi be his food; may ghi be his nutriment; sacrificed to with ghi he expands exceedingly; he shines like the sun, when the clarified butter is poured out for him.

ಸಂಹಿತಾಪಾಠಃ

ಯತ್ತೇ ಮನುರ್ಯದನೀಕಂ ಸುಮಿತ್ರಃ ಸಮೀಧೇ ಅಗ್ನೇ ತದಿದಂ ನವೀಯಃ।

ಸ ರೇವಚ್ಛೋಚ ಸ ಗಿರೋ ಜುಷಸ್ವ ಸ ವಾಜಂ ದರ್ಷಿ ಸ ಇಹ ಶ್ರವೋ ಧಾಃ ॥

ಪದಪಾಠಃ

ಯತ್ । ತೇ । ಮನುಃ । ಯತ್ । ಅನೀಕಂ । ಸುಽಮಿತ್ರಃ । ಸಂಽಈಧೇ । ಅಗ್ನೇ । ತತ್ । ಇದಂ । ನವೀಯಃ ।

ಸಃ । ರೇವತ್ । ಶೋಚ । ಸಃ । ಗಿರಃ । ಜುಷಸ್ವ । ಸಃ । ವಾಜಂ । ದರ್ಷಿ । ಸಃ । ಇಹ । ಶ್ರವಃ । ಧಾಃ ॥

ಸಾಯಣಭಾಷ್ಯಂ

ಹೇ ಅಗ್ನೇ ತೇ ತ್ವದೀಯಂ ಯದನೀಕಂ ರಶ್ಮಿಸಂಘಂ ಮನುರೇತನ್ನಾಮಕೋ ಯಥಾ ಸಮೀಧೇ ಹವಿರ್ಭಿಃ ಸಮ್ಯಗ್ದೀಪಯತಿ ಸುಮಿತ್ರ ಏತನ್ನಾಮಕೋಽಹಂ ಸಮೀಧೇ। ಸಮ್ಯಗ್ದೀಪಯಾಮಿ॥ ಞಿಇಂಧೀ ದೀಪ್ತೌ । ಲಿಟೀಂಧಿಭವತಿಭ್ಯಾಂ ಚೇತಿ ಕಿತ್ತ್ವಾನ್ನಲೋಪಃ ॥ ತದಿದಂ ಸೋಽಯಂ ರಶ್ಮಿಸಂಘೋ ನವೀಯೋ ನವತರೋ ಭವತು । ಸ ತ್ವಂ ರೇವದ್ಧನಯುಕ್ತಂ ಯಥಾ ಭವತಿ ತಥಾ ಶೋಚ । ಪ್ರಜ್ವಲ । ಸ ಏವ ತ್ವಂ ಗಿರೋಽಸ್ಮದೀಯಾಃ ಸ್ತುತೀರ್ಜುಷಸ್ವ । ಸೇವಸ್ವ । ಸ ತ್ವಂ ವಾಜಂ ಶತ್ರುಬಲಂ ದರ್ಷಿ । ವಿದಾರಯ । ತಥೇಹ ಮಯಿ ಶ್ರವೋಽನ್ನಂ ಧಾಃ । ಧೇಹಿ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ತೇ**—ನಿನ್ನ । **ಯತ್ ಅನೀಕಂ**—ಯಾವ ಜ್ವಾಲಾಸಮೂಹವನ್ನು । **ಮನುಃ**—ಮನುವು । **ಸಮೀಧೇ**—ಪ್ರಜ್ವಲಿಸುವಂತೆ ಮಾಡಿದನೋ । **ಸುಮಿತ್ರಃ**—ಸುಮಿತ್ರಸಂಜ್ಞಕನಾದ ನಾನು ಯಾವ ನಿನ್ನ ಜ್ವಾಲೆಗಳನ್ನು ಪ್ರಜ್ವಲಿಸುವಂತೆ ಮಾಡಿದೆನೋ । **ತದಿದಂ**—ಆ ನಿನ್ನ ಜ್ವಾಲಾಸಮೂಹವು । **ನವೀಯಃ**—ಹೊಸ ಸ್ವರೂಪವನ್ನು ಹೊಂದಲಿ । **ಸಃ**—ನೀನು । **ರೇವತ್**—ಧನಪ್ರದನಾಗುವಂತೆ । **ಶೋಚ**—ಬೆಳಗು । **ಸಃ**—ನೀನು । **ಗಿರಃ**—ನಮ್ಮ ಸ್ತುತಿಗಳನ್ನು । **ಜುಷಸ್ವ**—ಸೇವಿಸು । **ಸಃ**—ನೀನು । **ವಾಜಂ**—ಶತ್ರುಬಲವನ್ನು । **ದರ್ಷಿ**—ನಾಶಪಡಿಸು । **ಇಹ**—ನನ್ನಲ್ಲಿ । **ಶ್ರವಃ**—ಅನ್ನವನ್ನು । **ಧಾಃ**—ಸ್ಥಾಪಿಸು.

ಭಾವಾರ್ಥ

ಎಲೈ ಅಗ್ನಿಯೇ, ಯಾವ ನಿನ್ನ ಜ್ವಾಲಾಸಮೂಹವನ್ನು ಮನುವು ಪ್ರಜ್ವಲಿಸುವಂತೆ ಮಾಡಿದನೋ ಮತ್ತು ಸುಮಿತ್ರಸಂಜ್ಞಕನಾದ ನಾನು ಯಾವ ನಿನ್ನ ಜ್ವಾಲೆಗಳನ್ನು ಪ್ರಜ್ವಲಿಸುವಂತೆ ಮಾಡಿದೆನೋ ಆ ನಿನ್ನ ಜ್ವಾಲಾಸಮೂಹವು ಹೊಸಸ್ವರೂಪವನ್ನು ಹೊಂದಲಿ. ನೀನು ಧನಪ್ರದನಾಗುವಂತೆ ಬೆಳಗು. ನೀನು ನಮ್ಮ ಸ್ತುತಿಗಳನ್ನು ಸೇವಿಸು. ಶತ್ರುಬಲವನ್ನು ನಾಶಪಡಿಸು. ನನ್ನಲ್ಲಿ ಅನ್ನವನ್ನು ಸ್ಥಾಪಿಸು.

English Translation

May that your army of flame, Agni, which Manu, which Sumitra has kindled, be the newest; do you shine wealthily, do you grociously accept our praises; do you destroy the might (of our foes); do you grant us abundance.

ಸಂಹಿತಾಪಾಠಃ

ಯಂ ತ್ವಾ ಪೂರ್ವಮೀಳಿತೋ ವಧ್ರ್ಯಶ್ವಃ ಸಮೀಧೇ ಅಗ್ನೇ ಸ ಇದಂ ಜುಷಸ್ವ।
ಸ ನಃ ಸ್ತಿಪಾ ಉತ ಭವಾ ತನೂಪಾ ದಾತ್ರಂ ರಕ್ಷಸ್ವ ಯದಿದಂ ತೇ ಅಸ್ಮೇ ॥೪॥

ಪದಪಾಠಃ

ಯಂ । ತ್ವಾ । ಪೂರ್ವಂ । ಈಳಿತಃ । ವಧ್ರಿಽಅಶ್ವಃ । ಸಂಽಈಧೇ । ಅಗ್ನೇ । ಸಃ । ಇದಂ । ಜುಷಸ್ವ ।

ಸಃ । ನಃ । ಸ್ತಿಽಪಾಃ । ಉತ । ಭವ । ತನೂಽಪಾಃ । ದಾತ್ರಂ । ರಕ್ಷಸ್ವ । ಯತ್ । ಇದಂ । ತೇ । ಅಸ್ಮೇ ಇತಿ ॥

ಸಾಯಣಭಾಷ್ಯಂ

ಈಳಿತಃ ॥ ವ್ಯತ್ಯಯೇನ ಕರ್ತರಿ ಕ್ತಃ ॥ ಸ್ತೋತಾ ವಧ್ರ್ಯಶ್ವೋ ಮಮ ಪಿತಾ ಪೂರ್ವಂ ಪೂರ್ವಸ್ಮಿನ್ಕಾಲೇ ಸಂಜಾತಂ ಯಂ ತ್ವಾ ಸಮೀಧೇ ಹವಿರ್ಭಿಃ ಸಮ್ಯಗದೀಪಯತ್ ಸ ತ್ವಮಿದಾನೀಂ ಮಯಾ ಕ್ರಿಯಮಾಣಮಿದಂ ಸ್ತೋತ್ರಂ ಜುಷಸ್ವ । ಸೇವಸ್ವ । ಯದಗ್ನ । ವಧ್ರ್ಯಶ್ವಸ್ತಸ್ಯ ಪುತ್ರೋಽಹಂ ಸಮ್ಯಗ್ದೀಪಿತವಾನಸ್ಮಿ । ಸ ತ್ವಂ ನೋಽಸ್ಮಾಕಂ ಸ್ತಿಪಾಃ ॥ ಪೃಷೋದರಾದಿಃ ॥ ಪಸ್ತ್ಯಂ ಗೃಹಂ । ತಸ್ಯ ರಕ್ಷಕೋ ಭವ । ಯದ್ವಾ । ಉಪಸ್ಥಿತಾಞ್ಜ್ಯೋತಿಷ್ಟ್ವೇಮಾದೀನ್ಯಾಗಾನ್ಪಾಲಯತೀತಿ ಸ್ತಿಪಾಃ । ಅಸ್ಮದೀಯಾನಾಂ ಯಜ್ಞಾನಾಂ ಪಾಲಯಿತಾ ಭವ । ಉತಾಪಿ ಚ ತನೂಪಾಃ ಸ್ವಾಂಗಾನಾಂ ರಕ್ಷಕೋ ಭವ । ಕಿಂಚ ದಾತ್ರಂ ತದ್ಧನಂ ರಕ್ಷಸ್ವ ಯದಿದಂ ಧನಂ ತೇ ತವ ಸ್ವಭೂತೇಷ್ವಸ್ಮೇ ಅಸ್ಮಾಸು ತಿಷ್ಠತಿ ॥

ಪ್ರತಿಪದಾರ್ಥ

ಈಳಿತಃ—ಸ್ತುತಿಕರ್ತನಾದ । ವಧ್ರ್ಯಶ್ವಃ—ವಧ್ರ್ಯಶ್ವನು । ಪೂರ್ವಂ—ಮೊದಲು । ಯಂ ತ್ವಾ—ಯಾವ ನಿನ್ನನ್ನು । ಸಮೀಧೇ—ಹವಿಸ್ಸುಗಳಿಂದ ಪ್ರಜ್ವಲಿತನಾಗುವಂತೆ ಮಾಡಿದನೋ । ಸಃ—ಅದೇ ನೀನು ಇದಂ—ನನ್ನ ಈ ಸ್ತೋತ್ರವನ್ನು । ಜುಷಸ್ವ—ಸೇವಿಸು । ಸಃ—ನೀನು । ನಃ—ನಮ್ಮ । ಸ್ತಿಪಾಃ—ಗೃಹರಕ್ಷಕನಾಗಿ । ಭವ—ಇರು । ಉತ—ಮತ್ತು । ತನೂಪಾಃ—ನಮ್ಮ ಅಂಗರಕ್ಷಕನಾಗಿರು । ಯದಿದಂ—ಯಾವ ಧನವು । ತೇ—ನಿನ್ನ ಪೂಜಕರಾದ । ಅಸ್ಮೇ—ನಮ್ಮಲ್ಲಿ ಸ್ಥಾಪಿತವಾಗಿರುವುದೋ । ದಾತ್ರಂ—ಅಂತಹ ಧನವನ್ನು । ರಕ್ಷಸ್ವ—ಕಾಪಾಡು.

ಭಾವಾರ್ಥ

ಎಲೈ ಅಗ್ನಿಯೇ, ಸ್ತುತಿಕರ್ತನಾದ ವಧ್ರ್ಯಶ್ವನು ಮೊದಲು ಯಾವ ನಿನ್ನನ್ನು ಹವಿಸ್ಸುಗಳಿಂದ ಪ್ರಜ್ವಲಿತನಾಗುವಂತೆ ಮಾಡಿದನೋ, ಅದೇ ನೀನು ನನ್ನ ಈ ಸ್ತೋತ್ರವನ್ನು ಸೇವಿಸು. ನೀನು ನಮ್ಮ ಗೃಹರಕ್ಷಕನಾಗಿರು. ನಮ್ಮ ಅಂಗರಕ್ಷಕನಾಗಿಯೂ ಇರು. ನಿನ್ನಿಂದ ದತ್ತವಾಗಿ ನಮ್ಮಲ್ಲಿ ಸ್ಥಾಪಿತವಾಗಿರುವ ಧನವನ್ನು ಕಾಪಾಡು.

English Translation

Do you, Agni, whom Vadhryshwa propitiating you formerly kindled, accept this; be the protector of our sacrifices, be the protector of our bodies; preserve this wealth which has been given to us by you.

ಸಂಹಿತಾಪಾಠಃ

ಭವಾ ದ್ಯುಮ್ನೀ ವಾಧ್ರ್ಯಶ್ವೋತ ಗೋಪಾ ಮಾ ತ್ವಾ ತಾರೀದಭಿಮಾತಿರ್ಜನಾನಾಂ ।

ಶೂರ ಇವ ಧೃಷ್ಣುಶ್ಚ್ಯವನಃ ಸುಮಿತ್ರಃ ಪ್ರ ನು ವೋಚಂ ವಾಧ್ರ್ಯಶ್ವಸ್ಯ ನಾಮ ॥ ೫ ॥

ಪದಪಾಠಃ

ಭವ । ದ್ಯುಮ್ನೀ । ವಾಧ್ರ್ಯಶ್ವ । ಉತ । ಗೋಪಾಃ । ಮಾ । ತ್ವಾ । ತಾರೀತ್ । ಅಭಿವಮಾತಿಃ । ಜನಾನಾಂ ॥
ಶೂರಃಇವ । ಧೃಷ್ಣುಃ । ಚ್ಯವನಃ । ಸುಮಿತ್ರಃ । ಪ್ರ । ನು । ವೋಚಂ । ವಾಧ್ರ್ಯಶ್ವಸ್ಯ । ನಾಮ ॥

ಸಾಯಣಭಾಷ್ಯಂ

ಹೇ ವಾಧ್ರ್ಯಶ್ವ ವಧ್ರ್ಯಶ್ವಕುಲೇ ಜಾತಾಗ್ನೇ ದ್ಯುಮ್ನೀ । ದ್ಯುಮ್ನಂ ದ್ಯೋತತೇರ್ಯಶೋ ವಾನ್ನಂ ವಾ । ತದ್ವಾನ್ಭವ । ಉತಾಪಿ ಚ ಗೋಪಾ ಗೋಪಾಯಿತಾ ಭವ । ಕಿಂಚ ತ್ವಾ ತ್ವಾಂ ಕಶ್ಚಿದಪಿ ಮಾ ತಾರೀತ್ । ಮಾ ಹಿನಸ್ತು । ಯತೋ ಜನಾನಾಂ ಶತ್ರೂಣಾಮಭಿಮಾತಿರಭಿಭವನಶೀಲಮಾನ-ಯುಕ್ತೋಽಭಿಭವಿತಾ ಭವಸಿ । ಕಿಂಚ ಶೂರ ಇವ ಬಲವಾನಿವ ಧೃಷ್ಣುಃ ಶತ್ರುಧರ್ಷಣಶೀಲಃ ತಸ್ಮಾ-ಚ್ಚ್ಯವನಸ್ತೇಷಾಂ ಚ್ಯಾವಯಿತಾ ಭವಸಿ । ಅಥ ವಾಧ್ರ್ಯಶ್ವಸ್ಯಾಗ್ನೇಸ್ತವ ನಾಮಾಗ್ನಿರ್ಜಾತವೇದಾ ವೈಶ್ವಾನರ ಇತ್ಯಾದೀನಿ ನಾಮಾನಿ ನು ಕ್ಷಿಪ್ರಂ ಸುಮಿತ್ರೋಽಹಂ ಪ್ರ ವೋಚಂ । ಪ್ರಬ್ರವೀಮಿ । ತಸ್ಮಾ-ನ್ಮೋಽನ್ನಾದಿಯುಕ್ತೋ ಭವ ॥

ಪ್ರತಿಪದಾರ್ಥ

ವಾಧ್ರ್ಯಶ್ವ—ವಧ್ರ್ಯಶ್ವಸಂಬಂಧಿಯಾದ ಎಲೈ ಅಗ್ನಿಯೇ । **ದ್ಯುಮ್ನೀ**—ಅನ್ನಯುಕ್ತನಾಗ । **ಭವ**—ಆಗು । **ಉತ**—ಮತ್ತು । **ಗೋಪಾಃ**—ನಮ್ಮ ರಕ್ಷಕನಾಗಿರು । **ತ್ವಾ**—ನಿನ್ನನ್ನು । **ಮಾ ತಾರೀತ್**—ಯಾರೂ ಹಿಂಸಿಸದಿರಲಿ । **ಜನಾನಾಂ**—ಸಕಲರಿಗೂ । **ಅಭಿಮಾತಿಃ**—ಸೋಲನ್ನುಂಟುಮಾಡುವವನಾಗಿದ್ದೀಯೆ । **ಶೂರ ಇವ**—ಪರಾಕ್ರಮಿಯಂತೆ । **ಧೃಷ್ಣುಃ**—ಶತ್ರುಗಳನ್ನು ಸೆದೆಬಡಿಯುವವನೂ । **ಚ್ಯವನಃ**—ಅವರ ನಾಶಕನೂ ಆಗಿದ್ದೀಯೆ । **ಸುಮಿತ್ರಃ**—ಸುಮಿತ್ರಸಂಜ್ಞಕನಾದ । **ಅಹಂ**—ನಾನು । **ವಾಧ್ರ್ಯಶ್ವಸ್ಯ**—ವಧ್ರ್ಯಶ್ವಸಂಬಂಧಿ ಯಾದ ನಿನ್ನ । **ನಾಮ**—ವೈಶ್ವಾನರಾದಿ ನಾಮಗಳನ್ನು । **ನು**—ಕ್ಷಿಪ್ರವಾಗಿ । **ಪ್ರ ವೋಚಂ**—ಪಠಿಸುತ್ತೇನೆ.

ಭಾವಾರ್ಥ

ವಧ್ರ್ಯಶ್ವಸಂಬಂಧಿಯಾದ ಎಲೈ ಅಗ್ನಿಯೇ, ನೀನು ಅನ್ನಯುಕ್ತನಾಗಿರು. ನನ್ನ ರಕ್ಷಕನಾಗಿರು. ನಿನ್ನನ್ನು ಯಾರೂ ಹಿಂಸಿಸದಿರಲಿ. ನೀನು ಸಕಲರಿಗೂ ಸೋಲನ್ನುಂಟುಮಾಡುವವನಾಗಿದ್ದೀಯೆ. ಶೂರರಂತೆ ಶತ್ರುಗಳನ್ನು ಸೆದೆಬಡಿಯುವವನೂ ಅವರ ನಾಶಕನೂ ಆಗಿದ್ದೀಯೆ. ಸುಮಿತ್ರಸಂಜ್ಞಕನಾದ ನಾನು ವಧ್ರ್ಯಶ್ವಸಂಬಂಧಿಯಾದ ನಿನ್ನ ವೈಶ್ವನರಾದಿ ನಾಮಗಳನ್ನು ಕ್ಷಿಪ್ರವಾಗಿ ಪಠಿಸುತ್ತೇನೆ.

English Translation

Kinsman of Vadhryashwa, be the possessor of food and our protector; let one assail you, (for you are) the overcomer of men; like a resolute warrior (you are) the overthrower (of enemies); I, Sumitra, celebrate the names of the kinsmen of Vadhryashwa,

ಸಂಹಿತಾಪಾಠಃ

ಸಮಜ್ಯಾ ಪರ್ವತ್ಯಾಽವಸೂನಿ ದಾಸಾ ವೃತ್ರಾಣ್ಯಾರ್ಯಾ ಜಿಗೇಥ ।
ಶೂರ ಇವ ಧೃಷ್ಣುಶ್ಚ್ಯವನೋ ಜನಾನಾಂ ತ್ವಮಗ್ನೇ ಪೃತನಾಯೂಁರಭಿ ಷ್ಯಾಃ ॥

ಪದಪಾಠಃ

ಸಂ । ಅಜ್ಯಾ್ಯ । ಪರ್ವತ್ಯಾ । ವಸೂನಿ । ದಾಸಾ । ವೃತ್ರಾಣಿ । ಆರ್ಯಾ । ಜಿಗೇಥ ।
ಶೂರಃ ಇವ । ಧೃಷ್ಣುಃ । ಚ್ಯವನಃ । ಜನಾನಾಂ । ತ್ವಂ । ಅಗ್ನೇ । ಪೃತನಾಯೂನ್ । ಅಭಿ । ಷ್ಯಾಃ ॥

ಸಾಯಣಭಾಷ್ಯಂ

ಹೇ ಅಗ್ನೇ ಅಜ್ಯಾ್ಯ । ಅಜಂತಿ ಗಚ್ಛಂತೀತ್ಯಜ್ಯಯೋ ಜನಾಃ । ತೇಭ್ಯೋ ಹಿತಾನಿ ಪರ್ವತ್ಯಾ ಪರ್ವತಭವಾನಿ ವಸೂನಿ ಗವಾದಿಲಕ್ಷಣಾನಿ ಸಂ ಜಿಗೇಥ । ಶತ್ರುಭ್ಯಃ ಸಂಜಿತವಾನಸಿ । ತಥಾರ್ಯಾ ಬಲವದ್ಭಿಃ ಕೃತಾನ್ದಾಸಾ ದಾಸೈರಸುರೈಃ ಕೃತಾನ್ವೃತ್ರಾಣ್ಯುಪದ್ರವಾನ್ಸಂ ಜಿಗೇಥ । ತಾನ್ಹತವಾನಸೀತ್ಯರ್ಥಃ ॥ ಜಿ ಜಯೇ । ಲಿಟಿ ರೂಪಂ ॥ ಶೂರ ಇವ ಧೃಷ್ಣುರ್ಜನಾನಾಂ ಚ್ಯವನಸ್ತ್ವಂ ಪೃತನಾಯೂನ್ಸಂಗ್ರಾಮಕಾಮಾನಭಿ ಷ್ಯಾಃ । ಅಭಿಭವ ॥ ಪೃತನಾಯೂನಿತ್ಯತ್ರ ಲೋಪಾಭಾವಶ್ಛಂದಸಃ । ಅಶ್ವಘಸ್ಯಾದಿತ್ಯಾತ್ವಂ ವಿಧೀಯಮಾನಮುಸ್ಮಾದಪಿ ವ್ಯತ್ಯಯೇನ ಭವತಿ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಅಜ್ಯಾ್ಯ**—ಮಾನವರಿಗೆ ಹಿತಕರವೂ । **ಪರ್ವತ್ಯಾ**—ಪರ್ವತೋತ್ಪನ್ನವೂ ಆದ । **ವಸೂನಿ**—ಧನಗಳನ್ನು । **ಸಂ ಜಿಗೇಥ**—ನೀನು ಶತ್ರುಗಳಿಂದ ಕಿತ್ತುಕೊಂಡಿದ್ದೀಯೆ । **ಆರ್ಯಾ**—ಆರ್ಯರಿಂದ ಉಂಟುಮಾಡಲ್ಪಟ್ಟವೂ । **ದಾಸಾ**—ದಾಸರಿಂದ ಉಂಟುಮಾಡಲ್ಪಟ್ಟವೂ ಆದ । **ವೃತ್ರಾಣಿ**—ಸಕಲ ಹಿಂಸೆಗಳನ್ನೂ । **(ಸಂ) ಜಿಗೇಥ**—ಒಟ್ಟಿಗೆ ನಾಶಮಾಡಿದ್ದೀಯೆ । **ಶೂರ ಇವ**—ಶೂರನಂತೆ । **ಧೃಷ್ಣುಃ**—ಶತ್ರುಧರ್ಷಕನಾದವನೂ । **ಜನಾನಾಂ**—ಶತ್ರುಜನರ । **ಚ್ಯವನಃ**—ನಾಶಕನೂ ಆದ । **ತ್ವಂ**—ನೀನು । **ಪೃತನಾಯೂನ್**—ಶತ್ರುಯೋಧರನ್ನು । **ಅಭಿ ಷ್ಯಾಃ**—ಸೋಲಿಸುತ್ತೀಯೆ.

ಭಾವಾರ್ಥ

ಎಲೈ ಅಗ್ನಿಯೇ, ಮಾನವರಿಗೆ ಹಿತಕರವೂ, ಪರ್ವತೋತ್ಪನ್ನವೂ (ಅಥವಾ ಪರ್ವತದಲ್ಲಿ ಅಡಗಿರುವುದೂ) ಆದ ಧನಗಳನ್ನು ನೀನು ಶತ್ರುಗಳಿಂದ ಕಿತ್ತುಕೊಂಡಿದ್ದೀಯೆ. ಆರ್ಯರಿಂದ ಉಂಟುಮಾಡಲ್ಪಟ್ಟವೂ, ದಾಸರಿಂದ ಉಂಟುಮಾಡಲ್ಪಟ್ಟವೂ ಆದ ಸಕಲ ಹಿಂಸೆಗಳನ್ನೂ ಒಟ್ಟಿಗೆ ನಾಶಮಾಡಿದ್ದೀಯೆ. ಶೂರನಂತೆ ಶತ್ರುಧರ್ಷಕನೂ, ಶತ್ರುಜನರ ನಾಶಕನೂ ಆದ ನೀನು ಶತ್ರುಯೋಧರನ್ನು ಸೋಲಿಸುತ್ತೀಯೆ.

English Translation

You have gained mountain-treasures beneficial to men, (you have defeated ihe hostilities) of strong men, Dasas and Vritras, like are solute

warrior, do you Agni, the overthrower (of enemies), overcome those who are desirous of battle.

ಸಂಹಿತಾಪಾಠಃ

ದೀರ್ಘತಂತುರ್ಬೃಹದುಕ್ಷಾಯಮಗ್ನಿಃ ಸಹಸ್ರಸ್ತರೀಃ ಶತನೀಥ ಋಭ್ವಾ ।
ದ್ಯುಮಾನ್ ದ್ಯುಮತ್ಸು ನೃಭಿರ್ಮೃಜ್ಯಮಾನಃ ಸುಮಿತ್ರೇಷು ದೀದಯೋ
ದೇವಯತ್ಸು ॥ ೭ ॥

ಪದಪಾಠಃ

ದೀರ್ಘತಂತುಃ । ಬೃಹತ್ಉಕ್ಷಾ । ಅಯಂ । ಅಗ್ನಿಃ । ಸಹಸ್ರಸ್ತರೀಃ । ಶತನೀಥಃ । ಋಭ್ವಾ ।
ದ್ಯುಮಾನ್ । ದ್ಯುಮತ್ಸು । ನೃಭಿಃ । ಮೃಜ್ಯಮಾನಃ । ಸುಮಿತ್ರೇಷು । ದೀದಯೋಃ । ದೇವಯತ್ಸು ॥ ೭ ॥

ಸಾಯಣಭಾಷ್ಯಂ

ದೀರ್ಘತಂತುಃ। ಯೈರ್ಯಜ್ಞಂ ಸಂತನೋತಿ ತೇ ತಂತವಃ ಸ್ತೋತ್ರಾದಯಃ । ಪ್ರಭೂತಸ್ತುತಿಮಾನ್ಬೃಹದುಕ್ಷಾ । ಉಕ್ಷಾ ಸೇಚಕೋ ರಶ್ಮಿಃ । ಪ್ರಭೂತರಶ್ಮಿಯುಕ್ತಃ ಸಹಸ್ರಸ್ತರೀರ್ಹವಿರೂಪಬಹ್ವಾಚ್ಛಾದನಃ ಶತನೀಥ ಅಹವನೀಯಾದಿದ್ವಾರೇಣ ಬಹುವಿಧನಯನೇನ ಋಭ್ವಾ ಮಹಾನ್ದ್ಯುಮತ್ಸು ದೀಪ್ತಿಮತ್ಸು ಸುಧ್ಯೇ ದ್ಯುಮಾನತಿಶಯೇನ ದೀಪ್ತಿಮಾನಯಮಗ್ನಿರ್ನೃಭಿಃ ಕರ್ಮನೇತೃಭಿರ್ಋತ್ವಿಗ್ಭಿರ್ಮೃಜ್ಯಮಾನೋಽಲಂಕ್ರಿಯಮಾಣೋ ಭವತಿ ॥ ಮೃಜೂ ಶೌಚಾಲಂಕಾರಯೋಃ ॥ ಸ ತ್ವಂ ದೇವಯತ್ಸು ದೇವಾನ್ಕಾಮಯಮಾನೇಷು ಸುಮಿತ್ರೇಷ್ವಸ್ಮಾಸು ದೀದಯಃ । ದೀಪ್ಯಸ್ವ । ದೀದಯತಿರ್ದೀಪ್ತಿಕರ್ಮಾ ॥

ಪ್ರತಿಪದಾರ್ಥ

ದೀರ್ಘತಂತುಃ—ಅಧಿಕವಾದ ಸ್ತುತಿಯುಳ್ಳವನೂ । **ಬೃಹದುಕ್ಷಾ**—ಪ್ರಭೂತವಾದ ರಶ್ಮಿಗಳುಳ್ಳವನೂ। **ಸಹಸ್ರಸ್ತರೀಃ**—ಹವಿಸ್ಸಿನರೂಪದ ಅನೇಕ ಹೊದ್ದಿಕೆಯುಳ್ಳವನೂ । **ಶತನೀಥಃ**—ಅನೇಕರಿಗೆ ಮಾರ್ಗದರ್ಶಕನೂ। **ಋಭ್ವಾ**—ಮಹಾತ್ಮನೂ । **ದ್ಯುಮತ್ಸು**—ಕಾಂತಿಯುತರ ನಡುವೆ । **ದ್ಯುಮಾನ್**—ಅಧಿಕವಾದ ಪ್ರಕಾಶವುಳ್ಳವನೂ ಆದ । **ಅಯಂ ಅಗ್ನಿಃ**—ಈ ಅಗ್ನಿಯು । **ನೃಭಿಃ**—ಋತ್ವಿಕ್ಕುಗಳಿಂದ । **ಮೃಜ್ಯಮಾನಃ**—ಅಲಂಕರಿಸಲ್ಪಡುತ್ತಾನೆ । (ಎಲೈ ಅಗ್ನಿಯೇ) **ದೇವಯತ್ಸು**—ದೇವಪೂಜೆಯಲ್ಲಿ ಇಷ್ಟವುಳ್ಳ । **ಸುಮಿತ್ರೇಷು**—ಸುಮಿತ್ರ ಸಂಜ್ಞಕರಾದ ನಮ್ಮಲ್ಲಿ । **ದೀದಯೋಃ**—ಅತಿಶಯವಾಗಿ ಪ್ರಕಾಶಿಸು.

ಭಾವಾರ್ಥ

ಅಧಿಕವಾದ ಸ್ತುತಿಯುಳ್ಳವನೂ, ಪ್ರಭೂತವಾದ ರಶ್ಮಿಗಳುಳ್ಳವನೂ, ಹವಿಸ್ಸಿನ ರೂಪದ ಅನೇಕ ಹೊದ್ದಿಕೆಗಳುಳ್ಳವನೂ, ಅನೇಕರಿಗೆ ಮಾರ್ಗದರ್ಶಕನೂ, ಮಹಾತ್ಮನೂ, ಕಾಂತಿಯುತರ ನಡುವೆ ಅಧಿಕವಾದ ಪ್ರಕಾಶವುಳ್ಳ

ವನೂ ಆದ ಅಗ್ನಿಯು ಋತ್ವಿಕ್ಕುಗಳಿಂದ ಅಲಂಕರಿಸಲ್ಪಡುತ್ತಾನೆ. ಎಲೈ ಅಗ್ನಿಯೇ, ದೇವಪೂಜೆಯಲ್ಲಿ ನಿರತರಾದ ಸುಮಿತ್ರಸಂಜ್ಞಕರಾದ ನಮ್ಮಲ್ಲಿ ಅತಿಶಯವಾಗಿ ಪ್ರಕಾಶಿಸು.

English Translation

This Agni to whom a long series (of sacrifices has been addressed), who is bright with many rays, covering thousands (in the form of ghi), the leader of hundreds (of burnt offerings), the mighty one, brilliant among the brilliant, (is) heing glorified by the priests ; shine (Agni) upon the devout Sumitras.

ಸಂಹಿತಾಪಾಠಃ

ತ್ವೇ ಧೇನುಃ ಸುದುಘಾ ಜಾತವೇದೋಽಸಶ್ಚತೇವ ಸಮನಾ ಸಬರ್ಧುಕ್ ।
ತ್ವಂ ನೃಭಿರ್ದಕ್ಷಿಣಾವದ್ಭಿರಗ್ನೇ ಸುಮಿತ್ರೇಭಿರಿಧ್ಯಸೇ ದೇವಯದ್ಭಿಃ ॥ ೮ ॥

ಪದಪಾಠಃ

ತ್ವೇ ಇತಿ । ಧೇನುಃ । ಸುಽದುಘಾ । ಜಾತಽವೇದಃ । ಅಸಶ್ಚತಾಽಇವ । ಸಮನಾ । ಸಬಃಽಧುಕ್ ।
ತ್ವಂ । ನೃಽಭಿಃ । ದಕ್ಷಿಣಾವತ್ಽಭಿಃ । ಅಗ್ನೇ । ಸುಽಮಿತ್ರೇಭಿಃ । ಇಧ್ಯಸೇ । ದೇವಯತ್ಽಭಿಃ ॥ ೮ ॥

ಸಾಯಣಭಾಷ್ಯಂ

ಹೇ ಜಾತವೇದೋ ಜಾತಪ್ರಜ್ಞಾಗ್ನೇ ತ್ವೇ ತ್ವಯಿ ಸುದುಘಾ ಸುಷ್ಠು ಪಯಸೋ ದೋಗ್ಧ್ರೀ ಕಾಚಿದ್ಧೇನುಸಾಧನಭೂತಾ ಧೇನುರಸ್ತಿ । ಕೀದೃಶೀ । ಅಸಶ್ಚತೇವ ಸಂಗವರ್ಜಿತೇನೇವೈಕತ್ರ ಸ್ಥಿತ್ಯಭಾವಾತ್ಸ್ವತ್ರಾಪಿ ನ ಸಂಯುಕ್ತೇನಾದಿತ್ಯೇನ ಸಮನಾ ಸಂಗತಾ ಸಬರ್ಧುಗಮೃತಂ ದುಹಾನಾ। ಗೋರೂಪಾ ಮಾಧ್ಯಮಿಕಾ ವಾಗ್ವೈ ದುಗ್ಧೇ ತ್ವಯ್ಯಸ್ತೀತಿ ಭಾವಃ । ತಾದೃಶಸ್ತ್ವಂ ನೃಭಿಃ ಕರ್ಮನೇತೃಭಿರ್ದಕ್ಷಿಣಾವದ್ಭಿರ್ಋತ್ವಿಗ್ಭಿರ್ಹೃತ್ಯೇ ದೇಯತ್ವೇನ ತದ್ವದ್ಭಿರ್ದೇವಯದ್ಭಿರ್ದೇವಕಾಮೈಃ ಸುಮಿತ್ರೇಭಿರಸ್ಮಾಭಿರಿಧ್ಯಸೇ । ಹವಿರ್ಭಿರ್ದೀಪ್ಯಸೇ ॥

ಪ್ರತಿಪದಾರ್ಥ

ಜಾತವೇದಃ—ಜಾತವೇದೋರೂಪನಾದ । **ಅಗ್ನೇ**—ಎಲೈ ಅಗ್ನಿಯೇ । **ಅಸಶ್ಚತೇವ**—(ಎಲ್ಲಿಯೂ ಸ್ಥಿರವಾಗಿ ನಿಲ್ಲದ) ಸರ್ವದಾ ಸಂಚಾರಿಯಾದ ಆದಿತ್ಯನೊಡನೆ । **ಸಮನಾ**—ಸೇರಿಕೊಂಡಿರುವ (ಮತ್ತು) । **ಸಬರ್ಧುಕ್**—ಅಮೃತವನ್ನು ಕರೆಯುವ ಮಾಧ್ಯಮಿಕಾ ವಾಗ್ದೇವಿಯಂತೆ । **ತ್ವೇ**—ನಿನ್ನಲ್ಲಿ । **ಸುದುಘಾ**—ಉತ್ತಮವಾದ ಕ್ಷೀರವನ್ನು ಕರೆಯುವ । **ಧೇನುಃ**—ಧೇನುವು **ಸ್ಥಾಪಿತಳಾಗಿದ್ದಾಳೆ** । **ತ್ವಂ**—ನೀನು । **ದಕ್ಷಿಣಾವದ್ಭಿಃ**-

ದಕ್ಷಿಣೆಯೊಡನೆ ಕೂಡಿರುವವರೂ। **ದೇವಯದ್ಭಿಃ**—ದೇವಪೂಜಾನಿರತರೂ। **ಸುಮಿತ್ರೇಭಿಃ**—ಸುಮಿತ್ರಸಂಜ್ಞಕರೂ ಆದ। **ನೃಭಿಃ**—ಋತ್ವಿಕ್ಕುಗಳಿಂದ। **ಇಧ್ಯಸೇ**—ಪ್ರಜ್ವಲಿತನಾಗುತ್ತೀಯೆ.

ಭಾವಾರ್ಥ

ಜಾತವೇದೋರೂಪನಾದ ಎಲೈ ಅಗ್ನಿಯೇ, ಎಲ್ಲಿಯೂ ಸ್ಥಿರವಾಗಿ ನಿಲ್ಲದೆ ಸರ್ವದಾ ಸಂಚಾರಿಯಾದ ಆದಿತ್ಯನೊಡನೆ ಸೇರಿಕೊಂಡಿರುವ ಮತ್ತು ಅಮೃತವನ್ನು ಕರೆಯುವ ವಾಧ್ಯಖಿಕಾ ವಾಗ್ದೇನಿಯಂತೆ ನಿನ್ನಲ್ಲಿ ಉತ್ತಮವಾದ ಕ್ಷೀರವನ್ನು ಕರೆಯುವ ಧೇನುವು ಸ್ಥಾಪಿತಳಾಗಿದ್ದಾಳೆ. ದಕ್ಷಿಣೆಯೊಡನೆ ಕೂಡಿರುವವರೂ, ದೇವಪೂಜಾನಿರತರೂ, ಸುಮಿತ್ರಸಂಜ್ಞಕರೂ ಆದ ಋತ್ವಿಕ್ಕುಗಳಿಂದ ನೀನು ಪ್ರಜ್ವಲಿತನಾಗುತ್ತೀಯೆ.

English Translation

In you, Jatavedas, is the milch cow, easy to be milked, yielding ambrosia as it were inexhaustibly in battle, you are kindled, Agni, by the devout Sumitras who are entitled to the sacrificial donation.

ಸಂಹಿತಾಪಾಠಃ

ದೇವಾಶ್ಚಿತ್ತೇ ಅಮೃತಾ ಜಾತವೇದೋ ಮಹಿಮಾನಂ ವಾಧ್ರ್ಯಶ್ವ ಪ್ರ ವೋಚನ್ ।
ಯತ್ಸಂಪೃಚ್ಛಂ ಮಾನುಷೀರ್ವಿಶ ಆಯನ್ತ್ವಂ ನೃಭಿರಜಯಸ್ತ್ವಾವೃಧೇಭಿಃ॥೯॥

ಪದಪಾಠಃ

ದೇವಾಃ । ಚಿತ್ । ತೇ । ಅಮೃತಾಃ । ಜಾತವೇದಃ । ಮಹಿಮಾನಂ । ವಾಧ್ರ್ಯಶ್ವ । ಪ್ರ । ವೋಚನ್ ।
ಯತ್ । ಸಂಪೃಚ್ಛಂ । ಮಾನುಷೀಃ । ವಿಶಃ । ಆಯನ್ । ತ್ವಂ । ನೃಭಿಃ । ಅಜಯಃ । ತ್ವಾವೃಧೇಭಿಃ ॥

ಸಾಯಣಭಾಷ್ಯಂ

ಹೇ ಜಾತವೇದೋ ಹೇ ವಾಧ್ರ್ಯಶ್ವಾಗ್ನೇ ತೇ ತವ ಮಹಿಮಾನಮಮೃತಾ ದೇವಾಶ್ಚಿದ್ದೇವಾ ಅಪಿ ಪ್ರ ವೋಚನ್ । ಪ್ರಬ್ರುವಂತಿ। ಯದ್ಯದಾ ಮಾನುಷೀರ್ಮನುಷ್ಯಸಂಬಂಧಿನ್ಯೋ ವಿಶಃ ಪ್ರಜಾಃ ಸಂಪೃಚ್ಛಂ ದೇವೈಃ ಸಹ ಕೋ ವಾ ಅಸುರಾನ್ಹಂತೀತ್ಯೇವಮಾದಿಕಂ ಸಂಪ್ರಶ್ನಮಾಯನ್ ಪ್ರಾಪ್ತವಂತಃ ತದಾ ತ್ವಂ ನೃಭಿಃ ಸರ್ವಸ್ಯ ನೇತೃಭಿಸ್ತ್ವಾವೃಧೇಭಿಸ್ತ್ವಯಾ ವರ್ಧಿತೈರ್ದೇವೈಃ ಸಹ ಕರ್ಮವಿಘ್ನಕಾರಿಣಸ್ತಾನಜಯಃ । ಜಿತವಾನಸಿ ॥

ಪ್ರತಿಪದಾರ್ಥ

ವಾಧ್ರ್ಯಶ್ವ—ವಧ್ರ್ಯಶ್ವಸಂಬಂಧಿಯಾದ । **ಜಾತವೇದಃ**—ಎಲೈ ಅಗ್ನಿಯೇ । **ತೇ**—ನಿನ್ನ । **ಮಹಿಮಾನಂ**—ಮಹತ್ತ್ವವನ್ನು । **ಅಮೃತಾಃ**—ಮರಣರಹಿತರಾದ । **ದೇವಾಶ್ಚಿತ್**—ದೇವತೆಗಳೂ ಕೂಡ ।

ಪ್ರ ವೋಚೆನ್—ಕೊಂಡಾಡುತ್ತಾರೆ। **ಯತ್**—ಯಾವಾಗ। **ಮಾನುಷೀಃ**—ಮಾನವರ ಗುಂಪಿಗೆ ಸೇರಿದ। **ವಿಶಃ**—ಪ್ರಜೆಗಳು। **ಸಂಪೃಚ್ಛಂ**—"ಅಸುರರನ್ನು ಕೊಲ್ಲುವವರು ಯಾರು?" ಎಂಬ ಪ್ರಶ್ನೆಯನ್ನು। **ಆಯನ್**—ಕೇಳುವರೋ ಆಗ। **ತ್ವಂ**—ನೀನು। **ನೃಭಿಃ**—ಮಾರ್ಗದರ್ಶಕರಾದವರೂ। **ತ್ವಾವೃಧೇಭಿಃ**—ನಿನ್ನಿಂದ ಪೋಷಿಸಲ್ಪಡುವವರೂ ಆದ ದೇವತೆಗಳೊಡಗೂಡಿ। **ಅಜಯೇಃ**—ಅವರನ್ನು ಜಯಿಸುವೆ.

ಭಾವಾರ್ಥ

ವಧ್ರ್ಯಶ್ವಸಂಬಂಧಿಯಾದ ಎಲೈ ಅಗ್ನಿಯೇ, ನಿನ್ನ ಮಹತ್ತ್ವವನ್ನು ಮರಣರಹಿತರಾದ ದೇವತೆಗಳೂ ಕೂಡ ಕೊಂಡಾಡುತ್ತಾರೆ. ಮಾನವರಾವ ನಾವು ಯಾವಾಗ "ಅಸುರರನ್ನು ಕೊಲ್ಲತಕ್ಕ ವೀರನಾರು?" ಎಂದು ಪ್ರಶ್ನಿಸುವೆವೋ ಆಗ ನೀನು ಮಾರ್ಗದರ್ಶಕರೂ, ನಿನ್ನಿಂದಲೇ ಪೋಷಿಸಲ್ಪಡುವವರೂ ಆದ ದೇವತೆಗಳೊಡಗೂಡಿ ಅವರನ್ನು ಜಯಿಸುವೆ.

English Translation

The immortal gods have proclaimed your greatness, Jatavedas, Vadhryashwa (Agni); when human beings came to inquire (who would slay the Asuras), then you with (the gods), the leaders of all, fostered by you overcame (those who impeded the ceremony).

ಸಂಹಿತಾಪಾಠಃ

ಪಿತೇ॑ವ ಪು॒ತ್ರಮ॑ಬಿಭರು॒ಪಸ್ಥೇ॑ ತ್ವಾ॒ಮ॑ಗ್ನೇ ವಧ್ರ್ಯ॒ಶ್ವಃ ಸ॑ಪ॒ರ್ಯನ್ ।
ಜು॒ಷಾ॒ಣೋ॑ ಅ॒ಸ್ಯ ಸ॒ಮಿಧಂ॑ ಯವಿಷ್ಠೋತ ಪೂ॒ರ್ವಾ॑ ಅ॒ವನೋ॑ವ್ರ್ಯ॒-
ಧ॒ತಶ್ಚಿ॑ತ್ ॥ ೧೦ ॥

ಪದಪಾಠಃ

ಪಿತಾ॑ಽಇವ । ಪು॒ತ್ರಂ । ಅ॒ಬಿ॒ಭ॒ಃ । ಉ॒ಪ॒ಽಸ್ಥೇ॑ । ತ್ವಾ॒ಂ । ಅ॒ಗ್ನೇ॒ । ವ॒ಧ್ರಿ॒ಽಅ॒ಶ್ವ॒ಃ । ಸ॒ಪ॒ರ್ಯನ್ ।
ಜು॒ಷಾ॒ಣಃ । ಅ॒ಸ್ಯ । ಸಂ॒ಽಇ॒ಧಂ॒ । ಯ॒ವಿ॒ಷ್ಠ॒ । ಉ॒ತ । ಪೂ॒ರ್ವಾ॑ನ್ । ಅ॒ವ॒ನೋ॒ಃ । ವ್ಯಾ॒ಧ॒ತಃ । ಚಿ॒ತ್ ॥೧೦॥

ಸಾಯಣಭಾಷ್ಯಂ

ಹೇ ಅಗ್ನೇ ತ್ವಾಮುಪಸ್ಥೇ ಪೃಥಿವ್ಯಾ ಉಪಸ್ಥಾನ ಉತ್ತರವೇದ್ಯಾಂ ಸಪರ್ಯನ್ ಪರಿಚರ್ಯಂ-ಕರ್ಮಾ ಪರಿಚರನ್ವಧ್ರ್ಯಶ್ವೋ ಮಮ ಪಿತಾಬಿಭಃ। ಧೃತವಾನ್। ಹವಿರ್ಭಿಃ ಪೋಷಿತವಾನ್ವಾ। ಕಥಮಿವ। ಪಿತೇವ ಯಥಾ ಪಿತಾ ಸಮೀಪೇ ಪುತ್ರಂ ಸ್ಥಾಪಯತಿ ಪೋಷಯತಿ ವಾ ॥ ಡುಭೃಞ್ ಧಾರಣ-ಪೋಷಣಯೋಃ। ಲಜಿ ತಿಪಿ ಗುಣೇ ಕೃತೇ ಹಲ್ಙ್ಯಾದಿನಾ ತಿಪೋ ಲೋಪಃ॥ ಹೇ ಯವಿಷ್ಠ ಯುವತ-ಮಾಗ್ನೇ ಉತಾಪಿ ಚಾಸ್ಯ ವಧ್ರ್ಯಶ್ವಸ್ಯ ಪಿತುರ್ವಾ ಮಮ ವಾ ಸಮಿಧಂ ಜುಷಾಣಃ ಸೇವಮಾನಃ ಸನ್ ಪೂರ್ವಾನ್ಪ್ರತ್ಯಾನ್ವಾಧತಶ್ಚಿದ್ವಾಧಕಾನಪಿ ಶತ್ರೂನವನೋಃ। ಅವಧೀಃ॥ ವನತಿರ್ಹಿಂಸಾಯಾಂ ಭ್ವಾದಿಕಃ। ವ್ಯತ್ಯಯೇನೋಪ್ರತ್ಯಯಃ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ। **ಪಿತೇವ**—ತಂದೆಯು। **ಪುತ್ರಂ**—ತನ್ನ ಮಗುವನ್ನು ಸಮೀಪದಲ್ಲಿ ಕುಳ್ಳಿರಿಸಿ ಪೋಷಿಸುವಂತೆ। **ತ್ವಾಂ**—ನಿನ್ನನ್ನು। **ಉಪಸ್ಥೇ**—ಉತ್ತರವೇದಿಯಲ್ಲಿ। **ಸಪರ್ಯನ್**—ಪೂಜಿಸಿದ। **ವಧ್ರ್ಯಶ್ವಃ**—ವಧ್ರ್ಯಶ್ವನು। **ಅಬಿಭಃ**—ಹವಿರಾದಿಗಳಿಂದ ಪೋಷಿಸಿದ್ದಾನೆ। **ಯವಿಷ್ಠ**—ಅತ್ಯಂತ ಯುವಕನಾದ ಎಲೈ ಅಗ್ನಿಯೇ। **ಅಸ್ಯ ಸಮಿಧಂ**—ನನ್ನ ಹವಿರಾದಿಗಳನ್ನು। **ಜುಷಾಣಃ**—ಸೇವಿಸುವ ನೀನು। **ಪೂರ್ವಾನ್**-ಹಿಂದಿನಿಂದ ಇರತಕ್ಕವರೂ। **ವ್ಯಾಧತಶ್ಚಿತ್**-ಹಿಂಸಕರೂ ಆದ ಸಕಲ ಶತ್ರುಗಳನ್ನೂ। **ಅವನೋಃ**—ಕೊಂದಿರುವೆ.

ಭಾವಾರ್ಥ

ಎಲೈ ಅಗ್ನಿಯೇ, ತಂದೆಯು ತನ್ನ ಮಗುವನ್ನು ಸಮೀಪದಲ್ಲಿ ಕುಳ್ಳಿರಿಸಿ ಪೋಷಿಸುವಂತೆ ನಿನ್ನನ್ನು ಉತ್ತರ ವೇದಿಯಲ್ಲಿ ಪೂಜಿಸಿದ ವಧ್ರ್ಯಶ್ವನು ಹವಿರಾದಿಗಳಿಂದ ಪೋಷಿಸಿದ್ದಾನೆ. ಅತ್ಯಂತ ಯುವಕನಾದ ಎಲೈ ಅಗ್ನಿಯೇ, ನನ್ನ ಹವಿರಾದಿಗಳನ್ನು ಸೇವಿಸುವ ನೀನು ಹಿಂದಿನಿಂದ ಇರತಕ್ಕವರೂ, ಹಿಂಸಕರೂ ಆದ ಸಕಲ ಶತ್ರುಗಳನ್ನೂ ಕೊಂದಿರುವೆ.

English Translation

Vadhryashwa honouring you, Agni, placed yon upon the altar as a father (places) his son (upon his lap); pleased with his fuel, youngest (of the gods), you slew the ancient obstructers (of the rite).

ಸಂಹಿತಾಪಾಠಃ

ಶಶ್ವದಗ್ನಿರ್ವಧ್ರ್ಯಶ್ವಸ್ಯ ಶತ್ರೂನ್ನೃಭಿರ್ಜಿಗಾಯ ಸುತಸೋಮವದ್ಭಿಃ।
ಸಮನಂ ಚಿದದಹಶ್ಚಿತ್ರಭಾನೋಽವ ವ್ಯಾಧಂತಮಭಿನದ್ವೃಧಶ್ಚಿತ್ ॥ ೧೧ ॥

ಪದಪಾಠಃ

ಶಶ್ವತ್ । ಅಗ್ನಿಃ । ವಧ್ರ್ಯಶ್ವಸ್ಯ । ಶತ್ರೂನ್ । ನೃಭಿಃ । ಜಿಗಾಯ । ಸುತಸೋಮವದ್ಭಿಃ ।
ಸಮನಂ । ಚಿತ್ । ಅದದಹಃ । ಚಿತ್ರಭಾನೋ ಇತಿ ಚಿತ್ರಭಾನೋ । ಅವ । ವ್ಯಾಧಂತಂ । ಅಭಿನತ್ । ವೃಧಃ ।
ಚಿತ್ ॥ ೧೧ ॥

ಸಾಯಣಭಾಷ್ಯಂ

ಸೋಽಗ್ನಿರ್ವಧ್ರ್ಯಶ್ವಸ್ಯ ಸುತಸೋಮವದ್ಭಿರಭಿಷುತಸೋಮೈಃ ॥ ಅನುವಾದಕೋ ಮತ್ವರ್ಥೀಯಃ ॥ ತೈರ್ನೃಭಿರ್ಯಜ್ವಭಿಃ ಶಶ್ವತ್ ಸರ್ವದಾ ಶತ್ರೂಞ್ಜಿಗಾಯ । ಜಿತವಾನ್ । ಅಥ ಪ್ರತ್ಯಕ್ಷಕೃತಃ । ಹೇ ಚಿತ್ರಭಾನೋ ನಾನಾತೇಜಸ್ಕ ಚಾಯನೀಯದೀಪ್ತಿಮನ್ನಗ್ನೇ ತ್ವಂ ಸಮನಂ ಚಿತ್ । ಸಮನಮಿತಿ

ಸಂಗ್ರಾಮನಾಮ । ತಮಪ್ಯದಹಃ ಸ್ವತೇಜೋಭಿಃ । ಅಥ ತವ ಸ್ತೋತಾ ವಾಧ್ರ್ಯಶ್ವೋ ವೃಧಶ್ಚಿತ್ಸ್ವಯಂ ವೃದ್ಧೋ ಭವನ್ವ್ಯಧಂತಂ ವರ್ಧಮಾನಂ ಹಿಂಸಕಂ ವಾವಾಭಿನತ್ । ಅವಾಙ್ಮುಖಂ ಕೃತ್ವಾಚ್ಛಿನತ್ । ಯದ್ವಾ । ತ್ವಮೇವ ತಮವಾಭಿನತ್ । ಅವಾಙ್ಮುಖಂ ಕೃತ್ವಾಭಿನಃ । ಅಚ್ಛಿನಃ ॥ ಪ್ರಥಮಮಧ್ಯಮಯೋಃ ಸಮಾನಮೇತದ್ರೂಪಂ ॥

ಪ್ರತಿಪದಾರ್ಥ

ಅಗ್ನಿಃ—ಅಗ್ನಿಯು । **ವಧ್ರ್ಯಶ್ವಸ್ಯ**—ವಧ್ರ್ಯಶ್ವನಿಗೆ ಸೇರಿದವರೂ । **ಸುತ ಸೋಮವದ್ಭಿಃ**—ಹಿಂಡಿದ ಸೋಮವನ್ನು ಅರ್ಪಿಸುವವರೂ ಆದ । **ನೃಭಿಃ**—ಋತ್ವಿಕ್ಕುಗಳ ಸಹಾಯದಿಂದ । **ಶಶ್ವತ್**—ಸರ್ವದಾ । **ಶತ್ರೂನ್**—ಶತ್ರುಗಳನ್ನು । **ಜಿಗಾಯ**—ಜಯಿಸಿದ್ದಾನೆ । **ಚಿತ್ರಭಾನೋ**—ಅನೇಕವಿಧವಾದ ಕಾಂತಿಯುಳ್ಳ ಎಲೈ ಅಗ್ನಿಯೇ । **ಸಮನಂ ಚಿತ್**—ಸಂಗ್ರಾಮವನ್ನೂ । **ಅದಹಃ**—ನಿನ್ನ ತೇಜಸ್ಸಿನಿಂದ ದಹಿಸಿದ್ದೀಯೆ । (ನಿನ್ನನ್ನು ಸ್ತುತಿಸುವ ವಾಧ್ರ್ಯಶ್ವನು) **ವೃಧಶ್ಚಿತ್**—ಪ್ರಬಲನಾಗಿದ್ದರೂ । **ವ್ಯಾಧಂತಂ**—ಹಿಂಸಕನಾದ ಶತ್ರುವನ್ನು । **ಅವಾಭಿನತ್**—ನಾಶಪಡಿಸಿದ್ದಾನೆ.

ಭಾವಾರ್ಥ

ವಧ್ರ್ಯಶ್ವನಿಗೆ ಸೇರಿದವರೂ, ಹಿಂಡಿದ ಸೋಮವನ್ನು ಅರ್ಪಿಸುವವರೂ ಆದ ಋತ್ವಿಕ್ಕುಗಳ ಸಹಾಯದಿಂದ ಅಗ್ನಿಯು ಸರ್ವದಾ ಶತ್ರುಗಳನ್ನು ಜಯಿಸಿದ್ದಾನೆ. ಅನೇಕವಿಧವಾದ ಕಾಂತಿಯುಳ್ಳ ಎಲೈ ಅಗ್ನಿಯೇ, ನೀನು ನಿನ್ನ ತೇಜಸ್ಸಿನಿಂದ ಸಂಗ್ರಾಮವನ್ನೂ ದಹಿಸಿದ್ದೀಯೆ. ನಿನ್ನನ್ನು ಸ್ತುತಿಸುವ ವಾಧ್ರ್ಯಶ್ವನು ಪ್ರಬಲನಾದವನೂ, ಹಿಂಸಕನೂ ಆದ ಶತ್ರುವನ್ನೂ ಜಯಿಸಿದ್ದಾನೆ.

English Translation

Agni by means of the priests of Vadhryashwa pouring out libations always conqners his foes; you (Agni) shining with varied splendour, have consumed the battle; (your praiser) self-fostercd has destroyed his powerful (assailant),

ಸಂಹಿತಾಪಾಠಃ

ಅಯಮಗ್ನಿರ್ವಧ್ರ್ಯಶ್ವಸ್ಯ ವೃತ್ರಹಾ ಸನಕಾತ್ಪ್ರೇದ್ಧೋ ನಮಸೋಪವಾಕ್ಯಃ ।
ಸ ನೋ ಅಜಾಮ್ಮೀರುತ ವಾ ವಿಜಾಮ್ಮೀನಭಿ ತಿಷ್ಠ ಶರ್ಧತೋ ವಾಧ್ರ್ಯಶ್ವ ॥

ಪದಪಾಠಃ

ಅಯಂ । ಅಗ್ನಿಃ । ವಧ್ರ್ಯಶ್ವಸ್ಯ । ವೃತ್ರಹಾ । ಸನಕಾತ್ । ಪ್ರಇದ್ಧಃ । ನಮಸಾ । ಉಪವಾಕ್ಯಃ ।
ಸಃ । ನಃ । ಅಜಾಮ್ಮೀನ್ । ಉತ । ವಾ । ವಿಜಾಮ್ಮೀನ್ । ಅಭಿ । ತಿಷ್ಠ । ಶರ್ಧತಃ । ವಧ್ರ್ಯಶ್ವ ॥೧೨॥

ಸಾಯಣಭಾಷ್ಯಂ

वृत्रहा शत्रूणां हंतायमग्निः सनकाच्छिरादारभ्य वध्र्यश्वस्य हविषा प्रेद्धः प्रकर्षेण दीपितो भवति। तथा तस्य नमसा नमस्कारेण सहोपवाक्य उपस्तोतव्यो भवति। हे वाध्र्यश्व वध्र्यश्वकुलेऽथनेन समुत्पन्नाग्ने स त्वं नोऽस्माकमजामिनजञ्ञातीञ्ञातॄन् उत वापि वा शर्धतो हिंसतो विजामिन्विविधाञ्ञातीनभि शिष्म। अभिभव॥

ಪ್ರತಿಪದಾರ್ಥ

ವೃತ್ರಹಾ—ಶತ್ರುನಾಶಕನಾದ। **ಅಯಂ ಅಗ್ನಿಃ**—ಈ ಅಗ್ನಿಯು। **ಸನಕಾತ್**—ಅನೇಕಕಾಲದಿಂದ। **ವಧ್ರ್ಯಶ್ವಸ್ಯ**—ವಧ್ರ್ಯಶ್ವನ ಹವಿಸ್ಸಿನಿಂದ। **ಪ್ರೇದ್ಧಃ**—ಪ್ರಜ್ವಲಿತನಾಗಿದ್ದಾನೆ। **ನಮಸಾ**—ಅವನ ನಮಸ್ಕಾರದೊಡನೆ। **ಉಪವಾಕ್ಯಃ**—ಪ್ರಶಂಸಿಸಲ್ಪಡುತ್ತಾನೆ। **ವಾಧ್ರ್ಯಶ್ವ**—ವಧ್ರ್ಯಶ್ವನ ಪ್ರಯತ್ನದಿಂದ ಉತ್ಪನ್ನನಾದ ಎಲೈ ಅಗ್ನಿಯೇ। **ಸಃ**—ನೀನು। **ನಃ**—ನಮಗೆ। **ಶರ್ಧತಃ**—ಹಿಂಸೆಯನ್ನು ಕೊಡುವ। **ಅಜಾಮೀನ್**—ಬಂಧುಗಳಲ್ಲದ ಶತ್ರುಗಳನ್ನೂ। **ಉತ ವಾ**—ಹಾಗೆಯೇ। **ವಿಜಾಮೀನ್**—ಜ್ಞಾತಿರೂಪರಾದ ಶತ್ರುಗಳನ್ನೂ। **ಅಭಿ ಶಿಷ್ಮ**—ಸೋಲಿಸು.

ಭಾವಾರ್ಥ

ಶತ್ರುನಾಶಕನಾದ ಈ ಅಗ್ನಿಯು ಅನೇಕಕಾಲದಿಂದ ವಧ್ರ್ಯಶ್ವನ ಹವಿಸ್ಸಿನಿಂದ ಪ್ರಜ್ವಲಿತನಾಗಿದ್ದಾನೆ. ಅವನ ನಮಸ್ಕಾರದೊಡನೆ ಪ್ರಶಂಸಿತನಾಗಿದ್ದಾನೆ. ವಧ್ರ್ಯಶ್ವನ ಪ್ರಯತ್ನದಿಂದ ಉತ್ಪನ್ನನಾದ ಎಲೈ ಅಗ್ನಿಯೇ, ನಮಗೆ ಹಿಂಸೆಯನ್ನು ಕೊಡುವ ಸಕಲ ಶತ್ರುಗಳನ್ನೂ ಜಯಿಸಿ ಅವರು ನಮಗೆ ಬಂಧುಗಳಾಗಲಿ ಅಥವಾ ಬಂಧುಗಳಲ್ಲದಿರಲಿ ಅವರನ್ನು ನಾಶಪಡಿಸು.

English Translation

From a long period has this Agni the slayer of foes been kindled (by the ohlation) of Vadhryashwa; (he is) to be addressed with reverence; do you, (Agni, kindled in the) family of Vadhryashwa, overcome our enemies, both those who have no kinsmen and those who have many kinsmen.

ಎಪ್ಪತ್ತನೆಯ ಸೂಕ್ತ

ಪೀಠಿಕೆ

ಪ್ರಕೃತ ಸೂಕ್ತವು ಆಪ್ರಿಸೂಕ್ತಗಳಲ್ಲೊಂದಾಗಿದೆ. ಋಗ್ವೇದದಲ್ಲಿ ಒಟ್ಟು ೧೦ ಆಪ್ರೀಸೂಕ್ತಗಳಿವೆ. ಇವುಗಳಲ್ಲಿ ಇಧ್ಮಃ (ಸಮಿದ್ಧೋಗ್ನಿರ್ವಾ) ನರಾಶಂಸಃ, ತನೂನಪಾತ್, ಇಳಃ, ಬರ್ಹಿಃ, ದೇವೀರ್ದ್ವಾರಃ, ಉಷಾಸಾನಕ್ತಾ, ದೈವ್ಯೌ ಹೋತಾರೌ ಪ್ರಚೇತಸೌ, ತಿಸ್ರೋ ದೇವ್ಯಃ ಸರಸ್ವತೀಳಾಭಾರತ್ಯಃ, ತ್ವಷ್ಟಾ, ವನಸ್ಪತಿಃ ಸ್ವಾಹಾಕೃತಯಃ ಎಂಬ ದೇವತಾಕವಾದ ಮಂತ್ರಗಳಿವೆ. ಆದರೆ ನರಾಶಂಸಃ ಮತ್ತು ತನೂನಪಾತ್ ಎಂಬ ದೇವತೆಗಳ ವಿಷಯವಾಗಿ ಕೆಲವು ಸೂಕ್ತಗಳಲ್ಲಿ ನರಾಶಂಸಃ ಎಂಬ ಒಂದೇ ದೇವತೆಯನ್ನೂ ಮತ್ತೆ ಕೆಲವಲ್ಲಿ ತನೂನಪಾತ್ ಎಂಬ ಒಂದೇ ದೇವತೆಯನ್ನೂ

ಮತ್ತೆ ಕೆಲವು ಸೂಕ್ತಗಳಲ್ಲಿ ನರಾಶಂಸಃ ಮತ್ತು ತನೂನಪಾತ್ ಎಂಬ ಉಭಯ ದೇವತೆಗಳನ್ನೂ ಸ್ತುತಿಸಲಾಗಿದೆ. ಈ ಅರ್ಥಕ್ಕನುಸಾರವಾಗಿ ಈ ಆಪ್ರೀಸೂಕ್ತಗಳನ್ನು ಮೂರುವಿಧವಾಗಿ ವಿಂಗಡಿಸಿದ್ದಾರೆ. ಹೇಗೆಂದರೆ-ವಸಿಷ್ಠ, ಅತ್ರಿ, ವಾಧ್ರ್ಯಶ್ವ, ಗೃತ್ಸಮದ ಎಂಬ ಋಷಿಪ್ರಣೀತಗಳಾದ ಆಪ್ರೀಸೂಕ್ತಗಳು ಎಂದರೆ—

೧. **ಜುಷಸ್ವ ನಃ ಸಮಿಧಮಗ್ನೇ**—ಋ. ಸಂ. ೭-೨ (ವೈತ್ರಾವರುಣಿರ್ವಸಿಷ್ಠಃ)
೨. **ಸುಸಮಿದ್ಧಾಯ ಶೋಚಿಷೇ**—ಋ. ಸಂ. ೫-೫ (ವಸುಶ್ರುತ ಆತ್ರೇಯಃ)
೩. **ಇಮಾಂ ಮೇ ಅಗ್ನೇ ಸಮಿಧಂ**—ಋ. ಸಂ. ೧೦-೭೦ (ಸುಮಿತ್ರೋ ವಾಧ್ರ್ಯಶ್ವಃ)
೪. **ಸಮಿದ್ಧೋ ಅಗ್ನಿರ್ನಿಹಿತಃ**—ಋ. ಸಂ. ೨-೩ (ಗೃತ್ಸಮದಃ)

ಎಂಬ ಈ ನಾಲ್ಕು ಸೂಕ್ತಗಳು ಒಂದು ಗುಂಪಿಗೆ ಸೇರಿದವು. ಇವುಗಳಲ್ಲಿ ನರಾಶಂಸಃ ಎಂಬ ದೇವತಾಕವಾದ ಒಂದೊಂದು ಋಕ್ಕುಗಳಿವೆ. ಆದ್ದರಿಂದ ಈ ನಾಲ್ಕು ಸೂಕ್ತಗಳಿಗೆ **ನರಾಶಂಸವಂತಿ ಸೂಕ್ತಾನಿ**—ನರಾಶಂಸ ದೇವತೆಯನ್ನು ಮಾತ್ರ ಸ್ತುತಿಸುವ ಆಪ್ರೀಸೂಕ್ತಗಳೆಂದು ಹೆಸರು.

೧. **ಸುಸಮಿದ್ಧೋ ನ ಆ ವಹ**—ಋ. ಸಂ. ೧-೧೩ (ಮೇಧಾತಿಥಿಃ ಕಾಣ್ವಃ)
೨. **ಸಮಿದ್ಧೋ ಅಗ್ನ ಆವಹ**—ಋ. ಸಂ. ೧-೧೪೨ (ದೀರ್ಘತಮಾ ಔಚಥ್ಯಃ)

ಎಂಬ ಈ ಎರಡು ಆಪ್ರೀಸೂಕ್ತಗಳು ಎರಡನೆಯ ಗುಂಪಿಗೆ ಸೇರಿದವು. ಇವುಗಳಲ್ಲಿ ನರಾಶಂಸ ಮತ್ತು ತನೂನಪಾತ್ ಎಂಬ ಉಭಯ ದೇವತೆಯ ಪರವಾಗಿ ಒಂದೊಂದು ಋಕ್ಕುಗಳಿವೆ. ಆದುದರಿಂದ ಈ ಆಪ್ರೀಸೂಕ್ತಗಳು ನರಾಶಂಸ ಮತ್ತು ತನೂನಪಾತ್ ಎಂಬ ಉಭಯವಿಧದೇವತಾಕವಾದ ಸೂಕ್ತಗಳೆಂದು ಪ್ರಸಿದ್ಧವಾಗಿವೆ. ಈ ಸೂಕ್ತಗಳಲ್ಲಿ ಉಭಯ ದೇವತೆಗಳೂ ಇರುವುದರಿಂದ ೧-೧೪೨ ನೆಯ ಸೂಕ್ತದಲ್ಲಿ ಇಂದ್ರನನ್ನು ಬಿಟ್ಟು ಹನ್ನೊಂದು ಪ್ರಯಾಜ ಹೋಮಗಳಿಗೆ ಬದಲಾಗಿ ಹನ್ನೆರಡು ಹೋಮಗಳಿದ್ದಂತಾಯಿತು.

೧. **ಸಮಿದ್ಧೋ ಅದ್ಯ ರಾಜಸಿ**—ಋ. ಸಂ. ೧-೧೪೪ (ಅಗಸ್ತ್ಯೋ ವೈತ್ರಾವರುಣಿಃ)
೨. **ಸಮಿತ್ಸಮಿತ್ಸುಮನಾ**—ಋ. ಸಂ. ೩-೪ (ಗಾಧಿನೋ ವಿಶ್ವಾಮಿತ್ರಃ)
೩. **ಸಮಿದ್ಧೋ ವಿಶ್ವತಸ್ಪತಿಃ**—ಋ. ಸಂ. ೯-೫ (ಕಾಶ್ಯಪೋಽಸಿತೋ ದೇವಲೋ ವಾ)
೪. **ಸಮಿದ್ಧೋ ಅದ್ಯ ಮನುಷೋ**—ಋ. ಸಂ. ೧೦-೧೧೦ (ಜಮದಗ್ನಿಃ ಭಾರ್ಗವಃ)

ಎಂಬ ಸೂಕ್ತಗಳು ಮೂರನೆಯ ಗುಂಪಿಗೆ ಸೇರಿದವು. ಇವುಗಳಲ್ಲಿ ತನೂನಪಾತ್ ಎಂಬ ದೇವತಾಕವಾದ ಋಕ್ಕುಗಳು ಮಾತ್ರವಿರುವುವು. (ನರಾಶಂಸ ದೇವತಾಕವಾದ ಋಕ್ಕುಗಳಿರುವುದಿಲ್ಲ). ಆದುದರಿಂದ ಇವುಗಳಿಗೆ **ತನೂನಪಾತ್ಯಂತಿ ಸೂಕ್ತಾನಿ** ಎಂದರೆ ತನೂನಪಾತ್ ಎಂಬ ದೇವತಾಕವಾದ ಮಂತ್ರಗಳನ್ನೊಳಗೊಂಡ ಆಪ್ರೀಸೂಕ್ತಗಳೆಂದು ಹೆಸರು.

ಈ ಆಪ್ರಿಸೂಕ್ತಗಳನ್ನು ಪಶುಹೋಮ ಮಾಡುವಾಗ ಏಕಾದಶ (ಹನ್ನೊಂದು) ಪ್ರಯಾಜ ಹೋಮಗಳನ್ನು ಮಾಡುವುದಕ್ಕಾಗಿ ಪಠಿಸುವರು. **ಏಕಾದಶಾವದಾನಾನ್ಯವದ್ಯತಿ ದಶ ವೈ ಪಶೋಃ ಪ್ರಾಣಾ ಆತ್ಮೈಕಾದಶಃ** (ತೈ.ಸಂ. ೬-೩-೧೦-೩)ಎಂದು ತೈತ್ತಿರೀಯಸಂಹಿತಾ ವಾಕ್ಯವಿರುವುದು. ಈ ಆಪ್ರೀ ಸೂಕ್ತಗಳನ್ನು ಪಠಿಸಿ ಪಶುಹೋಮ ಮಾಡುವಾಗ ಒಂದು ವಿಶೇಷ ನಿಯಮವಿರುವುದು. ಆಯಾ ಗೋತ್ರೋತ್ಪನ್ನರಾದ ಯಜ್ಞಕರ್ತರು ಯಜ್ಞಮಾಡುವಾಗ ಆಯಾ ಋಷಿಪ್ರಣೀತವಾದ ಆಪ್ರೀಸೂಕ್ತಗಳನ್ನೇ ಪಠಿಸಬೇಕೆಂದು ನಿಯಮವಿರುವುದು(ಆ. ೩-೨) ಪ್ರಕೃತವಾದ **ಆಪ್ರೀಸೂಕ್ತವು ವಾಧ್ರ್ಯಶ್ವ ಗೋತ್ರೋತ್ಪನ್ನರಾದವರು ಪಠಿಸಬೇಕಾಗಿರುವುದು.**

ಆಪ್ರೀಸೂಕ್ತಗಳ ಸ್ವರೂಪ ಮತ್ತು ಕರ್ಮಾಚರಣೆಯಲ್ಲಿ ಅವುಗಳು ಹೊಂದಿರುವ ಸ್ಥಾನಗಳನ್ನು ತಿಳಿಯಬೇಕಾದರೆ ನಮಗಿರುವ ಆಧಾರಗಳು ಎರಡುಬಗೆಯಾಗಿವೆ. ಒಂದನೆಯದು, ಬ್ರಾಹ್ಮಣಾದಿ ಶ್ರುತಿವಾಕ್ಯಗಳು; ಎರಡನೆಯದಾಗಿ ನಿರುಕ್ತಾದಿನಿರ್ವಚನ ವಾಕ್ಯಗಳು. ಈ ಎರಡು ಬಗೆಯ ಆಧಾರಗಳಲ್ಲಿ ನಿರುಕ್ತಾದಿ ನಿರ್ವಚನ ವಾಕ್ಯಗಳು ಹೆಚ್ಚು ಯುಕ್ತಿಯುಕ್ತವಾಗಿಯೂ ಶಾಸ್ತ್ರೀಯವಾದ ವಿವರಣೆಗಳಿಂದಲೂ ಕೂಡಿವೆ.

ಐತರೇಯಾದಿ ಬ್ರಾಹ್ಮಣಗಳಲ್ಲಿ ಉಕ್ತವಾಗಿರುವ **ಆಪ್ರೀ**ಪದದ ನಿಷ್ಪತ್ತಿಯನ್ನು ಗಮನಿಸಿದರೆ ಅವೆಲ್ಲವೂ ಯಜ್ಞಯಾಗಾದಿ ಕರ್ಮಾಚರಣೆಯ ದೃಷ್ಟಿಯಿಂದಲೇ ಈ ಪದವನ್ನು ಅರ್ಥಮಾಡಿಕೊಂಡು ವಿವರಿಸಿದೆಯೆಂದು ಹೇಳಬಹುದು ಉದಾಹರಣೆಗೆ—

ತದ್ಯದಾ ಪ್ರೀಣಾತಿ ತಸ್ಮಾದಾಪ್ರಿಯೋ ನಾಮ।

(ಕೌ. ಬ್ರಾ. ೧೦-೩)

ದೇವತೆಗಳನ್ನು ತೃಪ್ತಿಪಡಿಸುವ ಸಾಧನವಾದ್ದರಿಂದ ಈ ಹೆಸರೆಂದು ಕೌಷೀತಕೀಬ್ರಾಹ್ಮಣದಲ್ಲೂ,

ಆಪ್ರೀಭಿರಾಪ್ನುವನ್ । ತದಾಪ್ರೀಣಾಮಾಪ್ರಿತ್ವಂ ॥

(ತೈ. ಬ್ರಾ. ೨-೨-೮-೬)

ಎಂದು ಮೇಲಿನ ಅಭಿಪ್ರಾಯವನ್ನೇ ಹೇಳಿ ತೈತ್ತಿರೀಯಬ್ರಾಹ್ಮಣದಲ್ಲೂ,

ಯಏತಾನ್ಮಾ ಪ್ರಿಯಾ ಆಜ್ಯಾನಿ ಭವಂತಿ । ಆತ್ಮಾನಮೇವೈತೈರಾಪ್ರೀಣಾತಿ ॥

(ತಾ. ಬ್ರಾ. ೧೫-೮-೨)

ಎಂದು ತಾಂಡ್ಯಬ್ರಾಹ್ಮಣದಲ್ಲೂ **ಆಪ್ರೀ** ಎಂಬ ಪದದ ಸ್ವರೂಪವನ್ನು ತಿಳಿಸಿದೆ.

ಐತರೇಯಬ್ರಾಹ್ಮಣದಲ್ಲಿ ಅಗ್ನಿಷ್ಟೋಮಯಾಗ ಕಾಲದಲ್ಲಿ ಹೋತೃವು ಆಚರಿಸಬೇಕಾದ ಕರ್ತವ್ಯಗಳನ್ನು ನಿರ್ದೇಶಿಸುವಾಗ **ಆಪ್ರಿಗಳ** ವಿವರಣೆಯನ್ನು ಹೇಳಿದೆ. **ಅಗ್ನಿ**ಯನ್ನೂ **ಸೋಮ**ವನ್ನೂ ಉದ್ದೇಶಿಸಿ ಯಾಗಮಾಡಬೇಕಾದ ಪಶುವಿನ ವರ್ಣನೆಯಾದಮೇಲೆ (೨-೩) ಹನ್ನೊಂದು ಪ್ರಯಾಜ ಮಂತ್ರಗಳು ಉಕ್ತವಾಗಿವೆ. (೨-೪)ಆ ಸಂದರ್ಭದಲ್ಲಿ—

ಆಪ್ರೀಭಿರಾಪ್ರೀಣಾತಿ । ತೇಜೋ ವೈ ಬ್ರಹ್ಮವರ್ಚಸಮಾಪ್ರಿಯಸ್ತೇಜಸೈವೇನಂ ತದ್ಬ್ರಹ್ಮವರ್ಚಸೇನ ಸಮರ್ಧಯತಿ ॥

(ಐ. ಬ್ರಾ. ೨-೪)

ಆಪ್ರೀಋಕ್ಕುಗಳು ತೇಜೋಮಯವಾದವೂ ಬ್ರಹ್ಮವರ್ಚಸ್ಸಿನಿಂದ ಕೂಡಿದವೂ ಆಗಿವೆ. ಅಂತಹ ಋಕ್ಕುಗಳಿಂದ (ಹೋತೃವು) ತೃಪ್ತಿಕಾರಣನಾಗುತ್ತಾನೆ ಎಂದು ಅಲ್ಲಿಯೂ ಆತ್ಮತೃಪ್ತಿಗೆ ಸಾಧನವಾಗಿರುವುದನ್ನು ತಿಳಿಸಿದೆ. ಅನಂತರ **ಸಮಿಧ್, ತನೂನಪಾತ್** ಇತ್ಯಾದಿ ದೇವತೆಗಳನ್ನು **ಪ್ರಾಣಾದಿ** ತತ್ತ್ವಗಳೊಡನೆ ತಾದಾತ್ಮ್ಯವನ್ನು ಹೊಂದಿರುವುದಾಗಿ ತಿಳಿಸಿದೆ.

ಋಕ್ಸಂಹಿತೆಯ ಬೇರೆಬೇರೆ ಮಂಡಲಗಳಲ್ಲಿ ಉಕ್ತವಾಗಿರುವ ಈ ಸೂಕ್ತಗಳನ್ನೂ ಇವುಗಳ ಫಲವನ್ನೂ ಹೇಳುತ್ತಾ ಇವುಗಳನ್ನು ಪಠಿಸಿರುವ ಋಷಿಗಳ ವಿಷಯವನ್ನೂ ಐತ್ತರೇಯಬ್ರಾಹ್ಮಣದಲ್ಲೇ ಎಲ್ಲಕ್ಕಿಂತ ಮೊದಲು ಹೇಳಿದೆ.

ತಾಭಿರ್ಯೇಥ ಯಷ್ಯಾಪ್ರೀಣೀಯಾದ್ಯದ್ಯೇಥ ಯಷ್ಯಾ ಪ್ರೀಣಾತಿ ಯಜಮಾನಮೇವ ತದ್ಬಂಧುತಾಯಾ ನೋತ್ಸೃಜತಿ।

(ಐ. ಬ್ರಾ. ೨-೪)

ಋಷಿಪ್ರಣೀತವಾದ ಈ ಋಕ್ಕುಗಳ ಪಠನದಿಂದ ಯಜಮಾನನನ್ನು ಯಜ್ಞಸಂಬಂಧದಿಂದ ಬಿಡಿಸದೆ ಕಾಪಾಡುತ್ತಾನೆಂದು ಈ ಋಕ್ಕುಗಳನ್ನು ಪಠಿಸುವುದರ ಫಲವನ್ನು ತಿಳಿಸಿದೆ. ಈ ಸೂಕ್ತಗಳು ಒಂದೇ ಋಷಿಯಿಂದ ದೃಷ್ಟವಾದವಲ್ಲ. ಬೇರೆ ಬೇರೆ ಋಷಿಗಳು ಈ ಸೂಕ್ತಗಳನ್ನು ತಮ್ಮತಮ್ಮ ವೈಯಕ್ತಿವಾದ ಸನ್ನಿವೇಶಗಳಲ್ಲಿ ದರ್ಶನಮಾಡಿದರು. ಆದರೂ ಸಹ ಈ ಸೂಕ್ತಗಳ ಸ್ವರೂಪವೂ, ಇವುಗಳ ಪಠನದ ಫಲವೂ ಎಲ್ಲದರಲ್ಲಿಯೂ ಒಂದೇವಿಧವಾಗಿ ಕಾಣುತ್ತದೆ.

ಈ ಆಪ್ರೀಸೂಕ್ತಗಳ ವಿಷಯದಲ್ಲೂ ಈ ಸೂಕ್ತಗಳ ದೇವತೆಗಳ ವಿಷಯದಲ್ಲೂ **ಬ್ರಾಹ್ಮಣಾದಿ** ಪ್ರಾಚೀನಕಾಲದಿಂದಲೇ ಅಭಿಪ್ರಾಯಭೇದವಿದೆಯೆಂದು ನಿರುಕ್ತಕಾರರ ವಿವರಣೆಯಿಂದ ತಿಳಿಯುತ್ತದೆ.

> **ಅಥಾತ ಆಪ್ರಿಯಃ । ಆಪ್ರಿಯಃ ಕಸ್ಮಾದಾಪ್ನೋತೇಃ ಪ್ರೀಣಾತೇರ್ವಾ । ಆಪ್ರೀಭಿರಾಪ್ರೀಣಾತೀತಿ ಚ ಬ್ರಾಹ್ಮಣಂ ॥**
>
> (ನಿ. ೮-೪)

ಎಂದು ನಿರುಕ್ತಕಾರರು ಆಪ್ರೀಸೂಕ್ತಗಳ ವಿಷಯದಲ್ಲಿ ತಮ್ಮ ಅಭಿಪ್ರಾಯಕ್ಕಿಂತ ಬ್ರಾಹ್ಮಣಾದಿಗಳ ಅಭಿಪ್ರಾಯವು ಬೇರೆಯೆಂದು ತೋರಿಸಿದ್ದಾರೆ. ಆಲ್ಲದೇ, **ಕಾತ್ಥಕ್ಯ, ಶಾಕಪೂಣಿ, ಮಾಧ್ಯಮಿಕ** ಇತ್ಯಾದಿ ಋಷಿಗಳ ಅಭಿಪ್ರಾಯಗಳನ್ನು ಆಗಾಗ್ಗೆ ಉದಹರಿಸಿದ್ದಾರೆ. ಕಾತ್ಥಕ್ಯಾದಿಗಳು ಯಾಜ್ಞಿಕರೇ ಆದರೂ ಸಹ ಅವರು ಬ್ರಾಹ್ಮಣಾದಿಗಳಲ್ಲಿ ಹೇಳಿರತಕ್ಕ ನಿರ್ವಚನಗಳನ್ನು ಅನೇಕ ಸಂದರ್ಭಗಳಲ್ಲಿ ಒಪ್ಪುವುದಿಲ್ಲವೆಂಬುದನ್ನು ಆಯಾ ಋಕ್ಕಿನ ವಿಶೇಷವಿಷಯಗಳಲ್ಲಿ ತಿಳಿಸಿದೆ. ಈ ಎಲ್ಲಾ ಅಭಿಪ್ರಾಯಗಳನ್ನೂ ತಿಳಿಸಿ ಯಾಸ್ಕರು ಕೊನೆಗೆ ತಮ್ಮ ಉಚಿತವಾದ ಅಭಿಪ್ರಾಯವನ್ನು ತಿಳಿಸಿದ್ದಾರೆ. ಉದಾಹರಣೆಗೆ—ಆಪ್ರೀದೇವತೆಗಳ ವಿಚಾರವಾಗಿ ಬ್ರಾಹ್ಮಣಾದಿಗಳಲ್ಲಿ ಹೇಳಿರುವ ಅಭಿಪ್ರಾಯಗಳು ಹೇಗಿವೆಯೆಂದು ಮೊದಲು ಅದನ್ನೆಲ್ಲಾ ಸಂಗ್ರಹಿಸಿದ್ದಾರೆ.

> **ಇತೀಮಾ ಆಪ್ರೀದೇವತಾ ಅನುಕ್ರಾಂತಾಃ । ಅಥ ಕಿಂ ದೇವತಾಃ ಪ್ರಯಾಜಾನುಯಾಜಾಃ ಆಗ್ನೇಯಾ ಇತ್ಯೇಕೇ । ಆಗ್ನೇಯಾ ವೈ ಪ್ರಯಾಜಾ ಆಗ್ನೇಯಾ ಅನುಯಾಜಾ ಇತಿ ಚ ಬ್ರಾಹ್ಮಣಂ। ಛಂದೋದೇವತಾ ಇತ್ಯಪರಂ। ಛಂದಾಂಸಿ ವೈ ಪ್ರಯಾಜಾಶ್ಛಂದಾಂಸ್ಯನುಯಾಜಾ ಇತಿ ಚ ಬ್ರಾಹ್ಮಣಂ । ಋತುದೇವತಾ ಇತ್ಯಪರಂ । ಋತವೋ ವೈ ಪ್ರಯಾಜಾ ಋತವೋಽನುಯಾಜಾ ಇತಿ ಚ ಬ್ರಾಹ್ಮಣಂ। ಪಶುದೇವತಾ ಇತ್ಯಪರಂ । ಪಶವೋ ವೈ ಪ್ರಯಾಜಾಃ ಪಶವೋಽನುಯಾಜಾ ಇತಿ ಚ ಬ್ರಾಹ್ಮಣಂ । ಪ್ರಾಣದೇವತಾ ಇತ್ಯಪರಂ। ಪ್ರಾಣಾ ವೈ ಪ್ರಯಾಜಾ ಪ್ರಾಣಾ ವಾ ಅನುಯಾಜಾ ಇತಿ ಚ ಬ್ರಾಹ್ಮಣಂ । ಆತ್ಮದೇವತಾ ಇತ್ಯಪರಂ । ಆತ್ಮಾ ವೈ ಪ್ರಯಾಜಾಃ ಆತ್ಮಾ ವಾ ಅನುಯಾಜಾ ಇತಿ ಚ ಬ್ರಾಹ್ಮಣಂ । ಆಗ್ನೇಯಾ ಇತಿ ತು ಸ್ಥಿತಿಃ । ಭಕ್ತಿವಾತ್ರಯಿತರಂ ॥**
>
> (ನಿ. ೮–೨೨)

ಎಂದು ಆಯಾ ಮತವನ್ನು ಹೇಳುತ್ತಾ ಮೊದಲು,

> **ತವ ಪ್ರಯಾಜಾ ಅನುಯಾಜಾಶ್ಚ ಕೇವಲ ಊರ್ಜಸ್ವಂತೋ ಹವಿಷಃ ಸಂತು ಭಾಗಾಃ ।**
> **ತವಾಗ್ನೇ ಯಜ್ಞೋಽಯಮಸ್ತು ಸರ್ವಸ್ತುಭ್ಯಂ ನಮಂತಾಂ ಪ್ರದಿಶಶ್ಚತಸ್ರಃ ।**
>
> (ಋ. ಸಂ. ೧೦-೫೧-೯)

ಎಂಬ ಋಕ್ಕನ್ನುದಹರಿಸಿ ಇದರಲ್ಲಿ ಹೇಳಿರುವಂತೆ **ಪ್ರಯಾಜಾ** ಮತ್ತು **ಅನುಯಾಜಾ**ಮಂತ್ರಗಳು ಅಗ್ನಿಯನ್ನೇ ಉದ್ದೇಶಿಸಿವೆ ಎಂದು ತಾವು ತಮ್ಮ ವಿವರಣೆಯನ್ನು ಕೊಟ್ಟು, ಅನಂತರ ಇತರರ ಅಭಿಪ್ರಾಯಗಳನ್ನೂ ಹೇಳಿದ್ದಾರೆ. ಅದ

ರಲ್ಲಿ ಬ್ರಾಹ್ಮಣವಾಕ್ಯದಿಂದ ಇದೇ ಅಭಿಪ್ರಾಯವು ಸಮರ್ಥಿತವಾಗುತ್ತದೆ. ಆದರೆ ಕೆಲವರು **ಛಂದೋದೇವತೆಗಳ** ನ್ನುದ್ದೇಶಿಸಿದೆಯೆಂದೂ (ಶ. ಬ್ರಾ. ೧-೩-೨-೯), ಇನ್ನೂ ಕೆಲವರು **ಋತ್ವಾತ್ಮಕ**ವಾದ ದೇವತೆಗಳನ್ನುದ್ದೇಶಿಸಿದೆ ಯೆಂದೂ, (ಶ. ಬ್ರಾ. ೧-೩-೨-೮) ಇತರರು **ಯಾಗಪಶು**ವನ್ನು ದ್ದೇಶಿಸಿದೆಯೆಂದೂ (ಕೌ. ಬ್ರಾ. ೩.೪) ಕೆಲವರು **ಪ್ರಾಣಾತ್ಮಕ**ವಾದ ದೇವತೆಯನ್ನುದ್ದೇಶಿಸಿದೆಯೆಂದೂ, (ಐ. ಬ್ರಾ. ೧-೧೧, ಶ. ಬ್ರಾ. ೧೧-೨-೭-೨೭) ಮತ್ತು ಇನ್ನೂ ಕೆಲವರು **ಆತ್ಮ**ನನ್ನೇ ಉದ್ದೇಶಿಸಿದೆಯೆಂದೂ (ತೈ. ಸಂ. ೬-೧-೫-೪). ಹೇಳಿರುವುದನ್ನೆಲ್ಲಾ ಸಂಗ್ರಹಿಸಿ ಹೇಳಿ ಅನಂತರ ಅಗ್ನಿಯನ್ನುದ್ದೇಶಿಸಿದೆಯೆಂದು ಹೇಳುವುದೇ ಸಾಧುವಾದ ಮತವೆಂದು ತಮ್ಮ ಖಚಿತವಾದ ಅಭಿಪ್ರಾಯವನ್ನು ಹೇಳಿದ್ದಾರೆ.

ಕಾತ್ಯಾಯನನ **ಸರ್ವಾನುಕ್ರಮಣಿಕೆ**ಯಲ್ಲಿ **ಆಪ್ರೀ** ಮತ್ತು **ಆಪ್ರೀ** ಎಂಬ ಶಬ್ದಗಳಿಗೆ ವ್ಯತ್ಯಾಸವನ್ನೂ ತಿಳಿಸಿ (ಈ ವ್ಯತ್ಯಾಸವನ್ನು **ಆಪ್ರೀಸೂಕ್ತ**ದ ಎಂದರೆ ೧-೧೪೨ ನೇ ಸೂಕ್ತದ ಕೊನೆಯಲ್ಲಿ ತಿಳಿಸಿರುತ್ತದೆ. **ನರಾಶಂಸ** ದೇವತೆಯನ್ನು ಉದ್ದೇಶಿಸಿರುವ ಋಕ್ಕುಗಳಿಗೆ **ಆಪ್ರೀ**ಮಂತ್ರಗಳೆಂದೂ ಮತ್ತು **ತನೂನಪಾತ್** ಎಂಬ ದೇವತೆಯನ್ನು ಉದ್ದೇಶಿಸಿರುವ ಋಕ್ಕುಗಳಿಗೆ ಆಪ್ರೀಮಂತ್ರಗಳೆಂದು ಪ್ರಸಿದ್ಧಿಯಿದೆಯೆಂದು ತೋರಿಸಿದ್ದಾರೆ. ಬೃಹದ್ದೇವತೆಯಲ್ಲಿ—

ದ್ವಿತೀಯೇ ದ್ವಾದಶರ್ಚೇ ತು ಪ್ರತ್ಯೃಚಂ ಯಾಸ್ತು ದೇವತಾಃ ।
ಸ್ತೂಯಂತೇ ಹ್ಯಗ್ನಿನಾ ಸಾರ್ಧಂ ತಾಸಾಂ ನಾಮಾನಿ ಮೇ ಶೃಣು ॥
ಪ್ರಥಮಾಯಾಂ ಸ್ತುತಶ್ಚೇಧ್ಸೋ ದ್ವಿತೀಯಾಯಾಂ ತನೂನಪಾತ್ ।
ನರಾಶಂಸ ಸ್ತೃತೀಯಾಯಾಂ ಚತುರ್ಥ್ಯಾಂ ಸ್ತೂಯತೇ ತ್ವಿಳಃ ॥
ಬರ್ಹಿರೇವ ತು ಪಂಚಮ್ಯಾಂ ದ್ವಾರೋ ದೇವ್ಯಸ್ತತೋಽನ್ಯಯಾ ।
ನಕ್ತೋಷಾಸಾ ತು ಸಪ್ತಮ್ಯಾಮುಷ್ಟಮ್ಯಾಂ ಸಂಸ್ತುತೌ ಸಹ ॥
ದೇವ್ಯಾವಿತಿ ತು ಹೋತಾರೌ ನವಮಾಮೃಚಿ ಸಂಸ್ತುತಾಃ ।
ತಿಸ್ರೋ ದೇವ್ಯೋ ದಶಮ್ಯಾಂ ತು ಜ್ಞೇಯಸ್ತ್ವಷ್ಟೈವ ತು ಸ್ತುತಃ ॥
ಏಕಾದಶ್ಯಾಂ ತು ಸೂಕ್ತಸ್ಯ ಸ್ತುತಂ ವಿದ್ಯಾದ್ವನಸ್ಪತಿಃ ।
ದ್ವಾದಶ್ಯಾಂ ತು ಸ್ತುತಾ ದೇವೀರ್ವಿದ್ಯಾತ್ಸ್ವಾಹಾಕೃತೀರಿತಿ ॥
ಸೂಕ್ತೇಽಸ್ಮಿನ್ಪ್ರತ್ಯೃಚಂ ಯಾಸು ದೇವತಾಃ ಪರಿಕೀರ್ತಿತಾಃ ।
ತಾ ಏವ ಸರ್ವಾಸ್ವಾಪ್ರೀಷು ದ್ವಿತೀಯಾ ತು ವಿಕಲ್ಪ್ಯತೇ ॥

(ಬೃ. ದೇ. ೨-೧೪೬ ರಿಂದ ೧೫೧)

ಎಂದು **ಇಳಾ** ಮೊದಲಾದ ಎಲ್ಲಾ ದೇವತೆಗಳ ಹೆಸರನ್ನು ನಿರ್ದೇಶಿಸಿ ಸೂಕ್ತದ ಕ್ರಮವನ್ನೂ, ಅಲ್ಲಲ್ಲಿ ಒಂದೊಂದು ಋಕ್ಕುಗಳಲ್ಲೂ ಇರುವ ಪ್ರತ್ಯೇಕವಾದ ದೇವತೆಯನ್ನುದ್ದೇಶಿಸಿರುವುದನ್ನೂ ತಿಳಿಸಿದ್ದಾರೆ. ಆಪ್ರೀಸೂಕ್ತಗಳೆಷ್ಟು ಎಂಬ ವಿಷಯದಲ್ಲಿ ಹೇಳುತ್ತಾ ನಿರುಕ್ತಕಾರರು,

ಇತೀಮಾನ್ಯೇಕಾದಶಾಪ್ರೀಸೂಕ್ತಾನಿ । ತೇಷಾಂ ವಾಸಿಷ್ಠಮಾತ್ರೇಯಂ ವಾಧ್ರ್ಯಶ್ವಂ ಗಾರ್ತ್ಸ-
ಮದಮಿತಿ ನಾರಾಶಂಸವಂತಿ । ಪೈಧಾತಿಥಂ ದೈರ್ಘತಮಸಂ ಪ್ರೈಷಿತಮಿತ್ಯುಭಯವಂತ್ಯ-
ತೋಽನ್ಯಾನಿ ತನೂನಪಾತ್ಸ್ತವಂತಿ ತನೂನಪಾತ್ಸ್ತವಂತಿ ॥

(ನಿ. ೮-೨೨)

ಈ ಸೂಕ್ತಗಳಲ್ಲಿ **ವಸಿಷ್ಠ, ಅತ್ರಿ, ವಧ್ರ್ಯಶ್ವ** ಮತ್ತು **ಗೃತ್ಸಮದ** ಇವರಿಂದ ದೃಷ್ಟವಾದ ಸೂಕ್ತಗಳು, ನರಾಶಂಸಪರವಾದವು. **ಮೇಧಾತಿಥಿ** ಮತ್ತು **ದೀರ್ಘತಮಸ್** ಈ ಋಷಿಗಳಿಂದ ದೃಷ್ಟವಾದವೂ ಮತ್ತು ಪ್ರೈಷಸೂಕ್ತವೂ ಸಹ **ತನೂನಪಾತ್** ಮತ್ತು **ನರಾಶಂಸ** ಎಂಬ ಎರಡು ದೇವತೆಗಳನ್ನೂ ಉದ್ದೇಶಿಸಿದವು; ಉಳಿದ ನಾಲ್ಕು ಸೂಕ್ತಗಳೂ ಕೇವಲ **ತನೂನಪಾತ್** ಎಂಬ ದೇವತಾಪರವಾದವು. ಒಟ್ಟಿನಲ್ಲಿ (ಪ್ರೈಷಸೂಕ್ತವನ್ನೂ ಸೇರಿಸಿದರೆ) ಹನ್ನೊಂದು ಆಪ್ರೀಸೂಕ್ತಗಳು. ಇದೇ ಅಭಿಪ್ರಾಯವನ್ನು ಬೃಹದ್ದೇವತೆಯಲ್ಲಿಯೂ,

ಪ್ರೇಷೈಃ ಸಹಾಪ್ರೀಸೂಕ್ತಾನಿ ತಾನ್ಯೇಕಾದಶ ಸಂತಿ ಚ ।
ಯಜೂಂಷಿ ಪ್ರೈಷಸೂಕ್ತಂ ವಾ ದಶೈತಾನೀತರಾಣಿ ತು ॥
ಸೌತ್ರಾಮಣ್ಯಾನಿ ತು ತ್ರೀಣಿ ಪ್ರಾಜಾಪತ್ಯಾಶ್ವಮೇಧಿಕೇ ।
ಪುರುಷಸ್ಯ ತು ಯನ್ಮೇಧೇ ಯಜಷ್ಟೇವ ತು ತಾನಿ ಷಟ್ ॥
ಆತ್ರೈವ ಪ್ರೈಷಸೂಕ್ತಂ ಸ್ಯಾನ್ನ ಯಜುಷ್ಟ್ವಾದ್ರಿಯೇತ ತತ್ ।
ತೇಷಾಂ ಪ್ರೈಷಗತಂ ಸೂಕ್ತಂ ಯಚ್ಚ ದೀರ್ಘತಮಾ ಜಗೌ ।
ಮೇಧಾತಿಥೌ ಯದುಕ್ತಂ ಚ ತ್ರಿಷ್ಯೇವೋಭಯವಂತಿ ತು ।
ಋಷೌ ಗೃತ್ಸಮದೇ ಯಚ್ಚ ವಾಧ್ರ್ಯಶ್ವೇ ಚ ಯದುಚ್ಯತೇ ॥
ನರಾಶಂಸವದತ್ರೇಶ್ಚ ದದರ್ಶ ಚ ಯದೌರ್ವಶಃ ।
ತನೂನಪಾದಗಸ್ತ್ಯಶ್ಚ ಜಮದಗ್ನಿಶ್ಚ ಯಜ್ಜಗೌ ॥
ವಿಶ್ವಾಮಿತ್ರ ಋಷಿರ್ಯಶ್ಚ ಜಗೌ ವೈ ಕಾಶ್ಯಪೌಽಸಿತಃ ।
ಮೇಧಾತಿಥೇರ್ಯುಚಾಂ ಯಾಸ್ತು ಪ್ರೋಕ್ತಾ ದ್ವಾದಶದೇವತಾಃ ॥
ಸಂಪದ್ಯಂತೇ ಯಥಾಗ್ನಿಂ ತಾಃ ಸಂಪದಂ ತಾಂ ನಿಬೋಧತ ।

(ಬೃ. ದೇ. ೨-೧೫೨ ರಿಂದ ೧೫೭)

ಎಂಬ ಶ್ಲೋಕಗಳಲ್ಲಿ **ಪ್ರೈಷ**ಸೂಕ್ತವನ್ನು ಸೇರಿಸಿದರೆ ಒಟ್ಟು ಹನ್ನೊಂದು **ಆಪ್ರೀ**ಸೂಕ್ತಗಳೆಂದೂ, ಇಲ್ಲದಿದ್ದರೆ ಹತ್ತು ಸೂಕ್ತಗಳೆಂದೂ ಹೇಳಿದೆ ಮತ್ತು ನಿಯುಕ್ತವಾಕ್ಯವನ್ನೇ ಅನುಸರಿಸಿ **ನರಾಶಂಸ, ತನೂನಪಾತ್** ಇತ್ಯಾದಿ ದೇವತೆಗಳನ್ನುದ್ದೇಶಿಸಿದವೂ ಮತ್ತು ಮೇಧಾತಿಥ್ಯಾದಿ ಋಷಿಗಳಿಂದ ಪ್ರಣೀತವಾದವೂ ಆದ ಸೂಕ್ತಗಳ ಕ್ರಮನನ್ನು ಕೊಟ್ಟಿದೆ.

ಪ್ರೈಷಸೂಕ್ತವು ಕ್ರಮಬದ್ಧವಾಗಿಯೂ, ಎಲ್ಲಾ ಆಪ್ರೀಸೂಕ್ತಗಳ ಸಾರಾಂಶವನ್ನೂ ಒಟ್ಟಿಗೆ ಶೇಖರಿಸಿ ಒಂದು ನಿರ್ದಿಷ್ಟವಾದ ಚಿತ್ರವನ್ನು ಕೊಡತಕ್ಕುದಾಗಿಯೂ ಇವೆ. **ಆಪ್ರೀ**ಸೂಕ್ತಗಳಲ್ಲಿ ಉದ್ದೇಶಿಸಿರುವ ದೇವತೆಗಳ ವೈಯಕ್ತಿಕವಾದ ವಿಶೇಷಣಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ಆಯಾ ದೇವತೆಗಳ ಸ್ವರೂಪವನ್ನೂ ಕರ್ತವ್ಯವನ್ನೂ ವಿಧಾನಿಸಿ ತಿಳಿಸುತ್ತದೆ. ಪ್ರತಿಯೊಂದು ದೇವತೆಯನ್ನೂ ಉದ್ದೇಶಿಸುವಾಗಲೂ ಸಹ ಮೊದಲು **ಹೋತಾ ಯಕ್ಷತ್** ಎಂಬ ಒಂದು ನಿಯಮಿತ ಮಂತ್ರಭಾಗವನ್ನುಚ್ಚರಿಸಿ ಅನಂತರ ಆಯಾ ದೇವತೆಗಳನ್ನು ನಿರ್ದೇಶಿಸಿದೆ. ಮೊದಲು ಪ್ರೈಷಸೂಕ್ತದಲ್ಲಿ ವಿವರಿಸಿರುವ **ದೇವತಾ**, ದೇವತೆಯ ವಿಶೇಷಣ ಮತ್ತು ಕರ್ತವ್ಯ ಇವುಗಳನ್ನು ಪರಿಶೀಲಿಸಿ ಅನಂತರ ಇಂತಹ ದೇವತಾತ್ಮಕವಾದ ಆಪ್ರೀಸೂಕ್ತಗಳ ಉದ್ದಿಶ್ಯವೇನು ? ಅವುಗಳ ಲಕ್ಷಣವೇನು ? ಅವುಗಳ ಪಠನೆಗಳಿಂದ ಆಗತಕ್ಕ ಲಾಭವೇನು ? ಎಂಬ ವಿಷಯದಲ್ಲಿರುವ ಅಭಿಪ್ರಾಯಗಳ ಸಾಮರಸ್ಯವನ್ನೂ ಅಥವಾ ಭಿನ್ನಾಭಿಪ್ರಾಯಗಳನ್ನೂ ತಿಳಿಯಬಹುದು.

ಸಂಖ್ಯೆ	ದೇವತಾ	ವಿಶೇಷದಿಗಳು
೧	ಅಗ್ನಿಃ (ಸಮಿತ್)	ಸಮಿಧಾ, ಸುಸಮಿಧಾ, ಸಮಿದ್ಧಃ
೨	ಅಗ್ನಿಃ (ತನೂನಪಾತ್)	ಅದಿತೇಃ ಗರ್ಭಂ ಭುವನಸ್ಯ ಗೋಪಾಂ
೩	ಅಗ್ನಿಃ (ನರಾಶಂಸಃ)	ನೃಸಸ್ತ್ರಂ ನೃಃ ಪ್ರಣೇತ್ರಂ
೪	ಅಗ್ನಿಃ (ಇಳಃ)	ಈಳಿತೋ ದೇವಃ ಹವ್ಯವಾಟ್ ಅಮೂರಃ
೫	ಬರ್ಹಿಃ	ಸುಷ್ಟರೀಮ, ಊರ್ಣಮ್ರದ, ದೇವೇಭ್ಯಃ, ಸ್ವಾಸಸ್ಥಂ
೬	ದೇವೀರ್ದ್ವಾರಃ	ಋಷ್ವಾಃ ಕವಷ್ಯಃ, ಕೋಷಧಾವನೀಃ
೭	ಉಷಾಸಾನಾಕ್ತಾ	ಬೃಹತೀ, ಸುಪೇಶಸಾ, ಪತಿಭ್ಯಃ, ಯೋನಿಂ, ಕೃಣವಾನ್ತೇ, ಸಂಸ್ಮಯಮಾನೇ
೮	ದೈವ್ಯಾ ಹೋತಾರಾ	ಮಂದ್ರಾ, ಪೋತಾರಾ, ಕವೀ, ಪ್ರಚೇತಸಾ
೯	ತಿಸ್ರೋ ದೇವೀಃ	ಅಪಸಾಂ ಅಪಸ್ತಮಾಃ, ದೇವೀಃ
೧೦	ತ್ವಷ್ಟಾ	ಅಚಿಷ್ಟಃ ಅಪಾಕಃ, ರೇತೋಧಾಃ, ವಿಶ್ರವಸ್, ಯಶೋಧಾಃ ಪುರುರೂಪಃ, ಅಕಾಮಕರ್ಶನ
೧೧	ವನಸ್ಪತಿಃ	ಧಿಯೋ ಜ್ಯೇಷ್ಠಾ, ಸ್ವಧಾವಾನ್ ಸ್ಪಧಿತಿಃ, ದೇವೇಭ್ಯಃಋತು-ಧಾ ಹವ್ಯವಾಟ್ ಯಜ್ಞಸ್ಯ ಆಯುಃ, ಕಲ್ಪಮಾನಃ
೧೨	ಅಗ್ನಿಃ (ಸ್ವಾಹಾ)	ಆಜ್ಯಸ್ಯ ಮೇದಸಃ ಸ್ವಾಹಾ

ಈರೀತಿಯಲ್ಲಿ **ಪ್ರೈಷ**ಸೂಕ್ತವು ಸಕಲವಾದ ಆಪ್ರೀಸೂಕ್ತಗಳ ಮುಖ್ಯಾಂಶಗಳನ್ನು ಸಂಗ್ರಹಿಸಿ ಒಂದು ಕ್ರಮಬದ್ಧವಾದ ಚಿತ್ರವನ್ನು ಕೊಟ್ಟಿದೆ. ಈ ಆಪ್ರೀಸೂಕ್ತಗಳ ರಚನಾಕ್ರಮಗಳನ್ನೂ ಅವುಗಳ ಶೈಲಿಗಳನ್ನೂ ಮತ್ತು ಯಜ್ಞಕಾರ್ಯದಲ್ಲಿ ಅವುಗಳ ಪ್ರಯೋಜನಗಳನ್ನೂ ಅವುಗಳ ಕಾವ್ಯಾತ್ಮಕವಾದ ಸ್ವರೂಪವನ್ನೂ ಅವುಗಳ ವಿಷಯದಲ್ಲಿ ಆಧುನಿಕ ಪಂಡಿತರು ಹೇಳಿರುವ ಅಭಿಪ್ರಾಯಗಳನ್ನೂ ಸಹ ಕೊನೆಯಲ್ಲಿ ಹೇಳಲಾಗಿದೆ.

ಆಪ್ರೀಸೂಕ್ತಗಳ ಅವಶ್ಯಕತೆ ಮತ್ತು ಉದ್ದಿಶ್ಯಗಳನ್ನು ಕುರಿತು Max Muller ಎಂಬ ಪಂಡಿತನು ಮೊದಲು ಅವು ದೇವತೆಗಳನ್ನಾಗಲಿ ಅಥವಾ ಬಂಧುಗಳನ್ನಾಗಲಿ ಸಮಾಧಾನಗೊಳಿಸುವ ಸಾಧನವೆಂದು ಹೇಳಿ ಅನಂತರ ಅವುಗಳ ರಹಸ್ಯಾರ್ಥಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವುದೇ ಶ್ರಮವೆಂದು ಹೀಗೆ ಹೇಳಿದ್ದಾನೆ—

ಯಾಗಾದಿಕರ್ಮಗಳಲ್ಲಿ ಆಪ್ರೀಸೂಕ್ತಗಳಿಗಿರುವ ಸ್ಥಾನಮಾನಗಳ ವಿಷಯದಲ್ಲಿಯೂ, ದೇವತೆಗಳ ವಿಷಯದಲ್ಲಿಯೂ ಪ್ರಾಚೀನವೈದಿಕಪಂಡಿತರಲ್ಲಿಯೇ ಅಭಿಪ್ರಾಯಭೇದವಿದ್ದರೂ ಸಹ ಆಪ್ರೀಸೂಕ್ತಗಳಿಲ್ಲದಿರಲ್ಲೂ ಅನೇಕ ಸಮಾನ ಧರ್ಮಗಳಿರುವುವು. ಅವುಗಳ ರಚನೆಯಲ್ಲಿಯೂ ವಿಷಯಗಳಲ್ಲಿಯೂ ಒಂದು ವಿರ್ದಿಷ್ಟವಾದ ಮಾದರಿಯೂ ಸಂಸ್ಕಾರವೂ ಇರುವುದರಿಂದ ಎಲ್ಲವೂ ಒಟ್ಟಿಗೆ ರಚಿಸಲ್ಪಟ್ಟವೆಂದಾಗಲೀ ಅಥವಾ ಒಂದಕ್ಕೊಂದಕ್ಕೆ ಸಂಬಂಧವಿಲ್ಲವೆಂದಾಗಲೀ ಹೇಳುವುದಕ್ಕಾಗುವುದಿಲ್ಲ. ನಾಲ್ಕನೆಯ ಮತ್ತು ಆರನೆಯ ಮಂಡಲಗಳ ಋಷಿಗಳನ್ನು ಬಿಟ್ಟು ಉಳಿದ ಮಂಡಲದ ಋಷಿಗಳೆಲ್ಲರೂ ತಮ್ಮತಮ್ಮ ಮನೆತನದ ಸಾಂಪ್ರದಾಯಿಕವಾದ ಆಪ್ರೀಸೂಕ್ತಗಳನ್ನು ಹೊಂದಿದ್ದಾರೆ· ಎಂಟನೇ ಮಂಡಲದ ಕಾಣ್ವಸಂತತಿಯವರಿಗೆ ಪ್ರತ್ಯೇಕವಾದ ಆಪ್ರೀಸೂಕ್ತವಿಲ್ಲದಿದ್ದರೂ ಸಹ ಅವರು ೧-೧೩ ನೆಯ

ಸೂಕ್ತವನ್ನೇ ಉಪಯೋಗಿಸಿಕೊಳ್ಳುವುದು ಪ್ರಸಿದ್ಧವಾಗಿದೆ. ಆದರೆ ನಾಲ್ಕು ಮತ್ತು ಆರನೇ ಮಂಡಲದ ದ್ರಷ್ಟೃಗಳಾದ ಋಷಿಗಳಿಗೆ ಇದರ ಅವಶ್ಯಕತೆಯು ಇಲ್ಲದಿರುವುದಕ್ಕೆ ಕಾರಣವನ್ನು ಹೇಳುವುದಕ್ಕಾಗುವುದಿಲ್ಲ ಅಥವಾ **ವಾಮದೇವ** ಮತ್ತು **ಭಾರದ್ವಾಜ**ಸಂತತಿಯವರು ಈ ಸ್ಥಾನದಲ್ಲಿ ಬೇರೆ ಇನ್ನಾವ ಮಂತ್ರಗಳನ್ನಾಗಲೀ ಪಠಿಸುತ್ತಿದ್ದಿರಬಹುದು,

ಆಪ್ರೀ ಮತ್ತು **ಆಪ್ರ** ಎಂಬ ಸಂಜ್ಞೆಯಿಂದ ಸೂಚಿತವಾಗುವ ಮಂತ್ರಗಳು—

ಕಾತ್ಯಾಯನರು ಸರ್ವಾನುಕ್ರಮಣಿಕೆಯಲ್ಲಿ—**ಏತದಾಪ್ರೀಸೂಕ್ತಂ ಏತೇನಾನ್ಯುಕ್ತದೈವತಾನಿ ಏಕಾದಶಕಾನಿ ತು ನಾರಾಶಂಸಾನಿ ಆಪ್ರಶಬ್ದೋಕ್ತಾನಿ ಆತನೂನಪಾತ್ಪಂತಿ** | ನರಾಶಂಸ ದೇವತೆಯನ್ನುದ್ದೇಶಿಸಿ ಪಠಿಸುವ ಮಂತ್ರಗಳು **ಆಪ್ರ**ವೆಂಬ ಹೆಸರಿನಿಂದಲೂ, **ತನೂನಪಾತ್** ದೇವತೆಯನ್ನುದ್ದೇಶಿಸಿ ಪಠಿಸುವ ಮಂತ್ರಗಳು **ಆಪ್ರೀ** ಎಂಬ ಹೆಸರಿನಿಂದಲೂ ಪ್ರಸಿದ್ಧವಾಗಿವೆಯೆಂದೂ ಹೇಳಿದ್ದಾರೆ. ಆದರೆ ನಿರುಕ್ತಾದಿಗಳಲ್ಲಿ ಈ ವ್ಯತ್ಯಾಸವನ್ನು ತೋರಿಸುವ ವಾಕ್ಯಗಳೇ ಇಲ್ಲ-

ಆಪ್ರೀ ಎಂಬ ಹೆಸರು **ದೇವತಾ**ಪರವಾದುದೇ ಅಥವಾ **ಸೂಕ್ತ**ಪರವಾದುದೇ ಎಂಬ ಪ್ರಶ್ನೆಯೂ ಸಹಜವಾದುದಾಗಿದೆ. ಸೂಕ್ಷ್ಮವಾಗಿ ನೋಡಿದರೆ ಮೊದಲು **ಸೂಕ್ತ**ಪರವಾಗಿದ್ದು ಅನಂತರ ದೇವತಾನಿರ್ದೇಶಕವಾದ ಮಂತ್ರಗಳಾಗಿದ್ದಿರಬಹುದೆಂದು ಹೇಳಬಹುದು.

ಕರ್ಮದ ಸ್ವರೂಪ—ಆಪ್ರೀಸೂಕ್ತದಿಂದ ನಿರ್ದಿಷ್ಟವಾದ ಯಜ್ಞಕರ್ಮವು ಬ್ರಾಹ್ಮಣಾದಿಗಳಿಂದ ಸೂಚಿತವಾಗುವಂತೆ ಗೌಣವಾದ ಸ್ಥಾನವನ್ನು ಹೊಂದಿರಲಿಲ್ಲವೆಂದೂ ಮುಖ್ಯ ಯಾಗದ ಸ್ಥಾನವನ್ನೇ ಹೊಂದಿದ್ದಿತೆಂದೂ ಹೇಳಬಹುದು. **ಪ್ರಯಾಜಾಹುತಿ**ಗಳಿಗೂ ಈ ಕರ್ಮದಲ್ಲಿ ನಿರ್ದಿಷ್ಟವಾದ ಆಹುತಿಗಳಿಗೂ ಇರುವ ವ್ಯತ್ಯಾಸವು ಅನೇಕಕಡೆಗಳಲ್ಲಿ ತಿಳಿಯುತ್ತದೆ. ೧-೧೩-೮, ೧-೧೫೮-೭, ೧-೧೪೨-೮, ೩-೪-೮, ೫-೫.೭, ೯-೫-೮. ಈ ಋಕ್ಕುಗಳಲ್ಲಿ **ಇಮಂ ಯಜ್ಞಂ** ಎಂಬ ಮಂತ್ರವೂ, ೫-೫-೨, ೩-೪-೫ನೇ ಋಕ್ಕುಗಳಲ್ಲಿ **ನಃ ಯಜ್ಞಂ** ಎಂಬುದೂ ೧-೧೩-೨, ೭-೨-೭, ೧೦-೧೧೦-೮ನೇ ಋಕ್ಕುಗಳಲ್ಲಿ **ಅಸ್ಮಿನ್ ಯಜ್ಞೇ** ಎಂಬುದೂ ಸಹ ಯಜ್ಞಕರ್ಮದಲ್ಲಿಯಾಗಲೀ ಅಥವಾ ಆಹುತ್ಯರ್ಪಣದಲ್ಲಾಗಲೀ ಪ್ರಧಾನವಾದ ಸ್ಥಾನವನ್ನು ತೋರಿಸುವುವೇ ಹೊರತು **ಪ್ರಯಾಜಾಹುತಿ**ಗಳಂತೆ ಗೌಣವಾದ ಸ್ಥಾನವನ್ನು ತೋರಿಸುವುದಿಲ್ಲ.

ತ್ರಿರಾದಿವೋವಿಮಿಷ್ಟತಿ (೧-೧೪೨-೩); **ತ್ರಿರಹನ್ನಾಯಜಂತೇ** (೩-೪-೨) ಎಂಬ ಮಂತ್ರಗಳಿಂದ ಈ ಕರ್ಮವು ದಿನದಲ್ಲಿಯೂ ಮೂರು ಕಾಲಗಳಲ್ಲಿಯೂ ನೆರವೇರಿಸಲ್ಪಡತಕ್ಕದ್ದೆಂದೂ, **ಸಮಿದ್ಧೋ ಅದ್ಯ ಮನುಷೋ ದುರೋಣೇ**(೧೦-೧೧೦-೧) ಎಂಬುದರಿಂದ ಇದಕ್ಕಾಗಿ ಪ್ರತ್ಯೇಕವಾದ ಯಜ್ಞಗೃಹವಿಲ್ಲವೆಂದೂ, ಸಾಧಾರಣವಾದ ಮನೆಯಲ್ಲಿಯೇ ಅಗ್ನಿಯನ್ನು ಸ್ಥಾಪಿಸಿಬಹುದೆಂದೂ ತಿಳಿಯುತ್ತದೆ.

ಸಮಿತ್ಸಮಿತ್ಸುಮನಾ ಬೋಧ್ಯಸ್ಮೇ ಶುಚಾಶುಚಾ ಸುಮತಿಂ ರಾಸಿ ವಸ್ವಃ ।
ಆ ದೇವ ದೇವಾನ್ಯಜಥಾಯ ವಕ್ಷಿ ಸಖಾ ಸಖೀನ್ತ್ಸುಮನಾ ಯಕ್ಷ್ಯಗ್ನೇ ॥

(ಋ. ಸಂ. ೩-೪-೧)

ಎಂಬ ಋಕ್ಕಿನಲ್ಲಿ ವಿಶ್ವಾಮಿತ್ರಋಷಿಯು ಕಾವ್ಯರೂಪದಲ್ಲಿ ವರ್ಣಿಸುವ ಅಗ್ನಿಯ ಪ್ರಜ್ವಲನವೂ ಮತ್ತು

ಜುಷಸ್ವ ನಃ ಸಮಿಧಮಗ್ನೇ ಅದ್ಯ ಶೋಚಾ ಬೃಹದ್ಯಜತಂ ಧೂಮಮೃಣ್ವನ್ ।

ಉಪ ಸ್ಪೃಶ ದಿವ್ಯಂ ಸಾನು ಸ್ತೂಪೈಃ ಸಂ ರಶ್ಮಿಭಿಸ್ತತನಃ ಸೂರ್ಯಸ್ಯ ॥
(ಋ. ಸಂ. ೭-೨-೧)

ಎಂಬ ಋಕ್ಕಿನಲ್ಲಿ ಅಗ್ನಿಕಿರಣವೂ, ಸೂರ್ಯಕಿರಣವೂ ಒಟ್ಟಗೆ ಸೇರಿಕೊಂಡು ಪ್ರಸರಿಸುವ ವರ್ಣನವೂ ಸಹ ಮಂತ್ರಗಳ ಕಾವ್ಯಾತ್ಮಕ ಸ್ವರೂಪವನ್ನು ತಿಳಿಸುತ್ತವೆ. ಇದೇ ವರ್ಣನೆಗಳು ಈ ಯಾಗವು ಪ್ರಾತಃಕಾಲದಲ್ಲಿ ಪ್ರಾರಂಭಿಸಲ್ಪಡತಕ್ಕದ್ದು ಎಂಬುದನ್ನೂ ತಿಳಿಸುತ್ತವೆ.

ಪೂರ್ವ್ಯಂ ತಂತುಂ ತನುಷ್ವ (೧-೧೪೨-೧) ಎಂಬ ಮಂತ್ರವು ಈ ಯಾಗವು ಪ್ರಾಚೀನವಾದುದೆಂದು ತಿಳಿಸುತ್ತದೆ. ಈ ಯಜ್ಞವು ನಿರ್ವಿಘ್ನವಾಗಿ ನೆರವೇರಲು **ದೇವಹೋತೃ**ವಾದ **ಅಗ್ನಿಯ** ಸಹಾಯದ ಅವಶ್ಯಕತೆ ಇರುವುದರಿಂದ ಅಗ್ನಿಗೆ ಆಜ್ಯಾಹುತಿಯನ್ನು ಮೊದಲು ಅರ್ಪಿಸಬೇಕು. ಇದರಿಂದ ಅಗ್ನಿ ತೃಪ್ತಿಯಾದನಂತರ ಅಗ್ನಿಯು ಅಂತರಿಕ್ಷದ ಕಡೆಗೆ ಪ್ರಸರಿಸುತ್ತಾನೆ. (೭-೨-೧) ಅನಂತರ ದೇವತೆಗಳನ್ನು ಕರೆತರುತ್ತಾನೆ. ಅಗ್ನಿಯು ಮಾನವರ ಸಖನಾದುದರಿಂದ (೩-೪-೧) ಈ ಉಪಕಾರವನ್ನು ಮಾಡುತ್ತಾನೆ.

ಕೃತಿಕೌಶಲ್ಯ—ಆಪ್ರೀಸೂಕ್ತಗಳು ಒಂದಕ್ಕಿಂತ ಒಂದು ಬೇರೆಯಾಗಿ, ಬೇರೆಬೇರೆ ಕಾಲಗಳಲ್ಲಿ ನಿರ್ಮಿತವಾಗಿದ್ದರೂ ಮತ್ತು ಬೇರೆ ಬೇರೆ ಋಷಿಸಂತತಿಗಳಿಗೆ ಸಂಬಂಧಿಸಿದ್ದರೂ ಸಹ ಈ ಎಲ್ಲಾ ಸೂತ್ರಗಳಲ್ಲಿಯೂ ಒಂದೇವಿಧವಾದ ವಾಕ್ಸರಣಿಯೂ ಧ್ಯೇಯವೂ ಇರುವುದರಿಂದ ಉಳಿದ ಎಲ್ಲಾ ವಿಧವಾದ ಸೂಕ್ತಗಳಿಗಿಂತಲೂ ಒಂದುವಿಧವಾಗಿ ಅಧಿಕವಾದ ಸಾಮರಸ್ಯವೂ, ಸ್ವಾರಸ್ಯವೂ ಇವುಗಳ ವೈಶಿಷ್ಟ್ಯವನ್ನು ತೋರಿಸುತ್ತದೆ.

(ಎರಡು ಸೂಕ್ತಗಳನ್ನುಳಿದು ಉಳಿದ) ಎಲ್ಲಾ ಸೂಕ್ತಗಳಲ್ಲೂ ಸಹ ಋಕ್ಕುಗಳ ಸಂಖ್ಯೆಯು ಹನ್ನೊಂದಿರುವುದೂ ಮತ್ತು **ಸಮಿದ್** ಎಂಬ ಪದದಿಂದ ಸೂಕ್ತವು ಪ್ರಾರಂಭವಾಗಿ **ಸ್ವಾಹಾ** ಎಂಬುದರೊಂದಿಗೆ ಮುಕ್ತಾಯವಾಗುವುದೂ ಕಾವ್ಯದೃಷ್ಟಿಯಿಂದಲೂ ಕಲಾದೃಷ್ಟಿಯಿಂದಲೂ ಒಂದು ನಿಯತವಾದ ನಿಯಮನವನ್ನು ತೋರಿಸುತ್ತದೆ.

ಛಂದಸ್ಸಿನ ವಿಷಯದಲ್ಲಿ ಅಂತಹ ನಿರ್ಬಂಧವಿಲ್ಲ. ೧ ೧೩, ೧-೧೮ಎಲ, ೫-೫, ೯-೫ ಈ ಸೂಕ್ತಗಳು **ಗಾಯತ್ರೀ** ಛಂದಸ್ಸಿನಲ್ಲೂ, ೧-೧೪೨ನೇ ಸೂಕ್ತವು **ಅನುಷ್ಟುಪ್** ಛಂದಸ್ಸಿನಲ್ಲೂ, ೨-೩, ೩-೫, ೬-೨, ೧೦-೭೦, ೧೦ ೧೧೦, ಈ ಸೂಕ್ತಗಳು **ತ್ರಿಷ್ಟುಪ್** ಛಂದಸ್ಸಿನಲ್ಲೂ ರಚಿತವಾಗಿವೆ.

ದೇವಾನ್ ಆ ವಹ, ದೇವಾನ್ ವಕ್ಷಿ, ವಿಪ್ರಾ ಯಜ್ಞೇಷು ಮಾನವೇಷು ಕಾರುಃ, ಇತ್ಯಾದ್ಯನೇಕ ಮಂತ್ರಭಾಗಗಳು ಪುನರಾವರ್ತಿತವಾಗಿವೆ.

ಸಾಯಣಭಾಷ್ಯಂ

ಇಮಾಂ ಮ ಇತ್ಯೇಕಾದಶರ್ಚಂ ದ್ವಿತೀಯಂ ಸೂಕ್ತಂ। ವಾಧ್ರ್ಯಶ್ವಸ್ಯ ಸುಮಿತ್ರಸ್ಯಾರ್ಷಂ ತ್ರೈಷ್ಟುಭಂ ತನೂನಪಾದ್ವೈರ್ಚಿತಾಃ ನರಾಶಂಸಾಃ ಸಮಿದಾದಯಃ ಪ್ರತ್ಯೃಚಂ ದೇವತಾಃ। ತಥಾ ಚಾನುಕ್ರಾಂತಂ। ಇಮಾಂ ಮ ಏಕಾದಶಾಪ್ರಮಿತಿ ॥ ವಧ್ರ್ಯಶ್ವಗೋತ್ರಾಣಾಂ ಪಶಾವಿದಮಾಪ್ರೀಸೂಕ್ತಂ। ಸೂತ್ರಿತಂ ಚ। ಸಮಿಧ್ಧೋ ಅದ್ಯೇತಿ ಸರ್ವೇಷಾಂ ಯಥರ್ಷಿ ವಾ। ಆ. ೩-೨ । ಇತಿ ॥

ಅನುವಾದವು—**ಇಮಾಂ ಮೇ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ವಧ್ರ್ಯಶ್ವಪುತ್ರನಾದ ಸುಮಿತ್ರನೆಂಬುವನು ಋಷಿಯು; ತ್ರಿಷ್ಟುಪ್ ಛಂದಸ್ಸು; ಈ ಸೂತ್ತಕ್ಕೆ (ಇಮ ಆಪ್ರೀಸೂಕ್ತವಾದ್ದರಿಂದ) ತನೂನಪಾತ್ ಎಂಬ ದೇವತೆಯನ್ನು ಬಿಟ್ಟು ಅದಕ್ಕೆ ಬದಲಾಗಿ ನರಾಶಂಸದೇವತೆಸಹಿತವಾಗಿ ಸಮಿದಾದಿ ಆಪ್ರೀಸೂಕ್ತದ ಹನ್ನೊಂದುಮಂದಿ ದೇವತೆಗಳೇ ಪ್ರತಿಋಕ್ಕಿಗೂ

ಕ್ರಮವಾಗಿ ದೇವತೆಗಳು; ಅನುಕ್ರಮಣಿಕೆಯಲ್ಲಿ **ಇಮಾಂ ಮ ಏಕಾದಶಾಪ್ರಂ** ಎಂದು ಹೇಳಿರುವುದು. ವಧ್ರ್ಯಶ್ವ ಋಷಿ ಗೋತ್ರದವರಿಗೆ ಪಶುಹೋಮದಲ್ಲಿ ಈ ಆಪ್ರೀಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಸಮಿದ್ಧೋ ಅದ್ಯೇತಿ ಸರ್ವೇಷಾಂ ಯೇಥರ್ಷಿ ವಾ** ಎಂಬ ಸೂತ್ರದಿಂದ (ಅ. ೩-೨) ವಿವೃತವಾಗಿರುವುದು.

ಸೂಕ್ತ—೭೦

ಮಂಡಲ—೧೦ ॥ ಅನುವಾಕ—೬ ॥ ಸೂಕ್ತ—೭೦ ॥
ಅಷ್ಟಕ—೮ ॥ ಅಧ್ಯಾಯ—೨ ॥ ವರ್ಗ—೨೧, ೨೨ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥

ಋಷಿಃ—ಸಾಮಿತ್ರೋ ವಾಧ್ರ್ಯಶ್ವಃ ॥

ದೇವತಾ—ಆಪ್ರಂ ॥ ೧. ಇಧ್ಮಃಸಮಿದ್ಧೋಽಗ್ನಿರ್ವಾ । ೨. ನರಾಶಂಸಃ । ೩. ಇಳಃ । ೪. ಬರ್ಹಿಃ । ೫. ದೇವೀರ್ದ್ವಾರಃ । ೬. ಉಷಾಸಾನಕ್ತಾ । ೭. ದೈವ್ಯಾ ಹೋತಾರಾ ಪ್ರಚೇತಸಾ । ೮. ತಿಸ್ರೋ ದೇವ್ಯಃ ಸರಸ್ವತೀಳಾಭಾರತ್ಯಃ । ೯. ತ್ವಷ್ಟಾ । ೧೦. ವನಸ್ಪತಿಃ । ೧೧. ಸ್ವಾಹಾಕೃತಯಃ ॥

ಛಂದಃ— ತ್ರಿಷ್ಟುಪ್ ॥

ಸಂಹಿತಾಪಾಠಃ

ಇ॒ಮಾಂ ಮೇ॑ ಅಗ್ನೇ ಸ॒ಮಿಧ॑ಂ ಜುಷಸ್ವೇಳಸ್ಪ॒ದೇ ಪ್ರ॑ತಿ ಹ॒ರ್ಯಾ ಘೃ॒ತಾಚೀ॑ಂ।
ವ॒ರ್ಷ್ಮ॒ನ್ಪೃ॑ಥಿ॒ವ್ಯಾಃ ಸು॒ದಿನ॑ತ್ವೇ ಅ॒ಹ್ನಾಮೂ॒ರ್ಧ್ವೋ ಭ॑ವ ಸುಕೃ॒ತೋ ದೇ॑ವಯ॒ಜ್ಯಾ ॥ ೧ ॥

ಪದಪಾಠಃ

ಇ॒ಮಾಂ । ಮೇ॒ । ಅ॒ಗ್ನೇ॒ । ಸ॒ಂऽಇಧ॑ಂ । ಜು॒ಷ॒ಸ್ವ॒ । ಇ॒ಳಃ । ಪ॒ದೇ । ಪ್ರ॒ತಿ । ಹ॒ರ್ಯ॒ । ಘೃ॒ತಾಚೀ॑ಂ ।
ವ॒ರ್ಷ್ಮ॑ನ್ । ಪೃ॒ಥಿ॒ವ್ಯಾಃ । ಸು॒ದಿನ॒ऽತ್ವೇ॒ । ಅ॒ಹ್ನಾಂ । ಊ॒ರ್ಧ್ವಃ । ಭ॒ವ॒ । ಸು॒ಕೃ॒ತೋ॒ ಇತಿ ಸು॒ऽಕೃ॒ತೋ॒।
ದೇ॒ವ॒ಽಯ॒ಜ್ಯಾ ॥ ೧ ॥

ಸಾಯಣಭಾಷ್ಯಂ

ಹೇ ಅಗ್ನೇ ಇಳಸ್ಪದ ಇಳಾಯಾಸ್ಪದೇ। ಏತದ್ವಾ ಇಳಾಯಾಸ್ಪದಂ ಯದುತ್ತರವೇದೀ ನಾಭಿಃ। ಇತಿ ಬ್ರಾಹ್ಮಣಂ । ಉತ್ತರವೇದ್ಯಾಮಿಮಾಂ ಮೇ ಮದೀಯಾಂ ಸಮಿಧಂ ಜುಷಸ್ವ । ಸೇವಸ್ವ । ತಥಾ ಘೃತಾಚೀಂ ಘೃತವಂಚಂತೀಂ ಸ್ರುಚಂ ಪ್ರತಿ ಹರ್ಯ । ಪ್ರತಿಕಾಮಯಸ್ವ । ಕಿಂಚ ಹೇ ಸುಕೃತೋ ಸುಪ್ರಜ್ಞ ಪೃಥಿವ್ಯಾ ವರ್ಷ್ಮನ್ವರ್ಷ್ಮಣಿ ಸನುಚ್ಛ್ರಿತೇ ಪೂರ್ವೋಕ್ತೇ ದೇಶೇಽಹ್ನಾಂ ಸುದಿನತ್ವೇ ತನ್ನಿಮಿತ್ತಂ ದೇವಯಜ್ಯಾ ದೇವಯಾಗೇನ ಹೇತುನೋರ್ಧ್ವೋ ಜ್ವಾಲಾಭಿರುನ್ನತೋ ಭವ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಇಳಸ್ಪದೇ**—ಉತ್ತರವೇದಿಯಲ್ಲಿ ಸ್ಥಾಪಿತನಾಗಿ । **ಮೇ**—ನನ್ನ । **ಇಮಾಂ ಸಮಿಧಂ**—ಈ ಸಮಿತ್ತುಗಳನ್ನು । **ಜುಷಸ್ವ**—ಸೇವಿಸು । **ಘೃತಾಚೀಂ**—ಘೃತಪೂರ್ಣವಾದ ಈ ಸ್ರುಕ್ಸ್ರುವಾತ್ರೆಯನ್ನು । **ಪ್ರತಿಹರ್ಯ**—ಅಪೇಕ್ಷಿಸು । **ಸುಕ್ರತೋ**—ಉತ್ತಮವಾದ ಪ್ರಜ್ಞೆಯುಳ್ಳ ಎಲೈ ಅಗ್ನಿಯೇ । **ಪೃಥಿವ್ಯಾಃ**—ಪೃಥ್ವಿಯ । **ವಸ್ಯಾನ್**-ಎತ್ತರವಾದ ಉತ್ತರವೇದಿಯಲ್ಲಿ । **ಅಹ್ನಾಂ**—ಅಹಸ್ಸುಗಳ । **ಸುದಿನತ್ವೇ**-ಕಲ್ಯಾಣಕ್ಕಾಗಿ । **ದೇವಯಜ್ಯಾ**—ದೇವಪೂಜಾದಿಗಳ ಮೂಲಕ । **ಊಧ್ವಃ ಭವ**—ಜ್ವಾಲಾರೂಪದಲ್ಲಿ ಮೇಲೆದ್ದು ಪ್ರಕಾಶಿಸು.

ಭಾವಾರ್ಥ

ಎಲೈ ಅಗ್ನಿಯೇ, ಉತ್ತರವೇದಿಯಲ್ಲಿ ಸ್ಥಾಪಿತನಾಗಿ ನನ್ನ ಈ ಸಮಿತ್ತುಗಳನ್ನು ಸೇವಿಸು. ಘೃತಪೂರ್ಣವಾದ ಈ ಸ್ರುಕ್ಸ್ರುವಾತ್ರೆಗೆ ಅಪೇಕ್ಷೆಪಡು. ಉತ್ತಮವಾದ ಪ್ರಜ್ಞೆಯುಳ್ಳ ಎಲೈ ಅಗ್ನಿಯೇ, ಪೃಥ್ವಿಯ ಎತ್ತರವಾದ ಉತ್ತರವೇದಿಯಲ್ಲಿ ಸಕಲ ಶ್ರೇಯಸ್ಸಿಗಾಗಿ ದೇವಪೂಜಾದಿಗಳ ಮೂಲಕ ಮೇಲೆದ್ದು ಜ್ವಾಲೆಯೊಡನೆ ಪ್ರಕಾಶಿಸು.

English Translation

Graciously acept, Agni, this my fuel (placed) on the place of libation (the altar); delight in the butter-laden (spoon); most wise, rise up upon the lofty place of the earth for the propitiousness of the days through the worship of the gods.

ವಿಶೇಷವಿಷಯಗಳು

ಸಮಿದ್ಧಃ—ಸಮ್ಯಗ್ದೀಪಿತಃ ಏತನ್ನಾಮಕಃ ತ್ವಂ । ಸಮಿದ್ಧಂ ಎಂಬ ಹೆಸರಿನಿಂದ ಪ್ರಖ್ಯಾತನಾದ ಎಂದು ಸಾಯಣರು ವಿವರಿಸಿದ್ದಾರೆ. ಆಪ್ರೀಸೂಕ್ತದಲ್ಲಿ ಪ್ರಥಮಸ್ಥಾನವನ್ನು ಹೊಂದಿರುವ ಸಮಿದಾಧ್ಯಗ್ನಿಯನ್ನು ಉದ್ದೇಶಿಸಿದೆ.

ಇಧ್ಮೋ ಯಃ ಸರ್ವಮೇವಾಗ್ನಿರಯಂ ಹೀಧ್ಮಃ ಸಮಿಧ್ಯತೇ ।
ಧ್ಮಾತೇವೈ ತತ್ಕೃತಂ ರೂಪಂ ಧ್ಮಾತೋ ಹೀಧ್ಮಃ ಸಮಿಧ್ಯತೇ ॥

(ಬೃ. ದೇ. ೨-೧೪೮)

ಕಾಷ್ಠರೂಪವಾದ ಇಧ್ಮಕ್ಕೂ ಸರ್ವವ್ಯಾಪಿಯಾದ ಅಗ್ನಿಗೂ ಇಲ್ಲಿ ತಾದಾತ್ಮ್ಯವನ್ನು ಹೇಳಿದೆ. **ಧ್ಮಾ** ಎಂಬ ಧಾತುವಿನಿಂದ ಇಧ್ಮಶಬ್ದವು ನಿಷ್ಪನ್ನವಾಗಿದೆ. ಊದಿದನಂತರ ಪ್ರಜ್ವಲಿತವಾಗುವುದರಿಂದ ಈ ಹೆಸರು ಎಂದು ಬೃಹದ್ದೇವತಾಕಾರರು ಇಧ್ಮ, ಸಮಿದ್ಧ ಎಂಬ ಪದಗಳ ನಿರ್ವಚನವನ್ನು ಹೇಳಿದ್ದಾರೆ. ಈ ನಿರ್ವಚನವು ನಿರುಕ್ತಕಾರರ ವಿವರಣೆಯನ್ನನುಸರಿಸಿದೆ. ನಿರುಕ್ತದಲ್ಲೂ,

ತಾಸಾಮಿಧ್ಮಃ ಪ್ರಥಮಾಗಾಮಿಾ ಭವತಿ । ಇಧ್ಮಃ ಸಮಿಂಧನಾತ್ ।

(ನಿ. ೮.೫)

ಎಂದು ಆಪ್ರೀಸೂಕ್ತದ ಪ್ರಥಮದೇವತೆಯ ವಿಷಯವಾಗಿ ಹೇಳಿದ್ದಾರೆ. **ತೈತ್ತಿರೀಯಬ್ರಾಹ್ಮಣದಲ್ಲಿಯೂ ಪ್ರೈಷಸೂಕ್ತದ ಆರಂಭದಲ್ಲಿ**—

ಹೋತಾ ಯಕ್ಷದಗ್ನಿಗ್ಂ ಸಮಿಧಾ ಸಮಿದ್ಧಂ ಸುಸಮಿಧಾ ನಾಧಾ ಪೃಥಿವ್ಯಾಃ ಸಂಗಥೇ ವಾಮುಷ್ಯ ।

(ತೈ. ಬ್ರಾ. ೩-೬-೨.೧)

ಎಂದು ಸಮಿಧಾಖ್ಯವಾದ ಮತ್ತು ಪ್ರಥಮಾಪ್ರಯಾಜಾದೇವತೆಯಿಂದೊಡಗೂಡಿದ ಅಗ್ನಿಯನ್ನುದ್ದೇಶಿಸಿ ಯಾಗಮಾಡಿದರೆಂದು ಸಂಬೋಧಿಸಿದೆ.

ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕಾಗಿದೆ. **ಇಧ್ಮ**ವೆಂಬ ಅಂಕಿತನಾಮವು **ಆಪ್ರೀ**ಸೂಕ್ತಗಳಲ್ಲಿ ಬರುವುದಿಲ್ಲ. ಪ್ರೈಷಸೂಕ್ತದಲ್ಲೂ ಸಹ **ಈ** ನಾನುವಿಲ್ಲ. ಸರ್ವಾನುಕ್ರಮಣಿಕೆಯಲ್ಲಿ ಮಾತ್ರ—

ಸುಸಮಿದ್ಧ ಇತೀಧ್ಮಃ ಸಮಿದ್ಧೋ ವಾ ಅಗ್ನಿ.....ಇತಿ ಪ್ರತ್ಯೃಚಂ ದೇವತಾಃ ।

ಎಂದು ನಿರ್ದೇಶಿಸಿದೆ. ಐತರೇಯಬ್ರಾಹ್ಮಣದಲ್ಲಿಯೂ **ಈ** ಪದದ ಪ್ರಯೋಗವು **ಈ** ಸನ್ನಿವೇಶದಲ್ಲಿಲ್ಲದಿರುವಾಗ **ಶೌನಕರೂ, ಕಾತ್ಯಾಯನರೂ** ಇದನ್ನು ಉಪಯೋಗಿಸುವುದರಲ್ಲಿ ನಿರುಕ್ತಕಾರನನ್ನು ಅನುಸರಿಸಿರುವುದು ಗೊತ್ತಾಗುತ್ತದೆ. ಅಲ್ಲದೆ **ಸಮಿದ್ಧ** ಅಥವಾ **ಸುಸಮಿದ್ಧ**ವೆಂಬ ವಿಶೇಷಣವು ಏಳು ಸೂಕ್ತಗಳಲ್ಲೂ, **ಸಮಿದ್** ಎಂಬ ವಿಶೇಷಣವು (ಋ. ಸಂ. ೩-೪-೧; ೭-೨-೧; ೧೦-೭೦-೧) ಎಂಬ ಉಳಿದ ಮೂರು ಸೂಕ್ತಗಳಲ್ಲೂ ಉಪಯೋಗಿಸಲ್ಪಟ್ಟಿದೆ.

ಸಮಿದ್ಧಾಖ್ಯನಾದ **ಈ** ಅಗ್ನಿಯು ದೇವತೆಗಳನ್ನು ಆಹ್ವಾನಿಸಬೇಕಾದುದು ಮೊದಲನೆಯ **ಕರ್ತವ್ಯ** ೧-೧೩-೧ ೧-೧೪೨-೧, ೩-೪-೧, ೧೦-೧೧೦-೧ ಎಂಬ ಸೂಕ್ತಗಳ ಪ್ರಾರಂಭದ ಋಕ್ಕುಗಳಲ್ಲಿ **ಸುಸಮಿದ್ಧೋನ ಆ ವಹ ದೇವಾಁ ಅಗ್ನೇ ಹವಿಷ್ಮತೇ** (ಋ. ಸಂ. ೧-೧೩-೧) ಎಂಬ ಋಕ್ಕಿನಲ್ಲಿರುವ ಪ್ರಾರ್ಥನೆಯಂತೆ ಅಗ್ನಿಯ ಕರ್ತವ್ಯವನ್ನು ಸೂಚಿಸಿದೆ. ಇಷ್ಟೇ ಅಲ್ಲದೆ ಪವಿರಾದಿಗಳನ್ನು ವಹಿಸಬೇಕೆಂದೂ ಪ್ರಾರ್ಥಿಸಿದೆ.

ಈ ದೇವತೆಯು ಅಗ್ನಿಯೇ ಅಲ್ಲವೇ ಎಂಬ ವಿಷಯದಲ್ಲಿ ನೊವಲಿನಿಂದಲೂ ಅಭಿಪ್ರಾಯಭೇದವನ್ನು ನಿರುಕ್ತಕಾರರೂ ಉದಹರಿಸಿ ಅನಂತರ ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ.

ಯಜ್ಞೋಧ್ಮ ಇತಿ ಕಾತ್ಥಕ್ಯಃ (ನಿ. ೮-೫), **ಅಗ್ನಿರಿತಿ ಶಾಕಪೂಣಿಃ** (೮-೫) ಎಂದು ಆಯಾ ಋಷಿಗಳ ಮತವನ್ನು ತಿಳಿಸಿ ಅನಂತರ **ಆಗ್ನೇಯ ಇತಿ ತು ಸ್ಥಿತಿಃ** (ನಿ. ೮-೨೨) ಎಂದು ತಮ್ಮ ಅಭಿಪ್ರಾಯವನ್ನೂ ಹೇಳಿದ್ದಾರೆ. **ಐತರೇಯಬ್ರಾಹ್ಮಣದಲ್ಲಿ**—

ಸಮಿಧೋ ಯಜತಿ । ಪ್ರಾಣಾ ವೈ ಸಮಿಧಃ । ಪ್ರಾಣಾ ಹೀದಂ ಸರ್ವಂ ಸಮಿಂಧತೇ ಯದಿದಂ ಕಿಂಚ ಪ್ರಾಣಾನೇವ ತತ್ಪ್ರೀಣಾತಿ ಪ್ರಾಣಾನ್ಯಜಮಾನೇ ದಧಾತಿ ॥

(ಐ. ಬ್ರಾ. ೩-೪)

ಎಂಬ ವಾಕ್ಯಗಳಿಂದ **ಸಮಿತ್** ಮತ್ತು **ಪ್ರಾಣ** ಇವೆರಡಕ್ಕೂ ತಾದಾತ್ಮ್ಯವನ್ನು ಹೇಳದೆಯಾದರೂ ಕೂಡ ಉಳಿದ ಅನೇಕ ಆಧಾರಗಳಿಂದ **ಈ** ದೇವತೆಯು ಅಗ್ನಿಯೇ ಆಗಿರಬೇಕೆಂದು ಹೇಳಬಹುದು.

ಸಂಹಿತಾಪಾಠಃ

ಆ ದೇವಾನಾಮಗ್ರಯಾವೇಹ ಯಾತು ನರಾಶಂಸೋ ವಿಶ್ವರೂಪೇಭಿರಶ್ವೈಃ ।

ಋತಸ್ಯ ಪಥಾ ನಮಸಾ ವಿಯೇಧೋ ದೇವೇಭ್ಯೋ ದೇವತಮಃ ಸುಷೂದತ್ ॥

ಪದಪಾಠಃ

ಆ । ದೇವಾನಾಂ । ಅಗ್ರ್ಯಯಾವಾ । ಇಹ । ಯಾತು । ನರಾಶಂಸಃ । ವಿಶ್ವರೂಪೇಭಿಃ । ಅಶ್ವೈಃ ।
ಋತಸ್ಯ । ಪಥಾ । ನಮಸಾ । ಮಿಯೇಧಃ । ದೇವೇಭ್ಯಃ । ದೇವತಮಃ । ಸುಷೂದತ್ ॥ ೨ ॥

ಸಾಯಣಭಾಷ್ಯಂ

ದೇವಾನಾಮಗ್ರ್ಯಯಾವಾಗ್ರೇ ಗಂತಾ ನರಾಶಂಸಃ ॥ ಉಭೇ ವನಸ್ಪತ್ಯಾದಿಷು ಯುಗಪದಿತಿ ಪೂರ್ವೋತ್ತರಪದಯೋರ್ಯುಗಪತ್ಪ್ರಕೃತಿಸ್ವರತ್ವಂ ॥ ನರೈಃ ಶಂಸನೀಯ ಏತನ್ನಾಮಕೋಽಗ್ನಿರ್ವಿಶ್ವರೂಪೇಭಿರ್ನಾನಾರೂಪೈರಶ್ವೈ ರೋಹಿದಾಖ್ಯೈಃ ಸಹೇಹಾಸ್ಮಿನ್ಯಜ್ಞ ಆ ಯಾತು । ಅಗತ್ಯ ಚ ಮಿಯೇಧೋ ಮೇಧ್ಯೋ ಯಜ್ಞಹಿತಃ ಸ್ತುತಿಯೋಗ್ಯೋ ವಾ ದೇವತಮೋ ದೇವಾನಾಂ ಮುಖ್ಯಃ ಸೋಽಗ್ನಿರ್ಹವಿರ್ನಯನಯೋಗ್ಯೇನರ್ತಸ್ಯ ಯಜ್ಞಸ್ಯ ಪಥಾ ಮಾರ್ಗೇಣ ನಮಸಾ ಸ್ತೋತ್ರೇಣ ಸಹ ದೇವೇಭ್ಯ ಇಂದ್ರಾದಿಭ್ಯಃ ಸುಷೂದತ್ । ಹವಿಃ ಪ್ರೇರಯತು ॥

ಪ್ರತಿಪದಾರ್ಥ

ದೇವಾನಾಂ—ದೇವತೆಗಳಿಗೆಲ್ಲ । **ಅಗ್ರ್ಯಯಾವಾ**—ಮುಂದಾಳಾಗಿ ಹೋಗತಕ್ಕ । **ನರಾಶಂಸಃ** । ನರಾಶಂಸಸಂಜ್ಞಕನಾದ ಅಗ್ನಿಯು । **ವಿಶ್ವರೂಪೇಭಿಃ**—ಅನೇಕವಿಧವಾದ ರೂಪವುಳ್ಳ । **ಅಶ್ವೈಃ**—ಅಶ್ವಗಳೊಡಗೂಡಿ । **ಇಹ**—ಈ ಯಜ್ಞಕ್ಕೆ । **ಆ ಯಾತು**—ಬರಲಿ । **ಮಿಯೇಧಃ**—ಪೂಜ್ಯನೂ । **ದೇವತಮಃ**—ದೇವತೆಗಳಿಗೆಲ್ಲ ಮುಖ್ಯನೂ ಆದ ಅಗ್ನಿಯು । **ಋತಸ್ಯ**—ಯಜ್ಞದ । **ಪಥಾ**—ಮಾರ್ಗದಿಂದ । **ನಮಸಾ**—ಸ್ತುತಿಯುಕ್ತನಾಗಿ । **ದೇವೇಭ್ಯಃ**—ಇಂದ್ರಾದಿ ದೇವತೆಗಳನ್ನುದ್ದೇಶಿಸಿ । **ಸುಷೂದತ್**—ಹವಿಸ್ಸನ್ನು ಪ್ರೇರಿಸಲಿ.

ಭಾವಾರ್ಥ

ದೇವತೆಗಳಿಗೆಲ್ಲ ಮುಂದಾಳಾಗಿ ಹೋಗತಕ್ಕ ನರಾಶಂಸಸಂಜ್ಞಕನಾದ ಅಗ್ನಿಯು ಅನೇಕವಿಧವಾದ ರೂಪಗಳುಳ್ಳ ಅಶ್ವಗಳೊಡಗೂಡಿ ಈ ಯಜ್ಞಕ್ಕೆ ಬರಲಿ. ಪೂಜಾಯೋಗ್ಯನೂ, ದೇವತೆಗಳಿಗೆಲ್ಲ ಮುಖ್ಯನೂ ಆದ ಅಗ್ನಿಯು ಯಜ್ಞಮಾರ್ಗದಲ್ಲಿ ಬಂದು ಸ್ತುತಿಯುಕ್ತನಾಗಿ ಇಂದ್ರಾದಿದೇವತೆಗಳನ್ನುದ್ದೇಶಿಸಿ ಹವಿಸ್ಸನ್ನು ಪ್ರೇರಿಸಲಿ.

English Translation

May Narashamsa, the preceder of the gods, come here with his horses of various forms; deserving of adoration, chief of the gods, may he effuse (oblations) to the gods by the path of the sacrifice with praise.

ವಿಶೇಷವಿಷಯಗಳು

ನರಾಶಂಸಃ—**ನರೈಃ ಶಂಸನೀಯಃ** (**ಅಗ್ನಿಃ**) ನರರಿಂದ ಸ್ತುತಿಸಲ್ಪಡುವ ಅಗ್ನಿಯೆಂದು ಇದು ಅಗ್ನಿಯ ಅನ್ವರ್ಥನಾಮವಾಗಿದೆ ಅಥವಾ **ನರಾಶಂಸೋಽಗ್ನಿರ್ಯಜ್ಞೋ ವಾ**। ನರಾಶಂಸನೆಂದರೆ ಅಗ್ನಿಯೆಂದಾಗಲಿ ಅಥವಾ ಯಜ್ಞವೆಂದಾಗಲಿ ಅರ್ಥವಾಗುವುದೆಂದು ಇನ್ನೊಂದು ಮತ. ಈ ಎರಡು ಅಭಿಪ್ರಾಯಗಳನ್ನೂ ನಿರುಕ್ತವಾಕ್ಯವು ಸಮರ್ಥಿಸುತ್ತದೆ.

ನರಾಶಂಸೋ ಯಜ್ಞ ಇತಿ ಕಾತ್ಥಕ್ಯಃ । ನರಾ ಅಸ್ಮಿನ್ನಾಸೀನಾಃ ಶಂಸಂತಿ । ಅಗ್ನಿರಿತಿ ಶಾಕಪೂಣಿಃ । ನರೈಃ ಪ್ರಶಸ್ಯೋ ಭವತಿ ॥

(ನಿ. ೪-೭)

ಎಂದರೆ ನರರು (ಮನುಷ್ಯರು) ಯಜ್ಞವೇದಿಯಲ್ಲಿ ಕುಳಿತುಕೊಂಡು (ದೇವತೆಗಳನ್ನು) ಪ್ರಶಂಸೆಮಾಡುವುದರಿಂದ (ಸ್ತುತಿಸುವುದರಿಂದ) ಯಜ್ಞಕ್ಕೆ ನರಾಶಂಸನೆಂಬ ಹೆಸರೆಂದು ಕಾತ್ಥಕ್ಯರೂ, ನರರಿಂದ ಪ್ರಶಸ್ಯನಾದುದರಿಂದ ಅಗ್ನಿಯೆಂಬ ಹೆಸರು ಅನ್ವಯಿಸುವುದೆಂದು ಶಾಕಪೂಣಿಯೂ ಹೇಳಿರುವುದಾಗಿ ನಿರುಕ್ತಕಾರರು ಈ ಎರಡು ಅಭಿಪ್ರಾಯಗಳನ್ನೂ ಸೂಚಿಸಿ ಅನಂತರ,

ನರಾಶಂಸಸ್ಯ ಮಹಿಮಾನಮೇಷಾಮುಪ ಸ್ತೋಷಾಮ ಯಜತಸ್ಯ ಯಜ್ಞಿಯಃ ।
ಯೇ ಸುಕ್ರತವಃ ಶುಚಯೋ ಧಿಯಂಧಾಃ ಸ್ವದಂತಿ ದೇವಾ ಉಭಯಾನಿ ಹವ್ಯಾ ॥

(ಋ. ಸಂ. ೭-೨-೨)

ಎಂಬ ಋಕ್ಕನ್ನು ಉದಹರಿಸಿದ್ದಾರೆ. ಈ ಋಕ್ಕಿನಲ್ಲಿ ನರಾಶಂಸಶಬ್ದಕ್ಕೆ ಅಗ್ನಿಯೆಂಬ ಅರ್ಥವೇ ಸಮಂಜಸವಾಗಿದೆ. ನಿಘಂಟುವಿನಲ್ಲಿ ಪಠಿತವಾಗಿರುವ ದೇವತೆಗಳ ಮಧ್ಯದಲ್ಲಿ ನರಾಶಂಸದೇವತೆಯು ಅಗ್ನಿಯ ರೂಪಾಂತರಗಳಲ್ಲೊಂದು ಎಂದು ಉಕ್ತವಾಗಿದೆ. ಇದನ್ನೇ ಬೃಹದ್ದೇವತಾಕಾರರು—

ನರಾಶಂಸಸ್ತ್ರಿತಶ್ಚೈನಮೇನಗೋವಾಶ್ರಿತಸ್ತ್ವಿಳಃ ।
ಬರ್ಹಿರ್ದ್ವಾರಶ್ಚ ದೇವ್ಯೋಽಗ್ನಿಮೇನಮೇವ ತು ಸಂಶ್ರಿತಾಃ ॥

(ಬೃ. ದೇ. ೧-೧೦೭)

ಎಂಬ ಶ್ಲೋಕದಲ್ಲಿ ನರಾಶಂಸ, ತ್ರಿತ, ಇಳ, ಬರ್ಹಿರ್ದ್ವಾರ ಇತ್ಯಾದಿ ದೇವತೆಗಳು ಈ ಅಗ್ನಿಯನ್ನೇ ಆಶ್ರಯಿಸಿ ಅವನಲ್ಲಿ ಅಂತರ್ಗತರಾಗಿರುವರೆಂದು ಹೇಳಿದಾರೆ ಮತ್ತು

ಪೃಥಕ್ತ್ವೇನ ಸಮಸ್ತೈಸ್ತು ಯಜ್ಞೋ ಯಚ್ಛಸ್ಯತೇ ನೃಭಿಃ ।
ಸ್ತುವಂತ್ಯಾಪ್ರೀಷು ತೇನೇಮಂ ನರಾಶಂಸಂ ತು ಕಾರವಃ ॥

(ಬೃ. ದೇ. ೨-೨೮)

ಯಜ್ಞದಲ್ಲಿ ಸೇರಿರತಕ್ಕ ಸಕಲ ನರರಿಂದಲೂ ಸಹ ಪ್ರತ್ಯೇಕವಾಗಿ ಪ್ರಶಂಸಿಸಲ್ಪಡುವುದರಿಂದ ಕೃತಿಕಾರರು ಇವನನ್ನು (ಅಗ್ನಿಯನ್ನು) ನರಾಶಂಸನೆಂಬ ಹೆಸರಿನಿಂದ ಆಪ್ರೀಸೂಕ್ತಗಳಲ್ಲಿ ಸ್ತುತಿಸಿದ್ದಾರೆ ಎಂದು ಹೇಳಿ. ನಿರುಕ್ತಕಾರರು ಹೇಳುವ ಅಭಿಪ್ರಾಯವನ್ನು ಇವರೂ ಅನುವೋದಿಸಿದ್ದಾರೆ.

ನರಾಶಂಸಮಿಹೈಕೇ ತು ಅಗ್ನಿಮಾಹುರಥೇತರೇ ।
ನರಾಃ ಶಂಸಂತಿ ಸರ್ವೇಽಸ್ಮಿನ್ನಾಸೀನಾ ಇತಿ ವಾಧ್ವರೇ ॥
ಏತಮೇವಾಹುರನ್ಯೇಽಗ್ನಿಂ ನರಾಶಂಸೋಽಧ್ವರೇ ಹ್ಯಯಂ ।
ನರೈಃ ಪ್ರಶಸ್ಯ ಆಸೀನೈರಾಹುಶ್ಚೈವರ್ತ್ವಿಜೋ ನರಃ ॥

(ಬೃ. ದೇ. ೩-೨, ೩)

ಕೆಲವರು ನರಾಶಂಸನನ್ನು ಅಗ್ನಿಯೆಂದೇ ಹೇಳುತ್ತಾರೆ. ಯಜ್ಞದಲ್ಲಿ ನರರು ಸೇರಿ ಪ್ರಶಂಸಿಸುವುದರಿಂದ ಯಜ್ಞವೆಂದೇ ಮತ್ತೆ ಕೆಲವರು ಹೇಳುತ್ತಾರೆ. ಯಜ್ಞದಲ್ಲಿ ಸೇರಿರತಕ್ಕ ನರರಿಂದ ಪ್ರಶಂಸಿಸಲ್ಪಡುವುದರಿಂದ ನರಾಶಂಸನೆಂದರೆ

ಅಗ್ನಿಯೇ ಎಂದು ಇನ್ನೂ ಕೆಲವರ ಮತ. ಮೂರನೆಯದು, ಮೊದಲನೆಯ ಮತ್ತು ಎರಡನೆಯ ಮತಗಳ ಸಮನ್ವಯವಾಗಿದೆ. ಈ ಎರಡು ಅರ್ಥಗಳ ಜತೆಗೆ ಸಾಯಣರು ಮೂರನೆಯ ಅರ್ಥವನ್ನೂ ಹೇಳಿರುತ್ತಾರೆ. ಋ. ಸಂ. ೧.೪೯.೯ನೇ ಋಕ್ಕಿನ ಭಾಷ್ಯದಲ್ಲಿ—

ನರಾಶಂಸಮೀಳತೇನ್ನಾಮಕಂ ದೇವವಿಶೇಷಂ। ಯದ್ವಾ ಅವಯೇವಾರ್ಥವ್ಯುತ್ಪತ್ತ್ಯಾ ಸದಸಸ್ಪತಿ-ದೇವತಾಪರೋ೭ಯಂ ಶಬ್ದಃ। ಅತ್ರ ಅಗ್ನಿವತ್ ಸದಸಸ್ಪತೇರಪಿ ನರೈಃ ಶಸ್ಯಮಾನತ್ವಾತ್ ನರಾಶಂಸಸ್ತ್ವಂ। ಏತಮೇವಾಭಿಪ್ರಾಯಂ ಹೃದಿ ನಿಧಾಯ ಬ್ರಾಹ್ಮಣಮೇವಮಾಮ್ನಾಯತೇ ಪ್ರಜಾ ವೈ ನರೋ ವಾಕ್ ಶಂಸಃ॥

(ಐ. ಬ್ರಾ. ೬-೨೭)

ಎಂಬ ವಿವರಣೆ ಇದೆ. ನರಾಶಂಸನೆಂದರೆ ಈ ಹೆಸರಿನ ದೇವತಾವಿಶೇಷವೆಂದಾಗಲೀ ಅಥವಾ ಸದಸಸ್ಪತಿಯೆಂದಾಗಲೀ ಅರ್ಥವಾಗಬಹುದು. ಸದಸಸ್ಪತಿಯೂ ನರರಿಂದ ಸ್ತುತಿಸಲ್ಪಡುವುದರಿಂದಲೂ, ಈ ಭಾವವು ಐತರೇಯಬ್ರಾಹ್ಮಣದಿಂದ ಉದಾಹೃತವಾಗಿರುವ ವಾಕ್ಯವು ಸೂಚಿಸುವುದರಿಂದಲೂ ಸಹ ಈ ಅರ್ಥವಾಗಬಹುದು ಎಂದು ಮೂರನೆಯ ಅರ್ಥವನ್ನು ತೋರಿಸಿದ್ದಾರೆ. ಆದರೆ ಈ ಶಬ್ದವು ಋಕ್ಸಂಹಿತೆಯಲ್ಲೆಲ್ಲಾ ಅಗ್ನಿಪರವಾಗಿಯೇ ಇದೆಯೆಂದು ಹೇಳಬಹುದು.

ನರಾಶಂಸಃ ಪ್ರತಿ ಧಾಮಾನ್ಯಂಜನ್ ತಿಸ್ರೋ ದಿವಃ ಪ್ರತಿ ಮಹ್ನಾ ಸ್ವರ್ಚಿಃ।
ಘೃತಪ್ರುಷಾ ಮನಸಾ ಹವ್ಯಮುಂದನ್ಮೂರ್ಧನ್ಯಜ್ಞಸ್ಯ ಸಮನಕ್ತು ದೇವಾನ್॥

(ಋ. ಸಂ. ೨-೩-೨)

ಇತ್ಯಾದಿ ಋಕ್ಕುಗಳಲ್ಲಿ ನರಾಶಂಸ ಶಬ್ದಕ್ಕೆ ಅಗ್ನಿಯೆಂದೇ ಅರ್ಥವಾಗುತ್ತದೆ.

ಸಂಹಿತಾಪಾಠಃ

ಶಶ್ವತ್ತಮಮೀಳತೇ ದೂತ್ಯಾಯ ಹವಿಷ್ಮಂತೋ ಮನುಷ್ಯಾಸೋ ಅಗ್ನಿಂ।
ವಹಿಷ್ಠೈರಶ್ವೈಃ ಸುವೃತಾ ರಥೇನಾ ದೇವಾನ್ವಕ್ಷಿ ನಿ ಷದೇಹ ಹೋತಾ॥ ೩॥

ಪದಪಾಠಃ

ಶಶ್ವತ್ತಮಂ। ಈಳತೇ। ದೂತ್ಯಾಯ। ಹವಿಷ್ಮಂತಃ। ಮನುಷ್ಯಾಸಃ। ಅಗ್ನಿಂ।
ವಹಿಷ್ಠೈಃ। ಅಶ್ವೈಃ। ಸುವೃತಾ। ರಥೇನ। ಆ। ದೇವಾನ್। ವಕ್ಷಿ। ನಿ। ಸದ। ಇಹ। ಹೋತಾ॥

ಸಾಯಣಭಾಷ್ಯಂ

ಶಶ್ವತ್ತಮಮತ್ಯಂತಂ ನಿತ್ಯಮಗ್ನಿಂ ಹವಿಷ್ಮಂತಃ ಸಂಭೃತಹವಿಷ್ಕಾ ಮನುಷ್ಯಾಸೋ ಮನುಷ್ಯಾ ಯಜಮಾನಾ ದೂತ್ಯಾಯ॥ ದೂತಸ್ಯ ಭಾಗಕರ್ಮಣೇ ಇತಿ ಯಶ್ಚ ತ್ಯಯಃ॥ ದೂತಕರ್ಮಣೇ ಹವಿರ್ವಹನಲಕ್ಷಣಾಯ ತನ್ನಿಮಿತ್ತಮೀಳತೇ। ಸ್ತುವಂತಿ। ಸ ತ್ವಮೇವಂ ಸ್ತುತೋ ವಹಿಷ್ಠೈರ್ವೋಢೃತಮೈರಶ್ವೈಃ ಸುವೃತಾ ಸುವರ್ತನೇನ ರಥೇನ ಚ ಸಹ ದೇವಾನಿಂದ್ರಾದೀನಾ ವಕ್ಷಿ। ಅಸ್ಮದೀಯಂ ಯಜ್ಞಂ ಪ್ರತ್ಯಾವಹ। ಪ್ರಾಪಯ। ತಸ್ತ್ವಂ ಹೋತಾ ಭವನ್ನಿಹಾಸ್ಮಿನ್ಯಜ್ಞೇ ನಿ ಸದ। ನಿಷೀದ॥

ಪ್ರತಿಪದಾರ್ಥ

ಶಶ್ವತ್ತಮಂ—ಅತ್ಯಂತ ನಿತ್ಯವಾದ ಸ್ಥಿತಿಯುಳ್ಳ । **ಅಗ್ನಿಂ**—ಅಗ್ನಿಯನ್ನು । **ಹವಿಷ್ಮಂತಃ**—ಹವಿರ್ಯುಕ್ತರಾದ । **ಮನುಷ್ಯಾಸಃ**—ಯಜಮಾನರು । **ದೂತ್ಯಾಯ**—ದೇವದೂತನ ಕರ್ಮವನ್ನು ನಿರ್ವಹಿಸಲು **ಈಳತೇ**—ಸ್ತುತಿಸುತ್ತಾರೆ । **ವಹಿಷ್ಠೈಃ**—ರಥವನ್ನು ವಹಿಸಲು ಯೋಗ್ಯವಾದ । **ಅಶ್ವೈಃ**—ಅಶ್ವಗಳಿಂದ ಕೂಡಿದುದೂ । **ಸುವೃತಾ**—ಉತ್ತಮವಾದ ಸಂಚಾರವುಳ್ಳದ್ದೂ ಆದ । **ರಥೇನ**—ರಥದಿಂದ । **ದೇವಾನ್**—ಇಂದ್ರಾದಿ ದೇವತೆಗಳನ್ನು । **ಆ ವಕ್ಷಿ**—ನಮ್ಮ ಯಜ್ಞಕ್ಕೆ ಕರೆದುಕೊಂಡು ಬಾ । **ಹೋತಾ**—ಹೋತೃರೂಪದಲ್ಲಿದ್ದು । **ಇಹ**—ಈ ಯಜ್ಞದಲ್ಲಿ । **ನಿಷದ**—ಕುಳಿತುಕೋ.

ಭಾವಾರ್ಥ

ನಿತ್ಯವಾದ ಸ್ಥಿತಿಯುಳ್ಳ ಅಗ್ನಿಯನ್ನು ಹವಿರ್ಯುಕ್ತರಾದ ಯಜಮಾನರು ದೇವದೂತನ ಕರ್ಮವನ್ನು ನಿರ್ವಹಿಸಲು ಸ್ತುತಿಸುತ್ತಾರೆ. ಎಲೈ ಅಗ್ನಿಯೇ, ರಥವನ್ನು ವಹಿಸಲು ಯೋಗ್ಯವಾದ ಅಶ್ವಗಳಿಂದ ಕೂಡಿದುದೂ, ಉತ್ತಮವಾದ ಸಂಚಾರವುಳ್ಳದ್ದೂ ಆದ ರಥದಿಂದ ಇಂದ್ರಾದಿದೇವತೆಗಳನ್ನು ನಮ್ಮ ಯಜ್ಞಕ್ಕೆ ಕರೆದುಕೊಂಡು ಬಾ. ಹೋತೃರೂಪದಲ್ಲಿದ್ದು ಈ ಯಜ್ಞದಲ್ಲಿ ಕುಳಿತುಕೋ.

English Translation

Men offering oblations adore the eternal Agni to (induce him to perform) the duty of messenger (to the gods); do you with your stalwart draught horses and your well-turning chariots bear (our offering) to the gods, and sit down here as the ministrant priest.

ವಿಶೇಷವಿಷಯಗಳು.

ಈಳತೇ—ಸರ್ವೈಃ ಸ್ತೂಯತೇ ಇಳನಾಮಕಃ ತ್ವಂ । ಸಕಲರಿಂದಲೂ ಸ್ತುತನಾದವನೂ, ಇಡಃ ಎಂಬ ಹೆಸರಿನಿಂದ ಪ್ರಸಿದ್ಧನಾದವನೂ ಆದ ಅಗ್ನಿಯೆಂದು ಅರ್ಥಮಾಡಿದೆ. **ಈಳ ಈಟ್ಟೇ ಸ್ತುತಿಕರ್ಮಣಃ; ಇಂಧ-ತೇರ್ವಾ** । ಸ್ತುತ್ಯರ್ಥಕವಾದ ಈಡ್ ಧಾತುವಿನಿಂದಾಗಲೀ, ಜ್ವಲನಾರ್ಥಕವಾದ **ಇಂಧ್** ಧಾತುವಿನಿಂದಾಗಲೀ ನಿಷ್ಪನ್ನವಾಗಬಹುದು (ನಿ. ೮-೮) ಎಂದು ಈ ಪದದ ನಿರ್ವಚನವನ್ನು ತೋರಿಸಿ ನಿರುಕ್ತಕಾರರು ಋ. ಸಂ ೧೦-೧೧೦-೩ ನೇ ಋಕ್ಕನ್ನು ಉದಹರಿಸಿ ಈ ಪದದ ಸರಿಯಾದ ಅರ್ಥವನ್ನು ವಿವರಿಸಿದ್ದಾರೆ.

ಪ್ರಥಮತಃ, **ಸಮಿಧ್** ಎಂಬ ಪದದಂತೆ ಈ ಪದಕ್ಕೂ ಕೂಡ ಪ್ರತ್ಯೇಕವಾದ ದೇವತಾರೂಪನಾದ ನಿರ್ದೇಶವಿಲ್ಲದೆ ಅಗ್ನಿಗೆ ವಿಶೇಷಣವಾಗಿ ಮಾತ್ರ ಉಪಯೋಗವಿದ್ದಿರುವಂತೆ ತೋರುತ್ತದೆ. ಯಾಗನಿರ್ವಹಣಕಾಲದಲ್ಲಿ **ಅಗ್ನಿಯು** ಸಹಾಯವೂ ನೆರವೂ ಸಂಪೂರ್ಣವಾಗಿ ಆಗಬೇಕಾಗಿದ್ದುದರಿಂದ ಅವನು ಸ್ವಭಾವವಾಗಿಯೇ ಸ್ತುತ್ಯನಾದನು. ಪ್ರಾರಂಭದಲ್ಲಿ **ಅಗ್ನಿಯು** (೧) **ಸಮಿದ್ಧ**ನಾಗಬೇಕು. ಅನಂತರ (೨) ತನೂನಪಾತ್ ಅಥವಾ **ನರಾಶಂಸ** ಎಂಬ ನಾಮಧೇಯದಿಂದ ಯಾಗದ ಹವಿಸ್ಸುಗಳನ್ನು ಮಧುಪೂರಿತಗಳಾಗುವಂತೆ ಮಾಡಬೇಕು. ಅನಂತರ ದೇವತೆಗಳನ್ನು ಅವನು ಯಾಗಕ್ಕೆ ಕರೆತರಬೇಕು. ಈ ಕಾರ್ಯಕ್ಕೆ ಅವನು **ಈಡ್ಯ** (ಸ್ತುತ್ಯ) ನಾಗಲೇಬೇಕು. ಆದುದರಿಂದ ಈ ಸನ್ನಿವೇಶದಲ್ಲಿ ಅವನು ಯಜಮಾನರಿಂದ (೩) **ಈಡ್ಯ**ನಾಗಿದ್ದಾನೆ (ಪ್ರಾರ್ಥಿಸಲ್ಪಡುತ್ತಾನೆ).

ಆಪ್ರೀಸೂಕ್ತಗಳಲ್ಲಿ **ಈಡ್** ಧಾತುನಿಷ್ಪನ್ನವಾದ **ಈ** ಪದವು ಎಂಟುಕಡೆಗಳಲ್ಲಿ **ಸ್ತುತನಾದ**ವನು ಅಥವಾ **ಸ್ತುತ್ಯ**ನಾದವನು ಎಂದು ವಿಶೇಷಣವಾಗಿಯೂ ಮತ್ತು ಒಂದುಕಡೆ ಅಗ್ನಿಯ ದೌತ್ಯವನ್ನು ತೋರಿಸತಕ್ಕ ವಿಶೇಷಣವಾಗಿಯೂ ಒಟ್ಟು ಒಂಭತ್ತುಕಡೆಗಳಲ್ಲಿ ಅಗ್ನಿಪರವಾಗಿ ಉಪಯೋಗಿಸಲ್ಪಟ್ಟಿದೆ ಮತ್ತು ವಿಶ್ವಾಮಿತ್ರದೃಷ್ಟವಾದ,

ಪ್ರದೀಧಿತಿರ್ವಿಶ್ವವಾರಾ ಜಿಗಾತಿ ಹೋತಾರಮಿಳಃ ಪ್ರಥಮಂ ಯಜಧ್ಯೈ ।
ಅಚ್ಛಾ ನಮೋಭಿರ್ವೃಷಭಂ ವಂದಧ್ಯೈ ಸ ದೇವಾನ್ಯಕ್ಷದಿಷಿತೋ ಯಜೀಯಾನ್ ॥

(ಋ. ಸಂ. ೩-೪-೩)

ಎಂಬ ಋಕ್ಕಿನಲ್ಲಿ ಮಾತ್ರ ಹವಿಸ್ಸಿನ ರೂಪದ ಅನ್ನವೆಂಬರ್ಥವಾಗುತ್ತದೆ. ಆದರೂ ಸಹ ಆ ಋಕ್ಕಿನ ಮುಖ್ಯ ದೇವತೆಯಾದ **ಅಗ್ನಿ**ಯೊಂದಿಗೆ ಸಂಬಂಧವನ್ನು ಹೊಂದಿದೆ. **ಈ** ಅರ್ಥವು ಆಪ್ರೀಸೂಕ್ತದ ಸಂಪ್ರದಾಯದಿಂದ ಭಿನ್ನವಾಗಿದೆ. ಆದರೆ **ಪ್ರೈಷ**ಸೂಕ್ತದಲ್ಲಿ ಮಾತ್ರ ಅಗ್ನಿಪರ್ಯಾಯವಾಗಿಯೇ ಇವೆ.

ಹೋತಾಯಕ್ಷದಗ್ನಿಮಿಡ ಈಡಿತೋ ದೇವೋ ದೇವಾಗ್ಂ ಆವಕ್ಷದ್ದೂತೋ ಹವ್ಯವಾಡಮೂರಃ । ಉಪೇಮಂ ಯಜ್ಞಮುಪೇಮಾಂ ದೇವೋ ದೇವಹೂತಿಮವತು ವೇತ್ವಾಜ್ಯಸ್ಯ ಹೋತರ್ಯಜ ॥

(ತೈ. ಬ್ರಾ. ೩-೬-೨-೧)

ಎಂಬ ವಾಕ್ಯಕ್ಕೆ ಭಾಷ್ಯಕಾರರು—**ಇಡೇತ್ಯೇತನ್ನಾಮಕಮಗ್ನಿಂ ತೃತೀಯಪ್ರಯಾಜದೇವಂ** ಎಂದು ಅಗ್ನಿಪರ್ಯಾಯನಾಮವೆಂದೂ ಹೇಳಿದ್ದಾರೆ. **ಐತರೇಯಬ್ರಾಹ್ಮಣ**ದಲ್ಲಿ—

ಇಳೋ ಯಜತ್ಯನ್ನಂ ವಾ ಇಳೋನ್ನಮೇವ ತತ್ಪ್ರೀಣಾತ್ಯನ್ನಂ ಯಜಮಾನೇ ದಧಾತಿ ।

(ಐ. ಬ್ರಾ. ೨-೪)

ಇಳಃ ಎಂದರೆ ಯಾಗದಲ್ಲಿ ಅರ್ಪಿಸತಕ್ಕ ಹವೀರೂಪದ **ಅನ್ನ**ವೆಂದೂ, **ಈ ಅನ್ನದ** ಅರ್ಪಣೆಯ ಫಲವಾಗಿ ಯಜಮಾನನಿಗೂ ಅನ್ನಲಾಭವಾಗುವುದೆಂದೂ ಹೇಳಿದೆ.

ಮೇಲೆ ವಿವರಿಸಿರುವಂತೆ ಯಾಸ್ಕರು ಈ ಪದಕ್ಕೂ **ಇಂಧ್** ಧಾತುವಿಗೂ ಸಂಬಂಧವನ್ನು ತೋರಿಸಿರುವುದು ಸರಿಯಾಗಿ ಅರ್ಥವಾಗುವುದಿಲ್ಲ. ಇಲ್ಲಿ **ಕಾತ್ಥಕ್ಯ**ರ ಅಭಿಪ್ರಾಯವನ್ನು ಯಾಸ್ಕರು ಹೇಳಿಲ್ಲ. **ಬೃಹದ್ದೇವತೆ**ಯಲ್ಲಿ—

ಇಳಸ್ತ್ವಯೃಷಿಕೃತಂ ರೂಪಂ ಈಡೇಶ್ಚ ಸ್ತುತಿಕರ್ಮಣಃ ।
ಇಳಾವಾಂಸ್ತೇನ ವೋಕ್ತೋಗ್ನಿರಿಡಿನಾ ವೃದ್ಧಿಕರ್ಮಣಾ ॥

(ಬೃ. ದೇ. ೩-೪)

ಎಂಬ ವಾಕ್ಯಗಳಿಂದ **ಈ** ಶಬ್ದವು ಆರ್ಷೇಯವೆಂದೂ, ಅಗ್ನಿಪರ್ಯಾಯನಾಮವೆಂದೂ ತೋರಿಸಿದೆ ಮತ್ತು **ಇಳಾವಾನ್** ಎಂಬ ಪದವು ಅಗ್ನಿಗೆ ವಿಶೇಷಣವಾಗಿದೆ.

ಗೋಮಾ ಅಗ್ನೇಽವಿಮಾ ಅಶ್ವೀ ಯಜ್ಞೋ ನೃವತ್ಸಖಾ ಸದಮಿದಪ್ರಮೃಷ್ಯಃ ।
ಇಳಾವಾ ಏಷೋ ಅಸುರ ಪ್ರಜಾವಾನ್ದೀರ್ಘೋ ರಯಿಃ ಪೃಥುಬುಧ್ನಃ ಸಭಾವಾನ್ ॥

ಎಂಬ ಋಕ್ಕಿನಲ್ಲಿ ಇಳಾವಾನ್ ಎಂಬ ಪದವು ಅಗ್ನಿಗೆ ವಿಶೇಷಣವಾಗಿರುವುದರಿಂದ ಬೃಹದ್ದೇವತೆಯಲ್ಲಿ ಆ ಅಂಶವನ್ನು ಸೂಚಿಸಿದೆ.

ವಿವರಣೆಗಳಲ್ಲಿ ಈರೀತಿ ಸಂಪ್ರದಾಯಭೇದಗಳು ಕಂಡರೂ ಸಹ ಸೂಕ್ತದಲ್ಲಿ ಮೂರನೇ ಸ್ಥಾನವನ್ನು ಹೊಂದಿರುವ ಅಗ್ನಿ ದೇವತಾಪರ್ಯಾಯನಾಮವೆಂದು ಒಟ್ಟನಲ್ಲಿ ಹೇಳಬಹುದು.

ಸಂಹಿತಾಪಾಠಃ

ವಿ ಪ್ರಥತಾಂ ದೇವಜುಷ್ಟಂ ತಿರಶ್ಚಾ ದೀರ್ಘಂ ದ್ರಾಘ್ಮಾ ಸುರಭಿ ಭೂತ್ವಸ್ಮೇ ।
ಅಹೇಳತಾ ಮನಸಾ ದೇವ ಬರ್ಹಿರಿಂದ್ರಜ್ಯೇಷ್ಠಾ ಉಶತೋ ಯಕ್ಷಿ ದೇವಾನ್ ॥

ಪದಪಾಠಃ

ವಿ । ಪ್ರಥತಾಂ । ದೇವಜುಷ್ಟಂ । ತಿರಶ್ಚಾ । ದೀರ್ಘಂ । ದ್ರಾಘ್ಮಾ । ಸುರಭಿ । ಭೂತು । ಅಸ್ಮೇ ಇತಿ ।
ಅಹೇಳತಾ । ಮನಸಾ । ದೇವ । ಬರ್ಹಿಃ । ಇಂದ್ರಜ್ಯೇಷ್ಠಾನ್ । ಉಶತಃ । ಯಕ್ಷಿ । ದೇವಾನ್ ॥ ೪ ॥

ಸಾಯಣಭಾಷ್ಯಂ

ಹೇ ಬರ್ಹಿರ್ನಾಮಕಾಗ್ನೇ ದೇವಜುಷ್ಟಂ ದೇವೈಃ ಸೇವಿತಂ ತಿರಶ್ಚಾ ತಿರಶ್ಚೀನಂ ತಿರ್ಯಗಂಚನ-ಮಿದಂ ಬರ್ಹಿರ್ವಿ ಪ್ರಥತಾಂ । ವಿಶೇಷೇಣ ವಿಸ್ತೃತಂ ಭವತು । ತಥಾ ದೀರ್ಘಂ ಚೇದಂ ದ್ರಾಘ್ಮಾ ದಾಘಿಮ್ನಾ ॥ ದೀರ್ಘಶಬ್ದಸ್ಯೇಮನಿಚಿ ಪ್ರಿಯಸ್ಥಿರೇತ್ಯಾದಿನಾ ದ್ರಾಘಿರಾದೇಶಃ । ಅಕಾರಸ್ಯೇಕಾರೋವರ್ಣ-ವ್ಯಾಪತ್ತ್ಯಾ । ಪಶ್ಚಾದಲ್ಲೋಪಃ ॥ ದ್ರಾಘಿಮ್ನಾ ಯುಕ್ತಂ ಭವತು । ಅಸ್ಮೇ ಅಸ್ಮದೀಯಂ ಬರ್ಹಿಃ ಸುರಭಿ ಸೋಮಾದಿಹವಿರ್ನಿಧಾನೇನ ಸುಗಂಧಂ ಭೂತು । ಭವತು । ಹೇ ದೇವ ದ್ಯೋತಮಾನ ಹೇ ಬರ್ಹಿರೇತ-ನ್ನಾಮಕಾಗ್ನೇ ಅಹೇಳತಾ । ಹೇಲ ಇತಿ ಕ್ರೋಧನಾಮ । ಅಕ್ರುಧ್ಯತಾ ಮನಸೋಶತೋ ಹವೀಂಷಿ ಕಾಮು-ಯಮಾನಾನಿಂದ್ರಜ್ಯೇಷ್ಠಾನಿಂದ್ರಪ್ರಧಾನಾನ್ದೇವಾನ್ಯಕ್ಷಿ । ಯಜ । ಪೂಜಯ ॥

ಪ್ರತಿಪದಾರ್ಥ

ದೇವಜುಷ್ಟಂ—ದೇವತೆಗಳಿಂದ ಸೇವಿತವೂ । **ತಿರಶ್ಚಾ**—ವಕ್ರಾಕಾರದಲ್ಲಿ ಸುತ್ತಿಕೊಂಡಿರುವುದೂ ಆದ । **ಬರ್ಹಿಃ**—ಬರ್ಹಿಯು (ಶ್ರೇಷ್ಠವಾದ ದರ್ಭಾಸನವು) । **ವಿ ಪ್ರಥತಾಂ**—ವಿಸ್ತೃತಿಯನ್ನು ಹೊಂದಲಿ । **ದೀರ್ಘಂ**—ದೀರ್ಘವಾದ ಬೆಳೆವಣಿಗೆಯನ್ನೂ । **ದ್ರಾಘ್ಮಾ**—ಅಧಿಕವಾದ ವಿಸ್ತೃತಿಯನ್ನೂ ಹೊಂದಿರುವ । **ಅಸ್ಮೇ**—ನಮ್ಮ ಬರ್ಹಿಯು । **ಸುರಭಿ**—ಸುಗಂಧಯುಕ್ತವಾಗಿ । **ಭೂತು**—ಆಗಲಿ । **ದೇವ**—ಪ್ರಕಾಶಮಾನನೂ । **ಬರ್ಹಿಃ**—ಬರ್ಹಿಸಂಜ್ಞಕನೂ ಆದ ಎಲೈ ಅಗ್ನಿಯೇ । **ಅಹೇಳತಾ**—ಕ್ರೋಧರಹಿತವಾದ । **ಮನಸಾ**—ಮನಸ್ಸಿನಿಂದ ಕೂಡಿ । **ಉಶತಃ**—ಹವಿಸ್ಸನ್ನು ಇಚ್ಛಿಸುವವರೂ । **ಇಂದ್ರಜ್ಯೇಷ್ಠಾನ್**—ಇಂದ್ರನೇ ಪ್ರಧಾನವಾಗಿ ಉಳ್ಳವರೂ ಆದ । **ದೇವಾನ್**—ದೇವತೆಗಳನ್ನು । **ಯಕ್ಷಿ**—ಪೂಜಿಸು.

ಭಾವಾರ್ಥ

ದೇವತೆಗಳಿಂದ ಸೇವಿತವೂ ವಕ್ರಾಕಾರದಲ್ಲಿ ಸುತ್ತಿಕೊಂಡಿರುವುದೂ ಆದ ಬರ್ಹಿಯು (ದರ್ಭಾಸನವು) ವಿಸ್ತೃತಿಯನ್ನು ಹೊಂದಲಿ. ದೀರ್ಘವಾದ ಬೆಳೆವಣಿಗೆಯನ್ನು ಹೊಂದಿರುವ ನಮ್ಮ ಬರ್ಹಿಯು ಸುಗಂಧಯುಕ್ತವಾಗಲಿ. ಪ್ರಕಾಶ

ಮಾನನೂ, ಬರ್ಹಿಸಂಜ್ಞಕನೂ ಆದ ಎಲೈ ಅಗ್ನಿಯೇ ಕ್ರೋಧರಹಿತವಾದ ಮನಸ್ಸಿನಿಂದ ಕೂಡಿ ಹವಿಸ್ಸನ್ನು ಇಚ್ಛಿಸುವವರೂ ಇಂದ್ರನೇ ಪ್ರಧಾನನಾಗಿ ಉಳ್ಳವರೂ ಆದ ದೇವತೆಗಳನ್ನು ಪೂಜಿಸು.

English Translation

May our (sacred grass) acceptable to the gods twining crookedly be stretched out, may it be long, lengthy, and fragrant ; with mind free romf wrath, divine Barhis, offer worship to the gods desiring (the sacrifice), of whom Indra is the chief.

ವಿಶೇಷವಿಷಯಗಳು

ಬರ್ಹಿಃ—ಇಧ್ಮಃ, ಈಳೆಃ ಎಂಬ ಭಾವನೆಗಿಂತ ಈ ಸಾಧನವು ಹೆಚ್ಚು ಮೂರ್ತರೂಪವುಳ್ಳದ್ದಾಗಿದೆ. ಬರ್ಹಿಯೆಂದರೆ ದರ್ಭಾಸನವೆಂದೇ ಅರ್ಥ. **ದೇವೀಃ ದ್ವಾರಃ** ಎಂದು ದ್ವಾರಗಳಿಗೇ ಒಂದು ದೈವಿಕವಾದ ಅಂಶವನ್ನು ಆರೋಪಮಾಡುವಂತೆ ಬರ್ಹಿಗೆ ಮಾಡಿಲ್ಲ. ಕೇವಲ ದೇವತೆಗಳ ಆಸನವೆಂಬ ಅರ್ಥವು ಮಾತ್ರ ಸೂಚಿತವಾಗುತ್ತದೆ ಅದೂ ಅಲ್ಲದೆ, ದೇವತೆಗಳ ಆಗಮನಕ್ಕಾಗಿ ದ್ವಾರಗಳು ಇತರ ಸಹಾಯವಿಲ್ಲದೇ ತಾವು ತೆರೆದುಕೊಂಡು ದಾರಿಯನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸಿದೆ. ಅಚೇತನವಾದ ದ್ವಾರಗಳಿಗೆ ದೈವಿಕವಾದ ಶಕ್ತಿಯಿದ್ದ ಹೊರತು ತನ್ಮುಖೇನ ತಮ್ಮಷ್ಟಕ್ಕೆ ತಾವೇ ತೆಗೆದುಕೊಂಡು ವಿಶಾಲವಾದ ಮಾರ್ಗವನ್ನು ಮಾಡುವುದಕ್ಕಾಗುವುದಿಲ್ಲ ಆದರೆ ಬರ್ಹಿಯ ವಿಷಯದಲ್ಲಿ ಮಾತ್ರ ಈ ಶಕ್ತಿಯ ಆರೋಪವಿಲ್ಲ. ಋತ್ವಿಕ್ಕುಗಳು ಇದನ್ನು ಹರಡಬೇಕು. ಕೇವಲ ಈ ಋಕ್ಕಿನಲ್ಲೇ ಅಲ್ಲವೇ ಆಪ್ರೀ ಸೂಕ್ತಗಳ ಇತರ ಋಕ್ಕುಗಳಲ್ಲೂ ಸಹ ಋತ್ವಿಗಾದಿಗಳ ಸಹಾಯದಿಂದಲೇ **ಬರ್ಹಿಯು** ಆಸ್ತರಣವಾಗಬೇಕೆಂದು ವಿಶದವಾಗಿ ಹೇಳಿದೆ. ಉದಾಹರಣೆಗೆ—

ಪ್ರಾಚೀನಂ ಬರ್ಹಿರೋಜಸಾ ಸಹಸ್ರವೀರಮಸ್ತೃಣನ್ । ಯತ್ರಾದಿತ್ಯಾ ವಿರಾಜಥ ।

(ಋ. ಸಂ. ೧-೧೮೮-೪)

ಎಂಬ ಋಕ್ಕಿನಲ್ಲಿಯೂ, ಹೀಗೆಯೇ ಋ. ಸಂ. ೯-೫-೪ ರಲ್ಲಿಯೂ **ಬರ್ಹಿಃ ಪ್ರಾಚೀನವೋಜಸಾ ಪವಮಾನಃ ಸ್ತೃಣನ್ ಹರಿಃ** । ಎಂದೂ, ಋತ್ವಿಕ್ಕುಗಳು **ಬರ್ಹಿಯನ್ನು** ಹರಡುತ್ತಾರೆ ಎಂಬ ವರ್ಣನೆಯಿದೆ. ಹೀಗೆಯೇ ಇತರ **ಆಪ್ರೀಸೂಕ್ತಗಳ** ಋಕ್ಕುಗಳಲ್ಲಿಯೂ ಸಹ **ಬರ್ಹಿಯು** ಪಾರ್ಥಿವವಾದುದೂ, ಅಚೇತನವಾದುದೂ ಆದರೂ ದೇವತೆಗಳಿಗೆ ಪವಿತ್ರವಾದ ಸ್ಥಾನರೂಪವಾದ ಸ್ಥನನೆಂದೂ ಹೇಳಿದೆ. **ಪೈೃಷ** ಸೂಕ್ತದಲ್ಲಿ ಮಾತ್ರ,

ಹೋತಾಯಕ್ಷದ್ಬರ್ಹಿಃ ಸುಷ್ಟರೀಮೋರ್ಣಂಮ್ರದಾ ಅಸ್ಮಿನ್ಯಜ್ಞೇ ವಿಚಪ್ರಚೆ ಪೃಥಚಾಗ್ಂ ಸ್ವಾಸಸ್ಥಂ ದೇವೇಭ್ಯಃ । ಏಮೇನದಸ್ಯ ವಸವೋ ರುದ್ರಾ ಆದಿತ್ಯಾಃ ಸದಂತು ಪ್ರಿಯಮಿಂದ್ರಸ್ಯಾಸ್ತು ವೇತ್ವಾಜ್ಯಸ್ಯ ಹೋತರ್ಯಜ ॥

(ತೈ. ಬ್ರಾ. ೩-೬-೨-೧)

ಬರ್ಹಿರ್ನಾಮಕಂ ಚತುರ್ಥಪ್ರಯೋಜದೇವಮಗ್ನಿಂ ಎಂದು **ಅಗ್ನಿ**ಪರ್ಯಯವಾದುದೂ **ದೇವತಾತ್ಮಕ**ವಾದುದೂ ಆದ ಆಸನವೆಂದು ಹೇಳಿದೆ. **ಐತರೇಯ ಬ್ರಾಹ್ಮಣದಲ್ಲಿ,**

ಬರ್ಹಿರ್ಯಜತಿ । ಪಶವೋ ವೈ ಬರ್ಹಿಃ । ಪಶೂನೇವ ತತ್ಪ್ರೀಣಾತಿ ಪಶೂನ್ಯಜಮಾನೇ ಧದಾತಿ ।

(ಐ. ಬ್ರಾ. ೩-೪-)

ಎಂದು ಹುಲ್ಲು ಮೇಯತಕ್ಕದ್ದೂ, ಹುಲ್ಲಿನಿಂದ ಕೂಡಿದುದೂ ಆದ ಪಶುವೆಂದು ಅರ್ಥಮಾಡಿದೆ. ಆದರೆ ಈ ಅರ್ಥಕ್ಕೆ ಸ್ವಲ್ಪವೂ ಅವಕಾಶವಿಲ್ಲವೆಂದು ತಿಳಿಯುತ್ತದೆ.

ನಿರುಕ್ತಕಾರರು **ಬರ್ಹಿಃ ಪರಿಬರ್ಹಣಾತ್** । ವೇಗವಾಗಿ ಬೆಳೆಯುವುದರಿಂದ ದರ್ಭೆಗೆ ಬರ್ಹಿಯೆಂದು ಹೆಸರೆಂದು ಹೇಳಿದ್ದಾರೆ. (ನಿ. ೮-೮) ಬೃಹದ್ದೇವತೆಯಲ್ಲಿ,

ಬರ್ಹಿರೇವಾಯಮುಗ್ನಿಸ್ತು ಸರ್ವಂ ಹಿ ಪರಿಬೃಂಹಿತಂ ।
ಅನ್ನೇನ ಯದ್ಧುತೋ ವಾ ಸನ್ನಿಧ್ನೇನ ಪರಿಬೃಂಹಿತಃ ॥

(ಬೃ. ದೇ. ೩-೫೫)

ಸಮಸ್ತವಾದ ಅನ್ನವೂ ತದ್ವ್ಯಾಪ್ಯವಾದುದರಿಂದಲೂ, ಆಹುತ್ಯನಂತರ ಇಧ್ಮದಿಂದ ಪೂರಿತವಾಗುವುದರಿಂದಲೂ **ಅಗ್ನಿಯೇ ಬರ್ಹಿ** ರೂಪದಲ್ಲಿದ್ದಾನೆ. ಎಂದು ತಾದಾತ್ಮ್ಯವನ್ನು ಹೇಳಿದೆ.

ಸಂಹಿತಾಪಾಠಃ

ದಿವೋ॑ ವಾ॒ ಸಾನು॑ ಸ್ಪೃಶತಾ॒ ವರೀ॑ಯಃ ಪೃಥಿ॒ವ್ಯಾ ವಾ॒ ಮಾತ್ರ॑ಯಾ॒ ವಿ ಶ್ರ॑ಯಧ್ವಂ ।
ಉ॒ಶತೀ॑ರ್ದ್ವಾರೋ॒ ಮಹಿ॑ನಾ॒ ಮಹ॑ದ್ಭಿ॒ರ್ದೇವಂ॑ ರ॒ಥಂ ರ॑ಥಯು॒ರ್ಧಾರ॑ಯಧ್ವಂ ॥ ೫ ॥

ಪದಪಾಠಃ

ದಿವಃ । ವಾ । ಸಾನು॑ । ಸ್ಪೃ॒ಶ॒ತ॒ । ವರೀ॑ಯಃ । ಪೃ॒ಥಿ॒ವ್ಯಾ । ವಾ । ಮಾತ್ರ॑ಯಾ । ವಿ । ಶ್ರ॒ಯ॒ಧ್ವ॒ಂ ।
ಉ॒ಶತೀ॑ಃ । ದ್ವಾರ॑ಃ । ಮಹಿ॑ನಾ । ಮಹ॑ತ್ಭಿಃ । ದೇವ॑ಂ । ರ॒ಥಂ । ರ॒ಥ॒ಯು॒ಃ । ಧಾರ॑ಯಧ್ವಂ ॥ ೫ ॥

ಸಾಯಣಭಾಷ್ಯಂ

ಹೇ ದ್ವಾರ ಏತನ್ನಾಮಧೇಯಾ ದೇವ್ಯಃ ಯೂಯಂ ದಿವೋ ವಾ । ವಾಶಬ್ದಶ್ಚಾರ್ಥೇ । ದಿವಶ್ಚ ಸಾನು ಸಮುಚ್ಛ್ರಿತಂ ವರೀಯ ಉರುತರಂ ಸ್ಥಾನಂ ಸ್ಪೃಶತ । ಉನ್ನತಾ ಭವತೇತ್ಯರ್ಥಃ ॥ ಚವಾಯೋಗೇ ಪೃಥಮೇತಿ ನ ನಿಘಾತಃ ॥ ಪೃಥಿವ್ಯಾಶ್ಚ ಯಾವತೀ ಮಾತ್ರಾಸ್ತಿ ತಾವತ್ಯಾ ಮಾತ್ರಯಾ ವಿ ಶ್ರಯಧ್ವಂ । ವಿಸ್ತೃತಾ ಭವತ । ಉಶತೀರ್ದೇವಾನಾನ್ಕಾಮಯಮಾನಾ ಯೂಯಂ ರಥಯುಃ ॥ ಸುಪಾಂ ಸುಲುಗಿತಿ ಜಸಃ ಸುಃ ॥ ರಥಕಾಮಾಃ ಸತ್ಯೋ ಮಹಿನಾ ಮಹಿಮ್ನಾ ಮಹದ್ಭಿರ್ದೇವೈರಧಿಷ್ಠಿತಂ ಅತ ಏವ ದೇವಂ ದ್ಯೋತಮಾನಂ ರಥಂ ರಮಣಸಾಧನಂ ಧಾರಯಧ್ವಂ । ಧಾರಯತ ॥

ಪ್ರತಿಪದಾರ್ಥ

ದ್ವಾರಃ—ದ್ವಾರಸಂಜ್ಞಕರಾದ ಎಲೈ ದೇವಿಯರೇ । **ದಿವಃ**—ದೇವಲೋಕದ । **ಸಾನು**—ಉಚ್ಚಸ್ಥಾನದಲ್ಲಿರುವುದೂ । **ವರೀಯಃ**—ವಿಸ್ತೃತವಾದುದೂ ಆದ ಸ್ಥಾನವನ್ನು । **ಸ್ಪೃಶತ**—ಸ್ಪರ್ಶಮಾಡಿರಿ । **ವಾ**—

अथवा (मत्तु)। पृथिव्याः—पृथ्विय। **मात्रयाऽ**—प्रमाणक्कनुसारवागि। **वि शयध्वं**—विस्तृतियन्नु हॊंदिरि। **उशतीः**—देवपूजेयन्नपेक्षिसुव नीवु। **रथयुवः**—रथवन्नु इच्छिसिदवरागि। **महिना**—निम्म महत्त्वदिंद। **महद्भिः**—महत्स्वरूपवुळ्ळ देवतेगळु आश्रयिसिरुवुदू। **देवं**—प्रकाशमानवादुदू आद। **रथं**—रथवन्नु। **धारयेद्ध्वं**—धरिसिरि.

भावार्थ

द्वारसंज्ञकरादा एलै देवियरीरे, देवलोकद उच्चस्थानदल्लिरुवुदू, विस्तृतवू आद दिव्य स्थानवन्नु स्पर्शिसिरि. पृथ्विय प्रमाणक्कनुसारवाद विस्तृतियन्नु हॊंदिरि. देवपूजेयन्न **पेक्षिसुव** नीवु रथवन्नु इच्छिसिदवरागि निम्म महत्त्वदिंद महत्स्वरूपवुळ्ळ देवतेगळु आश्रयिसिरुवुदू, प्रकाशमानवादुदू आद रथवन्नु धरिसिरि.

English Translation

Be in contact, doors, with the lofty height of heaven, or expand according to the measure of the earth; desiring the gods, desiring a cheriot, sustain with yourmight the shining chariot (that is mounted) by the mighty gods.

विशेषविषयगळु

ऋ. सं. ८-८४४-३ नेय ऋक्किनल्लि देवीर्द्वारः एंब यज्ञगृहद द्वारदेवतेगळन्नु (दुरः) प्रार्थिसुवाग मत्तॊंदु विशेषवेनेंदरे—यज्ञगृहद नाल्कुदिक्कुगळल्लियू इरुव नाल्कु द्वारगळ हॆसरुगळन्नु अल्लि सूचिसिदे. इतर आप्रिसूक्तगळल्लि ईरीति हॆसरुगळिरुवुदिल्ल. आदरू विराट् मॊदलाद शब्दगळिगॆ अवयवार्थवन्नु कल्पिसि दुरः एंब शब्दक्कॆ विशेषणपदगळन्नागि हेळुवुदू समंजसवागिदे. भाष्यकाररु ई एरडुविधवाद प्रयत्नगळन्नू माडिदारॆ.

दुरः—द्वारः एंब यज्ञगृहद द्वारदेवतेगळु, इवरु यारु एंब विषयदल्लि यास्करु **द्वारः। द्वारो जवतेर्वा द्रवतेर्वा वारयतेर्वा। गृहद्वार इति कात्थक्यः। अग्निरिति शाकपूणिः॥**

(नि. ८.८०)

एंदु निर्वचनवन्नु हेळिदारॆ. द्वारवेंदरॆ प्रवेशिसुवुदक्कॆ, ऒळगॆ होगुवुदक्कॆ अथवा ऒळगॆ होगुवुदन्नु तडॆयुवुदक्कॆ इरुवुदरिंद इदक्कॆ द्वारवेंदु हॆसरु. द्वारवेंदरॆ गृहद्वार (बागिलु) एंदु कात्थक्यर मतवु; अग्नियेंदु शाकपूणिय मतवु एंदू हेळिरुवरु. होमनुवन्नु माडुव होमगृहवु अग्निय स्वरूपवेंदू आदुदरिंद अदर द्वारगळू अग्निय विशेषरूपगळेंदू (अग्निविशेषमूर्तयः) हेळुवरु. The doors of the chamber in which the oblation offered are said to be personification of Agni.

यज्ञगृहद द्वाराभिमानिदेवतेगळेंदु सायणरु विवरिसिद्दारॆ. ई द्वारगळु यज्ञगृहद द्वारगळे अथवा इदु केवल आलंकारिकवाद प्रयोगवे एंब विषयदल्लि अभिप्रायभेदविदॆ.

ಒಂದುವೇಳೆ ಇಲ್ಲಿ ಈ ಶಬ್ದಕ್ಕೆ ಗೃಹದ್ವಾರಗಳೆಂದರ್ಥವಲ್ಲದಿದ್ದರೆ ಆಗ **ಆಪ್ರೀಸೂಕ್ತಗಳ** ದೇವತೆಗಳ ವಿಷಯದಲ್ಲೂ ಸಹ ಈಗ ಹೇಳಿರುವ ಅಂಶಗಳಿವೆ. ವ್ಯತ್ಯಾಸವಾದ ಅರ್ಥಗಳನ್ನು ಭಾವಿಸಬೇಕಾಗುತ್ತದೆ.

ಐತರೇಯಬ್ರಾಹ್ಮಣದಲ್ಲಿ—

ದುರೋ ಯಜತಿ ವೃಷ್ಟಿರ್ವೈ ದುರೋ ವೃಷ್ಟಿಮೇವ ತತ್ಪ್ರೀಣಾತಿ ವೃಷ್ಟಿಮನ್ನಾದ್ಯಂ ಯಜಮಾನೇ ದಧಾತಿ ।

(ಐ. ಬ್ರಾ. ೨-೪)

ಎಂದು ದ್ವಾರವೆಂಬ ಅರ್ಥಕ್ಕೆ ಬದಲಾಗಿ ವೃಷ್ಟಿಯೆಂದರ್ಥಮಾಡಿದೆ. ಈ ಅರ್ಥವು ಹೇಗಾಗುವುದೆಂದು ವಿಶದಪಡಿಸಿಲ್ಲ. ನಿರುಕ್ತಕಾರರು,

ದ್ವಾರೋ ಜವತೇರ್ವಾ ದ್ರವತೇರ್ವಾ ವಾರಯತೇರ್ವಾ । ಮುಂದಕ್ಕೆ ಒತ್ತು ಎಂಬರ್ಥವನ್ನು ಕೊಡುವ **ಜು** ಧಾತುವಿನಿಂದಾಗಲೀ, ಮುಂದುವರಿ ಎಂಬರ್ಥವನ್ನು ಕೊಡುವ **ದ್ರು** ಧಾತುವಿನಿಂದಾಗಲೀ ಅಥವಾ ಪ್ರತ್ಯೇಕಿಸು ಎಂಬರ್ಥವನ್ನು ಕೊಡುವ **ವೃ** ಧಾತುವಿನಿಂದಾಗಲೀ ನಿಷ್ಪನ್ನವಾಗಿದೆಯೆಂದು,

ವ್ಯಚಸ್ವತೀರುರ್ವಿಯಾ ವಿ ಶ್ರಯಂತಾಂ ಪತಿಭ್ಯೋ ನ ಜನಯಃ ಶುಂಭಮಾನಾಃ ।
ದೇವೀರ್ದ್ವಾರೋ ಬೃಹತೀರ್ವಿಶ್ವಮಿನ್ವಾ ದೇವೇಭ್ಯೋ ಭವತ ಸುಪ್ರಾಯಣಾಃ ॥

(ಋ. ಸಂ. ೧೦-೧೧೦ ೫)

ಎಂಬ ಋಕ್ಕನ್ನು ಉದಾಹರಿಸಿ **ದ್ವಾರ**ಶಬ್ದಕ್ಕೆ ಅರ್ಥವನ್ನು ವಿವರಿಸುತ್ತಾ **ಗೃಹದ್ವಾರ ಇತಿ ಕಾತ್ಥಕ್ಯಃ ।** ಕಾತ್ಥಕ್ಯರ ಮತದಂತೆ ಗೃಹದ್ವಾರವೆಂದೂ, **ಅಗ್ನಿರಿತಿ ಶಾಕಪೂಣಿಃ ।** ಶಾಕಪೂಣಿಯ ಮತದಂತೆ ಅಗ್ನಿಯೆಂದೂ ಶಹ ಮತಭೇದವನ್ನು ತಿಳಿಸಿದ್ದಾರೆ (ನಿ. ೮-೧೦) ಬೃಹದ್ದೇವತೆಯಲ್ಲಿ,

ದ್ವಾರಸ್ತು ದೇವ್ಯೋ ಯಾಃ ಪ್ರೋಕ್ತಾ ವಿಶ್ವೇಷಾಂ ತಾಸ್ತು ಪತ್ನಯಃ ।
ಆಗ್ನಾಯೀಮನುವರ್ತಂತೇ ತಥಾಗ್ನಾಯ್ಯಗ್ನಿಮೇವ ಚ ॥
ಅಗ್ನೌ ಧ್ರುವಂ ಸ್ಥಿತಾಸ್ತಾಸ್ತು ಸಂಸ್ತೂಯಂತೇಽಗ್ನಿನಾ ಸಹ ।
ಪ್ರಾಧಾನ್ಯಂ ತಾಸು ಚೈವಾಗ್ನೇ ಸ್ತುತಿಷ್ವೇವ ಹವಿಷ್ಸು ಚ ॥

(ಬೃ. ದೇ. ೩-೬ ರಿಂದ ೭)

ಈ ದ್ವಾರಗಳು ದೇವಪತ್ನಿಯರೆಂದೂ, ಅಗ್ನಿಯನ್ನು ಅನುಸರಿಸುವ ಆಗ್ನಾಯಿಯನ್ನು (ಅಗ್ನಿಪತ್ನಿಯನ್ನು) ಇವರು ಅನುಸರಿಸಿರುವರೆಂದೂ, ಅಗ್ನಿಯಲ್ಲೇ ಸ್ಥಿರವಾಗಿ ನೆಲೆಸಿರುವುದರಿಂದ ಅಗ್ನಿಯೊಡನೆ ಸ್ತುತಿಸಲ್ಪಡುವರೆಂದೂ ಹೇಳಿರುವುದು ಸಂಯುಕ್ತಿಕವಾಗಿದೆ.

ಯಜ್ಞಗೃಹದ ನಾಲ್ಕು ದ್ವಾರಗಳನ್ನು ಸಂಸ್ಕಾರಮಾಡುವ ವಿಷಯದಲ್ಲಿ ತೈತ್ತಿರೀಯಸಂಹಿತೆಯಲ್ಲಿ **ಈ** ವಿವರಣೆಯು ಈರೀತಿ ವರ್ಣಿಸಿದೆ—

ಪ್ರಾಚೀನವಗ್ಂಶಂ ಕರೋತಿ ದೇವಮನುಷ್ಯಾ ದಿಶೋ ವ್ಯಭಜಂತ ಪ್ರಾಚೀಂ ದೇವಾ ದಕ್ಷಿಣಾ ಪಿತರಃ ಪ್ರತೀಚೀಂ ಮನುಷ್ಯಾ ಉದೀಚೀಗ್ಂ ರುದ್ರಾಃ ॥

(ತೈ. ಸಂ. ೬-೧-೧-೧)

ಎಂದರೆ ಯಜ್ಞಗೃಹದ ಪೂರ್ವದ್ವಾರಗಳನ್ನು ದೇವತೆಗಳೂ, ದಕ್ಷಿಣದ್ವಾರವನ್ನು ಪಿತೃದೇವತೆಗಳೂ, ಪಶ್ಚಿಮದ್ವಾರವನ್ನು ಮನುಷ್ಯರೂ, ಉತ್ತರದ್ವಾರವನ್ನು (ಏಕಾದಶ) ರುದ್ರರೂ ಹಂಚಿಕೊಂಡರೆಂದಿದೆ.

ಈ ಯಜ್ಞಗೃಹದ ದ್ವಾರಗಳ ಹೆಸರುಗಳು ೧-೧೪ಅ-೫ ರಲ್ಲಿ ಹೇಳಿರುವಂತೆ ಈಂತಿ ಇದೆ—**ವಿರಾಟ್** ಎಂಬುದು ಪೂರ್ವದ್ವಾರವೆಂದೂ, **ಸಮ್ರಾಟ್** ಎಂಬುದು ದಕ್ಷಿಣದ್ವಾರವೆಂದೂ, **ವಿಭ್ವೀಃ** ಎಂಬುದು ಪಶ್ಚಿಮದ್ವಾರವೆಂದೂ, **ಪ್ರಭ್ವೀಃ** ಎಂಬುದು ಉತ್ತರದ್ವಾರವೆಂದೂ ಹೇಳಬಹುದು. ಈ ಶಬ್ದಗಳ ಅವಯವಾರ್ಥವನ್ನು ಸಾಯಣನು ಅಲ್ಲಿಯೇ ವಿವರಿಸಿರುವನು.

ಸಂಹಿತಾಪಾಠಃ

ದೇವೀ ದಿವ್ಯೇ ದುಹಿತರಾ ಸುಶಿಲ್ಪೇ ಉಷಾಸಾನಕ್ತಾ ಸದತಾಂ ನಿ ಯೋನೌ।
ಆ ವಾಂ ದೇವಾಸ ಉಶತೀ ಉಶಂತ ಉರೌ ಸೀದಂತು ಸುಭಗೇ ಉಪಸ್ಥೇ॥೬॥

ಪದಪಾಠಃ

ದೇವೀ ಇತಿ। ದಿವಃ। ದುಹಿತರಾ। ಸುಶಿಲ್ಪೇ ಇತಿ ಸು೨ಶಿಲ್ಪೇ। ಉಷಾಸಾನಕ್ತಾ। ಸದತಾಂ। ನಿ। ಯೋನೌ।
ಆ। ವಾಂ। ದೇವಾಸಃ। ಉಶತೀ ಇತಿ। ಉಶಂತಃ। ಉರೌ। ಸೀದಂತು। ಸುಭಗೇ ಇತಿ ಸು೨ಭಗೇ। ಉಪಸ್ಥೇ ॥೬॥

ಸಾಯಣಭಾಷ್ಯಂ

ದೇವೀ ದ್ಯೋತಮಾನೇ ದಿವ್ಯೇ ದ್ಯುಲೋಕಸ್ಯ ದುಹಿತರಾ ದುಹಿತರೌ ಸುಶಿಲ್ಪೇ ಶೋಭನರೂಪೇ ಉಷಾಸಾನಕ್ತೋಷಾಶ್ಚ ನಕ್ತಂ ಚಾಹೋರಾತ್ರೌ ಯೋನೌ ಯಜ್ಞಸ್ಯ ಸ್ಥಾನೇ ನಿ ಸದತಾಂ। ನಿಷೀದತಾಂ। ಹೇ ಉಶತೀ ಉಶತ್ಯೌ ಕಾಮಯಮಾನೇ ಹೇ ಸುಭಗೇ ಶೋಭನಧನೇ ಹೇ ದೇವ್ಯೌ ವಾಂ ಯುವಯೋರುರೌ ವಿಸ್ತೀರ್ಣಂ ಉಪಸ್ಥೇ ಸಮೀಪಸ್ಥೇ ಸ್ಥಾನ ಉಶಂತೋ ಹವೀಂಷಿ ಕಾಮಯಮಾನಾ ದೇವಾಸೋ ದೇವಾ ಆ ಸೀದಂತು। ಉಪವಿಶಂತು ॥

ಪ್ರತಿಪದಾರ್ಥ

ದೇವೀ—ಪ್ರಕಾಶಮಾನರೂ। **ದಿವಃ**—ದ್ಯುಲೋಕಕ್ಕೆ। **ದುಹಿತರಾ**—ಪುತ್ರಿಯರೂ। **ಸುಶಿಲ್ಪೇ**—ಉತ್ತಮವಾದ ರೂಪವುಳ್ಳವರೂ ಆದ। **ಉಷಾಸಾನಕ್ತಾ**—ಎಲೈ ಅಹೋರಾತ್ರದೇವತೆಗಳೇ। **ಯೋನೌ**—ಯಜ್ಞಸ್ಥಾನದಲ್ಲಿ। **ನಿ ಸದತಾಂ**—ಕುಳಿತುಕೊಳ್ಳಿರಿ। **ಉಶತೀ**—ಸಂಪತ್ತನ್ನು ಅಪೇಕ್ಷಿಸುವವರೂ। **ಸುಭಗೇ**—ಉತ್ತಮವಾದ ಸಂಪತ್ತುಳ್ಳವರೂ ಆದ ಎಲೈ ದೇವತೆಗಳೇ। **ವಾಂ**—ನಿಮ್ಮ। **ಉರೌ**—ವಿಸ್ತೃತವಾದ। **ಉಪಸ್ಥೇ**—ಸಮೀಪಸ್ಥಾನದಲ್ಲಿ। **ಉಶಂತಃ**—ಹವಿಸ್ಸನ್ನು ಅಪೇಕ್ಷಿಸುವ। **ದೇವಾಸಃ**—ದೇವತೆಗಳು। **ಆ ಸೀದಂತು**—ಕುಳಿತುಕೊಳ್ಳಲಿ.

ಭಾವಾರ್ಥ

ಪ್ರಕಾಶಮಾನರೂ, ದ್ಯುಲೋಕಕ್ಕೆ ಪುತ್ರಿಯರೂ ಉತ್ತಮವಾದ ರೂಪವುಳ್ಳವರೂ ಆದ ಎಲೈ ಅಹೋರಾತ್ರ ದೇವತೆಗಳೇ, ಯಜ್ಞಸ್ಥಾನದಲ್ಲಿ ಕುಳಿತುಕೊಳ್ಳಿರಿ. ಸಂಪತ್ತನ್ನು ಅಪೇಕ್ಷಿಸುವವರೂ ಉತ್ತಮವಾದ ಸಂಪತ್ತುಳ್ಳವರೂ

ಆದ ದೇವತೆಗಳೇ, ನಿಮ್ಮ ವಿಸ್ತೃತವಾದ ಸವಿಾಪಸ್ಥಾನದಲ್ಲಿ ಹವಿಸ್ಸನ್ನು ಅಪೇಕ್ಷಿಸುವ ದೇವತೆಗಳು ಕುಳಿತುಕೊಳ್ಳಲಿ.

English Translation

Radiant daughters of heaven, Dawn and Night, sit down on the place of sacrifice; O you, who are desirous and possessed of affluence, may the gods desirous (of oblations) sit down on your spacious lap.

ವಿಶೇಷವಿಷಯಗಳು

ಈ ಋಕ್ಕಿನಲ್ಲಿ **ನಕ್ತೋಷಾಸಾ** ಎಂಬ ರಾತ್ರಿ ಮತ್ತು ಪ್ರಾತಃಕಾಲದ ಅಭಿಮಾನಿದೇವತೆಗಳು ಆಹ್ವಾನ ಮಾಡಲ್ಪಟ್ಟಿರುವರು **ನಕ್ತೋಷಾಸಾ** ಎಂಬ ಶಬ್ದಕ್ಕೆ ಯಾಸ್ಕರ ವಿವರಣೆಯು ಈ ರೀತಿ ಇರುವುದು.

ಉಷಾಸಾನಕ್ತಾ। ಉಷಾಸಾನಕ್ತೋಷಾಶ್ಚ ನಕ್ತಾ ಚೋಷಾ ವ್ಯಾಖ್ಯಾತಾ। ನಕ್ತೇತಿ ರಾತ್ರಿನಾಮಾನಕ್ತಿ ಭೂತಸ್ಯವಶ್ಯಾಯೇನಾಪಿ ವಾ ನಕ್ತಾ೨ವ್ಯಕ್ತವರ್ಣಾ ॥

ನಕ್ತೋಷಾಸಾ, ಉಷಾಸಾನಕ್ತಾ ಎಂದು ಎರಡು ವಿಧವಾಗಿ ಪಠಿಸಿದರೂ, ಅರ್ಥ ಮಾತ್ರ ಒಂದೇ ಆಗಿರುವುದು. **ಉಷಾಃ** ಶಬ್ದದ ವಿವರಣೆಯನ್ನು ಹಿಂದೆಯೇ ಹೇಳಿರುವೆವು **ನಕ್ತಾ** ಎಂದರೆ ರಾತ್ರಿಯ ಹೆಸರು. ಏಕೆಂದರೆ, **ನಕ್ತಾ** ಎಂದರೆ **ಅವ್ಯಕ್ತವರ್ಣಾ** ಕತ್ತಲೆಯಾಗಿರುವುದರಿಂದ ವಸ್ತುಗಳು ಅವ್ಯಕ್ತವಾಗಿರುವುವು ಎಂದರೆ ಚೆನ್ನಾಗಿ ಕಾಣಿಸದೆ ಇರುವುವು. ಆದುದರಿಂದ ಕತ್ತಲೆಯಿಂದ ಕೂಡಿದ ರಾತ್ರಿಗೆ **ನಕ್ತಾ** ಎಂದು ಹೆಸರು ಮತ್ತು ಈ ರಾತ್ರಿಕಾಲದಲ್ಲಿ ಪ್ರಾಣಿಗಳು ತಮ್ಮ ತಮ್ಮ ವ್ಯಾಪಾರಗಳನ್ನು ಮಾಡಲಸಮರ್ಥವಾಗಿರುವುವು. **ಅನಕ್ತಿ ಕ್ಲೇದಯತಿ ಭೂತಾನಿ ಅವಶ್ಯಾಯೇನ। ಅಪಿ ವಾನಕ್ತಾ ಅವ್ಯಕ್ತವರ್ಣಾ। ಯಥಾ ಅಹಃ ಸರ್ವಮಭಿವ್ಯಕ್ತರೂಪಂ ಭವತಿ ನ ತಥಾ ರಾತ್ರಿಃ ॥** ಕತ್ತಲೆಯು ಪ್ರಾಣಿಗಳ ವ್ಯಾಪಾರಾದಿಗಳು ಸರಿಯಾಗಿ ನಡೆಯಲು ಅವಕಾಶವಿಲ್ಲದಂತೆ ಅವುಗಳಿಗೆ ತೊಂದರೆ ಕೊಡುವುದರಿಂದ ಅಂತಹ ಕತ್ತಲೆಯಿಂದ ಕೂಡಿದ ರಾತ್ರಿಗೆ **ನಕ್ತಾ** ಎಂದು ಹೆಸರು. ಅಥವಾ ಯಾವುದೂ ಚೆನ್ನಾಗಿ ಕಾಣಿಸದಂತೆ ಅವ್ಯಕ್ತವಾಗಿರುವುದರಿಂದ **ನಕ್ತಾ** ಎಂದು ಹೆಸರು. ಹಗಲಿನಲ್ಲಿ ಸಮಸ್ತವಸ್ತುಗಳ ರೂಪಗಳು ಸ್ಪಷ್ಟವಾಗಿ ಕಾಣಿಸುವುವು. ರಾತ್ರಿಯಲ್ಲಿ ಆ ರೀತಿ ಕಾಣಿಸುವುದಿಲ್ಲ. ಆದುದರಿಂದ ರಾತ್ರಿಕಾಲಕ್ಕೆ **ನಕ್ತಾ** ಎಂದು ಹೆಸರು ಎಂದು ಅರ್ಥವಿವರಣೆ ಮಾಡಿರುವರು (ನಿ. ೮-೧೧).

ಉಷಾಃ ಎಂಬ ಶಬ್ದಕ್ಕೆ ಅರ್ಥವಿವರಣೆಯನ್ನು ಹಿಂದೆಯೇ ಮಾಡಿರುವೆವು ಎಂದು ಹೇಳಿರುವರಷ್ಟೆ. ಆ ವಿವರಣೆಯು ಈ ರೀತಿ ಇರುವುದು.

ವಿಭಾವರೀ, ಸೂನರೀ ಮೊದಲಾದ ಹದಿನಾರು ಶಬ್ದಗಳು ಉಷೋನಾಮ ಶಬ್ದಗಳು (೨-೧೯) ಮತ್ತು ಉಷಾಃ **ಕಸ್ಮಾದುಚ್ಯತೀತಿ ಸತ್ಯಾ ರಾತ್ರೇರಪರಃ ಕಾಲಃ ॥**

ರಾತ್ರಿಕಾಲದ ತಮಸ್ಸನ್ನು (ಕತ್ತಲೆಯನ್ನು) ನಿವಾರಣೆ ಮಾಡುವುದರಿಂದ **ಉಷಾಃ** ಎಂದು ಹೆಸರು. ಎಂದರೆ ರಾತ್ರೆಯ ಅಪರಕಾಲವು. ಕೊನೆಯ ಭಾಗವು ಈ ಅರ್ಥವನ್ನು ಸಮರ್ಥಿಸುವುದಕ್ಕಾಗಿ ಒಂದು ಉದಾಹರಣೆಯನ್ನು ಕೊಟ್ಟಿರುವರು—

ಇದಂ ಶ್ರೇಷ್ಮಂ ಜ್ಯೋತಿಷಾಂ ಜ್ಯೋತಿರಾಗಾಚ್ಚಿತ್ರಃ ಪ್ರಕೇತೋ ಅಜನಿಷ್ಟ ವಿಭ್ವಾ ।
ಯಥಾ ಪ್ರಸೂತಾ ಸವಿತುಃ ಸಾವಾಯೈ ಏವಾ ರಾತ್ರ್ಯುಷಸೇ ಯೋನಿಮಾರೈಕ್ ॥

(ಋ. ಸಂ. ೧-೧೧೩-೧)

ಈ ಋಕ್ಕಿನ ನಿರುಕ್ತವು—

ಇದಂ ಶ್ರೇಷ್ಮಂ ಜ್ಯೋತಿಷಾಂ ಜ್ಯೋತಿರಾಗಮತ್ । ಚಿತ್ರಂ ಪ್ರಕೇತನಂ ಪ್ರಜ್ಞಾತತಮಮಜನಿಷ್ಟ ವಿಭೂತತಮಂ ಯಥಾ ಪ್ರಸೂತಾ ಸವಿತುಃ ಪ್ರಸವಾಯ ರಾತ್ರಿರಾದಿತ್ಯಸ್ಯ । ಏವಂ ರಾತ್ರ್ಯುಷಸೇ ಯೋನಿಮರಿಚೆತ್ ಸ್ಥಾನಂ । ಸ್ತ್ರೀಯೋನಿರಭಿಯುತ ಏನಾಂ ಗರ್ಭಃ ॥

(ನಿ. ೨-೧೯)

ಸೂರ್ಯನ ಉತ್ತಮವಾದ ಮತ್ತು ಅತಿ ಪ್ರಕಾಶಮಾನವಾದ ಬೆಳಕು ಉದಯಿಸುತ್ತಿರುವುದು. ಇಂತಹ ಸೂರ್ಯನ ಪ್ರಕಾಶಕ್ಕೆ ಪೂರ್ವಭಾವಿಯಾಗಿರುವ ಉಷಃಕಾಲವು ಆ ಪ್ರಕಾಶದ ನಿಕೇತನ (ಧ್ವಜ)ದಂತೆ ಬೆಳಕಿಗೆ ಮುಂಚೆಯೇ ತಲೆದೋರುವುದು. ಹೇಗೆಂದರೆ—ಸೂರ್ಯನ ಬೆಳಕು ಹಗಲೆಲ್ಲಾ ಪ್ರಕಾಶಿಸಿ, ಅಸ್ತಮಾನಕಾಲದಲ್ಲಿ ರಾತ್ರಿಗೆ ಯೋನಿಭೂತವಾಗಿ ಎಂದರೆ ಕಾರಣವಾಗಿರುವಂತೆ ರಾತ್ರಿಯು ತನ್ನ ಅವಸಾನಕಾಲದಲ್ಲಿ ಉಷಃಕಾಲಕ್ಕೆ ಯೋನಿಭೂತವಾಗಿರುವುದು ಎಂದರೆ ಕಾರಣಭೂತವಾಗಿರುವುದು. ಯೋನಿ ಎಂದರೆ ಜನ್ಮಸ್ಥಾನವು. ಹಗಲಿನ ಕೊನೆಯಲ್ಲಿ ರಾತ್ರಿಯೂ ರಾತ್ರಿಯ ಕೊನೆಯಲ್ಲಿ ಉಷಃಕಾಲವೂ ಒಂದಾಗುತ್ತಲೊಂದು ಪರಿವರ್ತನ ರೂಪದಿಂದ ಪ್ರಾಪ್ತವಾಗುವುವು ಎಂದು ಮುಖ್ಯಾಭಿಪ್ರಾಯವು. ಆದುದರಿಂದ ಉಷಃ ಎಂದರೆ ರಾತ್ರಿ ಕಳೆದನಂತರ ಸೂರ್ಯೋದಯಕ್ಕೆ ಪೂರ್ವದಲ್ಲಿ ಸನುಷ್ಠ ದಿಕ್ಕುಗಳನ್ನು ವ್ಯಾಪಿಸಿ ತಲೆದೋರುವ ಪ್ರಕಾಶವು, ಬೆಳಕು ಎಂದರ್ಥವು.

ಭಾಷ್ಯಕಾರರ (ಸಾಯಣರ) ಅರ್ಥವಿವರಣೆಯು—**ನಕ್ತಶಬ್ದ ಉಷಶ್ಶಬ್ದಶ್ಚ ಲೋಕೇ ಕಾಲವಿಶೇಷ ವಾಚಿನೌ । ಇಹ ತು ತತ್ಕಾಲಾಭಿಮಾನಿವಹ್ನಿಮೂರ್ತಿದ್ವಯೇ ಪ್ರಯುಜ್ಯೇತೇ । ನಕ್ತೋಷಾಸಾ ನಕ್ತೋಷೋನಾಮಿಕೇ ವಹ್ನಿಮೂರ್ತೀ**—ಎಂದರೆ, ನಕ್ತಾ (ರಾತ್ರಿ) ಉಷಃ (ಪ್ರಾತಃಕಾಲ) ಎಂಬ ಈ ಎರಡು ಶಬ್ದಗಳಿಗೆ ಲೋಕವ್ಯವಹಾರದಲ್ಲಿ ಎಂದರೆ ಈ ಋಕ್ಕಿನಲ್ಲಿ ಅಥವಾ ಋಗ್ವೇದದಲ್ಲಿ ಈ ಶಬ್ದಗಳು ರಾತ್ರಿ ಮತ್ತು ಪ್ರಾತಃಕಾಲಾಭಿವಾನಿದೇವತೆಗಳೆಂಬ ಅರ್ಥವನ್ನು ಪ್ರತಿಪಾದಿಸುವುವು. ಆದುದರಿಂದ **ನಕ್ತೋಷಾಸಾ** ಅಥವಾ **ಉಷಾಸಾನಕ್ತಾ** ಎಂಬ ಶಬ್ದಗಳು ರಾತ್ರಿ ಮತ್ತು ಉಷಃಕಾಲಾಭಿಮಾನಿದೇವತೆಗಳಾದ ಅಗ್ನಿಯ ಎರಡು ಮೂರ್ತಿ (ರೂಪಗಳು) ಗಳೆಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟವೆ. ಅಲ್ಲಲ್ಲಿ ಉಪಯೋಗಿಸಿರುವ **ಸುಪೇಶಸಾ** (ಒಳ್ಳೆಯ ರೂಪ ಅಥವಾ ಆಕಾರವುಳ್ಳ) ಎಂಬ ಶಬ್ದವು ಈ ಅರ್ಥವನ್ನು ಸಮರ್ಥಿಸುವುದು. ಏಕೆಂದರೆ, ರಾತ್ರಿ ಮತ್ತು ಪ್ರಾತಃಕಾಲಗಳು ಕಾಲವಿಭಾಗಗಳಾದ್ದರಿಂದ ಇವುಗಳಿಗೆ ರೂಪವಾಗಲಿ, ಆಕಾರವಾಗಲಿ ಇರುವುದಿಲ್ಲ. ಆ ಕಾಲದ ಅಭಿಮಾನಿದೇವತೆಗಳೆಂದು ಹೇಳುವ ಪಕ್ಷದಲ್ಲಿ ಆ ದೇವತೆಗಳಿಗೆ ರೂಪವನ್ನು ನಿರ್ದೇಶಿಸಬಹುದು. ಈ ಋಕ್ಕಿನಲ್ಲಿ ಆರೀತಿ ನಿರ್ದೇಶವಿರುವುದರಿಂದ ಇಲ್ಲಿ ಆ ಕಾಲಗಳ ಅಭಿಮಾನಿದೇವತೆಗಳನ್ನೇ ಪ್ರತಿಪಾದಿಸಿರುವುದೆಂದು ತಿಳಿಯಬೇಕು. **ನಕ್ತೋಷಾಸಾ** ಎಂಬ ಶಬ್ದದಲ್ಲಿರುವ ಷಕಾರವು ಛಂದಸ್ಸಿನ ಅನುಕೂಲಕ್ಕಾಗಿ ದೀರ್ಘವಾಗಿರುವುದು.

ಋ. ಸಂ. ೧-೧೪೭-೬ನೆಯ ಋಕ್ಕಿನಲ್ಲಿರುವ ಋತಸ್ಯ ಮಾತರಾ ಎಂಬ ವಿಶೇಷಣವು ಬಹು ಮುಖ್ಯವಾದುದು.

ದ್ರವತಾಂ ತ ಉಷಸಾ ವಾಜಯಂತೀ ಅಗ್ನೇ ವಾತಸ್ಯ ಪಥ್ಯಾಭಿರಚ್ಛ ।
ಋತ್ವೀಮಂಜಂತಿ ಪೂರ್ವ್ಯಂ ಹವಿರ್ಭಿರಾ ವಂಧುರೇವ ತಸ್ಥತುರ್ದುರೋಣೇ ॥

(ಋ. ಸಂ. ೩-೧೪-೩)

ಎಂಬ ಋಕ್ಕಿನಲ್ಲಿ ಯಜ್ಞಕ್ಕೂ ಅವರಿಗೂ ಇರತಕ್ಕ ನಿತ್ಯಸಂಬಂಧವು ವರ್ಣಿತವಾಗಿದೆ. ಅವರನ್ನು ಆಹ್ವಾನಿಸಿರುವ ಋಕ್ಕುಗಳಲ್ಲೆಲ್ಲಾ (ಇಂತಹ ಋಕ್ಕುಗಳು ಸುಮಾರು ಇಪ್ಪತ್ತಿವೆ) ಇತರ ದೇವತೆಗಳೊಡನೆ ಬಂದು ದರ್ಭಾಸನದ ಮೇಲೆ ಕುಳಿತುಕೊಳ್ಳಬೇಕೆಂದು ಪ್ರಾರ್ಥಿಸಿವೆ. ಅವರಲ್ಲೂ ಉಷಃಕಾಲದಲ್ಲಿಯೂ, ಸಾಯಂಕಾಲದಲ್ಲಿಯೂ ಪ್ರಜ್ವಲಿತನಾಗತಕ್ಕ ಅಗ್ನಿಯೊಡನೆ ಅತ್ಯಂತ ನಿಕಟವಾದ ಸಂಬಂಧವಿದೆ. ಆದುದರಿಂದಲೇ ಅವರು ನಮ್ಮ ನಡುವೆ ಅಗ್ನಿಯನ್ನು ಧರಿಸಿ ಹಿಡಿದಿರುವುದಾಗಿ ಅಲಂಕಾರಿಕವಾದ ವರ್ಣನೆಯು.

ನಕ್ತೋಷಾಸಾ ವರ್ಣಮಾಮೇಮ್ಯಾನೇ ಧಾಪಯೇತೇ ಶಿಶುಮೇಕಂ ಸಮೀಚೀ ।
ದ್ಯಾವಾಕ್ಷಾಮಾ ರುಕ್ಮೋ ಅಂತರ್ವಿ ಭಾತಿ ದೇವಾ ಅಗ್ನಿಂ ಧಾರಯನ್ದ್ರವಿಣೋದಾಂ ॥
(ಋ. ಸಂ. ೧-೯೬-೫)

ಇತ್ಯಾದಿ ಋಕ್ಕುಗಳಲ್ಲಿ **ಶಿಶು** ರೂಪನಾದ **ಅಗ್ನಿಗೆ** ಹವಿಃಪಾನಮಾಡಲು ಸಹಾಯಮಾಡುತ್ತಾರೆಂದು ತಿಳಿಸುತ್ತದೆ. ಈ ಸಂಬಂಧವಿರುವುದರಿಂದಲೇ ಅವರು ಯಜ್ಞಕರ್ತರ ಸಮೀಪವರ್ತಿನಿಯರೆಂದು ಹೇಳಲ್ಪಟ್ಟಿದ್ದಾರೆ. ಸಾಧಾರಣವಾಗಿ ಆಪ್ರೀಸೂಕ್ತಗಳಲ್ಲೂ ಸಹ ಈ ಅಂಶದ ವರ್ಣನೆಯು ಪುನರಾವರ್ತಿತವಾಗಿದೆ. ಉದಾಹರಣೆಗೆ—

ಅಸುಷ್ವಯಂತೀ ಯಜತೇ ಉಷಾಕೇ ಉಷಾಸಾನಕ್ತಾ ಸದತಾಂ ನಿ ಯೋನೌ ।
ದಿವ್ಯೇ ಯೋಷಣೇ ಬೃಹತೀ ಸುರುಕ್ಮೇ ಅಧಿ ಶ್ರಿಯಂ ಶುಕ್ರಪಿಶಂ ದಧಾನೇ ॥
(ಋ. ಸಂ. ೧೦-೧೧೦-೬)

ಎಂಬ ಆಪ್ರೀ ಸೂಕ್ತದ ಋಕ್ಕಿನಲ್ಲಿಯೂ ಇದೇ ವಿಷಯವು ಹೇಳಲ್ಪಟ್ಟಿವೆ.

ಉಷಾಸಾನಕ್ತಾ ದೇವತೆಗಳಿಗೆ ಯಜ್ಞಕಾರ್ಯಗಳಲ್ಲಿ ಗೌಣವಾದ ಸ್ಥಾನವಿಲ್ಲದೇ ಅತಿ ಮುಖ್ಯವಾದ ಸ್ಥಾನ ಲಭಿಸುವುದೆಂದು ಈ ಅಂಶದಿಂದ ತಿಳಿಯುತ್ತದೆ. ಈ ಪ್ರಧಾನವಾದ ಸ್ಥಾನಲಾಭವು,

ಹೋತಾಯಕ್ಷದುಷಾಸಾನಕ್ತಾ ಬೃಹತೀ ಸುಪೇಶಸಾ ನ್ಯಗ್ಂ ಪತಿಭ್ಯೋ ಯೋನಿಂ ಕೃಣ್ವಾನೇ ।
ಸಗ್ಂ ಸ್ಮಯಮಾನೇ ಇಂದ್ರೇಣ ದೇವ್ಯೈರೇದಂ ಬರ್ಹಿಃ ಸೀದತಾಂ ವೀತಾಮಾಜ್ಯಸ್ಯ ಹೋತರ್ಯಜ ॥
(ತೈ. ಬ್ರಾ. ೩-೬-೨೧)

ಎಂಬ ಪ್ರೈಷಸೂಕ್ತದ ಮಂತ್ರದಲ್ಲಿ ಸೂಚಿತವಾಗಿ ಉಷಾನಕ್ತರು ಕೇವಲ ಅಗ್ನಿಯೊಡನೆ ಮಾತ್ರವಲ್ಲದೇ ಇಂದ್ರಾದಿ ದೇವತೆಗಳೊಡನೆಯೂ ದರ್ಭಾಸನದ ಮೇಲೆ ಕುಳಿತುಕೊಳ್ಳಬೇಕೆಂಬ ಪ್ರಾರ್ಥನೆಯಿದೆ. ಐತರೇಯಬ್ರಾಹ್ಮಣದಲ್ಲಿ ಇವರನ್ನು **ಅಹೋರಾತ್ರೇ** ಎಂದು ಸಂಭೋದಿಸಿದೆ. ನಿರುಕ್ತಕಾರರು ೮-೧೧ ರಲ್ಲು ಈ ದೇವತೆಗಳ ಸ್ವರೂಪವನ್ನು ವಿವರಿಸಿದ್ದಾರೆ. **ಉಷಸ್** ಮತ್ತು **ನಕ್ತಾ** ಎಂಬ ಎರಡು ಪದಗಳ ನಿಷ್ಪತ್ತಿಯನ್ನೂ, ಈ ದೇವತೆಗಳ ಸ್ವರೂಪವನ್ನು ನಿರುಕ್ತಕಾರರು ಹೇಳಿರುವುದನ್ನು ಹಿಂದೆಯೇ ತಿಳಿಸಿದೆ. ಬೃಹದ್ದೇವತೆಯಲ್ಲೂ ಸಹ, ಇವರನ್ನು ಈ ರೀತಿ ವರ್ಣಿಸಿದೆ.

ನಕ್ತೋಷಾಸೌ ಚ ಯೇ ದೇವ್ಯಾವಾಗ್ನೇಯ್ಯಾವೇವ ತೇ ಸ್ಮೃತೇ ।
ಶ್ಯಾವ್ಯಾಗ್ನೇಯೀ ಹಿ ಕಾಲಸ್ಯ ತಸ್ಯೈವೋಷಾಃ ಕಲೇವ ತು ॥
(ಬೃ. ದೇ. ೩-೮)

ಉಷಸ್ಸು ಮತ್ತು **ನಕ್ತಾ** ಈ ಎರಡು ದೇವತೆಗಳೂ ಸಹ **ಅಗ್ನಿ** ಸಂಬಂಧಿಗಳೆಂದು ಪ್ರಸಿದ್ಧವಾಗಿದೆ. ಇವುಗಳಲ್ಲಿ **ಶ್ಯಾವಿಯು** (ರಾತ್ರಿದೇವತೆ ೧-೭೧-೧) ಅಗ್ನಿಯೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರುವುದೂ, ಮತ್ತು

ಉಷಃ ಕಸ್ಮಾದುಚ್ಛತೀತಿ ಸತ್ಯಾ ರಾತ್ರೇರಪರಃ ಕಾಲಃ (ನಿ. ೨-೧೪) ಎಂಬ ನಿರುಕ್ತವಾಕ್ಯದಿಂದ **ಉಷಸ್ಸು** ಆ ರಾತ್ರಿಯ ಅಪರಕಾಲವೆಂದೂ ತಿಳಿದ ವಿಷಯವಾಗಿದೆ.

ತಮು ಉಚ್ಛತ್ಯುಷಾ ನಕ್ತಾನಕ್ತೇಮಾಂ ಹಿಮಬಿಂದುಭಿಃ ।
ಅಪಿ ವಾವ್ಯಕ್ತವರ್ಣೇತಿ ನಇದ್ ಪೂರ್ವಾಂಚೀರಿದಂ ಭವೇತ್ ॥
(ಬೃ. ದೇ. ೩-೯)

ಈ ಇಬ್ಬರಲ್ಲಿ ಉಷಸ್ಸು ಕತ್ತಲನ್ನು ಓಡಿಸುತ್ತಾಳೆ. ರಾತ್ರಿಯು ಹಿಮಬಿಂದುಗಳಿಂದ ಎಲ್ಲವನ್ನೂ ನೆನೆಯುವಂತೆಯೂ ವ್ಯಾಪ್ತವಾಗುವಂತೆಯೂ ಮಾಡುತ್ತಾಳೆ. ಅಥವಾ ನಿರ್ದಿಷ್ಟವಾದ ವರ್ಣವಿಲ್ಲದಿರುವುದರಿಂದ **ನಞ್** ಪದದೊಡನೆ **ಅಞ್ಜುನ್** ಧಾತುವು ಸೇರಿ ಅವ್ಯಕ್ತವರ್ಣರೆಂಬ ಅರ್ಥವನ್ನು ಕೊಡುತ್ತದೆ.

ಸಾ ಹಿ ದೋಷಾ ಭವತ್ಯಾದೌ ನಿಶೀಥೇ ಸಾ ತಮಸ್ವತೀ ।
ನಾಮ್ನಾ ಭವತ್ಯುಷಾಶ್ಚೈವ ಸೈಷಾ ಪ್ರಾಗುದಯಾದ್ರವೇಃ ॥
(ಬೃ. ದೇ. ೩-೧೦)

ಪ್ರಾರಂಭದಲ್ಲಿ ಈ ದೇವತೆಗೆ (ಪ್ರ) **ದೋಷಾ** ಎಂದೂ, ಮಧ್ಯರಾತ್ರಿಯಲ್ಲಿ **ತಮಸ್ವತೀ**ಯೆಂದೂ, ಸೂರ್ಯೋದಯಕ್ಕೆ ಮೊದಲು **ಉಷಸ್ಸೆಂದೂ** ಹೆಸರು. **ದೋಷಾ ತಮಸ್ವತೀ, ಶ್ಯಾವಿ:, ನಕ್ತಾ** ಇವೆಲ್ಲಾ ರಾತ್ರಿ ನಾಮಗಳೆಂದು ನಿಘಂಟುವಿನಲ್ಲಿ ಪಠಿತವಾಗಿದೆ. (ನಿಘಂಟು ೧-೭)

ಋಕ್ಸಂಹಿತೆಯ ಇತರ ಕಡೆಗಳಲ್ಲಿ **ತಂತುಂ ತತಂ ಸಂವಯಂತೀ** (ಋ. ಸಂ. ೨-೩-೬) ಇತ್ಯಾದಿ ವಿಶೇಷಣಗಳಿಂದ ಯಜ್ಞದ ವಿಸ್ತರಣೆಗೆ **ಉಷಾಸಾನಕ್ತ**ಗಳ ಸಹಾಯವನ್ನು ವಿವರಿಸಿದೆ.

ಸಂಹಿತಾಪಾಠಃ

ಊರ್ಧ್ವೋ ಗ್ರಾವಾ ಬೃಹದಗ್ನಿಃ ಸಮಿದ್ಧಃ ಪ್ರಿಯಾ ಧಾಮಾನ್ಯದಿತೇ-
ರುಪಸ್ಥೇ ।
ಪುರೋಹಿತಾವೃತ್ವಿಜಾ ಯಜ್ಞೇ ಅಸ್ಮಿನ್ ವಿದುಷ್ಟರಾ ದ್ರವಿಣಮಾ
ಯಜೇಥಾಂ ॥ ೭ ॥

ಪದಪಾಠಃ

ಊರ್ಧ್ವಃ । ಗ್ರಾವಾ । ಬೃಹತ್ । ಅಗ್ನಿಃ । ಸಂಽಇದ್ಧಃ । ಪ್ರಿಯಾ । ಧಾಮಾನಿ । ಅದಿತೇಃ । ಉಪಽಸ್ಥೇ ।
ಪುರಃಽಹಿತೌ । ಋತ್ವಿಜಾ । ಯಜ್ಞೇ । ಅಸ್ಮಿನ್ । ವಿದುಃಽತರಾ । ದ್ರವಿಣಂ । ಆ । ಯಜೇಥಾಂ ॥ ೭ ॥

ಸಾಯಣಭಾಷ್ಯಂ

ಗ್ರಾವಾ ಸೋಮಾಭಿಷವಾಯ ಯದೋರ್ಧ್ವ ಉನ್ನತೋ ಭವತಿ ಯದಾ ಚ ಬೃಹನ್ಮಹಾನಗ್ನಿಃ ಸಮಿದ್ಧೋ ಹವಿರ್ಭಿಃ ಸಮ್ಯಗ್ದೀಪ್ತೋ ಭವತಿ । ತಥಾ ಪ್ರಿಯಾಣಿ ದೇವಾನಾಂ ಸೋಮಾದಿಹವಿಷ್ಪ್ರದಾ-

ನೇನ ಪ್ರೀಣಯಿತ್ನೋ ಣಿ ಧಾಮಾನಿ ಹವಿಷಾಂ ಧಾರಕಾಣಿ ಯೇಜ್ಞಪಾತ್ರಾಣ್ಯದಿತೇಃ ಪೃಥಿವ್ಯಾ ಉಪಸ್ಥೇ ಯೇಜ್ಞಸದನೇ ಯದಾಸಾದಿತಾನಿ ಭವಂತಿ ತದಾನೀಂ ಹೇ ಋತ್ವಿಜೌ ದೇವ್ಯೌ ಪುರೋಹಿತೌ ಹೋತಾರೌ ಪುರತೋ ನಿಹಿತೌ ವಿದುಷ್ಪರಾ ॥ ಛಾಂದಸಂ ಸಂಪ್ರಸಾರಣಂ ॥ ವಿದ್ವತ್ತಮೌ ಯುವಾಮಸ್ಮಿನ್ಯಜ್ಞೇ ದ್ರವಿಣಂ ಧನಮಾ ಯಜೇಥಾಂ । ಯಜಿರ್ದಾನಾರ್ಥಃ । ಅಸ್ಮಭ್ಯಮಾಭಿಮುಖ್ಯೇನ ಪ್ರಯಚ್ಛತಂ ॥

ಪ್ರತಿಪದಾರ್ಥ

ಗ್ರಾವಾ—ಸೋಮವನ್ನು ಹಿಂಡುವ ಕಲ್ಲುಗಳು । **ಊರ್ಧ್ವಃ**—ಯಾವಾಗ ಮೇಲ್ಮುಖವಾಗುವುವೋ ಆಗ । **ಬೃಹತ್**—ಮಹತ್ಸ್ವರೂಪವುಳ್ಳ । **ಅಗ್ನಿಃ**—ಅಗ್ನಿಯು । **ಸಮಿದ್ಧಃ**—ಪ್ರಜ್ವಲಿತನಾಗುತ್ತಾನೆ । **ಪ್ರಿಯಾ**—ದೇವತೆಗಳಿಗೆ ಪ್ರೀತಿಕರವಾದ । **ಧಾಮಾನಿ**—ಹವಿಸ್ಸನ್ನು ಹೊಂದಿರುವ ಪಾತ್ರೆಗಳು । **ಅದಿತೇಃ**—ಪೃಥ್ವಿಯ । **ಉಪಸ್ಥೇ**—ಯಜ್ಞಸ್ಥಾನದಲ್ಲಿ ಸಿದ್ಧವಾಗುತ್ತವೆ (ಆ ಕೂಡಲೇ) । **ಋತ್ವಿಜಾ**—ಋತ್ವಿಗ್ರೂಪರೂ । **ಪುರೋಹಿತಾ**—ಹೋತೃರೂಪರೂ । **ವಿದುಷ್ಪರಾ**—ವಿದ್ಯಾವತಿಯರೂ ಆದ ಎಲೈ ದೇವತೆಗಳೇ । **(ಯುವಾಂ**—ನೀವು) । **ಅಸ್ಮಿನ್ ಯೇಜ್ಞೇ**—ಈ ಯಜ್ಞದಲ್ಲಿ । **ದ್ರವಿಣಂ**—ಧನವನ್ನು । **ಆ ಯಜೇಥಾಂ**—ಕೊಡುತ್ತೀರಿ.

ಭಾವಾರ್ಥ

ಸೋಮವನ್ನು ಹಿಂಡುವ ಕಲ್ಲುಗಳು ಯಾವಾಗ ಮೇಲ್ಮುಖವಾಗುವುವೋ ಆಗ ಮಹತ್ಸ್ವರೂಪವುಳ್ಳ ಅಗ್ನಿಯು ಪ್ರಜ್ವಲಿತನಾಗುತ್ತಾನೆ. ದೇವತೆಗಳಿಗೆ ಪ್ರೀತಿಕರವೂ, ಹವಿಸ್ಸನ್ನು ಹೊಂದಿರುವುವೂ ಆದ ಪಾತ್ರೆಗಳು ಯಜ್ಞಸ್ಥಾನದಲ್ಲಿ ಸಿದ್ಧವಾಗುತ್ತವೆ. ಆ ಕೂಡಲೇ ಋತ್ವಿಗ್ರೂಪರೂ, ಹೋತೃರೂಪರೂ, ವಿದ್ಯಾವತಿಯರೂ ಆದ ಎಲೈ ದೇವತೆಗಳೇ, ನೀವು ಈ ಯಜ್ಞದಲ್ಲಿ ಧನವನ್ನು ಕೊಡುತ್ತೀರಿ.

English Translation

(When) the grinding-stone is uplifted, the mighty Agni kindled, the acceptable vessels (ready) on the lap of earth ; (then), most learned priests, who take the foremost place, bestow wealth upon us at tkis sacrifice.

ವಿಶೇಷವಿಷಯಗಳು

ದೇವಸಂಬಂಧಿನೌ ಹೋತಾರೌ । **ಅಯಂ ಚ ಮಧ್ಯಮಸ್ಥಾನಶ್ಚ ಇತ್ಯುಭೌ** ದೇವಸಂಬಂಧಿಗಳೂ ಹೋತೃಗಳೂ ಆದ ಪಾರ್ಥಿವಾಗ್ನಿ ಮತ್ತು ಅಂತರಿಕ್ಷಸ್ಥವಾದ ಅಗ್ನಿ ಎಂಬ ಅಗ್ನಿಯ ಎರಡು ರೂಪಗಳೆಂದು ಸಾಯಣರು ಅರ್ಥಮಾಡಿದ್ದಾರೆ. ಆಧುನಿಕವಾದ ಕೆಲವು ಪಂಡಿತರು ಇವಕ್ಕೆ ಭಿನ್ನವಾದ ಅರ್ಥವನ್ನು ಹೇಳಿ ತಮ್ಮಲ್ಲೇ ಅಭಿಪ್ರಾಯ ಭೇದವನ್ನೂ ತೋರಿದ್ದಾರೆ. Gelder ಎಂಬ ಪಂಡಿತನು ಯಜ್ಞಕರ್ತನಾದ **ಹೋತೃ** ಮತ್ತು ಅವನ **ಅಗ್ನಿ**ಯೆಂದೂ Haug ಎಂಬುವನು **ಹೋತೃ** ಮತ್ತು **ಅಧ್ವರ್ಯು**ವೆಂದೂ Oldenberg ಎಂಬುವನು ಹೋತೃ ಮತ್ತು ಅವನ ಸಹಾಯಕನಾದ ಮೈತ್ರಾವರುಣನೆಂದೂ ಅರ್ಥಮಾಡಿದ್ದಾರೆ. ಇವೊಂದೂ ಸಮಂಜಸವಾಗಿಲ್ಲ.

ಯಜ್ಞವನ್ನು ನೆರವೇರಿಸುವುದೇ ಈ ಹೋತೃಗಳ ಮುಖ್ಯಕರ್ತವ್ಯವೆಂದು **ಯಜ್ಞಂ ನೋ ಯಕ್ಷತಾಮಿಮಂ** । ಎಂದು ೧-೧೩-೪, ೧-೧೪೮-೭ ನೇ ಋಕ್ಕುಗಳಲ್ಲೂ, **ದೇವಾನ್ಯಜಂತಾವೃತುಥಾ** । ಎಂದು ೭-೩-೭ ನೇ

ಋಕ್ಕಿನಲ್ಲೂ ಹೇಳಿದೆ. ಈ ಕರ್ತವ್ಯಜ್ಞಾಪನವು ಮಾನವನಾದ ಹೋತೃವಿಗೆ ಅನ್ವಯಿಸತಕ್ಕದ್ದು ಮತ್ತು ಅಗ್ನಿಯನ್ನು ಕುರಿತು ಅಲಂಕರಿವಾಗಿ ಸಂಭೋದಿಸಿದೆ.

ದೈವ್ಯಾ ಹೋತಾರಾ ಎಂಬ ಶಬ್ದದ ವಿಷಯದಲ್ಲಿ ಯಾಸ್ಕರ ವಿವರಣೆಯು—

ದೈವ್ಯಾಹೋತಾರಾ ದೈವ್ಯೌಹೋತಾರಾವಯಂ ಚಾಗ್ನಿರಸೌ ಚ ಮಧ್ಯಮಃ ॥

(ನಿ. ೮-೧೨)

ಎಂದರೆ ಈ ಶಬ್ದವು ಅಗ್ನಿಯನ್ನೇ ಸೂಚಿಸುವುದು, ಅಗ್ನಿಯು ದೇವತೆಗಳನ್ನು ಆಹ್ವಾನ ಮಾಡುವುದರಿಂದ ದೇವತೆಗಳಿಗೂ, ಮನುಷ್ಯರಿಗೂ ಅಗ್ನಿಯು ಮಧ್ಯಸ್ಥನಾಗಿರುವನು ಎಂದು ಈ ವಿಷಯದಲ್ಲಿ ಒಂದು ಉದಾಹರಣೆಯನ್ನು ಕೊಟ್ಟಿರುವರು.

ದೈವ್ಯಾ ಹೋತಾರಾ ಪ್ರಥಮಾ ಸುವಾಚಾ ಮಿಮಾನಾ ಯಜ್ಞಂ ಮನುಷೋ ಯಜಧ್ಯೈ ।
ಪ್ರಚೋದಯಂತಾ ವಿದಥೇಷು ಕಾರೂ ಪ್ರಾಚೀನಂ ಜ್ಯೋತಿಃ ಪ್ರದಿಶಾ ದಿಶಂತಾ ॥

(ಋ. ಸಂ. ೧೦-೧೧೦-೭)

ಇದಕ್ಕೆ ದುರ್ಗಾಚಾರ್ಯಕೃತವ್ಯಾಖ್ಯಾನವು—

ಯಾವೇತೌ ದೈವ್ಯೌ ಹೋತಾರೌ । ದೇವೇಷು ಭವೌ ದೇವ್ಯೌ ದೇವಾವೇವ ದೈವ್ಯೌ । ಸ್ವಾರ್ಥೇ ಏವ ತದ್ಧಿತಃ । ಮನುಷ್ಯಹೋತಾರೌ ಅಪೇಕ್ಷ್ಯ । ದೈವ್ಯೌ ಹೋತಾರೌ ಹೋತೃಮೈತ್ರಾವರುಣೌ ಇತಿ ವಿಶೇಷಣಂ । ಹೋತಾರಾ ಹೋತಾರೌ ಆಹ್ವಾತಾರೌ ದೇವಾನಾಂ ವಾಯ್ವಗ್ನೀ । ಪ್ರಥಮಾ ಪ್ರಥಮೌ ಮುಖ್ಯೌ ಮನುಷ್ಯಹೋತಾರಾವಪೇಕ್ಷ್ಯ । ಸುವಾಚಾ ಸುವಾಚೌ, ಪ್ರಶಸ್ತವಾಚೌ, ಸುಸ್ತುತೌ । ಮಿಮಾನಾ ಯಜ್ಞಂ ಯಜ್ಞನಿರ್ಮಾತಾರೌ ನಿತ್ಯಂ । ಮನುಷಃ ಮನುಷ್ಯಸ್ಯ ಯಜಧ್ಯೈ ಯಜನಾಯ । ಪ್ರಯೋದಯಂತಾ ಪ್ರಚೋದಯಮಾನೌ । ವಿದಥೇಷು ಯಜ್ಞೇಷು । ಕಾರೂ ಕರ್ತಾರೌ । ಇತ್ಯಾದಿ ॥

ಇವರ ಮುಖ್ಯಾಭಿಪ್ರಾಯವೇನೆಂದರೆ—ದೇವತೆಗಳಿಗೆ ಅಗ್ನಿವಾಯುಗಳು ಹೋತೃಗಳೆಂದೂ, ಮನುಷ್ಯರಿಗೆ ಹೋತೃ ಮೈತ್ರಾವರುಣರೆಂಬ ಋತ್ವಿಜರು ಹೋತೃಗಳೆಂದೂ ಪ್ರಸಿದ್ಧವು. ಅಗ್ನಿ ಅಥವಾ ಅಗ್ನಿವಾಯುಗಳು ದೇವತೆಗಳಿಗೂ ಮನುಷ್ಯರಿಗೂ ಮಧ್ಯದಲ್ಲಿದ್ದು ಅವರಿಗೆ ಸಂಬಂಧವನ್ನು ಕಲ್ಪಿಸುವುದರಿಂದ ಅಗ್ನಿಯು ಮಧ್ಯಮನೆಂದೂ ಹೇಳಲ್ಪಡುವನು.

ದೈವ್ಯಾ ಹೋತಾರೌ ಎಂಬ ದೇವತೆಗಳ ಹೆಸರು ಆಪ್ರೀಸೂಕ್ತಗಳಲ್ಲಲ್ಲದೆ—

ತ್ವಷ್ಟಾರಂ ವಾಯುಮೃಭವೋ ಯ ಓಹತೇ ದೈವ್ಯಾ ಹೋತಾರಾ ಉಷಸಂ ಸ್ವಸ್ತಯೇ ।

(ಋ. ಸಂ. ೧೦-೬೫-೧೦)

ದೈವ್ಯಾ ಹೋತಾರಾ ಪ್ರಥಮಾ ಪುರೋಹಿತ ಋತಸ್ಯ ಪಂಥಾಮನ್ವೇಮಿ ಸಾಧುಯಾ ।

(ಋ. ಸಂ. ೧೦-೬೬ ೧೩)

ಎಂಬ ಎರಡು ಋಕ್ಕುಗಳಲ್ಲಿ ಪಠಿತವಾಗಿರುವುದು. ಋ. ಸಂ. ೭-೨.೭ ನೆಯ ಋಕ್ಕಿನಲ್ಲಿ **ಜಾದವೇದಸಾ** ಎಂದೂ ಋ. ಸಂ. ೧೦-೭೦-೭ ನೆಯ ಋಕ್ಕಿನಲ್ಲಿ **ಪುರೋಹಿತೌ** ಎಂದೂ ಇವರನ್ನು ಕರೆದಿದ್ದಾರೆ. ಮತ್ತು ಮೇಲೆ ಕೇಳಿದ ಋಕ್ಕುಗಳಲ್ಲಿರುವ **ಮಿಮಾನಾ ಯಜ್ಞಂ ಮನುಷೋ ಯಜಧ್ಯೈ, ಯಜ್ಞೇಷು ಮಾನುಷೇಷು ಕಾರೂ** ಮತ್ತು **ಪ್ರಚೋದಯಂತಾ ವಿದಥೇಷು ಕಾರೂ** ಎಂಬ ಶಬ್ದಗಳು, ಈ ದೇವತೆಗಳು, ಮನುಷ್ಯರು ಮಾಡುವ ಯಜ್ಞಗಳನ್ನು ನಿರ್ವಹಿಸುವವರು ಎಂದು ಹೇಳಿರುವುದರಿಂದ ಇವರನ್ನು ಪುರೋಹಿತರೆಂದು ಕರೆದಿರುವುದು ಸಹಜವಾಗಿದೆ.

ದೇವತೆಗಳಲ್ಲಿ ಹೋತೃಗಳು ಅಗ್ನಿವಾಯುಗಳಾದರೆ, ಮನುಷ್ಯರಲ್ಲಿ ಹೋತೃ, ಇವನ ಸಹಾಯಕ ಋತ್ವಿಜನಾದ ಮೈತ್ರಾವರುಣನು ಹೋತೃಗಳೆಂದು ಕರೆಯಲ್ಪಡುವರು. ಈ ಮೈತ್ರಾವರುಣನು ಪ್ರೈಷಮಂತ್ರಗಳಿಂದ ಇತರ ಋತ್ವಿಜರಿಗೆ ಆಯಾಯ ಕಾರ್ಯಗಳನ್ನು ವಾಡುವಂತೆ ಆಜ್ಞಾಪಿಸುವನು. ಯಜುರ್ವೇದದಲ್ಲಿ (ತೈ. ಸಂ. ೬.೧.೪ ೨) **ಮೈತ್ರಾವರುಣೋ ಹಿ ಪುರಸ್ತಾದೃತ್ವಿಗ್ಭ್ಯೋ ವಾಚಂ ವಿಭಜತಿ**—ಎಂದು ಹೇಳಿರುವುದು.

ಹೀಗೆ ಕೆಲವು ವಿಶೇಷಣಗಳು ಎರಡು ಹೋತೃಗಳಿಗೂ ಸಮಾನವಾಗಿದ್ದರೂ ಮಾನವನಾದ ಹೋತೃವಿನ ಕರ್ತವ್ಯವನ್ನೇ ಸೂಚಿಸುವಂತೆ ಇನ್ನು ಕೆಲವು ವಿಶೇಷಣಗಳೂ ಸಹ ಇಬ್ಬರಿಗೂ ಸಾಧಾರಣವಾಗಿದ್ದರೂ ಅವು **ದೇವ ಹೋತೃವಾದ** ಅಗ್ನಿಯ ಕರ್ತವ್ಯಗಳನ್ನೇ ವರ್ಣಿಸುತ್ತವೆ. ಉದಾಹರಣೆಗೆ—

ದೈವ್ಯಾ ಹೋತಾರಾ ಪ್ರಥಮಾನ್ಯೃಂಜೇ ಸಪ್ತ ಪೃಕ್ಷಾಸಃ ಸ್ವಧಯಾ ಮದಂತಿ ।
ಋತಂ ಶಂಸಂತ ಋತಮಿತ್ತ ಆಹುರನು ವ್ರತಂ ವ್ರತಪಾ ದೀಧ್ಯಾನಾಃ ।

(ಋ. ಸಂ. ೩-೪-೭)

ಎಂಬ ಋಕ್ಕಿನಲ್ಲಿ **ಪ್ರಥಮಾ** ಎಂಬ ವಿಶೇಷಣವು ದೇವಹೋತೃವಾದ ಅಗ್ನಿಸರವೇ ಆಗಿದೆ ಎಂಬುದರಲ್ಲಿ ಸಂದೇಹವಿಲ್ಲ. ೧-೧೩-೪ ರಲ್ಲು **ಹೋತಾ ಮನುರ್ಹಿತಃ** ಎಂದು ಅಗ್ನಿಯ ವಿಶೇಷಣವಾಗಿದೆ. ಈ ಎರಡು ಹೋತೃಗಳಿಗೂ ಇರತಕ್ಕ ನಿಷ್ಕರ್ಷವಾದ ವ್ಯತ್ಯಾಸವನ್ನು **ಪ್ರೈಷ**ಸೂಕ್ತದಲ್ಲಿ ಈರೀತಿಯಾಗಿ ಹೇಳಿದೆ.

ಹೋತಾಯಕ್ಷದ್ದೈವ್ಯಾ ಹೋತಾರಾ ಮಂದ್ರಾ ಪೋತಾರಾ ಕವೀ ಪ್ರಚೇತಸಾ । ಸ್ವಿಷ್ಟಮದ್ಯಾನ್ನಃ
ಕರದಿಷಾ ಸ್ವಭಿಗೂರ್ತಮನ್ಯ ಊರ್ಜಾ ಸತವಸೇಮಂ ಯಜ್ಞಂ ದಿವಿ ದೇವೇಷು ಧತ್ತಾಂ
ವೀತಾಮಾಜ್ಯಸ್ಯ ಹೋತರ್ಯಜ ॥

(ತೈ. ಬ್ರಾ. ೩-೬-೨ ೨)

ಎಂಬ ವಾಕ್ಯದಲ್ಲಿ ಒಬ್ಬ ಹೋತೃವು ಅನ್ನರೂಪವಾದ ಹವಿಸ್ಸಿನಿಂದ ಯಜ್ಞವನ್ನು ಸ್ವೀಕಾರಾರ್ಹವನ್ನಾಗಿ ವಾಡಲೆಂದೂ ಇನ್ನೊಬ್ಬನು ಈ ಯಜ್ಞವನ್ನು ಸ್ವರ್ಗದಲ್ಲಿ ದೇವತೆಗಳ ನಡುವೆ ಸ್ಥಾಪಿಸಲೆಂದೂ ಸೂಚಿಸಿದೆ. ಈ ಕಾರ್ಯ ವಿನಿಮಯವು ವಾನವನಾವ ಹೋತೃವಿಗೂ ದೇವಹೋತೃವಾದ ಅಗ್ನಿಗೂ ಇರುವ ವ್ಯತ್ಯಾಸವನ್ನು ತಿಳಿಸುತ್ತದೆ.
ಐತರೇಯ ಬ್ರಾಹ್ಮಣದಲ್ಲಿ.

ದೈವ್ಯಾ ಹೋತಾರಾ ಯಜತಿ ಪ್ರಾಣಾಪಾನೌ ವೈ ದೈವ್ಯಾ ಹೋತಾರಾ ಪ್ರಾಣಾಪಾನಾನೇವ
ತತ್ಪ್ರೀಣಾತಿ ಪ್ರಾಣಾಪಾನೌ ಯಜಮಾನೇ ಥದಾತಿ ॥

(ಐ. ಬ್ರಾ. ೨-೪)

ಎಂದು ಈ ಹೋತೃಗಳಿಗೂ ಪ್ರಾಣಾಪಾನಗಳಿಗೂ ತಾದಾತ್ಮ್ಯವನ್ನು ಹೇಳಿ, ಈ ಮಂತ್ರವನ್ನು ಪಠಿಸತಕ್ಕವನು ಯಜ್ಞ ಕರ್ತನಿಗೆ ಪ್ರಾಣಾಪಾನಗಳ ಸುಸ್ಥಿತಿಯನ್ನು ಸಂಪಾದಿಸಿ ಕೊಡುತ್ತಾನೆಂದು ಹೇಳಿದೆ. **ನಿರುಕ್ತದಲ್ಲಿ**—

ದೈವ್ಯಾ ಹೋತಾರಾ ದೈವ್ಯೌ ಹೋತಾರಾವಯಂ ಚಾಗ್ನಿರಸೌ ಚ ಮಧ್ಯಮಃ ।

(ನಿ. ೮-೧೨)

ಎಂದು ಸಾಯಣರ ಅರ್ಥವನ್ನು ಸಮರ್ಥಿಸುವ ಆಧಾರವಾಕ್ಯಗಳಿಂದ **ಪಾರ್ಥಿವ**ವಾದ **ಅಗ್ನಿ** ಮತ್ತು ಅಂತರಿಕ್ಷಸ್ಥನಾದ **ಅಗ್ನಿ**ಯೆಂದು ಹೇಳಿದೆ. **ಬೃಹದ್ದೇವತೆ**ಯಲ್ಲಿಯಲ್ಲಿಯೂ ಇದೇ ಅಭಿಪ್ರಾಯವನ್ನನುಮೋದಿಸುತ್ತಾ,

ದೈವ್ಯಾವಿತಿ ತು ಹೋತಾರಾವಗ್ನೀ ಪಾರ್ಥಿವಮಧ್ಯಮೌ ।
ದಿವ್ಯಾದಗ್ನೇರ್ಹಿ ಜಜ್ಞಾತೇ ದೈವ್ಯೌ ತೇನೇಹ ಜನ್ಮನಾ ॥
(ಬೃ. ದೇ. ೩-೧೧)

ಈ ಇಬ್ಬರು ಹೋತೃಗಳೂ ಪಾರ್ಥಿವ ಮತ್ತು ಮಧ್ಯಮಸ್ಥಾನರಾದ (ಅಂತರಿಕ್ಷಸ್ಥವಾದ) ಅಗ್ನಿಗಳೆಂದು ಹೇಳಿದ್ದಾರೆ.

ಸಂಹಿತಾಪಾಠಃ

ತಿಸ್ರೋ ದೇವೀರ್ಬರ್ಹಿರಿದಂ ವರೀಯ ಆ ಸೀದತ ಚಕೃಮಾ ವಃ ಸ್ಯೋನಂ ।
ಮನುಷ್ವದ್ಯಜ್ಞಂ ಸುಧಿತಾ ಹವೀಂಷೀಳಾ ದೇವೀ ಘೃತಪದೀ ಜುಷಂತ ॥ ೮ ॥

ಪದಪಾಠಃ

ತಿಸ್ರಃ । ದೇವೀಃ । ಬರ್ಹಿಃ । ಇದಂ । ವರೀಯಃ । ಆ । ಸೀದತ । ಚಕೃಮ । ವಃ । ಸ್ಯೋನಂ ।
ಮನುಷ್ವತ್ । ಯಜ್ಞಂ । ಸುಽಧಿತಾ । ಹವೀಂಷಿ । ಇಳಾ । ದೇವೀ । ಘೃತಽಪದೀ । ಜುಷಂತ ॥ ೮ ॥

ಸಾಯಣಭಾಷ್ಯಂ

ಹೇ ತಿಸ್ರೋ ದೇವೀರಿಳಾದ್ಯಾಸ್ತಿಸ್ರೋ ದೇವ್ಯಃ ವರೀಯ ಉರುತರಮಿದಂ ಬರ್ಹಿರಾ ಸೀದತ ॥ ಕಾಲಾಧ್ವನೋರಿತಿ ದ್ವಿತೀಯಾ ॥ ಅತ್ಯಂತಂ ತಸ್ಮಿನ್ನಿಷೀದತ । ಕುತ ಏತತ್ ತತ್ರಾಹ। ವೋ ಯುಷ್ಮದರ್ಥಂ ಸ್ಯೋನಂ ವಿಸ್ತೀರ್ಣಮಿದಂ ಚಕೃಮ । ವಯಂ ಕೃತವಂತಃ ॥ ವಾಕ್ಯಭೇದಾದನಿಘಾತಃ ॥ ಇಳೈತನ್ನಾಮಿಕಾ ದೇವೀ ದ್ಯೋತಮಾನಾ ಸರಸ್ವತೀ ಘೃತಪದೀ ದೀಪ್ತಪದೋಪೇತಾ ಭಾರತೀ ಚೈತಾ ಮನುಷ್ವನ್ಮನೋರ್ಯಜ್ಞೇ ಯಥಾ ಹವೀಂಷ್ಯಸೇವಂತ ತದ್ವದಸ್ಮದೀಯಂ ಯಜ್ಞಂ ಸುಧಿತಾ ಸುಷ್ಠು ನಿಹಿತಾನಿ ಹವೀಂಷಿ ಚ ಜುಷಂತ । ಸೇವತಾಂ ॥

ಪ್ರತಿಪದಾರ್ಥ

ತಿಸ್ರಃ ದೇವೀಃ—ಇಳೆಯೇ ಮುಂತಾದ ಎಳೈ ಮೂರು ದೇವತೆಗಳೇ । **ವರೀಯಃ**—ಅತಿವಿಸ್ತೃತವಾದ । **ಇದಂ ಬರ್ಹಿಃ**—ಈ ದರ್ಭಾಸನದ ಮೇಲೆ । **ಆ ಸೀದತ**—ಕುಳಿತುಕೊಳ್ಳಿರಿ । **ವಃ**—ನಿಮಗಾಗಿ । **ಸ್ಯೋನಂ ಚಕೃಮ**—ಈ ಆಸನವನ್ನು ವಿಸ್ತಾರವಾಗಿ ಹರಡಿದ್ದೇವೆ । ಇಳಾ—ಇಳಾದೇವಿಯೂ । ದೇವೀ—ಪ್ರಕಾಶಮಾನಳಾದ ಸರಸ್ವತಿಯೂ । **ಘೃತಪದೀ**—ಪ್ರಕಾಶಮಾನವಾದ ಪಾದಗಳುಳ್ಳ ಭಾರತಿಯೂ । **ಮನುಷ್ವತ್**—ಮನುವಿನ ಯಜ್ಞದಲ್ಲಿ ಸ್ವೀಕರಿಸಿದಂತೆ । **ಯಜ್ಞಂ**—ನಮ್ಮ ಯಜ್ಞದಲ್ಲಿ । **ಸುಧಿತಾ**—ಉತ್ತಮವಾಗಿ ಸ್ಥಾಪಿತವಾದ । **ಹವೀಂಷಿ**—ಹವಿಸ್ಸುಗಳನ್ನು । **ಜುಷಂತ**—ಸೇವಿಸಲಿ.

ಭಾವಾರ್ಥ

ಇಳೆಯೇ ಮುಂತಾದ ಎಳೈ ದೇವತೆಗಳೇ, ಅತಿವಿಸ್ತೃತವಾದ ಈ ದರ್ಭಾಸನದ ಮೇಲೆ ಕುಳಿತುಕೊಳ್ಳಿರಿ. ನಿಮಗಾಗಿ ಈ ಆಸನವನ್ನು ವಿಸ್ತಾರವಾಗಿ ಹರಡಿದ್ದೇವೆ. ಇಳಾದೇವಿಯೂ, ಪ್ರಕಾಶಮಾನಳಾದ ಸರಸ್ವತಿಯೂ ಕಾಂತಿಯುತವಾವ ಪಾದಗಳುಳ್ಳ ಭಾರತಿಯೂ, ಮನುವಿನ ಯಜ್ಞದಲ್ಲಿ ಸ್ವೀಕರಿಸಿದಂತೆ ನಮ್ಮ ಈ ಯಜ್ಞದಲ್ಲಿ ಉತ್ತಮವಾಗಿ ಸ್ಥಾಪಿತವಾದ ಹವಿಸ್ಸುಗಳನ್ನು ಸೇವಿಸಲಿ.

English Translation

Sit down, you three goddesses, upon this broad barhis, we have spread it out for you; Ila, radiant (Saraswati) and bright-footed (Bharati) accept our sacrifice and well-presented oblations as if they were Manu's.

ವಿಶೇಷವಿಷಯಗಳು.

ಈ ಋಕ್ಕಿನಲ್ಲಿ ಮೂರು ದೇವತೆಗಳ ಗುಂಪನ್ನು ಉದ್ದೇಶಿಸಿ ಅವರನ್ನು ಯಜ್ಞಕ್ಕೆ ದಯಮಾಡಿಸಬೇಕೆಂದು ಪ್ರಾರ್ಥಿಸಿದೆ. ಪ್ರಕೃತವಾದ ಸೂಕ್ತವನ್ನೂ ಮತ್ತು ೧೦೧೪೬ನೇ ಸೂಕ್ತವನ್ನೂ ಬಿಟ್ಟು ಉಳಿದ ಎಲ್ಲಾ **ಅಪ್ರೀ** ಸೂಕ್ತಗಳಲ್ಲೂ ಸಹ ಈ ದೇವತೆಗಳನ್ನು ಒಟ್ಟಿಗೆ ಸೇರಿಸಿ **ತಿಸ್ರೋ ದೇವೀಃ** ಎಂದು ಸಾಮೂಹಿಕವಾಗಿ ನಿರ್ದೇಶಿಸಿದೆ. **ಇಳಾ, ಸರಸ್ವತೀ, ಭಾರತೀ** ಎಂಬುವರೇ ಈ ಮೂವರು ಈ ದೇವತೆಗಳ ಸ್ವರೂಪವೇನು ಎಂಬ ವಿಷಯದಲ್ಲಿ ಬಹಳವಾದ ಅಭಿಪ್ರಾಯ ಭೇದವಿದೆ. ೧೦೧೪೬ರಲ್ಲಿ **ಭಾರತೀ** ಎಂಬ ದೇವತೆಗೆ ಹೋತ್ರಾ, ಶುಚಿಃ (ಮನುಷ್ಯ, ದೇವೇಷು) ಅರ್ಪಿತಾ ಎಂಬ ವಿಶೇಷಣಗಳೂ, **ಸರಸ್ವತೀ** ಎಂಬ ದೇವತೆಗೆ **ಮಹೀ** ಎಂಬ ವಿಶೇಷಣವೂ ಇರುತ್ತದೆ. ಕೆಲವು ಸೂಕ್ತಗಳಲ್ಲಿ **ಮಹೀ** ಎಂಬ ಪದವು ವಿಶೇಷಣವಾಗಿದೆ. **ಭಾರತೀ** ದೇವತೆಯು ಪರ್ಯಾಯವಾಗಿ ಉಪಯೋಗಿಸಲ್ಪಟ್ಟಿದೆ. ಪ್ರಕೃತದಲ್ಲಿ ಈ ದೇವತೆಗಳ ಸ್ವರೂಪವನ್ನು ನಿಷ್ಕರ್ಷವಾಗಿ ತಿಳಿಯಲು ಸಾಧ್ಯವೇ ಎಂಬುವನ್ನು ಶ್ರುತ್ಯಾದಿ ವಾಕ್ಯಗಳನ್ನು ಪ್ರಮಾಣವಾಗಿಟ್ಟುಕೊಂಡು ವಿಮರ್ಶಿಸಬಹುದು.

ತಿಸ್ರೋ ದೇವೀಃ ಎಂಬ ವಿಷಯದಲ್ಲಿ ಯಾಸ್ಕರು—

ತಿಸ್ರೋ ದೇವೀಃ । ತಿಸ್ರೋ ದೇವೀಸ್ತಿಸ್ರೋ ದೇವ್ಯಃ ।

ಎಂದು ಮಾತ್ರ ಹೇಳಿ ಉದಾಹರಣೆಗಾಗಿ ಕೊಟ್ಟಿರುವ ಋಕ್ಕಿನಲ್ಲಿ—

ಆ ನೋ ಯಜ್ಞಂ ಭಾರತೀ ತೂಯಮೇತ್ವಿಳಾ ಮನುಷ್ವದಿಹ ಚೇತಯಂತೀ ।
ತಿಸ್ರೋ ದೇವೀರ್ಬರ್ಹಿರೇದಂ ಸ್ಯೋನಂ ಸರಸ್ವತೀ ಸ್ವಪಸಃ ಸದಂತು ॥

(ಋ. ಸಂ. ೧೦-೧೧೦-೮)

ಐತು ನೋ ಯಜ್ಞಂ ಭಾರತೀ ತೂಯಮ್ । ಭರತ ಆದಿತ್ಯಸ್ಯ ಭಾ ಇಳಾ ಚ ಮನುಷ್ವದಿಹ ಚೇತಯಮಾನಾ ತಿಸ್ರೋ ದೇವ್ಯೋ ಬರ್ಹಿರಿದಂ ಸುಖಂ ಸರಸ್ವತೀ ಚ ಸುಕರ್ಮಾಣ ಆಸೀದಂತು ॥

ಎಂದು ವಿವರಿಸಿರುವರು ಎಂದರೆ—

ಭಾರತೀಃ—ಭರತನೆಂದರೆ ದ್ವಾದಶಾದಿತ್ಯರಲ್ಲಿ ಒಬ್ಬನು. ಆದಿತ್ಯನ ದೀಪ್ತಿಗೆ ಭಾ ಎಂದು ಹೆಸರು. ಆದುದರಿಂದ ಭಾರತಿಯೆಂದರೆ ಸೂರ್ಯನ ಪ್ರಕಾಶವು ಅಥವಾ ಸೂರ್ಯಮಂಡಲದಲ್ಲಿ ಪ್ರಕಾಶರೂಪದಿಂದಿರುವ ಅಗ್ನಿಯು.

ಇಳಾ—ಇಳಾ ಎಂದರೆ ಪೃಥಿವಿಯು. **ಮನುಷ್ವತ್ ಚೇತಯಂತೀ**—ಮನುಷ್ಯರಂತೆ ಪ್ರೇರಿಸುವ ಶಕ್ತಿಯುಳ್ಳ ಎಂದರೆ ಭೂಮಿಯ ಮೇಲೆ ಇರುವ ಮನುಷ್ಯರಿಗೆ ಅನ್ನಾದ್ಯಾಹಾರಗಳನ್ನೂ, ಧನಾದಿಗಳನ್ನೂ ಕೊಡುವುದರಿಂದ **ಇಳಾ** ಎಂದರೆ ಪೃಥಿವೀಸ್ಥಾನದಲ್ಲಿರುವ ಅಗ್ನಿಯ ರೂಪವಿಶೇಷವು.

ಸರಸ್ವತೀ—ಅಂತರಿಕ್ಷಸ್ಥಾನದಲ್ಲಿರುವ ಶಿಂಶುಮಾರಚಕ್ರಗಳಿಗೆ ಅಭಿಮಾನಿದೇವತೆಯಾಗಿರುವುದರಿಂದ ಸರಸ್ವತಿಯು ಅಂತರಿಕ್ಷಸ್ಥಾನದಲ್ಲಿರುವ ಅಗ್ನಿಸ್ವರೂಪವೆಂದೂ ಹೇಳಲ್ಪಡುವುದು.

ಆದುದರಿಂದ ಇಳಾ, ಸರಸ್ವತೀ, ಭಾರತೀ ಎಂಬ ಮೂರು ಮಂದಿ ದೇವಿಯರನ್ನು ಸ್ವರ್ಗ, ಅಂತರಿಕ್ಷ, ಭೂಮಿಯ ಮೇಲೆ ಇರುವ ಅಗ್ನಿಯ ಮೂರು ರೂಪಗಳೆಂದು ಹೇಳುವ ರೂಢಿಯಿರುವುದು.

ಆಪ್ರೀಸೂಕ್ತಗಳ ಮುಖ್ಯಾಂಶಗಳನ್ನು ಸಂಗ್ರಹಿಸಿರುವ ಮಂತ್ರವನ್ನು ಪರಿಶೀಲಿಸಿದರೆ,

ಹೋತಾಯಕ್ಷತ್ತಿಸ್ರೋ ದೇವೀರಪಸಾಮಪಸ್ತಮಾ ಅಚ್ಛಿದ್ರಮದ್ಯೇದಮಪಸ್ತನ್ನಶಾಂ ।
ದೇವೇಭ್ಯೋ ದೇವೀರ್ದೇವಮಪೋ ವಿಯಂತ್ವಾಜ್ಯಸ್ಯ ಹೋತರ್ಯಜ ॥

(ತೈ. ಬ್ರಾ. ೩-೬-೨-೨)

ಎಂದು ಮೂಲದಲ್ಲಿ ಕೇವಲ **ತಿಸ್ರೋ ದೇವೀಃ** ಎಂದು ಮಾತ್ರವಿದೆ. ಭಾಷ್ಯದಲ್ಲಿ ಇದನ್ನು ವಿವರಿಸುತ್ತಾ **ಇಡಾ ಸರಸ್ವತೀ, ಭಾರತೀತ್ಯೇವಂ ರೂಪಾಸ್ತಿಸ್ರೋಽಷ್ಟಮ್ಯ ಪ್ರಯಾಜದೇವ್ಯಸ್ತದ್ರೂಪಮಗ್ನಿಂ ದೈವ್ಯೋ ಹೋತಾ ಯಜತು** । ಇಡಾ, ಸರಸ್ವತೀ ಮತ್ತು ಭಾರತೀ ಎಂಬ ಮೂವರು ಅಷ್ಟಮಪ್ರಯಾಜದೇವತೆಗಳು ಅಗ್ನಿಯನ್ನು ಪ್ರತಿಬಿಂಬಿಸುವ ದೇವತೆಗಳೆಂದು ಹೇಳಿದೆ. ಅಲ್ಲದೆ **ಅಪಸಾಂ ಅಪಸ್ತಮಾಃ । ಕರ್ಮವತೀನಾಂ ಮಧ್ಯೇಽತಿಶಯೇನ ಕರ್ಮವತ್ಯಃ** । ಅತ್ಯಂತ ಶ್ರೇಷ್ಠವಾದ ಕರ್ಮವತಿಯರೆಂದೂ ವಿಶೇಷಣದಿಂದ ತಿಳಿಸಿದೆ. ಐತರೇಯ ಬ್ರಾಹ್ಮಣದಲ್ಲಿ,

ತಿಸ್ರೋ ದೇವೀರ್ಯಜತಿ ಪ್ರಾಣೋ ವಾ ಅಪಾನೋ ವ್ಯಾನಸ್ತಿಸ್ರೋ ದೇವ್ಯಸ್ತಾ ಏವ ತತ್ಪ್ರೀಣಾತಿ ತಾ ಯಜಮಾನೇ ದಧಾತಿ ।

(ಐ. ಬ್ರಾ. ೨-೪)

ಎಂದು ಮೂರು ದೇವತೆಗಳಿಗೂ, **ಪ್ರಾಣ, ಅಪಾನ** ಮತ್ತು **ವ್ಯಾನ** ಎಂಬ ಜೀವತತ್ತ್ವಗಳಿಗೂ ತಾದಾತ್ಮ್ಯವನ್ನು ಹೇಳಿದೆ. ನಿರುಕ್ತಕಾರರು **ಆ ನೋ ಯಜ್ಞಂ** ಎಂದು ೧೦-೧೧೦-೪ನೇ ಋಕ್ಕನ್ನು ದಹರಿಸಿ ಅದಕ್ಕೆ ವಿವರಣೆಯನ್ನು ಈ ರೀತಿ ಕೊಟ್ಟಿರುತ್ತಾರೆ. **ಐತು ನೋ ಯಜ್ಞಂ ಭಾರತೀ ಕ್ಷಿಪ್ರಂ । ಭರತೇ ಆದಿತ್ಯಸ್ಯಸ್ತಸ್ಯ ಭಾ ಇಳಾ ಚ ಮನುಷ್ಯವದಿಹ ಚೇತಯಮಾನಾ ತಿಸ್ರೋ ದೇವ್ಯಃ ಬರ್ಹಿರಿದಂ ಸುಖಂ ಸರಸ್ವತೀ ಚ ಸುಕರ್ಮಾಣ ಆಸೀದಂತು** । (ನಿ. ೮-೧೩) ಭರತನ (ಸೂರ್ಯನ) ಪ್ರಭಾರೂಪವಾದ ದೇವತೆಯೂ, ಇಳೆಯೂ ಸರಸ್ವತಿಯೂ ಬರ್ಹಿಯನ್ನಲಂಕರಿಸಲಿ. ಬೃಹದ್ದೇವತೆಯಲ್ಲಿ,

ತಿಸ್ರಸ್ತು ದೇವ್ಯೋ ಯಾಃ ಪ್ರೋಕ್ತಾಸ್ತ್ರಿಸ್ಥಾನೈವೇಹ ಸಾ ತು ವಾಕ್ ।
ತ್ರಿವಿಧೇನೋಚ್ಯತೇ ನಾಮ್ನಾ ಜ್ಯೋತಿಃಷು ತ್ರಿಷು ವರ್ತಿನೀ ॥
ಅಗ್ನಿಮೇವಾನುಗೇಳಾ ತು ಮಧ್ಯಂ ಸ್ಯಾತ್ತಾ ಸರಸ್ವತೀ ।
ಅಮೂ ಸ್ಥಿತಾಧಿ ಲೋಕಂ ತು ಭಾರತೀ ಭವತಿ ಹ್ಯಸೌ ॥
ಸೈಷಾ ತು ತ್ರಿವಿಧಾ ವಾಗ್ವೈ ದಿವಿ ಚ ವ್ಯೋಮ್ನಿ ಚೇಹ ಚ ।
ವ್ಯಸ್ತಾ ಚೈವ ಸಮಸ್ತಾ ಚ ಭಜತ್ಯಗ್ನೀನಿಮಾನಪಿ ॥

(ಬೃ. ದೇ. ೩-೧೨ ರಿಂದ ೧೪)

ತಿಸ್ರೋ ದೇವ್ಯಃ ಎಂದರೆ ಮೂರು ಲೋಕಗಳಲ್ಲೂ ಇರುವ ವಾಗಧಿದೇವತೆಗಳು (ವಾಕ್ಕಿನ ಮೂರು ರೂಪಗಳನ್ನು ಬೃ. ದೇ. ೨-೭೨ ರಿಂದ ೮೨ ವರೆಗಿನ ಶ್ಲೋಕಗಳಲ್ಲಿ ವಿವರಿಸಿದೆ).

ಅಯಂ ಪ್ರಯೋಗಸ್ತ್ವೇತೇಷಾಂ ಜ್ಯೋತಿಷಾಂ ತ್ರಿಷು ವರ್ತತಾಂ ।

(ಬೃ. ದೇ. ೧-೯೦)

ಎಂದು ಹೇಳಿರುವಂತೆ ಮೂರು ಲೋಕಗಳಲ್ಲಿಯೂ ಇರುವ ಬೇರೆಬೇರೆ ದೇವತೆಗಳು ಒಂದೇ ವಾಗಧಿದೇವತೆಯ ರೂಪಾಂತರಗಳು ಇವರಲ್ಲಿ **ಇಳೆಯು** ಪಾರ್ಥಿವಾಗ್ನಿಯನ್ನನುಸರಿಸಿದಳು. **ಸರಸ್ವತಿಯು** ಅಂತರಿಕ್ಷಲೋಕವನ್ನಾಕ್ರಮಿಸಿದಳು ಮತ್ತು **ಭಾರತಿಯು** ದ್ಯುಲೋಕಸ್ಥಳಾದಳು. ಆದರೂ ಸಹ,

ದೇವ್ಯಸ್ತಿಸ್ರಃ ಶ್ರಿತಾಶ್ಚಮಂ ತ್ವಷ್ಟಾ ಚೈವೇತದಾಶ್ರಯಃ ।

(ಬೃ. ದೇ. ೧-೧೦೮)

ಎಂಬ ವಾಕ್ಯದಲ್ಲಿ ಹೇಳಿರುವಂತೆ ಈ ಮೂರು ಲೋಕದ ದೇವತೆಗಳೂ ಸಹ ಪಾರ್ಥಿವಾಗ್ನಿಯನ್ನೇ ಸೇವಿಸುತ್ತಾರೆಂದು ಎಲ್ಲವನ್ನೂ ಕೊನೆಯಲ್ಲಿ ಅಗ್ನಿಪರವಾಗಿಯೇ ಮುಕ್ತಾಯಮಾಡಿದೆ.

ಇಳಾ ಸರಸ್ವತೀ ಮಹೀ ತಿಸ್ರೋ ದೇವೀರ್ಮಯೋಭುವಃ । ಬರ್ಹಿಃ ಸೀದಂತ್ವಸ್ರಿಧಃ ॥

(ಋ. ಸಂ. ೧ ೧೩-೯)

ಎಂಬ ಋಕ್ಕಿನಲ್ಲಿಯೂ, ಇದೇ ಅನುಪೂರ್ವಿಯಿರುವ ಋ. ಸಂ. ೫-೫-೮ ನೇ ಋಕ್ಕಿನಲ್ಲಿಯೂ ಸಹ **ಭಾರತೀ** ಎಂಬ ನಿರ್ದೇಶವಿಲ್ಲದಿರುವುದರಿಂದ **ಮಹೀ** ಎಂಬುದು ಭಾರತೀದೇವತೆಯ ಪರ್ಯಾಯಪದವೆಂದು ಸಾಯಣರು ಹೇಳಿದ್ದಾರೆ. ಋ. ಸಂ. ೧-೧೮೮-೮ ನೇ ಋಕ್ಕಿನಲ್ಲಿಯೂ ಮತ್ತು

ಭಾರತೀ ಹೆವಮಾನಸ್ಯ ಸರಸ್ವತೀಳಾ ಮಹೀ ।
ಇಮಂ ನೋ ಯಜ್ಞಮಾ ಗಮನ್ತಿಸ್ರೋ ದೇವೀಃ ಸುಪೇಶಸಃ ॥

(ಋ. ಸಂ. ೯-೫೮)

ಎಂಬ ಋಕ್ಕಿನಲ್ಲಿಯೂ ಸಹ ವಿಶೇಷಣವಾಗಿವೆ.

ಇಳಾಂ—ಬೃಹದ್ದೇವತೆಯಲ್ಲಿ **ಅಗ್ನಿಮೇವಾನುರಾಗೇಳಾ** (೩-೧೩) **ಇಳೆಯು** ಪಾರ್ಥಿವಾಗ್ನಿಯನ್ನನುಸರಿಸಿದಳು ಎಂದು ಹೇಳಿರುವುದರಿಂದಲೂ,

ಪ್ರದೀಧಿತಿರ್ವಿಶ್ವವಾರಾ ಜಿಗಾತಿ ಹೋತಾರಮಿಳಃ ಪ್ರಥಮಂ ಯಜಧ್ಯೈ ।
ಅಚ್ಛಾ ನವೋಭಿರ್ವೃಷಭಂ ವಂದಧ್ಯೈ ಸ ದೇವಾನ್ಯಕ್ಷದ್ದಿಷಿತೋ ಯಜೀಯಾನ್ ॥

(ಋ. ಸಂ. ೩-೪-೩)

ಎಂಬ ಋಕ್ಕಿನಲ್ಲಿ ಇಳಃ ಶಬ್ದಕ್ಕೆ ಹವೀರೂಪವಾವ ಅನ್ನವೆಂದು ಅರ್ಥಮಾಡಿರುವುದರಿಂದಲೂ ಮತ್ತು ೭-೧೬-೮ ನೇ ಋಕ್ಕಿನಲ್ಲಿ **ಘೃತಹವಸ್ತಾ** ಎಂಬ ವಿಶೇಷಣವೂ, ೧೦-೭೦-೮ ರಲ್ಲಿ **ಘೃತಪದೀ** ಎಂಬ ವಿಶೇಷಣವೂ ಇರುವುದರಿಂದಲೂ **ಇಳಾ** ಎಂಬುದಕ್ಕೆ **ಹವಿಸ್ಸಿಂದರ್ಥ**ವಾಡಬಹುದಾಗಿ ತೋರುತ್ತದೆ. ಬಹುಶಃ ಈ ಕಾರಣದಿಂದಲೇ,

ಉತ್ತಾನಾಯಾಮವ ಭರಾ ಚಿಕಿತ್ವಾನ್ತ್ಸದ್ಯಃ ಪ್ರವೀತಾ ವೃಷಣಂ ಜಜಾನ ।
ಅರುಷಸ್ತೂಪೋ ರುಶದಸ್ಯ ಪಾಜ ಇಳಾಯಾಸ್ಪುತ್ರೋ ವಯುನೇ೭ಜನಿಷ್ಟ ॥

(ಋ. ಸಂ. ೩-೨೯-೩)

ಎಂಬ ಋಕ್ಕಿನಲ್ಲಿ **ಇಳೆಯ** ಪುತ್ರನೆಂದೂ ಹೇಳಿದೆ.

ಭಾರತೀ—ನಿರುಕ್ತದಲ್ಲಿ ಆದಿತ್ಯನ ಪ್ರಭೆಯೆಂದು ಹೇಳಿದೆ. (**ಭರತಃ ಆದಿತ್ಯಃ ತಸ್ಯ ಭಾಃ**) Macdonell ಎಂಬ ಪಂಡಿತನು Vedic Mythology ಎಂಬ ಗ್ರಂಥದಲ್ಲಿ **ಭರತವಂಶ**ದವರಿಂದ ಆರ್ಪಿಸಲ್ಪಟ್ಟ **ಹವಿಸ್ಸು** ಎಂದೂ (p. 87) Grassmann ಎಂಬುವನು ವಾಗ್ದೇವತೆಯೆಂದೂ ಅರ್ಥಮಾಡಿದ್ದಾರೆ ಅಥವಾ ಅಗ್ನಿಸಂಬಂಧಿಯೆಂದೂ ಅರ್ಥಮಾಡಬಹುದು.

ತಸ್ಮಾ ಅಗ್ನಿರ್ಭಾರತಃ ತರ್ಮ ಯಂಸಜ್ಜ್ಯೋಕ್ಪಶ್ಯಾತ್ಸೂರ್ಯಮುಚ್ಚರಂತಂ ।
ಯ ಇಂದ್ರಾಯ ಸುನವಾಮೇತ್ಯಾಹ ನರೇ ನರ್ಯಾಯ ನೃತಮಾಯ ನೃಣಾಂ ॥
(ಋ. ಸಂ. ೪-೨೫-೪)

ಎಂಬ ಋಕ್ಕಿನಲ್ಲಿ ಭಾರತಃ ಎಂದು ಅಗ್ನಿಗೆ ವಿಶೇಷಣವಾದುದರಿಂದ ಸತ್ಸಂಬಂಧಿಯಾದ ದೇವತೆ ಭಾರತೀ ಎಂದು ಹೆಸರಿರಬಹುದೆಂದು ಇನ್ನು ಕೆಲವರ ಮತ.

ಸಂಹಿತಾಪಾಠಃ

ದೇವ ತ್ವಷ್ಟರ್ಯದ್ಧ ಚಾರುತ್ವಮಾನಡ್ಯದಂಗಿರಸಾಮುಭವಃ ಸಚಾಭೂಃ ।
ಸ ದೇವಾನಾಂ ಪಾಥ ಉಪ ಪ್ರ ವಿದ್ವಾನುಶನ್ಯಕ್ಷಿ ದ್ರವಿಣೋದಃ ಸುರತ್ನಃ ॥

ಪದಪಾಠಃ

ದೇವ । ತ್ವಷ್ಟಃ । ಯತ್ । ಹ । ಚಾರುಽತ್ವಂ । ಆನಟ್ । ಯತ್ । ಅಂಗಿರಸಾಂ । ಅಭವಃ ।
ಸಚಾಽಭೂಃ ॥

ಸಃ । ದೇವಾನಾಂ । ಪಾಥಃ । ಉಪ । ಪ್ರ । ವಿದ್ವಾನ್ । ಉಶನ್ । ಯಕ್ಷಿ । ದ್ರವಿಣಃಽದಃ । ಸುಽರತ್ನಃ ॥

ಸಾಯಣಭಾಷ್ಯಂ

ತ್ವಾಷ್ಟ್ರಸ್ಯ ಪಶೋರ್ವಪಾಯಾಗಸ್ಯ ದೇವ ತ್ವಷ್ಟರಿತಿ ಯಾಜ್ಯಾ । ಸೂತ್ರಿತಂ ಚ । ದೇವ ತ್ವಷ್ಟರ್ಯದ್ಧ ಚಾರುತ್ವಮಾನಟ್ ಪಿಶಂಗರೂಪಃ ಸುಭರೋ ವಯೋಧಾಃ । ಆ. ೩-೮ । ಇತಿ ॥

ಹೇ ದೇವ ತ್ವಷ್ಟರೇತನ್ನಾಮಕ ತ್ವಂ ಯಚ್ಚಾರುತ್ವಂ ಹವಿರ್ಭಿಃ ಕಲ್ಯಾಣರೂಪತ್ವಮಾನಟ್ ಪ್ರಾಪ್ತವಾನ್ ॥ ಅಶ್ನೋತೇರ್ಲಿಟಿ ಪ್ರತ್ಯಯಸ್ಯ ಲುಕ್ ॥ ಯಚ್ಚ ತ್ವಮಂಗಿರಸಾಮಸ್ಮಾಕಂ ಸಚಾಭೂಃ ಸಹಭಾವೀ ಸಖಾಭವಃ । ಹೇ ದ್ರವಿಣೋದೋ ಧನಸ್ಯ ದಾತಃ ಅವ ಏವ ಸುರತ್ನಃ ಸುಧನಃ ಸ ತ್ವಮುಶನ್ಹವೀಂಷಿ ಕಾಮಯಮಾನಃ ಸನ್ ವಿದ್ವಾನ್ ಅಸ್ಯೇದಮುಸ್ಯೇದಮಿತಿ ಪ್ರಜಾನನ್ದೇವಾನಾಂ ಪಾಥೋಽನ್ನಮುಪ ಯಕ್ಷಿ । ಉಪಯಜ । ತೇಭ್ಯಃ ಪ್ರಯಚ್ಛ ॥

ಪ್ರತಿಪದಾರ್ಥ

ದ್ರವಿಣೋದಃ—ಧನಪ್ರದನೂ । ದೇವ—ದೇವತಾತ್ಮನೂ ಆದ । ತ್ವಷ್ಟಃ—ಎಲೈ ತ್ವಷ್ಟೃವೇ । ಯತ್—ಯಾವ ನಿಮಿತ್ತವಾಗಿ । ಚಾರುತ್ವಂ—ಕಲ್ಯಾಣಕಾರಕವಾದ ರೂಪವನ್ನು । ಆನಟ್—ನೀನು ಹೊಂದಿರುವೆಯೋ । ಯತ್—ಯಾವ ನಿನ್ನ ಮಹತ್ತ್ವದಿಂದ । ಅಂಗಿರಸಾಂ—ಅಂಗಿರಸ್ಸುಗಳೊಂದಿಗೆ (ನಮ್ಮೊಂದಿಗೆ) । ಸಚಾಭೂಃ—ಕೂಡಿಕೊಂಡು । ಅಭವಃ—ಇರುವೆಯೋ ಆದುದರಿಂದಲೇ । ಸುರತ್ನಃ—ಉತ್ತಮವಾದ ಧನವುಳ್ಳ । ಸಃ—ನೀನು । ಉಶನ್—ಹವಿಸ್ಸುಗಳನ್ನು ಅಪೇಕ್ಷಿಸಿ । ಪ್ರ ವಿದ್ವಾನ್—ಸಕಲವನ್ನೂ ತಿಳಿದವನಾಗಿ । ದೇವಾನಾಂ—ದೇವತೆಗಳಿಗೆ । ಪಾಥಃ—ಅನ್ನವನ್ನು । ಉಪ ಯಕ್ಷಿ—ಒದಗಿಸು.

ಭಾವಾರ್ಥ

ಧನಪ್ರದನೂ, ದೇವಾತ್ಮನೂ ಆದ ಎಲೈ ತ್ವಷ್ಟೃವೇ, ಯಾವ ನಿನ್ನ ಮಾಹಾತ್ಮ್ಯದಿಂದ ನೀನು ಸುಂದರವಾದ ರೂಪವನ್ನು ಹೊಂದಿರುವೆಯೋ ಮತ್ತು ಯಾವ ನಿನ್ನ ಮಹತ್ತ್ವದಿಂದ ಆಂಗಿರಸ್ಸಿನ ವಂಶಸ್ಥರಾದ ನಮ್ಮೊಂದಿಗೆ ಕೂಡಿ

ಕೊಂಡಿರುವೆಯೋ ಆದುದರಿಂದಲೇ, ಉತ್ತಮವಾದ ಧನವುಳ್ಳ ನೀನು ಹವಿಸ್ಸುಗಳನ್ನು ಅಪೇಕ್ಷಿಸಿ ಮತ್ತು ಸಕಲವನ್ನೂ ತಿಳಿದವನಾಗಿ ದೇವತೆಗಳಿಗೆ ಅನ್ನವನ್ನು ಒದಗಿಸು.

English Translation

Divine Twashtri, since you have attained to beauty (through our oblations), and have become the associate of the Angirasas, do you, the bestower of wealth, possessed of precious treasure, and knowing (to whom each portion belongs), offer the food of the gods (to them).

ವಿಶೇಷವಿಷಯಗಳು

ತ್ವಷ್ಟೃದೇವತೆಯನ್ನುದ್ದೇಶಿಸಿ ಮಾಡುವ ಯಜ್ಞಯಾಗದಲ್ಲಿ **ದೇವ ತ್ವಷ್ಟಃ** ಎಂಬ ಈ ಋಕ್ಕನ್ನು ಯಾಜ್ಯಾ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದೇವ ತ್ವಷ್ಟರ್ಯದ್ಧ ಚಾರುತ್ವಮಾನಟ್ ಪಿಶಂಗ-ರೂಪಃ ಸುಭರೋ ವಯೋಧಾಃ** ಎಂಬ ಸೂತ್ರದಿಂದ (ಅ. ೩-೮) ವಿವೃತವಾಗಿರುವುದು.

ತ್ವಷ್ಟೃದೇವತೆಯ ವಿಷಯದಲ್ಲಿ ಯಾಸ್ಕರ ವಿವರಣೆಯು—

ತ್ವಷ್ಟಾ । ತ್ವಷ್ಟಾ ತೂರ್ಣಮಶ್ನುತ ಇತಿ ನೈರುಕ್ತಾಃ । ತ್ವಿಷೇರ್ವಾ ಸ್ಯಾದ್ದೀಪ್ತಿಕರ್ಮಣಸ್ತ್ವಕ್ಷ-ತೇರ್ವಾ ಸ್ಯಾತ್ಕರೋತಿಕರ್ಮಣಃ ॥ ವಾಧ್ಯಮಿಕಸ್ತ್ವಷ್ಟೇತ್ಯಾಹುರ್ಮಧ್ಯಮೋ ಚ ಸ್ಥಾನೇ ಸಮಾವ್ಮ್ನಾತಃ । ಅಗ್ನಿರಿತಿ ಶಾಕಪೂಣಿಃ ॥

(ನಿ. ೮-೧೪)

ಎಂದರೆ ತ್ವಷ್ಟಾ ಎಂಬ ಶಬ್ದಕ್ಕೆ ಜಾಗ್ರತೆಯಾಗಿ ವ್ಯಾಪಿಸುವನನು ಎಂದು ನಿರುಕ್ತಕಾರರು ಹೇಳುವರು ಅಥವಾ ಪ್ರಕಾಶ ಮಾನನಾಗಿರುವನು ಅಥವಾ ಕರ್ಮಗಳನ್ನು (ಶಿಲ್ಪಕರ್ಮಗಳನ್ನು) ಮಾಡುವವನು; ವಾಧ್ಯಮಿಕನೆಂದೂ ಕೆಲವರು ಹೇಳುವರು. ಎಂದರೆ ದ್ಯಾವಾಪೃಥಿವಿಗಳ ಮಧ್ಯದಲ್ಲಿ (ಅಂತರಿಕ್ಷದಲ್ಲಿ) ಇರುವನನು. ಅಗ್ನಿಯೆಂದು ಶಾಕಪೂಣಿಯು ಹೇಳುವನು.

ತ್ವಷ್ಟೃವು ವಿಶ್ವಕರ್ಮನಂತೆ ದೇವತೆಗಳ ಶಿಲ್ಪಿಯೆಂದೂ ಕೆಲವರು ಹೇಳುವರು. ಏಕೆಂದರೆ ಯಾಸ್ಕರು ಉದಾ ಹರಣೆಗಾಗಿ ಕೊಟ್ಟಿರುವ ಋಕ್ಕಿನಲ್ಲಿ,

ಯ ಇಮೇ ದ್ಯಾವಾಪೃಥಿವೀ ಜನಿತ್ರೀ ರೂಪೈರಪಿಂಶದ್ಭುವನಾನಿ ವಿಶ್ವಾ ।
ತಮದ್ಯ ಹೋತರಿಷಿತೋ ಯಜೀಯಾನ್ ದೇವಂ ತ್ವಷ್ಟಾರಮಿಹ ಯಕ್ಷಿ ವಿದ್ವಾನ್ ॥

ತ್ವಷ್ಟೃವು ದ್ಯಾವಾಪೃಥಿವಿಗಳ ನಿರ್ಮಾಪಕನು ಮತ್ತು ಸಮಸ್ತ ಲೋಕಗಳಲ್ಲಿರುವ ಪ್ರಾಣಿಗಳಿಗೆ ಅವರವರಿಗೆ ಯೋಗ್ಯ ವಾದ ರೂಪ, ಸೌಂದರ್ಯ, ಋದ್ಧಿ, ವೃದ್ಧಿ ಮೊದಲಾದವುಗಳಿಗೆ ಕಾರಣಕರ್ತನು ಎಂದು ಹೇಳಿರುವರು. ಇದಲ್ಲದೆ **ತ್ವಷ್ಟಾ ವೈ ಪಶೂನಾಂ ಮಿಥುನಾನಾಂ ರೂಪಕೃತ್** (ತೈ. ಸಂ. ೬-೧-೮-೫) **ತ್ವಷ್ಟಾ ರೂಪಾಣಾಮಧಿಪತಿಃ** (ತೈ. ಸಂ. ೫-೪-೫-೧) **ತ್ವಷ್ಟಾ ರೂಪಾಣಿ ವಿಕರೋತಿ** ಮೊದಲಾದ ಶ್ರುತಿ (ಯಜುರ್ವೇದ) ವಾಕ್ಯಗಳು ತ್ವಷ್ಟೃವಿನ ವಸ್ತುನಿರ್ಮಾಣಕುಶಲತೆಯನ್ನು ಪ್ರತಿಪಾದಿಸುವುವು ಮತ್ತು

ಮಹ್ಯಂ ತ್ವಷ್ಟಾ ವಜ್ರಮತಕ್ಷದಾಯಸಂ ಮಯಿ ದೇವಾಸೋಽವೃಜನ್ನಪಿ ಕ್ರತುಂ ॥

(ಋ. ಸಂ. ೧೦-೪೮-೩)

ತ್ವಷ್ಟೃವು ನನಗೆ ಉಕ್ಕಿನಿಂದ ವಜ್ರಾಯುಧವನ್ನು ನಿರ್ಮಾಣಮಾಡಿಕೊಟ್ಟನು ಎಂದು ಇಂದ್ರನು ಹೇಳಿರುವನು. ದೇವತೆಗಳಿಗೆ ಅವಶ್ಯಕವಾದ ಯಜ್ಞಸಾಮಗ್ರಿಗಳನ್ನೂ, ಇತರ ಅನೇಕ ವಸ್ತುಗಳನ್ನೂ ನಿರ್ಮಿಸಿ ಕೊಟ್ಟಿರುವನೆಂದು ಋಗ್ವೇದದ ಅನೇಕ ಮಂತ್ರಗಳಲ್ಲಿ ಹೇಳಿದೆ,

ತ್ವಷ್ಟೃವು ದ್ವಾದಶಾದಿತ್ಯರಲ್ಲಿ ಒಬ್ಬನೆಂದು ಪ್ರಸಿದ್ಧಿಯು. ಆದುದರಿಂದಲೇ ಪ್ರಕಾಶಮಾನನು ಎಂದು ಯಾಸ್ಕರು ಅರ್ಥವಿವರಣೆ ಮಾಡಿರುವರು.

ತ್ವಷ್ಟೃದೇವತೆಯ ವಿಷಯದಲ್ಲಿ ವೈಯಕ್ತಿಕವಾದ ಅಭಿಪ್ರಾಯವನ್ನು ತಿಳಿಸುವ ಶ್ರುತಿವಾಕ್ಯಗಳಲ್ಲಿ ಈ ಕೆಳಗೆ ಉದಾಹೃತವಾಗಿರುವುವು, ಆಪ್ರೀಸೂಕ್ತದೇವತೆಯನ್ನು ಮಾತ್ರ ನಿರ್ದೇಶಿಸುವುದಾಗಿವೆ.

ಹೋತಾಯಕ್ಷತ್ತ್ವಷ್ಟಾರಮಚಿಷ್ಣುಮಸಾಕಗ್ಂ ರೇತೋಧಾಂ ವಿಶ್ರವಸಂ ಯಶೋಧಾಂ।
ಪುರುರೂಪಮಕಾಮಕರ್ತನಗ್ಂ ಸುಪೇಶಃ ಪೇಶೈಃ ಸ್ಯಾತ್ಸುವೀರೋ ವೀರೈರ್ವೇತ್ವಾಜ್ಯಸ್ಯ
ಹೋತರ್ಯಜ ॥ (ತೈ. ಬ್ರಾ. ೩-೬-೨-೨)

ಎಂಬ ಮಂತ್ರದಲ್ಲಿ **ಅಚಿಷ್ಣುಂ, ಅಸಾಕಂ, ರೇತೋಧಾಂ, ವಿಶ್ರವಸಂ, ಯಶೋಧಾಂ, ಪುರುರೂಪಂ. ಅಕಾಮಕರ್ತನಂ** ಎಂಬ ವಿಶೇಷಣಗಳಿವೆ. ಇವುಗಳಲ್ಲಿ—

ಅಚಿಷ್ಣುಂ ಎಂದರೆ ಚೇಷ್ಟನರಹಿತಂ, ಚಾಂಚಲ್ಯರಹಿತಂ, ಸ್ಥಿರಂ, ಚಂಚಲವಿಲ್ಲದೇ ಸ್ಥಿರವಾಗಿರತಕ್ಕವನೆಂದೂ
ಅಸಾಕಂ ಎಂದರೆ **ಅಬಾಲಂ ಪ್ರಾಜ್ಞಂ** । ಬಾಲನಲ್ಲದೆ ಪ್ರಾಜ್ಞನೆಂದೂ

ರೇತೋಧಾಂ ಎನ್ನುವುದಕ್ಕೆ **ಪುತ್ರಾದಿಬೀಜಸ್ಯ ಯಜಮಾನೇ ಧಾರಯಿತಾರಂ** । ಯಜ್ಞಕರ್ತನಲ್ಲಿ ಪುತ್ರಾದಿಬೀಜವನ್ನು ಬಿತ್ತುವವನೆಂದೂ

ವಿಶ್ರವಸಂ ಎಂಬುದಕ್ಕೆ **ವಿವಿಧಕೀರ್ತಿಯುಕ್ತಂ** । ಬಗೆಬಗೆಯ ಕೀರ್ತಿಯುಕ್ತನೆಂದೂ

ಯಶೋಧಾಂ ಎಂದರೆ **ಯಜಮಾನೇ ಯಶಸಃ ಧಾರಯಿತಾರಂ** । ಯಜ್ಞಕರ್ತನು ಯಶೋಭಾಗಿಯಾಗುವಂತೆ ಮಾಡುವವನೆಂದೂ

ಪುರುರೂಪಂ ಎನ್ನುವುದಕ್ಕೆ **ಬಹುರೂಪಂ** ವಿಧವಿಧವಾದ ರೂಪವುಳ್ಳವನೆಂದೂ

ಅಕಾಮಕರ್ತನಂ—ಎಂದರೆ **ಕಾಮಾನಾಂ ಅನಾಶಯಿತಾರಂ** । ಯಜಮಾನನ ಇಷ್ಟಾರ್ಥಗಳನ್ನು ಸಾರ್ಥಕಗೊಳಿಸುವವನೆಂದೂ ವಿವರಿಸಿದೆ.

ಈ ವಿಶೇಷಣಗಳು **ತ್ವಷ್ಟೃವಿನ** ವೈಯಕ್ತಿಕವಾದ ಸ್ವರೂಪವನ್ನು ತಿಳಿಸುತ್ತವೆ ನಿರುಕ್ತಕಾರರು **ತ್ವಷ್ಟೃ** ಶಬ್ದದ ನಿಷ್ಪತ್ತಿಯನ್ನು ತೋರಿಸುತ್ತಾ (೮-೧೪) **ತ್ವಷ್ಟಾ ತೂರ್ಣಮಶ್ನುತ ಇತಿ ನೈರುಕ್ತಾಃ** । **ಶ್ವಿಷೇರ್ವಾ-ಸ್ಯಾದ್ದೀಪ್ತಿಕರ್ಮಣಸ್ತ್ವಷ್ಟೇರ್ವಾ ಸ್ಯಾತ್ ಕರೋತಿಕರ್ಮಣಃ** । ವೇಗವಾಗಿ ವ್ಯಾಪಿಸುವುದರಿಂದ ಈ ಹೆಸರೆಂದು ನೈರುಕ್ತಕಾರರ ಮತ ಮತ್ತು ಪ್ರಕಾಶಿಸು ಎಂಬರ್ಥವುಳ್ಳ **ಶ್ವಿಷ್** ಧಾತುವಿನಿಂದಾಗಲಿ, ಕರ್ತ್ರರ್ಥಕವಾದ **ತ್ವಷ್ಟೃ** ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದೆಂದೂ ಹೇಳಿದ್ದಾರೆ. ಈ ನಿರ್ವಚನಗಳಿಂದ **ತಷ್ಟೃವು** ವೇಗವಾಗಿ ವ್ಯಾಪಿಸುವವನೆಂದೂ, ಪ್ರಕಾಶಿಸುವನೆಂದೂ ಮತ್ತು ನಿರ್ಮಾಪಕನೆಂದೂ ಅರ್ಥವಾಗುವುದು. ಈ ದೇವತೆಯು ಯಾವ ಲೋಕಕ್ಕೆ ಸೇರಿವವನೆಂದು ತೋರಿಸಲು **ಮಾಧ್ಯಮಿಕಸ್ತ್ವಷ್ಟೇತ್ಯಾಹುರ್ಮಧ್ಯಮೇ ಚ ಸ್ಥಾನೇ ಸಮಾಮ್ನಾತಃ** ।

ಅಂತರಿಕ್ಷಸ್ಥವಾದ ದೇವತೆಗಳ ಗುಂಪಿಗೆ ಸೇರಿದವನೆಂದು ಕೆಲವರೂ, ಅಗ್ನಿಯೆಂದು ಶಾಕಪೂಣಿಯೂ ಹೇಳಿರುವ ಮತಗಳನ್ನು ತಿಳಿಸಿದ್ದಾರೆ ಬೃಹದ್ದೇವತೆಯಲ್ಲಿ ಮೊದಲನೆಯ ಮತವನ್ನನುಮೋದಿಸುತ್ತಾ,

ತ್ವಷ್ಟಾ ರೂಪವಿಕರ್ತಾ ಚ ಯೋಽಸೌ ಮಾಧ್ಯಮಿಕೇ ಗಣೇ ।
ಸ್ತುತಃ ಸ ಚ ನಿಪಾತೇನ ಸೂಕ್ತಂ ತಸ್ಯ ನ ವಿದ್ಯತೇ ॥ (ಬೃ. ದೇ. ೩-೨೫)

ಎಂಬ ಶ್ಲೋಕದಲ್ಲಿ **ಮಧ್ಯಮಲೋಕದ** ದೇವತೆಗಳ ಗುಂಪಿನಲ್ಲಿ ಸೇರತಕ್ಕವನೆಂದು ಹೇಳಿದೆ. ಇದಕ್ಕೆ ಮೊದಲು,

ತ್ವಷ್ಟಾ ತು ಯಸ್ತ್ವಯಮೇವ ಪಾರ್ಥಿವೋಽಗ್ನಿರಿತಿ ಸ್ತುತಿಃ ।
ಪಾರ್ಥಿವಸ್ಯಾಸ್ಯ ವರ್ಚಃ ಸ್ಯುಃ ಕಸ್ಯಾಶ್ಚಿತ್ ಚಾರ್ತವೇಷು ಚ ॥
ತ್ವಿಷಿತಸ್ತ್ವಷ್ಟತೇವಾರ್ವಾ ಸ್ಯಾತ್ ತೂರ್ಣಮಶ್ನುತ ಏವ ವಾ ।
ಕರ್ಮಸೂತ್ತಾರಣೋ ವೇತಿ ತೇನ ನಾಮೈತದಶ್ನುತೇ ॥
ಯಃ ಸಹಸ್ರತಮೋ ರಶ್ಮೀ ರವೇಶ್ಚಂದ್ರಮುಸಾಶ್ರಿತಃ ।
ಸೋಽಪಿ ತ್ವಷ್ಟಾರನೇವಾಗ್ನಿಂ ಪರಂ ಚೇಹ ಚ ಯೆನ್ಮಧು ॥
(ಬೃ. ದೇ. ೩-೧೫ ರಿಂದ ೧೭)

ಪಾರ್ಥಿವಾಗ್ನಿಗೆ ಯಾವ ಸ್ತುತಿಯೋ ಅದೇ ತ್ವಷ್ಟೃವನನ್ನೂ ಉದ್ದೇಶಿಸಿದ ಪೃಥ್ವಿಗೆ ಸಂಬಂಧಪಟ್ಟ ದೇವತೆಯೆಂಬ ಸೂಚನೆಯು ಕೆಲವೆಡೆಗಳಲ್ಲಿವೆ. ಋತುಪರವಾದ ಸೂಕ್ತಗಳಲ್ಲೂ ಇವನನ್ನು ಅಗ್ನಿಯ ಅಂಶವೆಂದೇ ವರ್ಣಿಸಿದೆ ಎಂದು ಅನಂತರ **ತ್ವಷ್ಟೃ** ಪದಕ್ಕೆ ನಿರುಕ್ತದಲ್ಲಿರುವ ನಿರ್ವಚನವನ್ನೇ ಹೇಳಿದೆ. **ಚಂದ್ರ** ವ್ಯಾಪ್ತನಾದ ಸೂರ್ಯನ ಸಹಸ್ರರಶ್ಮಿ ಮಧುವಿನಲ್ಲಿಯೂ, ಪರಲೋಕದಲ್ಲಿಯೂ, ಪೃಥ್ವಿಯಲ್ಲಿಯೂ ವ್ಯಾಪಿಸಿರುವಂತೆ ತ್ವಷ್ಟೃವಿನಲ್ಲಿಯೂ ಇವೆ ಎಂದೂ ಸಹ ವರ್ಣಿಸಿದೆ. ಮುಖ್ಯವಾಗಿ **ಬೃಹದ್ದೇವತಾಕಾರರು** ನಿರುಕ್ತೋಕ್ತವಾದ ಶಾಕಪೂಣಿಯ ಮತವನ್ನು **ಈ** ವಿಷಯದಲ್ಲಿ ಅನುಮೋದಿಸುತ್ತಾರೆ. **ನಿಘಂಟು**ವಿನಲ್ಲಿ ತ್ವಷ್ಟೃವನ್ನು ಮೊದಲು **ಆಪ್ರೀದೇವತೆ**ಗಳೊಡನೆಯೂ, (೫-೨) ಅನಂತರ **ಅಂತರಿಕ್ಷಸ್ಥ**ನಾವ ದೇವತೆಗಳೊಡನೆಯೂ (೫-೫) ಮೊದಲನೆಯದಾಗಿ ದ್ಯುಲೋಕಸ್ಥರಾದ ದೇವತೆಗಳೊಡನೆಯೂ (೫-೬) ಸೇರಿಸಿದೆ.

ತ್ವಷ್ಟೃ ಮತ್ತು ದಧೀಚ ಋಷಿಯ ಕಥೆಯನ್ನು ಕುರಿತು ೧-೧೫೯ನೆಯ ಸೂಕ್ತದ ವಿಶೇಷವಿಷಯಗಳಲ್ಲಿ ತಿಳಿಸಿದೆ. ಐತರೇಯಬ್ರಾಹ್ಮಣದಲ್ಲಿ,

ತ್ವಷ್ಟಾರಂ ಯಜತಿ ವಾಗ್ವೈ ತ್ವಷ್ಟಾ ವಾಗ್ವಿಶ್ವೇದಂ ಸರ್ವಂ । ತ್ವಾಂಷ್ಟ್ರೀ ವಾಚಮೇವ ತತ್ಪ್ರೀಣಾತಿ ವಾಚಂ ಯಜಮಾನೇ ದಧಾತಿ ।
(ಐ. ಬ್ರಾ. ೨-೪)

ಎಂಬ ವಾಕ್ಯದಿಂದ ತ್ವಷ್ಟೃವಿಗೂ ವಾಕ್ಕಿಗೂ ತಾದಾತ್ಮ್ಯವನ್ನು ಹೇಳಿರುವುದೂ ಒಂದು ಮತವಾಗಿದೆ.

ಯ ಇಮೇ ದ್ಯಾವಾಪೃಥಿವೀ ಜನಿತ್ರೀ ರೂಪೈರಪಿಂಶದ್ಭುವನಾನಿ ವಿಶ್ವಾ ।
ತಮದ್ಯ ಹೋತರಿಷಿತೋ ಯಜೀಯಾನ್ ದೇವಂ ತ್ವಷ್ಟಾರಮಿಹ ಯಕ್ಷಿ ವಿದ್ವಾನ್ ।
(ಋ. ಸಂ. ೧೦-೧೧೦-೯)

ಎಂಬ ಋಕ್ಕಿನಲ್ಲಿ ಈ ದೇವತೆಗೆ **ದಿವ್ಯಜನ್ಮ**ವಿದೆಯೆಂದೂ, ಆಮೂಲಾಗ್ರದಿಂದಲೇ ಸೃಷ್ಟಿಕಾಲಗಳಲ್ಲಿಯೂ ಸಹ ಇವನು ತನ್ನ **ಪ್ರಾಕ್ತನತ್ವ**ವನ್ನು ತೋರಿಸುತ್ತಾನೆಂದೂ ಸ್ತುತಿಸಿದೆ. ತ್ವಷ್ಟೃವು ಅತ್ಯಂತ ಪ್ರಾಚೀನನು ಎಂಬಭಿಪ್ರಾಯವು.

ಇಹ ತ್ವಷ್ಟಾರಮಗ್ರಿಯಂ ವಿಶ್ವರೂಪಮುಪಹ್ವಯೇ । ಅಸ್ಮಾಕಮಸ್ತು ಕೇವಲಃ ॥
(ಋ. ಸಂ. ೧-೧೩-೧೦)

ತ್ವಷ್ಟಾರಮಗ್ರಜಾಂ ಗೋಪಾಂ ಪುರೋಯಾವಾನಮಾ ಹುವೇ ।
ಇಂದುರಿಂದ್ರೋ ವೃಷಾ ಹರಿಃ ಪವಮಾನಃ ಪ್ರಜಾಪತಿಃ ॥
(ಋ. ಸಂ. ೯-೫-೯)

ಇತ್ಯಾದಿ ಋಕ್ಕುಗಳಲ್ಲಿ ಅಗ್ರಿಯ, ಅಗ್ರಜ ಎಂಬ ವಿಶೇಷಣಗಳಿಂದ ತಿಳಿಯುತ್ತದೆ.

ತ್ವಷ್ಟಾ ರೂಪಾಣಿ ಹಿ ಪ್ರಭುಃ ಪಶೂನ್ಪಿಶ್ಚಾನ್ತ್ಸಮಾನಜೇ । ತೇಷಾಂ ನಃ ಸ್ಫಾತಿಮಾ ಯಜ ।
(ಋ. ಸಂ. ೧-೧೮೮-೯)

ತ್ವಷ್ಟಾ ರೂಪಾಣಿ ವಿಕರೋತಿ ।
(ತೈ. ಸಂ. ೧-೫-೯-೨)

ಇತ್ಯಾದಿ ವಾಕ್ಯಗಳು ತ್ವಷ್ಟೃವಿನ ನಿರ್ಮಾಣಕಾರ್ಯವನ್ನು ಸ್ತುತಿಸುತ್ತವೆ. ಅಲ್ಲದೇ ಅವನಿಗೆ ವಿಶ್ವರೂಪನೆಂಬ ವಿಶೇಷಣವೂ ಇದೆ. (ಋ. ಸಂ. ೧-೧೩-೧೦).

ಸಂಹಿತಾಪಾಠಃ

ವನಸ್ಪತೇ ರಶನಯಾ ನಿಯೂಯಾ ದೇವಾನಾಂ ಪಾಥ ಉಪ ವಕ್ಷಿ ವಿದ್ವಾನ್।
ಸ್ವದಾತಿ ದೇವಃ ಕೃಣವದ್ಧವೀಂಷ್ಯವತಾಂ ದ್ಯಾವಾಪೃಥಿವೀ ಹವಂ ಮೇ ॥೧೦॥

ಪದಪಾಠಃ

ವನಸ್ಪತೇ । ರಶನಯಾ । ನಿಽಯೂಯೇತಿ ನಿಽಯೂಯ । ದೇವಾನಾಂ । ಪಾಥಃ । ಉಪ । ವಕ್ಷಿ । ವಿದ್ವಾನ್ ।
ಸ್ವದಾತಿ । ದೇವಃ । ಕೃಣವತ್ । ಹವೀಂಷಿ । ಅವತಾಂ । ದ್ಯಾವಾಪೃಥಿವೀ ಇತಿ । ಹವಂ । ಮೇ ॥ ೧೦ ॥

ಸಾಯಣಭಾಷ್ಯಂ

ವನಸ್ಪತಿಸ್ತೋಮೇ ನಿಷ್ಕೇವಲ್ಯೇ ವನಸ್ಪತೇ ರಶನಯೇತ್ಯೇಷಾ ಸೂಕ್ತಮುಖೀಯಾ । ಸೂತ್ರಿತಂ ಚ । ದೇವೇಭ್ಯೋ ವನಸ್ಪತೇ ಹವೀಂಷಿ ವನಸ್ಪತೇ ರಶನಯಾ ನಿಯೂಯೇತಿ ಸೂಕ್ತಮುಖೀಯಾಃ । ಆ. ೯-೫ । ಇತಿ ॥

ಹೇ ವನಸ್ಪತೇ ವನಸ್ಪತಿವಿಕಾರ ಯೂಪ ವಿದ್ವಾಞ್ಜಾನಾನಸ್ತ್ವಂ ರಶನಯಾ ರಜ್ಜ್ವಾ ನಿಯೂಯೇ ಬದ್ಧ್ವಾ ಪರಿವ್ಯಯ ಪಾಥೋಽನ್ನಂ ದೇವಾನಾಮಿಂದ್ರಾದೀನಾಮುಪ ವಕ್ಷಿ । ಉಪವಹ । ಪ್ರಾಪಯ । ತತೋ ದೇವೋ ವನಸ್ಪತಿಃ ಸ್ವದಾತಿ । ಹವಿಷ್ಪ್ರಪಣೇನ ಸ್ವದಯತು । ತಥಾ ಹವೀಂಷ್ಯಸ್ಮಾಭಿರ್ದತ್ತಾನಿ ಕೃಣವತ್ । ದೇವಾನಾಂ ಕರೋತು । ತಥಾ ಮೇ ಮದೀಯಂ ಹವಂ ದೇವವಿಷಯಾಹ್ವಾನಂ ದ್ಯಾವಾಪೃಥಿವೀ ದ್ಯಾವಾಪೃಥಿವ್ಯಾವವತಾಂ । ರಕ್ಷತಾಂ ॥

ಪ್ರತಿಪದಾರ್ಥ

ವನಸ್ಪತೇ—ವೃಕ್ಷದಿಂದ ನಿರ್ಮಿಸಲ್ಪಟ್ಟಿರುವ ಎಲೈ ಯೂಪದೇವತೆಯೇ । ವಿದ್ವಾನ್—ಸಕಲವನ್ನೂ ತಿಳಿದಿರುವ ನೀನು । ಪಾಥಃ—ಹವೀರೂಪವಾದ ಅನ್ನವನ್ನು । ರಶನಯಾ—ಹಗ್ಗದಿಂದ । ನಿಯೂಯೇ—

ಗಂಟುಕಟ್ಟಿಕೊಂಡು । **ದೇವಾನಾಂ ಉಪ**—ಇಂದ್ರಾದಿದೇವತೆಗಳ ಸಮೀಪಕ್ಕೆ । **ವಕ್ಷಿ**—ತೆಗೆದುಕೊಂಡುಹೋಗು (ಅನಂತರ) । **ದೇವಃ**—ವನಸ್ಪತಿ (ಅಥವಾ ಯೂಪಾಭಿಮಾನಿ) ದೇವನು । **ಸ್ವದಾತಿ**—ಹವಿಸ್ಸನ್ನು ಭಕ್ಷಿಸಲಿ । **ಹವೀಂಷಿ**—ನಮ್ಮಿಂದ ಅರ್ಪಿಸಲ್ಪಟ್ಟ ಹವಿಸ್ಸುಗಳನ್ನು । **ಕೃಣವತ್**—ದೇವತೆಗಳಿಗೆ ಕೊಡಲಿ । **ಮೇ**—ನನ್ನ । **ಹವಂ**—ದೇವವಿಷಯವಾದ ಆಹ್ವಾನವನ್ನು । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳು । **ಅವತಾಂ**—ರಕ್ಷಿಸಲಿ ಎಂದರೆ ಅನುಮೋದಿಸಲಿ.

ಭಾವಾರ್ಥ

ವೃಕ್ಷದಿಂದ (ಮರದಿಂದ) ನಿರ್ಮಿಸಲ್ಪಟ್ಟಿರುವ ಎೈ ಯೂಪದೇವತೆಯೇ, ಸಕಲವನ್ನೂ ತಿಳಿದಿರುವ ನೀನು ಹವೀರೂಪವಾದ ಅನ್ನವನ್ನು (ಪ್ರಯಾಣಕಾಲದಲ್ಲಿ ಜನರು ತೆಗೆದುಕೊಂಡುಹೋಗುವಂತೆ) ಹಗ್ಗದಿಂದ ಗಂಟುಕಟ್ಟಿಕೊಂಡು ದೇವತೆಗಳ ಸಮೀಪಕ್ಕೆ ತೆಗೆದುಕೊಂಡುಹೋಗು. ಅನಂತರ ವನಸ್ಪತಿ ಎಂಬ ಯೂಪಾಭಿಮಾನಿದೇವನು ಆ ಹವಿಸ್ಸನ್ನು ಭಕ್ಷಿಸಲಿ ಮತ್ತು ನಮ್ಮಿಂದ ಅರ್ಪಿತವಾದ ಹವಿಸ್ಸನ್ನು ದೇವತೆಗಳಿಗೆ ಕೊಡಲಿ ಮತ್ತು ದೇವತೆಗಳು ಈ ಯಜ್ಞಭೂಮಿಗೆ ಬರಬೇಕೆಂದು ಪ್ರಾರ್ಥಿಸಿ ಕರೆಯುವ ನನ್ನ ಆಹ್ವಾನವನ್ನು ದ್ಯಾವಾಪೃಥಿವೀದೇವತೆಗಳು ಅನುಮೋದಿಸಲಿ.

English Translation

Vanspati, you are intelligent; having fastened it with a rope, convoy the food of the gods; may the divine (Vanaspati) taste it, may he take the oblations (to the gods); may heaven and earth protect my invocation.

ವಿಶೇಷವಿಷಯಗಳು

ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ಪಠಿಸುವಾಗ ವನಸ್ಪತಿದೇವಿಯನ್ನು ಸ್ತುತಿಸುವ ಸಮಯದಲ್ಲಿ **ವನಸ್ಪತೇ ರಶನಯಾ** ಎಂಬ ಈ ಋಕ್ಕನ್ನು ಪ್ರಾರಂಭದಲ್ಲಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದೇವೇಭ್ಯೋ ವನಸ್ಪತೇ ಹವೀಂಷಿ ವನಸ್ಪತೇ ರಶನಯಾ ನಿಯೂಯೇತಿ ಸೂಕ್ತಮುಖೀಯಾಃ** । ಎಂಬ ಸೂತ್ರದಿಂದ (ಆ. ೯-೫) ವಿವೃತವಾಗಿರುವುದು.

ವನಸ್ಪತಿಶಬ್ದಕ್ಕೆ ಎರಡು ವಿಧವಾದ ಅರ್ಥವಿರುವುದೆಂದು ಯಾಸ್ಕರು ತಮ್ಮ ನಿರ್ವಚನದಲ್ಲಿ ಹೇಳಿದಾರೆ—

ವನಸ್ಪತ ಇತ್ಯೇನಮಾಹೈಷ ಹಿ ವನಾನಾಂ ಪಾತಾ ವಾ ಪಾಲಯಿತಾ ವಾ । ವನಂ ವನೋತೇಃ ।

(ನಿ. ೮-೩)

ವನಸ್ಪತಿಯೆಂದರೇನು ? ವನಗಳ (ಅರಣ್ಯಗಳ) ಸಂರಕ್ಷಕನು ಎಂದರೆ ವನಸ್ಪತಿ ಎಂಬ ವನಾಭಿಮಾನಿದೇವನು. ಅರಣ್ಯದಲ್ಲಿರುವ ವೃಕ್ಷಗಳನ್ನು ಕಾಪಾಡುವವನು ಎಂದರ್ಥವು. ವನಶಬ್ದವು **ವನ-ಸಂಭಕ್ತೌ** ಹೊಂದು ಎಂಬರ್ಥವುಳ್ಳ ಧಾತುವಿನಿಂದ ನಿಷ್ಪನ್ನವಾಗಿರುವುದು. ಜನರು ತಮ್ಮ ಕಾರ್ಯಗಳಿಗಾಗಿ ತನುಗೆ ಬೇಕಾದಾಗ ಇದನ್ನು (ವೃಕ್ಷ ಅಥವಾ ಮರವನ್ನು) ಹೊಂದುವುದರಿಂದ ಎಂದರೆ ತೆಗೆದುಕೊಂಡುಬರುವುದರಿಂದ ವೃಕ್ಷಕ್ಕೆ ವನವೆಂದು ಹೆಸರು. ವೃಕ್ಷಗಳಲ್ಲಿ ದೊಡ್ಡದಾದ ವೃಕ್ಷಕ್ಕೆ ಅಥವಾ ವೃಕ್ಷಾಭಿಮಾನಿದೇವತೆಗೆ ವನಸ್ಪತಿಯೆಂದು ಹೆಸರು. ಉದಾಹರಣೆಗಾಗಿ—ಈ ವನಸ್ಪತಿಶಬ್ದವಿರುವ **ಉಪಾವಸೃಜನ್** ಎಂಬ ಋಕ್ಕನ್ನು (ಋ. ಸಂ. ೧೦-೧೧೦-೧೦) ಹೇಳಿರುವರು.

ತಶ್ ಕೋ ವನಸ್ಪತಿಃ । ಯೂಪ ಇತಿ ಕಾತ್ಥಕ್ಯಃ । ಅಗ್ನಿರಿತಿ ಶಾಕಪೂಣಿಃ ॥

(ನಿ. ೮-೧೮, ೧೯)

ವನಸ್ಪತಿಶಬ್ದಕ್ಕೆ ಯಜ್ಞದಲ್ಲಿ ಪಶುಗಳನ್ನು ಕಟ್ಟುವ ಯೂಪಸ್ತಂಭವೆಂದೂ ಅರ್ಥವಾಗುವುದು ಎಂದು ಕಾತ್ಥಕ್ಯ ಎಂಬುವರ ಮತವು, ಈ ವಿಷಯದಲ್ಲಿ **ಅಜಂತಿ ತ್ವಾಮಧ್ವರೇ** (ಋ. ಸಂ. ೩-೮-೧) ಎಂಬ ಋಕ್ಕಿನಲ್ಲಿ ವನಸ್ಪತಿ ಶಬ್ದಕ್ಕೆ ಯೂಪವೆಂಬ ಅರ್ಥವಿರುವುದನ್ನು ಉದಾಹರಣೆಯಾಗಿ ಕೊಟ್ಟಿರುವರು. ವನಸ್ಪತಿಶಬ್ದಕ್ಕೆ ಅಗ್ನಿಯೆಂದೂ ಅರ್ಥವೆಂದು ಶಾಕಪೂಣಿಯವರ ಮತವು. ಇದರ ಸಮರ್ಥನೆಗಾಗಿ **ದೇವೇಭ್ಯೋ ವನಸ್ಪತೇ** ಮತ್ತು **ವನಸ್ಪತೇ ರಶನಯಾ** ಎಂಬ ಮಂತ್ರಗಳನ್ನು ಉದಾಹರಣೆಯಾಗಿ ಕೊಟ್ಟಿರುವರು.

ಪಾಥಃ—ಪಾಥಶಬ್ದಕ್ಕೆ ಯಾಸ್ಕರು ಮೂರುವಿಧ ಅರ್ಥಗಳನ್ನು ಹೇಳಿರುವರು—

ಪಾಥಃ । ಪಾಥೋಽನ್ತರಿಕ್ಷಂ ಪಥಾ ವ್ಯಾಖ್ಯಾತಂ । ಶ್ಯೇನೋ ನ ದೀಯನ್ನನ್ವೇತಿ ಪಾಥಃ । ಇತ್ಯಪಿ ನಿಗಮೋ ಭವತಿ ॥

(ನಿ. ೬-೮)

(೧) ಪಾಥಶಬ್ದಕ್ಕೆ ಅಂತರಿಕ್ಷವೆಂದರ್ಥವು. ಈ ವಿಷಯದಲ್ಲಿ **ಶ್ಯೇನೋ ನ ದೀಯನ್ನನ್ವೇತಿ ಪಾಥಃ** ಎಂಬ ಶ್ರುತಿವಾಕ್ಯವು ಈ ಅರ್ಥವನ್ನು ಸಮರ್ಥಿಸುವುದು.

ಉದಕಮಪಿ ಪಾಥ ಉಚ್ಯತೇ ಪಾನಾತ್ । ಅಚಷ್ಟ ಅಸಾಂ ಪಾಥೋ ನದೀನಾಂ । ಇತ್ಯಪಿ ನಿಗಮೋ ಭವತಿ ॥

(ನಿ. ೬-೯)

(೨) ಪಾಥಶಬ್ದಕ್ಕೆ ಉದಕವೆಂದೂ ಅರ್ಥವು. ಏಕೆಂದರೆ ಇದನ್ನು ಪಾನಮಾಡುವರು. **ಅಚಷ್ಟ ಅಸಾಂ ಪಾಥೋ ನದೀನಾಂ** ಎಂಬ ಶ್ರುತಿವಾಕ್ಯವು ಈ ಅರ್ಥವನ್ನು ಸಮರ್ಥಿಸುವುದು.

ಅನ್ನಮಪಿ ಪಾಥ ಉಚ್ಯತೇ ಪಾನಾದೇವ । ದೇವಾನಾಂ ಪಾಥ ಉಪವಕ್ತಾ ವಿದ್ವಾನ್ ಇತ್ಯಪಿ ನಿಗಮೋ ಭವತಿ ॥

(ನಿ. ೬-೧೦)

(೩) ಜನರು ಅನ್ನವನ್ನು ಭಕ್ಷಿಸುವುದರಿಂದ ಅನ್ನಕ್ಕೆ ಪಾಥನೆಂದೂ ಹೆಸರು. ಈ ವಿಷಯದಲ್ಲಿ **ದೇವಾನಾಂ ಪಾಥ ಉಪವಕ್ತಾ ವಿದ್ವಾನ್** ಎಂಬ ಪ್ರಕೃತ ಋಕ್ಕೇ ಉದಾಹರಣೆಯಾಗಿರುವುದು.

ವನಸ್ಪತಿ ಶಬ್ದಕ್ಕೆ ಯಾಸ್ಕರ ವಿವರಣೆಯು—

ವನಸ್ಪತ ಇತ್ಯೇನಮಾಹೈಷ ಹಿ ವನಾನಾಂ ಪಾತಾ ವಾ ಪಾಲಯಿತಾ ವಾ । ವನಂ ವನೋತೇಃ ।

(ನಿ. ೮-೩)

ತತ್ಕೋ ವನಸ್ಪತಿಃ । ಯೂಪ ಇತಿ ಕಾತ್ಥಕ್ಯಃ । ಅಗ್ನಿರಿತಿಶಾಕಪೂಣಿಃ ॥

(ನಿ. ೮-೧೮)

ಎಂದರೆ ಅಗ್ನಿಯನ್ನೇ ವನಸ್ಪತಿಯೆಂದು ಹೇಳುವರು ಏಕೆಂದರೆ ಅಗ್ನಿಯು ವನಗಳ ಪಾಲಕನು ಅಥವಾ ಸಂರಕ್ಷನು. ವೃಕ್ಷದಲ್ಲಿ ಅಗ್ನಿಯು ಅಂತರ್ಭೂತವಾಗಿದ್ದರೂ ಅವನ್ನು ಸುಡುವುದಿಲ್ಲವಾದ್ದರಿಂದ ಅದರ ಸಂರಕ್ಷಕನೆಂದು ಹೇಳಲ್ಪಡುವನು. ಅಥವಾ ದಾರ್ವಾದಿ ಯಜ್ಞಸಾಧನಗಳಿಗೆ ಉಪಯೋಗವಾಗುವುದರಿಂದ ವನವೆಂದು ಹೆಸರು. ವನಸ್ಪತಿ ಎಂದರೆ

ವೃಕ್ಷರಾಜ, ದೊಡ್ಡದಾದ ವೃಕ್ಷ ಎಂದರ್ಥವು. ವನಸ್ಪತಿ ಎಂದರೆ ಯಾವ ದೇವತೆಯು? ಯಜ್ಞದಲ್ಲಿ ಪಶುವನ್ನು ಕಟ್ಟುವುದಕ್ಕಾಗಿ ನೆಟ್ಟಿರುವ ಮರದ ಕಂಭವೆಂದು ಕಾತ್ಥಕ್ಯರ ಅಭಿಪ್ರಾಯವು. ವನಸ್ಪತಿಯೆಂದರೆ ಅಗ್ನಿಯೆಂದು ಶಾಕಪೂಣಿಯ ಅಭಿಪ್ರಾಯವು.

ಕಾತ್ಥಕ್ಯರ ಅಭಿಪ್ರಾಯವನ್ನೂ ಸಮರ್ಥಿಸುವುದಕ್ಕಾಗಿ ಯಾಸ್ಕರು ಒಂದು ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು—

ಅಂಜಂತಿ ತ್ವಾಮಧ್ವರೇ ದೇವಯಂತೋ ವನಸ್ಪತೇ ಮಧುನಾ ದೈವ್ಯೇನ ॥

(ಋ. ಸಂ. ೩.೮-೧)

ಎಂದರೆ ಎಲೈ ವನಸ್ಪತಿಯೇ (ಯೂಪಸ್ತಂಭವೇ) ಯಜ್ಞದಲ್ಲಿ ಋತ್ವಿಗ್ಯಜಮಾನರು ನಿನ್ನನ್ನು ಮಂತ್ರಸಂಸ್ಕೃತವಾದ ಘೃತ (ತುಪ್ಪ) ದಿಂದ ಲೇಪನಮಾಡುವರು ಎಂದು ಪಶುವನ್ನು ಕಟ್ಟುವ ಯೂಪಸ್ತಂಭವನ್ನುದ್ದೇಶಿಸಿ ಸಂಬೋಧನೆ ಮಾಡಿರುವುದು ಮತ್ತು ಇದೇ ಸೂಕ್ತದ ೩, ೬, ೧೧ನೆಯ ಋಕ್ಕುಗಳಲ್ಲಿಯೂ ವನಸ್ಪತಿಯನ್ನು ಯೂಪಸ್ತಂಭವೆಂದು ಸಂಬೋಧನೆಮಾಡಿರುವುದಲ್ಲದೆ ಈ ಸೂಕ್ತಕ್ಕೆ ಯೂಪವೇ ದೇವತೆಯು ಎಂದು ಪ್ರಸಿದ್ಧವಾಗಿರುವುದು. ಈ ಸೂಕ್ತದ ಹನ್ನೊಂದನೆಯ ಋಕ್ಕಿನಲ್ಲಿ—**ವನಸ್ಪತೇ ಶತವಲ್ಶೋ ವಿರೋಹ ಸಹಸ್ರವಲ್ಶಾ ವಿ ವಯಂ ರುಹೇಮ** ಎಂದರೆ, ಎಲೈ ವನಸ್ಪತಿಯೇ, ನೂರಾರು ಮತ್ತು ಸಾವಿರಾರು (ಸ್ಥಳಗಳಲ್ಲಿ) ಚಿಗುರುಗಳಿಂದ ಕೂಡಿ ಬೆಳೆ ಎಂದು ಹೇಳಿರುವುದು ವನಸ್ಪತಿಯಾದ ವೃಕ್ಷಕ್ಕೆ ಅನ್ವಯಿಸುವುದಾಗಿರುವುದು. ಋ. ಸಂ. ೧೮-೭೦-೧೦ನೇ ಋಕ್ಕಿನಲ್ಲಿ **ವನಸ್ಪತೇ ರಶನಯೋ ನಿಯೂಯ** ಎಲೈ ವನಸ್ಪತಿಯೇ, ಪಶುವನ್ನು ಕಟ್ಟುವ ಹಗ್ಗದಿಂದ ಕಟ್ಟಿ ಎಂದು ಹೇಳಿರುವುದು ವನಸ್ಪತಿ ಶಬ್ದಕ್ಕೆ ಯೂಪಸ್ತಂಭವೆಂಬ ಅರ್ಥವನ್ನು ಪುಷ್ಟೀಕರಿಸುವುದು. ಆದುದರಿಂದ ವನಸ್ಪತಿಯೆಂದರೆ ಯೂಪಸ್ತಂಭವೆಂದೇ ಅರ್ಥವು. ಅಗ್ನಿಯೆಂದು ಪರೋಕ್ಷಾರ್ಥವು.

ವನಸ್ಪತಿಯ ಸ್ವರೂಪವೇನೆಂಬುದನ್ನು ಬಹಳ ವಿಮರ್ಶೆಮಾಡಿ ತಿಳಿಯಬೇಕು. ಈ ಪದದ ಆಧಾರದ ಮೇಲೆ ಕೆಲವು ಆಧುನಿಕರಾದ ಪಾಶ್ಚಾತ್ಯ ವಿದ್ವಾಂಸರು ವೇದಕಾಲದಲ್ಲಿ ಹಿಂಸಾತ್ಮಕವಾದ ಪಶುಯಾಗವು ರೂಢಿಯಾಗಿದ್ದು **ಆಪ್ರೀ** ಸೂಕ್ತಗಳು ಅಂತಹ ಯಾಗಕ್ಕೆ ಸಂಬಂಧಿಸಿದ ಪ್ರಯಾಜ ಮಂತ್ರಗಳೆಂದು ತೀರ್ಮಾನಕ್ಕೆ ಬಂದಿದ್ದಾರೆ.

ಸ್ಥೂಲವಾದ ದೃಷ್ಟಿಯಿಂದ ನೋಡಿದರೆ **ವನಸ್ಪತಿ**ಯೆಂದರೆ ಯಾಗಪಶುವನ್ನು ಕಟ್ಟುತಕ್ಕ ಯೂಪಸ್ತಂಭವೆಂದಾಗುತ್ತದೆ. ಆದರೆ ಇದು ಯಜ್ಞಪಶುವನ್ನು ಕಟ್ಟುವ ಸ್ತಂಭವೇ ಅಲ್ಲವೇ ಎಂಬ ವಿಷಯದಲ್ಲಿ ಶ್ರುತಿವಾಕ್ಯಗಳನ್ನು ಗಮನಿಸಿ ಅನಂತರ ಅವುಗಳ ಆಧಾರದ ಮೇಲೆ **ವನಸ್ಪತಿಯ** ಸ್ವರೂಪವನ್ನು ನಿಷ್ಕರ್ಷಿಸಬಹುದು.

ಹೋತಾ ಯಕ್ಷದ್ವನಸ್ಪತಿಮುಪಾವಸ್ರಷ್ಟ್ಧಿಯೋ ಜೋಷ್ಟ್ರಾರಗ್ಂ ಶಮಿತಂ ನರಃ । ಸ್ವದಾತ್ಸ್ವ-
ಧಿತಿರ್ವನುಥಾದ್ಯ ದೇವೋ ದೇವೇಭ್ಯೋ ಹವ್ಯಾವಾಡ್ವೇತ್ವಾಜ್ಯಸ್ಯ ಹೋತರ್ಯಜ ।

(ತೈ. ಬ್ರಾ. ೩ ೬ ೨-೨)

ಎಂಬ ಮಂತ್ರಕ್ಕೆ ಭಾಷ್ಯವು ಈ ರೀತಿಯಿದೆ. **ವನಸ್ಪತಿಂ ಯೂಪಾಧಾರಭೂತಂ ದಶಮಪ್ರಯಾಜದೇವತಾತ್ಮಕ-**
ಮಗ್ನಿಂ ದೈವ್ಯೋ ಹೋತಾ ಯಜತು-ವನಸ್ಪತಿಯು ಯೂಪಕ್ಕೆ ಆಧಾರಭೂತವಾದದ್ದು ಮತ್ತು ಹತ್ತನೆಯ ಪ್ರಯಾಜ ದೇವತಾತ್ಮಕನಾದ ಅಗ್ನಿಯು. ಇವನನ್ನುದ್ದೇಶಿಸಿ ಹೋತೃವು ಯಾಗಮಾತಲೆಂದು **ವನಸ್ಪತಿಗೆ ಧಿಯೋ, ಜೋಷ್ಟ್ರಾ, ಸ್ವದಾತ್, ಸ್ವಧಿತಿಃ, ದೇವೇಭ್ಯಃ, ಋತುಥಾ ಹವ್ಯವಾಟ್**, ಯಜ್ಞಸ್ಯ **ಆಯುಃ ಕಲ್ಪಮಾನಃ** ಎಂಬ ವಿಶೇಷಣಗಳಿವೆ. ಈ ವಿಶೇಷಣಗಳಲ್ಲಿ **ಧಿಯೋ ಜೋಷ್ಟ್ರಾ** ಎಂಬುದಕ್ಕೆ **ಬುದ್ಧೇಃ ಪ್ರೇಣಯಿತಾರಂ** । ಬುದ್ಧಿಗೆ

ಹರ್ಷದಾಯಕನೆಂದೂ, **ಸ್ವಧಿತಿಃ**—ಸ್ವಧಿತಿಯಿಂದ (ವಜ್ರಾಯುಧ ಅಥವಾ) ದಿವ್ಯಶಸ್ತ್ರದಿಂದ ಸಂಸ್ಕೃತವಾದದ್ದೆಂದೂ, **ಋತುಥಾ-ಋತೌ ವಿಹಿತೇ ಕಾಲವಿಶೇಷೇ ಅದ್ಯ ಅಸ್ಮಿಕನ್ಕರ್ಮಣಿ ಸ್ವದಾದಸ್ಮಾಭಿರ್ದೀಯಮಾನಂ ಹವಿಃ ಸ್ವದಯತು। ಕಿಂಚ ದೇವೋ ವನಸ್ಪತಿರ್ದೇವೇಭ್ಯೋ ದೇವಾರ್ಥಂ ಹವ್ಯಾ ಹವೀಂಷಿ ಹವ್ಯವಾಡ್ವಹತು।** ಈ ಯಾಗಕಾಲದಲ್ಲಿ ನಮ್ಮಿಂದ ಅರ್ಪಿತಗಳಾದ ಹವಿಸ್ಸುಗಳನ್ನು ದೇವತೆಗಳಿಗೆ ಅರ್ಪಿಸಲಿ ಎಂದು ಮಂತ್ರಾರ್ಥ. ಮತ್ತು **ಯಜ್ಞಸ್ಯ ಆಯುಃಕಲ್ಪಮಾನಃ** ಎಂಬ ವಿಶೇಷಣದಿಂದ ಯಜ್ಞದ ಆಯುಸ್ಸನ್ನು ಬೆಳೆಸುವವನು ಎಂದರ್ಥ ಈ ವಿಧವಾದ ವಿಶೇಷಣಗಳಿಂದ **ಪ್ರೈಷಸೂಕ್ತದಲ್ಲಿ ಅಗ್ನಿಗೂ, ವನಸ್ಪತಿಗೂ** ತಾದಾತ್ಮ್ಯವನ್ನು ಹೇಳಿದೆ. ಐತರೇಯ ಬ್ರಾಹ್ಮಣದಲ್ಲಿ **ಪ್ರಾಣೋ ವೈ ವನಸ್ಪತಿಃ** (೨-೪) ಎಂಬ ವಾಕ್ಯದಿಂದ ನಿರ್ದೇಶಿಸಿದೆ. ನಿರುಕ್ತಕಾರರು ಮೊದಲು ವನಸ್ಪತಿಶಬ್ದದ ನಿರ್ವಚನವನ್ನು ಹೇಳಿ ಅನಂತರ **ಆಪ್ರೀ** ಸೂಕ್ತದಲ್ಲಿ ವನಸ್ಪತಿಯ ಸ್ವರೂಪವೇನೆಂಬುದನ್ನು ತಿಳಿಸಿದ್ದಾರೆ. ಋ. ಸಂ. ೨-೩೭-೩ನೇ ಋಕ್ಕನ್ನು ವಿವರಿಸುವಾಗ ಅದರಲ್ಲಿರುವ ವನಸ್ಪತಿಶಬ್ದದ ನಿರ್ವಚನವನ್ನು ತೋರಿಸುತ್ತಾ **(ನಿ. ೮-೩)ವನಾನಾಂ ಪಾತಾ ವಾ ಪಾಲಯಿತಾ ವಾ। ವನಂ ವನೋತೇಃ।** ವನಗಳಿಗೆ ಪ್ರಭುವಾಗಿರುವುದರಿಂದಾಗಲಿ, ಅಥವಾ ಪಾಲಕನಾಗುವುದರಿಂದಾಗಲಿ ವನಸ್ಪತಿಯೆಂದು (ಅಗ್ನಿಯು) ಪ್ರಸಿದ್ಧನಾಗಿದ್ದಾನೆ ಮತ್ತು **ಪಡೆ** ಎಂಬರ್ಥವನ್ನು ಕೊಡತಕ್ಕ **ವನ್** ಧಾತುವಿನಿಂದ ನಿಷ್ಪನ್ನವಾಗಿದೆ ಎಂದು ಹೇಳಿ ಅನಂತರ **ಆಪ್ರೀ** ಸೂಕ್ತದ ದೇವತೆಗಳ ಸ್ವರೂಪವನ್ನು ಚರ್ಚಿಸುವಾಗ (ನಿ. ೮-೧೮) **ತತ್ ಕೋ ವನಸ್ಪತಿಃ ಯೂಪ ಇತಿ ಕಾತ್ಥಕ್ಯಃ ಅಗ್ನಿರಿತಿ ಶಾಕಪೂಣಿಃ** ಎಂದು ಎರಡು ಅಭಿಪ್ರಾಯಗಳನ್ನು ತಿಳಿಸಿ ಕಾತ್ಥಕ್ಯರ ಮತವನ್ನು ಸಮರ್ಥಿಸುವುದಕ್ಕೆ,

ಅಂಜಂತಿ ತ್ವಾಮಧ್ವರೇ ದೇವಯಂತೋ ವನಸ್ಪತೇ ಮಧುನಾ ದೇವ್ಯೇನ।
ಯದೂರ್ಧ್ವಸ್ತಿಷ್ಠಾ ದ್ರವಿಣೇಹ ಧತ್ತಾದ್ಯಾ ನ್ಷಯೋ ಮಾತುರಸ್ಯಾ ಉಪಸ್ಥೇ॥

(ಋ. ಸಂ. ೩-೮-೧)

ಎಂಬ ಋಕ್ಕನ್ನುದಹರಿಸಿದ್ದಾರೆ. ಈ ಋಕ್ಕಿನಲ್ಲಿ ಸಾಯಣರು **ವನಸ್ಪತಿ** ಯನ್ನು ಯೂಪವೆಂದೇ ಸಂಭೋಧಿಸಿದ್ದಾರೆ. ಅನಂತರ ನಿರುಕ್ತಕಾರರು **ಶಾಕಪೂಣಿಯ** ಮತವನ್ನು ಸಮರ್ಥಿಸಲು,

ವನಸ್ಪತೇ ರಶನಯಾ ನಿಯೂಯಾ ದೇವಾನಾಂ ಪಾಥ ಉಪ ವಕ್ಷಿ ವಿದ್ವಾನ್।
ಸ್ವದಾತಿ ದೇವಃ ಕೃಣವದ್ಧವೀಂಷ್ಯವಶಾಂ ದ್ಯಾವಾಪೃಥಿವೀಹವಂ ಮೇ॥

(ಋ. ಸಂ. ೧೦-೭೦ ೧೦)

ಎಂಬ ಋಕ್ಕನ್ನುದಹರಿಸಿದ್ದಾರೆ. ಇಲ್ಲಿಯೂ ಸಾಯಣರು ಯೂಪವೆಂದೇ ಅರ್ಥವಾಡಿದ್ದಾರೆ. ಆದರೆ ಯೂಪಾಂತರ್ಗತವಾದ **ಅಗ್ನಿ**ಯೆಂದು ನಿರುಕ್ತಕಾರರ ಮತ. ದುರ್ಗಾಚಾರ್ಯರು ನಿರುಕ್ತದಲ್ಲಿ ಈ ಋಕ್ಕನ್ನು ವಿವರಿಸುತ್ತಾ **ಏವಮಗ್ನಿರ್ವನಸ್ಪತಿಃ। ಯತ್ ಪುನರೇತದುಕ್ತಂ ಯೂಪಾಂಜನೀಯಾಯಾಂ ಯೂಪೇ ವನಸ್ಪತಿಶಬ್ದಃ ಇತಿ। ಅತ್ರ ಬ್ರೂಮಃ—ಅಗ್ನಿರೇವಾಸೌ ಯೂಪಾಂತರ್ಗತೋ ಯೂಪಾತ್ಮನಾ ವರ್ತಮಾನೋ ಯೂಪಾಂಜನೀಯಾಯಾಂ ವನಸ್ಪತಿಶಬ್ದೇನೋಚ್ಯತೇ।** ಇಲ್ಲಿ ವನಸ್ಪತಿಯೆಂದರೆ **ಯೂಪಾಂತರ್ಗತನಾದ ಅಗ್ನಿಯೇ** ಹೊರತು ಬೇರೆಯಲ್ಲ ಎಂಬುದನ್ನು ಸ್ಥಿರಪಡಿಸಿದ್ದಾರೆ. ಬೃಹದ್ದೇವತಾಕಾರರು,

ವನಸ್ಪತಿಂ ತು ಯಂ ಪ್ರಾಹುರಯಂ ಸೋಽಗ್ನಿರ್ವನಸ್ಪತಿಃ।
ಅಯಂ ವನಾನಾಂ ಹಿ ಪತಿಃ ಪಾತಾ ಪಾಲಯಿತೇತಿ ವಾ॥
ಅಗ್ನಿರ್ಗೃತ್ಸಮದೇನಾಯಂ ವನಸ್ಪತಿರಿತೀಳಿತಃ।
ಮಂದಸ್ವೇತ್ಯಸ್ಯ ಸೂಕ್ತಸ್ಯ ಪಳ್ಚಸ್ಯ ತೃತೀಯಯೇಯಾ॥

ಯೂಪವತ್ತೇರುವಚ್ಚೈವ ಸ್ತುತಿರ್ಯಾಸ್ಯ ಪ್ರಸಂಗಜಾ ।
ಸರ್ವೇಷಾಂಜಂತಿಸೂಕ್ತೇನ ತೃತೀಯೇ ಸಾ ತು ಮಂಡಲೇ ॥
(ಬೃ. ದೇ. ೩-೨೬ ರಿಂದ ೨೮)

ಎಂಬ ವಾಕ್ಯಗಳಿಂದ ಋ. ಸಂ. ೯-೧೩-೧೧ನೇ ಋಕ್ಕಿನಲ್ಲಿ ಉದ್ದೇಶಿಸಿರುವ ಆಪ್ರೀದೇವತೆಯ ಸ್ವರೂಪವನ್ನು ಚರ್ಚಿಸಿ ಇಲ್ಲಿ ವನಸ್ಪತಿಯೆಂದರೆ **ಪಾರ್ಥಿವಾಗ್ನಿಯೆಂದೂ** ಮತ್ತು ಋ. ಸಂ. ೨-೩೭-೨ನೇ ಋಕ್ಕಿನಲ್ಲಿ **ಗೃತ್ಸಮದನೂ** ವನಸ್ಪತಿಶಬ್ದದಿಂದ **ಈ** ಪಾರ್ಥಿವಾಗ್ನಿಯನ್ನೇ ಉದ್ದೇಶಿಸಿದನೆಂದೂ, ಮೂರನೆಯ ಮಂಡಲದಲ್ಲಿ ಮಾತ್ರ ಕೆಲವು ಋಕ್ಕುಗಳಲ್ಲಿ **ಯೂಪ** ಅಥವಾ **ವೃಕ್ಷ**ವೆಂದರ್ಥವೆಂದೂ ಅದೂ ಸಹ ಪ್ರಸಂಗಜವೆಂದೂ ತಿಳಿಸಿದ್ದಾರೆ. ಇದೇ ಅಲ್ಲದೇ,

ಇಹೈಷ ಪವಮಾನೋಽಗ್ನಿರ್ಮಧ್ಯಮೋಽಗ್ನಿರ್ವನಸ್ಪತಿಃ ।
ಅನುಷ್ಮಿನ್ನೇವ ವಿಪ್ರೈಷ್ಟು ಲೋಕೇಽಗ್ನಿಶ್ಯುಚಿರುಚ್ಯತೇ ॥
(ಬೃ. ದೇ. ೧-೬೬)

ಎಂಬಲ್ಲಿ **ವನಸ್ಪತಿ**ಯೆಂದರೆ ಮಧ್ಯಮಲೋಕದ **ಅಗ್ನಿ**ಯೆಂದು ತೋರಿಸಿ ಋಕ್ಸಂಹಿತೆಯಲ್ಲಿ ಕೆಲವೆಡೆಗಳಲ್ಲಿ ಬಿಟ್ಟು ಉಳಿದ ನಾನಾ ಕಡೆಗಳಲ್ಲಿ **ಈ** ಪದವು **ಅಗ್ನಿಯನ್ನೇ** ನಿರ್ದೇಶಿಸಿರುವುದರಲ್ಲಿ ಸಂಶಯವೇ ಇಲ್ಲವೆಂಬುದನ್ನು ನಿಷ್ಕರ್ಷವಾಗಿ ಹೇಳಿದ್ದಾರೆ

ಸಂಹಿತಾಪಾಠಃ

ಆಗ್ನೇ ವಹ ವರುಣಮಿಷ್ಟಯೇ ನ ಇಂದ್ರಂ ದಿವೋ ಮರುತೋ ಅಂತರಿಕ್ಷಾತ್ ।
ಸೀದಂತು ಬರ್ಹಿರ್ವಿಶ್ವ ಆ ಯಜತ್ರಾಃ ಸ್ವಾಹಾ ದೇವಾ ಅಮೃತಾ ಮಾದಯಂತಾಂ ॥ ೧೧ ॥

ಪದಪಾಠಃ

ಆ । ಅಗ್ನೇ । ವಹ । ವರುಣಂ । ಇಷ್ಟಯೇ । ನಃ । ಇಂದ್ರಂ । ದಿವಃ । ಮರುತಃ । ಅಂತರಿಕ್ಷಾತ್ ।
ಸೀದಂತು । ಬರ್ಹಿಃ । ವಿಶ್ವೇ । ಆ । ಯಜತ್ರಾಃ । ಸ್ವಾಹಾ । ದೇವಾಃ । ಅಮೃತಾಃ । ಮಾದಯಂತಾಂ ॥

ಸಾಯಣಭಾಷ್ಯಂ

ಹೇ ಅಗ್ನೇ ತ್ವಂ ನೋಽಸ್ಮಾಕಮಿಷ್ಟಯೇ ಯಾಗಾಯೇಂದ್ರಂ ವರುಣಂ ಚ ಮರುತಶ್ಚ ದಿವೋ ದ್ಯುಲೋಕಾದಂತರಿಕ್ಷಾಚ್ಚಾಸ್ಮದೀಯಂ ಯಜ್ಞಮಾ ವಹ । ಪ್ರಾಪಯ । ಅಗತಾಸ್ತೇ ಯಜತ್ರಾ ಯಷ್ಟವ್ಯಾ ವಿಶ್ವೇ ಸರ್ವೇ ದೇವಾ ಬರ್ಹಿರಾ ಸೀದಂತು । ತತ್ರಾಸನ್ನಾ ಭವಂತು । ತತೋಽಮೃತಾ ಮರಣಧರ್ಮರಹಿತಾ ದೇವಾಃ ಸ್ವಾಹಾ ಸ್ವಾಹಾಕಾರೇಣ ದತ್ತೈರ್ಹವಿರ್ಭಿರ್ಮಾದಯಂತಾಂ । ಆತ್ಮಾನಂ ಮಾವಯೆಂತು ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ। **ನಃ**—ನಮ್ಮ। **ಇಷ್ಟಯೇ**—ಯಾಗಕ್ಕಾಗಿ। **ಇಂದ್ರಂ**—ಇಂದ್ರನನ್ನೂ। **ವರುಣಂ**—ವರುಣನನ್ನೂ। **ಮರುತಃ**—ಮರುದ್ದೇವತೆಗಳನ್ನೂ ಸಹ। **ದಿವಃ**—(ಅವರ ವಾಸಸ್ಥಾನವಾದ) ಸ್ವರ್ಗಲೋಕದಿಂದಲೂ। **ಅಂತರಿಕ್ಷಾತ್**—ಅಂತರಿಕ್ಷದಿಂದಲೂ। **ಆ ವಹ**—ನಮ್ಮ ಯಜ್ಞಭೂಮಿಗೆ ಕರೆದು ಕೊಂಡು ಬಾ। **ಅಮೃತಾಃ**—ಮರಣರಹಿತರಾದ। **ವಿಶ್ವೇದೇವಾಃ**—ಆ ಸಮಸ್ತ ದೇವತೆಗಳೂ। **ಬರ್ಹಿಃ**—ದರ್ಭಾಸನದಮೇಲೆ। **ಸೀದಂತು**—ಕುಳಿತುಕೊಳ್ಳಲಿ। ಮತ್ತು **ಸ್ವಾಹಾ**—ಸ್ವಾಹಾಕಾರಪೂರ್ವಕವಾಗಿ ನಾವು ಅರ್ಪಿಸುವ ಹವಿಸ್ಸಿನಿಂದ। **ಮಾದಯಂತಾಂ**—ತೃಪ್ತಿಯನ್ನು ಹೊಂದಲಿ.

ಭಾವಾರ್ಥ

ಎಲೈ ಅಗ್ನಿಯೇ, ನೀನು ನಮ್ಮ ಯಜ್ಞದಲ್ಲಿ ಭಾಗವಹಿಸುವುದಕ್ಕಾಗಿ ಇಂದ್ರನನ್ನೂ, ವರುಣನನ್ನೂ, ಮರುದ್ದೇವತೆಗಳನ್ನೂ ಅವರ ಸ್ವಸ್ಥಾನವಾದ ಸ್ವರ್ಗಾಂತರಿಕ್ಷಲೋಕಗಳಿಂದ ನಮ್ಮ ಯಜ್ಞಭೂಮಿಗೆ ಕರೆದುಕೊಂಡು ಬಾ. ಮರಣರಹಿತರಾದ ಆ ಸಕಲ ದೇವತೆಗಳು ದರ್ಭಾಸನದ ಮೇಲೆ ಕುಳಿತು ಸ್ವಾಹಾಕಾರಪೂರ್ವಕವಾಗಿ ನಾವು ಅರ್ಪಿಸುವ ಹವಿಸ್ಸಿನಿಂದ ಸಂತೋಷಪಡಲಿ.

English Translation

Bring, Agni, to our sactifice Varnna and Indra from heaven, and the Maruts from the firmament; may the adorable universal gods sit down on the sacred grass, and may the immortal deities rejoice in (the oblation presented with) the Swaha.

ವಿಶೇಷವಿಷಯಗಳು

ಸ್ವಾಹಾ ಎಂಬ ಶಬ್ದಕ್ಕೆ ಯಾಸ್ಕರ ವಿವರಣೆಯು ಈರೀತಿ ಇದೆ—

ಸ್ವಾಹಾಕೃತಯಃ। ಸ್ವಾಹೇತ್ಯೇತತ್ ಸು ಆಹೇತಿ ವಾ। ಸ್ವಾ ವಾಗಾಹೇತಿ ವಾ। ಸ್ವಂ ಪ್ರಾಹೇತಿ ವಾ। ಸ್ವಾಹುತಂ ಹವಿರ್ಜುಹೋತೀತಿ ವಾ॥

(ನಿ. ೮-೨೧)

ಸ್ವಾಹಾ ಎಂಬ ಶಬ್ದಕ್ಕೆ ನಾಲ್ಕುವಿಧವಾದ ಅವಯವಾರ್ಥಗಳಿರುವವು—

(೧) **ಸು ಆಹೇತಿ ವಾ**। ಸು—ಚೆನ್ನಾಗಿ ಆಹ—ಹೇಳುತ್ತಾನೆ ಅಥವಾ ಉಚ್ಚರಿಸುತ್ತಾನೆ. ಸ್ವಾಹಾಂತ್ಯವಾದ ಮಂತ್ರವನ್ನು ಚೆನ್ನಾಗಿ ಅಥವಾ ಸ್ಪಷ್ಟವಾಗಿ ಉಚ್ಚರಿಸುವುದರಿಂದ ಇದಕ್ಕೆ ಸ್ವಾಹಾ ಎಂದು ಹೆಸರು.

(೨) **ಸ್ವಾ ವಾಗಾಹೇತಿ ವಾ**। ಸ್ವಾ—ಸ್ವಕೀಯವಾದ, ವಾಕ್—ವಾಕ್ಯವು. **ತಂ ಸ್ವಾ ವಾಗಭ್ಯವದಜ್ಜುಹುಧೀತಿ। ತತ್ಸ್ವಾಹಾಕಾರಸ್ಯ ಜನ್ಮ।** ಎಂದು ಶ್ರುತಿವಾಕ್ಯವಿರುವುದು. ಎಂದರೆ ಹೋಮಮಾಡುವಾಗ ವೇದ ಮಂತ್ರವಾದ ಋಕ್ಕಿನ ಅಂತ್ಯದಲ್ಲಿ ಸ್ವಾಹಾ ಎಂಬ ಶಬ್ದವನ್ನು ಹೋಮಮಾಡುವನನು ತಾನೇ ಸೇರಿಸಿ ಹೇಳುವುದರಿಂದ ಇವಕ್ಕೆ ಸ್ವಾಹಾ ಎಂದು ಹೆಸರು.

(೩) **ಸ್ವಂ ಪ್ರಾಹೇತಿ ವಾ**। (ಯಜಮಾನನು ಅಥವಾ ಋತ್ವಿಜನು) ಸ್ವಂ—ತನ್ನ ಹವಿಸ್ಸನ್ನು. ಆಹ—ಹೋಮಮಾಡುವೆನೆಂದು ಹೇಳುವನು. ಆದ್ದರಿಂದ ಸ್ವಾಹಾ ಎಂದು ಹೆಸರು.

(೪) **ಸ್ವಾಹುತಂ ಹವಿರ್ಜುಹೋತೀತಿ ವಾ** । ತಾನು ಹೋಮಮಾಡುವ ಹವಿಸ್ಸನ್ನು ಸ್ವಾಹಾ ಎಂಬ ಶಬ್ದೋಚ್ಚಾರಣೆ ಮೂಲಕ ಹೋಮಮಾಡುವುದರಿಂದ ಎಂದರೆ ಅಗ್ನಿಯಲ್ಲಿ ಹವಿಃಪ್ರದಾನಮಾಡುವುದರಿಂದ ಸ್ವಾಹಾ ಎಂದು ಹೆಸರು.

ಎಂದು ನಾಲ್ಕುವಿಧ ಅರ್ಥವಿವರಣೆಯನ್ನು ಮಾಡಿ ಉದಾಹರಣೆಗಾಗಿ ಈ ಋಕ್ಕನ್ನು ಕೊಟ್ಟಿರುವರು.

ಸದ್ಯೋ ಜಾತೋ ವ್ಯಮಿಮೀತ ಯಜ್ಞಮಗ್ನಿರ್ದೇವಾನಾಮಭವತ್ಪುರೋಗಾಃ ।
ಅಸ್ಯ ಹೋತುಃ ಪ್ರದಿಶ್ಯೃತಸ್ಯ ವಾಚಿ ಸ್ವಾಹಾಕೃತಂ ಹವಿರದಂತು ದೇವಾಃ ॥

(ಋ. ಸಂ. ೧೦-೧೧೦-೧೧)

ಇದರ ಮುಖ್ಯಾರ್ಥವು—ಈಗತಾನೇ ಉತ್ಪನ್ನವಾದ (ಎಂದರೆ ಯಜ್ಞದಲ್ಲಿ ಈಗ ಪ್ರತಿಷ್ಠಿಸಲ್ಪಟ್ಟಿರುವ) ಅಗ್ನಿಯು ದೇವತೆಗಳ ಮುಂದೆ ಕುಳಿತು ಹೋತೃವಿನ ಕರ್ತವ್ಯವನ್ನು ಎಂದರೆ ದೇವತೆಗಳನ್ನು ಆಹ್ವಾನಮಾಡುವ ಕಾರ್ಯವನ್ನು ನೆರವೇರಿಸುತ್ತಾ ಯಜ್ಞವನ್ನು ನಿರ್ವಹಿಸುವನು. ಇಂತಹ ಹೋತೃವು ಪೂರ್ವದಿಕ್ಕಿನಲ್ಲಿ ಇದ್ದು ಸನುರ್ಪಿಸುವ, ಸ್ವಾಹಾಕಾರ ಶಬ್ದಪೂರ್ವಕವಾಗಿ ಹೋಮಮಾಡುವ ಹವಿಸ್ಸನ್ನು ದೇವತೆಗಳು ಭಕ್ಷಿಸಲಿ ಎಂದು. ಆದುದರಿಂದ ಸ್ವಾಹಾ ಎಂದರೆ ಯಜ್ಞಾರ್ಥವಾಗಿ ವಿಧಿಪೂರ್ವಕವಾಗಿ ಪ್ರತಿಷ್ಠಿತವಾದ ಅಗ್ನಿಯಲ್ಲಿ ದೇವತೆಗಳ ಪ್ರೀತ್ಯರ್ಥವಾಗಿ ಹವಿಸ್ಸನ್ನು ಹೋಮಮಾಡುವಾಗ ಮಂತ್ರಾಂತ್ಯದಲ್ಲಿ ಉಚ್ಚರಿಸುವ ಶಬ್ದಕ್ಕೆ ಸ್ವಾಹಾ ಎಂದು ಹೆಸರು ಎಂದಭಿಪ್ರಾಯವು.

ಕೆಲವು ಆಪ್ರೀಸೂಕ್ತಗಳಲ್ಲಿ **ಸ್ವಾಹಾಕೃತಯಃ** ಎಂದು ಬಹುವಚನಶಬ್ದಪ್ರಯೋಗವಿರುವುದು. ಈ ಸೂಕ್ತದಲ್ಲಿರುವ ಹನ್ನೊಂದು ದೇವತೆಗಳಿಗೆ ಹೋಮಮಾಡುವಾಗ ಉಪಯೋಗಿಸುವ ಹನ್ನೊಂದು ಪ್ರಯಾಜಮಂತ್ರಗಳಿಗೂ ಸ್ವಾಹಾಕಾರವನ್ನು ಸೇರಿಸಿ ಪಠಿಸುವುದರಿಂದ **ಸ್ವಾಹಾಕೃತಯಃ** ಎಂದು ಬಹುವಚನವನ್ನು ಪ್ರಯೋಗಿಸಲಾಗಿದೆ.

ಪುರಾಣಾದಿಗಳಲ್ಲಿ ಸ್ವಾಹಾ ಎಂಬ ಬೇರೆ ಅರ್ಥದಲ್ಲಿ ಉಪಯೋಗಿಸಲ್ಪಡುವುದು. ಅಂಗಿರಾಋಷಿಯ ಪುತ್ರನಾದ ಬೃಹಸ್ಪತಿಯ ಮಗಳಿಗೆ ಸ್ವಾಹಾ ಎಂದು ಮಹಾಭಾರತದಲ್ಲಿ ಹೇಳಿರುವುದು. ಪುರಾಣಗಳಲ್ಲಿ ಸ್ವಾಹಾದೇವಿಯು ದಕ್ಷಪ್ರಜಾಪತಿಯ ಮಗಳೆಂದೂ, ಅಗ್ನಿಯ ಪತ್ನಿಯೆಂದೂ ಹೇಳಿರುವುದು

ಸ್ವಾಹಾ ಇತ್ಯೇವಂಪೂರ್ವಾ ಕೃತಿಃ ಕರಣಮುಚ್ಚಾರಣಂ ಯಷ್ಟ್ಯಮಾಣದೇವತಾನಾಂ ತಾಃ ಸ್ವಾಹಾಕೃತಯಃ । ತದ್ವಂತಿ ಹವ್ಯಾನಿ ॥ ಆಹುತ್ಯರ್ಪಣಕ್ಕೆ ಪಠಿಸತಕ್ಕ ಸ್ವಾಹಾ ಎಂಬ ಶಬ್ದದೊಡನೆ ಕೂಡಿದ ಹವ್ಯಗಳೆಂದು **ಹವ್ಯಾನಿ** ಎಂಬ ಪದಕ್ಕೆ ವಿಶೇಷಣವಾಗಿದೆ. ಆಪ್ರೀಸೂಕ್ತಗಳ ಕೊನೆಯ ಋಕ್ಕುಗಳಲ್ಲಿ ಮುಖ್ಯವಾಗಿ ಪಠಿಸಿರತಕ್ಕ ಪದವಾಗಿವೆ. ಕೆಲವು ಋಕ್ಕುಗಳಲ್ಲಿ ಕ್ರಿಯಾವಿಶೇಷಣವಾಗಿಯೂ ಇದೆ. ಎಂದರೆ, ೧-೧೩-೧೨ ನೆಯ ಋಕ್ಕಿನಲ್ಲಿ **ಸ್ವಾಹಾ ಕೃಣೋತನ** ಎಂದೂ, ೧-೧೪೨-೧೨ ನೇ ಋಕ್ಕಿನಲ್ಲಿ **ಸ್ವಾಹಾ ಕರ್ತನ** ಎಂದೂ, ೩-೪-೧೧; ೭-೨.೧೧; ೧೦-೭೦-೧೧ ನೇ ಋಕ್ಕುಗಳಲ್ಲಿ ಕರಣಾರ್ಥದಲ್ಲಿಯೂ ೨-೩-೧೧ ರಲ್ಲಿ ಹವ್ಯಕ್ಕೆ ವಿಶೇಷಣವಾಗಿಯೂ, ೧೦-೧೧೦-೧೧ ರಲ್ಲಿ **ಹವಿಃ** ಎಂಬುದಕ್ಕೆ ವಿಶೇಷಣವಾಗಿಯೂ ಇದೆ.

ಈ ಪದವ ವಿವರಣೆಯನ್ನು ಹೇಳುವಾಗ ಈ ಪದದಿಂದ ದೇವತಾತ್ಮಕವಾದ ಸ್ವಾಹಾಕೃತಿಯನ್ನು ನಿರ್ದೇಶಿಸಿದೆಯೆಂದು ಕೆಲವರೂ, ಈ ಪದದಿಂದ ಅಗ್ನಿಯು ನಿರ್ದೇಶಿಸಲ್ಪಟ್ಟಿದ್ದಾನೆ ಎಂದೂ ಮತ್ತೆ ಕೆಲವರೂ ಅಭಿಪ್ರಾಯಪಟ್ಟಿದ್ದಾರೆ. ತೈತ್ತಿರೀಯಸೂಕ್ತದಲ್ಲಿ,

ಹೋತಾ ಯಕ್ಷದಗ್ನಿಗ್ಂ ಸ್ವಾಹಾಜ್ಯಸ್ಯ.....ವಿಯಂತು ಹೋತರ್ಯಜ ॥

(ತೈ. ಬ್ರಾ. ೩-೬-೨-೨)

ಎಂದು ಪಠಿಸಿದೆ. ಇದಕ್ಕೆ ಸಾಯಣರು **ಯೋಽಯಂ ಸ್ವಾಹಾಶಬ್ದೋದಿತಃ ಉಕ್ತಮಪ್ರಯಾಜದೇವಃ ಅಗ್ನಿಃ ತಂ ದೈವ್ಯೋ ಹೋತಾ ಯಜತು । ಸ್ವಾಹಾ** ಶಬ್ದದಿಂದ ಹನ್ನೊಂದನೆಯ ಪ್ರಯಾಜದೇವತೆಯಾದ ಅಗ್ನಿಯನ್ನು ಉದ್ದೇಶಿಸಿದೆ ಎಂದು ವಿವರಿಸಿದ್ದಾರೆ. ನಿರುಕ್ತಕಾರರು ಹೇಳಿರುವ ನಾಲ್ಕುವಿಧ ಅರ್ಥವಿವರಣೆಯನ್ನು ಹಿಂದೆಯೇ ಹೇಳಿದೆ. ಐತರೇಯಬ್ರಾಹ್ಮಣದಲ್ಲಿ—

ಸ್ವಾಹಾಕೃತೀರ್ಯಜತಿ ಪ್ರತಿಷ್ಠಾ ವೈ ಸ್ವಾಹಾಕೃತಯಃ ಪ್ರತಿಷ್ಠಾಯಾಮೇವ ತದ್ಯಜ್ಞಮಂತತಃ ಪ್ರತಿಷ್ಠಾಪಯತಿ ॥

(ಐ. ಬ್ರಾ. ೨-೪)

ಸ್ವಾಹಾಕೃತಿಯಿಂದ ಆಹುತಿಯು ಸಮಾಪ್ತವಾಗಿರುವುದರಿಂದ ಯಾಗಕ್ಕೆಲ್ಲಾ ಅದೇ ಉಪಸ್ಪಂಭಕವಾಗಿರುವುದು ಮತ್ತು ಯಜ್ಞವನ್ನು ಸರಿಯಾದ ಆಧಾರದ ಮೇಲೆ ನಿಲ್ಲಿಸುವುದು ಎಂದು ವಿವರಿಸಿದೆ. ಬೃಹದ್ದೇವತೆಯಲ್ಲಿ—

ಸ್ವಾಹಾಕೃತಯೋಽನೇಕಾಶ್ಚ ವಿದುಷಾಂ ಮತಯೋಽಭವನ್ ।
ತತ್ಸರ್ವಂ ತ್ವಯಮೇವಾಗ್ನಿರ್ಭವತೀತಿ ವಿನಿಶ್ಚಯಃ ॥
ಅಯಂ ಹಿ ಕರ್ತಾ ಸ್ವಾಹಾನಾಂ ಕೃತಿಸ್ತಾಸಾಮಿಹೈಕಜಾ ।
ಅಯಂ ಪ್ರಸೂರ್ಭೂತಿಕಾನಾಂ ಸರ್ವೇಷಾಮಯಮವ್ಯಯಃ ॥

(ಬೃ. ದೇ. ೩-೨೯, ೩೦)

ಸ್ವಾಹಾಕೃತಿ ಎಂಬ ದೇವತೆಯ ವಿಷಯದಲ್ಲಿ ವಿದ್ವಾಂಸರ ಮತಭೇದಗಳು (ಭೇದಾಭಿಪ್ರಾಯಗಳು) ಅನೇಕವಾಗಿವೆ. ಆದರೆ ಅವರಲ್ಲಿ ಎಷ್ಟೇ ಮತಭೇದವಿದ್ದರೂ **ಈ ಸ್ವಾಹಾಕೃತಿ** ಎಂಬ ದೇವತೆಯು ಅಗ್ನಿಯ ರೂಪವಿಶೇಷವೆಂಬ ವಿಷಯದಲ್ಲಿ ಮಾತ್ರ ಎಲ್ಲರ ಅಭಿಪ್ರಾಯವೂ ಒಂದೇ ಆಗಿರುವುದು. ಏಕೆಂದರೆ ಸ್ವಾಹಾಕಾರಗಳಿಗೆ (ಎಂದರೆ ಸ್ವಾಹಾ ಶಬ್ದಪೂರ್ವಕವಾಗಿ ಅರ್ಪಿಸುವ ಹವಿಸ್ಸುಗಳಿಗೆ ಅಥವಾ ಮಂತ್ರಗಳಿಗೆ) ಈ ಅಗ್ನಿಯೇ ಕರ್ತೃವು. ಈ ವಿಧವಾದ ಮಂತ್ರಗಳೆಲ್ಲಾ ಇವನೇ ಕರ್ತೃವು, ಮತ್ತು ದೇವತೆಯು; ಈ ಅಗ್ನಿಯೇ ಸಮಸ್ತ ಭೂತಗಳಿಗೂ (ಪ್ರಾಣಿಗಳಿಗೂ) ಉತ್ಪತ್ತಿಸ್ಥಾನನು, ಎಂದರೆ ಇವನಿಂದಲೇ ಸಕಲ ಪ್ರಾಣಿಗಳೂ ಉತ್ಪನ್ನವಾಗುವವು. ಸರ್ವಪ್ರಾಣಿಗಳಲ್ಲಿ ಇವನಿಗೆ ಮಾತ್ರ ನಾಶವಿಲ್ಲ ಎಂದರೆ ಇವನು ನಾಶರಹಿತನು ಎಂದು ಬೃಹದ್ದೇವತಾಕಾರರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಸ್ವಾಹಾಕಾರಾತ್ಮಕವಾದ (ಕೆಲವು ಆಪ್ರೀಸೂಕ್ತಗಳ ಕೊನೆಯ) ಋಕ್ಕುಗಳಲ್ಲಿ ಪೂಷಾ, ಮರುತ್ತುಗಳು, ವಾಯು, ಸೂರ್ಯ, ಇಂದ್ರ, ವರುಣ ಇತ್ಯಾದಿ ದೇವತೆಗಳನ್ನೆಲ್ಲಾ ನಿರ್ದೇಶಿಸಲಾಗಿದೆ. ಎಲ್ಲರಿಗಿಂತಲೂ ಅಧಿಕವಾಗಿ,

ಪುರೋಗಾ ಅಗ್ನಿರ್ದೇವಾನಾಂ ಗಾಯತ್ರೇಣ ಸಮಜ್ಯತೇ ।
ಸ್ವಾಹಾಕೃತೀಷು ರೋಚತೇ ॥

(ಋ. ಸಂ. ೧-೧೪೪-೧೧)

ಸದ್ಯೋ ಜಾತೋ ವ್ಯಮಿಮೀತ ಯಜ್ಞಮಗ್ನಿರ್ದೇವಾನಾಮಭವತ್ಪುರೋಗಾಃ ।
ಅಸ್ಯ ಹೋತುಃ ಪ್ರದಿಶ್ಯೃತಸ್ಯ ವಾಚಿ ಸ್ವಾಹಾಕೃತಂ ಹವಿರದಂತು ದೇವಾಃ ॥

(ಋ. ಸಂ. ೧೦-೧೧೦-೧೧)

ಎಂಬ ಋಕ್ಕುಗಳಲ್ಲಿ ಅಗ್ನಿಯು ಉತ್ಪನ್ನನಾದ ಕಾಲದಿಂದಲ್ಲೂ ದೇವತೆಗಳ ಪುರೋಗನೆಂದು (ಪುರೋಹಿತ) ಸ್ತುತಿಸಿದೆ ಮತ್ತು ಸ್ವಾಹಾಕೃತಿಯ ಪ್ರಭಾವವನ್ನು ವಿವರಿಸುತ್ತಾ,

ಆ ಯೋಹ್ಯಗ್ನೇ ಸಮಿಧಾನೋ ಅರ್ವಾಙಿಂದ್ರೇಣ ದೇವೈಃ ಸರಥಂ ತುರೇಭಿಃ ।
ಬರ್ಹಿರ್ನ ಆಸ್ತಾಮದಿತಿಃ ಸುಪುತ್ರಾ ಸ್ವಾಹಾ ದೇವಾ ಅಮೃತಾ ಮಾದಯೆಂತಾಂ ॥
(ಋ. ಸಂ. ೩-೪-೧೧)

ಆಗ್ನೇ ವಹ ವರುಣಮಿಷ್ಟಯೇ ನ ಇಂದ್ರಂ ದಿವೋ ಮರುತೋ ಅಂತರಿಕ್ಷಾತ್ ।
ಸೀದಂತು ಬರ್ಹಿರ್ವಿಶ್ವ ಆ ಯಜತ್ರಾಃ ಸ್ವಾಹಾ ದೇವಾ ಅಮೃತಾ ಮಾದಯೆಂತಾಂ ॥
(ಋ. ಸಂ. ೧೦-೭೦-೧೧)

ಎಂಬ ಋಕ್ಕುಗಳಲ್ಲಿ ಸ್ವಾಹಾ ಎಂಬ ಮಂತ್ರದಿಂದ (ಸ್ವಾಹಾಶಬ್ದದಿಂದ) ದೇವತೆಗಳು ಹರ್ಷಗೊಳ್ಳುವುದರಿಂದ ಯಜ್ಞದಲ್ಲಿ ಸ್ವಾಹಾಶಬ್ದಕ್ಕೆ ಇಷ್ಟು ದಿವ್ಯವಾದ ಸ್ಥಾನವಿದೆಯೆಂದು ಸೂಚಿಸಿದೆ.

ಎಪ್ಪತ್ತೊಂದನೆಯ 'ಸೂಕ್ತ

ಪೀಠಿಕೆ

ಈ ಸೂಕ್ತದಲ್ಲಿ ಜ್ಞಾನವೆಂಬ ದೇವತೆಯನ್ನು ಸ್ತುತಿಸಲಾಗಿದೆ. ಮನಸ್ಸಿನಲ್ಲಿ ಉತ್ಪನ್ನವಾಗುವ ಕೆಲವು ಭಾವನೆಗಳನ್ನೇ ದೇವತೆಗಳೆಂದು ಭಾವಿಸಿ ಅವುಗಳನ್ನು ಋಷಿಗಳು ಸ್ತೋತ್ರಮಾಡಿರುವ ಸಂದರ್ಭಗಳು ಕೆಲವಿವೆ. ಅವುಗಳಲ್ಲಿ ಜ್ಞಾನವೂ ಒಂದು. ಇದರಂತೆ ಮನ್ಯು (ಕೋಪ) ಎಂಬ ಭಾವನಾದೇವತೆಯನ್ನು ಇದೇ ಮಂಡಲದ ೮೩ ಮತ್ತು ೮೪ ನೇ ಸೂಕ್ತಗಳಲ್ಲಿಯೂ, ಶ್ರದ್ಧಾ ಎಂಬ ದೇವತೆಯನ್ನು ಇದೇ ಮಂಡಲದ ೧೫೧ ನೇ ಸೂಕ್ತದಲ್ಲಿಯೂ ಸ್ತುತಿಸಲಾಗಿದೆ. ಹಾಗೆಯೇ, ದಾನ, ತಪಸ್ಸು (ಧ್ಯಾನ) ಮೇಧಾ, ಪ್ರಜ್ಞಾ, ಕಾಮ, ಸತ್ಯ, ದಮ, ಶಮ, ಧರ್ಮ, ಯಜ್ಞ, ಮನಸ್ಸು, ಸಂವತ್ಸರ ಅಥವಾ ಕಾಲ, ಶಾಂತಿ, ಆನಂದ ಇತ್ಯಾದಿಗಳೂ ಭಾವನಾದೇವತೆಗಳೆಂದು ಪರಿಗಣಿಸಲ್ಪಟ್ಟಿವೆ. ಈ ಭಾವನಾದೇವತೆಗಳ ವಿವರಣೆಯನ್ನು ಉದಾಹರಣೆಗಳ ಸಹಿತವಾಗಿ ನಾವು ಋ. ಸಂ. ೨ನೇ ಭಾಗದ 310-314 ನೇ ಪೇಜುಗಳಲ್ಲಿ ವಿಸ್ತಾರವಾಗಿ ವಿವರಿಸಿದ್ದೇವೆ.

ಶೌನಕಮಹರ್ಷಿಪ್ರೋಕ್ತವಾದ ಬೃಹದ್ದೇವತಾ ಎಂಬ ಗ್ರಂಥದಲ್ಲಿ ಈ ಸೂಕ್ತದ ವಿಷಯದಲ್ಲಿ ೭ ನೇ ಅಧ್ಯಾಯದಲ್ಲಿ ಈರೀತಿ ಹೇಳಿದೆ—

ಯೆಜ್ಞೋ ಽತಿರಮೃತಂ ಬ್ರಹ್ಮ ಯದ್ಯೋಗಾತ್ಸಮುಪಾಶ್ನುತೇ ।
ತಜ್ಞಾನಮಭಿತುಷ್ಟಾವ ಸೂಕ್ತೇನಾಥ ಬೃಹಸ್ಪತಿಃ ॥ ೧೦೯ ॥

ನಿತ್ಯವೂ ನಾಶರಹಿತವಾದುದೂ ಆದ ಯಾವ ಪರಂಜ್ಯೋತಿಯ ಧ್ಯಾನದಿಂದ ಯೋಗಿಯು (ಅಥವಾ ತಪಸ್ವಿಯಾದ ಪುರುಷನು) ಪರಬ್ರಹ್ಮ (ಪದವಿ) ವನ್ನು ಪಡೆಯುವನೋ ಅಂತಹ ಶ್ರೇಷ್ಠವಾದ ಜ್ಞಾನವನ್ನು ಬೃಹಸ್ಪತಿಯು ಈ ಸೂಕ್ತದಲ್ಲಿ ವರ್ಣಿಸಿ ಸ್ತುತಿಸಿದಾನೆ.

ಜೀವನಾರ್ಥಂ ಪ್ರಯೋಗಸ್ತು ಮುಂಜಾಣಾಂ ಪ್ರತಿಷಿಧ್ಯತೇ ।
ವೇದತೆತ್ತ್ವಾರ್ಥವಿಜ್ಞಾನಂ ಸ್ಯಾದೇಣಾತ್ರೆ ಹಿ ದೃಶ್ಯತೇ ॥ ೧೧೦ ॥

ವೇದಮಂತ್ರಗಳನ್ನು ಪ್ರಯೋಗಮಾಡಿ ಎಂದರೆ ಉಪಯೋಗಿಸಿ ಅದರಿಂದ ಜೀವನವನ್ನು ನಡೆಸುವುದು ನಿಷೇಧಿಸಲ್ಪಟ್ಟಿದೆ. ಎಂದರೆ ಜೀವನಾರ್ಥವಾಗಿ ವೇದಮಂತ್ರಗಳನ್ನು ಯಾರೂ ಬಳಸಬಾರದು. ಈ ಸೂಕ್ತದಲ್ಲಿ ವೇದಗಳಲ್ಲಿ ಹೇಳಿರುವ ಪರತತ್ತ್ವವನ್ನೂ ಅದಕ್ಕೆ ಸಾಧನೋಪಾಯವಾದ ವಿಜ್ಞಾನವನ್ನೂ ವರ್ಣಿಸಿರುವುದು ಇಲ್ಲಿ ಕಂಡುಬರುತ್ತದೆ.

ಆಚಾರ್ಯಃ ಕೇಚಿದಿತ್ಯಾಹುರತ್ರ ವಾಗ್ವಿದುಷಾಂ ಸ್ತವಃ ।
ಯಥಾಭಿನಿಂದ್ಯತೇಽತ್ರರ್ಗ್ಭಿಃ ಸೂಕ್ತೇಽನ್ಯಾಭಿರನರ್ಥವಿತ್ ॥ ೧೧೧ ॥

ಈ ಸೂಕ್ತದ ಕೆಲವು ಋಕ್ಕುಗಳಲ್ಲಿ ವಾಕ್ಯಗಳ (ಮಂತ್ರಗಳ) ಸ್ವರೂಪವನ್ನು ತಿಳಿದವರ ಪ್ರಶಂಸೆಯೂ ಮತ್ತೆ ಕೆಲವು ಋಕ್ಕುಗಳಲ್ಲಿ ವೇದಾರ್ಥವನ್ನು ತಿಳಿಯದವರ ನಿಂದೆಯೂ ಉಕ್ತವಾಗಿದೆಯೆಂದು ಕೆಲವು ಆಚಾರ್ಯರು ಹೇಳುವರು.

ಯಥೈತಾಮನ್ವವಿಂದಂತ ವಿದ್ವಾಂಸರ್ಷಿಗತಾಂ ಸತೀಂ ।
ಯಥಾ ಚ ವ್ಯಭಜನ್ಯಜ್ಞೇ ತದತ್ರೋಕ್ತಂ ತೃತೀಯಯಾ ॥ ೧೧೨ ॥

ಋಷಿಗಳು ತನ್ಮ ಜ್ಞಾನದೃಷ್ಟಿಯಿಂದ ಸಾಕ್ಷಾತ್ಕರಿಸಿದ ಈ ವಾಗ್ದೇವತೆಯ ಸ್ವರೂಪವನ್ನೂ ಮತ್ತು ಯಜ್ಞಕರ್ಮಗಳಲ್ಲಿ ಆ ದೇವತಾಸ್ವರೂಪವಾದ ಮಂತ್ರಗಳನ್ನೂ ಯಾವ ರೀತಿ ಕರ್ಮಕ್ಕನುಸಾರವಾಗಿ ವಿಭಾಗಮಾಡಿ ಉಪಯೋಗಿಸಿದರ ಎಂಬುದನ್ನು ವಿದ್ವಾಂಸನಾದ ವಿವೇಕಿಯು ತಿಳಿಯುತ್ತಾನೆ ಎಂಬ ವಿಷಯವು ಈ ಸೂಕ್ತದ ೩ನೇ ಋಕ್ಕಿನಲ್ಲಿ ಉಕ್ತವಾಗಿದೆ.

ಪ್ರಶಸ್ಯತೇ ದಶಮ್ಯಾ ತು ವಿದ್ವಾನುತ್ತಮಯಾ ತ್ವೃಚಾ ।
ಯಜ್ಞೇ ಮಹರ್ತ್ವಿಜಾಮಾಹ ವಿನಿಯೋಗಂ ಚ ಕರ್ಮಣಾಂ ॥ ೧೧೩ ॥

ಆದರೆ ೧೦ನೇ ಋಕ್ಕಿನಲ್ಲಿ ವಿವೇಕಿಯಾದ ವಿದ್ವಾಂಸನನ್ನು ಸ್ತುತಿಸಲಾಗಿದೆ. ಕೊನೆಯ ಋಕ್ಕಿನಲ್ಲಿ ನಾಲ್ಕುಜನ ಋತ್ವಿಕ್ಕುಗಳು ಯಜ್ಞದಲ್ಲಿ ನಿರ್ವಹಿಸಬೇಕಾದ ಕರ್ಮಗಳನ್ನೂ ಅವುಗಳ ವಿನಿಯೋಗವನ್ನೂ ಋಷಿಯು ವರ್ಣಿಸಿರುವನು.

ಈ ಸೂಕ್ತದ ವಿನಿಯೋಗದ ವಿಷಯದಲ್ಲಿ ಶೌನಕರು ಋಗ್ವಿಧಾನವೆಂಬ ಗ್ರಂಥದಲ್ಲಿ ಈ ರೀತಿ ಹೇಳಿದಾರೆ—

ಬೃಹಸ್ಪತೇ ಪ್ರಥಮಮಿತಿ ನಿತ್ಯಂ ಜ್ಞಾನಸ್ತುತಿಂ ಜಪೇತ್ ।
ಜ್ಞಾನವಾನ್ ಭವತಿ ಶ್ರೇಮಾನನಂತಾಂ ವಿಂದತೇ ಶ್ರಿಯಂ ।
ಅಲಕ್ಷ್ಮೀನಾಶನಾರ್ಥಂ ತು ಪಯೋಭಕ್ಷೋ ಭವೇದ್ದ್ವಿಜಃ ॥
(ಋಗ್ವಿಧಾನ ಅಧ್ಯಾಯ ೩. ಶ್ಲೋ. ೭೨-೭೩)

ಬೃಹಸ್ಪತೇ ಎಂಬ ಈ ಸೂಕ್ತವನ್ನು ಪ್ರತಿದಿನವೂ ಜಪಮಾಡುತ್ತಿದ್ದರೆ ಉತ್ತಮಜ್ಞಾನವೂ ಅತುಳೈಶ್ವರ್ಯವೂ ಲಭಿಸುವುದು. ಬ್ರಾಹ್ಮಣನಾದವನು ದಾರಿದ್ರ್ಯನಾಶನಾರ್ಥವಾಗಿ ಪ್ರತಿದಿನವೂ ಹಾಲನ್ನು ಮಾತ್ರ ಸೇವಿಸುತ್ತಾ ಈ ಸೂಕ್ತವನ್ನು ಜಪಮಾಡಬೇಕು. ಹಾಗೆ ಮಾಡಿದರೆ ದಾರಿದ್ರ್ಯನಾಶವಾಗಿ ಸಂಪತ್ಸಮೃದ್ಧಿಯುಂಟಾಗುವುದು.

ಸಾಯಣಭಾಷ್ಯಂ

ಬೃಹಸ್ಪತ ಇತ್ಯೇಕಾದಶರ್ಚಂ ತೃತೀಯಂ ಸೂಕ್ತಂ । ಆಂಗಿರಸಸ್ಯ ಬೃಹಸ್ಪತೇರಾರ್ಷಂ ನವಮೀ ಜಗತೀ ಶಿಷ್ಟಾ ದಶ ತ್ರಿಷ್ಟುಭಃ । ಅನೇನ ಸೂಕ್ತೇನರ್ಷಿಃ ಪರಮಪುರುಷಾರ್ಥಸಾಧನಂ ಪರಬ್ರಹ್ಮಜ್ಞಾನಂ ಸ್ತುತವಾನ್ । ಅತಸ್ತದ್ದೇವತ್ಯಮಿದಂ । ಉಕ್ತಂ ಹಿ ಬೃಹದ್ದೇವತಾಯಾಂ । ಸುಜ್ಞ್ಯೋತಿಃ ಪರಮಂ ಬ್ರಹ್ಮ ಯದ್ಯೋಗಾತ್ ಸಮುಪಾಶ್ನುತೇ । ತಜ್ಜ್ಞಾನಮಭಿತುಷ್ಟಾವ ಸೂಕ್ತೇನಾಥ ಬೃಹಸ್ಪತಿಃ ।

ಬೃ. ೭-೧೦೪೪ । ಇತಿ । ಅನುಕ್ರಾಂತಂ ಚ । ಬೃಹಸ್ಪತೇ ಬೃಹಸ್ಪತಿರ್ಜ್ಞಾನಂ ತುಷ್ಟಾವ ನವಮೀ ಜಗತೀ ॥ ಸೂಕ್ತವಿನಿಯೋಗೋ ಗತಃ । ದೇವಾಸುವಾಂ ಹವಿಃಷು ಬೃಹಸ್ಪತಿರ್ವಾಚಸ್ಪತಿರಿತ್ಯಸ್ಯ ಪ್ರಥಮಾನುವಾಕ್ಯಾ । ಸೂತ್ರಿತಂ ಚ । ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಹಂಸೈರಿವ ಸಖಿಭಿರ್ವಾವದ್ಧಿಃ । ಆ. ೪ ೧೧ ಇತಿ ॥

ಅನುವಾದವು—**ಬೃಹಸ್ಪತೇ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆಂಗಿರಸಪುತ್ರನಾದ ಬೃಹಸ್ಪತಿಯು ಋಷಿಯು; ಈ ಸೂಕ್ತದ ಒಂಭತ್ತನೆಯ ಋಕ್ಕು ಜಗತೀಛಂದಸ್ಕವು, ಉಳಿದ ಹತ್ತು ಋಕ್ಕುಗಳು ತ್ರಿಷ್ಟುಪ್ಛಂದಸ್ಕವು. ಋಷಿಯು ಈ ಸೂಕ್ತದಲ್ಲಿ ಪರಮಪುರುಷಾರ್ಥಸಾಧನಭೂತವಾದ ಪರಬ್ರಹ್ಮಜ್ಞಾನವನ್ನು ಸ್ತುತಿಸಿರುವನು. ಆದ್ದರಿಂದ ಈ ಸೂಕ್ತಕ್ಕೆ ಜ್ಞಾನವೇ ದೇವತೆಯು. ಬೃಹದ್ದೇವತೆಯೆಂಬ ಗ್ರಂಥದಲ್ಲಿ ಶೌನಕಮಹರ್ಷಿಯು- **ಸುಜ್ಯೋತಿಃ ಪರಮಂ ಬ್ರಹ್ಮ ಯದ್ಯೋಗಾತ್ಸಮುಪಾಶ್ನುತೇ । ತಜ್ಜ್ಞಾನಮಭಿತುಷ್ಟಾವ ಸೂಕ್ತೇನಾಥ ಬೃಹಸ್ಪತಿಃ** ॥ (ಬೃ. ದೇ. ೭-೧೦೯) ಎಂದು ಹೇಳಿರುವರು ಎಂದರೆ ಯೋಗಾಭ್ಯಾಸದಿಂದ (ತಪಸ್ಸಿನಿಂದ ಪರಬ್ರಹ್ಮಸ್ವರೂಪವಾದ ಯಾವ ದಿವ್ಯಜ್ಯೋತಿಯನ್ನು ಸಾಕ್ಷಾತ್ಕರಿಸಿ ಯೋಗಿಯು ಬ್ರಹ್ಮಾನಂದವನ್ನನುಭವಿಸುವನೋ ಅಂತಹ ಬ್ರಹ್ಮಪ್ರಾಪ್ತಿಗೆ ಸಾಧಕವಾದ ಜ್ಞಾನವನ್ನು ಬೃಹಸ್ಪತಿಋಷಿಯು ಈ ಸೂಕ್ತದಲ್ಲಿ ಸ್ತುತಿಸಿರುವನು ಎಂದು ಹೇಳಿದಾರೆ. ಅನುಕ್ರಮಣಿಕೆಯಲ್ಲಿ—**ಬೃಹಸ್ಪತೇ ಬೃಹಸ್ಪತಿರ್ಜ್ಞಾನಂ ತುಷ್ಟಾವ ನವಮೀ ಜಗತೀ** ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ದೇವಸುವ ಎಂಬ ದೇವತೆಗಳನ್ನುದ್ದೇಶಿಸಿ ಮಾಡುವ ಎಂಬು ದೇವಸುವಹೋಮಗಳಲ್ಲಿ ಬೃಹಸ್ಪತಿರ್ವಾಚಸ್ಪತಿ ಎಂಬ ದೇವತೆಯನ್ನುದ್ದೇಶಿಸಿ ಹೋಮವನ್ನಾಡುವಾಗ ಈ ಸೂಕ್ತದ ಮೊದಲಯ ಋಕ್ಕನ್ನು ಅನುವಾಕ್ಯಾ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಹಂಸೈರಿವ ಸಖಿಭಿರ್ವಾವದದ್ಧಿಃ** ಎಂಬ ಸೂತ್ರದಿಂದ (ಆ. ೪-೧೧) ವಿಸ್ತೃತವಾಗಿರುವುದು.

ಸೂಕ್ತ—೭೧

ಮಂಡಲ—೧೦ ॥ ಅನುವಾಕ—೬ ॥ ಸೂಕ್ತ—೭೧ ॥
ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೨೩, ೨೪ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ಬೃಹಸ್ಪತಿಃ ॥
ದೇವತಾ—ಜ್ಞಾನಂ ॥
ಛಂದಃ—೧-೪, ೧೦, ೧೧. ತ್ರಿಷ್ಟುಪ್ । ೯. ಜಗತೀ ॥

ಸಂಹಿತಾಪಾಠಃ

ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಯತ್ಪ್ರೈರತ ನಾಮಧೇಯಂ ದಧಾನಾಃ ।
ಯದೇಷಾಂ ಶ್ರೇಷ್ಠಂ ಯದರಿಪ್ರಮಾಸೀತ್ಪ್ರೇಣಾ ತದೇಷಾಂ ನಿಹಿತಂ ಗುಹಾವಿಃ ॥ ೧ ॥

ಪದಪಾಠಃ

ಬೃಹಸ್ಪತೇ। ಪ್ರಥಮಂ। ವಾಚಃ। ಅಗ್ರಂ। ಯತ್। ಪ್ರ। ಐರತ। ನಾಮಧೇಯಂ। ದಧಾನಾಃ।
ಯತ್। ಏಷಾಂ। ಶ್ರೇಷ್ಠಂ। ಯತ್। ಅರಿಪ್ರಂ। ಆಸೀತ್। ಪ್ರೇಣಾ। ತತ್। ಏಷಾಂ। ನಿಹಿತಂ।
ಗುಹಾ। ಆವಿಃ॥ ೧॥

ಸಾಯಣಭಾಷ್ಯಂ

ಬೃಹಸ್ಪತಿರನೇನ ಸೂಕ್ತೇನ ವಿದಿತವೇದಾರ್ಥನ್ಪಲಾನ್ದೃಷ್ಟ್ವಾ ಸ್ತೂಯಮಾನಃ ಸ್ವಾತ್ಮಾನಂ ಸಂಬೋಧ್ಯಾಹ। ಹೇ ಬೃಹಸ್ಪತೇಽಂತರಾತ್ಮನ್ ಪ್ರಥಮಮುತ್ಪತ್ತ್ಯನಂತರಮಿತರವಾಗುಚ್ಚಾರಣಾತ್ಪಾಗೇವ ನಾಮಧೇಯಂ ನಾಮ ದಧಾನಾಃ ಪದಾರ್ಥೇಷು ನಿದಧಾನಾ ಜಾಲಾ ಯತ್ಪ್ರೈರತ ಪ್ರೇರಿತವಂತಃ ತದ್ವಾಚೋಽಗ್ರಂ ಭವತಿ। ಯತ್ತತ ತಾತೇತ್ಯಾದಿಕಂ ವಾಕ್ಯಂ ಪೂರ್ವಮಭಿಧಾಯ ಪಶ್ಚಾದನ್ಯಾ ವಾಚೋ ವದಿಷ್ಯಂತಿ ಖಲು ತಸ್ಮಾದ್ವಾಚೋಽಗ್ರಂ। ಅಸ್ಯಾಂ ದಶಾಯಾಮವಸ್ಥಿತಾನ್ವಲಾನ್ಪಶ್ಯ। ತಥೇದಾನೀಮೇಷಾಂ ಶ್ರೇಷ್ಠಂ ಪ್ರಶಸ್ಯತಮಂ ಯದ್ಯಚ್ಚಾರಿಪ್ರಂ ಪಾಪರಹಿತಂ ವೇದಾರ್ಥಜ್ಞಾನಮಾಸೀತ್ ಏಷಾಂ ತಜ್ಜ್ಞಾನಂ ಗುಹಾ ಗುಹಾಯಾಂ ನಿಹಿತಂ ಗೋಪ್ಯಂ ತತ್ಪ್ರೇಣಾ॥ ಮಕಾರಲೋಪಶ್ಛಾಂದಸಃ॥ ಪ್ರೇಮ್ಣಾವಿರ್ಭವತಿ। ವೇದಾಭ್ಯಾಸಕಾಲೇ ಸರಸ್ವತೀ ಸ್ವಾರ್ಥಮೇಭ್ಯಃ ಪ್ರಕಾಶಯತೀತ್ಯರ್ಥಃ। ಏವಂ ವಿಸ್ಮಯೇ ಬೃಹಸ್ಪತೇ ಪ್ರಥಮಂ ವಾಚೋ ಅಗ್ರಮಿತ್ಯಾದಿಕಮಾರಣ್ಯಕಮನುಸಂಧೇಯಂ। ಐ. ಆ. ೧-೩-೬॥

ಪ್ರತಿಪದಾರ್ಥ

ಬೃಹಸ್ಪತೇ—ಎಲೈ ಬೃಹಸ್ಪತಿಯೇ। **ಪ್ರಥಮಂ**—ಜಗತ್ತಿನಲ್ಲಿ ಆವಿರ್ಭಾವವನ್ನು ಹೊಂದಿದೊಡನೆಯೇ। **ನಾಮಧೇಯಂ**—ಪದಾರ್ಥಗಳ (ಅಥವಾ ಪುರುಷರ) ಹೆಸರನ್ನು। **ದಧಾನಾಃ**—ನಿರ್ದೇಶಿಸಿ ಯೋಜಿಸುತ್ತ। **ಯತ್**—ಯಾವ ಹೆಸರನ್ನು। **ಪ್ರೈರತ**—ಉಚ್ಚರಿಸುವರೋ ಅದು। **ವಾಚಃ**—ವಾಕ್ಯುಗಳಲ್ಲೆಲ್ಲ। **ಅಗ್ರಂ**—ಪೂರ್ವಭಾವಿಯಾಗಿರುತ್ತದೆ। **ಏಷಾಂ**—ಈ ವಾಕ್ಯುಗಳಲ್ಲಿ। **ಯತ್**—ಯಾವುದು। **ಶ್ರೇಷ್ಠಂ**—ಅತ್ಯುತ್ತಮವಾಗಿಯೂ। **ಅರಿಪ್ರಂ**—ಪಾಪರಹಿತವಾಗಿಯೂ। **ಆಸೀತ್**—ಇರುವುದೋ ಮತ್ತು। **ಏಷಾಂ**—ಇವುಗಳಲ್ಲಿ ಯಾವುದು। **ಗುಹಾ**—ರಹಸ್ಯಸ್ಥಾನದಲ್ಲಿ। **ನಿಹಿತಂ**—ಸ್ಥಾಪಿತವಾಗಿರುವುದೋ। **ತತ್**—ಅದನ್ನು। **ಪ್ರೇಣಾ**—ಅತ್ಯಂತ ಪ್ರೀತಿಯಿಂದ। **ಆವಿಃ**—ಸರಸ್ವತಿಯು ಪ್ರಕಾಶಪಡಿಸುತ್ತಾಳೆ.

ಭಾವಾರ್ಥ

ಎಲೈ ಬೃಹಸ್ಪತಿಯೇ, ಜಗತ್ತಿನಲ್ಲಿ ಆವಿರ್ಭಾವವನ್ನು ಹೊಂದಿದೊಡನೆಯೇ ಪದಾರ್ಥಗಳ ಅಥವಾ ಪುರುಷರ ಹೆಸರನ್ನು ನಿರ್ದೇಶಿಸಿ ಯೋಜಿಸುತ್ತ ಯಾವ ಹೆಸರನ್ನು ಉಚ್ಚರಿಸುವರೋ ಅದು ವಾಕ್ಯುಗಳಲ್ಲೆಲ್ಲ ಪೂರ್ವಭಾವಿಯಾಗಿರುತ್ತದೆ. ಯಾವುದು ಅತ್ಯುತ್ತಮವಾಗಿಯೂ, ಪಾಪರಹಿತವಾಗಿಯೂ ಇರುವುದೋ, ಮತ್ತು ಯಾವುದು ರಹಸ್ಯ ಸ್ಥಾನದಲ್ಲಿ ಸ್ಥಾಪಿತವಾಗಿರುವುದೋ ಅದನ್ನು ಸರಸ್ವತಿಯು ಅತ್ಯಂತ ಪ್ರೀತಿಯಿಂದ ಪ್ರಕಾಶಪಡಿಸುತ್ತಾಳೆ.

English Translation

That, Brihaspati, is the best (part) of speech which those giving a name (to objects) first utter; that which was the best of those (words) and

free from defect, (Saraswati) reveals it though secretly implanted, by means of affection.

ಸಂಹಿತಾಪಾಠಃ

ಸಕ್ತುಮಿವ ತಿತಉನಾ ಪುನಂತೋ ಯತ್ರ ಧೀರಾ ಮನಸಾ ವಾಚಮಕ್ರತ ।
ಅತ್ರಾ ಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿ ವಾಚಿ॥

ಪದಪಾಠಃ

ಸಕ್ತುಂ೽ಇವ । ತಿತಉನಾ । ಪುನಂತಃ । ಯತ್ರ । ಧೀರಾಃ । ಮನಸಾ । ವಾಚಂ । ಅಕ್ರತ ।
ಅತ್ರ । ಸಖಾಯಃ । ಸಖ್ಯಾನಿ । ಜಾನತೇ । ಭದ್ರಾ । ಏಷಾಂ । ಲಕ್ಷ್ಮೀಃ । ನಿ೽ಹಿತಾ । ಅಧಿ । ವಾಚಿ ॥೭॥

ಸಾಯಣಭಾಷ್ಯಂ

ತಿತಉನಾ । ಪರಿಪೂಯತೇ೽ನೇನೇತಿ । ಯದ್ವಾ । ತತಾ ವಿಸ್ತೃತಾ ಭೃಷ್ಟಯೇವಾ ಅತ್ರೇತಿ ತಿತಉಃ ॥ ತನೋತೇರ್ಡಉಃ ಸನ್ಪಚ್ಚ । ಉ ೫-೫೨ । ಇತಿ ಡಉಪ್ರತ್ಯಯಃ । ಸನ್ವದ್ಭಾವಾದಿತ್ವಂ ॥ ಉಕ್ತನಿರ್ವಚನೇನ ಸೂರ್ಪೇಣ ಸಕ್ತುಮಿವ ಯಥಾ ಕಶ್ಚಿತ್ಸಕ್ತುಂ ದುರ್ಧಾರ್ವಂ ಪುನಾತಿ ತದ್ವತ್ ಪ್ರಕೃತಿತಃ ಪ್ರತ್ಯಯತಶ್ಚ ಶಬ್ದಾನುತ್ಪುನಂತೋ ಧೀರಾ ಧೀಮಂತೋ ವಿದ್ವಾಂಸೋ ಯತ್ರ ಯಸ್ಮಿನ್ವಾಲೇ ವಿದ್ವತ್ಸಂಘೇ ವಾ ಮನಸಾ ಪ್ರಜ್ಞಾಯುಕ್ತೇನ ವಾಚಮಕ್ರತ ಅಕೃಷತ ಕುರ್ವಂತಿ ॥ ಕರೋತೇರ್ಲುಙಿ ರೂಪಂ ॥ ಅತ್ರ ತತ್ರ ಕಾಲೇ ಸಖಾಯಃ ಸಮಾನಖ್ಯಾನಾಃ ಶಾಸ್ತ್ರಾದಿವಿಷಯಜ್ಞಾನಾಸ್ತೇ ಸಖ್ಯಾನಿ ತೇಷು ಭವಾನಿ ಜ್ಞಾನಾನಿ ಜಾನತೇ । ಜಾನಂತಿ । ಯದ್ವಾ । ಸಖಾಯೋ ವಾಚಾ ಬದ್ಧಸಖ್ಯಾಸ್ತೇ ತಸ್ಯಾಸ್ತಸ್ಯಾ ವಾಚಃ ಸಖ್ಯಾನಿ ಜಾನಂತಿ । ವಾಕ್ಯಯುಕ್ತಾನಭ್ಯುದಯಾಂಲ್ಲಭಂತ ಇತ್ಯರ್ಥಃ । ತಸ್ಮಾದೇಷಾಂ ವಾಚಿ ಭದ್ರಾ ಕಲ್ಯಾಣೀ ನಿಹಿತಾ ಲಕ್ಷ್ಮೀರ್ಭವತಿ । ಅಧಿಃ ಸಪ್ತಮ್ಯರ್ಥದ್ಯೋತಕಃ ॥ ಅರ್ಥಜ್ಞಾನಂ ವಾಚಿ ಪಶ್ಯಾಮ ಇತ್ಯರ್ಥಃ । ತಿತಉ ಪರಿಪವನಂ ಭವತಿ ತತವದ್ವಾ ತುನ್ನವದ್ವಾ ತಿಲಮಾತ್ರತುನ್ನಮಿತಿ ವಾ ಸಕ್ತುಮಿವ ತಿತಉನೇತ್ಯಾದಿ ನಿರುಕ್ತಮನುಸಂಧೇಯಂ । ನಿ. ೪-೧೦ ॥

ಪ್ರತಿಪದಾರ್ಥ

ತಿತಉನಾ—ವಂದರಿಯಿಂದ । **ಸಕ್ತು ಮಿವ ಪುನಂತಃ**—ಯವಧಾನ್ಯವನ್ನು ಶೋಧಿಸುವಂತೆ । **ಧೀರಾಃ**—ಪ್ರಾಜ್ಞರು । **ಯತ್ರ**—ಯಾವಾಗ । **ಮನಸಾ**—ಪ್ರಜ್ಞಾಯುಕ್ತವಾದ ತಮ್ಮ ಮನಸ್ಸಿನಿಂದ । **ವಾಚಂ**—ವಾಕ್ಯನ್ನು । **ಅಕ್ರತ**—ಸಂಸ್ಕರಿಸುವರೋ । **ಅತ್ರ**—ಆಗ । **ಸಖಾಯಃ**—ಮಿತ್ರರು । **ಸಖ್ಯಾನಿ**—ತಮ್ಮ ಮಿತ್ರತ್ವವನ್ನು । **ಜಾನತೇ**—ಅರಿಯುತ್ತಾರೆ । **ಏಷಾಂ**—ಇವರ । **ವಾಚಿ ಅಧಿ**—ವಾಕ್ಯಿನಲ್ಲಿ । **ಭದ್ರಾ**—ಕಲ್ಯಾಣಾತ್ಮಕವಾದ । **ಲಕ್ಷ್ಮೀಃ**—ಶ್ರೇಯಸ್ಸು । **ನಿಹಿತಾ**—ಸ್ಥಾಪಿತವಾಗಿದೆ.

ಭಾವಾರ್ಥ

ವಂದರಿಯಿಂದ ಯವಧಾನ್ಯವನ್ನು ಶೋಧಿಸುವಂತೆ ಪ್ರಾಜ್ಞರು ಯಾವಾಗ ಪ್ರಜ್ಞಾಯುಕ್ತವಾದ ತಮ್ಮ ಮನಸ್ಸಿನಿಂದ ವಾಕ್ಯನ್ನು ಸಂಸ್ಕರಿಸುವರೋ ಆಗ ಮಿತ್ರರು ತಮ್ಮ ಮಿತ್ರತ್ವವನ್ನು ಅರಿಯುತ್ತಾರೆ. ಇವರ ವಾಕ್ಯಿನಲ್ಲಿ ಕಲ್ಯಾಣಾತ್ಮಕವಾದ ಶ್ರೇಯಸ್ಸು ಸ್ಥಾಪಿತವಾಗಿದೆ.

English Translation

When the wise create Speech throngh wisdom winnowihg (it) as (men winnow) barley with a sieve, then friends know friendship; good fortune is placed upon their word.

ವಿಶೇಷವಿಷಯಗಳು

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

ತಿತಲು। ತಿತಲು ಪರಿಪವನಂ ಭವತಿ ತತವದ್ವಾ ತುನ್ನವದ್ವಾ ತಿಲಮಾತ್ರತುನ್ನಮಿತಿ ವಾ।

(ನಿ. ೪-೯)

ತಿತಲು ಎಂದರೆ ವಂದರಿ (sieve) ಎಂದರ್ಥವು. ಇದನ್ನು ಧಾನ್ಯಾದಿಗಳನ್ನು ಅಥವಾ ಹಿಟ್ಟನ್ನು ಶೋಧಿಸುವುದಕ್ಕಾಗಿ ಉಪಯೋಗಿಸುವರು. ಈ ಹೆಸರು ಇದಕ್ಕೆ ಹೇಗೆ ಬಂತೆಂದರೆ—**ತತವದ್ವಾ। ತತೇನ ಚರ್ಮಣಾ ನದ್ಧಂ।** ಈ ವಂದರಿಯನ್ನು ಯಾವುದಾದರೂ ತಗಡಿನಿಂದ ಮಾಡಿ ಅದರಲ್ಲಿ ಸಣ್ಣ ಸಣ್ಣ ರಂಧ್ರಗಳಿದ್ದು ಆ ತಗಡಿನ ಸುತ್ತಲೂ ಚರ್ಮದ ಕಟ್ಟನ್ನು ಹಾಕಿರುವುದರಿಂದ ವಂದರಿಗೆ **ತಿತಲು** ಎಂದು ಹೆಸರು. ಅಥವಾ **ತುನ್ನವದ್ವಾ-ತುನ್ನೈರ್ವಾ ಛಿದ್ರೈಃ ತದ್ವತ್।** ಈ ವಂದರಿಯಲ್ಲಿ ಸಣ್ಣ ಸಣ್ಣ ಛಿದ್ರಗಳು ಅಥವಾ ರಂಧ್ರಗಳಿರುವುದರಿಂದ ವಂದರಿಗೆ **ತಿತಲು** ಎಂದು ಹೆಸರು; ಅಥವಾ **ತಿಲಮಾತ್ರತುನ್ನಮಿತಿ ವಾ-ತಿಲಮಾತ್ರಾಣಿ ವಾ ತುನ್ನಾನಿ ತಸ್ಮಿನ್ನಿತಿ।** ಇದರಲ್ಲಿರುವ ರಂಧ್ರಗಳು ಎಳ್ಳಿನಂತೆ ಬಹಳ ಸಣ್ಣದಾಗಿರುವುದರಿಂದ ವಂದರಿಗೆ **ತಿತಲು** ಎಂದು ಹೆಸರು.

ಸಕ್ತುಮಿವ ಪರಿಪವನೇನ ಪುನಂತಃ। ಸಕ್ತುಃ ಸಚತೇರ್ಧಾವೋ ಭವತಿ। ಕಸತೇರ್ವಾ ಸ್ಯಾದ್ವಿಪರೀತಸ್ಯ ವಿಕಸಿತೋ ಭವತಿ ಯತ್ರ ಧೀರಾ ಮನಸಾ ವಾಚಮಕೃಪತ ಪ್ರಜ್ಞಾನಂ। ಧೀರಾಃ ಪ್ರಜ್ಞಾನವಂತೋ ಧ್ಯಾನವಂತಃ। ತತ್ರ ಸಖಾಯಃ ಸಖ್ಯಾನಿ ಸಂಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿ ವಾಚಿ ಇತಿ। ಭದ್ರಂ ಭಗೇನ ವ್ಯಾಖ್ಯಾತಂ ಭಜನೀಯಂ ಭೂತಾನಾಮು-ಭಿದ್ರವಣೀಯಂ ಭವದ್ರಮಯತೀತಿ ವಾ ಭಾಜನವದ್ವಾ। ಲಕ್ಷ್ಮೀರ್ಲಾಭಾದ್ವಾ ಲಕ್ಷಣಾದ್ವಾ (ಲಸ್ಯನಾದ್ವಾ) ಲಾಂಛನಾದ್ವಾ ಲಷತೇರ್ವಾ ಸ್ಯಾತ್ ಪ್ರೇಪ್ಸಾಕರ್ಮಣೋ ಲಗ್ಯತೇರ್ವಾ ಸ್ಯಾದಾಶ್ಲೇಷಕರ್ಮಣೋ ಲಜ್ಜತೇರ್ವಾ ಸ್ಯಾದಶ್ಲಾಘಾಕರ್ಮಣಃ॥

(ನಿ. ೪-೯)

(ಯವ) ಧಾನ್ಯವನ್ನು ವಂದರಿಯಲ್ಲಿ ಹಾಕಿ ಶೋಧಿಸಿ ಶುದ್ಧಿಮಾಡುವಂತೆ; ಸಕ್ತುಶಬ್ದವು ಅಂಟಿಕೊಳ್ಳು ಎಂಬ ಅರ್ಥವಿರುವ ಸಚತಿ ಧಾತುವಿನಿಂದ ನಿಷ್ಪನ್ನವಾಗಿದೆ. ಏಕೆಂದರೆ ಇದನ್ನು ತೊಳೆಯುವಾಗ ಇದು ಒಂದಕ್ಕೊಂದು ಅಂಟಿಕೊಂಡು ತೊಳೆಯುವುದು ಕಷ್ಟವಾಗುವುದು. ಅಥವಾ ಇದನ್ನು ತೊಳೆದಾಗ ಇದು ವಿಕಸಿತವಾಗುವುದು ಅಥವಾ ಅರಳುವುದು. ಆದ್ದರಿಂದ ವಿ-ಕಸಿತ ಶಬ್ದದ ಅಕ್ಷರಗಳನ್ನು ಹಿಂದುಮುಂದು ಮಾಡುವುದರಿಂದ ಸಕ್ತುಶಬ್ದವು ನಿಷ್ಪನ್ನವಾಗಿದೆಯೆಂದೂ ಹೇಳಬಹುದು. ವಂದರಿಯಿಂದ ಧಾನ್ಯವನ್ನು ಶೋಧಿಸಿ ಶುದ್ಧಿಮಾಡುವಂತೆ ಬುದ್ಧಿವಂತರೂ, ಜ್ಞಾನವಂತರೂ ಆದ ಜನರು ತಾವು ಆಡುವ ಮಾತನ್ನು (ಅಥವಾ ಮಂತ್ರವನ್ನು) ಮನಸ್ಸಿನಲ್ಲಿ ಚೆನ್ನಾಗಿ ಆಲೋಚಿಸಿ ಮಾತನಾಡುವರು. ಧಾನ್ಯವು ವಂದರಿಯಲ್ಲಿ ಹಾಕುವುದರಿಂದ ಶುದ್ಧಿಯಾಗುವುದು. ಅದರಂತೆ ಬುದ್ಧಿವಂತರಾದ ಮನುಷ್ಯರ ಮನಸ್ಸೆಂಬ ವಂದರಿಯಲ್ಲಿ ವಾಕ್ಯವೆಂಬ ಧಾನ್ಯವನ್ನು ಹಾಕಿ ಧ್ಯಾನವೆಂಬ ಚಲನೆಯಿಂದ ವಾಕ್ಯವು ಶುದ್ಧವಾಗುವುದು ಎಂದರೆ ಬುದ್ಧಿವಂತರು ಆಡುವ ಮಾತುಗಳು ಚೆನ್ನಾಗಿ ಆಲೋಚಿಸಲ್ಪಟ್ಟು ಆಡಲ್ಪಟ್ಟಿರುವುದರಿಂದ

ಯುಕ್ತಿಯುಕ್ತವಾಗಿಯೂ, ಅರ್ಥಗರ್ಭಿತವಾಗಿಯೂ ಇರುವವು ಎಂದಭಿಪ್ರಾಯವು. **ಸಖಾಯಃ ಸಖ್ಯಾನಿ ಸಂಜಾನತೇ** ಎಂದರೆ ಈ ವಿಧವಾದ ಸುಸಂಸ್ಕೃತವಾಕ್ಯಗಳಿಂದ ಜನರು ಪರಸ್ಪರಸ್ನೇಹಭಾವನವನ್ನು ಅರಿಯುತ್ತಾರೆ. **ಸಖಾಯಃ** ಎಂದರೆ **ಸಮಾನಖ್ಯಾನಾಃ** ಒಂದೇ ವಿಧವಾದ ಅಭಿಪ್ರಾಯ ಅಥವಾ ಸಂಸ್ಕಾರವುಳ್ಳವರಿಗೆ **ಸಖಾಯಃ**—ಸ್ನೇಹಿತರು ಎಂದರ್ಥವು. ಎಂದರೆ ಸ್ನೇಹಿತರ ಮಾತುಗಳು, ಕಾರ್ಯಗಳು ಪರಸ್ಪರ ವಿರೋಧವಾಗಿಲ್ಲದೆ ಒಬ್ಬರಿಗೊಬ್ಬರು ಸಹಕರಿಸಿರುವವು. **ಭದ್ರೈಷಾಂ ಲಕ್ಷ್ಮೀರ್ನಿರ್ಹಿತಾಧಿ ವಾಚಿ** । ಇಂತಹ ಸ್ನೇಹಿತರ ವಾಕ್ಯಗಳಲ್ಲಿ ಉತ್ತಮ ಅಥವಾ ಮಂಗಳಕರವಾದ ಚಿಹ್ನೆಯು (ಲಕ್ಷಣವು) ಕಂಡುಬರುವುದು. ಭದ್ರಶಬ್ದಕ್ಕೆ ಭಗವೆಂದರ್ಥವು. **ಭಗೋ ಭಜತೇಃ** (ನಿ. ೧೦-೭) ಭದ್ರಶಬ್ದಕ್ಕೆ ಹೊಂದಲ್ಪಡುವ, ಮಂಗಳಕರವಾದ ಅಥವಾ ಪ್ರಾಣಿಗಳಿಂದ ಅನುಭವಿಸಲ್ಪಡುವ ಎಂದರ್ಥವು. ಅಥವಾ ಇದರ ಉತ್ಪತ್ತಿಯೂ ಸುಖಾನುಭವಕ್ಕೆ ಕಾರಣಭೂತವಾಗಿರುವುದು ಅಥವಾ ಇದು ಇದನ್ನು ಹೊಂದಲು ಅರ್ಹರಾದವರನ್ನು ಹೋಗಿ ಸೇರುವುದು. ಅರ್ಹರಾದವರಿಗೆ ಮಾತ್ರ ಇದು ಸಿಕ್ಕುವುದು. **ಲಕ್ಷ್ಮೀಃ** ಎಂಬ ಶಬ್ದಕ್ಕೆ **ಈ** ಹೆಸರು **ಲಾಭಾದ್ವಾ** (ಹೊಂದುವುದು) ಎಂಬರ್ಥದಿಂದಾಗಲೀ, **ಲಕ್ಷಣಾದ್ವಾ** ನಿರ್ದೇಶಿಸುವುದರಿಂದಾಗಲೀ **ಲಷ್ಸ್ಯನಾತ್** ಅನೇಕ್ಷಿಸುವುದರಿಂದಾಗಲೀ, **ಲಾಂಛನಾದ್ವಾ** ಚಿಹ್ನೆಯನ್ನು ಸೂಚಿಸುವುದರಿಂದಲಾಗಲೀ, ಅಥವಾ ಅನೇಕ್ಷಿಸು ಎಂಬರ್ಥವುಳ್ಳ **ಲಷ್** ಧಾತುವಿನಿಂದಾಗಲೀ ಅಥವಾ ಹಿಂಜರಿ ಎಂಬರ್ಥವುಳ್ಳ **ಲಜ್** ಧಾತುವಿನಿಂದಾಗಲೀ ನಿಷ್ಪನ್ನವಾಗಬಹುದು ಅಥವಾ **ಅಶ್ಲಾಘಾಕರ್ಮಣಃ** ಸ್ವಯಂಪ್ರಶಂಸೆಮಾಡಿಕೊಳ್ಳದ ಎಂಬರ್ಥವಿರುವ **ಲಜ್ಜತಿ** ಧಾತುವಿನಿಂದ ನಿಷ್ಪನ್ನವಾಗಬಹುದು.

ನೋಡಿರಿ ನಿರುಕ್ತನಚನದಲ್ಲಿ ತಿತಉನಾ, ಸಕ್ತುಂ, ಸಖಾಯಃ, ಭದ್ರಾ, ಲಕ್ಷ್ಮೀಃ ಎಂಬ ಶಬ್ದಗಳ ವ್ಯುತ್ಪತ್ತಿ ಅಥವಾ ಅವಯವಾರ್ಥವು ಉಕ್ತವಾಗಿದೆ. ಧಾನ್ಯವನ್ನು ಪಂದರಿಯಲ್ಲಿ ಜಾಲಾಡಿದರೆ ಹೊಟ್ಟು, ಕಲ್ಲು ಮುಂತಾದ ಅನವಶ್ಯಕವಸ್ತುಗಳು ಹೋಗಿ ಶುದ್ಧವಾದ ಧಾನ್ಯವು ದೊರೆಯುವುದು. ಇದರಂತೆ ಬುದ್ಧಿವಂತರಾದ ಪುರುಷರು ಮಾತನಾಡುವಾಗ ನೋಡಲು ತನ್ನ ಮನಸ್ಸಿನಲ್ಲಿ ಧ್ಯಾನಮಾಡಿ ಎಂದರೆ ಚೆನ್ನಾಗಿ ಆಲೋಚಿಸಿ ಸುಸಂಸ್ಕೃತವಾದ ಮತ್ತು ಅರ್ಥಗರ್ಭಿತವಾದ ಮಾತುಗಳನ್ನೇ ಆಡುವರು. ಇವರ ವಾಕ್ಯಗಳು ಇದರಂತೆ ಬುದ್ಧಿವಂತರಾದ ಜನರಲ್ಲಿ ಪರಿಣಾಮವನ್ನುಂಟು ಮಾಡಿ ಪರಸ್ಪರ ಸ್ನೇಹಭಾವನವನ್ನು ವೃದ್ಧಿಪಡಿಸುವವು ಮತ್ತು ಇವರ ವಾಕ್ಯಗಳಲ್ಲಿ ಉತ್ತಮವೂ ಮಂಗಳಕರವೂ ಆದ ಲಕ್ಷಣಗಳು ಅಥವಾ ಚಿಹ್ನೆಗಳು ಕಂಡುಬರುವವು ಎಂದು ನಿರುಕ್ತವಚನದ ಮುಖ್ಯಾಭಿಪ್ರಾಯವು.

ಸಂಹಿತಾಪಾಠಃ

ಯಜ್ಞೇನ ವಾಚಃ ಪದವೀಯಮಾಯನ್ತಾಮನ್ವವಿನ್ದನ್ನೃಷಿಷು ಪ್ರವಿಷ್ಟಾಂ ।
ತಾಮಾಭೃತ್ಯಾ ವ್ಯದಧುಃ ಪುರುತ್ರಾ ತಾಂ ಸಪ್ತ ರೇಭಾ ಅಭಿ ಸಂ ನವನ್ತೇ ॥

ಪದಪಾಠಃ

ಯಜ್ಞೇನ । ವಾಚಃ । ಪದವೀಯಂ । ಆಯನ್ । ತಾಂ । ಅನು । ಅವಿನ್ದನ್ । ಋಷಿಷು । ಪ್ರವಿಷ್ಟಾಂ ।
ತಾಂ । ಆಭೃತ್ಯೈ । ವಿ । ಅದಧುಃ । ಪುರುತ್ರಾ । ತಾಂ । ಸಪ್ತ । ರೇಭಾಃ । ಅಭಿ । ಸಂ । ನವಂತೇ ॥ ೩ ॥

ಸಾಯಣಭಾಷ್ಯಂ

ವಾಗ್ದೇವತ್ಯಪಶೋರ್ವಪಾಪುರೋಡಾಶಯೋರ್ಯಜ್ಞೇನ ವಾಚ ಇತ್ಯಾದಿಕೇ ದ್ವೇ ಕ್ರಮೇಣ ಯಾಜ್ಯೇ । ಸೂತ್ರಿತಂ ಚ । ಯಜ್ಞೇನ ವಾಚಃ ಪದವೀಯಮಾಯನ್ನಿತಿ ದ್ವೇ ದೇವೀಂ ವಾಚಮಜನಯಂತ ದೇವಾಃ । ಆ. ೩-೮ । ಇತಿ ॥

ವಿದಿತಾರ್ಥಾ ಧೀರಾಃ ಪದವೀಯಂ॥ ವೇತೇರಚೋಯತ್ । ಸಂಜ್ಞಾಪೂರ್ವಕಸ್ಯ ವಿಧೇರನಿತ್ಯತ್ವಾದ್ಗುಣಾಭಾವಃ ॥ ಪದೇನ ಯಾತವ್ಯಃ ಪಂಥಾಃ ಪದವೀಯಃ । ತಂ ವಾಚೋ ಮಾರ್ಗಂ ಯಜ್ಞೇನಾಯನ್ । ಪ್ರಾಪ್ತವಂತಃ । ಋಷಿಷ್ವತೀಂದ್ರಿಯಾರ್ಥದರ್ಶಿಷು ಪ್ರವಿಷ್ಟಾಂ ತಾಂ ವಾಚಮವಿಂದನ್ । ಅಲಭಂತ । ಅನಂತರಂ ತಾಂ ವಾಚಮಾಭೃತ್ಯಾಹೃತ್ಯ ಪುರುತ್ರಾ ಬಹುಷು ದೇಶೇಷು ವ್ಯದಧುಃ । ವ್ಯಕಾರ್ಷುಃ । ಸವಾನ್ಮನುಷ್ಯಾನಧ್ಯಾಪಯಾಮಾಸುರಿತ್ಯರ್ಥಃ । ಏತಾದೃಶೀಂ ವಾಚಂ ರೇಭಾಃ ಶಬ್ದಾಯಮಾನಾಃ ಪಕ್ಷಿಣಃ ಪಕ್ಷಿರೂಪಾಣಿ ಗಾಯತ್ರ್ಯಾದೀನಿ ಸಪ್ತ ಛಂದಾಂಸ್ಯಭಿ ಸಂ ನವಂತೇ । ಅಭಿತಃ ಸಂಗಚ್ಛಂತೇ ॥

ಪ್ರತಿಪದಾರ್ಥ

ವಾಚಃ—ವಾಕ್ಕಿನ । **ಪದವೀಯಂ**—ಮಾರ್ಗವನ್ನು । **ಯಜ್ಞೇನ**—ಯಜ್ಞದ ಮೂಲಕ । **ಆಯನ್**—(ವಿವೇಕಿಗಳು) ಹೊಂದಿದರು । **ಋಷಿಷು**—ಋಷಿಗಳಲ್ಲಿ । **ಪ್ರವಿಷ್ಟಾಂ**—ಸ್ಥಾಪಿತವಾದ । **ತಾಂ**—ಆ ವಾಕ್ತತ್ತ್ವವನ್ನು । **ಅನ್ವವಿಂದನ್**—ಪಡೆದರು । **ತಾಂ**—ಆ ವಾಕ್ತತ್ತ್ವವನ್ನು । **ಆಭೃತ್ಯ**—ಶೇಖರಿಸಿ । **ಪುರುತ್ರಾ**—ಅನೇಕ ಪ್ರದೇಶಗಳಲ್ಲಿ । **ವ್ಯದಧುಃ**—ಹಂಚಿ ಹರಡಿದರು । **ತಾಂ**—ಅದನ್ನು । **ರೇಭಾಃ**—ಶಬ್ದಕಾರಕಗಳಾದ । **ಸಪ್ತ**—ಗಾಯತ್ರ್ಯಾದಿ ಸಪ್ತಚ್ಛಂದಸ್ಸುಗಳೂ । **ಅಭಿ ಸಂ**—ಸುತ್ತುವರಿದು । **ನವಂತೇ**—ಒಟ್ಟಿಗೆ ಕೂಡಿಕೊಳ್ಳುತ್ತವೆ.

ಭಾವಾರ್ಥ

ವಾಕ್ತತ್ತ್ವದ ಮಾರ್ಗವನ್ನು ವಿವೇಕಿಗಳು ಯಜ್ಞದ ಮೂಲಕ ಹೊಂದಿದರು. ಋಷಿಗಳಲ್ಲಿ ಸ್ಥಾಪಿತವಾದ ಆ ವಾಕ್ತತ್ತ್ವವನ್ನು ಅವರು ಪಡೆದರು. ಅದನ್ನು ಒಟ್ಟಿಗೆ ಸೇರಿಸಿ ಅನೇಕ ಪ್ರದೇಶಗಳಲ್ಲಿ ಹಂಚಿ ಹರಡಿದರು. ಅದನ್ನು ಶಬ್ದಕಾರಕಗಳೂ ಪಕ್ಷಿರೂಪವುಳ್ಳವೂ ಆದ ಗಾಯತ್ರ್ಯಾದಿಛಂದಸ್ಸುಗಳು ಸುತ್ತುವರಿದು ಕೂಡಿಕೊಳ್ಳುತ್ತವೆ.

English Translation

(The wise) reached the path of Speech by sacrifice, they found it centred in the Rishis; having acquired it they dispersed it in many places; the seven noisy (birds) meet together.

ವಿಶೇಷವಿಷಯಗಳು.

ವಾಗ್ದೇವತೆಯನ್ನುದ್ದೇಶಿಸಿ ಮಾಡುವ ಪಶುಯಾಗದ ವಪಾ ಮತ್ತು ಪುರೋಡಾಶಹೋಮಗಳಲ್ಲಿ **ಯಜ್ಞೇನ ವಾಚಃ** ಎಂಬ ಈ ಋಕ್ಕನ್ನೂ ಇದರ ಮುಂದಿನ **ಉತ ತ್ವಃ ಪಶ್ಯನ್** ಎಂಬ ಋಕ್ಕನ್ನೂ ಕ್ರಮವಾಗಿ ಯಾಜ್ಯಾಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯಜ್ಞೇನ ವಾಚಃ ಪದವೀಯಮಾಯನ್ನಿತಿ ದ್ವೇ ದೇವೀಂ ವಾಚಮಜನಯಂತ ದೇವಾಃ** ಎಂಬ ಸೂತ್ರದಿಂದ (ಆ. ೩-೮) ವಿವೃತವಾಗಿರುವುದು.

ಹಿಂದಿನ ಋಕ್ಕಿನ ನಿರುಕ್ತವಚನದಲ್ಲಿ ಹೇಳಿರುವಂತೆ ಋಷಿಗಳು ಸುಸಂಸ್ಕೃತವಾದ ವಾಕ್ಯಗಳನ್ನು ಎಂದರೆ ಮಂತ್ರಗಳನ್ನು ಯಜ್ಞಾನುಷ್ಠಾನದ ಮೂಲಕ ಸಾಕ್ಷಾತ್ಕರಿಸಿ ಪಡೆದರು. ಎಂದರೆ ಯಜ್ಞಾನುಷ್ಠಾನದ ಮೂಲಕ ಇವರಿಗೆ ಮಂತ್ರಗಳು ದೃಷ್ಟವಾದವು. ಆ ಮಂತ್ರಗಳು ಗಾಯತ್ರ್ಯಾದಿ ಏಳುವಿಧ ಛಂದಸ್ಸುಗಳಿಂದ ಸಹಿತವಾಗಿ ಘಟ್ಟಿಯಾಗಿ ಪಠಿಸಲ್ಪಡುತ್ತಾ ಸಮಸ್ತ ಪ್ರದೇಶಗಳಲ್ಲಿಯೂ ಹರಡಿದವು ಎಂದು ಋಕ್ಕಿನ ಮುಖ್ಯಾಭಿಪ್ರಾಯವು.

ಸಂಹಿತಾಪಾಠಃ

ಉತ ತ್ವಃ ಪಶ್ಯನ್ನ ದದರ್ಶ ವಾಚಮುತ ತ್ವಃ ಶೃಣ್ವನ್ನ ಶೃಣೋತ್ಯೇನಾಂ ।
ಉತೋ ತ್ವಸ್ಮೈ ತನ್ವಂ೧ವಿ ಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥

ಪದಪಾಠಃ

ಉತ । ತ್ವಃ । ಪಶ್ಯನ್ । ನ । ದದರ್ಶ । ವಾಚಂ । ಉತ । ತ್ವಃ । ಶೃಣ್ವನ್ । ನ । ಶೃಣೋತಿ । ಏನಾಂ ।
ಉತೋಇತಿ । ತ್ವಸ್ಮೈ । ತನ್ವಂ । ವಿ । ಸಸ್ರೇ । ಜಾಯೇವಇವ । ಪತ್ಯೇ । ಉಶತೀ । ಸುವಾಸಾಃ ॥ ೪ ॥

ಸಾಯಣಭಾಷ್ಯಂ

ತ್ವಶಬ್ದ ಏಕವಾಚೀ । ಏಕಃ । ಉತಶಬ್ದೋಽಪ್ಯರ್ಥೇ । ಪಶ್ಯನ್ನಪಿ ಮನಸಾ ಪರ್ಯಾಲೋಚಯನ್ನಪಿ ವಾಚಂ ನ ದದರ್ಶ । ದರ್ಶನಫಲಾಭಾವಾನ್ನ ಪಶ್ಯತಿ । ತ್ವ ಏಕಃ ಶ್ರಣ್ವನ್ನಪ್ಯೇನಾಂ ವಾಚಂ ನ ಶೃಣೋತಿ ಶ್ರವಣಫಲಾಭಾವಾತ್ । ಇತ್ಯನೇನಾರ್ಥೇನಾವಿದ್ವಾನಭಿಹಿತಃ । ತೃತೀಯಪಾದೇನ ವಿದಿತವೇದಾರ್ಥಮಾಹ । ತ್ವಸ್ಮಾ ಏಕಸ್ಮಾ ಅಪಿ ತನ್ವಮಾತ್ಮೀಯಂ ಶರೀರಂ ವಿ ಸಸ್ರೇ । ಸ್ವಯಂ ವಾಗ್ವಿಧಂ ಗಮಯತಿ । ಆತ್ಮಾನಂ ವಿವೃಣುತೇ ಪ್ರಕಾಶಯತೀತ್ಯರ್ಥಃ । ತತ್ರ ದೃಷ್ಟಾಂತಃ । ಜಾಯೇವ ಯಥೋಶತೀ ಸಂಭೋಗಂ ಕಾಮಯಮಾನಾ ಸುವಾಸಾಃ ಶೋಭನವಸನಾ ಜಾಯಾ ಪತ್ಯೇ ಭರ್ತ್ರೇ ಋತುಕಾಲೇ ಸಂಭೋಗಾರ್ಥಂ ಸ್ವಯಮಾತ್ಮಾನಂ ವಿವೃಣುತೇ ತದ್ವದೇನಾಂ ಪಶ್ಯತಿ ಶೃಣೋತಿ ಚೇತಿ ವಿದಿತವೇದಾರ್ಥಸ್ಯ ಪ್ರಶಂಸಾ । ಅಸ್ಯೇಕಃ ಪಶ್ಯನ್ನ ಪಶ್ಯತಿ ವಾಚಮಿತ್ಯಾದಿ ನಿರುಕ್ತಮತ್ರ ದ್ರಷ್ಟವ್ಯಂ । ನಿ ೧-೧೯ ॥

ಪ್ರತಿಪದಾರ್ಥ

ತ್ವಃ—ಒಬ್ಬನು (ಸಾಕ್ಷಾತ್ಕಾರ ಸಾಮರ್ಥ್ಯವಿಲ್ಲದವರು) । **ಪಶ್ಯನ್ ಉತ**—ನೋಡುತ್ತಿದ್ದರೂ । **ವಾಚಂ**—ಈ ವಾಕ್ತತ್ತ್ವವನ್ನು । **ನ ದದರ್ಶ**—ಸಾಕ್ಷಾತ್ಕರಿಸಿಕೊಳ್ಳಲಾಗಲಿಲ್ಲ । **ತ್ವಃ**—ಇನ್ನೊಬ್ಬನು (ಗೂಢವಾದ ತತ್ತ್ವವನ್ನರಿಯಲು ಯೋಗ್ಯವಾದ ಶ್ರೋತ್ರೇಂದ್ರಿಯವಿಲ್ಲದವನು) । **ಏನಾಂ**—ಈ ವಾಕ್ತತ್ತ್ವವನ್ನು । **ಶೃಣ್ವನ್ ಉತ**—ಕೇಳುತ್ತಿದ್ದರೂ । **ನ ಶೃಣೋತಿ**—ಕೇಳುವುದಿಲ್ಲ । **ಉಶತೀ**—ಪತಿಯ ಸಂಗವನ್ನಪೇಕ್ಷಿಸಿ । **ಸುವಾಸಾಃ**—ಉತ್ತಮವಾದ ವಸ್ತ್ರಾದಿಗಳಿಂದ ಅಲಂಕೃತಳಾದ । **ಜಾಯೇವ**—ಪತ್ನಿಯು । **ಪತ್ಯೇ**—ತನ್ನ ಪತಿಗೆ ತನ್ನ ಸುಂದರವಾದ ಸ್ವರೂಪವನ್ನು ಪ್ರಕಾಶಗೊಳಿಸುವಂತೆ । **ತ್ವಸ್ಮೈ**—ಇನ್ನೊಬ್ಬನಿಗೆ (ಸಾಕ್ಷಾತ್ಕಾರ ಮಾಡಿಕೊಳ್ಳುವ ಯೋಗ್ಯತೆಯಿರುವವನಿಗೆ) । **ತನ್ವಂ**—ತನ್ನ ಶರೀರವನ್ನು । **ವಿ ಸಸ್ರೇ**—ಪ್ರಕಾಶಪಡಿಸುತ್ತಾಳೆ.

ಭಾವಾರ್ಥ

ಸಾಕ್ಷಾತ್ಕಾರಮಾಡಲರಿಯವ ಕೆಲವರು ಈ ವಾಕ್ತತ್ತ್ವವನ್ನು ನೋಡಿದರೂ ನೋಡದಂತೆಯೇ ಆಗುತ್ತದೆ. ಇನ್ನು ಕೆಲವರು ಕಿವಿಯಲ್ಲಿ ಕೇಳುತ್ತಿದ್ದರೂ ಕೇಳಿದ ಪ್ರಯೋಜನವನ್ನು ಹೊಂದದೇ ಕೇಳದಿರುವಂತೆಯೇ ಆಗುತ್ತದೆ. ಆದರೆ, ಈ ತತ್ತ್ವವನ್ನರಿಯುವ ಸಾಮರ್ಥ್ಯವುಳ್ಳವರಿಗೆ ಮಾತ್ರ ಪತಿಗೆ ತನ್ನ ಸುಂದರವಾದ ಮತ್ತು ವಸ್ತ್ರಾದಿಗಳಿಂದ ಅಲಂಕೃತವಾದ ದೇಹವನ್ನು ಪತ್ನಿಯು ಪತಿಯ ಸಂಗವನ್ನು ಬಯಸಿ ಪ್ರಕಾಶಪಡಿಸುವಂತೆ ವಾಗ್ದೇವಿಯು ತನ್ನ ಸ್ವರೂಪವನ್ನು ಪ್ರಕಾಶಪಡಿಸುತ್ತಾಳೆ.

English Translation

One (man) indeed seeing Speech has not seen her; another (man) hearing her has not heard her; but to another she delivers her person as a loving wife well-attired presents herself to her husband.

ವಿಶೇಷವಿಷಯಗಳು

ಈ ಋಕ್ಕಿನ ಪೂರ್ವಾರ್ಧದಲ್ಲಿ ವೇದಾರ್ಥವನ್ನು ತಿಳಿಯದಿರುವ ಅಜ್ಞಪುರುಷನ ನಿಂದೆಯೂ ಉತ್ತರಾರ್ಧದಲ್ಲಿ ವೇದಾರ್ಥವನ್ನು ತಿಳಿದವನಿಗೆ ವಾಗ್ದೇವತೆಯು ಹೇಗೆ ಅನುಗ್ರಹಮಾಡುತ್ತಾಳೆ ಎಂಬುದನ್ನೂ ವಿವರಿಸಲಾಗಿದೆ. ಈ ಋಕ್ಕಿಗೆ ಯಾಸ್ಕರು ನಿರುಕ್ತವನ್ನು ಹೇಳುವಾಗ—

ಅಪ್ಯೇಕಃ ಪಶ್ಯನ್ನ ಪಶ್ಯತಿ ವಾಚಂ। ಅಪಿ ಚ ಶೃಣ್ವನ್ನ ಶೃಣೋತ್ಯೇನಾಮಿತ್ಯವಿದ್ವಾಂಸಮಾಹಾರ್ಥಂ॥ ಅಪ್ಯೇಕಸ್ಮೈ ತನ್ವಂ ವಿಸಸ್ರ ಇತಿ ಸ್ವಮಾತ್ಮಾನಂ ವಿವೃಣುತೇ। ಜ್ಞಾನಂ ಪ್ರಕಾಶನಮರ್ಥಸ್ಯಾಹಾನಯಾ ವಾಚೋಪಮೋತ್ತಮಯಾ ವಾಚಾ। ಜಾಯೇವ ಪತ್ಯೇ ಕಾಮಯಮಾನಾ ಸುವಾಸಾ ಋತುಕಾಲೇಷು॥ ಸುವಾಸಾಃ ಕಲ್ಯಾಣವಾಸಾಃ। ಕಾಮಯಮಾನಾ ಋತುಕಾಲೇಷು। ಯಥಾ ಸ ಏನಾಂ ಪಶ್ಯತಿ ಸ ಶೃಣೋತೀತ್ಯರ್ಥಜ್ಞಪ್ರಶಂಸಾ॥

(ನಿ. ೧-೧೯)

ಅನೇಕ ಪುರುಷರು ವ್ಯಾಕರಣಸಾಹಿತ್ಯಾದಿ ಶಾಸ್ತ್ರಗ್ರಂಥಗಳಲ್ಲಿ ಪರಿಣತರಾಗಿರುತ್ತಾರೆ. ವೇದಾಧ್ಯಯನವನ್ನು ಮಾಡಿರುತ್ತಾರೆ. ಆದರೆ ಅವರಲ್ಲಿ ಒಬ್ಬನು (ಎಂದರೆ ಕೆಲವರು) **ವಾಚಂ** ವೇದವಾಕ್ಯವನ್ನು ಅಥವಾ ಮಂತ್ರವನ್ನು **ಪಶ್ಯನ್ನಪಿ ನ ಪಶ್ಯತಿ**—ತಿಳಿದಿದ್ದರೂ ಎಂದರೆ ಬಾಯಿಂದ ಪಠಿಸುತ್ತಿದ್ದರೂ **ನ ಪಶ್ಯತಿ**—ಆ ಮಂತ್ರದ ಅರ್ಥವನ್ನು ತಿಳಿಯುವುದಿಲ್ಲ. ಎಂದರೆ ಮಂತ್ರವನ್ನು ಪಠಿಸುತ್ತಿದರೂ ಅದರ ಅರ್ಥವನ್ನು ಮಾತ್ರ ತಿಳಿದಿರುವುದಿಲ್ಲ ಅಥವಾ ತಿಳಿದು ಕೊಳ್ಳುವ ಶಕ್ತಿಯಿರುವುದಿಲ್ಲ. ಹಾಗೆಯೇ ಇನ್ನೊಬ್ಬನು ವೇದಮಂತ್ರವನ್ನು ಶ್ರವಣಮಾಡುತ್ತಿದ್ದರೂ ಅದರ ಅರ್ಥಜ್ಞಾನವಿರುವುದಿಲ್ಲ. ಕಣ್ಣಿದ್ದರೂ ನೋಡುವುದಿಲ್ಲ. ಕಿವಿಯಿದ್ದರೂ ಕೇಳುವುದಿಲ್ಲ. ಇನು ವೇದಾರ್ಥಜ್ಞಾನವಿಲ್ಲವಿರುದವರ ವಿಷಯವಾಯಿತು. ವೇದಾರ್ಥವನ್ನು ಚೆನ್ನಾಗಿ ತಿಳಿದಿರುವ ಇನ್ನೊಬ್ಬ ಪುರುಷನ ವಿಷಯದಲ್ಲಿಯಾದರೋ, ವಾಗ್ದೇವತೆಯು ಅವನಿಗೆ ತನ್ನ ನಿಜಸ್ವರೂಪವನ್ನು ಎಂದರೆ ವೇದಮಂತ್ರಗಳ ಗೂಢಾರ್ಥವನ್ನು ಸ್ಪಷ್ಟವಾಗಿ ಪ್ರಕಾಶ ಪಡಿಸುತ್ತಾಳೆ. ಹೇಗೆಂದರೆ ಒಳ್ಳೆಯ ವಸ್ತ್ರಾಭರಣಗಳಿಂದ ಅಲಂಕೃತಳಾದ ಸ್ತ್ರೀಯು ತನ್ನ ಪತಿಯ ಸಂಗವನ್ನು ಅಪೇಕ್ಷಿಸಿ ಋತುಕಾಲದಲ್ಲಿ (ಸಂಭೋಗ ಕಾಲದಲ್ಲಿ) ತನ್ನ ಅವಯವಗಳ ಸೌಂದರ್ಯವನ್ನು ತನ್ನ ಪತಿಗೆ ಹೇಗೆ ಪ್ರಕಟಿಸುವಳೋ ಎಂದರೆ ಪತಿಯು ತನ್ನ ಪತ್ನಿಯ ಸೌಂದರ್ಯಯುಕ್ತವಾದ ಅವಯವಗಳನ್ನು ರತಿಕಾಲದಲ್ಲಿ

ನೋಡಲು ಹೇಗೆ ಸಮರ್ಥನಾಗುವನೋ ಅದರಂತೆ ವೇದಾರ್ಥಜ್ಞನಾದ ಪುರುಷನಿಗೆ ಮಂತ್ರಗಳ ಗೂಢಾರ್ಥಗಳು ಸಹ ಸ್ಪಷ್ಟವಾಗಿ ಗೋಚರಿಸುವವು. ಇಲ್ಲಿ ತನ್ನ ಪತ್ನಿಯ ಉಪಮಾನವನ್ನು ಕೊಟ್ಟಿರುವ ಉದ್ದೇಶವೇನೆಂದರೆ—ಒಬ್ಬ ಪುರುಷನು ಅನೇಕ ಸ್ತ್ರೀಯರನ್ನು ಕಣ್ಣಿನಿಂದ ನೋಡಿದರೂ ತನ್ನ ಪತ್ನಿಯ ಅವಯವಗಳನ್ನು ಮಾತ್ರ ಏಕಾಂತದಲ್ಲಿ ಚೆನ್ನಾಗಿ ನೋಡಲು ಸಮರ್ಥನಾಗುತ್ತಾನೆ. ಅದರಂತೆ ವೇದಾರ್ಥವನ್ನರಿಯದ ಪುರುಷನು ಇತರ ಅನೇಕ ಶಾಸ್ತ್ರಗಳಲ್ಲಿ ಪಾರಂಗತನಾಗಿದ್ದರೂ ವೇದಮಂತ್ರಗಳ ರಹಸ್ಯಾರ್ಥಗಳನ್ನರಿಯಲು ಸಮರ್ಥನಾಗುವುದಿಲ್ಲ. ಆದರೆ ವೇದಾರ್ಥಜ್ಞನಾದ ಪುರುಷನಿಗೆ ಮಾತ್ರ ತನ್ನ ಪತ್ನಿಯನ್ನು ಏಕಾಂತದಲ್ಲಿ ನೋಡಲು ಶಕ್ಯವಾಗಿರುವಂತೆ ವೇದಮಂತ್ರಗಳ ರಹಸ್ಯಾರ್ಥಗಳನ್ನು ಸಹ ತಿಳಿದುಕೊಳ್ಳಲು ಶಕ್ತನಾಗಿರುವನು ಎಂದು ವೇದಾರ್ಥವನ್ನು ತಿಳಿಯದವನ ಮತ್ತು ತಿಳಿದವನ ಶಕ್ತಿ ಸಾಮರ್ಥ್ಯಗಳನ್ನು ವಿಶದಪಡಿಸುವುದಕ್ಕಾಗಿ **ಜಾಯೇವ ಪತ್ಯೇ** ಎಂದು ಪತಿಪತ್ನಿಯರ ದೃಷ್ಟಾಂತವನ್ನು ಹೇಳಿ ಋಷಿಯು ಅರ್ಥವಿವರಣೆಮಾಡಿದಾನೆ.

ತ್ವಃ ಎಂಬ ಶಬ್ದದ ವಿಷಯದಲ್ಲಿ ಯಾಸ್ಕರು ಈ ರೀತಿ ವಿವರಣೆಮಾಡಿದಾರೆ—

ತ್ವ ಇತಿ ವಿನಿಗ್ರಹಾರ್ಥೀಯಂ ಸರ್ವನಾಮಾನುದಾತ್ತಂ। ಅರ್ಧನಾಮೇತ್ಯೇಕೇ।

(ನಿ. ೧-೭)

ತ್ವಃ ಎಂಬ ಶಬ್ದವು ವಿರೋಧಾರ್ಥವನ್ನು ಸೂಚಿಸುವ ಸರ್ವನಾಮಪದವಾಗಿದೆ. ಇದು ಅನುದಾತ್ತಸ್ವರದಿಂದ ಕೂಡಿರುವುದು. ಕೆಲವರು ಈ ಶಬ್ದಕ್ಕೆ ಅರ್ಧವೆಂಬ ಅರ್ಥವಿರುವುದೆಂದು ಹೇಳುವರು.

ನಿಪಾತ ಇತ್ಯೇಕೇ। ತತ್ಕಥಮನುದಾತ್ತಪ್ರಕೃತಿ ನಾಮ ಸ್ಯಾತ್। ದೃಷ್ಟವ್ಯಯಂತು ಭವತಿ। ಉತ ತ್ವಂ ಸಖ್ಯೇ ಸ್ಥಿರಪೀತಮಾಹುಃ ಇತಿ ದ್ವಿತೀಯಾಯಾಂ। ಉತೋ ತ್ವಸ್ಮೈ ತನ್ವಂ೧ ವಿಸಸ್ರೇ ಇತಿ ಚತುರ್ಥ್ಯಾಂ। ಅಥಾಪಿ ಪ್ರಥಮಾ ಬಹುವಚನೇ॥ (ನಿ. ೧-೮)

ಕೆಲವರು ಈ ಶಬ್ದವನ್ನು ಅವ್ಯಯವೆಂದು ಹೇಳುವರು. ಅದು ಸರಿಯಲ್ಲ. ಏಕೆಂದರೆ, ಸರ್ವಾನುದಾತ್ತವಾದ ಪದವು ಹೇಗಾಗುವುದು. ನಾಮಪದದಂತೆ ಇದಕ್ಕೆ ವಿಭಕ್ತಿ ವಚನಗಳಲ್ಲಿ ಪ್ರತ್ಯಯಗಳನ್ನು ಸೇರಿಸಲಾಗುವುದು. ಉದಾಹರಣೆಗೆ, **ಉತ ತ್ವಂ ಸಖ್ಯೇ ಸ್ಥಿರಪೀತಮಾಹುಃ** ಎಂಬ ವಾಕ್ಯದಲ್ಲಿ **ತ್ವಂ** ಎಂದು ದ್ವಿತೀಯಾವಿಭಕ್ತಿ ಪ್ರಯೋಗವಿದೆ. **ಉತೋ ತ್ವಸ್ಮೈ ತನ್ವಂ೧ ವಿಸಸ್ರೇ** ಎಂಬ ವಾಕ್ಯದಲ್ಲಿ **ತ್ವಸ್ಮೈ** ಎಂದು ಚತುರ್ಥೀವಿಭಕ್ತಿಪ್ರಯೋಗವಿದೆ. ಮತ್ತು ಪ್ರಥಮಾವಿಭಕ್ತಿಯ ಬಹುವಚನದಲ್ಲಿಯೂ ಈ ಶಬ್ದದ ಪ್ರಯೋಗವಿರುವುದು **ಅದಶ್ಮಾಸ ಉಪಕಕ್ಷಾಸ ಉ ತ್ವೇ** ಎಂಬ ವಾಕ್ಯದಲ್ಲಿ ಕಂಡುಬರುವುದು.

ಅಥಾಪಿ ಸಮುಚ್ಚಯಾರ್ಥೇ ಭವತಿ। ಪರ್ಯಾಯಾ ಇವ ತ್ವದಾಶ್ವಿನಂ। ಆಶ್ವಿನಂ ಚ ಪರ್ಯಾಯಾಶ್ಚೇತಿ॥ (ನಿ. ೧-೯)

ಸಮುಚ್ಚಯಾರ್ಥದಲ್ಲಿಯೂ (ಮತ್ತು ಎಂಬರ್ಥದಲ್ಲಿಯೂ) ಈ ಶಬ್ದದ ಪ್ರಯೋಗವಿರುವುದು. ಹೇಗೆಂದರೆ, **ಪರ್ಯಾಯಾ ಇವ ತ್ವದಾಶ್ವಿನಂ** ಎಂಬ ವಾಕ್ಯದಲ್ಲಿ **ತ್ವತ್** ಎಂಬ ಶಬ್ದಕ್ಕೆ (**ಚ** ಶಬ್ದದ) ಮತ್ತು ಎಂಬರ್ಥವಿರುವುದು.

ಸಂಹಿತಾಪಾಠಃ

ಉತ ತ್ವಂ ಸಖ್ಯೇ ಸ್ಥಿರಪೀತಮಾಹುರ್ನೈರ್ಂ ಹಿನ್ವಂತ್ಯಪಿ ವಾಜಿನೇಷು।
ಅಧೇನ್ವಾ ಚರತಿ ಮಾಯಯೈಷ ವಾಚಂ ಶಶ್ವ್ಂವಾ ಅಫಲಾಮಪುಷ್ಪಾಂ॥೫॥

ಪದಪಾಠಃ

ಉತ । ತ್ವಂ । ಸಖ್ಯೇ । ಸ್ಥಿರಽಪೀತಂ । ಆಹುಃ । ನ । ಏನಂ । ಹಿನ್ವಂತಿ । ಅಪಿ । ವಾಜಿನೇಷು ।
ಅಧೇನ್ವಾ । ಚರತಿ । ಮಾಯುಯಾ । ಏಷಃ । ವಾಚಂ । ಶುಶ್ರುಽವಾನ್ । ಅಫಲಾಂ । ಅಪುಷ್ಪಾಂ ॥ ೫ ॥

ಸಾಯಣಭಾಷ್ಯಂ

ತ್ವಮುತೈಕಮಪಿ ಸಖ್ಯೇ ವಿದುಷಾಂ ಸಂಸದಿ । ಯಾ ಸತ್ಕಥಾ ಸಾ ಸಖಿಕರ್ಮತ್ವಾತ್ಸಖ್ಯಮಿತ್ಯುಚ್ಯತೇ । ಸಾ ಚ ವಾಚಾ ಕ್ರಿಯತೇ । ಅತೋ ವಾಕ್ಸಂಬಂಧಾದ್ವಾಕ್ಸಖ್ಯೇ ಸ್ಥಿರಪೀತಂ ಮಧು ಯಸ್ಯ ಹೃದಯೇ ಸ್ಥಿತಂ ಭವತಿ । ಯದ್ವಾ । ಸ್ಥಿರಪೀತಂ ಸ್ಥಿರಪ್ರಾಪ್ತಿಮಾಹುಃ । ಯದ್ವಾ । ತಸ್ಮಿಞ್ಜ್ಞಾತಾರ್ಥಮಾಹುಃ । ಲೋಕೇ ಯತಾ ಜ್ಞಾತಾರ್ಥಂ ಪುರುಷಂ ಪೀತಾರ್ಥಮಿತಿ ವದಂತಿ । ಕಿಂಚೈನಂ ವಿಜ್ಞಾತಾರ್ಥಂ ಪುರುಷಂ ವಾಜಿನೇಷು । ವಾಗಿನೇಶ್ವರಾ ಯೇಷಾಂ ತೇ ವಾಜಿನಾ ಅರ್ಥಾ ವಾಚ ಆಯುತ್ತಾಃ ಖಲು । ವಾಗ್ವಿಷಯೇಷ್ವರ್ಥೇಷು ನಾಪಿ ಹಿನ್ವಂತಿ । ಅಪಿಶಬ್ದೋಽನ್ವರ್ಥೇ । ಕೇಚಿದಪಿ ನಾನುಗಚ್ಛಂತಿ । ಅಯಮೇವಾತಿಶಯೇನ ವಿದ್ವಾನಿತ್ಯರ್ಥಃ । ಯದ್ವಾ । ವಾಜಿನೇಷು ಸಾರಭೂತೇಷು ನಿರೂಪಣೀಯೇಷ್ವರ್ಥೇಷ್ವೇನಂ ನ ಹಿನ್ವಂತಿ । ನ ವಹಿಃ ಕುರ್ವಂತಿ । ಏನಂ ಪುರಸ್ಕೃತ್ಯೈವ ಸರ್ವಂ ವೇದಾರ್ಥಂ ವಿಚಾರಯಂತೀತ್ಯರ್ಥಃ । ಇತ್ಯರ್ಥಜ್ಞಃ ಪ್ರಶಸ್ತಃ । ಅನಂತರಮುತ್ತರಾರ್ಧೇನ ಕೇವಲಪಾಠಕೋ ನಿಂದ್ಯತೇ । ಏಷೋಽವಿಜ್ಞಾತಾರ್ಥಃ ಪುರುಷೋಽಧೇನ್ವಾ ಧೇನುತ್ವವಿವರ್ಜಿತಯಾ ಕಾಮಾನಾಮದೋಗ್ಧ್ರ್ಯಾ ದೇವನನುಷ್ಯಸ್ಥಾನೇಷು ವಾಕ್ಪ್ರತಿರೂಪಯಾ ಮಯಯಾ ಚರತಿ । ಕಿಂ ಕುರ್ವನ್ । ಅಫಲಾಮಪುಷ್ಪಾಂ । ವಾಚೋಽರ್ಥಃ ಪುಷ್ಪಫಲಂ । ಅರ್ಥವರ್ಜಿತಾಂ । ಯದ್ವಾ । ವಾಚೋಽರ್ಥೋ ಯಾಜ್ಞದೈವತೇ । ಯಜ್ಞೇ ಭವಂ ಜ್ಞಾನಂ ಯಾಜ್ಞಂ ದೇವತಾಸು ಭವಂ ಜ್ಞಾನಂ ದೈವತಂ । ತದ್ವರ್ಜಿತಾಂ ಕರ್ಮಾದಿವಿಷಯಜ್ಞಾನವರ್ಜಿತಾಂ ವಾಚಂ ಶುಶ್ರುವಾಞ್ಶ್ರುತವಾನ್ । ಕೇವಲಂ ಪಾಠಮಾತ್ರೇಣೈವ ಶ್ರುತವಾನ್ ಸ ಚರತಿ । ಯಥಾ ವಂಧ್ಯಾ ಪೀನಾ ಗೌಃ ಕಿಂ ದ್ರೋಣಮಾತ್ರಂ ಕ್ಷೀರಂ ದೋಗ್ಧೀತಿ ಮಾಯಾಮುತ್ಪಾದಯಂತೀ ಚರತಿ ಯಥಾ ವಂಧ್ಯೋ ವೃಕ್ಷೋಽಕಾಲೇ ಪಲ್ಲವಾದಿಯುಕ್ತಃ ಸನ್ಫಲಿಷ್ಯತಿ ಫಲತೀತಿ ಭ್ರಾಂತಿಮುತ್ಪಾದಯಂಸ್ತಿಷ್ಠತಿ ತಥಾ ಪಾಠಂ ಪ್ರಬ್ರುವಾಣಶ್ಚರತೀತ್ಯರ್ಥಃ । ಅಸ್ಯೇಕಂ ವಾಕ್ಸಖ್ಯೇ ಸ್ಥಿರಪೀತಮಿತ್ಯಾದಿ ನಿರುಕ್ತಮನುಸಂಧೇಯಂ ॥ ನಿ. ೧-೨೦ ॥

ಪ್ರತಿಪದಾರ್ಥ

ತ್ವಂ ಉತ—ಒಬ್ಬನನ್ನು । **ಸಖ್ಯೇ**—ವಿದ್ವಾಂಸರ ಗುಂಪಿನಲ್ಲಿ । **ಸ್ಥಿರಪೀತಂ**—ವಿಶೇಷಜ್ಞಾನವುಳ್ಳವನನ್ನಾಗಿ । **ಆಹುಃ**—ತಿಳಿದವರು ಹೇಳುತ್ತಾರೆ । **ಏನಂ**—ಇಂತಹ ಪುರುಷನನ್ನು । **ವಾಜಿನೇಷು**—ವಾಗ್ವ್ಯವಹಾರಗಳಲ್ಲಿ । **ನ ಅಪಿ ಹಿನ್ವಂತಿ**—ಯಾರೂ ಪ್ರತಿಭಟಿಸುವುದಿಲ್ಲ ಮತ್ತು ಅಲಕ್ಷಿಸುವುದಿಲ್ಲ । **ಏಷಃ**—ಜ್ಞಾನರಹಿತನಾದ ಪುರುಷನು । **ಅಧೇನ್ವಾ**—ರಸರಹಿತನಾಗಿ । **ಅಫಲಾಂ**—ಫಲವಿಲ್ಲದುದೂ । **ಅಪುಷ್ಪಾಂ**—ಪುಷ್ಪರಹಿತವೂ ಆದ । **ವಾಚಂ**—ವಾಕ್ಯನ್ನು । **ಶುಶ್ರುವಾನ್**—ಅರ್ಥರಹಿತವಾಗಿ ಕೇವಲ ಶ್ರವಣಮಾತ್ರದಿಂದ ಕೇಳಿ । **ಮಾಯಯಾ**—ಅಜ್ಞಾನಯುಕ್ತನಾಗಿ । **ಚರತಿ**—ಸಂಚರಿಸುತ್ತಾನೆ.

ಭಾವಾರ್ಥ

ವಾಕ್ಕತ್ತ್ವವನ್ನು ಸಾಕ್ಷಾತ್ಕರಿಸಬಲ್ಲವನನ್ನು ತಿಳಿದವರು ವಿದ್ವಾಂಸರ ಗುಂಪಿನಲ್ಲಿ ವಿಶೇಷವಾಗಿ ಜ್ಞಾನವುಳ್ಳವನನ್ನಾಗಿ ಹೇಳುತ್ತಾರೆ. ಇಂತಹಪುರುಷನನ್ನು ವಾಗ್ವ್ಯವಹಾರಗಳಲ್ಲಿ ಯಾರೂ ಪ್ರತಿಭಟಿಸುವುದಿಲ್ಲ ಮತ್ತು ಅಲಕ್ಷಿಸುವುದಿಲ್ಲ ಜ್ಞಾನರಹಿತನಾದ ಪುರುಷನು ರಸರಹಿತನಾಗಿ ಫಲವಿಲ್ಲದುದೂ, ಪುಷ್ಪರಹಿತವೂ ಆದ ವಾಕ್ಯನ್ನು ಅರ್ಥವಿಲ್ಲದೆ ಕೇವಲ ಕಿವಿಯಿಂದ ಮಾತ್ರ ಕೇಳಿ ಅಜ್ಞಾನಯುಕ್ತನಾಗಿ ಸಂಚರಿಸುತ್ತಾನೆ.

English Translation

They call one man firmly established in the friendship (of Speech), they do not exelude him from (the society of) the powerful (in knowledge); another wanders with an illusion that is barren, bearing Speech that is without fruit, without flowers.

ವಿಶೇಷವಿಷಯಗಳು

ಹಿಂದಿನ ಋಕ್ಕಿನಲ್ಲಿ ಹೇಳಿರುವ ವಿಷಯವನ್ನೇ ಇಲ್ಲಿ ಪುನಃ ಸ್ಪಷ್ಟವಾಗಿ ವಿವರಿಸಲಾಗಿದೆ. ಆದರೆ ಋಕ್ಕಿನ ಪೂರ್ವಾರ್ಧದಲ್ಲಿ ವೇದಾರ್ಥಜ್ಞಾನ ಪ್ರಶಂಸೆಯೂ ಉತ್ತರಾರ್ಧದಲ್ಲಿ ವೇದಾರ್ಥಜ್ಞಾನಲ್ಲವನನ ನಿಂದೆಯೂ ಉಕ್ತವಾಗಿದೆ. ಯಾಸ್ಕರು ಈ ಋಕ್ಕಿಗೂ ನಿರ್ವಚನವನ್ನು ಈರೀತಿ ಹೇಳಿದ್ದಾರೆ—

> **ಆಸ್ಯೇಕಂ ವಾಕ್ ಸಖ್ಯೇ ಸ್ಥಿರಪೀತಮಾಹೂ ರಮಮಾಣಂ ವಿಪೀತಾರ್ಥಂ ದೇವಸಖ್ಯೇ ರಮಣೀಯೇ ಸ್ಥಾನ ಇತಿ ವಾ ವಿಜ್ಞಾತಾರ್ಥಂ ಯನ್ನಾಪ್ನುವಂತಿ ವಾಗ್ದೋಷೇಷು ಬಲವತ್ಸ್ವಪಿ। ಅಧೇನ್ವಾ ಹ್ಯೇಷ ಚರತಿ ಮಾಯಯಾ ವಾಕ್ಪ್ರತಿರೂಪಯಾ ನಾಸ್ಯೈ ಕಾಮಾನ್ದುಗ್ಧೇ ವಾಗ್ದೋಹ್ಯಾನ್ ದೇವಮಾನುಷ್ಯಸ್ಥಾನೇಷು ಯೋ ವಾಚಂ ಶ್ರುತವಾನ್ ಭವತ್ಯಫಲಾಮಪುಷ್ಪಾಮಿತ್ಯಫಲಾಸ್ಯಾ ಅಪುಷ್ಪಾ ವಾಕ್ ಭವತೀತಿ ವಾ ಕಿಂಚಿತ್ಪುಷ್ಪಫಲೇತಿ ವಾ ಅರ್ಥಂ ವಾಚಃ ಪುಷ್ಪಫಲಮಾಹ । ಯಜ್ಞದೈವತೇ ಪುಷ್ಪಫಲೇ ದೇವತಾಧ್ಯಾತ್ಮೇ ವಾ ॥**
>
> (ನಿ. ೧೩-೨೦)

ಉತ ತ್ವಂ ಸಖ್ಯೇ ಸ್ಥಿರಪೀತಮಾಹುಃ—ಇಲ್ಲಿ **ಸ್ಥಿರಪೀತಂ** ಎಂಬ ಶಬ್ದಕ್ಕೆ **ಆಪೀತಾರ್ಥಂ, ಗೃಹೀತಾರ್ಥಮಿತ್ಯರ್ಥಃ** ವೇದಮಂತ್ರಗಳ ಅರ್ಥವನ್ನು ಸ್ವೀಕರಿಸಿದವನು ಎಂದರೆ ಚೆನ್ನಾಗಿ ತಿಳಿದವನು ಎಂದಭಿಪ್ರಾಯವು. ಇಂತಹ ವೇದಾರ್ಥಜ್ಞನಾದ ಪುರುಷನು ವಾಕ್ಯಗಳೊಡನೆ ಎಂದರೆ ಮಂತ್ರಗಳೊಡನೆ ಸ್ನೇಹಭಾವದಿಂದಿರುವನೆಂದು ಹೇಳುವರು. ವೇದಾರ್ಥಜ್ಞನಿಗೂ ವೇದಮಂತ್ರಗಳಿಗೂ ಗಾಢವಾದ ಮೈತ್ರಿ (ಸ್ನೇಹ) ವಿರುವುದೆಂದು ತಿಳಿದವರು ಹೇಳುವರು ಮತ್ತು ವೇದಾರ್ಥಜ್ಞನು ವೇದಮಂತ್ರಗಳೊಡನೆ (ಎಂದರೆ ಅವುಗಳ ಅರ್ಥವನ್ನು ತಿಳಿದು) ಸಂತೋಷದಿಂದ ಕ್ರೀಡಿಸುತ್ತಿರುವನು ಅಥವಾ ದೇವತೆಗಳ ಸ್ನೇಹಭಾವದಲ್ಲಿ ಅಥವಾ ಉತ್ತಮವಾದ ಯಜ್ಞಸ್ಥಾನಗಳಲ್ಲಿ ಸಂತೋಷಚಿತ್ತನಾಗಿ ವಿಹರಿಸುತ್ತಿರುವನು.

ನೈನಂ ಹಿನ್ವಂತಿ ಅಪಿ ವಾಜಿನೇಷು—ವಾಜಿನೇಷು ಎಂದರೆ ವಾಗ್ದೋಷೇಷು ; ವಾಕ್ಯಗಳಿಂದ ತಿಳಿಯಲ್ಪಡುವ ಅಥವಾ ಚರ್ಚಿಸಲ್ಪಡುವ ಸನ್ನಿವೇಶಗಳಲ್ಲಿ ಎಂದರೆ ವಾಗ್ವಾದಗಳಲ್ಲಿ, ವಿದ್ವತ್ಸಭೆಗಳಲ್ಲಿ ಯಜ್ಞಾದಿಕರ್ಮವಿಷಯ

ವಾಗಿ ಅಥವಾ ಅಧ್ಯಾತ್ಮವಿಚಾರವಾಗಿ ನಡೆಯುವ ವಿಮರ್ಶಾತ್ಮಕವಾದ ಚರ್ಚೆಗಳಲ್ಲಿ **ಈ** ವೇದಾರ್ಥಜ್ಞಾನನ್ನು ಯಾರೂ ಅನುಸರಿಸಲಾರರು ಎಂದರೆ ಸರಿಗಟ್ಟಲಾರರು. ಯಾರೂ ಇವನೊಡನೆ ವಾಗ್ವಾದವನ್ನು ಮಾಡಿ ಇವನನ್ನು ಜಯಿಸ ಲಾರರು ಎಂದಭಿಪ್ರಾಯವು. ಇದು **ಈ** ಋಕ್ಕಿನ ಪೂರ್ವಾರ್ಧದ ನಿರ್ವಚನಾಭಿಪ್ರಾಯವು.

ಇನ್ನು ಉತ್ತರಾರ್ಧದಲ್ಲಿ ವೇದಾರ್ಥವನ್ನು ತಿಳಿಯದಿರುವ ಪುರುಷನ ವಿಷಯದಲ್ಲಿ ಎರಡು ಉಪಮಾನಗಳಿಂದ ಅರ್ಥವಿವರಣೆಮಾಡಿರುವರು.

ಅಧೇನ್ವಾ ಚರತಿ ಮಾಯಯೈಷಃ—ಧೇನು ಶಬ್ದಕ್ಕೆ ಹಾಲನ್ನು ಕರೆಯುವ ಗೋವು ಎಂದರ್ಥವು. ಇಲ್ಲಿ ಗೋವಿನಂತೆ ಸಕಲೇಷ್ಟಾರ್ಥಗಳನ್ನು ಕರೆಯುವ ಎಂದರೆ ಕೊಡುವ ವಾಗ್ದೇವತೆಯು ಎಂದಭಿಪ್ರಾಯವು. ದೇವಮನುಷ್ಯಾದಿಗಳಲ್ಲಿ ವೇದಮಂತ್ರಗಳ ಅರ್ಥಾದಿಗಳನ್ನು (ವಾಚಂ) ತಿಳಿದವರಿಗೆ ವಾಗ್ದೇವತೆಯು ಯಾವ ವಿಧವಾದ ಫಲಾದಿಗಳನ್ನು ಅನುಗ್ರಹಿಸುವಳೋ **ಆ** ವಿಧವಾದ ಫಲವು ವೇದಾರ್ಥಜ್ಞಾನಲ್ಲದವನಿಗೆ ಲಭಿಸುವುದಿಲ್ಲ. ಎಂದರೆ ವೇದಾರ್ಥಜ್ಞಾನಲ್ಲದವನಿಗೆ ವಾಗ್ದೇವತೆಯು ಇಷ್ಟಾರ್ಥಗಳನ್ನು ಕೊಡುವುದಿಲ್ಲ. ಇಂತಹ ಪುರುಷನು **ಮಾಯಯಾ** ಎಂದರೆ ಕೃತ್ರಿಮವಾದುದೂ (ನಿಜವಲ್ಲದ್ದೂ) **ಅಧೇನ್ವಾ**—ಧೇನುವಿನಂತೆ ಇಷ್ಟಾರ್ಥಗಳನ್ನು ಕೊಡದಿರುವುದೂ ಆದ ವಾಕ್ಯಗಳನ್ನು ಎಂದರೆ ವೇದಮಂತ್ರಗಳನ್ನು ಸುಮ್ಮನೆ (ಯಾವ ಪ್ರಯೋಜನವೂ ಇಲ್ಲದೆ) ಪಠಿಸುತ್ತಾ ಸಂಚರಿಸುತ್ತಾನೆ. ಅದು ಹೇಗೆ ಎಂದರೆ,

ವಾಚಂ ಶುಶ್ರುವಾನ್ ಅಫಲಾಂ ಅಪುಷ್ಪಾಂ—ಮಂತ್ರಗಳನ್ನು ಮಾತ್ರ (ಅರ್ಥವಿಲ್ಲದೆ) ಕೇಳುತ್ತಿರುವ ಅಥವಾ ಪಠಿಸುತ್ತಿರುವ ಇವನು ಪುಷ್ಪವಾಗಲಿ, ಫಲವಾಗಲಿ ಇಲ್ಲದಿರುವ ವೃಕ್ಷದಿಂದ ಯಾವ ರೀತಿ ಉಪಯೋಗವಿರುವು ದಿಲ್ಲವೋ ಅದರಂತೆ ಅರ್ಥವನ್ನು ತಿಳಿಯದಿರುವ ಮಂತ್ರಗಳಿಂದ **ಈ** ಪುರುಷನಿಗೆ ಏನೂ ಪ್ರಯೋಜನವಿರುವುದಿಲ್ಲ. ಇಲ್ಲಿ **ಅಫಲಾಂ ಅಪುಷ್ಪಾಂ** ಎಂಬ ಶಬ್ದಗಳು **ವಾಚಂ** ಎಂಬ ಶಬ್ದಕ್ಕೆ ವಿಶೇಷಣಪದಗಳು. **ವಾಚಂ** ಎಂದರೆ ವೇದಮಂತ್ರಗಳನ್ನು ಎಂದರ್ಥವು; ವೇದಮಂತ್ರಗಳಿಗೆ ಫಲ ಅಥವಾ ಪುಷ್ಪಗಳಿರುವುದೆಂದರೇನು ಎಂದರೆ **ಅರ್ಥಂ ವಾಚಃ ಪುಷ್ಪಫಲಮಾಹ। ಯಾಜ್ಞದೈವತೇ ಪುಷ್ಪಫಲೇ, ದೇವತಾಧ್ಯಾತ್ಮೇ ವಾ** ಎಂದು ಹೇಳಿರುವರು. ವಾಕ್ಯಗಳಿಗೆ ಎಂದರೆ ವೇದಮಂತ್ರಗಳಿಗೆ ಅರ್ಥವೇ ಪುಷ್ಪಫಲಗಳೆಂಬದಾಗಿ ಹೇಳಲ್ಪಟ್ಟಿರುವುದು. ಅಥವಾ ಯಜ್ಞಕರ್ಮಾನುಷ್ಠಾನವೂ ದೇವತಾನುಗ್ರಹವೂ ಪುಷ್ಪಫಲಗಳೆಂಬುದಾಗಿ ಹೇಳಲ್ಪಡುವವು. ವೃಕ್ಷದಲ್ಲಿ ಮೊದಲು ಪುಷ್ಪವು ಅಂಕುರವಾಗಿ ಅದು ಕ್ರಮೇಣ ಫಲವಾಗಿ ಪರಿಪಾರ್ಕವಾಗುವುದು ಅದರಂತೆ ಅರ್ಥಯುಕ್ತವಾದ ವೇದಮಂತ್ರಗಳಿಂದ ಮೊದಲು ಯಜ್ಞಾನುಷ್ಠಾನ ಮಾಡಿದಾಗ ಅದು ಪುಷ್ಪರೂಪದಿಂದಿದ್ದು ದೇವತಾನುಗ್ರಹವಾದ ಫಲರೂಪವಾಗಿ ಪರಿಣಮಿಸುವುದು ಎಂದಭಿಪ್ರಾಯವು. ಅಥವಾ ಅಧ್ಯಾತ್ಮಜ್ಞಾನವೇ ಫಲಪುಷ್ಪಗಳೆಂಬುದಾಗಿಯೂ ಹೇಳಲ್ಪಡುವುದು. ವೇದಾರ್ಥಜ್ಞಾನದಿಂದ ಅಧ್ಯಾತ್ಮ ಜ್ಞಾನವುಂಟಾಗುವುದು. ಇಲ್ಲಿ ಕೇವಲ ವೇದಮಂತ್ರಗಳನ್ನು ಅರ್ಥವಿಲ್ಲದೆ ಪಠಿಸುವವನಿಗೆ ವಾಗ್ದೇವತೆಯು (ಎಂದರೆ ವೇದಮಂತ್ರವು) ಯಾವ ಇಷ್ಟಾರ್ಥವನ್ನೂ ಕೊಡುವುದಿಲ್ಲ. ಮತ್ತು ಅವನು ವೇದಾರ್ಥಜ್ಞಾನದಿಂದ ಲಭಿಸಬೇಕಾದ ಯಾವ ಫಲಪುಷ್ಪಗಳನ್ನೂ (ಕರ್ಮಸಾಫಲ್ಯವನ್ನೂ ಅಥವಾ ಉತ್ತಮಜ್ಞಾನವನ್ನೂ) ಪಡೆಯದೆ ವ್ಯರ್ಥವಾಗಿ ಸಂಚರಿಸು ತ್ತಿರುವನು. ಅಥವಾ ಅವನಿಗೆ ಎಂದರೆ ವೇದಾರ್ಥವನ್ನು ತಿಳಿಯದವನಿಗೆ ಲಭಿಸುವ ಫಲಗಳು ಅತ್ಯಲ್ಪವಾಗಿರುವವು. ಎಂದು ನಿರ್ವಚನಾಭಿಪ್ರಾಯವು.

ಸಂಹಿತಾಪಾಠಃ

ಯಸ್ತಿತ್ಯಾಜ ಸಚಿವಿದಂ ಸಖಾಯಂ ನ ತಸ್ಯ ವಾಚ್ಯಪಿ ಭಾಗೋ ಅಸ್ತಿ ।

ಯದೀಂ ಶೃಣೋತ್ಯಲಕಂ ಶೃಣೋತಿ ನಹಿ ಪ್ರವೇದ ಸುಕೃತಸ್ಯ ಪಂಥಾಂ ॥

ಪದಪಾಠಃ

ಯಃ । ತಿತ್ಯಾಜ । ಸಚಿವಿದಂ । ಸಖಾಯಂ । ನ । ತಸ್ಯ । ವಾಚಿ । ಅಪಿ । ಭಾಗಃ । ಅಸ್ತಿ ।

ಯತ್ । ಈಂ । ಶೃಣೋತಿ । ಅಲಕಂ । ಶೃಣೋತಿ । ನಹಿ । ಪ್ರವೇದ । ಸುಕೃತಸ್ಯ । ಪಂಥಾಂ ॥ ೬ ॥

ಸಾಯಣಭಾಷ್ಯಂ

ಸಚಿವಿದಂ । ಶಚಿಶಬ್ದಃ ಸಖಿವಾಚೀ । ಸಖಿವಿದಂ । ಯೋಽಧ್ಯೇತಾ ಸ ವೇದಸ್ಯ ಸಖಾ ಸಂಪದಾಯೋಚ್ಚೇದನಿವಾರಕತ್ವೇನ ವೇದಂ ಪ್ರತ್ಯುಪಕಾರಿತ್ವಾತ್ । ತಾದೃಶಮುಪಕಾರಿಣಮಧ್ಯೇತಾರಂ ವೇತ್ತೀತಿ ಸಚಿವಿತ್ । ತಮಭಿಜ್ಞಂ ಸಖಾಯಮಧ್ಯೇತೄಣಾಂ ಪುರುಷಾಣಾಂ ಸಾರ್ಥಬೋಧನೇನೋಪಕಾರಿತ್ವಾತ್ಸಖಿಭೂತಂ ವೇದಂ ಯಃ ಪುಮಾಂಸ್ತಿತ್ಯಾಜ ಪರಾರ್ಥವಿನಿಯೋಗೇನ ಪರಿತ್ಯಜತಿ ॥ ತ್ಯಜತೇರ್ಲಿಟ್ಯಪಸ್ಪೃಧೇಥಾಮಾನೃಚುರಿತ್ಯಾದಿನಾ ನಿಸಾತಿತಃ ॥ ತಸ್ಯ ಪುರುಷಸ್ಯ ವಾಚಿ ಸರ್ವಸ್ಯಾಂ ಲೌಕಿಕ್ಯಾಂ ಶಾಸ್ತ್ರೀಯಾಯಾಂ ವಾಚ್ಯಪಿ ಭಾಗೋ ಭಜನೀಯಃ ಕಶ್ಚಿದರ್ಥೋ ನಾಸ್ತಿ । ಈಮುಯಂ ಪುರುಷೋ ಯದ್ವೇದವ್ಯತಿರಿಕ್ತಂ ಶೃಣೋತಿ ತದಲಕಮಲೀಕಂ ವ್ಯರ್ಥಮೇವ ಶೃಣೋತಿ । ಹಿ ಯಸ್ಮಾತ್ತ್ಯಾಕರಣಾತ್ಸುಕೃತಸ್ಯ ಪಂಥಾಂ ಪಂಥಾನಂ ನ ಪ್ರವೇದ । ಶ್ರದ್ಧಾರಾಹಿತ್ಯಾದನುಷ್ಠಾನಮಾರ್ಗಂ ನ ಜಾನಾತಿ । ತಸ್ಮಾತ್ತದೀಯಶ್ರವಣಮಪಿ ನಿಷ್ಫಲಮಿತ್ಯರ್ಥಃ । ದ್ವಿತೀಯಚತುರ್ಥಪಾದಯೋರಭಿಪ್ರಾಯ ಆರಣ್ಯಕೇ ದರ್ಶಿತೋ ನ ತಸ್ಯಾನೂಕ್ತೇ ಭಾಗೋಽಸ್ತೀತ್ಯಾದಿನಾ । ಐ ಆ. ೩-೨-೪ । ತಥಾ ತಂ ಯೋನೂತ್ಸೃಜತ್ಯಭಾಗೋ ವಾಚಿ ಭವತ್ಯಭಾಗೋ ನಾಕೇ ತದೇಷಾಭ್ಯುಕ್ತಾ । ತೈ. ಆ ೨-೧೫-೫ । ಇತ್ಯಧ್ವರ್ಯುಭಿಶ್ಚ ॥

ಪ್ರತಿಪದಾರ್ಥ

ಸಚಿವಿದಂ—ಮಿತ್ರನ ಬೆಲೆಯನ್ನು ತಿಳಿವ ಎಂದರೆ ಮಿತ್ರರೂಪವಾದ ವಾಕ್ಯಿನ ಬೆಲೆಯನ್ನು ತಿಳಿದವನೂ । **ಸಖಾಯಂ**—ವೇದಮಂತ್ರಗಳಿಗೆ ಮಿತ್ರನೂ ಆದ ಪುರುಷನನ್ನು । **ಯಃ**—ಯಾವ ಮನುಷ್ಯನು । **ತಿತ್ಯಾಜ**—ತ್ಯಾಗಮಾಡುವನೋ (ಅಲಕ್ಷ್ಯವಾಡುವನೋ) । **ತಸ್ಯ**—ಆ ಮನುಷ್ಯನ । **ವಾಚಿ**—ವಾಕ್ಯಿನಲ್ಲಿ (ವ್ಯವಹಾರದಲ್ಲಿ) । **ಭಾಗಃ**—ಪೂಜ್ಯವಾದ ಅಂಶವಾವುದೂ । **ನ ಅಸ್ತಿ**—ಇರುವುದಿಲ್ಲ । **ಈಂ**—ಈ ಪುರುಷನು । **ಯತ್**—ಯಾವ ವಾಕ್ಯನ್ನು । **ಶೃಣೋತಿ**—ಕೇಳುವನೋ ಅದನ್ನು । **ಅಲೀಕಂ**—ಸುಳ್ಳಾಗಿ (ಅಪ್ರಯೋಜಕವಾಗಿ) । **ಶೃಣೋತಿ**—ಕೇಳುತ್ತಾನೆ । **ಹಿ**—ಏತಕ್ಕೆಂದರೆ । **ಸುಕೃತಸ್ಯ**—ಉತ್ತಮವಾದ ಕರ್ಮವುಳ್ಳವರ । **ಪಂಥಾಂ**—ಮಾರ್ಗವನ್ನು । **ನ ಪ್ರವೇದ**—ಅವನು ಅರಿಯುವುದಿಲ್ಲ.

ಭಾವಾರ್ಥ

ಮಿತ್ರರೂಪವನ್ನು ಹೊಂದಿರುವ ವಾಕ್ಯಿನ ಬೆಲೆಯನ್ನು ತಿಳಿದವನೂ, ವೇದಮಂತ್ರಗಳಿಗೆ ಮಿತ್ರನೂ ಆದ ಪುರುಷನನ್ನು ಯಾವನು ತ್ಯಾಗಮಾಡುವನೋ ಆ ಮನುಷ್ಯನ ವ್ಯವಹಾರದಲ್ಲಿ ಪೂಜ್ಯವಾದ ಅಥವಾ ಸತ್ಯವಾದ ಅಂಶವು ಯಾವುದೂ ಇರುವುದಿಲ್ಲ. ಈ ಪುರುಷನು ಯಾವ ವಾಕ್ಯನ್ನು ಕೇಳುವನೋ ಅದನ್ನು ಅವನು ಕೇಳಿಯೂ ಪ್ರಯೋಜನವಿಲ್ಲ. ಉತ್ತಮವಾದ ಕರ್ಮವುಳ್ಳವರ ಮಾರ್ಗವನ್ನು ಅವನು ಅರಿಯದೆ ಇರುವುದರಿಂದ ಅದು ವ್ಯರ್ಥವು.

English Translation

He who has abandoned the friend who knows the duty of a friend, in his Speech there is not a particle (of sense); what he hears, he hears amiss; for he knows not the path of righteousness.

ವಿಶೇಷವಿಷಯಗಳು

ವೇದಗಳನ್ನೂ ವೇದಮಂತ್ರಗಳ ಅರ್ಥವನ್ನೂ ತಿಳಿದು ಅವುಗಳಿಗೆ ಮಿತ್ರನಂತಿರುವ ಪುರುಷನ ಮಾತುಗಳನ್ನು ಯಾವ ಪುರುಷನು ಅಲಕ್ಷ್ಯದಿಂದ ತಿರಸ್ಕರಿಸುವನೋ ಆ ಪುರುಷನ ಮಾತುಗಳಲ್ಲಿಯೂ ವ್ಯವಹಾರಗಳಲ್ಲಿಯೂ ಯಾವ ಉತ್ತಮವಾದ ಅಂಶವೂ ಇರುವುದಿಲ್ಲ. ಅವನು ಹೇಳುವುದೂ ಕೇಳುವುದೂ ಎಲ್ಲಾ ಅಸತ್ಯವೇ. ಅವನಿಗೆ ಉತ್ತಮವಾದ ಕಾರ್ಯಗಳಲ್ಲಿ ಆಸಕ್ತಿಯಾಗಲೀ, ಶ್ರದ್ಧೆಯಾಗಲೀ ಇರುವುದಿಲ್ಲ. ಅವನು ಸಜ್ಜನರ ಮಾರ್ಗವನ್ನು ಅನುಸರಿಸುವುದಿಲ್ಲ ಎಂದು ಮುಖ್ಯಾಭಿಪ್ರಾಯವು.

ಸಂಹಿತಾಪಾಠಃ

ಅಕ್ಷಣ್ವಂತಃ ಕರ್ಣವಂತಃ ಸಖಾಯೋ ಮನೋಜವೇಷ್ವಸಮಾ ಬಭೂವುಃ ।
ಆದಘ್ನಾಸ ಉ ಪಕ್ವಾಸ ಉತ್ವೇ ಹೃದಾ ಇವ ಸ್ನಾತ್ವಾ ಉ ತ್ವೇ ದದೃಶ್ರೇ ॥

ಪದಪಾಠಃ

ಅಕ್ಷಣ್ವಂತಃ । ಕರ್ಣವಂತಃ । ಸಖಾಯಃ । ಮನಃಜವೇಷು । ಅಸಮಾಃ । ಬಭೂವುಃ ।
ಆದಘ್ನಾಸಃ । ಉಪಕ್ವಾಸಃ । ಊಂ ಇತಿ । ತ್ವೇ । ಹೃದಾಃ ಇವ । ಸ್ನಾತ್ವಾಃ । ಊಂ ಇತಿ । ತ್ವೇ ।
ದದೃಶ್ರೇ ॥ ೭ ॥

ಸಾಯಣಭಾಷ್ಯಂ

ಅಕ್ಷಣ್ವಂತೋಽಕ್ಷಿಮಂತಃ ॥ ಛಂದಸ್ಯಪಿ ದೃಶ್ಯತ ಇತ್ಯಕ್ಷಿಶಬ್ದಾದನಜ್ । ಅನೋ ನುಡಿತಿ ನುಟ್ ॥ ಅನೇನ ದೃಶ್ಯತೇ ಸರ್ವಮಿತ್ಯಕ್ಷಿ ॥ ಯದ್ವಾ । ತೈಜಸತ್ವಾದನ್ಯೇಭ್ಯೋಽಂಗೇಭ್ಯೋ ವ್ಯಕ್ತತರಂ । ತಥಾ ಚ ಶ್ರೂಯತೇ । ತಸ್ಮಾದೇತೇ ವ್ಯಕ್ತತರೇ ಇವೇತಿ । ತಾದೃಶಾಕ್ಷಿಯುಕ್ತಾಃ । ಕರ್ಣವಂತಃ । ಕರ್ಣೋ ನಿಕೃತ್ತದ್ವಾರಃ। ಗರ್ಭಾವಸ್ಥಾಯಾಮೇವ ಕೇನಾಪಿ ನಿರ್ಮಿತಬಿಲ ಇತ್ಯರ್ಥಃ। ಯದ್ವಾ । ಶರೀರಸ್ಯ ಶಿರಸೋ ವೋರ್ಧ್ವಂ ಗತೇ ಉಚ್ಛ್ರಿತೇ। ಕರ್ಣವಿಲಕ್ಷಣಾಕಾಶವಂತಃ। ತಥಾ ಚಾಮ್ನಾಯತೇ । ಋಚ್ಛಂತೀ ಇವ ಖೇ ಉದಗಂತಾಮಿತಿ । ತಾದೃಶಾಃ ಸಖಾಯಃ । ಸಮಾನಂ ಖ್ಯಾನಂ ಜ್ಞಾನಂ ಯೇಷಾಮಿತಿ ಸಖಾಯಃ। ತೇಷು ವಾಕ್ಯೇಷು ಬಾಹ್ಯೇಷ್ವಿಂದ್ರಿಯೇಷು ಸಮಾನಜ್ಞಾನಾ ಇತ್ಯರ್ಥಃ । ತೇ ಮನೋಜವೇಷು। ಮನಸಾ ಗಮ್ಯಂತೇ ಜ್ಞಾಯಂತ ಇತಿ ಮನೋಜವಾಃ ಪ್ರಜ್ಞಾದ್ಯಾಃ। ತೇಷ್ವಸಮಾ ಅತುಲ್ಯಾ ಬಭೂವುಃ । ಭವಂತಿ। ತೇಷು ಮಧ್ಯೇ ಕೇಚಿದಾದಘ್ನಾಸಃ ॥ ಅಸ್ಯಶಬ್ದಸ್ಯ ಪೃಷೋದರಾದಿತ್ವಾದಾಕಾರಾದೇಶಃ ॥ ಅಸ್ಯದಘ್ನಾ ಅಸ್ಯಪ್ರಮಾಣೋದಕಾ ಹೃದಾ ಇವೇತಿ ಮಧ್ಯಮಪ್ರಜ್ಞಾನಾಹ । ಅಥ ತ್ವ ಏಕೇ॥ ಸರ್ವನಾಮತ್ವಾಜ್ಜಸಃ

ತೀಭಾವಃ ॥ ಉಪಕಕ್ಷಾಸಃ ಕಕ್ಷಸಮೀಪಪ್ರಮಾಣೋದಕಾ ಹ್ರದಾ ಇವ । ಅಲ್ಪೋದಕಾ ಇತ್ಯರ್ಥಃ । ಅನೇನಾಲ್ಪಪ್ರಜ್ಞಾನಾಹ । ತಥಾ ತ್ವ ಏಕೇ ಸ್ನಾತ್ವಾಃ ॥ ಸ್ನಾತೇಃ ಕೃತ್ಯಾರ್ಥೇ ತ್ವನ್ಪ್ರತ್ಯಯಃ । ಪಾ. ೩-೪-೧೪ । ಸ ಚಾರ್ಹೇ ಕೃತ್ಯತೃಚಶ್ಚ । ಪಾ. ೩-೩-೧೬೯ । ಇತ್ಯರ್ಹಾರ್ಥೇ ಚ ಭವತಿ ॥ ಸ್ನಾನಾರ್ಹಾ ಅಕ್ಷೋಭ್ಯೋದಕಾ ಹ್ರದಾ ಇವ ವದೃಶ್ರೇ । ದೃಶ್ಯಂತೇ । ಅನೇನ ಮಹಾಪ್ರಜ್ಞಾನಾಹ । ಉಃ ಪೂರಣಃ । ಅಕ್ಷಿಮಂತಃ ಕರ್ಣವಂತಃ ಸಖಾಯೋಽಕ್ಷಿ ಚಷ್ಟೇರಿತ್ಯಾದಿಕಂ ನಿರುಕ್ತಮುಂಶ್ರೇ ದ್ರಷ್ಟವ್ಯಂ । ನಿ. ೧-೯ ॥

ಪ್ರತಿಪದಾರ್ಥ

ಅಕ್ಷಣ್ವಂತಃ—ಸಮಾನವಾದ ಚಕ್ಷುಸ್ಸುಳ್ಳವರೂ । **ಕರ್ಣವಂತಃ**—ಸಮಾನವಾದ ಶ್ರೋತ್ರೇಂದ್ರಿಯವುಳ್ಳವರೂ । **ಸಖಾಯಃ**—ಮಿತ್ರರೇ ಆಗಿದ್ದಾರೆ (ಬಾಹ್ಯವ್ಯವಹಾರದಲ್ಲಿ ಒಂದೇ ಆಗಿದ್ದಾರೆ) । **ಮನೋಜವೇಷು**—ಮಾನಸಿಕಶಕ್ತಿಯ ವಿಷಯದಲ್ಲಿ । **ಅಸಮಾಃ ಬಭೂವುಃ**—ಒಂದೇ ರೀತಿಯಿರುವುದಿಲ್ಲ (ಇವರಲ್ಲಿ ಕೆಲವರು) । **ಆದಘ್ನಾಸಃ**—ಮುಖದವರೆಗೆ ನೀರುಳ್ಳ ಕೊಳದಂತೆ ಕೊಂಚಮಟ್ಟಿನ ಪ್ರಜ್ಞೆಯುಳ್ಳವರು । **ತ್ವೇ**—ಇನ್ನು ಕೆಲವರು । **ಉಪಕಕ್ಷಾಸಃ**—ಕಕ್ಷಪ್ರಮಾಣದ ನೀರುಳ್ಳ ಕೊಳದಂತೆ ಅಲ್ಪಮತಿಯುಳ್ಳವರಾಗಿದ್ದಾರೆ । **ತ್ವೇ**—ಇನ್ನು ಕೆಲವರು । **ಸ್ನಾತ್ವಾಃ**—ಸ್ನಾನಕ್ಕೆ ಯೋಗ್ಯವಾದ । **ಹ್ರದಾ ಇವ**—ಆಳವಾದ ನೀರುಳ್ಳ ಕೊಳದಂತೆ । **ದದೃಶ್ರೇ**—ತೋರುತ್ತಾರೆ.

ಭಾವಾರ್ಥ

ಸಾಧಾರಣವಾಗಿ ಮಾನವರೆಲ್ಲರೂ ಬಾಹ್ಯರೂಪಗಳಿಂದ ಒಂದೇಸಮನಾಗಿದ್ದಾರೆ. ಚಕ್ಷುಸ್ಸು, ಶ್ರೋತ್ರ ಇತ್ಯಾದೀಂದ್ರಿಯಗಳು ಎಲ್ಲರಿಗೂ ಸಮಾನವಾಗಿವೆ. ಬಿಡರೆ, ಮಾನಸಿಕಶಕ್ತಿಯ ವಿಷಯದಲ್ಲಿ ಮಾತ್ರ ಅವರು ಸಮಾನರಲ್ಲ. ಕೆಲವರ ಶಕ್ತಿಯು ಅತ್ಯಧಿಕ. ಇನ್ನು ಕೆಲವರ ಶಕ್ತಿಯು ಅಲ್ಪ. ಮುಖದವರೆಗೆ ಮಾತ್ರ ನೀರುಳ್ಳ ಕೊಳದಂತೆ ಕೊಂಚ ಪ್ರಜ್ಞೆಯುಳ್ಳವರು ಕೆಲವರು. ಸೊಂಟದವರೆಗೆ ನೀರುಳ್ಳ ಕೊಳದಂತೆ ಇನ್ನೂ ಕೊಂಚ ಕಡಿಮೆಯಾದ ಪ್ರಜ್ಞೆಯುಳ್ಳವರು ಕೆಲವರು. ಆದರೆ ಮತ್ತೆ ಕೆಲವರು, ಆಳವಾದ ನೀರುಳ್ಳ ಕೊಳದಂತೆ ಗಭೀರವಾದ ಪ್ರಜ್ಞೆಯನ್ನು ಹೊಂದಿರುತ್ತಾರೆ.

English Translation

Friends possessing eyes, possessing ears, were (yet) unequal tn mental apprehension ; some seemed like pools reaching to the mouth, others reaching to the loins, others like pools in which one ean bathe.

ವಿಶೇಷವಿಷಯಗಳು.

ಈ ಋಕ್ಕಿನಲ್ಲಿ ಎಲ್ಲಾ ಮನುಷ್ಯರ ಜ್ಞಾನವೂ (ತಿಳಿವಳಿಕೆಯೂ) ಒಂದೇ ಸಮನಾಗಿರುವುದಿಲ್ಲ. ಕೆಲವರ ಜ್ಞಾನವು ಅತ್ಯಧಿಕವಾಗಿಯೂ, ಕೆಲವರದು ಮಧ್ಯಸ್ಥವಾಗಿಯೂ, ಮತ್ತೆ ಕೆಲವರದು ಅತ್ಯಲ್ಪವಾಗಿಯೂ ಇರುವುದೆಂದು ಕೊಳದಲ್ಲಿರುವ ನೀರಿನ ದೃಷ್ಟಾಂತದಿಂದ ವರ್ಣಿಸಿರುವರು. ಈ ಋಕ್ಕಿಗೆ ಯಾಸ್ಕರು ನಿರುಕ್ತವನ್ನು ಹೇಳಿದಾರೆ—

ಅಕ್ಷಿಮಂತಃ ಕರ್ಣವಂತಃ ಸಖಾಯಃ । ಅಕ್ಷಿಃ ಚಷ್ಟೇಃ ಅನಕ್ತೇರಿತ್ಯಾಗ್ರಾಯಣಃ । ತಸ್ಮಾದೇತೇ ವ್ಯಕ್ತತರೇ ಇವ ಭವತ ಇತಿ ಹ ವಿಜ್ಞಾಯತೇ । ಕರ್ಣಃ ಕೃಂತತೇರ್ನಿಕೃತ್ತದ್ವಾರೋ ಭವತಿ । ಋಚ್ಛತೇರಿತ್ಯಾಗ್ರಾಯಣಃ । ಋಚ್ಛಂತೀವ ಮೇ ಉದಗಂತಾಮಿತಿ ಹ ವಿಜ್ಞಾಯತೇ

ಮನಸಾಂ ಪ್ರಜನೇಷ್ವಸಮಾ ಬಭೂವುಃ । ಅಸ್ಯದಕ್ಷ್ಣಾ ಅಪರೇ ಉಪೇಕ್ಷದಕ್ಷ್ಣಾ ಅಪರೇ । ಅಸ್ಯಮುಸ್ಯತೇಃ । ಅಸ್ಯಂದತ ಏತದನ್ನಮಿತಿ ವಾ । ದಕ್ಷ್ಣಂ ದಕ್ಷ್ಯತೇಃ ಸ್ರವತಿಕರ್ಮಣಃ । ದಸ್ಯತೇರ್ವಾ ಸ್ಯಾದ್ವಿದಸ್ತತರಂ ಭವತಿ । ಪ್ರಸ್ನೇಯಾ ಹ್ರದಾ ಇವೈಕೇ । ಪ್ರಸ್ನೇಯಾ ದದೃಶಿರೇ ಸ್ನಾನಾರ್ಹಾಃ । ಹ್ರದೋ ಹ್ರಾದತೇಃ ಶಬ್ದಕರ್ಮಣಃ । ಹ್ರಾದತೇರ್ವಾ ಸ್ಯಾಚ್ಛೀತೀಭಾವಕರ್ಮಣಃ ॥

(ನಿ. ೧೯)

ಎಲೈ ಸ್ನೇಹಿತರೇ, ಎಲ್ಲಾ ಮನುಷ್ಯರಿಗೂ ಕಣ್ಣುಗಳಿರುವವು, ಕಿವಿಗಳಿರುವವು. (ಅದರಂತೆ ಇತರ ಅವಯವಗಳೂ ಎಲ್ಲರಿಗೂ ಇರುವವು. ಅಥವಾ ಸರ್ವರಿಗೂ ಸಮಾನವಾದ ಅವಯವಗಳಿದ್ದಂತೆ ಅನೇಕರು ಸಮಾನಶಾಸ್ತ್ರಾಭ್ಯಾಸವನ್ನೂ ಮಾಡಿರುವರು) ಆದರೆ ಅವರ ಬುದ್ಧಿವಿಕಾಸವು ಬೇರೆ ಬೇರೆಯಾಗಿರುವುದು. ಕೆಲವರಿಗೆ ಬುದ್ಧಿಯು ಹೆಚ್ಚಾಗಿಯೂ ಕೆಲವರಿಗೆ ಸಾಧಾರಣವಾಗಿಯೂ ಮತ್ತೆ ಕೆಲವರಿಗೆ ಅತ್ಯಲ್ಪವಾಗಿಯೂ ಇರುವವು. ಎಂದರೆ ಬಾಹ್ಯಾವಯವಗಳಾದ ಣ, ಕಿವಿ, ಕೈಕಾಲುಗಳು ಎಲ್ಲರಿಗೂ ಒಂದೇ ಸಮನಾಗಿದ್ದರೂ ಬುದ್ಧಿಶಕ್ತಿಯಲ್ಲಿ ಮಾತ್ರ ವ್ಯತ್ಯಾಸವು ಕಂಡುಕ್ಣು ಬರುವುದು. ಹೇಗೆಂದರೆ ಕೊಳಗಳಲ್ಲಿ ಕೆಲವು ಒಂದಾಳುದ್ದದವರೆಗೆ ಎಂದರೆ ನೀರಿನಲ್ಲಿ ನಿಂತುಕೊಂಡರೆ ಮುಖದ (ಕತ್ತಿನ) ವರೆಗೂ ಆಳವಾಗಿರುವವು. ಮತ್ತೆ ಕೆಲವು ಕೊಳಗಳಲ್ಲಿ ನೀರು ಸೊಂಟಮಟ್ಟಕ್ಕೆ ಇರುವುದು. ಇವು ನೋಡುವುದಕ್ಕೆ ಮಾತ್ರ ಉಪಯೋಗವಾಗಿರುವವು. ಇವುಗಳಲ್ಲಿ ಸ್ನಾನಮಾಡಲು ಆಗುವುದಿಲ್ಲ. ಮತ್ತೆ ಕೆಲವು ಸ್ನಾನಮಾಡುವುದಕ್ಕೆ ಅರ್ಹವಾಗಿರುವವು. ಎಂದು ನಿರ್ವಚನಾಭಿಪ್ರಾಯವು.

ಅಕ್ಷಿ ಮೊದಲಾದ ಶಬ್ದಗಳಿಗೆ ರೂಪನಿಷ್ಪತ್ತಿಯನ್ನು ಇಲ್ಲಿ ಹೇಳಿರುವರು. ಅಕ್ಷಿ ಶಬ್ದವು ನೋಡು ಎಂಬರ್ಥವುಳ್ಳ ಚಕ್ಷ್ ಧಾತುವಿನಿಂದ ನಿಷ್ಪನ್ನವಾಗಿದೆ. ಅಲಂಕರಿಸು, ಅಥವಾ ಅಲಂಕಾರಾರ್ಥವಾಗಿ ಅಂಜನವನ್ನು (ಕಾಡಿಗೆಯನ್ನು) ಕಣ್ಣಿಗೆ ಹಚ್ಚು ಎಂಬ ಅರ್ಥವುಳ್ಳ ಅನಕ್ತಿ ಧಾತುವಿನಿಂದ **ಅಕ್ಷಿ** ಶಬ್ದವು ನಿಷ್ಪನ್ನವಾಗಿದೆಯೆಂದು ಆಗ್ರಾಯಣರ ಮತವು. ಅವು (ಕಣ್ಣುಗಳು) ಮುಖದಲ್ಲಿ ಸುಂದರವಾಗಿಯೂ, ವ್ಯಕ್ತವಾಗಿಯೂ ಕಾಣುವವು ಎಂಬರ್ಥವುಳ್ಳ **ತಸ್ಮಾದೇತೇ ವ್ಯಕ್ತತರೇ ಇವ ಭವತಃ** ಎಂಬ ಶ್ರುತಿವಾಕ್ಯವೂ ಉದಾಹರಣೆಯಾಗಿರುವುದು. **ಕರ್ಣ** ಶಬ್ದವು ಕತ್ತರಿಸು, ತೂತುಮಾಡು ಎಂಬರ್ಥವಿರುವ **ಕೃಂತತಿ** ಧಾತುವಿನಿಂದ ನಿಷ್ಪನ್ನವಾಗಿದೆ. ಏಕೆಂದರೆ ಕರ್ಣವು (ಕಿವಿಯು) ಶರೀರದೊಳಕ್ಕೆ ಕತ್ತರಿಸಿ ಕೊರೆದಿರುವ ದ್ವಾರವಂತಿದೆ. ಮತ್ತು ಕರ್ಣಶಬ್ದವು ಹೋಗು ಎಂಬರ್ಥವುಳ್ಳ **ಋ** (ಗತೌ) ಎಂಬ ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ಆಗ್ರಾಯಣರ ಮತವು. ಕಿವಿಗಳು ಶರೀರದಿಂದ ಮೇಲೆದ್ದು ಹೊರಟಿರುವಂತೆ ಕಾಣುವುದರಿಂದ ಈ ಹೆಸರು ಬಂದಿದೆಯೆಂದು ಅವರ ಅಭಿಮತವು. ಈ ವಿಷಯದಲ್ಲಿ **ಋಚ್ಛಂತೀವ ಖೇ ಉದಗಂತಾಂ** ಎಂಬ ಶ್ರುತಿವಾಕ್ಯದ ಉದಾಹರಣೆಯೂ ಇದೆ.

ಆಸ್ಯ (ಮುಖ) ಶಬ್ದವು **ಅಸು ಪ್ರಕ್ಷೇಪಣೆ** (ಎಸೆ) ಎಂಬ ಧಾತುವಿನಿಂದಾಗಲಿ, ಹರಿ, ಸ್ರವಿಸು ಎಂಬರ್ಥವುಳ್ಳ **ಅಸ್ಯಂದ್** ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ಏಕೆಂದರೆ ಆಹಾರವು ಇದರ ಮೂಲಕ ಉದರಕ್ಕೆ ಹರಿದುಹೋಗುವುದು ಮತ್ತು ಬಾಯಿಯಲ್ಲಿ ರಸವು ಸ್ರವಿಸುವುದು.

ದಕ್ಷ್ಣಂ ಎಂಬ ಶಬ್ದವು ಹರಿಯುವುದು ಎಂಬರ್ಥವುಳ್ಳ **ದಕ್ಷ್** ಧಾತುವಿನಿಂದ ನಿಷ್ಪನ್ನವಾಗಿದೆ. ಅಥವಾ ಕ್ಷೀಣವಾಗು ಎಂಬರ್ಥವುಳ್ಳ **ದಸ್ಯತಿ** ಧಾತುವಿನಿಂದಲೂ ನಿಷ್ಪನ್ನವಾಗಬಹುದು. **ಸ್ನಾತ್ವಾಃ—ಪ್ರಸ್ನೇಯಾಃ** ಎಂದರೆ ಸ್ನಾನಮಾಡಲು ಯೋಗ್ಯವಾದವು ಎಂದರ್ಥವು.

ಹೃದಃ ಎಂಬ ಶಬ್ದವು ಶಬ್ದಮಾಡು ಎಂಬರ್ಥವುಳ್ಳ ಹ್ರದ್ ಧಾತ್ವಿನಿಂದಾಗಲೀ, ತಣ್ಣಗಿರು, ಶೈತ್ಯವನ್ನುಂಟುಮಾಡು ಎಂಬರ್ಥವುಳ್ಳ ಹ್ಲಾದ್ ಧಾತುವಿನಿಂದಾಗಲೀ ನಿಷ್ಪನ್ನವಾಗಬಹುದು. ಬೇಸಿಗೆಯಲ್ಲಿಯೂ ಸಹ ಈ ಕೊಳದ ನೀರು ತಣ್ಣಗಿರುವುದರಿಂದ ಇದಕೆ ಹ್ರದವೆಂದು ಹೆಸರು.

ಸಂಹಿತಾಪಾಠಃ

ಹೃದಾ ತಷ್ಟೇಷು ಮನಸೋ ಜವೇಷು ಯದ್ಬ್ರಾಹ್ಮಣಾಃ ಸಂಯಜಂತೇ ಸಖಾಯಃ ।
ಅತ್ರಾಹ ತ್ವಂ ವಿ ಜಹುರ್ವೇದ್ಯಾಭಿರೋಹ ಬ್ರಹ್ಮಾಣೋ ವಿ ಚರಂತ್ಯುತ್ವೇ॥

ಪದಪಾಠಃ

ಹೃದಾ । ತಷ್ಟೇಷು । ಮನಸಃ । ಜವೇಷು । ಯತ್ । ಬ್ರಾಹ್ಮಣಾಃ । ಸಂಯಜಂತೇ । ಸಖಾಯಃ ।
ಅತ್ರ । ಅಹ । ತ್ವಂ । ವಿ । ಜಹುಃ । ವೇದ್ಯಾಭಿಃ । ಓಹಬ್ರಾಹ್ಮಣಃ । ವಿ । ಚರಂತಿ । ಊಂ ಇತಿ । ತ್ವೇ॥

ಸಾಯಣಭಾಷ್ಯಂ

ಸಖಾಯಃ ಸಮಾನಖ್ಯಾನಾ ಬ್ರಾಹ್ಮಣಾ ಹೃದಾ ಬುದ್ಧಿಮತಾಂ ಹೃದಯೇನ ತಷ್ಟೇಷು ನಿಶ್ಚಿತೇಷು ಪರಿಕಲ್ಪಿತೇಷು ಮನಸೋ ಜವೇಷು ಗಂತವ್ಯೇಷು ವೇದಾರ್ಥೇಷು ಗುಣದೋಷನಿರೂಪಣಾ ಯದ್ಯದಾ ಸಂಯಜಂತೇ ಸಂಗಚ್ಛಂತೇ । ಯಜಿರತ್ರ ಸಂಗತಿಕರಣವಾಚೀ॥ ಅತ್ರಾಸ್ಮಿನ್ಬ್ರಾಹ್ಮಣಸಂಘೇ ತ್ವಮವಿಜ್ಞಾತಾರ್ಥಮೇಕಂ ಪುರುಷಂ ವೇದ್ಯಾಭಿರ್ವೇದಿತವ್ಯಾಭಿರ್ವಿದ್ಯಾಭಿಃ ಪ್ರವೃತ್ತಿಭಿರ್ವಾ ವಿ ಜಹುಃ । ವಿಶೇಷೇಣ ಪರಿತ್ಯಜಂತಿ । ಅಹೇತಿ ವಿನಿಶ್ಚಯೇ । ಓಹಬ್ರಾಹ್ಮಣಃ । ಊಹ್ಯಮಾನಂ ಬ್ರಹ್ಮ ವಿದ್ಯಾಶ್ರುತಿಮತಿಬುದ್ಧಿಲಕ್ಷಣಂ ಯೇಷಾಂ ತೇ ತಥೋಕ್ತಾಃ । ತಾದೃಶಾಸ್ತ ಏಕೇ ವಿದ್ವಾಂಸೋ ನ ಚರಂತಿ । ಯಥಾಕಾಮಂ ವೇದಾರ್ಥೇಷು ವಿನಿಶ್ಚಯಾರ್ಥಂ ಪ್ರವರ್ತಂತೇ । ಉಃ ಪ್ರಸಿದ್ಧೌ । ಹೃದಾ ತಷ್ಟೇಷು ಮನಸಾಂ ಜವೇಷ್ವಿತ್ಯಾದಿಕಂ ನಿರುಕ್ತಂ ದ್ರಷ್ಟವ್ಯಂ । ನಿ. ೧೩-೧೩ ॥

ಪ್ರತಿಪದಾರ್ಥ

ಸಖಾಯಃ—ಮಿತ್ರರಾದ । **ಬ್ರಾಹ್ಮಣಾಃ**—ಬ್ರಹ್ಮತತ್ತ್ವವನ್ನರಿತವರು । **ಹೃದಾ**—ಧ್ಯಾನಾತ್ಮಕವಾದ । ಹೃದಯದಿಂದ । **ತಷ್ಟೇಷು**—ಪರಿಕಲ್ಪಿತವಾದುದೂ । **ಮನಸಃ ಜವೇಷು**—ಮಾನಸಿಕವಾದ ಶಕ್ತಿಯಿಂದ ನಿಷ್ಕರ್ಷಮಾಡಲ್ಪಟ್ಟುವೂ ಆದ ವೇದಾರ್ಥಗಳ ವಿಷಯದಲ್ಲಿ । **ಯತ್**—ಯಾವಾಗ । **ಸಂ ಯಜಂತೇ**—ಒಂದೇ ಅಭಿಪ್ರಾಯವುಳ್ಳವರಾಗಿರುತ್ತಾರೆಯೋ । **ಅತ್ರ**—ಆ ಕಾಲದಲ್ಲಿ । **ತ್ವಂ**—ಜ್ಞಾನರಹಿತನಾದ ಪುರುಷನನ್ನು । **ವೇದ್ಯಾಭಿಃ**—ಜ್ಞಾನವಿಷಯವಾದ ಸನ್ನಿವೇಶಗಳಿಂದ । **ವಿ ಜಹುಃ**—ದೂರಮಾಡುತ್ತಾರೆ । **ಓಹಬ್ರಾಹ್ಮಣಃ**—ಬ್ರಹ್ಮಜ್ಞಾನವನ್ನು ಹೊಂದಿರುವ । **ತ್ವೇ**—ಕೆಲವು ವಿದ್ವಾಂಸರು । **ವಿ ಚರಂತಿ**—ಅವರವರ ಶಕ್ತ್ಯನುಸಾರವಾಗಿ ವೇದಗಳ ಅರ್ಥಗಳನ್ನು ನಿಶ್ಚಯಿಸುತ್ತಾರೆ.

ಭಾವಾರ್ಥ

ಬ್ರಹ್ಮತತ್ತ್ವವನ್ನರಿತ ಮಿತ್ರರು ಧ್ಯಾನಾತ್ಮಕವಾದ ಹೃದಯದಿಂದ ಪರಿಕಲ್ಪಿತವಾದುದೂ, ಮಾನಸಿಕ ಶಕ್ತಿಯಿಂದ ನಿಷ್ಕರ್ಷಮಾಡಲ್ಪಟ್ಟುವೂ ಆದ ವೇದಾರ್ಥಗಳ ವಿಷಯದಲ್ಲಿ ಯಾವಾಗ ಒಂದೇ ಅಭಿಪ್ರಾಯವುಳ್ಳವರಾಗಿರುತ್ತಾರೆಯೋ, ಆ ಕಾಲದಲ್ಲಿ ಜ್ಞಾನರಹಿತನಾದ ಪುರುಷನನ್ನು ಅವರು ಜ್ಞಾನವಿಷಯವಾದ ಸನ್ನಿವೇಶಗಳಿಂದ ದೂರ ಮಾಡುತ್ತಾರೆ. ಬ್ರಹ್ಮಜ್ಞಾನವನ್ನು ಹೊಂದಿರುವ ಕೆಲವು ವಿದ್ವಾಂಸರು ಅನುವರ ಶಕ್ತ್ಯನುಸಾರವಾಗಿ ವೇದಗಳ ಅರ್ಥಗಳನ್ನು ನಿಶ್ಚಯಿಸುತ್ತಾರೆ.

English Translation

Although Brahmans who are friends concur in the mental apprehensions which are conceived by the heart (of the wise), yet in this (assembly) they abandon one man (to ignorance of the sciences) that are to be known.

ಸಂಹಿತಾಪಾಠಃ

ಇಮೇ ಯೇ ನಾರ್ವಾಙ್ನ ಪರಶ್ಚರಂತಿ ನ ಬ್ರಾಹ್ಮಣಾಸೋ ನ ಸುತೇಕರಾಸಃ।
ತ ಏತೇ ವಾಚಮಭಿಪದ್ಯ ಪಾಪಯಾ ಸಿರೀಸ್ತಂತ್ರಂ ತನ್ವತೇ ಅಪ್ರಜಜ್ಞಯಃ॥

ಪದಪಾಠಃ

ಇಮೇ । ಯೇ । ನ । ಅರ್ವಾಕ್ । ನ । ಪರಃ । ಚರಂತಿ । ನ । ಬ್ರಾಹ್ಮಣಾಸಃ । ನ । ಸುತೇಽಕರಾಸಃ ।
ತೇ । ಏತೇ । ವಾಚಂ । ಅಭಿಽಪದ್ಯ । ಪಾಪಯಾ । ಸಿರೀಃ । ತಂತ್ರಂ । ತನ್ವತೇ । ಅಪ್ರಽಜಜ್ಞಯಃ ॥ ೯ ॥

ಸಾಯಣಭಾಷ್ಯಂ

ಅನಯಾ ವೇದಾರ್ಥಾನಭಿಜ್ಞಾ ನಿಂದ್ಯಂತೇ । ಇಮೇ ಯೇಽವಿದ್ವಾಂಸೋಽರ್ವಾಗರ್ವಾಚೀನಮಧೋಭಾವಿನ್ಯಸ್ಮಿಂಲ್ಲೋಕೇ ಬ್ರಾಹ್ಮಣೈಃ ಸಹ ನ ಚರಂತಿ ಯೇ ಪರಃ ಪರಸ್ತಾದ್ದೇವೈಃ ಸಹ ನ ಚರಂತಿ ತೇ ಬ್ರಾಹ್ಮಣಾಸೋ ಬ್ರಾಹ್ಮಣಾ ವೇದಾರ್ಥತತ್ಪರಾ ನ ಭವಂತಿ । ಶಠಾ ಸುತೇಕರಾಸಃ ಸೋಮಂ ಸುತಮಭಿಷುತಂ ಕುರ್ವಂತೀತಿ ಸುತೇಕರಾ ಯತ್ವಿಜಃ । ತೇಽಪಿ ನ ಭವಂತಿ । ಅಪ್ರಜಜ್ಞಯಃ ॥ ಜಾನಾತೇರಾದೃಗಮಹನ ಇತಿ ಕಿಪ್ರತ್ಯಯಃ ॥ ಅವಿದ್ವಾಂಸಸ್ತ ಏತೇ ಮನುಷ್ಯಾ ವಾಚಂ ಲೌಕಿಕೀಮಭಿಪದ್ಯ ಪ್ರಾಪ್ಯ ತಯಾ ಪಾಪಯಾ ಪಾಪಕಾರಿಣ್ಯಾ ವಾಚಾ ಯುಕ್ತಾಸ್ತೇ ಸಿರೀಃ ॥ ಛಂದಸೀವನಿಪಾವಿತೀಪ್ರತ್ಯಯಃ ಸುಪಾಂ ಸುಲುಗಿತಿ ಜಸಃ ಸುಃ ॥ ಸೀರಿಣೋ ಭೂತ್ವಾ ತಂತ್ರಂ ಕೃಷಿಲಕ್ಷಣಂ ತನ್ವತೇ । ವಿಸ್ತಾರಯಂತಿ । ಕುರ್ವಂತೀತ್ಯರ್ಥಃ । ಸರ್ವಥಾ ವೇದಾರ್ಥೋ ಜ್ಞೇಯ ಇತ್ಯಭಿಪ್ರಾಯಃ ॥

ಪ್ರತಿಪದಾರ್ಥ

ಯೇ—ವಿದ್ಯಾವಂತರಲ್ಲದ ಯಾರು । ಅರ್ವಾಕ್—ಈ ಭೂಲೋಕದಲ್ಲಿ । ನ ಚರಂತಿ—ವಿದ್ಯಾವಂತರೊಂದಿಗೆ ಸೇರಿ ಸಂಚರಿಸುವುದಿಲ್ಲವೋ । ಪರಃ—ದ್ಯುಲೋಕದಲ್ಲಿ । ನ—ದೇವತೆಗಳೊಡನೆ ಸಂಚರಿಸುವುದಿಲ್ಲವೋ । ಇಮೇ—ಅಂತಹ ಅಜ್ಞಾನಿಗಳು । ನ ಬ್ರಾಹ್ಮಣಾಸಃ—ಬ್ರಹ್ಮಜ್ಞಾನವುಳ್ಳವರಲ್ಲ । ನ ಸುತೇಕರಾಸಃ—

ಯಜ್ಞಕರ್ತರೂ ಅಲ್ಲ। **ಅಪ್ರಜಜ್ಞಯೆಃ**—ಪ್ರಜ್ಞಾರಹಿತರಾದ। **ತೆ ಏತೇ**—ಅಂತಹವರು। **ವಾಚಂ**—ಕೇವಲ ಲೌಕಿಕವಾದ ವಾಕ್ಯನ್ನು। **ಅಭಿಪದ್ಯ**—ಹೊಂದಿ। **ಪಾಪಯಾ**—ಅಶುದ್ಧವಾದ ವ್ಯವಹಾರವುಳ್ಳವರಾಗಿ। **ಸಿರೀಃ**—ಉಳುವ ಸಾಧನವನ್ನು ಹೊಂದಿ। **ತಂತ್ರಃ**—ಉಳುವುದೇ ಮುಂತಾದ ಕಾರ್ಯವನ್ನು। **ತನ್ವತೇ**—ವಿಸ್ತರಿಸುತ್ತಾರೆ.

ಭಾವಾರ್ಥ

ವಿದ್ಯಾನಂತರಲ್ಲದ ಯಾವ ಮಾನವರು ಈ ಲೋಕದಲ್ಲಿ ಜ್ಞಾನಿಗಳೊಂದಿಗೂ, ಪರದಲ್ಲಿ ದೇವತೆಗಳೊಂದಿಗೂ ಸೇರಿ ಆ ಸಂಪರ್ಕದ ಪ್ರಯೋಜನವನ್ನು ಹೊಂದುವುದಿಲ್ಲವೋ ಅವರು ಯಾವಾಗಲೂ ಅಜ್ಞಾನಿಗಳೇ ಆಗಿರುತ್ತಾರೆ. ಅವರಿಗೆ ಬ್ರಹ್ಮಜ್ಞಾನವೂ ಇಲ್ಲ, ಅವರು ಯಜ್ಞಕರ್ತರೂ ಅಲ್ಲ. ಪ್ರಜ್ಞಾರಹಿತರಾದ ಅಂತಹವರು ಕೇವಲ ಲೌಕಿಕವಾದ ವಾಕ್ಯನ್ನು ಹೊಂದಿ, ಅಶುದ್ಧವಾದ ವ್ಯವಹಾರವುಳ್ಳವರಾಗಿ ಉಳುವ ಸಾಧನವನ್ನು ಹೊಂದಿ ಉಳುವುದೇ ಮುಂತಾದ ಕಾರ್ಯವನ್ನು ವಿಸ್ತರಿಸುತ್ತಾರೆ (ಮಾಡುತ್ತಿರುತ್ತಾರೆ).

English Translation

Those illeterate men who not commingle with good Brahmins and gods, and who do not prepare Soma libations for the offering to the gods are always engaged in useless and sinful discourses and manual lahour such as agriculture.

ಸಂಹಿತಾಪಾಠಃ

ಸರ್ವೇ ನಂದಂತಿ ಯಶಸಾಗತೇನ ಸಭಾಸಾಹೇನ ಸಖ್ಯಾ ಸಖಾಯಃ ।
ಕಿಲ್ಬಿಷಸ್ಪೃತ್ಪಿತುಷಣಿರ್ಹ್ಯೇಷಾಮರಂ ಹಿತೋ ಭವತಿ ವಾಜಿನಾಯ ॥ ೧೦ ॥

ಪದಪಾಠಃ

ಸರ್ವೇ । ನಂದಂತಿ । ಯಶಸಾ । ಆಽಗತೇನ । ಸಭಾಽಸಹೇನ । ಸಖ್ಯಾ । ಸಖಾಯಃ ।
ಕಿಲ್ಬಿಷಽಸ್ಪೃತ್ । ಪಿತುಽಷನಿಃ । ಹಿ । ಏಷಾಂ । ಅರಂ । ಹಿತಃ । ಭವತಿ । ವಾಜಿನಾಯ ॥ ೧೦ ॥

ಸಾಯಣಭಾಷ್ಯಂ

ಸೋಮಪ್ರವಹಣೇ ಸರ್ವೇ ನಂದಂತೀತ್ಯೇಷಾ । ಸೂತ್ರಿತಂ ಚ । ಸೋಮ ಯಾಸ್ತೇ ಮಯೋ-ಭುವ ಇತಿ ತಿಸ್ರಃ ಸರ್ವೇ ನಂದಂತಿ ಯಶಸಾಗತೇನ । ಆ. ೪-೪ । ಇತಿ ॥

ಸಖಾಯಃ ಸಮಾನಖ್ಯಾನಾಃ ಸಮಾನಜ್ಞಾನಾಃ ಸರ್ವೇ ಸಭ್ಯಾ ಮನುಷ್ಯಾಃ ಸಭಾಸಹೇನ ಸಭಾಂ ಸೋಢುಂ ಶಕ್ನುವತಾ ಸಖ್ಯುರ್ವಿಜಾಂ ಪ್ರತಿಭೂತೇನ ಯಜ್ಞಂ ಪ್ರತ್ಯಾಗತೇನ ಯಶಸಾ ಯಶಸ್ವಿನಾ ಸೋಮೇನ ಹೇತುನಾ ನಂದಂತಿ । ಹೃಷ್ಟಾ ಭವಂತಿ । ಸ ಹಿ ಸ ಏವ ಸೋಮ ಏಷಾಂ ಜನಾನಾಂ ಕಿಲ್ಬಿಷ-ಸ್ಪೃತ್ । ಯಃ ಸ್ವಸ್ಮಾದನ್ಯಃ ಪುರುಷಃ ಶ್ರೇಷ್ಠತಾಮಶ್ನುತೇ ಸ ಕಿಲ್ಬಿಷಂ ಭವತಿ ಬಾಧ್ಯತ್ವೇನ । ಯಥಾ ಪಾಪಂ ಸದಾಚಾರೈರ್ಬಾಧಿತವ್ಯಂ ಭವತಿ ತದ್ವತ್ । ಪಾಪರೂಪಸ್ಯ ಶತ್ರೋರ್ಬಾಧಕಃ । ಯದ್ವಾ । ಯಜ್ಞೇ ಸಾಧ್ವನುಪ್ರವಚನಾಕರಣೇನ ಯತ್ಕಿಲ್ಬಿಷಂ ಯೇಷಾಂ ಸಂಜಾಯತೇ ತದ್ಯೋ ಬಾಧತೇ ಸ ಕಿಲ್ಬಿಷಸ್ಪೃತ್ ।

ತಥಾ ತ್ವಂ ಪಿತುಷಣಿಃ । ಪಿತುರಿತ್ಯನ್ನನಾಮ ದಕ್ಷಿಣಾ ವಾ । ತಮನೇನ ಸೋಮೇನ ಸನೋತಿ ಯಜಮಾನಃ ಸಂಭಜತ ಇತಿ ತಾದೃಶಃ । ತೇಷಾಮನ್ನಂ ದಕ್ಷಿಣಾದಾತೇತ್ಯರ್ಥಃ । ಕಿಂಚ । ಹಿತಃ । ಪಾತ್ರೇಷು ನಿಹಿತಃ ಸೋಮೋ ವಾಜಿನಾಯ । ಇಂದ್ರಿಯಂ ವೀರ್ಯಂ ವಾಜಿನಂ । ತೇಷಾಂ ವೀರ್ಯಾಯ ತತ್ಕರ್ತು-ಮರಮಲಂ ಪರ್ಯಾಪ್ತಃ ಸಮರ್ಥೋ ಭವತಿ । ಸರ್ವೇ ನಂದಂತಿ ಯಶಸಾಗತೇನೇತ್ಯನ್ವಾಹ ಯಶೋ ವೈ ಸೋಮೋ ರಾಜೇತ್ಯಾದಿಕಮಿಂದ್ರಿಯಂ ವೈ ವೀರ್ಯಂ ವಾಜಿನಮಾಜರಸಂ ಹಾಸ್ಮೈ ವಾಜಿನಂ ನಾಪಚ್ಛಿದ್ಯತ ಇತ್ಯಂತಂ ಬ್ರಾಹ್ಮಣಮತ್ರಾನುಸಂಧೇಯಂ । ಐ. ಬ್ರಾ. ೧-೧೩ ॥

ಪ್ರತಿಪದಾರ್ಥ

ಸಖಾಯಃ—ಸಮಾನವಾದ ಜ್ಞಾನವುಳ್ಳ । **ಸರ್ವೇ**—ಸಕಲ ಋತ್ವಿಕ್ಕುಗಳೂ (ಪ್ರಾಜ್ಞರೂ) । **ಸಭಾಸಹೇನ**—ವಿದ್ವತ್ಸಭೆಯನ್ನು ನಿರ್ವಹಿಸಲು ಶಕ್ತವಾದುದೂ । **ಸಖ್ಯಾ**—ಋತ್ವಿಕ್ಕುಗಳಿಗೆ ಮಿತ್ರರೂಪವಾದುದೂ। **ಆಗತೇನ**—ಯಜ್ಞಾಭಿಮುಖವಾದುದೂ । **ಯಶಸಾ**—ಯಶಸ್ವಿಯಾದುದೂ ಆದ ಸೋಮನ ಆಗಮನದಿಂದ । **ನಂದಂತಿ**—ಹರ್ಷಗೊಳ್ಳುತ್ತಾರೆ । **ಹಿ**—ಏತಕ್ಕೆಂದರೆ । **ಹಿತಃ**—ಯಜ್ಞಪಾತ್ರೆಗಳಲ್ಲಿರುವ ಸೋಮನು । **ಏಷಾಂ**—ಈ ಋತ್ವಿಕ್ಕುಗಳಿಗೆ । **ಕಿಲ್ಬಿಷಸ್ಪೃತ್**—ಪಾಪನಾಶಕನೂ (ಶತ್ರುನಾಶಕನೂ) । **ಪಿತುಷಣಿಃ**—ಅನ್ನ ಪ್ರದನೂ ಆಗಿ । **ವಾಜಿನಾಯ**—ಅವರ ಶಕ್ತಿಯ ಬೆಳೆವಣಿಗೆಗೆ । **ಅರಂ**—ಶಕ್ತನಾಗಿ । **ಭವತಿ**—ಆಗುತ್ತಾನೆ.

ಭಾವಾರ್ಥ

ಸಮಾನವಾದ ಜ್ಞಾನವುಳ್ಳವರೂ, ಮಿತ್ರರೂ ಆದ ಸಕಲ ಋತ್ವಿಕ್ಕುಗಳೂ ಸಹ ವಿದ್ವತ್ಸಭೆಯನ್ನು ನಿರ್ವಹಿಸಲು ಶಕ್ತವಾದುದೂ, ಋತ್ವಿಕ್ಕುಗಳಿಗೆ ಮಿತ್ರರೂಪವಾದುದೂ, ಯಜ್ಞಾಭಿಮುಖವಾದುದೂ, ಯಶಸ್ವಿಯಾದೂ ಆದ ಸೋಮನ ಆಗಮನದಿಂದ ಹರ್ಷಗೊಳ್ಳುತ್ತಾರೆ. ಯಜ್ಞಪಾತ್ರೆಗಳಲ್ಲಿರುವ ಸೋಮನು ಈ ಋತ್ವಿಕ್ಕುಗಳಿಗೆ ಪಾಪರೂಪವಾದ ಶತ್ರುನಾಶಕನೂ, ಅನ್ನ ಪ್ರದನೂ ಆಗಿ ಅವರ ಶಕ್ತಿಯ ಬೆಳೆವಣಿಗೆಗೆ ಸಹಾಯಕನಾಗುತ್ತಾನೆ.

English Translation

When the friend Soma, the sin-remover and food-provider is prepared and placed at the altar all the friends (priests) express great joy at Soma's triumphant coming.

ವಿಶೇಷವಿಷಯಗಳು

ಸೋಮಪ್ರವಹಣನೆಂಬ (ಸೋಮಲತೆಗಳನ್ನು ಯಜ್ಞವೇದಿಗೆ ತರುವ) ಯಜ್ಞಾಂಗಕರ್ಮದಲ್ಲಿ **ಸರ್ವೇ ನಂದಂತಿ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಸೋಮಂ ಯಾಸ್ತೇ ಮಯೋಭುವ ಇತಿ ತಿಸ್ರಃ ಸರ್ವೇ ನಂದಂತಿ ಯಶಸಾಗತೇನ** ಎಂಬ ಸೂತ್ರದಿಂದ (ಆ. ೪-೪) ವಿವೃತವಾಗಿರುವುದು.

ಸಂಹಿತಾಪಾಠಃ

ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ಗಾಯತ್ರಂ ತ್ವೋ ಗಾಯತಿ ಶಕ್ವರೀಷು ।
ಬ್ರಹ್ಮಾ ತ್ವೋ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿ ಮಿಮೀತ ಉ ತ್ವಃ ॥

पदपाठः

ऋचां । त्वः । पोषं । आस्ते । पुपुष्वान् । गायत्रं । त्वः । गायति । शक्वरीषु ।
ब्रह्मा । त्वः । वदति । जातविद्यां । यज्ञस्य । मात्रां । वि । मिमीते । ऊं इति । त्वः ॥

सायणभाष्यं

अनयाऽ होत्राद्यृत्विक्कर्मणां विनियोगमाचष्टे । त्व एकोऽ होतर्चां पोषं यथाविधि कर्मणि प्रयोगं पुपुष्वान् । एकोऽ धातुरनुवादार्थः । बह्वृ-ग्यर्चः पुष्यञ्जांसन्नास्ते । त्व एक उद्गाता शक्वरीषु । शक्वर्यऽ ऋचः । अभिर्यग्गि-र्व्यत्रं हंतुमिंद्रः सनुथोर्ऽ भूदिति शक्वर्यः । तासु गायत्रं साम गायति । त्व एकोऽ ब्रह्मा च जातविद्यां जातेऽ जातेऽ कर्तव्येऽ प्रायश्चित्तादौ वेदयित्रीं वाचं वदति । ब्रह्मा हि सर्वं वेदितुं योग्योऽ भवति खलु ॥ चादिलोपेऽ विभाषेति न निघातः ॥ त्व एकोऽ ध्वर्युर्भ यज्ञस्य मात्रां यज्ञोऽ यया मीयतेऽ भिषव-ग्रहणादिकया क्रियया तां मात्रां यज्ञशरीरं वि मिमीतेऽ । अत्यर्थं निर्मिमीतेऽ । ऋचामेकः पोषमास्तेऽ पुपुष्वान् होतरर्चनेऽ । नि. ८ ल । इत्यादिनिरुक्तानु-सारेणाथोर्ऽ भ्यधायि । एवं बृहस्पतिर्विदितवेदार्थं तुष्टाव ॥

प्रतिपदार्थ

त्वः—ऋत्विक्कुगळल्लि ऒब्बनु (होतृवु) । ऋचां—ऋङ्मन्त्रगळ । पोषं—प्रयोग वन्नु निर्देशिसि । पुपुष्वान्—मन्त्रगळन्नु पठिसुववनागि । आस्ते—इरुत्तानॆ । त्वः—इन्नॊब्बनु (उद्गातृवु) । शक्वरीषु—शक्वरीसंज्ञकवाद (छंदोबद्धवाद) ऋक्कुगळिंद । गायत्रं—गायत्रसामवन्नु । गायति—गानरूपदल्लि पठिसुत्तानॆ । त्वः ब्रह्मा—ब्रह्मरूपनाद इन्नॊब्बनु । जातविद्यां—कर्मबोधकवाद वाक्यगळन्नु । वदति—पठिसुत्तानॆ । त्वः—इन्नॊब्बनु (अध्वर्युवु) । यज्ञस्य—यज्ञद । मात्रां—शरीरवन्नु । वि मिमीते—अळॆयुत्तानॆ.

भावार्थ

ऋत्विक्कुगळल्लि ऒब्बनाद होतृवु कर्मगळिगॆ उपयुक्तवाद ऋङ्मन्त्रगळन्नु निर्देशिसि पठिसुत्तानॆ. उद्गातृवु शक्वरीसंज्ञकवाद ऋक्कुगळल्लि गायत्रसामवन्नु सेरिसि गानरूपदल्लि पठिसुत्तानॆ. ब्रह्मनु प्रायश्चित्तादि कर्मबोधकवाद वाक्यगळन्नु पठिसुत्तानॆ. (तिळिसुत्तानॆ) अध्वर्युवु यज्ञक्कॆ ऒंदु रूपवन्नु कॊट्टु अदन्नु निर्वहिसुत्तानॆ.

English Translation

As the sacrifice proceeds, one (Hoti priest) utters Riks (verses of Rigveda) and thus helps the sacrifice; another sings Gayatra (a verse of

Samaveda) in a loud Sakvari metre; still another, Brahma priest looks after the sacrifice and gives instructions for rectifying defects; the last one (Adhvaryu priest) being in charge of the sacrifice conducts it in proper form.

ವಿಶೇಷವಿಷಯಗಳು

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿರುವರು. ಇದರಲ್ಲಿ ಋತ್ವಿಕ್ಕುಗಳು ಯಜ್ಞದಲ್ಲಿ ನಿರ್ವಹಿಸ ಬೇಕಾದ ಕರ್ತವ್ಯವನ್ನು ನಿರ್ದೇಶಿಸಲಾಗಿದೆ—

ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ಗಾಯತ್ರಂ ತ್ವೋ ಗಾಯತಿ ಶಕ್ವರೀಷು ।
ಬ್ರಹ್ಮಾ ತ್ವೋ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿಮಿಮೀತ ಉ ತ್ವಃ ॥

ಇತ್ಯೃತ್ವಿಕ್ಕರ್ಮಣಾಂ ವಿನಿಯೋಗಮಾಚಷ್ಟೇ । ಋಚಾಮೇಕಃ ಪೋಷಮಾಸ್ತೇ ಪುಪುಷ್ವಾನ್ ಹೋತರ್ಗರ್ಚನೀ ಗಾಯತ್ರಮೇಕೋ ಗಾಯತಿ ಶಕ್ವರೀಷೂದ್ಗಾತಾ । ಗಾಯತ್ರಂ ಗಾಯತೇಃ ಸ್ತುತಿಕರ್ಮಣಃ । ಶಕ್ವರ್ಯ ಋಚಃ ಶಕ್ನೋತೇಃ । ತದ್ಯದಾಭಿರ್ವೃತ್ರಮಶಕದ್ಧಂತುಂ ತಚ್ಛಕ್ವರೀಣಾಂ ಶಕ್ವರೀತ್ವಮಿತಿ ವಿಜ್ಞಾಯತೇ। ಬ್ರಹ್ಮೈಕೋ ಜಾತೇ ಜಾತೇ ವಿದ್ಯಾಂ ವದತಿ । ಬ್ರಹ್ಮಾ ಸರ್ವವಿದ್ಯಃ ಸರ್ವಂ ವೇದಿತುಮರ್ಹತಿ । ಬ್ರಹ್ಮಾ ಪರಿವೃಢ್ಢಃ ಶ್ರುತತೋ ಬ್ರಹ್ಮ ವರಿವೃಢ್ಢಂ ಸರ್ವತಃ । ಯಜ್ಞಸ್ಯ ಮಾತ್ರಾಂ ವಿಮಿಮೀತ ಏಕೋಽಧ್ವರ್ಯುಃ । ಅಧ್ವರ್ಯುರಧ್ವರಯುರಧ್ವರಂ ಯುನಕ್ತ್ಯಧ್ವರಸ್ಯ ನೇತಾಧ್ವರಂ ಕಾಮಯತ ಇತಿ ವಾ । ಅಪಿ ವಾಧಿಯಾನೇ ಯುರುಪಬಂಧಃ । ಅಧ್ವರ ಇತಿ ಯಜ್ಞನಾಮ । ಧ್ವರತಿರ್ಹಿಂಸಾಕರ್ಮಾ ತತ್ಪ್ರತಿಷೇಧಃ ॥

(ನಿ. ೮-೮)

ಈ ಋಕ್ಕಿನಲ್ಲಿ ಋತ್ವಿಕ್ಕುಗಳು ಯಜ್ಞದಲ್ಲಿ ಮಾಡಬೇಕಾದ ನಾನಾ ಕರ್ಮಗಳ ವಿನಿಯೋಗವನ್ನು ಹೇಳಲಾಗಿದೆ. ಈ ಋಕ್ಕಿನಲ್ಲಿರುವ ನಾಲ್ಕು ಪಾದಗಳಲ್ಲಿಯೂ ನಾಲ್ಕುಮಂದಿ ಋತ್ವಿಜರ ಕರ್ತವ್ಯವನ್ನು ನಿರ್ದೇಶಿಸಲಾಗಿದೆ. ಹೇಗೆಂದರೆ—ಮೊದಲನೆಯ ಪಾದದಲ್ಲಿ ಹೋತೃವಿನ ಕರ್ತವ್ಯವನ್ನೂ, ಎರಡನೆಯ ಪಾದದಲ್ಲಿ ಉದ್ಗಾತೃವಿನ ಕರ್ತವ್ಯವನ್ನೂ, ಮೂರನೆಯಲ್ಲಿ ಪಾದದಲ್ಲಿ ಬ್ರಹ್ಮನೆಂಬ ಋತ್ವಿಜನ ಕರ್ತವ್ಯವನ್ನೂ, ನಾಲ್ಕನೆಯ ಪಾದದಲ್ಲಿ ಅಧ್ವರ್ಯುವೆಂಬ ಋತ್ವಿಜನ ಕರ್ತವ್ಯವನ್ನೂ ಹೇಳಲಾಗಿದೆ. ಈಗ ಅವುಗಳನ್ನು ಒಂದೊಂದಾಗಿ ವಿವರಿಸಲಾಗುವುದು—

ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್—ಋಚಾಮೇಕಃ ಪೋಷಮಾಸ್ತೇ ಪುಪುಷ್ವಾನ್ ಹೋತರ್ಗರ್ಚನೀ ॥

ಇಲ್ಲಿ **ತ್ವಃ** ಎಂದರೆ ಒಬ್ಬನು, ಋತ್ವಿಜನು. ಯಜ್ಞಕರ್ಮವು ನೆರವೇರುತ್ತಿರುವಾಗ ಒಬ್ಬ ಋತ್ವಿಜನು ಋಕ್ಕುಗಳ ಪೋಷಣೆಮಾಡುವನು ಎಂದರೆ ಆಯಾ ಕರ್ಮಗಳಿಗೆ ಅನುಸಾರವಾದ ಋಙ್ಮಂತ್ರಗಳನ್ನು ಪಠಿಸಿ ಯಜ್ಞಕರ್ಮವು ಮುಂದುವರೆಯುವಂತೆ ಮಾಡುವನು. ಋಙ್ಮಂತ್ರವು ಯಜ್ಞಾದಿಗಳನ್ನು ಮಾಡುವಾಗ ಉಪಯೋಗಿಸಲ್ಪಡಬೇಕು ಎಂದರೆ ದೇವತೆಗಳನ್ನು ಆಹ್ವಾನಮಾಡುವಾಗಲೂ, ಸ್ತುತಿಸುವಾಗಲೂ ಯಾವಾಗಲೂ ಋಗ್ವೇದವ ಋಕ್ಕುಗಳನ್ನೇ ಪಠಿಸಬೇಕು. ಈ ಋಕ್ಕುಗಳನ್ನು ಪಠಿಸಬೇಕಾದುದು **ಹೋತೃ**ವೆಂಬ ಋತ್ವಿಕ್ಕಿನ ಕರ್ತವ್ಯವು. ಇವನು ಋಗ್ವೇದವನ್ನು

ಸಾಂಗವಾಗಿ ಅಧ್ಯಯನಮಾಡಿ ಆ ಮಂತ್ರಗಳ ಅರ್ಥವನ್ನೂ, ವಿನಿಯೋಗವನ್ನೂ ಆ ಮಂತ್ರಗಳನ್ನು ಯಜ್ಞದ ನಾನಾ ಕರ್ಮಗಳಲ್ಲಿ ಯಾವಾಗ, ಹೇಗೆ ಉಪಯೋಗಿಸಬೇಕೆಂಬುವುದನ್ನೂ ಚೆನ್ನಾಗಿ ತಿಳಿದವನಾಗಿರಬೇಕು. ಇದು ಹೋತೃವಿನ ಕರ್ತವ್ಯವು. ಇದನ್ನೇ ಈ ಪಾದದಲ್ಲಿ ಹೇಳಿದೆ.

ಗಾಯತ್ರಂ ತ್ವೋ ಗಾಯತಿ ಶಕ್ವರೀಷು—ಗಾಯತ್ರಮೇಕೋ ಗಾಯತಿ ಶಕ್ವರೀಷೂದ್ಗಾತಾ ಗಾಯತ್ರಂ ಗಾಯತೇಃ ಸ್ತುತಿಕರ್ಮಣಃ । ಶಕ್ವರ್ಯೋ ಋಚಃ ಶಕ್ನೋತೇಃ । ತದ್ಯದಾಭಿರ್ವೃತ್ರಮಶಕದ್ಧಂತುಂ ತಚ್ಛಕ್ವರೀಣಾಂ ಶಕ್ವರೀತ್ವಮಿತಿ ವಿಜ್ಞಾಯತೇ ॥

ಇನ್ನೊಬ್ಬ ಋತ್ವಿಜನು ಗಾಯತ್ರವೆಂಬ ಸಾಮಮಂತ್ರವನ್ನು ಶಕ್ವರೀ ಛಂದಸ್ಸಿನ ಮಂತ್ರಗಳಿಂದ ಗಾನಮಾಡುತ್ತಿರುವನು. ಈ ರೀತಿ ಸಾಮಮಂತ್ರಗಳನ್ನು ಗಾನಮಾಡುವ ಋತ್ವಿಜನಿಗೆ **ಉದ್ಗಾತಾ** ಎಂದು ಹೆಸರು. ಇವನು ಸಾಮವೇದವನ್ನು ಚೆನ್ನಾಗಿ ಅಧ್ಯಯನಮಾಡಿ ತ್ರಿವೃದಾದಿಸ್ತೋಮಗಳ ಸ್ವರೂಪವನ್ನು ಚೆನ್ನಾಗಿ ತಿಳಿದವನಾಗಿರಬೇಕು. ಯಜ್ಞದಲ್ಲಿ ದೇವತೆಗಳ ಪ್ರೀತ್ಯರ್ಥವಾಗಿ ಸಾಮಗಾನಮಾಡುವುದೇ ಈ ಉದ್ಗಾತೃವೆಂಬ ಹೋತೃವಿನ ಕರ್ತವ್ಯವು. ಇಲ್ಲಿ **ಗಾಯತ್ರಂ** ಎಂಬ ಶಬ್ದವು ಸ್ತುತಿಸು, ಗಾನಮಾಡು ಎಂಬರ್ಥವುಳ್ಳ **ಗೈ** ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. **ಶಕ್ವರ್ಯಃ** ಎಂದರೆ ಶಕ್ವರೀಛಂದಸ್ಸಿನ ಋಕ್ಕುಗಳು. ಶಕ್ವರೀ ಶಬ್ದವು ಶಕ್—ಶಕ್ತನಾಗು, ಸಮರ್ಥನಾಗು ಎಂಬರ್ಥವುಳ್ಳ ಶಕ್ನೋತಿಧಾತುವಿನಿಂದ ನಿಷ್ಪನ್ನವಾಗಿದೆ. ಈ ಶಕ್ವರೀಛಂದಸ್ಸಿನ ಋಕ್ಕುಗಳಿಂದ ಸ್ತುತನಾಗಿ ಇಂದ್ರನು ವೃತ್ರನನ್ನು ಸಂಹಾರಮಾಡಲು ಸಮರ್ಥನಾದನು. ಆದ್ದರಿಂದ ಈ ಛಂದಸ್ಸಿನ ಋಕ್ಕುಗಳಿಗೆ ಶಕ್ವರೀಛಂದಸ್ಸುಗಳು ಎಂಬ ಹೆಸರಾಯಿತು ಎಂದು ಶ್ರುತಿವಾಕ್ಯವೂ ಇರುವುದು.

ಬ್ರಹ್ಮಾ ತ್ವೋ ವದತಿ ಜಾತವಿದ್ಯಾಂ—ಬ್ರಹ್ಮೈಕೋ ಜಾತೇ ಜಾತೇ ವಿದ್ಯಾಂ ವದತಿ । ಬ್ರಹ್ಮಾ ಸರ್ವವಿದ್ಯಃ ಸರ್ವಂ ವೇದಿತುಮರ್ಹತಿ । ಬ್ರಹ್ಮಾ ಪರಿವೃಢ್ಢಃ ಶ್ರುತತೋ ಬ್ರಹ್ಮ ಪರಿವೃಢ್ಢಂ ಸರ್ವತಃ॥

ಯಜ್ಞವು ನಡೆಯುತ್ತಿರುವಾಗ ಇನ್ನೊಬ್ಬ ಋತ್ವಿಜನಾದ ಬ್ರಹ್ಮನೆಂಬುವನು ಯಜ್ಞಕರ್ಮವು ಸರಿಯಾಗಿ ನಡೆಯುತ್ತಿರುವುದೇ ಇಲ್ಲವೇ, ಎಂಬುವುದನ್ನು ಗಮನಿಸುತ್ತಿರುವನು ಮತ್ತು ಯಜ್ಞಾಂಗಕರ್ಮಗಳಲ್ಲಿ ಏನಾದರೂ ವ್ಯತ್ಯಾಸಗಳಾಗಲಿ, ಲೋಪದೋಷಗಳಾಗಲಿ ಸಂಭವಿಸಿದಲ್ಲಿ ಅವುಗಳಿಗೆ ಸರಿಯಾದ ಪ್ರಾಯಶ್ಚಿತ್ತಾದಿಗಳನ್ನು ನಿರ್ದೇಶಿಸಿ ಯಜ್ಞಕರ್ಮವು ಸಾಂಗವಾಗಿ ಸಮಾಪ್ತಿಯಾಗುವಂತೆ ಮಾಡುವನು. ಯಜ್ಞದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದೇ ಬ್ರಹ್ಮನೆಂಬ ಋತ್ವಿಜನ ಕರ್ತವ್ಯವು. ಇವನು ಮೂರು ವೇದಗಳನ್ನು ಅಧ್ಯಯನಮಾಡಿ ಸರ್ವವಿದ್ಯಾಪಾರಂಗತನಾಗಿರಬೇಕು. ವಿದ್ಯಗಳಲ್ಲಿ ಮಾತ್ರವೇ ಇವನಿಗೆ ಪಾಂಡಿತ್ಯವಿದ್ದರೆ ಸಾಲದು. ಯಜ್ಞಾಂಗಕರ್ಮಗಳಲ್ಲಿಯೂ ಅವುಗಳ ನಿರ್ವಹಣೆಯಲ್ಲಿಯೂ ಸರ್ವತೋಮುಖವಾದ ಪರಿಶ್ರಮವಿರಬೇಕು. ಇಂತಹ ಸಾಮರ್ಥ್ಯವುಳ್ಳ ಸರ್ವವಿದ್ಯಾಪಾರಂಗತನಾದ ಬ್ರಹ್ಮನೆಂಬ ಋತ್ವಿಜನು ಹೋತೃ ಮೊದಲಾದ ಋತ್ವಿಕ್ಕುಗಳಿಗೆ ಆಯಾ ಸಂದರ್ಭಗಳಲ್ಲಿ ಇಂತಿಂತಹ ಮಂತ್ರಗಳನ್ನು ಪಠಿಸಬೇಕೆಂದೂ, ಉದ್ಗಾತೃವಿಗೆ ಇಂತಹ ಸಾಮವನ್ನು ಗಾನಮಾಡಬೇಕೆಂದೂ ಅಧ್ವರ್ಯು ಮೊದಲಾದ ಋತ್ವಿಜರಿಗೆ ಯಜ್ಞದ ಕಾರ್ಯಕಲಾಪಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನೂ (ವದತಿ) ಹೇಳುತ್ತಿರುವನು

ಯಜ್ಞಸ್ಯ ಮಾತ್ರಾಂ ವಿಮಿಮಾನ ಏತಿ—ಯಜ್ಞಸ್ಯ ಮಾತ್ರಾಂ ವಿಮಿಮಾನ ಏಷೋಽಧ್ವರ್ಯುಃ। ಅಧ್ವರ್ಯುರಧ್ವರಯುರಧ್ವರಂ ಯುನಕ್ತ್ಯಧ್ವರಸ್ಯ ನೇತಾಧ್ವರಂ ಕಾಮಯತ ಇತಿ ವಾ । ಅಪಿ ವಾಧೀಯಾನೇ ಯುರುಪಬಂಧಃ । ಅಧ್ವರ ಇತಿ ಯಜ್ಞನಾಮ । ಧ್ವರತಿರ್ಹಿಂಸಾಕರ್ಮಾ ತತ್ಪ್ರತಿಷೇಧಃ ॥

ಮತ್ತೊಬ್ಬ ಋತ್ವಿಜನಾದ ಅಧ್ವರ್ಯುವೆಂಬುವನು ಯಜ್ಞದ ನಾನಾಕಾರ್ಯಕಲಾಪಗಳಲ್ಲಿ ತೊಡಗಿ ಯಜ್ಞಕ್ಕೆ ಒಂದು ರೂಪವನ್ನು ಕೊಟ್ಟು ಅದು ಒಂದು ಕ್ರಮದಲ್ಲಿ ನಡೆಯುವಂತೆ ಮಾಡುವನು. ಎಂದರೆ ಯಜ್ಞದಲ್ಲಿ ಒಂದು ಕರ್ಮವಾದ ನಂತರ ಮತ್ತೆ ಯಾವ ಕರ್ಮವನ್ನು ಮಾಡಬೇಕು, ಅದನ್ನು ಯಾರು, ಹೇಗೆ, ಯಾವ ಕಾಲದಲ್ಲಿ ಮಾಡಬೇಕು ಎಂಬ ಸಮಸ್ತ ಕಾರ್ಯಕಲಾಪಗಳಲ್ಲಿಯೂ ಆಸಕ್ತಿಯನ್ನು ವಹಿಸಿ ನಾನಾ ಋತ್ವಿಕ್ಕುಗಳಿಂದ ಅವರವರ ಕರ್ಮಗಳನ್ನು ಮಾಡಿಸಬೇಕು, ತಾನು ಮಾಡುವ ಕರ್ತವ್ಯ ಕರ್ಮಗಳನ್ನು ನಿರ್ವಹಿಸಬೇಕು. ಇವೆಲ್ಲವೂ ಎಂದರೆ ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ಕರ್ತವ್ಯವೆಲ್ಲವೂ ಅಧ್ವರ್ಯುವಿಗೆ ಸೇರಿದ್ದು. ಇವನು ಯಜುರ್ವೇದವನ್ನು ಸಾಂಗವಾಗಿ ಅಧ್ಯಯನ ಮಾಡಿ ಯಜ್ಞಕರ್ಮಗಳ ಸ್ವರೂಪವನ್ನೂ ಅವುಗಳನ್ನು ಹೇಗೆ ಮಾಡಬೇಕೆಂಬ ವಿಷಯದಲ್ಲಿ ಅನುಭವವನ್ನೂ ಪಡೆದವನಾಗಿರಬೇಕು. ಇಂತಹ **ಅಧ್ವರ್ಯು**ವೆಂಬ ಋತ್ವಿಜನು ಯಜ್ಞದಲ್ಲಿ ನಿರ್ವಹಿಸಬೇಕಾದ ಸಣ್ಣಸಣ್ಣ ಕರ್ಮಗಳನ್ನೂ, ದೊಡ್ಡ ಕರ್ಮಗಳನ್ನೂ ಒಂದಾಗುತ್ತಲೊಂದು ಕ್ರಮವಾಗಿ ನಡೆಯುವಂತೆ ಮಾಡುತ್ತಲೂ ಇತರ ಋತ್ವಿಕ್ಕುಗಳಿಂದ ಮಾಡಿಸುತ್ತಲೂ ಯಜ್ಞಕ್ಕೆ ಒಂದು ನಿರ್ದಿಷ್ಟವಾವ ರೂಪವನ್ನು ಕೊಟ್ಟು ಯಥಾಕ್ರಮದಲ್ಲಿ ನಡೆಯುವಂತೆ ಮಾಡುವನು. ಇದೇ ಇವನ ಕರ್ತವ್ಯವು. **ಅಧ್ವರ್ಯುಃ ಅಧ್ವರಯುಃ** ಎಂದರ್ಥವು ಅಧ್ವರಯುವೆಂದರೆ ಯಜ್ಞವನ್ನು ಇಚ್ಛಿಸುವವನು ಅಥವಾ **ಅಧ್ವರಸ್ಯ ನೇತಾ**—ಯಜ್ಞವನ್ನು ಹೀಗೆ ನಡೆಯಬೇಕೆಂದು ನಿರ್ದೇಶಿಸುವವನು, ಯಜ್ಞದ ಮಾರ್ಗದರ್ಶಿಯು (leader). ಅಧ್ವರ ಶಬ್ದಕ್ಕೆ ಯಜ್ಞವೆಂದರ್ಥವು. **ಧ್ವರತಿಃ ಹಿಂಸಾಕರ್ಮಾ ತತ್ಪ್ರತಿಷೇಧಃ**—ಧ್ವರವೆಂದರೆ ಹಿಂಸೆ; ಅಂತಹ ಹಿಂಸೆಯಿಲ್ಲದಿರುವ ಕರ್ಮಕ್ಕೆ ಅಧ್ವರ (ಯಜ್ಞ)ವೆಂದು ಹೆಸರು ಎಂದು ಅಧ್ವರಶಬ್ದದ ರೂಪನಿಷ್ಪತ್ತಿಯನ್ನು ಹೇಳಲಾಗಿದೆ.

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕ ಭೂಪಾಲ-
ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ
ವೇದಾರ್ಥಪ್ರಕಾಶ ಋಕ್ಸಂಹಿತಾಭಾಷ್ಯೇ೭ಷ್ಟಮಾಷ್ಟಕೇ
ದ್ವಿತೀಯೋ೭ಧ್ಯಾಯಃ ಸಮಾಪ್ತಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ಣಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಎಂಟನೆಯ ಅಷ್ಟಕದಲ್ಲಿ ಎರಡನೆಯ ಅಧ್ಯಾಯವು ಸಮಾಪ್ತವಾದುದು.



ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ॥
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋ೭ಸ್ತು ತೇ ॥

॥ ಶುಭಂ ಭೂಯಾತ್ ।

॥ ಮಂಗಳಂ ॥

ಬೃಹದ್ದೇವತಾ

ಪೀಠಿಕೆ

ಈ ಗ್ರಂಥದ ವಿಷಯದಲ್ಲಿ ಒಂದೆರಡು ಮಾತುಗಳನ್ನು ತಿಳಿಸುವುದು ಅವಶ್ಯಕವಾಗಿದೆ. ವೇದಗಳ, ಅದರಲ್ಲಿಯೂ ಋಗ್ವೇದದ, ಸರಿಯಾದ ಅರ್ಥವನ್ನು ತಿಳಿದುಕೊಳ್ಳಲು ಸಹಕಾರಿಯಾದ ಗ್ರಂಥಗಳು ಕೆಲವಿವೆ. ಅವುಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು, ಪ್ರಾಚೀನ ಮತ್ತು ಆಧುನಿಕ ಎಂದು. ಪ್ರಾಚೀನ ಗ್ರಂಥಗಳ ಶ್ರೇಣಿಗೆ ಸೇರಿದ ಗ್ರಂಥಗಳಲ್ಲಿ, ಯಾಸ್ಕರ ನಿರುಕ್ತ, ಕಾತ್ಯಾಯನರ ಸರ್ವಾನುಕ್ರಮಣಿಕೆ, ಶೌನಕರ ಬೃಹದ್ದೇವತಾ ಮತ್ತು ಋಗ್ವಿಧಾನ, ಆಶ್ವಲಾಯನರ ಶ್ರೌತಸೂತ್ರ ಎಂಬಿವು ಮುಖ್ಯವಾದವು. ವೆಂಕಟಮಾಧವ, ಸಾಯಣ ಮುಂತಾದವರು ಋಗ್ವೇದಕ್ಕೆ ಸುಮಾರು ೬೦೦ ವರ್ಷಗಳ ಹಿಂದೆ ಬರೆದಿರುವ ಭಾಷ್ಯಗಳು ಪ್ರಾಚೀನವಲ್ಲದಿದ್ದರೂ ಆಧುನಿಕವೆಂದೂ ಹೇಳಲಾಗುವುದಿಲ್ಲ. ವೇದಾಭ್ಯಾಸವು ಹಿಂದಿನ ಪದ್ಧತಿಯಂತೆ ನಡೆಯುತ್ತಿದ್ದಾಗ ಮತ್ತು ಸಂಸ್ಕೃತಭಾಷೆಗೆ ಪ್ರಾಧಾನ್ಯತೆ ಇದ್ದಾಗ ಮತ್ತು ಯಜ್ಞಯಾಗಾದಿಕರ್ಮಗಳನ್ನು ನೆರವೇರಿಸುವುದು ರೂಢಿಯಲ್ಲಿರುವಾಗ ಈ ಭಾಷ್ಯಗಳು ಬರೆಯಲ್ಪಟ್ಟಿರುವುದರಿಂದ ವೇದಾಭ್ಯಾಸಿಗಳಿಗೆ ಇವುಗಳಿಂದ ಮಹತ್ಪ್ರಯೋಜನವುಂಟಾಗುವ ವಿಷಯದಲ್ಲಿ ಯಾವ ಸಂಶಯವೂ ಇರುವುದಿಲ್ಲ ಸತ್ಯವಾಗಿ ಹೇಳಬೇಕಾದರೆ ಈ ಭಾಷ್ಯಗಳ ಸಹಾಯವಿಲ್ಲದಿದ್ದರೆ ಅತಿಪ್ರಾಚೀನಭಾಷೆಯಲ್ಲಿರುವ ವೇದಗಳ ಅರ್ಥವನ್ನು ತಿಳಿಯುವುದು ಸಾಧ್ಯವೇ ಆಗುತ್ತಿರಲಿಲ್ಲ. Maxmuller, Wilson, Macdonell ಮೊದಲಾದ ಪಾಶ್ಚಾತ್ಯಪಂಡಿತರೇ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಪಾಶ್ಚಾತ್ಯಪಂಡಿತರೂ, ಅವರನ್ನನುಸರಿಸಿ ಕೆಲವು ಭಾರತೀಯ ವಿದ್ವಾಂಸರೂ ಈಚೆಗೆ ನಡೆಸಿದ ಸಂಶೋಧನೆಯ ಫಲವಾಗಿ ಇಂಗ್ಲಿಷ್, ಜರ್ಮನ್ ಮುಂತಾದ ಭಾಷೆಗಳಲ್ಲಿ ಋಗ್ವೇದಕ್ಕೆ ಸಂಬಂಧಪಟ್ಟ ಅನೇಕ ಗ್ರಂಥಗಳು ಪ್ರಕಟವಾಗಿವೆ ವೇದಾರ್ಥಪ್ರಯತ್ನದಲ್ಲಿ ಈ ಗ್ರಂಥಗಳನ್ನು ಕಡೆಗಣಿಸುವುದಕ್ಕಾಗುವುದಿಲ್ಲ. ಸಂಸ್ಕೃತಭಾಷೆಯಲ್ಲಿ ಹೆಚ್ಚಾಗಿ ಪರಿಶ್ರಮವಿಲ್ಲದವರಿಗೆ ಈ ಗ್ರಂಥಗಳು ಬಹಳ ಉಪಕಾರಿಗಳಾಗಿವೆ.

ನಾವು ಈಗ ಬರೆದಿರುವ ಮತ್ತು ಬರೆಯುತ್ತಿರುವ ಋಗ್ವೇದಸಂಹಿತೆಯ ಅರ್ಥಾನುವಾದವಿವರಣೆಗಳಲ್ಲಿ ಮೇಲೆ ಹೇಳಿರುವ ಪೌರ್ವಾತ್ಯ ಮತ್ತು ಪಾಶ್ಚಾತ್ಯಗ್ರಂಥಗಳಲ್ಲಿರುವ ವಿವರಣೆಗಳನ್ನೂ ವಿಮರ್ಶೆಯನ್ನೂ ಆಯಾ ಸಂದರ್ಭಗಳಲ್ಲಿ ಸೇರಿಸಿದೇವೆ. ನಿರುಕ್ತ, ಶ್ರೌತಸೂತ್ರ ಮತ್ತು ಅನುಕ್ರಮಣಿಕೆಯಲ್ಲಿರುವ ವಿವರಣೆಗಳನ್ನು ಆಯಾ ಸಂದರ್ಭಗಳಲ್ಲಿ ಸೇರಿಸಿದೇವೆ. ಯಾಸ್ಕರ ನಿರುಕ್ತವೂ, ಶೌನಕರ ಬೃಹದ್ದೇವತಾಗ್ರಂಥವೂ, ಅತಿಪ್ರಾಚೀನಗ್ರಂಥಗಳು ಎಂದರೆ, ಮೂರು ಸಾವಿರ ವರ್ಷಗಳಿಗೂ ಹಿಂದಿನದು. ಅವು ಪ್ರಮಾಣಗ್ರಂಥಗಳೆಂದು ಪರಿಗಣಿಸಲ್ಪಟ್ಟಿವೆ. ನಿರುಕ್ತಗ್ರಂಥವನ್ನು ಮುಂದೆ ಪ್ರತ್ಯೇಕಭಾಗಗಳಲ್ಲಿ ಪ್ರಕಟಿಸಲಾಗುವುದು. ಬೃಹದ್ದೇವತೆಯು ಅಷ್ಟು ದೊಡ್ಡ ಗ್ರಂಥವಲ್ಲವಾದ್ದರಿಂದ ಅದನ್ನು ಋಗ್ವೇದದ ಈ ಭಾಗದಲ್ಲಿಯೇ ಪರಿಶಿಷ್ಟರೂಪದಲ್ಲಿ ಸೇರಿಸಲಾಗಿದೆ. ಈ ಗ್ರಂಥವು ವಿಶ್ವವಿದ್ಯಾನಿಲಯದ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೂ, ವಿಮರ್ಶಾತ್ಮಕವಾಗಿ ವೇದಾರ್ಥವನ್ನು ತಿಳಿಯಲಿತ್ಸಿಸುವ ಇತರರಿಗೂ ಬಹು ಉಪಯುಕ್ತವಾದ ಗ್ರಂಥವಾಗಿರುವುದರಿಂದ ಇದನ್ನು ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆ, ಇಂಗ್ಲಿಷ್ ಭಾಷಾಂತರ, ಸಂಬಂಧಪಟ್ಟ ಅಂಕಿಅಂಶಗಳು ಇವುಗಳೊಡನೆ ಸರ್ವಜನೋಪಯುಕ್ತವಾಗುಂತೆ ಬರೆದಿದೇವೆ. ಇದರಲ್ಲಿರುವ ಇಂಗ್ಲಿಷ್ ಭಾಷಾಂತರವನ್ನು ವೇದಸಂಶೋಧನೆಯಲ್ಲಿ ಹೆಸರಾಂತ Professor Macdonell ಎಂಬ ಪಾಶ್ಚಾತ್ಯ ವಿದ್ವಾಂಸನು ಬರೆದಿರುವ ಬೃಹದ್ದೇವತಾ ಎಂಬ ಗ್ರಂಥದಿಂದ ತೆಗೆದು ಸೂಕ್ತಬದಲಾವಣೆಗಳನ್ನು ಮಾಡಿ ಇಲ್ಲಿ ಸೇರಿಸಲಾಗಿದೆ. ಈ ಪಾಶ್ಚಾತ್ಯಪಂಡಿತನು ವೇದಕ್ಕೆ ಸಂಬಂಧಪಟ್ಟಂತೆ Katyayana's Sarvanukramani, A Sanskrit-English Dictionary, Vedic Mythology, A History of Sanskrit Literature, Brihaddevata, Vedic Grammar, Vedic Index of Names and Subjects ಮೊದಲಾದ ಗ್ರಂಥಗಳನ್ನು ಬರೆದಿದಾನೆ. ಇವು ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿವೆ.

—*Editor*.

॥ ಶ್ರೀಃ ॥

॥ ಅಥ ಶೌನಕಮಹರ್ಷಿಪ್ರಣೀತಾ ಬೃಹದ್ದೇವತಾ ॥

॥ ಪ್ರಥಮೋಽಧ್ಯಾಯಃ ॥

ಮಂತ್ರದೃಗ್ಭ್ಯೋ ನಮಸ್ಕೃತ್ಯ ಸಮಾಮ್ನಾಯಾನುಪೂರ್ವತಃ ।
ಸೂಕ್ತರ್ಗರ್ಧರ್ಚಪಾದಾನಾಮೃಗ್ಭ್ಯೋ ವಕ್ಷ್ಯಾಮಿ ದೈವತಂ ॥ ೧ ॥
ವೇದಿತವ್ಯಂ ದೈವತಂ ಹಿ ಮಂತ್ರೇ ಮಂತ್ರೇ ಪ್ರಯತ್ನತಃ ।
ದೈವತಜ್ಞೋ ಹಿ ಮಂತ್ರಾಣಾಂ ತದರ್ಥಮವಗಚ್ಛತಿ ॥ ೨ ॥
ತದ್ಧಿತಾಂಸ್ತದಭಿಪ್ರಾಯಾನೃಷೀಣಾಂ ಮಂತ್ರದೃಷ್ಟಿಷು ।
ವಿಜ್ಞಾಪಯತಿ ವಿಜ್ಞಾನಂ ಕರ್ಮಾಣಿ ವಿವಿಧಾನಿ ಚ ॥ ೩ ॥

ಮೊದಲನೆಯ ಅಧ್ಯಾಯವು

ಮಂತ್ರಗಳಲ್ಲಿ ಸ್ತುತರಾದ ದೇವತೆಗಳನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ

1. ಮಂತ್ರದ್ರಷ್ಟೃಗಳಾದ ಋಷಿಗಳಿಗೆ ನಮಸ್ಕರಿಸಿ, ಹಿಂದಿನಿಂದಲೂ ನಡೆದುಬಂದಿರುವ ಕ್ರಮವನ್ನನುಸರಿಸಿ ಋಗ್ವೇದಸಂಹಿತೆಯ ಸೂಕ್ತ, ಋಕ್, ಅರ್ಧಋಕ್, ಪಾದ ಇವುಗಳಲ್ಲಿ ಪ್ರತಿಪಾದಿತ (ಸ್ತುತ) ರಾಗಿರುವ ದೇವತೆಗಳ ವಿಷಯವನ್ನು ವಿವರಿಸುತ್ತೇನೆ.

2. ಪ್ರತಿ ಮಂತ್ರದಲ್ಲಿಯೂ ಸ್ತುತರಾಗಿರುವ ದೇವತೆಗಳ ಸ್ವರೂಪವನ್ನು ವಿವೇಕಿಯಾದವನು ಪ್ರಯತ್ನ ಪೂರ್ವಕವಾಗಿ ತಿಳಿದುಕೊಳ್ಳಬೇಕು. ಮಂತ್ರಗಳ ದೇವತೆಗಳನ್ನು ತಿಳಿದುಕೊಳ್ಳುವ ಪುರುಷನು ಆ ಮಂತ್ರಗಳ ಅರ್ಥವನ್ನೂ ಅವುಗಳ ಉದ್ದೇಶವನ್ನೂ ತಿಳಿದುಕೊಳ್ಳುವನು.

3. ಮಂತ್ರಪ್ರತಿಪಾದಿತದೇವತೆಗಳನ್ನು ತಿಳಿದುಕೊಳ್ಳುವ ಪುರುಷನು, ಋಷಿಗಳ ಜ್ಞಾನದೃಷ್ಟಿಗೆ ಮಂತ್ರಗಳು ಗೋಚರವಾಗುವಕಾಲದಲ್ಲಿ ಆ ಮಂತ್ರಗಳಿಗೆ ಯಾವವಿಧವಾದ ಅರ್ಥವಿದ್ದಿತೋ ಆ ಮಂತ್ರವಿಷಯದಲ್ಲಿ ಋಷಿಗಳ ಅಭಿಪ್ರಾಯವೇನಿದ್ದಿತೋ, ಆ ಮಂತ್ರಗಳಲ್ಲಿ ಉಕ್ತವಾಗಿರುವ ಕರ್ಮವಿಧಾನವು ಯಾವರೀತಿ ಇರುವುದೋ ಅವೆಲ್ಲವನ್ನೂ ತಿಳಿಯಲು ಸಮರ್ಥನಾಗುವನು.

BRIHADDEVATA

Traanslation and Explanation.

1. Impartance of knowing the deities. The Vedic Triad.

1. With obeisance to the seers of formulas, I will, in the sequence of the traditional text, state the divinity of the hymn, for(all)stanzas, the stanza, the hemistich, and the verse.

2. In every formula ane should know the divinity with exactness; for he who knows the divinities of the formulas, understands their object.

3 He is capable of giving an (authoritative) opinion (ವಿಜ್ಞಾಪಯತಿ) as to their (ತನ್ಮಂತ್ರಾಣಾಂ) intentions whieh were contained (ಹಿ ತಾನ್) in them (ತತ್) at the time when the formulas were revealed to the seers (ಋಷೀಣಾಂ ಮಂತ್ರದೃಷ್ಟಿಷು)

ನ ಹಿ ಕಶ್ಚಿದವಿಜ್ಞಾಯ ಯಾಥಾತಥ್ಯೇನ ದೈವತಂ ।
ಲೌಕ್ಯಾನಾಂ ವೈದಿಕಾನಾಂ ವಾ ಕರ್ಮಣಾಂ ಫಲಮಶ್ನುತೇ ॥ ೪ ॥
ಪೃಥಮೋ ಭಜತೇ ತ್ವಾಸಾಂ ವರ್ಗೋ೭ಗ್ನಿಮಿಹ ದೈವತಂ ।
ದ್ವಿತೀಯೋ ವಾಯುಮಿಂದ್ರಂ ವಾ ತೃತೀಯಃ ಸೂರ್ಯಮೇವ ಚ ॥ ೫ ॥
ಅರ್ಥಮಿಚ್ಛನ್ನೃಷಿರ್ದೇವಂ ಯಂ ಯಮಾಹಾಯಮುಸ್ತ್ವಿತಿ ।
ಪ್ರಾಧಾನ್ಯೇನ ಸ್ತುವನ್ಸ್ತುತ್ಯಾ ಮಂತ್ರಸ್ತದ್ದೇವ ಏವ ಸಃ ॥ ೬ ॥
ಸ್ತುತಿಸ್ತು ನಾಮ್ನಾ ರೂಪೇಣ ಕರ್ಮಣಾ ಬಾಂಧವೇನ ಚ ।
ಸ್ವರ್ಗಾಯುರ್ಧನಪುತ್ರಾದ್ಯೈರರ್ಥೈರಾಶೀಸ್ತು ಕಥ್ಯತೇ ॥ ೭ ॥

4. ಮಂತ್ರಗಳಲ್ಲಿ ಪ್ರತಿಪಾದಿತರಾಗಿರುವ ದೇವತೆಗಳನ್ನು ಯಥಾರ್ಥವಾಗಿ ತಿಳಿದುಕೊಳ್ಳದಿರುವ ಪುರುಷನು ಎಂದರೆ ದೇವತೆಗಳ ವಿಷಯದಲ್ಲಿ ಸರಿಯಾದ ತಿಳುವಳಿಕೆಯನ್ನು ಪಡೆಯದಿರುವ ಮನುಷ್ಯನು ಲೌಕಿಕ ಅಥವಾ ವೈದಿಕ ಕರ್ಮಗಳ ಆಚರಣೆಯಿಂದ ಲಭಿಸುವ ಫಲವನ್ನು ಪಡೆಯಲಾರನು.

ತ್ರಿಸ್ಥಾನದೇವತೆಗಳು

5. ದೇವತೆಗಳನ್ನು ಮೂರುಗುಂಪುಗಳನ್ನಾಗಿ ವಿಂಗಡಿಸಿದಾರೆ. ಅಗ್ನಿ ಮೊದಲಾದ ದೇವತೆಗಳು ಪೃಥಿವೀ ಸ್ಥಾನದ ದೇವತೆಗಳೆಂದೂ, ವಾಯು ಅಥವಾ ಇಂದ್ರ ಮೊದಲಾದ ದೇವತೆಗಳು ಅಂತರಿಕ್ಷಸ್ಥದೇವತೆಗಳೆಂದೂ, ಸೂರ್ಯ ಮೊದಲಾದವರು ಸ್ವರ್ಗದ ದೇವತೆಗಳೆಂದೂ ದೇವತೆಗಳಲ್ಲಿ ಮೂರು ವರ್ಗ (ಗುಂಪು) ವಿರುವುದು.

6. ಯಾವುದಾದರೂ ಒಂದು ಇಷ್ಟ ಅಥವಾ ಉದ್ದೇಶಸಾಧನೆಗಾಗಿ ಋಷಿಯು ಓರ್ವದೇವತೆಯನ್ನು ಮಂತ್ರದಲ್ಲಿ ಭಕ್ತಿಯಿಂದ ಸ್ತುತಿಸಿದ್ದಲ್ಲಿ ಆ ಮಂತ್ರಕ್ಕೆ ಅದೇ ದೇವತೆಯೆಂದು ಹೇಳಲ್ಪಡುವುದು.

7. ಓರ್ವದೇವತೆಯನ್ನು ಆ ದೇವತೆಯ ಹೆಸರಿನಿಂದಾಗಲಿ, ರೂಪ ಅಥವಾ ಆಕಾರದಿಂದಾಗಲಿ, (ಸಾಹಸ) ಕೃತ್ಯಗಳಿಂದಾಗಲಿ, ಸಂಬಂಧದಿಂದಾಗಲಿ ವರ್ಣಿಸುವಾಗ ಅದು ಸ್ತುತಿಯೆನಿಸುವುದು. ಋಷಿಯು ತನಗೆ ಬೇಕಾದ ಸ್ವರ್ಗಪ್ರಾಪ್ತಿ, ಆಯುಸ್ಸು, ಧನ, ಪುತ್ರರು ಮೊದಲಾದವುಗಳನ್ನು ಬಯಸಿ ಸ್ತುತಿಸಿದಲ್ಲಿ ಅದು ಪ್ರಾರ್ಥನೆ (ಆಶೀಃ) ಯೆನಿಸುವುದು.

(and) as to the correct understanding (of them) and the various ceremonies (connected with them).

4. For no one without really having correct knowledge of the divinity (addressed in the formula), attains to the fruit of customary or Vedic ceremonies.

5. The first groop of these (deities) belongs here to the divinity Agni, the second to Vayu or Indra, and the third to Surya.

6. Whateves god a seer desiring an object mentions, let that one, it is said, be (the god of the formula). A formula predominently praising (a god) with devotion, is addressed to that same god.

2. Prayer and Praise.

7. Praise is expressed by means of name, form, action and relationship, but prayer by means of objects such as heaven, long life, wealth, and sons.

ಸ್ತುತ್ಯಾಶಿಷೌ ತು ಯಾಸ್ವೃಕ್ಷು ದೃಶ್ಯೇತೇಽಲ್ಪಾಸ್ತು ತಾ ಇಹ ।
ತಾಭ್ಯಶ್ಚಾಲ್ಪತರಾಸ್ತಾಃ ಸ್ಯುಃ ಸ್ವರ್ಗೋ ಯಾಭಿಸ್ತು ಯಾಚ್ಯತೇ ॥ ೪ ॥

ಸ್ತುವಂತಂ ವೇದ ಸರ್ವೋಽಯಮರ್ಥಯತ್ಯೇಷ ಮಾಮಿತಿ ।
ಸ್ತೌತೀತ್ಯರ್ಥಂ ಬ್ರುವಂತಂ ಚ ಸಾರ್ಥಂ ಮಾಮೇಷ ಪಶ್ಯತಿ ॥ ೯ ॥

ಸ್ತುವದ್ಭಿರ್ವಾ ಬ್ರುವದ್ಭಿರ್ವಾ ಋಷಿಭಿಸ್ತತ್ತ್ವದರ್ಶಿಭಿಃ ।
ಭವತ್ಯುಭಯಮೇವೋಕ್ತಮುಭಯಂ ಹ್ಯರ್ಥತಃ ಸಮಂ ॥ ೧೦ ॥

ಪ್ರತ್ಯಕ್ಷಂ ದೇವತಾನಾಮ ಯಸ್ಮಿನ್ಮಂತ್ರೇಽಭಿಧೀಯತೇ ।
ತಾಮೇವ ದೇವತಾಂ ವಿದ್ಯಾನ್ಮಂತ್ರೇ ಲಕ್ಷಣಸಂಪದಾ ॥ ೧೧ ॥

ಪ್ರಾರ್ಥನೆ ಅಥವಾ ಸ್ತುತಿಯ ಸ್ವರೂಪ

8. ಮೇಲೆ ಹೇಳಿದ ಸ್ತುತಿ ಮತ್ತು ಪ್ರಾರ್ಥನೆಗಳೆರಡನ್ನೂ ಒಳಗೊಂಡ ಮಂತ್ರಗಳು ಋಗ್ವೇದದಲ್ಲಿ ಅಲ್ಪ ಪ್ರಮಾಣದಲ್ಲಿವೆ. ಸ್ವರ್ಗವನ್ನು ಬೇಕೆಂದು ಬಯಸಿ ಪ್ರಾರ್ಥಿಸಿರುವ ಮಂತ್ರಗಳೂ ಇನ್ನೂ ಅಲ್ಪಪ್ರಮಾಣದಲ್ಲಿವೆ. ಎಂದರೆ ಈ ವಿಧವಾದ ಮಂತ್ರಗಳು ಋಗ್ವೇದದಲ್ಲಿ ಹೆಚ್ಚಾಗಿಲ್ಲ.

9. ಪ್ರತಿಯೊಬ್ಬ ದೇವತೆಯೂ ತನ್ನನ್ನು ಸ್ತುತಿಸುವ ಪುರುಷನು ತನ್ನಿಂದ ಏನಾದರೊಂದನ್ನು ಬೇಡುವನೆಂದು ತಿಳಿದಿರುವನು ಮತ್ತು ಆ ಪುರುಷನು ತನ್ನಲ್ಲಿ ಆ ವಸ್ತುವಿಷಯವುದೆಂದೂ ಅದನ್ನು ತಾನು ಕೊಡಲು ಸಮರ್ಥನೆಂದೂ ತಿಳಿದು ಸ್ತುತಿಸುತ್ತಿರುವನೆಂದೂ ತಿಳಿದಿರುವನು.

10. ತತ್ತ್ವಜ್ಞಾನಿಗಳಾದ ಋಷಿಗಳು ದೇವತೆಗಳನ್ನು ಸ್ತುತಿಸಿದರೂ ಅಥವಾ ಅವರಲ್ಲಿ ತಮ್ಮ ಇಷ್ಟಾರ್ಥಗಳನ್ನು ನಿವೇದಿಸಿಕೊಂಡರೂ, ಇವೆರಡಕ್ಕೂ ಒಟ್ಟಿನಲ್ಲಿ ವ್ಯತ್ಯಾಸವೇನೂ ಇಲ್ಲವುದಿಲ್ಲ. ಎರಡೂ ಒಂದೇ ಎಂದು ಭಾವಿಸಬೇಕು.

11. ಒಂದು ಮಂತ್ರದಲ್ಲಿ ಒಬ್ಬ ದೇವತೆಯ ಹೆಸರನ್ನು ಪ್ರತ್ಯಕ್ಷವಾಗಿ ಎಂದರೆ ಸಂಬೋಧನಾರೂಪವಾಗಿ (ಎಲೈ ಇಂದ್ರನೇ, ನೀನು ಇತ್ಯಾದಿ) ಹೇಳಿದ್ದಲ್ಲಿ, ಆ ಮಂತ್ರಕ್ಕೆ ಅದೇ ದೇವತೆಯೆಂದು ತಿಳಿಯಬೇಕು. ಇದೇ ಲಕ್ಷಣವು.

8. The stanzas in which both praise and prayer appear, are here (in the Rig-Veda) but few; still fewer than these are those in which heaven it prayed for.

9. Every god (ಸರ್ವೋಽಯಂ) recognizes one who praises, (thinking) 'this man wants something from me,' and (he also recognises one who states an object), (thinking) 'he praises, (that is) he regards me as one having (those) object (to bestow)'.

10. But whether the seers who discern the truth either praise or state (an object), they express both; for both are in reality the same.

11. When the name of a deity is mentioned in the second person in a formula, one should know that to be the deity in the formula, because (that) indication is there (ಸಂಪದಾ).

ತಸ್ಮಾತ್ತು ದೇವತಾಂ ನಾಮ್ನಾ ಮಂತ್ರೇ ಮಂತ್ರೇ ಪ್ರಯೋಗವಿತ್ ।
ಬಹುತ್ವಮಭಿಧಾನಾಂ ಚ ಪ್ರಯತ್ನೇನೋಪಲಕ್ಷಯೇತ್ ॥ ೧೨ ॥

ಸಂಪೂರ್ಣಮೃಷಿವಾಕ್ಯಂ ತು ಸೂಕ್ತಮಿತ್ಯಭಿಧೀಯತೇ ।
ದೃಶ್ಯಂತೇ ದೇವತಾ ಯಸ್ಮಿನ್ನೇಕಸ್ಮಿನ್ಬಹುಷು ದ್ವಯೋಃ ॥ ೧೩ ॥

ದೇವತಾರ್ಷಾರ್ಥಛಂದಸ್ತೋ ವೈವಿಧ್ಯಂ ಚ ಪ್ರಜಾಯತೇ ।
ಋಷಿಸೂಕ್ತಂ ತು ಯಾವಂತಿ ಸೂಕ್ತಾನ್ಯೇಕಸ್ಯ ವೈ ಸ್ತುತಿಃ ॥ ೧೪ ॥

ಶ್ರೂಯತೇ ತಾನಿ ಸರ್ವಾಣಿ ಋಷೇಃ ಸೂಕ್ತಂ ಹಿ ತಸ್ಯ ತತ್ ।
ಯಾವದರ್ಥಸಮಾಪ್ತಿಃ ಸ್ಯಾದರ್ಥಸೂಕ್ತಂ ವದಂತಿ ತತ್ ॥ ೧೫ ॥

ನಾನಾವಿಧ ಸೂಕ್ತಗಳು

12. ಆದ್ದರಿಂದ ಮಂತ್ರವಿನಿಯೋಗನನ್ನು ತಿಳಿದಿರುವ ಪುರುಷನು ಪ್ರತಿ ಮಂತ್ರದಲ್ಲಿಯೂ ಇರುವ ದೇವತೆಯ ಹೆಸರನ್ನೂ ಮತ್ತು ಆ ದೇವತೆಯ ಗುಣಗಳಿಗೆ ಅನುಸಾರವಾಗಿ ಇರಬಹುದಾದ ಇತರ ಹೆಸರುಗಳನ್ನೂ ಪ್ರಯತ್ನಪೂರ್ವಕವಾಗಿ ವಿಮರ್ಶಿಸಿ ತಿಳಿದುಕೊಳ್ಳಬೇಕು.

13. ಋಷಿಯು ಓರ್ವ ದೇವತೆಯ (ಅಥವಾ ಅನೇಕ ದೇವತೆಗಳ) ವಿಷಯವಾಗಿ ಸ್ತುತಿಸುವ ಅಥವಾ ಪಠಿಸುವ ವಾಕ್ಯಗಳೆಲ್ಲವೂ ಒಟ್ಟು ಸೇರಿಸಿದರೆ ಅದು (ಒಂದು) ಸೂಕ್ತವೆನಿಸುವುದು. ಆ ಸೂಕ್ತದಲ್ಲಿ ಒಂದು ಅಥವಾ ಅನೇಕ ಮಂತ್ರಗಳಿರಬಹುದು. ಆ ಮಂತ್ರಗಳಲ್ಲಿ ಒಂದರಲ್ಲಿ ಅಥವಾ ಎರಡರಲ್ಲಿ ಅಥವಾ ಅನೇಕ ಮಂತ್ರಗಳಲ್ಲಿ ದೇವತೆಯ ಹೆಸರು ಪಠಿತವಾಗಿರಬಹುದು.

14-15. ಸೂಕ್ತಗಳಲ್ಲಿ ವಿಷಯಾನುಸಾರವಾಗಿ ಅನೇಕವಿಧವಿರುವುದು. ಹೇಗೆಂದರೆ, ಒಂದು ಸೂಕ್ತದಲ್ಲಿರುವ ಮಂತ್ರಗಳಿಗೆಲ್ಲಾ ಒಬ್ಬನೇ ಋಷಿ ಇರಬಹುದು, ಅಥವಾ ಒಂದೇ ಸೂಕ್ತದಲ್ಲಿರುವ ಬೇರೆಬೇರೆ ಮಂತ್ರಗಳಿಗೆ ಬೇರೆಬೇರೆ ಋಷಿಗಳಿರಬಹುದು. ದೇವತೆಗಳ ವಿಷಯವೂ ಅಷ್ಟೆ. ಸೂಕ್ತದಲ್ಲಿರುವ ಎಲ್ಲಾ ಮಂತ್ರಗಳಿಗೂ ಒಂದೇ ದೇವತೆ ಇರಬಹುದು ಅಥವಾ ಬೇರೆಬೇರೆ ಮಂತ್ರಗಳಿಗೆ ಬೇರೆಬೇರೆ ದೇವತೆಗಳಿರಬಹುದು. ಸೂಕ್ತದಲ್ಲಿ ಪ್ರತಿಪಾದಿತವಾಗಿರುವ ವಿಷಯವೂ ಇದರಂತೆಯೇ. ಸೂಕ್ತದಲ್ಲೆಲ್ಲಾ ಒಂದೇ ವಿಷಯವು ಪ್ರತಿಪಾದಿತವಾಗಿರಬಹುದು ಅಥವಾ ಬೇರೆಬೇರೆ ವಿಷಯಗಳು ಪ್ರತಿಪಾದಿತವಾಗಿರಬಹುದು. ಆದ್ದರಿಂದ ಒಂದು ಸೂಕ್ತದಲ್ಲಿರುವ ಮಂತ್ರಗಳಿಗೆಲ್ಲಾ ಒಬ್ಬನೇ ಋಷಿಯು ದ್ರಷ್ಟೃವಾಗಿದ್ದಲ್ಲಿ ಆ ಸೂಕ್ತಕ್ಕೆ ಋಷಿಸೂಕ್ತವೆಂದು ಹೆಸರು. ಏಕೆಂದರೆ ಆ

Different kinds of hymns.

12. Therefore one familiar with(the)applciation (of formulas) should in every formula, carefully observe the deity, with regard to name, and the multiplicity of the designations (of deities).

13. The complete utterance of a seer is designated a hymn (ಸೂಕ್ತ), in which the deities appear in one, in many, (or) in two (formulas).

14, 15. A variety arises with regard to the deity, the authorship, the object, and the metre. All hymns which are revealed as the praise of one single (seer constitute) a seer's hymn (ಋಷಿಸೂಕ್ತ); for that is the (aggregate)

ಸಮಾನಛಂದಸೋ ಯಾಃ ಸ್ಯುಸ್ತಚ್ಛಂದಃಸೂಕ್ತಮುಚ್ಯತೇ ।
ವೈವಿಧ್ಯಮೇವಂ ಸೂಕ್ತಾನಾಮಿಹ ವಿದ್ಯಾದ್ಯಥಾತಥಂ ॥ ೧೬ ॥
ದೇವತಾನಾಮಧೇಯಾನಿ ಮಂತ್ರೇಷು ತ್ರಿವಿಧಾನಿ ತು ।
ಸೂಕ್ತಭಾಂಜ್ಯಥವರ್ಚ್ಚಂಜಿ ತಥಾ ನೈಪಾತಿಕಾನಿ ತು ॥ ೧೭ ॥
ಸೂಕ್ತಭಾಂಜಿ ಭಜಂತೇ ವೈ ಸೂಕ್ತಾನ್ಯೃಗ್ಭಂಜಿ ವೈ ಋಚಃ ।
ಮಂತ್ರೇಽನ್ಯದೈವತೇಽನ್ಯಾನಿ ಸಿಗದ್ಯಂತೇಽತ್ರ ಕಾನಿಚಿತ್ ॥ ೧೮ ॥

ಸೂಕ್ತಕ್ಕೆಲ್ಲಾ ಒಬ್ಬನೇ ಋಷಿಯು. ಒಂದು ಸೂಕ್ತದಲ್ಲಿ ಅಥವಾ ಒಂದು ಸೂಕ್ತದ ಬಹುಭಾಗ ಮಂತ್ರಗಳಲ್ಲಿ ಒಂದು ವಿಷಯವು ಪೂರ್ತಿಯಾಗಿ ಪ್ರತಿಪಾದಿತವಾಗಿದ್ದರೆ (ವಿವರಿಸಿದ್ದರೆ) ಆ ಸೂಕ್ತಕ್ಕೆ ಅರ್ಥಸೂಕ್ತವೆಂದು ಹೆಸರು.

16. ಒಂದು ಸೂಕ್ತದಲ್ಲಿರುವ ಋಕ್ಕುಗಳೆಲ್ಲಾ ಒಂದೇ (ಸಮಾನ) ಛಂದಸ್ಸಿನವಾಗಿದ್ದರೆ ಆ ಸೂಕ್ತಕ್ಕೆ ಛಂದಸ್ಸೂಕ್ತವೆಂದು ಹೆಸರು. (ಕೆಲವು ಸೂಕ್ತಗಳಲ್ಲಿ ಎಲ್ಲಾ ಋಕ್ಕುಗಳು ಒಂದೇ ಛಂದಸ್ಸಿನವಾಗಿರುವವು. ಕೆಲವು ಸೂಕ್ತಗಳಲ್ಲಿ ಆ ರೀತಿ ಇಲ್ಲದೆ ಬೇರೆಬೇರೆ ಛಂದಸ್ಸಿನ ಮಂತ್ರಗಳಿರುವವು). ಆದ್ದರಿಂದ ಋಷಿದೇವತಾಛಂದಸ್ಸಿಗನುಸಾರವಾಗಿ ಸೂಕ್ತಗಳನ್ನು ಋಷಿಸೂಕ್ತ, ದೇವತಾ (ಅಥವಾ ವಿಷಯ) ಅಥವಾ ಅರ್ಥಸೂಕ್ತ ಮತ್ತು ಛಂದಸ್ಸೂಕ್ತವೆಂದು ಸೂಕ್ತಗಳು ಮೂರುವಿಧವಾಗಿರುವವು ಎಂದು ತಿಳಿಯಬೇಕು.

ಸೂಕ್ತಭಾಂಜಿ, ಋಗ್ಭಾಂಜಿ, ನೈಪಾತಿಕ ಎಂಬ ಮೂರುವಿಧ ಸೂಕ್ತಗಳು

17. ಸೂಕ್ತಗಳಲ್ಲಿ ದೇವತೆಗಳ ಹೆಸರು ಮೂರುವಿಧವಾಗಿ ಪಠಿತವಾಗಿರುವುದು. ಅವುಗಳಿಗೆ ಕ್ರಮವಾಗಿ ಸೂಕ್ತಭಾಂಜಿ, ಋಗ್ಭಾಂಜಿ, ನೈಪಾತಿಕ ಎಂದು ಹೆಸರು.

18. ಸೂಕ್ತದ ಎಲ್ಲಾ ಮಂತ್ರಗಳಲ್ಲಿಯೂ ಒಂದು ದೇವತೆಯ ಹೆಸರಿದ್ದರೆ (ಅಥವಾ ಆ ದೇವತೆಯು ಪ್ರತಿಪಾದಿತವಾಗಿದ್ದರೆ) ಆ ಸೂಕ್ತಕ್ಕೆ ಸೂಕ್ತಭಾಂಜಿ ಎಂದು ಹೆಸರು. ಹಾಗಿಲ್ಲದೆ ದೇವತೆಯ ಹೆಸರು ಒಂದು ಋಕ್ಕಿನಲ್ಲಿ ಮಾತ್ರ ಪಠಿತವಾಗಿದ್ದರೆ ಅದು ಋಗ್ಭಾಂಜಿ ಎನಿಸುವುದು. ಮತ್ತೆ ಕೆಲವು ಸಂದರ್ಭಗಳಲ್ಲಿ ಒಂದು ಋಕ್ಕಿನಲ್ಲಿ ಪ್ರತಿಪಾದಿತವಾಗಿರುವ ದೇವತೆ ಅಥವಾ ವಿಷಯದ ಜತೆಗೆ ಪ್ರಸ್ತಾಪವಾಗಿ ಬೇರೆ ದೇವತೆಯ (ಅಥವಾ ವಿಷಯದ) ಹೆಸರು ಪಠಿತವಾಗಿದ್ದರೆ ಅದಕ್ಕೆ ನೈಪಾತಿಕವೆಂದು ಹೆಸರು.

---

hymn ot that seer. In so far as a subject is completed (in sevaral stanzas), they call it a subject-hymn (ಅರ್ಥಸೂಕ್ತ).

16. (The stanzas which have a common metre are ealled a metre-hymn (ಛಂದಃಸೂಕ್ತ). Thus one should here recognize the variety of hymns such as it really is.

4. Hymn-deities, stanza-deities, incidental-deities.

17. The denominations of the deities in the formulas are of three kinds: such as belong to a (whole) hymn, or such as belong to a stanza (only) as well as such as are incidental.

18. (Names) belonging to hymns belong to (whole) hymns, those belonging to stanzas belong to (single) stanzas (only). In a formula addressed to one divinity certain other (names) are here mentined.

ಸಾಲೋಕ್ಯಾತ್ಸಾಹಚರ್ಯಾದ್ವಾ ತಾನಿ ನೈಪಾತಿಕಾನಿ ತು ।
ತಸ್ಮಾದ್ಬಹುಪ್ರಕಾರೇऽಪಿ ಸೂಕ್ತೇ ನ್ಯಾತ್ಸೂಕ್ತಭಾಗಿನೀ ॥ ೧೯ ॥
ದೇವತಾ ತದ್ಯಥಾ ಸೂಕ್ತಮವಿಶೇಷ್ಯಂ ಪ್ರತೀಯತೇ ।
ಭಿನ್ನೇ ಸೂಕ್ತೇ ವದೇದೇವ ದೇವತಾಮಿಹ ಲಿಂಗತಃ ॥ ೨೦ ॥
ತತ್ರ ತತ್ರ ಯಥಾವಚ್ಚ ಮಂತ್ರಾನ್ಕರ್ಮಸು ಯೋಜಯೇತ್ ।
ದೇವತಾಯಾಃ ಪರಿಜ್ಞಾನಾತ್ತದ್ಧಿ ಕರ್ಮ ಸಮೃಧ್ಯತೇ ॥ ೨೧ ॥
ಆದ್ಯಂತಯೋಸ್ತು ಸೂಕ್ತಾನಾಂ ಪ್ರಸಂಗಪರಿಕೀರ್ತನಾತ್ ।
ಸ್ತೋತೃಭಿರ್ದೇವತಾ ನಾಮ್ನಾ ಉಪೇಕ್ಷೇತೇಹ ಮಂತ್ರವಿತ್ ॥ ೨೨ ॥

19. ಒಂದು ದೇವತೆಯನ್ನು ಸ್ತುತಿಸುವಾಗ ಪ್ರಸ್ತಾಪವಾಗಿ ಅದೇ ಲೋಕದ (ಪೃಥಿವಿ, ಅಂತರಿಕ್ಷ, ಸ್ವರ್ಗ) ಇತರ ದೇವತೆಯ ಅಥವಾ ಆ ದೇವತೆಗೆ ಸಂಬಂಧಪಟ್ಟ (ಸಾಹಚರ್ಯ) ಇತರ ದೇವತೆಯ ವಿಷಯವಿವರಣೆ ಇರಬಹುದು. ಹಾಗಿದ್ದಲ್ಲಿ ಅಂತಹ ಸೂಕ್ತಗಳು ನೈಪಾತಿಕವೆನಿಸುವವು. ಆದ್ದರಿಂದ ಸೂಕ್ತಭಾಂಜಿ ಎಂಬ ವಿಧದ ಸೂಕ್ತಗಳಲ್ಲಿ ಅನೇಕಪ್ರಕಾರವಿರಬಹುದು.

20. ಒಂದು ಸೂಕ್ತ ಅಥವಾ ಮಂತ್ರದ ದೇವತೆಯನ್ನು ನಿಷ್ಕೃಷ್ಟವಾಗಿ ಹೆಸರಿನಿಂದ ತಿಳಿಸದಿದ್ದರೆ ಅಂತಹ ಸಂದರ್ಭದಲ್ಲಿ ಆ ಸೂಕ್ತದ (ಅಥವಾ ಮಂತ್ರದ) ಶಬ್ದಗಳನ್ನೋ ಅರ್ಥವನ್ನೋ ವಿಂಗಡಿಸಿ (ಬೇರೆ ಮಾಡಿ) ಅದರಿಂದ ಸೂಚಿತವಾಗುವ ಆರ್ಥಕ್ಕನುಸಾರವಾಗಿ ಆ ಸೂಕ್ತದ ಅಥವಾ ಮಂತ್ರದ ದೇವತೆಯನ್ನು ತಿಳಿಯಬಹುದು.

21. ಯಜ್ಞಾದಿಕರ್ಮಗಳಲ್ಲಿ ಉಪಯೋಗಿಸುವ ಮಂತ್ರಗಳ ದೇವತೆಗಳನ್ನು ಸರಿಯಾಗಿ ತಿಳಿದುಕೊಂಡು ಆಯಾ ಸಂದರ್ಭಾನುಸಾರವಾಗಿ ಮಂತ್ರಗಳನ್ನು ಉಪಯೋಗಿಸಬೇಕು. ಮಂತ್ರಪ್ರತಿಪಾದ್ಯದೇವತೆಗಳನ್ನು ಚೆನ್ನಾಗಿ ತಿಳಿದುಕೊಂಡು ಕರ್ಮಾಚರಣೆಮಾಡುವುದರಿಂದ ಕರ್ಮಸಾಫಲ್ಯವುಂಟಾಗುವುದು.

ಹೆಸರುಗಳ ಸ್ವರೂಪ ಮತ್ತು ಅವು ಹೇಗೆ ಉತ್ಪತ್ತಿಯಾದವು ?

22. ಸ್ತುತಿಕರ್ತರಾದ ಋಷಿಗಳು ಸಾಧಾರಣವಾಗಿ ಸೂಕ್ತಗಳ ಪ್ರಾರಂಭದಲ್ಲಿಯೂ, ಕೊನೆಯಲ್ಲಿಯೂ ಸೂಕ್ತದ ವಿಷಯವನ್ನು ಪ್ರಸ್ತಾಪಮಾಡಿರುವುದರಿಂದ ಮಂತ್ರಜ್ಞನಾದ ಪುರುಷನು ಸೂಕ್ತದಲ್ಲಿ ಪ್ರತಿಪಾದಿತರಾದ ದೇವತೆಗಳ ಹೆಸರುಗಳನ್ನು ವಿಮರ್ಶಿಸಿ ನಿಶ್ಚಯಿಸಬಹುದು.

---

19. either because they belong to the same world or because they are associated : these are incidental. Hence even in a hymn of manifold character, there may belong to the (whole) hymn.

20. a deity : that is, (such) a hymn is understoood to be one that cannot be definitely described. When a hymn is broken up (ಭಿನ್ನೇ), one should here state the deity from (its) characteristic mark.

21. In each case one should duly connect the formulas with the rites by ascertaining the deity ; for that is the rite which is completely successful.

5. Origin of names.

22. Because the praisers, at the beginning and end of hymns, proclaim the occasion, one who knows formulas should here observe the deities with regard to their names.

ತತ್ಪಲ್ವಾಹುಃ ಕತಿಭ್ಯಸ್ತು ಕರ್ಮಭ್ಯೋ ನಾಮ ಜಾಯತೇ ।
ಸತ್ತ್ವನಾಂ ವೈದಿಕಾನಾಂ ವಾ ಯದ್ವಾನ್ಯದಿಹ ಕಿಂಚನ ॥ ೨೩ ॥

ನವಭ್ಯ ಇತಿ ನೈರುಕ್ತಾಃ ಪುರಾಣಾಃ ಕವಯಶ್ಚ ಯೇ ।
ಮಧುಕಃ ಶ್ವೇತಕೇತುಶ್ಚ ಗಾಲವಶ್ಚೈವ ವನ್ವತೇ ॥ ೨೪ ॥

ನಿವಾಸಾತ್ಕರ್ಮಣೋ ರೂಪಾನ್ಮಂಗಲಾದ್ವಾಚ ಆಶಿಷಃ ।
ಯದೃಚ್ಛಯೋಪವಸನಾತ್ತಥಾಮುಷ್ಯಾಯಣಾಚ್ಚ ಯತ್ ॥ ೨೫ ॥

ಚತುರ್ಭ್ಯ ಇತಿ ತತ್ರಾಹುರ್ಯಾಸ್ಕಗಾರ್ಗ್ಯರಥೀತರಾಃ ।
ಆಶಿಷೋಽರ್ಥಾರ್ಥವೈರೂಪ್ಯಾದ್ವಾಚಃ ಕರ್ಮಣ ಏವ ಚ ॥ ೨೬ ॥

23. ಆಯಾ ದೇವತೆಗಳಿಗೆ ಆಯಾ ಹೆಸರುಗಳು ಹೇಗೆ ಬಂದಿತು ಎಂಬ ವಿಷಯದಲ್ಲಿ,—ಆ ದೇವತೆಗಳು ನೆರವೇರಿಸಿದ ಕರ್ಮಗಳು ಯಾವುವು ? ಅಂತಹ ಎಷ್ಟು ಕಾರ್ಯಗಳಿಂದ ಆ ಹೆಸರು ಬಂದಿತು ? ಎಂಬುದನ್ನು ತಿಳಿದವರು ಹೇಳುವರು. ಈ ವಿಧವಾದ ಹೆಸರುಗಳು ವೇದಗಳಲ್ಲಿ ಸೂಚಿತವಾಗಿರುವ ಅಥವಾ ಇತರವಿಧವಾಗಿ ಅಲ್ಲಲ್ಲಿ ಪಠಿತವಾಗಿರುವ ಹೆಸರುಗಳ ವಿಷಯದಲ್ಲಿಯೂ ಅನ್ವಯಿಸುವುದು.

24. ನಾಮ (ಹೆಸರು) ಎಂಬ ಶಬ್ದವು ನವ (ಒಂಭತ್ತು) ಎಂಬ ಶಬ್ದದಿಂದ ನಿಷ್ಪನ್ನವಾಗಿರುವುದೆಂದು ನಿರುಕ್ತಕಾರರೂ, ಪೂರ್ವೀಕರಾದ ಕವಿಗಳೂ, ಮಧುಕ, ಶ್ವೇತಕೇತು, ಗಾಲವ ಮೊದಲಾದವರೂ ಅಭಿಪ್ರಾಯ ಪಡುವರು.

25. ಹೇಗೆಂದರೆ, ಒಂದು ವ್ಯಕ್ತಿಗೆ ಒಂದು ಹೆಸರು ಬರಬೇಕಾದರೆ ಆ ವ್ಯಕ್ತಿಯ ನಿವಾಸಸ್ಥಾನ, ಅದು ಮಾಡುವ ಕಾರ್ಯ, ಅದರ ರೂಪ, ಮಂಗಳ, ವಾಕ್ಯ, ಪ್ರಾರ್ಥನೆ, ಸಂದರ್ಭ, ಅದರ ರೀತಿನೀತಿಗಳು ಇವುಗಳ ಸಂಪರ್ಕದಿಂದ ಒಂದು ವ್ಯಕ್ತಿಗೆ ಒಂದು ನಿರ್ದಿಷ್ಟವಾದ ಹೆಸರು ಬರಬಹುದು.

26. ಒಂದು ವ್ಯಕ್ತಿಗೆ ಒಂದು ನಿರ್ದಿಷ್ಟವಾದ ಹೆಸರು ರೂಢಿಯಲ್ಲಿ ಬರುವ ವಿಷಯದಲ್ಲಿ—ಪ್ರಾರ್ಥಿಸುವುದು, (ಆಶಿಷಃ) ಉದ್ದಿಷ್ಟವಿಷಯಗಳಲ್ಲಿ ವೈವಿಧ್ಯತೆ, ಉಚ್ಚರಿಸುವ ವಾಕ್ಯಗಳು, ಮಾಡುವ ಕರ್ಮಗಳು ಎಂಬ ಈ ನಾಲ್ಕು ವಿಧದಿಂದ ಆಯಾ ವ್ಯಕ್ತಿಗೆ ಆಯಾ ಹೆಸರು ಬರುವುದು ಎಂದು ಯಾಸ್ಕರು ಗಾರ್ಗ್ಯರು, ರಥೀತರ ಎಂಬ ಆಚಾರ್ಯರುಗಳು ಹೇಳುವರು.

---

23. As to that, indeed, they say : 'from how many actions does a name arise, whether of Vedic beings or any other (name occurring) here' ?

24. 'From nine,' say the etymologists, and the ancient sages Madhuka, Svetaketu, and Galava think so too:

25. '(viz) that which (comes) from abode, action, form, luck, speech prayer, from accideut, as well as addiction aud extraction.'

26. With regard to that (question), Yaska, Gargya, rnd Rathitara say, 'from four : from prayer, from the diversity of objects, from speech. and from action.

ಸರ್ವಾಣ್ಯೇತಾನಿ ನಾಮಾನಿ ಕರ್ಮತಸ್ತ್ವಾಹ ಶೌನಕಃ ।
ಆಶೀ ರೂಪಂ ಚ ವಾಚ್ಯಂ ಚ ಸರ್ವಂ ಭವತಿ ಕರ್ಮತಃ ॥ ೨೭ ॥
ಯದೃಚ್ಛಯೋಪಪನ್ನಾತ್ತಥಾಮುಷ್ಯಾಯಣಾಚ್ಚ ಯತ್ ।
ತಥಾ ತದಪಿ ಕರ್ಮೈವ ತಚ್ಛೃಣುಧ್ವಂ ಚ ಹೇತವಃ ॥ ೨೮ ॥
ಪ್ರಜಾಃ ಕರ್ಮಸಮುತ್ಥಾ ಹಿ ಕರ್ಮತಃ ಸತ್ತ್ವಸಂಗತಿಃ ।
ಕ್ವಚಿತ್ಸಂಜಾಯತೇ ಸಚ್ಚ ನಿವಾಸಾತ್ತತ್ಪ್ರಜಾಯತೇ ॥ ೨೯ ॥
ಯಾದೃಚ್ಛಿಕಂ ತು ನಾಮಾಭಿ ಧೀಯತೇ ಯತ್ರ ಕುತ್ರಚಿತ್ ।
ಔಪಮ್ಯಾದಪಿ ತದ್ವಿದ್ಯಾದ್ಭಾವಸ್ಯೈ ವೇಹ ಕಸ್ಯಚಿತ್ ॥ ೩೦ ॥

ಶೌನಕರ ಮತವು; ವ್ಯಕ್ತಿಗೆ ಹೆಸರುಗಳು ವ್ಯಕ್ತಿಯ ಕರ್ಮಗಳಿಂದಲೇ ಉಂಟಾಗುವವು

27. ಆಯಾ ವ್ಯಕ್ತಿಗಳಿಗೆ ಆಯಾ ಹೆಸರು ಬರಲು ಕಾರಣವೇನೆಂದರೆ—ಆ ವ್ಯಕ್ತಿಯು ಮಾಡುವ ಕರ್ಮ, ಹಾರೈಕೆ, ಅದರ ರೂಪ ಮತ್ತು ಉಚ್ಚರಿಸುವ (ಆಡುವ) ಮಾತು ಇವುಗಳಿಂದ ಮಾತ್ರ ಒಂದು ನಿರ್ದಿಷ್ಟವಾದ ಹೆಸರು ರೂಢಿಯಲ್ಲಿ ಬರುವುದೆಂದು ಶೌನಕಮಹರ್ಷಿಯ ಅಭಿಮತವು.

28. ಹಾಗೆಯೇ, ಒಂದು ವ್ಯಕ್ತಿಗೆ ಒಂದು ಹೆಸರು ಕಾರಣಾಂತರದಿಂದ ಅಥವಾ ಸಂದರ್ಭಾನುಸಾರ ಬಂತೆಂದು ಹೇಳುವಾಗಲೂ ಆ ಹೆಸರು ಬರಲು ಆ ವ್ಯಕ್ತಿಯ ಕರ್ಮವೇ ಮುಖ್ಯಕಾರಣವು. ಅದಕ್ಕೆ ಕಾರಣವನ್ನು ಹೇಳುವೆನು, ಕೇಳಿ.

29. ಪ್ರಾಣಿಗಳು ಕರ್ಮದಿಂದಲೇ ಉತ್ಪನ್ನವಾಗುವವು. ಆ ಕರ್ಮವೆಂಬುದು ಸ್ತ್ರೀಪುರುಷಪ್ರಾಣಿಗಳ ಸಮಾಗಮವೇ ಆಗಿದೆ. ಇಂತಹ ಸಮಾಗಮದಿಂದ ಎಲ್ಲಿಯೋ ಒಂದು ಸ್ಥಳದಲ್ಲಿ ಒಂದು ಪ್ರಾಣಿಯ ಉತ್ಪತ್ತಿಯಾಗುವುದು. ಅದು ಪ್ರಾಣಿಯ ನಿವಾಸಸ್ಥಾನದಲ್ಲಿ (ಅಥವಾ ಶರೀರದಿಂದ) ಉತ್ಪನ್ನವಾಗುವುದು.

30. ಕಾರಣಾಂತರದಿಂದ ಸಂದರ್ಭಾನುಸಾರವಾಗಿ ಎಲ್ಲಯಾದರೂ ಒಂದು ಸ್ಥಳದಲ್ಲಿ ಒಂದು ವ್ಯಕ್ತಿಗೆ ಒಂದು ಹೆಸರು ಬಂದರೂ ಅದೂ ಸಹ ಅದೇ ವಿಧವಾಗಿರುವ ಬೇರೆ ರೂಪದ ಅಥವಾ ವ್ಯಕ್ತಿಯ ಹೋಲಿಕೆಯಿಂದ ಬಂದಿತೆಂದು ತಿಳಿಯಬಹುದು.

6. Saunaka's view: all names derived from action.

27. Saunaka, however, says that all these names (come) from action: prayer and form and utterance, all arise from action.

28. Similarly, even that (name) which (comes) from accident, as well as from addition and extraction, is simply action: and so hear (what) the reasons (are).

29. Creatures arise from action; from action (comes) the intercourse of beings. And a being comes into existence somewhere; it is produced from (its) abode.

30. An accidental name is given somewhere or other: one should know that that also is here (derived from a comparison with some (form of) becoming.

ನಾಕರ್ಮಕೋಽಸ್ತಿ ಭಾವೋ ಹಿ ನ ನಾಮಾಸ್ತಿ ನಿರರ್ಥಕಂ ।
ನಾನ್ಯತ್ರ ಭಾವಾನ್ನಾಮಾನಿ ತಸ್ಮಾತ್ಸರ್ವಾಣಿ ಕರ್ಮತಃ ॥ ೩೧ ॥
ಮಂಗಲಾತ್ಕ್ರಿಯತೇ ಯಚ್ಚ ನಾಮೋಪವಸನಾಚ್ಚ ಯತ್ ।
ಭವತ್ಯೇವ ತೂ ಸಾ ಹ್ಯಾಶೀಃ ಸ್ವಸ್ತ್ಯಾದೇರ್ಮಂಗಲಾದಿಹ ॥ ೩೨ ॥
ಅಪಿ ಕುತ್ಸಿತನಾಮಾಯಮಿಹ ಜೀವೇತ್ಕಥಂ ಚಿರಂ ।
ಇತಿ ಕ್ರಿಯಂತೇ ನಾಮಾನಿ ಭೂತಾನಾಂ ವಿದಿತಾನ್ಯಪಿ ॥ ೩೩ ॥
ಮಂತ್ರಾ ನಾನಾಪ್ರಕಾರಾಃ ಸುದೃಷ್ಟಾ ಯೇ ಮಂತ್ರದರ್ಶಿಭಿಃ ।
ಸ್ತುತ್ಯಾ ಚೈವ ವಿಭೂತ್ಯಾ ಚ ಪ್ರಭಾವಾದ್ದೇವತಾತ್ಮನಃ ॥ ೩೪ ॥

31. ಯಾವ ವ್ಯಕ್ತಿಗೆ ಯಾವ ಹೆಸರು ಬರಬೇಕಾದರೂ ಆ ಹೆಸರು ಆ ವ್ಯಕ್ತಿಯು ಮಾಡುವ ಕರ್ಮಕ್ಕೆ ಸಂಬಂಧವಿಲ್ಲದೆ ಇರುವುದಿಲ್ಲ. ಆದ್ದರಿಂದ ಯಾವ ಹೆಸರೂ ಅರ್ಥರಹಿತವಾಗಿರುವುದಿಲ್ಲ. ಕರ್ಮಸಂಬಂಧವಿಲ್ಲದೆ ಯಾವ ಹೆಸರೂ ಉಂಟಾಗುವುದಿಲ್ಲ. ಆದ್ದರಿಂದ ಎಲ್ಲಾ ಹೆಸರುಗಳೂ ಆಯಾ ವ್ಯಕ್ತಿಗೆ ಸಂಬಂಧಪಟ್ಟ ಕರ್ಮಗಳಿಂದಲೇ ಉಂಟಾಗಿರುವವು.

ಮಂಗಲಕರವಾದ ಹೆಸರುಗಳು; ನಾನಾವಿಧ ಮಂತ್ರಗಳು

32. ಮಂಗಲಕರವಾದ ಕರ್ಮಗಳಿಂದಲೂ, ಅಂತಹ ಕರ್ಮಗಳ ಸಾಹಚರ್ಯದಿಂದಲೂ ಉಂಟಾಗುವ ಹೆಸರು ಪ್ರಾರ್ಥನೆ ಅಥವಾ ಆಶಿಸನೆನಿಸುವುದು. ಸ್ವಸ್ತಿ ಮೊದಲಾದ ಮಂಗಳಕರವಾದ ಶಬ್ದಗಳ ಉಚ್ಚಾರದಿಂದ ಆ ಹೆಸರು, ಮಂಗಲಕರವಾಗಿಯೇ ಇರುವುದು.

33. ಪ್ರಾಣಿಗಳ ಅದರಲ್ಲಿಯೂ ಪ್ರಸಿದ್ಧವಾದ ಪ್ರಾಣಿಗಳ ಹೆಸರುಗಳೂ ಸಹ ಈ ನಿಯಮವನ್ನೇ ಅನುಸರಿಸಿ ಉಂಟಾಗಿರುವವು. ಕೆಟ್ಟ ಅಥವಾ ದುಷ್ಟಪ್ರಾಣಿಗಳ ಹೆಸರು (ಅಥವಾ ಕೆಟ್ಟ ಮನುಷ್ಯನ ಹೆಸರು) ಬಹುಕಾಲ ಹೇಗೆ ತಾನೆ ಬಳಕೆಯಲ್ಲಿರುವುದು?

34. ಮಂತ್ರಪ್ರಷ್ಟೃಗಳಾದ ಋಷಿಗಳಿಂದ ದೃಷ್ಟವಾದ ಮಂತ್ರಗಳು ಸ್ತುತಿಯಿಂದಲೂ ಮಹಿಮೆಯಿಂದಲೂ ಸ್ತುತ್ಯರಾದ ದೇವತೆಗಳ ಪ್ರಭಾವದಿಂದಲೂ ಕೂಡಿ ನಾನಾಪ್ರಕಾರವಾಗಿರುವವು.

---

31. For there is no (form of) becoming unconnected with action, nor is any name meaningless. Names have no other source than becoming; therefore they are all derived from action.

7. Auspicious names. Different kinds of formulas.

32. A name which is formed from luck and from addition simply becomes a prayer: from (words expressing) luck, such as स्वस्ति (welfare).

33. Names of beings, even the well-known ones are formed on the principle, 'how, pray, could this man, with such a contemptible name, live long here?'

34. The formulas which have been seen by the seers of such may be of various sorts both with respect to the (kind of) praise and to the (degree of) majesty (arising) from the prominence of a deity's nature.

ಸ್ತುತಿಃ ಪ್ರಶಂಸಾ ನಿಂದಾ ಚ ಸಂಶಯಃ ಪರಿದೇವನಾ ।
ಸ್ಪೃಹಾಶೀಃ ಕತ್ಥನಾ ಯಾಚ್ಞಾ ಪ್ರಶ್ನಃ ಪ್ರೈಷಃ ಪ್ರವಹ್ಲಿಕಾ ॥ ೩೫ ॥

ನಿಯೋಗಶ್ಚಾನುಯೋಗಶ್ಚ ಶ್ಲಾಘಾ ವಿಲಪಿತಂ ಚ ಯತ್ ।
ಆಚಿಖ್ಯಾಸಾಥ ಸಂಲಾಪಃ ಪವಿತ್ರಾಖ್ಯಾನಮೇವ ಚ ॥ ೩೬ ॥

ಆಹನಸ್ಯಾ ನಮಸ್ಕಾರಃ ಪ್ರತಿರಾಧಸ್ತಥೈವ ಚ ।
ಸಂಕಲ್ಪಶ್ಚ ಪ್ರಲಾಪಶ್ಚ ಪ್ರತಿವಾಕ್ಯಂ ತಥೈವ ಚ ॥ ೩೭ ॥

ಪ್ರತಿಷೇಧೋಪದೇಶೌ ಚ ಪ್ರಮಾದಾಪಹ್ನವೌ ಚ ಹ ।
ಉಪಪ್ರೈಷಶ್ಚ ಯಃ ಪ್ರೋಕ್ತಃ ಸಂಜ್ವರೋ ಯಶ್ಚ ವಿಸ್ಮಯಃ ॥ ೩೮ ॥

ಅರ್ಥಾನುಸಾರವಾಗಿ ಮಂತ್ರಗಳು ಅನೇಕವಿಧವಾಗಿರುವವು.

35. ಮಂತ್ರಗಳು ಅರ್ಥಾನುಸಾರವಾಗಿ ಅನೇಕವಿಧವಾಗಿರುವವು ಎಂದರೆ ಮಂತ್ರಗಳಲ್ಲಿ ಈ ಕೆಳಗೆಕಂಡ ಅರ್ಥವು ಸೂಚಿತವಾಗಿರುವುವು—(1) ಸ್ತುತಿ (2) ಪ್ರಶಂಸೆ (3) ನಿಂದೆ (4) ಸಂಶಯ (5) ವಿಷಾದ (6) ಇಚ್ಛೆ (7) ಆಶಿಸ (8) ಜಂಭ (9) ಯಾಚಿಸುವುದು (10) ಪ್ರಶ್ನೆ (11) ಹೇಳಿ ತಿಳಿಸುವುದು (12) ಸಂಶಯಪಡುವುದು.

36. (13) ನಿಯೋಗ ಅಥವಾ ತಿಳಿಸುವುದು (14) ನಿಯಮಿಸುವುದು (15) ಹೊಗಳುವುದು ಅಥವಾ ಸ್ವಪ್ರಶಂಸೆ (16) ವ್ಯಸನ (17) ಮಾತಿನಿಂದ ಹೇಳುವುದು ಅಥವಾ ವಿವರಿಸುವುದು (18) ಪರಸ್ಪರ ಸಂಭಾಷಣೆ (19) ಪವಿತ್ರ ಅಥವಾ ಶುದ್ಧವಾದ ಉಪಾಖ್ಯಾನ.

37. (20) ಆಹನನ (21) ನಮಸ್ಕಾರ (22) ವಿಘ್ನ (23) ಸಂಕಲ್ಪ ಅಥವಾ ನಿಶ್ಚಯ (24) ಹರಟೆ (25) ಪ್ರತ್ಯುತ್ತರ.

38. (26) ಪ್ರತಿಷೇಧ ಅಥವಾ ನಿಷೇಧ (27) ಉಪದೇಶ (28) ಮದ ಅಥವಾ ಮರೆವು (29) ತಿರಸ್ಕಾರ (30) ಹೇಳಿಕಳುಹಿಸಿ ಕರೆಸುವುದು (31) ಪೇಚಾಟ (32) ಆಶ್ಚರ್ಯ.

---

35. Praise (47), laudation (48), blame (49), donbt (51), plaint (50), desire (53), prayer (50), boasting (51), request (49), question (50), summons enigma (57).

36, commission (51), injuction (52), vaunt (53), lament (53) narration (58), conversation (52), purifying narrative (53).

8. Different kinds of formulas and modes of expression.

37. Lascivious verses (55), obeisance (54), obstacle (55), resolve (55), prattle (55), reply (50);

38. prohibition and admonition (52), intoxication and denial (56, 57), and whai is called invitation (56), agitation (56), and wonder (57);

ಆಕ್ರೋಶೋಽಭಿಷ್ಟವಶ್ಚೈವ ಕ್ಷೇಪಃ ಶಾಪಸ್ತಥೈವ ಚ ।
ಉಪಸರ್ಗೋ ನಿಪಾತಶ್ಚ ನಾಮ ಚಾಖ್ಯಾತಮಿತ್ಯಪಿ ॥ ೩೯ ॥

ಭೂತಂ ಭವ್ಯಂ ಭವಿಷ್ಯಂ ಚ ಪುಮಾನ್ ಸ್ತ್ರೀ ಚ ನಪುಂಸಕಂ ।
ಏವಂಪ್ರಕೃತಯೋ ಮಂತ್ರಾಃ ಸರ್ವವೇದೇಷು ಸರ್ವಶಃ ॥ ೪೦ ॥

ವಾಕ್ಯಾರ್ಥದರ್ಶನಾರ್ಥೀಯಾ ಋಚೋಽರ್ಧರ್ಚಾಃ ಪದಾನಿ ಚ ।
ಬ್ರಾಹ್ಮಣೇ ಚಾಥ ಕಲ್ಪೇ ಚ ನಿಗದ್ಯಂತೇಽತ್ರ ಕಾನಿ ಚಿತ್ ॥ ೪೧ ॥

ಶಬ್ದೇನೋಚ್ಚರಿತೇನೇಹ ಯೇನ ದ್ರವ್ಯಂ ಪ್ರತೀಯತೇ ।
ತದಕ್ಷರವಿಧೌ ಯುಕ್ತಂ ನಾಮೇತ್ಯಾಹುರ್ಮನೀಷಿಣಃ ॥ ೪೨ ॥

39. (33) ಕೋಪ ಅಥವಾ ಒಯ್ಯುವುದು (34) ಹೊಗಳುವುದು (35) ಇಲ್ಲದ್ದನ್ನು ಹುಟ್ಟಿಸಿ ಹೇಳುವುದು (36) ಶಾಪ ಎಂಬರ್ಥವಿರುವ ಮಂತ್ರಗಳು (37) ಉಪಸರ್ಗ (38) ನಿಪಾತ (ಅವ್ಯಯ) (39) ನಾಮಪದ ಅಥವಾ ಹೆಸರು (40) ಕ್ರಿಯಾಪದ.

40. (41) ಭೂತಕಾಲ (42) ವರ್ತಮಾನಕಾಲ (43) ಭವಿಷ್ಯತ್ಕಾಲ (44) ಪುಲ್ಲಿಂಗ (45) ಸ್ತ್ರೀಲಿಂಗ (46) ನಪುಂಸಕಲಿಂಗ ಇತ್ಯಾದಿ ವಿಭೇದಗಳಿಂದ ವೇದಗಳಲ್ಲಿರುವ ಮಂತ್ರಗಳು ನಾನಾಪ್ರಕಾರವಾಗಿರುವವು.

41. ಮಂತ್ರಾತ್ಮಕವಾದ ಋಕ್ಕುಗಳು, ಅರ್ಧ ಋಕ್ಕುಗಳು, ಪಾದಗಳು (ಅರ್ಧ ಋಕ್ಕಿನಲ್ಲಿ ಅರ್ಧಭಾಗಕ್ಕೆ ಪಾದವೆಂದು ಹೆಸರು) ವಾಕ್ಯದಲ್ಲಿ ಹೇಳಿರುವ ಅರ್ಥವನ್ನು ಒಳಗೊಂಡಿರುವವು. ಈ ವಿಧವಾದ ಋಕ್ಕುಗಳು, ವಾಕ್ಯಗಳು ಮೊದಲಾದವು ವೇದವಿವರಣೆಗಾಗಿ ರಚಿತವಾದ ಬ್ರಾಹ್ಮಣವೆಂಬ ಗ್ರಂಥಗಳಲ್ಲಿಯೂ, ಕರ್ಮಾನುಷ್ಠಾನ ವಿವರಣೆಗಾಗಿ ರಚಿತವಾಗಿರುವ ಕಲ್ಪ (ಸೂತ್ರಗ್ರಂಥಗಳು) ಗ್ರಂಥಗಳಲ್ಲಿಯೂ ಪ್ರಮಾಣ ಮತ್ತು ಉದಾಹರಣೆಯಾಗಿ ಅಲ್ಲಲ್ಲಿ ಹೇಳಲ್ಪಟ್ಟಿರುವವು.

42. ಶಬ್ದಗಳ ಉಚ್ಚಾರದ ಮೂಲಕ ನಾವು ಯಾವ ವಸ್ತುವನ್ನು ನಿರ್ದೇಶಿಸಿ ಹೇಳುವೆವೋ ಆ ವಸ್ತುವನ್ನೇ ಅಕ್ಷರಗಳ ಮೂಲಕ ಬರೆದು ಅಥವಾ ಉಚ್ಚರಿಸಿ ತಿಳಿಸುವಾಗ ಆ ಹೆಸರನ್ನು ನಾಮಪದವೆಂದು ತಿಳಿದವರು ಹೇಳುವರು.

---

39. abuse (48), eulogy, invective (49), curse (49, 58), preposition, particle, noun, and verb;

40. past, present, and future; masculine, feminine, neuter: of such a nature are the formulas in all the Vedas everywhere.

41. Stanzas, hemistichs, and verses are for the purpose of setting forth the object of (their) utterances; moreover, in Brahmana and ritual (ಕಲ್ಪ) some (of these stanzas &c.) here are quoted.

9. Definition of noun and verb.

42. The uttered sound by which we here apprehend a substantive, when connected in the (correct) disposition of syllables, the wise call 'noun' (name).

ಅಷ್ಟೌ ಯತ್ರ ಪ್ರಯುಜ್ಯಂತೇ ನಾನಾರ್ಥೇಷು ವಿಭಕ್ತಯಃ ।
ತನ್ನಾಮ ಕವಯಃ ಪ್ರಾಹುರ್ಭೇದೇ ವಚನಲಿಂಗಯೋಃ ॥ ೪೩ ॥
ಕ್ರಿಯಾಸು ಬಹ್ವೀಷ್ವಭಿಸಂಶ್ರಿತೋ ಯಃ ಪೂರ್ವಾಪರೀಭೂತ ಇಹೈಕ ಏವ ।
ಕ್ರಿಯಾಭಿನಿರ್ವೃತ್ತಿವಶೇನ ಸಿದ್ಧ ಆಖ್ಯಾತಶಬ್ದೇನ ತಮರ್ಥಮಾಹುಃ ॥ ೪೪ ॥
ಕ್ರಿಯಾಭಿಸಿರ್ವೃತ್ತಿವಶೋಪಜಾತಃ ಕೃದಂತಶಬ್ದಾಭಿಹಿತೋ ಯದಾ ಸ್ಯಾತ್ ।
ಸಂಖ್ಯಾವಿಭಕ್ತ್ಯವ್ಯಯಲಿಂಗಯುಕ್ತೋ ಭಾವಸ್ತದಾ ದ್ರವ್ಯಮಿವೋಪಲಕ್ಷ್ಯಃ ॥ ೪೫ ॥
ಯಥಾ ನಾನಾವಿಧೈಃ ಶಬ್ದೈರಪಶ್ಯನ್ನೃಷಯಃ ಪುರಾ ।
ವಿವಿಧಾನೀಹ ವಾಕ್ಯಾನಿ ತಾನ್ಯನುಕ್ರಮತಃ ಶೃಣು ॥ ೪೬ ॥

43. ಈ ನಾಮಪದಕ್ಕೆ ಏಕವಚನ, ದ್ವಿವಚನ, ಬಹುವಚನಗಳೆಂಬ ಮೂರು ವಚನಗಳಲ್ಲಿಯೂ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳೆಂಬ ಮೂರು ಲಿಂಗಗಳಲ್ಲಿಯೂ ಶಬ್ದದ ಅರ್ಥವ್ಯತ್ಯಾಸಗಳನ್ನು ತಿಳಿಸುವುದಕ್ಕಾಗಿ ಎಂಟು ವಿಧವಾದ ಪ್ರತ್ಯಯಗಳನ್ನು ಸೇರಿಸಿ ಎಂಟು ವಿಭಕ್ತಿಗಳಾಗುವಂತೆ ನಾನಾರ್ಥಗಳಲ್ಲಿ ಆ ಶಬ್ದವು ಉಪಯೋಗಿಸಲ್ಪಡುವುದೆಂದು ಪ್ರಾಜ್ಞರು ಹೇಳುವರು.

44. ಅನೇಕವಿಧವಾದ ಕರ್ಮಗಳ ಸಂಬಂಧದಲ್ಲಿ ಆ ಕರ್ಮಗಳಿಂದ ಸೂಚಿತವಾಗುವ ಒಂದು ಭಾವವು (ಅರ್ಥವು) ಕಾಲಾನಂತರ ಆ ಕ್ರಿಯೆಗಳಲ್ಲಿಯೇ ಐಕ್ಯವಾದ ಒಂದು ನಿರ್ದಿಷ್ಟವಾದ ಅರ್ಥವನ್ನು ಸೂಚಿಸುವ ಶಬ್ದಕ್ಕೆ (ಅಥವಾ ಕ್ರಿಯೆಗೆ) ಆಖ್ಯಾತ ಅಥವಾ ಕ್ರಿಯಾಪದವೆಂದು ಹೇಳುವರು.

45. ಒಂದು ಕ್ರಿಯೆಯಿಂದ ಉಂಟಾಗುವ ಭಾವನನ್ನು (ಅರ್ಥವನ್ನು) ಸೂಚಿಸುವ ಶಬ್ದವು ಪ್ರತ್ಯಯಾದಿಗಳಿಂದ ಸಹಿತವಾಗಿಯೂ, ಸಂಖ್ಯಾ, ವಿಭಕ್ತಿ, ಅವ್ಯಯ, ಲಿಂಗ ಮೊದಲಾದ ಅರ್ಥವನ್ನು ಸೂಚಿಸುವ ಪ್ರತ್ಯಯಗಳಿಂದ ಯುಕ್ತವಾಗಿಯೂ ಇರುವಾಗ ಆ ಶಬ್ದವು ಅಥವಾ ಭಾವವು ಒಂದು ನಿರ್ದಿಷ್ಟವಾದ ದ್ರವ್ಯವನ್ನು ಸೂಚಿಸುವುದು.

ನಾನಾವಿಧಶಬ್ದಯುಕ್ತವಾದ ನಾನಾವಿಧಮಂತ್ರಗಳು

46. ಪೂರ್ವದಲ್ಲಿ ಋಷಿಗಳು ನಾನಾವಿಧಶಬ್ದಗಳನ್ನು ಉಪಯೋಗಿಸಿ ನಾನಾವಿಧ ಅರ್ಥಗಳನ್ನೊಳಗೊಂಡ ವಾಕ್ಯಗಳನ್ನು ಹೇಗೆ ರಚಿಸಿದರೆಂಬ ವಿಷಯವನ್ನು ಕ್ರಮವಾಗಿ ವಿವರಿಸುವೆನು, ಕೇಳು.

---

43. That in which eight inflexions are employed in various senses, sages call a noun, when there is a distinction of number and gender.

44. That notion which, connected with many actions, becoming a later from an earlier, (and yet being) but one, is effected by the development of the action, they call bv the term 'verb'

45. When there is a becoming whieh arises from the development of an action, and which is designated by a term with a primary suffix, and which is joined with number, inflexion (or) indeclinable form (ಅವ್ಯಯ, and gender, then it is to be regarded as a substantivel(ದ್ರವ್ಯ).

10. Examples of different kinds of formulas.

46. Hear now, in succession, how the seers formerly with terms of different kinds saw their various utterances here.

ರೂಪಾದಿಭಿಃ ಸ್ತುತಿಃ ಪ್ರೋಕ್ತಾ ಆಶೀಃ ಸ್ವರ್ಗಾದಿಭಿಸ್ತಥಾ ।
ಯಾನಿ ವಾಕ್ಯಾನ್ಯೇತೋಽನ್ಯಾನಿ ತಾನ್ಯಪಿ ಸ್ಯುರನೇಕಧಾ ॥ ೪೭ ॥

ಮಂತ್ರೇ ಪ್ರಶಂಸಾ ಭೋಜಸ್ಯ ಚಿತ್ರ ಇತ್ಪ್ರೋಭರೇ ಸ್ತುತಿಃ ।
ಆಕ್ರೋಶಾರ್ಥಸ್ತು ದ್ವ್ಯಂಶೇ ಮಾತಾ ಚೇತ್ಯಭಿಮೇಥತಿ ॥ ೪೮ ॥

ಋಜಿಷ್ಮೋಘಮನ್ನಂ ನಿಂದಾ ಚ ಶಾಪೋ ಯೋ ಮೇತ್ಯೃಗೇವ ತು ।
ಯಾಚ್ಞಾ ಯದಿಂದ್ರ ಚಿತ್ರೇತಿ ಕ್ಷೇಪೋಽಭೀದಮಿತಿ ತೃಚೇ ॥ ೪೯ ॥

47. ಉತ್ತಮವಾದ ರೂಪಗಳ ವರ್ಣನೆಯಿಂದ ಸ್ತುತಿಯೆಂದು ಹೇಳಲ್ಪಡುವ ವಾಕ್ಯವುಂಟಾಗುವುದು. ಸ್ವರ್ಗ ಮೊದಲಾದ ಶಬ್ದಪ್ರಯೋಗದಿಂದ **ಆಶೀಃ** (ಪ್ರಾರ್ಥನೆ ಕೋರಿಕೆ) ಎಂಬ ವಾಕ್ಯಗಳು ನಿರ್ದಿಷ್ಟವಾಗುವವು. ಇವುಗಳಲ್ಲದೆ ಇನ್ನೂ ಅನೇಕ ವಿಧವಾದ ವಾಕ್ಯಗಳ ಪ್ರಯೋಗದಿಂದ ಅನೇಕ ವಿಧವಾದ ಅರ್ಥವನ್ನೊಳಗೊಂಡ ವಾಕ್ಯಗಳು ಸೂಚಿತವಾಗುವವು.

48. ನಾನಾವಿಧ ಅರ್ಥಗಳನ್ನೊಳಗೊಂಡ ಅನೇಕವಿಧ ಮಂತ್ರಗಳಿರುವವೆಂದು ಹಿಂದೆ (35-40 ನೇ ಶ್ಲೋಕಗಳಲ್ಲಿ ಹೇಳಿರುವ 46 ಪ್ರಭೇದಗಳು) ಹೇಳಿದೆಯಷ್ಟೆ ಅವುಗಳಲ್ಲಿ ಕೆಲವನ್ನು ಉದಾಹರಣೆಪೂರ್ವಕವಾಗಿ ವಿವರಿಸಲಾಗುವುದು—**ವಯೆಮು ತ್ವಾ** ಎಂಬ ಸೂಕ್ತದ (ಋ ಸಂ. 8 21-18) **ಚಿತ್ರ ಇತ್** ಎಂಬ ಕೊನೆಯ ಋಕ್ಕಿನಲ್ಲಿ ನುಂತ್ರ ದ್ರಪ್ಸ್ಯವಾದ ಸೋಭರಿಯೆಂಬ ಋಷಿಯು ಚಿತ್ರನೆಂಬ ರಾಜನ ದಾನಪ್ರಶಂಸೆಮಾಡಿರುವನು. ಇದು ಪ್ರಶಂಸೆಯನ್ನು ಸೂಚಿಸುವ ಋಕ್ಕಿಗೆ (35 ನೇ ಶ್ಲೋಕದಲ್ಲಿ 2 ನೇ ವಿಷಯ) ಉದಾಹರಣೆಯಾಗಿರುವುದು. ಆಕ್ರೋಶಾರ್ಥವನ್ನು (39-33) ಸೂಚಿಸುವ ಉದಾಹರಣೆಯು **ಮಾತಾ ಚ** ಎಂಬ ಋಕ್ಕಿನಲ್ಲಿರುವುದು.

49. **ಮೋಘಮನ್ನಂ** (10-117-6) ಎಂಬ ಋಕ್ಕು ನಿಂದೆಗೆ (35-3) ಉದಾಹರಣೆಯು; **ಯೋ ಮಾ** ಎಂಬ ಋಕ್ಕು (7-104-16) ಶಾಪಕ್ಕೆ (39-36) ಉದಾಹರಣೆಯು; **ಯದಿಂದ್ರ ಚಿತ್ರ** ಎಂಬ ಋಕ್ಕು (5-39-1) ಯಾಚನೆಗೆ (35-9) ಉದಾಹರಣೆಯು; **ಅಭೀ೩ದಂ** ಎಂಬ ಋಕ್ಕಿನಲ್ಲಿ (10-48-7) **ಕ್ಷೇಪ** ಎಂದರೆ ಇಲ್ಲದ್ದನ್ನು ಹುಟ್ಟಿಸಿ ಹೇಳಿರುವ ವಿಷಯವು ಅಥವಾ ಉತ್ಪ್ರೇಕ್ಷೆಯು ಉಕ್ತವಾಗಿದೆ.

47. By means of (attributing) beautiful form and so forth, praise (35) is pronounced; similarly prayer by (such terms as) heaven and so forth. The utterences which are different from these may also be of many kinds.

48. In the formula 'Citra indeed' (ಚಿತ್ರ ಇತ್ viii. 21-18) Sobhari's praise of the liberal giver is a laudation (35). (Formulas) expressive of abuse (39) appear: (e.g. the formula) in 'and thy mother' (ಮಾತಾ ಚ) reviles.

49. The stanza 'vain food' (ಮೋಘಮನ್ನಂ x 117. 6) is blame (35), while the stanza 'who me' (ಯೋ ಮಾ vii. 104. 16) is a curse (39). 'What, wondrous Indra' (ಯದಿಂದ್ರ ಚಿತ್ರ v. 39. 1) is a request (35), while in the stanza over this world (ಅಭೀದಂ x. 48. 7) there is invective (39).

ಅಶೀಸ್ತು ವಾತೇ ಅ ವಾತು ದಂಡೇತಿ ಪರಿದೇವನಾ ।
ಪೃಚ್ಛಾಮಿ ಪ್ರತಿವಾಕ್ಯಂ ಚ ಪೃಚ್ಛಾಮಿ ತ್ವೇತ್ಯೃಜೌ ಪೃಥಕ್ ॥ ೫೦ ॥
ಸಂಶಯೋಽಧಃ ಸ್ವಿದಾಸೀಚ್ಚ ಕತ್ಥನಾ ಸ್ಯಾದಹಂ ಮನುಃ ।
ಇಮಂ ನೋ ಯಜ್ಞಮಿತ್ಯಸ್ಯಾಂ ನಿಯೋಗಃ ಪಾದ ಉಚ್ಯತೇ ॥ ೫೧ ॥
ಇಹ ಬ್ರವೀತ್ವನುಯೋಗಃ ಸಂಲಾಪ ಉಪೋಪ ಮೇ ।
ಪ್ರತಿಷೇಧೋಪದೇಶೌ ತು ಅಕ್ಷೈರ್ಮೇತ್ಯಕ್ಷಸಂಸ್ತುತೌ ॥ ೫೨ ॥
ಆಖ್ಯಾನಂ ತು ಹಯೇ ಜಾಯೇ ವಿಲಾಪಃ ಸ್ಯಾನ್ನದಸ್ಯ ಮಾ ।

50. **ವಾತೇ ಅ ವಾತು** ಎಂಬ ಋಕ್ಕು (10-186-1) ಪ್ರಾರ್ಥನೆಗೆ (35-7) ಉದಾಹರಣೆಯು; **ದಂಡ** ಎಂಬ ಋಕ್ಕು (7-33-6) ವಿಷಾದ (35-5) ಕ್ಕೆ ಉದಾಹರಣೆಯು; **ಪೃಚ್ಛಾಮಿ ತ್ವಾ** ಎಂಬ ಋಕ್ಕು (1-164-34) ಪ್ರಶ್ನೆಗೆ (35-10) ಉದಾಹರಣೆಯು; **ವೇದಿಮಾಹುಃ** ಎಂಬ ಋಕ್ಕು (1-164-35) ಉತ್ತರಕ್ಕೆ (37-25) ಉದಾಹರಣೆಯು;

51. **ಅಧಃ ಸ್ವಿದಾಸೀತ್** ಎಂಬ ಋಕ್ಕು (10-129-5) ಸಂಶಯಕ್ಕೆ (35-4) ಉದಾಹರಣೆಯು; **ಅಹಂ ಮನುಃ** ಎಂಬ ಋಕ್ಕು (4-26-1) ಜಂಭಕೊಚ್ಚಿಕೊಳ್ಳುವುದಕ್ಕೆ (35-8) ಉದಾಹರಣೆಯು; **ಇಮಂ ನೋ ಯಜ್ಞಂ** ಎಂಬ ಋಕ್ಕಿನ ಮೊದಲನೆಯ ಪಾದದಲ್ಲಿ (3-21-1) ನಿಯೋಗದ (36-13) ಉದಾಹರಣೆ ಇದೆ.

52. **ಇಹ ಬ್ರವೀತು** ಎಂಬ ಋಕ್ಕಿನಲ್ಲಿ (1-164-7) ಅನುಯೋಗದ (36-14) ಉದಾಹರಣೆ ಇದೆ; **ಉಪೋಪ ಮೇ** ಎಂಬ ಋಕ್ಕಿನಲ್ಲಿ (1-126-7) ಸಂಭಾಷಣೆಯ (36-18) ಉದಾಹರಣೆ ಇದೆ. ಪಗಡೆ ದಾಳಗಳನ್ನು ಪ್ರಶಂಸೆಮಾಡುವ **ಅಕ್ಷೈರ್ಮಾ** ಎಂಬ ಋಕ್ಕಿನಲ್ಲಿ (10-34-13) ಪ್ರತಿಷೇಧ (38-26) ಮತ್ತು ಉಪದೇಶದ (38-27) ಉದಾಹರಣೆಗಳಿವೆ.

53. **ಹಯೇ ಜಾಯೇ** ಎಂಬ ಋಕ್ಕಿನಲ್ಲಿ (10-95-1) ಆಖ್ಯಾನದ (36-17) ಉದಾಹರಣೆಯೂ **ನದಸ್ಯ ಮಾ** ಎಂಬ ಋಕ್ಕಿನಲ್ಲಿ (1-179-4) ವ್ಯಸನ ಅಥವಾ ವಿಲಾಪದ (36-16) ಉದಾಹರಣೆಯೂ ಇದೆ

---

50. 'May wind waft hither' (ವಾತ ಅ ವಾತು x. 186. 1) is a prayer (35); 'staves' (ದಂಡಾಃ vii. 33. 6) is plaint (35), while the two stanzas 'I ask thee' (ಪೃಚ್ಛಾಮಿ ತ್ವಾ i. 164. 34, 35) are respectively question (35) and reply (37).

51. 'What was below' (ಅಧಃ ಸ್ವಿದಾಸೀತ್ x. 129. 5) is doubt (35); 'I was Manu' (ಅಹಂ ಮನುಃ iv. 26. 1) would be boasting (35); (in the stanza) this our sacrifice (ಇಮಂ ನೋ ಯಜ್ಞಂ iii. 21. 1) the (fiirst) verse is called commission (36).

52. 'Here let him say' (ಇಹ ಬ್ರವೀತು i. 164. 7) is injunction (36); the stanza 'clasp me tightly' (ಉಪೋಪ ಮೇ i. 126. 7) is conversation (36); but 'not with dice' (ಅಕ್ಷೈರ್ಮಾ x. 34. 13) in the praise of dice is prohibition and admonition (38).

53. 'Ho, wife, (ಹಯೇ ಜಾಯೇ x. 95. 1) is narrative (36); 'of the reed to to me' (ನದಸ್ಯ ಮಾ i. 179. 4) would be lamentation (36); 'without a husband'

ಅವೀರಾಮಾತ್ಮನಃ ಶ್ಲಾಘಾ ಸುದೇವ ಇತಿ ತು ಸ್ಪೃಹಾ ॥ ೫೩ ॥
ನಮಸ್ಕಾರಃ ಶುನಃಶೇಪೇ ನಮಸ್ತೇ ಅಸ್ತು ವಿದ್ಯುತೇ ।
ಸಂಕಲ್ಪಯೆನ್ನಿದಂ ತುಲ್ಯೋಽಹಂ ಸ್ಯಾಮಿತಿ ಯದುಚ್ಯತೇ ॥ ೫೪ ॥
ಸಂಕಲ್ಪಸ್ತು ಯದಿಂದ್ರಾಹಂ ಪ್ರಲಾಪಸ್ತ್ವೈತಶಸ್ಯ ಯಃ ।
ಮಹಾನಗ್ನ್ಯಾಹನಸ್ಯಾ ಸ್ಯಾತ್ಪ್ರತಿರಾಧೋ ಭುಗಿತ್ಯಪಿ ॥ ೫೫ ॥
ಪ್ರಮಾದಸ್ತ್ವೇಷ ಹಂತಾಹಂ ನ ಸ ಸ್ವ ಇತ್ಯಪಹ್ನವಃ ।
ಇಂದ್ರಾಕುತ್ಸೇತ್ಯುಪಪ್ರೈಷೋ ನ ವಿಜಾನಾಮಿ ಸಂಜ್ವರಃ ॥ ೫೬ ॥

ಮತ್ತು **ಅವೀರಾಂ** ಎಂಬ ಋಕ್ಕಿನಲ್ಲಿ (10-86 9) ಸ್ವಪ್ರಶಂಸೆಯೂ (36-15) **ಸುದೇವಃ** ಎಂಬ ಋಕ್ಕಿನಲ್ಲಿ (10-95-14) ಸ್ಪೃಹಾ ಅಥವಾ ಇಚ್ಛೆಯ (35-6) ಉದಾಹರಣೆಯೂ ಇದೆ.

54. **ನಮಸ್ತೇ ಅಸ್ತು ವಿದ್ಯುತೇ** ಎಂಬಮಂತ್ರದಲ್ಲಿ(ಅ. ವೇ. 1-13-1)ನಮಸ್ಕಾರದ ಉದಾಹರಣೆ ಇದೆ.

55. **ಯದಿಂದ್ರಾಹಂ** ಎಂಬ ಋಕ್ಕಿನಲ್ಲಿ (8-14-1) ಸಂಕಲ್ಪ ಅಥವಾ ಮನೋನಿಶ್ಚಯದ (37-23) ಉದಾಹರಣೆಯೂ (ಅ. ವೇ. 20-27-1) ರಲ್ಲಿ (ಏತಶಋಷಿಯ) ಪ್ರಲಾಪ ಅಥವಾ ಹರಟೆಯ (37-24) ಉದಾಹರಣೆಯೂ **ಮಹಾನಗ್ನಿ** ಎಂಬ ಮಂತ್ರದಲ್ಲಿ (ಅ. ವೇ. 20-136-5) ಆಹನದ (37-20) ಉದಾಹರಣೆಯೂ **ಭುಕ್** ಎಂಬ ಮಂತ್ರಗಳಲ್ಲಿ (ಅ. ವೇ. 20-135-1, 2, 3) ಪ್ರತಿರಾಧ ಅಥವಾ ವಿಘ್ನದ (37-22) ಉದಾಹರಣೆಯೂ ಇದೆ.

56. **ಹಂತಾಹಂ** ಎಂಬ ಋಕ್ಕಿನಲ್ಲಿ (10-119-9) ಪ್ರಮಾದದ (38-28) ಉದಾಹರಣೆಯೂ **ನ ಸ ಸ್ವಃ** ಎಂಬ ಋಕ್ಕಿನಲ್ಲಿ (7-86-6) ಅಪಹ್ನವ ಅಥವಾ ಇಲ್ಲವೆಂಬ ತಿರಸ್ಕಾರದ (38-29) ಉದಾಹರಣೆಯೂ **ಇಂದ್ರಾಕುತ್ಸಾ** ಎಂಬ ಋಕ್ಕಿನಲ್ಲಿ (5-31-9) ಉಪಪ್ರೈಷದ (38-30) ಉದಾಹರಣೆಯೂ **ನ ವಿ ಜಾನಾಮಿ** ಎಂಬ ಋಕ್ಕಿನಲ್ಲಿ (1-164-37) ಪೇಚಾಟ, ಅಥವಾ ಕಳವಳದ ಉದಾಹರಣೆಯೂ (38-31) ಇದೆ.

(ಅವೀರಾಂ x. 86, 9) is vaunt (36) about oneself; while the lower (ಸುದೇವಃ x. 95. 14, expresses) desire (35).

54. Obeisance (37, is expressed) in (the formula of) ಶುನಃಶೇಪ, 'Obeisance to thee, lightning' (ನಮಸ್ತೇ ಅಸ್ತು ವಿದ್ಯುತೇ AV. i. 13. 1); but when one resolves what is exrpessed (with the words) 'I will be equal' (ತುಲ್ಯೋಽಹಂ ಸ್ಯಾಂ).

55. (there is) resolve (37); 'what, Indra, I' (ಯದಿಂದ್ರಾಹಂ viii. 14. 1, AV. xx. 27. 1) is the prattle (37) of Aitasa; (the harlot ಮಹಾನಗ್ನಿ AV. xx. 136. 5) would be lascivious verse (37); 'bang!' (ಭುಕ್ AV. xx. 135. 1.3), again, expresses) an obstacle (37).

12. Further examples of different kinds of formulas.

56. 'Well, I, (ಹಂತಾಹಂ x. 119. 9), this (formula) is intoxication (38); 'not our own' (ನ ಸ ಸ್ವಃ vii. 86. 6) is denial (38); 'O Indra-Kutsa' (ಇಂದ್ರಾಕುತ್ಸಾ v. 31. 9) is invitation (38); 'I discern not' (ನ ವಿ ಜಾನಾಮಿ i. 164. 37) is agitation (38).

ಹೋತಾ ಯಕ್ಷದಿತಿ ಪ್ರೈಷಃ ಕೋ ಅದ್ಯೇತಿ ತು ವಿಸ್ಮಯಃ ।
ಜಾಮಯೋಽಪಹ್ನವೋ ನೈಷಾ ವಿತತಾದಿಃ ಪ್ರವಹ್ನಿಕಾ ॥ ೫೭ ॥
ನ ಮೃತ್ಯುರಾಸೀದಿತ್ಯೇತಾಮಾಖ್ಯಾನಾಂ ಪ್ರಚಕ್ಷತೇ ।
ಅಭಿಶಾಪೋಽಪ್ರಜಾಃ ಸಂತು ಭದ್ರಮಾಶೀಸ್ತು ಗೋತಮೇ ॥ ೫೮ ॥
ಬಹ್ವಪ್ಯೇವಂಪ್ರಕಾರಂ ತು ಶಕ್ಯಂ ದ್ರಷ್ಟುಮಿತೀದೃಶಂ ।
ವಕ್ತುಂ ಪ್ರಯೋಗತಶ್ಚೈಷಾಮೃಕ್ಸೂಕ್ತಾರ್ಧರ್ಚಸಂಶ್ರಿತಂ ॥ ೫೯ ॥
ಏತೇ ತು ಮಂತ್ರವಾಕ್ಯಾರ್ಥಾ ದೇವತಾಂ ಸೂಕ್ತಭಾಗಿನೀಂ ।
ಸಂಶ್ರಯಂತೇ ಯಥಾನ್ಯಾಯಂ ಸ್ತುತಿಸ್ತ್ವತ್ರಾನುಮಾನಿಕೀ ॥ ೬೦ ॥

57. **ಹೋತಾ ಯಕ್ಷತ್** ಎಂಬ ಋಕ್ಕಿನಲ್ಲಿ (1-139-10) ಪ್ರೈಷದ (35-11) ಉದಾಹರಣೆಯೂ, **ಕೋ ಅದ್ಯ** ಎಂಬ ಋಕ್ಕಿನಲ್ಲಿ (1 84-16 ಅಥವಾ 4-25-1) ವಿಸ್ಮಯ ಅಥವಾ ಆಶ್ಚರ್ಯದ (38-32) ಉದಾಹರಣೆಯೂ, **ನ ಜಾಮಯೇ** ಎಂಬ ಋಕ್ಕಿನಲ್ಲಿ (3-31-2) ಅಪಹ್ನವ ಅಥವಾ ನಿಷೇದವ ಉದಾಹರಣೆಯೂ (38-26) **ವಿತತಾ** ಎಂದು ಮೊದಲಾಗುವ ಮಂತ್ರಗಳಲ್ಲಿ (ಅ. ವೇ. 20-133-1 ರಿಂದ 6) ಸಂಶಯದ (35-12) ಉದಾಹರಣೆಯೂ ಆಡಗಿದೆ.

58. **ನ ಮೃತ್ಯುರಾಸೀತ್** ಎಂಬ ಋಕ್ಕಿನಲ್ಲಿ (10-129-2) ಒಂದು ತತ್ತ್ವದ ವಿವರಣೆಯೂ(36.17) **ಅಪ್ರಜಾಃ ಸಂತು** ಎಂಬ ಋಕ್ಕಿನಲ್ಲಿ (1-25-5) ಅಭಿಶಾಪದ (39-36) ಉದಾಹರಣೆಯೂ, **ಭದ್ರಂ** ಎಂಬ ಋಕ್ಕಿನಲ್ಲಿ (1-89-8) ಆಶೀರ್ವಾದದ (ಒಳ್ಳೆಯದನ್ನು ಹಾರೈಸುವುದರ) (35-7) ಉದಾಹರಣೆಯೂ ಇದೆ.

59. ಇದೇ ಪ್ರಕಾರವಾಗಿ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು. ಸೂಕ್ತ, ಋಕ್ಕು ಅರ್ಧಋಕ್ಕು ಇತ್ಯಾದಿ ಸ್ಥಳಗಳಲ್ಲಿ ಇಂತಹ ಉದಾಹರಣೆಗಳನ್ನೊಳಗೊಂಡ ಪ್ರಯೋಗಗಳು ಬೇಕಾದಷ್ಟಿರುವುವು.

60. ಈ ಮಂತ್ರಗಳ ವಾಕ್ಯಗಳಲ್ಲಿ ಕಂಡುಬರುವ ಅರ್ಥವು ಸೂಕ್ತದಲ್ಲಿ ಸ್ತುತರಾದ ದೇವತೆಗಳ ವಿಷಯವಾಗಿರುವುದು. ಆದರೆ ಸ್ತುತಿ ಅಥವಾ ಪ್ರಶಂಸೆಯನ್ನು ಪೂರ್ವಾಪರ ಸಂದರ್ಭಗಳ ವಿವೇಚನೆಯಿಂದ ನಿಷ್ಕರ್ಷಿಸ ಬೇಕಾಗಿರುವುದು.

---

57. 'Let the invoker worship' (**ಹೋತಾ ಯಕ್ಷತ್** i. 139.10) is a summons (35); 'who to-day' (**ಕೋ ಅದ್ಯ** i. 84, 16 or iv. 25. 1) is wonder (38); 'to his brother not' (**ನ ಜಾಮಯೇ** iii. 31. 2) this (stanza) is denial (38); (there is) an enigma (35) which begins 'outstretched' (**ವಿತತಾ** AV. xx. 133. 1 6).

58. 'Death was not' (**ನ ಮೃತ್ಯುರಾಸೀತ್** x. 129. 2) this (stanza) they pronounce to be narration (36); 'may they be childless (**ಅಪ್ರಜಾಃ ಸಂತು** i. 25. 5) is curse (39), while 'blessed' (**ಭದ್ರಂ** i. 89. 8) is a prayer (in Gotama.)

59. Much else of this kind can be found, and can in accordance with application (**ಪ್ರಯೋಗತಃ**) of these (formulas) be stated to be such, when contained in stanzas, (whole) hymns, and hemistiches.

60. These contents (**ವಾಕ್ಯಾರ್ಥ**) of the formulas are properly connected with the deity belonging to the hymn; but the praise in this case is a matter of inference.

ಭವದ್ಭೂತಸ್ಯ ಭವ್ಯಸ್ಯ ಜಂಗಮಾಜಂಗಮಸ್ಯ ಚ ।
ಅಸ್ಯೈಕೇ ಸೂರ್ಯಮೇವೈಕಂ ಪ್ರಭವಂ ಪ್ರಲಯಂ ವಿದುಃ ॥ ೬೧ ॥
ಅಸತಶ್ಚ ಸತಶ್ಚೈವ ಯೋನಿರೇಷಾ ಪ್ರಜಾಪತಿಃ ।
ಯದಕ್ಷರಂ ಚ ವಾಚ್ಯಂ ಚ ಯಥೈತದ್ಬ್ರಹ್ಮ ಶಾಶ್ವತಂ ॥ ೬೨ ॥
ಕೃತ್ವೈಷ ಹಿ ತ್ರಿಧಾತ್ಮಾನಮೇಷು ಲೋಕೇಷು ತಿಷ್ಠತಿ ।
ದೇವಾನ್ಯಥಾಯಥಂ ಸರ್ವಾನ್ನಿವೇಶ್ಯ ಸ್ವೇಷು ರಶ್ಮಿಷು ॥ ೬೩ ॥
ಏತದ್ಭೂತೇಷು ಲೋಕೇಷು ಅಗ್ನಿಭೂತಂ ಸ್ಥಿತಂ ತ್ರಿಧಾ ।
ಋಷಯೋ ಗೀರ್ಭಿರರ್ಚಂತಿ ವ್ಯಂಜಿತಂ ನಾಮಭಿಸ್ತ್ರಿಭಿಃ ॥ ೬೪ ॥

ಸೂರ್ಯ (ಪ್ರಜಾಪತಿ) ನೇ ಸರ್ವಕ್ಕೂ ಮೂಲವು

61. ವರ್ತಮಾನ, ಭೂತಕಾಲ, ಭವಿಷ್ಯತ್ಕಾಲಗಳಲ್ಲಿ ಇರುವ ಸಮಸ್ತ ಚರಾಚರ ಪ್ರಪಂಚದ ಸ್ಥಿತಿಗೂ, ಲಯಕ್ಕೂ (ವಿನಾಶಕ್ಕೆ) ಸೂರ್ಯನೊಬ್ಬನೇ ಮುಖ್ಯಕಾರಣನಾಗಿರುವನು.

62. ಅವ್ಯಕ್ತಸ್ವರೂಪ ಮತ್ತು ವ್ಯಕ್ತಸ್ವರೂಪದಿಂದಿರುವ ಅಸತ್, ಸತ್ ಎಂಬ ತತ್ತ್ವಗಳಿಗೆ (ಸ್ಥಿತಿಗೆ) ಪ್ರಜಾಪತಿಯೇ ಮೂಲವು ಎಂದರೆ ಪ್ರಜಾಪತಿಯಿಂದಲೇ ವ್ಯಕ್ತಾವ್ಯಕ್ತಸ್ವರೂಪಗಳ ಆವಿರ್ಭಾವವಾಗುವುದು. ಈ ಪ್ರಜಾಪತಿಯೇ ನಾಶರಹಿತನಾದ, ನಿತ್ಯನಾದ (ಪರ) ಬ್ರಹ್ಮಶಬ್ದವಾಚ್ಯನಾಗಿರುವನು.

63. ಈ ಪ್ರಜಾಪತಿಯು ಅಥವಾ ಸೂರ್ಯನು ತನ್ನ ಸ್ವರೂಪವನ್ನೇ ಮೂರು ಭಾಗವಾಗಿ ವಿಭಾಗಿಸಿಕೊಂಡು ಈ ಲೋಕದಲ್ಲಿ ಸ್ಥಾಪಿತನಾಗಿದ್ದಾನೆ. ಸಮಸ್ತ ದೇವತೆಗಳನ್ನೂ ಸಹ ತನ್ನ ರಶ್ಮಿಗಳಲ್ಲಿ ಎಂದರೆ ತನ್ನ ಸ್ವಸಾಮರ್ಥ್ಯದ ಬಂಧನದಲ್ಲಿ ಇಟ್ಟಿದ್ದಾನೆ.

64. ಈ ಪ್ರಜಾಪತಿಯೇ (ಅಥವಾ ಸೂರ್ಯನೇ) ಈ ಲೋಕಗಳಲ್ಲಿ ಅಗ್ನಿಯ ರೂಪದಲ್ಲಿ ಮೂರು ವಿಧವಾಗಿ ಸ್ಥಾಪಿತನಾಗಿರುವನು. (ಭೂಮಿಯಲ್ಲಿ ಅಗ್ನಿಯಂತೆಯೂ, ಅಂತರಿಕ್ಷದಲ್ಲಿ ವಿದ್ಯುತ್ತಿನಂತೆಯೂ, ಸ್ವರ್ಗದಲ್ಲಿ ಸೂರ್ಯನಂತೆಯೂ ಮೂರು ವಿಧವಾಗಿ ಬೆಳಗುತ್ತಿರುವನು) ಋಷಿಗಳು ಇವನನ್ನೇ ವೇದವಾಕ್ಯಗಳಿಂದಲೂ, ಸಾಮಗಾನಗಳಿಂದಲೂ ಸ್ತುತಿಸಿ ಆರಾಧಿಸುವರು.

13. The Sun and Prajapathi as the source of all.

61. Of what is and has been and is to be, and of what moves and is stationery, of all this, some regard the Sun alone to be the origin and the cause of dissolution.

62. Both of what is not and what is, this source is (really) Prajapati, as being (this) eternal Brahma which is at once imperishable (ಅಕ್ಷರಂ) and the object of speech (ವಾಚ್ಯಂ).

63. He (the Sun), having divided himself into three, abides in these worlds, causing all the gods in due order to rest in his rays.

64. This (being) which, in the form of fire, abides in three forms (ತ್ರಿಧಾ) in the worlds that have come into being, the seers adore with songs as manifested under three names.

ತಿಷ್ಠತ್ಯೇವ ಹಿ ಭೂತಾನಾಂ ಜಠರೇ ಜಠರೇ ಜ್ವಲನ್ ।
ತ್ರಿಸ್ಥಾನಂ ಚೈನಮರ್ಚಂತಿ ಹೋತ್ರಾಯಾಂ ವೃಕ್ತಬರ್ಹಿಷಃ ॥ ೬೫ ॥

ಇಹೈಷ ಪವಮಾನೋಽಗ್ನಿರ್ಮಧ್ಯಮೋಽಗ್ನಿರ್ವನಸ್ಪತಿಃ ।
ಅಮುಷ್ಮಿನ್ನೇವ ವಿಪ್ರೈಸ್ತು ಲೋಕೇಽಗ್ನಿಃ ಶುಚಿರುಚ್ಯತೇ ॥ ೬೬ ॥

ಇಹಾಗ್ನಿಭೂತಸ್ತ್ವೃಷಿಭಿರ್ಲೋಕೇ ಸ್ತುತಿಭಿರೀಳಿತಃ ।
ಜಾತವೇದಾ ಸ್ತುತೋ ಮಧ್ಯೇ ಸ್ತುತೋ ವೈಶ್ವಾನರೋ ದಿವಿ ॥ ೬೭ ॥

ರಸಾನ್ರಶ್ಮಿಭಿರಾದಾಯ ವಾಯುನಾಯಂ ಗತಃ ಸಹ ।
ವರ್ಷತ್ಯೇಷ ಚ ಯೆಲ್ಲೋಕೇ ತೇನೇಂದ್ರ ಇತಿ ಸ ಸ್ಮೃತಃ ॥ ೬೮ ॥

65. ಈ ಅಗ್ನಿಯು (ಅಥವಾ ಪ್ರಜಾಪ್ರತಿಯು) ವೈಶ್ವಾನರಾಗ್ನಿರೂಪದಿಂದ ಸಮಸ್ತ ಪ್ರಾಣಿಗಳ ಜಠರದಲ್ಲಿ (ಉದರದಲ್ಲಿ ಜಾಠರಾಗ್ನಿರೂಪದಿಂದ) ಪ್ರಕಾಶಿಸುತ್ತಿರುವನು. ಈ ಅಗ್ನಿಯನ್ನು ಪೃಥಿವ್ಯಂತರಿಕ್ಷಸ್ವರ್ಗಗಳೆಂಬ ಮೂರು ಸ್ಥಾನಗಳಲ್ಲಿ ಸ್ಥಾಪಿತವಾಗಿರುವಂತೆ ತಿಳಿದು ಯಜ್ಞಾದಿಗಳಲ್ಲಿ ಬರ್ಹಿರಾದಿ ಯಜ್ಞಸಾಮಗ್ರಿಗಳಿಂದ ಕೂಡಿ ಆರಾಧಿಸುವರು.

ಅಗ್ನಿಯ ಮೂರುವಿಧ ರೂಪಗಳು

66. ಅಗ್ನಿಗೆ ಮೂರು ರೂಪಗಳಿರುವವು. ಈ ಭೂಮಿಯಲ್ಲಿ ಇರುವ ಅಗ್ನಿಗೆ ಪವಮಾನನೆಂದೂ, ಮಧ್ಯಮ (ಅಂತರಿಕ್ಷ) ಸ್ಥಾನನಾದ ಅಗ್ನಿಗೆ ವನಸ್ಪತಿಯೆಂದೂ ಸ್ವರ್ಗದಲ್ಲಿರುವ ಅಗ್ನಿಗೆ ಶುಚಿಯೆಂದೂ ವಿಪ್ರರು ಹೇಳುವರು.

67. ಈ ಭೂಲೋಕದಲ್ಲಿ ಅಗ್ನಿಯು ಅಗ್ನಿಯೆಂಬ ಹೆಸರಿನಿಂದಲೇ ಋಷಿಗಳಿಂದ ಸ್ತುತಿಸಲ್ಪಡುವನು. ಅಂತರಿಕ್ಷಲೋಕದಲ್ಲಿ ಜಾತವೇದಾಃ ಎಂಬ ಹೆಸರಿನಿಂದಲೂ ಸ್ವರ್ಗದಲ್ಲಿ ವೈಶ್ವಾನರನೆಂಬ ಹೆಸರಿನಿಂದಲೂ ಸ್ತುತಿಸಲ್ಪಡುವನು.

68. ಈ ಅಗ್ನಿಯು ಸೂರ್ಯರೂಪದಲ್ಲಿರುವಾಗ ಜಲಾಶಯಗಳಲ್ಲಿರುವ ರಸಾದಿಗಳನ್ನು (ಉದಕಗಳನ್ನು) ತನ್ನ ರಶ್ಮಿಗಳಿಂದ ಹೀರಿ ವಾಯುವಿನ ಸಹಾಯದಿಂದ ಭೂಮಿಯ ಮೇಲೆ ವೃಷ್ಟಿಯನ್ನು ಸುರಿಸುವುದರಿಂದ (ವೃಷ್ಟಿಯನ್ನು ಸುರಿಸುವುದು ಇಂದ್ರನ ಕರ್ಮವು) ಈ ಅಗ್ನಿಯು ಇಂದ್ರನೆಂಬ ಹೆಸರಿನಿಂದಲೂ ಕರೆಯಲ್ಪಡುವನು.

---

65. For he abides, glowing, in the interior of every being, and, with sacrificial litter spread, they adore him in the invocation as having three abodes.

14. The three forms of Agni.

66. Here (on earth) he is by priests called Agni Pavamana, (in the) middle (sphere), Agni Vanaspati, but in that (celestial) world, Agni Suchi.

67. In this world he is extolled by seers with praises as being Agni, in the middle (world) he is praised as Jatavedas, in heaven he is praised as Vaisvanara.

68. Because, taking up fluids with his rays, accompanied by Vayu, he rains upon the world, he is termed ಇಂದ್ರ.

ಅಗ್ನಿರಸ್ಮಿನ್ನಥೇಂದ್ರಸ್ತು ಮಧ್ಯತೋ ವಾಯುರೇವ ಚ ।
ಸೂರ್ಯೋ ದಿವೀತಿ ವಿಜ್ಞೇಯಾಸ್ತಿಸ್ರ ಏವೇಹ ದೇವತಾಃ ॥ ೬೯ ॥
ಏತಾಸಾಮೇವ ಮಾಹಾತ್ಮ್ಯಾನ್ನಾಮಾನ್ಯತ್ವಂ ವಿಧೀಯತೇ ।
ತತ್ತತ್ಸ್ಥಾನವಿಭಾಗೇನ ತತ್ರ ತತ್ರೇಹ ದೃಶ್ಯತೇ ॥ ೭೦ ॥
ತಾಸಾಮಿಯಂ ವಿಭೂತಿರ್ಹಿ ನಾಮಾನಿ ಯದನೇಕಶಃ ।
ಆಹುಸ್ತಾಸಾಂ ತು ಮಂತ್ರೇಷು ಕವಯೋಽನ್ಯೋನ್ಯಯೋನಿತಾಂ ॥ ೭೧ ॥
ಯೇಥಾಸ್ಥಾನಂ ಪ್ರದಿಷ್ಟಾಸ್ತಾ ನಾಮಾನ್ಯತ್ವೇನ ದೇವತಾಃ ।
ತದ್ಭಕ್ತಾಸ್ತತ್ಪ್ರಧಾನಾಶ್ಚ ಕೇಚಿದೇವಂ ವದಂತಿ ತಾಃ ॥ ೭೨ ॥

69. ಈ ಭೂಲೋಕದಲ್ಲಿ ಅಗ್ನಿಯು, ಮಧ್ಯ (ಅಂತರಿಕ್ಷ) ಲೋಕದಲ್ಲಿ ಇಂದ್ರ ಅಥವಾ ವಾಯು, ಸ್ವರ್ಗದಲ್ಲಿ ಸೂರ್ಯ ಎಂಬ ಮೂವರೇ ಮುಖ್ಯರಾದ ಮೂರುಮಂದಿ ದೇವತೆಗಳೆನಿಸುವರು.

70. ಈ ಮೂರು ಮಂದಿ ದೇವತೆಗಳ ಮಹಿಮೆಯಿಂದಲೇ (ಅವರ ನಾನಾವಿಧ ಮಹಿಮೆಗಳಿಗನುಸಾರವಾಗಿ) ಇವರಿಗೆ ಅನೇಕ ಹೆಸರುಗಳಿರುವವು. ಈ ದೇವತೆಗಳ ಆಯಾ ಸ್ಥಾನವಿಭಾಗಕ್ಕನುಸಾರವಾಗಿ ಇವರು ವಿಧವಿಧವಾದ ಹೆಸರುಗಳಿಂದ ಪ್ರಸಿದ್ಧಿಯನ್ನು ಪಡೆದಿರುವರು.

ತ್ರಿಸ್ಥಾನದೇವತೆಗಳು ಮತ್ತು ಆತ್ಮ, ವಾಕ್ಕಿನ ಮೂರು ರೂಪಗಳು

71. ಈ ದೇವತೆಗಳು ತಮ್ಮ ಅತಿಶಯವಾದ ಸಾಮರ್ಥ್ಯ (ವಿಭೂತಿ) ದಿಂದ ಅನೇಕ ಹೆಸರುಗಳನ್ನು ಪಡೆದಿರುವರು. ಆದರೆ ಈ ದೇವತೆಗಳಿಗೆಲ್ಲಾ ಮೂಲಸ್ಥಾನವು ಒಂದೇ ಆಗಿರುವುದೆಂದು ಕವಿಗಳು (ಋಷಿಗಳು) ತಮ್ಮ ಮಂತ್ರಗಳಲ್ಲಿ ಹೇಳಿದಾರೆ.

72. ಈ ದೇವತೆಗಳು ತಮ್ಮ ತಮ್ಮ ಸ್ಥಾನಕ್ಕನುಗುಣವಾಗಿ ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧರಾಗಿರುವರು. ಆ ದೇವತೆಗಳ ಸ್ಥಾನದ ಪ್ರಾಧಾನ್ಯದಿಂದಲೇ ಎಂದರೆ ಸ್ಥಾನಬಲದಿಂದ ದೇವತೆಗಳು ಈ ರೀತಿ ವಿಭಾಗಿಸಲ್ಪಟ್ಟಿರುವರೆಂದು ಕೆಲವರು ಹೇಳುವರು.

---

69. Agni in this (world), Indra and Vayu in the middle, Surya in heaven, are here to be recognised as the three deities.

70. Owing to the majesty of these (deities) different names are applied (to each of them); (the diversity of names) here appears in this and that (sphere) according to the division of their respective spheres.

15. The triad and the Atman. Three forms of वाक्

71. This is a manifestation of their power (विभूति) that their names are various. The poets, however, in their formulas say that these (deities) have a mutual origin (अन्योन्ययोनितां).

72. These deities are designated by different names according to their sphere. Some speak of them thus as belonging to (भक्त) that (sphere), and chiefly concerned with it.

ಪೃಥಕ್ಪ್ರಸ್ತಾದ್ಯೇ ತೋಕ್ತಾ ಲೋಕಾಧಿಪತಯಸ್ತ್ರಯಃ ।
ತೇಷಾಮಾತ್ಮೈವ ತೆನ್ಸರ್ವಂ ಯದ್ಯದ್ಭಕ್ತ್ಯಾ ಪ್ರಕೀರ್ತ್ಯತೇ ॥ ೭೩ ॥

ತೇಜಸ್ತ್ವೇವಾಯುಧಂ ಪ್ರಾಹುರ್ವಾಹನಂ ಚೈವ ಯಸ್ಯ ಯತ್ ।
ಇಮಾಮೈಂದ್ರೀಂ ಚ ದಿವ್ಯಾಂ ಚ ವಾಚಮೇವಂ ಪೃಥಕ್ ಸ್ತುತಾಂ ॥ ೭೪ ॥

ಬಹುದೇವತಾ ಸ್ತುತಯೋ ದ್ವಿವತ್ಸಂಸ್ತುತಯಶ್ಚ ಯಾಃ ।
ಪ್ರಾಧಾನ್ಯಮೇವ ಸರ್ವಾಸು ಪತೀನಾಮೇವ ತಾಸ್ವಪಿ ॥ ೭೫ ॥

ಸ್ಥಾನಂ ನಾಮಾನಿ ಭಕ್ತೀಶ್ಚ ದೇವತಾಯಾ ಸ್ತುತೌ ಸ್ತುತೌ ।

73. ಲೋಕಾಧಿಪತಿಗಳಾದ ಈ ಮೂರು ದೇವತೆಗಳು ಬೇರೆ ಬೇರೆಯೆಂದು ಹಿಂದೆ ಪ್ರತ್ಯೇಕವಾಗಿ ಹೇಳಿದ್ದರೂ ಅವರ ಆತ್ಮವೆಲ್ಲ ಒಂದೇ ಎಂದು ಭಕ್ತಿಭಾವದಿಂದ ಪ್ರಶಂಸಿಸಲ್ಪಡುತ್ತದೆ.

74. ದೇವತೆಯ ಆಯುಧವೆಂದು ಎಲ್ಲಿ ಹೇಳಲ್ಪಟ್ಟಿರುವುದೋ ಅದು ಆ ದೇವತೆಯ (ಅಥವಾ ಆತ್ಮದ) ತೇಜಸ್ಸಲ್ಲದೆ (ಶಕ್ತಿ) ಬೇರೆಯಲ್ಲ. ವಾಹನ ವಿಷಯದಲ್ಲಿಯೂ ಈ ನಿಯಮವೇ ಅನ್ವಯಿಸುವುದು. ಅದೇ ರೀತಿ ವಾಕ್ಕನ್ನು ಪೃಥಿವೀಸಂಬಂಧವಾದದ್ದೆಂದೂ, ಇಂದ್ರನ ಸಂಬಂಧ ಎಂದರೆ ಮಧ್ಯಮಸ್ಥಾನಸಂಬಂಧವಾದದ್ದೆಂದೂ, ಸ್ವರ್ಗ ಸ್ಥಾನಸಂಬಂಧದ್ದೆಂದೂ ಪ್ರತ್ಯೇಕವಾಗಿ (ಮೂರುಪ್ರಕಾರವಾಗಿಯೂ) ಸ್ತುತಿಸಲ್ಪಡುವುದು.

75. ಅನೇಕ ದೇವತೆಗಳನ್ನು ಪ್ರತ್ಯೇಕವಾಗಿ ಅಥವಾ ಒಟ್ಟಿಗೆ ಸ್ತುತಿಸುವಾಗಲೂ ಇಬ್ಬಿಬ್ಬರನ್ನು ಸಂಪ್ರವಿಕವಾಗಿ ಸ್ತುತಿಸುವಾಗಲೂ ಈ ಎಲ್ಲಾ ದೇವತೆಗಳಲ್ಲಿಯೂ ಮೇಲೆ ಹೇಳಿದ ಮೂರುಮಂದಿ (ಅಗ್ನಿ, ಇಂದ್ರ ಅಥವಾ ವಾಯು, ಸೂರ್ಯ) ದೇವತೆಗಳಿಗೇ ಪ್ರಾಧಾನ್ಯವಿರುವುದು.

ಸೂಕ್ತದ ಮುಖ್ಯದೇವತೆ

76. ದೇವತೆಯನ್ನು ಸ್ತುತಿಸುವ ಪ್ರತಿಸೂಕ್ತದಲ್ಲಿಯಾ ಆಯಾ ದೇವತೆಯ ಸ್ಥಾನ (ಪೃಥಿವಿ, ಅಂತರಿಕ್ಷ,

---

73. The Soul (ಆತ್ಮ) is all that is proclaimed to be an attribute (ಭಕ್ತಿ) of those three chief lords of the world who have been separately mentioned above.

74. They say that it is the energy (of this Soul) which is the weapon and the vehicle of any (god).

Similarly (they say) that speech (ವಾಕ್) is praised separately as this (terrestrial) one, as connected with Indra (in the middle sphere), and as celestial.

75. In all those praises which are addressed to many deities, and in those joint praises which are in the dual, the (those) lords (of the world) are predominent.

16. The chiaf deity of a hymn.

76. In bringing out (ಸಂಪಾದಯನ್) the sphere, the names, and the

ಸಂಪಾದಯೆನ್ನುಪೇಕ್ಷೇತ ಯಾಂ ಕಾಂಚಿದಿಹ ಸಂಪದಂ ॥ ೭೬ ॥

ಅಗ್ನಿಭಕ್ತಿಸ್ತುತಾನ್ಸರ್ವಾನಗ್ನಾವೇವ ಸಮಾಪಯೇತ್ ।
ಯದಿಂದ್ರಭಕ್ತಿ ತಚ್ಚೇಂದ್ರೇ ಸೂರ್ಯೇ ಸೂರ್ಯಾನುಗಂ ಚ ಯತ್ ॥ ೭೭ ॥

ನಿರುಪ್ಯತೇ ಹವಿರ್ಯಸ್ಮೈ ಸೂಕ್ತಂ ಚ ಭಜತೇ ಚ ಯಾ ।
ಸೈವ ತತ್ರ ಪ್ರಧಾನಂ ಸ್ಯಾನ್ನ ನಿಪಾತೇನ ಯಾ ಸ್ತುತಾ ॥ ೭೮ ॥

ಇತಿ ತ್ರಯಾಣಾಮೇತೇಷಾಮುಕ್ತಃ ಸಾಮಾಸಿಕೋ ವಿಧಿಃ ।
ಸಮಾಸೇನೈವಮುಕ್ತಸ್ತು ವಿಸ್ತರೇಣ ತ್ವನುಕ್ರಮಃ ॥ ೭೯ ॥

ದ್ಯುಸ್ಥಾನಗಳಲ್ಲೊಂದು) ದೇವತೆಯ ಹೆಸರು, ದೇವತೆಯ ಗುಣಗಳು ಇವುಗಳನ್ನು ಸಾಧ್ಯವಾದ ಮಟ್ಟಿಗೆ ಗಮನದಲ್ಲಿಟ್ಟು ಕೊಂಡೇ ಅವುಗಳನ್ನು ಸ್ಪಷ್ಟವಾಗಿ ವಿವರಿಸಬೇಕು.

77. ಅಗ್ನಿಯ ಗುಣಗಳಿರುವ ದೇವತೆಗಳನ್ನೆಲ್ಲಾ ಅಗ್ನಿಯಲ್ಲಿಯೇ (ಅಥವಾ ಅಗ್ನಿವರ್ಗದ ದೇವತೆಗಳಲ್ಲಿಯೇ) ಸೇರಿಸಬೇಕು. ಹಾಗೆಯೇ ಇಂದ್ರನ ಗುಣಗಳಿರುವ ದೇವತೆಗಳನ್ನು ಇಂದ್ರನೊಡನೆಯೂ, ಸೂರ್ಯನ ಗುಣಗಳಿರುವ ದೇವತೆಗಳನ್ನು ಸೂರ್ಯನೊಡನೆಯೂ ಸೇರಿಸಬೇಕು.

78. ಒಂದು ಸೂಕ್ತದಲ್ಲಿ ಯಾವ ದೇವತೆಯನ್ನುದ್ದೇಶಿಸಿ ಹವಿಸ್ಸನ್ನು ಅರ್ಪಿಸಲಾಗುವುದೋ ಮತ್ತು ಯಾವ ದೇವತೆಯನ್ನು ಮುಖ್ಯವಾಗಿ ಪ್ರಶಂಸಿಸಲಾಗಿರುವುದೋ ಆ ದೇವತೆಯೇ ಆ ಸೂಕ್ತದ ಮುಖ್ಯವಾದ (ಪ್ರಧಾನ) ದೇವತೆಯು ಮತ್ತು ಆ ದೇವತೆಯೇ ಆ ಸೂಕ್ತದಲ್ಲಿ ಸ್ತುತಿಸಲ್ಪಟ್ಟಿರುವುದೆಂದು ತಿಳಿಯಬೇಕು ಕಾರಣಾಂತರದಿಂದ ಆ ಸೂಕ್ತದಲ್ಲಿ ಎಲ್ಲಿಯಾದರೂ ಬೇರೆ ದೇವತೆಯ ಪ್ರಸ್ತಾಪವಿದ್ದಮಾತ್ರಕ್ಕೆ ಅದು ಆ ಸೂಕ್ತದ ದೇವತೆಯಾಗಲಾರದು.

79. ಈ ರೀತಿ ಮೂರು ಮುಖ್ಯದೇವತೆಗಳ ವಿಷಯವನ್ನು ಸಾಮಾನ್ಯವಾಗಿ ಸಮಷ್ಟಿರೂಪದಿಂದ ವಿವರಿಸಲಾಯಿತು. ಈಗ ಆ ದೇವತೆಗಳ ವಿಷಯವನ್ನೇ ಪ್ರತ್ಯೇಕವಾಗಿಯೂ, ವಿಸ್ತಾರವಾಗಿಯೂ ವಿವರಿಸಲಾಗುವುದು.

---

attributes (ಭಕ್ತಿಃ) of a deity in each praise, one should here observe every possible means of doing so (ಸಂಪದಂ).

77. All who are praised with the attributes (ಭಕ್ತಿ) of Agni, one should sum up (ಸಮಾಪಯೇತ್) in Agni, and what has the attributes of Indra, in Indra, and what is attached to Surya, in Surya

78. That deity to whom the oblation is offered, and to wbom the hymn belongs, will there be the chief object (of praise), not (the deity) who is praised incidentally.

79. Thus the rule about these three (gods) has been stated in a general way. But after it has thus been stated in general, the list (of the gods is as follows) in detail.

ಅವಶ್ಯಂ ವೇದಿತವ್ಯೋ ಹಿ ನಾಮ್ನಾಂ ಸರ್ವಸ್ಯ ವಿಸ್ತರಃ ।
ನ ಹಿ ನಾಮಾನ್ಯವಿಜ್ಞಾಯೆ ಮಂತ್ರಾಃ ಶಕ್ಯಾ ಹಿ ವೇದಿತುಂ ॥ ೮೦ ॥

ಸತ್ತ್ವಾನ್ಯಮೂರ್ತಾನ್ಯಪಿ ಚ ದೇವತಾವನ್ಮಹರ್ಷಯಃ ।
ತುಷ್ಟುವುರ್ಯಷಯಃ ಶಕ್ತ್ಯಾ ತಾಸು ತಾಸು ಸ್ತುತಿಷ್ವಿಹ ॥ ೮೧ ॥

ಯೈಸ್ತ್ವಗ್ನಿರಿಂದ್ರಃ ಸೋಮಶ್ಚ ವಾಯುಃ ಸೂರ್ಯೋ ಬೃಹಸ್ಪತಿಃ ।
ಚಂದ್ರೋಽಥ ವಿಷ್ಣುಃ ಪರ್ಜನ್ಯಃ ಪೂಷಾ ಚಾಪ್ಯೃಭವೋಽಶ್ವಿನೌ ॥ ೮೨ ॥

ರೋದಸೀ ಮರುತೋ ದೇವಾಃ ಪೃಥಿವ್ಯಾಪಃ ಪ್ರಜಾಪತಿಃ ।
ದೇವೌ ಚ ಮಿತ್ರಾವರುಣೌ ಪೃಥಕ್ ಸಹ ಚ ತಾವುಭೌ ॥ ೮೩ ॥

ವಿಶ್ವೇ ಚ ದೇವಾಃ ಸವಿತಾ ತ್ವಷ್ಟಾ ವೈ ರೂಪಕೃನ್ಮತಃ ।

80. ಸಮಸ್ತ ದೇವತೆಗಳ ಹೆಸರುಗಳೇ ಮೊದಲಾದ ಸಂಬಂಧಪಟ್ಟ ವಿಷಯಗಳನ್ನು ವಿಸ್ತಾರವಾಗಿ ತಿಳಿದು ಕೊಳ್ಳಬೇಕಾದುದು ಆವಶ್ಯಕವು. ಏಕೆಂದರೆ ದೇವತೆಗಳ ಹೆಸರನ್ನೂ, ಇತರ ವಿಷಯಗಳನ್ನೂ ತಿಳಿಯದೆ ಮಂತ್ರಗಳ ಅರ್ಥಾದಿಗಳನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲ.

ನಾನಾ ದೇವತೆಗಳ ಹೆಸರುಗಳು

81. ರೂಪಾದ್ಯಾಕಾರಗಳಿಲ್ಲದ ಭಾವನೆಗಳನ್ನೂ (ಜ್ಞಾನ, ಶ್ರದ್ಧೆ ಇತ್ಯಾದಿ) ರೂಪವಿರುವ ದೇವತೆಗಳಂತೆ ಭಾವಿಸಿ ಋಷಿಗಳು ತಮ್ಮ ಶಕ್ತ್ಯನುಸಾರವಾಗಿ ಅನೇಕ ಮಂತ್ರಗಳಲ್ಲಿ ಸ್ತುತಿಸಿರುವರು.

82. ಋಷಿಗಳು ಈ ಕೆಳಗೆ ಹೇಳಿರುವ ದೇವತೆಗಳನ್ನು ಪ್ರತ್ಯೇಕವಾಗಿ ಸ್ತುತಿಸಿರುವರು—ಅಗ್ನಿ, ಇಂದ್ರ, ಸೋಮ, ವಾಯು, ಸೂರ್ಯ, ಬೃಹಸ್ಪತಿ, ವಿಷ್ಣು, ಪರ್ಜನ್ಯ, ಪೂಷಾ, ಋಭುಗಳು, ಅಶ್ವಿನೀದೇವತೆಗಳು.

83. ದ್ಯಾವಾಪೃಥಿವೀ, ಮರುತ್ತುಗಳು, ದೇವತೆಗಳು (ಸಾಮಾನ್ಯ ಹೆಸರು) ಪೃಥಿವೀ, ಆಪಃ (ಉದಕಗಳು), ಪ್ರಜಾಪತಿ, ಮಿತ್ರಾವರುಣರೆಂಬ ಈರ್ವರು ದೇವತೆಗಳು (ಇವರನ್ನು ಒಟ್ಟಾಗಿಯೂ, ಬೇರೆ ಬೇರೆಯಾಗಿಯೂ),

84. ವಿಶ್ವೇದೇವತೆಗಳು, ಸವಿತೃ, ತ್ವಷ್ಟಾ, (ರೂಪಕ್ಕೆ ಅಧಿಪತಿ), ಅಶ್ವ, ಅನ್ನ, ಋತ್ವಿಕ್ಕುಗಳು, ವಜ್ರಾ

---

80. For the detailed account of the names of each must necessarily be known, since it is impossible to know the formulas without cognisance of the names.

18. Names of deities enumerated.

81. Even unembodied beings, the great sages, the seers, have also lauded as deities here, to the best of their ability, in their varions praises.

82. (the seers) by whom Agni, Indra, Soma, Vayu, Surya, Brihaspati, the Moon, Vishnu, Parjanya, Pusan, the Rbhus, the Asvins.

83. the Two Worlds, the divine Maruts, Earth, the Waters, Prajapati, and the divine Mitra, Varuna, seperately, and both together.

84. the All-gods, Savitr, Tvastr (who is) regarded as the fashioner

ಅಶ್ವೋಽನ್ನಮೃತ್ವಿಜೋ ವಜ್ರೋ ಗ್ರಾವಾಣೋ ರಥಸಂಯುತಾಃ ॥ ೮೪ ॥

ಸ್ತುತಾಃ ಪೃಥಕ್ಪೃಥಕ್ ಸ್ವೈಃ ಸ್ವೈಃ ಸೂಕ್ತೈರ್ಯಗ್ಭಿಶ್ಚ ನಾಮಭಿಃ ।
ಸ್ತುತೌ ಸ್ತುತೌ ಪ್ರವಕ್ಷ್ಯಾಮಿ ತಾನಿ ತೇಷಾಮನುಕ್ರಮಾತ್ ॥ ೮೫ ॥

ವ್ಯವಸ್ಯೇನ್ಮಂತ್ರವಾಗ್ನೇಯಂ ಲಿಂಗೈರಗ್ನೇಶ್ಚ ಲಕ್ಷಿತಂ ।
ಹವಿಷ್ಪಂಕ್ತಿಪ್ರಧಾನೈಶ್ಚ ನಾಮಾಹ್ವಾನೈಶ್ಚ ಕೇವಲೈಃ ॥ ೮೬ ॥

ಐಂದ್ರಸ್ತು ಮಂತ್ರೋ ವಾಯವ್ಯೈರ್ಲಿಂಗೈರೈಂದ್ರೈಶ್ಚ ಲಕ್ಷ್ಯತೇ ।
ನಾಮಧೇಯೈಶ್ಚ ವಜ್ರಸ್ಯ ಬಲಕೃತ್ಯಾ ಬಲೇನ ಚ ॥ ೮೭ ॥

ಯುಧ, ಸೋಮರಸವನ್ನು ಜಜ್ಜಿ ರಸವನ್ನು ಹಿಂಡುವುದಕ್ಕಾಗಿ ಉಪಯೋಗಿಸುವ ಕಲ್ಲುಗಳು, (ಇವರೆಲ್ಲರನ್ನು ರಥಯುಕ್ತರಾಗಿರುವಂತೆ).

85. ಇವರೆಲ್ಲರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಅವರವರ ಸೂಕ್ತಗಳಲ್ಲಿಯೂ, ಋಕ್ಕುಗಳಲ್ಲಿಯೂ ಅವರ ಹೆಸರುಗಳಿಂದ ಸ್ತುತಿಸಲಾಗಿದೆ. ಪ್ರತಿಸೂಕ್ತದಲ್ಲಿಯೂ ಹೇಳಲ್ಪಟ್ಟಿರುವ ಆ ದೇವತೆಗಳ ಹೆಸರು ಮೊದಲಾದ ವಿವರಗಳನ್ನು ಈಗ ಕ್ರಮವಾಗಿ ವಿವರಿಸುತ್ತೇನೆ.

ಅಗ್ನಿ, ಇಂದ್ರ ಅಥವಾ ವಾಯು, ಸೂರ್ಯ ಎಂಬ ದೇವತೆಗಳ ಪರವಾದ ಸೂಕ್ತಗಳ ವರ್ಣನೆಯು

86. ಒಂದು ಸೂಕ್ತವು ಅಗ್ನಿಪರವಾದುದೆಂದು ತಿಳಿಯಬೇಕಾದರೆ ಆ ಸೂಕ್ತದಲ್ಲಿರುವ ಅಗ್ನಿಯ ಗುಣಗಳನ್ನು ವರ್ಣಿಸುವ ಶಬ್ದಗಳಿಂದಲೂ, ಐದು ವಿಧವಾದ ಹವಿಸ್ಪ್ರದಾನದಿಂದಲೂ, ಅಗ್ನಿಯ ಹೆಸರಿನಿಂದಲೂ, ಇರುವುದನ್ನು ನೋಡಿ ಅದು ಅಗ್ನಿದೇವತಾಕವಾದ ಸೂಕ್ತವೆಂದು ನಿಶ್ಚಯಿಸಬೇಕು.

87. ಇಂದ್ರನ ಪರವಾದ ಸೂಕ್ತದಲ್ಲಿ ಇಂದ್ರ ಅಥವಾ ವಾಯುವಿನ ಮುಖ್ಯಗುಣಗಳ ವರ್ಣನೆಯಿರುವುದು. ಮತ್ತು ವಜ್ರಾಯುಧದ ಹೆಸರು, ಸಾಹಸಕಾರ್ಯಗಳ ವರ್ಣನೆ, ಬಲ ಇವುಗಳಿರುವವು. ಈ ವಿಧವಾದ ವರ್ಣನೆಯಿಂದ ಅಥವಾ ಇಂದ್ರನ ಹೆಸರನ್ನು ಮುಖ್ಯವಾಗಿ ಸ್ತುತಿಸಿರುವುದರಿಂದ ಆ ಸೂಕ್ತವು ಇಂದ್ರಪರವಾದುದೆಂದು ತಿಳಿಯಬೇಕು.

of forms, the Steed, Food, Priests, the bolt, the Pressing-stones, (all these deities) furnished with cars.

18. Characteristics of hymns of Agni, Indra or Vayu, and Surya.

85, Are praised separately in their various hymns and stanzas by their names; these (names) of theirs in their respective praises I will declare in order.

86. One should determine a formula to be addressed to Agni when distinguished by the charecteristic marks of Agni, which on the one hand consist chiefly of the five oblations (ಹವಿಷ್ಪಂಕ್ತಿ) and on the other (are) simple invocations by name,

87. A formula addressed to Indra is distinguished by the characteristic marks of Vayu as well as of Indra, and by denominations of the bolt, by mighty activity, and by might.

ಸೌರ್ಯಸ್ತು ಲಿಂಗೈಃ ಸೂರ್ಯಸ್ಯ ಗುಣೈಃ ಸರ್ವೈಶ್ಚ ತೈಜಸೈಃ ।
ನಾಮಧೇಯೈಶ್ಚ ಚಂದ್ರಸ್ಯ ಸೂಕ್ತಂ ಚ ಭಜತೇಽತ್ರ ಯೈಃ ॥ ೮೮ ॥

ಏತಾಸಾಂ ದೇವತಾನಾಂ ತು ನಾಮಧೇಯಾನುಕೀರ್ತನೈಃ ।
ಯಸ್ಯ ಯಸ್ಯೇಹ ಯಾವಂತಿ ನ ವ್ಯವಸ್ಯಂತ್ಯತೋಽನ್ಯಥಾ ॥ ೮೯ ॥

ಅಯಂ ಪ್ರಯೋಗಸ್ತ್ವೇತೇಷಾಂ ಜ್ಯೋತಿಷಾಂ ತ್ರಿಷು ವರ್ತತಾಂ ।
ಲೋಕೇಷು ಮಂತ್ರವಿದ್ವಿದ್ವಾನ್ಪ್ರಯೋಗೇ ನಾವಸೀದತಿ ॥ ೯೦ ॥

ನೀಯತೇಽಯಂ ನೃಭಿರ್ಯಸ್ಮಾನ್ನಯತ್ಯಸ್ಮಾದಸೌ ಚ ತಂ ।
ತೇನೇಮೌ ಚಕ್ರತುಃ ಕರ್ಮ ಸನಾಮಾನೌ ಪೃಥಕ್ ಪೃಥಕ್ ॥ ೯೧ ॥

88. ಸೂರ್ಯಪರವಾದ ಸೂಕ್ತಗಳಲ್ಲಿ ಸೂರ್ಯನ ಗುಣವರ್ಣನೆ ಇರುವುದಲ್ಲದೆ ತೇಜಸ್ಸಿನ ವರ್ಣನೆಯೂ, ಕೆಲವು ಸಂದರ್ಭಗಳಲ್ಲಿ ಚಂದ್ರನ ಹೆಸರು ಮೊದಲಾದ ವಿವರಣೆಗಳೂ ಇರುವವು.

89. ಋಷಿದೃಷ್ಟವಾದ ಈ ಎಲ್ಲಾ ಸೂಕ್ತಗಳನ್ನು ಮೇಲೆ ಹೇಳಿದ ಕ್ರಮದಿಂದಲೇ ಎಂದರೆ ಹೆಸರು ಮೊದಲಾದ ವರ್ಣನೆಗಳಿಂದಲೇ ಯಾವ ದೇವತಾಪರವೆಂಬುದನ್ನು ನಿಶ್ಚಯವಾಗಿ ತಿಳಿಯಲು ಸಾಧ್ಯವಾಗುವುದಿಲ್ಲ. ಇದನ್ನು ಬೇರೆ ವಿಧದಿಂದಲೂ ತಿಳಿಯಬೇಕಾಗಿರುವುದು.

90. ಮೇಲೆ ಹೇಳಿದ ರೀತಿಯಲ್ಲಿ ಪೃಥಿವ್ಯಂತರಿಕ್ಷಗಳೆಂಬ ಮೂರು ಸ್ಥಾನಗಳಲ್ಲಿ ಅಥವಾ ಲೋಕಗಳಲ್ಲಿ ಜ್ಯೋತೀರೂಪದಿಂದಿರುವ (ಅಗ್ನಿ, ಇಂದ್ರ, ಸೂರ್ಯ) ಮೂರು ದೇವತೆಗಳ ಸ್ವರೂಪವನ್ನು ತಿಳಿದು ಅದನ್ನು ಸಂದರ್ಭಾನುಸಾರ ವ್ಯವಹರಿಸುವುದಾದರೆ ಮಂತ್ರಜ್ಞನಾದ ಪುರುಷನು, ಮಂತ್ರಗಳ ಪ್ರಯೋಗ ವಿಷಯದಲ್ಲಿ ತಪ್ಪನ್ನು ಮಾಡುವುದಿಲ್ಲ.

ಮೂರುವಿಧ ಅಗ್ನಿಗಳು

91. ಅಗ್ನಿಶಬ್ದಾರ್ಥವಿವರಣೆ—ಈ ಅಗ್ನಿಯು ತನ್ನ ಉತ್ಪತ್ತಿಸ್ಥಾನವಾದ ಅರಣಿಯ ಸಮೀಪದಿಂದ ಉತ್ತರ ವೇದಿಯ ಬಳಿಗೆ (ಅಗ್ನ್ಯಾ ನಯನವಿಧಿಯಂತೆ) ಒಯ್ಯಲ್ಪಡುವುದರಿಂದಲೂ ಅಥವಾ ಈ ಅಗ್ನಿಯು ಯಜ್ಞಮಾಡುವ

88. (A formula) addressed to Surya (is distinguished) by the characteristic marks of Surya, as well as by all qualities relating to brilliance, and by those denominations of the moon by which it (the moon) here belongs to the hymn.

89. All such (hymns) of any (seer) here which (authorities) cannot determine by mention of the denominations of these deities, (must be determined) in some other way than this.

90. Let this application of these (three) lights take place in the three worlds (respectively) a wise man knowing the formulas does not fail in the application.

19. The three Agnis.

91. Because this (terristerial Agni) is led by men, and that (celestial

ಯದ್ವಿದ್ಯತೇ ಹಿ ಜಾತಃ ಸಞ್ಜಾತೈರ್ಯದ್ವಾತ್ರ ವಿದ್ಯತೇ ।
ತೇನೇಮೌ ತುಲ್ಯನಾಮಾನೌ ಉಭೌ ಲೋಕೌ ಸಮಾಪ್ನುತಃ ॥ ೯೨ ॥
ವಿಸೃಜನ್ನಯಮೇತೇಷಾಂ ಭ್ರಾಜತೇ ವ್ಯೋಮ್ನಿ ಮಧ್ಯಮಃ ।
ನಿಪಾತಮಾತ್ರೇ ಕಥ್ಯಂತೇ ತಥಾಗ್ನೇಯಾನಿ ಕಾನಿಚಿತ್ ॥ ೯೩ ॥
ಅರ್ಚಿಭಿಃ ಕೇಶ್ಯಯಂ ತ್ವಗ್ನಿರ್ವಿದ್ಯುದ್ಭಿಶ್ಚೈವ ಮಧ್ಯಮಃ ।
ಅಸೌ ತು ರಶ್ಮಿಭಿಃ ಕೇಶೀ ತೇನೈನಾನಾಹ ಕೇಶಿನಃ ॥ ೯೪ ॥

ಯಜಮಾನನನ್ನು (ಯಜ್ಞಫಲನಿಮಿತ್ತವಾಗಿ) ಸ್ವರ್ಗಕ್ಕೆ ಒಯ್ಯುವುದರಿಂದಲೂ ಪೃಥಿವೀಸ್ಥನಾದ ಅಗ್ನಿಗೆ ಅಗ್ನಿಯೆಂಬ ಹೆಸರು ಬಂದಿದೆ. ಅಗ್ನಿಗೆ ಈ ಎರಡು ಪ್ರತ್ಯೇಕವಾದ ಕರ್ಮಗಳಿದ್ದರೂ ಹೆಸರು ಮಾತ್ರ (ಅಗ್ನಿ ಎಂದು) ಒಂದೇ ಆಗಿರುವುದು.

92. ಅಗ್ನಿಯು ಅರಣಿಯಲ್ಲಿ ಉತ್ಪನ್ನನಾದ ಕೂಡಲೆ ಎಲ್ಲರಿಂದಲೂ ತಿಳಿಯಲ್ಪಡುವನು ಅಥವಾ ಈ ಲೋಕದ ಪ್ರಾಣಿಗಳಿಂದ ಅಗ್ನಿಯು ಅರಿಯಲ್ಪಡುವನು. ಆದ್ದರಿಂದ ಈ ಎರಡು ಕರ್ಮಗಳೂ ಅಗ್ನಿಯ (ಜಾತವೇದಸ್ಸಿನ) ಸ್ವರೂಪವನ್ನು ವಿಶದಪಡಿಸುವವು. ಇಲ್ಲಿ ಎರಡು ಕರ್ಮಗಳಿದ್ದರೂ ಹೆಸರು ಮಾತ್ರ ಒಂದೇ ಆಗಿರುವುದು ಎಂದರೆ ಜಾತವೇದಾಃ ಎಂಬ ಒಂದೇ ಹೆಸರಿಗೆ ಎರಡುವಿಧ ಅರ್ಥವನ್ನು ಹೇಳಬಹುದು.

93. ಮಧ್ಯಮಸ್ಥಾನದಲ್ಲಿರುವ (ಅಂತರಿಕ್ಷದಲ್ಲಿರುವ) ಅಗ್ನಿಯು (ವಿದ್ಯುದಗ್ನಿಯು) ಅಂತರಿಕ್ಷದಲ್ಲಿ ಪ್ರಕಾಶಿಸುತ್ತಾ ವೃಷ್ಟ್ಯುತ್ಸರ್ಜನಕ್ಕೆ ಪ್ರೇರಕನಾಗಿರುವನು. ಅಗ್ನಿಯ ಕೆಲವು ಹೆಸರುಗಳು ಕೆಲವು ಸಂದರ್ಭಗಳಲ್ಲಿ ಅನ್ವರ್ಥನಾಮವಾಗಿವೆ ಎಂದರೆ ಹೆಸರಿಗೆ ತಕ್ಕಂತೆ ಕಾರ್ಯವಿರುವುದು.

94. ಅಗ್ನಿಗೆ ಜ್ವಾಲೆ ಅಥವಾ ರಶ್ಮಿಗಳೇ ಕೇಶಗಳಂತಿರುವವು. ಪೃಥಿವೀಸ್ಥನಾದ ಅಗ್ನಿಗೆ ಜ್ವಾಲೆಗಳೇ ಕೇಶಗಳು; ಅಂತರಿಕ್ಷಸ್ಥನಾದ ವಿದ್ಯುದಗ್ನಿಗೆ ವಿದ್ಯುತ್ತೇ ಕೇಶವು; ಸ್ವರ್ಗದಲ್ಲಿ ಬೆಳಗುತ್ತಿರುವ ಸೂರ್ಯಾತ್ಮಕನಾದ ಅಗ್ನಿಗೆ ರಶ್ಮಿಗಳೇ ಕೇಶಗಳು. ಆದ್ದರಿಂದ ಕವಿಗಳಾದ ಋಷಿಗಳು ಅಗ್ನಿಯನ್ನು ಕೇಶೀ—ಕೇಶಯುಕ್ತನು ಎಂದು ವರ್ಣಿಸಿರುವರು.

Agni) leads him from this (world), therefore these two (Agnis), while having the same name, have performrd their work each separately.

92. Because he is known (ವಿದ್ಯತೇ) when born (ಜಾತಃ) or because he is known (ವಿದ್ಯತೇ) here by creatures (ಜಾತೈಃ) therefore these two, while having an identical name (i.e. ಜಾತವೇದಾಃ) pervade (ಸಮಾಪ್ನುತಃ) both worlds (separately).

93. He (Agni), as the middlemost of these (three), shines in the air discharging (rain); thus some (names) of Agni are mentioned only incidentally.

94. This (terristrial) Agni is hairy (ಕೇಶೀ) with flames, and the middle one with lightnings, while that (celestial) one is hairy with rays: therefore (the poet) calls them hairy ones (ಕೇಶಿನಃ).

ಏತೇಷಾಂ ತು ಪೃಥಕ್ತ್ವೇನ ತ್ರಯಾಣಾಂ ಕೇಶಿನಾಮಿಹ ।
ಸಲಂಕ್ಷ್ಯಂತೇ ಪ್ರಕ್ರಿಯಾಸು ತ್ರಯಃ ಕೇಶಿನ ಇತ್ಯೃಚಿ ॥ ೯೫ ॥

ನ ಚೈವೇಷಾಂ ಪ್ರಸೂತಿರ್ವಾ ವಿಭೂತಿಸ್ಥಾನಜನ್ಮ ವಾ ।
ನಿರ್ವಕ್ತುಂ ಶಕ್ಯಮೇತೈರ್ಹಿ ಕೃತ್ಸ್ನಂ ವ್ಯಾಪ್ತಮಿದಂ ಜಗತ್ ॥ ೯೬ ॥

ವೈಶ್ವಾನರಂ ಶ್ರಿತೋ ಹ್ಯಗ್ನಿರಗ್ನಿಂ ವೈಶ್ವಾನರಃ ಶ್ರಿತಃ ।
ಅನಯೋರ್ಜಾತವೇದಾಸ್ತು ತಥೈತೇ ಜಾತವೇದಸೀ ॥ ೯೭ ॥

ಸಾಲೋಕ್ಯಾಚ್ಚೈಕಜಾತತ್ವಾದ್ವ್ಯಾಪ್ತಿಮತ್ತ್ವಾತ್ತು ತೇಜಸಃ ।

95. ಈ ಮೂರು ವಿಧವಾದ ಕೇಶಿಗಳ ಎಂದರೆ ಕೇಶಯುಕ್ತರಾದ ಅಗ್ನಿಗಳ ವಿವರಣೆಯು ಬೇರೆ ಬೇರೆ ಯಾಗಿರುವುದರಿಂದ, **ತ್ರಯಃ ಕೇಶಿನಃ** (ಋ. ಸಂ. ೧-೧೬೪-೪೪) ಎಂಬ ಋಕ್ಕಿನಲ್ಲಿ ಮೂರುವಿಧ ಅಗ್ನಿಗಳನ್ನು ಅವರವರ ಕ್ರಿಯಾನುಗುಣವಾಗಿ ಲಕ್ಷಿಸಬಹುದು.

ಅಗ್ನಿಃ, ಜಾತವೇದಾಃ, ವೈಶ್ವಾನರಃ ಎಂಬ ಹೆಸರುಗಳು ಒಂದೇ ಅಗ್ನಿಯೆನ್ನು ಸೂಚಿಸುವುದಾದರೂ ಆ ಅಗ್ನಿಗಳ ಗುಣವರ್ಣನೆಯಲ್ಲಿ ಭೇದವು ಕಂಡುಬರುವುದು.

96. ಈ ಮೂರುವಿಧ ಅಗ್ನಿಗಳ ಉತ್ಪತ್ತಿ (ಪ್ರಸೂತಿ), ಸಾಮರ್ಥ್ಯ (ವಿಭೂತಿ) ಸ್ಥಾನ, ಜನ್ಮ ಇವುಗಳನ್ನು ವಿಶದವಾಗಿ ವಿವರಿಸುವುದು ಕಷ್ಟವೇ ಸರಿ. ಏಕೆಂದರೆ, ಸಮಸ್ತ ಜಗತ್ತೂ ಈ ಮೂರು ಅಗ್ನಿಗಳಿಂದ ವ್ಯಾಪ್ತವಾಗಿರುವುದು.

97. ಅಗ್ನಿಯು ವೈಶ್ವಾನರನೆಂಬ ಅಗ್ನಿಯಲ್ಲಿ ಸೇರಿರುವುದು, ವೈಶ್ವಾನರನು ಅಗ್ನಿಯಲ್ಲಿ ಸೇರಿರುವುದು ಎಂದರೆ ಪರಸ್ಪರ ಒಂದನ್ನೊಂದು ಆಶ್ರಯಿಸಿರುವುದು. ಈ ಎರಡರಲ್ಲಿ ಜಾತವೇದಾಗ್ನಿಯು ಇರುವುದು ಎಂದರೆ ಅಗ್ನಿ ಮತ್ತು ವೈಶ್ವನರಾಗ್ನಿಯು ಜಾತವೇದಾಗ್ನಿಯ ಎರಡು ರೂಪಾಂತರಗಳು.

98. ದೇವತೆಗಳ ದೇವತ್ವವು ಎಂದರೆ ಸ್ವರೂಪವು ಒಂದೇ ಲೋಕಕ್ಕೆ ಸೇರಿರುವುದರಿಂದಲೂ, ಒಂದೇವಿಧ

---

95. Now owing to the seperate nature of these three hairy ones here they are distinguished in their specific characters (ಪ್ರಕ್ರಿಯಾಸು) in the stanza, Three hairy ones' (ತ್ರಯಃ ಕೇಶಿನಃ 1-164-44).

20. Agni, Jatavedas, Vaisvanara; essentially identical, but distinguished.

96. It is impossible to explain their production (ಪ್ರಸೂತಿ) their power, sphere, and birth ; for the whole of this world is pervaded by them.

97. Agni is contained in (ಶ್ರಿತಃ) Vaisvanara, Vaiswanara is contained in Agni ; Jatavedas is in these two ; thus these two (lights) are two (forms of) Jatavedas.

98. The divine nature of each god here (is derived) from their belonging to the same world, from their having one and the same birth,

ತಸ್ಯ ತಸ್ಯೇಹ ದೇವತ್ವಂ ದೃಶ್ಯಂತೇ ಚ ಪೃಥಕ್ ಸ್ತುತಾಃ ॥ ೯೮ ॥
ಯತ್ತ್ವಾಗ್ನೇಯಮಿತಿ ಬ್ರೂಮಃ ಸೂಕ್ತಭಾಕ್ತತ್ರ ಪಾರ್ಥಿವಃ ।
ಜಾತವೇದಸ್ಯಮಿತ್ಯುಕ್ತೇ ಸೂಕ್ತೇಽಸ್ಮಿನ್ಮಧ್ಯಮಃ ಸ್ಮೃತಃ ॥ ೯೯ ॥
ವೈಶ್ವಾನರೀಯಮಿತಿ ತು ಯತ್ರ ಬ್ರೂಮೋಽಥ ವಾ ಕ್ವಚಿತ್ ।
ಸೂರ್ಯಃ ಸೂಕ್ತಸ್ಯ ಭಾಕ್ ತತ್ರ ಜ್ಞೇಯೋ ವೈಶ್ವಾನರಸ್ತುತೌ ॥ ೧೦೦ ॥
ಸೂರ್ಯಪ್ರಸೂತಾವಗ್ನೀ ತು ದೃಷ್ಟೌ ಪಾರ್ಥಿವಮಧ್ಯಮೌ ।
ಏತೇಷಾಮೇವ ಲೋಕಾನಾಂ ತ್ರಯಾಣಾಮಧ್ವರೇಽಧ್ವರೇ ॥ ೧೦೧ ॥

ವಾದ ಉತ್ಪತ್ತಿಯಿರುವುದರಿಂದಲೂ ತೇಜಸ್ಸಿನಿಂದ ವ್ಯಾಪ್ತವಾಗಿರುವುದರಿಂದಲೂ ಆಯಾ ಸ್ಥಾನದ ದೇವತೆಗಳಿಗೆ ಒಂದೇ ಮೂಲಸ್ಥಾನವಿದ್ದರೂ ಅವರ ಕರ್ಮಾನುಗುಣವಾಗಿ ಅವರ ಸ್ವರೂಪವು ಬೇರೆಬೇರೆಯಾಗಿರುವಂತೆ ಸ್ತುತಿಸಲ್ಪಡುವರು.

99. ನಾವು ಒಂದು ಸೂಕ್ತವನ್ನು ಆಗ್ನೇಯಸೂಕ್ತವೆಂದು ಹೇಳುವಾಗ ಆ ಸೂಕ್ತದಲ್ಲಿ ಪಾರ್ಥಿವಾಗ್ನಿಯು ಸ್ತುತನಾಗಿರುವನೆಂದು ತಿಳಿಯಬೇಕು. ಅದರಂತೆ ಒಂದು ಸೂಕ್ತವನ್ನು ಜಾತವೇದಸ್ಯವೆಂದು (ಜಾತವೇದಾಗ್ನಿಪರವಾದ ಸೂಕ್ತವೆಂದು) ಹೇಳುವಾಗ ಆ ಸೂಕ್ತದಲ್ಲಿ ಮಧ್ಯಮಸ್ಥಾನಾಗ್ನಿಯು (ವಿದ್ಯುದಗ್ನಿಯು) ಸ್ತುತನಾಗಿರುವನೆಂದು ತಿಳಿಯಬೇಕು.

100. ಮತ್ತು ಅದರಂತೆ ಒಂದು ಸೂಕ್ತವನ್ನು ವೈಶ್ವಾನರೀಯಸೂಕ್ತವೆಂದು ನಾವು ಹೇಳುವಾಗ ಆ ಸೂಕ್ತದಲ್ಲಿ ವೈಶ್ವಾನರನು ಸ್ತುತನಾಗಿದ್ದರೂ ಆ ಸೂಕ್ತಕ್ಕೆ ಸೂರ್ಯನೇ ಮುಖ್ಯದೇವತೆಯೆಂದೂ ವೈಶ್ವಾನರಸ್ತುತಿಯೇ ಸೂರ್ಯನ ಸ್ತುತಿಯೆಂದೂ ತಿಳಿಯಬೇಕು.

ಪ್ರತ್ಯವರೋಹಕ್ರಮದಿಂದ ತ್ರಿಸ್ಥಾನದೇವತೆಗಳ ವರ್ಣನೆ

101-102. ಪಾರ್ಥಿವಾಗ್ನಿಯೂ ಮಧ್ಯನಾಗ್ನಿಯೂ ಸೂರ್ಯನಿಂದ ಉತ್ಪತ್ತಿಯಾದಂತೆ ಕಂಡುಬರುವುದು. ಏಕೆಂದರೆ ಪ್ರತಿ ಯಜ್ಞದಲ್ಲಿಯೂ ಋತ್ವಿಕ್ಕುಗಳು ಪಠಿಸುವ ಆಗ್ನಿಮಾರುತಶಸ್ತ್ರಮಂತ್ರಪಠನದಲ್ಲಿ ರೋಹ ಪ್ರತ್ಯವರೋಹ

and from brilliance being inherent in them; at the same time (ಚ) they appear praised separately.

99. When we speak of (a hymn) as addressed to Agni, the terrestrial one in that case owns the hymn (ಸೂಕ್ತಭಾಕ್), When a hymn is stated to be addressed to Jatavedas, the middle (Agni) has been taught (as the object of praise) in it.

100. Or when again we speak anywhere of (a hymn) as addressed to Vaisvanara, Surya is in that case to be recognised in the praise of Vaisvanara to be the owner (ಭಾಕ್) of the hymn.

21. The deities of the three worlds in the descending series.

101-102. Now terrestrial and the middle (Agnis) are seen to be produced (ಪ್ರಸೂತ) from the Sun; at each sacrifice (the priest) wishing to

ರೋಹಾತ್ಪ್ರತ್ಯವರೋಹೇಣ ಚಿಕೀರ್ಷನ್ನಾಗ್ನಿಮಾರುತಂ ।
ಶಸ್ತ್ರಂ ವೈಶ್ವಾನರೀಯೇಣ ಸೂಕ್ತೇನ ಪ್ರತಿಪದ್ಯತೇ ॥ ೧೦೨ ॥

ತತಸ್ತು ಮಧ್ಯಮಸ್ಥಾನಾ ದೇವತಾಸ್ತ್ವನುಶಂಸತಿ ।
ರುದ್ರಂ ಚ ಮರುತಶ್ಚೈವ ಸ್ತೋತ್ರಿಯೇಽಗ್ನಿಮಿಮಂ ಪುನಃ ॥ ೧೦೩ ॥

ಯಥೈತದುಕ್ತಮೇತೇಷಾಂ ವಿಭೂತಿಸ್ಥಾನಸಂಭವಂ ।
ತಥಾ ಚ ದೇವದೇವಸ್ಯ ತತ್ರ ತತ್ರೇಹ ದೃಶ್ಯತೇ ॥ ೧೦೪ ॥

ಯದ್ಯತ್ರ ಪೃಥಿವೀಸ್ಥಾನಂ ಪಾರ್ಥಿವಂ ಚಾಗ್ನಿಮಾಶ್ರಿತಂ ।
ತತ್ಸರ್ವಮಾನುಪೂರ್ವ್ಯೇಣ ಕಥ್ಯಮಾನಂ ನಿಬೋಧತ ॥ ೧೦೫ ॥

ಕ್ರಮದಿಂದ (ಮೇಲಿನಿಂದ ಕೆಳಕ್ಕೆ ಎಂದರೆ ಸ್ವರ್ಗದಿಂದ ಅಂತರಿಕ್ಷ, ಅಂತರಿಕ್ಷದಿಂದ ಭೂಮಿ) ಮೊದಲು ವೈಶ್ವಾನರೀಯ ಸೂಕ್ತವು ಪಠಿಸಲ್ಪಡುವುದು. (ಎಂದರೆ ಮೊದಲು ಸೂರ್ಯನನ್ನೂ ಅನಂತರ ವಿದ್ಯುದಗ್ನಿ ಅಥವಾ ಜಾತವೇದಸ್ಸನ್ನೂ ಅನಂತರ ಪಾರ್ಥಿವಾಗ್ನಿಯನ್ನೂ ಸ್ತುತಿಸುವುದರಿಂದ ಸೂರ್ಯ ಅಥವಾ ವೈಶ್ವಾನರಾಗ್ನಿಯೇ ಇತರ ಎರಡು ಅಗ್ನಿಗಳಿಗೆ ಉತ್ಪತ್ತಿಸ್ಥಾನವೆಂದು ಹೇಳಿದಂತಾಯಿತು ಎಂದಭಿಪ್ರಾಯವು).

103. ಅನಂತರ ಮಧ್ಯಮ (ಅಂತರಿಕ್ಷ) ಸ್ಥಾನದ ದೇವತೆಗಳನ್ನು ಸ್ತುತಿಸಲಾಗುವುದು. ರುದ್ರ, ಮರುತ್ತುಗಳು ಮತ್ತು (ವಿದ್ಯುತ್) ಅಗ್ನಿ ಇವರುಗಳು ಮಧ್ಯಮಸ್ಥಾನದೇವತೆಗಳು.

104. ಈ ದೇವತೆಗಳ ಮಾಹಾತ್ಮ್ಯ ಸ್ಥಾನ ಮೊದಲಾದವುಗಳನ್ನು ಯಾವರೀತಿ ವರ್ಣಿಸಲಾಗಿದೆಯೋ ಅದರಂತೆ ದೇವದೇವನ (ಪ್ರಜಾಪತಿಯ) ಮಾಹಾತ್ಮ್ಯ, ಸ್ಥಾನ ಮೊದಲಾದವುಗಳನ್ನು ಅಲ್ಲಲ್ಲಿ ವರ್ಣಿಸಿರುವುದು ಕಂಡು ಬರುವುದು.

105. ಪೃಥಿವೀಸ್ಥಾನದೇವತೆಯಾದ ಪಾರ್ಥಿವಾಗ್ನಿಗೆ ಸಂಬಂಧಪಟ್ಟ ಸ್ಥಾನಾದಿಗಳನ್ನು ಎಲ್ಲೆಲ್ಲಿ ಯಾವ ರೀತಿ ಹೇಳಿದೆಯೋ ಅವೆಲ್ಲವನ್ನೂ ಈಗ ಒಂದು ಕ್ರದುದಲ್ಲಿ ವಿವರಿಸುವುದನ್ನು ಕೇಳಿರಿ.

---

perform the litany to Agni and the Maruts according to the descending series (which is) the reverse of the ascending series of these three worlds, begins with a hymn to Vaisvanara.

103. Then he lauds next the deities of the middle sphere, Rudra and the Maruts, (and) again this (terrestrial) Agni in the Stotria.

104. Just as this has been said of these (three) as arising from (their different) powers and spheres, so it also appears here in its respective place (as applicable) to the god of gods (ಪ್ರಜಾಪತಿ).

105. Whatever appears anywhere as belonging to the sphere of earth, and as contained in the terrestrial Agni, attend to all that (now) being told in due order.

ಜಾತವೇದಾಃ ಶ್ರಿತೋ ಹ್ಯಗ್ನಿಮಗ್ನಿಂ ವೈಶ್ವಾನರಃ ಶ್ರಿತಃ ।
ದ್ರವಿಣೋದಾಸ್ತಥೇಧ್ಮಶ್ಚ ಶ್ರಿತಶ್ಚಾಗ್ನಿಂ ತನೂನಪಾತ್ ॥ ೧೦೬ ॥

ನರಾಶಂಸಃ ಶ್ರಿತಶ್ಚೈನಮೇನಮೇವಾಶ್ರಿತಸ್ತ್ವಳಃ ।
ಬರ್ಹಿರ್ದ್ವಾರಶ್ಚ ದೇವ್ಯೋಽಗ್ನಿಮೇನಮೇವ ತು ಸಂಶ್ರಿತಾಃ ॥ ೧೦೭ ॥

ನಕ್ತೋಷಾಸಾ ಚ ದೇವ್ಯೌ ಚ ಹೋತಾರಾನೇತದಾಶ್ರಯೌ ।
ದೇವ್ಯಸ್ತಿಸ್ರಶ್ಚ ಶ್ರಿತಾಶ್ಚೈನಂ ತ್ವಷ್ಟಾ ಚೈವೈತದಾಶ್ರಯಃ ॥ ೧೦೮ ॥

ಶ್ರಿತೋ ವನಸ್ಪತಿಶ್ಚೈನಂ ಸ್ವಾಹಾಕೃತಯ ಏವ ಚ ।

ಪಾರ್ಥಿವಾಗ್ನಿಯನ್ನು ಪ್ರತಿಬಿಂಬಿಸುವ ದೇವತೆಗಳು

106. ಜಾತವೇದಾಃ ಎಂಬ ಹೆಸರಿನ ಅಗ್ನಿಯು ಅಗ್ನಿಯಲ್ಲಿಯೇ ಸೇರಿರುವುದು. ಹಾಗೆಯೇ ವೈಶ್ವಾನರ ನಾಮಕ ಅಗ್ನಿಯೂ, ದ್ರವಿಣೋದಾಃ (ಧನದಾತೃವಾದ) ಎಂಬ ಹೆಸರಿನ ಅಗ್ನಿಯೂ, ಇಧ್ಮ (ಸಮಿತ್ತು) ವೂ, ತನೂನ ಪಾತ್ ಎಂಬ ಹೆಸರಿನ ಅಗ್ನಿಯೂ ಇವೆಲ್ಲವೂ ಅಗ್ನಿಯಲ್ಲಿಯೇ ಸೇರಿರುವುದು ಎಂದರೆ ಇವೆಲ್ಲವೂ ಅಗ್ನಿಯ ರೂಪಾಂತರಗಳೇ ಆಗಿವೆ.

107. ಅದರಂತೆಯೇ ನರಾಶಂಸ ಎಂಬ ದೇವತೆಯೂ, ಇಳಃ, ಬರ್ಹಿಃ, ದ್ವಾರೋ ದೇವ್ಯಃ ಎಂಬ ಹೆಸರಿನ ದೇವತೆಗಳೂ (ಆಪ್ರೀಸೂಕ್ತದ ದೇವತೆಗಳು) ಅಗ್ನಿಯ ರೂಪಾಂತರಗಳೇ ಆಗಿರುವವು.

108. ಅದರಂತೆಯೇ **ನಕ್ತೋಷಾಸಾ** (ರಾತ್ರಿ ಮತ್ತು ಉಷಃಕಾಲಾಭಿಮಾನಿದೇವತೆಗಳು) **ದೇವ್ಯೌ ಹೋತಾರೌ** (ದೇವಸಂಬಂಧವಾದ ಹೋತೃಗಳೆಂಬ ಋತ್ವಿಜರು) **ದೇವ್ಯಸ್ತಿಸ್ರಃ** (ಇಳಾ, ಸರಸ್ವತೀ ಭಾರತೀ ಎಂಬ ಮೂರು ಮಂದಿ ದೇವಿಯರು) **ತ್ವಷ್ಟೃವು** ಇವರೂ (ಆಪ್ರೀಸೂಕ್ತದ ದೇವತೆಗಳು) ಅಗ್ನಿಯ ರೂಪಾಂತರಗಳು.

109. ಮತ್ತು ವನಸ್ಪತಿ, ಸ್ವಾಹಾಕೃತಿ (ಇವರೂ ಆಪ್ರಿಸೂಕ್ತದ ದೇವತೆಗಳು—**ಇಧ್ಮ** ಎಂಬುದರಿಂದ **ಸ್ವಾಹಾ** ಕೃತಿಯವರೆಗೆ ಇರುವ 11 ಮಂದಿ ದೇವತೆಗಳು ಆಪ್ರೀಸೂಕ್ತದ ದೇವತೆಗಳೆಂದು ಪ್ರಸಿದ್ಧರಾಗಿ ಇವರೆಲ್ಲರೂ)

---

22. The deities representing terrestrial Agni.

106. Jatavedas is contained in Agni, Vaisvanara is contained in Agni; so also are Dravinodas, and Fuel (ಇಧ್ಮ) and Tanunapat is contained in Agni.

107. Narasamsa is contained in him, in him is contained Ila, the litter (ಬರ್ಹಿ) and the Divine Doors are contained in this Agni.

108. Night and Dawn, and the two Divine Sacrificers are contained in him; and the Three Goddesses are contained in him, and Tvastr is contained in him.

109. Vanaspati is contained in him, also the Svahakrits; and the

ಅಶ್ವಶ್ಚ ಶಕುನಿಶ್ಚೈವ ಮಂಡೂಕಾಶ್ಚೈತದಾಶ್ರಯಾಃ ॥ ೧೦೯ ॥
ಗ್ರಾವಾಣಶ್ಚೈನಮುಷ್ಟಾಶ್ಚ ನರಾಶಂಸಸ್ತಥಾ ರಥಃ ।
ದುಂದುಭಿಶ್ಚೇಷುಧಿಶ್ಚೈನಂ ಹಸ್ತಘ್ನೋಽಭೀಶವೋ ಧನುಃ ॥ ೧೧೦ ॥
ಜ್ಯಾ ಚೈತದಾಶ್ರಿತೇಷುಶ್ಚ ಶ್ರಿತಾ ಅಶ್ವಾಜನೀ ಚ ಯಾ ।
ವೃಷಭೋ ದ್ರುಘಣಶ್ಚೈನಮೇನಂ ಪಿತುರುಲೂಖಲಂ ॥ ೧೧೧ ॥
ನದ್ಯಶ್ಚೈವೈನಮಾಪಶ್ಚ ಸರ್ವಾ ಓಷಧಯಶ್ಚ ಹ ।
ರಾತ್ರ್ಯಪ್ಪಾಗ್ನಾಯ್ಯರಣ್ಯಾನೀ ಶ್ರದ್ಧೇಳಾ ಪೃಥಿವೀ ತಥಾ ॥ ೧೧೨ ॥
ಭಜೇತೇ ಚೈನಮೇವಾಸ್ಯೀ ದ್ವಂದ್ವಭೂತೇ ಚ ರೋದಸೀ ।

ಅಗ್ನಿಯ ರೂಪಾಂತರಗಳೆಂದು ಹೇಳಲ್ಪಡುವರು. ಮತ್ತು ಅಶ್ವ (ಯಜ್ಞಾಶ್ವ) ಶಕುನಿ ಎಂಬ ಪಕ್ಷಿ, ಮಂಡೂಕಾಃ (ಕಪ್ಪೆಗಳು) ಇವುಗಳೂ ಅಗ್ನಿಯ ಅಂಶಗಳೆಂದು ಪರಿಗಣಿಸಲ್ಪಟ್ಟಿರುವವು.

110. ಇವರಲ್ಲದೆ 120 ನೇ ಶ್ಲೋಕದ ವರೆಗೆ ಹೇಳಿರುವ ದೇವತೆಗಳೆಲ್ಲರೂ ಅಗ್ನಿಯ ಅಂಶ ಅಥವಾ ರೂಪಗಳೆಂದೇ ಪ್ರಸಿದ್ಧಿಯು. ಅವರುಗಳ ಹೆಸರುಗಳನ್ನು ಇಲ್ಲಿ ಕ್ರಮವಾಗಿ ಹೇಳಲಾಗಿರುವುದು—ಸೋಮಲತೆಗಳನ್ನು ಜಜ್ಜುವ ಕಲ್ಲುಗಳು, ಪಗಡೆದಾಳಗಳು, ನರಾಶಂಸ, ರಥ, ದುಂದುಭಿ (ನಗಾರಿ), ಬಾಣಗಳನ್ನು ಇಡುವ ಬತ್ತಳಿಕೆ, ಹಸ್ತಘ್ನೆ (ಬಾಣವನ್ನು ಬಿಲ್ಲಿನಲ್ಲಿ ಹೂಡಿ ಎಳೆದು ಬಿಡುವಾಗ ಬಾಣದ ಕಡ್ಡಿಯು ಹಸ್ತಕ್ಕೆ ತಗಲಿ ಘಾಯಮಾಡದಿರುವುದ ಕ್ಕಾಗಿ ಹಸ್ತಕ್ಕೆ ಸುತ್ತಿರುವ ಬಟ್ಟೆ ಅಥವಾ ಆಯುಧಕ್ಕೆ ಹಸ್ತಘ್ನವೆಂದು ಹೆಸರು) ಕುದುರೆಯ ಲಗಾಮುಗಳು, ಧನುಸ್ಸು (ಬಿಲ್ಲು);

111. ಧನುಸ್ಸಿನ ಹೆದೆ (ಹಗ್ಗ), ಬಾಣ, ಚಾವಟಿ, ವೃಷಭ (ಎತ್ತು ಅಥವಾ ಹೋರಿ) ಸುತ್ತಿಗೆ, ಗುಂಡು ಕಲ್ಲು, ಒರಳು;

112. ನದಿಗಳು, ಆಪಃ (ಉದಕಗಳು), ಸಮಸ್ತ ಓಷಧಿಗಳು (ಲತೆಗಳು), ರಾತ್ರಿ, ಅಪ್ಪ, ಅಗ್ನಾಯೀ (ಅಗ್ನಿಯ ಪತ್ನಿ) ಅರಣ್ಯಾನೀ, ಶ್ರದ್ಧಾ, ಇಳಾ, ಪೃಥಿವೀ;

113. ಬಿಲ್ಲಿನ ಎರಡು ತುದಿಗಳು, ದ್ಯಾವಾಪೃಥಿವಿಗಳು (ಈ ಹೆಸರಿನ ದೇವತೆಗಳು) ಮುಸಲ, ಉಲೂಖಲ,

---

Steed, and the Bird, and the Frogs are contained in him,

110 And the Pressing-stones are contained in him, and the Dice, also Narasamsa, the Car, and the Drum, and the Quiver (are contained) in him, the Handguard, the Reins, the Bow.

111. And the Bowstring is contained in him and the arrow, the Whip, the Bull, and the Mallet, in him the Draught and the Mortar.

112. And the Rivers (are contained) in him, and the Waters and all the Plants; Ratri, Apva, Agnayi, Aranyayi, Sraddha, Ila, and Prithvi,

113. And the two Ends of the Bow belong to him and the Two

ಮುಸಲೋಲೂಖಲೇ ಚೈನಂ ಹವಿರ್ಧಾನೇ ಚ ಯೇ ಸ್ಮೃತೇ ॥ ೧೧೩ ॥

ಜೋಷ್ಟ್ರೀ ಚೋರ್ಜಾಹುತೀ ಚೈನಂ ಶುತುದ್ರ್ಯಾ ಚ ವಿಪಾಟ್ ಸಹ ।
ಯೌ ಚ ದೇವೌ ಶುನಾಸೀರೌ ತೌ ಚಾಗ್ನೀ ಚೈತದಾಶ್ರಯೌ ॥ ೧೧೪ ॥

ಲೋಕೋಽಯಂ ಯಚ್ಚ ವೈ ಪ್ರಾತಃ ಸವನಂ ಕ್ರಿಯತೇ ಮಖೇ ।
ವಸಂತಶರದೌ ಚರ್ತೂ ಸ್ತೋಮೋಽನುಷ್ಟುಬಥೋ ತ್ರಿವೃತ್ ॥ ೧೧೫ ॥

ಗಾಯತ್ರೀ ಚೈಕವಿಂಶಶ್ಚ ಯಚ್ಚ ಸಾಮ ರಥಂತರಂ ।
ಸಾಧ್ಯಾಃ ಸಾಮ ಚ ವೈರಾಜಮಾಪ್ತ್ಯಾಶ್ಚ ವಸುಭಿಃ ಸಹ ॥ ೧೧೬ ॥

(ವನಕೆ ಅಥವಾ ಗುಂಡುಕಲ್ಲು ಮತ್ತು ಒರಳುಕಲ್ಲು) ಹವಿರ್ಧಾನೇ ಎಂಬ ಸೋಮಲತೆಗಳನ್ನು ತುಂಬಿ ತರುವ ಎರಡು ಗಾಡಿಗಳು ;

114. ಜೋಷ್ಟ್ರೀ (ಪ್ರೀತಿದಾಯಕರಾದ ಇಬ್ಬರು ದೇವತೆಗಳು), ಊರ್ಜಾಹುತೀ (ಆಹುತಿಯ ಅರ್ಪಣೆಯಿಂದ ಆರಾಧಿಸಲ್ಪಡುವ ಇಬ್ಬರು ದೇವತೆಗಳು), ಶುತುದ್ರಿ (ಈ ಹೆಸರಿನ ನದಿ) ವಿಪಾಟ್ ಎಂಬ ನದಿ, ಶುನಾಸೀರೌ ಎಂಬ ದೇವತೆಗಳು ;

115. ಈ ಲೋಕವು (ಭೂಲೋಕ), ಪ್ರಾತಃಸವನಕರ್ಮವು (ಪ್ರಾತಃಕಾಲದಲ್ಲಿ ಸೋಮರಸವನ್ನು ಹಿಂಡುವ ಯಜ್ಞಾಂಗಕರ್ಮವು), ವಸಂತಋತು, ಶರದೃತು, ಸ್ತೋಮ (ತ್ರಿವೃದಾದಿಸ್ತೋಮಗಳು–ಅಥವಾ ಸ್ತೋತ್ರ), ಅನುಷ್ಟುಪ್ ಎಂಬ ಛಂದಸ್ಸು, ತ್ರಿವೃತ್ಸ್ತೋಮ ;

116. ಗಾಯತ್ರೀ, ಏಕವಿಂಶಸ್ತೋಮ, ರಥಂತರಸಾಮ, ವೈರಾಜಸಾಮ (ಸಾಮಗಾನದಲ್ಲಿ ಪ್ರಭೇದಗಳು) ಸಾಧ್ಯರು, ಆಪ್ತ್ಯರು, ವಸುಗಳು ;

Worlds forming a pair, and Pestle and Mortar (belong) to him, and the two Oblation-carts as they are called.

114. The two Fostering (goddesses) and the two worshipped with strengthening oblations (are contained) In him, and the Vipas together with the Sutudri, and the two Agnis, the divine Suna and Sira, are contained in him

115. This world, and the morning Soma pressing which is performed at the sacrifice, and the two seasons, Spring and Autumn, the Anustubh (metre) and the Trivrt Stoma ;

116. The Gayatri, the Ekavimas (Stoma), the Rathantara chant and the Vairaja chant, the Sadhyas and the Apatyas with the Vasus(belonging to sphere of Agni).

ಇಂದ್ರೇಣ ಚ ಮರುದ್ಭಿಶ್ಚ ಸೋಮೇನ ವರುಣೇನ ಚ ।
ಪರ್ಜನ್ಯೇನರ್ತುಭಿಶ್ಚೈವ ವಿಷ್ಣುನಾ ಚಾಸ್ಯ ಸಂಸ್ತವಃ ॥ ೧೧೬ ॥

ಅಸ್ಯೈವಾಗ್ನೇಸ್ತು ಪೂಷ್ಣಾ ಚ ಸಾಮ್ರಾಜ್ಯಂ ವರುಣೇನ ಚ ।
ದೇವತಾಮರ್ಥತತ್ತ್ವಜ್ಞೋ ಮಂತ್ರೈಃ ಸಂಯೋಜಯೇದ್ಧವಿಃ ॥ ೧೧೮ ॥

ಅಸಂಸ್ತುತಸ್ಯಾಪಿ ಸತೋ ಹವಿರೇಕಂ ನಿರುಪ್ಯತೇ ।
ದೇವತಾವಾಹನಂ ಚೈವ ವಹನಂ ಹವಿಷಾಂ ತಥಾ ॥ ೧೧೯ ॥

ಕರ್ಮ ದೃಷ್ಟೇ ಚ ಯತ್ಕಿಂಚಿದ್ವಿಷಯೇ ಪರಿವರ್ತತೇ ।
ಇತ್ಯುಕ್ತೋಽಯಂ ಗಣಃ ಸರ್ವಃ ಪೃಥಿವ್ಯಾಗ್ನ್ಯಾಶ್ರಯೋ ಮಹಾನ್ ॥ ೧೨೦

117. ಇಂದ್ರ, ಮರುತ್ತುಗಳು, ಸೋಮ, ವರುಣ, ಪರ್ಜನ್ಯ, ಋತುಗಳು ಮತ್ತು ವಿಷ್ಣು ಎಂಬ ದೇವತೆಗಳ ಜತೆಯಲ್ಲಿ ಸ್ತುತನಾದ ಅಗ್ನಿಯು (ಎಂದರೆ-ಇಂದ್ರನ ಜತೆಯಲ್ಲಿ ಸ್ತುತನಾದ ಅಗ್ನಿ ಎಂದರೆ, ಇಂದ್ರಾಗ್ನೀ ಎಂದೂ ಮರುದ್ಭಿರಗ್ನಿಃ, ಅಗ್ನಿಷೋಮಾ, ಇತ್ಯಾದಿ ಅಗ್ನಿಯಿಂದ ಕೂಡಿದ ಸಂಸ್ತುವಿಕದೇವತೆಗಳು ಎಂದರ್ಥವು); ಇವರೆಲ್ಲರೂ ಅಗ್ನಿಯ ರೂಪಾಂತರಗಳು (ಎಂದರೆ ಅಗ್ನಿಯಂತೆ ಪೃಥಿವೀಸ್ಥಾನದೇವತೆಗಳು).

118. ಪೂಷಾ, ವರುಣ ಎಂಬ ದೇವತೆಗಳನ್ನು ಗೌರವಸೂಕ್ತವಾದ ಸಾಮ್ರಾಜ್ಯ ಅಥವಾ ರಾಜಶಬ್ದದಿಂದ ಸಹಿತವಾಗಿ ಸಂಬೋಧಿಸುವಂತೆ (ಪೂಷಾ ರಾಜನ್, ರಾಜಾ ವರುಣಃ ಇತ್ಯಾದಿ) ಅಗ್ನಿಗೂ ಗೌರವಸೂಚಕವಾದ ರಾಜಾ ಎಂಬ ಶಬ್ದವು ಅನ್ವಯಿಸುವುದು. ದೇವತೆಗಳ ಸ್ವರೂಪವನ್ನೂ ಅರ್ಥವನ್ನೂ ತಿಳಿದಿರುವ ಪುರುಷನು ಆಯಾ ದೇವತೆಗಳ ಹೆಸರುಗಳುಳ್ಳ ಮಂತ್ರಗಳೊಡನೆ ಹವಿಸ್ಸನ್ನು ಸೇರಿಸಿ ಹೋಮಮಾಡಬೇಕು. ಎಂದರೆ ಆಯಾ ದೇವತೆಗಳಿಗೆ ಹವಿಸ್ಸನ್ನರ್ಪಿಸಿ ಹೋಮಮಾಡುವಾಗ ಆಯಾ ದೇವತಾಸಂಬಂಧವಾದ ಮಂತ್ರಗಳನ್ನು ಪಠಿಸುತ್ತಾ ಹೋಮಮಾಡಬೇಕು.

119-120. ಕೆಲವು ಸಂದರ್ಭಗಳಲ್ಲಿ ಒಂದು ಮಂತ್ರದಲ್ಲಿ ಒಂದು ದೇವತೆಯ ಜತೆಯಲ್ಲಿ ಇನ್ನೊಂದು ದೇವತೆಯು ಸ್ತುತಿಸಲ್ಪಡದಿದ್ದರೂ ಹವಿಸ್ಸು ಮಾತ್ರ ಎರಡು ದೇವತೆಗಳಿಗೂ ಅರ್ಪಿಸಲ್ಪಡುವುದು. ಏಕೆಂದರೆ ದೇವತೆಗಳ ಆವಾಹನೆಯೂ ಅವರಿಗೆ ಹವಿಸ್ಸನ್ನರ್ಪಿಸುವುದೂ ಇತರ ಕಾರ್ಯಕಲಾಪಗಳೂ ಆ ಕರ್ಮದಲ್ಲಿ

---

117. With Indra and the Maruts, with Soma and Varuna, with Parjanya and the Seasons, and with Vishnu he shares praise.

113. This same Agni shares sovereignty with Pusan and with Varuna. One who knows the essential meaning (of the formulas) should connect the deity (and) the oblation by means of the formulas.

119. Even though (a god) be not praised along with (another in the dual) one and the same oblation is (occasionally) offered (to both). The bringing of the gods, as well as the taking of the oblations (to them).

120. is his activity, and whatever moves within the ken of vision

ಯೇಶ್ಚೈಂದ್ರೋ ಮಧ್ಯಮಸ್ಥಾನೋ ಗಣಃ ಸೋಽಯಮುಕಃ ಪರಃ ।
ವಿಮಾನಾನಿ ಚ ದಿವ್ಯಾನಿ ಗಣಶ್ಚಾಪ್ಸರಸಾಂ ತಥಾ ॥ ೧೨೧ ॥

ಇಂದ್ರಾಶ್ರಯೇಸ್ತು ಪರ್ಜನ್ಯೋ ರುದ್ರೋ ವಾಯುರ್ಬೃಹಸ್ಪತಿಃ ।
ವರುಣಃ ಕಶ್ಚ ಮೃತ್ಯುಶ್ಚ ದೇವಶ್ಚ ಬ್ರಹ್ಮಣಸ್ಪತಿಃ ॥ ೧೨೨ ॥

ಮನ್ಯುಶ್ಚ ವಿಶ್ವಕರ್ಮಾ ಚ ಮಿತ್ರಃ ಕ್ಷೇತ್ರಪತಿರ್ಯಮಃ ।
ತಾರ್ಕ್ಷ್ಯೋ ವಾಸ್ತೋಷ್ಪತಿಶ್ಚೈವ ಸರಸ್ವಾಂಶ್ಚೈವಮತ್ರ ಹ ॥ ೧೨೩ ॥

ಅಪಾಂನಪಾದ್ದಧಿಕ್ರಾಶ್ಚ ಸುಪರ್ಣೋಽಥ ಪುರೂರವಾಃ ।
ಋತೋಽಸುನೀತಿರ್ವೇನಶ್ಚ ತಸ್ಯೈತಸ್ಯಾಶ್ರಯೇಽದಿತಿಃ ॥ ೧೨೪ ॥

(ಉದ್ದಿಷ್ಟಕರ್ಮದಲ್ಲಿ) ಹೇಳಿರುವುದರಿಂದ ಅದರಂತೆ ನೆರವೇರಿಸಬೇಕಾಗಿರುವುದು. ಈ ರೀತಿಯಾಗಿ ಪಾರ್ಥಿವಾಗ್ನಿಯನ್ನು ಆಶ್ರಯಿಸಿರುವ (ಎಂದರೆ ಪೃಥಿವೀಸಂಬಂಧವಾದ) ಸಮಸ್ತದೇವತೆಗಳ ಸಮೂಹವನ್ನು ವಿವರಿಸಲಾಗಿದೆ.

ಮಧ್ಯಮ (ಅಂತರಿಕ್ಷ) ಸ್ಥಾನ ದೇವತೆಗಳು ಮತ್ತು ಇಂದ್ರನಿಗೆ ಸಂಬಂಧಪಟ್ಟ ಇತರ ದೇವತೆಗಳು

121. ಈಗ ಇಂದ್ರನಿಗೆ ಸಂಬಂಧಪಟ್ಟ ಮಧ್ಯಮಸ್ಥಾನದೇವತೆಗಳ ವಿಷಯವನ್ನು ವಿವರಿಸಲಾಗುವುದು. ಈ ಮಧ್ಯಮಸ್ಥಾನದೇವತೆಗಳಾರೆಂದರೆ—ಇಂದ್ರ, ದೇವತೆಗಳ ವಿಮಾನಗಳು, ಅಪ್ಸರೋಗಣಗಳು ;

122. ಇಂದ್ರನನ್ನು ಆಶ್ರಯಿಸಿರುವ ಪರ್ಜನ್ಯ, ರುದ್ರ, ವಾಯು, ಬೃಹಸ್ಪತಿ, ವರುಣ, ಕಃ (ಪ್ರಜಾಪತಿ), ಮೃತ್ಯು, ಬ್ರಹ್ಮಣಸ್ಪತಿ ಎಂಬ ದೇವತೆ ;

123. ಮನ್ಯು, (ಕ್ರೋಧಾಭಿಮಾನಿದೇವತೆ) ವಿಶ್ವಕರ್ಮಾ, ಮಿತ್ರ, ಕ್ಷೇತ್ರಪತಿ, ಯಮ, ತಾರ್ಕ್ಷ್ಯ, ವಾಸ್ತೋಷ್ಪತಿ, ಸರಸ್ವಾನ್ ;

124. ಅಪಾಂನಪಾತ್, ದಧಿಕ್ರಾಃ, ಸುಪರ್ಣ, ಪುರೂರವಾಃ, ಋತ, ಅಸುನೀತಿ, ವೇನ, ಅದಿತಿ ;

(is connected with that activity). Thus the whole of this great group contained in the Agni of earth has been stated.

23. The group of deities of the middle Sphere belonging to Indra.

121. Now the group of the middle sphere belonging to Indra follows here, (including) the celestial cars and the group of the Apsarases.

122. In Indra are contained Parjanya, Rudra, Vayu, Brhaspati, Varuna, Ka, Mrtyu, and the god Brahmanaspati,

123. Manyu, Visvakarman, Mitra, Ksetrapati, Yama, Tarksya, as well as Vastospati, and also Sarasvat are here ;

124, Apam napat and Dadhikra, then Snparna, Pururavas, Rta, Asumati, in his sphere (ಆಶ್ರಯೇ) also is Aditi.

ತ್ವಷ್ಟಾ ಚ ಸವಿತಾ ಚೈವ ವಾತೋ ವಾಚಸ್ಪತಿಸ್ತಥಾ ।
ಧಾತಾ ಪ್ರಜಾಪತಿಶ್ಚೈವ ಅಥರ್ವಾಣಶ್ಚ ಯೇ ಸ್ಮೃತಾಃ ॥ ೧೨೫ ॥

ಶ್ಯೇನಶ್ಚೈವೈವಮಗ್ನಿಶ್ಚ ತಥೇಳಾ ಚೈವ ಯಾ ಸ್ಮೃತಾ ।
ವಿಧಾತೇಂದುರಹಿರ್ಬುಧ್ನ್ಯಃ ಸೋವೋಽಹಿರಥ ಚಂದ್ರಮಾಃ ॥ ೧೨೬ ॥

ವಿಶ್ವಾನರಶ್ಚ ವೈ ದೇವೋ ರುದ್ರಾಣಾಂ ಸಂಸ್ತುತೋ ಗಣಃ ।
ಮರುತೋಽಙ್ಗಿರಸಶ್ಚೈವ ಪಿತರಶ್ಚರ್ಭುಭಿಃ ಸಹ ॥ ೧೨೭ ॥

ರಾಕಾ ವಾಕ್ಸರಮಾಪ್ತ್ಯಶ್ಚ ಭೃಗವೋಽಘ್ನ್ಯಾ ಸರಸ್ವತೀ ।
ಯಮ್ಯುರ್ವಶೀ ಸಿನೀವಾಲೀ ಪಥ್ಯಾ ಸ್ವಸ್ತಿರುಷಾಃ ಕುಹೂಃ ॥ ೧೨೮ ॥

ಪೃಥಿವ್ಯನುಮತಿರ್ಧೇನುಃ ಸೀತಾ ಲಾಕ್ಷಾ ತಥೈವ ಗೌಃ ।
ಗೌರೀ ಚ ರೋದಸೀ ಚೈವ ಇಂದ್ರಾಣ್ಯಾಶ್ಚೈಷ ವೈ ಪತಿಃ ॥ ೧೨೯ ॥

125. ತ್ವಷ್ಟೃ, ಸವಿತೃ, ವಾತ, ವಾಚಸ್ಪತಿ, ಧಾತಾ, ಪ್ರಜಾಪತಿ, ಅಥರ್ವಾಣಃ (ಎಂಬ ಋಷಿಗಳು) ;

126. ಶ್ಯೇನ (ಸ್ವರ್ಗದಿಂದ ಸೋಮಲತೆಯನ್ನು ತಂದ ಪಕ್ಷಿ) ಅಗ್ನಿ (ವಿದ್ಯುದಗ್ನಿ) ಇಳಾ, ವಿಧಾತೃ, ಇಂದು, ಅಹಿರ್ಬುಧ್ನ್ಯ, ಸೋಮ, ಅಹಿಃ (ಸರ್ಪ), ಚಂದ್ರ ;

127. ವಿಶ್ವಾನರ (ವೈಶ್ವಾನರದೇವ), ಮರುದ್ಗಣ, ಮರುತ್ತುಗಳು, ಅಂಗಿರಸರು (ಪಿತೃಗಳಲ್ಲಿ ಪ್ರಭೇದ) ಪಿತೃಗಳು, ಋಭುಗಳು ;

128. ರಾಕಾ. ವಾಕ್ (ವಾಗ್ದೇವತೆ), ಸರಮಾ (ದೇವಶುನಿ), ಅಪ್ತ್ಯಃ, ಭೃಗುಗಳು (ಪಿತೃಗಳಲ್ಲಿ ಒಂದು ಪ್ರಭೇದ), ಅಘ್ನ್ಯಾ, ಸರಸ್ವತೀ, ಯಮಿ, ಉರ್ವಶೀ, ಸಿನೀವಾಲೀ, ಪಥ್ಯಾ, ಸ್ವಸ್ತಿ, ಉಷಾಃ, ಕುಹೂಃ ;

129. ಪೃಥಿವೀ, ಅನುಮತಿ, ಧೇನು, ಸೀತಾ, ಲಾಕ್ಷಾ, ಗೌಃ, ಗೌರೀ, ರೋದಸೀ (ರುದ್ರಪತ್ನೀ) ಇಂದ್ರಾಣೀ (ಇಂದ್ರನಪತ್ನಿ) ಅವಳ ಪತಿಯಾದ ಇಂದ್ರ ;

125. and Tvastr and Savitr, Vata as well as Vachaspati, Dhatr and also Prajapati, and those who are called Atharvanas ;

126. and so also the Falcon, and Agni, as well as she who is called Ila; Vidhatr, Indu, the Dragon of the Deep, Soma, the Dragon, and the Moon.

127. and the divine Visvanara, and the group of the Rudras is praised with (him), the Maruts, as well as the Angirasas, and the fathers together with the Rbhus,

128. Raka, Vac, Sarama, and the Aptyas, the Bhrgus, Aghnya, Sarasvati, Yami, Urvasi, Sinivali, Pathya, Svasti, Usas, Kuhu.

129. Earth, Anumathi, Dhenu, Sita, Laksha, likewise cow and Gouri, as well as Rodasi ; and he (ಇಂದ್ರ) is the husband of Indrani.

ಛಂದಸ್ತ್ರಿಷ್ಟುಪ್ ಚ ಪಂಕ್ತಿಶ್ಚ ಲೋಕಾನಾಂ ಮಧ್ಯಮಶ್ಚ ಯಃ ।
ಏತೇಷ್ವೇವಾಶ್ರಯೋ ವಿದ್ಯಾತ್ಸವನಂ ಮಧ್ಯಮಂ ಚ ಯತ್ ॥ ೧೩೦ ॥

ಋತೂ ಚ ಗ್ರೀಷ್ಮಹೇಮಂತೌ ಯಚ್ಚ ಸಾಮೋಚ್ಯತೇ ಬೃಹತ್ ।
ಶಕ್ವರೀಷು ಚ ಯದ್ಗೀತಂ ನಾಮ್ನಾ ತತ್ಸಾಮ ಶಾಕ್ವರಂ ॥ ೧೩೧ ॥

ನಾಮ್ನಾ ತತ್ಸಾಮ ಶಾಕ್ವರಂ ॥

॥ ಇತಿ ಬೃಹದ್ದೇವತಾಯಾಂ ಪ್ರಥಮೋಽಧ್ಯಾಯಃ ॥

---

130. ತ್ರಿಷ್ಟುಪ್‌ಛಂದಸ್ಸು, ಪಂಕ್ತಿಶ್ಛಂದಸ್ಸು, ಮಧ್ಯಮಲೋಕ (ಅಂತರಿಕ್ಷ), ಮಾಧ್ಯಂದಿನಸವನ, ಇವೆಲ್ಲವೂ ಮಧ್ಯಮಲೋಕವನ್ನಾಶ್ರಯಿಸಿರುವವು.

131. ಹಾಗೆಯೇ, ಗ್ರೀಷ್ಮ ಮತ್ತು ಹೇನುಂತಋತುಗಳು, ಬೃಹತ್ಸಾಮ (ಸಾಮವೇದದ ಮಂತ್ರವಿಶೇಷ) ಶಕ್ವರೀಛಂದಸ್ಸುಗಳಲ್ಲಿ ಗಾನಮಾಡಲ್ಪಡುವ ಶಾಕ್ವರಸಾಮ (ಸಾಮಗಾನವಿಶೇಷ) ಇವೆಲ್ಲವೂ ಮಧ್ಯಮಸ್ಥಾನದೇವತೆಗಳೆಂದು ಹೇಳಲ್ಪಡುವವು.

ಇಲ್ಲಿಗೆ ಶೌನಕಮಹರ್ಷಿಪ್ರೋಕ್ತವಾದ ಬೃಹದ್ದೇವತೆಯೆಂಬ ಗ್ರಂಥದಲ್ಲಿ
ಮೊದಲನೆಯ ಅಧ್ಯಾಯವು ಸಮಾಪ್ತವಾದುದು.

---

130. The metre Tristubh and Pankti and the middlemost of the worlds and the middle (i.e. midday) pressing (of Soma), one should know, (belonging to his) sphere among these same (gods);

131. and the two seasons, Summer and Winter, and the chant which is called Brhat, (ಬೃಹತ್) and the chant which, Sakvara (ಶಾಕ್ವರ) by name, is sung in Sakvari verses,

Thus ends the first chapter.

ಅಥ ಬೃಹದ್ದೇವತಾಯಾಂ ದ್ವಿತೀಯೋಽಧ್ಯಾಯಃ

ಅಥ ಚೈಷಾಸ್ಯ ದ್ವೌ ಸ್ತೋಮಾವಾಶ್ರಯೌ ಶಾಕಟಾಯನಃ।
ಯಶ್ಚ ಪಂಚದಶೋ ನಾಮ್ನಾ ಸಂಖ್ಯಯಾ ತ್ರಿಣವಶ್ಚ ಯಃ ॥ ೧ ॥
ಸಂಸ್ತುತಶ್ಚೈವ ಪೂಷ್ಣಾ ಚ ವಿಷ್ಣುನಾ ವರುಣೇನ ಚ।
ಸೋಮವಾಯ್ವಗ್ನಿಕುತ್ಸೈಶ್ಚ ಬ್ರಹ್ಮಣಸ್ಪತಿನೈವ ಚ ॥ ೨ ॥
ಬೃಹತಸ್ಪತಿನಾ ಚೈವ ನಾಮ್ನಾ ಯಶ್ಚಾಪಿ ಪರ್ವತಃ।
ಕಾಸುಚಿತ್ಕೇಚಿದಿತ್ಯಾಹುರ್ನಿಪಾತಾ ಸ್ತುತಿಷು ಸ್ತುತಾಃ ॥ ೩ ॥
ಮಿಶ್ರಶ್ಚ ಶ್ರೂಯತೇ ದೇವೋ ವರುಣೇನ ಸಹಾಸಕೃತ್।
ರುದ್ರೇಣ ಸೋಮಃ ಪೂಷ್ಣಾ ಚ ಪುನಃ ಪೂಷಾ ಚ ವಾಯುನಾ ॥ ೪ ॥

ಎರಡನೆಯ ಅಧ್ಯಾಯವು.

ಮಧ್ಯಮಸ್ಥಾನದೇವತೆಗಳು (ಮುಂದುವರೆದುದು).

1. ಶಾಕಟಾಯನರ ಮತದಂತೆ, ಪಂಚದಶಸ್ತೋಮ ಮತ್ತು ತ್ರಿಣವಸ್ತೋಮ ಎಂಬ ಎರಡು ಸ್ತೋಮಗಳು,

2. ಇಂದ್ರನು, ಪೂಷಾ, ವಿಷ್ಣು, ವರುಣ, ಸೋಮ, ವಾಯು, ಅಗ್ನಿ, ಕುತ್ಸ, ಬ್ರಹ್ಮಣಸ್ಪತಿ, ಎಂಬ ದೇವತೆಗಳೊಡನೆ ಸಂಸ್ತವಿಕವಾಗಿ ಎಂದರೆ ಜತೆಯಲ್ಲಿ ಸ್ತುತನಾಗಿರುವಾಗ, (ಇಂದ್ರಾಪೂಷಾ, ಇಂದ್ರಾವಿಷ್ಣೂ ಇತ್ಯಾದಿ)

3. ಮತ್ತು ಬೃಹಸ್ಪತಿ ಪರ್ವತ ಇವರೊಡನೆ (ಇಂದಾಬೃಹಸ್ಪತೀ ಇಂದ್ರಾಪರ್ವತಾ) ಸ್ತುತನಾದಾಗ; ಕೆಲವು ಸ್ತುತಿಗಳಲ್ಲಿ ಮುಖ್ಯದೇವತೆಯಲ್ಲದೆ ಇತರ ದೇವತೆಯ ಸ್ತುತಿಯೂ ಸಂದರ್ಭಾನುಸಾರವಾಗಿ ಇರುವುದು.

4. ಕೆಲವು ಸಂದರ್ಭಗಳಲ್ಲಿ ಇಂದ್ರನು ವರುಣನೊಡನೆಯೂ, ರುದ್ರನು ಸೋಮನೊಡನೆಯೂ, ಸೋಮನು ಪೂಷನೊಡನೆಯೂ, ಪೂಷನು ವಾಯುವಿನೊಡನೆಯೂ ಸಂಸ್ತವಿಕವಾಗಿ (ಒಟ್ಟಿಗೆ, ಜತೆಯಲ್ಲಿ) ಸ್ತುತಿಸಲ್ಪಟ್ಟಿರುವರು. ಇಂದ್ರಾವರುಣಾ, ಸೋಮಾರುದ್ರಾ, ಸೋಮಾಪೂಷಾ ಇತ್ಯಾದಿ) ಈ ದೇವತೆಗಳೂ ಮಧ್ಯಮಸ್ಥಾನೀಯರು.

Chapter 2.

1. Deities of Indra's sphere,

1. Sakatayana, moreover, says that to him(Indra)belong (ಅಸ್ಯಾಶ್ರಯೌ) two Stomas, (viz) that which is called the fifteenfold (ಪಂಚದಶ), and that whieh is three times nine in number (ತ್ರಿಣವ).

2. He is praised in combination (ಸಂಸ್ತುತಃ) which Pusan and Visnu and Varuna and with Soma, Vayu, Agni, Kutsa, as well as Brahmanaspati;

3. With Brahaspati as well as (with him) who is Parvata by name. They say that in some praises certain (gods) are praised as incidental.

4. And the god Mitra is frequently praised in the sacred text (ಶ್ರೂಯತೇ) with Varuna, Soma, with Rudra and Pusan, and again Pusan with Vayu;

ವಾತೇನೈವ ಚ ಪರ್ಜನ್ಯೋ ಲಕ್ಷ್ಯತೇಽನ್ಯತ್ರ ವೈ ಕ್ವಚಿತ್ ।
ಋಕ್ಷ್ವರ್ಧರ್ಚೀಷು ಪಾದೇಷು ಸೂಕ್ತೇಷ್ವೇಷು ತು ಕೃತ್ಸ್ನಶಃ ॥ ೫ ॥

ರಸಾದಾನಂ ತು ಕರ್ಮಾಸ್ಯ ವೃತ್ರಸ್ಯ ಚ ನಿಬರ್ಹಣಂ ।
ಸ್ತುತೇಃ ಪ್ರಭುತ್ವಂ ಸರ್ವಸ್ಯ ಬಲಸ್ಯ ನಿಖಿಲಾ ಕೃತಿಃ ॥ ೬ ॥

ಇತ್ಯೈನ್ದ್ರೇ ಮಧ್ಯಮಸ್ಥಾನೇ ಗಣಃ ಸಮ್ಯಗುದಾಹೃತಃ ।
ಯಃ ಪರಸ್ತು ಗಣಃ ಸೌರ್ಯೇ ದ್ಯುಸ್ಥಾನಸ್ತಂ ನಿಬೋಧತ ॥ ೭ ॥

ತಸ್ಯ ಮುಖ್ಯತಮೌ ದೇವಾವಶ್ವಿನೌ ಸೂರ್ಯಮಾಶ್ರಿತೌ ।
ವೃಷಾಕಪಾಯೀ ಸೂರ್ಯೋಷಾಃ ಸೂರ್ಯಸ್ಯೈವ ತು ಪತ್ನಯಃ ॥ ೮ ॥

5. ಮೇಲೆಹೇಳಿದಂತೆ ಪರ್ಜನ್ಯನು ವಾತನೊಡನೆ ಸಂಪ್ತವಿಕವಾಗಿ (ಪರ್ಜನ್ಯಾವಾತಾ) ಸ್ತುತಿಸಲ್ಪಟ್ಟಿರುವುದು ಕೆಲವುಕಡೆ ಕಂಡುಬರುವುದು. ಇದಲ್ಲದೆ ಇಂದ್ರನು ಸೂಕ್ತಗಳಲ್ಲಲ್ಲದೆ ಕೆಲವು ಋಕ್ಕುಗಳಲ್ಲಿಯೂ, ಅರ್ಧಋಕ್, ಪಾದ ಇವುಗಳಲ್ಲಿ ಮಾತ್ರ ಸ್ತುತನಾಗಿರುವನು.

6. ಮೇಘಗಳನ್ನು ತಡೆದಿರುವ ವೃತ್ರನನ್ನು ಸಂಹರಿಸುವುದು, ಮೇಘಗಳಲ್ಲಿರುವ ಜಲವನ್ನು ಬಿಡುಗಡೆಮಾಡಿ ವೃಷ್ಟಿಯನ್ನು ಸುರಿಸುವಂತೆ ಮಾಡುವುದು, ಎಲ್ಲರಿಗೂ ಪ್ರಭುವಾಗಿರುವುದು, ಬಲ ಅಥವಾ ಸಾಹಸಕೃತ್ಯಗಳನ್ನೆಸಗುವುದು ಇವೆಲ್ಲವೂ ಸ್ತುತಿಗಳಲ್ಲಿ ಕಂಡುಬರುವ ಇಂದ್ರನ ಗುಣವರ್ಣನೆಗಳು.

ದ್ಯುಸ್ಥಾನದೇವತೆಗಳು, ಸೂರ್ಯನ ಮೂರುಮಂದಿ ಪತ್ನಿಯರು

7. ಈ ರೀತಿಯಾಗಿ ಮಧ್ಯಮಸ್ಥಾನದೇವತೆಯಾದ ಇಂದ್ರನ ಮತ್ತು ಅವನ ಸಂಬಂಧವಾದ ದೇವತಾಗಣದ ವರ್ಣನೆಯನ್ನು ಹೇಳಿದ್ದಾಯಿತು. ಈಗ ದ್ಯುಸ್ಥಾನದೇವತೆಯಾದ ಸೂರ್ಯ ಮತ್ತು ಅವನ ಸಂಬಂಧವಾದ ದ್ಯುಸ್ಥಾನ ದೇವತೆಗಳ ವಿಷಯವನ್ನು ವಿವರಿಸಲಾಗುವುದು.

8. ಆ ದ್ಯುಸ್ಥಾನದೇವತೆಗಳಲ್ಲಿ ಸೂರ್ಯನನ್ನಾಶ್ರಯಿಸಿದವರೆಂದರೆ, ಅಶ್ವಿನೀದೇವತೆಗಳು, ವೃಷಾಕಪಾಯಿ, ಸೂರ್ಯಾ, ಉಷಾಃ ಎಂಬುವರು. ಇವರಲ್ಲಿ ವೃಷಾಕಪಾಯಿ, ಸೂರ್ಯಾ, ಉಷಾಃ ಎಂಬ (ಸ್ತ್ರೀ) ದೇವತೆಗಳು ಸೂರ್ಯನ ಪತ್ನಿಯರು.

---

5. and Parjanya with Vata. Elsewhere, however, he (Indra) is here and there (ಕ್ವಚಿತ್) in these stanzas, hemistchs, verses, (or) hymns (of the (ಋಗ್ವೇದ) as a whole, distinguished (as the deity).

6. Now the taking up of moisture is his function, and the destruction of Vritra, (and) the prevailing feature (ಪ್ರಭುತ್ವಂ) of (his) praise the complete accomplishment of every (kind of) mighty deed.

2. Deities of Surya's sphere : his three wives.

7. Thus Indra's group belonging to the middle sphere has been duly specified. Now learn the following group of the heavenly sphere (and) belonging to Surya.

8. The two chief gods of that (group) connected with Surya are the Asvins ; while Vrsakapayi, Surya, and Usas are the wives of Surya.

ಅಮುತೋಽರ್ವಾಙ್ನಿವರ್ತಂತೇ ಪ್ರತಿಲೋಮಾಸ್ತದಾಶ್ರಯಾಃ ।
ಪುರೋದಯಾತ್ತಾಮುಷಸಂ ಸೂರ್ಯಾಂ ಮಧ್ಯಂದಿನೇ ಸ್ಥಿತೇ ॥ ೯ ॥

ವೃಷಾಕಪಾಯಿಾಂ ಸೂರ್ಯಸ್ಯ ಕಾಮೇವಾಹುಸ್ತು ನಿಮ್ರುಚಿ ।
ತಸ್ಯಾಶ್ರಯೇ ಸರಣ್ಯೂಶ್ಚ ಭಗಃ ಪೂಷಾ ವೃಷಾಕಪಿಃ ॥ ೧೦ ॥

ಯವೋ ವೈಶ್ವಾನರೋ ವಿಷ್ಣುರ್ವರುಣಶ್ಚೈಕಪಾದಜಃ ।
ಪೃಥಿವೀ ಚ ಸಮುದ್ರಶ್ಚ ದೇವಾಃ ಸಪ್ತರ್ಷಯಶ್ಚ ಯೇ ॥ ೧೧ ॥

ಆದಿತ್ಯಾಃ ಕೇಶಿನಸಾಧ್ಯಾಶ್ಚ ಸವಿತಾ ವಸುಭಿರ್ಮನುಃ ।
ದಧ್ಯಙ್ಙಥರ್ವಾ ವಿಶ್ವೇ ಚ ವಾಜಿನೋ ದೇವಪತ್ನಯಃ ॥ ೧೨ ॥

9. ಸೂರ್ಯನ ನಿವಾಸಸ್ಥಾನವಾದ ದ್ಯುಸ್ಥಾನ (ಸ್ವರ್ಗ) ದಿಂದ ಆ ಮೂರು ಮಂದಿ ಸ್ತ್ರೀದೇವತೆಗಳು ಕೆಳಗಿನ ಲೋಕವಾದ ಭೂಲೋಕಕ್ಕೆ ಇಳಿದು ಬರುವರು. ಅವರಲ್ಲಿ ಮೊದಲು ಎಂದರೆ ಸೂರ್ಯೋದಯಕ್ಕೆ ಪೂರ್ವದಲ್ಲಿ ಗೋಚರಿಸುವ ದೇವತೆಯನ್ನು ಉಸಸ್ಸೆಂದೂ, ಮಧ್ಯಾಹ್ನಕಾಲದಲ್ಲಿ ಸೂರ್ಯಾದೇವಿಯೆಂದೂ,

10. ಸೂರ್ಯಾಸ್ತಮಯಕಾಲದಲ್ಲಿ ವೃಷಾಕಪಾಯಿಾ ಎಂದೂ ಹೇಳುವರು. ಆ ಸೂರ್ಯನ ಆಶ್ರಯದಲ್ಲಿಯೇ, ಸರಣ್ಯೂದೇವಿ, ಭಗ, ಪೂಷಾ, ವೃಷಾಕಪಿ,

11. ಯಮ, ವೈಶ್ವಾನರ, ವಿಷ್ಣು, ವರುಣ, ಅಜಏಕಪಾತ್, ಪೃಥಿವೀ, ಸಮುದ್ರ, (ಸಾಮಾನ್ಯ) ದೇವತೆಗಳು, ಸಪ್ತರ್ಷಿಗಳು,

12. ಆದಿತ್ಯರು (ಅದಿತಿಪುತ್ರರು ಅಥವಾ ದ್ವಾದಶಾದಿತ್ಯರು) ಕೇಶಸಹಿತರಾದವರು (ಎಂದರೆ ಜ್ವಾಲಾಯುಕ್ತ ಅಗ್ನಿಗಳು) ಸಾಧ್ಯರು, ಸವಿತೃ, ವಸುಗಳು, ಮನು, ದಧ್ಯಙ್ (ಋಷಿ) ಆಥರ್ವಾ (ಋಷಿ) ವಿಶ್ವೇದೇವತೆಗಳು, ವಾಜಿಗಳು (ಅಶ್ವಗಳು) ದೇವಪತ್ನಿಯರು,

9. From that (heavenly world) the return hitherward, reversed, in connextion with him (ಸೂರ್ಯ). They call her Usas before sunrise, Surya when midday reigns.

10. but Vrsakapayi at the setting of the sun. In his sphere (ಆಶ್ರಯೇ) also the Saranyu, Bhaga, Pusan, Vrsakapi;

11. Yama, Vaisvanara, Visnu, Varuna, Aja ekapad, and Earth (ಪೃಥ್ವೀ) and Ocean (ಸಮುದ್ರ) the Gods, and the Seven Seers (ಸಪ್ತರ್ಷಯಃ);

3. Deities of Surya's sphers (conttnued).

12. the Adityas, the Hairy ones (ಕೇಶಿನಃ) and the Sadhyas, Savitr with the Vasus, Manu, Dadhyanch, Atharvan, the All (gods), the Steeds (ವಾಜಿನಃ) the wives of the Gods.

ಅಸೌ ತೃತೀಯಂ ಸವನಂ ಲೋಕಃ ಸಾಮ ಚ ರೈವತಂ ।
ವೈರೂಪಂ ಚೈವ ವರ್ಷಾಶ್ಚ ಶಿಶಿರೋಽಥ ಋತುಸ್ತಥಾ ॥ ೧೩ ॥

ತ್ರಯಸ್ತ್ರಿಂಶಶ್ಚ ಯಃ ಸ್ತೋಮಃ ಕ್ಲೃಪ್ತ್ಯಾ ಸಪ್ತದಶಶ್ಚ ಯಃ ।
ಛಂದಶ್ಚ ಜಗತೀ ನಾಮ್ನಾ ಕಥಾತಿಛಂದಸಶ್ಚ ಯಾಃ ॥ ೧೪ ॥

ಪೌರುಷಂ ಚಾಹುರಸ್ಯೈತತ್ಸರ್ವಮೇವ ತು ಪೌರುಷಂ ।
ಏತಸ್ಯೈವ ತು ವಿಜ್ಞೇಯಾ ದೇವಾಃ ಸಂಸ್ತವಿಕಾಸ್ತ್ರಯಃ ॥ ೧೫ ॥

ಚಂದ್ರಮಾಶ್ಚೈವ ವಾಯುಶ್ಚ ಯಂ ಚ ಸಂವತ್ಸರಂ ವಿದುಃ ।
ಕೇಚಿತ್ತು ನಿರ್ವಪಂತ್ಯಸ್ಯ ಸೌರ್ಯವೈಶ್ವಾನರಂ ಹವಿಃ ॥ ೧೬ ॥

13. ತೃತೀಯಸವನ (ಸಾಯಂಕಾಲದಲ್ಲಿ ಸೋಮರಸವನ್ನು ಹಿಂಡುವ ಯಜ್ಞಾಂಗಕರ್ಮ), ಸ್ವರ್ಗಲೋಕ, ರೈವತಸಾಮ (ಸಾಮಮಂತ್ರವಿಶೇಷ), ವೈರೂಪಸಾಮ (ಸಾಮಮಂತ್ರವಿಶೇಷ) ವರ್ಷಋತು, ಶಿಶಿರಋತು,

14. ತ್ರಯಸ್ತ್ರಿಂಶಸ್ತೋಮ, ಸಪ್ತದಶಸ್ತೋಮ, ಜಗತೀಛಂದಸ್ಸು, ಅತಿಛಂದಃ ಎಂಬ ಛಂದಸ್ಸು. ಇವೆಲ್ಲವೂ ದ್ಯುಸ್ಥಾನದೇವತೆಗಳು.

15. ಪುರುಷಸಂಬಂಧವಾದ ಸಕಲ ಜಗತ್ತು (ಪುರುಷ ಎಂದರೆ ಪ್ರಜಾಪತಿಯಿಂದ ಸೃಷ್ಟವಾದ ಸಕಲ ಜಗತ್ತೂ) ಸೂರ್ಯನೊಡನೆ ಸಂಸ್ತವಿಕವಾಗಿ (ಜತೆಯಲ್ಲಿ) ಸ್ತುತಿಸಲ್ಪಡುವ ಮೂರು ದೇವತೆಗಳು, ಇವರೆಲ್ಲರೂ ದ್ಯುಸ್ಥಾನದೇವತೆಯಾದ ಸೂರ್ಯನಿಗೆ ಸಂಬಂಧಪಟ್ಟವರು. (ಆ ಮೂರು ದೇವತೆಗಳು ಯಾರೆಂದರೆ)

16. ಚಂದ್ರ, ವಾಯು, ಸಂವತ್ಸರ ಎಂಬುವರೇ ಆ ಮೂರು ಮಂದಿ ದೇವತೆಗಳು (ಸೂರ್ಯಾಚಂದ್ರಾಮಸೌ ಇತ್ಯಾದಿ) ಕೆಲವರು ಸೂರ್ಯನನ್ನುದ್ದೇಶಿಸಿ ಸೌರ್ಯವೈಶ್ವಾನರವೆಂಬ (ಸೂರ್ಯರೂಪದಿಂದಿರುವ ವೈಶ್ವಾನರ) ಹವಿಸ್ಸನ್ನು ಹೋಮಮಾಡುವರು.

13. That (heavenly) world, the third (Soma) pressing, the Raivata and the Vairupa chant (ಸಾಮನ್) and the Rains as well as the Cold Season ;

14. and the thirty-threefold Stoma and that which in arrangement (ಕ್ಲೃಪ್ತ್ಯ) is seventeenfold ; and the metre called Jagati as well as the Atichandas metres.

15. And what relates to Purusa, they say, is his (ಅಸ್ಯ) now all this (universe : ಏತತ್ ಸರ್ವಂ) is related to Purusa. Three gods are to be recognized) as associated with him (ಏತಸ್ಯ); in praise ;—

16. (viz) the Moon and Wind (ವಾಯು) and that which is regarded as the Year (ಸಂವತ್ಸರ). Now some offer to him an oblation addressed to Surya and Vaisvanara.

ಸೌರ್ಯವೈಶ್ವಾನರೀಯಂ ಹಿ ತತ್ಸೂಕ್ತಮಿವ ದೃಶ್ಯತೇ ।
ಋಗರ್ಧರ್ಚೋಽಥವಾ ಪಾದೋ ದ್ವ್ಯೃಚೋ ವಾ ಯದಿ ವಾ ತ್ರ್ಯೃಚಃ ॥ ೧೭ ॥

ಅನೇನ ತು ಪ್ರವಾದೇನ ದೃಷ್ಟಾ ಮೂರ್ಧನ್ವತಾ ಸ್ತುತಿಃ ।
ಸೂರ್ಯವೈಶ್ವಾನರಾಗ್ನೀನಾಮ್ಯೈಕಾತ್ಮ್ಯಮಿಹ ದೃಶ್ಯತೇ ॥ ೧೮ ॥

ಹರಣಂ ತು ರಸಸ್ಯೈತತ್ಕರ್ಮಾಮುತ್ರ ಚ ರಶ್ಮಿಭಿಃ ।
ಯೇನ ನಾತಿವಿಜಾನಂತಿ ಸರ್ವಭೂತಾನಿ ಚಕ್ಷುಷಾ ॥ ೧೯ ॥

ವಿಭಾಗಮಿಮಮೇತೇಷಾಂ ವಿಭೂತಿಸ್ಥಾನಸಂಭವಂ ।
ಸಂಯಗ್ವಿಜಾನನ್ಮಂತ್ರೇಷು ತಂ ತು ಕರ್ಮಸು ಯೋಜಯೇತ್ ॥ ೨೦ ॥

ಸೌರ್ಯವೈಶ್ವಾನರನೆಂದರೆ ಅಗ್ನಿಯ ರೂಪಾಂತರ

17. ಸೌರ್ಯವೈಶ್ವಾನರವೆಂಬ ಸೂಕ್ತದಲ್ಲಿ ಸೂರ್ಯನನ್ನು ವೈಶ್ವಾನರನೆಂದು ಸಂಬೋಧಿಸಿ ಸ್ತುತಿಸಲಾಗಿರುವುದು (ಋ. ಸಂ. 10 ನೇ ಮಂಡಲದ 88 ನೇ ಸೂಕ್ತ. **ಹವಿಷ್ಪಾಂತಮಜರಂ** ಇತ್ಯಾದಿ) ಈ ವಿಧವಾದ ಸೂಕ್ತದಲ್ಲಿ ಒಂದು ಋಕ್ಕು, ಅರ್ಧಋಕ್ಕು, ಅಥವಾ ಪಾದ, ಎರಡು ಋಕ್ಕುಗಳು, ಮೂರು ಋಕ್ಕುಗಳಲ್ಲಿಯೂ ಸೂರ್ಯನನ್ನು ವೈಶ್ವಾನರನೆಂದೇ ಸ್ತುತಿಸಲಾಗಿರುವುದು.

18. ಈ ಸ್ತುತಿಯಲ್ಲಿ ಮೂರ್ಧನ್ ಎಂಬ ಶಬ್ದಪ್ರಯೋಗದಿಂದ (5 ನೇ ಋಕ್ಕಿನಲ್ಲಿ) ಅವನ ಸ್ತುತಿಯು ವಿಶದವಾಗಿರುವುದು. ಇಲ್ಲಿ ಎಂದರೆ ಈ ಸೂಕ್ತದಲ್ಲಿ ಸೂರ್ಯ, ವೈಶ್ವಾನರ, ಅಗ್ನಿ ಎಂಬ ಮೂರು ದೇವತೆಗಳಿಗೂ ತಾದಾತ್ಮ್ಯವನ್ನು (ಮೂರು ದೇವತೆಗಳೂ ಒಂದೇ ಎಂದು) ಹೇಳಿರುವುದು ಕಂಡುಬರುವುದು.

19. ರಸಾಹರಣವೇ ಎಂದರೆ ರಶ್ಮಿಗಳ ಮೂಲಕ ಜಲವನ್ನು ಹೀರುವುದೇ (ಸೂರ್ಯನ) ಮುಖ್ಯ ಕರ್ಮವು. ಇದನ್ನು ಸರ್ವಪ್ರಾಣಿಗಳೂ ತಮ್ಮ ಕಣ್ಣುಗಳಿಂದ ನೋಡಲು ಸಮರ್ಥರಲ್ಲ.

20. ಈ ಸೂಕ್ತದ ಮಂತ್ರಗಳಲ್ಲಿ ವರ್ಣಿಸಿರುವ ಮಾಹಾತ್ಮ್ಯ ಸ್ಥಾನ ಮೊದಲಾದ ಗುಣಗಳಿಂದ ಈ ಮೂರು ದೇವತೆಗಳನ್ನು (ಸೂರ್ಯ, ವೈಶ್ವಾನರ, ಅಗ್ನಿ) ಸ್ಪಷ್ಟವಾಗಿ ತಿಳಿಯಬಹುದು. ಮಂತ್ರಜ್ಞನಾದ ಪುರುಷನು ಆಯಾ

4. Surya and Vaisvanara a form of Agni.

17. For (the hymn) addressed to Surya and Vaisvanara appears like a hymn of his (Surya's : ತತ್ ಸೂಕ್ತಂ) (whether) a stanza, a hemistich, or a verse, or a couplet, or a triplet (is regarded).

18. But by that expression containing the word 'head' (his) praise is apparent. Here the identity of Surya, Vaisvanara, and Agni appears.

19. Now the holding (ಹರಣ) of moisture in that (celestial) world (ಅಮೃತ) also by means of (his) rays-this (his) function: therefore all beings fail to distinguish (him) very clearly by the eye.

20. Now distinguishing correctly in the formulas this distribution of these (three deities) which arises from (their different) powers and spheres.

ಅಧ್ಯಾಪಯೆನ್ನಧೀಯಾನೋ ಮಂತ್ರಂ ಚೈವಾನುಕೀರ್ತಯೆನ್ ।
ಸ್ಥಾನಂ ಸಾಲೋಕ್ಯಂ ಸಾಯುಜ್ಯಮೇತೇಷಾಮೇವ ಗಚ್ಛತಿ ॥ ೨೧ ॥
ಅಗ್ನೇಸ್ತು ಯಾನಿ ಸೂಕ್ತಾನಿ ಪಂಚ ನಾಮಾನಿ ಕಾರವಃ ।
ಷಡ್ವಿಂಶತಿಸ್ತಥೇಂದ್ರಸ್ಯ ಸ್ಮಾಹುಃ ಸೂರ್ಯಸ್ಯ ಸಪ್ತ ಚ ॥ ೨೨ ॥
ತೇಷಾಂ ಪೃಥಙ್ನಿರ್ವಚನಮೇಕೈಕಸ್ಯೇಹ ಕರ್ಮಜಂ ।
ಉಚ್ಯಮಾನಂ ಯಥಾನ್ಯಾಯಂ ಶೃಣುಧ್ವಮಖಿಲಂ ಮಯಾ ॥ ೨೩ ॥
ಜಾತೋ ಯದಗ್ರೇ ಭೂತಾನಾಮಗ್ರಣೀರಧ್ವರೇ ಚ ಯತ್ ।
ನಾಮ್ನಾ ಸಂನಯತೇ ವಾಂಗಂ ಸ್ತುತೋಽಗ್ನಿರಿತಿ ಸೂರಿಭಿಃ ॥ ೨೪ ॥

ಮಂತ್ರಗಳಲ್ಲಿ ಪ್ರತ್ಯೇಕವಾಗಿ ಹೇಳಿರುವ ಗುಣವರ್ಣನೆಯ ಪ್ರಕಾರ ಆಯಾ ಮಂತ್ರಗಳನ್ನು ಆಯಾ ಕರ್ಮಗಳಲ್ಲಿ ಸಂದರ್ಭಾನುಸಾರ ಪ್ರಯೋಗಿಸಬೇಕು.

21. ಮಂತ್ರಗಳನ್ನು ತಾನು ಅಧ್ಯಯನ (ಕಲಿತುಕೊಳ್ಳುವುದು) ಮಾಡುವುದರಿಂದಲೂ, ಇತರರಿಗೆ ಹೇಳಿ ಕೊಡುವುದರಿಂದಲೂ, ಅವುಗಳನ್ನು ಪಠಿಸುವುದಂದಲೂ ಪುರುಷನು ಈ ದೇವತೆಗಳ ಸ್ಥಾನವನ್ನೂ, ಲೋಕವನ್ನೂ, ಅವರೊಡನೆ ಸಾಯುಜ್ಯವನ್ನೂ ಪಡೆಯಲು ಸಮರ್ಥನಾಗುವನು.

ಅಗ್ನಿಯ ಐದು ಹೆಸರುಗಳು, ಅಗ್ನಿಶಬ್ದದ ರೂಪನಿಷ್ಪತ್ತಿ, ದ್ರವಿಣೋದಾಃ ಮತ್ತು ತನೂನಪಾತ್ ಎಂಬ ಶಬ್ದಗಳ ನಿಷ್ಪತ್ತಿ

22. ಸೂಕ್ತಗಳಲ್ಲಿ ಕವಿಗಳು (ಋಷಿಗಳು) ಅಗ್ನಿಯನ್ನು ಐದು ಹೆಸರುಗಳಿಂದಲೂ, ಇಂದ್ರನನ್ನು ಇಪ್ಪತ್ತಾರು ಹೆಸರುಗಳಿಂದಲೂ ಸೂರ್ಯನನ್ನು ಏಳು ಹೆಸರುಗಳಿಂದಲೂ ಸ್ತುತಿಸಿರುವರು.

23. ಆ ಹೆಸರುಗಳ ನಿರ್ವಚನವನ್ನೂ (ರೂಪನಿಷ್ಪತ್ತಿಯನ್ನು) ಆ ಹೆಸರು ಆ ದೇವತೆಯ ಕರ್ಮಕ್ಕನುಸಾರವಾಗಿ ಹೇಗೆ ಬಂದಿತೆಂಬುವುದನ್ನೂ ಒಂದೊಂದಾಗಿ ವಿವರಿಸುವೆನು. ಅವೆಲ್ಲವನ್ನೂ ಮನಸ್ಸಿಟ್ಟು ಕೇಳಿ,

24. **ಅಗ್ನಿಶಬ್ದನಿರ್ವಚನ**—ಸಮಸ್ತ ಪ್ರಾಣಿಗಳ ಉತ್ಪತ್ತಿಗಿಂತಲೂ ಮೊದಲೇ ಉತ್ಪನ್ನನಾದುದರಿಂದಲೂ, ಯಜ್ಞದಲ್ಲಿ ಅಗ್ನಿಗೇ ಮುಖ್ಯಭಾಗವಿರುವುದರಿಂದಲೂ ಎಂದರೆ ಯಜ್ಞಕ್ಕೆ ನಾಯಕನಾಗಿರುವುದರಿಂದಲೂ ತನ್ನ ಶರೀರ

21. Teaching, studying, and reciting a formula (addressed to them) a man attains to the sphere of, to identity of the world (and) intimate union with, these same (gods).

5. Five names of Agni, Derivation of Agni, Dravinodas, Tanunapat.

22. Now as to the hymns, the poets proclaim (in them) five names of Agni, twenty-six of Indra and seven of Surya.

23. The seperate explanation, based on the function (of the god), of each of these here, listen to as duly stated by me in its entirety.

24. Becanse he was born at the beginning (ಅಗ್ರೇ) of beings, and because he is a leader (ಅಗ್ರಣಿ) at the sacrifice, or (because) he unites (his) body (ಅಂಗಂ ಸಾಮ್ನಿ) he is praised by sages under the name of 'Agni'.

ದ್ರವಿಣಂ ಧನಂ ಬಲಂ ವಾಪಿ ಪ್ರಾಯಚ್ಛದ್ಯೇನ ಕರ್ಮಣಾ ।
ತತ್ಕರ್ಮ ದೃಷ್ಟ್ವಾ ಕುತ್ಸಸ್ತು ಪ್ರಾಹೈನಂ ದ್ರವಿಣೋದಸಂ ॥ ೨೫ ॥
ಅಯಂ ತನೂನಪಾದಗ್ನಿರಸೌ ಹಿ ತನನಾತ್ತನುಃ ।
ತತಸ್ತು ಮಧ್ಯಮೋ ಜಜ್ಞೇ ಸ್ಥಾನೇಽಯಂ ಮಧ್ಯಮಾತ್ತತಃ ॥ ೨೬ ॥
ಅನಂತರಾಂ ಪ್ರಜಾಮಾಹುರ್ನಪಾದಿತಿ ಕೃಪಣ್ಯವಃ ।
ನಪಾದಮುಷ್ಯ ಚೈವಾಯಮಗ್ನಿಸ್ತೇನ ತನೂನಪಾತ್ ॥ ೨೭ ॥
ಪೃಥಕ್ತ್ವೇನ ಸಮಾಸೈಸ್ತು ಯಜ್ಞೇ ಯಚ್ಛಸ್ಯತೇ ನೃಭಿಃ ।
ಸ್ತುವಂತ್ಯಾಪ್ರೀಷು ತೇನೇಮಂ ನರಾಶಂಸಂ ತು ಕಾರವಃ ॥ ೨೮ ॥

ವನ್ನು ಯಜ್ಞಾದಿಕರ್ಮಗಳಲ್ಲಿ ಸೇರಿಸುವುದರಿಂದಲೂ ಈ ದೇವತೆಯನ್ನು ಅಗ್ನಿಯೆಂಬ ಹೆಸರಿನಿಂದ ಪ್ರಾಜ್ಞರು ಸ್ತುತಿಸುವರು.

25. **ದ್ರವಿಣೋದಾಃ** ಶಬ್ದದ ನಿರ್ವಚನ — ಯಾವ ಯಜ್ಞಕರ್ಮಾನುಷ್ಠಾನದಿಂದ ಪ್ರೀತನಾದ **ಅಗ್ನಿ**ಯು ದ್ರವಿಣ, ಧನ, ಅಥವಾ ಬಲವನ್ನು ಯಜಮಾನನಿಗೆ ಅನುಗ್ರಹಿಸಿದನೋ ಅಂತಹ ಕರ್ಮವನ್ನು ನೋಡಿ ಕುತ್ಸನೆಂಬ ಋಷಿಯು ಈ ಅಗ್ನಿಯನ್ನು ದ್ರವಿಣೋದನೆಂದು ಹೇಳಿರುವನು.

26. **ತನೂನಪಾತ್** ಶಬ್ದದ ನಿರ್ವಚನ — ಈ ಪಾರ್ಥಿವಾಗ್ನಿಗೆ **ತನೂನಪಾತ್** ಎಂದು ಹೆಸರು. ಹೇಗೆಂದರೆ **ತನನ** ಶಬ್ದಕ್ಕೆ ವಿಸ್ತಾರವೆಂದರ್ಥವಿರುವುದು ಸ್ವರ್ಗದಲ್ಲಿರುವ ಅಗ್ನಿಯಿಂದ ಮಧ್ಯಮಸ್ಥಾನದ ಅಗ್ನಿಯೂ, ಮಧ್ಯಮಸ್ಥಾನದ ಅಗ್ನಿಯಿಂದ ಈ ಪಾರ್ಥಿವಾಗ್ನಿಯೂ ಉತ್ಪನ್ನನಾದನು (ಆದ್ದರಿಂದ ಸ್ವರ್ಗಾಗ್ನಿಗೆ ಪಾರ್ಥಿವಾಗ್ನಿಯು **ಮೊಮ್ಮಗನು. ತನೂನಪಾತ್** ಶಬ್ದಕ್ಕೆ ಮೊಮ್ಮಗನೆಂದರ್ಥವು,)

27. ಸ್ತೋತ್ರಕರ್ತರು ಸ್ವರ್ಗಾಗ್ನಿಯ ಪುತ್ರನನ್ನು **ನಪಾತ್** ಎಂದೂ ಆ ಪುತ್ರನ (ಮಧ್ಯಮಾಗ್ನಿಯ) ತನುವಿನಿಂದ (ಶರೀರದಿಂದ) ಉತ್ಪನ್ನನಾದ ಪಾರ್ಥಿವಾಗ್ನಿಯನ್ನು **ತನೂನಪಾತ್** (ಮೊಮ್ಮಗ) ಎಂದೂ ಕರೆಯುವರು.

ನರಾಶಂಸ, ಪವಮಾನ, ಜಾತವೇದಾಃ ಎಂಬ ದೇವತೆಗಳು

28. **ನರಾಶಂಸಶಬ್ದದ** ನಿರ್ವಚನ-ಯಜ್ಞಾದಿಗಳಲ್ಲಿ ಜನರು ಬೇರೆಬೇರೆಯಾಗಿಯೂ ಒಟ್ಟಿಗೆ ಸೇರಿಯೂ

25. Kutsa observing the action by wuich he bestowed dravina wealth or strength—proclaimed him as ದ್ರವಿಣೋದಾಃ (1)

26. This (terrestrial) Agni is Tanunapat (2). For that (celestial) Agni is tanu from tanana (extending); from him the middle (Agni) was born, then from the middle one, in (his proper) place, this (terrestrial) one.

6. Narasamsa, Pavamana, Jatavedas.

27. The poets call an immediate descendant (ಪ್ರಜಾಂ) grandson (ನಪಾತ್) and this (terrestrial) Agni is the grandson of that (celestial one ; hence he is Tanunapat.

28. Because he is individually (ಪೃಥಕ್ತ್ವೇನ) lauded (ಶಂಸ) by men (ನರ) combined at the sacrifice, therefore poets praise this (ಅಗ್ನಿ) as Narasamsa (3) in Apri hymns.

ಪುನಾತಿ ಯದಿದಂ ವಿಶ್ವಮೇವಾಗ್ನಿಃ ಪಾರ್ಥಿವೋಽಥ ಚ ।
ವೈಖಾನಸರ್ಷಿಭಿಸ್ತೇನ ಪವಮಾನ ಇತಿ ಸ್ತುತಃ ॥ ೨೯ ॥
ಭೂತಾನಿ ವೇದ ಯಜ್ಜಾತೋ ಜಾತವೇದಾಥ ಕಥ್ಯತೇ ।
ಯಚ್ಚೈಷ ಜಾತವಿದ್ಯೋಽಭೂದ್ವಿತ್ತಂ ಜಾತೋಽಧಿವೇತ್ತಿ ವಾ ॥ ೩೦ ॥
ವಿದ್ಯತೇ ಸರ್ವಭೂತೈರ್ಹಿ ಯದಾ ಜಾತಃ ಪುನಃ ಪುನಃ ।
ತೇನೈಷ ಮಧ್ಯಭಾಗೇಂದ್ರೋ ಜಾತವೇದಾ ಇತಿ ಸ್ತುತಃ ॥ ೩೧ ॥
ಅಣಿಷ್ಮ ಏಷ ಯತ್ತು ತ್ರೀನ್ವ್ಯಶ್ನ್ಯೈಕೋ ವ್ಯೋಮ್ನಿ ತಿಷ್ಠತಿ ।

ಈ ಅಗ್ನಿಯನ್ನು ಸ್ತುತಿಸುವುದರಿಂದಲೂ, ಸ್ತೋತೃಗಳು ಆಪ್ರೀಸೂಕ್ತಗಳಲ್ಲಿ ಈ ಅಗ್ನಿಯನ್ನು ನರಾಶಂಸನೆಂಬ ಹೆಸರಿನಿಂದ ಸ್ತುತಿಸುವುದರಿಂದಲೂ ಈ ಅಗ್ನಿಗೆ ನರಾಶಂಸನೆಂಬ ಹೆಸರು ಬಂದಿರುವುದು.

29. **ಪವಮಾನ**ಶಬ್ದನಿರ್ವಚನ—ಈ ಪಾರ್ಥಿವಾಗ್ನಿಯು ಈ ಸಮಸ್ತ ವಿಶ್ವವನ್ನೂ, ಶುದ್ಧಗೊಳಿಸುವವನಾದುದರಿಂದಲೂ (ಪುನಾತಿ–ಶುದ್ಧಗೊಳಿಸುತ್ತಾನೆ), ವೈಖಾನಸರೆಂಬ ಋಷಿಗಳು ಇವನನ್ನು ಪವಮಾನ ಎಂಬ ಹೆಸರಿನಿಂದ ಸ್ತುತಿಸಿರುವುದರಿಂದಲೂ ಈ ಪಾರ್ಥಿವಾಗ್ನಿಗೆ ಪವಮಾನನೆಂಬ ಹೆಸರು ಬಂದಿರುವುದು.

30. **ಜಾತವೇದ**ಶಬ್ದನಿರ್ವಚನ—ಅಗ್ನಿಯು ಉತ್ಪನ್ನನಾದ ಕೂಡಲೇ ಸಮಸ್ತ ಪ್ರಾಣಿಗಳನ್ನೂ ತಿಳಿದುಕೊಳ್ಳುವುದರಿಂದ ಅಗ್ನಿಗೆ ಜಾತವೇದಾಃ ಎಂಬ ಹೆಸರು ಅಥವಾ ಈ ಅಗ್ನಿಯಲ್ಲಿ ವಿದ್ಯವು (ತಿಳುನಳಿಕೆ, ಜ್ಞಾನ)ಅಡಗಿರುವುದರಿಂದ ಅಥವಾ ಹುಟ್ಟಿದಕೂಡಲೇ ವಿತ್ತವನ್ನು ಎಂದರೆ ಧನವನ್ನು ತಿಳಿದಿರುವುದರಿಂದಲೂ ಅಗ್ನಿಗೆ **ಜಾತವೇದಾಃ** ಎಂದು ಹೆಸರು.

31. ಅಥವಾ (ಯಜ್ಞಾದಿಗಳಲ್ಲಿ) ಪುನಃಪುನಃ (ಅನೇಕವೇಳೆ) ಉತ್ಪನ್ನನಾದಾಗ ಸರ್ವಪ್ರಾಣಿಗಳಿಂದಲೂ (ಜನರಿಂದಲೂ) ತಿಳಿಯಲ್ಪಡುವನು ಮತ್ತು ಮಧ್ಯಸಂಸ್ಥನೇನತೆಯಾದ ಇಂದ್ರನಂತೆ ಸರ್ವರಿಂದಲೂ ಜಾತವೇದಾಃ ಎಂದು ಸ್ತುತಿಸಲ್ಪಡುವನು. ಈ ಕಾರಣದಿಂದಲೂ ಅಗ್ನಿಗೆ **ಜಾತವೇದಾಃ** ಎಂದು ಹೆಸರು.

ಇಂದ್ರನ ಇಪ್ಪತ್ತಾರು ನಾಮಗಳು; ವಾಯು, ವರುಣ, ರುದ್ರ ಮೊದಲಾದವರು

32. **ವಾಯು**ಶಬ್ದನಿರ್ವಚನ—ಈ ದೇವತೆಯು ಬಹಳ ಸೂಕ್ಷ್ಮರೂಪದಿಂದ ಅಂತರಿಕ್ಷದಲ್ಲಿದ್ದು ಮೂರು

29. And again because the terrestrial Agni purifies (ಪುನಾತಿ) this universe, therefore he is praised by hermit seers as (the Purifier) Pavamana (4).

30. Again, because when born (ಜಾತ) he knows (ವೇದ) beings he is spoken of as Jatavedas (5), and because he became one in whom knowledge (ವಿದ್ಯ) was produced (ಜಾತ) or (because) when born (ಜಾತ) he knows (ಅಧಿ ವೇತ್ತಿ) wealth;

31. or because when born (ಜಾತ) again and again he is known(ವಿದ್ಯತೇ) by all beings, therefore, he, as the Indra of the middle part (of the universe), is praised as Jatavedas.

7. The twenty-six names of Indra: Vayu, Varuna, Rudra, Indra.

32. But because he, in a most subtle form. abides in the air as the

ತೇನೈನಮೃಷಯೋ೭ರ್ಚಂತಃ ಕರ್ಮಣಾ ವಾಯುಮಬ್ರುವನ್ ॥ ೩೨ ॥
ತ್ರೀಣೀಮಾನ್ಯಾವೃಣೋತ್ಯೇಕೋ ಮೂರ್ತೇನ ತು ರಸೇನ ಯತ್ ।
ತಯೈನಂ ವರುಣಂ ಶಕ್ತ್ಯಾ ಸ್ತುತಿಷ್ವಾಹುಃ ಕೃಪಣ್ಯವಃ ॥ ೩೩ ॥
ಅರೋದೀದಂತರಿಕ್ಷೇ ಯದ್ವಿದ್ಯುದ್ವೃಷ್ಟಿಂ ದದನ್ಮೃಣಾಂ ।
ಚತುರ್ಭಿರ್ಋಷಿಭಿಸ್ತೇನ ರುದ್ರ ಇತ್ಯಭಿಸಂಸ್ತುತಃ ॥ ೩೪ ॥
ಚತುರ್ವಿಧಾನಾಂ ಭೂತಾನಾಂ ಪ್ರಾಣೋ ಭೂತ್ವಾ ವ್ಯವಸ್ಥಿತಃ ।
ಈಷ್ಟೇ ಚೈವಾಸ್ಯ ಸರ್ವಸ್ಯ ತೇನೇಂದ್ರ ಇತಿ ಸ ಸ್ಮೃತಃ ॥ ೩೫ ॥
ಇರಾಂ ದೃಣಾತಿ ಯತ್ಕಾಲೇ ಮರುದ್ಭಿಃ ಸಹಿತೋ೭ಮ್ಬರೇ ।

ಲೋಕಗಳಲ್ಲಿಯೂ ವ್ಯಾಪಿಸಿರುವನು. ಅವನ ಈ ವಿಧವಾದ ಕರ್ಮದಿಂದ ಋಷಿಗಳನ್ನು ಅವನನ್ನು ವಾಯುವೆಂದು ಕರೆಯುತ್ತಾ ಪೂಜಿಸುವರು.

33. **ವರುಣ**ಶಬ್ದನಿರ್ವಚನ-ವರುಣನೆಂಬ ದೇವತೆಯು ಈ ಮೂರು ಲೋಕಗಳನ್ನೂ ತನ್ನ ದ್ರವಸ್ವರೂಪದಿಂದ ಆವರಿಸಿರುವುದರಿಂದ ಸ್ತುತಿಕರ್ತರು ಈ ದೇವತೆಯನ್ನು ತಮ್ಮ ಸ್ತುತಿಗಳಲ್ಲಿ ವರುಣನೆಂದು ಪ್ರಶಂಸಿಸಿರುವರು.

34. **ರುದ್ರ**ಶಬ್ದನಿರ್ವಚನ—ಅಂತರಿಕ್ಷದಲ್ಲಿ ಘರ್ಜಿಸುವಂತೆ ಶಬ್ದಮಾಡುತ್ತಾ ಮಿಂಚಿನಿಂದ ಸಹಿತವಾಗಿ ವೃಷ್ಟಿಯನ್ನು ಮನುಷ್ಯರ ಉಪಕಾರಾರ್ಥವಾಗಿ ಸುರಿಸುವುದರಿಂದ ಈ ದೇವತೆಯನ್ನು ರುದ್ರನೆಂದು ನಾಲ್ಕುಜನ ಋಷಿಗಳು ಸ್ತುತಿಸಿರುವರು.

35. **ಇಂದ್ರ**ಶಬ್ದನಿರ್ವಚನ — ನಾಲ್ಕುವಿಧ ಎಂದರೆ ಅಂಡಜಾದಿ ನಾಲ್ಕುವರ್ಗದ ಪ್ರಾಣಿಗಳಲ್ಲಿಯೂ ಪ್ರಾಣಸ್ವರೂಪನಾಗಿ (ಅಂತರಾತ್ಮನಾಗಿ) ಇದ್ದುಕೊಂಡು ಅವುಗಳ ಸಮಸ್ತ ವ್ಯಾಪಾರಗಳನ್ನೂ ನಿಯಮಿಸುತ್ತಾ ಅವುಗಳಿಗೆ ಸ್ವಾಮಿಯಾಗಿರುವುದರಿಂದ ಇವನಿಗೆ ಇಂದ್ರನೆಂದು ಹೆಸರು.

36. ಮರುತ್ತುಗಳಿಂದ ಸಹಿತನಾಗಿ ಅಂತರಿಕ್ಷದಲ್ಲಿ ವೃಷ್ಟಿಯನ್ನು ಸುರಿಸುವಾಗ ಮಹಾಧ್ವನಿ (ಸಿಡಿಲು,

one pervading (ವ್ಯಾಪ್ಯ) the three (worlds), the seers adoring (him) by reason of this function, called him Vayu (1).

33. But because with concrete moisture he alone covers (ವೃಣೋತಿ) these three (worlds), the singers in their praises speak of him, by reason of this faculty, as Varuna (2).

34. Because he roared (ಅರೋದೀತ್) in the air, giving rain with lightning to men, therefore he is highly praised by four seers as Rudra (3).

35. And having become the established (source of) life of the four kinds of beings, he rules (ಈಷ್ಟೇ) over this universe ; therefore he has been named Indra (4).

36. Because he, associated with the Maruts, at the (proper) time

ರನೇಣ ಮಹತಾ ಯುಕ್ತಸ್ತೇನೇಂದ್ರಮೃಷಯೋಽಬ್ರುವನ್ ॥ ೩೬ ॥
ಯದಿಮಾಂ ಪ್ರಾರ್ಜಯತ್ಯೇಕೋ ರಸೇನಾಂಬರಜೇನ ಗಾಂ ।
ಕಾಲೇಽತ್ರಿರೌರ್ವಶಶ್ಚರ್ಷೀ ತೇನ ಪರ್ಜನ್ಯಮಾಹತುಃ ॥ ೩೭ ॥
ತರ್ಪಯತ್ಯೇಷ ಯಲ್ಲೋಕಾಞ್ಜನ್ಯೋ ಜನಹಿತಶ್ಚ ಯತ್ ।
ಪರೋ ಜೇತಾ ಜನಯಿತಾ ಯದ್ವಾಗ್ನೇಯಸ್ತತೋ ಜಗೌ ॥ ೩೮ ॥
ಬೃಹಂತೌ ಪಾತಿ ಯಲ್ಲೋಕಾವೇಷ ದ್ವೌ ಮಧ್ಯಮೋತ್ತಮೌ ।
ಬೃಹತಾ ಕರ್ಮಣಾ ತೇನ ಬೃಹಸ್ಪತಿರಿತೀಳಿತಃ ॥ ೩೯ ॥

ಗುಡುಗು) ಯಿಂದ ಉದಕಭರಿತವಾದ ಮೇಘವನ್ನು ಸೀಳುವುದರಿಂದ ಈ ದೇವತೆಯನ್ನು ಇಂದ್ರನೆಂದು ಋಷಿಗಳು ಕರೆಯುವರು.

ಪರ್ಜನ್ಯ, ಬೃಹಸ್ಪತಿ, ಬ್ರಹ್ಮಣಸ್ಪತಿ, ಕ್ಷೇತ್ರಸ್ಯಪತಿ ಇತ್ಯಾದಿ

37. **ಪರ್ಜನ್ಯಶಬ್ದನಿರ್ವಚನ**—ಅಂತರಿಕ್ಷದಲ್ಲಿ ಮೇಘರೂಪವಾಗಿ ಸಂಗೃಹೀತವಾದ ರಸ ಅಥವಾ ಜಲದಿಂದ ಭೂಮಿಯನ್ನು ವರ್ಷಾಕಾಲದಲ್ಲಿ ವೃಷ್ಟಿಯ ಮೂಲಕ ತೊಯ್ಯುವಂತೆ ಮಾಡುವ ಈ ಏಕಮಾತ್ರದೇವತೆಯನ್ನು ಪರ್ಜನ್ಯನೆಂಬ ಹೆಸರಿನಿಂದ ಅತ್ರಿಋಷಿಯೂ ಊರ್ವಶೀಪುತ್ರನಾದ ವಸಿಷ್ಠಋಷಿಯೂ ಕರೆಯುವರು.

38. ಈ ದೇವನು (ಪರ್ಜನ್ಯನು) ಲೋಕಗಳನ್ನು (ವೃಷ್ಟಿಯಿಂದ) ತೃಪ್ತಿಪಡಿಸುವವನಾದ್ದರಿಂದಲೂ ಜನರಿಗೆ ಹಿತವನ್ನುಂಟುಮಾಡುವವನಾದ್ದರಿಂದಲೂ, ಶ್ರೇಷ್ಠನಾದ ಜಯಶಾಲಿ ಮತ್ತು (ಹರ್ಷ) ಪ್ರದನಾದ್ದರಿಂದಲೂ ಇವನನ್ನು ಅಗ್ನಿಪುತ್ರನಾದ ಕುಮಾರನೆಂಬ ಋಷಿಯು ಪರ್ಜನ್ಯನೆಂದು ಸ್ತುತಿಸಿರುವನು.

39. **ಬೃಹಸ್ಪತಿ ಶಬ್ದನಿರ್ವಚನ**—ಬೃಹತ್ತಾದ (ದೊಡ್ಡದಾದ) ಸ್ವರ್ಗಾಂತರಿಕ್ಷಗಳೆಂಬ ಎರಡು ಲೋಕಗಳನ್ನು ತನ್ನ ಶ್ರೇಷ್ಠವಾದ ಕರ್ಮದಿಂದ ರಕ್ಷಿಸುವವನಾದ್ದರಿಂದ ಈ ದೇವತೆಯು ಬೃಹಸ್ಪತಿ ಎಂಬ ಹೆಸರಿನಿಂದ ಸ್ತುತಿಸಲ್ಪಟ್ಟಿರುವನು.

bursts open (ದೃಣಾತಿ) refreshment (ಇರಾಂ) in the sky, accompanied with great roar, therefore the seers called him Indra

8. Parjanya, Brahaspati, Brahmanaspati, Ksetrasya pati, Rta.

37. Because he alone endows (ಪ್ರಾರ್ಜಯತಿ) this earth at the (proper) time with moisture produced from the sky, therefore the seers Atri and the son of Urvasi (ವಸಿಷ್ಠ) speak of him as Parjanya (5).

38. Because he gladdens (ತರ್ಪಯತಿ) the worlds and because he is genial (ಜನ್ಯ) friendly to the people (ಜನ) (or because he is) a supreme (ಪರ) conquerer (ಜೇತಾ) or generator (ಜನಯಿತಾ) therefore (ಕುಮಾರ) Agneya sang (of him as ಪರ್ಜನ್ಯ).

39. Because he protects (ಪಾತಿ) the two great (ಬೃಹತ್) worlds, the middle and the highest, he is, by reason of this great function, lauded as Brhaspati (6).

ಬ್ರಹ್ಮ ವಾಗ್ವೈ ಬ್ರಹ್ಮ ಸತ್ಯಂ ಚ ಬ್ರಹ್ಮ ಸರ್ವಮಿದಂ ಜಗತ್ ।
ಪಾತಾರಂ ಬ್ರಹ್ಮಣಸ್ತೇನ ಶೌನಹೋತ್ರಃ ಸ್ತುವಞ್ಜಗೌ ॥ ೪೦ ॥

ಅನ್ನಂ ಕ್ಷಿತಿಭ್ಯೋ ವಿದಧದ್ಯದೃತುಷ್ವವಿಶಕ್ಷ್ಮಿತೌ ।
ತೇನೈನಮಾಹ ಕ್ಷೇತ್ರಸ್ಯ ವಾಮದೇವಃ ಸ್ತುವನ್ಪತಿಂ ॥ ೪೧ ॥

ಮನಸೇಮಂ ತು ಯದ್ದೃಶ್ಯಂ ಮಧ್ಯಮಂ ಲೋಕಮಾಶ್ರಿತಂ ।
ಶಂಸತ್ಸತ್ಯೇನ ಸತ್ಯೇ ವೈ ಸ ಏಷ ಸ್ತುತವಾನೃತಂ ॥ ೪೨ ॥

ರನೇಣಾನ್ತಾರಸೈಃ ಕ್ಷಿಪ್ತೈಃ ಸ್ಥಿತೋ ವ್ಯೋನ್ಮ್ಯೇಷ ಮಾಯಯಾ ।
ಋತಸ್ಯ ಶ್ಲೋಕ ಇತ್ಯೇಷ ಪುನಶ್ಚೈನಂ ತತೋಽಬ್ರವೀತ್ ॥ ೪೩ ॥

40. **ಬ್ರಹ್ಮಣಸ್ಪತಿ ಶಬ್ದನಿರ್ವಚನವು**—ವಾಕ್ಯೇ ಬ್ರಹ್ಮವು, ಸತ್ಯವೇ ಬ್ರಹ್ಮವು, ಈ ಸಮಸ್ತ ಪ್ರಪಂಚವೂ ಬ್ರಹ್ಮವೇ ಆಗಿರುವುದು. ಬ್ರಹ್ಮಸ್ವರೂಪವಾಗಿರುವ ಇವೆಲ್ಲವನ್ನೂ ರಕ್ಷಿಸುವವನಾದ್ದರಿಂದ ಈ ದೇವನನ್ನು ಬ್ರಹ್ಮಣಸ್ಪತಿಯೆಂಬ ಹೆಸರಿನಿಂದ ಶೌನಹೋತ್ರನು ಎಂದರೆ ಶುನಹೋತ್ರಪುತ್ರನಾದ ಗೃತ್ಸಮದನು ಸ್ತುತಿಸಿ ಗಾನಮಾಡಿರುವನು.

41. **ಕ್ಷೇತ್ರಸ್ಯ ಪತಿಯ** ವಿವರಣೆ—ಆಯಾ ಋತು (ಕಾಲ) ವಿನಲ್ಲಿ ಕ್ಷಿತಿಯನ್ನು (ಭೂಮಿಯನ್ನು) ಪ್ರವೇಶಿಸಿ ಭೂಮಿಯಲ್ಲಿರುವ ಜನರಿಗೆ ಅನ್ನಾದ್ಯಾಹಾರಗಳನ್ನು ಒದಗಿಸಿಕೊಡುವವನಾದ್ದರಿಂದ ಈ ದೇವನನ್ನು ಕ್ಷೇತ್ರಸ್ಯ ಪತಿಯೆಂದು (ಕ್ಷೇತ್ರಪಾಲಕ, ಭೂಮಿಗೆ, ಒಡೆಯ) ವಾಮದೇವಋಷಿಯು ಸ್ತುತಿಸಿರುವನು.

42. **ಋತ**—(ಸತ್ಯ) ಶಬ್ದವಾಚ್ಯನಾದ ಈ ದೇವನು ಮನಸ್ಸಿನಿಂದ ಮಾತ್ರ ತಿಳಿಯಲ್ಪಡುವವನು. ಮಧ್ಯಮ (ಅಂತರಿಕ್ಷ) ಲೋಕವನ್ನು ಆಶ್ರಯಿಸಿರುವನು. ಸತ್ಯಸ್ವರೂಪದಿಂದ ಸತ್ಯದಲ್ಲಿ ಅಡಗಿರುವನು. ಆದ್ದರಿಂದ ಈ ದೇವನನ್ನು ಋತ ಎಂಬ ಹೆಸರಿನಿಂದ ವಾಮದೇವಋಷಿಯು ಸ್ತುತಿಸಿರುವನು.

43. ತನ್ನ ಮಾಯಾಶಕ್ತಿಯಿಂದ ಅಂತರಿಕ್ಷದಲ್ಲಿ ಶಿಡಿಲು ಗುಡುಗಗಳಿಂದಲೂ ತೋಯಿಸುವ ಶಕ್ತಿಯುಳ್ಳ ಜಲಸೇಚನದಿಂದಲೂ ಇರುವವನಾದ್ದರಿಂದ ಈ ದೇವನನ್ನು ಋತಸ್ಯ ಶ್ಲೋಕ ಎಂಬಭಿಧಾನದಿಂದಲೂ ಆ ಋಷಿಯು ಸ್ತುತಿಸಿರುವನು.

---

40. Speech is Bhahma and truth is Brahma, this whole world is Brahma; therefore Saunahotra (ಗೃತ್ಸಮದ) praising, sang (of him) as protector (ಪಾತಾರಂ) of Brahma (i.e. as Brahmanaspati) (7).

41. Becanse he entered into the earth (ಕ್ಷಿತೌ) at the (proper) seasons, distributing food to the natlons (ಕ್ಷಿತಿಭ್ಯಃ) therefore Vamadeva, praising (him), calls him 'Lord of the Field' (8).

42. Because he declared him who, connected with the middle world, is to be seen by the mind (only), with truth (to be) in truth (ಸತ್ಯ) the name (ವಾಮದೇವ) praised him as (ಋತ) (9).

9. Vastospati, Vacaspati, Aditi, Ka, Yama

43. And by his magical power he abides in the air with internal moisture shed with thunder: hence he (Vamadeva) again spoke of him (as such in) 'the call of Rta' (ಋತಸ್ಯ ಶ್ಲೋಕಃ).

ವಾಸ್ತು ಪ್ರಯಚ್ಛಂಲ್ಲೋಕಸ್ಯ ಮಧ್ಯಮಃ ಸ ತು ಸಾತಿ ಯತ್ ।
ತೇನ ವಾಸ್ತೋಷ್ಪತಿಂ ಪ್ರಾಹ ಚತುರ್ಭಿರಿಮಮೌರ್ವಶಃ ॥ ೪೪ ॥

ವಾಚಾ ವೇದಾ ಹ್ಯಧೀಯಂತೇ ವಾಚಾ ಛಂದಾಂಸಿ ತತ್ರ ಹ ।
ಅಥೋ ವಾಕ್ಸರ್ವಮೇವೇದಂ ತೇನ ವಾಚಸ್ಪತಿಃ ಸ್ತುತಃ ॥ ೪೫ ॥

ನ ಕುತಶ್ಚನ ಯದ್ದೀನೋ ವೃತ್ವಾ ತಿಷ್ಠತಿ ಮಧ್ಯಮಃ ।
ರಾಹೂಗಣ ಋಷಿಸ್ತೇನ ಪ್ರಾಹೈನಂ ಗೋತಮೋಽದಿತಿಂ ॥ ೪೬ ॥

ಪ್ರಜಾಭ್ಯಸ್ತ್ವೇಷ ಯಚ್ಛರ್ಮ ಕಮಿಚ್ಛನ್ಮನಸಾ ಸುಖಂ ।

ವಾಸ್ತೋಷ್ಪತಿ, ಅದಿತಿ, ಕಃ ಯಮ

44. **ವಾಸ್ತೋಷ್ಪತಿ** ಶಬ್ದವಿವರಣೆ—ಈದೇವನು ಮಧ್ಯನು(ಅಂತರಿಕ್ಷ)ಲೋಕದಲ್ಲಿದ್ದುಕೊಂಡು ಲೋಕದ ಜನರಿಗೆ ವಾಸ್ತು ಎಂದರೆ ನಿವಾಸಸ್ಥಾನವನ್ನು (ವಸತಿಗೃಹ) ಅನುಗ್ರಹಿಸಿಕೊಡುವನು ಮತ್ತು ಅದರ ರಕ್ಷಣೆಯ ಭಾರವನ್ನು ತಾನೇ ವಹಿಸಿರುವನು. ಆದ್ದರಿಂದ ಊರ್ವಶೀ ಪುತ್ರನಾದ ವಸಿಷ್ಠಋಷಿಯು ಈ ದೇವನನ್ನು **ವಾಸ್ತೋಷ್ಪತಿ** ಎಂಬ ಹೆಸರಿನಿಂದ ನಾಲ್ಕು ಮಂತ್ರಗಳಲ್ಲಿ ಸ್ತುತಿಸಿರುವನು.

45. **ವಾಚಸ್ಪತಿ** ಶಬ್ದವಿವರಣೆ—ವಾಕ್ಕಿನ ಸಹಾಯದಿಂದಲೇ ವೇದಗಳ ಅಧ್ಯಯನವು ನಡೆಯುವುದು. ವಾಕ್ಕಿನ ಸಹಾಯದಿಂದಲೇ ವಿಧವಾದ ಛಂದಸ್ಸಿನ ಅಭ್ಯಾಸವು (ಎಂದರೆ ಉಚ್ಚಾರಣೆಯು) ನಡೆಯುವುದು ಇಷ್ಟೇ ಅಲ್ಲ ಈ ವಾಕ್ಕೇ ಸಮಸ್ತ ಜಗತ್ಸ್ವರೂಪವಾಗಿರುವುದು ಎಂದರೆ ವಾಕ್ಕಿನ ಸಹಾಯವಿಲ್ಲದಿದ್ದರೆ ಜಗತ್ತಿನ ವ್ಯವಹಾರಗಳು ಯಾವುದೂ ನಡೆಯುವಂತಿಲ್ಲ. ಆದ್ದರಿಂದ ಈ ದೇವತೆಯನ್ನು ವಾಚ್ಪತಿಯೆಂದು ಸ್ತುತಿಸಲಾಗಿದೆ.

46 **ಅದಿತಿ** ಶಬ್ದವಿವರಣೆ—ಈ ದೇವತೆಯು ಸಕಲವನ್ನು ವ್ಯಾಪಿಸಿರುವ ಮಧ್ಯನು (ಅಂತರಿಕ್ಷ) ಲೋಕದಲ್ಲಿ ಇದ್ದು ದೀನಳಲ್ಲವಾದ್ದರಿಂದ (ಸಂಕಟಕ್ಕೊಳಗಾಗುವುದಿಲ್ಲವಾದ್ದರಿಂದ ಈ ದೇವತೆಯನ್ನು ಅದಿತಿಯೆಂಬ ಹೆಸರಿನಿಂದ ರಾಹುಗಣಗೋತಮನೆಂಬ ಋಷಿಯು ಕರೆದು ಸ್ತುತಿಸಿರುವನು.

47. **ಕಃ** (ಪ್ರಜಾಪತಿಃ) ಶಬ್ದದ ವಿವರಣೆ. ಕ ಎಂಬ ಶಬ್ದಕ್ಕೆ ಸುಖವೆಂದರ್ಥವು. ಈ ದೇವತೆಯು ಸಮಸ

44. But because (being in the) middle (sphere) he granting an abode (ವಾಸ್ತು) to the world, protects (it), therefore the son of Urvasi (ವಸಿಷ್ಠ) proclaims him (to be) Vastospati (10) in four (formulas).

45. Since the Vedas are learned with speech (ವಾಕ್) (and) the metres there (are recited) with speech, and moreover speech is this universe, therefore (he is) praised as 'Lord of Speech' (11).

46. And because he abides (in the) middle (sphere) surrounding (the world), not afflicted (ದೀನ) on any side, therefore the seer Rahugana Gotama proclaims him as Aditi (12).

47. But because he is a protection to creatures, desiring (their) ಕ

ಹಿರಣ್ಯಗರ್ಭಸ್ತೇನೈನಮೃಷಿರರ್ಚನ್ನುವಾಚ ಕಂ ॥ ೪೭ ॥

ಇಹ ಪ್ರಜಾಃ ಪ್ರಯಚ್ಛನ್ಸ ಸಂಗೃಹೀತ್ವಾ ಪ್ರಯಾತಿ ಚ ।
ಋಷಿರ್ವಿವಸ್ವತಃ ಪುತ್ರಂ ತೇನಾಹೈನಂ ಯಮೋ ಯಮಂ ॥ ೪೮ ॥

ಮಿತ್ರೀಕೃತ್ಯ ಜನಾ ವಿಶ್ವೇ ಯದಿಮಂ ಪರ್ಯುಪಾಸತೇ ।
ಮಿತ್ರ ಇತ್ಯಾಹ ತೇನೈನಂ ವಿಶ್ವಾಮಿತ್ರಃ ಸ್ತುವನ್ಸ್ವಯಂ ॥ ೪೯ ॥

ನಿದಾಘಮಾಸಾತಿಗಮೇ ಯದೃತೇನಾವತಿ ಕ್ಷಿತಿಂ ।
ವಿಶ್ವಸ್ಯ ಜನಯನ್ಕರ್ಮ ವಿಶ್ವಕರ್ಮೈಷ ತೇನ ಸಃ ॥ ೫೦ ॥

ಪ್ರಜೆಗಳಿಗೂ ಮನಃಪೂರ್ವಕವಾಗಿ ಸುಖವನ್ನು ಒಯಸುವವನಾದುದರಿಂದ ಇವನ್ನು ಕ ಶಬ್ದವಾಚ್ಯನೆಂದು ಹಿರಣ್ಯಗರ್ಭ ಋಷಿಯು ಸ್ತುತಿಸಿರುವನು.

48. **ಯಮ** ಶಬ್ದವಿವರಣೆ—ಯಮಶಬ್ದಕ್ಕೆ (ಯಚ್ಛ್-ಕೊಡು) ಕೊಡುವವನು ಎಂದರ್ಥವು. ಈ ದೇವತೆಯು ಜನರಿಗೆ ಸಂತಾನ (ಮಕ್ಕಳನ್ನು) ಅನುಗ್ರಹಿಸಿಕೊಡುವುದರಿಂದಲೂ, ಜನರ ಮರಣಾನಂತರ ಅವರನ್ನು (ಅವರ ಆತ್ಮವನ್ನು) ಬೇರೆ ಲೋಕಕ್ಕೆ (ಯಮ ಅಥವಾ ಪಿತೃಲೋಕಕ್ಕೆ) ತೆಗೆದುಕೊಂಡು ಹೋಗುವುದರಿಂದಲೂ ವಿವಸ್ವಂತನ ಪುತ್ರನಾದ ಇವನನ್ನು ಯಮನೆಂದು ಋಷಿಯು ವರ್ಣಿಸಿರುವನು.

ಮಿತ್ರ, ವಿಶ್ವಕರ್ಮಾ, ಸರಸ್ವತ್, ವೇನಮನ್ಯು

49. **ಮಿತ್ರ** ಶಬ್ದವಿವರಣೆ—ಎಲ್ಲಾ ಜನರೂ ಇವನನ್ನು ಸ್ನೇಹಮಾಡಿಕೊಂಡು ಪೂಜಿಸುವುದರಿಂದ, ಇವನನ್ನು ಮಿತ್ರನೆಂಬ (ಮಿತ್ರ-ಸ್ನೇಹಿತ) ಹೆಸರಿನಿಂದ ನಿಶ್ಚಾಮಿತ್ರಋಷಿಯೇ ಸ್ವಯಂ ಸ್ತುತಿಸಿರುವನು.

50. **ವಿಶ್ವಕರ್ಮಾ** ಎಂಬ ಶಬ್ದದ ವಿವರಣೆ—ಈ ದೇವನು ಬೇಸಿಗೆ ಕಾಲ ಕಳೆದನಂತರ ವರ್ಷಾಕಾಲದಲ್ಲಿ ಭೂಮಿಯನ್ನು ನೀರಿನಿಂದ (ಮಳೆಯಿಂದ) ಸೇಚಿಸಿ ಕಾಪಾಡುವವನಾದ್ದರಿಂದಲೂ, ಸಮಸ್ತ ವಿಶ್ವದ (ಜಗತ್ತಿನ) ಕರ್ಮಗಳಿಗೂ ಕಾರಣಭೂತನಾದ್ದರಿಂದಲೂ ಈ ದೇವನಿಗೆ ವಿಶ್ವಕರ್ಮಾ ಎಂಬ ಹೆಸರು ಪ್ರಸಿದ್ಧಿಯು.

happiness(ಸುಖ)in his heart, therefore the seer Hiranyagarbha,adoring (him), spoke of him as ಕ (13).

48. He giving (ಪ್ರಯಚ್ಛನ್) offspring here, and gathering (them) goes forth (to the other world) : therefore the seer Yama calls him, the son of Vivasvat, Yama (14).

10. Mitra, Visvakarman, Sarasvat, Manyu.

49. Because all men making (ಮಿತ್ರೀಕೃತ್ಯ) a friend (of him) worship him, therefore Visvamitra himself praising (him) calls him 'Mitra' (15).

50. Because at the close of the hot months he refreshes the earth with water (ಋತ) creating the activity (ಕರ್ಮ) of everything (ವಿಶ್ವಸ್ಯ) therefore he (is called) Visvakarman (16).

ಸರಾಂಸಿ ಘೃತವಂತ್ಯಸ್ಯ ಸಂತಿ ಲೋಕೇಷು ಯತ್ತ್ರಿಷು ।
ಸರಸ್ವಂತಮಿತಿ ಪ್ರಾಹ ವಾಚಂ ಪ್ರಾಹುಃ ಸರಸ್ವತೀಂ ॥ ೫೧ ॥

ಪ್ರಾಣಭೂತೇಷು ಭೂತೇಷು ಯದ್ವೇನತ್ಯೇಷು ತಿಷ್ಠತಿ ।
ತೇನೈನಂ ವೇನಮಾಹರ್ಷಿರ್ವೇನೋ ನಾಮೇಹ ಭಾರ್ಗವಃ ॥ ೫೨ ॥

ಸಸೃಜೇ ಮಾಸಿ ಮಾಸ್ಯೇನಮಭಿಮತ್ಯ ತಪೋಽಗ್ರಜಂ ।
ತೇನೈನಂ ಮನ್ಯುರಿತ್ಯಾಹ ಮನ್ಯುರೇವ ತು ತಾಪಸಃ ॥ ೫೩ ॥

ಯದಂತಕಾಲೇ ಭೂತಾನಾಮೇಕ ಏವ ನಯತ್ಯಸೂನ್ ।
ತೇನಾಸುನೀತಿರುಕ್ತೋಽಯಂ ಸ್ತುವತಾ ಶ್ರುತಬಂಧುನಾ ॥ ೫೪ ॥

51. **ಸರಸ್ವಾನ್** ಶಬ್ದದ ವಿವರಣೆ—ಮೂರು ಲೋಕಗಳಲ್ಲಿಯೂ ಇರುವ ಸರೋವರಗಳನ್ನು ಉದಕದಿಂದ ಪೂರ್ಣಮಾಡಿ ಇಟ್ಟಿರುವವನಾದ್ದರಿಂದ ಈ ದೇವನಿಗೆ ಸರಸ್ವಾನ್ ಎಂದು ಹೆಸರು. ವಾಕ್ಕನ್ನು (ಅಥವಾ ವಾಗ್ದೇವತೆಯನ್ನು) ಸರಸ್ವತೀ ಎಂದು ಕರೆಯುವರು

52. **ವೇನ** ಶಬ್ದಾರ್ಥವಿವರಣೆ—ಸಮಸ್ತ ಪ್ರಾಣಿಗಳಲ್ಲಿಯೂ ಪ್ರಾಣರೂಪದಿಂದ ಇದ್ದು ಅವುಗಳ ಶರೀರದಲ್ಲಿ (ವೇನತಿ–ಸಂಚರಿಸು) ಸಂಚರಿಸುವವನಾದ್ದರಿಂದ ಅಥವಾ ಪ್ರಾಣಿಗಳನ್ನು ಸಂಚರಿಸುವಂತೆ ಮಾಡುವವನಾದ್ದರಿಂದ ಈ ದೇವತೆಗೆ ವೇನನೆಂದು ಹೆಸರು ಎಂಬುದಾಗಿ ಭಾರ್ಗವಋಷಿಯು ವಿವರಿಸಿರುವನು.

53. **ಮನ್ಯು** ಶಬ್ದವಿವರಣೆ—ತಪಸ್ಸನ್ನು ಮಾಡುವಾಗ ಮೊದಲು ಪ್ರತಿಮಾಸದಲ್ಲಿಯೂ ಶಾಖವು ಅಥವಾ ಕೋಪವು ಉತ್ಪತ್ತಿಯಾಗುವುದರಿಂದ ಈ ದೇವತೆಯನ್ನು ಮನ್ಯುದೇವತೆಯೆಂದು ಮನ್ಯುಸ್ತಾಪಸಃ ಎಂಬ ಋಷಿಯು ಹೇಳಿರುವನು.

ಅಸುನೀತಿ, ಅಪಾಂನಪಾತ್, ದಧಿಕ್ರಾ, ಧಾತೃ, ತಾರ್ಕ್ಷ್ಯ

54. **ಅಸುನೀತಿ** ಶಬ್ದದ ವಿವರಣೆ—(ಅಸುವೆಂದರೆ ಪ್ರಾಣ ಅಥವಾ ಆತ್ಮ, ನೀತಿ ಎಂದರೆ ಒಯ್ಯುವುದು) ಪ್ರಾಣಿಗಳು ಮೃತರಾದಾಗ ಅವರ ಅಸು ಅಥವಾ ಪ್ರಾಣಗಳನ್ನು (ಬೇರೆ ಲೋಕಕ್ಕೆ) ಒಯ್ಯುವವನಾದ್ದರಿಂದ ಈ ದೇವತೆಗೆ ಅಸುನೀತಿ ಎಂಬ ಹೆಸರು ಬಂದಿರುವುದೆಂದು ಶ್ರುತಬಂಧುವೆಂಬ ಋಷಿಯು ಸ್ತುತಿಸಿರುವನು.

51. Because he has lakes (ಸರಾಂಸಿ) full of water in the three worlds, (the seer) proclaims (him) as 'Sarasvat', (while) ವಾಕ್ (speech) they call Sarasvati.

52. Because being their life (ಪ್ರಾಣ) he moves (ವೇನತಿ) abides in them, therefore the seer named Vena, Bhargava here calls him Vena (18).

53. Primaeval (ಅಗ್ರಜ) Heat (ತಪಃ) desiring (ಅಭಿಮತ್ಯ) created him month after month : therefore Manyu Tapasa calls him 'Manyu'.

11. Asuniti, Apam napat, Dadhikra, Dhatr, Tarksya.

54. Because at the time when beings die he alone leads (ನಯತಿ)(their) spirits (ಅಸುಂ) therefore he is spoken of as Asuniti (20) by Srutabandhu who praises (him).

ನಿದಾಘವಾಸಾತಿಗಮೇ ಜನ್ಮ ಮಧ್ಯೇ ಭವತ್ಯಪಾಂ ।
ನಪ್ತಾರಮಾಹ ತೇ ನೈನಮೃಷಿರ್ಗೃತ್ಸಮದಃ ಸ್ತುವನ್ ॥ ೫೫ ॥
ಅಪಾಮಂಬರಗರ್ಭೋಘವಾದಧತ್ಸೋ ಽಷ್ಟಮಾಸಿಕಂ ।
ಯತ್ಕ್ರಂದತ್ಯಸಕೃನ್ಮಧ್ಯೇ ಧದಿಕ್ರಾಸ್ತೇನ ಕಥ್ಯತೇ ॥ ೫೬ ॥
ಮಾಸೇನ ಸಂಭೃತಂ ಗರ್ಭಂ ನವಮೇನಾಧ ಮಾಸಿಕಂ ।
ಸ್ವಯಂ ಕ್ರಂದನ್ದಧಾತ್ಯುರ್ವ್ಯಾಂ ಧಾತೇತ್ಯೃಗ್ಭಿಃ ಸ ಗೀಯತೇ ॥ ೫೭ ॥
ಸ್ತೀರ್ಣೇ ಽನ್ತರಿಕ್ಷೇ ಕ್ಷಿಯತಿ ಯದ್ವಾ ತೂರ್ಣಂ ಕ್ಷರತ್ಯಸೌ ।
ಅರಿಷ್ಟನೇಮಿಸಾರ್ಕ್ಷ್ಯರ್ಷಿಸ್ತಾರ್ಕ್ಷ್ಯಂ ತೇನೈವಮುಕ್ತವಾನ್ ॥ ೫೮ ॥

55. **ಅಪಾಂನಪಾತ್** ಶಬ್ದದ ವಿವರಣೆ—ಬೇಸಿಗೆ ಕಾಲದ ಕೊನೆಯ ಭಾಗದಲ್ಲಿ ಎಂದರೆ ಮಳೆಗಾಲದ ಪ್ರಾರಂಭದಲ್ಲಿ ಉದಕಗಳ ಮಧ್ಯದಲ್ಲಿ ಈ ದೇವತೆಯ ಉತ್ಪತ್ತಿಯಾಗುವುದರಿಂದ ಈ ದೇವತೆಯನ್ನು ಅಪಾಂನಪಾತ್ (ಉದಕದ ಪುತ್ರನು) ಎಂಬಭಿಧಾನದಿಂದ ಗೃತ್ಸಮದಋಷಿಯು ಸ್ತುತಿಸಿರುವನು.

56. **ದಧಿಕ್ರಾ** ಶಬ್ದದ ವಿವರಣೆ—(**ದಧಿ, ದಧತ್**-ಧರಿಸುವುದು) ಅಂತರಿಕ್ಷದಲ್ಲಿರುವ ಮೇಘಗಳ ಗರ್ಭ ರೂಪವಾದ ಜಲರಾಶಿಯನ್ನು ಎಂಟು ಮಾಸಗಳವರೆಗೆ ಧರಿಸಿ ಆಗಾಗ ಘರ್ಜನೆ (ಸಿಡಿಲು) ಮಾಡುವವನಾದ್ದರಿಂದ ಈ ದೇವತೆಗೆ **ದಧಿಕ್ರಾ** ಎಂಬ ಹೆಸರು ಬಂದಿರುವುದು.

57. **ಧಾತೃ** ಶಬ್ದಾರ್ಥ—(**ಧಾತೃ, ದಧಾತಿ**—ಇಡುವುದು) ಮೇಲೆ ಹೇಳಿದಂತೆ ಎಂಟು ಮಾಸಗಳ ವರೆಗೆ (ಮೇಘಗಳ ಗರ್ಭಸ್ಥವಾದ) ಉದಕವನ್ನು ಧರಿಸಿದ್ದು ಒಂಭತ್ತನೆಯ ತಿಂಗಳಲ್ಲಿ ಬೀಜರೂಪವಾದ ಆ ಜಲವನ್ನು (ಅಥವಾ ಓಷಧ್ಯಾದಿಗಳ ಬೀಜವನ್ನು) ಭೂಮಿಯ ಮೇಲೆ ಘರ್ಜನೆಸಹಿತವಾಗಿ ಇಡುವವನಾದ್ದರಿಂದ ಈ ದೇವನನ್ನು **ಧಾತಾ** ಎಂಬದಾಗಿ ಋಕ್ಕುಗಳಲ್ಲಿ ಸ್ತುತಿಸಲಾಗಿದೆ.

58. **ತಾರ್ಕ್ಷ್ಯ**ಶಬ್ದಾರ್ಥವಿವರಣೆ—ವಿಸ್ತಾರವಾದ ಅಂತರಿಕ್ಷಪ್ರದೇಶದಲ್ಲಿ ವಾಸಿಸುವುದರಿಂದ ಅಥವಾ ವೇಗವಾಗಿ ಸಂಚರಿಸುವುದರಿಂದ ಈ ದೇವತೆಗೆ ತಾರ್ಕ್ಷ್ಯನೆಂಬ ಹೆಸರೆಂದು ಅರಿಷ್ಟನೇಮಿಸಾರ್ಕ್ಷ್ಯ ಎಂಬ ಋಷಿಯು ಹೇಳಿರುವನು.

55. At the end of the hot months (his) birth takes place in (their) midst : therefore the seer Grtsamda (in) praising (him) calls him Child of Waters (21).

56. Because supporting (ಆ ದಧತ್) the mass of waters contained in the atmosphers for eight months, he roars (ಕ್ರಂದತಿ) frequently in (their) midst : therefore he is described as Dadhikra (22).

57. He then himself roaring deposits (ದಧಾತಿ) in the earth for a month the germ developed in the ninth month : (therefore) he is sung in the stanzas (of the Rig-Veda) as 'Dhatr' (23).

58. In the wide (ಸ್ತೀರ್ಣೇ) air he dwells (ಕ್ಷಿಯತಿ) or he swiftly (ತೂರ್ಣಂ) glides (ಕ್ಷರತಿ) : therefore the seer ಅರಿಷ್ಟನೇಮಿ Tarksya has spoken of him thus as Tarksya (24).

ರುವನ್ಪ್ರೈಮ್ನ್ನುದಯಂ ಯಾತಿ ಕೃಂತತ್ರಾದ್ವಿಸೃಜನ್ನಪಃ ।
ಪುರೂರವಸಮಾಹೈನಂ ಸ್ವವಾಕ್ಯೇನೋರುವಾಸಿನೀ ॥ ೫೯ ॥

ಯತ್ತು ಪ್ರಚ್ಯಾವಯನ್ನೇತಿ ಘೋಷೇಣ ಮಹತಾ ಮೃತಂ ।
ತೇನ ಮೃತ್ಯುಮಿಮಂ ಸಂತಂ ಸ್ತೌತಿ ಮೃತ್ಯುರಿತಿ ಸ್ವಯಂ ॥ ೬೦ ॥

ನಾಮ್ನಾ ಸಂಕುಸುಕೋ ನಾಮ ಯಮಪುತ್ರೋ ಜಘನ್ಯಜಃ ।
ಸಂವರ್ತಯಂಸ್ತಮಃ ಸೂರ್ಯಾದುಷಸಂ ಚ ಪ್ರವರ್ತಯನ್ ॥ ೬೧ ॥

ದಿವಾಕರಂ ಪ್ರಸೌತ್ಯೇಕಃ ಸವಿತಾ ತೇನ ಕರ್ಮಣಾ ।
ಉದಿತೋ ಭಾಸಯಂಲ್ಲೋಕಾನಿಮಾಂಶ್ಚೈಷ ಸ್ವರಶ್ಮಿಭಿಃ ॥

ಪುರೂರವಾಃ, ಮೃತ್ಯು, ಸೂರ್ಯನ ಹೆಸರುಗಳು

59. **ಪುರೂರವ**ಶಬ್ದವಿವರಣೆ—(**ಪುರು**-ಅಧಿಕವಾದ, **ರವ**-ಶಬ್ದ) ಬಹಳವಾಗಿ ಶಬ್ದಮಾಡುತ್ತಲೂ, ಝರಿಗಳಿಂದ ಉದಕಗಳನ್ನು ಸುರಿಸುತ್ತಲೂ ಆಕಾಶದಲ್ಲಿ ಉದಯಸನ್ನು ತಾಳುವುದರಿಂದ ಇವನ ಹೆಸರು **ಪುರೂರವಾಃ** ಎಂದು ಊರ್ವಶಿಯು ತನ್ನ ಮಾತಿನಿಂದಲೇ ಹೇಳಿರುವಳು.

60-61. **ಮೃತ್ಯು**ಶಬ್ದಾರ್ಥವಿವರಣೆ—ಉಚ್ಚಧ್ವನಿಯಿಂದ ಎಂದರೆ ಘೋರವಾದ ಶಬ್ದದಿಂದ ಧ್ವನಿಸೈ ಯ್ಯುತ್ತಾ ಮೃತರಾದವರನ್ನು ಇಲ್ಲಿಂದ ಹೊಡಿಸಿಕೊಂಡು ತನ್ನ (ಯಮ) ಲೋಕಕ್ಕೆ ಪೋಗುವವನಾದ್ದರಿಂದ **ಈ** ದೇಹವನ್ನು ಮೃತ್ಯುವೆಂಬ ಅಭಿಧಾನದಿಂದ ಯಮನ ಕನಿಷ್ಠಪುತ್ರನಾದ ಸಂಕುಸುಕ ಎಂಬ ಹೆಸರಿನ ಋಷಿಯು ಸ್ತುತಿಸಿರುವನು.

61- 62. **ಸವಿತಾ**ಶಬ್ದವಿವರಣೆ-ಅಂಧಕಾರವನ್ನು (ಕತ್ತಲೆಯನ್ನು) ಹೋಗಲಾಡಿಸುತ್ತಲೂ, ಉಷಃಕಾಲ ವನ್ನು (ಪ್ರಾತಃಕಾಲವನ್ನು) ಉಂಟುಮಾಡುತ್ತಲೂ ಇರುವ ಸೂರ್ಯನೇ ಉದಯಕಾಲದಲ್ಲಿ (ಮೇಲೆ ಹೇಳಿದ ತನ್ನ ಅಂಧಕಾರಪರಿಹಾರ, ಉಷಃಕಾಲಪ್ರವರ್ತನ ಎಂಬ ಕರ್ಮಗಳನ್ನು ನೆರವೇರಿಸುವುದರಿಂದ) ಸವಿತೃಶಬ್ದವಾಚ್ಯ ನಾಗಿರುವನು ಎಂದರೆ ಉದಯಕಾಲದಲ್ಲಿ ಸೂರ್ಯನಿಗೆ ಸವಿತೃವೆಂದು ಹೆಸರು.

ಭಗಶಬ್ದವಿವರಣೆ—ಉದಯಾನಂತರ ಸೂರ್ಯನು ತನ್ನ ರಶ್ಮಿಗಳಿಂದ ಈ ಲೋಕಗಳೆಲ್ಲವನ್ನೂ ಪ್ರಕಾಶದಿಂದ

12. Pururavas, Mrtyu, Names of the Sun : Savitr, Bhaga.

59. Roaring (ರುವನ್) in the sky he proceeds to sunrise, discharging the waters from the abyss (ಕೃಂತತ್ರಾತ್); (therefore) Urvasini (i. e. Urvasi) calls him Pururavas (25) in her own words.

60, 61. But because with great din he goes driving on the deceased (ಮೃತಂ), therefore him, as being death (ಮೃತ್ಯು), the youngest son of Yama, named Samkusuka, himself praises as ' Mrtyu ' (26).

62. Causing the darkness to disappear from the sun and the Dawn to appear. he alone propels(ಪ್ರಸೌತಿ)the day-star : by reason of that function he is Savitr (1). And he arose illuminating (ಭಾಸಯನ್) these worlds with his

ಸ್ವಯಂ ವಸಿಷ್ಠಸ್ತೇನೈನಮೃಷಿರಾಹ ಸ್ತುವನ್ಭಗಂ ॥ ೬೨ ॥

ಪುಷ್ಯನ್ ಕ್ಷಿತಿಂ ಪೋಷಯತಿ ಪ್ರಣುದನ್ರಶ್ಮಿಭಿಸ್ತಮಃ ।
ತೇನೈನಮಸ್ತೌತ್ಪೂಷೇತಿ ಭರದ್ವಾಜಸ್ತು ಪಂಚಭಿಃ ॥ ೬೩ ॥

ತ್ರೀಣಿ ಭಾಂತಿ ರಜಾಂಸ್ಯಸ್ಯ ಯತ್ಪದಾನಿ ತು ತೇಜಸಾ ।
ತೇನ ಮೇಧಾತಿಥಿಃ ಪ್ರಾಹ ವಿಷ್ಣುಮೇನಂ ತ್ರಿವಿಕ್ರಮಂ ॥ ೬೪ ॥

ಕೃತ್ವಾ ಸಾಯಂ ಪೃಥಗ್ಯಾತಿ ಭೂತೇಭ್ಯಸ್ತಮಸೋಽತ್ಯಯೇ ।
ಪ್ರಕಾಶಂ ಕಿರಣೈಃ ಕುರ್ವಂಸ್ತೇನೈನಂ ಕೇಶಿನಂ ವಿದುಃ ॥ ೬೫ ॥

ಬೆಳಗುವಂತೆ ಮಾಡುವನು. ಆದ್ದರಿಂದ ಉದಯಾನಂತರ (ಪ್ರಾತಃಕಾಲದಲ್ಲಿ) ತನ್ನ ಪ್ರಕಾಶದಿಂದ ಬೆಳಗುತ್ತಿರುವ ಸೂರ್ಯನನ್ನೇ ಭಗ ಎಂಬ ಅಭಿಧಾನದಿಂದ ವಸಿಷ್ಠಋಷಿಯೇ ಸ್ತುತಿಸಿರುವನು.

ಪೂಷಾ, ವಿಷ್ಣು, ಕೇಶಿನ್, ವಿಶ್ವಾನರ, ವೃಷಾಕಪಿ

63. **ಪೂಷಾ**ದೇವತೆಯ ವಿವರಣೆ—(ಪೂಷಾ, ಪುಷ್ಯತಿ—ಪೋಷಿಸುವವನು) ತನ್ನ ರಶ್ಮಿಗಳಿಂದ ಕತ್ತಲೆಯನ್ನು ಹೋಗಲಾಡಿಸಿ ಭೂಮಿಯನ್ನು ಪೋಷಿಸುವುದರಿಂದ ಈ ದೇವನನ್ನು (ಸೂರ್ಯನನ್ನು) ಪೂಷಾ ಎಂಬಭಿಧಾನದಿಂದ ಭರದ್ವಾಜಋಷಿಯು ಐದು ಸೂಕ್ತಗಳಲ್ಲಿ (೬ ನೇ ಮಂಡಲದ ೫೬–೫೬ ಮತ್ತು ೫೮ ನೇ ಸೂಕ್ತಗಳಲ್ಲಿ) ಸ್ತುತಿಸಿರುವನು.

64. **ವಿಷ್ಣು**ಶಬ್ದವಿವರಣೆ—ಮೂರು ಲೋಕಗಳೂ ಯಾವ ದೇವನ ಮೂರು ಪಾದವಿಕ್ಷೇಪಗಳಿಂದ ಬೆಳಗುವುವೋ ಅಂತಹ ದೇವನನ್ನು ಮೂರು ಪಾದವಿಕ್ಷೇಪಗಳುಳ್ಳ ವಿಷ್ಣುವೆಂದು ಮೇಧಾತಿಥಿ ಋಷಿಯು ಹೇಳಿರುವನು.

65. **ಕೇಶಿ**ಶಬ್ದಾರ್ಥವಿವರಣೆ—ಸಾಯಂಕಾಲದಲ್ಲಿ ಅಸ್ತಮಯವನ್ನು ಹೊಂದಿ ಕತ್ತಲೆಯು ಕಳೆಯುಹೋಗಿ ಬೆಳಕಾದನಂತರ ಕನ್ನ ಕಿರಣಗಳಿಂದ ಸಮಸ್ತ ಪ್ರಾಣಿಗಳ ಉಪಕಾರಾರ್ಥವಾಗಿ ಬೆಳಕನ್ನು ಉಂಟುಮಾಡುವವನಾದ್ದರಿಂದ ಈ ದೇವನನ್ನು (ಸೂರ್ಯ) ಕೇಶೀ ಎಂದು ಕರೆಯುವರು.

---

rays: therefoae the seer Vasistha himself (in) praising (him) calls him Bhaga (2).

13. Pusan, Visnu, Kesin, Visvanara, Vrsakapi.

63. Nourshing (ಪುಷ್ಯನ್) he causes the earth to thrive, dispelling the darkness with his rays: therefore Bharadwaja praised him as 'Pusan' (3) with five (hymns).

64. Because the three (ತ್ರೀಣಿ) regions (ರಜಾಂಸಿ) shine with brilliance as his footsteps, therefore Medhetithi pronounces him (to be) Visnu (4) of the three strides (ತ್ರಿವಿಕ್ರಮ).

65. Because after making a sojourn (ಸಾಯಂ) apart, he goes, at the departure of darkness, making light (ಪ್ರಕಾಶಂ) for beings with his beams, therefore they regard him rs (the Hairy) Kesin (5).

ಸಂಪ್ರತ್ಯೇಕೈಕಶಸ್ತ್ವೇನಂ ಯೇನ್ಮನ್ಯಂತೇ ಪೃಥಜ್ಜನಾಃ ।
ವಿಶ್ವೇ ವಿಶ್ವಾನರಸ್ತೇನ ಕರ್ಮಣಾ ಸ್ತುತಿಷು ಸ್ತುತಃ ॥ ೬೬ ॥
ವೃಷೈಷ ಕಪಿಲೋ ಭೂತ್ವಾ ಯೇನ್ನಾಕಮಧಿರೋಹತಿ ।
ವೃಷಾಕಪಿರಸೌ ತೇನ ವಿಶ್ವಸ್ಮಾದಿಂದ್ರ ಉತ್ತರಃ ॥
ರಶ್ಮಿಭಿಃ ಕಂಪಯನ್ನೇತಿ ವೃಷಾ ವರ್ಷಿಷ್ಠ ಏವ ಸಃ ॥ ೬೭ ॥
ಸಾಯೋಹ್ನಕಾಲೇ ಭೂತಾನಿ ಸ್ವಾಪಯನ್ನಸ್ತಮೇತಿ ಯತ್ ।
ವೃಷಾಕಪಿರಿತೋ ವಾ ಸ್ಯಾದಿತಿ ಮಂತ್ರೇಷು ದೃಶ್ಯತೇ ॥ ೬೮ ॥
ತ್ರಿಷು ಧನ್ವೇತಿ ಹೀಂದ್ರೇಣ ಪ್ರಯುಕ್ತೋ ವಾರಿಷಾಕಪೇ ।

66. **ವಿಶ್ವಾನರಶಬ್ದಾರ್ಥ**—ಸಮಸ್ತ ಜನರೂ ಪ್ರತ್ಯೇಕವಾಗಿ ಎಂದರೆ ಪ್ರತಿಯೊಬ್ಬರೂ ಬೇರೆಬೇರೆಯಾಗಿ ಈ ದೇವನ ಸ್ವರೂಪವನ್ನು ತಿಳಿದುಕೊಳ್ಳುವುದರಿಂದ (ಈ ಕರ್ಮದಿಂದ) ಈ ದೇವನು ವಿಶ್ವಾನರನೆಂದು ಸೂಕ್ತಗಳಲ್ಲಿ ಸ್ತುತಿಸಲ್ಪಟ್ಟಿರುವನು.

67. **ವೃಷಾಕಪಿಶಬ್ದಾರ್ಥ**—ಈ ದೇವನು ಕಪಿಲವರ್ಣದ ವೃಷಭರೂಪದಿಂದ ಸ್ವರ್ಗಲೋಕಕ್ಕೂ ಏರಿ ಹೋಗುವುದರಿಂದ ಇವನನ್ನು ವೃಷಾಕಪಿಯೆಂದು ಹೇಳುವರು. ಈ ಇಂದ್ರನೇ ಸಮಸ್ತ ಜಗತ್ತಿಗಿಂತಲೂ ಅಧಿಕನು (ಋ. ಸಂ. ೧೦ ನೇ ಮಂಡಲದ ೮೬ ನೇ ಸೂಕ್ತ). ಈ ವೃಷನೇ ತನ್ನ ರಶ್ಮಿಗಳಿಂದ ಎಲ್ಲವನ್ನೂ ಕಂಪನವಾಡುತ್ತಾ (ಅಲುಗಾಡಿಸುತ್ತಾ) ಹೋಗುವುದರಿಂದ ಇವನೇ ವರ್ಷಿಷ್ಠನೆಂದೂ ಕರೆಯಲ್ಪಡುವನು.

68. ಇದಲ್ಲದೆ ಸಾಯಂಕಾಲದಲ್ಲಿ ಸಮಸ್ತ ಪ್ರಾಣಿಗಳನ್ನೂ ಮಲಗಿ ನಿದ್ರಿಸುವಂತೆ ಮಾಡಿ ತಾನೂ ಅಸ್ತಂಗತನಾಗುವುದರಿಂದ (ಈ ಕಾರಣದಿಂದಲೂ) ಈ ದೇವನಿಗೆ ವೃಷಾಕಪಿಯೆಂಬ ಹೆಸರಿರುವುದು. **ಧನ್ವ ಚ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೧೦ ನೇ ಮಂಡಲದ ೮೬ ನೇ ಸೂಕ್ತದಲ್ಲಿ ೨೦-೨೨ ನೇ ಋಕ್ಕುಗಳಲ್ಲಿ) ಇಂದ್ರನಿಂದ ನಿಯೋಜಿತನಾಗಿರುವುದರಿಂದಲೂ ವೃಷಾಕಪಿಯೆಂಬ ಹೆಸರು ಬಂದಿರುವುದು.

69. **ವಿಷ್ಣುಶಬ್ದನಿರ್ವಚನ**—(**ವಿಶ್**–ವ್ಯಾಪಿಸು ಅಥವಾ **ವಿಶ್**–ಪ್ರವೇಶಿಸು, **ವಿನಿಶ್**–ಅಂತರ್ಗತನಾಗಿರು). ಈ ದೇವನು ಸಮಸ್ತ ಜಗತ್ತನ್ನೂ (ತನ್ನ ರಶ್ಮಿ ಅಥವಾ ಪ್ರಕಾಶದ ಮೂಲಕ) ವ್ಯಾಪಿಸುವುದರಿಂದಲೂ

66. Because all men (ವಿಶ್ವೇ ನರಾಃ) now singly (and) separately think of him, by reason of this function he is praised in laudations as Visvanara(6).

67. Because having become a brown (ಕಪಿಲ) bull (ವೃಷ) he mounts the firmament, therefore he is Vrsakapi (7), (in 'Indra is above all' (RV. x. 86): (of) this highest bull (vrsa) goes causing to waver (ಕಂಪಯನ್) with his rays:

14. Derivation of Visnu. Incidental names cannot be enumerated.

68. (i.e.) because he goes home (ಅಸ್ತಂ) at eventide causing beings to sleep, (his name) Vrsakapi may be (derived) from this: for in the three formulas beginning 'the waste' (ಧನ್ವ: RV. x. 86 20-22) in the hymn to Vrsakapi, he appears to be bidden thus (ಇತಿ) by Indra.

69. Visnu may be from (the root) vis (ವಿಷ್ಣೋತಿ) or vis (ವಿಶತಿ) (or) from

ವಿಷ್ಟಾತೇರ್ವಿಶತೇರ್ವಾ ಸ್ಯಾದ್ವೇವೇಷ್ಟೇರ್ವ್ಯಾಪ್ತಿಕರ್ಮಣಃ ॥
ವಿಷ್ಣುರ್ನಿರುಚ್ಯತೇ ಸೂರ್ಯಃ ಸರ್ವಂ ಸರ್ವಾಂತರಶ್ಚ ಯಃ ॥ ೬೯ ॥

ಪಂಚ ಷಡ್ವಿಂಶತಿಶ್ಚೈವ ಯಾನಿ ನಾಮಾನಿ ಸಪ್ತ ಚ ।
ಸಮ್ಯಗಗ್ನೀಂದ್ರಸೂರ್ಯಾಣಾಂ ತಾನ್ಯುಕ್ತಾನಿ ಯಥಾಕ್ರಮಂ ॥ ೭೦ ॥

ನೈಪಾತಿಕಾನಾಂ ನಾಮ್ನಾಂ ತು ಪ್ರಾಗುಕ್ತೈರ್ನಾಮಲಕ್ಷಣೈಃ ।
ಸಂಪನ್ನಾನಾಂ ಪೃಥಕ್ತ್ವೇನ ಪರಿಸಂಖ್ಯಾ ನ ವಿದ್ಯತೇ ॥ ೭೧ ॥

ಪಾರ್ಥಿವೀ ಮಧ್ಯಮಾ ದಿವ್ಯಾ ವಾಗಪಿ ತ್ರಿವಿಧಾ ತು ಯಾ ।
ತಸ್ಯಾಃ ಸೂಕ್ತಾನಿ ನಾಮಾನಿ ಯಥಾಸ್ಥಾನಂ ನಿಬೋಧತ ॥ ೭೨ ॥

ಅಥವಾ ಸಮಸ್ತ ವಸ್ತುಸ್ವರೂಪನಾದ್ದರಿಂದಲೂ ಅಥವಾ ಸಮಸ್ತ ವಸ್ತುಗಳಲ್ಲಿ ಅಂತರ್ಯಾಮಿಯಾಗಿ ಇರುವುದರಿಂದಲೂ ವಿಷ್ಣುವನ್ನು ಸೂರ್ಯನೆಂದು ಹೇಳುವರು ಅಥವಾ ಸೂರ್ಯನೇ ವಿಷ್ಣುಶಬ್ದವಾಚ್ಯನಾಗಿಯೂ ಇರುವನು.

70. ಅಗ್ನಿಯ ಐದು ನಾಮಗಳನ್ನೂ, ಇಂದ್ರನ ಇಪ್ಪತ್ತಾರು ನಾಮಗಳನ್ನೂ ಸೂರ್ಯನ ಏಳು ನಾಮಗಳನ್ನೂ ಕ್ರಮವಾಗಿ ಹೇಳಿದ್ದಾಯಿತು.

71. ಆದರೆ ಸಂದರ್ಭೋಚಿತವಾದ ಮತ್ತು ನಾಮಕ್ಕೆ ಅನುರೂಪವಾದ ಲಕ್ಷಣಗಳಿಂದ (ಗುಣಗಳಿಂದ) ಕೂಡಿರುವ ಪ್ರತ್ಯೇಕವಾದ ಹೆಸರುಗಳ ಪಟ್ಟಿಯು (ಸಂಖ್ಯೆಯು) ಇರುವುದಿಲ್ಲ.

ವಾಕ್ಕಿನ ಮೂರುವಿಧ ಸ್ವರೂಪ; ಪೃಥಿವೀ ಮತ್ತು ಮಧ್ಯಮಸ್ಥಾನದ ರೂಪಗಳು

72. **ವಾಕ್ಕಿನ** (ವಾಗ್ದೇವತೆಯ) ಸ್ವರೂಪವು ಪೃಥಿವೀ, ಮಧ್ಯಮ (ಅಂತರಿಕ್ಷ) ಸ್ವರ್ಗಸ್ಥಾನಗಳಲ್ಲಿರುವ ವೆಂದು ಮೂರು ವಿಧವಾಗಿರುವುದು. ಆಯಾ ಸ್ಥಾನಗಳಲ್ಲಿರುವ ವಾಕ್ಕಿನ ಸೂಕ್ತಗಳನ್ನೂ, ಹೆಸರುಗಳನ್ನೂ ಹೇಳುವೆನು, ಕೇಳಿ.

---

vevis (ವೇವಿಷ್ಟಿ) expressing pervasion ; (he) is (thus) explained as the Sun who is everything and is contained in everything.

70. The five, the twenty-six, and the seven names of Agni, Indra, and Surya (respectively), have (thus) been duly stated in succession.

71. But of the incidental names accompanied by the abovementioned nominal characteristics (ನಾಮಲಕ್ಷಣೈಃ) a separate enumeration does not exist.

15. Threefold Vac: her terrestrial and middle forms.

72. As to Speech (ವಾಕ್) also, who is threefold as terrestrial, middle, (and) celestial, listen to (an account of) her hymns (and) names according to her sphere.

ಕೃತ್ಸ್ನಂ ತು ಭಜತೇ ಸೂಕ್ತಮೇಷಾ ನದ್ಯಃ ಸ್ತುತಾ ಭುವಿ ।
ಯದಾ ಚೈನಂ ಭಜಂತ್ಯಾಪೋ ಯದಾ ಚೌಷಧಯೋ ಯದಾ ॥ ೭೩ ॥

ಆರಣ್ಯಾನೀ ಚ ರಾತ್ರೀ ಚ ಶ್ರದ್ಧಾ ಚೋಷಾಃ ಸರಸ್ವತೀ ।
ಪೃಥಿವೀ ಚೈವ ನಾಮ್ನೈಷಾ ಭೂತ್ವಾಪ್ಸ್ವರ್ಚಂ ಭಜಂತಿ ಚ ॥ ೭೪ ॥

ಅಗ್ನಾಯೀ ನಾಮತೋಽಪ್ಯೇಷಾ ಭೂತ್ವಾಗ್ನೇಯೇಷು ಕೇಷುಚಿತ್ ।
ಸ್ತುತಾ ನಿಪಾತಮಾತ್ರೇಣ ತತ್ರ ತತ್ರೇಹ ದೃಶ್ಯತೇ ॥ ೭೫ ॥

ಮಧ್ಯೇ ಸತ್ಯದಿತಿರ್ವಾಕ್ಚ ಭೂತ್ವಾ ಚೈಷಾ ಸರಸ್ವತೀ ।
ಸಮಗ್ರಂ ಭಜತೇ ಸೂಕ್ತಂ ತ್ರಿಭಿರೇವ ತು ನಾಮಭಿಃ ॥ ೭೬ ॥

ಏಷೈವ ದುರ್ಗಾ ಭೂತ್ವರ್ಚಂ ಕೃತ್ವಾ ಸ್ಯಾತ್ಸೂಕ್ತಭಾಗಿನೀ ।

73. ಭೂಮಿಯಲ್ಲಿರುವ ನದಿಗಳನ್ನೂ, ಉದಕಗಳನ್ನೂ, ಓಷಧಿಗಳನ್ನೂ ಸ್ತುತಿಸುವಾಗ ಪೂರ್ತಾ ಸೂಕ್ತವೆಲ್ಲಾ ವಾಕ್ಸ್ವರೂಪವೇ ಆಗಿರುವುದು.

74. ಮತ್ತು ಆರಣ್ಯಾನೀ, ರಾತ್ರಿ, ಶ್ರದ್ಧಾ, ಉಷಾಃ, ಪೃಥ್ವೀ, ಆಪ್ಸ ಎಂಬ ದೇವತೆಗಳು ಸ್ತುತಿಸಲ್ಪಡುವಾಗ ವಾಕ್ಕು ಆಯಾ ಋಕ್ಕುಗಳಿಗನುಸಾರವಾಗಿ ಮಾತ್ರ ಇರುವುದು.

75. ಇದಲ್ಲದೆ **ಅಗ್ನಾಯೀ** ಎಂಬ ಹೆಸರಿನಿಂದ ಸ್ತುತಿಸಲ್ಪಡುವಾಗಲೂ ಕೆಲವು ಅಗ್ನಿಸೂಕ್ತಗಳಲ್ಲಿ ಪ್ರಸ್ತಾಪಮಾತ್ರೇಣ ಸ್ತುತಳಾಗಿಯೂ ಇರುವುದು ಅಲ್ಲಲ್ಲಿ ಕಂಡುಬರುವುದು.

76. ಈ ದೇವತೆಯು ಅಂತರಿಕ್ಷಸ್ಥಳಾದ **ವಾಕ್**, **ಅದಿತಿ**, **ಸರಸ್ವತೀ** ಎಂಬ ಮೂರು ನಾಮಗಳಿಂದ ಸ್ತುತಳಾದಾಗ ಆಯಾ ಸೂಕ್ತಕ್ಕೆಲ್ಲಾ ಸಮಗ್ರ (ಪೂರ್ತಿಯಾಗಿ) ವಾಗಿ ದೇವತೆಯಾಗಿರುವಳು.

ವಾಗ್ದೇವತೆಯ ಇತರ ರೂಪಗಳು, ನಾಲ್ಕು ಸ್ವರ್ಗೀಯ ರೂಪಗಳು

77. ಈ ದೇವತೆಯು **ದುರ್ಗಾ** ಎಂಬ ಹೆಸರಿನಿಂದ ಒಂದು ಋಕ್ಕಿನಲ್ಲಿ ಮಾತ್ರ ಸ್ತುತಳಾಗಿದ್ದರೂ ಸಮಗ್ರ

73. Now she owns the entire hymn when the rivers on earth, and when the waters, (and) when the plants, being praised, in it.

74 And when she becomes Aranyani and Ratri, Sraddha, Usas, and Prthvi by name, and Apva, (all these forms of her) own the stanza,

75. Also when she becomes Agnayi by name, she appears here (in the RV.) in various passage (ತತ್ರ ತತ್ರ) praised only incidentally in some (hymns) addressed to Agni.

76, When she, being Vac in the middle (sphere), has become Aditi and Sarasvathi, she owns the complete hymn under (these) three names only.

16. Other middle forms of Vac. Her four celestial forms.

77. She on becoming Durgi (and) uttering a stanza may own a

ತನ್ನಾಮಾನಿ ಯಮಿರಿಂದ್ರಾಣೀ ಸರಮಾ ರೋಮಶೋರ್ವಶೀ ॥
ಭವತ್ಯಗ್ರ್ಯಾ ಸಿನೀವಾಲೀ ರಾಕಾ ಚಾನುಮತಿಃ ಕುಹೂಃ ॥ ೭೭ ॥

ಗೌರ್ಧೇನುರ್ದೇವಪತ್ನ್ಯೋಽಘ್ನ್ಯಾ ಪಥ್ಯಾ ಸ್ವಸ್ತಿಶ್ಚ ರೋದಸೀ ।
ನೈಪಾತಿಕಾನಿ ಋಗ್ಭಾಂಜಿ ಯೇಷಾಂ ನಾಮಾನಿ ಕಾನಿಚಿತ್ ॥ ೭೮ ॥

ಯದಾ ತು ವಾಗ್ಭವತ್ಯೇಷಾ ಸೂರ್ಯಾಮುಂ ಲೋಕಮಾಶ್ರಿತಾ ।
ತಥಾ ಸೂಕ್ತಮುಷಾ ಭೂತ್ವಾ ಸೂರ್ಯಾ ಚ ಭಜತೇಽಖಿಲಂ ॥ ೭೯ ॥

ವೃಷಾಕಪಾಯ್ಯೃಚಂ ಭೂತ್ವಾ ಸರಣ್ಯೂರ್ದ್ಯೌಶ್ಚ ತೇ ಧ್ರುವಂ ।
ನಿಪಾತಮಾತ್ರಂ ಭಜತೇ ದ್ಯುವಚ್ಚ ಪೃಥಿವೀ ಸತೀ ॥ ೮೦ ॥

ಸೂಕ್ತಕ್ಕೆ ಅನಳೀ ದೇವತೆಯಾಗಿರುವಳೆಂದು ತಿಳಿಯಬೇಕು ಈ ದೇವತೆಯ ಇತರ ಹೆಸರುಗಳು ಯಾವವೆಂದರೆ— ಯಮಿ, ಇಂದ್ರಾಣೀ, ಸರಮಾ, ರೋಮಶಾ, ಉರ್ವಶೀ, ಸಿನೀವಾಲೀ, ರಾಕಾ, ಅನುಮತಿ ಕುಹೂಃ,

78. ಅನಂತರ ಗೌಃ, ಧೇನು, ದೇವಪತ್ನಿಯರು, ಅಘ್ನ್ಯಾ, ಪಥ್ಯಾ, ಸ್ವಸ್ತಿ, ರೋದಸೀ. ಕೆಲವು ಋಕ್ಕುಗಳಲ್ಲಿ ಕಾರಣಾಂತರದಿಂದ ಇತರ ದೇವತೆಗಳ ಪ್ರಸ್ತಾಪವಿದ್ದರೂ ಅದು ಆ ಋಕ್ಕುಗಳಿಗೆ ಮಾತ್ರ ಸಂಬಂಧಪಟ್ಟಿದ್ದೆಂದು ತಿಳಿಯಬೇಕು.

79. ಈ ವಾಗ್ದೇವತೆಯು ಸೂರ್ಯಾದೇವಿಯೆಂದು ಸ್ತುತಳಾದಃಗ ಈ ದೇವತೆಯು ಸ್ವರ್ಗೀಯಸ್ಥಾನ ದೇವತೆಯೆಂದು ಪರಿಗಣಿಸಲ್ಪಡುವಳು. ಮತ್ತು ಸೂರ್ಯಾ, ಉಷಾಃ ಎಂಬ ರೂಪಗಳಿಂದ ಸ್ತುತಳಾದಾಗ ಪೂರ್ತಾ ಸೂಕ್ತಕ್ಕೆ ದೇವತೆಯಾಗಿರುವಳು.

80. ಮತ್ತು ಈ ದೇವತೆಯು ವೃಷಾಕಪಾಯಿ, ಮತ್ತು ಸರಣ್ಯೂಃ ಎಂಬ ಹೆಸರುಗಳಿಂದ ಸ್ತುತಳಾದಾಗ ಒಂದೊಂದು ಋಕ್ಕು ಮಾತ್ರ ಈ ದೇವತೆಯ ಪರವಾಗಿರುವುದು. ದ್ಯೌಃ ಮತ್ತು ಪೃಥಿವೀ ನಾಮಗಳಿಂದ ಕೆಲವುಕಡೆ ಪ್ರಸ್ತಾಪತ್ವೇನ ಸ್ತುತಳಾದಾಗಲೂ ಆಯಾ ಋಕ್ಕಿಗೆ ಮಾತ್ರ ದೇವತೆಯೆಂದು ಭಾವಿಸಬೇಕು.

(whole hymn). Her (other) names are Yami, Indrani, Sarama, Romasa, Urvasi; she first becomes Sinivali and Raka, Anumati, Kuhu.

78. Then Cow, Dhenu, the Wives of the Gods, Aghnya, Pathya, and Svasti, Rodasi. (Now) whatever names of any (gods) are incidental, own the stanza (only).

79. But when this Vac becomes Surya, she belongs to that (celestial) world: thus on beeoming Usas as well as Surya, she owns the entire hymn.

80. And when she bscomes Vrsakapay (and) Saranayu, these two undoubtedly (own) a stanza. And when she is earth corresponding to Heaven (ದ್ಯುವತ್), she owns (a stanza) incidentally.

ಸೂರ್ಯಾಮೇವ ಸತೀಮೇತಾಂ ಗೌರೀಂ ವಾಚಂ ಸರಸ್ವತೀಂ ।
ಪಶ್ಯಾನೋ ವೈಶ್ವದೇವೇಷು ನಿಷಾತೇನೈವ ಕೇವಲಾಃ ॥ ೮೧ ॥

ಘೋಷಾ ಗೋಧಾ ವಿಶ್ವವಾರಾ ಅಪಾಲೋಪನಿಷನ್ನಿಷತ್ ।
ಬ್ರಹ್ಮಜಾಯಾ ಜುಹೂರ್ನಾಮ ಅಗಸ್ತ್ಯಸ್ಯ ಸ್ವಸಾದಿತಿಃ ॥ ೮೨ ॥

ಇಂದ್ರಾಣೀ ಚೇಂದ್ರಮಾತಾ ಚ ಸರಮಾ ರೋಮಶೋರ್ವಶೀ ।
ಲೋಪಾಮುದ್ರಾ ಚ ನದ್ಯಶ್ಚ ಯಮೀ ನಾರೀ ಚ ಶಾಶ್ವತೀ ॥ ೮೩ ॥

ಶ್ರೀರ್ಲಾಕ್ಷಾ ಸಾರ್ಪರಾಜ್ಞೀ ವಾಕ್ ಶ್ರದ್ಧಾ ಮೇಧಾ ಚ ದಕ್ಷಿಣಾ ।
ರಾತ್ರೀ ಸೂರ್ಯಾ ಚ ಸಾವಿತ್ರೀ ಬ್ರಹ್ಮವಾದಿನ್ಯ ಈರಿತಾಃ ॥ ೮೪ ॥

81. ವಿಶ್ವೇದೇವತೆಗಳನ್ನು ಸ್ತುತಿಸುವ ಸೂಕ್ತಗಳಲ್ಲಿ ಈ ವಾಗ್ದೇವತೆಯು ಸೂರ್ಯಾ, ಗೌರೀ, ಸರಸ್ವತೀ ಎಂಬ ಹೆಸರುಗಳಿಂದ ಸ್ತುತಳಾಗಿದ್ದರೂ ಅವೆಲ್ಲವೂ ಆ ಸೂಕ್ತಗಳಲ್ಲಿ ಪ್ರಸಙ್ಗಪತ್ತೀನ ಸ್ತುತರಾಗಿವೆಯೆಂದು ತಿಳಿಯಬೇಕು.

ಋಷಿಕಾ ಅಥವಾ ಮಂತ್ರದ್ರಷ್ಟೃಗಳಾದ ಸ್ತ್ರೀಯರು (ಸ್ತ್ರೀಋಷಿಗಳು); ಇವರಲ್ಲಿ ಮೂರು ಪಂಗಡಗಳು

82. ಮೊದಲನೆಯ ಗುಂಪಿನಲ್ಲಿ—ಘೋಷಾ, ಗೋಧಾ, ವಿಶ್ವವಾರಾ, ಅಪಾಲಾ, ಉಪನಿಷತ್, ನಿಷತ್, ಜುಹೂ ಎಂಬ ಹೆಸರಿನ ಬ್ರಹ್ಮಜಾಯಾ, ಅಗಸ್ತ್ಯಋಷಿಯ ಸಹೋದರಿ ಮತ್ತು ಅದಿತಿ ಎಂಬ (ಒಂಭತ್ತು ಮುಂದಿ) ಸ್ತ್ರೀಯರಿರುವರು.

83. ಎರಡನೇ ಗುಂಪಿನಲ್ಲಿ—ಇಂದ್ರಾಣೀ, (ಇಂದ್ರನ ಪತ್ನಿ) ಇಂದ್ರಮಾತಾ (ಇಂದ್ರನ ತಾಯಿಯು), ಸರಮಾ, ರೋಮಶಾ, ಉರ್ವಶೀ, ಲೋಪಾಮುದ್ರಾ, ನದಿಗಳು, ಯಮಿ, ಶಾಶ್ವತೀ ಎಂಬ ಒಂಭತ್ತು ಮಂದಿ ಇರುವರು.

84. ಮೂರನೆಯ ಗುಂಪಿನಲ್ಲಿ—ಶ್ರೀಃ, ಲಾಕ್ಷಾ, ಸಾರ್ಪರಾಜ್ಞೀ, ವಾಕ್, ಶ್ರದ್ಧಾ, ಮೇಧಾ, ದಕ್ಷಿಣಾ, ರಾತ್ರೀ, ಸೂರ್ಯಾ ಸಾವಿತ್ರೀ ಎಂಬ ಒಂಭತ್ತು ಮಂದಿಯು ಬ್ರಹ್ಮವಾದಿನಿಯರೆಂದು ಪ್ರಸಿದ್ಧರಾಗಿರುವರು.

81. We see that when this Vac is Surya, Gauri, Sarasvati, they (are) in the hymns to the All-gods (praised) incidentally only.

17. Names of female seers : three groups.

82. Ghosa, Godha, Visvavara, Apala, Upanishad, Nisad, Brahmhjaya (who is) named Juhu, the sister of Agastya, Aditi,

83. and Indrani, and the mother of Indra, Sarama, Romasa, Urvasi, and Lopamudra, and The Rivers, (and) Yami, and the wife Sasvati.

84. Sri, Laksa, Sarparajni, Vac, Sraddha, Medha, Dakshina, Ratri, and Surya Savitri, (all these) are pronounced to be female seers (ಬ್ರಹ್ಮವಾದಿನ್ಯಃ).

ನವಕಃ ಪ್ರಥಮಸ್ತ್ವಾಸಾಂ ವರ್ಗಸ್ತುಷ್ಟಾವ ದೇವತಾಃ ।
ಋಷಿಭಿರ್ದೇವತಾಭಿಶ್ಚ ಸಮೂಢೇ ಮಧ್ಯಮೋ ಗಣಃ ॥ ೮೫ ॥

ಆತ್ಮನೋ ಭಾವವೃತ್ತಾನಿ ಜಗೌ ವರ್ಗಸ್ತಥೋತ್ತಮಃ ।
ಉತ್ತಮಸ್ಯ ತು ವರ್ಗಸ್ಯ ಯ ಋಷಿಃ ಸೈವ ದೇವತಾ ॥ ೮೬ ॥

ಆತ್ಮಾನಮಸ್ತೌದ್ವರ್ಗಸ್ತು ದೇವತಾಂ ಯಸ್ತಥೋತ್ತಮಃ ।
ತಸ್ಮಾದಾತ್ಮಸ್ತವೇಷು ಸ್ಯಾದ್ಯ ಋಷಿಃ ಸೈವ ದೇವತಾ ॥ ೮೭ ॥

ಸಂವಾದೇಷ್ವಾಹ ವಾಕ್ಯಂ ಯಃ ಸ ತು ತಸ್ಮಿನ್ಭವೇದೃಷಿಃ ।
ಯಸ್ತೇನೋಚ್ಯೇತ ವಾಕ್ಯೇನ ದೇವತಾ ತತ್ರ ಸಾ ಭವೇತ್ ॥ ೮೮ ॥

85. ಇವರಲ್ಲಿ ಮೊದಲನೆಯ ಗುಂಪಿನಲ್ಲಿರುವ ಒಂಭತ್ತು ಮಂದಿ ದೇವತೆಗಳನ್ನು ಸ್ತೋತ್ರ (ಮಾತ್ರ) ಮಾಡಿರುವರು. ಮಧ್ಯಮ ಎಂದರೆ ಎರಡನೇ ವರ್ಗದ ಒಂಭತ್ತು ಮಂದಿ ಋಷಿಗಳೊಡನೆಯೂ, ದೇವತೆಗಳೊಡನೆಯೂ ಸಂಭಾಷಣೆಮಾಡಿರುವರು (ಮಾತನಾಡಿರುವರು).

86. ಕೊನೆಯ ವರ್ಗದ ಒಂಭತ್ತು ಮಂದಿ ಭಾವವೃತ್ತದೇವತೆಗಳನ್ನು ಸ್ತುತಿಸಿರುವರು. ಎಂದರೆ ಆಯಾ ಸೂಕ್ತಕ್ಕೆ ಋಷಿಯೂ, ದೇವತೆಯೂ ಒಂದೇ ಆಗಿರುವುದು. ತಮ್ಮನ್ನೇ ಪ್ರಶಂಸೆಮಾಡಿರುವರೆಂದಭಿಪ್ರಾಯವು.

ಸ್ವಪ್ರಶಂಸೆಮಾಡಿರುವ ದೇವತೆಗಳು, ಸಂವಾದಗಳು, ನಿಪಾತಗಳು

87. ಕೊನೆಯ ವರ್ಗದ ಯಷಿಗಳಲ್ಲಿ ಪ್ರತಿಯೊಬ್ಬರೂ ತಮ್ಮನ್ನೇ ದೇವತೆಯೆಂದು ಭಾವಿಸಿ ಪ್ರಶಂಸೆ ಮಾಡಿಕೊಂಡಿರುವರು. ಆದ್ದರಿಂದ ಈ ಸೂಕ್ತಗಳಿಗೆ ಯಾರು ಋಷಿಗಳೋ ಅವರೇ ಆ ಸೂಕ್ತಗಳಿಗೆ ದೇವತೆಗಳೂ ಆಗಿರುವರು.

88. ಇದೇರೀತಿ ಸಂಭಾಷಣೆ ಅಥವಾ ಸಂವಾದರೂಪವಾದ ಮಂತ್ರಗಳಲ್ಲಿಯೂ ಯಾರು ವಾಕ್ಯವನ್ನು ಹೇಳುವರೋ (ಮಾತನಾಡುವರೋ) ಅವರೇ ಆ ಮಂತ್ರಕ್ಕೆ ಋಷಿಯು; ಮಂತ್ರದಲ್ಲಿ ಯಾರ (ಅಥವಾ ಯಾವ) ವಿಷಯವು ಹೇಳಲ್ಪಟ್ಟಿರುವುದೋ ಅವರೇ ಅಥವಾ ಆದೇ ವಿಷಯವೇ ಆ ಮಂತ್ರಕ್ಕೆ ದೇವತೆಯೆಂದು ಹೇಳಲ್ಪಡುವುದು.

85. The first group of these, consisting of nine, praised the deities; the middle series conversed with seers and deities.

86. The last group sang of the evolutionary forms (ಭಾವವೃತ್ತಂ) of Self. Whoever is the seer (of a hymn by one) of the last group is also the deity.

18. Deity in self-laudations and colloquies, particles.

87. Now (each seer of) the last group thus praise herself as the deity: therefore whoever may be the seer in self-laudations is at the same time the deity.

88. He who utters the speech in colloquies should be (regarded as) the seer in it; whoever may be addressed by that speeeh should be (regarded) as the deity therein.

ಉಜ್ಜಾವಚೇಷು ಚಾರ್ಥೇಷು ನಿಪಾತಾಃ ಸಮುದಾಹೃತಾಃ ।
ಕರ್ಮೋಪಸಂಗ್ರಹಾರ್ಥೇ ಚ ಕ್ವಚಿಚ್ಚೋಪಮ್ಯ ಕಾರಣಾತ್ ॥ ೮೯ ॥

ಊನಾನಾಂ ಪೂರಣಾರ್ಥಾ ವಾ ಪಾದಾನಾಮಪರೇ ಕ್ವಚಿತ್ ।
ಯಿತಾಕ್ಷರೇಷು ಗ್ರಂಥೇಷು ಪೂರಣಾರ್ಥಾಸ್ತ್ವನರ್ಥಕಾಃ ॥ ೯೦ ॥

ಕಮಿಮಾವಿದ್ವಿತಿ ವಿಜ್ಞೇಯಾ ಯೇ ತ್ವನೇಕಾರ್ಥಕಾಶ್ಚ ತೇ ।
ಇವ ನ ಚಿನ್ನು ಚತ್ವಾರ ಉಪಮಾರ್ಥಾ ಭವಂತಿ ತೇ ॥ ೯೧ ॥

ಉಪಮಾರ್ಥೇ ನಕಾರಸ್ತು ಕ್ವಚಿದೇವ ನಿಪಾತ್ಯತೇ ।

89. ನಿಪಾತಗಳು ಅನೇಕಾರ್ಥಗಳಲ್ಲಿ ಉಪಯೋಗಿಸಲ್ಪಡುವವು. ಕರ್ಮಗಳಲ್ಲಿ ಪರಸ್ಪರ ಸಂಬಂಧವನ್ನು ತೋರಿಸುವುದಕ್ಕಾಗಿಯೂ, ಕೆಲವುಕಡೆ ಉಪಮಾನ (ಹೋಲಿಕೆ) ಯನ್ನು ತಿಳಿಸುವುದಕ್ಕಾಗಿಯೂ, ಈ ನಿಪಾತಗಳ ಪ್ರಯೋಗವಿರುವುದು.

90. ಮತ್ತೆ ಕೆಲವು ಸಂದರ್ಭಗಳಲ್ಲಿ ಈ ನಿಪಾತಗಳು ಪಾದಪೂರಣಕ್ಕಾಗಿ ಎಂದರೆ ಛಂದಸ್ಸುಗಳಲ್ಲಿರಬೇಕಾದ ಕ್ಲೃಪ್ತಸಂಖ್ಯೆಯ ಅಕ್ಷರಗಳಿಲ್ಲದೆ ಕಮ್ಮಿಯಾಗಿದ್ದಲ್ಲಿ ಅವುಗಳನ್ನು ಪೂರಣಮಾಡುವುದಕ್ಕಾಗಿ ಉಪಯೋಗಿಸಲ್ಪಡುವವು. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ಯಿತಾಕ್ಷರ ಎಂದರೆ ಛಂದೋಬದ್ಧವಾದ ಗ್ರಂಥಗಳಲ್ಲಿ (ಎಂದರೆ ಋಕ್ಕುಗಳಲ್ಲಿ) ಪೂರಣಾರ್ಥವಾಗಿ ಉಪಯೋಗಿಸಲ್ಪಟ್ಟಿರುವ ಈ ನಿಪಾತಗಳಿಗೆ ಯಾವ ನಿರ್ದಿಷ್ಟಾರ್ಥವೂ ಇರುವುದಿಲ್ಲ.

91. ಆ ನಿಪಾತಗಳಲ್ಲಿ ಕೆಲವು **ಕಂ ಈಂ ಇತ್ ಊ** ಎಂಬ ನಿಪಾತಗಳು ಪೂರಣಾರ್ಥವಾಗಿ ಉಪಯೋಗಿಸಲ್ಪಡುವಾದರೂ ಕೆಲವು ಸಂದರ್ಭಗಳಿಗೆ ಅವುಗಳಿಗೆ ಒಂದುನಿಶ್ಚವಾದ ಎಂದರೆ ಬೇರೆಬೇರೆ ಅರ್ಥವೂ ಇರುವುದು. **ಇವ, ನ, ಚಿತ್, ನು,** ಎಂಬ ನಾಲ್ಕು ನಿಪಾತಗಳಿಗೆ ಉಪಮಾರ್ಥವಿರುವುದು.

92. **ನ** ಎಂಬ ನಿಪಾತವು ಛಂದೋಬದ್ಧಗ್ರಂಥಗಳಲ್ಲಿ (ಋಕ್ಕುಗಳಲ್ಲಿ) ಕೆಲವು ಸಂದರ್ಭಗಳಲ್ಲಿ ಮಾತ್ರ ಉಪಮಾರ್ಥದಲ್ಲಿ ಉಪಯೋಗಿಸಲ್ಪಡುವುದು. ಅನೇಕವೇಳೆ ನಿಷೇಧಾರ್ಥದಲ್ಲಿಯೂ ಇವರ ಪ್ರಯೋಗವಿರುವುದು.

---

89. Particles are enumerated in various sensess--both for the purpose of connecting actions, and occasionally for the sake of comparison.

90, Others again (are) occasionally (used) for the purpose of filling up defective verses (पाद). Those (particles) which in metrical books have the purpose of filling up (the verse) are meaningless.

91. They are to be recognised as kam, im, id, u, But (there are) also such (particles) as have various senses. ಇನ ನ ಚಿತ್ ನು—these are the four having the sense of comparison.

19. Particles (continued). Prepositions. Genders.

92. Now ನ is, in material books, only occasionally used as a

ಮಿತಾಕ್ಷರೇಷು ಗ್ರಂಥೇಷು ಪ್ರತಿಷೇಧೇ ತ್ವನಲ್ಪಶಃ ॥ ೯೨ ॥
ಇಯಂತ ಇತಿ ಸಂಖ್ಯಾನಂ ನಿಪಾತಾನಾಂ ನ ವಿದ್ಯತೇ ।
ವಶಾತ್ಪ್ರಕರಣಸ್ಯೈತೇ ನಿಪಾತ್ಯಂತೇ ಪದೇ ಪದೇ ॥ ೯೩ ॥
ಉಪಸರ್ಗಾಸ್ತು ವಿಜ್ಞೇಯಾಃ ಕ್ರಿಯಾಯೋಗೇನ ವಿಂಶತಿಃ ।
ವಿವೇಚಯಂತಿ ತೇ ಹ್ಯರ್ಥಂ ನಾಮಾಖ್ಯಾತವಿಭಕ್ತಿಷು ॥ ೯೪ ॥
ಅಚ್ಛ ಶ್ರದಂತರಿತ್ಯೇತಾನಾಚಾರ್ಯಃ ಶಾಕಟಾಯನಃ ।
ಉಪಸರ್ಗಾನ್ ಕ್ರಿಯಾಯೋಗಾನ್ಮೇನೇ ತೇ ತು ತ್ರಯೋಽಧಿಕಾಃ ॥ ೯೫ ॥
ಶ್ರಿಯ್ಯೇವ ಲೋಕೇ ಲಿಂಗಾನಿ ಪುಮಾನ್ ಸ್ತ್ರೀ ಚ ನಪುಂಸಕಂ ।
ನಾಮಸೂಕ್ತಪ್ರಯೋಗೇಷು ವಾಚ್ಯಂ ಪ್ರಕರಣಂ ತಥಾ ॥ ೯೬ ॥

93. ಈ ನಿಪಾತಗಳ ಸಂಖ್ಯೆಯು ಇಷ್ಟೇ ಎಂದು ಪರಿಗಣಿಸಲು ಸಾಧ್ಯವಿಲ್ಲ. ಬೇಕಾದಷ್ಟಿವೆ. ಆಯಾ ಸಂದರ್ಭಾನುಸಾರವಾಗಿ ಅನೇಕವೇಳೆ ಅವುಗಳ ಪ್ರಯೋಗವಿರುವುದು.

ಉಪಸರ್ಗಗಳು ಮತ್ತು ಲಿಂಗಗಳು

94. ಕ್ರಿಯಾಪದಗಳಿಗೆ ಸಂಬಂಧಿಸಿರುವಂತೆ ಇಪ್ಪತ್ತು ಉಪಸರ್ಗಗಳಿರುವವು. ಅವುಗಳು ನಾಮಪದಗಳ ಮತ್ತು ಕ್ರಿಯಾಪದಗಳ ಅರ್ಥಗಳನ್ನು ವಚನವಿಭಕ್ತಿಗಳಿಗನುಸಾರವಾಗಿ ವ್ಯತ್ಯಸ್ತವಾಗಿರುವುದನ್ನು ವಿಶದಪಡಿಸುವವು.

95. **ಅಚ್ಛ, ಶ್ರತ್, ಅಂತಃ** ಎಂಬ ಮೂರು ಶಬ್ದಗಳನ್ನು ನಿಪಾತಗಳೆಂದು ಶಾಕಟಾಯನ ಎಂಬ ಆಚಾರ್ಯರು ತಿಳಿಸಿರುವರು. ಕ್ರಿಯಾಪದಗಳ ಅಥವಾ ಕ್ರಿಯೆಗಳ ಅರ್ಥವನ್ನು ತಿಳಿಸುವ ಸಂದರ್ಭದಲ್ಲಿ ಈ ಮೂರು ಶಬ್ದಗಳೂ ಆ ಇಪ್ಪತ್ತು ಉಪಸರ್ಗಗಳ ಜತೆಗೆ ಸೇರಿ ಇಪ್ಪತ್ತ್ಮೂರು ಉಪಸರ್ಗಗಳಾಗಿರುವನೆಂದು ಆ ಆಚಾರ್ಯರ ಮತವು.

96. ಲೋಕವ್ಯವಹಾರದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗವೆಂಬ ಮೂರು ಲಿಂಗಗಳು ಮಾತ್ರ ಬಳಕೆಯಲ್ಲಿರುವವು. ನಾಮಪದಗಳ ಮತ್ತು ಸೂಕ್ತದಲ್ಲಿ ಉಕ್ತವಾಗಿರುವ ಪ್ರಕರಣಗಳ ವಿಷಯದಲ್ಲಿ ಈ ಲಿಂಗಗಳ ಉಪಯೋಗವನ್ನು ಗಮನಿಸಬೇಕು.

---

particle (ನಿಪಾತ್ಯತೇ) in the sense of comparison, but frequently in (the sense of) negation.

93. There does not exist an enumeration of the particles (starting explicitly) 'there are so many'. These particles are used (ನಿಪಾತ್ಯಂತೇ) at every turn (ಪದೇ ಪದೇ) on account of the subjeet-matter (ಪ್ರಕರಣ).

94. The twenty prepositions (ಉಪಸರ್ಗಾಃ) are to be recognised by reason of their connexion with (verbal) action; for they differentiate the meaning in the inflexion of noun and verb.

95. Acha, srad, antar—these the teacher Sakatayana considered prepositions because of their connexian with action; they are three more.

96. There are just three genders in popular usage (ಲೋಕೇ)—masculine, feminine, neuter. In (regard to) nouns, the employment of which has been stated, the subject-matter must be stated in this way.

ತೇಷಾಂ ತು ನಾಮಭಿರ್ಲಿಂಗೈರ್ಗ್ರಹಣಂ ಸರ್ವನಾಮಭಿಃ ।
ಕೃತಾಕೃತಸ್ಯ ಸದೃಶೋ ಗೃಹೀತಸ್ಯ ಪುನರ್ಗ್ರಹಃ ॥ ೯೭ ॥

ಪಾದಸೂಕ್ತ್ಯೃಗರ್ಧರ್ಚನಾಮಾನ್ಯನ್ಯಾನಿ ಯಾನಿ ಚ ।
ಸರ್ವೇ ನಾಮಾನಿ ಚೈವಾಹುರನ್ಯೇ ಚೈವಂ ಯಥಾ ಕಥಾ ॥ ೯೮ ॥

ಪ್ರಧಾನಮರ್ಥಃ ಶಬ್ದೋ ಹಿ ತದ್ಗುಣಾಯತ್ತ ಇಷ್ಯತೇ ।
ತಸ್ಮಾನ್ನಾನಾನ್ವಯೋಪಾಯೈಃ ಶಬ್ದಾನರ್ಥವಶಂ ನಯೇತ್ ॥ ೯೯ ॥

ನಾಮಪದಗಳು, ಸರ್ವನಾಮಗಳು, ಅರ್ಥ, ವಾಕ್ಯರಚನೆ

97. ವಸ್ತುಗಳ ಅಥವಾ ಪ್ರಾಣಿಗಳ ಹೆಸರುಗಳು ನಾಮಪದಗಳಿಂದ ಮಾತ್ರವಲ್ಲದೆ ಬೇರೆ ಬೇರೆ ಲಿಂಗಗಳಿಂದಲೂ ನಿರ್ದೇಶಿಸಲ್ಪಡುವವು. ಸರ್ವನಾಮಗಳ ವಿಷಯದಲ್ಲಿಯೂ ಇದೇ ನಿಯಮವಿರುವುದು. ಒಂದಾವರ್ತಿ ನಿರ್ದೇಶಿಸಿದ ವಸ್ತುವನ್ನು ಪುನಃ ಹೇಳುವಾಗ ಸರ್ವನಾಮದ ಪ್ರಯೋಗವಿರುವುದು. ಮತ್ತು ಆ ಪ್ರಯೋಗವು ಕರ್ಮಾಕರ್ಮಗಳಿಗೆ ಅನುಸಾರವಾಗಿರುವುದು.

98. ಸೂಕ್ತ, ಋಕ್, ಅರ್ಧಋಕ್, ಪಾದ ಮೊದಲಾದವುಗಳಲ್ಲಿ ಯಾವ ಯಾವ ಹೆಸರುಗಳಿರುವವೋ ಅವೆಲ್ಲವೂ ನಾಮಪದಗಳೆಂದು ಎಲ್ಲರೂ ಹೇಳುವರು. ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಮತ್ತೆ ಕೆಲವರು ಹೆಸರುಗಳಲ್ಲದ ಇತರ ಕೆಲವು ಶಬ್ದಗಳನ್ನು ಸಂದರ್ಭಾನುಸಾರವಾಗಿ ನಾಮಪದಗಳ ಗುಂಪಿಗೆ ಸೇರಿಸುವರು.

99. ಒಂದು ಶಬ್ದದ ಮುಖ್ಯವಾದ ಅರ್ಥವು ಆ ವಸ್ತುವಿನ ಗುಣವನ್ನನುಸರಿಸಿರುವುದು. ಆದ್ದರಿಂದ ಒಂದು ಶಬ್ದದ ಅರ್ಥವನ್ನು ಹೇಳುವಾಗ ಆ ಶಬ್ದಕ್ಕೆ ನಾನಾವಿಧವಾದ (ರೂಪಸಿದ್ಧಿ ಮೊದಲಾದ) ಉಪಾಯಗಳಿಂದ ಅರ್ಥವನ್ನು ಹೊಂದಿಸಬೇಕು.

20. Nouns, Pronouns, Sense, Rules for construing.

97. Now these (names) are mentioned (not only) by means of nouns, (but also) by means of genders; by means of pronouns repeated mention (is made) of (a noun already) mentioned, similar to (the repeated mention of) a positive or negative act (ಕೃತಾಕೃತಸ್ಯ).

98. All (authorities) say that the names (occuring) in verses, hymns, stanzas, hemistichs, and any others (there may be), (are) nouns; some (call them) so according to circumstances (ಯಥಾ ಕಥಾ).

99. The sense is the chief thing; for a term (ಶಬ್ದ) is required (to be) dependent on the qualities (ಗುಣ) of it (the sense); therefore one should bring terms under subjection to the sense by the various expedients of construing.

ಅತಿರಿಕ್ತಂ ಪದಂ ತ್ಯಾಜ್ಯಂ ಹೀನಂ ವಾಕ್ಯೇ ನಿವೇಶಯೇತ್ ।
ವಿಪ್ರಕೃಷ್ಟಂ ಚ ಸಂದಧ್ಯಾದಾನುಪೂರ್ವ್ಯಂ ಚ ಕಲ್ಪಯೇತ್ ॥ ೧೦೦ ॥
ಲಿಂಗಂ ಧಾತುಂ ವಿಭಕ್ತಿಂ ಚ ಸಂನಮೇತ್ತತ್ರ ತತ್ರ ಚ ।
ಯದ್ಯಸ್ಯಾಚ್ಛಾಂದಸಂ ಮಂತ್ರೇ ತತ್ತತ್ಕುರ್ಯಾತ್ತು ಲೌಕಿಕಂ ॥ ೧೦೧ ॥
ಯಾವತಾಮೇವ ಧಾತೂನಾಂ ಲಿಂಗಂ ರೂಢಿಗತಂ ಭವೇತ್ ।
ಅರ್ಥಶ್ಚಾಪ್ಯಭಿಧೇಯಃ ಸ್ಯಾತ್ತಾವದ್ಭಿರ್ಗುಣವಿಗ್ರಹಃ ॥ ೧೦೨ ॥

100. ಒಂದು ವಾಕ್ಯದಲ್ಲಿ ಅಸಂಬದ್ಧವಾದ (ಸಂದರ್ಭೋಚಿತವಲ್ಲದ, ಸರಿಯಾದ ಅರ್ಥವಿಲ್ಲದಿರುವ) ಶಬ್ದವನ್ನು ತ್ಯಜಿಸಬೇಕು ಎಂದರೆ ಆಶಬ್ದಕ್ಕೆ ಯಾವ ಅರ್ಥವನ್ನೂ ಹೇಳಬಾರದು. ಒಂದು ಅವಶ್ಯಕವಾದ ಶಬ್ದವು ವಾಕ್ಯದಲ್ಲಿಲ್ಲದಿದ್ದರೆ, ವಾಕ್ಯದ ಅರ್ಥವನ್ನು ಹೊಂದಿಸುವುದಕ್ಕಾಗಿ ಆ ಶಬ್ದವನ್ನು ಅಧ್ಯಾಹಾರಮಾಡಿಕೊಳ್ಳಬೇಕು ಮತ್ತು ಒಂದು ವಾಕ್ಯದಲ್ಲಿ ಸಂಬಂಧಪಟ್ಟ ಶಬ್ದಗಳು ಜತೆಯಲ್ಲಿರದೆ ದೂರದೂರದಲ್ಲಿದ್ದರೆ, ಆ ಶಬ್ದಗಳನ್ನು ಒಂದೆಡೆ ತಂದು ಸೇರಿಸಿ ಅನ್ವಯವನ್ನು ಹೊಂದುವಂತೆ ಮಾಡಿ ಅರ್ಥಮಾಡಬೇಕು.

101. ಅರ್ಥವು ಸರಿಯಾಗಿ ಹೊಂದುವುದಕ್ಕಾಗಿ ಮಂತ್ರದಲ್ಲಿರುವ ಲಿಂಗ, ಧಾತು, ವಿಭಕ್ತಿ ಮೊದಲಾದವುಗಳನ್ನು ಅಲ್ಲಲ್ಲಿ ಸರಿಪಡಿಸಿ ಅನ್ವಯಮಾಡಬೇಕು. (ಹೇಗೆಂದರೆ, ಮಂತ್ರಗಳಲ್ಲಿ ಪುಲ್ಲಿಂಗಕ್ಕೆ ಬದಲಾಗಿ ಸ್ತ್ರೀಲಿಂಗ ಪ್ರಯೋಗವಿರಬಹುದು; ಏಕವಚನಕ್ಕೆ ಬದಲಾಗಿ ದ್ವಿವಚನ ಅಥವಾ ಬಹುವಚನವಿರಬಹುದು; ಒಂದು ವಿಭಕ್ತಿಗೆ ಬದಲಾಗಿ ಬೇರೊಂದು ವಿಭಕ್ತಿ ಇರಬಹುದು. ಆದ್ದರಿಂದ ಶಬ್ದಗಳಲ್ಲಿ ಕಂಡುಬರುವ ಲಿಂಗ, ಧಾತು, ವಿಭಕ್ತಿ ವಚನಗಳನ್ನೇ ಮುಖ್ಯವಾಗಿ ಪರಿಗಣಿಸದೆ ಅರ್ಥವು ಸಮುಂಜಸವಾಗಿ ಹೊಂದುವಂತೆ ವಿಭಕ್ತಿವಚನಾದಿಗಳಲ್ಲಿ ಸಂದರ್ಭಾನುಸಾರ ವ್ಯತ್ಯಾಸವನ್ನು ಮಾಡಿ ಅರ್ಥಹೇಳಬೇಕೆಂದಭಿಪ್ರಾಯವು) ಮತ್ತು ಛಂದೋಬದ್ಧವಾದ ಋಕ್ಕುಗಳಲ್ಲಿಯೂ ಮಂತ್ರಗಳಲ್ಲಿಯೂ ವಿಷಯಗಳು ಸೂಕ್ಷ್ಮವಾಗಿಯೂ ಬೇಗನೆ ಅರ್ಥವಾಗದ ರೀತಿಯಲ್ಲಿಯೂ ಅಸ್ಪಷ್ಟವಾಗಿಯೂ ಇದ್ದರೆ ಆ ಮಂತ್ರಗಳ ಅರ್ಥವನ್ನು ಲೌಕಿಕಭಾಷೆಗೆ ಎಂದರೆ ಬಳಕೆಯಲ್ಲಿರುವ ಭಾಷೆಗೆ ಚೆನ್ನಾಗಿ ಅರ್ಥವಾಗುವಂತೆ ಪರಿವರ್ತಿಸಬೇಕು.

ಪದವಿಚ್ಛೇದ ಮತ್ತು ಆರುವಿಧ ಸಮಾಸಪದಗಳು

102. ಯಾವ ಧಾತುಗಳ ರೂಪವೂ ಅರ್ಥವೂ ಯಾವರೀತಿ ರೂಢಿಯಲ್ಲಿರುವುದೋ ಆ ಧಾತುಗಳ ಗುಣವಿವರಣೆಯೂ ರೂಪವನ್ನೂ ಅರ್ಥವನ್ನೂ ಅನುಸರಿಸಿರುವುದು.

---

100. A redundant word (ಪದ) should be rejected, while one that is lacking one should introduce into the sentence: and one that is far removed, one should bring into exta-position, and should (then) arrange the regular sequence (of the words).

21. Analysis of words. Six kinds of compounds.

101. Gender, root, and inflexion one should, in their respective places, adopt (to the sense). Whatever is Vedic in formula one should turn into everyday speech (ಲೌಕಿಕ).

102. The analysis of the secondary elements (ಗುಣ) may be (effected) by the aid of all roots (ಧಾತು) which possess a traditional characteristic form (ಲಿಂಗ), and the sense of which can be stated.

ಧಾತೂಪಸರ್ಗಾವಯವಗುಣಶಬ್ದಂ ದ್ವಿಧಾತುಜಂ ।
ಬಹ್ವೇಕಧಾತುಜಂ ವಾಪಿ ಪದಂ ನಿರ್ವಾಚ್ಯಲಕ್ಷಣಂ ॥ ೧೦೩ ॥
ಧಾತುಜಂ ಧಾತುಜಾಜ್ಞಾತಂ ಸಮಸ್ತಾರ್ಥಜಮೇವ ವಾ ।
ವಾಕ್ಯಜಂ ವ್ಯತಿಕೀರ್ಣಂ ಚ ನಿರ್ವಾಚ್ಯಂ ಪಂಚಧಾ ಪದಂ ॥ ೧೦೪ ॥
ದ್ವಿಗುರ್ದ್ವಂದ್ವೋಽವ್ಯಯೀಭಾವಃ ಕರ್ಮಧಾರಯ ಏವ ಚ ।
ಪಂಚಮಸ್ತು ಬಹುವ್ರೀಹಿಃ ಷಷ್ಠಸ್ತತ್ಪುರುಷಃ ಸ್ಮೃತಃ ॥ ೧೦೫ ॥
ವಿಗ್ರಹಾನ್ನಿರ್ವಚಃ ಕಾರ್ಯಂ ಸಮಾಸೇಷ್ವಪಿ ತದ್ಧಿತೇ ।

103. ಒಂದು ಪದವು (ಶಬ್ದವು) ಒಂದು ಧಾತು, ಎರಡು ಧಾತುಗಳು ಅಥವಾ ಅನೇಕ ಧಾತುಗಳಿಂದ ನಿಷ್ಪನ್ನವಾಗಿ, ಧಾತು, ಉಪಸರ್ಗ, ಅವಯವ (ವಿಭಾಗ) ಗುಣ, ಶಬ್ದ ಎಂಬ ಐದುವಿಧ ಅವಯವಗಳಿಂದ ಸಹಿತವಾಗಿ ಒಂದು ನಿರ್ದಿಷ್ಟಾರ್ಥವನ್ನು ಬೋಧಿಸುವುದು.

104. ಒಂದು ಶಬ್ದವನ್ನು ಐದುವಿಧವಾಗಿ ವಿವರಿಸಬಹುದು. ಆ ಶಬ್ದವು ಒಂದು ಧಾತುವಿನಿಂದ ನಿಷ್ಪನ್ನವಾಗಿ ಆ ಧಾತುವಿನ ಅರ್ಥವನ್ನು ನಿರ್ದೇಶಿಸಬಹುದು; (ಉದಾ—ಯಜ್ಞ-ಈ ಶಬ್ದವು ಯಜ್ ಧಾತುವಿನಿಂದ ನಿಷ್ಪನ್ನವಾಗಿದೆ) ಅಥವಾ ಒಂದು ಧಾತುವಿನಿಂದ ನಿಷ್ಪನ್ನವಾದ ಶಬ್ದದಿಂದ ಇನ್ನೊಂದು ಶಬ್ದವು ಉತ್ಪನ್ನವಾಗಿ ಒಂದು ನಿರ್ದಿಷ್ಟಾರ್ಥವನ್ನು ಸೂಚಿಸಬಹುದು. (ಉದಾ—ನಮಸ್ಕಾರ; ನಮ ಎಂಬುದು ನಮ್ ಧಾತುವಿನಿಂದ ಉಂಟಾಗಿದೆ. ಇದರ ಜತೆಗೆ ಕಾರ ಎಂಬ ಶಬ್ದವೂ ಸೇರಿ ನಮಸ್ಕಾರ ಎಂದಾಗಿದೆ) ಅಥವಾ ಆ ಶಬ್ದದಲ್ಲಿರುವ ಅಕ್ಷರಗಳ ಸಂಯೋಜನದಿಂದ ಲಬ್ಧವಾಗುವ ಒಂದು ಒಟ್ಟರ್ಥವನ್ನು ಸೂಚಿಸಬಹುದು; (ಪುರೋಹಿತ) ಅಥವಾ ಒಂದು ವಾಕ್ಯದಿಂದ ನಿರ್ದಿಷ್ಟವಾಗುವ ಅಭಿಪ್ರಾಯವನ್ನು ಸೂಚಿಸಬಹುದು; (ವೃತ್ರಹಾ-ವೃತ್ರನನ್ನು ಕೊಂದವನು) ಅಥವಾ ರೂಪನಿಷ್ಪತ್ತಿಗೆ ಸಂಬಂಧವಿಲ್ಲದಿರುವ ಬೇರೊಂದು ಅರ್ಥವನ್ನು ಸೂಚಿಸಬಹುದು. (ಉದಾ—ರೋದಸೀ ಇತ್ಯಾದಿ).

105. ಆರುವಿಧ ವಿಗ್ರಹಗಳು (ಸಮಾಸಪದಗಳು)—ದ್ವಿಗು, ದ್ವಂದ್ವ, ಅವ್ಯಯೀಭಾವ, ಕರ್ಮಧಾರಯ, ಬಹುವ್ರೀಹಿ ಮತ್ತು ತತ್ಪುರುಷ.

106. ಸಮಾಸಪದಗಳ ಅರ್ಥವನ್ನು ವಿವರಿಸುವಾಗಲೂ, ಶಬ್ದಗಳ ರೂಪನಿಷ್ಪತ್ತಿಯನ್ನು ವಿವರಿಸುವಾಗಲೂ ಆ ಶಬ್ದಗಳ ಅವಯವಗಳನ್ನು (ಅದರಲ್ಲಿರುವ ಬೇರೆಬೇರೆ ಪದ, ಧಾತುಮೂಲ, ಅಕ್ಷರ, ಉಪಸರ್ಗ ಇತ್ಯಾದಿ) ವಿಂಗಡಿಸಿ

103. A word (ಪದ), the definition of which can be expressed, whether it be derived from two roots, many (roots), or one root, is one consisting of a sound (ಶಬ್ದ) that contains root, preposition, members (ಅವಯವ), and secondary elements (ಗುಣ).

104. A word may be explained in five ways, (viz) as derived from a root, as derived from the derivative of a root, as derived from a compound meaning (ಸಮಸ್ತಾರ್ಥ), as devrived from a sentence (vakya), and as (of) confused derivation.

105. Dvigu, Dvanda, Avyayibhava, and Karmadharaya, the fifth Bahuvrihi, and the sixth called Tatpurusa (are the compounds).

ಪ್ರವಿಭಜ್ಯೈವ ನಿರ್ಬ್ರೂಯಾದ್ದಂಡಾರ್ಹೋ ದಂಡ್ಯ ಇತ್ಯಪಿ ॥ ೧೦೬ ॥
ಭಾರ್ಯಾ ರೂಪವತೀ ಚಾಸ್ಯ ರೂಪವದ್ಭಾರ್ಯ ಇತ್ಯಪಿ ।
ಇಂದ್ರಶ್ಚ ಸೋಮಶ್ಚೇತ್ಯೇವಮಿಂದ್ರಾಸೋಮೌ ನಿದರ್ಶನಂ ॥ ೧೦೭ ॥
ಶಬ್ದರೂಪಂ ಪದಾರ್ಥಶ್ಚ ವ್ಯುತ್ಪತ್ತಿಃ ಪ್ರಕೃತಿರ್ಗುಣಃ ।
ಸರ್ವಮೇತದನೇಕಾರ್ಥಂ ದಶಾನವಗಮೇ ಗುಣಾಃ ॥ ೧೦೮ ॥

ನಿರ್ವಚನವನ್ನು ಹೇಳಿ ಅರ್ಥವಿವರಣೆಮಾಡಬೇಕು. ಹೇಗೆಂದರೆ ದಂಡಾರ್ಹನಾದವನಿಗೆ ದಂಡ್ಯ (ಶಿಕ್ಷಾರ್ಹ) ನೆಂದು ಹೇಳುವಂತೆ; (ದಂಡ್ಯಶಬ್ದಕ್ಕೆ ದಂಡಾರ್ಹ ಎಂದು ಅರ್ಥವು. ದಂಡಾರ್ಹ ಶಬ್ದದಲ್ಲಿ ದಂಡ-ಅರ್ಹ ಎಂಬ ಎರಡು ಶಬ್ದಗಳಿರುವವು. ಈ ಎರಡು ಶಬ್ದಗಳೂ ಸೇರಿ ದಂಡ್ಯ ಎಂಬ ಒಂದು ನಿರ್ದಿಷ್ಟಾರ್ಥವನ್ನು ಕೊಡುವುದು ಇತ್ಯಾದಿ).

ಶಬ್ದಗಳ ಅರ್ಥ ಮತ್ತು ವಿವರಣೆ

107. ಮತ್ತು **ರೂಪವದ್ಭಾರ್ಯಃ** ಎಂಬ ಶಬ್ದಕ್ಕೆ ಅರ್ಥಮಾಡುವಾಗ **ರೂಪವತೀ ಭಾರ್ಯಾ ಯಸ್ಯ** ಎಂದು ಪದಗಳನ್ನು ಅಥವಾ ಅವಯವಗಳನ್ನು ವಿಂಗಡಿಸಿ ಅರ್ಥವಾಗುವಂತೆ ವಿವರಿಸಬೇಕು. ರೂಪವತಿಯಾದ ಭಾರ್ಯೆ ಅಥವಾ ಪತ್ನಿಯನ್ನು ಹೊಂದಿರುವವನು ಎಂದು ರೂಪವದ್ಭಾರ್ಯಃ ಎಂಬ ಶಬ್ದಕ್ಕೆ ಅರ್ಥವು. ಇಂದ್ರಾಸೋಮೌ ಎಂದರೆ ಇಂದ್ರ ಮತ್ತು ಸೋಮ ಎಂಬಿಬ್ಬರು ದೇವತೆಗಳು. ಇವರ ಅವಯವಾರ್ಥವನ್ನು ವಿಂಗಡಿಸುವಾಗ **ಇಂದ್ರಶ್ಚ ಸೋಮಶ್ಚ ಇಂದ್ರಾಸೋಮೌ**-ಇಂದ್ರನೂ ಮತ್ತು ಸೋಮನೂ ಇಬ್ಬರೂ ಸೇರಿದರೆ **ಇಂದ್ರಾಸೋಮೌ** ಎಂದು ಕರೆಯಲ್ಪಡುವರು. ಇದು ದ್ವಂದ್ವಸಮಾಸಕ್ಕೆ ಉದಾಹರಣೆಯು.

108. ಒಂದು ಶಬ್ದದ ನಿರ್ದಿಷ್ಟಾರ್ಥವನ್ನು ತಿಳಿದುಕೊಳ್ಳಬೇಕಾದರೆ—ಶಬ್ದದ ರೂಪ, ಶಬ್ದದ ಅರ್ಥ, ಅದರ ರೂಪನಿಷ್ಪತ್ತಿ, ಶಬ್ದದ ಮೂಲರೂಪ (ಎಂದರೆ ಆ ಶಬ್ದವು ಯಾವ ಧಾತು ಮೂಲ ಅಥವಾ ಶಬ್ದದಿಂದ ನಿಷ್ಪನ್ನವಾಗಿದೆ ಎಂಬುದು) ಅದರ ವಿಶೇಷಣ, ಅಥವಾ ಗುಣವಿವರಣೆ ಇವುಗಳನ್ನೆಲ್ಲಾ ವಿವೇಚಿಸಿ ಅರ್ಥಮಾಡಬೇಕು. ಇನ್ನೆಲ್ಲವನ್ನೂ ಗಮನಿಸಿದರೆ ಶಬ್ದಕ್ಕೆ ಅನೇಕಾರ್ಥಗಳು ಭಾಸವಾಗುವವು. ಇಂತಹ ಗುಣಗಳು ಹತ್ತು ಇರುವವು. ಶಬ್ದದ ಅರ್ಥವು ಚೆನ್ನಾಗಿ ತಿಳಿಯದಿದ್ದಲ್ಲಿ ಈ ಹತ್ತು ಗುಣಗಳನ್ನೂ ವಿವೇಚಿಸಿ(ವಿಮರ್ಶೆಮಾಡಿ)ಅರ್ಥ ನಿಷ್ಕರ್ಷೆಮಾಡಬೇಕು.

---

106. In compounds, as well as a secondary derivative, explanation (ನಿರ್ವಚಃ) should proceed from analysis; one should explain after separating (the parts) thus 'punishable' (ದಂಡ್ಯ) as 'deserving punishment' (ದಂಡಾರ್ಹ).

22. Meaning and analysis of words.

107. and 'fair-wived' ರೂಪವದ್ಭಾರ್ಯ) as 'he has a fair (ರೂಪವತೀ) wife (ಭಾರ್ಯಾ). Thus 'indra-soma' (ಇಂದ್ರಾ-ಸೋಮೌ) as 'Indra and Soma' is an example of a ದ್ವಂದ್ವ).

108. **The form of the sound (ಶಬ್ದ), the sense of the word (ಪದ) the etymology, the primary form (ಪ್ರಕೃತಿ), the secondary element (ಗುಣ) all this has manifold sense; there are ten species (ಗುಣಾಃ, of explanation) in (case of) misunderstanding (ಅನವಗಮೇ).**

ಸಾಮಾನ್ಯವಾಚಿನಃ ಶಬ್ದಾ ವಿಶೇಷೇ ಸ್ಥಾಪಿತಾಃ ಕ್ವಚಿತ್ ।
ಪಲಾಯನೇ ಯಥಾ ವೃತ್ತಿಃ ಕೋ ನು ಮರ್ಯಾ ಇತೀಷತೇ ॥ ೧೦೯ ॥

ವಿಶೇಷವಾಚಿನಸ್ತ್ವನ್ಯೇ ಸಾಮಾನ್ಯೇ ಸ್ಥಾಪಿತಾಃ ಕ್ವಚಿತ್ ।
ಹಿಮೇನಾಗ್ನಿಮಿತಿ ಮಂತ್ರೇ ಹಿಮಶಬ್ದೋ ನಿದರ್ಶನಂ ॥ ೧೧೦ ॥

ಪದಮೇಕಂ ಸಮಾದಾಯ ದ್ವಿಧಾ ಕೃತ್ವಾ ನಿರುಕ್ತವಾನ್ ।
ಪೂರುಷಾದಃಪದಂ ಯಾಸ್ಕೋ ವೃಕ್ಷೇವೃಕ್ಷ ಇತಿ ತ್ವೃಚಿ ॥ ೧೧೧ ॥

ಅನೇಕಂ ಸತ್ತಥಾ ಚಾನ್ಯದೇಕಮೇವ ನಿರುಕ್ತವಾನ್ ।

109. ಕೆಲವು ಶಬ್ದಗಳು ಸಾಮಾನ್ಯವಾಗಿ ರೂಢಿಗುಲ್ಲಿರುವ ಅರ್ಥಗಳಲ್ಲಿ ಉಪಯೋಗಿಸಲ್ಪಡುವುವಾದರೂ ಕೆಲವು ಸಂದರ್ಭಗಳಲ್ಲಿ ವಿಶೇಷಾರ್ಥಗಳಲ್ಲಿ ಉಪಯೋಗಿಸಲ್ಪಡುವವು. ಹೇಗೆಂದರೆ, ಋ. ಸಂ. ೮-೪೫-೩ ನೇ **ಕೋ ನು ಮರ್ಯಾ** ಎಂಬ ಋಕ್ಕಿನಲ್ಲಿ **ಈಷತೇ** ಎಂಬ ಶಬ್ದಕ್ಕೆ ಹೋಗುತ್ತಾನೆ ಎಂಬ ಸಾಮಾನ್ಯಾರ್ಥವು ರೂಢಿಯಲ್ಲಿದ್ದರೂ ಈ ಋಕ್ಕಿನಲ್ಲಿ **ಈಷತೇ** ಎಂಬ ಶಬ್ದಕ್ಕೆ ಓಡಿಹೋಗುತ್ತಾನೆ ಎಂಬರ್ಥವಿರುವುದು.

110. ಹಾಗೆಯೇ ವಿಶೇಷಾರ್ಥದಲ್ಲಿ ಉಪಯೋಗಿಸಲ್ಪಡುವ ಕೆಲವು ಶಬ್ದಗಳು ಸಾಮಾನ್ಯಾರ್ಥಗಳನ್ನು ಸೂಚಿಸುವುದಕ್ಕಾಗಿಯೂ ಉಪಯೋಗಿಸಿರುವುದು ಕಂಡುಬರುವುದು. ಹೇಗೆಂದರೆ **ಹಿಮೇನಾಗ್ನಿಂ**(ಋ.ಸಂ.೧-೧೧೬-೮) ಎಂಬ ಋಕ್ಕಿನಲ್ಲಿ ಇರುವ ಹಿಮಶಬ್ದವೇ ಇದಕ್ಕೆ ನಿದರ್ಶನವು.

111. ಯಾಸ್ಕಮಹರ್ಷಿಯು **ವೃಕ್ಷೇವೃಕ್ಷೇ** ಎಂಬ ಋಕ್ಕಿನಲ್ಲಿರುವ (ಋ. ಸಂ. ೧೦-೨೭-೨೨-೮) **ಪೂರುಷಾದಃ** ಎಂಬ ಶಬ್ದವನ್ನು ವಿವರಿಸುವಾಗ **ಪೂರುಷ—ಅದಃ** (ಮನುಷ್ಯರನ್ನು ತಿನ್ನುವ) ಎಂದು ಎರಡು ಪದಗಳನ್ನಾಗಿ ವಿಭಾಗಿಸಿ ನಿರ್ವಚನವನ್ನು ಹೇಳಿರುವರು.

ಯಾಸ್ಕರ ತಪ್ಪಾದ ವಿವರಣೆಯು

112. ಯಾಸ್ಕರು **ಅರುಣೋ ಮಾ ಸಕೃತ್** (ಋ. ಸಂ. ೧-೧೧೫-೧೪) ಎಂಬ ಋಕ್ಕಿನಲ್ಲಿರುವ ಮಾಸ

---

109. Terms (**ಶಬ್ದಾಃ**) expressive of a general meaning are occasionally applied in a particular sense (**ವಿಶೇಷೇ**); thus (in) 'Who', pray, O men' (**ಕೋ ನು ಮರ್ಯಾಃ** viii. 45, 37), the intrepretation (of) 'goes' (**ಈಷತೇ**) is in (the sense of) 'fleeing'.

110, But other (terms) expressive of a particular meaning are occasionally applied in a general sense; in the formula, 'With cold the fire' (**ಹಿಮೇನಾಗ್ನಿಂ**: i. 116. 8), the term 'frost' (**ಹಿಮ**) is an example.

111. Yaska has, in the stanza 'To every tree' (**ವೃಕ್ಷೇ ವೃಕ್ಷೇ** : x. 27, 22) explained the word 'man-eating' (**ಪುರುಷಾದಃ**) by taking one word (and) dividing (it) into two.

23. Yaska's wrong explanation. Dropping of letters.

112 Similiarly, another (expression) which is not one (word), he

ಅರುಣೋ ಮಾ ಸಕೃನ್ಮಂತ್ರೇ ಮಾಸಕೃದ್ವಿಗ್ರಹೇಣ ತು ॥ ೧೧೨ ॥

ಪದವ್ಯವಾಯೇಽಪಿ ಪದೇ ಏಕೀಕೃತ್ಯ ನಿರುಕ್ತವಾನ್ ।
ಗರ್ಭಂ ನಿಧಾನಮಿತ್ಯೇತೇ ನ ಜಾಮಯ ಇತಿ ತ್ವೃಚಿ ॥ ೧೧೩ ॥

ಪದಜಾತಿರವಿಜ್ಞಾತಾ ತ್ವಃಪದೇಽರ್ಥಃ ಶಿತಾಮನಿ ।
ಸ್ವರಾನವಗಮೋಽಧಾಯಿ ವನೇ ನೇತ್ಯೃಚಿ ದರ್ಶಿತಃ ॥ ೧೧೪ ॥

ಶುನಃಶೇಪಂ ನರಾಶಂಸಂ ದ್ಯಾವಾ ನಃ ಪೃಥಿವೀತಿ ಚ ।
ನಿರಸ್ಕೃತೇತಿಪ್ರಭೃತಿಷ್ವರ್ಥಾದಾಸೀತ್ಕ್ರಮೋ ಯಥಾ ॥ ೧೧೫ ॥

ಕೃತ್ (ಮಾ ಸಕೃತ್) ಎಂಬ ಎರಡು ಪದಗಳನ್ನು ಒಂದೇ ಪದವನ್ನಾಗಿ ಭಾವಿಸಿ (ಮಾಸ—ಕೃತ್) ಅದರಂತೆ ಅರ್ಥ ವಿವರಣೆಮಾಡಿರುವರು.

113. ಇನ್ನೊಂದು ಋಕ್ಕಿನಲ್ಲಿ ಎಂದರೆ **ನ ಜಾಮಯೇ** (ಋ. ಸಂ. ೩-೩೧-೨) ಎಂಬ ಋಕ್ಕಿನಲ್ಲಿ **ಗರ್ಭಂ ಸನಿತುರ್ನಿಧಾನಂ** ಎಂದಿರುವಲ್ಲಿ ಗರ್ಭಂ ಮತ್ತು ನಿಧಾನಂ ಎಂಬ ಎರಡು ಪದಗಳ ಮಧ್ಯೆ ಸನಿತುಃ ಎಂಬ ಶಬ್ದವಿದ್ದರೂ, ಗರ್ಭಂನಿಧಾನಂ ಎಂಬುದನ್ನು ಒಂದೇ ಪದವನ್ನಾಗಿ ಭಾವಿಸಿ ಅರ್ಥವಿವರಣೆಮಾಡಿದಾರೆ. [ಆದರೆ ಋಗ್ವೇದದಲ್ಲಿ ಇಂತಹ ಪ್ರಯೋಗಗಳು ಒಂದೆರಡು ಇವೆ—**ನರಾ ವಾ ಶಂಸಂ** (ಋ. ಸಂ. ೧೦-೬೪-೩) ಎಂಬಲ್ಲಿ **ನರಾಶಂಸಂ** ಎಂಬ ಪದದ ಮಧ್ಯದಲ್ಲಿ **ವಾ** ಎಂಬ ಪದವಿರುವುದು. ಮತ್ತೊಂದುಕಡೆ (ಋ. ಸಂ. ೯-೮೬-೪೨) **ನರಾ ಚ ಶಂಸಂ** ಎಂಬಲ್ಲಿ **ಚ** ಶಬ್ದವಿರುವುದು.

114. ಋ. ಸಂ. ೧೦-೭೧-೪ ಮತ್ತು ೧೧ ನೇ ಋಕ್ಕುಗಳಲ್ಲಿರುವ **ತ್ವಃ** ಎಂಬ ಶಬ್ದವು ಯಾವ ವರ್ಗಕ್ಕೆ ಸೇರಿದ್ದು ಎಂಬುದನ್ನು ವಿವರಿಸಿಲ್ಲ. **ಶಿತಾಮನ್** ಎಂಬ ಶಬ್ದದ ವಿಷಯವೂ ಅದರಂತೆಯೇ. ಮತ್ತು **ವನೇ ನ** (ಋ. ಸಂ. ೧೦-೨೯-೧) ಎಂಬ ಋಕ್ಕಿನಲ್ಲಿರುವ **ಅಧಾಯಿ** ಎಂಬ ಶಬ್ದದ ಸ್ವರದ ವಿವರಣೆಯೂ ಸರಿಯಾಗಿಲ್ಲ.

115. ಶುನಃಶೇಪ, ನರಾಶಂಸಂ, ದ್ಯಾವಾನಃಪೃಥಿವೀ, ನಿರಸ್ಕೃತಾ ಇತ್ಯಾದಿ ಶಬ್ದಗಳಲ್ಲಿ (ಉವಯವ) ಶಬ್ದಗಳು ಅರ್ಥವನ್ನನುಸರಿಸಿರುವವು.

---

has explained as one only by (his) analysis as 'month-maker' (ಮಾಸಕೃತ್), in the formula, 'the ruddy one me once' (ಅರುಣೋ ಮಾ ಸಕೃತ್ : i. 105. 18).

113. In the stanza, 'not to his brother' (ನ ಜಾಮಯೇ : iii. 31. 2), he has explained the two words ಗರ್ಭಂ ನಿಧಾನಂ, even though (another) word intervenes, by making them into one.

114. The class of word is not recognized in tha word ತ್ವಃ (nor) the sense in ಶಿತಾಮನ್. Misunderstanding of the accent (in) ಅಧಾಯಿ is shown in the stanza 'As on the tree' (ವನೇ ನ : x. 29. 1).

115. As the regular order (of the words) was (arranged according to the seuse in Sunah-sepam, Nara-samsam, Dyava nah prithvi,. nir-askrta, and the rest.

ವರ್ಣಸ್ಯ ವರ್ಣಯೋರ್ಲೋಪೋ ಬಹೂನಾಂ ವ್ಯಂಜನಸ್ಯ ಚ ।
ಅತ್ರಾಣೀತಿ ಕಪಿರ್ನಾಭಾ ದನೋ ಯಾಮಿರ್ಘಾಸು ಚ ॥ ೧೧೬ ॥

ಅರ್ಥಾತ್ಪದಂ ಸ್ವಾಭಿಧೇಯಂ ಪದಾದ್ವಾಕ್ಯಾರ್ಥನಿರ್ಣಯಃ ।
ಪದಸಂಘಾತಜಂ ವಾಕ್ಯಂ ವರ್ಣಸಂಘಾತಜಂ ಪದಂ ॥ ೧೧೭ ॥

ಅರ್ಥಾತ್ಪ್ರಕರಣಾಲ್ಲಿಂಗಾದೌಚಿತ್ಯಾದ್ದೇಶಕಾಲತಃ ।
ಮಂತ್ರೇಷ್ವರ್ಥವಿವೇಕಃ ಸ್ಯಾದಿತರೇಷ್ವಿತಿ ಚ ಸ್ಥಿತಿಃ ॥ ೧೧೮ ॥

ಇತಿ ನಾನಾನ್ವಯೋಪಾಯೈರ್ನೈರುಕ್ತೇ ಯೋ ಯತೇತ ಸಃ ।

116. ಅನೇಕಶಬ್ದಗಳಲ್ಲಿ ಒಂದು, ಎರಡು, ಅಥವಾ ಅನೇಕ ಅಕ್ಷರಗಳನ್ನು ಬಿಟ್ಟಿರುವುದು ಕಂಡುಬರುವುದು. ಅತ್ರಾಣಿ (ಅಮಿತ್ರಾಣಿ) ಕಪಿಃ (ಕಪಿಲ) ನಾಭಾ (ನಾಭಾನೇದಿಷ್ಠ) ಇತ್ಯಾದಿ. ಹಾಗೆಯೇ ದನಃ, ಯಾಮಿ, ಅಘಾಸು ಇತ್ಯಾದಿ ಶಬ್ದಗಳಲ್ಲಿ ವರ್ಣಲೋಪವಿರುವುದು.

ಪದ ಮತ್ತು ಅರ್ಥ, ಕ್ರಿಯಾಶಬ್ದಾರ್ಥ

117. ಒಂದು ನಿರ್ದಿಷ್ಟಾರ್ಥವನ್ನು ಸೂಚಿಸುವುದಕ್ಕಾಗಿಯೇ ಒಂದು ಪದದ ಪ್ರಯೋಗವಿರುವುದು. ಪದವು (ಅಥವಾ ಶಬ್ದವು), ವಾಕ್ಯದಲ್ಲಿರುವ ಸ್ಥಾನಕ್ಕನುಸಾರವಾಗಿ ಅರ್ಥವನ್ನು ಸೂಚಿಸುವುದು. ವರ್ಣಗಳ ಅಥವಾ ಅಕ್ಷರಗಳ ಗುಂಪೇ (ಯೋಜನೆಯೇ) ಪದವು, ಪದಗಳ ಜೋಡಣೆಯೇ ವಾಕ್ಯವು.

118. ಅರ್ಥಕ್ಕನುಸಾರವಾಗಿ, ಮಂತ್ರಾದಿಗಳಲ್ಲಿ ಪ್ರಕರಣ, ಲಿಂಗ, ಸಂದರ್ಭ, ದೇಶ, ಕಾಲಗಳನ್ನು ನಿರ್ಣಯಿಸಬೇಕು. ಇವೆಲ್ಲವನ್ನೂ ವಿಮರ್ಶಿಸಿ ಮಂತ್ರಕ್ಕೆ ಸರಿಯಾದ ಅರ್ಥವನ್ನು ನಿರ್ಣಯಿಸಬೇಕು. ಮಂತ್ರಗಳಲ್ಲಲ್ಲದೆ ಇತರ ವಾಕ್ಯಗಳಲ್ಲಿಯೂ ಇದೇ ಕ್ರಮವು ಅನ್ವಯಿಸುವುದು.

119. ಈರೀತಿ ನಾನಾವಿಧವಾದ ಅನ್ವಯ (ಅರ್ಥವನ್ನು ಹೊಂದಿಸುವ) ಕ್ರಮ ಮತ್ತು ಯುಕ್ತಿಗಳಿಂದ ಪದಗಳ ಮತ್ತು ವಾಕ್ಯಗಳ (ಮಂತ್ರಗಳ) ನಿರ್ವಚನವನ್ನು (ಸರಿಯಾದ ಅರ್ಥವನ್ನು) ವಿವರಿಸಲು ಯಾವ ಪುರುಷನು

116, (so) there is dropping of a letter, (ವರ್ಣ) of two letters, of many, aad of a consonant : for instance, in) atrani, kapih, nabah; danah, yami and aghasu.

24. **Word and sense. The verb expresses a form of beaoming.**

117. From the sense (comes) the word (ಪದ), its designation; from the word (comes) the ascertainment of the sense of the sentence (ವಾಕ್ಯ). (For) the sentence arises from an aggregation of words, the word arises from an aggregation of letters.

118. From the sense (of the word), the subject-matter (ಪ್ರಕರಣ), the gender, the appropriateness, and from (considerations of) place and time, the (possibility of) discriminating the (whole) sense in the formulas will result : such is the settled rule (ಸ್ಥಿತಿಃ) in (regard to) other (writings) also.

119. Ho who thus exerts himself in the study of etymology (ನೈರುಕ್ತೇ)

ಜಿಜ್ಞಾಸುರ್ಬ್ರಹ್ಮಣೋ ರೂಪಮಪಿ ದುಷ್ಕೃತ್ಪರಂ ವ್ರಜೇತ್ ॥ ೧೧೯ ॥
ಯಥೇದಮಗ್ರೇ ನೈವಾಸೀದಸದಪ್ಯಥವಾಪಿ ಸತ್ ।
ಜಜ್ಞೇ ಯಥೇದಂ ಸರ್ವಂ ತದ್ಭಾವವೃತ್ತಂ ವದಂತಿ ತು ॥ ೧೨೦ ॥
ಭಾವಪ್ರಧಾನಮಾಖ್ಯಾತಂ ಷಡ್ವಿಕಾರಾ ಭವಂತಿ ತೇ ।
ಜನ್ಮಾಸ್ತಿತ್ವಂ ಪರೀಣಾಮೋ ವೃದ್ಧಿರ್ಹಾನಂ ವಿನಾಶನಂ ॥ ೧೨೧ ॥
ಏತೇಷಾಮೇವ ಷಣ್ಣಾಂ ತು ಯೇಽನ್ಯೇ ಭಾವವಿಕಾರಜಾಃ ।
ತೇ ಯಥಾವಾಕ್ಯಮಭ್ಯೂಹ್ಯಾಃ ಸಾಮರ್ಥ್ಯಾನ್ಮಂತ್ರವಿತ್ತಮೈಃ ॥ ೧೨೨ ॥

ಪ್ರಯತ್ನಪಡುವನೋ, ಅವನು ದುಶ್ಚರಿತನಾಗಿದ್ದರೂ ಪರವಸ್ತುವಾದ ಬ್ರಹ್ಮನ (ಪರಬ್ರಹ್ಮನ) ರೂಪವನ್ನೂ ಸಹ ಜಿಜ್ಞಾಸಾದಿಗಳಿಂದ (ವಿಮರ್ಶೆಯಿಂದ) ತಿಳಿದು ಪರಮಪದವಿಯನ್ನು ಹೊಂದುವನು.

120. ಸೃಷ್ಟಿಗೆ ಪೂರ್ವದಲ್ಲಿ ಈ ಸಕಲ ಜಗತ್ತು ಯಾವರೀತಿ ಇರಲಿಲ್ಲವೆಂಬುದೂ, ಆ ಕಾಲದಲ್ಲಿ ಸತ್, ಅಸತ್ ಎಂದರೆ ವ್ಯಕ್ತಾವ್ಯಕ್ತವಸ್ತುಗಳು ಇರಲಿಲ್ಲವೆಂಬುದೂ, ಆನಂತರ ಈ ಸಮಸ್ತ ವಿಶ್ವವೂ ಯಾವರೀತಿ ಉತ್ಪನ್ನವಾಯಿತು ಎಂಬುವುದೂ ಇವೆಲ್ಲವನ್ನೂ ಒಳಗೊಂಡ ವಿವರಣೆಯನ್ನು ಭಾವವೃತ್ತವೆಂದು ಹೇಳುವರು.

121. ಈ ಭಾವವೃತ್ತದ ಮುಖ್ಯವಿವರಣೆಯನ್ನು ಮೇಲೆ ಹೇಳಿದ್ದಾಯಿತು. ಇದರಲ್ಲಿ ಎಂದರೆ ಭಾವವೃತ್ತದಲ್ಲಿ ಆರುವಿಧ ವಿಕಾರಗಳು ಎಂದರೆ ಪ್ರಭೇದಗಳಿರುವವು.—ಜನ್ಮ, (ಉತ್ಪತ್ತಿ) ಅಸ್ತಿತ್ವಂ (ಸ್ಥಿತಿ) ಪರೀಣಾಮ (ಬದಲಾವಣೆ—ಜಗತ್ತು ಯಾವಾಗಲೂ ಒಂದೇ ಸ್ಥಿತಿಯಲ್ಲಿರದೆ ಸ್ವಲ್ಪಸ್ವಲ್ಪವಾಗಿ ಬದಲಾಯಿಸುತ್ತಿರುವುದು. ಇದಕ್ಕೆ ಪರಿಣಾಮವೆಂದು ಹೆಸರು). ವೃದ್ಧಿ (ಅಭಿವೃದ್ಧಿ-ಹೆಚ್ಚಾಗುವುದು) ಹಾನಂ (ಕಡಮೆಯಾಗುವುದು) ವಿನಾಶ ಎಂಬಿನೇ ಆರು ಪ್ರಭೇದಗಳು.

122. ಈ ಆರು ವಿಕಾರಗಳಲ್ಲದೆ ಇತರ ವಿಕಾರಗಳೂ (ಅಥವಾ ಪ್ರಭೇದಗಳು) ಇರುವವೆಂದು ತಿಳಿಯುವುದಾದರೆ ಅವೆಲ್ಲವೂ ಮೇಲೆ ಹೇಳಿದ ಆರು ಮುಖ್ಯ ವಿಕಾರಗಳಲ್ಲಿಯೇ ಸೇರಿಹೋಗಿರುವವೆಂದು ಭಾವಿಸಬೇಕು. ಮಂತ್ರಜ್ಞರಾದವರು ವಾಕ್ಯ (ಮಂತ್ರ) ಗಳಲ್ಲಿ ಸೂಚಿತವಾಗುವ ಅರ್ಥಾದಿಗಳಿಂದಲೂ ತಮ್ಮ ಸ್ವಸಾಮರ್ಥ್ಯ ಎಂದರೆ ವಿಮರ್ಶಾಪೂರ್ವಕವಾದ ಯುಕ್ತಿಗಳಿಂದಲೂ ಅವುಗಳನ್ನು ಊಹಿಸಿ ತಿಳಿದುಕೊಳ್ಳಬೇಕು.

by the various means of construing (ಅನ್ವಯ), being desirous of knowing the form of Brahma, will, even though an evil-doer, go to the supreme (ಪರಂ).

120. How this (world) did not exist in the beginning, either as non-existent, how this universe (ಸರ್ವಂ) came into being, (all) this they term the evolution (ವೃತ್ತಂ) of becoming (ಭಾವ).

121. The verb (ಆಖ್ಯಾತ) has becoming as its fundamental meaning (ಪ್ರಧಾನ)' There are these six modifications (ವಿಕಾರಾಃ) of becoming genesis (ಜನ್ಮ) existence (ಅಸ್ತಿತ್ವಂ), transformation (ಪರಿಣಾಮ), growth (ವೃದ್ಧಿಃ), decline (ಹಾನಂ), drstrnction (ವಿನಾಶನಂ).

The deities of the Vyahrtis and of Om·

122. But whatever other modifications of becoming arise from these six must be inferred in each case according to the sense, to the best

ದೇವಾನಾಂ ಚೆ ಪಿತೄಣಾಂ ಚೆ ನಮಸ್ಕಾರೈಸ್ತಥೈವ ಚೆ ।
ಅಥ ವ್ಯಸ್ತಂ ಸಮಸ್ತಂ ವಾ ಶೃಣು ವ್ಯಾಹೃತಿದೈವತಂ ॥ ೧೨೩ ॥

ವ್ಯಾಹೃತೀನಾಂ ಸಮಸ್ತಾನಾಂ ದೈವತಂ ತು ಪ್ರಜಾಪತಿಃ ।
ವ್ಯಸ್ತಾನಾಮಯಮಗ್ನಿಶ್ಚ ವಾಯುಃ ಸೂರ್ಯಶ್ಚ ದೇವತಾಃ ॥ ೧೨೪ ॥

ವಾಗ್ದೇವತ್ಯೋಽಥವಾಸ್ಯೈಂದ್ರೋ ಯದಿ ವಾ ಪರಮೇಷ್ಠಿನಃ ।
ಓಂಕಾರೋ ವೈಶ್ವದೇವೋ ವಾ ಬ್ರಾಹ್ಮೋ ದೈವಃ ಕ ಏವ ವಾ ॥ ೧೨೫ ॥

ಇತಿ ಪೀಠಿಕಾಪ್ರಕರಣಂ ಸಮಾಪ್ತಂ

ಓಂ ಎಂಬ ವ್ಯಾಹೃತಿ ಮತ್ತು ಅದರ ದೇವತೆಗಳು

123. ಮತ್ತು ದೇವತೆಗಳನ್ನು ಪಿತೃಗಳನ್ನು ನಮಸ್ಕಾರ ಮಾಡುವುದರಿಂದಲೂ ಮಂತ್ರಜ್ಞರು ವೇದಮಂತ್ರಗಳ ವಾಕ್ಯಾರ್ಥವನ್ನು ಸರಿಯಾಗಿ ಊಹಿಸಿ ತಿಳಿದುಕೊಳ್ಳಬಹುದು. ಈಗ ವ್ಯಾಹೃತಿಗಳ ದೇವತೆಗಳಾರು ಎಂಬುವುದನ್ನು ಒಟ್ಟಾಗಿಯೂ ಬೇರೆಯಾಗಿಯೂ ಹೇಳುವೆನು, ಕೇಳು.

124. ಸಮಸ್ತ ವ್ಯಾಹೃತಿಗಳಿಗೂ (ಸಾಮಾನ್ಯವಾಗಿ)ಪ್ರಜಾಪತಿಯೇ ದೇವತೆಯು; ಒಂದೊಂದು ವ್ಯಾಹೃತಿಗಳಿಗೂ ಬೇರೆಬೇರೆಯಾಗಿ ದೇವತೆಯನ್ನು ನಿರ್ದೇಶಿಸುವುದಾದರೆ—**ಭೂಃ** ಎಂಬ ವ್ಯಾಹೃತಿಗೆ ಅಗ್ನಿಯೂ, **ಭುವಃ** ಎಂಬ ವ್ಯಾಹೃತಿಗೆ ವಾಯುವೂ, **ಸುವಃ** (ಅಥವಾ ಸ್ವಃ) ಎಂಬ ವ್ಯಾಹೃತಿಗೆ ಸೂರ್ಯನೂ ದೇವತೆಯು.

125. **ಓಂ** ಎಂಬ ವ್ಯಾಹೃತಿಗೆ ವಾಗ್ದೇವತೆಯಾಗಲಿ, ಇಂದ್ರ, ಪರಮೇಷ್ಠೀ, ವಿಶ್ವೇದೇವತೆಗಳು, ಬ್ರಹ್ಮ, ಕಃ (ಪ್ರಜಾಪತಿ) ಇವರಲ್ಲಿ ಯಾರಾದರೂ ಒಬ್ಬರು ದೇವತೆಯಾಗಬಹುದು

ಇಲ್ಲಿಗೆ ಪೀಠಿಕಾಪ್ರಕರಣವು ಸಮಾಪ್ತವು.

of their ability (ಸಾಮರ್ಥ್ಯತ್), by those who are most familiar wlth the formulas.

123. and (must) likewise (be inferred) in accordance with the (nature of the) adorations (ನಮಸ್ಕಾರೈಃ) of the Gods and Fathers (appearing ia those formulas).

Now hear the divinity of the sacred utterances (ವ್ಯಾಹೃತಿ), individually and collectively.

124. Now the divinity of the sacred utterances collectively is Prajapati, while the deities of them individually are this (terrestrial) Agni, Vayu, and Surya (respectively).

125. The syllable Om has Vac for its deity, or else it is addressed to Indra, or else (it belongs) to Parameslhin; or it ss addressed to the All-gods, or to Brahman, or to the Gods, (in general), or Ka (is its deity).

ಆಗ್ನೇಯಂ ಪ್ರಥಮಂ ಸೂಕ್ತಂ ಮಧುಚ್ಛಂದಸ ಆರ್ಷಕಂ।
ಜ್ಞೇಯಾಃ ಸರ್ವೇಽನ್ಯದೇವತ್ಯಾಸ್ತೃಚಾಃ ಸಪ್ತಾತ ಉತ್ತರಾಃ ॥ ೧೨೬ ॥

ವಾಯವ್ಯಃ ಪ್ರಥಮಸ್ತ್ವೇಷಾಮೈಂದ್ರವಾಯವ ಉತ್ತರಃ।
ಮೈತ್ರಾವರುಣೋಽಥಾಶ್ವಿನೋಽಸ್ಯೈಂದ್ರೋಽತೋ ವೈಶ್ವದೇವಕಃ ॥ ೧೨೭ ॥

ತನ್ನಾಮಾ ವಿಶ್ವಲಿಂಗೋ ವಾ ಗಾಯತ್ರೋಽನ್ತ್ಯಸ್ತು ಯಸ್ತೃಚಃ।
ಬಹುದೈವತಮನ್ಯತ್ತು ವೈಶ್ವದೇವೇಷು ಶಸ್ಯತೇ ॥ ೧೨೮ ॥

ಪ್ರಥಮಮಂಡಲದ ಸೂಕ್ತಗಳ ವಿವರಣೆಯು
ಮೊದಲ ಮೂರು ಸೂಕ್ತಗಳು; ವೈಶ್ವದೇವಸೂಕ್ತಗಳ ದ್ರಷ್ಟೃಗಳು

126. ಮೊದಲನೆಯ ಸೂಕ್ತಕ್ಕೆ (**ಅಗ್ನಿಮಿಳೇ** ೧-೧) ಅಗ್ನಿಯು ದೇವತೆಯು; ಮಧುಚ್ಛಂದಾಃ ಎಂಬುವನು ಋಷಿಯು. ಎರಡನೆಯ ಸೂಕ್ತ (೯ ಋಕ್ಕು) ಮತ್ತು ಮೂರನೆಯ ಸೂಕ್ತ (೧೨ ಋಕ್ಕು) ಗಳಲ್ಲಿರುವ ಒಟ್ಟು ೨೧ ಋಕ್ಕುಗಳಲ್ಲಿ ಪ್ರತಿ ತೃಚಕ್ಕೂ (ತೃಚವೆಂದರೆ ಮೂರು ಋಕ್ಕುಗಳು) ಎಂದರೆ ಪ್ರತಿ ಮೂರು ಋಕ್ಕುಗಳ ಸಮೂಹಕ್ಕೂ ಬೇರೆಬೇರೆ ದೇವತೆಗಳಿರುವರು. ಈ ೨ ನುತ್ತು ೩ ನೇ ಸೂಕ್ತಗಳಲ್ಲಿ ಒಟ್ಟು ೭ ತೃಚಗಳಿರುವವು

127. ಎರಡನೆಯ ಸೂಕ್ತದ ಮೊದಲನೆಯ ತೃಚಕ್ಕೆ (೨ನೇ ಸೂಕ್ತ ೧-೩ ಋಕ್ಕುಗಳು) ವಾಯುವು ದೇವತೆಯು; ಮುಂದಿನ ತೃಚಕ್ಕೆ (೨ನೇ ಸೂಕ್ತ ೪-೬ ಋಕ್ಕು) ಇಂದ್ರವಾಯುಗಳೂ ಅದರ ಮುಂದಿನ ತೃಚಕ್ಕೆ (೨ನೇ ಸೂ. ೭-೯) ಮಿತ್ರಾವರುಣರೂ, ಅದರ ಮುಂದಿನ ತೃಚಕ್ಕೆ (೩ ನೇ ಸೂಕ್ತ ೧-೩ ಋಕ್ಕು) ಅಶ್ವಿನೀದೇವತೆಗಳೂ, ಅದರ ಮುಂದಿನ ತೃಚಕ್ಕೆ (೩ ನೇ ಸೂ. ೭-೯ ಋಕ್ಕು) ವಿಶ್ವೇದೇವತೆಗಳೂ ದೇವತೆಯು.

128. ಈಗ ಕೊನೆಯ ತೃಚ (ಎಂದರೆ ೩ ನೇ ಸೂಕ್ತದ ೭-೯) ಋಕ್ಕುಗಳು ಗಾಯತ್ರೀಛಂದಸ್ಸುವು. ವಿಶ್ವೇದೇವತೆಗಳೆಂದರೆ ಅನೇಕ ದೇವತೆಗಳು. ಆದ್ದರಿಂದ ವೈಶ್ವದೇವಸೂಕ್ತಗಳಲ್ಲಿ ಅನೇಕ ದೇವತೆಗಳು ಸ್ತುತರಾಗಿರುವರು.

26. The first three hymns. Authors of Vaisvadeva hymns.

126. The first hymn is addressed to Agni. Its seer isMadhuchandas. The seven triplets wihch follow it should all be recognised as addressed to different deities.

127. The first of these (2. 1-3) is addressed to Vayu, the following one (2. 4-6) to Indra and Vayu, then one to Mitra and Varuna (2. 7-9), one also to the Aswins (3. 1-3), one to Indra (3. 4-6), then one to the All gods (3. 7-9).

128. Now (this) last triplet (3. 7-9), composed in the Gayatri metre, contains that name (ತನ್ನಾಮ), or has (the word) 'all' (ವಿಶ್ವ) as its characteristic mark. But (any) other (hymn) addressed to many divinities can be recited in (the place of those addressed to the All gods).

ಲುಶೇ ದುವಸ್ಯೌ ಶಾರ್ಯಾತೇ ಗೋತಮೇಽಥ ಋಜಿಶ್ವನಿ ।
ಅವತ್ಸಾರೇ ಪರುಚ್ಛೇಪೇ ಅತ್ರೌ ದೀರ್ಘತಮಸ್ಯೃಷೌ ॥ ೧೨೯ ॥
ವಸಿಷ್ಠೇ ನಾಭಾನೇದಿಷ್ಠೇ ಗಯೇ ಮೇಧಾತಿಥೌ ಮನೌ ।
ಕಕ್ಷೀವತಿ ವಿಹವ್ಯೇ ಚ ಬಹುಷ್ವನ್ಯೇಷ್ವಥರ್ಷಿಷು ॥ ೧೩೦ ॥
ಅಗಸ್ತ್ಯೇ ಬೃಹದುಕ್ಥೇ ಚ ವಿಶ್ವಾಮಿತ್ರೇ ಚ ಗಾಥಿನಿ ।
ದೃಶ್ಯಂತೇ ವಿಪ್ರವಾದಾಶ್ಚ ತಾಸು ತಾಸು ಸ್ತುತಿಷ್ವಿಹ ॥ ೧೩೧ ॥
ಬಹ್ವೀನಾಂ ಸಂನಿಪಾತೇಷು ಯಸ್ಮಿನ್ಮಂತ್ರೇ ಪ್ರದೃಶ್ಯತೇ ।

ವೈಶ್ವದೇವಸೂಕ್ತಗಳ ಸ್ವರೂಪ ಮತ್ತು ವಿವರಣೆ

129-131 .ವೈಶ್ವದೇವಸೂಕ್ತಗಳ ಮುಖ್ಯದ್ರಷ್ಟೃಗಳಾದ ಋಷಿಗಳಾರೆಂದರೆ—ಲುಶ (೧೦ ನೇ ಮಂಡಲದ ೩೫, ೩೬ ಸೂಕ್ತಗಳು) ದುವಸ್ಯು (೧೦ ನೇ ಮಂಡಲದ ೧೦೦ ನೇ ಸೂಕ್ತ) ಶಾರ್ಯಾತ (೧೦ ನೇ ಮಂಡಲದ ೯೨ ನೇ ಸೂಕ್ತ) ಗೋತಮ (೧೦ ನೇ ಮಂಡಲದ ೧೩೭ ನೇ ಸೂಕ್ತ ; ೧ನೇ ಮಂಡಲದಲ್ಲಿ ೮೯, ೯೦ ನೇ ಸೂಕ್ತಗಳು) ಋಜಿಶ್ವಾ (೬ ನೇ ಮಂಡಲದ ೪೯, ೫೦, ೫೧, ೫೨ ನೇ ಸೂಕ್ತಗಳು) ಅವತ್ಸಾರಃ ಕಾಶ್ಯಪಃ (೫ ನೇ ಮಂಡಲದ ೪೪ ನೇ ಸೂಕ್ತ) ಪರುಚ್ಛೇಪ (೧ ನೇ ಮಂಡಲದ ೧೫೯ ನೇ ಸೂಕ್ತ) ಅತ್ರಿರ್ಭೌಮಃ (೫ ನೇ ಮಂಡಲದ ೪೨, ೪೩ ನೇ ಸೂಕ್ತಗಳು) ದೀರ್ಘತಮಾಃ (೧ ನೇ ಮಂಡಲದ ೧೬೪ ನೇ ಸೂಕ್ತ) ವಸಿಷ್ಠ (೧೦ ನೇ ಮಂಡಲದ ೧೩೭ ನೇ ಸೂಕ್ತ) ನಾಭಾನೇದಿಷ್ಠ (೧೦ ನೇ ಮಂಡಲದ ೬೧, ೬೨ ನೇ ಸೂಕ್ತಗಳು) ಗಯಃ ಪ್ಲಾತಃ (೧೦ ನೇ ಮಂಡಲದ ೬೩, ೬೪ ನೇ ಸೂಕ್ತಗಳು) ಮೇಧಾತಿಥಿಃ (೮ ನೇ ಮಂಡಲದ ೫೮ ನೇ ಸೂಕ್ತ) ಮನುರ್ವೈವಸ್ವತಃ (೮ ನೇ ಮಂಡಲದಲ್ಲಿ ೩೭, ೩೮ ನೇ ಸೂಕ್ತಗಳು) ಕಕ್ಷೀವಾನ್ (೧ ನೇ ಮಂಡಲದಲ್ಲಿ ೧೨೧, ೧೨೨ ನೇ ಸೂಕ್ತಗಳು) ವಿಹವ್ಯ ಆಂಗಿರಸಃ (೧೦ ನೇ ಮಂಡಲದ ೧೨೮ ನೇ ಸೂಕ್ತ) ಅಗಸ್ತ್ಯ (೧ ನೇ ಮಂಡಲದ ೧೭೯ ನೇ ಸೂಕ್ತ) ಬೃಹದುಕ್ಥ (೧೦ ನೇ ಮಂಡಲದ ೫೬ ನೇ ಸೂಕ್ತ) ಬಂಧ್ವಾದಯಃ (೧೦ ನೇ ಮಂಡಲದ ೫೭ ನೇ ಸೂಕ್ತ) ಪ್ರಜಾಪತಿರ್ವೈಶ್ವಾಮಿತ್ರಃ (೩ ನೇ ಮಂಡಲದ ೫೬ ನೇ ಸೂಕ್ತ) ವಿಶ್ವಾಮಿತ್ರ (೩ ನೇ ಮಂಡಲದ ೫೭ ನೇ ಸೂಕ್ತ ; ೧೦ ನೇ ಮಂಡಲದ ೧೩೭ ನೇ ಸೂಕ್ತ). ಈ ಋಷಿಗಳಲ್ಲದೆ ಇನ್ನೂ ಇತರ ಋಷಿಗಳು ವಿಶ್ವೇದೇವತೆಗಳನ್ನು ಅಲ್ಲಲ್ಲಿ ಕೆಲವು ಋಕ್ಕುಗಳಲ್ಲಿ ಸ್ತುತಿಸಿರುವರು. ಇವರುಗಳ ಸ್ತುತಿಗಳಲ್ಲಿಯೂ ದೇವತಾ ಪ್ರಭೇದಗಳಲ್ಲಿಯೂ ಇತರ ವಿಷಯಗಳಲ್ಲಿಯೂ ಅನೇಕ ಪ್ರಕಾರಗಳು ಕಂಡುಬರುವವು.

132. ಒಂದು ಸೂಕ್ತದಲ್ಲಿ ಅಥವಾ ಮಂತ್ರದಲ್ಲಿ ಅನೇಕ ದೇವತೆಗಳ ಸ್ತುತಿಯಿದ್ದಲ್ಲಿ ಆ ಸೂಕ್ತವು ಅಥವಾ ಮಂತ್ರವು ವಿಶ್ವೇದೇವತಾಕವೆಂದು ಯಾಸ್ಕ, ಶಾಂಡಿಲ್ಯ ಎಂಬ ಆಚಾರ್ಯರು ಹೇಳಿರುವರು.

129. In Lusa, Duvasyu, Saryata, Gotama, Rijisvan, Avatsara, Paruchepa, Atri, the Dirghatamas.

27. **Character of Vaisvadeva hymns.**

130. In Vasistha, Nabhanedistha, Gaya, Medhatithi, Manu, Kaksivat, Vihavya, as well as in many other seers.

131, In Agastya, Brhaduktha, Visvamitra, and Gathin, variations (ವಿಪ್ರವಾದಾಃ) are here in (in the ಋಗ್ವೇದ) apparent in their respective praises.

132. Now the teachers Yaska and Sandilya say that any formula

ಆಚಾರ್ಯೌ ಯಾಸ್ಕಶಾಂಡಿಲ್ಯೌ ವೈಶ್ವದೇವಂ ತದಾಹತುಃ ॥ ೧೩೨ ॥
ಸಾದಂ ವಾ ಯದಿ ವಾರ್ಧರ್ಚಮೃಚಂ ವಾ ಸೂಕ್ತಮೇವ ವಾ ।
ವೈಶ್ವದೇವಂ ವದೇತ್ಸರ್ವಂ ಯತ್ಕಿಂಚಿದ್ಬಹುದೈವತಂ ॥ ೧೩೩ ॥
ಋಷಿಭಿರ್ದೇವತಾಃ ಸರ್ವಾ ವಿಶ್ವಾಭಿಃ ಸ್ತುತಿಭಿಃ ಸ್ತುತಾಃ ।
ಸಂಜ್ಞಾ ತು ವಿಶ್ವಘಿತ್ಯೇಷಾ ಸರ್ವಾವಾಪ್ತೌ ನಿಪಾತಿತಾ ॥ ೧೩೪ ॥
ಸಾರಸ್ವತಸ್ತು ಸಪ್ತಮ ಏಶಾಃ ಪ್ರಯೋಗದೇವತಾಃ ।
ಸರಸ್ವತೀತಿ ದ್ವಿವಿಧಮೃಕ್ಷು ಸರ್ವಾಸು ಸಾ ಸ್ತುತಾ ॥ ೧೩೫ ॥
ನದೀವದ್ದೇವತಾವಚ್ಚ ತತ್ರಾಚಾರ್ಯಸ್ತು ಶೌನಕಃ ।

133, ಒಂದು ಸೂಕ್ತ, ಋಕ್ಕು, ಅರ್ಧಋಕ್ಕು, ಪಾದ ಇವುಗಳಲ್ಲಿ ಯಾವುದರಲ್ಲಾದರೂ ಅನೇಕ ದೇವತೆಗಳ ಪ್ರಶಂಸೆ ಇದ್ದರೆ ಅದನ್ನು ವಿಶ್ವೇದೇವತಾಕವೆಂದು ಹೇಳಬೇಕು.

134. ಈ ವೈಶ್ವದೇವಸೂಕ್ತಗಳಲ್ಲಿ ಎಲ್ಲಾ ದೇವತೆಗಳನ್ನು ಎಲ್ಲಾವಿಧ ಸ್ತುತಿಗಳಿಂದಲೂ ಋಷಿಗಳು ಸ್ತುತಿಸಿರುವರು. ಈ ಎಲ್ಲಾ ದೇವತೆಗಳನ್ನು ನಿರ್ದೇಶಿಸುವಾಗ ವಿಶ್ವ (ಎಲ್ಲಾ) ಎಂಬ ಶಬ್ದಪ್ರಯೋಗವಿರುವುದರಿಂದ ಎಲ್ಲಾ ದೇವತೆಗಳನ್ನು ನಿರ್ದೇಶಿಸಲಾಗಿದೆಯೆಂದು ತಿಳಿಯಬೇಕು.

ಸರಸ್ವತೀದೇವತಾಕವಾದ ಮಂತ್ರಗಳು ಮತ್ತು ಇಂದ್ರದೇವತಾಕವಾದ ಸೂಕ್ತಗಳು

135. ಈಗ ಮೂರನೇ ಸೂಕ್ತದ ೭ನೇ ತೃಚದಲ್ಲಿ (ಮೂರನೇ ಸೂಕ್ತದ ೯-೧೨ನೇ ಋಕ್ಕುಗಳಲ್ಲಿ) ಸರಸ್ವತೀದೇವತೆಯು ಸ್ತುತಳಾಗಿರುವಳು. ಈ ಋಕ್ಕುಗಳು ಪ್ರಯೋಗಶಸ್ತ್ರಮಂತ್ರಗಳಲ್ಲಿ ಸೇರಿವೆ. ಸರಸ್ವತೀದೇವತೆಯು ಮಂತ್ರಗಳಲ್ಲಿ ಎರಡು ವಿಧವಾಗಿ ಸ್ತುತಿಸಲ್ಪಟ್ಟಿರುವಳು.

136. ಸರಸ್ವತಿಯು ನದಿಯೆಂದೂ, ಸರಸ್ವತೀ ಎಂಬ ಹೆಸರಿನ ದೇವತೆಯೆಂದೂ ಎರಡು ವಿಧವಾಗಿ

---

in which a combination of many (deities) appears, is addressed to the All-gods.

133. One should state everything, whatever it be, a verse, or hemistich, or stanza, or hymn, which is addressed to many divinities, to be addressed to the All-gods.

134. All (ಸರ್ವಾಃ) the deities are praised by the seers with collective laudations; now this technical term (ಸಂಜ್ಞಾ) 'collective' (ವಿಶ್ವ) is laid down (ನಿಪಾತಿತ) in (the sense of) all-comprehensiveness (ಸರ್ವಾವಾಪ್ತೌ).

28. **Paassages of the Rig-Veda addressed to Sarasvati. Indra hymns.**

135. Now the seventh (triplet) is addressed to Sarasvati (3. 10-12). These are the Prauga deities. She is praised in all stanzas by the name of Sarasvati in two ways:

136. As a river, and as a deity. Now with regard to this the

ನದಿವನ್ನಿಗವಾಃ ಷಟ್ ತೇ ಸಪ್ತಮೋ ನೇತ್ಯುವಾಚ ಹ ॥ ೧೩೬ ॥

ಅಂಬ್ಯೇಕಾ ಚ ದೃಷದ್ವತ್ಯಾಂ ಚಿತ್ರ ಇಚ್ಚ ಸರಸ್ವತೀ ।
ಇಯಂ ಶುಷ್ಮೇಭಿರಿತ್ಯೇತಂ ಮೇನೇ ಯಾಸ್ಕಸ್ತು ಸಪ್ತಮಂ ॥ ೧೩೭ ॥

ಪಶೋಃ ಸಾರಸ್ವತಸ್ಯೈತಾಂ ಯಾಜ್ಯಾಂ ಮೈತ್ರಾಯಣೀಯಕೇ ।
ಪ್ರಾಧಾನ್ಯಾದ್ಧವಿಷಃ ಪಶ್ಯನ್ವಾಚ ಏವೈತರೋಽಬ್ರವೀತ್ ॥ ೧೩೮ ॥

ಸುರೂಪಕೃತ್ನುಮಿತ್ಯೈಂದ್ರಂ ಸಪ್ತ ಚಾನ್ಯಾನ್ಯತಃ ಪರಂ ।

ಆ ದೇವತೆಯ ಸ್ತುತಿ ಇರುವುದು. ನದೀರೂಪವಲ್ಲಿ ಈ ದೇವತೆಯನ್ನು ಸ್ತುತಿಸಿರುವ ಮಂತ್ರಗಳು ಆರು ಮಾತ್ರ ಎಂದು ಶೌನಕಮಹರ್ಷಿಯು ಹೇಳಿರುವರು. ಇವಲ್ಲದೆ ಏಳನೆಯ ಮಂತ್ರವು ಯಾವುದೂ ಇರುವುದಿಲ್ಲ.

137. ಆ ಆರು ಮಂತ್ರಗಳು ಯಾವವೆಂದರೆ—**ಅಂಬಿತಮೇ** (ಋ. ಸಂ. ೨-೪೧-೧೬) **ಏಕಾ ಚೇತ್ಸರಸ್ವತೀ** (ಋ. ಸಂ. ೭-೯೫-೨) **ನಿ ತ್ವಾ ದಧೇ** (ಋ. ಸಂ. ೩-೨೩-೪) **ಚಿತ್ರ ಇದ್ರಾಜಾ** (ಋ. ಸಂ. ೮-೨೧ ೧೪) **ಸರಸ್ವತೀ ಸಯಮುಃ** (ಋ. ಸಂ. ೧೦.೬೪-೯) **ಇಂದ್ರೋ ನೇದಿಷ್ಠ** (ಋ. ಸಂ. ೬-೬೨-೬) ಇವೇ ಆ ಆರು ಮಂತ್ರಗಳು. ಆದರೆ ಯಾಸ್ಕರು **ಇಯಂ ಶುಷ್ಮೇಭಿಃ** (ಋ. ಸಂ. ೬-೬೧-೨) ಎಂಬ ಏಳನೆಯ ಮಂತ್ರವೂ ಸರಸ್ವತೀನದಿಯನ್ನು ಸ್ತುತಿಸುವುದೆಂದು ಅಭಿಪ್ರಾಯಪಡುವರು.

138. ಆದರೆ ಮೈತ್ರಾಯಣೀಯಸಂಹಿತೆಯಲ್ಲಿ ಹೇಳಿರುವಂತೆ **ಈ ಇಯಂ ಶುಷ್ಮೇಭಿಃ** ಎಂಬ ಏಳನೆಯ ಮಂತ್ರವು ಸರಸ್ವತೀದೇವತೆಯನ್ನುದ್ದೇಶಿಸಿ ಮಾಡುವ ಪಶುಹೋಮದಲ್ಲಿ ಯಾಜ್ಯಾನುವಾಕ್ಯನನ್ನಾಗಿ ಪಠಿಸುವುದರಿಂದಲೂ ಹವಿಸ್ಸನ್ನು ಹೋಮಮಾಡುವುದು ಯಜ್ಞದಲ್ಲಿ ಪ್ರಧಾನಕರ್ಮವಾಗುವುದರಿಂದಲೂ ಆ ಹೋಮವು ವಾಗ್ದೇವತೆಯನ್ನು ಉದ್ದೇಶಿಸಿರುವುದರಿಂದಲೂ ಈ ಮಂತ್ರವೂ ವಾಗ್ದೇವತೆಯಾದ ಸರಸ್ವತಿಯನ್ನೇ ನಿರ್ದೇಶಿಸುವುದೆಂದು ಇತರಾ ಎಂಬ ಸ್ತ್ರೀಯ ಪುತ್ರನಾದ ಐತರನೆಂಬ ಋಷಿಯು ಹೇಳಿರುವನು.

139. **ಸುರೂಪಕೃತ್ನು** ಎಂಬ ಸೂಕ್ತಕ್ಕೂ ಅದರ ಮುಂದಿನ ಏಳು ಸೂಕ್ತಗಳಿಗೂ (೫-೧೧ ಸೂಕ್ತ

---

teacher Saunaka has stated that the passages (in which she is praised) as a river are six, (and that there is) not a seventh.

137. (the six being) 'Best Mother' (ಅಂಬಿತಮೇ : ii. 41-16), 'Alone' (vii. 95. 2), 'On the Drisadvati' (ದೃಷದ್ವತ್ಯಾಂ : iii. 23 4), 'Citra-indeed' (ಚಿತ್ರ ಇತ್ : vii. 21-18) 'Sarasvati' (x. 64-9 and vi. 52.6). Yaska, however, regarded this (passage), 'She with her might' (ಇಯಂ ಶುಷ್ಮೇಭಿಃ : vi. 61-2), to be a seventh.

138. Aitra regarding this (stanza) as a sacrificial text (ಯಾಜ್ಯ) for the victim offered to Sarasvati (ಸಾರಸ್ವತ) in the Maitrayaniya (ಸಂಹಿತಾ), because the oblation is (here) the chief thing, has stated (that it is addressed to the Vac (ವಾಕ್).

139. (The hymn) 'Doer of fair deeds' (ಸುರೂಪಕೃತ್ನುಂ : i.4) is addressed to Indra, as well as seven others after it (5-11). Six successive stanzas

ಷಳಾದಹ ಸ್ವಧಾಮನು ಮಾರುತೋ೭ನನ್ತರಾ ಋಚಃ ॥ ೧೩೯ ॥

ಏಕಾ ವೀಳು ಚಿದಿಂದ್ರಾಯ ಮರುದ್ಭಿಃ ಸಹ ಗೀಯತೇ ।
ತಸ್ಯಾ ಏಕಾಂತರಾಯಾಸ್ತು ಅರ್ಧರ್ಚೋ೭ನ್ಯೋ ದ್ವಿದೇವತಃ ॥ ೧೪೦ ॥

ಮರುದ್ಗಣಪ್ರಧಾನೋ ಹೀತ್ಥಂ ಚೇಂದ್ರೋ ವಿಚಿಕಿತ್ಸಿತಃ ।
ಮಂದೂ ಸಮಾನವರ್ಚಸಾ ಮಂದುನಾ ವಾ ಸವರ್ಚಸಾ ॥ ೧೪೧ ॥

ಮಂದೂ ಇತಿ ಪ್ರಗೃಹ್ಣಂತಿ ಯೇಷಾಮೇವ ದ್ವಿದೇವತಃ ।
ಏಕದೇವತ್ಯಮಾಶ್ರಾವ್ಯೋ ವಿಜ್ಞಾಯಾಧ್ಯಯನಾತ್ಪದಂ ॥ ೧೪೨ ॥

ಗಳಿಗೂ) ಇಂದ್ರನು ದೇವತೆಯು. ಆದರೆ, **ಯುಂಜಂತಿ ಬ್ರಧ್ನಂ** ಎಂಬ ಆರನೆಯ ಸೂಕ್ತದಲ್ಲಿ ೪, ೬, ೮, ೯ನೇ ಋಕ್ಕುಗಳಿಗೆ ಇಂದ್ರ ಮತ್ತು ಮರುತ್ತುಗಳೂ ದೇವತೆಯು.

೬ನೇ ಸೂಕ್ತದ ೫, ೭ನೇ ಋಕ್ಕುಗಳಲ್ಲಿರುವ ಇಂದ್ರ ಮತ್ತು ಮರುತ್ತುಗಳ ಸಾಹಚರ್ಯ

140. **ಯುಂಜಂತಿ ಬ್ರಧ್ನಂ** ಎಂಬ ಆರನೆಯ ಸೂಕ್ತದಲ್ಲಿರುವ **ವೀಳು ಚಿತ್** ಎಂಬ ಐದನೆಯ ಋಕ್ಕಿನಲ್ಲಿ ಇಂದ್ರನನ್ನು ಮರುತ್ತುಗಳೊಡನೆ ಸ್ತುತಿಸಲಾಗಿದೆ. ಆದರಿಂದ ಮುಂದಿನ ಏಳನೆಯ ಋಕ್ಕಿನಲ್ಲಿ (**ಇಂದ್ರೇಣ ಸಂ** ಎಂಬ ಋಕ್ಕು) ಉತ್ತರಾರ್ಧಕ್ಕೆ ಇಬ್ಬರು ದೇವತೆಗಳಿರುವರು.

141-142. ಈ ಏಳನೆಯ ಋಕ್ಕಿಗೆ ಮರುದ್ಗಣವೇ ಮುಖ್ಯದೇವತೆಯು. ಇಂದ್ರನೂ ದೇವತೆಯಾಗಿರುವ ವಿಷಯದಲ್ಲಿ ಕೆಲವರು ಸಂಶಯವನ್ನು ವ್ಯಕ್ತಪಡಿಸುವರು. ಈ ಋಕ್ಕಿನ ಉತ್ತರಾರ್ಧದಲ್ಲಿರುವ **ಮಂದೂ** ಎಂಬ ಶಬ್ದವು ದ್ವಿವಚನವೆಂದು ಭಾವಿಸಿದರೆ ಆಗ ಇಬ್ಬರು ದೇವತೆಗಳೆಂದು ಹೇಳಬೇಕಾಗುವುದು. ಆದರೆ **ಮಂದೂ** ಎಂಬ ಶಬ್ದಕ್ಕೆ **ಮಂದುನಾ** ಎಂಬ ತೃತೀಯ ವಿಭಕ್ತ್ಯರ್ಥವನ್ನು ಹೇಳುವುದಾದರೆ ಆಗ ಈ ಋಕ್ಕಿಗೆ ಒಂದೇ ದೇವತೆಯೆಂದು ಹೇಳಬೇಕಾಗುವುದು. ಆದ್ದರಿಂದ ಈ ಋಕ್ಕಿನ ದೇವತೆಗಳ ವಿಷಯದಲ್ಲಿ ಅಭಿಪ್ರಾಯಭೇದವಿರುವುದು.

(beginning) 'Then according to their wont' (ಅಥ ಸ್ವಧಾಮನು : 6. 4-9) are addressed to the Maruts.

29, **Indra associated with the Maruts jn RV. j. 6.**

140. One (of them) 'What is firm' (ವೀಳು ಚಿತ್ : 6.5) is sung in honour of Indra with the Maruts. But the latter hemistich of the (stanza) next but one to this (i.e. 6.7) is addreseed to two deities.

141. For while it is chiefly addressed to the host of the Maruts, Indra is at the same time intended to be distinguished thus : 'both glad (and) equal in brilliance' (ಮಂದೂ ಸಮಾನವರ್ಚಸಾ) ; or (this means) 'with hi who is glad (and) of equal brilliance'.

142. Those to whom (the hemistich appears to be) addressed to two deities, explain (the final vowel of) mandu as not liable to phonetic combination (ಪ್ರಗೃಹ್ಣಂತಿ). One (however) who from his study (of it) recognizes the pada to have only one deity, deverses a hearing.

ರೋದಸೀ ದೇವಪತ್ನೀನಾಮಥರ್ವಾಂಗಿರಸೇ ಯಥಾ ।
ಮರುದ್ಗಣಪ್ರಧಾನೇಯಮಾಚಾರ್ಯಾಣಾಂ ಸ್ತುತಿರ್ಮತಾ ॥ ೧೪೩ ॥
ಮರುದ್ಗಣಪ್ರಧಾನತ್ವಾದಿಂದ್ರಸ್ತು ವಿಚಿಕಿತ್ಸಿತಃ ।
ಮರುದ್ಗಣಂ ಮಹೇಂದ್ರಸ್ಯ ಸಮಾಂಶಂ ಸಕಲಂ ವಿದುಃ ॥ ೧೪೪ ॥
ಅಗ್ನಿಮಿತ್ಯಗ್ನಿದೈವತ್ಯಂ ಪಾದಸ್ತತ್ರ ದ್ವಿದೇವತಃ ।
ನಿರ್ಮಥ್ಯಾಹವನೀಯಾರ್ಥಾವಗ್ನಿನಾಗ್ನಿಃ ಸಮಿಧ್ಯತೇ ॥ ೧೪೫ ॥
ದ್ವಿತೀಯೇ ದ್ವಾದಶರ್ಚೀ ತು ಪ್ರತ್ಯೃಚಂ ಯಾಸ್ತು ದೇವತಾಃ ।

143. ಅಥರ್ವವೇದದಲ್ಲಿ **ರೋದಸೀ** (ರುದ್ರಪತ್ನಿ) ಎಂಬುದು ದೇವಪತ್ನಿಯರಲ್ಲಿ ಓರ್ವ ಸ್ತ್ರೀಯೆಂಬ ಅರ್ಥವನ್ನು ಸೂಚಿಸುವಂತೆ ಈ ಸೂಕ್ತದಲ್ಲಿ ಈ ಋಕ್ಕಿಗೆ (೭ನೇ ಋಕ್ಕಿಗೆ) ಮರುದ್ಗಣವೇ ಮುಖ್ಯದೇವತೆಯೆಂದು (ಇಂದ್ರಶಬ್ದವಿದ್ದರೂ ಸಹ) ಅನೇಕ ಆಚಾರ್ಯರ ಮತವು.

144. ಮರುದ್ಗಣವೇ ಇಲ್ಲಿ ಪ್ರಧಾನದೇವತೆಯಾಗಿರುವುದರಿಂದ ಇಂದ್ರನು ಪ್ರಸ್ತಾಪಶ್ಲೇಷದಿಂದ ಸೂಚಿತನಾಗಿರುವನೆಂದು ತಿಳಿಯಬಹುದು. ಏಕೆಂದರೆ ಮರುತ್ಸಂಬಂಧವಾದ ಸಕಲ ಯಜ್ಞಕರ್ಮಗಳಲ್ಲಿಯೂ ಹವಿರ್ಭಾಗದಲ್ಲಿಯೂ ಇಂದ್ರನಿಗೂ ಮರುದ್ಗಣಗಳಿಗೂ ಸಮಾನವಾದ ಭಾಗವಿರುವುದೆಂದು ಪ್ರಸಿದ್ಧಿಯು.

ಪ್ರಥಮಮಂಡಲದ ೧೨ ನೇ ಸೂಕ್ತ ಮತ್ತು ೧೩ ನೇ ಸೂಕ್ತವಾದ ಆಪ್ರೀಸೂಕ್ತ

145. **ಅಗ್ನಿಂ ದೂತಂ ವೃಣೀಮಹೇ** ಎಂಬ ಹನ್ನೆರಡನೆಯ ಸೂಕ್ತಕ್ಕೆ ಅಗ್ನಿಯೇ ದೇವತೆಯು ; **ಈ** ಸೂಕ್ತದ **ಅಗ್ನಿನಾಗ್ನಿಃ ಸಮಿಧ್ಯತೇ** ಎಂಬ ಆರನೆಯ ಋಕ್ಕಿಗೆ ಇಬ್ಬರು ದೇವತೆಗಳು—ನಿರ್ಮಥ್ಯಾಗ್ನಿ, ಆಹವನೀಯಾಗ್ನಿ ಎಂದು. ನಿರ್ಮಥ್ಯಾಗ್ನಿ (ಅರಣಿಗಳಲ್ಲಿ ಕಡೆದ ಅಗ್ನಿ) ಯಿಂದ ಆಹವನೀಯಾಗ್ನಿಯು ಹೊತ್ತಿಸಲ್ಪಡುವುದೆಂದು ಇಲ್ಲಿ ಹೇಳಿದೆ.

146. ಇದರ ಮುಂದಿನ ಸೂಕ್ತವಾದ **ಸುಸಮಿದ್ಧೋ ನ** ಎಂಬ ಹದಿಮೂರನೆಯ ಸೂಕ್ತದಲ್ಲಿ ಹನ್ನೆರಡು

143. as Rodasi in the Atharva-veda (ಅಥರ್ವಾಂಗಿರಸ) is (regarded as one) of the wives of the gods.

This praise is by the teachers regarded as chiefly addressed to the host of the Maruts.

144. As the host of the Maruts is chiefly addressed, Indra is at the same time intended to be distinguished. For the entire host of the Maruts is considered to share (in sacrifice) equaly (ಸಮಂಸಮಂ) with the great Indra.

30. The deities of RV. i. 12, and of the Apri hymn i. 13.

145. The hymn 'Agni' (ಅಗ್ನಿ) : i. 12) has Agni as its divinity. In it one verse, 'by Agni Agni is kindled' (ಅಗ್ನಿನಾಗ್ನಿಃಸಮಿಧ್ಯತೇ 6), is addressed to two deities: they mean ನಿರ್ಮಥ್ಯ and ಆಹವನೀಯ.

146. Now as to the deities which, in the second hymn of twelve stanzas(i. 13),are praised along with Agni, hear their names from me.

ಸ್ತೂಯಂತೇ ಹ್ಯಗ್ನಿನಾ ಸಾರ್ಧಂ ತಾಸಾಂ ನಾಮಾನಿ ಮೇ ಶೃಣು ॥ ೧೪೬ ॥
ಪ್ರಥಮಾಯಾಂ ಸ್ತುತಶ್ಚೇಧ್ಮೋ ದ್ವಿತೀಯಾಯಾಂ ತನೂನಪಾತ್ ।
ನರಾಶಂಸಸ್ತೃತೀಯಾಯಾಂ ಚತುರ್ಥ್ಯಾಂ ಸ್ತೂಯತೇ ತ್ವಿಳಃ ॥ ೧೪೭ ॥
ಬರ್ಹಿರೇವ ತು ಪಂಚಮ್ಯಾಂ ದ್ವಾರೋ ದೇವ್ಯಸ್ತತೋಽನ್ಯಯಾ ।
ನಕ್ತೋಷಾಸಾ ತು ಸಪ್ತಮ್ಯಾಮಷ್ಟಮ್ಯಾಂ ಸಂಸ್ತುತೌ ಸಹ ॥ ೧೪೮ ॥
ದೈವ್ಯಾವಿತಿ ತು ಹೋತಾರೌ ನವಮ್ಯಾಮೃಚಿ ಸಂಸ್ತುತಾಃ ।
ತಿಸ್ರೋ ದೇವ್ಯೋ ದಶಮ್ಯಾಂ ತು ಜ್ಞೇಯಸ್ತ್ವಷ್ಟೈವ ತು ಸ್ತುತಃ ॥ ೧೪೯ ॥
ಏಕಾದಶ್ಯಾಂ ತು ಸೂಕ್ತಸ್ಯ ಸ್ತುತಂ ವಿದ್ಯಾದ್ವನಸ್ಪತಿಂ ।
ದ್ವಾದಶ್ಯಾಂ ತು ಸ್ತುತಾ ದೇವೀರ್ವಿದ್ಯಾತ್ಸ್ವಾಹಾಕೃತೀರಿತಿ ॥ ೧೫೦ ॥

ಋಕ್ಕುಗಳಿರುವುವು. ಪ್ರತಿಋಕ್ಕಿಗೂ ಬೇರೆ ಬೇರೆ ದೇವತೆಗಳಿದ್ದು ಅವರು ಅಗ್ನಿಯಿಂದ ಸಹಿತರಾಗಿ ಸ್ತುತಿಸಲ್ಪಟ್ಟಿರುವರು. ಆ ದೇವತೆಗಳ ಹೆಸರುಗಳನ್ನು ಹೇಳುವೆನು, ಕೇಳು.

147. ಮೊದಲನೆಯ ಋಕ್ಕಿನಲ್ಲಿ **ಇಧ್ಮವೂ** (ಜ್ವಲಿತಾಗ್ನಿಯೂ) ಎರಡನೆಯ ಋಕ್ಕಿನಲ್ಲಿ **ತನೂನಪಾತ್** ಎಂಬ ದೇವತೆಯೂ, ಮೂರನೆಯ ಋಕ್ಕಿನಲ್ಲಿ **ನರಾಶಂಸ**ನೆಂಬ ದೇವತೆಯೂ, ನಾಲ್ಕನೆಯ ಋಕ್ಕಿನಲ್ಲಿ **ಇಳಃ** ಎಂಬ ದೇವತೆಯೂ ಸ್ತುತರಾಗಿರುವರು.

148. ಐದನೆಯ ಋಕ್ಕಿನಲ್ಲಿ **ಬರ್ಹಿಃ** (ಕತ್ತರಿಸಿದ ದರ್ಭೆಗಳು) ಎಂಬ ದೇವತೆಯೂ, ಮುಂದಿನ ಋಕ್ಕಿನಲ್ಲಿ **ದ್ವಾರೋ ದೇವ್ಯಃ** ಎಂಬ ದ್ವಾರಾಭಿಮಾನಿದೇವತೆಗಳೂ, ಏಳನೆಯ ಋಕ್ಕಿನಲ್ಲಿ **ನಕ್ತೋಷಾಸಾ** ಎಂಬ (ರಾತ್ರಿ ಮತ್ತು ಉಷಃಕಾಲಾಭಿಮಾನಿದೇವತೆಗಳು) ದೇವತೆಗಳೂ, ಎಂಟನೆಯ ಋಕ್ಕಿನಲ್ಲಿ,

149. **ದೇವ್ಯೌ ಹೋತಾರೌ** ಎಂಬ ದೇವತೆಗಳೂ, ಒಂಭತ್ತನೆಯ ಋಕ್ಕಿನಲ್ಲಿ (ಸರಸ್ವತೀ ಇಳಾ ಭಾರತೀ) **ತಿಸ್ರೋ ದೇವ್ಯಃ** ಎಂಬ ಮೂರು ಮಂದಿ ದೇವತೆಯರೂ, ಹತ್ತನೆಯ ಋಕ್ಕಿನಲ್ಲಿ **ತ್ವಷ್ಟೃವೂ**

150. ಹನ್ನೊಂದನೆಯ ಋಕ್ಕಿನಲ್ಲಿ **ವನಸ್ಪತಿ**ಯೆಂಬ ದೇವತೆಯೂ, ಹನ್ನೆರಡನೆಯ ಋಕ್ಕಿನಲ್ಲಿ **ಸ್ವಾಹಾಕೃತಿ** ಎಂಬ ದೇವತೆಯೂ ಸ್ತುತರಾಗಿರುವರು.

147. In the first (stanxa Fuel(ಇಧ್ಮ)is praised, in the second Tanunapat, Narasamsa in the third, but in the forth Ila is praised.

148. but the Litter (ಬರ್ಹಿ) in the fifth, then the Divine Doors with other (6), Night and Morning (ನಕ್ತೋಷಾಸಾ) in the seventh, while in the eight are praised together.

149. the two 'Divine' Sacrificers, in the ninth stanza are praised the Three Goddesses; But Tvastr is to be known as praised in the tenth.

31. The eleven Apri hymns.

150. In the eleventh (stanza) of the hymn one should know Vanaspati to be praised, but in the twelfth one shouid know the divine 'Svahakrtis' to be praised.

ಸೂಕ್ತೇऽಸ್ಮಿನ್ಪ್ರೈಷ್ಯಚಂ ಯಾಸ್ತು ದೇವತಾಃ ಪರಿಕೀರ್ತಿತಾಃ ।
ತಾ ಏವ ಸರ್ವಾಸ್ವಾಪ್ರೀಷು ದ್ವಿತೀಯಾ ತು ವಿಕಲ್ಪತೇ ॥ ೧೫೧ ॥
ಪ್ರೈಷೈಃ ಸಹಾಪ್ರೀಸೂಕ್ತಾನಿ ತಾನ್ಯೇಕಾದಶ ಸಂತಿ ಚ ।
ಯಜೂಂಷಿ ಪ್ರೈಷಸೂಕ್ತಂ ವಾ ದಶೈತಾನೀತರಾಣಿ ತು ॥ ೧೫೨ ॥
ಸೌತ್ರಾಮಣಾನಿ ತು ತ್ರೀಣಿ ಪ್ರಾಜಾಪತ್ಯಾಶ್ವಮೇಧಿಕೇ ।
ಪುರುಷಸ್ಯ ತು ಯನ್ಮೇಧೇ ಯಜುಃಷ್ವೇವ ತು ತಾನಿ ಷಟ್ ॥ ೧೫೩ ॥
ಅತ್ರೈವ ಪ್ರೈಷಸೂಕ್ತಂ ಸ್ಯಾನ್ನ ಯಜುಃಷ್ವಾದ್ರಿಯೇತ ತತ್ ।

ಹನ್ನೊಂದು (ಹತ್ತು) ಆಪ್ರೀಸೂಕ್ತಗಳು

151. ಈ ಸೂಕ್ತದ ಪ್ರತಿಋಕ್ಕಿನಲ್ಲಿಯೂ ಯಾವ ಯಾವ ದೇವತೆಗಳು ಸ್ತುತರಾಗಿರುವರೋ ಅವರೆಲ್ಲರೂ ಎಲ್ಲಾ (ಹತ್ತು) ಆಪ್ರೀಸೂಕ್ತಗಳಲ್ಲಿಯೂ ಈ ಕ್ರಮದಿಂದಲೇ ಸ್ತುತರಾಗಿರುವರು. ಎರಡನೆಯ ದೇವತೆಯ ವಿಷಯದಲ್ಲಿ (**ತನೂನಪಾತ್** ಅಥವಾ **ನರಾಶಂಸ**) ಸ್ವಲ್ಪ ವ್ಯತ್ಯಾಸವಿರುವುದು.

152. ಪ್ರೈಷಸೂಕ್ತವನ್ನೂ ಸೇರಿಸಿಕೊಂಡರೆ ಒಟ್ಟು ಹನ್ನೊಂದು ಆಪ್ರೀಸೂಕ್ತಗಳಿರುವುವು ಪ್ರೈಷಸೂಕ್ತವು ಮುಖ್ಯವಾಗಿ ಯಜುರ್ವೇದಕ್ಕೆ ಸಂಬಂಧಪಟ್ಟ ಮಂತ್ರಗಳನ್ನು ನಿರ್ದೇಶಿಸುವುದರಿಂದ ಅದನ್ನು ಬಿಟ್ಟರೆ ಋಗ್ವೇದದಲ್ಲಿ ಒಟ್ಟು ಹತ್ತು ಆಪ್ರೀಸೂಕ್ತಗಳಿರುವುವು.

153. ಇವುಗಳಲ್ಲದೆ, ಸೌತ್ರಾಮಣಿ ಎಂಬ ಯಾಗಕ್ಕೆ ಸಂಬಂಧಪಟ್ಟಂತೆ ಮೂರು ಆಪ್ರೀಸೂಕ್ತಗಳೂ, ಪ್ರಾಜಾಪತ್ಯ, ಅಶ್ವಮೇಧ, ಪುರುಷಮೇಧ ಎಂಬ ಯಾಗಗಳಿಗೆ ಸಂಬಂಧಪಟ್ಟಂತೆ ಒಂದೊಂದು ಆಪ್ರೀಸೂಕ್ತವೂ ಒಟ್ಟು ಆರು ಆಪ್ರೀಸೂಕ್ತಗಳೂ ಯಜುರ್ವೇದಕ್ಕೆ ಸಂಬಂಧಪಟ್ಟಂತಿರುವವು.

154. ಈ ಆರು ಆಪ್ರೀಸೂಕ್ತಗಳಲ್ಲಿ ಶುಕ್ಲಯಜುರ್ವೇದದ ವಾಜಸನೇಯ ಸಂಹಿತೆಯಲ್ಲಿರುವ 29 ರಿಂದ 40 ವರೆಗಿನ ಪ್ರೈಷಮಂತ್ರಗಳನ್ನು ಮಾತ್ರ ವಿಮರ್ಶೆಮಾಡಬೇಕು. ಉಳಿದ ಐದು ಸೂಕ್ತಗಳನ್ನು ವಿವೇಚಿಸಬೇಕಾದ

151. Now as to the deities which, in each stanza, are celebrated in this hymn (i. 13), they (occur) in all the Apris; the second (deity), however, is subject to option (ವಿಕಲ್ಪತೇ).

152. As to the Apri hymns, including the praises (ritual summons), they are eleven (in number); or (rather) the praisa hymn (consists of) sacrificial formulas, while these other (hymns of the Rg.veda are ten in number).

153. Now there are three (Apri hymns) relating to the sautramani sacrifice (ಸೌತ್ರಾಮಣಂ), one to Prajapati (prajapatya), and one used at the horse-sacrifice (ಅಶ್ವಮೇಧಿಕಾ), and the one (employed) in the human sacrifice (ಪುರುಷಸ್ಯ ಮೇಧೇ); these (make) six (speeial additional Apri hymns) in the Yajur-veda (ಯಜುಃಸು).

154. Here only the Praisa hymn (VS. xxi. 29-40) need be (considered); that (which has been referred to beyond this) in the Yajur-veda

ತೇಷಾಂ ಪ್ರೈಷಗತಂ ಸೂಕ್ತಂ ಯಚ್ಚ ದೀರ್ಘತಮಾ ಜಗೌ ॥ ೧೫೪ ॥
ಮೇಧಾತಿಥೌ ಯದುಕ್ತಂ ಚ ತ್ರೀಣ್ಯೇವೋಭಯವಂತಿ ತು ।
ಋಷೌ ಗೃತ್ಸಮದೇ ಯಚ್ಚ ವಾಧ್ರ್ಯಶ್ವೇ ಚ ಯದುಚ್ಯತೇ ॥ ೧೫೫ ॥
ನರಾಶಂಸವದತ್ರೇಶ್ಚ ದದರ್ಶ ಚ ಯದೌರ್ವಶಃ ।
ತನೂನಪಾದಗಸ್ತ್ಯಶ್ಚ ಜಮದಗ್ನಿಶ್ಚ ಯಜ್ಜಗೌ ॥ ೧೫೬ ॥

ಆವಶ್ಯಕತೆ ಇಲ್ಲ. ಮೇಲೆ ಹೇಳಿದ ಪ್ರೈಷಸೂಕ್ತದ 11 ಮಂತ್ರಗಳನ್ನು **ದೀರ್ಘತಮಾಃ** ಎಂಬ ಋಷಿಯು ಪಠಿಸಿರುವನು.

ಆಪ್ರೀಸೂಕ್ತಗಳ ಮೂರು ಗುಂಪುಗಳು ಅಥವಾ ಪ್ರಭೇದಗಳು

155 ಈ ಮೇಲಿನ 10 ಆಪ್ರೀಸೂಕ್ತಗಳಲ್ಲಿ ಮೇಧಾತಿಥಿ ಋಷಿದೃಷ್ಟವಾದ (1 ನೇ ಮಂಡಲದ 13 ನೇ ಸೂಕ್ತ) ಸೂಕ್ತದಲ್ಲಿಯೂ, **ದೀರ್ಘತಮಾಃ** ಎಂಬ ಋಷಿದೃಷ್ಟವಾದ **ಸಮಿದ್ಧೋ ಅಗ್ನ ಆ ವಹ** ಎಂಬ 1 ನೇ ಮಂಡಲದ 142 ನೇ ಸೂಕ್ತದಲ್ಲಿಯೂ ಎರಡನೆಯ ದೇವತೆಯ ಸ್ಥಾನದಲ್ಲಿ **ತನೂನಪಾತ್** ಮತ್ತು **ನರಾಶಂಸ** ಎಂಬ ಎರಡು ದೇವತೆಗಳೂ ಇವೆ. ಆದ್ದರಿಂದ ಈ 2 ಸೂಕ್ತಗಳಿಗೆ **ಉಭಯವಂತಿ ಸೂಕ್ತಾನಿ** ಎಂದು ಹೆಸರು, ಈ ಸೂಕ್ತದಲ್ಲಿರುವಂತೆ ಎರಡನೆಯ ದೇವತೆಯ ಸ್ಥಾನದಲ್ಲಿ ನರಾಶಂಸದೇವತೆಯಿರುವ ಇನ್ನೂ ಮೂರು ಆಪ್ರೀಸೂಕ್ತಗಳಿರುವವು. ಅವು ಯಾವ ವೆಂದರೆ—ಗೃತ್ಸಮದಋಷಿದೃಷ್ಟವಾದ ಸೂಕ್ತ (2 ನೇ ಮಂಡಲದ 3 ನೇ ಸೂಕ್ತ). **ಸಮಿದ್ಧೋ ಅಗ್ನಿರ್ನಿಹಿತಃ** ಎಂಬ ಸೂಕ್ತ; ವಾಧ್ರ್ಯಶ್ವಋಷಿದೃಷ್ಟವಾದ **ಇಮಾಂ ಮೇ ಅಗ್ನೇ** ಎಂಬ ಸೂಕ್ತ (10 ನೇ ಮಂಡಲದ 70 ನೇ ಸೂಕ್ತ); ವಸುಶ್ರುತ ಆತ್ರೇಯನಿಂದ ದೃಷ್ಟವಾದ **ಸುಸಮಿದ್ಧಾಯ** ಎಂಬ ಐದನೆಯ ಮಂಡಲದ ಐದನೆಯ ಸೂಕ್ತ; ವಸಿಷ್ಠ ದೃಷ್ಟವಾದ **ಜುಷಸ್ವ ನಃ** ಎಂಬ ಏಳನೆಯ ಮಂಡಲದ ಎರಡನೆಯ ಸೂಕ್ತ. ಈ ನಾಲ್ಕು ಸೂಕ್ತಗಳಲ್ಲಿಯೂ ಎರಡನೆಯ ಸ್ಥಾನದೇವತೆಯು ನರಾಶಂಸನಾದುದರಿಂದ ಈ ನಾಲ್ಕು ಆಪ್ರೀಸೂಕ್ತಗಳಿಗೆ **ನಾರಾಶಂಸವಂತಿ ಸೂಕ್ತಾನಿ** ಎಂದು ಹೆಸರು.

156-157. ಅಗಸ್ತ್ಯಋಷಿದೃಷ್ಟವಾದ **ಸಮಿದ್ಧೋ ಅದ್ಯ ರಾಜಸಿ** ಎಂಬ ಮೊದಲನೇ ಮಂಡಲದ 188 ನೇ ಸೂಕ್ತದಲ್ಲಿಯೂ, ಜಮದಗ್ನಿಋಷಿದೃಷ್ಟವಾದ **ಸಮಿದ್ಧೋ ಅದ್ಯ ಮನುಷೋ** ಎಂಬ 10 ನೇ ಮಂಡಲದ

(ಯಜುಃಸು) need not be troubled about (here).

Of those (eleven) the hymn relating to the Praisas, and that which Dirghatamas sang (i. 142),

32. Tanunapat and Narasamsa in Apri hymns. Idhma a form of Agni.

155. and that which has been mentioned in (the collection of) Medhatithi (i. 13): only these three contain both (ತನೂನಪಾತ್ and ನರಾಶಂಸ). Both that which is mentioned in (the collection of) Grtsamada (ii. 3) and in (that of) Vadhryasva (x 70).

156. Both (the hymn) of Atri (v. 5) and that (vii. 2) which was revealed to the son of Urvasi (Vasistha), contain Narasamsa. Tanunapat (appears in that) which Agastya (i. 188) and Jamadagni (x. 110) sang.

ವಿಶ್ವಾಮಿತ್ರ ಋಷಿರ್ಯಚ್ಚ ಜಗೌ ವೈ ಕಾಶ್ಯಪೋಽಸಿತಃ ।
ಮೇಧಾತಿಥೇರ್ಯುಚಾಂ ಯಾಸ್ತು ಪ್ರೋಕ್ತಾ ದ್ವಾದಶ ದೇವತಾಃ ॥ ೧೫೭ ॥

ಸಂಪದ್ಯಂತೇ ಯಥಾಗ್ನಿಂ ತಾಃ ಸಂಪದಂ ತಾಂ ನಿಬೋಧತ ।
ಇಧ್ಮೋ ಯಃ ಸರ್ವಮೇವಾಗ್ನಿರಯಂ ಹೀಧ್ಮಃ ಸಮಿಧ್ಯತೇ ॥
ಧ್ಮಾತೇರ್ವೈ ಧೃತಕೃತಂ ರೂಪಂ ಧ್ಮಾತೋ ಹೀಧ್ಮಃ ಸಮಿಧ್ಯತೇ ॥ ೧೫೮ ॥

ಧ್ಮಾತೋ ಹೀಧ್ಮಃ ಸಮಿಧ್ಯತೇ

॥ ಇತಿ ಬೃಹದ್ದೇವತಾಯಾಂ ದ್ವಿತೀಯೋಽಧ್ಯಾಯಃ ॥

110 ನೇ ಸೂಕ್ತದಲ್ಲಿಯೂ, ವಿಶ್ವಾಮಿತ್ರಋಷಿದೃಷ್ಟವಾದ **ಸಮಿತ್ಸಮಿತ್ಸುಮನಾ** ಎಂಬ ಮೂಗನೆಯ ಮಂಡಲದ ನಾಲ್ಕನೆಯ ಸೂಕ್ತದಲ್ಲಿಯೂ ಕಶ್ಯಪಪುತ್ರನಾದ ಅಸಿತ (ಅಥವಾ ದೇವಲ) ಎಂಬ ಋಷಿದೃಷ್ಟವಾದ **ಸಮಿದ್ಧೋ ವಿಶ್ವತಸ್ಪತಿಃ** ಎಂಬ ೯ ನೇ ಮಂಡಲದ 5 ನೇ ಸೂಕ್ತದಲ್ಲಿಯೂ **ತನೂನಪಾತ್** ಎಂಬುದು ಎರಡನೆಯ ದೇವತೆಯಾಗಿರುವುದು. ಆದ್ದರಿಂದ ಈ ನಾಲ್ಕು ಸೂಕ್ತಗಳಿಗೆ **ತನೂನಪಾತ್ಸಂತಿ ಸೂಕ್ತಾನಿ** ಎಂದು ಹೆಸರು. ಮೇಧಾತಿಥಿ ಋಷಿದೃಷ್ಟವಾದ 1 ನೇ ಮಂಡಲದ 13 ನೇ ಸೂಕ್ತದಲ್ಲಿ ಒಟ್ಟು ಹನ್ನೆರಡು ಮಂದಿ ದೇವತೆಗಳು ಸ್ತುತರಾಗಿದಾರೆ.

158. ಈ ದೇವತೆಗಳು ಯಾವ ರೀತಿ ಅಗ್ನಿಯನ್ನು ಪ್ರತಿಬಿಂಬಿಸುವರೆಂಬುದನ್ನು ಹೇಳುವೆನು, ಕೇಳಿ. ಈ ಎಲ್ಲಾ ಆಪ್ರೀಸೂಕ್ತಗಳಲ್ಲಿಯೂ ಮೊದಲನೆಯ ಋಕ್ಕಿನಲ್ಲಿರುವ **ಇಧ್ಮಃ** ಎಂಬ ಶಬ್ದವು ಅಗ್ನಿಯನ್ನು ಸೂಚಿಸುವುದು. ಏಕೆಂದರೆ **ಸಮಿಧ್ಯತೇ** ಎಂಬ ಶಬ್ದಕ್ಕೆ ಹೊತ್ತಿಸಿ ಜ್ವಲಿಸುವಂತೆ ಮಾಡಲ್ಪಡುವುದು ಎಂದೂ, ಧ್ಮಾತಿ ಶಬ್ದಕ್ಕೆ (ಊದುಕೊಳವಿಯಿಂದ) ಊದಿ ಉರಿಮಾಡುವುದು ಎಂದೂ ಅರ್ಥವಿರುವುದು. ಈ ಎರಡು ಕಾರ್ಯಗಳೂ (ಹೊತ್ತಿಸುವುದು, ಮತ್ತು ಊದಿ ಉರಿಮಾಡುವುದು) ಅಗ್ನಿಗೆ ಸಂಬಂಧಪಟ್ಟಿರುವುದರಿಂದ ಮೊದಲನೆಯ ಋಕ್ಕಿನಲ್ಲಿ ಕಂಡುಬರುವ **ಸಮಿದ್ಧಃ** ಇತ್ಯಾದಿ ಪದಗಳು ಅಗ್ನಿಯನ್ನೇ ಸೂಚಿಸುವವು. ಆದ್ದರಿಂದ ಆಪ್ರೀಸೂಕ್ತದ ಮೊದಲನೆಯ ಋಕ್ಕಿಗೆ (ಪ್ರಜ್ವಲಿತನಾದ) ಅಗ್ನಿಯೇ ದೇವತೆಯು.

ಇಲ್ಲಿಗೆ ಬೃಹದ್ದೇವತೆಯೆಂಬ ಗ್ರಂಥದಲ್ಲಿ ಎರಡನೆಯ ಅಧ್ಯಾಯವು ಸಮಾಪ್ತವಾದುದು.

157. and that which the seer Viswamitra (iii. 4) and Asita the son of Kasyapa (ix. 5) sang.

Now as to the twelve deities which have been stated (to belong) to the stanzas of Medhatithi (i 13, 1-12).

158. learn the manner (ಸಂಪದಂ) in which they represent (ಸಂಪದ್ಯಂತೇ) Agni.

The Fuel (ಇಧ್ಮ) is the Agni who is everything; for this (Agni) is kindled ಸಮಿಧ್ಯತೇ as fuel. Or this form (ಇಧ್ಮ) is made from the root dhma- to blow; for fuel is kindled when blown (ಧಮತಃ).

Thus ends the 2nd chapter.

ಅಥ ಬೃಹದ್ದೇವತಾಯಾಂ ತೃತೀಯೋಽಧ್ಯಾಯಃ

ತನೂನಪಾದಯಂ ತ್ವೇವ ನಾಮ್ನಾ ಯಚ್ಛತ್ಯಸೌ ತನುಂ ।
ನಪಾದಿತಿ ಪ್ರಜಾಮಾಹುರಮುತೋಽಸ್ಯ ಚ ಸಂಭವಂ ॥ ೧ ॥
ನರಾಶಂಸಮಿಹೈಕೇ ತು ಅಗ್ನಿಮಾಹುರಥೇತರೇ ।
ನರಾಃ ಶಂಸಂತಿ ಸರ್ವೇಽಸ್ಮಿನ್ನಾಸೀನಾ ಇತಿ ವಾಧ್ವರೇ ॥ ೨ ॥
ಏತಮೇವಾಹುರನ್ಯೇಽಗ್ನಿಂ ನರಾಶಂಸೋಽಧ್ವರೇ ಹ್ಯಯಂ ।
ನರೈಃ ಪ್ರಶಸ್ಯ ಆಸೀನೈರಾಹುಶ್ಚೈವರ್ತ್ವಿಜೋ ನರಃ ॥ ೩ ॥

ಮೂರನೆಯ ಅಧ್ಯಾಯವು.

ಆಪ್ರೀಸೂಕ್ತವಿವರಣೆ (ಮುಂದುವರೆದುದು)

ತನೂನಪಾತ್, ನರಾಶಂಸ, ಇಳ, ಬರ್ಹಿ ಎಂಬ ದೇವತೆಗಳು

1. **ತನೂನಪಾತ್**—ಈ ಅಗ್ನಿಗೆ **ತನೂನಪಾತ್** ಎಂದು ಹೆಸರು. **ನಪಾತ್** ಎಂದರೆ ಪ್ರಜೆ, ಸಂತತಿ ಎಂದರ್ಥವು. ಸ್ವರ್ಗೀಯಾಗ್ನಿಯು ತನ್ನ ಶರೀರವನ್ನು (**ತನು**) ವಿಸ್ತರಿಸುವುದರಿಂದ ಮತ್ತು ಅದರಿಂದ ಪಾರ್ಥಿವಾಗ್ನಿಯು ಉತ್ಪತ್ತಿಯಾಗುವುದರಿಂದ ಪಾರ್ಥಿವಾಗ್ನಿಗೆ **ತನೂನಪಾತ್** ಎಂದು ಹೆಸರು.

2. **ನರಾಶಂಸಃ**—ಈ ನರಾಶಂಸದೇವತೆಯನ್ನು ಅಗ್ನಿಯೆಂದೇ ಕೆಲವರು ಹೇಳುವರು ಅಥವಾ ಸಮಸ್ತ ಜನರು (ನರಾಃ) ಯಜ್ಞದಲ್ಲಿ ಕುಳಿತು ಈ ದೇವತೆಯನ್ನು ಪ್ರಶಂಸೆ (ಸ್ತುತಿ) ಮಾಡುವುದರಿಂದ ಈ ದೇವತೆಗೆ ನರಾಶಂಸನೆಂಬ ಹೆಸರು ಬಂದಿರುವುದು.

3. ಮತ್ತೆ ಕೆಲವರು ಈ ದೇವತೆಯನ್ನು (ನರಾಶಂಸನನ್ನು) ಅಗ್ನಿಯೆಂದು ಹೇಳುವರು. ಏಕೆಂದರೆ, ಯಜ್ಞದಲ್ಲಿ ಕುಳಿತಿರುವ ನರರಿಂದ (ಜನರಿಂದ) ಈ ದೇವತೆಯು ಎಂದರೆ ಅಗ್ನಿಯು ಪ್ರಶಂಸಿಸಲ್ಪಡುವನು. ಋತ್ವಿಕ್ಕುಗಳೂ ಇದೇ ರೀತಿ ಹೇಳುವರು.

Chapter 3.

1. Tanunapat, Narasamsa. IIa. Barhis.

1. Now this same Agni is (also) Tanunapat by name. That (celestial Agni) extends (ಯಚ್ಛತಿ) his body (ತನುಂ).

They say that 'Napat' is a descendant, and that the origin of this one (ಅಸ್ಯ) is from that one (ಅಮುತಃ).

2. Now some say that Narasamsa here is Agni Again (ಅಥವಾ) others (use the term) in (the sense of) sacrifice, (saying) 'all men (ನರಾಃ) utter praise (ಶಂಸಂತಿ) seated at it'.

3. Others say he is Agni, because he is Narasamsa as the object of praise (ಪ್ರಶಸ್ಯ) by men seated at the sacrifice; and so also say the ritualists (ಋತ್ವಿಜೋ ನರಃ),

ಇಳಸ್ಪ್ರಪಿಕೃತಂ ರೂಪಮಿಡೇಶ್ಚ ಸ್ತುತಿಕರ್ಮಣಃ ।
ಇಳಾವಾಂಸ್ತೇನ ವೋಕ್ತೋಽಗ್ನಿರಿಡಿನಾ ವದ್ಧಿಕರ್ಮಣಾ ॥ ೪ ॥

ಬರ್ಹಿರೇವಾಯಮಗ್ನಿಸ್ತು ಸರ್ವಂ ಹಿ ಪರಿಬೃಂಹಿತಂ ।
ಅನೇನ ಯದ್ಧುತೋ ವಾ ಸನ್ನಿಧ್ನೇನ ಪರಿಬೃಂಹಿತಃ ॥ ೫ ॥

ದ್ವಾರಸ್ತು ದೇವ್ಯೋ ಯಾಃ ಪ್ರೋಕ್ತಾ ವಿಶ್ವೇಷಾಂ ತಾಸ್ತು ಪತ್ನಯಃ ।
ಅಗ್ನಾಯೀಮನುವರ್ತಂತೇ ತಥಾಗ್ನಾಯ್ಯಗ್ನಿಮೇವ ಚ ॥ ೬ ॥

ಅಗ್ನೌ ಧ್ರುವಂ ಸ್ಥಿತಾಸ್ತಾಸ್ತು ಸಂಸ್ತೂಯಂತೇಽಗ್ನಿನಾ ಸಹ ।
ಪ್ರಾಧಾನ್ಯಂ ತಾಸು ಚೈವಾಗ್ನೇ ಸ್ತುತಿಷ್ವೇವ ಹವಿಃಷು ಚ ॥ ೭ ॥

4. **ಇಳಃ**—ಇಳ ಶಬ್ದವು **ಈಳ ಸ್ತುತೌ** (ಸ್ತುತಿಸು) ಎಂಬ ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ಋಷಿಗಳು ಹೇಳುವರು. ಅಗ್ನಿಗೆ **ಇಳಾವಾನ್** ಎಂದೂ ಹೆಸರು. ಈ ಶಬ್ದವು ಈಡ್-ಸ್ತುತಿಸು ಎಂಬ ಧಾತುವಿನಿಂದಾಗಲೀ ಇದ್-ವೃದ್ಧಿಯನ್ನು ಹೊಂದು ಎಂಬ ಧಾತುವಿನಿಂದಾಗಲೀ ನಿಷ್ಪನ್ನವಾಗಿರುವುದು.

5. **ಬರ್ಹಿಃ**—ಅಗ್ನಿಯೇ ಬರ್ಹಿಃ ಎಂಬ ಹೆಸರಿನಿಂದಲೂ ಕರೆಯಲ್ಪಡುವನು. ಏಕೆಂದರೆ, ಅಗ್ನಿಯು ಹವೀರೂಪವಾದ ಅನ್ನದಿಂದಲಾಗಲಿ, ಇಧ್ಮದಿಂದಾಗಲಿ, ಪೋಷಿಸಲ್ಪಟ್ಟ ವೃದ್ಧಿಯನ್ನೆಲ್ಲವನು (ಪರಿಬೃಂಹಿತಃ).

ದೇವೀರ್ದ್ವಾರಃ ಮತ್ತು ಉಷಾಸಾನಕ್ತಾ ಎಂಬ ದೇವತೆಗಳು

6. **ದ್ವಾರಃ ದೇವ್ಯಃ**—ಸಮಸ್ತ ದೇವತೆಗಳ ಪತ್ನಿಯರೇ (ಎಂದರೆ ದೇವಪತ್ನಿಯರೇ) ಈ ಹೆಸರಿನಿಂದ ಕರೆಯಲ್ಪಡುವರು. ಇವರೆಲ್ಲರೂ ಅಗ್ನಿಪತ್ನಿಯಾದ ಅಗ್ನಾಯಿಯ ಎಂಬ ದೇವತೆಯನ್ನು ಅನುಸರಿಸಿರುವರು. ಈ ಅಗ್ನಾಯಿಯು ಅಗ್ನಿಯನ್ನು ಅನುಸರಿಸುವಳು.

7. ಈ ದೇವತೆಗಳು ಅಗ್ನಿಯಲ್ಲಿ ದೃಢವಾಗಿ ಸ್ಥಾಪಿತರಾಗಿರುವರು ಮತ್ತು ಅಗ್ನಿಯೊಡನೆ ಸ್ತುತಿಸಲ್ಪಡುವರು. ಇವರನ್ನು ಉದ್ದೇಶಿಸಿ ಅರ್ಪಿಸುವ ಸ್ತುತಿಗಳಲ್ಲಿಯೂ, ಹವಿಸ್ಸುಗಳಲ್ಲಿಯೂ ಅಗ್ನಿಗೇ ಪ್ರಾಧಾನ್ಯತೆ ಇರುವುದು.

---

4. Ila is a form made by the Rishis, and (is derived) from the root id, expressing praise : Agni is called idavan (possessing refreshment) either from that (root) or from the root id, expressing increase.

5. Again, this Agni is the Litter (ಬರ್ಹಿಃ), for the whole of it (ಸರ್ವಂ) is furnished (ಪರಿಬೃಂಹಿತಂ) with food; or because, when sacrificed to, he (Agni) is furnished (ಪರಿಬೃಂಹಿತಃ) with fuel.

2 The Divine Doors, Night and Morning.

6. The Divine Doors, as they are called, are the wives of all (the gods); they follow Agnayi, and so also Agnayi (follows) Agni.

7. Now being firmly established in Agni they are praised in combination with Agni, In their case also there is a predominance of Agni both in praises and oblations.

ನಕ್ತೋಷಾಸೌ ಚ ಯೇ ದೇವ್ಯಾವಾಗ್ನೇಯ್ಯಾವೇವ ತೇ ಸ್ಮೃತೇ ।
ಶ್ಯಾವ್ಯಾಗ್ನೇಯೀ ಹಿ ಕಾಲಸ್ಯ ತಸ್ಯೈವೋಷಾಃ ಕಲೇವ ತು ॥ ೮ ॥
ತಮ ಉಚ್ಛತ್ಯುಷಾ ನಕ್ತಾನಕ್ತೇಮಾಂ ಹಿಮಬಿಂದುಭಿಃ ।
ಅಪಿ ವಾವ್ಯಕ್ತವರ್ಣೇತಿ ನಞಾಪೂರ್ವಾಞ್ಜೇರಿದಂ ಭವೇತ್ ॥ ೯ ॥
ಸಾ ಹಿ ದೋಷಾ ಭವತ್ಯಾದೌ ನಿಶೀಥೇ ಸಾ ತಮಸ್ವತೀ ।
ನಾಮ್ನಾ ಭವತ್ಯುಷಾಶ್ಚೈವ ಸೈಷಾ ಪ್ರಾಗುದಯಾದ್ರವೇಃ ॥ ೧೦ ॥
ದೈವ್ಯಾವಿತಿ ತು ಹೋತಾರಾವಾಗ್ನೀ ಪಾರ್ಥಿವಮಧ್ಯಮೌ ।

8. **ನಕ್ತೋಷಾಸೌ ಅಥವಾ ಉಷಾಸಾನಕ್ತಾ**—(ಎಂದರೆ ಉಷೋದೇವತೆ ಮತ್ತು ರಾತ್ರ್ಯಭಿಮಾನಿ ದೇವತೆ) ಈ ಎರಡು ದೇವತೆಗಳೂ ಸಹ ಅಗ್ನಿಗೇ ಸಂಬಂಧಪಟ್ಟಿರುವರೆಂದು ಹೇಳಲಾಗಿದೆ. ಏಕೆಂದರೆ, ಅಗ್ನಿಯು ಕತ್ತಲೆಯನ್ನು ಪರಿಹಾರಮಾಡುವುದರಿಂದ ಅಗ್ನಿಗೂ ಕತ್ತಲೆಗೂ (ಶ್ಯಾವಿ) ಒಂದು ವಿಧವಾದ ಸಂಬಂಧವಿದ್ದಂತಾಯಿತು. ಉಷಸ್ಸೂ ಸಹ ಆ ರಾತ್ರಿಕಾಲದ ಒಂದು ಕಲೆಯೆಂದು (ಹದಿನಾರರಲ್ಲಿ ಒಂದು ಭಾಗ) ಹೇಳಲ್ಪಡುವುದು.

9. **ತಮಃ ಉಚ್ಛತೀತ್ಯುಷಾಃ**—ಕತ್ತಲೆಯನ್ನೂ ಓಡಿಸುವುದಾದ್ದರಿಂದ ಈ ದೇವತೆಗೆ **ಉಷಾಃ** ಎಂದು ಹೆಸರು. **ಇಮಾಂ (ರಾತ್ರಿಂ) ಅನಕ್ತಿ ಹಿಮಬಿಂದುಭಿರತಿ ನಕ್ತಾ**—ಈ ರಾತ್ರಿಕಾಲವನ್ನು ಹಿಮಬಿಂದುಗಳಿಂದ (ಮಂಜಿನಿಂದ) ತೋಯಿಸುವುದರಿಂದ ರಾತ್ರಿಗೆ **ನಕ್ತಾ** ಎಂದು ಹೆಸರು ಅಥವಾ **ನಕ್ತಾ** ಎಂಬ ಶಬ್ದವು **ನ—ಅಂಚತಿ** ಎಂಬುದರಿಂದ ನಿಷ್ಪನ್ನವಾಗಬಹುದು. ಈ ರಾತ್ರಿಕಾಲದಲ್ಲಿ ಯಾವುದೂ ಸ್ಪಷ್ಟವಾಗಿ ಕಾಣಿಸುವುದಿಲ್ಲವಾದ್ದರಿಂದ **ನಕ್ತಾ—ಅವ್ಯಕ್ತವರ್ಣಾ** ಎಂದೂ ಅರ್ಥವು.

10. ಈ ರಾತ್ರಿದೇವತೆಗೆ ಕಾಲಾನುಸಾರವಾಗಿ ಮೂರು ವಿಧ ಹೆಸರುಗಳಿರುವವು. ರಾತ್ರಿಯ ಪ್ರಾರಂಭ ಕಾಲದಲ್ಲಿ ರಾತ್ರಿಗೆ **ದೋಷಾ** ಎಂದೂ ಅರ್ಧರಾತ್ರಿಯ ಸಮಯದಲ್ಲಿ **ತಮಸ್ವತೀ** ಎಂದೂ, ರಾತ್ರಿಯ ಕೊನೆಯಲ್ಲಿ ಎಂದರೆ ಸೂರ್ಯೋದಯಕ್ಕೆ ಪೂರ್ವದಲ್ಲಿ **ಉಷಾಃ** ಎಂದೂ ಹೆಸರು.

ದೈವ್ಯೌ ಹೋತಾರೌ, ತಿಸ್ರೋ ದೇವ್ಯಃ, ತ್ವಷ್ಟಾ

11. **ದೈವ್ಯೌ ಹೋತಾರೌ** ಎಂದರೆ ಪಾರ್ಥಿವಾಗ್ನಿ ಮತ್ತು ಮಧ್ಯಮಾಗ್ನಿಯು. ಈ ಎರಡು ಅಗ್ನಿಯ

8. And as to the two goddesses, Night and dawn (ನಕ್ತೋಷಾಸೌ), they too are regarded as related to Agni. For the Dark (ಶ್ಯಾವೀ) is related to Agni, while Dawn is, as it were, a sixteenth portion (ಕಲಾ) of that time (ಕಾಲ).

9. Dawn (ಉಷಾಃ) lightens (ಉಚ್ಛತಿ) the darkness, Night (ನಕ್ತ) anoints (ಅನಕ್ತಿ) her with drops of dew (ಹಿಮ); or else this (form) might be (derived) from the root ಅಂಚ್ preceded by the negative (ನಞ್), (and) mean 'the indefinite.coloured one' (ಅವ್ಯಕ್ತವರ್ಣ).

10. For at first she becomes Gloaming (ದೋಷಾ), at midnight she is Darkling (ತಮಸ್ವತೀ), and before the rising of the Sun she becomes Dawn (ಉಷಾಃ) by name.

3. The Two Divine Sacrificers. The Three Goddesses. Tvastr.

11. Now the Two Divine Sacrificers are the terrestrial and the

ದಿವ್ಯಾದಗ್ನೇರ್ಹಿ ಜಜ್ಞಾತೇ ದೈವ್ಯೌ ತೇನೇಹ ಜನ್ಮನಾ ॥ ೧೧ ॥

ತಿಸ್ರಸ್ತು ದೇವ್ಯೋ ಯಾಃ ಪ್ರೋಕ್ತಾಸ್ತ್ರಿಸ್ಥಾನೈವೇಹ ಸಾ ತು ವಾಕ್ ।
ತ್ರಿವಿಧೇನೋಚ್ಯತೇ ನಾಮ್ನಾ ಜ್ಯೋತಿಃಷು ತ್ರಿಷು ವರ್ತನೀ ॥ ೧೨ ॥

ಅಗ್ನಿಮೇವಾನುಗೇಳಾ ತು ಮಧ್ಯಂ ಪ್ರಾಪ್ತಾ ಸರಸ್ವತೀ ।
ಅಮುಂ ಸ್ಥಿತಾಧಿ ಲೋಕಂ ತು ಭಾರತೀ ಭವತಿ ಹ್ಯಸೌ ॥ ೧೩ ॥

ಸೈಷಾ ತು ತ್ರಿವಿಧಾ ವಾಗ್ವೈ ದಿವಿ ಚ ವ್ಯೋಮ್ನಿ ಚೇಹ ಚ ।
ವ್ಯಸ್ತಾ ಚೈವ ಸಮಸ್ತಾ ಚ ಭಜತ್ಯಗ್ನೀನಿಮಾನಪಿ ॥ ೧೪ ॥

ರೂಪಗಳೂ ಸ್ವರ್ಗೀಯಾಗ್ನಿಯಿಂದ (ದಿವ್ಯಾದಗ್ನೇಃ) ಉತ್ಪತ್ತಿಯಾಗಿರುವವು. ಆದ್ದರಿಂದ ಅಗ್ನಿಯ ಈ ಎರಡು ರೂಪಗಳನ್ನು ದೈವ್ಯೌ (ಸ್ವರ್ಗಸಂಬಧಪಾದ) ಎಂಬ ಹೆಸರಿನಿಂದ ಕರೆಯಲಾಗಿರುವುದು.

12. **ತಿಸ್ರೋ ದೇವ್ಯಃ**—ತಿಸ್ರಃ ದೇವ್ಯಃ (ಮೂರು ಮಂದಿ ದೇವತೆಯರು) ಎಂಬ ದೇವತೆಗಳು ತ್ರಿಸ್ಥಾನಗಳಲ್ಲಿರುವ ವಾಕ್ ಅಥವಾ ವಾಗ್ದೇವತೆಯನ್ನು ಪ್ರತಿಬಿಂಬಿಸುವರು. ಈ ವಾಗ್ದೇವತೆಯು ಮೂರು ಸ್ಥಾನಗಳಲ್ಲಿರುವುದರಿಂದ ಮೂರುವಿಧ ರೂಪಗಳುಳ್ಳವಳೆಂದು ಮೂರು ಬೇರೆಬೇರೆ ಹೆಸರುಗಳಿಂದ ಕರೆಯಲ್ಪಡುವಳು.

13. ಪಾರ್ಥಿವಾಗ್ನಿಯನ್ನು ಅನುಸರಿಸಿ ಈ ಲೋಕದಲ್ಲಿರುವ ವಾಗ್ದೇವಿಗೆ **ಇಳಾ** ಎಂಬ ಹೆಸರು. ಮಧ್ಯನು (ಅಂತರಿಕ್ಷ) ಲೋಕದಲ್ಲಿರುವ ವಾಕ್ಕಿಗೆ **ಸರಸ್ವತಿ**ಯೆಂದೂ, ಸ್ವರ್ಗಲೋಕದಲ್ಲಿರುವ ವಾಗ್ದೇವತೆಗೆ **ಭಾರತೀ** ಎಂದು ಹೆಸರು. (ಒಂದೇ ದೇವತೆಗೆ ಸ್ಥಾನಭೇದಗಳಿಂದ ಮೂರು ಬೇರೆಬೇರೆ ಹೆಸರುಗಳಿರುವವು).

14. ಈ ವಾಗ್ದೇವತೆಯು ಒಬ್ಬಳೇ ಆದರೂ, ಪೃಥಿವಿ, ಅಂತರಿಕ್ಷ, ಸ್ವರ್ಗಗಳೆಂಬ ಮೂರು ಸ್ಥಾನಗಳಲ್ಲಿ ಮೂರುವಿಧವಾದ ಹೆಸರುಗಳಿಂದ ಇರುವಳು. ಈ ದೇವತೆಯು ಒಂದೇ ರೂಪದಲ್ಲಿದ್ದರೂ ಬೇರೆಬೇರೆ ರೂಪಗಳಿದ್ದರೂ ಆಯಾ ಸ್ಥಾನದಲ್ಲಿರುವ ಅಗ್ನಿಯೊಡನೆ (ಪೃಥಿವ್ಯಂತರಿಕ್ಷಸ್ವರ್ಗಗಳಲ್ಲಿರುವ ಮೂರುವಿಧ ಅಗ್ನಿಯೊಡನೆ) ಸೇರಿರುವಳು.

---

middle (forms of) Agni. For they were born from the celestial (दिव्य) Agni; they are therefore celestial (दैव्य) by birth.

12. Now they who are called the Three Goddesses are here simply (representative of) Speech (वाक्) in the three spheres. She is spoken of by a three-fold name as abiding in the three lights.

13. Ila follows (the terrestrial) Agni, Sarasvati is attached to (प्राप्ता) the middle one, while the third (celestial form of Vac) becomes Bharati as occupying that (celestial) world.

14. Now this same Vac is threefold (as) in heaven and in air and here (on earth). Both when individual and combined she belongs (भजति) to all these (three) Agnis.

ತ್ವಷ್ಟಾ ತು ಯಸ್ತ್ವಯಮೇವ ಪಾರ್ಥಿವೋಽಗ್ನಿರಿತಿ ಸ್ತುತಿಃ ।
ಪಾರ್ಥಿವಸ್ಯಾಸ್ಯ ವರ್ಚಃ ಸ್ಯುಃ ಕಸ್ಯಾಪ್ಯೃಕ್ ಚಾರ್ತವೇಷು ಚ ॥ ೧೫ ॥

ತ್ವಿಷಿತಸ್ತ್ವಕ್ಷತೇರ್ವಾ ಸ್ಯಾತ್ತೂರ್ಣಮಶ್ನುತ ಏವ ವಾ ।
ಕರ್ಮಸೂತ್ತಾರಣೋ ವೇತಿ ತೇನ ನಾಮೈತದಶ್ನುತೇ ॥ ೧೬ ॥

ಯಃ ಸಹಸ್ರತಮೋ ರಶ್ಮೀ ರವೇಶ್ಚಂದ್ರಮುಪಾಶ್ರಿತಃ ।
ಸೋಽಪಿ ತ್ವಷ್ಟಾರಮೇವಾಗ್ನಿಂ ಪರಂ ಚೇಹ ಚ ಯನ್ಮಧು ॥ ೧೭ ॥

ಪ್ರಾದಾದ್ಬ್ರಹ್ಮಾಪಿ ಸುಪ್ರೀತಃ ಸುತಾಯ ತದಥರ್ವಣಃ ।

15. ತ್ವಷ್ಟಾ ಎಂಬ ಯಾವ ದೇವತೆಯಿರುವುದೋ ಅದು ಪಾರ್ಥಿವಾಗ್ನಿಯೆಂದೇ (ಅಥವಾ ಅದರ ರೂಪಾಂತರವೆಂದೇ) ಸ್ತುತಿಸಲ್ಪಟ್ಟಿರುವುದು ಅಥವಾ ಈ ದೇವತೆಯು ಪಾರ್ಥಿವದೇವತೆಯೆಂದು (ಪೃಥಿವೀಸ್ಥಾನಕ್ಕೆ ಸಂಬಂಧಪಟ್ಟ) ಸ್ತುತಿಸಿರುವ ಋಕ್ಕುಗಳಿರುವವು ಮತ್ತು ಋತುಗಳನ್ನು ಸ್ತುತಿಸುವ ಋಕ್ಕುಗಳ ಮಧ್ಯದಲ್ಲಿ ಈ ತ್ವಷ್ಟೃದೇವತೆಯನ್ನು ಅಗ್ನಿಯ ರೂಪಾಂತರವೆಂದು (ಕಶ್ಯಪ) ಸ್ತುತಿಸಿರುವ ಋಕ್ಕು ಒಂದಿರುವುದು.

ಸ್ವರ್ಗೀಯೆ ದೇವತೆಯೊದ ತ್ವಷ್ಟೃ; ದಧೀಚಋಷಿಯ ವೃತ್ತಾಂತ

16. **ತ್ವಷ್ಟೃ** ಶಬ್ದನಿರ್ವಚನ—**ತ್ವಷ್ಟೃ** ಶಬ್ದವು **ತ್ವಿಷ್** (ಪ್ರಕಾಶಿಸು) ಅಥವಾ **ತ್ವಕ್ಷ್** ಎಂಬ ಧಾತುವಿನಿಂದ ನಿಷ್ಪನ್ನವಾಗಬಹುದು. ಅಥವಾ ಬೇಗನೆ (ತೂರ್ಣ) ಪಡೆಯುವವನಾದ್ದರಿಂದ ಅಥವಾ ಕರ್ಮಗಳಲ್ಲಿ ಸಹಾಯ ಮಾಡುವವನಾದ್ದರಿಂದ ಈ ದೇವನಿಗೆ **ತ್ವಷ್ಟಾ** ಎಂಬ ಹೆಸರು ಬಂದಿರುವುದು.

17. ಸೂರ್ಯನ ಸಾವಿರಾರು ರಶ್ಮಿಗಳು ಚಂದ್ರನಲ್ಲಿ ಆಶ್ರಯವನ್ನು ಪಡೆದಿರುವವು. ಆ ರಶ್ಮಿಯು ಭೂಮಿಯಲ್ಲಿಯೂ, ಅಂತರಿಕ್ಷದಲ್ಲಿಯೂ ಇರುವ ಅಗ್ನಿಯ ರೂಪಾಂತರವಾದ ತ್ವಷ್ಟೃವನ್ನೂ, ಮಧುವಿದ್ಯೆಯನ್ನೂ (ಮೃತಸಂಜೀವಿನೀ ವಿದ್ಯೆ) ವ್ಯಾಪಿಸಿ ಅಲ್ಲಿ ಆಶ್ರಯವನ್ನು ಪಡೆದಿರುವುದು.

18. ಒಂದು ಸಮಯದಲ್ಲಿ ಇಂದ್ರನು ಅಥರ್ವಣಪುತ್ರನಾದ ದಧ್ಯಂಚ ಋಷಿಯ ವಿಷಯದಲ್ಲಿ ಸಂತುಷ್ಟನಾಗಿ

15. Now as to Tvrstr. there is praise (of him) as this same terrestrial Agni; or (it may be said) there are stanzas to him as terrestrial, and there is one stanza also in the (hymns) to the seasons (addressed) to (him as) one or other (ಕಸ್ಯಾಪಿ) form of Agni.

4. The celestial Tvastr. Story of Dadhyanch and the Mead.

16. (ತ್ವಷ್ಟೃ) may be (derived) from ತ್ವಿಷ್ or from ತ್ವಕ್ಷ್, or (it means) 'he quickly (ತೂರ್ಣಂ) obtains (ಅಶ್ನುತೇ)' or 'he assists (ಉತ್ತಾರಣ) in works (ಕರ್ಮಸು)' therefore he obtains this name.

17. The thousandfold ray of the sun which abides in the moon, as well as the mead (ಮಧು) which is above (ಪರಂ) and on earth (ಇಹ), also (abides) in the Tvastr (who is Agni).

18. Well-pleased (with him, Indra) bestowed on the son of Athar-

ಸ ಚಾಭವದ್ಯಷಿಸ್ತೇನ ಬ್ರಹ್ಮಣಾ ದೀಪ್ತಿಮತ್ತರಃ ॥ ೧೮ ॥

ತಮೃಷಿಂ ನಿಷಿಷೇಧೇಂದ್ರೋ ಮೈವಂ ವೋಚೀಃ ಕ್ವಚಿನ್ಮಧು ।
ನ ಹಿ ಪ್ರೋಕ್ತೇ ಮಧುನ್ಯಸ್ಮಿಞ್ಜೀವಂತಂ ತ್ವೋತ್ಪ್ರಜಾಮ್ಯಹಂ ॥ ೧೯ ॥

ತಮೃಷಿಂ ತ್ವಶ್ವಿನೌ ದೇವೌ ವವಿಕ್ತೇ ಮಧ್ವ್ಯಯಾಚತಾಂ ।
ಸ ಚ ತಾಭ್ಯಾಂ ತದಾಚಷ್ಟೇ ಯದುವಾಚ ಶಚೀಪತಿಃ ॥ ೨೦ ॥

ತಮಬ್ರೂತಾಂ ತು ನಾಸತ್ಯಾವಾಶ್ವ್ಯೇನ ಶಿರಸಾ ಭವಾನ್ ।
ಮಧ್ವಾಶು ಗ್ರಾಹಯತ್ಯಾವಾಂ ಮೇಂದ್ರಶ್ಚ ತ್ವಾ ವಧೀತ್ತತಃ ॥ ೨೧ ॥

ಆವನಿಗೆ ಮಧುವಿದ್ಯೆ (ಬ್ರಹ್ಮವಿದ್ಯೆ) ಯನ್ನು ಉಪದೇಶಿಸಿದನು. ಆ ವಿದ್ಯಾಪ್ರಭಾವದಿಂದ ದಧೀಚಿಋಷಿಯು ಅತ್ಯಂತ ತೇಜಸ್ಸಿನಿಂದ (ವರ್ಚಸ್ಸಿನಿಂದ) ಬೆಳಗುತ್ತಿದ್ದನು.

19. ಈ ಮಧುವಿದ್ಯೆಯನ್ನು ಉಪದೇಶಿಸುವಾಗ ಇಂದ್ರನು ಆ ಋಷಿಯನ್ನು ಕುರಿತು—ಇದನ್ನು (ಈ ಮಧು ವಿದ್ಯೆಯನ್ನು) ನೀನು ಯಾರಿಗೂ ಹೇಳಿಕೊಡಕೂಡದು. ಒಂದುವೇಳೆ ನನ್ನ ಮಾತನ್ನುಲ್ಲಂಘಿಸಿ ಇದನ್ನು ಯಾರಿಗಾದರೂ ಹೇಳಿದ್ದೇ ಆದರೆ ಆಗ ನಾನು ನಿನ್ನನ್ನು ಜೀವದಿಂದಿರಲು ಬಿಡುವುದಿಲ್ಲ ಎಂದು ಹೇಳಿದನು.

20. ಹೀಗಿರುವಾಗ ಒಂದು ಸನುಯನಲ್ಲಿ ದಧೀಚಿಋಷಿಯ ಬಳಿಗೆ ಅಶ್ವಿನೀದೇವತೆಗಳು ಬಂದು ತಮಗೆ ಆ ಮಧುವಿದ್ಯೆಯನ್ನು ಹೇಳಿಕೊಡಬೇಕೆಂದು ರಹಸ್ಯವಾಗಿ ಪ್ರಾರ್ಥಿಸಿದರು. ಇದನ್ನು ಕೇಳಿ ಆ ಋಷಿಯು ಶಚೀಪತಿಯು (ಇಂದ್ರನು) ಈ ವಿದ್ಯೆಯನ್ನು ಯಾರಿಗೂ ಹೇಳಬೇಡವೆಂದು ಹೇಳಿರುವ ವಿಷಯವನ್ನು ತಿಳಿಸಿದನು.

ದಧೀಚಿಋಷಿಯ ಅಶ್ವಶಿರಸ್ಸು—ಮಧ್ಯಸ್ಥಾನನಾದ ತ್ವಷ್ಟೃವು

21. ಇದನ್ನು ಕೇಳಿ ಅಶ್ವಿನೀದೇವತೆಗಳು—ಹಾಗಾದರೆ ನೀನು ಒಂದು ಅಶ್ವದ (ಕುದುರೆಯ) ಶಿರಸ್ಸನ್ನು ಧರಿಸಿ ಆ ರೂಪದಿಂದ ನಮಗೆ ಮಧುವಿದ್ಯೆಯನ್ನು ಹೇಳಿಕೊಡು. ಇಂದ್ರನು ನಿನ್ನನ್ನು ಕೊಲ್ಲುವುದಿಲ್ಲ ಎಂದರು.

---

van (i.e. ದಧ್ಯಂಚ್) even that spell (ಬ್ರಹ್ಮ); and the seer became more brilliant by means of the spell.

19. Indra forbade the sage (saying), 'Do not speak anywhere of the mead thus (revealed); for if this mead is proclaimed (to any one), I will not let you escape alive'.

20. Now the divine Aswins asked for the mead in secret from the seer; and he told them what the Lord of Sachi had said.

5. The horse's head of Dadhyanch The middle Tvastr.

21. To him the Nasatyas spoke: 'Do you quickly make us two receive the mead by means of a horse's head; Indra shall not slay you for that'.

ಆಶ್ವ್ಯೇನ ಶಿರಸಾ ತೌ ತು ದಧ್ಯಙ್ಙಾಹ ಯದಶ್ವಿನೌ ।
ತದಸ್ಯೇಂದ್ರೋ೭ಹರತ್ಸ್ವಂ ತನ್ನ್ಯಧತ್ತಾಮುಸ್ಯ ಯೇಚ್ಛಿರಃ ॥ ೨೨ ॥

ದಧೀಚೇಶ್ಚ ಶಿರಶ್ಚಾಶ್ವ್ಯಂ ಕೃತ್ತಂ ವಜ್ರೇಣ ವಜ್ರಿಣಾ ।
ಪಪಾತ ಸರಸೋ ಮಧ್ಯೇ ಪರ್ವತೇ ಶರ್ಯಣಾವತಿ ॥ ೨೩ ॥

ತದದ್ಭ್ಯಸ್ತು ಸಮುತ್ಥಾಯ ಭೂತೇಭ್ಯೋ ವಿವಿಧಾನ್ವರಾನ್ ।
ಪ್ರಾದಾಯ ಯುಗಪರ್ಯಂತಂ ತಾಸ್ಯೇವಾಪ್ಸು ನಿಮಜ್ಜತಿ ॥ ೨೪ ॥

ತ್ವಷ್ಟಾ ರೂಪವಿಕರ್ತಾ ಚ ಯೋ೭ಸೌ ಮಾಧ್ಯಮಿಕೇ ಗಣೇ ।
ಸ್ತುತಃ ಸ ಚ ನಿಪಾತೇನ ಸೂಕ್ತಂ ತಸ್ಯ ನ ವಿದ್ಯತೇ ॥ ೨೫ ॥

22. ಅನಂತರ ದಧ್ಯಂಚಋಷಿಯು ಅಶ್ವಿನೀದೇವತೆಗಳಿಗೆ ಆ ಮಧುವಿದ್ಯೆಯನ್ನು ಉಪದೇಶಿಸಿದನು. ಇದರಿಂದ ಕೋಪಗೊಂಡ ಇಂದ್ರನು ಆ ದಧೀಚಿಋಷಿಯ ಅಶ್ವಶಿರಸ್ಸನ್ನು ಕತ್ತರಿಸಿಹಾಕಿದನು. ಬಳಿಕ ಅಶ್ವಿನೀದೇವತೆಗಳು ದಧೀಚಿಋಷಿಯ ಮುಂಚೆ ಇದ್ದ ಶಿರಸ್ಸನ್ನೇ ಪುನಃ ಅವನ ಶರೀರಕ್ಕೆ ಸೇರಿಸಿದರು.

23. ಇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ದಧೀಚಿಋಷಿಯ ಅಶ್ವಶಿರಸ್ಸು ಶರ್ಯಣಾವತ್ ಎಂಬ ಪರ್ವತದಲ್ಲಿದ್ದ ಒಂದು ಸರೋವರದ ಮಧ್ಯದಲ್ಲಿ ಹೋಗಿ ಬಿದ್ದಿತು.

24. ಸರೋವರದ ನೀರಿನಲ್ಲಿ ಮುಳುಗಿಹೋಗ ಆ ಅಶ್ವಶಿರಸ್ಸು ಆಗಾಗ ಮೇಲಕ್ಕೆ ಎದ್ದುಬಂದು ಪ್ರಾಣಿಗಳಿಗೆ ನಾನಾವಿಧ ವರಗಳನ್ನು ಅನುಗ್ರಹಿಸಿ ಪುನಃ ಆ ನೀರಿನಲ್ಲಿಯೇ ಮುಳುಗಿರುವುದು. ಈ ಕಾರ್ಯವು ಯುಗ ಪರ್ಯಂತರ ನಡೆದುಬರುತ್ತಿರುವುದು.

25. ಮಧ್ಯಮಸ್ಥಾನದೇವತೆಯಾದ ತ್ವಷ್ಟೃವು ರೂಪಗಳಿಗೆ ಅಧಿಪತಿಯಾಗಿ ಪ್ರಾಣಿಗಳೇ ಮೊದಲಾದವರಿಗೆ ಯಾವ ರೂಪವನ್ನು ಬೇಕಾದರೂ ಉಂಟುಮಾಡಬಲ್ಲನು. ಈ ದೇವನು ಅನೇಕ ಸೂಕ್ತಗಳಲ್ಲಿ ಸಂದರ್ಭತ್ವೇನ ಅಲ್ಲಲ್ಲಿ ಸ್ತುತನಾಗಿರುವನು. ಆದರೆ ಇವನನ್ನು ಸ್ತುತಿಸುವ ಪ್ರತ್ಯೇಕ ಸೂಕ್ತವು ಯಾವುದೂ ಇರುವುದಿಲ್ಲ.

22. Because Dadhyanch had told (the secret) to the two Aswins with the horse's head, Indra took off that (head) of his; (but) his own head they (the Aswins) put on (again),

23. And the horse's head of Dadhyanch, severed by the bolt-bearer with his bolt, fell in the midst of a lake on Mount Saryanavat.

24. Rising up from the waters (and) bestowing manifold boons on living beings, it lies submerged in those same waters to the close of the cosmic age (ಯುಗ).

25. That Tvastr, who is in the group of the middle sphere (ಮಾಧ್ಯಮಿಕ) is a modifier (ವಿಕರ್ತೃ) of forms. He too is praised incidentally; a hymn to him does not exist.

ವನಸ್ಪತಿಂ ತು ಯಂ ಪ್ರಾಹುರಯಂ ಸೋಽಗ್ನಿರ್ವನಸ್ಪತಿಃ ।
ಅಯಂ ವನಾನಾಂ ಹಿ ಪತಿಃ ಪಾತಾ ಪಾಲಯತೀತಿ ವಾ ॥ ೨೬ ॥
ಅಗ್ನಿರ್ಗೃತ್ಸಮದೇನಾಯಂ ವನಸ್ಪತಿರಿತೀಳಿತಃ ।
ಮಂದಸ್ವೇತ್ಯಸ್ಯ ಸೂಕ್ತಸ್ಯ ಷಳೃಚಸ್ಯ ತೃತೀಯಯಾ ॥ ೨೭ ॥
ಯೂಪವತ್ತರುವಚ್ಚೈವ ಸ್ತುತಿರ್ಯಾಸ್ಯ ಪ್ರಸಂಗಜಾ ।
ಸರ್ವೇಷಾಂ ಜಂತಿಸೂಕ್ತೇನ ತೃತೀಯೇ ಸಾ ತು ಮಂಡಲೇ ॥ ೨೮ ॥
ಸ್ವಾಹಾಕೃತಯೋಽನೇಕಾಶ್ಚ ವಿದುಷಾಂ ಮತಯೋಽಭವನ್ ।
ತತ್ಸರ್ವಂ ತ್ವಯಮೇವಾಗ್ನಿರ್ಭವತೀತಿ ವಿನಿಶ್ಚಯಃ ॥ ೨೯ ॥

ವನಸ್ಪತಿ ಮತ್ತು ಸ್ವಾಹಾಕೃತಿ ಎಂಬ ದೇವತೆಗಳು

26. **ವನಸ್ಪತಿ**—ವನಸ್ಪತಿಯೆಂದು ಯಾವ ದೇವನನ್ನು ಕರೆಯುವರೋ ಆ ದೇವನು ವನಗಳಿಗೆ ಪಾಲಕನೆಂದು ಹೇಳಲ್ಪಡುವ ಅಗ್ನಿಯ ರೂಪಾಂತರವೇ ಆಗಿರುವನು. ಅಗ್ನಿಯೇ ವನಸ್ಪತಿಯೆಂದು ಹೇಳಲ್ಪಡುವನು. ಏಕೆಂದರೆ, ಈ ಅಗ್ನಿಯು ವನಗಳ ಸಂರಕ್ಷಕನು ಅಥವಾ ಈ ವನಗಳನ್ನು (ವೃಕ್ಷಗಳನ್ನು) ತೊಂದರೆಗೆ ಈಡಾಗದಂತೆ ಕಾಪಾಡುವವನು.

27. ಗೃತ್ಸಮದಋಷಿಯು, ಆರು ಋಕ್ಕುಗಳಿರುವ **ಮಂದಸ್ವ ಹೋತ್ರಾದನು** ಎಂಬ ಸೂಕ್ತದ (೨ ನೇ ಮಂಡಲದ ೩೭ ನೇ ಸೂಕ್ತ) ಮೂರನೆಯ ಋಕ್ಕಿನಲ್ಲಿ (**ಮೇದ್ಯಂತು ತೇ ವಹ್ನಯಃ** ಎಂಬ ಋಕ್ಕಿನಲ್ಲಿ) ಅಗ್ನಿಯನ್ನು ವನಸ್ಪತಿಶಬ್ದದಿಂದ ಸ್ತುತಿಸಿರುವನು.

28. ಆದರೆ ಮೂರನೆಯ ಮಂಡಲದ **ಅಂಜಂತಿ ತ್ವಾ** ಎಂಬ 8 ನೇ ಸೂಕ್ತದಲ್ಲೆಲ್ಲಾ ಪ್ರಸಂಗವಶದಿಂದ ವನಸ್ಪತಿದೇವತೆಯನ್ನು ಯೂಪವೆಂದೂ ದೊಡ್ಡ ವೃಕ್ಷವೆಂದೂ ಸ್ತುತಿಸಲಾಗಿದೆ.

29. **ಸ್ವಾಹಾಕೃತಿ** ಎಂಬ ದೇವತೆಯ ವಿಷಯದಲ್ಲಿ ವಿದ್ವಾಂಸರ ಮತಭೇದಗಳು (ಭೇದಾಭಿಪ್ರಾಯಗಳು) ಅನೇಕವಾಗಿವೆ. ಆದರೆ ಅವರಲ್ಲಿ ಎಷ್ಟೇ ಮತಭೇದವಿದ್ದರೂ ಈ **ಸ್ವಾಹಾಕೃತಿ** ಎಂಬ ಈ ದೇವತೆಯು ಅಗ್ನಿಯ ರೂಪ ವಿಶೇಷವೆಂಬ ವಿಷಯದಲ್ಲಿ ಮಾತ್ರ ಎಲ್ಲರ ಅಭಿಪ್ರಾಯವೂ ಒಂದೇ ಆಗಿರುವುದು.

6. Vanaspati. The Svahakritis.

26. Now he whom they proclaim as Vanaspati is this (ಅಯಂ) Agni as Lord of the Wood; for this (Agni) is lord (ಪತಿ) of wood as (their) protector (ಪಾತಾ), or because he guards (ಪಾಲಯತಿ) them

27. This (ಅಯಂ) Agni is also lauded as Vanaspati by Grtsamada in in the third (stanza) of the hymn 'Enjoy' (ಮಂದಸ್ವ : ii. 37), which contains six stanzas.

28. But an occasional (ಪ್ರಸಂಗಜಾ) praise of him (ವನಸ್ಪತಿ), as a sacrificial post and as a tree, with the whole hymn, 'They anoint' (ಅಂಜಂತಿ : iii. 8) is (to be found) in the third Mandala.

29. As to the Svahakritis—the views of the learned have been various. It is, however, a certain conclusion that all that (viz., which is meant by the term) is simply (a form of) this Agni.

ಅಯಂ ಹಿ ಕರ್ತಾ ಸ್ವಾಹಾನಾಂ ಕೃತಿಸ್ತಾಸಾಮಿಹೈಕಜಾ ।
ಅಯಂ ಪ್ರಸೂತಿರ್ಭೂತಾನಾಂ ಸರ್ವೇಷಾಮಯಮವ್ಯಯಃ ॥ ೩೦ ॥

ತನೂನಪಾದ್ದ್ವಿತೀಯಾ ಚ ನರಾಶಂಸವತೀ ಚ ಯಾ ।
ಸಮಸ್ಯೇತೇ ಪ್ರಯೋಕ್ತವ್ಯೇ ತ್ರಿಷ್ವೇವೋಭಯವತ್ಸು ತು ॥ ೩೧ ॥

ನರಾಶಂಸವತೀ ವಾ ಸ್ಯಾದ್ದ್ವಿತೀಯಾ ಚ ಪ್ರಜಾರ್ಥಿನಾಂ ।
ಬಲಕಾಮೋಽನ್ನಕಾಮೋ ವಾ ಭೂತಿಮಿಚ್ಛೇದಥಾಪಿ ಯಃ ॥ ೩೨ ॥

30. ಏಕೆಂದರೆ ಸ್ವಾಹಾಕಾರಗಳಿಗೆ (ಎಂದರೆ ಸ್ವಾಹಾಶಬ್ದಪೂರ್ವಕವಾಗಿ ಅರ್ಪಿಸುವ ಹವಿಸ್ಸುಗಳಿಗೆ ಅಥವಾ ಮಂತ್ರಗಳಿಗೆ) ಈ ಅಗ್ನಿಯೇ ಕರ್ತೃವು. ಈ ವಿಧವಾದ ಮಂತ್ರಗಳಿಗೆಲ್ಲಾ ಇವನೇ ಕರ್ತೃವು ಮತ್ತು ದೇವತೆಯು; ಈ ಅಗ್ನಿಯೇ ಸಮಸ್ತ ಭೂತಗಳಿಗೂ (ಪ್ರಾಣಿಗಳಿಗೂ) ಉತ್ಪತ್ತಿಸ್ಥಾನನು ಎಂದರೆ ಇವನಿಂದಲೇ ಸಕಲ ಪ್ರಾಣಿಗಳೂ ಉತ್ಪನ್ನವಾಗುವವು. ಸರ್ವಪ್ರಾಣಿಗಳಲ್ಲಿ ಇವನಿಗೆ ಮಾತ್ರ ನಾಶವಿಲ್ಲ ಎಂದರೆ ಇವನು ನಾಶರಹಿತನು.

ತನೂನಪಾತ್ ಮತ್ತು ನರಾಶಂಸ ಎಂಬ ಎರಡು ದೇವತೆಗಳನ್ನು ಸ್ತುತಿಸಿರುವ ಆಪ್ರೀಸೂಕ್ತಗಳು

31. ಆಪ್ರೀಸೂಕ್ತದಲ್ಲಿ (ಎರಡನೆಯ ದೇವತೆಯಾದ) **ನೂನಪಾತ್** ಮತ್ತು **ನರಾಶಂಸ** ಎಂಬ ಎರಡು ದೇವತೆಗಳನ್ನು ಸ್ತುತಿಸಿರುವ ಸೂಕ್ತಗಳು ಋಗ್ವೇದದಲ್ಲಿ ಮೂರು ಮಾತ್ರವಿರುವವು. (ಈ ವಿಧವಾದ ಸೂಕ್ತಗಳು ಯಾವವೆಂದರೆ—1 ನೇ ಮಂಡಲದ 13 ನೇ ಸೂಕ್ತ (**ಮೇಧಾತಿಥಿಃ ಕಾಣ್ವಃ** ಎಂಬ ಋಷಿದೃಷ್ಟವಾದುದು) ಮತ್ತು 1 ನೇ ಮಂಡಲದ 142 ನೇ ಸೂಕ್ತ (**ದೀರ್ಘತಮಾ ಔಚಥ್ಯಃ** ಎಂಬ ಋಷಿದೃಷ್ಟವಾದುದು.) ಈ ವಿಧವಾದ ಸೂಕ್ತಗಳು ಮೂರು ಇರುವವೆಂದು ಇಲ್ಲಿ ಹೇಳಿದೆ. (ಪ್ರೈಷಸೂಕ್ತವನ್ನು ಬಿಟ್ಟರೆ) ಇದು ತಪ್ಪು. ಎರಡು ಮಾತ್ರ ಇರುವವು.

32. ಎರಡನೇ ಮಂತ್ರವು ನರಾಶಂಸದೇವತಾಕವಾದ ಆಪ್ರೀಸೂಕ್ತಪ್ರಯೋಗದಿಂದ ಯಜ್ಞಮಾಡುವ ಯಜಮಾನನು ತಾನು ಬಯಸುವ ಪ್ರಜಾಸಂತತಿಯನ್ನೂ, ಬಲವನ್ನೂ, ಅನ್ನವನ್ನೂ ಅಥವಾ ಸಂಪತ್ತನ್ನೂ ಪಡೆಯುವನು.

30. For he is the maker (ಕರ್ತಾ) of oblations (ಸ್ವಾಹಾ); the making (ಕೃತಿ) of them (that is to say), here is of a single nature (ಏಕಜಾ): it is he who is the source (ಪ್ರಸೂತಿ) of living beings, the imperishale (source) of all of them.

7. Tanunapat and Narasamsa. Deities of RV. i. 14 and 15.

31. Both the the second (stanza) with Tanunapat and that which contains Narasamsa, are combined as applicable (ಪ್ರಯೋಕ್ತವ್ಯೇ) in only three (hymns) which (thus) contain both.

32. The (stanza) containing Narasamsa, as well as the second, may be (applied in behalf) of those wanting children, (of him) who desires strength, or who desires food, as well as (of him) who may wish for prosperity.

ಆಗ್ನೇಯಂ ಸೂಕ್ತಮೇಭಿರ್ಯದ್ವೈಶ್ವದೇವಮಿಹೋಚ್ಯತೇ ।
ತದ್ವಿಶ್ವಲಿಂಗಂ ಗಾಯತ್ರಂ ವೈಶ್ವದೇವೇಷು ಶಸ್ಯತೇ ॥ ೩೩ ॥
ಇಂದ್ರ ಸೋಮಮಂ ಪಿಬೇತೀದಂ ಯದ್ದ್ವಾದಶಕಮಾರ್ತವಂ ।
ತಸ್ಮಿನ್ಸಹರ್ತುನಾ ಸಪ್ತ ಪ್ರತ್ಯೃಚಂ ಸ್ತೌತಿ ದೇವತಾಃ ॥ ೩೪ ॥
ತತ್ರರ್ತುನೇತಿ ಷಟ್ಸ್ವೃಕ್ಷು ಚತಸೃಷ್ವೃತುಭಿಃ ಸಹ ।
ಪುನರ್ದ್ವಯೋರ್ಋತುನೇತಿ ಬಹುತ್ವೈಕತ್ವಲಕ್ಷಿತಾಃ ॥ ೩೫ ॥
ಋತವೋ ದೇವತಾಭಿಶ್ಚ ನಿಪಾತೇನೇಹ ಸಂಸ್ತುತಾಃ ।

೧ ನೇ ಮಂಡಲದ ೧೪ ಮತ್ತು ೧೫ ನೇ ಸೂಕ್ತಗಳ ದೇವತೆಗಳು

33. ಐಭಿರಗ್ನೇ ಎಂಬ ೧೪ ನೆಯ ಸೂಕ್ತದಲ್ಲಿ ಅಗ್ನಿಯನ್ನು ಸಂಬೋಧಿಸಿ ಸ್ತುತಿಸಿದ್ದರೂ ಈ ಸೂಕ್ತವು ವೈಶ್ವದೇವಸೂಕ್ತವೆಂದು ಹೇಳಲ್ಪಡುವುದು. ಏಕೆಂದರೆ, ಗಾಯತ್ರೀಛಂದಸ್ಸುಗಳಿಂದ ಕೂಡಿರುವ ಈ ಸೂಕ್ತದಲ್ಲಿ ವಿಶ್ವೇದೇವತಾಕವಾದ ಸೂಕ್ತದ ಲಕ್ಷಣಗಳೆಲ್ಲವೂ ಇರುವವು.

ಋತುದೇವತಾಕವಾದ ಸೂಕ್ತ, ೧ ನೇ ಮಂಡಲದ ೧೫ ನೇ ಸೂಕ್ತ

34 ಇಂದ್ರ ಸೋಮಂ ಪಿಬ ಎಂಬ ೧೫ ಋಕ್ಕುಗಳನ್ನು ೧೫ ನೇ ಸೂಕ್ತದಲ್ಲಿ ಒಂದೊಂದು ಋಕ್ಕಿನಲ್ಲಿ ಒಂದೊಂದು ದೇವತೆಯಂತೆ ಏಳುಮಂದಿ ದೇವತೆಗಳು ಋತುದೇವತೆಯಿಂದ ಸಹಿತರಾಗಿ ಸ್ತುತರಾಗಿರುವರು. (ಇಲ್ಲಿ ಏಳುಮಂದಿ ದೇವತೆಗಳೆಂದು ಹೇಳಿದೆ ಇದು ತಪ್ಪು. ಈ ಸೂಕ್ತದಲ್ಲಿ ಒಂಭತ್ತುಮಂದಿ ದೇವತೆಗಳನ್ನು ಸ್ತುತಿಸಲಾಗಿದೆ).

35. ಈ ಸೂಕ್ತದ ಕೆಲವು ಋಕ್ಕುಗಳಲ್ಲಿ ಋತುನಾ ಎಂಬ ಏಕವಚನಪ್ರಯೋಗವೂ, ಕೆಲವು ಋಕ್ಕುಗಳಲ್ಲಿ ಋತುಭಿಃ ಎಂಬ ಬಹುವಚನಶಬ್ದಪ್ರಯೋಗವೂ ಇರುವುದು. ಹೇಗೆಂದರೆ, ಮೊದಲಿನ ಆರು ಋಕ್ಕುಗಳಲ್ಲಿ ಋತುನಾ ಎಂದು ಏಕವಚನವೂ, ಅಲ್ಲಿಂದ ಮುಂದಿನ ನಾಲ್ಕು ಋಕ್ಕುಗಳಲ್ಲಿ ಋತುಭಿಃ ಎಂದು ಬಹುವಚನವೂ, ಕೊನೆಯ ಎರಡು ಋಕ್ಕುಗಳಲ್ಲಿ ಋತುನಾ ಎಂದು ಏಕವಚನವೂ ಕಂಡುಬರುವುದು.

36. ಈ ಸೂಕ್ತದಲ್ಲಿ ದೇವತೆಗಳನ್ನು ಸ್ತುತಿಸುವಾಗ ಋತುಗಳನ್ನು ಪ್ರಸ್ತಾಪಪೂರ್ವಕವಾಗಿ ಸ್ತುತಿಸಲಾಗಿದೆ. ಅದ

33. The hymn, 'Hither with these' (ಐಭಿರಗ್ನೇ i. 14), which invoking Agni is spoken of here as addressed to the All-gods (ವೈಶ್ವದೇವ), is recited (ಶಸ್ಯತೇ) among the hymns to the All gods, because, being composed in the gayatri metre, it contains the characteristic 'All' (ವಿಶ್ವ).

34. As to the hymn, 'Indra, drink Soma' (ಇಂದ್ರ ಸೋಮಂ ಪಿಬ. i. 15), consisting of twelve stanzas, and addressed to seasons, (the seer) praises in it seven deities in their respective stanzas, together with the season. (ಋತು).

35. There (the deities) are characterized in the plural and in the singular; in six stanzas (1--6), with rtu, (ಋತುನಾ), in four with the (ಋತುಭಿಃ) then again in two (11, 12) 'with Rtu.'

8. Hymn to the seasons: RV. i. 15.

36. The Rtus are here incidentally praised with the deities; so it

ತಥರ್ತುಪ್ರೈಷಸೂಕ್ತೇ ಚ ತಥಾ ಗಾರ್ತ್ಸಮದೇऽಪಿ ಚ ॥ ೩೬ ॥

ಮುಖ್ಯಯಾ ತ್ವಿಂದ್ರಮೇವಾಸ್ತೌನ್ಮರುತಸ್ತು ದ್ವಿತೀಯಯಾ ।
ತೃತೀಯಯಾ ತು ತ್ವಷ್ಟಾರಂ ಚತುರ್ಥ್ಯಾ ಚಾಗ್ನಿಮೇವ ಚ ॥ ೩೭ ॥

ಪಂಚಮ್ಯಾ ತು ಪುನಃ ಶಕ್ರಂ ಷಷ್ಠ್ಯಾ ದೇವವೃತಾವೃಧೌ ।
ಸಪ್ತಮ್ಯಾದ್ಯಾಭಿರಗ್ನಿಂ ಚ ಚತುರ್ಭಿರ್ದ್ರವಿಣೋದಸಂ ॥ ೩೮ ॥

ಆದೇಶಾದ್ದೈವತಂ ಜ್ಞೇಯಮೃಙ್ಮಂತ್ರಾಣಾಂ ನ ಲಿಂಗತಃ ।
ನ ಶಕ್ಯಂ ಲಿಂಗತೋ ಹ್ಯಾಸಾಂ ಜ್ಞಾತುಂ ತತ್ತ್ವೇನ ದೈವತಂ ॥ ೩೯ ॥

ರಂತೆಯೇ ಪ್ರೈಷಸೂಕ್ತದಲ್ಲಿಯೂ ಗೃತ್ಸಮದಋಷಿದೃಷ್ಟನಾದ (ಋತುದೇವತಾಕವಾದ) ಸೂಕ್ತದಲ್ಲಿಯೂ (೨ ನೇ ಮಂಡಲದ ೩೭ ನೇ ಸೂಕ್ತ) ದೇವತೆಗಳನ್ನು ಋತುಗಳೊಡನೆ ಸ್ತುತಿಸಲಾಗಿರುವುದು.

37. ಮೇಲೆ ಹೇಳಿದ **ಇಂದ್ರ ಸೋಮಂ** ಎಂಬ ಸೂಕ್ತದಲ್ಲಿ ಋಷಿಯು ದೊದಲನೆಯ ಋಕ್ಕಿನಲ್ಲಿ ಇಂದ್ರನನ್ನು ಸ್ತುತಿಸಿರುವನು. ಆದರಂತೆಯೇ ಎರಡನೆಯ ಋಕ್ಕಿನಲ್ಲಿ ಮರುದ್ದೇವತೆಗಳನ್ನೂ, ಮೂರನೆಯ ಋಕ್ಕಿನಲ್ಲಿ ತ್ವಷ್ಟೃದೇವತೆಯನ್ನೂ, ನಾಲ್ಕನೆಯ ಋಕ್ಕಿನಲ್ಲಿ ಅಗ್ನಿಯನ್ನೂ,

38. ಐದನೆಯ ಋಕ್ಕಿನಲ್ಲಿ ಪುನಃ ಇಂದ್ರನನ್ನೂ, ಆರನೆಯ ಋಕ್ಕಿನಲ್ಲಿ ಋತಾವೃಧಾ ಎಂಬ ಹೆಸರಿನಿಂದ ಪ್ರಸಿದ್ಧರಾದ ಮಿತ್ರಾವರುಣರನ್ನೂ, ಏಳನೆಯ ಋಕ್ಕಿನಿಂದ ಹತ್ತನೆಯ ಋಕ್ಕಿನವರೆಗೆ ನಾಲ್ಕು ಋಕ್ಕುಗಳಲ್ಲಿ ದ್ರವಿಣೋದ (ಅಗ್ನಿ) ಎಂಬ ಹೆಸರಿನ ದೇವತೆಯನ್ನೂ ಋಷಿಯು ಸ್ತುತಿಸಿರುವನು.

39. ಋಗ್ವೇದಮಂತ್ರಗಳಿಗೆ ಇರುವ ದೇವತೆಗಳನ್ನು ಪ್ರಮಾಣದಿಂದ (ಆದೇಶ) ತಿಳಿದುಕೊಳ್ಳಬೇಕು. ಪ್ರಮಾಣವೆಂದರೆ ಅನುಕ್ರಮಣಿಕೆ ಮೊದಲಾದ ಗ್ರಂಥಗಳು. ಏಕೆಂದರೆ ಈ ಮಂತ್ರಗಳಿಗೆ ಮಂತ್ರಲಕ್ಷಣಗಳಿಂದಾಗಲಿ ಪ್ರಸ್ತಾಪತ್ಪ್ರೇನ ಮಂತ್ರದಲ್ಲಿ ಉಕ್ತವಾಗಿರುವ ದೇವತೆಯ ಹೆಸರಿನಿಂದಾಗಲಿ ಮಂತ್ರೋಕ್ತದೇವತೆಯನ್ನು ಸರಿಯಾಗಿ ನಿಶ್ಚಯಿಸಿ ತಿಳಿಯಲು ಸಾಧ್ಯವಿಲ್ಲ.

---

is both in the hymn of summons (ಪ್ರೈಷ) for offerings to the Rtus, and in the hymn of Grtsadama also.

37. Now with the fisst (stanza) he (the seer) praised Indra, the Maruts with the second, Tvastr with the third, and Agni with the fourth;

38. With the fifth Sakra (Indra) again, the two gods who delight in truth (Mitra-Varuna) with the sixth, and with the four beginning with the seventh (7-10) Agni Dravinodas.

39. The divinity of the formulas of the Rg-Veda is to be known from authoritative statement (ಆದೇಶ), not from its characteristic mark (ಲಿಂಗ); for it is not possible to know actually (ತತ್ತ್ವೇನ) the divnity of these (stanzas) from its characteristic mark,

ಏಕಾದಶ್ಯಾ ತು ನಾಸತ್ಯೌ ದ್ವಾದಶ್ಯಾಗ್ನಿಮಿಮಂ ಪುನಃ ।
ಪೃಥಕ್ಪೃಥಕ್ತ್ವಸ್ತೀದಂ ತು ಸೂಕ್ತಮಾಹ ರಥೀತರಃ ॥ ೪೦ ॥
ಬಹುದೈವೇ ದ್ವಿದೈವೇ ವಾ ಗುಣೈರ್ವಾ ಯತ್ರ ಕರ್ಮಜೈಃ ॥
ಸ್ತೂಯತೇ ದೇವತೈಕೈಕಾ ವಿಭಕ್ತಸ್ತುತಿ ತದ್ವಿದುಃ ॥ ೪೧ ॥
ವೈಶ್ವದೇವಾನಿ ಸೂಕ್ತಾನಿ ತ್ರಿವಿಧಾನಿ ಭವಂತಿ ತು ।
ಸೂರ್ಯಸಂಸ್ತವಸಂಯುಕ್ತಂ ವಿಶ್ವಲಿಂಗಂ ಪೃಥಕ್ತುತಿ ॥ ೪೨ ॥
ಪೃಥಕ್ಸ್ತುತೀತಿ ಯತ್ರೋಕ್ತಂ ತದ್ವಿಧ್ಯಾದ್ಬಹುದೈವತಂ ।

40. ಹನ್ನೊಂದನೆಯ ಋಕ್ಕಿನಲ್ಲಿ ಅಶ್ವಿನೀದೇವತೆಗಳನ್ನೂ, ಹನ್ನೆರಡನೆಯ ಋಕ್ಕಿನಲ್ಲಿ ಪುನಃ ಅಗ್ನಿಯನ್ನೂ ಸ್ತುತಿಸಲಾಗಿದೆ. ಈ ಸೂಕ್ತದ ಪ್ರತಿಯೊಂದು ಋಕ್ಕು ಆಯಾ ದೇವತೆಯನ್ನು ಸ್ತುತಿಸುವ ಪ್ರತ್ಯೇಕ ಸ್ತುತಿಯಾಗಿರುವುದೆಂದು ರಥೀತರ ಎಂಬ ಋಷಿಯ ಅಭಿಪ್ರಾಯವು.

41. ಒಂದು ಸೂಕ್ತದಲ್ಲಿ ಎರಡು ದೇವತೆಗಳನ್ನು ಅಥವಾ ಅನೇಕ ದೇವತೆಗಳನ್ನು ಅವರವರ ಗುಣಗಳಿಂದಲೂ, ಸಾಹಸಕರ್ಮಗಳಿಂದಲೂ ವರ್ಣಿಸಿ ಪ್ರತಿದೇವತೆಯನ್ನು ಪ್ರತ್ಯೇಕವಾಗಿ ಸ್ತುತಿಸಿದ್ದರೆ ಆ ಸೂಕ್ತವನ್ನು ವಿಭಕ್ತಿಸ್ತುತಿಯೆಂದು ಹೇಳುವರು.

ಮೂರು ವಿಧವಾದ ವೈಶ್ವದೇವಸೂಕ್ತಗಳು

42. ವೈಶ್ವದೇವಸೂಕ್ತಗಳಲ್ಲಿ (ವಿಶ್ವೇದೇವತೆಗಳನ್ನು ಸ್ತುತಿಸಿರುವ ಸೂಕ್ತಗಳಲ್ಲಿ) ಮೂರು ವಿಧಗಳಿರುವವು. ಮೊದಲನೆಯದು—ಸೂರ್ಯ ಅಥವಾ ಆದಿತ್ಯನೊಡನೆ ಎಲ್ಲಾ ದೇವತೆಗಳನ್ನು ಸ್ತುತಿಸಿರುವುದು (ಉದಾ-1ನೇ ಮಂಡಲದ 164 ನೇ ಸೂಕ್ತ ಇತ್ಯಾದಿ); ಎರಡನೆಯ ವರ್ಗ—ಎಲ್ಲಾ ದೇವತೆಗಳನ್ನು ಒಟ್ಟಾಗಿ (ಸಮಷ್ಟಿಯಾಗಿ) ಸ್ತುತಿಸಿರುವುದು; ಮೂರನೆಯ ವರ್ಗ—ಸೂಕ್ತದಲ್ಲಿರುವ ಎಲ್ಲಾ ದೇವತೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ (ಪ್ರತ್ಯೇಕ ಮಂತ್ರಗಳಿಂದ) ಸ್ತುತಿಸಿರುವುದು. ಇವುಗಳಲ್ಲಿ ಮೊದಲನೆಯ ವರ್ಗದ ಸ್ತುತಿಗೆ ಸೂರ್ಯಸಂಸ್ತವ ಸಂಯುಕ್ತವೆಂದೂ ಎರಡನೆಯ ವರ್ಗದ ಸ್ತುತಿಗೆ ವಿಶ್ವಲಿಂಗವೆಂದೂ, ಮೂರನೆಯ ವರ್ಗದ ಸ್ತುತಿಗೆ ಪೃಥಕ್ಸ್ತುತಿಯೆಂದೂ ಹೆಸರು.

೪೩. **ಪೃಥಕ್ಸ್ತುತಿ** ಎಂಬ ವರ್ಗದ ಸ್ತುತಿಗಳಲ್ಲಿ ಅನೇಕ ದೇವತೆಗಳನ್ನು ಅವರ ಹೆಸರುಗಳಿಂದ ಪ್ರತ್ಯೇಕ

---

40. With the eleventh (he praises) the Nasatyas (Asvins), with the twelth this Agni again. Rathitara, however, says that this hymn consists of single separate praises.

9. Three kinds of hymns to tne All-gods.

41. For where, (in a hymn) with many deities or two deities, each deity is praised singly (ಏಕೈಕ) or by qualities arising from its activities, they regard that (hymn) as one containing distributed praise (ವಿಭಕ್ತಿಸ್ತುತಿ).

42. Now the hymns to the All-gods (ವೈಶ್ವದೇವ) are of three kinds; that which is provided with joint-praise of the Sun (ಸೂರ್ಯ-ಸಂಸ್ತವ), that which contains the characteristic 'All' (ವಿಶ್ವಲಿಂಗ) and that which contains separate praise (ಪೃಥಕ್‌ಸ್ತುತಿ)

43. That which is called 'Separate praise' (ಪೃಥಕ್‌ಸ್ತುತಿ) one should

ವಿಶ್ವಲಿಂಗಂ ತು ತದ್ಯತ್ರ ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ ॥ ೪೩ ॥
ವಿಶ್ವಾನುದ್ದಿಶ್ಯ ಯದ್ದೇವಾನ್ ಸ್ತೌತಿ ಸೂರ್ಯಮನೇಕಧಾ ।
ದೇವಾನೇವಾಭಿಸಂಸ್ತೌತಿ ತಂ ಪ್ರಾಹುಃ ಸೂರ್ಯಸಂಸ್ತವಂ ॥ ೪೪ ॥
ನ ತು ಭಾಗಸ್ಯ ಸೂಕ್ತಾದೌ ಸೂಕ್ತೇಷ್ವೇವೌಷಸೇಷು ವಾ ।
ನ ಸಾವಿತ್ರೇ ಹ್ವಯಾಮೀತಿ ನ ಸೂರ್ಯಾಯಾಂ ಕೃತೌ ಮಖೇ ॥ ೪೫ ॥
ನ ಚೈವೈವಂ ಪ್ರವಾದೇಷು ಮಂತ್ರೇಷ್ವನ್ಯೇಷು ಕೇಷುಚಿತ್ ।
ನ ಚ ಯತ್ರ ಸಜೋಷೇತಿ ಪದಂ ವಾ ಸ್ಯಾತ್ಸಜೂರಿತಿ ॥ ೪೬ ॥

ಪ್ರತ್ಯೇಕವಾಗಿ ಸ್ತುತಿಸಲಾಗಿರುವುದು. ವಿಶ್ವಲಿಂಗವೆಂಬ ವರ್ಗದ ಸೂಕ್ತಗಳಲ್ಲಿ ವಿಶ್ವೇದೇವತೆಗಳನ್ನು ಒಟ್ಟಾಗಿ ಅವರವರ ಕರ್ಮಗಳ ಮತ್ತು ಗುಣಗಳ ವರ್ಣನೆಯಿಂದ ಸ್ತುತಿಸಲಾಗಿರುವುದು.

44. ಸೂರ್ಯಸಂಸ್ತವವೆಂಬ ವರ್ಗದ ಸೂಕ್ತಗಳಲ್ಲಿ ಅನೇಕ ದೇವತೆಗಳನ್ನುದ್ದೇಶಿಸಿ (ಸೂರ್ಯನಿಗೂ, ವಿಶ್ವೇದೇವತೆಗಳಿಗೂ ತಾದಾತ್ಮ್ಯವನ್ನು ವರ್ಣಿಸಿ) ಸೂರ್ಯನನ್ನು ಅನೇಕ ಪ್ರಕಾರವಾಗಿ ಸ್ತುತಿಸಲಾಗಿರುವುದು.

॥ ವೈಶ್ವದೇವಸೂಕ್ತದ ಲಕ್ಷಣ ॥

45. ಆದರೆ ಒಂದು ಸೂಕ್ತದ ಪ್ರಾರಂಭದಲ್ಲಿ (ಪ್ರಾರಂಭ ಮಂತ್ರದಲ್ಲಿ) ಭಗದೇವತೆಯನ್ನು ಸ್ತುತಿಸಿದ್ದರೂ, ಉಷೋದೇವತೆಯನ್ನು ಸ್ತುತಿಸಿದ್ದರೂ, ಸವಿತೃದೇವತೆಯ ಸ್ತುತಿಯಿದ್ದರೂ (ಹ್ವಯಾಮ್ಯಾಗ್ನಿಂ-ಋ. ಸಂ. ೧-೩೫ ಇತ್ಯಾದಿ) ಅಥವಾ ಸೂರ್ಯದೇವತಾಕವಾದ ಸೂಕ್ತದಲ್ಲಿ ಯಜ್ಞಸಂಬಂಧವಾದ ಆಹುತ್ಯರ್ಪಣೆ ಇದ್ದರೂ ಆ ಸೂಕ್ತವು ವೈಶ್ವದೇವಸೂಕ್ತವೆನಿಸುವುದಿಲ್ಲ.

46. ಹಾಗೆಯೇ ಒಂದು ಸೂಕ್ತದ ಮಂತ್ರಗಳಲ್ಲಿ ಸ್ತುತಿ ಇಲ್ಲದೆ ಕೇವಲ ವಿಷಯನಿರೂಪಣೆ (ಪ್ರವಾದ) ಇದ್ದರೂ ಸಜೋಷಾಃ, ಸಜೂಃ ಎಂಬ ಪದಗಳ ಪ್ರಯೋಗವಿದ್ದರೂ ಅದು ವೈಶ್ವದೇವಸೂಕ್ತವೆನಿಸುವುದಿಲ್ಲ.

---

recognise as addressed to many divinities; that which is characterised by 'All' (ವಿಶ್ವಲಿಂಗ) is the one in which (the gods are praised) with their universal (ವಿಶ್ವ) qualities arising from their activities.

44, That which with reference to the All-gods frequently praises the Sun, (and) at the same time praises the gods themselves, they call a joint-praise of the Sun (ಸೂರ್ಯಸಂಸ್ತವ).

45. But (the term does) not (apply) at the beginning of the hymn to Bhaga, nor in hymns to Usas, nor in the hymn to Savitr, 'I invoke' (ಹ್ವಯಾಮಿ : i. 35), nor in the Surya (hymn), in (regaad to) oblation (and) sacrifice (ಮಖ).

10. How to ascertain the deity of a hymn.

46. nor, similarly, in any other formulas (which are) statements (ಪ್ರವಾದಾಃ), or where the word 'associated' (ಸಜೋಷಾಃ) or 'together' (ಸಜೂಃ) may be (used).

ಯಸ್ಮಿನ್ಪ್ರಸಂಗಾದಪಿ ತು ಬಹ್ವೀನಾಂ ಪರಿಕೀರ್ತನಂ ।
ವೈಶ್ವದೇವಂ ತದಪ್ಯಾಹ ಸ್ಥವಿರೋ ಲಾಮಕಾಯನಃ ॥ ೪೭ ॥

ಅಸಂಸ್ತುತಂ ಸ್ತುತಂ ವಾಪಿ ಪ್ರದಿಷ್ಟಂ ದೈವತಂ ಕ್ವಚಿತ್ ।
ಮಂತ್ರೈಸ್ತದೃಷಯೋಽರ್ಚಂತಿ ತಾಂ ತು ಬುಧ್ಯೇತ ಶಾಸ್ತ್ರವಿತ್ ॥ ೪೮ ॥

ಆದೌ ಹಿ ಮಧ್ಯೇ ಚಾಂತೇ ಚ ಪೃಥಕ್ತ್ವೇಷು ಚ ಕರ್ತೃಭಿಃ
ಕರ್ಮಾಣ್ಯನಪದಿಷ್ಟಾನಿ ಪ್ರದಿಷ್ಟಾನ್ಯಪಿ ತು ಕ್ವಚಿತ್ ॥ ೪೯ ॥

ಕರ್ಮೈವ ತಾವಿತ್ಸಾವಿತ್ರ್ಯಾಂ ನಿವಿದಿ ಸ್ತೌತಿ ಕರ್ಮಣಾ ।

47. ಆದರೆ ಒಂದು ಸೂಕ್ತದಲ್ಲಿ ಪ್ರಸಂಗವಶದಿಂದ ಅನೇಕ ದೇವತೆಗಳ ಹೆಸರುಗಳು ಸೂಚಿತವಾಗಿದ್ದರೂ ಅದನ್ನೂ ವೈಶ್ವದೇವಸೂಕ್ತವೆಂದು ಭಾವಿಸಬೇಕೆಂದು ಲಾಮಕಾಯನ ಎಂಬ ಆಚಾರ್ಯರ ಮತವಿರುವುದು.

48. ಒಂದು ಮಂತ್ರದಲ್ಲಿ ನಿರ್ದಿಷ್ಟದೇವತೆಯನ್ನು ಸ್ತುತಿಸಿರಲಿ, ಸ್ತುತಿಸದೇ ಇರಲಿ ಮಂತ್ರದಲ್ಲಿ ದೇವತೆಯ ಹೆಸರನ್ನು ಎಲ್ಲಿಯಾದರೂ ಒಂದುಕಡೆ ಮಾತ್ರ ಸೂಚಿಸಿದ್ದರೂ ಆ ಮಂತ್ರದಿಂದ ಆ ದೇವತೆಯನ್ನು ಋಷಿಗಳು (ಮತ್ತು ಇತರರು) ಅರ್ಚಿಸುತ್ತಾರೆ. ಈ ವಿಷಯವನ್ನು ಶಾಸ್ತ್ರಜ್ಞನಾದವನು ತಿಳಿದು ಅದರಂತೆ ಆಚರಿಸಬೇಕು.

49. ಸ್ತುತಿಕರ್ತರಾದ (ಋಷಿಗಳಿಂದ) ದೇವತೆಗಳ ಸಾಹಸಕಾರ್ಯಗಳ (ಅಥವಾ ಗುಣಗಳ) ವರ್ಣನೆಯು ಮಂತ್ರದ (ಅಥವಾ ಸೂಕ್ತದ) ಮೊದಲಲ್ಲಿಯಾಗಲಿ, ಕೊನೆಯಲ್ಲಿಯಾಗಲಿ, ಪ್ರತ್ಯೇಕ ವಾಕ್ಯಗಳಲ್ಲಾಗಲಿ ಪ್ರಶಂಸಿಶಲ್ಪಡದ್ದಿದರೂ, ಎಲ್ಲಿಯಾದರೂ ಒಂದೆಕಡೆ ಸ್ವಲ್ಪಮಟ್ಟಿಗೆ ಸೂಚಿತವಾಗಿದ್ದರೂ ಆ ಮಂತ್ರವು ಆ ದೇವತೆಯನ್ನು ನಿರ್ದೇಶಿಸಿದೆಯೆಂದು ತಿಳಿಯಬೇಕು.

50 ಆಯಾ ವ್ಯಕ್ತಿಗಳ ಕರ್ಮಗಳಿಂದ ಆಯಾ ವ್ಯಕ್ತಿಯನ್ನು ನಿರ್ದೇಶಿಸುವಂತೆ ಎಂದರೆ **ದೋಗ್ಧಾಽಶ್ವ** (ಹಾಲು ಕರೆಯುವ ಕಾರ್ಯದಿಂದ) ಹಸುವನ್ನೂ, ಆಶುಃ (ಶೀಘ್ರಗಮನಕಾರ್ಯದಿಂದ) ಅಶ್ವನನ್ನೂ ವೋಳ್ಹಾ (ಭಾರವನ್ನು ವಹಿಸುವ ಕಾರ್ಯದಿಂದ) ಎತ್ತನ್ನೂ ಗುರುತಿಸುವಂತೆ, ಸವಿತೃದೇವತಾಕವಾದ ಮಂತ್ರಗಳ ಮಧ್ಯದಲ್ಲಿರುವ ನಿವಿತ್ಸೂಕ್ತದಿಂದ ಆ ದೇವತೆಯನ್ನು ತಿಳಿಯುವಂತೆಯೂ, ಆಯಾ ದೇವತಾಸಂಬಂಧವಾದ ಕಾರ್ಯಗಳಿಂದ ಆಯಾ

47. But the old Lamakayana states even that (hymn) to be addressed to the All-gods, in which many (deities) are celebrated even incidentally (ಪ್ರಸಂಗಾತ್)

48. The divinity, whether praised or not, (but) indicated somewhere (in the hymn), the seers adore with formnlas. That (deity) one learned in scriptures (ಶಾಸ್ತ್ರ) should take note of.

49. For the action (of the gods), though not designated by their agents, are nevertheless indicated somewhere—at the beginning, and in middle, and at the end, and in individual passages (ಪೃಥಕ್ತ್ವೇಷು).

50. The very action itself in the Nivid to Savitr praises by the

ಯದ್ದೇನುಃ ಸಪ್ತ್ಯನಡ್ವಾಹೌ ವೋಳ್ಹಾ ದೋಗ್ಧ್ರ್ಯಶುರೇವ ವಾ ॥ ೫೦ ॥

ಭಾಗೇ ಯತ್ಸ್ತೌತಿ ಚಾಗ್ನ್ಯಾದೀನ್ಮಿತ್ರಾದೀಂಶ್ಚಾಶ್ವಸಂಸ್ತುತೌ ।
ಯದ್ವೈಭರಿತಿ ಚೈತಸ್ಮಿನ್ವೈಶ್ವದೇವೇಗ್ನಿಮರ್ಚತಿ ॥ ೫೧ ॥

ತದಾಹುರಾದಾವಂತೇ ಚ ಪ್ರಾಯಶೋಽನ್ಯಾ ಸ್ತುವನ್ನೃಚಃ ।
ಪ್ರತಿಯೋಗಾತ್ಪ್ರಸಂಗಾದ್ವಾ ಸ್ತೌತ್ಯನ್ಯಾಮಪಿ ದೇವತಾಂ ॥ ೫೨ ॥

ದೇವತೆಗಳ ಹೆಸರನ್ನು ನಿರ್ದಿಷ್ಟವಾಗಿ ತಿಳಿಯಬಹುದು. (ಎಂದರೆ ಒಂದು ಮಂತ್ರದಲ್ಲಿ ದೇವತೆಯ ನಾಮನಿರ್ದೇಶ ವಿಲ್ಲದಿದ್ದರೆ ಆ ಸಂದರ್ಭದಲ್ಲಿ ಆ ಮಂತ್ರದ ದೇವತೆಯು ಯಾರೆಂಬುದನ್ನು ತಿಳಿಯುವುದಕ್ಕಾಗಿ ಮೇಲೆ ಹೇಳಿದ ಕ್ರಮ ವನ್ನು ಅನುಸರಿಸಬೇಕು ಎಂದಭಿಪ್ರಾಯವು).

ಸೂಕ್ತಭಾಗಿನೀ ಮತ್ತು ನಿಪಾತಿನೀ ಮಂತ್ರಗಳು

51. ಭಗದೇವತಾಕವಾದ ಸೂಕ್ತದಲ್ಲಿ (೭ ನೇ ಮಂಡಲ ೪೧ನೇ ಸೂಕ್ತ) ಅಗ್ನ್ಯಾದಿ ದೇವತೆಗಳನ್ನೂ ಅಶ್ವ ಸ್ತುತಿ ಇರುವ ಸೂಕ್ತದಲ್ಲಿ (೧ ನೇ ಮಂಡಲ ೧೬೨ನೇ ಸೂಕ್ತ) ಮಿತ್ರಾದಿ ದೇವತೆಗಳನ್ನೂ, ವೈಶ್ವದೇವಸೂಕ್ತವಾದ ಐಭಿರಗ್ನೇ (೧ ನೇ ಮಂಡಲದ ೧೪ನೇ ಸೂಕ್ತ) ಎಂಬ ಸೂಕ್ತದಲ್ಲಿ ಅಗ್ನಿಯನ್ನು ಸ್ತುತಿಸಿರುವಂತೆಯೇ,

52. ಒಂದು ಸೂಕ್ತದ ಮುಖ್ಯದೇವತೆಯನ್ನು ಸ್ತುತಿಸುವಾಗ ಆ ಸೂಕ್ತದ ಬಹುಭಾಗದ ಋಕ್ಕುಗಳಲ್ಲಿ ಮುಖ್ಯದೇವತೆಯನ್ನು ಸ್ತುತಿಸಿ ಮುಖ್ಯದೇವತೆಗೆ ಸಂಬಂಧಪಟ್ಟ ವಿಷಯವನ್ನು ಹೇಳುವಾಗ ಅಥವಾ ಪ್ರಸಂಗವಶದಿಂದ ಇತರ ದೇವತೆಗಳನ್ನು ಸೂಕ್ತದ ಕೆಲವು ಋಕ್ಕುಗಳಲ್ಲಿ ಋಷಿಯು ಸ್ತುತಿಸಿರುವುದು ಕಂಡುಬರುವುದು. ಎಂದರೆ ಒಂದು ಸೂಕ್ತದಲ್ಲಿ ಮುಖ್ಯದೇವತೆಯನ್ನು ಮಾತ್ರ ಸ್ತುತಿಸಬೇಕೆಂದು ನಿಯಮವಲ್ಲ. ಮುಖ್ಯದೇವತೆಯ ಸ್ತುತಿಯನ್ನೇ ಲಕ್ಷ್ಯ ದಲ್ಲಿಟ್ಟುಕೊಂಡು ಸಂದರ್ಭಾನುಸಾರವಾಗಿ ಅಥವಾ ಮುಖ್ಯದೇವತೆಯ ವಿಷಯವನ್ನು ವಿವರಿಸುವುದಕ್ಕಾಗಿ ಇತರ ದೇವತೆಗಳನ್ನೂ ಸ್ವಲ್ಪವಮಟ್ಟಿಗೆ ಸ್ತುತಿಸುವುದು ಸಹಜವೂ ರೂಢಿಯೂ ಆಗಿದೆ.

---

action : since the cow, the courser, and the ox are (called) milker, swift, or career (respectively).

11. Hymn-owning and incidental deities. Seers of Visvedeva hymns

51. Inasmuch as (the seer) praises Agni and others in the hymn to Bhaga (vii. 41), Mitra and others in the panegyric of the horse (i. 162), and adores Agni in (the hymn) to the All-gods, 'Hither with these' (ಐಭಿಃ i. 14):

52. as to that, they say that, while for the most part employing in his praise (ಸ್ತುವನ್) other stanzas at the beginning and end (of a hymn), he (the seer) from association (ಪ್ರತಿಯೋಗಾತ್) or on occasion (ಪ್ರಸಂಗಾತ್) praises another deity at the same time.

ಯಸ್ಯಾಂ ವದತ್ಯರ್ಥವಾದಾನ್ಸಾ ಜ್ಞೇಯಾ ಸೂಕ್ತಭಾಗಿನೀ ।
ಯಾಂ ತು ಸ್ತೌತಿ ಪ್ರಸಂಗೇನ ಸಾ ವಿಜ್ಞೇಯಾ ನಿಪಾತಿನೀ ॥ ೫೩ ॥

ಚತುರ್ಧಾ ಭಣ್ಯತೇ ತಸ್ಮಿನ್ಸೂಕ್ತೇ ವಾ ಸೂಕ್ತಭಾಗಿನೀ ।
ಯಸ್ಮಿನ್ಸರ್ವಾಂಸ್ತು ರಾಜರ್ಷೀನೃಷೀನ್ವಾಪಿ ಸ್ತುವನ್ಋಷಿಃ ॥ ೫೪ ॥

ಮೇಧಾತಿಥಿರಗಸ್ತ್ಯಸ್ತು ಬೃಹದುಕ್ಥೋ ಮನುರ್ಗಯಃ ।
ಋಜಿಶ್ವಾ ವಸುಕರ್ಣಶ್ಚ ಶಾರ್ಯಾತೋ ಗೋತಮೋ ಲುಶಃ ॥ ೫೫ ॥

ಸ್ವಸ್ತ್ಯಾತ್ರೇಯಃ ಪರುಚ್ಛೇಪಃ ಕಕ್ಷೀವಾನ್ ಗಾಥಿನೌರ್ವಶೌ ।
ನಾಭಾಕಶ್ಚೈವ ನಿರ್ದಿಷ್ಟೋ ದುವಸ್ಯುರ್ಮಮತಾಸುತಃ ॥ ೫೬ ॥

53 ಒಂದು ಮಂತ್ರದಲ್ಲಿ ಯಾವ ದೇವತೆಯನ್ನು ಪ್ರಧಾನ (ಮುಖ್ಯ) ದೇವತೆಯೆಂದು ಭಾವಿಸಿ ಆ ದೇವತೆಯನ್ನು ಸ್ತುತಿಸಲಾಗುವುದೋ ಆ ಮಂತ್ರಕ್ಕೆ ಅಥವಾ ಋಕ್ಕಿಗೆ ಸೂಕ್ತಭಾಗಿನೀ (ಪ್ರಧಾನದೇವತೆಯನ್ನು ಸ್ತುತಿಸಿರುವ ಸೂಕ್ತ) ಎಂದೂ ಪ್ರಸಂಗವಶದಿಂದ ಪ್ರಧಾನದೇವತೆಯಲ್ಲದ ಇತರ ದೇವತೆಯನ್ನು ಸ್ತುತಿಸಿರುವ ಋಕ್ಕಿಗೆ ನಿಪಾತಿನೀ (ಕಾರಣಾಂತರದಿಂದ ಬೇರೆ ದೇವತೆಯನ್ನು ಸ್ತುತಿಸಿರುವ ಮಂತ್ರ)ಎಂದೂ ಹೆಸರು. ಒಂದು ಸೂಕ್ತದಲ್ಲಿ ಸೂಕ್ತಭಾಗಿನೀ ಮಂತ್ರಗಳು ಮಾತ್ರವಿರಬಹುದು. ಅಥವಾ ಸೂಕ್ತಭಾಗಿನೀ ಮತ್ತು ನಿಪಾತಿನೀ ಎಂಬ ಎರಡು ವಿಧ ಮಂತ್ರಗಳೂ ಇರಬಹುದು.

54. ಸೂಕ್ತಭಾಗಿನೀ ಎಂಬ ಋಕ್ಕು ನಾಲ್ಕು ವಿಧವಾಗಿ ಹೇಳಲ್ಪಟ್ಟಿರುವುದು ಸೂಕ್ತದ್ರಷ್ಟೃನಾದ ಋಷಿಯು ಆ ಸೂಕ್ತದಲ್ಲಿ ಅನೇಕ ರಾಜರ್ಷಿಗಳನ್ನೂ ಋಷಿಗಳನ್ನೂ ಪ್ರಶಂಸೆ ಮಾಡಿರುವುದು ಕಂಡುಬರುವುದು.

ವಿಶ್ವೇದೇವತಾಕಸೂಕ್ತಗಳ ದ್ರಷ್ಟೃಗಳಾದ ಋಷಿಗಳ ಹೆಸರುಗಳು

55. ವೈಶ್ವದೇವಸೂಕ್ತಗಳ (ವಿಶ್ವೇದೇವತೆಗಳನ್ನು ಸ್ತುತಿಸಿರುವ ಸೂಕ್ತಗಳ) ದ್ರಷ್ಟೃಗಳಾದ ಋಷಿಗಳಾರೆಂದರೆ—ಮೇಧಾತಿಥಿ, ಅಗಸ್ತ್ಯ, ಬೃಹದುಕ್ಥ, ಮನು, ಗಯಃ. ಋಜಿಶ್ವಾ, ವಸುಕರ್ಣ, ಶಾರ್ಯಾತ, ಗೋತಮ, ಲುಶ,

56. ಸ್ವಸ್ತ್ಯಾತ್ರೇಯ, ಪರುಚ್ಛೇಪಃ, ಕಕ್ಷೀವಾನ್, ಗಾಧಿಪುತ್ರನಾದ ವಿಶ್ವಾಮಿತ್ರ, ಊರ್ವಶೀಪುತ್ರನಾದ ವಸಿಷ್ಠ, ನಾಭಾಕ, ದುವಸ್ಯು, ಮಮತಾದೇವಿಯ ಪುತ್ರನಾದ ದೀರ್ಘತಮಾಃ,

53. The deity to whom he addresses statements of an object (ಅರ್ಥವಾದಾನ್) is to be known as hymn-owning (ಸೂಕ್ತಭಾಗಿನೀ) ; but the one whom he praises on occasion (ಪ್ರಸಂಗೇನ) is to be recognised as incidental (ನಿಪಾತಿನೀ),

54. In four ways (ಚತುರ್ಧಾ) it may be said (ವಾ), rhe hymn-owning (deity) is mentioned (ಭಣ್ಯತೇ) in that hymn in which a seer who praises all the royal Rishis or (divine) Rishis is indicated (ನಿರ್ದಿಷ್ಟ).

55. as Medhatithi, Agastya, Brhaduktha, Manu, Gaya, Rijisvan, Vasukarna, Saryata, Gotama, Lusa;

12. Seers of Vaisvadeva hymn (continued).

56. Svastyatreya, Paruchepa, Kaksivat, the son of Gathin (ವಿಶ್ವಾಮಿತ್ರ) and the son of Urvasi (ವಸಿಷ್ಠ), Nabhaka, Duvasyu, and the son of Mamata (ದೀರ್ಘತಮಾಃ).

ವಿಹವ್ಯಃ ಕಶ್ಯಪ ಋಷಿರವತ್ಸಾರಶ್ಚ ನಾಮ ಯಃ ।
ವಾಮದೇವೋ ಮಧುಚ್ಛಂದಾಃ ಪಾರ್ಥೋ ದಕ್ಷಸುತಾದಿತಿಃ ॥ ೫೭ ॥

ಜುಹೂರ್ಗೃತ್ಸಮದಶ್ಚರ್ಷಿರ್ದೇವಾಃ ಸಪ್ತರ್ಷಯಶ್ಚ ಯೇ ।
ಯಮೋಽಗ್ನಿಸ್ತಾಪಸಃ ಕುತ್ಸಃ ಕುಸೀದೀ ತ್ರಿತ ಏವ ಚ ॥೫೮॥

ಬಂಧುಪ್ರಭೃತಯಶ್ಚೈವ ಚತ್ವಾರೋ ಭ್ರಾತರಃ ಪೃಥಕ್ ।
ವಿಷ್ಣುಶ್ಚ ನೇಜಮೇಷಶ್ಚ ನಾಮ್ನಾ ಸಂವನನಶ್ಚ ಯಃ ॥ ೫೯ ॥

ಏತೇ ತು ಸರ್ವ ಏವಾಸ್ಯ ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ ।
ಸಮಸ್ತೈರಥ ಚ ವ್ಯಸ್ತೈಃ ಪೃಥಕ್ಸೂಕ್ತೇಷು ತುಷ್ಟುವುಃ ॥ ೬೦ ॥
ಪಾರ್ಥಿವೋ ದ್ರವಿಣೋದೋಽಗ್ನಿಃ ಪುರಸ್ತಾದ್ಯಸ್ತು ಕೀರ್ತಿತಃ ।

57. ವಿಹವ್ಯ, ಕಶ್ಯಪ, ಅವತ್ಸಾರ, ವಾಮದೇವ, ಮಧುಚ್ಛಂದಾಃ, ಪಾರ್ಥ, ದಕ್ಷಪುತ್ರಿಯಾದ ಅದಿತಿ,

58. ಜುಹು, ಗೃತ್ಸಮದ, ಸಪ್ತಋಷಿಗಳು (ಭರದ್ವಾಜ, ಕಶ್ಯಪ, ಗೋತಮ, ಅತ್ರಿ, ವಿಶ್ವಾಮಿತ್ರ, ಜಮದಗ್ನಿ, ವಸಿಷ್ಠ ಎಂಬ ಸಪ್ತರ್ಷಿಗಳು ೧೦ನೇ ಮಂಡಲದ ೧೩೭ನೇ ಸೂಕ್ತದಲ್ಲಿ ಪ್ರತಿಯೊಬ್ಬರೂ ವಿಶ್ವೇದೇವತೆಗಳನ್ನು ಒಂದೊಂದು ಋಕ್ಕಿನಲ್ಲಿ ಸ್ತುತಿಸಿರುವರು,) ಯಮ, ಅಗ್ನಿಸ್ತಾಪಸ, ಕುತ್ಸ, ಕುಸೀದೀ, ತ್ರಿತ,

59. ಬಂಧುಪ್ರಭೃತಿಗಳು (ಎಂದರೆ, ಬಂಧು, ಸುಬಂಧು, ಶ್ರುತಬಂಧು, ವಿಪ್ರಬಂಧು ಎಂಬ ನಾಲ್ಕು ಮಂದಿ ಸಹೋದರರು ಪ್ರತ್ಯೇಕವಾಗಿ ವಿಶ್ವೇದೇವತೆಗಳನ್ನು ಸ್ತುತಿಸಿರುವರು), ವಿಷ್ಣು, ನೇಜಮೇಷ, ಸಂವನನ ಎಂಬ ಹೆಸರಿನ ಋಷಿ ;

60. ಈ ಋಷಿಗಳೆಲ್ಲರೂ ವಿಶ್ವೇದೇವತೆಗಳನ್ನು ಅವರವರ ಕರ್ಮಗಳು ಮತ್ತು ಗುಣಗಳಿಗೆ ಅನುಸಾರವಾಗಿ ಒಟ್ಟಾಗಿಯೂ, ಬೇರೆಬೇರೆಯಾಗಿಯೂ ನಾನಾಸೂಕ್ತಗಳಲ್ಲಿ ಸ್ತುತಿಸಿರುವರು.

ದ್ರವಿಣೋದಾಃ ಎಂಬ ದೇವತೆಯ ವಿಷಯ.

61. ಹಿಂದೆ ಹೇಳಿದಂತೆ (೧೫ನೇ ಸೂಕ್ತದ ೭-೧೦ ಋಕ್ಕುಗಳಲ್ಲಿ) ಪಾರ್ಥಿವಾಗ್ನಿಯನ್ನೇ ದ್ರವಿಣೋದ

57. Vihavya, the seer Kasyapa, and he who is Avatsara by name, Vamadeva, Madhuchandas, Partha, Aditi, daughter of Daksa ;

58. Juhu, and the seer Grtsamada, and those who are the divine seven Rishis, Yama, Agni, Tapasa, Kutsa, Kusidin, and Trita ;

59. also the four brothers, Bandhu and the rest separately (ಪೃಥಕ್) and Visnu, and Nejamesa, and he who is Samvanana by name.

60. All these have praised (them) in separate hymns with their universal (ವಿಶ್ವೈಃ) qualities arising from their activities, (whether those qualities are mentioned) collectively or individuelly.

13. Explanation of Dravinodas of RV. i. 16-18.

61. Now the Dravinoda, who has been asserted above (iii. 38) (to

ತಮಾಹುರಿಂದ್ರಂ ದಾತೃತ್ವಾದೇಕೇ ತು ಬಲವಿತ್ತಯೋಃ ॥ ೬೧ ॥
ಅಯಂ ಹಿ ದ್ರವಿಣೋದೋಽಗ್ನಿರಯಂ ದಾತಾ ಬಲಸ್ಯ ಹಿ ।
ಜಾಯತೇ ಚ ಬಲೇನಾಯಂ ಮಥ್ಯತ್ಯೈ ಋಷಿಭಿರಧ್ವರೇ ॥ ೬೨ ॥
ಹವೀಂಷಿ ದ್ರವಿಣಂ ಪ್ರಾಹುರ್ಹವಿಷೋ ಯತ್ರ ಜಾಯತೇ ।
ದಾತಾರಶ್ಚರ್ತ್ವಿಜಸ್ತೇಷಾಂ ದ್ರವಿಣೋದಾಸ್ತತಃ ಸ್ವಯಂ ॥ ೬೩ ॥
ಋಷೀಣಾಂ ಪುತ್ರ ಇತ್ಯೇಷಾಂ ದೃಶ್ಯತೇ ಸಹಸೋ ಯಹೋ ।
ಮಧ್ಯಮಾದ್ವಾ ಯತೋ ಜಜ್ಞೇ ತಸ್ಮಾದ್ವಾ ದ್ರವಿಣೋದಸಃ ॥ ೬೪ ॥

ಎಂಬ ದೇವತೆಯೆಂದು ಕರೆಯುವರು. ಈ ದೇವತೆಯು ಬಲವನ್ನೂ ದ್ರವ್ಯವನ್ನೂ ಭಕ್ತರಿಗೆ ಕೊಡುವವನಾದ್ದರಿಂದ ಕೆಲವರು ಇವನನ್ನು ಇಂದ್ರನೆಂದೂ ಹೇಳುವರು.

62. ಬಲವನ್ನು ಕೊಡುವವನಾದ್ದರಿಂದ ಈ ಅಗ್ನಿಯೇ ದ್ರವಿಣೋದನು. ಅಥವಾ ಯಜ್ಞಾದಿಗಳಲ್ಲಿ ಋಷಿಗಳು ಅರಣಿಗಳಲ್ಲಿ ಅಗ್ನಿಮಥನಮಾಡುವಾಗ ಬಲವನ್ನು ಉಪಯೋಗಿಸಿ ಕಡೆಯುವುದರಿಂದಲೂ ಈ ಅಗ್ನಿಗೆ ದ್ರವಿಣೋದನೆಂಬ ಹೆಸರು.

63. ಇವಲ್ಲದೆ ಹವಿಸ್ಸನ್ನು ದ್ರವ್ಯ (ದ್ರವಿಣ)ವೆಂದು ಕರೆಯುವರು. ಏಕೆಂದರೆ ಯಜ್ಞಾಗ್ನಿಯಲ್ಲಿ ಹವಿಸ್ಸನ್ನು ಹೋಮ ಮಾಡುವುದರಿಂದ ಅವಕ್ಕೆ ಪ್ರತಿಫಲವಾಗಿ ದ್ರವ್ಯವು ಲಭಿಸುವುದು. ಈಗ ಯಜ್ಞದಲ್ಲಿ ಭಾಗವಹಿಸುವ ಋತ್ವಿಕ್ಕುಗಳು ಹವಿಸ್ಸನ್ನು ಅರ್ಪಿಸಿ ಆ ಮೂಲಕ ದ್ರವ್ಯಪ್ರಾಪ್ತಿಗೆ ಕಾರಣರಾಗುವುದರಿಂದ ಋತ್ವಿಕ್ಕುಗಳಿಗೆ ದ್ರವಿಣೋದರೆಂದೂ ಹೇಳಬಹುದು.

64. ಅಥವಾ ಋಷಿಗಳು ತಮ್ಮ ಸ್ತುತಿಗಳಲ್ಲಿ ಅಗ್ನಿಯನ್ನು ಪುತ್ರನೆಂದೂ, ಬಲದ (ಬಲಪ್ರಯೋಗದಿಂದ ಜನಿಸುವ) ಪುತ್ರನೆಂದೂ ಪ್ರೀತ್ಯಾದರಗಳಿಂದ ಸಂಬೋಧಿಸುತ್ತಾರೆ. ಅಥವಾ ಈ ಪಾರ್ಥಿವಾಗ್ನಿಯು ಮಧ್ಯಮಾಗ್ನಿ (ಅಂತರಿಕ್ಷಸ್ಥಾನಾಗ್ನಿ) ಯಿಂದ ಜನಿಸುವವನು. ಈ ಕಾರಣಗಳಿಂದಲೂ ಈ ಪಾರ್ಥಿವಾಗ್ನಿಯೇ ದ್ರವಿಣೋದನು.

---

be) the terrestrial Agni, some call Indra, because of his being the giver of strength and wealth.

62. This (terrestrial) Agni is Dravinoda; for he is giver of strength; and he is produced by strength, (that is) rubbed (ಮಥ್ಯತಿ) by the seers at the sacrifice.

63. They call the oblations wealth (ದ್ರವಿಣ), because it is produced from the oblation; now the sacrificers (ಋತ್ವಿಜ್) are givers of them (oblations); hence they themselves are wealth-givers (ದ್ರವಿಣೋದಾಃ).

64. or he (Agni) is (called) Dravinodas because he appears (connected) with them (ಏಷಾಂ) from (such expressions as) 'the son of the seers', (and) 'O child of strength'; or because he was produced from the middle (Agni).

ದ್ರವಿಣೋದೋ೬ಗ್ನಿರೇವಾಯಂ ದ್ರವಿಣೋದಾಸ್ತದೋಚ್ಯತೇ ।
ಆಗ್ನೇಯೇಷ್ವೇವ ದೃಶ್ಯಂತೇ ಪ್ರವಾದಾ ದ್ರವಿಣೋದಸಃ ॥ ೬೫ ॥

ಐಂದ್ರಸ್ಯ ನವಕಸ್ಯೇಹ ಯದೈಂದ್ರಾವರುಣಂ ಪರಂ ।
ತಸ್ಯೋತ್ತರಂ ಚ ಸೋಮಾನಂ ಸ್ತೂಯತೇ ಬ್ರಹ್ಮಣಸ್ಪತಿಃ ॥ ೬೬ ॥

ಋಗ್ಭಿಃ ಪಂಚಭಿರಾದ್ಯಾಭಿಸ್ತಿಸೃಭಿಃ ಸದಸಸ್ಪತಿಃ ।
ನರಾಶಂಸೋ೬ನ್ತ್ಯಯಾ ಚರ್ಚಾ ಸೋಮೇಂದ್ರೌ ತು ನಿಪಾತಿತೌ ॥ ೬೭ ॥

ಚತುರ್ಥ್ಯಾಂ ಸೋಮ ಇಂದ್ರಶ್ಚ ಪಂಚಮ್ಯಾಂ ದಕ್ಷಿಣಾದಿಕಾ ।

65. ಈ ಪಾರ್ಥಿವಾಗ್ನಿಯೇ ದ್ರವಿಣೋದನೆಂದು ಹೇಳಲು ಇನ್ನೂ ಒಂದು ಕಾರಣವಿರುವುದು. ಈ ಪಾರ್ಥಿವಾಗ್ನಿಯೇ ತನ್ನನ್ನು ಸ್ತುತಿಸುವವರಿಗೆ ದ್ರವಿಣ ಎಂದರೆ ಧನಾದಿಸಂಪತ್ತನ್ನು ಕೊಡುವವನು ಎಂದು ಪ್ರಸಿದ್ಧಿಯು. ಇದಲ್ಲದೆ, ಅಗ್ನಿದೇವತಾಕವಾದ ಸೂಕ್ತಗಳಲ್ಲಿಯೇ ಅಗ್ನಿಯನ್ನು ದ್ರವಿಣೋದನೆಂದು ಕರೆದಿರುವ ಪ್ರಸಂಗಗಳು ಅನೇಕವಿರುವುವು.

೧೬, ೧೭, ೧೮ ನೇ ಸೂಕ್ತಗಳ ದೇವತೆಗಳು

66. ಪ್ರಥಮಮಂಡಲದ 16ನೇ ಸೂಕ್ತಕ್ಕೆ ಇಂದ್ರನು ದೇವತೆಯು; ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಇದರ ಮುಂದಿನ ಸೂಕ್ತಕ್ಕೆ (ಇದರಲ್ಲಿಯೂ ೯ ಋಕ್ಕುಗಳಿರುವವು) ಇಂದ್ರಾವರುಣರು ದೇವತೆಯು. ಅದರ ಮುಂದಿನ (೧೮ ನೇ ಸೂಕ್ತ) ಸೂಕ್ತದಲ್ಲಿ ಸೋಮದೇವತೆಯೂ, ಬೃಹಸ್ಪತಿಯೂ ಸ್ತುತಿಸಲ್ಪಟ್ಟಿರುವರು.

67-68. ಈ ಸೂಕ್ತದ (೧೮ ನೇ ಸೂಕ್ತದ) ಮೊದಲ ಐದು ಋಕ್ಕುಗಳಲ್ಲಿ ಬ್ರಹ್ಮಣಸ್ಪತಿಯೂ, ಮುಂದಿನ ಮೂರು ಋಕ್ಕುಗಳಲ್ಲಿ (೬-೮) ಸದಸಸ್ಪತಿ ಎಂಬ ದೇವತೆಯೂ, ಕೊನೆಯ ಋಕ್ಕಿನಲ್ಲಿ ನರಾಶಂಸ ದೇವತೆಯೂ ಸ್ತುತರಾಗಿರುವರು. ಈ ಸೂಕ್ತದಲ್ಲಿ (೪ ನೇ ಋಕ್ಕಿನಲ್ಲಿ) ಬ್ರಹ್ಮಣಸ್ಪತಿಯ ಜತೆಯಲ್ಲಿ ಪ್ರಸಂಗವಶದಿಂದ ಸೋಮ ಮತ್ತು ಇಂದ್ರನೂ, ಐದನೆಯ ಋಕ್ಕಿನಲ್ಲಿ ಈ ದೇವತೆಗಳ ಜತೆಗೆ ದಕ್ಷಿಣಾ ಎಂಬ ದೇವತೆಯೂ ಸ್ತುತರಾಗಿರುವರು. ಈ ಋಕ್ಕು

---

65. It is this (terrestrial) Agni who is wealth-giver (ದ್ರವಿಣೋದಾಃ); it is then that he is called 'Dravinodas': it is only in (hymns) addressed to Agni that mention of Drovinodas appears.

66. Here (the hymn) which follows that of nine stanzas to Indra (i. 16) is addressed to Indra-Varuna (i. 17). The one next to it is 'The Soma-Presser' (ಸೋಮಾನಂ: 1. 18) Brahmanaspati is praised

14. Deities of RV. i. 18. Eight names of Prajapati.

67. in the first five stanzas; in (the next) three (6-8) Sadasaspati; and in the last stanza (9) Narasamsa; Soma-Indra are incidentally praised (ನಿಪಾತಿತೌ).

68. in the fourth: Soma and Indra, and Daksina as well (ಆದಿಕಾ) in the fifth.

ಪ್ರಸಂಗಾದೃಷಿಣಾ ಪ್ರೋಕ್ತಾಃ ಸಂಬಂಧಾಃ ಸ್ಥಾನಲೋಕಯೋಃ ॥ ೬೮ ॥

ಪ್ರಾಜಾಪತ್ಯಂ ತಥೇಂದ್ರಃ ಸ್ಯಾದಿತಿ ತಸ್ಯೇಹ ನಾಮನೀ ।
ಕಥಿತೇ ದ್ವೇ ಚ ಷಟ್ ಚಾನ್ಯಾನ್ಯೇಷಾಂ ಚಾದ್ಯಃ ಪ್ರಜಾಪತಿಃ ॥ ೬೯ ॥

ಶಿಷ್ಟಾನಿ ಯಾನಿ ನಾಮಾನಿ ತಾನಿ ವಕ್ಷ್ಯಾಮ್ಯತಃ ಪರಂ ।
ಸತ್ಪತಿಃ ಕಶ್ಚ ಕಾಮಶ್ಚ ಸದಸಸ್ಪತಿರೇವ ಚ ॥ ೭೦ ॥

ಇಳಸ್ಪತಿರ್ವಾಚಸ್ಪತಿಸ್ತತಸ್ತು ಬ್ರಹ್ಮಣಸ್ಪತಿಃ ।
ತೃತೀಯಾಂತ್ಯೇ ತು ಸೂಕ್ತಸ್ಯ ಪ್ರಥಮಂ ಪಂಚಮಂ ಚ ಯತ್ ॥ ೭೧ ॥

ಗಳಲ್ಲಿ ಋಷಿಯು ಮುಖ್ಯದೇವತೆಯ ಜತೆಗೆ ಇತರ ದೇವತೆಗಳನ್ನು ಸ್ಥಾನ ಮತ್ತು ಸಂದರ್ಭಕ್ಕನುಸಾರವಾಗಿ ಪ್ರಸ್ತಾಪ ಮಾಡಿ ಸ್ತುತಿಸಿರುವನು.

69. ಈ ಸೂಕ್ತದಲ್ಲಿ ಪ್ರಜಾಪತಿಯನ್ನು ಸೂಚಿಸುವುದಕ್ಕಾಗಿ ಇಂದ್ರಶಬ್ದಪ್ರಯೋಗವಿರಬಹುದು. ಇಲ್ಲಿ ಎರಡು ಸಲ ಇಂದ್ರಶಬ್ದವಿರುವುದರಿಂದ ಒಂದು ಇಂದ್ರಶಬ್ದಕ್ಕೆ ಪ್ರಜಾಪತಿಯೆಂದು ಅರ್ಥಮಾಡಬಹುದು. ಪ್ರಜಾಪತಿಗೆ ಈ ಎರಡು ಹೆಸರುಗಳಲ್ಲದೆ ಇನ್ನೂ ಆರು ಹೆಸರುಗಳಿರುವವು. ಈ ಒಟ್ಟು ಎಂಟು ಹೆಸರುಗಳಲ್ಲಿ ಪ್ರಜಾಪತಿಯೆಂಬುದೇ ಮೊದಲನೆಯದು.

70. ಪ್ರಜಾಪತಿಯ ಉಳಿದ ಹೆಸರುಗಳನ್ನು ಹೇಳುವೆನು, ಕೇಳು. ಸತ್ಪತಿಃ, ಕಃ, ಕಾಮಃ, ಸದಸಸ್ಪತಿಃ.

71. ಇಳಸ್ಪತಿಃ, ವಾಚಸ್ಪತಿಃ, ಬ್ರಹ್ಮಣಸ್ಪತಿಃ ಎಂಬಿವೇ ಪ್ರಜಾಪತಿಯ ಎಂಟು ಹೆಸರುಗಳು. ಇವುಗಳಲ್ಲಿ ಮೂರನೆಯ ಹೆಸರೂ (ಕಃ ಎಂಬುದು) ಕೊನೆಯ ಹೆಸರೂ (ಬ್ರಹ್ಮಣಸ್ಪತಿಃ ಎಂಬುದು) ಮತ್ತು ಮೊದಲನೆಯದು (ಪ್ರಜಾಪತಿಃ) ಮತ್ತು ಐದನೆಯದು (ಸದಸಸ್ಪತಿ ಎಂಬುದು) ಕೆಲವು ಸೂಕ್ತಗಳಲ್ಲಿ ಆ ಸೂಕ್ತಗಳ ದೇವತೆಯೆಂದು ಸ್ತುತಿಸಲ್ಪಟ್ಟಿರುವುದು.

On occasion the relationships (ಸಂಬಂಧಾಃ) of sphere and world are proclaimed by thr seer.

69. Thus (a name) of Prajapati (ಪ್ರಾಜಾಪತ್ಯಂ) might be (meant for) Indra : on this principle (ಇತಿ) two names of his are mentioned here. There are six others as well : Prajapati is the first of them.

70. The remaining names I will next state :—Satpati, Ka, Kama, and Sadasaspati,

71. Ilaspati, Vachaspati, then Brahmanaspati : the third and the last (belong) to a hymn, as well as the first and the fifth ;

ಚತುರ್ಭಿರಿತರೈಸ್ತ್ವೇನಂ ನ ಸೂಕ್ತಂ ನಾಪ್ಯೃಗಶ್ನುತೇ ।
ಸರ್ವಾಣ್ಯೇವತು ಸರ್ವಾಸಾಂ ದೇವತಾನಾಂ ಪ್ರಜಾಪತೇಃ ॥ ೭೨ ॥

ನಾಮಾನಿ ಕಥಯಂತ್ಯೇತೇ ಸಮ್ಯಗ್ಭಕ್ತಿದಿದೃಕ್ಷವಃ ।
ತದಾಹುರ್ನೈತದೇವಂ ಸ್ಯಾದಷ್ಟಾನಾಮೇಷ ಹಿ ಸ್ಮೃತಃ ॥ ೭೩ ॥

ತೈರೇವ ಚಾಸ್ಯ ಕಲ್ಪ್ಯಂತೇ ಕ್ರತವಶ್ಚ ಹವೀಂಷಿ ಚ ।
ಮರುದ್ಭಿರ್ಮಧ್ಯಮಸ್ಥಾನೈರಯಮಗ್ನಿಸ್ತು ಪಾರ್ಥಿವಃ ॥ ೭೪ ॥

ನವಕೇನೇಹ ಸೂಕ್ತೇನ ಪ್ರತಿ ತ್ಯಮಿತಿ ಸಂಸ್ತುತಃ ।
ಮರುತಾಂ ಸಾಹಚರ್ಯಾತ್ತು ಸೂಕ್ತೇಽಸ್ಮಿನ್ನಾಗ್ನಿಮಾರುತೇ ॥ ೭೫ ॥

72-73. ಆದರೆ ಪ್ರಜಾಪತಿಯ ಉಳಿದ ನಾಲ್ಕು ಹೆಸರುಗಳನ್ನು (ಸತ್ಪತಿ, ಕಾಮಃ, ಇಳಸ್ಪತಿ, ವಾಚಸ್ಪತಿಃ) ಸ್ತುತಿಸಿರುವ ಪ್ರತ್ಯೇಕ ಸೂಕ್ತಗಳಾಗಲಿ, ಋಕ್ಕುಗಳಾಗಲಿ ಇರುವುದಿಲ್ಲ. ಆದರೆ ಕೆಲವರು ಭಕ್ತಿಭಾವದಿಂದ ಪರವಶರಾಗಿ, ಎಲ್ಲಾ ದೇವತೆಗಳ ಎಲ್ಲಾ ಹೆಸರುಗಳೂ ಪ್ರಜಾಪತಿಯನ್ನೇ ನಿರ್ದೇಶಿಸುವುವು ಎಂದು ಹೇಳುವರು. ಮತ್ತೆ ಕೆಲವರು ಈ ಅಭಿಪ್ರಾಯವು ಸರಿಯಲ್ಲವೆಂದೂ ಮೇಲೆ ಹೇಳಿದ ಎಂಟು ಹೆಸರುಗಳು ಮಾತ್ರ ಪ್ರಜಾಪತಿಯನ್ನು ನಿರ್ದೇಶಿಸುವವೆಂದೂ ಹೇಳುವರು. ಏಕೆಂದರೆ ಈ ಎಂಟು ಹೆಸರುಗಳಿಂದ ಮಾತ್ರವೇ ಪ್ರಜಾಪತಿಗೆ ಹವಿರಾದಿಗಳನ್ನು ಕಲ್ಪಿಸಿ ಅರ್ಪಿಸ ಲಾಗುವುದು.

೧೯ ನೇ ಸೂಕ್ತದ ದೇವತೆಗಳು

74-75. ೯ ಋಕ್ಕುಗಳಿರುವ **ಪ್ರತಿ ತ್ಯಂ ಚಾರುಂ** ಎಂಬ ೧೯ ನೇ ಸೂಕ್ತದಲ್ಲಿ ಮಧ್ಯಮಸ್ಥಾನದೇವತೆ ಗಳಾದ ಮರುತ್ತುಗಳೊಡನೆ ಪಾರ್ಥಿವಾಗ್ನಿಯು ಸ್ತುತನಾಗಿರುವನು. ಮರುದ್ದೇವತೆಗಳ ಸಾಹಚರ್ಯೆಯಿಂದ ಈ ಸೂಕ್ತದಲ್ಲಿ ಅಗ್ನಿಯು ಮರುದ್ದೇವತೆಗಳೊಂದಿಗೆ ಸ್ತುತನಾಗಿರುವನು.

---

15. Prajapati's names (continued). Deities of RV. i. 19.

72, 73. but under the four other (names) neither a hymn nor a stanza belongs to (ಅಶ್ನುತೇ) him.

Now certain people (ಏತೇ) desirous of a correct view in devotion say that all the names of all the deities (belong) to Prajapati. With regard to that (others) say, this should not be so; for he is traditionally held(ಸ್ಮೃತ) to be (the owner) of eight (only).

74. and by these (names) only are sacrifices and oblations offered (ಕಲ್ಪ್ಯಂತೇ) to him.

Now together with the Maruts, who belong to the middle sphere, this terrestrial Agni,

75. is here praised with the hymn of nine stanzas 'to this' (ಪ್ರತಿ ತ್ಯಂ : i. 19). But by reason of the association with the Maruts in this hymn addressed to Agni and the Maruts.

ಮನ್ಯತೇ ಮಧ್ಯಮಂ ಚೈವ ಯಾಸ್ಕೋಽಗ್ನಿಂ ನ ತು ಪಾರ್ಥಿವಂ ।
ಸ್ಯಾದಯಂ ಪಾರ್ಥಿವಸ್ತ್ವೇವ ತಥಾ ರೂಪಂ ಹಿ ದೃಶ್ಯತೇ ॥ ೭೬ ॥

ಹೂಯಸೇ ಪೀತಯೇ ಚೇತಿ ವೈದ್ಯುತೇ ನ ತದಸ್ತಿ ಹಿ ।
ಅಥ ಸ್ಯಾದಭಿಧಾನಸ್ಯ ದೇವತಾಯಾಃ ಪೃಥಕ್ ಪೃಥಕ್ ॥ ೭೭ ॥

ಋಚೋಽರ್ಧರ್ಚಸ್ಯ ಪಾದಸ್ಯ ಕಥಂ ಜ್ಞಾಯೇತ ದೈವತಂ ।
ಯಥಾ ನಿವಿದಿ ಸಾವಿತ್ರ್ಯಾಂ ಸ್ತೂಯತೇ ಕರ್ಮ ಕರ್ಮಣಾ ॥ ೭೮ ॥

76. ಈ ಸೂಕ್ತದಲ್ಲಿ ಸ್ತುತನಾಗಿರುವ ಅಗ್ನಿಯು ಮಧ್ಯಮಸ್ಥಾನಾಗ್ನಿಯೇ ಹೊರತು ಪಾರ್ಥಿವಾಗ್ನಿಯಲ್ಲ ಎಂದು ಯಾಸ್ಕರ ಮತವು. ಆದರೆ ಸೂಕ್ತದಲ್ಲಿ ಕಂಡುಬರುವ ಅಗ್ನಿಯ ರೂಪ ಮತ್ತು ಗುಣವರ್ಣನೆಯಿಂದ ಇಲ್ಲಿ ಸ್ತುತನಾಗಿರುವ ಅಗ್ನಿಯು ಪಾರ್ಥಿವಾಗ್ನಿಯೆಂದೇ ಕಂಡುಬರುವುದು.

ಮಂತ್ರದಲ್ಲಿ ನಿರ್ದಿಷ್ಟರಾಗಿರುವ ದೇವತೆಗಳನ್ನು ತಿಳಿಯುವ ಬಗೆ

77. ಕೆಲವು ದೇವತೆಗಳ ವಿಷಯದಲ್ಲಿ ಕೆಲವು ನಿರ್ದಿಷ್ಟವಾದ ಕರ್ಮ ಅಥವಾ ಗುಣವರ್ಣನೆ ಇರುವುದು. ಆ ವರ್ಣನೆಯಿಂದ ಆ ದೇವತೆಯ ಸ್ವರೂಪವನ್ನೂ ಆ ದೇವತೆಯ ಹೆಸರನ್ನೂ ತಿಳಿಯಬಹುದು. ಉದಾಹರಣೆಗೆ— ಮಧ್ಯಮಸ್ಥಾನದ ದೇವತೆಯಾದ ವೈದ್ಯುತಾಗ್ನಿಯ ವಿಷಯದಲ್ಲಿ ಪಾನಾರ್ಥವಾಗಿ ನೀನು ಕರೆಯಲ್ಪಡುವೆ ಎಂದರೆ ಹವಿಸ್ಸ್ವೀಕಾರಾರ್ಥವಾಗಿ ನಿನ್ನನ್ನು ಪ್ರಾರ್ಥಿಸಿ ಕರೆಯುತ್ತೇವೆ ಇತ್ಯಾದಿ ಪ್ರಾರ್ಥನೆಗಳು ಯಾವಾಗಲೂ ಉಪಯೋಗಿಸಲ್ಪಡುವುದಿಲ್ಲ. ಆದ್ದರಿಂದ ಮಂತ್ರದಲ್ಲಿ ಸ್ತುತರಾಗಿರುವ ಪ್ರತಿಯೊಂದು ದೇವತೆಯ ಹೆಸರನ್ನೂ ಆ ದೇವತೆಯ ಗುಣವರ್ಣನೆಯಿಂದ ಪ್ರತ್ಯೇಕವಾಗಿ ತಿಳಿಯಬೇಕು.

78. ಈಗ ಒಂದು ಋಕ್ಕು, ಅರ್ಧಋಕ್ಕು ಅಥವಾ ಪಾದ ಇವುಗಳಿಗೆ ದೇವತೆ ಯಾರು ಎಂದು ಹೇಗೆ ತಿಳಿಯಬೇಕು ಎಂದರೆ ಸವಿತೃದೇವತಾಕವಾದ ಮಂತ್ರಗಳ ಮಧ್ಯದಲ್ಲಿ ಪಠಿಸುವ ನಿವಿತ್‌ಸೂಕ್ತದಲ್ಲಿ ಸವಿತೃದೇವತೆಯ ಕರ್ಮಗಳನ್ನು ವರ್ಣಿಸಿ ಸ್ತುತಿಸಲಾಗಿರುವಂತೆ. ಆ ದೇವತೆಯ ಗುಣವರ್ಣನೆಯಿಂದ (ಅಥವಾ ಕರ್ಮವರ್ಣನೆಯಿಂದ) ಆ ಮಂತ್ರದಲ್ಲಿ ಸವಿತೃವೇ ನಿರ್ದಿಷ್ಟದೇವತೆಯೆಂದು ತಿಳಿಯುವಂತೆ ಇತರಮಂತ್ರಗಳ ವಿಷಯದಲ್ಲಿಯೂ ಸ್ತುತರಾಗಿರುವ ದೇವತೆಗಳ ಕರ್ಮಗಳನ್ನೂ ಗುಣಗಳನ್ನೂ ವಿವೇಚಿಸಿ ಆ ಮಂತ್ರಕ್ಕೆ ನಿರ್ದಿಷ್ಟದೇವತೆ ಯಾರೆಂಬುದನ್ನು ತಿಳಿದುಕೊಳ್ಳಬೇಕು.

---

76. Yakas thinks the middle Agni, and not the terrestrial one, (is meant. But it can only be this terrestrial (Agni), for such is (here) evidently (his) character (ರೂಪ).

16. How to ascertain the deity of a stanza.

77. Such (a prayer) as 'you are invoked to drink' is not (applicable) in (the case of) the lightning (Agni): so (the invocation) must belong to the designation of the respective deity.

78. How is one to know the divinity of a stanza, of a hemistich, of a verse? As in the Nivid to Savitr the activity (of the god) is praised by the (statement of his) activity.

ದೋಗ್ಧ್ರೀ ಧೇನುರ್ವೋಢಾನಡ್ವಾನಾಶುಃ ಸಪ್ತಿಃ ಪುರಂಧಿರ್ಯಾ ।
ಯಥಾ ಚ ಶಂನೋಮಿತ್ರೀಯಾ ವರುಣಃ ಪ್ರಾವಿತಾ ಭುವತ್ ॥ ೭೯ ॥

ಸೂಕ್ತಪ್ರಾಯೇಣೈಭಿರಗ್ನೇ ಪರೀಕ್ಷ್ಯಾಸ್ತತ್ರ ದೇವತಾಃ ॥
ಶಬ್ದಾನಾಂ ದ್ವ್ಯಾದಿಪದಾದೀನಾಂ ದ್ವಿದೈವಬಹುದೈವತಂ ॥ ೮೦ ॥

79. ಮೇಲಿನ ಶ್ಲೋಕದಲ್ಲಿ ಹೇಳಿರುವ ವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಕೆಲವು ಉದಾಹರಣೆಗಳನ್ನು ಕೊಡುವರು. ಒಂದು ಋಕ್ಕಿನಲ್ಲಿ ದೋಗ್ಧ್ರೀ (ಹಾಲನ್ನು ಕರೆಯುವ) ಎಂಬ ಶಬ್ದವಿದ್ದು ಇತರ ನಿರ್ದಿಷ್ಟಶಬ್ದವಿಲ್ಲದಿದ್ದರೆ ಆಗ ಲೋಕವ್ಯವಹಾರದಲ್ಲಿ ರೂಢಿಯಲ್ಲಿರುವಂತೆ ಹಾಲನ್ನು ಕರೆಯುವ ಪ್ರಾಣಿಯು ಹಸುವಾದ್ದರಿಂದ ದೋಗ್ಧ್ರೀ ಶಬ್ದಕ್ಕೆ ಧೇನುವೆಂದು ಅರ್ಥಮಾಡಬೇಕು. ಅದರಂತೆ ವೋಢಾ (ಭಾರವನ್ನು ಹೊರುವ ಪ್ರಾಣಿಯು) ಎಂಬ ಶಬ್ದವಿದ್ದಲ್ಲಿ ಆನಡ್ವಾನ್ (ಎತ್ತು) ಎಂದೂ, ಆಶುಃ (ಶೀಘ್ರಗತಿಯುಳ್ಳ ಪ್ರಾಣಿಯು) ಶಬ್ದವಿದ್ದಲ್ಲಿ ಸಪ್ತಿಃ (ಕುದುರೆ) ಎಂದೂ ಪುರಂಧಿಯಾ (ಚಟುವಟಿಕೆಯಾಗಿ ಕೆಲಸಮಾಡುವವಳು) ಶಬ್ದವಿದ್ದಲ್ಲಿ ಆ ಕ್ರಿಯೆಯುಳ್ಳ ಸ್ತ್ರೀಯೆಂದೂ ತಿಳಿಯಬೇಕು. ಇದೇ ರೀತಿ **ಶಂನೋ ಮಿತ್ರಃ** (೧ ೯೦-೯) । **ವರುಣಃ ಪ್ರಾವಿತ್ ಭುವತ್** (೧-೧೪೪-೧) । ಇತ್ಯಾದಿ ಮಂತ್ರಗಳಲ್ಲಿ ಅಲ್ಲಿರುವ ಶಬ್ದಪ್ರಯೋಗದಿಂದ ನಿರ್ದಿಷ್ಟದೇವತೆಯನ್ನು ತಿಳಿದುಕೊಳ್ಳಬಹುದು.

80. **ಐಭಿರಗ್ನೇ** (೧೪ನೇ ಸೂಕ್ತ) ಎಂಬ ಸೂಕ್ತದಲ್ಲಿಯೂ ಇತರ ಸೂಕ್ತ ಅಥವಾ ಮಂತ್ರಗಳಲ್ಲಿಯೂ ಸೂಕ್ತದಲ್ಲಿ ವಿವರಿಸುವ ವಿಷಯಗಳನ್ನು ಹಿಂದೆ ಹೇಳಿರುವ ಕ್ರಮದಂತೆ ಚೆನ್ನಾಗಿ ಪರೀಕ್ಷಿಸಿ (ವಿಮರ್ಶಿಸಿ) ಆಯಾ ಸೂಕ್ತದ ಅಥವಾ ಮಂತ್ರದ ನಿರ್ದಿಷ್ಟದೇವತೆಯನ್ನು ತಿಳಿದುಕೊಳ್ಳಬೇಕು. ಮಂತ್ರಗಳಲ್ಲಿರುವ ಶಬ್ದಗಳಲ್ಲಿ ಎರಡು ಅಥವಾ ಹೆಚ್ಚು ಪದಗಳಿದ್ದಲ್ಲಿ ಇಬ್ಬರು ಅಥವಾ ಬಹುದೇವತೆಗಳು ನಿರ್ದೇಶಿಸಲ್ಪಟ್ಟಿರುವರೆಂದು ತಿಳಿಯಬೇಕು. (ಉದಾ— **ರಾಜಾನಾ, ಋತಾವೃಧಾ** ಇತ್ಯಾದಿ ದ್ವಿವಚನಾಂತಶಬ್ದಪ್ರಯೋಗವಿದ್ದರೆ ಅಲ್ಲಿ ಮಿತ್ರಾವರುಣರು, ಅಶ್ವಿನೀದೇವತೆಗಳು ಇತ್ಯಾದಿ ಇಬ್ಬರು ದೇವತೆಗಳು ನಿರ್ದಿಷ್ಟರಾಗಿರುವರೆಂದು ತಿಳಿಯಬೇಕು. ಅದರಂತೆ **ಯಜತ್ರಾಃ ಅಮೃತಾಃ ಋತಜ್ಞಾಃ** ಇತ್ಯಾದಿ ಬಹುವಚನಶಬ್ದಪ್ರಯೋಗವಿದ್ದಲ್ಲಿ ಅನೇಕಮಂದಿ ದೇವತೆಗಳು ನಿರ್ದಿಷ್ಟರಾಗಿರುವರೆಂದು ತಿಳಿಯಬೇಕು.)

---

79 (as in) (The milking cow, the carrying ox, the swift courser, the industrious (woman), and as (in the stanzas) 'May Mitra be gracious to us' (ಶಂ ನೋ ಮಿತ್ರಃ : 1. 90. 9), 'May Varuna be our protector' (ವರುಣಃ ಪ್ರಾವಿತಾ ಭುವತ್ : i. 23.6).

80. (and) 'Hither with these, O Agni' (ಐಭಿರಗ್ನೇ i. 14. 1)—in such cases (ತತ್ರ) the deities have to be carefully observed in accordance with the general purport (ಪ್ರಾಯೇಣ) of hymn.

Connected with words (ಶಬ್ದ) containing two are more members (ಪದ), there are two deities or many deities.

ಅಸಂಸ್ತುತಂ ಸಂಸ್ತುತವತ್ಪ್ರದಿಷ್ಟಂ ದೈವತಂ ಕ್ವಚಿತ್ ।
ಯತ್ರ ದ್ವಿದೈವತೇ ಮಂತ್ರ ಏಕವದ್ದೇವತೋಚ್ಯತೇ ॥ ೮೧ ॥

ವಿಭಕ್ತಸ್ತುತಿ ತದ್ವಿದ್ಯಾದ್ಬಹುಷ್ವಬಹುವಚ್ಚ ಯತ್ ।
ಆಶೀರ್ವಾದೇಷು ಸಂಜ್ಞಾಸು ಕರ್ಮಸಂಸ್ಥಾಸು ದೇವತಾಃ
ಬಹ್ವ್ಯೀ ಹ ಬಹುವತ್ತತ್ರ ದ್ವಿಪದೇ ಯತ್ರ ಸಂಸ್ತುತೇ ॥ ೮೨ ॥

ಸುಧನ್ವನ ಆಂಗಿರಸಸ್ಯಾಸನ್ಪುತ್ರಾಸ್ತ್ರಯಃ ಪುರಾ ।
ಋಭುರ್ವಿಭ್ವಾ ಚ ವಾಜಶ್ಚ ಶಿಷ್ಯಾಸ್ತ್ವಷ್ಟುಶ್ಚ ತೇಽಭವನ್ ॥ ೮೩ ॥

81 ಒಂದು ಮಂತ್ರದಲ್ಲಿ ಒಂದು ದೇವತೆಯನ್ನು ನಿರ್ದಿಷ್ಟವಾಗಿ ಸ್ತುತಿಸಿಲ್ಲದಿದ್ದರೂ ಆ ದೇವತೆಯ ಹೆಸರು ಪ್ರಸ್ತಾಪತ್ವೇನ ಬಂದಿದ್ದರೆ ಸಾಕು ಆ ದೇವತೆಯನ್ನು ಸ್ತುತಿಸಿರುವಂತೆಯೇ ಭಾವಿಸಬೇಕು. ಮತ್ತು ಒಂದು ಮಂತ್ರದಲ್ಲಿ ಎರಡು ದೇವತೆಗಳು ಒಟ್ಟಿಗೆ ಸ್ತುತಿಸಿದ್ದಲ್ಲಿ ಆಗ ಆ ಎರಡು ದೇವತೆಗಳನ್ನೂ ಒಂದೇ ದೇವತೆಯನ್ನು ಸ್ತುತಿಸಿರುವಂತೆ ಭಾವಿಸಬೇಕು.

82. ಒಂದು ಮಂತ್ರದಲ್ಲಿ ಅನೇಕ ದೇವತೆಗಳಿದ್ದು ಅವುಗಳನ್ನು ಸಮಷ್ಟಿಯಾಗಿ (ಒಟ್ಟಿಗೆ) ಸ್ತುತಿಸದೆ ಪ್ರತಿಯೊಂದು ದೇವತೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸ್ತುತಿಸಿದ್ದಲ್ಲಿ ಆಗ ಒಂದು ದೇವತೆಯನ್ನೇ ಸ್ತುತಿಸಿರುವಂತೆ (ವಿಭಕ್ತಸ್ತುತಿ) ಭಾವಿಸಬೇಕು ಆಶೀರ್ವಾದನನ್ನೂ, ದೇವತೆಗಳ ಆಥವಾ ಯಜ್ಞಾಗಳ ಕರ್ಮಕ್ರಮನನ್ನೂ ಒಳಗೊಂಡಿರುವ ಮಂತ್ರಗಳಲ್ಲಿ ಅನೇಕ ದೇವತೆಗಳಿರುವರು ಮತ್ತು ಇಬ್ಬರು ದೇವತೆಗಳನ್ನೂ ಒಟ್ಟಿಗೆ (ದ್ವಿವಚನದಲ್ಲಿ) ಸ್ತುತಿಸಿರುವ ಸಂದರ್ಭದಲ್ಲಿಯೂ, ಅಲ್ಲಿಯೂ ಅನೇಕ ದೇವತೆಗಳನ್ನು ಸ್ತುತಿಸಲಾಗಿದೆಯೆಂದು ಭಾವಿಸಬೇಕು.

ಋಭುಗಳ ಮತ್ತು ತ್ವಷ್ಟೃವಿನ ವೃತ್ತಾಂತ

83. ಪೂರ್ವಕಾಲದಲ್ಲಿ ಆಂಗಿರಸಪುತ್ರನಾದ (ಅಥವಾ ಗೋತ್ರದವನಾದ) ಸುಧನ್ವನೆಂಬುವನಿಗೆ ಋಭು ವಿಭು, ಮತ್ತು ವಾಜ ಎಂಬ ಹೆಸರಿನ ಮೂವರು ಪುತ್ರರಿದ್ದರು ಇವರು ತ್ವಷ್ಟೃವಿನ ಶಿಷ್ಯರಾಗಿದ್ದರು.

81. A divinity not associated in praise (ಅಸಂಸ್ತುತ) is (to be regarded) as though associated in praise if indicated anywhere.

Where in a formula addressed to two divinities a deity is spoken of in the singular (ಏಕವತ್),

82. One should know that to contain separate praise (ವಿಭಕ್ತಿಸ್ತುತಿ): also that in which, when there are many (divinities), a deity is (spoken of) singly (ಅಬಹುವತ್).

In benedictions (ಆಶೀರ್ವಾದೇಷು), in (enumerations of) technical names (ಸಂಜ್ಞಾಸು), in leading ritual forms (ಕರ್ಮಸಂಸ್ಥಾಸು) many deities are in the plural (ಬಹುವತ್) where two membered (deities : ದ್ವಿಪದೇ) are associated in praise

17. Story of the Rubhus and Tvastr.

83. In former times there were three sons of Sudhanvan, son of Angiras, (viz) Rbhu, Vibhavan, and Vaja; and they became pupils of Tvastr.

शिक्षयामास ताꣳस्त्वष्टा त्वाष्ट्र्यं यत्कर्म किंचन ।
परिनिष्ठितकर्माणोऽविश्वे देवा उपाह्वयन् ॥ ೮೪ ॥

विश्वेषां तेऽतक्षꣳस्त्रिर्वाहनान्यायुधानि तु ।
धेनुꣳ सबर्दुघां चक्रुरमृतं सबरुच्यते ॥ ೮೫ ॥

बृहस्पतेरथाश्विभ्यां रथं दिव्यं त्रिवन्धुरं ।
इन्द्राय च हरी देवप्रहितेनाग्निनापि यत् ॥ ೮೬ ॥

एकं चमसमित्युक्त्वा ज्येष्ठ आहेत्यथोऽदिवि ।

84. ಸರ್ವಕರ್ಮಕುಶಲನಾದ ತ್ವಷ್ಟೃವು ತನ್ನ ಶಿಷ್ಯರಾದ ಆ ಋಭು ಮೊದಲಾದವರಿಗೆ ಕುಶಲವಿದ್ಯೆ (ಶಿಲ್ಪ ಮೊದಲಾದ ವಿದ್ಯೆ) ಗಳನ್ನು ಹೇಳಿಕೊಟ್ಟನು. ಆಗ ಸಮಸ್ತ ದೇವತೆಗಳೂ ಕುಶಲಕರ್ಮಪ್ರವೀಣರಾದ ಆ ಋಭುಗಳನ್ನು ಕರೆದು ತಮ್ಮ ವಿದ್ಯಾಪ್ರದರ್ಶನಮಾಡಬೇಕೆಂದು ಕೋರಿದರು.

85. ಆಗ ಆ ಋಭುಗಳು ಸಮಸ್ತ ದೇವತೆಗಳಿಗೂ ಅವರವರಿಗೆ ತಕ್ಕಂತೆ ವಾಹನಗಳನ್ನೂ, ಆಯುಧಗಳನ್ನೂ ಮಾಡಿಕೊಟ್ಟರು. ಅಮೃತವನ್ನು ಕರೆಯುವ ಧೇನುವನ್ನು ನಿರ್ಮಿಸಿದರು. (**तक्षन् धेनुꣳ सबर्दुघां** ೧-೨೭-೩) ಇಲ್ಲಿ **सबः** ಎಂದರೆ ಅಮೃತವು.

86. ಬೃಹಸ್ಪತಿಗೆ ಒಂದು ದಿವ್ಯವಾದ ರಥವನ್ನು ಮಾಡಿಕೊಟ್ಟರು. ಅಶ್ವಿನೀದೇವತೆಗಳಿಗೆ ಮೂರು ಮೂಕಿ ಮರಗಳಿಂದ (ತ್ರಿವಂಧುರಂ) ಸುಸಜ್ಜಿತವಾದ ಒಂದು ಉತ್ತಮವಾದ ರಥವನ್ನು ನಿರ್ಮಿಸಿಕೊಟ್ಟರು. (**तक्षन्नासत्याभ्यां परिज्मानं सुखं रथं** ೧-೨೭-೩) ಇಂದ್ರನಿಗೆ ಎರಡು ಹರಿತವರ್ಣದ ಕುದುರೆಗಳನ್ನು ನಿರ್ಮಿಸಿಕೊಟ್ಟರು. **(ये इन्द्राय वचोयुजा ततक्षुर्मनसा हरी** ೧-೨೭-೨) ದೇವತೆಗಳು ಅಗ್ನಿಯ ಮೂಲಕ ಹೇಳಿಕಳುಹಿಸಿದಂತೆ,

87. ಒಂದು ಚಮಸಪಾತ್ರೆಯನ್ನು ಮಾಡಲು ಹೇಳಿಕಳುಹಿಸಿದಾಗ ಒಂದು ಚಮಸಪಾತ್ರೆಯನ್ನು ಮಾಡ ಬೇಕೆಂಬ ಉದ್ದೇಶವಿದ್ದಿತು. ಆದರೆ ಆ ಋಭುಗಳಲ್ಲಿ ಜ್ಯೇಷ್ಠನಾದ ಋಭುವು ಎರಡನ್ನು ಮಾಡಬೇಕೆಂದೂ, ಎರಡನೆಯವನು ಮೂರನ್ನು ಮಾಡಬೇಕೆಂತಲೂ, ಕೊನೆಯವನು ನಾಲ್ಕನ್ನು ಮಾಡಬೇಕೆಂತಲೂ ಅವರಲ್ಲಿ ವಿವಾದವುಂಟಾಗಿ

84. Tvastr instructed them in every art of which he was a master (त्वाष्ट्र्य). The All-gods, who were thoroughly versed in the arts (परिनिष्ठित कर्माणः), challenged them.

85. They then made for all (the gods) vehicles and weapons. they made the nectar-yielding cow ; the draught of immortality (अमृत) is called nectar (सबर्)—a chariot,

86. to Brhaspati; then for the Asvins a divine car with three seats, and for Indra, his two bay steeds; also what (they did) through Agni who had been dispatched (to them) by the gods.

87. When he had said 'One cup, make into four': (एकंचमसं) RV. i. 161. 2) and when they had conversed in heaven (with the stanza),

ಉಕ್ತ್ವಾ ತತಕ್ಷುಶ್ಚಮಸಾನ್ಯಥೋಕ್ತಂ ತೇನ ಹರ್ಷಿತಾಃ ॥ ೮೭ ॥
ತ್ವಷ್ಟಾ ಚ ಸವಿತಾ ಚೈವ ದೇವದೇವಃ ಪ್ರಜಾಪತಿಃ ।
ಸರ್ವಾನ್ದೇವಾನ್ಸಮಾಮಂತ್ರ್ಯ ಅಮೃತತ್ವಂ ದದುಶ್ಚ ತೇ ॥ ೮೮ ॥
ತೇಷಾಮಾದ್ಯಾನ್ತ್ಯಯೋರ್ನಾಮ್ನಾ ದೃಶ್ಯತೇ ಬಹುವಚ್ಚಸ್ತವಃ ।
ತೃತೀಯಸವನೇ ತೇಷಾಂ ತೈಸ್ತು ಭಾಗಃ ಪ್ರಕಲ್ಪಿತಃ ॥ ೮೯ ॥
ಅಪಿಬತ್ಸೋಮಮಿಂದ್ರಶ್ಚ ತೈಸ್ತತ್ರ ಸವನೇ ಸಹ ।
ತೇಷಾಂ ಸ್ತುತಿರಿದಂ ಸೂಕ್ತಂ ತ್ವಯಮಿತ್ಯಷ್ಟಕಂ ಪರಂ ॥ ೯೦ ॥

ಕೊನೆಗೆ ತಮ್ಮ ಗುರುವಾದ ತ್ವಷ್ಟೃವಿನ ಮಾತಿನಂತೆ ನಾಲ್ಕು ಚಮಸಪಾತ್ರೆಗಳನ್ನು ಮಾಡಿಕೊಟ್ಟರು. ಅದರಿಂದ ದೇವತೆಗಳು ಹರ್ಷಿತರಾದರು (**ಜ್ಯೇಷ್ಠ ಆಹ ಚಮಸಾ ದ್ವಾ ಕರೇತಿ ಕನೀಯಾನ್ ತ್ರೀನ್ ಕೃಣವಾಮೇತ್ಯಾಹ । ಕನಿಷ್ಠ ಆಹ ಚತುರಸ್ಕರೇತಿ ತ್ವಷ್ಟ ಋಭವಸ್ತ್ವನಯದ್ವಚೋ ವಃ ।** (೪-೩೩-೫).

88. ತ್ವಷ್ಟೃವೂ, ಸವಿತೃದೇವನೂ, ದೇವದೇವನಾದ ಪ್ರಜಾಪತಿಯೂ ಸಮಸ್ತ ದೇವತೆಗಳನ್ನು ಕರೆದು (ಅವರೆದುರಿಗೆ) ಋಭುಗಳಿಗೆ ಅಮೃತತ್ವ ಎಂದರೆ ಮರಣರಾಹಿತ್ಯವನ್ನು ಎಂದರೆ ದೇವತ್ವವನ್ನು ಅನುಗ್ರಹಿಸಿಕೊಟ್ಟನು.

89. ಋಗ್ವೇದದಲ್ಲಿ ಋಭುಗಳನ್ನು ಸ್ತುತಿಸುವಾಗ ಸೂಕ್ತಗಳಲ್ಲಿ ಋಭು, ವಿಭು, ವಾಜ ಎಂಬ ಮೂವರಲ್ಲಿ ಮೊದಲನೆಯವನ ಹೆಸರಿನಿಂದಲೂ (ಋಭವಃ) ಅಥವಾ ಕೊನೆಯವನ ಹೆಸರಿನಿಂದಲೂ (ವಾಜಿನಃ) **ಈ** ಋಭುಗಳು ನಿರ್ದೇಶಿಸಲ್ಪಡುವರು. **ಈ** ಋಭುಗಳಿಗೆ ತೃತೀಯಸವನದಲ್ಲಿ ದೇವತೆಗಳೊಡನೆ ಸೋಮಪಾನವು (ಅಥವಾ ಹವಿರ್ಭಾಗವು) ಕಲ್ಪಿಸಲ್ಪಟ್ಟಿರುವುದು.

೨೦-೨೨ ನೇ ಸೂಕ್ತಗಳ ದೇವತೆಗಳು

90. **ಈ** ಋಭುಗಳ ಜತೆಯಲ್ಲಿ ಇಂದ್ರನು ಸವನಕಾಲದಲ್ಲಿ ಸೋಮರಸವನ್ನು ಪಾನಮಾಡಿದನು. ಪ್ರಥಮ ಮಂಡಲದ **ಅಯಂ ದೇವಾಯ ಜನ್ಮನೇ** (೧ ನೇ ಮಂಡಲದ ೨೦ ನೇ ಸೂಕ್ತ) ಎಂಬ ಎಂಟು ಋಕ್ಕಿನ ಸೂಕ್ತದಲ್ಲಿ **ಈ** ಋಭುಗಳ ಸ್ತುತಿ ಇರುವುದು.

'The eldest said' (IV. 33. 5), they fashioned the (four) cups as had been said, gladdened by him.

18. Deities of RV. i. 20-22.

88. And Tvastr, and Savitr, (and) the god of gods, Prajapati summoning all the gods, bestowed immortality (on the Ruhus).

89. There appears (in the RV.) praise of them in the plural (ಬಹುವತ್) with the name of the first and the last.

In the third pressing (ಸವನ) a share is prescribed for them (ತೇಷಾಂ) with those (All-gods).

90. And Indra drank Soma with them (the Ruhus) at that pressing. Now this hymn (beginning) 'This' (ಅಯಂ, i. 20), which follows and consists of eight stanzas, is their praise.

ಇಹೇಂದ್ರಾಗ್ನೀ ಸ್ತುತೌ ದೇವೌ ತೃತೀಯಸ್ಯಾದಿರಶ್ವಿನೌ ।
ಹಿರಣ್ಯಪಾಣಿಂ ಸಾವಿತ್ರ್ಯಷ್ಟತಸ್ರಶ್ಚಾಪ್ಯಥೋತ್ತರಾಃ ॥ ೯೧ ॥

ಏಕಾಗ್ನೇರ್ದ್ವೇ ತು ದೇವೀನಾಂ ದ್ವಾದಶ್ಯಾಂ ದೇವಪತ್ನಯಃ ।
ಇಂದ್ರಾಣೀ ವರುಣಾನೀ ಚ ಅಗ್ನಾಯೀ ಚ ಪೃಥಕ್ ಸ್ತುತಾಃ ॥ ೯೨ ॥

ದ್ಯಾವಾಪೃಥಿವ್ಯೌ ದ್ವೇ ಚ ಸ್ಯಾತ್ಸ್ಯೋನೇತ್ಯೇಕ್ ಪಾರ್ಥವೀ ಸ್ಮೃತಾ ।
ದೇವಾನಾಂ ವಾತ ಇತ್ಯೇಷಾ ಸೂಕ್ತಶೇಷಸ್ತು ವೈಷ್ಣವಃ ॥ ೯೩ ॥

ವಾಯೋಸ್ತೀವ್ರೇಂದ್ರವಾಯುಭ್ಯಾಂ ದ್ವ್ಯೃಚೋ ದ್ವಾಭ್ಯಾಂ ತತಃ ಪರಂ ।

91. **ಇಹೇಂದ್ರಾಗ್ನೀ** ಎಂಬ ೨೧ ನೇ ಸೂಕ್ತದಲ್ಲಿ ಇಂದ್ರಾಗ್ನಿಗಳು ಸ್ತುತರಾಗಿರುವರು. ಮುಂದಿನ ಸೂಕ್ತವಾದ **ಹ್ರಾತಯ್ಯುಜಾ** ಎಂಬ ೨೨ ನೇ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳಲ್ಲಿ ಅಶ್ವಿನೀದೇವತೆಗಳನ್ನೂ ಅದರ ಮುಂದಿನ ನಾಲ್ಕು ಋಕ್ಕುಗಳಲ್ಲಿ (೫-೮) ಹಿರಣ್ಯಪಾಣಿ ಎಂಬ ಅಭಿಧಾನದಿಂದ ಸವಿತೃದೇವತೆಯನ್ನೂ,

92. ಅದರ ಮುಂದಿನ ಎಂದರೆ ೯ ನೇ ಋಕ್ಕಿನಲ್ಲಿ ಅಗ್ನಿಯನ್ನೂ ಅದರ ಮುಂದಿನ (೧೦-೧೧) ಎರಡು ಋಕ್ಕುಗಳಲ್ಲಿ ದೇವಪತ್ನಿಯರನ್ನೂ ೧೨ ನೇ ಋಕ್ಕಿನಲ್ಲಿ ಇಂದ್ರಾಣೀ, ವರುಣಾನೀ, ಅಗ್ನಾಯೀ ಎಂಬ ಇಂದ್ರನ, ವರುಣನ, ಅಗ್ನಿಯ ಪತ್ನಿಯರನ್ನೂ ಅವರ ಹೆಸರುಗಳಿಂದ ಬೇರೆ ಬೇರೆಯಾಗಿ ಸ್ತುತಿಸಲಾಗಿದೆ.

93. ಅದರ ಮುಂದಿನ ಎರಡು ಋಕ್ಕುಗಳಲ್ಲಿ (೧೩-೧೪) ದ್ಯಾವಾಪೃಥಿವಿಗಳನ್ನೂ, ಅದರ ಮುಂದಿನ (೧೫) ಒಂದು ಋಕ್ಕಿನಲ್ಲಿ ಪ್ರತ್ಯೇಕವಾಗಿ ಪೃಥಿವೀದೇವತೆಯನ್ನೂ ಮಾತ್ರ ಸ್ತುತಿಸಲಾಗಿದೆ. ಅದರ ಮುಂದೆ ಸೂಕ್ತದ ಕೊನೆಯ ವರೆಗೂ ಇರುವ (೬) ಋಕ್ಕುಗಳಲ್ಲಿ ವಿಷ್ಣುವನ್ನು ಸ್ತುತಿಸಲಾಗಿದೆ.

೨೩ ನೇ ಸೂಕ್ತದ ದೇವತೆಗಳು

94. **ತೀವ್ರಾಃ ಸೋಮಾಸಃ** ಎಂಬ ೨೩ ನೆಯ ಸೂಕ್ತದಲ್ಲಿ ಮೊದಲನೆಯ ಋಕ್ಕಿನಲ್ಲಿ ವಾಯುವನ್ನೂ ಮುಂದಿನ ಎರಡು ಋಕ್ಕುಗಳಲ್ಲಿ (೨-೩) ಇಂದ್ರವಾಯುಗಳನ್ನೂ ಅಲ್ಲಿಂದ ಮುಂದಕ್ಕೆ ಮೂರು ಋಕ್ಕುಗಳಲ್ಲಿ (೪-೬)

---

91. (In) 'Here' (ಇಹ : i. 21) the two gods Indra-Agni are praised. The beginning of the third (hymn praises) the Asvins and then the next (stanzas) ' The golden-handed ' (ಹಿರಣ್ಯಪಾಣಿಂ : i. 22. 5-8) are addressed to Savitr.

92. One (9) is (addressed) to Agni, but two (10. 11) to the Goddesses ; in the twelfth (stanza) the wives of the gods, Indrani and Varunani and Agnayi, are praised seperately.

19. RV. i. 22 (continued). RV i. 23 : Pusan Aghrni.

93. And two (stanzas, 13, 14, praise) Heaven and Earth. the stanza ' Soft ' (ಸ್ಯೋನಾ : 15) should be held to be addressed to Earth. The (stanza) ' From thence ' (ಅತೋ : 16) is (addressed) optionally (ವಾ) to the gods ; the rest of the hymn (17-21) is addressed to Visnu.

94. To Vayu (belongs) ' Mighty ' (ತೀವ್ರಾಃ i. 23. 1) : for the two,

ತೃಚೋ ಮಿತ್ರಾವರುಣಯೋಸ್ತೃಚೇಂದ್ರಾಯ ಮರುತ್ವತೇ ॥ ೪೪ ॥

ತೃಚೋ ವಿಶ್ವೇಷಾಂ ದೇವಾನಾಂ ಪೂಷ್ಣ ಆಘೃಣಯೇ ತೃಚಃ ।
ಆಸಕ್ತ್ಯೋ ಹಿ ಘೃಣಿಸ್ತಸ್ಯ ದಧ್ನಃ ಪೂರ್ಣೋ ದೃತೀ ರಥೇ ॥ ೪೫ ॥

ಆಘೃಣಿಸ್ತತ್ಸ್ತುತಃ ಪೂಷಾ ಕೀರಿಭೀ ರಿಭ್ಯತೇ ತತಃ ।
ಯಥಾ ಹಿ ಮಧುನಃ ಪೂರ್ಣೋ ದೃತಿರರ್ಥ್ಯೇತಿ ಚಾಶ್ವಿನೌ ॥ ೪೬ ॥

ಆ ವರ್ತನಿಂ ಮಧುನೇತಿ ದೃತಿರೇವ ಚ ದೃಶ್ಯತೇ ।
ಅರ್ಧಾಷ್ಟಮಾ ಅಪಾಂ ಜ್ಞೇಯಾ ಅಧ್ಯರ್ಧಾಂತ್ಯಾಗ್ನಿದೇವತಾ ॥ ೪೭ ॥

ಮಿತ್ರಾವರುಣರನ್ನೂ ಅದರ ಮುಂದಿನ ತೃಚದಲ್ಲಿ (೭-೯ ಎಂಬ ಮೂರು ಋಕ್ಕುಗಳಲ್ಲಿ) ಮರುತ್ತುಗಳಿಂದ ಸಹಿತನಾದ ಇಂದ್ರನನ್ನೂ (ಇಂದ್ರೋ ಮರುತ್ವಾನ್).

95. ಮುಂದಿನ ತೃಚದಲ್ಲಿ (೧೦-೧೨) ವಿಶ್ವೇದೇವತೆಗಳನ್ನೂ ಅದರ ಮುಂದಿನ ತೃಚದಲ್ಲಿ (೧೩-೧೫) ಆಘೃಣಿಪೂಷನೆಂಬ ದೇವತೆಯನ್ನೂ ಸ್ತುತಿಸಲಾಗಿದೆ. ಈ ಪೂಷನ್ ಎಂಬ ದೇವತೆಯ ರಥಕ್ಕೆ ನೊಸರಿನಿಂದ ತುಂಬಿದ ಒಂದು ಚರ್ಮದ ಚೀಲವನ್ನು (ಘೃಣಿ) ಕಟ್ಟಿರುವುದರಿಂದ ಈ ದೇವತೆಗೆ ಆಘೃಣಿ ಎಂಬ ಹೆಸರು ಬಂದಿರುವುದು.

96-97. ಯಾವರೀತಿ ಮಧುವಿನಿಂದ ಪೂರ್ಣರಾದ ಅಶ್ವಿನೀದೇವತೆಗಳು ಮಧುಶಬ್ದದಿಂದ ಸ್ತುತರಾಗುವರೋ (**ಅಶ್ವಿನಾ ಪಿಬತಂ ಮಧು ದೀದ್ಯಗ್ನೀ ಶುಚಿವ್ರತಾ** ೧-೧೫-೧೮), **ಆ ವರ್ತನಿಂ ಮಧುನಾ ಜಿನ್ವತು** (೪-೪೫-೩ ಇತ್ಯಾದಿ) ಅದರಂತೆ ಈ ಪೂಷದೇವನೂ ಆಘೃಣಿಶಬ್ದದಿಂದ ಸ್ತುತನಾಗಿ ಪ್ರಶಂಸಿಸಲ್ಪಡುವನು. ಅದರಿಂದ ಮುಂದಿನ ಏಳೂವರೆ ಋಕ್ಕುಗಳಲ್ಲಿ (೧೬-೨೩, ೨೩ರಲ್ಲಿ ಪೂರ್ವಾರ್ಧ) ಆಪಃ ಎಂಬ ಅಬ್ದೇವತೆಗಳೂ ಅದರ ಮುಂದಿನ ಒಂದೂವರೆ ಋಕ್ಕುಗಳಲ್ಲಿ (೨೩ ರಲ್ಲಿ ಉತ್ತರಾರ್ಧ, ೨೪ ನೇ ಋಕ್ಕು) ಅಗ್ನಿಯೂ ಸ್ತುತಿಸಲ್ಪಟ್ಟಿರುವರು.

Indra-Vayu, there is a couplet (2,3) : after that there is a triplet to Mitra-Varuna (4-6), also (one) for Indra accompanied by Maruts.

95. (then) a triplet for the All-gods (10-12) and a triplet for Pusan Aghrni (13-15).

(He is thus named) for there is attached (ಆಸಕ್ತ್ಯ) to his car a ghrni : a skin full of curds.

96. Therefore (ತತ್) he is praised as ಆಘೃಣಿ hence he is lauded (ರಿಭ್ಯತೇ) by singers (ಕೀರಿ) For as their skin ದೃತಿ is fnll of mead, the suppliant (ಅರ್ಥಿನ್) also approaches the Asvins (in the same way).

97. The skin itself appears in (the passage) ' Refresh the track with mead (ಆ ವರ್ತನಿಂ ಮಧುನಾ iv. 45. 3).

Seven and a half (stanzas) are to be known as (belonging) to the Waters (16-23); the last in addition to the (preceding) half (23. 24) has Agni as its deity.

ಕಸ್ಯ ನೂನಂ ತು ಕಾಯ್ಯಾದ್ಯಾ ಅಗ್ನೇಯ್ಯೃಕ್ ಸವಿತುಸ್ತೃಚಃ ।
ಭಗಭಕ್ತಸ್ಯ ಭಾಗೀ ವಾ ಪರಂ ಯಚ್ಛಿಚ್ಚ ವಾರುಣಂ ॥ ೯೮ ॥

ವಸಿಷ್ವಾ ಹೀತಿ ಚಾಗ್ನೇಯೀ ಋಗಗ್ನೇರ್ಮಧ್ಯಮಸ್ಯ ತು ।
ಜರಾಬೋಧೇತಿ ವಿಜ್ಞೇಯಾ ವೈಶ್ವದೇವ್ಯುತ್ತಮಾ ನಮಃ ॥ ೯೯ ॥

ಪರಾಶ್ಚತಸ್ರೋ ಯತ್ರೇತಿ ಇಂದ್ರೋಲೂಖಲಯೋಃ ಸ್ತುತಿಃ ।
ಮನ್ಯೇತೇ ಯಾಸ್ಕಕಾತ್ಥಕ್ಯಾವಿಂದ್ರಸ್ಯೇತಿ ತು ಭಾಗುರಿಃ ॥ ೧೦೦ ॥

೨೪-೩೦ ನೇ ಸೂಕ್ತಗಳ ದೇವತೆಗಳು

98. **ಕಸ್ಯ ನೂನಂ** ಎಂಬ ೨೪ ನೇ ಸೂಕ್ತದಲ್ಲಿ ಮೊದಲನೆಯ ಋಕ್ಕು (ಕಃ ಅಥವಾ ಪ್ರಜಾಪತಿಃ) ಕಃ ಎಂಬಭಿಧಾನದ ಪ್ರಜಾಪತಿಯನ್ನೂ ೨ ನೇ ಋಕ್ಕು ಅಗ್ನಿಯನ್ನೂ ಅದರ ಮುಂದಿನ ಮೂರು ಋಕ್ಕುಗಳು (೩-೫) ಸವಿತೃದೇವತೆಯನ್ನೂ ಅದರ ಮುಂದಿನ ಋಕ್ಕು (೬) ಭಗದೇವತೆಯನ್ನೂ ಅಥವಾ ವರುಣನನ್ನೂ ಆಲ್ಲಿಂದ ಮುಂದಿನ ಕೊನೆಯವರೆಗಿನ ಋಕ್ಕುಗಳೂ (೬-೧೫) **ಯಚ್ಛಿದ್ಧಿ** ಎಂಬ ೨೫ ನೇ ಸೂಕ್ತವೂ ವರುಣನನ್ನೂ ಸ್ತುತಿಸುವವು.

99. **ವಸಿಷ್ವಾ ಹಿ** ಎಂಬ ೨೬ ನೇ ಸೂಕ್ತವೂ, **ಅಶ್ವಂ ನ ತ್ವಾ** ಎಂಬ ೨೭ ನೇ ಸೂಕ್ತವೂ, ಅಗ್ನಿಯನ್ನು ಸ್ತುತಿಸುವವು. ಆದರೆ **ಜರಾಬೋಧ** (೨೭ ನೇ ಸೂಕ್ತದಲ್ಲಿ ೧೦ ನೇ ಋಕ್ಕು) ಎಂಬ ಋಕ್ಕಿನಲ್ಲಿ ಮಧ್ಯಮಾಗ್ನಿಯನ್ನು ಸ್ತುತಿಸಲಾಗಿರುವುದೆಂದು ತಿಳಿಯಬೇಕು. ೨೭ ನೇ ಸೂಕ್ತದ ಕೊನೆಯ ಋಕ್ಕಿನಲ್ಲಿ (೧೩ ನೇ ಋಕ್ಕು) ಎಲ್ಲಾ ದೇವತೆಗಳನ್ನೂ ಸ್ತುತಿಸಲಾಗಿರುವುದು.

100. **ಯತ್ರ ಗ್ರಾವಾ** ಎಂಬ ೨೮ನೆಯ ಸೂಕ್ತದಲ್ಲಿ ಮೊದಲಿನ ನಾಲ್ಕು ಋಕ್ಕುಗಳಲ್ಲಿ ಇಂದ್ರನ (೧-೪) ಮತ್ತು ಉಲೂಖಲಗಳ (ಒರಳುಕಲ್ಲುಗಳ) ಸ್ತುತಿ ಇರುವುದೆಂದು ಯಾಸ್ಕ ಮತ್ತು ಕಾತ್ಥಕ್ಯ ಎಂಬ ಆಚಾರ್ಯರುಗಳ ಮತವಿರುವುದು. ಆದರೆ ಈ ಋಕ್ಕುಗಳಿಗೆ ಇಂದ್ರನೊಬ್ಬನೇ (ಇಂದ್ರನು ಮಾತ್ರ) ದೇವತೆಯೆಂದು ಭಾಗುರಿ ಎಂಬುವರ ಮತವು.

---

20. **Deities of RV. i. 24-30.**

98. But (in) of whom now (ಕಸ್ಯ ನೂನಂ i. 24) the first (stanza) is addressed to Ka (1) there is (then) a stanza addressed to Agni (2), a triplet (next) to Saivtr (3-5), Bestowed by the gods (ಭಗಭಕ್ತಸ್ಯ), being optionally (ವಾ) addressed to Bhaga.

What follows (6-15) as well as (the next hymn), ' Whatever ' (ಯಚ್ಛಿತ್ i. 25), is addressed to Varuna.

99. ' Do you put on ' (ವಸಿಷ್ವಾ i. 26) are two (hymns) addressed to Agni (26, 27); but the stanza ' you that know ' (ಜರಾಬೋಧ i. 27-10) is to be recognised as (belonging) to the Middle Agni; the last (stanza) ' Obeisance ' (ನಮಃ i. 27. 13) is addressed to the All-gods.

100. The following four (stanzas), ' Where ' (ಯತ್ರ i. 28. 1-4) are (in) praise of Indra and the Mortar, (so) think Yaska and Katthakya, but Bhaguri (thinks) of Indra (alone).

ಯಚ್ಚಿದ್ಧ್ಯ ಲೂಖಲಸ್ಯ ದ್ವೇ ದ್ವೇ ಪರೀ ಮುಸಲಸ್ಯ ತು ।
ಚರ್ಮಾಧಿಷವಣೀಯಂ ವಾ ಸೋಮಂ ವಾಂಶ್ಯಾ ಪ್ರಶಂಸತಿ ॥ ೧೦೧ ॥

ಐಂದ್ರಂ ಯಚ್ಚಿದ್ಧಿ ಸತ್ಯೇತಿ ಉತ್ತರಂ ಚಾಶ್ವಿನಾತೈ ಚಾತ್ ।
ಆಶ್ವಿನಾದುತ್ತರಃ ಕಸ್ತ ಉಷಸ್ಯಸ್ತೃಚ ಉತ್ತಮಃ ॥ ೧೦೨ ॥

ಸ್ತೂಯಮಾನಃ ಶಶ್ವದಿತಿ ಪ್ರೀತಸ್ತು ಮನಸಾ ದದೌ ।
ಶುನಃಶೇಪಾಯ ದಿವ್ಯಂ ತು ರಥಂ ಸರ್ವಂ ಹಿರಣ್ಮಯಂ ॥ ೧೦೩ ॥

ಆಗ್ನೇಯಂ ಯತ್ತ್ವಮೈಂದ್ರೇ ಚ ಶ್ರಿಶ್ಚಿದಿತ್ಯಾಶ್ವಿನಂ ತತಃ ।

101. ಇದೇ ಸೂಕ್ತದ (೨೮ನೇ ಸೂಕ್ತದ) ೫, ೬ನೇ ಋಕ್ಕುಗಳಲ್ಲಿ ಉಲೂಖಲವೂ(ಒರಳು)೭, ೮ನೇ ಋಕ್ಕುಗಳಲ್ಲಿ ಮುಸಲವೂ (ಒನಕೆ) ಕೊನೆಯದಾದ ೯ನೆಯ ಋಕ್ಕಿನಲ್ಲಿ ಸೋಮ ಅಥವಾ ಸೋಮರಸವನ್ನು ತುಂಬುವ ಚರ್ಮದ ಚೀಲವೂ ಪ್ರಶಂಸಿಸಲ್ಪಟ್ಟಿರುವುದು.

102. **ಯಚ್ಚಿದ್ಧಿ ಸತ್ಯ** ಎಂಬ ೨೯ನೇ ಸೂಕ್ತಕ್ಕೂ ಅದರ ಮುಂದಿನ **ಆ ವ ಇಂದ್ರಂ** ಎಂಬ ೩೦ನೆಯ ಸೂಕ್ತಕ್ಕೂ ಇಂದ್ರನು ದೇವತೆಯು ; ಆದರೆ ೩೦ನೇ ಸೂಕ್ತದ ೧೭-೧೯ನೆಯ ಋಕ್ಕುಗಳಲ್ಲಿ ಅಶ್ವಿನೀದೇವತೆಗಳೂ ಮುಂದಿನ ಮೂರು ಋಕ್ಕುಗಳಲ್ಲಿ (೨೦-೨೨) ಉಷೋದೇವತೆಯೂ ಸ್ತುತಿಸಲ್ಪಟ್ಟಿರುವರು.

103. ೩೦ನೇ ಸೂಕ್ತದ ೧೬ನೇ ಋಕ್ಕಾದ **ಶಶ್ವದಿಂದ್ರಃ** ಎಂಬ ಋಕ್ಕಿನಿಂದ ಶುನಃಶೇಪನಿಂದ ಸ್ತುತಿಸಲ್ಪಟ್ಟ ಇಂದ್ರನು ಸಂತುಷ್ಟನಾಗಿ ಆ ಶುನಃಶೇಪನಿಗೆ ಚಿನ್ನದಿಂದ ಮಾಡಲ್ಪಟ್ಟ ಒಂದು ದಿವ್ಯವಾದ ರಥವನ್ನು ಕೊಟ್ಟನು.

೩೧—೪೦ ಸೂಕ್ತಗಳ ದೇವತೆಗಳು

104. **ತ್ವಮಗ್ನೇ ಪ್ರಥಮಃ** ಎಂಬ ೩೧ನೇ ಸೂಕ್ತದಲ್ಲಿ ಅಗ್ನಿಯನ್ನೂ ಮುಂದಿನ ಎರಡು ಸೂಕ್ತಗಳಲ್ಲಿ (೩೨-೩೩) ಇಂದ್ರನನ್ನೂ ಸ್ತುತಿಸಲಾಗಿರುವುದು. ಮುಂದಿನ **ಶ್ರಿಶ್ಚಿನ್ನೋ ಅದ್ಯ** ಎಂಬ ೩೪ನೇ ಸೂಕ್ತದಲ್ಲಿ ಅಶ್ವಿನೀ

---

101. ' If indeed ' (ಯಚ್ಚಿದ್ಧಿ i. 28. 5) are two (stanzas in praise) of the Mortar (5. 6), the two following (7. 8) are (in praise) of the Pestle also ; the last (stanza) lauds the skin used in pressing (ಅಧಿಷವಣೀಯ) of Soma.

102. 'What though, O True one' (ಯಚ್ಚಿದ್ಧಿ ಸತ್ಯ: i. 29) is addressed to Indra as well as the following (i. 30). After the triplet 'Hither, O Asvins' (ಅಶ್ವಿನಾ : i 30. 17-19), addressed to the Asvins, the next(ಉತ್ತರ)triplet 'Who of you' (ಕಸ್ತೇ : 20-22) addressed to Dawn, is the last (triplet).

21. Deities of RV. i. 31-40.

103 Being praised (with the stanza) ' For ever ' (ಶಶ್ವತ್ : i. 30-16), he (Indra) rejoiced in mind gave to Sunahsepha (the seer) a celestial car all made of gold.

104. The (Hymn) which (begins) ' you ' (ತ್ವಂ : i. 31) is addressed to Agni ; and (then come) two (32-33) addressed to Indra. Then ' Even

ಋತೇಽರ್ಥವಾದಂ ಕರ್ಮೈತದಿಂದ್ರಸ್ಯೇತಿ ತು ಶಂಸತಿ ॥ ೧೦೪ ॥

ಪಾದೋಽಗ್ನಯೇ ಹ್ವಯೋವಿಮಾತಿ ಮೈತ್ರಾವರುಣ ಉತ್ತರಃ ।
ತೃತೀಯೋ ರಾತ್ರಿಸಂಸ್ತಾವಃ ಸೂಕ್ತಂ ಸಾವಿತ್ರಮುಚ್ಯತೇ ॥ ೧೦೫ ॥

ಪಂಚೈತಾನಿ ಜಗೌ ದೃಷ್ಟ್ವಾ ಸೂಕ್ತಾನ್ಯಾಂಗಿರಸೋ ಮುನಿಃ ।
ಹಿರಣ್ಯಸ್ತೂಪತಾಂ ಪ್ರಾಪ್ಯ ಸಖ್ಯಂ ಚೇಂದ್ರೇಣ ಶಾಶ್ವತಂ ॥ ೧೦೬ ॥

ಆಗ್ನೇಯಂ ಪ್ರೇತಿ ಮರುತಾಂ ಕ್ರೀಳಂ ತ್ರೀಣಿ ಪರಾಣ್ಯತಃ ।
ಉತ್ತಿಷ್ಠ ಬ್ರಾಹ್ಮಣಸ್ಪತ್ಯಂ ಯಂ ರಕ್ಷಂತಿ ತ್ರಯಸ್ತೃಚಾಃ ॥ ೧೦೭ ॥

ದೇವತೆಗಳನ್ನು ಸ್ತುತಿಸಲಾಗಿದೆ. **ಇಂದ್ರಸ್ಯ ನು** ಎಂಬ ೩೨ ನೇ ಸೂಕ್ತದಲ್ಲಿ ಯಾವ ಸ್ವಪ್ರಯೋಜನದ ಉದ್ದಿಶ್ಯವೂ ಇಲ್ಲದೆ ಇಂದ್ರನ ಸಾಹಸಕಾರ್ಯಗಳನ್ನು ಋಷಿಯು ಸ್ತುತಿಸಿರುವನು.

105. **ಹ್ವಯಾಮ್ಯಗ್ನಿಂ** ಎಂಬ ೩೫ನೆಯ ಸೂಕ್ತದ ಮೊದಲನೆಯ ಋಕ್ಕಿನ ಮೊದಲನೆಯ ಪಾದದಲ್ಲಿ ಅಗ್ನಿಯನ್ನೂ, ಎರಡನೆಯ ಪಾದದಲ್ಲಿ ಮಿತ್ರಾವರುಣರನ್ನೂ ಸ್ತುತಿಸಲಾಗಿದೆ. ಮೂರನೆಯ ವಾದದಲ್ಲಿ ರಾತ್ರಿದೇವತೆಯ ಸ್ತುತಿ ಇರುವುದು. ಒಟ್ಟು ಈ ಸೂಕ್ತಲ್ಕೆಲ್ಲಾ ಸವಿತೃನೇ ದೇವತೆಯು.

106. ಈ ಸೂಕ್ತದ ಋಷಿಯಾದ ಅಂಗಿರಸನ ಪುತ್ರನು ಈ ಐದು ಸೂಕ್ತಗಳ (೩೧—೩೫ ಸೂಕ್ತಗಳನ್ನು) ದ್ರಷ್ಟೃವಾಗಿ ಅವುಗಳನ್ನು ಗಾನಮಾಡಿ ಹಿರಣ್ಯಸ್ತೂಪವೆಂಬ ಪದವಿಯನ್ನೂ ಇಂದ್ರನೊಡನೆ ಸ್ನೇಹವನ್ನೂ ಸಂಪಾದಿಸಿದನು.

107. **ಪ್ರ ವೋ ಯಹ್ವಂ** ಎಂಬ ಸೂಕ್ತವು (೩೬ನೇ ಸೂಕ್ತ) ಅಗ್ನಿಯನ್ನೂ **ಕ್ರೀಳಂ ವಃ** ಎಂದು ಮೊದಲಾಗುವ ಮುಂದಿನ ಮೂರು ಸೂಕ್ತಗಳು (೩೭-೩೯) ಮರುದ್ದೇವತೆಗಳನ್ನೂ, **ಉತ್ತಿಷ್ಠ** ಎಂಬ (೪೦) ಸೂಕ್ತವು ಬ್ರಹ್ಮಣಸ್ಪತಿಯನ್ನೂ ಪ್ರಶಂಸಿಸುವುವು. ಮುಂದಿನ **ಯಂ ರಕ್ಷಂತಿ** ಎಂಬ ೪೧ನೆಯ ಸೂಕ್ತದಲ್ಲಿ ಮೂರು ತೃಚ ಎಂದರೆ ಒಂಭತ್ತು ಋಕ್ಕುಗಳಿರುವುವು.

---

thrice' (ತ್ರಿಷ್ಟಿತ್ : I. 34) is addressed to the Aswins; Of Indra, (ಇಂದ್ರಸ್ಯ : i. 32) lauds the action (of Indra) without (any) statement of an object (ಅರ್ಥವಾದ).

105. (In) 'I invoke' (ಹ್ವಯಾಮಿ : i. 35) one verse (1) is to Agni, the next (2) is addressed to Mitra-Varuna, the third is (in) praise of Night, (while) the (whole) hymn is stated to be addressed to Savitr.

106. These five hymns (31-35) the sage, the son of Angiras, after he had seen them, sang, on gaining the position of Hiranyastupa and eternal friendship with Indra.

107. (Forth) (ಪ್ರ : i. 36) is addressed to Agni; the three (37-39) following this (beginning) sporting (ಕ್ರೀಳಂ : i. 37) are to the Maruts 'Stand Up' (ಉತ್ತಿಷ್ಠ : i. 40) is addressed to Brahmanaspati. 'Whom they protect' (ಯಂ ರಕ್ಷಂತಿ : i. 41) is (composed of) three triplets.

ವರುಣಾಯೇಮಮಿತ್ರಾಣಾಂ ಮಧ್ಯ ಆದಿತ್ಯದೈವತಃ ।
ಪೌಷ್ಣಂ ಸಂ ಪೂಷನ್ ಷಡ್ರ್ಚಾದ್ರ್ಯಸ್ತೃತೀಯೋ ನ ತು ಕೇವಲಾ ॥ ೧೦೮ ॥
ಮಿತ್ರೇಣ ವರುಣೇನಾತ್ರ ವಿಶ್ವೈರ್ದೇವೈಶ್ಚ ಸಂಸ್ತವಃ ।
ಉಕ್ತಮತ್ರಿರ್ಋಷಾ ಪೂರ್ವಮಾದೇಶಾದ್ದೈವತಂ ವಿನಾ ॥ ೧೦೯ ॥
ಜ್ಞಾತುಂ ನ ಶಕ್ಯತೇ ಲಿಂಗಾತ್ತಥಾಪಿ ಕ್ವಚಿದುಚ್ಯತೇ ।
ಆದಿತ್ಯಾ ವಸವೋ ರುದ್ರಾಸ್ತ್ವಮಗ್ನ ಇತಿ ಸಂಸ್ತುತಾಃ ॥ ೧೧೦ ॥

೪೧—೪೭ ನೇ ಸೂಕ್ತಗಳ ದೇವತೆಗಳು

108. ೪೧ನೇ ಸೂಕ್ತದ ಮೊದಲ ಮತ್ತು ಮೂರನೆಯ ತೃಚಗಳಲ್ಲಿ (೧-೩ ಮತ್ತು ೭-೯) ವರುಣ, ಮಿತ್ರ, ಅರ್ಯಮಾ ಎಂಬ ಮೂವರು ದೇವತೆಗಳೂ ಎರಡನೆಯ ತೃಚದಲ್ಲಿ (೪-೬) ಆದಿತ್ಯರೂ ದೇವತೆಗಳೆಂದು ಸ್ತುತರಾಗಿರುವರು. **ಸಂಪೂಷನ್** ಎಂಬ ೪೨ನೆಯ ಸೂಕ್ತದಲ್ಲಿ ಪೂಷಾ ಎಂಬ ದೇವತೆಯು ಸ್ತುತನಾಗಿರುವನು. ಅನಂತರ **ಕದ್ರುದ್ರಾಯ** ಎಂಬ ಮುಂದಿನ ಸೂಕ್ತದಲ್ಲಿ (೪೩ನೇ ಸೂಕ್ತ) ಇರುವ ೯ ಋಕ್ಕುಗಳಲ್ಲಿ ಮೊದಲ ಆರು ಋಕ್ಕುಗಳಿಗೆ ರುದ್ರನು ದೇವತೆಯು. ಆದರೆ ಮೂರನೆಯ ಋಕ್ಕಿನಲ್ಲಿ ರುದ್ರನ ಜತೆಯಲ್ಲಿ ಮಿತ್ರಾವರುಣರು ಇರುವರು. ಕೊನೆಯ ತೃಚದಲ್ಲಿ (೭-೯) ಸೋಮದೇವನ ಪ್ರಶಂಸೆ ಇದೆ. ಆದುದರಿಂದ ಈ ಸೂಕ್ತದಲ್ಲಿ ಎಲ್ಲಾ ದೇವತೆಗಳನ್ನು (ವಿಶ್ವೈರ್ದೇವೈಃ) ಪ್ರಶಂಸಿಸಲಾಗಿದೆ ಎಂದು ಹೇಳಿರುವುದು.

109-110. ಈ ಸೂಕ್ತದ (೪೩ನೇ ಸೂಕ್ತದ) ೩ನೇ ಋಕ್ಕಿನಲ್ಲಿ ರುದ್ರನ ಜತೆಯಲ್ಲಿ ಮಿತ್ರ, ವರುಣ, ಅರ್ಯಮಾ, ಮತ್ತು ವಿಶ್ವೇದೇವತೆಗಳೂ ಸ್ತುತರಾಗಿರುವರು. ಒಂದು ಸೂಕ್ತದ ಅಥವಾ ಮಂತ್ರದ ನಿರ್ದಿಷ್ಟದೇವತೆಯು ಯಾರೆಂದು ನಿರ್ಣಯಿಸುವಾಗ ಪ್ರಮಾಣ (ಆದೇಶ)ವೇ ಮುಖ್ಯವೆಂದೂ ಮಂತ್ರದ ಲಕ್ಷಣವು ಮುಖ್ಯವಲ್ಲವೆಂದೂ ಋಷಿಯು ಹಿಂದೆಯೇ ಹೇಳಿರುವನು. ಆದರೆ ಕೆಲವು ಸ್ಥಳಗಳಲ್ಲಿ ದೇವತೆಗಳ ಹೆಸರುಗಳೂ ಹೇಳಲ್ಪಟ್ಟಿರುವುವು. ಹೇಗೆಂದರೆ **ತ್ವಮಗ್ನೇ ವಸೂನ್** ಎಂಬ ೪೫ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ಆದಿತ್ಯರು, ವಸುಗಳು, ರುದ್ರರು ಅಗ್ನಿಯೊಡನೆ ಸ್ತುತಿಸಲ್ಪಟ್ಟಿರುವರು.

22. Deities of RV. i. 41-47.

108. (the first, 1-3, and the third, 7-9, being addressed) to Varuna, and Mitra, (while) the middle one (4-6) has the Adityas for its divinities. 'Shorten, O Pusan' (संपूषन् : i. 42) is addressed to Pusan. (Then come) six (stanzas) addressed to Rudra (i. 43. 1-6), the third, however, not exclusively.

109. There is here (i. 43-3) praise (of Rudra) along with Mitra, Varuna, and the All-gods.

It has already been said before by the seer that without an authoritative statement (आदेश) the divinity,

110. cannot be known from its characteristic mark (लिंग) : yet in some places (क्वचित्) it (the deity) is stated : (thus) in 'you, O Agni, (त्वमग्ने : i. 45. 1) the Adityas, Vasus, Rudras are praised at the same time (with Agni).

ತಿಸ್ರಃ ಸೌಮ್ಯೋ೭ಗ್ನ ಆಗ್ನೇಯೇ ಪ್ರಗಾಥೇನಾಶ್ವಿನಾ ಸ್ತುತೌ ।
ಸಹೋಷಸಾ ಲಿಂಗಭಾಜಾ ಅಯಂ ಸೋಮಃ ಸುದಾನವಃ ॥ ೧೧೧ ॥

ಅರ್ಧರ್ಚೋ ದೇವದೇವತ್ಯ ಏಷೋ ಇತ್ಯಾಶ್ವಿನೇ ಪರೇ ।
ಆದಿತ್ಯಂ ಮನ್ಯತೇ ಯಾಸ್ಕೋ ಹವಿಷೇತಿ ಸಹ ಸ್ತುತಂ ॥ ೧೧೨ ॥

ಸಹೌಷಸೇ ತತಃ ಸೌರ್ಯಮುದು ತ್ಯಮಿತಿ ಸಂಸ್ತುತಃ ।

111. ೪೩ನೇ ಸೂಕ್ತದ ಕೊನೆಯ ಮೂರು ಋಕ್ಕುಗಳಲ್ಲಿ (೭–೯) ಸೋಮದೇವತೆಯ ಸ್ತುತಿ ಇರುವುದು. **ಅಗ್ನೇ ವಿವಸ್ವತ್**(೪೪ನೇ ಸೂಕ್ತ) ಎಂಬ ಸೂಕ್ತವೂ, **ತ್ವಮಗ್ನೇ ವಸೂನ್** (೪೫ನೇ ಸೂಕ್ತ)ಎಂಬ ಸೂಕ್ತವೂ ಅಗ್ನಿಯನ್ನು ಸ್ತುತಿಸುವುವು. ೪೬ನೇ ಸೂಕ್ತದಲ್ಲಿ ಪ್ರಗಾಥ ಛಂದಸ್ಸಿನ ೧-೨ ಋಕ್ಕುಗಳಲ್ಲಿ ಅಗ್ನಿಯ ಜತೆಗೆ ಅಶ್ವಿನೀದೇವತೆಗಳನ್ನೂ, ಉಷೋದೇವತೆಯನ್ನೂ ಸ್ತುತಿಸಲಾಗಿದೆ. ಈ ಋಕ್ಕುಗಳಲ್ಲಿ ಉಷೋ ದೇವತೆಯ ಸ್ವರೂಪವಿವರಣೆ ಇದೆ. ೪೫ ನೇ ಸೂಕ್ತದ **ಅಯಂ ಸೋಮಃ ಸುದಾನವಃ** ಎಂಬ ಮೂರನೆಯ ಪಾದದಲ್ಲಿ,

112. ದೇವತೆಗಳನ್ನು ದ್ವೇಶಿಸಿದ ಸ್ತುತಿ ಇರುವುದು. ಇದರ ಮುಂದಿನ **ಏಷೋ ಉಷಾ** ಎಂಬ ೪೬ ನೇ ಸೂಕ್ತಕ್ಕೂ ಅದರ ಮುಂದಿನ **ಅಯಂ ವಾಂ** ಎಂಬ ೪೭ ನೇ ಸೂಕ್ತಕ್ಕೂ ಅಶ್ವಿನೀದೇವತೆಗಳೇ ದೇವತೆಯು. ಆದರೆ ಈ ೪೬ನೇ ಸೂಕ್ತದ **ಹವಿಷಾ ಜಾರಃ** ಎಂಬ ನಾಲ್ಕನೆಯ ಋಕ್ಕಿನಲ್ಲಿ ಅಶ್ವಿನೀದೇವತೆಗಳ ಜತೆಗೆ ಆದಿತ್ಯನೂ ಸ್ತುತನಾಗಿರುವನೆಂದು ಯಾಸ್ಕರು ತಿಳಿಸುವರು.

113. **ಸಹ ವಾಮೇನ** (೪೮ನೇ ಸೂಕ್ತ) ಮತ್ತು **ಉಷೋ ಭದ್ರೇಭಿಃ** (೪೯ ನೇ ಸೂಕ್ತ)ಎರಡು ಸೂಕ್ತಗಳಿಗೂ ಉಷಸ್ಸೇ ದೇವತೆಯು. ಅದರ ಮುಂದಿನ **ಉದು ತ್ಯಂ** ಎಂಬ ೫೦ ನೇ ಸೂಕ್ತವೂ ಸೂರ್ಯನನ್ನು ಸ್ತುತಿಸಲಾಗಿದೆ. ಈ ಸೂಕ್ತದ **ಯೇನಾ ಪಾವಕ** ಎಂಬ ಆರನೆಯ ಋಕ್ಕಿನಲ್ಲಿ ವರುಣನು ಸೂರ್ಯನೊಡನೆ (ಅಥವಾ ಸ್ವರ್ಗ

---

111. (Then come) three (stanzas) addressed to Soma (i. 43. 7-9). 'O Agni' (ಅಗ್ನೇ: i. 44. 1) are two (hymns) addresed to Agni (44, 45). With a Pragatha couplet the Aswins are (here) praised with Dawn who bears her characteristic mark (ಲಿಂಗಭಾಕ್). 'Here is Soma, O bounteous ones (ಅಯಂ ಸೋಮಃ ಸುದಾನವಃ : i. 45. 10).

112. is a hemistich which has the gods for its deities. The two following (hymns, beginning) 'She here' (ಏಷೋ : i. 46. 1) are addressed to the Asvins (46, 47).

Yaska thinks the Sun (ಆದಿತ್ಯ) is praised at the same time in (the stanza) 'With oblatian' (ಹವಿಷಾ : i. 46. 4).

23. RV. i. 48-60. Story of Savya. The Satarchins.

113. 'Together with' (ಸಹ : i. 48. 1) are two (hymns), addressed to Dawn (48, 49) : then 'Upward him' (and ಉದುತ್ಯಂ : i. 50) is addressed to Surya : (in) 'Wherewith' (ಯೇನ : i. 50. 6) Varnna connected with Heaven

ದ್ಯುಭಕ್ತಿರ್ಯೇನ ವರುಣೋ ರೋಗಘ್ನಸ್ತ್ರಯಃ ಉತ್ತಮಃ ॥ ೧೧೩ ॥
ರೋಗಾಪನುತ್ತಿರಾದ್ಯಾಭ್ಯಾಮುದ್ಯನ್ನಿತ್ಯುತ್ತಮೋ ತೃಚೇ ।
ಅರ್ಧರ್ಚೇ ತು ದ್ವಿಷದ್ದ್ವೇಷ ಇಂದ್ರಃ ಸವ್ಯಃ ಶತರ್ಚಿಷು ॥ ೧೧೪ ॥
ಸ್ವಯಮಿಂದ್ರಸಮಂ ಪುತ್ರಮಿಚ್ಛತೋಽಙ್ಗಿರಸೋ ಮುನೇಃ ।
ವಜ್ರ್ಯೇವ ಸವ್ಯೋ ಭೂತ್ವರ್ಷೇರ್ಯೋಗಿತ್ವಾತ್ಪುತ್ರತಾಂ ಗತಃ ॥ ೧೧೫ ॥
ಪ್ರಥಮೇ ಮಂಡಲೇ ಜ್ಞೇಯಾ ಋಷಯಸ್ತು ಶತರ್ಚಿನಃ ।

ದ್ಯುಭಕ್ತಿ) ಪ್ರಾರ್ಥಿತನಾಗಿದಾನೆ. ಕೊನೆಯ ಮೂರು ಋಕ್ಕುಗಳು (೧೧-೧೩ ಋಕ್ಕುಗಳು) ರೋಗಗಳನ್ನು ನಾಶಮಾಡುವ ಶಕ್ತಿಯುಳ್ಳವೆಂದು ಪ್ರಸಿದ್ಧವಾಗಿವೆ.

114. ಕೊನೆಯ ಈ ಮೂರು ಋಕ್ಕುಗಳಲ್ಲಿ (೧೧-೧೩) ಮೊದಲಿನ ಎರಡು ಋಕ್ಕುಗಳು (೧೧-೧೨) ರೋಗವನ್ನು ನಾಶಮಾಡುವುವು. ಕೊನೆಯ ೪ನೆಯ ಋಕ್ಕಿನ ಉತ್ತರಾರ್ಧವು ಶತ್ರುನಾಶಕರವಾಗಿರುವುದು. ಶತರ್ಚಿಗಳು ಎಂಬ ಹೆಸರಿನಿಂದ ಪ್ರಸಿದ್ಧರಾದ ಋಷಿಗಳಲ್ಲಿ ಸವ್ಯ ಎಂಬುವನು ಇಂದ್ರನ ಅಂಶಭೂತನು. (ಶತರ್ಚಿ ಎಂದರೆ ಸುಮಾರು ಒಂದು ನೂರು ಋಕ್ಕುಗಳ ದ್ರಷ್ಟೃಗಳು. ಇಂತಹ ಅನೇಕ ಋಷಿಗಳ ಸೂಕ್ತಗಳು ಮೊದಲನೆಯ ಮಂಡಲದಲ್ಲಿರುವುದರಿಂದ ಈ ಮಂಡಲಕ್ಕೆ ಶತರ್ಚಿನಃ ಎಂಬ ಹೆಸರು ಪ್ರಸಿದ್ಧವಾಗಿವೆ.)

ಸವ್ಯನ ವೃತ್ತಾಂತ; ಶತರ್ಚಿನರು ಎಂದರೆ ಯಾರು ?

115. ಅಂಗಿರಾಃ ಎಂಬ ಋಷಿಯು ಪರಾಕ್ರಮಾದಿಗಳಲ್ಲಿ ಇಂದ್ರನಿಗೆ ಸಮನಾದ ಪುತ್ರನನ್ನು ಪಡೆಯಬೇಕೆಂದು ಬಯಸಿ ತಪಸ್ಸನ್ನು ಮಾಡಿದನು. ಆಗ ವಜ್ರಾಯುಧಧಾರಿಯಾದ ಇಂದ್ರನೇ ತನ್ನ ಯೋಗಸಾಮರ್ಥ್ಯದಿಂದ ಆ ಋಷಿಗೆ ಸವ್ಯನೆಂಬ ಪುತ್ರನಾದನು. (ಈ ಸವ್ಯನು-ಸವ್ಯ ಆಂಗಿರಸಃ—ಪ್ರಥಮ ಮಂಡಲದ ೫೧-೫೭ ಸೂಕ್ತಗಳಿಗೆ (೭೨ ಋಕ್ಕುಗಳಿಗೆ) ಋಷಿಯಾಗಿರುವನು).

116. ಪ್ರಥಮ ಮಂಡಲದಲ್ಲಿರುವ ಸೂಕ್ತಗಳ ಋಷಿಗಳಿಗೆ ಶತರ್ಚಿನರೆಂದು ಹೆಸರು (ಏಕೆಂದರೆ ಇವರು ಸಾಧಾರಣವಾಗಿ ನೂರು ಋಕ್ಕುಗಳ ದ್ರಷ್ಟೃಗಳು) ಕೊನೆಯ ಹತ್ತನೆಯ ಮಂಡಲದ ಋಷಿಗಳಿಗೆ ಕ್ಷುದ್ರಸೂಕ್ತಮಹಾಸೂಕ್ತಗಳ (ಸಣ್ಣ ಸೂಕ್ತಗಳ ಮತ್ತು ದೊಡ್ಡ ಸೂಕ್ತಗಳ) ದ್ರಷ್ಟೃಗಳಾದ ಋಷಿಗಳೆಂದು ಹೆಸರು. ಮೊದಲನೆಯ

(ದ್ಯುಭಕ್ತಿ) is praised; the last triplet (50. 11-13) is destructive of disease (ರೋಗಘ್ನ).

114. With the first two (stanzas) in the last triplet (beginning) 'Rising' (ಉದ್ಯನ್ : i. 50—11, 12) there is driving away of disease, while in a hemistich (of the last stanza) there is hostility to foes.

Among the Satarchins is ಸವ್ಯ who is a form of Indra (ಇಂದ್ರ).

115. Of the sage Angirasa who wished for a son like Indra, the Bolt-bearer himself became the son, having assumed the form of Savya in consequence of the seer's asceticism.

116. Now the seers in the first book are to be known as Satarchins in

ಕ್ಷುದ್ರಸೂಕ್ತಮಹಾಸೂಕ್ತಾ ಅಂತ್ಯೇ ಮಧ್ಯೇಷು ಮಧ್ಯಮಾಃ ॥ ೧೧೬ ॥
ನವಕಂ ಜಾತವೇದಸ್ಯಂ ನೂ ಚಿದ್ಯತ್ತು ವಯಾ ಇತಿ ।
ವೈಶ್ವಾನರೀಯಂ ತತ್ಸೂಕ್ತಂ ವಹ್ನಿಮಾಗ್ನೇಯಮುತ್ತರಂ ॥ ೧೧೭ ॥
ಐಂದ್ರಾಣ್ಯಸ್ಮೈ ತತಸ್ತ್ರೀಣಿ ವೈಷ್ಣೇ ಶರ್ಧಾಯ ಮಾರುತಂ ।
ಆಗ್ನೇಯೋನಿ ತು ಪಶ್ವೇತಿ ನವ ಶಶ್ವದ್ಧಿ ವಾಮಿತಿ ॥ ೧೧೮ ॥
ದಶಾಶ್ವಿನಾನೀಮಾನೀತಿ ಇಂದ್ರಾವರುಣಯೋಃ ಸ್ತುತಿಃ ।
ಸೌಪರ್ಣೇಯಾಸ್ತು ಯಾಃ ಕಾಶ್ಚಿನ್ನಿಪಾತಸ್ತುತಿಷು ಸ್ತುತಾಃ ॥ ೧೧೯ ॥

ಮಂಡಲಕ್ಕೂ ಹತ್ತನೆಯ ಮಂಡಲಕ್ಕೂ ಮಧ್ಯದಲ್ಲಿರುವ ೨, ೩, ೪, ೫, ೬, ೭, ೮, ೯ ಎಂಬ ಎಂಟು ಮಂಡಲದ ಋಷಿಗಳಿಗೆ ಮಧ್ಯಮಋಷಿಗಳೆಂದು ಹೆಸರು.

117. **ನೂ ಚಿತ್** ಎಂಬ ಒಂಭತ್ತು ಋಕ್ಕುಗಳುಳ್ಳ ೫೮ ನೇ ಸೂಕ್ತಕ್ಕೆ ಜಾತವೇದಾಗ್ನಿಯೂ, **ವಯಾ ಇದಗ್ನೇ** ಎಂಬ ೫೯ ನೇ ಸೂಕ್ತಕ್ಕೆ ವೈಶ್ವಾನರಾಗ್ನಿಯೂ, **ವಹ್ನಿಂ ಯಶಸಂ** ಎಂಬ ೬೦ ನೇ ಸೂಕ್ತಕ್ಕೆ ಅಗ್ನಿಯೂ ದೇವತೆಗಳು.

೬೧-೭೩ ನೇ ಸೂಕ್ತಗಳ ದೇವತೆಗಳು

118. **ಅಸ್ಮೈ ಇದು** ಎಂಬ ಮುಂದಿನ ಮೂರು ಸೂಕ್ತಗಳಿಗೆ (೬೧-೬೩) ಇಂದ್ರನು ದೇವತೆಯು. **ವೈಷ್ಣೇ ಶರ್ಧಾಯ** ಎಂಬ ೬೪ ನೇ ಸೂಕ್ತಕ್ಕೆ ಮರುತ್ತುಗಳು ದೇವತೆಯು; **ಪಶ್ವಾ ನ** ಎಂಬ ೬೫ ನೇ ಸೂಕ್ತದಿಂದ ಮುಂದಿನ ಒಂಭತ್ತು ಸೂಕ್ತಗಳಿಗೆ (೬೫-೭೩) ಅಗ್ನಿಯು ದೇವತೆಯು **ಶಶ್ವದ್ಧಿ ವಾಂ** ಎಂದು ಮೊದಲಾಗುವ,

119. ೧೦ ಸೂಕ್ತಗಳಿಗೆ ಅಶ್ವಿನೀದೇವತೆಗಳು ದೇವತೆಯು; **ಇಮಾನಿ ವಾಂ** ಎಂಬ ಖಿಲ ಸೂಕ್ತದಲ್ಲಿ (೮ ನೇ ಮಂಡಲದ ೫೯ ನೇ ಸೂಕ್ತ) ಇಂದ್ರಾವರುಣರ ಸ್ತುತಿ ಇರುವುದು. ಸುಪರ್ಣಸೂಕ್ತಗಳಲ್ಲಿ ಸೂಚಿತವಾಗಿರುವ ಇತರ ದೇವತೆಗಳನ್ನು ಸಂದರ್ಭಾನುಸಾರ ಪ್ರಸ್ತಾಪಮಾಡಲಾಗಿದೆಯೆಂದು ತಿಳಿಯಬೇಕು.

---

the last, as seers of short hymns and of long hymns; in the middle ones, as middlemen (ಮಧ್ಯಮಾ).

117. 'Now indeed' (ನೂ ಚಿತ್: i. 58), containing nine stanzas, is addressed to Jatavedas: while the hymn which (begins) 'Branches' (ವಯಾಃ i. 59) is addressed to Vaisvanara; the following one, 'Bearer' (ವಹ್ನಿಂ: i. 60) is addressed to Agni.

24. RV. i. 61-73. Eleven Khilas. RV. i. 74-89.

118. Then (come) three (61-63), 'To him' (ಅಸ್ಮೈ: i. 64) is addressed to the Indra: 'For the manly host' (ವೈಷ್ಣೇ ಶರ್ಧಾಯ: i. 64) is addressed to the Maruts; 'With a cow' (ಪಶ್ವಾ; i. 65) is the first of nine hymns (65-73) addressed to Agni; 'Ever indeed of you' (ಶಶ್ವದ್ಧಿ ವಾಂ).

119. are ten addressed to the Asvins; (the hymn) 'These' (ಇಮಾನಿ: viii. 59) is (in) praise of Indra-Varuna. But Whatever (other deities) belong to the Sauparna hymns are praised incidentally (ನಿಪಾತಸ್ತುತಿಷು).

ಉಪಪ್ರಯಂತಃ ಸೂಕ್ತಾನಿ ಅಗ್ನೇಯಾನ್ಯುತ್ತರಾಣಿ ಷಟ್ ।
ಹಿರಣ್ಯಕೇಶೋ ರಜಸಸ್ತೃಚೋಽಗ್ನೇರ್ಮಧ್ಯಮಸ್ಯ ತು ॥ ೧೨೦ ॥
ಇತ್ಥೇತಿ ಪಂಚ ತ್ವೈಂದ್ರಾಣಿ ಯಾಮಿತ್ಯಸ್ಯಾಂ ನಿಪಾತಿತಾಃ ।
ದಧ್ಯಙ್ಮನುರಥರ್ವಾ ಚ ಮಾರುತಾನಿ ಪ್ರ ಯೇ ತತಃ ॥ ೧೨೧ ॥
ಚತ್ವಾರ್ಯಾ ನೋ ವೈಶ್ವದೇವೇ ದ್ವೇ ದೇವಾನಾಂ ಸ್ತುತಿರ್ಮತೇ ।
ಆ ನೋ ಭದ್ರಾಶ್ಚ ದೇವಾನಾಂ ಭದ್ರಂ ಯಾವಚ್ಛತಂ ಪುನಃ ॥ ೧೨೨ ॥
ಮಧು ವಾತಾಸ್ತೃಚೇ ತಸ್ಮಿನ್ಪರಮಂ ಮಧ್ವಪೀಷ್ಯತೇ ।

೭೪-೯೦ ಸೂಕ್ತಗಳ ದೇವತೆಗಳು

120. **ಉಪಪ್ರಯಂತಃ** ಎಂಬ ಸೂಕ್ತದಿಂದ ಮುಂದಿನ ಆರು ಸೂಕ್ತಗಳಿಗೆ (೭೪-೭೯) ಅಗ್ನಿಯು ದೇವತೆಯು; ಆದರೆ ೭೯ ನೇ ಸೂಕ್ತದ **ಹಿರಣ್ಯ ಕೇಶೋ ರಜಸಃ** ಎಂದು ಮೊದಲಾಗುವ ಮೂರು ಋಕ್ಕುಗಳಿಗೆ (೧-೩) ಅಗ್ನಿ ಅಥವಾ ಮಧ್ಯಮಾಗ್ನಿಯು ದೇವತೆಯು.

121. **ಇತ್ಥಾ ಹಿ** ಎಂಬ ಮುಂದಿನ ಐದು ಸೂಕ್ತಗಳಿಗೆ (೮೦-೮೪) ಇಂದ್ರನು ದೇವತೆಯು; ಆದರೆ ೮೦ ನೇ ಸೂಕ್ತದ **ಯಾಮಥರ್ವಾ** ಎಂಬ ೧೬ ನೇ ಋಕ್ಕಿನಲ್ಲಿ ದಧ್ಯಙ್, ಮನು, ಅಥರ್ವಾ ಎಂಬುವರ ಹೆಸರುಗಳು ಪ್ರಾಸಂಗಿಕವಾಗಿ ಸೂಚಿತವಾಗಿರುವವು. ಆದರ ಮುಂದಿನ **ಪ್ರ ಯೇ** ಎಂಬ ೮೫ ನೇ ಸೂಕ್ತದಿಂದ ಮುಂದಿನ,

122. ನಾಲ್ಕು ಸೂಕ್ತಗಳಿಗೆ (೮೯-೯೦ ಸೂಕ್ತಗಳಿಗೆ) ವಿಶ್ವೇದೇವತೆಗಳು ದೇವತೆಯು; ಆದರೆ ೮೯ ನೇ ಸೂಕ್ತದ ಮೊದಲ ೨ ಋಕ್ಕುಗಳಿಗೆ (**ಆ ನೋ ಭದ್ರಾಃ** ೧-೨) ಸಾಮಾನ್ಯ ದೇವತೆಗಳು ದೇವತೆಯು ಮತ್ತು ಅದರಂತೆಯೇ **ಈಃ** ಸೂಕ್ತದ (೮೯ ನೇ ಸೂಕ್ತದ) **ದೇವಾನಾಂ** ಎಂಬ ಎರಡನೆಯ ಋಕ್ಕಿಗೂ, **ಭದ್ರಂ ಕರ್ಣೇಭಿಃ** ಎಂಬ ಎಂಟನೆಯ ಋಕ್ಕಿಗೂ, **ಶತಮಿನ್ನು** ಎಂಬ ಒಂಭತ್ತನೆಯ ಋಕ್ಕಿಗೂ (ಸಾಮಾನ್ಯ) ದೇವತೆಗಳೇ ದೇವತೆಯು.

123. ೯೦ ನೇ ಸೂಕ್ತದಲ್ಲಿರುವ **ಮಧು ವಾತಾ** ಎಂಬ ತೃಚದಲ್ಲಿ (೬-೮) ಉತ್ತಮವಾದ ಮಧುವನ್ನು

120. The following six hymns (74-79), 'Going forth' (ಉಪಪ್ರಯಂತ: i. 74. 1), are addressed to Agni; but the triplet 'With golden locks of hair' (ಹಿರಣ್ಯಕೇಶೋ ರಜಸ: i. 79. 1-3) is (addressed) to the middle Agni.

121. Now 'Thus' (ಇತ್ಥಾ: i. 80. 1) are five (80-34) addressed to Indra; in the (stanza) 'Whatever' (ಯಂ: i. 80. 16) Dadhyanch, Manu, and Atharvan are incidentally mentioned. Then 'They who forth' (ಪ್ರ ಯೇ: i. 85. 1) are addressed to the Maruts,

122. being four (85-88) 'To us' (ಆ ನಃ: i. 8. 1) are two (hymns) to the All-gods (89, 90); two (stanzas here) are regarded as (in) praise of the gods (in general), both 'To us, the auspicious' (ಆ ನೋ ಭದ್ರಾಃ: i. 89.1), 'Of the gods' (ದೇವಾನಾಂ: i. 89.2), and again 'What is auspicious' (ಭದ್ರಂ: i. 89.8) up to (yavat) 'A hundred' (ಶತಂ: i. 89. 9).

25. RV. i. 90-93. Order of hymn-groups in Mandala i. 74-164

123. In the triplet 'The winds waft mead' (ಮಧು ವಾತಾಃ: i. 90. 6) the

ಅದಿತಿರ್ದ್ಯೌರಿತಿ ತ್ವಸ್ಯಾಂ ವಿಭೂತಿಃ ಕಥಿತಾದಿತೇಃ ॥ ೧೩೩ ॥

ತ್ವಂ ಸೋಮ ಸೌಮ್ಯಮೌಷಸನುೇತಾ ಉ ತ್ಯಾಸ್ತ್ರ್ಯಚೋಽಶ್ವಿನೋಃ ।

ಅಶ್ವಿನಾಗ್ನೇಃ ಸಸೋಮಸ್ಯ ಅಗ್ನೀಷೋಮಾವಿತಿ ಸ್ತುತಿಃ ॥ ೧೩೪ ॥

ಗೋತಮಾದೌಶಿಜಃ ಕುತ್ಸಃ ಪರುಚ್ಛೇಪಾದ್ಯಸೇಃ ಪರಃ ।

ಕುತ್ಸಾದ್ದೀರ್ಘತಮಾಃ ಶಶ್ವತ್ತೇ ದ್ವೇ ಏವಮಧೀಯತೇ ॥ ೧೩೫ ॥

ಇಮಂ ಕುತ್ಸ ಆಂಗಿರಸೋ ದದರ್ಶ ಜಾತವೇದಸ್ಯಂ ಜಗಾದ ಷೋಳಶರ್ಚಂ ।

(ಉದಕವನ್ನು) ಅಪೇಕ್ಷಿಸಲಾಗಿದೆ. ೮೯ ನೇ ಸೂಕ್ತದ ೧೦ ನೇ ಋಕ್ಕಾದ **ಅದಿತಿರ್ದ್ಯೌರದಿತಿಃ** ಎಂಬ ಋಕ್ಕಿನಲ್ಲಿ ಅದಿತಿಯ ಮಾಹಾತ್ಮೆಯು ಉಕ್ತವಾಗಿದೆ.

೯೧-೧೦೪ ನೇ ಸೂಕ್ತಗಳ ದೇವತೆಗಳು

124. **ತ್ವಂ ಸೋಮ** ಎಂಬ ಸೂಕ್ತಕ್ಕೆ (೯೧ ನೇ ಸೂಕ್ತ) ಸೋಮನೂ, **ಏತಾ ಉತ್ಯಾ** (೯೨ ನೇ ಸೂಕ್ತ) ಎಂಬ ಸೂಕ್ತಕ್ಕೆ ಉಷೋದೇವತೆಯೂ ದೇವತೆಗಳು, ಈ ಸೂಕ್ತದ ೧-೧೪ ನೇ ಋಕ್ಕುಗಳಿಗೆ ಅಶ್ವಿನೀದೇವತೆಗಳು ದೇವತೆಯು; **ಅಗ್ನೀಷೋಮಾ** ಎಂಬ ೯೩ ನೇ ಸೂಕ್ತಕ್ಕೆ ಅಗ್ನಿ ಮತ್ತು ಸೋಮ ಎಂಬಿಬ್ಬರೂ ದೇವತೆಗಳು.

125. ಪ್ರಥಮಮಂಡಲದ ೭೪-೯೩ ಸೂಕ್ತಗಳಿಗೆ ಗೋತಮನು ಋಷಿಯು; (ಅನಂತರ ೯೪–೧೧೫ ಸೂಕ್ತಗಳಿಗೆ ಕುತ್ಸನು ಋಷಿಯು); ೧೧೬–೧೩೬ ಸೂಕ್ತಗಳಿಗೆ **ಕಕ್ಷೀವಾನ್** ಎಂಬುವನು ಋಷಿಯು. ಈ ಋಷಿಯು **ಉಶಿಕ್** ಎಂಬ ಸ್ತ್ರೀಯ ಪುತ್ರನು; ಅನಂತರ ೧೩೭–೧೪೯ ಸೂಕ್ತಗಳಿಗೆ **ಪರುಚ್ಛೇಪ**ಋಷಿಯೂ ಅನಂತರ ೧೪೦–೧೬೪ ಸೂಕ್ತಗಳಿಗೆ **ದೀರ್ಘತಮಾಃ** ಎಂಬ ಋಷಿಯೂ ಋಷಿಗಳು. **ಕುತ್ಸ** ಮತ್ತು **ದೀರ್ಘತಮಾಃ** ಎಂಬ ಋಷಿಗಳಿಬ್ಬರೂ (ಎಂದರೆ ಇವರಿಬ್ಬರ ಸೂಕ್ತಗಳೂ) ಜತೆಯಲ್ಲಿರುವರು.

126. ಅಂಗಿರಸಪುತ್ರನಾದ ಕುತ್ಸನೆಂಬ ಋಷಿಯು **ಇಮಂ ಸ್ತೋಮಂ** ಎಂಬ ೪೪ ನೇ ಸೂಕ್ತದ ದ್ರಷ್ಟೃವಾಗಿರುವನು ಮತ್ತು ಜಾತವೇದೋಗ್ನಿಯನ್ನು ಸ್ತುತಿಸಿರುವ ಈ ಸೂಕ್ತದ ೧೬ ಋಕ್ಕುಗಳನ್ನು ಪಠಿಸಿರುವನು. ಆದರೆ

---

supreme (ಪರಮ) mead is also (ಅಪಿ) desired; but in the (stanza) 'Aditi is Heaven' (ಅದಿತಿರ್ದ್ಯೌಃ : i. 89. 10) the majesty of Aditi is told.

124. 'you, Soma, (ತ್ವಂ ಸೋಮ : i. 91) is addressed to Soma; 'These Dawns' (ಏತಾ ಉತ್ಯಾ : i. 92) is addressed to Dawn; the triplet 'O Asvins (ಅಶ್ವಿನಾ: i. 92. 16-18) to the Asvins. 'Agni and Soma' (ಅಗ್ನೀಷೋಮೌ : 1. 93) is (in) praise of Agni associated with Soma.

125. After Gotama (74-93) the son of Usij (Kaksivat comes: 116-126); after the seer Paruchepa (127-139) follows Kutsa (99-115); after Kutsa, Dirghatamas (140-164): always (ಶಶ್ವತ್) these two (sets respectively); in this order (ಏವಂ) is read (the text of the Rg-veda).

26. RV. i. 94-111. Seers of hymns with refrains; Khilas of Kasyapa

126. Kutsa, son of Angiras, saw 'This' (ಇಮಂ; i. 94): he uttered (this hymn), containing sixteen stanzas (and) addressed to Jatavedas.

ಪೂರ್ವೋ ದೇವಾ ಇತ್ಯೃಚೋ ದೇವದೇವಾಸ್ತ್ರಯಃ ಪಾದಾ ಉತ್ತಮಾಯಾಸ್ತ-
ತೋಽರ್ಧಂ ॥ ೧೨೬ ॥

ತಸ್ಯೈವ ವಾ ಯಸ್ಯ ತತ್ಪೂರ್ವಸೂಕ್ತಂ ಮಿತ್ರಾದಿಭ್ಯೋ ವಾತ್ರ ಷಡ್ಭ್ಯಃ ಪ್ರಕೃತಾಭ್ಯಃ ।
ಅಂತ್ಯೋಽರ್ಧರ್ಚಸ್ತು ವಾ ಷಣ್ಣಾಂ ಸ್ತುತಾನಾಂ ಪೂರ್ವೋ ದೇವಾಃ ಪಾದ್ಯೈಸ್ತು ತ್ರಿಭಿಃ
ಸ್ತುತಾಃ ॥ ೧೨೭ ॥

ಭರದ್ವಾಜೇ ಗೃತ್ಸಮದೇ ವಸಿಷ್ಠೇ ನೋಧಸ್ಯಗಸ್ತ್ಯೇ ವಿಮದೇ ನಭಾಕೇ ।
ಕುತ್ಸೇ ನೋದರ್ಕಾ ಬಹುದೈವತೇಷು ತಥಾ ದ್ವಿದೇವೇಷು ಸಮಾನಧರ್ಮಿಣಃ ॥ ೧೨೮ ॥

ಈ ಸೂಕ್ತದ **ಪೂರ್ವೋ ದೇವಾಃ** ಎಂಬ ೪ ನೇ ಋಕ್ಕಿನ ಮೊದಲಿನ ಮೂರು ಪಾದಗಳಿಗೂ **ಸ ತ್ವಮಗ್ನೇ** ಎಂಬ ೧೬ ನೇ ಋಕ್ಕಿನ ಉತ್ತರಾರ್ಧಕ್ಕೂ ದೇವತೆಗಳೇ ದೇವತೆಯು.

127. ೧೬ ನೇ ಋಕ್ಕಿನ ಉತ್ತರಾರ್ಧವು, ಈ ಸೂಕ್ತದ ಮುಖ್ಯದೇವತೆಯಾದ ಜಾತವೇದೋಗ್ನಿಯ ಪರವಾಗಿರುವುದು ಅಥವಾ ಅರ್ಧಋಕ್ಕಿನಲ್ಲಿಯೇ ಹೇಳಿರುವಂತೆ ಮಿತ್ರಾದಿ ಆರು ದೇವತೆಗಳ ಪರವಾಗಿರಲೂ ಇರುವುದು. ಆದರೆ ಕೊನೆಯ ಋಕ್ಕಿನ (೧೬) ಉತ್ತರಾರ್ಧದಲ್ಲಿ ಮಿತ್ರಾದಿ ಆರು ದೇವತೆಗಳ ಹೆಸರನ್ನು ಪ್ರತ್ಯೇಕವಾಗಿ ಸೂಚಿಸಿದೆ. ೪ ನೇ ಋಕ್ಕಿನಲ್ಲಿ ಮೊದಲು ಮೂರು ಪಾದಗಳ ದೇವತೆಗಳ ಹೆಸರನ್ನು ಹೇಳದೆ ಸಾಮಾನ್ಯವಾಗಿ **ದೇವಾಃ**—ದೇವತೆಗಳು ಎಂದು ಮಾತ್ರ ಸ್ತುತಿಸಲಾಗಿದೆ.

128. ಭರದ್ವಾಜ, ಗೃತ್ಸಮದ, ವಸಿಷ್ಠ, ನೋಧಾಃ, ಅಗಸ್ತ್ಯ, ವಿಮದ, ನಭಾಕ, ಕುತ್ಸ ಎಂಬ ಋಷಿಗಳಿಂದ ದೃಷ್ಟವಾದ ಸೂಕ್ತಗಳಲ್ಲಿ, ಬಹುದೇವತೆಗಳ ವಿಷಯದಲ್ಲಾಗಲಿ, ದ್ವಿದೇವತೆ (ಮಿತ್ರಾವರುಣಾ, ಅಶ್ವಿನೌ ಇತ್ಯಾದಿ) ಗಳ ವಿಷಯದಲ್ಲಾಗಲಿ, ಗುಣವರ್ಣನೆಯ ಸಾಮಾನ್ಯತೆಯು ಕಂಡುಬರುವುದಿಲ್ಲ ಎಂದರೆ ದ್ವಿದೇವತೆಗಳನ್ನೂ ನಾನಾ ದೇವತೆಗಳನ್ನೂ ಸ್ತುತಿಸುವಾಗ ಮೇಲೆ ಹೇಳಿದ ಋಷಿಗಳು ಒಂದೇ ವಿಧವಾದ ಕ್ರಮವನ್ನು ಅನುಸರಿಸಿರುವುದಿಲ್ಲ. ಪ್ರತಿಯೊಬ ಋಷಿಯ ಸ್ತುತಿಯ ವೈಶಿಷ್ಟ್ಯವೂ ಬೇರೆ ಬೇರೆಯಾಗಿರುವುದು.

Three verses of the stanza 'Foremost, O Gods' (पूर्वो देवाः : i. 94. 8) have the gods as their deities; then half of the last (stanza : i. 94-16)

127. either belongs to the same deity (i.e. Agni) as the (whole) hymn which precedes it (तत्पूर्व), or it is (addressed) to the six deities, Mitra and the rest, who are here referred to (प्रकृत).

The last hemistich (i. 94. 16) is (addressed) optionally (वा) to the six (deities) praised, whereas in 'Foremost'(पूर्वः : 1. 94. 8) the gods (in general) are praised with three verses

128. In Bharadvaja, Grtsamada, Vasistha, Nodhas, Agastya, Vimada, Nabhaka, Kutsa there are no similar (समानधर्मिणः) refrains in (hymns) addressd to many divinities, also (not) in those addressed to two gods.

ದ್ವೇ ವಿರೂಪೇ ಸೂಕ್ತಮೌಷಸಾಯಾಗ್ನಯೇ ಸ ಪ್ರಶ್ನಥೇತಿ ದ್ರವಿಣೋದಸೇऽಗ್ನಯೇ ।
ವೈಶ್ವಾನರಸ್ಯೇತಿ ವೈಶ್ವಾನರೀಯಮಸ್ಮಾತ್ಪೂರ್ವಂ ಶುಚಯೇऽಗ್ನಯೇ ಪುನಃ ॥ ೧೨೯ ॥
ಜಾತವೇದಸ್ಯಂ ಸೂಕ್ತಸಹಸ್ರಮೇಕ ಐಂದ್ರಾತ್ಪೂರ್ವಂ ಕಶ್ಯಪಾರ್ಷಂ ವದಂತಿ ।
ಜಾತವೇದಸೇ ಸೂಕ್ತಮಾದ್ಯಂ ತು ತೇಷಾಮೇಕಭೂಯಸ್ತ್ವಂ ಮನ್ಯತೇ
ಶಾಕಪೂಣಿಃ ॥ ೧೩೦ ॥
ಸ ಯೋ ವೃಷೈಂದ್ರಾಣಿ ಪಂಚ ವೈಶ್ವದೇವಾನಿ ಚಂದ್ರಮಾಃ ।
ಶ್ರೇಷ್ಯೈಂದ್ರಾಗ್ನೇ ಯ ಇಂದ್ರಾಗ್ನೀ ತತಮಿತ್ಯಾರ್ಭವೇ ಪರೇ ॥ ೧೩೧ ॥

129. **ದ್ವೇ ವಿರೂಪೇ** (೯೫ನೇ ಸೂಕ್ತ) ಎಂಬ ಸೂಕ್ತದಲ್ಲಿ ಉಷೋದೇವತೆಯನ್ನೂ ಮತ್ತು ಅಗ್ನಿಯನ್ನೂ ಸ್ತುತಿಸಲಾಗಿದೆ. **ಸ ಪ್ರಶ್ನಥಾ** ಎಂಬ ಸೂಕ್ತದಲ್ಲಿ (೯೬ನೇ ಸೂಕ್ತ) **ದ್ರವಿಣೋದಾಃ** ಎಂಬ ಹೆಸರಿನ ಅಗ್ನಿಯನ್ನು ಸ್ತುತಿಸಲಾಗಿದೆ. **ವೈಶ್ವಾನರಸ್ಯ ಸುಮತೌ** (೯೮ನೇ ಸೂಕ್ತ) ಎಂಬ ಸೂಕ್ತದಲ್ಲಿ ವೈಶ್ವಾನರನೆಂಬ ಅಗ್ನಿಯನ್ನೂ ಅದರ ಹಿಂದಿನ ಸೂಕ್ತವಾದ **ಅಪ ನಃ** (೯೭ನೇ ಸೂಕ್ತ) ಎಂಬ ಸೂಕ್ತದಲ್ಲಿ **ಅಗ್ನಿಃ ಶುಚಿಃ** ಎಂಬ ಅಗ್ನಿಯ ರೂಪಾಂತರವನ್ನು ಅಥವಾ ಕೇವಲ ಅಗ್ನಿಯನ್ನು ಸ್ತುತಿಸಲಾಗಿದೆ.

130. ಋಗ್ವೇದಸಂಹಿತೆಯಲ್ಲಿ ಅಗ್ನಿದೇವತಾಕವಾದ ಸುಮಾರು ಒಂದುಸಾವಿರ ಸೂಕ್ತಗಳಲ್ಲಿ **ಜಾತವೇದಸೇ** (೯೯ನೇ ಸೂಕ್ತ) ಎಂಬ ಸೂಕ್ತವು ಜಾತವೇದೋಗ್ನಿಯನ್ನು ಸ್ತುತಿಸಿರುವ ಸೂಕ್ತಗಳಲ್ಲಿ ಮೊದಲನೆಯದೆಂದು ಕೆಲವರು ಹೇಳುವರು. ಪ್ರಕೃತ ಮೇಲೆ ಹೇಳಿದ **ಜಾತವೇದಸೇ** ಎಂಬ ಸೂಕ್ತಕ್ಕೆ ಕಶ್ಯಪನು ಋಷಿಯು, ಈ ಸೂಕ್ತವು ಇಂದ್ರದೇವತಾಕವಾದ (**ಸ ಯೋ ವೃಷಾ** ಎಂಬ ೧೦೦ನೇ ಸೂಕ್ತ) ಸೂಕ್ತದ ಹಿಂದಿನ ಸೂಕ್ತವು (ಎಂದರೆ ೯೯ನೇ ಸೂಕ್ತ) ಮತ್ತು ಇದರಲ್ಲಿ ಒಂದು ಋಕ್ಕು ಮಾತ್ರವಿರುವುದು ಎಂದು **ಶಾಕಪೂಣಿ** ಎಂಬ ಆಚಾರ್ಯರು ಹೇಳುತ್ತಾರೆ.

131. **ಸ ಯೋ ವೃಷಾ** ಎಂಬ (೧೦೦ನೇ) ಸೂಕ್ತವು ಇಂದ್ರದೇವತಾಕವಾದ ಐದು ಸೂಕ್ತಗಳಲ್ಲಿ (೧೦೦-೧೦೪ ಸೂಕ್ತಗಳಲ್ಲಿ) ಮೊದಲನೆಯದು; **ಚಂದ್ರಮಾ** (೧೦೫ನೇ ಸೂಕ್ತ) ಎಂಬ ಸೂಕ್ತವು ವಿಶ್ವೇದೇವತಾಕವಾದ ಮೂರು ಸೂಕ್ತಗಳಲ್ಲಿ (೧೦೫-೧೦೭) ಮೊದಲನೆಯದು; **ಯ ಇಂದ್ರಾಗ್ನೀ** (೧೦೮ನೇ ಸೂಕ್ತ) ಎಂಬ ಸೂಕ್ತವು ಇಂದ್ರಾಗ್ನಿಗಳನ್ನು ಸ್ತುತಿಸಿರುವ ಎರಡು ಸೂಕ್ತಗಳಲ್ಲಿ (೧೦೮-೧೦೯) ಮೊದಲನೆಯದು; ಮುಂದಿನ ಎರಡು ಸೂಕ್ತಗಳಲ್ಲಿ (೧೧೦-೧೧೧) ಋಭುದೇವತೆಗಳನ್ನು ಸ್ತುತಿಸಲಾರುಗಿವುದು. ಇವುಗಳಲ್ಲಿ **ತತಂ ಮೇ** ಎಂಬ (೧೧೦) ಸೂಕ್ತವು ಮೊದಲನೆಯದು.

---

129. 'Two unlike' (ದ್ವೇ ವಿರೂಪೇ : i. 95) is a hymn to Agni Ausasa, 'He in the ancient way' (ಸ ಪ್ರಶ್ನಥಾ : 1. 96) is to Agni Dravinodas, 'Of Vaisvanara' (ವೈಶ್ವಾನರಸ್ಯ : i. 98) is addressed to Vaisvanara; but the one before this (i. 97) is to Agni Suchi.

130. Some say that the thousand hymns addressed to Jatavedas (which come) before (the hymn) addressed to Indra (i. 100) have Kasyapa as their seer; the first hymn of these is 'For Jatavedas' (ಜಾತವೇದಸೇ : i. 99). Sakapuni thinks that they increase by one (in the number of their stanzas).

131. 'The mighty one who' (ಸ ಯೋ ವೃಷಾ : i. 100) is (the first of) five (hymns) addressed to Indra (100-104); there are (then) three (105-107) addressed to the All-gods, (beginning) 'The Moon (ಚಂದ್ರಮಾಃ : i. 105. 1). 'That which, O Indra-Agni (ಯ ಇಂದ್ರಾಗ್ನೀ : 1. 108) is (the first of) two addressed to Indra-Agni (108-109); the two following (110, 111) 'I wrought' (ತತಂ : i. 110. 1) are addressed to the Rbhus.

ತ್ರಿತಂ ಗಾಸ್ತ್ವನುಗಚ್ಛಂತಂ ಕ್ರೂರಾಃ ಸಾಲಾವೃಕೀಸುತಾಃ ।
ಕೂಪೇ ಪ್ರಕ್ಷಿಪ್ಯ ಗಾಃ ಸರ್ವಾಸ್ತತ ಏವಾಪಜಹ್ರಿರೇ ॥ ೧೩೨ ॥

ಸ ತತ್ರ ಸುಷುವೇ ಸೋಮಂ ಮಂತ್ರವಿನ್ಮಂತ್ರವಿತ್ತಮಃ ।
ದೇವಾಂಶ್ಚಾವಾಹಯತ್ಸರ್ವಾಂಸ್ತಚ್ಛುಶ್ರಾವ ಬೃಹಸ್ಪತಿಃ ॥ ೧೩೩ ॥

ಆಗಚ್ಛತೋಽಥ ತಾನ್ದೃಷ್ಟ್ವಾ ಕ್ವ ವಸತ್ಯಸ್ಯ ತತ್ತ್ವತಃ ।
ಸರ್ವದೃಕ್ತ್ವಂ ಚ ವರುಣಸ್ಯಾರ್ಯಮ್ಣಶ್ಚೇತ್ಯುಪಾಲಭತ್ ॥ ೧೩೪ ॥

ತ್ರಿತ ಆಪ್ತ್ಯಃ ಎಂಬ ಋಷಿಯೆ ವೃತ್ತಾಂತವು (೧೦೫ನೇ ಸೂಕ್ತ)

132. ಒಂದಾನೊಂದು ಕಾಲದಲ್ಲಿ ಗೋವುಗಳನ್ನು ಮೇಯಿಸುವುದಕ್ಕಾಗಿ ಹೊಡೆದುಕೊಂಡು ಹೋಗುತ್ತಿದ್ದ ತ್ರಿತನನ್ನು ಸಾಲಾವೃಕಿ (ಎಂಬ ಹೆಣ್ಣುತೋಳದ) ಯ ಕ್ರೂರರಾದ ಪುತ್ರರು ಬಂದು ಪಾಳುಭಾವಿಯಲ್ಲಿ ತಳ್ಳಿ ಅವನ ಗೋವುಗಳನ್ನು ಅಪಹರಿಸಿಕೊಂಡು ಹೋದರು.

133. ಮಂತ್ರಜ್ಞನಾದ ಆ ತ್ರಿತಋಷಿಯು ಭಾವಿಯಲ್ಲಿ ಬಿದ್ದು ಮೇಲೆದ್ದುಬರಲು ಸಾಧ್ಯವಿಲ್ಲದೆ ಅಲ್ಲಿಯೇ ಬೆಳೆದಿದ್ದ ಸೋಮಲತೆಗಳನ್ನು ಕಿತ್ತು ಅದರ ರಸವನ್ನು ಹಿಂಡಿ ಅದನ್ನು ಪಾನಮಾಡಿ ತನ್ನನ್ನು ಬಂಧಮುಕ್ತನನ್ನಾಗಿ ಮಾಡಬೇಕೆಂದು ದೇವತೆಗಳನ್ನೆಲ್ಲಾ ಪ್ರಾರ್ಥಿಸಿ ಕರೆದನು. ಇವನ ಈ ವಿಧವಾದ ಪ್ರಾರ್ಥನೆಯನ್ನು ಬೃಹಸ್ಪತಿಯೂ ಕೇಳಿದನು.

134. ಇವನ ಪ್ರಾರ್ಥನೆಯನ್ನು ಕೇಳಿ ಇವನಿದ್ದ ಭಾವಿಯ ಒಳಿಗೆ ಬಂದು ಈ ತ್ರಿತನು ಎಲ್ಲಿದಾನೆ ಎಂದು ತಿಳಿಯದೆ ಹುಡುಕುತ್ತಿರುವ ದೇವತೆಗಳನ್ನು ತ್ರಿತನು ನೋಡಿ-ಈ ದೇವತೆಗಳ—ಅದರಲ್ಲಿಯೂ ವರುಣ ಮತ್ತು ಅರ್ಯಮರ ಸಮಸ್ತವನ್ನು ನೋಡಬಲ್ಲ ಶಕ್ತಿಯು ಎಲ್ಲಿ ಹೋಯಿತು ? ನಾನಿರುವ ಸ್ಥಳವನ್ನು ಕಾಣದೆ ಇವರು ಹುಡುಕುತ್ತಿರುವರಲ್ಲಾ ಎಂದು ವಿಷಾದದಿಂದ ಹೇಳಿದನು.

27. RV. i. 105 : Story of Trita

132. The cruel sons of the she-wolf (ಸಾಲಾವೃಕೀ) having cast Trita, who was following the cows, into a well, carried off all the cows from thence.

133. He, the best knower of formulas among all knowers of such, pressed Soma there and summoned all the gods : Brhaspati heard that (call).

134. Now on seeing them coming, he reproached (them), saying, 'Where, indeed, abides, the all seeing power (ಸರ್ವದೃಕ್ತ್ವ) of this Varuna and of Aryaman ?

ಪೂಪೇಷ್ವಕಾಭಿರ್ವ್ರಣಿತಾನ್ಯಂಗಾನ್ಯೇವಾಭವನ್ಮಮ ।
ದೃಷ್ಟ್ವಾ ಸರ್ವಾನಹಂ ಸ್ತೌಮಿ ಯದ್ಯಪ್ಯೇಕೋ ನ ಪಶ್ಯತಿ ॥ ೧೩೫ ॥
ಬೃಹಸ್ಪತಿಪ್ರಚೋದಿತಾ ವಿಶ್ವೇದೇವಗಣಾಸ್ತ್ರಯಃ ।
ಜಗ್ಮುಸ್ತ್ರಿತಸ್ಯ ತಂ ಯಜ್ಞಂ ಭಾಗಾಂಶ್ಚ ಜಗೃಹುಃ ಸಹ ॥ ೧೩೬ ॥
ಬೃಹಸ್ಪತಿಸ್ತ್ರಿತಸ್ಯೈತಜ್ಜ್ಞಾನಂ ವಿಜ್ಞಾನಮೇವ ಚ ।
ತೃಚೇನಾಂತ್ಯೇನ ಸೂಕ್ತಸ್ಯ ಜಗಾದರ್ಷಿರಸಾವಿತಿ ॥ ೧೩೭ ॥
ದ್ಯಾವಾಪೃಥಿವ್ಯೋರೀಳೇತಿ ಆಗ್ನೇಯಃ ಪಾದ ಉತ್ತರಃ ।
ಆಶ್ವಿನಃ ಸೂಕ್ತಶೇಷಃ ಸ್ಯಾದಿದಂ ರಾತ್ರ್ಯುಷಸೋಃ ಸ್ತುತಿಃ ॥ ೧೩೮ ॥

135. ಭಾವಿಯಲ್ಲಿ ಬಿದ್ದದ್ದರಿಂದ ನನ್ನ ಕೈಕಾಲಗಳಿಗೆ ಗಾಯವಾಗಿದೆ. ಭಾವಿಯಲ್ಲಿ ಬಿದ್ದಿರುವ ನನಗೆ ಈ ದೇವತೆಗಳು ಕಾಣಿಸುತ್ತಿರುವುದು. ಆದರೆ ನಾನು ಮಾತ್ರ ಈ ದೇವತೆಗಳಲ್ಲಿ ಯಾರಿಗೂ ಕಾಣಿಸುತ್ತಿಲ್ಲ.

136. ಕೊನೆಗೆ ಬೃಹಸ್ಪತಿಯಿಂದ ಪ್ರೇರಿತರಾಗಿ ಆ ಸ್ವರ್ಗಾಂತರಿಕ್ಷಭೂಮಿಗಳೆಂಬ ತ್ರಿಸ್ಥಾನಗಳಲ್ಲಿ ವಾಸಿಸುವ ದೇವತೆಗಳೆಲ್ಲ ಆ ತ್ರಿತನಿದ್ದೆಡೆಗೆ ಬಂದು ಅವನು ಯಜ್ಞಾರ್ಥವಾಗಿ ಅರ್ಪಿಸಿದ ಸೋಮರಸದ ಭಾಗವನ್ನು ಸ್ವೀಕರಿಸಿ ತೃಪ್ತರಾದರು.

137. ಬೃಹಸ್ಪತಿಯು ತ್ರಿತನ ಜ್ಞಾನವನ್ನೂ ವಿಜ್ಞಾನವನ್ನೂ ಚೆನ್ನಾಗಿ ತಿಳಿದು ಈ ಸೂಕ್ತದ(೧೦೫ನೇ ಸೂ) **ಅಸೌ ಯಃ** ಎಂದು ಮೊದಲಾಗುವ ಮೂರು ಋಕ್ಕುಗಳಿಂದ (೧೬-೧೮)ಅವನ ಶಕ್ತಿಸಾಮರ್ಥ್ಯವನ್ನು ಕೊಂಡಾಡಿದನು.

೧೧೨-೧೨೧ ಸೂಕ್ತಗಳ ದೇವತೆಗಳು.

138. **ಈಳೇ ದ್ಯಾವಾಪೃಥಿವೀ** ಎಂಬ ಸೂಕ್ತದಲ್ಲಿ (೧೧೨) ಮೊದಲನೆಯ ಪಾದದಲ್ಲಿ ದ್ಯಾವಾಪೃಥಿವಿಗಳ ಸ್ತೋತಿಯೂ ಮುಂದಿನ (ತೃನೇ) ಪಾದದಲ್ಲಿ ಅಗ್ನಿಯ ಸ್ತುತಿಯೂ ಇರುವುದು. ಅಲ್ಲಿಂದ ಮುಂದಕ್ಕೆ ಸೂಕ್ತ ಸಮಾಪ್ತಿಯವರೆಗೂ ಅಶ್ವಿನೀ ದೇವತೆಗಳ ಸ್ತುತಿ ಇರುವುದು. **ಇದಂ ಶ್ರೇಷ್ಠಂ** ಎಂಬ ೧೧೩ನೇ ಸೂಕ್ತದಲ್ಲಿ ರಾತ್ರಿ ಮತ್ತು ಉಷೋದೇವತೆಗಳ ಸ್ತುತಿ ಇರುವುದು.

---

135. 'My limbs were wounded by the bricks of the well. Having seen all (the gods) I praise (them), even though not one (of them) sees (me).

136. The three troops of the All-gods, urged on by Brhaspati, went to that sacrifice of Trita and took shares of it together.

28. Deities of RV. i. 112-121

137. As a seer Brhaspati declared the knowledge and discernment of Trita here displayed (ಏತತ್) with the last triplet (i. 105. 16-18) of the hymn (beginning 'That' (ಅಸೌ : i. 105. 16).

138. (The verse) 'I praise' (ಈಳೇ : i. 112. 1) is to Heaven and Earth, the next verse (1) is addressed to Agni; the remainder of the hymn (112. 1-25) should be (regarded as) addressed to the Asvins. 'This' (ಇದಂ : i. 113) is (in) praise of Night and Dawn.

ಇಮಾ ರೌದ್ರಂ ಪರಂ ಸೌರ್ಯಂ ಚಿತ್ರಂ ಪಂಚಾಶ್ವಿನಾನ್ಯತಃ ।
ನಾಸತ್ಯಾಭ್ಯಾಮಿತಿ ಕ್ವನ್ಯೇ ಅಂತ್ಯಾ ದುಃಸ್ವಪ್ನನಾಶಿನೀ ॥ ೧೩೯ ॥

ಐಂದ್ರಂ ಕದ್ವೈಶ್ವದೇವಂ ಚ ಪ್ರೌಷಸೇ ಪೃಥುರುತ್ತರೇ ।
ಋಷಿರ್ದಾನಂ ಚ ಭಾವ್ಯಸ್ಯ ಪ್ರಾತರಿತ್ಯತ್ರ ಶಂಸತಿ ॥ ೧೪೦ ॥

ಕಾಕ್ಷೀವತಂ ಕದಿತ್ಥೇತಿ ಯದೈಂದ್ರಮುಪದಿಶ್ಯತೇ ।
ಪರೋಕ್ಷಂ ವೈಶ್ವದೇವಂ ತತ್ಪ್ರದಿಷ್ಟಂ ಸ್ವರಸಾಮಸು ॥ ೧೪೧ ॥

139. **ಇಮಾ ರುದ್ರಾಯ** ಎಂಬ ೧೧೪ನೇ ಸೂಕ್ತವು ರುದ್ರದೇವತಾಕವು ; **ಚಿತ್ರಂ ದೇವಾನಾಂ** ಎಂಬ ೧೧೫ನೇ ಸೂಕ್ತದಲ್ಲಿ ಸೂರ್ಯನನ್ನು ಸ್ತುತಿಸಲಾಗಿದೆ. ಅಲ್ಲಿಂದ ಮುಂದಿನ **ನಾಸತ್ಯಾಭ್ಯಾಂ** ಎಂದು ಮೊದಲಾಗುವ ಐದು ಸೂಕ್ತಗಳಿಗೆ (೧೧೬-೧೨೦) ಅಶ್ವಿನೀದೇವತೆಗಳು ದೇವತೆಯು : ೧೨೦ನೇ ಸೂಕ್ತದ **ಅಧ ಸ್ವಪ್ನಸ್ಯ** ಎಂಬ ಕೊನೆಯ ಋಕ್ಕು (೧೨೦ನೇ ಋಕ್ಕು) ದುಃಸ್ವಪ್ನ (ಫಲ)ವನ್ನು ಪರಿಹಾರ ಮಾಡುವುದು.

140. **ಕದಿತ್ಥಾ** ಎಂಬ ೧೨೧ನೇ ಸೂಕ್ತಕ್ಕೆ ಇಂದ್ರನು, **ಪ್ರ ವಃ ಪಾಂತಂ** ಎಂಬ ೧೨೨ನೇ ಸೂಕ್ತಕ್ಕೆ ವಿಶ್ವೇದೇವತೆಗಳೂ, ಅದರ ಮುಂದಿನ ಎರಡು ಸೂಕ್ತಗಳಿಗೆ (೧೨೩ ಮತ್ತು ೧೨೪) ಉಷೋದೇವತೆಯೂ ದೇವತೆಗಳು. **ಪ್ರಾತಾ ರತ್ನಂ** ಎಂಬ ೧೨೫ನೇ ಸೂಕ್ತದಲ್ಲಿ ಋಷಿಯು ಭಾವಯವ್ಯ ಪುತ್ರನಾದ ಸ್ವನಯನೆಂಬುವನು ಮಾಡಿದ ದಾನವನ್ನು ಪ್ರಶಂಸೆ ಮಾಡಿರುವನು.

141. **ಕದಿತ್ಥಾ** ಎಂಬ ೧೨೧ನೇ ಸೂಕ್ತಕ್ಕೆ ಕಕ್ಷೀವಾನ್ ಎಂಬುವನು ಋಷಿಯು. ಈ ಸೂಕ್ತದಲ್ಲಿ ಪ್ರತ್ಯಕ್ಷವಾಗಿ ಇಂದ್ರನನ್ನು ಸ್ತುತಿಸಿದ್ದರೂ ಪರೋಕ್ಷವಾಗಿ ಈ ಸೂಕ್ತಕ್ಕೆ ವಿಶ್ವೇದೇವತೆಗಳೂ ದೇವತೆಯು ಎಂದು ಸ್ವರಸಾಮ ಮಂತ್ರಗಳಲ್ಲಿ ಉಕ್ತವಾಗಿದೆ.

---

139. 'These' (ಇಮಾಃ : i. 114) is addressed to Rudra; the next, 'The brilliant' (ಚಿತ್ರಂ: i. 115), is addressed to the Sun. Then (come) five (i. 116-120) addressed to the Asvins (beginning) 'For the Nasatyas' (ನಾಸತ್ಯಾಭ್ಯಾಂ; i. 116.1) the last (stanza) in the last (hymn ; 1. 120. 12) is destructive of evil dreams.

140 'When' ? (ಕದಿತ್ಥಾ : i. 121) is addressed to Indra, and 'Forth' (ಪ್ರ. i. 122) is addressed to the All gods. The two (123-124) next (beginning) 'Broad' (ಪೃಥುಃ : i. 123 1) are addressed to Dawn (ಔಷಸೇ). In 'At morn' (ಪ್ರಾತಃ : i. 125) the seer lauds the gift of Bhavayavya.

141. 'When, indeed ?' (ಕದಿತ್ಥಾ : 1. 121), a hymn of Kaksivat which is traditionally held to be addressed to Indra, is indicated as indirectly addressed (ಪರೋಕ್ಷ) to the All-gods in the Svarasamans.

ಅಧಿಗಮ್ಯ ಗುರೋರ್ವಿದ್ಯಾಂ ಗಚ್ಛನ್ನಿಲಯಂ ಕಿಲ ।
ಕಕ್ಷೀವಾನಧ್ವನಿ ಶ್ರಾಂತಃ ಸುಷ್ಠಾಪಾರಣ್ಯಗೋಚರಃ ॥ ೧೪೨ ॥

ತಂ ರಾಜಾ ಸ್ವನಯೋ ನಾಮ ಭಾವಯವ್ಯಸುತೋ ವ್ರಜನ್ ।
ಕ್ರೀಡಾರ್ಥಂ ಸಾನುಗೋಽಪಶ್ಯತ್ಸಭಾರ್ಯಃ ಸಪುರೋಹಿತಃ ॥ ೧೪೩ ॥

ಅಥೈನಂ ರೂಪಸಂಪನ್ನಂ ದೃಷ್ಟ್ವಾ ದೇವಸುತೋಪಮಂ ।
ಕನ್ಯಾದಾನೇ ಮತಿಂ ಚಕ್ರೇ ವರ್ಣಗೋತ್ರಾವಿರೋಧತಃ ॥ ೧೪೪ ॥

ಕಕ್ಷೀವಾನ್ ಮತ್ತು ಸ್ವನಯ ಎಂಬುವರ ವೃತ್ತಾಂತವು.

142. ಕಕ್ಷೀವಾನ್ ಎಂಬ ಋಷಿಯು ಯುವಕನಾಗಿದ್ದಾಗ ತನ್ನ ಗುರುವಿನ ಹತ್ತಿರ ವಿದ್ಯಾಭ್ಯಾಸವನ್ನು ಮಾಡಿ ಮುಗಿಸಿ ಅಲ್ಲಿಂದ ತನ್ನ ಮನೆಗೆ ಹೊರಟು ಬರುವಾಗ ಮಾರ್ಗಾಯಾಸದಿಂದ ಬಳಲಿ ದಾರಿಯಲ್ಲಿ ಸಿಕ್ಕಿದ ಒಂದು ಅರಣ್ಯ ಮಧ್ಯದಲ್ಲಿ ವಿಶ್ರಾಂತಿಗಾಗಿ ಮಲಗಿ ನಿದ್ರೆಮಾಡುತ್ತಿದ್ದನು.

143. ಆ ಸಮಯದಲ್ಲಿ ತನ್ನ ಪತ್ನಿಯಿಂದಲೂ ಪುರೋಹಿತನಿಂದಲೂ ಮತ್ತು ಅನುಚರರಿಂದಲೂ ಸಹಿತನಾದ ಭಾವಯವ್ಯ ಪುತ್ರನಾದ ಸ್ವನಯನೆಂಬ ರಾಜನು ಬೇಟೆಯಾಡುವುದಕ್ಕಾಗಿ ಆ ಅರಣ್ಯದಲ್ಲಿ ಸುತ್ತುತ್ತಿರುವಾಗ ಅಲ್ಲಿ ನಿದ್ರಿಸುತ್ತಿದ್ದ ಈ ಕಕ್ಷೀವಾನ್ ಎಂಬ ಋಷಿಪುತ್ರನನ್ನು ನೋಡಿದನು.

144. ಆಗ ಆ ಸ್ವನಯರಾಜನು, ಅಲ್ಲಿ ನಿದ್ರಿಸುತ್ತಿದ್ದ ರೂಪಯೌವನಸಂಪನ್ನನೂ ದೇವಕುಮಾರನಂತೆ ಸರ್ವಲಕ್ಷಣಶೋಭಿತನೂ ಆದ ಈ ಋಷಿಪುತ್ರನನ್ನು ಕಂಡು ಅವನ ರೂಪಕ್ಕೆ ಬೆರಗಾಗಿ ಈ ಋಷಿಪುತ್ರನ ಜಾತಿ, ಗೋತ್ರ ಮುಂತಾದವುಗಳು ಅನುಕೂಲವಾಗಿದ್ದಲ್ಲಿ ತನ್ನ ಪುತ್ರಿಯನ್ನು ಇವನಿಗೆ ಕೊಡಬೇಕೆಂದು ಅಪೇಕ್ಷಿಸಿದನು.

29. Story of Kakṣivat and Svanaya.

142. Having acquired knowledge from the spiritual teacher (and) going home, as we are told (ಕಿಲ), Kakṣivat fatigued on the way fell asleep within the forest.

143. Him a king, Svanaya by name, the son of Bhavayavya, saw as he went along to amuse himself, accompanied by his retinue, his wife. and his domestic priest.

144. Then on seeing him endowed with beauty (and) resembling the son of god, he thought of bestowing his daughter (on him), if there were no ohjection on the score of caste and family,

ಸಂಬೋಧ್ಯೈನಂ ಸ ಪಪ್ರಚ್ಛ ವರ್ಣಗೋತ್ರಾದಿಕಂ ತತಃ ।
ರಾಜನ್ನಾಂಗಿರಸೋಽಸ್ಮೀತಿ ಕುಮಾರಃ ಪ್ರತ್ಯುವಾಚ ತಂ ॥ ೧೪೫ ॥

ಪುತ್ರೋಽಹಂ ದೀರ್ಘತಮಸ ಔಚಥ್ಯಸ್ಯ ಋಷೇರ್ನೃಪ ।
ಅಥಾಸ್ಮೈ ಸ ದದೌ ಕನ್ಯಾ ದಶಾಭರಣಭೂಷಿತಾಃ ॥ ೧೪೬ ॥

ತಾವತಶ್ಚ ರಥಾಞ್ಶ್ಯಾವಾನ್ವೀಡ್ವಂಗಾನ್ಸೈ ಚತುರ್ಯುಜಃ ।
ವಧೂನಾಂ ವಾಹನಾರ್ಥಾಯ ಧನಕುಪ್ಯಮಜಾವಿಕಂ ॥ ೧೪೭ ॥

ನಿಷ್ಕಾಣಾಂ ವೃಷಭಾಣಾಂ ಚ ಶತಂ ಶತಮದಾತ್ಪುನಃ ।
ಏತದುತ್ತರಸೂಕ್ತೇನ ಶತಮಿತ್ಯಾದಿನೋದಿತಂ ॥ ೧೪೮ ॥

145. ಬಳಿಕ ಆ ರಾಜನು ಆ ಋಷಿಕುಮಾರನನ್ನು ನಿದ್ರೆಯಿಂದ ಎಬ್ಬಿಸಿ ಅವನ ಕುಲಗೋತ್ರ ಮುಂತಾದ ವಿವರಗಳನ್ನು ಕೇಳಿದನು. ಅದಕ್ಕೆ ಆ ಋಷಿಕುಮಾರನು ಇಂತೆಂದನು—ಎಲೈ ರಾಜನೇ, ನಾನು ಆಂಗಿರಸ ಗೋತ್ರದವನು,

146. ಔಚಥ್ಯಪುತ್ರನಾದ ದೀರ್ಘತಮಸ್ಸೆಂಬ ಋಷಿಯ ಪುತ್ರನು ಎಂದು ಹೇಳಲಾಗಿ ಅದನ್ನು ಕೇಳಿ ಸಂತೋಷಪಟ್ಟು ಸರ್ವಾಭರಣಭೂಷಿತೆಯರಾದ ತನ್ನ ಹತ್ತು ಮಂದಿ ಪುತ್ರಿಯರನ್ನ ಅವನಿಗೆ ವಿವಾಹಮಾಡಿಕೊಟ್ಟನು

147. ಮತ್ತು ವಿವಾಹಕಾಲದಲ್ಲಿ ತನ್ನ ಪುತ್ರಿಯರನ್ನು ಕಳುಹಿಸುವುದಕ್ಕಾಗಿ ಆ ಋಷಿಪುತ್ರನಿಗೆ ಹತ್ತು ರಥಗಳನ್ನೂ, ಒಂದೊಂದು ರಥಕ್ಕೆ ನಾಲ್ಕರಂತೆ ಕೆಂಪುವರ್ಣದ ಧಷ್ಟಪುಷ್ಟವಾದ ಕುದುರೆಗಳನ್ನೂ, ಧನಾದಿದ್ರವ್ಯವನ್ನೂ, ಪಾತ್ರೆಪದಾರ್ಥಗಳನ್ನೂ, ಆಡು, ಕುರಿಗಳನ್ನೂ ಬಳುವಳಿಯಾಗಿ ಕೊಟ್ಟನು.

148. ಇದಲ್ಲದೆ ನೂರು ಚಿನ್ನದ ನಿಷ್ಕುಗಳನ್ನು (ಅಥವಾ ಆಭರಣಗಳನ್ನೂ) ನೂರು ಹೋರಿ (ಎತ್ತು) ಗಳನ್ನು ಅವನಿಗೆ ಕೊಟ್ಟನು. ಈ ವಿಷಯವನ್ನೇ ಮುಂದಿನ ಸೂಕ್ತದ (೧೨೬ನೇ ಸೂಕ್ತದ) **ಶತಂ ರಾಜ್ಞೋ ನಾಧಮಾನಸ್ಯ ನಿಷ್ಕಾನ್** (೨ನೇ ಋಕ್ಕು) ಎಂದು ಮೊದಲಾದ ಋಕ್ಕುಗಳಲ್ಲಿ ವರ್ಣಿಸಲಾಗಿದೆ.

145. Then after wakening him he inquired as to his caste, family, and so forth. The youth replied to him saying, 'O king, I am of the race of Angirasas;

146. 'I am a son of the seer Drighatamas, son of Uchathya, O king.' Thereupon he (ಸ್ವನಯ) gave him ten maidens decked with ornaments.

30. Story of Kaksivat and Svanaya (continued)

147. and the same number of chariots, strong-bodied bay steeds going in teams of four, for the purpose of conveying the maidens, money and (utensils of) inferior metal, goats and sheep.

148. Further he gave (him) a hundred necklets and a hundred bulls. This is told in the next hymn with (the stanza) 'A hundred' (ಶತಂ. 1-126-2) and so forth.

ಶತಮಶ್ವಾನ್ಬಿಭೃತಂ ನಿಷ್ಕಾನ್ರಥಾನ್ದಶ ವಧೂಮತಃ ।
ಚತುರ್ಯುಜೋ ಗವಾಂ ಚೈವ ಸಹಸ್ರಂ ಷಷ್ಟ್ಯುಪಾಧಿಕಂ ॥ ೧೪೯ ॥
ಸ್ವನಯೋದ್ಭಾವಯವ್ಯಾದ್ಯಃ ಕಕ್ಷೀವಾನ್ಪ್ರತ್ಯಪದ್ಯತ ।
ಪ್ರತಿಗೃಹ್ಯ ಚ ತುಷ್ಟಾವ ಪ್ರಾತಃ ಪಿತ್ರೇ ಶಶಂಸ ಚ ॥ ೧೫೦ ॥
ಫಲಪ್ರದರ್ಶನಂ ತಸ್ಯ ಕ್ರಿಯತೇ ಪ್ರಾಯಶಸ್ತ್ವಿಹ ।
ದ್ವಿತೀಯಾಂ ತು ಪಿತಾಪಶ್ಯತ್ಸುಗುರಿತ್ಯಾದಿಕಾಮ್ಯಚಂ ॥ ೧೫೧ ॥
ಕಾಕ್ಷೀವತಂ ಸರ್ವಮಿತಿ ಭಗವಾನಾಹ ಶೌನಕಃ ।
ಏಷಾ ತು ದೈರ್ಘತಮಸೀ ಸಾನುಲಿಂಗಾ ಕಥಂ ಭವೇತ್ ॥ ೧೫೨ ॥

149. ಮತ್ತು ನೂರು ಕುದುರೆಗಳನ್ನೂ, ನೂರು ಚಿನ್ನದ ನಿಷ್ಕ ಅಥವಾ ಆಭರಣಗಳನ್ನೂ, ಹತ್ತು ರಥಗಳನ್ನೂ ಆ ರಥಗಳಿಗೆ ಒಂದೊಂದಕ್ಕೆ ನಾಲ್ಕರಂತೆ ಕುದುರೆಗಳನ್ನೂ ಅರವತ್ತು ಸಾವಿರ ಗೋವುಗಳನ್ನೂ,

150. ಭಾವಯವ್ಯನ ಪುತ್ರನಾದ ಸ್ವನಯರಾಜನಿಂದ ಈ ಕಕ್ಷೀವಾನ್ ಋಷಿಕುಮಾರನು ಪಡೆದನು. ಬಳುವಳಿಯಾಗಿ ಕೊಟ್ಟ ಈ ವಸ್ತುಗಳಿಂದ ಸಂತುಷ್ಟನಾದ ಋಷಿಕುಮಾರನು ಅವುಗಳನ್ನು ಸ್ವೀಕರಿಸಿ ಆ ವಿಷಯವನ್ನು ಮಾರನೆಯ ದಿವಸ ಪ್ರಾತಃಕಾಲದಲ್ಲಿ ತನ್ನ ತಂದೆಗೆ ವಿಶದವಾಗಿ ತಿಳಿಸಿದನು.

ರಾಜರ ದಾನಪ್ರಶಂಸೆ, ನಾರಾಶಂಸೀ ಮಂತ್ರಗಳು ಮತ್ತು ೧೨೬ನೇ ಸೂಕ್ತದ ೬,೭ನೇ ಮಂತ್ರಗಳ ವಿಷಯದಲ್ಲಿ ಕೆಲವು ಅಭಿಪ್ರಾಯಗಳು.

151. ಈಗ ಈ ೧೨೫ನೇ ಸೂಕ್ತದಲ್ಲಿ ಮೇಲೆ ಹೇಳಿದ ವಿವಿಧ ವಸ್ತುಗಳ ದಾನ ಪ್ರಶಂಸೆಯು ಉಕ್ತವಾಗಿರುವುದು. ಈ ಸೂಕ್ತದ **ಸುಗುರಸತ್** ಎಂಬ ೨ನೇ ಋಕ್ಕಿಗೆ ಈ ಕಕ್ಷೀವಂತನ ತಂದೆಯಾದ **ದೀರ್ಘತಮಾಃ** ಎಂಬುವನು ದ್ರಷ್ಟೃವು.

152. ಆದರೆ ಈ ಸೂಕ್ತವೆಲ್ಲಕ್ಕೂ ಕಕ್ಷೀವಂತನೇ ದ್ರಷ್ಟೃವೆಂದು (ಋಷಿಯೆಂದು) ಪೂಜ್ಯರಾದ ಶೌನಕರು ಅಭಿಪ್ರಾಯಪಡುವರು. ಹೀಗಿರುವಾಗ ಮಧ್ಯದಲ್ಲಿರುವ ಈ ೨ನೆ, ಋಕ್ಕು ಮಾತ್ರ (ಅದರಲ್ಲಿರುವ ವಿಷಯಗಳನ್ನು ಪರಿಶೀಲಿಸಿದರೆ) ದೀರ್ಘತಮಸ್ಸಿಂಬ (ಕಕ್ಷೀವಂತನ ತಂದೆ) ಋಷಿದೃಷ್ಟವಾಗುವುದು ಹೇಗೆ ಸಾಧ್ಯ ?

149. A hundred horses, a hundred necklettes, ten chariots with maidens, (steeds) going in teams of four, and a thousand and sixty cows.

150. Kaksivat, who obtained (all this) from Svanaya Bhavayavya, both praised (him) after receiving (it) and recited (the hymn) 'At morn' (ಪ್ರಾತಃ i. 125) to his father.

31. Gifts of kings; Narasamsi stanzas; Opinions regarding i. 126—6, 7.

151. Now here (in 125) the rewards of (liberality) are for the most part set forth to him. The father, however saw the second (stanza), which begins 'possessed of many cows (ಸುಗುಃ : 125. 2).

152. The revered Saunaka says that the whole (hymn) is Kaksivat's But as to this (stanza), how could it, according to the indications (it contains) have been seen by Dirghatamas?

ಉಚ್ಯತೇ ಪ್ರಾತರಿತ್ಯುಕ್ತೇ ಸೂನೋರ್ದಾನೇನ ಹರ್ಷಿತಃ ।
ರಾಜ್ಞಶ್ಚಾಶಿಷಮಾಹಾಥ ಸುಗುರಿತ್ಯಾದಿನಾ ಕಿಲ ॥ ೧೫೩ ॥

ಕರ್ಮಾಣಿ ಯಾಭಿಃ ಕಥಿತಾನಿ ರಾಜ್ಞಾಂ ದಾನಾನಿ ಚೋಚ್ಚಾವಚಮಧ್ಯಮಾನಿ ।
ನಾರಾಶಂಸೀರಿತ್ಯೃಚಸ್ತಾಃ ಪ್ರತೀಯಾದ್ಯಾಭಿಃ ಸ್ತುತಿರ್ದಾಶತಯೀಷು ರಾಜ್ಞಾಂ ॥ ೧೫೪ ॥

ಪಂಚಾಮಂದಾನ್ಭಾವಯವ್ಯಸ್ಯ ಗೀತಾ ಜಾಯಾಪತ್ಯೋಃ ಸಂಪ್ರವಾದೋ ದ್ವ್ಯೃಚೇನ ।
ಸಂಪ್ರವಾದಂ ರೋಮಶಯೇಂದ್ರರಾಜ್ಞೋರೇತೇ ಋಚೌ ಮನ್ಯತೇ ಶಾಕಪೂಣಿಃ ॥೧೫೫॥

153. ಅದಕ್ಕೆ ಸಮಾಧಾನವೇನೆಂದರೆ-ಕಕ್ಷೀವಂತನು ತನ್ನ ತಂದೆಗೆ **ಪ್ರಾತಾ ರತ್ನಂ** (೧೨೫ನೇ ಸೂಕ್ತ) ಎಂಬ ಸೂಕ್ತದಂತೆ ರಾಜನ ದಾನವನ್ನು ಪ್ರಶಂಸಿಸಿ ಹೇಳಿದಾಗ ಅದನ್ನು ಕೇಳಿ ಹರ್ಷಗೊಂಡ ಅವನ ತಂದೆಯಾದ ದೀರ್ಘತಮಸ್ಸು **ಸುಗುಃ** ಎಂದು ಮೊದಲಾಗುವ ಮಂತ್ರಗಳಿಂದ ತನ್ನ ಪುತ್ರನಿಗೆ ದಾನವನ್ನು ಕೊಟ್ಟ ಸ್ವನಯರಾಜನ ವಿಷಯದಲ್ಲಿ ಆಶೀರ್ವಾದವನ್ನು ಪಠಿಸಿ ಅವನಿಗೆ ಒಳ್ಳೆಯದಾಗಲೆಂದು ಹಾರೈಸಿರುವನು ಎಂದು ಹೇಳುವುದು ಸಮಂಜಸವಷ್ಟೆ,

154. ರಾಜರ ದಾನಪ್ರಶಂಸೆ ಇರುವ ಮಂತ್ರಗಳು ಅವು ದೊಡ್ಡವಾಗಿರಲಿ, ಸಣ್ಣವಾಗಿರಲಿ ಅಥವಾ ಮಧ್ಯಸ್ಥವಾಗಿರಲಿ ಋಗ್ವೇದದ ಹತ್ತು ಮಂಡಲಗಳಲ್ಲಿ ಎಲ್ಲಲ್ಲಿ ಇರುವ ಅಂತಹ ಮಂತ್ರಗಳಿಗೆ **ನಾರಾಶಂಸೀ** ಮಂತ್ರಗಳೆಂದು ಕರೆಯುವ ರೂಢಿ ಇರುವುದು.

155 **ಅಮಂದಾನ್** ಎಂಬ ೧೨೬ನೇ ಸೂಕ್ತದ ಮೊದಲ ಐದು ಋಕ್ಕುಗಳಲ್ಲಿ ಭಾವಯವ್ಯ (ಸ್ವನಯ) ಎಂಬ ರಾಜನ ಪ್ರಶಂಸೆ ಇರುವುದು. ಪತ್ನಿ ೬-೭ನೇ ಋಕ್ಕುಗಳಲ್ಲಿ ದಂಪತಿಗಳಾದ ಸ್ವನಯನಿಗೂ ಅವನ ಪತ್ನಿಯಾದ **ರೋಮಶಾ** ಎಂಬ ಸ್ತ್ರೀಗೂ ನಡೆದ ಸಂಭಾಷಣೆ ಇರುವುದು. ಆದರೆ ಈ ಎರಡು ಋಕ್ಕುಗಳಲ್ಲಿರುವ ಸಂಭಾಷಣೆಯು **ರೋಮಶಾ** ಎಂಬ ಸ್ತ್ರೀಗೂ, ರಾಜನಿಗೂ ಇಂದ್ರನಿಗೂ ನಡೆದದ್ದು ಎಂದು **ಶಾಕಪೂಣಿ** ಎಂಬ ಆಚಾರ್ಯರ ಅಭಿಪ್ರಾಯವಿರುವುದು

153. The answer is, that when 'At morn' (ಪ್ರಾತಃ : 1. 125 1) had been uttered (by Kaksivat), he (Dirghatamas) was delighted by the gift to his son, and then uttered a prayer for the king with (the stanza) 'possessed of many cows' (ಸುಗುಃ : 1. 125 2).

154. The stanzas in which the deeds of kings and their gifts, great, small, and middling, are told, should be understood to be called 'Laudations of Men' (ನಾರಾಶಂಸಿ), as the praise of kings (is expressed) by them in the ten books (of the Rg-Veda).

155. The five (stanzas) 'Lively' (ಅಮಂದಾನ್ : i. 126. 1-5) are a song (in praise) of Bhavayavya. With a couplet (6, 7) there is a conversation of a husband and wife. Sakapuni thinks these two stanzas are a conversation of Indra and the king with Romasa.

ಇಂದ್ರೇಣ ಜಾಯಾಪತ್ಯೋೞ್ಚೇತಿಹಾಸಂ ದ್ವ್ಯೃಚೇऽಸ್ಮಿನ್ನನ್ಯತೇ ಶಾಕಟಾಯನಃ ।
ಪ್ರಾದಾತ್ಸುಕಾಂ ರೋಮಶಾಂ ನಾಮ ನಾಮ್ನಾ ಬೃಹಸ್ಪತಿರ್ಭಾವಯವ್ಯಾಯ ರಾಜ್ಞೇ ॥೧೫೬॥
ಬೃಹಸ್ಪತಿರ್ಭಾವಯವ್ಯಾಯ ರಾಜ್ಞೇ ॥

॥ ಇತಿ ಬೃಹದ್ದೇವತಾಯಾಂ ತೃತೀಯೋऽಧ್ಯಾಯಃ ಸಮಾಪ್ತಃ ॥

156. ಈ ಎರಡು ಋಕ್ಕುಗಳ ವಿಷಯದಲ್ಲಿ ಶಾಕಟಾಯನರೆಂಬ ಆಚಾರ್ಯರ ಅಭಿಪ್ರಾಯವು ಬೇರೆ ರೀತಿಯಲ್ಲಿರುವುದು—ಇಂದ್ರನಿಗೆ ಸಂಬಂಧಿಸಿದಂತೆ ದಂಪತಿಗಳ (ಗಂಡಹೆಂಡಿರ) ಇತಿಹಾಸವು ಈ ಋಕ್ಕುಗಳಲ್ಲಿ ಉಕ್ತವಾಗಿರುವುದು. ಬೃಹಸ್ಪತಿಯು ತನ್ನ ಪುತ್ರಿಯಾದ **ರೋಮಶಾ** ಎಂಬ ಸ್ತ್ರೀಯನ್ನು **ಭಾವಯವ್ಯ** ಎಂಬ ರಾಜನಿಗೆ ಮದುವೆ ಮಾಡಿಕೊಟ್ಟನು ಎಂದು ಈ ಇತಿಹಾಸದ ಸಾರಾಂಶವು.

ಇಲ್ಲಿಗೆ ಶೌನಕಮಹರ್ಷಿಪ್ರೋಕ್ತವಾದ ಬೃಹದ್ದೇವತಾ ಎಂಬ ಗ್ರಂಥದಲ್ಲಿ ಮೂರನೆಯ ಅಧ್ಯಾಯವು ಸಮಾಪ್ತವಾದುದು.

156. Sakatayana thinks that in this couplet there is a story of a husband and wife (in connexion) with Indra. Brhaspati gave his daughter Romasa by name, to king Bhavayavya.

Thus ends the Third Chapter.

ಅಥ ಬೃಹದ್ದೇವತಾಯಾಂ ಚತುರ್ಥೋಽಧ್ಯಾಯಃ

ತತಸ್ತಮರ್ಥಂ ಹರಿವಾನ್ವಿದಿತ್ವಾ ಪ್ರಿಯಂ ಸಖಾಯಂ ಸ್ವನಯಂ ದಿದೃಕ್ಷುಃ ।
ಅಭ್ಯಾಜಗಾಮಾಶು ಶಚೀಸಹಾಯಃ ಪ್ರೀತ್ಯಾರ್ಚಯತ್ತಂ ವಿಧಿನೈವ ರಾಜಾ ॥ ೧ ॥

ಅಭ್ಯಾಜಗಾಮಾಂಗಿರಸೀ ಚ ತತ್ರ ಹೃಷ್ಟಾ ತಯೋಃ ಸಾ ಚರಣೌ ವವಂದೇ ।
ಇಂದ್ರಃ ಸಖಿತ್ವಾದಥ ತಾಮುವಾಚ ರೋಮಾಣಿ ತೇ ಸಂತಿ ನ ಸಂತಿ ರಾಜ್ಞಿ ॥ ೨ ॥

ನಾಲ್ಕನೆಯ ಅಧ್ಯಾಯವು.

ರೋಮಶಾ ಮತ್ತು ಇಂದ್ರ ಇವರ ವೃತ್ತಾಂತ—೧೨೭-೧೩೬ ನೇ ಸೂಕ್ತಗಳು

1. ಅನಂತರ ಸ್ವನಯರಾಜನು ತನ್ನ ಪುತ್ರಿಯರನ್ನು ಕಕ್ಷೀವಂತನಿಗೆ ವಿವಾಹಮಾಡಿಕೊಟ್ಟ ವಿಚಾರವನ್ನು ತಿಳಿದು ಇಂದ್ರನು ತನ್ನ ಪ್ರಿಯಮಿತ್ರನಾದ ಸ್ವನಯರಾಜನನ್ನು ನೋಡಬೇಕೆಂಬ ಅಪೇಕ್ಷೆಯಿಂದ ತನ್ನ ಪತ್ನಿಯಾದ ಶಚೀದೇವಿಯೊಡಗೂಡಿ ಸ್ವನಯನ ಸಮೀಪಕ್ಕೆ ಬೇಗನೆ ಬಂದನು. ಇಂದ್ರನು ತನ್ನ ಮನೆಗೆ ಬಂದುದನ್ನು ಕಂಡು ಸ್ವನಯರಾಜನು ಅವನನ್ನು ಪ್ರೀತ್ಯಾದರಗಳಿಂದ ಸತ್ಕರಿಸಿ ಪೂಜಿಸಿದನು.

2. ಆಗ ಆಂಗಿರಸಗೋತ್ರದಲ್ಲಿ ಉತ್ಪನ್ನಳಾದ ಎಂದರೆ ಬೃಹಸ್ಪತಿಯ ಪುತ್ರಿಯು ಅಲ್ಲಿಗೆ ಬಂದು ಸಂತೋಷಭರಿತಳಾಗಿ ಇಂದ್ರನ ಮತ್ತು ಶಚೀದೇವಿಯರ ಪಾದಗಳನ್ನು ಮುಟ್ಟಿ ನಮಸ್ಕರಿಸಿದಳು. ಬಳಿಕ ಇಂದ್ರನು ಸ್ನೇಹಭಾವದಿಂದ ಆ ಪುತ್ರಿಯನ್ನು ಕುರಿತು—ಎಲೈ ರಾಜಪುತ್ರಿಯೇ, ನಿನಗೆ ರೋಮಗಳು ಇವೆಯೇ ಅಥವಾ ಇಲ್ಲವೇ ಎಂದು ಕೇಳಿದನು (ಎಂದರೆ ಯೌವನಸೂಚಕವಾದ ರೋಮಗಳು ಮರ್ಮಾಂಗಗಳಲ್ಲಿ ಬೆಳದಿವೆಯೇ ಅಥವಾ ಇಲ್ಲವೇ ಎಂದರೆ, ನೀನು ಸಂಭೋಗಾರ್ಹಳಾದ ಯುವತಿಯೇ ಅಥವಾ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಕುಮಾರಿಯೇ ಎಂದು ಕೇಳಿದನು ಎಂದಭಿಪ್ರಾಯವು).

Chapter 4.

1. Romasa and Indra. RV. i. 127-136 Praise in the dual.

1. Then the Lord of Bays, the Companion of Sachi (Indra) becoming aware of that affair, (and) desirous of seeing his dear friend Swanaya, quickly went to him. The king joyfully honoured him with due ceremony.

2 And the daughter of the Angiras (Brhaspati) came there; rejoicing she adored their feet. Indra then in a friendly way said to her' 'Have you hair or have you not, O Queen?'.

ಸಾ ಬಾಲಭಾವಾದಥ ತಂ ಜಗಾದ ಉಪೋಪ ಮೇ ಶಕ್ರ ಪರಾಮೃಶೇತಿ ।
ತಾಂ ಪೂರ್ವಯಾ ಸ್ಯಾಂತ್ಪ್ರ ಯ ನೃಪಃ ಪ್ರಹೃಷ್ಯೋ ಅನ್ವವ್ರಜತ್ಸಾಥ ಪತಿಂ ಪತಿವ್ರತಾ ॥ ೩ ॥
ಅಥಾಗ್ನೇಯೀ ಅಗ್ನಿಮಿತ್ಯುತ್ತರೇ ಯಂ ಪಂಚೈಂದ್ರಾಣಿ ಪ್ರ ತದೈನ್ದವ್ಯಗತ್ರ ।
ಯುವಂ ತಮಿಂದ್ರಾಪರ್ವತೌ ಸಹ ಸ್ತುತೌ ತ್ವಿಂದ್ರಂ ಮೇನ ಇಹ ಯಾಸ್ಕಃ ಪ್ರಧಾನಂ ।೪॥
ಋಕ್ಷು ಸ್ತುತಃ ಪರ್ವತವದ್ಧಿ ವಜ್ರೋ ದ್ವಿವತ್ಸ್ತೌ ಚೇಂದ್ರಮಾಹುಃ ಪ್ರಧಾನಂ ।

3. ಆ ಯುವತಿಯು ಇಂದ್ರನ ಪ್ರಶ್ನೆಗೆ ಉತ್ತರಕೊಡುತ್ತಾ ತನ್ನ ಬಾಲಭಾವಕ್ಕೆ ಸಹಜವಾದ ಮೃದುನುಡಿಯಿಂದ ಎಲೈ ಇಂದ್ರನೇ, ನನ್ನ ಸನಿಹಕ್ಕೆ ಬಂದು ನನ್ನನ್ನು ಮುಟ್ಟಿನೋಡು ಎಂದು ಹೇಳಿದಳು (೧೩೬ ನೇ ಸೂಕ್ತದ **ಉಪೋಪ ಮೇ** ಎಂಬ ೭ ನೇ ಋಕ್ಕು). ಅವಳ ಮಾತನ್ನು ಕೇಳಿ ರಾಜನು ಅವಳನ್ನು ಹಿಂದಿನ ಋಕ್ಕಿನಿಂದ (**ಅಗಧಿತಾ** ಎಂಬ ೬ ನೇ ಋಕ್ಕು) ಸಮಾಧಾನಮಾಡಿ ಹರ್ಷದಿಂದಿದ್ದನು. ಅನಂತರ ಆ ರಾಜಪುತ್ರಿಯು ತನ್ನ ಪತಿಯನ್ನು ಸಾಧ್ವಿಯಾದ ಪತಿವ್ರತೆಯಂತೆ ಅನುಸರಿಸಿ ಹೋದಳು.

4. ಅನಂತರ ಮುಂದಿನ ಎರಡು ಸೂಕ್ತಗಳಿಗೆ (**ಅಗ್ನಿಂ ಹೋತಾರಂ** ಎಂದು ಮೊದಲಾಗುವ ೧೨೭, ೧೨೮ ನೇ ಸೂಕ್ತಗಳಿಗೆ) ಅಗ್ನಿಯು ದೇವತೆಯು; ಅಲ್ಲಿಂದ ಮುಂದಿನ **ಯಂ ತ್ವಂ** ಎಂದು ಮೊದಲಾಗುವ ಐದು ಸೂಕ್ತಗಳಿಗೆ (೧೨೯-೧೩೩) ಇಂದ್ರನು ದೇವತೆಯು; ಆದರೆ ೧೨೯ ನೇ ಸೂಕ್ತದ **ಪ್ರ ತದ್ವೋಚೇ** ಎಂಬ ೬ ನೇ ಋಕ್ಕಿನಲ್ಲಿ ಇಂದುವು ಸ್ತುತಿಸಲ್ಪಟ್ಟಿರುವನು. ಮತ್ತು ೧೩೨ ನೇ ಸೂಕ್ತದ **ಯುವಂ ತಮಿಂದ್ರಾಪರ್ವತಾ** ಎಂಬ ೬ ನೇ ಋಕ್ಕಿನಲ್ಲಿ ಇಂದ್ರ ಮತ್ತು ಪರ್ವತರಿಬ್ಬರ ಸ್ತುತಿಯೂ ಇರುವುದು. ಆದರೂ ಈ ಋಕ್ಕುಗಳಲ್ಲಿ ಇಂದ್ರನಿಗೆ ಪ್ರಾಧಾನ್ಯವಿರುವುದೆಂದು ಯಾಸ್ಕರು ಭಾವಿಸುವರು.

5. ಏಕೆಂದರೆ, ಕೆಲವು ಋಕ್ಕುಗಳಲ್ಲಿ ಇಂದ್ರನ ವಜ್ರಾಯುಧವು ಪರ್ವತದಂತೆ ಎಂದರೆ ಪರ್ವತಶಬ್ದದಿಂದ ವರ್ಣಿಸಲಾಗಿರುವುದು. ಆದ್ದರಿಂದ ಇಂದ್ರ ಮತ್ತು ಅವನ ವಜ್ರಾಯುಧವನ್ನು ಸ್ತುತಿಸುವಾಗ ದ್ವಿವಚನಪ್ರಯೋಗವಿರುವುದು ಸಹಜವು. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಇಂದ್ರನಿಗೆ ಪ್ರಾಧಾನ್ಯತೆ ಇರುವುದೆಂದು ಕೆಲವರು ಹೇಳುವರು. ಮುಂದಿನ **ಆ ತ್ವಾ** ಎಂಬ ೧೩೪ ನೇ ಸೂಕ್ತದಲ್ಲಿರುವ ೬ ಋಕ್ಕುಗಳಿಗೂ ಮುಂದಿನ **ಸ್ತೀರ್ಣಂ ಬರ್ಹಿಃ** ಎಂಬ ೧೩೫ ನೇ

---

3. She in a childlike way then addressed him 'Feel me closely (ಉಪೋಪನೋ : i. 126. 7), Mighty one'. The king having soothed her with the previous (stanza : i. 126. 6), rejoiced. She then followed her husband as a devoted wife.

4. Next follow, two hymns (127, 128) addressed to Agni beginning) 'Agni' (ಅಗ್ನಿಂ : i. 127). There are (then) five (129-133) addressed to Indra (beginning), 'Which' (ಯಂ : i. 129) Here the stanza (Forth this' (ಪ್ರತತ್ ; i. 129. 6) is addressed to Indu, while Indra-Parvata are praised together (in) 'Ye him' (ಯುಂ ತಂ : i. 132. 6). Yaska here considered Indra to be predominant.

5. For in (certain) stanzas (Indra's) bolt is praised as Parvata, and when there is praise (of the two) in the dual (ದ್ವಿವತ್ಸ್ತೌ) they say that Indra is predominant, (Beginning with 'Hither you (ಆ ತ್ವಾ : i. 134. 1)

ಆ ತ್ವಾ ವಾಯೋರ್ನವ ಪಂಚೇಂದ್ರವಾಯ್ವೋರೇಕಾ ವಾಯೋರುತ್ತರಂ ದ್ವಿಪ್ರಧಾನಂ ॥೫॥
ತತ್ರ ಪಂಚ ವರುಣಮಿತ್ರದೇವಾ ದಿವಾದಿಭ್ಯಃ ಕಥಿತಾಭ್ಯಃ ಪರೇ ದ್ವೇ ।
ದ್ವೇ ದ್ವೇ ಪದೇ ಸಂಸ್ತುತೇ ರೋದಸೀ ಚ ದೇವಾಶ್ಚಾರ್ಧರ್ಚೇನ ವಿಭಕ್ತಮನ್ಯತ್ ॥ ೬ ॥
ಪ್ರೈತ್ವಾವರುಣಂ ಸುಷುಮೇತಿ ಸೂಕ್ತಂ ಪ್ರಪ್ರ ಪೌಷ್ಣಂ ವೈಶ್ವದೇವಂ ತೃತೀಯಂ ।
ಅಸ್ತು ಶ್ರೌಷಟ್ ವೈಶ್ವದೇವಂ ತೃತೀಯಂ ವೈಶ್ವದೇವಂ ಸ್ಯಾದ್ಬಹುದೇವತೇಷು ॥ ೭ ॥

ಸೂಕ್ತದಲ್ಲಿ ಮೊದಲ ಮೂರು ಋಕ್ಕುಗಳಿಗೂ (೧–೩) ಒಟ್ಟು ೯ ಋಕ್ಕುಗಳಿಗೆ ವಾಯುವು ದೇವತೆಯು; ಮುಂದಿನ ೫ ಋಕ್ಕುಗಳಿಗೆ (೧೩೫ರಲ್ಲಿ ೪-೮ ಋಕ್ಕುಗಳಿಗೆ) ಇಂದ್ರವಾಯುಗಳೂ, ಅದರ ಮುಂದಿನ ಒಂದು ಋಕ್ಕಿಗೆ (೯ನೇ ಋಕ್ಕಿಗೆ) ವಾಯುವೂ ದೇವತೆಯು; ಮುಂದಿನ **ಪ್ರ ಸು** ಎಂಬ ೧೩೬ನೇ ಸೂಕ್ತಕ್ಕೆ ಮುಖ್ಯರಾದ (ಮಿತ್ರಾವರುಣರೆಂಬ) ಇಬ್ಬರು ದೇವತೆಗಳಿರುವರು.

6. ೧೩೬ನೇ ಸೂಕ್ತದ ಮೊದಲ ೫ ಋಕ್ಕುಗಳಿಗೆ ಮಿತ್ರಾವರುಣರು ದೇವತೆಗಳು. ಮುಂದಿನ (೬-೭) ಎರಡು ಋಕ್ಕುಗಳಿಗೆ ದ್ಯಾವಾಪೃಥಿವೀ ಮೊದಲಾದವರು ದೇವತೆಗಳು. ೬ನೇ ಋಕ್ಕಿನ ಪ್ರತಿಪಾದದಲ್ಲಿಯೂ ಇಬ್ಬಿಬ್ಬರು ದೇವತೆಗಳು ಸ್ತುತರಾಗಿರುವರು. ೭ನೇ ಋಕ್ಕಿನ ಪೂರ್ವಾರ್ಧದಲ್ಲಿ ದೇವತೆಗಳೆಂದು ದೇವತೆಗಳನ್ನು ಒಟ್ಟಾಗಿಯೂ ಉತ್ತರಾರ್ಧದಲ್ಲಿ ಪ್ರತ್ಯೇಕವಾಗಿ ಹೆಸರುಗಳಿಂದಲೂ ಸ್ತುತಿಸಲಾಗಿದೆ.

೧೩೭-೧೩೯ನೇ ಸೂಕ್ತಗಳ ದೇವತೆಗಳು; ವೈಶ್ವದೇವಸೂಕ್ತಗಳ ಸ್ವರೂಪ

7. **ಸುಷುಮಾ ಯಾತಂ** ಎಂಬ ೧೩೭ನೇ ಸೂಕ್ತಕ್ಕೆ ಮಿತ್ರಾವರುಣರೂ, **ಪ್ರಪ್ರ** ಎಂಬ ೧೩೮ನೇ ಸೂಕ್ತಕ್ಕೆ ಪೂಷನೂ, **ಅಸ್ತು ಶ್ರೌಷಟ್** ಎಂಬ ೧೩೯ನೇ ಸೂಕ್ತಕ್ಕೆ ವಿಶ್ವೇದೇವತೆಗಳೂ ದೇವತೆಯು; ಮೂರನೆಯ ದಾದ **ಅಸ್ತು ಶ್ರೌಷಟ್** ಎಂಬ ಸೂಕ್ತದಲ್ಲಿ ಅನೇಕ ದೇವತೆಗಳ ಸ್ತುತಿಯಿರುವುದು ವಿಶ್ವೇದೇವತಾಕವಾದ (ಅಥವಾ ವೈಶ್ವದೇವ) ಸೂಕ್ತಗಳಲ್ಲಿ ಅನೇಕ ದೇವತೆಗಳ ಸ್ತುತಿ ಇರುವುದು ಎಂದರೆ, ಅನೇಕ ದೇವತೆಗಳ ಸ್ತುತಿ ಇರುವ ಸೂಕ್ತಕ್ಕೆ ವೈಶ್ವದೇವಸೂಕ್ತವೆಂದು ಹೆಸರು.

---

there are nine (stanzas : i. 134. 1-6, 135 1-3) to Vayu, (then) five (i. 135.4-8) to Indra-Vayu, (then) one (i. 135. 9) to Vayu. The next (hymn : i. 136) has two predominant (deities).

2. Distributed Praise. RV. i. 137–139 Vaisvadeva hymns.

6. There, five stanzas (i. 136 1-5) have Varuna and Mitra for their gods; the following two (i. 136. 6,7) are (addressed) to the(deities)mentioned, Dyaus and the rest. Couples (of deities ದ್ವೇ ದ್ವೇ), including the Two worlds (ರೋದಸೀ), are praised together (ಸಂಸ್ತುತೇ), each in a verse (ಪಾದ), and the gods (are praised with a hemistich (?); the rest (?) is distributed (in praise).

7. The hymn 'We have pressed' (ಸುಷುಮಾ ಯಾತಮುದ್ರಿಭಿಃ : i. 137) is addressed to Mitra-Varuna. 'Forth, forth' (ಪ್ರ-ಪ್ರ : i. 138) is addressed to Pusan, the third (i. 139) is addressed to the All-gods. 'Let it be heard' (ಅಸ್ತು ಶ್ರೌಷಟ್ : i. 139) is the third hymn addressed to the All-gods.

A hymn to the All-gods may be (included) among those which contain many deities.

ಬಹುಶಸ್ತು ವೈಶ್ವದೇವೇಷು ಸಂತ್ಯೃಚಃ ಪಾದಾರ್ಧರ್ಚಾ ದ್ವ್ಯೃಪದಾಸ್ತ್ರ್ಯೃಪದಾಶ್ಚ ।
ದ್ವಿಪ್ರಧಾನಾ ಅಪಿ ಚೈಕಪ್ರಧಾನಾ ಬಹುಪ್ರಧಾನಾ ಅಪಿ ವೈಶ್ವದೇವಾಃ ॥ ೮ ॥
ವೈಶ್ವದೇವೀ ಮೈತ್ರಾವರುಣೀ ದ್ವಿತೀಯಾ ತಿಸ್ರೋಽಶ್ವಿಭ್ಯಾಂ ತತ ಐಂದ್ರೀ ತತೋಽಗ್ನೇಃ।
ಮಾರುತ್ಯೇಕಾ ತತ ಐಂದ್ರಾಗ್ನ್ಯನಂತರಾ ಬಾರ್ಹಸ್ಪತ್ಯಾ ಚೋತ್ತಮಾ ಸ್ತೌತಿ ದೇವಾನ್॥೯॥
ಋಷೀನೃಷಿರ್ವಾ ಸ್ತೌತಿ ದಧ್ಯಙ್ ಹ ಮೇಽಸ್ಯಾಮಾತ್ಮಾನಂ ವಾ ತೇಷು ಶಂಸನ್ಸ್ವಜನ್ಮ ।
ತಸ್ಮಾದಸ್ಯಾಂ ವಿಪ್ರವದಂತಿ ಕೇಚಿದಿಂದ್ರಾಗ್ನೀ ತಸ್ಯಾಂ ತು ನಿಪಾತಭಾಜೌ ॥ ೧೦ ॥

8. ವೈಶ್ವದೇವಸೂಕ್ತಗಳಲ್ಲಿ ಸಾಧಾರಣವಾಗಿ ನಾನಾದೇವತೆಗಳು ಬೇರೆಬೇರೆಯಾಗಿ (ಅಥವಾ ಒಟ್ಟಾಗಿ) ಕೆಲವು ಋಕ್ಕುಗಳಲ್ಲಿಯೂ, ಅಥವಾ ಒಂದು ಋಕ್ಕು, ಅರ್ಧ ಋಕ್ಕು ಅಥವಾ ಒಂದು ಪಾದ, ಎರಡು ಪಾದಗಳು ಅಥವಾ ಮೂರು ಪಾದಗಳಲ್ಲಿ ಪ್ರತ್ಯೇಕವಾಗಿ ಸ್ತುತರಾಗಿರುವರು. ಈ ಸೂಕ್ತಗಳಲ್ಲಿ ಪ್ರಧಾನದೇವತೆಗಳು ಒಬ್ಬರು ಅಥವಾ ಇಬ್ಬರು ಅಥವಾ ಅನೇಕಮಂದಿ ಇರಬಹುದು.

9. ಪ್ರಸಕ್ತವಾದ **ಅಸ್ತು ಶ್ರೌಷಟ್** ಎಂಬ ೧೫೯ ನೇ ಸೂಕ್ತದಲ್ಲಿ ವಿಶ್ವೇದೇವತೆಗಳ ಸ್ತುತಿ ಇದೆ ಎಂದರೆ ಮೊದಲನೆಯ ಋಕ್ಕಿನಲ್ಲಿ ವಿಶ್ವೇದೇವತೆಗಳನ್ನು ಒಟ್ಟಾಗಿ ಸ್ತುತಿಸಿದೆ. ೨ ನೇ ಋಕ್ಕಿನಲ್ಲಿ ಮಿತ್ರಾವರುಣರನ್ನೂ ಮುಂದಿನ ಮೂರು ಋಕ್ಕುಗಳಲ್ಲಿ (೩-೫) ಅಶ್ವಿನೀದೇವತೆಗಳನ್ನೂ, ಮುಂದಿನ ೬ ನೇ ಋಕ್ಕಿನಲ್ಲಿ ಇಂದ್ರನನ್ನೂ, ೭ ನೇ ಋಕ್ಕಿನಲ್ಲಿ ಅಗ್ನಿಯನ್ನೂ, ೮ ನೇ ಋಕ್ಕಿನಲ್ಲಿ ಮರುದ್ದೇವತೆಗಳನ್ನೂ, ೯ ನೇ ಋಕ್ಕಿನಲ್ಲಿ ಇಂದ್ರಾಗ್ನಿಗಳನ್ನೂ, ೧೦ ನೇ ಋಕ್ಕಿನಲ್ಲಿ ಬೃಹಸ್ಪತಿಯನ್ನೂ, ಕೊನೆಯ ೧೧ ನೇ ಋಕ್ಕಿನಲ್ಲಿ ಒಟ್ಟಾಗಿ ವಿಶ್ವೇದೇವತೆಗಳನ್ನೂ ಸ್ತುತಿಸಲಾಗಿದೆ.

10. ಈ ಸೂಕ್ತದ (೧೫೯ ನೇ ಸೂಕ್ತದ) ಋಷಿಯಾದ ಪರುಚ್ಛೇಪಋಷಿಯು **ದಧ್ಯಙ್ ಹ ಮೇ** ಎಂಬ ೯ನೇ ಋಕ್ಕಿನಲ್ಲಿ ದಧ್ಯಙ್ ಎಂಬ ಹೆಸರಿನ ಪುರಾತನ ಋಷಿಯನ್ನು ಸ್ತುತಿಸಿರುವನು ಅಥವಾ ತಾನು ಆ ದಧ್ಯಙ್ ಋಷಿಯ ವಂಶೋತ್ಪನ್ನನೆಂದು ಸೂಚಿಸುವುದಕ್ಕಾಗಿ ತನ್ನನ್ನೇ ಸ್ತುತಿಸಿರಬಹುದು. ಆದ್ದರಿಂದ ಆ ಋಕ್ಕಿನಲ್ಲಿ ಇಂದ್ರಾಗ್ನಿಗಳನ್ನು ಪ್ರಧಾನದೇವತೆಗಳನ್ನಾಗಿ ಸ್ತುತಿಸಿಲ್ಲವೆಂದೂ ಪ್ರಸ್ತಾಪತ್ವೇನ (ಸಂದರ್ಭಾನುಸಾರವಾಗಿ) ಇವರನ್ನು ಸ್ತುತಿಸಲಾಗಿದೆಯೆಂದೂ ಕೆಲವರಲ್ಲಿ ಅಭಿಪ್ರಾಯಭೇದವಿರುವುದು.

---

8. There are variously (ಬಹುಶಃ), in(hymns)addressed to the All-gods. stanzas, verses, hemistichs, stanzas with two verses (ದ್ವ್ಯೃಪದಾಃ) or with three (ತ್ರ್ಯೃಪದಾಃ): (such) Vaisvadeva (formulas) have two predominant (deities) or one predominant (deity) or many predominant (deities).

9. There is (one: i. 139. 1) addressed to the All-gods, the second (2) is addressed to Mitra-Varuna; three (3-5) are to the Aswins, then (one) is addressed to Indra (6), then (one) to Agni (7). one is addressed to the Maruts (8), then (one) is addressed to Indra-Agni (9) and the next is addressed to Brahspati (10); the last (stanza) praises the gods (11).

10. The seer in the (stanza Dadhyanc of me) (ದಧ್ಯಙ್ ಹ ಮೇ: i. 139. 9). praised either the (ancient) seers or himself by proclaiming his own origin among them. For this reason some disagree in regard to this (stanza, saying), that Indra-Agni are at the same time (ತು) incidentally praised ನಿಪಾತಭಾಜ್) in it.

ದ್ವಾವುಚಥ್ಯಬೃಹಸ್ಪತೀ ಋಷಿಪುತ್ರೌ ಬಭೂವತುಃ ।
ಆಸೀದುಚಥ್ಯಭಾರ್ಯಾ ತು ಮಮತಾ ನಾಮ ಭಾರ್ಗವೀ ॥ ೧೧ ॥
ತಾಂ ಕನೀಯಾನ್ಬೃಹಸ್ಪತಿರ್ಮೈಥುನಾಯೋಪಚಕ್ರಮೇ ।
ಶುಕ್ರಸ್ಯೋತ್ಸರ್ಗಕಾಲೇ ತು ಗರ್ಭಸ್ತಂ ಪ್ರತ್ಯಭಾಷತ ॥ ೧೨ ॥
ಇಹಾಸ್ಮಿ ಪೂರ್ವಸಂಭೂತೋ ನ ಕಾರ್ಯಃ ಶುಕ್ರಸಂಕರಃ ।
ತಚ್ಛುಕ್ರಪ್ರತಿಷೇಧಂ ತು ನ ಮಮರ್ಷ ಬೃಹಸ್ಪತಿಃ ॥ ೧೩ ॥
ಸ ವ್ಯಾಜಹಾರ ತಂ ಗರ್ಭಂ ತಮಸ್ತೇ ದೀರ್ಘಮಸ್ತ್ವಿತಿ ।
ಸ ಚ ದೀರ್ಘತಮಾ ನಾಮ ಬಭೂವರ್ಷಿರುಚಥ್ಯಜಃ ॥ ೧೪ ॥

ದೀರ್ಘತಮಾಃ ಎಂಬ ಋಷಿಯ ಜನ್ಮವೃತ್ತಾಂತ

11. ಪೂರ್ವದಲ್ಲಿ ಒಬ್ಬ ಋಷಿಗೆ **ಉಚಥ್ಯ** ಮತ್ತು **ಬೃಹಸ್ಪತಿ** ಎಂಬ ಈರ್ವರು ಪುತ್ರರಿದ್ದರು. ಉಚಥ್ಯನ ಪತ್ನಿಯ ಹೆಸರು **ಮಮತಾ** ಎಂದು. ಈಕೆಯು ಭೃಗುವಂಶದವಳು.

12. ಆ ಇಬ್ಬರು ಋಷಿಪುತ್ರರಲ್ಲಿ ಕಿರಿಯವನಾದ ಬೃಹಸ್ಪತಿಯು ತನ್ನ ಅತ್ತಿಗೆಯಾದ **ಮಮತಾ** ಎಂಬ ಗರ್ಭಿಣಿಯಾದ ಸ್ತ್ರೀಯೊಡನೆ ರತಿಕ್ರೀಡೆಯಲ್ಲಿ ಉದ್ಯುಕ್ತನಾಗಿದ್ದನು. ವೀರ್ಯಸ್ಖಲನಕಾಲದಲ್ಲಿ ಗರ್ಭದಲ್ಲಿದ್ದ ಪಿಂಡವು ಬೃಹಸ್ಪತಿಯನ್ನು ಉದ್ದೇಶಿಸಿ ಇಂತೆಂದಿತು—

13. ಎಲೈ ಬೃಹಸ್ಪತಿಯೇ, ನಾನು ಈ ಸ್ತ್ರೀಯ ಗರ್ಭದಲ್ಲಿ ಮೊದಲಿನಿಂದಲೂ ವಾಸವಾಗಿದೇನೆ. ಆದ್ದರಿಂದ ನೀನು ನಿನ್ನ ವೀರ್ಯವನ್ನು ಈ ಗರ್ಭದಲ್ಲಿ ಬಿಟ್ಟು ವೀರ್ಯಸಂಪರ್ಕವಾಗುವಂತೆ ಮಾಡಬೇಡ ಎಂದಿತು. ಆದರೆ ಬೃಹಸ್ಪತಿಯು ವೀರ್ಯಸ್ಖಲನವನ್ನು ತಡೆಯಲಾಗದೆ ವೀರ್ಯಸಂಕರವಾಗುವುದೆಂಬ ಅಡ್ಡಿಯನ್ನು ಸಹಿಸಲಿಲ್ಲ ಮತ್ತು,

14. ಕೋಪಾವಿಷ್ಟನಾಗಿ ಆ ಗರ್ಭವನ್ನು (ಗರ್ಭಸ್ಥಪಿಂಡವನ್ನು) ಕುರಿತು ನೀನು ಯಾವಾಗಲೂ ಕತ್ತಲೆಯಲ್ಲಿರುವಂತಾಗಲಿ (ಕುರುಡಾಗಲಿ) ಎಂದು ಶಪಿಸಿದನು. ಆದ್ದರಿಂದ ಆ ಗರ್ಭದಿಂದ ಹುಟ್ಟಿದ ಉಚಥ್ಯಋಷಿಯ ಪುತ್ರನು **ದೀರ್ಘತಮಾಃ** ಎಂಬ ಹೆಸರಿನಿಂದ ಪ್ರಸಿದ್ಧನಾದನು.

3. Story of the birth of Dirghatamas.

11. There were (once) two seers' sons Uchathya and Brahspati. Now Uchathya's wife was Mamata by name, of the race of Bhrgu.

12. Brahaspati, the younger (of the two), approached her for sexual intercouse. Now at the time of impregnation the embryo addressed him.

13. 'Here am I previously engendered; you must not cause a commingling of seed'. Brahspati, however, could not brook this remonstrance about the seed.

14. (So) he addressed the embryo: 'Long darkness shall be your lot'. And (hence) the seer, Uchathya's, son, was born with the name Dirghatamas (Long Darkness).

ಸ ಜಾತೋಽಭ್ಯತಪದ್ದೇವಾನಕಸ್ಮಾದಂಧತಾಂ ಗತಃ ।
ದದುರ್ದೇವಾಸ್ತು ತನ್ನೇತ್ರೇ ತತೋಽನಂಧೋ ಬಭೂವ ಸಃ ॥ ೧೫ ॥

ಸ ವೇದಿಷದಿತ್ಯಸ್ತೌಚ್ಚತುರ್ಭಿರ್ಜಾತವೇದಸಂ ।
ಸಮಿದ್ಧ ಆಪ್ರಿಯೋಽತ್ಯೈಂದ್ರೀ ತಮಿಶ್ಯಗ್ನೇಃ ಪರಾಣಿ ಷಟ್ ॥ ೧೬ ॥

ಸ್ತುತೌ ತು ಮಿತ್ರಾವರುಣೌ ಸೂಕ್ತೈರ್ಮಿತ್ರಮಿತಿ ತ್ರಿಭಿಃ ।
ಮಿತ್ರಂ ಮೈತ್ರೀಂ ವದತ್ಯೇತಾಮಾ ಧೇನವಶ್ಚ ಶಂಸತಿ ॥ ೧೭ ॥

15. ಆ ಉಚಥ್ಯಪುತ್ರನು (**ದೀರ್ಘತಮಾಃ** ಎಂಬುವನು) ಹುಟ್ಟಿದ ಕೂಡಲೇ ಕುರುಡನಾದನು. ಅವನು ತನ್ನ ಅಂಧತ್ವನಿವಾರಣೆಗಾಗಿ ದೇವತೆಗಳನ್ನು ಕುರಿತು ತಪಸ್ಸುಮಾಡಲು ದೇವತೆಗಳು ಅವನಿಗೆ ಕಣ್ಣುಗಳನ್ನು (ನೋಡುವ ಶಕ್ತಿಯನ್ನು) ಅನುಗ್ರಹಿಸಿದರು. ಆದ್ದರಿಂದ ಅವನು ಕುರುಡನಾಗದೆ ಎಲ್ಲರಂತೆ ಕಣ್ಣುಗಳಿಂದ ನೋಡುವ ಸಾಮರ್ಥ್ಯವನ್ನು ಪಡೆದನು.

ದೀರ್ಘತಮಾಃ ಎಂಬ ಋಷಿಯಿಂದ ದೃಷ್ಟವಾದ ಸೂಕ್ತಗಳು ೧೪೦-೧೫೬

16. **ಈ ದೀರ್ಘತಮಾಃ** ಎಂಬ ಋಷಿಯು **ವೇದಿಷದೇ** ಎಂದು ಮೊದಲಾಗುವ ೪ ಸೂಕ್ತಗಳಿಂದ (೧೪೦, ೧೪೧, ೧೪೩, ೧೪೪ನೇ ಸೂಕ್ತಗಳಿಂದ) ಜಾತವೇದೋಗ್ನಿಯನ್ನು ಸ್ತುತಿಸಿರುವನು. **ಸಮಿದ್ಧ** ಎಂಬ ೧೪೨ನೇ ಸೂಕ್ತವು **ಆಪ್ರೀಸೂಕ್ತವು**. ಇದರ ಕೊನೆಯ ಋಕ್ಕು ಇಂದ್ರದೇವತಾಕವು. ಅಲ್ಲಿಂದ ಮುಂದಿನ **ತಂ ಪೃಚ್ಛತಾ** ಎಂದು ಮೊದಲಾಗುವ ಆರು ಸೂಕ್ತಗಳಿಗೆ (೧೪೫-೧೫೦) ಅಗ್ನಿಯು ದೇವತೆಯು.

17. **ಮಿತ್ರಂ ನ** ಎಂದು ಮೊದಲಾಗುವ ಮೂರು ಸೂಕ್ತಗಳಲ್ಲಿ (೧೫೧-೧೫೩) ಮಿತ್ರಾವರುಣರನ್ನು ಸ್ತುತಿಸಲಾಗಿದೆ. ಆದರೆ ೧೫೧ನೇ ಸೂಕ್ತದ **ಮಿತ್ರಂ ನ** ಎಂಬ ಮೊದಲನೆಯ ಋಕ್ಕಿನಲ್ಲಿ ಮಿತ್ರನೊಬ್ಬನನ್ನು ಮಾತ್ರ ಸ್ತುತಿಸಲಾಗಿದೆ. ೧೫೨ನೇ ಸೂಕ್ತದ **ಆ ಧೇನವಃ** ಎಂಬ ೬ನೇ ಋಕ್ಕಿನಲ್ಲಿ,

15. He when born distressed the gods, having become suddenly blind. The gods, however, gave him (the use of) his eyes (**ತನ್ನೇತ್ರೇ**), so he was cured of his blindness.

4. Hymns revealed to Dirghatamas: RV. 140-156.

16. With four (hymns beginning) 'To him seated on the altar' (**ವೇದಿಷದೇ**: i. 40) he praised Jatavedas (Agni). 'Kindled' (**ಸಮಿದ್ಧಃ**: i. 142) is an Apri hymn, its last (stanza) being addressed to Indra (i 142. 13). The six (i. 145-150) following (beginning) 'Him' (**ತಂ**; i. 145. 1) are to Agni.

17. But Mitra-Varuna are praised with the three (151-153) hymns (beginning) 'A Friend' (**ಮಿತ್ರಂ**: 1. 151). 'A Friend' (**ಮಿತ್ರಂ**: i. 151. 1) expresses that this (stanza) is addressed to Mitra (only). 'May the cows' (**ಧೇನವಃ**; i. 152. 6) lauds.

ಆದಿತಿಂ ವಾಥವಾಽಗ್ನಿಂ ತಥಾ ರೂಪಂ ಹಿ ದೃಶ್ಯತೇ ।
ಅಗ್ನಿಂ ಮೇನೇಽದಿತಿಂ ತ್ವೇವ ಕುತ್ಸೇ ಚೇಹ ಚ ಶೌನಕಃ ॥ ೧೭ ॥
ಋಷಿರತ್ರ ಪ್ರಸಂಗಾದ್ವಾ ದರ್ಶನಾದ್ವಾನುಕೀರ್ತಯೇತ್ ।
ವಿಷ್ಣೋರ್ನು ಕಮಿತಿ ತ್ರೀಣಿ ವೈಷ್ಣವಾನಿ ಪರಾಣ್ಯತಃ ॥ ೧೯ ॥
ಪ್ರ ವಶ್ಚ ತಿಸೃಭಿರ್ಯುಗ್ಭಿರಿಂದ್ರಾವಿಷ್ಣೂ ಸಹ ಸ್ತುತೌ ।
ಗೃಹಾಣಿ ವಾ ವೈಷ್ಣವಾನಿ ತಾ ವಾಮಿತ್ಯೃಚಿ ಕಾಂಕ್ಷತಿ ॥ ೨೦ ॥
ಜೀರ್ಣಂ ತು ದೀರ್ಘತಮಸಂ ಖಿನ್ನಾಸ್ತತ್ಪರಿಚಾರಿಣಃ ।
ದಾಸಾ ಬಧ್ವಾ ನದೀತೀರೇ ದೃಷ್ಟಿಹೀನಮವಾದಧುಃ ॥ ೨೧ ॥

18. ಆದಿತಿಯನ್ನಾಗಲೀ, ಅಥವಾ ಅಗ್ನಿಯನ್ನಾಗಲೀ ಸ್ತುತಿಸಲಾಗಿದೆ. ಏಕೆಂದರೆ ಆ ಋಕ್ಕಿನ ವಿಷಯವು ಆರೀತಿ ಇದೆ. ಪ್ರಕೃತ ಋಕ್ಕಿನಲ್ಲಿಯೂ ಕುತ್ಸಋಷಿದೃಷ್ಟವಾದ ಮಂತ್ರದಲ್ಲಿಯೂ ಆದಿತಿಯೆಂದರೆ ಅಗ್ನಿಯೆಂದೇ ಹೇಳಬಹುದೆಂದು ಶೌನಕರ ಅಭಿಪ್ರಾಯವಿರುವುದು.

19. ಏಕೆಂದರೆ, ಋಷಿಯು ಇಲ್ಲಿ ಪ್ರಸಂಗವಶದಿಂದ ಆದಿತಿಶಬ್ದಪ್ರಯೋಗಮಾಡಿರಬಹುದು ಅಥವಾ ಅಗ್ನಿಯನ್ನು ಆದಿತಿರೂಪದಲ್ಲಿ ಭಾವಿಸಿ ಕಂಡಿರಬಹುದು. ಆದ್ದರಿಂದ ಆರೀತಿ ಹೇಳಿರಬಹುದು. ಅಲ್ಲಿಂದ ಮುಂದಿನ **ವಿಷ್ಣೋರ್ನುಕಂ** ಎಂದು ಮೊದಲಾಗುವ ಮೂರು ಸೂಕ್ತಗಳಿಗೆ (೧೫೪-೧೫೬) ವಿಷ್ಣುವು ದೇವತೆಯು.

20. **ಪ್ರ ವಃ ಪಾಂತಂ** ಎಂಬ ೧೫೫ ನೇ ಸೂಕ್ತದ ಮೊದಲ ಮೂರು ಋಕ್ಕುಗಳಲ್ಲಿ (೧-೩) ಇಂದ್ರ ಮತ್ತು ವಿಷ್ಣುಗಳು ಒಟ್ಟಿಗೆ ಸ್ತುತರಾಗಿರುವರು. ೧೫೪ ನೇ ಸೂಕ್ತದ **ತಾ ವಾಂ** ಎಂಬ ೬ ನೇ ಋಕ್ಕಿನಲ್ಲಿ ಋಷಿಯು ವಿಷ್ಣುವಿನ ಪರಮಪದವೆಂಬ ಉತ್ತಮಸ್ಥಾನವನ್ನು ಬಯಸಿರುವುದು ವ್ಯಕ್ತವಾಗಿರುವುದು.

ದೀರ್ಘತಮಾಃ ಎಂಬ ಋಷಿಯ ಮುಂದಿನ ವೃತ್ತಾಂತವು

21. **ಈ** ದೀರ್ಘತಮಸ್ಸೆಂಬ ಋಷಿಗೆ ವಯಸ್ಸಾಗಿ ಮುಪ್ಪಿನಿಂದ ಶರೀರವು ಜೀರ್ಣವಾಗಿ ಕಣ್ಣು ಕಾಣಿಸದೆ ಇರುವಾಗ ಇವನ ಈ ಸ್ಥಿತಿಯನ್ನು ನೋಡಿ ಇವನ ಅನುಚರರು ಬೇಸರಗೊಂಡು ಇವನ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿ ನದಿಯ ನೀರಿನಲ್ಲಿ ಎಸೆದುಬಿಟ್ಟರು.

18. either Aditi or Agni; for(its)character is evidently such. Saunaka, however, thought that both in Kutsa and here Aditi means Agni only.

19. The seer may here mention (ಅದಿತಿ) either incidentally (ಪ್ರಸಂಗಾತ್) or because he saw (Agni in this form). The three (hymns) after this (i. 154-156), (beginning) 'Of Visnu now' (ವಿಷ್ಣೋರ್ನುಕಂ : i. 154. 6) are addressed to Visnu.

20. and with the three stanzas 'Forth your' (ಪ್ರ ವಃ : i. 155. 1-3) Indra-Vishnu are praised together. In the stanza 'Those of you two' (ತಾ ವಾಂ : i. 154. 6) he(the seer)may be said to long for(ವಾ ಕಾಂಕ್ಷತಿ)the mansions of Visnu.

5. Story of Dirghatamas (continued).

21. His attendent slaves, being weary, bound the aged and blind Dirghatamas and cast him down into the waters of the river.

ತಶ್ಚೈಕಸ್ಮೈತನೋ ನಾಮ ಶಸ್ತ್ರೇಣೈನಮಪಾಹನತ್ ।
ಶಿರಶ್ಚಾಂಸಾವುರಶ್ಚೈವ ಸ್ವಯಮೇವ ನ್ಯಕೃಂತತ ॥ ೨೨ ॥
ಹತ್ವಾ ದೀರ್ಘತಮಾಸ್ತಂ ತು ಪಾಪೇನ ಮಹತಾ ವೃತಂ ।
ಆತ್ಮಾಂಗಾನ್ಯನುದಚ್ಚೈವ ತತ್ರೋದೋನ್ಮೋಹಿತೋ ಭೃಶಂ ॥ ೨೩ ॥
ಅಂಗದೇಶಸಮೀಪೇ ತು ತಂ ನದ್ಯಃ ಸಮುದಕ್ಷಿಪನ್ ।
ಅಂಗರಾಜಗೃಹೇ ಯುಕ್ತಾಮುಶಿಜಂ ಪುತ್ರಕಾಮ್ಯಯಾ ॥ ೨೪ ॥
ರಾಜ್ಞಾ ಚ ಪ್ರಹಿತಾಂ ದಾಸೀಂ ಭಕ್ತಾಂ ಮತ್ವಾ ಮಹಾತಪಾಃ ।
ಜನಯಾಮಾಸ ಚೋಶಿಜ್ಯಾಯೇ ಕಕ್ಷೀವತ್ಪ್ರಮುಖಾನ್ಋಷೀನ್ ॥ ೨೫ ॥

22. ಆ ಅನುಚರರಲ್ಲಿ ತ್ರೈತನೆಂಬುವನು ಈ ಋಷಿಯನ್ನು ತನ್ನ ಕೈಲಿದ್ದ ಕತ್ತಿಯಿಂದ ಪ್ರಹರಿಸಲು ಹೋಗಿ ಆಯತಪ್ಪಿದ್ದರಿಂದ ತನ್ನ ತಲೆ, ಎದೆ, ಭುಜಗಳಿಗೇ ಏಟುಬಿದ್ದು ಕತ್ತರಿಸಿಹೋಯಿತು.

23. ತನ್ನನ್ನು ಕೊಲ್ಲಲು ಬಂದ ಮಹಾಪಾಪಿಷ್ಠನಾದ ಆ ಅನುಚರನನ್ನು ಈರೀತಿ ಪರಿಹರಿಸಿ ದೀರ್ಘತಮ ಋಷಿಯು ತನ್ನ ಕೈಕಾಲುಗಳಿಗೆ ಕಟ್ಟಿದ್ದ ಹಗ್ಗವನ್ನು ಬಿಡಿಸಿಕೊಂಡು ನೀರಿನಲ್ಲಿ ಜ್ಞಾನಹೀನನಾಗಿ ಒದ್ದಾಡುತ್ತಾ ತೇಲಿ ಹೋಗುತ್ತಿದ್ದನು.

24. ನದಿಯ ಪ್ರವಾಹವು ಇವನನ್ನು ಅಂಗದೇಶದ ರಾಜನ ಅರಮನೆಯ ಸಮೀಪಕ್ಕೆ ಒಯ್ದು ಅಲ್ಲಿಯೇ ಬಿಟ್ಟಿತು. ಆ ರಾಜನ ಅರಮನೆಯಲ್ಲಿ ಉಶಿಜ್ ಎಂಬ ಓರ್ವ ದಾಸಿ ಇದ್ದಳು. ಅಂಗರಾಜನು ತನಗೆ ಮಕ್ಕಳಿಲ್ಲದ್ದರಿಂದ ಮಕ್ಕಳನ್ನು ಪಡೆಯಬೇಕೆಂಬ ಇಚ್ಛೆಯಿಂದ ಈ ಉಶಿಜ್ ಎಂಬ ದಾಸಿಯನ್ನು

25. ಈ ದೀರ್ಘತಮಾಃ ಎಂಬ ಋಷಿಯ ಬಳಿಗೆ ಕಳುಹಿಸಿದನು. ನದಿಯ ಪ್ರವಾಹದಿಂದ ತಪ್ಪಿಸಿಕೊಂಡು ಬಂದ ಈ ಮಹಾತಪಸ್ವಿಯಾದ ಋಷಿಯು ಉಶಿಜ್ ಎಂಬ ದಾಸಿಯು ತನ್ನ ವಿಷಯದಲ್ಲಿ ಭಕ್ತಿಭಾವದಿಂದಿರುವುದನ್ನು ಕಂಡು ಅವಳಲ್ಲಿ ಕಕ್ಷೀವಾನ್ ಮುಂತಾದ ಶ್ರೇಷ್ಠರಾದ ಅನೇಕ ಋಷಿಪುತ್ರರನ್ನು ಉತ್ಪಾದನೆಮಾಡಿದನು.

22. One among them, Traitana by name, tried to strike him away with his sword, and (in so doing) cut to pieces (ನ್ಯಕೃಂತತ) his own head, shoulders and breast.

23. Now Dirghatamas having (thus) slain him (who had) involved (himself) in great sin, moved his limbs there (in the river), (though) excessively stupefied (ಉನ್ಮೋಹಿತ) by the water (ಉದ).

24. Now the currents (ನದ್ಯಃ) threw him up in the neighbourhood of the Anga country.

Usij was employed in the house of the king of Anga- Through desire of obtaining a son,

25. The king dispatched (this) slave (to Dirghatamas). The great ascetic observing her to be devoted (to him), after he had come out (of the water), begot (with her) the seer Kaksivat and others.

ತುಷ್ಟಾವ ಚೈವ ಸೂಕ್ತಾಭ್ಯಾಮಬೋಧೀತ್ಯಶ್ವಿನಾವೃಷಿಃ ।
ಪ್ರೇತಿ ದ್ಯಾವಾಪೃಥಿವ್ಯೌ ತು ಪರಾಭ್ಯಾಮೇತದುತ್ತರಂ ॥ ೨೬ ॥

ಕಿರ್ಮಾಭವಂ ಪರೇ ಮಾ ನೋ ಮೇಧ್ಯಸ್ಯಾಶ್ವಸ್ಯ ಸಂಸ್ತವಃ ।
ಈರ್ಮಾಂತಾಸ ಇತಿ ತ್ವಸ್ಯಾಂ ನೀಯಮಾನಂ ಪ್ರಶಂಸತಿ ॥ ೨೭ ॥

ಸ್ವಯೂಥ್ಯಾಸ್ತಸ್ಯ ಚೈವಾತ್ರ ಬಹವಃ ಸಂಸ್ತುತಾ ಹಯಾಃ ।
ನಿಯುಕ್ತಾಶ್ಚಾನಿಯುಕ್ತಾಶ್ಚ ಪ್ರಸಂಗಾದನುಕೀರ್ತಿತಾಃ ॥ ೨೮ ॥

೧೫೭–೧೬೩ನೇ ಸೂಕ್ತಗಳ ದೇವತೆಗಳು

26. **ಈ ದೀರ್ಘತಮಾಃ** ಎಂಬ ಋಷಿಯು **ಅಬೋಧಿ** ಎಂದು ಮೊದಲಾಗುವ ೨ ಸೂಕ್ತಗಳಿಂದ (೧೫೭-೧೫೮) ಆಶ್ವಿನೀದೇವತೆಗಳನ್ನೂ ಮುಂದಿನ **ಪ್ರ ದ್ಯಾವಾ** ಎಂದು ಮೊದಲಾಗುವ ಎರಡು ಸೂಕ್ತಗಳಿಂದ (೧೫೯–೧೬೦) ದ್ಯಾವಾಪೃಥಿವಿಗಳನ್ನೂ ಸ್ತುತಿಸಿರುವನು.

27. ಮತ್ತು **ಕಿಮು** ಎಂಬ ೧೬೧ನೇ ಸೂಕ್ತದಿಂದ ಋಭುಗಳನ್ನೂ ಮುಂದಿನ **ಮಾ ನೋ ಮಿತ್ರೋ** ಎಂದು ಮೊದಲಾಗುವ ಎರಡು ಸೂಕ್ತಗಳಿಂದ (೧೬೨-೧೬೩) ಯಜ್ಞಾಶ್ವವನ್ನೂ ಸ್ತುತಿಸಿರುವನು. ೧೬೩ನೇ ಸೂಕ್ತದ **ಈರ್ಮಾಂತಾಸಃ** ಎಂಬ ಹತ್ತನೆಯ ಋಕ್ಕಿನಲ್ಲಿ ಯಜ್ಞಾಶ್ವವು ಯಜ್ಞವೇದಿಗೆ ಒಯ್ಯಲ್ಪಡುವ ವಿಷಯವು ಪ್ರಶಂಸಿತವಾಗಿದೆ.

28. ಮತ್ತು ಈ ಋಕ್ಕಿನಲ್ಲಿ (೧೬೩ನೇ ಸೂಕ್ತದ ೧೦ನೇ ಋಕ್ಕಿನಲ್ಲಿ) ಯಜ್ಞಾಶ್ವವಲ್ಲದ ಇತರ ಅಶ್ವಗಳ ಸ್ತುತಿಯೂ ಇರುವುದು. ಪ್ರಸಂಗವಶದಿಂದ ರಥಕ್ಕೆ ಹೂಡುವ ಅಥವಾ ಹೂಡದಿರುವ ಇತರ ಅಶ್ವಗಳ ಸ್ತುತಿಯೂ ಇಲ್ಲಿ ಉಕ್ತವಾಗಿದೆ.

---

6. Deities of RV. i. 157-163.

26. And the seer praised with the two (157-158) hymns (beginning) 'He is awake' (अबोधि: i. 157. 1), the two Aswins: but with the two (159, 160) following (beginning) 'forth' (प्र: i. 159. 1), Heaven and Earth. That which comes next to these (एतदुत्तरं).

27. (Beginning) - Why' (किं: i. 161. 1) is addressed to the Rbhus. The two (162, 163) following (beginning) 'Not us' (मा नः: i. 162. 1) are a laudation of the sacrificial horse. In the (stanza) 'Full-haunched' (ईर्मान्तासः i. 163. 10) he extols the horse as he is being led.

28. And here also (i. 163. 10) the many steeds belonging to his troop (स्वयूथ्याः) are praised: both the yoked and unyoked are incidentally (प्रसंगात्) mentioned.

ಸಂಜ್ಞಪ್ತೇವದಸಂಜ್ಞಪ್ತಂ ಭವಿಷ್ಯಂ ಚಾಹ ಭೂತವತ್ ।
ತಸ್ಯ ಮಾಂಸಸ್ಯ ಸೂನಸ್ಯ ಚೆರೂಣಾಂ ಹವಿಷಸ್ತಥಾ ॥ ೨೯ ॥

ವಾಸೋಽಧಿವಾಸಸೋಶ್ಚಾತ್ರ ಯದ್ವಿಶಸ್ಯಂ ಚ ಕೀರ್ತಿತಂ ।
ಗಾತ್ರಸ್ಯ ತೂಲಸ್ಥೂಣಾನಾಂ ಸ್ವಧಿತೇಶ್ಚ ಪ್ರಕೀರ್ತನಂ ॥ ೩೦ ॥

ಛಾಗಸ್ಯ ಕೀರ್ತನಂ ಚಾತ್ರ ಇಂದ್ರಾಪೂಷ್ಣೋಃ ಸಹ ಸ್ತುತಿಃ ।
ಸೂಕ್ತಂ ಯದಸ್ಯವಾಮೀಯಂ ವೈಶ್ವದೇವಂ ತದುಚ್ಯತೇ ॥ ೩೧ ॥

29. ಯಜ್ಞಾಶ್ವವು ಇನ್ನೂ ಕೊಲ್ಲಲ್ಪಡದಿರುವಾಗಲೇ ಅದು ಯಜ್ಞದಲ್ಲಿ ಕೊಲ್ಲಲ್ಪಟ್ಟಿರುವಂತೆ ಭಾವಿಸಿ ಋಷಿಯು ಸ್ತುತಿಸಿರುವನು. ಹಾಗೆಯೇ, ಆ ಅಶ್ವದ ಭವಿಷ್ಯವನ್ನು (ಎಂದರೆ ಅದಕ್ಕೆ ಉಂಟಾಗುವ ಉತ್ತಮಪದವಿಯ ಪ್ರಾಪ್ತಿಯನ್ನು) ಭೂತಕಾಲಕ್ಕೆ ಸೇರಿಹೋದಂತೆಯೂ (ಪಡೆದಂತೆಯೂ) ಅದರ ಮಾಂಸವನ್ನು ಬುಟ್ಟಿಯಲ್ಲಿ ಇಟ್ಟಿರುವಂತೆಯೂ, ಚರು ಮತ್ತು ಹವಿಸ್ಸುಗಳಂತೆ ಸಿದ್ಧಪಡಿಸಿರುವಂತೆಯೂ ಋಷಿಯು ಭಾವಿಸಿ ವರ್ಣಿಸಿರುವನು.

30. ಮತ್ತು ಅದರಂತೆ ಅಶ್ವದ ಶರೀರದ ಮೇಲೆ ಹೊದಿಸುವ ವಾಸ, ಅಧಿವಾಸ (ಮೇಲುಹೊದಿಕೆ) ಗಳೆಂಬ ವಸ್ತ್ರಗಳನ್ನೂ, ಅಶ್ವಶರೀರವನ್ನು ಕತ್ತರಿಸುವುದನ್ನೂ, ಅಶ್ವಶರೀರದ ಬೇರೆ ಬೇರೆ ಅವಯವಗಳು ಬೇಯಿಸಿದನಂತರ ಗೊತ್ತಾಗುವುದಕ್ಕಾಗಿ ಆ ಮಾಂಸಖಂಡಗಳಿಗೆ ಗುರುತಿಗಾಗಿ ಚುಚ್ಚುವ ಶೂಲ (ಮುಳ್ಳು) ಗಳನ್ನೂ, ಯೂಪವನ್ನೂ ಮಾಂಸವನ್ನು ಕತ್ತರಿಸುವ ಕತ್ತಿಯನ್ನೂ ಇಲ್ಲಿ ಪ್ರಶಂಸಿಸಲಾಗಿದೆ.

31. ಯಜ್ಞಾಶ್ವದ ಮುಂದುಗಡೆ ಒಯ್ಯಲ್ಪಡುವ ಛಾಗದ ಎಂದರೆ ಆಡಿನ ಪ್ರಶಂಸೆಯೂ ಇಂದ್ರ ಮತ್ತು ಪೂಷದೇವನ ಸ್ತುತಿಯೂ ಇಲ್ಲಿಯೇ ಹೇಳಲ್ಪಟ್ಟಿದೆ. ಮುಂದಿನ ಸೂಕ್ತವಾದ **ಅಸ್ಯ ವಾಮಸ್ಯ** ಎಂಬ ೧೬೪ ನೇ ಸೂಕ್ತವು ವೈಶ್ವದೇವಸೂಕ್ತವೆಂದು ಪ್ರಸಿದ್ಧವಾಗಿದೆ.

29. He speaks of him (though) not (yet) sacrificed as (already) sacrificed, of (his) future (state) as if past. Of his flesh (ಮಾಂಸ), of the basket (ಸೂನ), of the pots (ಚರು), and of the oblation (ಹವಿಃ).

30. and of the robe (ವಾಸಃ) and upper covering (ಅಧಿವಾಸ), and of his body (ಗಾತ್ರ) which is mentioned as about to be dissected (ವಿಶಸ್ಯ), of the spit (ಶೂಲ) and the post (ಸ್ಥೂಣ), and of the axe (ಸ್ವಧಿತಿ) there is here (ಅತ್ರ) laudation.

7. Deities of RV. i. 164: the three Agnis; the year.

31. There is here also mention of the goat (ಛಾಗ) (and) praise at the same time of Indra-Pusan.

The hymn which (begins) 'Of this benignant' (**ಅಸ್ಯ ವಾಮಸ್ಯ**: i. 164) is stated to he addressed to the All-gods.

ಪ್ರವಾದಾ ವಿವಿಧಾಸ್ತತ್ರ ದೇವಾನಾಂ ಚಾತ್ರ ಕೀರ್ತನಂ ।
ಸೋಕ್ತೇಽಸ್ಯರ್ಚಿ ಪರೋಕ್ಷೋಕ್ತಾ ವಕ್ಷ್ಯಾಮಿ ಭ್ರಾತರಸ್ತ್ರಯಃ ॥ ೩೨ ॥
ಅಗ್ನಿಸ್ತು ವಾಮಃ ಪಲಿತೋ ವಾಯುರ್ಭ್ರಾತಾ ತು ಮಧ್ಯಮಃ ।
ಘೃತಪೃಷ್ಠಸ್ತೃತೀಯೋಽತ್ರ ಸಪ್ತ ವೈ ರಶ್ಮಯಃ ಸ್ತುತಾಃ ॥ ೩೩ ॥
ಪರಾಸ್ತು ಕಥಯಂತ್ಯಗ್ನಿಂ ಯಥಾ ವರ್ಷತಿ ಪಾತಿ ಚ ।
ಅಹೋರಾತ್ರಾನ್ದಿನಾನ್ಮಾಸಾನೃತೂಂಶ್ಚ ಪರಿವರ್ತಿನಃ ॥ ೩೪ ॥
ಪಂಚಧಾ ಚ ತ್ರಿಧಾ ಚೈವ ಷೋಢಾ ದ್ವಾದಶಧೈವ ಚ ।
ಸಂವತ್ಸರಂ ಚಕ್ರವಚ್ಚ ಪರಾಭಿಃ ಕೀರ್ತಯತ್ಯೃಷಿಃ ॥ ೩೫ ॥

೧೬೪ ನೇ ಸೂಕ್ತದ ದೇವತೆಗಳು, ಮೂರುವಿಧ ಅಗ್ನಿಗಳು, ಸಂವತ್ಸರ

32. ಈ ಸೂಕ್ತದ ಮಂತ್ರಗಳಿಗೆ ನಾನಾವಿಧ ಅರ್ಥಭೇದಗಳನ್ನು ಹೇಳುವ ರೂಢಿ ಇದೆ. ದೇವತೆಗಳ ವಿಷಯದಲ್ಲಿಯೂ ಮತಭೇದಗಳಿವೆ. ಈ ಸೂಕ್ತದ (**ಅಸ್ಯ ವಾಮಸ್ಯ** ಎಂಬ ೧೬೪ ನೇ ಸೂಕ್ತದ) ಮೊದಲನೆಯ ಋಕ್ಕಿನಲ್ಲಿ ಮೂರು ಮಂದಿ ಸಹೋದರರು (**ಭ್ರಾತರಸ್ತ್ರಯಃ**) ಎಂದು ಪ್ರಥಮಪುರುಷದಲ್ಲಿ ಹೇಳಲಾಗಿದೆ. **ಭ್ರಾತರಸ್ತ್ರಯಃ** ಎಂದರೇನು ಎಂಬುವುದನ್ನು ಹೇಳುತ್ತೇನೆ.

33. ಈ ಮೊದಲನೆಯ ಋಕ್ಕಿನಲ್ಲಿ ಹೇಳಿರುವ ವಾಮಶಬ್ದವು ಅಗ್ನಿಯನ್ನೂ ಪಲಿತಶಬ್ದವು ಮಧ್ಯಮಸ್ಥಾನನಾದ ವಾಯುವನ್ನೂ ಘೃತಪೃಷ್ಠಶಬ್ದವು ಮೂರನೆಯ ಸಹೋದರನನ್ನೂ ಸೂಚಿಸುವವು. ಈ ಅಗ್ನಿಯ ಏಳು ರಶ್ಮಿಗಳನ್ನು (ಸಪ್ತಜ್ವಾಲೆ) ಇಲ್ಲಿ ಸ್ತುತಿಸಲಾಗಿದೆ.

34. ಆದರೆ ಮುಂದಿನ ಋಕ್ಕುಗಳಲ್ಲಿ ಅಗ್ನಿಯ ವಿಷಯವನ್ನೂ, ಈ ಅಗ್ನಿಯು ಹೇಗೆ ವೃಷ್ಟಿಗೆ ಕಾರಣನು ಮತ್ತು ಜನರನ್ನು (ಯಜಮಾನರನ್ನು) ಹೇಗೆ ರಕ್ಷಿಸುವನು, ಅಹೋರಾತ್ರಿಗಳ ವಿಷಯ, ದಿನಗಳು, ಮಾಸಗಳು, ಒಂದಾದ ಮೇಲೆ ಮತ್ತೊಂದು ಬರುವ ಋತುಗಳ ವಿಷಯ, ಇವೆಲ್ಲವನ್ನೂ ಪ್ರಸ್ತಾಪಿಸಲಾಗಿದೆ.

35. ಮುಂದಿನ ಕೆಲವು ಋಕ್ಕುಗಳಲ್ಲಿ ಋಷಿಯು ಸಂವತ್ಸರವನ್ನು ಒಂದು ಚಕ್ರಕ್ಕೆ ಹೋಲಿಸಿ, ಐದು, ಮೂರು, ಆರು, ಹನ್ನೆರಡು ಭಾಗಗಳಿಂದ ಕೂಡಿರುವಂತೆ ವರ್ಣಿಸಿರುವನು.

---

32. In it are various sayings (ಪ್ರವಾದಾಃ) and here (too) mention of the gods.

In the stanza 'of this' (ಅಸ್ಯ : i. 164. 1) in the hymn, three brothers are spoken of in the third person (ಪರೋಕ್ಷ)—I will explain (them).

33. Now the benignant, grey-haired one is Agni, while the middle brother is Vayu. The third here is butter-backed (ಘೃತಪೃಷ್ಠ) : (his seven rays are praised.

34. But the following (stanzas) tell of Agni, how he rains and protects; and of days and nights (ಅಹೋರಾತ್ರಾನ್), of days (ದಿನ), of months, and of revolving seasons.

35. With the following (stanzas) the seer celebrates the year (ಸಂವತ್ಸರ) like a wheel (as) fivefold, and threefold, sixfold and twelvefold.

ಕ್ಷೇತ್ರಜ್ಞಾನಂ ಚ ಧೇನುಂ ಚ ಗೌರೀಂ ವಾಚಂ ಸರಸ್ವತೀಂ ।
ಧರ್ಮಂ ಪೂರ್ವಯುಗೀಯಂ ಚ ಸಾಧ್ಯಾನ್ದೇವಗಣಾಂಸ್ತಥಾ ॥ ೩೬ ॥

ವಿವಿಧಾನಿ ಚ ಕರ್ಮಾಣಿ ಅಗ್ನಿವಾಯುವಿವಸ್ವತಾಂ ।
ವಿಭೂತಿಮಗ್ನೇರ್ವಾಯೋಶ್ಚ ಜಗತಿ ಸ್ಥಾಸ್ನುಜಂಗಮೇ ॥ ೩೭ ॥

ಹರಣಂ ರಶ್ಮಿಭಿರ್ವಾರೋ ವಿಸರ್ಗಂ ಪುನರೇವ ಚ ।
ಕರ್ಮಾನುಕೀರ್ತನಂ ಚಾತ್ರ ಪರ್ಜನ್ಯಾಗ್ನಿವಿವಸ್ವತಾಂ ॥ ೩೮ ॥

ಮಾತಾಪುತ್ರೌ ಕು ವಾಕ್ಪ್ರಾಣೌ ಮಾತಾ ವಾಗಿತರಃ ಸುತಃ ।
ಸರಸ್ವಂತಮಿತಿ ಪ್ರಾಣೋ ವಾಚಂ ಪ್ರಾಹುಃ ಸರಸ್ವತೀಂ ॥ ೩೯ ॥

36. ಹಾಗೆಯೇ, ಕ್ಷೇತ್ರಜ್ಞಾನವನ್ನೂ (ಶರೀರದಲ್ಲಿರುವ ಆತ್ಮನ ವಿಷಯವನ್ನೂ) ಧೇನು, ಗೌರಿ, ವಾಕ್, ಸರಸ್ವತೀ ಹಿಂದಿನ ಯುಗದ ಧರ್ಮ, ಸಾಧ್ಯರು, ದೇವಗಣಗಳು, ಇವುಗಳನ್ನೂ,

37. ಅಗ್ನಿ, ವಾಯು, ವಿವಸ್ವತ್ ಎಂಬ ದೇವತೆಗಳ ನಾನಾವಿಧ ಕರ್ಮಗಳನ್ನೂ ಚರಾಚರಾತ್ಮಕವಾದ ಜಗತ್ತಿನಲ್ಲಿ ಅಗ್ನಿವಾಯುಗಳ ವಿಭೂತಿ (ಮಹಿಮೆ, ಸಾಮರ್ಥ್ಯ) ಯನ್ನೂ ವರ್ಣಿಸಿರುವನು.

38. ಸೂರ್ಯರಶ್ಮಿಗಳಿಂದ ಜಲಾಶಯಗಳ ಉದಕವು ಆವಿಯ ರೂಪದಲ್ಲಿ ಹೀರಲ್ಪಟ್ಟು ಪುನಃ ಮೇಘಗಳಿಂದ ವೃಷ್ಟಿರೂಪದಲ್ಲಿ ಬೀಳುವುದೂ, ಈ ಸಂಬಂಧದಲ್ಲಿ **ಪರ್ಜನ್ಯ, ಅಗ್ನಿ, ವಿವಸ್ವಾನ್** ಎಂಬ ದೇವತೆಗಳ ಕರ್ಮಗಳೂ (ಪಾತ್ರಗಳೂ) ತಿಳಿಸಲ್ಪಟ್ಟವೆ.

39. ವಾಕ್ಪ್ರಾಣಗಳು ಮಾತಾಪುತ್ರರೆಂದು ಹೇಳಲ್ಪಡುವುವು. ಎಂದರೆ **ವಾಕ್** ಎಂಬುದು ತಾಯಿಯು. ಪ್ರಾಣವೆಂಬುದು ಪುತ್ರನು. ಇಲ್ಲಿ ಪ್ರಾಣವನ್ನು **ಸರಸ್ವಾನ್** ಎಂದೂ ವಾಕ್ಕನ್ನು **ಸರಸ್ವತಿ**ಯೆಂದೂ ಹೇಳುವರು.

8. Account of the contents of RV. i. 164 (continued).

36. and knowledge of the soul (ಕ್ಷೇತ್ರಜ್ಞಾನ) and the cow (ಧೇನು), the buffalo (ಗೌರಿ), Vac, Sarasvati, and the ordinance (ಧರ್ಮ) of former ages, the Sadhyas, and the troops of the gods.

37. and the various activities of Agni, Vayu, and Vivasvat (the Sun), and the mighty power (ವಿಭೂತಿ) of Agni, and Vayu in the stationary, and moving world.

38. The taking (ಹರಣಂ) of water (ವಾಃ) by the (Snn's) rays and its discharge again. There is here also glorification of the activities of Parjanya, Agni, and Vivasvat (the Sun).

39. Now mother and son are Vac (Speech) and Prana (Breath): the mother is Vac, the son is the other (Prana). Prana is (meant by) 'Sarasvat', while Vac they call Sarasvati.

ಶರೀರಮಿಂದ್ರಿಯೈರ್ಯುಕ್ತಂ ಕ್ಷೇತ್ರಮಿತ್ಯಭಿಧೀಯತೇ ।
ವೇದ ತತ್ಪ್ರಾಣ ಏವೈಕಸ್ತಸ್ಮಾತ್ಕ್ಷೇತ್ರಜ್ಞ ಉಚ್ಯತೇ ॥ ೪೦ ॥

ಮೇಘೇ ಶಕಸ್ತಸ್ಯ ಧೂಮಃ ಸಲಿಲಂ ವಾಸ ಏವ ವಾ ।
ಸೋಮ ಉಕ್ಷಾ ಭವಂತ್ಯಸ್ಯ ಪಾವಕಾಶ್ಚ ತ್ರಯೋಽಧಿಪಾಃ ॥ ೪೧ ॥

ಗೌರೀರಂತಂ ವೈಶ್ವದೇವಮುಪರಿ ಸ್ಯಾತ್ಪೃಥಕ್ಸ್ತುತಿಃ ।
ಇಂದ್ರಂ ಮಿತ್ರಮಿಮೇ ಸೌರ್ಯೌ ಸೌರೀ ವಾಂತ್ಯಾ ಸರಸ್ವತೇ ॥ ೪೨ ॥

40. ಇಂದ್ರಿಯಗಳಿಂದ (ಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯ) ಕೂಡಿರುವ ಶರೀರಕ್ಕೆ ಕ್ಷೇತ್ರ ವೆಂದು ಹೆಸರು. ಪ್ರಾಣಕ್ಕೆ ಮಾತ್ರವೇ ಈ ಕ್ಷೇತ್ರದ ಸ್ವರೂಪವು ತಿಳಿದಿರುವುದು. ಆದ್ದರಿಂದ ಪ್ರಾಣ ಅಥವಾ ಆತ್ಮವನ್ನು ಕ್ಷೇತ್ರಜ್ಞನೆಂದು ಹೇಳುವರು.

41. ೧೬೪ ನೇ ಸೂಕ್ತದ ೪೩ ನೇ ಋಕ್ಕಿನಲ್ಲಿರುವ ಶಕವೆಂಬ ಶಬ್ದವು ಮೇಘವೆಂಬ ಅರ್ಥದಲ್ಲಿ ಉಪಯೋಗಿ ಸಲ್ಪಡುವುದು. ಧೂಮವೆಂದರೆ ನೀರು ಅಥವಾ ಆಚ್ಛಾದಿತವಾದ ವಸ್ತ್ರವು ; ವೃಷಭ (ಉಕ್ಷಾ) ಎಂದರೆ ಸೋಮವು. ಮೂರು ಮಂದಿ ಅಧಿಪತಿಗಳೇ ಈ ಸೋಮದ ಶುದ್ಧಿಕಾರಕರು.

42. **ಗೌರೀರ್ಮಿಮಾಯ** ಎಂಬ ಋಕ್ಕಿನವರೆಗಿರುವ ಈ ಸೂಕ್ತಭಾಗವು ಎಂದರೆ ೧-೪೧ ಋಕ್ಕುಗಳು ವಿಶ್ವೇದೇವತಾಕವು. ಅನಂತರ ಮುಂದೆ ಇರುವ ಋಕ್ಕುಗಳಲ್ಲಿ ದೇವತೆಗಳನ್ನು ಆವರವರ ಹೆಸರಿನಿಂದ ಬೇರೆಬೇರೆಯಾಗಿ ಸ್ತುತಿಸಲಾಗಿದೆ. **ಇಂದ್ರಂ ಮಿತ್ರಂ** ಎಂದು ಮೊದಲಾಗುವ ಎರಡು ಋಕ್ಕುಗಳಿಗೆ (೪೬-೪೭) ಸೂರ್ಯನು ದೇವತೆಯು. **ದಿವ್ಯಂ ಸುಪರ್ಣಂ** ಎಂಬ ಕೊನೆಯ ಋಕ್ಕಿಗೆ (೫೨ ನೇ ಋಕ್ಕಿಗೆ) **ಸರಸ್ವಾನ್** ಅಥವಾ ಸೂರ್ಯನು ದೇವತೆ ಯಾಗಬಹುದು.

---

40. The body joined with the organs of sense is designated ksetra (ಕ್ಷೇತ್ರ) Prana alone knows it: hence he (ಪ್ರಾಣ) is spoken of as 'he who knows the body' (ಕ್ಷೇತ್ರಜ್ಞ).

9. RV. i. 164 (concluded). RV. i. 165: Indra and the Maruts.

41. Saka is (used) in (the sense of) cloud; its dhuma (ಧೂಮ) is water orgarment. The bull is Soma; and the three lords (ಅಧಿಪ) are his purifiers.

42. That (part of i. 164) which ends with (the (stanza) 'The buffalo' (ಗೌರೀಃ: i. 164. 41) is addressed to the All-gods: afterwards there may be (said to be) separate praise (ಪೃಥಕ್ ಸ್ತುತಿ). The two (stanzas: 46-47), 'Indra, Mitra' (ಇಂದ್ರಂ ಮಿತ್ರಂ: i. 164, 46), are addressed to Surya: the last (stanza) to Sarasvat (i. 164-52) may optinally (ವಾ) be addressed to Surya.

ಸೂಕ್ತಮಲ್ಪಸ್ತವಂ ಶ್ವೇತಜ್ಞಾನಮೇವ ಪ್ರಶಂಸತಿ ।
ಸ್ರವಾದಬಹುಲತ್ವಾಚ್ಚ ತತಃ ಸಲಿಲಮುಚ್ಯತೇ ॥ ೪೩ ॥
ಮಾರುತೈಂದ್ರಸ್ತು ಸಂವಾದಃ ಕಯೇತಿ ಪರಮಃ ಸ್ಮೃತಃ ।
ಮರುತಾಮಯುಜಸ್ತ್ವೈಂದ್ರ್ಯೋ ಯುಗ್ಮಾಃ ಸರ್ವಾಃ ಸಹಾಂತ್ಯಯಾ ॥ ೪೪ ॥
ಏಕಾದಶೀ ಪ್ರಥಮಾ ಚ ಮಾರುತಸ್ತ್ರ್ಯಚ ಉತ್ತರಃ ।
ತೃಚಸ್ಯೈವ ತು ತತ್ರೋಕ್ತಂ ಕರ್ತೃತ್ವಮಿತರಸ್ಯ ತು ॥ ೪೫ ॥
ಇತಿಹಾಸಃ ಪುರಾವೃತ್ತ ಋಷಿಭಿಃ ಪರಿಕೀರ್ತ್ಯತೇ ।
ಸಮಾಗಚ್ಛನ್ಮರುದ್ಭಿಸ್ತು ಚರನ್ವ್ಯೋಮ್ನಿ ಶತಕ್ರತುಃ ॥ ೪೬ ॥

43. ಈ ೧೬೪ ನೇ ಸೂಕ್ತದಲ್ಲಿ ಸ್ತೋತ್ರಭಾಗವು ಸ್ವಲ್ಪವಾಗಿರುವುದು. ಆದರೆ ಮುಖ್ಯವಾಗಿ ಜ್ಞಾನನನ್ನೇ (ಜ್ಞಾನವಿಷಯವನ್ನೇ) ಹೆಚ್ಚಾಗಿ ಪ್ರತಿಪಾದಿಸಲಾಗಿದೆ. ನಾನಾನಿಧ ವಿಷಯಗಳ ನಿರೂಪಣೆಯೂ ಇದೆ. ಆದ್ದರಿಂದ ಸಲಿಲ ಎಂದರೆ ನೀರಿನ ವಿಷಯವೂ ಉಕ್ತವಾಗಿದೆ.

೧೬೫-೧೬೪ ನೇ ಸೂಕ್ತಗಳ ದೇವತೆಗಳು

44. **ಕಯಾ ಶುಭ್ರಾ** ಎಂಬ ೧೬೫ ನೇ ಸೂಕ್ತದಲ್ಲಿ ಮರುದ್ದೇವತೆಗಳಿಗೂ ಇಂದ್ರನಿಗೂ ನಡೆದ ಸಂಭಾಷಣೆಯ ವಿವರವಿದೆ. ಈ ಸೂಕ್ತದ ಋಕ್ಕುಗಳಲ್ಲಿ ಅಸಮಸಂಖ್ಯೆಯ ಋಕ್ಕುಗಳು ಮರುದ್ವಾಕ್ಯಗಳು. ಸಮಸಂಖ್ಯೆಯ ಋಕ್ಕುಗಳು (ಕೊನೆಯ ಋಕ್ಕೂ ಸೇರಿ) ಇಂದ್ರನ ವಾಕ್ಯವು.

45. ಮೇಲಿನ ಸೂಕ್ತದಲ್ಲಿ (೧೬೫) ೧ ಮತ್ತು ೧೧ ನೇ ಋಕ್ಕುಗಳೂ ಇಂದ್ರನ ವಾಕ್ಯವು. ಎಂದರೆ ಈ ಋಕ್ಕುಗಳಿಗೆ ಮರುತ್ತುಗಳೇ ದೇವತೆಯು. ಕೊನೆಯ ಮೂರು ಋಕ್ಕುಗಳಿಗೆ ಕರ್ತೃವು ಬೇರೆ ಇರುವುದೆಂದು ಅಭಿಪ್ರಾಯಭೇದವಿದೆ.

ಮರುದ್ದೇವತೆಗಳ ವಿಷಯದಲ್ಲಿ ಒಂದು ಇತಿಹಾಸವು

46. ಪೂರ್ವಕಾಲದಲ್ಲಿ ನಡೆದ ಒಂದು ಇತಿಹಾಸವನ್ನು ಋಷಿಗಳು ಈರೀತಿ ಹೇಳುವರು. ಒಂದಾನೊಂದು ಕಾಲದಲ್ಲಿ ಇಂದ್ರನು ಸಂಚಾರಮಾಡುತ್ತಿದ್ದಾಗ ಅವನು ಮರುದ್ದೇವತೆಗಳನ್ನು ಕಂಡನು.

---

43. Now this hymn contains little praise: it lauds knowledge. And because it contains many statements, water (ಸಲಿಲ) is also mentioned (in it).

44. (The hymn) 'With what?' (ಕಯಾ : i. 165) is traditionally held to be the chief (ಪರಮ) dialogue of Maruts and Indra. The odd (stanzas) are (the speech) of the Maruts, all the even ones, including the last, are Indra's.

45. (as well as) the eleventh and the first. The next triplet (i. 165. 13-15) is addressed to the Maruts.

But the authorhip (ಕರ್ತೃತ್ವಂ) of the triplet there is attributed to another.

46. A story of ancient events (ಪುರಾವೃತ್ತ) is (here) proclaimed by the seers.

Satakratu (Indra), while roaming in the sky, fell in with the Maruts.

ದೃಷ್ವಾ ತುಷ್ಟಾವ ತಾನಿಂದ್ರಸ್ತೇ ಚೇಂದ್ರಮೃಷಯೋಽಬ್ರುವನ್ ।
ತೇಷಾಮಗಸ್ತ್ಯಃ ಸಂವಾದಂ ತಪಸಾ ವೇದ ತತ್ತ್ವತಃ ॥ ೪೭ ॥

ಸ ತಾನಭಿಜಗಾಮಾಶು ನಿರುಪ್ಯೇಂದ್ರಂ ಹವಿಸ್ತದಾ ।
ಮರುತಶ್ಚಾಭಿತುಷ್ಟಾವ ಸೂಕ್ತೈಸ್ತನ್ನಿತಿ ಚ ತ್ರಿಭಿಃ ॥ ೪೮ ॥

ಮಹಶ್ಚಿದಿತಿ ಚೈವೇಂದ್ರಂ ಸಹಸ್ರಮಿತಿ ಚೈತಯಾ ।
ನಿರುಪ್ತಂ ತದ್ದಿವಿಷ್ಟೇಂದ್ರಂ ಮರುದ್ಭ್ಯೋ ದಾತುಮಿಚ್ಛತಿ ॥ ೪೯ ॥

ವಿಜ್ಞಾಯೋವೇಕ್ಷ್ಯ ತದ್ಭಾವಮಿಂದ್ರೋ ನೇತಿ ತಮಬ್ರವೀತ್ ।

47. ಆಗ ಇಂದ್ರನು ಆ ಮರುದ್ದೇವತೆಗಳನ್ನು ಸ್ತುತಿಸಿದನು. ಮರುತ್ತುಗಳೂ ಋಷಿಗಳು ದೇವತೆಗಳನ್ನು ಸ್ತುತಿಸುವಂತೆ ಇಂದ್ರನನ್ನು ಸ್ತುತಿಸಿದರು. ಮರುತ್ತುಗಳಿಗೂ, ಇಂದ್ರನಿಗೂ ನಡೆದ ಈ ಸಂಭಾಷಣೆಯನ್ನು ಅಗಸ್ತ್ಯ ಋಷಿಯು ತನ್ನ ತಪೋಮಹಿಮೆಯಿಂದ ತಿಳಿದನು (೧೬೫ ನೇ ಸೂಕ್ತ).

48. ಬಳಿಕ ಆ ಅಗಸ್ತ್ಯನು ಇಂದ್ರನಿಗಾಗಿ ಹವಿಸ್ಸನ್ನು ಸಿದ್ಧಪಡಿಸಿ ಅನಂತರ ಶೀಘ್ರವಾಗಿ ಮರುದ್ದೇವತೆಗಳ ಸಮೀಪಕ್ಕೆ ಹೋಗಿ ಅವರನ್ನು **ತನ್ನು ವೋಚಾಮ** ಎಂದು ಮೊದಲಾಗುವ ಮೂರು ಸೂಕ್ತಗಳಿಂದ (೧೬೬–೧೬೮) ಸ್ತುತಿಸಿದನು.

ಇಂದ್ರ, ಮರುತ್ತುಗಳು ಮತ್ತು ಅಗಸ್ತ್ಯಋಷಿ (೧೬೯-೧೭೦)

49. ಅನಂತರ ಅಗಸ್ತ್ಯನು **ಮಹಶ್ಚಿತ್** ಎಂಬ ೧೬೯ ನೇ ಸೂಕ್ತದಿಂದ ಇಂದ್ರನನ್ನು ಸ್ತುತಿಸಿದನು ಮತ್ತು **ಸಹಸ್ರಂ** ಎಂಬ ಋಕ್ಕಿನಿಂದ (೧೬೭ ನೇ ಸೂಕ್ತದ ೧ ನೇ ಋಕ್ಕಿನಿಂದ) ಹಿಂದೆ ಹೇಳಿದಂತೆ ಇಂದ್ರನಿಗಾಗಿ ತಾನು ಸಿದ್ಧಮಾಡಿದ ಹವಿಸ್ಸನ್ನು ಮರುದ್ದೇವತೆಗಳಿಗೆ ಕೊಡಲು ಇಚ್ಛಿಸಿದನು.

50. ಋಷಿಯ ಆಶಯವನ್ನು ಇಂದ್ರನು ತಿಳಿದು ತನಗಾಗಿ ಸಿದ್ಧಪಡಿಸಿದ ಹವಿಸ್ಸನ್ನು ಮರುದ್ದೇವತೆಗಳಿಗೆ ಕೊಡಕೂಡದೆಂದು ಹೇಳಿದನು ಮತ್ತು (ಎಲೈ ಋಷಿಯೇ, ನೀನು ನನಗಾಗಿ ಹವಿಸ್ಸನ್ನು ನಾಳೆ ಕೊಡುವೆನೆಂದು ಹೇಳುವಿಯಾದರೆ) ನಿಜವಾಗಿ ನೋಡುವುದಾದರೆ ನಾಳೆ ಎಂಬುವುದು ಯಾವುದೂ ಇಲ್ಲ, ಈಗ ಎನ್ನುವುದೂ ಇಲ್ಲ. ಏಕೆಂದರೆ

---

47. On seeing them Indra praised them, and they as seers addressed Indra. By the aid of austerity Agastya became fully (ತತ್ತ್ವತಃ) aware of their dialogue.

48. He quickly went to them after having prepared (ನಿರುಪ್ಯ) an oblation to Indra, and he praised the Maruts also with the three hymns (i. 166–168) ' Now that ' (ತನ್ನು : i. 166. 1).

10. Indra, the Maruts, and Agastya : RV. i. 169, 170.

49. And (with) ' Even from great ' (ಮಹಶ್ಚಿತ್ : i. 169) he (praised) Indra, and with the (stanza) ' A thousand ' (ಸಹಸ್ರಂ : i. 167. 1) he wished to give the oblation which he had prepared (ನಿರುಪ್ತಂ) for Indra to the Maruts.

50 Indra recognizing his intention (ತದ್ಭಾವಂ) said to him regarding

ನ ಶ್ವೋ ನಾದ್ಯತನಂ ಹ್ಯಸ್ತಿ ವೇದ ಕಸ್ತದ್ಯದದ್ಭುತಂ ॥ ೫೦ ॥

ಕಸ್ಯ ಚಿತ್ತ್ವರ್ಥಸಂಚಾರೇ ಚಿತ್ತಮೇವ ವಿನಶ್ಯತಿ ।
ಕಿಂ ನ ಇತ್ಯಬ್ರವೀದಿಂದ್ರಮಗಸ್ತ್ಯೋ ಭ್ರಾತರಸ್ತವ ॥ ೫೧ ॥

ಮರುದ್ಭಿಃ ಸಂಪ್ರಕಲ್ಪಸ್ವ ವಧೀರ್ಮಾ ನಃ ಶತಕ್ರತೋ ।
ಕಿಂ ನೋ ಭ್ರಾತರಿತಿ ತ್ವಸ್ಯಾಮಿಂದ್ರೋ ಮಾನ್ಯಮುಪಾಲಭತ್ ॥ ೫೨ ॥

ಅಗಸ್ತ್ಯಸ್ತ್ವರಮಿತ್ಯಸ್ಯಾಂ ಕ್ಷುಬ್ಧಮಿಂದ್ರಂ ಪ್ರಶಾಮಯತ್ ।
ಪ್ರಾದಾತ್ಸಂವನನಂ ಕೃತ್ವಾ ತೇಭ್ಯ ಏವ ಚ ತದ್ಧವಿಃ ॥ ೫೩ ॥

ಮುಂದೆ ಏನು ಸಂಭವಿಸುವುದೆಂಬುವುದನ್ನು ಯಾರೂ ತಿಳಿಯಲಾರರು ಎಂಬರ್ಥವಿರುವ **ನ ಶ್ವೋನಮಸ್ತಿ** (೧೭೦ ನೇ ಸೂಕ್ತದ ೧ ನೇ ಋಕ್ಕಿನಿಂದ) ತಿಳಿಯಪಡಿಸಿದನು.

51. ಒಬ್ಬ ಪುರುಷನ ಉದ್ದೇಶವು ಸ್ಥಿಮಿತವಿಲ್ಲದಿದ್ದರೆ ಅವನ ಮನಸ್ಸಿನ ನಿಶ್ಚಯವೇ ಅಥವಾ ಉದ್ದೇಶವೇ ನಾಶವಾಗುವುದು ಎಂದರೆ ಸ್ಥಿರಮನಸ್ಕನಾಗಿರದಿದ್ದರೆ ಅವನ ಉದ್ದೇಶವು ಸಫಲವಾಗುವುದಿಲ್ಲ ಎಂದು ಇಂದ್ರನು ಹೇಳಲು ಅಗಸ್ತ್ಯನು ಅದಕ್ಕೆ ಪ್ರತ್ಯುತ್ತರವಾಗಿ—**ಕಿಂ ನಃ** (೧೭೦ ರಲ್ಲಿ ೨ನೇ ಋಕ್ಕು) ಎಂಬ ಋಕ್ಕಿನಿಂದ, ಎಲೈ ಇಂದ್ರನೇ, ಅದೇಕೆ ಹಾಗೆ ಹೇಳುವಿ? ನಿನಗೆ ಸಿದ್ಧಪಡಿಸಿದ ಹವಿಸ್ಸನ್ನು ಮರುತ್ತುಗಳಿಗೆ ಏಕೆ ಕೊಡಬಾರದು?) ಆ ಮರುತ್ತುಗಳು ನಿನಗೆ ಸಹೋದರರಲ್ಲವೇ?

52. ಮರುತ್ತುಗಳೊಡನೆ ಸಮಾಧಾನದಿಂದಿರು (ಎಂದರೆ ಮರುತ್ತುಗಳಿಗೆ ಹವಿಸ್ಸನ್ನು ಅರ್ಪಿಸುವ ವಿಷಯದಲ್ಲಿ ನೀನು ಸಮ್ಮತಿಸು). ಎಲೈ ಇಂದ್ರನೇ ನಮ್ಮನ್ನು ಕೊಲ್ಲಬೇಡ ಎಂದನು. ಅದಕ್ಕೆ ಇಂದ್ರನು **ಕಿಂ ನೋ ಭ್ರಾತಃ** (೧೭೦ ರಲ್ಲಿ ೩ ನೇ ಋಕ್ಕು) ಎಂಬ ಋಕ್ಕಿನಿಂದ ಅಗಸ್ತ್ಯನನ್ನು ಆಕ್ಷೇಪಿಸಿದನು.

53. ಆದರೆ ಅಗಸ್ತ್ಯನು **ಅರಂ ಕೃಣ್ವಂತು** (೧೭೦ ರಲ್ಲಿ ೪ ನೇ ಋಕ್ಕು) ಎಂಬ ಋಕ್ಕಿನಿಂದ ವಿಹ್ವಲನಾದ ಇಂದ್ರನನ್ನು ಸಮಾಧಾನಮಾಡಿದನು ಮತ್ತು ಸಮಾಧಾನಮಾಡಿದನಂತರ ಆ ಹವಿಸ್ಸನ್ನು ಆ ಮರುತ್ತುಗಳಿಗೇ ಅರ್ಪಿಸಿದನು.

(ಅವೇಕ್ಷ್ಯ) it, ' Not ' (ನ : i. 170. 1) : ' there is, indeed, not (anything for) to-morrow, nor to-day : who knows that which has not beem (ಅದ್ಭುತಂ) ' ?

51. ' But the intention itself (ಚಿತ್ತಮೇವ) of any one, in the uncertainty of purpose (ಅರ್ಥಸಂಚಾರೇ), comes to naught '. Agastya (then) said to Indra, ' Why us ? ' (ಕಿಂ ನಃ : i. 170. 2i ;) they (the Maruts) are your brothers.

52. ' Agree with the Maruts ; slay us not, Satakrtu '. But in the (stanza) ' Why us, O Brother ? ' (ಕಿಂ ನೋ ಭ್ರಾತಃ : i. 170. 3) Indra reproached Manya (ಅಗಸ್ತ್ಯ).

53. But Agastya in the (stanza) ' Ready ' (ಅರಂ : i. 170. 4) pacified the agitated (ಕ್ಷುಬ್ಧ) Indra. After propitiating him, he made over the oblation to them (the Maruts).

ಸುತೇ ಚಕಾರ ಸೋಮೇಽಥ ತಾನಿಂದ್ರಃ ಸೋಮಪೀಥಿನಃ ।
ತಸ್ಮಾದ್ವಿದ್ಯಾನ್ನಿಪಾತೇನ ಐಂದ್ರೇಷು ಮರುತಃ ಸ್ತುತಾನ್ ॥ ೫೪ ॥

ಪ್ರೀತಾತ್ಮಾ ಪುನರೇವರ್ಷಿಸ್ತಾಂಸ್ತುಷ್ಟಾವ ಪೃಥಕ್ಪೃಥಕ್ ।
ಮರುತಃ ಪ್ರತಿ ಸೂಕ್ತಾಭ್ಯಾಮಿಂದ್ರಂ ಷಡ್ಭಿಃ ಪರೈಸ್ತು ಸಃ ॥ ೫೫ ॥

ಸ್ತುತಶ್ಚ ತಸೃಭಿಶ್ಚೇಂದ್ರಃ ಸ್ತುತಾಸ ಇತಿ ತೈಃ ಸಹ ।
ಮರುದ್ಭಿಃ ಸಹ ಯತ್ರೇಂದ್ರೋ ಮರುತ್ವಾಂಸ್ತತ್ರ ಸೋಽಭವತ್ ॥ ೫೬ ॥

ಋತೌ ಸ್ನಾತಾಮೃಷಿರ್ಭಾರ್ಯಾಂ ಲೋಪಮುದ್ರಾಂ ಯಶಸ್ವಿನೀಂ ।
ಉಪಜಲ್ಪಿತುಮಾರೇಭೇ ರಹಃಸಂಯೋಗಕಾಮ್ಯಯಾ ॥ ೫೭ ॥

54. ಆದ್ದರಿಂದ ಸೋಮರಸವು ಹಿಂಡಲ್ಪಡುವಾಗಲೆಲ್ಲಾ ಇಂದ್ರನು ಮರುತ್ತುಗಳಿಗೆ ಸೋಮಪಾನವು ಲಭಿಸುವಂತೆ ಮಾಡಿದನು. ಆದ್ದರಿಂದ ಇವನನ್ನು ಸ್ತುತಿಸುವ ಸೂಕ್ತಗಳಲ್ಲಿ ಮರುದ್ದೇವತೆಗಳ ವಿಷಯವು ಪ್ರಾಸಂಗಿಕವಾಗಿ ಉಕ್ತವಾಗಿರುವುದು.

55. ಸಂತುಷ್ಟನಾದ ಆ ಅಗಸ್ತ್ಯಋಷಿಯು ಮರುದ್ದೇವತೆಗಳನ್ನೂ, ಇಂದ್ರನನ್ನೂ ಬೇರೆ ಬೇರೆ ಸೂಕ್ತಗಳಿಂದ ಸ್ತುತಿಸಿದನು. **ಪ್ರತಿ ವ** ಎಂದು ಮೊದಲಾಗುವ ಎರಡು ಸೂಕ್ತಗಳಿಂದ (೧೭೧-೧೭೨) ಮರುದ್ದೇವತೆಗಳನ್ನೂ ಅದರ ಮುಂದಿನ ಆರು ಸೂಕ್ತಗಳಿಂದ (೧೭೩-೧೭೮) ಇಂದ್ರನನ್ನೂ ಪ್ರತ್ಯೇಕವಾಗಿ ಸ್ತುತಿಸಿದನು.

56. ಮತ್ತು ೧೭೧ ನೇ ಸೂಕ್ತದ **ಸ್ತುತಾಸಃ** ಎಂದು ಮೊದಲಾಗುವ ೪ ಋಕ್ಕುಗಳಿಂದ (೩-೬) ಇಂದ್ರನು ಮರುದ್ದೇವತೆಗಳೊಡನೆ ಸಹಿತನಾಗಿ ಸ್ತುತಿಸಲ್ಪಟ್ಟಿರುವನು. ಆದ್ದರಿಂದ ಮರುದ್ದೇವತೆಗಳೊಡನೆ ಇಂದ್ರನು ಎಲ್ಲೆಲ್ಲಿ ಸ್ತುತಿಸಲ್ಪಡುವನೋ ಅಲ್ಲೆಲ್ಲಾ ಇಂದ್ರನನ್ನು **ಮರುತ್ವಾನ್** (ಮರುದ್ದೇವತೆಗಳೊಡನೆ ಸಹಿತನಾದವನು) ಎಂದು ಸ್ತುತಿಸಲಾಗಿದೆ.

ಅಗಸ್ತ್ಯ ಮತ್ತು ಅವನ ಪತ್ನಿಯಾದ ಲೋಪಾಮುದ್ರಾ ; ೧೭೯ ನೇ ಸೂಕ್ತ

57. ಒಂದಾನೊಂದುಕಾಲದಲ್ಲಿ ಅಗಸ್ತ್ಯಋಷಿಯು ಋತುಸ್ನಾನಮಾಡಿದ ತನ್ನ ಭಾರ್ಯೆಯಾದ ಲೋಪಾಮುದ್ರೆಯೊಡನೆ ರಹಸ್ಯವಾಗಿ ಸಂಭೋಗಮಾಡಲು ಅಪೇಕ್ಷಿಸಿ ಅವಳೊಡನೆ ಸಂವಾದಮಾಡಲುಪಕ್ರಮಿಸಿದನು.

11. RV. i. 171-178. Agastya and Lopamudra : RV. i. 179.

54. Then when Soma had been pressed, Indra made them (the Maruts) drinkers of Soma (with him). Therefore one should understand that in (hymns) addressed to Indra the Maruts are incidentally praised.

55. Pleased at heart the seer praised the Maruts again seperately in the two (171, 172) hymns ' To you ' (प्रति : i 171. 1), but Indra with the six follhwing ones (173-178).

56. And Indra in thc four (etanzas) ' praised ' (स्तुतासः : i. 171, 3-6) is praised with them. Wherever Indra was with the Maruts, he was Marutvat (attended by the Maruts).

57. The seer began, from desire of secret union, to talk to his wife, the illustrious Lopamudra, when she had bathed after her courses (ऋतौ).

ದದರ್ಶ ತದಗಸ್ತ್ಯೋ ವಾ ವಿಷಘ್ನಂ ವಿಷಶಂಕಯಾ ।
ಅದೃಷ್ಟಾಖ್ಯೋ ನಷ್ಟರೂಪಃ ಸೂಕ್ತಸ್ಯಾಂತ್ಯೋ೭ತ್ರ ತು ದ್ವ್ಯೃಚಃ ॥ ೬೪ ॥

॥ ಇತಿ ಪ್ರಥಮಂ ಮಂಡಲಂ ಸಮಾಪ್ತಂ ॥

64. ಅಥವಾ ವಿಷವು ತನ್ನ ದೇಹಕ್ಕೆ ಸೇರಿದೆಯೆಂಬ ಶಂಕೆಯಿಂದ ವಿಷಪರಿಹಾರಕವಾದ ಈ ಸೂಕ್ತವು ಅಗಸ್ತ್ಯಋಷಿಗೆ ದೃಷ್ಟವಾಯಿತೆಂದೂ ಕೆಲವರ ಅಭಿಪ್ರಾಯವಿರುವುದು. ಈ ಸೂಕ್ತದ (೧೯೧) ಕೊನೆಯ ಎರಡು ಋಕ್ಕುಗಳಲ್ಲಿ ಯಾವ ನಿರ್ದಿಷ್ಟವಾದ ಹೆಸರೂ ಇರುವುದಿಲ್ಲ ಮತ್ತು ಅವುಗಳ ಸ್ವರೂಪವೂ ವಿಶದವಾಗಿಲ್ಲ.

ಇಲ್ಲಿಗೆ ಬೃಹದ್ದೇವತಾ ಗ್ರಂಥದಲ್ಲಿ ಮೊದಲನೆಯ ಮಂಡಲದ ವಿವರಣೆಯು ಸಮಾಪ್ತವು.

64. Or Agastya, in fear of poison, saw this (hymn) as an antidote. The last couplet here of the hymn, however, contains no distinct name (ಅದೃಷ್ಟಾಖ್ಯಃ) and its character is obscure (ನಷ್ಟರೂಪಃ).

End of I Mandla.

ಯುವೋ ರಜಾಂಸೀತಿ ತತಃ ಸೂಕ್ತೈಃ ಪಂಚಭಿರಶ್ವಿನೌ ।
ಅಗಸ್ತ್ಯ ಏವ ತುಷ್ಟಾವ ಕತರೇತಿ ಪರೇಣ ತು ॥ ೬೧ ॥

ದ್ಯಾವಾಪೃಥಿವ್ಯೌ ಸೂಕ್ತೇನ ಆ ನೋ ವಿಶ್ವಾನ್ದಿವೌಕಸಃ ।
ಪಿತುಮನ್ನಂ ಸಮಿದ್ಧಾಗ್ನ್ಯೇ ಅಗ್ನಿಮಗ್ನೇ ನಯೇತಿ ಚ ॥ ೬೨ ॥

ಬೃಹಸ್ಪತೇರನರ್ವಾಣಂ ಕಂಕತೋಪನಿಷತ್ಪರಂ ।
ಅಪಾಂ ತೃಣಾನಾಂ ಸೂರ್ಯಸ್ಯ ಕೇಚಿದೇತಾಂ ಸ್ತುತಿಂ ವಿದುಃ ॥ ೬೩ ॥

೧೮೦-೧೯೧ ನೇ ಸೂಕ್ತಗಳು

61. **ಯುವೋ ರಜಾಂಸಿ** ಎಂದು ಮೊದಲಾಗುವ ಐದು ಸೂಕ್ತಗಳಿಂದ (೧೮೦-೧೮೪) ಅಗಸ್ತ್ಯಮುನಿಯು ಅಶ್ವಿನೀದೇವತೆಗಳನ್ನು ಸ್ತುತಿಸಿದುವನು. ಅದರ ಜುಂದಿನ ಸೂಕ್ತವಾದ **ಕತರಾ ಪೂರ್ವಾ** ಎಂಬ ೧೮೫ ನೇ ಸೂಕ್ತದಿಂದ,

62. ದ್ಯಾವಾಪೃಥಿವಿಗಳನ್ನೂ **ಆ ನಃ** ಎಂಬ ೧೮೬ ನೇ ಸೂಕ್ತದಿಂದ ವಿಶ್ವೇದೇವತೆಗಳನ್ನೂ, **ಪಿತುಂ ನ** ಎಂಬ ೧೮೭ ನೇ ಸೂಕ್ತದಿಂದ ಅನ್ನವನ್ನೂ ಸ್ತುತಿಸಿಯುವನು. **ಸಮಿದ್ಧಃ** ಎಂಬ ೧೮೮ ನೇ ಸೂಕ್ತವು ಆಪ್ರೀಸೂಕ್ತವು ; **ಅಗ್ನೇ ನಯ** ಎಂಬ ೧೮೯ ನೇ ಸೂಕ್ತದಲ್ಲಿ ಅಗ್ನಿಯನ್ನು ಸ್ತುತಿಸಲಾಗಿದೆ.

63. **ಅನರ್ವಾಣಂ** ಎಂಬ ೧೯೦ ನೇ ಸೂಕ್ತಕ್ಕೆ ಬೃಹಸ್ಪತಿಯು ದೇವತೆಯು ; **ಕಂಕತೋ ನ** ಎಂಬ ೧೯೧ ನೇ ಸೂಕ್ತವು ಉಪನಿಷತ್ಪರವಾಗಿರುವುದು. ಆದರೆ ಕೆಲವರು ಈ ಸೂಕ್ತದಲ್ಲಿ ಅಬ್ದೇವತೆಗಳನ್ನೂ ತೃಣಾಭಿಮಾನಿ ದೇವತೆಯನ್ನೂ ಸೂರ್ಯನನ್ನೂ (ಅಪ್ತೃಣಸೂರ್ಯಾಃ) ಸ್ತುತಿಸಲಾಗಿದೆಯೆಂದು ಅಭಿಪ್ರಾಯಪಡುವರು.

---

61. Then with the five hymns (i. 180-184), 'Your (coursers) through the regions' (ಯುವೋ ರಜಾಂಸಿ : i. 180. 1), Agastya praised the Asvins; but with the following, 'Which of the two'? (ಕತರಾ : i. 185).

62. (he praised) Heaven and Earth; with the hymn 'To our' (ಆ ನಃ : i. 186), all the dwellers in the sky (ವಿಶ್ವಾನ್ ದಿವೌಕಸಃ); (with) 'The draught' (ಪಿತುಂ : i. 187), Food; 'Kindled' (ಸಮಿದ್ಧಃ : i. 188) is an Apri hymn and (with) 'O Agni, lead' (ಅಗ್ನೇ ನಯ : i. 189), (he praised) Agni.

63. 'The resistless' (ಅನರ್ವಾಣಂ : i. 190) is to Brhaspati. The following (hymn), 'Venomous creatuae' (ಕಂಕತಃ : i. 191), is of esoteric import (ಉಪನಿಷತ್). Some consider this to be a praise of Waters, Grass, and the Sun.

ಅಥ ದ್ವಿತೀಯಂ ಮಂಡಲಂ

ಅಸ್ತ್ವಿದ್ಗೃತ್ಸಮದೋಽಗ್ನಿಂ ತ್ವಂ ಜಾತವೇದಸ್ಯಮಾಪ್ರಿಯಃ ।
ಯಜ್ಞೀನಾಥ ಸಮಿದ್ಧೋಽಗ್ನಿರತೋಽಗ್ನಿಂ ಸಪ್ತಭಿರ್ಭುವೇ ॥ ೬೫ ॥

ಸಂಯುಜ್ಯ ತಪಸಾತ್ಮಾನಮೈಂದ್ರಂ ಬಿಭ್ರನ್ಮಹದ್ವಪುಃ ।
ಅದೃಶ್ಯತ ಮುಹೂರ್ತೇನ ದಿವಿ ಚ ವ್ಯೋಮ್ನಿ ಚೇಹ ಚ ॥ ೬೬ ॥

ತಮಿಂದ್ರಮಿತಿ ಮತ್ವಾ ತು ದೈತ್ಯೌ ಭೀಮಪರಾಕ್ರಮೌ ।
ಧುನಿಶ್ಚ ಚುಮುರಿಶ್ಚೋಭೌ ಸಾಯುಧಾವಭಿಪೇತತುಃ ॥ ೬೭ ॥

ಎರಡನೆಯ ಮಂಡಲವು

೨ ನೇ ಮಂಡಲದ ೧-೧೨ ಸೂಕ್ತಗಳು; ಗೃತ್ಸಮದ, ಇಂದ್ರ ಮತ್ತು ದೈತ್ಯರು

65. ಈ ೨ ನೇ ಮಂಡಲದ ದ್ರಷ್ಟೃವಾದ ಗೃತ್ಸಮದಋಷಿಯು **ತ್ವಮಗ್ನೇ** ಎಂಬ ಮೊದಲನೆಯ ಸೂಕ್ತದಿಂದ ಅಗ್ನಿಯನ್ನೂ **ಯಜ್ಞೀನ ವರ್ಧತ** ಎಂಬ ಎರಡನೆಯ ಸೂಕ್ತದಿಂದ ಜಾತವೇದೋಗ್ನಿಯನ್ನೂ ಸ್ತುತಿಸಿರುವನು. ಸಮಿದ್ಧೋ ಅಗ್ನಿಃ ಎಂಬ ೩ ನೇ ಸೂಕ್ತವು ಆಪ್ರೀಸೂಕ್ತವು; ಅದರ ಮುಂದಿನ **ಹುವೇ ವಃ** ಎಂದು ಮೊದಲಾಗುವ ೭ ನೇ ಸೂಕ್ತಗಳಲ್ಲಿ (೪-೧೦) ಅಗ್ನಿಯನ್ನು ಸ್ತುತಿಸಲಾಗಿದೆ.

66. ಒಂದು ಸಮಯದಲ್ಲಿ ಈ ಗೃತ್ಸಮದಋಷಿಯು ತನ್ನ ತಪಃಪ್ರಭಾವದಿಂದ ಇಂದ್ರನಂತಿರುವ ದೊಡ್ಡ ಶರೀರವನ್ನು ಧರಿಸಿ ಸ್ವಲ್ಪಕಾಲದವರೆಗೆ ಪೃಥಿವ್ಯಂತರಿಕ್ಷಸ್ವರ್ಗಗಳಲ್ಲಿ ಎಲ್ಲರಿಗೂ ಕಾಣಿಸುವಂತೆ ಗೋಚರಿಸಿದನು.

67. ಇಂದ್ರನ ಆಕಾರವನ್ನು ಧರಿಸಿ ಇಂದ್ರನಂತೆಯೇ ಕಾಣುತ್ತಿದ್ದ ಈ ಗೃತ್ಸಮದಋಷಿಯನ್ನು ಮಹಾಬಲ ಪರಾಕ್ರಮಶಾಲಿಗಳಾದ ಧುನಿ ಮತ್ತು ಚುಮುರಿ ಎಂಬಿಬ್ಬರು ದೈತ್ಯರು ನೋಡಿ ಅವನೇ ಇಂದ್ರನೆಂದು ತಿಳಿದು ಆಯುಧೋಪೇತರಾಗಿ ಅವನಮೇಲೆ ನುಗ್ಗಿಬಂದರು.

II Mandala.

13. Deities of RV. ii. 1-12. Grtsamada, Indra and the Daityas.

65. Grtsamada praised Agni (with) 'you' (त्वं : ii. 1). Then With sacrifice' (यज्ञीन : ii. 2) and 'Agni kindled' (समिद्धो अग्निः : ii. 3) are (respectively) addressed to Jatavedas and Apri stanzas. Then with the seven (hymns : 4-10) 'I call' (हुवे : ii. 4) (he prised) Agni.

66. Having applied himself to austerity, he with (बिभ्रत्) a great body like that of Indra (ऐन्द्र), in a moment appeared in heaven and air and here (on earth).

67. Now the two Daityas of terrible prowess, Dhuni and Chumuri, thinking him to be Indra, both fell upon him armed.

ವಿದಿತ್ವಾ ಸ ತಯೋರ್ಭಾವಮೃಷಿಃ ಪಾಪಂ ಚಿಕೀರ್ಷತೋಃ ।
ಯೋ ಜಾತ ಇತಿ ಸೂಕ್ತೇನ ಕರ್ಮಾಣ್ಯೈಂದ್ರಾಣ್ಯಕೀರ್ತಯತ್ ॥ ೬೮ ॥

ಉಕ್ತೇಷು ಕರ್ಮಸ್ವೈಂದ್ರೇಷು ಭೀಸ್ತಾವಾಶು ವಿವೇಶ ಹ ।
ಇದಮಂತರಮಿತ್ಯುಕ್ತ್ವಾ ತಾವಿಂದ್ರಸ್ತು ನಿಬರ್ಹಯತ್ ॥ ೬೯ ॥

ನಿಹತ್ಯ ತೌ ಗೃತ್ಸಮದಮೃಷಿಂ ಶಕ್ರೋಽಭ್ಯಭಾಷತ ।
ಯಥೇಷ್ಟಂ ಮಾಂ ಸಖೇ ಪಶ್ಯ ಪ್ರಿಯತ್ವಂ ಹ್ಯಾಗತೋಽಸಿ ಮೇ ॥ ೭೦ ॥

ವರಂ ಗೃಹಾಣ ಮತ್ತಸ್ತ್ವಮಕ್ಷಯಂ ಚಾಸ್ತು ತೇ ತಪಃ ।
ಪ್ರಹ್ವಸ್ತಂ ಪ್ರತ್ಯುವಾಚರ್ಷಿರಸ್ಮಾಕಂ ವದತಾಂ ವರ ॥ ೭೧ ॥

68. ಪಾಪಿಷ್ಠರಾದ ಈ ದೈತ್ಯರ ದುರಾಲೋಚನೆಯನ್ನು ತಿಳಿದು ಗೃತ್ಸಮದಋಷಿಯು **ಯೋ ಜಾತ ಏವ** ಎಂಬ ೧೨ ನೇ ಸೂಕ್ತದಿಂದ ಇಂದ್ರನ ಸಾಹಸಕಾರ್ಯಗಳನ್ನೂ ಗುಣಗಳನ್ನೂ ವರ್ಣಿಸಿದನು.

69. ಇಂದ್ರನ ಬಲಪರಾಕ್ರಮಗಳನ್ನು ಕೇಳಿ ಆ ದೈತ್ಯರ ಮನಸ್ಸಿನಲ್ಲಿ ಬಹಳವಾದ ಭೀತಿಯು ಆವರಿಸಿತು. ಇವರನ್ನು ಕೊಲ್ಲುವುದಕ್ಕೆ ಇದೇ ತಕ್ಕ ಸಮಯವು ಎಂದು ಇಂದ್ರನು ಹೇಳಿ (ತಿಳಿದು) ಆ ಇಬ್ಬರು ದೈತ್ಯರನ್ನೂ ಪ್ರಹರಿಸಿ ಕೊಂದನು.

ಗೃತ್ಸಮದ ಮತ್ತು ಇಂದ್ರ

70. ಈ ರೀತಿಯಾಗಿ ಆ ದೈತ್ಯರನ್ನು ಸಂಹಾರಮಾಡಿದ ಬಳಿಕ ಇಂದ್ರನು ಗೃತ್ಸಮದನನ್ನು ಕುರಿತು—ಎಲೈ ಮಿತ್ರನೇ, ನಾನು ನಿನಗೆ ಹಿತವನ್ನು ಬಯಸುವ ಮಿತ್ರನೆಂದು ತಿಳಿ. ಏಕೆಂದರೆ, ನೀನು ನನಗೆ ಪ್ರೀತಿಪಾತ್ರನಾಗಿರುವೆ.

71. ಆದ್ದರಿಂದ, ನಿನ್ನ ತಪಸ್ಸು ನಿರ್ವಿಘ್ನವಾಗಿ ನಡೆಯಲಿ. ನಿನಗೆ ಬೇಕಾದ ವರವನ್ನು ಕೇಳು, ಕೊಡುವೆನು ಎಂದನು. ಅದನ್ನು ಕೇಳಿ ಋಷಿಯು ಆ ಇಂದ್ರನನ್ನು ಬಗ್ಗಿ ನಮಸ್ಕರಿಸಿ ಇಂತೆಂದನು—ಮಾತನಾಡುವವರಲ್ಲಿ ಶ್ರೇಷ್ಠವಾದ ಎಲೈ ಇಂದ್ರನೇ,

---

68. The seer becoming aware of the intention (ಭಾವ) of these two bent on evil, proclaimed the deeds of Indra with the hymn ‘ Who when born ’ (ಯೋ ಜಾತಃ : ii. 12).

69. The deeds of Indra being (thus) declared, fear quickly entered them. Now Indra (saying) ‘ This is (my) opportunity, ’ struck them down (ನಿಬರ್ಹಯತ್).

14. Grtsamada and Indra.

70. Having smitten them down, Sakra addressed Grtsamada the seer : ‘ Look upon me, friend, as one beloved ; for you have become dear to me

71. ‘ Ask a boon of me ; and may your penance never fail.’ Bowing down, the seer replied to him : ‘ For us, O chief of speakers,

ತನೂನಾಮಸ್ತು ಚಾರಿಷ್ಟಿರ್ವಾಕ್ ಚಾಸ್ತು ಹೃದಯೇಂಗಮಾ ।
ಸುವೀರಾ ರಯಿಮಂತಶ್ಚ ವಯಂ ತ್ವಾಮಿಂದ್ರ ಧೀಮಹೇ ॥ ೭೨ ॥

ಇಂದ್ರ ತ್ವಾಂ ಚ ನಿಜಾನೀವೋ ವಯಂ ಜನ್ಮನಿ ಜನ್ಮನಿ ।
ತ್ವದ್ಗತಶ್ಚೈಷ ಮೇ ಭಾವೋ ಮಾಪಗಾಸ್ತ್ವಂ ರಥೀತರಃ ॥ ೭೩ ॥

ನಿರುಕ್ತಂ ತದಿದಂ ವಾರ್ಯಮಿಂದ್ರ ಶ್ರೇಷ್ಠಾನ್ಯೃಚಾಂತ್ಯಯಾ ।
ವವ್ರೇ ವರಮಿದಂ ಸರ್ವಂ ತದಾಕರ್ಣ್ಯ ಶಚೀಪತಿಃ ॥ ೭೪ ॥

ತಥೇತ್ಯುಕ್ತ್ವಾ ತುರಾಷಾಟ್ ತು ಪಾಣೌ ಜಗ್ರಾಹ ದಕ್ಷಿಣೇ ।
ಋಷಿಶ್ಚಾಸ್ಯ ಸಖಿತ್ವೇನ ಪಾಣಿನಾ ಪಾಣಿಮಸ್ಪೃಶತ್ ॥ ೭೫ ॥

72. ನಮ್ಮ ಶರೀರಗಳಿಗೂ ಮನಸ್ಸಿಗೆ ಸಂತೋಷವನ್ನುಂಟುಮಾಡುವ ವಾಕ್ಕಿಗೂ (ಮಾತು, ಕವಿತ್ವ) ಯಾವಾಗಲೂ ತೊಂದರೆಯುಂಟಾಗದಿರಲಿ. ವೀರರೂ ಧನಾಢ್ಯರೂ ಆದ ಪುತ್ರಾದಿಗಳನ್ನು ನಮಗೆ ಅನುಗ್ರಹಿಸು. ಎಲೈ ಇಂದ್ರನೇ, ನಮ್ಮ ಬುದ್ಧಿಯು ಯಾವಾಗಲೂ ನಿನ್ನಲ್ಲಿ ಅನುರಕ್ತವಾಗಲಿ.

73. ಎಲೈ ಇಂದ್ರನೇ, ನಾವು ಜನ್ಮಜನ್ಮಗಳಲ್ಲಿಯೂ ನಿನ್ನ ಮಹತ್ಸ್ವರೂಪವನ್ನು ತಿಳಿಯುವಂತಾಗಲಿ. ನನ್ನ ಮನಸ್ಸು ಯಾವಾಗಲೂ ನಿನ್ನಲ್ಲಿ ಅನುರಕ್ತವಾಗಿರಲಿ, ಬೇರೆಕಡೆ ಹೋಗದಿರಲಿ. ಎಲೈ ಇಂದ್ರನೇ, ನೀನು ರಥಿಕರಲ್ಲಿ ಶ್ರೇಷ್ಠನಾದವನು ಎಂದನು.

74. ಗೃತ್ಸಮದನು ಕೇಳಿದ ಈ ವರಗಳ ವಿಷಯವು **ಇಂದ್ರ ಶ್ರೇಷ್ಠಾನಿ** ಎಂಬ ಋಕ್ಕಿನವರೆಗಿರುವ (೨೧ನೇ ಸೂಕ್ತದ ೬ ನೇ ಋಕ್ಕು) ಸೂಕ್ತಗಳಲ್ಲಿ ವಿನ್ಯತವಾಗಿದೆ. ಗೃತ್ಸಮದಋಷಿಯು ಈ ರೀತಿಯಾದ ಸನುಸ್ತ ವರಗಳನ್ನೂ ಬೇಡಿದನು. ಅದನ್ನು ಕೇಳಿ ಇಂದ್ರನು,

75. ಹಾಗೆಯೇ ಆಗಲೆಂದು ಸಮ್ಮತಿಸಿ ಆ ಋಷಿಯ ಬಲಗೈಯನ್ನು ಹಿಡಿದುಕೊಂಡು ಅವನು ಕೇಳಿದ ವರಗಳನ್ನು ಕೊಟ್ಟನು. ಬಳಿಕ ಋಷಿಯೂ ಸಹ ಸ್ನೇಹಭಾವದಿಂದ ಇಂದ್ರನ ಹಸ್ತವನ್ನು ತನ್ನ ಹಸ್ತದಿಂದ ಸ್ಪರ್ಶ ಮಾಡಿದನು.

---

72. let there be both security for our bodies and speech that stirs the heart. Let us abound in heroes and wealth. We, O Indra, turn our thoughts (ಧೀಮಹೇ) to you ;

73. and you, O Indra, we discern in every birth, and this my heart is fixed on you ; go not away : you are the better chariot-fighter (ರಥೀತರಃ).

74. This choice (made by Grtsamada) is explained in the final (6) stanza (of RV. ii. 21), 'O Indra, the best' (ಇಂದ್ರ ಶ್ರೇಷ್ಠಾನಿ) : he chose all this as a boon. The Lord of Sachi hearing that,

15. Story of Indra and Grtsamada (continued).

75. the Swift Conqueror (ತುರಾಷಾಟ್) agreeing, grasped (him) by the right hand, and the seer, through his friendship for him, touched Indras's hand with his own.

ಸಹಿತೌ ಜಗ್ಮತುಶ್ಚೈವಂ ಮಹೇಂದ್ರಸದನಂ ಪ್ರತಿ ।
ತತ್ರೈನಮಾರ್ಹಯತ್ಪ್ರೀತ್ಯಾ ಸ್ವಯಮೇವ ಪುರಂದರಃ ॥ ೭೬ ॥

ಕರ್ಮಣಾ ವಿಧಿದೃಷ್ಟೇನ ತಮೃಷಿಂ ಚಾಭ್ಯಪೂಜಯತ್ ।
ಸಖಿತ್ವಾಚ್ಚ ಪುನಶ್ಚೈನಮುವಾಚ ಹರಿವಾಹನಃ ॥ ೭೭ ॥

ಗೃಣನ್ಮಾದಯಸೇ ಯಸ್ಮಾತ್ತ್ವಮಸ್ಮಾನೃಷಿಸತ್ತಮ ।
ತಸ್ಮಾದ್ಗೃತ್ಸಮದೋ ನಾಮ ಶೌನಹೋತ್ರೋ ಭವಿಷ್ಯಸಿ ॥ ೭೮ ॥

ತತೋ ದ್ವಾದಶಭಿಃ ಸೂಕ್ತೈಸ್ತುಷ್ಟಾವೇಂದ್ರಂ ಶ್ರುಧೀತ್ಯೃಷಿಃ ।
ದದರ್ಶ ಸಂಸ್ತುವನ್ನೇವ ತತ್ರ ಸ ಬ್ರಹ್ಮಣಸ್ಪತಿಂ ॥ ೭೯ ॥

76. ಅನಂತರ ಅವರಿಬ್ಬರೂ ಜತೆಯಾಗಿ ಇಂದ್ರನ ಮನೆಗೆ ಹೋದರು. ಅಲ್ಲಿ ಇಂದ್ರನು ತಾನೇ ಸ್ವತಃ ಆ ಗೃತ್ಸಮದ ಋಷಿಯನ್ನು ಪ್ರೀತ್ಯಾದರಗಳಿಂದ ಸತ್ಕರಿಸಿ ಗೌರವಿಸಿದನು.

77. ವಿಧ್ಯುಕ್ತವಾದ ಅತಿಥಿಸತ್ಕಾರಕರ್ಮಗಳಿಂದ ಇಂದ್ರನು ಆ ಋಷಿಯನ್ನು ಪೂಜಿಸಿದನು. ಬಳಿಕ ಆ ಇಂದ್ರನು ಸ್ನೇಹಭಾವದಿಂದ ಆ ಋಷಿಯನ್ನುದ್ದೇಶಿಸಿ ಇಂತೆಂದನು.

78. ಎಲೈ ಋಷಿಶ್ರೇಷ್ಠನೇ, ನೀನು ದೇವತೆಗಳಾದ ನಮ್ಮನ್ನು ಸ್ತುತ್ಯಾದಿಗಳಿಂದ ಸಂತೋಷಪಡಿಸುವೆ. ಆದ್ದರಿಂದ ಶೌನಹೋತ್ರನಾದ ನೀನು ಗೃತ್ಸಮದ ಎಂಬ ಹೆಸರಿನಿಂದ ಪ್ರಸಿದ್ಧನಾಗುವೆ (ಎಂದನು).

79. ಬಳಿಕ ಗೃತ್ಸಮದನು **ಶ್ರುಧೀ ಹವಂ** ಎಂದು ಮೊದಲಾಗುವ ೧೨ ಸೂಕ್ತಗಳಿಂದ (೧೧-೨೨) ಇಂದ್ರನನ್ನು ಸ್ತುತಿಸಿದನು. ಇಂದ್ರನನ್ನು ಈ ರೀತಿ ಸ್ತುತಿಸುತ್ತಿರುವ ಸಮಯದಲ್ಲಿ ಅಲ್ಲಿಯೇ ಬ್ರಹ್ಮಣಸ್ಪತಿಯನ್ನು ಕಂಡನು.

---

76. And thus they went together to great Indra's abode. There the Destroyer of Forts (ಪುರಂದರ) himself affectionately honoured him,

77. and paid reverence to the seer with ceremony prescribed by rule. And because of his friendship the Lord of Bay Steeds (ಹರಿವಾಹನಃ) again addressed him :

78. ' Since you, O best of seers, with your praise (ಗೃಣನ್) delight (ಮಾದಯಸೇ) us, therefore, being the son of Sunahotra, you shall be (called) Grtsamada by name.

79. Then with the twelve (ii. 11-22) hymns beginning ' hear ' (ಶ್ರುಧಿ : ii. 11.1) the seer praised Indra. And just as he was prasing (him) he saw Brahmansaptti there.

ಬೃಹಸ್ಪತಿಂ ತು ತುಷ್ಟಾವ ದೈಷ್ಟಲಿಂಗಾಭಿರೇವ ಚ ।
ಸ ತಮಪ್ಯಭಿತುಷ್ಟಾವ ಚತುರ್ಭಿರಿತ ಊರ್ಧ್ವತೈಃ ॥ ೮೦ ॥

ಗಣಾನಾಂ ವಿಶ್ವಮಿತ್ಯಸ್ಯಾಂ ಸಹೇಂದ್ರಾಬ್ರಹ್ಮಣಸ್ಪತೀ ।
ಬೃಹಸ್ಪತಿಂ ಪ್ರಸಂಗಾದ್ವಾ ಬ್ರಹ್ಮಣಸ್ಪತಿಮೇವ ಚ ॥ ೮೧ ॥

ತುಷ್ಟಾವ ಕರ್ಮಣೈಕೇನ ಪ್ರಭಾವಸ್ಯಾಂತರಂ ದ್ವಯೋಃ ।
ಮಿತ್ರಾವರುಣದಕ್ಷಾಂಶತುವಿಜಾತಭಗಾರ್ಯಮ್ಣಾಂ ॥ ೮೨ ॥

ಆದಿತ್ಯಾನಾಮಿಮಾಃ ಸೂಕ್ತ್ಮಿದಂ ವಾರುಣಮುಚ್ಯತೇ ।

೨೩-೩೦ ಸೂಕ್ತಗಳು

80. ಅನಂತರ ಬೃಹಸ್ಪತಿಯನ್ನೂ ಆ ಹೆಸರಿನೊಡನೆ ಸಂಬಂಧಿಸಿರುವ ಬ್ರಹ್ಮಣಸ್ಪತಿಯನ್ನೂ ಸ್ತುತಿಸಿದನು. ಮತ್ತು ಬ್ರಹ್ಮಣಸ್ಪತಿಯನ್ನು ಮುಂದಿನ ನಾಲ್ಕು ಸೂಕ್ತಗಳಿಂದಲೂ (೨೩-೨೬) ಸ್ತುತಿಸಿದನು.

81. **ಗಣಾನಾಂ** ಎಂಬ ಋಕ್ಕಿನಲ್ಲಿಯೂ (೨೩ ನೇ ಸೂಕ್ತದ ೧ ನೇ ಋಕ್ಕು) **ವಿಶ್ವಂ ಸತ್ಯಂ** ಎಂಬ ಋಕ್ಕಿನಲ್ಲಿಯೂ (೨೪ ನೇ ಸೂಕ್ತದ ೧೨ ನೇ ಋಕ್ಕು) ಇಂದ್ರನನ್ನೂ, ಬ್ರಹ್ಮಣಸ್ಪತಿಯನ್ನೂ ಒಟ್ಟಿಗೆ ಸ್ತುತಿಸಲಾಗಿದೆ. ಮುಖ್ಯವಾಗಿ ಹೇಳುವುದಾದರೆ ಈ ಸೂಕ್ತಗಳಲ್ಲಿ (೨೩-೨೬) ಬ್ರಹ್ಮಣಸ್ಪತಿಯನ್ನೇ ಮುಖ್ಯದೇವತೆಯನ್ನಾಗಿ ಸ್ತುತಿಸ್ನ ಲಾಗಿದೆ. ಬೃಹಸ್ಪತಿಯನ್ನು ಪ್ರಸಂಗವಶದಿಂದ ಸ್ತುತಿಸಲಾಗಿದೆ.

82. ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿ ಎಂಬ ಇಬ್ಬರು ದೇವತೆಗಳಲ್ಲಿಯೂ ಒಂದೇವಿಧವಾದ ಕರ್ಮವನು ಅಥವಾ ಗುಣವನ್ನು ಆರೋಪಿಸಿ ಋಷಿಯು ಸ್ತುತಿಸಿರುವನು. ಮಿತ್ರ, ವರುಣ, ದಕ್ಷ, ಅಂಶ, ತುವಿಜಾತ, ಭಗ, ಅರ್ಯಮಾ ಎಂಬುವರೂ,

83. ಆದಿತ್ಯರೂ **ಈ** ಸೂಕ್ತದಲ್ಲಿ (೨೭ ನೇ ಸೂಕ್ತದಲ್ಲಿ) ಸ್ತುತರಾಗಿದಾರೆ. **ಇದಂ ಕವೇಃ** ಎಂಬ ೨೮ ನೇ

---

16 Deities of RV. ii. 23-30.

80. Now he praised Brihaspati also in those (stanzas in which (that form of) the name (ಲಿಂಗ) appears. He praised him also with the four (hymns) after this (ii. 23 26).

81. (beginning) ' Of the hosts ' (ಗಣಾನಾಂ : ii. 23. 1) ; in the (stanza) All ' (ವಿಶ್ವಂ : ii. 24. 12) Indra and Brhamanapati together. Or (he praised) Brhaspati incidentally (ಪ್ರಸಂಗಾತ್) and Brahmanrpati stricly speaking (ವಿನ).

82. He praised the different powers of the two by (lauding) one and the same deed.

To Mitra, Varuna, Daksa, Amsa, Tuvijata, Bhaga, Aryaman,

83. the Adityas, belongs the hymn ' These ' (ಇಮಾಃ : ii. 27). (The hymn) ' This ' (ಇದಂ : ii. 28) is stated to be addressed to Varuna. (The

ವಾರುಣೀ ಯೋ ಮ ಇತ್ಯಾದ್ಯಾ ದುಃಸ್ವಪ್ನಾದ್ಯಪಶಾತಿನೀ ॥ ೮೩ ॥

ಧೃತವ್ರತಾ ವೈಶ್ವದೇವಮೃತಮೈಂದ್ರಂ ಪರಂ ತು ಯತ್ ।
ಪ್ರ ಹಿ ಕ್ರತುಮಿತಿ ತ್ವಸ್ಯಾಮಿಂದ್ರಾಸೋಮೌ ಸಹ ಸ್ತುತೌ ॥ ೮೪ ॥

ಸರಸ್ವತಿ ತ್ವಮಿತ್ಯಸ್ಮಿನ್ನರ್ಧರ್ಚೇ ಮಧ್ಯಮಾ ತು ವಾಕ್ ।
ಬೃಹಸ್ಪತಿಸ್ತುತಿರ್ಯೋ ನಸ್ತಂ ವ ಋಜ್ಮರುತಾಂ ಸ್ತುತಿಃ ॥ ೮೫ ॥

ಅಸ್ಮಾಕಂ ವೈಶ್ವದೇವಂ ಸ್ಯಾದಾದಾವಸ್ಯೇತಿ ಚಾಸ್ಯ ಋಕ್ ।
ದ್ಯಾವಾಪೃಥಿವ್ಯೋಸ್ತ್ವಷ್ಟ್ರಾ ವಾ ಅಥವೈಂದ್ರ್ಯೌ ಪರೇ ತತಃ ॥ ೮೬ ॥

ಸೂಕ್ತಕ್ಕೆ ವರುಣನು ದೇವತೆಯು; ಈ ಸೂಕ್ತದಲ್ಲಿರುವ **ಯೋ ಮೇ ರಾಜನ್** ಎಂಬ ೧೦ ನೇ ಋಕ್ಕು ದುಃಸ್ವಪ್ನವನ್ನೂ ಅದರ ಕೆಟ್ಟಫಲಗಳನ್ನು ನಾಶಮಾಡುವುದು.

84. **ಧೃತವ್ರತಾಃ** ಎಂಬ ಸೂಕ್ತಕ್ಕೆ (೨೯ ನೇ ಸೂಕ್ತ) ವಿಶ್ವೇದೇವತೆಗಳೂ, **ಋತಂ ದೇವಾಯ** ಎಂಬ ೩೦ ನೇ ಸೂಕ್ತಕ್ಕೆ ಇಂದ್ರನೂ ದೇವತೆಗಳು. ಈ ಸೂಕ್ತದಲ್ಲಿರುವ **ಪ್ರ ಹಿ ಕ್ರತುಂ** ಎಂಬ ೬ ನೇ ಋಕ್ಕಿನಲ್ಲಿ ಇಂದ್ರ ಮತ್ತು ಸೋಮ ಇಬ್ಬರೂ ಒಟ್ಟಿಗೆ ಸ್ತುತರಾಗಿರುವರು.

85. ಮತ್ತು ಸರಸ್ವತಿ ಎಂಬ ೮ ನೇ ಋಕ್ಕಿನ ಪೂರ್ವಾರ್ಧದಲ್ಲಿ ಮಾಧ್ಯಮಿಕಾ ವಾಗ್ದೇವತೆಯನ್ನು ಸ್ತುತಿಸಲಾಗಿದೆ. **ಯೋ ನಃ** ಎಂಬ ೯ ನೇ ಋಕ್ಕಿನಲ್ಲಿ ಬೃಹಸ್ಪತಿಯನ್ನೂ **ತಂ ವಃ ಶರ್ಧಂ** ಎಂಬ ೧೧ ನೇ ಋಕ್ಕಿನಲ್ಲಿ ಮರುದ್ದೇವತೆಗಳನ್ನೂ ಸ್ತುತಿಸಲಾಗಿದೆ.

೩೧-೩೫ ನೇ ಸೂಕ್ತಗಳ ದೇವತೆಗಳು

86. **ಅಸ್ಮಾಕಂ** ಎಂಬ ೩೧ ನೇ ಸೂಕ್ತಕ್ಕೆ ವಿಶ್ವೇದೇವತೆಗಳು ದೇವತೆಯು; **ಅಸ್ಯ ಮೇ** ಎಂಬ ೩೨ ನೇ ಸೂಕ್ತದಲ್ಲಿ ಮೊದಲನೇ ಋಕ್ಕಿಗೆ ದ್ಯಾವಾಪೃಥಿವಿಗಳು ದೇವತೆಯು; ಮುಂದಿನ ಎರಡು ಋಕ್ಕುಗಳಿಗೆ (೨-೩) ತ್ವಷ್ಟೃ ಅಥವಾ ಇಂದ್ರನು ದೇವತೆಯು.

---

stanza) addressed to Varnna beginning 'Who me' (ಯೋ ಮೇ : ii. 28. 10) is dertructive of evil dreams and the like.

84. 'Upholders of law' (ಧೃತವ್ರತಾಃ : ii. 29) is addressed to the All-gods, but that which follows, 'Right' (ಋತಂ : ii. 30), is addressed to Indra. In the (stanza) 'His Power indeed' (ಪ್ರ ಹಿ ಕ್ರತುಂ : ii. 30. 6) Indra-Soma are praised together.

85. But in the hemistich 'O Sarasvati, you, (ಸರಸ್ವತಿ ತ್ವಂ : ii 30. 8) the middle Vac (is praised). 'who us,(ಯೋ ನಃ ii.30.9)is(in) praise of Brihaspati. the stanza (That of yours, ತಂ ವಃ i i.30·11) is (in) praise of the Maruts.

17. Deities of RV· ii. 31-35

86. 'Our, (ಅಸ್ಮಾಕಂ: ii. 31) should be (regarded as) addressed to the All-gods; and the stanza at the beginning of (the hymn) 'Of this (ಅಸ್ಯ: ii. 32. 1) belongs to Heaven and Earth; the two following it (ii. 32-2, 3) are addressed either to Tvastr or to Indra·

ದ್ವೇ ದ್ವೇ ರಾಕಾಸಿನೀವಾಲ್ಯೋಃ ಷಡ್ಗಂಗ್ವಾದ್ಯಾಸ್ತ್ವಥಾಂತ್ಯಯಾ ।
ತತ್ಪೂರ್ವೇ ದ್ವೇ ಋಚೌ ಕುಹ್ವಾಃ ಕುಹೂಮಹಮಿತಿ ಸ್ಮೃತೇ । ॥ ೮೭ ॥
ತದುತ್ತರೇ ದ್ವೇಽನುಮತೇರನು ನೋಽನ್ವಿದಿತಿ ಸ್ಮೃತೇ ।
ಧಾತುಶ್ಚತಸ್ರಸ್ತತ್ರಾದೌ ಧಾತಾ ದದಾತು ನೋ ರಯಿಂ ॥ ೮೮ ॥
ರೌದ್ರಂ ಮಾರುತಂ ತು ಪರಮಾ ತೇ ಧಾರಾವರಾ ಇತಿ ।
ವಾಮತಸ್ತು ಮೃಗಂ ದೃಷ್ಟ್ವಾ ಬಿಭ್ಯದೇತ್ಯ ಋಷಿಃ ಸ್ವಯಂ ॥ ೮೯ ॥

87. ಅದರ ಮುಂದಿನ ಎರಡು ಋಕ್ಕುಗಳಿಗೆ (೪-೫) ರಾಕಾ ಎಂಬ ದೇವತೆಯೂ, ೬-೭ ನೇ ಋಕ್ಕುಗಳಿಗೆ ಸಿನೀವಾಲೀ ಎಂಬ ದೇವತೆಯೂ ದೇವತೆಯು; ಕೊನೆಯ ಋಕ್ಕಿನಲ್ಲಿ (೮ ನೇ ಋಕ್ಕಿನಲ್ಲಿ) ಗುಂಗೂ ಮೊದಲಾದ ಆರು ಮಂದಿ ದೇವತೆಗಳು ಸ್ತುತರಾಗಿರುವರು. ಅದರ ಹಿಂದಿನ ಎರಡು ಋಕ್ಕುಗಳಲ್ಲಿ ಕುಹೂ ಎಂಬ ದೇವತೆಯನ್ನು ಸ್ತುತಿಸ ಲಾಗಿದೆ. [ಋಗ್ವೇದಸಂಹಿತೆಯ ಈ ೩೨ ನೇ ಸೂಕ್ತದಲ್ಲಿ ಅಥವಾ ಬೇರೆ ಎಲ್ಲಿಯಾದರೂ **ಕುಹೂಮಹಂ** ಎಂಬ ಋಕ್ಕುಗಳಿರುವುದಿಲ್ಲ. ಆದರೆ ಪರಿಶಿಷ್ಟದಲ್ಲಿ ೩ ನೇ ಖಿಲಸೂಕ್ತದಲ್ಲಿ **ಕುಹೂಮಹಂ** ಮತ್ತು **ಕುಹೂರ್ದೇವಾನಾಂ** ಎಂಬ ಎರಡು ಋಕ್ಕುಗಳು (೧-೨) ಪಠಿತವಾಗಿವೆ ಮತ್ತು ತೈ. ಸಂ. ೩-೩-೧೧-೫ ರಲ್ಲಿಯೂ ಈ ಮಂತ್ರಗಳಿವೆ].

88. ಅಲ್ಲಿಂದ ಮುಂದಿನ ಎರಡು ಋಕ್ಕುಗಳಿಗೆ ಎಂದರೆ, **ಅನು ನೋ ದ್ಯಾನುಮತಿಃ** ಮತ್ತು **ಅನ್ವಿದನುಮತೇ ತ್ವಂ** ಎಂಬ ಋಕ್ಕುಗಳಿಗೆ (೩-೪) ಅನುಮತಿಯು ದೇವತೆಯು; ಇದಾದನಂತರ **ಧಾತಾ ದಧಾತು ನೋ ರಯಿಂ** ಎಂಬ ನಾಲ್ಕು ಋಕ್ಕುಗಳಿಗೆ (೫-೮) ಧಾತೃವು ದೇವತೆಯು. [ಈ ಆರು ಮಂತ್ರಗಳೂ ೩ ನೇ **ಖಿಲ** ಸೂಕ್ತದಲ್ಲಿಯೇ ಇವೆ ಮತ್ತು ತೈತ್ತಿರೀಯಸಂಹಿತೆಯಲ್ಲಿಯೂ ಹಿಂದೆ ಹೇಳಿದ ಸ್ಥಳದಲ್ಲಿಯೇ ಇವೆ].

89. ಮುಂದಿನ **ಆ ತೇ ಪಿತಃ** ಎಂಬ ೩೩ ನೇ ಸೂಕ್ತಕ್ಕೆ ರುದ್ರನೂ, ಅದರ ಮುಂದಿನ **ಧಾರಾವರಾಃ** ಎಂಬ ೩೪ ನೇ ಸೂಕ್ತಕ್ಕೆ ಮರುತ್ತುಗಳೂ ದೇವತೆಯು. ೩೩ ನೇ ಸೂಕ್ತದಿಂದ ರುದ್ರನನ್ನು ಋಷಿಯು ಸ್ತುತಿಸುತ್ತಿರುವಾಗ ತನ್ನ ಎಡಗಡೆ ಒಂದು ಮೃಗವಿರುವುದನ್ನು ಕಂಡು ಹೆದರಿ,

---

87. Two (stanzas) each belong to Raka (ii. 32-4, 5) and Sinivali (6, 7) while with the last (8) the six (goddesses) Gungu and the rest (are praised).

Preceded by these (stanzas : ತತ್ಪೂರ್ವೇ) there are two stnnzas (beginning) 'Kuhu' (ಕುಹೂಮಹಂ) traditionally held to (belong) to Kuhu.

88. Followed by these (ತದುತ್ತರೇ) there are two, ಅನು ನಃ (and) ಅನ್ವಿತ್, traditionally held to belong to Anumathi, at the beginning in the same place there are four (stanzas) to Dhatr (beginning) 'May the Creator grant us wealth' (ಧಾತಾ ದದಾತು ನೋ ರಯಿಂ).

89. Now 'To you' (ಆ ತೇ; ii. 33) is addressed to Rudra (and) the following, 'Delighting in showers' (ಧಾರಾವರಾಃ; ii. 34) to the Marnts.

Seeing a beast (ಮೃಗಂ) on his left, the seer himself approaching in fear (ಬಿಭ್ಯದೇತ್ಯ),

ಸ್ತುಹಿ ಶ್ರುತಮಿತಿ ತ್ವಸ್ಯಾಂ ತವೇವಾಸ್ತೌತ್ಪ್ರಸಾದಯನ್ ।
ಅಪಾಂ ನಪಾದುಪೇತ್ಯತ್ರ ಸ್ತುತಃ ಸೂಕ್ತೇ ತತಃ ಪರೇ ॥ ೯೦ ॥

ತುಭ್ಯಮಿತ್ಯಾರ್ತವೇ ಸೂಕ್ತೇ ಸಾವಿತ್ರಾದಾಶ್ವಿನಂ ಪರಂ ।
ಸೋಮಃ ಪೂಷಾದಿತಿಶ್ಚೈವ ಸೋಮಾಪೌಷ್ಣೇಽನ್ತ್ಯಯಾ ಸ್ತುತಾಃ ॥ ೯೧ ॥

ವಾಯವ್ಯೇ ಚೈಂದ್ರವಾಯವೀ ಪಂಚಾಥ ಪ್ರಾಉಗಾಸ್ತೃಚಾಃ ।
ಪ್ರೇತ್ಯೈಕೌಸತಿ ಹವಿರ್ಧಾನೇ ಅಗ್ನಿಸ್ತತ್ರ ನಿಪಾತಭಾಕ್ ।

90. ಅದನ್ನು **ಸ್ತುಹಿ ಶ್ರುತಂ** ಎಂಬ ಋಕ್ಕಿನಿಂದ (೩೩ ನೇ ಸೂಕ್ತದ ೧೧ ನೇ ಋಕ್ಕು) ಸ್ತುತಿಸಿರುವನು. ಅನಂತರ ಮುಂದಿನ **ಉಪೇಮುಸೃಷ್ಟಿ** ಎಂಬ ೩೫ ನೇ ಸೂಕ್ತದಿಂದ **ಅಪಾಂನಪಾತ್** ಎಂಬ ದೇವತೆಯನ್ನು ಸ್ತುತಿಸಿರುವನು.

೩೬-೪೩ ನೇ ಸೂಕ್ತದ ದೇವತೆಗಳು ; ಕಪಿಂಜಲರೂಪನಾದ ಇಂದ್ರನು

91. **ತುಭ್ಯಂ ಹಿನ್ವಾನಃ** ಎಂಬ ೩೬ ನೇ ಸೂಕ್ತದಲ್ಲಿಯೂ, **ಮಂದಸ್ವ** ಎಂಬ ೩೭ ನೇ ಸೂಕ್ತದಲ್ಲಿಯೂ ಋತುದೇವತೆಗಳನ್ನು ಸ್ತುತಿಸಲಾಗಿದೆ. ಅದರ ಮುಂದಿನ **ಉದು ಷ್ಯ** ಎಂಬ ೩೮ ನೇ ಸೂಕ್ತದಲ್ಲಿ ಸವಿತೃದೇವತೆಯನ್ನೂ ಅದರ ಮುಂದಿನ **ಗ್ರಾವಾಣೇವ** ಎಂಬ ೩೯ ನೇ ಸೂಕ್ತದಲ್ಲಿ ಅಶ್ವಿನೀದೇವತೆಗಳನ್ನೂ ಸ್ತುತಿಸಲಾಗಿದೆ. **ಸೋಮಾಪೂಷಣಾ** ಎಂಬ ೪೦ ನೇ ಸೂಕ್ತಕ್ಕೆ ಸೋಮ ಮತ್ತು ಪೂಷಾ ಎಂಬುವರು ದೇವತೆಗಳು. ಆದರೆ ಕೊನೆಯ ೬ ನೇ ಋಕ್ಕಿನಲ್ಲಿ ಸೋಮ, ಪೂಷಾ ಅದಿತಿ ಎಂಬ ದೇವತೆಗಳು ಸ್ತುತರಾಗಿದಾರೆ.

92. **ವಾಯೋ ಯೇ ತೇ** ಎಂಬ ೪೧ ನೇ ಸೂಕ್ತದಲ್ಲಿ ಮೊದಲಿನ ಎರಡು ಋಕ್ಕುಗಳಿಗೆ ವಾಯುವೂ, ೩ ನೇ ಋಕ್ಕಿಗೆ ಇಂದ್ರವಾಯುಗಳೂ ದೇವತೆಯು. ಅಲ್ಲಿಂದ ಮುಂದಿನ ೫ ತೃಚಗಳಲ್ಲಿ (ತೃಚವೆಂದರೆ ೩ ಋಕ್ಕುಗಳು) ಪ್ರಉಗಶಸ್ತ್ರಮಂತ್ರಗಳ ದೇವತೆಗಳನ್ನು ಸ್ತುತಿಸಲಾಗಿದೆ (ಎಂದರೆ ೪-೬ ಋಕ್ಕುಗಳಲ್ಲಿ ಮಿತ್ರಾವರುಣರನ್ನೂ ೭-೯ ರಲ್ಲಿ ಅಶ್ವಿನೀದೇವತೆಗಳನ್ನೂ, ೧೦-೧೨ ರಲ್ಲಿ ಇಂದ್ರನನ್ನೂ, ೧೩-೧೫ ರಲ್ಲಿ ವಿಶ್ವೇದೇವತೆಗಳನ್ನೂ ೧೬-೧೮ ರಲ್ಲಿ ಸರಸ್ವತಿಯನ್ನೂ ಸ್ತುತಿಸಲಾಗಿದೆ). **ಪ್ರೇತಾಂ** ಎಂಬ ೧೯ ನೇ ಋಕ್ಕಿನಲ್ಲಿ ಹವಿರ್ಧಾನದೇವತೆಗಳನ್ನೂ (ಹವಿರ್ಧಾನವೆಂದರೆ

---

90. praised the same in the (stanza) 'Praise the famous' (**ಸ್ತುಹಿ ಶ್ರುತಂ** : ii. 33. 11), propitiating him. Then in the following hymn (beginning) 'Unto' (**ಉಪ** : ii. 35) Apam-napat is praised.

18. Deities of RV. ii. 36-43. Indra as a Kapinjala.

91. There are two hymns (ii. 36-37) addressed to the Seasons (beginning) ('To you' **ತುಭ್ಯಂ** : ii. 36. 1). After one addressed to Savitr (38) follows one to the Asvins (39) With the last (stanza 6) of (the hymn) to Soma-Pusan (40), Soma, Pusan and Aditi as well, are praised.

92. And (at the beginning of ii. 41) there are two (stanzas) to Vayu (1, 2), one to Indra-Vayu (3); next (come) five triplets (4-18) addressed to the Prauga deities. The stanza 'Fourh' (**ಪ್ರ** : 19) praises the two Soma

ದ್ಯಾವಾಪೃಥಿವ್ಯೌ ದ್ಯಾವೇತಿ ಹವಿರ್ಧಾನೇ ತತಃ ಪರೇ ॥ ೯೨ ॥
ಸ್ತುತಿಂ ತು ಪುನರೇವೇಚ್ಛನ್ನಿಂದ್ರೋ ಭೂತ್ವಾ ಕಪಿಂಜಲಃ ।
ಋಷೇರ್ಜಿಗಮಿಷೋರಾಶಾಂ ವವಾಶಾಸ್ಥಾಯ ದಕ್ಷಿಣಾಂ ॥ ೯೩ ॥
ಸ ತಮಾರ್ಷೇಣ ಸಂಪ್ರೇಕ್ಷ್ಯ ಚಕ್ಷುಷಾ ಪಕ್ಷಿರೂಪಿಣಂ ।
ಪರಾಭ್ಯಾಮಭಿತುಷ್ಟಾವ ಸೂಕ್ತಾಭ್ಯಾಂ ತು ಕನಿಕ್ರದತ್ ॥ ೯೪ ॥

ಇತಿ ದ್ವಿತೀಯೇಂ ಮಂಡಲಂ ಸಮಾಪ್ತಂ

ಸೋಮಲತೆಗಳನ್ನು ತುಂಬಿ ಯಜ್ಞವೇದಿಗೆ ತರುವ ಎರಡು ಗಾಡಿಗಳು) ಪ್ರಾಸಂಗಿಕವಾಗಿ ಅಗ್ನಿಯನ್ನೂ **ದ್ಯಾವಾ ನಃ** ಎಂಬ ೨೦ ನೇ ಋಕ್ಕಿನಲ್ಲಿ ದ್ಯಾವಾಪೃಥಿವಿಗಳನ್ನೂ ಅನಂತರ **ಆ ವಾಂ** ಎಂಬ ೨೧ ನೇ ಋಕ್ಕಿನಲ್ಲಿ ಹವಿರ್ಧಾನಗಳನ್ನು ಸ್ತುತಿಸಲಾಗಿದೆ.

93. ಒಂದು ಸನುಯದಲ್ಲಿ ಇಂದ್ರನು ಗೃತ್ಸಮದಋಷಿಯಿಂದ ಸ್ತುತಿಯನ್ನು ಅಪೇಕ್ಷಿಸಿ **ಕಪಿಂಜಲ**ವೆಂಬ ಪಕ್ಷಿಯ ರೂಪವನ್ನು ತಾಳಿ, ಋಷಿಯು ಎಲ್ಲಿಗೋ ಹೊರಡುತ್ತಿರುವಾಗ ಅವನ ಬಲಭಾಗದಲ್ಲಿ ನಿಂತು ಧ್ವನಿಗೈದನು.

94. ಗೃತ್ಸಮದನು ಮಂಗಳಕರವಾಗಿ ಕೂಗುತ್ತಿರುವ ಕಪಿಂಜಲಪಕ್ಷಿಯನ್ನು ನೋಡಿ ತನ್ನ ಋಷಿಪ್ರಭಾವದಿಂದ ಇಂದ್ರನೇ ಆ ಪಕ್ಷಿರೂಪದಲ್ಲಿರುವನೆಂದು ತಿಳಿದು ಮುಂದಿನ **ಕನಿಕ್ರದತ್** ಎಂದು ಮೊದಲಾಗುವ ಎರಡು ಸೂಕ್ತಗಳಿಂದ (೪೨-೪೩) ಪಕ್ಷಿರೂಪಿಯಾದ ಇಂದ್ರನನ್ನು ಸ್ತುತಿಸಿದನು.

ಇಲ್ಲಿಗೆ ಎರಡನೇ ಮಂಡಲದ ಸೂಕ್ತಗಳ ವಿವರಣೆಯು ಸಮಾಪ್ತವಾದುದು.

---

carts : Agni is there incidental (ಸಿಪಾತಭಾಜ್). 'Heaven and Earth' (ದ್ಯಾವಾ : 20) (praises) Heaven and Earth ; then follow (21) the two Soma Carts,

93, Now Indra again desiring praise, became a falcoline patridge, and taking up a position on the right quarter of the seer as he was about to set out, uttered a cry (ವವಾಶ).

94. He (Grtsamada), with the eye of a seer, recognising him (Indra) in the form of the bird, praised him in the two following hymns (ii. 42, 43), 'With repeated cry' (ಕನಿಕ್ರದತ್ : ii. 42. 1).

End of 2nd Mandala

ಅಥ ತೃತೀಯಂ ಮಂಡಲಂ

ಪ್ರಶಾಸ್ಯ ಗಾಂ ಯಸ್ತಪಸಾಭ್ಯಗಚ್ಛದ್ಬ್ರಹ್ಮರ್ಷಿತಾಮೇಕಶತಂ ಚ ಪುತ್ರಾನ್ ।
ಸ ಗಾಥಿಪುತ್ರಸ್ತು ಜಗಾದ ಸೂಕ್ತಂ ಸೋಮಸ್ಯ ಮೇತ್ಯಾಗ್ನೇಯಂ ಯತ್ಪರೇ ಚ ॥ ೯೫ ॥

ವೈಶ್ವಾನರೀಯೇ ಸಮಿತ್ಸಮಿದಾಪ್ರ್ಯೌ ದ್ವೇ ಅಗ್ನೇಯೇ ಉತ್ತರೇ ತ್ವತ್ರ ಸೂಕ್ತೇ ।
ದ್ಯಾವಾಪೃಥಿವ್ಯಾ ಉಷಸೋ ನಿಪಾತಾ ಅಪೋಽಥ ದೇವಾಃ ಪಿತರಶ್ಚ ಮಿತ್ರಃ ॥ ೯೬ ॥

ಮೂರನೆಯ ಮಂಡಲ

ಮಂಡಲದ್ರಷ್ಟೃವಾದ ವಿಶ್ವಾಮಿತ್ರಋಷಿಯು; ೧-೬ ಸೂಕ್ತಗಳು

95. ಗಾಧಿರಾಜನ ಪುತ್ರನಾದ ವಿಶ್ವಾಮಿತ್ರನು ರಾಜನಾಗಿ ಭೂಮಿಯನ್ನು ಪಾಲಿಸುತ್ತಿದ್ದು ತಪಸ್ಸನ್ನು ಮಾಡಿ ಅದರ ಪ್ರಭಾವದಿಂದ ಬ್ರಹ್ಮರ್ಷಿಪದವಿಯನ್ನೂ ನೂರೊಂದು ಮಂದಿ ಪುತ್ರರನ್ನೂ ಪಡೆದನು. ಇಂತಹ ಈ ಮೂರನೇ ಮಂಡಲದ್ರಷ್ಟೃವಾದ ವಿಶ್ವಾಮಿತ್ರಋಷಿಯು ಈ ಮಂಡಲದ ಪ್ರಥಮಸೂಕ್ತವಾದ **ಸೋಮಸ್ಯ ಮಾ** ಎಂಬ್ಸೂಕ್ತವನ್ನು ಪಠಿಸಿರುವನು. ಈ ಸೂಕ್ತಕ್ಕೆ ಅಗ್ನಿಯು ದೇವತೆಯು. ಆದರ ಮುಂದಿನ ಎರಡು ಸೂಕ್ತಗಳಿಗೂ (೨-೩).

96. ವೈಶ್ವಾನರಾಗ್ನಿಯೇ ದೇವತೆಯು. **ಸಮಿತ್ಸಮಿತ್** ಎಂಬ ನಾಲ್ಕನೆಯ ಸೂಕ್ತವು ಆಪ್ರೀಸೂಕ್ತವು; ಆದರ ಮುಂದಿನ ಎರಡು ಸೂಕ್ತಗಳಿಗೆ (೫-೬) ಅಗ್ನಿಯು ದೇವತೆಯು. ಆದರೆ ಈ ಸೂಕ್ತಗಳಲ್ಲಿ ದ್ಯಾವಾಪೃಥಿವಿಗಳು, ಉಷಸ್ಸು, ಅಬ್ದೇವತೆಗಳು, ದೇವತೆಗಳು, ಪಿತೃದೇವತೆಗಳು ಮಿತ್ರ ಇವರೆಲ್ಲರನ್ನೂ ಪ್ರಸಂಗವಶದಿಂದ ಸ್ತುತಿಸಲಾಗಿದೆ.

Mandala iii.

13. The seer Viswamitra. Deities of RV. iii. 1-6

95. The son of Gathi who, after ruling the earth, attained by penance to the position of a Braman seer (ಬ್ರಹ್ಮರ್ಷಿ) and (obtained) a hundred and one sons, uttered the hymn which is addressed to Agni, 'Of Soma me' (ಸೋಮಸ್ಯ ಮಾ : iii. 1), and the two following (iii. 2, 3).

96. addressed to Vaisvanara. 'With every log' (ಸಮಿತ್ಸಮಿತ್ : iii. 4) is an Apri hymn (ಆಪ್ರ್ಯಃ). There follow here two hymns (iii. 5, 6) addressed to Agni: Heaven and Earth, the Dawns, the Waters, the Gods, the Fathers, and Mitra are incidentally mentioned deities (ನಿಪಾತಾಃ).

ಆಗ್ನೇಯೇಷು ದೃಶ್ಯಂತೇ ಸ್ತುತಾಸ್ತು ವೈಶ್ವಾನರೋ ವರುಣೋ ಜಾತವೇದಾಃ ।
ಸ್ತೂಯೇತೈಕೋ ಯತ್ರ ಯಚ್ಚಾಸ್ತುತಿರ್ವಾ ನಿಪಾತ್ಯರ್ಥಾಂಶ್ಚೋಪಮಾರ್ಥಾಂಶ್ಚ
ವಿದ್ಯಾತ್ ॥ ೯೭ ॥

ರಾಜರ್ಷಯೋ ಗೃತ್ಸಮದಾ ವಸಿಷ್ಠಾ ಭರದ್ವಾಜಾಃ ಕುಶಿಕಾ ಗೋತಮಾಶ್ಚ ।
ವಿಶ್ವೇಽಶ್ವಿನಾಮಂಗಿರಸೋಽತ್ರಯೋಽದಿತಿರ್ಭೋಜಾಃ ಕಣ್ವಾ ಭೃಗವೋ ರೋದಸೀ ದಿಶಃ॥

ಸಾವಿತ್ರಸೌಮ್ಯಾಶ್ವಿನಮಾರುತೇಷು ಐಂದ್ರಾಗ್ನೇಯೇ ರೌದ್ರಸೌರ್ಯೌಷಸೇಷು ।
ಆದಾವಂತೇ ಸೂಕ್ತಮಧ್ಯೇ ಸ್ತುತಾಸ್ತು ನ ವ್ಯಾಹ್ನಂತಿ ದೇವತಾಃ ಸೂಕ್ತಭಾಜಃ ॥ ೯೯ ॥

97. ಅಗ್ನಿದೇವತಾಕವಾದ ಸೂಕ್ತಗಳಲ್ಲಿ ವೈಶ್ವಾನರ, ವರುಣ, ಜಾತವೇದಾಃ ಇತ್ಯಾದಿ ದೇವತೆಗಳನ್ನು ಸ್ತುತಿಸಿರುವುದು ಕೆಲವು ಸಂದರ್ಭಗಳಲ್ಲಿ ಕಂಡುಬರುವುದು. ಮತ್ತು ಈ ಸಂದರ್ಭದಲ್ಲಿ (ಅಗ್ನಿಯಲ್ಲದ) ಬೇರೆ ಒಂದು ದೇವತೆಯ ಸ್ತುತಿ ಇದ್ದರೂ ಅಥವಾ ಸ್ತುತಿ ಇಲ್ಲದೆ ಕೇವಲ ದೇವತೆಯ ಹೆಸರನ್ನು ಮಾತ್ರ ಸೂಚಿಸಿದ್ದರೂ ಅವೆಲ್ಲವೂ, ಪ್ರಸಂಗವಶದಿಂದ ಅಥವಾ ಹೋಲಿಕೆ (ಉಪಮಾರ್ಥ) ಗಾಗಿ ಇತರ ದೇವತೆಗಳ ಹೆಸರು ಅಗ್ನಿಸೂಕ್ತಗಳಲ್ಲಿರುವುದೆಂದು ತಿಳಯಬೇಕು.

98. ರಾಜರ್ಷಿಗಳು, ಗೃತ್ಸಮದ, ವಸಿಷ್ಠ, ಭರದ್ವಾಜ, ಕುಶಿಕ, ಗೋತಮ ಎಂಬ ಋಷಿಗಳ ವಂಶದವರು, ವಿಶ್ವೇದೇವತೆಗಳು, ಅಶ್ವಿನೀದೇವತೆಗಳು, ಅಂಗಿರಸರು, ಅತ್ರಿವಂಶದ ಋಷಿಗಳು, ಅದಿತಿಯು, ಭೋಜರು, ಕಣ್ವಋಷಿಗಳು, ಭೃಗುವಂಶದ ಋಷಿಗಳು, ದ್ಯಾವಾಪೃಥಿವಿಗಳು, ದಿಕ್ಕುಗಳು, (ಇವರುಗಳಲ್ಲಿ ಯಾರಾದರೂ),

99. ಸವಿತೃ, ಸೋಮ, ಅಶ್ವಿನೀದೇವತೆಗಳು, ಮರುತ್ತುಗಳು, ಇಂದ್ರ, ಅಗ್ನಿ, ರುದ್ರ, ಸೂರ್ಯ, ಉಷಸ್ಸು ಮೊದಲಾದವರು ದೇವತೆಗಳಾಗಿರುವ ಸೂಕ್ತಗಳಲ್ಲಿ ಸೂಕ್ತದ ಪ್ರಾರಂಭದಲ್ಲಾಗಲಿ, ಮಧ್ಯದಲ್ಲಾಗಲಿ, ಕೊನೆಯಲ್ಲಾಗಲಿ ಸ್ತುತಿಸಲ್ಪಟ್ಟಿದ್ದರೂ ಅವರು ಸೂಕ್ತದ ಮುಖ್ಯದೇವತೆಯ ಸ್ತುತಿಗೆ ವಿಘ್ನವನ್ನುಂಟುಮಾಡುವುದಿಲ್ಲ. ಇವರ ಸ್ತುತಿಯು ಪ್ರಸಂಗವಶವೆಂದು ಪರಿಗಣಿಸಬೇಕು.

97. In (hymns) addressed to Agni, Vaiswanara, Varuna, Jatavedas are seen to be praised. Whenever (here) one (of them) may be praised or there is no (actual) praise, one should know that they are intended to be incidental or to serve as a comparison.

98. The royal seers, the Grtsamadas, the Vasisthas, the Bharadvajas, the Kusikas, and the Gotamas, the All (gods), the Asvins, the Angirasas, the Atris, Aditi, the Bhojas, the Kanvas, fhe Bhrgus, the two Worlds (ರೋದಸೀ), the Regions (ದಿಶಃ),

99. when praised at the beginning, end, or middle of a hymn, in (hymns) addressed to Savitr, Soma, the Asvins, or the Maruts, to Indra of Agni, to Rudra, Surya, or Usas, do not interfere (ವ್ಯಾಹ್ನಂತಿ) with the deities who own the hymn (ಸೂಕ್ತಭಾಜ).

ಅಗ್ನೇಃ ಸಪ್ತದಶೋಽಧ್ಯಾಯೆ ಊರ್ಧ್ವ ಊ ಷು ಣ ಊತಯೇ ।
ಏತೇ ಕಾಣ್ವಾ ಋಚೌ ಯೌಪಾ ಅಂಜಂತಿ ತ್ವೇತಿ ಪಂಚ ಚ ॥ ೧೦೦ ॥

ಶೇಷಾ ಬಹುಭ್ಯೋ ಯೂಪೇಭ್ಯೋ ವೈಶ್ವದೇವೀ ತ್ವೈಗಷ್ಟುಮಾ ।
ಅಸ್ಯಾಂತ್ಯಾ ವ್ರಶ್ಚನೀ ಯೋಕ್ತಾ ಷಷ್ಠಮೈಂದ್ರಾಗ್ನಮುಚ್ಯತೇ ॥ ೧೦೧ ॥

ಅಗ್ನಿಮುಷಸಂ ವೈಶ್ವದೇವೀ ದಧಿಕ್ರಾಮಿತಿ ಚೈತಯಾ ।

೭-೨೯ನೇ ಸೂಕ್ತದ ದೇವತೆಗಳು

100. ಹದಿನೇಳನೆಯ ಅಧ್ಯಾಯದ ಸೂಕ್ತಗಳೆಲ್ಲಾ (೩ನೇ ಅಷ್ಟಕದ ಮೊದಲನೆಯ ಅಧ್ಯಾಯ ಅಥವಾ ೩ನೇ ಮಂಡಲದ ೭-೨೯ ಸೂಕ್ತಗಳು) ಅಗ್ನಿದೇವತಾಕವಾದವು; ಆದರೆ ಕಣ್ವಋಷಿದೃಷ್ಟವಾದ **ಊರ್ಧ್ವ ಊ ಷು ಣಃ** ಮತ್ತು **ಊರ್ಧ್ವೋ ನಃ ಪಾಹಿ** ಎಂಬ ಋಕ್ಕುಗಳಿಗೂ (ಪ್ರಥಮಮಂಡಲದ ೩೬ನೇ ಸೂಕ್ತದ ೧೩-೧೪ನೆಯ ಋಕ್ಕುಗಳು) **ಅಂಜಂತಿ ತ್ವಾ** ಎಂಬ (೩ನೇ ಮಂಡಲದ) ೮ನೇ ಸೂಕ್ತದಲ್ಲಿ ಮೊದಲ ಐದು ಋಕ್ಕುಗಳಿಗೂ (೧-೫) ಯೂಪವು ದೇವತೆಯು.

101. ಈ ೮ನೇ ಸೂಕ್ತದಲ್ಲಿ ೬ನೇ ಋಕ್ಕಿನಿಂದ ಮುಂದಿನ ಋಕ್ಕುಗಳಿಗೂ ಸಾಧಾರಣವಾಗಿ ಯೂಪವೇ ದೇವತೆಯು; ಆದರೆ, ೮ನೇ ಋಕ್ಕಿಗೆ (ಅದಿತ್ಯಾ ರುದ್ರಾ ಎಂಬ ಋಕ್ಕಿಗೆ) ವಿಶ್ವೇದೇವತೆಗಳೂ, ಕೊನೆಯ (೧೧ನೇ) ಋಕ್ಕಾದ ವನಸ್ಪತೇ ಎಂಬ ಋಕ್ಕಿಗೆ **ವ್ರಶ್ಚನಃ** ಎಂಬುದೂ ದೇವತೆಯು; (೩ನೇ ಅಷ್ಟಕದ ಮೊದಲನೆಯ) ಅಧ್ಯಾಯದ ಆರನೆಯ ಸೂಕ್ತಕ್ಕೆ (ಎಂದರೆ ಮೂರನೆಯ ಮಂಡಲದ ೧೨ನೇ ಸೂಕ್ತಕ್ಕೆ) ಇಂದ್ರಾಗ್ನಿಗಳು ದೇವತೆಯು,

102. **ಅಗ್ನಿಮುಷಸಂ** ಎಂಬ ಇಪ್ಪತ್ತನೆಯ ಸೂಕ್ತದಲ್ಲಿ **ಅಗ್ನಿಮುಷಸಂ** ಎಂಬ ಮೊದಲನೆಯ ಋಕ್ಕೂ **ದಧಿಕ್ರಾಂ** ಎಂಬ ೫ನೆಯ ಋಕ್ಕೂ ವಿಶ್ವೇದೇವತಾಕವು. **ಅಗ್ನೇ ದಿವಃ** ಎಂಬ ೨೫ನೇ ಸೂಕ್ತದ **ಅಗ್ನ ಇಂದ್ರಶ್ಚ**

---

20. Deities of RV. iii. 7-29

100. The seventeenth Adhyaya (RV. iii. 7-29) is Agni's. 'Stand erect to aid us, (ಊರ್ಧ್ವ ಊ ಷು ಣ ಊತಯೇ : i. 36. 13-14) these two stanzas of Kanva are adressed to the sacrificial post (ಯೂಪ), and the five (beginning) 'The anoint thee' (ಅಂಜಂತಿ ತ್ವಾ : iii. 8. 1-5).

101. The rest (are addressed) to many posts, while the eigth stanza is addressed to the All gods; the last (stanza) of this (hymn) is that which is said to be concerned with cutting (the post). The sixth (hymn : iii. 12) is said to be addressed to Indra-Agni.

47 **ಆ ರುದ್ರಾಸಃ** ಎಂಬ ೫೭ ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ರುದ್ರರ (ಅಥವಾ ರುದ್ರಪುತ್ರರಾದ ಮರುತ್ತುಗಳ) ಗಣವನ್ನು ಸ್ತುತಿಸಲಾಗಿದೆ. ಮರುದ್ದೇವತೆಗಳಿಗೆ ಅಥವಾ ಅವರ ಗಣಗಳಿಗೆ **ರುದ್ರಾಃ** (ಎಂದರೆ ರುದ್ರನ ಪುತ್ರರೆಂದು) ಕರೆಯುವ ರೂಢಿ ಇದೆ.

---

45. Among these it is spoken of as the third: after it comes the (hymn) 'I invoke the gods' (ದೇವಾನ್ ಹುವೇ x 66).

In the couplet 'The Spouses of the Gods' (ದೇವಾನಾಂ ಪತ್ನೀಃ v. 46-7, 8), the spouses of the gods are praised.

10. Deities of RV. v. 51-60.

46. Aad with three of the four (beginning) 'This' (ಅಯಂ v. 51. 4-7) Indra-Vayu are praised, while 'O Vayu, come' (ವಾಯವಾ ಯಾಹಿ v. 51-5) (praises) Vayu (only). With the stanza 'The car' (ರಥಂ v. 56. 8) is here praised Rodasi, whose (husbands) the Maruts—she being the spouse of the Rudras—are praised (in the whole hymn).

47. But in the (stanza) 'Hither, O Rudra' (ಆ ರುದ್ರಾಸಃ v. 57. 1) the host of the Rudras is praised. Now this is the name of the host of the Maruts: they are called Rudras.

ಅಸಾವಗ್ನಿರಯಂ ಚೋಭಾವಗ್ನೀ ಪಾರ್ಥಿವಮಧ್ಯಮೌ ।
ಅಗ್ನೇ ಮರುದ್ಭಿರಿತ್ಯಸ್ಯಾಂ ಮರುದ್ಭಿಃ ಸಹ ಸಂಸ್ತುತೌ ॥ ೪೮ ॥

ಮಧ್ಯಮಾ ವಾಕ್ ಸ್ತ್ರಿಯಃ ಸರ್ವಾಃ ಪುಮಾನ್ ಸರ್ವಶ್ಚ ಮಧ್ಯಮಃ ।
ಗಣಾಶ್ಚ ಸರ್ವೇ ಮರುತೋ ಗುಣಭೇದಾತ್ಪೃಥಕ್ ಪೃಥಕ್ ॥ ೪೯ ॥

ರಾಜರ್ಷಿರಭವದ್ದಾರ್ಭ್ಯೋ ರಥವೀತಿರಿತಿ ಶ್ರುತಃ ।
ಸ ಯಕ್ಷ್ಯಮಾಣೋ ರಾಜಾತ್ರಿಮಭಿಗಮ್ಯ ಪ್ರಸಾದ್ಯ ಚ ॥ ೫೦ ॥

ಆತ್ಮಾನಂ ಕಾರ್ಯಮರ್ಥಂ ಚ ಖ್ಯಾಪಯೆನ್ಪ್ರಾಂಜಲಿಃ ಸ್ಥಿತಃ ।
ಅರ್ಚನಾನಸಮತ್ರೇಯಮಾರ್ತ್ವಿಜ್ಯಾಯಾರ್ಚನಾನಸಂ ॥ ೫೧ ॥

48. ೬೦ ನೇ ಸೂಕ್ತದ **ಅಗ್ನೇ ಮರುದ್ಭಿಃ** ಎಂಬ ೪ ನೇ ಋಕ್ಕಿನಲ್ಲಿ ಈ ಪಾರ್ಥಿವಾಗ್ನಿಯೂ, ಮಧ್ಯಮಾಗ್ನಿಯೂ ಮರುದ್ದೇವತೆಗಳೊಡನೆ ಸ್ತುತರಾಗಿರುವರು.

49. ದೇವಪತ್ನಿಯರೇ ಮೊದಲಾದ ಸ್ತ್ರೀದೇವತೆಗಳು ಮಾಧ್ಯಮಿಕಾ ವಾಗ್ದೇವತೆಯ ಸ್ವರೂಪರಾಗಿರುವರು; ಪುರುಷರಾಗಿದ್ದಲ್ಲಿ ಮಧ್ಯಮದೇವತೆಯರಾಗಿರುವರು. ಮರುದ್ದೇವತೆಗಳೂ, ಅವರ ಗಣಗಳೂ ಮಧ್ಯಮದೇವತೆಗಳಾಗಿದ್ದರೂ ಗುಣಭೇದದಿಂದ ಬೇರೆಬೇರೆಯಾಗಿರುವರು.

ಶ್ಯಾವಾಶ್ವನ ವೃತ್ತಾಂತವು

50. ರಥವೀತಿ ದಾರ್ಭ್ಯ ಎಂಬ ಹೆಸರಿನ ಒಬ್ಬ ರಾಜರ್ಷಿಯಿದ್ದನು. ಅವನು ಯಜ್ಞಮಾಡಬೇಕೆಂದಿಚ್ಛಿಸಿ ಅತ್ರಿಋಷಿಯ ಬಳಿಗೆ ಬಂದು ಅವನನ್ನು ಸತ್ಕರಿಸಿ ಸಂತೋಷಪಡಿಸಿದನು

51. ಬಳಿಕ ರಾಜನು ತಾನು ಯಾರೆಂಬುದನ್ನೂ ತಾನು ಬಂದ ಕಾರ್ಯವನ್ನೂ ಪ್ರಾಂಜಲಿಬದ್ಧನಾಗಿ ಋಷಿಗೆ ತಿಳಿಸಿ ಅವನ ಅನುಜ್ಞೆಯಿಂದ ಅತ್ರಿಋಷಿಯ ಪುತ್ರನಾದ ಅರ್ಚನಾನಾಃ ಎಂಬ ಋಷಿಯು ತಾನು ಮಾಡುವ ಯಜ್ಞದಲ್ಲಿ ಪುರೋಹಿತನಾಗಿರಬೇಕೆಂದು ಪ್ರಾರ್ಥಿಸಿದನು.

48. Now that Agni and this, (viz·) both the middle and the terrestrial Agnis, are praised with the Maruts in the (stanza) 'O Agni, with the Maruts' (ಅಗ್ನೇ ಮರುದ್ಭಿಃ v. 60. 8).

49. Vac (may be) middle, all female goddesses(ಸ್ತ್ರಿಯಃ)(may be middle) and every male (deity may be) middle, as well as all groups (ಗಣ), (such as) the Maruts, respectively according to their different qualities.

11. Story of Syavasva.

50. There was a royal seer famous by the name of Rathaviti Darbhya. That king being about to sacrifice went to Atri and propitiated him.

51. And making known his identity and the object he had in view, as he stood with folded hands, he chose the seer Archananas, the son of Atri, to officiate as (his) priest.

ಸ ಸಪುತ್ರೋಽಭ್ಯಗಚ್ಛತ್ತಂ ರಾಜಾನಂ ಯಜ್ಞಸಿದ್ಧಯೇ ।
ಶ್ಯಾವಾಶ್ವಶ್ಚಾತ್ರಿಪುತ್ರಸ್ಯ ಪುತ್ರಃ ಖಲ್ವರ್ಚನಾನಸಃ ॥ ೫೨ ॥

ಸಾಂಗೋಪಾಂಗಾನ್ಸರ್ವವೇದಾನ್ಯಃ ಪಿತ್ರಾಧ್ಯಾಪಿತೋ ಮುದಾ ।
ಅರ್ಚನಾನಾಃ ಸಪುತ್ರೋಽಥ ಗತ್ವಾ ನೃಪಮಯಾಜಯತ್ ॥ ೫೩ ॥

ಯಜ್ಞೇ ಚ ವಿತತೇಽಪಶ್ಯದ್ರಾಜಪುತ್ರೀಂ ಯಶಸ್ವಿನೀಂ ।
ಸ್ನುಷಾ ಮೇ ರಾಜಪುತ್ರೀ ಸ್ಯಾದಿತಿ ತಸ್ಯ ಮನೋಽಭವತ್ ॥ ೫೪ ॥

ಶ್ಯಾವಾಶ್ವಸ್ಯ ಚ ತಸ್ಯಾಂ ವೈ ಸಕ್ತಮಾಸೀತ್ತದಾ ಮನಃ ।
ಸಂಯುಜ್ಯಸ್ವ ಮಯಾ ರಾಜನ್ನಿತಿ ಯಾಜ್ಯಂ ಚ ಸೋಽಬ್ರವೀತ್ ॥ ೫೫ ॥

52. ರಾಜನ ಪ್ರಾರ್ಥನೆಯನ್ನು ಮನ್ನಿಸಿ ಅತ್ರಿಪುತ್ರನಾದ ಅರ್ಚನಾನಸ ಋಷಿಯು ತನ್ನ ಪುತ್ರನೊಡನೆ ರಾಜನ ಯಜ್ಞನಿರ್ವಹಣಕ್ಕಾಗಿ ಹೊರಟನು- ಅರ್ಚನಾನಸಋಷಿಯ ಪುತ್ರನ ಹೆಸರು ಶ್ಯಾವಾಶ್ವನೆಂದು.

53. ಅರ್ಚನಾನಸಋಷಿಯು ತನ್ನ ಪುತ್ರನಾದ ಶ್ಯಾವಾಶ್ವನಿಗೆ ಷಡಂಗ, ಉಪಾಂಗಗಳ ಸಹಿತವಾಗಿ ಸಕಲ ವೇದಗಳನ್ನೂ ಅಧ್ಯಯನಮಾಡಿಸಿದ್ದನು- ಇಂತಹ ವೇದಾಧ್ಯಯನಸಂಪನ್ನನಾದ ಪುತ್ರನೊಡನೆ ಹೊರಟು ರಾಜನಿಗೆ ಯಜ್ಞವನ್ನು ಮಾಡಿಸಿದನು.

54. ಯಜ್ಞವು ನಡೆಯುತ್ತಿರುವ ಸಮಯದಲ್ಲಿ ಅರ್ಚನಾನಸಋಷಿಯು ರೂಪಯೌವನಸಂಪನ್ನಳಾದ ರಾಜಪುತ್ರಿಯನ್ನು ನೋಡಿದನು. ಆಗ ಅವನ ಮನಸ್ಸಿನಲ್ಲಿ ಈ ರಾಜಪುತ್ರಿಯು ನನ್ನ ಸೊಸೆಯಾಗಬಾರದೇ ಎಂದೆನಿಸಿತು.

55. ಆಗ ಶ್ಯಾವಾಶ್ವನ ಮನಸ್ಸೂ ಆ ರಾಜಪುತ್ರಿಯಲ್ಲಿ ಅನುರಕ್ತವಾಯಿತು. ಆದ್ದರಿಂದ ಶ್ಯಾವಾಶ್ವನು ಯಜ್ಞಮಾಡುತ್ತಿದ್ದ ರಾಜನನ್ನು ಕುರಿತು—ಎಲೈ ರಾಜನೇ, ಈ ರಾಜಪುತ್ರಿಯೊಡನೆ ನನ್ನ ವಿವಾಹವನ್ನು ನೆರವೇರಿಸು ಎಂದು ಪ್ರಾರ್ಥಿಸಿದನು.

52. He, accompanied by his son, went to the king for the performance of the sacrifice. Now the son of Archananas, Atri's son, was Syavasva,

53. who had been gladly taught by his father all the Vedas with their members (ಅಂಗ) and subordinate members (ಉಪಾಂಗ). Then Archananas having gone with his son, performed the sacrifice for the king.

54. And as the sacrifice was in progress, he saw the illustrious daughter of the king. The thought occured to him that the princess might become his daughter-in-law.

55. Then the heart of Syavasva too became fixed on her, and so he said to the institutor of the sacrifice : 'Ally yourself with me, O king'.

ಶ್ಯಾವಾಶ್ವಾಯ ಸುತಾಂ ದಿತ್ಸುರ್ಮಹಿಷೀಂ ಸ್ವಾಂ ನೃಪೋಽಬ್ರವೀತ್ ।
ಕಿಂ ತೇ ಮತಮಹಂ ಕನ್ಯಾಂ ಶ್ಯಾವಾಶ್ವಾಯ ದದಾಮಿ ಹಿ ॥ ೫೬ ॥
ಆತ್ರಿಪುತ್ರೋಽದುರ್ಬಲೋ ಹಿ ಜಾಮಾತಾ ತ್ವಾವಯೋರಿತಿ ।
ರಾಜಾನಮಬ್ರವೀತ್ಸಾಪಿ ನೃಪರ್ಷಿಕುಲಜಾ ಹ್ಯಹಂ ॥ ೫೭ ॥
ನಾನೃಷೀರ್ನೌ ತು ಜಾಮಾತಾ ನೈಷ ಮಂತ್ರಾನ್ ಹಿ ದೃಷ್ಟವಾನ್ ।
ಋಷಯೇ ದೀಯತಾಂ ಕನ್ಯಾ ವೇದಸ್ಯಾಂಬಾ ಭವೇತ್ತ್ವಥಾ ।
ಋಷಿರ್ಮಂತ್ರದೃಶಂ ವೇದಪಿತರಂ ಮನ್ಯತೇ ಯತಃ ॥ ೫೮ ॥
ಪ್ರತ್ಯಾಚಷ್ಟೇ ಸ ತಂ ರಾಜಾ ಸಹ ಸಂಮಂತ್ರ್ಯ ಭಾರ್ಯಯಾ ।
ಅನೃಷಿರ್ನೈವ ಜಾಮಾತಾ ಕಶ್ಚಿದ್ಭವಿತುಮರ್ಹತಿ ॥ ೫೯ ॥

56. ಆಗ ರಾಜನು ಶ್ಯಾವಾಶ್ವನಿಗೆ ತನ್ನ ಪುತ್ರಿಯನ್ನು ವಿವಾಹಮಾಡಿಕೊಡಲು ಇಷ್ಟಪಟ್ಟರೂ ತನ್ನ ಪಟ್ಟ ಮಹಿಷಿಯಾದ ರಾಣಿಯನ್ನು ಕಂಡು—ಈ ಶ್ಯಾವಾಶ್ವನಿಗೆ ನನ್ನ ಪುತ್ರಿಯನ್ನು ವಿವಾಹಮಾಡಿಕೊಡುವ ವಿಚಾರದಲ್ಲಿ ನಿನ್ನ ಅಭಿಪ್ರಾಯವೇನು,

57. ಆತ್ರಿಪುತ್ರನಾದ ಈ ಶ್ಯಾವಾಶ್ವನು ನಿಕೃಷ್ಟನೇನೂ ಅಲ್ಲ. ಇವನು ನಮಗೆ ಅಳಿಯನಾಗುವ ವಿಷಯದಲ್ಲಿ ಯೋಚಿಸಬೇಕಾಗಿಲ್ಲ ಎಂದನು. ಅದಕ್ಕೆ ರಾಣಿಯು—ನೀವು ಹೇಳುವುದೇನೋ ಸರಿ. ಆದರೆ ನಿಮ್ಮ ಪತ್ನಿಯಾದ ನಾನೂ ಸಹ ರಾಜರ್ಷಿಯ ಕುಲದಲ್ಲಿಯೇ ಹುಟ್ಟಿರುವೆನಲ್ಲವೇ?

58. ಋಷಿಯಾಗಿಲ್ಲದವನು ನಮಗೆ ಅಳಿಯನಾಗಬಾರದು. ಈ ಯುವಕನು ಮಂತ್ರದ್ರಷ್ಟೃವಾದ ಋಷಿಯೇನಲ್ಲ. ಆದ್ದರಿಂದ ಮಂತ್ರದ್ರಷ್ಟೃವಾದ ಬೇರೊಬ್ಬ ಋಷಿಗೆ ನನ್ನ ಪುತ್ರಿಯನ್ನು ಕೊಡೋಣ. ಆಗ ಅವಳು ವೇದಗಳಿಗೆ ತಾಯಿಯೆಂದು (ವೇದಮಂತ್ರದ್ರಷ್ಟೃವಾದ ಋಷಿಗೆ ತಾಯಿಯೆಂದು) ಪ್ರಸಿದ್ಧಿಯನ್ನು ಪಡೆಯುವಳು ಏಕೆಂದರೆ ಮಂತ್ರದ್ರಷ್ಟೃವಾದ ಋಷಿಯನ್ನು ವೇದಕ್ಕೆ ತಂದೆಯೆಂದು ಹೇಳುವರಲ್ಲವೇ ಎಂದಳು.

59. ಪತ್ನಿಯ ಅಭಿಪ್ರಾಯವನ್ನು ತಿಳಿದು ರಾಜನು ಆ ಋಷಿಯನ್ನು ಕರೆದು ಮಂತ್ರದ್ರಷ್ಟೃವೂ ಋಷಿಯೂ ಆಗದಿರುವ ಯಾವ ಪುರುಷನೂ ನನ್ನ ಅಳಿಯನಾಗಲಾರನು ಎಂದು ಹೇಳಿದನು.

12. Story of Syavasva (continued).

56. The king wishing to give his daughter to Syavasva, said to his royal consort: 'What is your opinion? I (desire to) give the girl to Syavasva.

57. For a son of Atri would be no contemptible (ಅದುರ್ಬಲ) son-in law for us. She on her part said to the king: 'I have been born in a family of royal seers;

58. One who is not a seer should not be our son-in law: this (youth) has not seen formulas. Let the girl be given to a seer: she would thus become a mother (ಅಂಬ) of the Veda; for a (certain) seer regards one who sees formulas as a father of the Veda'.

59. The king after conferring with his wife, refused him (saying), 'No one is worthy to be (our) son-in-law who is not a seer.'

ಪ್ರತ್ಯಾಖ್ಯಾತ ಋಷಿಸ್ತೇನ ವ್ಯತ್ಕ್ರೀ ಯಜ್ಞೇ ಸ್ವವರ್ಕತ ।
ಶ್ಯಾವಾಶ್ವಸ್ಯ ತು ಕನ್ಯಾಯಾ ಮನೋ ನೈವ ಸ್ವವರ್ಕತ ॥ ೬೦ ॥
ತತಸ್ತೌ ತು ನಿವರ್ತೇತಾಮುಭಾವೇವಾಭಿಜಗ್ಮತುಃ ।
ಶಶೀಯಸೀಂ ತರಂತಂ ಚ ಪುರುಮಿಳ್ಹಂ ಚ ಪಾರ್ಥಿವಂ ॥ ೬೧ ॥
ತರಂತಪುರುಮಿಳ್ಹೌ ತು ರಾಜಾನೌ ವೈದದಶ್ವ ಋಷೀ ।
ತಾಭ್ಯಾಂ ತೌ ಚಕ್ರತುಃ ಪೂಜಾಮೃಷಿಭ್ಯಾಂ ನೃಪತೀ ಸ್ವಯಂ ॥ ೬೨ ॥
ಋಷಿಪುತ್ರಂ ಮಹಿಷ್ಯಾಶ್ಚ ದರ್ಶಯಾಮಾಸ ತಂ ನೃಪಃ ।
ತರಂತಾನುಮತಾ ಚೈವ ಪ್ರಾದಾದ್ಬಹುವಿಧಂ ವಸು ॥ ೬೩ ॥
ಅಜಾವಿಕಂ ಗವಾಶ್ವಂ ಚ ಶ್ಯಾವಾಶ್ವಾಯ ಶಶೀಯಸೀ ।
ಅತ್ರಿಂ ಯಾಜ್ಯಾರ್ಚಿತೌ ಗತ್ವಾ ಪಿತಾಪುತ್ರೌ ಸ್ವಮಾಶ್ರಮಂ ॥ ೬೪ ॥

60. ರಾಜನಿಂದ ತಿರಸ್ಕೃತನಾದ ಋಷಿಯು (ಅರ್ಚನಾನಸನು) ಯಜ್ಞಕರ್ಮವು ಸಮಾಪ್ತಿಯಾದನಂತರ ತನ್ನ ಗೃಹಕ್ಕೆ ಹಿಂತಿರುಗಿದನು. ಆದರೆ ಶ್ಯಾವಾಶ್ವನ ಮನಸ್ಸು ಆ ರಾಜಪುತ್ರಿಯನ್ನು ಬಿಟ್ಟಿರಲಿಲ್ಲ.

61. ಅನಂತರ ತಂದೆಯೂ ಮಗನೂ ಹಿಂತಿರುಗಿ ಬರುತ್ತಿರುವಾಗ ಅವರಿಗೆ ದಾರಿಯಲ್ಲಿ ಶಶೀಯಸೀ, ತರಂತ ಮತ್ತು ಪುರುಮಿಳ್ಹರಾಜನು ಸಂಧಿಸಿದರು.

62. ತರಂತ ಮತ್ತು ಪುರುಮಿಳ್ಹ ಎಂಬುವರು ವಿದದಶ್ವ ಎಂಬ ರಾಜನ ಪುತ್ರರು. ಇವರಿಬ್ಬರೂ ಮಂತ್ರ ದ್ರಷ್ಟೃಗಳಾದ ಋಷಿಗಳೂ ಆಗಿದ್ದರು. ಇವರಿಬ್ಬರೂ ತಮಗೆ ದಾರಿಯಲ್ಲಿ ಸಂಧಿಸಿದ ಅರ್ಚನಾನಸ ಮತ್ತು ಇವನ ಪುತ್ರನಾದ ಶ್ಯಾವಾಶ್ವನನ್ನು ವಿಧಿವತ್ತಾಗಿ ಪೂಜಿಸಿದರು.

63. ಅನಂತರ ತರಂತರಾಜನು ಋಷಿಪುತ್ರನಾದ ಶ್ಯಾವಾಶ್ವನನ್ನು ತನ್ನ ಪಟ್ಟಮಹಿಷಿಗೆ ತೋರಿಸಿದನು. ರಾಜನ ಅನುಮತಿಯಿಂದ ಆ ಮಹಿಷಿಯು(ರಾಜಪತ್ನಿಯು) ಆ ಶ್ಯಾವಾಶ್ವನಿಗೆ ಅನೇಕ ವಿಧವಾದ ದ್ರವ್ಯವನ್ನು ಕೊಟ್ಟಳು.

64. ಶಶೀಯಸೀ ಎಂಬ ಆ ರಾಣಿಯು ಶ್ಯಾವಾಶ್ವನಿಗೆ ಅನೇಕ ಆಡುಗಳನ್ನೂ, ಕುರಿಗಳನ್ನೂ, ಗೋವುಗಳನ್ನೂ, ಅಶ್ವಗಳನ್ನೂ ಕೊಟ್ಟಳು. ಅವನ ತಂದೆಯಾದ ಅತ್ರಿಯನ್ನೂ (ಅರ್ಚನಾನಸಋಷಿಯನ್ನೂ) ಪೂಜಿಸಿದ ಬಳಿಕ ತಂದೆಮಕ್ಕಳಿಬ್ಬರೂ ಅವರ ಸತ್ಕಾರವನ್ನು ಸ್ವೀಕರಿಸಿ ತಮ್ಮ ಆಶ್ರಮಕ್ಕೆ ತೆರಳಿದರು.

60. The seer, being rejected by him, returned, when the sacrifice was over; but the heart of Syavasya returned not from the girl.

61. So these two returned; they both met Sasiyasi and Taranta and king Purumilha.

62. Now the two kings Taranta and Purumilha were seers, son of Vidadasva. These two kings themselves paid homage to the two seers.

63. And the king (ತರಂತ) showed the seer's son to royal consort; and with Taranta's approval she gave manifold wealth,

13. Story of Syavasva (continued)

64. Goats and sheep, cows and horses, to Syavasva, did Sasiyasi. Father and son, (thus) honoured by the institutors of the sacrifice, went to their hermitage to Atri.

ಅಭ್ಯವಾದಯತಾಮತ್ರಿಂ ಮಹರ್ಷಿಂ ದೀಪ್ತತೇಜಸಂ ।
ಶ್ಯಾವಾಶ್ವಸ್ಯ ಮನಸ್ಯಾಸೀನ್ಮಂತ್ರಸ್ಯಾದರ್ಶನಾದಹಂ ॥ ೬೫ ॥
ನ ಲಬ್ಧವಾನಹಂ ಕನ್ಯಾಂ ಹಂತ ಸರ್ವಾಂಗಶೋಭನಾಂ ।
ಅಪ್ಯಹಂ ಮಂತ್ರದರ್ಶೀ ಸ್ಯಾಂ ಭವೇದ್ಧರ್ಷೋ ಮಹಾನ್ಮಮ ॥ ೬೬ ॥
ಇತ್ಯರಣ್ಯೇ ಚಿಂತಯತಃ ಪ್ರಾದುರಾಸೀನ್ಮರುದ್ಗಣಃ ।
ದದರ್ಶ ಸಂಸ್ಥಿತಾನ್ಪಾರ್ಶ್ವೇ ತುಲ್ಯರೂಪಾನಿವಾತ್ಮನಃ ॥ ೬೭ ॥
ಸಮಾನವಯಸಶ್ಚೈವ ಮರುತೋ ರುಕ್ಮವಕ್ಷಸಃ ।
ತಾಂಸ್ತುಲ್ಯವಯಸೋ ದೃಷ್ಟ್ವಾ ದೇವಾನ್ಪುರುಷವಿಗ್ರಹಾನ್ ॥ ೬೮ ॥
ಶ್ಯಾವಾಶ್ವೋ ವಿಸ್ಮಿತೋಽಪೃಚ್ಛತ್ ಕೇ ಷ್ಮೇತಿ ಮರುತಸ್ತದಾ ।
ತತಸ್ತು ಮರುತೋ ದೇವಾನ್ರುದ್ರಸೂನೂನಬುಧ್ಯತ ॥ ೬೯ ॥

65. ಬಳಿಕ ಆ ರಾಜರಿಬ್ಬರೂ ಮಹಾತೇಜಸ್ವಿಯಾದ ಆ ಅತ್ರಿಮಹರ್ಷಿಯನ್ನು ನಮಸ್ಕರಿಸಿದರು. ಶ್ಯಾವಾಶ್ವನ ಮನಸ್ಸಿನಲ್ಲಿ ನಾನು ಮಂತ್ರದ್ರಷ್ಟೃವಾವ ಋಷಿಯಾಗಲಿಲ್ಲವಲ್ಲಾ ಎಂಬ ವಿಷಾದವುಂಟಾಯಿತು.

66. ಆಹಾ, ಆ ಸರ್ವಾಂಗಸುಂದರಿಯಾದ ಆ ರಾಜಕನ್ಯೆಯು ನನಗೆ ಸಿಕ್ಕಲಿಲ್ಲನಲ್ಲಾ. ನಾನೂ ಮಂತ್ರ ದರ್ಶಿಯಾದ ಋಷಿಯಾಗಿದ್ದಲ್ಲಿ ನನಗೆ ಬಹಳ ಸಂತೋಷವುಂಟಾಗುತ್ತಿತ್ತು.

67. ಅರಣ್ಯದಲ್ಲಿ ಸಂಚರಿಸುತ್ತಾ ಈರೀತಿ ಚಿಂತಿಸುತ್ತಿರುವಾಗ ಅವನಿಗೆ ಮರುದ್ದೇವತೆಗಳ ಸಮೂಹವು ಗೋಚರವಾಯಿತು. ಶ್ಯಾವಾಶ್ವನು ತನ್ನ ಸಮೀಪದಲ್ಲಿ ನಿಂತಿರುವ ಆ ಮರುದ್ದೇವತೆಗಳನ್ನು ನೋಡಿದನು. ಅವರೆಲ್ಲರೂ ರೂಪದಲ್ಲಿ ಒಂದೇವಿಧವಾಗಿದ್ದರು.

68. ಆ ಮರುದ್ದೇವತೆಗಳೆಲ್ಲಾ ಒಂದೇ ವಯಸ್ಸಿನವರಾಗಿದ್ದರು. ಎದೆಯಲ್ಲಿ ಸುವರ್ಣಮಯವಾದ ಹಾರಗಳನ್ನು ಧರಿಸಿದ್ದರು. ಪುರುಷಾಕಾರದಿಂದಿರುವವರೂ, ಸಮಾನವಯಸ್ಕರೂ ಆದ ಮರುದ್ದೇವತೆಗಳನ್ನು ಶ್ಯಾವಾಶ್ವನು ನೋಡಿ,

69. ಆಶ್ಚರ್ಯದಿಂದ ಆ ಮರುದ್ದೇವತೆಗಳನ್ನು (**ಕೇ ಷ್ಮಾ ನರಃ** ಎಂಬ ೬೧ ನೇ ಸೂಕ್ತದ ಮೊದಲನೆಯ ಋಕ್ಕು) ಪ್ರಶ್ನೆಮಾಡಿದನು. ಆಗ ಅವರು ರುದ್ರಪುತ್ರರಾದ ಮರುದ್ದೇವತೆಗಳೆಂದು ಇವನಿಗೆ ತಿಳಿಯಿತು.

65. And they saluted Atri, the great seer, of brilliant splendour. (But) Syavasva thought : ' Because I have not seen (any) formula,

66. I have, alas ! not obtained the maiden beautiful in all her limbs. Could I but become a seer of formulas, my joy would be great.

67. To him as he thus reflected in the forest the host of the Maruts appeared.

He saw standing at his (ಆತ್ಮನಃ) side, quite (ಇವ) similar in form,

68. and equal in age, the Maruts, with gold on their breasts. Seeing the gods similar in age, with the figures of men,

69. Syavasva, astonished, then asked the Maruts, ' Who are ye ? ' (**ಕೇ ಷ್ಮಾ** : v. 61. 1). Then, however, he became aware that they were the divine Maruts, the sons of Rudra.

ಯೆ ಈಂ ವಹಂತೇ ಇತ್ಯಾಭಿರ್ಬುಧ್ವಾ ತುಷ್ಟಾವ ತಾಂಸ್ತಥಾ ।
ಅತಿಕ್ರಮಂ ಹಿ ತೇಂ ಮೇನೇ ಋಷಿರ್ವಿಪುಲಮಾತ್ಮನಃ ॥ ೭೦ ॥

ಯೆನ್ನ ದೃಷ್ಟ್ವೈವ ತುಷ್ಟಾವ ಯಚ್ಚ ಕೇ ಸ್ಮೇತಿ ಪೃಷ್ಟವಾನ್ ।
ಸ್ತುತಾ ಸ್ತುತ್ಯಾ ತಯಾ ಪ್ರೀತಾ ಗಚ್ಛಂತಃ ಪೃಶ್ನಿಮಾತರಃ ॥ ೭೧ ॥

ಅವಮುಚ್ಯ ಸ್ವವಕ್ಷೋಭ್ಯೋ ರುಕ್ಮಂ ತಸ್ಮೈ ತದಾ ದದುಃ ।
ಮರುತ್ಸು ತು ಪ್ರಯಾತೇಷು ಶ್ಯಾವಾಶ್ವಃ ಸುಮಹಾಯಶಾಃ ॥ ೭೨ ॥

ರಥವೀತೇರ್ದುಹಿತರಮಗಚ್ಛನ್ಮನಸಾ ತದಾ ।
ಸ ಸದ್ಯ ಋಷಿರಾತ್ಮಾನಂ ಪ್ರವಕ್ಷ್ಯನ್ರಥವೀತಯೇ ॥ ೭೩ ॥

70. ಬಳಿಕ ಅವನು ಆ ಮರುದ್ದೇವತೆಗಳನ್ನು **ಯೆ ಈಂ ವಹಂತೇ** ಎಂಬ ೬೧ನೇ ಸೂಕ್ತದ ೧೧ನೇ ಋಕ್ಕಿನಿಂದ ಸ್ತುತಿಸಿದನು. ಅವರನ್ನು ನೋಡಿದ ಕೂಡಲೇ ಅವರನ್ನು ಸ್ತುತಿಸಲಿಲ್ಲವಲ್ಲಾ, ನಾನು ದೊಡ್ಡ ತಪ್ಪನ್ನು ಮಾಡಿದೆನು ಎಂದು ಋಷಿಯು ವ್ಯಥೆಪಟ್ಟನು.

71. ಆ ಮರುದ್ದೇವತೆಗಳೂ ಕೂಡ—ಈ ಋಷಿಪುತ್ರನು ನಮ್ಮನ್ನು ನೋಡಿದ ಕೂಡಲೆ ಸ್ತುತಿಸಲಿಲ್ಲ ಮತ್ತು ನೀವು ಯಾರೆಂದು ನಮ್ಮನ್ನೇ ಕೇಳಿದನು. ಎಂದು ತಮ್ಮಲ್ಲಿ ಪರಸ್ಪರ ಮಾತನಾಡಿಕೊಂಡರೂ ಅವನು ಮಾಡಿದ ಸ್ತುತಿಯಿಂದ ಪ್ರೀತರಾದ ಆ ಪೃಶ್ನಿಪುತ್ರರು ತಾವು ಹೊರಡುವಾಗ,

72. ತಮ್ಮ ಎದೆಯ ಮೇಲಿದ್ದ ಸುವರ್ಣಾಭರಣವನ್ನು ತೆಗೆದು ಆ ಶ್ಯಾವಾಶ್ವನಿಗೆ ಕೊಟ್ಟರು. ಮರುದ್ದೇವತೆಗಳ ಹೊರಟುಹೋದಮೇಲೆ ಕೀರ್ತಿಶಾಲಿಯಾದ ಆ ಶ್ಯಾವಾಶ್ವನೂ ಕೂಡ,

73. ರಥವೀತಿರಾಜನ ಪುತ್ರಿಯನ್ನೇ ಮನಸ್ಸಿನಲ್ಲಿ ಚಿಂತಿಸುತ್ತಿದ್ದನು. ತಾನು ಈಗತಾನೇ ಮಂತ್ರದ್ರಷ್ಟಾರನಾದ ಋಷಿಯಾದೆನೆಂಬ ವಿಷಯವನ್ನು ಆ ರಥವೀತಿರಾಜನಿಗೆ ಹೇಳಬೇಕೆಂದು ಇಚ್ಛಿಸಿ,

---

70. Having observed (this), he also praised them with the (stanzas) 'They that ride' (ಯೆ ಈಂ ವಹಂತೇ : v. 61. 11). For the seer considered it a great transgression on his part,

71. that, as soon as he had seen them, he did not praise them, and that he asked them, 'Who are ye?' Being praised and being delighted with their praise, the sons of Prsni (the Maruts) as they went along,

14. Story of Syavasva (continued)

72. taking off the gold from their breasts, gave it, to him. Now when the Maruts had gone thence, the illustrious Syavasva

73. went in thought to the daughter of Rathaviti. He, only just (ಸದ್ಯಃ) a seer, wishing to declare himself to Rathaviti,

ಏತಂ ಮೇ ಸ್ತೋಮಮಿತ್ಯಾಭ್ಯಾಂ ದೌತ್ಯೇ ರಾತ್ರೀಂ ನ್ಯಯೋಜಯೇತ್ ।
ರಥವೀತಿಮಪಶ್ಯಂತೀಂ ಸಂಪ್ರೇಕ್ಷ್ಯಾರ್ಷೇಣ ಚಕ್ಷುಷಾ ॥ ೭೪ ॥
ರಮ್ಯೇ ಹಿಮವತಃ ಪೃಷ್ಠೇ ಏಷ ಕ್ಷೇತೀತಿ ಚಾಬ್ರವೀತ್ ।
ಋಷೇರ್ನಿಯೋಗಮಾಜ್ಞಾಯ ದೇವ್ಯಾ ರಾತ್ರ್ಯಾ ಪ್ರಚೋದಿತಃ ॥ ೭೫ ॥
ಆದಾಯ ಕನ್ಯಾಂ ತಾಂ ದಾರ್ಭ್ಯ ಉಪೇಯಾಯಾರ್ಚನಾನಸಂ ।
ಪಾದೌ ತಸ್ಯೋಪಸಂಗೃಹ್ಯ ಸ್ಥಿತ್ವಾ ಪ್ರಹ್ವಃ ಕೃತಾಂಜಲಿಃ ॥ ೭೬ ॥
ರಥವೀತಿರಹಂ ದಾರ್ಭ್ಯ ಇತಿ ನಾಮ ಶಶಂಸ ಚ ।
ಮಯಾ ಸಂಗತಿಮಿಚ್ಛಂತಂ ತ್ವಾಂ ಪ್ರತ್ಯಾಚಕ್ಷಿ ಯತ್ಪುರಾ ॥ ೭೭ ॥

74. ರಾತ್ರಿದೇವತೆಯನ್ನು ಕರೆದು ಆ ದೇವತೆಯ ಮುಖಾಂತರ **ಏತಂ ಮೇ ಸ್ತೋಮಂ** ಎಂದು ಮೊದಲಾಗುವ ಎರಡು ಋಕ್ಕುಗಳಿಂದ (೬೧ ನೇ ಸೂಕ್ತದ ೧೭-೧೮ ನೇ ಋಕ್ಕುಗಳು) ಹೇಳಿಕಳುಹಿಸಿದನು. ಆದರೆ ಆ ರಾತ್ರಿದೇವತೆಯು ರಥವೀತಿರಾಜನನ್ನು ನೋಡಿರಲಿಲ್ಲ. ಅವನು ಎಲ್ಲಿರುವನೆಂಬುದೂ ಗೊತ್ತಿರಲಿಲ್ಲ. ಆದ್ದರಿಂದ ಶ್ಯಾವಾಶ್ವನು ಋಷಿಸಹಜವಾದ ತನ್ನ ದಿವ್ಯದೃಷ್ಟಿಯಿಂದ ರಾಜನಿರುವ ಸ್ಥಳವನ್ನು ತಿಳಿದು,

75. ಎಲೈ ರಾತ್ರಿಯೇ, ಆ ರಥವೀತಿರಾಜನು ಮನೋಹರವಾದ ಹಿಮಾಲಯಪರ್ವತದ ತಪ್ಪಲುಪ್ರದೇಶದಲ್ಲಿ ವಾಸಿಸುತ್ತಿರುವನು ಎಂದು **ಏಷ ಕ್ಷೇತಿ** ಎಂಬ ಋಕ್ಕಿನಿಂದ (೬೧ ನೇ ಸೂಕ್ತದ ೧೯ ನೇ ಋಕ್ಕು) ತಿಳಿಸಿದನು. ಆದರಂತೆ ರಾತ್ರಿಯು ಶ್ಯಾವಾಶ್ವನ ನಿಯೋಗವನ್ನು ರಾಜನಿಗೆ ತಿಳಿಸಲು,

76. ದರ್ಭಪುತ್ರನಾದ ಆ ರಥವೀತಿರಾಜನು ತನ್ನ ಪುತ್ರಿಯನ್ನು ಜತೆಯಲ್ಲಿ ಕರೆದುಕೊಂಡು ಶ್ಯಾವಾಶ್ವನ ತಂದೆಯಾದ ಆರ್ಚನಾನಸನಿರುವ ಸ್ಥಳಕ್ಕೆ ಬಂದು ಅವನ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಕೈಮುಗಿದುಕೊಂಡು ವಿನೀತನಾಗಿ,

77. ಎಲೈ ಮಹರ್ಷಿಯೇ, ನಾನು ದರ್ಭಪುತ್ರನಾದ ರಥವೀತಿರಾಜನು. ನೀನು ಹಿಂದೆ ನನ್ನೊಡನೆ ಬಂಧುತ್ವವನ್ನು ಬೆಳೆಸಬೇಕೆಂದು ಇಷ್ಟಪಟ್ಟಾಗ ನಾನು ಅದನ್ನು ತಿರಸ್ಕರಿಸಿದೆನಷ್ಟೆ.

74. commissinoned Night on a message with the two (stanzas) 'This my song of praise' (ಏತಂ ಮೇ ಸ್ತೋಮಂ : v. 61-17, 18); and to her (Night) who did not see Rathaviti, he discerning (him)with the eye of a seer,

75. said, 'Here he dwells' (ಏಷ ಕ್ಷೇತಿ v. 61. 19) 'on a delightful ridge of the Himavat' Urged by the goddess Night, after learning his instructions,

76. the son of Darbha, taking the girl with him, approached Archananas, and after clasping his feet, standing bent forward with folded hands,

15. Story of Syavasva (concluded).

77. he announced his name(saying), I am Rathaviti, son of Darbha; inasmuch as I refused you formerly when you desired an alliance with me,

ತತ್ಕ್ಷಮಸ್ವ ನಮಸ್ತೇಽಸ್ತು ಮಾ ಚ ಮೇ ಭಗವನ್ಕ್ರುಧಃ ।
ಋಷೇಃ ಪುತ್ರಃ ಸ್ವಯಮೃಷಿಃ ಪಿತಾಸಿ ಭಗವನ್ಋಷೇಃ ॥ ೭೮ ॥

ಹಂತ ಪ್ರತಿಗೃಹಾಣೇಮಾಂ ಸ್ನುಷಾಮಿತ್ಯೇವಮಬ್ರವೀತ್ ।
ಪಾದ್ಯಾರ್ಘ್ಯಮಧುಪರ್ಕೈಶ್ಚ ಪೂಜಯಿತ್ವಾ ಸ್ವಯಂ ನೃಪಃ ॥ ೭೯ ॥

ಶುಕ್ಲಮಶ್ವಶತಂ ದತ್ತ್ವಾ ಅನುಜಜ್ಞೇ ಗೃಹಾನ್ಪ್ರತಿ ।
ಶಶೀಯಸೀಂ ತರಂತಂ ಚ ಪುರುಮಿಳ್ಹಂ ಚ ಪಾರ್ಥಿವಂ ॥ ೮೦ ॥

ಷಡ್ಭಿಃ ಸನದಿತಿ ಸ್ತುತ್ವಾ ಜಗಾಮರ್ಷಿರಪಿ ಕ್ಷಯಂ ।
ಋತೇನ ಮೈತ್ರಾವರುಣಾನ್ಯೇಕಾದಶ ಪರಾಣಿ ತು ॥ ೮೧ ॥

78. ಈಗ ಆ ತಪ್ಪನ್ನು ಕ್ಷಮಿಸು- ಇಗೋ ನಿನಗೆ ನಮಸ್ಕರಿಸುವೆನು. ನನ್ನ ಮೇಲೆ ಕೋಪಮಾಡಬೇಡ. ಎಲೈ ಪೂಜ್ಯನೇ, ನೀನು ಋಷಿಯ (ಮಂತ್ರದ್ರಷ್ಟೃವಿನ) ಪುತ್ರನು, ಸ್ವಯಂ ನೀನೂ ಋಷಿಯು ಮತ್ತು ಮಂತ್ರ ದ್ರಷ್ಟೃವಾದ ಋಷಿಯ ತಂದೆಯೂ ಆಗಿರುವೆ.

79. ಒಳ್ಳೆದು, ಆದದ್ದಾಯಿತು. ಈಗ ಈ ಕನ್ಯೆಯನ್ನು (ನನ್ನ ಪುತ್ರಿಯನ್ನು) ನಿನ್ನ ಸೊಸೆಯಾಗಿ ಪರಿಗ್ರಹಿಸು, ಎಂದು ಹೇಳಿ ಆ ರಾಜನು ತಾನೇ ಸ್ವತಃ ಆ ಋಷಿಯನ್ನು ಪಾದ್ಯ, ಅರ್ಘ್ಯ, ಮಧುಪರ್ಕಾದಿ ಸತ್ಕಾರ ಗಳಿಂದ ಪೂಜಿಸಿದನು.

80. ಅನಂತರ ಆ ಋಷಿಪುತ್ರನಿಗೆ ನೂರು ಶ್ವೇತಾಶ್ವಗಳನ್ನು (ಬಿಳೀ ಕುದುರೆಗಳನ್ನು) ಬಳುವಳಿಯಾಗಿ ಕೊಟ್ಟು ಅವನಿಂದ ಅನುಜ್ಞೆಯನ್ನು ಪಡೆದು ತನ್ನ ಗೃಹಾಭಿಮುಖವಾಗಿ ಹೊರಟುಹೋದನು. ಋಷಿಯೂ ಸಹ ಶಶೀಯಸಿ (ರಾಜಪತ್ನಿ) ಯನ್ನೂ, ತರಂತನನ್ನೂ, ಪುರುಮಿಳ್ಹರಾಜನನ್ನೂ,

81. **ಸನತ್ ಸಾಶ್ವ್ಯಂ** ಎಂದು ಮೊದಲಾಗುವ ಆರು ಋಕ್ಕುಗಳಿಂದ (೬೧ ನೇ ಸೂಕ್ತದ ೫-೧೦ ಋಕ್ಕು ಗಳು) ಪ್ರಶಂಸೆಮಾಡಿ ತಾನೂ ತನ್ನ ಮನೆಗೆ ಹೊರಟುಹೋದನು. ಈಗ ಇದರ ಮುಂದಿನ **ಋತೇನ ಋತಂ** ಎಂದು ಮೊದಲಾಗುವ ೧೧ ಸೂಕ್ತಗಳಲ್ಲಿ (೬೨-೭೨ ಸೂಕ್ತಗಳಲ್ಲಿ) ಮಿತ್ರಾವರುಣರನ್ನು ಸ್ತುತಿಸಲಾಗಿದೆ.

---

78. forgive me for that. I pay homage to you; and do not, adorable one, be wrath with me. You are the son of a seer, a seer yourself, you are, adorable one, the father of a seer.

79. Come, accept this (girl) as a daughter-in-law, So said the king, and himself honouring him with water to wash his feet (पाद्य), with the water of hospitality (अर्घ्य) and with a mixture of honey (मधुपर्क),

80-81. and giving him a hundred white (शुक्ल) steeds, he dismissed him to his home. And the seer, on his part, having praised Sasiyasi, and king Purumilha with the six (stanzas) ' May she gain ' (सनत् : v. 61. 5.10) departed to his abode.

Now the following eleven (hymns beginning) ' With law ' (ऋतेन v. 62-72) are addressed to Mitra-Varuna.

ಷಳಾಶ್ವಿನಾನಿ ಗರ್ಭಾರ್ಥಂ ಪಂಚರ್ಚೋಪನಿಷತ್ಸ್ತುತಿಃ ।
ಸಪ್ತ ಕೃತ್ವಾಪರಾಧಾನ್ಸ್ವೈ ವಿಫಲೇ ದಾರಸಂಗ್ರಹೇ ॥ ೮೨ ॥

ಋಷಿಃ ಕೃತೋಽಶ್ವಮೇಧೇನ ಭಾರತೇನೇತಿ ವೈ ಶ್ರುತಿಃ ।
ತಮುಷ್ಟ್ರಮೇಽಪರಾಧೇ ತು ವೃಕ್ಷದ್ರೋಣ್ಯಾಂ ಸ ಪಾರ್ಥಿವಃ ॥ ೮೩ ॥

ಋಬೀಸೇ ಹ ನಿನಿಕ್ಷಿಪ್ಯ ಸ್ಥನ್ನಂ ರಾತ್ರೌ ನ್ಯಧಾರಯತ್ ।
ಸೋಽಶ್ವಿನಾವಿತಿ ಸೂಕ್ತೇನ ತುಷ್ಟಾವರ್ಷಿಃ ಶುಭಸ್ಪತೀ ॥ ೮೪ ॥

ತೌ ತಂ ತಸ್ಮಾತ್ಸಮುದ್ಧೃತ್ಯ ಚಕ್ರತುಃ ಸಫಲಂ ಪುನಃ ।
ತೃಚಃ ಸ್ವಸ್ಯೈವ ಗರ್ಭಾರ್ಥಂ ಸ್ವಪತಸ್ತಸ್ಯ ಗರ್ಭವತ್ ॥ ೮೫ ॥

ಸಪ್ತವಧ್ರಿಯ ವೃತ್ತಾಂತ

82-84. ಇಗರ ಮುಂದಿನ ಆರು ಸೂಕ್ತಗಳಲ್ಲಿ (೭೩-೭೮) ಅಶ್ವಿನೀದೇವತೆಗಳನ್ನು ಸ್ತುತಿಸಲಾಗಿದೆ. ಈ ೭೮ ನೇ ಸೂಕ್ತದ ಐದು ಋಕ್ಕುಗಳಲ್ಲಿ (೫-೯) ಗರ್ಭಾರ್ಥವಾಗಿ ಪ್ರಾರ್ಥಿಸಿರುವ ಸ್ತುತಿಯು ಉಕ್ತವಾಗಿದೆ. ಈ ವಿಷಯದಲ್ಲಿ ಒಂದು ಪೂರ್ವೇತಿಹಾಸವಿರುವುದು. ಭರತಕುಲದ ಅಶ್ವಮೇಧನೆಂಬ ರಾಜನಿಗೆ ಮಕ್ಕಳಿರಲಿಲ್ಲ. ಇವನಿಗೆ ಮಕ್ಕಳಾಗುವಂತೆ ದೇವತೆಗಳನ್ನು ಪ್ರಾರ್ಥಿಸಿ ಅವರ ಅನುಗ್ರಹವನ್ನು ಸಂಪಾದಿಸುವಂತೆ ಈ ಅತ್ರಿಋಷಿಯು ನಿಯಮಿಸಲ್ಪಟ್ಟನು. ಋಷಿಯು ರಾಜನ ಪುತ್ರಪ್ರಾಪ್ತಿಗಾಗಿ ಏಳಾವರ್ತಿ ಪ್ರಯತ್ನಪಟ್ಟರೂ ಸಫಲವಾಗಲಿಲ್ಲ. ಎಂಟನೆಯ ಸಲವೂ ಋಷಿಯ ಪ್ರಯತ್ನವು ವಿಫಲವಾದುದನ್ನು ಕಂಡು ರಾಜನಿಗೆ ಕೋಪಬಂದು ಇವನನ್ನು ಒಂದು ಮರದಪೆಟ್ಟಿಗೆಯಲ್ಲಿ ಹಾಕಿ ಆಳವಾದ ಒಂದು ಕಮರಿಯಲ್ಲಿ ನಿರ್ಬಂಧಿಸಿ ಇಟ್ಟಿದ್ದನು. ರಾತ್ರಿಕಾಲದಲ್ಲಿ ಆ ಪೆಟ್ಟಿಗೆಯಿಂದ ಹೇಗೋ ಈಚಿಗೆ ಬಂದು ಅಶ್ವಿನೀದೇವತೆಗಳನ್ನು **ಅಶ್ವಿನಾವೇಹ ಗಚ್ಛತಂ** ಎಂಬ ೭೮ ನೇ ಸೂಕ್ತದಿಂದ ಸ್ತುತಿಸಿದನು.

85-86. ಆ ಅಶ್ವಿನೀದೇವತೆಗಳು ಇವನನ್ನು ಆ ಹಳ್ಳದಿಂದ ಮೇಲಕ್ಕೆತ್ತಿ ಇವನ ಇಷ್ಟಾರ್ಥವನ್ನು ನೆರವೇರಿಸಿದರು. ಗರ್ಭವಾಸದಲ್ಲಿದ್ದಂತೆ ಮರದಪೆಟ್ಟಿಗೆಯಲ್ಲಿ ನಿರ್ಬಂಧಿತನಾಗಿದ್ದ ಆ ಋಷಿಗೆ ಮಕ್ಕಳಾಗುವುದಕ್ಕಾಗಿ **ಯಥಾ ವಾತಃ** ಎಂದು ಮೊದಲಾಗುವ ಮೂರು ಋಕ್ಕುಗಳು (೭೮ ನೇ ಸೂಕ್ತದ ೭-೯ ಋಕ್ಕುಗಳು) ಋಷಿಯಿಂದ ಪಠಿತ

16. RV. v. 73-78. Story of Saptavadhri.

82. There are six (hymns) addressed to the Asvins (v. 73-78). There is (here) a mystic (ಉಪನಿಷತ್) praise consisting of five stanzas (v. 78. 5-9) with a view to childbirth.

83-84 There is a sacred tradition (ಶ್ರುತಿ) that the seer after incurring seven faillures (ಅಪರಾಧಾನ್) was appointed (again) by (king) Asvamedha of the race of Bharata, his wedlock being childless. On the eighth failure, however, the king casting him, in a trough (made) of a tree (ವೃಕ್ಷದ್ರೋಣೀ), into a chasm (ಋಬೀಸ) kept him down (in it) when he leapt up at night (Then) the seer praised the Lords of Light (ಶುಭಸ್ಪತೀ) with the hymn 'Ye Asvins' (ಅಶ್ವಿನೌ : v. 78).

85-86. They, raising him out of that (chasm), made him productive again. The triplet 'Like the wind' (ಯಥಾ ವಾತಃ : v. 78. 7-9) is with

ಯಥಾ ವಾತ ಇತಿ ಜ್ಞೇಯೇ ತ್ವಶ್ವಿಭ್ಯಾಮಿತರೇ ಋಚೌ ।
ಪ್ರವತಾಮಪಿ ಗರ್ಭಾಣಾಂ ದೃಷ್ಟಂ ತದನುಮಂತ್ರಣಂ ॥ ೮೬ ॥

ಭಾವವೃತ್ತಂ ತು ತದ್ವತ್ಸಾ ಽತ್ರತಥಾರೂಪಂ ಹಿ ದೃಶ್ಯತೇ ।
ಜರಾಯುಗರ್ಭಶಬ್ದಾಭ್ಯಾಮೇತದ್ರೂಪಂ ಹಿ ದೃಶ್ಯತೇ ॥ ೮೭ ॥

ಮಹೇ ಉಷಸ್ಯೇ ಸಾವಿತ್ರೇ ಯುಂಜತೇ ಽಚ್ಛೇತಿ ವೈ ಸ್ತುತಃ ।
ಪರ್ಜನ್ಯೋ ಬಳಿತಿ ತ್ವಸ್ಮಿನ್ಪೃಥಿವೀ ಮಧ್ಯಮಾ ಸ್ತುತಾ ॥ ೮೮ ॥

ವಾಗಿವೆ. ಆದರೆ ಕೊನೆಯ ಎರಡು ಋಕ್ಕುಗಳಲ್ಲಿ (೮೮-೯) ಅಶ್ವಿನೀದೇವತೆಗಳನ್ನು ಗರ್ಭಸ್ರಾವಾರ್ಥವಾಗಿ ಸ್ತುತಿಸ ಲಾಗಿದೆ. ಸ್ತ್ರೀಯರ ಪ್ರಸವಕಾಲದಲ್ಲಿ ಸುಖಪ್ರಸವವಾಗುವುದಕ್ಕಾಗಿ ಈ ಮಂತ್ರಗಳನ್ನು ಪಠಿಸಬಹುದೆಂದು ಹೇಳ ಲಾಗಿದೆ. ಈ ಐದು ಋಕ್ಕುಗಳಿಗೂ (೫-೯) ಗರ್ಭಸ್ರಾವಿಣ್ಯೋಽನಿಷತ್ ಎಂಬ ಹೆಸರಿದೆ.

87. ಈ ಐದು ಋಕ್ಕುಗಳಲ್ಲಿ (೭೮ ನೇ ಸೂಕ್ತದ ೫-೯) ಪ್ರತಿಪಾದಿತವಾಗಿರುವ ವಿಷಯಗನ್ನು ಪರಿಶೀಲಿ ಸಿದರೆ ಈ ಋಕ್ಕುಗಳಿಗೆ ಭಾವವೃತ್ತವೇ ದೇವತೆಯೆಂದು ಹೇಳಬೇಕಾಗುವುದು. ಏಕೆಂದರೆ ಈ ಋಕ್ಕುಗಳಲ್ಲಿರುವ **ಜರಾಯು, ಗರ್ಭ** ಎಂಬ ಶಬ್ದಗಳು ಈ ವಿಧವಾದ ಅಭಿಪ್ರಾಯವನ್ನು ಪುಷ್ಟೀಕರಿಸುವವು.

೭೯-೮೭ ನೇ ಸೂಕ್ತಗಳ ದೇವತೆಗಳು

88. **ಮಹೇ ನೋ ಅದ್ಯ** ಎಂದು ಮೊದಲಾಗುವ ೨ ಸೂಕ್ತಗಳಲ್ಲಿ (೭೯-೮೦) ಉಷೋದೇವತೆಯೂ, **ಯುಂಜತೇ ಮನ** ಎಂದು ಪ್ರಾರಂಭವಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೮೧-೮೨) ಸವಿತೃವೂ, **ಅಚ್ಛಾ ವದ** ಎಂಬ ೮೩ ನೇ ಸೂಕ್ತದಲ್ಲಿ ಪರ್ಜನ್ಯನೂ **ಬಳಿತ್ಥಾ** ಎಂಬ ೮೪ ನೇ ಸೂಕ್ತದಲ್ಲಿ ಮಧ್ಯಮಸ್ಥಾನದೇವತೆಯಾದ ಪೃಥಿವಿಯೂ ಸ್ತುತರಾಗಿರುವರು.

---

a view to a child (ಗರ್ಭ) for himself who like a child (in the womb) slept (in the tree); but the other two stanzas are to be known as for the Asvins.

This is also recognied (ದೃಷ್ಟಂ) as a consecrating prayer for children issuing from the womb (ಪ್ರವತಾಂ)

17. Deities of RV. v. 79-87. Khilas.

87. But it may likewise (ತದ್ವತ್) be (regaded as) concerned with the evolution of becoming (ಭಾವವೃತ್ತ), for it evidently has such a character: that it has this character (ರೂಪ) is evident from the two words after birth (ಜರಾಯು) and embryo (ಗರ್ಭ).

88. The two (hymns) 'To great' (ಮಹೇ: v. 79, 80) are addressed to Dawn, the two 'They yoke' (ಯುಂಜತೇ: v. 81, 82) are addressed to Savitr. (In) 'Unto' (ಅಚ್ಛಾ: v 83) Parjanya is praised; but in 'Verily' (ಬಟ್; v. 84) the Middle Earth is praissed.

ಅದ್ಯಾ ನೋ ದೇವ ಸವಿತರಿಯಂ ದುಃಸ್ವಪ್ನನಾಶಿನೀ ।
ವಾರುಣಂ ತು ಪ್ರ ಸಮ್ರಾಜೇ ಇಂದ್ರಾಗ್ನೀ ಕೃಂದ್ರಾಗ್ನಮುತ್ತರಂ ॥ ೮೯ ॥

ವಿಷ್ಣುನ್ಯಂಗಂ ಪರಂ ಪ್ರೇತಿ ಮಾರುತಂ ಸೂಕ್ತಮುತ್ತಮಂ ।
ಏವಯಾಮರುದಾಖ್ಯಾತಂ ದ್ಯೌರ್ನೇಂದ್ರೇ ಪ್ರತಿಪೂರ್ವಕಂ ॥ ೯೦ ॥

ಶ್ರೀಸೂಕ್ತಮಾಶೀರ್ವಾದಸ್ತು ಶ್ರೀಪುತ್ರಾಣಾಂ ಪರಾಣಿ ಷಟ್ ।
ತಸ್ಯಾಕೃದ್ವಾಲಕ್ಷ್ಮಕೃಪನುದಮಗ್ನಿಸ್ತತ್ರ ನಿಪಾತಭಾಕ್ ॥ ೯೧ ॥

89. ಅದ್ಯಾ ನೋ ದೇವ ಸವಿತಃ ಎಂಬ ಋಕ್ಕು (೮೨ ನೇ ಸೂಕ್ತದ ೪ ನೇ ಋಕ್ಕು) ದುಃಸ್ವಪ್ನವನ್ನು ನಾಶಮಾಡುವುದು. ಮುಂದಿನ ಪ್ರ ಸಮ್ರಾಜೇ ಎಂಬ ೮೫ ನೇ ಸೂಕ್ತದಲ್ಲಿ ವರುಣನನ್ನೂ, ಅದರ ಮುಂದಿನ ಇಂದ್ರಾಗ್ನೀ ಎಂಬ ೮೬ ನೇ ಸೂಕ್ತದಲ್ಲಿ ಇಂದ್ರಾಗ್ನಿಗಳನ್ನೂ ಸ್ತುತಿಸಲಾಗಿದೆ.

90. ಇದರ ಮುಂದಿನ ಸೂಕ್ತವೂ ಮಂಡಲದ ಕೊನೆಯ ಸೂಕ್ತವೂ ಆದ ಪ್ರ ವೋ ಮಹೇ ಎಂಬ ೮೭ನೇ ಸೂಕ್ತದಲ್ಲಿ ಮರುದ್ದೇವತೆಗಳನ್ನು ಸ್ತುತಿಸಲಾಗಿದೆ. ಸೂಕ್ತದ ಕೆಲವು ಋಕ್ಕುಗಳಲ್ಲಿ ವಿಷ್ಣುವಿನ ಹೆಸರು ಅಲ್ಲಲ್ಲಿ ಪ್ರಾಸಂಗಿಕವಾಗಿ ಉಕ್ತವಾಗಿದೆ. ಈ ಸೂಕ್ತಕ್ಕೆ ಏವಯಾಮರುತ್ ಎಂಬುವನು ಋಷಿಯು. ೬ ನೇ ಮಂಡಲದ ದ್ಯೌರ್ನ ಎಂಬ ೨೦ ನೇ ಸೂಕ್ತವು ಇಂದ್ರಸೂಕ್ತವೆಂದು ಕರೆಯಲ್ಪಡುವಂತೆ ಈ ಸೂಕ್ತಕ್ಕೆ ಏವಯಾಮರುತ್ಸೂಕ್ತವೆಂದು ಹೆಸರಿದೆ.

91. ಈ ಮಂಡಲಾಂತ್ಯದಲ್ಲಿ ಪಠಿಸಲ್ಪಡುವ (ಹಿರಣ್ಯವರ್ಣಾಂ) ಎಂಬ ಶ್ರೀಸೂಕ್ತವು ಆಶೀರ್ವಾದರೂಪವಾಗಿದೆ. ಈ ಸೂಕ್ತದ (ಮೊದಲಿನ) ಆರು ಋಕ್ಕುಗಳಲ್ಲಿ ಸಂಪತ್ ಮತ್ತು ಪುತ್ರರ ಪ್ರಸ್ತಾಪವಿದೆ ಅಥವಾ ಇದರಲ್ಲಿ ಅಲಕ್ಷ್ಮಿಯ (ದಾರಿದ್ರ್ಯದ) ಪರಿಹಾರವನ್ನು ಪ್ರಾರ್ಥಿಸಲಾಗಿದೆ. ಈ ಸೂಕ್ತದಲ್ಲಿರುವ ಅಗ್ನಿಯ ಸ್ತುತಿಯು ಪ್ರಾಸಂಗಿಕವಾಗಿರುವುದು.

---

89. The (stanza) 'For us to-day, god Savitr' (ಅದ್ಯಾ ನೋ ದೇವ ಸವಿತಃ : v. 82-4) destroys evil dreams.

'Forth to the sovereign lord' (ಪ್ರ ಸಮ್ರಾಜೇ : v. 85) is addressed to Varuna. The following one 'O Indra-Agni' (ಇಂದ್ರಾಗ್ನೀ : v. 86) is addressed to Indra-Agni.

90. The following hymn 'Forth' (ಪ್ರ : v. 87), the last (of the ಮಂಡಲ) is addressed to the Maruts while makiug incidental mention of Visnu (ವಿಷ್ಣುವ್ಯಂಗ).

It is called Evayamarut, being the antecedent (ಪ್ರತಿಪೂರ್ವಕ) in the (case of the) Indra hymn 'As Heaven' (ದ್ಯೌರ್ನ : vi. 20).

91. But the hymn of Fortune (ಶ್ರೀಸೂಕ್ತ) is a benediction : the following six are connected with fortune and sons. Or that (hymn) may be regarded (or meant) to banish ill-luck, Agni is incidentally praised (ನಿಪಾತಭಾಜ) in it.

ಪ್ರಜಾವಜ್ಜೀವಪುತ್ರೌ ವಾ ಗರ್ಭಕರ್ಮಣಿ ಸಂಸ್ತುತೌ ।
ನಾನಾರೂಪಾ ಪಯಸ್ವಿನ್ಯಃ ಸಂಸ್ರವಂತೀತಿ ಸಂಸ್ತುತಾಃ ॥ ೯೨ ॥

ಅತೀರ್ವಾದೇಷು ಸಂಜ್ಞಾಸು ಕರ್ಮಸಂಸ್ಥಾಸು ದೇವತಾ ।
ನಿಪಾತಭಾಕ್ ಲಿಂಗವಾಕ್ಯಾಭ್ಯಾಮೀಕ್ಷ್ಯೇತೇಹ ಮಂತ್ರವಿತ್ ॥ ೯೩ ॥

ಮಂತ್ರಪ್ರಯೋಗಮಂತ್ರಯೋಃ ಪ್ರಯೋಗೋ ಬಲವತ್ತರಃ ।
ವಿಧೇಸ್ತಯೋಃ ಪರೀಕ್ಷಾ ಸ್ಯಾನ್ಮಂತ್ರಾಃ ಸ್ಯುರಭಿಧಾಯಕಾಃ ॥ ೯೪ ॥

92. ಅಥವಾ ಪ್ರಜಾವತ್ ಮತ್ತು ಜೀವಪುತ್ರ ಎಂಬ ಎರಡು ಸೂಕ್ತಗಳನ್ನು ಗರ್ಭಪ್ರಸವಕಾಲದಲ್ಲಿ ಪಠಿಸ ಬಹುದು. ಸಂಸ್ರವಂತಿ ಎಂಬ ಸೂಕ್ತದಲ್ಲಿ ಪಯಸ್ವಿನಿಯರಾದ (ಹಾಲನ್ನು ಕೊಡುವ) ನಾನಾವಿಧ ಸ್ತ್ರೀಯರ ಪ್ರಶಂಸೆ ಇದೆ ಅಥವಾ ಬಹೂದಕವುಳ್ಳ ನಾನಾನದಿಗಳ ಪ್ರಶಂಸೆ ಇದೆ ಎಂದೂ ಹೇಳಬಹುದು.

93. ಅತೀರ್ವಾದರೂಪವಾದ ಮಂತ್ರಗಳಲ್ಲಿಯೂ, ನಾನಾಕರ್ಮಪ್ರಯೋಗಮಂತ್ರಗಳಲ್ಲಿಯೂ, ಅನೇಕ ದೇವತೆಗಳ ಸ್ತುತಿಯು ಪ್ರಸಂಗವಶದಿಂದ ಇರುವುದು ಕಂಡುಬರುವುದು. ಆದರೆ ಮಂತ್ರಜ್ಞನಾದ ಪುರುಷನು ಆಯಾ ಮಂತ್ರಗಳಲ್ಲಿರುವ ವಾಕ್ಯಾದಿಗಳಿಂದ ಮುಖ್ಯದೇವತೆ ಯಾವುದು, ಪ್ರಸಂಗನವಶದಿಂದ ಸ್ತುತಿಪಲಾಗಿರುವ ದೇವತೆ ಯಾವುದು ಎಂಬುದನ್ನು ಪರೀಕ್ಷಿಸಿ ತಿಳಿಯಬೇಕು.

94. ಮಂತ್ರಗಳ ಮತ್ತು ಮಂತ್ರಪ್ರಯೋಗಗಳ (ಯಾವ ಮಂತ್ರವನ್ನು ಯಾವ ಸಂದರ್ಭದಲ್ಲಿ ಉಪಯೋಗಿಸಬೇಕೆಂಬುದಕ್ಕೆ ಪ್ರಯೋಗವೆಂದು ಹೆಸರು) ವಿಷಯದಲ್ಲಿ ಮಂತ್ರಪ್ರಯೋಗವೇ ಮುಖ್ಯವಾದುದು. ಈ ವಿಷಯದಲ್ಲಿ ಉಕ್ತವಾಗಿರುವ ವಿಧಿನಿಯಮಗಳನ್ನನುಸರಿಸಿ ಪರೀಕ್ಷೆಮಾಡಬೇಕು. ಮಂತ್ರಗಳು ಕೇವಲ ವಿಷಯಗಳನ್ನು ಮಾತ್ರ ಸೂಚಿಸುವವು.

18. **The Khilas of Prajavat and Jivaputra. Employment of formulas.**

92. Or the two (hymns of) Prajavat and Jivaputra (may be) used together as praise (ಸಂಸ್ತುತೌ) in the ceremony of pregnancy (ಗರ್ಭಕರ್ಮಣಿ). (In the hymn) 'Flow together' (ಸಂಸ್ರವಂತಿ) various kinds of females having milk are praised together.

93. In benedictions, in (enumerations of) technical names, in leading ritual forms, a deity is incidentally mentioned (ನಿಪಾತಭಾಜ). One familiar with formulas should here observe (it) carefully from the statement of its characteristic name (ಲಿಂಗ).

94. (In the case) of the application of a formula and the formula (itself), the application is the more important. There should be careful observation of the rule (ವಿಧಿ) regarding the two. The formulas should be (regarded as) making (only) statements (ಅಭಿಧಾಯಕಾಃ).

ತಸ್ಮಾತ್ತೇನ ವಿಸಂವಾದೋ ಮಂತ್ರಾಣಾಂ ತದ್ಗತಾನಿ ತು ।
ಗುಣಾಭಿಧಾಯಕಾನಿ ಸ್ಯುಃ ಸಂವಿಜ್ಞಾನಪದಾನಿ ತು ॥ ೯೫ ॥

ಮಂತ್ರೇಷು ಗುಣಭೂತೇಷು ಪ್ರಧಾನೇಷು ಚ ಕರ್ಮಸು ।
ಪ್ರಧಾನಗುಣಭೂತಾಃ ಸ್ಯುರ್ದೇವತಾ ಇತಿ ಗಮ್ಯತೇ ॥ ೯೬ ॥

ತ್ರಿಸಾಂವತ್ಸರಿಕಂ ಸತ್ರಂ ಪ್ರಜಾಕಾಮಃ ಪ್ರಜಾಪತಿಃ ।
ಆಹರತ್ಸಹಿತಃ ಸಾಧ್ಯೈರ್ವಿಶ್ವೈರ್ದೇವೈಃ ಸಹೇತಿ ಚ ॥ ೯೭ ॥

ತತ್ರ ವಾಗ್ದೀಕ್ಷಣೀಯಾಯಾಮಾಜಗಾಮ ಶರೀರಿಣೀ ।
ತಾಂ ದೃಷ್ಟ್ವಾ ಯುಗಪತ್ತತ್ರ ಕಸ್ಯಾಥ ವರುಣಸ್ಯ ಚ ॥ ೯೮ ॥

95. ಆದ್ದರಿಂದ ಮಂತ್ರಗಳ ಪ್ರಯೋಗವಿಧಾನದಲ್ಲಿ ಭಿನ್ನಾಭಿಪ್ರಾಯಗಳು ಉದ್ಭವಿಸುವುದು ಸಹಜವಾಗಿದೆ. ಆ ಮಂತ್ರಗಳಲ್ಲಿರುವ ಕೆಲವು ಪದಗಳು ಸಾಧಾರಣವಾಗಿ ಒಂದು ನಿರ್ದಿಷ್ಟಾರ್ಥವನ್ನು ಸೂಚಿಸುವುದಾಗಿದ್ದರೂ ಕೆಲವು ಸಂದರ್ಭಗಳಲ್ಲಿ ಅವು ಗುಣವರ್ಣನೆಗಾಗಿ ವಿಶೇಷಪದಗಳಂತೆ ಉಪಯೋಗಿಸಲ್ಪಟ್ಟಿರಬಹುದು.

96. ಗುಣವರ್ಣನೆ ಮಾಡುವ ಮಂತ್ರಗಳು ಅಷ್ಟುಮುಖ್ಯವಲ್ಲ. ಕರ್ಮಗಳೇ ಮುಖ್ಯವು. ಅಂತಹ ಕರ್ಮಗಳಲ್ಲಿ ಉಪಯೋಗಿಸಲು ಅರ್ಹವಾದ ಪ್ರಧಾನಗುಣಗಳಿಂದ ಕೂಡಿದ ಮಂತ್ರಗಳಲ್ಲಿ ಹೇಳಿರುವುದೇ ಪ್ರಧಾನ ದೇವತೆಗಳು. ಎಂದರೆ ಪ್ರಧಾನದೇವತೆಗಳ ಗುಣಗಳು ಮಾಡುವ ಕರ್ಮಗಳಿಗೆ ಅನುರೂಪವಾಗಿರಬೇಕು.

ಭೃಗು, ಅಂಗಿರಸ, ಅತ್ರಿ ಎಂಬ ಋಷಿಗಳ ಜನನ ವೃತ್ತಾಂತ

97. ಒಂದಾನೊಂದು ಕಾಲದಲ್ಲಿ ಪ್ರಜಾಪತಿಯು ಪುತ್ರಾಪೇಕ್ಷೆಯಿಂದ ಸಾಧ್ಯರಿಂದಲೂ, ವಿಶ್ವೇದೇವತೆಗಳಿಂದಲೂ ಕೂಡಿ ಮೂರು ವರ್ಷಗಳವರೆಗೆ ಮಾಡಬೇಕಾದ ಸತ್ರಯಾಗವನ್ನು ಕೈಗೊಂಡನು.

98. ಆಗ ಯಾಗದೀಕ್ಷೆಯ ಕಾಲದಲ್ಲಿ ಸಾಕ್ಷಾತ್ ವಾಗ್ದೇವತೆಯೇ ಶರೀರವನ್ನು ಧರಿಸಿ ಅಲ್ಲಿಗೆ ಬಂದಳು. ಅವಳನ್ನು ನೋಡಿದ ಕೂಡಲೇ ಏಕಕಾಲದಲ್ಲಿ ಪ್ರಜಾಪತಿಯ ಮತ್ತು ವರುಣನ,

---

95 Hence (there may be) a disagreement of the formulas with the (application). But the words (ಪದ) occuring in them (the formulas), which have a generally understood meaning (ಸಂವಿಜ್ಞಾನ), may express what is secondary (ಗುಣ).

96. The formulas being secondary and the rites primary, the deities may be primary or secondary : this is (to be) understood.

19. Story of the birth of Bhrugu, Angiras and Atri.

97. Prajapati, desirous of offspring, offered a sessional sacrifice (ಸತ್ರ) lasting three years, accompanied by the Sadhyas and the All-gods, we are told (ಇತಿ).

98. Thither came Vac in bodily from to the ceremony of initiation On seeing her simultaneously Ka's (Prajapati's) and Varuna's.

ಶುಕ್ರಂ ಚಿಸ್ಕಂದ ತದ್ವಾಯುರಗ್ನೌ ಪ್ರಾಸ್ಯದ್ಯದೈಚ್ಛಯಾ ।
ತತೋಽರ್ಚಿಭ್ಯೋ ಭೃಗುರ್ಜಜ್ಞೇ ಅಂಗಾರೇಷ್ವಂಗಿರಾ ಋಷಿಃ ॥ ೯೯ ॥
ಪ್ರಜಾಪತಿಂ ಸುತೌ ದೃಷ್ಟ್ವಾ ದೃಷ್ಟ್ವಾ ವಾಗಭ್ಯಭಾಷತ ।
ಅಭ್ಯಾಮೃಷಿಸ್ತೃತೀಯೋಽಪಿ ಭವೇದಶ್ರೈವ ಮೇ ಸುತಃ ॥ ೧೦೦ ॥
ಪ್ರಜಾಪತಿಸ್ತಯೇತ್ಯುಕ್ತಃ ಪ್ರತ್ಯಭಾಷತ ಭಾರತೀಂ ।
ಋಷಿರತ್ರಿಸ್ತತೋ ಜಜ್ಞೇ ಸೂರ್ಯಾಲನಲಸಮದ್ಯುತಿಃ ॥ ೧೦೧ ॥
ಯೋಽಙ್ಗಾರೇಭ್ಯ ಋಷಿರ್ಜಜ್ಞೇ ತಸ್ಯ ಪುತ್ರೋ ಬೃಹಸ್ಪತಿಃ ।
ಬೃಹಸ್ಪತೇರ್ಭರದ್ವಾಜೋ ವಿದಥೀತಿ ಯ ಉಚ್ಯತೇ ॥ ೧೦೨ ॥

ಇತಿ ಪಂಚಮಂ ಮಂಡಲಂ

99. ವೀರ್ಯವು ಸ್ಖಲನವಾಯಿತು. ವಾಯುವು (ಗಾಳಿಯು) ಬೀಸುತ್ತಿರುವಾಗ ಆ ಗಾಳಿಯಿಂದ ವೀರ್ಯವು ಅಗ್ನಿಯಲ್ಲಿ ಬಂದು ಬಿದ್ದಿತು. ಅದರಿಂದ ಉಂಟಾದ ಅಗ್ನಿಜ್ವಾಲೆಯಿಂದ ಭೃಗುಋಷಿಯ ಉತ್ಪತ್ತಿಯಾಯಿತು. ಕೆಂಡಗಳಿಂದ ಅಂಗಿರಾಋಷಿಯ ಉತ್ಪತ್ತಿಯಾಯಿತು.

100. ಆಗ ವಾಗ್ದೇವತೆಯು ಈರೀತಿ ಉತ್ಪನ್ನರಾದ ಇಬ್ಬರು ಮಕ್ಕಳನ್ನು (ಭೃಗು ಮತ್ತು ಅಂಗಿರಾಃ) ನೋಡಿ ಪ್ರಜಾಪತಿಯನ್ನು ಕುರಿತು—ಎಲೈ ಪ್ರಜಾಪತಿಯೇ, ಈ ಇಬ್ಬರ ಮಕ್ಕಳ ಜತೆಗೆ ನನಗೆ (ಇನ್ನೂ ಒಬ್ಬ) ಮೂರನೆಯ ಪುತ್ರನೂ ಆಗಬೇಕೆಂದಳು.

101. ವಾಗ್ದೇವತೆಯ ಮಾತನ್ನು ಕೇಳಿ ಪ್ರಜಾಪತಿಯು ಹಾಗೆಯೇ ಆಗಲೆಂದು ಹೇಳಿದನು. ಅನಂತರ ಸೂರ್ಯಾಗ್ನಿಗಳ ಕಾಂತಿಗೆ ಸಮನಾದ ದಿವ್ಯಕಾಂತಿಯಿಂದ ಬೆಳಗುತ್ತಿರುವ ಅತ್ರಿಋಷಿಯು ಉತ್ಪನ್ನನಾದನು.

ಭರದ್ವಾಜಋಷಿಯ ಜನನ ವೃತ್ತಾಂತ

102. ಹಿಂದೆ ಪ್ರಜಾಪತಿಯ ವೀರ್ಯವು ಬಿದ್ದ ಅಗ್ನಿಯ ಕೆಂಡಗಳಿಂದ ಅಂಗಿರಾಋಷಿಯ ಉತ್ಪತ್ತಿಯಾಯಿತೆಂದು ಹೇಳಿದೆಯಷ್ಟೆ. ಆ ಅಂಗಿರಾಋಷಿಯ ಪುತ್ರನೇ ಬೃಹಸ್ಪತಿಯು; ಬೃಹಸ್ಪತಿಯ ಪುತ್ರನು ಭರದ್ವಾಜನು. ಇವನಿಗೆ ವಿಧತೀ ಎಂದೂ ಹೆಸರು. ಅಂಗಿರಾಋಷಿಗೆ ಮೊಮ್ಮಗನಾದ ಈ ಭರದ್ವಾಜಋಷಿಯು ಮರುದ್ದೇವತೆಗಳಿಗೆ ಗುರುವಾಗಿದ್ದನು.

ಇಲ್ಲಿಗೆ ಐದನೆಯ ಮಂಡಲವು ಸಮಾಪ್ತವಾದುದು.

---

99. Seman was effused. Vayu scattered it in the fire at his will. Then from the flames Bhrgu was born, (and) the seer Angiras among the coal (ಅಂಗಾರ).

100. Vac, on seeing the two sons, herself being seen, said to Prajapeti: 'May a third seer also, in addition to these two, be (born) to me as a son'.

101. Prajapati (thus) addressed, replied 'So be it' to Bharati (ವಾಕ್). Then the seer Atri was born, equal in splendour to Sun and Fire.

102. Brhaspati was the son of the seer who was born from the coals (Angiras). Brihaspati's (son) Bharadvaja, who is called Vidathin.

End of Fifth Mandala.

ಅಥ ಷಷ್ಠಂ ಮಂಡಲಂ

ಮರುತ್ವಾಂಶ್ಚೀದ್ಧ ರುರ್ಯಶ್ಚ ಸ ಏವಾಂಗಿರಸೋ ನಪಾತ್ ॥
ಸಪುತ್ರಸ್ಯ ತು ತಸ್ಯೈತನ್ಮಂಡಲಂ ಷಷ್ಠಮುಚ್ಯತೇ ॥ ೧೦೩ ॥

ತ್ವಂ ಹ್ಯಗ್ನ ಇತಿ ತಕ್ರಾದಾವಾಗ್ನೇಯಾನಿ ತ್ರಯೋದಶ ।
ಸೂಕ್ತಾನಿ ತ್ರೀಣಿ ಮೂರ್ಧಾನಮಗ್ನೇರ್ವೈಶ್ವಾನರಸ್ಯ ತು ॥ ೧೦೪ ॥

ಏಕಾನ್ನ ತ್ರಿಂಶದೇವಾತ್ರ ಪಿಬೇತ್ಯೈಂದ್ರಾಣ್ಯತಃ ಪರಂ ।
ಅಗ್ನೇ ಸ ಕ್ಷೇಷದಿತ್ಯಸ್ಯಾಂ ದೇವೌ ಯೌ ತು ನಿಪಾತಿತೌ ॥ ೧೦೫ ॥

ಆರನೆಯ ಮಂಡಲವು

ಆರನೇ ಮಂಡಲದ ೧-೪೬ ಸೂಕ್ತಗಳ ದೇವತೆಗಳು

103. ಈ ಆರನೇ ಮಂಡಲಕ್ಕೆ ಈ ಭರದ್ವಾಜಋಷಿಯೂ ಅವನ ಪುತ್ರರೂ ಮಂತ್ರದ್ರಷ್ಟೃಗಳಾದ ಋಷಿಗಳೆಂದು ಹೇಳುವರು.

104. ಈ ಆರನೇ ಮಂಡಲದಲ್ಲಿ **ತ್ವಂ ಹ್ಯಗ್ನೇ** ಎಂದು ಪ್ರಾರಂಭವಾಗುವ ೧೩ ಸೂಕ್ತಗಳಿಗೆ (೧-೬ ಮತ್ತು ೧೦-೧೬ ಒಟ್ಟು ೧೩ ಸೂಕ್ತಗಳಿಗೆ) ಅಗ್ನಿಯು ದೇವತೆಯು; **ಮೂರ್ಧಾನಂ ದಿವಃ** ಎಂದು ಪ್ರಾರಂಭವಾಗುವ ಮೂರು ಸೂಕ್ತಗಳಿಗೆ (೭-೯) ವೈಶ್ವಾನರಾಗ್ನಿಯು ದೇವತೆಯು.

105. ಅನಂತರ **ಪಿಬಾ ಸೋಮಂ** ಎಂದು ಪ್ರಾರಂಭವಾಗುವ ೨೯ ಸೂಕ್ತಗಳಿಗೆ (೧೭-೪೬) ಇಂದ್ರನು ದೇವತೆಯು; ಈ ಮಂಡಲದ **ಅಗ್ನೇ ಸ ಕ್ಷೇಷತ್** ಎಂಬ ೩ ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ಕಂಡುಬರುವ ಇಬ್ಬರು ದೇವತೆಗಳು (ಮಿತ್ರ ಮತ್ತು ವರುಣ) ಅಲ್ಲಿ ಪ್ರಸಂಗವಶದಿಂದ ಸೂಚಿತರಾಗಿರುವರು.

Mandala vi.

20. Origin of Bharadvaja. Deities of RV. vi. 1-46.

103. And who was a preceptor among the Maruts, was (thus) the grandson of Angiras, Now this sixth Mandala is stated to be his and his sons.

104. In it there are thirteen hymns addressed to Agni (beginning) 'You, O Agni' (त्वं ह्यग्ने : vi. 1-6, 10-16), while there are three (beginning) 'The head' (मूर्धानं : vi. 7-9) to Agni Vaisvanara.

105. After this (i.e. vi. 16) there are here exactly twenty-nine (hymns) addressed to Indra (beginning) 'Drink' (पिब : vi. 17-1). The two gods who (occur) in the (stanza) 'O Agni, he dwells' (अग्ने स क्षेषत् : vi. 3.1) are incidentally mentioned (निपातितौ).

ಪ್ರೋತಯೇ ನೂ ಮ ಇತ್ಯೇತೇ ವೈಶ್ವದೇವ್ಯಾವೃಚೌ ಸ್ಮೃತೇ ।
ಯುಗ್ಮ್ಯತೀಯಾ ಪದಂ ಚಾಂತ್ಯಮೈಂದ್ರಮೇತಿ ಗವಾಂ ಸ್ತುತಿಃ ॥ ೧೦೬ ॥

ಆಸಸ್ರಾಣಾಸ ಇತ್ಯಸ್ಯಾಂ ವಾಯುರಿಂದ್ರಶ್ಚ ಸಂಸ್ತುತೌ ।
ಇಂದ್ರಃ ಪ್ರಾಧಾನ್ಯತೋ ವಾತ್ರ ಸ್ತುತೋ ವಾಯುರ್ನಿಪಾತಭಾಕ್ ॥ ೧೦೭ ॥

ಅಯಂ ದೇವಸ್ತೃಚಂ ಸೌಮ್ಯಮೈಂದ್ರಮೇಕೇ ಪ್ರಚಕ್ಷತೇ ।
ಯ ಆನಯದಿತಿ ತ್ವಸ್ಯ ತೃಚೋಽಧೀತಿ ಬೃಬುಸ್ತುತಿಃ ॥ ೧೦೮ ॥

106. ಮತ್ತು ೨೧ ನೇ ಸೂಕ್ತದ **ಪ್ರೋತಯೇ ವರುಣಂ** ಎಂಬ ೯ ನೇ ಋಕ್ಕೂ, **ನೂ ಮ** ಆ ಎಂಬ ೧೧ ನೇ ಋಕ್ಕೂ ವಿಶ್ವೇದೇವತಾಕವೆಂದು ಹೇಳಲ್ಪಡುವವು. ೨೮ ನೇ ಸೂಕ್ತದಲ್ಲಿ ಗೋವುಗಳ ಸ್ತುತಿ ಇರುವುದು. ಆದರೆ ೨ ಮತ್ತು ಕೊನೆಯ ೮ ನೇ ಋಕ್ಕುಗಳಲ್ಲಿ ಇಂದ್ರನನ್ನು ಸ್ತುತಿಸಲಾಗಿದೆ.

೩೭, ೪೪, ೪೫, ೪೭ ನೇ ಸೂಕ್ತಗಳ ದೇವತೆಗಳು

107. ೩೭ ನೇ ಸೂಕ್ತದಲ್ಲಿರುವ **ಆಸಸ್ರಾಣಾಸಃ** ಎಂಬ ೩ ನೇ ಋಕ್ಕಿನಲ್ಲಿ ವಾಯು ಮತ್ತು ಇಂದ್ರ ಇವರಿಬ್ಬರೂ ಸ್ತುತರಾಗಿರುವರು ಅಥವಾ ಈ ಋಕ್ಕಿನಲ್ಲಿ ಮುಖ್ಯವಾಗಿ ಇಂದ್ರನನ್ನೂ, ಪ್ರಾಸಂಗಿಕವಾಗಿ ವಾಯುವನ್ನೂ ಸ್ತುತಿಸಲಾಗಿದೆಯೆಂದು ಭಾವಿಸಬಹುದು.

108. ೪೪ ನೇ ಸೂಕ್ತದ **ಅಯಂ ದೇವಃ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೨೨–೨೪) ಸೋಮನನ್ನು ಸ್ತುತಿಸಲಾಗಿದ್ದರೂ ಕೆಲವರು ಈ ಋಕ್ಕುಗಳಿಗೆ ಇಂದ್ರನು ದೇವತೆಯೆಂದು ಹೇಳುವರು. **ಯ ಆನಯತ್** ಎಂಬ ೪೫ ನೇ ಸೂಕ್ತದ **ಅಧಿ ಬೃಬುಃ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೩೧–೩೩) **ಬೃಬುಸ್ತುಷ್ಟಾ** ಎಂಬ ದೇವತೆಯನ್ನು ಸ್ತುತಿಸಲಾಗಿದೆ

---

106. But these two stanzas 'Bring to aid' (ಪ್ರೋತಯೇ: vi. 21. 9) 'Now my' (ನೂ ಮೇ: vi. 21. 11) are traditionally held to be addressed to the All-gods. The hymn 'Hither' (ಆ: vi. 28) is (in) praise of cows, the second stanza (i. 28. 2) and the last verse (vi. 28. 8) being addressed to Indra.

21. Deities of RV. vi. 37, 44, 45, 47.

107. In the (stanza) 'Bringing hither' (ಆಸಸ್ರಾಣಾಸಃ: vi. 37. 3) Vayu and Indra are praised together.

Or else Indra is here predominantly praised, while Vayu is incidental (ನಿಪಾತಭಾಜ).

108. The triplet 'This god' (ಅಯಂ ದೇವಃ: vi. 44. 22-24), which is addressed to Soma, some say, is addressed to Indra.

But the triplet 'Above' (ಅಧಿ: 31-33)of the (hymn) 'Who brought' (ಯ ಆನಯತ್: vi. 45) is (in) praise of Brbu (ಬೃಬು).

ಪಿತರಂ ಸ್ತೌತಿ ಶಂಯುಶ್ಚ ತೃಚಸ್ಯಾಂತೇ ಪದೇ ಸ್ವಕಂ ।
ಸ್ವಾದುಷ್ಕಿಲಾಯಮಿತಿ ತು ಸೌಮ್ಯಃ ಪಂಚರ್ಚ ಉತ್ತರಃ ॥ ೧೦೯ ॥

ಇಂದ್ರಃ ಪ್ರಧಾನತೋ ವಾತ್ರ ಸ್ತುತಃ ಸೋಮೋ ನಿಪಾತಭಾಕ್ ।
ಇಂದ್ರಸ್ಯೈಂದ್ರ್ಯೃಚ್ಯನುಪಾನೀಯಾಃ ಶ್ರೂಯಂತೇ ಹ್ಯೈತರೇಯಕೇ ॥ ೧೧೦ ॥

ಅಗವ್ಯೂತಿ ಸ್ತೌತಿ ದೇವಾನ್ಪಾದೋ ಭೂಮಿಮಥೋತ್ತರಃ ।
ಬೃಹಸ್ಪತಿಂ ತೃತೀಯೇಸ್ತು ಇಂದ್ರಮೇವೋತ್ತಮಂ ಪದಂ ॥ ೧೧೧ ॥

ವನಸ್ಪತೇ ವೀಡ್ವಂಗಃ ಪರಂ ಯತ್ತದಾಚಾರ್ಯಾ ಭಾವವೃತ್ತಂ ವದಂತಿ ।

109. ೪೪ ನೇ ಸೂಕ್ತದ ಕೊನೆಯ ಋಕ್ಕಿನ ಕೊನೆಯ ಪಾದದಲ್ಲಿ ಸೂಕ್ತದ ಋಷಿಯಾದ ಶಂಯುವು ತನ್ನ ತಂದೆಯನ್ನು (ಭರದ್ವಾಜ) ಸ್ತುತಿಸಿರುವನು. ಇಂದ್ರದೇವತಾಕವಾದ ಸೂಕ್ತಗಳಾದನಂತರ **ಸ್ವಾದುಷ್ಕಿಲಾಯಂ** ಎಂಬ ೪೭ ನೇ ಸೂಕ್ತದ ಮೊದಲ ೫ ಋಕ್ಕುಗಳು (೧-೫) ಸೋಮದೇವತಾಕವು.

110. ಅಥವಾ ಈ ಋಕ್ಕುಗಳಿಗೆ (೧-೫) ಇಂದ್ರನೇ ಪ್ರಧಾನದೇವತೆಯು, ಸೋಮನು ಪ್ರಸಂಗವಶದಿಂದ ಸ್ತುತನಾಗಿರುವನು ಎಂದೂ ಹೇಳಬಹುದು. ಏಕೆಂದರೆ ಐತರೇಯಬ್ರಾಹ್ಮಣದಲ್ಲಿ ಈ ಮಂತ್ರಗಳು ಇಂದ್ರದೇವತಾಕವಾದ ಅನುಪಾನೀಯಮಂತ್ರಗಳೆಂದು ಹೇಳಲ್ಪಟ್ಟಿವೆ.

111. ೪೭ ನೇ ಸೂಕ್ತದ **ಅಗವ್ಯೂತಿ** ಎಂಬ ೨೦ ನೇ ಋಕ್ಕಿನಲ್ಲಿ ಮೊದಲನೆಯ ಪಾದದಲ್ಲಿ ದೇವತೆಗಳನ್ನೂ, ಎರಡನೆಯ ಪಾದದಲ್ಲಿ ಭೂಮಿಯನ್ನೂ, ಮೂರನೆಯ ಪಾದದಲ್ಲಿ ಬೃಹಸ್ಪತಿಯನ್ನೂ ನಾಲ್ಕನೆಯ ಪಾದದಲ್ಲಿ ಇಂದ್ರನನ್ನೂ ಸ್ತುತಿಸಲಾಗಿದೆ.

112. ಅದೇ ಸೂಕ್ತದ **ವನಸ್ಪತೇ ವೀಡ್ವಂಗಃ** ಎಂಬ ೨೬ ನೇ ಋಕ್ಕಿನಲ್ಲಿ ಭಾವವೃತ್ತವು (ದೇವತೆಯೆಂದು) ಉಕ್ತವಾಗಿದೆಯೆಂದು ಕೆಲವು ಆಚಾರ್ಯರು ಹೇಳುವರು. ಆದರೆ **ವನಸ್ಪತೇ** ಎಂದು ಮೊದಲಾಗುವ ಮೂರು

---

109. And Samyu praises his father in the last verse (ಪಾದ) of the triplet. The five stanzas (beginning) ' Sweet, indeed, is this ' (ಸ್ವಾದುಷ್ಕಿಲಾಯಂ: vi. 47. 1-5) which follow (the Indra hymns) are addressed to Soma.

110. Or else Indra is here predominantly praised, while Soma is incidental; for in the Aitareya (Brahman) they are stated to be ಅನುಪಾನೀಯ stanzas addressed to Indra.

111. (In) ' Destitute of pasture ' (ಅಗವ್ಯೂತಿ : vi. 47. 20) one verse (ಪಾದ) praises the Gods, the next one (the second) the Earth, the third Brhaspati the last verse (ಪಾದ) Indra.

22. Deities of RV. vi. 47 (continued) and vi. 48.

112. The (verse) which follows, ' O Lord of Wood, be firm in body (ವನಸ್ಪತೇ ವೀಡ್ವಂಗಃ : vi. 47. 26), the teachers state to be evolutionary (ಭಾವವೃತ್ತ). But the (whole) three stanzas (26-28) relate to the stroking of the car, while

ಋಚಸ್ತು ತಿಸ್ರಸ್ತು ರಥಾಭಿಮರ್ಶನಾ ಉಪೇತಿ ತಿಸ್ರೋ ದುಂದುಭೇಃ ಸಂಸ್ತವೋಽತ್ರೈ ॥

ಸಮಶ್ವಪರ್ಣಾ ಇತಿ ಚಾರ್ಧಮೈಂದ್ರಂ ದಶಾದಿತೋಽಗ್ನೇಸ್ತೃಣಪಾಣಿಕಸ್ಯ ।
ತೃಚಃ ಪರೋ ಮಾರುತಃ ಪೃಶ್ನಿಸೂಕ್ತೇ ದ್ವ್ಯೃಚಃ ಪರೋ ವೈಶ್ವದೇವಃ ಪುನಶ್ಚ ॥ ೧೧೩ ॥

ಅದಿತ್ಯೋ ವಾ ಮಾರುತ ಏವ ವಾ ಸ್ಯಾದಾ ಮಾ ಪೂಷನ್ನಿತಿ ಪೌಷ್ಣೇಽಷ್ಟತಸ್ರಃ ।
ದ್ವ್ಯೃಚಂ ಪರಂ ಮಾರುತಂ ತತ್ರ ವಿದ್ಯಾದಂತ್ಯಾದ್ಯುಭ್ವೋಃ ಕೀರ್ತನಾ ಪೃಶ್ನಯೇ ವಾ ॥ ॥

ಋಕ್ಕುಗಳಲ್ಲಿಯೂ (೨೬–೨೮) ರಥಾಭಿಮರ್ಶನವನ್ನು ಸ್ತುತಿಸಲಾಗಿದೆ ಮತ್ತು **ಉಪ ಶ್ವಾಸಯೇ** ಎಂದು ಮೊದಲಾಗುವ ಮುಂದಿನ ಮೂರು ಋಕ್ಕುಗಳಲ್ಲಿ (೨೯–೩೧) ದುಂದುಭಿಯನ್ನು (ನಗಾರಿ) ಸ್ತುತಿಸಲಾಗಿದೆ.

113. ೪೭ ನೇ ಸೂಕ್ತದ ೩೧ ನೇ ಋಕ್ಕಿನ **ಸಮಶ್ವಪರ್ಣಾಃ** ಎಂಬ ಉತ್ತರಾರ್ಧದಲ್ಲಿ ಇಂದ್ರನನ್ನು ಸ್ತುತಿಸಲಾಗಿದೆ. ಮುಂದಿನ ೪೮ ನೇ ಸೂಕ್ತದ ಮೊದಲ ಹತ್ತು ಋಕ್ಕುಗಳಿಗೆ (೧–೧೦) ಅಗ್ನಿಯು ದೇವತೆಯು; (ಈ ೪೮ ನೇ ಸೂಕ್ತದ ಋಷಿಯಾದ **ಶಂಯುರ್ಬಾರ್ಹಸ್ಪತ್ಯಃ** ಎಂಬುವನಿಗೆ ತೃಣಪಾಣಿ ಎಂದೂ ಹೆಸರು. ಆದ್ದರಿಂದ ಆ ಋಷಿದೃಷ್ಟವಾದ ಈ ಸೂಕ್ತವನ್ನು ತೃಣಪಾಣಿಸೂಕ್ತವೆಂದು ಕರೆಯಲಾಗಿದೆ). ಮುಂದಿನ ಮೂರು ಋಕ್ಕುಗಳಿಗೆ (೧೧–೧೩) ಮರುದ್ದೇವತೆಗಳೂ ಅದರ ಮುಂದಿನ ಎರಡು ಋಕ್ಕುಗಳಿಗೆ (೧೪–೧೫) ವಿಶ್ವೇದೇವತೆಗಳೂ ದೇವತೆಯು (ಮರುತ್ತುಗಳನ್ನು ಸ್ತುತಿಸುವ ಮಂತ್ರಗಳನ್ನು ಪೃಶ್ನಿಸೂಕ್ತವೆಂದು ಕರೆಯುವ ರೂಢಿಯುಂಟು).

114. ಅಥವಾ ೪೪ ನೇ ಸೂಕ್ತದ ೧೩–೧೫ ನೇ ಋಕ್ಕುಗಳಿಗೆ ಅದಿತ್ಯರಾಗಲಿ, ಮರುತ್ತುಗಳಾಗಲಿ ದೇವತೆಗಳಾಗಬಹುದು (ಲಿಂಗೋಕ್ತದೇವತೆಗಳಾಗಬಹುದು). **ಆ ಮಾ ಪೂಷನ್** ಎಂದು ಪ್ರಾರಂಭವಾಗುವ ೪ ಋಕ್ಕುಗಳಿಗೆ (೧೬–೧೯) ಪೂಷನು ದೇವತೆಯು; ಮುಂದಿನ ೨ ಋಕ್ಕುಗಳಿಗೆ (೨೦–೨೧) ಮರುತ್ತುಗಳು ದೇವತೆಯು. ಈ ಸೂಕ್ತದ ಕೊನೆಯ ಋಕ್ಕಿಗೆ (೨೨) ದ್ಯಾವಾಭೂಮಿಗಳಾಗಲಿ, ಪೃಶ್ನಿಯಾಗಲಿ ದೇವತೆಯಾಗಬಹುದು.

---

the three here (beginning) 'Forth' (ಉಪ: 29-31) are (in) praise of the Drum.

113. And the hemistich 'together, winged with steeds' (ಸಮಶ್ವಪರ್ಣಾಃ: vi. 47. 31) is addressed to Indra. The ten (stanzas) at the beginning of the ತೃಣಪಾಣಿ hymn (vi. 48 1-10) are to Agni; the following triplet (11-13) in (this) hymn to Prsni is addressed to the Maruts, and, again, the following couplet (14, 15) is addressed to the All-gods.

114. Or it may be addressed to the Adityas or to the Maruts The four (stanzas) 'To me, O Pusan, (ಆ ಮಾ ಪೂಷನ್: vi. 48. 16-19) one should know to be addressed to Pusan, (and) the following couplet there (20, 21) to be addressed to the Maruts; the last (stanza) is a celebration of Heaven and Earth or is (meant) for Prsni (22).

ಸ್ತುಷೇ ಸೂಕ್ತಾನಿ ಚತ್ವಾರಿ ವೈಶ್ವದೇವಾನ್ಯತಃ ಪರಂ ।
ದ್ವಿತೀಯೋಗ್ನಿಂ ಚತುರ್ಥೀಂ ಚ ವಾಯುಂ ಪಂಚಮ್ಯಥಾಶ್ವಿನೌ ॥ ೧೧೫ ॥

ಸ್ತೌತ್ಯೃಕ್ ತು ಸಪ್ತಮೀ ವಾಚಮುತ್ರ ಪೂಷಣಮಷ್ಟಮೀ ।
ತ್ವಷ್ಟಾರಂ ನವಮೀ ರುದ್ರಂ ಭುವನಸ್ಯೇತ್ಯಥೋತ್ತರೇ ॥ ೧೧೬ ॥

ಮಾರುತ್ಯೌ ಯೋ ರಜಾಂಸೀತಿ ವಿಷ್ಣುಮೇವ ಜಗಾವೃಷಿಃ ।
ಅಭ್ಯೈಂದ್ರ್ಯೇತಿ ಚ ಸಾವಿತ್ರೀ ರೌದಸ್ಯಾಗ್ನೇಯ್ಯುತಾಶ್ವಿನೀ ॥ ೧೧೭ ॥

೪೯-೫೨ ನೇ ಸೂಕ್ತಗಳ ದೇವತೆಗಳು

115. ಮುಂದಿನ **ಸ್ತುಷೇ ಜನಂ** ಎಂದು ಮೊದಲಾಗುವ ೪ ಸೂಕ್ತಗಳಲ್ಲಿ (೪೯-೫೨) ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ. ೪೯ ನೇ ಸೂಕ್ತದ ೨ ನೇ ಋಕ್ಕಿನಲ್ಲಿ ಅಗ್ನಿಯನ್ನೂ, ೪ ನೇ ಋಕ್ಕಿನಲ್ಲಿ ವಾಯುವನ್ನೂ, ೫ ನೇ ಋಕ್ಕಿನಲ್ಲಿ ಅಶ್ವಿನೀದೇವತೆಗಳನ್ನೂ,

116. ೭ ನೇ ಋಕ್ಕಿನಲ್ಲಿ ವಾಕ್ಕನ್ನೂ, ೮ ನೇ ಋಕ್ಕಿನಲ್ಲಿ ಪೂಷದೇವನನ್ನೂ, ೯ ನೇ ಋಕ್ಕಿನಲ್ಲಿ ತ್ವಷ್ಟೃವನ್ನೂ, ಮುಂದಿನ **ಭುವನಸ್ಯ ಪಿತರಂ** ಎಂಬ ೧೦ ನೇ ಋಕ್ಕಿನಲ್ಲಿ ರುದ್ರನನ್ನೂ, ಮುಂದಿನ ಎರಡು ಋಕ್ಕುಗಳಲ್ಲಿ (೧೧-೧೨)

117. ಮರುದ್ದೇವತೆಗಳನ್ನೂ ಸ್ತುತಿಸಲಾಗಿದೆ. **ಯೋ ರಜಾಂಸಿ** ಎಂಬ ೧೩ ನೇ ಋಕ್ಕಿನಲ್ಲಿ ಋಷಿಯು ವಿಷ್ಣುವಿನ ಗುಣಗಾನಮಾಡಿರುವನು. ೫೦ ನೇ ಸೂಕ್ತದ **ಅಭಿ ತ್ಯಂ** ಎಂಬ ೬ ಋಕ್ಕಿನಲ್ಲಿ ಇಂದ್ರನನ್ನೂ, **ಆ ನೋ ದೇವಃ** ಎಂಬ ೮ ನೇ ಋಕ್ಕಿನಲ್ಲಿ ಸವಿತೃದೇವನನ್ನೂ ಸ್ತುತಿಸಲಾಗಿದೆ. ಇದೇ ೫೦ ನೇ ಸೂಕ್ತದ ೫ ನೇ ಋಕ್ಕಿಗೆ ರೋದಸಿಯೂ, ೯ ನೇ ಋಕ್ಕಿಗೆ ಅಗ್ನಿ ಮತ್ತು ಅಶ್ವಿನೀದೇವತೆಗಳೂ **ಉತ ತ್ಯಾ ಮೇ** ಎಂದು ಪ್ರಾರಂಭವಾಗುವ ಮುಂದಿನ ೩ ಋಕ್ಕುಗಳಿಗೆ (೯-೧೦) ಅಶ್ವಿನೀದೇವತೆಗಳೂ ದೇವತೆಯು,

---

23. Deitief of RV. vi. 49-52.

115-116. After this the hymns 'I praise' (स्तुषे : vi. 49-52) are addressed to the All-gods; the second stanza (vi. 49-2) (praises) Agni, and the fourth (49-4) Vayu; then the fifth (49-5) the Asvins, but the seventh here praises Vac (49.7), the eighth (49. 8) Pusan, the nineth (49. 9) Tvastr, 'Of the world' (भुवनस्य : 49. 10) Rudra, then the two next (49-11, 12).

117. are addressed to the Maruts. (With) 'Who the spaces' (यो रजांसि : vi. 49-13) the seer sang of Visnu. 'To' (अभि : vi. 50. 6) is addressed to Indra, and 'Hither' (आ : vi. 50. 8) is addressed to Savitr There is one to Rodasi (vi. 50. 5), one to Agni (9) as well as to the Asvins (10) (beginning) 'And' (उत; vi. 50. 9, 10).

अग्नीषजन्यावनयोः सौर्यो घोदु त्यदिश्वभौ ।
वयं चत्वारि सौष्णानि त्र्यंद्रासौष्णस्य चोत्तरं ॥ ೧೧೮ ॥
रथीतमं कपर्दिनं रौद्रमेके प्रचक्षते ।
ऐंद्राग्नेऽप्रु नु वोचेति इयं सारस्वतं स्तुषे ॥ ೧೧೯ ॥
अश्विने चौषसे चैव मारुतं तु वपुर्स्विति ।
उषेति च द्व्यृचेऽश्विभ्यामाराधनं च शंसति ॥ ೧೨೦ ॥

118. ೫೨ ನೇ ಸೂಕ್ತದ **अग्नीषजन्यावतं** ಎಂಬ ೧೬ ನೇ ಋಕ್ಕಿಗೆ ಅವರೇ (अग्नीषजन्यौ) ದೇವತೆಯು; ೫೧ ನೇ ಸೂಕ್ತದ **उदु त्यत्** ಎಂದು ಪ್ರಾರಂಭವಾಗುವ ಮೊದಲ ೩ ಋಕ್ಕುಗಳಿಗೆ ಸೂರ್ಯನು ದೇವತೆಯು; **वयंमु त्वा** ಎಂದು ಪ್ರಾರಂಭವಾಗುವ ೪ ಸೂಕ್ತಗಳಿಗೂ (೫೩-೫೬) ಮುಂದಿನ ೫೮ ನೇ ಸೂಕ್ತಕ್ಕೂ ಪೂಷನು ದೇವತೆಯು; ೫೭ ನೇ ಸೂಕ್ತಕ್ಕೆ ಇಂದು ಮತ್ತು ಪೂಷಾ ಎಂಬಿಬ್ಬರೂ ದೇವತೆಗಳು.

119. ೫೫ ನೇ ಸೂಕ್ತದ **रथीतमं कपर्दिनं** ಎಂಬ ೨ ನೇ ಋಕ್ಕಿಗೆ ರುದ್ರನು ದೇವತೆಯೆಂದು ಏಕೆಲವರು ಹೇಳುವರು. **प्र नु वोचा** ಎಂದು ಪ್ರಾರಂಭವಾಗುವ ಮುಂದಿನ ೨ ಸೂಕ್ತಗಳಿಗೆ (೫೯-೬೦) ಇಂದ್ರಾಗ್ನಿಗಳು ದೇವತೆಯು; **इयंमददात्** ಎಂಬ ೬೧ ನೇ ಸೂಕ್ತಕ್ಕೆ ಸರಸ್ವತಿಯು ದೇವತೆಯು; **स्तुषे नरा** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಿಗೆ (೬೨-೬೩),

೬೩-೭೪ ನೇ ಸೂಕ್ತಗಳ ದೇವತೆಯು; ಸಪ್ತನಿಧಿಗಳು

120. ಅಶ್ವಿನೀದೇವತೆಗಳು ದೇವತೆಯು; ಮುಂದಿನ ಎರಡು ಸೂಕ್ತಗಳಿಗೆ (೬೪-೬೫) ಉಷೋದೇವತೆಯು ದೇವತೆಯು; **वपुर्नु** ಎಂಬ ೬೬ ನೇ ಸೂಕ್ತಕ್ಕೆ ಮರುತ್ತುಗಳು ದೇವತೆಯು. **उष** ಎಂದು ಮೊದಲಾಗುವ ೨ ಋಕ್ಕುಗಳಲ್ಲಿ (?) ಅಶ್ವಿನೀದೇವತೆಗಳ ಪ್ರಶಂಸೆ ಇದೆ.

---

118. 'O Agni and Parjanya' (अग्नीषजन्यौ: vi. 52-16) belongs to those two (deities), and the two stanzas 'Upward that' (उदु त्यत्: vi, 51-1,2) are addressed to Surya- 'We' (वयं: vi. 53. 56)are four (hymns) addressed to Pusan, as well as that which comes next (58) to the one addressed to Indra-Pusan (57).

119. Some declare the stanza 'Him chief of charioteers, with braided heir' (रथीतमं कपर्दिनं: vi. 55 2) to be addressed to Rudra.

'I will now proclaim' (प्र नु वोच: vi. 59, 60) is addressed to Indra-Agni. 'She' (इयं: vi. 61) is addressed to Sarasvati; 'I praise' (स्तुषे: vi. 62).

24 Deities of RV. vi. 63-74. The seven treasures.

120. are two (62, 63) addressed to the Asvins; and there are also two (64, 65) addressed to Dawn; but 'A wonder now' (वपुर्नु: vi. 66) is addressed to the Maruts,

And in the couplet 'Unto' (उष) he (the seer) proclaims adoration of the Asvins.

ಗೃತ್ಸಾವರುಣಮೇವೈಕಂ ವಿಶ್ವೇಷಾಂ ವಃ ಸತಾಮಿತಿ ।
ಶ್ರುಷ್ಟೀತಿ ಚೈಂದ್ರಾವರುಣಂ ಸಮೈಂದ್ರಾವೈಷ್ಣವಂ ಪರಂ ॥ ೧೨೧ ॥
ದ್ಯಾವಾಪೃಥಿವ್ಯೌ ಸವಿತಾ ಇಂದ್ರಾಸೋಮೌ ಬೃಹಸ್ಪತಿಃ ।
ಪೃಥಕ್ಪೃಥಕ್ ಪರೈಃ ಸೂಕ್ತೈಃ ಸೋಮಾರುದ್ರೇತಿ ತೌ ಸ್ತುತೌ ॥ ೧೨೨ ॥
ಚಕ್ರಂ ರಥೋ ಮಣಿರ್ಭಾರ್ಯಾ ಭೂಮಿರಶ್ವೋ ಗಜಸ್ತಥಾ ।
ಏತಾನಿ ಸಪ್ತ ರತ್ನಾನಿ ಸರ್ವೇಷಾಂ ಚಕ್ರವರ್ತಿನಾಂ ॥ ೧೨೩ ॥
ಅಭ್ಯಾವರ್ತೀ ಚಾಯಮಾನಃ ಪ್ರಸ್ತೋಕಶ್ಚೈವ ಸಾಂಜಯೌ ।
ಅಜಗ್ಮತುರ್ಭರದ್ವಾಜಂ ಜಿತೌ ವಾರಶಿಖೈರ್ಯುಧಿ ॥ ೧೨೪ ॥

121. ವಿಶ್ವೇಷಾಂ ವಃ ಎಂಬ ೬೭ ನೇ ಸೂಕ್ತಕ್ಕೆ ಮಿತ್ರಾವರುಣರೂ, ಶ್ರುಷ್ಟೀ ವಾಂ ಎಂಬ ೬೮ ನೇ ಸೂಕ್ತಕ್ಕೆ ಇಂದ್ರಾವರುಣರೂ ಅದರ ಮುಂದಿನ ಸಂ ವಾಂ ಕರ್ಮಣಾ ಎಂಬ ೬೯ ನೇ ಸೂಕ್ತಕ್ಕೆ ಇಂದ್ರಾವಿಷ್ಣುಗಳೂ ದೇವತೆಯು.

122. ಮುಂದಿನ ೭೦, ೭೧, ೭೨, ೭೩ ನೇ ಸೂಕ್ತಗಳಲ್ಲಿ ಕ್ರಮವಾಗಿ ದ್ಯಾವಾಪೃಥಿವಿಗಳು, ಸವಿತೃ, ಇಂದ್ರಾಸೋಮ, ಬೃಹಸ್ಪತಿ ಎಂಬ ದೇವತೆಗಳು ಸ್ತುತರಾಗಿರುವರು. ಸೋಮರುದ್ರಾ ಎಂಬ ೭೪ ನೇ ಸೂಕ್ತದಲ್ಲಿ ಆ ದೇವತೆಗಳೇ ಎಂದರೆ ಸೋಮರುದ್ರರೇ ಸ್ತುತರಾಗಿರುವರು.

123. ೭೫ ನೇ ಸೂಕ್ತದ ಮೊದಲನೆಯ ಋಕ್ಕಿನ ಉತ್ತರಾರ್ಧದಲ್ಲಿ ಸಪ್ತ ರತ್ನಾ ದಧಾನಾ ಎಂದು ಹೇಳಿದೆಯಷ್ಟೆ. ಅವು ಯಾವುವೆಂದರೆ—ಚಕ್ರ, ರಥ, ರತ್ನ, ಪತ್ನಿ, ಭೂಮಿ, ಅಶ್ವ, ಗಜ (ಏನೆ) ಎಂಬಿವೇ ಚಕ್ರವರ್ತಿಗಳಿಗೆ ಎಂದರೆ ಚಕ್ರವರ್ತಿಗಳಲ್ಲಿರಬೇಕಾದ ಸಪ್ತವಿಧ ರತ್ನಗಳೆಂದು ಹೇಳಲ್ಪಡುವವು.

೭೫ ನೇ ಸೂಕ್ತ; ಅಭ್ಯಾವರ್ತೀ ಮತ್ತು ಪ್ರಸ್ತೋಕ ಸಾಂಜಯ ಎಂಬುವರ ವೃತ್ತಾಂತ

124. ಒಂದು ಸಮಯದಲ್ಲಿ ಅಭ್ಯಾವರ್ತೀ ಚಾಯಮಾನ ಎಂಬ ರಾಜನೂ, ಸೃಂಜಯಪುತ್ರನಾದ ಪ್ರಸ್ತೋಕನೆಂಬ ರಾಜನೂ ವಾರಶಿಖ ಎಂಬ ರಾಜಂದ ಯುದ್ಧದಲ್ಲಿ ಪರಾಜಿತರಾಗಿ ಭರದ್ವಾಜಋಷಿಯ ಬಳಿಗೆ ಬಂದರು.

---

121. There is one to Mitra-Varuna (viz). ‘ Among all beings your ’ (ವಿಶ್ವೇಷಾಂ ವಃ ಸತಾಂ : vi 67) ‘ Obediently ’ (ಶ್ರುಷ್ಟೀ · vi. 68) is addressed to Indra Varuna : the following one, ‘ Together ’ (ಸಂ : vi. 69) is addressed to Irdra Visnu.

122. Heaven and Earth (70), Savitr (71), Indra-Soma (72), Brhaspati (73) are respectively praised in the following hymns ; (in) ‘ O Soma and Rudra ’ (ಸೋಮಾರುದ್ರಾ : vi. 74) those two (gods) are praised.

123. Discus, car, jewel, wife. territory, horse, and elephant, these are the seven treasures of all emperors (chakravartin).

25. RV. vi· 75 : Story of Abhyavartin and Prastoka Sarnjaya·

124. Abhyavartin Chayamana and Prastoka, son of Srnjaya, having been conqnered in fight by the Varasikhas, came to Bharadvaja·

ಅಭಿಗಮ್ಯೋಚತುಸ್ತೌ ತಂ ಪ್ರಸಾದ್ಯಾಖ್ಯಾಯ ನಾಮನೀ ।
ಯುಧಿ ವಾರಶಿಖೈರ್ಬ್ರಹ್ಮನ್ನಾವಾಂ ವಿದ್ಧಿ ವಿನಿರ್ಜಿತೌ ॥ ೧೨೫ ॥

ಭವತ್ಪುರೋಹಿತಾವಾವಾಂ ಕ್ಷತ್ರಬಂಧೂಞ್ಜಯೇವಹಿ ।
ಕ್ಷತ್ರಂ ತದಪಿ ವಿಜ್ಞೇಯಂ ಬ್ರಹ್ಮ ಯತ್ರಾತಿ ಶಾಶ್ವತಂ ॥ ೧೨೬ ॥

ಋಷಿಸ್ತೌ ತು ತಥೇತ್ಯುಕ್ತ್ವಾ ಪಾಯುಂ ಪುತ್ರಮಭಾಷತ ।
ಅಧರ್ಷಣೀಯೌ ಶತ್ರೂಣಾಂ ಕುರುಷ್ವೈತೌ ನೃಪಾವಿತಿ ॥ ೧೨೭ ॥

ಪಿತರಂ ಸ ತಥೇತ್ಯುಕ್ತ್ವಾ ಯುದ್ಧೋಪಕರಣಂ ತಯೋಃ ।
ಜೀಮೂತಸ್ಯೇತಿ ಸೂಕ್ತೇನ ಪೃಥಕ್ತ್ವೇನಾನ್ವಮಂತ್ರಯತ್ ॥ ೧೨೮ ॥

125. ಋಷಿಯ ಬಳಿಗೆ ಬಂದು ತಮ್ಮ ಹೆಸರುಗಳನ್ನು ಹೇಳಿ ಆ ಋಷಿಗೆ ನಮಸ್ಕಾರಮಾಡಿ ಇಂತೆಂದರು— ಎಲೈ ಪೂಜ್ಯನೇ, ನಾವು ವಾರಶಿಖರೆಂಬ ರಾಜರೊಡನೆ ಯುದ್ಧಮಾಡಿ ಅವರಿಂದ ಪರಾಜಿತರಾಗಿದ್ದೇವೆ.

126. ನೀನು ನಮಗೆ ಪುರೋಹಿತನಾದಲ್ಲಿ ನಾವು ನಮ್ಮ ಕ್ಷತ್ರಿಯ ಕುಲದಲ್ಲಿ ಜನಿಸಿದ ರಾಜರನ್ನು ಜಯಿಸಲು ಸಮರ್ಥರಾಗುವೆವು. ಬ್ರಾಹ್ಮಣನಾದ ಪುರೋಹಿತನು ಯಾವನನ್ನು ಕಾಪಾಡುತ್ತಾನೆಯೋ ಅವನಿಗೆ ಕ್ಷಾತ್ರತೇಜಸ್ಸು ಎಂದರೆ ಶಕ್ತಿಸಾಮರ್ಥ್ಯಗಳು ಉಂಟಾಗುವವು. ಎಂದರೆ ನಿನ್ನ ಅನುಗ್ರಹವಿದ್ದರೆ ನಾವು ಆ ರಾಜರನ್ನು ಜಯಿಸಲು ಸಮರ್ಥರಾಗುವೆವು.

127. ಋಷಿಯು ಹಾಗೆಯೇ ಆಗಲೆಂದು ಹೇಳಿ ಅವರಿಗೆ ಅಭಯವಿತ್ತು ತನ್ನ ಪುತ್ರನಾದ ಪಾಯುವೆಂಬುವನನ್ನು ಕರೆದು—ಈ ರಾಜರಿಬ್ಬರೂ ಶತ್ರುಗಳಿಂದ ಪರಾಜಿತರಾಗದಂತೆ ಮಾಡು ಎಂದು ಹೇಳಿದನು.

128. ಹಾಗೆಯೇ ಮಾಡುವೆನೆಂದು ತಂದೆಗೆ ಉತ್ತರವಿತ್ತು ಆ ರಾಜರ ಯುದ್ಧೋಪಕರಣಗಳನ್ನು **ಜೀಮೂತಸ್ಯೇವ ಭವತಿ** ಎಂಬ ಸೂಕ್ತದ (೭೫) ಮಂತ್ರಗಳಿಂದ ಪ್ರತ್ಯೇಕವಾಗಿ ಅಭಿಮಂತ್ರಿಸಿ ಅವರ ಆಯುಧಗಳ ಸಾಮರ್ಥ್ಯಗಳನ್ನು ಹೆಚ್ಚಿಸಿದನು

125. Having approached and propitiated him and mentioning their names, the two said to him : ' O Brahman, know that we have been vanquished by the Varasikhas in fight.

126. With you as our domestic priest we could conquer the warriors (ಕ್ಷತ್ರಬಂಧೂನ್). That is to be recognised as ksatra (warrior caste) which protects the everlasting brahma (priestly caste).

127. The seer saying ' yes ' to them, addressed his son Payu : ' Make these two kings unassilable to their enemies. '

128. Saying 'yes' to his father, he consecrated their implements of war individually with the hymn ' Of a thuuder cloud ' (जीमूतस्य : vi. 75).

ಪ್ರಥಮಾ ತಸ್ಯ ಸೂಕ್ತಸ್ಯ ಯೋದ್ಧಾರಂ ಸ್ತೌತಿ ವರ್ಮಿಣಂ ।
ಧನುಷಶ್ಚ ದ್ವಿತೀಯಾ ತು ತೃತೀಯಾ ಜ್ಯಾಭಿಮಂತ್ರಿಣೇ ॥ ೧೨೯ ॥
ಸ್ತೌತ್ಯೃಗಾರ್ಷ್ನೀ ಚತುರ್ಥೀ ತು ಇಷುಧಿಂ ಸ್ತೌತಿ ಪಂಚಮೀ ।
ಅರ್ಧೇನ ಸಾರಥಿಃ ಷಷ್ಠ್ಯಾ ರಶ್ಮಯೋಽರ್ಧೇನ ಸಂಸ್ತುತಾಃ ॥ ೧೩೦ ॥
ಅಶ್ವಾಂಶ್ತು ಸಪ್ತಮೀ ಸ್ತೌತಿ ಆಯುಧಾಗಾರಮಷ್ಟಮೀ ।
ನವಮೀ ರಥಗೋಪಾಂಸ್ತು ದಶಮೀ ರಣದೇವತಾಃ ॥ ೧೩೧ ॥
ಇಷುಂ ಚೈಕಾದಶೀ ಸ್ತೌತಿ ದ್ವಾದಶೀ ಕವಚಸ್ತುತಿಃ ।
ತ್ರಯೋದಶೀ ಕಶಾಂ ಸ್ತೌತಿ ಹಸ್ತತ್ರಾಣಂ ಚತುರ್ದಶೀ ॥ ೧೩೨ ॥

೭೫ ನೇ ಸೂಕ್ತದ ದೇವತೆಗಳು

129. ಈ ೭೫ ನೇ ಸೂಕ್ತದ ಮೊದಲನೆಯ ಮಂತ್ರದಲ್ಲಿ ಯುದ್ಧಾರ್ಥವಾಗಿ ಕವಚವನ್ನು (armour) ಧರಿಸಿರುವ ಯುದ್ಧಭಟನ ಪ್ರಶಂಸೆ ಇದೆ. ೨ ನೇ ಋಕ್ಕಿನಲ್ಲಿ ಧನುಸ್ಸನ್ನೂ, ಮೂರನೆಯ ಋಕ್ಕಿನಲ್ಲಿ ಧನುಸ್ಸಿನ ಹೆದೆಯನ್ನೂ (ಜ್ಯಾ-ಹಗ್ಗ) ಸ್ತುತಿಸಲಾಗಿದೆ.

130. ೪ ನೇ ಯಕ್ಕಿನಲ್ಲಿ **ಆರ್ಷ್ನೀ** ಎಂಬ ಬಿಲ್ಲಿನ ಎರಡು ತುದಿಗಳನ್ನೂ, ೫ ನೇ ಋಕ್ಕಿನಲ್ಲಿ **ಇಷುಧಿ** ಎಂಬ ಬತ್ತಳಿಕೆಯನ್ನೂ ೬ ನೇ ಋಕ್ಕಿನ ಪೂರ್ವಾರ್ಧದಲ್ಲಿ ರಥವನ್ನು ನಡೆಸುವ ಸಾರಥಿಯನ್ನೂ ಉತ್ತರಾರ್ಧದಲ್ಲಿ ಕುದುರೆಗಳ ಲಗಾಮುಗಳನ್ನೂ ಸ್ತುತಿಸಲಾಗಿದೆ.

131. ೭ ನೇ ಋಕ್ಕಿನಲ್ಲಿ ರಥದ ಅಶ್ವಗಳನ್ನೂ, ೮ ನೇ ಋಕ್ಕಿನಲ್ಲಿ ಆಯುಧಾಗಾರವನ್ನೂ, ೯ ನೇ ಋಕ್ಕಿನಲ್ಲಿ ರಥಸಂರಕ್ಷಕರನ್ನೂ (ರಥಗೋಪಾಃ) ೧೦ ನೇ ಋಕ್ಕಿನಲ್ಲಿ ಯುದ್ಧಾಭಿಮಾನಿದೇವತೆಗಳನ್ನೂ (ರಣದೇವತಾಃ) ಸ್ತುತಿಸಲಾಗಿದೆ.

132 ೧೧ ನೇ ಋಕ್ಕಿನಲ್ಲಿ ಬಾಣವನ್ನೂ (arrow) ೧೨ ನೇ ಋಕ್ಕಿನಲ್ಲಿ ಕವಚವನ್ನೂ ೧೩ ನೇ ಋಕ್ಕಿನಲ್ಲಿ ಕುದುರೆಗಳನ್ನು ಹೊಡೆಯುವ ಚಾವಟಿಗಳನ್ನೂ ೧೪ ನೇ ಋಕ್ಕಿನಲ್ಲಿ ಬಿಲ್ಲಿನ ತುದಿ ತಾಕದಿರುವಂತೆ ಕೈಗಳಿಗೆ ಕಟ್ಟಿ ಕೊಳ್ಳುವ ಬಟ್ಟೆಯನ್ನೂ (ಹಸ್ತಘ್ನ) ಸ್ತುತಿಸಲಾಗಿದೆ.

25. Deities of RV. vi. 75 in detail.

129, The frist (stanza) of this hymn praises the warrior in his coat of mail (1), the second is (in praise) of the bow (2), the third consecrates the bowstring (3).

130. The fourth stanzr praises the ends of the bow (4), the fifth praises the quiver (5). With half of the sixth the charioteer, with the (other) half the reins are praised. (6).

131. The seventh prisses the horses (7), the eighth the arsenal (8), the ninth the guards of the car (9), the tenth the deities of battle (10).

132. The eleventh praises the arrow (11), the twelfth is a praise of the cuirass (12), the thirteenth praises the goad (13), the fourteenth the handguard (14).

ಪ್ರಥಮೇ ಪಂಚದಶ್ಯಾಸ್ತು ಪಾತೇ ದಿಗ್ಧ ಇಷುಃ ಸ್ತುತಃ ।
ಅಯೋಮುಖೀ ದ್ವಿತೀಯೇ ತು ಅರ್ಧೇ ತ್ವಸ್ತ್ರಂ ವಾರುಣಂ ಪರೇ ॥ ೧೩೩ ॥
ಷೋಳಶ್ಯಾಂ ತ್ವಸ್ಯ ಸೂಕ್ತಸ್ಯ ಧನುರ್ಮುಕ್ತ ಇಷುಃ ಸ್ತುತಃ ।
ಸಪ್ತದಶ್ಯಾಂ ತು ಯುದ್ಧಾದೇಃ ಕವಚಸ್ಯ ತು ಬಧ್ಯತಃ ॥ ೧೩೪ ॥
ಸ್ತುತಿರಷ್ಟಾದಶೀ ಜ್ಞೇಯಾ ಯುಯುತ್ಸೋಃ ಸ್ತುತಿರುತ್ತಮಾ ।
ಆಶಾಸ್ತೇ ಚೋತ್ತಮೇ ಪಾದೇ ಋಷಿರಾತ್ಮನ ಆಶಿಷಃ ॥ ೧೩೫ ॥
ಸೂಕ್ತೇನಾನೇನ ತು ಸ್ತುತ್ವಾ ಸಂಗ್ರಾಮಾಂಗಾನ್ಯೃಷಿಸ್ತಯೋಃ ।
ತತಃ ಪ್ರಸ್ಥಾಪಯಾಮಾಸ ಪುನರ್ವಾರಶಿಖಾನ್ಪ್ರತಿ ॥ ೧೩೬ ॥

133. ೧೫ ನೇ ಋಕ್ಕಿನ ಮೊದಲನೆಯ ಪಾದದಲ್ಲಿ ವಿಷಪೂರಿತವಾದ (ವಿಷದಲ್ಲಿ ಅದ್ದಿರುವ) ಬಾಣವನ್ನೂ ಎರಡನೆಯ ಪಾದದಲ್ಲಿ ಉಕ್ಕಿನ ಮೊನೆಯಿಂದ ಕೂಡಿದ ಬಾಣದ ತುದಿಯನ್ನೂ ಉತ್ತರಾರ್ಧದ ಎರಡು ಪಾದಗಳಲ್ಲಿ ವಾರುಣಾಸ್ತ್ರವನ್ನೂ (ಪರ್ಜನ್ಯಾಸ್ತ್ರವನ್ನೂ) ಸ್ತುತಿಸಲಾಗಿದೆ.

134. ಈ ಸೂಕ್ತದ ೧೬ ನೇ ಋಕ್ಕಿನಲ್ಲಿ ಧನುಸ್ಸಿನಿಂದ ಹೊರಹೊಮ್ಮಟ ಬಾಣದ ಪ್ರಶಂಸೆ ಇದೆ. ೧೭ ನೇ ಋಕ್ಕಿನಲ್ಲಿ ಯುದ್ಧದ ಪ್ರಾರಂಭವನ್ನು ಸ್ತುತಿಸಲಾಗಿದೆ. ಯುದ್ಧಮಾಡುವ ಯೋಧನು ತನ್ನ ಶರೀರಕ್ಕೆ ಕವಚವನ್ನು ಕಟ್ಟಿಕೊಳ್ಳುವ ವಿಷಯವು,

135. ೧೯ ನೇ ಋಕ್ಕಿನಲ್ಲಿ ಹೇಳಲಾಗಿದೆ. ೧೯ ನೇ ಋಕ್ಕಿನಲ್ಲಿ ಯುದ್ಧಮಾಡುವ ಯೋಧನ ಪ್ರಶಂಸೆ ಇದೆ ಮತ್ತು ೧೯ ನೇ ಋಕ್ಕಿನ ಕೊನೆಯ ಪಾದದಲ್ಲಿ (ಅಥವಾ ಕೊನೆಯ ೨ ಪಾದಗಳಲ್ಲಿ) ಋಷಿಯು ಯುದ್ಧಮಾಡುವ ಯೋಧನ ವಿಷಯದಲ್ಲಿ ಜಯವನ್ನು ಬಯಸಿ ಆಶೀರ್ವಾದವನ್ನು ಪಠಿಸಿರುವನು.

136. ಮೇಲೆ ಹೇಳಿದಂತೆ ಪಾಯುಋಷಿಯು ಈ ಸೂಕ್ತದ ಋಕ್ಕುಗಳಿಂದ ಆಯುಧಾದಿಗಳನ್ನು ಅಭಿಮಂತ್ರ ಪೂರ್ವಕವಾಗಿ ಸ್ತುತಿಸಿ ಆ ಇಬ್ಬರು ರಾಜರನ್ನೂ ಹರಸಿ ವಾರಶಿಖರಾಜರಮೇಲೆ ಮತ್ತೆ ಯುದ್ಧಮಾಡುವುದಕ್ಕಾಗಿ ಕಳುಹಿಸಿಕೊಟ್ಟನು.

133. In the first verse of the fifteenth (stanza) the poisoned arrow is praised (15), in the second (15) the iron-tipped (arrow), but in the following half (of the stanza) the missile of Varuna (15).

27. RV. vi. 75. (continued).

134, 135. In the sixteenth (stanza) of this hymn the arrow discharged from the bow is praised (16); in the seventeenth (there is praise) of the beginning of the fight (17), while the eighteenth is to be known as (in) praise of the mail of him who ties it on (ಬಧ್ಯತಃ); the last (19) is (in) praise of him who is about to fight; and in the last verse (19) the seer utters prayers on his own behalf.

136. Now the seer having with this hymn praised the implements of battle of these two (kings), sent them forth again against the Varasikhas.

ಏತತ್ತ್ಯತ್ತ್ರೇ ಚತಸೃಭೀ ರಾಜ್ಞೋ ಸಾಹಾಯ್ಯಕಾಮ್ಯಯಾ ।
ಭರದ್ವಾಜೋಽಭಿತುಷ್ಟಾವ ಪ್ರೀತಸ್ತೇನ ಪುರಂದರಃ ॥ ೧೩೬ ॥

ಅಭ್ಯಾವರ್ತಿನಮಭ್ಯೇತ್ಯ ಹರ್ಯುಪೀಯಾನದೀತಟೇ ।
ಸಹಿತಶ್ಚಾಯಮಾನೇನ ಜಘಾನೈನಾಞ್ಛಚೀಪತಿಃ ॥ ೧೩೭ ॥

ತೌ ತು ವಾರಶಿಖಾಞ್ಜಿತ್ವಾ ತತೋಽಭ್ಯಾವರ್ತಿಸಾಂಜಯೌ ।
ಭರದ್ವಾಜಾಯ ಗುರವೇ ದದತುರ್ವಿವಿಧಂ ವಸು ॥ ೧೩೮ ॥

ಭರದ್ವಾಜಶ್ಚ ಗರ್ಗಶ್ಚ ದೃಷ್ಟ್ವಾವಿಂದ್ರೇಣ ವೈ ಪಥಿ ।
ದ್ವಯಾನ್ ಪ್ರಸ್ತೋಕ ಇತ್ಯಾಭಿರ್ಧಾನಂ ತದ್ವೈ ಶಶಂಸತುಃ ॥ ೧೪೦ ॥

137. ಈ ಇಬ್ಬರು ರಾಜರಿಗೆ ಸಹಾಯಮಾಡುವುದಕ್ಕಾಗಿ ಭರದ್ವಾಜಋಷಿಯೂ ಸಹ **ಏತತ್ ತ್ಯತ್ತ್ರೇ** ಎಂದು ಮೊದಲಾಗುವ ನಾಲ್ಕು ಋಕ್ಕುಗಳಿಂದ (೨೭ ನೇ ಸೂಕ್ತದ ೪-೭ ಋಕ್ಕುಗಳಿಂದ) ಇಂದ್ರನನ್ನು ಸ್ತುತಿಸಿದನು ಭರದ್ವಾಜಋಷಿಯ ಸ್ತುತಿಯಿಂದ ಪ್ರೀತನಾದ ಇಂದ್ರನು,

138. ಹರ್ಯುಪೀಯಾ ಎಂಬ ನದಿಯ ದಡದಮೇಲೆ ಬೀಡುಬಿಟ್ಟಿದ್ದ ಅಭ್ಯಾವರ್ತೀ ಮತ್ತು ಚಾಯಮಾನ ಎಂಬ ಆ ರಾಜರ ಸಮೀಪಕ್ಕೆ ಬಂದು ಅವರ ಶತ್ರುಗಳಾದ ವಾರಶಿಖರನ್ನು ಸಂಹಾರಮಾಡಿದನು.

139. ಈರೀತಿಯಾಗಿ ಅಭ್ಯಾವರ್ತೀ ಮತ್ತು ಸಾಂಜಯರೆಂಬ ಆ ರಾಜರಿಬ್ಬರೂ (ಇಂದ್ರನ ಸಹಾಯದಿಂದ) ತಮ್ಮ ಶತ್ರುಗಳಾದ ವಾರಶಿಖರೆಂಬುವರನ್ನು ಯುದ್ಧದಲ್ಲಿ ಜಯಿಸಿ ತಮ್ಮ ಗುರುವಾದ ಭರದ್ವಾಜಋಷಿಯ ಸಮೀಪಕ್ಕೆ ಬಂದು ಅವರಿಗೆ ನಾನಾವಿಧವಾದ ಧನಾದಿವಸ್ತುಗಳನ್ನು ಕೊಟ್ಟರು.

140. ಭರದ್ವಾಜನೂ ಗರ್ಗಋಷಿಯೂ ದಾರಿಯಲ್ಲಿ ಬರುತ್ತಿರುವಾಗ ಇಂದ್ರನನ್ನು ಕಂಡರು. ಈ ಇಬ್ಬರು ರಾಜರೂ ತಮಗೆ ಕೊಟ್ಟ ಧನಾದಿಗಳ ದಾನಪ್ರಶಂಸೆಯನ್ನು ಅವರು ಇಂದ್ರನಿಗೆ **ದ್ವಯಾನ್ ಅಗ್ನೇ** ಎಂಬ ಋಕ್ಕಿನಿಂದಲೂ (೨೭ ನೇ ಸೂಕ್ತದ ೮ ನೇ ಋಕ್ಕು) **ಪ್ರಸ್ತೋಕ ಇನ್ನು** ಎಂಬ ಋಕ್ಕಿನಿಂದಲೂ (೪೭ ನೇ ಸೂಕ್ತದ ೨೨ ನೇ ಋಕ್ಕು) ತಿಳಿಸಿದರು.

---

137. With the four stanzas 'This here of you' (ಏತತ್ತ್ಯತ್ತ್ರೇ : vi. 27.4-7) Bharadvaja praised (Indra) from a desire of aiding the king (ಚಾಯಮಾನ) Pleased thereby the Fort-destroyer,

138. the Lord of Sachi, coming to Abhyavartin on the bank of the Haryupiya river, slew them in company with Chayamana.

28. Story of Chayamana and Prastoka (concluded).

139. Now these two, Abhyavartin and Sarnjaya, having conquered the Varasikhas, gave manifold wealth to their preceptor Bharadvaja.

140. Bharadvaja and Garga. being seen by Indra on the road, proclained that gift with the (stanzas) 'Two' (ದ್ವಯಾನ್ : vi. 27. 8) (and) 'Prastoka' (ಪ್ರಸ್ತೋಕಃ : vi. 47-22).

ಋಷಿರಸ್ಯಭಿತುಷ್ಟಾವ ದಾನಂ ತಸ್ಯ ಚ ತೇಷ್ಟಯೇ ।
ಋಚೈಕಯಾ ದ್ವಯಾನ್ ಅಗ್ನೇ ದತ್ತಂ ಸಂಕೀರ್ತಯನ್ ಸ್ವಯಂ ॥ ೧೪೧ ॥

ಪ್ರಸಂಗಾಸ್ತ್ವಿಹ ಯಾಃ ಸೂಕ್ತೇ ದೇವತಾಃ ಪರಿಕೀರ್ತಿತಾಃ ।
ತಾ ಏವ ಸೂಕ್ತಭಾಜಸ್ತು ಮೇನೇ ರಾಥೀತರಃ ಸ್ತುತೌ ॥ ೧೪೨ ॥

ಇತಿ ಷಷ್ಠಂ ಮಂಡಲಂ

141. ಭರದ್ವಾಜಋಷಿಯೂ ಸಹ ಆ ಚಾಯಮಾನರಾಜನ ದಾನವನ್ನು **ದ್ವಯಾನ್ ಅಗ್ನೇ** ಎಂಬ ಋಕ್ಕಿನಿಂದ (೨೭ ನೇ ಸೂಕ್ತದ ೮ ನೇ ಋಕ್ಕು) ಚೆನ್ನಾಗಿ ಪ್ರಶಂಸೆಮಾಡಿದನು.

142. ಈ ಸೂಕ್ತದಲ್ಲಿ (೭೫ ನೇ ಸೂಕ್ತದಲ್ಲಿ) ಯಾವ ದೇವತೆಗಳು ಪ್ರಸಂಗವಶದಿಂದ ಸ್ತುತರಾಗಿರುವರೋ ಅವರೇ ಆಯಾ ಮಂತ್ರಗಳಿಗೆ ಮುಖ್ಯದೇವತೆಗಳೆಂದು (ಸೂಕ್ತಭಾಜಃ) **ರಾಥೀತರಃ** ಎಂಬುವರು ಅಭಿಪ್ರಾಯ ಪಡುವರು.

ಇಲ್ಲಿಗೆ ಆರನೆಯ ಮಂಡಲವು ಸಮಾಪ್ತವು.

141. The seer on his part praised the gift of that (ಚಾಯಮಾನ), himself proclaiming what had been given (by him) with the one stanza, 'Two, O Agni' (ದ್ವಯಾನ್ ಅಗ್ನೇ : vi. 27-8).

142. The deities who in this hymn are occasionally (ಪ್ರಸಂಗಾತ್) celebrated, Rathitara regarded as hymn-owning (ಸೂಕ್ತಭಾಜ) in praise (ಸ್ತುತ).

End of 6th Mandala.

———

ಅಥ ಸಪ್ತಮಂ ಮಂಡಲಂ

ಪ್ರಾಜಾಪತ್ಯೋ ಮರೀಚಿರ್ಹಿ ಮಾರೀಚಃ ಕಶ್ಯಪೋ ಮುನಿಃ।
ತಸ್ಯ ದೇವ್ಯೋಽಭವಞ್ಜಾಯಾ ದಾಕ್ಷಾಯಣ್ಯಸ್ತ್ರಯೋದಶ ॥ ೧೪೩ ॥

ಅದಿತಿರ್ದಿತಿರ್ದನುಃ ಕಾಲಾ ದನಾಯುಃ ಸಿಂಹಿಕಾ ಮುನಿಃ।
ಕ್ರೋಧಾ ವಿಶ್ವಾ ವರಿಷ್ಠಾ ಚ ಸುರಭಿರ್ವಿನತಾ ತಥಾ ॥ ೧೪೪ ॥

ಕದ್ರೂಶ್ಚೈವೇತಿ ದುಹಿತ್ರ್ಯಃ ಕಶ್ಯಪಾಯ ದದೌ ಸ ಚ।
ತಾಸು ದೇವಾಸುರಾಶ್ಚೈವ ಗಂಧರ್ವೋರಗರಾಕ್ಷಸಾಃ ॥ ೧೪೫ ॥

ಏಳನೆಯ ಮಂಡಲವು

ವಸಿಷ್ಠಋಷಿಯ ಮಹಿಮೆ; ಕಶ್ಯಪನ ಪತ್ನಿಯರು

143. ಪ್ರಜಾಪತಿಗೆ ಮರೀಚಿ ಎಂಬ ಪುತ್ರನಿದ್ದನು ಆ ಮರೀಚಿಗೆ ಕಶ್ಯಪಋಷಿಯು ಪುತ್ರನಾಗಿದ್ದನು. ಆ ಕಶ್ಯಪನಿಗೆ ದಕ್ಷಪ್ರಜಾಪತಿಯ ಹದಿಮೂರು ಮಂದಿ ಪುತ್ರಿಯರು ಪತ್ನಿಯರಾಗಿದ್ದರು. ಅವರುಗಳು ಯಾರೆಂದರೆ—

144. ಅದಿತಿ, ದಿತಿ, ದನು, ಕಾಲಾ, ದನಾಯು, ಸಿಂಹಿಕಾ, ಮುನಿ, ಕ್ರೋಧಾ, ವಿಶ್ವಾ, ವರಿಷ್ಠಾ, ಸುರಭಿ, ವಿನತಾ,

145. ಕದ್ರೂಃ ಎಂದು ಆ ಹದಿಮೂರುಮಂದಿ ಪತ್ನಿಯರ ಹೆಸರು. ಈ ಹದಿಮೂರುಮಂದಿ ಪುತ್ರಿಯರನ್ನು ದಕ್ಷನು ಕಶ್ಯಪಋಷಿಗೆ ವಿವಾಹಮಾಡಿಕೊಟ್ಟನು. ಈ ಪತ್ನಿಯರಲ್ಲಿ—ದೇವತೆಗಳು, ಅಸುರರು, ಗಂಧರ್ವರು, ಸರ್ಪಗಳು, ರಾಕ್ಷಸರು,

Mandala VII.

29 Predigree of Vasistha. Kasyapa's wives.

143. The son of Prajapati was Marichi, Marichi's son was the sage Kasyapa. He had thirteen divine wives, the daughters of Dhksa :

144. Aditi, Diti, Danu, Kala, Danayu, Sinhika, Muni, Krodha, Visva and Varistha, Surabhi and Vinata.

145. and Kadru by name : (those) daughters he (Daksa) gave to Kasyapa.

From them the Gods aod Asuras, the Gandharvas, the Serpents, the Raksasas,

ವಯಾಂಸಿ ಚ ಪಿಶಾಚಾಶ್ಚ ಜಜ್ಞಿರೇಽನ್ಯಾಶ್ಚ ಜಾತಯಃ ।
ತಾಸ್ವೇಕಾ ತ್ವದಿತಿರ್ದೇವೀ ದ್ವಾದಶಾಜನಯತ್ಸುತಾನ್ ॥ ೧೪೬ ॥

ಭಗಶ್ಚೈವಾರ್ಯಮಾಂಶಶ್ಚ ಮಿತ್ರೋ ವರುಣ ಏವ ಚ ।
ಧಾತಾ ಚೈವ ವಿಧಾತಾ ಚ ವಿವಸ್ವಾಂಶ್ಚ ಮಹಾದ್ಯುತಿಃ ॥ ೧೪೭ ॥

ತ್ವಷ್ಟಾ ಪೂಷಾ ತಥೈವೇಂದ್ರೋ ದ್ವಾದಶೋ ವಿಷ್ಣುರುಚ್ಯತೇ ।
ದ್ವಂದ್ವಂ ತಸ್ಯಾಸ್ತು ತಜ್ಜಜ್ಞೇ ಮಿತ್ರಶ್ಚ ವರುಣಶ್ಚ ಹ ॥ ೧೪೮ ॥

ತಯೋರಾದಿತ್ಯಯೋಃ ಸತ್ರೇ ದೃಷ್ಟ್ವಾಪ್ಸರಸಮುರ್ವಶೀಂ ।
ರೇತಶ್ಚಸ್ಕಂದ ತತ್ಕುಂಭೇ ನ್ಯಪತದ್ವಾಸತೀವರೇ ॥ ೧೪೯ ॥

146. ಪಕ್ಷಿಗಳು, ಪಿಶಾಚಿಗಳು, ಇನ್ನೂ ಇತರ ಅನೇಕವಿಧ ಜಾತಿಯ ಪ್ರಾಣಿಗಳೂ ಉತ್ಪನ್ನರಾದರು. ಆ ಪುತ್ರಿಯರಲ್ಲಿ ಒಬ್ಬಳಾದ ಅದಿತಿದೇವಿಯು ಹನ್ನೆರಡುಮಂದಿ ಪುತ್ರರನ್ನು ಹಡೆದಳು.

147. ಭಗ, ಅರ್ಯಮಾ, ಅಂಶ, ಮಿತ್ರ, ವರುಣ, ಧಾತಾ, ವಿಧಾತಾ, ಮಹಾವರ್ಚಸ್ವಿಯಾದ ವಿವಸ್ವಾನ್ ಎಂಬುವರೂ,

148. ತ್ವಷ್ಟಾ, ಪೂಷಾ, ಇಂದ್ರ, ವಿಷ್ಣು ಎಂಬುವರೂ ಸೇರಿ ಒಟ್ಟು ಹನ್ನೆರಡು ಮಂದಿ ಪುತ್ರರು. ಈ ಹನ್ನೆರಡು ಮಂದಿಯಲ್ಲಿ ಒಂದಾವರ್ತಿಗೆ ಇಬ್ಬಿಬ್ಬರಂತೆ ಎಂದರೆ ಮಿತ್ರನೂ, ವರುಣನೂ ಎಂಬಿಬ್ಬರಂತೆ ಅವಳ ಮಕ್ಕಳಾಗಿ ಜನಿಸಿದರು.

ಮಿತ್ರಾವರುಣರು ಮತ್ತು ಊರ್ವಶೀ ; ಅಗಸ್ತ್ಯ ಮತ್ತು ವಸಿಷ್ಠರ ಜನ್ಮವೃತ್ತಾಂತವು

149. ಈ ಅವಳಿಮಕ್ಕಳಾದ ಮಿತ್ರಾವರುಣರು ಒಂದು ಯಜ್ಞಕ್ಕೆ ಹೋಗಿದ್ದಾಗ ಅಲ್ಲಿ ಊರ್ವಶೀ ಎಂಬ ಅಪ್ಸರಸ್ತ್ರೀಯನ್ನು ನೋಡಿದರು. ಆದರಿಂದ ಅವರ ವೀರ್ಯವು ಸ್ಖಲನವಾಗಿ ಆ ಯಜ್ಞವೇದಿಯಲ್ಲಿದ್ದ ವಸತೀವರಿ ಎಂಬ ನೀರಿನ ಕುಂಭದಲ್ಲಿ (ಪಾತ್ರೆಯಲ್ಲಿ) ಬಿದ್ದಿತು.

146. Birds, Pisachas, and other classes (of beings) were produced. Now among these (daughters) the one goddess Aditi produced twelve sons.

147. (These were) Bhaga, Aryaman, and Amsa, Mitra and Varuna, Dhatr and Vidhatr, and Vivasvat of great brilliance,

30. Story of Mitra-Varuna and Urvasi.

148. Tvastr, Pusan, and also Indra; the twelfth is called Visnu. (Thus) that pair was born of her—Mitra and Varuna.

149. Of these two Adityas, when they saw the nymph Urvasi at a sacrificial session, the semen was effused. It fell into a jar containing water that stood overnight.

ತೇನೈವ ತು ಮುಹೂರ್ತೇನ ವೀರ್ಯವಂತೌ ತಪಸ್ವಿನೌ ।
ಅಗಸ್ತ್ಯಶ್ಚ ವಸಿಷ್ಠಶ್ಚ ತತ್ರರ್ಷೀ ಸಂಬಭೂವತುಃ ॥ ೧೫೦ ॥

ಬಹುಧಾ ಪತಿತೇ ಶುಕ್ರೇ ಕಲಶೇಽಥ ಜಲೇ ಸ್ಥಲೇ ।
ಸ್ಥಲೇ ವಸಿಷ್ಠಸ್ತು ಮುನಿಃ ಸಂಭೂತ ಋಷಿಸತ್ತಮಃ ॥ ೧೫೧ ॥

ಕುಂಭೇ ತ್ವಗಸ್ತ್ಯಃ ಸಂಭೂತೋ ಜಲೇ ಮತ್ಸ್ಯೋ ಮಹಾದ್ಯುತಿಃ ।
ಉದಿಯಾಯ ತತೋಽಗಸ್ತ್ಯಃ ಶಮ್ಯಾಮಾತ್ರೋ ಮಹಾಯಶಾಃ ॥ ೧೫೨ ॥

ಮಾನೇನ ಸಂಮಿತೋ ಯಸ್ಮಾತ್ತಸ್ಮಾನ್ಮಾನ್ಯ ಇಹೋಚ್ಯತೇ ।
ಯದ್ವಾ ಕುಂಭಾದೃಷಿರ್ಜಾತಃ ಕುಂಭೇನಾಪಿ ಹಿ ಮಾಯತೇ ॥ ೧೫೩ ॥

150. ಆ ಕ್ಷಣವೇ ವೀರ್ಯವಂತರೂ ಮಹಾತಪಸ್ವಿಗಳೂ ಆದ ಅಗಸ್ತ್ಯ ಮತ್ತು ವಸಿಷ್ಠ ಎಂಬ ಇಬ್ಬರು ಋಷಿಗಳು ಅಲ್ಲಿಯೇ ಪ್ರಾದುರ್ಭೂತರಾದರು.

151. ಮಿತ್ರಾವರುಣರ ವೀರ್ಯವು ಸ್ಖಲನವಾದಾಗ ಅದು ನೆಲದ ಮೇಲೆಯೂ (ವಸತೀವರೀ ಎಂಬ) ನೀರಿನ ಕಲಶದಲ್ಲಿಯೂ ಬಿದ್ದಿತಷ್ಟೆ. ನೆಲದ ಮೇಲೆ ಬಿದ್ದ ವೀರ್ಯದಿಂದ ಋಷಿಶ್ರೇಷ್ಠನಾದ ವಸಿಷ್ಠ ಋಷಿಯು ಉತ್ಪನ್ನನಾದನು.

152, ಜಲದಲ್ಲಿ ಮತ್ಸ್ಯವು ಉತ್ಪತ್ತಿಯಾಗುವಂತೆ ಮಹಾ ವರ್ಚಸ್ಸಿನಿಂದ ಬೆಳಗುವ ಅಗಸ್ತ್ಯಋಷಿಯು ಕುಂಭದಲ್ಲಿ ಬಿದ್ದ ಮಿತ್ರಾವರುಣರ ವೀರ್ಯದಿಂದ ಉತ್ಪನ್ನನಾದನು. ಅವನು ಉತ್ಪನ್ನನಾದಾಗ ಒಂದು ಗೇಣಿನಷ್ಟು ಮಾತ್ರ ಇದ್ದನು.

153. ಅಗಸ್ತ್ಯನು ಹುಟ್ಟಿದಾಗ [ಒಂದು ಗೇಣಿನಷ್ಟು (ಮಾನ-ಅಳತೆ) ಇದ್ದನೆಂದು ಹೇಳಿರುವುದರಿಂದ ಅಗಸ್ತ್ಯನಿಗೆ ಮಾನ್ಯನೆಂಬ ಹೆಸರು ಪ್ರಸಿದ್ಧವಾಯಿತು. ಅಥವಾ ಕುಂಭದಿಂದ (ಕುಂಭವಲ್ಲಿ ಬಿದ್ದ ವೀರ್ಯದಿಂದ) ಈ ಅಗಸ್ತ್ಯಋಷಿಯು ಹುಟ್ಟಿದ್ದರಿಂದ ಈ ಋಷಿಗೆ ಕುಂಭಸಂಭವನೆಂದೂ ಹೆಸರಾಯಿತು.

---

150. Now at that same moment two vigorous ascetics, the seers Agastya and Vasistha, there came into being.

151. Now the semen having fallen in various ways—in a jar, in water, on the ground—the sage Vasistha, best of seers, was produced on the ground ;

152. While Agastya was produced in the jar, (and) Matsya, of great brilliance, in the water.

Then Agastya, of great glory, arose being the length of a peg (ಶಮ್ಯಾ)

31. Birth of Agastya and Vasistha.

153. Because he was meted with a measure, he is here called Manya ; or else (because) the seer was born from a jar. For measurement is made with a jar also :

ಕುಂಭ ಇತ್ಯಭಿಧಾನಂ ತು ಪರಿಮಾಣಸ್ಯ ಲಕ್ಷ್ಯತೇ ।
ತತೋಽಪ್ಸು ಗೃಹ್ಯಮಾಣಾಸು ವಸಿಷ್ಠಃ ಪುಷ್ಕರೇ ಸ್ಥಿತಃ । ॥ ೧೫೪ ॥
ಸರ್ವತ್ರ ಪುಷ್ಕರಂ ತತ್ರ ವಿಶ್ವೇ ದೇವಾ ಅಧಾರಯನ್ ।
ಉತ್ಥಾಯ ಸಲಿಲಾತ್ತಸ್ಮಾದಥ ತೇಪೇ ಮಹತ್ತಪಃ ॥ ೧೫೫ ॥
ನಾಮಾಸ್ಯ ಗುಣತೋ ಜಜ್ಞೇ ವಸತೇಃ ಶ್ರೈಷ್ಠ್ಯಕರ್ಮಣಃ ।
ಅದೃಶಮೃಷಿಭಿರ್ಹೀಂದ್ರಂ ಸೋಽಪಶ್ಯತ್ತಪಸಾ ಪುರಾ ॥ ೧೫೬ ॥
ಸೋಮಭಾಗಾನಥೋ ತಸ್ಮೈ ಪ್ರೋವಾಚ ಹರಿವಾಹನಃ ।
ಋಷಯೋ ವಾ ಇಂದ್ರಮಿತಿ ಬ್ರಾಹ್ಮಣಾತ್ತದ್ಧಿ ದೃಶ್ಯತೇ ॥ ೧೫೭ ॥

154. ಕುಂಭ (ಪಾತ್ರೆ)ವೂ ಸಹ ಒಂದು ನಿರ್ದಿಷ್ಟವಾದ ಅಳತೆಯ ಪ್ರಮಾಣವನ್ನು ಸೂಚಿಸುವುದು. (ಧಾನ್ಯಾದಿಗಳನ್ನು ಅಳೆಯುವಾಗ ಕುಂಭವನ್ನು ಉಪಯೋಗಿಸುತ್ತಾರೆ) ಯಜ್ಞಾರ್ಥವಾಗಿ ನೀರನ್ನು ತರುವಾಗ ವಸಿಷ್ಠ ಋಷಿಯು ನೀರಿನ ಮಧ್ಯದಲ್ಲಿದ್ದ ಒಂದು ಕಮಲದ (ಪುಷ್ಕರ) ಮೇಲೆ ನಿಂತಿರುವುದು ಕಂಡುಬಂದಿತು.

155. ನೀರಿನಲ್ಲಿದ್ದ ಆ ಕಮಲವನ್ನು ಎಲ್ಲಾ ದೇವತೆಗಳೂ ಹಿಡಿದು ನಿಂತಿದ್ದರು. ಆ ನೀರಿನಿಂದ ಎದ್ದುಬಂದು ವಸಿಷ್ಠಋಷಿಯು ಮಹಾ ತಪಸ್ಸನ್ನು ಮಾಡಿದನು.

156. ಈ ವಸಿಷ್ಠಋಷಿಯ ಹೆಸರು ಅವನ ಗುಣಕ್ಕನುಸಾರವಾಗಿ ಬಂದಿರುವುದು. ವಸತಿಧಾತುವಿಗೆ ಶ್ರೇಷ್ಠವೆಂಬ ಅರ್ಥವಿರುವುದು. ಇತರ ಋಷಿಗಳು ನೋಡಲು ಸಾಧ್ಯವಿಲ್ಲದ ಈ ಇಂದ್ರನನ್ನು ವಸಿಷ್ಠಋಷಿಯು ತನ್ನ ತಪೋ ಮಹಿಮೆಯಿಂದ ನೋಡಿದನು. (ಆದ್ದರಿಂದ ಎಲ್ಲಾ ಋಷಿಗಳಿಗಿಂತಲೂ ವಸಿಷ್ಠನು ಶ್ರೇಷ್ಠನು. ಈ ಅರ್ಥ ಅರ್ಥವನ್ನೇ ವಸಿಷ್ಠಶಬ್ದವು ತಿಳಿಸುವುದು).

157. ಆಗ ಇಂದ್ರನು ಈ ವಸಿಷ್ಠಋಷಿಗೆ ಯಜ್ಞಾದಿಗಳಲ್ಲಿ ಸೋಮಭಾಗವನ್ನು ಕೊಡುವೆನೆಂದು ಹೇಳಿದನು. ಈ ವಿಷಯವು **ಋಷಯೋ ವಾ ಇಂದ್ರಂ ಪ್ರತ್ಯಕ್ಷಂ ನಾಪಶ್ಯನ್ತಂ ವಸಿಷ್ಠಃ ಪ್ರತ್ಯಕ್ಷಮಪಶ್ಯತ್** ಇತ್ಯಾದಿ ಬ್ರಾಹ್ಮಣವಾಕ್ಯಗಳಲ್ಲಿ (ತೈತ್ತಿರೀಯಸಂಹಿತೆಯಲ್ಲಿಯೂ ಸಹ) ಕಂಡುಬರುವುದು

154. by 'jar' (ಕುಂಭ) the designation of a measure of capacity (parimana) is indicatad,

Then, as the waters were being taken up (ಗೃಹ್ಯಮಾಣ), Vasistha was (found) standing on a lotus (ಪುಷ್ಕರ).

155. There on every side the All-gods supported the lotus. Arising out of that water he (ವಸಿಷ್ಠ) then performed great austerity.

156. His name arose, with reference to his virtue (ಗುಣತಃ), from the root expressive of pre-eminence: for he once upon a time, by means of austerity, saw Indra who was invisible to (others) seers.

157. The Lord of Bay Steeds 'Indra' then proclaimed to him (that he should receive) shares in Soma.

For this appears from the Brahmana (passage) 'The seers (saw not) Indra' (ಋಷಯೋ ವಾ ಇಂದ್ರಂ).

ವಸಿಷ್ಠಶ್ಚ ವಸಿಷ್ಠಾಶ್ಚ ಬ್ರಾಹ್ಮಣಾ ಬ್ರಹ್ಮಕರ್ಮಣಿ ।
ಸರ್ವಕರ್ಮಸು ಯಜ್ಞೇಷು ದಕ್ಷಿಣೇಯತಮಾಸ್ತಥಾ ॥ ೧೫೮ ॥
ತಸ್ಮಾದ್ಯೇಽದ್ಯಾಪಿ ವಾಸಿಷ್ಠಾಃ ಸದಸ್ಯಾಃ ಸ್ಯುಸ್ತು ಕರ್ಹಿಚಿತ್ ।
ಅರ್ಹಯೇದ್ದಕ್ಷಿಣಾಭಿಸ್ತಾನ್ ಭಾಲ್ಲವೇಯಾ ಶ್ರುತಿಸ್ತ್ವಯಂ ॥ ೧೫೯ ॥
ಋಷಿಸ್ತು ಮೈತ್ರಾವರುಣಿಃ ಸೂಕ್ತೈಃ ಷೋಳಶಭಿಃ ಪರೈಃ ।
ತುಷ್ಟಾವಾಗ್ನಿಮಿತಿ ತ್ವಗ್ನಿಮಾಪ್ರಿಯಸ್ತತ್ರ ಜುಷಸ್ವ ನಃ ॥ ೧೬೦ ॥
ಪ್ರಾಗ್ನಯೇಽಥ ಪ್ರ ಸಮ್ರಾಜೋ ದ್ವಿತೀಯಂ ಪ್ರಾಗ್ನಯೇ ತೃಚಂ ।
ವೈಶ್ವಾನರೀಯಾಣ್ಯೇತಾನಿ ತ್ವೇ ಹ್ಯೆಂದ್ರಾಣಿ ಪರಾಣ್ಯತಃ ॥ ೧೬೧ ॥

ವಸಿಷ್ಠ ಮತ್ತು ವಸಿಷ್ಠಕುಲದವರು ; ೭ ನೇ ಮಂಡಲದ ೧-೩೨ ಸೂಕ್ತಗಳ ದೇವತೆಗಳು

158. ವಸಿಷ್ಠಋಷಿಯೂ ಅವನ ವಂಶಜರೂ ಯಜ್ಞಾದಿಕರ್ಮಗಳಲ್ಲಿ ಬ್ರಹ್ಮನೆಂಬ ಋತ್ವಿಜನ ಪದವಿಯನ್ನು (ಋತ್ವಿಕ್ಕುಗಳಲ್ಲೆಲ್ಲಾ ಬ್ರಹ್ಮನೆಂಬ ಋತ್ವಿಜನೇ ಶ್ರೇಷ್ಠನೆಂದು ಪ್ರಸಿದ್ಧವು) ಗಳಿಸಿರುವರು. ಯಜ್ಞಗಳಲ್ಲಿಯೂ ಇತರ ಸಮಸ್ತ ಕರ್ಮಗಳಲ್ಲಿಯೂ ದಕ್ಷಿಣೆಯನ್ನು ಪಡೆಯಲು ಇವರು ಅರ್ಹರಾಗಿರುವರು.

159. ಆದ್ದರಿಂದ ಯಜ್ಞಾದಿಸರ್ವಕರ್ಮಗಳಲ್ಲಿಯೂ ಅಲ್ಲಿಗೆ ಬಂದಿರಬಹುದಾದ ವಸಿಷ್ಠಕುಲದ ಬ್ರಾಹ್ಮಣರನ್ನೆಲ್ಲಾ ದಕ್ಷಿಣೆಯನ್ನು ಕೊಟ್ಟು ಗೌರವಿಸಬೇಕೆಂದು ಭಾಲ್ಲವೇಯಶ್ರುತಿವಾಕ್ಯವು ತಿಳಿಸುವುದು.

160. ಮಿತ್ರಾವರುಣರ ಪುತ್ರನಾದ ಈ ವಸಿಷ್ಠಋಷಿಯು ಈ ೭ ನೇ ಮಂಡಲದಲ್ಲಿ ಮೊದಲ ೧೬ ಸೂಕ್ತಗಳಲ್ಲಿ (ಎಂದರೆ ೧ ಮತ್ತು ೩-೧೫ ಸೂಕ್ತಗಳಲ್ಲಿ) ಅಗ್ನಿಯನ್ನು ಸ್ತುತಿಸಿರುವನು ಈ ಸೂಕ್ತಗಳ ಮಧ್ಯದಲ್ಲಿ **ಜುಷಸ್ವ ನಃ** ಎಂಬ ೨ ನೇ ಸೂಕ್ತವು ಆಪ್ರೀಸೂಕ್ತವು.

161. **ಪ್ರಾಗ್ನಯೇ ತವಸೇ** ಎಂಬ ೫ ನೇ ಸೂಕ್ತದಲ್ಲಿಯೂ, **ಪ್ರ ಸಮ್ರಾಜಃ** ಎಂಬ ೬ ನೇ ಸೂಕ್ತದಲ್ಲಿಯೂ, **ಪ್ರಾಗ್ನಯೇ ವಿಶ್ವಶುಚೇ** ಎಂಬ ೩ ಋಕ್ಕುಗಳಿರುವ ೧೩ ನೇ ಸೂಕ್ತದಲ್ಲಿಯೂ ವೈಶ್ವಾನರಾಗ್ನಿಯನ್ನು ಸ್ತುತಿಸಲಾಗಿದೆ. **ತ್ವೇ ಹ ಯತ್** ಎಂಬ ೧೮ ನೇ ಸೂಕ್ತದಲ್ಲಿ ಇಂದ್ರನನ್ನು ಸ್ತುತಿಸಲಾಗಿದೆ.

32. Vasistha and his descendants. Deities of RV. vii. 1-32.

158, Vasistha and the Vasisthas thus (became) Brahmans in the office of Brahman priest, most worthy of fees in all rites at sacrifices.

159. Therefore one should honour with fees all such descendants of Vasistha who may at any time even to-day be present at a sacrificial assembly, so (says) a sacred text of the Bhallavins.

160. Now the seer, the son of Mitra-Varuna (ವಸಿಷ್ಠ), with the following sixteen hymns (beginning) 'Agni' (ಅಗ್ನಿಂ : vii. 1. 1) praised Agni; 'Enjoy our' (ಜುಷಸ್ವ ನಃ : vii. 2) here are Apri stanzas.

161. Then 'Forth to Agni' (ಪ್ರಾಗ್ನಯೇ : vii. 5), 'Forth of the sovereign lord' (ಪ್ರ ಸಮ್ರಾಜಃ : vii. 6), the second 'Forth to Agni' (ಪ್ರಾಗ್ನಯೇ : vii. 13) which consists of three stanzas—these are addressed to Visvanra. Then those which follow, (beginning) 'In these, indeed' (ತ್ವೇ ಹ : vii. 18), are addressed to Indra.

ದಶ ಪಂಚ ಚ ಸೂಕ್ತಾನಿ ನಿಪಾತೋ ಮರುತಾಂ ಸ್ತುತಿಃ ।
ನಕಿಃ ಸುದಾಸ ಇತ್ಯಸ್ಯಾಂ ದಾನಂ ಪೈಜವನಸ್ಯ ತು ॥ ೧೬೨ ॥
ವಸಿಷ್ಠೇನ ಚತುರ್ಭಿಸ್ತು ದ್ವೇ ನಪ್ತ್ರೇತಿ ಕೀರ್ತಿತಂ ।
ಸಂವಾದಂ ಸೂಕ್ತಮೈಂದ್ರಂ ವಾ ಶ್ವಿತ್ಯ್ಯಂಚಸ್ತು ಪ್ರಚಕ್ಷತೇ ॥ ೧೬೩ ॥
ವಸಿಷ್ಠಾಗಸ್ತ್ಯಯೋರತ್ರ ಕೀರ್ತ್ಯತೇ ತನಯೈಃ ಸಹ ।
ಇಂದ್ರೇಣ ಚೈವ ಸಂವಾದೋ ಮಹಿಮಾ ಜನ್ಮ ಕರ್ಮ ಚ ॥ ೧೬೪ ॥
ಪರಾಣಿ ಪ್ರೇತಿ ಚತ್ವಾರಿ ವೈಶ್ವದೇವಾನಿ ತತ್ರ ತು ।
ಸ್ತೌತ್ಯಜಾಬ್ಜಾಮಹಿಂ ತತ್ರ ಮಾ ನೋಽಹಿಂ ಬುಧ್ನ್ಯಮೇವ ಚ ॥ ೧೬೫ ॥

162. ೧೮-೩೨ ರ ವರೆಗಿನ ಹದಿನೈದು ಸೂಕ್ತಗಳಲ್ಲಿ ಮರುದ್ದೇವತೆಗಳನ್ನು ಸ್ತುತಿಸಲಾಗಿದೆ (ಈ ಸೂಕ್ತಗಳಿಗೆ ಇಂದ್ರನು ಮುಖ್ಯದೇವತೆಯು). ೩೨ ನೇ ಸೂಕ್ತದ **ನಕಿಃ ಸುದಾಸಃ** ಎಂಬ ೧೦ ನೇ ಋಕ್ಕಿನಲ್ಲಿ ಪಿಜವನ ಪುತ್ರನಾದ ಸುದಾಸನ ದಾನಪ್ರಶಂಸೆ ಇದೆ.

೩೩-೩೮ ನೇ ಸೂಕ್ತಗಳ ದೇವತೆಗಳು

163. ಮೇಲೆ ಹೇಳಿದ ಋಕ್ಕಿನಲ್ಲಲ್ಲದೆ ೧೮ ನೇ ಸೂಕ್ತದ **ದ್ವೇ ನಪ್ತ್ರಃ** ಎಂದು ಮೊದಲಾಗುವ ೪ ಋಕ್ಕುಗಳಲ್ಲಿಯೂ (೨೨-೨೫) ಸುದಾಸನ (ಪಿಜವನನ ಪುತ್ರ) ಪ್ರಶಂಸೆ ಇದೆ. **ಶ್ವಿತ್ಯ್ಯಂಚೋ ಮಾ** ಎಂಬ ೩೩ ನೇ ಸೂಕ್ತಕ್ಕೆ ಇಂದ್ರನು ದೇವತೆಯಾಗಿದ್ದರೂ ಈ ಸೂಕ್ತದಲ್ಲಿ ವಸಿಷ್ಠ, ವಸಿಷ್ಠಪುತ್ರರು ಮತ್ತು ಇಂದ್ರನಿಗೆ ನಡೆದ ಸಂಭಾಷಣೆ ಇರುವುದು.

164. ಈ ಸೂಕ್ತದಲ್ಲಿ ವಸಿಷ್ಠಾಗಸ್ತ್ಯರಿಗೂ ಅವರ ಪುತ್ರರಿಗೂ ಇಂದ್ರನಿಗೂ ನಡೆದ ಸಂಭಾಷಣೆ ಇದೆ. ಇಲ್ಲಿ ಅವರ ಮಹಿಮೆ, ಜನನ, ಕೆಲಸಕಾರ್ಯಗಳು ಇವೆಲ್ಲವೂ ಪ್ರಶಂಸಿಸಲ್ಪಟ್ಟಿವೆ.

165. **ಪ್ರ ಶುಕ್ರೈತು** ಎಂದು ಮೊದಲಾಗುವ ೪ ಸೂಕ್ತಗಳಿಗೆ (೩೪-೩೭) ವಿಶ್ವೇದೇವತೆಗಳು ದೇವತೆಯು; ಈ ಸೂಕ್ತದ **ಅಬ್ಜಾಮುಕ್ಥೈಃ** ಎಂಬ ೧೬ ನೇ ಋಕ್ಕಿನಲ್ಲಿ ಅಹಿಯೆಂಬ ಅಸುರನನ್ನೂ ಮುಂದಿನ **ಮಾನೋಽಹಿಃ** ಎಂಬ ೧೭ ನೇ ಋಕ್ಕಿನಲ್ಲಿ ಅಹಿರ್ಬುಧ್ನ್ಯನನ್ನೂ ಪ್ರಶಂಸಿಸಲಾಗಿದೆ.

---

162 being fifteen hymns (vii. 18-32): praise of the Maruts is incidental (in them). In the (stanza) 'No one Suda's (ನಕಿಃ ಸುದಾಸಃ : vii. 32-10) the gift of Paijavana (ಸುದಾಸ).

33. Deities of RV. vii. 33-38.

163. is proclaimed by Vasiṭhha, as well as in the four (stanzas) 'Two from the grandson' (ದ್ವೇ ನಪ್ತ್ರಃ : vii. 18. 22-25), 'White robed' (ಶ್ವಿತ್ಯ್ಯಂಚಃ : vii. 33) they pronounce to be a dialogue or a hymn addressed to Indra.

164. Here is proclaimed a dialogue of Vasistha and Agastya with their sons and also with Indra, and (their) greatness, birth, and action (are celebrated).

165. The following four (hymns) 'Forth' (ಪ್ರ : vii. 34-37) are addressed to the All-gods. There, however, the stanza 'Born in the waters' (ಅಬ್ಜಂ : vii. 34.16) praises the Dragon (ಅಹಿ), and there 'May us not' (ಮಾ ನಃ : vii. 34-17) praises the Dragon of the Deep (ಅಹಿರ್ಬುಧ್ನ್ಯ).

ಅಹಿರಾಹಂತಿ ಮೇಘಾನ್ಸ ಏತಿ ವಾ ತೇಷು ಮಧ್ಯಮಃ ।
ಯೋಽಹಿಃ ಸ ಬುಧ್ನೋ ಬುಧ್ನೇ ಹಿ ಸೋಽನ್ತರಿಕ್ಷೇಽಭಿಜಾಯತೇ ॥ ೧೬೬ ॥

ಉದು ಷ್ಯ ಸವಿತುಃ ಸೂಕ್ತಂ ಶಂ ನೋ ವಾಜಿನದೈವತಃ ।
ದ್ವ್ಯೃಚೋಽರ್ಧರ್ಚಶ್ಚ ಭಾಗೋಽತ್ರ ಭಗಮುಗ್ರ ಇತಿ ಶ್ರುತಿಃ ॥ ೧೬೭ ॥

ಪಾದಶ ಏವ ತತೀಯೋಽತ್ರ ಪಂಚಮ್ಯಾಮಹಿದೈವತಃ ।
ಯೆಥಾರ್ಧರ್ಚೋ ಭಗಮುಗ್ರಸ್ತಥಾ ನೂನಂ ಭಗೋಽಪಿ ಚ ॥ ೧೬೮ ॥

166. ಮೇಘಗಳನ್ನು ಪ್ರಹರಿಸುವುದರಿಂದ (ಆಹಂತಿ) ಇವನಿಗೆ ಅಹಿಯೆಂದು ಹೆಸರು ಅಥವಾ ಆ ಮೇಘಗಳ ಮಧ್ಯದಲ್ಲಿ ನುಗ್ಗಿಹೋಗುವುದರಿಂದ ಅಹಿ ಎಂಬ ಹೆಸರುಬಂದಿದೆ. ಆಳವಾದ ಅಥವಾ ವಿಸ್ತಾರವಾದ ಅಂತರಿಕ್ಷ ಪ್ರದೇಶದಲ್ಲಿ ಇವನ ಉತ್ಪತ್ತಿಯಾಗುವುದರಿಂದ ಅಹಿರ್ಬುಧ್ನ್ಯನಿಗೆ ಈ ಹೆಸರುಬಂದಿದೆ.

167. **ಉದು ಷ್ಯ ದೇವಃ** ಎಂಬ ೩೮ ನೇ ಸೂಕ್ತಕ್ಕೆ ಸವಿತೃವು ದೇವತೆಯು. ಆದರೆ ಈ ಸೂಕ್ತದ **ಶಂ ನೋ ಭವಂತು** ಎಂದು ಮೊದಲಾಗುವ ಎರಡು ಋಕ್ಕುಗಳಿಗೆ (೭-೮) ಅಶ್ವಗಳು ದೇವತೆಯು. ೬ ನೇ ಋಕ್ಕಿನ **ಭಗಮುಗ್ರಃ** ಎಂಬ ಉತ್ತರಾರ್ಧಕ್ಕೆ ಭಗನು ದೇವತೆಯೆಂದು ಶ್ರುತಿವಾಕ್ಯವು ಹೇಳುವುದು.

168. ಈ ೩೮ ನೇ ಸೂಕ್ತದ ೫ ನೇ ಋಕ್ಕಿನ ಮೂರನೆಯ ಪಾದಕ್ಕೆ ಅಹಿಯು ದೇವತೆಯು; ಹಿಂದೆ ೬ ನೇ ಋಕ್ಕಿನ ಉತ್ತರಾರ್ಧಕ್ಕೆ (ಭಗಮುಗ್ರಃ) ಭಗನು ದೇವತೆಯಾಗಿರುವಂತೆಯೇ ಈ ಸೂಕ್ತದ ಮೊದಲನೆಯ ಋಕ್ಕಿನ **ನೂನಂ ಭಗಃ** ಎಂಬ ಉತ್ತರಾರ್ಧಕ್ಕೂ ಭಗನೇ ದೇವತೆಯು.

---

166. The Dragon (ಅಹಿ) strikes (ಆಹಂತಿ) the clouds, or he goes in the midst among them. The Dragon is of the deep (ಬುಧ್ನ್ಯ), for he is born in the deep (ಬುಧ್ನ), the air.

167. 'On high that' (ಉದು ಷ್ಯ ಸವಿತುಃ : vii. 38) is a hymn of Savitr, Here the couplet 'Blessed for us' (ಶಂ ನಃ : vii. 38. 7-8) has steeds as its divinities, and the hemistich 'On Bhaga the mighty' (ಭಗಮುಗ್ರಃ : vii. 38. 6) is addressed to Bhaga, so a sacred text (states).

34. Deities of RV. vii. 38-43.

168. And the third verse in the fifth (stanza) here (vii. 38. 5) has the Dragon for its divinity.

As the hemisttch 'On Bhaga the mighty' (ಭಗಮುಗ್ರಃ : vii. 38. 6) so also is 'Now Bhaga' (ನೂನಂ ಭಗ : vii. 38. 1) :

ಸ ಹಿ ರತ್ನಾನಿ ಸವಿತಾ ಸುವಾತೀತಿ ಭಗಃ ಸ ವಾ ।
ವೈಶ್ವದೇವಾನಿ ಪಂಚೋರ್ಧ್ವಃ ಪಂಚರ್ಕೋ ಭಗದೈವತಃ ॥ ೧೬೯ ॥
ಪ್ರಾತರ್ಜಿತಮುಷಸ್ಯಾಂತ್ಯಾ ದ್ರಷ್ಟೃಭ್ಯೋಽಕ್ತಾಶಿರೇವ ವಾ ।
ಏಕೇ ತು ಪ್ರಾತರಿತ್ಯಸ್ಯಾಂ ಭಗಮೇವ ಪ್ರಚಕ್ಷತೇ ॥ ೧೭೦ ॥
ಆದಾವಂತೇ ತು ಋಷಯಃ ಕೀರ್ತಯಂತಿ ಪ್ರಸಂಗತಃ ।
ಸೂಕ್ತೇಽಸ್ಮಿನ್ದೇವತಾಸ್ತ್ವನ್ಯಾ ಅನ್ಯಾಸ್ತತ್ರ ಭವಂತಿ ಚ ॥ ೧೭೧ ॥

೩೯-೪೩ ಸೂಕ್ತದ ದೇವತೆಗಳು

169-170. ೫ ನೇ ಮಂಡಲದ ೮೨ ನೇ ಸೂಕ್ತದ **ಸ ಹಿ ರತ್ನಾನಿ** ಎಂಬ ೩ ನೇ ಋಕ್ಕಿನಲ್ಲಿ ಹೇಳಲ್ಪಟ್ಟಂತೆ ಭಗನನ್ನೇ ಸವಿತೃದೇವನೆಂದು ಹೇಳಬಹುದು. **ಊರ್ಧ್ವೋ ಅಗ್ನಿಃ** ಎಂದು ಪ್ರಾರಂಭವಾಗುವ ಮುಂದಿನ ೫ ಸೂಕ್ತಗಳಿಗೆ (೩೯-೪೩) ವಿಶ್ವೇದೇವತೆಗಳು ದೇವತೆಯು. ಅವುಗಳಲ್ಲಿ ಎಂದರೆ **ಪ್ರಾತರ್ಜಿತಂ** ಎಂದು ಮೊದಲಾಗುವ ೪೧ ನೇ ಸೂಕ್ತದ ೫ ಋಕ್ಕುಗಳಲ್ಲಿ (೨-೬) ಭಗನನ್ನು ಸ್ತುತಿಸಲಾಗಿದೆ ಈ ೪೧ ನೇ ಸೂಕ್ತದ ಕೊನೆಯ ಎಂದರೆ ೭ ನೆಯ ಋಕ್ಕಿಗೆ ಉಷಸ್ಸು ದೇವತೆಯು ಅಥವಾ ಈ ಕೊನೆಯ ಋಕ್ಕಿನಲ್ಲಿ ಸೂಕ್ತದ್ರಷ್ಟೃಗಳಾದ ಋಷಿಗಳಿಗೆ ಮಂಗಳವನ್ನು (**ಆಶೀಃ**) ಕೋರಲಾಗಿದೆ. ಕೆಲವರು **ಪ್ರಾತರಗ್ನಿಂ** ಎಂಬ ಈ ೪೨ ನೇ ಸೂಕ್ತಕ್ಕೆ ಭಗನೊಬ್ಬನೇ ದೇವತೆಯೆಂದು ಹೇಳುವರು.

171. ಸೂಕ್ತದ್ರಷ್ಟೃಗಳಾದ ಋಷಿಗಳು ಸೂಕ್ತದ ಪ್ರಾರಂಭದಲ್ಲಿಯೂ, ಕೊನೆಯಲ್ಲಿಯೂ ಕೆಲವು ದೇವತೆಗಳನ್ನು ಪ್ರಾಸಂಗಿಕವಾಗಿ ಸ್ತುತಿಸುತ್ತಾರೆ. ಹೇಗೆಂದರೆ—ಭಗದೇವತಾಕವಾದ ಈ ೪೧ ನೇ ಸೂಕ್ತದ ಪ್ರಾರಂಭದ ಋಕ್ಕಿನಲ್ಲಿ ಅಗ್ನಿ, ಇಂದ್ರ, ಮಿತ್ರಾವರುಣಾ, ಅಶ್ವಿನಾ, ಪೂಷಾ, ಬ್ರಹ್ಮಣಸ್ಪತಿ, ಸೋಮ, ರುದ್ರ ಎಂಬ ಇತರ ದೇವತೆಗಳ ಪ್ರಶಂಸೆ ಇದೆ. ಹಾಗೆಯೇ ಕೊನೆಯ ಋಕ್ಕಿನಲ್ಲಿ ಉಷೋದೇವತೆಯ ಪ್ರಶಂಸೆ ಇದೆ. ಇನ್ನೆಲ್ಲರನ್ನೂ ಇಲ್ಲಿ ಪ್ರಾಸಂಗಿಕವಾಗಿ ಸ್ತುತಿಸಲಾಗಿರುವುದೆಂದು ತಿಳಿಯಬೇಕು.

169. According to (the stanza) 'May that Savitr produce treasures' (ಸ ಹಿ ರತ್ನಾನಿ RV. v. 82. 3), he (Savitr) may (ವಾ) be (regarded as) Bhag.

'Upright' (ಊರ್ಧ್ವಃ ; vii. 39-1) is (the first of) five (hymns) addressed to the All-gods (vii. 39-43). Bhaga is the divinity of the five stanzas.

170. (beginning) 'Winning at morn' (ಪ್ರಾತರ್ಜಿತಂ : vii. 41. 2-6). The last (stanza) is addressed to Dawn (vii. 41.7), or else a prayer for the seers (ದ್ರಷ್ಟೃ) is here (expressed). Some, however, pronounce Bhaga only to be (the deity) in the (stanza) 'At morn' (ಪ್ರಾತಃ : vii. 41. 1)

171. Now the seers at the beginning and end (of hymns) proclaim (deities) in an occasional manner (ಪ್ರಸಂಗತಃ) : (thus) in the hymn there are some deities (here) and others (there) in that place (ತತ್ರ).

ಸಾಲೋಕ್ಯಾತ್ಸಾಹಚರ್ಯಾದ್ವಾ ಸಂಸ್ತವಾದಥವಾ ಪುನಃ ॥
ಗಣಸ್ಥಾನಾದ್ಭಕ್ತಿತೋ ವಾ ಕೀರ್ತ್ಯಂತೇऽನ್ಯಾಸ್ತು ದೇವತಾಃ ॥ ೧೭೨ ॥

ದಾಧಿಕ್ರಮಥ ಸಾವಿತ್ರಂ ರೌದ್ರಮಿತ್ಯನುಪೂರ್ವಶಃ ।
ದಾಧಿಕ್ರೇ ಪ್ರಥಮಾಯಾಸ್ತು ದೇವತಾಃ ಪರಿಕೀರ್ತಿತಾಃ ॥ ೧೭೩ ॥

ತಾ ಜ್ಞೇಯಾ ಆಪ ಆಪ್ಯಂ ಸ್ಯಾದಾರ್ಭವಃ ಪ್ರಥಮಸ್ತ್ರ್ಯಚಃ ।

172. ಸೂಕ್ತದ ಮುಖ್ಯದೇವತೆಯನ್ನಲ್ಲದೆ ಇತರ ದೇವತೆಗಳನ್ನು ಸೂಕ್ತದಲ್ಲಿ ಸ್ತುತಿಸುವ ಸಂದರ್ಭಗಳು ಕೆಲವಿವೆ—ಸ್ತುತರಾಗುವ ಇತರ ದೇವತೆಗಳು ಮುಖ್ಯದೇವತೆಯ ಸ್ಥಾನಕ್ಕೆ (ಪೃಥಿವ್ಯಂತರಿಕ್ಷಸ್ವರ್ಗಗಳೆಂಬ ಮೂರು ಸ್ಥಾನಗಳಲ್ಲಿ ಮುಖ್ಯದೇವತೆಯ ಸ್ಥಾನಕ್ಕೆ) ಸೇರಿದ್ದರೂ, ಅಥವಾ ಮುಖ್ಯದೇವತೆಯೊಡನೆ ಆ ಇತರ ದೇವತೆಗಳಿಗೆ ಸಾಹಚರ್ಯವಿದ್ದರೂ, ಅಥವಾ ಮುಖ್ಯದೇವತೆಯೊಡನೆ ಸಂಸ್ತವಿಕವಾಗಿ (ಜತೆಯಲ್ಲಿ ಅಥವಾ ಒಟ್ಟಿಗೆ ಸೇರಿಸಿ—ಇಂದ್ರಾಗ್ನೀ, ಇಂದ್ರಾವಿಷ್ಣೂ ಇತ್ಯಾದಿ) ಸ್ತುತಿಸಿದ್ದರೂ, ಅಥವಾ ಮುಖ್ಯದೇವತೆಯ ಗಣಕ್ಕೆ ಅಥವಾ ಸಮೂಹಕ್ಕೆ ಸೇರಿದ್ದರೂ (ಗಣವೆಂದರೆ ಗುಂಪು—ಮರುದ್ಗಣಗಳು, ವಿಶ್ವೇದೇವತೆಗಳ ಗುಂಪು, ವಸುಗಳು, ರುದ್ರರು, ಆದಿತ್ಯರು ಇವರುಗಳ ಗುಂಪು ಇತ್ಯಾದಿ) ಅಥವಾ ಭಕ್ತಿಪರವಶತೆಯಿಂದಲೂ ಋಷಿಯು ಮೇಲೆ ಹೇಳಿದ ಸಂದರ್ಭಗಳಲ್ಲಿ ಇತರ ದೇವತೆಗಳನ್ನು (ಪ್ರಸಂಗವಶದಿಂದ) ಸ್ತುತಿಸಬಹುದು.

೪೪-೪೯ನೇ ಸೂಕ್ತದ ದೇವತೆಗಳು

173. ಮುಂದಿನ **ದಧಿಕ್ರಾಂ ವಃ** ಎಂಬ ೪೪ನೇ ಸೂಕ್ತಕ್ಕೆ ದಧಿಕ್ರನು ದೇವತೆಯು. ಅದರ ಮುಂದಿನ **ಆ ದೇವಃ** ಎಂಬ ೪೫ನೇ ಸೂಕ್ತಕ್ಕೆ ಸವಿತೃವೂ ಅದರ ಮುಂದಿನ **ಇಮಾ ರುದ್ರಾಯ** ಎಂಬ ೪೬ನೇ ಸೂಕ್ತಕ್ಕೆ ರುದ್ರನೂ ಕ್ರಮವಾಗಿ ದೇವತೆಗಳು. ಆದರೆ ೪೪ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ಇತರ ದೇವತೆಗಳ ಪ್ರಶಂಸೆಯೂ ಇರುವುದು. ಅವರು ಯಾರೆಂದರೆ—ಅಶ್ವಿನೀದೇವತೆಗಳು, ಉಷೋದೇವತೆ, ಅಗ್ನಿ, ಭಗ, ಇಂದ್ರ, ವಿಷ್ಣು, ಪೂಷಾ, ಬ್ರಹ್ಮಣಸ್ಪತಿ, ಆದಿತ್ಯ, ದ್ಯಾವಾಪೃಥಿವೀ, ಆಪಃ ಎಂಬ ದೇವತೆಗಳ ಪ್ರಶಂಸೆಯಿದೆಯೆಂದು ತಿಳಿಯಬೇಕು.

174. **ಆಪೋ ಯಂ ವಃ** ಎಂಬ ೪೭ನೇ ಸೂಕ್ತಕ್ಕೆ **ಆಪಃ** (ಉದಕಗಳು) ಎಂಬುದು ದೇವತೆಯು.

---

172. Other deities are proclaimed because they belong to the same world or because they are associated, or else again because they share praise (ಸಂಸ್ತವಾತ್), because of the sphere of (their accompanying) troop (ಗಣ), or because of a (common) attribute (ಭಕ್ತಿತಃ).

35. Deities of RV. vii. 44-49.

173. Next (come) one (hymn) addressed to Dadhikra (vii. 44), one to Savitr (vii. 45), one to Rudra (vii, 46) in succession. But the deities proclaimed as belonging to the first (stanza) of (the hymn) addressed to Dadhikra (vii. 44. 1)

174. may be recognised. 'O Waters' (ಆಪಃ: vii. 47) should be (regarded as) addressed to the waters. The first triplet (of the next hymn)

ಉತ್ತಮಾ ವೈಶ್ವದೇವೀ ವಾ ಆರ್ಭವೀ ವಾ ನಿಗದ್ಯತೇ ॥ ೧೭೪ ॥

ವೈಶ್ವದೇವೇ ತಥಾ ಶಸ್ತ್ರೇ ಆರ್ಭವಂ ಶಸ್ಯತೇ ಹಿ ತತ್ ।
ದಶಮೇಽಹ್ನಿ ಸಮಸ್ತಂ ಸಮುದ್ರಜ್ಯೇಷ್ಠಾ ಅಪಾಂ ಸ್ತುತಿಃ ॥ ೧೭೫ ॥

ಸಮುದ್ರಜ್ಯೇಷ್ಠಾ ಅಪಾಂ ಸ್ತುತಿಃ ॥

॥ **ಇತಿ ಬೃಹದ್ದೇವತಾಯಾಂ ಪಂಚಮೋಽಧ್ಯಾಯಃ** ॥

ಮುಂದಿನ ಸೂಕ್ತದ (೪೮) ಮೊದಲ ಮೂರು ಋಕ್ಕುಗಳಿಗೆ (೧-೩) ಋಭುಗಳು ದೇವತೆಯು. ಕೊನೆಯ ೪ ನೇ ಋಕ್ಕಿಗೆ ವಿಶ್ವೇದೇವತೆಗಳಾಗಲಿ, ಋಭುಗಳಾಗಲಿ ದೇವತೆಯಾಗಬಹುದು.

175. ಅಥವಾ ಋಭುದೇವತಾಕವಾದ ಈ ೪೮ ನೇ ಸೂಕ್ತವು ಪೂರ್ತಿಯಾಗಿ ಯಜ್ಞದ ಹತ್ತನೇ ದಿವಸ ಪಠಿಸಲ್ಪಡುವ ವೈಶ್ವದೇವಶಸ್ತ್ರಮಂತ್ರಗಳಿಗಾಗಿ ಪಠಿಸಲ್ಪಡುವುದು ಪ್ರಸಿದ್ಧವಾಗಿಯೇ ಇದೆ. **ಸಮುದ್ರಜ್ಯೇಷ್ಠಾ** ಎಂಬ ೪೯ ನೇ ಸೂಕ್ತವು ಉದಕಗಳನ್ನು (**ಅಪಾಂ ಸ್ತುತಿಃ**) ಸ್ತುತಿಸುವುದು.

ಇಲ್ಲಿಗೆ ಐದನೆಯ ಅಧ್ಯಾಯವು ಸಮಾಪ್ತವಾದುದು.

is addressed to the Rbhus (vii. 48. 1-3). The last (stanza : vii 48. 4) is pronounced to be addressed either to the All-gods or to the Rbhus.

175. For it is thus that this entire (hymn) addressed to the Rbhns is chanted on the tenth day in the litany to the All-gods. 'Whose chief the sea' (**ಸಮುದ್ರಜ್ಯೇಷ್ಠಾಃ** : vii. 49) is (in) praise of the Waters

Thus ends 5th Chapter.

ಅಥ ಬೃಹದ್ದೇವತಾಯಾಂ ಷಷ್ಠೋಽಧ್ಯಾಯಃ

ಆ ಮಾಮಿತಿ ತು ಸೂಕ್ತೇನ ಪ್ರತ್ಯೃಚಂ ದೇವತಾಃ ಸ್ತುತಾಃ ।
ಮಿತ್ರಾವರುಣಾವಗ್ನಿಶ್ಚ ದೇವಾ ನದ್ಯಸ್ತಥೈವ ಚ ॥ ೧ ॥

ತ್ರಿಚಾವಾದಿತ್ಯದೇವತ್ಯೌ ರೋದಸ್ಯೋಃ ಪ್ರೇತಿ ಯಸ್ತ್ರಿಚಃ ।
ವಾಸ್ತೋಷ್ಪತ್ಯಾಶ್ಚತಸ್ರಸ್ತು ಸಪ್ತ ಪ್ರಸ್ವಾಪಿನ್ಯಃ ಸ್ಮೃತಾಃ ॥ ೨ ॥

ಆರನೆಯ ಅಧ್ಯಾಯವು.

೭ ನೇ ಮಂಡಲದಲ್ಲಿ ೫೦-೬೬ ಸೂಕ್ತಗಳ ದೇವತೆಗಳು

1. **ಆ ಮಾಂ** ಎಂಬ ೫೦ ನೇ ಸೂಕ್ತದಲ್ಲಿ ಒಂದೊಂದು ಋಕ್ಕಿನಲ್ಲಿ ಒಬ್ಬೊಬ್ಬ ದೇವತೆಯನ್ನು ಸ್ತುತಿಸ ಲಾಗಿದೆ. ಹೇಗೆಂದರೆ—೧ ನೇ ಋಕ್ಕಿನಲ್ಲಿ ಮಿತ್ರಾವರುಣರನ್ನೂ ೨ ನೇ ಋಕ್ಕಿನಲ್ಲಿ ಅಗ್ನಿಯನ್ನೂ, ೩ ನೇ ಋಕ್ಕಿನಲ್ಲಿ ವಿಶ್ವೇದೇವತೆಗಳನ್ನೂ ೪ ನೇ ಋಕ್ಕಿನಲ್ಲಿ ನದಿಗಳನ್ನೂ ಸ್ತುತಿಸಲಾಗಿದೆ.

2. ಮೂರು ಮೂರು ಋಕ್ಕುಗಳಿರುವ **ಆದಿತ್ಯಾನಾಂ** ಮತ್ತು **ಆದಿತ್ಯಾಸಃ** ಎಂಬ ೫೧, ೫೨ ನೇ ಸೂಕ್ತಗಳಿಗೆ ಆದಿತ್ಯರು ದೇವತೆಗಳು. ಅದರಂತೆ ಮೂರು ಋಕ್ಕುಗಳುಳ್ಳ **ಪ್ರ ದ್ಯಾವಾ** ಎಂಬ ೫೩ ನೇ ಸೂಕ್ತಕ್ಕೆ ದ್ಯಾವಾಪೃಥಿವಿ ಗಳೂ, **ವಾಸ್ತೋಷ್ಪತೇ** ಎಂಬ ೫೪ ನೇ ಸೂಕ್ತಕ್ಕೂ, ೫೫ ನೇ ಸೂಕ್ತದ ಮೊದಲನೆಯ ಋಕ್ಕಿಗೂ ಒಟ್ಟು ೪ ಋಕ್ಕು ಗಳಿಗೆ **ವಾಸ್ತೋಷ್ಪತಿಯು** ದೇವತೆಯು. ಅದರ ಮುಂದಿನ ಎಂದರೆ ೫೫ ನೇ ಸೂಕ್ತದ ೨-೮ ರವರೆಗಿನ ೭ ಋಕ್ಕುಗಳು **ಪ್ರಸ್ವಾಪಿನೀ** ಮಂತ್ರಗಳೆಂದು ಪ್ರಸಿದ್ಧವಾಗಿವೆ. (ಈ ೭ ಋಕ್ಕುಗಳಿಗೆ ಇಂದ್ರನೇ ಮುಖ್ಯದೇವತೆಯೆಂದು ಅನುಕ್ರಮಣಿಕೆಯಲ್ಲಿದೆ).

1. Deities of RV. vii. 50-66.

1. Now with the hymn 'Gaurd me' (**ಆ ಮಾಂ**: vii. 50) the deities are praised in successive stanzas:

Mitra-Varuna (1), and Agni (2), the (All)-gods (3), as well as the Rivers (4).

2. Two triplets (vii. 51, 52) have the Adityas for their deities. The triplet which (begins) 'Forth' (**ಪ್ರ**: vii. 53. 1-3) is to the Two Worlds (**ರೋದಸೀ**) There are (then) four (stanzas: vii. 54. 1-3, 55, 1) addressed to Vastospati: the seven following: (vii. 55. 2-8) are traditionally held to be lullably stanzas.

ಪರಂ ಚತ್ವಾರಿ ಸೂಕ್ತಾನಿ ಮಾರುತಾನಿ ಕ ಈಮಿತಿ ।
ತೇಷಾಂ ತು ಪಿತರಂ ದೇವಂ ತ್ರ್ಯಂಬಕಂ ಸ್ತೌತ್ಯೃಗುತ್ತಮಾ ॥ ೩ ॥

ಸ್ತುತೌ ತು ಮಿತ್ರಾವರುಣೌ ಸೂಕ್ತ್ಯೌರ್ಯದಿತಿ ಸಪ್ತಭಿಃ ।
ಅಶ್ವಿನೌ ತು ಪರೈರ್ದೇವಾವಷ್ಟಭಿಃ ಪ್ರತಿ ವಾಮಿತಿ ॥ ೪ ॥

ಯದದ್ಯೈಕೋತ್ಸೂರ್ಯಸ್ತಿಸ್ರ ಉದ್ವೇತೀತ್ಯರ್ಧಪಂಚಮಾಃ ।
ಸೌರ್ಯಸ್ತಚ್ಚಕ್ಷುರಿತಿ ತು ಗೀಯತೇ ಚಕ್ಷುರ್ದೇವತಾ ॥ ೫ ॥

ಆದಿತ್ಯಾನಾಂ ತದ್ವೋ ಅದ್ಯ ದ್ವೇ ಋಚೌ ಶೌನಕೋऽಬ್ರವೀತ್ ।

3. ಮುಂದಿನ **ಕ ಈಂ ವ್ಯಕ್ತಾ** ಎಂದು ಪ್ರಾರಂಭವಾಗುವ ೪ ಸೂಕ್ತಗಳಲ್ಲಿ (೫೬–೫೯) ಮರುದ್ದೇವತೆಗಳನ್ನು ಸ್ತುತಿಸಲಾಗಿದೆ. ಈ ೪ ಸೂಕ್ತಗಳಲ್ಲಿ ಕೊನೆಯ ೫೯ ನೇ ಸೂಕ್ತದ ಕೊನೆಯ ೧೨ ನೆಯ ಋಕ್ಕಿನಲ್ಲಿ ದೇವತೆಗಳಿಗೆ ಪಿತೃವೆಂದು ಹೇಳಲ್ಪಡುವ ತ್ರ್ಯಂಬಕದೇವನನ್ನು ಸ್ತುತಿಸಲಾಗಿದೆ.

೬೦–೬೪ ಸೂಕ್ತಗಳ ದೇವತೆಗಳು

4. ಮುಂದಿನ **ಯದದ್ಯ** ಎಂದು ಪ್ರಾರಂಭವಾಗುವ ೭ ಸೂಕ್ತಗಳಲ್ಲಿ (೬೦–೬೬) ಮಿತ್ರಾವರುಣರನ್ನು ಸ್ತುತಿಸಲಾಗಿದೆ. ಅದರ ಮುಂದಿನ **ಪ್ರತಿ ವಾಂ** ಎಂದು ಪ್ರಾರಂಭವಾಗುವ ೮ ಸೂಕ್ತಗಳಲ್ಲಿ (೬೭–೭೪) ಅಶ್ವಿನೀ ದೇವತೆಗಳನ್ನು ಸ್ತುತಿಸಲಾಗಿದೆ.

5. ಆದರೆ **ಯದದ್ಯ** ಎಂಬ ೬೦ ನೇ ಸೂಕ್ತದ **ಯದದ್ಯ** ಎಂಬ ೧ ಋಕ್ಕಿನಲ್ಲಿಯೂ, **ಉತ್ಸೂರ್ಯಃ** ಎಂಬ ೬೨ ನೇ ಸೂಕ್ತದ ೧-೩ ಋಕ್ಕುಗಳಲ್ಲಿಯೂ, **ಉದ್ವೇತಿ** ಎಂಬ ೬೩ ನೇ ಸೂಕ್ತದ ಮೊದಲ ೪ ಋಕ್ಕುಗಳಲ್ಲಿಯೂ ಮತ್ತು ೫ ನೇ ಋಕ್ಕಿನ ಪೂರ್ವಾರ್ಧದಲ್ಲಿಯೂ ಸೂರ್ಯನನ್ನು ಸ್ತುತಿಸಲಾಗಿದೆ; ೬೬ ನೇ ಸೂಕ್ತದ **ತಚ್ಚಕ್ಷುಃ** ಎಂಬ ೧೬ ನೇ ಋಕ್ಕಿನಲ್ಲಿ ಸೂರ್ಯನ ಚಕ್ಷುಸ್ಸನ್ನೇ (**ತಚ್ಚಕ್ಷುಃ**) ದೇವತೆಯೆಂದು ಭಾವಿಸಿ ಸ್ತುತಿಸಲಾಗಿದೆ.

6. ೬೬ ನೇ ಸೂಕ್ತದಲ್ಲಿ **ತದ್ವೋ ಅದ್ಯ** ಎಂದು ಮೊದಲಾಗುವ ಎರಡು ಋಕ್ಕುಗಳಿಗೆ (೧೨–೧೩) ಆದಿತ್ಯರು

---

3. After this there are four hymns addressed to the Maruts (beginning) Who, pray ? ' (**ಕ ಈಂ** : vii. 56-59) ; the last stanza of these (vii. 59. 12) praises Trayambaka, the divine father.

4. With the seven hymns heginning ' When ' (**ಯತ್** : vii. 60-66) Mitra-Varuna are praised ; but with the followsng eight (beginning) ' To meet your ' (**ಪ್ರತಿ ವಾಂ** : vii. 67-74) the divine Asvins.

5. (In) ' When to-day (**ಯದದ್ಯ** : vii. 60) one (1), Aloft the sun ' (**ಉತ್ಸೂರ್ಯಃ** : vii. 62) three (1-3), (in) Aloft he goes ' (**ಉದ್ವೇತಿ** : vii. 63) four and a half (1-5) are addressed to Surya, while (in) ' That eye ' (**ತಚ್ಚಕ್ಷುಃ** : vii. 66-16) the eye (of the sun) is sung as the deity.

2. Deities of RV. vii. 66-85.

6. Saunaka has stated that the two stanzas ' Thus of you to-day ' **ತದ್ವೋ ಅದ್ಯ** : vii. 66-12, 13) belong to the Adityas, while all the other stanzas,

ಅನ್ಯಾಃ ಸರ್ವಾ ಋಚಃ ಸೌರ್ಯಾ ಯದದ್ಯಾದ್ಯಾಃ ಪ್ರಕೀರ್ತಿತಾಃ ॥ ೬ ॥

ಇಮೇ ಚೇತಾರ ಇತ್ಯಾದ್ಯಾಃ .... ।
ಆರ್ಯಮ್ಣೋ ವರುಣಸ್ಯಾಪಿ ಮಿತ್ರಸ್ಯೈತಾ ನವ ಸ್ಮೃತಾಃ ॥ ೭ ॥

ಯದದ್ಯ ಸೂರ ಇತ್ಯಾದ್ಯಾ ದಶಾದಿತ್ಯಾ ಋಚಃ ಸ್ಮೃತಾಃ ।
ಸವಿತಾ ವಾದಿತಿರ್ಮಿತ್ರೋ ವರುಣಶ್ಚಾರ್ಯಮಾ ಭಗಃ ॥ ೮ ॥

ಸ್ತುತಾ ಉದು ತ್ಯದಿತ್ಯೇತಾಸ್ತಿಸ್ರಃ ಸೌರ್ಯಸ್ತತಃ ಪರಾಃ ।
ತಚ್ಚಕ್ಷುರಿತ್ಯೇತಾಮಾಚಾರ್ಯಃ ಶೌನಕೋಽಬ್ರವೀತ್ ॥ ೯ ॥

ದೇವತೆಯೆಂದೂ ಉಳಿದ ಋಕ್ಕುಗಳಿಗೆ ಎಂದರೆ **ಯದದ್ಯ** ಎಂದು ಪ್ರಾರಂಭವಾಗುವ ೪ ಋಕ್ಕುಗಳಿಗೂ (೪-೧೧) ಸೂಕ್ತದ ಇತರ ಋಕ್ಕುಗಳಿಗೂ ಸೂರ್ಯನು ದೇವತೆಯೆಂದೂ ಶೌನಕರ ನುತವು.

7. ೬೦ ನೇ ಸೂಕ್ತದಲ್ಲಿ **ಇಮೇ ಚೇತಾರಃ** ಎಂಬ ೫ ನೇ ಋಕ್ಕಿಗೂ ಅದರ ಮುಂದಿನ ಸೂಕ್ತದ ಕೊನೆಯ ವರೆಗಿನ ಋಕ್ಕುಗಳಿಗೂ ಒಟ್ಟು ೯ ಋಕ್ಕುಗಳಿಗೆ ಮಿತ್ರ, ವರುಣ, ಅರ್ಯಮಾ ಎಂಬುವರು ದೇವತೆಗಳೆಂದು ಹೇಳಲ್ಪಡುವರು.

8. ೬೬ ನೇ ಸೂಕ್ತದಲ್ಲಿ **ಯದದ್ಯ ಸೂರ್ಯ** ಎಂಬ ೪ ನೇ ಋಕ್ಕಿನಿಂದ ಮುಂದಿನ ೧೦ ಋಕ್ಕುಗಳಿಗೆ (೪-೧೩) ಆದಿತ್ಯರು ದೇವತೆಗಳೆಂದು ಹೇಳಲ್ಪಡುವುರು. ಅಥವಾ ಈ ೧೦ ಋಕ್ಕುಗಳಲ್ಲಿ ಸವಿತೃ, ಅದಿತಿ, ಮಿತ್ರ, ವರುಣ, ಅರ್ಯಮಾ, ಭಗ ಎಂಬ ದೇವತೆಗಳು,

9. ಸ್ತುತಿಸಲ್ಪಟ್ಟಿರುವರೆಂದು ಹೇಳಬಹುದು. ಆವರ ಮುಂದಿನ **ಉದು ತ್ಯತ್** ಎಂದು ಮೊದಲಾಗುವ ಮೂರು ಋಕ್ಕುಗಳಿಗೆ (೬೬ ನೇ ಸೂಕ್ತದ ೧೪-೧೬ ಋಕ್ಕುಗಳು) ಸೂರ್ಯನೇ ದೇವತೆಯು. **ತಚ್ಚಕ್ಷುಃ** ಎಂಬ ೧೬ ನೇ ಋಕ್ಕಿನಲ್ಲಿ ಪ್ರಾರ್ಥನೆಯು ಮಾತ್ರ ಉಕ್ತವಾಗಿದೆಯೆಂದು ಶೌನಕರು ಹೇಳುವರು.

When to-day ' ಯದದ್ಯ : vii. 66. 4 11) and the rest, are, proclaimed (by him) to be addressed to Surya.

7. ' These chastisers ' (ಇಮೇ ಚೇತಾರಃ : vii. 60-5) and the rest, these nine are traditinally held to belong to Aryaman, Mitra and Varuna.

8. The ten stanzas beginning 'When to-day the sun's (ಯದದ್ಯ ಸೂರಃ : vii. 66. 4-13) are traditionally held to be addressed to the Adityas : or else Savitr, Aditi, Mitra, Varuna, Aryamau, Bhaga

9. are praised. The three stanzas which then follow, ' Aloft that ' (**ಉದು ತ್ಯತ್** : vii. 66. 14-16), are addressed to Surya. The teacher Saunaka has stated the stanza ' That eye ' (**ತಚ್ಚಕ್ಷುಃ** : vii. 66. 16) to be a prayer.

ಉಷಾಸ್ತು ಸಪ್ತಭಿರ್ವ್ಯಷಾಃ ಸೂಕ್ತಾನ್ಯೇಭ್ಯಃ ಪರಾಣಿ ತು ।
ಚತ್ವಾರೀಂದ್ರಾವರುಣೇತಿ ಇಂದ್ರಾವರುಣಯೋಃ ಸ್ತುತಿಃ ॥ ೧೦ ॥
ಉದು ಜ್ಯೋತಿರಿತಿ ತ್ವಸ್ಮಿನ್ನರ್ಧರ್ಚೇ ಮಧ್ಯಮಃ ಸ್ತುತಃ ।
ವರುಣಸ್ಯ ಗೃಹಾನ್ಪ್ರಾತರ್ವಸಿಷ್ಠಃ ಸ್ವಪ್ನೆ ಆಚರತ್ ॥ ೧೧ ॥
ಪ್ರಾವಿವೇಶಾಥ ತಂ ತತ್ರ ಶ್ವಾ ನದನ್ನಭ್ಯಧಾವತ ।
ಕ್ರಂದಂತಂ ಸಾರಮೇಯಂ ಸ ಧಾವಂತಂ ದಷ್ಟುಮುದ್ಯತಂ ॥ ೧೨ ॥
ಯದದ್ಯುನೇತಿ ಚ ದ್ವಾಭ್ಯಾಂ ಸ್ವಾಂತಯಿತ್ವಾ ವ್ಯಸುಷ್ವಪತ್ ।
ಸ ತಂ ಪ್ರಸ್ನಾಪಯಾಮಾಸ ಜನಮನ್ಯಂ ಚ ವಾರುಣಂ ॥ ೧೩ ॥

೭೫-೮೫ ಸೂಕ್ತಗಳ ದೇವತೆಗಳು

10. **ವ್ಯುಷಾ** ಎಂದು ಮೊದಲಾಗುವ ಮುಂದಿನ ೭ ಸೂಕ್ತಗಳಲ್ಲಿ (೭೫-೮೧) ಉಷೋದೇವತೆಯನ್ನು ಸ್ತುತಿಸಲಾಗಿದೆ ಮುಂದಿನ **ಇಂದ್ರಾವರುಣಾ** ಎಂದು ಪ್ರಾರಂಭವಾಗುವ ೪ ಸೂಕ್ತಗಳಲ್ಲಿ (೮೨-೮೫) ಇಂದ್ರಾವರುಣರನ್ನು ಸ್ತುತಿಸಲಾಗಿದೆ.

೭೬-೮೯ ಸೂಕ್ತಗಳ ದೇವತೆಗಳು; ವಸಿಷ್ಠ ಮತ್ತು ವರುಣನ ನಾಯಿಯು

11. **ಉದು ಜ್ಯೋತಿಃ** ಎಂದು ೭೬ನೇ ಸೂಕ್ತದ ಮೊದಲನೇ ಋಕ್ಕಿನ ಪೂರ್ವಾರ್ಧದಲ್ಲಿ ಮಧ್ಯಮಾಗ್ನಿಯು ಸ್ತುತನಾಗಿರುವನು. ಒಂದು ದಿನ ರಾತ್ರಿಕಾಲದಲ್ಲಿ ಸ್ವಪ್ನಾವಸ್ಥೆಯಲ್ಲಿರುವಾಗಲೇ ವಸಿಷ್ಠನು ವರುಣನ ಮನೆಗೆ ಹೋದನು.

12 13. ವರುಣನ ಮನೆಯನ್ನು ಪ್ರವೇಶಿಸುತ್ತಿರುವಾಗ ಬಾಗಿಲಿನಲ್ಲಿದ್ದ ನಾಯಿಯು ಘಟ್ಟಿಯಾಗಿ ಬೊಗಳುತ್ತಾ ವಸಿಷ್ಠನನ್ನು ಕಚ್ಚುವ ಉದ್ದಿಶ್ಯದಿಂದ ಅವನ ಮೇಲೆ ನುಗ್ಗಿ ಬಂದಿತು. ಘಟ್ಟಿಯಾಗಿ ಬೊಗಳುತ್ತಿರುವ ಮತ್ತು ಕಚ್ಚಬೇಕೆಂದು ಓಡಿಬರುತ್ತಿರುವ ಆ ನಾಯಿಯನ್ನು ವಸಿಷ್ಠನು ೫೫ನೇ ಸೂಕ್ತದ **ಯದದ್ಯುನ** ಎಂದು ಮೊದಲಾಗುವ ಎರಡು ಋಕ್ಕುಗಳಿಂದ (೨-೩) ಸಮಾಧಾನಪಡಿಸಿ ಅದನ್ನು ನಿದ್ರಿಸುವಂತೆ ಮಾಡಿದನು. ಮತ್ತು ಮನೆಯ ಇತರ ಜನರಿಗೂ ನಿದ್ರಿಸುವಂತೆ ಮಾಡಿದನು.

---

10. Now Dawn (is praised) with the seven (hymns) 'For the Dawn' (ವ್ಯುಷಾಃ : vii. 75-81) ; but the four hymns following these, 'O Indra and Varuna' (ಇಂದ್ರಾವರುಣಾ : vii. 82-85), are (in) praise of Indra-Varuna.

3. Vasistha and the dog of Varuna : RV. vii 86 89.

11. In the hemistich 'Aloft the light' (ಉದು ಜ್ಯೋತಿಃ : vii. 76-1) the Middle (Agni) is praised.

During the night Vasistha in a dream approached the house of Varuna.

12-13. He then entered. A dog there ran at him, barking. Pacifying the hound which was making a din and runing (up) with intent to bite, he lulled him to sleep (ವ್ಯಸುಷ್ವಪತ್) with the two (stanzas) 'When, O bright one (ಯದದ್ಯುನ : vii. 55. 2, 3).

He sent him as well as the othar attnedants of Varuna to sleep.

తతస్తు వరుణో రాజా స్వైః పాశైః ప్రత్యబధ్యత ।
స బద్ధ్వా పితరం సూక్తైశ్చతుర్భిరిత ఉత్తరైః ॥ ౧౪ ॥
అభితుష్టావ ధీరేతి ముమోచైనం తతః పితా ।
ధ్రువాసు క్షేతి చోక్తాయాం పాశా అస్మాత్ప్రమోచిరే ॥ ౧౫ ॥
పరాణీ ప్రేణీ సూక్తాని వాయవ్యాని ప్ర వీరయా ।
ఇత్యై వాస్తవ్యప్రాయవ్యా స్తుతౌ యాసు ద్వివత్స్తుతిః ॥ ౧౬ ॥
ప్ర వీరయోక్తా వాయవ్యా ప్రాఉగిత్యేతరేయకే ।
పదస్య వ్యత్యయం కృత్వా వాయోః ప్రాధాన్యముచ్యతే ॥ ౧౭ ॥

14-15. ఆగ వరుణను (ఈ గద్దలవన్ను నోడి) అల్లిగే బందిద్ద వసిష్ఠనన్ను తన్న పాశగళింద బంధిసిదను. బంధితనాద వసిష్ఠను తన్న తందెయాద వరుణనన్ను **ధీరా త్వస్య** ఎందు మొదలాగువ నాల్కు సూక్తగళింద (౮౬-౮౯) స్తుతిసిదను. అదరింద సంతుష్టనాద వరుణను అవనన్ను తన్న పాశదింద బిడిసిదను. **ధ్రువాసు త్వాసు** ఎంబ ఋక్కన్ను (౮౮ నే సూక్తద ౭ నే ఋక్కన్ను) వసిష్ఠను పఠిసిదకూడలే అవనన్ను బంధిసిద్ద పాశగళు (హగ్గగళు) కళచిబిద్దవు.

౯౦-౯౬ నే సూక్తద దేవతెగళు

16. **ప్ర వీరయా** ఎందు మొదలాగుస ముందిన మూరు సూక్తగళల్లి (౯౦-౯౨) వాయువన్ను స్తుతిసలాగిదే. ఈ సూక్తగళ కెలవు ఋక్కుగళల్లి ఇంద్రవాయుగళన్ను ద్వివచనశబ్దగళింద (ఇంద్రవాయూ) స్తుతిసలాగిదే.

17. ప్రఉగశస్త్రమంత్రగళల్లి **ప్ర వీరయా** ఎంబ వాయుదేవతాకవాద ఋక్కన్ను (౯౦ నే సూక్తద దొదలనే ఋక్కు)పఠిసబేకెందు ఐతరేయబ్రాహ్మణదల్లి హేళిరువుదరింద వాయువిన ప్రాధాన్యతెయు ఈ ఋక్కినల్లి ప్రతిపాదితవాగిరువుదెందు తిళియబేకు. ఋక్కినల్లిరువ పదగళ వ్యత్యయదింద సూచితవాగువ భావవన్ను గమనిసబేకాగిల్ల.

14-15. Then king Varuna bound him with his fetters. Bound (thus) he (Vasistha) praised his father (Varuna) with the next (ఇతః) following four (hymns) ' The wise ' (ధీరా : vii. 86-89). Then his father released him.

As soon as the (stanza) ' you in the fixed ' (ధ్రువాసు త్వా : vii. 88-7) had been uttered, the fetters dropped (ప్రమోచిరే) from him.

4. Deities of RV. vii. 90-96.

16. The next three hyms, ' Forth longing for the heroes ' (ప్ర వీరయా vii. 90-92), are addressed to Vayu. Now in this praise those (stanzas) are addressed to Indra-Vayu in which there is praise in the dual (ద్వివత్).

17. ' Forth with longing fot the heroes ' (ప్ర వీరయా : vii. 90-1) is spoken of in the (ఐతరేయ బ్రాహ్మణ) as a stanza addressed to Vayu belonging to the Prauga litany (ప్రఉగీ) the predominance of Vayu is (thereby) expressed in contravention (వ్యత్యయం కృత్వా) of one of its verses (పాద).

ತೇ ಸತ್ಯೇನ ತೃಚೋ ಯಾವತ್ತ್ರಕ್ಷ್ಣತುರ್ಯಚಃ ಪುನಃ ।
ಉಶನ್ತೈಕಾ ಪ್ರ ಸೋಶಾ ಚಗರ್ದ್ವ್ಯೋರೇತಾ ನವ ಸ್ಮೃತಾಃ ॥ ೧೮ ॥
ಐನ್ದ್ರಾಗ್ನೇ ಶುಚಿಮಿತ್ಯೇತೇ ಪ್ರೇತಿ ಸಾರಸ್ವತೇ ಪರೇ ।
ಋಚಾ ಸರಸ್ವಾನ್ ಸ ಇತಿ ಜನೀಯಂತಶ್ಚ ತಿಸೃಭಿಃ ॥ ೧೯ ॥
ರಾಜಾ ವರ್ಷಸಹಸ್ರಾಯ ದೀಕ್ಷಿಷ್ಯನ್ನಾಹುಷಃ ಪುರಾ ।
ಚಚಾರೈಕರಥೇನೇಮಾಂ ಬ್ರುವನ್ಸರ್ವಾಃ ಸಮುದ್ರಗಾಃ ॥ ೨೦ ॥

18. ೯೦ ನೇ ಸೂಕ್ತದ **ತೇ ಸತ್ಯೇನ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿಯೂ (೫-೭) ೯೨ನೇ ಸೂಕ್ತದ **ಯಾವತ್ತ್ರರಃ** ಎಂದು ಮೊದಲಾಗುವ ೪ ಋಕ್ಕುಗಳಲ್ಲಿಯೂ (೪-೭) ಆದೇ ೯೧ ನೇ ಸೂಕ್ತದ **ಉಶಂತಾ** ಎಂಬ ೨ ನೇ ಋಕ್ಕಿನಲ್ಲಿಯೂ, ೯೨ ನೇ ಸೂಕ್ತದ **ಪ್ರ ಸೋಶಾ** ಎಂಬ ೨ ನೇ ಋಕ್ಕಿನಲ್ಲಿಯೂ ಇಂದ್ರವಾಯುಗಳಿಬ್ಬರ ಸ್ತುತಿಯೂ ಇರುವುದು.

19. **ಶುಚಿಂ ನು** ಎಂದು ಮೊದಲಾಗುವ ಎರಡು ಸೂಕ್ತಗಳಲ್ಲಿ (೯೩-೯೪) ಇಂದ್ರಾಗ್ನಿಗಳನ್ನೂ **ಪ್ರ ಕ್ಷೋದಸಾ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೯೫.೯೬) ಸರಸ್ವತಿಯನ್ನೂ ಸ್ತುತಿಸಲಾಗಿದೆ. ೯೫ ನೇ ಸೂಕ್ತದ **ಸ ವಾವೃಧೇ** ಎಂಬ ೩ ನೇ ಋಕ್ಕಿನಲ್ಲಿಯೂ ೯೬ ನೇ ಸೂಕ್ತದ **ಜನೀಯಂತಃ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿಯೂ (೪-೬) **ಸರಸ್ವಾನ್** ಎಂಬ ದೇವತೆಯ ಸ್ತುತಿ ಇರುವುದು.

ನಾಹುಷ ಮತ್ತು ಸರಸ್ವತಿ ಇವರ ವೃತ್ತಾಂತವು

20. ಪೂರ್ವದಲ್ಲಿ ನಾಹುಷನೆಂಬ ರಾಜನು ಸಾವಿರವರ್ಷಗಳವರೆಗೆ ಮಾಡಬೇಕಾದ ಸತ್ತ್ರಯಾಗದಲ್ಲಿ ದೀಕ್ಷೆಯನ್ನು ಕೈಕೊಂಡು ತನ್ನ ಒಂದು ರಥದಲ್ಲಿ ಕುಳಿತು ಈ ಭೂಮಿಯಲ್ಲೆಲ್ಲಾ (ವಿಜಯಾರ್ಥವಾಗಿ) ಸಂಚರಿಸಿದನು. ಆಗ ಆ ರಾಜನು ಸಮಸ್ತ ನದಿಗಳನ್ನೂ ಕುರಿತು,

---

18. 'these with true' (ತೇ ಸತ್ಯೇನ : vii. 90. 5-7) being a triplet, 'As long as strength' (ಯಾವತ್ತ್ರರಃ : vii- 91. 2) being a quartet, Eager (ಉಶಂತಾ vii. 91-2) and ಪ್ರಸೋಶಾ (vii. 92-2)—these are traditionally held to be the nine (stanzas) belonging to the two (Indra-Vayu).

19. The two (hymns) 'The pure' (ಶುಚಿಂ : vii. 93. 94) are addressed to Indra-Agni; the two following, 'Forth' (ಪ್ರ : vii. 95, 96), are addressed to Sarasvati. Sarasvat (is praised) with the stanza 'He' (ಸಃ : vii. 95. 3) and with the three 'Longing for wives' (ಜನೀಯಂತಃ : vii. 86. 4-6.)

5. Story of Nahusha and Sarasvati : RV. vii. 95-96.

20. King Nahusa in former days wishing to consecrate himself for a thousand years, travelled over this (earth) with a single chariot, saying to all streams :

ಯೇಷ್ಯೇ ವಹತ ಭಾಗಾನ್ಮೇ ದ್ವಂದ್ವಶೋ ವಾಥವೈಕಶಃ ।
ಪ್ರತ್ಯೂಚುಸ್ತಂ ನೃಪಂ ನದ್ಯಃ ಸ್ವಲ್ಪವೀರ್ಯಾಃ ಕಥಂ ವಯಂ ॥ ೨೧ ॥

ವಹೇಮ ಭಾಗಾಂನ್ಸರ್ವಾಂಸ್ತೇ ಸತ್ರೇ ವಾರ್ಷಸಹಸ್ರಿಕೇ ।
ಸರಸ್ವತೀಂ ಪ್ರಪದ್ಯಸ್ವ ಸಾ ತೇ ವಕ್ಷ್ಯತಿ ನಾಹುಷ ॥ ೨೨ ॥

ತಥೇತ್ಯುಕ್ತ್ವಾ ಜಗಾಮಾಶು ಆಪಗಾಂ ಸ ಸರಸ್ವತೀಂ ।
ಸಾ ಚೈನಂ ಪ್ರತ್ಯಜಗ್ರಾಹ ದುದುಹೇ ಚ ಪಯೋ ಘೃತಂ ॥ ೨೩ ॥

ಏತದತ್ಯದ್ಭುತಂ ಕರ್ಮ ಸರಸ್ವತ್ಯಾ ನೃಪಂ ಪ್ರತಿ ।
ವಾರುಣಿಃ ಕೀರ್ತಯಾಮಾಸ ಪ್ರಥಮಸ್ಯ ದ್ವಿತೀಯಯಾ ॥ ೨೪ ॥

21. ಎಲೈ ನದಿಗಳೇ, ನಾನು ಯಜ್ಞವನ್ನು ಮಾಡಬೇಕೆಂದು ಉದ್ದೇಶಿಸಿರುವೆನು. ಆದ್ದರಿಂದ ಆ ಯಜ್ಞ ಸಹಾಯಾರ್ಥವಾಗಿ ನೀವೆಲ್ಲರೂ ಒಬ್ಬೊಬ್ಬರಾಗಲಿ ಇಬ್ಬಿಬ್ಬರಾಗಲಿ ಬಂದು ನಿಮ್ಮ ಭಾಗದ ಸಹಾಯವನ್ನು ಒದಗಿಸಬೇಕು ಎಂದನು. ಅದನ್ನು ಕೇಳಿ ನದಿಗಳು ಆ ರಾಜನನ್ನು ಕುರಿತು—ಎಲೈ ರಾಜನೇ, ನೀನು ಕೇಳುವ ಸಹಾಯವನ್ನು ನಾವು ಹೇಗೆ ಮಾಡಲಾದೀತು ? ನಮಗಿರುವ ಸಾಮರ್ಥ್ಯವು ಅಲ್ಪವಾಗಿರುವುದು.

22. ಸಾವಿರವರ್ಷಗಳವರೆಗೆ ನಡೆಯುವ ಯಾಗಕ್ಕೆ ಬೇಕಾದ ಸಹಾಯಸಾಮಗ್ರಿಗಳನ್ನು ತಂದು ಪೂರೈಸಲು ನಮಗೆ ಶಕ್ತಿಯಿಲ್ಲದೆ ? ಆದ್ದರಿಂದ ಎಲೈ ರಾಜನೇ, ನೀನು ಸರಸ್ವತೀನದಿಯ ಬಳಿಗೆ ಹೋಗಿ ನಿನ್ನ ಅಭೀಷ್ಟವನ್ನು ತಿಳಿಸು. ಆ ಸರಸ್ವತಿಯು ನಿನಗೆ ಬೇಕಾದ ಸಹಾಯವನ್ನು ಒದಗಿಸುವಳು ಎಂದು ಹೇಳಿದವು.

23. ಹಾಗೆಯೇ ಆಗಲೆಂದು ರಾಜನು ಹೇಳಿ ಬೇಗನೆ ಅಲ್ಲಿಂದ ಹೊರಟು ಸರಸ್ವತೀನದಿಯ ಬಳಿಗೆ ಬಂದನು. ಆ ಸರಸ್ವತಿಯು ಈ ರಾಜನನ್ನು ಆದರದಿಂದ ಸ್ವಾಗತಿಸಿ ಇವನ ಯಜ್ಞಕ್ಕೆ ಬೇಕಾದ ಹಾಲನ್ನೂ ಘೃತ (ತುಪ್ಪ)ವನ್ನೂ ಯಥೇಚ್ಛವಾಗಿ ಒದಗಿಸಿದಳು.

24. ಸರಸ್ವತಿಯು ರಾಜನ ವಿಷಯದಲ್ಲಿ ನಿರ್ವಹಿಸಿದ ಈ ಅದ್ಭುತಕಾರ್ಯವನ್ನು ವಸಿಷ್ಠಋಷಿಯು (ಈ ಎರಡು ಸೂಕ್ತಗಳಲ್ಲಿ ಮೊದಲನೆಯ) ೯೫ ನೇ ಸೂಕ್ತದ ಏಕಾಚೇತ್ತತ್ ಎಂಬ ೨ ನೇ ಋಕ್ಕಿನಲ್ಲಿ ಪ್ರಶಂಸೆ ಮಾಡಿರುವನು.

---

21. 'I am about to offer sacrifice; bring me shares (for it), either in pairs or singly.' The rivers replied to the king: 'How can we, who have but very little power.

22. bring you all the shares for a sacrificial session lasting a thousand years? Resort to the Sarasvati: she will bring them for you, Nahusa.

23. Saying 'So be it,' he quickly went to the river Sarasvati; and she received him and yielded (duduhe) (him) milk (and) ghee.

24. This exceedingly marvellous act of the Sarasvati towards the king, the son of (Varuna) (vasishtha) proclaimed with the second (stanza) of the first (of the two hymns, viz., vii. 95. 2)

ಯಜ್ಞೇ ಬಾರ್ಹಸ್ಪತ್ಯಮೈಂದ್ರಂ ವೈಷ್ಣವೇ ತು ಪರೇ ತತಃ
ಉರುಮೈಂದ್ರ್ಯಶ್ಚ ತಿಸ್ರಃ ಸ್ಯುಃ ಪಾರ್ಜನ್ಯೇ ತಿಸ್ರ ಉತ್ತರೇ ॥ ೨೫ ॥
ಸ್ತೌತೀಂದ್ರಂ ಪ್ರಥಮಾ ತ್ವತ್ರ ದ್ವಿತೀಯೋಧ್ಯಾ ಬೃಹಸ್ಪತಿಂ ।
ಯಜ್ಞ ಆದ್ಯೇಂದ್ರಮೇವಾಸ್ತೌದಂತ್ಯಾ ತ್ವಿಂದ್ರಾಬೃಹಸ್ಪತೀ ॥ ೨೬ ॥
ತೃತೀಯಾ ನವಮೀ ಚೈವ ಸ್ತೌತೀಂದ್ರಾಬ್ರಹ್ಮಣಸ್ಪತೀ ।
ಸಂವತ್ಸರಂ ತು ಮಂಡೂಕಾನೈಂದ್ರಾಸೋಮಂ ಪರಂ ತು ಯತ್ ॥ ೨೭ ॥

೯೭-೧೦೪ ನೇ ಸೂಕ್ತದ ದೇವತೆಗಳು

25. **ಯಜ್ಞೇ ದಿವಃ** ಎಂಬ ೯೭ನೇ ಸೂಕ್ತದಲ್ಲಿ ಬೃಹಸ್ಪತಿಯನ್ನೂ ಅದರ ಮುಂದಿನ ೯೮ ನೇ ಸೂಕ್ತದಲ್ಲಿ ಇಂದ್ರನನ್ನೂ ಅದರ ಮುಂದಿನ ೨ ಸೂಕ್ತಗಳಲ್ಲಿ (೯೯–೧೦೦) ವಿಷ್ಣುವನ್ನೂ ಸ್ತುತಿಸಲಾಗಿದೆ. ಆದರೆ ೯೯ ನೇ ಸೂಕ್ತದ **ಉರುಂ ಯಜ್ಞಾಯ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೪-೬) ವಿಷ್ಣುವಿನ ಜತೆಯಲ್ಲಿ ಇಂದ್ರನೂ ಸ್ತುತನಾಗಿರುವನು. **ತಿಸ್ರೋ ವಾಚಃ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೧೦೧–೧೦೨)ಪರ್ಜನ್ಯನು ಸ್ತುತನಾಗಿರುವನು.

26. ಆದರೆ, ೯೭ ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ಇಂದ್ರನನ್ನೂ ೨ ನೇ ಋಕ್ಕಿನಲ್ಲಿಯೂ ೪-೮ನೇ ಋಕ್ಕುಗಳಲ್ಲಿಯೂ ಬೃಹಸ್ಪತಿಯನ್ನೂ ಸ್ತುತಿಸಲಾಗಿದೆ. **ಯಜ್ಞೇ** ಎಂಬ ಈ ೯೭ ನೇ ಸೂಕ್ತದಲ್ಲಿ ಮೊದಲನೆಯ ಋಕ್ಕಿನಲ್ಲಿ ಇಂದ್ರನನ್ನು ಮಾತ್ರ ಸ್ತುತಿಸಲಾಗಿದೆ. ಕೊನೆಯ ಋಕ್ಕಿನಲ್ಲಿ (೧೦) ಇಂದ್ರ ಮತ್ತು ಬೃಹಸ್ಪತಿ ಇಬ್ಬರನ್ನೂ ಸ್ತುತಿಸಲಾಗಿದೆ.

27. ಇದೇ ೯೭ ನೇ ಸೂಕ್ತದಲ್ಲಿ ೩ ನೇ ಮತ್ತು ೯ ನೇ ಋಕ್ಕುಗಳಲ್ಲಿ ಬ್ರಹ್ಮಣಸ್ಪತಿಯ ಸ್ತುತಿ ಇದೆ. **ಸಂವತ್ಸರಂ** ಎಂಬ ೧೦೩ನೇ ಸೂಕ್ತದಲ್ಲಿ ಮಂಡೂಕಗಳನ್ನು (ಕಪ್ಪೆಗಳನ್ನು) ಸ್ತುತಿಸಲಾಗಿದೆ. ಅದರ ಮುಂದಿನ ೧೦೪ನೇ ಸೂಕ್ತದಲ್ಲಿ ಇಂದ್ರ ಮತ್ತು ಸೋಮ ದೇವತೆಗಳನ್ನು ಸ್ತುತಿಸಲಾಗಿದೆ.

---

6. Deities of RV. vii. 97–104.

25. 'In the sacrifice' (यज्ञेः vii. 97) is addressed to Brhaspati; (then comes) a (hymn) addressed to Indra (vii. 98); but the two following (99, 100) after that are addressed to Visnu, and the three (stanzas) 'Wide' (उरुं: vii. 99. 4-6) should be (regarded as) addressed to Indra as well. The two next (hymns) 'Three' (तिस्रः: 101, 102) are addressed to Parjanya.

26. Now the first (stanza) here (vii. 97. 1) praises Indra, the second and the rest (2. 4-8) (praise) Brhaspati.

In 'At the sacrifice' (यज्ञेः vii. 97) the first (stanza) praised Indra alone, but the last both Indra and Brhaspati.

27. The third and the ninth (vii. 97, 3, 9) praise Indra and Brahmanaspati. (The hymn) 'For a year' (संवत्सरं: vii. 103) (praises) the frogs; but that which follows (vii. 104) is addressed to Indra-Soma.

ಋಷಿರ್ದದರ್ಶ ರಾಕ್ಷೋಘ್ನಂ ಪುತ್ರಶೋಕಪರಿಪ್ಲುತಃ ।
ಹತೇ ಪುತ್ರಶತೇ ತಸ್ಮಿನ್ಸೌದಾಸೈರ್ದುಃಖಿತಸ್ತದಾ ॥ ೨೮ ॥

ಯೇ ಪಾಕಶಂಸಮೃಕ್ಸೌಮ್ಯಾ ಆಗ್ನೇಯೀ ತತ ಉತ್ತರಾ ।
ಏಕಾದಶೀ ವೈಶ್ವದೇವೀ ಸೌಮ್ಯಸ್ತಸ್ಯಾಃ ಪರೋ ದ್ವ್ಯೃಚಃ ॥ ೨೯ ॥

ಯದಿ ವಾಹಮೃಗಾಗ್ನೇಯೀ ಐಂದ್ರೀ ಯೋ ಮೇತಿ ತು ಸ್ಮೃತಾ ।
ಗ್ರಾವ್ಣೀ ಪ್ರ ಯಾ ಜಿಗಾತೀತಿ ವಿ ನಿಷ್ಮಧ್ವಂ ತು ಮಾರುತೀ ॥ ೩೦ ॥

28. ಒಂದು ಸಮಯದಲ್ಲಿ ವಸಿಷ್ಠಋಷಿಯ ನೂರುಮಂದಿ ಪುತ್ರರು ಸುದಾಸರಾಜನ ವಂಶದವರಿಂದ ಕೊಲ್ಲಲ್ಪಟ್ಟರು. ಆ ಪುತ್ರಶೋಕದಿಂದ ದುಃಖಿತನಾದ ವಸಿಷ್ಠಋಷಿಗೆ **ಇಂದ್ರಾಸೋಮ** (೧೦೪ ನೇ ಸೂಕ್ತ) ಎಂಬ ರಾಕ್ಷೋಘ್ನಸೂಕ್ತವು (ರಾಕ್ಷಸರನ್ನೂ, ಪಿಶಾಚಾದಿಗಳನ್ನೂ ನಾಶಮಾಡಲು ಸಮರ್ಥವಾದ ಸೂಕ್ತಕ್ಕೆ ರಾಕ್ಷೋಘ್ನ ಸೂಕ್ತವೆಂದು ಹೆಸರು) ಮನಸ್ಸಿಗೆ ಗೋಚರವಾಯಿತು.

೧೦೪ ನೇ ಸೂಕ್ತದ ಋಕ್ಕುಗಳ ಪ್ರತ್ಯೇಕ ವಿವರಣೆ

29. ಈ ೧೦೪ ನೇ ರಾಕ್ಷೋಘ್ನಸೂಕ್ತದಲ್ಲಿ **ಯೇ ಪಾಕಶಂಸಂ** ಎಂಬ ೯ ನೇ ಋಕ್ಕಿನಲ್ಲಿ ಸೋಮ ದೇವತೆಯನ್ನೂ, ಮುಂದಿನ ೧೦ ನೇ ಋಕ್ಕಿನಲ್ಲಿ ಅಗ್ನಿಯನ್ನೂ ೧೧ ನೇ ಋಕ್ಕಿನಲ್ಲಿ ವಿಶ್ವೇದೇವತೆಗಳನ್ನೂ, ಮುಂದಿನ ಎರಡು ಋಕ್ಕುಗಳಲ್ಲಿ (೧೨-೧೩) ಸೋಮದೇವತೆಯನ್ನೂ ಸ್ತುತಿಸಲಾಗಿದೆ.

30. ಈ ೧೦೪ ನೇ ಸೂಕ್ತದಲ್ಲಿ **ಯದಿ ವಾಹಂ** ಎಂಬ ೧೪ ನೇ ಋಕ್ಕಿನಲ್ಲಿ ಅಗ್ನಿಯನ್ನೂ **ಯೋ ಮಾಯಾತುಂ** ಎಂಬ ೧೬ ನೇ ಋಕ್ಕಿನಲ್ಲಿ ಇಂದ್ರನನ್ನೂ **ಪ್ರ ಯಾ ಜಿಗಾತಿ** ಎಂಬ ೧೭ ನೇ ಋಕ್ಕಿನಲ್ಲಿ ಸೋಮಲತೆ ಗಳನ್ನು ಜಜ್ಜುವ ಕಲ್ಲುಗಳನ್ನೂ **ವಿ ತಿಷ್ಠಧ್ವಂ** ಎಂಬ ೧೮ ನೇ ಋಕ್ಕಿನಲ್ಲಿ ಮರುದ್ದೇವತೆಗಳನ್ನು ಸ್ತುತಿಸಲಾಗಿದೆ.

---

28. The seer, when his hundred sons had been slain by the followers of Sudas, full of pain and overwhelmed with grief for his sons, saw (this hymn) for the destruction of demons.

7. Detailed account of RV. vii. 104.

29. The stanza 'Who the simple' (યે પાકશંસં : vii. 104. 9) is addressed to Soma; the next (10) after that is addressed to Agni; the eleventh is addressed to the All-gods (11); the couplet which follows it (12, 13) is addressed to Soma.

30. The Stanza 'As if I' (યદિ વાહં : vii. 104) is addressed to Agni, while 'Who me' (યો મા : 16) is traditionally held to be addressed to Indra; 'She who strides forth' (પ્ર યા જિગાતિ : 17) is addressed to the pressing stones, while 'Spread out' (વિ તિષ્ઠધ્વં : 18) is addressed to the Maruts.

ಪ್ರ ವರ್ತಯೇತಿ ಪಂಚೈಂದ್ರ್ಯ ಐಂದ್ರಾಸೋಮಾ ತ್ವಗುತ್ತಮಾ ।
ಋಷಿಸ್ತ್ವಾಶಿಷಮಾಶಾಸ್ತೇ ಮಾ ನೋ ರಕ್ಷ ಇತಿ ತ್ವ್ಯಚೆ ॥ ೩೧ ॥
ದಿವಿ ಚೈವ ಪೃಥಿವ್ಯಾಂ ಚ ತಥಾ ಪಾಲನಮಾತ್ಮನಃ ।
ಉಲೂಕಯಾತುಂ ಜಹ್ಯೇತಾನ್ನಾನಾರೂಪಾನ್ನಿಶಾಚರಾನ್ ॥ ೩೨ ॥
ಪಂಚದಶ್ಯಾಂ ತು ಸೂಕ್ತಸ್ಯ ಅಷ್ಟಮ್ಯಾಂ ಚೈವ ವಾರುಣಿಃ ।
ದುಃಖಶೋಕಪರೀತಾತ್ಮಾ ಶಪತೇ ವಿಲಪನ್ನಿವ ॥ ೩೩ ॥
ಹತೇ ಪುತ್ರಶತೇ ತಸ್ಮಿನ್ವಸಿಷ್ಠೇ ದುಃಖಿತಸ್ತದಾ ।
ರಕ್ಷೋಭೂತೇನ ಶಾಪಾತ್ತು ಸುದಾಸಾನೇತಿ ವೈ ಶ್ರುತಿಃ ॥ ೩೪ ॥

ಇತಿ ಸಪ್ತಮಂ ಮಂಡಲಂ

31. ಇದೇ ಸೂಕ್ತದ **ಪ್ರ ವರ್ತಯೇ** ಎಂದು ಮೊದಲಾಗುವ ಮುಂದಿನ ೫ ಋಕ್ಕುಗಳಲ್ಲಿ (೧೯-೨೨ ಮತ್ತು ೨೪) ಇಂದ್ರನ ಸ್ತುತಿ ಇರುವುದು. ಕೊನೆಯ ಋಕ್ಕಿನಲ್ಲಿ (೨೫) ಇಂದ್ರ ಮತ್ತು ಸೋಮ ಇಬ್ಬರೂ ಸ್ತುತರಾಗಿರುವರು. **ಮಾ ನೋ ರಕ್ಷಃ** ಎಂಬ ೨೩ನೇ ಋಕ್ಕಿನಲ್ಲಿ ಋಷಿಯು ರಕ್ಷಣೆಯನ್ನೂ ಆಶೀರ್ವಾದವನ್ನೂ ಬಯಸಿ ಪ್ರಾರ್ಥಿಸಿರುವನು.

32. **ಉಲೂಕಯಾತುಂ** ಎಂಬ ೨೨ನೇ ಋಕ್ಕಿನಲ್ಲಿ ವಸಿಷ್ಠಋಷಿಯು ರಾತ್ರಿಕಾಲದಲ್ಲಿ ಸಂಚರಿಸುವ ಸ್ವಭಾವವುಳ್ಳ ಪಿಶಾಚಾದಿ ನಾನಾರೂಪಗಳಿಂದಿರುವ ದುಷ್ಟಜಂತುಗಳನ್ನೂ, ರಾಕ್ಷಸರನ್ನೂ ಸಂಹರಿಸಬೇಕೆಂದೂ, ಭೂಮಿಯಲ್ಲಿಯೂ, ಸ್ವರ್ಗದಲ್ಲಿಯೂ ತನಗೆ ರಕ್ಷಣೆಯನ್ನು ನೀಡಬೇಕೆಂದೂ ದೇವತೆಗಳನ್ನು ಪ್ರಾರ್ಥಿಸಿರುವನು.

33. ವರುಣಪುತ್ರನಾದ ವಸಿಷ್ಠನು ಪುತ್ರಶೋಕದಿಂದಲೂ, ದುಃಖದಿಂದಲೂ ಕಂಗೆಟ್ಟು ನಾನಾವಿಧವಾಗಿ ಪ್ರಲಾಪಿಸುತ್ತಾ ಈ ಸೂಕ್ತದ ೧೫ನೇ ಋಕ್ಕಿನಲ್ಲಿಯೂ, ೮ನೇ ಋಕ್ಕಿನಲ್ಲಿಯೂ ಹೇಳಿರುವಂತೆ ತನ್ನ ಶತ್ರುಗಳು ನಾಶವಾಗಲೆಂದು ಶಪಿಸಿರುವನು.

34. ತನ್ನ ನೂರುಮಂದಿ ಪುತ್ರರು ಕೊಲ್ಲಲ್ಪಟ್ಟಿದ್ದರಿಂದ ವಸಿಷ್ಠಋಷಿಯು ಅತ್ಯಂತ ದುಃಖಿತನಾಗಿ ತನ್ನ ಪುತ್ರರ ನಾಶಕ್ಕೆ ಕಾರಣಭೂತನಾದ ಸುದಾಸನಿಗೆ ರಾಕ್ಷಸನಾಗೆಂದು ಶಾಪವನ್ನು ಕೊಟ್ಟನು ಎಂದು ಶ್ರುತಿವಾಕ್ಯವು ಹೇಳುವುದು.

ಇಲ್ಲಿಗೆ ಏಳನೆಯ ಮಂಡಲವು ಸಮಾಪ್ತವು.

---

31. Five(stanzas, beginning)'Hurl forth' (ಪ್ರವರ್ತಯಃ vii. 104. 19-22, 24) are addressed to Indra, while the last stanza is addressed to Indra-Soma. In the stanza 'May not the demon us'(ಮಾ ನೋ ರಕ್ಷಃ 23)the seer invokes a blessing.

32 and protection in heaven and earth on his own behalf. 'The owl-friend' (ಉಲೂಕಯಾತುಂ : vii. 104. 22) (Prays) 'Slay these night-walkers of various forms.'

33. Now in the fifteenth and in the eigth (stanza) of the hymn the son of Varuna (Vasistha), while as it where lamenting, his soul being overwhelmed with pain and grief, utters a curse.

34. Vasistha was at that time pained, as his hundred sons had been slain by Sudasa who, in consequence of a curse, had been transformed into a demon (ರಕ್ಷಃ); such is the sacred tradition:

End of 7th Mandala.

ಅಥಾಷ್ಟಮಂ ಮಂಡಲಂ

ಕಣ್ವಶ್ಚೈವ ಪ್ರಗಾಥಶ್ಚ ಘೋರಪುತ್ರೌ ಬಭೂವತುಃ ।
ಗುರುಣಾ ತಾವನುಜ್ಞಾತಾವೂಷತುಃ ಸಹಿತೌ ವನೇ ॥ ೩೫ ॥

ವಸತೋಸ್ತು ತಯೋಸ್ತತ್ರ ಕಣ್ವಪತ್ನ್ಯಾಃ ಶಿರಃ ಸ್ವಪತ್ ।
ಕೃತ್ವಾ ಕನೀಯಾನ್ಕಣ್ವಸ್ಯ ಉತ್ಸಂಗೇ ನಾನ್ವಬುಧ್ಯತ ॥ ೩೬ ॥

ಶಪ್ತುಕಾಮಸ್ತು ತಂ ಕಣ್ವಃ ಕ್ರುದ್ಧಃ ಪಾಪಾಭಿಶಂಕಯಾ ।
ಬೋಧಯಾಮಾಸ ಪಾದೇನ ದಿಧಕ್ಷನ್ನಿವ ತೇಜಸಾ ॥ ೩೭ ॥

ಎಂಟನೆಯ ಮಂಡಲವು

ಕಣ್ವ ಮತ್ತು ಪ್ರಗಾಥ ಎಂಬುವರ ವೃತ್ತಾಂತ

35. ಕಣ್ವ ಮತ್ತು ಪ್ರಗಾಥ ಎಂಬುವರು ಘೋರ ಎಂಬ ಋಷಿಯ ಪುತ್ರರು. ಇವರು ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಗುರುವಿನ ಅನುಜ್ಞೆಯಿಂದ ಹಿಂತಿರುಗಿ ಬಂದು ವನದಲ್ಲಿ (ವನದಲ್ಲಿದ್ದ ತಮ್ಮ ಆಶ್ರಮದಲ್ಲಿ) ವಾಸಮಾಡುತ್ತಿದ್ದರು.

36. ಇವರಿಬ್ಬರೂ ವಾಸಮಾಡುತ್ತಿರುವಾಗ ಒಂದು ದಿವಸ ಕಣ್ವನ ತಮ್ಮನಾದ ಪ್ರಗಾಥನು ಕಣ್ವನ ಪತ್ನಿಯ ತೊಡೆಯ ಮೇಲೆ ತನ್ನ ತಲೆಯನ್ನಿಟ್ಟುಕೊಂಡು ನಿದ್ರೆಮಾಡುತ್ತಿದ್ದನು. ಅವನಿಗೆ ಎಚ್ಚರವಾಗಲಿಲ್ಲ.

37. ಕಣ್ವನು ಬಂದು ತನ್ನ ತಮ್ಮನು ತನ್ನ ಪತ್ನಿಯ ತೊಡೆಯ ಮೇಲೆ ಶಿರಸ್ಸನ್ನಿಟ್ಟು ನಿದ್ರಿಸುತ್ತಿದ್ದುದನ್ನು ನೋಡಿ ಇವನು ಮಹಾಪಾಪಕಾರ್ಯವನ್ನು ಮಾಡುತ್ತಿರುವನೆಂದು ಶಂಕಿಸಿ ತನ್ನ ತೀಕ್ಷ್ಣವಾದ ತೇಜಸ್ಸಿನಿಂದ ಅವನನ್ನು ಸುಟ್ಟುಬಿಡುವಂತೆ ನೋಡುತ್ತಾ ಕಾಲಿನಿಂದ ಅವನನ್ನು ಒದ್ದು ಎಬ್ಬಿಸಿದನು.

Mandala VIII.

8. Story of Kanva and Pragatha.

35. Kanva and Pragatha were two sons of Ghora. When they had been dismissed by their preceptor they dwelt together in the forest.

36. Now while these two dweltt here the younger (brother) of Kanva (i.e. ಪ್ರಗಾಥ), having placed his head while asleep (ಸ್ವಪತ್)on the lap of Kanva's wife, did not awake.

37. Now Kanva, enraged by suspicion of a sin (and) wishing to curse him, awakened him with his foot, as though about to consume him with his fiery energy.

ವಿದಿತ್ವಾ ತಸ್ಯ ತಂ ಭಾವಂ ಪ್ರಗಾಥಃ ಪ್ರಾಂಜಲಿಃ ಸ್ಥಿತಃ ।
ಮಾತೃಷ್ಟೇ ಚ ಪಿತೃಷ್ಟೇ ಚ ವರಯಾಮಾಸ ತಾವುಭೌ ॥ ೩೮ ॥

ಸ ಘೌರೋ ವಾಥ ಕಾಣ್ವೋ ವಾ ವಂಶಜೈರ್ಬಹುಭಿಃ ಸಹ ।
ದದರ್ಶಾನ್ಯೈಶ್ಚ ಸಹಿತ ಋಷಿರ್ಮಂಡಲಮಷ್ಟಮಂ ॥ ೩೯ ॥

ಮಾಚಿದ್ಮೈಂದ್ರಾಣಿ ಚತ್ವಾರಿ ಅನ್ವಸ್ಯ ಸ್ಥೂರಮಿತ್ಯೃಚಿ ।
ತುಷ್ಟಾವಾಂಗಿರಸೀ ನಾರೀ ವಸಂತೀ ಶಾಶ್ವತೀ ಪತಿಂ ॥ ೪೦ ॥

ಸ್ತ್ರಿಯಂ ಸಂತಂ ಪುಮಾಂಸಂ ತಮಾಸಂಗಂ ಕೃತವಾನೃಷಿಃ ।

38. ಪ್ರಗಾಥನು ಎಚ್ಚರಗೊಂಡು ಎದುರಿಗೆ ನಿಂತಿದ್ದ ತನ್ನ ಅಣ್ಣನ ಭಾವವನ್ನು ತಿಳಿದು ಕೈಮುಗಿದುಕೊಂಡು ಕಣ್ವನ ಮತ್ತು ಅವನ ಪತ್ನಿಯ ಕ್ಷಮೆ ಬೇಡಿ ಇವರಿಬ್ಬರೂ ತನಗೆ ಮಾತಾಪಿತೃಗಳ ಸಮಾನವೆಂದೂ ತನ್ನ ವಿಷಯದಲ್ಲಿ ಅವರು ಆ ಭಾವನೆಯನ್ನೇ ಇಟ್ಟಿರಬೇಕೆಂದೂ ಪ್ರಾರ್ಥಿಸಿದನು.

39. ಆದ್ದರಿಂದ ಆ ಲಾಗಾಯಿತು ಆ ಪ್ರಗಾಥನು ಘೌರ ಅಥವಾ ಕಣ್ವನ ಪುತ್ರನೆಂದು ಪ್ರಸಿದ್ಧನಾಗಿ ತನ್ನ ವಂಶದ ಇತರ ಋಷಿಗಳೊಡನೆ ಎಂಟನೆಯ ಮಂಡಲದ ಸೂಕ್ತಗಳಿಗೆ ದ್ರಷ್ಟೃವಾದನು.

೮ನೇ ಮಂಡಲದ ೧-೨೧ ಸೂಕ್ತಗಳ ದೇವತೆಗಳು

40. **ಮಾ ಚಿದನ್ಯತ್** ಎಂದು ಪ್ರಾರಂಭವಾಗುವ ಸೂಕ್ತದಿಂದ ನಾಲ್ಕು ಸೂಕ್ತಗಳಲ್ಲಿ (೧-೪) ಇಂದ್ರನನ್ನು ಸ್ತುತಿಸಲಾಗಿದೆ. **ಅನ್ವಸ್ಯ ಸ್ಥೂರಂ** ಎಂಬ ಮೊದಲನೆಯ ಸೂಕ್ತದ ೩ನೇ ಋಕ್ಕಿನಲ್ಲಿ ಅಂಗಿರಾಋಷಿಯ ಪುತ್ರಿಯೂ (ಆಸಂಗರಾಜನ ಪತ್ನಿಯೂ) ಆದ **ಶಶ್ವತೀ** ಎಂಬ ಸ್ತ್ರೀಯು ತನ್ನ ಪತಿಯನ್ನು ಅಭಿನಂದಿಸಿ ಸ್ತುತಿಸಿದ್ದಾಳೆ.

41. ಈ ಸೂಕ್ತದ ಋಷಿಯಾದ ಮೇಧಾತಿಥಿಯು, ದೇವಪ್ರಸಾದದಿಂದ ಪುರುಷತ್ವವನ್ನು ಕಳೆದುಕೊಂಡು ಸ್ತ್ರೀಯಾಗಿದ್ದ ಆಸಂಗನೆಂಬ ರಾಜನಿಗೆ ಮತ್ತೆ ಪುರುಷತ್ವವುಂಟಾಗುವಂತೆ ಮಾಡಿದನು. ಈ ವಿಧವಾದ ಋಷಿಯ

38. Pragatha, becoming aware of his intention, stood with folded hands and chose the couple for his mother and father.

39. The seer, being (thus) the son of either Ghora or Kanva, saw, in company with many other members of his family, the eighth Mandala.

9. Deities of RV. viii. 1-21.

40. There are four hymns addressed to Indra (beginning) 'Not at all' (**ಮಾ ಚಿತ್** : viii. 1-4). in the stanza 'Downward his mighty' (**ಅನ್ವಸ್ಯ ಸ್ಥೂರಂ** : viii. 1-34), Sasvati, daughter of Angiras, living (**ವಸಂತೀ**) as his wife (**ನಾರೀ**), praised her husband.

41. The seer turned that Asanga, who had been a woman, into a

ಸ್ವಸ್ಯ ದಾನಂ ಸ್ತುಹೀತ್ಯೃಗ್ಭಿಃ ಪರಿಕೀರ್ತಿತಂ ॥ ೪೧ ॥

ಶಿಕ್ಷೇತ್ಯೃಗ್ಭ್ಯಾಂ ತು ಕಾಶ್ಯಸ್ಯ ವಿಭಿನ್ದೋಃ ಪರಿಕೀರ್ತಿತಂ ।
ಪಾಕಸ್ಥಾಮ್ನಸ್ತು ಭೋಜಸ್ಯ ಚತುರ್ಭಿರ್ಯಮಿತಿ ಸ್ತುತಂ ॥ ೪೨ ॥

ಪೌಷ್ಣೌ ಪ್ರೇತಿ ಪ್ರಗಾಥೌ ದ್ವೌ ಮನ್ಯತೇ ಶಾಕಟಾಯನಃ ।
ಐನ್ದ್ರಮೇವಾಥ ಪೂರ್ವಂ ತು ಗಾಲವಃ ಪೌಷ್ಣಮುತ್ತರಂ ॥ ೪೩ ॥

ಅನುಗ್ರಹದಿಂದ ಸಂತೋಷಪಟ್ಟ ಆಸಂಗರಾಜನು ಮೇಧಾತಿಥಿಋಷಿಗೆ ಅನೇಕ ವಿಧವಾದ ದಾನಗಳನ್ನು ಕೊಟ್ಟನು. ತಾನು ಕೊಟ್ಟ ದಾನಗಳ ಪ್ರಶಂಸೆಯನ್ನು ಮಾಡಬೇಕೆಂದು ಆಸಂಗರಾಜನು ಮೇಧಾತಿಥಿಋಷಿಯನ್ನು **ಸ್ತುಹಿ** ಎಂದು ಮೊದಲಾಗುವ ನಾಲ್ಕು ಋಕ್ಕುಗಳಿಂದ (೧ ನೇ ಸೂಕ್ತದ ೩೦-೩೩ ಋಕ್ಕುಗಳಿಂದ) ಪ್ರೇರಿಸಿರುವನು ಎಂದು ಹೇಳಲಾಗಿದೆ.

42. ೨ ನೇ ಸೂಕ್ತದ **ಶಿಕ್ಷಾ ವಿಭಿಂದೋ** ಎಂದು ಮೊದಲಾಗುವ ೨ ಋಕ್ಕುಗಳಲ್ಲಿ (೪೧-೪೨) ಕಾಶಿಯ ರಾಜನಾದ **ವಿಭಿಂದು** ಎಂಬ ರಾಜನ ದಾನಸ್ತುತಿಯ ವರ್ಣನೆಯೂ ೩ ನೇ ಸೂಕ್ತದ **ಯಂ ಮೇ** ಎಂದು ಮೊದಲಾಗುವ ನಾಲ್ಕು ಋಕ್ಕುಗಳಲ್ಲಿ (೨೧-೨೪) ಉದಾರಹೃದಯನಾದ **ಪಾಕಸ್ಥಾಮಾ** ಎಂಬ ರಾಜನ ದಾನಪ್ರಶಂಸೆಯೂ ಇರುವುದು.

43. ೪ ನೇ ಸೂಕ್ತದ **ಪ್ರ ಪೂಷಣಂ** ಎಂದು ಪ್ರಾರಂಭವಾಗುವ ಎರಡು ಪ್ರಗಾಥಮಂತ್ರಗಳಲ್ಲಿ (ಪ್ರಗಾಥ ಛಂದಸ್ಸಿನ ಮಂತ್ರವೆಂದರೆ ವಿಷಮಾ ಬೃಹತೀಛಂದಸ್ಸಿನ ಮಂತ್ರವೊಂದು, ಸತೋಬೃಹತೀಛಂದಸ್ಸಿನ ಮಂತ್ರವೊಂದೂ ಸೇರಿ ಆ ಎರಡು ಮಂತ್ರಗಳಿಗೆ ಪ್ರಗಾಥಛಂದಸ್ಸೆಂದು ಹೇಳಲ್ಪಡುವುದು. ಈ ೪ ನೇ ಮಂಡಲದಲ್ಲಿ ಅನೇಕಕಡೆ ಈ ವಿಧವಾದ ಛಂದಸ್ಸಿನ ಋಕ್ಕುಗಳಿವೆ) ಅಥವಾ ನಾಲ್ಕು ಋಕ್ಕುಗಳಲ್ಲಿ (೧೧-೧೪) ಪೂಷದೇವತೆಯನ್ನು ಸ್ತುತಿಸಲಾಗಿದೆ. ಆದರೆ ಮೊದಲಿನ ಎರಡು ಋಕ್ಕುಗಳಲ್ಲಿ (೧೫-೧೬) ಪೂಷದೇವನೂ, ಮುಂದಿನ ಎರಡು ಋಕ್ಕುಗಳಲ್ಲಿ (೧೭-೧೪) ಇಂದ್ರನೂ ಸ್ತುತರಾಗಿರುವರೆಂದು ಗಾಲವ ಎಂಬುವರ ಅಭಿಪ್ರಾಯವು.

---

man (again), With the four stanzas 'Praise' (**ಸ್ತುಹಿ** : viii. 1, 30-33) his own gift (to the seer) is proclaimed (by Asanga).

42. But with the two stanzas 'Bestow' (**ಶಿಕ್ಷಾ** : viii. 2. 41-42) that of Vibhindu, king of Kasi (**ಕಾಶ್ಯ**), is proclaimed, while with the four (stanzas) 'Which' (**ಯಂ** : viii. 3. 21-24) the (gift) of the liberal **ಪಾಕಸ್ಥಾಮಾ** is praised.

43. The two pragatha couplets (beginning) 'Forth' (**ಪ್ರ** : viii. 4. 15-18) Sakatayana thinks are addressed to Pusan ; Galava, however, (thinks) the former (15, 16) is addressed to Indra only, the latter (17, 18) to Pusan.

ಐರದ್ರಾಣಾಮಿಹ ಸೂಕ್ತಾನಾಮುತ್ತಮಸ್ಯೋತ್ತಮೇ ತೃಚೇ ।
ದಾನಂ ರಾಜ್ಞಃ ಕುರುಂಗಸ್ಯ ಸ್ಥೂರಂ ರಾಧ ಇತಿ ಸ್ತುತಂ ॥ ೪೪ ॥
ದೂರಾದಿತ್ಯಾಶ್ವಿನೇ ಸೂಕ್ತೇ ಸಪ್ತತ್ರಿಂಶತ್ತಮಾ ಯಥಾ ।
ಇತ್ಯರ್ಧರ್ಚೋ ದ್ವ್ಯೃಚಶ್ಚಾಂತ್ಯಃ ಕಶೋರ್ದಾನಸ್ತುತಿಃ ಸ್ಮೃತಾ ॥ ೪೫ ॥
ಮಹಾನೈಂದ್ರಂ ಪ್ರತ್ನವತ್ಯಾಮಗ್ನಿಂ ವೈಶ್ವಾನರಂ ಸ್ತುತಂ ।
ಮನ್ಯತೇ ಶಾಕಪೂಣಿಸ್ತು ಭಾಮ್ಯಶ್ವಶ್ಚೈವ ಮುದ್ಗಲಃ ॥ ೪೬ ॥
ತೃಚೇ ತು ಶತಮಿತ್ಯಸ್ಮಿನ್ದಾನಂ ತೈರಿಂದಿರಂ ಸ್ಮೃತಂ ।

44. ಇಂದ್ರದೇವತಾಕಸೂಕ್ತಗಳ ಕೊನೆಯ ಸೂಕ್ತದ (೪ನೇ) **ಸ್ಥೂರಂ ರಾಧಃ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೧೯-೨೧) **ಕುರುಂಗ** ಎಂಬ ರಾಜನ ದಾನಪ್ರಶಂಸೆಯು ಉಕ್ತವಾಗಿರುವುದು.

೫-೧೪ ಸೂಕ್ತಗಳ ದೇವತೆಗಳು

45. ೫ನೇ ಸೂಕ್ತದಲ್ಲಿ ಅಶ್ವಿನೀದೇವತೆಗಳನ್ನು ಸ್ತುತಿಸಲಾಗಿರುವುದು. ಆದರೆ **ಈ** ಸೂಕ್ತದ ೩೭ನೇ ಋಕ್ಕಿನ **ಯಥಾ ಚಿತ್** ಎಂಬ ಉತ್ತರಾರ್ಧದಲ್ಲಿಯೂ ಅದರ ಮುಂದಿನ ಎರಡು ಋಕ್ಕುಗಳಲ್ಲಿಯೂ (೩೮-೩೯) **ಕಶು** ಎಂಬ ರಾಜನ ದಾನಪ್ರಶಂಸೆಯು ಉಕ್ತವಾಗಿರುವುದೆಂದು ಹೇಳಲಾಗಿದೆ.

46. **ಮಹಾನ್** ಇಂದ್ರಃ ಎಂಬ ಆರನೆಯ ಸೂಕ್ತದಲ್ಲಿ ಇಂದ್ರನನ್ನು ಸ್ತುತಿಸಲಾಗಿದೆ. ಆದರೆ **ಈ** ಸೂಕ್ತದಲ್ಲಿ **ಪ್ರತ್ನಸ್ಯ** ಎಂಬ ಶಬ್ದವಿರುವ ೩೦ನೇ ಋಕ್ಕಿನಲ್ಲಿ ವೈಶ್ವಾನರಾಗ್ನಿಯು ಸ್ತುತನಾಗಿರುವನೆಂದು **ಶಾಕಪೂಣಿ** ಎಂಬ ಆಚಾರ್ಯರೂ **ಭಮ್ಯಶ್ವ** ಎಂಬುವರ ಪುತ್ರನಾದ **ಮುದ್ಗಲ** ಎಂಬುವರೂ ಅಭಿಪ್ರಾಯಪಡುವರು.

47. ಆದರೆ ೬ನೇ ಸೂಕ್ತದ **ಶತಮಹಂ** ಎಂದು ಮೊದಲಾಗುವ ೩ ಋಕ್ಕುಗಳಲ್ಲಿ (೪೬-೪೮) **ಪೆರ್ಥು** ಎಂಬುವನ ಪುತ್ರನಾದ **ತಿರಿಂದಿರ** ಎಂಬ ರಾಜನ ದಾನಪ್ರಶಂಸೆ ಇದೆ. ಮುಂದಿನ **ಪ್ರ ಯಂತ್** ಎಂಬ ೭ನೇ ಸೂಕ್ತದಲ್ಲಿ

---

44. In the last triplet of the last of Indra hymns herc (viii. 4. 19-21), the gift of king Kurunga is praised (with the words) 'Abundant wealth' (ಸ್ಥೂರಂ ರಾಧಃ : 19).

10. Deities of RV. viii. 5.18.

45. In the hymn addressed to the Asvins, 'From afar' **ದೂರಾತ್** : viii. 5), the thrity-seventh stanza, (that is) the hemistich 'As' (ಯಥಾ : 37) and the final couplet (38, 39) are traditionally held to be (in) praise of the gifts of Kasu.

46. 'Great' (ಮಹಾನ್ : viii. 6) is addressed to Indra ; in (the stanza) containing (the word) 'ancient' (ಪ್ರತ್ನ : viii. 6-30), Sakapuni, as well as Mudgala, son of Bhrnyasva, thinks Agni Vaisvanara is praised.

47. But in the triplet 'A hundred' (ಶತಂ : viii. 6. 46-48) the gift of Tirindira is recorded. 'Forth' (ಪ್ರ : viii. 7), the following (hymn), is

ಪರಂ ತು ಮಾರುತಂ ಪ್ರೇತಿ ಆ ನಸ್ತ್ರೀಣ್ಯಾಶ್ವಿನಾನಿ ಚ ॥ ೪೭ ॥
ತ್ವಮಾಗ್ನೇಯಂ ಯ ಇಂದ್ರೇತಿ ಷಳೈಂದ್ರಾಣ್ಯುತ್ತಮಸ್ಯ ತು ।
ಉಪೋತ್ತಮಾಯಾಮರ್ಧರ್ಚೇ ದೇವೋ ವಾಸ್ತೋಷ್ಪತಿಃ ಸ್ತುತಃ ॥ ೪೮ ॥
ಇದಮಾದಿತ್ಯದೇವತ್ಯಂ ತಿಸೃಭಿಸ್ತ್ವದಿತಿಃ ಸ್ತುತಾ ।
ಷಷ್ಠ್ಯಾ ಚತುರ್ಥ್ಯಾ ಸಪ್ತಮ್ಯಾ ಉತೇತ್ಯಾಶ್ವಿನ್ಯೃಗಷ್ಟಮೀ ॥ ೪೯ ॥
ಸ್ತುತಾಃ ಶಮಿತಿ ಪಚ್ಛಸ್ತು ಅಗ್ನಿಸೂರ್ಯಾನಿಲಾಸ್ತ್ರಯಃ ।
ವರುಣಾರ್ಯಮಮಿತ್ರಾಣಾಂ ಪ್ರಗಾಥೋ ಯಮಿತಿ ಸ್ತುತಿಃ ॥ ೫೦ ॥

ಮರುದ್ದೇವತೆಗಳನ್ನು ಸ್ತುತಿಸಲಾಗಿದೆ. ಅದರ ಮುಂದಿನ ಆ ನಃ ಎಂದು ಮೊದಲಾಗುವ ಮೂರು ಸೂಕ್ತಗಳಲ್ಲಿ (೮-೧೦) ಅಶ್ವಿನೀದೇವತೆಗಳನ್ನು ಸ್ತುತಿಸಲಾಗಿದೆ.

48. **ತ್ವಮಗ್ನೇ** ಎಂಬ ೧೧ ನೇ ಸೂಕ್ತಕ್ಕೆ ಅಗ್ನಿಯು ದೇವತೆಯು; **ಯೆ ಇಂದ್ರ** ಎಂಬ ಸೂಕ್ತದಿಂದ ಮುಂದಿನ ಆರು ಸೂಕ್ತಗಳಿಗೆ (೧೨-೧೭) ಇಂದ್ರನು ದೇವತೆಯು; ಆದರೆ ಕೊನೆಯ ಸೂಕ್ತದ (೧೭) ಕೊನೆಯ ಋಕ್ಕಿನ ಹಿಂದಿನ ಋಕ್ಕಿನ (೧೪) ಪೂರ್ವಾರ್ಧದಲ್ಲಿ **ವಾಸ್ತೋಷ್ಪತಿ** ಎಂಬ ದೇವತೆಯ ಸ್ತುತಿ ಇದೆ.

49. **ಇದಂ ಹ** ಎಂಬ ೧೪ ನೇ ಸೂಕ್ತಕ್ಕೆ ಆದಿತ್ಯರು ದೇವತೆಗಳು; ಆದರೆ ಈ ಸೂಕ್ತದ ೪, ೬, ೭ ನೇ ಋಕ್ಕುಗಳಲ್ಲಿ ಅದಿತಿಯನ್ನೂ ೮ ನೇ ಋಕ್ಕಿನಲ್ಲಿ ಅಶ್ವಿನೀದೇವತೆಗಳನ್ನೂ ಸ್ತುತಿಸಲಾಗಿದೆ.

೧೯ ನೇ ಸೂಕ್ತದ ದೇವತೆ ಮತ್ತು ತ್ರಸದಸ್ಯುರಾಜನ ದಾನಪ್ರಶಂಸೆ

50. ೧೪ ನೇ ಸೂಕ್ತದ **ಶಮಗ್ನಿರಗ್ನಿಭಿಃ** ಎಂಬ ೯ ನೇ ಋಕ್ಕಿನಲ್ಲಿ ಅಗ್ನಿ, ಸೂರ್ಯ, ವಾಯು ಎಂಬ ಮೂವರು ದೇವತೆಗಳು ಮೂರು ಪಾದಗಳಲ್ಲಿ ಒಬ್ಬೊಬ್ಬರಂತೆ ಕ್ರಮವಾಗಿ ಸ್ತುತಿಸಲ್ಪಟ್ಟಿರುವರು. ೧೯ ನೇ ಸೂಕ್ತದ **ಯೆಮಾದಿತ್ಯಾಸಃ** ಎಂಬ ಪ್ರಗಾಥ ಛಂದಸ್ಸಿನ ೨ ಋಕ್ಕುಗಳಲ್ಲಿ(೩೪-೩೫)ಮಿತ್ರಾವರುಣಾರ್ಯಮರ ಸ್ತುತಿ ಇರುವುದು.

---

addressed to the Maruts; and the three 'Hither to us' (ಆ ನಃ; viii. 8-10) are addressed to the Asvins.

48. 'You' (ತ್ವಂ: viii. 11) is addressed to Agni. 'Which, O Indra' (ಯ ಇಂದ್ರ: viii. 12-1) are six (12-17) addressed to Indra; but in a hemistich of the last (stanza) but one of the last (viii. 17-14) the god Vastospati is praised.

49. 'This' (ಇದಂ: viii. 18) has the Adityas as its deities: with three (of its stanzas), the sixth, the fourth, and the seventh, Aditi is praised; the eigth stanza, 'And' (ಉತ), is addressed to the Asvins.

11. RV. viii. 19: praise of Trasadasyu's gifts.

50. (In) 'Blessing' (ಶಂ: viii. 18-9) the three (gods) Fire (agni), Sun (surya), Wind (ಅನಿಲ) are (respectively) praised in successive verses (ಪಚ್ಛಃ). The pragatha couplet 'Whom' (ಯಂ: viii. 19-34, 35) is (in) praise of Varuna, Aryaman, and Mitra,

ಅಗ್ನೇಯೇ ಸ್ತುತೀ ರಾಜರ್ಷೇಸ್ತ್ರಸದಸ್ಯೋರಿಹಾದಿತಿ ।
ಪಂಚಾಶತಂ ವಧೂನಾಂ ಚ ಗವಾಂ ತಿಸ್ರಶ್ಚ ಸಪ್ತತೀಃ ॥ ೫೦ ॥

ಅಶ್ವೋಷ್ಟ್ರಾಣಾಂ ತಥೈವಾಸೌ ವಾಸಾಂಸಿ ವಿವಿಧಾನಿ ಚ ।
ರತ್ನಾನಿ ವೃಷಭಂ ಶ್ಯಾವಂ ತಾಸಾಮಗ್ರೇಸರಂ ಪತಿಂ ॥ ೫೨ ॥

ಕೃತ್ವಾ ದಾರಾನೃಷಿರ್ಗಚ್ಛನ್ನಿಂದ್ರಾಯೈತಚ್ಛಶಂಸ ಚ ।
ವಯಂ ಸೂಕ್ತೇನ ಶಕ್ರಂ ಚ ಪ್ರೀತಸ್ತೇನ ಶಚೀಪತಿಃ ॥ ೫೩ ॥

ಋಷೇ ವರಂ ವೃಣೀಷ್ವೇತಿ ಪ್ರಹ್ವಸ್ತಮೃಷಿರಬ್ರವೀತ್ ।
ಕಾಕುತ್ಸ್ಥಕನ್ಯಾಃ ಪಂಚಾಶದ್ಯುಗಪದ್ರಮಯೇ ಪ್ರಭೋ ॥ ೫೪ ॥

51. ಅಗ್ನಿದೇವತಾಕವಾದ ಈ ೧೯ನೇ ಸೂಕ್ತದ **ಅದಾನ್ಮೇ** ಎಂದು ಮೊದಲಾಗುವ ೨ ಋಕ್ಕುಗಳಲ್ಲಿ (೩೬-೩೭) **ತ್ರಸದಸ್ಯು** ಎಂಬ ರಾಜರ್ಷಿಯ ದಾನಪ್ರಶಂಸೆ ಇದೆ. ಅಲ್ಲಿ ಆ ರಾಜನು ೫೦ ವಧುಗಳನ್ನೂ (ಸ್ತ್ರೀಯರನ್ನೂ) ೨೧೦ ಗೋವುಗಳನ್ನೂ,

52. ಅನೇಕ ಕುದುರೆಗಳನ್ನೂ, ಒಂಟೆಗಳನ್ನೂ, ನಾನಾವಿಧವಸ್ತ್ರಗಳನ್ನೂ, ರತ್ನಗಳನ್ನೂ (ಒಡವೆಗಳನ್ನೂ) ತನ್ನ ಹಿಂಡಿಗೆ ನಾಯಕನಂತಿರುವ ಕಂದುಬಣ್ಣದ ಒಂದು ವೃಷಭ (ಹೋರಿ) ಯನ್ನೂ ದಾನವಾಗಿ ಕೊಟ್ಟನೆಂಬ ಪ್ರಶಂಸೆ ಇದೆ.

53. ರಾಜರ್ಷಿಯು ದಾನವಾಗಿ ಇತ್ತ ವಧುಗಳನ್ನು ವಿವಾಹವಾಗಿ ಆ ಋಷಿಯು ತನ್ನ ವಾಸಸ್ಥಾನಕ್ಕೆ ಹೋಗಿ ಸಕಲವನ್ನೂ ಇಂದ್ರನಿಗೆ ತಿಳಿಸಿದನು ಮತ್ತು **ವಯಮು ತ್ವಾ** ಎಂಬ ೨೧ನೇ ಸೂಕ್ತದಿಂದ ಇಂದ್ರನನ್ನು ಸ್ತುತಿಸಿದನು. ಅದರಿಂದ ಪ್ರೀತನಾದ ಇಂದ್ರನು, ಋಷಿಯನ್ನು ಕುರಿತು,

54. ಎಲೈ ಋಷಿಯೇ, ನಿನ್ನ ಸ್ತುತಿಯಿಂದ ನಾನು ಸಂತುಷ್ಟನಾಗಿರುವೆನು. ಬೇಕಾದ ವರವನ್ನು ಕೇಳಿಕೋ ಎನ್ನಲು ಋಷಿಯು, ಎಲೈ ಇಂದ್ರನೇ ಕಾಕುತ್ಸ್ಥವಂಶದ ಈ ಐವತ್ತುಮಂದಿ ಕನ್ಯೆಯರನ್ನೂ ನಾನು ಏಕಕಾಲದಲ್ಲಿ ರಮಿಸಲು ಸಾಮರ್ಥ್ಯವನ್ನು ಕೊಡು ಎಂದು ಕೇಳಿದನು.

---

51. in the (hymn) addressed to Agni. 'He has given (ಅದಾತ್ : viii. 19-36, 7) are (two stanzas in) praise of the royal seer Trasadasyu.

He gave fifty maidens and three herds of seventy (ಸಪ್ತತೀಃ) cows.

52. horses, and camels, and he also (gave) various garments, jewels, a brown bull, the lord that led those (herds)

53. Having wedded, the seer as he went on his way proclaimed (all) this to Indra, and with the hymn 'We' (ವಯಂ : viii. 21) (praised) Sakra. Pleased therby the Lord of Sachi.

54. (said), 'O seer, choose a boon'. Humbly the seer replied to him : 'I (will) enjoy O Lord, simultaneously the fifty maidens of the race of Kakutstha,

ಕಾಮತೋ ಬಹುರೂಪತ್ವಂ ಯೌವನಂ ಚಾಕ್ಷಯಂ ರತಿಂ ।
ಶಂಖನಿಧಿಂ ಪದ್ಮನಿಧಿಂ ಮದ್ಗೃಹೇಷ್ವನಪಾಯಿನಂ ॥ ೫೫ ॥

ಪ್ರಾಸಾದಾನ್ವಿಶ್ವಕರ್ಮಾಸೌ ಸೌವರ್ಣಾಂಸ್ತ್ವತ್ಪ್ರಸಾದತಃ ।
ಕುರ್ವೀತ ಪುಷ್ಪವಾಟೀಂ ಚ ಪೃಥಕ್ತಾಸಾಂ ಸುರದ್ರುಮೈಃ ॥ ೫೬ ॥

ಮಾ ಭೂತ್ಸಪತ್ನೀಸ್ಪರ್ಧಾಸಾಂ ಸರ್ವಮಸ್ತ್ವಿತಿ ಚಾಬ್ರವೀತ್ ।
ಆ ಗಂತ ಮಾರುತಂ ಸೂಕ್ತಂ ವಯಮಿತ್ಯೈಂದ್ರಮುತ್ತರಂ ॥ ೫೭ ॥

ಋಷಿಯು ಇಂದ್ರನನ್ನು ಬೇಡಿದ ವರಗಳು, ಸೋಭರಿ ಮತ್ತು ಚಿತ್ರ ಎಂಬುವರ ವೃತ್ತಾಂತವು

55. ಋಷಿಯು ಇಂದ್ರನಿಂದ ಇನ್ನೂ ಕೆಲವು ವರಗಳನ್ನೂ ಕೇಳಿಕೊಂಡನು—ನಾನು ಇಚ್ಛಿಸಿದ ರೂಪಗಳನ್ನು ಪಡೆಯುವಂತೆಯೂ, ಯೌವನ, ರತಿಕ್ರೀಡೆಯಲ್ಲಿ ಯಾವಾಗಲೂ ಕಮ್ಮಿಯಾಗದ ಸಾಮರ್ಥ್ಯವುಂಟಾಗಬೇಕು ಶಂಖನಿಧಿ, ಪದ್ಮನಿಧಿ ಎಂಬ ನಿಧಿನಿಕ್ಷೇಪಗಳು ಯಾವಾಗಲೂ ನನ್ನ ಮನೆಯಲ್ಲಿರಬೇಕು,

56. ವಿಶ್ವಕರ್ಮನೆಂಬ ದೇವಶಿಲ್ಪಿಯು ನಿನ್ನ ಅನುಗ್ರಹದಿಂದ ಸುವರ್ಣಮಯವಾದ ದೊಡ್ಡ ಅರಮನೆಯನ್ನು ನನಗೆ ನಿರ್ಮಿಸಿಕೊಡಬೇಕು, ನನ್ನ ಐವತ್ತುಮಂದಿ ಭಾರ್ಯೆಯರಿಗೆ ಪ್ರತ್ಯೇಕವಾಗಿ (ಒಬ್ಬೊಬ್ಬರಿಗೆ ಒಂದರಂತೆ) ಫಲಪುಷ್ಪಭರಿತವಾದ ದಿವ್ಯವೃಕ್ಷಗಳಿಂದ ಕೂಡಿದ ಉದ್ಯಾನವನಗಳು,

57. ನನ್ನ ಐವತ್ತುಮಂದಿ ಪತ್ನಿಯರಲ್ಲಿ ಪರಸ್ಪರ ವಿರೋಧವಿಲ್ಲದೆ ಎಲ್ಲರೂ ಐಕಮತ್ಯದಿಂದ ಸಹಕರಿಸಬೇಕು ಎಂಬ ಈ ವರಗಳನ್ನು ಕೇಳಿದನು. ಇಂದ್ರನು ಹಾಗೆಯೇ ಆಗಲೆಂದು ಅವನು ಕೇಳಿದ ವರಗಳನ್ನೆಲ್ಲಾ ಕೊಟ್ಟನು. **ಆ ಗಂತ** ಎಂಬ ೨೦ ನೇ ಸೂಕ್ತದಲ್ಲಿ ಮರುದ್ದೇವತೆಗಳನ್ನೂ **ವಯಮು ತ್ವಾಂ** ಎಂಬ ೨೧ ನೇ ಸೂಕ್ತದಲ್ಲಿ ಇಂದ್ರನನ್ನೂ ಸ್ತುತಿಸಲಾಗಿದೆ.

12. The boons choosen by the seer ; Story of Sobhari and Chitra.

55. (and choose) the assumptioa of many forms at will, youth, and everlasting enjoyment, the conch-trrasure, the lotus-treasure always remaining in my house.

56. May the famous (ಅಸೌ) Visvakarman fashion (for me) palaces of gold by your favour, and a flower garden with celestial trees for (each of) those (spouses) separately.

57. and let there be no co-wife rivarly among these (fifty spouses). And he (Indra) said, 'All this shall be (fullfilled).

'Come hither' (ಆ ಗಂತಾ : viii. 20) is a hymn addressed to the Maruts ; the next one, 'We (ವಯಂ : viii. 21), is addressed to Indra.

ಕಾಣ್ವಸ್ಯ ಸೋಭರೇಶ್ಚೈವ ಯಜತೋ ವಂಶಜೈಃ ಸಹ ।
ಕುರುಕ್ಷೇತ್ರೇ ಯವಾಞ್ಜಿಘ್ನುರ್ಹವೀಂಷಿ ವಿವಿಧಾನಿ ಚ ॥ ೫೮ ॥
ಅಖುವಃ ಸೋಽಭಿತುಷ್ಟಾವ ಇಂದ್ರಂ ಚಿತ್ರಂ ಸರಸ್ವತೀಂ ।
ಇಂದ್ರೋ ವೇತ್ಯನಯರ್ಚಾ ಸ ದಾನಶಕ್ತಿಂ ಪ್ರಕಾಶಯನ್ ॥ ೫೯ ॥
ಅಖುರಾಜೋಽಭಿಮಾನಾಚ್ಚ ಪ್ರಹರ್ಷಿತಮನಾಃ ಸ್ವಯಂ ।
ಸಂಸ್ತುತೋ ದೇವವಚ್ಚಿತ್ರ ಋಷಯೇ ತು ಗವಾಂ ದದೌ ॥ ೬೦ ॥
ಅಯುತಾನಾಂ ಸಹಸ್ರಂ ವೈ ನಿಜಗ್ರಾಹ ಸ್ತುವನ್ನೃಷಿಃ ।
ಋಷಿಂ ಚೋವಾಚ ಹೃಷ್ಟಾತ್ಮಾ ನಾಹಮರ್ಹಾಮ್ಯೃಷೇ ಸ್ತುತಿಂ ॥ ೬೧ ॥

58. ಕಣ್ವಋಷಿಯ ಪುತ್ರನಾದ ಸೋಭರಿ ಎಂಬ ಋಷಿಯು ತನ್ನ ವಂಶದ ಇತರ ಋಷಿಗಳೊಡನೆ ಸೇರಿ ಕುರುಕ್ಷೇತ್ರವೆಂಬ ಸ್ಥಳದಲ್ಲಿ ಯಜ್ಞಮಾಡುತ್ತಿರುವಾಗ ಯಜ್ಞಾಹುತಿಗಾಗಿ ಸಿದ್ಧಪಡಿಸಿದ್ದ ಯವಧಾನ್ಯವನ್ನೂ ನಾನಾ ವಿಧ ಹವಿಸ್ಸುಗಳನ್ನೂ,

59. ಇಲಿಗಳು ತಿಂದುಹಾಕಿದವು. ಆದ್ದರಿಂದ ಆ ಸೋಭರಿಋಷಿಯು ಇಂದ್ರನನ್ನೂ, ಚಿತ್ರನೆಂಬ ರಾಜನನ್ನೂ ಸರಸ್ವತಿಯನ್ನೂ ಸ್ತುತಿಸಿ ಇಂದ್ರೋ ವೇತ್ಯ ಎಂಬ ೨೧ ನೇ ಸೂಕ್ತದ ೧೭ ನೇ ಋಕ್ಕಿನಿಂದ ಚಿತ್ರರಾಜನ ದಾನ ಮಾಡುವ ಸಾಮರ್ಥ್ಯವನ್ನು ಪ್ರಶಂಸೆಮಾಡಿರುವನು.

೨೨-೨೫ ನೇ ಸೂಕ್ತಗಳ ದೇವತೆಗಳು

60. ಬಳಿಕ ಇಲಿಗಳ ರಾಜನು ಋಷಿಯ ಸ್ತುತಿಯಿಂದ ಬಹಳ ಸಂತೋಷಪಟ್ಟನು. ಋಷಿಯು ಚಿತ್ರರಾಜನನ್ನು ದೇವತೆಗಳನ್ನು ಸ್ತುತಿಸುವಂತೆ ಸ್ತುತಿಸಿದ್ದರಿಂದ ಸಂತುಷ್ಟನಾಗಿ ಆ ಸೋಭರಿಋಷಿಗೆ

೯-೧೪ನೇ ಸೂಕ್ತಗಳ ದೇವತೆಗಳು ಮತ್ತು ೧೫.೧೬ನೇ ಸೂಕ್ತಗಳ ದೇವತೆಗಳು-ಮೂರು ವಿಧ ಅಗ್ನಿಗಳು.

152. ಆಗ ಬ್ರಹ್ಮಸ್ವರೂಪದ ಆಶರೀರವಾಣಿಯು ಕೇಳಿಸಿತು-ಎಲೈ ಇಂದ್ರನೇ, ದೇವತೆಗಳಾದ ನಿಮ್ಮಲ್ಲಿಯೇ ಇದ್ದು ನಿಮ್ಮರಕ್ಷಣೆಯಲ್ಲಿದ್ದ ವಿಶ್ವರೂಪನೆಂಬ ಬ್ರಾಹ್ಮಣನನ್ನು ನೀನು ಹಿಂದಿನಿಂದ ಕೊಂದಿರುವೆ ಆದ್ದರಿಂದ ನಿನಗೆ ಬ್ರಹ್ಮಹತ್ಯಾದೋಷವು ಪ್ರಾಪ್ತವಾಗಿದೆ.

---

150. Now Indra became aware that the seer (ತ್ರಿಶಿರಾಃ) had been sent by the Asuras among the gods. He then with his bolt quickly struck off those three heads of his,

151. The mouth with which he drank Soma became a francoline patridge (ಕಪಿಂಜಲ); that with which he drank Sura (became) a sparrow (ಕಲವಿಂಕ); while that with which he ate food became a partridge (ತಿತ್ತಿರಿ).

31. Deities of RV. x. 9-14.

152. Him (Indra) divine (ಬ್ರಾಹ್ಮೀ) Speech (ವಾಕ್) addressed : 'You are a Brahman-slayer, Lord of hundred powers (ಶತಕ್ರತು), since you have slain Visvarupa who sought refuge (ಪ್ರಪನ್ನ) with averted face.

ತಮಭ್ಯಸಿಂಚತ್ಸೋಕೇನ ಯುಷಿರಾಪ ಇತಿ ಸ್ವಯಂ ।
ಸಿಂಧುದ್ವೀಪೋಽಪನುತ್ತ್ಯರ್ಥಂ ತಸ್ಯಾಶ್ಲೀಲಸ್ಯ ಪಾಪ್ಮನಃ ॥ ೧೫೩ ॥
ನೈಥುನಾರ್ಥಮಭೀಪ್ಸಂತೀಂ ಪ್ರತ್ಯಾಚಷ್ಟೇ ಯಮಿಮಾಂ ಯಮಃ ।
ತದೋ ಚಿದಿತಿ ಸಂವಾದೋ ವಿವಸ್ವತ್ಸುತಯೋರಸ್ತಯೋಃ ॥ ೧೫೪ ॥
ವೃಷಾಗ್ನೇಯೇ ಹವಿರ್ಧಾನೇ ಯುಜೇ ವಾಮಿತ್ರ ಸಂಸ್ತುತೇ ।
ಪರೇಯಿವಾಂಸಮಿತ್ಯತ್ರ ಸ್ತೂಯತೇ ಮಧ್ಯಮೋ ಯಮಃ ॥ ೧೫೫ ॥
ಅಥರ್ವಾಣೋಽಥ ಭೃಗವೋಽಙ್ಗಿರಸಃ ಪಿತರಃ ಸಹ ।
ಷಷ್ಠ್ಯಾಂ ದೇವಗಣಾಸ್ತತ್ರ ಸಂಸ್ತೂಯಂತೇ ದ್ಯುಭಕ್ತಯಃ ॥ ೧೫೬ ॥

153. ಇಂದ್ರನ ಈ ಬ್ರಹ್ಮಹತ್ಯಾ ದೋಷಪರಿಹಾರಾರ್ಥವಾಗಿ ಸಿಂದುದ್ವೀಪನೆಂಬ ಋಷಿಯು **ಆಪೋ ಹಿ ಷ್ಠಾ** ಎಂಬ ೯ನೇ ಸೂಕ್ತದ ಮಂತ್ರಗಳಿಂದ ನೀರನ್ನು ತೆಗೆದುಕೊಂದು ಪ್ರೋಕ್ಷಣೆಮಾಡಿದನು.

154. ವಿವಸ್ವಂತನ ಪುತ್ರಿಯಾದ ಯಮಿಾ ಎಂಬ ಸ್ತ್ರೀಯು ತನ್ನ ಅಣ್ಣನಾದ ಯಮನಲ್ಲಿಯೇ ಅನುರಕ್ತಳಾಗಿ ಅವನೊಡನೆ ರತಿಸುಖವನ್ನು ಅಪೇಕ್ಷಿಸಿದಾಗ ಆ ಯಮಯಮಿಯರ ಮಧ್ಯೆ ನಡೆದ ಸಂಭಾಷಣೆಯು **ಓ ಚಿತ್ಸಖಾಯಂ** ಎಂಬ ೧೦ ನೇ ಸೂಕ್ತದಲ್ಲಿ ಋಷಿಯು ವಿವರಿಸಿರುವನು.

155. **ವೃಷಾ ವೃಷ್ಣೇ** ಎಂದು ಪ್ರಾರಂಭವಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೧೧-೧೨) ಅಗ್ನಿಯನ್ನು ಸ್ತುತಿಸಲಾಗಿದೆ. ಇದರ ಮುಂದಿನ **ಯುಜೇ ವಾಂ** ಎಂಬ ೧೩ನೇ ಸೂಕ್ತದಲ್ಲಿ **ಹವಿರ್ಧಾನೇ** ಎಂಬ ಸೋಮಲತೆಗಳನ್ನು ತುಂಬಿ ತರುವ ಎರಡು ಗಾಡಿಗಳನ್ನು ಸ್ತುತಿಸಲಾಗಿದೆ. **ಪರೇಯಿವಾಂಸಂ** ಎಂಬ ೧೪ನೇ ಸೂಕ್ತದಲ್ಲಿ ಮಧ್ಯಮಸ್ಥಾನದೇವತೆಯಾದ ಯಮನನ್ನು ಸ್ತುತಿಸಲಾಗಿದೆ.

156. ಈ ೧೪ನೇ ಸೂಕ್ತದ ಆರನೆಯ ಋಕ್ಕಿನಲ್ಲಿ, ಅಥರ್ವಾಣರು, ಭೃಗುಗಳು, ಅಂಗಿರಸರು, ಪಿತೃಗಳು (ಇವರೆಲ್ಲರೂ ಪಿತೃದೇವತೆಗಳಲ್ಲಿ ಬೇರೆ ಬೇರೆ ಪಂಗಡದವರು) ಸ್ವರ್ಗಲೋಕಕ್ಕೆ ಸಂಬಂಧಪಟ್ಟಿರುವ ಕೆಲವು ದೇವತೆಗಳ ಗುಂಪುಗಳು, ಇವರೆಲ್ಲರನ್ನೂ ಸ್ತುತಿಸಲಾಗಿದೆ.

---

153. Him (Indra) the Sindhudvipa himself besprinkled, to the accompaniment of the hymn (ಸೂಕ್ತೇನ) 'O waters' (ಆಪಃ : x. 9), for the removal of that unpropitious sin.

154. Yama rejects Yami who solicits him with a view to sexual intercourse: the dialogue, 'Hither, indeed' (ಓಚಿತ್ : x. 10) of those two children of Vivasvat is (descriptive of) that.

155. The two (hymns beginning) 'The bull' (ವೃಷಾ : x. 11-12) are addressed to Agni. In the hymn (ಅತ್ರ) 'I yoke for you' (ಯುಜೇ ವಾಂ x. 13) the two oblation carts are praised together. In 'Him who has passed away' (ಪರೇಯಿವಾಂಸಂ : x. 14) the Middle Yama is praised.

156. Then the Atharvans, the Bhrgus, the Angirases, Fathers are praised together in the sixth (stanza) there (x. 14-6), as groups of gods (ದೇವಗಣ) connected with heaven (ದ್ಯುಭಕ್ತಿ).

ಪಿತೃಭಿಶ್ಚಾಂಗಿರೋಭಿಶ್ಚ ಸಂಸ್ತುತೋ ದೃಶ್ಯತೇ ಯಮಃ ।
ಮಂತ್ರೇಷು ಬಹುಶಃ ಸಾದೇ ವಿವಸ್ವಂತಂ ಪಿತಾ ಹ್ಯಸಿ ॥ ೧೫೭ ॥

ಸಂಸ್ಕಾರ್ಯಪ್ರೇತಸಂಯುಕ್ತೈಃ ಪಿತೃಭಿಃ ಸ್ತೂಯತೇ ಯಮಃ ।
ಪ್ರೇಹಿ ಪ್ರೇಹೀತಿ ತಿಸೃಷು ಪ್ರೇತಾಶಿಷ ಉದಾಹೃತಾಃ ॥ ೧೫೮ ॥

ಪಿತೃಣಾಂ ಹಿ ಪತಿರ್ದೇವೋ ಯಮಸ್ತಸ್ಮಾತ್ಸ ಸೂಕ್ತಭಾಕ್ ।
ಅತಿ ದ್ರವ ತೃಚೇ ಶ್ವಾನೌ ಪರಂ ಪಿತ್ರ್ಯಮುದೀರಣಾಂ ॥ ೧೫೯ ॥

157. ಅನೇಕ ಮಂತ್ರಗಳಲ್ಲಿ ಯಮನು ಪಿತೃದೇವತೆಗಳೊಡನೆಯೂ ಅಂಗಿರಸರೊಡನೆಯೂ ಸ್ತುತಿಸ ಲ್ಪಟ್ಟಿರುವುದು ಕಂಡುಬರುವುದು. ೧೪ ನೇ ಸೂಕ್ತದ ೫ ನೇ ಋಕ್ಕಿನ **ವಿವಸ್ವಂತಂ ಹುವೇ** ಎಂಬ ಉತ್ತರಾರ್ಧದಲ್ಲಿ ಯಮನನ್ನೇ ಪಿತೃವೆಂದು ಕರೆದು ಸ್ತುತಿಸಲಾಗಿದೆ.

158. ಮೃತರಾದವರ ಪ್ರೇತ (ಅಂತ್ಯ) ಸಂಸ್ಕಾರಕರ್ಮಗಳಲ್ಲಿ ಯಮನು ಪಿತೃಗಣಗಳೊಡನೆ ಸ್ತುತನಾಗಿರುವನು. ೧೪ ನೇ ಸೂಕ್ತದ **ಪ್ರೇಹಿ ಪ್ರೇಹಿ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೭-೯) ಮೃತರಾದವರ ವಿಷಯದಲ್ಲಿ ಒಳ್ಳೆಯದನ್ನು ಹಾರೈಸಿ ಆಶೀರ್ವಚನವನ್ನು ಪಠಿಸಲಾಗಿದೆ.

159. ಯಮನು ಪಿತೃದೇವತೆಗಳಿಗೆ ಪ್ರಭು (ಪತಿ) ವಾಗಿರುವನು. ಆದ್ದರಿಂದ ಪಿತೃಗಳನ್ನು ಸ್ತುತಿಸಿರುವ ಈ ೧೪ ನೇ ಸೂಕ್ತಕ್ಕೆ ಅವನೇ ಪ್ರಧಾನದೇವತೆಯು. ೧೪ ನೇ ಸೂಕ್ತದ **ಅತಿ ದ್ರವ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೧೦-೧೨) ಯಮನ ಎರಡು ನಾಯಿಗಳನ್ನು ಸ್ತುತಿಸಲಾಗಿದೆ. **ಉದೀರತಾಂ** ಎಂಬ ಮುಂದಿನ ೧೫ ನೇ ಸೂಕ್ತದಲ್ಲಿ ಪಿತೃಗಳನ್ನು ಸ್ತುತಿಸಲಾಗಿದೆ.

---

32. Deities of RV. x. 14 (continued), 15-16. Three Agnis.

157. Yama is frequently seen praised with the Fathers and the Angirases in the formulas ; for in the verse ‘ vivasvat ’ (**ವಿವಸ್ವಂತ** : x. 14.5) he (himself appears as) a Father.

158. Yama is praised with the Fathers in conjunction with the deceased man who is to be hallowed (**ಸಂಸ್ಕಾರ್ಯ**). In the three (stanzas) ‘ Go forth, go forth ’ (**ಪ್ರೇಹಿ ಪ್ರೇಹಿ** : x. 14, 7-9) prayers for the deceased man are uttered.

159. The god Yama is Lord af the Fathers ; therefore he owns the hymn (**ಸೂಕ್ತಭಾಜ**).

In the triplet ‘ Run past ’ (**ಅತಿ ದ್ರವ** : x. 14. 10-12) the two dogs (are praised). The following (Hymn) ‘ Let them arise ’ (**ಉದೀರತಾಂ** : x. 15) is addressed to the Fathers.

ಉತ್ತರೇಣ ತು ಸೂಕ್ತೇನ ಶ್ಮಶಾನೇ ಕರ್ಮ ಶಂಸತಿ ।
ಪಿತೃದೇವಾಸುರಾಣಾಂ ಚ ಅಭವನ್ನಗ್ನಯಸ್ತ್ರಯಃ
ಹವ್ಯಕವ್ಯವಹೌ ಚೋಭೌ ಸಹರಕ್ಷಾಶ್ಚ ನಾಮ ಯಃ ॥ ೧೬೦ ॥
ತತ್ರ ಮೈನಮಿತಿ ತ್ವೇತತ್ಕವ್ಯವಾಹನಸಂಸ್ತುತಿಃ ।
ಇತರಾಣಿ ತು ದೈವಸ್ಯ ಸ್ತುತಿರ್ನಾಸ್ಯಾ ಸುರಸ್ಯ ಚ ॥ ೧೬೧ ॥
ಅಭವನ್ನಿಥುನಂ ತ್ವಷ್ಟುಃ ಸರಣ್ಯೂಸ್ತ್ರಿಶಿರಾಃ ಸಹ ।
ಸ ವೈ ಸರಣ್ಯೂಂ ಪ್ರಾಯಚ್ಛತ್ಸ್ವಯಮೇವ ವಿವಸ್ವತೇ ॥ ೧೬೨ ॥

160. ಮುಂದಿನ ಸೂಕ್ತದಲ್ಲಿ ಶ್ಮಶಾನದಲ್ಲಿ ನಡೆಯುವ ಅಂತ್ಯಕ್ರಿಯೆಗಳನ್ನು ನಿಯಂಸಲಾಗಿದೆ. ಪಿತೃ, ದೇವತೆಗಳು, ಅಸುರರು, ಇವರಿಗೆ ಸಂಬಂಧಪಟ್ಟಂತೆ ಮೂರುವಿಧವಾಸ ಅಗ್ನಿಗಳಿರುವವು. ಹೇಗೆಂದರೆ ದೇವತೆಗಳಿಗೆ ಹವ್ಯ (ಹವಿಸ್ಸು) ವನ್ನು ವಹಿಸುವ ಅಗ್ನಿಗೆ **ಹವ್ಯವಾಟ್** ಎಂತಲೂ ಪಿತೃಗಳಿಗೆ ಕವ್ಯ (ಅನ್ನ) ವನ್ನು ವಹಿಸುವ ಅಗ್ನಿಗೆ **ಕವ್ಯವಾಟ್** ಎಂತಲೂ ಹೆಸರು. ಯಜ್ಞಾದಿಕರ್ಮಗಳಲ್ಲಿ ಅಸುರರು ಬಂದು ವಿಘ್ನಮಾಡದಂತೆ ಅವರನ್ನು ತಡೆಗಟ್ಟುವ ಅಗ್ನಿಗೆ **ಸಹರಕ್ಷಃ** (ರಕ್ಷೋಹಾಗ್ನಿ) ಎಂದು ಹೆಸರು.

161. **ಮೈನಮಗ್ನೇ** ಎಂಬ ೧೬ ನೇ ಸೂಕ್ತದಲ್ಲಿ ಕವ್ಯವಾಹನನೆಂಬ ಅಗ್ನಿಯ ಸ್ತುತಿ ಇದೆ. ಇತರ ಸೂಕ್ತಗಳಲ್ಲಿ ಹವ್ಯವಾಹನನೆಂಬ ಅಗ್ನಿಯ ಸ್ತುತಿ ಇದೆ. ಆದರೆ ಇತರ ಸೂಕ್ತಗಳಲ್ಲಿ ಪಿತೃಗಳನ್ನಾಗಲೀ, ಅಸುರರನ್ನಾಗಲೀ ಸ್ತುತಿಸಿರುವುದು ಕಂಡುಬರುವುದಿಲ್ಲ.

ಸರಣ್ಯೂದೇವಿಯ ವೃತ್ತಾಂತ

162. ತ್ವಷ್ಟೃವಿಗೆ ಸರಣ್ಯೂ ಮತ್ತು ತ್ರಿಶಿರಾಃ ಎಂಬ ಈರ್ವರು ಅವಳೀಮಕ್ಕಳಿದ್ದರು. ಅವರಲ್ಲಿ ಸರಣ್ಯೂ ಎಂಬ ಕನ್ಯೆಯನ್ನು ವಿವಸ್ವಾನ್ ಎಂಬುವನಿಗೆ ತಾನೇ ನಿಂತು ವಿವಾಹಮಾಡಿಕೊಟ್ಟನು.

---

160. But with the following hymn (the seer) proclaims the rite in the burning ground.

There were three Agnis belonging (respectively) to the Fathers, the Gods, and the Asuras: the two who bear oblations (ಹವ್ಯ) and food offerings (ಕವ್ಯ) and he who is called Saharaksas. (ಸಹರಕ್ಷಃ)

161. Now with regard to these (ತತ್ರ) the (hymn) ' Not him ' (ಮೈನಂ x. 16) is (in) praise of the bearer of food offerings (ಕವ್ಯ). Other (hymns) however are (in) praise of the divine (Agni), not of this one (connected with the Fathers), nor of the demoniac one (ಅಸುರ).

33. Story of Saranyu : RV. x. 17.

162. Tvastr had twin children, Saranyu as well as Trisiras. He himself gave Saranyu in marrige to Vivasvat.

ತತಃ ಸರಣ್ಯಾಂ ಜಜ್ಞಾತೇ ಯಮಯಮ್ಯೌ ವಿವಸ್ವತಃ ।
ತೌ ಚಾಪ್ಯುಭೌ ಯಮಾವೇವ ಜಾಯಾಂಸ್ತಾಭ್ಯಾಂ ತು ವೈ ಯಮಃ ॥ ೧೬೩ ॥
ಜ್ಯಾಯಾಂಸ್ತಾಭ್ಯಾಂ ತು ವೈ ಯಮಃ

ಇತಿ ಬೃಹದ್ದೇವತಾಯಾಂ ಷಷ್ಠೋಽಧ್ಯಾಯಃ

163. ವಿವಸ್ವಂತನಿಗೆ ಸರಣ್ಯೂದೇವಿಯಲ್ಲಿ ಯಮ (ಪುತ್ರ) ಯಮಿಾ (ಪುತ್ರಿ) ಎಂಬ ಇಬ್ಬರು ಅವಳೀ ಮಕ್ಕಳು ಹುಟ್ಟಿದರು. ಅವರಲ್ಲಿ ಯಮನೇ ಹಿರಿಯವನು.

ಇಲ್ಲಿಗೆ ಆರನೆಯ ಅಧ್ಯಾಯವು ಸಮಾಪ್ತವು.

163. Then Yama and Yami were begotten on Saranyu by Vivasvat. And these two also were twins but the elder of the two was Yama.

Thus ends 6th Chapter.

ಅಥ ಬೃಹದ್ದೇವತಾಯಾಂ ಸಪ್ತಮೋಽಧ್ಯಾಯಃ

ಸೃಷ್ಟ್ವಾ ಭರ್ತುಃ ಪರೋಕ್ಷಂ ತು ಸರಣ್ಯೂಃ ಸದೃಶೀಂ ಸ್ತ್ರಿಯಂ ।
ನಿಕ್ಷಿಪ್ಯ ಮಿಥುನಂ ತಸ್ಯಾವಶ್ವಾ ಭೂತ್ವಾಪಚಕ್ರಮೇ ॥ ೧ ॥

ಅವಿಜ್ಞಾನಾದ್ವಿವಸ್ವಾಂಸ್ತು ತಸ್ಯಾಮಜನಯನ್ಮನುಂ ।
ರಾಜರ್ಷಿರಭವತ್ಸೋಽಪಿ ವಿವಸ್ವಾನಿವ ತೇಜಸಾ ॥ ೨ ॥

ಸ ವಿಜ್ಞಾಯ ತ್ವಪಕ್ರಾಂತಾಂ ಸರಣ್ಯೂಮಶ್ವರೂಪಿಣೀಂ ।
ತ್ವಾಷ್ಟ್ರೀಂ ಪ್ರತಿ ಜಗಾಮಾಶು ವಾಜೀ ಭೂತ್ವಾ ಸಲಕ್ಷಣಃ ॥ ೩ ॥

ಏಳನೆಯ ಅಧ್ಯಾಯವು.

ಸರಣ್ಯೂವಿನ ವೃತ್ತಾಂತ (ಮುಂದುವರೆದುದು.)

1. ಒಂದಾನೊಂದು ಸಮಯದಲ್ಲಿ ತನ್ನ ಪತಿಯು ಮನೆಯಲ್ಲಿಲ್ಲದ ಸಮಯದಲ್ಲಿ ಸರಣ್ಯೂವು ತನ್ನಂತೆಯೇ ಇರುವ ಒಂದು ಪ್ರತಿಕೃತಿಯನ್ನು ಸ್ತ್ರೀರೂಪವನ್ನು ನಿರ್ಮಿಸಿ (ಸೃಷ್ಟಿಸಿ) ಆ ಸ್ತ್ರೀಯ ವಶಕ್ಕೆ ತನ್ನ ಇಬ್ಬರು ಮಕ್ಕಳನ್ನು (ಯಮ ಮತ್ತು ಯಮಿಯಾ) ಒಪ್ಪಿಸಿ ತಾನು ಅಶ್ವರೂಪಿಣಿಯಾಗಿ ಹೊರಟುಹೋದಳು.

2. ವಿವಸ್ವಂತನು ಮನೆಗೆ ಬಂದ ಮೇಲೆ ಅವನಿಗೆ ಈ ಕೃತ್ರಿಮವು ಗೊತ್ತಾಗಲಿಲ್ಲ. ಆ ಕೃತಕಸ್ತ್ರೀಯಲ್ಲಿ ವಿವಸ್ವಂತನು ಮನುವೆಂಬ ಪುತ್ರನನ್ನು ಉತ್ಪತ್ತಿಮಾಡಿದನು. ಆ ಮನುವೂ ಸಹ ತನ್ನ ತಂದೆಯಾದ ವಿವಸ್ವಂತನಂತೆ ಅತಿತೇಜಸ್ವಿಯಾದ ರಾಜರ್ಷಿಯಾದನು.

3. ಕೆಲವುಕಾಲದ ಮೇಲೆ ತನ್ನ ಪತ್ನಿಯಾದ ಸರಣ್ಯೂದೇವಿಯು ನಡೆಸಿದ ಕೃತ್ರಿಮವು ಎಂದರೆ ಅಶ್ವರೂಪಿಣಿಯಾಗಿ ಹೊರಟುಹೋಗಿರುವುದು ಗೊತ್ತಾಯಿತು. ಆದ್ದರಿಂದ ವಿವಸ್ವಂತನು ತಾನೂ ಉತ್ತಮ ಲಕ್ಷಣಗಳುಳ್ಳ ಅಶ್ವರೂಪವನ್ನು ತಾಳಿ ತ್ವಷ್ಟೃಪುತ್ರಿಯಾದ ಆ ಸರಣ್ಯೂವಿದ್ದ ಕಡೆಗೆ ಬೇಗನೆ ಹೋದನು.

---

1. Story of Saranyu (continued).

1. Now Saranyu having created, in the absence of her husband, a female similar(to herself)and having entrusted to her the pair (of children), turned herself into a mare and departed.

2. But Vivasvat, in ignorance (of this), begot Manu on that (substitute). He (ಮನು) became a royal seer, like Vivasvat in brilliance.

3. When, however, he (ವಿವಸ್ವತ್) had become aware that Saranyu had departed in the shape of a mare, quickly went after the daughter of Tvastr, having turned himself into a horse with similar characteristics (to hers).

ಸರಣ್ಯೂಶ್ಚ ವಿವಸ್ವಂತಂ ವಿದಿತ್ವಾ ಹಯರೂಪಿಣಂ ।
ನೈಥುನಾಯೋಪಚಕ್ರಾಮ ತಾಂ ಚ ತತ್ರಾರುರೋಹ ಸಃ ॥ ೪ ॥

ತತಸ್ತಯೋಸ್ತು ವೇಗೇನ ಶುಕ್ರಂ ತದಪತದ್ಭುವಿ ।
ಉಪಾಜಿಘ್ರಚ್ಚ ಸಾ ತ್ವಶ್ವಾ ತಚ್ಛುಕ್ರಂ ಗರ್ಭಕಾಮ್ಯಯಾ ॥ ೫ ॥

ಆಘ್ರಾತಮಾತ್ರಾಚ್ಛುಕ್ರಾತ್ತು ಕುಮಾರೌ ಸಂಬಭೂವತುಃ ।
ನಾಸತ್ಯಶ್ಚೈವ ದಸ್ರಶ್ಚ ಯೌ ಸ್ತುತಾವಶ್ವಿನಾವಿತಿ ॥ ೬ ॥

ಇತಿಹಾಸಮಿಮಂ ಯಾಸ್ಕಃ ಸರಣ್ಯೂದೇವತೇ ದ್ವ್ಯೃಚೇ ।
ವಿವಸ್ವತಶ್ಚ ತ್ವಷ್ಟುಶ್ಚ ತ್ವಷ್ಟೇತಿ ಸಹ ಮನ್ಯತೇ ॥ ೭ ॥

4. ವಿವಸ್ವಂತನೇ ಅಶ್ವರೂಪದಿಂದ ತನ್ನ ಬಳಿಗೆ ಬಂದಿರುವನೆಂಬ ವಿಷಯವು ಅಶ್ವರೂಪದಿಂದಿದ್ದ ಸರಣ್ಯೂವೀಗೆ ತಿಳಿಯಿತು. ಆಗ ಅವಳು ಅವನೊಡನೆ ಸಂಭೋಗವನ್ನಿಚ್ಛಿಸಲು, ವಿವಸ್ವಂತನು ಅವಳ ಇಚ್ಛೆಯನ್ನು ಪೂರೈಸಿದನು.

5. ಅವರ ಸಂಭೋಗಕಾಲದಲ್ಲಿ ವಿವಸ್ವಂತನ ವೀರ್ಯವು ಭೂಮಿಯ ಮೇಲೆ ಬಿದ್ದಿತು. ಅಶ್ವರೂಪಿಣಿಯಾದ ಸರಣ್ಯೂವು ತನಗೆ ಗರ್ಭಧಾರಣೆಯಾಗಬೇಕೆಂಬ ಇಚ್ಛೆಯಿಂದ ನೆಲದ ಮೇಲೆ ಬಿದ್ದಿದ್ದ ಆ ವೀರ್ಯವನ್ನು ಮೂಸಿ ನೋಡಿದಳು.

6. ಮೂಸಿನೋಡಿದ ಮಾತ್ರಕ್ಕೆ ಗರ್ಭವುಂಟಾಗಿ ಅದರಿಂದ ಈರ್ವರು ಕುಮಾರರು ಜನಿಸಿದರು. ಅವರೇ ನಾಸತ್ಯ ಮತ್ತು ದಸ್ರ ಎಂಬ ಹೆಸರುಗಳಿಂದ ಪ್ರಸಿದ್ಧರಾಗಿ ಅಶ್ವಿನೀದೇವತೆಗಳೆಂದು ಸರ್ವರಿಂದಲೂ ಸ್ತುತಿಸಲ್ಪಡುವರು.

೧೭ ನೇ ಸೂಕ್ತದ ದೇವತೆಗಳು

7. ಈ ಇತಿಹಾಸವು ಸರಣ್ಯೂದೇವತಾಕವಾದ ೧೭ ನೇ ಸೂಕ್ತದ **ತ್ವಷ್ಟಾ ದುಹಿತ್ರೇ** ಎಂಬ ಎರಡು ಋಕ್ಕುಗಳಲ್ಲಿ (೧-೨) ಉಕ್ತವಾಗಿದೆಯೆಂದು ಯಾಸ್ಕರು ಹೇಳುವರು.

4. And Saranyu, recognising Vivasvat in the form of a steed, approached him for sexual intercourse, and he covered her there.

5. Then in their agitation the semen fell on the ground. And the mare, through desire of offspring, smelt the semen.

2. Story of Saranyu (concluded). Dalties of RV. x. 17.

6. Now from the semen which had just been smelt there came into being two youths, Nasatya and Dasra, who are praised as 'Asvins'.

7. Yaska regards this as a story of Vivasvat and Tvastr togetner in the couplet 'Tvastr' (**त्वष्टा** : x. 17. 1-2) which has Saranyu for its deity.

ಪೂಷೇತಿ ಸಾದೌ ಪೌಷ್ಣೌ ದ್ವ್ಯವಾಗ್ನೇಯೌವುತ್ತರೌ ತು ಯೌ ।
ಸ್ಯಾತ್ತೃತೀಯೋಽಪಿ ವಾ ಪೌಷ್ಣಸ್ತಿಸ್ರಶ್ಚಾನ್ಯಾಃ ಪರಾಸ್ತು ಯಾಃ ॥ ೮ ॥

ಆಪಾಂ ಸ್ತುತಿಸ್ತ್ರ್ಯೃಗತ್ರೈಕಾ ತೃಚಾತ್ಸಾರಸ್ವತಾತ್ಪರಾ ।
ಸ್ತುತಃ ಪರೋಕ್ಷಃ ಸೋಮಸ್ತು ದ್ರಪ್ಸ ಇತ್ಯುತ್ತರೇ ತೃಚೇ ॥ ೯ ॥

ಆಬ್ದೇವತಾಶೀರ್ವಾದೋ ವಾ ಪಯಸ್ವತ್ಯುತ್ತರಾ ತು ಯಾ ।
ಚತಸ್ರಸ್ತಾ ಸ್ತುತಿರ್ಮೃತ್ಯೋರಂತ್ಯೇ ಕ್ಲೃಪ್ತಾಶ್ಚ ಕರ್ಮಣಿ ॥ ೧೦ ॥

8. ಈ ೧೭ನೇ ಸೂಕ್ತದ **ಪೂಷಾ ತ್ವೇತಃ** ಎಂಬ ೩ನೇ ಋಕ್ಕಿನ ೧-೨ ಪಾದಗಳಲ್ಲಿ ಪೂಷದೇವನೂ ೩ನೇ ಪಾದದಲ್ಲಿ ಅಗ್ನಿಯೂ ಸ್ತುತರಾಗಿರುವರು ಅಥವಾ ೩ನೇ ಪಾದಕ್ಕೆ ಪೂಷನೇ ದೇವತೆಯೆಂದೂ ವಿಕಲ್ಪವಾಗಿ ಹೇಳಬಹುದು. ಮುಂದಿನ ಮೂರು ಋಕ್ಕುಗಳಲ್ಲಿ (೪-೬) ಪೂಷದೇವನನ್ನೇ ಸ್ತುತಿಸಲಾಗಿದೆ.

9. ಈ ಸೂಕ್ತದಲ್ಲಿರುವ ಒಂದು ಋಕ್ಕಿನಲ್ಲಿ ಎಂದರೆ ಸರಸ್ವತೀದೇವತಾಕವಾದ (೭-೯) ಋಕ್ಕುಗಳನಂತರ ಇರುವ ೧೦ನೇ ಋಕ್ಕಿನಲ್ಲಿ **ಆಪಃ** ಎಂಬ ಅಬ್ದೇವತೆಯನ್ನು ಸ್ತುತಿಸಲಾಗಿದೆ. ಮತ್ತು **ದ್ರಪ್ಸಃ** ಎಂದು ಮೊದಲಾಗುವ ಮುಂದಿನ ಮೂರು ಋಕ್ಕುಗಳಲ್ಲಿ (೧೧-೧೩) ಅಬ್ದೇವತೆಯ ಜತೆಯಲ್ಲಿ ಸೋಮನನ್ನೂ ಪ್ರಸಂಗವಶದಿಂದ ಸ್ತುತಿಸಲಾಗಿದೆ.

10. (ಈ ೧೭ನೇ ಸೂಕ್ತದಲ್ಲಿ) **ಪಯಸ್ವತೀಃ** ಎಂಬ ಮುಂದಿನ ೧೪ನೇ ಋಕ್ಕಿನಲ್ಲಿ **ಆಪಃ** ಎಂಬ ಅಬ್ದೇವತೆಯನ್ನು ಸ್ತುತಿಸಲಾಗಿದೆ ಅಥವಾ ಅಬ್ದೇವತಾಶೀರ್ವಾದವು ಉಕ್ತವಾಗಿದೆ. ೧೪ನೇ ಸೂಕ್ತದ ೧-೪ನೇ ಋಕ್ಕುಗಳಲ್ಲಿ ಮೃತ್ಯುದೇವತೆಯನ್ನು ಸ್ತುತಿಸಲಾಗಿದೆ ಮತ್ತು ಈ ಮಂತ್ರಗಳು ಅಂತ್ಯಸಂಸ್ಕಾರಗಳಲ್ಲಿ ಉಪಯೋಗಿಸಲ್ಪಡುವವು.

---

8. The two verses (beginning) 'Pusan' (**पूषा** : x. 17-3) are addressed to Pusan, but the two next (3) to Agni; even the third (3) may optionally (**वा**) be addressed to Pusan ; and the other three (stanzas) which follow (4-6) are also (addressed to him).

9. But one (stanza) in this hymn (**अत्र**), which follows the triplet addressed to Sarasvati (7-9), is (in) praise of the waters (10), while in the next triplet, 'The drop' (**द्रप्सः** : 11-13), Soma is praised indirectly (**परोक्ष**).

10. But the next (stanza), 'Rich in milk' (**पयस्वतीः** 14), has the waters for its deities or is a benediction. The (next) four (stanzas : x 18. 1-4) are (in) praise of Death and are applicable (**क्लृप्ताः**) in the funeral (**अन्त्य**) ceremony.

ಮೃತೇಶಿಷ್ವೇಭ್ಯ ಆಶಾಸ್ತೇ ಇಮೇ ಜೋಗ್ಜೀವನಂ ಪುನಃ ।
ಇಮಂ ಜೀವೇಭ್ಯ ಆಶಾಸ್ತೇ ತೇಭ್ಯಃ ಪರಿಧಿಕರ್ಮಣಿ ॥ ೧೧ ॥

ಯಥಾ ಧಾತ್ರೃತ್ವಷ್ಟ್ರಾ ತ್ವಾಷ್ಟ್ರೀ ತತೋ ಯೋನ್ಯಾ ಇಮಾಸ್ತ್ವತಿ ।
ಸ್ತ್ರೀಣಾಮಾಶಿಷಮಾಶಾಸ್ತೇ ತಯೈವಾಂಜನಕರ್ಮಣಿ ॥ ೧೨ ॥

ಉದೀರ್ಷ್ವ ನಾರೀತ್ಯನಯಾ ಮೃತಂ ಪತ್ನ್ಯನುರೋಹತಿ ।
ಭ್ರಾತಾ ಕನೀಯಾನ್ಪ್ರೇತಸ್ಯ ನಿಗದ್ಯ ಪ್ರತಿಷೇಧತಿ ॥ ೧೩ ॥

೧೪ ನೇ ಸೂಕ್ತದಲ್ಲಿ ಅಂತ್ಯಸಂಸ್ಕಾರಕ್ಕಾಗಿ ಉಪಯೋಗಿಸುವ ಕೆಲವು ಮಂತ್ರಗಳ ವಿವರಣೆ

11. ೧೪ ನೇ ಸೂಕ್ತದ **ಇಮೇ ಜೀವಾಃ** ಎಂಬ ೩ ನೇ ಋಕ್ಕಿನಲ್ಲಿ ಮೃತ್ಯುವಶರಾಗದೆ ಜೀವಂತರಾಗಿರುವವರ ವಿಷಯದಲ್ಲಿ ದೀರ್ಘಾಯುಸ್ಸನ್ನು ತೋರಿ ಪ್ರಾರ್ಥಿಸಲಾಗಿದೆ. **ಇಮಂ ಜೀವೇಭ್ಯಃ** ಎಂಬ ೪ ನೇ ಋಕ್ಕಿನಲ್ಲಿಯೂ ಮೇಲೆ ಹೇಳಿದಂತೆ ಜೀವಂತರಾಗಿರುವವರ ವಿಷಯದಲ್ಲಿ **ಪರಿಧಿ** ಎಂಬ ಕರ್ಮದಲ್ಲಿ ಶ್ರೇಯಸ್ಸನ್ನು ಕೋರಲಾಗಿದೆ.

12. **ಯಥಾ** ಎಂಬ ೫ ನೇ ಋಕ್ಕಿನಲ್ಲಿ ಧಾತೃವನ್ನೂ ಮುಂದಿನ ೬ ನೇ ಋಕ್ಕಿನಲ್ಲಿ ತ್ವಷ್ಟೃವನ್ನೂ ಸ್ತುತಿಸಲಾಗಿದೆ. **ಇಮಾ ನಾರೀಃ** ಎಂಬ ೭ ನೇ ಋಕ್ಕಿನಲ್ಲಿ—ಈ ಸ್ತ್ರೀಯರು ಕಣ್ಣುಗಳಿಗೆ ಕಪ್ಪನ್ನು ಹಚ್ಚಿಕೊಂಡು ಶೋಭನಾಲಂಕಾರಯುಕ್ತರಾಗಿ ಸುಮಂಗಲಿಯರಾಗಿ (ತಮ್ಮ ಪತಿಯರೊಡನೆ ಬಾಳುವವರಾಗಿ) ಬಹುಕಾಲ ಜೀವಿಸಿರಲೆಂಬ ಆಶ್ವಾಸನೆಯು ಉಕ್ತವಾಗಿದೆ.

13. **ಉದೀರ್ಷ್ವ ನಾರಿ** ಎಂಬ ೮ ನೇ ಋಕ್ಕಿನಲ್ಲಿ—ಮೃತನಾದ ಪುರುಷನ ಪತ್ನಿಯು ತನ್ನ ಪತಿಯು ಮೃತಶರೀರವನ್ನನುಸರಿಸಿ ಚಿತಿಯನ್ನೇರುತ್ತಾಳೆ. ಮೃತನ ತಮ್ಮನು ಹಾಗೆ ಮಾಡಬೇಡವೆಂದು ಹೇಳಿ ಆ ಸ್ತ್ರೀಯನ್ನು ತಡೆಯುತ್ತಾನೆ—ಎಂಬ ವಿಷಯವು ಉಕ್ತವಾಗಿದೆ.

---

3. Detailed account of the funeral hymns RV. x. 18.

11. The (stanza) 'These' (ಇಮೇ : x. 18-3) prays for long life for those who have escaped death ; 'For the living this' (ಇಮಂ ಜೀವೇಭ್ಯಃ : 4) again prays (for it) for them in the ceremony with the barrier (ಪರಿಧಿ).

12. 'As' (ಯಥಾ: x. 18-5) is addressed to Dhatr; the next to Tvastr (6), then with another (7), 'These wives'(ಇಮಾಃ),he (the seer) utters a prayer for the women in the ceremony with collyrium (ಅಂಜನ)

13. With the (stanza) 'Rise up, O woman' (ಉದೀರ್ಷ್ವ ನಾರಿ : x. 18-8) the wife ascends (the funeral pyre) after her dead (husband). The younger brother of the departed, repeating (the stanza), prohibits (her).

ಕುರ್ಯಾದೇತತ್ಕರ್ಮ ಹೋತಾ ದೇವರೋ ನ ಭವೇದ್ಯದಿ ।
ಪ್ರೇತಾನುಗಮನಂ ನ ಸ್ಯಾದಿತಿ ಬ್ರಾಹ್ಮಣಶಾಸನಾತ್ ॥ ೧೪ ॥
ವರ್ಣಾನಾಮಿತರೇಷಾಂ ಚ ಸ್ತ್ರೀಧರ್ಮೋಽಯಂ ಭವೇನ್ನ ವಾ ।
ಶಾಂತ್ಯರ್ಥಂ ಧನುರಾದಾನೇ ಪ್ರೇತಸ್ಯರ್ಚಂ ಧನುರ್ಜಪೇತ್ ।
ಯಸ್ಮಾದೇತಾಃ ಪ್ರಯುಜ್ಯಂತೇ ಶ್ಮಶಾನೇ ಚಾಂತ್ಯಕರ್ಮಣಿ ॥ ೧೫ ॥
ತಸ್ಮಾದ್ಧ್ರುವದೇತ್ರ್ಯೃಚಸ್ಯಾಸ್ಯ ದೇವತಾಂ ಮೃತ್ಯುಮೇವ ತು ।
ಮಂತ್ರೇಷು ಹ್ಯನಿರುಕ್ತೇಷು ದೇವತಾಂ ಕರ್ಮತೋ ವದೇತ್ ॥ ೧೬ ॥

14. ಮೃತನಿಗೆ ತಮ್ಮನಿಲ್ಲದಿದ್ದಲ್ಲಿ ಆ ಕಾರ್ಯವನ್ನು (ಸ್ತ್ರೀಯು ಪತಿಯೊಡನೆ ಸಹಗಮನಮಾಡುವುದನ್ನು ತಡೆಗಟ್ಟುವ ಕಾರ್ಯವನ್ನು) ಹೋತೃವು ಎಂದರೆ ಪುರೋಹಿತನು ಮಾಡಬೇಕು. ಏಕೆಂದರೆ ಮೃತನ ಪತ್ನಿಯು ತನ್ನ ಪತಿಯ ಶರೀರವನ್ನನುಸರಿಸಿ ಸಹಗಮನಮಾಡುವುದನ್ನು ಬ್ರಾಹ್ಮಣದ ವಾಕ್ಯವು ನಿಷೇಧಿಸುವುದು.

15 ಈ ಸಹಗಮನ ಪದ್ಧತಿಯು (ಸ್ತ್ರೀಧರ್ಮವು) ಇತರ ಜಾತಿಯವರಿಗೆ ಅನ್ವಯಿಸಬಹುದು ಅಥವಾ ಅನ್ವಯಿಸದಿರಬಹುದು. ಮೃತನಾದವನ ಕೈಯಲ್ಲಿದ್ದ ಧನುಸ್ಸನ್ನು ತೆಗೆಯುವಾಗ ಶಾಂತ್ಯರ್ಥವಾಗಿ **ಧನುರ್ಹಸ್ತಾತ್** ಎಂಬ ೯ನೇ ಋಕ್ಕನ್ನು ಪಠಿಸಬೇಕು. ಏಕೆಂದರೆ ಶ್ಮಶಾನದಲ್ಲಿ ಅಂತ್ಯಕ್ರಿಯೆಯು ನಡೆಯುತ್ತಿರುವಾಗ ಈ ಮಂತ್ರಗಳನ್ನು ಪಠಿಸುತ್ತಾ ಕಾರ್ಯಗಳನ್ನು ಮಾಡಬೇಕಾಗಿರುವುದು. ಎಂದರೆ ಅಂತ್ಯಕ್ರಿಯೆಗಳಲ್ಲಿ ಈ ಮಂತ್ರಗಳನ್ನು ಉಪಯೋಗಿಸುವುದು ರೂಢಿಯು.

ಯಾವ ದೇವತೆಯ ಹೆಸರೂ ಇಲ್ಲದ ಕೆಲವು ಮಂತ್ರಗಳು

16. ಈ ೧೮ನೇ ಸೂಕ್ತದಲ್ಲಿರುವ ೭-೯ನೇ ಋಕ್ಕುಗಳಿಗೆ ಮೃತ್ಯುವೇ ದೇವತೆಯೆಂದು ಹೇಳಬೇಕು. ಮಂತ್ರಗಳಲ್ಲಿ ದೇವತೆಗಳ ಹೆಸರುಗಳಿಲ್ಲದಿರುವಾಗ, ಆ ಮಂತ್ರಗಳಲ್ಲಿ ಯಾವ ಕರ್ಮದ ವಿವರಣೆ ಇದೆಯೋ ಅದನ್ನನುಸರಿಸಿ ಸಂದರ್ಭಾನುಸಾರವಾಗಿ ಆ ಮಂತ್ರಗಳಿಗೆ ಇಂತಹ ದೇವತೆಯೆಂದು ಹೇಳಬೇಕು. [ಉದಾಹರಣೆಗೆ-ಈ ೭-೯ನೇ ಋಕ್ಕುಗಳಲ್ಲಿ ಅಂತ್ಯಕರ್ಮಗಳ ವಿವರಣೆ ಇರುವುದರಿಂದ ಈ ಮಂತ್ರಗಳಿಗೆ ಮೃತ್ಯುವೇ ದೇವತೆಯೆಂದು ಹೇಳಬಹುದು ಎಂದಭಿಪ್ರಾಯವು.]

14. The Hotr ought to perform this rite, should there be no brother-in-law, because a Brahmana enjoins that (the widow) should not follow the departed (husband).

15. This law regarding women may or may not apply to the other castes.

In taking the bow (from the hand) of the departed man, one should mutter (stanza) 'The bow' (धनुः : x. 18-9) for the sake of averting evil. And because these (stanzas) are employed on the burning ground at the funeral ceremony.

4. Formulas in which no deity is mentioned.

16. One should state the deity of this triplet (x. 18. 7-9) to be Death (मृत्यु). For in the formulas (in which it is) not expressly mentioned, one should state the deity from the ceremony.

ಮಂತ್ರತಃ ಕರ್ಮತಶ್ಚೈವ ಪ್ರಜಾಪತಿರಸಂಭವೇ ।
ಪರಾಕ್ಷತಸ್ತೋ ಯಾಸ್ತ್ವತ್ರ ಉಪ ಸರ್ಪೇತಿ ಪಾರ್ಥಿವೀ ॥ ೧೬ ॥
ತಾಸಾಂ ಪ್ರಯೋಗಃ ಪ್ರೇತಸ್ಯ ಅಸ್ಥಿಸಂಚಯಕರ್ಮಣಿ ।
ಪ್ರತೀಚೀನೇ ಯಥಾಹಾನಿ ಅಪಹೃತ್ಯೇತರಾಣಿ ತು ॥ ೧೭ ॥
ಅಹಃಸ್ವ ಪಿತರೋ ದಧುರಿತ್ಯಾಶಾಸ್ತೇ೨ನ್ತ್ಯಯಾಶಿಷಃ ।
ಅಹಃಸ್ವಾಗಾಮಿಷು ಚ ಮಾಂ ಪ್ರಯಂತಂ ಸಮಜೀವಯನ್ ॥ ೧೮ ॥
ನಿವರ್ತಧ್ವಮಿತೀದಂ ತು ಗವಾಂ ಕೇಚಿದಪಾಂ ವಿದುಃ ।
ಅರ್ಧರ್ಚಃ ಪ್ರಥಮಾಯಾಸ್ತು ಅಗ್ನೀಷೋಮಾಯೇ ಉತ್ತರಃ ॥ ೨೦ ॥

17. ಒಂದು ಮಂತ್ರದಲ್ಲಿ ಹೇಳರುವ ವಿಷಯವಾಗಲಿ, ಕರ್ಮದ ವಿವರಣೆಯಾಗಲಿ ಸ್ಪಷ್ಟವಾಗಿರದಿದ್ದರೆ, ಅಂತಹ ಸಂದರ್ಭದಲ್ಲಿ ಆ ಮಂತ್ರಕ್ಕೆ ಪ್ರಜಾಪತಿಯೇ ದೇವತೆಯೆಂದು ಹೇಳಬೇಕು. ಇನ್ನು ೧೪ನೇ ಸೂಕ್ತದ ೧೦-೧೩ನೇ ಋಕ್ಕುಗಳಲ್ಲಿ ಮೊದಲನೆಯಿದಾದ **ಉಪ ಸರ್ಪ** ಎಂಬ ೧೦ನೇ ಋಕ್ಕಿನಲ್ಲಿ ಭೂಮಿಯನ್ನು ಪ್ರಾರ್ಥಿಸಲಾಗಿದೆ.

18-19. ಈ ನಾಲ್ಕು ಋಕ್ಕುಗಳನ್ನು (೧೦-೧೩) ಮುಖ್ಯವಾಗಿ ಮೃತನಾದವನ ಶರೀರವು ದಹಿಸಲ್ಪಟ್ಟ ನಂತರ ಅಲ್ಲಿರುವ ಅಸ್ಥಿಗಳನ್ನು (ಎಲಬುಗಳನ್ನು) ಒಟ್ಟಗೂಡಿಸುವ ಅಸ್ಥಿಸಂಚಯವೆಂಬ ಕರ್ಮದಲ್ಲಿ ಉಯೋಗಿಸಲಾಗುವುದು. ಈ ಸೂಕ್ತದ **ಪ್ರತೀಚೀನೆ** ಎಂಬ ಕೊನೆಯ ಋಕ್ಕಿನಲ್ಲಿ (೧೪) ಹಿಂದೆ ಕಳೆದುಹೋದ ದಿವಸಗಳಲ್ಲಿ ಪಿತೃಗಳು ನನ್ನನ್ನು ಹೇಗೆ ನೋಡಿಕೊಂಡರೋ ಅದರಂತೆ ಮುಂದೆ ಬರುವ ದಿವಸಗಳಲ್ಲಿಯೂ ನಾನು ಪೂರ್ಣಾಯುಸ್ಸಿನಿಂದ ಜೀವಿಸುವಂತೆ ಇಟ್ಟರಬೇಕೆಂಬ-ಆಶ್ವಾಸನೆಯನ್ನು ಆಶೀರ್ವಾದರೂಪದಲ್ಲಿ ಋಷಿಯು ವ್ಯಕ್ತಪಡಿಸಿದಾನೆ.

20. **ನಿವರ್ತಧ್ವಂ** ಎಂಬ ೧೯ನೇ ಸೂಕ್ತದಲ್ಲಿ ಗೋವುಗಳನ್ನು ಸ್ತುತಿಸಲಾಗಿದೆ. ಕೆಲವರು ಈ ಸೂಕ್ತಕ್ಕೆ **ಆಪಃ** ಎಂಬ ಅಬ್ದೇವತೆಯೇ ದೇವತೆಯೆಂದು ಹೇಳುವರು. ಈ ಸೂಕ್ತದ ಮೊದಲನೆಯ ಋಕ್ಕಿನ ಉತ್ತರಾರ್ಧದಲ್ಲಿ ಅಗ್ನಿ ಮತ್ತು ಸೋಮದೇವತೆಗಳು ಸ್ತುತಿಸಲ್ಪಟ್ಟಿರುವರು.

---

17. When there is lack (of a deity) from the (evidence of the) formula and the ceremony as well, Prajapati is (the deity).

Now as to the following four (stanzas : x. 18. 10-13) here, 'Approach' (ಉಪ ಸರ್ಪ ; 10) is addressed to the Earth.

18-19. Their application is in the ceremony of collecting the bones of the departed. Now with the last (stanza) 'In the future' (ಪ್ರತೀಚೀನೇ : x. 18,14) he (the seer) expresses a prayer (in saying), As having taken away (my) other days, the Fathers placed (me) in (past) days.

(So) they also restored me, about to die (ಪ್ರಯಂತಂ), to life in days to come.

20. Now the (hymn) 'Turn back' (ನಿವರ್ತಧ್ವಂ : x. 19) is (in praise) of Cows; some regard it as (in praise) of the Waters. The latter hemistich of the first (stanza : 1) is however, addressed to Agni-Soma.

ಐಂದ್ರೀ ಷಷ್ಠೀ ದ್ವಿತೀಯೌಯಾಮುಭೌ ದೇವೌ ನಿಷಾತಿತೌ ।
ದಶಾಕ್ಷರಂ ತು ಶಾಂತ್ಯರ್ಥಂ ಮಾನಸಂ ಸೂಕ್ತಮುಚ್ಯತೇ ॥ ೨೧ ॥
ತ್ರೀಣ್ಯೈಂದ್ರಾಣಿ ಕುಹೇತ್ಯತ್ರ ಆಗ್ನೇಯಾಭ್ಯಾಂ ಪರಾಣಿ ತು ।
ತೃಚೋಽಶ್ವಾಸ್ಯಾಶ್ವಿನಸ್ತ್ರೈಕ ಐಂದ್ರಾಣಾಮುತ್ತಮೇ ಯುವಂ ॥ ೨೨ ॥
ಭದ್ರಂ ಸೌಮ್ಯಂ ಪ್ರ ಹಿ ಪೌಷ್ಣಂ ತ್ರೀಣ್ಯೈಂದ್ರಾಣಿ ಪರಾಣ್ಯಸತ್ ।
ತೇಷಾಮಾದ್ಯೇನ ಮತ್ತ್ಯಃ ಸನ್ಸ್ವಾನಿ ಕರ್ಮಾಣಿ ಶಂಸತಿ ॥ ೨೩ ॥

೧೯-೨೭ನೇ ಸೂಕ್ತಗಳ ದೇವತೆಗಳು

21. ೧೯ನೇ ಸೂಕ್ತದ ೬ನೇ ಋಕ್ಕಿನಲ್ಲಿ ಇಂದ್ರನು ಸ್ತುತನಾಗಿರುವನು. ೨ನೇ ಋಕ್ಕಿನಲ್ಲಿ ಇಂದ್ರ ಮತ್ತು ಅಗ್ನಿಯೆಂಬ ಈರ್ವರು ದೇವತೆಗಳನ್ನು ಪ್ರಸಂಗವಶದಿಂದ ಸ್ತುತಿಸಲಾಗಿದೆ. ಮುಂದಿನ ೨೦ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ಹತ್ತು ಅಕ್ಷರಗಳ ಒಂದು ಪಾದಮಾತ್ರವಿರುವುದು (ಏಕಪದಾ ವಿರಾಟ್). ಈ ಸೂಕ್ತಪಠನವು ಮನಸ್ಸಿಗೆ ಶಾಂತಿಯನ್ನುಂಟುಮಾಡುವುದೆಂದು ಹೇಳಲ್ಪಡುವುದು.

22. ಈ ೨೦ನೇ ಸೂಕ್ತಕ್ಕೂ ಇದರ ಮುಂದಿನ ೨೧ನೇ ಸೂಕ್ತಕ್ಕೂ ಅಗ್ನಿಯು ದೇವತೆಯು. ಈ ಅಗ್ನಿ ದೇವತಾಕವಾದ ಸೂಕ್ತಗಳಾದನಂತರ **ಕುಹ ಶ್ರುತ** ಎಂದು ಮೊದಲಾಗುವ ಮುಂದಿನ ಮೂರು ಸೂಕ್ತಗಳಿಗೆ(೨೨-೨೪) ಇಂದ್ರನು ದೇವತೆಯು. ಆದರೆ ಕೊನೆಯ ೨೪ನೇ ಸೂಕ್ತದ **ಯುವಂ ಶಕ್ರಾ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೪-೬) ಅಶ್ವಿನೀದೇವತೆಗಳನ್ನು ಸ್ತುತಿಸಲಾಗಿದೆ.

23. **ಭದ್ರಂ ನಃ** ಎಂಬ ೨೫ನೇ ಸೂಕ್ತಕ್ಕೆ ಸೋಮನು ದೇವತೆಯು; **ಪ್ರ ಹ್ಯಚ್ಛಾ** ಎಂಬ ೨೬ನೇ ಸೂಕ್ತಕ್ಕೆ ಪೂಷನು ದೇವತೆಯು; ಮತ್ತು **ಅಸತ್ಸು ಮೇ** ಎಂದು ಮೊದಲಾಗುವ ಮುಂದಿನ ಮೂರು ಸೂಕ್ತಗಳಿಗೆ (೨೭-೨೯) ಇಂದ್ರನು ದೇವತೆಯು; ಈ ಕೊನೆಯ ಮೂರು ಸೂಕ್ತಗಳಲ್ಲಿ ಮೊದಲನೆಯದಾದ ೨೭ನೇ ಸೂಕ್ತದಲ್ಲಿ ಇಂದ್ರನು ಸೋಮಪಾನದಿಂದ ಮತ್ತನಾಗಿ ತಾನು ಮಾಡಿದ ಸಾಹಸಕೃತ್ಯಗಳನ್ನು ತಾನೇ ಹೇಳಿಕೊಂಡಿದ್ದಾನೆ.

---

5. Deities of RV. x. 19-27.

21. The sixth (stanza) is addressed to Indra (x. 19-6), while in the second both the gods are incidentally mentioned (2). Now the hymn which contains a line of ten syllables (x. 20-1) is described as intended to avert evil (and) as connected with mind (मानस).

22. Now here after two hymns addressed to Agni (x. 20-21) there follow three addressed to Indra (beginning) 'Where ?' (कुहा: x. 22-24). Now in the last of the hymns to Indra there is one triplet 'Ye two' (युवं: x. 24. 4-6) addressed to the Asvins.

23. 'Happy' (भद्रं: x. 25) is addressed to Soma; 'Forth indeed' (प्र: x. 26) is addressed to Pusan. The three following (beginning) 'It shall be' (असत्: x. 27-29) are addressed to Indra with the first (27) of these (Indra), being exhilarated, proclaims his deeds.

ಯಥಾ ಚರತಿ ಭೂತೇಷು ಯಥಾ ವರ್ಷತಿ ಪಾತಿ ಚ ।
ಸೂಕ್ತೇ ತದಸ್ಮಿನ್ನಷ್ಟಾಭಿರ್ಯಗ್ಭಿರುಕ್ತಮಭೂರ್ವಿತಿ ॥ ೨೪ ॥

ಸಪ್ತೇತಿ ಮರುತಃ ಸ್ತೌತಿ ಸ್ತೌತಿ ವಜ್ರಮೃಗುತ್ತರಾ ।
ಅಗ್ನಿಮಿಂದ್ರಂ ಚ ಸೋಮಂ ಚ ಪೀವಾನಂ ಮೇಷಮರ್ಚತಿ ॥ ೨೫ ॥

ಪೂರ್ವೋರ್ಧರ್ಚೋರ್ಽಪರಸ್ತಸ್ಯಾಃ ಪರ್ಜನ್ಯಂ ವಾಯುನಾ ಸಹ ।
ವಿ ಕ್ರೋಶನಾಸ ಇತ್ಯಗ್ನಿಮುತ್ತರಾ ಸೂರ್ಯಮೇವ ತು ॥ ೨೬ ॥

24. ಈ ೨೭ ನೇ ಸೂಕ್ತದ **ಅಭೂರ್ವಾಕ್ಷೀಃ** ಎಂದು ಮೊದಲಾಗುವ ೮ ಋಕ್ಕುಗಳಲ್ಲಿ (೭-೧೪) ಅವನು (ಇಂದ್ರನು) ಸರ್ವಪ್ರಾಣಿಗಳಲ್ಲಿ ಅಂತರ್ಗತನಾಗಿದ್ದುಕೊಂಡು ಹೇಗೆ ಸಂಚರಿಸುತ್ತಿರುವನೆಂದೂ, ಹೇಗೆ ವೃಷ್ಟಿ (ಮಳೆ) ಯನ್ನು ಸುರಿಸುವನೆಂದೂ, ಸಕಲರನ್ನೂ ಹೇಗೆ ಸಂರಕ್ಷಣೆಮಾಡುವನೆಂದೂ ಹೇಳಲಾಗಿದೆ.

25. ಈ ೨೭ ನೇ ಸೂಕ್ತದ **ಸಪ್ತ ವೀರಾಸಃ** ಎಂಬ ೧೫ ನೇ ಋಕ್ಕಿನಲ್ಲಿ ಮರುದ್ದೇವತೆಗಳನ್ನೂ ಮುಂದಿನ ೧೬ ನೇ ಋಕ್ಕಿನಲ್ಲಿ ವಜ್ರಾಯುಧವನ್ನೂ ಋಷಿಯು ಸ್ತುತಿಸಿದಾನೆ. **ಪೀವಾನಂ ಮೇಷಂ** ಎಂಬ ೧೭ ನೇ ಋಕ್ಕಿನಲ್ಲಿ ಅಗ್ನಿಯನ್ನೂ, ಇಂದ್ರನನ್ನೂ, ಸೋಮನನ್ನೂ ಸ್ತುತಿಸಲಾಗಿದೆ.

26. ೧೭ ನೇ ಋಕ್ಕಿನ ಪೂರ್ವಾರ್ಧದಲ್ಲಿ ಮೇಲೆ ಹೇಳಿದಂತೆ ಅಗ್ನೀಂದ್ರಸೋಮದೇವತೆಗಳನ್ನೂ ಉತ್ತರಾರ್ಧದಲ್ಲಿ ಪರ್ಜನ್ಯವಾಯುಗಳನ್ನೂ ಸ್ತುತಿಸಲಾಗಿದೆ. **ವಿ ಕ್ರೋಶನಾಸಃ** ಎಂಬ ೧೮ ನೇ ಋಕ್ಕಿನಲ್ಲಿ ಅಗ್ನಿಯನ್ನೂ ಮುಂದಿನ ೧೯ ನೇ ಋಕ್ಕಿನಲ್ಲಿ ಸೂರ್ಯನನ್ನೂ ಸ್ತುತಿಸಲಾಗಿದೆ.

---

24. how he moves among beings, how he rains and protects is told in this hymn with the eight stanzas (beginning) 'You became' (**ಅಭೂಃ** : x. 27. 7-14).

25. (The stanza) 'Seven' (**ಸಪ್ತ** : x. 27-15) praises, the Maruts the next stanza (16) praises the Bolt; (the stanza) 'The fatted ram' (**ಪೀವಾನಂ ಮೇಷಂ** : 17) adores Agni, Indra and Soma.

17. RV. x. 27. (continued). RV. x. 28. Dialogues of Indra & Vasukra.

26. (that is) its first hemistich (does so : 17), while its second one (adores) Parjanya with Vayu (17). 'Crying aloud' (**ವಿ ಕ್ರೋಶನಾಸಃ** : 18) (praises) Agni, but the next (stanza) Surya (19).

ಏತೌ ಮೇಽಯಂ ಯ ಇತ್ಯೇತೇ ಸ್ತುತಿಶ್ಚೈವೇಂದ್ರವಜ್ರಯೋಃ ।
ವೃಕ್ಷೇ ವೃಕ್ಷೇ ಧನುಶ್ಚೈಂದ್ರಂ ದೇವಾನಾಮಿತಿ ತು ತ್ರಯಃ ॥ ೨೭ ॥
ಶೀತೋಷ್ಣವರ್ಷದಾತಾರಃ ಪರ್ಜನ್ಯಾನಿಲಭಾಸ್ಕರಾಃ ।
ಅಂತ್ಯೇ ಸೂರ್ಯಾನಿಲೌ ಚೋಭೌ ಸ್ತೂಯೇತೇ ಚ ಪದೇ ಸಹ ॥ ೨೮ ॥
ಸಾ ತೇ ಜೀವಾತುರಿತ್ಯಸ್ಯಾಮಿಂದ್ರೋ ವಾ ಸೂರ್ಯ ಏವ ವಾ ।
ವಿಶ್ವೋ ಹ್ಯನ್ಯಸ್ತು ಸಂವಾದ ಋಷೇಃ ಶಕ್ರಸ್ಯ ಚೈವ ಹಿ ॥ ೨೯ ॥
ಯುಗ್ಮಾಃ ಶಕ್ರಸ್ಯ ವಿಜ್ಞೇಯಾ ವಸುಕ್ರಸ್ಯೇತರಾ ಋಚಃ ।

27. ಏತೌ ಮೇ ಗಾವೌ ಎಂಬ ೨೦ನೇ ಋಕ್ಕಿನಲ್ಲಿಯೂ ಮುಂದಿನ ಅಯಂ ಯೋ ವಜ್ರಃ ಎಂಬ ೨೧ ನೇ ಋಕ್ಕಿನಲ್ಲಿಯೂ ಇಂದ್ರನ ಮತ್ತು ವಜ್ರಾಯುಧದ ಪ್ರಶಂಸೆ ಇದೆ. ವೃಕ್ಷೇವೃಕ್ಷೇ ಎಂಬ ೨೨ ನೇ ಋಕ್ಕಿನಲ್ಲಿ ಇಂದ್ರನ ಧನುಸ್ಸಿನ ವರ್ಣನೆ ಇದೆ. ಆದರೆ ದೇವಾನಾಂ ಮಾನೇ ಎಂಬ ೨೩ ನೇ ಋಕ್ಕಿನಲ್ಲಿ ಮೂರುಮಂದಿ ದೇವತೆಗಳು ಎಂದರೆ,

28. ಶೀತ, ಉಷ್ಣ, ಮತ್ತು ವೃಷ್ಟಿ ಇವುಗಳನ್ನು ಕೊಡುವ ವಾಯು, ಸೂರ್ಯ, ಪರ್ಜನ್ಯ ಎಂಬ ಮೂರು ಮಂದಿ ದೇವತೆಗಳನ್ನು ಸ್ತುತಿಸಲಾಗಿದೆ. ಈ ಋಕ್ಕಿನ (೨೩) ಕೊನೆಯ ಪಾದದಲ್ಲಿ ಸೂರ್ಯ ಮತ್ತು ವಾಯುಗಳನ್ನು ಒಟ್ಟಿಗೆ ಸ್ತುತಿಸಲಾಗಿದೆ.

29. ಈ ೨೭ ನೇ ಸೂಕ್ತದ ಸಾ ತೇ ಜೀವಾತುಃ ಎಂಬ ಕೊನೆಯ ಋಕ್ಕಿಗೆ (೨೪) ಇಂದ್ರನಾಗಲಿ, ಸೂರ್ಯನಾಗಲಿ ದೇವತೆಯಾಗಬಹುದು. ವಿಶ್ವೋ ಹ್ಯನ್ಯಃ ಎಂಬ ೨೮ ನೇ ಸೂಕ್ತದಲ್ಲಿ ಸೂಕ್ತದ್ರಷ್ಟೃವಾದ ವಸುಕ್ರಋಷಿಗೂ, ಇಂದ್ರನಿಗೂ ನಡೆದ ಸಂಭಾಷಣೆಯು ಉಕ್ತವಾಗಿದೆ.

30. ಈ ೨೮ ನೇ ಸೂಕ್ತದಲ್ಲಿ ಸಮಸಂಖ್ಯೆಯ (೨, ೪, ೬ ಇತ್ಯಾದಿ) ಋಕ್ಕುಗಳಲ್ಲಿ ಇಂದ್ರನ ವಾಕ್ಯವಿರುವುದೆಂದೂ ಉಳಿದ ಅಸಮಸಂಖ್ಯೆಯ (೩, ೫ ಇತ್ಯಾದಿ) ಋಕ್ಕುಗಳಲ್ಲಿ ವಸುಕ್ರಋಷಿಯ ವಾಕ್ಯವಿರುವುದೆಂದೂ ತಿಳಿಯ

27. 'These two of mine' (ಏತೌ ಮೇ : x. 20) and 'This which' (ಅಯಂ ಯಃ : 21) these two (stanzas) are (in) praise of Indra and the Bolt; and 'To every tree' (ವೃಕ್ಷೇ ವೃಕ್ಷೇ : 22) (praises) the Bow of Indra. But (in) 'Of the Gods' (ದೇವಾನಾಂ : 23) the three

28. bestowers of cold, heat, and rain, Parjanya, Wind (ಅನಿಲ) and Sun (ಭಾಸ್ಕರ), and in the last verse (ಪಾದ : 27-23) both Sun and Wind are praised together.

29. In the (stanza), 'This is your life' (ಸಾ ತೇ ಜೀವಾತುಃ : 24) either Indra or Surya (is praised). But 'Every other' (ವಿಶ್ವೋ ಹ್ಯನ್ಯಃ : x. 28) is a dialogue of the seer and of Sakra (Indra).

30. The even (stanzas) are to be recognised as Sakra's the other stanzas as Vasukra's.

ಸ್ನುಷೇಂದ್ರಸ್యಾಗತಾನ್ದೇವಾನ್ದೃಷ್ವಾ ತಕ್ರಮನಾಗತಂ ॥ ೩೦ ॥
ಯಜ್ಞಂ ಪರೋಕ್ಷವತ್ಪ್ರಾಹ ಶ್ವಶುರೋ ನಾಗತೋ ಮಮ ।
ಯದ್ಯಾಗಚ್ಛೇದ್ಭಕ್ಷಯೇತ್ಸ ಧಾನಾಃ ಸೋಮಂ ಪಿಬೇದಪಿ ॥ ೩೧ ॥
ಇತಿ ತಸ್యಾ ವಚಃ ಶ್ರುತ್ವಾ ತತ್ಕ್ಷಣಾದೇత్య వజ్రధృక್ ।
ತಿಷ್ಠన್ವೇద్యಾಮುತ್ತರಸ್యಾಮುచ్చైరాహ స రోరువత్ ॥ ೩೨ ॥
తృతీయయా చతుర్థ్యా చ ప్ర దేవత్రేత్యపాం స్తుతౌ ।
ಅపಾಂನಪಾದಿತ್యనేన నామాగ్నిర్మధ్యమಃ స్తుతేಃ ॥ ೩೩ ॥

ಬೇಕು. ಇಂದ್ರನ ಸೊಸೆಯು ಯಜ್ಞಾರ್ಥವಾಗಿ ದೇವತೆಗಳಲ್ಲಿ ಎಲ್ಲರೂ ಬಂದಿರುವುದನ್ನೂ ಇಂದ್ರನು ಮಾತ್ರ ಇನ್ನೂ ಬರದಿದ್ದುದನ್ನೂ ನೋಡಿ—

೩೦-೩೩ನೇ ಸೂಕ್ತಗಳ ದೇವತೆಗಳು

31. ಯಜ್ಞಾರ್ಥವಾಗಿ ಹೋಗಿದ್ದ ನನ್ನ ಮಾವನಾದ ಇಂದ್ರನು ಇಷ್ಟುಹೊತ್ತಾದರೂ ಇನ್ನೂ ಬರಲಿಲ್ಲ. ಅವನು ಬಂದಿದ್ದಲ್ಲಿ (ಸಿದ್ಧವಾಗಿರುವ) ಈ ಧಾನ್ಯವನ್ನು ಭಕ್ಷಿಸಿ ಸೋಮನನ್ನು ಪಾನಮಾಡುತ್ತಿದ್ದನು ಎಂದು ಹೇಳಿದಳು.

32. ಅವಳ ಮಾತನ್ನು ಕೇಳಿ ವಜ್ರಧಾರಿಯಾದ ಇಂದ್ರನು ತತ್ಕ್ಷಣವೇ ಅಲ್ಲಿಗೆ ಬಂದು ಉತ್ತರವೇದಿಯ (ಯಜ್ಞದ) ಉತ್ತರದಿಕ್ಕಿನಲ್ಲಿ ನಿಂತುಕೊಂಡು **ಸ ರೋರುವತ್** ಎಂಬ ೨೮ನೇ ಸೂಕ್ತದ ೨ನೇ ಋಕ್ಕಿನಿಂದ ಘಟ್ಟಿಯಾಗಿ ಹೇಳಿದನು.

33. ಆಬ್ದೇವತಾಕವಾದ **ಪ್ರ ದೇವತ್ರಾ ಬ್ರಹ್ಮಣೇ** ಎಂಬ ೩೦ನೇ ಸೂಕ್ತದ ೩ ಮತ್ತು ೪ನೇ ಋಕ್ಕುಗಳಲ್ಲಿ ಮಧ್ಯಮಾಗ್ನಿಯು **ಅಪಾಂನಪಾತ್** ಎಂಬ ಹೆಸರಿನಿಂದ ಸ್ತುತಿಸಲ್ಪಟ್ಟಿರುವನು.

The daughter-in-law of Indra, seeing the gods had come, but Sakra had not come,

7. Deities of RV. x. 30-33.

31. to the sacrifice, addressed (him) in the third person (**ಪರೋಕ್ಷವತ್**) (saying : 'My father-in-law has not come; should he come, he would eat grain and would drink Soma.'

32. The Bolt-bearer on hearing this speech of hers, came that very moment, and standing on the northern altar (**ಉತ್ತರವೇದಿ**), said aloud; He bellowing loud (**ಸ ರೋರುವತ್** : x. 28-2).

33. In the praise of waters (beginning)'Forth to the gods'(**ಪ್ರ ದೇವತ್ರಾ**: x, 30) the Middle Agni is praised by the name of 'Child of Waters' (**ಅಪಾಂ ನಪಾತ್**) with the third and the fourth (stanza).

ಏತಿ ಯದ್ವೈಶ್ವದೇವಂ ತು ತಸ್ಯ ಪ್ರೇತ್ಯೈಂಪ್ರಮುತ್ತರಂ ।
ವೈಶ್ವದೇವೀ ಪ್ರ ಮೇತ್ಯೇಕಾ ಸಂ ಮೇತ್ಯೈಂದ್ರೋ ದ್ವ್ಯೃಚಃ ಪರಃ ॥ ೩೪ ॥
ಕುರುಶ್ರವಣಮರ್ಚತಃ ಪರೇ ದ್ವೇ ತ್ರಾಸದಸ್ಯವಂ ।
ಮೃತೇ ಮಿತ್ರಾತಿಥೌ ರಾಜ್ಞಿ ತನ್ಮಪಾತಮೃಷಿಃ ಪರೈಃ ॥ ೩೫ ॥
ಉಪಮಶ್ರವಸಂ ಯಸ್ಯ ಚತುರ್ಭಿಃ ಸ ವ್ಯಶೋಕಯತ್ ।
ಪ್ರಾವೇಪಾ ಇತಿ ಸೂಕ್ತಂ ಯತ್ತದಕ್ಷಸ್ತುತಿರುಚ್ಯತೇ ॥ ೩೬ ॥

34. **ಆ ನೋ ದೇವಾನಾಂ** ಎಂದು ಪ್ರಾರಂಭವಾಗುವ ೩೧ನೇ ಸೂಕ್ತದಲ್ಲಿ ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ. **ಪ್ರ ಸು ಗ್ಮಂತಾ** ಎಂಬ ೩೨ನೇ ಸೂಕ್ತಕ್ಕೆ ಇಂದ್ರನು ದೇವತೆಯು ; **ಪ್ರ ಮಾ ಯುಯುಜ್ರೇ** ಎಂಬ ೩೩ ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ವಿಶ್ವೇದೇವತೆಗಳನ್ನೂ ಮುಂದಿನ **ಸಂ ಮಾ** ಎಂದು ಮೊದಲಾಗುವ ಎರಡು ಋಕ್ಕುಗಳಲ್ಲಿ (೨-೩) ಇಂದ್ರನನ್ನೂ ಸ್ತುತಿಸಲಾಗಿದೆ.

35. ಈ ೩೩ ನೇ ಸೂಕ್ತದ ಮುಂದಿನ ಎರಡು ಋಕ್ಕುಗಳಲ್ಲಿ (೪-೫) ತ್ರಸದಸ್ಯುಪುತ್ರನಾದ (ಅಥವಾ ಅವನ ವಂಶಜನಾದ) **ಕುರುಶ್ರವಣ** ಎಂಬ ರಾಜನನ್ನು ಋಷಿಯು ಪ್ರಶಂಸೆಮಾಡಿರುವನು. **ಮಿತ್ರಾತಿಥಿ** ಎಂಬ ರಾಜನು ಮೃತನಾದಾಗ ಅವನ ಮಿತ್ರನಾದ ಈ ಸೂಕ್ತದ ಕವಷನೆಂಬ ಋಷಿಯು ರಾಜನ ಮೊಮ್ಮಗನನ್ನು ದುಃಖಿಸಬೇಡವೆಂದು ಸಮಾಧಾನಮಾಡುತ್ತಾ,

ಪಗಡೆ ದಾಳಗಳ ಪ್ರಶಂಸೆ (೩೪) ೩೫-೪೪ ಸೂಕ್ತಗಳ ದೇವತೆಗಳು

36. **ಯಸ್ಯ ಪ್ರಸ್ಫಾರಸಃ** ಎಂದು ಮೊದಲಾಗುವ ೩೬ ನೇ ಸೂಕ್ತದ ನಾಲ್ಕು ಋಕ್ಕುಗಳಿಂದ (೬-೯) ಮಿತ್ರಾತಿಥಿರಾಜನ ಮೊಮ್ಮಗನಾದ ಉಪಮಶ್ರವನೆಂಬುವನನ್ನು ಸಮಾಧಾನಪಡಿಸುವನು. **ಪ್ರಾವೇಪಾ ಮಾ** ಎಂಬ ೩೪ ನೇ ಸೂಕ್ತದಲ್ಲಿ ಪಗಡೆಯಾಟದ ಮತ್ತು ದಾಳಗಳ ಪ್ರಶಂಸೆ ಇದೆ.

---

34. Now (the hymn) which (begins) 'Hither' (ಏತಿ : x.31) is addressed to the All-gods; the one next to that 'Forth' (ಪ್ರ : x. 32) is addressed to Indra. One (stanza) 'Onward me' (ಪ್ರ ಮಾ : x. 33-1) is addressed to the All-gods; the following couplet 'Together me' (ಸಂ ಮಾ : 2-3) is addressed to Indra.

35. The following two (stanzas) adore Kurusravana Trasadasyava (x. 33. 4-5). On the death of king Mitratithi, the seer with the following:

8. The hymns of Dice : x. 34. Deities of RV. 35-44.

36. four (stanzas beginning) 'Of whom' (ಯಸ್ಯ: x. 33. 6-9) consoled his (Mitratithi's) grandson ಉಪಮಶ್ರವಸಂ. The hymn which (begins) 'The lively (ಪ್ರಾವೇಪಾಃ : x. 34) is called the praise of Dice.

ಅತ್ರಾಷ್ಟಾನ್ದ್ವಾದಶೀ ಸ್ತೌತಿ ನವಮ್ಯಾದ್ಯಾ ಚ ಸಪ್ತಮೀ।
ತ್ರಯೋದಶೀ ಕೃಷಿಂ ಸ್ತೌತಿ ಕಿತವಂ ಚಾನುಶಾಸತಿ ।
ಅಷ್ಟಾಂಸ್ತು ಶೇಷಾ ನಿಂದಂತಿ ಅಬುಧ್ರಂ ವೈಶ್ವದೇವತೇ ॥ ೩೭ ॥

ಸಾವಿತ್ರಮೇಕೇ ಮನ್ಯಂತೇ ಮಹೋ ಅಗ್ನೇ ಸ್ತವಂ ಪರಂ ।
ಆಚಾರ್ಯಾಃ ಶೌನಕೋ ಯಾಸ್ಕೋ ಗಾಲವಶ್ಚೋತ್ತಮಾಮೃಚಂ ॥ ೩೮ ॥

ನಮಃ ಸೌರ್ಯಮೈಂದ್ರಮಸ್ಮಿನ್ ಸೌರ್ಯೇ ಷಷ್ಠ್ಯಾ ತು ಯೋಃ ಸ್ತುತಾಃ ।
ನಿಪಾತಿನ್ಯಸ್ತಾಃ ಸೂಕ್ತಾಂತೇ ವೈಶ್ವದೇವೋಽತ್ರ ತು ದ್ವ್ಯೃಚಃ ॥ ೩೯ ॥

37. ಈ ಸೂಕ್ತದ (೩೪) ೧, ೭, ೯, ೧೨ನೇ ಋಕ್ಕುಗಳಲ್ಲಿ ಪಗಡೆ ದಾಳಗಳ ಪ್ರಶಂಸೆ ಇವೆ. ೧೩ನೇ ಋಕ್ಕಿನಲ್ಲಿ ವ್ಯವಸಾಯ (ಕೃಷಿ)ನನ್ನು ಪ್ರಶಂಸಿಸಿ ಜೂಜುಕೋರನಾದ (ಪಗಡೆ) ಆಟಗಾರನನ್ನು ನಿಂದಿಸಿ ಬಯ್ಯಲಾಗಿದೆ. ಸೂಕ್ತದ ಉಳಿದ ಋಕ್ಕುಗಳಲ್ಲಿ ಪಗಡೆ ಆಟವನ್ನೂ, ದಾಳವನ್ನೂ ನಿಂದಿಸಲಾಗಿದೆ. **ಅಬುಧ್ರಮು ತ್ಯ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೩೫-೩೬) ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ.

38. ಆದರೆ ೩೬ನೇ ಸೂಕ್ತದ ಕೊನೆಯಲ್ಲಿರುವ **ಮಹೋ ಅಗ್ನೇ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೧೨-೧೪) ಸವಿತೃದೇವತೆಯನ್ನು ಸ್ತುತಿಸಲಾಗಿದೆಯೆಂದು ಕೆಲವರು ಹೇಳುವರು. ಆದರೆ ಈ ಸೂಕ್ತದ ಕೊನೆಯ ೧೪ನೇ ಋಕ್ಕು ಮಾತ್ರ ಸವಿತೃದೇವತಾಕವೆಂದು ಶೌನಕ, ಯಾಸ್ಕ, ಗಾಲವ ಎಂಬ ಆಚಾರ್ಯರು ಹೇಳುವರು.

39. **ನಮೋ ಮಿತ್ರಸ್ಯ** ಎಂಬ ೩೭ನೇ ಸೂಕ್ತಕ್ಕೆ ಸೂರ್ಯನೂ, **ಅಸ್ಮಿನ್ನ ಇಂದ್ರ** ಎಂಬ ೩೮ನೇ ಸೂಕ್ತಕ್ಕೆ ಇಂದ್ರನೂ ದೇವತೆಗಳು. ಆದರೆ ಸೂರ್ಯದೇವತಾಕವಾದ ೩೭ನೇ ಸೂಕ್ತದ ೬ನೇ ಋಕ್ಕಿನಲ್ಲಿ ಸ್ತುತರಾಗಿರುವ ಇತರ ದೇವತೆಗಳು (ದ್ಯಾವಾಪೃಥಿವೀ, ಆಪಃ, ಇಂದ್ರಃ, ಮರುತಃ) ಪ್ರಸಂಗವಶದಿಂದ ಸ್ತುತರಾಗಿರುವರೆಂದು ತಿಳಿಯಬೇಕು. ಈ ಸೂಕ್ತದ ಕೊನೆಯ ಎರಡು ಋಕ್ಕುಗಳಲ್ಲಿ (೧೧-೧೨) ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ

---

37. Here the twelfth (stanza) praises the Dice, the ninth, the first and the seventh (x. 34. 1, 7, 9, 12),

The thirteenth praises tillage (13) and admonishes the gambler.

But the remaining (stanzas) blame the Dice. Two (hymns) beginning 'They are awake (ಅಬುಧ್ರಂ : x. 35-36) are addressed to the All-gods.

38. Some consider the praise at the end (ಪರಂ), 'Of the great Agni' (ಮಹೋ ಅಗ್ನೇಃ : x. 36. 12-14) to be addressed to Savitr ; the teachers Suanaka, Yaska, and Galava (consider) the last (14) stanza (to be such)

39. 'Obeisance' (ನಮಃ : x. 37) is addressed to Surya, 'In this' (ಅಸ್ಮಿನ್ : x. 38) to Indra. But (the deities) who are praised in the sixth (stanzas) of the hymn to Surya (x. 37-6) are incidental ; at the end of this (ಅತ್ರ) hymn there is a couplet addressed te the All-gods (x. 37. 11-12).

ಆಶ್ವಿನಾನಿ ತು ಯೇಸ್ತ್ರೀಣಿ ಐಂದ್ರಾಣ್ಯಸ್ತೇವ ಸು ಪ್ರ ಚ ।
ಐಂದ್ರಾಣಾಮುತ್ತಮಾಯಾಸ್ತು ಸ್ತುತೋಽರ್ಧರ್ಚೇ ಬೃಹಸ್ಪತಿಃ ॥ ೪೦ ॥

ಪರೇ ದಿವಸ್ಪರ್ಯಾಗ್ನೇಯೇ ಪ್ರಥಮಸ್ಯೋತ್ತಮೇನ ತು ।
ದ್ಯಾವಾಪೃಥಿವ್ಯೌ ವಿಶ್ವೇ ಚ ಪಚ್ಛೋಽರ್ಧರ್ಚೇನ ಸಂಸ್ತುತಾಃ ॥ ೪೧ ॥

ಆಸೀತ್ಕಾಕ್ಷೀವತೀ ಘೋಷಾ ಪಾಪರೋಗೇಣ ದುರ್ಭಗಾ ।
ಉವಾಸ ಷಷ್ಟಿಂ ವರ್ಷಾಣಿ ಪಿತುರೇವ ಗೃಹೇ ಪುರಾ ॥ ೪೨ ॥

40. **ಯೋ ವಾಂ ಪರಿಜ್ಮಾ** ಎಂದು ಮೊದಲಾಗುವ ಮುಂದಿನ ಮೂರು ಸೂಕ್ತಗಳಲ್ಲಿ (೩೯-೪೧) ಅಶ್ವಿನೀ ದೇವತೆಗಳನ್ನು ಸ್ತುತಿಸಲಾಗಿದೆ. **ಅಸ್ತೇವ** ಎಂಬ ಮುಂದಿನ ಮೂರು ಸೂಕ್ತಗಳಲ್ಲಿ (೪೨-೪೪) ಇಂದ್ರನನ್ನು ಸ್ತುತಿಸಲಾಗಿದೆ. ಆದರೆ ಇಂದ್ರದೇವತಾಕವಾದ ಈ ೪೪ನೇ ಸೂಕ್ತದ ೧೧ನೇ ಋಕ್ಕಿನಲ್ಲಿ ಬೃಹಸ್ಪತಿಯನ್ನು ಸ್ತುತಿಸಲಾಗಿದೆ.

೪೫-೪೬ನೇ ಸೂಕ್ತಗಳ ದೇವತೆಗಳು.

41. **ದಿವಸ್ಪರಿ** ಎಂಬ ೪೫ನೇ ಸೂಕ್ತದಲ್ಲಿಯೂ ಇದರ ಮುಂದಿನ ೪೬ನೇ ಸೂಕ್ತದಲ್ಲಿಯೂ ಅಗ್ನಿಯನ್ನು ಸ್ತುತಿಸಲಾಗಿದೆ. ಆದರೆ ೪೫ನೇ ಸೂಕ್ತದ ಕೊನೆಯ ಋಕ್ಕಿನ (೧೨) ಉತ್ತರಾರ್ಧದ ಮೊದಲನೆಯ ಪಾದದಲ್ಲಿ ದ್ಯಾವಾಪೃಥಿವಿಗಳನ್ನೂ, ಎರಡನೆಯ ಪಾದದಲ್ಲಿ ದೇವತೆಗಳನ್ನೂ ಸ್ತುತಿಸಲಾಗಿದೆ.

ಘೋಷಾ ಎಂಬ ಸ್ತ್ರೀಯ ವೃತ್ತಾಂತ

42. ಪೂರ್ವದಲ್ಲಿ ಕಕ್ಷೀವಾನ್ ಎಂಬ ಋಷಿಗೆ ಘೋಷಾ ಎಂಬ ಪುತ್ರಿ ಇದ್ದಳು. ಅವಳು ಚರ್ಮರೋಗ (ತೊನ್ನು) ದಿಂದ ನರಳುತ್ತಿದ್ದಳು. ಅವಳು ತನಗೆ ಅರವತ್ತು ವರುಷವಾಗಿದ್ದರೂ ಮದುವೆಯಿಲ್ಲದ್ದರಿಂದ ತನ್ನ ತಂದೆಯ ಮನೆಯಲ್ಲಿಯೇ ವಾಸವಾಗಿದ್ದಳು.

---

40. Now there are three hymns addressed to the Asvins (beginning) 'Which' (ಯಃ : x. 39-41), and there are (three) addressed to Indra(beginning) 'As the archer far' (ಅಸ್ತೇವ ಸು ಪ್ರ : x. 42-44), but in a hemistich (11) of the last stanza of the Indra hymns (42-44) Brihaspati is praised.

Deities of RV. x. 45-46. Story of Ghosa

41. The two following (hymns), 'From heaveu' (ದಿವಸ್ಪರಿ : x. 45, 46) are addressed to Agni, but with the last hemistich of the former (x. 45-12) Heaven and Earth (12) and the All-gods are praised in the respective verses (ಪಚ್ಛಃ).

42. Ghosa, daughter of Kaksivat, was disfigured by an evil disease. In the days of old she remained in her father's house for sixty yenrs.

ಅತಸ್ಥೇ ಮಹತೀಂ ಚಿಂತಾಂ ನ ಪುತ್ರೋ ನ ಪತಿರ್ಮಮ ।
ಜರಾಂ ಪ್ರಾಪ್ತಾ ಮುಧಾ ತಸ್ಮಾತ್ಪ್ರಪದ್ಯೇಽಹಂ ಶುಭಸ್ಪತೀ ॥ ೪೩ ॥

ಯೇಥೈತೌ ಮಾಮಕಸ್ತಾತ ಆರಾಧ್ಯಾವಾಪ ಯೌವನಂ ।
ಆಯುರಾರೋಗ್ಯಮೈಶ್ವರ್ಯಂ ಸರ್ವಭೂತಹನೇ ವಿಷಂ ॥ ೪೪ ॥

ರೂಪವತ್ತಾಂ ಚ ಸೌಭಾಗ್ಯಮಹಂ ತಸ್ಯ ಸುತಾ ಯದಿ ।
ಮಮಾಪಿ ಮಂತ್ರಾಃ ಸ್ಯುರ್ಯೈಃ ಸ್ತೋಷ್ಯೇತೇ ಮಯೋಶ್ವಿನೌ ॥ ೪೫ ॥

ಚಿಂತಯಂತೀತಿ ಸೂಕ್ತೇ ದ್ವೇ ಯೋ ವಾಂ ಪರಿ ದದರ್ಶ ಸಾ ।
ಸ್ತುತೌ ತಾವಶ್ವಿನೌ ದೇವೌ ಪ್ರೀತೌ ತಸ್ಯಾ ಭಗಾಂತರಂ ॥ ೪೬ ॥

43. ತನಗೆ ಮದುವೆಯಾಗಲಿಲ್ಲವಲ್ಲಾ, ಪತಿಪುತ್ರರಿಲ್ಲವಲ್ಲಾ, ವ್ಯರ್ಥವಾಗಿ ವಯಸ್ಸು ಕಳೆದುಹೋಗಿ ಮುದುಕಿಯಾದೆನಲ್ಲಾ ಎಂಬ ಚಿಂತೆಯಿಂದ ಕೊರಗುತ್ತಿದ್ದಳು. ಆದ್ದರಿಂದ ಅವಳು ಅಶ್ವಿನೀದೇವತೆಗಳನ್ನು ಮರೆ ಹೋಗುತ್ತೇನೆಂದು ನಿಶ್ಚಯಿಸಿದಳು.

44. ಈ ಅಶ್ವಿನೀದೇವತೆಗಳನ್ನು ಆರಾಧಿಸಿ ವೃದ್ಧನಾಗಿದ್ದ ನನ್ನ ತಂದೆಯು (ಅಥವಾ ತಾತನು) ಯೌವನವನ್ನು ಪಡೆದನು. ಹಾಗೆಯೇ ಅವರ ಅನುಗ್ರಹದಿಂದ ದೀರ್ಘಾಯುಸ್ಸನ್ನೂ, ಆರೋಗ್ಯವನ್ನೂ, ಐಶ್ವರ್ಯವನ್ನೂ ಸಮಸ್ತ ಪ್ರಾಣಿಗಳನ್ನು ಕೊಲ್ಲಲು ಸಮರ್ಥವಾದ ವಿಷವನ್ನು ಪಡೆದನು.

45. ಆದ್ದರಿಂದ ಆ ಅಶ್ವಿನೀದೇವತೆಗಳನ್ನು ಸಂತೋಷಪಡಿಸುವ ಮಂತ್ರಗಳು ನನಗೆ ಗೋಚರವಾದರೆ ಆ ಋಷಿಯಪುತ್ರಿಯಾದ ನಾನೂ ಸಹ ಆ ದೇವತೆಗಳ ಅನುಗ್ರಹದಿಂದ ಸುಂದರವಾದ ರೂಪವನ್ನೂ, ಸೌಭಾಗ್ಯವನ್ನೂ (ಒಳ್ಳೆಯ ಅದೃಷ್ಟವನ್ನು) ಪಡೆಯಬಹುದು ಎಂದು ಆಲೋಚಿಸಿದಳು.

46. ಈರೀತಿ ಆಲೋಚಿಸುತ್ತಿರುವಾಗ ಅವಳಿಗೆ **ಯೋ ವಾಂ ಪರಿಜ್ಮಾ** ಎಂಬ ೩೯ನೇ ಸೂಕ್ತವೂ ಅದರ ಮುಂದಿನ **ರಥಂ ಯೋಂತಂ** ಎಂಬ ೪೦ನೇ ಸೂಕ್ತವೂ ಗೋಚರವಾದವು. ಈ ಸೂಕ್ತಗಳಿಂದ ಸ್ತುತರಾದ ಅಶ್ವಿನೀದೇವತೆಗಳು ಪ್ರೀತರಾಗಿ, ಆ ಸ್ತ್ರೀಯ ಭಗಪ್ರದೇಶವನ್ನು (ಯೋನಿಪ್ರದೇಶವನ್ನು) ಪ್ರವೇಶಿಸಿ

43. She fell into great grief (thinking), 'Without son or husband I have reached old age in vain; I (will) therefore resort to the Lords of Light (**ಶುಭಸ್ಪತೀ**).

44. Since my father, by propitiating them, obtained youth, long life, health, power, poison for slaying all beings.

45. I, his daughter, (would obtain) beauty and good fortune, if to me also were revealed formulas in which the Asvins shall be praised by me.

10. Story of Ghosa (concluded)

46-47. As she reflected thus, she saw the two hymns 'Your encircling' (**ಯೋ ವಾಂ ಪರಿ** : x. 39-40). The two divine Asvins being praised, were pleased.

ಪ್ರವಿಶ್ಯ ವಿಜರಾರೋಗಾಂ ಸುಭಗಾಂ ಚಕ್ರತುಶ್ಚ ತೌ ।
ಭರ್ತಾರಂ ದದತುಸ್ತಸ್ಯೈ ಸುಹಸ್ತ್ಯೇತಿ ಸುತಂ ಮುನಿಂ ॥ ೪೬ ॥
ದದತುಸ್ತತ್ಸುಪರ್ಣಾಭ್ಯಾಂ ಯನ್ನಾಸತ್ಯೇತಿ ಕೀರ್ತ್ಯತೇ ।
ಕಾಕ್ಷೀವತ್ಯೈ ಚ ಘೋಷಾಯೈ ನ ತೆಸ್ಯಾಮಾಜುರೋಽನಯಾ ॥ ೪೭ ॥
ಪ್ರಾಜಾಪತ್ಯಾಸುರೀ ತ್ವಾಸೀದ್ವಿಕುಂಠಾ ನಾಮ ನಾಮತಃ ।
ಸೇಚ್ಛಂತೀಂದ್ರಸಮಂ ಪುತ್ರಂ ತೇಪೇಽಥ ಸುಮಹತ್ತಪಃ ॥ ೪೯ ॥
ಸಾ ಪ್ರಜಾಪತಿತಃ ಕಾಮಾಂಲ್ಲೇಭೇಽಥ ವಿವಿಧಾನ್ ವರಾನ್ ।
ತಸ್ಯಾಂ ಚೇಂದ್ರಃ ಸ್ವಯಂ ಜಜ್ಞೇ ಜಿಘಾಂಸುರ್ದೈತ್ಯದಾನವಾನ್ ॥ ೫೦ ॥

47. ಅವಳ ವಯೋವಿಕಾರವನ್ನು ಎಂದರೆ ವೃದ್ಧಾಪ್ಯವನ್ನೂ ರೋಗರುಜಿನಾದಿಗಳನ್ನೂ ಪರಿಹಾರಮಾಡಿ ಸುಂದರವಾದ ಕನ್ಯೆಯನ್ನಾಗಿ ಪರಿವರ್ತಿಸಿದರು. ಮತ್ತು ಆ ಘೋಷೆಗೆ ಅನುರೂಪನಾದ ಪತಿಯನ್ನು ಒದಗಿಸಿಕೊಟ್ಟು ಸುಹಸ್ತ್ಯನೆಂಬ ಪುತ್ರನನ್ನೂ ಅನುಗ್ರಹಿಸಿದರು.

48. **ನಾಸತ್ಯಾ** ಎಂಬ ಹೆಸರಿನಿಂದ ಪ್ರಸಿದ್ಧರಾದ ಆ ಅಶ್ವಿನೀದೇವತೆಗಳು ರೆಕ್ಕೆಗಳುಳ್ಳ ತಮ್ಮ ಅಶ್ವಗಳ ಮೂಲಕ ಕಕ್ಷೀವಂತನ ಪುತ್ರಿಯಾದ **ಘೋಷಾ** ಎಂಬ ಸ್ತ್ರೀಗೆ ಅನುಗ್ರಹಮಾಡಿರುವುದನ್ನು ೪೦ ನೇ ಸೂಕ್ತದ **ನ ತೆಸ್ಯ ವಿದ್ಮ** ಎಂಬ ೧೧ ನೇ ಋಕ್ಕಿನಲ್ಲಿಯೂ ೩೯ ನೇ ಸೂಕ್ತದ **ಅಮಾಜುರಶ್ವಿ** ತ್ ಎಂಬ ೩ ನೇ ಋಕ್ಕಿನಲ್ಲಿಯೂ ವಿವರಿಸಲಾಗಿದೆ.

ಇಂದ್ರವೈಕುಂಠನೆಂಬ ಋಷಿಯೆ ವೃತ್ತಾಂತ

49. ಪೂರ್ವದಲ್ಲಿ ಪ್ರಜಾಪತಿಗೆ **ಆಸುರೀ** ಎಂಬ ಪುತ್ರಿ ಇದ್ದಳು. ಅವಳು ತನಗೆ ವೀರ್ಯಪರಾಕ್ರಮಾದಿಗಳಲ್ಲಿ ಇಂದ್ರನನ್ನು ಸರಿಗಟ್ಟುವ ಪುತ್ರನಾಗಬೇಕೆಂದು ಬಯಸಿ ಘೋರವಾದ ತಪಸ್ಸನ್ನು ಮಾಡಿದಳು.

50. ಆ ಆಸುರೀ ಎಂಬ ಸ್ತ್ರೀಯು ತನ್ನ ತಂದೆಯಾದ ಪ್ರಜಾಪತಿಯಿಂದ ತನಗೆ ಇಷ್ಟವಾದ ಅನೇಕ ವರಗಳನ್ನು ಪಡೆದಳು. ದೈತ್ಯರನ್ನೂ, ದಾನವರನ್ನೂ ಸಂಹಾರಮಾಡಬೇಕೆಂದು ಇಚ್ಛಿಸಿ ಇಂದ್ರನೇ ಆ ಸ್ತ್ರೀಯಲ್ಲಿ ಅವಳ ಪುತ್ರನಾಗಿ ಹುಟ್ಟಿದನು.

Entering her organ (ಭಗ) they made her ageless, free from disease, and beautiful (ಸುಭಗಾ). They gave her a husband and the sage Suhastya as a son.

48. What the 'Nasatyas' by means of their two winged steeds (ಸುಪರ್ಣಾಭ್ಯಾಂ) gave to Ghosa, daughter of Kaksivat, is proclaimed by the (stanzas) 'Not of that' (ನ ತಸ್ಯ : x. 40-11) (and) 'Of her that grows old at home' (ಅಮಾಜುರಃ : x. 39-3).

49. There was an Asuri, daughter os Prajapati, Vikuntha(ವಿಕುಂಠಾ)by name. She, desiring a son like Indra, performed very severe austerities.

11. Story of Indra Vaikuntha.

50. She then obtained from Prajapati her desires (in the form of) various boons. And Indra himself was born of her, as he wished to slay the Daityas and Danavas.

ಏಕದಾ ದಾನವೈಃ ಸಾರ್ಧಂ ಸಮರೇ ಸಮಸಜ್ಯತ ।
ಜಘಾನ ತೇಷಾಂ ನವತೀರ್ನವ ಸಪ್ತ ಚ ಸಪ್ತಕಾನ್ ॥ ೫೧ ॥

ಭಿತ್ತ್ವಾ ಸ್ವಬಾಹುವೀರ್ಯೇಣ ಹೈಮರೌಪ್ಯಾಯಸೀಃ ಪುರೀಃ ।
ಹತ್ವಾ ಸರ್ವಾನ್ಯಥಾಸ್ಥಾನಂ ಪೃಥಿವ್ಯಾದಿವ್ಯವಸ್ಥಿತಾನ್ ॥ ೫೨ ॥

ಪೃಥಿವ್ಯಾಂ ಕಾಲಕೇಯಾಂಶ್ಚ ಪೌಲೋಮಾಂಶ್ಚೈವ ಧನ್ವಿನಃ ।
ತಾಂಶ್ಚ ವ್ಯುತ್ಸಾದಯಾಮಾಸ ಪ್ರಹ್ಲಾದತನಯಾನ್ದಿವಿ ॥ ೫೩ ॥

ರಾಜ್ಯಂ ಪ್ರಾಪ್ಯ ಸ ದೈತ್ಯೇಷು ಸ್ವೇನ ವೀರ್ಯೇಣ ದರ್ಪಿತಃ ।
ದೇವಾನ್ಪಾಧಿತುಮಾರೇಭೇ ಮೋಹಿತೋಽಸುರಮಾಯಯಾ ॥ ೫೪ ॥

51. ಒಂದು ಸಮಯದಲ್ಲಿ ದೇವತೆಗಳಿಗೂ, ದಾನವರಿಗೂ (ಅಸುರರಿಗೂ) ಯುದ್ಧವಾಯಿತು. ಆ ಯುದ್ಧದಲ್ಲಿ ಈ ಇಂದ್ರವೈಕುಂಠನು 810 ಮಂದಿ (90×9) ದೈತ್ಯರನ್ನೂ 490 ಮಂದಿ (70×7) ದಾನವರನ್ನೂ ಸಂಹಾರ ಮಾಡಿದನು.

52. (ಈ ದೈತ್ಯದಾನವರಿಗೆ ಪೃಥಿವಿ, ಅಂತರಿಕ್ಷ ಸ್ವರ್ಗಗಳಲ್ಲಿ ಚಿನ್ನ, ಬೆಳ್ಳಿ, ಉಕ್ಕುಗಳಿಂದ ನಿರ್ಮಿತವಾದ ಅಭೇದ್ಯವಾದ ಕೋಟೆಗಳಿದ್ದವು) ಇಂದ್ರವೈಕುಂಠನು ತನ್ನ ಬಾಹುಬಲದಿಂದಲೇ ಈ ದೈತ್ಯದಾನವರ ಪೃಥಿವ್ಯಂತರಿಕ್ಷಸ್ವರ್ಗಗಳಲ್ಲಿದ್ದ ಚಿನ್ನ, ಬೆಳ್ಳಿ, ಉಕ್ಕುಗಳಿಂದ ನಿರ್ಮಿತವಾಗಿದ್ದ ಮೂರು ಪಟ್ಟಣಗಳನ್ನು ಧ್ವಂಸಮಾಡಿದನು. ಮತ್ತು ಪೃಥಿವ್ಯಾದಿ ಸ್ಥಾನಗಳಲ್ಲಿದ್ದ ಆ ದೈತ್ಯದಾನವರೆಲ್ಲರನ್ನೂ ಸಂಹಾರಮಾಡಿದನು.

53. ಮತ್ತು ಭೂಮಿಯ ಮೇಲಿದ್ದ ಕಾಲಕೇಯರೆಂಬ ದೈತ್ಯರನ್ನೂ ಧನುರ್ಬಾಣಗಳಿಂದ ಅಜೇಯರಾಗಿದ್ದ ಪುಲೋಮವಂಶದ ದೈತ್ಯರನ್ನೂ ಸ್ವರ್ಗದಲ್ಲಿದ್ದ ಪ್ರಹ್ಲಾದವಂಶದವರಾದ ಅನೇಕ ದೈತ್ಯರನ್ನೂ ನಾಶಮಾಡಿದನು.

54. ಈ ರೀತಿಯಾಗಿ ದೈತ್ಯರನ್ನು ಕೊಂದು ಅವರ ರಾಜ್ಯಕ್ಕೆ ತಾನೇ ಪ್ರಭುವಾಗಿ ತನ್ನ ಸ್ವಬಲ ಪರಾಕ್ರಮಗಳಿಂದ ಬೀಗಿ ಮೆರೆಯುತ್ತಾ ಮಾಯಾಪರವಶನಾಗಿ ದೇವತೆಗಳನ್ನು ಹಿಂಸಿಸುವುದಕ್ಕೆ ಪ್ರಾರಂಭಿಸಿದನು.

---

51. Once he was engaged in battle with the Danavas. Of them he slew nine nineties and seven groups of seven.

52. Having shattered with the might of his arm their citadels of gold, silver, and iron, (and) having slain all (of them) in their respective spheres (ಯಥಾಸ್ಥಾನಂ), as arrayed on earth and in the other (two worlds).

53. On earth he exterminated both the Kalakeyas and the race of Puloma, the archers, and in heaven the notorious offspring of Prahlada.

12. Story of Indra Vaikuntha (continued).

54. Having obtained sovereignty among the Daityas (and) puffed up with pride by reason of his might, he began to harass the gods, being infatuated by the craft of the Asuras.

ಬಾಧ್ಯಮಾನಾಸ್ತು ತೇನಾಪಿ ಅಸುರೇಣಾಮಿತೌಜಸಾ ।
ಉಪಾಧಾವನ್ಮೃಷಿಶ್ರೇಷ್ಠಂ ತಪ್ತ್ರೋಧಾಯೇ ಸಪ್ತಗುಂ ॥ ೫೫ ॥
ಋಷಿಸ್ತು ಸಪ್ತಗುರ್ನಾಮ ತಸ್ಯಾಸೀತ್ಸುಪ್ರಿಯಃ ಸಖಾ ।
ಸ ಚೈನಮಭಿತುಷ್ಟಾವ ಜಗೃಭ್ಮೇತಿ ಕರೇ ಸ್ಪೃಶನ್ ॥ ೫೬ ॥
ತತಃ ಸ ಬುಧ್ವಾ ಜಾತ್ಮಾನಂ ಸಪ್ತಗುಸ್ತುತಿಹರ್ಷಿತಃ ।
ಆತ್ಮಾನಮೇವ ತುಷ್ಟಾವ ಅಹಂ ಭುವಮಿತಿ ತ್ರಿಭಿಃ ॥ ೫೭ ॥
ಕೀರ್ತಯನ್ಸ್ವಾನಿ ಕರ್ಮಾಣಿ ಯಾನಿ ಸ್ಮ ಕೃತವಾನ್ಪುರಾ ।
ಯೇಥಾಕರೋಚ್ಚ ವೈದೇಹಂ ವ್ಯಂಸಂ ಸೋಮಪತಿಂ ನೃಪಂ ॥ ೫೮ ॥

55. ಅಪರಿಮಿತಶಕ್ತಿಸಾಮರ್ಥ್ಯದಿಂದ ಕೂಡಿದವನೂ, ಅಸುರನೂ ಆದ ಈ ಇಂದ್ರವೈಕುಂಠನಿಂದ ಪೀಡಿತರಾದ ದೇವತೆಗಳು ಇವನ ಬಾಧೆಯನ್ನು ತಾಳಲಾರದೆ ಓಡಿಹೋಗಿ ಋಷಿಶ್ರೇಷ್ಠನಾದ **ಸಪ್ತಗು** ಎಂಬ ಋಷಿಯ ಮರೆಹೊಕ್ಕರು.

56. ಈ ಸಪ್ತಗುಋಷಿಯು ಆ ಇಂದ್ರವೈಕುಂಠನ ಪ್ರಿಯಮಿತ್ರನಾಗಿದ್ದನು. ಆದ್ದರಿಂದ ದೇವತೆಗಳನ್ನು ರಕ್ಷಿಸುವುದಕ್ಕಾಗಿ ಇಂದ್ರವೈಕುಂಠನ ಕೈಯನ್ನು ಹಿಡಿದುಕೊಂಡು **ಜಗೃಭ್ಮಾ ತೇ ದಕ್ಷಿಣಮಿಂದ್ರ ಹಸ್ತಂ** ಎಂಬ ೪೭ ನೇ ಸೂಕ್ತದಿಂದ ಆ ಇಂದ್ರವೈಕುಂಠನನ್ನು ಸ್ತುತಿಸಿದನು:

57. ಸಪ್ತಗುಋಷಿಯಿಂದ ಪ್ರಶಂಸಿತನಾದ ಆ ಇಂದ್ರವೈಕುಂಠನಿಗೆ ತಾನು ಯಾರು (ಎಂದರೆ ಇಂದ್ರನೇ ತಾನು) ಎಂಬ ಅರಿವಾಯಿತು. ಅನಂತರ ಆ ಇಂದ್ರವೈಕುಂಠನು **ಅಹಂ ಭುವನಂ ವಸುನಃ** ಎಂದು ಮೊದಲಾಗುವ ಮುಂದಿನ ಮೂರು ಸೂಕ್ತಗಳಲ್ಲಿ (೪೮-೫೦) ತನ್ನ ಸ್ವಪ್ರಶಂಸೆಯನ್ನು ಮಾಡಿಕೊಂಡಿದ್ದಾನೆ.

58. ತನ್ನ ಆತ್ಮಪ್ರಶಂಸೆಯಲ್ಲಿ ಹಿಂದೆ ತಾನು ಯಾವ ಯಾವ ಸಾಹಸಕೃತ್ಯಗಳನ್ನು ಮಾಡಿದನೋ ಅವುಗಳೆಲ್ಲವನ್ನೂ ಹೇಳಿಕೊಂಡಿರುವನು. ಮತ್ತು ತಾನು ವಿದೇಹದೇಶದ ರಾಜನಾದ ವ್ಯಂಸನೆಂಬುವನನ್ನು ಹೇಗೆ ಸೋಮಪತಿಯನ್ನಾಗಿ ಮಾಡಿದೆನೆಂಬ ವಿಷಯವನ್ನೂ ಪ್ರಶಂಸೆಮಾಡಿರುವನು.

---

55. Now while they were being harassed by that same Asura of unlimited power, they fled for succour to Saptagu, most excellent of seers, in order that (the latter) should admonish him (Indra).

56. Now the seer called Saptagu was a dear friend of his, and (so) he praised him with the (hymn), "We have grasped (जगृभ्मा : x. 47), as he took kim by the hand.

57. Then he coming to (बुध्वा) himself (and) rejoiced at the praise of Saptagu, praised himself with the three (hymns) 'I was' (अहं भुवन : x. 48-50);

58. Proclaiming his deeds, which he performed in days of yore, and how he made king Vyemsa of Videha lord of Soma.

ವಸಿಷ್ಠಶಾಪಾದಭವದ್ವೈದೇಹೋ ನೃಪತಿಃ ಪುರಾ ।
ಇಂದ್ರಪ್ರಸಾದಾದ್ದೇಜೇ ಚ ಸತ್ರೈಃ ಸಾರಸ್ವತಾದಿಭಿಃ ॥ ೫೯ ॥

ಪ್ರಭೂತಾಂ ಶಕ್ತಿಮತ್ತಾಂ ಚ ತತ್ಕೃತಾನುಸೃತಾಕ್ರಿಯಾಂ ।
ನೃಷು ಸರ್ವೇಷು ಚೈಶ್ವರ್ಯಂ ಪ್ರಭುತ್ವಂ ಭುವನೇಷು ಚ
ಪ್ರ ವೋ ಮಹ ಇತಿ ತ್ವಸ್ಯಾಮಾತ್ಮನೋ ವೀರ್ಯಮಕ್ಷಯಂ ॥ ೬೦ ॥

ವೈಶ್ವಾನರೇ ಗೃಹಪತೌ ಯವಿಷ್ಠೇಽಗ್ನೌ ಚ ಪಾವಕೇ ।
ವಷಟ್ಕಾರೇಣ ವೃಕ್ಣೇಷು ಭ್ರಾತೃಷ್ವಗ್ನೌ ಸಹಃಸುತೇ ॥ ೬೧ ॥

59. ಪೂರ್ವದಲ್ಲಿ ಈ ವಿದೇಹದೇಶದ ರಾಜನಿಗೆ ವಸಿಷ್ಠಋಷಿಯು ಶಾಪವನ್ನು ಕೊಟ್ಟನು. ಈ ರಾಜನು ಇಂದ್ರನ ಅನುಗ್ರಹದಿಂದ ಸರಸ್ವತೀ ಮೊದಲಾದ ನದಿಗಳ ದಡದಲ್ಲಿ ಸತ್ರಯಾಗಗಳನ್ನು ಮಾಡಿದನು.

60. ಇಂದ್ರನು ತನ್ನ ಸ್ವಪ್ರಶಂಸೆಯನ್ನು ಮಾಡುತ್ತಾ ತನ್ನ ಅತಿಶಯವಾದ ಸಾಮರ್ಥ್ಯವನ್ನೂ, ತನ್ನ ಶತ್ರುಗಳಿಗೆ ತಾನು ಮಾಡಿದ ಹಿಂಸೆಯನ್ನೂ, ಸಮಸ್ತ ಲೋಕಗಳಿಗೂ ತಾನು ಪ್ರಭುವಾಗಿರುವುದನ್ನು ಸಮಸ್ತ ಜನರಿಗೂ ತಾನು ಒಡೆಯನಾಗಿರುವುದನ್ನೂ ಪ್ರ ವೋ ಮಹೇ ಎಂಬ ೫೦ ನೇ ಸೂಕ್ತದಲ್ಲಿ ವರ್ಣಿಸಿರುವನು.

ಸೌಚೀಕಾಗ್ನಿಯೆ ವಿಷಯ; ಅಗ್ನಿಯು ದೇವತೆಗಳನ್ನು ಬಿಟ್ಟು ಓಡಿಹೋಗಿ ನೀರಿನಲ್ಲಿ ಅವಿತುಕೊಂಡಿದ್ದ ವಿಷಯ.

61. ಪೂರ್ವದಲ್ಲಿ ಅಗ್ನಿಯ ಜ್ಯೇಷ್ಠಸಹೋದರರಾದ ವೈಶ್ವಾನರ, ಅಗ್ನಿಗೃಹಪತಿ (ಗಾರ್ಹಪತ್ಯಾಗ್ನಿ), ಯವಿಷ್ಠಪಾವಕ (ಪಾವಕಾಗ್ನಿ) ಎಂಬ ಮೂರು ಮಂದಿಯೂ ಯಜಮಾನರು ಯಜ್ಞಗಳಲ್ಲಿ ವಷಟ್ಕಾರಪೂರ್ವಕರಾಗಿ ಅರ್ಪಿಸುವ ಹವಿಸ್ಸುಗಳನ್ನು ದೇವತೆಗಳ ಬಳಿಗೆ ಒಯ್ಯುತ್ತಿದ್ದರು. ವಜ್ರಾಯುಧಸದೃಶವಾದ ಈ ವಷಟ್ಕಾರಾಹುತಿಗಳಿಂದ (ಅವುಗಳ ತೀಕ್ಷ್ಣತೆಯನ್ನು ತಾಳಲಾರದೆ) ಈ ಮೂವರೂ ಹತರಾದರು. ತನ್ನ ಈ ಮೂರುಮಂದಿ ಸಹೋದರರ್ ಮೃತರಾದುದನ್ನು ನೋಡಿ ಅಗ್ನಿಯು ಹೆದರಿ,

---

13. Story of Indra Vaikuntha (concluded). Story of Agni and his brothers: RV. x. 51-53.

59. By the curse of Vasistha he in former days had become king of Videha, and by the favour of Indra he sacrificed with sessions (सत्र) on the Sarasvati and others,

60. and (praising) his great power and his injury to foes, and his sovereignty among all men and his lordship in the worlds: but in the (stanza) 'Forth to your great' (प्र वो महे: x. 50 1) his own imperishable might.

61. When the brothers Vaisvanara, Agni Grihapati and Yavistha, Pavaka, and Agni Sahasuta had been shattered by the Vasat call.

ಅಪಚಕ್ರಾಮ ದೇವೇಭ್ಯಃ ಸೌಚೀಕೋಽಗ್ನಿರಿತಿ ಶ್ರುತಿಃ ।
ಸ ಪ್ರಾವಿಶದಪೇಕ್ರಮ್ಯ ಋತೂನಪೋ ವನಸ್ಪತೀನ್ ॥ ೬೨ ॥
ತತೋಽಸುರಾಃ ಪ್ರಾದುರಾಸನ್ನಷ್ಟೇಽಗ್ನೌ ಹವ್ಯವಾಹನೇ ।
ತೇಽಗ್ನಿಮೇವಾನ್ವವೈಚ್ಛಂತ ದೇವಾ ಹತ್ವಾಸುರಾನ್ಯುಧಿ ॥ ೬೩ ॥
ತಂ ತು ದೂರಾದ್ಯಮಶ್ಚೈವ ವರುಣಶ್ಚಾನ್ವಪಶ್ಯತಾಂ ।
ಉಭಾವೇನಂ ಸಮಾದಾಯ ದೇವಾನೇವಾಭಿಜಗ್ಮತುಃ ॥ ೬೪ ॥
ದೃಷ್ಟ್ವಾ ದೇವಾಸ್ತ್ವೇನಮೂಚುರಗ್ನೇ ಹವ್ಯಾನಿ ನೋ ವಹ ।
ವರಾನ್ ಗೃಹಾಣ ಚಾಸ್ಮತ್ತಃ ಶ್ರಿತ್ರಭಾನೋ ಭಜಸ್ವ ನಃ ।

62. ದೇವತೆಗಳ ಸಮೀಪವನ್ನು ಬಿಟ್ಟು ಓಡಿಹೋಗಿ ಈ ಸೌಚೀಕಾಗ್ನಿಯು ಋತುಗಳಲ್ಲಿಯೂ, ಉದಕಗಳಲ್ಲಿಯೂ, ವೃಕ್ಷಗಳಲ್ಲಿಯೂ ಹೋಗಿ ಸೇರಿಕೊಂಡನು (ಆಶ್ರಯ ಪಡೆದನು) ಈ ವಿಷಯವು ಶ್ರುತಿವಾಕ್ಯಗಳಲ್ಲಿ ಹೇಳಲ್ಪಟ್ಟಿರುವುದು.

63. ತಮಗೆ ಹವಿಸ್ಸನ್ನು ಒಯ್ಯುತ್ತಿದ್ದ ಅಗ್ನಿಯು ತಮ್ಮನ್ನು ಬಿಟ್ಟು ಹೊರಟುಹೋದ ಕೂಡಲೆ ಅಸುರರು ದೇವತೆಗಳ ಮೇಲೆ ನುಗ್ಗಿ ಬಂದರು. ಆಗ ದೇವತೆಗಳಿಗೂ ಅಸುರರಿಗೂ ನಡೆದ ಯುದ್ಧದಲ್ಲಿ ದೇವತೆಗಳು ಅಸುರರನ್ನು ಕೊಂದರು. ಆಗ ತಮ್ಮ ಬಳಿ ಅಗ್ನಿ ಇಲ್ಲದಿರುವುದನ್ನು ಕಂಡು ಅಗ್ನಿಯು ಎಲ್ಲಿಗೆ ಹೋಗಿರುವನೆಂದು ಅವನನ್ನು ಹುಡುಕಲಾರಂಭಿಸಿದರು.

64. ಆಗ ಯಮನೂ, ವರುಣನೂ ಅಗ್ನಿಯನ್ನು ದೂರದಿಂದಲೇ ನೋಡಿದರು. ಅವರು ಅಗ್ನಿಯ ಬಳಿಗೆ ಬಂದು ಅವನನ್ನು ತಮ್ಮ ಜತೆಯಲ್ಲಿಯೇ ಕರೆದುಕೊಂಡು ದೇವತೆಗಳ ಬಳಿಗೆ ಹೋದರು.

65. ತಮ್ಮ ಬಳಿಗೆ ಬಂದ ಅಗ್ನಿಯನ್ನು ದೇವತೆಗಳು ನೋಡಿ ಇಂತೆಂದರು—ಎಲೈ ಅಗ್ನಿಯೇ, ಯಜ್ಞಾದಿಗಳಲ್ಲಿ ನಮಗೆ ಅರ್ಪಿತವಾಗುವ ಹವಿಸ್ಸನ್ನು ನಮಗೆ ವಹಿಸು, ನಿನಗೆ ವರಗಳು ಬೇಕಾಗಿದ್ದಲ್ಲಿ ಕೇಳು, ಕೊಡುವೆವು.

---

62. Agni Sauchika departed from the gods, so a Vedic text(relates). He on departing entered the seasons, the waters, (and) the trees.

63. Then the Asuras appeared, when Agni the oblation-bearer had vanished. The gods, having slain the Asuras in fight, looked about in quest of Agni.

14. Story of Agni's flight (continued).

64. Now Yama and Varuna espied him from afar. Both of them, taking him with them, went to the gods.

65. On seeing him the gods said ; 'O Agni, bear our oblations, and accept boons from us ; do you, O brilliantly rhining one, attend upon us ;

ದೇವಯಾನಾನ್ ಸುಗಾನ್ ಪಥಃ ಕುರುಷ್ವ ಸುಮನಾಃ ಸ್ವಯಂ ॥ ೬೫ ॥
ಪ್ರತ್ಯುವಾಚಾಥ ತಾನಗ್ನಿರ್ವಿಶ್ವೇದೇವಾ ಯದೂಚಿ ಮಾಂ ।
ತತ್ಕರಿಷ್ಯೇ ಜುಷಂತಾಂ ತು ಹೋತ್ರಂ ಪಂಚ ಜನಾ ಮಮ ॥ ೬೬ ॥
ಶಾಲಾಮುಖ್ಯಃ ಪ್ರಣೀತಶ್ಚ ಪುತ್ರೋ ಗೃಹಪತೇಶ್ಚ ಯಃ ।
ಉತ್ತರೋ ದಕ್ಷಿಣಶ್ಚಾಗ್ನಿರೇತೇ ಪಂಚ ಜನಾಃ ಸ್ಮೃತಾಃ ॥ ೬೭ ॥
ಮನುಷ್ಯಾಃ ಪಿತರೋ ದೇವಾ ಗಂಧರ್ವೋರಗರಾಕ್ಷಸಾಃ ।
ಗಂಧರ್ವಾಃ ಪಿತರೋ ದೇವಾ ಅಸುರಾ ಯಕ್ಷರಾಕ್ಷಸಾಃ ॥ ೬೮ ॥

ನಾನಾಪ್ರಕಾಶಗಳಿಂದ ಬೆಳಗುವ ಎಲೈ ಅಗ್ನಿಯೇ, ನಮ್ಮ ಹವಿರ್ವಹನಕಾರ್ಯವನ್ನು ನೆರವೇರಿಸು. ನೀನು ನಮ್ಮ ವಿಚಾರದಲ್ಲಿ ಒಳ್ಳೆಯ ಬುದ್ಧಿಯನ್ನು ಪ್ರದರ್ಶಿಸಿ ದೇವತೆಗಳು ಸಂಚರಿಸುವ ಮಾರ್ಗಗಳನ್ನು ನಿರ್ಬಾಧಿತವಾಗುವಂತೆ ಮಾಡು.

66. ದೇವತೆಗಳ ಮಾತನ್ನು ಕೇಳಿ, ಅಗ್ನಿಯು ಈರೀತಿ ಪ್ರತ್ಯುತ್ತರವಿತ್ತನು—ದೇವತೆಗಳಾದ ನೀವೆಲ್ಲರೂ ಹೇಳಿದುದನ್ನು ನಾನು ಮಾಡುತ್ತೇನೆ. ಆದರೆ ಐದು ಪಂಗಡದ ಜನರೂ ನನ್ನ ಹವಿರ್ವಹನಕಾರ್ಯದಿಂದ ಪ್ರಯೋಜನವನ್ನು ಪಡೆಯಲಿ.

ಪಂಚಜನರ ವಿವರಣೆ

67. ಈ ಐದು (ವಿಧ) ಪಂಗಡದ ಜನರು ಯಾರು ಎಂಬುದನ್ನು ಇಲ್ಲಿ ವಿವರಿಸುತ್ತಾರೆ—(೧) ಯಜ್ಞಗೃಹದ ದ್ವಾರದಲ್ಲಿ ಪ್ರತಿಷ್ಠಿತವಾಗಿರುವ ಅಗ್ನಿಯು (ಶಾಲಾಮುಖ್ಯಃ); (೨) ಅರಣಿಗಳಲ್ಲಿ ಕಡೆದ ಸ್ಥಳದಿಂದ ಉತ್ತರವೇದಿಗೆ ತರಲ್ಪಡುವ (ಪ್ರಣೀತ) ಅಗ್ನಿ ; (೩) ಯಜಮಾನನ ಗೃಹದಲ್ಲಿ ಸ್ಥಾಪಿತನಾದ ಅಗ್ನಿ (ಅಥವಾ ಗಾರ್ಹಪತ್ಯಾಗ್ನಿ); (೪) ಯಜ್ಞವೇದಿಯ ಉತ್ತರಭಾಗದಲ್ಲಿರುವ ಅಗ್ನಿ ; (೫) ದಕ್ಷಿಣಾಗ್ನಿ; ಈ ಐದು ವಿಧ ಅಗ್ನಿಗಳನ್ನೇ ಪಂಚಜನರೆಂದು ಕೆಲವರು ಹೇಳುವರು.

68. (೧) ಮನುಷ್ಯರು (೨) ಪಿತೃಗಳು (೩) ದೇವತೆಗಳು (ಗಂಧರ್ವರು) (೪) ಸರ್ಪಗಳೇ ಮೊದಲಾದ ರಾಕ್ಷಸರು. ಅಥವಾ (೧) ಗಂಧರ್ವರು (೨) ಪಿತೃಗಳು (೩) ದೇವತೆಗಳು (೪) ಅಸುರರು (೫) ಯಕ್ಷರಾಕ್ಷಸರು.

---

do yourself graciously make the paths trodden by the gods easy to traverse.'

66. Agni then answered them : 'What all ye gods have said to me I will do ; but let the five races enjoy my priesthood'

67. now the fire at the entrance of the shed (ಶಾಲಾಮುಖ್ಯ), that which is brought forward (ಪ್ರಣೀತ), the son of the Lord of the House, the northern and the southern fire, these are held by tradition (ಸ್ಮೃತ) to be the five races.

15. The meaning of pancha janah

68. Men, Fathers, Gods, Gandharvas, Serpents, Demons ; (or) Gandharvas, Fathers, Gods, Asuras, Yaksas (and) Demons :

ಯಾಸ್ಕೋಪಮನ್ಯವಾವೇತಾನಾಹತುಃ ಪಂಚ ವೈ ಜನಾನ್ ।
ನಿಷಾದಪಂಚಮಾನ್ಸಹಾನ್ ಮನ್ಯತೇ ಶಾಕಟಾಯನಃ ॥ ೬೯ ॥

ಋತ್ವಿಜೋ ಯಜಮಾನಂ ಚ ಶಾಕಪೂಣಿಸ್ತು ಮನ್ಯತೇ ।
ಹೋತಾಧ್ವರ್ಯುಸ್ತಥೋದ್ಗಾತಾ ಬ್ರಹ್ಮಾ ಚೇತಿ ವದಂತಿ ತಾನ್ ॥ ೭೦ ॥

ಚಕ್ಷುಃ ಶ್ರೋತ್ರಂ ಮನೋ ವಾಕ್ಚ ಪ್ರಾಣಶ್ಚೇತ್ಯಾತ್ಮವಾದಿನಃ ।
ಗಂಧರ್ವಾಪ್ಸರಸೋ ದೇವಾ ಮನುಷ್ಯಾಃ ಪಿತರಸ್ತಥಾ ॥ ೭೧ ॥

ಸರ್ಪಾಶ್ಚ ಬ್ರಾಹ್ಮಣೇ ಚೈವ ಶ್ರೂಯಂತೇ ಹ್ಯೈತರೇಯಕೇ ।
ಯೇ ಚಾನ್ಯೇ ಪೃಥಿವೀಜಾತಾ ದೇವಾಶ್ಚಾನ್ಯೇಽಥ ಯಜ್ಞಿಯಾಃ ॥ ೭೨ ॥

69. ಇವರೇ ಪಂಚಜನರೆಂದು ಯಾಸ್ಕರೂ ಔಪಮನ್ಯವ ಎಂಬ ಆಚಾರ್ಯರೂ ಹೇಳುವರು. ಶಾಕಟಾಯನ ರೆಂಬ ಆಚಾರ್ಯರು—(೧) ನಿಷಾದರು (ಬೇಡರು) (೨) ಬ್ರಾಹ್ಮಣ (೩) ಕ್ಷತ್ರಿಯ (೪) ವೈಶ್ಯ (೫) ಶೂದ್ರ ಎಂಬುವರೇ ಪಂಚಜನರೆಂದು ಹೇಳುವರು.

70. (೧) ಋತ್ವಿಕ್ಕುಗಳು (೨) ಯಜ್ಞವನ್ನು ಮಾಡುವ ಯಜಮಾನ (೩) ಹೋತೃ ಅಧ್ವರ್ಯು, ಎಂಬ ಋತ್ವಿಕ್ಕುಗಳು (೪) ಉದ್ಗಾತೃ (೫) ಬ್ರಹ್ಮಾ ಈ ಐದು ಮಂದಿಯೇ ಪಂಚಜನರೆಂದು ಶಾಕಪೂಣಿಯವರ ಮತವು.

71. (೧) ಕಣ್ಣು (೨) ಕಿವಿ (೩) ಮನಸ್ಸು (೪) ವಾಕ್ (ಮಾತು) (೫) ಪ್ರಾಣ ಈ ಪಂಚೇಂದ್ರಿಯಗಳೇ ಪಂಚಜನರೆಂದು ಆತ್ಮವಾದಿಗಳು (ವೇದಾಂತಿಗಳು) ಹೇಳುವರು. (೧) ಗಂಧರ್ವರು ಮತ್ತು ಅಪ್ಸರೆಯರು (೨) ದೇವತೆಗಳು (೩) ಮನುಷ್ಯರು (೪) ಪಿತೃಗಳು.

72. (೫) ಸರ್ಪಗಳು. ಈ ಐದು ಪಂಗಡಗಳೇ ಪಂಚಜನರೆಂದು ಐತರೇಯಬ್ರಾಹ್ಮಣದಲ್ಲಿ ಹೇಳಲಾಗಿದೆ. ಎಲೈ ದೇವತೆಗಳೇ, ಈ ಪಂಚಜನರೂ ಪೃಥಿವಿಯಲ್ಲಿ ಹುಟ್ಟಿರುವ ಇತರ ಪ್ರಾಣಿವರ್ಗಗಳೂ, ಯಜ್ಞಾರ್ಹರಾದ ಇತರ ದೇವತೆಗಳೂ,

---

69. Yaska and Aupamanyava state these to be the five races. Sakatayana thinks they are the (four) castes with the Nisadas as a fifth.

70 Sakapuni, however, thinks they are the (four) priests (ಋತ್ವಿಜಃ) and the institutor of the sacrifice (ಯಜಮಾನ),

Those (priests) they call 'Hotr', 'Adhvaryu', 'Udgatr', and 'Brahman,'

71-72. Eye, ear, mind, speech, and breath, say the theosphists (ಆತ್ಮವಾದಿನಃ). They are stated to be Gandharvas and Apsarases, Gods, Men, Fathers, and Serpents in the sacred text of the Aitareya Brahmana

and (continued Agni) whatever other terrestrial creatures(ಪೃಥಿವೀಜಾತಾಃ) and other divine beings (ದೇವಾಃ) there are that receive worship (ಯಜ್ಞಿಯಾಃ).

ಆಯುರಸ್ತು ಚ ಮೇ ದೀರ್ಘಂ ಹವೀಂಷಿ ವಿವಿಧಾನಿ ಚ ।
ಅರಿಷ್ಟಿಃ ಪೂರ್ವಜಾನಾಂ ಚ ಭ್ರಾತೄಣಾಮಧ್ವರೇಽಧ್ವರೇ ॥ ೭೩ ॥

ಪ್ರಯಾಜಾಶ್ಚಾನುಯಾಜಾಶ್ಚ ಘೃತಂ ಸೋಮೋ ಚ ಯಃ ಪಶುಃ ।
ಮದ್ದೈವತ್ಯಾನಿ ವೈ ಸಂತು ಯಜ್ಞೋ ಮದ್ದೇವತೋಽಸ್ತು ಚ ॥ ೭೪ ॥

ತವಾಗ್ನೇ ಯಜ್ಞ ಇತ್ಯೇತತ್ಪ್ರತ್ಯಾಧಿ ಸ್ವಿಷ್ಟಕೃಚ್ಚ ಸಃ ।
ಯಸ್ಯ ತ್ರೀಣಿ ಸಹಸ್ರಾಣಿ ನವ ತ್ರೀಣಿ ಶತಾನಿ ಚ ॥ ೭೫ ॥

ತ್ರಿಂಶಚ್ಚೈವ ತು ದೇವಾನಾಂ ಸರ್ವಾನೇವ ವರಾನ್ದದುಃ ।
ತತೋಽಗ್ನಿಃ ಸುಮನಾಃ ಪ್ರೀತೋ ವಿಶ್ವೈರ್ದೇವೈಃ ಪುರಸ್ಕೃತಃ ॥ ೭೬ ॥

73. ನನಗೆ ದೀರ್ಘಾಯುಸ್ಸನ್ನೂ (long life) ಅನುಗ್ರಹಿಸಲಿ. ಮತ್ತು ನನಗೆ ಅನೇಕ ವಿಧವಾದ ಇತರ ಹವಿರ್ಭಾಗಗಳನ್ನೂ, ನನ್ನ ಜ್ಯೇಷ್ಠ ಸಹೋದರರಿಗೆ ಪ್ರತಿಯಜ್ಞದಲ್ಲಿಯೂ ಯಾವ ವಿಧವಾದ ಬಾಧೆಯೂ ಸಂಟಾಗದಿರುವುದನ್ನೂ ಅನುಗ್ರಹಿಸಬೇಕು.

74. ಹಾಗೆಯೇ ಯಜ್ಞದ ಪ್ರಾರಂಭದಲ್ಲಿ ಅರ್ಪಿಸುವ **ಪ್ರಯಾಜಾಃ** ಎಂಬ ಆಹುತಿಗಳಿಗೂ ಯಜ್ಞಾಂತ್ಯದಲ್ಲಿ ಅರ್ಪಿಸುವ **ಅನುಯಾಜಾಃ** ಎಂಬ ಆಹುತಿಗಳಿಗೂ ಆಜ್ಯ,(ಘೃತ)ಸೋಮ, ಯಜ್ಞಪಶು ಇವುಗಳಿಗೆಲ್ಲಾ ನಾನೇ ದೇವತೆಯಾಗಿರುವಂತೆಯೂ, ಯಜ್ಞಕ್ಕೆ ನಾನೇ ಮುಖ್ಯದೇವತೆಯಾಗಿರುವಂತೆಯೂ (ಯಜ್ಞದಲ್ಲಿ ಮುಖ್ಯ ಪಾತ್ರವನ್ನು ವಹಿಸುವಂತೆಯೂ) ಅನುಗ್ರಹಿಸಬೇಕು ಎಂದು ಅಗ್ನಿಯು ದೇವತೆಗಳನ್ನು ಕೇಳಿಕೊಂಡನು.

75. ಹಾಗೆಯೇ ಆಗಲೆಂದೊಪ್ಪಿ ದೇವತೆಗಳು ವರವನ್ನು ಕೊಟ್ಟರು—ಎಲೈ ಅಗ್ನಿಯೇ, ಯಜ್ಞವು ನಿನ್ನದಾಗಿಯೇ ಇರಲಿ (ಎಂದರೆ ಯಜ್ಞದಲ್ಲಿ ಮುಖ್ಯಪಾತ್ರವು ನಿನಗೇ ಇರಲಿ) ಸ್ವಿಷ್ಟಕೃತ್ಸ್ವರೂಪನೂ ನೀನೇ ಆಗಿರು ಎಂದು ಹೇಳಿ, ಮೂರುಸಾವಿರದ ಮುನ್ನೂರ ಮೂವತ್ತೊಂಭತ್ತು ಮಂದಿ ದೇವತೆಗಳೆಲ್ಲರೂ ಸೇರಿ,

76. ಅಗ್ನಿಗೆ ವರವನ್ನು ಕೊಟ್ಟರು. ಅಗ್ನಿಯೂ ಸಹ ದೇವತೆಗಳು ತನಗೆ ಮಾಡಿದ ಗೌರವಾದರಗಳಿಂದ ಸಂತೋಷಗೊಂಡು,

---

16. Story of Agni's flight (continued).

73. And let me have long life, and various oblations, and let my elder brothers enjoy safety at every sacrifice;

74. and let the preliminary (प्रयाजाः) and the final oblations (अनुयाजाः), the ghee, and the victim in the Soma (sacrifice) have me as their divinity, and let the sacrifice (in general) have me as its deity.'

75. This was accorded (प्रत्याधिः) with (the words) 'Yours, O Agni, the sacrifice' (तवाग्ने यज्ञः x. 51·9); and he(became)Svistakrt (offering right sacrifice), to whom the three thousand, three hundred and nine

76. and thirty gods gave all(these) boons. Then Agni, well-disposed, pleased, honoured by all the gods,

ವಿಧೂಯಾಂಗಾನಿ ಯಜ್ಞೇಷು ಚಕ್ರೇ ಹೋತ್ರಮತಂದ್ರಿತಃ ।
ಭ್ರಾತೃಭಿಃ ಸಹಿತಃ ಪ್ರೀತೋ ದಿವ್ಯಾತ್ಮಾ ಹವ್ಯವಾಹನಃ ॥ ೭೭ ॥

ತಸ್ಯಾಸ್ಥಿ ದೇವದಾರ್ವಾಸೀನ್ಮೇದೋ ಮಾಂಸಂ ಚ ಗುಗ್ಗುಲುಃ ।
ಸುಗಂಧಿತೇಜನಂ ಸ್ನಾಯು ಶುಕ್ರಂ ರಜತಕಾಂಚನೇ ॥ ೭೮ ॥

ರೋಮಾಣಿ ಕಾಶಾಃ ಕೇಶಾಸ್ತು ಕುಶಾಃ ಕೂರ್ಮಾ ನಖಾನಿ ಚ ।
ಅಂತ್ರಾಣಿ ಚೈವಾಪ್ಯವಕಾ ಮಜ್ಜಾ ಸಿಕತಶರ್ಕರಾಃ ॥ ೭೯ ॥

ಅಸೃಕ್ ಪಿತ್ತಂ ಚ ವಿವಿಧಾ ಧಾತವೋ ಗೈರಿಕಾದಯಃ ।
ಏವಮಗ್ನಿಶ್ಚ ದೇವಾಶ್ಚ ಸೂಕ್ತೈರ್ಮಹದಿತಿ ತ್ರಿಭಿಃ ॥ ೮೦ ॥

77. ತನ್ನ ಕೈಕಾಲುಗಳನ್ನು ಕೊಡವಿ ಮೇಲಕ್ಕೆದ್ದು ತನ್ನ ಸಹೋದರರುಗಳಿಂದ ಸಹಿತನಾಗಿ ದೇವತೆಗಳಿಗೆ ಹವಿಸ್ಸನ್ನು ವಹಿಸುವ ಆ ಅಗ್ನಿಯು ಅತ್ಯಂತ ಸಂತೋಷದಿಂದ ಯಜ್ಞಗಳಲ್ಲಿ ಹೋತೃಕಾರ್ಯವನ್ನು ಎಂದರೆ ದೇವತೆಗಳನ್ನು ಯಜ್ಞಕ್ಕೆ ಆಹ್ವಾನಮಾಡಿ ಕರೆತರುವ ಕಾರ್ಯವನ್ನು ನಿರ್ಬಾಧಿತವಾಗಿ ಮಾಡಲು ತೊಡಗಿದನು. ಆಗ

78. ಅಗ್ನಿಯ ಅಸ್ಥಿಯು (ಎಲಬು) ದೇವದಾರುವೃಕ್ಷವಾಯಿತು ; ಮೇದಸ್ಸು (ಕೊಬ್ಬು) ಮಾಸಂವೂ ಗುಗ್ಗುಲುವಾಗಿ ಪರಿವರ್ತಿತವಾಯಿತು. ಆವನ ಸ್ನಾಯುಗಳು ಎಂದರೆ ನರಗಳು ಸುಗಂಧಯುಕ್ತವಾದ (ಒಳ್ಳೆಯ ವಾಸನೆಯುಳ್ಳ) ತೇಜನ ಎಂಬ ದರ್ಭೆಯಹುಲ್ಲಾಯಿತು ; ಅವನ ವೀರ್ಯವು ಚಿನ್ನ ಮತ್ತು ಬೆಳ್ಳಿಯಾಯಿತು.

79. ಆವನ ಶರೀರದ ಕೂದಲುಗಳು ಕಾಶಾ ಎಂಬ ದರ್ಭೆಯಾಯಿತು ; ಶಿರಸ್ಸಿನ ಕೂದಲುಗಳು ಕುಶ ಎಂಬ ದರ್ಭೆಯಾಯಿತು. ಉಗುರುಗಳು ಆಮೆಗಳಾದವು ; ಕರಳುಗಳು ಅವಕ ಎಂಬ ಲತೆಯಾದವು; ಕೊಬ್ಬು ಮರಳು ಮತ್ತು ಮಣ್ಣುಗಳಾದವು.

80. ರಕ್ತವೂ ಪಿತ್ತವೂ ಗೈರಿಕಾದಿ ನಾನಾವಿಧ ಧಾತುಗಳಾದವು. ಈರೀತಿಯಾಗಿ **ಮಹತ್ತದುಲ್ಬಂ** ಎಂದು ಮೊದಲಾಗುವ ಮೂರು ಸೂಕ್ತಗಳಲ್ಲಿ (೫೧-೫೩) ದೇವತೆಗಳೂ ಅಗ್ನಿಯೂ,

---

77. shaking off his limbs, the divine-souled oblation.bearer, pleased in company with his brothers, unweariedly performed the office of Hotr (ಹೋತ್ರಂ) at sacrifices.

17. Story of Agni's flight (concluded). RV. x. 54-57.

78 His bone became the Devadaru tree ; his fat and flesh, bdellium his sinew, fragrant Tejana grass; his semen, silver and gold,

79. the hair of his body (ರೋಮಾಣಿ) became Kasa grass ; the hair of his head (ಕೇಶಾಃ), Kusa grass ; and his nails, tortoises ; and his entrails also (became) the Avaka plant ; his marrow, sand and gravel ;

80. his blood and bile (became) various minerals, such as red chalk. Thus Agni and the gods with the three hymns (beginning) 'Great' (ಮಹತ್ x. 51-53),

ಸಮೂದಿರೇ ಪರೇ ತ್ವಸ್ಮಾದೈಂದ್ರೇ ಸೂಕ್ತೇ ತು ತಾಂ ಸುತೇ ।
ವಿಧುಂ ದದ್ರಾಣಮಿತ್ಯಸ್ಯಾಂ ಸೂರ್ಯಾಚಂದ್ರಮಸೌ ಸ್ತುತೌ ॥ ೮೧ ॥

ಪ್ರಾಣವಚ್ಚಾತ್ಮವಚ್ಚಾಪಿ ಸ್ತುತಿರಪ್ಯತ್ರ ದೃಶ್ಯತೇ ।
ಇದಂ ದ್ವೇ ವೈಶ್ವದೇವೇ ಚ ದ್ವಿತೀಯೇ ಮನಸಸ್ತೃಚಃ ॥ ೮೨ ॥

ಪ್ರಥಮೈಂದ್ರೀ ದ್ವಿತೀಯ್ಯಾಗ್ನೇಯ್ಯಂತ್ಯಾ ತತ್ಸೋಮದೇವತಾ ।
ಆಪಿ ಸ್ತೌತಿ ಪಿತೄನೇತದಾರ್ತ್ವಿಜ್ಯಂ ಯತ್ತದುತ್ತರಂ ॥ ೮೩ ॥

81. ಸಂಭಾಷಿಸಿರುವನು. **ತಾಂ ಸುತೇ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೫೪-೫೫) ಇಂದ್ರನನ್ನು ಸ್ತುತಿಸಲಾಗಿದೆ. ೫೫ನೇ ಸೂಕ್ತದ **ವಿಧುಂ ದದ್ರಾಣಂ** ಎಂಬ ೫ನೇ ಋಕ್ಕಿನಲ್ಲಿ ಸೂರ್ಯನನ್ನೂ ಚಂದ್ರನನ್ನು ಸ್ತುತಿಸಲಾಗಿದೆ.

82. ಈ ೫೬ನೇ ಋಕ್ಕಿನಲ್ಲಿ ಪ್ರಾಣವನ್ನೂ. ಆತ್ಮವನ್ನೂ ಸ್ತುತಿಸಿರಬಹುದೆಂಬ ಭಾವವೂ ಸೂಚಿತವಾಗುತ್ತದೆ. **ಇದಂ ತೆ ಏಕಂ** ಎಂದು ಮೊದಲಾಗುವ ಎರಡು ಸೂಕ್ತಗಳಲ್ಲಿ (೫೬-೫೭) ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ. ಆದರೆ ೫೭ನೇ ಸೂಕ್ತದ **ಮನೋನ್ವಾಹುವಾಮಹೇ** ಎಂಬ ಮೊದಲಾಗುವ ಮೂರು ಋಕ್ಕಗಳಲ್ಲಿ (೩-೫) ಮನಸ್ಸನ್ನು ಸ್ತುತಿಸಲಾಗಿದೆ.

83. ಮತ್ತು ಈ ೫೭ನೇ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ಇಂದ್ರನನ್ನೂ ಎರಡನೆಯ ಋಕ್ಕಿನಲ್ಲಿ ಅಗ್ನಿಯನ್ನೂ, ೬ನೇ ಋಕ್ಕಿನಲ್ಲಿ ಸೋಮನನ್ನು ಸ್ತುತಿಸಲಾಗಿದೆ. ಈ ಸೂಕ್ತದಲ್ಲಿ ಪಿತೃದೇವತೆಗಳನ್ನು ಉದ್ದೇಶಿಸಿ ಸ್ತುತಿಸಿರುವುದೂ ಕಂಡುಬರುವುದು. ಈ ದೃಷ್ಟಿಯಲ್ಲಿ ಈ ಸೂಕ್ತದ ಮಂತ್ರಗಳನ್ನು ಆಯಾಸಂದರ್ಭಗಳಲ್ಲಿ ಋತ್ವಿಕ್ಕುಗಳು ಪ್ರಯೋಗಮಾಡುವರು. ಇದರ ಮುಂದಿನ ಸೂಕ್ತವಾದ **ಯತ್ತೇ ಯಮಂ** ಎಂಬ ಸೂಕ್ತದ ವಿಷಯದಲ್ಲಿ,

---

81. conversed. Now the two following (hymns) 'That of you' (ತಾಂಸುತೇ x. 54-55) after this are addressed to Indra.

In the(stanza)' Who lonely runs ' (ವಿಧುಂ ದದ್ರಾಣಂ x. 55-5) Sun and Moon are praised.

82. The praise here also appears as of Breath and of Soul. The two (hymns) ' This ' (ಇದಂ x. 56-57) are addressed to the All-gods. In the second (57) there is a triplet (3-5) to Mind (ಮನಃ).

18. Story of Subandhu : RV. x. 57-59.

83. The first (stanza) is addressed to Indra (x. 57. I), the second to Agni (2), the last (6) has the Soma (mentioned) in it (ತತ್) for its deity.

This (hymn)praises the Fathers also (and) should be recited (in that sense) by priests (ಆರ್ತ್ವಿಜ್ಯಂ). The hymn (beginning) ' Which ' (ಯತ್ x. 58), coming next after that,

ಸೂಕ್ತಮಾಖ್ಯಾನಸಂಯುಕ್ತಂ ವಕ್ತುಕಾಮಸ್ಯ ಮೇ ಶೃಣು ।
ಸಂಮೋಹಾನ್ನಷ್ಟಸಂಜ್ಞಸ್ಯ ಶತ್ರುಣಾಭಿಹತಸ್ಯ ತು ॥ ೮೪ ॥

ಜೀವಾವೃತ್ತಿಃ ಸುಬಂಧೋರ್ವಾ ಯದಿ ವಾ ಮನಸಃ ಸ್ತವಃ ।
ರಾಜಾಸಮಾತಿರೈಕ್ಷ್ವಾಕೂ ರಥಪ್ರೋಷ್ಠಃ ಪುರೋಹಿತಾನ್ ॥ ೮೫ ॥

ವ್ಯುದಸ್ಯ ಬಂಧುಪ್ರಭೃತೀನ್ ದ್ವಿಪದಾ ಯೇಽತ್ರಿಮಂಡಲೇ ।
ದ್ವೌ ಕಿರಾತಾಕುಲೀ ನಾಮ ತತೋ ಮಾಯಾವಿನೌ ದ್ವಿಜೌ ॥ ೮೬ ॥

ಸುಬಂಧುವಿನ ವೃತ್ತಾಂತ, ೫೭-೫೯ ಮೂಕ್ತಗಳು

84. ಒಂದು ಪೂರ್ವೇತಿಹಾಸವಿರುವುದು. ಅದನ್ನು ಹೇಳುವೆನು ಮನಸ್ಸಿಟ್ಟು ಕೇಳು. ಈ ಸುಬಂಧುವೆಂಬ ಋಷಿಯು ಶತ್ರುಗಳ ಮಾಯಾ ಮಾಟದ ಫಲವಾಗಿ ಮೂರ್ಛೆಹೋಗಿ ಜ್ಞಾನವಿಲ್ಲದೆ ನಿಶ್ಚೇಷ್ಟಿತನಾಗಿ ಬಿದ್ದಿದ್ದಾಗ,

85. ಆ ಸುಬಂಧುವಿನ ಪ್ರಾಣವು (ಆತ್ಮವನ್ನು ಅಥವಾ ಮನಸ್ಸನ್ನು) ಹಿಂತಿರುಗಿ ಬಂದು ಅವನ ಶರೀರದಲ್ಲಿ ಸೇರಿಕೊಳ್ಳಬೇಕೆಂದು ಪ್ರಾರ್ಥಿಸುವ ವಿಷಯವು ಈ ಸೂಕ್ತದಲ್ಲಿ (೫೪) ವಿವರಿಸಲಾಗಿದೆ. ಇದನ್ನು ಮನಸ್ಸನ್ನು (ಪ್ರಾಣ ಅಥವಾ ಆತ್ಮ) ಉದ್ದೇಶಿಸಿ ಮಾಡಿರುವ ಸ್ತುತಿಯೆಂದೂ ಹೇಳಬಹುದು. (ಈ ವಿಷಯದ ವರ್ಣನೆಯು ಈ ರೀತಿ ಇದೆ-)

86. ಐದನೇ ಮಂಡಸದ ದ್ರಷ್ಟೃವಾದ ಅತ್ರಿವಂಶದ ಬಂಧು ಮೊದಲಾದ ನಾಲ್ಕು ಮಂದಿ ಸಹೋದರರು (ಬಂಧು, ಸುಬಂಧು, ಶ್ರುತಬಂಧು, ವಿಪ್ರಬಂಧು ಎಂಬ ಋಷಿಗಳು) ಐದನೇ ಮಂಡಲದ ದ್ವಿಪದಾವಿರಾಟ್ ಛಂದಸ್ಸಿನ ೨೪ನೇ ಸೂಕ್ತಕ್ಕೆ ಋಷಿಗಳಾಗಿದಾರೆ. [ಈ ನಾಲ್ವರು ಸಹೋದರರೂ ಅಸಮಾತಿ ಎಂಬ ರಾಜನ ೨೪ ಪುರೋಹಿತರಾಗಿದ್ದರು. ಕಾರಣಾಂತರದಿಂದ ಆ ರಾಜನು ಇವರನ್ನು ಆ ಕೆಲಸದಿಂದ ತೆಗೆದು] ಮಾಯಾವಿಗಳೂ ಮಾಟ ಮೊದಲಾದ ಅಭಿಚಾರಕರ್ಮಗಳಲ್ಲಿ ಕುಶಲರೂ ಆದ ಕಿರಾತ ಮತ್ತು ಆಕುಲಿ ಎಂಬ ಇಬ್ಬರು ದ್ವಿಜರನ್ನು

---

84. is connected with a story: hear it from me desirous of telling it. When he had lost consciousness from stupefaction, having been struck down by an enemy,

85. Subandhu's life is (here) recalled (ಜೀವಾವೃತ್ತಿ) or (the hymn) is (in) praise of Mind (ಮನಃ).

King Asamati, of the race of Iksvaku, the Rathaprostha, cast off (ವ್ಯುದಸ್ಯ) his domestic priests,

86. Bandhu and the rest who in the Mandala of the Atris (v. 24) are seers of Dvipadas (ದ್ವಿಪದಾಃ). The two crafty priests named Kirata and Akuli,

అసమాతిः పురోఽధత్త వరిష్ఠౌ హి మన్యతే ।
తౌ కపోతౌ ద్విజౌ భూత్వా గత్వా గౌపాయనానభి ॥ ౮౭ ॥
మాయాబలాచ్చ యోగాచ్చ సుబంధుమభిపేతతుः ।
స దుఃఖాదభిఘాతాచ్చ ముమోహ చ పపాత చ ॥ ౮౮ ॥
తౌ తతోఽస్యాసుమాలుచ్య రాజానమభిజగ్మతుः ।
శతः సుబంధౌ పతితే గతాసౌ భ్రాతరస్త్రయः ॥ ౮౯ ॥
జేపుः స్వస్త్యయనం సర్వే మేతి గౌపాయనాः సహ ।
మన ఆవర్తనం తస్య సూక్తం యేదితి తేఽభ్యయుः ॥ ౯౦ ॥

87. సుబంధు మొదలాదవరిగింత శ్రేష్ఠరేందు తిళిదు ఆ అసమతిరాజను తన్న పురోహితరన్నాగి నేమిసికొండను. మాయావిద్యెయల్లి కుశలరాద ఈ ద్విజరిబ్బరూ ఎరడు పారివాళద పక్షిగళ రూపవన్ను ధరిసి గోపాయనపుత్రరాద సుబంధు మొదలాదవర,

88. బళగె హోగి తమ్మ మాయావిద్యెయ మత్తు యోగద సామర్థ్యదింద సుబంధువిన మేలె బిద్దు అవనన్ను హింసిసతొడగిదరు. ఆ సుబంధువు ఇవర (ఈ పారివాళగళ) హొడెతవన్ను తాళలారదె మూర్ఛెహోగి నెలదమేలె బిద్దు బిట్టను.

89. బళిక ఆ ఈర్వరు ద్విజరు సుబంధువిన అసువన్ను (ప్రాణవన్ను) అపహరిసి అవన్ను తెగిదు కొండు (అసమాతి) రాజన బళిగె బందరు ఇత్త సుబంధు అసువన్ను నీగి నిశ్చేష్టితనాగి బిద్దిరలు అవన మళిద మూవరు సహోదరరు, (గౌపాయనరు).

90. సుబంధువిన ప్రాణవు హింతిరుగి బరువుదక్కాగియూ అవనిగె శ్రేయస్సాగువుదక్కాగియూ **మా హ్వ గామ** ఎంబ సూక్తదింద (౫౭) స్వస్తిమంత్రగళన్ను పఠిసుత్తిద్దరు మత్తు ఆదే కార్యసాధనెగాగి ఎందరె సుబంధువిన అసువు (ప్రాణవు) హింతిరుగి బరువుదక్కాగి **యేత్తే యేమం** ఎంబ ౫౯నే సూక్తవన్ను పఠిసుత్తిద్దరు.

---

87. Asamati made his domestic priests; for he considered them the best. These two priests havsng become pigeons and having gone against the Gaupayanas,

19. Story of Subandhu (continued).

88. fell upon Subandhu with their crafty power and their magical art (యోగ). From the pain (caused) by their attack, he swooned and fell.

89, When they had plucked out (ఆలుచ్య) his spirit (అసు), they went to the king. Then, after Subandhu had fallen lifeless to the ground, the three brothers,

90 the Gaupayanas, all together muttered, as a spell for good luck, (the hymn) 'Not' (మా x. 57): for bringing back his soul (మన ఆవర్తనం) they had recourse to (అభ్యయుः) the hymn 'Which' (యత్ x. 58)

ಜೇಪುಶ್ಚ ಭೇಷಜಾರ್ಥಂ ಯಂ ಪ್ರ ತಾರೀತಿ ಪರಂ ತತಃ ।
ಸೂಕ್ತಸ್ಯಾದ್ಯಸ್ತೃಚಸ್ತತ್ರ ನಿರ್ಋತೇರಪನೋದನಃ ॥ ೯೦ ॥

ತ್ರಯಃ ಪಾದಾ ಮೋ ಷ್ವಿತಿ ತು ಸೌಮ್ಯಾ ನೈರ್ಋತ ಉತ್ತಮಃ ।
ಋಕ್ಸೌಮ್ಯಾ ನೈರ್ಋತೀ ಚೈಷಾ ಅಸುನೀತೇಃ ಸ್ತುತಿಃ ಪರೇ ॥ ೯೨ ॥

ದ್ಯೌಶ್ಚೇ ತ್ವಾನುಮತಂ ಪಾದಮಂತ್ಯಂ ಯಾಸ್ಕಸ್ತು ಮನ್ಯತೇ ।
ಭೂರ್ದ್ಯೌಃ ಸೋಮಶ್ಚ ಪೂಷಾ ಚ ಖಂ ಪಥ್ಯಾ ಸ್ವಸ್ತಿರೇವ ಚ ॥ ೯೩ ॥

ಸುಬಂಧೋರೇವ ಶಾಂತ್ಯರ್ಥಂ ಪುನರ್ನ ಋಚಿ ತು ಸ್ತೃತಾಃ ।

91. ಮತ್ತು ಈ ಕಾರ್ಯದಲ್ಲಿ ಉಂಟಾದ ಶರೀರಾಪಘಾತವು ವಾಸಿಯಾಗುವುದಕ್ಕಾಗಿ ೫೯ನೇ ಸೂಕ್ತದ **ಪ್ರ ತಾರ್ಯಾಯುಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು (೧-೩) ಪಠಿಸಿದರು. ಈ ಮೂರು ಋಕ್ಕುಗಳ ಪಠಣದಿಂದ ನಿರ್ಋತಿ ಎಂಬ ಪಾಪದೇವತೆಯ ಉಚ್ಚಾಟನೆಯಾಗುವುದು.

92. ಈ ಸೂಕ್ತದ **ಮೋ ಷು ಣಃ** ಎಂಬ ೪ನೇ ಋಕ್ಕಿನ ಮೊದಲು ಮೂರು ಪಾದಗಳಲ್ಲಿ ಸೋಮದೇವತೆಯನ್ನು ಸ್ತುತಿಸಲಾಗಿದೆ. ನಾಲ್ಕನೆಯ ಪಾದದಲ್ಲಿ ನಿರ್ಋತಿಯ ವಿಷಯವಿದೆ. ಆದ್ದರಿಂದ ಈ ಋಕ್ಕಿಗೆ ಸೋಮ ಮತ್ತು ನಿರ್ಋತಿಯು ದೇವತೆಗಳು. ಇದರ ಮುಂದಿನ ೫-೬ನೇ ಋಕ್ಕುಗಳಲ್ಲಿ ಅಸುನೀತಿ ಎಂಬ ದೇವತೆಯ ಪ್ರಶಂಸೆ ಇದೆ.

93. ಈ ಎರಡು ಋಕ್ಕುಗಳಲ್ಲಿ (೫-೬) ೬ನೇ ಋಕ್ಕಿನ ಕೊನೆಯ ಪಾದದಲ್ಲಿ ಅನುಮತಿಯೆಂಬ ದೇವತೆಯನ್ನು ಸ್ತುತಿಸಲಾಗಿದೆಯೆಂದು ಯಾಸ್ಕರ ಅಭಿಪ್ರಾಯವು ಮತ್ತು ಪೃಥಿವೀ, ದ್ಯೌಃ, ಸೋಮ, ಪೂಷಾ, ಅಂತರಿಕ್ಷ, ಪಥ್ಯಾ, ಸ್ವಸ್ತಿ ಎಂಬ ದೇವತೆಗಳು,

94. ಸುಬಂಧುವಿನ ಶಾಂತ್ಯರ್ಥವಾಗಿ **ಪುನರ್ನಃ** ಎಂಬ ೭ನೇ ಋಕ್ಕಿನಲ್ಲಿ ಸ್ತುತಿಸಲ್ಪಟ್ಟಿರುವರು ಎಂದು

---

91. And the following (triplet) which, beginning 'Let be prolonged' (ಪ್ರ ತಾರಿ : x. 59), they muttered with a view to remedies is,

the first triplet of the hymn (1-3) : it is there meant to drive away (ಅಪನೋದನ) Dissolution (ನಿರ್ಋತಿ),

92. Now the three verses 'Not at all' (ಮೋ ಷು : x. 59-4) are addressed to Soma, the last (4) to Nirrti ; this whole stanza being addressed to Soma and Nirrti. The following two (stanzas : 5-6) are (in) praise of Asuniti.

93. Now in (this) couplet Yaska thinks the last verse (59-6) is addressed to Anumati,

20. Detailed account of RV. x. 59-60.

Earth, Heaven, Soma and Pusan, Air, Pathya and Svasti,

94. are traditionally held (to be the deities) in the stanza 'Again to us' (ಪುನರ್ನ : x. 59-7) for the alleviation (ಶಾಂತಿ) of Subandhu. The triplet

ತೈಚಃ ಶಮಿತಿ ರೋದಸ್ಯೋರೈಂದ್ರೋ೨ರ್ಧರ್ಚಃ ಸಮಿತ್ಯೃಚಿ ॥ ೯೪ ॥
ರಪಸೋ ನಾಶನಾರ್ಥಂ ವೈ ತುಷ್ಟುವುಸ್ತ್ವಥ ರೋದಸೀ ।
ರಪ ಇತ್ಯಭಿಧಾನಂ ತು ಗದಿತಂ ಪಾಪಕೃಚ್ಛ್ರಯೋಃ ॥ ೯೫ ॥
ಋಗ್ಭಿರೇತಿ ಚತಸೃಭಿಸ್ತತ ಐಕ್ಷ್ವಾಕುಮಸ್ತುವನ್ ।
ಇಂದ್ರ ಕ್ಷತ್ರೇತ್ಯೃಚಾ ಚಾಸ್ಯ ಸ್ತುತ್ವಾಶಂಸಿಷುರಾಶಿಷಃ ॥ ೯೬ ॥
ಅಗಸ್ತ್ಯಸ್ಯೇತಿ ಮಾತಾ ಚ ತೇಷಾಂ ತುಷ್ಟಾವ ತಂ ನೃಪಂ ।
ಸ್ತುತಃ ಸ ರಾಜಾ ಸವ್ರೀಳಸ್ತಸ್ಥೌ ಗೌಪಾಯನಾನಭಿ ॥ ೯೭ ॥

ಸಿ. **ಶಂ ರೋದಸೀ** ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ (೮-೧೦) ದ್ಯಾವಾಪೃಥಿವಿಗಳನ್ನು ಸ್ತುತಿಸಲಾಗಿದೆ. ಈ ೧೦ನೇ ಋಕ್ಕಿನ ಪೂರ್ವಾರ್ಧದಲ್ಲಿ ಇಂದ್ರನ ಸ್ತುತಿ ಇದೆ.

95. ಶರೀರದ ನಿರ್ಬಲತ್ವವನ್ನು (ಅಶಕ್ತಿ) ನಾಶಮಾಡುವುದಕ್ಕಾಗಿ ಋಷಿಗಳು ದ್ಯಾವಾಪೃಥಿವಿಗಳನ್ನು ಸ್ತುತಿಸಿರುವರು. ಪಾಪಕರ್ಮಗಳಿಂದ ಉಂಟಾದ ಶರೀರದ ನಿಶ್ಶಕ್ತತೆಗೆ ರಪ ಎಂದು ಹೆಸರಿರುವುದು.

೬೦ನೇ ಮೂಕ್ತದ ದೇವತೆಗಳು

96. ೬೦ನೇ ಸೂಕ್ತದ **ಆ ಜನಂ** ಎಂದು ಮೊದಲಾಗುವ ನಾಲ್ಕು ಋಕ್ಕುಗಳಿಂದ (೧-೪) ಬಂಧ್ವಾದಿ ಋಷಿಗಳು ಇಕ್ಷ್ವಾಕುವಂಶದ ರಾಜನಾದ ಅಸಮಾತಿಯನ್ನು ಪ್ರಶಂಸೆ ಮಾಡಿದರು. ಅವನನ್ನು ಬಹುವಿಧವಾಗಿ ಪ್ರಶಂಸೆಮಾಡಿದನಂತರ **ಇಂದ್ರ ಕ್ಷತ್ರಾ** ಎಂಬ ೫ನೇ ಋಕ್ಕಿನಿಂದ ಆ ರಾಜನ ಶ್ರೇಯಸ್ಸನ್ನು ಕೋರಿ ಇಂದ್ರನನ್ನು ಸ್ತುತಿಸಿದರು.

97. ಆ ಬಂಧ್ವಾದಿಋಷಿಗಳ ತಾಯಿಯೂ ಸಹ ಆ ರಾಜನನ್ನು **ಅಗಸ್ತ್ಯಸ್ಯ** ಎಂಬ ೬ನೇ ಋಕ್ಕಿನಿಂದ ಸ್ತುತಿಸಿದಳು. ಈರೀತಿ ಬಂಧ್ವಾದಿಋಷಿಗಳಿಂದಲೂ ಅವರ ತಾಯಿಯಿಂದಲೂ ಸ್ತುತಿಸಲ್ಪಟ್ಟ ಆ ಅಸಮಾತಿ ರಾಜನು ತಾನು ಮಾಡಿದ ಕಾರ್ಯಕ್ಕಾಗಿ ಲಜ್ಜೆಗೊಂಡು ಗೋಪಾಯನಪುತ್ರರಾದ ಬಂಧ್ವಾದಿಗಳ ಸಮೀಪದಲ್ಲಿ ತಲೆತಗ್ಗಿಸಿ ಸುಮ್ಮನೆ ನಿಂತುಕೊಂಡನು.

'Blessing' (**ಶಂ**: x. 58. 8-10) is to the Two Worlds (**ರೋದಸೀ**), while in the stanza 'Together' (**ಸಂ**: x. 59-10) the (first) hemistich is addressed to Indra.

95. Now they praised the Two Worlds for the distruction of infirmity (**ರಪಸಃ**): 'infirmity' is stated to be a designation of sin of (bodily) trouble.

96. Then with the four stanzas 'Hither' (**ಆ**: x. 60. 1-4) they praised the scion of Iksvaku, and after praising him they uttered prayers for him with the stanza 'O Indra, dominion' (**ಇಂದ್ರ ಕ್ಷತ್ರ**: x. 60-5).

97. And their mother praised the king, with (the stanza) 'Of Agastya' (**ಅಗಸ್ತ್ಯಸ್ಯ**: x. 60-6). The king, having been praised, went to the Gaupayanas full of shame.

ಸೂಕ್ತೇನಾಪ್ಯಸ್ತುವನ್ನಗ್ನಿಂ ದ್ವಿಪದೇನ ಯಥಾತ್ರಿಷು ।
ಅಗ್ನಿರಪ್ಯಬ್ರವೀದೇತಾನಯಮಂತಃ ಪರಿಧ್ಯಸುಃ ॥ ೯೮ ॥

ಸುಬಂಧೋರಸ್ಯ ಚೈಷ್ವಾಕೋರ್ಮಯಾ ಗುಪ್ತೋ ಹಿತಾರ್ಥಿನಾ ।
ಸುಬಂಧವೇ ಪ್ರದಾಯಾಸುಂ ಜೀವೇತ್ಯುಕ್ತ್ವಾ ಚ ಪಾವಕಃ ॥ ೯೯ ॥

ಸ್ತುತೋ ಗೌಪಾಯನೈಃ ಪ್ರೀತೋ ಜಗಾಮ ತ್ರಿದಿವಂ ಪ್ರತಿ ।
ಅಯಂ ಮಾತೇತಿ ಹೃಷ್ಟಾಸ್ತೇ ಸುಬಂಧೋರಸುಮಾಹ್ವಯನ್ ॥ ೧೦೦ ॥

98. ಅನಂತರ ಅತ್ರಿಋಷಿವಂಶಜರಾದ ಈ ಬಂಧ್ವಾದಿಗೋಪಾಯನಪುತ್ರರು ದ್ವಿಪದಾವಿರಾಟ್‌ಛಂದಸ್ಸಿನ ಸೂಕ್ತದಿಂದ (೫ನೇ ಮಂಡಲದ ೩೪ನೇ ಸೂಕ್ತದಿಂದ) ಅಗ್ನಿಯನ್ನು ಸ್ತುತಿಸಿದರು. ಅಗ್ನಿಯು ಇವರ ಸ್ತೋತ್ರದಿಂದ ಸಂತುಷ್ಟನಾಗಿ ಅವರ ಬಳಿಗೆ ಬಂದು—ಎಲೈ ಋಷಿಗಳೇ, ಅಗ್ನಿಯ ಪರಿಧಿಯ ಒಳಭಾಗದಲ್ಲಿ ಸುಬಂಧುವಿನ ಪ್ರಾಣವು,

99. ಸುರಕ್ಷಿತವಾಗಿ ನೆಲೆಸಿರುವುದು. ಈ ಇಕ್ಷ್ವಾಕುವಂಶದ ಅಸಮಾತಿಯ ಪ್ರಾಣವೂ ಇಲ್ಲಿಯೇ ಇರುವುದು. ಇವರಿಬ್ಬರ ಪ್ರಾಣಗಳನ್ನು ಇವರ ಶ್ರೇಯಸ್ಸಿಗಾಗಿ ನಾನು ಇದುವರೆಗೂ ಕಾಪಾಡಿಟ್ಟಿದ್ದೆನು—ಎಂದು ಹೇಳಿ ಶುದ್ಧಿಕಾರಕನಾದ (ಪಾವಕ) ಅಗ್ನಿಯು ಸುಬಂಧುವನ್ನು ಉದ್ದೇಶಿಸಿ ಜೀವಿಸು (ಜೀವ) ಎಂದು ಸುಬಂಧುವಿನ ಪ್ರಾಣವನ್ನು ಹಿಂದಕ್ಕೆ ತಂದುಕೊಟ್ಟನು.

100. ಬಳಿಕ ಗೋಪಾಯನಪುತ್ರರಾದ ಬಂಧ್ವಾದಿಗಳು ಅಗ್ನಿಯನ್ನು ಸ್ತುತಿಸಿದರು. ಅಗ್ನಿಯು ಪ್ರೀತನಾಗಿ ತನ್ನ ಸ್ವಸ್ಥಾನವಾದ ಸ್ವರ್ಗಕ್ಕೆ ತೊಟ್ಟುಹೊರೆದನು. ಬಳಿಕ ಬಂಧ್ವಾದಿಋಷಿಗಳು ಸಂತೋಷಚಿತ್ತರಾಗಿ ೬೦ನೇ ಸೂಕ್ತದ **ಅಯಂ ಮಾತಾ** ಎಂಬ ೭ನೇ ಋಕ್ಕಿನಿಂದ ಸುಬಂಧುವಿನ ಅಸುವನ್ನು (ಪ್ರಾಣವನ್ನು) ಹಿಂತಿರುಗಿ ಬರುವಂತೆ ಪ್ರಾರ್ಥಿಸಿ ಕರೆದರು.

---

98 As among the Atris they had also praised Agni with a dvipada hymn (ದ್ವಿಪದ), Agni, on his part, said to them, 'Here within the sacrificial barrier' (ಅಂತಃಪರಿಧಿ) is the spirit,

21. Story of Subandhu (concluded) Deities of RV. x. 61-66

99. of Subandhu; that of this scion of Iksvaku also has been guarded by me desirous of the welfare (of both). Having given (back) his spirit to Subandhu and saying 'Live,' the Purifier (ಪಾವಕ),

100. having been praised by the Gaupayanas, went back pleased to heaven. They, rejoicing, summoned the spirit of Subandhu with (the stanza) 'He as a mother' (ಅಯಂ ಮಾತಾ : x. 60-7).

ಶರೀರಮಭಿನಿರ್ದಿಶ್ಯ ಸುಬಂಧೋಃ ಪತಿತಂ ಭುವಿ ।
ಸೂಕ್ತಶೇಷಂ ಜಗುಶ್ಚಾಸ್ಯ ಚೇತಸೋ ಧಾರಣಾಯ ತೇ ॥ ೧೦೧ ॥

ಲಬ್ಧಾಸುಂ ಜಾಯಮಿತ್ಯಸ್ಯಾಂ ಪೃಥಕ್ಪಾಣಿಭಿರಸ್ಪೃಶನ್ ।
ಪಳಿದಂ ವೈಶ್ವದೇವಾನಿ ದ್ವಿತೀಯೇಽಙ್ಗಿರಸಾಂ ಸ್ತುತಿಃ ॥ ೧೦೨ ॥

ಜನ್ಮ ಕರ್ಮ ಚ ಸಖ್ಯಂ ಚ ಇಂದ್ರೇಣ ಸಹ ಕೀರ್ತಯನ್ ।
ಸ್ತೌತಿ ಪ್ರ ನೂನಮಿತ್ಯಾದ್ಯಾಃ ಸಾವರ್ಣ್ಯಸ್ಯ ಮನೋಃ ಸ್ತುತಿಃ ॥ ೧೦೩ ॥

101. ಅನಂತರ ಅಲ್ಲಿ ನಿಶ್ಚೇಷ್ಟಿತವಾಗಿ ಬಿದ್ದಿದ್ದ ಸುಬಂಧುವಿನ ಶರೀರವನ್ನು ಆ ಆತ್ಮಕ್ಕೆ ತೋರಿಸಿ ಆ ಆತ್ಮವು ಆ ಶರೀರದಲ್ಲಿ ಪ್ರವೇಶಿಸಿ ಅವನಿಗೆ ಮುಂಚಿನಂತೆ ಜ್ಞಾನಬರುವುದಕ್ಕಾಗಿ ಈ ಸೂಕ್ತದ ಉಳಿದ ಮಂತ್ರಗಳನ್ನು (೮-೧೪) ಪಠಿಸಿದರು.

102. ಸೂಕ್ತದ ಉಳಿದ ಋಕ್ಕುಗಳನ್ನು ಪಠಿಸುವಾಗ ಕೊನೆಯ (೧೪) **ಅಯಂ ಮೇ ಹಸ್ತಃ** ಎಂಬ ಋಕ್ಕಿನಿಂದ ಆ ಸುಬಂಧುವಿನ ಶರೀರವನ್ನು ತಮ್ಮ ಹಸ್ತಗಳಿಂದ ಸ್ಪರ್ಶಿಸುತ್ತಾ ಪಠಿಸುತ್ತಿದ್ದರು. ಮತ್ತು ಆ ಸುಬಂಧುವಿಗೆ ಪುನಃ ಚೇತನ (ಪ್ರಜ್ಞೆ) ಉಂಟಾಯಿತು. **ಇದಮಿತ್ಥಾ** ಎಂದು ಮೊದಲಾಗುವ ಮುಂದಿನ ಆರು ಸೂಕ್ತಗಳಲ್ಲಿ (೬೧-೬೬) ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ. ಈ ಆರು ಸೂಕ್ತಗಳಲ್ಲಿ ಎರಡನೆಯದಾದ ೬೨ನೇ ಸೂಕ್ತದಲ್ಲಿ ಆಂಗಿರಸರನ್ನು ಸ್ತುತಿಸಲಾಗಿದೆ.

103. ಈ ಸೂಕ್ತದಲ್ಲಿ (೬೨)ಋಷಿಯು (ನಾಭಾನೇದಿಷ್ಠ ಋಷಿಯು) ಈ ಆಂಗಿರಾಋಷಿಗಳ ಜನ್ಮವೃತ್ತಾಂತವನ್ನೂ, ಅವರಿಸಗಿದ ಕಾರ್ಯಗಳನ್ನೂ, ಇಂದ್ರನೊಡನೆ ಅವರಿಗಿರುವ ಮಿತ್ರತ್ವವನ್ನು ವಿವರಿಸಿ ಪ್ರಶಂಸೆಮಾಡಿರುವನು. **ಪ್ರ ನೂನಂ ಜಾಯತಾಂ** ಎಂದು ಮೊದಲಾಗುವ ಮುಂದಿನ ಋಕ್ಕುಗಳಲ್ಲಿ (೮-೧೧) ಸವರ್ಣಪುತ್ರನಾದ ಮನುವಿನ ಪ್ರಶಂಸೆ ಇದೆ.

---

101. Pointng to the body of Subandhu prostrate on the ground, they sang the remainder of the hymn for the maintenance of his consciousness (ಚೇತಸಃ).

102. And in the (stanza) ' This ' (ಅಯಂ : x. 60-12) they individually (ಪೃಥಕ್) touched him with their hands when he had reeovered his spirit.

There are six (hymns) addressed to the All-gods (beginning) ' This' (ಇದಂ : x. 61-66). In the second (62) there is praise of the Angirases.

103. (The seer) praises (them), proclaiming (their) birth, and activity, and friendship with Indra. ' May he now prosper (ಪ್ರನೂನಂ : x. 62. 8-11) and the rest are a praise of Manu, son of Savarna (ಸಾವರ್ಣ್ಯ).

ತಸ್ಯೈವ ಚಾಯುಷೋಽರ್ಥಾಯ ದೇವಾನ್ಸ್ತೌತ್ಯಭ್ಯಯಾವೃಷಿಃ ।
ಸುತ್ರಾಮಾಣಂ ಮಹೀಮೂ ಷು ದಕ್ಷಸ್ಯೇತ್ಯದಿತೇಃ ಸ್ತುತಿಃ ॥ ೧೦೪ ॥

ಪಥ್ಯಾಸ್ವಸ್ತೇಃ ಸ್ವಸ್ತಿರಿದ್ಧಿ ಸ್ವಸ್ತಿ ನೋ ಮರುತಾಂ ಸ್ತುತಿಃ ।
ಮಾರುತೀಮೃಚಮನ್ವಾಹೇತ್ಯುತ್ತಮಾಧ್ವರ್ಯವೇಷು ಹಿ ॥ ೧೦೫ ॥

ಯಾ ಗೌರಿತಿ ತಥೈವಾಸ್ಯಾಂ ಸ್ತೂಯತೇ ಮಧ್ಯಮಾ ತು ವಾಕ್ ।
ಮಿತ್ರಾಯ ನೈತ್ರಾವರುಣೇ ಭುಜ್ಯುಮಂಹಸ ಅಶ್ವಿನೀ ॥ ೧೦೬ ॥

104. ತನ್ನ ಆಯುರ್ವೃದ್ಧಿಗಾಗಿ ಋಷಿಯು ದೇವತೆಗಳನ್ನು ಸ್ತುತಿಸಿರುವನು. ೬೩ನೇ ಸೂಕ್ತದ **ಸುತ್ರಾಮಾಣಂ** ಎಂಬ ೧೦ನೇ ಋಕ್ಕಿನಲ್ಲಿಯೂ, **ಮಹೀ ಮೂ ಷು** ಎಂಬ ಋಕ್ಕಿನಲ್ಲಿಯೂ (ಈ ಋಕ್ಕು ಋಗ್ವೇದದಲ್ಲಿರುವುದಿಲ್ಲ. ಯಜುರ್ವೇದದ ತೈತ್ತಿರೀಯಸಂಹಿತೆಯ ೫ನೇ ಪ್ರಪಾಠಕದ ೧೧ನೇ ಅನುವಾಕದಲ್ಲಿ ೫ನೇ ಪಂಚಾಶತ್ತಿನಲ್ಲಿ ಈ ಮಂತ್ರವು ಈರೀತಿ ಇರುವುದು—**ಮಹೀ ಮೂ ಷು ಮಾತರಗ್ಂ ಸುವ್ರತಾನಾಮೃತಸ್ಯ ಪತ್ನೀಮವಸೇ ಹುವೇಮ । ತುವಿಕ್ಷತ್ರಾಮಜರಂತೀಮುರೂಚೀಗ್ಂ ಸುಶರ್ಮಾಣಮದಿತಿಗ್ಂ ಸುಪ್ರಣೀತಿಂ ॥**) ಮತ್ತು ೬೪ನೇ ಸೂಕ್ತದ **ದಕ್ಷಸ್ಯ ವಾದಿತೇ** ಎಂಬ ೫ನೇ ಋಕ್ಕಿನಲ್ಲಿಯೂ ಅದಿತಿಯ ಸ್ತುತಿ ಇರುವುದು.

105. ೬೩ನೇ ಸೂಕ್ತದ **ಸ್ವಸ್ತಿರಿದ್ಧಿ** ಎಂಬ ಋಕ್ಕಿನಲ್ಲಿ **ಪಥ್ಯಾಸ್ವಸ್ತಿ** ಎಂಬ ದೇವತೆಯ ಸ್ತುತಿ ಇದೆ. **ಸ್ವಸ್ತಿ ನಃ** ಎಂಬ ೧೫ ಋಕ್ಕಿನಲ್ಲಿ ಮರುದ್ದೇವತೆಗಳನ್ನು ಸ್ತುತಿಸಲಾಗಿದೆ. ಏಕೆಂದರೆ ಅಧ್ವರ್ಯುವೆಂಬ ಋತ್ವಿಜನು ಪಠಿಸಬೇಕಾದ ಅಥವಾ ನಿರ್ವಹಿಸಬೇಕಾದ ಕರ್ಮಗಳಲ್ಲಿ ಈ ಮಂತ್ರವನ್ನು ಮರುದ್ದೇವತಾಕವಾದ ಮಂತ್ರವೆಂದು ಸ್ಪಷ್ಟವಾಗಿ ತಿಳಿಸಿ **ಮಾರುತೀಮೃಚಮನ್ವಾಹ** ಎಂಬ ಶ್ರುತಿವಾಕ್ಯದಿಂದ ನಿರ್ದೇಶಿಸಲಾಗಿದೆ.

106. **ಯಾ ಗೌರ್ವರ್ತನಿಂ** ಎಂಬ ಋಕ್ಕಿನಲ್ಲಿ (೬೫ನೇ ಸೂಕ್ತದ ೬ನೇ ಋಕ್ಕು) ಮಧ್ಯಮಸ್ಥಾನದ ವಾಗ್ದೇವತೆಯನ್ನು ಸ್ತುತಿಸಲಾಗಿದೆ. ಇದೇ ಸೂಕ್ತದ **ಮಿತ್ರಾಯ ಶಿಕ್ಷ** ಎಂಬ ೫ನೇ ಋಕ್ಕಿನಲ್ಲಿ ಮಿತ್ರಾವರುಣರನ್ನೂ, **ಭುಜ್ಯುಮಂಹಸಃ** ಎಂಬ ೧೨ನೇ ಋಕ್ಕಿನಲ್ಲಿ ಅಶ್ವಿನೀದೇವತೆಗಳನ್ನೂ ಸ್ತುತಿಸಲಾಗಿದೆ.

---

22. Details of RV. x. 63-66. Deities of RV. x. 67-72.

104. And for the sake of long life for him the seer praises the gods : (so) he came upon 'Her that well guards' (सुत्रामाणं : x. 63-10) (and) 'Her that is great' (महीमू षु). 'Of Daksa' (दक्षस्य : x 64-5) is (in) praise of Aditi.

105. 'The goddess of welfare, indeed' (स्वस्तिरिद्धि : x. 63-16) is (in praise) of the Pathya svasti ; 'Welfare to us' (स्वस्ति नः : 15) is (in) praise of the Martuts ; for for it is stated in the texts of the Adhvaryus (with regard to it) 'He repeats the stanza addressed to the Maruts.'

106. So also in the (stanza) 'The Cow that' (या गौः : x. 65-6) the Middle Vac is praised, 'To Mitra' (मित्राय : 5) is addressed to Mitra-Varuna ; 'Bhujyu from distress' (भुज्युमंहसः : 12) is addressed to the Asvins.

ಸ್ತೌತ್ಯಪಿ ಚ ಮನುಂ ಸ್ವಸ್ತಿ ದ್ವ್ಯಚೇ ವಾಚಂ ಚ ಮಧ್ಯಮಾಂ ।
ಅಥೇಮಾಂ ದ್ವೇ ಬಾರ್ಹಸ್ಪತ್ಯೇ ಭದ್ರಾ ಅಗ್ನೇಯಮಾಪ್ರಿಯಃ ॥ ೧೦೭ ॥

ಪ್ರಥಮೇ ಬಾರ್ಹಸ್ಪತ್ಯೇ ತು ಅರ್ಧರ್ಚೇ ಬ್ರಹ್ಮಣಸ್ಪತಿಃ ।
ವೈಶ್ವದೇವೇಽಪಿ ಸೂಕ್ತೇಽತ್ರ ಸ್ತುತೋಽರ್ಧರ್ಚೇ[2]ಬೃಹಸ್ಪತಿಃ
ಬ್ರಹ್ಮಣಸ್ಪತಿರಿತ್ಯಸ್ಮಿನ್ ಲಿಂಗವಾಕ್ಯವಿಕಾರತಃ ॥ ೧೦೮ ॥

ಯಜ್ಜ್ಯೋತಿರಮೃತಂ ಬ್ರಹ್ಮ ಯದ್ಯೋಗಾತ್ಸಮುಪಾಶ್ನುತೇ ।
ತಜ್ಜ್ಞಾನಮಭಿತುಷ್ಟಾವ ಸೂಕ್ತೇನಾಥ ಬೃಹಸ್ಪತಿಃ ॥ ೧೦೯ ॥

107. ೬೫ ನೇ ಸೂಕ್ತದ ಕೊನೆಯ ಎರಡು ಋಕ್ಕುಗಳಲ್ಲಿ ಮನುವನ್ನೂ ಮಾಧ್ಯಮಿಕಾ ವಾಗ್ದೇವತೆಯನ್ನು ಸ್ತುತಿಸಲಾಗಿದೆ.

೬೭-೭೨ ನೇ ಸೂಕ್ತಗಳ ದೇವತೆಗಳು

ಇಮಾಂ ಧಿಯಂ ಎಂದು ಮೊದಲಾಗುವ ಎರಡು ಸೂಕ್ತಗಳಲ್ಲಿ (೬೭-೬೮) ಬೃಹಸ್ಪತಿಯನ್ನು ಸ್ತುತಿಸಲಾಗಿದೆ. **ಭದ್ರಾ ಅಗ್ನೇ** ಎಂಬ ೬೯ ನೇ ಸೂಕ್ತದಲ್ಲಿ ಅಗ್ನಿಯನ್ನು ಸ್ತುತಿಸಲಾಗಿದೆ. ಮುಂದಿನ **ಇಮಾಂ ಮೇ ಅಗ್ನೇ** ಎಂಬ ೭೦ ನೇ ಸೂಕ್ತದಲ್ಲಿ ಆಪ್ರೀಸೂಕ್ತದ ದೇವತೆಗಳನ್ನು ಸ್ತುತಿಸಲಾಗಿದೆ.

108. ಬೃಹಸ್ಪತಿದೇವತಾಕವಾದ ೬೭ ನೇ ಸೂಕ್ತದ ೭ ನೇ ಋಕ್ಕಿನ ಉತ್ತರಾರ್ಧದಲ್ಲಿ ಬ್ರಹ್ಮಣಸ್ಪತಿಶಬ್ದದ ಪ್ರಯೋಗವಿದೆ. ವಿಶ್ವೇದೇವತಾಕವಾದ (ಅಥವಾ ಕೇವಲ ದೇವತೆಗಳನ್ನುದ್ದೇಶಿಸಿ ಸ್ತುತಿಸಲಾಗಿರುವ) ೭೨ ನೇ ಸೂಕ್ತದ ೨ ನೇ ಋಕ್ಕಿನ ಪೂರ್ವಾರ್ಧದಲ್ಲಿ ಬ್ರಹ್ಮಣಸ್ಪತಿ ಎಂಬ ಪದಪ್ರಯೋಗವಿದ್ದರೂ ವಾಕ್ಯದ ಲಕ್ಷಣಾದಿಗಳಿಂದ ವಿಮರ್ಶಿಸಿದರೆ ಬೃಹಸ್ಪತಿಯನ್ನೇ ನಿರ್ದೇಶಿಸಲಾಗಿದೆಯೆಂದು ಕಂಡುಬರುವುದು

೭೧ ನೇ ಸೂಕ್ತದ ಪ್ರತ್ಯೇಕ ವಿವರಣೆ

109. ನಿತ್ಯವೂ ನಾಶರಹಿತವಾದುದೂ ಆದ ಯಾವ ಪರಂಜ್ಯೋತಿಯ (ಪರಮಾತ್ಮನ) ಧ್ಯಾನದಿಂದ ಯೋಗಿಯು (ಅಥವಾ ತಪಸ್ವಿಯಾದ ಪುರುಷನು) ಪರಬ್ರಹ್ಮಪದವಿಯನ್ನು ಪಡೆಯುವನೋ ಅಂತಹ ಶ್ರೇಷ್ಠವಾದ ಜ್ಞಾನವನ್ನು ಬೃಹಸ್ಪತಿಯು ಈ ೭೧ ನೇ ಸೂಕ್ತದಲ್ಲಿ ವರ್ಣಿಸಿ ಸ್ತುತಿಸಿದಾನೆ.

---

107. He also praises Manu and the Middle Vac in the couplet containing Svasti (x. 66-14,15),

Then the two (hyms) 'this' (ಇಮಾಂ: x. 67-68) are addressed to Brhaspati; 'The auspicious' (ಭದ್ರಾಃ: x. 69) is addressed to Agni; (then comes) an Apri hymn (x. 70)

108. In the first (hymn) addressed to Brhaspati (67) Brahmanaspati (appears) in a hemistich ( ). In the hymn to the All-gods here (72) Brahspati is alao praised in a hemistich (2): (that is) in the one beginning 'Brahmanaspati' (72. 2) by changing (ವಿಕಾರತಃ) the characteristic term (ಲಿಂಗವಾಕ್ಯ).

23. Detailed account of RV. x. 71

109. That knowledge which is immortal light and by union with which one attains to Brahman, Brahaspati praised next(ಅಥ)with a hymn (71).

ಜೀವನಾರ್ಥಂ ಪ್ರಯೋಗಸ್ತು ಮಂತ್ರಾಣಾಂ ಪ್ರತಿಷಿಧ್ಯತೇ ।
ವೇದತತ್ತ್ವಾರ್ಥವಿಜ್ಞಾನಂ ಪ್ರಾಯೇಣಾತ್ರ ಹಿ ದೃಶ್ಯತೇ ॥ ೧೧೦ ॥

ಆಚಾರ್ಯಾಃ ಕೇಚಿದಿತ್ಯಾಹುರತ್ರ ವಾಗ್ಮಿದುಷಾಂ ಸ್ತವಃ ।
ಯೇಥಾಭಿರಿಂದ್ಯತೇಽತ್ರರ್ಗ್ಭಿಃ ಸೂಕ್ತೇಽನ್ಯಾಭಿರನರ್ಥವಿತ್ ॥ ೧೧೧ ॥

ಯಥೈತಾಮನ್ವವಿಂದಂತ ವಿದ್ವಾಂಸರ್ಷಿಗತಾಂ ಸತೀಂ ।
ಯೇಥಾ ಚ ವ್ಯಭಜನ್ಯಜ್ಞೇ ತದತ್ರೋಕ್ತಂ ತೃತೀಯೆಯಾ ॥ ೧೧೨ ॥

ಪ್ರಶಸ್ಯತೇ ದಶಮ್ಯಾ ತು ವಿದ್ವಾನುತ್ತಮಯಾ ತ್ವೃಚಾ ।

110. ವೇದಮಂತ್ರಗಳನ್ನು ಪ್ರಯೋಗಮಾಡಿ ಎಂದರೆ ಉಪಯೋಗಿಸಿ (ಆಚರಿಸುವ ನಾನಾ ಕರ್ಮಗಳಿಂದ) ಜೀವನವನ್ನು ನಡೆಸುವುದು ನಿಷೇಧಿಸಲ್ಪಟ್ಟಿದೆ. ಎಂದರೆ ಜೀವನಾರ್ಥವಾಗಿ ವೇದಮಂತ್ರಗಳನ್ನು ಯಾರೂ ಬಳಸಬಾರದು. ಈ ಸೂಕ್ತದಲ್ಲಿ ವೇದಗಳಲ್ಲಿ ಹೇಳಿರುವ ಪರತತ್ತ್ವವನ್ನೂ ಅದಕ್ಕೆ ಸಾಧನೋಪಾಯವಾದ ವಿಜ್ಞಾನವನ್ನೂ ವರ್ಣಿಸಿರುವುದು ಕಂಡುಬರುತ್ತದೆ.

111. ಈ ಸೂಕ್ತದ ಕೆಲವು ಋಕ್ಕುಗಳಲ್ಲಿ ವಾಕ್ಯಗಳ (ಮಂತ್ರಗಳ) ಸ್ವರೂಪವನ್ನೂ, ಅರ್ಥವನ್ನೂ ತಿಳಿದವರ ಪ್ರಶಂಸೆಯೂ, ಮತ್ತೆ ಕೆಲವು ಋಕ್ಕುಗಳಲ್ಲಿ ವೇದಾರ್ಥವನ್ನು ತಿಳಿಯದವರ ನಿಂದೆಯೂ ಉಕ್ತವಾಗಿದೆಯೆಂದು ಕೆಲವು ಆಚಾರ್ಯರು ಹೇಳುವರು.

112. ಋಷಿಗಳು ತಮ್ಮ ಜ್ಞಾನದೃಷ್ಟಿಯಿಂದ ಸಾಕ್ಷಾತ್ಕರಿಸಿದ ಈ ವಾಗ್ದೇವತೆಯ ಸ್ವರೂಪವನ್ನೂ ಮತ್ತು ಯಜ್ಞಕರ್ಮಗಳಲ್ಲಿ ಆ ದೇವತಾಸ್ವರೂಪವಾದ ಮಂತ್ರಗಳನ್ನೂ ಯಾವ ರೀತಿ ಕರ್ಮಕ್ಕನುಸಾರವಾಗಿ ವಿಭಾಗಮಾಡಿ ಉಪಯೋಗಿಸಿದೆ ಎಂಬುವುದನ್ನೂ ವಿದ್ವಾಂಸನಾದ ವಿವೇಕಿಯು ತಿಳಿಯುತ್ತಾನೆ ಎಂಬ ವಿಷಯವು ಈ ಸೂಕ್ತದ ೩ನೇ ಋಕ್ಕಿನಲ್ಲಿ ಉಕ್ತವಾಗಿದೆ.

113. ಆದರೆ ೧೦ನೇ ಋಕ್ಕಿನಲ್ಲಿ ವಿವೇಕಿಯಾದ ವಿದ್ವಾಂಸನನ್ನು ಸ್ತುತಿಸಲಾಗಿದೆ. ಕೊನೆಯ ಋಕ್ಕಿನಲ್ಲಿ

---

110. Now the employment of formulas for the sake of a liveli-hood is forbidden. There appears here for the most part correct knowledge of the essential meaning of the Veda (as the subject of the hymn).

111. Some teachers say that there is here praise of those who are wise in speech with some (ऋभिः) stanzas, but with others in this hymn the man who does not know the meaning (of the Veda) is blamed.

112. And how the wise found that (speech) when she was located among the seers, and how they divided her at the sacrifice all this is here told in the third (stanza : x. 71. 3).

113. But in the tenth the wise man is lauded (x. 71. 10), while in

ಯೇಜ್ಞೇ ಮಹರ್ತ್ವಿಜಾಮಾಹ ವಿನಿಯೋಗಂ ಚ ಕರ್ಮಣಾಂ ॥ ೧೧೩ ॥
ಪರೇ ತು ಸ್ತೂಯತೇ ದಕ್ಷೋ ಅಷ್ಟೌ ಚೈವಾದಿತೇಃ ಸುತಾಃ ।
ಧಾತೇಂದ್ರೋ ವರುಣೋ ಮಿತ್ರೋ ಅಂಶಃ ಸೂರ್ಯೋ ಽರ್ಯಮಾ ಭಗಃ ॥ ೧೧೪ ॥
ಐಂದ್ರೇ ಜನಿಷ್ಟಾಃ ಸೂಕ್ತೇ ದ್ವೇ ಪ್ರ ಸ್ವಿತ್ಯತ್ರ ಪರಂ ತು ಯತ್ ।
ತತ್ರ ಪ್ರಾಚ್ಯಃ ಪ್ರತೀಚ್ಯಶ್ಚ ಸ್ರವಂತ್ಯೋ ದಕ್ಷಿಣಾಶ್ಚ ಯಾಃ ॥ ೧೧೫ ॥
ತಾಃ ಸಪ್ತ ಸಪ್ತಕೈರ್ವರ್ಗೈಃ ಸಂಸ್ತೂಯಂತೇ ಪ್ರಧಾನತಃ ।
ಗ್ರಾವ್ಣಾಮಾ ವೋ ಮಾರುತೇ ದ್ವೇ ಅಭ್ರಪ್ರುಷ ಇತಿ ಸ್ಮೃತೇ ॥ ೧೧೬ ॥

ನಾಲ್ಕು ಮಂದಿ ಋತ್ವಿಕ್ಕುಗಳು (ಹೋತೃ, ಉದ್ಗಾತೃ, ಬ್ರಹ್ಮಾ, ಅಧ್ವರ್ಯು) ಯಜ್ಞದಲ್ಲಿ ಅವರವರು ನಿರ್ವಹಿಸ ಬೇಕಾದ ಕರ್ಮಗಳ ವಿವರಣೆಯನ್ನೂ, ಅವುಗಳ ವಿನಿಯೋಗವನ್ನೂ ಋಷಿಯು ವರ್ಣಿಸಿರುವನು.

೭೨-೭೪ ಸೂಕ್ತದ ದೇವತೆಗಳು (ಖಿಲಮಂತ್ರಗಳು)

114. ಈಗ ಮುಂದಿನ ೭೨ನೇ ಸೂಕ್ತದಲ್ಲಿ ದಕ್ಷ, ಮತ್ತು ಅದಿತಿಯ ಎಂಟು ಮಂದಿ ಪುತ್ರರಾದ ಧಾತಾ, ಇಂದ್ರ, ವರುಣ, ಮಿತ್ರ, ಅಂಶ, ಸೂರ್ಯ, ಆರ್ಯಮಾ, ಭಗ ಎಂಬುವರನ್ನು ಸ್ತುತಿಸಲಾಗಿದೆ.

115. **ಜನಿಷ್ಟಾ ಉಗ್ರಃ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೭೩-೭೪) ಇಂದ್ರನನ್ನು ಸ್ತುತಿಸಲಾಗಿದೆ. **ಪ್ರ ಸು ವ ಆಪಃ** ಎಂಬ ಇದರ ಮುಂದಿನ ೭೫ನೇ ಸೂಕ್ತದಲ್ಲಿ ಪೂರ್ವಾಭಿಮುಖವಾಗಿಯೂ, ಪಶ್ಚಿಮಾಭಿಮುಖವಾಗಿಯೂ ದಕ್ಷಿಣಾಭಿಮುಖವಾಗಿಯೂ ಪ್ರವಹಿಸುವ,

116. ನದಿಗಳನ್ನೆಲ್ಲಾ ಅವುಗಳ ಪ್ರಾಮುಖ್ಯತೆಗನುಸಾರವಾಗಿ ಏಳು ಏಳು ನದಿಗಳ ಗುಂಪುಗಳನ್ನಾಗಿ ವಿಂಗಡಿಸಿ ಸ್ತುತಿಸಲಾಗಿದೆ. **ಆ ವ ಯಂಜಸ** ಎಂಬ ೭೬ನೇ ಸೂಕ್ತದಲ್ಲಿ ಸೋಮಲತೆಗಳನ್ನು ಜಜ್ಜುವ ಕಲ್ಲುಗಳನ್ನೂ **ಅಭ್ರಪ್ರುಷಃ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೭೭-೭೮) ಮರುದ್ದೇವತೆಗಳನ್ನೂ ಸ್ತುತಿಸಲಾಗಿದೆ.

---

the last stanza he (the seer) states the distribution (ವಿನಿಯೋಗ) of the (four) chief priests and of their rites at the sacrifice.

24. Deities of RV. x. 72-84. Khilas.

114. Now in the following (hymn : x 72) Daksa is praised and also the eight sons of Aditi : Dhatr, Indra, Varuna, Mitra, Amsa, Surya, Aryaman, Bhaga.

115. The two hymns (beginning) 'You have been born' (ಜನಿಷ್ಟಾಃ : x. 73-74) are addressed to Indra : but (in the hymn) which here follows (beginning) 'Let well proclaim' (ಪ್ರ ಸು : x. 75) the streams (ಸ್ರವಂತ್ಯಃ) which flow east, and west, and south,

116. are praised together according to pre-eminence (ಪ್ರಧಾನತಃ) in seven groups of seven. 'Hither you' (ಆ ವಃ : x. 76) is to the pressing stones ; the two 'Of the sprinkling of the cloud' (ಅಭ್ರಪ್ರುಷಃ : x.77-78) are traditionally held to be addressed to the Maruts.

ಅಪಶ್ಯಮಿತಿ ಜಾಗ್ನೇಯೇ ಯ ಇಮಾ ವೈಶ್ವಕರ್ಮಣೇ ।
ಮಾನ್ಯವೇ ಯಸ್ತ ಇತ್ಯೇತೇ ಪರಂ ಯತ್ತು ಮಮ ವ್ರತೇ ॥ ೧೧೭ ॥

ತದಾಶೀರ್ವಾದಬಹುಲಂ ಸ್ತೌತಿ ವಿಶ್ವಾನ್ದೇವೌಕಸಃ ।
ಪರಾಕದಾಸ ಆಗ್ನೇಯಂ ಯದುದಿತ್ಯಷ್ಟಕಂ ಪರಂ ॥ ೧೧೮ ॥

ನೈತ್ರಾವರುಣ್ಯೃಕ್ ತತ್ರಾಸ್ತಿ ಚತುರ್ಥ್ಯೃಂದ್ರಾಗ್ನ್ಯೃಷೋತ್ತಮಾ ।
ಸಾವಿತ್ರೀ ಚೈವ ಸೂರ್ಯಾ ಚ ಸೈವ ಪತ್ನೀ ವಿವಸ್ವತಃ ॥ ೧೧೯ ॥
ಸ್ತುತಾ ವೃಷಾಕಪಾಯಿತಿ ಉಷಾ ಇತಿ ಚ ಯೋಚ್ಯತೇ ।
ಉಷಾ ಏಷಾ ತ್ರಿಧಾತ್ಮಾನಂ ವಿಭಜ್ಯ ಪ್ರೈತಿ ಚ ಗೋಪತಿಂ ॥ ೧೨೦ ॥

117-118. **ಅಪಶ್ಯಮ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೭೯-೮೦) ಅಗ್ನಿಯನ್ನೂ, **ಯ ಇಮಾ** ಎಂದು ಮೊದಲಾಗುವ ಮುಂದಿನ ಎರಡು ಸೂಕ್ತಗಳಲ್ಲಿ (೮೧-೮೨) ವಿಶ್ವಕರ್ಮನೆಂಬ ದೇವತೆಯನ್ನೂ **ಯಸ್ತೇ ಮನ್ಯೋ** ಎಂದು ಮೊದಲಾಗುವ ಮುಂದಿನ ೨ ಸೂಕ್ತಗಳಲ್ಲಿ (೮೩-೮೪) ಮನ್ಯುದೇವತೆಯನ್ನೂ (ಕ್ರೋಧಾಭಿಮಾನಿದೇವತೆ) ಸ್ತುತಿಸಲಾಗಿದೆ. **ಮಮ ವ್ರತೇ** ಎಂಬ ಸೂಕ್ತದಲ್ಲಿ (ಖಿಲಸೂಕ್ತವಿರಬಹುದು. ಆದರೆ ಖಿಲಸೂಕ್ತಗಳಲ್ಲಿ ಈ ಸೂಕ್ತವೂ ಮುಂದಿನ ಸೂಕ್ತವೂ ಸೇರಿರುವುದಿಲ್ಲ) ವಿಶ್ವೇದೇವತಾಕವಾದ ಆಶೀರ್ವಾದಮಂತ್ರಗಳಿವೆ. ಮತ್ತು **ಉತ್** ಎಂಬ ಮುಂದಿನ ೮ ಋಕ್ಕುಗಳುಳ್ಳ ಪರಾಕದಾಸಋಷಿಯ ಸೂಕ್ತದಲ್ಲಿ ಅಗ್ನಿಯನ್ನು ಸ್ತುತಿಸಲಾಗಿದೆ.

119. ಮೇಲೆ ಹೇಳಿದ ೮ ಋಕ್ಕುಗಳಿರುವ ವಿಶ್ವೇದೇವತಾಕವಾದ ಖಿಲಸೂಕ್ತದಲ್ಲಿ ನಾಲ್ಕನೇ ಋಕ್ಕಿನಲ್ಲಿ ವಿಶ್ವೆದೇವತೆಗಳನ್ನೂ ಕೊನೆಯ ಹಿಂದಿನ ಎಂದರೆ ೭ನೇ ಋಕ್ಕಿನಲ್ಲಿ ಇಂದ್ರಾಗ್ನಿಗಳನ್ನೂ ಸ್ತುತಿಸಲಾಗಿದೆ. , ಸಾವಿತ್ರೀ ಮತ್ತು ಸೂರ್ಯಾ ಎಂಬ ಎರಡು ಹೆಸರುಗಳೂ ವಿವಸ್ವಂತನ ಒಬ್ಬಳೇ ಪತ್ನಿಯ ಹೆಸರನ್ನು ನಿರ್ದೇಶಿಸುವವು.

120. ಇವಳನ್ನೇ **ವೃಷಾಕಪಾಯಿ** ಮತ್ತು **ಉಷಾಃ** ಎಂಬ ಹೆಸರುಗಳಿಂದ ಸ್ತುತಿಸಲಾಗಿದೆ. ಈ ಉಷೋದೇವತೆಗೆ ಮೂರು ರೂಪಾಂತರಗಳಿರುವವು. ಹೇಗೆಂದರೆ—

---

117. The Two (beginning) 'I saw' (ಅಪಶ್ಯಂ : x. 79-80) are addressed to Agni; the two 'Who these' (ಯ ಇಮಾ : x. 81-82) are addressed to Visvakarman ; the two 'Who to you' (ಯಸ್ತೇ : 83-84) are addressed to Manyu, but that which follows, 'In my vow' (ಮಮ ವ್ರತೇ),

118 consisting for the most part of benedictions, praises the All-gods. That which follows (beginning) 'Out' (ಉತ್), consisting of eight stanzas, is (the hymn) of (ಪರಾಕದಾಸ) (and) is addressed to Agni.

25. The Surya hymn : RV. x. 85. Three forms of Usas.

119. The fourth stanza there is addressed to Mitra-Varuna, while the last but one (x. 85-7) is addressed to Indra and Agni.

Savitri and Surya are one and the same wife of Vivasvat,

120. who is praised as Vrsakapayi and is called Usas. This Usas having divided herself into three, goes to the Lord of rays (ಗೋಪತಿಂ–Surya).

ಉಷಾಃ ಪುರೋದಯೋದ್ಭೂತಾ ಸೂರ್ಯಾ ಮಧ್ಯಂದಿನೇ ಸ್ಥಿತೇ ।
ಭೂತ್ವಾ ವೃಷಾಕಪಾಯೀ ಚ ದಿನಾಂತೇಷ್ವವಗಚ್ಛತಿ ॥ ೧೨೧ ॥

ಸತ್ಯಸೂರ್ಯರ್ತಸೋಮಾನಾಂ ಸೌರ್ಯಾದ್ಯಾತ್ರ ಹ್ಯೃಗುಚ್ಯತೇ ।
ಪರಾಭಿಸ್ತಿಸೃಭಿಸ್ತ್ವೃಗ್ಭಿರುಚ್ಯತೇ ಸೋಮ ಓಷಧಿಃ ॥ ೧೨೨ ॥

ವಿಸ್ಪಷ್ಟಮುತ್ತರಾ ತ್ವಾಸಾಮೃಕ್ಚಂದ್ರಮಸಮರ್ಚತಿ ।
ಸೂರ್ಯಾಯೈ ಭಾವವೃತ್ತಂ ತು ರೈಭೀತ್ಯಷ್ಟಾಭಿರುಚ್ಯತೇ ॥ ೧೨೩ ॥

ಯದಶ್ವಿನೌ ದ್ವ್ಯೃಚಃ ಸ್ತೌತಿ ಸೂರ್ಯಮೇವೋತ್ತರಾರ್ಚತಿ ।
ಸಪ್ತದಶೀ ವೈಶ್ವದೇವೀ ಸೌರ್ಯಾಚಂದ್ರಮಸೀ ಪರಾ ॥ ೧೨೪ ॥

121. ಸೂರ್ಯೋದಯಕ್ಕೆ ಪೂರ್ವದಲ್ಲಿ ಉಷಸ್ಸೆಂದೂ, ಮಧ್ಯಾಹ್ನಕಾಲದಲ್ಲಿ ಸೂರ್ಯಾ ಎಂದೂ ಸೂರ್ಯಾಸ್ತಮಯಕಾಲದಲ್ಲಿ ವೃಷಾಕಪಾಯೀ ಎಂದೂ ಒಂದೇ ದೇವತೆಗೆ (ಉಷಸ್ಸಿಗೆ) ಮೂರುವಿಧ ಹೆಸರುಗಳಿರುವವು.

ಸೂರ್ಯಾಸೂಕ್ತ (೮೫) ದ ವಿವರಣೆ

122. ೮೫ನೇ ಸೂಕ್ತದ ಮೊದಲನೆಯ ಋಕ್ಕು ಸೂರ್ಯಾದೇವಿಯ ಪರವಾಗಿದ್ದರೂ ಅದರಲ್ಲಿ ಸತ್ಯ, ಸೂರ್ಯ, ಋತ, ಸೋಮ ಎಂಬ ದೇವತೆಗಳ ಸಂಬಂಧವೂ ಈ ಋಕ್ಕಿಗಿದೆ. ಮುಂದಿನ ಮೂರು ಋಕ್ಕುಗಳಲ್ಲಿ (೨-೪) ಸೋಮಲತೆಯ ಪ್ರಶಂಸೆ ಇದೆ.

123. ಆದರೆ ಮುಂದಿನ ೫ನೇ ಋಕ್ಕಿನಲ್ಲಿ ಚಂದ್ರನ ಸ್ತುತಿ ಇದೆ. **ರೈಭೀ** ಎಂದು ಮೊದಲಾಗುವ ಮುಂದಿನ ೮ ಋಕ್ಕುಗಳಲ್ಲಿ (೬-೧೩) ಭಾವವೃತ್ತಾತ್ಮಕವಾದ ಸೂರ್ಯಾದೇವಿಯ ವಿವಾಹದ ವರ್ಣನೆ ಇದೆ.

124. **ಯದಶ್ವಿನಾ** ಎಂದು ಮೊದಲಾಗುವ ಎರಡು ಋಕ್ಕುಗಳಲ್ಲಿ (೧೪-೧೫) ಅಶ್ವಿನೀದೇವತೆಗಳನ್ನೂ ಮುಂದಿನ ೧೬ನೇ ಋಕ್ಕಿನಲ್ಲಿ ಸೂರ್ಯಾದೇವಿಯನ್ನೂ ಸ್ತುತಿಸಲಾಗಿದೆ. ೧೭ನೇ ಋಕ್ಕಿನಲ್ಲಿ ವಿಶ್ವೇದೇವತೆಗಳನ್ನೂ ೧೮ನೇ ಋಕ್ಕಿನಲ್ಲಿ ಸೋಮಸೂರ್ಯರನ್ನೂ ಸ್ತುತಿಸಲಾಗಿದೆ.

---

121. Becoming Usas before sunrise, Surya when midday reigns, and becoming Vrsakapayi at the end of days, she goes down.

122. The first stanza here (x. 85-1) addressed to Surya is stated to be connected with Satya, Surya, Rts and Soma; but with the following three stanzas (2-4) Soma as a plant is spoken of.

123. But the stanza which comes next to these (5) clearly adores the moon (ಚಂದ್ರಮಸಂ), while with the eignt (stanzas) 'The singer's' (ರೈಭೀ: x. 85. 6-13) the evolutional section (ಭಾವವೃತ್ತಂ) for Surya is expressed.

26. Account of the Surya hymn (continued).

124, The couplet 'When' (ಯತ್ x. 85. 14, 15) praises the Asvins: the following (stanza) adores Surya (16); the seventeenth is addressed to the All-gods (17); the following one is addressed to Sun and moon (18).

ಪರಸ್ಯಾಃ ಪೃಥಮೌ ಪಾದೌ ಸೌರ್ಯೌ ಚಾಂದ್ರಮಸೌ ಪರೌ ।
ಔರ್ಣವಾಭೋ ದ್ವ್ಯಚೇ ತ್ವಸ್ಮಿನ್ನಶ್ವಿನೌ ಮನ್ಯತೇ ಸ್ತುತೌ ॥ ೧೨೫ ॥
ಸೂರ್ಯಾಚಂದ್ರಮಸೌ ತೌ ಹಿ ಪ್ರಾಣಾಪಾನೌ ಚ ತೌ ಸ್ಮೃತೌ ।
ಅಹೋರಾತ್ರೌ ಚ ತಾವೇವ ಸ್ಯಾತಾಂ ತಾವೇವ ರೋದಸೀ ॥ ೧೨೬ ॥
ಅಶ್ನುವಾತೇ ಹಿ ತೌ ಲೋಕಾನ್ಜ್ಯೋತಿಷಾ ಚ ರಸೇನ ಚ ।
ಪೃಥಕ್ಪೃಥಕ್ಚ ಚರತೋ ದಕ್ಷಿಣೇನೋತ್ತರೇಣ ಚ ॥ ೧೨೭ ॥
ಸೂರ್ಯಃ ಸರತಿ ಭೂತೇಷು ಸು ವೀರಯತಿ ತಾನಿ ವಾ ।
ಸು ಈರ್ಯತ್ವಾಯ ಯಾತ್ಯೇಷು ಸರ್ವಕಾರ್ಯಾಣಿ ಸಂದಧತ್ ॥ ೧೨೮ ॥

125. ಮುಂದಿನ ೧೯ನೇ ಋಕ್ಕಿನ ಮೊದಲಿನ ಎರಡು ಪಾದಗಳಲ್ಲಿ ಸೂರ್ಯನನ್ನೂ ಕೊನೆಯ ಎರಡು ಪಾದಗಳಲ್ಲಿ ಚಂದ್ರನನ್ನೂ ಸ್ತುತಿಸಲಾಗಿದೆ. ಆದರೆ ಈ ಪಾದಗಳಲ್ಲಿ ಅಶ್ವಿನೀದೇವತೆಗಳು ಸ್ತುತರಾಗಿರುವರೆಂದು ಔರ್ಣವಾಭರೆಂಬುವರ ಮತವು.

126. ಮೇಲೆ ಹೇಳಿದ ಅಶ್ವಿನೀದೇವತೆಗಳೆಂದರೆ, ಸೂರ್ಯಚಂದ್ರರಾಗಬಹುದು, ಅಥವಾ ಪ್ರಾಣ ಮತ್ತು ಅಪಾನವಾಗಬಹುದು, ಅಥವಾ ಅಹೋರಾತ್ರೆಗಳಾಗಬಹು, ಅಥವಾ ದ್ಯಾವಾಪೃಥಿವಿಗಳಾಗಳಾದರೂ ಆಗಬಹುದು.

127. ಈ ಸೂರ್ಯಚಂದ್ರರು ಲೋಕಗಳನ್ನು ತಮ್ಮ ಪ್ರಕಾಶದಿಂದಲೂ, ರಸ ಅಥವಾ ದ್ರವತ್ವ (ಹಿಮ, ಶೀತ) ದಿಂದಲೂ ಕ್ರಮವಾಗಿ ವ್ಯಾಪಿಸುತ್ತಾರೆ. ಮತ್ತು ಇವರ ಸಂಚಾರಕ್ರಮವು ಕ್ರಮವಾಗಿ ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಗೆ ಅಭಿಮುಖವಾಗಿದೆ.

128. ಸೂರ್ಯಶಬ್ದವಿವರಣೆ—ಸೂರ್ಯನು ಪ್ರಾಣಿಗಳ ಮಧ್ಯದಲ್ಲಿ ಎಂದರೆ ಭೂಮಿಯ ಮೇಲೆ ಸರಿಯುತ್ತಾನೆ (ಪೂರ್ವದಿಂದ ಪಶ್ಚಿಮಕ್ಕೆ) ಆದ್ದರಿಂದ ಸೃ–ಸರಿ ಎಂಬ ಧಾತುವಿನಿಂದ ಸೂರ್ಯಶಬ್ದವು ನಿಷ್ಪನ್ನವಾಗಿದೆ. ಅಥವಾ ಈ ಸೂರ್ಯನು ಪ್ರಾಣಿಗಳಿಗೆ ಉತ್ಸಾಹವನ್ನುಂಟುಮಾಡುವುದರಿಂದ (ವೀರಯತಿ) ಸೂರ್ಯನೆಂದು ಹೆಸರು ; ಅಥವಾ ಪ್ರಾಣಿಗಳ ಶರೀರಗಳಲ್ಲಿ ಚೈತನ್ಯ (ಶಾಖ) ರೂಪದಿಂದಿದ್ದು ಅವುಗಳ ಕಾರ್ಯಾದಿಗಳನ್ನು ಪ್ರೇರಿಸುವುದರಿಂದ ಸೂರ್ಯನೆಂದು ಹೆಸರು ; ಅಥವಾ ಪ್ರಪಂಚದ ಮೇಲೆ ನಡೆಯುವ ಸಮಸ್ತಕಾರ್ಯಗಳಿಗೂ ಕಾರಣಕರ್ತನಾದ್ದರಿಂದ ಸೂರ್ಯನೆಂದು ಹೆಸರು.

---

125. of the following (stanza : x. 85. 19) the first two verses are addtessed to the Sun (19), while the following two (19) are to the moon. Aurnavabha, however, thinks that in this couplet the Asvins are praised.

126. For those two (Asvins) are traditionally held to be Sun and Moon, and Prana (outward breath) and Apana (downward breath) ; and these two may be Day and Night, (or) these two (may be) the two worlds (ರೋದಸೀ).

127. For these two permeate (ಅಶ್ನುವಾತೇ) the world with light and moisture ; and they fare (ಚರತಃ), each saparately, to the south and the north.

128. Surya moves (ಸರತಿ) among beings, or he instigates (ವೀರಯತಿ) them well (ಸು) apportioning (ಸಂದಧತ್) all their functions (ಕಾರ್ಯಾಣಿ) he goes among them in order to instigate (ಈರ್ಯತ್ವಾಯ) them well.

ಚಾರು ದ್ರಮತಿ ವಾ ಚಾಯಂಶ್ಚಾಯನೀಯೋ ದ್ರಮತ್ಯುತ ।
ಚಮೇಃ ಪೂರ್ವಂ ಸಮೇತಾನಿ ನಿರ್ಮಿಮೀತೇಽಥ ಚಂದ್ರಮಾಃ ॥ ೧೨೯ ॥
ಸುಕಿಂಶುಕಮಿತಿ ತ್ಸ್ಯಾಂ ಸೂರ್ಯಾಮಾರೋಹತೀಂ ಪತಿಂ ।
ಸ್ತೌತಿ ವಿಶ್ವಾವಸುಂ ಚೈವ ದ್ವ್ಯೃಚೇ ಗಂಧರ್ವಮುತ್ತರೇ ॥ ೧೩೦ ॥
ಅನೃಕ್ಷರಾ ಇತ್ಯನಯಾ ಯಾತೌ ಸ್ತೌತೀಹ ದಂಪತೀ ।
ಗೃಹಾನ್ಪ್ರಪದ್ಯಮಾನಾಂ ತು ಪರಾಭಿಃ ಪಂಚಭಿರ್ವಧೂಂ ॥ ೧೩೧ ॥
ವಾಸಸಶ್ಚ ವಧೂನಾಂ ಚ ವರದಾನಂ ಪ್ರಚಕ್ಷತೇ ।
ತತಸ್ತ್ರಿಯಾ ವಿರಾಗಸ್ಯ ವಿಭವೇ ಸತಿ ವಾಸಸಃ ॥ ೧೩೨ ॥

129. ಚಂದ್ರಮಾಃ ಶಬ್ದದ ರೂಪನಿಷ್ಪತ್ತಿ—ಚಂದ್ರನು ಮನೋಹರವಾಗಿ (ಚಾರು) ಬೆಳಗುತ್ತಾನೆ ಅಥವಾ ಸಂಚರಿಸುತ್ತಾನೆ ಅಥವಾ ನೋಡುವುದಕ್ಕೆ ಆಹ್ಲಾದಕರನಾಗಿರುತ್ತಾನೆ. ಅಥವಾ ಚಮ್ ಎಂಬಧಾತುವಿನೊಡನೆ ಮಿವಿಾತೇ ಎಂಬ ಕ್ರಿಯಾಪದದ ಏತಾ ಶಬ್ದವು ಸೇರಿ ಚಂದ್ರಮಾಃ ಎಂಬ ಶಬ್ದವಾಗಿರುವುದು.

130. ಸುಕಿಂಶುಕಂ ಎಂಬ ೨೦ನೇ ಋಕ್ಕಿನಲ್ಲಿ ಸೂರ್ಯಾದೇವಿಯು ತನ್ನ ಪತಿಯ ರಥವನ್ನು ಹತ್ತುವುದನ್ನೂ ಮುಂದಿನ ಎರಡು ಋಕ್ಕುಗಳಲ್ಲಿ(೨೧-೨೨)ವಿಶ್ವಾವಸು ವೆಂಬ ಗಂಧರ್ವನ ವಿಷಯವನ್ನೂ ಋಷಿಯು ವರ್ಣಿಸಿರುವನು.

131. ಅನೃಕ್ಷರಾ ಎಂಬ ೨೩ ನೇ ಋಕ್ಕಿನಲ್ಲಿ ರಥಾರೋಹಣಮಾಡಿ ಹೋಗುತ್ತಿರುವ ದಂಪತಿಗಳನ್ನು ಋಷಿಯು ಸ್ತುತಿಸಿರುವನು. ಮುಂದಿನ ಐದು ಋಕ್ಕುಗಳಲ್ಲಿ (೨೪-೨೮) ಪತ್ನಿಯು ತನ್ನ ಪತಿಗೃಹಕ್ಕೆ ಹೋಗಿ ಸೇರುವ ವರ್ಣನೆ ಇದೆ.

132-133. ೨೯ನೇ ಯಕ್ಕಿನಲ್ಲಿ ಹೊಸದಾಗಿ ಆಗತಾನೆ ವಿವಾಹಿತರಾದ ವಧುಗಳನ್ನು ಅವರನವ ಪತಿಯ ಗೃಹಕ್ಕೆ ಕರೆದುಕೊಂಡು ಹೋಗಿ ಒಪ್ಪಿಸುವುದನ್ನು ಹೇಳಿದೆ. ವಧುವಿನ ವಸ್ತ್ರವನ್ನು ಉತ್ಸವಕಾಲದಲ್ಲೇ(ವಿವಾಹಕಾಲದಲ್ಲಿ)

---

27. Derivation of Chandramas. Contents of RV. x. 85. 20-30

129. The moon (ಚಂದ್ರಮಾಃ) runs (ದ್ರಮತಿ)beautifully (ಚಾರು) or observing (ಚಾಯನ್), or (ಉತ) runs as one worthy to be observed (ಚಾಯನೀಯ); (or) the prior (member of the compound comes) from (the verb) ಚಮ್ or (ಅಥ) he (ಚಂದ್ರ) fashions (ನಿರ್ಮಿಮೀತೇ) the aggregate of beings (ಸಮೇತಾನಿ).

130. Now in the (stanza) 'Bright, with kimsuka flowers' (ಸುಕಿಂಶುಕಂ x. 85. 20) (the seer) praises Surya mounting (the car of) her husband, and in the next two stanzas (21, 22) the Gandharva Visvavasu.

131. Vith the (stanza) 'Thornless; (ಅನೃಕ್ಷರಾಃ x. 85. 23) the seer here praises the wedded couple (ದಂಪತೀ) who have started (ಯಾತೌ), but with the following five (24-28) the wife as she reaches the house (of her husband).

132. And (in the next : 85. 29) they declare (that) the presentation by the bridegroon (ವರದಾನಂ) of (newly-married) wives (is expressed). Then (30) woman's garment, when indifference prevails (ವಿಭವೇ ಸತಿ),

ಅನ್ಯತ್ರ ಮೈಥುನಾದ್ಧರ್ತುರ್ಹರಣಂ ಪ್ರತಿಷಿಧ್ಯತೇ ।
ಯೇ ಯಕ್ಷ್ಮನಾಶಿನೀ ಸ್ತೌತಿ ದ್ವ್ಯಚೇ ಮಾ ಪರಿಪಂಥಿನಃ ॥ ೧೩೩ ॥
ತೃಷ್ಟಮೇತದಿತಿ ತ್ವಾಹ ಯಾದೃಗ್ವಾಧೂಯಮರ್ಹತಿ ।
ಆಶಾಸ್ತೇ ಚೈವ ವಿವಿಧಂ ಜ್ಞಾತಿಭ್ಯಶ್ಚಾನುಶಾಸನಂ ॥ ೧೩೪ ॥
ಬದ್ಧಾ ಸ್ತ್ರೀ ಭಾವವೃತ್ತಿಶ್ಚ ಪರಯಾ ತತ್ರ ಕಥ್ಯತೇ ।
ಗೃಭ್ಣಾಮಿ ತ ಋಚಾ ಹಸ್ತಂ ಗೃಹ್ಣನ್ನಥ ಧನಾಶಿಷಃ ॥ ೧೩೫ ॥
ಆಶಾಸ್ತೇ ಪರಯಾ ತಸ್ಯಾಃ ಸಂಯೋಗಾರ್ಥಾಸ್ತಥಾಶಿಷಃ ।

ಅಥವಾ ಸಂಭೋಗಕಾಲದಲ್ಲಿ ಹೊರತು ಇತರಕಾಲಗಳಲ್ಲಿ (ಪತಿಯು) ಸ್ಪರ್ಶಮಾಡುವುದು ನಿಷಿದ್ಧವೆಂದು ಹೇಳಲಾಗಿದೆ. **ಮಾ ವಿದನ್ ಪರಿಪಂಥಿನಃ** ಎಂಬ ಎರಡು ಋಕ್ಕುಗಳಲ್ಲಿ(೩೨-೩೩)ಯಕ್ಷ್ಮ(ಕ್ಷಯ) ರೋಗದಿಂದಲೂ ಮಾರ್ಗದಲ್ಲಿ ದಾರಿಕಾಯುವ ಕಳ್ಳರಿಂದಲೂ ಆ ದಂಪತಿಗಳನ್ನು ಕಾಪಾಡಬೇಕೆಂಬ ಆಶ್ವಾಸನೆಯು ಉಕ್ತವಾಗಿದೆ

134. **ತೃಷ್ಟಮೇತತ್** ಎಂಬ ೩೪ನೇ ಋಕ್ಕಿನಲ್ಲಿ ವಧುವಿನ ಮಲಿನ ವಸ್ತ್ರಕ್ಕೆ ಯಾರು ಅರ್ಹರೆಂಬುದನ್ನು ಹೇಳಿ ವಧುವಿನ ಜ್ಞಾತಿಗಳಿಗೆ ಆಶ್ವಾಸನೆಯನ್ನು ಕೋರಿದೆ.

135. ಮುಂದಿನ ೩೫ನೇ ಋಕ್ಕಿನಲ್ಲಿ ಬದ್ಧಳಾದ ಸ್ತ್ರೀಯು ಹೇಳಿರುವ ಸ್ವವಿಷಯವನ್ನು (ಭಾವವೃತ್ತಿಯನ್ನು) ಇಲ್ಲಿ ಹೇಳಲಾಗಿದೆ. **ಗೃಭ್ಣಾಮಿ ತೇ** ಎಂಬ ೩೬ನೇ ಋಕ್ಕಿನಲ್ಲಿ ವರನು ವಧುವಿನ ಪಾಣಿಗ್ರಹಣಮಾಡುವುದನ್ನೂ ಧನಾದಿಗಳಿಗಾಗಿ ಪ್ರಾರ್ಥಿಸುವುದನ್ನೂ ಹೇಳಲಾಗಿದೆ.

136. ಮುಂದಿನ ೩೭ನೇ ಋಕ್ಕಿನಲ್ಲಿ ವಧೂವರರ ಸಂಯೋಗವನ್ನು ಹರಸಬೇಕೆಂದು ಮೊದಲಾಗಿ ಬಯಸ

28. RV. x 85. 31-43

133. (that is), except at the time of intercourse, is forbidden to be taken hold of (ಹರಣಂ) by the husband,

The stanza 'The diseases which' (ಯೇ : x 85-31) is destructive of consumption (ಯಕ್ಷ್ಮ); in the couplet 'May not' (ಮಾ : 32-33) (the seer) praises the waylayers.

134. But (the stanza) 'Rough is this' (ತೃಷ್ಟಮೇತತ್: x. 85.34) states what sort of man deserves (to receive) the bridal dress. And various directions are given to her relations

135. by the woman, who is bound. And evolution (ಭಾವವೃತ್ತಿ) is here told, in the following (stanza : x. 85-35).

With the stanza 'I grasp you' (ಗೃಭ್ಣಾಮಿ ತೇ : 36); as he then takes her hand, prayers for wealth

136. are uttered (by the husband). In the following (stanza : x. 85-37) are also prayers for her with the object of union.

ಪರಾಭಿರಾಶೀಶ್ಚಾಶಾಸ್ತೇ ಪೃಥಕ್ತಾಭ್ಯಾಂ ಸಹೈವ ಚ ॥ ೧೩೬ ॥

ಅಘೋರೇತಿ ತೃಚೇ ತಸ್ಯಾಃ ಸಮಿಹೇತಿ ದ್ವಯೋರ್ದ್ವಯೋಃ ।
ಆ ನಃ ಪ್ರಜಾಪತೇರಿಮಾಮೈಂದ್ರೀ ಚಾಂತ್ಯಾ ಬೃಹಸ್ಪತೇಃ ॥ ೧೩೭ ॥

ಮಂತ್ರಾ ವೈವಾಹಿಕಾ ಹ್ಯೇತೇ ನಿಗದ್ಯಂತೇ ನೃಣಾಮಪಿ ।
ಆರ್ತ್ವಿಜಾ ಯಾಜಮಾನಾಶ್ಚ ಯಥಾರೂಪಂ ವಿಶೇಷತಃ ॥ ೧೩೮ ॥

ಪ್ರತ್ಯೃಚಂ ಪ್ರತಿಕೀರ್ತ್ಯಂತೇ ದೇವತಾಶ್ಚೇಹ ಯಾಸು ಯಾಃ ।

ಲಾಗಿದೆ. ಮುಂದಿನ ಋಕ್ಕುಗಳಲ್ಲಿ ವಧೂವರರರಿಗೆ ಶ್ರೇಯಸ್ಸನ್ನುಕೋರಿ ಅವರನ್ನು ಪ್ರತ್ಯೇಕವಾಗಿಯೂ, ಒಟ್ಟಾಗಿಯೂ, ಋಷಿಯು ಅವರ ಶ್ರೇಯಸ್ಸಿಗಾಗಿ ಪ್ರಾರ್ಥಿಸಿದಾನೆ.

137. **ಅಘೋರಚಕ್ಷುಃ** ಎಂದು ಮೊದಲಾಗುವ ಮುಂದಿನ ಮೂರು ಋಕ್ಕುಗಳಲ್ಲಿ (೪೪–೪೬) ವಧುವಿಗೆ ಮಾತ್ರವೂ **ಸಮಂಜಂತು** ಎಂಬ ೪೭ನೇ ಋಕ್ಕಿನಲ್ಲಿ ವಧೂವರರಿಬ್ಬರಿಗೂ **ಇಹೈವ ಸ್ತಂ** ಎಂಬ ಋಕ್ಕಿನಲ್ಲಿ ಇಬ್ಬರಿಗೂ ಶ್ರೇಯಸ್ಸನ್ನು ಕೋರಲಾಗಿದೆ. **ಆ ನಃ ಪ್ರಜಾಂ** ಎಂಬ ೪೩ನೇ ಋಕ್ಕಿನಲ್ಲಿ ಪ್ರಜಾಪತಿಯನ್ನು ಸ್ತುತಿಸ ಲಾಗಿದೆ.

138. ಸೂರ್ಯಾವಿವಾಹದ ವರ್ಣನೆ ಇರುವ **ಈ** ೮೫ನೇ ಸೂಕ್ತದ ಮಂತ್ರಗಳು ಮಾನವರ ವಿವಾಹ ಕಾರ್ಯಗಳಲ್ಲಿಯೂ ಉಪಯೋಗಿಸಲ್ಪಡುವವು. ಆದರಲ್ಲಿಯೂ ಋತ್ವಿಕ್ಕುಗಳೂ (ಪುರೋಹಿತರೂ) ಯಜಮಾನರೂ (ವಿವಾಹಕಾರ್ಯದಲ್ಲಿ ಭಾಗವಹಿಸುವ ವಧೂವರರು ಮುಂತಾದವರೂ)ಸಹ **ಈ** ಸೂಕ್ತದ ಮಂತ್ರಗಳನ್ನು ಸಂದರ್ಭಾನುಸಾರವಾಗಿ ಬಳಸುವರು.

139. ಪ್ರತಿಋಕ್ಕನ್ನೂ ಆ ಋಕ್ಕಿನಲ್ಲಿ ಹೇಳುವ ದೇವತೆಗಳನ್ನೂ ಯಾವ ಯಾವ ಕರ್ಮಗಳಲ್ಲಿ ಉಪಯೋಗಿಸಬೇಕಾಗಿರುವುದೋ ಅಂತಹ ಸಂದರ್ಭಗಳಲ್ಲಿ ಆಯಾ ಮಂತ್ರಗಳನ್ನು ಪ್ರಯೋಗಿಸಬೇಕು. ಅಥವಾ **ಈ**ಸೂಕ್ತದ

With the following (stanzas, the seer) utters prayers for the two both seperately and together ;

137. in the triplet 'having no evil' (ಅಘೋರ ; x. 85. 44-46) for her (alone), in 'Together' (ಸಂ : 47) and 'Here' (ಇಹ : 42) respectively for both. 'Here for us' (ಆ ನಃ : 43) is to Prajapati ; and 'Her here' (ಇಮಾಂ : 45) is addressed to Indra ; the last (47) is to Brahaspati.

29. Remarks on the Surya hymn (concluded).

138. Now these wedding formulas are recited for men also, being connected with the priests (ಆರ್ತ್ವಿಜಾಃ) and with the institutor of the rite (ಯಜಮಾನಾಃ) according to their respective form (and) their peculiarity (ವಿಶೇಷತಃ).

139. And in those stanzas here in which respectively (ಪ್ರತ್ಯೃಚಂ)

ವದೇತ್ತಾಂ ದೇವತಾಂ ತಾಸು ನಾರಾಶಂಸೀರ್ವದೇತ ವಾ ॥ ೧೩೯ ॥

ಔಷಸೀಃ ಸರ್ವಥಾ ಚೈತಾ ಭಾವವೃತ್ತಂ ಪ್ರಚಕ್ಷತೇ ।
ಸೂರ್ಯಯಾ ಸಹ ಸೂಕ್ತೇಽಸ್ಮಿನ್ಪಾದಶ್ಚೈವಾತ್ರ ಲಕ್ಷ್ಯತೇ ॥ ೧೪೦ ॥

ವಿ ಹಿ ವಾರ್ಷಾಕಪಂ ಸೂಕ್ತಮಸೌ ಹಿ ಕಪಿಲೋ ವೃಷಾ ।
ಇಂದ್ರಃ ಪ್ರಜಾಪತಿಶ್ಚೈವ ವಿಶ್ವಸ್ಮಾದಿಂದ್ರ ಉತ್ತರಃ ॥ ೧೪೧ ॥

ರಕ್ಷೋಹಣಾದಿ ಚಾಗ್ನೇಯಂ ತ್ರೀನ್ ಸ್ತೌತ್ಯಗ್ನೀನ್ಪರಂ ಹವಿಃ ।
ಇಮಂ ಚ ಮಧ್ಯಮಂ ಚೈವ ಅಸೌ ವೈಶ್ವಾನರಂ ಚ ಯಃ ॥ ೧೪೨ ॥

ಮಂತ್ರಗಳನ್ನು ನಾರಾಶಂಸೀಮಂತ್ರಗಳೆಂದು ಎಂದರೆ ನರರ, ಮನುಷ್ಯರ ಕರ್ಮಗಳನ್ನು ಪ್ರಶಂಸಿಸುವ ಮಂತ್ರಗಳೆಂದೂ ಹೇಳಬಹುದು.

140. **ಸೂರ್ಯೊ, ಉಷಾಃ** ಎಂಬ ಹೆಸರುಗಳು ಒಂದೇ ದೇವತೆಯ ರೂಪಾಂತರಗಳೆಂದು ಹಿಂದೆಯೇ ಹೇಳಿದೆಯಷ್ಟೆ. ಆದ್ದರಿಂದ ಸೂರ್ಯಾದೇವತೆಯ ವಿವಾಹವರ್ಣನೆ ಇರುವ ಈ ಸೂಕ್ತವನ್ನು ಉಷೋದೇವತಾಕವೆಂದೂ ಹೇಳಬಹುದು. ಮತ್ತು ಈ ಸೂಕ್ತದಲ್ಲಿ ಸೂರ್ಯಾದೇವಿಯೇ ತನ್ನ ವಿವಾಹವರ್ಣನೆಯನ್ನು ಮಾಡಿರುವುದರಿಂದ ಈ ಸೂಕ್ತವನ್ನು ಭಾವವೃತ್ತಸೂಕ್ತವೆಂದೂ ಹೇಳಬಹುದು. [ಒಂದು ಸೂಕ್ತಕ್ಕೆ ಋಷಿಯೂ, ದೇವತೆಯೂ ಒಂದೇ ವ್ಯಕ್ತಿಯಾಗಿದ್ದರೆ, ಎಂದರೆ ಋಷಿಯು ತನ್ನನ್ನೇ ಸೂಕ್ತದಲ್ಲಿ ಪ್ರಶಂಸೆಮಾಡಿಕೊಂಡಿದ್ದರೆ ಆ ಸೂಕ್ತವು ಭಾವವೃತ್ತಸೂಕ್ತವೆನಿಸುವುದು] ಮತ್ತು ಈ ಸೂಕ್ತದ ಒಂದು ಪಾದದಲ್ಲಿ ಆರೀತಿ ಭಾವವೃತ್ತವಿರುವುದೆಂದು ಕಂಡುಬರುವುದು.

141. **ವಿ ಹಿ ಸೋತೋರಸೃಕ್ಷತ** ಎಂಬ ಸೂಕ್ತಕ್ಕೆ (೮೬) ವೃಷಾಕಪಿಸೂಕ್ತವೆಂದು ಹೆಸರು. ವೃಷಾಕಪಿಯೆಂದರೆ ಕಪಿಲವರ್ಣದ ವೃಷಭನೆಂದು ಅರ್ಥವು. ಈ ದೇವತೆಯು ಯಾರು ಎಂದರೆ ಇಂದ್ರ ಅಥವಾ ಪ್ರಜಾಪತಿಯೇ ಆಗಿರುವುದು. ಸಮಸ್ತ ವಿಶ್ವಕ್ಕೂ (ಪ್ರಪಂಚಕ್ಕಿಂತಲೂ) ಇಂದ್ರನೇ ಶ್ರೇಷ್ಠನು.

142. **ರಕ್ಷೋಹಣಂ** ಎಂಬ ಸೂಕ್ತಕ್ಕೆ (೮೭) ಅಗ್ನಿಯು ಅಥವಾ ರಕ್ಷೋಹಾಗ್ನಿಯು ದೇವತೆಯು. **ಹವಿಷ್ಪಾಂತಂ** ಎಂಬ ಲಲ ನೇ ಸೂಕ್ತದಲ್ಲಿ ಮೂರುವಿಧ ಅಗ್ನಿಗಳನ್ನೂ, ಎಂದರೆ ಪಾರ್ಥಿವಾಗ್ನಿ, ಮಧ್ಯಮಾಗ್ನಿ ಮತ್ತು ಸ್ವರ್ಗದಲ್ಲಿರುವ ವೈಶ್ವಾನರಾಗ್ನಿ (ಸೂರ್ಯ) ಎಂಬ ಅಗ್ನಿಗಳನ್ನು ಸ್ತುತಿಸಲಾಗಿದೆ.

---

deities are proclaimed, one should state the one mentioned (ತಾಂ) to be the deity or should state that (stanzas) are addresed to Narasamsa (ನಾರಾಶಂಸೀಃ).

140. And they declare that these stanzas addressed to Usas form as a whole (ಸರ್ವಥಾ) a (hymn) concerned with evolution (ಭಾವವೃತ್ತ); and in this hymn a verse (ಪಾದ) is also (thus) characterised with Surya.

141. 'Away, indeed' (ವಿಹಿ; x. 86) is a hymn addressed to (ವೃಷಾಕಪಿ) for that brown (ಕಪಿಲ) bull (ವೃಷಾ) is Indra and Prajapati: Indra is superior to all.'

142. (The hymn) beginning 'The demon-slayer' (ರಕ್ಷೋಹಣಂ: x. 87) is addressed to Agni. The following one, 'The oblation' (ಹವಿಃ x. 88) praises the three Agnis, this (terrestrial) one, and the Middle one, and Vaisvanara who is that (celestial) one

ಐಂದ್ರಾತ್ಪುರುಷಸೂಕ್ತಂ ಚ ಆಂತ್ಯಯೋ ಪೌರುಷಸ್ಯ ತು ।
ಯೇಭ್ಯೇನಮುಭಜನ್ಸಾಧ್ಯಾ ಯಜ್ಞಾರ್ಥಂ ಸೋಽರ್ಥ ಉಚ್ಯತೇ ॥ ೧೪೩ ॥

ಆಪಾಂತಮನ್ಯುರಿತ್ಯೈಂದ್ರ್ಯಾಂ ಸ್ತುತಃ ಸೋಮೋಽತ್ರ ದೃಶ್ಯತೇ ।
ಸಾಲೋಕ್ಯಾತ್ಸಾಹಚರ್ಯಾದ್ವಾ ಸ್ತೂಯತೇ ಸೋಮ ಏವ ವಾ ॥ ೧೪೪ ॥

ನಿಪಾತಭಾಜಂ ಸೋಮಂ ಚ ಅಸ್ಯಾಂ ರಥೀತರೋಽಬ್ರವೀತ್ ।
ಐಂದ್ರೇಷು ಹಿ ನಿಪಾತೋಽತ್ರ ಸ್ತುತೋಽಗ್ನಿರರುಣೇನ ಸಂ ॥ ೧೪೫ ॥

೮೩-೯೩ ನೇ ಸೂಕ್ತಗಳ ದೇವತೆಗಳು

143. ಮುಂದಿನ ೮೯ ನೇ ಸೂಕ್ತಕ್ಕೆ ಇಂದ್ರನು ದೇವತೆಯು ; ೯೦ ನೇ ಸೂಕ್ತಕ್ಕೆ ಪುರುಷನು ದೇವತೆಯು. ಪುರುಷದೇವತಾಕವಾದ ಈ ಸೂಕ್ತದ ಕೊನೆಯ ಋಕ್ಕಿನಲ್ಲಿ (೧೬) ಹೇಳರುವ ಸಾಧ್ಯರೆಂಬುವ ದೇವಗಣಗಳು ಯಜ್ಞಾರ್ಥವಾಗಿ ಪುರುಷನನ್ನು (ಪರಬ್ರಹ್ಮ ಅಥವಾ ಪರಮಾತ್ಮ) ವಿಭಾಗಿಸಿ ಯಜ್ಞವನ್ನು ನಿರ್ವಹಿಸಿದರು ಎಂಬ ವಿಷಯವು ಪ್ರತಿಪಾದಿತವಾಗಿದೆ.

144. ೮೯ ನೇ ಸೂಕ್ತದ **ಆಪಾಂತಮನ್ಯುಃ** ಎಂಬ ೫ ನೇ ಋಕ್ಕಿನಲ್ಲಿ ಸೋಮದೇವತೆಯನ್ನು ಸ್ಪಷ್ಟವಾಗಿ ಸ್ತುತಿಸಲಾಗಿದೆ. ಏಕೆಂದರೆ ಸೋಮನು ಇಂದ್ರನ ಸ್ವಸ್ಥಾನವಾದ ಲೋಕಕ್ಕೆ (ಸ್ವರ್ಗಕ್ಕೆ) ಸೇರಿದವನು ಅಥವಾ ಸೋಮನಿಗೂ, ಇಂದ್ರನಿಗೂ ಸಾಹಚರ್ಯವಿರುವುದು.

145. ಈ ಋಕ್ಕಿನಲ್ಲಿ ಸೋಮನನ್ನು ಪ್ರಸಂಗವಶದಿಂದ ಸ್ತುತಿಸಲಾಗಿದೆಯೆಂದು ರಥೀತರ ಎಂಬುವರು ಹೇಳುವರು. ಏಕೆಂದರೆ ಇಂದ್ರದೇವತಾಕವಾದ ಅನೇಕ ಸೂಕ್ತಗಳಲ್ಲಿ ಸೋಮನನ್ನು ಪ್ರಾಸಂಗಿಕವಾಗಿ ಸ್ತುತಿಸಿರುವುದು ಕಂಡುಬರುವುದು. **ಸಂಜಾಗೃವದ್ಭಿಃ** ಎಂಬ ೯೧ ನೇ ಸೂಕ್ತದಲ್ಲಿ ಅರುಣನೆಂಬ ಋಷಿಯು ಅಗ್ನಿಯನ್ನು ಸ್ತುತಿಸಿದಾನೆ.

---

30. Deities of RV. x. 89-93. Story of Pururavas & Urvasi

143. And after (a hymn : x. 89) addressed to Indra (comes) the Purusa hymn (x 90). With the last (stanza 16) of (the hymn) addressed to Purusa the circumstances (ಅರ್ಥ) are told in which the Sadhyas divided him for the purpose of sacrifice.

144. In the stanza addressed to Indra, 'He who gives zeal when imbibed' (ಆಪಾಂತಮನ್ಯುಃ ; x. 89-5), Soma is clearly praised. Soma is praised either because he belongs to the same world or hecause he is (Indra's) companion.

145. Rathitara has said that in this (stanza) Soma is incidental (ನಿಪಾತಭಾಜ); for in (hymns) addressed to Indra there is here (such) incidental mention. In 'Together' (ಸಂ : x. 91) Agni is praised by Aruna.

ಯಜ್ಞಸ್ಯ ವೋ ವೈಶ್ವದೇವೇ ಪ್ರೈತ ಇತ್ಯೃಕ್ತ್ರಂ ತು ಯೇಕ್ ।
ತತ್ರಾರ್ಬುದಸ್ತು ಗ್ರಾವಾಣಂ ಮೂರ್ತಿಮಂತಮಿವಾರ್ಚತಿ ॥ ೧೪೬ ॥

ಪ್ರ ತದ್ದುಃಸೀಮ ಇತ್ಯೃಗ್ಭ್ಯಾಂ ರಾಜ್ಞಾಂ ದಾನಂ ಚ ಶಂಸತಿ ।
ಪುರೂರವಸಿ ರಾಜರ್ಷಾವಪ್ಸರಾಸ್ತೂರ್ವಶೀ ಪುರಾ ।
ನ್ಯವಸತ್ಸಂವಿದಂ ಕೃತ್ವಾ ತಸ್ಮಿನ್ಧರ್ಮಂ ಚಚಾರ ಚ ॥ ೧೪೭ ॥

ತಯಾ ತಸ್ಯ ಚ ಸಂವಾಸಮಸೂಯನ್ ಪಾಕಶಾಸನಃ ।
ಪೈತಾಮಹಂ ಚಾನುರಾಗಮಿಂದ್ರವಚ್ಚಾಪಿ ತಸ್ಯ ತು ॥ ೧೪೮ ॥

146. **ಯಜ್ಞಸ್ಯ ವೋ ರಥ್ಯಂ** ಎಂದು ಮೊದಲಾಗುವ ಮುಂದಿನ ಎರಡು **ಸೂಕ್ತ**ಗಳಲ್ಲಿ (೯೨-೯೩) ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ. **ಪ್ರೈತೇ ವದಂತು** ಎಂಬ ಅದರ ಮುಂದಿನ ೯೪ನೇ ಸೂಕ್ತದಲ್ಲಿ ಸೂಕ್ತದ ಋಷಿಯಾದ ಆರ್ಬುದನು ಸೋಮಲತೆಗಳನ್ನು ಜಜ್ಜುವ **ಗ್ರಾವಾಣಃ** ಎಂಬ ಕಲ್ಲುಗಳನ್ನು ದೇವತೆಯ ರೂಪದಲ್ಲಿರುವಂತೆ ಭಾವಿಸಿ ಸ್ತುತಿಸಿದುವನು.

ಪುರೂರವ ಮತ್ತು ಉರ್ವಶಿಯ ಕಥೆ ; ೯೫ನೇ ಸೂಕ್ತ

147. ೯೫ನೇ ಸೂಕ್ತದ **ಪ್ರ ತದ್ದುಃಸೀಮೇ** ಎಂದು ಮೊದಲಾಗುವ ಎರಡು ಋಕ್ಕುಗಳಲ್ಲಿ (೧೪-೧೫) ಆ ಸೂಕ್ತದ ಋಷಿಯು ರಾಜರ ದಾನಪ್ರಶಂಸೆ ಮಾಡಿದಾನೆ. ಪೂರ್ವದಲ್ಲಿ ಉರ್ವಶೀ ಎಂಬ ಅಪ್ಸರಸ್ತ್ರೀಯು ರಾಜರ್ಷಿಯಾದ ಪುರೂರವಸ್ಸಿನೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡು ವಿವಾಹವಾದ ಪತ್ನಿಯಂತೆ ಅವನೊಡನೆ ವಾಸಮಾಡುತ್ತಿದ್ದಳು.

148. ಬ್ರಹ್ಮನು ಇಂದ್ರನಲ್ಲಿಟ್ಟಿರುವ ಅನುರಾಗದಂತೆ ಆ ಪುರೂರವಸ್ಸು ಉರ್ವಶಿಯಲ್ಲಿ ಅತ್ಯಂತ ಅನುರಾಗದಿಂದ (ಪ್ರೀತಿಯಿಂದ) ಪತಿಪತ್ನಿಯರಂತೆ ವಾಸಿಸುತ್ತಿರುವುದನ್ನು ಕಂಡು ಅವರ ವಿಷಯದಲ್ಲಿ ಇಂದ್ರನಿಗೆ ಅಸೂಯೆಯುಂಟಾಯಿತು.

---

146. 'Of your sacrifice' (ಯಜ್ಞಸ್ಯ ವಃ : x. 93) are two addessed to the All-gods (92-93); but in that which (come) next, 'Forth these' (ಪ್ರೈತೇ : x. 94) Arbuda adores the Pressing-Stone as if incarnate

147. and with the two stanzas 'Forth this to Duhsima' (ಪ್ರ ತದ್ದುಃಸೀಮೇ: x. 93. 14-15) he (the seer) lauds the gift of kings.

Now in the days of yore the nymph Urvasi dwelt with the royal seer Pururavas ; and having made a compact (with him), she lived in wedlock with him.

31. Story of Pururavas and Urvasi (concluded).

148. And the Chastiser of Paka (Indra), being jealous of his cohabitation with her and of Brahma's (ಪೈತಾಮಹ) and his (ಪುರೂರವ) passion (for her) as if he (ಪುರೂರವ) were Indra,

ಸ ತಯೋಸ್ತು ವಿಯೋಗಾರ್ಥಂ ಪಾರ್ಶ್ವಸ್ಥಂ ವಜ್ರಮಬ್ರವೀತ್ ।
ಪ್ರೀತಿಂ ಭಿಂಧಿ ತಯೋರ್ವಜ್ರ ಮಮ ಚೇದಿಚ್ಛಸಿ ಪ್ರಿಯಂ ॥ ೧೪೯ ॥

ತಥೇತ್ಯುಕ್ತ್ವಾ ತಯೋಃ ಪ್ರೀತಿಂ ವಜ್ರೋಽಭಿನತ್ಸ್ವಮಾಯಯಾ ।
ತತಸ್ತಯಾ ವಿಹೀನಸ್ತು ಚಚಾರೋನ್ಮತ್ತವನ್ನೃಪಃ ॥ ೧೫೦ ॥

ಚರನ್ಸರಸಿ ಸೋಽಪಶ್ಯದಭಿರೂಪಾಮಿವೋರ್ವಶೀಂ ।
ಸಖೀಭಿರಭಿರೂಪಾಭಿಃ ಪಂಚಭಿಃ ಪಾರ್ಶ್ವತೋ ವೃತಾಂ ॥ ೧೫೧ ॥

ತಾಮಾಹ ಪುನರೇಹೀತಿ ದುಃಖಾತ್ತಾ ತ್ವಬ್ರವೀನ್ನೃಪಂ ।
ಅಪ್ರಾಪ್ಯಾಹಂ ತ್ವಯಾದ್ಯೇಹ ಸ್ವರ್ಗೇ ಪ್ರಾಪ್ಸ್ಯಸಿ ಮಾಂ ಪುನಃ ॥ ೧೫೨ ॥

149. ಆಗ ಅವರಿಬ್ಬರಿಗೂ ವಿಯೋಗವನ್ನು (ಅಗಲಿರುವಿಕೆ) ಉಂಟುಮಾಡಬೇಕೆಂದು ಇಂದ್ರನು ಯೋಚಿಸಿ ತನ್ನ ಸಮೀಪದಲ್ಲಿದ್ದ ವಜ್ರಾಯುಧವನ್ನು ಕುರಿತು, ಎಲೈ ವಜ್ರಾಯುಧವೇ, ನನಗೆ ಪ್ರಿಯವನ್ನುಂಟುಮಾಡಬೇಕೆಂಬ ಅಪೇಕ್ಷೆಯು ನಿನಗಿದ್ದರೆ ಆ ಉರ್ವಶೀಪುರೂರವಸುಗಳ ಮಧ್ಯದಲ್ಲಿರುವ ಪರಸ್ಪರ ಪ್ರೀತಿಯನ್ನು ಕಡಿದುಹಾಕು, ಎಂದು ಹೇಳಿದನು.

150. ಹಾಗೆಯೇ ಆಗಲೆಂದು ಹೇಳಿ ವಜ್ರಾಯುಧವು ತನ್ನ ಮಾಯೆಯಿಂದ ಅವರಲ್ಲಿದ್ದ ಪರಸ್ಪರ ಅನುರಾಗವನ್ನು ನಾಶಮಾಡಿತು. ಎಂದರೆ ಅವರು ಪರಸ್ಪರ ಅಗಲುವಂತೆ ಮಾಡಿತು. ಆಗ ರಾಜನು ಆ ಉರ್ವಶಿಯ ವಿರಹವ್ಯಥೆಯನ್ನು ತಾಳಲಾರದೆ ಹುಚ್ಚನಂತಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದನು.

151. ಹೀಗೆ ಸಂಚರಿಸುತ್ತಿರುವಾಗ ಒಂದು ದಿವಸ ರೂಪಸಂಪನ್ನಳಾದ ಆ ಉರ್ವಶಿಯು ತನ್ನ ಪಕ್ಕದಲ್ಲಿ ತನ್ನಂತೆಯೇ ಇರುವ ಐದುಮಂದಿ ಸಖಿಯರೊಡನೆ ಒಂದು ಸರೋವರದಲ್ಲಿ ವಿಹರಿಸುತ್ತಿರುವದನ್ನು ಕಂಡನು.

152. ಬಳಿಕ ರಾಜನು ಆ ಉರ್ವಶಿಯನ್ನು ಕುರಿತು ನನ್ನ ಬಳಿಗೆ ಬಾ ಎಂದು ಕರೆದನು. ಆದರೆ ಉರ್ವಶಿಯು ದುಃಖದಿಂದ ಆ ರಾಜನನ್ನುದ್ದೇಶಿಸಿ ಎಲೈ ರಾಜನೇ, ಈಗ ನಾನು ನಿನಗೆ ದೊರೆಯಲಾರೆನು. ಸ್ವರ್ಗದಲ್ಲಿ ನೀನು ಮತ್ತೆ ನನ್ನನ್ನು ಹೊಂದಬಹುದು ಎಂದಳು.

149, said to the bolt at his side wth a view to separating them; Destroy, O bolt, the alliance of these two, if you wish (to do) me a favour.

150, 'Very well', said the bolt, and destroyed their alliance with its craft. Then bereft of her the king wandered about like one distracted.

151 As he wandered, he saw in a lake the beautiful (ಅಭಿರೂಪಾಂ) Urvasi, as it seemed (ಇವ), surrounded by five beautiful maiden friends at her side.

152 To her he said, 'Come back.' But she sorrowfully (ದುಃಖಾತ್) answered the king, 'You cannot now obtain me here; in heaven you will obtain me again.'

ಆಹ್ವಾನಂ ಪ್ರತಿ ಚಾಖ್ಯಾನಮಿತರೇತರಯೋರಿದಂ ।
ಸಂವಾದಂ ಮನ್ಯತೇ ಯಾಸ್ಕ ಇತಿಹಾಸಂ ತು ಶೌನಕಃ ॥ ೧೫೩ ॥

ಹಯ ಇತಿ ಪರಮೈಂದ್ರಂ ಪ್ರ ತೇ ಯಾ ಓಷಧೀಸ್ತವಃ ।
ಪ್ರಯೋಗೇ ಭಿಷಜಸ್ತ್ವೇತದ್ಯಕ್ಷ್ಮನಾಶಾಯ ಕಲ್ಪತೇ ॥ ೧೫೪ ॥

ಆಷ್ಟಿಷೇಣಸ್ತು ದೇವಾಪಿಃ ಕೌರವ್ಯಶ್ಚೈವ ಶಂತನುಃ ।
ಭ್ರಾತರೌ ಕುರುಷು ಶ್ವೇತೌ ರಾಜಪುತ್ರೌ ಬಭೂವತುಃ ॥ ೧೫೫ ॥

153. ರಾಜನು ಉರ್ವಶಿಯನ್ನು ತನ್ನ ಬಳಿಗೆ ಬಾ ಎಂದು ಕರೆದುದೂ ಮತ್ತು ಅವರಿಬ್ಬರಲ್ಲಿ ಪರಸ್ಪರ ನಡೆದ ಸಂಭಾಷಣೆಯನ್ನು ಯಾಸ್ಕರು ಸಂವಾದವೆಂದೂ ಶೌನಕರು ಇತಿಹಾಸವೆಂದೂ (ಕಥೆ) ಹೇಳುವರು.

೯೬ ೯೭ನೇ ಸೂಕ್ತಗಳ ದೇವತೆ ; ದೇವಾಪಿ ಎಂಬುವನ ವೃತ್ತಾಂತ

154. **ಹಯೇ ಜಾಯೇ** ಎಂಬ ೯೫ನೇ ಸೂಕ್ತದಲ್ಲಿ ಉರ್ವಶೀ ಮತ್ತು ಪುರೂರವಸ್ಸಿಗೆ ನಡೆದ ಸಂಭಾಷಣೆ ಇದೆ. **ಪ್ರ ತೇ ಮಹೇ** ಎಂಬ ೯೬ನೇ ಸೂಕ್ತದಲ್ಲಿ ಇಂದ್ರನನ್ನೂ **ಯಾ ಓಷಧೀಃ** ಎಂಬ ೯೭ನೇ ಸೂಕ್ತದಲ್ಲಿ ಓಷಧಿ ಮತ್ತು ಲತೆಗಳನ್ನೂ ಸ್ತುತಿಸಲಾಗಿದೆ. ಯಕ್ಷ್ಮ (ಕ್ಷಯ) ರೋಗವೇ ಮೊದಲಾದ ರೋಗಗಳ ಪರಿಹಾರಾರ್ಥವಾಗಿ ಈ ಸೂಕ್ತದ ಪ್ರಯೋಗವಿರುವುದು.

ಋಷ್ಟಿಷೇಣನ ಪುತ್ರರಾದ ದೇವಾಪಿ ಮತ್ತು ಶಂತನುವೆಂಬುವರ ವೃತ್ತಾಂತ

155. ಪೂರ್ವದಲ್ಲಿ ಕುರುವಂಶದ ಋಷ್ಟಿಷೇನೆಂಬುವನಿಗೆ ದೇವಾಪಿ ಎಂಬ ಪುತ್ರನಿದ್ದನು. ಕುರುವಂಶದ ರಾಜರಲ್ಲಿ ಶಂತನು ಎಂಬ ರಾಜಪುತ್ರನಿದ್ದನು. ಕುರುವಂಶದ ರಾಜಪುತ್ರರಾದ ಇವರಿಬ್ಬರೂ ಸಹೋದರರಾಗಿದ್ದರು. ಅವರಲ್ಲಿ,

---

32. Deities of RV. x. 96-97, Story of Devapi ; x. 98

153. This reciprocal narrative (ಆಖ್ಯಾನ) in connexion with a summons (ಆಹ್ವಾನಂ), Yaska considers a dialogne, but Saunaka a story,

154. (that is, the hymn beginning) 'Ho' (ಹಯೇ : x. 95). The following one, 'Forth you' (ಪ್ರ ತೇ : x. 96), is addressed to Indra. 'Which' (ಯಾಃ : x. 97) is (in) praise of plants.

In (its) employment this (hymn) of Bhisaj is applicable to the cure of consumption (ಯಕ್ಷ್ಮ).

155. Now Devapi, son of Rstisena, and samtanu of the race of Kuru were two brothers, princes among the Kurus.

ಜ್ಯೇಷ್ಠಸ್ತಯೋಸ್ತು ದೇವಾಪಿಃ ಕನೀಯಾಂಶ್ಚೈವ ಶಂತನುಃ ।
ತ್ವಗ್ದೋಷೀ ರಾಜಪುತ್ರಸ್ತು ಋಷ್ಟಿಷೇಣಸುತೋಽಭವತ್ ॥ ೧೫೬ ॥

ರಾಜ್ಯೇನ ಖಂದಯಾಮಾಸುಃ ಪ್ರಜಾಃ ಸ್ವರ್ಗಂ ಗತೇ ಗುರೌ ।
ಸ ಮುಹೂರ್ತಮಿವ ಧ್ಯಾತ್ವಾ ಪ್ರಜಾಸ್ತಾಃ ಪ್ರತ್ಯಭಾಷತ ॥ ೧೫೭ ॥

॥ ಇತಿ ಸಪ್ತಮೋಽಧ್ಯಾಯಃ ॥

156. ದೇವಾಪಿ ಎಂಬುವನು ಹಿರಿಯನು, ಶಂತನು ಎಂಬುವನು ಕಿರಿಯನು. ಋಷ್ಟಿಷೇಣನ ಪುತ್ರನಾದ ದೇವಾಪಿಗೆ ಚರ್ಮರೋಗವಿದ್ದಿತು.

157. ತಂದೆಯು ಮೃತನಾದ ಮೇಲೆ ಆ ದೇಶದ ಪ್ರಜೆಗಳು ದೇವಾಪಿಗೆ ರಾಜ್ಯಭಾರವನ್ನು ವಹಿಸಿದರು. ಕ್ಷಣಕಾಲ ಯೋಚಿಸಿ ಆ ದೇವಾಪಿಯು ತನ್ನ ಪ್ರಜೆಗಳನ್ನು ಕುರಿತು ಇಂತೆಂದನು.

ಇಲ್ಲಿಗೆ ಏಳನೆಯ ಅಧ್ಯಾಯವು ಸಮಾಪ್ತವು.

156. Now the elder of these two was Devapi and the younger Samtanu, but the (former) prince the son of Rstisena, was afflicted with skin diseases

157. When his father had gone to heaven his subjects offered him the sovereignty. Reflecting for but a moment, he replied to his subjects.

Thus ends 7th Chapter.

ಅಥ ಬೃಹದ್ದೇವತಾಯಾಂ ಅಷ್ಟಮೋಽಧ್ಯಾಯಃ

ನ ರಾಜ್ಯಮಹಮರ್ಹಾಮಿ ನೃಪತಿರ್ಯೋಽಸ್ತು ಶಂತನುಃ ।
ತಥೇತ್ಯುಕ್ತ್ವಾಭ್ಯಸಿಂಚಂಸ್ತಾಃ ಪ್ರಜಾ ರಾಜ್ಯಾಯ ಶಂತನುಂ ॥ ೧ ॥

ತತೋಽಭಿಷಿಕ್ತೇ ಕೌರವ್ಯೇ ವನಂ ದೇವಾಪಿರಾವಿಶತ್ ।
ನ ವವರ್ಷಾಥ ಪರ್ಜನ್ಯೋ ರಾಜ್ಯೇ ದ್ವಾದಶ ವೈ ಸಮಾಃ ॥ ೨ ॥

ತತೋಽಭ್ಯಗಚ್ಛದ್ದೇವಾಪಿಂ ಪ್ರಜಾಭಿಃ ಸಹ ಶಂತನುಃ ।
ಪ್ರಸಾದಯಾಮಾಸ ಚೈನಂ ತಸ್ಮಿನ್ಧರ್ಮವ್ಯತಿಕ್ರಮೇ ॥ ೩ ॥

ಎಂಟನೆಯ ಅಧ್ಯಾಯವು.

ದೇವಾಪಿಯ ವೃತ್ತಾಂತ (ಮುಂದುವರೆದುದು)

1. ಎಲೈ ಪ್ರಜೆಗಳಿರಾ, ನಾನು (ತ್ವಗ್ದೋಷಯುತನಾಗಿರುವುದರಿಂದ) ರಾಜ್ಯವನ್ನಾಳಲು ಅರ್ಹನಲ್ಲ. ಆದ್ದರಿಂದ ನಿಮಗೆ ಶಂತನುವೇ ರಾಜನಾಗಲಿ ಎಂದನು. ಹಾಗೆಯೇ ಆಗಲೆಂದು ಹೇಳಿ ಪ್ರಜೆಗಳು ಶಂತನುವನ್ನು ರಾಜ್ಯಾಭಿಷಿಕ್ತನನ್ನಾಗಿ ಮಾಡಿದರು.

2. ಕುರುವಂಶದ ಶಂತನುವು ರಾಜ್ಯಾಭಿಷಿಕ್ತನಾದ ಮೇಲೆ ದೇವಾಪಿಯು ತಪಸ್ಸನ್ನು ಮಾಡಲು ವನಕ್ಕೆ ಹೊರಟುಹೋದನು. ಆಗ ಶಂತನುವಿನ ರಾಜ್ಯದಲ್ಲಿ ಹನ್ನೆರಡು ವರ್ಷಗಳವರೆಗೆ ಪರ್ಜನ್ಯನು ಮಳೆಯನ್ನು ಸುರಿಸಲಿಲ್ಲ.

3. ಆದ್ದರಿಂದ ಶಂತನುರಾಜನು ತನ್ನ ಪ್ರಜೆಗಳೊಡನೆ ಹೊರಟು ದೇವಾಪಿಯು ತಪಸ್ಸುಮಾಡುತ್ತಿದ್ದ ವನಕ್ಕೆ ಬಂದು ತಾನು ಧರ್ಮವನ್ನು ಅತಿಕ್ರಮಿಸಿ (ಎಂದರೆ ಅಣ್ಣನಿಗೆ ರಾಜ್ಯವನ್ನು ಕೊಡದೆ ತಾನೇ ರಾಜನಾಗಿ) ರಾಜನಾಗಿರುವುದಕ್ಕೆ ಪಶ್ಚಾತ್ತಾಪವನ್ನು ಪ್ರದರ್ಶಿಸಿ ಅವನನ್ನು ನಾನಾವಿಧವಾಗಿ ಸಮಾಧಾನಮಾಡಿದನು.

Chapter viii.

1. Story of Devapi (continued)

1. 'I am not worthy of the sovereignty : let Samtanu be your ruler.' Assenting to this, his subjects anointed Samtanu king,

2. When the scion of Kuru had been anointed, Devapi retired to the forest. Thereupon Parjanya did not rain in (that) realm for twelve years.

3. Samtanu accordingly came with his subjects to Devapi and propitiated him with regard to that dereliction of duty.

ಶಶಿಕ್ಷ ಚೈನಂ ರಾಜ್ಯೇನ ಪ್ರಜಾಭಿಃ ಸಹಿತಸ್ತದಾ ।
ತಮುವಾಚಾಥ ದೇವಾಪಿಃ ಪ್ರಹ್ವಂ ತು ಪ್ರಾಂಜಲಿಸ್ಥಿತಂ ॥ ೪ ॥
ನ ರಾಜ್ಯಮಹಮರ್ಹಾಮಿ ತ್ವಗ್ದೋಷೋಪಹತೇಂದ್ರಿಯಃ ।
ಯಾಜಯಿಷ್ಯಾಮಿ ತೇ ರಾಜನ್ ವೃಷ್ಟಿಕಾಮೇಜ್ಯಯಾ ಸ್ವಯಂ ॥ ೫ ॥
ತತಸ್ತಂ ತು ಪುರೋಽಧತ್ತ ಆರ್ತ್ವಿಜ್ಯಾಯ ಸ ಶಂತನುಃ ।
ಸ ಚಾಸ್ಯ ಚಕ್ರೇ ಕರ್ಮಾಣಿ ವಾರ್ಷಿಕಾಣಿ ಯಥಾವಿಧಿ ॥ ೬ ॥
ಬೃಹಸ್ಪತೇ ಪ್ರತೀತ್ಯೃಗ್ಭಿರೀಜೇ ಚೈವ ಬೃಹಸ್ಪತಿಂ ।
ದ್ವಿತೀಯಯಾಸ್ಯ ಸೂಕ್ತಸ್ಯ ಬೋಧಿತೇ ಜಾತವೇದಸಾ ॥ ೭ ॥

4. ಬಳಿಕ ಪ್ರಜೆಗಳಿಂದ ಸಹಿತನಾದ ಆ ಶಂತನುವು ತನ್ನ ಜ್ಯೇಷ್ಠಸಹೋದರನಾದ ದೇವಾಪಿಗೆ ರಾಜ್ಯವನ್ನು ಒಪ್ಪಿಸಿದನು. ಆಗ ತನ್ನ ಎದುರಿಗೆ ಕೈಮುಗಿದುಕೊಂಡು ವಿನಯಾನ್ವಿತನಾಗಿ ನಿಂತಿರುವ ಶಂತನುವನ್ನು ನೋಡಿ ದೇವಾಪಿಯು ಇಂತೆಂದನು.

5. ಎಲೈ ರಾಜನೇ, ನಾನು ಚರ್ಮರೋಗದಿಂದ ನರಳುತ್ತಿರುವುದರಿಂದ ನಾನು ರಾಜ್ಯಭಾರನಾಡಲು ಅರ್ಹನಲ್ಲ. ಆದರೆ ನಿನ್ನ ರಾಜ್ಯದಲ್ಲಿ ವೃಷ್ಟಿವರ್ಷಣದಿಂದ ಸುಭಿಕ್ಷವಾಗುವುದಕ್ಕಾಗಿ ನಾನೇ ಸ್ವತಃ ನಿಂತುಕೊಂಡು (ಪೌರೋಹಿತ್ಯವನ್ನು ವಹಿಸಿ) ನಿನ್ನಿಂದ ಯಜ್ಞವನ್ನು ಮಾಡಿಸುವೆನು ಎಂದು ಹೇಳಿದನು,

6. ಬಳಿಕ ಶಂತನುರಾಜನು ಹಾಗೆಯೇ ಆಗಲೆಂದು ಸಂಮತಿಸಿ ತಾನು ಮಾಡುವ ಯಜ್ಞದಲ್ಲಿ ದೇವಾಪಿಯು ಪೌರೋಹಿತ್ಯವನ್ನು ವಹಿಸಿ ಋತ್ವಿಕ್ಪಾತ್ರವನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿ ಅವನನ್ನು ಮುಖ್ಯಪುರೋಹಿತನನ್ನಾಗಿ ಮಾಡಿದನು. ಪೌರೋಹಿತ್ಯವನ್ನು ವಹಿಸಿದ ದೇವಾಪಿಯು ವೃಷ್ಟಿವರ್ಷಣಕರ್ಮಕ್ಕಾಗಿ ಮಾಡಬೇಕಾದ ಕಾರ್ಯ ಕಲಾಪಗಳನ್ನು ವಿಧ್ಯುಕ್ತವಾಗಿ ನೆರವೇರಿಸಿದನು.

7. ಅನಂತರ ದೇವಾಪಿಯು **ಬೃಹಸ್ಪತೇ ಪ್ರತಿ ಮೇ** ಎಂಬ ೯೮ ನೇ ಸೂಕ್ತದ ಮೂರು ಋಕ್ಕುಗಳಿಂದ (೧-೩) ಬೃಹಸ್ಪತಿಯನ್ನು ಆರಾಧಿಸಿದನು. ಈ ಸೂಕ್ತದ ಎರಡನೇ ಋಕ್ಕಿನಲ್ಲಿ ಜಾತವೇದಾಗ್ನಿಯು ದೇವಾಪಿಯನ್ನುದ್ದೇಶಿಸಿ—

4. Then, in company with his subjects, he offered him the sovereignty. To him, as he stood humbly with folded hands, Devapi replied :

5. 'I am not worthy of the sovereignty, my energy being impaired by skin-disease ; I will myself officiate, O king, as yout priest in a sacrifice for rain.'

2. Story of Devapi (concluded). **Deities of RV. x. 99-101**

6. Then Samtanu appointed him to be his chaplain (ಪುರೋಽಧತ್ತ) and to act as priest (ಆರ್ತ್ವಿಜ್ಯಾಯ). So he (ದೇವಾಪಿ) duly performed the rites productive of rain-

7. And he sacrificed to Brhaspati with the stanzas, ' O Brhaspati, to ' (ಬೃಹಸ್ಪತೇ ಪ್ರತಿ : x. 98-1-3),

When with the second (stanza) of this hymn Jatavedas had informed him (ಬೋಧಿತೇ).

ಅಸ್ಯೇ ತೇ ದ್ಯುಮತೀಂ ವಾಚಂ ದಧಾಮಿ ಸ್ತುಹಿ ದೇವತಾಃ ।
ತತಃ ಸೋಽಸ್ಮೈ ದದೌ ಪ್ರೀತೋ ವಾಚಂ ದೇವೀಂ ತಯಾ ಚ ಸಃ　　॥ ೮ ॥

ಋಗ್ಭಿಶ್ಚತಸೃಭಿರ್ದೇವಾನ್ ಜಗೌ ವೃಷ್ಟ್ಯರ್ಥಮೇವ ತು ।
ಅಗ್ನಿಂ ಚ ಸೂಕ್ತಶೇಷೇಣ ಕಮ್ಯೇಂದ್ರಂ ಸೂಕ್ತಮುತ್ತರಂ　　॥ ೯ ॥

ಇಂದ್ರ ದೃಹ್ಯೇತಿ ವಿಶ್ವೇಷಾಮುದಿತೈವೃತ್ವಿಕ್ಸ್ತುತಿಃ ಪರಂ ।
ಶಕ್ತಿಪ್ರಕಾಶನೇನೈಷಾಂ ವಿನಿಯೋಗೋಽತ್ರ ಕೀರ್ತ್ಯತೇ　　॥ ೧೦ ॥

8. ಎಲೈ ದೇವಾಪಿಯೇ, ನಿನ್ನ ಮುಖದಲ್ಲಿ (ಬಾಯಿಯಲ್ಲಿ) ಬಹಳ ಪ್ರಕಾಶಮಾನವಾದ (ಅತಿಶಯವಾದ ಶಕ್ತಿಸಾಮರ್ಥ್ಯಗಳುಳ್ಳ) ವಾಕ್ಯವನ್ನು (ಮಂತ್ರವನ್ನು) ಇಡುವೆನು (ಎಂದರೆ ನಿನಗೆ ಉಪದೇಶಿಸುವೆನು) ಆದ್ದರಿಂದ ನೀನು ದೇವತೆಗಳನ್ನು ಸ್ತುತಿಸು ಎಂದನು. ಬೃಹಸ್ಪತಿಯು ಸಂತುಷ್ಟನಾಗಿ ದೇವಾಪಿಗೆ ವೃಷ್ಟಿವರ್ಷಣಕ್ಕೆ ಸಾಧಕವಾದ ಮಂತ್ರಗಳನ್ನು ಅನುಗ್ರಹಿಸಿದನು. ಆ ಮಂತ್ರಸಾಮರ್ಥ್ಯದಿಂದ,

9. ದೇವಾಪಿಯು ನಾಲ್ಕು ಋಕ್ಕುಗಳಲ್ಲಿ (೯೮ ನೇ ಸೂಕ್ತದ ೪-೭ ಋಕ್ಕುಗಳು) ದೇವತೆಗಳನ್ನು ವೃಷ್ಟಿವರ್ಷಣಕ್ಕಾಗಿ (ಮಳೆ ಬರುವುದಕ್ಕಾಗಿ) ಪ್ರಾರ್ಥಿಸಿದನು. ಮತ್ತು ಸೂಕ್ತದ ಉಳಿದ ಮುಂದಿನ ಋಕ್ಕುಗಳಲ್ಲಿ (೮-೧೨) ಅಗ್ನಿಯನ್ನು ಸ್ತುತಿಸಿದನು. **ಕಂ ನಷ್ಟ್ರಿತ್ರಂ** ಎಂಬ ಮುಂದಿನ ಸೂಕ್ತದಲ್ಲಿ (೯೯) ಇಂದ್ರನನ್ನು ಸ್ತುತಿಸಲಾಗಿದೆ.

10. **ಇಂದ್ರ ದೃಹ್ಯ ಮಘವನ್** ಎಂಬ ೧೦೦ ನೇ ಸೂಕ್ತದಲ್ಲಿ ವಿಶ್ವೇದೇವತೆಗಳನ್ನು ಸ್ತುತಿಸಲಾಗಿದೆ. **ಉದ್ಬುಧ್ಯಧ್ವಂ** ಎಂಬ ೧೦೧ ನೇ ಸೂಕ್ತದಲ್ಲಿ ಋತ್ವಿಕ್ಕುಗಳನ್ನು ಪ್ರಶಂಸಿಸಲಾಗಿದೆ. ಈ ಋತ್ವಿಕ್ಕುಗಳ ಶಕ್ತಿಸಾಮರ್ಥ್ಯಗಳನ್ನು ಪ್ರಕಟಿಸುವುದಕ್ಕಾಗಿ ಕರ್ಮಗಳ ವಿಯೋಗವನ್ನೂ ಸ್ತುತಿಸಲಾಗಿದೆ (ಹೇಳಲಾಗಿದೆ).

---

8. 'I will place brilliant speech in your mouth : praise the Gods,'

then he (Brihaspati) being pleased bestowed on him (Devapi) divine Speech ; and therewith.

9. he in four stanzas (x. 98-4-7) sang (in praise of) the gods with a view to rain only, and Agni with the remainder of the hymn (8-12). The next hymn ' whom ?' (**ಕಂ** x. 99) is addressed to Indra.

10. ' O Indra, stand fast ' (**ಇಂದ್ರ ದ್ರುಹ್ಯ** : x. 100) is to the all (gods) : the following one, ' Awake ' (**ಉತ್** : x. 101), is (in) praise of the priests : the application of rites (**ವಿನಿಯೋಗ**) is here proclaimed by setting forth the powers of these (priests).

ಪ್ರೇತೀತಿಹಾಸಸೂಕ್ತಂ ತು ಮನ್ಯತೇ ಶಾಕಟಾಯನಃ ।
ಯಾಸ್ಕೋ ದ್ರೌಘಣಮೈಂದ್ರಂ ವಾ ವೈಶ್ವದೇವಂ ತು ಶೌನಕಃ ॥ ೧೧ ॥

ಆಜಾವನೇನ ಭಾಮ್ರ್ಯಶ್ಚ ಇಂದ್ರಾಸೋಮೌ ತು ಮುದ್ಗಲಃ ।
ಅಜಯದ್ವೃಷಭಂ ಯುಕ್ತ್ವಾ ಐಂದ್ರಂ ಚ ದ್ರುಘಣಂ ರಥೇ ॥ ೧೨ ॥

ಯುಧ್ಯನ್ ಸಂಖ್ಯೇ ಜಯಂ ಪ್ರೇಪ್ಸುರೈಂದ್ರೋಽಪ್ರತಿರಥೋ ಜಗೌ ।
ಆಶುರೈಂದ್ರಮಪ್ವಾ ದೇವೀ ಆಮಿಷಾಮಿತ್ಯೃಚಿ ಸ್ತುತಾ ॥ ೧೩ ॥

ಚತುರ್ಥೀ ಬಾರ್ಹಸ್ಪತ್ಯಾ ಸ್ಯಾನ್ನಾಕುಲೇ ಚ ಮಹಾನಿತಿ ।

೧೦೨-೧೦೩ ನೇ ಸೂಕ್ತಗಳು ; ನಕುಲಋಷಿಯ ಖಿಲಮಂತ್ರಗಳು

